KARNATAKA STATE ARCHIVES

KARNATAKA STATE ARCHIVES

KARNATAKA
STATE
ARCHIVES

Roll No:136

Roll No:136

Roll No: 136

ARS 34 APP 82

NAVAYUGA KANNADA

WEEKLY

From: 27: 10: 1938 pageNo: 20

Contd: from ROLL NO: 135

ARS 34 APP 82

NAVAYUGA KANNADA
WEEKLY
From: 27: 10: 1938 pageNo: 20
Contd: from Roll No: 135

ARS 34 APP 82

NAVAYUGA KANNADA
WEEKLY
From: 27: 10: 1938 pageNo: 20
Contd: from ROLL No: 135

ಶ್ತ್ರುಯಾರೂಪವಾಗಿ ಧನವ್ಯಯ ಇವುಗಳು ತಪ್ಪದೆ ಆಗುವವು. ತಾ. 28, 29, 2, 3 ಈ ದಿನಗಳು ಉತ್ತಮ ಫಲದಾಯಕವಾಗಿವೆ—

ಮಕರರಾಶಿ—

ನೀವೂ ಕೂಡ ಧನುರಾಶಿಯವರಿಂದ ಆವ ಭಾಗವಲ್ಲೂ ಕಡಿಮೆಯಿಲ್ಲವು. ಆದರೂ ದೇಹಪೀಡೆಯಿಂದಾಗಿ ಕೊರಗುವಿರಿ ಮತ್ತು ಸ್ಥಾನ ವಿಷಯದಲ್ಲಿ ಕಿಂಚಿತ್ ಭಯಗ್ರಸ್ತರಾಗುವಿರಿ ಆದರೂ ಚಿಂತಿಸಬೇಕಾಗಿಲ್ಲ ಧನಜನಬೆಂಬಲವು ನಿಮಗೆ ಅನುಕೂಲವಾಗಿರುವುದರಿಂದ ಸರ್ವತೋಮುಖವಾದ ನಿಮ್ಮ ಪ್ರಗತಿಗೆ ಯಾವ ತೊಂದರೆಯೂ ಬರಲಾರದು. ಸಂಕಲ್ಪಿಸಿದ ಕಾರ್ಯಗಳನ್ನು ಕಾರ್ಯರೂಪದಲ್ಲಿ ತರುವಿರಿ. ಶತ್ರುಗಳಿಂದ ಗೂಗೆಗಳಿಗೆ ನೀವು ಸೂರ್ಯನಂತಿರುವಿರಿ. ಮಿತ್ರ ವರ್ಗದವರ ಒಡನಾಟದಿಂದಲೂ ಗೃಹಸಂಪತ್ತಿನ ವೈಭವದಿಂದಲೂ ಸುಖದಿಂದ ಕಾಲ ಕಳೆಯುವಿರಿ ತಾ. 27, 30, 1 ಈ ದಿನಗಳಲ್ಲಿ ನಾನಾ ರೀತಿಯಲ್ಲಿ ಲಾಭ, ಸುಖ ಭೋಜನ, ಶಯನಸುಖಗಳನ್ನು ಪಡೆಯುವಿರಿ—

ಕುಂಭರಾಶಿ—

ಈ ವಾರವು ನಿಮಗೆ ಯಾವ ಭಾಗದಲ್ಲಿಯೂ ಹಿತಕರವಾಗಿಲ್ಲವೆನ್ನಲು ತುಂಬಾ ವಿಷಾದವಾಗುತ್ತದೆ. ಗ್ರಹರು ಆ ರೀತಿಯಲ್ಲಿ ಬಂದು ನಿಂತಿರುವರು. ಆರ್ಥಿಕ ಅಡಚಣೆಯಿಂದ ನಾನಾಕಷ್ಟ ನಷ್ಟಗಳು ಎಸ್ಟು ಪಡಬೇಕಾಗುತ್ತದೆ. ವ್ಯಾಪಾರ, ವ್ಯವಹಾರ, ಕೋರ್ಟು ಕಛೇರಿಗಳ ಕಾರ್ಯಗಳಲ್ಲಿ ಕೂಡಾ ಸರ್ವತ್ರ ಪ್ರತಿಕೂಲವೇ ನಿಮ್ಮ ಭಾಗಕ್ಕೆ ಕಟ್ಟಿಟ್ಟಗಂಟಾಗಿದೆ ಶರೀರಸುಖವು ಸ್ವಲ್ಪವೂ ಇಲ್ಲವೆನ್ನಬಹುದು ಮಾತು ಮಾತಿಗೆ ಕಲಹ ಬೆಳೆಯುವುದು ಅವಮಾನ, ತಿರಸ್ಕಾರಗಳಲ್ಲ ಮುಳುಗೇಳುವಿರಿ. ಶುಚಿತ್ವವು ನಿಮ್ಮಿಂದ ದೂರವಾಗಿದೆ ಎನ್ನಬಹುದು. ತಾ. 30, 31, 1 ಕಷ್ಟದ ದಿನಗಳಾಗಿವೆ—

ಮೀನರಾಶಿ—

ನಿಮ್ಮ ಭಾಗದಲ್ಲಿ ತೃಪ್ತಿಯೇನೆಂದರೆ ನಿಮಗೆ ಕೆಲವಂಶದಲ್ಲಿ ಗುರು ಶುಕ್ರರ ಅನುಗ್ರಹವಿದೆಯೆಂದು ಇದರಿಂದ ದೇಹಾರೋಗ್ಯವು ಚೆನ್ನಾಗಿರುವುದು ಸಾಂಪತ್ತಿಕ ಭಾಗವು ಕೆಲವಂಶ ಸುಧಾರಣೆಗೆ ಬರುವುದು. ಇತರ ಗ್ರಹರೆಲ್ಲರೂ ಪ್ರತಿಕೂಲರಿದ್ದ ಕಾರಣ ಸ್ತ್ರೀಯರಲ್ಲಿ ಕಲಹ, ನಷ್ಟವಿಲ್ಲದ ನೋವುಗಳುಂಟಾಗುವವು ಒಂದು ಮಿತ್ರರೂ, ಆಪ್ತೇಷ್ಟರೂ ಕೂಡ ನಿಮ್ಮಿಂದ ದೂರವಾಗುವರು. ದೇಶಾಟನದಿಂದಾಗಿ ಒಹಳ ಕಾಯಕಷ್ಟವನ್ನನುಭವಿಸಬೇಕಾಗಿ ಬರುವುದು. ಮನೆಯಲ್ಲಿ ಧರ್ಮ ಕಾರ್ಯಗಳೇನೋ ಜರಗುವುವು. ತಾ ೨೮ರಿಂದ 1ರ ತನಕದ ದಿನಗಳು ಅನುಕೂಲವಿವೆ.

ನವಯುಗಕ್ಕೆ
ಏಜಂಟರಿಲ್ಲದ ಸ್ಥಳಗಳಲ್ಲಿ
ಏಜಂಟರು
ಬೇಕಾಗಿದ್ದಾರೆ.

ಪ್ರೇಮ

●

ಒಂದು ದಿನ ನೇಸನ್ನು ತನ್ನಯ |
ಬಂದ ಕಷ್ಟವ ನೆನೆದು ಚಿಂತಿಸಿ |
ನೊಂದು ಮನದಲಿ ಶೋಕಿಸುತಲಾ ಪರಮ ದುರ್ದಶೆಯಾ ||
ಸಂದುದೀ ದಿನ ಇಷ್ಟು ಇಂದಿಗೆ |
ಸಂದು ಹೋಯಿತು ಅಧಿಕ ಪ್ರಾಯವು |
ಒಂದು ದಿನ ಸುಖವಿಲ್ಲ ಮನಕೀ ಹಾಳು ಬಾಳುವೆಯಾ || ೧ ||

ಹೊಟ್ಟೆ ಕೂಳಿಗೆ ಗತಿಯು ಇಲ್ಲದ |
ಮೊದಲೆ ಪತಿಯುಳಿದ ಸತಿಯುಳ |
ಉದರದಲಿ ನಾನಂತು ಜನಿಸಿದೆ ಎನ್ನ ಮನದನ್ನೆ ||
ಆದರದಿ ನೋಳ್ಪವರ ಕಾಣೆನು |
ಮೋದದಿಂ ಕುವವರ ಕಾಣೆನು |
ಪದುಮನಾಭನ ದಯದಿ ಬಾಳಿದೆ ಇಷ್ಟು ವರಿಯಂತಾ || ೨ ||

ಸಡೆದ ಸಾಲದಿ ಬಳಲಿ ನರಳುವೆ |
ಕೊಡುವನೆಂದರೆ ಸ್ಥಿತಿಯು ಇಲ್ಲಲೆ |
ಬಿಡದೆ ಬಡ ಉಗ್ರಾಣ ಕೂಪದಿ ನರಳುವಂತಾಯ್ತು ||
ಬಡತನದ ಜೀವನವಿದಕಟಕಟ! —
ಬಡತನದುರಿಯು ಸೈರಿಸಲೆಂತು!
ಒಡನೆ ನೀಡೆನ್ನ ಬಂದು ಉದ್ಧರಿಸಯ್ಯ ಶ್ರೀರಮಣಾ || ೩ ||

ಮತ್ತೆ -
ಅನ್ಯರೇ ಎನಗಾಗಿ ಮರುಗುವೆ!
ಅನ್ಯರೇ ಎನಗಾಗಿ ಕೊರಗುವೆ!
ಸುಮ್ಮನೇ ಯಾಕೆಲ್ಲ ಬಿಡು ಚಿಂತೆಯನು ತಕ್ಷಣದೀ ||
ನಮ್ಮ ಹಣೆಯಲಿ ಬ್ರಹ್ಮ ಬರೆದಿಹ |
ನಮ್ಮದ ದ್ದಾತಿ ಬದಲಹೊಂದದು |
ಪದ್ಮನಾಭಿಯ ಮಡದಿ ತಾಯಿ ಸ್ಮರಿಸು ಕಾತರತೆಯಾಗ || ೪ ||

ಮುನ್ನ ಮಾಡಿದ ಕರ್ಮ ಫಲದಿಂ |
ನನ್ನ ತಂದೆಯು ಮಡಿದು ಪೋಗಲು |
ಇನ್ನು ಯೋಚಿಸಿ ಫಲವಿದೇನದು ಏಕ ಮಾತೆಯುಳಿ ||
ಅಣ್ಣ ತಮ್ಮರು ಮೊದಲೆ ಇಲ್ಲವು |
ಬನ್ನ ಬಡಿಸರು ಕಿಚ್ಚಿನಂದದಿ |
ಸನ್ನಿಹಕೆ ಬರಗೊಡುವರಿಲ್ಲವೆ ಏನಗ್ಯಯುವುದೂ || ೫ ||

(ಮುಂದರಿಯುವುದು.)

ಯು. ಕೆ. ರಂಗ, ಬೊಂಬಾಯಿ.

WANTED

An energetic young man or woman (widow preferred) Secondary grade trained, or trained in any of the well established Bhagini seva samajams or Ashrams to manage a Hindu orphanage to be started at Manipal. The selected candidate is expected to be a life worker. Only Hindus need apply.

Apply stating minimum requirements before the 30th Oct. 1938.

K. Panduranga Shenoy,
Secretary,
Manipal Hindu orphanage,
Manipal, UDIPI.



ಕರ್ನಾಟಕದ ಪ್ರಸಿದ್ಧ ಸಾಹಿತಿಗಳಾದ
ಶ್ರೀ. ಕೊರಡ್ಕಲ್ ಶ್ರೀನಿವಾಸರಾವ್
ಇವರಿಂದ ರಚಿತವಾಗಿ
ಕಿರಿಯರ ಪ್ರಪಂಚದವರಿಂದ
ಪ್ರಕಟವಾದ

ನಂದಾದೀಪ

ಉತ್ಕೃಷ್ಟ ಕಥಾಸಂಗ್ರಹ.

●

'ನಂದಾದೀಪದ ಕುರಿತು ಪ್ರಭಾತದಲ್ಲಿ ಹೀಗಿದೆ:—

ಶ್ರೀ ಶ್ರೀನಿವಾಸರಾಯರ ಕತೆಗಾರಿಕೆಯಲ್ಲಿ ಕಲಾಪೂರ್ಣತೆಯಿದೆ. ಲೇಖನದ ಶೈಲಿಯಲ್ಲಿ ಇಂಪು, ಮಲ್ಲುಮೃಗೂಡಿದೆ. ಕತೆಯನ್ನು ಓದಲು ಮೊದಲು ಮಾಡಿದರೆ ಕೊನೆ ಮುಟ್ಟಿಸುವ ಆಕರ್ಷತೆಯಿದೆ. ಇವರ ಕತೆಯಲ್ಲಿ ಸ್ವಾಭಾವಿಕವಾಗಿಯೇ ಇರುವ ನೈಜತೆಗೆ ಬೂದ, ತಕ್ಕಿ, ತೌದ ಇತ್ಯಾದಿ ಇದ್ದ ಹೆಸರುಗಳಿಂದ ಮತಷ್ಟು ಕಳೆಯೇರಿದೆ. ಅಂತೂ ಹೆಚ್ಚಿನ ಕತೆಗಳೂ ಜನಜೀವನದ ಪಡಿ ನೆಳಲಂತಿವೆಯೆನ್ನುವುದಕ್ಕೇನೂ ಅಡ್ಡಿಯಿಲ್ಲ...... ಈ ಕಥಾಸಂಗ್ರಹವು ಸಂಗ್ರಹಣೀಯವಿವೆಯೆನ್ನುವುದು ನಿಸ್ಸಂದೇಹ, ಲೇಖಕರೆಂದಂತೆ 'ನಾರದೆಯ ಭಜಕರು ತಾವು ಅರ್ಪಿಸುವ ದರಕೆಯ ಎಣ್ಣೆ ತುಪ್ಪ ಒಂದಿಷ್ಟನ್ನು ಈ ದೀಪಮಾಲೆಗೂ ಎರೆಯುತ್ತಲಿರಬೇಕು' ಎಂದು ನಾವು ಹೇಳಬಯಸುವೆವು.

●

ಏಂಟಿಕ್ ಕಾಗದ! . ಅಂದವಾದ ಮುದ್ರಣ!!

೧೧ ಮನೋರಂಜಕ ಕಥೆಗಳು.

ಬೆಲೆ ೮ ಆಣೆ ಮಾತ್ರ.

೦-೯-೦ ಆಣೆ ಸ್ಟಾಂಪು ಕಳುಹಿಸಿದರೆ ೧ ಪ್ರತಿಯನ್ನು ಬುಕ್ ಪೋಸ್ಟು ಮೂಡಿ ಕಳುಹಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

☞ ನವಯುಗ ಆಫೀಸಿನಲ್ಲೂ ಪ್ರತಿಗಳು ದೊರೆಯುತ್ತವೆ.

ಡಂಭ-VANITY

Ha, Vanitas Vanitatum! Which of us is happy today? O' Vanity, what is the use of this 'Outward show with many an inward woe? Why parade, why pretend, why presume what you are not? Are you true to yourself? No. Why not? Because you are wanting in courage. Vanity must be replaced by Sanity—otherwise—no hope, no salvation. Don't run, lest you should fall—Walk; even if you fall, there is no regret.

[ಪೇಟೆಗೆ ಬಂದ ಶೆಟ್ರು ತನ್ನ ಮಗಳ ಹೊಸ ನಂಟಸ್ತಿಕೆಯ ವಿಷಯ ಭಾವೀ ದೃಷ್ಟಿಯಿಂದ ತನ್ನ ಮಿತ್ರನೊಡನೆ ಆಡಿದ ಮಾತುಕತೆ--ಅಂತ್ಯಕ್ಕೆ ಶೆಟ್ರು ನೆನಸಿದೆಲ್ಲ ನಿಜವಾಗುವುದು.—]

ಶೆಟ್ರು—ಅಲ್ಲ, ಇಲ್ಲದ್ದನ್ನು ತೋರಿಸಿ ಕೊಳ್ಳುವುದು ಯಾಕೆ? ಈ ರೀತಿಯಲ್ಲೇ ಎಷ್ಟರ ತನಕ ಸಾಗಬಹುದು? ಹೀಗೆ ಮಾಡದಿದ್ದರೆ ಶಿಕ್ಷೆಯಾದೀತು ಎಂದು ಏನಾದರೂ ಸರಕಾರದ ಕಾನೂನು ಗೀನೂನು ಉಂಟೇ?

ಮಿತ್ರ—ಈ ಪ್ರಶ್ನೆಯನ್ನು ಎತ್ತಲು ಕಾರಣವೇನು?

ಶೆಟ್ರು—ನೋಡಿ, ನಿನ್ನೆ, ನಾನು ನಮ್ಮ ಹೊಸ ನಂಟರ ಮನೆಗೆ ಹೋಗಿದ್ದೆ. ಅಲ್ಲಿಯ ಆ ವೈಭವ, ಆ ಆಡಂಬರ ಇತ್ಯಾದಿಗಳನ್ನೆಲ್ಲಾ ನೋಡಿ ನನಗೆ ವಿಸ್ಮಯವಾಗಿ ಹೋಯಿತ್ರಿ. ಆ ಚಿತ್ರ ಈಗಲೂ ನನ್ನ ಕಣ್ಣೆದುರು ಕಟ್ಟಿದಂತಿದೆ! ಕಣ್ಣನ್ನು ಕುಕ್ಕುತ್ತಿದೆ! ನಡುಹೊತ್ತಿನ ಕಿರಣಕ್ಕಿಂತಲೂ ಮಿಕ್ಕಿ ಕುಕ್ಕುತ್ತಿದೆ! ಅಬ್ಬ! ನಮ್ಮ ಆ ಹೊಸ ನಂಟರ ವೈಭವದ ಮಿರುಗು ಬೆರಗುಗಳೇನಪ್ಪಾ!

ಮಿತ್ರ—ಹಾಗಾದರೆ ಸ್ವಲ್ಪ ವಿವರಿಸಿ ಹೇಳೀಂದ್ರು!

ಶೆಟ್ರು—ಪೂರಾ ಹೇಳಲು ಈಗ ಸಮಯವಿಲ್ಲ. ಆದರಲ್ಲಿ ಒಂದು 'ಸ್ಯಾಂಪಲ್' ಒಂದೇ ಒಂದು ದೃಶ್ಯ ಮಾತ್ರ ಚಿತ್ರಿಸಿ ಬಿಡುತ್ತೇನೆ. ಮಿಕ್ಕುದನ್ನೆಲ್ಲ ನೀವು ಆ ದೃಷ್ಟಿಯಿಂದ ನೋಡಿ ಊಹಿಸಬಹುದು.—ನಾವೆಲ್ಲಾ ಭೋಜನ ಶಾಲೆಗೆ ಊಟಕ್ಕೆ ಹೋಯಿತ್ರಿ. ನನ್ನ ಅಳಿಯ, ಅವನ ತಂದೆ ಮತ್ತು ಅವನ ಬಂಧುಗಳೆಲ್ಲಾ—ನೋಡುವದೇನು? ಥಳಥಳಿಸುವ ಬೆಳ್ಳಿ ಒಟ್ಟಲುಗಳು, ಬೆಳ್ಳಿ ತಂಬಿಗೆಗಳು ಮತ್ತು ಲೋಟಿಗಳು! ಮೇಲೆ 'ಪೆಟ್ರೋಮೆಕ್ಸ್' (Petromax) ಲೈಟ್! ಊಟಕ್ಕೆ ಕೂತೆವು ಅಂದೆ ಇಬ್ಬರು ಕೆಲಸದ ಗಂಡಸರು ಬೀಸಣಿಗೆಯನ್ನು ಹಿಡಿದು ನಿಂತರು, ನಮಗೆ ಗಾಳಿ ಬೀಸಲಿಕ್ಕೆ! ಒಂದೊಂದಾಗಿ ಬಡಿಸಲಿಕ್ಕೆ ಸುರುವಾಯಿತು! ಒಂದರ ಹಿಂದೆ ಒಂದು ಪದಾರ್ಥ ಎಲೆಯ ಮೇಲೆ ಬಂತ್ರಿ! ಉಪ್ಪಿನ ಕಾಯಿಯಲ್ಲೇ ಮೂರು ಬಗೆ, ಬೇರೆ ಇತರ ತರಕಾರಿ ಪಲ್ಯ, ಕೋಳಿ ಪದಾರ್ಥ ಆರು ನಮೂನೆ—ಮಲಬಾರು ನಮೂನೆದ್ದು, ಮದ್ರಾಸ್ ಕಡೇದ್ದು, ಬಿಲಾಯಿತಿಸ್ಟೈಲಿದ್ದು, ಮತ್ತು ನಮ್ಮದೇ ನೂರು ತಾಳ್ಳು, ಗೀಳ್ಳು ಅಂತ ಬೇರೆ ಬೇರೆ ತರದ್ದು. ಇನ್ನು ಇದಕ್ಕಿಂತಲೂ ವಿಶೇಷವಾದ ಸಂಗ್ತಿ ಇನ್ನೊಂದು ಉಂಟ್ರೀ—ಆಗಾಗ ಮಿಂಚು ಬಂದ ಹಾಗೆ ಆಗಿತ್ತು! ಅದು ಏನು ಗೊತ್ತುಂಟೇ? ಬಡಿಸಲು ಬಂದ ಹೆಂಗಸರ ವಜ್ರದ ಬೆಂಡೋಲೆಯ ಥಳಕು! ಆ ಝಗಝಗಿಸುವ ಜರೀಶೀರೆಯ ಹೊಳಪು—ಏನು ಹೇಳ್ಲೀಂದೆ—ಇಷ್ಟಯೋ! ಪ್ರತಿಯೊಂದು ನಮೂನೆಯ ಮೇಲೋಗರ ತರುವಾಗ ಪ್ರತಿ ಒಬ್ಬ ಹೆಂಗಸರ ಶೀರೆ ಬದಲಾವಣೆ! 'ಟ್ರೇನ್ಸ್‌ಫರ್ಡ್ ಸಿನೇರಿ' (Transferred scenery) ಸಹಾ ಅಷ್ಟು ಬೇಗ ಆಗಲಿಕ್ಕಿಲ್ಲ - ಎಂಥಾ ಸ್ವದರ್ಶನ—ಆದರೆದುರಿಗೆ ನಿಮ್ಮ ಮೊನ್ನೆಯ ದಸರಾ 'ಎಗ್ಸಿಬಿಶನ್' (Exhibition ಪ್ರದರ್ಶನ) ಏನೂ ಪ್ರಯೋಜನವಿಲ್ಲರೀ. ನನಗೆ ಕಣ್ಣು ಕತ್ತಲೆ ಬಂದಂತಾಯಿತು! ಶ್ವಾಸಗೀಸ ಬಂದ್, ಅಷ್ಟು ಬೆರಗಾಗಿ ಹೋಗಿದ್ದೆ! ಗಾಳಿ ಬೀಸುವ ಗಂಡಿಗೆ ಸ್ವಲ್ಪ ಶ್ವಾಸ ಪುನಃ ಬರುವ ಹಾಗೆ ಗಟ್ಟಿಯಾಗಿ ಬೀಸು ಅಂದ.

ಮಿತ್ರ—ನೀವು ಒಂದು ದೃಶ್ಯವನ್ನು ವರ್ಣಿಸುವಾಗಲೇ ನನಗ ತಲೆ ಗಿರ ತಿರುಗತದ್ರೀ—ಆಮೇಲಿನದೆಲ್ಲವನ್ನೂ ನೋಡಿದ ನಿಮಗೆ ತಲೆ ಗರ ಗರ ಆಗುವುದರಲ್ಲಿ ಏನೂ ಆಶ್ಚರ್ಯ ಇಲ್ರಿ

ಶೆಟ್ರು ಅದು ಹೇಗಲ್ಲಾ, ನಾವು ಈಗ ಹೆಣ್ಣು ಕೊಟ್ಟು ಸಿಕ್ಕಬಿದ್ದೆವಲ್ಲಾ!

ಮಿತ್ರ—ಅದು ಏನ್ರಿ? ಇಷ್ಟು ವೈಭವಯಿರುವ ನಂಟರು ನಿಮಗ ಎಲ್ಲಿ ಸಿಕ್ಕುತಾರ್ರೀ! ನೀವು ಧನ್ಯರು-ನಿಮ್ಮ ಪೂರ್ವ ಪುಣ್ಯ-ನಿಮ್ಮ ಮಗಳ ಭಾಗ್ಯ-ಭಾಗ್ಯಂದ. ನಮ್ಮ ಒಂದು ಹುಡುಗಿಗೆ ಇನ್ನೂ ಮದುವೆಯಾಗಲಿಲ್ಲ. ಪ್ರಾಯವಾಗಿ ಏಳುವರ್ಷ ಆಯಿತ್ರಿ-ನಮ್ಮ ಯೋಗ್ಯತೆಗೆ ತಕ್ಕ ಸಂಬಂಧ ಸಿಕ್ಕುವುದಿಲ್ಲ-ಬಹಳ ಕಷ್ಟರೀ-ಬಹಳ ಕಷ್ಟ್ವಾಂದೆ ನಮ್ಮ ಜಾತಿಯಲ್ಲಿ ಒಂದು ಹುಡುಗಿಗೆ ವರನನ್ನು ಹುಡುಕಿ ನಂಟಸ್ತಿಕೆ ಮಾಡುವದೆಂದರೆ ಒಂದು ಅಶ್ವಮೇಧಯಾಗ ಮಾಡಿದಷ್ಟೇ ಕಷ್ಟ ಬಂತ್ರಿ-ಇಂಥಾ ನಂಟರು ಸಿಕ್ಕಿದ ನೀವೇ ಧನ್ಯರು-ನಿಮ್ಮದೊಂದ್ರೆ ಇಂದ್ರ ಲೋಕದ ದೇವೇಂದ್ರನ ನಂಟಸ್ತಿಕೆ! ನಮ್ಮ ಹುಡುಗಿ ಯೋಗ್ಯತೆ ಹ್ಯಾಗುಂಟು! ಆ ಭಗವಂತನೇ ಒಲ್ದ ನೀವು ಸಂತೋಷ ಪಡ್ಬೇಕ್ರಿ ಅಂಥಾ ಅಮರಾವತಿ ಸಂಬಂಧ ಗಂಟುಹಾಕಿಕೊಟ್ಟ ಆ ಭಗವಂತನನ್ನು ಸ್ತೋತ್ರ ಮಾಡ್ರಿ

ಶೆಟ್ರು—ಅದು ಹೇಗಲ್ಲಾ, ಆದರೆ ಈಗಿನ ನಮ್ಮ ಪ್ರೈಮಾನ ಸ್ವಲ್ಪ ಕಷ್ಟಕ್ಕೆ ನಿಂತಿದೆಯಲ್ಲಾ!

ಮಿತ್ರ—ಅದು ಏನ್ರಿ?

ಶೆಟ್ರು—ಏನಂತ ಹೇಳೋಣ! ನಮ್ಮ ಹುಡುಗಿಯು ಪೃಷ್ಟಿಕೊಳ್ಳುವ ಈಗ ಬದಲಾಗಿದೆ-ನಾವು ಹಾಕಿದ ಮುತ್ತಿನ ಬೆಂಡೋಲೆ ಈಗ ಬೇಡವಂತೆ 'ಫಸ್ಟ್‌ಕ್ಲಾಸ್ ಬ್ಲೂ ಜೇಗರ' (Blue Jagger) ವಜ್ರದ ಬೆಂಡೋಲೆ ಹಾಕಿಕೊಂಡು ಬರುವ ಹಾಗೆ ಮಾಯಿ, ಸಾಮಿಯರು ಹೇಳಿರುವರಂತೆ. ಅಲ್ಲದೆ ಎಲ್ಲದ ಒಳೆ ಇತ್ಯಾದಿ ಆಭರಣಗಳೆಲ್ಲ ತಿರಿಗಿ ಕರಗಿಸಿ ಈಗಿನ 'ಫ್ಯಾಶನ' (Fashion) ಪ್ರಕಾರ ಮಾಡಿಸಬೇಕಂತೆ-ಈ 'ಫ್ಯಾಶನ್ನಿಂದಾ' ನಮಗ ಸಾಕು!—ಎಲ್ಲ ಲೆರವಿಕೆಗಳು ಅತ್ಯಾಧುನಿಕ 'ಸ್ಟೈಲಿ' (Style) ನವುಗಳೇ ಆಗಬೇಕಂತೆ-ಶೀರೆ ಇಂದಿನ ನಮೂನೆದ್ದೇ ನಾಲ್ಕು-ಇನ್ನು ಏನೇನೋ ಆಗಬೇಕಾದ್ದರ ಪಟ್ಟಿ ಉಂಟು ಮೂರು ಮಾರುದ್ದ-ಇದೆಲ್ಲಾ ಇಲ್ಲದಿದ್ದರೆ ಅವಳಿಗೆ ಅವರೆ'ನಡುವೆ ಇರಲಿಕ್ಕೆ ಸ್ವಲ್ಪ ನಾಚಿಕೆ ಆಗುತ್ತದಂತೆ. ಅವನ್ನೆಲ್ಲ ನಮಗೆ ತೆಗೆದುಕೊಳ್ಳಲಿಕ್ಕೆ ತಿಳಿಯಲಿಕ್ಕಿಲ್ಲವಂತೆ ಅವಳ ಗಂಡನೇ ನಾಡ್ದು ಇಲ್ಲಿ ಬರುತ್ತಾನಾಗಿ ಬರೆದಿದ್ದಾನೆ. ನಾವಿಬ್ಬರೂ ಕಾರ್ ಮಾಡಿ ಮಂಗಳೂರಿಗೆ ಹೋಗಿ ಅಲ್ಲಿಂದ ರೈಲ್ ಹತ್ತಿ ಮದ್ರಾಸಿಗೆ ಹೋಗಿ,'ಲೇಟೆಸ್ಟ್ ಫ್ಯಾಶನ' (Latest Fashion) ಸರಕುಗಳು ಇರುವ, ಚಾಪಾಲಾಲ್, ಚೆಲ್ಲಾರಾಮ್, ಪಿ. ಓರ್. ಎಂಡ್ ಸನ್ಸ್, ಇವೆಲ್ಲಾ ಹೆಸರು ಯಾರಿಗೆ ಬರುತ್ತದ್ರಿ-ಅವರೆ ಕಲಿಯುದೆ ಯತ್ನವಿಲ್ಲ. ಈ ಹೊಸ ನಂಟಸ್ತಿಕೆ ಆದಮೇಲೆ ಇದೆಲ್ಲಾ ಸ್ವಲ್ಪ ಕಲಿಯಲಿಕ್ಕೆ ಅಭ್ಯಾಸಮಾಡುತ್ತಿದ್ದೇನೆ. ಇದೂ ಸಹ ಒಂದು ಕಷ್ಟವೇ-ಅಂಗಡಿಗಳಿಂದ ತೆಗೆಯ್ಯಬೇಕಂತೆ. ಆಮೇಲೆ ಹುಡುಗಿ ಹೇಳುತ್ತಾಳೆ, "ಅವರು ನಮ್ಮ ಮನೆಗೆ ಸುರುವಿಗೆ ಬರುವವರು-ಅವರಿಗೆ ತಕ್ಕ ಮರ್ಯಾದೆ ಅಂದರೆ-ಕನಿಷ್ಠ ಪಕ್ಷಕ್ಕೆ ಒಂದು ಐನೂರು ರೂಪಾಯಿಯಾದರೂ ಕೊಡಮಾಡಿ (ಬಂಗಾರ ಔತಣ) ಹುಡುಗಿರೆ ಮಾಡದಿದ್ದರೆ ನನಗೆ ಅಂತಿಂಗಿ ಹೋದಾಗ ಮರ್ಯಾದೆ ಸಿಕ್ಕಲಿಕ್ಕಿಲ್ಲ" ಎಂತ. ಈ ಮರ್ಯಾದೆಗಾಗಿ ನಾವ ದುಡ್ಡು ಒಗಿಯಲಿಕ್ಕೆ ಎಲ್ಲಿ ಹೋಗುವುದು?—ಕಷ್ಟ ಆಯಿತಲ್ಲ!

ಮಿತ್ರ—ಏನಾದರೂ ಮಾಡಿ, ಹೊಸ ಅಳಿಯನಲ್ಲವಾ!

ಶೆಟ್ರು ಏನೋ, ಎಂತೋ! ನೀವರು ಹಾಗೆ ಇದ್ದೀರ್ರೆನೋ! ನನಗೆ ಸ್ವಲ್ಪ ಚಿಂತೆ ಜ್ವರ ಬರುತ್ತಿದೆ. ನೀವು ಭಗವ-ಭಗವನ್ನು ಹಾಗೆ ನಿಲ್ಲುತ್ತದೋ?

ಮಿತ್ರ ನಿಮಗ ಹುಚ್ಚು. ಹ್ಯಾಗೆ-ನೀವು ಈಗ ಗಟ್ಟಿದ್ದನ್ನೇ ಯಾವಾಗಲೂ ನೋಡುತ್ತೀರಿ-ನಿಮ್ಮ ವಿಷಯ ನನಗೆ ಸ್ವಲ್ಪ ಆಲೋಚನೆ ಮಾಡಬೇಕಾಗಿದೆ ನಿನ್ನೆ, ವ್ಯವಹಾರಿಕ, ಹುಡುಗಿ ಮನಸ್ಸು ಸಂತೋಷಪಡಿಸಿ ಅಂದೆ.

ಶೆಟ್ರು—ಹೌದು, ಅವರ ಮನೆಯ ವೈಭವದಿಂದ ಒಂದು ನಾನು ದಣಿದೆ, ಮುಂದಕ್ಕೆ ಕಾಲಿಕ್ಕುವದರೆ ಹರಿಯುವದಾಗುತ್ತದೋ? ಹೌದು ಇನ್ನೇನು ಮಾಡಲಿ! ಇಳಿದಾಯಿತು, ನಾವು ನಮ್ಮ ಧೈರ್ಯಮಾಡುವದೆ. ಮತ್ತೇನು ಇಷ್ಟು ಆಯಿತಲ್ಲಾ—ನಾವು ಅವರ ಗಡ ಒಂದ ಹಾಗೆ ಗಿಯಾ ಈ ನಮ್ಮ ಬೇಡಾದ್ದು ಕಾಡಿ ಮುಖ್ಯವಿಲ್ಲ ಎಂದು ಅವಳಿಗೆ 'ಕಪ್ಸ್' (cups) ಆಗಬೇಕಂತೆ-ನಮ್ಮಲ್ಲಿ ಅವೆ ಇಲ್ಲ ಅಂತಿದೆ? ಏನಾ ಹಿರಿಯರು ಮಾಡಿಟ್ಟ ಕಂಚಿನ ಒಟ್ಟು, ಗಿಂಡಿ, ಕೊಳಗೆ ಅಷ್ಟೇ ಈಗಿನ ಫ್ಯಾಶನ್ ಬಂದಿ ಎಲ್ಲ ಅದೇ ನೋಡಿ ಮೇಲೆ ಕುಡಿ ಕುಡಿಯಾ ಇರಲಿಕ್ಕೆ ಬರಲ್ಲ! ಆ 'ಕಪ್ಸ್' ತೆಗೊಳ್ಳಲಿಕ್ಕೆ ಈ ವ್ಯಾಪಾರ ಕಡೆಗ ಬಂದೆ. ನಮ್ಮ ಈ ಸ್ಥಿತಿ ಯಾರ ಮುಂದೆ ಹೇಳೋದು ಆಗಿಲ್ಲ ಕೇಳಿ ನೀವೊಬ್ಬರೆ!

* * * *

ಶೆಟ್ರು—(ಅದು ಬರುವ ಕಾಲ ನಂತರ ಮಗಳೊಡನೆ) ...... ತನ್ನನ್ನ ಪರಚಿಮಾಡಬೇಡ. ನಾನು ಜೀ

LAKSHMI'S

"RECORD EVENT IN THE HISTORY OF LIFE INSURANCE"

Year	Value of Policies issued	Total Business	Life Fund
1924	22,67,750	22,67,750	500
1928 -	55,29,500	1,02,11,000	5,29,000
1932 —	70,88,750	1,31,88,000	27,35,000
1936 -	110,00,000	5,00,00,000	67,61,100
1938 -	161,00,000	11,77,00,000	1,01,71,696

"A **LAKSHMIS** POLICY IS A BRIDGE OVER THE ABYSS OF DARKNESS DESTITUTION AND DESPAIR IT LINKS THE HOPES AND EFFORTS OF THE PRESENT TO THE FUTURE OF YOUR CHOISE"

For Agency Particulars, please apply to—

THE BRANCH MANAGER,

LAKSHMI INSURANCE CO., LTD.,

334, Thambuchetty, Street,

G. T. MADRAS.

OR

A. B. KRISHNA RAJ,

Organiser,

LAKSHMI INSURANCE CO LTD. UDIPI

ಪಡಲ್ಲಿರುವುದು ನಿನಗೆ ಸಮಾಧಾನವಿಲ್ಲವೇ? ಈಗ ಎಲ್ಲಾ ನಿನಗೆ ಗೊತ್ತಾಗುತ್ತದೆ, ಹೌದಾ? ನೀನು ಬಾವಿಗೆ ಹಾರುವುದು ಬೇಡ–'ನಿಮ್ಮಿಬ್ಬರ ಪರವಾಗಿ ನಾನೇ ಹಾರಿಬಿಡುತ್ತೇನೆ –ನಾನಿದ್ದೇನಲ್ಲವೇ ನಿಮಗೆ ರಗಳೆ–ನಾಳೆ ನಾನಿಲ್ಲ! ನೋಡು–ನಾನು ಅಂದೇ ಹೇಳಿದ್ದೇನಲ್ಲಾ? ನಿನ್ನ ಗಂಡನದ್ದೂ ಅವನ ಮನೆಯವರದ್ದೂ 'ಸ್ಪೀಡ್' ಜೋರು ಆಗುತ್ತೇಂತ! ನೀನು ಸಹಾ ಆ ಆಟೋಪಕ್ಕೆ ಮರುಳಾದಿ –ನೀವು ಮೋಟರಿನ ಚಕ್ರ ತಿರುಗುವುದೇ ನೋಡಿದ್ದಲ್ಲದೆ 'ಪೆಟ್ರೋಲ್ ಟಾಂಕಿ'ಗೆ ಕೋಲುಹಾಕಿ ಆಗಾಗ್ಗೆ ನೋಡುತ್ತಿದ್ದರೆ. ಇಷ್ಟೇ 'ಪೆಟ್ರೋಲ್' ಖರ್ಚಾಯಿತು ಅಂತ ಗೊತ್ತಾಗುತಿತ್ತು ಈಗ 'ಟ್ಯಾಂಕ್' ಬತ್ತಿ ಹೋಗಿದೆ—ಚಕ್ರ ನಿಂತಿದೆ—ನೋಡು, ಚಕ್ರ ಓಡಬೇಕಾದರೆ—'ಪೆಟ್ರೋಲ್' ಬೇಕು—ಪೆಟ್ರೋಲ್ ಅಂದೆ! ಅಂದರೆ ದುಡ್ಡು ದುಡ್ಡು, ಗೊತ್ತಾಯಿತೆ! ನಿನಗೆ ನೋಡು, ದೇವರು ಕೊಟ್ಟ ಎರಡು ಹೆಮ್ಮಕ್ಕಳು ಇದ್ದಾವೆ ಅವುಗಳನ್ನು ಯಾರ ಮನೆಗೆ ನಾಳೆ ಕೆಲಸಕ್ಕೆ ಕಳುಹಿಸೋದು!—ಅವನನ್ನು ಸಿವಿಲ್ ಜೈಲಿನಿಂದ ಬಿಡಿಸಲು ನನಗೆ ಸಾಧ್ಯವಿಲ್ಲ—ನೀನು ಕಣ್ಣೀರಿಟ್ಟೇಂತ ನಾನು ಅವನಿಗೆ ಬೇಂಕನಲ್ಲಿ ಜಾಮೀನು ಹಾಕುವಂತಿಲ್ಲ–ನಮ್ಮ ಮನೆ ಸಹಾ ನಿಮ್ಮವರ ಹಿಂದೆಯೇ ಕೋರ್ಟು ಹರಾಜಿನಲ್ಲಿ ಹಾರಿ ಹೋಗೋದು ಬೇಡ. ನಿನ್ನ ನೆಂಟಸ್ತಿಕೆಯು ದನಿಯಿಂದ, ಆಡಂಬರದ ಹಾರಾಟದಿಂದ, ಆಟೋಪದಿಂದ ನಮ್ಮ ಮನೆಯು ಡಂ, ಡಂ–ಡಂ ಆಗುತ್ತಾ ಬರುತ್ತದೆ, ನಿಮಗೆಲ್ಲಾ 'ಫೇಶನ್', 'ಕಾರ್', 'ಸ್ಟೈಲ್'–ತಲೆಯಿಲ್ಲದ ಪ್ರಾಣಿಗಳು–ನಿಮಗೆ ಮತಿಯಿಲ್ಲ–ಬಾಕಿಯವರ ಗತಿ ಹಾಳುಮಾಡಲಿಕ್ಕೆ ಇಳಿದಿದ್ದೀರಿ ನೀವು–ಜೀವ ಇರುವಾಗಲೇ ಸತ್ತಾಯಿತು ನಾವು–ಇನ್ನು ಮನೆ ಮನೆ ಬೇಡಿದ್ದು ಸೈ–ಡಂಭ, ಡಂಭ–ಡಂ-ಡಂ-ಡಂ-ಫಟ್!'–ಅಯ್ಯೋ ದೇವರೇ ಇವಕ್ಕೆಲ್ಲಾ ಮದ್ದೇನಪ್ಪಾ! ಈ ರೋಗಕ್ಕೆ ಚಿಕಿತ್ಸೆ ಯಾವುದು? ಎಲ್ಲಿ ವೈದ್ಯರು? ಸಮಾಜವೇ ಹಾಳಾಗುತ್ತದಲ್ಲಾ! ಯಾರಲ್ಲಿ ಹೋಗಲಿ, ಯಾರ ಹತ್ತಿರ ಕೇಳಲಿ–ಓ, ಆ ಲೇಖಕರ ಹತ್ತಿರ ಕೇಳುವ–ಎಲ್ಲಿ ಸ್ವಾಮಿ! ಸ್ವಾಮೀ ಲೇಖಕರೇ, ನಮ್ಮ ಸಮಾಜಕ್ಕೆ ತಗಲಿದ ಡಂಭಾಚಾರದ ವ್ಯಾಧಿನಿವಾರಣೆಗೊಂದು ಮದ್ದು ಹೇಳಲಾರಿರಾ?

ಲೇಖಕ–'ಬಜೆಟ್', 'ಬಜೆಟ್'! (Budget)

ಶೆಟ್ಟಿ–ಹಾಗಂದರೇನು, ಸ್ವಾಮೀ? ನಮಗೆ ತಿಳಿಯಲಿಲ್ಲವಲ್ಲಾ!

ಲೇಖಕ—ಬರುವ ಲೇಖನದಲ್ಲಿ ಅದರ ವಿಷಯ ವಿಸ್ತಾರವಾಗಿ ಹೇಳುತ್ತೇನೆ.

ತಿದ್ದುಪಡಿ.

ತಾ. 13 10 '38ರ ಸಂಚಿಕೆಯ 10ನೇ ಪುಟದಲ್ಲಿ ಪ್ರಕಟವಾದ 'ಬೊಂಬಾಯಿ ಸಮಾಚಾರ'ದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ದೇವರ ಶಿವಸಮಾಧಿ ಉತ್ಸವ ಎಂಬ ವಿಷಯದ 9ನೇ ಪಂಕ್ತಿಯಲ್ಲಿ ಅನಗರಿಯ ರಮಾನಂದರವರು ಎಂಬುದು ಅನಗಾರಿಕ ರಮಾನಂದರು ಎಂದಾಗಬೇಕು. ಬಿಲ್ಲವರ ಎಸೋಸಿಯೇಶನಿನ ಪಸ್ತವ ವಾರ್ಷಿಕೋತ್ಸವವು ಸಪ್ತಮವಾರ್ಷಿಕೋತ್ಸವವಾಗಬೇಕು. ಅದರಲ್ಲಿಯ 5ನೇ ಮತ್ತು 6ನೇ ಪಂಕ್ತಿಗಳಲ್ಲಿಯ ಶ್ರೀ ಅನಗಾರಿಯ ರಮಾನಂದ ಶ್ರೀ, ಘಂಟಿರಾಮ ಅಯ್ಯರ್ ಎಂಬುದು ಅನಗಾರಿಗ ರಮಾನಂದ ಶ್ರೀ ಮುಂಚೇರಿ ರಾಮ ಅಯ್ಯರ ಎಂದಾಗಬೇಕು. ಅಂತೆಯೇ 8ನೇ ಪಂಕ್ತಿಯಲ್ಲಿ 'ಪ್ರೊ. ಶೀನಪ್ಪನವರ' ಎಂಬುದನ್ನು ಪ್ರೊ. ಶೀರಪ್ಪನವರ ಎಂದೂ ತಿದ್ದಿ ಕೊಳ್ಳಬೇಕಾಗಿದೆ

ಬೊಂಬಾಯಿ ಸಮಾಚಾರ

(ನಮ್ಮ ಸ್ವಂತ ಬಾತ್ಮೀದಾರರಿಂದ)

20 10-'38

ಕಾಮಗಾರರ ಪ್ರಚಂಡ ಸಭೆ

ಮುಂಬಯಿ ಎಸೆಂಬ್ಲಿಯಲ್ಲಿ ಪಾಸಾಗಲಿರುವ ಟ್ರೇಡ ಡಿಸ್ಪ್ಯೂಟ್ಸ್ ಬಿಲ್ಲಿಗೆ ವಿರುದ್ಧವಾಗಿ, ನವಂಬರ್ 7ನೇ ತಾರೀಕಿಗೆ ಒಂದು ದಿನದ ಸಂಪನ್ನು ಹೂಡುವ ಯೋಜನೆಯನ್ನು ಕಾಮಗಾರರಿಗೆ ತಿಳಿಸಿ, ಕಾಮಗಾರರಿಗೆ ವಿರುದ್ಧವಾಗಿ ನಡೆಯುತ್ತಿರುವ ಕೆಲವು ಸಮಕಾಷಾದಿಗಳ ಮತ್ತು ಕೋಂಗ್ರೆಸ ಮುಂದಾಳುಗಳ ವಿರೋಧವನ್ನು ಮುರಿಯುವುದಕ್ಕಾಗಿ, ಕಳೆದ ರವಿವಾರ ಸಂಜೆಗೆ 20 000 ಕೆಲಸಗಾರರ ಪ್ರಚಂಡ ಸಭೆಯೊಂದು ಬೊಂಬಾಯಿ ಪ್ರೆಸಿಡೆನ್ಸಿ, ಟ್ರೇಡ ಯೂನಿಯನ್ ಕೋಂಗ್ರೆಸಿನ ಪರವಾಗಿ, ಶ್ರೀ. ಜಮ್ನಾದಾಸ್ ಮೆಹತರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವತಂತ್ರ ಲೇಬರ್ ಸಂಘ, ಜಿ. ಐ. ಪಿ. ಒ. ಬಿ. ಬಿ. ಸಿ. ಐ. ಪ್ರೆಸ್ ವರ್ಕರ್ಸ್ ಯೂನಿಯನ್ ಮೊದಲಾದ ಸಂಘದವರೆಲ್ಲಾ ಮೆರವಣಿಗೆ ಮಾಡಿ ಕೊನೆಗೆ ಸರ್ವರೂ ಕಾಮಗಾರ ಮೈದಾನಿಗೆ ಬಂದು ನೆರೆದರು.

ಈ ಬಿಲ್ಲಿನಿಂದ ಕಾಮಗಾರರಿಗೇನೂ ಪ್ರಯೋಜನವಿಲ್ಲವೆಂದೂ ಇದು ಕೆಲಸಗಾರರಿಗೆ ಹಾನಿಕರವಾಗಿದೆ ಮತ್ತು ಕೆಲಸಗಾರರ ಸ್ವಾತಂತ್ರ್ಯಕ್ಕೆ ಕಂಟಕಪ್ರಾಯವಾಗಿದೆ ಎಂಬ ವಿಷಯವನ್ನೊಳಗೊಂಡ ಶ್ರೀ ಪುರಂದರೆಯವರ ಠರಾವೊಂದು ಸರ್ವಾನುಮತದಿಂದ ಪಾಸಾಯಿತು.

ಈ ಬಿಲ್ಲು ನಮಗೇನು ತೋರಿಸುತ್ತದೆಂದರೆ, ಕೋಂಗ್ರೆಸ ತನ್ನ ಚುನಾವಣೆ ಪತ್ರಕ್ಕೆ ಸರಿಯಾಗಿ ನಡೆಯದ ಕಾಮಗಾರರ ಅಭಿವೃದ್ಧಿಗೆ ಪ್ರಯತ್ನಿಸುತ್ತೇವೆಂಬ ತನ್ನ ಧ್ಯೇಯವನ್ನು ಮುರಿಯುತ್ತದೆ. ಮಾತ್ರವಲ್ಲ ಶ್ರೀ ನಂದರವರು, ಮತ್ತು ಮುಂಬಯಿಯ ಇನ್ನಿತರ ಮುಂದಾಳುಗಳು ಬಿ. ಪಿ. ಟಿ. ಯು. ಸಿ. ಯು. ಕಾಮಗಾರರ ಸಂಘವಲ್ಲ, ಮೊದಲು ಆದು ಬಿಲ್ಲಿಗೆ ಒಪ್ಪಿಗೆಯನ್ನಿತ್ತು, ಈಗ ವಿರೋಧಿಸುತ್ತಿದೆ ಅದ್ದರಿಂದ ನಾವಿದನ್ನು ಒಪ್ಪಿಕೊಳ್ಳುವುದಿಲ್ಲವೆಂದು ಹೇಳುತ್ತಿರುವರು. ಇವನ್ನು ನೋಡುವಾಗ ಕೋಂಗ್ರೆಸ್ಸಿಗೆ ಕಾಮಗಾರರ ಮೇಲೆ ದಯೆ ಇಲ್ಲವೆಂದೂ, ಕಾಮಗಾರರನ್ನು ಮತ್ತೂ ಅಧೋಗತಿಗಿಳಿಸಿ ಅವರ ಸಂಘಗಳನ್ನೆಲ್ಲಾ ನಿರ್ನಾಮ ಮಾಡಬಯಸುತ್ತದೆಂದೂ ಇದರಿಂದ ತಿಳಿದುಬರುತ್ತದೆ.

ಜಮ್ನಾದಾಸ್ ಮೆಹತಾರವರು ಅಧ್ಯಕ್ಷ ಭಾಷಣ ಮಾಡುತ್ತಾ ಹೇಳಿದರು "ಕೆಲಸಗಾರರು ಸಂಪು ಹೂಡುವಲ್ಲಿ ಅವರನ್ನು ಬಂಧಿಸುವ ಅವಶ್ಯಕ ಕ್ರಮವು ಸರಕಾರದ ಕೈಯಲ್ಲಿ ಇಲ್ಲ ಬಿಲ್ಲಿನ 32 ವಿಷಯಗಳನ್ನು ಪಾಸು ಮಾಡಲು 58 ದಿನಗಳು ಹಿಡಿಯಿತು ಸಂಪೂರ್ಣವಾಗಿ ಮುಗಿಸಲು ಎಷ್ಟು ದಿವಸ ಬೇಕೋ ಯಾರಿಗೆ ಗೊತ್ತು. ಈ ಬಿಲ್ಲನ್ನು ಮುಂಬಯಿಗೆ ತರುವುದಿಲ್ಲವೇಕೆಂದರೆ, ಇಲ್ಲಿ ಕಾಮಗಾರರ ವಿರೋಧವು ಮಿತಿಮೀರೀತೆಂಬ ಭಯವಿದೆ. ಪೂನಾ ಕೃತರು ಭಯಂಕರ ಚಳವಳ ಹೂಡಬಹುದೆಂಬ ಹೆದರಿಕೆಯಿಂದ ಟೆನೆಸ್ಸಿ ಬಿಲ್ಲನ್ನು ಪೂನಕ್ಕೆ ಕೊಂಡು ಹೋಗುವುದಿಲ್ಲ ನಾಳೆ ದಿನ ಒಂದು ದಿವಸ ಮಹಾ ಸಂಪನ್ನು ವಿಜಯಯಾಗಿ ಮಾಡಲು ಸರ್ವರೂ ಪ್ರಯತ್ನಿಸಬೇಕು."

ಶ್ರೀ. ಸಂಬಕರ್ರವರು ಇಂಗ್ಲೆಂಡಿನ ಲೇಬರ್ ಮುಖಂಡರಾದ ಶ್ರೀ. ಬ್ರೈಡ್‌ಲೀಯವರ ಪತ್ರವೊಂದನ್ನು ಓದಿ ಹೇಳಿದರು. ಅದರಲ್ಲಿ ಕೋಂಗ್ರೆಸ ಸರಕಾರವು ಬ್ರಿಟಿಷ್ ಸರಕಾರಕ್ಕಿಂತಲೂ ಹಾನಿಕರವಾದ ಠರಾವುಗಳನ್ನು ಪಾಸುಮಾಡುತ್ತಿದೆ ಎಂದು ಬರೆದಿತ್ತು.

ಈ ಸಭೆಯ ಮತ್ತೊಂದು ವಿಶೇಷವೇನೆಂದರೆ, ಅಂದು ಬೆಳಗ್ಗೆ ಈ ಸಭೆಯ ಕುರಿತು ಜನರಿಗೆಲ್ಲಾ ತಿಳಿಸಲು ಒಂದು ಲೋರಿಯ ಮೇಲೆ ಕೆಲವು ಕಾಮಗಾರರು ನಗರದಲ್ಲೆಲ್ಲಾ ಸುತ್ತುತ್ತಿರಲು ಒಂದು ಕಡೆಯಲ್ಲಿ ಕೆಲವರು ಇವರ ಮೇಲೆ ಕಲ್ಲೆಸೆದು ಗಾಯಪಡಿಸಿದ್ದರು ಹೀಗೆ ರಕ್ತದಿಂದ ತೊಯ್ದ ಬಡಪಾಯಿಗಳನ್ನು ಜನತೆಯ ಮುಂದಿಟ್ಟು ಕೋಂಗ್ರೆಸ್ ಸರಕಾರದಲ್ಲಿ ಎಂತಹ ದುಷ್ಕೃತ್ಯವು ಹೇಗೆ ನಡೆಯುತ್ತಿದೆಂಬುದನ್ನು ಜನರಿಗೆ ದಿಗ್ದರ್ಶಿಸಿದರು.

ಇತರ ಮುಂದಾಳುಗಳೂ ಭಾಷಣ ಮಾಡಿದ ನಂತರ 'ಕೆಂಪು ಧ್ವಜಕ್ಕೆ ಜಯವಾಗಲಿ' 'ಕಾಮಗಾರರಿಗೆ ಸ್ವಾತಂತ್ರ್ಯ ಸಿಗಲಿ' ಎಂಬ ಜೈಕಾರದೊಡನೆ ಸಭಾಂತ್ಯವಾಯಿತು.

ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ಲೂ ಕಾಮಗಾರರೂ

ಶ್ರೀಗಳಾದ ಎನ. ಎಸ್. ಮಿರಜ್‌ಕರ್, ಕೆ. ಎನ್. ಜೋಗ್ಳೇಕರ್, ಬಿ. ಟಿ. ರನದೇವ್, ಎಸ್ ಎ ಡಾಂಗೇ (ಟ್ರಾಮ್‌ವೇ ಕೆಲಸಗಾರರ ಸಂಘ) ಜಿ. ಬಿ. ಖಾರೆ (ಬಿ. ಬಿ. ಸಿ. ಐ.) ಎಸ್ ಎಸ್ ಪಾತ್ಕರ್ (ಗಿರ್ಣಿ ಕಾಮ್‌ಗಾರ್ ಯೂನಿಯನ್) ಆರ್. ಆರ್ ಪಡಿಸ್ನೀಕರ್ ಮೊದಲಾದವರು (ಇವರೆಲ್ಲಾ ಕೊಂಗ್ರೆಸ್ ಸದಸ್ಯರು) ಕೆಳಗಿನ ಪ್ರಕಟಣೆಯನ್ನು ಕೊಟ್ಟಿದ್ದಾರೆ.

ನವಂಬ್ರ 7ನೇ ತಾರೀಕಿಗೆ ಒಂದು ದಿವಸದ ಮಹಾ ಸಂಪು ಹೂಡಬೇಕೆಂದು ಬೊಂಬೇ ಪಿ. ಯು. ಸಿ. ಯು. ಜನರಿಗೆಲ್ಲಾ ಕೇಳಿಕೊಂಡಿದೆ. ಮುಂಬಯಿ ಸರಕಾರದ ಲೇಬರ್ ಕಾರ್ಯಕ್ರಮಗಳೆಲ್ಲಾ ಪ್ರಕಟಿಸಲ್ಪಟ್ಟಾಗ ನಾವು ಇದರ ಒಡಂಬಡಿಕೆಯ ಕೆಲವು ಧ್ಯೇಯಗಳನ್ನು ವಿರೋಧಿಸಲಿಲ್ಲ. ಆವರೆ ಯೂನಿಯನು ಕೊಂಗ್ರೆಸಿನಿಂದ ಮತ್ತು ಮಿಲ್ಲು ಅಧಿಕಾರಿಗಳಿಂದ ಸ್ವೀಕರಿಸಲ್ಪಡಬೇಕೆಂದೂ ಮತ್ತು ಈ ಸಂಘಗಳು ಸ್ವತಂತ್ರವಾಗಿ ಕೆಲಸಮಾಡಲು ಬಿಡಬೇಕೆಂದೂ ನಾವು ಕೇಳಿಕೊಂಡಿರುವವು ಕಂಪೆನಿಯ ಸಂಘಗಳಿಗೆ ಇದು ಹುರುಪು ಕೊಟ್ಟಿದನ್ನೂ ಮತ್ತು ಕೆಲಸಗಾರರನ್ನು ಒತ್ತಾಯದಿಂದ ಸದೆಬಡೆಯಬೇಕೆಂಬ ಈ ಒಕ್ಕಣೆಯ ಧ್ಯೇಯವನ್ನು ನಾವು ವಿರೋಧಿಸುತ್ತೇವೆ. ಇಂಥಾದ್ದನ್ನೆಲ್ಲ ತೆಗೆದು ಹಾಕಲು ನಾವು ಸ್ಪಷ್ಟವಾದ ಉಪಕರಣಗಳನ್ನಪೇಕ್ಷಿಸುತ್ತೇವೆ.

ಈ ಸಮಯದ ನಂತರ ಮುಂಬಯಿ ಸರಕಾರವು ಮೊದಲನೆಯ ಒಕ್ಕಣೆಯಲ್ಲಿದ್ದ ವಿರೋಧ ವಿಷಯಗಳನ್ನೆಲ್ಲ [illegible] ಮತ್ತೊಂದು ಒಕ್ಕಣೆಯನ್ನು ಸಭೆಯ ಮುಂದಿಟ್ಟು ಉಪಕರಣಗಳನ್ನೆಲ್ಲ ತೆಗೆದು ಹಾಕಿ ಈ ಬಿಲ್ಲನ್ನು ಒಂದು ಸಿಲೆಕ್ಟ್ ಕಮಿಟಿಯ ಮುಂದಿಡಬೇಕೆಂದು ಎತ್ತಿನಿತು.

ಹೀಗಿರುವಾಗ ಕಾಮಗಾರರು ತಮಗೆ ಬೇಕಾದ ಬದಲಾವಣೆಗಳನ್ನು ಮಾಡಲು, ಉಪಕರಣಗಳನ್ನು ಕಳುಹಿಸಿತು. ಆದರೆ ಸರಕಾರವು ಇದನ್ನು ನಿರಾಕರಿಸಿತು.

ಮಾತ್ರವಲ್ಲದೆ ಟ್ರೇಡ್‌ಯೂನಿಯನುಗಳು ಪ್ರಥಮತಃ ಈ ಬಿಲ್ಲಿಗೆ ಒಪ್ಪಿಗೆಯನ್ನಿತ್ತಿದ್ದವೆಂದೂ ಬಿ ಪಿ ಟಿ. ಯು. ಸಿ ಯು ಕಾಮಗಾರರ ಪರವಾಗಿಲ್ಲವೆಂದೂ ಕೊಂಗ್ರೆಸ್ ಮಂತ್ರಿಮಂಡಲವು ತಪ್ಪುಭಾವಿಸುತ್ತಿದೆ ನಾವು ಸದಾಕಾಲವೂ ಕಾಮಗಾರರೊಡನೆ ಬೆರೆತು ಅವರೊಡನೆ ಕೆಲಸಮಾಡುತ್ತಿರುವುದರಿಂದ ಕಾಮಗಾರರು ಈ ಬಿಲ್ಲನ್ನು ಸಂಪೂರ್ಣವಾಗಿ ವಿರೋಧಿಸುತ್ತಿರುವರೆಂದೂ, ಮತ್ತು ಮಂತ್ರಿಮಂಡಲವು ಇದನ್ನು ಜಾರಿಗೆ ತಂದಲ್ಲಿ ಇದನ್ನು ವಿರೋಧಿಸಲು ತಯಾರಿದ್ದೇವೆಂದೂ ಚೆನ್ನಾಗಿ ತಿಳಿದಿರುವೆವು.

ಕೊಂಗ್ರೆಸ ಕಾಮಗಾರರ ಪರವಾಗಿ ಕೆಲಸಮಾಡಲು ಒಪ್ಪುವುದಿಲ್ಲ, ಮತ್ತು ಕಾಮಗಾರರು ತಮ್ಮನ್ನು ಅನುಸರಿಸುವುದಿಲ್ಲವೆಂದು ಸಾರುತ್ತಿದೆ.

ಇಂಥಾ ಮುಖ್ಯಸಂದರ್ಭಗಳಲ್ಲಿ ಕೊಂಗ್ರೆಸ್ ಕಾಮಗಾರರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು. ಆದರೆ ಮಂತ್ರಿಮಂಡಲವು ಹೀಗೆ ಮಾಡಲಿಲ್ಲ.

ಶಾಂತವಾದ ಒಂದು ದಿವಸದ ಸಂಪಿನ ಮೂಲಕ ನಾವು ನಮ್ಮ ಧ್ಯೇಯವನ್ನೂ ಅಭಿಪ್ರಾಯವನ್ನೂ ಕೊಂಗ್ರೆಸಿಗೆ ತಿಳಿಸಬೇಕೆಂದಿರುವೆವು.

ಕಾಮಗಾರರು ಈ ಬಿಲ್ಲನ್ನು ವಿರೋಧಿಸುವುದೇಕೆಂದರೆ ಇದು ಕಾಮಗಾರರ ಯೂನಿಯನಿನ ಧ್ಯೇಯಗಳನ್ನು ಬುಡದಿಂದಲೇ ನಾಶಮಾಡುತ್ತದಲ್ಲದೆ, ರಾಷ್ಟ್ರೀಯ ಸ್ವಾತಂತ್ರ್ಯದ ಚಳವಳಿಕ್ಕೂ ಕಂಟಕಪ್ರಾಯವಾಗಿದೆ.

ಹರತಾಳಗಳೂ ಸಂಪುಗಳೂ ಅನ್ಯಾಯಕರವೆಂದು ಹೇಳಿ ಕಾಮಗಾರರ ಸಂಘರ್ಷಣಕ್ಕೆ ಆತಂಕ ತರುವುದಲ್ಲದೆ ರಾಷ್ಟ್ರೀಯ ಸಂಗ್ರಾಮದಲ್ಲಿ ಭಾಗವಹಿಸುವ ಪ್ರಾಮುಖ್ಯ ಸೈನ್ಯವೊಂದನ್ನು ಮುರಿಯಲೆತ್ನಿಸುತ್ತಿದೆ ಈ ಬಿಲ್ಲು.

ಈಗಿರುವಂತಿರುವ ಬಿಲ್ಲು ಜನತೆಯ ಒಗ್ಗಟ್ಟಿಗೆ ಮಾತ್ರವಲ್ಲ ಕೊಂಗ್ರೆಸ್ಸಿಗೂ ಹಾನಿಕರವಾಗಿದೆ ಹೀಗೆ ಜನತೆಗೆ ಕಂಟಕಪ್ರಾಯವಾದ ಬಿಲ್ಲು ಕೊಂಗ್ರೆಸ್ಸಿಗೆ ಅಪಾಯಕರವಾಗಬೇಕು. ಮಿಲ್ಲು ಮಾಲಕರುಗಳಿಂದ ಮೆಚ್ಚಿಸಲ್ಪಟ್ಟೆಂದು ಬಿಲ್ಲನ್ನು ಪಾಸುಮಾಡುವುದರಿಂದ ಕೊಂಗ್ರೆಸು ತನ್ನ ಶತ್ರುಗಳಿಗೆ ಸಹಾಯಮಾಡುವುದರ ಮೂಲಕ ಬಡ ಕಾಮಗಾರರನ್ನು ಮತ್ತು ಕೊಂಗ್ರೆಸನ್ನು ಅನುಕರಿಸುವವರನ್ನು ಅಧಃಪತನಕ್ಕೆ ಒಯ್ಯುತ್ತಿದೆ

ತಿದ್ದುಪಡಿ.

ನಾವು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ ಉಡುಪಿ ಬಾತ್ಮಿಯಲ್ಲಿ ಮುನಿಸಿಪಾಲಿಟಿಯ ಕಾಯಂ ಆದ ಸಿಬ್ಬಂದಿಯ ಹೆಸರಲ್ಲಿ ಕೆ ಶೀನಪ್ಪ ಸೆಟ್ಟಿ ಎಂಬ ಹೆಸರಿಗೆ ಬದಲಾಗಿ ಕೆ ಶಿ ನಪ್ಪ ಸೆಟ್ಟಿ ಎಂದೂ ವಿಲಿಯಂ ಕರ್ನೇಲಿಯೊ ಎಂಬುದರ ಬಗ್ಗೆ ವಿಲಿಯಂ ಕರ್ನೆಲಿಯೊ ಎಂದೂ ತಪ್ಪಾಗಿ ಪ್ರಕಟವಾಗಿದೆ. ಅದಕ್ಕಾಗಿ ವಿಷಾದಿಸುತ್ತೇವೆ

ನೋಟೀಸು

ಪುತ್ತೂರು ತಾಲೂಕು ಬೆಳ್ಳಿಪ್ಪಾಡಿ ಗ್ರಾಮದ ಬೆಳ್ಳಿಪ್ಪಾಡಿ ಕುಟುಂಬದ ಯಜಮಾನ ವ ಅಡಳ್ತೆದಾರ ಬೆಳ್ಳಿಪ್ಪಾಡಿ ರಾಮಪ್ಪ ರೈಗಳ ಮೊಮ್ಮಗ ಬೆಳ್ಳಿಪ್ಪಾಡಿ ರಾಮಣ್ಣ ರೈಯು ತಿಳಿಯಪಡಿಸುವದೇನಂದ್ರೆ:—

ನಮ್ಮ ಕುಟುಂಬದ ಕಿರಿ ಮೆಂಬರನಾದ ಬೆಳ್ಳಿಪ್ಪಾಡಿ ವೆಂಕಪ್ಪ ರೈಗಳ ಅಳಿಯ ಮಂಜಪ್ಪರೈಯು ತಾ 13–10–'38ನೇ ನವಯುಗ ಪೇಪರಿನಲ್ಲಿ ತಾ. 1 10 38ರಲ್ಲು ಪ್ರಕಟಸಿದ ನೋಟೀಸಿನ ಮತ್ಲಬುಗಳು ತಿಳಿಯಿತು. ಸದ್ರಿ ಪ್ರಕಟಣೆಯ ವಾಚಕಗಳು ಪೂರ್ಣ ಸುಳ್ಳಾಗಿರುತ್ತವೆ. ಸದ್ರಿ ಮಂಜಪ್ಪ ರೈಯನ್ನು ಕೊಡ್ಲಮೊಗ್ರು ಸಂಕಪ್ಪ ರೈ ಮತ್ತು ಪಿ ರಾಮಯ್ಯ ಆಳ್ವ ಕೂಡಾ ಇವರು ಒಳಸಂಚಿಗೆ ತೆಗೆದುಕೊಂಡು ಅಕ್ರಮ ಲಭ್ಯ ಪಡಿಯಬೇಕೆಂಬ ಕೆಟ್ಟ ವಿಚಾರದಿಂದ ಅದನ್ನು ಪ್ರಕಟಸಿದ್ದಾಗಿರುತ್ತದೆ.

ನನ್ನ ಹಿರಿಯರಾಗಿದ್ದ ಮಂಜಪ್ಪರೈಗಳು ಪೂರ್ತಿ ತೀರಿದ ಅವರ ನಂತ್ರದ ಅಡಳ್ತೆದಾರನಾದ ನನಗೆ ಅಡಳ್ತೆ ಬಿಟ್ಟುಕೊಟ್ಟಂತೆ ಅವರ ಮರಣದ ವರೇಗೆ ಆ ಹಕ್ಕಿನಿಂದಲೂ ಅನಂತ್ರ ಶಿಲಶಿಲೆ ಹಕ್ಕು ಪ್ರಕಾರ ನಾನು ಕುಟುಂಬದ ಆಡಳ್ತೆ ನೋಡಿಕೊಂಡು ಬರುವದಾಗಿರುತ್ತದೆ. ನಾನು ಆ ಮಂಜಪ್ಪರೈಕ್ಕಿಂತ ಹಿರಿಯನೆಂಬ ಬಗ್ಗೆ ಸೆಟ್ಲ ರಿಕಾರ್ಡುಗಳು ಇರುತ್ತವೆ. ನನ್ನ ನಂತ್ರ ಬೆಳ್ಳಿಪ್ಪಾಡಿ ಕೊರಗಪ್ಪ ಯಾನೆ ವೆಂಕಪ್ಪ ರೈ ಎಂಬವನು ಆಡಳ್ತೆಗೆ ಹಕ್ಕುದಾರನಾಗಿದ್ದು ಮಂಜಪ್ಪರೈಯು ಆತನಿಗಿಂತಲೂ ಕಿರಿಯ ಮೆಂಬರನಾಗಿರುತ್ತಾನೆ

ಆದ್ದರಿಂದ ಸದ್ರಿ ಮಂಜಪ್ಪ ರೈಗೆ ಯಾರಾದರೂ ಯಾವ ರೂಪದಿಂದಲೂ ಸಾಲ, ಒತ್ತಿಗಳು ಗೇಣಿ ವಗೈರೆ, ಕೊಡಕೂಡದು. ಕೊಟ್ಟಿದ್ದರೆ ಅದು ನಮ್ಮ ಕುಟುಂಬಕ್ಕೆ ಎಷ್ಟುಮಾತ್ರ ಬಾಧಿಸುವಂಥಾದ್ದಲ್ಲವೆಂಬ ಸಂಗ್ತಿ ಈ ಮೂಲಕ ತಿಳಿಸಿರುತ್ತೇನೆ.

ಬೆಳ್ಳಿಪ್ಪಾಡಿ ಯಜಮಾನ ರಾಮಣ್ಣ ರೈ.

ತಾ. 20–10–1938.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು,

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಮೇಜೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು, ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡೋಣಾಗುವುದು.



CROWN RUBBER STAMP CO,
Balmat Road, MANGALORE.
Included by the Mysore Govt Stores Purchase Committee in the list of approved Firms.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
[illegible] ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
[illegible] ಲಾಮು ಈ ಕೆಳಗಣಂತೆ ವ್ಯತ್ಯಾಸವಾದಲಾಗಿದೆ

ಅಮೃತಾಂಜನ ಡಿಪ್ಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು

ನಮ್ಮ ಟ್ರೇಡ್ ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವ ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

HOTEL INDIANA

BAR AND RESTAURANT

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು
ಯೋಚಿಸುವಿರೇಕೆ!

ಹೋಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ
ಕೇಂದ್ರವಾದ ಹಂಪನ್‌ಕಟ್ಟೆಯಲ್ಲಿ ಇದ್ದು ಸರ್ವ ಆಧುನಿಕ
ಸೌಕರ್ಯಗಳಿಂದ ನಿಮ್ಮನ್ನಿದಿರುಗೊಳ್ಳುತ್ತದೆ

ಹೊಸ ಆಡಳಿತ! **ಹೊಸ ವ್ಯವಸ್ಥೆ!!**

ಎಲ್ಲವೂ ಹೊಸತೇ ಆಗಿ
ನವೀನ ಮಾದರಿಯ ಬೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ

Proprietor, HOTEL INDIANA
Hampankatta, Mangalore

THE

MOOLKY BANK, LTD.,

MOOLKY

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟ [illegible] ಸಂಸ್ಥೆ

ಭಂಗಾರದ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ಸೇಕಡ [illegible] ವರ್ಗಿನ [illegible] ಸೇವಿಂಗ ಬ್ಯಾಂಕ್ ಸೇಕಡ 3½ ದರದ [illegible]

ಎಲ್ಲಾ ತರದ ಬ್ಯಾಂಕಿಂಗ್ [illegible] ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja, ಯಂ. ಆರ್. ಪುಂಜ,
President & Manager ಪ್ರಸಿಡೆಂಟ್ ಮತ್ತು ಮೆನೇಜರ್

DAIMONDS! DAIMONDS!!

K. R. K. SHET

Opposite Govt College Hampankatte MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ದಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ [illegible] ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕಾಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

[illegible]

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ವ ಮೂತ್ರದೊಡನೆ [illegible], ಸಂಧಿಗಳ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, [illegible] ಇವುಗಳನ್ನು ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು [illegible] ರೂ 2—8—0

ಕಸ್ತೂರಿಮಿಶ್ರಿತ ದಶಮೂಲ
ಬಾಣಂತಿಯರಿಗೆ [illegible] ಶಕ್ತಿವರ್ಧಕ ಬಾಟ್ಲಿ 1 ರೂ 1 8—0

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, [illegible] ಇವುಗಳಿಗೆ ದಿವ್ಯೌಷಧ
[illegible]

ಕೆಟಲಾಗಿಗೆ ಬರೆಯಿರಿ — **ಯಂ. ಗಣಪಯ್ಯ ಎಂಡ್ ಸನ್ಸ್,**
[illegible] ಮಂಗಳೂರು

ಸ್ಥಾಪನೆ] # ಕೆನರಾ ಛಾಪಖಾನೆ [1920

(ಒಂಟರ ಯಾನ ನ ದವರ ಸಂಘದ [illegible])

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ [illegible] ಕೈಕೊಳ್ಳಲಾಗುತ್ತದೆ
ಈಗ ದರವನ್ನು [illegible] ಒಮ್ಮೆ ಬಂದು ವಿಚಾರಿಸಿರಿ

Manager

Kanara Printing Works,
Hampankatte **MANGALORE**

ಕಸಿಗಿಡಗಳು.

ಸಪ್ಪೋಡಿಲ್ಲ (ಚಿಕ್ಕು) — [illegible] ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, [illegible] ವರ್ಷದಲ್ಲಿಯೇ ತಪ್ಪದೆ ಫಲ [illegible] ಹಣ್ಣಾಗುವದು [illegible]

ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು [illegible] ನಮ್ಮಲ್ಲಿ ಉತ್ತಮ [illegible] ದೊರೆಯುತ್ತವೆ [illegible]

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
[illegible] ಕಾಪು, ದ. ಕ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕಾಲರಾ ರೋಗಕ್ಕೆ [illegible]	[illegible] ರೋಗಸಂಬಂಧವಾದ
ಔಷಧ	ಕಲ ರೋಗಗಳಿಗೂ ದಿವ್ಯೌಷಧ
[illegible]	[illegible]

ಎಲ್ಲಾ ತರದ ರೋಗಗಳಿಗೂ ಅನುಭವ[illegible] ಔಷಧಗಳು ದೊರೆಯುತ್ತವೆ

ಯು ಕೆ [illegible], ಗೋಲ್ಡ್ ಮೆಡಲ್ ಫಿಜಿಸಿಯನ್

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

ಪ್ರವೀಣತೆ! ಪ್ರಾಮಾಣಿಕತೆ! [illegible]

[illegible]

ಪ್ರೊ/ಟರ್ ಗಣಪತಿರಾವ್,

[illegible] ಉಡುಪಿ, ದ ಕ

ವದಲ್ಲಿರುವುದು ನಿನಗೆ ಸಮಾಧಾನವಿಲ್ಲವೇ? ಈಗ ಎಲ್ಲಾ ನಿನಗೆ ಗೊತ್ತಾಗುತ್ತದೆ, ಹೌದಾ? ನೀನು ಬಾವಿಗೆ ಹಾರುವುದು ಬೇಡ–ನಿಮ್ಮಿಬ್ಬರ ಪರವಾಗಿ ನಾನೇ ಹಾರಿಬಿಡುತ್ತೇನೆ –ನಾನಿದ್ದಲ್ಲವೇ ನಿಮಗೆ ರಗಳೆ–ನಾಳೆ ನಾನಿಲ್ಲ! ನೋಡು–ನಾನು ಅಂದೇ ಹೇಳಿದ್ದೇನಲ್ಲಾ? ನಿನ್ನ ಗಂಡನದ್ದೂ ಅವನ ಮನೆಯವರದ್ದೂ 'ಸ್ಪೀಡ್' ಜೋರು ಆಗುತ್ತೇಂತ! ನೀನು ಸಹಾ ಆ ಆಟೋಪಕ್ಕೆ ಮರುಳಾದಿ –ನೀವು ಮೋಟರಿನ ಚಕ್ರ ತಿರುಗುವುದೇ ನೋಡಿದ್ದಲ್ಲದೆ 'ಪೆಟ್ರೋಲ್ ಟಾಂಕಿ'ಗೆ ಕೋಲುಹಾಕಿ ಆಗಾಗ್ಗೆ ನೋಡುತ್ತಿದ್ದರೆ. ಇಷ್ಟೇ 'ಪೆಟ್ರೋಲ್' ಖರ್ಚಾಯಿತು ಅಂತ ಗೊತ್ತಾಗುತಿತ್ತು. ಈಗ 'ಟ್ಯಾಂಕ್' ಬತ್ತಿ ಹೋಗಿದೆ—ಚಕ್ರ ನಿಂತಿದೆ—ನೋಡು, ಚಕ್ರ ಓಡಬೇಕಾದರೆ—'ಪೆಟ್ರೋಲ್' ಬೇಕು—ಪೆಟ್ರೋಲ್ ಅಂದೆ! ಅಂದರೆ ದುಡ್ಡು ದುಡ್ಡು, ಗೊತ್ತಾಯಿತ! ನಿನಗೆ ನೋಡು, ದೇವರು ಕೊಟ್ಟ ಎರಡು ಹೆಮ್ಮಕ್ಕಳು ಇದ್ದಾವೆ ಅವುಗಳನ್ನು ಯಾರ ಮನೆಗೆ ನಾಳೆ ಕೆಲಸಕ್ಕೆ ಕಳುಹಿಸೋದು!—ಅವನನ್ನು ಸಿವಿಲ್ ಜೈಲಿನಿಂದ ಬಿಡಿಸಲು ನನಗೆ ಸಾಧ್ಯವಿಲ್ಲ—ನೀನು ಕಣ್ಣೀರಿಟ್ರೇಂತ ನಾನು ಅವನಿಗೆ ಬೇಂಕಿನಲ್ಲಿ ಜಾಮೀನು ಹಾಕುವಂತಿಲ್ಲ–ನಮ್ಮ ಮನೆ ಸಹಾ ನಿಮ್ಮವರ ಹಿಂದೆಯೇ ಕೋರ್ಟು ಹರಾಜಿನಲ್ಲಿ ಹಾರಿ ಹೋಗೋದು ಬೇಡ. ನಿನ್ನ ನೆಂಟಸ್ತಿಕೆಯ ದೆಸೆಯಿಂದ, ಆಡಂಬರದ ಹಾರಾಟದಿಂದ, ಆಟೋಪದಿಂದ ನಮ್ಮ ಮನೆಯು ಢಂ, ಢಂ–ಢಂ ಆಗುತ್ತಾಬರುತ್ತದೆ, ನಿಮಗೆಲ್ಲಾ 'ಫೇಶನ್', 'ಕಾರ', 'ಸ್ಟೈಲ್'–ತಲೆಯಿಲ್ಲದ ಪ್ರಾಣಿಗಳು–ನಿಮಗೆ ಮತಿಯಿಲ್ಲ–ಬಾಕಿಯವರ ಗತಿ ಹಾಳುಮಾಡಲಿಕ್ಕೆ ಇಳಿದಿದ್ದೀರಿ ನೀವು–ಜೀವ ಇರುವಾಗಲೇ ಸತ್ತಾಯಿತು ನಾವು–ಇನ್ನು ಮನೆ ಮನೆ ಬೇಡಿದ್ರೆ ಸೈ–ಡಂಭ, ಡಂಭ–ಡಂ–ಡಂ–ಡಂ–ಸದ್ದು!'–ಅಯ್ಯೋ ದೇವರೇ ಇವಕ್ಕೆಲ್ಲಾ ಮದ್ದೇನಪ್ಪಾ! ಈ ರೋಗಕ್ಕೆ ಚಿಕಿತ್ಸೆ ಯಾವುದು? ಎಲ್ಲಿ ವೈದ್ಯರು? ಸಮಾಜವೇ ಹಾಳಾಗುತ್ತದಲ್ಲ! ಯಾರಲ್ಲಿ ಹೋಗಲಿ, ಯಾರ ಹತ್ತಿರ ಕೇಳಲಿ–ಓ, ಆ ಲೇಖಕರ ಹತ್ತಿರ ಕೇಳುವ–ಎಲ್ಲಿ ಸ್ವಾಮಿ! ಸ್ವಾಮಿಾ ಲೇಖಕರೇ, ನಮ್ಮ ಸಮಾಜಕ್ಕೆ ತಗಲಿದ ಡಂಭಾಚಾರದ ವ್ಯಾಧಿನಿವಾರಣೆಗೊಂದು ಮದ್ದು ಹೇಳಲಾರಿರಾ?

ಲೇಖಕ—'ಬಜೆಟ್', 'ಬಜೆಟ್'! (Budget)

ಶೆಟ್ರು – ಹಾಗಂದರೇನು, ಸ್ವಾಮಿಾ? ನನಗೆ ತಿಳಿಯಲಿಲ್ಲವಲ್ಲಾ!

ಲೇಖಕ—ಬರುವ ಲೇಖನದಲ್ಲಿ ಅದರ ವಿಷಯ ವಿಸ್ತಾರವಾಗಿ ಹೇಳುತ್ತೇನೆ.

ತಿದ್ದುಪಡಿ.

ತಾ. 13 10-'38ರ ಸಂಚಿಕೆಯ 10ನೇ ಪುಟದಲ್ಲಿ ಪ್ರಕಟವಾದ 'ಬೊಂಬಾಯಿ ಸಮಾಚಾರ'ದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ದೇವರ ಜನ್ಮ ಮಹಾಸಮಾಧಿ ಉತ್ಸವ ಎಂಬ ವಿಷಯದ 9ನೆ ಪಂಕ್ತಿಯಲ್ಲಿ ಅನಗಾರಿಯ ರಮಾನಂದರವರ ಎಂಬುದು ಅನಗಾರಿಗ ರಮಾನಂದರವರ ಎಂದಾಗಬೇಕು, ಬಿಲ್ಲವರ ಎಸೋಸಿಯೇಶನಿನ ಪಶ್ಚಮ ವಾರ್ಷಿಕೋತ್ಸವವು ಷಷ್ಟ ವಾರ್ಷಿಕೋತ್ಸವವಾಗಬೇಕು. ಅದರಲ್ಲಿಯ 5ನೇ ಮತ್ತು 6ನೇ ಪಂಕ್ತಿಗಳಲ್ಲಿಯ ಶ್ರೀ. ಅನಗಾರಿಯ ರಮಾನಂದ ಶ್ರೀ. ಸುಂದರರಾಮ ಅಯ್ಯರ್ ಎಂಬುದು ಅನಗಾರಿಗ ರಮಾನಂದ ಶ್ರೀ ಮಂಜೇರಿ ರಾಮ ಅಯ್ಯರ ಎಂದಾಗಬೇಕು. ಅಂತೆಯೇ 8ನೇ ಪಂಕ್ತಿಯಲ್ಲಿ 'ಶ್ರೀ. ಶೀನಪ್ಪನವರ' ಎಂಬುದನ್ನು ಶ್ರೀ. ಶೇಷಪ್ಪನವರ ಎಂದೂ ತಿದ್ದಿಕೊಳ್ಳಬೇಕಾಗಿದೆ

ಬೊಂಬಾಯಿ ಸಮಾಚಾರ

(ನಮ್ಮ ಸ್ವಂತ ಬಾತ್ಮೀದಾರರಿಂದ)

20-10-'38

ಕಾಮಗಾರರ ಪ್ರಚಂಡ ಸಭೆ

ಮುಂಬಯಿ ಎಸೆಂಬ್ಲಿಯಲ್ಲಿ ಪಾಸಾಗಲಿರುವ ಟ್ರೇಡ ಡಿಸ್ಪ್ಯುಟ್ಸ್ ಬಿಲ್ಲಿಗೆ ವಿರುದ್ಧವಾಗಿ, ನವಂಬರ್ 7ನೇ ತಾರೀಕಿಗೆ ಒಂದು ದಿನದ ಸಂಪನ್ನು ಹೂಡುವ ಯೋಜನೆಯನ್ನು ಕಾಮಗಾರರಿಗೆ ತಿಳಿಸಿ, ಕಾಮಗಾರರಿಗೆ ವಿರುದ್ಧವಾಗಿ ನಡೆಯುತ್ತಿರುವ ಕೆಲವು ಸಮತಾವಾದಿಗಳ ಮತ್ತು ಕೋಂಗ್ರೆಸ ಮುಂದಾಳುಗಳ ವಿರೋಧವನ್ನು ಮುರಿಯುವುದಕ್ಕಾಗಿ, ಕಳೆದ ರವಿವಾರ ಸಂಜೆಗೆ 20 000 ಕೆಲಸಗಾರರ ಪ್ರಚಂಡ ಸಭೆಯೊಂದು ಬೊಂಬೇ ಪ್ರೊವಿನ್ಸಿಯಲ್ ಟ್ರೇಡ ಯೂನಿಯನ್ ಕೋಂಗ್ರೆಸಿನ ಪರವಾಗಿ, ಶ್ರೀ. ಜಮ್ನಾದಾಸ್ ಮೆಹತರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವತಂತ್ರ ಲೇಬರ್ ಸಂಘ, ಜಿ. ಐ. ಪಿ, ಬಿ. ಬಿ. ಸಿ. ಐ. ಪ್ರೆಸ್ ವರ್ಕರ್ಸ್ ಯೂನಿಯನ್ ಮೊದಲಾದ ಸಂಘಗಳವರೆಲ್ಲಾ ಮೆರವಣಿಗೆ ಮಾಡಿ ಕೊನೆಗೆ ಸರ್ವರೂ ಕಾಮಗಾರ ಮೈದಾನಿಗೆ ಬಂದು ಸೇರಿದರು.

ಈ ಬಿಲ್ಲಿನಿಂದ ಕಾಮಗಾರರಿಗೇನೂ ಪ್ರಯೋಜನವಿಲ್ಲವೆಂದೂ ಇದು ಕೆಲಸಗಾರರಿಗೆ ಅಸಹಕಾರವಾಗಿದೆ ಮತ್ತು ಕೆಲಸಗಾರರ ಸ್ವಾತಂತ್ರ್ಯಕ್ಕೆ ಕಂಟಕಪ್ರಾಯವಾಗಿದೆ ಎಂಬ ವಿಷಯವನ್ನೊಳಗೊಂಡ ಶ್ರೀ ಪಿರೋಜ್ ಭರೂಚಾರವರ ಠರಾವೊಂದು ಸರ್ವಾನುಮತದಿಂದ ಪಾಸಾಯಿತು.

ಈ ಬಿಲ್ಲು ನಮಗೇನು ತೋರಿಸುತ್ತದೆಂದರೆ, ಕೋಂಗ್ರೆಸು ತನ್ನ ಚುನಾವಣೆ ಪತ್ರಕ್ಕೆ ಸರಿಯಾಗಿ ನಡೆಯದೆ ಕಾಮಗಾರರ ಅಭಿವೃದ್ಧಿಗೆ ಪ್ರಯತ್ನಿಸುತ್ತೇವೆಂಬ ತನ್ನ ಧ್ಯೇಯವನ್ನು ಮುರಿಯುತ್ತದೆ. ಮಾತ್ರವಲ್ಲ ಶ್ರೀ ನಂದರವರು ಮತ್ತು ಮುಂಬಯಿಯ ಇನ್ನಿತರ ಮುಂದಾಳುಗಳು ಬಿ. ಪಿ. ಟಿ. ಯು. ಸಿ. ಯು. ಕಾಮಗಾರರ ಸಂಘವಲ್ಲ, ಮೊದಲು ಅದು ಬಿಲ್ಲಿಗೆ ಒಪ್ಪಿಗೆಯನ್ನಿತ್ತು, ಈಗ ವಿರೋಧಿಸುತ್ತಿದೆ. ಅದ್ದರಿಂದ ನಾವದನ್ನು ಒಪ್ಪಿಕೊಳ್ಳುವುದಿಲ್ಲವೆಂದು ಹೇಳುತ್ತಿರುವರು. ಇದನ್ನು ನೋಡುವಾಗ ಕೋಂಗ್ರೆಸ್ಸಿಗೆ ಕಾಮಗಾರರ ಮೇಲೆ ದಯೆ ಇಲ್ಲವೆಂದೂ, ಕಾಮಗಾರರನ್ನು ಮತ್ತೂ ಅಧೋಗತಿಗಿಳಿಸಿ ಅವರ ಸಂಘಗಳನ್ನೆಲ್ಲಾ ನಿರ್ನಾಮ ಮಾಡಬಯಸುತ್ತದೆಂದೂ ಇದರಿಂದ ತಿಳಿದುಬರುತ್ತದೆ.

ಜಮ್ನಾದಾಸ್ ಮೆಹತಾರವರು ಅಧ್ಯಕ್ಷ ಭಾಷಣದ ಮಧ್ಯೆ ಹೀಗಂದರು. "ಕೆಲಸಗಾರರು ಸಂಪು ಹೂಡಿದ್ದಲ್ಲಿ ಅವರನ್ನು ಬಂಧಿಸುವಾಗ ಒಯ್ಯುವ ಕ್ರಮವು ಬೇರಿಲ್ಲವೂ ಇಲ್ಲ. ಬಿಲ್ಲಿನ 32 ವಿಷಯಗಳನ್ನು ಪಾಸು ಮಾಡಲು 58 ದಿನಗಳು ಹಿಡಿಯಿತು. ಸಂಪೂರ್ಣವಾಗಿ ಮುಗಿಸಲು ಎಷ್ಟು ದಿವಸ ಬೇಕೋ ಯಾರಿಗೆ ಗೊತ್ತು. ಈ ಬಿಲ್ಲನ್ನು ಮುಂಬಯಿಗೆ ತರುವುದಿಲ್ಲವೇಕೆಂದರೆ, ಇಲ್ಲಿ ಕಾಮಗಾರರ ವಿರೋಧವು ಮಿತಿಮಿಾರೀತೆಂಬ ಭಯವಿದೆ. ಪೂನದ ರೈತರು ಭಯಂಕರ ಚಳವಳ ಹೂಡಬಹುದೆಂಬ ಹೆದರಿಕೆಯಿಂದ ಟೆನೆನ್ಸಿ ಬಿಲ್ಲನ್ನು ಪೂನಕ್ಕೆ ಕೊಂಡು ಹೋಗುವುದಿಲ್ಲ. ನಾಳೆ ದಿನ ಒಂದು ದಿನದ ಮಹಾಸಂಪನ್ನು ವಿಜಯಯಾಗಿ ಮಾಡಲು ಸರ್ವರೂ ಪ್ರಯತ್ನಿಸಬೇಕು."

ಶ್ರೀ. ಅಂಬೇಕರ್‌ರವರು ಇಂಗ್ಲೆಂಡಿನ ಲೇಬರ್ ಲೀಡರರಾದ ಶ್ರೀ. ಬ್ರೈಲ್ಸ್‌ಫೋರ್ಡರ ಪತ್ರವೊಂದನ್ನು ಓದಿಹೇಳಿದರು. ಅದರಲ್ಲಿ ಕೋಂಗ್ರೆಸ ಸರಕಾರವು ಬ್ರಿಟಿಶ್ ಸರಕಾರಕ್ಕಿಂತಲೂ ಹಾನಿಕರವಾದ ಠರಾವುಗಳನ್ನು ಪಾಸುಮಾಡುತ್ತದೆ ಎಂದು ಬರೆದಿತ್ತು.

ಈ ಸಭೆಯ ಮತ್ತೊಂದು ವಿಶೇಷವೇನೆಂದರೆ, ಅಂದು ಬೆಳಿಗ್ಗೆ ಈ ಸಭೆಯ ಕುರಿತು ಜನರಿಗೆಲ್ಲಾ ತಿಳಿಸಲು ಒಂದು ಲೋರಿಯ ಮೇಲೆ ಕೆಲವು ಕಾಮಗಾರರು ನಗರದಲ್ಲೆಲ್ಲಾ ಸುತ್ತುತ್ತಿರಲು ಒಂದು ಕಡೆಯಲ್ಲಿ ಕೆಲವರು ಇವರ ಮೇಲೆ ಕಲ್ಲೆಸೆದು ಗಾಯಪಡಿಸಿದ್ದರು. ಹೀಗೆ ರಕ್ತದಿಂದ ತೊಯ್ದ ಬಡ ಪಾಯಿಗಳನ್ನು ಜನತೆಯ ಮುಂದಿಟ್ಟು ಕೋಂಗ್ರೆಸ್ ಸರಕಾರದಲ್ಲಿ ಪಾಶವೀಕೃತ್ಯವು ಹೇಗೆ ನಡೆಯುತ್ತಿದೆಂಬುದನ್ನು ಜನರಿಗೆ ದಿಗ್ದರ್ಶಿಸಿದರು.

ಇತರ ಮುಂದಾಳುಗಳೂ ಭಾಷಣಮಾಡಿದ ನಂತರ 'ಕೆಂಪು ಧ್ವಜಕ್ಕೆ ಜಯ ವಾಗಲಿ' 'ಕಾಮಗಾರರಿಗೆ ಸ್ವಾತಂತ್ರ್ಯ ಸಿಗಲಿ' ಎಂಬ ಜೈಕಾರದೊಡನೆ ಸಭಾಂತ್ಯವಾಯಿತು.

ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ಲೂ ಕಾಮಗಾರರೂ

ಶ್ರೀಗಳಾದ ಎಸ. ಎಸ್. ಮಿರಜ್‌ಕರ್, ಕೆ. ಎನ್ ಜೋಗ್ಲೇ, ಬಿ ಟಿ. ರಣದೇವ್, ಎಸ್ ವಿ. ದಾಂಗೇ (ಟ್ರಾಮ್‌ವೇ ಕೆಲಸಗಾರರ ಸಂಘ) ಜೆ. ಬುಖಾರೆ (ಜಿ. ಐ. ಪಿ. & ಸಿ. ಐ.) ಎಸ್ ಎಸ್. ಸಾಕರ್ (ಗಿರ್ಣಿ ಕಾಮ್‌ಗಾರ್ ಯೂನಿಯನ್) ಆರ್. ಆರ್ ಪಡಿಸ್ನೀಕರ್ ಮೊದಲಾದವರು (ಇವರೆಲ್ಲಾ ಕೋಂಗ್ರೆಸ್ ಸದಸ್ಯರು) ಕೆಳಗಿನ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ನವಂಬ್ರ 7ನೇ ತಾರೀಕಿಗೆ ಒಂದು ದಿವಸದ ಮಹಾ ಸಂಪು ಹೂಡಬೇಕೆಂದು ಬೊಂಬೇ ಟಿ ಯು. ಸಿ. ಯು ಜನರಿಗೆಲ್ಲಾ ಕೇಳಿಕೊಂಡಿದೆ. ಮುಂಬಯಿ ಸರಕಾರದ ಲೇಬರ್ ಕಾರ್ಯಕ್ರಮಗಳೆಲ್ಲಾ ಪ್ರಕಟಿಸಲ್ಪಟ್ಟಾಗ ನಾವು ಇದರ ಒಡಂಬಡಿಕೆಯ. ಕೆಲವು ಧ್ಯೇಯಗಳನ್ನು ವಿರೋಧಿಸಿಲ್ಲ, ಅವರ ಯೂನಿಯನು ಕೋಂಗ್ರೆಸಿನಿಂದ ಮತ್ತು ಮಿಲ್ಲು ಅಧಿಕಾರಿಗಳಿಂದ ಸ್ವೀಕರಿಸಲ್ಪಡಬೇಕೆಂದೂ ಮತ್ತು ಈ ಸಂಘಗಳು ಸ್ವತಂತ್ರವಾಗಿ ಕೆಲಸಮಾಡಲು ಬಿಡಬೇಕೆಂದೂ ನಾವು ಕೇಳಿಕೊಂಡಿರುವೆವು. ಕಂಪೆನಿಯ ಸಂಘಗಳಿಗೆ ಇದು ಹುರುಪು ಕೊಟ್ಟುದನ್ನೂ ಮತ್ತು ಕೆಲಸಗಾರರನ್ನು ಒತ್ತಾಯದಿಂದ ನಡೆಬಡೆಯಬೇಕೆಂಬ ಈ ಒಕ್ಕಣೆಯ ಧ್ಯೇಯವನ್ನು ನಾವು ವಿರೋಧಿಸುತ್ತೇವೆ. ಇಂಥಾದ್ದನ್ನೆಲ್ಲಾ ತೆಗೆದು ಹಾಕಲು ನಾವು ಸ್ಪಷ್ಟವಾದ ಉಪಠರಾವುಗಳನ್ನ ಪೇಕ್ಷಿಸುತ್ತೇವೆ.

ತನು ಸಮಯದ ನಂತರ ಮುಂಬಯಿ ಸರಕಾರವು ಮೊದಲನೆಯ ಒಕ್ಕಣೆಯಲ್ಲಿದ್ದ ವಿರೋಧ ವಿಷಯಗಳನ್ನೆಲ್ಲ ಒಳಗೊಂಡ ... ಒಕ್ಕಣೆಯನ್ನು ಸಭೆಯ ಮುಂದಿಟ್ಟು ಉಪಠರಾವುಗಳನ್ನೆಲ್ಲ ತೆಗೆದುಹಾಕಿ ಈ ಬಿಲ್ಲನ್ನು ಒಂದು ಸೆಲೆಕ್ಟ್ ಕಮಿಟಿಯ ಮುಂದಿಡಬೇಕೆಂದು ಯತ್ನಿಸಿತು.

ಹೀಗಿರುವಾಗ ಕಾಮಗಾರರು ತಮಗೆ ಬೇಕಾದ ಬದಲಾವಣೆಗಳನ್ನು ಮಾಡಲು, ಉಪಠರಾವುಗಳನ್ನು ಕಳುಹಿಸಿತು. ಆದರೆ ಸರಕಾರವು ಇದನ್ನು ನಿರಾಕರಿಸಿತು.

ಮಾತ್ರವಲ್ಲದೆ ಟ್ರೇಡ್ ಯೂನಿಯನುಗಳು ಪ್ರಥಮತಃ ಈ ಬಿಲ್ಲಿಗೆ ಒಪ್ಪಿಗೆಯನ್ನಿತ್ತಿದ್ದವೆಂದೂ ಬಿ ಪಿ. ಟಿ. ಯು. ಸಿ. ಯು. ಕಾಮಗಾರರ ಪರವಾಗಿಲ್ಲವೆಂದೂ ಕೋಂಗ್ರೆಸ್ ಮಂತ್ರಿಮಂಡಲವು ತಪ್ಪುಭಾವಿಸುತ್ತಿದೆ. ನಾವು ಸದಾಕಾಲವೂ ಕಾಮಗಾರರೊಡನೆ ಬೆರೆತು ಅವರೊಡನೆ ಕೆಲಸಮಾಡುತ್ತಿರುವುದರಿಂದ ಕಾಮಗಾರರು ಈ ಬಿಲ್ಲನ್ನು ಸಂಪೂರ್ಣವಾಗಿ ವಿರೋಧಿಸುತ್ತಿರುವರೆಂದೂ, ಮತ್ತು ಮಂತ್ರಿಮಂಡಲವು ಇದನ್ನು ಜಾರಿಗೆ ತಂದಲ್ಲಿ ಇದನ್ನು ವಿರೋಧಿಸಲು ತಯಾರಿದ್ದೇವೆ ... ಚೆನ್ನಾಗಿ ತಿಳಿದಿರುವೆವು.

ಕೋಂಗ್ರೆಸ್ ಕಾಮಗಾರರ ಪರವಾಗಿ ಕೆಲಸಮಾಡಲು ಒಪ್ಪುವುದಿಲ್ಲ, ಮತ್ತು ಕಾಮಗಾರರು ತಮ್ಮನ್ನು ಅನುಸರಿಸುವುದಿಲ್ಲವೆಂದು ಸಾರುತ್ತಿದೆ.

ಇಂಥಾ ಮುಖ್ಯಸಂದರ್ಭಗಳಲ್ಲಿ ಕೋಂಗ್ರೆಸ್ ಕಾಮಗಾರರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು. ಆದರೆ ಮಂತ್ರಿಮಂಡಲವು ಹೀಗೆ ಮಾಡಲಿಲ್ಲ.

ಶಾಂತವಾದ ಒಂದು ದಿವಸದ ಸಂಪಿನ ಮೂಲಕ ನಾವು ನಮ್ಮ ಧ್ಯೇಯವನ್ನೂ ಅಭಿಪ್ರಾಯವನ್ನೂ ಕೋಂಗ್ರೆಸಿಗೆ ತಿಳಿಸಬೇಕೆಂದಿರುವೆವು.

ಕಾಮಗಾರರು ಈ ಬಿಲ್ಲನ್ನು ವಿರೋಧಿಸುವುದೇಕೆಂದರೆ ಇದು ಕಾಮಗಾರರ ಯೂನಿಯನಿನ ಧ್ಯೇಯಗಳನ್ನು ಬುಡದಿಂದಲೇ ನಾಶಮಾಡುತ್ತದಲ್ಲದೆ, ರಾಷ್ಟ್ರೀಯ ಸ್ವಾತಂತ್ರ್ಯದ ಚಳವಳಕ್ಕೂ ಕಂಟಕಪ್ರಾಯವಾಗಿದೆ.

ಹರತಾಳಗಳೂ ಸಂಪುಗಳೂ ಅನ್ಯಾಯಕರವೆಂದು ಹೇಳಿ ಕಾಮಗಾರರ ಸಂಘರ್ಷಣಕ್ಕೆ ಆತಂಕ ತರುವುದಲ್ಲದೆ ರಾಷ್ಟ್ರೀಯ ಸಂಗ್ರಾಮದಲ್ಲಿ ಭಾಗವಹಿಸುವ ಪ್ರಾಮುಖ್ಯ ಸೈನ್ಯವೊಂದನ್ನು ಮುರಿಯಲೆತ್ನಿಸುತ್ತಿದೆ ಈ ಬಿಲ್ಲು.

ಈಗಿರುವಂತಿರುವ ಬಿಲ್ಲು ಜನತೆಯ ಒಗ್ಗಟ್ಟಿಗೆ ಮಾತ್ರವಲ್ಲ ಕೋಂಗ್ರೆಸ್ಸಿಗೂ ಹಾನಿಕರವಾಗಿದೆ ಹೀಗೆ ಜನತೆಗೆ ಕಂಟಕಪ್ರಾಯವಾದ ಬಿಲ್ಲು ಕೋಂಗ್ರೆಸ್ಸಿಗೆ ಅಪಾಯಕರವಾಗಬೇಕು. ಬಿಲ್ಲು ಮಾಲಕರುಗಳಿಂದ ಮೆಚ್ಚಿಸಲ್ಪಟ್ಟಂಥಾ ಬಿಲ್ಲನ್ನು ಪಾಸುಮಾಡುವುದರಿಂದ ಕೋಂಗ್ರೆಸು ತನ್ನ ಶತ್ರುಗಳಿಗೆ ಸಹಾಯಮಾಡುವುದರ ಮೂಲಕ ಬಡ ಕಾಮಗಾರರನ್ನು ಮತ್ತು ಕೋಂಗ್ರೆಸನ್ನು ಅನುಕರಿಸುವವರನ್ನು ಅಧಃಪತನಕ್ಕೆ ಒಯ್ಯುತ್ತಿದೆ

ತಿದ್ದುಪಡಿ.

ನಾವು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ ಉಡುಪಿ ಬಾತ್ಮಿಯಲ್ಲಿ ವ ಸನಿಸಿಪಾಲಿಟಿಯ ಕಾಯಂ ಆದ ಕಿನ್ನಿಗೋಳಿಯ ಹೆಸರಲ್ಲಿ ಕೆ ಶೇಷಪ್ಪ ಸೆಟ್ಟಿ ಎಂಬ ಹೆಸರಿಗೆ ಬದಲಾಗಿ ಕೆ ಶಿ ನಪ್ಪ ಸೆಟ್ಟಿ ಎಂದೂ ವಿಲಿಯಂ ಕರ್ನೇಲಿಯೊ ಎಂಬುದರ ಬಗ್ಗೆ ವಿಲಿಯಂ ಕರ್ನೆಲಿಯೊ ಎಂದೂ ತಪ್ಪಾಗಿ ಪ್ರಕಟವಾಗಿದೆ. ಅದಕ್ಕಾಗಿ ವಿಷಾದಿಸುತ್ತೇವೆ

ನೋಟೀಸು

ಪುತ್ತೂರು ತಾಲೂಕು ಬೆಳ್ಳಿಪ್ಪಾಡಿ ಗ್ರಾಮದಲ್ಲಿರ್ವ ಬೆಳ್ಳಿಪ್ಪಾಡಿ ಕುಟುಂಬದ ಯಜಮಾನ ವ ಆಡಳ್ತೆದಾರ ಬೆಳ್ಳಿಪ್ಪಾಡಿ ರಾಮಪ್ಪ ರೈಗಳ ಮೊಮ್ಮಗ ಬೆಳ್ಳಿಪ್ಪಾಡಿ ರಾಮಣ್ಣ ರೈಯು ತಿಳಿಯಪಡಿಸುವದೇನಂದ್ರೆ:—

ನಮ್ಮ ಕುಟುಂಬದ ಕಿರಿ ಮೆಂಬರನಾದ ಬೆಳ್ಳಿಪ್ಪಾಡಿ ವೆಂಕಪ್ಪ ರೈಗಳ ಅಳಿಯ ಮಂಜಪ್ಪರೈಯು ತಾ 13-10-'38ನೇ ನವಯುಗ ಪೇಪರಿನಲ್ಲಿ ತಾ. 1-10-38ರಲ್ಲು ಪ್ರಕಟಿಸಿದ ನೋಟೀಸಿನ ಮತ್ಲಬುಗಳು ತಿಳಿಯಿತು. ಸದ್ರಿ ಪ್ರಕಟಣೆಯ ವಾಚಕಗಳು ಪೂರ್ಣ ಸುಳ್ಳಾಗಿರುತ್ತವೆ. ಸದ್ರಿ ಮಂಜಪ್ಪರೈಯ್ಯನ್ನು ಕೊಡ್ಲಮೊಗ್ರು ಸಂಕಪ್ಪ ರೈ ಮತ್ತು ಪಿ ರಾಮಯ್ಯ ಆಳ್ವ ಕೂಡಾ ಇವರು ಒಳಸಂಚಿಕೆಗೆ ತೆಗೆದುಕೊಂಡು ಅಕ್ರಮ ಲಾಭ ಪಡಿಯಬೇಕೆಂಬ ಕೆಟ್ಟ ವಿಚಾರದಿಂದ ಅದನ್ನು ಪ್ರಕಟಿಸಿದ್ದಾಗಿರುತ್ತದೆ.

ನನ್ನ ಹಿರಿಯರಾಗಿದ್ದ ಮಂಜಪ್ಪರೈಗಳು ಪೂರ್ತಿಳಿದೇ ಅವರ ನಂತ್ರದ ಆಡಳ್ತೆದಾರನಾದ ನನಗೆ ಆಡಳ್ತೆ ಬಿಟ್ಟುಕೊಟ್ಟಂತೆ ಅವರ ಮರಣದ ವರೇಗೆ ಆ ಹಕ್ಕಿನಿಂದಲೂ ಅನಂತ್ರ ಶಿಲಶಿಲೆ ಹಕ್ಕು ಪ್ರಕಾರ ನಾನು ಕುಟುಂಬದ ಆಡಳ್ತೆ ನೋಡಿಕೊಂಡು ಬರುವದಾಗಿರುತ್ತದೆ. ನಾನು ಆ ಮಂಜಪ್ಪರೈಕ್ಕಿಂತ ಹಿರಿಯನೆಂಬ ಬಗ್ಗೆ ಹೆಚ್ಚು ರಿಕಾರ್ಡುಗಳಿರುತ್ತವೆ. ನನ್ನ ನಂತ್ರ ಬೆಳ್ಳಿಪ್ಪಾಡಿ ಕೊರಗಪ್ಪ ಯಾನೆ ವೆಂಕಪ್ಪ ರೈ ಎಂಬವನು ಆಡಳ್ತೆಗೆ ಹಕ್ಕುದಾರನಾಗಿದ್ದು ಮಂಜಪ್ಪರೈಯು ಆತನಿಗಿಂತಲೂ ಕಿರಿಯ ಮೆಂಬರನಾಗಿರುತ್ತಾನೆ

ಅದ್ರಿಂದ ಸದ್ರಿ ಮಂಜಪ್ಪ ರೈಗೆ ಯಾರಾದರೂ ಯಾವ ರೂಪದಿಂದ್ಲೂ ಸಾಲ, ಒಕ್ಲಿಗಳು ಗೇಣಿ ವಗೈರೆ, ಕೊಡಕೂಡದು. ಕೊಟ್ಟದ್ದಾದ್ರೆ ಅದು ನಮ್ಮ ಕುಟುಂಬಕ್ಕೆ ಎಷ್ಟುಮಾತ್ರ ಬಾಧಿಸುವಂಥಾದ್ದಲ್ಲವೆಂಬ ಸಂಗ್ತಿ ಈ ಮೂಲಕ ತಿಳಿಸಿರುತ್ತೇನೆ.

ಬೆಳ್ಳಿಪ್ಪಾಡಿ ಯಜಮಾನ ರಾಮಣ್ಣ ರೈ,

ತಾ. 20-10-1938.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು. ಪೇಡೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವದು.



CROWN RUBBER STAMP CO.,
Balmat Road, MANGALORE.
Included by the Mysore Govt Stores Purchase Committee in the list of approved Firms.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಷ್ಟರ ವರೆಗಣ ನಮ್ಮ
ವಿಲಿಯಮ್ಸ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು

ನಮ್ಮ ಟ್ರೇಡ್‌ಮಾರ್ಕಿನ ಮೂಲಾಂಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಲ್ಲೆಂಬ ಕುರಿತು ನಾವ ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

HOTEL INDIANA

BAR AND RESTAURANT

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು
ಯೋಚಿಸುವಿರೇಕೆ!

ಹೋಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ
ಕೇಂದ್ರವಾದ ಹಂಪನ್‌ಕಟ್ಟೆಯಲ್ಲಿ ಇದ್ದು ಸರ್ವ ಅತ್ಯಾಧುನಿಕ
ಸೌಕರ್ಯಗಳಿಂದ ನಿಮ್ಮನ್ನಿದಿರುಗೊಳ್ಳುತ್ತದೆ

ಹೊಸ ಆಡಳಿತ! ಹೊಸ ವ್ಯವಸ್ಥೆ !!

ಎಲ್ಲವೂ ಹೊಸತೇ ಆಗಿ
ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ

Proprietor, HOTEL INDIANA
Hampankatta, Mangalore.

THE
MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ
ಬಂಗಾರದ ಮತ್ತು ಸರಕಿನ ಈಡಿನಮೇಲೆ ಸಾಲ [illegible] ವರೆಗೆ ಸಾಲಕೊಡ ಲಾಗುವುದು
ಸಿರಖು ಠೇವಣಿತಿ ಸಾಲದ [illegible] ವರೆಗೆ ಬಡ್ಡಿ [illegible] ಸೇವಿಂಗ್ಸ್ ಬ್ಯಾಂಕ್ ಸಾಲದ [illegible] ದರದ ಬಡ್ಡಿ [illegible] ಆಗಿಂಕರಿಸಲ್ಪಡುವುದು
ಎಲ್ಲಾ ತರದ ಬ್ಯಾಂಕಿಂಗ್ ನಮೂನ ಟಗಳಿಗೆ ಸಿರಾ ಕೊಡುವುದಲ್ಲದ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja, ಯಂ. ಆರ್. ಪೂಂಜ,
President & Manager. ಪ್ರೆಸಿಡೆಂಟ್ ಮತ್ತು ಮೆನೇಜರ್

DAIMONDS! DAIMONDS!!
K. R. K. SHET
Opposite Govt College Hampankatte MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !

ಉತ್ಕೃಷ್ಟ ತರಗತಿಯ ಜುನ್ನಾತ (first quality selected) ಎಮ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವ ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ [illegible] ಕೈಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ [illegible] ಯೋಗದಸ್ಸು ಗವರ್ನ್‌ಮೆಂಟ್ ಕೋಲೇಜಿನ [illegible] ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್.
ಗವರ್ನ್‌ಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

[illegible]
ಇದು ಬಲಹೀನರಿಗೆ ಅಮೃತ ಸಮಾನ ಶಕ್ತಿವರ್ಧಕ ರಸಾಯನ [illegible] ರಿಂದ ಉಷ್ಣತೆ, ಧಾತು ನಷ್ಟದಿಂದ ಉಂಟಾಗುವ ಶಿಕ, ಸಾಂಟಸೋವು, ಕೈಕಾಲು ಬಚ್ಚು ವುದು, ಮಲಬದ್ಧತೆ, ಒಳಗಿದ ಅಶಕ್ತಿ ಇವಗಳನ್ನೂ ಹೋಗಲಾಡಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟು ಮಾಡುವದ ಬಾಟ್ಲಿ ೧ರ ರೂ 2-8-0

ಕಸ್ತೂರಿಮಿಶ್ರಿತ ಧರಮೂಲ
ಬಾಣಂತಿಯರಿಗೆ ಅತ್ಯುಪಯೋಗವಾದ ಶಕ್ತಿದ ಕ ಬಾಟ್ಲಿ ೧ರ ರೂ 1-8-0

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ [illegible] ೧ರ ರೂ 0-10-0

ಕೇಟಲಾಗಿಗೆ ಬರೆಯಿರಿ ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಯ [illegible] ರಥಬೀದಿ ನಂ. 11 ಮಂಗಳೂರು

ಕೆನರಾ ಛಾಪಖಾನೆ

([illegible])

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್ ಕನ್ನಡ ಮತ್ತು ಹಿಂದಿಯಲ್ಲಿ
ಮುದ್ರಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು [illegible]

Kanara Printing Works,
Hampankatte MANGALORE

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು).— ಈ ಮಾವಿನ ಚಟ್ಟೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೧ನೇ ವರ್ಷದಲ್ಲಿಯೇ ರುಚ್ಯದ ಫಲಬಿಡುತ್ತದೆ ಸುರದಲ್ಲಿ ಸಾವಿರಗಟ್ಟ ಹಣ್ಣುಗುವ ಎಕ್ರೆಯಲ್ಲಿ ವರ್ಷಕ್ಕೆ ರೂ ಸಾವಿರದ ಮೇಲೆ ಉತ್ಪತ್ತಿ ಯಾಗುವದು
ಎಲ್ಲ ತೋಟದಲ್ಲಿಯೂ ಇರತಕ್ಕದ್ದು ಗಿಡ [illegible] ರೂ [illegible] ಮಾತ್ರ ನಮ್ಮಲ್ಲಿ ಉತ್ತಮ ಮಾವ ಮತ್ತು [illegible] ಗಿಡಗಳು ಕೂಡ ದೊರೆಯುತ್ತವೆ ಕ್ರಯದ ಪಟ್ಟಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
[illegible] ಕಾಪು, [illegible]

ತುಳುನಾಡ ವನಶಾಲೆ, ಉದ್ಯಾವರ, ದ. ಕ.

ಕೊಟಿಕ [illegible] ಭೈರವ ಮಾತ್ರೆಗಳು
[illegible] ರೋಗಸಂಬಂಧವ [illegible]
[illegible] ಕಲ ರೋಗಗಳಿಗೂ ದಿವ್ಯೌಷಧ
[illegible] ಮಾತ್ರೆಗಳ [illegible]
[illegible] ಔಷಧಿಗಳು ದೊರೆಯುತ್ತವೆ
ಯು ಹಿ ಶೇಣ್ಯ, ಗೋವಿಂದ [illegible]

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಎಗಎಗಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ
ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ
ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

ಪ್ರವೀಣತೆ! ಪ್ರಾಮಾಣಿಕತೆ! [illegible]
[illegible]
[illegible]
ಇತ ದರ!] [illegible]
[illegible]

ಪ್ರೊ/ಟರ್ ಗಣಪತಿರಾವ್,
[illegible]

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

ಎಂದಾದರೊಮ್ಮೆ ನೋಡಬಹುದು ಎಂದೆಣಿಸಲಾಗದ ಪರ್ವಕಾಲ.

ಕಾವೇರೀ ನದೀತೀರವಾದ ತಲಕಾಡಿನಲ್ಲಿ

ಪಂಚಲಿಂಗ ದರ್ಶನ

ಭಕ್ತವೃಂದವು ಹಾರೈಸುವ ಪುಣ್ಯಕಾಲ.

ಅನೇಕ ವರುಷಗಳಿಗೊಮ್ಮೆ ಬಂದೊದಗುವ ಜಾತ್ರೆ ಇದು

ಕಳೆದ **1925**ರಲ್ಲಿ ಜರಗಿದ ಜಾತ್ರೆ ಇದು ಇದೀಗ **1938**ರಲ್ಲಿ ತಾರೀಕು **21-11-38**ರಲ್ಲು

ಜರಗಲಿಕ್ಕಿದೆ.

ಕಾರ್ತಿಕಮಾಸ, ವೃಶ್ಚಿಕಮಾಸ, ಅಮಾವಾಸ್ಯೆ, ಸೋಮವಾರ, ಮಹಾಯೋಗ, ಇವಿಷ್ಟು ಯೋಗಗಳು ಒಟ್ಟಿಗೆ ಬಂದ ದಿವಸದಲ್ಲಿಮಾತ್ರ ಈ ಜಾತ್ರೆಯು ಜರಗುವದು

ಈ ಪರ್ವಕಾಲದಲ್ಲಿ ಉತ್ತರವಾಹಿನಿಯಾಗಿಯೂ, ಪೂರ್ವವಾಹಿನಿಯಾಗಿಯೂ, ದಕ್ಷಿಣವಾಹಿನಿಯಾಗಿಯೂ, ಪಶ್ಚಿಮವಾಹಿನಿಯಾಗಿಯೂ, ಹರಿಯುವ ಕಾವೇರಿ ಪುಣ್ಯೋದಕದಲ್ಲಿ ಸ್ನಾನವನ್ನು ಮಾಡಿ. ವೈದ್ಯೇಶ್ವರ, ಅರ್ಕೇಶ್ವರ, ಪಾತಾಳೇಶ್ವರ, ಮರಳೇಶ್ವರ, ಮಲ್ಲಿಕಾರ್ಜುನೇಶ್ವರ ಸ್ವಾಮಿಯ ದರ್ಶನ ಲಾಭವನ್ನು ಪಡೆಯಿರಿ. ಕಾರ್ತಿಕ ಬಹುಳ ಅಮಾವಾಸ್ಯೆ, ಸೋಮವಾರ ದಿವಸ ತಲಕಾಡಿನ ಗೋಕರ್ಣ ಸರೋವರದಲ್ಲಿ ಸ್ನಾನಮಾಡಿ, ಗೋಕರ್ಣೇಶ್ವರ ಸ್ವಾಮಿ ದರ್ಶನ ಪಡೆದು ಚಾಮುಂಡೇಶ್ವರೀ ದರ್ಶನವನ್ನು ಹೊಂದಿ, ವೈದ್ಯೇಶ್ವರ ದರ್ಶನ ಲಾಭವನ್ನು ಹೊಂದುವದು. ಅಲ್ಲಿಂದ ಮೂರು ಮೈಲು ದೂರದಲ್ಲಿರುವ ವಿಜಾಪುರಕ್ಕೆ ಹೋಗಿ, ಉತ್ತರವಾಹಿನಿ ಕಾವೇರಿನದಿಯಲ್ಲಿ ಸ್ನಾನಮಾಡಿ ಅಲ್ಲಿರುವ ಅರ್ಕೇಶ್ವರನ ದರ್ಶನ ಲಾಭ ಪಡೆದು, ಅಲ್ಲಿಂದ ತಲಕಾಡಿಗೆ ದಕ್ಷಿಣದಲ್ಲಿರುವ ಪೂರ್ವವಾಹಿನಿ ಕಾವೇರಿ ನದಿಯಲ್ಲಿ ಸ್ನಾನಮಾಡಿ, ಪಾತಾಳೇಶ್ವರನ ದರ್ಶನ ಲಾಭ ಪಡೆದು, ಪಶ್ಚಿಮ ಪಾರ್ಶ್ವದಲ್ಲಿ ದಕ್ಷಿಣವಾಹಿನಿಯಾಗಿ ಹರಿಯುವ ಕಾವೇರಿಯಲ್ಲಿ ಸ್ನಾನಮಾಡಿ, ಮಲ್ಲಿಕಾರ್ಜುನೇಶ್ವರ ಸ್ವಾಮಿ ದರ್ಶನ ಲಾಭವನ್ನು ಪಡೆಯುವುದು. ಇದು ಪಂಚಲಿಂಗ ದರ್ಶನ ಕ್ರಮ.

ಈ ಸ್ಥಳವು ಮೈಸೂರಿನಿಂದ ಬರೇ 30 ಮೈಲು ದೂರದಲ್ಲಿದೆ. ಯಾತ್ರಾರ್ಥಿಗಳ ಸರ್ವಾನುಕೂಲತೆಯು ವ್ಯವಸ್ಥೆ ಮಾಡಲಾಗಿದೆ. ನಮ್ಮ ಜಿಲ್ಲೆಯಲ್ಲಿ ವ ಮಡಿಕೇರಿ, ಮೈಸೂರು ಕಡೆಗಳಲ್ಲಿ ಪ್ರಯಾಣಿಕರಿಗೆ ಉಳಕೊಳ್ಳುವರೆ ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ.

ಹೆಚ್ಚಿನ ವಿಷಯಗಳ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರಮೂಲಕವಾಗಿಯೂ ಅಥವಾ ಸ್ವತಃ ಬಂದು ಕೇಳಿ ತಿಳಕೊಳ್ಳಿರಿ.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ ಓದುಗರ ಮನಸ್ಸನ್ನು ಸೂರೆಗೊಂಡ ಹೊಸಮಾದರಿಯ ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ ದೊರೆಯುವುದು.

ವಾರ್ಷಿಕ ಚಂದಾ ರೂ 3 0 0 ಬಿಡಿ ಪ್ರತಿ 0 1 0

ಮೆನೇಜರ್ ಅಂತರಂಗ, ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital	Rs 1,00,000
Subscribed & Paid up	Rs. 30,360
Reserves	Rs. 1,078

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

3ರಿಂದ	**6**	ತಿಂಗಳ ವರೆಗೆ	**4**	ಸಲೆ
7 ,,	**11**	,,	**5**	,,
12 ,,	**18**	,,	**6**	,,

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯಿತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?

ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ನ್ಯಾಶನಲ್ ಭವನ,
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S.S. KARANTH, for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI, South India.

Registered No. M. 3618.

3-11-1938

ನವ ಯುಗ
NAVA YUGA



ಶ್ರೀ. ಎನ್. ಎಸ್. ಕಿಲ್ಲೆಯವರು.

ಅಸಾಧಾರಣ ವಾಗ್ಮಿಗಳಾಗಿ ಅಖಿಲಕರ್ನಾಟಕ ಪ್ರಸಿದ್ಧಿ ಪಡೆದಿರುವ ತರುಣ ದಕ್ಷಿಣ ಕನ್ನಡಿಗರು. ಅಗ್ರಗಣ್ಯ ಯಕ್ಷಗಾನ ಅರ್ಥಧಾರಿಗಳಾದ ಇವರ ಹೆಸರು ದಕ್ಷಿಣಕನ್ನಡದಲ್ಲಿ ಮನೆಮಾತಾಗಿರುವುದು. ಯಕ್ಷಗಾನ ಅರ್ಥವಿಧಾನದಲ್ಲಿ ನವೀನ ಮಾರ್ಪೊಂದು ರೀತಿಯ ನಿರ್ಮಾಣಕರಿವರು. ಉಜ್ವಲ ರಾಷ್ಟ್ರಾಭಿಮಾನಿಯಾಗಿ ಎಡೆಬಿಡದೆ ದೇಶಕ್ಕಾಗಿ ದುಡಿಯುತ್ತಾ ಬಂದವರು. ಸಾರ್ವಜನಿಕ ಸೇವೆಗಾಗಿ ಮೀಸಲಿಟ್ಟ ಜೀವನ ಇವರದು.

PLAN YOUR FAMILY'S FUTURE.

EVERY INDEPENDENT STATE HAS ITS OWN FIVE OR SEVEN YEARS' PLANS FOR THE ECONOMIC BETTERMENT OF ITS PEOPLE; EVEN SO HAS EVERY THOUGHTFUL INDIVIDUAL IN EVERY WALK OF LIFE A WELL THOUGHT OUT PLAN OF HIS OWN FOR THE FUTURE WELFARE OF HIS FAMILY.

PLAN YOUR FAMILY'S FUTURE NOW.

IF YOU ARE A BUSINESSMAN OUR PIGMY DEPOSIT SCHEME SHOULD APPEAL TO YOU MOST SINCE IT IS A DAILY DEPOSIT COLLECTED AT YOUR DOOR. THESE DAILY DEPOSITS GROW EVEN AS YOUR CHILDREN DO AND ARE THEREFORE WELL SUITED FOR BEING EARMARKED FOR YOUR DAUGHTER'S MARRIAGE OR SON'S EDUCATION.

THE

CANARA INDUSTRIAL & BANKING SYNDICATE, LTD.

(INCORPORATED IN BRITISH INDIA)

ESTD.] *HEAD OFFICE.* - UDIPI, S. INDIA [1925

MEMBER:

RESERVE BANK OF INDIA
BANKERS' CLEARING HOUSE, BOMBAY.

Authorised Capital	„	10,00,000
Issued Capital	,	8,00,000
Subscribed Capital	„	7,74,500
Paid up Capital	„	3,86 880
Reserves	„	2,16,700

TOTAL RESOURCES EXCEED Rupees 51 Lakhs.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು

ಅಸನ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವೀಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ

ಯಾವಾಗಲೂ [illegible]

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ವಿಷಯಗಳಿಗೂ ಬರೆಯಿರಿ

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಶೀರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	– ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿನಾಶಿನಿ
ಕಷ್ಟ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಧಾತುಪುಷ್ಟಿಗೆ	—ಮದನಕಾಮೇಶ್ವರಿ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: MANGALORE
BRANCHES: Udipi, Coondapoor, Kaup & Karkal

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at 3½ p. c. per annum.
One year Fixed Deposits at 4 p. c per annum.
Two years' Fixed Deposits at 4½ p. c per annum

Interest on Fixed Deposits is payable every quarter.

Every kind of Banking business undertaken

Further particulars can be had on application to the Head Office or any of the branches.

K. Gopalkrishna Shetty,
Secretary

THE

PANGAL NAYAK BANK

LIMITED.

Estd.] H. O. UDIPI. [1920

BRANCHES.

MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at 3½ p c. per annum.
Two years' Fixed Deposits at 4 p. c. per annum.
Savings Bank Deposits .... 3 p c per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD. 1921
FOUNDER
Sri A B SHETTY, M L A
Parliamentary Secretary Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ ಎಲ್. ಎ.

ಸಂಪಾದಕ
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೩-೧೧-೧೯೩೮. | Vol. XVIII
ಸಂಚಿಕೆ ೧೦ | Udipi, Thursday 3-11-1938 | No 10

ಸ್ಥಾಪನೆ: ೧೯೨೧
ಚಂದಾ ವಿವರ:
ವರ್ಷಕ್ಕೆ ರೂ ೩-೪-೦
೬ ತಿಂಗಳಿಗೆ ರೂ ೧-೧೨-೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು

ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ

ವಾರದ ಡೈರಿ

ಹಿಂದುಗಳೇ ಬುದ್ಧಿಶಾಲಿಗಳು—

ತನ್ನ ಮೋಟರ್ ಕಾರ್ಖಾನೆಗೆ ಕೆಲಸ ಕಲಿಯ ಬರುವ ವಿದೇಶೀಯರಲ್ಲೆಲ್ಲಾ ಹಿಂದುಗಳೇ ಅತ್ಯಂತ ಬುದ್ಧಿಶಾಲಿಗಳೆಂದು ಮಿ ಹೆನ್ರಿಫೋರ್ಡರ ಅಭಿಮತವಂತೆ. ಆದರೆ ಬರೇ ಬುದ್ಧಿವಂತಿಕೆಯನ್ನು ಹಿಡಿದುಕೊಂಡು ಅವರು ಮಾಡುವುದೇನು? ಅದನ್ನುಪಯೋಗಿಸುವ ಸಂದರ್ಭ ಬೇಕಲ್ಲವೇ? ಕಾನನದ ಕುಸುಮವಾಗಿದೆ ಅದೀಗ ವಿದೇಶೀಯರ ಆಳ್ವಿಕೆಯಲ್ಲಿ

x x x x

ಇನ್ನೊಂದು ಓಂ ಮಂಡಲಿ—

ಕರಾಚಿಯ ಓಂ ಮಂಡಲಿಯು ಅಲ್ಲಿಯ ಶೇಟ್ ಸಮಾಜದ ಗಂಡಹೆಂಡಿರಲ್ಲೆಲ್ಲಾ ದೊಡ್ಡ ದ್ವಂದ್ವವನ್ನೇ ಎಬ್ಬಿಸಿಬಿಟ್ಟಿದೆ. ಹೆಂಡಿರು ಗಂಡಂದಿರನ್ನು ಧಿಕ್ಕರಿಸಿ ಗೋಪಿಕೆಯರಾಗಿ ಓಂಮಂಡಲಿಯ ಅಭಿನವ ಕೃಷ್ಣನ ಅನುಯಾಯಿಗಳಾಗ ಹತ್ತಿರುತ್ತಾರೆ. ಗಂಡಂದಿರೆಲ್ಲಾ ದಿಗಿಲುಗೊಂಡು ಈ ಓಂಮಂಡಲಕ್ಕೆ ತಮ್ಮ ಸ್ತ್ರೀಯರಾರೂ ಹೋಗದಂತೆ ಸತ್ಯಾಗ್ರಹ ಹೂಡಿದ್ದಾರೆ. ಈಗ ಇಂತಹ ಓಂ ಮಂಡಲಿಯೊಂದನ್ನು ಡಿಲ್ಲಿಯ ಶ್ರೀಮಂತ ವಿಧುರ ಶೇಟರೊಬ್ಬರು ಸ್ಥಾಪಿಸಲಿದ್ದಾರಂತೆ. ಚಳಿಹಿಡಿಯ ಹತ್ತಿದೆಯಂತೆ ಅಲ್ಲಿಯ ಶೇಟ್ ಗಂಡಸರಿಗೆಲ್ಲ. ಪ್ರಾಯಶಃ ಶೇಟ್ ಸಮಾಜದಲ್ಲಿ ಸ್ತ್ರೀಯರ ತುಟ್ಟಿ ಬಹಳವೆಂದು ತೋರುತ್ತದೆ

ಜಾಪಾನಿಗೆ ಬುದ್ಧದೇವನ ಎಲುಬು—

ಸಯಮ್ ರಾಜಮನೆತನದವರು ಸೌಹಾರ್ದ ಸೂಚಕವಾಗಿ ಜಾಪಾನಿಗೆ ಭಗವಾನ್ ಬುದ್ಧನ ಎಲುಬನ್ನು, ಕಮಾಂಡರ್ ಕಂಕೃಯವರ ಮೂಲಕ ಕಳುಹಿಸಿರುವರು. ಆ ಅಹಿಂಸಾವತಾರಿಯ ಧರ್ಮದ ಮೂಲತತ್ವದ ಸಮಾಧಿಯ ಮೇಲೆ, ಸಹಸ್ರಗಟ್ಲೆ ಚೀನೀಯರ ರಕ್ತಪಾತದ ಪ್ರಾರಂಭದಿಂದ ಈ ಪವಿತ್ರ ಎಲುಬು ಪ್ರತಿಷ್ಠಾಪಿಸಲ್ಪಡುವುದು ಜಾಪಾನ ಸಾಮ್ರಾಜ್ಯದ ಮುಖ್ಯ ಪಟ್ಟಣವಾದ ಟೋಕಿಯೋದಲ್ಲಿ! ಹಿಂದಿನ ಧರ್ಮಗಳ ಈಗಣ ಅನುಸರಣೆಯ ರೀತಿಯಿದು!

x x x x

ದವಸಧಾನ್ಯ ವಿನಿಮಯ—

ಪರಮಾವಧಿಗಳು ಯಾವಾಗಲೂ ಒಂದುಗೂಡುತ್ತವೆ ನ್ಯಾ ವಿನಿಮಯದಲ್ಲಿ ಅತ್ಯಂತ ಮುಂದುವರಿದ ಅಮೆರಿಕದಲ್ಲಿಂಗ ಹಿಂದಿನ ವಸ್ತು ವಿನಿಮಯಕ್ರಮಾರಂಭಿಸಹತ್ತಿರುವುದು. ಕೆಲವು ಥಿಯೇಟರುಗಳ ಮನೇಜರರು, ಆದೊಂದು ಪ್ರಮಾಣದ ಗೋಧಿ ತೆಗೆದುಕೊಂಡು ಟಿಕೇಟುಗಳನ್ನು ಕೊಡಹತ್ತಿದ್ದಾರೆ. ಇತ್ತಲಾಗ್ಯಿ ಕಾನ್ಸಾಸ್ ಎಂಬಲ್ಲಿ ಮೆಜಿಸ್ಟ್ರೇಟನೊಬ್ಬನು ದಂಪತಿಗಳಿಬ್ಬರನ್ನು ಗೋಧಿ ಗದ್ದೆಯಲ್ಲೇ ವಿವಾಹಮಾಡಿ ಫೀಸಾಗಿ ವಧುವಿನ ತೂಕದಷ್ಟು ಗೋಧಿಯನ್ನು ಸ್ವೀಕರಿಸಿರುವನು. ಮಿಚಿಗನಿನಲ್ಲಿ ಕ್ಷೌರಿಕರು ಗೋಧಿಪಡೆಕೊಂಡು ಕ್ಷೌರಮಾಡಹತ್ತಿರುವರು.

ಜರ್ಮನಿಯ ನಾಶ ನಿಶ್ಚಯ

ಇಷ್ಟರವರೆಗೆ ಹಿಟ್ಲರರು ಜಯಸಂಪಾದಿಸಿರುವುದು ಕೇವಲ ಯುದ್ಧದ ಬೆದರಿಕೆಯಾಗಿ. ಇನ್ನು ಮುಂದೆ ಯುದ್ಧವುಂಟಾಯಿತೆಂದರೆ ಜರ್ಮನಿಯ ನಾಶ ನಿಶ್ಚಯ. ಯುದ್ಧವು ಮಿಂಚಿನಂತ ಕೇವಲ ಸ್ವಲ್ಪ ಸಮಯಮಾತ್ರ ನಡೆಯುವುದಾದರೆ ಜರ್ಮನಿಯು ಜಯಶೀಲವಾಗಬಹುದು, ಆದರೆ ಆ ಸಂಭವವೇನೂ ಇಲ್ಲ. ಪೂರ್ವದಲ್ಲಿ ರಷ್ಯವು ಅತ್ಯಂತ ಪ್ರಬಲ ಸೇನಾಸಿದ್ಧತೆಯುಳ್ಳದಾಗಿದೆ ಪಶ್ಚಿಮದಲ್ಲಿ ಫ್ರಾನ್ಸ್ ಅತ್ಯಂತ ಪ್ರಬಲ ಸೇನೆಯನ್ನೊಳಗೊಂಡಿದೆ. ಅಂದಮೇಲೆ ಯುದ್ಧವು ದೀರ್ಘವಾಗಿ ನಡೆಯುವುದಂತೂ ನಿಶ್ಚಯ. ಆಗ ಜರ್ಮನಿಯ ಆರಂಭೋತ್ಸಾಹವು ಕುಂದಿ ಜನತೆಯಲ್ಲಿ ಅತೃಪ್ತಿಯುದ್ದು ವಿನಾಶ ನಿಶ್ಚಯ. ಕಳೆದ ಮಹಾಯುದ್ಧದಲ್ಲೂ ಆದುದು ಹೀಗೆ.

x x x x

ಗಗನ ರಹಸ್ಯ—

ಎಂದು ಹಂಗೇರಿ ದೇಶದ ಲೂಯಿಸ್ ಡಿಪ್ರೋಲರಂಬವರು ಕೆಲವು ಭವಿಷ್ಯಗಳನ್ನು ಹೇಳಿರುವರು. ಇವರ ಭವಿಷ್ಯ ಪ್ರಕಾರ ಗಾಂಧಿಜಿಯವರು 1939ನೇ ವರ್ಷದ ಆದಿಭಾಗದೊಳಗೆ ಸರ್ವಾಧಿಕಾರವನ್ನೈದುವರು. ಮುಸೊಲೋನಿಯು 1940ರಲ್ಲಿ ತನ್ನ ಜೀವನದ ತುತ್ತತುದಿಗೇರುವನು. 1945ನೇ ಜನವರಿಯಲ್ಲಿ ಜರ್ಮನಿಯ ಮುಖಂಡನೊಬ್ಬನು ಕೊಲೆಗೊಳಗಾಗುವನು. ಮತ್ತು ಸುಪ್ರಸಿದ್ಧ ಪ್ರಮುಖರೊಬ್ಬರು ಕೊಲ್ಲಲ್ಪಡದಿದ್ದರೂ ಗಾಯಗೊಳ್ಳುವರು. 1938ನೇ ವರ್ಷದ ಮೊದಲಲ್ಲಿ ಮಿ. ಛೇಂಬರ್ಲೇನರು ಮತ್ತಷ್ಟು ಖ್ಯಾತಿ ಹೊಂದುವರು. ಆದರೆ ಆಮೇಲೆ ಸ್ವಲ್ಪ ಸಮಯದಲ್ಲೇ ಇಂಗ್ಲೆಂಡ ಗಂಡಾಂತರಕ್ಕೊಳಗಾಗುವುದು. ಯುದ್ಧದ ಅಪಾಯವುಂಟಾಗುವುದು. ಆದರೆ ಎಂದೂ ಅನಿವಾರ್ಯವಲ್ಲ. ಸಮರ್ಥ ಮುತ್ಸದ್ದಿತನದಿಂದ ಅದನ್ನು ನಿವಾರಿಸಬಹುದೆಂದು ತೋರುತ್ತದೆ. ಈಗಣ ಇಂಗ್ಲೆಂಡಿನ ಯುದ್ಧ ಮಂತ್ರಿಗಳಾದ ಮಿ. ಲೆಸ್ಲಿ ಹೋರ್ ಬೆಲೀಶರು ಪ್ರಧಾನ ಮಂತ್ರಿಗಳಾಗಬಹುದು.

ಶಾಂತಿವಾದಿಗಳಲ್ಲ, ಹೇಡಿಗಳು—

"ಯುದ್ಧದ ಭೀತಿಯಿಂದ, ತಮಗೆ ಸರಿ ತೋರಿದದನ್ನು ಮಾಡದಿರುವವರು, ನನ್ನ ಮಿತ್ರ ಮಹಾತ್ಮ ಗಾಂಧಿಯವರಂತೆ ಉದಾತ್ತ ಶಾಂತಿವಾದಿಗಳಲ್ಲ ನನ್ನಂತೆಯೇ ಸರ್ವಸಾಮಾನ್ಯ ಹೇಡಿಗಳು" ಮಿ. ಲಿಂಡ್ಸೆಯವರು ಶಾಂತಿಯ ದೂತ ಬ್ರಿಟಿಷ್ ಪ್ರಧಾನ ಮಂತ್ರಿಗಳ ಕುರಿತು ಮಾಡಿರುವ ಟೀಕೆಯಿದು. ಬಹಳ ಅರ್ಥಪೂರ್ಣವಾದುದು.

ಇನ್ನೊಂದು ರೌಂಡ್ ಟೇಬಲ್ ಪರಿಷತ್ತು—

ಸಿಂಲಾ ರಜೆಯ ಮೇಲೆ ಹೋಗಿದ್ದ ಲಾರ್ಡ್ ಲಿನ್ಲಿತ್‌ಗೋರವರು ಹಿಂತಿರುಗಿರುವರು. ಫೆಡರೇಶನನ್ನು ಜಾರಿಗೆ ತರುವ ಪ್ಲಾನ್ ನಡೆದಿದೆಯೆಂದು ಸುದ್ದಿಗಳು ಸಿಗಹತ್ತಿವೆ. ವೃತ್ತಪತ್ರಿಕೆಗಳು, ಇಂಗ್ಲೆಂಡಿನಲ್ಲೇ ಹಿಂದೀ ರಾಜಕೀಯ ಮುಖಂಡರ ರೌಂಡ್ ಟೇಬಲ್ ಪರಿಷತ್ತನ್ನು ಸೇರಿಸಬಹುದೆಂದು ಬರೆಯುತ್ತಿವೆ. ವಾಯುವ್ಯ ಗಡಿನಾಡಿನಿಂದ ಹಿಂತಿರುಗಿ ಮಹಾತ್ಮಾ ಗಾಂಧಿಯವರನ್ನು ಕಂಡು ಮಾತಾಡಬಹುದೆಂದು ಇನ್ನೊಂದು ಸುದ್ದಿ. ಅಂಡರ್ ಸೆಕ್ರೆಟರಿಗಳಾದ ಮಿ. ಬಟ್ಲರ್ ಹೆಲಿಕಾಪ್ಟರ್ ಮೂಲಕ ಪೇರ ಇಸ್ಮಾಯಿಲ್ ಖಾನ್ ಎಂಬಲ್ಲಿಗೆ ಹೋಗಿ ಗಾಂಧಿಯವರೊಡನೆ ೧ ನಿಮಿಷ ಮಾತಾಡಿರುವರು. ಅಂತೂ ಏನೋ ಒಳಗಿಂದೊಳಗೆ ನಡೆಯುವಂತೆ ತೋರುತ್ತದೆ.

ರಾಷ್ಟ್ರಪತಿಗಳ ಯುದ್ಧದ ಕರೆ—

ಕಾಂಗ್ರೆಸು ರಾಷ್ಟ್ರೀಯ ಕೇಳಿಕೆಗಳನ್ನು ಬ್ರಿಟಿಷ್ ಸರಕಾರದ ಮುಂದಿಟ್ಟು ಅದಕ್ಕೊಂದು ಅವಧಿ ಹಾಕಬೇಕು. ಅಷ್ಟರಲ್ಲಿ ಸಮರ್ಪಕ ಉತ್ತರ ದೊರೆಯದಿದ್ದಲ್ಲಿ ಅಗತ್ಯ ಬಿದ್ದರೆ ಕಾಯಿದೆಭಂಗವನ್ನು ಮರು ಕೈಕೊಳ್ಳಬೇಕು. ಹಿಂದೀಯರು ಯುದ್ಧಕ್ಕೆ ಸಿದ್ಧರಾಗಿರಬೇಕೆಂದು ರಾಷ್ಟ್ರಪತಿಗಳು

THE UDIPI BANK LTD.

ನಿರಖು ಠೇವಣಾತಿ (ಡಿಪೋಜಿಟು)ಗಳು

ನೂ. ಕೆ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ

ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100-ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್.
ಉಡುಪಿ —

ಎಚ್ಚರವೀಯುಹತ್ತಿದ್ದಾರೆ ಅಭಿನವ ಕಾಂಗ್ರೆಸ್ ಪಕ್ಷೀಯರಿಗೆ ಕೆಲವರಿಗೆ ಚಳಿಹಿಡಿಯುಹತ್ತಿರಬಹುದು ಇಷ್ಟರಲ್ಲೇ!

x x x x

ಗುಲಾಮಗಿರಿಯ ಸಹಾಯಕರು—

'ನಮ್ಮ ರಾಷ್ಟ್ರೀಯ ಗೌರವ ಮತ್ತು ಸ್ವಾಭಿಮಾನದ ಮೇರೆಗೆ ನಮ್ಮ ರಾಜಕೀಯ ಘಟನೆಯನ್ನು ತಯಾರಿಸುವ ಅಧಿಕಾರ ನಮಗಿರತಕ್ಕದ್ದು. ನಾವಿನ್ನು ಮುಂದೆ ಗುಲಾಮರಾಗಿರಲಾರೆವು. ನಾವು ಗುಲಾಮರೆಂಬುದು ನಮ್ಮ ದುರ್ದೈವವಲ್ಲ. ನಮ್ಮ ಜನರೇ ಗುಲಾಮಗಿರಿಯ ಸಹಾಯಕರಿರುವರೆಂಬುದು ನಮ್ಮ ದುರದೃಷ್ಟ. ಸ್ವಾತಂತ್ರ್ಯದ ಪ್ರಾಮುಖ್ಯ ಪ್ರಶ್ನೆಯನ್ನು ಮೂಲೆಗೊತ್ತಿ ಅಲ್ಪ ವಿಷಯಗಳಿಗೆ ಮಹತ್ವಕೊಡಲ್ಪಡುವುದು ಅತ್ಯಂತ ಶೋಚನೀಯ.' ಸರ್ ವಜೀರ್ ಹಾಸನರು ಲಾಹೋರಿನ ಒಂದು ಭಾಷಣದಲ್ಲಿ ಹೇಳಿದ ಮಾತುಗಳಿವು. ಮುಸ್ಲಿಮ್ ಲೀಗಿಗೆ ದೇಶದ ಸ್ವಾತಂತ್ರ್ಯ ಸಾಧನೆಗಿಂತಲೂ ನೌಕರಿ ಮತ್ತು ಅಧಿಕಾರದ ಪಾಲು, ವಂದೇ ಮಾತರಮ್ ಮತ್ತು ರಾಷ್ಟ್ರೀಯ ಭಾಷೆಯ ಪ್ರಶ್ನೆಯೇ ಮಹತ್ವವಾಗಿ ಹೋಗಿದೆ. ಅವುಗಳಿಗಾಗಿ ಅದು ಕಾಂಗ್ರೆಸಿನೊಡನೆ ಹೋರಾಡಿ ಸ್ವಾತಂತ್ರ್ಯದ ಹೋರಾಟಕ್ಕೆ ಅಡ್ಡಿಮಾಡಲು ಕೂಡಾ ಮುಂದಾಗಿದೆ.

ಹಿಂದೂದೇಶದ ಮೇಲೆ ಧಾಳಿಯ ಬೆದರಿಕೆ—

ಯುರೋಪಿನಲ್ಲಿ ಯುದ್ಧವಾದರೆ ಜಪಾನ ಹಡಗುಪಡೆಯು ಹೊಂಕೊಂಗ್, ಸಿಂಗಪುರ, ಮಲಯದ್ವೀಪ ಮತ್ತು ಹಿಂದೂದೇಶದ ಮೇಲೆ ಧಾಳಿಯಿಡಬಹುದೆಂಬ ಸುದ್ದಿಯಿಂದ ಬ್ರಿಟಿಷ್ ಸರಕಾರವು ದಿಗಿಲುಗೊಂಡು ಮ್ಯೂನಿಚ್ ಒಡಂಬಡಿಕೆಗೆ ಮುಂದಾಯಿತೆಂದು ಅಮೇರಿಕಾನ ಪತ್ರಿಕೆಗಳು ಪ್ರಕಟಿಸಿರುತ್ತವೆ. ಸಿಂಗಪುರದ ನೌಕಾನೆಲೆಯು ಇನ್ನೂ ಅಷ್ಟೊಂದು ಪ್ರಬಲವಾಗಿಲ್ಲ. ಅಮೇರಿಕವು ಯುದ್ಧಕ್ಕೆ ಬಂದು ಜಪಾನನ್ನು ಶಾಂತಸಾಗರದಲ್ಲಿ ತಡೆಗಟ್ಟುವುದಾದರೆ ಮಾತ್ರ ಮಿ. ಚೇಂಬರ್ಲೇನರು ಯುರೋಪಿನ ಯುದ್ಧಕ್ಕೆ ಸಿದ್ಧರಿದ್ದರಂತೆ. ಆದರೆ ಅಮೇರಿಕವು ಇಂಗ್ಲೆಂಡಿನ ಸ್ವಾರ್ಥಕ್ಕಾಗಿ ಫಕ್ಕ ಯುದ್ಧಕ್ಕೆ ಧುಮುಕುವುದೇಕೆ?

x x x x

28ನೇ ಅಕ್ಟೋಬರ—

ಇಟೆಲಿಯಾನ ಹುಡುಗರು ಓದ ಕಲಿತೊಡನೆಯೇ ಪ್ರಥಮವಾಗಿ ಕಲಿಯುವುದೆಂದರೆ 1922ನೇ ಇಸ್ವಿ ಅಕ್ಟೋಬರ ತಾ 28ನೇ ದಿನದ ಪಾಠವನ್ನು. ಇಟೆಲಿಯ ರಕ್ಷಕ ಮುಸಲೋನಿಯವರು ಲಕ್ಷ ಫೆಸಿಸ್ಟ ಕರಿಯಂಗಿ ಸೇನೆಯೊಂದಿಗೆ ರೋಮ್ ನಗರವನ್ನು ಪ್ರವೇಶಿಸಿದ ಸ್ಮರಣೀಯ ದಿನವದು. ಪ್ರತಿ ವರ್ಷವೂ ಇಟೆಲಿಯಲ್ಲಿ ಅತಿ ವಿಜೃಂಭಣೆಯಿಂದ ಆಚರಿಸಲ್ಪಡುತ್ತಿರುವುದು. ಇಟೆಲಿಯ ಪ್ರಾಥಮಿಕ ಶಾಲೆಗಳ ಪಠ್ಯಪುಸ್ತಕಗಳ ಪ್ರಥಮ ಪಾಠವೇ ಇದು. ಆದರೆ ಹಿಂದೀ ಬಾಲಕರು ಪ್ರಥಮವಾಗಿ ಇಂತಹ ಪಾಠಕಲಿಯುವ ದಿನವು ಎಂದು ಬರುವುದು!

ಮೊದಲು ಫ್ರಾನ್ಸು ಅನಂತರ ಇಂಗ್ಲೆಂಡು—

ಇಂಗ್ಲೆಂಡು ತನ್ನನ್ನೆಂದಿಗೂ ಬಿಟ್ಟುಹಾಕಲಾರದೆಂದು ಫ್ರಾನ್ಸು ನಂಬಿಕೊಂಡಿದೆ. ಇದು ಬಯಲು ಭ್ರಾಂತಿ. ಚೇಂಬರ್ಲೇನ, ಮುಸಲೋನಿ ಮತ್ತು ಹಿಟ್ಲರರು ಒಂದಾಗಿ ಮೊದಲು ಫ್ರಾನ್ಸಿನ ಹಿತಕ್ಕೆ ಕೊಡಲಿಯಿಡುವರು. ಆಗ ಫ್ರಾನ್ಸು ಕಣ್ಣುಕಣ್ಣು ನೋಡುತ್ತಿರಬೇಕು. ಆಮೇಲೆ ಇಂಗ್ಲೆಂಡಿನ ಸರ್ತಿ ಬರುವುದು. ಇಂಗ್ಲೆಂಡಿಗೆ ಯಾರ ಸಹಾಯವೂ ಇಲ್ಲದಾಗಿ ಡಿಕ್ಟೇಟರರ ಕೈಯೇ ಮೇಲಾಗುವುದು. ಈ ನಾಲ್ಕು ರಾಷ್ಟ್ರಗಳ ಒಪ್ಪಂದವೆಂಬುದು ನಿಜವಾಗಿಯೂ ಎರಡು ರಾಷ್ಟ್ರಗಳ ಒಪ್ಪಂದ. ಹಿಟ್ಲರ್ ಮುಸಲೋನಿಗಳ ಒಳಸಂಚು. ಇದರಿಂದ ಅನಾಹುತ ತಪ್ಪಲಾರದೆಂದು ಮೋಸ್ಕೋ ಪತ್ರಿಕೆಯೊಂದರ ಕಟುವಾದ ಟೀಕೆ. ಈಗಣ ಪರಿಸ್ಥಿತಿ ನೋಡಿದರೆ ಇದು ನಿಜವೆಂಬ ಹಾಗೆ ತೋರುತ್ತದೆ.

ಒಬ್ಬನಿಗೆ 14 ಬೋಂಬುಗಳು—

ಸ್ಪೈನಿನಲ್ಲಿ ಬಂಡಾಯಗಾರರು ಕೆಟಲೋನಿಯದ 24 ಪಟ್ಟಣಗಳ ಮೇಲೆ 552 ಸಲ ವಿಮಾನಧಾಳಿ ನಡಿಸಿ ಕೊಲ್ಲಲ್ಪಟ್ಟ ಜನರು 3662 ಮಂದಿ. ಇಷ್ಟು ಮಂದಿಯನ್ನು ಕೊಲ್ಲಲು 12,704 ಬೋಂಬುಗಳೆಸೆಯಲ್ಪಟ್ಟುವು. ಅಂದರೆ ಒಬ್ಬನಿಗೆ 4 ಬೋಂಬುಗಳಂತಾಯಿತು. 150,000 ಜನಸಂಖ್ಯೆಯಿರುವ 4 ದೊಡ್ಡ ಪಟ್ಟಣಗಳ ಮೇಲೆ ಬಂಡಾಯಗಾರ ವಿಮಾನಗಳು 173 ಸಲ ವಿಮಾನಧಾಳಿ ನಡಿಸಿ 4,930 ಬೋಂಬುಗಳನ್ನು ಸುರಿದು ಕೊಲ್ಲಲ್ಪಟ್ಟವರು 360 ಮಂದಿ ಮಾತ್ರ. 14 ಬೋಂಬುಗಳಿಗೊಬ್ಬ ಕೊಲ್ಲಲ್ಪಟ್ಟಂತಾಯಿತು!

ದುರ್ಭೇದ್ಯ ಕೋಟೆಕೊತ್ತಳ

ಸೋವಿಯೆಟ್ ಸರಕಾರವು ತನ್ನ ಪಶ್ಚಿಮದ ಎಲ್ಲೆಯಲ್ಲಿ 50 ಮೈಲು ಅಗಲಕ್ಕೆ ಕಾಂಕ್ರೀಟಿನಿಂದ ದುರ್ಭೇದ್ಯವಾದ ಕೋಟೆಕೊತ್ತಳಗಳ ಸಾಲನ್ನು ರಚಿಸಿರುವುದು. ಇಷ್ಟೊಂದು ಭದ್ರವಾದ ಕೋಟೆಗಳು ಫ್ರಾನ್ಸು ಮತ್ತು ಜರ್ಮನಿಗಳ ಕಲ್ಪನಾತೀತವಾದುವಂತೆ. ಈ ಕೋಟೆಗಳ ನೆಲಮಾಳಿಗೆಗಳೊಳಗೇನೇ ರೈಲ್ವೆ, ಮದ್ದುಗುಂಡು ಸಂಗ್ರಹಾಲಯ, ಮತ್ತು ವರ್ಕಶೋಪುಗಳಿರುತ್ತವೆ. ಮಿಶನ್ ತೋಪುಗಳ ಗೂಡು, ಮತ್ತು ವಿಮಾನಾಲಯಗಳು ಕೂಡಾ ಇರುತ್ತವೆ. ಯುರೋಪಿನಲ್ಲಿ ಯುದ್ಧದ ಕ್ಷೋಭೆಯೆದ್ದಾಗ ಸ್ಟಾಲಿನರು, ತನ್ನ ಸೇನಾನಾಯಕರೊಂದಿಗೆ ಗುಪ್ತವಾಗಿ ಹೋಗಿ ಈ ಕೋಟೆಗಳನ್ನು ಪರೀಕ್ಷಿಸಿ ತೃಪ್ತರಾಗಿ ಹಿಂದಿರುಗಿರುವರು. ಎಲ್ಲರ ಕಣ್ಣೂ ಈಗ ರಸ್ಯದ ಮೇಲೆ ಬಿದ್ದಿರುವಾಗ ಅದು ತನ್ನ ಆತ್ಮರಕ್ಷಣೆಯ ಸಿದ್ಧತೆ ಮಾಡಿಕೊಳ್ಳಲೇಬೇಕು.

ಯುದ್ಧವಾಗುತ್ತಿದ್ದರೆ?—

ಯುರೋಪಿನಲ್ಲಿ ಯುದ್ಧವಾಗುತ್ತಿದ್ದರೆ ಡ್ಯೂಕ್ ಆಫ್ ವಿಂಡ್ಸರರು ಇಂಗ್ಲೆಂಡಿಗೆ ಕೂಡಲೇ ಬಂದು ತನ್ನ ತಮ್ಮನಿಗೆ ನೆರವಾಗುತ್ತಿದ್ದರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಜೋರ್ಜ್ ಚಕ್ರವರ್ತಿಗಳೂ ಮೇರಿ ಮಹಾರಾಣಿಯವರೂ, ಎಡ್ವರ್ಡರನ್ನು ಸಪತ್ನೀಕರಾಗಿ ಇಂಗ್ಲೆಂಡಿಗೆ ಆಮಂತ್ರಿಸುವುದರಲ್ಲಿದ್ದರೆಂದು ತಿಳಿದುಬರುತ್ತದೆ. ದೊಡ್ಡ ಗಂಡಾಂತರದ ಸಂದರ್ಭದಲ್ಲಿ ಅಲ್ಪ ವಿಷಯಗಳ ಗೊಡವೆ ಯಾರಿಗಿದೆ?

ವಿಹಾರಿ.

ಮೂಲ್ಕಿ ೨೯-೧೦-'೩೮

ಶ್ರೀ ಬಿ. ವೆಂಕಟಪ್ಪಯ್ಯ ಬಾಳಿಗ ಎಮ್. ಎಲ್. ಎ. ಚೆಯರ್‌ಮೆನ್, ಮಂಗಳೂರು ಮುನಿಸಿಪಾಲಿಟಿ ಇವರ ಅಧ್ಯಕ್ಷತೆಯಲ್ಲಿ ಇಂದು ರಾತ್ರಿ 8 ಗಂಟೆಗೆ ಹೈಸ್ಕೂಲು ಹಾಲಿನಲ್ಲಿ ಮೂಲ್ಕಿ ಹೈಸ್ಕೂಲು ಕಮಿಟಿಯ ಸಭೆಯು ಜರಗಿತು. ಸಭೆಯು, ಈಗ ಇರುವ ಕಾರ್ಯಕಾರಿ ಮಂಡಳದ ಮೇಲೆ ಒಂದು ತರದ ಅವಿಶ್ವಾಸ ಠರಾವನ್ನು ಆಲೋಚಿಸುವದಕ್ಕಾಗಿ ನಡೆದಿತ್ತು. ತೀವ್ರ ಚರ್ಚೆಯ ಮೇಲೆ 20 ಪ್ರತಿಕೂಲ, 11 ಅನುಕೂಲ ಮತ್ತು 2 ತಟಸ್ಥ ಮತಗಳಿಂದ ಠರಾವು ಬಿದ್ದು ಹೋಯಿತು. ಸಭೆಯು ರಾತ್ರಿ ಘಂಟೆ 11-30ರ ವರೆಗೆ ಇತ್ತು. 67 ಮೆಂಬರರ ಪೈಕಿ 33 ಮೆಂಬರರೂ, ಸುಮಾರು 250 ಜನ ಪ್ರೇಕ್ಷಕರೂ ಸೇರಿದ್ದರು. ಸಭೆಯು 7 ಘಂಟೆಗೆ ಎಂದು ತಿಳಿಸಿದ್ದರೂ, ಅಧ್ಯಕ್ಷ ಮಹಾಶಯರು ಮಂಗಳೂರಿನಿಂದ 8 ಗಂಟೆ ರಾತ್ರಿಗೆ ಬಂದುದರಿಂದ 8 ಗಂಟೆಗೆ ಶುರುವಾಯಿತು. ಡಾಕ್ಟರ್ ರಾಯಪ್ಪ ಕಮ್ಮತಿಯರ ಸೂಚನೆಯನ್ನು ಶ್ರೀ ಯಂ. ಆರ್. ಪೂಂಜರು ಅನುಮೋದಿಸಿದ ಮೇರೆಗೆ ಅಧ್ಯಕ್ಷರು ಆಸನಾರೂಢರಾದರು. ಅಧ್ಯಕ್ಷರು, ಶ್ರೀ ಪೂಂಜರು ಕಳೆದ ಸಭೆಯಲ್ಲಿ ಮುದಾಸಿನಿಂದ ಬರಲಿಲ್ಲವಾದುದರಿಂದ, ಅದು ಇಂದಿಗೆ ಮುಂದರಿಸಿತ್ತು. ಆದುದರಿಂದ, ಸಭೆಯ ಕಾರ್ಯಕ್ರಮಗಳಿಗೆ ಕೈಹಚ್ಚುವ ಮೊದಲು, ಶ್ರೀ ಪೂಂಜರು, ಹೈಸ್ಕೂಲು ಮತ್ತು ಅದರ ಕಮಿಟಿಯ, ಕಾರ್ಯಕಲಾಪಗಳ ವರದಿಯನ್ನು ಸಭೆಗೆ ತಿಳಿಸಬೇಕೆಂದು ಸೂಚಿಸಿದರು. ಶ್ರೀ ಪೂಂಜರು ಹೈಸ್ಕೂಲಿಗಾಗಿ ಮೂಲ್ಕಿಯವರಾದ ನಾವು ಮಾಡುತ್ತಿರುವ ಎಲ್ಲಾ ಚಳವಳಗಳನ್ನು ತಿಳಿಸಿ, ಶ್ರೀ ಎ. ಬಿ. ಶೆಟ್ರ ಪ್ರಯತ್ನದಿಂದ ಮತ್ತು ದಿವಾನ್ ಬಹದೂರು ಮಹಾಬಲ ಹೆಗ್ಗಡೆಯವರ ಪ್ರೋತ್ಸಾಹದಿಂದ ತಮಗೆ ಹೈಸ್ಕೂಲು ಸಿಕ್ಕಿತೆಂದೂ ಮತ್ತು ಹಣದ ಅಭಾವಕ್ಕಾಗಿ ನಾವು ಒಂದು ಸೊಸೈಟಿಯನ್ನು ಏರ್ಪಡಿಸಿದೆವೆಂದೂ ಅದು ಮಹಾಜನರ ಪ್ರೋತ್ಸಾಹದಿಂದ ಸಾಂಗವಾಯಿತೆಂದೂ, ಆ ದುಡ್ಡಿನಿಂದ ಅಂದರೆ ಅದರಲ್ಲಿ ಈಗ ಖರ್ಚು ಕಳೆದು ಉಳಿದಿರುವ 12,500/- ರೂಪಾಯಿಗಳಲ್ಲಿ ಜಿಲ್ಲಾ ಬೋರ್ಡಿನ ಸಹಾಯದಿಂದ ವಿದ್ಯಾ ಇಲಾಖೆಯವರು ಸೂಚಿಸುವ ಹೊಸತಾದ ಒಳ್ಳೇ ಸ್ಥಳದಲ್ಲಿ ಕಟ್ಟೋಣ ಕಟ್ಟುವೆವೆಂದೂ, ಆ ಎಲ್ಲಾ ಕೆಲಸಗಳೂ ಮುಂದಿನಂತೆಯೇ ಸಾಂಗವಾಗಿ ನಡೆದೀತೆಂದು ತಿಳಿಸಿ, ಕಮಿಟಿಯವರೂ, ಮಹಾಜನರೂ, ಕಾರ್ಯಕಾರಿ ಕಮಿಟಿಗೆ ಇದೆಲ್ಲಾ ಕೆಲಸಗಳನ್ನು ನಿರ್ವಹಿಸಲಿಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟ ಮೇರೆಗೆ ನಮ್ಮ (Working Committee) ಕೆಲಸವನ್ನು ದಕ್ಷತೆಯಿಂದ ನಡೆಸಿದ್ದೇವೆಂದು ಹೇಳಿ ಇನ್ನು ಮುಂದಿನ ಕಾರ್ಯಕ್ಕೆ ಬೆಂಬಲ ಕೊಡಬೇಕೆಂದರು.

ಕಡೆಗೆ ಬೋಳ ವಾಸುದೇವರಾಯರ ಠರಾವನ್ನು ಸಮರ್ಥಿಸಿ, ಕಾರ್ಯಕಾರಿ ಮಂಡಳಿಯನ್ನು ಬದಲಿ, ಶ್ರೀಗಳಾದ ಉಪೇಂದ್ರ ಪೈ. ಬಿ ಎ. ವಿ. ಟಿ. ನಾರಾಯಣ ಶೆಣೈ, ಎಮ್. ಕೃಷ್ಣರಾಯ ಶೆಣೈ ಮತ್ತು ವಿ. ಎಸ್. ಕಾಮತರ ಮಾತನಾಡಿದರು. ಇವರೆಲ್ಲರೂ ಶ್ರೀ ಪೂಂಜರ ಪ್ರಯತ್ನದಿಂದಲೇ ಮೂಲ್ಕಿಯಲ್ಲಿ ಹೈಸ್ಕೂಲಾ

ಪುಟ 9ರಲ್ಲಿ ನೋಡಿರಿ.

THE Bombay Life
ASSURANCE CO., LTD.
ಸ್ಥಾಪನೆ] [1908
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:
(1) ರಥಬೀದಿ, ಮಂಗಳೂರು
(2) ಪುತಿಯಾರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗ್ವಾಮ್, ಬೊಂಬೈ (ಫೋ. ನಂ. 26314)
ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು
(6) ವಟ್ಟಪಾಳಂ, ದ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂಕೂರು

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)
ರಿಜಿಸ್ಟ್ರಿಯಾದ ಆಫೀಸು: ಉಡುಪಿ.
ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ಮಟ್ಟಗತಿಯ ವಿಮಾಸಂಸ್ಥೆ.
ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	.... ರೂ.	1,40,08,725
ಪ್ರೀಮಿಯಂ ಆದಾಯ ಮಿಕ್ಕಿದುದು	.... ,,	30,00,000
ಒಟ್ಟು ಮೂಲ ಮಿಕ್ಕಿದುದು	.. ,,	1,00,00,000
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	50,00,000

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದ ಅತ್ಯಧಿಕ ಪ್ರತಿಫಲ.
ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

ಈ ವಾರದ ಕತೆ

— ಹಳೆಯ ತಲೆ —

ಯು ನಾರಾಯಣ ಭಟ್ಟ, ಕೋಟೇಹಿತ್ಲು, ಕೊಪ್ಪ-- ಕಡೂರು.

- ಎಳೆಯ ಮನಸ್ಸು—ಕುದುರೆ.
- ಅದರ ವೇಗವನ್ನು ಹಳೆಯ ತಲೆ—ಕಡಿವಾಣದಿಂದ ತಡೆಯಬಲ್ಲುದು
- ನಿಮ್ಮ ಮಗಳಾದ ಕಲಾವತಿಯನ್ನು ನನಗೆ........ನೀವು ಹೇಳಿದಂತೆ ಕೇಳುವೆನು.
- ಆಹಾ! ಆನಂದದ ಕಡಲು!! ಹಸಿಯೇ ಬಿಸಿಯಾಯಿತು.
- ಹಳೆಯ ಮನುಷ್ಯರ ಹಳೇ ತಲೆಯ ಪ್ರಭಾವ ಹಾಗೂ ಅದರ ಮಹತ್ವ

೧

ನಮ್ಮ ಮಹಾಕಾಯ ಭಟ್ಟರೆಂದರೆ ನನಗೆ ಪಂಚಪ್ರಾಣ. ಅವರು ನೋಡಲಿಕ್ಕೆ ಬಹಳ ಸುಂದರ. ಸುತ್ತಳತೆ ಮೀರಿರುವ ಅವರ ತಲೆ, ಹೇಜಸಿಗಿರುವಂತೆ ಶೋಭಿಸುವ ಒಂದೆರಡು ಅಂಗುಲದಷ್ಟು ಇರುವ ಅವರ ತಲೆಯ ಜುಟ್ಟು. ಅದು ವಾಯುವೇಗವನ್ನು ತಡೆಗಟ್ಟಿ ಅದರೊಡನೆ ಮಲ್ಲಯುದ್ಧವನ್ನು ಮಾಡುವುದೋ ಎಂಬಂತೆ ಗರಗರನೆ ತಿರುಗುವಾಗ, ನನ್ನ ಲೇಖನಿಕೆಯೂ ತಿರುಗದೆ ಇರುತ್ತಿಲ್ಲ!

ನನಗೆ ಮೊದಮೊದಲು ಅವರ ಪರಿಚಯವಾಗಿರಲಿಲ್ಲ ನಮ್ಮ ಮನೆಯವರು ಯಾವದೇ ಒಂದು ಶುಭಕಾರ್ಯವಾದರೆ ಅವರನ್ನು ಕರೆಯಿಸುತ್ತಿದ್ದರು. ಅವರು ನಮ್ಮ ಪುರೋಹಿತರಾಗಿದ್ದರು. ನಾನು ಮೊದಲಿನಿಂದಲೂ ಸ್ವಲ್ಪ ಉಡಾಡಿ ಇದ್ದಿದ್ದೆ. ಆ ಉಡಾಡಿತನವೇ ಈಗಲಾದರೂ ಚಿಗುರಿ, ಬೆಳೆದು ಗಿಡವಾಗಿದೆ ಎಂದು ತೋರುತ್ತದೆ. ಇರಲಿ! ಇನ್ನು ಭಟ್ಟರ ಪರಿಚಯ—

ಭಟ್ಟರು ಬಹಳ ಒಳ್ಳೆಯ ಗುಣವುಳ್ಳವರು; ಸ್ವಲ್ಪ ಸಿಡುಕು ಸ್ವಭಾವ ಹೆಚ್ಚಿನ್ನಿ. ಅವರೂ ಅವರ ಹೆಂಡತಿ ಕಾಳಮ್ಮನೂ, ಹುಡುಗಿ ಕಲಾವತಿಯೂ ಅಲ್ಲದೆ ಇನ್ನಾರೂ ಅವರ ಮನೆಯಲ್ಲಿ ಇರಲಿಲ್ಲ. ಬಡಸಂಸಾರ! ಅವರಿಗೆ ಮಹಾಕಾಯ ಎಂಬ ಹೆಸರು ಬಂದುದು ಬಹಳ ಸೋಜಿಗ ರೀತಿಯಲ್ಲಂತೆ! ವಿನಾಯಕ ಚೌತಿಯ ಶುಕ್ಲ ಪ್ರತಿಪದೆಯಲ್ಲಿ ಅವರು ಜನನಕ್ಕೆ ಬಂದರಂತೆ. ಅಂದೇ ಅವರು ಮಹಾಕಾಯ ಎಂದು ಪ್ರಸಿದ್ಧರಾದರಂತೆ ಮೊದಲೇ ಶುಕ್ಲಪಕ್ಷ! ಇವರೂ ಶುಕ್ಲಪಕ್ಷದ ಚಂದ್ರನಂತೆಯೇ, 'ಬೆಳ್ಳ ಬೆಳ್ಳಗೆ, ಡುಳ್ಳ ಡುಳ್ಳಗೆ ಡೊಳ್ಳು' ಆಗಿ ಬೆಳೆಯುತ್ತಾ ಬಂದರು ಈಗಲಾದರೋ ಅವರ ಶುಕ್ಲಪಕ್ಷಕ್ಕೆ ಮಾಸಿಬರಬಾರದಂತೆ! ಅದಕ್ಕಾಗಿ, ಅವರು ತಿನ್ನುವುದರಲ್ಲಿ ಹೆಸರು ಪಡೆದಿದ್ದರು. ಹೋಳಿಗೆ, ಲಾಡು ಮುಂತಾದುವು ಅವರಿಗೇನೂ ಗಣ್ಯವಿಲ್ಲದ ವಸ್ತುಗಳಾಗಿದ್ದುವು. ಅವನ್ನೆಲ್ಲಾ ಒಂದೇ ಬಾರಿ ನೊರಜುಗಳಂತೆ ತಿಂದು ತೇಗುತ್ತಿದ್ದರು. ಒಂದು ದಿವಸ, ಅವರು ನೆರೆಯೂರಿಗೆ ಹೋದಾಗ, ಅವರಿಗೆ ಖಾನಾವಳಿಯೊಂದರಲ್ಲಿರುವ ಪ್ರಸಂಗ ಒದಗಿತು. ಖಾನಾವಳಿಯ ಅಡಗೂಲಜ್ಜಿಯ ಹತ್ತಿರ ನಾಲ್ಕು ಜನರಿಗೆ ಸಾಕಾಗುವಷ್ಟು ಅಡಿಗೆ ಮಾಡಿಡಲು ಹೇಳಿ, ತನ್ನ ಕಾರ್ಯಾರ್ಥವಾಗಿ ಹೊರಗೆ ಹೋದವರು ನಂತರ ಬಂದು, ನಾಲ್ಕು ಜನರಿಗೆ ಮಾಡಿಟ್ಟ ಅನ್ನ ಪದಾರ್ಥವನ್ನು ಒಬ್ಬರೇ ತಿಂದು ತೇಗಿ, 'ನೀನು ಒಬ್ಬರಿಗೆ ಸಾಕಾಗುವಷ್ಟು ಬಡಿಸಿದಿ', ಎಂದು ಆರು ಕಾಸು ಕೊಟ್ಟು, ಅಡಗೂಲಜ್ಜಿಯ ಬಾಯಿಂದ 'ಮೂರು ಕಾಸಿನವ' ನೆಂಬ ಸಹಸ್ರನಾಮ ಪಡೆದಿದ್ದರು. ಅಷ್ಟು ಸಾಹಸಿ!

ನನಗೆ ಅವರು ಒಂದು ದಿವಸ, ತಮ್ಮ ಮನೆಗೆ ಬರಬೇಕೆಂದು ಕರೆಕಳಿಸಿದ್ದರು ನಾನು ಅವರ ಮನೆಗೆ ಹೋಗಲು ಸ್ವಲ್ಪ ಹೆದರುತ್ತಿದ್ದೆ. ನಾನು, ಎಷ್ಟೋ ಸಲ, 'ಡೊಳ್ಳು ಹೊಟ್ಟೆಯ ಭಟ್ಟ, ಕೋಳಿಯ ಜುಟ್ಟಿನವ, ಗುಡಾಣ ಬಾಯಿಯವ'ನೆಂದು ಕುಚೇಷ್ಟೆ ಮಾಡಿ, ಅವರಿಂದ ಬೆತ್ತದ ಕೋಲಿನ ಪೂಜೆಯನ್ನು ಸ್ವೀಕರಿಸಿದ್ದೆ. ಒಂದು ದಿನವಂತೂ, ಅವರು ದಾರಿಯಲ್ಲಿ ಹೋಗುವಾಗ ಜಾರಿ ಬಿದ್ದರು. ನನಗೆ ನಗೆಯನ್ನು ತಡೆಯಿಸಿಕೊಳ್ಳಲು ಸಾಧ್ಯವಾಗದೆ ಹೋಯಿತು. ಆಗ ಭಟ್ಟರು ಪ್ರಳಯರುದ್ರನಂತೆ ದೊಡ್ಡ ಕೊರಡೆಯಿಂದ ನನಗೆ ಹೊಡೆದರು ನನಗೆ ಅವಮಾನವಾಯಿತು ಆ ಜೋಟುದ್ದ ಭಟ್ಟನಿಗೆ ನೀರು ಕುಡಿಸಿಯೇ ಬಿಡುತ್ತೇನೆಂದು ಶಪಥಮಾಡಿದೆ. ನವರಾತ್ರಿಯ ಹಬ್ಬಕ್ಕೆ ಅವರು ನಮ್ಮ ಮನೆಗೆ ಬಂದಾಗ, ತಾಂಬೂಲ ಅಣಿಮಾಡುವ ಕೆಲಸ ನನ್ನ ಪಾಲಿಗೆ ಬಂದಿತ್ತು. ನಾನು ಬಿಡುವೆನೇ? ಮೆಣಸಿನ ಬಳ್ಳಿಯಿಂದ ಏಳೆಂಟು ಎಲೆಗಳನ್ನು ಕುಯ್ದು ತಂದೆ. ಹೊಗೆಸೊಪ್ಪಿಗೆ ಒಣ ಮೆಣಸಿನ ಪುಡಿ ಸೇರ್ಸಿದೆ. ಇನ್ನೂ ಮಾಡಬೇಕಾದುದನ್ನೆಲ್ಲಾ ಮಾಡಿ, ಅಲ್ಲೇ ಅಡಗಿಕೊಂಡೆ. ಪಾಪ! ಭಟ್ಟರಿಗೆ ಕಣ್ಣಲ್ಲೂ ಬಾಯಲ್ಲೂ......ಲ್ಲೂ ನೀರಿನ ಪ್ರವಾಹವೇ ಹರಿಯತೊಡಗಿತು. ಈ ಸಂಗತಿಯು ನಮ್ಮ ತಂದೆಯವರಿಗೆ ತಿಳಿಯಿತು. ಆ ಕ್ಷಣವೇ ತಂದೆಯವರು ಕೆನ್ನೆಕೆನ್ನೆಗೆ ಹೊಡೆದು ಬಿಸಿ ಮಾಡಿಯೇ ಬಿಟ್ಟರು. ಹಲ್ಲುಗಳು ಉದುರಲಿಲ್ಲ—ಅದೇ ನನ್ನ ಪುಣ್ಯ!

ಈಗ ನಾನು ದೊಡ್ಡವನಿರುವೆ. ಭಟ್ಟರಿಗೂ ನನ್ನ ಮೇಲೆ ತುಂಬಾ ಪ್ರೀತಿ. ಅಷ್ಟು ಪ್ರೀತಿ ಅವರಿಗೆ ನನ್ನ ಮೇಲಿರುವ ಕಾರಣ, ನನಗೆ ಕಟ್ಟಕಡೆಗೆ ತಿಳಿಯಿತು. ನಾನು ಅವರ ಅಳಿಯ. ..ಹೀಗಿತ್ತು ಅವರ ಆಲೋಚನೆ!

ನಾನು ಅವರ ಮನೆಗೆ ಹೋದೆ ಹೋದಾಗ, ಭಟ್ಟರು, 'ಮಗೂ, ಬೊಮ್ಮಣ್ಣ, ಈಗ ನೀನು ದೊಡ್ಡವನಿರುವೆ. ನೋಡು! ನಿನ್ನ ತಂದೆ ಇನ್ನೂರು ರೂಪಾಯಿಯ ಸಂಬಳ ತಿನ್ನುತ್ತಾರೆ. ಆಹಾ! ಅವರ ಜೀವನದ ಒಗೆಯನ್ನೆಷ್ಟು ಕೊಂಡಾಡಲಿ!! ನಿನಗೆ ಮಾತ್ರ ನಾಟಕ ಬೇಕು, ಸಿನೇಮಾ ಬೇಕು. ಹ್ಯಾಟು–ಬೂಟು–ಇವೆಲ್ಲಾ ಯಾಕಯ್ಯ ನಿನಗೆ? ನೀನು ನಮ್ಮವನೆಂದು ಎರಡು ಬುದ್ಧಿಯ ಮಾತುಗಳನ್ನು ಹೇಳಿದೆ. ಸಿಟ್ಟಾಗಬಾರದು—' ಎಂದರು. ಹಳೆಯವರು ಆದರಲ್ಲೂ ಹಿರಿಯರು ಹೇಳಿದುದು ನ್ಯಾಯ! ಆದರೆ 'ಮೂಗಿನ ತುದಿಯ ಸಿಟ್ಟು' ನನ್ನನ್ನು ಬಿಡುತ್ತದೆಯೇ? 'ಹೌದಯ್ಯಾ! ನಿಮ್ಮ ಮಗಳು ಕಲಾವತಿಯನ್ನು ......ಗೆ ಕೊಟ್ಟು ಲಗ್ನ ನೋಡುವಾ! ಆಗ ನೀವು ಹೇಳಿದಂತೆ ಕೇಳ್ಬೇನು,' ಎಂದು ದರ್ಪದಿಂದ ಹೇಳಿದೆ. ಭಟ್ಟರ ಮುಖ ಬದನೆ ಕಾಯಷ್ಟು; ಕಣ್ಣು ತೊಂಡೆ ಹಣ್ಣಿನಷ್ಟು ಆದವು. 'ಏನು ಜಪತಪ, ನೇಮ ನಿಯಮಗಳನ್ನು ಬಿಟ್ಟ ನಿನಗೆ ನನ್ನ ಮಗಳನ್ನು ಕೊಡಬೇಕೇ? ನೀನು ಯೋಗ್ಯನ?' 'ಅಯ್ಯೋ! ನಿಮ್ಮ ಮಗಳು ದೇವಲೋಕದಿಂದ ಬಂದ ರಂಭೆಯಲ್ಲ!! ಗೊತ್ತಾಯಿತೇ? ಎಂದೆ. ಇದಕ್ಕೆ ಭಟ್ಟರು ಸುಮ್ಮನಾದರು.

೨

ಅದೇ ಭಟ್ಟರು ಈಗ ನಾನು ಅವರ ಮಗಳು ಕಲಾವತಿ ಇದ್ದಾಳಲ್ಲ ಅವಳನ್ನು ಮದುವೆಯಾಗಬೇಕೆಂದು ಆಗ್ರಹ ಮಾಡುತ್ತಿದ್ದಾರೆ. ನನ್ನ ತಂದೆಯವರೂ ಅವರ ಹಾದಿಯನ್ನೇ ಅನುಸರಿಸಿದರು. ಸನಗೆ ಮಾತ್ರ, ಆಗ ಬಿಸಿ ಇದ್ದದ್ದು ಈಗ 'ಹಸಿ'ಯಾಗಿದೆ. ನಾನು ಕಲಾವತಿಯನ್ನು ಮದುವೆಯಾಗಲಾರೆನೆಂದು ನಿರ್ದಾಕ್ಷಿಣ್ಯದಿಂದ ಹೇಳಿಬಿಟ್ಟೆ ಇದನ್ನು ಕೇಳಿ, ಭಟ್ಟರು, "ಮಹಾರಾಯಾ! ಹುಡುಗಿ ಪ್ರಾಯಕ್ಕೆ ಬಂದಿದ್ದಾಳೆ. ನಮ್ಮದು ಬಡ ಸಂಸಾರ!! ಇದ್ದ ಒಬ್ಬಳು ಹುಡುಗಿ!! ನಾನೂ ವಾರ್ಧಕ್ಯದ ಪರಮಾವಧಿಯಲ್ಲಿರುವೆನು" ಎಂದು ಗೋಳಾಡಿದರು ನನ್ನ ಮನಸ್ಸೂ ಕಲ್ಲಾಗಿದ್ದುದು ನೀರಾಯಿತು.

ನಾನೂ ದೊಡ್ಡ ಯೋಚನೆಗೊಳಗಾದೆ. "ಆಹಾ! ಹೆಣ್ಣು ಜನ್ಮದಲ್ಲಿ ಹುಟ್ಟುವುದೇ ಕಷ್ಟ, ಅದರಲ್ಲೂ ಹೆಣ್ಣನ್ನು ಹಡೆದ ತಾಯಿಂದಿರಿಗೆ ಬಹಳ ಕಷ್ಟವೇ. ಹುಟ್ಟಿದಾಗ ಹುಟ್ಟಿತಲ್ಲಾ ಎಂದು ಸಂತೋಷದಲ್ಲಿಯೂ ದುಃಖ,ದೊಡ್ಡವಳಾದ ನಂತರ, ವಿದ್ಯಾವಂತನಾಗಲೀ ಐಶ್ವರ್ಯವಂತನಾಗಲಿ ಗುಣವಂತನಾಗಲೀ ಹುಡುಕಬೇಕು! ಮದುವೆ ಮಾಡಿಕೊಟ್ಟ ನಂತರ, ಹುಡುಗಿಯು ಸುಖವಾಗಿರುವಳೋ ಇಲ್ಲವೋ ಎಂಬ ಯೋಚನೆ!! ಇವಿಷ್ಟು ತಂದೆತಾಯಂದಿರ ಕಷ್ಟ ಪರಂಪರೆಗಳು. ಇನ್ನು ಹುಡುಗಿಗೆ ಗೋಳೇ ಗೋಳು! ಇವನ್ನೆಲ್ಲಾ ಪರಿಶೀಲಿಸಿದರೆ, 'ಬೇಡುವನೆಂದಿಗೂ ಬೇಡ ಸ್ತ್ರೀ ಜನ್ಮವು' ....ಎಂಬ ಪದವು ನೆನಪಾಗುತ್ತದೆ ಕಟ್ಟಕಡೆಗೆ, ಮಹಾಕಾಯ ಭಟ್ಟರ ಮಗಳಾದ ಕಲಾವತಿಯನ್ನು ಮದುವೆಯಾಗಲು ಒಪ್ಪಿಯೇ ಬಿಟ್ಟೆ, ಆಗ ಭಟ್ಟರಿಗೆ ಮಹದಾನಂದ!

ನಾನು ಮೊದಲಿನಂತಿರದೆ ಈಗ ಎಷ್ಟೋ ಸುಧಾರಿಸಿದ್ದೇನೆ. ನೋಡಿದರೆ, 'ಶುದ್ಧ ಖಾದಿಧಾರಿ!' ಅದರೊಂದಿಗೆ ವಿಭೂತಿಯಿಂದ ಶೋಭಿಸುವ ನನ್ನ ಹಣೆ. ಆಗಂತೂ, ಮಹಾಕಾಯ ಭಟ್ಟರಿಗೆ ನನ್ನನ್ನು ನೋಡಿ ಬಹಳ ಸಂತೋಷ. ನಾನು ಕಾಲಕ್ರಮೇಣ ಹೀಗಾಗುವೆನೆಂದು ಅವರು ಕನಸಿನಲ್ಲಿಯೂ ನೆನೆಸಿರಲಿಲ್ಲ. ಮನೆಯ ಬಾಗಿಲಿಗೆ ಹೋದರೆ ಗಿರಾಕಿ! ಒಂದು ತೊಟ್ಟು ನೀರನ್ನು ಕೊಡದ ಭಟ್ಟರು ನನಗೆ ಕಾಫಿ ನೀರಿನಿಂದ ಮಿಂದಿಸಿ ಬಿಟ್ಟಿದ್ದರು. ಯಾಕೆ? 'ಭವಿಷ್ಯ ಜಾಮಾತೃ' ಆಗುವೆನೆಂದು.

x x x x

x x x

ನನಗೂ ಕಲಾವತಿಗೂ ಮದುವೆಯೂ ಆಯಿತು. ಮದುವೆಯಾಗಿ ಒಂದು ವರುಷದೊಳಗಾಗಿ, ನಮ್ಮ ಒಂದು ಪ್ರತಿಬಿಂಬವೂ ಮೂಡಿತ್ತು! ಮಗು ಗಂಡು. ಶ್ರೀಪತಿ ಎಂದು ನನ್ನ ಅಪ್ಪನ ಹೆಸರೇ ಇಟ್ಟೆ.

ಇಂತಿದೆ ಹಳೆಯ ಮನುಷ್ಯರ ಹಳೆಯ ತಲೆ! ಭಗೀರಥ ಪ್ರಯತ್ನ ಮಾಡಿ, ಮಹಾಕಾಯ ಭಟ್ಟರು ನನ್ನನ್ನು ಜೇಬಿನಲ್ಲಿ ಹಾಕಿಯೇ ಬಿಟ್ಟರು.

ಹುಚ್ಚಿಮಾಸೆಯ ತರುಣರಿಗೆ ಹಳೆಯ ತಲೆ ಬಹಳ ಉಪಯೋಗಕ್ಕೆ ಬೀಳುತ್ತದೆಂದು ಈಗ ನಾನು ಮನಗಂಡೆ. ವಾಚಕರೇ ಹಳೆಯ ತಲೆಯ ಮಹತ್ವ ಹೇಗಿದೆ!

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಪರ್ಣತದದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಲ್ಲಿ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1 ಕ್ಕೆ ರೂ 2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ, ಕೆ.

ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

NAVAYUGA

Advt. Tariff.

Full Page Rs. 25/- Per Insertion

½ ,, Rs. 15 ,, ,,

¼ ,, Rs. 8 ,, ,,

⅛ ,, Rs. 5 ,, ,,

Re. 1 Per inch column

For Contract Rates Please

Apply to the manager.

ದಿ ಮೈಸೂರು ಗ್ಲಾಸ್ ಎಂಡ್ ಎನಾಮೆಲ್ ವರ್ಕ್ಸ್ ಲಿಮಿಟೆಡ್

(ಮೈಸೂರು ಕಂಪೆನಿಗಳ ೧೯೦೭ರ ಆಕ್ಟ್ ೩, ೧೯೩೩ರ 16ನೆಯ ಆಕ್ಟಿನಿಂದ ತಿದ್ದುಪಡಿ ಹೊಂದಿರುವುದನ್ನು ಅನುಸರಿಸಿ ಈ ಕಂಪೆನಿಯು ಸ್ಥಾಪಿಸಲ್ಪಟ್ಟಿದೆ.)

ನಿಯಮಿತ ಮೂಲಧನ . . . . ರೂ. ೩,೦೦,೦೦೦

(೧೦ ರೂಪಾಯಿಗಳ ೩೦,೦೦೦ ಷೇರುಗಳಾಗಿ ವಿಭಾಗ ಮಾಡಲ್ಪಟ್ಟಿದೆ.)

ಪ್ರಕೃತದಲ್ಲಿ ಕೋರಲ್ಪಟ್ಟ ಮೂಲಧನ ೨,೦೦,೦೦೦

(ಈ ಮೂಲಧನವು ಷೇರುವೊಂದಕ್ಕೆ ೧೦ ರೂಪಾಯಿಗಳಂತೆ ೨೦,೦೦೦ ಷೇರುಗಳಾಗಿ ವಿಭಾಗಮಾಡಲ್ಪಟ್ಟಿದೆ)

೧ ಪಾವತಿಕ್ರಮ

ದರಖಾಸ್ತಿನೊಂದಿಗೆ ಪ್ರತಿ ಷೇರಿಗೂ ೨ ರೂ. ಅಂಗೀಕಾರವಾದ ಮೇಲೆ ರೂ. ೨ ೮-೦

ಉಳಿದ ಬಾಬಲಗನ್ನು ರೂ. ೨ ರ ಪ್ರಕಾರ ಎರಡು ಕಂತುಗಳಲ್ಲಿ ಮಂಜೂರು ನಿರ್ದೇಶಕ ಕಂಪೆನಿಯವರು ಕೋರುವ ಕಾಲದಲ್ಲಿ ಪಾವತಿಮಾಡಬೇಕು. ಆದರೆ ಒಂದು ಕಂತಿಗೂ ಇನ್ನೊಂದು ಕಂತಿಗೂ ಕನಿಷ್ಠಪಕ್ಷ ಮೂರು ತಿಂಗಳ ಅವಧಿಯನ್ನು ಕೊಡಲಾಗುವುದು.

೨ ಡೈರೆಕ್ಟರುಗಳು

೧. ಶ್ರೀಯುತ ಲೋಕಸೇವಾಸಕ್ತ ರಾವ್ ಬಹದ್ದೂರ್ ಬಿ. ಕೆ. ಗರುಡಾಚಾರ್, ಚೇರ್‌ಮನ, ದಿ ಬ್ಯಾಂಕ್ ಆಫ್ ಮೈಸೂರು ಲಿಮಿಟೆಡ್, ಬೆಂಗಳೂರು ಸಿಟಿ.

೨. ಸರ್ ದಿವಾನ್ ಜೇ. ಪಿ. ಜೋಮನ್ ಜೆ. ಕೂಪರ್, ಕೆ. ಟಿ., ಚ. ಪಿ., ಎಂ. ಎಲ್. ಎ., ಮುಂಬಯಿ ಸರಕಾರದ ಮಾಜಿ ಫೈನಾನ್ಸ್ ಮೆಂಬರು ಮತ್ತು ಪ್ರಧಾನ ಮಂತ್ರಿಗಳು, ಸತಾರ

೩. ಮಿ|| ನಾರಾಯಣರಾವ ಜ. ನಾಯಕ್ ಎ., ಆರ್. ಎ., ಮ್ಯಾನೇಜಿಂಗ್ ಪ್ರೊಪ್ರೈಟರ್, ಶ್ರೀರಾಮ ಸಿಲ್ಕ್ ಫ್ಲೋಯಿಂಗ್ ಫ್ಯಾಕ್ಟರಿ ಬೆಂಗಳೂರು.

೪. ಮಿ|| ಬಿ. ಬಾಳಾಜಿ ರಾವ, ಬಿ. ಎ., ರಿಟೈರ್ಡ್ ಅಸಿಸ್ಟೆಂಟ್ ಜಿಯಾಲಾಜಿಸ್ಟ್ (ಮೈಸೂರು ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್) ಬೆಂಗಳೂರು ಸಿಟಿ

೫. ಮಿ|| ಭೂಪಾಳಂ ಚಂದ್ರಶೇಖರಯ್ಯ ಬಿ. ಎ., ಯಂ. ಆರ್. ಎ., ವ್ಯಾಪಾರಸ್ಥರು, ಶಿವಮೊಗ್ಗ.

೬. ಮಿ|| ಎಂ. ಎಸ್. ರಾಮಚಂದ್ರರಾವ್, ಬಿ. ಎ., ಡೈರೆಕ್ಟರ್, ಮೈಸೂರು ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ಶಾಖೆ (ಎಕ್ಸ್ ಅಫೀಷಿಯೋ, ಸರಕಾರ ಪರವಾಗಿ), ಬೆಂಗಳೂರು ಸಿಟಿ

೭. ರಾಜಕುಮಾರ್ ಶ್ರೀಮಂತ್ ಅಪ್ಪಾ ಸಾಹೇಬ್ ಪಂತ್ ಬಿ. ಎ., (Oxon) ಬಾರ್-ಅಟ್-ಲಾ, ಔಂಧ್

೮. ಮಿ|| ಶಂಕರರಾವ್ ಪಿ. ಓಗಲೆ (ಎಕ್ಸ್ ಅಫೀಷಿಯೋ, ದಿ ಓಗಲ ಗ್ಲಾಸ್‌ವರ್ಕ್ಸ್, ಲಿಮಿಟೆಡ್) ಗಾಂಧಿ ನಗರ, ಬೆಂಗಳೂರು ಸಿಟಿ.

೩ ಬ್ಯಾಂಕರ್ಸ್

೧. ದಿ ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್ ಬೆಂಗಳೂರು ಮತ್ತು ಬ್ರಾಂಚುಗಳು ೨. ದಿ ಇಂಡಿಯನ ಬ್ಯಾಂಕ್, ಲಿಮಿಟೆಡ್, ಮದ್ರಾಸು ಮತ್ತು ಶಾಖೆಗಳು

೪ ಆಡಿಟರ್ಸ್ (Auditors)

೧. ಶ್ರೀ ಎಸ. ಆರ್. ಮಾಂಡ್ರೆ, ಎಂ. ಎ., ಬಿ. ಕಾಮ್, ಎಫ್. ಎಸ್. ಎ. ಎ., ಆರ್. ಎ., ಇನ್‌ಕಾರ್ಪೊರೇಟೆಡ್ ಅಕೌಂಟೆಂಟ್ (ಲಂಡನ್) ೨೭೧ ನಗರ್ತರಪೇಟೆ, ಬೆಂಗಳೂರು ಸಿಟಿ. ೨. ಶ್ರೀ|| ಎ. ರಾಮಸ್ವಾಮಿ ಅಯ್ಯಂಗಾರಿ, ಬಿ. ಕಾಮ್., ಎಫ್. ಎಸ್. ಎ. ಎ., ಆರ್. ಎ., ಅಕೌಂಟೆಂಟ್ ಮತ್ತು ಆಡಿಟರ್, ದವಾಖಾನೆ ನಾರ್ತ್ ರೋಡ್ ಬಸವನಗುಡಿ, ಬೆಂಗಳೂರು ಸಿಟಿ

೫ ಮ್ಯಾನೇಜಿಂಗ್ ಏಜಂಟ್ಸ್

ದಿ ಓಗಲೇ ಗ್ಲಾಸ ವರ್ಕ್ಸ್, ಲಿಮಿಟೆಡ್, (ಓಗಲೇವಾಡಿ, ಔಂಧ್ ಸ್ಟೇಟ್, ದಕ್ಷಿಣ ಸತಾರ)

೬ ರಿಜಿಸ್ಟರ್ಡ್ ಆಫೀಸು

ಡಿಸ್ಟ್ರಿಕ್ಟ್ ಬೋರ್ಡ್ ಆಫೀಸ್ ಬಿಲ್ಡಿಂಗ್, ಕೆಂಪೇಗೌಡರೋಡು, ಗಾಂಧಿನಗರ, ಬೆಂಗಳೂರು ಸಿಟಿ.

೭ ಕಂಪೆನಿಯ ಉದ್ದೇಶ

ಮುಖ್ಯವಾಗಿ ಗ್ಲಾಸ್ ಮತ್ತು ಎನಾಮೆಲ್ ಸರಕುಗಳ ತಯಾರಿಕೆಗಾಗಿ ಈ ಕಂಪೆನಿಯು ಸ್ಥಾಪಿಸಲ್ಪಟ್ಟಿರುವುದು.

೮ ಕಂಪೆನಿಯ ಆಡಳಿತ

ದಿ ಓಗಲೇ ಗ್ಲಾಸ್ ವರ್ಕ್ಸ್, ಲಿಮಿಟೆಡ್ (ಕಂಪನಿ)ಯವರು ದಿ ಮೈಸೂರು ಗ್ಲಾಸ್ ಅಂಡ್ ಎನಾಮೆಲ್ ವರ್ಕ್ಸ್, ಲಿಮಿಟೆಡ (ಕಂಪನಿ)ಗೆ ಅದು ರಿಜಿಸ್ಟರಾದ ಹತ್ತು ವರ್ಷಗಳ ಕಾಲ (Managing Agents) ವ್ಯವಸ್ಥಾಪಕರಾಗಿ ನೇಮಿಸಲ್ಪಟ್ಟಿದ್ದಾರೆ.

ಓಗಲೆಯವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಗಾಜಿನ ಕಾರ್ಖಾನೆಯನ್ನು ಸ್ಥಾಪಿಸುವುದರಿಂದ ಈ ಕೆಳಕಂಡ ಪ್ರಯೋಜನಗಳುಂಟು —

(a) ಓಗಲೆಯವರು ಇತ್ತರ್ಧಗೊಂಡ ಮತ್ತು ದೀರ್ಘ ಕಾಲದ ಅನುಭವದ ಪ್ರತಿಫಲವಾಗಿ ಸಂಪಾದಿಸಿದ ಕ್ರಮಬದ್ಧವಾದ, ಅಥವಾ ಪರೀಕ್ಷಾರ್ಥವಾದ ಕಾರ್ಯಗಳಲ್ಲಿ ಭಂಡವಾಳದ ಯಾವ ಭಾಗವೂ ಉಪಯೋಗಿಸಲ್ಪಡಬೇಕಾಗಿರುವುದಿಲ್ಲ.

(b) ಕಾರ್ಖಾನೆಯ ಕೆಲಸಕ್ಕೆ ಚತುರರನ್ನು ತರಬೇತುಮಾಡುವ ಪ್ರದರ್ಶನ ಸಿದ್ಧವಿರುವುದು.

(c) ಓಗಲೆಯವರಿಂದ ತಯಾರಾದ ಗ್ಲಾಸ್ ಮತ್ತು ಎನಾಮೆಲ್ ಸರಕುಗಳಿಗೆ ವಿಶೇಷ ಪ್ರಖ್ಯಾತಿಯು ಜನರ ಸಾಂಗದಲ್ಲಿ ಗಿರಾಕಿಯೂ ಉಂಟು. ಆದುದರಿಂದ ಈ ನೂತನ ಕಂಪೆನಿಯವರು ತಯಾರಿಸುವ ಸರಕುಗಳನ್ನು ಬೇಗನೆ ಮಾರಾಟಮಾಡಲು ಅವಕಾಶವುಂಟು.

(d) ಗಾಜಿನ ತಯಾರಿಕೆಗೆ ಬೇಕಾದ ಹಲವು ಯಂತ್ರಗಳನ್ನು ಓಗಲೆಯವರೇ ಕಂಡುಹಿಡಿದಿರುವುದರಿಂದಲೂ, ಕುಲುಮೆಯನ್ನು ಅವರೇ ನಿರ್ಮಾಣ ಮಾಡುವುದರಿಂದಲೂ, ಹೊಸ ಕಂಪೆನಿಯ ಯಂತ್ರಗಳ ಉಪಯೋಗಕ್ಕೆ ಬೇಕಾದ ಅನುಭವವನ್ನು ಉಚಿತವಾಗಿ ಹೊಂದಬಹುದು.

ಒಟ್ಟಿನಲ್ಲಿ ಓಗಲೆಯವರ ನೇತೃತ್ವದಲ್ಲಿ ಗ್ಲಾಸ್ ಮತ್ತು ಎನಾಮೆಲ್ ಕಾರ್ಖಾನೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದೆಂದರೆ ಇದುವರೆಗೂ ಓಗಲೆಯವರು ಪಡೆದಿರುವ ವಿಶಾಲವಾದ ಅನುಭವವೂ ವಿಜಯವೂ ಬೆಂಗಳೂರಿನ ಕಾರ್ಖಾನೆಗೆ ಉಪಯುಕ್ತವಾದುದೆಂಬುದರಲ್ಲಿ ಯಾವ ಅಡ್ಡಿಯೂ ಇಲ್ಲ. ಇದಕ್ಕೆ ಮೇಲ್ಪಟ್ಟು ಸ್ಥಳೀಕ ಸೌಕರ್ಯಗಳೂ ಬಹಳ ಉನ್ನತವಾಗಿರುವುವೆಂದರೆ ಈ ನೂತನ ಉದ್ಯಮಕ್ಕೆ ಯಾವ ಕೊರತೆಯೂ ಇರುವುದಿಲ್ಲ.

ಬೆಂಗಳೂರಿನ ಗ್ಲಾಸ್ ಮತ್ತು ಎನಾಮೆಲ್ ಕಾರ್ಖಾನೆಗೆ ಸುತ್ತಮುತ್ತಲಲ್ಲಿ ಅವಶ್ಯಕವಾದ ಪದಾರ್ಥಗಳು ಸಮೃದ್ಧಿಯಾಗಿ ದೊರೆಯುವುದರಿಂದಲೂ, ರೈಲ್ವೆ ಮತ್ತು ಬಸ್ಸುಗಳಿಗೆ ಬೆಂಗಳೂರು ಮಧ್ಯಸ್ಥಾನವಾಗಿರುವುದರಿಂದಲೂ, ಸುಲಭದರದಲ್ಲಿ ವಿದ್ಯುಚ್ಛಕ್ತಿಯು ಹಗಲಿರುಳೂ ಸರಬರಾಜು ಆಗುತ್ತಿರುವುದರಿಂದಲೂ, ಮಾರಾಟ ಮತ್ತು ಇತರ ಸ್ಥಳೀಯ ಸೌಕರ್ಯಗಳು ಹೇರಳವಾಗಿ ಉಂಟು.

ಮೈಸೂರು ಗವರ್ನಮೆಂಟಿನ ರಿಯಾಯಿತಿ

ಈ ಕೈಗಾರಿಕೆಯು ಲಾಭಕರವಾಗಿ ನಡೆದುಬರಬೇಕೆಂದು ಘನಹೊಂದಿದ ಮೈಸೂರು ಸರ್ಕಾರದವರು ತಮ್ಮ ತಾ. ೧೫ ೧೬ನೇ ಜುಲೈ, ೧೯೩೮ರ ಮತ್ತು ೨೫ ೮-೩೮ನೆಯ ಹುಕುಂ ನಂ. ೩೮೩ ೪೪೯ I E C ೨೩೫-೩೭-೧೪ ಮತ್ತು D ೧೫೬೩-೬೬ I & C, ೨೫ ೩೭ ೧೪ ಇವುಗಳ ಪ್ರಕಾರ ಉಚಿತವಾದ ಜಮೀನನ್ನು ಕೊಡಲೊಪ್ಪಿರುವರಲ್ಲದೆ ತಮಗೆ ಬೇಕಾಗುವಷ್ಟು ಗಾಜು ಮತ್ತು ಎನಾಮೆಲ್ ಸರಕುಗಳನ್ನು ಈ ಕಂಪೆನಿಯಿಂದ ಕೊಂಡು, ಕಾರ್ಖಾನೆಯಲ್ಲಿ ತಯಾರಿಕೆಗೆ ಬೇಕಾದ ಪದಾರ್ಥಗಳನ್ನು ಈ ಕಂಪೆನಿಗಾಗಿ ಕಾದಿಟ್ಟು, ಈ ಕಂಪೆನಿಯು ಸಮರ್ಪಕವಾಗಿ ಕಾರ್ಯಕ್ರಮಗಳನ್ನು ನಡೆಯಿಸಿಕೊಂಡು ಬರುವವರೆಗೂ ಇದೇ ತೆರನಾದ ಮತ್ತೊಂದು ಗಾಜಿನ ಕಾರ್ಖಾನೆಯನ್ನು ತಮ್ಮ ಸ್ವಂತ ಪರಿಶ್ರಮದಿಂದ ಅಥವಾ ಪ್ರೋತ್ಸಾಹಕೊಟ್ಟು ಇತರರ ಮುಖೇನ ಸ್ಥಾಪಿಸುತ್ತಿಲ್ಲವೆಂದೂ ಉದಾರ ಭರವಸೆಯನ್ನು ನೀಡಿದ್ದಾರೆ. ಅಲ್ಲದೆ ತಮ್ಮ ಪರವಾಗಿ ಒಬ್ಬ ಡೈರೆಕ್ಟರನ್ನು ಈ ಕಂಪೆನಿಯ ಕಾರ್ಯನಿರ್ವಾಹ ಮಂಡಲಿ ಸೇರಿರುವಂತೆ ನೇಮಿಸಿದ್ದಾರೆ.

ಪ್ರಕಟಣ ಪತ್ರದ ಪ್ರತಿಗಳನ್ನೂ ಷೇರು ದರಖಾಸ್ತು ಫಾರಂಗಳನ್ನೂ ಕಂಪೆನಿಯ ಬ್ಯಾಂಕರುಗಳಿಂದಲಾಗಲಿ, ಅಥವಾ ಬೆಂಗಳೂರು ಸಿಟಿ ಕೆಂಪೇಗೌಡ ರೋಡಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಆಫೀಸು ಕಟ್ಟಡದ ಕೆಳಭಾಗದಲ್ಲಿರುವ ಕಂಪೆನಿಯ ರಿಜಿಸ್ಟರ್ ಆಫೀಸಿನಿಂದಾಗಲಿ ಪಡೆಯಬಹುದು.

ಈ ಕೆಳಗೆ ಮುದ್ರಿಸಿರುವ ಸಂಕ್ಷಿಪ್ತ ದರಖಾಸ್ತು ಫಾರಮ್ಮನ್ನು ಭರ್ತಿಮಾಡಿ

ಪಡೆಯ ಅಪೇಕ್ಷಿಸುವ ಷೇರು ಒಂದಕ್ಕೆ ರೂ. ೨ರಂತೆ ಆಗುವ ಠೇವಣಾತಿ ಹಣವನ್ನು ಚೆಕ್ಕು (Cheque) ಅಥವಾ ಮನಿಯಾರ್ಡರು ಮೂಲಕ ಕಂಪೆನಿಯ ರಿಜಿಸ್ಟರ್ ಆಫೀಸಿಗೆ ಕಳುಹಿಸಿಕೊಡಬಹುದು. ಅಥವಾ ಕಂಪೆನಿಯ ಬ್ಯಾಂಕರ್ಸ್ (Bankers) ಗಳಿಗೆ ಪಾವತಿಮಾಡಿ ರಸೀದಿಯನ್ನು ಪಡೆಯಬಹುದು.

ಷೇರು ದರಖಾಸ್ತು ಫಾರಂ

To ದಿ ಮ್ಯಾನೇಜಿಂಗ್ ಏಜಂಟ್ಸ್

ದಿ ಮೈಸೂರು ಗ್ಲಾಸ್ ಅಂಡ್ ಎನಾಮೆಲ್ ವರ್ಕ್ಸ್ ಲಿಮಿಟೆಡ್,

ಡಿಸ್ಟ್ರಿಕ್ಟ್ ಬೋರ್ಡ್ ಆಫೀಸ್ ಬಿಲ್ಡಿಂಗ್,

ಕೆಂಪೇಗೌಡ ರೋಡ್, ಬೆಂಗಳೂರು ಸಿಟಿ

ಮಹಾಶಯರೇ,

ಇದರಡಿ ಸಹಿಮಾಡಿರುವ ನಾನು/ನಾವು ಮೈಸೂರು ಗ್ಲಾಸ್ ಅಂಡ್ ಎನಾಮಲ್ ವರ್ಕ್ಸ್ ಲಿಮಿಟಡ್ ಷೇರುಗಳ ಬಗ್ಗೆ ಪ್ರತಿ ಷೇರಿಗೂ ರೂ ೨-೦-೦........ಷೇರುಗಳಿಗೆ ಆಗುವ ರೂ........ಗಳನ್ನು ಠೇವಣಾತಿ (Deposit) ಗಾಗಿ ಕಳುಹಿಸಿರುತ್ತೇನೆ/ವೆ. ಕಂಪೆನಿಯ ಪ್ರಕಟನ ಪತ್ರ (Prospectus) ಕ್ಕೆ ಅನುಸಾರವಾಗಿ ನಾನು/ನಾವು ಈ ಮೂಲಕ ಕೋರುವ ಷೇರುಗಳನ್ನು ಮಂಜೂರುಮಾಡಬೇಕಾಗಿ ಪ್ರಾರ್ಥಿಸುತ್ತೇನೆ/ವೆ. ನಾನು/ನಾವು ಕೇಳಿರುವ ಷೇರುಗಳ ಬಗ್ಗೆ ಎಷ್ಟನ್ನು ಮಂಜೂರುಮಾಡಿದಾಗ್ಯೂ ಅವನ್ನು ಅಂಗೀಕರಿಸಲು ಒಪ್ಪಿರುತ್ತೇನೆ/ವೆ.

ರುಜು

ಹೆಸರು (ಪೂರ್ತಿಯಾಗಿ)

ವಿಳಾಸ

ಕಸಬು (ಉದ್ಯೋಗ)

ಸರ್. ಎಂ. ವಿಶ್ವೇಶ್ವರಯ್ಯನವರ ಮೆಚ್ಚಿಕೆ

ಮೈಸೂರಿನ ಮಾಜೀ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರು ತಾವು ಓಗಲೇ ಗ್ಲಾಸ್ ಕಾರ್ಖಾನೆಯನ್ನು ನೋಡಿದಾಗ ಕೊಟ್ಟ ಅಭಿಪ್ರಾಯವಿದು —"ಶ್ರೀಯುತ ಓಗಲೆಯವರು ನನ್ನನ್ನು ಈ ದಿನ ಕಾರ್ಖಾನೆಗೆ ಕರೆದುಕೊಂಡುಹೋಗಿ ತೋರಿಸಿದರು. ನಾನು ನೋಡಿದ ಎಲ್ಲ ವಿದ್ಯಮಾನಗಳಿಂದ ಈ ಕಂಪೆನಿಯು ಚಾಲಕರಲ್ಲಿ ಸಾಧನಶಕ್ತಿಯೂ, ಪರಿಶೋಧನದ ಕೌತುಕವೂ, ದಕ್ಷತೆಯಿಂದ ಕೂಡಿದ ನಿರ್ವಾಹಶಕ್ತಿಯೂ ಇರುವುದೆಂಬುದನ್ನು ಮನಗಂಡೆನು. ಇವರ ಈ ಕೈಗಾರಿಕೆಯು ದೇಶೋಪಕಾರಿಯಾದುದಲ್ಲದೆ ಆಳವಿಲ್ಲದ ಪ್ರೋತ್ಸಾಹಕ್ಕೆ ಅರ್ಹವಾಗಿದೆ."

ಕಾಂಗ್ರೆಸು ಎತ್ತ ಸರಿಯುತ್ತದೆ.

ಕಾಂಗ್ರೆಸಿನ ತತ್ವ ಮತ್ತು ಕಾರ್ಯಕ್ರಮಕ್ಕಿರುವ ವಿರೋಧ.

ಕಾಂಗ್ರೆಸಿನ ಇಂದಿನ ಸ್ಥಿತಿ ಮತ್ತು ಮುಂದಿನ ಗತಿಯ ಕುರಿತು ಶ್ರೀ. ಎಮ್. ಎನ್. ರೈಯ್ಯಾಗಳ ಅಭಿಮತ.

೧

ಶ್ರೀ ಎಮ್. ಎನ್. ರೈಯ್ಯಾಗಳು ಲೋಕದ ಹಲವು ದೇಶಗಳ ಕ್ರಾಂತಿಕಾರಕ ಮತ್ತು ಪ್ರಜಾಸ್ವಾತಂತ್ರ್ಯ ಸಾಧನಾ ಚಳವಳಿಗಳಲ್ಲಿ ಭಾಗವಹಿಸಿ ಪರಿಪಕ್ವ ಅನುಭವ ಪಡೆದವರು. ಚೈನಾ, ಮೆಕ್ಸಿಕೋ ಮತ್ತು ರಶ್ಯದ ಕ್ರಾಂತಿಗಳಲ್ಲಿ ಪ್ರಾಮುಖ್ಯ ಪಾತ್ರವಹಿಸಿದವರು. ಅವರು ಇತ್ತಲಾಗಿ ಹಿಂದೀ ರಾಜಕೀಯ ರಂಗಕ್ಕೆ ಪ್ರವೇಶಿಸಿದಂದಿನಿಂದ, ಹಿಂದೂದೇಶದ ಸ್ವಾತಂತ್ರ್ಯ ಸಾಧನಾ ಚಳವಳಿದ ಕುರಿತು ಹೊಸ ಬೆಳಕೊಂದನ್ನು ಬೀರಹತ್ತಿರುವರು. ಕಾಂಗ್ರೆಸು ಯಾವ ದಾರಿಹಿಡಿದು ಹೇಗೆ ಮುನ್ನಡೆಯಬೇಕೆಂಬ ವಿಷಯದಲ್ಲಿ, ತನ್ನ ಅಂತರರಾಷ್ಟ್ರೀಯ ಅನುಭವದ ದೃಷ್ಟಿಯಿಂದ ಸ್ವತಂತ್ರವೂ, ನಿಶ್ಚಿತವೂ ಮತ್ತು ನವೀನವೂ ಆದ ವಿಚಾರಗಳನ್ನು ದೇಶದ ಮುಂದಿಡಹತ್ತಿರುವರು. ಗಾಂಧಿಜಿಯವರ ತತ್ವ ಮತ್ತು ಕಾರ್ಯಕ್ರಮಕ್ಕೆ ಪ್ರತಿ ವಿರುದ್ಧವಾಗಿ ಸಮತಾವಾದದ ಹೊಸ ತತ್ವ ಮತ್ತು ಕಾರ್ಯಕ್ರಮವನ್ನು ಧೈರ್ಯದಿಂದ ಮುಂದೊತ್ತಿರುವ ಒಬ್ಬನೇ ಒಬ್ಬ ಹಿಂದೀ ರಾಜಕೀಯ ಮುಖಂಡರೆಂದರೆ ಶ್ರೀ ಎಮ್ ಎನ್ ರೈಯ್ಯಾಗಳು. ಗಾಂಧಿಜಿಯವರು ಹಿಂದೀ ರಾಜಕೀಯ ಪರಿಸ್ಥಿತಿಯ ಪ್ರವಾಹದಿಂದ ಮೇಲಕ್ಕೇರಿ ಬಂದಿರುವ ಮಹಾವ್ಯಕ್ತಿ. ಪರಿಸ್ಥಿತಿಯು ಅವರನ್ನು ನಿರ್ಮಿಸಿತಲ್ಲದೆ ಅವರು ಪರಿಸ್ಥಿತಿಯನ್ನುಂಟುಮಾಡಿರುವುದಿಲ್ಲ. ಅವರಷ್ಟು ಪ್ರಚಂಡ ಜನಜಾಗೃತಿಯನ್ನುಂಟುಮಾಡಿ ಜನತಾ ಹೃದಯವನ್ನೆಳಕೊಂಡು ಪೂಜನೀಯರಾಗಿರುವ ಹಿಂದೀ ಮುಖಂಡರಾರೂ ಇಲ್ಲ. ಅವರ ಕುರಿತು ತನಗೆ ಸಂಪೂರ್ಣ ಪೂಜ್ಯಬುದ್ಧಿಯಿದೆ. ಆದರೆ ಅವರನ್ನು ಅಂಧಭಕ್ತಿಯಿಂದ ಪೂಜಿಸುವವನು ತಾನಲ್ಲ. ಅವರ ವಿಚಾರಗಳನ್ನು ವಿಮರ್ಶಕ ಬುದ್ಧಿಯ ಒರೆಗೆ ತಿಕ್ಕಿ ಪರೀಕ್ಷಿಸುವವನು. ಅವರ ವಿಚಾರಸರಣಿ ಮತ್ತು ಕಾರ್ಯಕ್ರಮವು ಅತಿ ಮಹತ್ವದ್ದಿರುವವಾದರೂ ಅದರಿಂದಲೇ ಹಿಂದೂದೇಶವು ಮುಂದೆ ಸಂಪೂರ್ಣ ಸ್ವರಾಜ್ಯ ಪಡೆದು ಅಭ್ಯುದಯ ಹೊಂದುವುದೆಂದು ಶ್ರೀ ರೈಯ್ಯಾಗಳು ಎಣಿಸುವುದಿಲ್ಲ. ಕಾಂಗ್ರೆಸು ರಾಜಕೀಯ ಸಂಸ್ಥೆ. ದೇಶದ ಬಂಧನವನ್ನು ಹರಿಸಿ ಸಂಪೂರ್ಣ ಸ್ವಾತಂತ್ರ್ಯ ಪಡೆಯುವುದೇ ಅದರ ಗುರಿ. ಅದರೊಳಗೆ ಉದಾತ್ತ ನೀತಿ ಮತ್ತು ಧಾರ್ಮಿಕ ತತ್ವಸಾಧನೆಯನ್ನು ಸಮಾವೇಶಮಾಡುವುದರಲ್ಲಿ ಅರ್ಥವಿಲ್ಲ. ಅಹಿಂಸೆಯಿಂದಲೇ ಸ್ವರಾಜ್ಯಸಿದ್ಧಿಯಾದರೆ ಮಾತ್ರ ತನಗದು ಬೇಕು. ಇಲ್ಲವಾದರೆ ತಾನದರಲ್ಲಿಲ್ಲೆಂಬ ಗಾಂಧಿಜಿಯವರ ವಿಚಾರವನ್ನು ಶ್ರೀ ಎಮ್. ಎನ್ ರೈಯ್ಯಾಗಳು ಪ್ರಬಲವಾಗಿ ವಿರೋಧಿಸಿರುವರು. ಸಂಪೂರ್ಣ ಸ್ವರಾಜ್ಯಸಾಧಿಸುವುದೇ ಕಾಂಗ್ರೆಸಿನ ಮುಖ್ಯ ಉದ್ದೇಶವಲ್ಲದ ಸತ್ಯ ಮತ್ತು ಅಹಿಂಸೆಯ ಸಾರ್ಥಕತೆಗಾಗಿ ಪ್ರಯತ್ನಿಸುವ ಸಂಸ್ಥೆಯಲ್ಲದು. ಸತ್ಯ ಮತ್ತು ಅಹಿಂಸೆಯನ್ನು ತನ್ನ ತತ್ವವಾಗಿ ಅದು ಸ್ವೀಕರಿಸಿರುವುದೂ ಇಲ್ಲ. ನ್ಯಾಯವಾದ ಮತ್ತು ಶಾಂತವಾದ ಎಲ್ಲಾ ವಿಧಾನಗಳಿಂದ ಸ್ವರಾಜ್ಯಸಾಧನೆಯೇ ಅದರ ತತ್ವ. ಸತ್ಯ ಮತ್ತು ಅಹಿಂಸೆಯನ್ನು ಕಾಂಗ್ರೆಸು ತನ್ನ ತತ್ವವಾಗಿ ಸ್ವೀಕರಿಸುವಂತೆ ಗಾಂಧಿಜಿಯವರು ಬಹೂರೀದು ಕಾಂಗ್ರೆಸಿನಲ್ಲಿ ಮಾಡಿದ ಪ್ರಯತ್ನವು ಫಲಕಾರಿಯಾಗಿರುವುದಿಲ್ಲ. ಲೋಕವೇ ಹಿಂಸೆಯನ್ನವಲಂಬಿಸಿ ನಡೆಯುವಾಗ, ಬ್ರಿಟಿಷ್ ಸಾಮ್ರಾಜ್ಯದ ಮೂಲತತ್ವವೇ ಹಿಂಸೆಯಾಗಿರುವಾಗ ಅದನ್ನು ಸಾಧ್ಯವಾದರೆ ಅಹಿಂಸೆಯಿಂದ ಅಗತ್ಯಬಿದ್ದರೆ ಹಿಂಸೆಯಿಂದಾದರೂ ವಿರೋಧಿಸಬೇಕೇ ಹೊರತು ಮೊದಲಾಗಿಯೇ ಅಹಿಂಸೆಗೆ ಕಟ್ಟುಬೀಳುವುದು ಸರಿಯಲ್ಲೆಂದು ಶ್ರೀ. ರೈಯ್ಯಾಗಳ ಮತ.

ಡಿಲ್ಲಿಯ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ವರ್ಕಿಂಗ್ ಕಮಿಟಿಯ ನಾಗರಿಕ ಸ್ವಾತಂತ್ರ್ಯ ಸಂಬಂಧವಾದ ಸೂಚನೆಯನ್ನು ನಿಷೇಧಿಸಿ ತೀವ್ರಗಾಮಿಗಳು ಹೊರನಡೆದ ಕುರಿತು ಗಾಂಧಿಜಿಯವರು ಕೊಟ್ಟಿರುವ ಅಭಿಪ್ರಾಯವು ಶೋಚನೀಯವಾದುದೆಂದು ಶ್ರೀ. ರೈಯ್ಯಾಗಳು ಕಠಿಣವಾಗಿ ಟೀಕಿಸಿರುವರು. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯವಾದ ಮೇಲೆ ತೀವ್ರಗಾಮಿಗಳೇನೂ ಹೊರನಡೆದುದಲ್ಲ. ಆ ಮೊದಲೇ ಅವರು ಹೊರನಡೆದು ಕೇವಲ ತಮ್ಮ ನಿಷೇಧಸೂಚಿಸಿದುದು. ಅದೇನೂ ಕಾಂಗ್ರೆಸಿನ ಶಿಸ್ತಿಗೆ ವಿರೋಧವಾಗಲಾರದು. ತೀವ್ರಗಾಮಿಗಳು ಕಾಂಗ್ರೆಸಿನ ಶಿಸ್ತು ಮತ್ತು ನಿಯಮಗಳನ್ನು ವಿಧೇಯವಾಗಿ ಪಾಲಿಸಲಿರುವರು. ಆದರೆ ಕಾಂಗ್ರೆಸಿನ ರಾಜಕೀಯ ಉದ್ದೇಶವಾದ ಸಂಪೂರ್ಣ ಸ್ವಾತಂತ್ರ್ಯ ಸಾಧನೆಗೆ ಬೇಕಾದ ರಾಜಕೀಯ ಕಾರ್ಯಕ್ರಮವು ಮೂಲೆಗೊತ್ತಲ್ಪಟ್ಟು ಅದಕ್ಕೆ ಸಂಬಂಧವಿಲ್ಲದ ನೈತಿಕ ಮತ್ತು ಧಾರ್ಮಿಕ ತತ್ವಗಳನ್ನು ಅದರ ಮೇಲೆ ಹೊರಿಸಿದರೆ, ಖಾದಿ, ಮದ್ಯಪಾನ ನಿಷೇಧ, ಹರಿಜನೋದ್ಧಾರವೇ ಮೊದಲಾದ ಕಾರ್ಯಗಳೇ ಅದರ ಸರ್ವಸ್ವವೆಂದಾಗಿ, ಕ್ರಾಂತಿಕಾರಕ ಸಾಮುದಾಯಿಕ ಚಟುವಟಿಕೆಗಳು ನಿಷೇಧಿಸಲ್ಪಟ್ಟರೆ ಅದಕ್ಕೆ ತೀವ್ರಗಾಮಿಗಳೊಪ್ಪಲಾರರು. ಇದು ಹೊರತು, ಸತ್ಯ, ಅಹಿಂಸೆ, ಖಾದಿಪ್ರಚಾರ, ಮದ್ಯಪಾನ ನಿಷೇಧವೇ ಮೊದಲಾದುವುಗಳಲ್ಲಿ ವಿಶ್ವಾಸವಿದ್ದವರು ಮಾತ್ರ ಕಾಂಗ್ರೆಸಿನೊಳಗಿರಬೇಕೆಂಬ ಗಾಂಧಿಜಿಯವರ ಅಭಿಪ್ರಾಯವು ಖಂಡನೀಯವಿದೆ. ಕಾಂಗ್ರೆಸು ಪ್ರಜಾಸತ್ತಾತ್ಮಕ ಸಂಸ್ಥೆ. ಅದರಲ್ಲಿ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ವಿಶ್ವಾಸವಿರುವ ಜನರಿರುತ್ತಾರೆ. ತಮ್ಮ ಕಾರ್ಯಕ್ರಮಕ್ಕೆ ಬಹುಪಕ್ಷವನ್ನೊಲಿಸಿಕೊಳ್ಳುವ ಹಕ್ಕು ಅಲ್ಪಸಂಖ್ಯಾಕರಿಗಿದ್ದೇ ಇರುತ್ತದೆ. ಗಾಂಧಿಜಿಯವರು ಕಾಂಗ್ರೆಸಿಗೆ ಪ್ರವೇಶಿಸುವಾಗ ದರೂ ಇದೇ ರೀತಿ. ಅಂದವೇ ಕಾಂಗ್ರೆಸಿನೊಳಗೆ ಒಂದೇ ರೀತಿಯ ಮನೋವೃತ್ತಿಯ ಜನರೇ ಇರಬೇಕೆಂಬುದು ಮೂರ್ಖತನವೆಂದು ಶ್ರೀ. ಎಮ್ ಎನ್ ರೈಯ್ಯಾಗಳ ಪ್ರತಿಪಾದನೆ.

ಶ್ರೀ ರೈಯ್ಯಾಗಳು ತಾ. ೨೭ರಂದು "ಕಾಂಗ್ರೆಸು ಎತ್ತ ಸರಿಯುತ್ತಿದೆ?" ಎಂಬ ಕುರಿತು ಪೂನಾದ ಗೋಖಲೆ ಹಾಲಿನಲ್ಲಿ ಕೊಟ್ಟ ಭಾಷಣದ ಸಾರಾಂಶವು ಈ ಕೆಳಗಣಂತಿರುತ್ತದೆ. "ಕಾಂಗ್ರೆಸು ಈಗ ಎರಡು ದಿಕ್ಕು ಹಿಡಿದು ಸಾಗುತ್ತಿದೆ ಮತ್ತು ಅದರಲ್ಲಿ ಮೂರು ವಿಷಯಗಳು ಸಂಭವನೀಯವಿವೆ. ಅದು ಒಂದೇದಿಕ್ಕು ಹಿಡಿದು ಮುನ್ನಡೆಯಬಹುದು. ಇಲ್ಲವೆ ಇನ್ನೊಂದು ದಿಕ್ಕು ಹಿಡಿಯಬಹುದು. ಅಥವಾ ಎರಡು ಭಾಗವಾಗಿ ಹೋಗಬಹುದು. ಕಾಂಗ್ರೆಸು ಕಟ್ಟಕಡೆಗಂತೂ ಅದು ಒಂದೇ ದಾರಿ ಹಿಡಿಯುವುದು. ಅದೇ ತೀವ್ರಗಾಮಿ ಸಮತಾವಾದದ ಹಾದಿ. ನನಗೆ ಕಾಂಗ್ರೆಸಿನಲ್ಲಿ ಸಂಪೂರ್ಣ ವಿಶ್ವಾಸವಿದೆ. ಈಗ ಅದರಲ್ಲಿ ಪ್ರಬಲವಾಗಿರುವಂತಿರುವ ಅಪ್ರಾಗತಿಕ ಪ್ರವೃತ್ತಿಗಳ್ಳಿನದು. ಇಂದೆಹಾಕಿ ಮುಂದೊತ್ತುವ ಆಂತರಿಕ ಶಕ್ತಿಯುಳ್ಳದಾಗಿದೆ. ಇಂದಿನದು ಅದರದೊಂದು ತಾತ್ಕಾಲಿಕ ಸ್ವರೂಪ ಮಾತ್ರ. ಕಳೆದ ಒಂದು ವರ್ಷದಿಂದ ಕಾಂಗ್ರೆಸಿನೊಳಗೆ ಅಪಾಯಕರ ಪ್ರವೃತ್ತಿಗಳು ತಲೆಯೆತ್ತಲಾರಂಭಿಸಿ ಗೊಂದಲ ತೊಡಕುಗಳುಂಟಾಗಿವೆ. ಕಾಂಗ್ರೆಸಿನ ಸಾಧ್ಯ ಮತ್ತು ಸಾಧನೋಪಾಯಗಳೊಳಗೆ, ತತ್ವ ಮತ್ತು ಕಾರ್ಯಕ್ರಮಗಳೊಳಗೆ ಪರಸ್ಪರ ವಿರೋಧವುಂಟಾದಂತಿದೆ. ಕಾಂಗ್ರೆಸಿನ ಗುರಿಯು ಸಂಪೂರ್ಣ ಸ್ವರಾಜ್ಯ. ಅದರ ಸಾಧನೋಪಾಯವು ಸತ್ಯ ಮತ್ತು ಅಹಿಂಸೆಯೆಂದು ಹೇಳಲಾಗಿದೆ. ಹೆಚ್ಚಿನ ಕಾಂಗ್ರೆಸ್‍ವಾದಿಗಳಿಗೆ ಕಾಂಗ್ರೆಸೊಂದು ರಾಜಕೀಯ ಸಂಸ್ಥೆಯಾಗಿರುತ್ತದೆ. ನಾವು ನಮ್ಮ ರಾಜಕೀಯ ಗುರಿಯನ್ನು ಸಾಧಿಸಲೆತ್ನಿಸುವಾಗ ಅದಕ್ಕೆ ಸಂಬಂಧಿಸದ ಇತರ ವಿಷಯಗಳಿಗೆಲ್ಲಾ ಪ್ರಾಮುಖ್ಯತೆ ಕೊಡಲು ಸಾಧ್ಯವಿಲ್ಲ. ಸಂಪೂರ್ಣ ಸ್ವರಾಜ್ಯ ಸಾಧನೆಯಲ್ಲಿ ಎರಡು ಪಕ್ಷಗಳೊಳಗೆ ಹೋರಾಟ ನಡೆಯಲೇ ಬೇಕು. ಈ ಹೋರಾಟದಲ್ಲಿ ಒಂದು ಪಕ್ಷವು ಯುದ್ಧದ ನಿಯಮವನ್ನು ನಿಶ್ಚೈಸಿ ಬಿಡಲು ಸಾಧ್ಯವಿಲ್ಲ. ಒಬ್ಬನು ವೈರಿಯನ್ನು ಅವನ ಕಳದಲ್ಲೇ ಇದಿರಿಸ ಬೇಕಾಗುವುದು. ಇಲ್ಲವಾದರೆ ತನ್ನ ಗುರಿ ಸಾಧಿಸುವುದನ್ನೇ ಬಿಟ್ಟುಬಿಡಬೇಕು. ವಿರೋಧಿಯೊಡನೆ ಯಾವ ರೀತಿಯಲ್ಲಿ ಹೋರಾಡಬೇಕೆಂಬುದನ್ನು ಮೊದಲಾಗಿಯೇ ನಿಶ್ಚೈಸಿ ಬಿಡಲು ಸಾಧ್ಯವಿಲ್ಲ. ವೈರಿಯ ಚಲನವಲನ ರೀತಿನೀತಿಗಳನ್ನು ಪರಿಶೀಲಿಸಿ ಅದನ್ನು ನಿಶ್ಚೈಸಬೇಕು.

ಇದರಿಂದ ನಾನು ಹಿಂಸಾವಾದಿಯಿರುವೆನೆಂದು ಯಾರಾದರೂ ನೆನಸಿಕೊಳ್ಳಕೂಡದು. ಆದರೆ ಮೊದಲಾಗಿ ನಾನು ಅಹಿಂಸಾತತ್ವಕ್ಕೆ ಕಟ್ಟುಬೀಳಲಾರ. ಗಾಂಧಿಜಿಯವರ ಸತ್ಯ ಮತ್ತು ಅಹಿಂಸೆಯನ್ನೇ ನಾವು ಕಾಂಗ್ರೆಸಿನ ತತ್ವವಾಗಿ ಸ್ವೀಕರಿಸಿವೆಂದು ಭಾವಿಸೋಣ. ಒಂದುವೇಳೆ ಅದರಿಂದ ನಮಗೆ ಸ್ವಾತಂತ್ರ್ಯ ಸಾಧಿಸಲು ಅಸಾಧ್ಯವಾದರೆ ಮುಂದೇನು? ಯಾವುದಾದರೊಂದು ವಿಧಾನಕ್ಕೆ ಕಾಂಗ್ರೆಸು ಮೂಢ

ANNOUNCEMENT

WE BEG TO INFORM ALL CUSTOMERS, CONSTITUENTS, FRIENDS AND WELL WISHERS THAT SATURDAY, THE 19th NOVEMBER 1938 THE BIRTHDAY OF OUR FOUNDER, THE LATE Mr. A. SUBBARAO PAI WILL BE OBSERVED AS A HOLIDAY AT ALL OUR BRANCH OFFICES IN THE SOUTH KANARA DISTRICT

RESOURCES OF A CRORE

ESTD 1906

CANARA BANK LIMITED

ಲಾಗಿಯೋ ಕಟ್ಟುಬೀಳಬೇಕೆ? ಕೇವಲ ಅಹಿಂಸೆಯಿಂದ ಸಾಮುದಾಯಿಕ ಚಳವಳವನ್ನು ಬೆಳೆಸಲು ಸಾಧ್ಯವಿಲ್ಲೆಂದು ಕಾಂಗ್ರೆಸಿಗೆ ಅನುಭವವೇದ್ಯ ವಿಷಯ. ಕಾಂಗ್ರೆಸು ಸತ್ಯ ಮತ್ತು ಅಹಿಂಸೆಯನ್ನು ತನ್ನ ತತ್ವವಾಗಿ ಈ ವರೆಗೂ ಅಂಗೀಕರಿಸಿಲ್ಲ. ಹಾಗೆ ಅಂಗೀಕರಿಸದೆ ಅದರ ಮೇಲೆ ಅದನ್ನು ಹೊರಿಸುವುದು ನ್ಯಾಯವಲ್ಲ ಗುರಿಗಿಂತಲೂ ಅದರ ಸಾಧನವನ್ನು ಅದರ ಉದ್ದೇಶಕ್ಕಿಂತಲೂ ಅದರ ತತ್ವವನ್ನು ಮಹತ್ವದ್ದಾಗಿ ಪರಿಗಣಿಸಬೇಕೇಕೆ? ಈಗ ಕಾಂಗ್ರೆಸಿನೊಳಗೆ ಧಿಕಾರವು ಕೆಲವೇ ಮಂದಿಯ ಹಸ್ತಗತವಾಗಿದೆ. ಅದರ ಆಂತರಿಕ ಪ್ರಜಾಸತ್ತೆಯೆಂಬುದು ನಾಶವಾಗಿದೆ ಒಂದೆಡೆ ಕಾಂಗ್ರೆಸು ಫೆಡರೇಶನನ್ನು ವಿರೋಧಿಸುವುದು ಇನ್ನೊಂದೆಡೆ ಅದರ ಅಂಗಭೂತವಾದ ಪ್ರಾಂತಿಕ ಸರಕಾರಗಳನ್ನು ಚೆನ್ನಾಗಿ ಕಾಯಿದೇಶೀರವಾಗಿ ನಡಿಸುತ್ತಾ ಹೋಗುವುದರಲ್ಲಿ ಅರ್ಥವಿಲ್ಲ. ಅದು ಅಸಾಧ್ಯ ವಿಷಯವೆಂದೇ ಶ್ರೀ ಎಮ್. ಎನ್ ರ್ರಾಯ್ಯ ಗಳ ಸ್ಪಷ್ಟೋಕ್ತಿ.

WANTED

An energetic young man or woman (widow preferred) Secondary grade trained, or trained in any of the well established Bhagini seva samajams or Ashrams to manage a Hindu orphanage to be started at Manipal. The selected candidate is expected to be a life worker. Only Hindus need apply

Apply stating minimum requirements before the 30th Oct 1938.

P. Panduranga Shenoy,
Secretary,
Manipal Hindu orphanage,
Manipal, UDIPI.

ಕಬ್ಬಿನ ಬೆಳೆ

ದರ್ಭೆಹುಲ್ಲು ಮತ್ತು ನೀಲಿಯಜಾತಿಗೆ ಸೇರಿದ ಹುಲ್ಲುಗಳು ಕಬ್ಬಿನ ಮೂಲವೆಂದು ತಿಳಿಯಲಾಗಿದೆ ಈ ಜಾತಿಗೆ ಸೇರಿದ ನಾಲ್ಕು ತರದ ಹುಲ್ಲುಗಳು ನಮ್ಮ ಹಿಂದುಸ್ಥಾನದಲ್ಲಿಯೇ ಇರುವುದರಿಂದಲೂ ಮತ್ತು ಇತರ ಆಧಾರಗಳಿಂದಲೂ ಕಬ್ಬಿನ ಮೂಲಸ್ಥಾನವು ಹಿಂದೂದೇಶವೇ ಎಂಬುವುದು ನಿಸ್ಸಂದೇಹ, ಚೈನಾದೇಶದಿಂದ ಅಲ್ಲಿಯ ವ್ಯಾಪಾರಸ್ಥರು ಕಬ್ಬನ್ನು ಹಿಂದೂಸ್ಥಾನಕ್ಕೆ ತಂದರೆಂದು ಕೆಲವರ ಅಭಿಪ್ರಾಯವಿದ್ದರೂ ಚರಿತ್ರೆಯ ಆಧಾರದಿಂದ ತಿಳಿಯುವುದಾದರೆ ಹಿಂದೂಸ್ಥಾನದಿಂದಲೇ ಕಬ್ಬು ಬೇರೆದೇಶಗಳಿಗೆ ಹರಡಿರುವುದೆಂದು ಸ್ಪಷ್ಟವಾಗುವುದು.

ಕಬ್ಬು ದರ್ಭೆಯ ಜಾತಿಗೆ ಸೇರಿದ ಹುಲ್ಲಾಗಿದ್ದು ತಂಬಾಸೀ...ದ್ರಿಯವಿದ್ದ ಉಷ್ಣಪ್ರದೇಶಗಳಲ್ಲೆಲ್ಲಾ ಸಮೃದ್ಧಿಯಾಗಿ ಬೆಳೆಯುತ್ತದೆ

ಪ್ರಾಚೀನಕಾಲದಲ್ಲಿ ಅಂದರೆ ಸಾಧಾರಣ 19ನೇ ಶತಮಾನದ ಮೊದಲಿನಿಂದ ಬೆಲ್ಲ ಮತ್ತು ಸಕ್ಕರೆ ಮಾಡುವ ವಿಧಾನಗಳು ಕಂಡುಹಿಡಿಯಲ್ಪಟ್ಟು ಇದರ ಬೆಳೆಯು ಬಹಳ ಬೇಗನೇ ಪಸ್ರಂಸಿಲಾರಂಭಿಸಿತು. ಇದರಲ್ಲಿಯೂ ಬಿಳಿಸಕ್ಕರೆ ಯಂತ್ರಗಳು ತಯಾರಾದ ಮೇಲಂತೂ ಕಬ್ಬಿನ ಬೆಳೆಯು ಈ ಇಪ್ಪತ್ತನೇ ಶತಮಾನದಲ್ಲ ಸಂಪೂರ್ಣ ಸುಧಾರಣೆಯನ್ನು ಹೊಂದಿ ಹೆಚ್ಚಿನ ಲಾಭದಾಯಕವಾದ ಬೆಳೆಯೆಂದೆನಿಸಲ್ಪಟ್ಟಿದೆ

ಕಬ್ಬಿನ ಹುಟ್ಟುನಾಡು ನಮ್ಮ ಹಿಂದುಸ್ಥಾನವೇ ಆದರೂ ಅನ್ಯದೇಶಗಳಿಗಿಂತ ಬೆಳೆಯಲ್ಲಿಯೂ ಬೆಲ್ಲ ಮತ್ತು ಸಕ್ಕರೆ ತಯಾರಿಸುವಿಕೆಯಲ್ಲಿಯೂ ಇದು ಹಿಂದುಳಿದಿರುವುದು ವಿಷಾದಕರವಾಗಿದೆ ಈಗ ಹವಾಯಿ, ಮೊರಿಶಿಯಸ್, ಜಾವಾ, ಕ್ಯೂಬ ಮುಂತಾದ ಪ್ರದೇಶಗಳು ಮುಂದೂತ್ತಿ ಕಬ್ಬಿನ ಬೆಳೆಯ ಸುಧಾರಣೆಯಲ್ಲಿ ಅಗ್ರಗಣ್ಯಸ್ಥಾನವನ್ನು ಪಡೆದಿವೆ ಪರಂತು ಅದರ ಜನ್ಮಭೂಮಿಯು ಇಂದು ಇದರ ಸುಧಾರಣೆಯಲ್ಲಿ ಹಿಂದುಳಿದಿರುವುದು ಆಶ್ಚರ್ಯವಲ್ಲವೇ? ಇಂಥಾ ಬೆಳೆ ಮತ್ತು ಕೈಗಾರಿಕೆಗಳ ಸುಧಾರಣೆಗಳಾಗದಿರುವುದೇ ಇಂದಿನ ಆರ್ಥಿಕ ಹೀನಸ್ಥಿತಿಗೆ ಕಾರಣ

ಕಬ್ಬಿನ ಬೆಳೆಯು ಧನಿಕನ ಬೆಳೆ ಎಂಬದೇನೋ ನಿಜ. ಯಾಕಂದರೆ ಕಬ್ಬನ್ನು ಬೆಳೆಯಿಸುವುದೆಂದರೆ ತುಂಬಾ ಹಣವನ್ನು ಖರ್ಚು ಮಾಡಬೇಕಾಗಿದೆ. ಆದರೆ ಬಡರೈತರಿಗೆ ಈ ಬೆಳೆಗೆ ಹಣಹಾಕಿ ಒಂದು ವರ್ಷದ ತನಕ ಕಾಯಲು ಅಸಾಧ್ಯವಾದುದರಿಂದ ಊರಿನ ಧನಿಕ ರೈತರು ಚಲೋರೀತಿಯಲ್ಲಿ ಕಬ್ಬನ್ನು ಬೆಳೆಸಲು ತಮ್ಮ ಒಕ್ಕಲುಗಳಿಗೆ ಉತ್ತೇಜನವಿತ್ತು ಬೇಕಾದ ಧನಸಹಾಯ ಮಾಡುವುದು ಅವರ ಕರ್ತವ್ಯವಾಗಿದೆ ಮಾತ್ರವಲ್ಲದೆ ಪ್ರತಿಯೊಬ್ಬ ಕಬ್ಬಿನ ರೈತನೂ ಕಬ್ಬಿನ ಬೆಳೆಯ ಶಾಸ್ತ್ರೀಯ ಅನುಭವವನ್ನು ಕೃಷಿಯಿಲಾಖೆಯವರಿಂದ ಪಡೆದು ಈ ಬೆಳೆಯಲ್ಲಿ ಇನ್ನೂ ಹೆಚ್ಚಿನ ಲಾಭಹೊಂದಬಹುದು

ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಾಧಾರಣ 3500ಎಕ್ರೆ ಸ್ಥಳದಲ್ಲ ಕಬ್ಬು ಬೆಳೆಸಲ್ಪಡುತ್ತದೆ ಅದರಲ್ಲಿ ಸುಮಾರು 800 ಎಕ್ರೆಗಳು ನಮ್ಮ ಉಡುಪಿ ತಾಲೂಕಿನಲ್ಲಿ ಇದ್ದು ಮುಖ್ಯವಾಗಿ ಕಲ್ಯಾಣಪುರ ಕೇಂದ್ರದಲ್ಲಿವೆ ಸುಧಾರಿತ ರೀತಿಯ ಕಬ್ಬಿನ ವ್ಯವಸಾಯದಿಂದ ಎಕ್ರೆ ಒಂದರ ಬಿನ್ ಉತ್ಪತ್ತಿಯನ್ನು ಈಗಿನ ಬಿನ್ ಉತ್ಪತ್ತಿಗಿಂತ ಸರಾಸರಿ 50ರೂಪಾಯಿಗಳಂತೆ ಏರಿಸುವುದು ಸುಲಭಕಾರ್ಯವಾಗಿದೆ ಅಂದರೆ ನಮ್ಮ ಇಡೀ ತಾಲೂಕಿಗೆ ವರ್ಷ ಒಂದರ ಸರಾಸರಿ 40,000ರೂಪಾಯಿಗಳ ಉತ್ಪತ್ತಿಯು ಜಾಸ್ತಿಯಾಗಿ ಇದು ರೈತರ ಕೈ ಸೇರುವುದು.

ಈ ಸುಧಾರಿತ ರೀತಿಯ ಕಬ್ಬಿನ ಬೆಳೆಯ ಕುರಿತು ಈ ಪತ್ರಿಕೆಯ ಮುಂದಿನ ಸಂಚಿಕೆಗಳನ್ನು ನಿರೀಕ್ಷಿಸಿರಿ.

K. J BALLAL,
President for Sugarcane Grower Co-operative Union Ltd.
UDIPI.

— ನೋಟೀಸು —

ಬೆಳ್ಳಿಪ್ಪಾಡಿ ಯಜಮಾನ ಬೆಳ್ಳಾರೆ ಮಂಜಪ್ಪ ರೈಯು ಯಾವತ್ತು ಜನರಿಗೆ ತಿಳಿಯಪಡಿಸುವದೇನಂದ್ರೆ—

ಕಳೆದ ಎಪ್ರಿಲ್ ತಿಂಗಳಲ್ಲಿ ಮುಂಚಿನ ಯಜಮಾನ ಆಡೆಕಾಲ ಮಂಜಪ್ಪ ರೈಗಳು ಮೃತಪಟ್ಟ ನಂತರ ಬೆಳ್ಳಿಪಾಡಿ ಕುಟುಂಬದ ಪದ್ಧತಿ ಪ್ರಕಾರ ನಾನು ಹಿರೇಮುಂಬರ್ತ್ನ ಯಜಮಾನನಾಗಿರುತ್ತೇನೆ ಕಣ್ವಲ್ಲದ ಸದರಿ ಮಂಜಪ್ಪ ರೈಗಳ ಪರವಾಗಿ ಅವರ ಹಕ್ಕಿನಿಂದ ಆಡಳಿತೆ ನಡಿಸುತ್ತಿದ್ದ ನನಗೆ ತಮ್ಮನಾಗುವ ನೆಲ್ಲ್‌ತೊಟ್ಟು ರಾಮಣ್ಣ ರೈಯು ಮುಂಚಿನಿಂದಲಾಗ್ಯಾತು ಯಜಮಾನರಾದವರಿಗೆ ಅನೇಕ ತರದ ಉಪದ್ರಕೊಟ್ಟು ದುರ್ಲಭ್ಯ ಪಡಿಸುತ್ತಿದ್ದಂತೆಯೇ ಸದರಿ ಆಡಳಿತೆಯಲ್ಲಿ ಕೂಡ ಬೇರಳ ಕಾಜದ ಏವಜು ವಸೂಲು ಮಾಡಿಯೂ ಕುಟುಂಬದ ಆಸ್ತಿಗಳ ಹುಟ್ಟುವಳಿಗಳನ್ನು ವಸೂಲುಮಾಡಿ ತನ್ನಸ್ವಂತಕ್ಕೆ ದುರ್ಲಭ್ಯ ಪಡಿಸಿಕೊಂಡದ್ದಲ್ಲದೆ ಕುಟುಂಬದಿಂದ ಸಲತಕ್ಕ ಸಾಲಗಳನ್ನು ವ ಸರ್ಕಾರ ತೀರ್ವೆ ಹಣಗಳನ್ನು ಸಲಾಯಿಸದೆ ಕುಟುಂಬದ ಆಸ್ತಿಗಳಿಗೆ ಹೊಣೆಯಾಗುವ ರೀತಿ ವರ್ತಿಸುತ್ತಿದ್ದ ಕುಟುಂಬದ ಆಸ್ತಿಗಳಿಗೆ ಕುಮಿಕಿ ಹಕ್ಕುಗಳು ತಪ್ಪಿಹೋಗುವಂತೆ ಸರಕಾರದ ಹಕ್ಕುಗಳ ಮರಮಟ್ಟುಗಳನ್ನು ಕಡಿಸಿ ನಾಶಪಡಿಸುತ್ತಾನಾಗಿಯೂ ವ ಇದೇ ರೀತಿ ಹಲವು ತರದ ಕುಟುಂಬಕ್ಕೆ ದ್ರೋಹಚಿಂತನೆಯ ಕೃತ್ಯಗಳು ರಿಕಾರ್ಡು ಮಾಡಿರುತ್ತಾನಾಗಿಯೂ ತಿಳಿದುಬಂದದೆ

ಹ್ಯಾಗಿದ್ದಾಗ್ಯೂ ಕಳೆದ ಎಪ್ರಿಲ್ ತಿಂಗಳ ಬಾಗ್ಯಾತು ನಾನು ಕುಟುಂಬದ ಯಜಮಾನನಾಗಿರುವದರಿಂದ ಕುಟುಂಬಕ್ಕೆ ಸಂಬಂಧಪಟ್ಟ ಯಾವತ್ತು ರಿಕಾರ್ಡುಗಳು ವಗೈರೆ ಆಡಳಿತೆಗೆ ಸಂಬಂಧಪಟ್ಟ ಪ್ರಾಗಳನ್ನು ರಾಜಿಯಿಂದಲೇ ಬಿಟ್ಟುಕೊಡುತ್ತೇನಾಗಿ ನನ್ನನ್ನು ನಂಬಿಸಿ ಈಗ ತಿಳಿಯುವಾಗ್ಯೆ ನನ್ನ ಆಡಳಿತೆಗೆ ಉಪದ್ರಕೊಡುವ ವ ಕುಟುಂಬಕ್ಕೆ ಮೋಸಕರವಾದ ಅನೇಕ ರಿಕಾರ್ಡುಗಳು ಮಾಡಿಟ್ಟು ನನ್ನನ್ನು ವ್ಯವಹಾರಗಳಿಗೆ ಗುರಿಪಡಿಸುವರೆ ಆಸ್ಪದಕೊಟ್ಟಿರುವ್ಯಾನಾಗಿ ತಿಳಿದು ಬಂದಿರುತ್ತದೆ

ಆದ್ದರಿಂದ ಕುಟುಂಬದ ಮೇಂ...ದರು ಗೇಣಿಒಕ್ಕಲುಗಳು ಲೇವಾದೇವಿ ಇತರ ವಹಿವಾಟದಾರರು ನನ್ನ ಮುಖಾಂತರ ನಡಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ ನಡೆಸುವ ಯಾವತ್ತೂ ವ್ಯವಹಾರಗಳಲ್ಲಿ ಉಂಟಾಗುವ ವ್ಯವಹಾರಗಳ ನಷ್ಟಗಳಿಗೆ ಅವರವರೇ ಜವಾಬ್ದಾರರಲ್ಲದೆ ನಾನಾಗಲೀ ನನ್ನ ಆಡಳ್ತೆಗೆ ಒಳಪಡುವ ಸ್ಥಿರಚರಸೊತ್ತುಗಳಾಗಲೀ ಜವಾಬ್ದಾರರಲ್ಲವೆಂಬ ಸಂಗತಿ ತಿಳಿದಿರುವದು.

ಮಂಜಪ್ಪ ರೈ ರುಜು
ಮೊಕ್ಕಾಂ ಪುತ್ತೂರು, ತಾ 1-10-1938

Established]   [1906

THE

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	**Rs 486 Lakhs**
Annual income Exceeds	**Rs. 28 Lakhs**
Total Assets Exceed	**Rs 100 Lakhs**
Total claims paid over	**Rs. 36 Lakhs**

The oldest and largest Life Assurance Company of South India, having 31 years of record service.

A POLICY IN THE UNITED INDIA *COMBINES PERFECT SAFETY WITH PRUDENCE*

BRANCHES ALL OVER INDIA.

WANTED AGENTS

For particulars, please apply to:-

THE BRANCH MANAGER
The United India,
Life Assurance Company Ltd
BLOCK No 2, Fehx Par Bazaar
BRANCH, **MANGALORE, S. K**

OR

K. Keshava Shenoy, M A
Organiser, Shantiniketan,
PENTLANDPET,
MANGALORE.

General Assurance Society Ltd.

ಹಿಂದೂದೇಶದ ಪ್ರಮುಖ ವಿಮಾ ಕಂಪೆನಿ:

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಪ್ರಧಾನ ಆಫೀಸು:-ಅಜ್ಮೀರ್   ಸ್ಥಾಪನೆ **1907**

- **ಸಂತೃಪ್ತಿಹೊಂದಿರುವ 50,000 ಪೊಲಿಸಿದಾರರೇ ನಮ್ಮ ಉತ್ಕೃಷ್ಟ ಪ್ರಶಸ್ತಿ ಪತ್ರ**
- **ಎಲ್ಲಾ ವರ್ಗದವರ ಪ್ರತಿಯೊಂದು ಆವಶ್ಯಕತೆಗೂ ಅನುಕೂಲವಾದ ಪೊಲಿಸಿಗಳು**
- **ಏಜನ್ಸಿ ಶರ್ತಗಳು: ಉದಾರ ಮತ್ತು ಲಾಭಕರ.**

ಹೆಚ್ಚಿನ ವಿವರವನ್ನು ಈ ಕೆಳಗಿನವರಿಂದ ಪಡೆಯಬಹುದು:-
ಜನರಲ್ ಮೆನೇಜರ್, ಅಜ್ಮೀರ್.
ಅಥವಾ, ಶಾಖಾ ಮೆನೇಜರ್—ಮದ್ರಾಸ್, ಹುಬ್ಬಳ್ಳಿ, ಬೆಂಗಳೂರು.
ಅಥವಾ, ಚೀಫ್ ಏಜೆಂಟರು:—ಮಧುರೆ, ರಾಜಮಹೇಂದ್ರಿ, ಸಿಕಂದರಾಬಾದ್, ತಿರುಚಿನಾಪಳ್ಳಿ
ಅಥವಾ ಓರ್ಗನೈಸರ್:-ಔರಂಗಬಾದ್, ಬಳ್ಳಾರಿ, ನೆಲ್ಲೂರು.

THE
Canara Banking Corporation, Udipi, Ltd.
Established] (INCORPORATED IN BRITISH INDIA) [1906
MEMBER:
RESERVE BANK OF INDIA
BANKERS' CLEARING HOUSE, MADRAS

Capital Authorised, Issued & Subscribed	Rs.	3,50,000
Paid up Capital	Rs.	3,03,205
Reserves	Rs	3,88,842

RATES OF INTEREST ON DEPOSITS

3 months	2½ % p. a.
6 or 9 months	3 % p. a.
12 or 24 months	3½ % p. a.
Short Term	2 % p. a.

All kinds of Banking Transactions undertaken

ಉಡುಪಿ, ಗುರುವಾರ, ತಾ. ೩-೧೧-೩೮

ವಾಯುವ್ಯ ಗಡಿನಾಡಿನ ಪ್ರಶ್ನೆಯು

ಬ್ರಿಟಿಷ್ ಸರಕಾರಕ್ಕೊಂದು ದೊಡ್ಡ ಸಮಸ್ಯೆಯಾಗಿ ನಿಂತಿದೆ. ಹಿಂದೀ ಸೇನೆಯ ಪರಿಸ್ಥಿತಿಯ ಕುರಿತು ವಿಚಾರಿಸಲು ಹಿಂದೂದೇಶಕ್ಕೆ ಬರುವ ಲೋರ್ಡ್ ಚೆಟ್‌ಫೀಲ್ಡ್ ಕಮಿಟಿಯವರು ಈ ವಿಷಯವನ್ನು ಚೆನ್ನಾಗಿ ಪರಿಶೀಲಿಸಲಿರುವರು. ವಾಯುವ್ಯಗಡಿನಾಡಿನ ಪಂಗಡಿಗರ ಗಲಾಟೆಯನ್ನಡಗಿಸುವುದಕ್ಕಾಗಿ ಹಿಂದೀ ಸರಕಾರವು ಕಳೆದ 15 ವರ್ಷಗಳಿಂದ ಹಣವನ್ನು ನೀರಿನಂತೆ ವ್ಯಯಿಸುತ್ತಿದೆ. ಇಷ್ಟರವರೆಗೆ ಕೋಟಿಗಟ್ಲೆ ಹಣ ವೆಚ್ಚಮಾಡಿದಂತಾಯಿತು. ಕಳೆದ ಒಂದೇ ವರ್ಷದಲ್ಲಿ 201 ಲಕ್ಷ ರೂಪಾಯಿಯನ್ನು ವಾಯುವ್ಯಗಡಿನಾಡಿನ ವೆಚ್ಚಕ್ಕಾಗಿ ಪ್ರತ್ಯೇಕಿಸಿಡಲಾಗಿದೆ. ಆದರೆ ಈ ಹಣವೆಲ್ಲಾ ವಿನಿಯೋಗಿಸಲ್ಪಡುವುದು, ಪಂಗಡಿಗರ ಮೇಲೆ ಧಾಳಿ ನಡಿಸಿ ಅವರನ್ನು ಬಗ್ಗುಬಡಿಯಲಿಕ್ಕಾಗಿ, ಅವರ ಗುಡ್ಡತಟ್ಟಿನ ಮನೆಮಾರುಗಳ ಮೇಲೆ ವಿಮಾನಮೂಲಕ ಬೋಂಬೆಸೆಯಲಿಕ್ಕಾಗಿ, ಸಂದುಕಟ್ಟಿನ ಸ್ಥಳಗಳಲ್ಲಿ ಕೋಟೆ ಕೊತ್ತಳ ಮತ್ತು ರಸ್ತೆಗಳನ್ನು ರಚಿಸಿ ಪಂಗಡಿಗರನ್ನು ಬಲಾತ್ಕಾರದಿಂದ ದಾರಿಗೆ ತರುವುದಕ್ಕಾಗಿ; ಸರಕಾರದ ಹಸ್ತಕರಾಗಿರುವ ಕೆಲಮಂದಿ ಮುಖಂಡರಿಗೆ ವೇತನ ರೂಪದ ಲಂಚಕೊಡುವುದಕ್ಕಾಗಿ. ಗಡಿನಾಡಿನ ಪಂಗಡಿಗರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವುದಕ್ಕಾಗಿ, ಅವರಿಗೆ ವಿದ್ಯೆ ಬುದ್ಧಿಕೊಟ್ಟು ನಾಗರಿಕ ಜೀವನ ನಡಿಸುವಂತೆ ಮಾಡುವುದಕ್ಕಾಗಿ, ಅವರ ಜೀವನ ಸುಖವನ್ನು ಹೆಚ್ಚಿಸುವುದಕ್ಕಾಗಿ ಸ್ವಲ್ಪವಾದರೂ ಹಣವು ವ್ಯಯಿಸಲ್ಪಡುವುದಿಲ್ಲ. ಇಷ್ಟು ಮಾಡಿಯೂ ಗಡಿನಾಡಿನಲ್ಲಿ ಆಗಾಗ ಗಲಾಟೆತಪ್ಪಲಿಕ್ಕೇನೇ ಇಲ್ಲ. ವಜೀರಿಸ್ತಾನದ ಗಲಾಟೆಯೆದ್ದು ಈಗ ಸುಮಾರು 2 ವರ್ಷಗಳಾದುವು. ಇನ್ನೂ ಬೇಗನೆ ಶಾಂತಿಯುಂಟಾಗುವ ಸಂಭವ ತೋರುವುದಿಲ್ಲ. ಕೇವಲ ಬನ್ನುವಿನ ಹಿಂದು ಹುಡುಗಿಯೊಬ್ಬಳ ಪ್ರಕರಣವೊಂದರಿಂದ ಮತ್ತು ಇಪ್ಪಿಯ ಫಕೀರರ ಉತ್ತೇಜನ ಮಾತ್ರದಿಂದ ವಜೀರಿ ಪಂಗಡಿಗರು ಇಷ್ಟೊಂದು ದೀರ್ಘಕಾಲ, ಹೆಚ್ಚಿನ ಪ್ರಾಣ ಮತ್ತು ಸೊತ್ತುನಷ್ಟಕ್ಕೊಳಗಾಗಿ ಸರಕಾರವನ್ನು ವಿರೋಧಿಸುವ ಅಚಲ ನಿರ್ಧಾರವುಳ್ಳವರಿರುವರೆಂಬ ವಾದದಲ್ಲಿ ಅರ್ಥವಿಲ್ಲ. ಗಡಿನಾಡಿನ ಪಂಗಡಿಗರ ಅತೃಪ್ತಿಗೆ ಕಾರಣವೇ ಬೇರೆ ಇರಬೇಕು. ಸರಕಾರದ ಧೋರಣೆಯು ಇಷ್ಟರವರೆಗೆ ಈ ರೋಗದ ಮೂಲವನ್ನು ಕಂಡುಹಿಡಿದು ನಿವಾರಿಸುವುದರಲ್ಲಿ ಜಯಶೀಲವಾಗಿರುವುದಿಲ್ಲ. ಬಲಾತ್ಕಾರದಿಂದ ಪಂಗಡಿಗರನ್ನು ಬಗ್ಗಿಸಿ ದಾರಿಗೆ ತರುವುದಕ್ಕೂ ಇಷ್ಟರ ವರೆಗೆ ಸರಕಾರಕ್ಕೆ ಸಾಧ್ಯವಾಗಿರುವುದಿಲ್ಲ. ಇಷ್ಟರವರೆಗಣ ಅದರ ಧೋರಣೆಯು ಬಹುತೇಕ ನಿರರ್ಥಕವಾಗಿರುವುದೆಂದೇ ಹೇಳಬಹುದು. ಆದುದರಿಂದ ಸರಕಾರವು ವಾಯುವ್ಯ ಗಡಿನಾಡಿನ ಕುರಿತಾದ ತನ್ನ ಈ ವರೆಗಣ ರೀತಿನೀತಿಗಳನ್ನು ಸಂಪೂರ್ಣ ಬದಲಾಯಿಸಿ ಅವನ್ನು ಬಗೆಹರಿಸಲು ಬೇರೇನಾದರೂ ಉಪಾಯವಿದೆಯೋ ಎಂದು ಪರ್ಯಾಲೋಚಿಸತಕ್ಕದ್ದು.

ಮಹಾತ್ಮ ಗಾಂಧಿಯವರ ಸೂಚನೆ.

ಗಾಂಧಿಜಿಯವರು ಈಗ ವಾಯುವ್ಯ ಗಡಿನಾಡಿಗೆ ಹೋಗಿ ಖಾನ್ ಅಬ್ದುಲ್ ಗಾಫರ್ ಖಾನರೊಂದಿಗೆ ಪ್ರಾಮುಖ್ಯ ಸ್ಥಳಗಳನ್ನೆಲ್ಲಾ ಸಂದರ್ಶಿಸುತ್ತಿರುವರಷ್ಟೆ. ಅಕ್ಟೋಬರ ತಾ 20ರಲ್ಲು ಅವರು ಬನ್ನು ಪಟ್ಟಣದಲ್ಲಿ ಮಾಡಿದ ಭಾಷಣವು ಅತ್ಯಂತ ಮಹತ್ವದ್ದಿರುವುದು. ವಾಯುವ್ಯ ಗಡಿನಾಡಿನಲ್ಲೀಗ ಕಾಂಗ್ರೆಸ್ ಮಂತ್ರಿಮಂಡಲವು ಸ್ಥಾಪಿತವಾಗಿದೆ. ಆದರೂ ಗಡಿನಾಡಿನ ಪಂಗಡಿಗರ ಧಾಳಿಯ ಹಾವಳಿಯು ಜನತೆಗೆ ತಪ್ಪಿಲ್ಲ. ಬನ್ನುವಿನಲ್ಲಿಯೇ ಅತ್ಯಂತ ಭಯಂಕರ ಧಾಳಿ ನಡೆದಿರುವುದು. ಬ್ರಿಟಿಷ್ ಸರಕಾರದ ಅಲಕ್ಷ್ಯವೇ ಇದಕ್ಕೆ ಕಾರಣ. ಈ ಧಾಳಿಗಳು ನಡೆಯದಂತೆ ಅವರು ತಕ್ಕ ರಕ್ಷಣೆಯ ಏರ್ಪಾಡು ಮಾಡುವುದಿಲ್ಲ. ಆ ಸಂಬಂಧವಾದ ಅಧಿಕಾರವನ್ನು ಕಾಂಗ್ರೆಸ್ ಮಂತ್ರಿಗಳಿಗೂ ಬಿಟ್ಟುಕೊಡುವುದಿಲ್ಲ. ಪರಿಸ್ಥಿತಿ ಇದೇ ರೀತಿ ನಡೆದಲ್ಲಿ ಗಡಿನಾಡಿನ ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಡುವುದೇ ಲೇಸೆಂದು ಗಾಂಧಿಜಿಯವರ ಸ್ಪಷ್ಟೋಕ್ತಿ. ಸರಕಾರವು, ಗಡಿನಾಡಿನ ಪಂಗಡಿಗರ ಮೇಲಿನ ಅಧಿಕಾರವನ್ನೂ ಕಾಂಗ್ರೆಸ್ ಮಂತ್ರಿಗಳಿಗೇನೇ ಬಿಟ್ಟುಕೊಡಬೇಕು. ಪ್ರಜಾಜವಾಬ್ದಾರಿಗಳಾದ ಮಂತ್ರಿಗಳು, ತಮ್ಮ ಬಂಧುಗಳಾದ ಗಡಿನಾಡಿನ ಪಂಗಡಿಗರನ್ನು ಸೌಹಾರ್ದದಿಂದ ಒಲಿಸಿಕೊಳ್ಳಲೆತ್ನಿಸಬೇಕು. ಈ ಪಂಗಡಿಗರ ಧಾಳಿಗೆ ಜಾತೀಯ ದ್ವೇಷವು ಕಾರಣವಲ್ಲ. ತಮ್ಮ ಪ್ರಾಥಮಿಕ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅವರು ಇತರರ ಸೊತ್ತುಗಳನ್ನು ಲುಟಾಯಿಸುವರು. ಈ ಪಂಗಡಿಗರಿನ್ನೂ ನಾಗರಿಕತೆಯ ಗಂಧಗಾಳಿಯಿಲ್ಲದೆ ಬರ್ಬರರಾಗಿಯೇ ಇದ್ದಾರೆ. ಕೋವಿಯ ಉಪಯೋಗದ ಹೊರತು ಇನ್ನಾವ ಶಿಕ್ಷಣವನ್ನೂ ಅವರು ಪಡೆದವರಲ್ಲ. ಒಂದೆಡೆ ಸ್ಥಿರವಾಗಿ ವಾಸಿಸಿ ಭೂ ವ್ಯವಸಾಯಮಾಡಿ ಸುಖವಾಗಿರುವಂತಹ ಜೀವನಾನುಕೂಲತೆಯನ್ನು ಅವರಿಗೆ ಯಾರೂ ಒದಗಿಸಿಕೊಟ್ಟವರಿಲ್ಲ. ಕಾಡು ಜನರಂತೆ ಪಂಗಡ ಪಂಗಡವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸಿ, ಆವಶ್ಯಬಿದ್ದಾಗ ಇತರರ ಸೊತ್ತುಗಳನ್ನು ಅಪಹರಿಸಿ ಜೀವನ ನಡಿಸುತ್ತಿರುವವರವರು. ಈ ಪಂಗಡಿಗರು ಒಂದೆಡೆ ಸ್ಥಿರವಾಗಿ ವಾಸಿಸಿ ಬೇಸಾಯ ಕಸುಬನ್ನು ಕೈಕೊಳ್ಳುವಂತೆ ಬೇಕಾದ ಸಹಾಯಮಾಡಿದರೆ, ಕಾಲುವೆಗಳನ್ನು ತೋಡಿಸಿ ಬೇಕಷ್ಟು ಬೆಳೆ, ಹಣ್ಣು ಹಂಪಲುಗಳನ್ನು ಬೆಳಸಲು ಪ್ರೋತ್ಸಾಹವಿತ್ತರೆ, ಶಾಲೆಗಳನ್ನು ಸ್ಥಾಪಿಸಿ ವಿದ್ಯಾಪ್ರಚಾರ ಮಾಡಿದರೆ, ಆಸ್ಪತ್ರೆಗಳ ಮೂಲಕವಾಗಿ ವೈದ್ಯಕೀಯ ಸಹಾಯವಿತ್ತರೆ, ವೀರರೂ, ಅತ್ಯಂತ ಪರಿಶ್ರಮಿಗಳೂ ಆದ ಈ ಜನರು ವಾಯುವ್ಯ ಗಡಿನಾಡು ಪ್ರಾಂತದ ತಮ್ಮ ಬಂಧುಗಳಿಗಿಂತ ಎಂದೂ ಹಿಂದೆ ಬೀಳಲಾರರು. ಕಾಂಗ್ರೆಸ್ ಮಂತ್ರಿಗಳು ಈ ಕೆಲಸವನ್ನು ಕ್ರಮಶಃ ಅತಿ ಸುಲಭವಾಗಿ ಮಾಡಬಹುದು. ಆಗ ಗಡಿನಾಡಿನ ಪಂಗಡಿಗರ ಗಲಾಟೆಗಳು ತನ್ನಂತೆಯೇ ನಿಂತುಹೋಗುವವು. ಇಂಡಿಯಾ ಸರಕಾರವು ಆಗತ್ಯವಾದ ಧನ ಸಹಾಯವಿತ್ತರೆ, ವಾಯುವ್ಯ ಗಡಿನಾಡಿನ ಕಾಂಗ್ರೆಸ್ ಸರಕಾರವು ಈ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವುದೆಂದು ಗಾಂಧಿಜಿಯವರು ಸೂಚಿಸಿರುವರು. ಇಂಡಿಯಾ ಸರಕಾರವು ಏನು ಮಾಡಲಿರುವುದೋ ನೋಡಲಿದೆ.

ಚೀನಾಜಪಾನು ಯುದ್ಧವು

ಇನ್ನು ಮುಂದೆ ಸಮರಂಗದಲ್ಲಿನಡೆಯುವ ಗುಪ್ತ ಗೋರಿಲ್ಲ ಯುದ್ಧವು ಚೈನದ ಎಲ್ಲಾ ರಣರಂಗಗಳಲ್ಲಿಯೂ ಸಂಘಟಿತವಾಗಿ ನಡೆಸಲ್ಪಡುವುದೆಂದು ಮಾರ್ಶಲ್ ಚ್ಯಾಂಗ್ ಕೈಶೇಕ್ಕರು ವ್ಯಕ್ತಗೊಳಿಸಿರುವರು. ಮಾರ್ಶಲ್ ಚ್ಯಾಂಗರು ರಾಜಿನಾಮೆಕೊಡುವರೆಂಬ ಸುದ್ದಿಯು ಸುಳ್ಳಾಗಿದೆ. ಚುಂಕಿಂಗ್ ಎಂಬ ಪರ್ವತಶ್ರೇಣಿಯಿಂದಾವರಿತ ಸ್ಥಳವನ್ನವರು ತನ್ನ ಹೊಸ ರಾಜಧಾನಿಯಾಗಿ ಮಾಡಿರುವರು. ಕಟ್ಟಕಡೆಯಲ್ಲಿ ಚೈನವು ಜಯಹೊಂದುವುದೆಂಬ ಭರವಸೆಯು ಅವರಿಗಿರುವುದು. ಕ್ಯಾಂಟನ್ ಮತ್ತು ಹೇಂಕೋ ಪಟ್ಟಣಗಳಲ್ಲಿ ಸಮರಂಗದಲ್ಲಿ, ಆತ್ಯಾಧುನಿಕ ಯುದ್ಧೋಪಕರಣ ಸಿದ್ಧತೆಯುಳ್ಳ ಜಪಾನರೊಡನೆ ಹೋರಾಡುವುದರಿಂದ ಸಹಸ್ರಗಟ್ಲೆ ಚೀನೀ ಸೈನಿಕರು ಹತರಾಗಬೇಕಾಗುವುದೆಂದು ಮಾರ್ಶಲ್ ಚ್ಯಾಂಗರು ಆ ಪ್ರಾಮುಖ್ಯ ಪಟ್ಟಣಗಳನ್ನು, ಯುದ್ಧವೇನೂ ನಡಿಸದೆ ಬಿಟ್ಟುಕೊಟ್ಟಿದ್ದಾಗಿರಬೇಕು. ಇನ್ನು ಮುಂದೆ ಚೀನೀ ಸೈನಿಕರು ಸಣ್ಣ ಸಣ್ಣ ಪಂಗಡವಾಗಿ ಬೇರೆ ಬೇರೆ ರಣರಂಗದಲ್ಲಿ ಗೋರಿಲ್ಲ ಯುದ್ಧ ನಡಿಸಲು ಉಪಯೋಗಿಸಲ್ಪಡುವರು. ಕ್ಯಾಂಟನ್ ಮತ್ತು ಹೇಂಕೋ ಪಟ್ಟಣಗಳು [illegible] ಸವಾಗಿ ತಮ್ಮ ವಶವಾದುದರಿಂದ ಜಪಾನರು ಆನಂದೋತ್ಸಾಹಪೂರ್ಣರಾಗಿದ್ದರು. ಆದರೆ ಈ ಪಟ್ಟಣಗಳಲ್ಲಿ ಚೀನೀಯರು ಜಪಾನರನ್ನು ಪ್ರಬಲವಾಗಿ ವಿರೋಧಿಸುತ್ತಿದ್ದರೆ ಪ್ರಾಯಶಃ ಯುದ್ಧವು ಬೇಗನೆ ಕೊನೆಗೊಳ್ಳುತ್ತಿತ್ತು. ಈಗ ಅದು ಇನ್ನೂ ದೀರ್ಘ ಕಾಲ ಮುಂದುವರಿಸಲ್ಪಡುವಂತಾಗಿರುವುದೆಂಬುದನ್ನವರು ಮರೆತಿರುವಂತಿದೆ. ಜಪಾನರ ಸಾಂಪತ್ತಿಕ ಸ್ಥಿತಿಯು ಬಹಳವಾಗಿ ಕೆಟ್ಟುಹೋಗಿದೆ. ಯುದ್ಧಕ್ಕಾಗಿ ಅವರು ಅಪಾರ ಸಾಲಮಾಡಬೇಕಾಗಿ ಬಂದಿದೆ. ಮೋಟರ್ ವಾಹನಗಳಿಗೆ ಪೆಟ್ರೋಲಿನ ಬದಲಿಗೆ ಇದ್ದಿಲನ್ನುಪಯೋಗಿಸಿ ಪೆಟ್ರೋಲನ್ನು ಉಳಿಸತೊಡಗಿದ್ದಾರೆ ಎಂಬ ಮೇಲೆ ಅವರೆ ಕಷ್ಟಕ್ಕೊಳಗಾಗಿದ್ದಾರೆಂಬುದು ವೇದ್ಯವಾಗುವುದು. ಅವರೀಗ ಸಂಧಿಗೂ ಸಿದ್ಧರಿರುವರು. ಆದರೆ ಮಾರ್ಶಲ್ ಚ್ಯಾಂಗರು, ಜಪಾನರ ಅಧೀನತೆಗೊಳಪಡುವ ಯಾವ ಸಂಧಿಗೂ ಸಿದ್ಧರಿರುವುದಿಲ್ಲ. ಜಪಾನರು ಚೈನದ ಕೆಲವು ಪ್ರಾಮುಖ್ಯ ಪಟ್ಟಣಗಳನ್ನು ವಶಪಡಿಸಿಕೊಂಡರೂ, ಗೆದ್ದ ಪ್ರದೇಶಗಳಲ್ಲಿನ ಸರ್ವಸಾಮಾನ್ಯ ಜನರು ಅವರಿಗೆ ಬದ್ಧವಿರೋಧಿಗಳಿದ್ದಾರೆ. ಆದುದರಿಂದ ರಾಜ್ಯಭಾರ ವ್ಯವಸ್ಥೆಯು ಬಹಳ ಕಷ್ಟವಾಗಿದೆ. ಒಳಗಿಂದೊಳಗೆ ಜನರು ಗೋರಿಲ್ಲ ಯುದ್ಧ ನಡಿಸಲು ಬೇಕಾದ ಯುದ್ಧೋಪಕರಣ ಮತ್ತು ಮದ್ದು ಗುಂಡುಗಳನ್ನು ಮೊದಲೇ ಸಂಗ್ರಹಿಸಿಟ್ಟಿದ್ದಾರೆ. ಆದುದರಿಂದ ಚೈನವನ್ನು ಶೀಘ್ರವಾಗಿ ಗೆದ್ದು ಅಧಿಕಾರ ನಡಿಸುವೆನೆಂಬ ಜಪಾನಿನ ಆಶೆಯು ಬಯಲುಭ್ರಾಂತಿಯೇ ಸರಿ. ಜಪಾನರು ಇಷ್ಟರಲ್ಲೇ ಯುದ್ಧ ನಿಲ್ಲಿಸದೆ ಮುಂದೊತ್ತಿ ಮಾರ್ಶಲ್ ಚ್ಯಾಂಗರನ್ನು ಬಗ್ಗುಬಡಿಯುವ ದೃಢನಿರ್ಧಾರಮಾಡಿದ್ದಾರೆ. ಚೀನೀಯರೆಲ್ಲಾ ಒಕ್ಕಟ್ಟಿನಿಂದ ಚ್ಯಾಂಗರ ಸಹಾಯಕ್ಕೆ ಬಂದಿರುವಾಗ ಜಪಾನರ ಈ ಉದ್ದೇಶವು ಹೇಗೆ ನೆರವೇರುವುದೋ?

ಮದ್ರಾಸು— ಅಕ್ಟೋಬರ 27ನೇ ತಾರೀಕು ಬೆಳಗ್ಗೆ 8 ಗಂಟೆಗೆ ಪ್ರಾರಂಭಿಸಿದ ಮಳೆಯು ಮಧ್ಯಾಹ್ನ 12 ಗಂಟೆಯ ವರೆಗೂ ಒಂದೇ ಸವನೆ ಸುರಿಯಿತು. [illegible] ಬಸ್ಸುಗಳ ಸಂಚಾರವು ಬಹಳ ಕಷ್ಟವಾಗಿತ್ತು. [illegible] ಮಳೆಯು ತಿರುಗಿ ರಾತ್ರಿಯುದ್ದಕ್ಕೂ 28ನೇ ತಾರೀಕು ಮಧ್ಯಾಹ್ನ ಒಂದು ಗಂಟೆಯ ವರೆಗೆ ಸುರಿಯಿತು.

ಅಕ್ಟೋಬರ್ 27ರಲ್ಲಿ [illegible] ಪೇಟೆ ಎಂಬಲ್ಲಿ ಒಬ್ಬ ಹೆಂಗಸು ಅದೇ ಮನೆಯ ಮಾಳಿಗೆ ಬಿದ್ದು ಜನರಲ್ ಆಸ್ಪತ್ರೆಗೆ ಒಯ್ಯಲ್ಪಟ್ಟು ಮೃತಳಾದಳೆಂದು ತಿಳಿದುಬರುತ್ತದೆ.

ಪುಟ ೪ರಿಂದ

ದುದೆಂದೂ, ಆದರೆ ಹೆಸ್ಕ್ಯಾಲು [illegible] ಇರಬೇಕೆಂದೂ, ಅದಕ್ಕೆ ಬೇರೆ [illegible] ಬೇಕೆಂದೂ ಮತ್ತು ತಮ್ಮ [illegible] ವಿದ್ಯಾರ್ಥಿ ವೇತನವಾಗಿ ಕೊಡಬೇಕೆಂದು [illegible] ವಾದಿಸಿದರು. [illegible] [illegible] [illegible] ಕಮಿಟಿಯವರ ನಿರ್ಧಾರ [illegible] ಕಟ್ಟಡವಿಲ್ಲದೆ [illegible] ದೂ, ಕಟ್ಟಡ ಅಗತ್ಯವಿದ್ದ [illegible] [illegible] [illegible] ಕಟ್ಟಡವನ್ನು [illegible] [illegible] ಕಟ್ಟಿಸಿ ಕೊಡುವೆವು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 30 10 '38

ಕೈಗಾರಿಕೆ ವಸ್ತು ಪ್ರದರ್ಶನ— ಮಾಸ್ತ ಎ. ಎ ಗಿರಿ ಪೈಯವರು ಮಂಗಳೂರಿನ ಕೈಗಾರಿಕೆ ವಸ್ತು ಪ್ರದರ್ಶನವನ್ನು ಈ ಮುಹೂರ್ತದಲ್ಲಿ ತೆರೆಯಲು ಬರುವುದಿಲ್ಲ. ಆದರೂ ಆ ಪ್ರದರ್ಶನವನ್ನು ನಿಂಳೆಯಿಂದ ಮಹಾಜನರು ನೋಡುವ ಏರ್ಪಾಡು ಮಾಡಲಾಗಿದೆ.

ನಗರ ಸಭೆ—ಕಳೆದ ಸೋಮವಾರ ಮಂಗಳೂರು ನಗರ ಸಭೆಯ ಮೀಟಿಂಗು ಶ್ರೀ ಬಿ. ವಿ. ಬಾಳಿಗ ಅಧ್ಯಕ್ಷತೆಯಲ್ಲಿ ಜರಗಿತು. ಚೊಕ್ಕಪಟ್ಣ ಮತ್ತು ಅತ್ತಾವರ ಮುನ್ಸಿ. ಶಾಲೆಗಳು ಆರೋಗ್ಯ ಮತ್ತು ಶಿಶುಪ್ರದರ್ಶನದಲ್ಲಿ ಪ್ರಥಮ ದ್ವಿತೀಯ ಸ್ಥಾನಗಳನ್ನು ಪಡೆದ ಬಗ್ಗೆ ಅವುಗಳಿಗೆ ಎರಡು ಬೆಳ್ಳಿಯ ಬಟ್ಟಲುಗಳನ್ನು ನಗರ ಸಭಾಧ್ಯಕ್ಷರು ಕೊಟ್ಟರು. ಶ್ರೀ ರಂಗರಾಯರು ಅರ್ಜಿ ಫಾರಂಗಳು ಕನ್ನಡದಲ್ಲಿ ಅಚ್ಚಾಗಬೇಕೆಂದೂ ಕರ್ನಾಟಕ ಪ್ರಾಂತೀಕರಣಕ್ಕೆ ಠರಾವು ಮಾಡಬೇಕೆಂದೂ ಸೂಚಿಸಿದ್ದರು. ಅವರು ಹಾಜರಿಲ್ಲದ್ದರಿಂದ ಆ ಎರಡು ಠರಾವುಗಳೂ ಹಾಗೆಯೇ ಬಿಡಲ್ಪಟ್ಟವು. ಭಗಿನೀ ಏವಾ ಡಬವರ. ಸ್ಥಾಪಿಸಿರುವ ಶಿಶು ಕೇಂದ್ರಕ್ಕೆ ನಗರ ಸಭೆಯು ತಿಂಗಳಿಗೆ ಈ ವರೆಗಿನ 15ನ್ನು ಕೊಡುವದೆಂಬ ಠರಾವನ್ನು ಶ್ರೀಮತಿ ಲೀಲಾವತಿ ಏಕಾಂಬರರಾಯರು ತಂದರು. ಅದು ಬಹುಮತದಿಂದ ಮಂಜೂರಾಯಿತು. ಸಂಗೀತದವರು ಅನುಮತಿಯಿತ್ತರೆ ಹಣವನ್ನು ಕೊಡಬಹುದೆಂದಾಯಿತು. ನಗರ ಸಭೆಗೆ ಓವರ್ ಡ್ರಾಫ್ಟಿನಿಂದ ಲಾರ್ಡ್ ಕ್ರಿಶ್ಚನ ಬ್ಯಾಂಕು ಬರಬೇಕಾಗಿದ್ದ ಋಣದ ವಿಷಯ ಚರ್ಚೆ ನಡೆಯುತ್ತಿರುವಾಗ ಶ್ರೀಗಳಾದ ಶ್ರೀನಿವಾಸರೂ, ಸಿ. ಎಲ್. ಲೋಬೋರವರೂ ಚರ್ಚೆಯಾಯಿತು. ಶ್ರೀ ಲೋಬೋರವರು ನಿಂಗೆ ಶ್ರೀನಿವಾಸರನ್ನು "ಈ ವಕೀಲರು" ಎಂದು ಸಂಬೋಧಿಸಿದರು. ಶ್ರೀ ಶ್ರೀನಿವಾಸರು ಅದಕ್ಕೆ ಆಕ್ಷೇಪ ಮಾಡಿದರು. ಮಿ| ಲೋಬೋರು ತಮ್ಮ ಮಾತನ್ನು ಹಿಂತೆಗೆದರು. ಇತರ ವಿಷಯಗಳ ಚರ್ಚೆನಡೆದು ತೀರ್ಮಾನವಾದ ಬಳಿಕ ಸಭಾಂತ್ಯವಾಯಿತು.

ವ್ಯಾಪಾರಿಗಳ ಸಂಘ— ಮಂಗಳೂರಿನಲ್ಲಿ ಕಾಫಿ ಪ್ರೊಡ್ಯೂಸ್ ವ್ಯಾಪಾರಿಗಳು ತಮ್ಮದೊಂದು ಸಂಘವನ್ನು ಸ್ಥಾಪಿಸಿದರು. ಇದರ ಉದ್ಘಾಟನಾ ಸಮಾರಂಭವು ಕಳೆದ ತಾ. 22ರಲ್ಲಿ ಶ್ರೀ ಜಿ. ಎ ಬಾಳಿಗ ಯಂ ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಿ| ಗಳಾದ ಜೆಫ್ರೆಸ್, ಜೆ. ಎ ಸಾಲ್ಡಾನ ಯಂ. ಎಲ್. ಸಿ. ಬಿ. ವೆಂಕಟರಾವ ಬಾಳಿಗರೇ ಮೊದಲಾದವರು ಸಂಘದ ಆಗತ್ಯದ ಕುರಿತು ಮಾತಾಡಿದರು. ಅಧ್ಯಕ್ಷರ ಸಮಯೋಚಿತ ಭಾಷಣವಾಗಿ ಅಧ್ಯಕ್ಷರ ವಂದನೆಗೆ ಸದಸ್ಯರ ಬೆಂಬಲ ಸಿಕ್ಕಿಯಾಯಿತು. ಟೀಪಾರ್ಟಿ ಸತ್ಕಾರದೊಂದಿಗೆ ಸಭಾಂತ್ಯವಾಯಿತು.

ಜಿಲ್ಲಾ ಸಬ್ ಜಡ್ಜರು— ಸಬ್ ಜಡ್ಜರಾದ ಶ್ರೀಮಾನ್ ಡಿ. ಬಿ. ಕೃಷ್ಣಮೂರ್ತಿ ಪಂತಲುಗಾರು ಇವರು ಅಸ್ವಸ್ಥದ ಕಾರಣದಿಂದ ರಜೆ ಪಡೆದಿರುವರು. ಇವರ ಸ್ಥಾನದಲ್ಲಿ ಶ್ರೀ ಎಸ್. ರಾಮಸ್ವಾಮಿ ಅಯ್ಯಂಗಾರರವರು ನೇಮಕ ಹೊಂದಿರುವರು.

ಮುಸ್ಲಿಂಹುಡುಗಿಯರ ವಿದ್ಯಾಭ್ಯಾಸ

ಕಳೆದ ತಾ. 21ರಲ್ಲಿ ಮುಸ್ಲಿಂ ಮಹಿಳೆಯರ ಪರಿಷತ್ತು ಮಿಸೆಸ್ ರಾಜ ಅಬ್ದುಲ್ಲರವರ ಅಧ್ಯಕ್ಷತೆಯಲ್ಲಿ ಜರಗಿತು. ಮಿಸೆಸ್ ಗುಲಾಂ ದಸ್ತಗೀರ್ ಇವರು ಸ್ವಾಗತಭಾಷಣ ಮಾಡಿದರು. ಅಧ್ಯಕ್ಷೆಯರು ತಮ್ಮ ಭಾಷಣದಲ್ಲಿ ಮುಸ್ಲಿಮರು ಹುಡುಗಿಯರ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದೂ ಹೇಳಿದರು. ಕೆಲವು ಮುಖ್ಯ ಠರಾವುಗಳನ್ನು ಮಂಜೂರು ಮಾಡಿದ ತರುವಾಯ ಸಭೆಯು ಮುಕ್ತಾಯವಾಯಿತು.

ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಶನರರು

ದ. ಕ. ಜಿಲ್ಲಾ ಮೆಡಿಕಲ್ ಪ್ರಾಕ್ಟೀಶನರ ಸಂಘವು ರಜಿಸ್ಟರಾಗಿದೆ. ಈ ಸಂಘದ ಅಧ್ಯಕ್ಷರು ಆಯುರ್ವೇದ ಭೂಷಣ ಶ್ರೀ| ಯಂ ವಿ. ಶಾಸ್ತ್ರಿಗಳು, ಡಾ| ಯು. ಆರ್ ಭಟ್ಟರು ಇದರ ಕಾರ್ಯದರ್ಶಿಗಳು. ಶ್ರೀಗಳಾದ ಬಿ. ಆರ್. ಹರಿದಾಸರೂ, ಐ. ಕೆ ಪಿ. ಕಮ್ಮಾರರೂ ಕ್ರಮವಾಗಿ ಉಪಾಧ್ಯಕ್ಷ, ಕೋಶಾಧ್ಯಕ್ಷರಾಗಿರುವರು.

ಗಣೇಶ ವಾಚನ ಸಂಘ— ಈ ಸಂಘದಲ್ಲಿ ಮೊನ್ನೆ ಶ್ರೀ| ಜಿನರಾಜ ಹೆಗ್ಡೆಯವರು ಭಾಷಣ ಮಾಡಿ ಕರ್ನಾಟಕದ ಸಂಗೀತವನ್ನೂ, ಕನ್ನಡ ಸಂಸ್ಕೃತಿಯನ್ನೂ ಶ್ಲಾಘಿಸಿದರು.

ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಹಿಂದೀ ಸಂಚಾಲಕರು.

ಮಂಗಳೂರು ಕೆನರಾ ಹೈಸ್ಕೂಲಿನ ಹಿಂದೂಸ್ಥಾನೀ ಅಧ್ಯಾಪಕರಾದ ಶ್ರೀ ಕೃಷ್ಣಾನಂತ ಪೈ, 'ವಿಶಾರದ' (ಅಲಹಾಬಾದ) ಇವರನ್ನು ಕರ್ನಾಟಕ ಪ್ರಾಂತೀಯ ಹಿಂದೀಪ್ರಚಾರಸಭೆಯು ಪರವಾಗಿ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಹಿಂದೀಪ್ರಚಾರಚಟುವಟಿಕೆಗಳ ಗೌರವ ಸಂಚಾಲಕರಾಗಿ ನೇಮಿಸಲಾಗಿದೆ. ಶ್ರೀ ಪೈಯವರು ಪ್ರಾಂತಿಕ ಸಭೆಯ ಕಾರ್ಯಕಾರೀ ಸಮಿತಿಯ ಸದಸ್ಯರೂ ಧಾರವಾಡದ ಹಿಂದೀ ಶಿಕ್ಷಕ ಮಹಾವಿದ್ಯಾಲಯದ ಮಾಜೀ ಅಧ್ಯಾಪಕರೂ ಆಗಿದ್ದು ವಿಶೇಷ ಅನುಭವ ಹೊಂದಿದವರಾಗಿದ್ದಾರೆ.

ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಯಾವತ್ತೂ ಹಿಂದೀಪ್ರಚಾರಕರು ಹಾಗೂ ವಿದ್ಯಾರ್ಥಿಗಳು ಶ್ರೀ| ಪೈಯವರು ಕೈಕೊಂಡ ಕಾರ್ಯಕ್ಕೆ ಬೆಂಬಲಕೊಡಬೇಕಾಗಿ ವಿನಂತಿ. ಶ್ರೀಯುತರು ಪ್ರಾಂತೀಯ ಸಭೆಗೆ ಸದಸ್ಯರನ್ನು ಸೇರಿಸುವುದು, ಸ್ಥಳೀಕ ಹಿಂದೀ ಸಂಘಗಳನ್ನು ಸ್ಥಾಪಿಸುವುದು ಮತ್ತು ಕಾರ್ಯತತ್ಪರವಾಗಿರುವ ಹಿಂದೀ ಕೇಂದ್ರಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು ಇವೇ ಮೊದಲಾದ ಕಾರ್ಯಗಳಿಗೆ ಅಧಿಕೃತರಾಗಿದ್ದಾರೆ. ಈ ನಿರ್ಣಯವು ಕಳೆದ ತಿಂಗಳು ಡಾ| ಧ| ಬಿ. ಮಾಕರರ ಅಧ್ಯಕ್ಷತೆಯಲ್ಲಿ ಜರಗಿದ ಕ. ಪ್ರಾ. ಹಿಂದೀ ಪ್ರಚಾರ ಸಭೆಯ ಕಾರ್ಯಕಾರೀ ಸಮಿತಿಯಲ್ಲಿ ಅಂಗೀಕರಿಸಲ್ಪಟ್ಟಿತು.

ದಿ ಕೋಮನ್‌ವೆಲ್ತ್

ಎಸ್ಯೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.

ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ:-

ಎಸ್. ಪಿ. ಆರ್. ನಾಯಕ್ ಎಂಡ್ ಸನ್ಸ್,	**ಗವಾನಕರ್ ಎಂಡ್ ಸನ್ಸ್,**
ಸ್ಪೆಶಲ್ ಏಜೆಂಟ್ಸ್,	ಚೀಫ್ ಏಜೆಂಟ್ಸ್
ಕಾರ್ ಸ್ಟ್ರೀಟ್, ಮಂಗಳೂರು.	163 ಗಾಂಧಿ ನಗರ, ಬೆಂಗಳೂರು.

ಉಡುಪಿ

ಉಡುಪಿ ನಗರ ಸಭೆಯ ಕೊನೆಯ ಮೀಟಿಂಗು:— ಕಳದ ತಾ. 31ನೇ ಸೋಮವಾರ ಸಂಜೆ ಶ್ರೀ ಅಗೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಚುನಾವಣೆಗಳು ನಡೆದು ಹೊಸತಾಗಿ ಆರಿಸಿಬಂದ ಸದಸ್ಯರುಗಳು ರಾಜಭಕ್ತಿ ಸೂಚಕಪ್ರಮಾಣಗಳನ್ನು ಮಾಡುವ ಪದ್ಧತಿಯನ್ನು ತೆಗೆದುಹಾಕುವಂತೆ ಸರಕಾರವನ್ನು ವಿನಂತಿ ಮಾಡಿಕೊಳ್ಳಬೇಕೆಂದು ಸೂಚಿಸಿದ ಶ್ರೀ. ಉಪೇಂದ್ರ ಶ್ರೀನಿವಾಸ ನಾಯ್ಕರ ಠರಾವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ತಾ 29-9-38ರ ತನಕ ನಗರ ವ್ಯವಹಾರಕ್ಷೇತ್ರದಲ್ಲಿ ನಡುಬಿನ ಹಾವಳಿಯು ತಲೆದೋರಿದ್ದುದರಿಂದ ಜಿಲ್ಲಾ ಹೆಲ್ತ್ ಆಫೀಸರರು ಪ್ರತ್ಯೇಕ ವೆಕ್ಸಿನೇಟರನೊಬ್ಬನನ್ನು ಒಂದು ತಿಂಗಳ ತನಕ ನೇಮಿಸಬೇಕೆಂದು ಸೂಚಿಸಿದ ಗ್ಯಾಸ್ ಸದ್ರಿ ಇಸವಿ ಅನಗತ್ಯವೆಂದೇ ಕೌನ್ಸಿಲಿನ ನಿರ್ಧಾರವಾಯಿತು. ರೇಡಿಯೋ ಹೌಸಿಗೆ ವಿದ್ಯುದ್ದೀಪಗಳನ್ನು ಇರಿಸವರೆಯೂ 'ಲಿಸನರ್' ಬಗ್ಗೆಯೂ ಅಂದಾಜು ಮಿಟರ್ ಸೆಂಕ್ಷನ್ ಮಾಡಲಾಯಿತು. ಆಫೀಸಿನ ಕೆಳಭಾಗದ ತೋಟಗಳಿಗೆಲ್ಲಾ ಇವೇ ತರಗಳಿಂದ ಒಂಭತ್ತು ರೂಪಾಯಿಯಂತೆ ಸಂಬಳಕೊಡುವರೆ ಕೌನ್ಸಿಲಿನ ಒಪ್ಪಿಗೆ ದೊರೆಯಿತು. ರೇಡಿಯೋಹೌಸನ್ನು ಭುಜಂಗಾಲಯವೆಂದು ಕರೆಯಬೇಕೆಂಬ ಚೆಯರ್‌ಮೇನರ ಸೂಚನೆಯನ್ನು ಮನ್ನಿಸಲಾಯಿತು. ತಾ. 31-3-'36, 30 9 '36 ಮತ್ತು 31-3 '37 ಈ ಮೂರು ಕಂತುಗಳವರೆಗೆ ತನ್ನಿಂದ ವೃತ್ತಿ ತೆರಿಗೆಯನ್ನು ಅನ್ಯಾಯವಾಗಿಯೂ ಅಕ್ರಮವಾಗಿಯೂ ವಸೂಲು ಮಾಡಿರುವುದರಿಂದ ಸದ್ರಿ ಹಣಗಳನ್ನು ವಾಪಾಸು ಕೊಡದಿದ್ದಲ್ಲಿ ಕೌನ್ಸಿಲಿನ ಮೇಲೆ ತಾನು ದಾವಾಮಾಡಬೇಕಾಗುವ ಪ್ರಸಂಗ ಬಂದೀತೆಂದು ಕೊಟ್ಟ ಶ್ರೀ ಭುಜಂಗರಾಯರ ನೋಟೀಸಿನ ಕುರಿತು ತುಂಬ ಚರ್ಚೆ ನಡೆಯಿತು. ಶ್ರೀ. ರಾಯರಿಗೆ ನಿಜವಾಗಿಯೂ ಮುನಿಸಿಪಾಲಿಟಿಯಿಂದ ಹೊರಿಸೋಣಾದ ವೃತ್ತಿತೆರಿಗೆ ಕೇವಲ ನಮ್ಮ ಉಕ್ತಿಯದೆಯೇ? ತೆರಿಗೆ ನೋಟೀಸು ನಿಜವಾಗಿಯೂ ಜ್ಯಾರಿಯಾಗಿದೆಯೇ? ಜ್ಯಾರಿಯಾದುದಕ್ಕೆ ಸಾಕಷ್ಟು ರುಜುವಾತುಗಳಿವೆಯೇ? ಎಂದು ಮಿ. ಜಿ. ಸಿ ರೇಗೋರವರ ಸವಾಲುಗಳು, ಶ್ರೀ ಭುಜಂಗರಾಯರ ನೋಟೀಸುಗಳು ಅವರ ಗುಮಾಸ್ತರ ಕೊಡೆ. ಜ್ಯಾರಿಯಾಗಿವೆಯೆಂದು ಸಂಬಂಧಪಟ್ಟ ಬಿಲ್ ಕಲೆಕ್ಟರರ ರಿಪೋರ್ಟು, 1936ನೇ ಇಸವಿಯ ಈ ವಾದೇವಿಗಳು 1938ರಲ್ಲಿ, ಆದುಕೊಡಾ ಪಾಲನೆಮಾಡಲು ಮುಸೂದೆ ಪಾಸಾದ ನಂತರ ವಿಚಾರಣೆಗೆ ಬಂದುದು ಸರಿಯೇ? ಅಪೀಲಿನ ಮ್ಯಾದೆಗೆ ಅವಧಿಬಾಧಕ ತಟ್ಟಲಿಲ್ಲವೇ? ಎಂದು ಕೆಲವರ ಪ್ರಶ್ನೆಗಳು ಸುದೀರ್ಘ ಚರ್ಚೆ ನಡೆದು ಕೊನೆಗೆ ಈ ವಿಷಯವನ್ನು ಹೊಸಕೌನ್ಸಿಲಿನ ತೀರ್ಮಾನಕ್ಕೆ ಮುಂದರಿಸಿ ಇಡಲಾಯಿತು.

ಹೊಸ ಕೌನ್ಸಿಲಿನ ಸಭೆಯು ಇದೇ ತಿಂಗಳ ಎರಡನೇ ವಾರದಲ್ಲಿ ಕೂಡಲಿರುವುದು. ಈಗಿನ ಕೌನ್ಸಿಲಿನ ಕೆಲವು ಸದಸ್ಯರು ಮುಂದಣ ಸಭೆಯಲ್ಲಿಲ್ಲದಿರುವುದರಿಂದ ಶ್ರೀಗಳಾದ ಅನಂತ ಸೆಟ್ಟಿ, ಮಾಮನ ಭಟ್, ಕೇಶವ ಪ್ರಭು ಮೊದಲಾದವರ ಗುಣಕಥನಗಳಿದ್ದು ಕಮಿಶನರೂ ಅವರ ಶಿಬಂದಿಯೂ ವಸ್ತುತಃ ಕೌನ್ಸಿಲಿನ ಸದಸ್ಯರೆಲ್ಲರೂ ನಗರಾಡಳಿತದಲ್ಲಿ ತನಗೆ ಒದಗಿಸಿದ ಸಹಕಾರವನ್ನಿತ್ತು ಪ್ರೋತ್ಸಾಹಿಸಿದುದಕ್ಕಾಗಿ ಚೆಯರ್‌ಮೇನರು ಧನ್ಯವಾದಗಳನ್ನರ್ಪಿಸಿದರು. ಪತ್ರಿಕಾ ಪ್ರತಿನಿಧಿಗಳ ಪರವಾಗಿ ಮದ್ರಾಸ್ ಮೈಲ್ ಕರೆಸ್ಪೋಂಡೆಂಟ್ ಶ್ರೀ. ಯು. ಯಸ್. ಭಟ್ಟರು ಪತ್ರಿಕಾ ಸೌಕರ್ಯಗಳನ್ನಿತ್ತ ಚೆಯರ್ ಮೇನರನ್ನೂ ಕೌನ್ಸಿಲರನ್ನೂ ಕಮಿಶನರನ್ನೂ ವಂದಿಸಿ ಮಾತನಾಡಿದರು. ಸರ್ವ ವಿಧದಲ್ಲೂ ನೆರವಾಗಿ ಬೆಂಬಲವಿತ್ತ ಚೆಯರ್‌ಮೇನರನ್ನೂ ಕೌನ್ಸಿಲ್ ಸದಸ್ಯರನ್ನೂ ಶಿಬಂದಿವರ್ಗವನ್ನೂ ಕಮಿಶನರ್ ಶ್ರೀ. ನಾರಾಯಣ ಶೆಟ್ಟಿಯವರು ಅಭಿನಂದಿಸಿ ಧನ್ಯವಾದಗಳನ್ನಿತ್ತರು.

ಶ್ರೀಕೃಷ್ಣ ಸನ್ನಿಧಾನದಲ್ಲಿಯ ವರ್ಷಾವಧಿ ಲಕ್ಷದೀಪೋತ್ಸವವು ಇದೇ ತಾ. 5ರಿಂದ ಪ್ರಾರಂಭವಾಗಿ ಸೋಮವಾರ ಪರ್ಯಂತ ಜರಗಲಿರುವುದು.

ಕ್ರಿಕೆಟ್ ಪಂದ್ಯಾಟ— ಇಲ್ಲಿಯ ಇಂಟರ ಸ್ಕೂಲ್ ಜಮ್ಖಾನ ಕ್ರಿಕೆಟ್ ಪಂದ್ಯಾಟದಲ್ಲಿ ಮಿಶನ್ ಹೈಸ್ಕೂಲಿನವರು ಗೆದ್ದು ಕಪ್ ಪಡೆದಿರುವರು.

ಹವಾಗುಣ— ಆಕಾಶವು ಮೋಡಗಳಿಂದಾವರಿತವಾಗಿ ಸೆಕೆಯುಂಟಾಗಿರುವುದು. ಕಳೆದ ಶನಿ

ಲೋಕನಾಶದ

ಬನ್ನುವಿನಲ್ಲಿ ಗಾಂಧಿಜಿಯವರ ಹೃದಯಸ್ಪರ್ಶ ಭಾಷಣ

ಕೆಲ ಸಮಯದ ಮೊದಲು ಗಡಿನಾಡಿನ ಪಂಗಡಿಗರ ಭೀಕರ ಧಾಳಿಯ ಹಾನಿಗೊಳಗಾಗಿರುವ ಬನ್ನು ಪಟ್ಟಣವನ್ನು ಗಾಂಧಿಜಿಯವರು ಅಕ್ಟೋಬರ ತಾ. 26ರಲ್ಲು ಸಂದರ್ಶಿಸಿ ಸಂಭ್ರಮದ ಸ್ವಾಗತ ಪಡೆದು, ವಾಯುವ್ಯ ಗಡಿನಾಡಿನ ಎಲ್ಲೆಯ ಪಂಗಡಿಗರನ್ನು ದಾರಿಗೆ ತರುವ ಕುರಿತು ಮಹತ್ವದ ಹಾಗೂ ಅತ್ಯಂತ ಹೃದಯಸ್ಪರ್ಶಿ ಭಾಷಣವಿತ್ತರು. ಕಳೆದ ಹಲವು ವರ್ಷಗಳಿಂದ ಮಹಾತ್ಮರು ಇಷ್ಟೊಂದು ದೀರ್ಘಭಾಷಣ ಮಾಡಿದುದಿಲ್ಲ. ಅದರ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

"ಧಾಳಿ ನಡೆಸಿ ಲೂಟಿಮಾಡುವುದೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿರುವ ಬೇರೆ ಬೇರೆ ಪಂಗಡಗಳಿಂದ ಗಡಿನಾಡು ಆವರಿತವಾಗಿದೆ. ಈ ಧಾಳಿಗೆ ಹಿಂದೂ ಮುಸಲ್ಮಾನ ದ್ವೇಷ ಭಾವನೆಯು ಕಾರಣವಲ್ಲೆಂದು ನನ್ನ ಅಭಿಮತ. ಮಾನವನ ಪ್ರಾಥಮಿಕ ಅವಶ್ಯಕತೆಗಳನ್ನು ತೃಪ್ತಿಪಡಿಸುವುದೇ ಈ ಧಾಳಿಗಳ ಮುಖ್ಯ ಉದ್ದೇಶ. ಕಷ್ಟೊಯ್ಯಲ್ಪಟ್ಟವರನ್ನೆಲ್ಲಾ ಹಿಂದೆ

ಮಾರ ಜೋರು ಮಿಂಚ ಗುಡುಗು ಮತ್ತು ಮಳೆಬಂದಿರುವುದು. ಪಟ್ಟಣದಲ್ಲಿ ಸಿಡುಬುರೋಗವು ಕಡಿಮೆಯಾಗಿರುವುದು.

ಕೆಡಬ:— ತಾ. 28-10-38ನೇ ಶುಕ್ರವಾರ ಇಲ್ಲಿಯ ಬೋ. ಸಾ. ಎ. ಶಾಲೆಯಲ್ಲಿ ಆರೋಗ್ಯ ಸಪ್ತಾಹದ ದಿನಾಚರಣೆಯು ಸ್ಥಳೀಯ ಆಸ್ಪತ್ರೆಯ ವೈದ್ಯಉದ್ಯೋಗಸ್ಥರಾದ ಶ್ರೀಮಾನ್ ಎನ್. ಪದ್ಮನಾಭ ರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಪ್ರಭಾತಫೇರಿ, ಧ್ವಜಾರೋಹಣ, ಪಂದ್ಯಾಟಗಳು, ಮಕ್ಕಳಿಗೆ ಉಪಹಾರ, ಭಾಷಣಗಳು, ಮಾಲಾ ಮಕ್ಕಳಿಂದ ವಿನೋದಾವಳಿಗಳು, ಮೊದಲಾದ ಕಾರ್ಯಕ್ರಮಗಳಿದ್ದುವು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ. ಕ್ರಮನಂಬ್ರ 1524/1934

ವಾದಿರು—ಮುಲ್ಲಾ ಮಹಮ್ಮದ ಸಾಹೇಬ ಕೂಡಾ
ಪ್ರತಿವಾದಿರು—ಕರೀಮು ಬ್ಯಾರಿಸಾಹೇಬ ಕೂಡಾ

ಸದ್ರಿ ವ್ಯಾಜ್ಯದ 1-4-9ನೇ ಪ್ರತಿವಾದಿರಿಗೆ ತಿಳಿಸುವದೇನೆಂದರೆ:-

1ನೇ ಪ್ರ. ಬಿಬಿಮಾ, ಕೇರಿ ಬಾಪುಸ್ಯಾಬರ ಮಗಳು ಪ ಮುಲ್ಲಾಇಬ್ರಾಹಿಮ ಸ್ಯಾಬರ ಹೆಂಡತಿ 4ನೇ ಪ್ರ ರಾಬಿಯಾಬಿ, ಕೇರಿ ಬಾಪುಸ್ಯಾಬರ ಮಗಳು ಪ ಕಾದೀರ ಸ್ಯಾಬರ ಹೆಂಡತಿ. 9ನೇ ಪ್ರ ಬಿಬಿಮಾ, ಯಾಕೂಬ್ ಹುಸೈನ ಸ್ಯಾಬರ ಹೆಂಡತಿ

1-4ನೇ ಪ್ರತಿವಾದಿರು ಕುಂದಾಪುರ ತಾಲ್ಲೂಕು ನಂಬ್ರ 1ನೇ ಶೀರೂರು ಗ್ರಾಮದಲ್ಲಿಯೂ 9ನೇ ಪ್ರತಿವಾದಿಯು ಯಡ್ತರೆ ಗ್ರಾಮದಲ್ಲಿಯೂ ವಾಸಿಸುವವರು.

ಮೇಲ್ಕಂಡ ವಾದಿರಿಗೆ 1-2ನೇ ಪ್ರತಿವಾದಿರು ರಿ.ನಿರಿಗೆ ರೂ. 1000 0-0ಕ್ಕೆ ಬರೆಸಿಕೊಟ್ಟ ಸ್ಥಿರಂಸ್ಥಿ ಈಡು ದಸ್ತಾವೇಜಿನ ಬಾಬ್ತು ಐವಜು ಬರಮಾಡಿಕೊಳ್ಳುವ ಬಗ್ಗೆ ಮೇಲ್ಕಂಡ ದಾವಾ ವಾದಿರು ದಾಖಲುಮಾಡಿದ್ದಾಗಿರುತ್ತದೆ. ಸದ್ರಿ ದಾವೆಯ ವಿಚಾರಣೆ ತಾರೀಕು 11-11-1938ಕ್ಕೆ ತನ್ನಿಗೆ ಇಟ್ಟಿರುವದರಿಂದ ಆ ದಿವಸ ಹಗಲು 11 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರು ಆಗಲಿಕ್ಕೆ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ. ಮೇಲೆ ನಮೂದಿಸಲಾದ ದಿವಸ ಹಾಜರು ಆಗಲಿಕ್ಕೆ ತಪ್ಪಿದಲ್ಲಿ ಸದ್ರಿ ವ್ಯಾಜ್ಯವನ್ನು ನಿಮ್ಮ ಗೈರಹಾಜರಿಯಲ್ಲಿ ತೀರ್ಪು ಮಾಡಲಾಗುವದೆಂತ ನೀವು ತಿಳಿದಿರತಕ್ಕದ್ದು.

B Mahabala Holla,
Advocate for Plaintiffs.

ತಾ. 31-10-'38, ಮೊಕ್ಕಾಂ—ಕುಂದಾಪುರ

ತಂದು ಕೊಡ
ವಿಲ್ಲ. ಅಧಿಕಾ
ದಲ್ಲಿ ಹೆಚ್ಚಿನ
ವಿಲ್ಲ. ಮುಂ
ಕೊಟ್ಟಿರುವ
ಧಿಕವಾದುದು
ಬಯಸುವುದ
ಕ್ಕೆ ನಡಿಸಲ
ನಾಡಿನಲ್ಲಿ ಶಾ
ಸ್ಥಾಪಿಸಲ್ಪಟ್ಟ
ಯ ಹಾವಳ
ನು ಪರಿಸ್ಥಿತಿ
ಅಭಿಪ್ರಾಯ.
ತಡೆಗಟ್ಟಲು
ಸಾಧ್ಯವಾದ
ಡುವುದೊಳ್ಳೆ
ತಿಷ್ಠೆಯು ಕ
ರ್ ಖಾನರ
ವರು ಅಧಿ
ಕಾಂಗ್ರೆಸಿನವ
ರಕ್ಷೆ ಬರಬೇ
ಸುವ ಜನ

ಗಡಿನಾಡಿ
ದ ಜೀವಿಸುವು
ಬಿಟ್ಟು ಬೇರೆ
ದು. ಧಾಳಿಗಾ
ನರು ತಮಗ
ಮಾಡುವುದಿಂ
ದೂರು ಇದ್
ಹಿಂದುಗಳು
ಯರ ಸಶಸ್ತ್ರ
ಬಾರದು. ಹಾ
ತಲೆಬಾಗಲು

ಗಡಿನಾಡಿ
ತ್ಮಕ ವಿಧಾನ
ಧ್ಯವಿಲ್ಲೆಂದ.
ನ್ನಿಚ್ಛೆಯಂತೆ
ನಾನು ಈ ಪ
ಕೆದು ಪ್ರೇಮ
ಧೈಯಿಂದ ಅ
ಸೆಯು ನನಗ
ಈ ಪಂಗಡಿಗ
ಸರಕಾರವು ಹಾ
ಮುಂದಿ ವಜ
ವರು. ಅವ
ರಿಗಿಂತ ಭಿನ್ನ
ಪಂಗಡಿಗರ.
ತ್ತಿಯಲ್ಲಿ ತ
ಡೆಯುವಂತೆ
ಪ್ರೇರಿಪಣೆ

ಹಿಂಸೆ
ಗಡಿನಾಡಿನ
ಸಾಧ್ಯವಿಲ್ಲ.
ಅಹಿಂಸಾವಿ
ನ್ನೊಲಿಸಿಕೊ
ಸುಖಶಾಂತಿ
ಡುವುದೇನೂ
ಕೊಡನೆ ನಾ
ನು. ಆದರೆ
ಲ್ಲಾದರೂ ಜನ
ಮಾಡಲೆಳಸು

...ಮಕ ದಿಗಿಲು — ಬನ್ನುವಿನಲ್ಲಿ ಗಾಂಧಿಜಿಯವರು

...ದನೇನೂ ಮಂತ್ರ ...ಈ ವಿಷಯ ...ಕ್ಷಿಸಲು ಸಾಧ್ಯ ...ಂಡಿಯಾ ಆಕ್ಟು ...ಅತ್ಯಂತ ನಿರ್ಬಂ... ಮಾಡಬೇಕೆಂದು ...ಂಗ್ರೆಸ್ ಸರಕಾರ ... ವಾಯವ್ಯ ಗಡಿ ...ಂತ್ರಿ ಮಂಡಲವು ...ಸಂಗಡಿಗರ ಧಾಳಿ ...ಗಿದೆಯೆಂದು ನಾ ...ರೀಕ್ಷಿಸಿ ಪಡೆದ ... ಧಾಳಿಯನ್ನು ...ಮಂತ್ರಿಗಳಿಗೆ ಅ... ...ಜಿನಾಮೆ ಕೊ... ...ದರೆ ಅವರ ಪ್ರ... ...ವುದು ಡಾಕ್ಟ... ... ಸೇವಕರು. ಅ... ...ಕೋ ಅಥವಾ ...ಮಂತ್ರಿಗಳು ಅಧಿಕಾ... ...ವುದನ್ನು ನಿರ್ಧರಿ... ...ದು.

...ತತೆ ಗೌರವದಿಂ... ...ವಾದವೆ ಅವನ್ನು ...ೋಗಿ ಜೀವಿಸಬಹು... ...ರಿಸಲು ಮುಸಲ್ಮಾ... ...ಲಿಕಂತೆ ಸಹಾಯ ...ಂದುಗಳಲ್ಲಿ ಕೆಲವರ ...ಬಹುದು. ಆದರೆ ...ಣೆಗಾಗಿ ಪರಕೀ... ...ಲ ಅವಲಂಬಿಸಿರ... ...ರ ಅಧಿಕಾರಕ್ಕೂ ...ಬೇಕು

...ಗರನ್ನು ಅಹಿಂಸಾ... ...ಸಿಕೊಳ್ಳಲು ಸಾ... ...ನಿಸುವುದಿಲ್ಲ ತ... ...ಸಾಧ್ಯವಾದರೆ ...ದಿಗೆ ಹೊಕ್ಕು ಬ... ...ವಿಚಾರದ ಬೋ... ...ಕೊಳ್ಳುವ ಧರ್ಮ ...ಂದೀಗ ನನ್ನನ್ನು ...ಪ್ರವೇಶಿಸಲು ...ಗಿಲ್ಲ. ಹಲವು ...ಬಳಿಗೆ ಬಂದಿರು... ...ತೆ ಇತರ ಮಾನವ ...ಆಗಿಲ್ಲ. ಈ ...ಂದು ಜೀವನ ವ್ಯ... ...ನಾನುಕೂಲತೆ ಪ... ... ಧಾಳಿನಡೆಸುವ ...ಗುವುದು.

...ತ್ತು ಲಂಚದಿಂದ ... ಬಗೆಹರಿಸಲು ...ನೋ ನಿರ್ಧಾರ ... ಈ ಸಂಗಡಿಗರ ... ಇತರರಂತೆಯೇ ...ವಿಸುವಂತೆ ಮಾ... ... ರೆಡ್ ಶರ್ಟ ...ಮಾತಾಡಿರುವೆ ...ವ ಸಂದರ್ಭದ ...ಕೇಡಿಗಳನ್ನಾಗಿ ...ನೇ ಒಬ್ಬ ...ಹೇ...

...ಡಿಯನ್ನಾದರೂ ಕಾಣುವ ಮನಸ್ಸು ನನ ಗಿಲ್ಲ, ಖಡ್ಗದಿಂದಲೇ ಹೋರಾಡಬೇಕೆಂಬ ನಿರ್ಧಾರವು ನಿಮ್ಮಲ್ಲಿದ್ದರೆ ಹಾಗೆಯೇ ಹೋರಾಡಿರಿ. ಆದರೆ ಖಡ್ಗದಿಂದ ಎಂದೂ ಯಾವ ಪ್ರಶ್ನೆಯನ್ನಾದರೂ ಬಿಡಿಸಲು ಸಾಧ್ಯವಿಲ್ಲೆಂದೇ ನನ್ನ ಮನೋ ನಿರ್ಧಾರ ನೆನ್ನ ಶಕ್ತಿಯನ್ನಾಗಲಿ, ಮೆಮ್ಮಗಳ ನ್ನಾಗಲಿ ದರೋಡೆಗಾರರು ಕದ್ದೊಯ್ದು ಅವರನ್ನು ಬಿಡಬೇಕಾದರೆ ಹಣಕೇಳಿದರೆ ಅವರಿಗೆ ನನ್ನಿಂದದನ್ನು ಪಡೆಯಲು ಸಾಧ್ಯ ವಿಲ್ಲ. ನನ್ನ ತಲೆಯನ್ನವರು ಕಡಿದೊಯ್ಯ ಬಹುದು. ದುರ್ಬಲರೂ ಸಬಲರೂ ಒಟ್ಟೊಟ್ಟಿಗಿದ್ದುಕೊಂಡು ಲೋಕಕ್ಕೆ ಶಾಂತಿಸಾಧನೆಯ ಪಥವಲ್ಲಿ ನಮ್ಮನ್ನಡೆಯಲು ಸಾಧ್ಯವಿಲ್ಲ ದರೋಡೆಗಾರರು ತಲೆ ತಂದ ... ದರೋಡೆಗಾರರಾಗಿಯೇ ಉಳಿಯುವರೆಂಬುದನ್ನು ನಾನು ನಂಬಲಾರೆ. ಸೌಹಾರ್ದದಿಂದ ಅವರೊಡನೆ ಹೊಕ್ಕು ... ಬೋಧಿಸಿ ಅವರ ಹೃದಯವನ್ನು ಕರಗಿಸ ಬಹುದು. ಅವರು ಇತರ ಮಾನವರಂತೆಯೇ ನನ್ನ ಸಹೋದರರು. ಮಾನವತ್ವದ ಹೊರತು ಇನ್ನಾವ ಜಾತಿಮತವನ್ನೂ ನಾನರಿಯೆನು. ದುಷ್ಟತನ ಅಥವಾ ಕೆಟ್ಟವನ್ನು ಮಾಡುವ ಶಕ್ತಿಯು ಪರ ಸ್ವಭಾವವಲ್ಲದ ಮಾನವನದಲ್ಲ. ಅಹಿಂಸೆಯನ್ನು ತನ್ನ ಧರ್ಮ ಮತ್ತು ಕವಚವನ್ನಾಗಿ ಮಾಡಿಕೊಂಡವನು ಮಹತ್ಕಾರ್ಯಗಳನ್ನು ಸಾಧಿಸಲು ಶಕ್ತನಾಗುವನು.

ನಾವು ಕೇವಲ ಅಧಿಕಾರಪಡೆಯಲಿಕ್ಕಾಗಿ ಮಂತ್ರಿಮಂಡಲವನ್ನು ಸ್ಥಾಪಿಸಿರುವುದಲ್ಲ, ಜನತಾ ಸೇವೆಗಾಗಿ. ನಮ್ಮ ಆಡಳಿತದಲ್ಲಿಯೂ ಪುಂಡಾಟಿಕೆಯು ಹೆಚ್ಚುತ್ತಾ ಹೋಗಿ ನಮಗದನ್ನು ತಡೆಗಟ್ಟಲು ಅಸಾಧ್ಯವಾದರೆ ಅದು ನಮಗೆ ನಾಚಿಕೆಕರವೆಂಬುವನ್ನು ನಾನು ಒಪ್ಪಲು ಸಿದ್ಧನೇ ಇರುವೆನು ಕಾಂಗ್ರೆಸ್ ಮಂತ್ರಿಗಳನ್ನು ನೇಮಿಸಿದವರು ಜನರು. ನಿಮ್ಮ ಮುಖ್ಯಮಂತ್ರಿಯ ಪ್ರತಿಷ್ಠೆಯೇ ನಿಮ್ಮ ಪ್ರತಿಷ್ಠೆ. ಖಾನ್ ಅಬ್ದುಲ ಗಾಫರ್ ಖಾನರು ಖುದಾಯಿ ಖಿದ್ಮತ್‌ಗಾರರ ಕೈಯಿಂದ ಖಡ್ಗವನ್ನು ತೆಗೆದುಕೊಂಡಿರುವರು. ಆದರೆ ಅವನ್ನವರು ತಮ್ಮ ಹೃದಯದಿಂದ ತೆಗೆದುಹಾಕದೆ, ಪುನಃ ಅದಕ್ಕೆ ಕೈಕೊಡಲು ಸಂದರ್ಭವನ್ನು ಮಾತ್ರ ನಿರೀಕ್ಷಿಸಿಕೊಂಡಿದ್ದರೆ ಅದು ಅತ್ಯಂತ ಹಾನಿಕರವೂ ಆತ್ಮವಂಚಕವೂ ಆಗಿದೆ

ಬ್ರಿಟಿಷ್ ಸರಕಾರವು ಗಡಿನಾಡಿನಲ್ಲಿ ಕೋಟಿಗಟ್ಲೆ ಹಣವನ್ನು ವ್ಯಯಿಸಿರುವುದು ಬೋಂಬು ಮತ್ತು ತೋಪುಗಳಿಂದ ನೂರಾರು ಜನರ ಪ್ರಾಣಹಾನಿ ಮಾಡಿರುವುದು. ಶಾಂತಿ ಸ್ಥಾಪಿಸಲು ಇದನ್ನೆಲ್ಲಾ ತಾವು ಸ್ಥಾಪಿಸಿರುವವೆನ್ನುತ್ತಾರವರು. ಗಡಿನಾಡಿನ ಸಂಗಡಿಗರನ್ನು ಈ ರೀತಿಯಿಂದ ಅಡಗಿಸಲು ಸಾಧ್ಯವಿಲ್ಲೆಂದು ಅವರಿಗೆ ಚೆನ್ನಾಗಿ ಗೊತ್ತು. ಯಾಕೆಂದರೆ ಗುಂಡು ಹೊಡೆಯುವುದರಲ್ಲಿ ಮತ್ತು ಖಡ್ಗ ಪ್ರಯೋಗದಲ್ಲಿ ಈ ಸಂಗಡಿಗರಷ್ಟು ಚತುರರು ಲೋಕದಲ್ಲಾರೂ ಇರಲಾರರು. ಶಾಂತಿ ಸುರಕ್ಷಿತತೆಗಾಗಿ ಬ್ರಿಟಿಷ್ ಸರಕಾರವು ಇಲ್ಲಿರುವುದೆಂದು ಭಾವಿಸಬೇಡಿರಿ. ಅದವರ ಕಸುಬಲ್ಲ. ಆಂಗ್ಲೇಯನೊಬ್ಬನು ಕೊಲ್ಲಲ್ಪಟ್ಟರೆ ಅಥವಾ ಕದ್ದೊಯ್ಯಲ್ಪಟ್ಟರೆ ಕೂಡಲೆ ಅವರು ತಮ್ಮ ಸರ್ವ ಶಕ್ತಿಯನ್ನೂ ಉಪಯೋಗಿಸುವರು."

ಅಕ್ಟೋಬರ ತಾ. 31ರಲ್ಲು ಗಾಂಧಿಜಿಯವರು ಡೆಹರ ಇಸ್ಮಯೇಲ್ ಖಾನ್ ಎಂಬ ಪಟ್ಟಣದಲ್ಲಿ ವಿಜೃಂಭಣೆಯ ಸ್ವಾಗತ ಮತ್ತು ಪುರಸಭೆಯಿಂದ ಮಾನಪತ್ರ ಪಡೆದರು. ಹಲವು ಮಂದಿಗೆ ಭೇಟಿಕೊಟ್ಟರು. ಇಂಡಿಯಾ ಅಂಡರ್ ಸೆಕ್ರಿಟರಿಗಳಾದ ಲೆಫ್ಟನೆಂಟ್ ಕರ್ನಲ್ ಮುರ್ ಹೆಡ್ಡರು ವಿಮಾನ ಮೂಲಕ ಡೆಹರ ಇಸ್ಮಯೇಲ್ ಖಾನಿಗೆ ಹೋಗಿ 15ನಿಮಿಷಗಳ ವರೆಗೆ ಗಾಂಧಿಜಿಯವರೊಡನೆ ಮಾತುಕತೆ ನಡಿಸಿದರು. ಡೆಹರ ಇಸ್ಮಯೇಲ್ ಖಾನಿಗೆ ಬೇರೆ ಬೇರೆ ಹಿಂದೂಸಂಸ್ಥೆಗಳವರು ಗಾಂಧಿಜಿಯವರಿಗೆ ಹರಿಜನೋದ್ಧಾರ ಕಾರ್ಯಕ್ಕಾಗಿ ರೂ. 6000ದ ನಿಧಿಯನ್ನೊಪ್ಪಿಸಿರುವರು

ಮೈಸೂರಿನ ದಿವಾನ ಸರ್ ಮಿರ್ಜಾ ಇಸ್ಮಾಯೀಲ್

ಇವರನ್ನು ತಾ. 23-10-38ರಲ್ಲು ಬೆಂಗಳೂರಿನ ಅವರ ನಿವಾಸಗೃಹದಲ್ಲಿ ನಮ್ಮ ಉಪಸಂಪಾದಕರಾದ ಶ್ರೀ ಎನ್. ಶಾಮುಶೆಟ್ಟಿ ಸಂದರ್ಶಿಸಿದರು. ದಿವಾನರು ಬಹು ಆದರಪೂರ್ವಕವಾಗಿ ಸ್ವಾಗತವನ್ನಿತ್ತು ನವಯುಗ ಪತ್ರಿಕೆಯ ವಿಷಯ ವಿಚಾರಿಸಿ ಸಂತೋಷ ತೋರ್ಪಡಿಸಿದರು. ತಮ್ಮ ಸಂಸ್ಥಾನದ ಕುರಿತಾಗಿ ಪ್ರಸ್ತಾಪಿಸಿದರು. ಅವರ ಮಾತಿನ ಅಭಿಪ್ರಾಯ ಹೀಗಿರುವುದು

"ಶ್ರೀಮಾನ್ ಎ. ಬಿ ಶೆಟ್ಟಿಯಿಂದ ಸ್ಥಾಪಿತವಾದ ನಿಮ್ಮ ನವಯುಗ ಪತ್ರಿಕೆಯು ಪ್ರಗತಿಮಾರ್ಗದಲ್ಲಿ ಮುಂದುವರಿಯುತ್ತಿರುವುದೆಂಬುದನ್ನು ತಿಳಿಯುವರ ಸಂತೋಷಪಡುತ್ತೇನೆ. ಪತ್ರಿಕೋದ್ಯಮಿಗಳ ಕಾರ್ಯವು ಬಹು ಜೋಖಿಮದಾಯಕವಾಗಿದೆ. ಕೆಲವೇಳೆ, ಆಧಾರರಹಿತ, ಯಥಾರ್ಥವಿರದ, ಅಲ್ಲದ ಸಲ್ಲದ ಸುದ್ದಿಗಳು ಹುಟ್ಟುವುದಿದೆ. ಇಂಥಾ ಸಂದರ್ಭದಲ್ಲಿ ಪತ್ರಿಕಾ ವ್ಯವಸಾಯಿಗಳು ತಮ್ಮ ಉಚ್ಚ ಉದ್ದೇಶವನ್ನು ಜ್ಞಾಪಿಸಿಕೊಂಡು, ನಿಜತ್ವವನ್ನು ಪರಾಂಬರಿಸಿ, ವಿವೇಕ ವಿಚಾರಪರರಾಗಿ ಕಾರ್ಯವನ್ನು ಕೈಕೊಳ್ಳುವುದು ಶ್ರೇಯಸ್ಕರ.

ನಮ್ಮ ಸಂಸ್ಥಾನದ ಪ್ರಜೆಗಳ ಹಿತಕ್ಕಾಗಿ ನಾವು ಕೈಲಾದ ರೀತಿಯಲ್ಲಿ ಪ್ರಯತ್ನಿಸುತ್ತಿದ್ದೇವೆ. ಕಸುಬು ಕೈಗಾರಿಕೆಗಳಲ್ಲಿ ವಿಶೇಷ ಸುಧಾರಣೆಯಾಗಿದೆ. ಸಂಸ್ಥಾನದ ಅಭಿವೃದ್ಧಿಗಾಗಿ ಹೆಚ್ಚಿನ ಗಮನಕೊಟ್ಟಿರುತ್ತೇವೆ. ಅಧಿಕಾರದಲ್ಲಿರುವವರನ್ನು ಹೊಗಳಬಹುದು, ಅಥವಾ ದೂರಬಹುದು. ಮತ್ತು ಕೆಲವು ವೇಳೆ ನಿಷ್ಕಾರಣವಾದ ತಪ್ಪಭಿಪ್ರಾಯ ಪ್ರಸಾರಕ್ಕಾಗಿ ಕೆಲವರು ಉದ್ದೇಶಪೂರ್ವಕವಾಗಿ ಪ್ರಯತ್ನಿಸುವುದಿದೆ. ಮಹಾರಾಜರ ಶುದ್ಧ ಹೆಸರಿಗೆ ಕೊರತೆಯಾಗದಂತೆ ನಾನು ನೋಡಬೇಕಾಗಿದೆ. ದೇವರು ಸರ್ವವನ್ನೂ ನೋಡುವವನಿದ್ದಾನೆ."

ದಿವಾನರು ಅತ್ಯುಚ್ಚ ಪದವಿಯಲ್ಲಿದ್ದರೂ, ತಮ್ಮ ಪವಿತ್ರ ಹೊಣೆಗಾರಿಕೆಯನ್ನು ನೆನಪಿಟ್ಟುಕೊಂಡು ವಿಚಾರಪೂರ್ವಕವಾಗಿ ವರ್ತಿಸುವಂಥಾ ಪ್ರತಿಭೆಯುಳ್ಳವರು. ಅವರ ಮಾತು, ರೀತಿ ನೀತಿಗಳು ಆದರ್ಶವಾದವುಗಳು.

ಉದಾರತೆಯಿಂದ ನಮ್ಮ ಕಾರ್ಯಭಾಗದಲ್ಲಿ ಸಹಾನುಭೂತಿಯನ್ನು ತೋರಿಸಿದ ದಿವಾನರ ಮತ್ತು ಅವರ ಸೆಕ್ರೆಟರಿಯರನ್ನು ನಾವು ಅಭಿನಂದಿಸುವೆವು.

ಲೋಕನಾಶದ ಭ್ರಾಮಕ ದಿಗಿಲು

ಲೋಕಗಳ ಯುದ್ಧ (The war of the worlds) ಎಂಬ ಲೋಕ ಪ್ರಖ್ಯಾತ ಆಂಗ್ಲೇಯ ಗ್ರಂಥಕರ್ತರಾದ ಮಿ. ಎಚ್. ಜಿ. ವೆಲ್ಸರ ಕಾದಂಬರಿಯು ಆಂಗ್ಲೇಯ ಪಟ್ಟಣಗಳ ಹೆಸರುಗಳ ಬದಲಿಗೆ ಅಮೇರಿಕಾನ ಪಟ್ಟಣಗಳ ಹೆಸರುಗಳನ್ನು ಸೇರಿಸಿ ಭಾಷಣವೊಂದನ್ನು ಅಮೇರಿಕದಲ್ಲಿ ಆಕಾಶವಾಣಿಯ ಮೂಲಕ ಪ್ರಸಾರಗೊಳಿಸಿದಾಗ ಯುನೈಟೆಡ್ ಸ್ಟೇಟ್ಸಿನ ನೂರಾರು ಜನರಲ್ಲಿ ಲೋಕವು ನಿಜವಾಗಿಯೂ ನಾಶವಾಗುತ್ತಿರುವುದೆಂಬ ದಿಗಿಲುಂಟಾಗಿ ಸಾವಿರಾರು ಜನರು ಟೆಲಿಫೋನ್ ಮೂಲಕ ಸಂಗತಿಯನ್ನು ವಿಚಾರಿಸಿದರು. ಮಿ. ವೆಲ್ಸರ ಕಾದಂಬರಿಯ ಭಾಷಣ ಕೇಳಿದ ನ್ಯೂಯೋರ್ಕ್ ಪಟ್ಟಣದ ಆಸುಪಾಸಿನ ಸಾವಿರಾರು ಮಂದಿಯಲ್ಲಿ ಅದೊಂದು ಬಗೆಯ ಉನ್ಮಾದವುಂಟಾಗಿ ಅವರು ತಲೆಗೆಟ್ಟು ತಮ್ಮ ಮನೆಮಾರು ಬಿಟ್ಟು ಹೋಗಹತ್ತಿದರು. ಅಟ್ಲಾಂಟ ಮತ್ತು ಜೋರ್ಜಿಯ ಎಂಬ ಸ್ಥಳಗಳಲ್ಲಿ ಹಲವರು ಲೋಕದ ಅಂತ್ಯವು ಸಮೀಪಿಸಿರುವುದೆಂದು ಭಯಚಕಿತರಾದರು. ಹಲವು ಪ್ರಾಂತಗಳಲ್ಲಿ ಜನರು ಒಟ್ಟು ಸೇರಿ, "ದೇವರೇ ರಕ್ಷಿಸು" ಎಂದು ಪ್ರಾರ್ಥಿಸಹತ್ತಿದರು. ಇಂಡಿಯಾನ ಪೋಲೀಸ್ ಎಂಬಲ್ಲಿಯ ಸ್ತ್ರೀಯೊಬ್ಬಳು, "ನ್ಯೂಯೋರ್ಕ್ ಪಟ್ಟಣವು ನಾಶವಾಯಿತು. ಲೋಕದ ಅಂತ್ಯವು ಸಮೀಪಿಸಿರುವುದು. ನಾವು ಮನೆಗೆ ಹೋಗಿ ಸತ್ತರಾಯಿತು. ಈಗಲೇ ರೇಡಿಯೋ ಮೂಲಕ ನಾವದನ್ನು ಕೇಳಿದೆವು" ಎಂದು ಕೂಗುತ್ತಾ ಚರ್ಚಿಗೆ ಓಡಿಬಂದಳು.

ಒಂದು ವರ್ಷದಲ್ಲಿ ೯ ಮಕ್ಕಳು

ಒಂದು ವರ್ಷದೊಳಗೆ ೯ ಮಕ್ಕಳೆಂದರೆ ಯಾರೂ ನಂಬಲಾರರು. ಆದರೆ ಸಂಯುಕ್ತ ಪ್ರಾಂತದ ಗೊಂಡಾ ಎಂಬಲ್ಲಿ ಜಾಡಮಾಲಿಯೊಬ್ಬಳು ಒಂದೇ ವರ್ಷದೊಳಗೆ ಎರಡು ಸಲ ಪ್ರಸವಿಸಿರುವಳು. ಮೊದಲನೇ ಸಲ ಒಮ್ಮೆಯೇ 3 ಶಿಶುಗಳನ್ನು ಹೆತ್ತಳು. ಎರಡನೇ ಸಲ ಆರು ಮಕ್ಕಳನ್ನು ಹಡೆದಳು ಮೊದಲನೇ ಸಲ ಹೆತ್ತ ಮೂರು ಮಕ್ಕಳೂ ಮೃತವಾಗಿರುವವು. ಎರಡನೇ ಸಲ ಹೆತ್ತ ಎರಡು ಮಕ್ಕಳೂ ಬದುಕಿ ಕ್ಷೇಮದಿಂದಿವೆ.

ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳು

ನಮ್ಮ ಉಪಸಂಪಾದಕರಾದ ಶ್ರೀ ಎನ್. ಶ್ಯಾಮು ಶೆಟ್ಟಿ ಮಡಿಕೇರಿ, ಮೈಸೂರು, ಬೆಂಗಳೂರು ಕಡೆಗಳಲ್ಲಿ ನಮ್ಮ ನವಯುಗದ ಕಾರ್ಯ ನಿಮಿತ್ತ ಪ್ರಯಾಣ ಬೆಳಸಿದ್ದರು, ನಮ್ಮ ಕಾರ್ಯಭಾಗದಲ್ಲಿ ಹೆಚ್ಚಿನವರು ಸಹಾನುಭೂತಿ ಸಲಹೆಯನ್ನಿತ್ತಿರುವರು. ಇವರ ಉಪಕಾರವನ್ನು ನಾವು ಮರೆಯಲಾರೆವು.

ನಮಗೆ ಮೈಸೂರು ಸರಕಾರದ ಕೆಲ ಅಧಿಕಾರ ಮಂಡಳಿಯವರು ಹಲವು ರೀತಿಯಲ್ಲಿ ಮನ್ನಣೆ, ಆದರಗಳನ್ನು ತೋರಿಸಿರುವರು. ಮೈಸೂರು ಸಂಸ್ಥಾನದ ದಿವಾನರಾದ ಸರ್. ಮಿರ್ಜಾ ಇಸ್ಮಾಯಿಲ್—ಇವರು ಬಹು ಸಂತೋಷದಿಂದ ನಮ್ಮ ವಿಚಾರವನ್ನು ತಿಳಿದುಕೊಂಡು, ಸಲಹೆ ಸಂದೇಶವನ್ನಿತ್ತಿರುವುದಕ್ಕಾಗಿ ನಾವು ತುಂಬಾ ಆಭಾರಿಗಳಾಗಿರುವೆವು. ಅತೀವ ಸೌಹಾರ್ದದಿಂದ ದಿವಾನರ ಸಂದರ್ಶನೆಗೆ ಸಂದರ್ಭವನ್ನೊದಗಿಸಿ ಕೊಟ್ಟ ಅವರ ಪ್ರೈವೇಟ್ ಸೆಕ್ರೆಟರಿಯವರಾದ ಮಿ. ಸಿ. ಇ. ನೋರೆಂಡ ಎಮ್. ಎ—ಇವರಿಗೂ ನಮ್ಮ ಕೃತಜ್ಞತೆ ಸಲ್ಲಬೇಕಾಗಿದೆ. ಕೃಷಿ, ಕೈಗಾರಿಕೆ ಶಾಖೆಗಳ ಅಧಿಕಾರಿಗಳಿಗೂ ನಮ್ಮ ವಂದನೆಗಳು.

ಮೇಲಾಗಿ, ಕರ್ನಾಟಕದ ಪ್ರಸಿದ್ಧ ಸಾಹಿತಿಗಳೂ, ಪತ್ರಿಕಾ ವ್ಯವಸಾಯಿಗಳೂ, ನಮಗೆ ತುಂಬಾ ಸಲಹೆಯನ್ನಿತ್ತಿರುವರು. ಶ್ರೀಯುತರುಗಳಾದ ಆ. ನ. ಕೃಷ್ಣರಾಯರು, ಬೆನಗಲ್ ರಾಮರಾಯರು ಎಂ. ಎ ಎಲ್. ಎಲ್. ಬಿ., ಮಾಸ್ತಿ ವೆಂಕಟೇಶ ಯ್ಯಂಗಾರ್ ಎಂ. ಎ., ಕೆ. ಕೆ. ವೆಂಕಟರಾಮಯ್ಯ ಎಂ. ಎ. ಎಲ್ ಎಲ್ ಬಿ., ವಿ. ಸೀತಾರಾಮಯ್ಯ ಎಂ. ಎ, ಜಿ. ಪಿ. ರಾಜರತ್ನಂ ಎಂ. ಎ, ತಿರುನಾರಾಯಣ ಯ್ಯಂಗಾರ್ ಎಂ ಎ ಮೊದಲಾದ ಸಜ್ಜನರಿಗೂ, ಉಳಿದ ಪರಿಷನ್ಮಂದಿರದ ಸದಸ್ಯರಿಗೂ, ನಾವು ಈ ಸಂದರ್ಭದಲ್ಲಿ ಕೃತಜ್ಞತಾ ಪೂರ್ವಕವಾಗಿ ವಂದಿಸದಿರಲಾರೆವು. ಅಲ್ಲದೆ, ಕೊಡಗು, ಕಥಾವಳಿ, ತಾಯಿನಾಡು, ಸರಸ್ವತಿ ಮೊದಲಾದ ಪತ್ರಿಕಾ ಸಂಪಾದಕರಿಗೂ, ಮಂಡಳಿಗೂ ನಮ್ಮ ವಂದನೆಗಳು ನಮಗೆ ಈ ಸಂದರ್ಭದಲ್ಲಿ ಹೆಚ್ಚಿನ ರೀತಿಯಲ್ಲಿ ನೆರವಾದ ಶ್ರೀ. ಕೆ ಪಿ. ಪುರಾಣಿಕರಿಗೂ, ಪಿ ಎ. ಉಪಾಧ್ಯಾಯರಿಗೂ ಮತ್ತು ಸಿ ಪಿ ಸಿ ಕಂಪೆನಿಯ ಉದ್ಯೋಗಸ್ಥ ಮಂಡಳಿಗೂ, ನಮ್ಮ ಏಜೆಂಟರುಗಳಿಗೂ, ಶ್ರೀ ಎಸ್. ಜಿ ಗವಾನಕರ್ ಮೊದಲಾದ ನಮ್ಮ ಜಾಹೀರಾತುದಾರರಿಗೂ, ನಮ್ಮ ಹಿತೈಷಿಗಳಿಗೂ ನಾವು ತುಂಬಾ ಕೃತಜ್ಞರಾಗಿರುವೆವು

ಬೊಂಬಾಯಿ ಸಮಾಚಾರ

(ಸ್ವಂತ ಬಾತ್ಮೀದಾರರಿಂದ)

ತಾ 28 10-'38

ಮುಂಬಯಿ ನಗರಸಭಾ ಚುನಾವಣೆ

ಬರ ಪ ಮುಂಬಯಿ ನಗರಸಭಾ ಚ ನಾವಣಗೆ ಕೋಂಗ್ರೆಸಿನ ಕಡೆಯಿಂದ 70 ಮಂದಿ ಸದಸ್ಯರನ್ನು ಚುನಾಯಿಸಿರುವರು ಇವರ ಪ್ರಕಟಣಾ ಪತ್ರವು ನವಂಬ್ರ ಒಂದನೇ ತಾರೀಕಿಗೆ ತಿಳಿಯ ಬರುವುದು

ಶ್ರೀ. ಕೆ. ಎಫ್ ನರಿಮನ್‌ರವರ ಚುನಾವಣಾ ಪತ್ರವನ್ನು ಹಾಗೆಯೇ ಇಟ್ಟಿದ್ದಾರೆ. ಕೋಂಗ್ರೆಸ್ ವರ್ಕಿಂಗ್ ಕಮಿಟಿಯು ಇವರ ಮೇಲೆ ಹೊರಿಸಿರುವ ಆಜ್ಞೆಯನ್ನು ತೆಗೆಯುವ ವರೆಗೆ ಯಾ ಅದನ್ನು ಸುಧಾರಿಸುವ ತನಕ ಇವರ ಕುರಿತು ಏನು ಮಾಡಲೂ ಸಾಧ್ಯವಿಲ್ಲೆಂದೂ ಬಿ ಪಿ ಸಿ ಸಿ.ಯ ಅಂಬೋಣವಾಗಿರುತ್ತದೆ ಶ್ರೀ. ಕೆ. ಎಫ. ನರಿಮನ್‌ರವರು ವರ್ಕಿಂಗ್ ಕಮಿಟಿಯನ್ನು ಸಮಾಪಿಸಿ ಆವರೊಡನೆ ಕೇಳಿಕೊಂಡಲ್ಲಿ, ಇವರ ಮೇಲಿನ ಆಜ್ಞೆಯನ್ನು ತೆಗೆದು ಚುನಾವಣೆಗೆ ನಿಲ್ಲಲು ಬಿಡುವರೆಂದೂ, ಅಲ್ಲದಿಂದ ಆದಷ್ಟು ತೀವ್ರಗತಿಯಿಂದ ಅವರೊಡನೆ ವಿಚಾರಿಸುವುದೊಳ್ಳಿತೆಂಬ ಅಭಿಪ್ರಾಯದ ಪತ್ರವೊಂದನ್ನು ಬಿ. ಪಿ ಸಿ ಸಿ ಯು ಶ್ರೀ ನರಿಮನ್‌ರವರಿಗೆ ಕಳುಹಿದೆ

ಶ್ರೀ ನರಿಮನ್‌ರ ಕುರಿತು ಇವರೆಲ್ಲ ಹೆದರುವುದೇಕೆಂದರೆ, ಇವರು ಚುನಾವಣೆಗೆ ನಿಂತಲ್ಲಿ ನಿಂದಿತವಾಗಿಯೂ ಚುನಾಯಿಸಲ್ಪಟ್ಟು, ಮುಂಬಯಿಯ ಮೇಯರಾಗುವ ಸಂಭವವಿದೆ. ಮಾತ್ರವಲ್ಲ ನಿಜವಾಗಿಯೂ ಇವರು ಆ ಸ್ಥಾನವನ್ನು ಪಡೆಯುವರೆಂದು ಸರ್ವರೂ ತಿಳಿದಿರುವರು. ಇದಕ್ಕಾಗಿಯೇ ಬಿ. ಪಿ. ಸಿ ಸಿ ಯು ವರ್ಕಿಂಗ್ ಕಮಿಟಿಯೊಡನೆ ಇದರ ಕುರಿತು ವಿಚಾರಿಸಿಕೊಳ್ಳಬೇಕೆಂದೂ ಹೇಳಿರುವರು ಮುಂಬಯಿ ನಗರದ ಜನರಿಗೆ ಶ್ರೀ ನರಿಮನ್‌ರಲ್ಲಿ ನಂಬಿಕೆ ಇದ್ದರೂ ಕೋಂಗ್ರೆಸ ಹ್ಯಾಕಮಾಂಡಿಗೆ ಇವರಲ್ಲಿ ನಂಬಿಕೆಯಿಲ್ಲ ಹೀಗಿರುವಾಗ ಡೆಮೋಕ್ರೆಟಿಕ್ ಕೋಂಗ್ರೆಸ್ ತಾನೇ ಎಲ್ಲಿ?

ಮಿಟ್ಟು ಮಾಡುವವರ ಸಂಪು—ನಾಗ್ಪಾಡಾ ಮತ್ತು ಕಾಮಾಟೀಪುರದ ಮಿಟ್ಟು ಕೆಲಸಗಾರರು ತಮಗೆ ಸರಿಯಾದ ಕೂಲಿ ದೊರೆಯುವುದಿಲ್ಲೆಂದು ಕೆಲಸಗಳನ್ನು ಬಿಟ್ಟು ಕಾರಖಾನೆಗಳಿಂದ ಹೊರಹೊರಟರ ವರು. ಮಂಗಳವಾರ ಸಂಜೆ ಸಾಧಾರಣ 300ಕ್ಕಿಂತಲೂ ಜಾಸ್ತಿ ಮಂದಿ ಮಿಟ್ಟು ಕೆಲಸಗಾರರು ತಮ್ಮ ಕಾರಖಾನೆಗಳಿಂದ ಹೊರಬಂದು,ಮೆರವಣಿಗೆಯಾಗಿ ಮುಖ್ಯರಸ್ತೆಗಳಲ್ಲಿ ಹೋಗಿ ಅಜಾದ್ ಮೈದಾನಿನಲ್ಲಿ ಸಭೆ ಕೂಡಿದರು. ಶ್ರೀಗಳಾದ ಪಿ ರಾಜ್‌ಕರ, ಖಾನ್ ಭ ಖಾಲೆ, ಗೋವಿಂದ ವಿದ್ಯಾರ್ಥಿ ಮೊದಲಾದವರೆಲ್ಲಾ ಭಾಷಣ ಮಾಡಿ, 'ಕಾರಖಾನೆದಾರರು' ಇವರ ಬೇಡಿಕೆಗಳನ್ನು ಸಲ್ಲಿಸದಿದ್ದಲ್ಲಿ ಪಿಕೆಟಿಂಗ್ ಮಾಡಬೇಕೆಂದು ಹೇಳಿದರು. ಬುಧವಾರ ಒಂದು ಸಂಪು ಕಮಿಟಿಯು ಏರ್ಪಟ್ಟು 29 ಕಾರಖಾನೆಗಳನ್ನು ಪಿಕೆಟಿಂಗ್ ಮಾಡಿದರು. ನಾಹದ್ ಹಸನ್ ಎಂಬವನು ಶೇಕಡಾ 25 ರಷ್ಟು ಸಂಬಳ ಜಾಸ್ತಿ ಕೊಡತ್ತೇನೆಂದು ಹೇಳಿದ್ದರಿಂದ ಇವನ ಕಾರಖಾನೆಯ ಪಿಕೆಟಿಂಗನ್ನು ತೆಗೆದು ಕಾಮಗಾರರು ಕೆಲಸಗಳನ್ನು ಸ್ವೀಕರಿಸಿರುವರು.

ಆಲ್ ಇಂಡಿಯಾ ಎಡ್ಯುಕೇಶನಲ್ ಕಾನ್‌ಫರೆನ್ಸ್—ಮಂಗಳವಾರ ಆಲ್ ಇಂಡಿಯಾ ಎಡ್ಯುಕೇಶನಲ್ ಕಾನ್‌ಫರೆನ್ಸಿನ ರಿಸೆಪ್ಶನ್ ಕಮಿಟಿಯ ಎಕ್ಸಿಕ್ಯೂಟಿವ್ ಕಮಿಟಿಯು ಶ್ರೀ ಪಿ ಎಸ್. ಚಂದ್ರಾವರ್‌ಕರ್‌ರವರ ಅಧ್ಯಕ್ಷತೆಯಲ್ಲಿ ಕೂಡಿತು ಬರುವ ಕ್ರಿಸ್ಮಸ್‌ನಲ್ಲಿ ಜರಗಲಿರುವ ಕಾನ್‌ಫರೆನ್ಸಿನ ಕಾರ್ಯಕ್ರಮಗಳ ಕುರಿತು ವಿಚಾರಿಸಿ, ಎಡ್ಯುಕೇಶನಲ್ ಎಕ್ಸಿಬಿಷನನ್ನು ದಶಂಬರ 26ನೇ ತಾರೀಕಿಗೂ, ಕಾನ್‌ಫರೆನ್ಸಿನ ಪ್ರಾರಂಭೋತ್ಸವವನ್ನು 27ಕ್ಕೂ ಗೊತ್ತುಪಡಿಸಿದರು

ಡಯಿಂಗ್ ಕಂಪೆನಿಯ ಸಂಪು ಕೊನೆಗೊಂಡಿತು—ಹಲವು ದಿವಸಗಳಿಂದ ನಡೆಯುತ್ತಿದ್ದ ಮ. ಅಜಿಯ ಡಯಿಂಗ್ ಮತ್ತು ಮ್ಯಾನ್ಯುಫೆಕ್ಚರಿಂಗ್ ಕಂಪೆನಿಯ ಸಂಪು ಕೊನೆಗೊಂಡು ಕೆಲಸಗಾರರು ತಿರಿಗಿ ಕೆಲಸಕ್ಕೆ ಹೋಗಿರುವರು

ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ಲ್—ದೀಪಾವಳಿಯ ಎರಡು ದಿನ ಮುಂಬಯಿಯಲ್ಲಿ ಗೌಜಿ ಗೌಜಿ ಇತ್ತು. ಮುಂಬಯಿ ಎಸಂಬ್ಲಿಯಲ್ಲಿ ಪಾಸಾಗಲಿರುವ ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ಲ್ ಅಮೃತ ಮಥನದ ಸಮಯದಲ್ಲಿ ಅಸುರರೂ ದೇವತೆಗಳೂ ವಾಸುಕಿಯ ಬಾಯಿ ಮತ್ತು ಬಾಲಗಳನ್ನು ಹಿಡಿದೆಳೆದಂತೆ ಇಂದು ಕೋಂಗ್ರೆಸಿನ ನಾಯಕರುಗಳೂ ಮತ್ತು ಲೇಬರ್ ಮಂಡಳಿಗಳೂ ಕಾಮಗಾರರನ್ನು ಮಸೆಯುತ್ತಿರುವರು ಆದರೆ ಇದರಿಂದ ಅಮೃತ ಬಂದೀತೆಂಬ ಭರವಸೆಯು ಇಬ್ಬರಿಗೂ ಇಲ್ಲ ಒಂದು ಕಡೆಯವರು ಕಾಮಗಾರರನ್ನು ಸದೆ ಬಡೆಯಲು ಪ್ರಯತ್ನಿಸುತ್ತಿರುವರು, ಮತ್ತೊಂದು ಕಡೆಯವರು ಇವರ ಉನ್ನತಿಗಾಗಿ ಪ್ರಯತ್ನಿಸುತ್ತಿರುವರು ಈ ಎರಡು ಪಾರ್ಟಿಯವರ ಸಭೆಗಳೂ ಬಹಳ ತೀವ್ರಗತಿಯಿಂದ ಜರಗುತ್ತಿವೆ. ಇದರಲ್ಲಿ ಅಮೃತ ಯಾರಿಗೆ ವಿಷ ಯಾರಿಗೆ ಬರುವುದನ್ನು 7ನೇ ತಾರೀಕಿನ ಮಹಾಸಂಪಿನ ಮರುದಿವಸ ತಿಳಿಯ ತಕ್ಕದ್ದು ಆದರೂ ಕಾಮಗಾರರಿಗೆ ಜಯವಾಗಲೆಂದು ನಾವು ಹಾರೈಸಬೇಕಾಗಿದೆ

ಶ್ರೀ ಕೆ ಎಫ್ ನರಿಮನ್‌ರವರ ಚುನಾವಣಾ ನಾಮ ಪತ್ರವನ್ನು ....ಕಲೆಕ್ಟರನವರು ಚುನಾಯಿಸದೆ ಬಿಟ್ಟುಬಿಟ್ಟದ್ದರಿಂದ ಈಗಿನ ಪರಿಸ್ಥಿತಿಯನ್ನು ನೋಡುವಾಗ ಸ್ಥಳೀಯ ಸಮಾಚಾರಗಳಿಂದ ಶ್ರೀ ನರಿಮನ್‌ರವರು ಮುಂಬಯಿ ನಗರದ ಮೇಯರರಾಗುವ ಸಂಭವವಿದೆ. ಇಲ್ಲಿಲ್ಲ ಮಾತೇ ಹುಟ್ಟಿದೆ ಇದಕ್ಕೆ ಕಾರಣವೆಂದರೆ ಈ ಚುನಾವಣೆಗೆ ಈ ಮಹಾಪುರುಷರು ಸ್ಥಳೀಯ ಕೋಂಗ್ರೆಸ್ ಹ್ಯಾಕಮಾಂಡಿನೊಂದಿಗೆ ಎಂತಹ ಹದ್ದಿನ ಅಭಿಲಾಷೆಯಿಂದ ಕಾದಾಡುತ್ತಿದ್ದಾರೆ ಎಂಬುದು. ಬೇರೆ ಕೇಳಬೇಕೆ ... ಇದರಲ್ಲಿ ... ಅತಿ ಶೀಘ್ರ ... ಟ್ರೇಡ್ ಡಿಸ್ಪ್ಯೂಟ್ಸ್ ... ನಗರದಲ್ಲಿ ... ಕೋಂಗ್ರೆಸ ಹ್ಯಾಕಮಾಂಡು ಇವರಿಗೆ ನೇಮಿಸಿದ ಪದವಿಯನ್ನು ಕೊಡಲಿರುವರೆಂದು ತಿಳಿದುಬರುತ್ತದೆ.

ಆರ್ಯಸಮಾಜದ ಕಾರ್ಯಕಲಾಪ—ಇಲ್ಲಿಯ ... ಆರ್ಯಸಮಾಜವು ದೀಪಾವಳಿಯ ಶುಭಸಂದರ್ಭದಲ್ಲಿ ವೈದಿಕ ಧರ್ಮ ಪ್ರಚಾರಕಾರ್ಯವನ್ನು ಒಳ್ಳೇರೀತಿಯಿಂದ ಮಾಡಿರುವುದು. ಕಳೆದ ತಿಂಗಳ ತಾರೀಕು 22ಕ್ಕೆ ಶ್ರೀ ಬೇಚು ಸಿಂಹ ಶರ್ಮರು ನಮ್ಮ ಸಮಾಜವನ್ನು ಆಮಂತ್ರಿಸಿ ತನ್ನ ಹಾಲಿನ ಅಂಗಡಿಯಲ್ಲಿ ಒಂದು ಯಜ್ಞವನ್ನು ವಿಜೃಂಭಣೆಯಿಂದ ಮಾಡಿಸಿರುವರು ಯಜ್ಞಾಂತ್ಯದಲ್ಲಿ ಶ್ರೀ ಎಮ್. ಚಂದ್ರೇಶರರು ಯಜ್ಞದ ಆವಶ್ಯಕತೆಯ ಕುರಿತು ಚಿಕ್ಕಭಾಷಣವನ್ನಿತ್ತರು ಆ ವೇಳೆ ಶರ್ಮರು ವೇದಪ್ರಚಾರ ನಿಧಿಗೆ ರೂಪಾಯಿ 5ನ್ನು ದಾನಕೊಟ್ಟರು ತಾ 23 10 38 ಸಮಾಜಮಂದಿರದಲ್ಲಿ ಪ್ರಾತಃಕಾಲ ಘಂಟೆ9ಕ್ಕೆ ಶ್ರೀ ಎಸ್ ನಾರಾಯಣಯ್ಯ ಬಿ ಎ ಎಲ್ ಎಲ್ ಬಿ ಆಡ್ವೋಕೇಟ ಇವರಸನ್ಮಾನ್ಯಾಧ್ಯಕ್ಷತೆಯಲ್ಲಿ ಋಷಿ ದಯಾನಂದ ಸರಸ್ವತಿಯವರ ನಿರ್ವಾಣೋತ್ಸವವು ಬಹುಸಂಭ್ರಮದಿಂದ ಆಚರಿಸಲ್ಪಟ್ಟಿತು ಸದರಿ ಸಭೆಯಲ್ಲಿ ಶ್ರೀಮಾನ ಕುರಂಬಯ್ಯ ಎಂ ಎ ಯವರೂ, ... ಮಾನ್ ... ಶೀನಪ್ಪ ನವರೂ (Law student) ಪಂ. ಪದ್ಮದತ್ತರೂ ಶ್ರೀ. ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದರೂ ಶ್ರೀ ಯಚ್ ಯಸ್ ಕಲ್ಲಾಡರೂ ದೀಪಾವಳಿ ಹಾಗೂ ಸ್ವಾಮಿ ದಯಾನಂದರ ಕುರಿತು ಮಹತ ಪೂರ್ಣ ಭಾಷಣಗಳನ್ನಿತ್ತರು. ಕೊನೆಗೆ ಅಧ್ಯಕ್ಷರು ಜಗತ್ತಿನಲ್ಲಿ ಶಾಂತಿಸ್ಥಾಪನೆಯಾಗಬೇಕಾದರೆ ವೇದಗಳು ಪ್ರತಿಪಾದಿಸುವ ಪಥವಲ್ಲದೆ ಅನ್ಯಥಾವಿಲ್ಲವೆಂದೂ ಋಷಿದಯಾನಂದರು ಅದನ್ನೇ ಜಗತ್ತಿಗೆ ತೋರಿಸಿರುವರೆಂದೂ ಗಂಭೀರವಾದ ಭಾಷಣವನ್ನಿತ್ತರು ... ಕಾರ್ಯದರ್ಶಿ ... ಚಂದ್ರಶೇಖರರ ಧನ್ಯವಾದಗಳನ್ನರ್ಪಿಸಿದರು ಅದೇ ದಿನ ಮಧ್ಯಾಹ್ನೋತ್ತರ ಘಂಟೆ 6ಕ್ಕೆ ಮೋಡರ್ನ್ ಟೈಲರಿಂಗ್ ಕಂಪೆನಿಯಲ್ಲಿಯೂ ಯೂನಿಯನ್ ಜನರಲ್ ಸ್ಟೋರಿನಲ್ಲಿಯೂ ಕರ್ನಾಟಕ ಹಿತೈಷಿ ಕಂಪೆನಿಯಲ್ಲಿಯೂ ... ಯಜ್ಞಗಳನ್ನು ಮಾಡಲಾಯಿತು ಪ್ರತಿಯೊಂದು ಕಡೆಯಲ್ಲಿಯೂ ಪುರೋಹಿತರಾದ ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದರೂ ಕಾರ್ಯದರ್ಶಿಯವರೂ ಯಜ್ಞದ ಮಹತ್ವ ಮತ್ತು ಅದರ ಆವಶ್ಯಕತೆಯ ಕುರಿತು ಚಿಕ್ಕ ಚಿಕ್ಕ ಭಾಷಣಗಳನ್ನಿತ್ತಿರುವರು. ಈ ಸಮಾರಂಭಗಳಲ್ಲಿ ಮೋಡರ್ನ್ ಟೈಲರಿಂಗ್ ಕಂಪೆನಿಯವರು ರೂಪಾಯಿ 2ನ್ನೂ, 'ಯೂನಿಯನ್ ಜನರಲ್ ಸ್ಟೋರಿನವರು ರೂ 2ನ್ನೂ, ಕರ್ನಾಟಕ ಹಿತೈಷಿ ಕಂಪೆನಿಯವರು ರೂ 3ನ್ನೂ ವೇದ ಪ್ರಚಾರ ಫಂಡಿಗೆ ದಾನಕೊಟ್ಟಿರುವರು ಸೋಮವಾರ ತಾ 24ಕ್ಕೆ ಶ್ರೀ ಎಚ್. ಎಸ್ ಕಲ್ಲಾಡರ ಪುತ್ರಿಯ ನಾಮಕರಣ ಸಂಸ್ಕಾರವು ಜರಗಿಸಲ್ಪಟ್ಟಿತು ಶ್ರೀ. ಸತ್ಯಾರ್ಥಿ ಸಿದ್ಧಾಂತ ವಿಶಾರದರವರ ಪೌರೋಹಿತ್ಯವನ್ನು ವಹಿಸಿದ್ದರು. ಮಗುವಿಗೆ 'ಜಯವಂತಿ'ಎಂಬ ನಾಮವನ್ನಿಡಲಾಯಿತು. ಸಂಸ್ಕಾರಾಂತ್ಯದಲ್ಲಿ ಪುರೋಹಿತರೂ ಶ್ರೀ ಎಂ. ಚಂದ್ರಶೇಖರರೂ ಸಂಸ್ಕಾರದ ಆವಶ್ಯಕತೆಯ ಕುರಿತು ಚಿಕ್ಕ ಭಾಷಣವಿತ್ತರು. ಶ್ರೀ. ಎಚ್ ಯಸ್ ಕಲ್ಲಾಡರು ಈ ಶುಭ ಸಂದರ್ಭದಲ್ಲಿ ವೇದಪ್ರಚಾರ ನಿಧಿಗೆ ರೂ 3ವನ್ನು ದಾನಮಾಡಿರುವರು.

SALE! SALE! SALE!

ಮುಂಚಿನ ಕ್ರಯ ರೂ 10, ಈಗಿನ ಕ್ರಯ ರೂ 6

Swiss Lever Wrist Watch

ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನಮೂನೆ ಗಡಿಯಾರಗಳು ವಿಲಾಯತಿಯಲ್ಲಿ ಬಹ ಬಲಿಷ್ಠ ಸಾಮಾನಗಳಿಂದ ತಯಾರಿಸಲ್ಪಟ್ಟು ನೋಡುವದಕ್ಕೂ ಸ್ತ್ರೀ ಪುರುಷರ ಕೈಮಣಿಕಟ್ಟಿಗೆ ಕಟ್ಟಿಕೊಳ್ಳುವದಕ್ಕೂ ಬಹು ಅಂದವಾಗಿವೆ ಭಂಗಾರದ ಯಾ ಗಡಿಯಾರಗಳನ್ನು ನಾವು ಬಹಳ ... ಸಲಭ ಕ್ರಯಕ್ಕೆ ಕೊಡುತ್ತೇವೆ ಇಂಡಿಯಾ ದೇಶದಲ್ಲಿ ಎಷ್ಟೋ ಗಡಿಯಾರಗಳು ... ಅನೇಕ ಯೋಗ್ಯತಾಪತ್ರಗಳು ಬಂದಿರುವವು ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು ರೈಲ್ವೆ ಉದ್ಯೋಗಸ್ಥರು, ದೊಡ್ಡ ಆಫೀಸರಗಳೂ, ... ಉಪಯೋಗಿಸುತ್ತಿರುವರು ಒಂದನ್ನು ತರಿಸಿ ನೋಡಿದ್ದು ... ವರ್ಷ, ಕ್ರಯ ರೂ 6-0-0

ರಾಯಲ್ ಕಂಪೆನಿ, ೧೯ ಬೀಟ್, ಜಿ. ಟಿ ಮದ್ರಾಸ್.

ROYAL CO., Direct Importers, 19 Beat, G. T MADRAS

ಮೋಹಧ್ವಂಸಿನಿ (Regd)



ಗುಪ್ತ ವ್ಯಾಧಿಗಳ ವಾಸಿ ಬ್ರಹ್ಮಾಸ್ತ್ರ ... ಶರೀರವನ್ನು ಕೃಶಿಸಿ ಮಾನವನ ಜೀವ ದ್ರವವನ್ನು ... ಬಿಳಿಪು, ಕೆಂಪು, ಪರಂಗಿ ಹುಣ್ಣು, ಮೇಹಗಡ್ಡೆ, ಮೇಹಜ್ವರ, ಚರ್ಮ ವ್ಯಾಧಿ, ಕೀಲುಗಂಟುನೋವು ಅತಿಮೂತ್ರ ಮೊದಲಾದ ಚಿಹ್ನೆಗಳನ್ನು 'ಮೋಹಧ್ವಂಸಿನಿ'ಯು ಶೀಘ್ರವಾಗಿ ಹೋಗಲಾಡಿಸಿ, ರಕ್ತ ಶುದ್ಧಿಮಾಡಿ ನರಗಳಿಗೆ ಬಲವನ್ನೀಯುವುದು ಸೇವಿಸ ಪುವಕ್ಕೆ ಹಿತಕರ ಪ್ರತಿಯೊಂದು ಬೊಟ್ಟಿನ ಔಷಧದಲ್ಲಿಯೂ ಅದ್ಭುತ ಗುಣ

ದೊಡ್ಡ ಸೈಜು 1 0 0, ಮಿಡಿಯಂ ಸೈಜು 2 4 0, ಚಿಕ್ಕ ಸೈಜು 1 2 0

ಹಂಚಿಕೊಡುವ ಪ್ರಮುಖರು ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು.

ಸಬ್ ಏಜಂಟರ ; ಉಡುಪಿ ಮಿಶನ್ ಶೋಪ್, ಸಂತೆಕಟ್ಟೆ, ಉಡುಪಿ

ಏ. ಪಿ. ಶೆಣೈ, ಕಾರ್ಕಳ ಭಕ್ತಾ ಬ್ರದರ್ಸ್, ಕಾಸರಗೋಡು

ದಕ್ಷಿಣ ಕನ್ನಡ

ಹೆಜಮಾಡಿ—ಶಾಲಾ ವಿಸ್ತಾರದ ಕಮಿಟಿಯ ಅಧ್ಯಕ್ಷರಾದ ವಿ ಶಾಲ್ಕ ದಾ. ರಾಯಪ್ಪ ಮಿತ್ರಿಯರ ಅಪೇಕ್ಷೆಯಮೇರೆಗೆ ಜಿಲ್ಲಾಬೋರ್ಡ ಅಧ್ಯಕ್ಷರಾದ ಡಾಕ್ಟರ ವಿಟ್ಠಲ ಶೆಟ್ರ ಹೆಜಮಾಡಿ ಶಾಲಾ ವಿಸ್ತಾರಕ್ಕೆ ಆಗುವ ಹೊಸ ಕಟ್ಟೋಣದ ಶಂಕುಸ್ಥಾಪನೆಯನ್ನು ಕಳೆದ ತಾ. 30ರಲ್ಲು ಗಂಟೆ 12 30ಕ್ಕೆ ನೆರವೇರಿಸಿದರು. ಸಮಾರಂಭವು ಬಹಳ ವಿಜೃಂಭಣೆಯಿಂದ ವಿಧಿಯುಕ್ತವಾಗಿ ನಡೆಯಿತು. ಶ್ರೀಗಳಾದ ರಾಮಕೃಷ್ಣ ಪೂಂಜರು ಮೊದಲಾದವರು ಚಿತ್ತೈಸಿದ್ದರು ಶ್ರೀ.ವಿಠಲ ಶೆಟ್ರು ಸಂದರ್ಭೋಚಿತವಾಗಿ ಸುರಸ ಭಾಷಣವಿತ್ತರು.

ಇಲ್ಲಿಯ ನಡಹಕ್ಕಳಬೈಲಿನಲ್ಲಿ ಕೆಲವೇ ಮೆಂಬರರಿಂದ ಸ್ಥಾಪಿಸಲ್ಪಟ್ಟ ಭಜನಾಮಂಡಳಿಯಲ್ಲಿ ತಾ 23 10 38ನೇ ಆದಿತ್ಯವಾರ ಪ್ರಾರಂಭವಾಗಿ ಇದೇ ಬರುವ ತಾರೀಕು 3 11 -38ನೇ ಗುರುವಾರ ಭಜನ ಮಂಗಳವಾಗುವುದರಿಂದ ಎಲ್ಲರಿಗೂ ಸುಸ್ವಾಗತವಿರುವುದು.

ಅಜೆಕಾರು—ಆರೋಗ್ಯ ಮತ್ತು ಶಿಶು ಸಪ್ತಾಹ ಸಪ್ತಾಹ ತಾ 27-10-38ರಲ್ಲು ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಅಲಂಕೃತವಾದ ಅಜೆಕಾರು ಬೋರ್ಡು ಶಾಲಾ ಮಂದಿರದಲ್ಲಿ ಶ್ರೀ. ಕಾರ್ಕಳ ವಕೀಲ್ ಪಿ. ವಿ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿ, ಮೆರವಣಿಗೆ, ಪಂದ್ಯಾಟ, ಆರೋಗ್ಯಚಕ್ರವರ್ತಿಯ ದರ್ಬಾರ್ ಎಂಬ ಏಕಾಂಕ ನಾಟಕ ಶಿಶು ಪ್ರದರ್ಶನ, ಪುರಸ್ಕಾರ ವಿತರಣದ ಮೇಲೆ ಅಧ್ಯಕ್ಷರ ಬೋಧಪ್ರದ ಭಾಷಣವಾಗಿ ರಾತ್ರೆ 'ಕುಷ್ಠರೋಗ'ದ ವಿಷಯ ಮಾಯಾಲಾಂದ್ರದ ದೇಖಾವೆ ರಿಹಾ ಪ್ರದರ್ಶಿಸಲ್ಪಟ್ಟಿರುತ್ತದೆ.

ಮುಲ್ಕಿ—ಆರೋಗ್ಯ ಮತ್ತು ಶಿಶು ಸಪ್ತಾಹವು ಕಳೆದ ತಾ. 30-10-38ಕ್ಕೆ ಮುಲ್ಕಿಯಲ್ಲಿ ಬಹಳ ವಿಜೃಂಭಣೆಯಲ್ಲಿ ಜರಗಿತು. ರೂರಲ್ ಆಸ್ಪತ್ರೆಯ ಡಾಕ್ಟರ್ ಬಲ್ಲಾಳರೂ ಸ್ಥಳೀಯ ಪ್ರಾಥಮಿಕ ಶಾಲಾಧ್ಯಾಪಕರೂ ಯೋಗ್ಯರೀತಿಯಿಂದ ಸಪ್ತಾಹ ದಿನಾಚರಣೆಯು ನಡೆಯುವಂತೆ ಸಹಕರಿಸಿದ್ದರು ಉಡುಪಿ ಆಸ್ಪತ್ರೆಯ ಲೇಡೀ ಡಾಕ್ಟರರೂ ಮತ್ತು ಡಾಕ್ಟರ್ ಬೆನಗಲರವರೂ ಕ್ರಮವಾಗಿ ಬೆಳಿಗ್ಗೆ ಮತ್ತು ಸಂಜೆ ಜರಗಿದ ಸಭೆಗಳ ಅಧ್ಯಕ್ಷತೆಯನ್ನು ವಹಿಸಿದ್ದರು. ಮಹಿಳೆಯರು ಹೆಚ್ಚಾಗಿ ಸಭೆಯಲ್ಲಿ ನೆರೆದಿದ್ದರು. ಹರಿಜನ ಸ್ತ್ರೀಯರು 40ಕ್ಕೂ ಮಿಕ್ಕಿದ ತಮ್ಮ ಮಕ್ಕಳೊಂದಿಗೆ ಹಾಜರಿದ್ದರು ಅವರಿಗೆ ಬಿಸ್ಕೀಟು, ಹಾಲು ಹಾಗೂ ವಸ್ತ್ರಗಳು ಹಂಚಲ್ಪಟ್ಟವು ಅಧ್ಯಕ್ಷರಾದ ಡಾಕ್ಟರ್ ಬೆನಗಲರವರಿಂದಲೂ ಇತರ ಸಭಿಕರಿಂದಲೂ ಆರೋಗ್ಯ, ಶುಚಿತ್ವ ಶಿಶು ಪಾಲನೆಯ ಕುರಿತು ಬೋಧಪ್ರದ ಭಾಷಣಗಳಾದುವು ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆದ್ದ ಮಕ್ಕಳಿಗೆ ಇನಾಮುಗಳು ಅಧ್ಯಕ್ಷರಿಂದ ಹಂಚಲ್ಪಟ್ಟುವ. ಬೆಳಿಗ್ಗೆ ಮತ್ತು ಸಂಜೆ 800ಕ್ಕೂ ಮಿಕ್ಕಿದ ಮುಲ್ಕಿಯ ಶಾಲೆಗಳ ಮಕ್ಕಳಿಂದ ಮೆರವಣಿಗೆಯೂ ಜರಗಿಸಲ್ಪಟ್ಟಿತ್ತು. ಸಭಾಧ್ಯಕ್ಷರಿಗೆ ಧನ್ಯವಾದಾರ್ಪಣೆಯಿಂದ ಸಭೆಯು ಮುಕ್ತಾಯವಾಯಿತು

ನೋಟೀಸು

ಪುತ್ತೂರು ಕಸಬೆಯಲ್ಲಿರುವ ಬೆಳ್ಳಿಪ್ಪಾಡಿ ಸುಂದರ್ಯಪ್ಪ ಹೆಂಗಸು ಮತ್ತು ಇವಳ ಮಗಳು ಬಿ. ಪದ್ಮಾವತಿ ಸಹಾ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ನಮಗೆ ಚಿಕ್ಕಮೂಡನ್ನೂರು ಗ್ರಾಮದಲ್ಲಿ ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ ಕ್ರಿ ಮಿನಂಬ್ರ 116/25ನೇ ರಾಜಿ ಡಿಕ್ರಿಪ್ರಕಾರ ಆಸ್ತಿಗಳು ಇದ್ದು ಅನುಭವಿಸಿಕೊಂಡು ಬರುತ್ತೇವೆ. ಆದರೆ ನಮ್ಮ ಪೂರ್ವ ದ್ವೇಷಿಕನಾದ ಪೆರ್ನಕ್ಕಾಲರ್ಯೆಯು ಸುಂದರ ರೈಯನ್ನು ಒಳಸಂಚಿಗೆ ತೆಗೆದುಕೊಂಡು ನಮ್ಮ ಸ್ವಾಧೀನದಲ್ಲಿರುವ ಆಸ್ತಿಗಳ ಗೇಣಿಚೀಟು ವಗೈರೆ ಕೀಳ್ ಮುಂಬರನಾದ ಸುಂದರ ರೈ ಹೆಸರಲ್ಲಿ ಅಕ್ರಮವಾಗಿ ಬಲಾತ್ಕಾರದಿಂದ ಒಕ್ಕಲುಗಳಿಂದ ಮಾಡಿಸಿಕೊಟ್ಟು ಕೇಶಪ್ಪರೈ ಹೆಂಡ್ತಿ ಲಕ್ಷ್ಮಿಯು ಈ ಕೋರ್ಟು O. S. ನಂಬ್ರ 573/36ನೇ ವ್ಯಾಜ್ಯಕ್ಕೆ ಅನುಕೂಲವಾಗುವಂತಹ ರಿಕಾರ್ಡುಗಳನ್ನು ವಗೈರೆ ಮಾಡಿಸುವುದರಲ್ಲಿರುವುದಾಗಿ ತಿಳಿಯುತ್ತೇವೆ. ಅಕ್ರಮವಾಗಿ ಪ್ಯಾಲರ್ಯ ಪ್ರೇರೇಪಣೆಗಳಿಗೆ ಒಳಪಟ್ಟು ಸುಂದರ ರೈಯಿಂದ ಗೇಣಿಗೆ ವಗೈರೆ ಪಡಿಸಿಕೊಂಡವರಿಗೇನೂ ಪ್ರಯೋಜನ ಸಿಕ್ಕಲಾರದು. ಸುಂದರ ರೈಯು ಸಧ್ರಿ ಪ್ಯಾಲರ್ಯೆಯ ಸಹಾಯದಿಂದ ಏನಾದರೂ ರಿಕಾರ್ಡುಗಳನ್ನು ಸೃಷ್ಟಿಸಿ ಮಾಡಿಸಿದ್ದು ಇದ್ದರೆ ವ ಇನ್ನು ಮಾಡಿಸಿದರೆ ನಮಗೆ ಯಾ ನಮ್ಮ ಮೇಲೆ ಪ್ರಸ್ತಾಪಿಸಿದ ಆಸ್ತಿಗೆ ಬಾಧಿಸಕೂಡದು. ಯಾವತ್ತು ರಿಕಾರ್ಡುಗಳು ನಮ್ಮ ಹಸ್ತದಸ್ಕತ್ತಿನಲ್ಲಿ ಇಲ್ಲದ್ದು ನಮಗೆ ಯಾ ನಮ್ಮ ಸ್ವಾಧೀನದಲ್ಲಿರುವ ಆಸ್ತಿಗಳಿಗೆ ಬಾಧಿಸಕೂಡದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

☞ ||| ಈ ಮೂರು ಗೆರೆ ವ ಎಡಹೆಬ್ಬೆಟ್ಟಿನ ಗುರ್ತು ಸಧ್ರಿ ಸುಂದ್ಯಪ್ಪ ಹೆಂಗ್ಸಿನ ರುಜು.

B. Padmavathi.

ಪುತ್ತೂರು, 20-10-38

ಕೂದಲು

ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ಡಬ್ಬಲ್ ವಾಪಾಸು ಕೊಡಲು ಗ್ಯಾರಂಟಿ ಎಂಬುದಕ್ಕೆ ದೊರೆತ ನೂರಾರು ಸರ್ಟಿಫಿಕೇಟುಗಳೇ ಸಾಕ್ಷಿ.

ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ. 5-0-0. ಕಾಲಂಶಕ್ಕೂ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವದೆ ರೂ. 7-0-0 ಬೆಲೆಯ ಎಣ್ಣೆ ಬೇಕಾಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

HAZRA & Co.,

P. C. **Bihar Nursery,** (DARBHANGA)

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ. 2-4-0.

ಸಣ್ಣ ಸುಂದರ, ಅಲಂಗಟ್ಟಿ ಮುಟ್ಟಿದ ಮಶಿನರಿ ಸರಿಯಾದ ಸಮಯ ತೋರಿಸುವಂಥದ್ದು 5ವರ್ಷದ ಗ್ಯಾರಂಟಿ ದುಂಡಾಕೃತಿಯ ಟೀರ್ಘ ಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಚಿತ್ರದಲ್ಲಿ ತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0-0, ಬಾವಲಿರುವ ರೋಲ್ಡ್ ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ಟ. ಖ. ಪ್ರತ್ಯೇಕ.

ಎಚ್. ಡಾವಿಡ್ ಅಂಡ್ ಕೊ.

ಪೊ. ಬಾಕ್ಸ್ 11424 ಕಲ್ಕತ್ತಾ.

H. David & Co.

Post Box No. 11424. Calcutta

ವಿಸ್ಮಯ ಜಗತ್ತು

ಹೇಂಟೆಗಳು ಚಚ್ಚೌಕ ತತ್ತಿಗಳನ್ನಿಡುವಂತೆ ಯತ್ನ

ತತ್ತಿಗಳನ್ನು ಒಂದು ಸ್ಥಳದಿಂದ ಇನ್ನೊಂದೆಡೆಗೆ ಕಳುಹಿಸುವಾಗ ಒಡೆಯದಂತೆ ಹೇಂಟೆಗಳ ತತ್ತಿಗಳನ್ನು ಚಚ್ಚೌಕವಾಗಿ ಮಾಡಲು ಯುನೈಟೆಡ್ ಸ್ಟೇಟ್ಸಿನ ಕೃಷಿ ಇಲಾಖೆಯ ತಜ್ಞರು ಶೋಧನೆ ನಡೆಸುತ್ತಿರುವರು. ಹೇಂಟೆಯ ಆಹಾರದಲ್ಲಿ ಸುಣ್ಣದಂಶವನ್ನು ಕಡಿಮೆಮಾಡಿ ಚಚ್ಚೌಕ ತತ್ತಿಗಳನ್ನು ತಯಾರಿಸಬಹುದೆಂದು ಅವರ ನಂಬಿಕೆ. ಹೇಂಟೆಗಳು ಬಹುತೇಕ ಚಿಪ್ಪಿಲ್ಲದ ತತ್ತಿಗಳನ್ನಿಡುವಂತೆ ಮಾಡಿ ಅವುಗಳ ಮೇಲೆ ಗಟ್ಟಿಯಾದ ಪದಾರ್ಥವೊಂದನ್ನು ಸಾರಿಸಿ ಚೌಕಟ್ಟಿನೊಳಗಿರಿಸಿ ಚೌಕಾಕೃತಿಯಾಗಿ ಮಾಡಬಹುದು. ಬಾಗಿದ ನೇಂದ್ರ ಬಾಳೆಗಳನ್ನು ಪೇಕ್ ಮಾಡಲು ಹೆಚ್ಚು ಸ್ಥಳಬೇಕಾಗುವುದರಿಂದ ಕೋಲಿನಂತೆ ನೆಟ್ಟಗಿನ ಬಾಳೆಹಣ್ಣುಗಳನ್ನು ತಯಾರಿಸುವ ಯತ್ನವೂ ನಡೆದಿದೆ.

ಚೀನೀ ಹುಡುಗನ ವಿಚಿತ್ರ ಶಕ್ತಿ

ಪೆಂಸಿನಲ್ಲಿರುವ ಚೀನೀ ರಾಯಭಾರಿಯ 7 ವರ್ಷ ಪ್ರಾಯದ ಪ್ಲೇಟೋ ಬಕ್ಸ್‌ಜಾನನೆಂಬವನು ಎರಡುವರ್ಷದ ಬಾಲಕನಿರುವಾಗಲೇ ಚಿತ್ರಬಿಡಿಸಲಾರಂಭಿಸಿ ಈಗ ಕೆಲವೇ ನಿಮಿಷಗಳಲ್ಲಿ ಯಾವ ರಾಜಕೀಯ ವಿಷಯದಲ್ಲಾದರೂ ವ್ಯಂಗ್ಯ ಚಿತ್ರ ಬಿಡಿಸುವ ವಿಚಿತ್ರ ಶಕ್ತಿಯುಳ್ಳವನಿರುವನು. ವಿಸ್ಮಯಕರ ತೈಲಚಿತ್ರಗಳನ್ನು ಬಿಡಿಸಬಲ್ಲನು. ಇತರ ನಕಾಶೆಗಳನ್ನು ಎಷ್ಟು ಬೇಕಾದರೂ ಮಾಡುವನು. ಜಾನನೀಗ ತನ್ನ ತಂದೆತಾಯಿಗಳೊಂದಿಗೆ ಪ್ರಥಮವಾಗಿ ಲಂಡನಿಗೆ ಹೋಗಿರುವನು. ಯುರೋಪಿನ 4 ಭಾಷೆಗಳನ್ನು ಮಾತಾಡಬಲ್ಲನು. 'ಇಂದಿನ ರಾಜಕೀಯ ಪರಿಸ್ಥಿತಿಯ ಕುರಿತು ನಿನ್ನ ಅಭಿಪ್ರಾಯವೇನು?' ಎಂದು ಲಂಡನಿನಲ್ಲಿ ಜಾನನೊಡನೆ ಪ್ರಶ್ನಿಸಿದಾಗ ಅವನು 5 ನಿಮಿಷಗಳಲ್ಲಿ ಒಂದು ನಕಾಶೆಯನ್ನು ತಯಾರಿಸಿಕೊಟ್ಟ. ಜಾನನು ಚಿತ್ರಕಲೆಯಲ್ಲಿ ಯಾವ ತರಬೇತಿಯನ್ನೂ ಹೊಂದಿದವನಲ್ಲ. ಲಂಡನಿನಲ್ಲಿ ಜಾನನು ಚಿತ್ರಗಳನ್ನು ಮಾರಿ ಚೈನದ ಮತ್ತು ಸ್ಪೈನಿನ ನಿರಾಶ್ರಿತ ಮಕ್ಕಳ ಸಹಾಯಕ್ಕಾಗಿ ಹಣ ಒಟ್ಟುಗೂಡಿಸುತ್ತಿರುವನು.

ಪಿಶಾಚಿಯ ಸೇಡು

ಮಿರ್ಜಾಪುರದ ಲಕ್ಷ್ಮಣಪುರದಲ್ಲಿ ಸಂಸಾರವಂದಿಗನಾದ ಒಬ್ಬ ಗುಮಾಸ್ತನು ವಾಸಿಸಿಕೊಂಡಿರುವ ಮನೆಯ ಬಳಿ ಒಬ್ಬಾನೊಬ್ಬ ಯೋಗಿಯ ಸಮಾಧಿ ಇದೆ. ಈ ಯೋಗಿಯ ಪಿಶಾಚಿರೂಪವು ಆಗಾಗ್ಗೆ ಆ ಮನೆಯವರಿಗೆ ಗಾಳಿಯ ರೂಪದಲ್ಲಿ ಕಾಣಿಸಿಕೊಂಡು ತನ್ನ ಗೂಡಪೆಗಾರರೂ ಬಾರದಿದ್ದಲ್ಲಿ ತಾನು ಆ ಕುಟುಂಬಕ್ಕೆ ಯಾವ ತೊಂದರೆಗಳನ್ನೂ ಉಂಟುಮಾಡುವುದಿಲ್ಲವೆಂದು ಹೇಳುತ್ತಿತ್ತಂತೆ.

ಒಂದುದಿನ ಗುಮಾಸ್ತನ ಮಗುವು ಕಣಿಕಾಯಿಲೆಯಲ್ಲಿ ಬಿತ್ತು. ಡಾಕ್ಟರರಿಂದ ಈ ರೋಗವನ್ನು ಕಂಡು ಹಿಡಿಯುವುದಕ್ಕಾಗಲಿ ವಾಸಿಮಾಡುವುದಕ್ಕಾಗಲಿ ಅಸಾಧ್ಯವಾಯಿತು. ಮಗು ಮಲಗಿದ್ದ ಕೊಠಡಿಯಲ್ಲಿ ಪ್ರಕಾಶಮಾನವಾದ ಪ್ರಕಾಶ ಕಂಡು ಬರುತ್ತಾ ಒಂದು ದಿನ ಮಾರ್ವಾಡಿ ಹೆಂಗಸಿನಂತೆ ಸೀರೆ ಉಟ್ಟುಕೊಂಡ ಒಂದು ರೂಪವು ಕಂಡುಬಂದು ಮಗುವು ಸಾಧುವಿನ ಸಮಾಧಿಯನ್ನು ಅಶುದ್ಧಮಾಡಿದೆಯೆಂದೂ, ಹದಿನೈದು ದಿನಗಳೊಳಗೆ ಮಗುವು ಸಾಯುವುದೆಂದೂ ಹೇಳಿ ಮಾಯವಾಯಿತಂತೆ. ದುಃಖಿತರಾದ ತಾಯಿತಂದೆಗಳು ಮಗುವನ್ನು ಅಲ್ಲಹಾಬಾದಿಗ ಕೊಂಡುಹೋಗಿ ಏನೇನು ಮಾಡಿದರೂ ಉಪಯೋಗವಾಗಲಿಲ್ಲ. ಅದೇ ರೂಪು ಇನ್ನೆರಡುಸಲ ಕಾಣಿಸಿಕೊಂಡು ಅದೇಪ್ರಕಾರ ಹೇಳಿತು ತಾಯಿಯ ತೊಡೆಯಲ್ಲಿ ಮಲಗಿದ್ದ ಮಗುವಿನ ಪ್ರಾಣವನ್ನು ಆ ದುಷ್ಟ ಸಾಧು ಪಿಶಾಚಿಯು ಕೊಂಡುಹೋಗಿ ತಾಯಿತಂದೆಗಳಿಗೆ ಕಷ್ಟವನ್ನು ತಂದೊಡ್ಡಿತು.

ಎರಡು ತಲೆ 4 ಕೈಗಳ ಮಗು

ರಷ್ಯದ ಮೊಸ್ಕೋಪಟ್ಟಣದಲ್ಲಿ ಲೋಕದ ಅತಿ ವಿಚಿತ್ರ ಅವಳಿಜವಳಿ ಮಕ್ಕಳಿರುವವು. ಈರಾ ಮತ್ತು ಗಾಲ್ಯಾ ಎಂದವುಗಳ ಹೆಸರು ಇವುಗಳಿಗೆ ಪ್ರತ್ಯೇಕ ತಲೆ, ತೋಳು, ಹೃದಯ, ಬೆನ್ನೆಲುಬು ಮತ್ತು ಹೊಟ್ಟೆಗಳಿರುವವು. ಆದರೆ ತೋರವಾದ ಒಂದೇ ದೇಹ ಮತ್ತು ಎರಡೇ ಕಾಲುಗಳಿರುತ್ತವೆ. ನರಗಳೆಲ್ಲಾ ಪ್ರತ್ಯೇಕ ಪ್ರತ್ಯೇಕವಾಗಿರುತ್ತವೆ. ಆದರೆ ರಕ್ತ ಪ್ರವಾಹವು ಒಂದೇ. ಈರಳ ಕೈಗೆ ಚಿವುಟಿದಾಗ ಅವಳು ಮಾತ್ರ ಕೂಗುವಳು. ಆಗ ಗಾಲ್ಯಳು ನಗುವಳು. ಒಬ್ಬಳನ್ನು ಬಿಟ್ಟು ಇನ್ನೊಬ್ಬಳು ನಿದ್ದೆಹೋಗಬಲ್ಲಳು. ಈಗ ಈ ಮಕ್ಕಳಿಗೆ ಒಂದು ವರ್ಷವಾಗಿರುವುದು. ಗಾಲ್ಯಳಿಗೆ ಕೊಟ್ಟ ಆಹಾರದಿಂದ ಈರಳ ರುಚಿಯೇನೂ ತಣಿಯುವುದಿಲ್ಲ. ಗಾಲ್ಯಳ ಹೆಸರೆತ್ತಿ ಕರೆದಾಗ ಅವಳು ತಲೆಯೆತ್ತಿ ನಸುನಗುವಳು. ಈರಳು ತಣ್ಣಗಿರುವಳು. ಈ ಶಿಶುಗಳ ಬೆಳವಣಿಗೆಯನ್ನು ರಷ್ಯದ ವಿಜ್ಞಾನಿಗಳು ಪರೀಕ್ಷಿಸುತ್ತಿರುವರು ಈ ಪರೀಕ್ಷೆಯಿಂದ ತಿಳಿದು ಬಂದ ಒಂದು ವಿಷಯವೆಂದರೆ ನರಗಳಿಂದ ನಿದ್ದೆ ಬರುವಂತೆ ಮಾಡಬಹುದೇ ಹೊರತು ರಕ್ತಪ್ರವಾಹಕ್ಕೆ ವಿಷಸೇರಿಸಿಯಲ್ಲೆಂಬುದು.

ಸರ್ಪದಿಂದ ಕಚ್ಚಿಸಿ ಪತ್ನಿಯ ಕೊಲೆ.

ಪೆರಿಸಿನ ಅಲ್ಫೋನ್ಸ್ ಡಿಲೆಂಜ್ ಎಂಬ 68 ವರ್ಷ ಪ್ರಾಯದವನೊಬ್ಬನಿಗೆ ತನ್ನ ಪತ್ನಿಯ ನಡತೆಯ ಕುರಿತು ಸಂದೇಹವುಂಟಾಗಿ ಪ್ರತೀಕಾರಮಾಡುವ ನಿರ್ಧಾರವಾಡಿದ. ಸರ್ ಆರ್ಥರ್ ಕೊನೆಂಡಾಯ್ಲರು ಬರೆದ 'ದಿ ಸ್ಪೆಕ್ಲ್‌ಡ್ ಹೆಡ್' ಎಂಬ ಕಾದಂಬರಿಯನ್ನೋದಿ, ಸರ್ಪದಿಂದ ಕಚ್ಚಿಸಿ ಹೆಂಡತಿಯ ಕೊಲೆಮಾಡಬೇಕೆಂಬ ಹಂಚಿಕೆ ಮಾಡಿದ. ಗುಪ್ತವಾಗಿ ಒಂದು ವಿಷ ಸರ್ಪವನ್ನು ತಂದು ಮಾಡಿನ ಸೀಲಿಂಗಿನಲ್ಲಿ ಅಡಗಿಸಿಟ್ಟ. ಅವನು ಮಲಗುವ ಕೋಣೆಯು ಹೆಂಡತಿಯ ಕೋಣೆಯ ಮೇಲ್ಭಾಗದಲ್ಲಿತ್ತು. ತನ್ನ ಕೋಣೆಯ ನೆಲದಲ್ಲೊಂದು ತೂತನ್ನು ಜಾಗ್ರತೆಯಿಂದ ಕೊರೆದಿಟ್ಟ. ಮತ್ತು ಒಂದು ರಾತ್ರಿ ಸೀಲಿಂಗಿನಲ್ಲಡಗಿಸಲ್ಪಟ್ಟಿದ್ದ ಸರ್ಪವನ್ನು ಈ ತೂತಿನ ಮೂಲಕ ಹೆಂಡತಿಯ ಹಾಸಿಗೆಯ ಮೇಲೆ ಬಿಟ್ಟ. ಸರ್ಪವು ಕಚ್ಚಿ ತನ್ನ ಕೆಲಸಮಾಡಿತು. ಸ್ತ್ರೀಯು ಕ್ರಮೇಣ ನಿಶ್ಚೇತನಳಾಗಿ ಮೃತಳಾದಳು. ಆಮೇಲೆ ಅಲ್ಫೋನ್ಸನು ಕೋಣೆಗೆ ಪ್ರವೇಶಿಸಿ ಸರ್ಪವನ್ನು ಕೊಂದು ಮನೆಯ ಕಂಪೌಂಡಿನಲ್ಲಿ ಹುಗಿದು, ತನ್ನ ಪತ್ನಿಯು ವಿಚಿತ್ರರೀತಿಯಲ್ಲಿ ಮರಣ ಹೊಂದಿರುವಳೆಂದು ಪೋಲೀಸರಿಗೆ ತಿಳಿಸಿದ. ಪೋಲೀಸರು ಬಂದು ಪರೀಕ್ಷಿಸಿ, ಸರ್ಪಕಚ್ಚಿದ ಚಿಹ್ನೆಯನ್ನು ಕಂಡು ಮನೆಯ ಕಂಪೌಂಡನ್ನೆಲ್ಲಾ ಪರೀಕ್ಷಿಸಿದಾಗ ಹುಗಿಯಲ್ಪಟ್ಟಿದ್ದ ಸರ್ಪದ ಶವವು ದೊರಕಿತು. ಆದರೆ ಅವರು ಅಲ್ಫೋನ್ಸನ ಮನೆಗೆ ಪ್ರವೇಶಿಸುವಷ್ಟರಲ್ಲಿ ಅವನು ಮೆದುಳಿಗೆ ಗುಂಡು ಹೊಡಕೊಂಡು ಮರಣೋನ್ಮುಖನಾಗಿ ನೆಲದ ಮೇಲೆ ನರಳುತ್ತಿದ್ದ. ತಾನು ಎಂತಹ ಪೈಶಾಚಿಕ ಹಂಚಿಕೆಯಿಂದ ತನ್ನ ಪತ್ನಿಯನ್ನು ಕೊಲೆಮಾಡಿದನೆಂಬುದನ್ನು ಬರೆದಿಟ್ಟ ಕಾಗದವು ಆತನ ಬಳಿಯಲ್ಲೇ ಇತ್ತು.

ಆತಂಕನಿಗ್ರಹ ಮಾತ್ರೆ

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ ದುಸ್ವಪ್ನವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗೆ ೧—೦—೦

ನಾ ಜೀ ಕ ರ ಣ ತೈ ಲ

ವೀರ್ಯವು ಪಕ್ವವಾಗ ವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣ. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ

ಆತಂಕನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ.

ಸ್ಥಾಪನೆ: **ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಮೇದೆಗಳ ಜೇಷು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡೋಣಾಗುವದು.

CROWN RUBBER STAMP CO.,

Balmat Road, MANGALORE.

Included by the Mysore Govt Stores Purchase Committee in the list of approved Firms.

ಪೆಲಸ್ತೈನದ ಗಲಾಟೆಯ ಕಾರಣವೇನು?

ಇತರ ದೇಶಗಳಿಂದ ಹೊರಹಾಕಲ್ಪಡುತ್ತಿರುವ ಯೆಹೂದ್ಯರು ಪೆಲೆಸ್ತೈನವನ್ನು ತಮ್ಮ ರಾಷ್ಟ್ರೀಯ ನಿವಾಸವಾಗಿ ಮಾಡುವ ಯತ್ನ.

ಅರಬರನ್ನು ಮೂಲೆಗೊತ್ತಿ ಯೆಹೂದ್ಯರ ಅಧಿಕಾರ ಸ್ಥಾಪಿಸಲು ಬ್ರಿಟಿಷ್ ಸರ್ಕಾರದ ಪ್ರೋತ್ಸಾಹ

ಪೆಲೆಸ್ತೈನನನ್ನು ವಿಂಗಡಿಸಿ ಹಾಕುವ ಕುಟಿಲನೀತಿ.

ಯೆಹೂದ್ಯರಿಗೆ ಸ್ವಂತ ದೇಶವೆಂಬುದಾವುದೂ ಇಲ್ಲ. ಅವರು ಯುರೋಪಿನ ಬೇರೆ ಬೇರೆ ದೇಶಗಳಲ್ಲೆಲ್ಲಾ ಚದರಿರುತ್ತಾರೆ. ಅವರ ಮೂಲನಿವಾಸವು ಪೆಲಸ್ತೈನವಾದರೂ ಅಲ್ಲಿರುವ ಯೆಹೂದ್ಯರು ಬಹಳ ಸ್ವಲ್ಪ ಮಂದಿ. ಕಳೆದ ಮಹಾಯುದ್ಧದಲ್ಲಿ ಯುರೋಪಿನ ಶ್ರೀಮಂತ ಯೆಹೂದ್ಯರು ಹೆಚ್ಚಾಗಿ ಇಂಗ್ಲೆಂಡ್ ಫ್ರಾನ್ಸ್ ಮೊದಲಾದ ಮಿತ್ರರಾಷ್ಟ್ರಗಳಿಗೆ ಬಹಳ ಹಣ ಸಹಾಯಮಾಡಿದ್ದರು. ಆದುದರಿಂದ 1917ರಲ್ಲಿ ಬ್ರಿಟಿಷ್ ವಿದೇಶ ಮಂತ್ರಿಗಳಾದ ಲೋರ್ಡ್ ಬಾಲ್‌ಫೂರರು ಪ್ರಖ್ಯಾತ ಯೆಹೂದ್ಯ ಬ್ಯಾಂಕರರಾದ ಲೋರ್ಡ್ ರೊಥ್ಸ್‌ಚೈಲ್ಡರೊಡನೆ, ಪೆಲೆಸ್ತೈನವನ್ನು ಯೆಹೂದ್ಯರು ತಮ್ಮ ರಾಷ್ಟ್ರೀಯ ನಿವಾಸವಾಗಿ ಮಾಡಿಕೊಳ್ಳಲು ಬ್ರಿಟಿಷ್ ಸರಕಾರವು ಅನುಕೂಲವಿದೆಯೆಂದು ತಿಳಿಸಿದರು. ಮತ್ತು ಅದಕ್ಕಾಗಿ ತಾವು ಬೇಕಾದ ಸಹಾಯವನ್ನು ಕೂಡಾ ಮಾಡುವುದಾಗಿ ಆಶ್ವಾಸನೆಯಿತ್ತರು. ಲೋರ್ಡ್ ಬಾಲ್‌ಫೂರರ ಈ ನಿರೂಪಣೆಯು ಯೆಹೂದ್ಯ ಜನರಲ್ಲೆಲ್ಲಾ ಅತ್ಯಂತ ಸಮಾಧಾನವನ್ನುಂಟುಮಾಡಿತು. 1919ರಲ್ಲು ಶಾಂತಿಯ ಒಪ್ಪಂದವಾಗುವ ಸಂದರ್ಭದಲ್ಲಿ, ಲೋರ್ಡ್ ಬಾಲ್‌ಫೂರರ ನಿರೂಪಣೆಯೆಂದರೆ ಪೆಲಸ್ತೈನದಲ್ಲಿ ಈಗಿರುವ ಜನರ ಮೇಲೆಲ್ಲಾ ಯೆಹೂದ್ಯರನ್ನು ಹೊರಿಸುವುದೆಂದಲ್ಲ. ಈಗ ಅಲ್ಲಿರುವ ಯೆಹೂದ್ಯ ಜನಸಂಖ್ಯೆಯನ್ನು ಹೆಚ್ಚಿಸಿ ಧಾರ್ಮಿಕ ಮತ್ತು ಜನಾಂಗಿಕ ದೃಷ್ಟಿಯಿಂದ ಯೆಹೂದ್ಯರು ಅದನ್ನು ತಮ್ಮ ನಿವಾಸವಾಗಿಕಂಡು ಅಭಿಮಾನಪಡುವಂತೆ ಮಾಡಲಾಗುವುದೆಂದು ಬ್ರಿಟಿಷ್ ಸರಕಾರವು ಸ್ಪಷ್ಟಪಡಿಸಿತು.

ಬ್ರಿಟಿಷ್ ಸರಕಾರದ ಈ ನಿರೂಪಕ್ಕೆ ಅತ್ಯುದಾರ ಅರ್ಥವು ಕಲ್ಪಿಸಲ್ಪಟ್ಟು, ಲೋಕದಲ್ಲಿರುವ ಯೆಹೂದ್ಯರೆಲ್ಲಾ ಪೆಲೆಸ್ತೈನಕ್ಕೆ ಹೋಗಿ ವಾಸಿಸಲು ಅದೊಂದು ಆಮಂತ್ರಣವೆಂದು ತೆಗೆದುಕೊಳ್ಳಲಾಯಿತು. ಇಷ್ಟರವರೆಗೆ ಪೆಲೆಸ್ತೈನವನ್ನು ಕಂಡರಿಯದ ಹಟ್ಟಿನ ಯೆಹೂದ್ಯರು, ಸಂಪತ್ಸಮೃದ್ಧಿಯುಳ್ಳ ದೇಶವೊಂದು ತಮ್ಮನ್ನು ಸ್ವಾಗತೀಕರಿಸಲು ಕೈಯೊಡ್ಡಿಕೊಂಡಿದೆಯೆಂದು ನೆನಸಿಕೊಂಡರು. 1919ರಲ್ಲಿ ಪೆಲಿಸ್ತೈನದಲ್ಲಿ 65,000 ಮಂದಿ ಯೆಹೂದ್ಯರು ವಾಸಮಾಡಿಕೊಂಡಿದ್ದರು. ಲೋರ್ಡ್ ಬಾಲ್‌ಫೂರರ ನಿರೂಪಣೆಯ ನಂತರ 10 ವರ್ಷಗಳಲ್ಲಿ ಬೇರೆಬೇರೆ ದೇಶಗಳಿಂದ 3,50,000 ಮಂದಿ ಹೋಗಿ ಪೆಲಸ್ತೈನವನ್ನು ತಮ್ಮ ದೇಶವನ್ನಾಗಿ ಮಾಡಿಕೊಂಡು ವಾಸಿಸಿದರು. ಇಂದೀಗ ಪೆಲಸ್ತೈನದಲ್ಲಿರುವ ಯೆಹೂದ್ಯ ಜನಸಂಖ್ಯೆಯು 4,10,000ಕ್ಕೇರಿರುವುದು. ಇಷ್ಟಾದರೂ ಅಲ್ಲಿಯ ಅರಬರ ಸಂಖ್ಯೆಯು ಇದಕ್ಕಿಂತ ಎರಡುಪಾಲಿದೆ. ಇತ್ತಲಾಗಿನ ಸರಕಾರದ ಅಂದಾಜಿನ ಮೇರೆಗೆ ಅರಬ ಜನಸಂಖ್ಯೆಯು 8,10,000 ಆಗಿದೆ.

ರಸ್ಯ ಮತ್ತು ಪೋಲಂಡುಗಳಲ್ಲಿ ಒಟ್ಟು 5,000,000 ಮಂದಿ ಯೆಹೂದ್ಯರಿರುತ್ತಾರೆ. 1 ಮಿಲ್ಯ ಮಂದಿ ಯುರೋಪಿನ ಇತರ ಭಾಗಗಳಲ್ಲಿರುತ್ತಾರೆ. ಇಂಗ್ಲೆಂಡಿನಲ್ಲಿಯೇ 300,000 ಲಕ್ಷ ಮಂದಿ ಇದ್ದಾರೆ. ಆದರೆ ಪೆಲಸ್ತೈನಕ್ಕೆ ಹೋಗಿ ವಾಸಿಸಿದ ಯಹೂದ್ಯರಲ್ಲಿ ಹೆಚ್ಚಿನವರು ರಸ್ಯ ಮತ್ತು ಪೋಲಂಡುಗಳಲ್ಲಿದ್ದವರು. ಈ ಎರಡು ದೇಶಗಳಲ್ಲಿಯೂ ಯೆಹೂದ್ಯರು ತಮ್ಮ ಧರ್ಮವನ್ನಾಚರಿಸದಂತೆ ನಿಷೇಧವಿದೆ. ಆದುದರಿಂದ ಸಾವಿರಾರು ಮಂದಿ ಯೆಹೂದ್ಯರು ಆ ದೇಶಗಳನ್ನು ಬಿಟ್ಟು ಪೆಲಸ್ತೈನಕ್ಕೆ ಹೋಗಿ ವಾಸಿಸಿದರು. ಕಟ್ಟಕಡೆಗೆ ರಸ್ಯವು ಯೆಹೂದ್ಯರು ದೇಶ ಬಿಟ್ಟು ಹೋಗದಂತೆ ತಡೆಯಾಕಬೇಕಾಯಿತು. ಯಾಕೆಂದರೆ ಅವರು ಚತುರ ಕೆಲಸಗಾರರು, ಹಣ ಮತ್ತು ಸಮಯದ ಬೆಲೆಗೊತ್ತಿದ್ದವರು. ಪೋಲಂಡು ಯಾವ ತಡೆಯನ್ನೂ ಹಾಕಲಿಲ್ಲ ಆದುದರಿಂದ ಕಳೆದ 10 ವರ್ಷಗಳಲ್ಲಿ ಅಲ್ಲಿಂದ 80,000 ಮಂದಿ ಯೆಹೂದ್ಯರು ಪೆಲಸ್ತೈನಕ್ಕೆ ಹೋಗಿರುವರು. 1933ರಲ್ಲಿ ಜರ್ಮನಿಯು ಯೆಹೂದ್ಯ ವಿರೋಧವಾಗಿ ಉಗ್ರಚಳವಳ ಹೂಡಿದಾಗ ಅಲ್ಲಿಂದ ನೂರಾರು ಮಂದಿ ಯೆಹೂದ್ಯರು ಪೆಲೆಸ್ತೈನಕ್ಕೆ ಹೋಗಿ ವಾಸಿಸತೊಡಗಿದರು. ಕಳೆದ 5 ವರ್ಷಗಳಲ್ಲಿ 45,000 ಮಂದಿ ಜರ್ಮನಿಯಿಂದ ಪೆಲೆಸ್ತೈನಕ್ಕೆ ಹೋಗಿರುವರು. ಇನ್ನೂ ಅನೇಕರು ಯುರೋಪಿನ ಬೇರೆ ಬೇರೆ ಕಡೆಗಳಲ್ಲಿ ತಿರುಗಾಡುತ್ತಿರುವರು. ನಾಜಿಗಳು ಯೆಹೂದ್ಯರನ್ನು ಪೀಡಿಸಹತ್ತಿದಂದಿನಿಂದ 1,50,000 ಮಂದಿ ಜರ್ಮನಿ ಬಿಟ್ಟು ಹೋಗಿರುವರು. ಆಸ್ಟ್ರಿಯ ಮತ್ತು ಇಟಲಿಗಳಿಂದಲೂ ಈಗ ಅವರು ಹೊರಹಾಕಲ್ಪಟ್ಟಿರುವುದರಿಂದ ಪೆಲಸ್ತೈನಕ್ಕೆ ಇನ್ನೂ ಹೆಚ್ಚುಮಂದಿ ಹೋಗುವಂತಾಗಿದೆ.

ಯೆಹೂದ್ಯರು ಉದ್ಯಮಶೀಲ ಕೆಲಸಗಾರರು, ಚತುರ ಬ್ಯಾಂಕರರು ಮತ್ತು ವ್ಯಾಪಾರಿಗಳು. ಆದರೆ ಪೆಲೆಸ್ತೈನದಲ್ಲಿ ಒಂದೋ ಒಕ್ಕಲುತನ ಮಾಡಬೇಕು, ಇಲ್ಲವೆ ಭಿಕ್ಷೆ ಬೇಡಿ ಜೀವನ ನಡಿಸಬೇಕು. ಇವೆರಡರ ಹೊರತು ಅಲ್ಲಿ ಬೇರೆ ಉದ್ಯೋಗವಿಲ್ಲ. ಆದರೂ ಸಾಹಸಿಗಳೂ ಸತತೋದ್ಯೋಗಿಗಳೂ ಆದ ಅವರು ಟೌನುಗಳಲ್ಲಿ ಸೇರಿ ಬೇರೆ ಬೇರೆ ಕಸುಬುಗಳನ್ನು ಕೈಕೊಂಡಿರುವರು. ಹೈಫ ಪಟ್ಟಣದ ಜನಸಂಖ್ಯೆಯನ್ನು 15 ವರ್ಷಗಳಲ್ಲಿ 6000 ದಿಂದ 60,000ಕ್ಕೇರಿಸಿರುವರು. ಟೆಲ್ ಅವಿವ್ ಎಂಬಲ್ಲಿ ಹೊಸತಾಗಿಯೇ ಒಂದು ಪಟ್ಟಣವನ್ನು ರಚಿಸಿರುವರು. 20 ವರ್ಷಗಳ ಮೊದಲು ಅಜ್ಞಾತವಾಗಿದ್ದ ಈ ಪಟ್ಟಣದಲ್ಲಿ ಈಗ 1,50,000 ಮಂದಿ ಇರುವರು. ಹೈಫದಲ್ಲಿ ಯೆಹೂದ್ಯರು ವ್ಯಾಪಾರ ಕೈಗಾರಿಕೆಗಳನ್ನೆಲ್ಲಾ ಬಹಳವಾಗಿ ಸ್ಥಾಪಿಸಿರುವರು. ಸಾಬೂನು, ಸಿಗರೇಟು, ಸಿಮೆಂಟು ಮತ್ತು ಮೋಟಾರ್ ಕಾರುಗಳನ್ನು ತಯಾರಿಸುತ್ತಿರುವರು. ಹಳಬರು ಕೆಲವರು ತೋಟಗಳನ್ನು ಮಾಡಿಕೊಂಡು ಕಿತ್ತಳೆ ಮೊದಲಾದ ಹಣ್ಣುಹಂಪಲುಗಳನ್ನು ಬೆಳೆಸಿ ಶಾಂತಪರ ಜೀವನ ಸಾಗಿಸುತ್ತಿರುವರು.

ಯೆಹೂದ್ಯರು ಎಷ್ಟು ಪ್ರಯತ್ನಿಸಿದರೂ ಪೆಲೆಸ್ತೈನವು ಇಷ್ಟರ ವರೆಗೆ ಅವರ ದೇಶವಾಗಿರುವುದಿಲ್ಲ. ಅಲ್ಲಿ ಅರಬರೇ ಪ್ರಬಲರಾಗಿದ್ದಾರೆ. ವಿಭಾಗಿಸಿ ಆಳುವ ತನ್ನ ನೀತಿಯ ಮೇರೆಗೆ ಪೆಲೆಸ್ತೈನವನ್ನೂ ಅರಬ ಮತ್ತು ಯೆಹೂದ್ಯರೊಳಗೆ ಹಂಚುವ ಪ್ಲೇನನ್ನು ಬ್ರಿಟಿಷ್ ಸರಕಾರವು ಮಾಡಿರುವುದು. ಇದನ್ನು ಅರಬರು ಉಗ್ರವಾಗಿ ವಿರೋಧಿಸಿ ಪೆಲೆಸ್ತೈನದಲ್ಲಿ ದೊಡ್ಡ ಬಂಡಾಯವೇ ಎದ್ದು ನೂರಾರು ಮಂದಿ ಕೊಲ್ಲಲ್ಪಟ್ಟಿರುವರು. ಲೋಕದ ಮುಸಲ್ಮಾನರಲ್ಲೆಲ್ಲಾ ಇದರಿಂದಾಗಿ ತೀವ್ರ ಅತೃಪ್ತಿಯುಂಟಾಗಿರುವುದು. ಪೆಲೆಸ್ತೈನವು ಅರಬರ ರಾಜ್ಯ ಆದುದರಿಂದ ಅದರಲ್ಲಿ ಅರಬರ ಅಧಿಕಾರವೇ ನಡೆಯಬೇಕಲ್ಲದೆ ಹೊರಗಣ ಯೆಹೂದ್ಯರ ರಾಜ್ಯವನ್ನಾಗಿ ತಾವದನ್ನು ಮಾಡಬಿಡೆವೆಂದು ಅರಬರ ಸಾಧನೆ. ತಮ್ಮ ಪುರಾತನ ನಾಡಾದ ಪೆಲೆಸ್ತೈನವು ತಮ್ಮ ರಾಷ್ಟ್ರೀಯ ನಿವಾಸವಾಗಬೇಕೆಂದು ಅರಬರ ಚಳವಳ. ಮುಂದೇನಾಗಲಿರುದೋ ನೋಡಲಿದೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

ಜಗತ್ಪ್ರಸಿದ್ಧ

"ಗೊನೊಕಿಲರ್" ರಿಜಿಸ್ಟರ್ಡ್

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಸಕಲ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನು "ಗೊನೊಕಿಲ್ಲರ್" ಹೆಸರನ್ನೂ ಗಮನಿಸಿರಿ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದುವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬೌಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ole Manufacturer **Dr D N JASANI,** Vitalbhai Patel Road, BOMBAY 4,

ಕಮ್ಮಿ ಕ್ರಯದ ಖಾತ್ರಿ ವಾಚುಗಳು



ಈಗತಾನೆ ಬಂದ ನಮ್ಮ ಹೊಸ ಸ್ಟಾಕಿನ ನವೀನ ವಾಚುಗಳು ಅಗ್ಗವಾದ ಇತರ ಎಲ್ಲಾ ವಾಚುಗಳಿಗಿಂತ ಖಾತ್ರಿಯಾಗಿವೆ. ಹೆಚ್ಚು ಬಾಳಿಕೆಬರುವ ಮತ್ತು ಸರಿ ಸಮಯ ಸೂಚಿಸುವ ಲಿವರ್ ವಾಚುಗಳಾಗಿವೆ. ಖಾತ್ರಿ 3 ವರುಷದ ಗ್ಯಾರಂಟಿ. ನಿಕ್ಕಲ್ ಕೇಸಿನ ಒಂದು ವಾಚಿಗೆ ರೂ 2-0-0 ಬಂಗಾರದಕ್ಕೆ ರೂ. 3-4-0. 1ರಿಂದ 3 ವಾಚುಗಳವರೆಗೆ 10ಆಣೆ ಟಪ್ಪಾಲುಖರ್ಚು ಬೀಳುತ್ತೆ. ನಂತರದ ಪ್ರತಿ 1ಕ್ಕೆ 4ಆಣೆ ಮಾತ್ರ ಹೆಚ್ಚು.

ಟಿ. ಜ. ಎಂಡ್ ಕೋ.,
ಪೋಸ್ಟ್ ಬಾಕ್ಸ್ ನಂಬ್ರ 6757, ಕಲ್ಕತ್ತ.

T. Jha & Co.,
Post Box No. 6757, Calcutta.

ಈ ವಾರದ ನಿಮ್ಮ ಭವಿಷ್ಯ

ತಾ 3—11—38ರಿಂದ 10—11—38ರ ವರೆಗೆ

[ಜ್ಯೋತಿಷವು ಅಸ್ಪಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ ಸಂ ನ.]

ಮಕರ ರಾಶಿಯವರ ಗ್ರಹಸ್ಥಿತಿಯು ಅತ್ಯುತ್ತಮವಿರುವುದು.
ಧನು ರಾಶಿಯವರ ಗ್ರಹಸ್ಥಾನವು ಉತ್ತಮರೀತಿಯಲ್ಲಿರುವುದು.
ಮೇಷ, ತುಲಾ, ವೃಶ್ಚಿಕ, ಈ ಮೂರು ರಾಶಿಯವರ ಭವಿಷ್ಯವು ಮಧ್ಯಮ ತರಗತಿಯದಹುದು.
ವೃಷಭ, ಕರ್ಕಾಟಕ, ಸಿಂಹ, ರಾಶಿಗಳವರ ಫಲವು ಕನಿಷ್ಠ ತರಗತಿಯಲ್ಲಿರುವುದು.
ತುಲಾ, ಕುಂಭ, ಮೀನ, ಈ ರಾಶಿಗಳವರ ಗ್ರಹಗತಿಯು ಕೆಟ್ಟಿರುವುದು.
ಮಿಥುನ ರಾಶಿಯವರಿಗೆ ಗ್ರಹಾನುಕೂಲವು ಏನೂ ಇಲ್ಲವು.

ಮೇಷರಾಶಿ—

ಆರ್ಥಿಕದೃಷ್ಟಿಯಿಂದ ನೋಡುವುದಾದರೆ ನಿಮಗೀವಾರದಲ್ಲಿ ಆಯವ್ಯಯಗಳು ಸಮಾನವಾಗಿರುವವು. ಆದ್ದರಿಂದ ಧನ ವಿಷಯದಲ್ಲಿ ನೀವು ನಿಶ್ಚಿಂತರಾಗಿರುವಿರಿ. ದೇಹಾರೋಗ್ಯವು ಸರಿಯಾಗಿ ಉಳಿಯಲಾರದು. ಪ್ರವಾಸಕ್ಕೆ ಈ ಕಾಲವು ಒಳ್ಳೆಯದಿಲ್ಲ. ಹೆಚ್ಚಾದ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಸ್ವೀಕೃತ ಕೆಲಸಗಳು ಸುಗಮವಾಗಿ ನೆರವೇರುವವು. ಶತ್ರುಗಳ ಭಯವು **ಈಷತ್ತೂ** ಇಲ್ಲವು. ಗೃಹಸಂಪತ್ತುಗಳು ಬಹಳ ಉತ್ತಮಸ್ಥಿತಿಯಲ್ಲಿರುವವು. ಸಂಪನ್ನಸ್ತ್ರೀಯರ ಪರಿಚಯವಾಗುವುದು. ಶೋಕಾಕುಲಿತರಿಂದ ನಿಮಗೆ ಮಾನಸಿಕ ಸುಖವಿಲ್ಲವು. ತಾ 3, 7, 8 ಮಿತ್ರಪ್ರಾಪ್ತಿ, ಸುಖಲಾಭ.

ವೃಷಭರಾಶಿ—

ಹೊರಗಿನ ಶತ್ರುಗಳ ಪೀಡೆಯು ನಿಮಗಿಲ್ಲದಿದ್ದರೂ ನಿಮ್ಮ ಗೃಹಸಂಬಂಧಿಗಳಾದ ಜನರು ಶತ್ರುಗಳಿಗಿಂತಲೂ ಹೆಚ್ಚಾಗಿ ಪೀಡಿಸುವರು. ಕುಟುಂಬದಲ್ಲಿ ಮನಸ್ತಾಪವು ಹೆಚ್ಚಿ ಸಹಜಾತರಿಂದಲೂ ಸ್ತ್ರೀಪುತ್ರರಿಂದಲೂ ಕೂಡ ವಿರೋಧವುಂಟಾಗುವುದು. ಶರೀರಪೀಡೆಯು ಹೆಚ್ಚುವುದು. ಖರ್ಚಿನ ಭಾಗಗಳು ಅಧಿಕಾಧಿಕವಾಗಿ ಪರಿಣಮಿಸಿದರೂ ಈ ಭಾಗದಲ್ಲಿ ಅಡಚಣೆಯುಂಟಾಗಬಾರದು. ವ್ಯವಹಾರದಲ್ಲಿ ಜಯವಿದ್ದರೂ ಉದ್ಯೋಗಭಾಗದಲ್ಲಿ ತೃಪ್ತಿಯಿಲ್ಲವು. ಸ್ತ್ರೀಹೇತುಕವಾದ ಅನಿಷ್ಟಗಳು ಸಂಭವಿಸುವ ಯೋಗವಿದೆ. ತಾ 7, 8, ಇವುಗಳಲ್ಲಿ ಹೆಚ್ಚಿನ ಧನವ್ಯಯವೂ, ದೇಹಾಲಸ್ಯವೂ ಉಂಟಾಗುವದು.

ಮಿಥುನರಾಶಿ—

"ಪ್ರಯೋಜನಮನುದ್ದಿಶ್ಯ ನ ಮಂದೋಪಿ ಪ್ರವರ್ತತೇ" ಅಂದರೆ ಏನೊಂದೂ ಫಲಾಪೇಕ್ಷೆಯಿಲ್ಲದೆ ಮೂರ್ಖನೂ ಕೂಡ ಒಂದು ಕಾರ್ಯದಲ್ಲಿ ಪ್ರವೇಶಿಸುವುದಿಲ್ಲವೆಂದು ಬಲ್ಲವರ ಹೇಳಿಕೆ. ಅಂತಯೇ ನೀವೂ ಕೂಡ ಪ್ರಯೋಜನವನ್ನುದ್ದೇಶಿಸಿಯೇ ಕಾರ್ಯದಲ್ಲಿ ಪ್ರವೃತ್ತಿ ಮಾಡುವಿರಿ. ಆದರೇನುದ್ದೈವೇಚ್ಛೆಯು ವಿಪರೀತವಾಗಿರುವುದರಿಂದ ನಿಮ್ಮ ಕಾರ್ಯವು ಫಲಕಾರಿಯಾಗುವುದಿಲ್ಲವು. ಇದಕ್ಕನುಕೂಲವಾಗಿ ಶತ್ರುಗಳೂ ವರ್ತಿಸುತ್ತಿದ್ದಾರೆ. ನಿಮ್ಮ ಚಿತ್ತವೃತ್ತಿಯೂ ಕೂಡ ನಿಮ್ಮ ಹತೋಟಿಗೆ ಸಿಲುಕದ ವಿಪರೀತವಾಗಿ ಹರಿದಾಡುವುದು. ಕಾರ್ಯಗಳಿಗೆ ಮೇಲಿಂದ ಮೇಲೆ ವಿಘ್ನಗಳು ಬರುತ್ತಲೇ ಇರುವವು. ಉಷ್ಣವಿಕಾರದಿಂದುಂಟಾದ ಉದರಪೀಡೆಯೂ ಅಧಿಕವಾಗಿ ಶಾರೀರಿಕ ಮಾನಸಿಕ ಸುಖಗಳಿಗೆ ಸಂಪೂರ್ಣ ಹಾನಿಯಾಗುವುದು. ಅಂತೂ ಈ ವಾರದಲ್ಲಿ ಯಾವ ಭಾಗದಲ್ಲಿ ನೋಡಿದರೂ ಒಳ್ಳಿತಿಲ್ಲವು. ವಾರದ ಆದ್ಯಂತದಿನಗಳು ಹೆಚ್ಚಿನ ಹಾನಿಕರಗಳಿರುವವು.

ಕರ್ಕಾಟಕರಾಶಿ—

ಹೆಚ್ಚಿನಂಶ ಈ ವಾರವು ಚೆನ್ನಾಗಿಲ್ಲವು. **ಇಷ್ಟೇಷ್ಟರಲ್ಲೂ** ವೈಮನಸ್ಸುಂಟಾಗುವುದು. ನಿಮ್ಮಲ್ಲಿ ಧರ್ಮಬುದ್ಧಿಯಿದ್ದರೂ ಕಾರ್ಯತಃ ನೀವು ಧರ್ಮದ್ರೋಹಿಗಳಾಗಿತೋರುವಿರಿ. ಇದರಿಂದ ಮಾನಹಾನಿ, ಹೆಚ್ಚಿನ ಶೋಕ ಇತ್ಯಾದಿಗಳಿಗೆ ಗುರಿಯಾಗುವಿರಿ. ದುಃಖದಾಯಕವಾದ ನಿಮ್ಮ ಕೌಟುಂಬಿಕ ಜೀವನದಲ್ಲಿ ಅಸಡ್ಡೆ ತೋರಿಬರುವುದು. ಶರೀರವು ಆರೋಗ್ಯವಾಗಿರುವಂತಿಲ್ಲವು. ಪ್ರವಾಸಕ್ಕೆ ಈ ವಾರವು ಪ್ರಶಸ್ತವಲ್ಲ. ಆದರೂ ಆರ್ಥಿಕಭಾಗದಲ್ಲಿ ನಿಮ್ಮ ಅದೃಷ್ಟವು ಚೆನ್ನಾಗಿದೆ. ಖರ್ಚಿಗಿಂತಲೂ ಹೆಚ್ಚಿಗೆ ಸಂಪಾದಿಸುವಿರಿ. ಮಾತ್ರವಲ್ಲ, ವಂಚಕ, ತಸ್ಕರ ಮೊದಲಾದವರಿಂದ ಧನಲಾಭವಾಗುವ ಯೋಗವಿದೆ. ವನಿತಾಸುಖವು ಪೂರ್ತಿಯಾಗಿಹುದು. ವಾರದ ಆದ್ಯರ್ಧದಿನಗಳಲ್ಲಿ ರಾಜಭಯ, ಬಂಧನ, ಆಯಾಸಗಳುಂಟಾಗುವವು.

ಸಿಂಹರಾಶಿ—

ನಿಮ್ಮ ಪೂರ್ವಸ್ಥಿತಿಗೇನೂ ಹಾನಿಯಾಗುವಂತಿಲ್ಲವು. ನಿಮ್ಮ ಕಷ್ಟಾರ್ಜಿತವಾದ ಹಣದಲ್ಲಿ ಪರಕೀಯರ ದೃಷ್ಟಿಯು ಬಿದ್ದಿರುವುದರಿಂದ ಈ ಭಾಗದಲ್ಲಿ ಜಾಗ್ರತ ವಹಿಸತಕ್ಕದ್ದು, ತಿಳಿದೂ ತಿಳಿದೂ ದುಷ್ಕಾರ್ಯವನ್ನು ಮಾಡಿ ಆ ಮೇಲೆ ಅದರಿಂದ ಮುಕ್ತರಾಗಲು ಬಹಳ ಹೆಣಗಾಡುವಿರಿ. ಉಷ್ಣ ಮತ್ತು ಪಿತ್ಥ ಇವುಗಳ ಉದ್ರೇಕದಿಂದಾಗಿ ಶರೀರಪೀಡೆಯು ಅಧಿಕವಾಗುವುದು. ಅಂಗಾಂಗಗಳಲ್ಲಿ ನೋವು ತೋರಿಬರುವುದು. ಕುಟುಂಬದ ಜನರ ವಿಯೋಗವಾಗುವದು. ಈದಾವ ಕಷ್ಟಗಳಿಂದ ದುಃಖಿತರಾದ ನಿಮಗೆ ಧನವ್ಯಯವು ಅಧಿಕವಾಗುವುದು. ಈ ಕಾಲದಲ್ಲಿ ನಿಮಗೆ ಮಿತ್ರರು ತುಂಬಾ ಸಹಾಯ ಮಾಡುವರು. ತಾ. 3, 9, 10 ಈ ದಿನಗಳಲ್ಲಿ ಇಷ್ಟಸಿದ್ಧಿ, ಸಂತೋಷ.

ಕನ್ಯಾರಾಶಿ—

ವಿರೋಧಿಗಳ ಪೀಡೆಗೆ ಸಿಲುಕಿದ ನಿಮಗೆ ಮನೋರೋಗವು ಪ್ರಬಲವಾಗಿ ಮಾನಸಿಕಸುಖವನ್ನು ನಾಶಮಾಡುವುದು. ಅಕಸ್ಮಾತ್ ಸಂಭವಿಸುವ ಅಪಘಾತದಿಂದಾಗಲೂ ನೇತ್ರರೋಗದಿಂದ ಶರೀರಪೀಡೆಯಿಂದಲೂ ವ್ಯಾಕುಲರಾಗುವಿರಿ. ಸುಖವು ಇಲ್ಲವೆನಬಹುದು. ಕಾರ್ಯಗಳಲ್ಲಿ ಅಪಜಯ ಹೊಂದಿ ಹೆಚ್ಚಿನ ನಷ್ಟಕ್ಕೆ ಗುರಿಯಾಗುವಿರಿ. ಮತ್ತು ಅನಿಷ್ಟಗಳೂ ಕೂಡ ಒಂದರಹಿಂದೆ ಒಂದಾಗಿ ಬರುತ್ತಲೇ ಇರುವವು. ಪರರಲ್ಲಿ ವಿಶ್ವಾಸವಿಡುವುದಂತಿರಲಿ, ನಿಮ್ಮಲ್ಲೇ ನಿಮಗೆ ಭರವಸೆಯಿಲ್ಲವು ಎಂಬಂತೆ ತೋರುವುದು. ಶಯನಸ್ತ್ರೀಸುಖಗಳ ಹೊರತಾಗಿ ನಿಮಗೆ ಬೇಕಾದ ಅನುಕೂಲತೆಗಳಿರುವವು. ತಾ. ೮ರಿಂದ ೧೦ವರೆಗಿನ ದಿನಗಳಲ್ಲಿ ವಾಹನಾದಿಗಳ ಯಾನ, ಕಿಂಚಿದಾರೋಗ್ಯ ಸುಖ.

ತುಲಾರಾಶಿ—

ಶರೀರದೌರ್ಬಲ್ಯದಿಂದಾಗಿ ಹೆಚ್ಚಿನ ಆಯಾಸವು ಯಾವಾಗಲೂ ಕಂಡುಬಂದೀತು. ಸ್ತ್ರೀಜನರಲ್ಲಿ ಕಲಹವಾಗುವುದು. ಪಿತ್ತವಿಕಾರದ ದೋಷಗಳು ದೇಹದಲ್ಲಿ ಕಂಡುಬಂದರೂ ಕೂಡಲೇ ಉಪಶಮನವಾಗುವವು. ಇನ್ನಿತರ ಭಾಗಗಳಲ್ಲಿ ಏನೂ ಕೊರತೆಕಾಣದು. ಮಿತ್ರಜನರ ಸಹಾಯವು ನಿಮಗೆ ಚೆನ್ನಾಗಿರುವುದರಿಂದ ಸಕಲ ಕಾರ್ಯಗಳಲ್ಲೂ ಜಯಪ್ರಾಪ್ತಿಯಾಗುವುದು. ಶತ್ರುಜನರ ಸುಳಿವೇ ಅಡಗಿಹೋಗುವುದು. ವ್ಯಾಪಾರಾದಿ ಉದ್ಯೋಗಗಳಲ್ಲಿ ಹೆಚ್ಚಿನ ಧನಲಾಭವಾದರೂ ಸ್ವಾರ್ಥಕ್ಕಾಗಿ ವ್ಯಯವಾಗುವುದು. ವಾರಾರಂಭದಲ್ಲಿ ಬಂಧುಜನರೊಡನೆ ಮನಸ್ತಾಪವುಂಟಾದರೂ ಆ ಮೇಲೆ ನಿವಾರಿಸಲ್ಪಡುವುದು. ತಾ 3, 9, 10ರಲ್ಲಿ ಪ್ರವಾಸ, ಕಾರ್ಯಕ್ಕೆ ವಿಘ್ನ ಇತ್ಯಾದಿ ಅನಿಷ್ಟಗಳು ತಲದೋರುವವು.

ವೃಶ್ಚಿಕರಾಶಿ—

ನಾಲಿಗೆಯನ್ನು ಹಿಡಿತದಲ್ಲಿಟ್ಟುಕೊಳ್ಳುವುದು ನಿಮ್ಮಿಂದ ಸಾಧ್ಯವಲ್ಲದ ಕೆಲಸ. ಆದ್ದರಿಂದಲೇ ಹೆಚ್ಚಿನವರೊಡನೆ ಕಲಹ, ಅಪಮಾನಗಳನ್ನು ಹೊಂದುವಿರಿ. ಇದಕ್ಕೆ ನಿಮ್ಮ ಕೃಪಣತನವು ಮತ್ತಷ್ಟು ಸಹಕಾರಿಯಾಗಿರುವುದು. ಸತ್ಕರ್ಮಗಳಲ್ಲೇನೇ ಪ್ರವರ್ತಿಸಿದರೆ ಮಿತ್ರಜನರ ಅನುಕೂಲಪರಿಚಯ ಇವುಗಳು ಹೆಚ್ಚಿ ಅಭಿವೃದ್ಧಿಯನ್ನೈದುವಿರಿ. ಸಾಂಪತ್ತಿಕ ಭಾಗವು ಸುಧಾರಣೆಯಾಗುವುದು. ಗೃಹಸಂಪತ್ತು ಚಿರಸ್ಥಾಯಿಯಾಗುವುದು. ಸುಖ, ಪರಸ್ತ್ರೀಸಂಬಂಧವಾದ ಧನಗಳೂ ಲಭಿಸುವವು. ಆರೋಗ್ಯವು ಚೆನ್ನಾಗಿದ್ದು ಕಾರ್ಯನಿರ್ವಹಣಕ್ಕೆ ಬೇಕಾದ ಶಕ್ತ್ಯುತ್ಸಾಹಗಳು ಹೆಚ್ಚುವವು. ವಾರದ ಆದ್ಯರ್ಧದಲ್ಲಿ ನಿಮ್ಮ ವಚನನಿಷ್ಠುರತೆಯಿಂದ ಬಂಧುಗಳಿಗೆ ನಿಮ್ಮಲ್ಲಿ ಅವಿಶ್ವಾಸವೂ, ಕೆಲವು ಕಾರ್ಯಗಳಿಗೆ ವಿಘ್ನವೂ ಕಲಹವೂ ಪ್ರಾಪ್ತವಾಗುವುದು.

ಧನುರಾಶಿ—

ನಿಮ್ಮ ಬುದ್ಧಿಯ ದೌರ್ಬಲ್ಯದಿಂದಾಗಿ ಮನಸ್ಸು ಅಕಾರ್ಯದಲ್ಲಿ ಮುಂದರಿವುದರಿಂದ ನಿಮ್ಮ ಆಪ್ತಮಿತ್ರರಿಗೆ ನಿಮ್ಮಲ್ಲಿ ದ್ವೇಷವುಂಟಾಗುವುದು. ಈ ಕಾರಣದಿಂದಾಗಿ ನಿಮ್ಮ ಕಾರ್ಯಗಳಿಗೆ ಕೆಲವಂಶವಷ್ಟು ವಿಘ್ನಗಳು ಒದಗಲಿವೆ. ಆದರೂ ಹೆಚ್ಚಿನ ಗ್ರಹರ ಅನುಕೂಲಸ್ಥಿತಿಯಿಂದಾಗಿ ಸಮಾಜದಲ್ಲಿ ಮುಖ್ಯಸ್ಥಾನವನ್ನು ಹೊಂದಿ ಗೌರವ ಹೊಂದುವಿರಿ. ಕಾರ್ಯಗಳಲ್ಲಿ ಜಯವನ್ನು ಸಂಪಾದಿಸಿ ಧನಲಾಭ, ಮಾನ

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ „ „ 0—1—3
೩ ಮೆಡಿಕೇಟೆಡ್ ನಂ. ೧ ಸೀಸೆಯ . 0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅಮೃತ. ಬೆಲೆ 0-4-0, 0-2-0.

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-4-0.

ಹಿಮತೈಲ

ಮಂಡೆಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ನಹಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ. ಬೆಲೆ. 0-8-0 ಮತ್ತು ರೂ 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:— ಕುಂದಾಪುರ-ಶಾಮರಾವ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ-ಜಿ. ಕೃಷ್ಣ ಕಾಮತರ, ಆಯುರ್ವೇದೀಯ ಔಷಧಗಳ ಏಜಂಟರು, ಕಾರ್ಕಳ-ವಿ. ವಿ. ಶೆಣೈ-ಕೆಮಿಸ್ಟ್. ಕಾಸರಗೋಡು ಭಕ್ತ ಪ್ರಧಾನ ಮತ್ತು ಶ್ರೀರಾಮ ಸ್ಟೇಶನರಿ ಹೌಸ್, ಪುತ್ತೂರು-ಬಿ ಪಾಂಡುರಂಗ ಗೋವಿಂದ ಭಂಡಾರಿ ಮತ್ತು ಸೈ ಡಿಸ್ಪೆನ್ಸರಿ, ಮೂಲ್ಕಿ ಬಿ ಎಸ್ ಸೀತಾರಾಮ ಮ್ಯಾನುಫೇಕ್ಚರ್, ಜನರಲ್ ಮರ್ಚಂಟ್, ಮೂಡಬಿದ್ರೆ ಸಂಜೀವ ಶೇನಗಿರಿ ಪ್ರಭು ಬ್ರದರ್ಸ್, ಬಂಟ್ವಾಳ ಪ್ರಭು ಅಂಡ್ ಕೋ, ಉಡುಪಿ ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ

ಲಾಭಗಳನ್ನು ಪಡೆದು ಕೀರ್ತಿವಂತರಾಗು ವಿರಿ. ಶುಭ ಕಾರ್ಯಗಳು ಕ್ರಮವಾಗಿ ಜರಗುವವು. ಉದ್ಯೋಗಿಗಳಿಗೆ ಉದ್ಯೋಗದಲ್ಲಿ ಧನಲಾಭವು ತೃಪ್ತಿಕರವಾಗಿರುವುದರಿಂದ ಸಂಸಾರ ರಥವು ಸುಗಮವಾಗಿ ಚಲಿಸುವದು. ವಾರದ ಮಧ್ಯಭಾಗದಲ್ಲಿ ಆರೋಗ್ಯದಲ್ಲಿ ಸ್ವಲ್ಪ ನ್ಯೂನತೆ, ಪ್ರವಾಸದಲ್ಲಿ ಕೆಲವು ಆಪತ್ತುಗಳು ಕಂಡುಬರುವವು.

ಮಕರರಾಶಿ—

ಅಹೋರಾತ್ರಿಯಂತ ಮನುಷ್ಯನಿಗೆ ಸುಖದುಃಖಗಳು ಕ್ರಮವಾಗಿ ಪರಿವರ್ತನ ಹೊಂದುತ್ತಲೇ ಇರುವವು. ಇಂದೀಗ ನಿಮ್ಮ ಅದೃಷ್ಟ ಚಕ್ರದ ಭಾಗ್ಯರವಿಯು ಅರುಣಾಚಲಕ್ಕೆ ಬಂದಿರುವನು. ಆದ್ದರಿಂದಲೇ ಯಾವ ಭಾಗದಲ್ಲಿ ನೋಡಿದರೂ ಈ ವಾರವು ನಿಮಗೆ ಅತ್ಯನುಕೂಲವಾಗಿರುವುದು. ದೇಹಾರೋಗ್ಯವು ಉತ್ತಮ ತರಗತಿಯಲ್ಲಿರುವುದು. ಧನಸಂಪತ್ತು ನಿಮಗೆ ಚೆನ್ನಾಗಿರುವುದರಿಂದ ಜನಬೆಂಬಲವೂ ಬಹಳವಾಗಿದೆ. ಶತ್ರುಗಳು ನಾಮಾವಶೇಷರಾಗುವುದರಲ್ಲಿ ಸಂದೇಹವಿಲ್ಲ. ಕಾರ್ಯಸಿದ್ಧಿಯು ನಿಮ್ಮ ಹಸ್ತಗತವಾಗಿರುವುದು. ಕೋರ್ಟು ಕಚೇರಿಗಳಲ್ಲಿನ ವ್ಯವಹಾರಗಳು ನಿಮ್ಮಂತೆಯೇ ಕೊನೆಹೊಂದುವವು. ಪಶ್ವಾದಿ ಸಮಸ್ತ ಸಂಪತ್ತುಗಳಿಂದ ಕೂಡಿದ ಗೃಹಕೃತ್ಯವು ಮನಸ್ಸಿನ ಸಮಾಧಾನಕ್ಕೆ ಕಾರಣವಾಗಿರುವುದು. ವಾರದ ಅಂತ್ಯಾರ್ಧದಲ್ಲಿ ದೇಹಾಲಸ್ಯವೂ ವ್ಯಸನವೂ ತಲೆದೋರಬಹುದು

ಕುಂಭರಾಶಿ—

ಗ್ರಹಚಾರವು ಬಹಳ ಕೆಟ್ಟಿರುವುದು. ಬುಧಹೊರತಾದ ಸಕಲ ಗ್ರಹರೂ ನಿಮ್ಮ ಭಾಗಕ್ಕೆ ಶತ್ರುಗಳಂತಾಗಿರುವರು. ಆತವಿವ ಶತ್ರುಗಳ ಪೀಡೆಯೂ ಧನವ್ಯಯವೂ ಅತ್ಯಧಿಕವಾಗಿರುವುದು. ಕೊಟ್ಟ ಸಾಲವು ಹಿಂದಕ್ಕೆ ಸಿಗುವುದು ಬಹಳ ಕಷ್ಟ. ಕೋರ್ಟುಗಳಿಗೇ ಹೋಗುವ ಅವಶ್ಯಕತೆ ಬರುವುದು. ಧನವ್ಯಯದಿಂದ ಅತ್ಯಂತ ಸಂತಪ್ತವಾದ ನಿಮ್ಮ ಬುದ್ಧಿಗೆ ಏನುಮಾಡಬೇಕೆಂದೂ ತೋಚದು. ಮಿತ್ರಜನರೂ ಕೂಡ ಶತ್ರುಗಳಂತೆ ವರ್ತಿಸುವರಂದಮೇಲೆ ಇತರ ಸಾಮಾನ್ಯ ಜನರ ವಿಷಯವೇನು? ಧನಸುಖಹೀನರಾದ ನಿಮಗೆ ಮಾನಾಪಮಾನದೊಡನೆ ಸಿಟ್ಟೇ ಮುಂದಾಗಿ ಬರುವುದರಿಂದ ಜನರಲ್ಲಿ ಕಲಹವು ಹೆಚ್ಚಾಗುವುದು. ಹಣದ ಅಡಚಣಿಯು ಹೇಳತೀರದು. ಆದರೂ ತಾ. 3, 7, 8ರ ಮಟ್ಟಿಗೆ ಕೆಲವು ಕಾರ್ಯಗಳಲ್ಲಿ ಜಯವಿರುವುದರಿಂದ ಸ್ವಲ್ಪಮಟ್ಟಿಗೆ ಧನಲಾಭವಾಗುವ ಯೋಗವಿದೆ.

ಮೀನರಾಶಿ—

"ಸ್ನಿಗ್ಧಜನಸಂವಿಭಕ್ತಂ ಹಿ ದುಃಖಂ ಸಹ್ಯವೇದನಂ ಭವತಿ" ಆತ್ಯಾಸಕ್ತಿಗೊಳಗಾದ ಪುರುಷನು ಸಹಿಸಲಾರದ ತನ್ನ ದುಃಖವನ್ನು ಮಿತ್ರಜನರೊಡನೆ ಹೇಳುವುದರಿಂದ ಆ ದುಃಖದಲ್ಲಿ ಅವರೂ ಕೂಡ ಭಾಗಿಗಳಾಗಿ ಈತನ ದುಃಖವು ಕಡಿಮೆಯಾಗಿ ತದ್ವಿಷಯಕ ವೇದನೆಯು ಸಹಿಸಲು ಸಾಧ್ಯವಾಗುವುದು ಎಂದು ಕಾಳಿದಾಸನು ಹೇಳಿರುವನು ಸಹಜ. ನೀವೂ ಕೂಡ ಅಸಾಧ್ಯವಾದ ಆಪತ್ತಿಗೊಳಗಾಗಿರುವಿರಿ. ಈ ನಿಮ್ಮ ದುಃಖವನ್ನು ನಿಮ್ಮ ಮಿತ್ರರಿಗೆ ವಾಟವಾಡಿ ಹಂಚಿಕೊಡೋಣವೆಂದರೆ ನಿಮಗೆ ಮಿತ್ರರೇ ಇಲ್ಲದಂತಾಗಿರುವುದಕ್ಕೆ ಯಾರನ್ನು ದೂರಬೇಕು? ಅನಾರೋಗ್ಯವು ನಿಮ್ಮನ್ನು ಸಂಪೂರ್ಣ ಆವರಿಸಿರುವುದು ಮನೆಯವರಿಗೇ ನಿಮ್ಮ ಗುಣವು ಸರಿದೋರಿಬರುವುದಿಲ್ಲವು ಅಂದಮೇಲೆ ಮಿತ್ರರ ವಿಷಯ ಹೇಳಬೇಕಾಗಿಲ್ಲ. ಕಾರ್ಯಾರಂಭಕ್ಕೆ ಮುಂಚಿತವಾಗಿ ವಿಘ್ನಗಳು ಬಂದು ಕುಳಿತಿರುವವು. ಮನೋವ್ಯಥೆಯು ನಿಮ್ಮನ್ನು ಅರ್ಧಕ್ಕರ್ಧ ಕುಗ್ಗಿಸಿಬಿಡುವುದು ತಾ. 4, 5, 9, 10ರಲ್ಲಿ ಧರ್ಮಕಾರ್ಯದಲ್ಲಿ ಪ್ರವರ್ತಿಸುವುದರಿಂದ ತತ್ಸಂಬಂಧವಾಗಿ ಜಯಧನಗಳು ಸಿಗುವವು.

ವಿಚಿತ್ರ ಅವಳಿಜವಳಿ ಮಕ್ಕಳು

೪೫ನೇ ವಯಸ್ಸಿನಲ್ಲಿ ೪೨ ಮಕ್ಕಳ ತಾಯಿ.
೫೬ರಲ್ಲಿ ಸಾಯುವಾಗ ೬೯ ಮಕ್ಕಳು.

ಒಟ್ಟಿಗೆ ಜನನ, ಒಟ್ಟಿಗೆ ಕೆಲಸ, ಒಟ್ಟಿಗೆ ಮದುವೆ, ಒಟ್ಟಿಗೆ ಮರಣ— ಒಂದು ಮಗು ಹೆತ್ತು ೩ ತಿಂಗಳ ನಂತರ ಇನ್ನೊಂದು ಮಗು ಒಂದೇ ಭಾವ, ಒಂದೇ ಹೃದಯ, ಒಂದೇ ರೀತಿಯ ರೋಗರುಜೆಯ ಅವಳಿ ಮಕ್ಕಳು.

ಅಮೇರಿಕದ ಪ್ರಖ್ಯಾತ ಪಂಚ ಶಿಶುಗಳು ಆದೊಂದು ಅದ್ಭುತವೆಂದೇ ಪರಿಗಣಿಸಲ್ಪಟ್ಟಿವೆ. ಯಾಕೆಂದರೆ ಅವು 1 ದಿವಸಗಳಿಗಿಂತ ಹೆಚ್ಚು ಕಾಲ ಬದುಕಿಯುತ್ತವೆ. ಒಂದೇ ಸವನೆ ಹೀಗೆ ನಾಲ್ಕೈದು ಮಕ್ಕಳನ್ನು ಹೆರುವುದು ಜನರು ಸರ್ವಸಾಮಾನ್ಯ ಭಾವಿಸುವಷ್ಟೇನೂ ಅಪರೂಪವಲ್ಲ. 1691 ರಿಂದ ಈ ವರೆಗೆ 30 ಪಂಚ ಶಿಶುಗಳು ಹುಟ್ಟಿರುತ್ತವೆಂದು ವೈದ್ಯಕೀಯ ಇತಿಹಾಸದಿಂದ ತಿಳಿದುಬರುತ್ತದೆ. ಒಂದೇ ಸವನೆ ಆರು ಮಕ್ಕಳನ್ನು 6 ಮಂದಿ ಹೆತ್ತಿರುವುದು ಮಾತ್ರಯಾಗಿ ತಿಳಿದುಬಂದಿದೆ. ಒಮ್ಮೆಯೇ 7 ಮಕ್ಕಳನ್ನು ಹೆತ್ತ ಒಂದೇ ಒಂದು ಉದಾಹರಣೆಯಿದೆ. ಹೆಮ್ಲಿನ್ ಎಂಬ ಪಟ್ಟಣದ ಹಳೆಯ ಮನೆಯೊಂದರಲ್ಲಿ 1600ನೇ ಇಸ್ವಿ ಜನವರಿ ತಾ. 3ರಲ್ಲು ಮಧ್ಯರಾತ್ರಿಯ ನಂತರ 3 ಘಂಟೆಗೆ 7 ಮಕ್ಕಳನ್ನು ಹೆತ್ತ ದಾಖಲೆಯಿದೆ. ಬಿಳಿ ಜನರಿಗಿಂತಲೂ ಇತರ ವರ್ಣೀಯರಲ್ಲಿ ಅವಳಿಜವಳಿ ಮಕ್ಕಳು ಹುಟ್ಟುವುದು ಹೆಚ್ಚೆಂದು ಬ್ರಿಟಿಷ್ ವೈದ್ಯಕೀಯ ಪತ್ರಿಕೆಯ ಅಭಿಪ್ರಾಯ. ಬಿಳಿಜನಾಂಗಗಳ ಪ್ರಕಿರಸ್ಯದಲ್ಲಿ ಪ್ರತಿ 43 ಜನನಕ್ಕೊಂದರಂತೆ ಅವಳಿಜವಳಿ ಮಕ್ಕಳು ಹುಟ್ಟುತ್ತವೆ. ಒಮ್ಮೆಯೇ 3 ಮಕ್ಕಳು ಹುಟ್ಟುವ ಸಂದರ್ಭ ಬರುವುದು 7633 ಜನನಕ್ಕೊಂದು. ನಾಲ್ಕು ಮಕ್ಕಳು ಒಂದೇ ಸವನೆ ಹುಟ್ಟುವುದು 670,000 ಜನನಕ್ಕೊಮ್ಮೆ. ಪಂಚ ಶಿಶುಗಳು ಜನಿಸುವುದು ಎಲ್ಲಿಯಾದರೂ 57,000,000 ಜನನಕ್ಕೊಮ್ಮೆ.

ಅವಳಿಜವಳಿ ಮಕ್ಕಳನ್ನು ಹೆರುವ ಪ್ರವೃತ್ತಿಯು ವಂಶಪಾರಂಪರ್ಯವಾಗಿ ಬರುವುದು. ಚೈನದ ಹೋಂಕೋಂಗ್ ಪಟ್ಟಣದ ಬಳಿ 16 ವರ್ಷದ ಚೀನೀಯಳೊಬ್ಬಳು 13 ಮಕ್ಕಳ ತಾಯಿಯಾಗಿರುವಳು. ಇವಳು 8 ಸಲ ಅವಳಿ ಜವಳಿ ಮಕ್ಕಳನ್ನೂ 5 ಸಲ ಮೂರು ಮೂರು ಮಕ್ಕಳನ್ನೂ ನಾಲ್ಕು ಮತ್ತು ಆರಾರು ಮಕ್ಕಳನ್ನು ಒಮ್ಮೊಮ್ಮೆಯೂ ಹೆತ್ತಿರುವಳು. ಬವೇರಿಯ ದೇಶದ ಫರ್ತ್' ಎಂಬ ಹಳ್ಳಿಯಲ್ಲಿ ಫ್ರೌ. ಬರ್ನಾರ್ಡ್ ಎಂಬವಳು 1678ರಲ್ಲಿ ತನ್ನ 66ನೇ ವಯಸ್ಸಿನಲ್ಲಿ ಮೃತಳಾದಳು. ಅಷ್ಟರಲ್ಲಿ ಅವಳು 69 ಮಕ್ಕಳನ್ನು ಹೆತ್ತಿದ್ದಳು. ಇವಳು 16 ಅವಳಿಜವಳಿ, ಮತ್ತು ಹಲವು ಸಲ ಮೂರು ಮೂರು ಮತ್ತು ನಾಲ್ಕು ನಾಲ್ಕು ಮಕ್ಕಳನ್ನು ಹೆತ್ತಿದ್ದಳು. ಇವಳ ಗಂಡನು ಪುನಃ ಮದುವೆಯಾಗಿ ಎರಡನೇ ಹೆಂಡತಿಯಲ್ಲಿ 18 ಮಕ್ಕಳನ್ನು ಪಡೆದನು.

ಓಲ್ಡ್ ಹೇಮ್ ಎಂಬಲ್ಲಿಯ ಸೇಮ್ ಮತ್ತು ವಿಲಿಯಮ್ ರೆಂಬ ಯಮಳ ಸಹೋದರರಿಬ್ಬರು ಇಬ್ಬರು ಸಹೋದರಿಯರನ್ನು ಒಂದೇ ದಿನ ಮದುವೆಯಾಗಿ ಇಡೀ ಜೀವನದಲ್ಲಿ ಇಬ್ಬರೂ ಒಂದೇ ಕೆಲಸ ಮಾಡಿಕೊಂಡಿದ್ದು ಒಬ್ಬನು ಸತ್ತ 3 ಘಂಟೆಯೊಳಗೆ ಇನ್ನೊಬ್ಬನು ಸತ್ತು ಒಟ್ಟಿಗೇನೇ ಹೂಳಲ್ಪಟ್ಟರು. ಜಕೋಸ್ಲೊವೇಕಿಯದ ಜೆವ್ಲಿ ಎಂಬಲ್ಲಿ ಹೆಚ್ಚಾಗಿ ಮಕ್ಕಳು ಹುಟ್ಟುವುದು ಎರಡೆರಡು ಅಥವಾ ಮೂರುಮೂರು ಏಕಶಿಶು ಜನನವೇ ಅಪರೂಪ ಅಲ್ಲಿ. ಇದರಿಂದ ವಿಜ್ಞಾನಿಗಳು ವಿಸ್ಮಯಗೊಂಡಿದ್ದಾರೆ.

ಅಮೇರಿಕದ ಮಿಚಿಗನ್ ಎಂಬಲ್ಲಿ ಬೇಸಾಯಗಾರನೊಬ್ಬನ ಹೆಂಡತಿಯು 1 ಸಲ ಯಮಳರನ್ನು ಹೆತ್ತಿರುವಳು. ಇವಳಿಗೆ ಇತರ ನಾಲ್ಕು ಮಕ್ಕಳಿರುವರು. 23 ವರ್ಷದ ಇವಳ ಹಿರಿಯ ಮಗನಿಗೆ ಅವಳಿಜವಳಿ ಮಕ್ಕಳುಂಟಾಗಿರುವವು. ಯುನೈಟೆಡ್ ಸ್ಟೇಟ್ಸಿನ ನ್ಯೂ ರೋಚೆಲ್ಲಿ ಎಂಬಲ್ಲಿ 17 ವರ್ಷ ಪ್ರಾಯದ ತರುಣಿಯರಿಬ್ಬರು ಒಂದೇ ದಿನ ಹುಟ್ಟಿದರು. ಒಂದೇ ತೂಕ ಮತ್ತು ಗಾತ್ರವುಳ್ಳವರು. ಒಟ್ಟಿಗೆ ಶಾಲೆಗೆ ಹೋಗಿ ಒಂದೇ ರೀತಿಯ ಆಟಗಳಲ್ಲಿ ಆಸಕ್ತಿಯುಳ್ಳವರು. ಪರೀಕ್ಷೆಯಲ್ಲಿ ಒಂದೇ ರೀತಿ ಫಲಿತಾಂಶ ಪಡೆದಿರುವರು. ಇವರಿಬ್ಬರೂ ಸಂಬಂಧಿಗಳೇನೂ ಅಲ್ಲ. ಯುನೈಟೆಡ್ ಸ್ಟೇಟ್ಸಿನ ಕೊನ್ನೆಕಿಕ್ಟ್ ಎಂಬಲ್ಲಿಯ ಜೋನ್ ಕೊನೋನ್ ಮತ್ತು ಜೋನ್ ಕೊವೆನ್ ಎಂಬಿಬ್ಬರೂ ತಮ್ಮ 77ನೇ ವಯಸ್ಸಿನಲ್ಲಿ ಒಂದೇ ದಿನ ಮೃತರಾದರು. ಒಂದೇ ದಿನ ಒಬ್ಬರೊಬ್ಬರ ಮಗ್ಗುಲಲ್ಲಿ ಹೂಳಲ್ಪಟ್ಟರು. ಇವರಿಬ್ಬರೂ ಪ್ರತಿದಿನ ಒಟ್ಟಿಗೆ ಒಂದೇ ಚರ್ಚಿಗೆ ಹೋಗುತ್ತಿದ್ದರು.

ಇಂಗ್ಲೆಂಡಿನ ರೊಸಲ್ ಎಂಬಲ್ಲಿ 1908ರಲ್ಲಿ 4 ಮಂದಿ ಸಹೋದರರು ಒಂದೇ ವರ್ಷದಲ್ಲಿ ಹುಟ್ಟಿದ್ದು ಒಂದೇ ಕ್ಲಾಸಿನಲ್ಲಿ ಕಲಿಯುತ್ತಿದ್ದರು. ಇಬ್ಬರು ಜನವರಿಯಲ್ಲಿ ಮತ್ತು ಇನ್ನಿಬ್ಬರು ದಶಂಬರದಲ್ಲಿ ಹುಟ್ಟಿದ್ದರು. ದಕ್ಷಿಣ ಆಫ್ರಿಕದ ವೂರ್ಸೆಸ್ಟರ್ ಎಂಬಲ್ಲಿ ಒಬ್ಬ ಸ್ತ್ರೀಯು ಫೆಬ್ರವರಿ ತಾ. 30ರಲ್ಲು ಒಂದು ಹೆಣ್ಣು ಕೂಸು ಹೆತ್ತಳು. ಅದು ಕೆಲವು ಘಂಟೆಗಳಲ್ಲೇ ಸತ್ತಿತು. ಆ ಮೇಲೆ ಅದೇ ಹೆಂಗಸು ಮೇ ತಾ. 10ರಲ್ಲು ಗಂಡು ಕೂಸೊಂದನ್ನು ಹೆತ್ತಳು.

ಲೋಕದ ಅತ್ಯಂತ ವೃದ್ಧ ಅಮಳರೆಂದರೆ ಅಮೆರಿಕದ ಫಿಲಿಡೆಲ್ಫಿಯದ ಮಿಸೆಸ್ ಬರ್ತಬೆಡೆಸ್ ಫೆಲ್ಡ್ ಮತ್ತು ಮಿಸೆಸ್ ಎಮ್ಮಾ ಕ್ರೋಸಳು. ಇವರಿಬ್ಬರಿಗೂ ಈಗ 91 ವರ್ಷ ಪ್ರಾಯ. ಇಬ್ಬರೂ 1,870 ರಲ್ಲಿ ವಿವಾಹವಾಗಿದ್ದರು. ಇಬ್ಬರೂ ಒಂದೊಂದು ಮಗು ಹೆತ್ತಿರುವರು. ಇಬ್ಬರ ಗಂಡಂದಿರೂ 1888ರಲ್ಲಿ ಮೃತರಾದರು. ಇಬ್ಬರೂ ಪುನಃ ವಿವಾಹವಾಗಿರುವುದಿಲ್ಲ.

ತಮ್ಮ ತಾಯಂದಿರಿಗೇನೇ ಗುರುತು ಹಿಡಿಯಲು ಅಸಾಧ್ಯವಾದ ಯಮಳರಿದ್ದು ದಿಡೆ ಅವಳಿಜವಳಿ ಮಕ್ಕಳು ಬೆಳೆದು ಪ್ರತ್ಯೇಕವಾಗಿ ಜೀವಿಸಿಕೊಂಡಿದ್ದರೂ ಒಂದೇ ಕಾಲದಲ್ಲಿ ಒಂದೇ ರೀತಿಯ ರೋಗದಿಂದ ಪೀಡಿತವಾದುದಿದೆ. 23 ವರ್ಷದ ಯಮಳರಿಬ್ಬರಿಗೆ ಒಂದೇ ಸಮಯ ಹಲ್ಲುನೋವುಂಟಾಗಿ ಇಬ್ಬರಿಂದಲೂ ಒಂದೇ ಹಲ್ಲನ್ನು ಕಿತ್ತು ತೆಗೆಯಬೇಕಾಯಿತು. ಅವಳಿಜವಳಿ ಮಕ್ಕಳಲ್ಲಿ ಲಂಡನಿನಲ್ಲಿದ್ದವನೊಬ್ಬನಿಗೆ ಉಷ್ಣಭೇದಿಯಾದಾಗ ಹಲವು ನೂರು ಮೈಲುದೂರವಿದ್ದ ಇನ್ನೊಬ್ಬನಿಗೂ 24 ಘಂಟೆಯ ನಂತರ ಅದೇ ಚಿನ್ಹೆಗಳುಂಟಾದುವು. ಬೇರೆಬೇರೆಯಾಗಿ ವಾಸಿಸುತ್ತಿದ್ದ ಇಬ್ಬರು ಯಮಳರು ಏಕಕಾಲದಲ್ಲಿ ವಾತರೋಗ ಪೀಡಿತರಾಗಿ ಒಬ್ಬರೊಬ್ಬರಿಗೆ ಬರೆದು ತಿಳಿಸುವ ಮೊದಲೇ ಅವರಿಗದು ಪರಸ್ಪರ ತಿಳಿದಿತ್ತು.

ಅವಳಿಜವಳಿ ಮಕ್ಕಳು ಒಂದೇ ಭಾವನೆ ಮತ್ತು ಅಭಿರುಚಿಯುಳ್ಳವರಿರುವುದೂ ಇದೆ. ಯಮಳರಲ್ಲೊಬ್ಬನು ಸ್ಕಾಟ್ಲೇಂಡಿನಲ್ಲಿ ಸಂಚರಿಸುವಾಗ ವ್ಯಾನ್ ಕಂಡಿಯುವ ಚಂದನಾದ ಗ್ಲಾಸುಗಳನ್ನು ಕಂಡು ತನ್ನ ಸಹೋದರನಿಗೆಂದು ಅದನ್ನು ಕೊಂಡುಕೊಂಡನು. ಇಂಗ್ಲೆಂಡಿನಲ್ಲಿ ಸಂಚರಿಸುತ್ತಿದ್ದ ಆತನ ಸಹೋದರನು ತನ್ನ ಸಹೋದರನಿಗೆಂದು ಅದೇ ರೀತಿಯ ಗ್ಲಾಸುಗಳನ್ನು ಕೊಂಡುಕೊಂಡಿದ್ದನು

SRI. SADANAND RAM
No. 57, P. O. Warisaligung,
(Gaya)
"ಸುಳ್ಳೆಂದು ರುಜುಪಡಿಸುವವರಿಗೆ ರೂ 50 ಇನಾಂ."
ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು.
1 **ವಶೀಕರಣ ಯಂತ್ರ:** ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರ ಧರಿಸಿದ ಮಾತ್ರದಿಂದಲೇ ಅವಳು ನಿಮ್ಮೊಡನೆ ಮಾತನಾಡಬಯಸುವಳು ಮಾತ್ರವಲ್ಲದೆ ನಿಮ್ಮ ವಶಳಾಗುವಳು. ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು. ಬೆಳ್ಳಿ ಯಂತ್ರಕ್ಕೆ ರೂ. 2-8-0, ಚಿನ್ನದ ತಾಯಿತಕ್ಕೆ 7-8-0.
2 **ಲಕ್ಷ್ಮೀಯಂತ್ರ:** ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ವಹಿವಾಟುಗಳು ಹೆಚ್ಚು ಲಾಭದಾಯಕ ಸುಸಂಧಿಬರುವುದು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ್ದಕ್ಕೆ ರೂ. 7-8-0
ಇಂದೇ ಮೇಲಣ ವಿಳಾಸಕ್ಕೆ ಬರೆಯಿರಿ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

ಮುಂಬಾಯಿಕನ್ನಡಿಗ
ಮುಂಬಾಯಿಯಿಂದ ಪ್ರತಿ ರವಿವಾರ
ಹೊರಡುವ ರಾಷ್ಟ್ರೀಯ
ವಾರಪತ್ರಿಕೆ.
ವಾರ್ಷಿಕ ಚಂದಾ ೩—೮—೦
ಬಿಡಿ ಸಂಚಿಕೆ ೦—೧—೦
ಮಾದರಿಗೂ ಜಾಹೀರಾತುದರಗಳಿಗೂ ಬರೆಯಿರಿ
ಕನ್ನಡ ಪಬ್ಲಿಷರ್ಸ್
168 ಗಿರ್ಗಾಂ ರೋಡು,
ಬೊಂಬಾಯಿ 4.

ಆಯವ್ಯಯದ ಅಚ್ಚುಗಟ್ಟು
(BUDGET)

(ಲೇಖಕರು— ಬಿ. ಶ್ಯಾಮರಾಯ ಶೆಟ್ರು, ಬಿ. ಎ., ಎಲ್.ಟಿ., ಉಡುಪಿ)

●

[Benjamin Franklin in his boyhood once paid 'too much for the whistle. He learnt a bitter lesson from this that stood him in good stead throughout his life. While running through the gamut of life from Log Cabin to White House, he pitied people playing too much for the whistle. Many of us very nearly all of us are paying too much for the whistle to day. While condemning Prodigality on the one hand and Parsimony on the other let us uphold Economy, the golden mean always, in all situations and seasons. Economy is based on Budget. It need not always be that income makes a man rich. When you spend not more than fifteen annas in the rupee you earn, you keep yourself safe and are an asset to society; the moment you spend hundred and ninety-three pies in the rupee you are a burden to society—you dupe society to that extent which you have no right to do. So let us balance our budget however little it may be. Let us not run on our overdraft but let us run on our surplus budget. Let us not always talk of things abroad, let us also have in view the things of our home, the sweet home. If our home budget is safe, our nation is safe. Nation is home writ large; home is the miniature picture of the nation nay the pivot of a nation. **Gentle reader, hard days! Let us coax every pie to do the work of an anna. Every state every institution has a budget meeting every year. Let husband and wife the brain and heart of every home, discuss their budget at the beginnings of every month. When we fail here it is possible we fail everywhere.]**

●

ಶೆಟ್ರು—ಸ್ವಾಮಿ, ಅದೇನು, 'ಬಜ್ಜೆಟ್', 'ಬಜ್ಜೆಟ್' ಅಂದ್ರಿಯಲ್ಲ ತಾವು?—ಅದು ಎಂಥಾದ್ದು, ಏನು ಕಥೆ, ಸ್ವಲ್ಪ ವಿವರಿಸಿ ಹೇಳೀಂದ್ರೆ!

ಲೇಖಕ—ಪೂರ್ಣ ವಿವರಿಸಲು ಇಂದು ಬಿಡುವಿಲ್ಲ. ಸ್ವಲ್ಪಮಟ್ಟಿಗೆ ಹೇಳುತ್ತೇನೆ. ಇರಲಿ, ನೀವು ಕಂಗಾಲಾಗಿ ಬಂದು ಈ ಪ್ರಶ್ನೆಯನ್ನು ನನ್ನೊಡನೆ ಕೇಳಲು ಕಾರಣವೇನು? ನೀವೂ ಜೀವನದ ರಂಗಸ್ಥಳದಲ್ಲಿ ಜಾರಿ ಬಿದ್ದಂತಿದೆ. ಹೌದೋ, ಅಲ್ಲವೋ?

ಶೆಟ್ರು—ಅಲ್ಲಾನ್ನಲಿಕ್ಕೆ ಬರೋದಿಲ್ಲ, ನೋಡಿ, ನಮ್ಮಲ್ಲಿ ಈ ಡಂಭಾಚಾರದ ಶೀಕೆಯು ಮೀರಿ ಮಿತಿ ಮೀರಿ ಹೋಗಿದೆ. ಅದರಿಂದಾಗಿ ಈಗೀಗ ನಮ್ಮ ಅವಸ್ಥೆ ಬಹಳ ಕಠಿಣದಲ್ಲಿ ನಿಂತಿದೆ. ನಮ್ಮ ಯುವಕ ಯುವತಿಯರು ತಮ್ಮ ಮನೆಯು ಅಕ್ಷಯಪಾತ್ರವೆಂದು ನೆನಸಿ ಹಣ ಕೂಡಿ ಕೊಡಿ ಎನ್ನುತ್ತಾರೆ ವಿನಾ, ಅದು ಎಂಥಾದ್ದು, ಎಲ್ಲಿಂದ ಬರುತ್ತೆ ಎಂಬ ವಿಚಾರವನ್ನೇ ಮಾಡುವುದಿಲ್ಲ. ನೋಡಿ, ನಮ್ಮ ಯಜಮಾಂತಿಗೆ, ನನ್ನ ಹೆಂಡ್ತಿಗೆ, ಈ ಇಂದಿನ ಹುಡುಗರ ಮರ್ಜಿ ಹೆಚ್ಚು ಗೊತ್ತಿಲ್ಲ. ನಾನೇನೋ ರಕ್ತವನ್ನು ಬೆವರು ಮಾಡಿ ಸ್ವಲ್ಪ ಹಣಗಳಿಸಿ ಇಟ್ಟಿದ್ದೆ, ಸ್ವಲ್ಪ ಆಸ್ತಿಗೀಸ್ತಿ ಸಹಾ ಮಾಡಿದ್ದೇನ್ನಿ. ಅವಳು ಹೇಳಿದಳು ಒಂದು ದಿವಸ, 'ನೋಡಿ ನಮಗೆ ಮೂರು ಹೆಮ್ಮಕ್ಕಳಿವೆ. ಮೊದಲಿನವಳಿಗೆ ನಾವು ಒಳ್ಳೇ ದೊಡ್ಡವರ ನೆಂಟಸ್ತಿಕೆ ಮಾಡಿದರೆ, ಆಮೇಲೆ ಉಳಿದವರ ನೆಂಟಸ್ತಿಕೆಗಳೆಲ್ಲಾ, ಉಪ್ಪರಿಗೆ ಮೆಟ್ಲು ಹತ್ತಿದ ಹಾಗೆ ಒಂದಕ್ಕಿಂತ ಒಂದು ಮೇಲೆಮೇಲೇರುತ್ತ ಹೋಗುತ್ತದೆ' ಅಂದ್ಳು. ನನಗೂ ಅದು ಸರಿಯೆಂದು ತೋರಿತು. ಹುಡುಕಿ, ಹುಡುಕಿ ದೊಡ್ಡ ದೊಡ್ಡ ಗುತ್ತುಗಳಿಗೆ ಗಂಟು ಹಾಕಲಿಕ್ಕೆ ಸುರುಮಾಡಿದೆ. ದಲ್ಲಾಲಿಗಳಿಗೂ ಸ್ವಲ್ಪ ತಿನ್ನಿಸಿದೇನ್ನಿ. ಹುಡುಗಿಗೆ ಎರಡು ಎರಡೂವರೆ ಸಾವಿರ ರೂಪಾಯಿ ಚಿನ್ನಾಭರಣ ಹಾಕಿಸಿ, ಹುಡುಗನಿಗೆ ಎಂಟು ಸಾವಿರ ರೂಪಾಯಿ ಬದಿ ಕೊಟ್ಟು, ಇದಕ್ಕಾಗಿ ಸ್ವಲ್ಪ ಆಸ್ತಿ ಈಡು ಕೊಟ್ಟು ಸಾಲ ತೆಗೆದೆ. ಆದ್ರೆ ನನ್ನ ಆಲೋಚನೆ ಏನಿತ್ತೂಂದ್ರೆ, ಈ ಒಂದು ದೊಡ್ಡ ನೆಂಟಸ್ತಿಕೆ ಮಾಡಿಬಿಟ್ಟರೆ ಇವರ 'ಭರಂ'ನಿಂದಲೇ ಇನ್ನೆಲ್ಲಾ ನೆಂಟಸ್ತಿಕೆಗಳು ಸುಲಭದೊಳ್ಗೆ ಆಗಿಹೋಗ್ತೆ ಎಂದು. ಒಂದು ವೇಳೆ ಹಾಗಾಗದಿದ್ದರೂ ನಮ್ಮ ಹೊಸ ನೆಂಟ್ರು ಅವರ 'ಭರಂ' ಕಮ್ಮಿ ಮಾಡಿಕೊಳ್ಳಲಿಕ್ಕಿಲ್ಲ. ಅಂಥಾ ಸಂದರ್ಭದಲ್ಲಿ ಕೈ ಕೊಟ್ಟು ಸಹಾಯಗೀಯಾ ಮಾಡ್ತಾರು ಅಂತ ತಿಳ್ಕೊಂಡಿದ್ದೆ. ಅವಳೂ ಸಹಾ ಹಾಗೇ ಹೇಳಿದ್ಲು. ಆದರೆ ಈಗ ಆದ್ದೇನಂತೀರಿ! ಬಂದ ಕೋಣ ಇದ್ದ ಎಮ್ಮೇನೂ ಕೊಂಡುಹೋಯಿತು!! ನಾವು ಬೊಕ್ಕಸ ಖಾಲಿ ಮಾಡಿದ್ದೇ ಸೈ-ಈಗ ಅವರು ಪಾವುರಿ, ನಮಗೆ ಊರಿಲ್ಲ. ನಮ್ಮ ಮೋಟರ್ ಕಾರ್ ನಡಿಸಲಿಕ್ಕೆ ನಮ್ಮ ನೆಂಟರಿಂದ ಪೆಟ್ರೋಲ್ ಸಿಕ್ಕುವ ಬದಲಿಗೆ, ಅವರ ಮೋಟರ್ ಹೋಗುವ ರಭಸದಲ್ಲಿ ನಮ್ಮ ಉಳಿದ ಇಬ್ಬರು ಮಕ್ಕಳಿಗೆ ಇಟ್ಟ ಸ್ವಲ್ಪ ಪೆಟ್ರೋಲ್ ಸಹಾ ಸುಟ್ಟು ಹಾರಿಹೋಯಿತು. ಈಗ ಅವರ ಕಾರ್ ಮುದ್ದು ಮೂಲೀಗೆ ಬಿದ್ದಿದೆ. ನಮ್ದು ಇದ್ದ ಕಾರ್ ಪೆಟ್ರೋಲ್ ಇಲ್ಲದೆ ಉರುಳೋದಿಲ್ಲ—ಅವಸ್ಥೆ ಇಲ್ಲಿ ವರೇಗೆ ಬಂದಿದೆ. ಆ ಒಂದೆರಡು ವರ್ಷದ ಓಟ ಏನು ಹೇಳ್ಲಿ! ನೊಡ್ಲೊಮ್ಮೆ ಹೇಳಲ್ಲವೇ? ತಮ್ಮ ಕೈಯಾಗೆ! ನಮ್ಮ ಯಜಮಾಂತಿ ಸಹಾ ಆ ಶೋಕಿಗೆ ಸ್ವಲ್ಪ ಹುಚ್ಚುಗಟ್ಟಿ ಹೋಗಿದ್ಳೂಂತೇನೆ! ಎರಡು ಮೂರು ಸಾರಿ ಅಳಿಯನ ಮನೆಗೆ ಹೋಗಿದ್ಲು—ಅಲ್ಲಿಯ ಸೊಬಗು ನೋಡಿ ಬೆರಗಾಗಿ ಹಿಂತಿರುಗಿದವಳೇ ನನಗೆ ಏಕ್ ದಮ್ ಬಯ್ಯಲಿಕ್ಕೇ ಸುರು—ಅವರೇನೋ ಇವಳನ್ನು ಕಾರಿನಲ್ಲಿ ಕೂತುಕೊಳ್ಳಿಸಿ ಎರಡು ಮೂರು ಸಾರಿ ನಮ್ಮ ಪ್ಯಾಟೀ ಕಡೇಗೆ ತಂದಿದ್ರಂತೆ—ನನ್ನ ಹತ್ತರ ಬಂದು ಹೇಳುತ್ತಾಳೆ—ಏನು ಸುಖ ಆ ಕಾರ್ ಓಡೋತ್ತಿಗೆ! ನಮ್ಮ ಮನೆ ಎತ್ತಿನ ಗಾಡೀಲಿ ಕೂತು ಗಾಡೀ ಗುಂಟದಾಗೆ ಕಿಬ್ಬದಿ ಕೀಲು ಮುರ್ಕೊಂಡ ಹಾಂಗಂತೀರಾ? ಅಂಥೋರ ಮನೆ ಸೇರಿದ್ದು ನಮ್ಮ ಹುಡುಗಿಯ ಪುಣ್ಯ ಅಂದ್ಲು!—ಅಳಿಯ ಬಂದಾಗ ನಮ್ಮಲ್ಲಿ ಗೌಜಿಯೇ ಗೌಜಿ! ನೆರಮನೆಯಲ್ಲೆಲ್ಲಾ ಒಂದು ಮೈಲು ತನಕ ಇದ್ದ ಕೋಳಿ, ತತ್ತಿಯೆಲ್ಲಾ ಕಲಾಸ್!—ಆದರೆ ಬರಬರುತ್ತಾ ಹುಡುಗಿ ಮೈಮೇಲೆ ನಾವು ಹಾಕಿದ ಆಭರಣಗಳು ಒಂದೊಂದೇ ಕಾಣೆ—ಒಹುಹು! ಹುಡುಗಿಗೆ ಆಭರಣ ಇಟ್ಟ ಇಟ್ಟು ಸಾಕಾಯಿತು ಅಂತ ಕಾಣ್ತಾಳೆ, ಅದ್ದರಿಂದ ಗಂ[illegible] ಅವನ್ನೆಲ್ಲಾ ಇಟ್ಟು ಬಿಡಿಸ್ಲೇ ಏನೋ ಅಂತ ನಾವು ತಿಳ್ಕೊಂಡ್ವಿ. ಇತ್ತೀಚೆಗೆ ಗುಟ್ಟು ಪೂರ್ಣ ರಟ್ಟು. ಹೆಣ್ಣಿನ ಚಿನ್ನವೆಲ್ಲಾ ಬ್ಯಾಂಕೀಲಿ ಒತ್ತೆ ಇಟ್ಟು ಸಾಲ ತೆಗ್ದು ಬಡ್ಡಿ ಕೂಡಾ ಕೊಡ್ಲಾರದೆ ಅವೆಲ್ಲಾ ಏಲಂ ಆಗಿ ಹೋಯ್ತಂತೆ! ಆ ಮೇಲಿನ ಗೋಳು ಮೊನ್ನೆ ಹೇಳಿದೆನಲ್ಲವಾ? ಅವಳಿಗೆ ಎರಡು ಹೆಣ್ಣು ಮಕ್ಕಳಿದ್ದಾವೆ. ಆದರೆ ಅವಕ್ಕೆ ಸ್ವಲ್ಪ ಸಮಯ ಇತ್ತು. ಬಾಕಿ ಉಳಿದ ನನ್ನ ಎರಡು ಹೆಣ್ಣು ಮಕ್ಕಳು ಅಳ್ತಾವೆ—'ಅಪ್ಪಯ್ಯಾ, ನಮ್ಮ ಕುತ್ತಿಗೆ ಕೊಯಿದ್ರಲ್ಲವಾ ನೀವು?' ಅಂತ. ಈಗ ನಮ್ಮ ಯಜಮಾಂತಿ ಸುದ್ದಿ ಮಾತಾಡುದಿಲ್ಲ—ಗಪ್ಚುಪ್ಪು. ನೋಡಿ ಸ್ವಾಮಿ, ಒಂದು ಅವಿಚಾರದ ನೆಂಟಸ್ತಿಕೆಯಿಂದ ಎಷ್ಟು ಜನರಿಗೆ ಕಷ್ಟ—ಕಾಲಿನಲ್ಲಿ ಒಂದು ಸಣ್ಣ ಕುರು ಆದರೆ—ಇಡೀ ದೇಹಕ್ಕೇನೇ ನೋವು—ಈ ರೀತಿ ಆಯಿತಲ್ಲಾ ನನ್ನ ಗತಿ!—ಹಾಗೆಂತ ನಾನೊಬ್ಬನೇ ಹೆಡ್ಡ ಊರೋರೆಲ್ಲಾ ಗಟ್ಟಿಗರೂಂತ ಹೇಳ್ಲಾ, ಹಾಗೂ ಇಲ್ಲ. ಊರೆಲ್ಲಾ ವಿಚಾರಿಸಿ ನೋಡಿದೆ—ಏನು ತಿಳೀತು ಗೊತ್ತಾ ನಿಮಗೇ? ಹೆಚ್ಚು ಕಡೇಲೆಲ್ಲಾ ಚಿನ್ನದ ಹಾಂಗೆ ಹೊರಮೈ ಮಿರುಗೋದಲ್ಲಿ ಹತ್ತಿರ ಹೋಗಿ ನೋಡಿದ್ರೆ ಬೇಗಡೆ! ತಾಜಾ ಬೇಗಡೆ! ಆದ್ರಿಂದ್ಲೆ ನಮ್ಮ ಸಮಾಜಕ್ಕೆ ಈ ಡಂಭದ ಬೇಗಡೆ ರೋಗ ಅಂಟಿದೆ, ಏನು ಮಾಡ್ಲೀಂದೆ?

ಲೇಖಕ—ಸ್ವಾಮಿ ಶೆಟ್ರೆ—ಇಂದಾ ಸಂಗತಿಗಳನ್ನು ಮುಟ್ಟಿ ಪಡಬಾರದ. ಇವೆಲ್ಲ ಬಯಲಿಗೆ ಒಡೆಯು [illegible] ಸಮಾಜದ ಕಣ್ಣೆದುರಿಗೆ [illegible] ಬೇಕು. [illegible] ನೋಡಿ ಪಟ್ಟೆ, ಅನೇಕ ಸಂದರ್ಭಗಳಲ್ಲಿ ನಾವು ದುಷ್ಟ ದಾಷ್ಟಿ ಎಂತ ತೋರುವ [illegible] ತೋರಿಸುತ್ತೇನೆ ತೋರದೆ [illegible] ತೋರಿಸುವುದಿಲ್ಲ. ಹಾಗೆ ಮಾಡುವುದು ಒಂದು ತರದ ವಂಚನೆ, ಆತ್ಮಘಾತಕ ಎನಿಸುವುದು. ನಾವು ತಿಳಿದವರ [illegible] ನೋಡಿ, ನಾವು ನಮ್ಮ [illegible] ಮನೆಗೆ ನಮ್ಮ ನಿಜಸ್ಥಿತಿಯನ್ನು ತೋರಿಸಿ [illegible] ಅವನ್ನು [illegible] ಅವರನ್ನೂ, ನಮ್ಮನ್ನೂ [illegible] ಒಂದು ಕಡೆ [illegible] ನೆಂಟಸ್ತಿಕೆಯನ್ನು ಮಾಡಿದ ಪಕ್ಷಕ್ಕೆ [illegible] ಎಂಬ ತಪ್ಪು ಅಭಿಪ್ರಾಯವನ್ನು ನಾವು ಕಟ್ಟಿಕೊಳ್ಳಬಾರದು. ಯಾವುದೋ ಒಂದು ಕಾಲದಲ್ಲಿ ಒಂದು ಕಡೆಯಲ್ಲಿ [illegible] ಸಾವಿರದವರೊಳ್ಳೆ, ಒಂದು [illegible] ಎಂತ ಅದನ್ನು ಸಾರ್ವತ್ರಿಕವಾಗಿ ತನ್ನ [illegible] ನಿಯಮವೆಂತ ಕಟ್ಟಿಕೊಳ್ಳಲಿಕ್ಕಾಗುವುದಿಲ್ಲ. ಏನು ಒಂದು ಅಪಮಾನದ ಗಳಿಕೆ [illegible] ಘಳಿಗೆಗೆ ಮರುಳಾಗಿ ನಾವು ಹಿಂದಿನ ದೃಷ್ಟಿಯಿಂದ ನೋಡಿ ಕೊನೆಗೆ ಮೋಸಹೋಗಬಾರದು. ನಮ್ಮ ಹೊಸ ಅಳಿಯಂದಿರಿಗೆ ನಮ್ಮ ಕೋಶವನ್ನು ಭೂತಗನ್ನಡಿಯಿಟ್ಟು ತೋರಿಸಿದ್ರೆ ಅವರೇನು ಎಣಿಸುತ್ತಾರೆ ಗೊತ್ತೇ? 'ನಾವು ಎಷ್ಟು ಖರ್ಚು ಮಾಡಿದರೂ ಚಿಂತೆಯಿಲ್ಲ—ನಮ್ಮ ಮಾವ ದೊಡ್ಡವರು ನಮಗೇನು?' ಅಂತ. ಈ ತ

LAKSHMI'S

"RECORD EVENT IN THE HISTORY OF LIFE INSURANCE"

Year		Value of Policies issued	Total Business	Life Fund
1924	—	22,67,750	22,67,750	500
1928	—	55,29,500	1,62,11,000	5,29,000
1932	—	70,88,750	4,21,88,000	[illegible]
1936	—	110,00,000	8,65,00,000	64,64,100
1938	—	161,00,000	11,77,00,000	[illegible]1,71,696

"A **LAKSHMI'S** POLICY IS A BRIDGE OVER THE ABYSS OF DARKNESS DESTITUTION AND DESPAIR. IT LINKS THE HOPES AND EFFORTS OF THE PRESENT TO THE FUTURE OF YOUR CHOISE

For Agency Particulars, please apply to—

THE BRANCH MANAGER,

LAKSHMI INSURANCE CO., LTD.,

334, Thambuchetty Street,

G. T. MADRAS

OR

A. B. KRISHNA RAJ,

Organiser,

LAKSHMI INSURANCE CO. LTD., UDIPI

ಪ್ರಭಾವನೆಯನ್ನು ನಾವು ಕೂಡಲೇ ತೆಗೆಯಬೇಕು. ನಮ್ಮ ತರುಣರಿಗೆ ಅವರವರ ಹೊಲಗಳನ್ನು ಅವರವರೇ ನೀರುಮೊಗೆದು ಉಳುವಹಾಗೆ ಮಾಡಬೇಕು. ಅವರ ಹೊಲಗಳಿಗೆ ಬೇಕಾದ ನೀರಿಗಾಗಿ ಮಾವನ ಬಾವಿಯ ನೀರನ್ನು ಕಾದುಕೊಳ್ಳದ ಹಾಗೆ ಎಚ್ಚರಗೊಟ್ಟಿರಬೇಕು. ಮಾವನ ಬಾವಿಯು ನ್ನರೆ ಮಾವನಿಗೆ ಸಾಗುವಳಿ ಮಾಡಲಿಕ್ಕೆ ಹೊಲಗಳು ಇವೆ. ಆದರ ನೀರು ಅವಕ್ಕೆ ಬೇಕು. ನೀವು ಬಾವಿ ಅಗೆದು ನಿಮ್ಮ ಹೊಲಗಳಿಗೆ ನಿಮ್ಮ ನೀರನ್ನೇ ಉಪಯೋಗಿಸಬೇಕೆಂದು ಮುಂದಾಗಿ ಹೇಳುವುದು ಲೇಸು. ನಮ್ಮ ಹೆಂಡತಿ ಮಕ್ಕಳಿದುರಿಗೂ ನಮ್ಮ ನಿಜಸ್ಥಿತಿಯನ್ನು ಪದೇ ಪದೇ ತೋರಿಸುವುದು ಒಳ್ಳೇದು-ಇದರ ಬಗ್ಗೆ ಪ್ರತಿಯೊಬ್ಬನೂ ತನ್ನ ಆಯವ್ಯಯ ಪಟ್ಟಿಯನ್ನು ಇಡಲೇಬೇಕು-ಮತ್ತು ಮಕ್ಕಳಿಗೆ ಒಂದು ವಿಷಯವನ್ನು ಮುಂದಟ್ಟುಮಾಡಬೇಕು.-ಏನೆಂದರೆ-ದುಡ್ಡು ಮಾಡುವ ಪವರ್ ಗವರ್ನ್‌ಮೆಂಟಿಗಲ್ಲದೆ, ಬೇರೆ ಯಾವ ವ್ಯಕ್ತಿಗೂ ಇಲ್ಲ.-ದುಡ್ಡು ನಾವು ಹೇಳಿದ ಹಾಗೆ ನಮ್ಮ ಹಿಂದೆ ಬರುವುದಿಲ್ಲ. ಲೋಕದಲ್ಲಿ ಎಲ್ಲರೂ ಹೆಣಗಾಡುವುದು ಒಂದು ದುಡ್ಡಿಗಾಗಿ. ಖರ್ಚುಮಾಡುವುದರಲ್ಲಿ ಹೆಗ್ಗಳಿಕೆ ಕೊಚ್ಚಿ ಫಲವಿಲ್ಲ. ಚಿಕ್ಕ ಮಗುವೂ ವೆಚ್ಚಮಾಡೀತು ಆದರೆ ಸಂಪಾದನೆಮಾಡೀತೇ? ನಾವು ಹುಟ್ಟುವುದಕ್ಕೆ ಮುಂಚೆಯೇ ನಮಗಾಗಿ ವೆಚ್ಚತೊಡಗುತ್ತ. ಪ್ರಸವ ವೇದನೆ ತಾಯಿಯಲ್ಲಿ ತಲೆದೋರಿದಾಗಿನಿಂದ ತೊಡಗಿ ನಮ್ಮ ಜೀವಮಾನದ ಪಜ್ಜೆ ಹೆಜ್ಜೆಯಲ್ಲಿಯೂ ನಮ್ಮನ್ನು ಹಿಂಬಾಲಿಸಿ ನಾವು ಸತ್ತಮೇಲೆ ಸ್ಮಶಾನದಲ್ಲಿಯೂ, ಅಮೇಲೆ ಉತ್ತರಕ್ರಿಯೆ ವರೆಗೂ ವೆಚ್ಚ ಇದ್ದೇ ಇದೆ. ಲೋಕದಲ್ಲಿ ಬಹು ಸುಲಭವಾದ ಕೆಲಸವೆಂದರೆ ಖರ್ಚುಮಾಡುವುದು-ಅದೂ ಸಹಾ ಬೇರೊಬ್ಬರು ಕೊಟ್ಟರೆ ಬಹಳ ಸುಲಭ. ಖರ್ಚುಮಾಡಲಿಕ್ಕೆ ಧೀರನಾಗಬೇಕೆಂದಿಲ್ಲ.-ಧೈರ್ಯ ಶೌರ್ಯ ಸಹಾಸಗಳೇನೂ ಬೇಡ-ಯಾವ ಹೆಂಗಸೂ ಮಾಡಬಹುದು-ಯಾವ ಮಗುವೂ ಮಾಡಬಹುದು.-ಖರ್ಚುಎಂಬುದು ಗುಡ್ಡದಿಂದ ಕೆಳಗೆ ಇಳಿದುಬರುವ ಕಲ್ಲು-ಅದನ್ನು ಮೇಲಿಂದ ಉರುಳಿಸಿಬಿಟ್ಟರ ಸಾಕು-ತನ್ನಷ್ಟಕ್ಕೆ ರಭಸಗೊಂಡು ಮತ್ತೂ ಹೆಚ್ಚು ಹೆಚ್ಚು ಭರದಿಂದ ಕೆಳಕ್ಕೆ ಉರುಳುತ್ತದೆ. ಬೇರೆಯವರು ಮಾಡಿದ ಹಣವು ನಮ್ಮ ಹತ್ತಿರ ಇರುವಾಗ 'ನಮಗೆ ಲೋಕದ ಕಾರಿಣ್ಯದ ಬತ್ತಲೆ ರೂಪ ತೋರುವುದಿಲ್ಲ ಯಾವ ಮನುಷ್ಯನು ಬೇರೆಯವರು ಮಾಡಿದ ಹಣವನ್ನು ಖರ್ಚುಮಾಡುತ್ತಾ ದಿನದೂಡುತ್ತಾನೋ ಅವನು ಜೀವಿಸಿ ಪ್ರಯೋಜನವಿಲ್ಲ -ಅವನಿಗೆ ಈ ಜೀವಮಾನದ ಸೊಗಸು ಸಿಕ್ಕುವುದಿಲ್ಲ. ಹಣವನ್ನು ತುಚ್ಛೀಕಾರಮಾಡುವುದರಲ್ಲಿ ತಿರುಳಿಲ್ಲ.-ಅದು ನಮಗೆ ಪ್ರತಿ ಕ್ಷಣವೂ ಬೇಕೇಬೇಕು-ಹಾಗೆಂದು ನಾವು ಕೃಪಣರಾಗಬೇಕೆಂದಲ್ಲ. ಬಾಯಿಯಲ್ಲಿ ಹಣವನ್ನು ತುಚ್ಛೀಕಾರಮಾಡುವವರಿಗೆ ಕಾರ್ಯದಲ್ಲಿ ಅದು ಬಹಳ ಜಾಸ್ತಿ ಬೇಕಾಗುತ್ತದೆ. ಹಾಗಿದ್ದೂ ಅವರು ಅದನ್ನು ತುಚ್ಛೀಕಾರಮಾಡುವುದು ವಿಚಿತ್ರವಲ್ಲವೇ? ಲೋಕದಲ್ಲಿ ಅತಿ ಕಷ್ಟವಾದದ್ದು ಯಾವುದೆಂದರೆ ಸಂಪಾದನೆಮಾಡುವಂಥಾದ್ದು ಅದಕ್ಕೆ ಧೈರ್ಯಬೇಕು, ಶೌರ್ಯಬೇಕು, ಸಾಹಸಬೇಕು, ಪರಿಶ್ರಮಬೇಕು, ಮೇಲಾಗಿ ಬುದ್ಧಿಚಾತುರ್ಯಬೇಕು. ಈಗಿನ ಕಾಲದಲ್ಲಂತೂ ಸಂಪಾದನೆಮಾಡುವುದೆಂದರೆ ಬಲು ಕಷ್ಟವಾಗಿದೆ. ಹೀಗಿದ್ದು ವೆಚ್ಚಮಾಡುವಾಗ ವಿಚಾರಬೇಡವೇ, ವಿವೇಕಬೇಡವೇ? ಸಂದರ್ಭದ ಯುಕ್ತಾಯುಕ್ತತೆಯನ್ನು ನೋಡಿ ದುಡ್ಡಿನ ಗಂಟು ಬಿಚ್ಚಬೇಡವೆ? ಶೆಟ್ರೇ, ದೊಡ್ಡ ನೆಂಟಸ್ತಿಕೆ ಯಾವುದು ಗೊತ್ತುಂಟೇ?– <u>ಸಂಪಾದನೆಯೇ ಗಂಡ, ವೆಚ್ಚವೇ ಹೆಂಡತಿ. ಗಂಡನನ್ನು ಮೀರದ ಹೆಂಡತಿಯನ್ನು ಗಂಟುಹಾಕಿಕೊಡುವುದರಲ್ಲಿದೆ ದೊಡ್ಡ ನೆಂಟಸ್ತಿಕೆ. ಅದೇ ದೊಡ್ಡ ಮನೆತನ! ನಿಜವಾದ "ಧರಂ" ಅಂದರೆ ಅದೇ</u>—ಆದುದರಿಂದ ವಿಚಾರವಿಲ್ಲದೆ ವೆಚ್ಚಮಾಡುವವನು ಪ್ರಯೋಜನವಿಲ್ಲ ಆಯಮೀರಿ ವ್ಯಯಮಾಡುವವನ ಬಾಳು ನಾಳೆ ಬಹಳ ಕೀಳುಬೀಳುವುದು ನಿಸ್ಸಂದೇಹ ಆದುದರಿಂದ ಹಾಸಿಗೆ ಇದ್ದಷ್ಟು ಕಾಲುನೀಡುವವನ್ಯಾರೋ ಅವನೇ ಜಾಣ. ಅವನಿಗೆ ಸ್ಥಾನವಿದೆ, ಮಾನವಿದೆ, ಸುಖ ಸಂತೋಷ, ಶಾಂತಿ, ತುಷ್ಟಿಗಳಿವೆ. ಅವನೇ ಮಾನವ. ಹೀಗೆ ಆಯದ ಹಾದಿಯ ಕಡೆಗೆ ದೃಷ್ಟಿಯಿಟ್ಟು ವ್ಯಯದ ಮೂಗುದಾಣಹಿಡಿದು ಸಂಸಾರದ ರಥವನ್ನು ನಡೆಸುವವನೇ ಧೀರ, ಅವನೇ ಶೂರ; ಅದನ್ನರಿಯದವನು ಊರಿಗೆ ಕಾರ, ಭೂಮಿಗೆ ಭಾರ. ಮೊದಮೊದಲು ಆಯದ ಹದಮೀರಿ ವ್ಯಯದಿಂದ ಡಂಭಾಚಾರ ತೋರಿ ರಕ್ಕನ ಸಿಂತನದಲ್ಲಿ ಮೆರೆದು ಕೊನೆಗೆ ಕಸಕ್ಕಿಂತ ಕೀಳಾಗಿ, ಗಾಳಿಗಿಂತ ಹಗುರವಾಗಿ, ಕೂಳಿನ ಆಳಾಗಿ, ಬೇಲಿಯ ಗೂಟದ ಗೇಲಿಗೂ ಬಲಿಬೀಳುವವನ ಬಾಳೆಂಬುದೆ ಅದೇ ನರಕದ ಜೀವನ. ಅದೇ ಅವಿವೇಕದ ಹಾದಿಹಿಡಿದುದಕ್ಕೆ ದೇವರು ಕೊಟ್ಟ ಶಿಕ್ಷೆ. ಬೇರೆ ನರಕ ಬೇಕೆ ಶೆಟ್ರೇ? ಬೇರೆ ಶಿಕ್ಷೆ ಯಾಕೆ ಶೆಟ್ರೇ? ಈ ನರಕ ಯಾತನೆಯನ್ನು, ಈ ಶಿಕ್ಷೆಯ ಚಿತ್ರಹಿಂಸೆಯನ್ನು ತಾಳಲಾರದೆ ಆತ್ಮಹತ್ಯೆಮಾಡಿಕೊಂಡವರೆಷ್ಟು ಮಂದಿ? ಲೆಕ್ಕಮಾಡಿ ಶೆಟ್ರೇ? ಹುಚ್ಚು ಹಿಡಿದವರೆಷ್ಟು? ಊರುಬಿಟ್ಟು ಓಡಿದವರೆಷ್ಟು? ಬ್ಯಾಂಕಿನ ಜಾಮೀನಿನ ಗಾಳದಲ್ಲಿ ಇತರರನ್ನು ಸಿಲುಕಿಸಿ ಕುತ್ತಿಗೆ ಹಿಸುಕಿದವರೆಷ್ಟು? ಲೆಕ್ಕಮಾಡಿ ಶೆಟ್ರೇ? ನಿಮ್ಮ ಸುತ್ತಮುತ್ತ ನೋಡಿ ನೋಡಿ ನೆನಪುಮಾಡಿ ಮಾಡಿ, ಲೆಕ್ಕಮಾಡೀಂದೆ! ಈ ರೋಗಕ್ಕೆ ಯಾವ ಮದ್ದೆಂದು ಕೇಳ್ತೀರಾ ನನ್ನನ್ನೇ? ಅಲ್ಲದ ಸಲ್ಲದ ಇಲ್ಲದ ಸಿರಿಸಂಪತ್ತನ್ನು ತೋರಿಸುವ ವಂಚನೆ ನಾಟಕವನ್ನಾಡದಿರುವುದು. ಆಯಕ್ಕಿಂತ ಗಿಡ್ಡ ವ್ಯಯದ ಹಾದಿಹಿಡಿದು ವೆಚ್ಚದ ಪ್ರತಿಯೊಂದು ಹೆಜ್ಜೆಯನ್ನೂ ವಿಚಾರದ ದೃಷ್ಟಿಯಿಂದ ನೋಡಿ ವಿವೇಕದ ತಕ್ಕಡಿಯಲ್ಲಿ ತೂಗಿ ಎಚ್ಚರದಿಂದ ಮುಂದಿಡುವುದು– ಇದೇ ಮದ್ದು! ಇದರ ಹೆಸರೇ 'ಬಜೆಟ್' ಈ 'ಬಜೆಟ್ಟಿ'ನ ಸ್ಥೂಲ ಸೂಕ್ಷ್ಮರೇಖೆಗಳನ್ನು ಮುಂದಿನ ವಾರ ಹಾಕಿ ಕೊಡುತ್ತೇನೆ ಇಂದು ಇಷ್ಟನ್ನು ಮನನಮಾಡಿ ಶೆಟ್ರೇ, ನಮಸ್ಕಾರ.

ಪಂಡಿತ ತಾರಾನಾಥರ ಪ್ರಕೃತಿ

ಪಂಡಿತಜೀಯವರ ಮಿತ್ರರನೇಕರು ಅವರ ಪ್ರಕೃತಿಮಾನದ ವಿಚಾರ ಆಗಾಗ ಬರೆದು ಕೇಳುತ್ತಲಿದ್ದಾರೆ. ಅವರೆಲ್ಲರಿಗೂ ಬೇರೆಬೇರೆಯಾಗಿ, ಉತ್ತರ ಬರೆಯುವದಕ್ಕಿಂತ, ತಮ್ಮ ಪ್ರಮುಖ ಪತ್ರಿಕೆಯಲ್ಲಿ ಪ್ರಕಟಿಸಿದರೆ ಎಲ್ಲರಿಗೂ ತಿಳಿಯುವ ಅನುಕೂಲವಿದೆಯೆಂಬ ಆಪೇಕ್ಷೆಯಿಂದ ಈ ವಾರ್ತೆಯನ್ನು ನಿಮಗೆ ಕಳುಹಿಸಲಾಗಿದೆ.

ಪಂಡಿತರಿಗೆ ಎರಡು ಎರಡೂವರೆ ತಿಂಗಳಿಂದೀಚೆಗೆ ಜ್ವರ ಬರುತ್ತಲೇ ಇತ್ತು. ಅರ್ಥಮರ್ಥ ಕಾಯಿಲೆಯಲ್ಲಿಯೇ ತಮ್ಮ ಆರೋಗ್ಯದ ಕಡೆಗೂ ಲಕ್ಷ್ಯಕೊಡದೆ, ಪುಣೆಯಲ್ಲಿ ಜರಗಿದ ಮುಂಬಯಿ ಪ್ರಾಂತೀಯ ವೈದ್ಯ ಹಕೀಮರ ಪರಿಷತ್ತಿಗೆ ಮಹತ್ವಕೊಟ್ಟು ಅಧ್ಯಕ್ಷರಾಗಿ ಹೋದರು. ಅಲ್ಲಿಯ ಆದ್ಯರಾತಿಥ್ಯವ್ಯವಸ್ಥೆಗಳು ಅತಿ ಚೆನ್ನಾಗಿದ್ದರೂ, ಪರಿಷತ್ಕಾರ್ಯ, ಮಿನಿಷ್ಟರ್ಸ್ ಭೇಟಿ, ಅಷ್ಟೇ ಅಲ್ಲದೆ ಕೆಲವು ಹೊರಗಿನ ಕಾಲೇಜು ಸಂಸ್ಥೆಗಳ ಕರೆಯನ್ನು ಸ್ವೀಕರಿಸಿ ಅಲ್ಲಿ ಭಾಷಣ ವಗೈರೆ ಕಾರ್ಯಬಾಹುಲ್ಯದಿಂದ ದಣಿದುಬಿಟ್ಟರು. ಅಸ್ವಾಸ್ಥ್ಯದಲ್ಲೇ ಹೀಗೆ ಅವಿರಾಮವಾಗಿ ಕೆಲಸಮಾಡಿದುದರಿಂದ ತುಂಗಭದ್ರೆಗೆ ಬಂದವರೇ ಭಯಂಕರ ಸಂಧಿವಾತ ಬೇನೆಯಿಂದ ಹಾಸಿಗೆ ಹಿಡಿದಿರುವರು. ಚಿಕಿತ್ಸೆ ನಡೆಯುತ್ತಲಿದೆ

ಬಳ್ಳಾರಿಯ ಪ್ರಸಿದ್ಧ ಹೋಮಿಯೋಪಥಿ ಡಾಕ್ಟರ್ ಸಭಾಪತಿರಾವ್, B A B L. ವಕೀಲ್ ಇವರು ಆಗಾಗ ಬಂದು ಸಲಹೆ ಕೊಡುತ್ತಿದ್ದಾರೆ ಕಳೆದವಾರ ಡಾ| ಮಿಶ್ರಾ I. M S. F. R C. S ಇವರು ಬಂದು ಪರೀಕ್ಷೆಮಾಡಿ ಹೋದರು. ಇಂದು ಡಾ। ಸುಬ್ಬರಾವ್ M R C S. ಸೀನಿಯರ್ ಪೇಲೇಸ್ ಸರ್ಜನ್ ಮೈಸೂರು ಇವರು ಬಂದು ಪರೀಕ್ಷೆಮಾಡಿ "ಸೀವಿಯರ್ ರುಮೇಟಿಸಮ್" ಎಂದು ನಿದಾನಮಾಡಿ, ಚಿಂತಾಜನಕವೇನೂ ಇಲ್ಲೆಂದು ಹೇಳಿ ಹೋಗಿರುವರು. ಚಿಕಿತ್ಸೆಯು ಪಂಡಿತಜೀಯವರ ಇಷ್ಟಪದ್ಧತಿಗನುಸಾರ ನಡೆಯುತ್ತಿದೆ. ಮುಂದಿನ ಚಿಕಿತ್ಸಾ ಸೌಕರ್ಯಕ್ಕಾಗಿ ಇವರು ಬೆಂಗಳೂರಿಗೆ ತೆರಳುವವರಿದ್ದಾರೆಂದು ಗೊತ್ತಾಗಿದೆ ಇವರಿಗೆ ಶೀಘ್ರ ಆರೋಗ್ಯಪ್ರಾಪ್ತಿಯಾಗಲೆಂದು ಹಾರೈಕೆ.

ನವಯುಗಕ್ಕೆ

ಏಜಂಟರಿಲ್ಲದ ಸ್ಥಳಗಳಲ್ಲಿ ಏಜಂಟರು

ಬೇಕಾಗಿದ್ದಾರೆ.



ಜಯಕರ್ನಾಟಕ

ಶಿಕ್ಷಣಾಂಕ

ಡಿಸೆಂಬರ ೧ನೇ ತಾರೀಖಿಗೆ ಹೊರಡುವ ವಿಶೇಷ ಸಂಚಿಕೆ.

ನಾರ್ಧಾಶಿಕ್ಷಣ ಯೋಜನೆ, ರಾಷ್ಟ್ರೀಯ ಶಿಕ್ಷಣ, ಶಿಕ್ಷಣದ ಜೀವನಸಾಮ್ರಾಜ್ಯ, ಆಧುನಿಕ ಶಿಕ್ಷಣ ಪದ್ಧತಿಗಳು, ಶಿಕ್ಷಣದ ಅಭಿನವ ದೃಷ್ಟಿ, ದೇಶವಿದೇಶಗಳೊಳಗಿನ ಶಿಕ್ಷಣ ಪ್ರಕಾರಗಳು ಮೊದಲಾದ ವಿವಿಧ ಶಿಕ್ಷಣ ಸಮಸ್ಯೆಗಳ ಮೇಲೆ ಅಧಿಕಾರಸಂಪನ್ನ ಲೇಖಕರ ಲೇಖನಗಳು ಬರುವವು.

ದಕ್ಷಿಣ ಕನ್ನಡದ ಶ್ರೀಯುತರಾದ ಕಾರಂತ, ಎಂ ಎನ್. ಕಾಮತ, ಜಿ ಆರ್ ಶೆಣೈ, ಎಸ್. ಮುಕುಂದರಾವ್, ಉಲ್ಲಾಳ ಮಂಗೇಶರಾವ್, ಕೊರಡ್ಕಲ್ ಶ್ರೀನಿವಾಸರಾವ್ ಮೊದಲಾದ ಮಹನೀಯರು ಬರೆಯುವರು.

ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ ತುಂಬಾ ಸಂಗ್ರಾಹ್ಯವಾದ ಸಂದರ್ಭ ಗ್ರಂಥ.

ಲೇಖಕರಿಗೆ ಸೂಚನೆ - ಶಿಕ್ಷಣದ ಪ್ರಶ್ನೆಗಳ ವ್ಯಾಸಂಗ ಮಾಡಿದವರು ಜ ಕ ದ ೩ ಪುಟಗಳಿಗೆ ಮಿಕ್ಕದಂತೆ ಯಾವುದೊಂದು ಸೂಕ್ತ ವಿಷಯವನ್ನು ತೆಗೆದುಕೊಂಡು ಸಂಗ್ರಹವಾಗಿ ಬರೆದು ಕಳಿಸಬೇಕು.

ಸಂಚಿಕೆಯು ೧೦೦ ಪುಟಗಳನ್ನು ಮೀರುವುದು, ಆದರೂ ಬೆಲೆ ಆರೇ ಆಣೆ

ಬಿಡಿ ಪ್ರತಿಗಳನ್ನು ಪಡೆಯಲಿಚ್ಛಿಸುವವರು ಆರ್ಡರು ದಾಖಲುಮಾಡಬೇಕು.

ಜಾಹೀರಾತುದಾರರಿಗೆ ತಮ್ಮ ಸರಕುಗಳ ಪ್ರಚಾರಮಾಡಲು ಸುವರ್ಣ ಸಂಧಿ.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ನಾಯುಮಾತ್ರೆ

ಅಜೀರ್ಣ, ಸುಟ್ಟಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ ತಿಂಡವಾಯು, ಎಲ್ಲಾತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ಥ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. **ಕ್ರಯ:**-100ಮಾತ್ರೆಗಳಿಗೆ ರೂ 1-5-0, 500ಕ್ಕೆ ರೂ. 5-0-0. ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ

ಆಮಲಕೀ ತೈಲ (ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ .0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ.
ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ.

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ. ಭಾರತ

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

HOTEL INDIANA

BAR AND RESTAURANT

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ!

ಹೋಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ
ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಆಧುನಿಕ
ಸೌಕರ್ಯಗಳಿಂದ ನಿಮ್ಮನ್ನೆದುರುಗೊಳ್ಳುತ್ತದೆ

ಹೊಸ ಆಡಳಿತ! **ಹೊಸ ವ್ಯವಸ್ಥೆ !!**

ಎಲ್ಲವೂ ಹೊಸತೇ ಆಗಿ
ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ

Proprietor, HOTEL INDIANA
Hampankatta, Mangalore.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, — ಯಂ. ಆರ್. ಪೂಂಜ,
President & Manager, — ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! **DAIMONDS!!**

K. R. K. SHET

Opposite Govt College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! — **ವಜ್ರಗಳು** — BEST BRILLIANCY !!

ಉತ್ಕೃಷ್ಟ ತರಗತಿಯ ಆಯ್ದಿರುವ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುತ್ತದು ಬಾಟ್ಲಿ ೧ರ ರೂ 2-8-0

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager,
Kanara Printing Works,
Hampankatte, **MANGALORE**

ಕಸಿಗಿಡಗಳು.

ಸಪ್ಪೋಡಿಲ್ಲ (ಚಿಕ್ಕು):— ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ವರದಲ್ಲಿ ಸಾವಿರಗಟ್ಟಲೆ ಹಣ್ಣಾಗುವದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು

ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ 1-0-0 ಮಾತ್ರ.
ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ
ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಕೆ. ಎಮ್. ಸೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ —ಕಾಪು, ದ. ಕ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩-೮-೦	೧೦೦ ಮಾತ್ರೆಗಳಿಗೆ ರೂ ೨-೮-೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ ಮೇಸ್ತ್ರಿ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಸಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! **ಪ್ರಾಮಾಣಿಕತೆ!** **ಪ್ರಸಿದ್ಧಿ!**

ಮನಮೋಹಕ ಸೀನ್‌ಸಿನರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತವೆ [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿ

ಪೈಂಟರ್ ಗಣಪತಿರಾವ್,
ಸೋದೆ ಮಠದ ಲೇನು - - - ಉಡುಪಿ, ದ ಕ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

ಎಂದಾದರೊಮ್ಮೆ ನೋಡಬಹುದು ಎಂದೆಣಿಸಲಾಗದ ಪರ್ವಕಾಲ

ಕಾವೇರೀ ನದೀತೀರವಾದ ತಲಕಾಡಿನಲ್ಲಿ

ಪಂಚಲಿಂಗ ದರ್ಶನ

ಭಕ್ತವೃಂದವು ಹಾರೈಸುವ ಪುಣ್ಯಕಾಲ.

ಅನೇಕ ವರುಷಗಳಿಗೊಮ್ಮೆ ಬಂದೊದಗುವ ಜಾತ್ರೆ ಇದು

ಕಳೆದ 1925ರಲ್ಲಿ ಜರಗಿದ ಜಾತ್ರೆ ಇದು ಇದೀಗ 1938ರಲ್ಲಿ ತಾರೀಕು 21-11-38ರಲ್ಲು

ಜರಗಲಿಕ್ಕಿದೆ.

ಕಾರ್ತಿಕಮಾಸ, ವೃಶ್ಚಿಕಮಾಸ, ಅಮಾವಾಸ್ಯೆ, ಸೋಮವಾರ, ಮಹಾಯೋಗ, ಇವಿಷ್ಟು ಯೋಗಗಳು ಒಟ್ಟಿಗೆ ಬರುವ ದಿವಸದಲ್ಲಿಮಾತ್ರ ಈ ಜಾತ್ರೆಯು ಜರಗುವದು

ಈ ಪರ್ವಕಾಲದಲ್ಲಿ ಉತ್ತರವಾಹಿನಿಯಾಗಿಯೂ, ಪೂರ್ವವಾಹಿನಿಯಾಗಿಯೂ, ದಕ್ಷಿಣವಾಹಿನಿಯಾಗಿಯೂ, ಪಶ್ಚಿಮವಾಹಿನಿಯಾಗಿಯೂ, ಹರಿಯುವ ಕಾವೇರಿ ಪುಣ್ಯೋದಕದಲ್ಲಿ ಸ್ನಾನವನ್ನು ಮಾಡಿ, ವೈದ್ಯೇಶ್ವರ, ಅರ್ಕೇಶ್ವರ, ಪಾತಾಳೇಶ್ವರ, ಮರಳೇಶ್ವರ, ಮಲ್ಲಿಕಾರ್ಜುನೇಶ್ವರ ಸ್ವಾಮಿಯ ದರ್ಶನ ಲಾಭವನ್ನು ಪಡೆಯಿರಿ. ಕಾರ್ತಿಕ ಬಹುಳ ಅಮಾವಾಸ್ಯೆ, ಸೋಮವಾರ ದಿವಸ ತಲಕಾಡಿನ ಗೋಕರ್ಣ ಸರೋವರದಲ್ಲಿ ಸ್ನಾನಮಾಡಿ, ಗೋಕರ್ಣೇಶ್ವರ ಸ್ವಾಮಿ ದರ್ಶನ ಪಡೆದು ಚಾಮುಂಡೇಶ್ವರೀ ದರ್ಶನವನ್ನು ಹೊಂದಿ, ವೈದ್ಯೇಶ್ವರ ದರ್ಶನ ಲಾಭವನ್ನು ಹೊಂದುವದು. ಅಲ್ಲಿಂದ ಮೂರು ಮೈಲು ದೂರದಲ್ಲಿರುವ ವಿಜಾಪುರಕ್ಕೆ ಹೋಗಿ, ಉತ್ತರವಾಹಿನಿ ಕಾವೇರಿನದಿಯಲ್ಲಿ ಸ್ನಾನಮಾಡಿ ಅಲ್ಲಿರುವ ಅರ್ಕೇಶ್ವರನ ದರ್ಶನ ಲಾಭ ಪಡೆದು, ಅಲ್ಲಿಂದ ತಲಕಾಡಿಗ ದಕ್ಷಿಣದಲ್ಲಿರುವ ಪೂರ್ವವಾಹಿನಿ ಕಾವೇರಿ ನದಿಯಲ್ಲಿ ಸ್ನಾನಮಾಡಿ, ಪಾತಾಳೇಶ್ವರನ ದರ್ಶನ ಲಾಭ ಪಡೆದು, ಪಶ್ಚಿಮ ಪಾರ್ಶ್ವದಲ್ಲಿ ದಕ್ಷಿಣವಾಹಿನಿಯಾಗಿ ಹರಿಯುವ ಕಾವೇರಿಯಲ್ಲಿ ಸ್ನಾನಮಾಡಿ, ಮಲ್ಲಿಕಾರ್ಜುನೇಶ್ವರ ಸ್ವಾಮಿ ದರ್ಶನ ಲಾಭವನ್ನು ಪಡೆಯುವುದು. ಇದು ಪಂಚಲಿಂಗ ದರ್ಶನ ಕ್ರಮ.

ಈ ಸ್ಥಳವು ಮೈಸೂರಿನಿಂದ ಬರೇ 30 ಮೈಲು ದೂರದಲ್ಲಿದೆ. ಯಾತ್ರಾರ್ಥಿಗಳ ಸರ್ವಾನುಕೂಲತೆಯು ವ್ಯವಸ್ಥೆ ಮಾಡಲಾಗಿದೆ ನಮ್ಮ ಜಿಲ್ಲೆಯಲ್ಲಿ ವ ಮಡಿಕೇರಿ, ಮೈಸೂರು ಕಡೆಗಳಲ್ಲಿ ಪ್ರಯಾಣಿಕರಿಗೆ ಉಳಕೊಳ್ಳುವರೆ ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ.

ಪಟ್ಟಿನಮಾ • ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರಮೂಲಕವಾಗಯ ಆಥವಾ ಸ್ವತಃ ಬಂದು ಕೇಳಿ ತಿಳಕೊಳ್ಳಿರಿ.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ ದೊರೆಯುವುದು.

ವಾರ್ಷಿಕ ಚಂದಾ ರೂ 3 0 0 ಬಿಡಿ ಪ್ರತಿ 0 1 0

ಮೆನೇಜರ್— ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital	Rs 1,00,000
Subscribed & Paid up	Rs. 30,460
Reserves ..	Rs. 1,078

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

3ರಿಂದ	6 ತಿಂಗಳ ವರೆಗೆ	4 ಸಲೆ
7 ,,	11 ,,	5 ,,
12 ,,	18 ,,	6 ,,

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?
ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ವ್ಯಾಸಭವನಂ
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S S KARANTH, for & on behalf of SUPPLY AGENCY LTD, at THULUNAD PRESS, UDIPI and Published by K H SHETTY at "NAVAYUGA" OFFICE, UDIPI, South India

Registered No. M. 3618

10-11-1938

NAVA YUGA



ಶ್ರೀರಾಮಕೃಷ್ಣ ಥಿಯೇಟರಿನಲ್ಲಿ
8 11 38ರಿಂದ ತೋರಿಸಲ್ಪಡುವ ಕ್ಯಾಪ್ಟನ್ ಕೇಶೀಕುಮಾರ
ಚಿತ್ರದಲ್ಲಿ—ಮೋತಿಲಾಲ

PLAN YOUR FAMILY'S FUTURE.

EVERY INDEPENDENT STATE HAS ITS OWN FIVE OR SEVEN YEARS' PLANS FOR THE ECONOMIC BETTERMENT OF ITS PEOPLE; EVEN SO HAS EVERY THOUGHTFUL INDIVIDUAL IN EVERY WALK OF LIFE A WELL THOUGHT OUT PLAN OF HIS OWN FOR THE FUTURE WELFARE OF HIS FAMILY.

PLAN YOUR FAMILY'S FUTURE NOW.

IF YOU ARE A BUSINESSMAN OUR PIGMY DEPOSIT SCHEME SHOULD APPEAL TO YOU MOST SINCE IT IS A DAILY DEPOSIT COLLECTED AT YOUR DOOR. THESE DAILY DEPOSITS GROW EVEN AS YOUR CHILDREN DO AND ARE THEREFORE WELL SUITED FOR BEING EARMARKED FOR YOUR DAUGHTER'S MARRIAGE OR SON'S EDUCATION.

THE

CANARA INDUSTRIAL & BANKING SYNDICATE, LTD.

(INCORPORATED IN BRITISH INDIA)

ESTD.] *HEAD OFFICE:*— UDIPI, S. INDIA [1925

MEMBER:

RESERVE BANK OF INDIA
BANKERS' CLEARING HOUSE, BOMBAY.

Authorised Capital ... . „	10,00,000
Issued Capital .. .. ,	8,00,000
Subscribed Capital . . . . „	7,74,500
Paid up Capital ... . „	3,86,880
Reserves .. .. „	2,16,700

TOTAL RESOURCES EXCEED Rupees 51 Lakhs.

ಭುವನೇಂದ್ರ ಪ್ರಾಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು
ತೈಲ ಮತ್ತು ಅರಿಷ್ಟಾಸವಗಳು

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮಿ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಸ್ಮೃತಿಸಾಗರ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ
ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅ... ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಧಾತುಪುಷ್ಟಿಗೆ	—ಮದನಕಾಮೇಶ್ವರಿ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: MANGALORE

BRANCHES: Udipi Coondapoor, Kaup & Karkal

Fixed deposits are now received at all the offices of the Bank at the following terms:—

3 Months Fixed Deposits at 3 p. c. per annum.
6 Months / 9 months } Fixed Deposits at 3½ p. c. per annum.
One year Fixed Deposits at 4 p. c per annum.
Two years' Fixed Deposits at 4½ p c per annum.

Interest on Fixed Deposits is payable every quarter.
Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary

THE

PANGAL NAYAK BANK LIMITED.

Estd.] H. O. UDIPI. [1920

BRANCHES:
MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at 3½ p. c per annum.
Two years' Fixed Deposits at 4 p. c. per annum.
Savings Bank Deposits .... 3 p. c per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD 1921
FOUNDER
Sri A B SHETTY, M.L.A.
Parliamentary Secretary Govt. of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ ಎಲ್ ಎ
ಸಂಪಾದಕ
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೧೦-೧೧-೧೯೩೮ | Vol XVIII
ಸಂಚಿಕೆ ೧೧ | Udipi, Thursday 10—11—1938 | No. 11

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೪—
೬ ತಿಂಗಳಿಗೆ ರೂ ೧—೧—೦
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ

ಎಲ್ಲಿದೆ ಗೌರವದ ಶಾಂತಿ?

ಮ್ಯುನಿಚ್ ಒಡಂಬಡಿಕೆಯನ್ನು ಗೌರವಪೂರ್ವಕವಾದ ಶಾಂತಿಯೆಂದು ಉದ್ಘೋಷಿಸಿದರು ಬ್ರಿಟಿಷ್ ಪ್ರಧಾನ ಮಂತ್ರಿಗಳು. ಆದರೆ ಅವರ ಉತ್ತರ ಕ್ಷಣದಲ್ಲೇ ಇಂಗ್ಲೆಂಡು ಪ್ರಚಂಡ ಯುದ್ಧಸಿದ್ಧತೆಗಾರಂಭಿಸಿರುವುದು. ಬೇಗನೆ ಯುದ್ಧ ನಿಶ್ಚಯವೆಂಬ ದಿಗಿಲು ಯುರೋಪಿನಲ್ಲೆಲ್ಲಾ ಹಬ್ಬಿ ಚಿಕ್ಕ ಚಿಕ್ಕ ರಾಷ್ಟ್ರಗಳೂ ಆತ್ಮರಕ್ಷಣೆಯ ಸಿದ್ಧತೆಯಲ್ಲಿ ನಿರತವಾಗಿರುವವು. ದೂರದ ಅಮೇರಿಕವೂ ಈ ಯುದ್ಧದ ಸಿದ್ಧತೆಯ ಮೇಲಾಟಕ್ಕೆ ಸೇರಿರುವುದು. 7000ದಿಂದ10000ದ ವರೆಗಣ ಯುದ್ಧ ವಿಮಾನ, ಕಡಿಮೆಯೆಂದರೆ 4ಲಕ್ಷ ಸೇನೆ ಮತ್ತು ಒಂದು ಮಿಲ್ಯ ರಿಸರ್ವ್ ಸೇನೆಯನ್ನು ತಯಾರಿಸುವ ನಿರ್ಧಾರಮಾಡಿರುವುದು. ಮ್ಯುನಿಚ್ ಒಪ್ಪಂದವು ಶಾಂತಿಯ ಬದಲಿಗೆ ಮಹತ್ತಾದ ಯುದ್ಧಕ್ಕೆ ತಳಹದಿ ಹಾಕಿರುವುದು

ಹಿಟ್ಲರರ ಆಕಾಂಕ್ಷೆಗೆ ತಡೆ!

ಮಧ್ಯ ಯುರೋಪಿನ ಚಿಕ್ಕ ರಾಷ್ಟ್ರಗಳನ್ನೆಲ್ಲಾ ನುಂಗಿ ಜರ್ಮನ್ ಸಾಮ್ರಾಜ್ಯವನ್ನು ವಿಸ್ತರಿಸಬೇಕು ಆಮೇಲೆ ರಷ್ಯದ ಉಕ್ರೈನನ್ನೂ ಫ್ರಾನ್ಸಿನ ಉತ್ತರ ಭಾಗವನ್ನೂ ಆಕ್ರಮಿಸಿಕೊಳ್ಳಬೇಕು ಉಳಿದ ಯುರೋಪಿನ ಭಾಗವನ್ನು ಮುಸಲೋನಿಯವರಿಗೆ ಬಿಟ್ಟುಬಿಡಬೇಕೆಂದು ಹಿಟ್ಲರರ ಆಕಾಂಕ್ಷೆಯಿರುತ್ತದೆ. ಯಾವ್ಯಾವ ವರ್ಷದಲ್ಲಿ ಹೇಗೆ ಈ ಆಕಾಂಕ್ಷೆಯನ್ನು ಮುಂದೊತ್ತಬೇಕೆಂದವರು ಕಾರ್ಯಕ್ರಮವೊಂದನ್ನು ಕೂಡಾ ಸಿದ್ಧಗೊಳಿಸಿರುತ್ತಾರೆ ಆದರೆ ಜರ್ಮನಿಯ ರಾಜ್ಯ ವಿಸ್ತಾರ ಮತ್ತು ಹಿಟ್ಲರರ ಪ್ರಾದುರ್ಭಾವದ ಕುರಿತು ಇಟೆಲಿಯನರಲ್ಲೇ ಒಳಗಿಂದೊಳಗೆ ಅತೃಪ್ತಿಯುಂಟಾಗಿದೆ. ಉತ್ತರ ಇಟೆಲಿಯಲ್ಲಿ ಈ ಅತೃಪ್ತಿಯು ತೀವ್ರ ಸ್ವರೂಪತಾಳಿದೆ ರುಮೇನಿಯದ ಯುಗೊಸ್ಲಾವಿಯದ ಅರಸರು, ಜರ್ಮನಿಯಿಂದ ದೂರವಾಗುತ್ತಿರುವ ಪೋಲಂಡಿನೊಂದಿಗೆ ಹೊಸ ಕೂಟವೊಂದನ್ನು ಸ್ಥಾಪಿಸಿ ಹಿಟ್ಲರರು ಪೂರ್ವಕ್ಕೆ ಮುಂದುವರಿಯದಂತೆ ವಿರೋಧಿಸುವ ಪ್ರಯತ್ನದಲ್ಲಿದ್ದಾರೆ.

ಯುರೋಪಿನ ಮೇಲೆ ಫೆಸಿಸ್ಟರ ಹಿಡಿತ.

ಮಿ. ಚೇಂಬರ್ಲೇನರ ಧೋರಣೆಯು ಯುರೋಪಿನ ಮೇಲೆ ಫೆಸಿಸ್ಟರ ಹಿಡಿತವನ್ನು ಬಲಗೊಳಿಸಿರುವುದು. ಅವರು ರಷ್ಯವನ್ನು ಮೂಲೆಗೊತ್ತಿ ಫೆಸಿಸ್ಟ್ ಡಿಕ್ಟೇಟರುಗಳೊಡನೆ ಒಡಂಬಡಿಕೆಮಾಡಿಕೊಂಡು ಶಾಂತಿ ಸ್ಥಾಪಿಸುವ ಬಯಲು ಭ್ರಾಂತಿಕಟ್ಟಿಕೊಂಡಿರುವರು. ಇದರಿಂದ ಉಂಟಾಗುವ ಅನಾಹುತವೆಂದರೆ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಫೆಸಿಸ್ಟ್ ಡಿಕ್ಟೇಟರರ ತಾಳಕ್ಕೆ ತಕ್ಕ ಹೆಜ್ಜೆ ಹಾಕುವ ಅವಸ್ಥೆಗೀಡಾಗುವುದು. ಇ

ವಾರದ ಡೈರಿ

ಟೆಲಿ, ಜರ್ಮನಿ ಮತ್ತು ಜಾಪಾನುಗಳು, ಕಮ್ಯೂನಿಸ್ಟರನ್ನು ವಿರೋಧಿಸಲು ಪರಸ್ಪರ ಸಹಾಯದ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಇಟೆಲಿಯು ನಿರ್ಧರಿಸಿರುವುದಂತೆ ಇದರಿಂದ ಫೆಸಿಸ್ಟ್ ರಾಜ್ಯಗಳು ಇಡೀ ಲೋಕದಲ್ಲೇ ತಮ್ಮ ಪ್ರಾಬಲ್ಯವು ನೆಲೆಗೊಳ್ಳುವಂತೆ ಒಳಗಿಂದೊಳಗೆ ಸಂಚು ನಡೆಸುತ್ತಿರವವೆಂಬುದು ಸಿದ್ಧವಾಗುವುದಿಲ್ಲವೇ? ಚೇಂಬರ್ಲೇನರ ಮ್ಯುನಿಚ್ ಒಡಂಬಡಿಕೆಯು ಬರಿಯ ಕಣ್ಣು ಕಟ್ಟಲ್ಲವೇ?

ಪ್ರತಿಯೊಬ್ಬನೂ ತನ್ನ ಧರ್ಮವನ್ನು ಕಂಡುಕೊಳ್ಳಬೇಕು!

ಶ್ರೀ ಜೆ. ಕೃಷ್ಣಮೂರ್ತಿಯವರು ಹಿಂದೂದೇಶದಲ್ಲೆಲ್ಲಾ ಕೆಲವು ತಿಂಗಳು ಸಂಚರಿಸಿ ಭಾಷಣಮಾಡುವ ಕಾರ್ಯಕ್ರಮವನ್ನು ಕೈಕೊಂಡಿರುವರು ಯಾವ ತರದ ಮತಸಂಘಗಳ ಆಧೀನತೆಗೂ, ಸಾಮಾಜಿಕ ನೀತಿ ನಿಯಮಗಳ ಬಂಧನಗೂ ಅವರು ಬದ್ಧ ವಿರೋಧಿ ಇದ್ದು ಪ್ರತಿಯೊಬ್ಬ ಮಾನವನನ್ನೂ ಸ್ವತಂತ್ರ ವಿಚಾರಿಯಾಗಿ, ಬುದ್ಧಿ ವಿಕಾಸ ಮಾಡಿಕೊಂಡು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದೇ ಶ್ರೀ ಕೃಷ್ಣಮೂರ್ತಿಯವರ ಸಂದೇಶ ವಿಶ್ವಪ್ರೇಮ ಮತ್ತು ಸರ್ವ ಮಾನವ ಬಾಂಧ್ಯವ್ಯದ ಪ್ರವಾದಿಯವರು ಧಾರ್ಮಿಕ, ಸಾಮಾಜಿಕ ಮತ್ತು ರಾಷ್ಟ್ರೀಯದ ಮೇರೆ ಮತ್ತು ಕಟ್ಟುಕಟ್ಟಳೆಗಳ ಯಾವ ತರದ ಸಂಕುಚಿತತೆಯೂ ಇಲ್ಲದ ವಿಶ್ವವ್ಯಾಪೀ ಚಿತ್ತವೃತ್ತಿಯವರವರು. ಯಾವರೀತಿಯ ಧಾರ್ಮಿಕ, ನೈತಿಕ, ಸಾಮಾಜಿಕ ಮತ್ತು ರಾಷ್ಟ್ರೀಯ ನಿರ್ಬಂಧಗಳಾದರೂ ಮಾನವನ ನಿಜವಾದ ಬೆಳವಣಿಗೆ ಮತ್ತು ಉನ್ನತಿಯನ್ನು ಕುಂಠಿತಗೊಳಿಸುವವೆಂದೇ ಅವರ ಮನೋನಿರ್ಧಾರ

ಗಾಂಧಿಜಿಯವರ ಮೇಲೆ ಪಠಾಣರ ಭಕ್ತಿ

ಮಹಾತ್ಮಾ ಗಾಂಧಿಯವರು ಹೋದ ಹೋದಲ್ಲೆಲ್ಲಾ ವಾಯವ್ಯ ಗಡಿನಾಡಿನ ಪಠಾಣರು, ಅತ್ಯಂತ ಭಕ್ತಿಪೂರ್ವಕವಾಗಿ ಸ್ವಾಗತೀಕರಿಸಿ ತಮ್ಮ ಪಾಲಿನ ಭಾಗ್ಯದೇವತೆಯಂತೆ ಸನ್ಮಾನಿಸುತ್ತಿರುವರು 'ನೀವು ನಮ್ಮೊಂದಿಗೇನೇ ವಾಸಿಸಿ ನಮ್ಮ ಪ್ರಾಂತವನ್ನು ನಿಮ್ಮ ವನೆಯಾಗಿ ಮಾಡಬೇಕು' ಎಂದರು ಒಂದು ಹಳ್ಳಿಯವರು 'ನೀವು ನಮ್ಮ ಬಹಳ ಜನರನ್ನು ನಿಮ್ಮ ಪ್ರದೇಶದಲ್ಲಿ 6 ವರ್ಷಗಳ ವರೆಗೆ ನಿರ್ಬಂಧದಲ್ಲಿರಿಸಿಕೊಂಡಿರಿ ನಾವು ನಿಮ್ಮನ್ನು ನಮ್ಮ ಪ್ರೇಮದ ಬಂದಿಯಾಗಿ 6 ತಿಂಗಳು ಇಟ್ಟುಕೊಳ್ಳುವೆವು' ಎಂದರು ಪ್ರಮುಖ ಖಾನರೊಬ್ಬರು.

ಜಮೀನು ಹಿಂದೆ ಸಿಕ್ಕಿತು

ಬಾರ್ಡೋಲಿಯ ... ಒಕ್ಕಲಿಗರು ಕರನಿರಾಕರಣ ಚಳವಳದಲ್ಲಿ ತಮ್ಮ ಜಮೀನನ್ನೆಲ್ಲಾ ಕಳಕೊಂಡು ಈಗ ೮ ವರ್ಷಗಳಾದುವು ದೇಶದ್ರೋಹಿಗಳು ಕೆಲವರು ಬಹಳ ಕಡಿಮೆ ಬೆಲೆಗೆ ಅದನ್ನು ಪಡಕೊಂಡು, ಅನುಭವಿಸುತ್ತಿದ್ದರು ಈಗ ಅದನ್ನೆಲ್ಲಾ ಅವರು ಬಾರ್ಡೋಲಿಯ ಒಕ್ಕಲಿಗರಿಗೆ ಹಿಂದೆ ಕೊಡಬೇಕಾಗಿರುವುದು. ಅವರದನ್ನು ರಾಜಿಯಿಂದ ಕೊಡಲೊಪ್ಪಲಿಲ್ಲ. ಬೊಂಬಾಯಿ ಸರಕಾರವು ಆ ಕುರಿತು ಪ್ರತ್ಯೇಕವಾದೊಂದು ಕಾನೂನೇ ಮಾಡಬೇಕಾಯಿತು ಆಮೇಲೆ ಈಗ ಸರ್ದಾರ್ ವಲ್ಲಭಾಯಿಯವರು ಸ್ವತಃ ಬಾರ್ಡೋಲಿಗೆ ಹೋಗಿ ಒಕ್ಕಲಿಗರಿಗೆ ತಮ್ಮ ಭೂಮಿಯನ್ನು ಕೊಡಿಸಿರುವರು. ಕರ್ನಾಟಕದ ಅಂಕೋಲೆಯ ಸತ್ಯಾಗ್ರಹಿಗಳ ಸಂಗತಿಯೇನೆಂದು ಇಷ್ಟರವರಗೆ ತಿಳಿದಿಲ್ಲ

ತಿರುವಾಂಕೂರಿನ ಪರಿಸ್ಥಿತಿಯು

ಶಾಂತವಾಗುವ ಸಂಭವ ತೋರುವುದಿಲ್ಲ ರಾಜಕೀಯ ಕೈದಿಗಳನ್ನೆಲ್ಲಾ ಮಹಾರಾಜರು ಬಿಡುಗಡೆ ಮಾಡುವ ಮತ್ತು ಸ್ಟೇಟ್ ಕಾಂಗ್ರೆಸಿನ ಮೇಲಿನ ನಿಷೇಧವನ್ನು ತೆಗೆದುಹಾಕುವ ಉದಾರತೆ ತೋರಿಸಿರುವರೇ ಹೊರತು, ಪ್ರಜಾಪ್ರಭುತ್ವ ರಾಜ್ಯಭಾರದ ಪ್ರಶ್ನೆಯ ಕುರಿತು ಮೌನ ವಹಿಸಿದ್ದಾರೆ ಸರಕಾರವು ಇದೇ ರೀತಿ ಸುಮ್ಮನಿದ್ದರೆ ಸ್ಟೇಟ್ ಕಾಂಗ್ರೆಸಿನವರು ತಾವು ಪುನಃ ಸತ್ಯಾಗ್ರಹವನ್ನಾರಂಭಿಸಬೇಕಾಗುವುದೆಂದು ಎಚ್ಚರಿಸಿರುತ್ತಾರೆ ಹಾಗೆ ಸತ್ಯಾಗ್ರಹ ಹೂಡಿದರೆ ಸರಕಾರವು ಕಠಿಣವಾಗಿ ಅದನ್ನಡಗಿಸುವ ಯೋಚನೆ

THE UDIPI BANK LTD.

ನಿರಖು-ಠೇವಣಾತಿ (ಡಿಪೋಜಿಟು)ಗಳು
ಸಾ ಶೇ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ
ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100-ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ಕೂಡಾ ಮಾಡಿರುವುದಂತೆ ಹೀಗಾದರೆ ಕಳೆದ ಎರಡು ತಿಂಗಳ ಆಂದೋಲನದಿಂದ ದಿವಾನರು ಪಾಠ ಕಲಿತಿರುವಂತೆ ತೋರುವುದಿಲ್ಲ.

ಪ್ರತಿ ಸರಕಾರ

ಪೆಲೆಸ್ತಿನದಲ್ಲಿ ಈಗ ಸೈನಿಕ ರಾಜ್ಯಭಾರ ಸ್ಥಾಪಿಸಲ್ಪಟ್ಟು ಚಿಕ್ಕಮಟ್ಟಿನ ಒಂದು ಯುದ್ಧವೇ ನಡೆದಿದೆ. ಅರಬರು ಬ್ರಿಟಿಷರ ದಬ್ಬಾಳಿಕೆಯನ್ನು ಪ್ರಬಲವಾಗಿ ವಿರೋಧಿಸುವ ದೃಢ ನಿರ್ಧಾರದಿಂದಿರುತ್ತಾರೆ. ಅದಕ್ಕಾಗಿ ಎಂತಹ ತ್ಯಾಗಕ್ಕೂ ಅವರು ಸಿದ್ಧರೇ ಇರುತ್ತಾರೆ ಪೆಲೆಸ್ತಿನದಲ್ಲಿ ಅರಬ ಮುಖಂಡರು ತಮ್ಮದೇ ಆದೊಂದು ಸರಕಾರವನ್ನೇ ಸ್ಥಾಪಿಸಿರುತ್ತಾರೆ. ಕೆಲವು ದಿವಸಗಳ ಮೊದಲು ಅರಬಿ ಸೈನಿಕರು ಬೆತ್ಲಹೇಮಿನ ರಸ್ತೆಗಳಲ್ಲಿ ಜಾಹೀರಾಗಿ ನಡೆದು ಜನರಿಂದ ಪ್ರೋತ್ಸಾಹಿಸಲ್ಪಡುತ್ತಿದ್ದರು. ತಮ್ಮ ಕೋವಿಗಳನ್ನು ಹೊರಗಿಟ್ಟು ಕಾಫಿ ಹೊಟೆಲುಗಳಿಗೆ ಹೊಕ್ಕು ಕಾಫಿ ಕುಡಿಯುತ್ತಿದ್ದರು. ದರೋಡೆ ಕಳವುಗಳು ನಡೆದರೆ ವಿಚಾರಿಸಿ ಶಿಕ್ಷಿಸುತ್ತಿದ್ದರು. ಅರಬರ ಬಂಡಾಯವು ಬಹಳ ಸಂಘಟಿತವಾಗಿ ನಡೆದಿರುವುದು. ಆದುದರಿಂದಲೇ ಬ್ರಿಟಿಷರಿಗೆ ಅದನ್ನಡಗಿಸಲು ಇಷ್ಟು ಕಷ್ಟವಾಗಿರುವುದು. ಇತ್ತಲಾಗಿ ಅರಬರೆಲ್ಲಾ 4 ದಿನ ಮುಷ್ಕರ ಹಿಡಿದು ಬ್ರಿಟಿಷ್ ದಬ್ಬಾಳಿಕೆಯನ್ನು ನಿಷೇಧಿಸಿರುವರು.

ರಾಷ್ಟ್ರೀಯ ಧ್ವಜವನ್ನು

ಎಲ್ಲೆಲ್ಲಿಯೂ ಆರೋಹಣ ಮಾಡುವ ಚಟವು ಈಗ ಬಲವಾಗಿ ಹಬ್ಬುತ್ತಾ ಬಂದಿದೆ. ಅದಕ್ಕಾಗಿ ಜಗಳ ಗಲಾಟೆಗಳು ಕೂಡಾ ನಡೆದಿರುತ್ತವೆ ಈ ಕುರಿತು ಗಾಂಧಿಯವರ ಅಭಿಪ್ರಾಯವನ್ನು ಬಾತ್ಮಿದಾರರೊಬ್ಬರು ಕೇಳಿದಾಗ, ಸರ್ವಸಮ್ಮತಿಯಿಂದ ಮತ್ತು ಸ್ವಸಂತೋಷದಿಂದ ಎಲ್ಲಿಯೂ ರಾಷ್ಟ್ರೀಯಧ್ವಜವನ್ನೇರಿಸಬಹುದು. ಆದರೆ ಕ್ಷೋಭೆಯನ್ನುಂಟುಮಾಡಿ ರಾಷ್ಟ್ರೀಯ ಧ್ವಜಾರೋಹಣ ಮಾಡುವುದು ಸರಿಯಲ್ಲ. ದೇವಸ್ಥಾನಾದಿಗಳಲ್ಲೆಲ್ಲಾ ಅದಕ್ಕೆ ಸ್ಥಾನವೇ ಇಲ್ಲ. ಯಾಕೆಂದರೆ ಅದು ಧಾರ್ಮಿಕ ಸಂಕೇತವೇನೂ ಅಲ್ಲ. ರಾಷ್ಟ್ರೀಯ ಸಂಕೇತವೆಂದು ಗಾಂಧಿಯವರು ಅಭಿಪ್ರಾಯಪಟ್ಟಿರುವರು.

ಚೀನಾಜಾಪಾನ ಯುದ್ಧ

ಜಾಪಾನು ಚೀನದಲ್ಲಿ ಸಂಯುಕ್ತ ರಾಜ್ಯಭಾರವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವುದು. ಚೀನದಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ವರ್ಚಸ್ಸನ್ನೆಲ್ಲಾ ನಿರ್ನಾಮಗೊಳಿಸಿ ಅವರ ವ್ಯಾಪಾರಕ್ಕೆಲ್ಲಾ ತಡೆಹಾಕಿ ಸಂಪೂರ್ಣವಾಗಿ ತನ್ನ ಅಧಿಕಾರ ಸ್ಥಾಪಿಸಬೇಕೆಂದೇ ಜಪಾನಿನ ಆಕಾಂಕ್ಷೆ. ಜರ್ಮನಿ ಮತ್ತು ಇಟಲಿಗಳಿಗೇನಾದರೂ ಅದು ರಿಯಾಯಿತಿ ತೋರಿಸಬಹುದು. ಇದರಿಂದ ಅಮೇರಿಕ ಮತ್ತು ಇಂಗ್ಲೇಡುಗಳು ತಳಮಳಗೊಂಡಿವೆ ಅಮೇರಿಕವು ಜಾಪಾನಿನ ಈ ಘೋರಣೆಯನ್ನು ತೀವ್ರವಾಗಿ ನಿಷೇಧಿಸಿದೆ. ಕ್ಯಾಂಟನ್ ಮತ್ತು ಹೆಂಕೋಗಳು ಜಾಪಾನರ ವಶವಾದರೂ ಚೀನೀ ಯುದ್ಧವು ಬೇಗನೆ ಕೊನೆಗೊಳ್ಳುವಂತೆ ತೋರುವುದಿಲ್ಲ. ಅಲ್ಲಲ್ಲಿ ಚೀನೀ ಸೈನಿಕರು ಜಾಪಾನರನ್ನು ಪ್ರಬಲವಾಗಿ ವಿರೋಧಿಸಿ ತಡೆಗಟ್ಟುತ್ತಿದ್ದಾರೆ. ಶಾನ್ಸಿಯಲ್ಲಿ ಜಾಪಾನ ಸೇನೆಯು ಪರಾಜಯಹೊಂದಿದೆ. ಮಾರ್ಶಲ್ ಚ್ಯಾಂಗರು ಚುಂಕಿಂಗಿನಲ್ಲಿ ತನ್ನ ರಾಜಧಾನಿ ಸ್ಥಾಪಿಸಿರುತ್ತಾರೆ. ಅವರಿಗೆ ಚೀನೀಯರೆಲ್ಲರ ಸಂಪೂರ್ಣಬೆಂಬಲವಿದೆ. ಅವಶ್ಯಬಂದರೆ ಜಾಪಾನರು ಚುಂಕಿಗಿನ ಮೇಲೂ ಧಾಳಿನಡಿಸುವವರಿದ್ದಾರೆ. ಅದರಮೇಲೆವಿಮಾನಧಾಳಿ ನಡಿಸುವ ಪ್ರಯತ್ನ ಇಷ್ಟರಲ್ಲೇ ನಡೆದಿದೆ

ಕಬ್ಬಿನ ಬೆಳೆ!

ಕಬ್ಬು ನಡುವ ಭೂಮಿಯನ್ನು ತಯಾರಿಸುವಿಕೆ—

ಕಬ್ಬನ್ನು ಬೆಳೆಯಿಸುವ ರೈತರು ಈ ಕೆಳಗಣ ವಿಷಯಗಳಿಗೆ ಗಮನಕೊಡತಕ್ಕದ್ದು.

1. ಕಬ್ಬು ಬೆಳೆಸತಕ್ಕ ಭೂಮಿಯು ಒಸರು ಗದ್ದೆಗಳಾಗಿರದೆ ನೀರು ಬೇಗನೇ ಸೋಸಿಹೋಗತಕ್ಕದ್ದಾಗಿರಬೇಕು. ಒಸರು ಗದ್ದೆಗಳಲ್ಲಿ ನೀರು ಎಷ್ಟು ಬಿಡಿಸಿದರೂ ಇಳಿದುಹೋಗದ್ದರಿಂದ ಮಳೆಗಾಲದಲ್ಲಿ ನೀರು ನಿಂತು ಕಬ್ಬಿನ ಬೇರುಗಳಿಗೆ ಶಕ್ತಿ ಕಮ್ಮಿಯಾಗಿ ಬೆಳೆಯು ಕುಸಿದುಹೋಗುವುದು. 2. ಆ ಗದ್ದೆಗೆ ಹೆಂಬಾ ಸಿಹಿ ನೀರಾಶ್ರಯವಿರಬೇಕು. 3. ಅದರ ಮುಂಚಿನ ವರ್ಷದ ಪೈರು ಭತ್ತವಾಗಿರಬೇಕು. ವರ್ಷಂಪ್ರತಿಯೂ ನೆಟ್ಟ ಸ್ಥಳದಲ್ಲಿಯೇ ಕಬ್ಬನ್ನು ನೆಟ್ಟು ಬೆಳೆಯಿಸುವದು ಸಾಧ್ಯವಾಗಿದ್ದರೂ, ಒಂದು ವರ್ಷ ಕಬ್ಬು ಮತ್ತು ಇನ್ನೊಂದು ವರ್ಷ ಭತ್ತ ಬೆಳೆಯಿಸುವುದರಿಂದ ಭೂಮಿಯು ಫಲವತ್ತಾಗಿ ಉಳಿಯುವುದು. ಮಾತ್ರವಲ್ಲದೆ, ಮಿತದರದಲ್ಲಿ ಗದ್ದೆಯನ್ನು ಚೆನ್ನಾಗಿ ಪುಡಿಮಾಡಿ ಒಳ್ಳೆಯ ಕಬ್ಬಿನ ಬೆಳೆಯನ್ನು ಮಾಡಲು ಸಹಾಯವಾಗುತ್ತದೆ.

ಹೀಗೆ ಅನುಕೂಲವಾದ ಗದ್ದೆಗಳನ್ನು ಕಂಡು ಅವುಗಳನ್ನೇ ಕಬ್ಬು ನಡಲು ಆರಿಸಿದ ನಂತರ, ಅವುಗಳನ್ನು ಪುಡಿಮಾಡಿ ನಡುವರೇ ತಯಾರಿಸಬೇಕು.

ಈ ವರ್ಷ ಕಬ್ಬು ಬೆಳೆಯಿಸಿದ ಗದ್ದೆಯನ್ನು ಕಬ್ಬು ಕಡಿದೊಡನೆಯೇ ಪುಡಿಮಾಡುವುದು ಅಗತ್ಯ. ಈ ಕೆಲಸವನ್ನು ರೈತರು ಸರ್ವಸಾಧಾರಣವಾಗಿ ಹಾರೆ ಗುದಲಿಗಳಿಂದ ಮಾಡುವದಾದರೂ, ಅದು ಪ್ರಯಾಸ ಒಂದು ಜತೆ ಎತ್ತುಗಳಿಂದ ಎಳೆಯಲ್ಪಡುವ ಕಬ್ಬಿಣದ ನೇಗಿಲಿನಿಂದ ಇದನ್ನು ಸುಲಭವಾಗಿ ಮಾಡಬಹುದು. ಬೇರೆ ಊರುಗಳಲ್ಲಾದರೆ ಕಬ್ಬನ್ನು ಬುಡದಿಂದ ಕಡಿದು ತೆಗೆಯುವ ಕ್ರಮವಿದೆ. ಆದರೆ ಇಲ್ಲಿ ಅದನ್ನು ಅಗೆದುತೆಗೆಯುವ ಕ್ರಮವಿರುವುದರಿಂದ ಉತ್ತು ಪುಡಿಮಾಡುವುದು ಹುತ್ತಾ ಸುಲಭ ಕಾರ್ಯ. ಗದ್ದೆಯು ಚೆನ್ನಾಗಿ ಪುಡಿಯಾದ ಮೇಲೆ ಹುರುಳಿಯಾಗಲೀ ಉದ್ದಾಗಲೀ ಒಂದು ಧಾನ್ಯವನ್ನು ಬಿತ್ತುವಾಗ ಎಕ್ರೆ ಒಂದಕ್ಕೆ 12ಸೇರಿನಂತೆ ಕೊಳಿಂಜಿ ಗೊಬ್ಬರದ ಬೀಜವನ್ನು ಬಿತ್ತಿ, ಧಾನ್ಯದ ಬೆಳೆಯನ್ನು ತೆಗೆದ ಮೇಲೆ ಗೊಬ್ಬರದ ಗಿಡಗಳನ್ನು ಮಳೆಗಾಲ ಪ್ರಾರಂಭದ ತನಕ ಬೆಳೆಯಬಿಟ್ಟು, ಮಳೆಬಂದೊಡನೆ ಭೂಮಿಯೊಳಕ್ಕೆ ಉತ್ತುಬಿಡಬೇಕು. ಇದರಿಂದ 10-15ಗಾಡಿಗಳಷ್ಟು ಹಸುರೆಲೆ ಗೊಬ್ಬರವು ಭೂಮಿಗೆ ಬಿದ್ದು ಆ ಗದ್ದೆಗೆ ಸಾಧಾರಣ 5ಗಾಡಿ ಹಟ್ಟಿಗೊಬ್ಬರ ಹಾಕಿ ಭತ್ತದ ಪೈರು ಬೆಳೆಸಿದಲ್ಲಿ ಸೊಗಸಾದ ಪೈರಾಗುವುದು. ಮಾತ್ರವಲ್ಲದೆ ಭೂಮಿಯೂ ಫಲವತ್ತಾಗುವುದು. ಇನು ಈ ಭತ್ತದ ಪೈರನ್ನು ಸಪ್ಟಂಬರ-ಒಕ್ಟೋಬರ ತಿಂಗಳಲ್ಲಿ ಕೊಯ್ದೊಡನೆ ಗದ್ದೆಯನ್ನು ಚೆನ್ನಾಗಿ ಪುಡಿಮಾಡಬೇಕು. ಇದಕ್ಕೆ ಸಣ್ಣ ಕಬ್ಬಿಣದ ನೇಗಿಲು (Cooper No. 25 Plough) ಬಹಳ ಉಪಯುಕ್ತವಾಗಿದೆ ಈ ನೇಗಿಲನ್ನು ಒಂದು ಸಣ್ಣ ಜತೆ ಎತ್ತುಗಳು ಕೂಡ ಎಳೆಯಬಹುದಾಗಿದ್ದು, ರೂ. 4-8-0ಗೆ ಕೃಷಿ ಇಲಾಖೆಯವರಿಂದ ಪಡೆಯಬಹುದು. ಇದರ ಗುಳವು ಸವೆದುಹೋದಂತೆ ಬೇರೆ ಗುಳಗಳನ್ನಿಟ್ಟು ಕೆಲಸಮಾಡುವುದರಿಂದ ನಮ್ಮ ಮರದ ನೇಗಿಲಿಗಿಂತ ಖರ್ಚು ಸುಲಭವಾಗಿ ಹೆಚ್ಚಾಗಿ ಉಳಲಾಗುವುದು. ಈ ಗದ್ದೆಗಳು ಚೆನ್ನಾಗಿ ಪುಡಿಯಾಗುವಂತೆ 4ರಿಂದ 6ಸಾಲು ಹೂಡಬೇಕಾಗುವುದು. ನಾಲ್ಕು ಸಾಲುಗಳಾದೊಡನೆ ಎಕ್ರೆ ಒಂದರ 10ಗಾಡಿಗಳಂತೆ ಹಟ್ಟಿಗೊಬ್ಬರವನ್ನು ಹಾಕಿ ಮತ್ತೆರಡು ಸಾಲು ಉಳಬೇಕು. ಈ ಮಧ್ಯೆ ಗದ್ದೆಯ ಬದಿಗಳನ್ನು ಕೊಚ್ಚಿ, ಕಂಟಗಳನ್ನು ಸೌರಿ, ನಾಜೂಕಾಗಿರಿಸುವುದು ಅಗತ್ಯ.

ಇನ್ನೊಂದ ಕೆಲಸವೆಂದರೆ ಏರಿಗಳನ್ನು ತೆಗೆಯುವುದು. ನಮ್ಮ ಊರಿನಲ್ಲಿ ಗದ್ದೆಗಳು ಬಹಳ ಸಣ್ಣಸಣ್ಣವುಗಳಾಗಿರುವುದರಿಂದಲೂ ಏರಿ ತೆಗೆಯುವ ನೇಗಿಲು ಹೆಚ್ಚಿನ ಪ್ರಚಾರದಲ್ಲಿಲ್ಲದಿರುವುದರಿಂದಲೂ ಈ ಕೆಲಸವು ಹಾರೆಯಿಂದಲೇ ಮಾಡಲ್ಪಡುತ್ತದೆ. ಆದರೆ ಏರಿ ತೆಗೆಯುವ ನೇಗಿಲುಗಳನ್ನು ಉಪಯೋಗಿಸುವುದರಿಂದ ರೈತರು ಎಕ್ರೆ ಒಂದರ ರೂ. 2-8-0ನ್ನು ಉಳಿಸಬಹುದು. ಈ ನೇಗಿಲನ್ನು (Sugar cane Ridge plough) ಕೃಷಿ ಇಲಾಖೆಯವರಿಂದ ರೂ. 12/-ಕ್ಕೆ ಕ್ರಯಕ್ಕೆ ಪಡೆಯಬಹುದು. ಅಥವಾ ಉಡುಪಿ ಕೃಷಿ ಡೆಮೋಸ್ಟ್ರೇಟರವರಿಂದ ಬಾಡಿಗೆಗೂ ಪಡೆಯಬಹುದು. ಒಂದು ಒಳ್ಳೆಯ ಎತ್ತಿನ ಜೋಡಿನಿಂದ ಇದರ ಕೆಲಸಮಾಡಬಹುದು ಇದರಿಂದ ಕಡಿಗೊಂಡು ಏರಿ ಸಾಲುಗಳನ್ನು ಹಿಡಿದು ಆಮೇಲೆ ಹಾರೆಯಿಂದ ಏರಿಗಳನ್ನು ಸರಿಪಡಿಸಬೇಕು. ಒಂದು ಎತ್ತಿನ ಜೋಡು ಮತ್ತು ಇಬ್ಬರು ಕೂಲಿಗಳು ದಿನ ಒಂದರ ಒಂದರಿಂದ ಒಂದೂವರೆ ಎಕ್ರೆಗಳ ವರೆಗೆ ಸಾಲು ಹಿಡಿದು ಪೂರೈಸುವರು, 12ಕೂಲಿಗಳು ಎಕ್ರೆ ಒಂದರ ಏರಿಗಳನ್ನು ಸರಿಪಡಿಸಬಹುದು.

ಹೀಗೆ ಏರಿಗಳನ್ನು ತೆಗೆದಾದ ಮೇಲೆ ಆ ಗದ್ದೆಯನ್ನು ನಾಲ್ಕೈದು ದಿನಗಳ ವರೆಗೆ ಒಣಗಲು ಬಿಡುವುದರಿಂದ ಮಣ್ಣು ಹುಟ್ಟು ಪುಡಿಯಾಗಿ ಪೈರಿಗೆ ಬಾಧಕಕರವಾದ ಕ್ರಿಮಿಕೀಟಾದಿಗಳು ನಾಶವಾಗಿ ಉಪಯುಕ್ತವಾದ ಜೀವಾಣುಗಳು ಹೆಚ್ಚಿನ ಕೆಲಸಮಾಡಲು ಸಹಾಯವಾಗುವುದು. ಮಾತ್ರವಲ್ಲದೆ ಕಳೆಗಳು ಬಹಳ ಕಮ್ಮಿಯಾಗುವುವು

ಆದುದರಿಂದ ಕಬ್ಬು ನಡುವ ಗದ್ದೆಗಳನ್ನು ಶ್ಲಿಷ್ಟ ಕಾಲದಲ್ಲಿ ಹಸನಾಗಿ ಕಬ್ಬಿಣದ ನೇಗಿಲಿನಿಂದ ಉತ್ತು, ಚೆನ್ನಾಗಿ ಪುಡಿಮಾಡಿ, ಬಿಲಿಸಿಗೆ ಕಾಯಬಿಡಿರಿ—ಕಳೆಗಳನ್ನು ಕಮ್ಮಿಮಾಡಿರಿ—ಕಬ್ಬು ನಟ್ಟ ಸ್ಥಳಗಳನ್ನು ಬಿಡಿರಿ—ಬೆಳೆಯನ್ನು ವೃದ್ಧಿಗೊಳಿಸಿ ನಿಮ್ಮ ಆದಾಯವನ್ನು ಹೆಚ್ಚಿಸಿರಿ.

ಕಬ್ಬಿನ ಗೊಬ್ಬರ ಮತ್ತು ಗೊಬ್ಬರಹಾಕುವ ಕ್ರಮವನ್ನು ಈ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿರಿ

K. J. Ballal.
President.
The Sugar cane Growers'
Co-operative Union LTD.
UDIPI.

ನ ವ ಯು ಗ ಕ್ಕೆ
ಏಜಂಟರಿಲ್ಲದ ಸ್ಥಳಗಳಲ್ಲಿ
ಏಜಂಟರು
ಬೇ ಕಾ ಗಿ ದ್ದಾ ರೆ.

THE **Bombay Life**
ಸ್ಥಾಪನೆ] **ASSURANCE CO., LTD.** [1908
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:
(1) ರಥಬೀದಿ, ಮಂಗಳೂರು
(2) ಪ್ರತಿಯಾರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, ಬೊಂಬೈ (ಫೋ. ನಂ. 26314)
ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು
(6) ಪಟ್ಟೆಪಾಳಂ, ದ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂಕೂರು.

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)
ರಿಜಿಸ್ಟ್ರಿಯಾದ ಆಫೀಸು: **ಉಡುಪಿ.**
ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ,
ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ವೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	ರೂ.	**1,40,08,725**
ಪ್ರೀಮಿಯಂ ಆದಾಯ ಮಿಕ್ಕಿದುದು	,,	**30,00,000**
ಒಟ್ಟು ಮೂಲ ಮಿಕ್ಕಿದುದು	,,	**1,00,00,000**
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	**50,00,000**

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದ **ಅತ್ಯಧಿಕ ಪ್ರತಿಫಲ.**
ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

ಈ ವಾರದ ಕತೆ

ರಂಗರಾಯರು ನನ್ನ ಬಾಲ್ಯದ ಮಿತ್ರರು. ಮೆಟ್ರಿಕ್ಕಿನ ವರೆಗೆ ನಾವು ಒಂದೇ ಶಾಲೆಯಲ್ಲಿ ಒಟ್ಟಿಗೆ ಓದಿದುದು. ನಂತರ ಅವರು ಕಾಲೇಜಿಗೆ ಸೇರಿದರು. ನನಗೂ ಕಾಲೇಜಿಗೆ ಹೋಗಬೇಕೆಂಬ ಆತುರವಿತ್ತು. "ಮುದುಕಿಯೊಬ್ಬಳನ್ನು ಬಿಟ್ಟುಹೋಗುವೆಯಾ! ಕಲಿತು ನಿನಗಿನ್ನೇನು ಆಗಬೇಕಾಗಿದೆ! ಬೇಡಪ್ಪಾ!" ಎಂದು ಹೆತ್ತಾಕೆಯು ತಡೆದಳು. ಹೀಗಾಗಿ ನಾನು ಮನೆಯ ಯಜಮಾನನಾದೆ.

ರಂಗರಾಯರು ಕಾಲೇಜು ಸೇರಿದರು. ಚೆನ್ನಾಗಿ ಕಲಿತರು. ಬಿ. ಎ. ಪಾಸು ಮಾಡಿದ ನಂತರ ಲಾಯರು ಆಗಬೇಕೆಂಬ ಅವರ ತಂದೆಯ ಆಶಯದಂತೆ 'ಲಾ' ಕಲಿಯಲು ಮುಂಬಾಯಿಗೆ ಹೋದರು. ಆದರೆ ಅಲ್ಲಿ ಅವರಿಗೇನೋ ಲಾಯರಾಗುವ ಬಯಕೆ ಹೋಗಿಬಿಟ್ಟಿತು ಒಂದು ಒಳ್ಳೇ ಕಂಪೆನಿಯಲ್ಲಿ ನೌಕರರಾಗಿ ಸೇರಿದರು ಅವರು ನನ್ನ ಸ್ನೇಹ ಮರೆಯುವವರಲ್ಲ ಆಗಾಗ್ಗೆ ಅವರ ಪತ್ರ ಬಾರದಿರುತ್ತಿರಲಿಲ್ಲ ಆದರೆ ಇತ್ತೀಚೆ ಕೆಲ ಸಮಯದಿಂದ ಅವರ ಕಾಗದ ಬರಲಿಲ್ಲ. ಅವರೊಬ್ಬ ವಿಧವೆಯನ್ನು ಮದುವೆಯಾದ ವರ್ತಮಾನ ದೊರೆಯಿತು. ತಲೆಕೆಟ್ಟು ಜಾತಿಬಿಟ್ಟರೆಂದು ಊರಲ್ಲೆಲ್ಲಾ ಸುದ್ದಿ. ನಾನು ಇವರ ವಿಚಾರದಲ್ಲಿ ಒಂದು ಕಾಗದ ಬರೆದೆ. ಸ್ವಲ್ಪ ಕಟುವಾಗಿಯೇ ಬರೆದಿದ್ದೆ ಎರಡು ವಾರಗಳ ನಂತರ ಉತ್ತರ ದೊರೆಯಿತು ಚಾವಡಿಯ ಕೋಣೆಯಲ್ಲಿ ಕುಳಿತುಕೊಂಡೆ; ಓದತೊಡಗಿದೆ. ಅದರಲ್ಲಿ ಹೀಗೆ ಬರೆದಿತ್ತು.

ರಂಗರಾಯರ ಪತ್ರ

ರಂಗಸ್ವಾಮಿಯು ರಾಮಸ್ವಾಮಿಯ ಸೋದರಿ—ಬಾಲವಿಧವೆ ಲಲಿತೆಯನ್ನು ಕೈಹಿಡಿದು, ತನ್ನ ಸೋದರಿಯೆನಿಸಿದ ಅನಾಥ ವಿತಂತು, ವಿಮಲೆಯನ್ನು ರಾಮಸ್ವಾಮಿಯ ಸ್ವಾಮಿತ್ವಕ್ಕೆ ಅರ್ಪಿಸಿದರು ಇವರ ತ್ಯಾಗವು ಸಾಮಾನ್ಯವಲ್ಲ. ಆದರೆ, ಗೋಪೂ ಏಕೆ ರತ್ನಳನ್ನು ವರದಕ್ಷಿಣೆ ಬೇಡದೆ ಮದುವೆಯಾಗಲೊಪ್ಪಿದ! 'ಎರಡೂ' ಎಂದರೆ ಮೂರು ಬೆರಳನ್ನು ತೋರಿಸುವ ಶುದ್ಧ ಗಾಂಧಿಭಕ್ತ ಏಟ್ಟುವೇಕೆ ಶಾರದೆಗೊಲಿದ! ಇವರಿಬ್ಬರು ಸ್ವಾರ್ಥ ತ್ಯಾಗಮಾಡಿದರೇ! ಅಂತರಂಗದ ಮೋಹದ ಪ್ರೇರಣೆಯೇ? ಅಥವಾ ರಂಗರಾಯರ ಪತ್ರವೇ ಇವಕ್ಕೆಲ್ಲಾ ಕಾರಣವಾಯಿತೇ!!!

ಮುಂಬಯಿ, 20-10-'37

ಮಿತ್ರವರ್ಯರೇ,

ನಮಸ್ಕಾರ, ಉಭಯ ಕುಶಲೋಪರಿ, ಸಾಂಪ್ರತ-ತರುವಾಯ, ನಿಮ್ಮ ಪತ್ರ ಬಂದು ಕೆಲವು ದಿನಗಳು ಸಂದುವು; ಉತ್ತರ ಬರೆಯಲು ಅವಕಾಶವಾಗಲಿಲ್ಲ. ಬೇಸರಿಸಕೂಡದು ಅದಾಗಿ ನಿಮ್ಮ ಕಳೆದ ಪತ್ರದ ವಿಚಾರ ಸರಿಯಾಗಿ ಗ್ರಹಿಸಿಕೊಂಡೆ, ಹೃದ್ಯಮಿತ್ರರಲ್ಲವೇ ನೀವು? ನಿಮಗೆ ಯಥಾರ್ಥವಿಚಾರ ತಿಳಿಸಬೇಕಷ್ಟೆ. ನೀವು ನನ್ನ ಮದುವೆಯ ವಿಚಾರದಲ್ಲಿ ಬರೆದಿರುವಿರಿ ಬ್ರಾಹ್ಮಣನಾಗಿ ಹುಟ್ಟಿ, ಜಾತಿ ನೀತಿ, ಮಾನ, ಮರ್ಯಾದೆಯನ್ನು ಮರೆತು, ಹೆತ್ತವರ, ಬಂಧುಗಳ ಪ್ರೇಮವನ್ನು ಕಡೆಗಣಿಸಿ, ವಿಧವೆಯೊಬ್ಬಳನ್ನು ಮದುವೆಯಾದುದು ನಿಮಗೆ ಬಹು ಆಶ್ಚರ್ಯವೆನಿಸಲು ಕಾರಣವಿದೆ ನನ್ನ ಸ್ವಭಾವಜನ್ಯವಾದ ವಿನಯ, ಆಚಾರ, ವಿಚಾರಗಳು, ಅದೇಕೆ ಮರವೆಯಾಯಿತೆಂಬುದು ನಿಮ್ಮ ಪ್ರಶ್ನೆಯಷ್ಟೆ "ಇಂಗ್ಲಿಷ್" ಕಲಿಯುವುದರಿಂದ ಪೇಟೆ ಪಟ್ಟಣಗಳನ್ನು ಸೇರುವುದರಿಂದ, ಮನುಷ್ಯನು ಮಾರ್ಪಡುವನೇ! ಅಯ್ಯೋ, ಮಾಯಾಜಾಲ!" ಎಂದು ಉದ್ಗಾರ ತೆರೆದಿರುವಿರಿ ನೀವು ನಾನು ಜಾತಿಕುಲಕ್ಕೆ ವಿರೋಧವಾಗಿ ನಡೆದ ವಿಚಾರ, ಬಡಗುಮಾಸ್ತನೊಬ್ಬನ ತಂಗಿ, ಗತಿಯಿಲ್ಲದ ವಿಧವೆಯೊಬ್ಬಳನ್ನು ಕೈಹಿಡಿದ ಪ್ರಶ್ನೆ,— ಈ ಕುರಿತು ನಿಮ್ಮ ಸಂದೇಹವಷ್ಟೆ, ಆಗಲಿ, ನಮ್ಮ ಸಮಾಜದ ವಿಚಾರ ನೀವು ಬಲ್ಲಿರಷ್ಟೆ. ಮೇಲಾಗಿ ನಾನು ಪಿತೃದ್ರೋಹಿಯಾಗಬಾರದಿತ್ತೆಂಬುದು ನನ್ನ ವರ್ತನೆಯು ಅಕ್ಷಮ್ಯವಾದುದೋ, ಅಲ್ಲವೋ ಎಂಬುದನ್ನು ಹೇಳಲಾರೆ ಆದರೆ ಇಷ್ಟೊಂದು ಹೇಳಬಲ್ಲೆ; ಆತ್ಮವು ನನ್ನದು; ಮನಸ್ಸು ನನ್ನದು. ನನ್ನ ಅಂತಃಪ್ರೇರಣೆಯಂತೆ ನಡೆಯದೆ ಜೀವನ ನಡೆಸಲು ಸಾಧ್ಯವಾಗಲಿಲ್ಲ. ಹೀಗೆ ಮಾಡಿಬಿಟ್ಟೆ ನಿಜ' ವಿಷಯವನ್ನು ಬಿಡಿಸಿ ಹೇಳಬೇಕೇ? ನಿಮಗೆ ವಿಶ್ವಾಸವಿದೆಯಷ್ಟೆ! ಅದರ ಆಧಾರವಿಲ್ಲಿದೆ.

ನಾನು ರಾಮಸ್ವಾಮಿ ಸೋದರಿ ಲಲಿತೆಯನ್ನು ಮದುವೆಯಾದುದು, ನನ್ನ ಅವಿಚಾರ, ಮೋಹಪರವಶತೆಯಿಂದಲ್ಲ; ನನ್ನ ತಂಗಿ ವಿಮಲ—ಇವಳಿಗಾಗಿ. ವಿಮಲೆ ಯಾರು? ತಂಗಿ ಹೇಗೆ? ಎಂದು ನೀವು ಕೇಳಬಹುದು. ವಿಮಲೆ ಮಂಗಳೂರಿನವಳು. ಉತ್ತಮ ಬ್ರಾಹ್ಮಣಕುಲದಾಕೆ. ಗೋಪಾಲರಾಯನೆಂಬವರ ಒಡಹುಟ್ಟಿದವಳು. ಮಂಗಳೂರಲ್ಲಿ ನಾನೂ ಗೋಪಾಲರಾಯರೂ ಕಾಲೇಜಿನಲ್ಲಿ ಒಟ್ಟಿಗೆ ಕಲಿತವರು. ನನ್ನ ಅತಿ ಮಿತ್ರರು ನಾನೆಂದರೆ ಅವರಿಗೆ ಪ್ರಾಣ. ಅವರ ತಂದೆ ತೀರಿಹೋಗಿದ್ದರು ಆದರೆ, ಮಗನ ವಿದ್ಯಾಭ್ಯಾಸಕ್ಕೆ ಸಾಕಾಗುವಷ್ಟು ಹಣ ಉಳಿಸಿದ್ದರು ಗೋಪಾಲರಾಯರು ತನ್ನ ತಾಯಿತಂಗಿಯರೊಂದಿಗೆ ಬೋಳಾರದಲ್ಲಿ ವಾಸಿಸುತ್ತಿದ್ದರು. ನಾನು ಎಷ್ಟೋ ಸಲ ಅವರೊಂದಿಗೆ ಅವರ ಮನೆಗೆ ಹೋಗುತ್ತಿದ್ದೆ ಗೋಪಾಲರಾಯರ ತಂಗಿ ವಿಮಲು ಆಗ ಹನ್ನೆರಡು ವರ್ಷದವಳು ಅವಳಿಗೆ ಒಂಭತ್ತನೇ ವರ್ಷ ಮದುವೆಯಾಗಿತ್ತು. ಆದರೆ ಮರುವರ್ಷವೇ ಗಂಡ ತೀರಿಹೋಗಿದ್ದ. ಹೀಗಾಗಿ ಅವಳು ಬಾಲವಿಧವೆಯಾಗಿದ್ದಳು. ಅವಳ ಮುಂದಣ ಜೀವನದಲ್ಲಿ ಸಮಾಜದ ಎಂತಾ ಕಷ್ಟ ನಿಷ್ಠುರ ಹೊರೆಯನ್ನು ಹೊರಲಿಕ್ಕಿರಬಹುದೆಂಬ ಅರಿವೇ ಅವಳಿಗಿರಲಿಲ್ಲ. ಬಾಲಕಿಯಷ್ಟೆ ಆದರೆ ತಾಯಿ ಮಾತ್ರ ಒಮ್ಮೊಮ್ಮೆ ಮಗಳ ಭಾವೀ ಜೀವನವನ್ನು ನೆನಸಿ ಕಣ್ಣೀರು ಬಿಡುವುದಿತ್ತು. ಅವಳ ಶೀಲ ಸ್ವಭಾವಗಳು, ನಡೆನುಡಿಗಳು ಅಚ್ಚುಮೆಚ್ಚಿನದಾಗಿದ್ದಿತು ಕಲ್ಮಷವಿಲ್ಲದ ನುಡಿ, ಸುಂದರ ದೇಹಕಾಂತಿಯ ಬಾಲೆಯಾಕೆ ನಾನೆಂದರೆ ಗೋಪಾಲರಾಯರಂತೆ ಅವಳಿಗೆ. ನನ್ನನ್ನು 'ಅಣ್ಣಾ' ಎಂತಲೇ ಕರೆಯುತ್ತಿದ್ದಳು. ಗೋಪಾಲರಾಯರ ತಾಯಿ ಎಷ್ಟು ಗುಣಾಢ್ಯೆ! ಅವರಿಗೂ ಅವ್ಯಾಜ್ಯ ವಾತ್ಸಲ್ಯ ನನ್ನಲ್ಲಿ ರಜಾದಿನಗಳಲ್ಲಿ ನಾನು ಹೆಚ್ಚಾಗಿದ್ದುದು ಗೋಪಾಲರಾಯರೊಟ್ಟಿಗೆ. ನಾನೊಬ್ಬ ಅವರ ಮನೆಯವರಂತೆ ವಿಮಲು ನನ್ನ ತಂಗಿಯಷ್ಟೇ ಪ್ರಿಯಳು.

ಗೋಪಾಲರಾಯರು ಬಿ ಎ ಪಾಸಾದ ನಂತರ ಮುಂಬಾಯಿಗೆ ಹೋದರು, ಅಲ್ಲಿ ಒಂದು ಇನ್ಶ್ಯೂರೆನ್ಸ್ ಕಂಪೆನಿಯಲ್ಲಿ ಉದ್ಯೋಗದೊರೆಯಿತು ನಾನು ವಕಲಾತು ಕಲಿಯಲೆಂದು ಮುಂಬಾಯಿಗೆ ಹೋದೆ ಕೊನೆಗೆ ಆ ಡಂಭದ ವಕಾಲತಿಗೆ ವ್ಯರ್ಥ ವೇಳೆ, ಹಣ ಖರ್ಚುಮಾಡುವುದರ ಬದಲಿಗೆ ಉದ್ಯೋಗ ದೊರೆತರೆ ಲೇಸಲ್ಲವೇ ಎಂದು ನೆನಸಿದೆ ಗೋಪಾಲರಾಯರ ಸಲಹೆಯಂತೆ ನಾನೂ ಅವರ ಕಂಪೆನಿಯಲ್ಲಿ ಸೇರಿದೆ. ತಲುಬೂ ನೂರು ರೂಪಾಯಿ ಗೋಪಾಲರಾಯರಿಗೆ ನನಗಿಂತ ೨೫ರೂ ಹೆಚ್ಚು ತಂಗಿ ವಿಮಲೂ, ತಾಯಿಯೂ ಈಗ ಮುಂಬಾಯಿಯಲ್ಲಿದ್ದರು ವಿಮಲುವೀಗ ಪ್ರಾಯತುಂಬಿದ ತರುಣಿಯಾದಳು. ಮುಂದೇನು ಗತಿಯೆಂದು ಒಮ್ಮೊಮ್ಮೆ ನಾವು ಚಿಂತಿಸುವುದಿತ್ತು ಆದರೆ, ಮುಖದಲ್ಲಿ ಸುಖವೆಂಬಂತೆ ದಿವಸಗಳು ಸಂದುಹೋದವು.

ಅಯ್ಯೋ ಏನೆನ್ನಲಿ. ಈ ಪ್ರಪಂಚದ ಸುಖದುಃಖಗಳಿಗೆ ಆದಿ ಅಂತ್ಯ ಕಾರ್ಯಕಾರಣಗಳೆಲ್ಲಿ? ಅಕಸ್ಮಾತ್ತಾಗಿ ಕಳೆದ ಮೇ ತಿಂಗಳಲ್ಲಿ ಗೋಪಾಲರಾಯರು ವಿಷಮ ಜ್ವರದಲ್ಲಿ ಬಿದ್ದರು. ಡಾಕ್ಟರರು ಹೆದರಿಕೆಯಿಲ್ಲವೆನ್ನುತಿದ್ದಂತೆಯೇ ಅವರು ಒಂದು ವಾರದೊಳಗೆ ನಮ್ಮನ್ನಗಲಿದರು. ಏನನ್ನು

Established] THE [1906
UNITED INDIA
LIFE ASSURANCE COMPANY. LTD.
HEAD OFFICE—MADRAS.
Trustee:—THE OFFICIAL TRUSTEE OF MADRAS.

Policies in force	Rs.	486 Lakhs
Annual income Exceeds	Rs.	28 Lakhs
Total Assets Exceed	Rs	100 Lakhs
Total claims paid over	Rs.	36 Lakhs.

The oldest and largest Life Assurance Company of South India, having 31 years of record service

A POLICY IN THE UNITED INDIA *COMBINES PERFECT SAFETY WITH PRUDENCE*
BRANCHES ALL OVER INDIA.
WANTED AGENTS
For particulars, please apply to:—

THE BRANCH MANAGER
The United India,
Life Assurance Company Ltd
BLOCK No 2, Felix Pai Bazaar,
BRANCH, MANGALORE, S. K

OR

K. Keshava Shenoy, M. A
Organiser, Shantiniketan,
PENTLANDPET,
MANGALORE.

General Assurance Society Ltd.
ಹಿಂದೂದೇಶದ ಪ್ರಮುಖ ವಿಮಾ ಕಂಪೆನಿ:
ಜನರಲ್ ಎಶ್ಯೂರೆನ್ಸ್ ಸೊಸೈಟಿ
ಲಿಮಿಟೆಡ್.
ಪ್ರಧಾನ ಆಫೀಸು:-ಅಜ್ಮೀರ್ ಸ್ಥಾಪನೆ **1907**

- ಸಂತೃಪ್ತಿಹೊಂದಿರುವ **50,000** ಪೋಲಿಸಿದಾರರೇ ನಮ್ಮ ಉತ್ಕೃಷ್ಟ ಪ್ರಶಸ್ತಿ ಪತ್ರ
- ಎಲ್ಲಾ ವರ್ಗದವರ ಪ್ರತಿಯೊಂದು ಆವಶ್ಯಕತೆಗೂ ಅನುಕೂಲವಾದ ಪೋಲಿಸಿಗಳು.
- ಏಜನ್ಸಿ ಶರ್ತಗಳು. ಉದಾರ ಮತ್ತು ಲಾಭಕರ.

ಹೆಚ್ಚಿನ ವಿವರವನ್ನು ಈ ಕೆಳಗಿನವರಿಂದ ಪಡೆಯಬಹುದು:-
ಜನರಲ್ ಮೆನೇಜರ್, ಅಜ್ಮೀರ್.
ಅಥವಾ, ಶಾಖಾ ಮೆನೇಜರ್:—ಮದ್ರಾಸ್, ಹುಬ್ಬಳ್ಳಿ, ಬೆಂಗಳೂರು.
ಅಥವಾ, ಚೀಫ್ ಏಜಂಟರು:—ಮಧುರ, ರಾಜಮಹೇಂದ್ರಿ, ಸಿಕಂದರಾಬಾದ್, ತಿರುಚಿನಾಪಳ್ಳಿ.
ಅಥವಾ ಒರ್ಗನೈಸರ್:-ಔರಂಗಬಾದ್, ಬಳ್ಳಾರಿ, ನೆಲ್ಲೂರು.

ವಿರಿ! ದೇವರು ದಯಾಮಯನೇ! ಇಂಥಾ ದುಃಖಗಳು ಸಜ್ಜನರಿಗೆ ಒಂದರ ಮೇಲೊಂದು ಬರಲೇಕೆ? ಇದಕ್ಕೆಲ್ಲಾ ಕೊನೆಬೀಳುವದಿಲ್ಲೆ? ದೇವರು ಸರ್ವಶಕ್ತನೆಂದರೇನು? ಈ ಜಗತ್ತು ಪಿಶಾಚದ ಭಯಂಕರ ಕ್ರೀಡಾಟವೇನ್ನಲೇ! ಹೆತ್ತಾಕೆ, ಈ ದುಃಖವನ್ನು ಸಹಿಸಿಕೊಳ್ಳಬಲ್ಲಳೇ! ತಂಗಿ ವಿಮಲು ಇನ್ನಾರನ್ನು ಸೇರುವಳು? ನಾನು ಸಂತಪ್ತನಾದೆ ತಾಯಿಯನ್ನು ಸಂತೈಸಿದೆ. ಮಗನಂತೆ ನಾ ನೋಡಿಕೊಂಡಿರುವೆನೆಂದೆ. ತಾಯಿ ಹೇಗೋ ಜೀವವನ್ನುಳಿಸಿಕೊಂಡರು

ನನ್ನ ಹೆತ್ತವರಿಗೇನೂ ತೊಂದರೆಯಿಲ್ಲ, ಬೇಕಾದಷ್ಟು ಸಂಪತ್ತಿದೆ. ಅಧಿಕಾರವಿದೆ, ಯಾವ ಧನ ದೌಲತ್ತಿಗೂ ಕೊರತೆಯಿಲ್ಲ. ತಂದೆಯವರಿಗೆ ರೂ. ೨೦೦/- ತಿಂಗಳಿಗೆ ಪೆನ್ಶನ್ ದೊರೆಯುತ್ತೆ. ಅಣ್ಣನೀಗ ಪ್ರೊಫೆಸರ್. ನಾನೊಬ್ಬ ಮನೆಯಗೂಡವೆ ಬಿಟ್ಟರೆ ಯಾರಿಗೂ ತೊಂದರೆಯಿಲ್ಲ. ಆದರೆ....ಆದರೆ....ನಮ್ಮಾ ವಿಮಲು ಮತ್ತು ಬಡತಾಯಿಯ ಗತಿಯೇನು? ವಿಮಲು ಎಷ್ಟು ಗುಣವಂತೆ, ಎಷ್ಟು ನಿಷ್ಕಳಂಕ ಕೋಮಲ ಹೃದಯದವಳು! ಹಾಳು ಸಮಾಜದಲ್ಲಿ ಅನಾಥಾರಿಗಳಿಗೆ ಆಧಾರವಿಲ್ಲ? ಆಧಾರವಿಲ್ಲದ ಅಪವಾದ ಮಾತ್ರ ಎಷ್ಟೋ ಬರುತ್ತವೆ!

ವಿಮಲು ಸುಖವನ್ನು ಜೀವನದಲ್ಲಿ ಕಾಣಬಾರದೇಕೆ? ಅವಳ ಯೌವನವು ಕಳಂಕಿತವಾಗಬೇಕೇ? ಈಗತಾನೇ ಜೀವನಪ್ರಭಾತದ ದಿಗಂತಕ್ಕೇರಲರ್ಹಳಾದ ಸುಕುಮಾರಿ ಕೋಮಲೆಯು ಕೆಳಗುರುಳಬೇಕೇ? 'ಕೂಡದು' ಎಂಬುದು ನನ್ನ ಹೃದಯದ ಮಾರ್ನುಡಿಯಾಯಿತು. ನಾನು ಅವಳ ಅಣ್ಣ. ನಮ್ಮ ಪರಸ್ಪರ ಪ್ರೇಮದ ಬಣ್ಣವೇ ಹಾಗ ಬಳೆಯಲ್ಪಟ್ಟದ್ದು ಮಾರ್ಪಡಿಸಲೇ? ಸಾಧ್ಯವಿಲ್ಲ! ವಿಮಲು ನನ್ನ ಪತ್ನಿಯಾಗಳು. ವಿಮಲು ಹೆಸರು ಪೂರ್ತಿಗೆ ಬಾಲ್ಯದಲ್ಲಿ ಮದುವೆಯಾದವಳು. ಗಂಡನನ್ನು ಅರಿಯಳು. ಅವಳ ವೈಧವ್ಯವು ಸಮಾಜದ ಕುರುಡುದೃಷ್ಟಿಗೆ. ಅವಳ ಶುದ್ಧ ಜೀವನಕ್ಕೆ ಅವಳಿನ್ನೂ ಸುಮಂಗಲೆಯಾಗಳು ಅರ್ಹಳಲ್ಲವೇ ಎನಿಸಿತು. ಸಮಾಜವು ಅವಳನ್ನು ಆಹುತಿಗೊಳ್ಳುವ ಬದಲಿಗ ಮುರಿದು ಬೀಳಬಾರದೇಕೆ? ಎಂದು ನನ್ನ ಎದೆಯು ಧ್ವನಿಗೊಟ್ಟಿತು-

ಒಮ್ಮೊಮ್ಮೆ ದೇವರೊಬ್ಬನಿರುವನು ಎಂಬಂತೆ ತೋರುವುದು. ನನ್ನ ಯೋಜನೆ ನೆರವೇರಿತು. ರಾಮಸ್ವಾಮಿಯು ಬೆಂಗಳೂರಿನವ, ತರುಣ ಗ್ರಾಜ್ಯುವೇಟ್. ಒಂದು ಬ್ಯಾಂಕಿನ ಕ್ಲಾರ್ಕನಾಗಿ ಇತ್ತೀಚೆ ಕೆಲಸ ಪಡೆದವ. ದಿನಹರಣೆಗೆ ಸಾಕಷ್ಟು ವೇತನ ದೊರೆಯುತ್ತಿತ್ತು. ಇವನು ಹರೆಲಿನಲ್ಲಿ ಬಿಡಾರಮಾಡಿಕೊಂಡಿದ್ದ. ಇವನೂ ಒಬ್ಬ ದುಃಖಕ್ಕೆ ಒಳಗಾದವ. ಮನೆಯಲ್ಲಿ ಒಬ್ಬಾಕೆ ಮುದಿತಾಯಿ. ಹದಿನಾಲ್ಕು ವರ್ಷದ ತಂಗಿ, ತಂಗಿಯ ಹೆಸರು ಲಲಿತೆ. ಲಲಿತೆಯು ಎಂಟುವರ್ಷ ಪ್ರಾಯದಲ್ಲಿ ಒಬ್ಬ ಐವತ್ತೈದು ವರ್ಷ ಪ್ರಾಯದ ರೋಗಿಯ ಕೈ ಹಿಡಿದಿದ್ದಳಂತೆ. ಮರುವರ್ಷವೇ ಅವಳು ವಿಧವೆ. ಇದಾಗಿ ಐದು ವರ್ಷ ಕಳೆದಿತ್ತು. ನನಗೂ ಅವರ ಪರಿಚಯವಾದುದು ಕಳೆದ ಜೂನಿನಲ್ಲಿ ಮುಂಬಾಯಿಯಲ್ಲಿ, ಕೆಲಸವಾದ ನಂತರ ಪರಸ್ಪರ ವಿಚಾರ ತಿಳಿಯಿತು. ನಮ್ಮೊಳಗೆ ಪ್ರೇಮ ವಿಶ್ವಾಸ ಮೊಳೆಯಿತು ರಾಮಸ್ವಾಮಿ ನನ್ನ ತಂಗಿ ವಿಮಲುವನ್ನೇ ಮದುವೆಯಾಗಲೊಪ್ಪಿದ. ನಾನು ಅವನ ಋಣಕ್ಕೆ ಪ್ರತಿಯಾಗಿ ಅವನ ಸೋದರಿ ಲಲಿತೆಯನ್ನು ಮದುವೆ ಮಾಡಿಕೊಳ್ಳಬೇಕಾಯ್ತು. ಹೌದು; ತಂದೆಯ ಆಶಯದಂತೆ ನಡೆಯುತ್ತಿದ್ದರೆ, ನಾನೀಗ ಕಲೆಕ್ಟರರ ಮಗಳ ಗಂಡನಾಗುತ್ತಿದ್ದೆನು. ದೊಡ್ಡ ಮನುಷ್ಯನಾಗುತ್ತಿದ್ದೆ. ಆದರೆ ವಿಮಲೆಗೆ ಸಮಾಜದಲ್ಲೇನು ಸ್ಥಾನ ದೊರೆಯಬಹುದಿತ್ತು! ನಮ್ಮ ವಿವಾಹಕಾರ್ಯವು ಬ್ರಹ್ಮಸಮಾಜದ ವಿಧಿ ನಿಯಮಕ್ಕನುಸಾರ ನಡೆಯಿತು ಈಗ ನಾವೆಲ್ಲರೂ ಒಟ್ಟಿಗೆ ವಾಸಿಸುತ್ತಿದ್ದೇವೆ. ನಾನೀಗ ವಿಮಲೆಯ ಜೀವನಲತೆಯು ರಾಮಸ್ವಾಮಿಯ ಸ್ವಾಮಿತ್ವದಲ್ಲಿ ಹಬ್ಬುತ್ತಿರುವುದನ್ನು ಕಂಡು ಸುಖಪಡುತಿದ್ದೇನೆ. ಸಮಾಜವೆಂದರೇನು, ಜೀವಿತವೆಂದರೇನು? ನಾನರಿಯೆ. ನನ್ನ ಅಂತರಂಗದ ಶಾಂತಿಗಾಗಿ, ಈ ರೀತಿ ವರ್ತಿಸಿದೆ. ಲಲಿತೆಯಿಗ ನನ್ನ ಪತ್ನಿ ಅವಳು ವಿಧವೆಯೇ? ಅವಳಿಗೆ ಮೊದಲಣ ಗಂಡನ ಪ್ರೇಮ ದೊರೆತಿದೆಯೇ? ಅವಳೀಗ ನನ್ನ ಸರಳ ಜೀವನದ ಸಹಚರಿ, ಏನು! ನಾವು ಸಮಾಜ ಬಾಹಿರರು! ನಾವೀಗ ಧರ್ಮದ್ವೇಷಿಗಳಲ್ಲವೇ, ಪಿತೃದ್ರೋಹಿಗಳು, ಕಾಮುಕರು, ಅವಿಚಾರಿಗಳಲ್ಲವೇ!-ಏನೆನ್ನುವಿರಿ ಹೇಗೆ! ವಿಚಾರಿಸಿ ಬರೆಯಿರಿ!!

ಇತಿ ನಮಸ್ಕಾರ-

ರಂಗರಾಯ.

ನಾನೀ ಪತ್ರವನ್ನೋದುತ್ತಾ ವಿಚಾರಮಗ್ನನಾಗಿ ಕುಳಿತುಬಿಟ್ಟೆ. ಜನರು ಹೇಗೂ ಎನ್ನಲಿ! ನಾನೂ ಅಪರಾಧ ಹೊರಿಸಬಿನೇ! ಎಂದು ನನ್ನ ಸಂಕಟ. ಅಷ್ಟರಲ್ಲಿ ಗೋಪು (ಗೋಪಾಲಕೃಷ್ಣ) ಸದಾಶಿವ ಇವರಿಬ್ಬರೂ ಕೋಣೆಗೆ ಒಂದರು. ಏನು ರಾಯರು! ಕಾಫಿ ಪಂಥದಲ್ಲಿ ಆಡೋಣವೆಂದು ಬಂದೆವು. ಇದೇನಪ್ಪಾ ಕಾಗದ. ಮುಖ ಬಾಡಿದೆಯಲ್ಲಾ! ಬೇಡವೇ cards! ಎಂದ ಗೋಪು. ಏನು ಪ್ರೈವೇಟ್ ಲೆಟರೇ, ಎಂದ ಸದಾಶಿವ. "Private confidential and disappointing ಎಂದ ಗೋಪು.

"ಇದೊಂದು ಸುಖ ದುಃಖಗಳ ಚಿತ್ರ. ಶಿವನೂ ಕೇಳಲಿ. ಗೋಪೂ, ಗಟ್ಟಿಯಾಗಿ ಓದು" ಎಂದು ಕೈಗೆ ಕೊಟ್ಟೆ ಗೋಪು ಓದಿ ಮುಗಿಸಿದ; "ಅಯ್ಯೋ, ನಾವು ರಾಮರಾಯರ ವಿಷಯ ಏನು ತಪ್ಪು ಗ್ರಹಿಸಿಕೊಂಡೆವು ಅವರಿಗೆ ಖಲಿ ಕೆಟ್ಟತೆನ್ನುವ ಜನರಿಗೆ ತಿಳಿಯೆಲ್ಲ! ಪುಣ್ಯ ಪುರುಷರಿವರು" ಎಂದು ಭಾವನಾಪರವಶನಾಗಿ ಆಡಿದ. ಅದೇಕೋ ಏವನಿಗೆ ಕಣ್ಣೀರು ಬಂತು.

"ರಾಯರ ಸಮತಾವಾದದ ಜನರು ಹಲವರಿದ್ದಾರೆ; ಶಟ್ರ ಸ್ವಮತಾವಾದದವರೂ ಹಳ್ಳಿಹಳ್ಳಿಯಲ್ಲಿ ಕೂಡಾ ದೊರೆಯುವರೆನ್ನುವ. ಆದರೆ ರಂಗರಾಯರಂತೆ ಜೀವನವನ್ನು ಬೇರೆಯವರ ದುಃಖಕ್ಕಾಗಿ ವಿನಿಯೋಗಿಸುವ ಯಥಾರ್ಥವಾದಿಗಳೆಷ್ಟು ಮಂದಿ! ಇರಲಿ. ಬ್ರಾಹ್ಮಣರ--ವಿಧವೆಯರ ವಿಚಾರವಂತಿರಲಿ. ನಮ್ಮವರ ವಿಚಾರ ನೋಡಬಾರದೇ? ವರದಕ್ಷಿಣೆಯ ನೆವದಿಂದ ಎಷ್ಟು ಸ್ತ್ರೀಯರು ಸಮಾಜದಲ್ಲಿ ಮದುವೆಯಿಲ್ಲದೆ ನಿಟ್ಟುಸಿರುಬಿಡುವುದಿಲ್ಲ! ಉದಾಹರಣೆಗಾಗಿ ನಮ್ಮ ದೊಡ್ಡಮನೆ ಶೆಟ್ರ ಮಕ್ಕಳು-ಶಾರದೆ ಮತ್ತು ಅವಳ ತಂಗಿ ರತ್ನ. ರತ್ನಳು ಅವಳಿಗಿಂತ ಮೂರುವರ್ಷ ಕಿರಿಯವಳು. ಆ ಎರಡು ಹೆಣ್ಣುಮಕ್ಕಳು, ಎಷ್ಟು ಸುಗುಣೆಯರು ಸುಂದರಿಯರು; ಅಡುಗೆ, ಮನೆಗೆಲಸ ಅವರಿಂದ ಸ್ತ್ರೀಯರು ಕಲಿಯಬೇಕು. ಪಾಪ! ಅವರ ದುಃಖವನ್ನು ನೋಡುವವರಾರು! ಶಾರದೆ ಋತುವಾಗಿ ಹತ್ತು ವರ್ಷವಾಯಿತು; ಎಂದು ಶಿವನ ಮಾತು ಮುಗಿಯುವಷ್ಟರಲ್ಲೇ "ರತ್ನಳೆಂದರೆ ನಿಜವಾದ ರತ್ನ!" ಎಂದ ಗೋಪು

"ಗೋಪೂ, ನೀನು ಈ ವರ್ಷ ಬಿ. ಎ. ಪಾಸಾದವ. ತಿನ್ನಲಿಕ್ಕೆ ತೊಂದರೆಯಿಲ್ಲ. ಉಪಮೆ, ಅಲಂಕಾರ ಚೆನ್ನಾಗಿ ಬಲ್ಲೆ. ರತ್ನಳು ರತ್ನವಾದರೆ ನೀನೇಕೆ ಆ ರತ್ನವನ್ನು ಧರಿಸಬಾರದು!" ಎಂದೆ ನಾನು.

ಸಾಕು, ವಿಟ್ಟು ಲೆಕ್ಚರು. ಶುದ್ಧ ಗಾಂಧಿ ಭಕ್ತ ನೀನು. ನನಗೆ ಬುದ್ಧಿ ಹೇಳಲು ಹೊರಟೆ. ಯಾರಾದರೂ ಪ್ರಶ್ನಿಸಿದರೆ, ಒಂದು ಅಂದರೆ ಒಂದೂವರೆ ಎನ್ನುವೆ. ಎರಡು ಅಂದರೆ ನಿನ್ನ ಮೂರು ಬೆರಳು ಮುಂದೆಬರುತ್ತದೆ ಸ್ವಾರ್ಥದ ಪ್ರಾಣಿ! ಇಂಥಾ ಕಪಟ ಸನ್ಯಾಸಿಗಳಿಂದ ಸಮಾಜ ಹಾಳಾಯಿತು, ಶಾರದೆ ಉತ್ತಮ ತರುಣಿಯಷ್ಟೆ. ವರದಕ್ಷಿಣೆ ಪಡೆಯದೆ ಮದುವೆಯಾಗುವೆಯಾ? ಮತ್ತೆ ನಿನ್ನ ತ್ಯಾಗ-ಉಪದೇಶ-" ಎಂದ ಗೋಪು

ನೀನು ರತ್ನಳನ್ನು ಏನೂ ಬೇಡದೆ ಮದುವೆಯಾಗುವೆಯಾ! ಎಂದು ಪುನಃ ಪ್ರಶ್ನಿಸಿದೆ ನಾನು-'ನೀನು ಶಾರದೆಯನ್ನಾದರೆ' ಎಂದ ಅವ ಮಾತಿಗೆ ಮಾತು ಬೆಳೆಯಿತು. ಮರುದಿನ ವಿನೋದವಾಗಿದ್ದುದು ಯಥಾರ್ಥವಾಯಿತು. ನಾನು ಶಾರದೆಯನ್ನು ಮದುವೆಮಾಡಿಕೊಳ್ಳುವೆನೆಂದೆ ಗೋಪು ರತ್ನ ನನ್ನ ಪತ್ನಿಯೆಂದ. ಲಗ್ನಪತ್ರಿಕೆ ಪವರ್ ಪ್ರೆಸ್ಸಿಗೆ ಕಳುಹಿಸಿಯೂ ಆಯಿತು.

ಹಾ! ರಕ್ಕರು ನೀವು! ನಿಮ್ಮದಿದು ತ್ಯಾಗವಲ್ಲ. ಭೋಗದ ಆಶೆ; ಅಂತರಂಗದ ಮೋಹ ಪೂರ್ವಪುಣ್ಯವಲ್ಲವೇ? ಎಂಥಾ ಸ್ತ್ರೀ ರತ್ನಗಳು ನಿಮಗೆ ಎಂದು ಸದಾಶಿವನು ತಲೆಯಲ್ಲಾಡಿಸಿದ. —ಶಾಮ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬ ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0

ಎಸ್. ವಿ. ಶಾಸ್ತ್ರಿ, ಆಯುರ್ವೇದ ಫಾರ್ಮಸಿ ಮಂಗಳೂರು, ದ. ಕ

ಮೈಸೂರು ಸ್ಟೇಟಿನ ಏಜಂಟರು - ಶ್ರೀ ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

ಆತಂಕನಿಗ್ರಹ ಮಾತ್ರೆ

ಯಾವ ಕಾರಣದಿಂದಾಗಲಿ ಉಂಟಾದ ವಾತುಸಪ್ತ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಶಿಷ್ಟ ಗುಣವುಂಟಾಗುವಂತೆ ಮಾಡುತ್ತದೆ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗೆ ೧—೦—೦

ನಾಜೀಕರಣ ತೈಲ

ವೀರ್ಯವು ಪಕ್ವವಾಗ ವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಪರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡವುದು ಅರ್ಧ ತೊಲೆ ಶೀಸೆ 1ಕ್ಕೆ ರೂ. 5--0--0.

'ಕಾಮಶಾಸ್ತ್ರ' ದರ್ಪಣ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ

ಆತಂಕನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಸ್ಥಾಪನೆ **ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು. ಪೇಪರಿನ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBBER STAMP CO,

Balmat Road, MANGALORE.

Included by the Mysore Govt. Stores Purchase Committee in the list of approved Firms.

ಪುತ್ತೂರು

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. $\frac{330}{38}$ R. I. A. $\frac{867}{38}$

ಭೀಮ ಭಟ್ಟ ಕೂಡಾ —**ಅರ್ಜಿದಾರರು**

ನಾರಾಯಣ ಭಟ್ಟ ಕೂಡಾ —**ಎದ್ರಿರು**

ಸದ್ರಿವ್ಯವಹರಣೆಯ 2ನೇ ಎದ್ರಿ ಶಂಕರಿ ಅಮ್ಮಗೆ ತಿಳಿಸುವುದೇನೆಂದರೆ—

ಮೇಲ್ಕಂಡ ಅರ್ಜಿಯ ವ್ಯಾದೆ ತಾರೀಕು 9-11-38ಕ್ಕೆ ಇಟ್ಟದೆ. ಆ ದಿವಸ 10 ಘಂಟೆಗೆ ಸರಿಯಾಗಿ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಸ್ವತಃ ಅಗ್ಲಿ ವಕೀಲರ ಮುಖಾಂತರವಾಗಲೀ ತಿಳಿಸಿಕೊಳ್ಳತಕ್ಕದ್ದು ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾಗುವುದು ತಿಳಿದಿರಲಿ.

ಪುತ್ತೂರು ತಾ 1-11-38 } **C. S Shastry,** *Vakil for Petitioner.*

ಗಂಡಂದಿರು ಬೇಕಾಗಿದ್ದಾರೆ!

ಹತ್ತು ಹನ್ನೆರಡು ಮಂದಿಗೆ ಒಬ್ಬ ಗಂಡನಾದರೂ ಸಿಕ್ಕಬೇಕೆಂಬ ಹಾರೈಕೆ.

ಹೆಚ್ಚಿನ ಧನಸಂಪತ್ತಿದ್ದರೂ ಗಂಡಂದಿರಿಲ್ಲದೆ ಪ್ರಣಯ ಬೇಗೆಯಿಂದ ಕುದಿಯುತ್ತಿರುವ ಸ್ತ್ರೀಯರ ನಾಡು.

ಚಿತ್ರಾಂಗದೆಯರ ದ್ವೀಪವೊಂದು ಅರ್ಜುನರಿಗಾಗಿ ಕಾದುಕೊಂಡಿದೆ. ಆದರೆ ಅರ್ಜುನರಾರೂ ಹೋಗುವುದಿಲ್ಲ. ಹಾಗೆಂತ ಈ ಚಿತ್ರಾಂಗದೆಯರೇನೂ ಕುರೂಪಿಗಳಲ್ಲ. ಒಳ್ಳೇ ರೂಪವಂತರು, ಒಳ್ಳೇ ಸೌಂದರ್ಯ ಮತ್ತು ಅಂಗಸೌಷ್ಟವ ಉಳ್ಳವರು. ಬಡತನದಿಂದ ಬಳಲಿಕೊಂಡಿರುವವರೂ ಅಲ್ಲ. ತುಂಬಾ ಧನಕನಕವುಳ್ಳವರು. ಚಿನ್ನ ಮತ್ತು ಬೆಳ್ಳಿಯ ಆಭರಣಗಳು ತುಂಬಿಕೊಂಡಿವೆ ಅವರ ಕುತ್ತಿಗೆಗಳಲ್ಲಿ. ಬೆಲೆ ಬಾಳುವ ವಸನಭೂಷಣವುಳ್ಳವರು. ಅವರಲ್ಲಿರುವ ಮುತ್ತುಗಳನ್ನು ನೋಡಿದರೆ ನಮ್ಮ ಸ್ತ್ರೀಯರು ಅಸೂಯೆಪಡಬೇಕು. ಪ್ರಾಕೃತಿಕ ಸೌಂದರ್ಯದ ನೆಲೆಯಾಗಿ ಭೂಸ್ವರ್ಗವೇ ಆಗಿದೆ ಅವರು ವಾಸಿಸುವ ದ್ವೀಪ. ತೆರಿಗೆತೆರಬೇಕೆಂಬ ಗೊಡವೆ ಇಲ್ಲ. ರಾಜಕೀಯ ಗಲಾಟೆಯ ಭೀತಿಯಿಲ್ಲ. ನಾಗರಿಕ ಚಿಂತೆಗಳೇನೂ ಇಲ್ಲ. ಸುಖಸಂಪತ್ತಿನ ನೆಲೆಬೀಡು ಈ ಸ್ತ್ರೀಯರ ನಾಡು. ಮುಂದಿನ ಊಟದ ಗತಿಯೇನೆಂದು ವ್ಯಥೆ ಪಡಬೇಕೆಂದೇನೂ ಇಲ್ಲ. ಅದು ಮರಗಳಲ್ಲೇ ಬೆಳೆಯುವುದು. ಹೆಕ್ಕಿದ ಮಾತ್ರಕ್ಕೆ ನಿಮ್ಮದಾಗುವುದು.

ಇಂತಹ ಅಮರಾವತಿ ಸಮಾನ ದ್ವೀಪ ವಾಸಿಗಳಾಗಿರುವ ಸ್ತ್ರೀಯರುಮಾತ್ರ ಅಸುಖಿಗಳಾಗಿರುವರು. ಅವರಿಗೆ ಗಂಡಂದಿರಿಲ್ಲ, ಪ್ರಣಯಿಗಳಿಲ್ಲ, ಹುಡುಗ ಮಿತ್ರರಿಲ್ಲ, ಮತ್ಸರದ ಕಿಚ್ಚೇನೂ ಅವರ ಹೃದಯದಲ್ಲಿಲ್ಲ. ಪ್ರತಿಯೊಬ್ಬಳಿಗೂ ಒಬ್ಬೊಬ್ಬ ಗಂಡಬೇಕೆಂದು ಕೂಡಾ ಅವರು ಆಶಿಸುವುದಿಲ್ಲ. ಅಲ್ಲಿ ವಾಸಮಾಡುವ ಗಂಡಸೊಬ್ಬನು ಹತ್ತುಹನ್ನೆರಡು ಹೆಂಡಿರನ್ನು ಮಾಡಿಕೊಳ್ಳಬಹುದು. ಅವನು ಯಾವ ಕೆಲಸವನ್ನೂ ಮಾಡಬೇಕಾಗಿಲ್ಲ, ಎಲ್ಲಾ ಅವರೇ ಮಾಡುತ್ತಾರೆ.

ಈ ಸ್ತ್ರೀಮಲಯಾಳವು ಅಮೇರಿಕದ ಪನಾಮಕೊಲ್ಲಿಯ ಪೂರ್ವ ಕರಾವಳಿಯಲ್ಲಿದೆ. ಸಾನ್ ಬ್ಲಾಸ್ ಎಂಬ ಪಂಗಡಕ್ಕೆ ಸೇರಿದವರಾಗಿದ್ದಾರೆ ಈ ಸ್ತ್ರೀಯರು. ವ್ಯಾಘ್ರ ದ್ವೀಪವೆಂದು ಇದರ ಹೆಸರಾಗಿದೆ. ಇಲ್ಲಿಯ ಸಂಪತ್ತೆಂದರೆ ತೆಂಗಿನಕಾಯಿ. ಇತ್ತಲಾಗಿ ತೆಂಗಿನಕಾಯಿ ಬೆಲೆ ಹೆಚ್ಚಿದೆ. ಅವುಗಳ ಚಿಪ್ಪಿನಿಂದ ಉತ್ತಮ ವಿಷವಾಯು ನಿರೋಧಕ ಮುಖಕವಚವನ್ನು ಮಾಡಬಹುದಾಗಿದೆ. ಪನಾಮ ಕಾಲುವೆಯಿಂದ ಬಿದಿಗೆಯ ಚಂದ್ರಾಕಾರದಲ್ಲಿ ಕೊರಕಲಾಗಿರುವ ಈ ದ್ವೀಪಕ್ಕೆ ಯಾರೂ ಹೋಗಬಹುದು. ಕೆಲವು ಶತಮಾನಗಳ ವರೆಗೆ ಈ ಸಾನ್‌ಬ್ಲಾಸ್ ಜನರ ವಿಷಯ ಹೆಚ್ಚೇನೂ ತಿಳಿದಿರಲಿಲ್ಲ. ಅವರು ಉಗ್ರ ಸ್ವಭಾವದವರು, ಯುದ್ಧಪ್ರಿಯರು. ಗುಪ್ತಗಾಮಿಗಳು. ಅವರ ಯೋಧರು ವಿಷಬಾಣಗಳನ್ನು ಉಪಯೋಗಿಸುತ್ತಿದ್ದರು. ಬಿಳಿಜನರನ್ನು ದ್ವೇಷಿಸಿ ಅವರನ್ನು ತಮ್ಮ ದ್ವೀಪಕ್ಕೆ ಬರಲು ಬಿಡಲೇ ಇಲ್ಲ.

ಹೆನ್ರಿ ಮೋರ್ಗನನೆಂಬವನು ಮೊದಲಾಗಿ ಇವರ ಮೈತ್ರಿ ಬೆಳೆಸಿದ ಬಿಳಿ ಮನುಷ್ಯನು. ಅವನು ಸ್ಪೈನಿನಿಂದ ಪನಾಮವನ್ನು ತೆಕ್ಕೊಳ್ಳಲು ಹಡಗದಲ್ಲಿ ಹೋದಾಗ, ಕೆಲ ಮಂದಿ ಸಾನ್‌ಬ್ಲಾಸರನ್ನು ತನ್ನ ಸೈನ್ಯಕ್ಕೆ ಸೇರಿಸಿಕೊಂಡ. ಆಮೇಲೆ ಸಮುದ್ರಗಳ್ಳರಾದ ಸಿಂಗ್ಲ್‌ಟನ್, ಸ್ಮಿತ್ ಮತ್ತು ಬ್ಲೆಕ್‌ಬೀಯರ್ಡರು ಈ ದ್ವೀಪವಾಸಿಗಳ ಸಂಪರ್ಕವುಳ್ಳವರಾಗಿ ಅವರಿಗೆ ಕತ್ತಿ ಮತ್ತು ಕಬ್ಬಿಣವನ್ನು ಕೊಟ್ಟು ಅದರ ಬದಲಿಗೆ ಚಿನ್ನ ಮುತ್ತು ಮುತ್ತುಗಳನ್ನು ಪಡೆಕೊಂಡರು. ಸಾನ್‌ಬ್ಲಾಸರಿಗೆ ಮುತ್ತೆಂದರೆ ಬಹಳ ಸಾಮಾನ್ಯ ವಸ್ತುವಾಗಿತ್ತು. ಅವುಗಳನ್ನವರು ಸಾಲುಸಾಲಾಗಿ ತಮ್ಮ ದೋಣಿಗಳ ಮುಂಭಾಗಕ್ಕೆ ಸಿಕ್ಕಿಸುತ್ತಿದ್ದರು. ಚಿನ್ನವನ್ನೂ ಇದೇ ರೀತಿ ಉಪಯೋಗಿಸುತ್ತಿದ್ದರು. ಇವತ್ತಿಗೂ ಅವರ ಸ್ತ್ರೀಯರು ಹಬ್ಬಹುಣ್ಣಿಮೆಗಳ ಸಂದರ್ಭದಲ್ಲಿ ಸ್ಪೆನಿಶ್ ನಾಣ್ಯ, ಬ್ರಿಟಿಶ್ ಪವನು ಮತ್ತು ಅಮೇರಿಕಾದ ಡೋಲರುಗಳನ್ನು ಸುರಿದು ಮಾಡಿದ ಮಾಲೆಗಳನ್ನು ಧರಿಸಿಕೊಳ್ಳುವರು. ಅವರ ಉಡುಗೆಗಳಲ್ಲಿ ಚಿನ್ನಾಭರಣಗಳು ತುಂಬಿರುತ್ತವೆ.

ಪನಾಮ ಕಾಲುವೆಯು ತೆರೆಯಲ್ಪಟ್ಟಾಗ ವ್ಯಾಪಾರಿಗಳು ತೆಂಗಿನಕಾಯಿಯನ್ನೊಯ್ಯಲು ವ್ಯಾಘ್ರದ್ವೀಪಕ್ಕೆ ಹೋದವರು ಮತ್ತು ಸಾನ್‌ಬ್ಲಾಸಿನ ಗಂಡಸರು, ಪನಾಮ ಕಾಲುವೆಯ ಪ್ರದೇಶಕ್ಕೆ ಹೋಗಿ ಸುಖವಿಲಾಸಮಗ್ನರಾಗಿ ವಾಸಿಸಹತ್ತಿದರು. ಹಾಗವು ವ್ಯಾಘ್ರದ್ವೀಪದ ಸಮುದ್ರಭಾಗಕ್ಕೆ ಪ್ರವೇಶಿಸಿದೊಡನೆಯೇ ದೃಷ್ಟಿಗೆ ಬೀಳುವ ಪ್ರಥಮ ನೋಟವೆಂದರೆ ಕೆಂಬಣ್ಣದ ಸ್ತ್ರೀಯರು ನಿಚ್ಚಳ ಹಾಗೂ ಪ್ರಶಾಂತ ಜಲದಲ್ಲಿ ಮುಳುಗಿ ಈಜಾಡುತ್ತಿರುವುದು. ಅವರು ತೆಂಗಿನಕಾಯಿಗಳಿಂದ ತುಂಬಿದ ದೋಣಿಗಳನ್ನು ನಡಿಸಿಕೊಂಡುಬರುವರು. ಹಡಗದ ನಾವಿಕರನ್ನೂ ತಮ್ಮ ದ್ವೀಪಕ್ಕೆ ಆಮಂತ್ರಿಸುವರು. ಆದರೆ ವ್ಯಾಪಾರಿಗಳು ತಮ್ಮ ಕೆಲಸಗಾರರನ್ನು ಹೋಗಬಿಡುವುದಿಲ್ಲ. ಈ ಹೆಂಗಸರು ತೆಂಗಿನ ವ್ಯಾಪಾರಿಗಳಾಗಿರುವರು. ಆದರೆ ಅವರು ಬಹಳವಾಗಿ ಆಶಿಸುವುದು ಗಂಡಂದಿರಿಗಾಗಿ. ರೋನಾಲ್ಡ್ ಜೆಬ್ಸೋನೆಂಬವನೊಮ್ಮೆ ಈ ದ್ವೀಪಕ್ಕೆ ಹೋದ. ಆದರೆ ಹಿಂತಿರುಗಿ ತನ್ನ ಹಡಗಕ್ಕೆ ಬರಲು ಪ್ರಾಣಕ್ಕೆ ಬಂತವನಿಗೆ. ಅವನು ಸಮುದ್ರತೀರಕ್ಕೆ ಕಾಲಿಟ್ಟೊಡನೆಯೇ ಸ್ತ್ರೀಯರು ಆತನನ್ನು ಆವರಿಸಿದರು. ಕೆಲವರು ತಮ್ಮ ಗುಡಿಸಲುಗಳಿಗೋಡಿ ಒಳ್ಳೇವಸನ ಭೂಷಣಗಳನ್ನು ಹಾಕಿಕೊಂಡುಬಂದರು. ಅಮೂಲ್ಯ ಆಭರಣಗಳು ಅವರಕುತ್ತಿಗೆಗಳಲ್ಲಿ ತೂಗಾಡುತ್ತಿದ್ದವು. ಉಡುಗೆಗಳಿಗೆ ಹೊಲಿಯಲ್ಪಟ್ಟಿದ್ದವು. ತಮಗೆ ಗಂಡಂದಿರನ್ನು ತಾರದಿದ್ದರೆ ತೆಂಗಿನಕಾಯಿಗಳನ್ನು ನಾವು ಹೆಕ್ಕದೆ ಹಾಗೆಯೇ ಬಿಟ್ಟುಬಿಡುವೆವೆಂದು ಒಬ್ಬಳು ರೋನಾಲ್ಡನಿಗೆ ಎಚ್ಚರಿಕೆಯಿತ್ತಳು. ಇತರರು ದೊಡ್ಡದೊಂದು ದೋಣಿಯಲ್ಲಿ ತೆಂಗಿನಕಾಯಿ ತುಂಬಿಸಿತಂದರು. ಇತರ ದೋಣಿಗಳು ದಡದಿಂದ ಹಡಗಕ್ಕೆ ಹೋಗುತ್ತಿದ್ದವು. ಅಂತೆಯೇ ತಾನೂ ಹೋಗುವುದೆಂದು ರೋನಾಲ್ಡನು ಒಗೆದಿದ್ದ. ಈ ಹೆಂಗಸರ ಉಪಟಳದಿಂದ ಹೇಗಾದರೊಮ್ಮೆ ತಪ್ಪಿಸಿಕೊಂಡು ಹೋದರೆ ಸಾಕೆಂದು ಅವನು ಆತುರಗೊಂಡಿದ್ದನು. ಆದುದರಿಂದ ಒಡನೆಯೇ ಆ ದೋಣಿಗ ಹೋದನು. ಅದರಲ್ಲಿ ಹತ್ತು ಹನ್ನೆರಡು ಮಂದಿ ಸ್ತ್ರೀಯರಿದ್ದರು. ದೋಣಿಯು ಹೋಗಹತ್ತಿತು. ಆದರೆ ಅದು ಹಡಗದ ಕಡೆಗೆ ಹೋಗದೆ ಪರದೆಯಂತೆ ದಟ್ಟವಾಗಿ ಬೆಳೆದ ಕಾಡಿನ ಬಳಿಯ ಆಖಾತದ ಕಡೆಗೆ ಸರಿಯುತ್ತಿತ್ತು. ಆಗ ದೋಣಿಯಲ್ಲಿದ್ದ ಸ್ತ್ರೀಯರು, ಅವನನ್ನು ಗಂಡನಾಗಿ ಮಾಡಿಕೊಳ್ಳಲು ಅನೇಕ ಪಟ್ಟು ಕದ್ದೊಯ್ಯುತ್ತಿರುವುದೆಂದು ತಿಳಿಸಿದರು. ತಮ್ಮ ಪೈಕಿ ಯಾರನ್ನಾದರೂ ಮುಖ್ಯ ಪತ್ನಿಯನ್ನಾಗಿ ಆರಿಸಬೇಕೆಂದು ಕೇಳಿಕೊಂಡರು. ಅವನ ಸುತ್ತಲೂ ಕುಳಿತುಕೊಂಡರು. ಆ ಸಮಯದಲ್ಲಿ ರೋನಾಲ್ಡನು ಹಡಗದಿಂದ ದೂರವಾಗುತ್ತಿದ್ದನು. ಇನ್ನು ಸುಮ್ಮನಿದ್ದರೆ ಆಗುವದಿಲ್ಲವೆಂದು ದೋಣಿಯಿಂದ ದೊಪ್ಪನೆ ಸಮುದ್ರಕ್ಕೆ ಹಾರಿ ಹಡಗದ ಕಡೆಗೆ ಈಜಾಡಿ ಹೋದನು. ಹಡಗದ ದೋಣಿಯೊಂದು ಅವನನ್ನು ಎತ್ತಿಕೊಂಡಿತು. ನಿರಾಶರಾದ ಸ್ತ್ರೀಯರು ಮನೋದ್ಗಾರದ ಹಾವಭಾವಗಳನ್ನು ಮಾಡುತ್ತಿದ್ದರು.

ಈ ವ್ಯಾಘ್ರದ್ವೀಪದಲ್ಲಿ ಸಾನ್‌ಬ್ಲಾಸ್ ಗಂಡಸರೇ ಇಲ್ಲವೇ? ಬಹಳ ಸ್ವಲ್ಪ ಮಂದಿ ಮಾತ್ರ ಇದ್ದಾರೆ. ಇತರರು ಪನಾಮಕ್ಕೆ ಅಥವಾ ಹತ್ತಿರದ ಇತರ ಪಟ್ಟಣಗಳಿಗೆ ಹೋಗಿ ವಾಸಿಸುತ್ತಿರುವರು. ಇಲ್ಲವೆ ಕರಾವಳಿಯಲ್ಲಿ ಸಂಚರಿಸುವ ಹಡಗಗಳಲ್ಲಿ ಕೆಲಸಗಾರರಾಗಿರುವರು. ಆದುದರಿಂದ ಈ ದ್ವೀಪದಲ್ಲಿ ಸುಂದರ ಚಿತ್ರಾಂಗದೆಯರು ಮಾತ್ರ ಇದ್ದಾರೆ. ಗಂಡಂದಿರನ್ನು ಹಾರೈಸಿಕೊಂಡಿದ್ದು ಆದರ್ಶ ಪಮಾಗುಣದಲ್ಲಿ ಅವರಿಗೆ ಬೇಕಾದ ಸುಖಸಂಪತ್ತನ್ನೊದಗಿಸಿ ಅವರೊಂದಿಗೆ ಭೋಗಿಸಲು ತವಕಗೊಂಡಿರುವರು. ಆದರೆ ಅವರ ಬಳಿಗೆ ಹೋಗುವ ಅರ್ಜುನರಾರೂ ಇಲ್ಲ. ಎಂತಹ ವಿಲಕ್ಷಣ ಲೋಕವಿದು.

ಗ್ರಾಮಫೋನುಗಳಿಗೆ ಶಾಶ್ವತವಾದ ಸೂಜಿ

ಈಗ ಗ್ರಾಮಫೋನುಗಳ ಪ್ಲೇಟುಗಳಿಗಿಡುವ ಸೂಜಿಯನ್ನು ಪ್ರತಿಯೊಂದು ಪ್ಲೇಟಿಗೂ ಬದಲಾಯಿಸಬೇಕಷ್ಟೆ. ಇವು ಹೊರತು ಅವರಿಂದ ಪ್ಲೇಟು ಕೂಡಾ ಸವೆದು ಹಾಳಾಗುತ್ತದೆ. ಈಗ ಅಮೇರಿಕದ ನ್ಯೂ ಜೆರ್ಸಿ ಎಂಬಲ್ಲಿಯ ಇಬ್ಬರು ಇಂಜನೀಯರರು ಯಾವಾಗಲೂ ಇಡಲಾಗುವ ಸೂಜಿಯೊಂದನ್ನು ತಯಾರಿಸಿರುವರು. ಇದು ಸವೆಯುವುದೇ ಇಲ್ಲ. ಪ್ಲೇಟುಗಳೂ ಇದರಿಂದೇನೂ ಸವೆದು ಹಾಳಾಗುವುದಿಲ್ಲ. ಈ ಸೂಜಿಯು ಪಚ್ಚೆ ಕಲ್ಲಿನಿಂದ ತಯಾರಿಸಲ್ಪಟ್ಟದ್ದು. ಪ್ರತಿಯೊಂದರ ಬೆಲೆ ರೂ 6 ಒಂದಿಷ್ಟು ಸವೆಯದೆ ಇದನ್ನು 3000 ಪ್ಲೇಟುಗಳಿಗೆ ಉಪಯೋಗಿಸಬಹುದು. ಸ್ವರವೂ ಕಬ್ಬಿಣದ ಸೂಜಿಯಂತೆಯೇ ಕೇಳಬರುವುದು.

ಹಲ್ಲುಗಳ ಜಪ್ತಿ

ನ್ಯೂಯೋರ್ಕ ಪಟ್ಟಣದ ಒಪ್ಪೆಲ್ಲೋ ಎಂಬಲ್ಲಿ ರೋಬರ್ಟ ಆಷ್ಲೀ ಎಂಬ ನೀಗ್ರೊ ಒಬ್ಬನ 2 ಹಲ್ಲುಗಳು ವಜ್ರದಿಂದ ಕಟ್ಟಲ್ಪಟ್ಟವಿದ್ದವು. ಆಷ್ಲಿಯಿಂದ ಬರತಕ್ಕ 100 ಪವನುಗಳಿಗಾಗಿ ಸಾಲಗಾರರು ದಾವೆ ಮಾಡಿ ಆತನ ವಜ್ರದ ಹಲ್ಲುಗಳನ್ನು ಜಪ್ತಿ ಮಾಡಿಸಬೇಕೆಂದು ಕೇಳಿಕೊಂಡರು. 'ಅವು ಆತನ ದೇಹಕ್ಕೆ ಸಂಬಂಧಿಸಿದವಾದುದರಿಂದ ಸಾಧ್ಯವಿಲ್ಲೆಂದರು ಮೆಜಿಸ್ಟ್ರೇಟರು.

ANNOUNCEMENT

WE BEG TO INFORM ALL CUSTOMERS, CONSTITUENTS, FRIENDS AND WELL-WISHERS THAT SATURDAY, THE 19th NOVEMBER, 1938 THE BIRTHDAY OF OUR FOUNDER, THE LATE Mr. A. SUBBARAO PAI WILL BE OBSERVED AS A HOLIDAY AT ALL OUR BRANCH OFFICES IN THE SOUTH KANARA DISTRICT.

RESOURCES OF A CRORE

ESTD 1906
CANARA BANK LIMITED

NAVAYUGA
Advt. Tariff.

Full Page Rs. 25/- Per Insertion
1/2 „ Rs. 15/- „ „
1/4 „ Rs. 8/- „ „
1/8 „ Rs. 5/- „ „
Re. 1 Per inch column

For Contract Rates Please
Apply to the manager.

• ವಿಸ್ಮಯ ಜಗತ್ತು •

ಹೃದಯವನ್ನು ತೆಗೆದು ಪುನಃ ಇಟ್ಟದ್ದು.

ಅಮೆರಿಕದ ನ್ಯೂಯೋರ್ಕಿನ ಆಸ್ಪತ್ರೆಯಲ್ಲಿ ವೈದ್ಯಕೀಯ ಇತಿಹಾಸದಲ್ಲಿ ಅಪೂರ್ವವಾದೊಂದು ಶಸ್ತ್ರಕ್ರಿಯೆ ನಡೆದಿರುವುದು 27 ವರ್ಷ ಪ್ರಾಯದ ವಿಲಿಯಮ್ ಮೇನ್ನಿಂಗನೆಂಬ ಪೋಲೀಸನೊಬ್ಬನು ಹೃದಯಕ್ಕೆ ತಿವಿಯಲ್ಪಟ್ಟು ಮರಣೋನ್ಮುಖನಾಗಿದ್ದನು. ಕೂಡಲೆ ಅವನನ್ನು ನ್ಯೂಯೋರ್ಕಿನ ಫ್ಲೋವರ್ ಫಿಫ್ತ್ ಆಸ್ಪತ್ರೆಗೊಯ್ಯಲಾಯಿತು. ಡಾಕ್ಟರ್ ಅಲೆಗ್ಸಾಂಡರ್ ನಿಕೊಲರೆಂಬವರು ಸಾಹಸಪರ ಶಸ್ತ್ರಕ್ರಿಯೆಯೊಂದನ್ನು ಮಾಡುವ ನಿರ್ಧಾರಮಾಡಿದರು. ಅವರು ಮೇನ್ನಿಂಗನ ಹೃದಯವನ್ನು ಹೊರತೆಗೆದು, ಎದೆಗೂಡಿನೊಳಗೆ ಸುರಿದಿದ್ದ ರಕ್ತವನ್ನೆಲ್ಲಾ ಅದೊಂದು ಚಿಕ್ಕ ಯಂತ್ರದ ಮೂಲಕ ಸೋಸಿ ತೆಗೆದರು. ಆ ಮೇಲೆ ಹೃದಯವನ್ನು ಹೊಲಿದು ಎದೆಗೂಡಿನಲ್ಲಿಯೇ ಇಟ್ಟರು. 5 ವಾರಗಳ ವರೆಗೆ ಮೇನ್ನಿಂಗನು ಆಮ್ಲಜನಕ ತುಂಬಿದ ಡೇರೆಯೊಳಗಿರಿಸಲ್ಪಟ್ಟನು. ಹೃದಯದಲ್ಲಿ ಸರಿಯಾಗಿ ರಕ್ತಚಲನೆಯಾಗುವಂತೆ ಪ್ರತಿದಿನವೂ ಸರಿ ತಿಕ್ಕಲಾಯಿತು. ಈಗ ಮೇನ್ನಿಂಗನು ಸೌಖ್ಯಹೊಂದಿ ತನ್ನ ಕೆಲಸಕ್ಕೆ ಹೋಗಿ ಸೇರಿದ್ದಾನೆ.

೫ ವರ್ಷ ಪತ್ನಿಯ ಶವವನ್ನು ಕಾದಿಟ್ಟುಕೊಂಡುದು.

ಫ್ರಾನ್ಸಿನ ಮಿಲ್ಯಾಧೀಶನಾದ ಪಿಯರೆ ಫ್ಲೇಂಚಾರ್ಡನೆಂಬವನು ಕೆಲವು ವರ್ಷಗಳ ಮೊದಲು ಮರಿಸೆಂಡಳೆಂಬ ಸಾಮಾನ್ಯ ಗಾಯಕಿ ಹುಡುಗಿಯೊಬ್ಬಳನ್ನು ಮದುವೆಯಾಗಿ ಜನರನ್ನೆಲ್ಲಾ ವಿಸ್ಮಯಗೊಳಿಸಿದನು. ಇವರು ವಿವಾಹಾನಂತರದ ಸಂತೋಷಸಮಯವನ್ನು ವಿಹಾರಹಡಗವೊಂದರಲ್ಲಿ ಕಳೆಯುವ ಏರ್ಪಾಡು ನಡೆದಿತ್ತು. ಆದರೆ ನವದಂಪತಿಗಳು ಈ ಪ್ರಯಾಣಕ್ಕೆ ಹೊರಡುವ ಮೊದಲೇ ಮರಿಸಾಂಡಳು ಆಪಘಾತವೊಂದಕ್ಕೆ ಸಿಕ್ಕಿ ಕೊಲ್ಲಲ್ಪಟ್ಟಳು. ಫ್ಲೇಂಚಾರ್ಡನು ದುಃಖವಿಹ್ವಲನಾಗಿ ಆವಳ ಶವವು ಕೊಳೆಯದಂತೆ ಮಾಡಿ ವೈವಾಹಿಕ ಗವನು ಹಾಕಿ ಅದನ್ನು ಶೃಂಗರಿಸಿ ಗ್ಲಾಸಿನ ಪೆಟ್ಟಿಗೆಯೊಳಗಿರಿಸಿ, ಆ ಪೆಟ್ಟಿಗೆಯನ್ನು ತನ್ನ ವಿಹಾರ ಹಡಗಿನ ಕೋಣೆಯೊಳಗಿಟ್ಟು ಹಿಂದೀಸಾಗರದಲ್ಲಿ ಸಂಚರಿಸ ಹೊರಟನು. ಒಂದು ದಿನ ಅವನು ಸುಂದರವಾದ ದ್ವೀಪವನ್ನು ಸಮೀಪಿಸಿ, ಹಡಗಿಂದ ಕೆಳಗಿಳಿದನು. ಅಲ್ಲಿಯ ಸ್ತ್ರೀಯರು ಫ್ಲೇಂಚಾರ್ಡನ ಮನೋಹರ ಗಡ್ಡವನ್ನು ಕಂಡು ಮರುಳಾದರು. ಕೂಡಲೆ ಅವನಿಗೊಂದು ಗುಡಿಸಲನ್ನು ಕೊಟ್ಟು ೪ ಮಂದಿ ಪತ್ನಿಯರನ್ನು ಅವನ ಮೇಲೆ ಹೊರಿಸಲಾಯಿತು. ಫ್ಲೇಂಚಾರ್ಡನು ಯಾವಾಗಲೂ ತನ್ನ ಹಡಗಕ್ಕೆ ಹೋಗಿ ಬರುತ್ತಿರುವುದನ್ನು ಕಂಡು ಈ ೪ ಮಂದಿ ಪತ್ನಿಯರೂ ಅವನ್ನನುಸರಿಸಿದರು. ಅಲ್ಲಿ ಕನ್ನಡಿಪೆಟ್ಟಿಗೆಯೊಳಗಿರುವ ಶವವನ್ನು ಕಂಡು ಅದು ಸಜೀವ ಸ್ತ್ರೀಯೆಂದು ಮತ್ಸರಗೊಂಡು ಪೆಟ್ಟಿಗೆಯನ್ನೊಡೆದು ಶರೀರವನ್ನು ಸಮುದ್ರಕ್ಕೆ ಸೆದರು. ಕಟ್ಟಕಡೆಗೆ ಫ್ಲೇಂಚಾರ್ಡನು ಆ ದ್ವೀಪದಿಂದ ಹೇಗಾದರೂ ತಪ್ಪಿಸಿಕೊಂಡು ಕಳೆದ ವರ್ಷ ಫ್ರಾನ್ಸಿಗೆ ಹಿಂತಿರುಗಿದ ಸ್ವಲ್ಪ ಸಮಯದಲ್ಲೇ ಮೃತನಾದ. ೫ ವರ್ಷಗಳ ವರೆಗೆ ಇವನು ಸಮುದ್ರದಲ್ಲಿದ್ದನು

೬೪ ಇಂಚುದ್ದ ಮೀಸೆ

ಮಲಯದ್ವೀಪದಲ್ಲಿ ವಾಸಿಸುತ್ತಿರುವ ಹಿಂದೀಯನೊಬ್ಬನ ಮೀಸೆಯು 64 ಇಂಚು ಉದ್ದವಾಗಿ ಬೆಳೆದಿರುತ್ತದೆ. ಅವನು ಮೀಸೆ ತುದಿಗಳನ್ನು ಹಿಡಕೊಂಡು ಸರಿ ತೋಳುಗಳನ್ನು ಎಡಬಲಕ್ಕೆ ನೀಡಬಹುದಾಗಿದೆ. ಇನ್ನೂ ಆ ಮೀಸೆಯು ಬೆಳೆಯುತ್ತಿದೆ.

ಸತ್ತ ಮಗನ ಯಾಂತ್ರಿಕ ಮೂರ್ತಿ

ಕೆನಡಾ ದೇಶದ ಬ್ಲೇಕ್‌ಪೂಲ್ ಎಂಬಲ್ಲಿಯ ಲೂಯಿಸ್ ಪೋಂಟೈನನೆಂಬ ಯಂತ್ರನಿರ್ಮಾಣಕನು ಜಾಕಿಸನೆಂಬ ತನ್ನ ಏಕಮಾತ್ರ ಮಗನನ್ನು ಕಳೆದ ಮಹಾಯುದ್ಧದಲ್ಲಿ ಕಳಕೊಂಡನು. ಅವನ ಪ್ರತಿರೂಪವೊಂದನ್ನು ಮಾಡಿಟ್ಟರೆ ತಾನದನ್ನು ಪ್ರತಿದಿನ ನೋಡಿ ಸಮಾಧಾನಪಡಬಹುದೆಂದು ಕೆಲಸಕ್ಕಾರಂಭಿಸಿದ 1933ರಲ್ಲಿ.

5 ವರ್ಷಗಳ ಪರಿಶ್ರಮದ ನಂತರ ಅವನು ಜಾಕೀಸನನ್ನೇ ಹೋಲುವ ಯಾಂತ್ರಿಕ ಮನುಷ್ಯನನ್ನು ತಯಾರಿಸಿದನು. ಅದು ಲೂಯಿಸನ ಸೂಚನೆ ಮೇರೆಗೆ ಬೇರೆ ಬೇರೆಯವರ ಮುಖ ಮತ್ತು ಇತರ ನಕಾಶೆಗಳನ್ನು ಬಿಡಿಸಬಲ್ಲದು ಮೃತ ಜಾಕಿಸನಿಗೆ ಸಂಗೀತದಲ್ಲಿ ಹೆಚ್ಚಿನ ಅಭಿರುಚಿಯಿದ್ದುದರಿಂದ ಯಾಂತ್ರಿಕ ಜಾಕಿಸನೂ ಸಂಗೀತೋಪಕರಣಗಳಲ್ಲಿ ಪದ ಬಾರಿಸುವಂತೆ ತರಬೇತಿ ಹೊಂದಿರುತ್ತಾನೆ.

ಲಂಡನಿನಲ್ಲಿ ಬ್ರಿಟಿಷ್ ನಗ್ನವಾದಿಗಳ ಕೂಟ

ಬರುವ ತಿಂಗಳ ಆದಿಯಲ್ಲಿ ಲಂಡನಿನಲ್ಲಿ ನಗ್ನವಾದಿಗಳಿಗಾಗಿ ಕಟ್ಟಲ್ಪಟ್ಟಿರುವ ಮನೆಯೊಂದರ ಪ್ರವೇಶೋತ್ಸವವು ನಡೆಯಲಿರುವುದು. ಇದು ಇನ್ನು ಮುಂದೆ ಬ್ರಿಟಿಷ್ ನಗ್ನವಾದಿಗಳ ಕೇಂದ್ರ ನಿವಾಸವಾಗುವುದು. ಈ ಪ್ರವೇಶೋತ್ಸವಕ್ಕಾಗಿ ಇಂಗ್ಲೆಂಡಿನ ಬೇರೆ ಬೇರೆ ಕಡೆಯ ನಗ್ನವಾದಿಗಳೆಲ್ಲಾ ಆಮಂತ್ರಿಸಲ್ಪಟ್ಟಿರುವರು. ಇವರು ಒಂದು ತುಂಡು ವಸ್ತ್ರವನ್ನಾದರೂ ಇಟ್ಟುಕೊಳ್ಳದೆ ಸಂಪೂರ್ಣ ಬತ್ತಲೆಯಾಗಿರಬೇಕು. ವರ್ಷಕ್ಕೆ ಎರಡು ಗಿನಿ ಪ್ರವೇಶ ಹಾಸಲು ಕೊಟ್ಟು ನಗ್ನವಾಗಿರುವ ಆಂಗ್ಲೇಯರಾರಾದರೂ ಈ ನಿವಾಸಕ್ಕೆ ಬಂದು ಸೇರಬಹುದು. ಈ ಸಮಾರಂಭದಲ್ಲಿ ಭಾಗವಹಿಸುವವರು, ಕಣ್ಣುಮುಚ್ಚಾಟಳವಾಡುವಾಗ ಕಣ್ಣಿಗೆ ಕಟ್ಟಲು ಕರವಸ್ತ್ರ ಮಾತ್ರ ಹಿಡಿದುಕೊಳ್ಳಬಹುದು.

ಪ್ರೀತಿಸುವಿರಾದರೆ ನನ್ನನ್ನು ಕೊಲ್ಲಿರಿ!

"ನಾನು ನನ್ನ ಪತ್ನಿಯನ್ನು ಕೊಂದಿರುವೆನು" ಎಂಬ ಸಮಾಚಾರವು. ೬೫ ವರ್ಷ ಪ್ರಾಯದ ಧನಿಕನಾದ ಹೆನ್ರಿ ಜೋನ್ಸನೆಂಬವನಿಂದ ಪೋಲೀಸ್ ಸ್ಟೇಶನಿಗೆ ಬಂದಿತು ಈಗ ಅವನು ಕೊಲೆಯ ಆರೋಪದಿಂದ ವಿಚಾರಣೆಗೊಳಗಾಗಿರುವನು. ಆದರೆ ಅವನು ತಾನೊಂದು ಸತ್ಕಾರ್ಯ ಮಾಡಿದ ಸಂತೋಷದಿಂದಿರುವನು ಆತನ ೪೦ ವರ್ಷಗಳ ದಾಂಪತ್ಯ ಜೀವನದಲ್ಲಾತನು ತನ್ನ ಹೆಂಡತಿಯ ಅಪೇಕ್ಷೆಯನ್ನೇನೂ ನಿರಾಕರಿಸಿದುದಿಲ್ಲ. ಅಪರಿಹಾರ್ಯವಾದ ಘೋರ ಕಾಯಿಲೆಯೊಂದರಿಂದ ಅಸಹನೀಯ ಪೀಡೆಗೊಳಗಾದ ಅವಳು, ತನ್ನನ್ನು ಕೊಲೆ ಮಾಡುವ ಕರುಣೆ ತೋರಿಸಿರೆಂದು ಬೇಡಿಕೊಂಡಳು. ಜೋನ್ಸನನು ಅವಳ ಅಪೇಕ್ಷೆಯನ್ನು ಮನ್ನಿಸಿದನು. 'ನಾನೇನೂ ಪಾಪ ಮಾಡಿರುವೆನೆಂದು ಭಾವಿಸುವುದಿಲ್ಲ. ಅವಳ ಅಸಹ್ಯ ವೇದನೆಯನ್ನು ಕೊನೆಗೊಳಿಸುವ ಮನಸ್ಸನ್ನು ನಾನು ದೀರ್ಘಕಾಲದ ವರೆಗೆ ತಡೆಗಟ್ಟಿಕೊಂಡೆ 'ನೀವು ಇನ್ನೂ ನನ್ನನ್ನು ಪ್ರೀತಿಸುವಿರೆಂದಾದರೆ ದಯಮಾಡಿ ನನ್ನ ಜೀವನವನ್ನೊಮ್ಮೆ ಕೊನೆಗೊಳಿಸಿರಿ' ಎಂದವಳು ಆಗ್ರಹಪಟ್ಟಾಗ ನನಗೆ ತಡೆಯಲು ಸಾಧ್ಯವಾಗಲಿಲ್ಲ. ನಾನು ಪ್ರಾರ್ಥನೆ ಮಾಡಿ ಅವಳ ಕೋಣೆಗೆ ಪೈಪ್ ಮೂಲಕ ಗ್ಯಾಸ್ ಬಿಟ್ಟು 'ಪ್ರಿಯತಮೆ ನಿದ್ದೆ ಹೋಗು' ಎಂದು ಹೇಳಿ ಮೆಲ್ಲನೆ ಅಗಳಿಂದ ಕೋಣೆಯಿಂದ ಹೊರಬಂದೆ

ಅಥರ್ವವೇದದ ವಿಜ್ಞಾನ ರಹಸ್ಯ

ಹಿಂದುಗಳ ಅಥರ್ವವೇದದಲ್ಲಿ ವಿಚಿತ್ರ ವಿಜ್ಞಾನ ರಹಸ್ಯಗಳು ಅಡಕವಾಗಿವೆ. ಅದರ ಶ್ಲೋಕಗಳ ಆಧಾರದಿಂದ ಅಪೂರ್ವ ಯುದ್ಧ ಸಾಧನಗಳನ್ನು ತಯಾರಿಸಬಹುದು ಘೋರವಾದ ವಿಷವನ್ನುಂಟುಮಾಡಿ ಅದನ್ನು ಮೋಡವಾಗಿ ಮಾರ್ಪಡಿಸಿ ಶತ್ರುಸೇನೆಯ ಮೇಲೆ ಅಗ್ನಿ ಮಳೆಗರೆಸಬಹುದು. ಈ ಕುರಿತು ಶ್ರೀ. ಡಾಕ್ಟರ್ ರಾಜಾದೇವಿಪ್ರಸಾದ ಮಿಶ್ರಾಎಂಬವರು ಮಹತ್ತ್ವಾದ ಶೋಧನೆ ನಡಿಸಿರುತ್ತಾರೆ. ಇವರು ಬೊಂಬಾಯಿಯಲ್ಲಿ ಮಣ್ಣು, ಪೊಟೇಸಿಯಮ್ ಕ್ಲೊರೈಡ್ ಮತ್ತು ಹಾಲು ಸೇರಿಸಿ ಊಟ ಮಾಡಿರುವರು. ಆರು ತಿಂಗಳು ಇದೇ ಆಹಾರ ಸೇವೆಮಾಡಿ ಜೀವಿಸಿಕೊಂಡಿರುತ್ತಾರೆ ಇವರು ಅಮೆರಿಕದ ಯುನೈಟೆಡ್ ಸ್ಟೇಟ್ಸಿಗೆ ಹೋಗಿ ಅಲ್ಲಿ ಜನಸಮಕ್ಷಮದಲ್ಲಿ ತನ್ನ ದೇಹವನ್ನು ಸುಡಿಸಿಕೊಂಡು ಪರಕಾಯ ಪ್ರವೇಶದ ಮೇರೆಗೆ ಇನ್ನೊಂದು ಶರೀರಕ್ಕೆ ಪ್ರವೇಶಿಸಿ ಪುನಃ ಭಾರತಕ್ಕೆ ಬರುವರಂತೆ.

ಸಸ್ಯಗಳಿಗೂ ನಿದ್ದೆ ಬೇಕು

ಸ್ಕಾಂಡಿನೇವಿಯದ ಜೋಹನ್ಸನನೆಂಬವನು ಸಸ್ಯಗಳಿಗೂ ನಿದ್ದೆ ಅವಶ್ಯವಿದೆಯೆಂಬುದನ್ನು ಕಂಡುಹಿಡಿದಿರುವನು ಸಸ್ಯಗಳ ವಿಶ್ರಾಂತಿ ರಹಸ್ಯವನ್ನರಿತುಕೊಂಡ ಇವನು ಕೆಲವು ಹೂಗಿಡಗಳ ಬೇರುಗಳನ್ನು ಬಿಸಿನೀರಿನ ಕೊಳವೆಯ ಬದಿಯಲ್ಲಿಟ್ಟನು ಮರುದಿನ ಹೂಗಳು ಬಹಳ ಸುಂದರವಾಗಿದ್ದವು ಸಸ್ಯಗಳಿಗೆ ನಿದ್ದೆಮಾಡಲು ಬೆಚ್ಚಗಿನ ಸ್ಥಳವೇ ಒಳ್ಳೇದೆಂದು ಇದರಿಂದ ತಿಳಿದುಕೊಂಡ. ಜೋಹನ್ಸನ ಶೋಧವೆಂದರೆ ಸಸ್ಯಗಳಿಗೆ ನಿದ್ದೆ ಬರುವಂತೆ ಬೇರುಗಳ ಮೂಲಕ ಕ್ಲೋರಪ್ರೋರ್ಮನ್ನು ಕೊಡುವುದಾಗಿದೆ ಒಂದು ಗಿಡದ ಗಡ್ಡೆಯನ್ನು ಕ್ಲೋರಪ್ರೋರ್ಮಿನಲ್ಲಿಟ್ಟಾಗ ಅದು ಎಂದಿಗಿಂತ ಬೇಗನೆ ಮತ್ತು ಹೆಚ್ಚು ಹೂಬಿಟ್ಟಿತು.

ನಿಶ್ಚೇತನಗೊಳಿಸುವ ಕಿರಣ

ಯಾವ ತರದ ಹಾನಿಯನ್ನೂ ಮಾಡದೆ ನಿಶ್ಚೇತನಗೊಳಿಸುವ ಕಿರಣವೊಂದು ಪೆರಿಸಿನಲ್ಲಿ ಕಂಡುಹಿಡಿಯಲ್ಪಟ್ಟು ನರ್ತನ ಸದನವೊಂದರಲ್ಲಿ ಅದರ ಪ್ರಯೋಗ ನಡೆದಿರುತ್ತದೆ. ಈ ಸದನದಲ್ಲಿ ಗಾಯನ ನಡೆಯುತ್ತಿತ್ತು ನರ್ತನ ನಡೆಯುತ್ತಿತ್ತು. ಕೂಡಲೆ ಸದನದ ಒಂದು ಮೂಲೆಯಿಂದ ಈ ಕಿರಣವನ್ನು ಪ್ರಯೋಗಿಸಲಾಯಿತು. ನರ್ತನಗಾರರೆಲ್ಲಾ ನಿಶ್ಚೇತನರಾಗಿಬಿಟ್ಟರು. ಸಂಗೀತವು ನಿಂತುಹೋಯಿತು ಈ ಕಿರಣವನ್ನು ತೆಗೆದೊಡನೆಯೇ ಎಲ್ಲವೂ ಯಥಾಪ್ರಕಾರವಾಯಿತು. ಈ ಕಿರಣವನ್ನು ಹಲವು ಮೈಲುಗಳ ವರೆಗೆ ಪ್ರಯೋಗಿಸಲಾಗುವಂತೆ ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ.

THE

Canara Industrial & Banking Syndicate Ltd.

ನೋಟೀಸು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಕುಂದಾಪುರ, ಇವರು ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಜವಾಬ್ದಾರಿ ಮೇಲೆ ಸಾಲಪಡೆದು ಆ ಬಾಬ್ತು ಬಡ್ಡಿಯನ್ನು ಬ್ಯಾಂಕಿನ ರೂಲ್ಸಿಗನುಗುಣವಾಗಿ ವ್ಯಾಡೆಗೆ ಸರಿಯಾಗಿ ಕೊಡದೆ ರಿಜಿಸ್ಟ್ರಿ ನೋಟೀಸು ಕೂಡ ಕೊಟ್ಟಾಗ್ಯೂ ಯಾವ ತರದ ನಿವೃತ್ತಿಯನ್ನೂ ಮಾಡದೆ ಇದ್ದ ಪ್ರಯುಕ್ತ ನವರಿಯವರ ನಗಗಳನ್ನು ತಾರೀಕು 29-11-1938ನೇ ಮಂಗಳವಾರ ದಿವಸ ಅಪರಾಹ್ನ 2 ಘಂಟೆಗೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾಗುತ್ತದೆ. ಸಂದರ್ಭಾನುಸಾರ ಏಲಂ ತಾರೀಕು ಬ್ಯಾಂಕಿನವರಿಗೆ ಯುಕ್ತಕಂಡಲ್ಲಿ ಮುಂದರಿಸಲಾದೀತು

ತಾರೀಕು	ಸಾಲದ ನಂಬ್ರ	ಹೆಸರು	ರೂಪಾಯಿ
2-12-35	352/35	ಚನ್ನಯ್ಯ ಶೆಟ್ಟಿ, ಸುಬ್ಬಯ್ಯ ಹೆಗಡೆ ಅಳಿಯ, ಪಟೇಲ್, ಅಂಪಾರು, (ಪೋಸ್ಟ್ ಶಂಕರನಾರಾಯಣ)	15/-
2- 4-36	174/36	ಹಾಡಿಮನೆ ಕೃಷ್ಣಯ್ಯ, ಪೊಮ್ಮಯ್ಯ ಶೇರುಗಾರನ ಮಗ, ರೈತ, ಕುಂದಾಪುರ.	13/-
15- 5-37	185/37	ಗುಲುವಾಡಿ ನಾರಾಯಣ ಶೆಟ್ಟಿ, ನಂದ್ಯಪ್ಪ ಶೆಟ್ಟಿ ಅಳಿಯ, ರೈತ, ಗುಲುವಾಡಿ, ಕುಂದಾಪುರ.	70/-
5- 3-38	99/38	ದತ್ತಾತ್ರೆಯ ಶೆಟ್ಟಿ, ಅಣ್ಣಪ್ಪ ಶೆಟ್ಟಿ ಅಳಿಯ, ಜಮೀನ್ದಾರ, ಬಂಡಾಡಿ ಕೊರ್ಗಿಮನೆ, ಕನ್ಯಾನ ಕುಂದಾಪುರ	100/-
25- 7-38	348/38	ನಾರಾಯಣ, ಶೇಷಿಪ್ಪನ ಮಗ, ರೈತ ಕುಂದಾಪುರ	8/-
16- 8-38	395/38	ದತ್ತಾತ್ರೆಯ ಶೆಟ್ಟಿ, ಅಣ್ಣಪ್ಪಶೆಟ್ಟಿ ಅಳಿಯ, ಜಮೀನ್ದಾರ, ಬಂಡಾಡಿ ಕೊರ್ಗಿಮನೆ ಕನ್ಯಾನ ಕುಂದಾಪುರ	65/-

ಕುಂದಾಪುರ,
ತಾ. 4-11-'38

T. G. M Pai,
Agent at Coondapoor.

THE
Canara Banking Corporation, Udipi, Ltd.
Established:] (INCORPORATED IN BRITISH INDIA) [1906.
MEMBER:-
RESERVE BANK OF INDIA
BANKERS' CLEARING HOUSE, MADRAS

Capital Authorised, Issued & Subscribed	Rs.	3,50,000
Paid up Capital	Rs.	3,03,205
Reserves	Rs.	3,88,842

RATES OF INTEREST ON DEPOSITS

3 months ..	2½% p. a.
6 or 9 months ..	3 % p. a.
12 or 24 months ...	3½% p. a
Short Term ..	2 % p a.

All kinds of Banking Transactions undertaken.

ನವಯುಗ

ಉಡುಪಿ, ಗುರುವಾರ, ತಾ.೧೦ ೧೧-೩೮

ಹಿಂದೂದೇಶದಲ್ಲಿ ವೈದ್ಯಕೀಯ ಸಹಾಯ

ಹಿಂದೂದೇಶದಲ್ಲಿ ಸರ್ವಸಾಧಾರಣವಾಗಿ 10,000 ಜನಸಂಖ್ಯೆಗೊಬ್ಬರಂತೆ ಯೋಗ್ಯತೆ ಪಡೆದಿರುವ ಡಾಕ್ಟರರಿದ್ದಾರೆ. ಆದರೂ ಡಾಕ್ಟರರಾಗಿ ಕಲಿತುಬರುವವರಲ್ಲಿ ಇಷ್ಟರಲ್ಲೇ ನಿರುದ್ಯೋಗಪೀಡೆಯುಂಟಾಗಿದೆ. ಹಳ್ಳಿಗಳಿಗೆ ಹೋಗಿ ಕೆಲಸಮಾಡಲು ಮನಸ್ಸಿಲ್ಲದೆ ಪಟ್ಟಣಗಳಿಗೇನೇ ಮತ್ತೂ ಮತ್ತೂ ಹೋಗಿ ಹೆಚ್ಚಾಗಿ ಸೇರುವುದೇ ಇದಕ್ಕೆ ಕಾರಣವಿರುತ್ತದೆ ಪಟ್ಟಣಗಳಲ್ಲಿ 1000 ಜನಸಂಖ್ಯೆಗೊಬ್ಬರಂತೆ ಡಾಕ್ಟರರಿರುತ್ತಾರೆ. ಕೃಷಿಪ್ರಧಾನವಾದ ಎಲ್ಲಾ ದೇಶಗಳಲ್ಲಿನ ಪರಿಸ್ಥಿತಿಯೂ ಇದೇ ರೀತಿ. ದೊಡ್ಡ ಪಟ್ಟಣಗಳಲ್ಲೇ ಇದ್ದು ಹೆಚ್ಚು ವೆಚ್ಚಮಾಡಿ ಅತ್ಯಾಧುನಿಕ ವೈದ್ಯಕೀಯ ವಿಧಾನಗಳನ್ನೆಲ್ಲಾ ಬಹಳ ಶ್ರಮಪಟ್ಟು ಅಭ್ಯಾಸಿಸಿ, ಕಡೆಗೆ ಯಾವತರದ ಆಧುನಿಕ ಅನುಕೂಲತೆಯೂ, ಹೆಚ್ಚಿನ ಉತ್ಪತ್ತಿಯೂ ಇಲ್ಲದ ಯಾವುದಾದರೊಂದು ಹಳ್ಳಿಮೂಲೆಗೆ ಹೋಗಿ ವಾಸಿಸಲು ಡಾಕ್ಟರರುಗಳು ಉತ್ಸಾಹಗೊಳ್ಳದುದರಲ್ಲಿ ಆಶ್ಚರ್ಯವೇನೂ ಇಲ್ಲ. ಕೆಲವು ಪ್ರಾಂತಿಕ ಸರಕಾರಗಳು ಸಹಾಯರೂಪವಾಗಿ ಹಣ ಕೊಟ್ಟು ಡಾಕ್ಟರರು ಹಳ್ಳಿಗಳಿಗೆ ಹೋಗಿ ನೆಲಸುವಂತೆ ಪ್ರೋತ್ಸಾಹಿಸಿರುತ್ತವೆ.

ಡಾಕ್ಟರರುಗಳಿಗೆ ಹಳ್ಳಿಗಳಲ್ಲಿ ಉತ್ಪತ್ತಿ ಕಡಿಮೆಯಾಗಲು ಮುಖ್ಯ ಕಾರಣವೆಂದರೆ ಅವರ ಫೀಸನ್ನು ಹಳ್ಳಿಗರಿಗೆ ಕೊಡಲು ಸಾಧ್ಯವಾಗುದದ. ಪಟ್ಟಣದಲ್ಲಿ ಕೂಡಾ ಹೆಚ್ಚಿನವರು ಅಷ್ಟೊಂದು ಫೀಸನ್ನು ಕೊಟ್ಟು ಡಾಕ್ಟರರಿಂದ ಚಿಕಿತ್ಸೆ ಹೊಂದಲು ಶಕ್ತರಿರುವುದಿಲ್ಲ. ಆಧುನಿಕ ಶಾಸ್ತ್ರೀಯ ಚಿಕಿತ್ಸೆಯ ವೆಚ್ಚವು ಅತಿರೇಕವಾಗಿವೆ. ಅದನ್ನು ಕಡಿಮೆಮಾಡದೆ ಹಳ್ಳಿಗಳಲ್ಲಿ ಆಧುನಿಕ ವೈದ್ಯಕೀಯ ಚಿಕಿತ್ಸೆಯು ಜನಾದರ ಪಡೆಯುವಹಾಗಿಲ್ಲ. ಸರ್ವಸಾಮಾನ್ಯ ಡಾಕ್ಟರರುಗಳು ಹಳ್ಳಿಪ್ರದೇಶಗಳಿಗೆ ಹೋಗಿ ವಾಸಿಸಿ, ಅಲ್ಲಿಯ ಜನರ ಸಾಂಪತ್ತಿಕ ಸ್ಥಿತಿಯ ಮೇರಿಗೆ ವೈದ್ಯಕೀಯ ಸಹಾಯಕ್ಕೆ ಫೀಸನ್ನು ವಸೂಲುಮಾಡುವುದರಿಂದ ಅವರಬಳಿಗೆ ಹೆಚ್ಚಿನ ರೋಗಿಗಳು ಬರುವಂತಾಗಿ ಕ್ರಮಶಃ ಅವರ ಉತ್ಪತ್ತಿಯು ಹೆಚ್ಚಾಗಬಹುದು. ಇದರಿಂದ 'ನನ್ನ ಅದೃಷ್ಟವಿದ್ದಂತಾಗಲಿ; ಡಾಕ್ಟರರ ಬಳಿಗೆ ಹೋಗಲು ದುಡ್ಡೆಲ್ಲಿಂದ?' ಎಂಬ ಹಳ್ಳಿಪ್ರದೇಶದ ರೋಗಿಗಳ ಮನೋವೃತ್ತಿಯು ಕೂಡಾ ಬದಲಾಗಿ ಅವರು ಡಾಕ್ಟರರನ್ನು ಆಶ್ರೈಸಲು ಪ್ರೋತ್ಸಾಹವಿತ್ತಂತಾಗುವುದು. ವೈದ್ಯಕೀಯ ಶಿಕ್ಷಣದ ವೆಚ್ಚವನ್ನು ಕಡಿಮೆಮಾಡಿದ ಪಕ್ಷದಲ್ಲಿ ಡಾಕ್ಟರರು ಕೂಡಾ ಕಡಿಮೆ ಆದಾಯದಲ್ಲಿ ತೃಪ್ತರಾಗುವಂತಾಗಬಹುದು.

ಹಳ್ಳಿಪ್ರದೇಶದ ಜನತೆಯು ಯಾವ ರೀತಿಯ ಕಷ್ಟನಿವಾರಣೆಯ ಆಲೋಚನೆಗಾದರೂ, ಚಕಿತಗೊಳಿಸುವ ಅವರ ದಾರಿದ್ರ್ಯವು ದೊಡ್ಡ ತಡೆಯಾಗಿ ಬರುವುದು. ವೈದ್ಯಕೀಯ ಚಿಕಿತ್ಸೆಯ ವಿಷಯದಲ್ಲಿ ಇತರ ಪ್ರಾಂತದವರಿಗಿಂತ ಮದ್ರಾಸಿನವರ ಸ್ಥಿತಿಯು ಒಳ್ಳೇದಾದ ಪಕ್ಷದಲ್ಲಿಯೂ 1936 ರಲ್ಲಿ ಪ್ರತಿ 120 ಚಚ್ಚೌಕ ಮೈಲುಗಳಿಗೆ ನಮಗೆ ಬರೇ ಒಂದು ಆಸ್ಪತ್ರೆ ಮಾತ್ರ ಇದ್ದಿತು. ಸುಮಾರು 40,000 ಜನರಿಗೆ ಅದೊಂದರಿಂದ ವೈದ್ಯಕೀಯ ಸಹಾಯ ದೊರೆಯಬೇಕಿತ್ತು ಅದಕ್ಕಾಗಿ ತಲೆಯೊಂದರ ವೆಚ್ಚವೆಂದರೆ ಎರಡಾಣೆ ಏಳುಪೈ. ಗರ್ಭಿಣಿಯರಾಗಿರುವಾಗ ಇಲ್ಲವೆ ಪ್ರಸವಿಸುವಾಗ ಸರಿಯಾದ ವೈದ್ಯಕೀಯ ಸಹಾಯವಿಲ್ಲದೆ ಸುಮಾರು 3 ಮಿಲ್ಯ ಸ್ತ್ರೀಯರು ಹಿಂದೂದೇಶದಲ್ಲಿ ತತ್ಕಾಲಿಕವಾಗಿಯಾಗಲಿ ನಿರಂತರವಾಗಿಯಾಗಲಿ ಯಾತನೆಪಡುವಂತಾಗುತ್ತದೆ. ಹಿಂದೂದೇಶದಷ್ಟು ಬಾಣಂತಿ ಮತ್ತು ಶಿಶುಮರಣವು ಲೋಕದ ಇನ್ನಾವ ದೇಶದಲ್ಲಿಯೂ ಇಲ್ಲೆಂದು ಹೇಳಬಹುದು. ಹೃದ್ರಾವಕ ವಿಷಯವೆಂದರೆ ಸೇಕಡ 80 ರಷ್ಟರ ಮರಣವು ನಿವಾರಿಸಲು ಸಾಧ್ಯವಾದುದೆಂಬುದು.

ಇಂತಹ ಚಿತ್ತಪಂಥಕ ಪರಿಸ್ಥಿತಿಯನ್ನು ಸಾಧ್ಯವಾದಷ್ಟು ನಿವಾರಿಸಲು ವ್ಯಾಪಕ ಯೋಜನೆಯನ್ನು ತೀವ್ರವಾಗಿ ಕೈಕೊಳ್ಳುವ ಅವಶ್ಯವಿದೆ. ಲೂಧಿಯಾನದ ಸ್ತ್ರೀಯರ ಕ್ರಿಶ್ಚನ್ ಮೆಡಿಕಲ್ ಕೋಲೇಜಿನ ಪ್ರಿನ್ಸಿಪಾಲರಾದ ಡೇಮ್ ಎಡಿತ್ ಬ್ರೌನರು, ಈಸ್ಟ್ ಇಂಡಿಯಾ ಎಸೋಸಿಯೇಶನಿನಲ್ಲಿ ಇತ್ತಲಾಗಿ ಭಾಷಣಕೊಡುವಾಗ, ಹಳ್ಳಿ ಸ್ತ್ರೀಯರಿಗೆ ವೈದ್ಯಕೀಯ ಸಹಾಯವೀಯುವ ಪ್ಲೇನೊಂದರ ರೂಪರೇಖೆಯನ್ನು ವಿವರಿಸಿರುವರು. ಕೇಂದ್ರ ಹಳ್ಳಿಯೊಂದರಲ್ಲಿ ಸ್ತ್ರೀ ಡಾಕ್ಟರ್, ಅಧ್ಯಾಪಕಿ, ಆರೋಗ್ಯ ಪರೀಕ್ಷಕಳು, ಕ್ಷಯರೋಗ ಚಿಕಿತ್ಸಕ ನರ್ಸ್ ಮತ್ತು ಇಬ್ಬರು ಮೂವರು ದಾದಿಯರಿರುವ ಚಿಕ್ಕದಾದೊಂದು ಕೊಲನಿಸ್ಥಾಪಿಸಬೇಕು. ಇವರು ಒಂದೇ ಕಂಪೌಂಡಿನಲ್ಲಿ ಸರಳವಾಗಿ ಕಟ್ಟಲ್ಪಟ್ಟ ಹಳ್ಳಿಯ ಮನೆಗಳಲ್ಲಿ ವಾಸಿಸಬೇಕು. ಈ ಕೊಲನಿಯು ಆರೋಗ್ಯಕರವಾಗಿಯೂ, ಶುಚಿಯಾಗಿಯೂ ಇದ್ದು ಹಳ್ಳಿಯ ಸ್ತ್ರೀಯರಿಗೆಲ್ಲಾ ಅದೊಂದು ಮಾದರಿಯಾಗಿರಬೇಕು. ಅದರಲ್ಲಿನ ಒಂದು ಒಳ್ಳೇ ಕೋಣೆಯು ಕೆಲವು ವೇಳೆ ಆರೋಗ್ಯ ಕೇಂದ್ರವಾಗಿಯೂ, ಇನ್ನು ಕೆಲವು ವೇಳೆ ಆಸ್ಪತ್ರೆಯಾಗಿಯೂ ಮತ್ತು ಕೆಲವು ವೇಳೆ ಮಾಯಾಲಾಂದ್ರ ಭಾಷಣಕ್ಕಾಗಿಯೂ ಪ್ರತ್ಯೇಕಿಸಿಡಲ್ಪಡಬೇಕು. ಡಾಕ್ಟರರು ಅಥವಾ ಆರೋಗ್ಯಪರೀಕ್ಷಕಳು 5ರಿಂದ 12 ಮೈಲು ವರೆಗಣ ಪ್ರದೇಶದಲ್ಲಿ ಸಂಚರಿಸಿ ಕೆಲಸಮಾಡಬೇಕು ಇಂತಹ ಕೊಲನಿಯನ್ನು ಮೊದಲಾಗಿ ಸ್ಥಾಪಿಸಲು ಸುಮಾರು ರೂ. 10,000 ಮತ್ತು ಆಮೇಲೆ ಪ್ರತಿವರ್ಷ ನಡೆಸಲು ರೂ 6ರಿಂದ 7ಸಾವಿರ ಬೇಕಾಗುವುದೆಂದು ಡೇಮ್ ಎಡಿತರ ಅಂದಾಜು. ಇಂತಹದೊಂದು ಯೋಜನೆಯನ್ನು ಕೈಕೊಳ್ಳದೆ ವೈದ್ಯಕೀಯ ಸಹಾಯದ ವಿಷಯದಲ್ಲಿ ಹಳ್ಳಿಯ ಜನರು ಈಗ ಪಡುವ ಸಂಕಷ್ಟವು ದೂರವಾಗಲಾರದು.

ಪ್ರತೀಕಾರ ಬುದ್ಧಿ

ಈಗೀಗ ಕಾಂಗ್ರೆಸ್ ಸಂಸ್ಥೆಗಳೊಳಗೆ ಸೌಹಾರ್ದ ಮತ್ತು ಸಹಕಾರಭಾವದ ಬದಲಿಗೆ ದ್ವೇಷಸಾಧನೆ ಮತ್ತು ಪ್ರತೀಕಾರ ಬುದ್ಧಿಯು ಅಧಿಕವಾಗುತ್ತಿರುವ ವಿಲಕ್ಷಣ ಚಿಹ್ನೆಗಳು ತೋರಿಬರಹತ್ತಿವೆ ಬೊಂಬಾಯಿ ಕೋರ್ಪರೇಶನ್ ಚುನಾವಣೆಗಾಗಿ ಕಾಂಗ್ರೆಸ್ ಉಮೇದ್ವಾರಿಗಳನ್ನಾರಿಸಲು ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿಂದ ನೇಮಿಸಲ್ಪಟ್ಟ ಕಮಿಟಿಯವರು ವೀರ ನರಿಮನರನ್ನು ಕಾಂಗ್ರೆಸ್ ಪಕ್ಷದ ಉಮೇದ್ವಾರರಾಗಿ ಆರಿಸದಿರುವುದು ಈ ಪ್ರತೀಕಾರ ಬುದ್ಧಿಯ ದ್ಯೋತಕವಾಗಿದೆ ಕಾಂಗ್ರೆಸ್ ಸಂಸ್ಥೆಯೊಳಗೆ ಯಾವ ತರದ ಅಧಿಕಾರವನ್ನಾದರೂ ಹೊಂದಲು ನರಿಮನರು ಅನರ್ಹರೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಿರ್ಣೈಸಿರುವಾಗ ಅವರು ಕೋರ್ಪರೇಶನ್ ಚುನಾವಣೆಗೆ ಕೂಡಾ ಕಾಂಗ್ರೆಸ್ ಪರವಾಗಿ ನಿಲ್ಲಲು ಅನರ್ಹರಾಗಿ ಬಿಡುವರೇ? ಹಾಗಾದರೆ ಅವರನ್ನು ಕಾಂಗ್ರೆಸ್ ಮೆಂಬರಿಕೆಯಿಂದಲೇ ತೆಗೆದುಹಾಕಿ ಕಠಿಣ ಶಿಸ್ತು ಜಾರಿಮಾಡುವುದು ಉಚಿತವಲ್ಲವೇ? ಡಾಕ್ಟರ್ ಖಾರೆಯವರ ಪ್ರಕರಣಕ್ಕೂ, ನರಿಮನರದಕ್ಕೂ ಹೋಲಿಕೆಯಿರುವುದಿಲ್ಲ. ಡಾಕ್ಟರ್ ಖಾರೆಯವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅನುಜ್ಞೆ ಪಡೆಯದೆ ಎಸೆಂಬ್ಲಿಯ ಸ್ಥಾನಕ್ಕೆ ರಾಜಿನಾಮೆ ಕೊಡದೆ ಧಿಕ್ಕರಿಸಿ ನಡೆದಿರುವರು ಶ್ರೀ. ನರಿಮನರು ಅಂತಹದೇನೂ ಮಾಡಿಲ್ಲ. ಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನು ಧಿಕ್ಕರಿಸಿ ನಡೆದಿರುವುದಿಲ್ಲ ಇದು ಹೊರತು ಅವರು ಬೊಂಬಾಯಿಯ ಜನತೆಯ ಸಂಪೂರ್ಣ ವಿಶ್ವಾಸಕ್ಕೆ ಪಾತ್ರರಾಗಿಯೇ ಇರುವರು ಅವರು ನಾಗರಿಕ ಮತ್ತು ರಾಜಕೀಯ ಹಕ್ಕುಬಾಧ್ಯತೆಗಳಿಗಾಗಿ ಎಡೆಬಿಡದೆ ಹೋರಾಡುತ್ತಿರುವ ವೀರ ನಾಯಕರಾಗಿರುವರು ಒಂದುವೇಳೆ ಅವರು ಸ್ವತಂತ್ರವಾಗಿ ಚುನಾವಣೆಗೆ ನಿಂತರೆ ಆರಿಸಿಬರುವುದು ನಿಶ್ಚಯ ಆದರೆ ಅವರು ಸ್ವತಂತ್ರವಾಗಿ ನಿಲ್ಲುವುದಿಲ್ಲೆಂಬುದು ಸಂತೋಷದ ವಿಷಯ. ಕಾಂಗ್ರೆಸಿಗಾಗಿ ಎಷ್ಟೋ ತ್ಯಾಗಮಾಡಿ ಜನತೆಯ ಪ್ರೀತಿ ಮತ್ತು ವಿಶ್ವಾಸಕ್ಕೆ ಪಾತ್ರರಾಗಿರುವ ಮುಖಂಡರ ಕುರಿತು ಕಾಂಗ್ರೆಸ್ ಅಧಿಕಾರಿಗಳು ಇಂತಹ ಪ್ರತೀಕಾರ ಬುದ್ಧಿ ತೋರಿಸುವುದರಿಂದ ಕಾಂಗ್ರೆಸಿಗೆ ಶ್ರೇಯಸ್ಸುಂಟಾಗಲಾರದು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 7-11-38

ನಗರ ಸಭೆ—ಮಂಗಳೂರು ನಗರ ಸಭೆಯು ಈ ದಿನ ಸಾಯಂಕಾಲ ನಡೆಯಲಿದೆ.

ಆಗಮನ—ಕಳೆದ ತಾ. ೪ನೇ ಶುಕ್ರವಾರ ದಿನ ಮದ್ರಾಸ್ ಉಚ್ಚ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾದ ಮಾನ್ಯ ಡಾ। ಯು. ರಾಮರಾಯರು ಬೆಂಗಳೂರಿನಿಂದ ಮಂಗಳೂರಿಗೆ ಚಿತ್ತೈಸಿದರು.

ಹೊಸ ಮುನಿಸಿಪಲ್ ಕಮಿಶನರು—ಮಂಗಳೂರು ನಗರ ಸಭೆಗೆ ಹೊಸತಾಗಿ ನೇಮಕಹೊಂದಿದ ಶ್ರೀ. ಕೆ. ಪಿ. ಕಂದಸ್ವಾಮಿ ಪಿಳ್ಳೆಯವರು ಕಳೆದ ತಾ. ೩ರಲ್ಲಿ ಮಂಗಳೂರಿಗೆ ಬಂದು ತಮ್ಮ ಕೆಲಸದ ಚಾರ್ಜನ್ನು ವಹಿಸಿರುವರು.

ಜಿ. ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಮೇಲೆ ಅವಿಶ್ವಾಸ—ದ. ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಮೇಲೂ ಜತೆ ಕಾರ್ಯದರ್ಶಿಗಳ ಮೇಲೂ ಮತ್ತು ಕೋಶಾಧಿಕಾರಿ ಕಮಲಾದೇವಿಯವರ ಮೇಲೂ ಅವಿಶ್ವಾಸದ ಠರಾವನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರು ತರಲಿರುವರು. ಈ ಬಗ್ಗೆ 34ಮಂದಿ ಸದಸ್ಯರು ಸಹಿಹಾಕಿದ ಒಂದು ಅರ್ಜಿಯನ್ನು ಜಿ. ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಿಗೆ ಕಳುಹಿಸಿ ಬರುವ ತಾ 20ಕ್ಕೆ ಜಿ. ಕಾ. ಕಮಿಟಿಯ ಜನರಲ್ ಸಭೆಯನ್ನು ಕರೆಯಬೇಕೆಂದು ತಿಳಿಸಿರುವರಾಗಿ ಕೇಳುತ್ತೇನೆ.

ಜಿ. ಹರಿಜನ ಎಡ್ವೈಜರಿ ಬೋರ್ಡು—ಕಲೆಕ್ಟರ್ ದೂರೆಗಳ ಅಧ್ಯಕ್ಷತೆಯಲ್ಲಿ ಸೇರಿದ ಜಿ. ಹರಿಜನ ಎಡ್ವೈಜರಿ ಬೋರ್ಡಿನವರು ಪುತ್ತೂರಲ್ಲಿ ಲೇಬರ್ ಶಾಲೆಗಳನ್ನು ತೆರೆಯಬೇಕೆಂದು ನಿರ್ಧರಿಸಿರುವರು.

ಇಂಟರ್ ಕಾಲೇಜ್ ದಿಬೇಟ್—ಈ ದಿನ ಸಾಯಂಕಾಲ ಗವರ್ನ್‌ಮೆಂಟ್ ಕಾಲೇಜ್ ಮತ್ತು ಸೈ. ಎ. ಕಾಲೇಜ್ ವಿದ್ಯಾರ್ಥಿಗಳಲ್ಲಿ ಒಂದು ಡಿಬೇಟ್ ನಡೆಯುವುದು. ಶ್ರೀ. ಯಂ. ಕೆ. ನಂಬಿಯಾರರು ಅಧ್ಯಕ್ಷತೆ ವಹಿಸುವರು. ವಿಷಯ:—"ಈ ಸಭೆಯ ಅಭಿಪ್ರಾಯದಲ್ಲಿ ಹಿಂದುಸ್ಥಾನಕ್ಕೆ ಪ್ರಜಾಪ್ರಭುತ್ವಕ್ಕಿಂತ ಸರ್ವಾಧಿಕಾರಿಗಳ ಆಳ್ವಿಕೆಯು ಉತ್ತಮ." ಗವರ್ನ್‌ಮೆಂಟ್ ಕಾಲೇಜಿನವರು ಠರಾವನ್ನು ತರುವರು. ಸೈ. ಎ. ಕಾಲೇಜಿನವರು ಅದನ್ನು ವಿರೋಧಿಸುವರು.

ಶ್ರೀ. ಯಂ. ಎಸ್. ಮಾಧವರಾಯರಿಗೆ ಸತ್ಕಾರ—ಸ್ಥಳೀಯ ಡಿ. ಸಿ. ಮಿಶನ್ ಶಾಲೆಗಳ ಕರೆಸ್ಪಾಂಡೆಂಟರಾದ ಶ್ರೀ. ಯಂ. ಎಸ್. ಮಾಧವರಾಯರು ತಮ್ಮ ಆ ಕೆಲಸವನ್ನು ಬಿಡುವ ಸಂದರ್ಭದಲ್ಲಿ ಡಿ. ಸಿ. ಯಂ ಶಾಲೆಯ ಅಧ್ಯಾಪಕ ಸಂಘದವರು ಅವರಿಗೊಂದು ಸತ್ಕಾರವನ್ನಿತ್ತರು. ಶ್ರೀ. ಕೆ. ಈಶ್ವರ ಯಂ. ಎಲ್ ಎ. ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಯು. ಗೋವಿಂದರಾಯರು ಅತಿಥಿಗಳ ಗುಣಕಥನಮಾಡಿ ಅವರು ಅಧ್ಯಾಪಕ ವೃಂದಕ್ಕೆ ಮಾಡಿದ ಸಹಾಯಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಶ್ರೀ। ರಾಮಚಂದ್ರ ಅಯ್ಯರ್, ಎಸ್. ಮುಕುಂದರಾಯರೇ ಮೊದಲಾದ ಮಹಾಶಯರು ಭಾಷಣಮಾಡಿದರು. ಶ್ರೀ. ಮಾಧವರಾಯರು ಸಮಯೋಚಿತವಾಗಿ ಮಾತಾಡಿದ ಮೇಲೆ ಶ್ರೀ. ಪಿ. ಬಬ್ಬುರಾಯರು ಧನ್ಯವಾದಗಳನ್ನರ್ಪಿಸಿದರು. ಅನಂತರ ಸಭಾಂತ್ಯವಾಯಿತು. ಸಭೆ ಜರಗುವ ಮೊದಲು ಅತಿಥಿಗಳನ್ನು ಇತರರನ್ನೂ ಅಧ್ಯಾಪಕ ಸಂಘದವರು ಫಲಾಹಾರಾದಿಗಳಿಂದ ಸತ್ಕರಿಸಿದರು.

ಬೊಂಬಾಯಿಯ ಒಂದು ದಿನದ ಮುಷ್ಕರ—ಸರ್ದಾರ್ ವಲ್ಲ

ಹರ್ ಹಿಟ್ಲರರ ಭಾಷಣ

ಬೊಂಬಾಯಿ ಟ್ರೇಡ್ ಡಿಸ್ಪ್ಯೂಟ್ ಬೀಲನ್ನು ಪ್ರಬಲವಾಗಿ ವಿರೋಧಿಸಿ ಅದನ್ನು ನಿಷೇಧಿಸುವ ಮುಷ್ಕರದಲ್ಲಿ ಅಗ್ರಭಾಗ ವಹಿಸಿರುವ ಹರಿಜನ ಮುಖಂಡ ಡಾಕ್ಟರ್ ಅಂಬೇಡ್ಕರರು

ಬೊಂಬಾಯಿಯ ಟ್ರೇಡ್ ಡಿಸ್ಪ್ಯೂಟ್ ಬೀಲು.

ಬೊಂಬಾಯಿ ಎಸಂಬ್ಲಿಯು ಈಗತಾನೇ ಮಂಜೂರು ಮಾಡಿರುವ 'ಟ್ರೇಡ್ ಡಿಸ್ಪ್ಯೂಟ್ ಬೀಲು' ಮಜೂರರ ಮುಷ್ಕರದ ಹಕ್ಕನ್ನು ನಿರಾಕರಿಸುವಂತಹದು, ಅವರ ಸಂಘಟನೆಯ ಬುಡಕ್ಕೇನೇ ಕೊಡಲಿ ಇಡುವ ಭಂಡವಾಳಶಾಹೀ ಪಕ್ಷಪಾತಿ ಮಸೂದೆಯೆಂದು ಅದನ್ನು ನಿಷೇಧಿಸಲು ಇದೇ ತಾ. 7ರಲ್ಲಿ ಬೊಂಬಾಯಿ ಪ್ರಾಂತದಲ್ಲಿ ಮಜೂರರೆಲ್ಲಾ ಮುಷ್ಕರ ಹಿಡಿಯಬೇಕೆಂಬಷ್ಟು ಉಗ್ರ ಚಳವಳವನ್ನು ಕೈಕೊಂಡಿದ್ದಾರೆ ಶ್ರೀ ಜಮ್ನಾದಾಸ ಮೇಥಾ ಮತ್ತು ಡಾಕ್ಟರ್ ಅಂಬೇಡ್ಕರರೇ ಮೊದಲಾದವರು. ಆದರೆ ಈ ಮುಷ್ಕರವು ಬೊಂಬಾಯಿಯಲ್ಲೇ ಅಷ್ಟೊಂದು ಜಯಶೀಲವಾದಂತೆ ತೋರುವುದಿಲ್ಲ ಅಹಮ್ಮದಾಬಾದ್ ಮೊದಲಾದ ಕಡೆಗಳಲ್ಲಿ ಮಜೂರರು ಅದಕ್ಕೆ ಬೆಂಬಲ ಕೂಡಲೇ ಇಲ್ಲ ಇದರಿಂದ ಸದ್ರಿ ಮಸೂದೆಯ ಕುರಿತು ಮಜೂರರಲ್ಲೇ ಪ್ರಬಲ ಭಿನ್ನಾಭಿಪ್ರಾಯವಿರುವುದೆಂದು ಸ್ಪಷ್ಟವಾಗುವುದು. ಕಾಂಗ್ರೆಸ್ ಮಂತ್ರಿಗಳು, ಸಂಪೂರ್ಣವಾಗಿ ಮಜೂರಿಪಕ್ಷಪಾತಿಗಳಾಗಿ ಕೆಲಸಮಾಡದ ಭಂಡವಾಳಗಾರರನ್ನು ಸಾಧ್ಯವಾದ ಮಟ್ಟಿಗೆ ಸಮಜಾಯಿಸಿಕೊಳ್ಳುವ ಆದರೆ ಅವರು ಭಂಡವಾಳಗಾರರ ಪಕ್ಷಪಾತಿಗಳಾಗಿ ಏನಾದರೂ ಕೆಲಸ ಮಾಡುವರೆಂಬ ಆರೋಪದಲ್ಲಿ ಅರ್ಥವಿಲ್ಲ ಟ್ರೇಡ್‌ಡಿಸ್ಪ್ಯೂಟ್ ಬೀಲಿನಲ್ಲಿ ಮಜೂರರು ಮುಷ್ಕರ ಹಿಡಿಯುವ ಹಕ್ಕೇನೂ ನಿರಾಕರಿಸಲ್ಪಟ್ಟಿರುವುದಿಲ್ಲ ಯಾವತರದ ಸಂಘಟನೆಯೂ ಇಲ್ಲದೆ ಅಲ್ಪ ಕಾರಣಗಳಿಂದಾಗಿ ಆಗಾಗ ಮುಷ್ಕರಗಳು ನಡೆಯುವಂತೆ ತಡೆಹಾಕಲಾಗಿದೆ ಮತ್ತು ಒಂದೊಮ್ಮೆ ಮುಷ್ಕರ ನಡೆಯುತ್ತಿದ್ದರೆ ಅದಕ್ಕೆ ಭಂಡವಾಳಗಾರರ ಬಗ್ಗೆಯೇ ಬಗ್ಗುವಂತೆ ಮಸೂದೆಯಲ್ಲಿ ಏರ್ಪಾಡು ಮಾಡಲಾಗಿದೆ ಮಜೂರರ ಸಂಘಗಳು ಸುಸಂಘಟಿತವಾಗಿ ಬಲಗೊಂಡು ಬೆಳೆಯುವ ದೃಷ್ಟಿಯಿಂದಲೇ ಮಸೂದೆಯು ತರಲ್ಪಟ್ಟಿದೆಯೆಂದು ಬೊಂಬಾಯಿಯ ಪ್ರಧಾನ ಮಂತ್ರಿಗಳು ವ್ಯಕ್ತಪಡಿಸಿರುತ್ತಾರೆ ಮತ್ತು ಮಸೂದೆಯನ್ನು ಜ್ಯಾರಿಗೆ ತರುವಾಗ ಅದರಿಂದೇನಾದರೂ ಮಜೂರರಿಗೆ ಅಹಿತವಾಗುವಂತಾದರೆ ಬೇಕಾದ ತಿದ್ದುಪಡಿ ಮಾಡಲು ಇಲ್ಲವೆ ಇಡೀ ಮಸೂದೆಯನ್ನು ರದ್ದು ಮಾಡಲು ತಾನು ಸಿದ್ಧನೇ ಇರುವೆನೆಂದು ಕೂಡಾ ಆಶ್ವಾಸನೆಯಿತ್ತಿರುತ್ತಾರೆ. ಆದುದರಿಂದ ಅದನ್ನು ಸಂಪೂರ್ಣವಾಗಿ ಮತ್ತು ಉಗ್ರವಾಗಿ ನಿಷೇಧಿಸುವುದು ಅಷ್ಟೊಂದು ಯುಕ್ತವಾದ ಧೋರಣೆಯೆಂದು ನಮಗೆ ತೋರುವುದಿಲ್ಲ

೪೮ ಘಂಟೆಗಳಲ್ಲಿ ೭೧೬೨ ಮೈಲು ಹಾರಾಟ.

ಇಂಗ್ಲಂಡಿನ ರೋಯಲ್ ಏರ್ ಫೋರ್ಸಿನ 3 ವಿಮಾನಗಳು ಇಂಗ್ಲೆಂಡಿನಿಂದ ಆಸ್ಟ್ರೇಲಿಯಕ್ಕೆ 48 ಘಂಟೆಗಳಲ್ಲಿ ೭೧೬೨ ಮೈಲು ಹಾರಾಡಿ ಲೋಕದ ಹಿಂದಿನ ದಾಖಲೆಗಳೆಲ್ಲವುಗಳನ್ನು ಅಂಇಂ ಮೈಲುಗಳಷ್ಟು ಹಿಂದ ಹಾಕಿರುವವು ಹಿಂದೆ ರಷ್ಯಾದ ವೈಮಾನಿಕರು 48 ಘಂಟೆಗಳಲ್ಲಿ ೬೩೦೬ ಮೈಲು ಹಾರಾಡಿದ್ದರು

ಪಂಡಿತ ಜವಾಹರಲಾಲ ನೆಹರುಗಳು.

ಇದೇ ತಾ 6ರಲ್ಲಿ ತನ್ನ ಪುತ್ರಿಯೊಂದಿಗ ಈಜಿಪ್ತದ ಕೈರೋ ಪಟ್ಟಣದಲ್ಲಿಳಿದು 3 ದಿನಗಳ ವರೆಗ ನಾಹಸ್‌ಪಾಶರವರ ಅತಿಥಿಗಳಾಗಿ ನಿಲ್ಲುವರು ಇಂದು ನಾಹಸ್‌ಪಾಶರೊಡನೆ ಊಟ ಮಾಡಿದರು.

ಬೊಂಬಾಯಿಯ ಮುಷ್ಕರ

ಬೊಂಬಾಯಿ ಎಸೆಂಬ್ಲಿಯಲ್ಲಿ ಈಗತಾನೇ ಮಂಜೂರಾಗಿರುವ ಟ್ರೇಡ್ ಡಿಸ್ಪ್ಯೂಟ್ ಬೀಲನ್ನು ನಿಷೇಧಿಸುವರ ಬೊಂಬಾಯಿ ಪ್ರೆಸಿಡೆನ್ಸಿ ಟ್ರೇಡ್ ಯೂನಿಯನ್ ಕಾಂಗ್ರೆಸ್ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಮತ್ತು ರೆಡ್ ಫ್ಲೇಗ್ ಯೂನಿಯನಿನವರು ಇದೇ ತಾ 7ನ್ನು ಸಾರ್ವತ್ರಿಕ ಮುಷ್ಕರದ ದಿನವಾಗಿ ಆಚರಿಸಿರುವರು. ಬೊಂಬಾಯಿ ಪಟ್ಟಣದ ವಸ್ತ್ರದ ಗಿರಣಿಗಳೆಲ್ಲಾ ತೆರೆದಿರುತ್ತವೆ ಆದರೆ ಬಹಳ ಮಂದಿ ಕೆಲಸಗಾರರು ಕೆಲಸಕ್ಕೆ ಹೋಗಲಿಲ್ಲ ಗಿರಣಿದ್ವಾರ ಮತ್ತು ಕೆಲಸಗಾರರ ನಿವಾಸಗಳ ಬಳಿ ಪ್ರಬಲ ಪಹರೆ ನಡೆದಿರುವುದು ಡೋಕ್ ಮತ್ತು ಟ್ರೇನ್ ಸ್ಪೋರ್ಟ್ ಕೆಲಸಗಾರರು ಮುಷ್ಕರಕ್ಕೆ ಸೇರಲಿಲ್ಲ

ಡಲಿಸ್ಲೆ ರಸ್ತೆಯಲ್ಲಿ ಎಲ್ಫಿನ್‌ಸ್ಟನ್ ಗಿರಣಿಯ ಬಳಿ ಜನಸ್ತೋಮವು ಪೋಲೀಸ್ ಸ್ಟೇಶನಿನ ಮೇಲೆ ಕಲ್ಲೆಸೆದು ಗಲಾಟೆಮಾಡಿದಾಗ ಪೋಲೀಸರು ಗುಂಡು ಹಾರಿಸಿ ಇಬ್ಬರು ಗಾಯಗೊಂಡು ಆಸ್ಪತ್ರೆಗೊಯ್ಯಲ್ಪಟ್ಟಿರುವರು ಗುಂಡುಹಾರಿಸಲ್ಪಡುವ ಮೊದಲು ಜನರು ಕಲ್ಲೆಸೆದುದರಿಂದ ಒಬ್ಬ ಸಬ್ ಇನಸ್ಪೆಕ್ಟರನು ಗಾಯಗೊಂಡಿದ್ದನೆಂದು ತಿಳಿದುಬರುತ್ತದೆ. ಗಿರಣಿ ಪ್ರದೇಶದಲ್ಲಿ ಕೆಲಸಕ್ಕೆ ಹೋಗಲಪೇಕ್ಷಿಸುವ ಮಜೂರರನ್ನು ತಡೆಯಲು ಪ್ರಯತ್ನ ನಡೆದು ಪ್ರಕ್ಷುಬ್ಧ ಪರಿಸ್ಥಿತಿಯುಂಟಾಗಿರುವುದು ಗಿರಣಿ ಪ್ರದೇಶದ ಟ್ರೇಮ್ ಮತ್ತು ಬಸ್ ಸರ್ವಿಸನ್ನು ನಿಲ್ಲಿಸುವ ಪ್ರಯತ್ನವು ನಿರರ್ಥಕವಾಗಿರುವುದು ಮುಷ್ಕರಗಾರರು ರಸ್ತೆಗಳಲ್ಲೆಲ್ಲಾ ದೊಡ್ಡ ಮೆರವಣಿಗೆ ನಡಿಸಿ ಸಾರ್ವಜನಿಕ ಸಭೆ ಭಾಷಣಗಳು ನಡೆದುವು

ಬೊಂಬಾಯಿಯ ಒಟ್ಟು 62 ವಸ್ತ್ರದ ಗಿರಣಿಗಳಲ್ಲಿ 29 ಸಂಪೂರ್ಣ ಕೆಲಸಮಾಡುತ್ತಿವೆ 14 ಗಿರಣಿಗಳಿಗೆ ಸೇಕಡ 50ರಷ್ಟು ಕೆಲಸಗಾರರು ಬಂದಿರುತ್ತಾರೆ. 2 ಸಂಪೂರ್ಣ ಮುಚ್ಚಲ್ಪಟ್ಟಿವೆ. 6 ಇಂದು ಬೆಳಿಗ್ಗ ಮುಚ್ಚಲ್ಪಟ್ಟವೆ ಉಳಿದವುಗಳಿಗೆ ಅಲ್ಪಸ್ವಲ್ಪ ಮಂದಿ ಕೆಲಸಗಾರರು ಹೋಗಿರುತ್ತಾರೆ ಅಹಮ್ಮದಾಬಾದಿನಲ್ಲಿ ಮುಷ್ಕರ ನಡಿಸಲು ನಡೆದ ಯತ್ನವು ಫಲಿಸದೆ ಎಲ್ಲಾ ಗಿರಣಿಗಳೂ ಸರಿಯಾಗಿ ಕೆಲಸಮಾಡುತ್ತಿವೆಯೆಂದು ತಿಳಿದುಬಂದಿದೆ

ಸರ್ದಾರ್ ಪಟೇಲರ ಮೇಲೆ ಕಲ್ಲೆಸೆತ

ಇಂದು ಬೆಳಿಗ್ಗೆ ಸರ್ದಾರ್ ಪಟೇಲರೂ ಶ್ರೀ ಕೆ ಎಮ್ ಮುನ್ಷಿಯವರೂ ಗಿರಣಿ ಪ್ರದೇಶದಲ್ಲಿ ತೀವ್ರಗತಿಯ ಮೋಟರ್ ಕಾರಿನಲ್ಲಿ ಸಂಚರಿಸುತ್ತಿದ್ದಾಗ ಮುಷ್ಕರಗಾರರು ಅವರ ಮೋಟರ್ ಕಾರಿನ ಮೇಲೆ ಕಲ್ಲೆಸೆದು ಅದರ ಕನ್ನಡಿಗಳು ಒಡೆದುಹೋಗಿರುವವು. ಪಟೇಲರಿಗೂ ಮುನ್ಷಿಯವರಿಗೂ ಪೆಟ್ಟು ತಾಗುವುದು ಸ್ವಲ್ಪಮಾತ್ರ ತಪ್ಪಿಹೋಯಿತು ಪಟ್ಟಣದ ಉತ್ತರಭಾಗದಲ್ಲಿ ಮುಷ್ಕರಗಾರರು ರಸ್ತೆಗಳಲ್ಲಿ ಅಡ್ಡ ಮಲಗಿ ವಾಹನಗಳ ಸಂಚಾರ ನಿಲ್ಲಿಸಿರುವರು.

ಮಧ್ಯಾಹ್ನಕ್ಕಿಂತ ಸ್ವಲ್ಪ ಮೊದಲು ಮುಷ್ಕರಗಾರರು ಹತ್ತು ಹನ್ನೆರಡು ಟ್ರೇಮ್ ಕಾರುಗಳೊಳಗೆ ಪ್ರವೇಶಿಸಿ ಚಾರ್ಜು ಕೊಡಲು ನಿರಾಕರಿಸಿ ಅವುಗಳ ಸಂಚಾರವನ್ನೇ ನಿಲ್ಲಿಸಿಬಿಟ್ಟರು. ಕೆಲವರು ಅಂಗಡಿಗಳಿಗೆ ಹೋಗಿ ಬಾಗಿಲು ಹಾಕುವಂತೆ ಒತ್ತಾಯ ಪಡಿಸಿದರು ಪೋಲೀಸರು ಲೋರಿಗಳಲ್ಲಿ ಕೊತಾಡುತ್ತಿರುವಾಗ ಮುಷ್ಕರಗಾರರು ರೆಡ್ ಫ್ಲೇಗ್ ಯೂನಿಯನಿನ ಮುಖಂಡರೂ ಲೋರಿಯಲ್ಲಿ "ಲೌಡ್ ಸ್ಪೀಕರಿನ ಮೂಲಕ ಮುಷ್ಕರ ಮಾಡಬೇಕೆಂದು ವಿನಂತಿಮಾಡಿ ಕಾಂಗ್ರೆಸ್ ಮಂತ್ರಿಗಳನ್ನು ನಿಷೇಧಿಸುತ್ತಾ ಸಂಚಲಿಸುತ್ತಿದ್ದರು.

ಮದನಪುರದ ಮುಷ್ಕರಗಾರರು ಮುಷ್ಕರದ ಪ್ರಬಲವಿರೋಧಿಗಳು ವಾಸಿಸುವ ಕಾಮಾಟಿಪುರಕ್ಕೆ ಮೆರವಣಿಗೆಯಿಂದ ಹೋಗಿ ಗಲಾಟೆಯಾಗಿ 4 ಮಂದಿ ಗಾಯಗೊಂಡಿರುವರು ಅಲ್ಲಲ್ಲಿ ಹಲವು ಮಂದಿ ಕೈದು ಮಾಡಲ್ಪಟ್ಟಿರುವರು ಫರ್ಗುಸನ್ ರಸ್ತೆಯಲ್ಲಿ ಮುಷ್ಕರ ಮಾಡಬಾರದೆಂದು ಪ್ರಚಾರ ಮಾಡುತ್ತಿದ್ದ ಕಾಂಗ್ರೆಸ್ ಕೆಲಸಗಾರರ ಲೋರಿಯೊಂದು ಹೋಗುವಾಗ ಮುಷ್ಕರಗಾರರು ಕಲ್ಲೆಸೆದು 4 ಮಂದಿ ಗಾಯಗೊಂಡು ಆಸ್ಪತ್ರೆಗೊಯ್ಯಲ್ಪಟ್ಟಿರುವರು.

ಬೆಳಿಗ್ಗೆ ಗೋಳಿಬಾರು ನಡೆದ ಡೆಲ್ಲಿರಸ್ತೆಯಲ್ಲಿ ಮಧ್ಯಾಹ್ನದ ಊಟದ ಅವಕಾಶದಲ್ಲಿ ಪುನಃ ಗಲಾಟೆ ನಡೆಯಿತು. ಗಿರಣಿಗಳಿಂದ ಹೊರಬರುವ ಕೆಲಸಗಾರರ ಮೇಲೆ ಮುಷ್ಕರಗಾರರು ಬಿದ್ದು ಹೊಡೆದಾಟ ನಡೆಯಿತು ಈ ಸ್ಥಳದ ಇಬ್ಬರು ಪೋಲೀಸ್ ಅಧಿಕಾರಿಗಳ ಮೇಲೆ ಕಲ್ಲೆಸೆಯಲಾಯಿತು. ಗಿರಣಿಯ ಯುರೋಪಿಯನ್ ಮೆನೇಜರರನ್ನು ಬೈದು ಅವರ ಟೊಪ್ಪಿ ಎಳಕೊಂಡು ಮೇಲಕ್ಕೆ ಹಾರಿಸಿದರು. ಮಧ್ಯಾಹ್ನದ ಮೇಲೆ ಈ ಗಿರಣಿಯು ಮುಚ್ಚಲ್ಪಟ್ಟಿತು.

ಇಂದು ಬೆಳಿಗ್ಗೆ ಸರ್ದಾರ್ ವಲ್ಲಭಾಯಿ ಪಟೇಲ್ ಮತ್ತು ಶ್ರೀ ಮುನ್ಷಿಯವರು ಗಿರಣಿ ಪ್ರದೇಶದಲ್ಲಿ ಮೋಟರ್ ಕಾರಿನಲ್ಲಿ ಹೋಗುತ್ತಿದ್ದಾಗ ಎದುರಿನಿಂದ ರೆಡ್ ಫ್ಲೇಗ್ ಯೂನಿಯನಿನ ಮೆರವಣಿಗೆ ಬರುತ್ತಿದ್ದು, ಒಬ್ಬನು ಮೋಟರ್ ಕಾರಿನ ಎದುರು ಅಡ್ಡ ಮಲಗಿ ಅದನ್ನು ತಡೆಗಟ್ಟಿದನೆಂದೂ, ಆಗ ಡ್ರೈವರನು ಮೋಟರ್ ಕಾರನ್ನು ಫಕ್ಕನೆ ಇನ್ನೊಂದು ಒದಿಗೆ ತಿರುಗಿಸಿದನೆಂದೂ, ಒಬ್ಬನು ಕಾರಿಗೆ ಹೊಡೆ... ವನೆಂದೂ ತಿಳಿ...

...ಪರೆಲಿನ ಕಾ... ಡೆದ ಸಾರ್ವಜನಿ... ಷ್ಕರಗಾರರು ಬ... ಮ್ನಾದಾಸ್ ಮೆ... ಕ್ಷತೆ ವಹಿಸಿದ್ದರ... ಜೋಗ್ಲೇಕರ್... ಯವರು ಟ್ರೇಡ್... ಖಂಡಿಸಿ ಭಾಷ... ಪುರದಲ್ಲಿಯೂ ... ವು ಜಯಶೀಲವಾ...

ಹಿಟ್ಲರರ

ಇದೇ ತಾ.

ಬೊಂಬಾಯಿ ಸಮ...

ಕಾಮಗಾರರ ಮಹಾಸಭೆ

ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ಲಿನ ಆಂದೋಲನವು ಮುಂಬಯಿಯಲ್ಲಿ ಅತಿ ತೀವ್ರಗತಿಯಿಂದ ನಡೆಯುತ್ತಿದೆ ಆಯಾಯ ಪಾರ್ಟಿಯವರು ತಮ್ಮ ಆಕಾಂಕ್ಷೆಗಳ ಪೂರಣಕ್ಕಾಗಿ ವಿಶ್ರಾಂತಿಯಿಲ್ಲದೆ ಪ್ರಯತ್ನಿಸುತ್ತಿರುವರು. ಕಳೆದ ರವಿವಾರ ಸಂಜೆ 4½ ಗಂಟೆಗೆ, ಪರೇಲ್ ಕಾಮಗಾರ್ ಮೈದಾನದಲ್ಲಿ ಮಿಲ್ಲು ಕಾಮಗಾರರ ಪ್ರಚಂಡ ಸಭೆಯೊಂದು ಜರಗಿತ್ತು 30,000 ಕಾಮಗಾರರು, ರೊಟ್ಟಿ ಇಲ್ಲದಿದ್ದರೂ ಶಕ್ತಿಯಿದೆಯೆಂಬುದನ್ನು "ಬಡಾ ಸಾಹೇಬರು"ಗಳಿಗೆ ಪ್ರತ್ಯಕ್ಷ ಮನದಟ್ಟು ಮಾಡಲಿಕ್ಕೋಸ್ಕರ ಸೂರ್ಯನ ತಂಬಿಸಿಲಡಿಯಲ್ಲಿ, ತಮ್ಮ ಮಕ್ಕಳು ಮರಿಗಳೊಂದಿಗೆ ಬಂದು ನೆರೆದಿದ್ದರು ಶ್ರೀ ಜಮ್ನಾದಾಸ ಮೆಹತಾರವರು ಅಧ್ಯಕ್ಷ ಪದವಿಯನ್ನು ವಹಿಸಿದ್ದರು ಶ್ರೀಗಳಾದ ಡಾಂಗೆ, ನಿಂಬಕರ್, ಪರೋಳ್‌ಕರ್, ಡಾ। ಅಂಬೇಡ್‌ಕರ್, ವಿನದೇವ ಮೊದಲಾದವರೆಲ್ಲಾ, ಆಂದಿನ ಸಭೆಯ ಮಹತ್ವವನ್ನು ತಿಳಿಸಿ, ಕಾಮಗಾರರ ಶಕ್ತಿ ಸ್ಥಾಪನೆಯ ಜನ್ಮದಿನೋತ್ಸವವಿದು ಈ ದಿವಸವನ್ನು ಸರ್ವ ಘಾತದಲ್ಲೂ ಆಚರಿಸುತ್ತಿರುವರು, ಲೋಕದ ಕಾಮಗಾರರಿಗೆಲ್ಲಾ ವಿಜಯವಾಗಲಿ ಎಂದು ಉತ್ಸಾಹದ ಮಾತುಗಳನ್ನಾಡಿ, 7ನೇ ತಾರೀಗಿಗೆ ಒಂದು ದಿವಸದ ಮಹಾ ಸಂಪಿನ ಕುರಿತ ಜನರನ್ನು ಎಚ್ಚರಿಸಿ, ಆ ಸಂಪು ಸಂಪೂರ್ಣ ವಿಜಯಿಯಾಗುವಂತೆ ಪ್ರಯತ್ನಿಸಬೇಕೆಂದು ...

ಇದೇ ಸಮಯದಲ್ಲಿ, ಕಾಮಗಾರ ಮೈದಾನದ ತುಸು ದೂರದಲ್ಲಿ ಬಿ ಪಿ. ಸಿ ಸಿ ಯ ಪರವಾಗಿ ಜರಗಿಸಲ್ಪಟ್ಟ ಸಭೆಯೊಂದು ಶ್ರೀ ಶಂಕರರಾವ್‌ದೇವ ಇವರ ಅಧ್ಯಕ್ಷತೆಯಲ್ಲಿ ಜರಗಿತ್ತು ಇವರೆಲ್ಲಾ ಈ ಬಿಲ್ಲು ಕಾಮಗಾರರ ಪರವಾಗಿದೆಯೆಂದೂ, ಇದರಿಂದ ಕಾಮಗಾರರಿಗೇನೂ ತೊಂದರೆಯಿಲ್ಲವೆಂದೂ, ಆದ್ದರಿಂದ 7ನೇ ತಾರೀಕಿನ ಮಹಾ ಸಂಪನ್ನು ಯಾರೂ ಸಹಕರಿಸಬಾರದೆಂದೂ ಹೇಳಿದರು. ಆದರೆ ಈ ಸಭೆಯಲ್ಲಿಯ ಜನಸಂಖ್ಯೆಯನ್ನು ಹೇಳಲು ನಾಚಿಕೆಯಾಗುತ್ತದೆ

ಕಾಮಗಾರರ ಈ ನಿರ್ಧಾರವನ್ನು ನೋಡಿ, ಮಿಲ್ಲುಗಳ ಯಜಮಾನರುಗಳು ಕೋಂಗ್ರೆಸ್ಸಿನವರ ಸಹಾಯದಿಂದ, ಮಹಾಸಂಪಿನ ದಿವಸ ಅಂದರೆ ಸೋಮವಾರ 7ನೇ ತಾರೀಕಿನ ದಿವಸ ತಮ್ಮ ಮಿಲ್ಲುಗಳನೆಲ್ಲಾ ರಜೆ ಕೊಡುವ ಯೋಜನೆಯಲ್ಲಿರುವರು, ಹೀಗೆ ಮಾಡಿದ್ದಲ್ಲಿ ಸಂಪು ಸಂಪೂರ್ಣವಾಗಿ ತಿಂತುಹೋಗುವದೆಂದು ಇವರ ಭಾವನೆ ಆದರೆ ಇವರ ಧಮನಿಯಲ್ಲಿಯ ಆ ಬಿಸಿ ರಕ್ತವು ಎಲ್ಲಿಯ ತನಕ ಹಾರುತ್ತದೆಂಬುದನ್ನು ನೋಡಬೇಕಾಗಿದೆ. ಕಾಮಗಾರರ ರಕ್ತವು ಇವರಿಗಿಂತಲೂ ಒಂದು ಡಿಗ್ರಿ ಬಿಸಿ ಜಾಸ್ತಿಯಿದೆಂಬುದನ್ನು ಇವರು ಅರಿತುಕೊಳ್ಳಲಿ

ಸಭ್ಯತೆ ಎಲ್ಲಿ ಉಳಿಯಿತು?

ಕಳೆದ ಸೋಮವಾರ ಬಿ ಪಿ ಸಿ ಸಿ ಯ "ಅರ್ಜಂಟ" ಸಭೆಯೊಂದು ಕೂಡಿತು ಯಾಕೆಂದರೆ. ಮುನಿಸಿಪಲ್ ಚುನಾವಣೆಗೆ ಸದಸ್ಯರನ್ನು ಚುನಾಯಿಸುವ ಕಮಿಟಿಯು ಕ್ರಿಯಿಸಲಿಲ್ಲವೆಂದು ಹೇಸನೆಯು ಎದ್ದುದಾದಲ್ಲಿ ಈ ಕಮಿಟಿಯು ಬಿ. ಪಿ. ಸಿ. ಸಿ. ಗೆ ಅರ್ಪಿಸಬೇಕಿತ್ತು ಸದಸ್ಯರ ನಾಮ ಪಟ್ಟಿ... ಗಳನ್ನು ಹೇಳಿದ ನಂತರ ಶ್ರೀ. ನರಿಮನ್‌ರವರ ನಿರಾಕರಿಸಿರುವುದು ... ಲು ಇವರಿಗೆ ಅಧಿಕಾರ... ಪಸ್ಸಾಗಿರುವ... ದಲ್ಲಿ ಸೂಚಿಸಿದಂತೆ, ... ರ್ಟನ್ನು ಇಂದಿನ ಸಭೆ... ಬೆನ್ನಾಗಿ ಏಕ "ಸರ್ವ... ಗ್ರೆಸ್ಸಿನ ಕ್ರಮಗಳಂತೆ ... ನಾಯಿಸಿದ ಈ ನಾಮ... ದಾಕಾಲ ಖಾದಿ ಧರಿಸ... ಮತ್ತೊಂದೇನೆಂದರೆ, ... ಜೆಗೆ ನಿಲ್ಲುವವರು, ಬೇ... ಆಗಬಾರದೆಂಬ ಕ್ರಮ... ಸ್ಯರಾಗಿರುವವರೂ ಕೆಲ... ಮಗಳನ್ನಿಲ್ಲ ತಿರುಗೊ... ವ ತ್ತು ನರಿಮನರ ನಾ... "ಎಂದರು. ಇದಕ್ಕೆ ... ಪೊಯಿಂಟ್ ಆಫ್ ಆ... ಪತ್ರಗಳನ್ನು ನೋಡುವ... ಕ್ಯನ್ ಬೋರ್ಡಿಗೆ ... ಅದಕ್ಕೆ, ಕೈಹಾಕಬಾರದ... ಸಿ ಎಂದು ಬರೆದ... ರಿಪೋರ್ಟ ಬರೇ ಕಾ... ಬರಬೇಕು ಬೇರೆ ಯ... ಸವ ಆಗತ್ಯವಿಲ್ಲ "ಎಂ... ಘೋಷಣೆಯಾದೊಡನೆ ... ಭ್ಯಾಯವರು ಅದು ... ವರ ಬಾಯಿ ಮುಚ್ಚಿ...

ಕರ್ನಾಟಕ ...

ಮು...

ಇಲ್ಲಿಯ ಕೆಲವು ... ಲು ಸೇರಿ, "ಕರ್ನಾ... ನ್ನು ಸ್ಥಾಪಿಸಿದ್ದಾರೆ

ಪ್ರೋಟೆಸ್ಟ ...

ಮು...

ಕಳೆದ ತಾ. 30 ... ರಿದ ವೆಲ್ಲಿಂಗ್ಡನ ... ವೇಶನದಲ್ಲಿ, ಮುಂಬ... ಭೂತಪೂರ್ವ ಕಾಮ... ಕಾರ್ಯಕರ್ತರೂ ಆ... ಸ್ ರತ್ನಸಿಂಹ ಮಹ... ನಿಮಿತ್ತ ಒಂದು ... ಶಂಶಿತ ಯಜ್ಞದಸ್ಸ... ಜರಗಿತು.

...ಯಿ ಮತ್ತು ಮುನ್ಶಿಯವರ ಮೋಟರ್‌ಕಾರಿಗೆ ಕಲ್ಲೆಸೆತ

ಸು ... ಮೋಟರ್ ... ಡೆದು ... ಹಾಕಿ ... ಶಾಮ ... ನಲ್ಲಿ ನ ಜನಿಕ ...000 ಮು ... ಶ್ರೀ ಜ ... ಸಭೆಯ ಅಧ್ಯ ... ಸರ್ದಾರ ... ಡಾಂಗೆ ... ಬೀಲನ್ನು ... ಕೋಲಾ ... ಸವ ಯತ್ನ



ಶ್ರೀ. ಸರ್ದಾರ್ ವಲ್ಲಭಾಯಿಯವರು.

ಬೊಂಬಾಯಿಯ ತಾ. 7ರ ಮುಷ್ಕರವು ನಿಷ್ಫಲವಾಗುವಂತೆ ಬಹಳವಾಗಿ ಪ್ರಯತ್ನಿಸಿರುವರು.

ನಾಜಿಪಕ್ಷದ ಕಾಂಗ್ರೆಸಿನ ಅಂತ್ಯದಲ್ಲಿ ನ್ಯ ಮಾಲ್ ಎಂಬಲ್ಲಿ 50,000 ಜನಸ್ತೋಮಕ್ಕೆ ಭಾಷಣಕೊಡುವಾಗ ಹೀಗೆಂದಿರುವರು. ಇಲ್ಲಿಯ ನಾಜಿಪಕ್ಷದ ಮುಖಂಡರು, ಹರ್. ಹಿಟ್ಲರರನ್ನು ಸ್ವಾಗತೀಕರಿಸುತ್ತಾ ಅವರು ಮೂರನೇ ಪವಿತ್ರ ಜರ್ಮನ್ ಸಾಮ್ರಾಜ್ಯದ ಸಂಸ್ಥಾಪಕರೆಂದು ಸಂಬೋಧಿಸಿದರು ಹಿಟ್ಲರು, ನಾಜಿಪಕ್ಷದ ಇತಿಹಾಸವನ್ನು ವಿವರಿಸಿ "ಜರ್ಮನಿಯನ್ನು ಶಾಂತಿಯಿಂದಿರಗೊಡಿಸಬೇಕೆಂದೇ ಆದರ ಇಚ್ಛೆ. ತಮಗೆ ಸಹಾಯಮಾಡಿಕೊಳ್ಳುವವರಿಗೆ ಮಾತ್ರ ದೇವರೂ ಸಹಾಯ ಮಾಡುವನೆಂದು ನಾಜಿಗಳ ನಂಬಿಕೆ ಐಕ್ಯದಿಂದ ಜನರನ್ನೆಳೆದು ಒಟ್ಟುಗೂಡಿಸಬೇಕಾಗಿದೆ. ಜರ್ಮನಿಯುಪರವಾಗಿ ಯಾವ ತರದ ಸಂಧಿಪ್ರಸ್ತಾಪ ನಡಿಸುವುದಕ್ಕೂ ನಾನು ಸಿದ್ಧನಿದ್ದೇನೆ, ಆದರೆ ಜರ್ಮನಿಯ ಹಕ್ಕುಗಳು ತುಳಿಯಲ್ಪಡಲು ಎಷ್ಟುಕ್ಕೂ ಬಿಡಲಾರೆನು ಅದುದರಿಂದ ಜರ್ಮನರು ಯಾವಾಗಲೂ ಎಚ್ಚರದಿಂದಿರಬೇಕು ಶಸ್ತ್ರತ್ಯಾಗ ಮತ್ತು ಶಾಂತಿಯ ಕುರಿತು ದೊಡ್ಡ ದೊಡ್ಡ ಮಾತುಗಳನ್ನೇನೋ ಮಾತಾಡಬಹುದು ಆದರೆ ಆತ್ಮಿಕ ಶಸ್ತ್ರತ್ಯಾಗವಿಲ್ಲದ ಶಸ್ತ್ರತ್ಯಾಗ ಸಂಬಂಧವಾದ ಮಾತುಕತೆಯಿಂದ ಹೆಚ್ಚಿನ ಪ್ರಯೋಜನವೇನೂ ಇಲ್ಲ ಶಾಂತಿಪ್ರಿಯನಾದ, ನಮ್ಮ ಶಾಂತಿಪ್ರಿಯತೆಯು ಇತರರಿಗೆ ವೇದ್ಯವಾಗುವಂತಹ ಸೇನೆಯನ್ನು ಸಂಘಟಿಸಿರುವೆನು, ಲೋಕಶಾಹೀ ರಾಷ್ಟ್ರಗಳು ತಮಗಾಗಿ ಕಳುಹುದಕ್ಕಿಂತ ಹೆಚ್ಚಿನದೇನನ್ನೂ ನಾವು ಆಶಿಸುವುದಿಲ್ಲ.

ಇಂಗ್ಲೆಂಡಿನಲ್ಲಿ ಜರ್ಮನಿಯ ಕುರಿತು ಕೆಲವರು ನಡೆಸುತ್ತಿರುವ ಚಳವಳವು ನಮ್ಮ ಮನಸ್ಸನ್ನು ನೋಯಿಸಿರುವುದು ಈ ಜನರು ಇನ್ನು ಒಂದೆರಡು ವರ್ಷಗಳಲ್ಲಿ ಅಧಿಕಾರಕ್ಕೆ ಬರಬಹುದು. ಲೋಕಶಾಹೀ ರಾಷ್ಟ್ರಗಳು ನಮ್ಮ ಜೀವನದ ತತ್ವವನ್ನರಿತುಕೊಳ್ಳಬೇಕು. ಅವರು ಸಮಾನ ಹಕ್ಕು ಬಾಧ್ಯತೆಗಳು ಕುರಿತು ಮಾತಾಡುತ್ತಿದ್ದಾರೆ. ಸಣ್ಣ ರಾಷ್ಟ್ರಗಳ ಹಕ್ಕುಗಳ ಕುರಿತು ಬಹಳ ಪ್ರೇಮತೋರಿಸುತ್ತಾರೆ ಅಂತಹ ಹಕ್ಕುಗಳನ್ನೇ ದೊಡ್ಡ ರಾಷ್ಟ್ರಗಳೇಕೆ ಕೇಳಬಾರದು. ಜರ್ಮನ್ ಆಳ್ವಿಕೆಯನ್ನು ಜರ್ಮನಿಯೊಳಗಣ ಶಕ್ತಿಗಳಿಂದಲೇ ನಾಶಪಡಿಸುವ ಕುರಿತು ಮಿ. ಚರ್ಚಿಲ್ಲರು ಪ್ರಸ್ತಾಪಿಸುತ್ತಾರೆ. ಅವರು ಜರ್ಮನ್ ದೇಶದ್ರೋಹಿಗಳ ಮಾತು ಕೇಳುವುದನ್ನು ಕಡಿಮೆಮಾಡಿ ಜರ್ಮನ್ ಸರಕಾರದೊಂದಿಗೆ ಹೆಚ್ಚಿನ ವ್ಯವಹಾರ ನಡೆಸಿದರೆ ಅಂತಹ ಭಾಷಣದ ಮೂರ್ಖತನವನ್ನು ಮನಗಾಣುದಿರರು. 1918ನೇ ಇಸ್ವಿಯ ಪರಿಸ್ಥಿತಿಯನ್ನು ಪುನರಾವರ್ತಿಸುವ ಆಶೆ ಕೆಲವರಿಗಿದೆ. ಅದು ಒಮ್ಮೆಯೇ ಸಂಘಟಿಸಿದುದು ಮಾತ್ರ ಇನ್ನೊಮ್ಮೆ ಎಂದಿಗೂ ಸಂಭವಿಸಲಾರದೆಂದು ನಾನು ಚರ್ಚಿಲ್ ಮತ್ತು ಅವರ ಮಿತ್ರರಿಗೆ ಆಶ್ವಾಸನೆಯೀಯುತ್ತೇನೆ

ಸೋವಿಯೆಟ್ ಸರಕಾರದ ಎಚ್ಚರಿಕೆ

ಸೋವಿಯೆಟ್ ರಷ್ಯವು ಲೋಕದಲ್ಲೇ ನವೀನವಾದ ಸಮಾಜವಾದೀ ರಾಜ್ಯಭಾರವನ್ನು ಸ್ಥಾಪಿಸಿ ಈಗ 20 ವರ್ಷಗಳಾದುವು. ಈ 20 ವರ್ಷಗಳಲ್ಲಿ ರಷ್ಯವು ಲೋಕದ ಅತ್ಯಂತ ಪ್ರಬಲ ರಾಷ್ಟ್ರಗಳಲ್ಲೊಂದಾಗಿ ಅಜೇಯವಾಗಿ ತಲೆಯೆತ್ತಿ ನಿಂತಿರುವುದು. ಅದನ್ನು ಮುರಿಯಲು ಹೊರಗಣ ಭಂಡವಾಳಶಾಹೀ ಮತ್ತು ಫಸಿಸ್ಟ್ ರಾಷ್ಟ್ರಗಳೂ, ಒಳಗಣ ಪಿತೂರಿಗಾರರೂ ನಡಿಸಿರುವ ಭಗೀರಥ ಯತ್ನವು ನಿಷ್ಫಲವಾಗಿರುವುದು. ಇದೇ ತಾ. 7ರಲ್ಲು ರಷ್ಯದ ಕ್ರಾಂತಿಯ 20ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳಾದ ಮಿ ಮೊಲೊಟೊರವರು ಮಹತ್ವದ ಭಾಷಣವೊಂದನ್ನಿತ್ತು ಸೋವಿಯೆಟ್ ರಾಜ್ಯದ ಮೇಲೆ ಕಣ್ಣಿಟ್ಟಿರುವ ಫಸಿಸ್ಟ್ ರಾಷ್ಟ್ರಗಳನ್ನು ಎಚ್ಚರಿಸಿರುವರು. "ನಮ್ಮ ವಿಮಾನಗಳ ಬೋಂಬೆಸೆಯುವ ಶಕ್ತಿಯ ಕುರಿತು ಸಂದೇಹಗೊಂಡು ನಮ್ಮ ಪೂರ್ವದ ಅಥವಾ ಪಶ್ಚಿಮ ವೈರಿಗಳಾರಾದರೂ ನಮ್ಮನ್ನೊಮ್ಮೆ ಕೆಣಕಿನೋಡಲಿ. ಯಾವ ಆಕ್ರಮಣಕಾರಿಯಾದರೂ ಸೋವಿಯೆಟ್ ರಾಜ್ಯದ ಮೇಲೆ ಬಿದ್ದರೆ, ಅದಕ್ಕೆ ಎರಡು ಮತ್ತು ಮೂರು ಪಾಲಷ್ಟರ ಪ್ರತೀಕಾರಮಾಡಲು ಸೋವಿಯೆಟ್ ರಷ್ಯವು ಸಿದ್ಧವಿದೆ" ಜೆಕೋಸ್ಲೊವೇಕಿಯಕ್ಕೆ ವಿಶ್ವಾಸಘಾತಮಾಡಿ ಕೈಬಿಟ್ಟ ಫ್ರಾನ್ಸ್ ಮತ್ತು ಇಂಗ್ಲೆಂಡುಗಳವರ್ತನೆಯನ್ನು ಮೊಲೊಟೊರವರು ಕಠಿಣವಾಗಿ ಟೀಕಿಸಿ, ಅಂತರರಾಷ್ಟ್ರೀಯ ಜವಾಬ್ದಾರಿಯನ್ನು ಪರಿಪಾಲಿಸುವ ರಾಷ್ಟ್ರವು ಸೋವಿಯೆಟ್ ರಷ್ಯವೊಂದೇ. ಮ್ಯೂನಿಚ್ ಒಡಂಬಡಿಕೆಯಿಂದುಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿಯಿಂದ ರಷ್ಯವು ಎಂದಿಗಿಂತಲೂ ಅತಿ ಹೆಚ್ಚಿನ ಯುದ್ಧಸಿದ್ಧತೆ ಮಾಡಬೇಕಾಗಿದೆಯೆಂದು ಹೇಳಿರುವರು ಸ್ಟಾಲಿನ್ ವರೊಶಿಲವ್ ಮತ್ತು ಇತರ ಮುಖಂಡರು ಈ ಭಾಷಣಕ್ಕೆ ಬಹಳವಾಗಿ ಮೆಚ್ಚಿ ಕರತಾಡನಮಾಡಿದರು

ಪೇಶಾವರದಲ್ಲಿ ಗಾಂಧಿಜೀಯವರು

ಗಾಂಧಿಜೀಯವರು ಇದೇ ತಾ. 6ರಲ್ಲಿ ಪೇಶಾವರದಿಂದ ಹಜಾರಕ್ಕೆ ಹೋಗುವ ಮೊದಲು ಡಾಕ್ಟರ್ ಖಾನರೊಡನೆ ಮಾತನಾಡಿದರು. ಆಸಂದರ್ಭದಲ್ಲಿ ಶಿಕ್ಷಣ ಮಂತ್ರಿಗಳಾದ ಖಾಜಿ ಅಟೊಲ್ಲಾರವರೂ, ಅರ್ಥಸಚಿವರಾದ ಶ್ರೀ ಭಂಜುರಾಮ ಗಾಂಧಿಯವರೂ, ಖಾನ್ ಅಬ್ದುಲ್ಲಾ ಗಫರ್ ಖಾನರೂ ಹಾಜರಿದ್ದರು. ಮಂತ್ರಿಗಳು ಜರೂರಾಗಿ ಕೈಕೊಳ್ಳಬೇಕಾದ ಕೆಲವು ವಿಷಯಗಳನ್ನು ಗಾಂಧಿಜೀಯವರವರಿಗೆ ತಿಳಿಸಿದರು. ತಾ.7ರಲ್ಲು ಮಹಾತ್ಮರು ಹರಿಪುರಕ್ಕೆ ಹೋದರು. ಅವರ ಅಪೇಕ್ಷೆಯಂತೆ ಮೆರವಣಿಗೆಯನ್ನು ನಿಲ್ಲಿಸಲಾಯಿತು ಇದರಿಂದ ಗಾಂಧಿಜೀಯವರನ್ನು ನೋಡಬೇಕೆಂದು ಮನೆಗಳಕಡೆಕಟ್ಟು ರಸ್ತೆಬದಿಗಳಲ್ಲೆಲ್ಲಾ ನೆರೆದಿದ್ದ ಸಾವಿರಾರುಮಂದಿ ನಿರಾಶೆಗೊಂಡರು. ಆಮೇಲೆ ಮಹಾತ್ಮರು ಉಳಕೊಳ್ಳುವ ನಿವಾಸವನ್ನು ಜನರು ಆವರಿಸಿ ಗಲಾಟೆಯಾಯಿತು. ಈ ಜನರನ್ನು ಚೆದರಿಸಲು ಮಾಡಿದ ಪ್ರಯತ್ನವೆಲ್ಲಾ ನಿರರ್ಥಕವಾದುದರಿಂದ ಗಾಂಧೀಜಿಯವರು ಗವರ್ನಮೆಂಟ್ ಹೈಸ್ಕೂಲಿನ ಆಟಸ್ಥಳದಲ್ಲಿ ಪ್ರಚಂಡ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣವಿತ್ತರು. ಈ ಸಂದರ್ಭದಲ್ಲಿ ಸಭೆ ನಡೆಸುವ ಮೊದಲು ತನ್ನ ಪರವಾನಿಗೆಯನ್ನು ಪಡೆಯಲಿಲ್ಲೆಂದು ಗವರ್ನಮೆಂಟ್ ಹೈಸ್ಕೂಲಿನ ಹೆಡ್‌ಮಾಸ್ತರರು ಗಾಂಧಿಜೀಯವರಿಗೆ ಕಾಗದಮೂಲಕ ತಿಳಿಸಿದರು ಇದು ತಪ್ಪೆಂದು ಗಾಂಧಿಜೀಯವರು ಸೂಚಿಸಿದರು. ಸೋಸಿಯಲಿಸ್ಟರರು ಸಭೆಯಲ್ಲಿ "ಕಾಂಗ್ರೆಸ್ ಮಂತ್ರಿ ಮುರ್ದಾಬಾದ್" ಎಂದು ಕೂಗೆಬ್ಬಿಸಿ ಸಭೆಯಿಂದೆದ್ದು ಹೋದರು

ರಷ್ಯದ ಪ್ರಚಂಡ ಯುದ್ಧಸಿದ್ಧತೆ



ಮಿ. ಲ್ಲೊಯ್ಡ್ ಜೋರ್ಜರು.

ಇಂಗ್ಲೆಂಡಿನ ಪ್ರತಿಷ್ಠೆಯು ಬಹಳ ಕೆಳಗಣ ಮಟ್ಟಕ್ಕಿಳಿದಿದೆ ಅದು ಫೆಸಿಸ್ಟ್ ಡಿಕ್ಟೇಟರರ ತಾಳಕ್ಕೆ ತಕ್ಕ ಹೆಜ್ಜೆ ಹಾಕುತ್ತಿದೆ, ಪ್ರಧಾನಮಂತ್ರಿ ಮಿ. ಚೇಂಬರ್ಲೇನರು ತಾನೊಬ್ಬ ಡಿಕ್ಟೇಟರನಂತೆಯೇ ನಡೆಯುತ್ತಿದ್ದಾರೆಂದು ಬ್ರಿಟಿಷ್ ಸರಕಾರದ ಧೋರಣೆಯನ್ನು ಕಠಿಣವಾಗಿ ಟೀಕಿಸಿರುವರು.

ಇಂಗ್ಲೆಂಡಿಗೆ ರಾಷ್ಟ್ರಪತಿ ಭೋಸರ ಎಚ್ಚರಿಕೆ

ಫೆಡರೇಶನನ್ನು ವಿರೋಧಿಸಲು ಕಾಂಗ್ರೆಸು ಪುನಃ ಸತ್ಯಾಗ್ರಹ ಚಳವಳ ಆರಂಭಿಸುವಹಾದರೆ ಅದರ ಸರ್ವ ಜವಾಬ್ದಾರಿಯೂ ಬ್ರಿಟಿಷ್ ಸರಕಾರದ್ದಾಗಿದೆಯೆಂದು ರಾಷ್ಟ್ರಪತಿ ಭೋಸರು ಬಂಗಾಳದ ರಾಜಶಾಹಿಯ ಸಾರ್ವಜನಿಕ ಭಾಷಣದಲ್ಲಿ ಹೇಳಿದರು. ಕಾಂಗ್ರೆಸು ಜಾತೀಯ ಸಂಸ್ಥೆಯೆಂಬ ಆರೋಪವನ್ನು ವಿರೋಧಿಸಿ, ರಾಷ್ಟ್ರೀಯ ಮನೋಪ್ರವೃತ್ತಿಯುಳ್ಳ 10 ಮಂದಿ ಮುಸಲ್ಮಾನ ಮಂತ್ರಿಗಳನ್ನಾದರೂ ತಾನು ಸ್ವಾಗತೀಕರಿಸುವೆನೆಂದೂ, ಜಾತೀಯವಾದಿಗಳಾದ 10 ಮಂದಿ ಹಿಂದೂ ಮಂತ್ರಿಗಳನ್ನೂ ವಿರೋಧಿಸುವೆನೆಂದೂ ಸ್ಪಷ್ಟಪಡಿಸಿದರು. ಮತ್ತು ಬಂಗಾಳದ ಮಂತ್ರಿಮಂಡಲವು ಬೇಗನೆ ಪತನವಾಗಲಿರುವುದೆಂದೂ, ಆಗ ಕಾಂಗ್ರೆಸ್ ಪಕ್ಷೀಯರು ಮಂತ್ರಿಮಂಡಲವನ್ನು ರಚಿಸಿ ಮುಸಲ್ಮಾನರೊಬ್ಬರೇ ಮುಖ್ಯ ಮಂತ್ರಿಗಳಾಗಲಿರುವರೆಂದೂ ವ್ಯಕ್ತಪಡಿಸಿದರು.

ಪುಟ ... ರಿಂದ

ಅನಂತರ ಅಧ್ಯಕ್ಷರ ಪ್ರಾರ್ಥನೆಯ ಮೇರೆಗೆ ಶ್ರೀ ಏಕನಾಥ ಸೀತಾರಾಮ ಶಿಸ್ತಾಗಳು ಅವರಿಗೆ ... ಮಾನ ಮಾಡಿ ದೇಶೀಯ ಸಂಸ್ಥಾನದವರೂ ಬ್ರಿಟಿಷ ಹಿಂದುಸ್ಥಾನದವರೂ ಒಂದೇ ಎಂದೂ ಅವರಲ್ಲಿ ಭೇದಕಲ್ಪಿಸುವುದು ಸರಿಯಲ್ಲವೆಂದೂ ಸಕಲರೂ ದೇಶದ ದಾರಿದ್ರ್ಯದ ದುಃಖವನ್ನು ನೀಗಿಸಲಿಕ್ಕೆ ಸಬೇಕೆಂದೂ ಹೇಳಿದರು

ಶ್ರೀ. ಬಿ. ಭಾಸ್ಕರ ರೈಗಳು ಧನ್ಯವಾದಗಳನ್ನರ್ಪಿಸಿದ ಅನಂತರ ಸಭಾಂತ್ಯವಾಯಿತು.

ರಾತ್ರಿ 8-30ಕ್ಕೆ ಅತಿಥಿಗಳಿಗೆ ಔತಣಸತ್ಕಾರನಡೆಯಿತು ಈ ತನ್ಮಧ್ಯೆ ವಿವಿಧ ವಿನೋದಾವಳಿಗಳು ಸಂಗೀತ, ಭೋಜನದ ಮಧ್ಯದಲ್ಲಿ ಭಾಷಣ ಇತ್ಯಾದಿಗಳು ಇದ್ದು ... ಕೋಮುಲವಿಲಾಸದವರು ವಿನೋದ ವಿಹಾರವನ್ನು ಮಾಡಿದರು.

ವಿಜಾಪುರ ಜಿಲ್ಲೆ

ದಿನಚರ್ಯೆ—

ಒಣಗಾಳಿ ಬೀಸುತ್ತಲಿದೆ, ಹಲರಿಹಿತ ಮೋಡಗಳು ಚಲಿಸುತ್ತಲಿವೆ ಚಳಿಗಳು ಚೆನ್ನಾಗಿಲ್ಲ ರೋಗಾದಿಗಳೇನೂ ಇಲ್ಲ

ನವಜೀವನ ಸಂಘದ ಪ್ರಚಾರಕಾರ್ಯ

'ನವಜೀವನ ಸಂಘದ ಪರವಾಗಿ ವಿಜಾಪುರಜಿಲ್ಲೆಯ ಉತ್ತರಭಾಗಕ್ಕೆ ನವಜೀವನ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ವ್ಹಿ ಇಪಗೇರಿಯವರ ಬಿ ಎ ಯವರೂ ಹೋಗಿದ್ದಾರೆ ಸಂಘದ ಕಾರ್ಯಕರ್ತರುಗಳು ಸಿಂದಗಿಕ್ಕೆ ಹೋದಾಗ ಅಲ್ಲಿಯ ತರುಣ ಸಂಘದ ಸದಸ್ಯರು ನವಜೀವನ ಸಂಘದ ಪ್ರಧಾನ ಕಾರ್ಯದರ್ಶಿಗಳು ಬರೆದ 'ಶ್ರೀಮತಿ ಡಿ. ಎಸ್. ಕುಲಕರ್ಣಿ' ಎಂಬ ನಾಟಕವನ್ನು ಅಭಿನಯಿಸಿ ತೋರಿಸಿದರು. ಕಾರ್ಯದರ್ಶಿಗಳು ಸಾಯಂಕಾಲದಲ್ಲಿ ಶ್ರೀ ಬಿ ಜ ನಾಡಗೌಡರು ತರುಣ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉಪನ್ಯಾಸ ವಿತ್ತರು. ವಿಷಯವು 'ಹಳ್ಳಿಗರ ನಿಜವಾದ ಉದ್ಧಾರ' ಎನುವ ವಿಷಯ ಕೊಡಿದ್ದರು ಅಂಜುಟಗಿಯಲ್ಲಿ ಶ್ರೀ ಆರ್. ವ್ಹಿ ಇಪಗೇರಿಯವರ ಬಿ ಎ ಯವರು ಉಪನ್ಯಾಸವಿತ್ತರು ... ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ ಸಂಚರಿಸಲಿದ್ದಾರೆ

ಭಯಂಕರ ಕೊಲೆ— ಇಂಡೀತಾಲೂಕದಲ್ಲಿ ಸಾಲೋಟಗಿಯಲ್ಲಿ ಮೂರು ಕೊಲೆಗಳೂ, ಅಂಜುಟಗಿಯ ಹತ್ತಿರ ಒಂದು ಕೊಲೆಯೂ ಜರಗಿದೆ ಆಗಿದೆ, ರೀತಿಪ್ರಕಾರ ತನಿಖೆ ನಡೆದಿದೆ.

ಕಮ್ಮಿ ಕ್ರಯದ ಖಾತ್ರಿ ವಾಚುಗಳು



ಈಗತಾನೆ ಬಂದ ನವೀನ ಹೊಸ ಸ್ಟಾಕಿನ ನವೀನ ವಾಚುಗಳು ಅಗ್ಗವು. ಇದರ ಎಲ್ಲಾ ವಾಚುಗಳಿಗಿಂತ ಖಾತ್ರಿಯಾಗಿನ ... ಬಾಳಿಕೆಬರುವ ಮತ್ತು ಸರಿ ಸಮಯ ಸೂಚಿಸುವ ಲಿವರ್ ವಾಚುಗಳು ... ವರ್ಷದ ಗ್ಯಾರಂಟಿ ... ಬೆಲೆ ರೂ 2 0 0 ... ರೂ. 3 4 0 ... ಗಳವರೆಗೆ 10 ... ಪ್ರತಿ 1ಕ್ಕೆ 4 ... ಮಾತ್ರ

ಟಿ. ಜ ಎಂಡ್ ಕೋ,

ಪೋಸ್ಟ್ ಬಾಕ್ಸ್ ನಂ. 6757 ಕಲ್ಕತ್ತ,

T. Jha & Co.,

Post Box No. 6757, Calcutta

ಉಡುಪಿ

ಶ್ರೀಕೃಷ್ಣ ಮಠದಲ್ಲಿಯ ಲಕ್ಷದೀಪೋತ್ಸವವು ಕಳೆದ ಶನಿವಾರ ಮೊದಲ್ಗೊಂಡು ಸೋಮವಾರ ಪರ್ಯಂತ ಜಯಶೀಲವಾಗಿ ನಡೆಯಿತು. ಎರಡನೆ ಉತ್ಸವದ ದಿನ ಭಾರಿ ಮಳೆ ಸುರಿದುದರಿಂದ ಜನಸ್ತೋಮವು ಕ್ಷೀಣಾಂಶದಲ್ಲಿದ್ದುದು ಮಾತ್ರವಲ್ಲದೆ ಎಣ್ಣೆ ಬತ್ತಿ ಬದಲಾಗಿ ಕರ್ಪೂರ ಉಪಯೋಗಿಸಬೇಕಾಯಿತು.

ಮೈಸೂರು ರಾಜಮನೆತನದಿಂದ ಪ್ರತಿ ಎರಡು ವರುಷಗಳಿಗೊಮ್ಮೆ ಉಡುಪಿ ಶ್ರೀಕೃಷ್ಣನಿಗೂ ಪರ್ಯಾಯ ಪಟ್ಟಾಂಕಿತರಾದ ಸ್ವಾಮಿಯವರಿಗೂ ಬರತಕ್ಕ ಪಟ್ಟೆಪೀತಾಂಬರ, ಜರಿಶಾಲು ಶೀರೆ ಕುಪ್ಪಸ ಮೊದಲಾದುವು ಕಳೆದವಾರ ಸನ್ನಿಧಾನಕ್ಕೆ ಒಪ್ಪಿಸಲಾಗಿಯದೆ.

ಮುನಿಸಿಪಲ್ ಚೆಯರ್‌ಮೇನರ ಮತ್ತು ವೈಸ್‌ಚೆಯರ್‌ಮೇನರ ಚುನಾವಣೆಯು ಇದೇ ತಾ. 12ರಲ್ಲು ಪೂರ್ವಾಹ್ನ ಮತ್ತು ಅಪರಾಹ್ನ ಜರಗಲಿದೆ. ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರು ಚೆಯರ್‌ಮೇನರಾಗಿಯೂ, ಶ್ರೀ. ಉಪೇಂದ್ರ ಶ್ರೀನಿವಾಸನಾಯ್ಕರು ವೈಸ್‌ಚೆಯರ್‌ಮೇನರಾಗಿಯೂ ಬಹುಶಃ ಆರಿಸಲ್ಪಡುವರೆಂದು ವಿಶ್ವಾಸನೀಯ ವಾರ್ತೆ.

ಕಲ್ಯಾಣಪುರ—ದಿನೇ ದಿನೇ ಅಭಿವೃದ್ಧಿ ಹೊಂದಿ, ವ್ಯಾಪಾರ ವಹಿವಾಟುಗಳು ಹೆಚ್ಚು ಪುಷ್ಟಿಪಟ್ಟವಾಗಿ ವಾರ್ಪಟ್ಟು ಜನರಿಗೆ ಸಕಲ ಸೌಕರ್ಯಗಳೂ ಊರಲ್ಲೇ ದೊರಕುತ್ತಿರುವುದು ಸಂತೋಷಕರ. ಇಲ್ಲಿ ಒಂದು ಹೈಸ್ಕೂಲು, ಒಂದು ಸಕ್ಕರೆ ಕಾರ್ಖಾನೆ, 2ಬ್ಯಾಂಕುಗಳು 3ಸಹಕಾರಿ ಸಂಘಗಳು 3 ಶಾಲೆಗಳು ಇವೆ. ಹೀಗೆ ಜಿಲ್ಲೆಯ ವ್ಯಾಪಾರ ವಾಣಿಜ್ಯ ವಿದ್ಯಾಮಂದಿರಗಳ ಕೇಂದ್ರಗಳಲ್ಲೊಂದಾದ ಇಲ್ಲಿ ಪತ್ರವ್ಯವಹಾರ, ಹಣದ ಚಲಾವಣೆ ದಿನೇ ದಿನೇ ವೃದ್ಧಿಯಾಗುತ್ತಿರುವಾಗ ಟಪ್ಪಾಲು ಮತ್ತು ತಂತಿ ಆಫೀಸು ಇರುವುದು ಆವಶ್ಯಕವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈಗಿರುವ ಟಪ್ಪಾಲುಕಟ್ಟೆಯ ವ್ಯವಸ್ಥೆಯಿಂದ ಹೆಚ್ಚಿನ ಫಲವಿಲ್ಲ. ಆದುದರಿಂದ ಇಲಾಖಾಧಿಕಾರಿಗಳು ಇನ್ನಾದರೂ ಈ ವಿಷಯ ಗಮನಿಸಿ ಒಂದು ಯುಕ್ತ ಟಪ್ಪಾಲು ಮತ್ತು ತಂತಿ ಆಫೀಸು ತೆರೆದು, ಜನರ ಸಂಕಷ್ಟ ಕಳೆದುಕೊಳ್ಳುವುದು ಅತ್ಯಾವಶ್ಯಕ.

ಊರನಿವಾಸಿಕರಲ್ಲೊಬ್ಬ,

ಇನ್ನಂಜೆ ಗ್ರಾಮದ ಹಿಂದುಗಳ ಮಹಾಸಭೆ

ಇನ್ನಂಜೆ ಗ್ರಾಮದ ಹಿಂದುಗಳ ಮಹಾಸಭೆಯು ಗ್ರಾಮದೇವಸ್ಥಾನದ ವಠಾರದಲ್ಲಿ ತಾ.24-10-38 ರಲ್ಲು ಅಪರಾಹ್ನ ಘಂಟೆ 4ಕ್ಕೆ ಶ್ರೀ ಸೋದೆ ಮಠದ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಶೀತರಾಮ ದೊರೆಬಲ್ಲಾಳ, ಪಾಂಗಾಳ ಕೃಷ್ಣಣ್ಣಯ್ಯ, ಕುರ್ಕಾಲು ಗಣಪಯ್ಯಶೆಟ್ಟಿ-ಮೊದಲಾದವರು ಹಾಜರಿದ್ದರು. ಸಭಿಕರು ಸುಮಾರು 500 ಮಂದಿ ಏಕ್ಕೆ ಸೇರಿದ್ದರು.

ಇನ್ನಂಜ ಹಿಂದೂಶಾಲೆಯ ಅಭಿವೃದ್ಧಿಗಾಗಿ, ಗ್ರಾಮಾಭಿವೃದ್ಧಿ ಸಂಘಸ್ಥಾಪನೆ. 2. ಮೂಡುಬೆಟ್ಟು ಕೆಥೋಲಿಕ್ ಶಾಲೆಗಿಂತ ಇನ್ನಂಜೆ ಗ್ರಾಮ ಶಾಲೆಯೇ ಗ್ರಾಮಸ್ಥರ ಹಿತದೃಷ್ಟಿಯಿಂದ ಯೋಗ್ಯ ಕೇಂದ್ರವಾದುದರಿಂದ ಇಲಾಖೆಯವರು ಇದನ್ನು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾರ್ಪಡಿಸಲು ವಿದ್ಯಾಧಿಕಾರಿಗಳಿಗೆ ಬರೆದುಕೊಳ್ಳುವ ವಿಚಾರ-3. ಗ್ರಾಮಸಂಘ ಸಂಘಟನೆಗಾಗಿ ಶ್ರೀ. ಮತ್ತಂತಾಯರಿಂದ ಕೂಡಿದ ಕಮಿಟಿಯ ನೇಮಕ, ವಗೈರೆ ವಿಚಾರಗಳು ಸಭೆಯಿಂದ ಮಂಜೂರಾತಿ ಹೊಂದಿದುವು.

ಕುಂದಾಪುರ—ಇಲ್ಲಿಯ ಉಪಾಧ್ಯಾಯರ ಪರಸ್ಪರ ಸಹಾಯಕ ಸಂಘದ ಮಹಾ ಸಭೆಯು ಕಳೆದ ಒಕ್ಟೋಬರ ತಾ. 29ರಲ್ಲು ಬೋರ್ಡ್‌ಹೈಸ್ಕೂಲು ಲಂಕೇಶಯರ ಹಾಲಿನಲ್ಲಿ ಜರಗಿತು.

ಇಲ್ಲಿಯ ತಾ. ಕಾಂ. ಕಮಿಟಿಯ ಸಭೆಯು ತಾ. 5-11-38ರಲ್ಲಿ ಕೃಷ್ಣರಾಯಕೊಡ್ಗಿಯವರ ಅಧ್ಯಕ್ಷತೆಯಲ್ಲಿ ಜರಗಿತು. ತಾ. 16ಕ್ಕೆ ಚಿತ್ತೈಸಲಿರುವ ಮಾನ್ಯ ವಿದ್ಯಾ ಮಂತ್ರಿಗಳಿಗೆ ಮಾನಪತ್ರ ಕೊಡಬೇಕಾಗಿ ನಿರ್ಣಯಿಸಿ ಆ ಬಗ್ಗೆ ರೂ 25-0 0 ಸಂಗ್ರಹಮಾಡಲಾಯಿತು.

ಬೈಂದೂರು—ಸ್ಥಳೀಕ ಮೆಡಿಕಲ್ ಆಫೀಸರರಾದ ಶ್ರೀ. ಡಾ. ಕೆ. ಕೆ. ರೈಗಳವರ ನೇತೃತ್ವದಿಂದ ಇಲ್ಲಿನ ಸಬ್ ರಿಜಿಸ್ಟ್ರಾರರಾದ ಜನಾಬ್ ಶೇಖ್ ಉಮ್ಮದ ಸಾಹೇಬರ ಅಧ್ಯಕ್ಷತೆಯಲ್ಲಿ ಆರೋಗ್ಯ ಮತ್ತು ಶಿಶುಸಪ್ತಾಹವು ಬಹು ವಿಜೃಂಭಣೆಯಿಂದ ಜರಗಿತು.

ಧರ್ಮಸ್ಥಳದೀಪೋತ್ಸವ—ವರ್ಷಂಪ್ರತಿಯಲ್ಲಿ ಜರಗುವಂಥಾ ದೀಪೋತ್ಸವ ಸಮಾರಂಭದಲ್ಲಿ ಇದೇ ನವಂಬರ ತಿಂಗಳ ತಾ. 20ನೇ ಆದಿತ್ಯವಾರ ದಿವಸ ಮಧ್ಯಾಹ್ನಕ್ಕೆ ರೈತರ ಜೀವನ ಸುಧಾರಣೆ ಕುರಿತು ವಿಚಾರಿಸತಕ್ಕ ಸಭೆಯು ಜರಗಲಿರುವುದು. ಮತ್ತು ಮಾರಣೇ ದಿನ ತಾ. 21 ಸೋಮವಾರ ಮಧ್ಯಾಹ್ನಕ್ಕೆ ವಿವಿಧ ಧರ್ಮಸಮ್ಮೇಳನದಲ್ಲಿ ಸಮತಾಚಾರ ವಿಧಾನದ ಉದ್ದೇಶವೆಂಬ ವಿಷಯದ ಕುರಿತು ಬೇರೆಬೇರೆ ಕಡೆಯಿಂದ ಬರತಕ್ಕ ನಾನಾ ವಿದ್ವಾಂಸರ ಭಾಷಣಗಳೂ ಆಗಲಿಕ್ಕಿವೆ. ಭಾಷಣಕಾರರ ಮತ್ತು ಅಧ್ಯಕ್ಷರ ವಿಷಯ ಮುಂದೆ ಪ್ರಕಟಿಸಲಾಗುವದು.

ಮಾ. ವರ್ಧಮಾನ್ 'ವಿಶಾರದ'

ಕಾರ್ಯದರ್ಶಿ

ಧರ್ಮಸಮ್ಮೇಳನ ಪೋಸ್ಟು ಧರ್ಮಸ್ಥಳ

ಗ್ರಾಮಕಾಂಗ್ರೆಸ್ ಕಮಿಟಿ ಮುದ್ರಾಡಿ

ಈ ಕಮಿಟಿಯ ವತಿಯಿಂದ (ರಾಜಕೀಯ ಧಾರ್ಮಿಕ ಸಾಮಾಜಿಕ) ಅನುಭವಗಳನ್ನು ಹೆಚ್ಚಿಸಿಕೊಳ್ಳುವರೆಯೂ, ಭಾಷಾಭಿವೃದ್ಧಿಗಾಗಿಯೂ ಇಲ್ಲಿ ಯಕ್ಷಗಾನ ಸುಧಾರಣ ಸಭಾ ಮುದ್ರಾಡಿ ಎಂಬ ಹೆಸರಿನ ಒಂದು ಸಮಿತಿಯನ್ನು ರಚಿಸಲಾಯಿತು. ತಾ. 4-11-38ನೇ ದಿನ ಒಂದು ತಾಳಮದ್ದಳೆಯೂ ಜರಗಿತು. ಪ್ರಸಂಗ 'ರುಕ್ಮಾಂಗದ ಚರಿತ್ರೆ.' ಇನ್ನು ಇದೇ ಬರುವ 19-11 38ನೇ ಶನಿವಾರ ರಾತ್ರಿ 7 ಘಂಟೆಗೆ 'ಭೀಷ್ಮವಿಜಯವು' ಎಂಬ ಪ್ರಸಂಗ ಸುಧಾರಣಾರೀತಿಯಲ್ಲಿ ಜರಗುವುದು.

ದಕ್ಷಿಣ ಕನ್ನಡ ವಿದ್ಯಾರ್ಥಿ ಸಂಘಗಳ ಫೆಡರೇಶನ್

ಶ್ರೀ. ಕೆ. ಟಿ. ಭಾಷ್ಯಂರವರ ಉಜ್ವಲ ಭಾಷಣ.

ಡಾ. ಕೆ. ವಿಟ್ಠಲ ಶೆಟ್ಟಿಯವರು ಅಧ್ಯಕ್ಷರು.

ಪ್ರೊಫೆಸರ್ ಜೋಸೆಫರವರ ಸ್ವಾಗತ ಭಾಷಣ.

●

(ನಮ್ಮ ವಿಶೇಷ ಪ್ರತಿನಿಧಿಗಳಿಂದ)

7-11-38

ನಿನ್ನೆಯ ದಿನ ಸಾಯಂಕಾಲ 5-30ಕ್ಕೆ ಸರಿಯಾಗಿ ದ. ಕನ್ನಡ ಜಿಲ್ಲಾ ವಿದ್ಯಾರ್ಥಿಸಂಘಗಳ ಫೆಡರೇಶನಿನ ಉದ್ಘಾಟನಾ ಸಮಾರಂಭವು ಮೈಸೂರಿನ ಪ್ರಸಿದ್ಧ ದೇಶಾಭಿಮಾನಿಗಳೂ, ರಾಷ್ಟ್ರವೀರರೂ ಆದ ಶ್ರೀ. ಕೆ. ಟಿ ಭಾಷ್ಯಂರವರಿಂದ ನೆರವೇರಿಸಲ್ಪಟ್ಟಿತು.

ಶ್ರೀ. ಭಾಷ್ಯಂರವರು ಶ್ರೀ. ವೀರಕೇಸರಿ ಸೀತಾರಾಮಶಾಸ್ತ್ರಿಗಳೊಡಗೂಡಿ ಬೆಂಗಳೂರಿನಿಂದ ನಿನ್ನೆ ಮಧ್ಯಾಹ್ನ ಮಂಗಳೂರಿಗೆ ಚಿತ್ತೈಸಿದರು. ಸಾಯಂಕಾಲ 5-30ಕ್ಕೆ ವಿದ್ಯಾರ್ಥಿಗಳ ಮೆರವಣಿಗೆ ಇತ್ಯಾದಿಗಳು ಜರಗಿ ಗಣಪತಿ ಹೈಸ್ಕೂಲಿನ ಹಾಲಿನಲ್ಲಿ ಮಹಾಸಭೆ ಜರಗಿತು.

ಪ್ರೊ ಜೋಸೇಫರ ಸ್ವಾಗತ—ನಿಯೋಜಿತ ಅಧ್ಯಕ್ಷರಾದ ಮಾನ್ಯ ಡಾ| ವಿಟ್ಠಲಶೆಟ್ಟಿಯವರು ಬರಲು ಸ್ವಲ್ಪ ವಿಳಂಬವಾದ್ದರಿಂದ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಪ್ರೊ. ಜೋಸೆಫರು ಅಧ್ಯಕ್ಷರ ಮತ್ತು ಸ್ವಾಗತಾಧ್ಯಕ್ಷರ ಜವಾಬ್ದಾರಿಕೆಯನ್ನು ವಹಿಸಿಕೊಂಡು ಕಾರ್ಯಕ್ರಮವನ್ನು ಆರಂಭಮಾಡಿದರು. ವಂದೇ ಮಾತರಂ ಹಾಡಲ್ಪಟ್ಟ ಬಳಿಕ ಪ್ರೊ. ಜೋಸೆಫರು ತಮ್ಮ ಸ್ವಾಗತ ಭಾಷಣದಲ್ಲಿ, ಮಾನ್ಯ ಅತಿಥಿಗಳನ್ನೂ (ವಿದ್ಯಾರ್ಥಿ) ಪ್ರತಿನಿಧಿಗಳನ್ನೂ ಜಿಲ್ಲೆಯ ನಾನಾ ಭಾಗಗಳಿಂದ ಬಂದಿದ್ದ ಅಧ್ಯಾಪಕರುಗಳನ್ನೂ ಸ್ವಾಗತೀಕರಿಸಿದರು. ಅನಂತರ ವಿದ್ಯಾರ್ಥಿ ಸಂಘವು ದಿವಂಗತ ಪಲ್ಲನಾಡು ಸೂರಪ್ಪಯ್ಯನವರಿಂದ ಸ್ಥಾಪಿಸಲ್ಪಟ್ಟು, ಮೊದಲು ಅತಿ ಸಣ್ಣದಾಗಿದ್ದರೂ ಈಚಿಗೆ ಒಂದೆರಡು ವರ್ಷಗಳಿಂದ ಅದು ತನ್ನ ಕಾರ್ಯಕ್ಷೇತ್ರವನ್ನು ಬಹಳವಾಗಿ ವಿಸ್ತರಿಸಿ ಈಗ ಫೆಡರೇಶನಾಗುವ ಸ್ಥಿತಿಗೆ ಬಂದ ದನ್ನು ವಿವರಿಸಿದರು. ದ. ಕನ್ನಡದ ವಿದ್ಯಾರ್ಥಿ ಸಂಘಕ್ಕೆ ಒಂದು ನಿಶ್ಚಿತ ಧ್ಯೇಯವಿದೆಯೆಂದೂ, ಅದು ತನ್ನ ಕಾರ್ಯಕ್ಷೇತ್ರವನ್ನು ಬಿಟ್ಟಿಲ್ಲವೆಂದೂ ಆದರೂ ಕೆಲವರು ಈ ಸಂಸ್ಥೆಯನ್ನು ವಕ್ರದೃಷ್ಟಿಯಿಂದ ನೋಡುತ್ತಿರುವುದು ವ್ಯಸನಕರವೆಂದೂ ಹೇಳಿದರು. ಇಪ್ಪತ್ತೈದು ವರ್ಷಗಳ ಹಿಂದಿನ ವಿದ್ಯಾರ್ಥಿಗಳಿಗೆ ತಮ್ಮ ಪುಸ್ತಕದ ಹೊರಗಿನ ವಿಚಾರವೇ ತಿಳಿದಿರಲಿಲ್ಲವೆಂದೂ, ಇಂದು ಮಹಾತ್ಮಾ ಗಾಂಧಿಯವರ ಪ್ರಭಾವದಿಂದ ವಿದ್ಯಾರ್ಥಿಗಳು ಮತ್ತು ಇತರರೂ ದೇಶದ, ಪ್ರಪಂಚದ ಪರಿಸ್ಥಿತಿಗಳನ್ನು ತಿಳಿಯುವ ಸ್ಥಿತಿಗೆ ಬಂದಿರುವರೆಂದೂ ಅವರುಗಳು ರಾಜಕೀಯ ಮತ್ತು ಸಾಮಾಜಿಕ ವಿಷಯಗಳಲ್ಲಿ ಆಸಕ್ತಿಯನ್ನು ತೋರಿಸಿದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲವೆಂದೂ ಅವರನ್ನು ಸಂಕುಚಿತ ದಾರಿಯಲ್ಲಿ ನಡಿಸಿಕೊಂಡು ಹೋಗುವುದು ದೊಡ್ಡವರ ಕರ್ತವ್ಯವೆಂದೂ ಹೇಳಿ, ವಿದ್ಯಾರ್ಥಿಗಳು ತಮ್ಮ ಕಾರ್ಯಕ್ಷೇತ್ರವನ್ನು ಬಿಡುವವರಲ್ಲ. ಆದರೂ ದೇಶದ ಹಿತಸಾಧನೆ ತ್ಯಾಗ ನಡೆಯಬೇಕಾದರೆ ದಕ್ಷಿಣ ಕನ್ನಡದ ವಿದ್ಯಾರ್ಥಿಗಳು ಮೈಸೂರಿನ ಅಥವಾ ಅನ್ಯ ತರಯಾನದ ವೀರ ಯುವಕರಂತೆಯೇ ಮುಂದೆ ಬರಲು ಹಿಂಜರಿಯುವವರಲ್ಲವೆಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಇಷ್ಟರಲ್ಲಿ ನಿಯೋಜಿತ ಅಧ್ಯಕ್ಷರಾದ ಡಾ| ವಿಟ್ಠಲ ಶೆಟ್ಟಿಯವರು ಸಭೆಗೆ ಚಿತ್ತೈಸಿ ಅಗ್ರಾಸನ ವಹಿಸಿಕೊಂಡು, ಕಾರ್ಯದರ್ಶಿಗಳಾದ ಶ್ರೀ. ಬಾಲಕೃಷ್ಣನ್ ನಾಯರರನ್ನು ಮಾತಾಡುವಂತೆ ಕೇಳಿಕೊಂಡರು. ಶ್ರೀ ನಾಯರ್‌ರವರ ವಿದ್ಯಾರ್ಥಿ ಸಂಘದ ಸಂಕ್ಷಿಪ್ತ ಚರಿತ್ರೆಯನ್ನು ಹೇಳಿ ಅದು ಈಚೆಗೆ ಮಾಡಿರುವ, ಇನ್ನು ಮಾಡಲಿರುವ ಕಾರ್ಯಕ್ರಮಗಳನ್ನು ತಿಳಿಸಿದರು. ಮತ್ತು ಈ ಸಂದರ್ಭದಲ್ಲಿ ಜಿಲ್ಲಾ ಬೋರ್ಡು ಪ್ರೆಸಿಡೆಂಟರು ವಿದ್ಯಾರ್ಥಿ ಸಂಘದ ಪುರೋಭಿವೃದ್ಧಿಗೆ ಮಾಡಿದ ಸಹಾಯವನ್ನು ತಿಳಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು.

ಡಾ| ಕೆ ವಿಟ್ಠಲ ಶೆಟ್ಟಿಯವರು ಭಾಷಣಕರ್ತರ ಪರಿಚಯವನ್ನು ಮಾಡಿಕೊಡುತ್ತಾ, ಶ್ರೀ ಭಾಷ್ಯಂರವರು ಮೈಸೂರಿನ ತರುಣ ರಾಷ್ಟ್ರಭಕ್ತರೆಂದೂ ಅವರು ಮೈಸೂರಿನ ಸತ್ಯಾಗ್ರಹಿಗಳನ್ನು ಒಂದು ಜಯದಿಂದ ಮತ್ತೊಂದು ಜಯಕ್ಕೆ ಒಯ್ದರೆಂದೂ ಅಂತಹ ಮಹನೀಯರು ವಿದ್ಯಾರ್ಥಿಗಳ ಮತ್ತು ಇತರ ಚಳವಳಗಳನ್ನು ನಡಿಸಲು ಅಗತ್ಯವೆಂದೂ ಹೇಳಿದರು. ಮತ್ತು ಮಂಗಳೂರಿನ ವಿದ್ಯಾರ್ಥಿಗಳು ತಮ್ಮ ಸಂಘದ ವಿಷಯದಲ್ಲಿ ತುಂಬ ಅಭಿಮಾನಪಡುವುದು ಸ್ತುತ್ಯವೆಂದು ಹೇಳಿ ಅವರ ಪ್ರಯತ್ನಕ್ಕೆ ಜಯವಾಗಲೆಂದು ಕೋರಿ ಶ್ರೀ| ಭಾಷ್ಯಂರವರನ್ನು ಮಾತಾಡುವಂತೆ ಪ್ರಾರ್ಥಿಸಿದರು.

ಶ್ರೀ. ಭಾಷ್ಯಂರವರ ಭಾಷಣ—ಭಾಷಣಕರ್ತರು ತಮಗೀಸಂದರ್ಭವನ್ನೊದಗಿಸಿಕೊಟ್ಟ ವಿದ್ಯಾರ್ಥಿ ಸಂಘದವರಿಗೂ, ನಮ್ಮ ವಿಷಯದಲ್ಲಿ ಅಭಿಮಾನಪೂರ್ವಕವಾಗಿ ಮಾತಾಡಿದ ಅಧ್ಯಕ್ಷರಿಗೂ ತಮ್ಮ ಆಭಾರ ಸೂಚಿಸಿ ಭಾಷಣವನ್ನಾರಂಭಿಸಿದರು.

ಭಾರತ ರಾಷ್ಟ್ರ ಚಳವಳದ ವಿಷಯವಾಗಿ ಹೇಳುತ್ತಾ ಹಿಂದೂಸ್ಥಾನವು ಹೇಗೆ ಬ್ರಿಟಿಷ ಇಂಡಿಯಾ ಮತ್ತು ದೇಶೀಯ ಸಂಸ್ಥಾನವೆಂದು ವಿಭಾಗಿಸಲ್ಪಟ್ಟಿದೆ, ಅವುಗಳಲ್ಲಿರುವ ಭೇದ ಇತ್ಯಾದಿಗಳನ್ನು ತಿಳಿಸಿ ಹಿಂದೂಸ್ಥಾನದ ಭವಿಷ್ಯದ ಏಳಿಗೆಗೆ ಫೆಡರೇಶನು ಅಗತ್ಯವೆಂದೂ, ಆದರೆ ಇಂಡಿಯಾ ಆಕ್ಟಿನಲ್ಲಿ ನಿರೂಪಿಸಿದಂತಹ ಫೆಡರೇಶನು ಪ್ರಯೋಜನವಿಲ್ಲವೆಂದೂ ಅದನ್ನು ನುರಿಯಲೇ ಬೇಕೆಂದೂ, ಪ್ರಜೆಗಳಿಂದಲೇ ಸಿದ್ಧಪಡಿಸಿದ ಫೆಡರೇಶನನ್ನು ಮಾತ್ರ ಸ್ವೀಕರಿಸಬಹುದೆಂದೂ ಹೇಳಿದರು.

ಏಕೀಕರಣ—ಕರ್ನಾಟಕವು ಒಂದು ಸ್ವತಂತ್ರ ಅಂಗಸಂಸ್ಥೆಯಾಗಿರಬೇಕಾದರೆ ಕನ್ನಡ ನಾಡು ಒಂದಾಗಬೇಕೆಂದೂ ಇದಕ್ಕೆ ಏಕೀಕರಣವು ಅಗತ್ಯವೆಂದೂ ಹೇಳಿ ಕೆಲವರು ಏಕೀಕರಣಕ್ಕೆ ವಿರೋಧವಾಗಿರುವರೆಂದೂ ಆದರೆ ಅವರ ಆಕ್ಷೇಪಣೆಗಳಿಗೆ ಆಧಾರವಿಲ್ಲವೆಂದೂ, ಅಂಗಸಂಸ್ಥೆಗಳಾದ ಪ್ರಾಂತಗಳು ಬಲವಾಗಿದ್ದರೆ, ಅವರ ಭಾಷೆ, ಸಂಸ್ಕೃತಿಗಳು ಅವರನ್ನು ಬಲವಾಗಿ ಬಂಧಿಸಿ ಅವರಲ್ಲಿ ಒಕ್ಕಟ್ಟನ್ನು ಸ್ಥಾಪಿಸಿದರೆ ಅಂತಹ ಜನರಿರುವ ಪ್ರಾಂತವು ನಿಜವಾಗಿಯೂ ಅಖಿಲ ಭಾರತಕ್ಕೆ ಬಹಳ ಸಹಾಯ ಮಾಡಲು ಸಾಧ್ಯವಿದೆಯೆಂದರು.

ಇತರ ದೇಶಗಳ ವಿದ್ಯಾರ್ಥಿಗಳು—ಇಟೆಲಿ, ಜರ್ಮನಿ, ಜಪಾನುಗಳ ವಿದ್ಯಾರ್ಥಿಗಳು ಮಾಡುತ್ತಿರುವ ಸಾಹಸವನ್ನು ಹೇಳಿ ನಮ್ಮ ದೇಶದ ಯುವಕರೂ ಕೂಡ ಸುಸಂಘಟಿತರಾಗಿ ಅವರಂತೆಯೇ ನಮ್ಮ ದೇಶವನ್ನು ಮುಂದಕ್ಕೆ ತರಲೆತ್ನಿಸಬೇಕೆಂದರು.

ವಿದ್ಯಾರ್ಥಿಗಳೂ ರಾಜಕೀಯ ಚಳವಳವೂ—ವಿದ್ಯಾರ್ಥಿಗಳು ತಮ್ಮ ಓದು ಬರಹವನ್ನು ಚೆನ್ನಾಗಿ ಅಭ್ಯಾಸಮಾಡಿ ಮುಂದಿನ ಜನಾಂಗದ ಅಡಿಗಟ್ಟನ್ನು ಭದ್ರಪಡಿಸಬೇಕು. ಆದರೆ ಪ್ರತಿಯೊಂದು ರಾಜಕೀಯ ವಿಚಾರವನ್ನೂ ವಿದ್ಯಾರ್ಥಿಗಳು ತಿಳಿದುಕೊಳ್ಳುವುದು ಅಗತ್ಯವಿದೆ. ಆಚರಣೆಗೆ ತರುವುದಕ್ಕೆ ಅವರು ತಮ್ಮ ವಿದ್ಯಾರ್ಥಿ ತನವನ್ನು ಮುಗಿಸಿದಮೇಲೆ ಪ್ರಯತ್ನಿಸಬೇಕು. ಆದರೆ ಜನಾಂಗದ ಗೌರವವು ನಾಶವಾಗುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ಅಗತ್ಯವಾಗಿ ಚಳವಳಕ್ಕೆ ಧುಮುಕಬೇಕಾಗಿದೆಯೆಂದರು.

ಸಾಮಾಜಿಕ ವಿಚಾರಗಳಲ್ಲಿ— ವಿದ್ಯಾರ್ಥಿಗಳು ಸಾಮಾಜಿಕ ವಿಚಾರಗಳಲ್ಲಿ ಬಹಳ ಕೆಲಸ ಮಾಡಬಹುದೆಂದರು. ಮುಖ್ಯವಾಗಿ ವಿದ್ಯಾಪ್ರಸಾರ ಮಾಡುವುದು, ಖಾದಿ, ಸ್ವದೇಶೀ ಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧದ ಚಳವಳಿ ಇತ್ಯಾದಿಗಳನ್ನು ನಡೆಸಬಹುದು. ಮತ್ತು ವಾಕ್ಚಾತುರ್ಯವನ್ನು ಪಡೆಯಬೇಕೆಂದೂ ಈ ಬಗ್ಗೆ ಸಭೆಗಳಲ್ಲಿ ಭಾಷಣಕೊಡಲು ಅಭ್ಯಾಸಮಾಡುವುದು ಅಗತ್ಯವೆಂದೂ ಹೇಳಿದರು.

ವಿದ್ಯಾರ್ಥಿಗಳು ತಮ್ಮ ಸಂಘ ಸಂಸ್ಥೆಗಳನ್ನು ರಚಿಸಿಕೊಂಡು ತನ್ಮೂಲಕ ದೇಶ ಸೇವೆಯನ್ನು ಮಾಡಬೇಕೆಂದು ಹೇಳಿ ಫೆಡರೇಶನನ್ನು ಉದ್ಘಾಟನೆಮಾಡಿದರು.

(ಪುಟ ೧೧ ನೋಡಿರಿ)

ದಿ ಕೋಮನ್‌ವೆಲ್ತ್

ಎಸ್ಸೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.

ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:-

ಎಸ್. ಪಿ ಆರ್. ನಾಯಕ್ ಎಂಡ್ ಸನ್ಸ್, ಸ್ಪೆಶಲ ಏಜಂಟ್, ಕಾರ್ ಸ್ಟ್ರೀಟ್, ಮಂಗಳೂರು.

ಗವಾನಕರ್ ಎಂಡ್ ಸನ್ಸ್, ಚೀಫ್ ಏಜಂಟ್ಸ್, 163 ಗಾಂಧಿ ನಗರ, ಬೆಂಗಳೂರು

ಈ ವಾರದ ನಿಮ್ಮ ಭವಿಷ್ಯ

ತಾ 10—11—38ರಿಂದ 17—11—38ರ ವರೆಗೆ

[ಜ್ಯೋತಿಷವು ಅದೃಷ್ಟವಾದವಲ್ಲ ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಆತ್ಮತೃಪ್ತಿಯ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ಈ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ ನ.]

ಮಿಥುನ, ಕನ್ಯಾ, ಕುಂಭ, ಮೀನರಾಶಿಗಳವರ ಗ್ರಹಸ್ಥಿತಿಯು ಬಹಳ ಕೀಳು ತರಗತಿಯಲ್ಲಿರುವುದು—ವೃಷಭ, ಕರ್ಕಾಟಕ, ಈ ಎರಡು ರಾಶಿಯವರ ಗ್ರಹ ಗತಿಯು ಕನಿಷ್ಠತರಗತಿಯಲ್ಲಿಹುದು—ಮೇಷ, ಸಿಂಹ ತುಲಾ, ವೃಶ್ಚಿಕ, ಧನು, ರಾಶಿಗಳವರ ಗ್ರಹಚಾರವು ಮಧ್ಯಮ ರೀತಿಯಲ್ಲಿರುವುದು ಮಕರರಾಶಿಯವರ ಭವಿಷ್ಯವು ಚೆನ್ನಾಗಿರುವುದು.

ಮೇಷರಾಶಿ—

ಪ್ರಕೃತದ ಪರಿಸ್ಥಿತಿಯಲ್ಲಿ ನಿಮಗೀ ವಾರವು ಅಷ್ಟೊಂದು ಹಾನಿಕರವಾಗಿಲ್ಲ. ಅನುಕೂಲ ವಿದ್ಯಮಾನಗಳ ಚಿಹ್ನೆಗಳೇ ಹೆಚ್ಚಾಗಿ ತೋರಿಬರುವುವು. ಆದ್ದರಿಂದ ನೀವು ಮಾಡತಕ್ಕ ಸಕಲ ಕಾರ್ಯಗಳೂ ಸಫಲವಾಗುವವು. ಶತ್ರುಗಳ ಅಭಾವದಿಂದಾಗಿ ನಿಮಗಾವತರದ ವಿಘ್ನಗಳ ಶಂಕೆಯೂ ಇರಲಾರದು. ಆರ್ಥಿಕಭಾಗವು ಸುಧಾರಿಸುವುದು. ವ್ಯಾಪಾರ, ದ್ಯೂತ, ಉದ್ಯೋಗ ಮೊದಲಾದವುಗಳಲ್ಲಿ ಆಯವು ತೃಪ್ತಿಕರವಾಗಿರುವುದು. ಕೌಟುಂಬಿಕರ ಜೀವನವು ಸುಗಮವಾಗಿರುವುದು ಆದರೂ ಕೂಡ ನಿಮ್ಮ ಶರೀರ ಪ್ರಕೃತಿಯು ಚೆನ್ನಾಗಿರುವುದಿಲ್ಲವೆನಬಹುದು. ಮತ್ತು ಅಕಸ್ಮಾತ್ ಪ್ರವಾಸಗಳು ಜರಗಿ ಸ್ವಲ್ಪ ಮಟ್ಟಿಗೆ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ತಾ. 10 ಮತ್ತು 13ರಿಂದ 17ರ ವರೆಗಿನ ದಿನಗಳಲ್ಲಿ ಕಲಹ, ದುಃಖ, ದೇಹಾಲಸ್ಯಗಳು ಹೆಚ್ಚುವವು—

ವೃಷಭರಾಶಿ—

ಆಧಿವ್ಯಾಧಿಗಳೆಂಬ ಶತ್ರುಗಳು ನಿಮ್ಮನ್ನು ಸಕಲ ವಿಷಯದಲ್ಲಿಯೂ ಪೀಡಿಸುವರು ಆದಕಾರಣದಿಂದಲೇ ನಿದ್ರಾಹಾರಗಳು ಸಮಯಕ್ಕೆ ಸರಿಯಾಗಿ ದೊರೆಯದೆ ರೋಗಬಾಧೆಯು ಅನೇಕ ವಿಧದಿಂದ ನಿಮ್ಮನ್ನು ಪೀಡಿಸುವುದು. ಇಷ್ಟಾದರೂ "ಪರೋಪಕಾರಾರ್ಥಮಿದಂ ಶರೀರಂ" ಎಂಬ ಲೋಕೋಕ್ತಿಯಂತೆ ಜನರಿಗೆ ಉಪಕಾರ ಮಾಡುವ ವಿಷಯದಲ್ಲಿ ನೀವು ಸ್ವಶರೀರಾಭಿಮಾನವನ್ನು ಎಣಿಸತಕ್ಕವರಲ್ಲ ಈ ನಿಮ್ಮ ಗುಣಕ್ಕೆ ಶತ್ರುಗಳೂ ಕೂಡ ತಲೆದೂಗುವರು. ಜನರು ಗೌರವ ಮನ್ನಣೆಗಳನ್ನು ಕೊಡುವರು. ಕೆಲವು ಕಾರ್ಯಗಳಲ್ಲಿ ಜಯಶೀಲರಾಗುವಿರಿ ತಾ. 11, 12 ಮತ್ತು 15, 16, 17 ಈ ದಿನಗಳಲ್ಲಿ ಕಲಹ ಶೋಕಗಳು ಅಭಿವೃದ್ಧಿಯನ್ನೈದುವವು—

ಮಿಥುನರಾಶಿ—

ಕಾಲಗತಿಯನ್ನನುಸರಿಸಿ ಜನರ ರೀತಿ ನೀತಿಯೂ ಕೂಡ ಪರಿವರ್ತನೆ ಹೊಂದುತ್ತಲೇ ಇರುವುದು "ಛಿದ್ರೇಷ್ವನರ್ಥಾ ಬಹುಲೀ ಭವಂತಿ" ಎಂಬ ನೀತಿ ವಚನದಂತೆ ಓರ್ವನು ಆತ್ಮ್ಯಾಪತ್ತಿಗೆ ಸಿಲುಕಿದನಂದರ ತತ್ಕಾಲದಲ್ಲೇ ಅನೇಕಾನೇಕ ವಿಪತ್ತುಗಳು ಬಂದು ಆತನನ್ನು ಸೇರುವವು. ಅಂತೆಯೇ ಜನರೂ ಕೂಡ ಹಳ್ಳಕ್ಕೆ ಬಿದ್ದವನ ತಲೆ ಮೇಲೆ ಕಲ್ಲೆಸೆವರೇ ಹೊರತು ಮೇಲಕ್ಕೆತ್ತಿ ಹಾಕುವವರಿಲ್ಲವು. ಈ ವಾರವು ನಿಮ್ಮನ್ನೀ ತೆರನಾದ ಅವಸ್ಥೆಗೆ ಗುರಿಮಾಡಿರುವುದು. ವೈರಿಗಳ ಉಪದ್ರವ, ದೇಹಾಲಸ್ಯ, ಧನಹಾನಿ ಇವುಗಳು ನಿಮ್ಮನ್ನು ಬಿಟ್ಟಿರವು. ಸಂಸರ್ಗ ದೋಷದಿಂದ ನಿಮಗೆ ಯಾರಿಂದ ಯಾವಾಗ ಏನು ಕೇಡು ಸಂಭವಿಸೀತೆಂದು ಹೇಳಲಾಗದು. ಇವೆಲ್ಲಕ್ಕೂ ನಿಮ್ಮ ಮೇಲಿರುವ ಗ್ರಹರ ಪ್ರತಿಕೂಲವೇ ಕಾರಣವಿಹುದು. ಈ ಗ್ರಹರ ಸೇವಾಸ್ತುತಿಗಳಿಂದ ಕೆಲವಂಶ ದೋಷಗಳು ಕಡಿಮೆಯಾದಾವು ತಾ. 10, 13, 14 17 ಬಹಳ ಅನಿಷ್ಟಗಳಾಗಿವೆ—

ಕರ್ಕಾಟಕರಾಶಿ—

ಈ ವಾರದಲ್ಲಿ ನೀವು ಧನ ವಿಷಯದಲ್ಲಿ ಬಹಳ ಸುಧಾರಿಸಿರುವಿರೇನೋ ನಿಜ ಒಂಧು ಮಿತ್ರಾದಿಗಳ ಅನುಕೂಲ್ಯವೂ ಚೆನ್ನಾಗಿರುವುದು. ಪತ್ನ್ಯಾದಿ ಗೃಹಸಂಪತ್ತೂ ಚೆನ್ನಾಗಿರುವುದು ಆದರೂ ಇವೆಲ್ಲವುಗಳ ಅನುಭವಕ್ಕೆ ಬೇಕಾದ ಆರೋಗ್ಯ ಭಾಗ್ಯವು ನಿಮಗಿಲ್ಲದಿರುವುದರಿಂದ ಇವುಗಳು ನಿಮ್ಮ ಭಾಗಕ್ಕೆ ಇದ್ದರೂ ಇಲ್ಲದಂತೆಯೇ ಸರಿ ಸಾಂಸಾರಿಕ ಕಲಹದಿಂದಾಗಿ ಮನಃಕ್ಲೇಶವೂ ಧನವ್ಯಯವೂ ಅಧಿಕವಾಗುವುದು. ಮಾರ್ಗದಲ್ಲಿ ಆಯಾಸವಾದರೂ ಪವಿತ್ರ ಸ್ಥಳಗಳ ಸಂದರ್ಶನಾದಿಗಳು ಜರಗುವವು. ತಾ. 11, 12 ಮತ್ತು 15, 16 ಈ ದಿನಗಳು ಧನವ್ಯಯ ಮತ್ತು ಮಾನಹಾನಿಕಾರಕಗಳಾಗಿರುವವು -

ಸಿಂಹರಾಶಿ—

ನಿಮ್ಮಲ್ಲಿ ಅಸಾಧಾರಣವಾದ ಬುದ್ಧಿಕೌಶಲವೂ ವಾಕ್ಚಾತುರ್ಯವೂ ಇರುವುದರಿಂದ ಸಾರ್ವಜನಿಕ ಕಾರ್ಯಗಳಲ್ಲಿ ಕೀರ್ತಿ ಸಂಪಾದಿಸುವಿರಿ. ಮಿತ್ರಸೌಖ್ಯವು ಚೆನ್ನಾಗಿ ಲಭಿಸುವುದು. ಕುಟುಂಬವು ವೃದ್ಧಿಯಾಗುವುದು. ಸಂಕಲ್ಪಿತ ಕಾರ್ಯಗಳು ಅನಾಯಾಸದಿಂದ ಪಾರುಗಾಣುವವು. ಶತ್ರುಗಳ ಕ್ಷಯದಿಂದಾಗಿಯೂ ಉದ್ಯೋಗ ವ್ಯಾಪಾರಾದಿಗಳಲ್ಲಿನ ಪರಿಸ್ಥಿತಿಯಿಂದಾಗಿಯೂ ಮನಸ್ಸಿಗೆ ಪೂರ್ಣ ನೆಮ್ಮದಿಯಿರುವುದು ಶಯನಸುಖವು ತೃಪ್ತಿಕರವಾಗಿರುವುದು. ಕೆಲವೊಂದು ರಾಜಕೀಯ ಭಾಗಕ್ಕಾಗಿ ಮತ್ತು ದೇಹಪೀಡಾ ನಿವೃತ್ತಿಗಾಗಿ ಧನವ್ಯಯಮಾಡಬೇಕಾಗುವುದು. ತಾ. 13, 14, 17ರಲ್ಲಿ ಸ್ವೀಕೃತ ಕಾರ್ಯಗಳಿಗೆ ವಿಘ್ನಗಳ ಭಯವುಂಟಾದೀತು—

ಕನ್ಯಾರಾಶಿ—

ನಿಮ್ಮ ಗ್ರಹಸ್ಥಿತಿಯು ಬಹಳ ವಿಪರೀತಾವಸ್ಥೆಗೆ ಬಂದಿರುವುದು. ಈ ವಾರದಲ್ಲಿ ನಿಮ್ಮಭಾಗದ ಭಾಗ್ಯನೆಂದರೆ ಶುಕ್ರನೊಬ್ಬನೇ. ಇವನಿಂದಾಗಿ ನಿಮಗೆ ವಸ್ತ್ರಾಭರಣಗಳ ಲಾಭಮತ್ತು ಮಾನಸಿಕ ಸುಖಮಾತ್ರವೊರೆಯಲು ಶಕ್ಯವಿದೆ ಆದರೂ ಇತರ ಸರ್ವಗ್ರಹರೂ ನಿಮ್ಮ ಮೇಲೆ ಮುನಿದು ಬಿದ್ದಿರುವುದರಿಂದ ಶತ್ರುಗಳ ಹಿಂಸೆಯೂ ದೇಹಾಲಸ್ಯವು ಅನಿವಾರ್ಯವಾಗುವುವು ಮಾತ್ರವಲ್ಲ ಅಕಸ್ಮಾತ್ ಅಚಾತುರ್ಯದಿಂದಾಗಿ ಆದ ಕಾರ್ಯಕ್ಕೆ ತಕ್ಕ ಪ್ರತಿಫಲವೂ ದೊರೆಯುವುದು. ಪ್ರವಾಸ ನಿಮಿತ್ತದಿಂದ ಹೆಚ್ಚಾಗಿ ಕಷ್ಟನಷ್ಟಗಳಿಗೆ ಗುರಿಯಾಗಬೇಕಾದೀತು. ಕೆಲವು ಭಾಗದಲ್ಲಿ ಆಗತಕ್ಕ ಧನವ್ಯಯವು ನಿಮ್ಮ ಮನಸ್ಸನ್ನು ಪ್ರವಾಹಕ್ಕೆ ಸಿಲುಕಿದ ನಾವೆಯಂತೆ ಸಿಕ್ಕಕಡೆಕೊಂಡೊಯ್ಯುವುದು. ತಾ 10, 15, 16ರಲ್ಲಿ ಉದರರೋಗ ಆಯಾಸ ಇವುಗಳು ಹೆಚ್ಚಾಗಿ ಪೀಡಿಸುವವು—

ತುಲಾರಾಶಿ—

ನಿಮ್ಮ ಗ್ರಹಮಾನವಾದರೋ ಈ ವಾರದಲ್ಲಿ ಅರಕ್ಕೆ ಹೆಚ್ಚದು ಮೂರಕ್ಕೆ ಕುಂದದೆಂಬಂತಿರುವುದು. ಪಿತ್ತೋದ್ರೇಕದಿಂದುಂಟಾದ ವ್ಯಾಧಿಪೀಡೆಗೂ ವನಿತಾ ಸಮಾಜದ ವಕ್ರದೃಷ್ಟಿಗೂ ಅನರ್ಥ ಶತಗಳಿಗೂ ಕೂಡ ಗುರಿಯಾದರೂ ಅವುಗಳು ಸೂರ್ಯ ರಶ್ಮಿತಗಲಿದ ಹಿಮಗಡ್ಡೆಗಳಂತೆ ಅಲ್ಲಿಯೇ ಅಂತರ್ಧಾನವಾಗುವವು. ಯಾವ ಉದ್ಯೋಗದಲ್ಲೂ ನಿಮಗೆ ಸೋಲಾಗದು. ಕೆಲವು ಕಾರ್ಯಗಳಲ್ಲಿ ನಿಮಗೆ ಸೋಲೆಂದು ಕಂಡುಬಂದರೂ ಅದರಿಂದಾಗಿ ನಿಮ್ಮ ಲಾಭಕ್ಕೆ ಏನೂ ತೊಂದರೆಯಿಲ್ಲವು ಸಂಪೂರ್ಣ ಸ್ತ್ರೀ ಸುಖವು ನಿಮಗಿರುವುದು. ಪರೋಪಕಾರ ಬುದ್ಧಿಯು ನಿಮ್ಮಲ್ಲಿರುವುದರಿಂದ ನಾಲ್ಕು ಜನರಿಗೆ ಬೇಕಾದವರೆಂದೆನಿಸಿಕೊಳ್ಳುವಿರಿ ತಾ. 13ರಿಂದ 16ರ ವರೆಗಿನ ದಿನಗಳು ಬಹಳ ಅನುಕೂಲವಿವೆ.

ವೃಶ್ಚಿಕರಾಶಿ—

ಜನ್ಮಾಂತರೀಯವಾದ ಕರ್ಮಗಳ ಫಲವನ್ನು ನರನು ಇಹದಲ್ಲಿ ಭೋಗಿಸುವುದಾದರೂ ಇಹದಲ್ಲಿ ಮಾಡತಕ್ಕ ಕರ್ಮ ಧರ್ಮ ಆಚಾರಗಳಿಂದ ಅವುಗಳ ವೃದ್ಧಿಹ್ರಾಸಾದಿಗಳನ್ನು ಮಾಡಿಕೊಳ್ಳಲು ಶಕ್ತನಿರುವನು ಮತ್ತು ವಿಶೇಷತರನಾದ ಇಹದ ಕ್ರಿಯಾಫಲವನ್ನು ಇಹದಲ್ಲೇ ಅನುಭವಿಸುವನು. ಅದಕ್ಕಾಗಿಯೇ "ತ್ರಿಭಿರ್ವರ್ಷೈಸ್ತ್ರಿಭಿರ್ಮಾಸೈಸ್ತ್ರಿಭಿಃಪಕ್ಷೈಸ್ತ್ರಿಭಿರ್ದಿನೈಃ। ಅತ್ಯುತ್ಕಟೈಃ ಪುಣ್ಯಪಾಪೈರಿಹೈವ ಫಲಮಶ್ನುತೇ" ಸಾಮಾನ್ಯ ಕರ್ಮಗಳ ಫಲವು ವರ್ಷ ಮಾಸ ಪಕ್ಷ ದಿನಗಳಲ್ಲಿ ಅನುಭವಕ್ಕೆ ಬಾರದರೂ ಅತಿ ಬಲವತ್ತರವಾದ ಪುಣ್ಯ ಕರ್ಮವನ್ನು ಮಾಡಿದರೂ ಪಾಪ ಕರ್ಮವನ್ನಾಚರಿಸಿದರೂ ಅವುಗಳ ಫಲವು ಆಗಾಗಲೇ ಸಿಗುವವು. ಎಂದು ಪ್ರಾಜ್ಞರು ಹೇಳಿರುವರು. ಅಂತಯೇ ನೀವೂ ಕೂಡ ನ್ಯಾಯ ಮಾರ್ಗದಲ್ಲಿರುವುದಾದರೆ ನಿಮಗೆ ಹೆಚ್ಚಿನ ಕೇಡುಕುಗಳೇನೂ ಸಂಭವಿಸಲಾರವು. ಕರ್ತವ್ಯವನ್ನು ಕಣ್ಣೆಗಾಣಿಸಿ ಜನರ ಮನ್ನಣೆಗೆ ಪಾತ್ರರಾಗುವಿರಿ. ನಿಮ್ಮ ಆರೋಗ್ಯದ ಮಾನವು ಸಂತೋಷದಲ್ಲಿರುವುದು. ಹಣದ ಅಡಚಣೆಗಳೂ ಹೆಚ್ಚಿನ ಖರ್ಚಿನ ಪ್ರಸಂಗಗಳೂ ಒದಗುವಂತಿಲ್ಲ. ತಾ. 11ರಿಂದ 14ರ ವರೆಗೆ ಕಲಹ ಕ್ಲೇಶಗಳು ಕಂಡುಬರುವವು.—

ಧನುರಾಶಿ—

ನಿಮ್ಮ ಮನಸ್ಸು ಯಾವಾಗಲೂ ಕಲುಷಿತವಾಗಿರುವುದರಿಂದ ಏಕಾಕಿಯಾಗಿ ನೀವು ಯಾವ ಕಾರ್ಯವನ್ನು ಮಾಡಲೂ ಸ್ವತಂತ್ರರವುದಿಲ್ಲ ಆದರೂ ಜನರು ಹಿಂಗಡೆಯಿಂದ ಏನಾದರೂ ನಿಮ್ಮನ್ನು ದೂಷಿಸುವದಲ್ಲದೆ ಇದಿರಿನಲ್ಲಿ ನಿಮ್ಮ ವಿಷಯವಾಗಿ ಮಾತನಾಡಲು ಯಾರಿಗೂ ಧೈರ್ಯವಿಲ್ಲ,

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ „ „ 0—1—3
೩ ಮೆಡಿಕೇಟೆಡ್ ನಂ ೧, ಶೀಸೆಯಲ್ಲಿ „ 0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ. ಬೆಲೆ 0—1—0, 0—2—0.

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-1-0.

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸದಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ. ಬೆಲೆ. 0-8-0 ಮತ್ತು ರೂ. 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:— ಕುಂದಾಪುರ-ಕಾಮತ್ಸ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ ಜಿ ಕೃಷ್ಣ ಕಾರಂತರ, ಆಯುರ್ವೇದೀಯ ಔಷಧಗಳ ಏಜೆಂಟರು, ಕಾರ್ಕಳ ವಿ ಬಿ ಶೆಣೈ-ಕೆಮಿಸ್ಟ್, ಕಾಸರಗೋಡು ಭಕ್ತಾ ಬ್ರದರ್ಸ್ ಮತ್ತು ಶ್ರೀರಾಮ ಸ್ವದೇಶಿ ಹೌಸ್, ಕಲ್ಯಾಣಪುರ-ವಿ ಪಾಂಡುರಂಗ ಗೋವಿಂದ ಭಂಡಾರಿ ಮತ್ತು ಸೈ ಡಿಸ್ಪೆನ್ಸರಿ, ಮಲ್ಕಿ ಬಿ ಎಸ್, ಸೀತಾರಾಮ ಪ್ರಿಂಟಿಂಗ್, ಪನೆಲ್ ಮರ್ಚೆಂಟ್, ಮೂಡಬಿದ್ರೆ ಸಂಜೀವ ಶೇಷಗಿರಿ ಪ್ರಭು ಬ್ರದರ್ಸ್, ಬಂಟ್ವಾಳ-ಪ್ರಭು ಅಂಡ್ ಕೋ, ಉಡುಪಿ ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ

ವು. ಕಾರಣ ನೀವು ಜನಪ್ರಿಯರು ಮತ್ತು ಪರೋಪಕಾರಿಗಳು ಆಗಿರುವಿರಿ ವ್ಯಾಪಾರ ವ್ಯವಹಾರಾದಿ ಕಾರ್ಯಗಳಲ್ಲಿ ಜಯಶೀಲರಾಗಿ ಕೈಯಲ್ಲಿ ಹಣವು ಅತ್ತಿತ್ತ ಓಡಾಡುವುದು ಕುಟುಂಬಯುಕ್ತರಾದ ನೀವು ನಿರೋಗಿಗಳಾಗಿರುವಿರಿ ತಾ 13ರಿಂದ 16ರವರೆಗೆ ರಾಜಕೀಯ ವ್ಯವಹಾರದಲ್ಲಿ ಹಾನಿಯಾಗುವ ಸಂಭವವಿದೆ —

ಮಕರರಾಶಿ—

ಭಾಗ್ಯಸ್ಥಾನಗತನಾದ ಕುಜನನ್ನು ಹೊರತಾಗಿ ಸರ್ವ ಗ್ರಹರೂ ನಿಮಗೆ ಅನುಕೂಲವಾಗಿರುವುದರಿಂದ, ಕುಜನೂ ಕೂಡ ಇತರ ಗ್ರಹರಮಾರ್ಗವನ್ನೇ ಅನುಸರಿಸುವನು ಪನಿರ್ವ್ಯಾಪಾರನಾಗಿರುವನು ಯಾಕೆಂದರೆ "ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ" ಚಂದ್ರಕಿರಣ ಸಮೂಹದಲ್ಲಿ ಆತನ ಕಳಂಕವು ಹೇಗೆ ಆಚ್ಛಾದಿತವಾಗುವುದೋ ಅಂತೆಯೇ ಗುಣಗಳ ಸಮೂಹದಲ್ಲಿ ಒಂದೆರಡು ದೋಷಗಳು ತೋರಿಬರಲಾರವು. ಆದುದರಿಂದ ಈ ವಾರವು ನಿಮಗೆ ಸರ್ವ ವಿಧದಲ್ಲಿಯೂ ಹಿತಕಾರಿಯೇ ಆಗಿರುವುದು ಯಾವ ವಿಷಯಕ್ಕೂ ಚಿಂತಿಸಬೇಕಾಗಿಲ್ಲವು ಅಂತೂ ಶಾರೀರಕ ಮಾನಸಿಕ ಸುಖಗಳು ಚೆನ್ನಾಗಿರುವವು. ಆರ್ಥಿಕ ಭಾಗವು ಉತ್ತಮ ಪರಗತಿಯಲ್ಲಿರುವುದು. ಸಾರ್ವಜನಿಕ ಕಾರ್ಯಗಳಲ್ಲಿ ಮತ್ತು ಸಮಾಜಸೇವೆಯಿಂದ ಕೀರ್ತಿಗಳಿಸುವಿರಿ ತಾ 11 ರಿಂದ 14ರ ವರಗಿನ ದಿನಗಳು ಬಹಳ ಅನುಕೂಲವಾಗಿವೆ —

ಕುಂಭರಾಶಿ—

ಯಾವ ಭಾಗದಲ್ಲಿ ನೋಡಿದರೂ ನಿಮಗೆ ಈ ವಾರವು ಹಿತಕರವಾಗಿಲ್ಲವು ಮನೋವ್ಯಥೆಯಿಂದ ನಿಮ್ಮ ದೇಹವು ಬಹಳ ಕಾರ್ಶ್ಯವಾಗಿರುವುದಲ್ಲದೆ ಮುಖವು ನಿಸ್ತೇಜವಾಗಿರುವುದು. ಹಣದ ಅಡಚಣೆಯಿಂದ ದಿನಗಳು ವರ್ಷಗಳಾಗಿ ತೋರುವವು ಜನರೊಡನ ವೈಮನಸ್ಸು ಹೆಚ್ಚಿ ಮನಶ್ಶಾಂತಿಯು ಕನ್ನಡಿಯೊಳಗಿನ ಗಂಟೆನಂತಾಗುವುದು ಮೇಲಿಂದ ಮೇಲಕ್ಕೆ ಶತ್ರುಗಳ ಪೀಡೆಯೂ ಆಪತ್ತುಗಳೂ ಬರುವುದರಿಂದ ಇತಿಕರ್ತವ್ಯತಾಮೂಢರಾದ ನೀವು ಕಣ್ಣುಕಟ್ಟಿ ಕಾಡಿನಲ್ಲಿ ಬಿಟ್ಟವರಂತಾಗುವಿರಿ ಸ್ಥಾನಮಾನಗಳನ್ನು ಕಳಕೊಂಡ ನೀವು ಹೆಚ್ಚಿನ ಅವಮಾನಕ್ಕೀಡಾಗುವಿರಿ ತಾ. 10-11-12 ಮತ್ತು 17ರಲ್ಲಿ ದೇಹಾಲಸ್ಯವೂ ಕಾರ್ಯಹಾನಿಯೂ ಸಂಭವಿಸುವವು. ಪ್ರವಾಸದಲ್ಲಿ ಹೆಚ್ಚಿನ ಕಷ್ಟನಷ್ಟಗಳಿಗೂ ಗುರಿಯಾಗುವಿರಿ —

ಮೀನ—

ನಿಮ್ಮ ಮನೋರಥವೆಲ್ಲವೂ ಆಕಾಶದಲ್ಲಿ ಕಟ್ಟಿದ ಗೋಪುರದಂತೆಯೇ ಸರಿ ಕಾರಣವೇನೆಂದರ ನಿಮ್ಮ ದೇಹವು ಸದಾ ರೋಗಪೀಡಿತವಾಗಿರುವುದರಿಂದ ಯಾವ ಕಾರ್ಯವನ್ನು ಮಾಡುವ ಶಕ್ತಿ ನಿಮ್ಮಲ್ಲಿಲ್ಲವು ಮಿತ್ರ ಜನರು ಬಂಧುಗಳು ನಿಮಗೆ ಸ್ವಲ್ಪವೂ ಸಹಾಯಮಾಡುವಂತಿಲ್ಲ ಶತ್ರುಗಳು ವೃದ್ಧಿಯನ್ನೈದಿರುವುದರಿಂದ ಸಾಧ್ಯವಾದಷ್ಟು ಅಪಕೃತಿಯನ್ನು ಮಾಡುವರು ಇದಕ್ಕೆ ಸರಿಯಾಗಿ ನಿಮ್ಮ ಗೃಹದ ವಿದ್ಯಮಾನವೂ ಕೆಟ್ಟದಾಗುವುದು ಆದ್ದರಿಂದ ನಿಮಗೆ ಯಾವ ಕಾರ್ಯದಲ್ಲೂ ನಷ್ಟವೇ ಹೆಚ್ಚಾಗುವುದು ಆಯಕ್ಕಿಂತ ವ್ಯಯವು ಅಧಿಕವಾಗುವುದರಿಂದ ಸಾಲಮಾಡ

ದಿ ಟ್ರೋಪಿಕಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಈ ಸಂಸ್ಥೆಯ ಪ್ರಧಾನ ಕಾರ್ಯಕ್ಷೇತ್ರವಾದ ಡಿಲ್ಲಿಯ ಹೊಸ ಕಟ್ಟೋಣದ ಪ್ರವೇಶೋತ್ಸವ ಸಮಾರಂಭವು ರಾಷ್ಟ್ರಪತಿ ಸುಭಾಸ ಭೋಸರಿಂದ ಕಳೆದ ಸೆಪ್ಟಂಬರ್ ತಾ ೨೧ರಲ್ಲಿ ಬಹುವಿಜೃಂಭಣೆಯಿಂದ ಜರಗಿತು. ಭವ್ಯ ಸಭಾಮಂದಿರವು ಕಂಪೆನಿಯಲ್ಲಿ ವಿಮೆ ಇಳಿಸಿದವರಿಂದಲೂ, ಉದ್ಯೋಗಸ್ಥ ಮಂಡಳಿಯಿಂದಲೂ, ಆಡ್ಯ ಪುರನಿವಾಸಿಗಳಿಂದಲೂ ತುಂಬಿಕೊಂಡಿತ್ತು. ದೇಶಸೇವಿಕೆಯರ ಸುರಸ ರಾಷ್ಟ್ರಗೀತೆಯಾದ ನಂತರ ಅಧ್ಯಕ್ಷ ಮಹಾಶಯ ಭೋಸರು ಆಡಳಿತ ಮಂಡಲದ ವ್ಯವಸ್ಥಾಪಕರ ಸಲಹೆಯಿಂದ ಉತ್ಸಾಹೀ ಸಭಿಕರ ಆನಂದದ ಕೋಲಾಹಲದೊಡನೆ ವೇದಿಕೆಯನ್ನೇರಿದರು ನಂತರ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರು ಟ್ರೋಪಿಕಲ್ ವಿಮಾಸಂಸ್ಥೆಯ ಉಚ್ಚ ಉದ್ದೇಶ ಸಂದರ್ಭವನ್ನು ವಿವರಿಸಿ, ಕಂಪೆನಿಯು ಹೇಗೆ ಪ್ರ

ಬೇಕಾಗಿ ಒರುವುದು ಅಷ್ಟಮಿತ್ರರ ವಿಯೋಗದಿಂದಲೂ ಗೃಹಿಣಿಯ ಕಾಟದಿಂದಲೂ ನಿಮ್ಮ ಮನೋವ್ಯಥೆಯು ಇಮ್ಮಡಿಯಾಗುವುದು ತಾ. 10-15-16-17 ಈ ದಿನಗಳಲ್ಲಿ ನಿಮ್ಮ ಧರ್ಮಗಳ ಬಲದಿಂದ, ದೇಹಾರೋಗ್ಯ, ವಸ್ತ್ರಲಾಭ, ಸ್ತ್ರೀಸುಖಗಳು ಸ್ವಲ್ಪ ಮಟ್ಟಿಗೆ ದೊರೆಯುವವು —

ಗತಿ ಮಾರ್ಗದಲ್ಲಿ ಮುನ್ನಡೆಯುತ್ತಿರುವುದೆಂಬುದನ್ನು ವಿವರಿಸಿದರು ಆದಾಗಿ ಅಧ್ಯಕ್ಷರು ಅತೀವ ಸಂತೋಷದೊಡನೆ ತಮ್ಮ ಅಮೋಘ ಭಾಷಣಕ್ಕಾರಂಭಿಸಿದರು.

"ನನಗೀ ಉತ್ಕೃಷ್ಟ ಕಾರ್ಯಸಮಾರಂಭದಲ್ಲಿ ಭಾಗವಹಿಸಲು ಸಂದರ್ಭ ದೊರೆತುದಕ್ಕಾಗಿ ತುಂಬಾ ಸಂತೋಷಪಡುವೆನು ಕಾಂಗ್ರೆಸಿನ ಕಾರ್ಯಕ್ರಮಗಳಲ್ಲೊಂದಾದ ಪ್ರಾಮುಖ್ಯ ವಿಷಯವೆಂದರೆ, ದೇಶೀಯ ಕೈಗಾರಿಕಗಳಿಗೆ ಪ್ರೋತ್ಸಾಹವನ್ನೀಯುವುದು, ಅಭಿವೃದ್ಧಿಗೊಳಿಸುವುದು, ಮತ್ತು ವಿದೇಶೀಯ ಸಾಮಾನುಗಳನ್ನು ಬಹಿಷ್ಕರಿಸುವುದಾಗಿದ ಈಗೀಗಲೇ ದೇಶೀಯ ಕಂಪೆನಿಗಳು ಸ್ಥಾಪಿತವಾಗಿ ಸಾಕಷ್ಟು ಲಾಭದಾಯಕ ಸ್ಥಿತಿಯಲ್ಲಿ ಮುನ್ನಡೆಯುತ್ತಿದ್ದು ವಿದೇಶೀ ಕಂಪೆನಿಗಳ ಕಾರಣದಿಂದ ದೇಶದ ಸಂಪತ್ತು ಹೊರಹೋಗದಂತೆ ತಡೆಗಟ್ಟುತ್ತಿವೆಯೆಂಬುದು ಸರ್ವಸಾಮಾನ್ಯವಾಗಿ ತಿಳಿದ ವಿಚಾರ ಈ ಕುರಿತು ಹೆಚ್ಚೇನೂ ಹೇಳಬೇಕಾಗಿಲ್ಲ ನಮ್ಮ ಭಾರತರಾಷ್ಟ್ರವು ವಿಶಾಲವಾದುದು ಬಹುಕಾಲದವರಗೆ ವಿದೇಶೀಯ ವಿಮಾ ಕಂಪನಿಗಳೇ ಕ್ಷೇತ್ರವನ್ನು ತಮ್ಮಧೀನಪಡಿಸಿಕೊಂಡಿದ್ದುವು ಆದರೆ ಸಾಹಸದಿಂದ ಮುಂದಾದ ದೇಶೀಯ ವಿಮಾಸಂಸ್ಥೆಗಳು ಸಾಕಷ್ಟು ಮುಂದ ಬಂದು ವಿಮಾವ್ಯಾಪಾರದಲ್ಲಿ ತಮ್ಮ ಭಾಗವನ್ನು ಗಳಿಸಿರುವುವು. ಈ ಕಾರಣದಿಂದ ದೇಶದಿಂದ ಹೊರಹೋಗುತ್ತಿದ್ದ ಕೋಟಿಗಟ್ಟಲೆ ಹಣ ದೇಶದಲ್ಲಿ ಉಳಿಯುವಂತಾಯಿತು ದೇಶಕ್ಕೆ ಅಪಾರ ಲಾಭವಾದಂತಾಯಿತು, ವಿದೇಶೀಯ ಉತ್ತಮ ವಿಮಾಸಂಸ್ಥೆಗಳೊಡನ ಸ್ಪರ್ಧಿಸಲರ್ಹತೆಯುಳ್ಳ ದೇಶೀಯ ಉತ್ಕೃಷ್ಟ ಸಂಸ್ಥೆಗಳು ಭಾರತ ರಾಷ್ಟ್ರದಲ್ಲಿ ಈಗೀಗಲೇ ನೂರಕ್ಕಿಂತ ಹೆಚ್ಚಾಗಿರುವುದೆಂದು ನಾನು ತಿಳಿಯುವರೆ ಸಂತೋಷಪಡುತ್ತೇನೆ. ಮತ್ತು ಈ ಸಂಸ್ಥೆಗಳು ಜನತೆಯ ಅನುಕೂಲತೆಗೊಪ್ಪುವ ಉತ್ತಮ ಯೋಜನೆಗಳನ್ನೆಲ್ಲಾ ಒಳಗೊಂಡಿರುವುದಾಗಿ ತಿಳಿಯುವರೆ ಅಭಿಮಾನವೆನಿಸುವುದು. ಈ ಟ್ರೋಪಿಕಲ್ ವಿಮಾ ಸಂಸ್ಥೆಯು ಇಂಥಾ ಉತ್ತಮ ಸಂಸ್ಥೆಗಳಲ್ಲೊಂದೆನ್ನಲು ನನಗೆ ಸಂತೋಷವೆನಿಸುವುದು ಮಾತ್ರವಲ್ಲದೆ ಇದರ ಉದ್ಯೋಗಸ್ಥ ಮಂಡಳಿಯ ಪರಸ್ಪರ ಐಕ್ಯತೆಯಿಂದ ಇದು ಮುಂದಣ ಉನ್ನತಿಯನ್ನು ಹೊಂದಲೆಂದು ನನ್ನ ಪ್ರಾರ್ಥನೆಯಿದೆ. ಇಂಥಾ ಕಂಪೆನಿಯ ಆರಂಭಸಮಾರಂಭವನ್ನು ಜರಗಿಸುವುದು ನನಗೆ ಬಹು ಅಭಿಮಾನಾಸ್ಪದವಾಗಿದೆ. ನನಗೆ ಈ ಉತ್ತಮ ಕಾರ್ಯಭಾಗವನ್ನು ಕೈಕೊಳ್ಳಲು ನನ್ನನ್ನು ಸ್ವಾಗತೀಕರಿಸಿದ ಮಂಡಲಕ್ಕೂ ನನ್ನೊಡನೆ ಸಹಕರಿಸಿದ ನಿಮ್ಮೆಲ್ಲರಿಗೂ ನನ್ನ ಕೃತಜ್ಞಾಪೂರ್ವಕ ವಂದನೆಗಳು.

ಅಧ್ಯಕ್ಷರು ಭಾಷಣಾನಂತರ ಡಾ। ಸಯ್ಯದ್ ಮಹಮ್ಮದ್, ಲಾಲಾ ಶಂಕರಲಾಲ ಮತ್ತು ಇನ್ನಿತರ ಡೈರೆಕ್ಟರರೊಡನೆ ಪ್ರಧಾನದ್ವಾರದೆಡೆಗೆ ನಡೆದು, ಪ್ರವೇಶ ಕಾರ್ಯವನ್ನು ವಿಧಿಯುಕ್ತ ನೆರವೇರಿಸಿದರು ಉಪಚಾರ ಸತ್ಕಾರದೊಂದಿಗೆ ಸಭಾಂತ್ಯವಾಯಿತು

ಮದನರತಿಕಾಮಶಾಸ್ತ್ರವೆಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ ಇದರಲ್ಲಿ ಎಲ್ಲಾ ದೇಶದ ಸೌಂದರ್ಯ ಕನ್ಯೆಗಳು ಮೋಹಿಸುವ ರಹಸ್ಯಗಳು, ದಾಂಪತ್ಯ ಸುಖ ವಿಲಾಸಗಳು ಸ್ತ್ರೀ ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ ಓದಿನೋಡಿರಿ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸು ಬಾರದು

ಫೋಟೋಗಳು ಸಹಿತ ಇರುವ ಪುಸ್ತಕ ರೂ 0-11-0

ಸಿಗುವ ವಿಳಾಸ —ಟಿ. ದೇವಕರ್ ಅಂಡ್ ಕಂಪನಿ, ನಂಬುಲಿಯರ್ ಬೀದಿ, ಜಿ ಟಿ ಮದರಾಸು

T V Devkar & Co, *Nambulier Street*, G T MADRAS.

ಮೋಹಧ್ವಂಸಿನಿ (REGD)



ಗರ್ಭಸ್ರಾವ್ಯಾದಿಗಳ ಮೇಲೆ ಬ್ರಹ್ಮಾಸ್ತ್ರ ನೋವನ್ನು ಕೊಡುವ ಶಸ್ತ್ರಚಿಕಿತ್ಸೆ ಅನವಶ್ಯಕ ಶರೀರವನ್ನು ಕೃಶಿಸಿ ಮಾನವನ ಜೀವ ಪ್ರಸಗ್ನೆಯ ಕೃತ್ತಿರ ವ ಬಿಳುಪು, ಕೆಂಪು, ಹರಿಗೆ ದುಃಖ, ಮೇಹಸಟ್ಟೆ, ಮಾಸ ಜ್ವರ, ಚರ್ಮ ವ್ಯಾಧಿ, ಕೀಲುಗಳನೋವು ಮೂತ್ರ ವಗೈರೆ ಚಿಹ್ನೆಗಳನ್ನು 'ಮೋಹಧ್ವಂಸಿನಿ'ಯು ಶೀಘ್ರವಾಗಿ ಹಿಂದಿ, ರಕ್ತ ಶುದ್ಧಿಮಾಡಿ ನರಗಳಿಗೆ ಬಲವನ್ನೀಯುವುದು ಸೇವಿಸುವುದಕ್ಕೆ ಹಿತಕರ ಪ್ರಯೋಗದೊತ್ತಿನ ಔಷಧವಲ್ಲಿಯೂ ಅದ್ಭುತ ಗುಣ

ದೊಡ್ಡ ಸೈಜು 4 0 0, ಮೀಡಿಯಂ ಸೈಜು 2 4 0, ಚಿಕ್ಕ ಸೈಜು 1 2 0

ಹಂಚಿಕೊಡುವ ಪ್ರಮುಖರು —ಬಾಸೆಲ್ ಮಿಶ್ಯನ್ ಪ್ರೆಸ್, ಮಂಗಳೂರು.

ಸಬ್ ಏಜಂಟರು:- ಉಡುಪಿ ಮಿಶ್ಯನ್ ರೋಪ್, ಸಂತೆಕಟ್ಟೆ, ಉಡುಪಿ ಎ. ವಿ ಶೆಣೈ, ಕಾರ್ಕಳ ಭಕ್ತಾ ಬ್ರದರ್ಸ್, ಕಾಸರಗೋಡು

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ **2-4-0.**

ಸಣ್ಣ ಸುಂದರ, ಆಕಾರಗಟ್ಟಿ ಮಟ್ಟದ ಮಶಿನರಿ ಸರಿಯಾದ ಸಮಯ ತೋರಿಸುವಂತಹದ್ದು ೧೦ ವರ್ಷದ ಗ್ಯಾರಂಟಿ ದರಂದಾಕೃತಿಯ ದೀರ್ಘ ಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ಎಕ್ಸ್‌ಟ್ರಾ 2-10-0, ಅತ್ಯುತ್ಕೃಷ್ಟವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ 4-8-0, ಚಿತ್ರದಲ್ಲಿ ತೋರುವ ಲೇಡಿ ರಿಸ್ಟ್‌ವಾಚಿಗೆ ರೂ 6 0-0 ಜುವೆಲಿರುವ ರೋಲ್ಡ್ ಗೋಲ್ಡಿಗೆ ರೂ 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ಟಿ. ಪಿ. ಪ್ರತ್ಯೇಕ

ಎಚ್ ಡಾವಿಡ್ ಅಂಡ್ ಕೊ.

ಪೋ ಬಾಕ್ಸ್ 11424 ಕಲ್ಕತ್ತಾ

H David & Co.
Post Box No 11424 Calcutta

'ನವಯುಗ'ಕ್ಕೊಪ್ಪುವ
ವಾರಪತ್ರಿಕೆ
ನವಯುಗ



ಸಮಾಜದ ಅಗ್ನಿಕುಂಡ

(ಎಸ್. ಎಲ್. ಸುಬ್ರಹ್ಮಣ್ಯಂ, ಪರಿಹದ,)

ಭಾರತದಲ್ಲಿ ದಿನದಿನವೂ ನಡೆಯುತ್ತಿರುವ-ವೃದ್ಧಿಯಾಗುತ್ತಿರುವ ನಾರೀಅಪಹರಣದ ಸಂಖ್ಯೆಯು ನಮಗೆ ನಾಚಿಕೆಯನ್ನು ಹುಟ್ಟಿಸುವುದಾಗಿದೆ. ಭಾರತದ ಸ್ತ್ರೀಯರ ಕ್ರಯವಿಕ್ರಯದ ಈ ವ್ಯವಸಾಯವನ್ನು ಸುಗಮವಾಗಿ ಸಾಗಿಸುವ ಒಂದು ಸುಸಂಘಟಿತ ಸಂಘವೇ ಇದೆ. ಪಂಜಾಬಿನಲ್ಲಿ ಸ್ತ್ರೀಯರ ಸಂಖ್ಯೆಯು ಕಡಿಮೆಯಾಗಿರುವ ಕಾರಣ ಈ ಪುಂಡರು ಅಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ಮಾಡಿಕೊಂಡಿದ್ದಾರೆ. ಕಳೆದ ವಾರ ಜಬ್ಬಲ್‌ಪುರದ ನ್ಯಾಯಾಧೀಶರ ಮುಂದೆ ಒಂದು ಹೃದಯವಿದ್ರಾವಕ ವಿಚಾರದಲ್ಲಿ ಕೇಸ್ ಇಗಿದೆ. 16 ಜನರಮೇಲೆ ನಾರೀಅಪಹರಣ ದೋಷದ ಮೇಲೆ ಮೊಕದ್ದಮೆ ನಡೆಯುತ್ತಿದೆ. ಸ್ತ್ರೀಯರನ್ನು ಮಾರುಟಮಾಡಲು ಇವರು ಅನೇಕ ಉಪಾಯಗಳನ್ನುಮಾಡುವರು. ಈ ಪುಂಡರು ಇದನ್ನು 20 ವರ್ಷಗಳಿಂದ ಮಾಡುತ್ತಿರುವರೆಂದು ತಿಳಿದುಬಂದಿದೆ. ಪೋಲಿಸ್ ರಿಪೋರ್ಟಿನಿಂದಲೇ ಇದುವರೆಗೆ ಮೇಲ್ಕಂಡ ಪುಂಡರು 250 ಸ್ತ್ರೀಯರ ಕ್ರಯ-ವಿಕ್ರಯಗಳನ್ನು ಮಾಡಿರುವರೆಂದು ತಿಳಿದುಬರುತ್ತದೆ. ಈ ಅಪಹರಣ ಮಾಡಲ್ಪಟ್ಟ ಸ್ತ್ರೀಯರಲ್ಲಿ ಅಧಿಕಾಂಶ ಹಿಂದೂವಿಧವೆಯರೆಂಬುದರಲ್ಲಿ ಸಂಶಯವಿಲ್ಲ. ಸಮಾಜದ ನಿಯಮಗಳು ವಿಧವೆಯರನ್ನು ಸುಖ-ಶಾಂತಿಗಳಿಂದ ಇರಗೊಡಿಸುವುದಿಲ್ಲ. ವಿಧವಿಧವಾದ ಅತ್ಯಾಚಾರಗಳು, ಪೈತೃಕ ಸಂಪತ್ತಿನಿಂದ ವಂಚಿಸುವಿಕೆ, ಈ ಕಾರಣಗಳಿಂದ ಸ್ತ್ರೀಯರು ಇತರಜಾತಿಗೆ ಮರುಳಾಗುವುದು ಸಹಜವೇ ಆಗಿದೆ.

ವಿಧವೆಯರ ಪ್ರಶ್ನೆ

ಇದುವರೆಗೂ ವಿಧವಾವಿವಾಹದ ಸಮಸ್ಯೆಯು ಪೂರ್ಣವಾಗಿ ತೀರ್ಮಾನವಾಗದೆ ಇರುವುದು ನಮ್ಮ ದುರ್ದೈವ. ಇದರ ಪರಿಣಾಮವಾಗಿ, ದಾಂಪತ್ಯಸುಖವನ್ನೇ ಕಂಡರಿಯದ ಸ್ತ್ರೀಯರು ಸುಲಭವಾಗಿ ಪುಂಡರ ವಶವಾಗಿ ಹೋಗುವರು. ತರಹತರಹದ ಆಸೆಗಳನ್ನು ತೋರಿಸಿ ಅವರನ್ನು ಯಾರಾದರೂ ದನಿಕರಿಗೆ ಮಾರಿಬಿಡುವರು. ನಮ್ಮ ಸಹೋದರಿಯರು ಧರ್ಮಭ್ರಷ್ಟರಾಗುವ ಈ ನಿಂದನೀಯ ಕಾರ್ಯದ ಕಾರಣವು ನಮ್ಮ ಹಿಂದೂಸಮಾಜವಲ್ಲದೆ ಬೇರೆಇಲ್ಲ! ಪುರುಷರಂತೆಯೇ ಸ್ತ್ರೀಯರಿಗೂ ಪುನರ್ವಿವಾಹವಾಗುವ ಏರ್ಪಾಡಿದ್ದಲ್ಲಿ, ದಿನದಿನವೂ ಆಗುತ್ತಿರುವ ಭ್ರೂಣಹತ್ಯೆಗಳು ಮತ್ತು ನಾರೀ ಅಪಹರಣಗಳ ಸಮಾಚಾರಗಳು ನಿಜವಾಗಿಯೂ ಕಡಿಮೆಯಾಗುತ್ತಿದ್ದವು.

ನಿಂದನೀಯ ಮನೋವೃತ್ತಿ

ವಿಧವೆಯರ ಧರ್ಮ ಮತ್ತು ಸತೀತ್ವವನ್ನು ನಾಶಮಾಡುವ ಉತ್ತರವಾದಿತ್ವವು ಬಹುಶಃ ಮನೆಯವರ ಮೇಲೆಯೇ ಇದೆ. ಒಂದು ಪ್ರತ್ಯಕ್ಷ ಉದಾಹರಣೆ:-ಒಬ್ಬ ದೊಡ್ಡ ಮನುಷ್ಯರು ಒಂದ ದಿನ ರಾತ್ರಿ ತಮ್ಮ ಪಕ್ಕದ ಮನೆಯಿಂದ ಸ್ತ್ರೀಯ ರೋದನ ಧ್ವನಿಯನ್ನು ಕೇಳಿದರು. ಮನಕರಗಿ ಹಿತ್ತಲಕಡೆಯಿಂದ ಅಕ್ರಮ(?)ಪ್ರವೇಶಮಾಡಿ ಒಳಗೆಹೋಗಲು 16-18 ವರ್ಷದ ಯುವತಿ ತನ್ನ ಕಥೆಯನ್ನು ಈ ರೀತಿ ಹೇಳಿದಳು "ನನಗೆ ಚಿಕ್ಕವಯಸ್ಸಿನಲ್ಲೇ ವಿವಾಹವಾಗಿ ವಿಧವೆಯಾದೆನು. ನನ್ನ ಗಂಡನ ಅಣ್ಣನ ದೃಷ್ಟಿ ನನ್ನಮೇಲೆ ಬಿತ್ತು. ಗರ್ಭವತಿಯಾದೆ. ಅದರಿಂದ ನನ್ನನ್ನು ಮುಕ್ತಳನ್ನಾಗಿಮಾಡಲು ಬಹಳ ಪ್ರಯತ್ನ ಮಾಡಿದರು ಆಗಲಿಲ್ಲ. ಈಗ ತೀರ್ಥಯಾತ್ರೆಯ ನೆವನದಲ್ಲಿ ನನ್ನನ್ನು ಈ ಊರಿಗೆ ಕರೆದುಕೊಂಡು ಬಂದು ಯಾರಿಗಾದರೂ ಮಾರಬೇಕೆಂದಿದ್ದಾನೆ" ನೋಡಿದಿರಾ ನಮ್ಮ ಸುಸಂಸ್ಕೃತ-ಹಿಂದೂ ಸಮಾಜವನ್ನು!

ನೈತಿಕ ಪತನ

ಇಂದು ನಮ್ಮ ನೈತಿಕ ಪತನವು ಮೇರೆ ಮೀರಿದೆ. ವಿಧವೆಯರ ಸತೀತ್ವಹರಣ ಮಾಡುವ ನರರಾಕ್ಷಸರು ನಮ್ಮಲ್ಲೇ ಇರುವರು. ಆದರೆ ಅವರು ತಮ್ಮ ಸಾಹಸಪ್ರದರ್ಶನವನ್ನು ಆ ಬಡವಿಧವೆಯರನ್ನು ವಿವಾಹವಾಗುವುದರಲ್ಲಿ ತೋರಿಸುತ್ತಿಲ್ಲ. ಅವರು ವಿಧವೆಯರನ್ನು ಗರ್ಭವತಿಯರನ್ನಾಗಿ ಮಾಡಿ, ನಂತರ ಭ್ರೂಣಹತ್ಯಕ್ಕೆ ಪ್ರಯತ್ನಪಡುವರೇ ಹೊರತು, ಆಕೆಯ ಮಕ್ಕಳನ್ನು ಪೋಷಿಸುವ ಹೊಣೆಗಾರಿಕೆಯನ್ನು ಮಾತ್ರ ಹೊರುವುದಿಲ್ಲ. ಕಾರಣ-ಅವರನ್ನು ಸಮಾಜವು ದೂಷಿಸುವುದೆಂಬ ಭಯವೇ ಅವರ. ಪತಿತರಾಗುವರೆಂಬ ಭಯ. ಇದು ಹೃದಯದೌರ್ಬಲ್ಯವಲ್ಲದೆ ಮತ್ತೇನು? ವಿಧವೆಯರ ವಿಷಯದಲ್ಲಿ ಸಹಾನುಭೂತಿ ಇರುವುದಾದರೆ ಈ ಗುಪ್ತ ಕಾಮವಾಸನೆಯ ಚಪಲವನ್ನು ಬಿಟ್ಟು ಪ್ರಕಟವಾಗಿಯೇ ಅವರನ್ನು ವಿವಾಹವಾಗಬಾರದೇಕೆ?

ದೀಪಾವಳಿ

ದೀಪಾವಳಿ ಬಂದು ಹೋಯಿತು. ಗ್ರಾಮದ ಬಡಬೋರೇಗೌಡನಾದಿಯಾಗಿ ಎಲ್ಲರೂ ಆನಂದದಿಂದ ನಲಿಯುವ ಹಬ್ಬವಿದು. ಎಲ್ಲರೂ ನೂತನ ವಸ್ತ್ರಧಾರಣೆ ಮಾಡುವರು. ಧನಲಕ್ಷ್ಮಿಯ ಪೂಜೆ ಮಾಡುವರು. ಆದರೆ ನಮ್ಮ ಹಿಂದೂಸಮಾಜವು ಪ್ರಾಚೀನ ನಿಯಮಗಳ ಮಹತ್ವವನ್ನು ಬದಿಗೊತ್ತಿದೆ. ಹಿಂದಿನಕಾಲದಲ್ಲಿ ದೀಪಮಾಲೆಗಳಿಗಾಗಿ ದೀಪಗಳನ್ನು ಕುಂಬಾರನು ಒದಗಿಸುತ್ತಿದ್ದನು. ಗಾಣಿಗನು ಎಣ್ಣೆಯನ್ನು ಕೊಡುತ್ತಿದ್ದನು. ಮನೆಯಲ್ಲಿನ ಹತ್ತಿಯನ್ನು ನೂತು ನೂಲುಮಾಡಿ ಬತ್ತಿಮಾಡಿಕೊಳ್ಳುತ್ತಿದ್ದರು. ಈ ರೀತಿ ದೀಪಾವಳಿಯಲ್ಲಿ ಸ್ವದೇಶ ಚಟುವಟಿಕೆಗಳು ಇರುತ್ತಿದ್ದುವು. ಈಗ ನೋಡಿ ದೀಪಗಳಿಗೆ ಪರದೇಶದ ಮೋಂಬತ್ತಿಗಳು. ಮದ್ದು ಪಟಾಕಿ ಆದಿಗಳಿಗೆ ಲಕ್ಷಾಂತರ ರೂಪಾಯಿಗಳು ಹರಿದು ಹೋಗುವವು. ಯಾವ ದೇಶದ ಸಮಾಜದ ಪ್ರಮುಖ ಅಂಗವಾದ ರೈತನು ದಾರಿದ್ರ್ಯದ ಕಲ್ಲಿನಲ್ಲಿ ಬೀಸಲ್ಪಟ್ಟು ತಿರುಗಿ ಪಿಟ್ಟಾಗುತ್ತಿರುವನೋ, ಅಲ್ಲಿ ಕೆಲವು ಹಣವಂತರು ವಿದೇಶಿ ವಸ್ತುಗಳದ್ವಾರಾ ತಮ್ಮ ಆಮೋದ-ಪ್ರಮೋದಗಳಿಗಾಗಿ ಹಣವನ್ನು ದುರ್ವ್ಯಯಮಾಡುತ್ತಿರುವುದು ಸಕಾರಣವಾಗಿ ತೋರುವುದಿಲ್ಲ. ಈ ಪವಿತ್ರ ದೀಪಾವಳಿಯಲ್ಲಿ ವಿದೇಶದ ಪಟಾಕಿಗಳಿಗಾಗಿ ಹಣವನ್ನು ಹಾಳುಮಾಡದಂತೆ ಮಾಡುವುದು ನಮ್ಮ ಕರ್ತವ್ಯವಲ್ಲವೆ? ಸ್ವದೇಶೀ ಪ್ರಚಾರದಿಂದ ಬಡವರಿಗೆ ನಾಲ್ಕು ಕಾಸು ದೊರೆಯುವಂತಾಗಬೇಕು.

ಏತಕ್ಕಾಗಿ ಈ ನಷ್ಟ?

ಈ ದೀಪಾವಳಿಯಲ್ಲಿ ಪಟಾಕಿಗಳ ಪ್ರಚಾರವು ಪ್ರಾಯಶಃ ಸಮಗ್ರ ಭಾರತದಲ್ಲೇ ಇದೆ. ಇದರಲ್ಲಿ ಧನದ ಅಪವ್ಯಯವಾಗುವಲ್ಲಿ, ಅನೇಕವೇಳೆ ಪ್ರಾಣಾಪಾಯವೂ ಆಗುತ್ತಿರುತ್ತದೆ.

ಪಟಾಕಿಗಳಲ್ಲಿ ಉಪ್ಪುಗಳ ಜೋಡಿಕೆಯು ಅಧಿಕವಾಗಿರುವದರಿಂದ ಉಪ್ಪುಗಳನ್ನು ತಯಾರು

NO LIFE INSURANCE?

It often takes the dependants to know the difference between "LIFE INSURANCE" and "NO LIFE INSURANCE" The difference to them is cheque or no cheque when the bread-winner dies



The above is a cheque issued recently to a claimant by the Company.

"But if any provide not for his own, and especially for those of his own house, he hath denied the faith, and is worse than an infidel."

I. TIMOTHY. V. 8.

INSURE YOUR LIFE WITH

THE CANARA MUTUAL

ASSURANCE COMPANY, LIMITED.

THE COMPANY IS MUTUAL.

THERE ARE NO SHARE HOLDERS

ಲೋಕದ ಚಿನ್ನ ಎಲ್ಲಿ ಹೋಗುತ್ತದೆ?

ಪ್ರತಿ ವರ್ಷ ೨೫೦,೦೦೦,೦೦೦ ಪವನು ಚಿನ್ನ ನುಂಗಲ್ಪಡುವುದು.

ಕಳೆದ ದಶಮಾನದಲ್ಲಿ ಹಿಂದೂದೇಶವು ಅಪಾರ ಚಿನ್ನವನ್ನು ಹೊರಕಳುಹಿಸಿರುವುದು.

೧೯೩೧ರಿಂದ ೩೬ನೇ ಇಸವಿಯ ವರೆಗೆ ಐದೇ ವರ್ಷಗಳಲ್ಲಿ

೨೦೫,೦೦೦,೦೦೦ ಪವನು ಚಿನ್ನ ರಫ್ತುಮಾಡಿರುವುದು.

ಲೋಕದ ಕಾರ್ಯಕಲಾಪಗಳಲ್ಲಿ ಚಿನ್ನಕ್ಕೆ ಮಹತ್ವದ ಸ್ಥಾನವಿದೆ. ಜನರು ಚಿನ್ನ ಪಡೆಯುವುದಕ್ಕಾಗಿ ಚಡಪಡಿಸುತ್ತಾರೆ. ಪ್ರತಿವರ್ಷ ಲೋಕದಲ್ಲಿ 250,000,000 ಪವನುಗಳಷ್ಟು ಚಿನ್ನವು ಉತ್ಪತ್ತಿಯಾಗುವುದಾದರೂ ಅದೆಲ್ಲಾ ತಳವಿಲ್ಲದ ಹೊಂಡಕ್ಕೆ ಸೇರಿ ಅದೃಶ್ಯವಾಗುವಂತೆ ತೋರುವುವು.

ರಷ್ಯವು ಈಗ ಚಿನ್ನವನ್ನು ಬಹಳವಾಗಿ ರಫ್ತುಮಾಡಹತ್ತಿರುವುದು. ಈಗಣ ಪ್ರಮಾಣದಲ್ಲಿಯೇ ಅದು ಚಿನ್ನವನ್ನು ಉತ್ಪಾದಿಸುತ್ತಾ ಹೋದ ಪಕ್ಷದಲ್ಲಿ ಚಿನ್ನದ ಪೂರೈಕೆಯ ಭವಿಷ್ಯದಲ್ಲಿ ದೊಡ್ಡ ಕ್ರಾಂತಿಯೇ ಆಗಲಿರುವುದು. ಲೋಕದ ಇತರ ದೇಶಗಳ ಚಿನ್ನದ ಉತ್ಪತ್ತಿಯು ಅಷ್ಟೇನೂ ಹೆಚ್ಚಿಗೆಯಾಗದಿರುವಾಗ ರಷ್ಯವು 1929 ರಿಂದ ತನ್ನ ಚಿನ್ನ ಸಂಗ್ರಹವನ್ನು ಸೇಕಡ 700ರಷ್ಟು ಹೆಚ್ಚಿಸಿದೆ. ಲೋಕದ ಚಿನ್ನದ ಉತ್ಪತ್ತಿಯಲ್ಲಿ ಐದರಲ್ಲೊಂದಂಶವು ರಷ್ಯದಿಂದ ಸಿಗುತ್ತದೆ. ಚಿನ್ನದ ಉತ್ಪತ್ತಿಯಲ್ಲಿ ರಷ್ಯಕ್ಕೆ ಎರಡನೇ ಸ್ಥಾನವಿದೆ. ಈಗ ರಷ್ಯನರು ಸೈಬೀರಿಯ ಪ್ರದೇಶದ ಅಪಾರ ಖನಿಜ ಸಂಪತ್ತನ್ನು ಸೂರೆಮಾಡಲು ಎಡೆಬಿಡದೆ ಬಹಳವಾಗಿ ಪ್ರಯತ್ನಿಸುತ್ತಿರುವರು. ಸೈಬೀರಿಯದ ಗಣಿಗಳಲ್ಲಿ, ಕೆಲವು ವೇಳೆ ಅತಿ ದೊಡ್ಡ ಚಿನ್ನದ ಗಟ್ಟಿಗಳು ದೊರೆಯುತ್ತವೆ. 1934ರಲ್ಲೊಮ್ಮೆ 16ರಾತ್ತಲ್ ಭಾರದ ಚಿನ್ನದ ಗಟ್ಟಿ ಸಿಕ್ಕಿತ್ತು. 1935ರಲ್ಲಿ 3000ಪವನಿಗಿಂತಲೂ ಮಿಕ್ಕ ಬೆಲೆ ಬಾಳುವ 443¼ಔನ್ಸ್ ತೂಕದ ಚಿನ್ನದ ಗಟ್ಟಿ ಸಿಕ್ಕಿದ್ದಿತು.

1929ರ ನಂತರ ಈಗ ಲೋಕದ ಚಿನ್ನದ ಸರಬರಾಯಿಯು ಎರಡು ಪಾಲು ಹೆಚ್ಚಿರುವುದು. ಈ ಚಿನ್ನವೆಲ್ಲಾ ಎಲ್ಲ ಹೋಗುತ್ತವೆಂಬುದು, ಲೋಕದ ಅತಿ ದೊಡ್ಡದಾದ ಮೂರು ಕೇಂದ್ರ ಬೇಂಕುಗಳ ಚಿನ್ನ ಸಂಗ್ರಹದ ಪ್ರಮಾಣವನ್ನು ತಿಳಿದುಕೊಂಡರೆ ವಿದಿತವಾಗುತ್ತದೆ. 1929ರಲ್ಲಿ ಯುನೈಟೆಡ್ ಸ್ಟೇಟ್ಸಿನಲ್ಲಿ 138,000,000 ಔನ್ಸ್ ಚಿನ್ನವು ಸಂಗ್ರಹಿಸಲ್ಪಟ್ಟಿತ್ತು. 1936ರಲ್ಲಿ ಇದು 322,000,000ಔನ್ಸುಗಳಿಗೇರಿರುವುದು. ಇದೇ ವರ್ಷಗಳಲ್ಲಿ ಇಂಗ್ಲೆಂಡಿನ ಚಿನ್ನ ಸಂಗ್ರಹವು 34,000,000 ಔನ್ಸುಗಳಿಂದ 100,000,000ಔನ್ಸುಗಳಿಗೇರಿರುತ್ತದೆ. ಪೌರ್ವಾತ್ಯ ದೇಶಗಳು ಅಪಾರ ಚಿನ್ನವನ್ನು ಆಭರಣ ಮೊದಲಾದುವುಗಳ ರೂಪದಲ್ಲಿ ಸಂಗ್ರಹಿಸಿಟ್ಟಿರುತ್ತವೆ. ಚಿನ್ನವನ್ನು ಹುಗಿದಿಡುವ ಪದ್ಧತಿಯು ಇನ್ನೂ ಪೌರ್ವಾತ್ಯ ದೇಶಗಳಲ್ಲಿ ನಿಂತುಹೋಗಿಲ್ಲ.

ಕಳೆದ ದಶಮಾನದಲ್ಲಿ ಹಿಂದೂದೇಶವು ಅಪಾರ ಚಿನ್ನವನ್ನು ರಫ್ತುಮಾಡಿರುತ್ತದೆ. 1931ರಿಂದ 36ರ ವರೆಗೆ ರಫ್ತುಮಾಡಿದ ಚಿನ್ನವೇ 205,000,000ಪವನುಗಳ ವಿಸ್ಮಯಕರ ಸಂಖ್ಯೆಗೇರಿದೆ. ಇದರಲ್ಲಿ ಹೆಚ್ಚಿನಂಶ ಹುಗಿದಿಡಲ್ಪಟ್ಟುದು; ಕೆಲವಂಶ ಗಣಿಗಳಿಂದ ಪಡೆದುದು. ಈಗ ಚಿನ್ನದ ಬೆಲೆಯು ಔನ್ಸಿಗೆ ರೂ 93-5-4ಆಗಿದೆ. ಇದು ಹಿಂದಿನ ಬೆಲೆಗಿಂತ ಸೇಕಡ 75ರಷ್ಟು ಅಧಿಕವಾಗಿರುತ್ತದೆ. ಆದರೂ ಚಿನ್ನಕ್ಕಾಗಿ ನಡೆಯುವ ಚಡಪಡಿಕೆಯು ಹೆಚ್ಚಿಗೆಯೇ ಆಗಿದೆ. ಆದುದರಿಂದ ಎಷ್ಟೊಂದು ವೆಚ್ಚಮಾಡಿಯಾದರೂ ಗಣಿಗಳಿಂದ ಚಿನ್ನ ತೆಗೆಯುವುದರಿಂದ, ಮತ್ತು ಹೊಸ ಗಣಿಗಳನ್ನು ಶೋಧಿಸುವುದರಿಂದ ಹೆಚ್ಚಿನ ಲಾಭದೊರೆಯುವುದಂತೂ ನಿಶ್ಚಯ. ಆದುದರಿಂದ ನಾಗರಿಕತೆಯ ಆರಂಭದಿಂದ ನಡೆದುಬಂದ 'ಹೊನ್ನಿಗಾಗಿ ಹೋರಾಟ'ವೆಂಬ ಮಾತು ಮುಂದೆಯೂ ನಿಜವಾಗಲಿರುವುದು. ಚಿನ್ನಕ್ಕಾಗಿ ಮಾನವರು ಅವಿಶ್ರಾಂತವಾಗಿ ದುಡಿದು ಪ್ರಾಣಕೊಟ್ಟಿರುವರು. ಭಯಂಕರ ಕೃತ್ಯಗಳನ್ನು ಮಾಡಿರುವರು. ಚಿನ್ನದ ಲೋಭವು ಮಾನವರನ್ನು ಎಂತೆಂತಹ ಕೃತ್ಯಗಳನ್ನೆಲ್ಲಾ ಮಾಡಲು ಪ್ರೇರೇಪಿಸಿಲ್ಲ!

ಚಿನ್ನದಿಂದ ಹೆಚ್ಚಿನ ಜನೋಪಕಾರವೂ ಆಗಿರುತ್ತದೆ. ಚಿನ್ನದ ಗಣಿಯು ಕಂಡುಹಿಡಿಯಲ್ಪಟ್ಟುದರಿಂದಲೇ ಹಲವು ಅನಾಗರಿಕ ಪ್ರದೇಶಗಳು ನಾಗರಿಕತೆಯ ಅನುಕೂಲತೆಗಳನ್ನು ಪಡೆದು ಸುಖಸಂಪತ್ತಿನಿಂದ ನಲಿಯುವಂತಾಗಿವೆ. ಕಳೆದ ಶತಮಾನದ ಮಧ್ಯ ಭಾಗದಲ್ಲಿ ಆಸ್ಟ್ರೇಲಿಯದಲ್ಲಿ ಚಿನ್ನದ ಗಣಿಯು ಕಂಡುಹಿಡಿಯಲ್ಪಟ್ಟುದೇ ಅದರ ಮಹತ್ವಿಕೆಗೆ ಮೂಲಕಾರಣವಾಯಿತು. ಇದೇ ರೀತಿ ಅಲಾಸ್ಕ ಮತ್ತು ದಕ್ಷಿಣ ಆಫ್ರಿಕದಲ್ಲಿ ಚಿನ್ನದ ಗಣಿಗಳ ಶೋಧನೆಯಾದುದೇ ಆ ದೇಶಗಳ ಪ್ರಚಂಡ ಅಭಿವೃದ್ಧಿಗೆ ಕಾರಣವಾಯಿತು.

ಮೆಕ್ಸಿಕೋ ಮತ್ತು ದಕ್ಷಿಣ ಅಮೇರಿಕವನ್ನು ಗೆದ್ದ ಸ್ಪೆನಿಶ್ ಜನರು ಚಿನ್ನವನ್ನು ಶೋಧಿಸಿಕೊಂಡು ಹೋದವರು. 1492ರಲ್ಲಿ ಕೊಲಂಬಸನು ಅಮೇರಿಕವನ್ನು ಕಂಡುಹಿಡಿದಂದಿನಿಂದ ಅಮೇರಿಕದಲ್ಲಿ ಒಟ್ಟು 6,000,000,000ಪವನಿನಷ್ಟರ ಚಿನ್ನವು ಗಣಿಗಳಿಂದ ತೆಗೆಯಲ್ಪಟ್ಟಿದೆಯೆಂದು ಅಂದಾಜುಮಾಡಲಾಗಿದೆ. 1848ರಲ್ಲಿ ಕೆಲಿಫೋರ್ನಿಯದಲ್ಲಿ ಚಿನ್ನವು ಕಂಡುಹಿಡಿಯಲ್ಪಟ್ಟ ಮೇಲೆ ಅಮೇರಿಕದ ಚಿನ್ನ ಸರಬರಾಯಿಯು ಬಹಳವಾಗಿ ಹೆಚ್ಚಿತು. ಇಷ್ಟರವರೆಗೆ ತೆಗೆಯಲ್ಪಟ್ಟಿರುವ ಚಿನ್ನದ ಒಟ್ಟು ತೂಕವು 30,000ಟನ್ನುಗಳಾಗಿವೆ.

ಚಿನ್ನದ ನಾಣ್ಯಗಳು ಚಲಾವಣೆಯಲ್ಲಿದ್ದಾಗ ಲೋಕದಲ್ಲಿ ಉತ್ಪತ್ತಿಯಾಗುತ್ತಿದ್ದ ಸುಮಾರು ಅರೆವಾಸಿ ಚಿನ್ನವು ನಾಣ್ಯಗಳಿಗಾಗಿ ಉಪಯೋಗಿಸಲ್ಪಡುತ್ತಿತ್ತು. ಹಿಂದೂದೇಶವು ಅಪಾರ ಚಿನ್ನವನ್ನು ಸಂಗ್ರಹಿಸುತ್ತಿತ್ತು. ಇದರಲ್ಲಿ ಮೂರರಲ್ಲೊಂದಂಶವು ಆಭರಣಗಳಿಗಾಗಿ ಉಪಯೋಗಿಸಲ್ಪಡುತ್ತಿತ್ತು. ಈಗ ಚಿನ್ನದ ನಾಣ್ಯ ಚಲಾವಣೆಯು ನಿಂತು ಹೋಗಿರುವುದಾದರೂ ಬೇಂಕಿನ ನೆಲಮಾಳಿಗೆಗಳಲ್ಲಿ ಸಾಧ್ಯವಾದಷ್ಟು ಹೆಚ್ಚಿನ ಚಿನ್ನವು ಸಂಗ್ರಹಿಸಲ್ಪಡುತ್ತಿರುವುದು. ಆದುದರಿಂದ ಚಿನ್ನಕ್ಕಾಗಿ ಹೋರಾಟವು ಮುಂದೆಯೂ ಬಹಳವಾಗಿ ನಡೆಯುವುದು.

ಬ್ರಿಟಿಷ್ ಸಾಮ್ರಾಜ್ಯದ ಅತಿದೊಡ್ಡ ಚಿನ್ನದ ಗಣಿಯು ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲಿನಲ್ಲಿದೆ. ಅದರಿಂದ ಇನ್ನೂ 1,000,000,000ಪವನುಗಳಷ್ಟರ ಚಿನ್ನ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ಕೆನಡದ ಉತ್ತರ ಧ್ರುವ ಪ್ರದೇಶದ ಚಿನ್ನವನ್ನು ಇನ್ನೂ ಯಾರೂ ಮುಟ್ಟಿಲ್ಲ. ಪಶ್ಚಿಮ ಆಸ್ಟ್ರೇಲಿಯದಲ್ಲಿ ಹೆಚ್ಚಿನ ಚಿನ್ನ ದೊರೆಯಲಿದೆ. ಆದರೆ ಈ ಗಣಿಗಳಿಂದೆಲ್ಲಾ ವಿಸ್ಮಯಕರ ಪ್ರಮಾಣದಲ್ಲಿ ಚಿನ್ನವೇನೂ ದೊರೆಯಲಾರದು. ರಷ್ಯದ ಗಣಿಗಳಿಂದ ಮಾತ್ರ ವಿಚಿತ್ರ ಪ್ರಮಾಣದಲ್ಲಿ ಚಿನ್ನ ಪಡೆಯಬಹುದಾಗಿದೆ.

...ಮಾಡುವುದೂ ಸಹ ಕಡಿಮೆಯಾಗಿಯೇ ಆಗುತ್ತದೆ. ಈ ಸಮಯದಲ್ಲಿ ನಾವು ಅನೇಕ ವೃತ್ತಪತ್ರಿಕೆಗಳಲ್ಲಿ ಇದರಿಂದಾಗುವ ಅನಾಹುತಗಳ ವರದಿಯನ್ನು ನೋಡುತ್ತಲೇ ಇರುವೆವು. ಆದುದರಿಂದ ಮುಖಂಡರು ಈ ವಿಚಾರದಲ್ಲಿ ತಕ್ಕ ಪ್ರಚಾರವನ್ನು ಮಾಡಿ ಜನಸಾಮಾನ್ಯರಿಗೆ ತಿಳುವಳಿಕೆಯನ್ನುಂಟುಮಾಡಬೇಕು. ಕೋಟ್ಯಂತರ ಪ್ರಜೆಗಳು ಹಸಿವಿನ ಜ್ವಾಲೆಯಲ್ಲಿ ಬೆಂದು ಬೂದಿಯಾಗುತ್ತಿರುವಾಗ, ಕೆಲವು ನಿಮಿಷಗಳ ಮನೋರಂಜನೆಗಾಗಿ ಲಕ್ಷಾಂತರ ರೂಪಾಯಿಗಳನ್ನು ಹಾಳುಮಾಡುವುದು ಸರ್ವಥಾ ಯೋಗ್ಯವಲ್ಲವೆಂಬುದನ್ನು ತಿಳಿಯ ಹೇಳಬೇಕು. ಈ ಬಾಬಿಗಾಗಿ ಸುರಿಯುವ ಹಣವನ್ನು ದೇಶ ಮತ್ತು ಸಮಾಜದ ಕಲ್ಯಾಣದ ದೃಷ್ಟಿಯಿಂದ ತಡೆಯುವುದು ಪ್ರತಿಯೊಬ್ಬ ದೇಶಭಕ್ತನ ಕರ್ತವ್ಯವಾಗಿದೆ. ಮತ್ತು ಇದೇ ಹಣವನ್ನು ಸಾರ್ವಜನಿಕ ಕಾರ್ಯಗಳಿಗೆ ಉಪಯೋಗಿಸುವ ಯೋಜನೆ ಮಾಡುವುದೂ ದೇಶದ ಹಿತದೃಷ್ಟಿಯಿಂದ ಹಿತಕರವಲ್ಲವೆ?

ಕೂದಲು

ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟಹಣಕ್ಕೆ ಡಬ್ಬಲ್ ವಾಪಾಸು ಕೊಡಲು ಗ್ಯಾರಂಟಿ ಎಂಬುದಕ್ಕೆ ದೊರೆತ ನೂರಾರು ಸರ್ಟಿಫಿಕೇಟುಗಳೇ ಸಾಕ್ಷಿ.

ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ 5-0-0. ಕಾಲಂಶಕ್ಕೂ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ 7-0-0 ಬೆಲೆಯ ಎಣ್ಣೆ ಬೇಕಾಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ:

HAZRA & Co.,

P. O. Bihar Nursery, (DARBHANGA)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" ರಿಜಿಸ್ಟರ್ಡ್

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬೌಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಸುರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪದಾರ್ಥವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲ್ಲರ್' ಹೆಸರನ್ನೂ ಗಮನಿಸಿರಿ.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer **Dr. D. N. JASANI,** Vitalbhai Patel Road, BOMBAY 4.

ಆಯವ್ಯಯದ ಅಚ್ಚುಗಟ್ಟು (BUDGET)

(ಲೇಖಕರು.-ಬಿ. ಶ್ಯಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ., ಉಡುಪಿ.)

["Afflictions are of two kinds. The one we bring upon ourselves through our own misconduct, the other is laid upon us by God for our own advantage. We receive many blessings in disguise. Troubles sent by God serve to draw out our manly energies. They make us engage ourselves vigorously in the business of life. They strengthen our self-dependence and our trust in Him." When the sinful man suffers, he derives consolation from the fact that a righteous man also suffers in this world. This malobservation of the wicked man misleads people. Life has meaning. It must be properly interpreted. The phenomenon of life very often deceives us. We must see the noumenon within the phenomenon.]

ಶೆಟ್ರು—ಸ್ವಾಮಿ, ಆ 'ಬಜೆಟ್ಟಿನ ಸ್ಥೂಲ, ಸೂಕ್ಷ್ಮ ರೇಖೆಗಳನ್ನು ಹೇಳುತ್ತೇನೆಂದ್ರಿ, ನೆನಪು ಆ ದಿನ? ಅದೇನು ದಯಮಾಡಿ ವಿವರಿಸಿ ಹೇಳಿಬಿಡಿ. ನಾನು ಹ್ಯಾಗೂ ಆ ವಿಚಾರದಿಂದ ಕೆಟ್ಟೆ; ನನ್ನ ಅನುಭವದಿಂದ ಬೇರೆಯವರಾದರೂ ಒಳ್ಳೇಯದಾಗಲಿ ನೋಡಿ ಸ್ವಾಮಿ, ಒಬ್ಬೊಬ್ಬರು ಒಂದೊಂದು ನಮೂನೆಯ ತಪ್ಪು ಹೆಜ್ಜೆಯನ್ನು ಇಟ್ಟು ಕೆಡುತ್ತಾರೆ, ಕೆಟ್ಟು ಕಂಗಾಲಾಗುತ್ತಾರೆ. ಮೊನ್ನೆ ಒಬ್ಬರು ಹೇಳುತ್ತಾರೆ— ಅಂದ್ರೆ ಪ್ಯಾಟೆ ಅತ್ತ ಕಡೆಗೆ ನಾನು ಹೋಗಿದ್ದೆ. ಅಲ್ಲಿ ಬಾಯಾರಿಕೆ ಕುಡಿಯುವ ಬಗ್ಗೆ ಕಾಫಿಹೋಟೇಲಿಗೆ ಹೋದೆ. ನನ್ನ ಸಂಗತಿಯನ್ನು ಆಲೋಚನೆಮಾಡುತ್ತಾ ಒಂದೊಂದೇ ತುಂಡು ಬಜೆಯನ್ನು ತಿನ್ನುವಾಗ, ಸ್ವಲ್ಪ ಸ್ವಲ್ಪವಾಗಿ ಬಿಸಿ ಬಿಸಿ ಕಾಫಿಯನ್ನು ತುಟಿಯಿಂದ ಹೀರುವಾಗ ನನ್ನ ದುಃಖವನ್ನು ನಿವಾರಿಸುವ ಇನ್ನೊಂದು ದುಃಖಸೂಚನೆಯು ಮತ್ತೊಂದು ಕಡೆಯಿಂದ ಒದಗಿತ್ತು. ಇತ್ತು ಇದೇನುಗೊತ್ತೇ-ನಾನು ಕೂತುಕೊಂಡ ಕೋಣೆಯಲ್ಲಿಯೇ ಸ್ವಲ್ಪದೂರದಲ್ಲಿ ನನ್ನ ಹಾಗೆಯೇ ನಾಲ್ಕೈದು ಜನರು ಕಾಫಿ ಕುಡಿಯಲು ಕೂತುಕೊಂಡಿದ್ದರು. ಅವರಲ್ಲಿ ಒಬ್ಬರು ಹೇಳುತ್ತಾರೆ, "ನೋಡೀ ಕುಟುಂಬಕ್ಕೆ ಅನ್ನಕೊಟ್ಟಾನು ಎಂತ ತನ್ನ ಹತ್ತಿರ ಇದ್ದ ಆಸ್ತಿಗೆ ಸಾಲಹೊರಿಸಿ ಮಗನಿಗೆ ಬರಹ ಕಲಿಸುವವನು ನನ್ನನ್ನು ನೋಡಿ ಮರೆಯಬೇಕು. ನನಗೆ ಆರುಜನ ಗಂಡುಮಕ್ಕಳು, ನಾಲ್ಕು ಜನ ಹೆಣ್ಣುಮಕ್ಕಳು. ಅಕ್ಕಿಗೆ ತುಂಬಾ ಕ್ರಯವಿರುವ ಸಮಯದಲ್ಲಿ ನಾನು ಆಸ್ತಿ ಜವಾಬ್ದಾರಿಯಲ್ಲಿ ಸಾಲತೆಕ್ಕೊಂಡು ನನ್ನ ಹಿರೇ ಮಗನಿಗೆ ಯಮ್. ಬಿ. ವರೇಗೆ ಕಲಿಸಿದೆ. ಈಗ ಡಾಕ್ಟರಿಕೆ ಮಾಡುತ್ತಾ ಇದ್ದಾನೆ. ನಾನೇನು ನೆನಸಿದ್ದೆ ಗೊತ್ತೇ? ಇವನು ಮುಂದಕ್ಕೆ ಹೇರಳ ಸಂಪಾದನೆಮಾಡಿ, ಈ ಸಾಲವನ್ನು ತೀರಿಸಿ, ಆಸ್ತಿಯನ್ನು ಬಿಡಿಸಿ, ಕುಟುಂಬವನ್ನು ಪೋಷಿಸಿ, ಎಲ್ಲರನ್ನೂ ಸುಧಾರಿಸಿ, ಕುಟುಂಬವನ್ನು ಬೆಳಗಿಸಿಯಾನು-ಎಂದು. ಆದರೆ ನೆನಸಿದ್ದೇನ? ಆದದ್ದೇನು! ಅವನ ಸಂಪಾದನೆ ಎಷ್ಟಿದ್ದರೂ ಅವನಿಗೂ ಅವನ ಹೆಂಡ್ತಿ ಸ್ಪೈಲಿಗೂ ಸಾಲುವುದಿಲ್ಲ. ಎಷ್ಟು ಆಗುತ್ತದೆಂತಲೂ ನಮಗೊತ್ತಿಲ್ಲ. ಯಾವಾಗ ಕೇಳಿದರೂ ಹಣವಿಲ್ಲವಂತೆ. ಆಸ್ತಿಯ ಸಾಲ ಏರಿ ಬಂದದೆ. ಆದರ ಗೊಡವೆ ನಾನೀಗ ಬಿಟ್ಟೇಬಿಟ್ಟಿದ್ದೇನೆ. ಕಟ್ಟಿಕೊಂಡುಮಾಡುವುದೇನು? ಅವನ ಹತ್ತಿರ ಹೇಳಿದರೆ ಮುಖತಿರುಗಿಸಿಬಿಡುತ್ತಾನೆ. ಅವನ ಕಷ್ಟವನ್ನೇ ಹೇಳುತ್ತಾನೆ. ಆಸ್ತಿ ಹ್ಯಾಗೂ ಹೋಯಿತು. ಮಗನಿಗೆ ಹಾಕಿದ ಹಿಂಡಿಯಿಂದ ಹಾಲುಸಿಗುವುದಿಲ್ಲ. ನನ್ನ ಉಳಿದ ಮಕ್ಕಳ ಗೋಳೇ ಗೋಳು—'ನಮಗೆ ವಿಷ ಕೊಟ್ಟಿರಲ್ಲಾ' ಎಂದು. ಕುಟುಂಬ ವೃದ್ಧಿಯಾದೀತು, ಕುಟುಂಬಕ್ಕೆ ಶ್ರೇಯಸ್ಸು ಬಂದೀತು ಎಂದು ಸರ್ವಸ್ವವನ್ನೂ ಒಬ್ಬ ಮಗನಿಗೆ ಖರ್ಚುಮಾಡಿ ನಾಳೆ ಅವನು ದೊರೆಯಾಗಿ ಬಾಕಿಯುವರನ್ನು ಪೊರೆಯುವನು ಎಂದು ಈಗಿನಕಾಲದಲ್ಲಿ ತಪ್ಪು ಆಲೋಚನೆಮಾಡುವವರು ನನ್ನಿಂದ ಒಂದು ಬುದ್ಧಿವಾದವನ್ನು ಕಲಿತುಕೊಳ್ಳಬೇಕು" ಅಂದರು. ಇವರು ಬಹುಶಃ ಮಕ್ಕಳ ಸಂತಾನಕ್ಕೆ ಸೇರಿದವರೆಂದು ನನ್ನ ಭಾವನೆ. ನಾನು ಅವರೊಡನೆ ಕೇಳಲಿಲ್ಲ. ಕಾಫಿಕುಡಿದು ಸೀದ ಬಂದುಬಿಟ್ಟೆ. ಇದನ್ನು ಕೇಳಿ ನನ್ನ ಹೊಟ್ಟೆಯ ಬೆಂಕಿ ಸ್ವಲ್ಪ ಶಾಂತವಾಯಿತು-ಸ್ವಾಮಿ, ಈತಮ್ಮ 'ಬಜ್ಜೆಟ್' ಎಂಬ ಮದ್ದು ಈ ಎಲ್ಲಾ ತರದ ಆರ್ಥಿಕ ರೋಗಗಳಿಗೂ ರಾಮಬಾಣವೇ?

ಲೇಖಕ—ಹೌದು-ಅವೆಲ್ಲಕ್ಕೂ ಶ್ರೇಷ್ಠವಾದ ಔಷಧ. ಈ ಭವಸಾಗರದಲ್ಲಿ ಮುಳುಗದೆ ತೇಲಿ ಪಾರಾಗಬೇಕೆಂಬುವರೆಲ್ಲರೂ ಸೇವಿಸಬೇಕಾದ ಮದ್ದು ನೋಡ್ರೀ ಅದು! ನಿಮ್ಮ ಡಂಭದ ನೆಂಟರನ್ನೂ ಉಳಿಸೀತು

ಶೆಟ್ರು—ನಮ್ಮ ಡಂಭದ ನೆಂಟ್ರು ಬಚಾವಾಗುವ ಹಾಗೆ ಇಲ್ಲೆ. ಸ್ವಾಮಿ, ಅದು "ಯುನೈಟೆಡ್ ಸ್ಟೇಟ್ಸ್" ಮರ್‌, ಅದು ಪೂರ್ಣ ಮುಳುಗಿ ಎರಡು ಮೂರು ಮೈಲು ಅಡಿಗೆ ಹೋಗಿ ಆಯಿತು. ಅದು ಇನ್ನು ಪ್ರಯೋಜನವಿಲ್ಲ. ಇದು ಮುಳುಗುವ ರಭಸದಲ್ಲಿ ನಮ್ಮದ್ದಾಂಡಿ ಸಹಾ ಮುಳುಗಿ 'ಕಲಾಸ್' ಏನು ಪೋಕ್ ಸ್ವಾಮಿ ಅವರದ್ದು! ಅವರು ಮುಳುಗದೆ ಉಳಿಯೋದು ಹ್ಯಾಗೆ? ನಿನ್ನೆ ಒಬ್ಬ ಅತ್ತ ಕಡೆಯವ ನನ್ನ ಹತ್ತರ ಹೇಳುತ್ತಾನೆ—"ಶೆಟ್ರೇ, ನಿಮಗೆಯಾರು ಈ ನೆಂಟಸ್ಥಿಕೆಯ ಹುಚ್ಚು ಹಿಡಿಸಿದ್ದು. ನನ್ನ ಹತ್ತರ ಕೇಳುತ್ತಿದ್ದರೆ ನಾನು ಅದನ್ನು ನಿಮಗೆ ಎಷ್ಟು ಮಾತ್ರಕ್ಕೂ ಶಿಫಾರಸು ಮಾಡುತ್ತಿದ್ದಿಲ್ಲ ಅದು ಬೇಗಡೆ ನೋಡಿ, ಕೆಲವು ವರ್ಷದ ಹಿಂದೆ ಆ ಆಸ್ಪತ್ರೆಯಲ್ಲಿ ಹೋಗಿ ಕುರವಿಗೆ ತಾಗಿಸಲಿಕ್ಕೆ ಸ್ವಲ್ಪ ತುಪ್ಪಕೊಡಿಯೆಂದರೆ ಅದೆಲ್ಲಾ ನಿಮ್ಮ ಡಂಭದ ನೆಂಟರಲ್ಲಿಗೆ ತುಪ್ಪದ ಅನ್ನ, ಕೋಳಿ ಪದಾರ್ಥಮಾಡುವುದುಕ್ಕೆ ಹೋಗಿದೆ ಅಂದುಹೇಳುತ್ತಿದ್ದರು. ಈಗ ಅವರ ಆ ನಿಮ್ಮ ಥಳಕು ನೆಂಟರ ಅವಸ್ಥೆ ಎಲ್ಲಿ ವರೆಗೆ ಬಂದಿದೆ ಅಂದರೆ, ಅವರಲ್ಲಿಗೇನೇ ಹೋಗಿ ಸ್ವಲ್ಪ ತುಪ್ಪಕೊಡಿ ಅಂದರೆ 'ನಮಗೇನೇ ಕುರುವಿಗೆ ತಾಗಿಸಲಿಕ್ಕೂ ಒಂದು ಬೊಟ್ಟು ಇಲ್ಲವಲ್ಲಾ!' ಅಂತಹೇಳುತ್ತಾರೆ-ನೋಡಿದಿರಾ ನಿಮ್ಮ ನೆಂಟರು" ಅಂದ ಅವರನ್ನು ಬಿಟ್ಟುಬಿಡಿ, ಬೇಗಡೆಗಳು. ಬಹಳ ವಿಪರೀತ ಮಾಡಿದುವು ಕೆಲವು ಸಮಯ. ನಾಚಿಕೆ ಇಲ್ಲದವು. ತಮಗಿಂತ ಮೇಲೆ ಯಾರೂ ಇಲ್ಲವೆಂತ ಒಮ್ಮೆ ಕುಣಿದವು. ಅವುಗಳನ್ನು ನೆನಸುವಾಗ ನನಗೆ ಈಗ ನಗೆ ಬರುತ್ತದೆ. ಅವಳು ಅಲ್ಲಿಗೆ ಕೊಟ್ಟ ನನ್ನ ಮಗಳು ಈಗ ಏಳುತಿಂಗಳ ಬಸ್ರಿ. ಸುರುವಿನ ಎರಡು ಸಾರಿ ಹೆರಲಿಕ್ಕೆ ಗಿರಲಿಕ್ಕೆ ಅವಳ ಗಂಡ ಹೆಂಗಸರ ಆಸ್ಪತ್ರೆಗೆ ಕಾರಿನಲ್ಲಿ ತಂದಿದ್ದ—ಈ ಸಾರಿ ಏನುಮಾಡುವುದಾ? ಅಂದರೆ ಅವನ ಕಾರ್ ಬಿದ್ದಿದೆ. ನನ್ನಿಂದ ಈ ಬೇಗಡೆರೋಗ ಎಲ್ಲಾ ಸಾಧ್ಯವಿಲ್ಲ—ಎಂಥಾದ್ದು! ಸಿಕ್ಕಿಬಿತ್ತಲ್ಲಾ. ಸ್ವಾಮಿ! ಸ್ವಲ್ಪ ನಿಮ್ಮ ಬಜೆಟ್ ಎಂಬ ಮದ್ದನ್ನು ಹೇಗೆ ಉಪಯೋಗಿಸುವುದು ಎಂದು ಹೇಳಿಬಿಡಿ. ವಿಪರೀತ ಹೋಗಿರುವ ನನ್ನ ವ್ಯಾಧಿ ಪೂರ್ಣಗುಣವಾಗಿ ಮುಂಚಿನ ಹಾಗೆ ಸೌಖ್ಯದಲ್ಲಿರಲಿಕ್ಕೆ ಯಾವ ಮದ್ದಿನಿಂದಲೂ ಆಗಲಿಕ್ಕಿಲ್ಲ, ಚಿಂತೆಯಿಲ್ಲ—ಸ್ವಲ್ಪ ಮಟ್ಟಿಗೆ ಸಾಯುವವರೇಗೆ ಬದುಕ ಬಹುದಲ್ಲವಾ! ನೋಡುವ ಹೇಳಿ.

ಲೇಖಕ—ವಿಪರಿಮಿತ ಜೀವನದ ಪೆಟ್ಟನ್ನು ಸಹಿಸಲಿಕ್ಕೆ ಯಾರ ಆರ್ಥಿಕ ಸ್ಥಿತಿಗೂ ಸಾಧ್ಯವಿಲ್ಲ. ಶೆಟ್ರೇ, ಆದಕಾರಣ ಒಬ್ಬರಿಗೊಬ್ಬರು ನಮ್ಮಲ್ಲಿ ಒಣ ಡಂಭಾಚಾರಕ್ಕಾಗಿ ಕೊಟ್ಟುಕೊಳ್ಳುವ ಆ 'ನಿಮಗೇನು! ನೀವು ತಾಪತ್ರಯಿಲ್ಲದವರು—' ಎಂಬ ಅಭಿಮಾನವನ್ನು ನೀವೂ ಸಹಾ ಇನ್ನತ್ತೆ ಬಿಡುವದಲ್ಲದೆ ಬಾಕಿಯವರು ಹೇಳುವದನ್ನು ಕೇಳಿದೊಡನೆಯೇ ಇದನ್ನು ಭಯಂಕರವಾಗಿ ಖಂಡಿಸಬೇಕು. ಇದೇ ಒಂದು ಹೊಲಸು ಮಾತಿನಿಂದ, ಅಜ್ಞಾನದ ಡಂಭದಿಂದ ಸಮಾಜವೇ ಹಾಳಾಯಿತು. ಈ ಅಭಿಮಾನಕ್ಕೆ ಅರ್ಹನಾದ ಕುಬೇರನು ನಮ್ಮ ಸಮಾಜದಲ್ಲಿಯಾಗಲೀ ಇತರ ಕಡೆಯಲ್ಲಿಯಾಗಲೀ ಇಷ್ಟರತನಕ ಹುಟ್ಟಿಲ್ಲ, ಇವತ್ತು ಇಲ್ಲ. ನಾಳೆಹುಟ್ಟುವದಿಲ್ಲ—ಖಂಡಿತ! ಗಟ್ಟಿಯಾಗಿ ನೆನಪಿನಲ್ಲಿ ಇಟ್ಟುಕೊಳ್ಳಿ—ಈಮಾತು ಹಲವು ಮನೆಗಳನ್ನು ಅಗಾಧಕ್ಕೆಗೆಯಿತು. ತಿಂಗಳಿಗೆ ಹತ್ತು ಸಾವಿರ ರೂಪಾಯಿ ಸಂಪಾದನೆಯಿದ್ದರೂ, ಹತ್ತು ಸಾವಿರದ ಒಂದು ರೂಪಾಯಿ ಖರ್ಚುಮಾಡಿದರ ನಾವು ದಿವಾಳಿ—ಇದನ್ನು ಮುಂಚೆ ಬರದುಕೊಳ್ಳಿ, ಬೇರೆ ಗಟ್ಟಿಪೆನ್ಸಿಲ್ ಬೇಕಾ ಬರಿಯಲಿಕ್ಕೆ? ಬರೀ ಸಂಪಾದನೆಯನ್ನು ನೋಡಿ ಪ್ರಯೋಜನವಿಲ್ಲ. ಖರ್ಚಿನ ಪಟ್ಟಿಯನ್ನು ಮುಂಚೆನೋಡಬೇಕು ತಿಳಿಯಿತೇ? ಬಹುದೊಡ್ಡ ಸಂಸ್ಥೆಯಾದ ಗವರ್ನಮೆಂಟು ಸಹಾ ತನ್ನ ಆಯವ್ಯಯ ಪಟ್ಟಿಯನ್ನು ಇಡುತ್ತದೆ. ಒಂದು ವರ್ಷದಲ್ಲಿ ಒಂದು ತಿಂಗಳು ಈ ಆಯವ್ಯಯಕ್ಕೋಸ್ಕರ ಸಭೆ ಜರಗುತ್ತದೆ. ಎಷ್ಟೋ ಆಯವಿರುವಂಥಾ ಗವರ್ನಮೆಂಟು, ಎಷ್ಟೋ ವೆಚ್ಚ ಮಾಡುವಂಥಾ ಗವರ್ನಮೆಂಟು ಒಂದು ಪೈಯ ಲೆಕ್ಕವನ್ನೂ ಚಲೋ ರೀತಿಯಲ್ಲಿ ಇಡುತ್ತದೆ. ಒಂದು ಪೈಯನ್ನು ಸಹಾ ಖರ್ಚುಮಾಡುವ ಮುಂಚೆ ಬಹಳವಾದ ಚರ್ಚೆಯನ್ನು ಮಾಡಿ, ಅದು ಅವಶ್ಯವೋ ಅಲ್ಲವೋ ಎಂಬುವನ್ನು ತಿಳಿದು ತನ್ನ ಹೆಜ್ಜೆಯನ್ನು ಮುಂದಕ್ಕೆ ಹಾಕುತ್ತದೆ. ವರ್ಷದ ಆದಿಯಲ್ಲಿ ಆ ವರ್ಷದ ಆಯವ್ಯಯಗಳ ಅಂದಾಜುಪಟ್ಟಿಯನ್ನು ಮಾಡುತ್ತದೆ, ವ್ಯಯದ ಸಂಗತಿಗಳು ಅಯುಕ್ತವೆಂತ ಹುಟ್ಟಾಗುವ ಸಂದರ್ಭದಲ್ಲಿ ಕೆಲವನ್ನು ಮುಂದಿನ ವರ್ಷಕ್ಕೆ ದೂಡುತ್ತದೆ. ಪ್ರಾಲ್ತಿ ವರ್ಷದ ಆದಿಯಲ್ಲೇ ವ್ಯಯದ ಅಂದಾಜುಪಟ್ಟಿಯನ್ನು ಮಾಡಿ ಅದನ್ನು ಆಯಕ್ಕಿಂತ ಮಿಕ್ಕದ ಹಾಗೆ ಇಟ್ಟು ಆ ಮೇಲೆ

THE LAKSHMI INS., CO., LTD., LAHORE. Estd 1924.

Don't Say Can't Afford.

For THERE IS A LAKSHMI POLICY SUITABLE FOR

Every Purse and Purpose.

WITH

NOVEL SCHEMES AND UNIQUE FEATURES

New Business completed	Exceeds	1.61 crores.
Business in Force.		7.09 crores

APPLICATIONS FOR AGENCIES ARE INVITED FROM INFLUENTIAL LADIES AND GENTLEMEN FROM ALL UNREPRESENTED AREAS.

For Particulars, please apply to:

The Branch Manager, *334, Thambuchetty St.,* G. T. MADRAS. OR *A. B. Krishna Raj,* ORGANISER, UDIPI

ಯಾವುದಾದರೂ ಅನಿರೀಕ್ಷಿತ ಸಂಘಟನೆಗಳು (contingencies) ಬಂದಾಗ ಅವನ್ನು ಕಟ್ಟಿಕೊಂಡು ವರ್ಷದ ಕೊನೆಗೆ ತಿರುಗಿ ಯಥಾರ್ಥವಾದ (Actuals) 'ಬಜೆಟ್'ಮಾಡಿ ವ್ಯಯವು ಅನಿವಾರ್ಯವಾದ ವಿದ್ಯಮಾನಗಳಿಂದ ಜಾಸ್ತಿಯಾದ ಸಂದರ್ಭದಲ್ಲಿ ಅದನ್ನು ಮುಂದಿನವರ್ಷದ ಆಯದಲ್ಲಿ ಮೊದಲಾಗಿ ವಜಾವಟು (Provision)ಮಾಡಿಕೊಂಡು ಆ ಮೇಲೆ ಆ ವರ್ಷದ ಬಜೆಟನ್ನು ಮಾಡುತ್ತದೆ ಅಗಣಿತ ಉತ್ಪತ್ತಿಯುಳ್ಳ ಸರಕಾರವೂ ಆಯ ನೋಡಿ ವ್ಯಯಕ್ಕೆ ಇಳಿಯುವ ಬಾಳಿನ ಮೂಲಮಂತ್ರವನ್ನು ಹೆಜ್ಜೆ ಹೆಜ್ಜೆಗೂ ಅನುಸರಿಸುತ್ತಿರುವುದರಿಂದ ಅದು ಅಷ್ಟು ಪರಿಷ್ಕಾರವಾಗಿ ನಡೆಯುತ್ತದೆ. ಅದಕ್ಕೆ ಆರ್ಥಿಕ ಸಚಿವರು ಗಟ್ಟಿಯಿರಬೇಕು.

ಹೀಗೆಯೇ ನಮ್ಮ ಪ್ರತಿ ಮನೆಯಲ್ಲಿಯೂ, ಮನೆಯ ಆಡಳಿತೆಯನ್ನು ನಡಿಸುವ ಹೆಂಗಸರಲ್ಲ ಆರ್ಥಿಕ ನಿಪುಣತೆಯಿರಬೇಕು—ಇವರೇ ಮನೆಯ ಆರ್ಥಿಕ ಸಚಿವರು—ಈ ಕಾರಣದಿಂದಲೇ ಇವರಿಗೆ ಗೃಹಿಣಿಯರೆಂದು ಹೆಸರು—**ತಲೆಪೊಳ್ಳಾದ ಹೆಂಗಸಿನ ಮನೆ ಹಾಳು. ಅಲ್ಲಿಯದು ಗೋಳಿನ ಬಾಳು. ಅದ್ದರಿಂದ ಪ್ರತಿಯೊಬ್ಬ ಹೆಂಗಸೂ ದಿನದಿನದ ಕರ್ಚಿನ ಲೆಕ್ಕ ಇಡಲೇ ಬೇಕು. ಗಂಡಸರ ಹತ್ತಿರವೂ ಆಯವ್ಯಯದ ಲೆಕ್ಕಬೇಕು.** ಆಯವ್ಯಯವಾದಂತೆಲ್ಲ ಆಗಾಗ ಬರೆದಿಡಲು ಸಾಧ್ಯವಿಲ್ಲದಿದ್ದರೆ, ಅದೇ ದಿನ ರಾತ್ರಿ ಮಲಗುವ ಮುಂಚೆಯಾದರೂ ನೆನಪುಮಾಡಿ, ವಗಾಡಿ ಬರೆದು ಮುಗಿಸಿ ಮಲಗಬೇಕು. ಇದರಿಂದ ಶಿಸ್ತು ಬರುತ್ತದೆ. ಮತ್ತು ನೆನಪು ವೃದ್ಧಿಯಾಗುತ್ತದೆ. ಹೀಗೆ ಮಾಡಿ ಇಬ್ಬರೂ ಲೆಕ್ಕವಿಟ್ಟು ಆ ತಿಂಗಳ ಅಂತ್ಯದಲ್ಲಿ ಆಯವೆಷ್ಟು ವ್ಯಯವೆಷ್ಟು ಎಂದು ನೋಡಿ ಒಂದು ವೇಳೆ ವ್ಯಯ ಹೆಚ್ಚಾದರೆ ಅವನ್ನು ಮುಂದಿನ ತಿಂಗಳ 'ಬಜೆಟ್ಟಿನಲ್ಲಿ' ತೆಗೆಯಬೇಕು—ಈ ರೀತಿ ಮಾಡುವುದನ್ನು ಬಿಟ್ಟು ನಾವು 'ಇದೆಲ್ಲಾ ಸಾಧ್ಯವಾ! ಸುಮ್ಮನೆ ಆಗದ ಹೋಗದ ಆದರ್ಶವಿದು.' ಎಂದು ನೆನಸಿ ಅವಿವೇಕದ ಖರ್ಚನ್ನು ಮಾಡುತ್ತಾ ಹೋಗುತ್ತೇವೆ. ಮರ್ಯಾದೆ ಮರ್ಯಾದೆಯೆಂದು ಹೇಳಿ ಅಲ್ಲದ ಸಲ್ಲದ ಸಂಗತಿಗಳಲ್ಲಿ ನಮ್ಮ ಡಂಭವನ್ನು ಪ್ರದರ್ಶಿಸುತ್ತೇವೆ--ಮದುವೆಗೆ ಹೋದರೆ ಸಭೆಯಲ್ಲಿ ನಮ್ಮ ಸೀರೆಯ ಜರಿಯು ಬೇರೆಯವರ ಜರಿಯ ಹೊಳಪನ್ನು ಇಳಿಸಬೇಕು. ನಮ್ಮ ವಜ್ರದ ಬೆಂಡೋಲೆಯ ಮಿರುಗು ಇತರ ಬೆಂಡೋಲೆಯ ಥಳಕನ್ನು ತಗ್ಗಿಸಬೇಕು. ಹೆಂಗಸರಾಗಲಿ ಗಂಡಸರಾಗಲಿ ಉಡಿಗೆತೊಡಿಗೆಯ ಬೆಡಗಿನಲ್ಲಿ ಮನೆಮರ್ಯಾದೆಯ ಬಹುಮಾನದ ಗೊಂಡೆಯನ್ನೆತ್ತಿ ಹಿಡಿಯುವುದರಲ್ಲಿ ಅಗ್ರಗಣ್ಯರು (Leaders of Fashion and Aristocrats) ಎಂಬ ಬಿರುದು ನಮಗೆ ಬೇಕೇ ಬೇಕು. ಒಬ್ಬನು ಒಂದು ಪವನು ಉಡುಗರೆ ಮಾಡಿದರೆ ನಾವು ನಾಲ್ಕು ಇಟ್ಟು ಅವನನ್ನು ಮೀರಿ ಏರಬೇಕು ಒಬ್ಬರು ಜಟ್ಕದಲ್ಲಿ ಮದುವೆಗೆ ಹೋದರೆ ನಮಗೆ 'ರೋಲ್ಸ್‌ರೋಯಿಸ್ ಕಾರಿನಲ್ಲಿ' ಬ್ಯಾಂಡ್ ವಾದ್ಯದಲ್ಲೇ ಹೋಗಬೇಕು. ಸಾಧ್ಯವಿದ್ದರೆ ಫಕ್ಕನೆ ಸಿಕ್ಕಿದರೆ 'ಏರೋಪ್ಲೇನ್' ಏರಲಿಕ್ಕೂ ತಯಾರಿ ಒಬ್ಬಳು ಉಡುಪಿಗೆ ಹೆರಲಿಕ್ಕೆ ಬಂದರೆ ಮತ್ತೊಬ್ಬಳಿಗೆ ಮದ್ರಾಸಿಗೇನೇ ಹೋಗಿ ಹೆರಬೇಕು. ಮುಂಚಿತವಾಗಿ 'ಯಕ್ಸ್‌ರೇ' ಹಾಕಿಸಿ ತನ್ನ ದೇಹವನ್ನು ಪರೀಕ್ಷಿಸಿಕೊಳ್ಳಬೇಕು ಅದನ್ನು ಹಿಂತಿರುಗಿ ಬಂದು ಐನೂರು ಜನರ ಹತ್ತಿರ ಹೇಳಬೇಕು. 'ಸ್ಟೈಲ್!' ಸ್ಪರ್ಧೆ! ಈ ರೀತಿಯಲ್ಲಿ ಒಬ್ಬನಿಗಿಂತ ಒಂದು ಹೆಜ್ಜೆ ನಾವು ಮುಂದಕ್ಕೆ ಇಡಲೇಬೇಕು. ನಮ್ಮ ಹೆಮ್ಮಕ್ಕಳಿಗೆ ಐ ಸಿ ಸ್. ಗಂಡ ಸಿಕ್ಕುವ ಪಕ್ಷದಲ್ಲಿ ನಾಳೆಗೇನೆಂಬುದರ ಗೊಡವೆ ಹಚ್ಚಿಕೊಳ್ಳದೆ ನಮ್ಮ ಬೊಕ್ಕಸವನ್ನು ಬರಿದುಮಾಡಿ ಕುಣಿಯಲಿಕ್ಕೂ ನಾವು ಸಿದ್ಧರು. ಒಬ್ಬರು ಮದುವೆಗೆ ಬೆಲ್ಲದ ಪಾಯಸಮಾಡಿದರೆ ನಾವು "ಬಿಲಾಯ್ತಿ"ಸಕ್ಕರೆ ಪಾಯಸಮಾಡಬೇಕು—ಅದರ ಗೌಜಿ ಐನೂರು ಕಡೆಗೆ ಹರಡಬೇಕು. ಇಲ್ಲದಿದ್ದರೆ ಮಜೆಯಿಲ್ಲ—ಮರ್ಯಾದೆ ಇಲ್ಲ. ರಾಮಾ! ಒಂದು ಮರ್ಯಾದೆಯೇ—ಎಲ್ಲಿ ಕೂತುಕೊಂಡುಬಿಟ್ಟದೆ ನೋಡಿಶೆಟ್ರೇ! **ಹಿಂದಕ್ಕೆ ಬರುವ ಅವಮರ್ಯಾದೆಯನ್ನು ಮುಂದಾಗಿ ನೋಡದೆ ಇಂದಿನ ಮರ್ಯಾದೆ ಯಾಕೆ ಶೆಟ್ರೇ?** ಮದುವೆಯಲ್ಲಿ ಪುಷ್ಪಹಾರ ಒಬ್ಬರುವಧೂವರರಿಗೆಹಾಕಿದರೆ ನಾವು ಭಂಗಾರದ ಹೂಮಾಲೆಯನ್ನೆ ಹಾಕಲಿಕ್ಕೆ ತಯಾರು-ಒಬ್ಬರು ಚಲೋ ಚಪ್ಪರವನ್ನು ಹಾಕಿದರೆ ನಾವು ಒಣಹೆಸರಿಗೆಬೇಕಾಗಿ ಸಾಲವಾದರೂ ಮಾಡಿ ವೀಳ್ಯದೆಲೆ ಚಪ್ಪರವನ್ನು ಹಾಕಲಿಕ್ಕೆ ತಯಾರು-ಸ್ವಾಮಿ ಶೆಟ್ರೇ, ನಿಮಗೆ ಸ್ವಲ್ಪ ನಿದ್ದೆ ಬಂತಾ ಇದನ್ನು ಕೇಳುವಾಗ? ಓಹೋ ಮೂರ್ಛೆ ಹೋಗಿಬಿಟ್ಟಿರಾ! ಎದ್ದೇಳಿ-ಡಂಭದ ಭೂತ ಹಿಡಿದ ಮನುಷ್ಯನ ಹತ್ತಿರ ತರ್ಕ ಮಾಡಿದರೆ,ಬುದ್ಧಿ ಹೇಳಿದರೆ ಅವನ ದರ್ಶನ ನಮ್ಮ ಮೇಲೆಬಂದೀತು. ಜೋರುಓಡುವ ಕುದುರೆಯ 'ಲಗಾಂ' ಎಳೆದರೆ ಅದು ತುಂಡಾದೀತು. ಅದು ಕೇಳಲಿಕ್ಕಿಲ್ಲ! ಮೋಟರ್ ಜೋರುಬಿಡುವಾಗ ಬ್ರೇಕ್ ಪಕ್ಕ ಹಿಡಿಯುವುದಿಲ್ಲ. ಅವಗಡ ಬಂದು ಅದು ಬಿದ್ದು ನುಚ್ಚು ನೂರಾದಾಗ ಹತ್ತಿರ ಹೋಗಿ, "ನಿನಗೆ ಈ ರೀತಿ ನಾನು ಮುಂಚೆ ಹೇಳಲಿಲ್ಲವೆ, ಈಗ ಬುದ್ಧಿ ಬಂತಾ!" ಎಂದರೆ, "ಆಗಿಹೋದ ಸಂಗ್ತಿಯನ್ನು ಮಾತಾಡಿ ಫಲವೇನು ಈಗ? ಏನಾದರೂ ನಿನ್ನಿಂದ ಸಹಾಯ ಮಾಡಲಿಕ್ಕೆ ಸಾಧ್ಯವಿದ್ದರೆ ಮಾಡಪ್ಪ! ಈಗ ಬುದ್ಧಿ ಹೇಳುವ ಸಮಯವಲ್ಲ. ಮುಂಚೆ ನಾನು ಬುದ್ಧಿಯನ್ನು ಕೇಳಲಿಲ್ಲ, ಈಗ ಹೇಳಿ ಫಲವಿಲ್ಲ—ಸಹಾಯ ಏನಾದರೂ ಮಾಡುತ್ತೀಯಾ? ದಮ್ಮಯ್ಯಾ!" ಅನ್ನುತ್ತಾರೆ. ಜನರು ಹೆಚ್ಚಾಗಿ ಯಾವಾಗಲೂ (Psychological) ಕಲ್ಪಿತ ರಾಜ್ಯದಲ್ಲಿ ಹಾರಾಡುತ್ತಿರುವರು. ಕಷ್ಟದಲ್ಲಿ ಬಿದ್ದಾಗ ಮಾತ್ರ (logical) ನಿಜ ಲೋಕದ ಇರಿತ ಗೊತ್ತಾಗುವುದು ಅವರಿಗೆ. ಆ ಅವಸ್ಥೆಗೆ ನಾವು ಬೀಳುವುದು ಬೇಡ ಅಟ್ಟ ಮೇಲೆ ಒಲೆ ಉರಿದು, ಕೆಟ್ಟ ಮೇಲೆ ಬುದ್ಧಿ ಬಂದು ನಮಗೇನು ಪ್ರಯೋಜನ ಶೆಟ್ರೇ? ಅದ್ದರಿಂದ ಇವತ್ತೇ ನಿಮ್ಮ ಮನೆಯನ್ನೂ ನಮ್ಮ ಮನೆಯನ್ನೂ ಕ್ರಮದಲ್ಲಿಡಲು ತೊಡಗುವ. ಇದಕ್ಕಾಗಿ ಆಯವ್ಯಯ ಕ್ರಮದ ಪಂಚಾಂಗವನ್ನು ಹಾಕುವ—ಬರುವ ಆದಿತ್ಯವಾರ ನಮ್ಮಲ್ಲಿ ಬನ್ನಿ—ನಾವು ಸಮಾಜಕ್ಕೆ ಬುದ್ಧಿ ಹೇಳುವದನ್ನು ನುಡಿಯಲ್ಲಿ ಮಾತ್ರ ತೋರಿಸುವುದಲ್ಲದೆ ನಡೆಯಲ್ಲಿಯೂ ನಡೆವ. ನಡೆದು ಮಾಡಿ ತೋರಿಸಬೇಕು, ಅದ್ದರಿಂದ ಬಡವನೆಂದು ಹೇಳಿಕೊಳ್ಳಲು ನಮಗೆ ಬಹಳ ಹಗುರ, ಬಹು ಅಂಜಿಕೆ, ಮರ್ಯಾದೆಗೆ, ಡಂಭಕ್ಕೆ ಕಡಿಮೆ ಎಂದು ನಾವು ತಿಳಿದುಕೊಳ್ಳಬಾರದು, ದೊಡ್ಡವನೆಂತ ಕೇಳಿಸಿಕೊಳ್ಳಬೇಕೆಂದು ಹಾರಬಾರದು, ಅದು ಸಾಧ್ಯವಲ್ಲ ಅದು ಕೇವಲ ಹುಚ್ಚುತನ. ಹೇಡಿತನ!—ಶೆಟ್ರೇ, ನಾವು ನೀವು ಇಬ್ಬರು ಬಡವರು ಲೋಕದಲ್ಲ—ಬಾಕಿಯೆಲ್ಲಾ ದೊಡ್ಡವರು ಇರಲಿ. ನಮಗೇನು ನಷ್ಟ ಅದರಿಂದ! ನಮಗಾಗಲೀ, ಅವರಿಗಾಗಲೀ ಬ್ಯಾಂಕಿನಲ್ಲಿ 'ಕ್ರೆಡಿಟ್'ಇದ್ದಷ್ಟೆ ಇದ್ದೀತಲ್ಲದೆ ಒಣ ಡೌಲಿನಿಂದ ಹೆಚ್ಚೋದಿಲ್ಲರೀ, ಹೆಚ್ಚೋದಿಲ್ಲಾ! **ನೀವು ಅಳಿಯ ಸಂತಾನದ ಹಿರಿಯ ಗುರುಕಾರರಾಗಿದ್ದರೆ, ಅಗತ್ಯವಾಗಿ ಬಜೆಟು ಇಡಲೇ ಬೇಕು, ಶೆಟ್ರೇ—ಅದು ನಿಮ್ಮ ಮೊದಲ ಕರ್ತವ್ಯ—ಅದನ್ನಿಟ್ಟು ಅದರಂತೆ ನಡೆಯುತ್ತಾ ಬಂದರೆ ಕುಟುಂಬದಲ್ಲಿ ಮನಸ್ತಾಪವಿಲ್ಲ, ಕಣ್ಣೀರಿಲ್ಲ, ನಿಷ್ಠುರವಿಲ್ಲ, ಕತ್ತಿ ಕೋವಿಗಳನ್ನೆತ್ತುವ ಸಂಭವವಿಲ್ಲ** ಈ 'ಬಜೆಟ್'ನಿಂದ ತಾಪತ್ರಯಗಳ ಮುಕ್ತಿ; ನಿಮ್ಮ ತಲೆಯಲ್ಲಿ ಶಾಂತಿ,ಮುಖದಲ್ಲಿ ಕಾಂತಿ—ಅಂತಹ 'ಬಜೆಟ್ಟನ್ನು' ಸಸೂತ್ರವಾಗಿ ಇಡುವುದು ಹೇಗೆಂಬಿರಾ? ಮುಂದಿನ ಲೇಖನದಲ್ಲಿ—

SRI. SADANAND RAM
No. 57, P. O. Warisaligunj,
(Gaya)
"ಸುಳ್ಳೆಂದು ರುಜುಪಡಿಸುವವರಿಗೆ ರೂ. 50 ಇನಾಂ."
ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು.
1 **ವಶೀಕರಣ ಯಂತ್ರ:** ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರಧರಿಸಿದ ಮಾತ್ರದಿಂದಲೇ ಅವಳು ನಿಮ್ಮೊಡನೆ ಮಾತನಾಡಬಯಸುವಳು. ಮಾತ್ರವಲ್ಲದೆ ನಿಮ್ಮ ವಶಳಾಗುವಳು. ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ ತಾಯಿತಕ್ಕೆ 7-8-0.
2 **ಲಕ್ಷ್ಮೀಯಂತ್ರ:** ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ವಹಿವಾಟುಗಳು ಹೆಚ್ಚಿ ಲಾಭದಾಯಕ ಸುಸಂಧಿ ಬರುವುವು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ್ದಕ್ಕೆ ರೂ. 7-8-0 ಇಂದೇ ಮೇಲಣ ವಿಳಾಸಕ್ಕೆ ಬರೆಯಿರಿ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

ಮುಂಬಾಯಿಕನ್ನಡಿಗ
ಮುಂಬಾಯಿಯಿಂದ ಪ್ರತಿ ರವಿವಾರ
ಹೊರಡುವ ರಾಷ್ಟ್ರೀಯ
ವಾರಪತ್ರಿಕೆ.
ವಾರ್ಷಿಕ ಚಂದಾ ೩—೮—೦
ಬಿಡಿ ಸಂಚಿಕೆ ೦—೧—೦
ಮಾದರಿಗೂ ಜಾಹೀರಾತುದರಗಳಿಗೂ ಬರೆಯಿರಿ
ಕನ್ನಡ ಪಬ್ಲಿಷರ್ಸ್
168 ಗಿರ್ಗಾಂ ರೋಡು,
ಬೊಂಬಾಯಿ 4.

ಜಯಕರ್ನಾಟಕ ಶಿಕ್ಷಣಾಂಕ
ಡಿಸೆಂಬರ ೧ನೇ ತಾರೀಖಿಗೆ ಹೊರಡುವ ವಿಶೇಷ ಸಂಚಿಕೆ.
ವಾರ್ಧಾಶಿಕ್ಷಣ ಯೋಜನೆ, ರಾಷ್ಟ್ರೀಯ ಶಿಕ್ಷಣ, ಶಿಕ್ಷಣದ ಜೀವನಸಾಮ್ರಾಜ್ಯ, ಆಧುನಿಕ ಶಿಕ್ಷಣ ಪದ್ಧತಿಗಳು, ಶಿಕ್ಷಣದ ಅಭಿನವ ದೃಷ್ಟಿ, ದೇಶವಿದೇಶಗಳೊಳಗಿನ ಶಿಕ್ಷಣ ಪ್ರಕಾರಗಳು ಮೊದಲಾದ ವಿವಿಧ ಶಿಕ್ಷಣ ಸಮಸ್ಯೆಗಳ ಮೇಲೆ ಅಧಿಕಾರಸಂಪನ್ನ ಲೇಖಕರ ಲೇಖನಗಳು ಬರುವವು.
ದಕ್ಷಿಣ ಕನ್ನಡದ ಶ್ರೀಯುತರಾದ ಕಾರಂತ, ಎಂ ಎನ್. ಕಾಮತ, ಜಿ. ಆರ್. ಶೆಣೈ, ಎಸ್. ಮುಕುಂದರಾವ್, ಉಲ್ಲಾಳ ಮಂಗೇಶರಾವ್, ಕೊರಡ್ಕಲ್ ಶ್ರೀನಿವಾಸರಾವ್ ಮೊದಲಾದ ಮಹನೀಯರು ಬರೆಯುವರು.
ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ ತುಂಬಾ ಸಂಗ್ರಾಹ್ಯವಾದ ಸಂದರ್ಭ ಗ್ರಂಥ.
ಲೇಖಕರಿಗೆ ಸೂಚನೆ —ಶಿಕ್ಷಣದ ಪ್ರಶ್ನೆಗಳ ವ್ಯಾಸಂಗ ಮಾಡಿದವರು ಜ ಕ ದ 3 ಪುಟಗಳಿಗೆ ಮಿಕ್ಕದಂತೆ ಯಾವುದೊಂದು ಸೂಕ್ತವಿಷಯವನ್ನು ತೆಗೆದುಕೊಂಡು ಸಂಗ್ರಹವಾಗಿ ಬರೆದು ಕಳಿಸಬೇಕು.
ಸಂಚಿಕೆಯು ೧೦೦ ಪುಟಗಳನ್ನು ಮಿಕ್ಕುವುದು, ಆದರೂ ಬೆಲೆ ಆರೇ ಆಣೆ.
ಬಿಡಿ ಪ್ರತಿಗಳನ್ನು ಪಡೆಯಬಚ್ಛಿಸುವವರು ಆರ್ಡರು ದಾಖಲುಮಾಡಬೇಕು.
ಜಾಹೀರಾತುದಾರರಿಗೆ ತಮ್ಮ ಸರಕುಗಳ ಪ್ರಚಾರಮಾಡಲು ಸುವರ್ಣ ಸಂಧಿ.
ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಧನ್ವಂತರಿ ಗುಟಿಕಾ **ಕಸ್ತೂರಿಯುಕ್ತ ವಾಯುಮಾತ್ರೆ**
ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. **ಕ್ರಯ:**-100ಮಾತ್ರೆಗಳಿಗೆ ರೂ 1-5-0, 600ಕ್ಕೆರೂ. 6-0-0. ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ.
ಆಮಲಕೀ ತೈಲ **(ಸುಗಂಧಯುಕ್ತ ಕೇಶವರ್ಧಕ ತೈಲ)**
ಮಿದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಸ್ವರೂಪ ತೈಲ.
4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ .0—6—0
ನಮ್ಮ ಔಷಧಿಗಳು **ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ**, ಇಲ್ಲಿ ಸಿಗುತ್ತವೆ.
ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ,
ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,
ಬ್ರಹ್ಮಾವರ ಪೋಸ್ಟ್, ದ. ಭಾರತ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇತ್ಯರ ತರಿಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ಪ್ರವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

HOTEL INDIANA

BAR AND RESTAURANT

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ!

ಹೋಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಆಧುನಿಕ ಸೌಕರ್ಯಗಳಿಂದ ನಿಮ್ಮನ್ನಿದಿರುಗೊಳ್ಳುತ್ತದೆ

ಹೊಸ ಆಡಳಿತ! ಹೊಸ ವ್ಯವಸ್ಥೆ !!

ಎಲ್ಲವೂ ಹೊಸತೇ ಆಗಿ

ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ

Proprietor, HOTEL INDIANA
Hampankatta, Mangalore.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 6½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, ಯಂ. ಆರ್. ಪೂಂಜ,
President & Manager. ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ಎಮ್ಮನ್ನು ದಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪ್ ಯೋವನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸವರ್ಣ, ಸುಲಾಮಿಶ್ರ, ಕಸ್ತೂರಿ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಜಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು, ಅದಲ್ಲದೆ ಸರಳಗ ಬಾಂಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವದು ಬಾಟ್ಲಿ ೧ರ ರೂ 2—8—0

ಕಸ್ತೂರಿಮಿಶ್ರಿತ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ಬಾಟ್ಲಿ 1ರ ರೂ 1—8—0

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ 0—10—0.

ಕೆಟಲುಗಿಗೆ ಬರೆಯಿರಿ— ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager

Kanara Printing Works,

Hampankatte, **MANGALORE**

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):— ಈ ಮಾವಿನ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೪ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು

ಎಲ್ಲಾ ಕೋಟದಲ್ಲಿಯೂ ಇರತಕ್ಕದ್ದು ಗಿಡವೊಂದರ ಕ್ರಯ ರೂ 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಕೆ. ಎಸ್. ಸೆಟ್ಟಿ, ಕೆನರಾ ನರ್ಸರಿ,
ಪೋಸ್ಟ್—ಕಾಪು, ದ. ಕ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೋಲೆರಾ ರೋಗಕ್ಕೆ ರಾಮಬಾಣ ಔಷಧ	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ —೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ ಶೇಟ್ಟಿ, ಗೋಲ್ಡ್ ಮೆಡಲ್ಸ್ ಫಿಜಿಸಿಯನ್

ಶೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ವ ನನೋಹರ ಸೀನ್‌ಸೀನರಿಗಳು, ಕೆತ್ತನೆ ಕೆಲಸಗಳು, ನಮೂನೆದಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತವೆ [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವುದು ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ

ಪೈಂಟರ್ ಗಣಪತಿರಾವ್,

ಕೋರ್ಟು ಮಾರ್ಗದ ಲೇನು - - - ಉಡುಪಿ, ದ ಕ

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

ಎಂದಾದರೊಮ್ಮೆ ನೋಡಬಹುದು ಎಂದೆಣಿಸಲಾಗದ ಪರ್ವಕಾಲ.

ಕಾವೇರೀ ನದೀತೀರವಾದ ತಲಕಾಡಿನಲ್ಲಿ

ಪಂಚಲಿಂಗ ದರ್ಶನ

ಭಕ್ತವೃಂದವು ಹಾರೈಸುವ ಪುಣ್ಯಕಾಲ.

ಅನೇಕ ವರುಷಗಳಿಗೊಮ್ಮೆ ಬಂದೊದಗುವ ಜಾತ್ರೆ ಇದು

ಕಳೆದ **1925**ರಲ್ಲಿ ಜರಗಿದ ಜಾತ್ರೆ ಇದು ಇದೀಗ **1938**ರಲ್ಲಿ ತಾರೀಕು **21-11-38**ರಲ್ಲು

ಜರಗಲಿಕ್ಕಿದೆ.

ಕಾರ್ತಿಕವಾರ, ವೃಶ್ಚಿಕಮಾಸ, ಅಮಾವಾಸ್ಯೆ, ಸೋಮವಾರ, ಮಹಾಯೋಗ, ಇವಿಷ್ಟು ಯೋಗಗಳು ಒಟ್ಟಿಗೆ ಬರುವ ದಿವಸದಲ್ಲಿ ಮಾತ್ರ ಈ ಜಾತ್ರೆಯು ಜರಗುವದು

ಈ ಪರ್ವಕಾಲದಲ್ಲಿ ಉತ್ತರವಾಹಿನಿಯಾಗಿಯೂ, ಪೂರ್ವವಾಹಿನಿಯಾಗಿಯೂ, ದಕ್ಷಿಣವಾಹಿನಿಯಾಗಿಯೂ, ಪಶ್ಚಿಮವಾಹಿನಿಯಾಗಿಯೂ, ಹರಿಯುವ ಕಾವೇರಿ ಪುಣ್ಯೋದಕದಲ್ಲಿ ಸ್ನಾನವನ್ನು ಮಾಡಿ, ವೈದ್ಯೇಶ್ವರ, ಅರ್ಕೇಶ್ವರ, ಪಾತಾಳೇಶ್ವರ, ಮರಳೇಶ್ವರ, ಮಲ್ಲಿಕಾರ್ಜುನೇಶ್ವರ ಸ್ವಾಮಿಯ ದರ್ಶನ ಲಾಭವನ್ನು ಪಡೆಯಿರಿ. ಕಾರ್ತಿಕ ಬಹುಳ ಅಮಾವಾಸ್ಯೆ, ಸೋಮವಾರ ದಿವಸ ತಲಕಾಡಿನ ಗೋಕರ್ಣ ಸರೋವರದಲ್ಲಿ ಸ್ನಾನಮಾಡಿ, ಗೋಕರ್ಣೇಶ್ವರ ಸ್ವಾಮಿ ದರ್ಶನ ಪಡೆದು ಚಾಮುಂಡೇಶ್ವರೀ ದರ್ಶನವನ್ನು ಹೊಂದಿ, ವೈದ್ಯೇಶ್ವರ ದರ್ಶನ ಲಾಭವನ್ನು ಹೊಂದುವದು. ಅಲ್ಲಿಂದ ಮೂರು ಮೈಲು ದೂರದಲ್ಲಿರುವ ವಿಜಾಪುರಕ್ಕೆ ಹೋಗಿ, ಉತ್ತರವಾಹಿನಿ ಕಾವೇರಿನದಿಯಲ್ಲಿ ಸ್ನಾನಮಾಡಿ ಅಲ್ಲಿರುವ ಅರ್ಕೇಶ್ವರನ ದರ್ಶನ ಲಾಭ ಪಡೆದು, ಅಲ್ಲಿಂದ ತಲಕಾಡಿಗೆ ದಕ್ಷಿಣದಲ್ಲಿರುವ ಪೂರ್ವವಾಹಿನಿ ಕಾವೇರಿ ನದಿಯಲ್ಲಿ ಸ್ನಾನಮಾಡಿ, ಪಾತಾಳೇಶ್ವರನ ದರ್ಶನ ಲಾಭ ಪಡೆದು, ಪಶ್ಚಿಮ ಪಾರ್ಶ್ವದಲ್ಲಿ ದಕ್ಷಿಣವಾಹಿನಿಯಾಗಿ ಹರಿಯುವ ಕಾವೇರಿಯಲ್ಲಿ ಸ್ನಾನಮಾಡಿ, ಮಲ್ಲಿಕಾರ್ಜುನೇಶ್ವರ ಸ್ವಾಮಿ ದರ್ಶನ ಲಾಭವನ್ನು ಪಡೆಯುವುದು. ಇದು ಪಂಚಲಿಂಗ ದರ್ಶನ ಕ್ರಮ.

ಈ ಸ್ಥಳವು ಮೈಸೂರಿನಿಂದ ಬರೀ 30 ಮೈಲು ದೂರದಲ್ಲಿದೆ, ಯಾತ್ರಾರ್ಥಿಗಳ ಸರ್ವಾನುಕೂಲತೆಯ ವ್ಯವಸ್ಥೆ ಮಾಡಲಾಗಿದೆ ನಮ್ಮ ಜಿಲ್ಲೆಯಲ್ಲಿ ವ ಮಡಿಕೇರಿ, ಮೈಸೂರು ಕಡೆಗಳಲ್ಲಿ ಪ್ರಯಾಣಿಕರಿಗೆ ಉಳಕೊಳ್ಳುವರೆ ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ.

ಹೆಚ್ಚಿನ ವರ್ತಮಾನದ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರಮೂಲಕವಾಗಿಯೂ ಅಥವಾ ಸ್ವತಃ ಬಂದು ಕೇಳಿ ತಿಳಕೊಳ್ಳಿರಿ.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ ದೊರೆಯುವುದು.

ವಾರ್ಷಿಕ ಚಂದಾ ರೂ 3 0 0 ಬಿಡಿ ಪ್ರತಿ 0 1 0

ಮೆನೇಜರ್— ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital		Rs	1,00,000
Subscribed & Paid up	,, ...	Rs.	30,460
Reser.es	. . .	Rs.	1,078

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

3ರಿಂದ	**6**	ತಿಂಗಳ ವರೆಗೆ	**4**	ಸಲೆ
7 ,,	**11**	,,	**5**	,,
12 ,,	**18**	,,	**6**	,,

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಜಿಟುಗಳು ರಿಯಾಯತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?
ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ವ್ಯಾಸಭವನಂ
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S S KARANTH, for & on behalf of SUPPLY AGENCY LTD., at THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India

Registered No. M. 3618

17-11-1938

ನವ ಯುಗ
NAVA YUGA

ಮಿಸ್ ಗೋಹರ್.



NAVAYUGA

ANNOUNCING

A new year present to its readers in its

1939 ANNUAL

NEW SIZE GET UP SURPRIRE

All making it

The Brightest Annual of the year.

Advertisement Assures Commercial Success.

Send your advertisement now and achieve success

DATE OF PUBLICATION: 12-1-1939.

is available for Advt Rs. 10/- per insertion.

The Canara Industrial & Banking Syndicate, Limited.

(INCORPORATED IN BRITISH INDIA)
[ESTD. 1925]

HEAD OFFICE.—MUKUND NIVAS, **UDIPI**, S. INDIA

MEMBER:

RESERVE BANK OF INDIA
BANKERS' CLEARING HOUSE, BOMBAY.

Authorised Capital	,,	10,00,000
Issued Capital	,	8,00,000
Subscribed Capital	,,	7,74,500
Paid up Capital	,,	3,87,730
Reserves	,,	2,16,700

BANKING BUSINESS OF
EVERY DESCRIPTION TRANSACTED.

Please Note

The Subscribers, Agents & Advertisers
in

NAVAYUGA

PLEASE NOTE THAT PAYMENTS DUE TO **NAVAYUGA** MAY BE MADE TO THE CREDIT OF NAVAYUGA ACCOUNT IN ANY BRANCH OF

THE CANARA INDUSTRIAL & BANKING SYNDICATE, LIMITED, UDIPI

Without being liable to pay any amount by way of Commission.

WHERE THE SYNDICATE HAS BRANCHES

Bombay, Bangalore, Belgaum, Byadgi, Bellary, Adoni, Hospet, Nandyal, Prodattur, Tadpatri, Taliparamba, Hubli, Gadag. Mangalore, Cannanore, Payyanur, Kanhangad, Kasargode, Karkal, Udipi, Uppinangady, Karwar, Kumta, Ankola Honavar, Bhatkal, Sirsi, Sagar, Coondapoor, Brahmavar, Hungarcutta, Nippani, Tumkur & Hindupur.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಂಸಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅನ್ಯತ್ರ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಕಲಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿನಾಶಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಧಾತುಪುಷ್ಟಿಗೆ	—ಮದನಕಾಮೇಶ್ವರಿ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE:	BRANCHES.
MANGALORE	**Udipi, Coondapoor, Kaup & Karkal.**

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at 3½ p. c. per annum.
One year Fixed Deposits at 4 p. c. per annum
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary

THE PANGAL NAYAK BANK LIMITED.

Estd.] **H. O. UDIPI.** [1920

BRANCHES
MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at 3½ p. c per annum.
Two years' Fixed Deposits at 4 p. c. per annum.
Savings Bank Deposits .... 3 p. c per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD 1921
FOUNDER
Sri A B SHETTY, M L A
Parliamentary Secretary Govt of Madras
ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟಿ, ಎಂ ಎಲ್ ಎ

ಸಂಪಾದಕ
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೧೨ | ಉಡುಪಿ, ಗುರುವಾರ ೧೭-೧೧-೧೯೩೮ Udipi, Thursday 17—11—1938 | Vol. XVIII No 12

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೮—೦
೬ ತಿಂಗಳಿಗೆ ರೂ ೧—೧೨—೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ

ಹಕ್ ಮಂತ್ರಿಮಂಡಲದ ದಿನ ಎಣಿಸಲ್ಪಟ್ಟಿದೆ.

ಇನ್ನು ಬರುವ ವರ್ಷ ಫೆಬ್ರವರಿ ತಿಂಗಳಲ್ಲಿ ಬಂಗಾಳ ಎಸಂಬ್ಲಿ ಸಭೆ ಸೇರಲಿದೆ. ಆಗ ಕಾಂಗ್ರೆಸ್ ಪಕ್ಷೀಯರು ಇತರರ ಸಹಾಯದಿಂದ, ಹಕ್ ಮಂತ್ರಿಮಂಡಲವನ್ನು ನಿವಾಳಿಸಿ ಹೊಸ ಮಂತ್ರಿಮಂಡಲವನ್ನೇರ್ಪಡಿಸುವ ನಿರೀಕ್ಷೆಯಿಂದಿದ್ದಾರೆ. ಹಕ್ಕರು ಇತ್ತಲಾಗಿ ಪ್ರತಿಪಕ್ಷದ ಕೆಲವು ಮಂದಿ ಮುಸಲ್ಮಾನರೊಡನೆ ಏಕಾಏಕಿ ಸಂಧಿಪ್ರಸ್ತಾಪ ನಡಿಸಿ, ಅವರಲ್ಲಿ ಮೂವರಿಗೆ ಮಂತ್ರಿಪದವಿ ಕೊಡಲೊಪ್ಪಿದುದರಿಂದ ಹಿಂದು ಮಂತ್ರಿಗಳಾದ ಶ್ರೀ. ನಳಿನಿರಂಜನ ಸರ್ಕಾರ್ ಮತ್ತು ಸರ್ ಬಿಜಯಿಪ್ರಸಾದ ಸಿಂಘ ರ್‍ಯೊಯುವರು ಅಸಮಧಾನ ಹೊಂದಿ ರಾಜಿನಾಮೆಕೊಡಲು ಸಂದರ್ಭ ನಿರೀಕ್ಷಿಸುತ್ತಿದ್ದಾರೆ ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಯ ಕುರಿತು ಗೃಹ ಮಂತ್ರಿ ಸರ್. ನಾಜಿಮುದ್ದೀನರ ಧೋರಣೆಯಿಂದ ಕೆಲವಂದಿ ಮಂತ್ರಿಗಳೂ ಜನತೆಯೂ ತೀವ್ರ ಅತೃಪ್ತಿಗೊಂಡಿದ್ದಾರೆ. ಕಲ್ಕತ್ತಾದ ಡಮ್ ಡಮ್ ಮತ್ತು ಆಲಿಪುರ ಜೈಲಿನ ಸುಮಾರು 220ಮಂದಿ ಕೈದಿಗಳು ಉಪವಾಸ ಹಿಡಿದಿರುವುದರಿಂದ ಪರಿಸ್ಥಿತಿಯು ವತ್ತಷ್ಟು ವಿಷಮಸ್ವರೂಪ ತಳದಿದೆ ಅಂತೂ ಹಕ್ ಮಂತ್ರಿಮಂಡಲದ ದಿನವು ಎಣಿಸಲ್ಪಟ್ಟಿರುವಂತೆ ತೋರುತ್ತದೆ

ಮಹಾತ್ಮಾ ಗಾಂಧಿಯವರು

ವಾಯುವ್ಯಗಡಿನಾಡಿನ ಸಂಚಾರವನ್ನು ಮುಗಿಸಿ ವಾರ್ಧಕ್ಕೆ ಹಿಂತಿರುಗಿರುವರು ಈ ಸಂಚಾರದಿಂದ ಅಹಿಂಸೆಯ ಮೇಲಿನ ಅವರ ವಿಶ್ವಾಸವು ಮತ್ತಷ್ಟು ದೃಢವಾಗಿರುವುದು ಕೋವಿಯನ್ನೇ ಜೀವನದ ಅಮೂಲ್ಯ ಸೊತ್ತಾಗಿ ಮಾಡಿಕೊಂಡು ಹಿಂಸಾತ್ಮಕ ಹೋರಾಟದಲ್ಲಿ ವೀರಾಗ್ರೇಸರರಾಗಿದ್ದ ಪಠಾಣರು ಇಂದು ಶಾಂತವೀರರಾಗಿ ಅಹಿಂಸಾವತಾರಿಯಾದ ಗಾಂಧಿಜಿಯವರ ನಿಷ್ಠಾವಂತ ಶಿಷ್ಯರಾಗಿರುತ್ತಾರೆ. ಲಕ್ಷಾಂತರ ಜನರು ಅವರ ದರ್ಶನಮಾಡಿ ಧನ್ಯರಾಗಿದ್ದಾರೆ ಹರಿಜನ ಫಂಡಿಗೆ ಉದಾರ ಸಹಾಯಮಾಡಿರುತ್ತಾರೆ. ಮಹಾತ್ಮರು ಬೇಗನೆ ಪುನಃ ಗಡಿನಾಡಿಗೆ ಹೋಗಲಿದ್ದಾರೆ ಗಾಂಧಿಜಿಯವರ ಸೂಚನೆಯಂತ ಗಡಿನಾಡಿನ ಪ್ರಧಾನಮಂತ್ರಿ ಡಾಕ್ಟರ್ ಖಾನರು, ತನ್ನ ಪ್ರಾಂತದ ಎಲ್ಲೆಯ ಪಂಗಡಿಗರ ಪ್ರದೇಶದ ಆಡಳಿತವನ್ನು ತಾನು ನಡಿಸಲು ಸಿದ್ಧನಿರುವೆನೆಂದು ವೈಸರಾಯರಿಗೆ ಪತ್ರ ಬರೆದಿರುತ್ತಾರೆ.

ನಾಜಿಗಳ ಬರ್ಬರ ಅತ್ಯಾಚಾರ

ಜರ್ಮನ್ ರಾಜತಂತ್ರಜ್ಞರಾದ ಹರ್ ವಾನ್‌ರಾತರನ್ನು ಪೆರಿಸಿನಲ್ಲಿ ತರುಣ ಯೆಹೂದ್ಯನೊಬ್ಬನು ಗುಂಡುಹೊಡೆದು ಕೊಲೆಮಾಡಿದುದನ್ನು ನೆವನಮಾಡಿಕೊಂಡು

ವಾರದ ಡೈರಿ

ನಾಜಿಗಳು ಜರ್ಮನಿಯ ಯೆಹೂದ್ಯರ ಮೇಲೆ ಬರ್ಬರ ಅತ್ಯಾಚಾರ ನಡಿಸಹತ್ತಿರುತ್ತಾರೆ. ನಾಜಿ ಪುಂಡರು ಯೆಹೂದ್ಯಜನರ ಮನೆಮಾರು, ಅಂಗಡಿ ಮೊದಲಾದುವನ್ನು ಲುಟಾಯಿಸಿ ಸುಟ್ಟುಹಾಕಿರುವುದು ಮಾತ್ರವಲ್ಲದೆ ಅವರ ಪ್ರಾರ್ಥನಾಲಯಗಳನ್ನೂ ನಾಶಮಾಡಿರುತ್ತಾರೆ. ಪೋಲೀಸರು ಈ ಅತ್ಯಾಚಾರಗಳನ್ನು ಕಣ್ಣುಕಣ್ಣು ನೋಡುತ್ತಾ ನಿಂತಿದ್ದರು. ಹರ್ ವಾನ್ ರಾತರ ಕೊಲೆಯಿಂದಾಗಿ ಜನರು ತಾವಾಗಿ ಸಿಟ್ಟುಗೊಂಡು ಈ ಅತ್ಯಾಚಾರ ನಡಿಸಿರುವರೆಂದು ಜರ್ಮನ್ ಪ್ರಚಾರ ಮಂತ್ರಿ ಡಾಕ್ಟರ್ ಗೊಬ್ಬೆಲ್ಸರು ಹೇಳಿರುವರಾದರೂ ಅದಕ್ಕೆ ಅವರ ಆಶೀರ್ವಾದವು ಇದ್ದೇಇರುವುದು "ಈ ಅತ್ಯಾಚಾರ ನಡಿಸುವ ಜರ್ಮನರಿಗೆ ಗುಂಡು ಹೊಡೆಯಿರೆಂದು ಪೋಲೀಸರಿಗೆ ನನಗೆ ಹೇಳಲಾಗಲಿಲ್ಲ. ಯಾಕೆಂದರೆ ಆಂತರಿಕವಾಗಿ ನನಗದರಲ್ಲಿ ಸಹಾನುಭೂತಿಯಿದೆ" ಎಂದು ಡಾಕ್ಟರ್ ಗೊಬ್ಬೆಲ್ಸರು ಸ್ಪಷ್ಟವಾಗಿ ಹೇಳಿರುವರು ಜನರು ತಾವಾಗಿಯೇ ಉದ್ರೇಕಗೊಂಡು ಯೆಹೂದ್ಯರ ಮಿಲ್ಯಾಂತರ ಪವನು ಬೆಲೆಯ ಸೊತ್ತುಗಳನ್ನೆಲ್ಲಾ ನಾಶಮಾಡಿರುವರೆಂದು ಹೇಳಲು ಸಾಧ್ಯವೇ ಇಲ್ಲ ಯಾಕೆಂದರೆ ಸರ್ವಸಾಮಾನ್ಯವಾಗಿ ಜನರು ಅದರಲ್ಲಿ ಭಾಗವಹಿಸಲಿಲ್ಲ ನಾಜಿಪುಂಡರು ಮಾತ್ರ ಇಚ್ಛಾನುಸಾರ ಲೂಟಿ ನಡೆಸಿದುದು ಯೆಹೂದ್ಯರ ಈ ಅಮಾನುಷ ಹಿಂಸೆಯಿಂದ ವಿವೇಕಶಾಲೀ ನಾಜಿಗಳೇ ಚಕಿತರಾಗಿರುತ್ತಾರೆ. ಇಡೀ ಲೋಕವೇ ಈ ನಾಜೀ ಅತ್ಯಾಚಾರವನ್ನು ನಿಷೇಧಿಸಿರುತ್ತದೆ. ಅಮೇರಿಕದಲ್ಲಿ ನಾಜಿಗಳ ವಿರೋಧವಾಗಿ ಜನರು ಪ್ರದರ್ಶನ ನಡಿಸಿರುವರು. ಜರ್ಮನ್ ಸರಕಾರವು ಯೆಹೂದ್ಯರ ಮೇಲೆ ಒಂದು ಬಿಲ್ಯರ್ಡ್ ಮಾರ್ಕ್ಸ್‌ಗಳಷ್ಟರ ಜುಲ್ಮಾನೆ ವಿಧಿಸಿರುವುದು. ಈ ಪ್ರಕಾರ ಸ್ತ್ರೀಯರು ಮಕ್ಕಳೆಂಬ ಭೇದವಿಲ್ಲದೆ ಜರ್ಮನಿಯಲ್ಲಿರುವ ಯೆಹೂದ್ಯರೆಲ್ಲಾ ತಲೆಯೊಂದರ 136ಪವನು ಜುಲ್ಮಾನೆ ತೆರಬೇಕಾಗಿರುವುದು ನಾಜಿಪುಂಡರ. ನಡಿಸಿದ ಅತ್ಯಾಚಾರದಿಂದ ಉಂಟಾದ ನಷ್ಟವನ್ನು ಯೆಹೂದ್ಯರು ಭರ್ತಿಮಾಡಬೇಕು ಇನ್ನೂ ಆಶ್ಚರ್ಯಕರ ಹುಕುಮೆಂದರೆ, ನಿರ್ಬಂಧದಲ್ಲಿರಿಸಲ್ಪಟ್ಟಿರುವ ಯೆಹೂದ್ಯರ ವೆಚ್ಚವನ್ನು ಹೊರಗಿರುವ ಯೆಹೂದ್ಯರು ತೆರಬೇಕೆಂಬುದು ಇದು ಹೊರತು ಬರುವ ಜನವರಿ ತಿಂಗಳಿಂದ, ಯೆಹೂದ್ಯರು ಜರ್ಮನಿಯಲ್ಲಿ ಯಾವತರದ ವಹಿವಾಟುಗಳನ್ನೂ ನಡಿಸದಂತೆ ಮಾಡಿ ಅವರನ್ನು ಹೊರಗಟ್ಟುವ ಕಾನೂನುಗಳು ಜ್ಯಾರಿಗೆ ಬರಲಿವೆ ಜರ್ಮನಿಯ ಶಾಂತಿಪ್ರಿಯತೆಯ ಸ್ವರೂಪವಿದು! ಮ್ಯುನಿಚ್ ಒಡಂಬಡಿಕೆಯ ಗೌರವಪೂರ್ವಕವಾದ ಶಾಂತಿಯ ಪರಿಣಾಮವಿದು! ಇಂತಹ ಅಂತರರಾಷ್ಟ್ರೀಯ ಪುಂಡರೊಡನೆ ಸಂಧಿಮಾಡಿಕೊಳ್ಳಲು ಆತುರಪಡುವ ಮಿ ಚೇಂಬರ್ಲೇನರ ಮನೋವೃತ್ತಿಗಾದರೂ ಏನೆನ್ನಬೇಕು!

ಚೈನವನ್ನು ಬೇಗನೆ ಗೆಲ್ಲಲು ಸಾಧ್ಯವಿಲ್ಲ.

ದಕ್ಷಿಣ ಚೈನದ ದೊಡ್ಡ ವ್ಯಾಪಾರ ಕೇಂದ್ರವೂ ನವೀನ ಚೈನದ ಮೂಲ ಆಶಯವೂ, ಯುರೋಪಿನಿಂದ ಯುದ್ಧಸಾಮಗ್ರಿಗಳು ಆಮದಾಗುವ ಪ್ರಾಮುಖ್ಯ ಮಾರ್ಗವೂ ಆದ ಕ್ಯಾಂಟನ್ ಪಟ್ಟಣವು ಅನಾಯಾಸವಾಗಿ ಜಪಾನರ ಅಧೀನವಾಗಿದೆ ಮಾರ್ಶಲ್‌ಚ್ಯಾಂಗರು 2ನೇ ಮುಖ್ಯಪಟ್ಟಣವಾಗಿ ಗಣಿಸಿದ ಹೇಂಕೋವನ್ನೂ ಅವರು ವಶಪಡಿಸಿಕೊಂಡಿದ್ದಾರೆ. ಅಂದಮೇಲೆ ಇನ್ನು ಇಡೀ ಚೈನವನ್ನು ಜಪಾನರು ಬೇಗನೆ ಗೆದ್ದು ವಶಪಡಿಸಿಕೊಳ್ಳುತ್ತಾರೆಂದು ನಂಬಲು ಕಾರಣವಿದೆ ಆದರೆ ಚೈನದ ನಿಜವಾದ ಪರಿಸ್ಥಿತಿಯು ಬೇರೆಯೇ ಇದೆ. ಮಾರ್ಶಲ್ ಚ್ಯಾಂಗರು ಹೇಂಕೋದಿಂದ 500 ಮೈಲು ದೂರದ ಚುಂಕಿಂಗ್‌ನ್ನು ತನ್ನ ಪ್ರಧಾನ ಪಟ್ಟಣವನ್ನಾಗಿಮಾಡಿಕೊಂಡು, ಚೀನೀಯರೆಲ್ಲರ, ವಿಶೇಷವಾಗಿ ಸೇನಾನಿಗಳ ವಿಶ್ವಾಸಕ್ಕೆ ಪಾತ್ರರಾಗಿ, ಸಮರಂಗವನ್ನು ಬಿಟ್ಟು ಗೊರಿಲ್ಲಯುದ್ಧದ ಮೂಲಕ ಜಪಾನರನ್ನು ವಿರೋಧಿಸಹತ್ತಿದ್ದಾರೆ. ಈ ಗೊರಿಲ್ಲಪಂಗಡಿಗರು ಎಲ್ಲಾ ಕಡೆಗಳಲ್ಲಿಯೂ ಜಪಾನರಿಗೆ ಉಪಟಳ ಕೊಡಹತ್ತಿದ್ದಾರೆ ಶಾನ್ಸಿಯಲ್ಲಿ ಜಪಾನರು ದೊಡ್ಡ ಅಪಜಯಪಡೆದಿರುತ್ತಾರೆ. ದಕ್ಷಿಣ ಚೀನದಲ್ಲಿಯೂ ಚೀನೀಯರು ಜಪಾನರನ್ನು ಪ್ರಬಲವಾಗಿ ವಿರೋಧಿಸಿ ಕೆಲವುಟ್ಟಿನ ವಿಜಯಹೊಂದಿರುತ್ತಾರೆ ಒಂದು ವಾರದೊಳಗೆ ಕ್ಯಾಂಟನ್ ಪಟ್ಟಣವನ್ನು ವಶಪಡಿಸಿಕೊಳ್ಳಬಹುದೆಂಬ ವಿಶ್ವಾಸವು ಚೀ

ಪುಟ ೮ರಲ್ಲಿ ನೋಡಿರಿ.

THE UDIPI BANK LTD.

ನಿರಖು ಠೇವಣಾತಿ (ಡಿಪ್ರೋಜಿಟು)ಗಳು
ಸಾ ಕೇ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ

ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100 -ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ಯುದ್ಧೋಪಕರಣಸಿದ್ಧತೆಯ ಉನ್ಮತ್ತ ಮೇಲಾಟ

ಮಹಾತ್ಮಾ ಗಾಂಧಿಯವರ ಎಚ್ಚರಿಕೆ

ಅಹಿಂಸಾವಿಧಾನದ ಪ್ರಭಾವ

ಶಸ್ತ್ರ ಸಿದ್ಧತೆಯ ಉನ್ಮತ್ತ ಮೇಲಾಟವು ಮುಂದುವರಿಸಲ್ಪಟ್ಟರೆ, ಇತಿಹಾಸದಲ್ಲಿ ಎಂದೂ ನಡೆಯದ ನರಹತ್ಯೆಯಲ್ಲದು ಪರಿಣಮಿಸದಿರಲಾರದೆಂದು ಮಹಾತ್ಮ ಗಾಂಧಿಯವರು ಹರಿಜನದಲ್ಲಿ ಬರೆದು ಇತ್ತಲಾಗಿ ಜೆಕೋಸ್ಲೋವೇಕಿಯದ ಸಂಬಂಧವಾಗಿ ಅವರು ಕೊಟ್ಟ ಅಭಿಪ್ರಾಯಗಳ ಕುರಿತು ಬಂದ ಟೀಕೆಗಳಿಗೆ ಉತ್ತರವಿತ್ತಿರುವರು. ಮಹಾತ್ಮ ಗಾಂಧಿಯವರು ಅಹಿಂಸಾತ್ಮಕ ವಿಧಾನವನ್ನು ಅನುಸರಿಸ ಹೇಳಿದುದು ದುರ್ಬಲ ಜೆಕೋಸ್ಲೋವೇಕಿಯಕ್ಕೆ ಮಾತ್ರವಲ್ಲದೆ, ಪ್ರಬಲ ಇಂಗ್ಲೆಂಡು, ಫ್ರಾನ್ಸು, ಅಥವಾ ಅಮೇರಿಕಕ್ಕಲ್ಲೆಂಬ ಟೀಕೆಗೆ ಗಾಂಧಿಜಿಯವರು ಈ ಕೆಳಗಣ ಉತ್ತರವಿತ್ತಿರುವರು

ಇಂಗ್ಲೆಂಡು ಮೊದಲಾದ ಪ್ರಬಲ ರಾಷ್ಟ್ರಗಳೇನೂ ಗಂಡಾಂತರಕ್ಕೊಳಗಾಗಿರಲಿಲ್ಲ. ವೈದ್ಯಕೀಯ ಭಾಷೆಯನ್ನುಪಯೋಗಿಸುವುದಾದರೆ ಅವುಗಳಿಗೇನೂ ರೋಗ ಬಾಧೆ ಉಂಟಾಗಿರುವುದಿಲ್ಲ ಆದುದರಿಂದ ಚಿಕಿತ್ಸಾ ವಿಧಾನವನ್ನೂ ನಾನು ಸೂಚಿಸಿರುವುದಿಲ್ಲ. ಆವಶ್ಯಕತೆಯ ಒತ್ತಾಟದಿಂದಾಗಿ ಜನರು ಒಳ್ಳೆಯವರಾಗುವುದೇನೂ ಅಪರೂಪವಲ್ಲ. ವಿದ್ಯಮಾನಗಳ ಒತ್ತಾಟದಿಂದ ಒಬ್ಬನು ಒಳ್ಳೆಯವನಾಗುವುದರಲ್ಲೇನೂ ತಪ್ಪಿಲ್ಲ ಒಳ್ಳೆತನಕ್ಕಾಗಿಯೇ ಒಳ್ಳೆಯವನಾಗುವುದು ಬಹಳ ಉತ್ತಮವಾದುದು.

ಜೆಕ್ಕರು ಒಂದೋ ಜರ್ಮನಿಯ ಬಲಕ್ಕೆ ತಲೆಬಾಗಿ ಶಾಂತವಾಗಿ ಅದಕ್ಕೆ ಶರಣಾಗತರಾಗಬೇಕಿತ್ತು. ಇಲ್ಲವೆ ಏಕಾಕಿಯಾಗಿ ಜರ್ಮನಿಯನ್ನು ವಿರೋಧಿಸಿ ಹೋರಾಟ ನಡಿಸಿ ಸಂಪೂರ್ಣನಾಶದ ಅಪಾಯಕ್ಕೊಳಗಾಗಬೇಕಿತ್ತು. ಈ ಸಂದರ್ಭದಲ್ಲಿ ಬಹಳ ಮಟ್ಟಿಗೆ ಇಂತಹದೇ ಆದ ಪರಿಸ್ಥಿತಿಗಳಲ್ಲಿ ಫಲಕಾರಿಯಾದ ಉಪಾಯವೊಂದನ್ನು ಸೂಚಿಸಲು ನಾನು ಮುಂದೆ ಬಂದೆನು ಅಹಿಂಸಾ ವಿಧಾನವು ಹಿಂದೂ ದೇಶದಲ್ಲೇ ಸಂಪೂರ್ಣವಾಗಿ ಜಯಶೀಲವಾಗದಿರುವಾಗ, ವಿಶೇಷವಾಗಿ ಕಾಂಗ್ರೆಸ್ ವಾದಿಗಳೇ ಕಾಂಗ್ರೆಸಿನ ತತ್ವವಾದ ಅಹಿಂಸೆಯನ್ನು ನಿಷ್ಠೆಯಿಂದ ಪಾಲಿಸುವ ಕುರಿತು ಪ್ರಬಲ ಸಂದೇಹವುಂಟಾಗಿರುವಾಗ ನಾನು ಪಾಶ್ಚಾತ್ಯ ರಾಷ್ಟ್ರಗಳಿಗೆ ಬೋಧನೆಕೊಡ ಹೊರಟುದೇಕೆಂದು ಕೆಲವರು ಟೀಕಿಸಬಹುದು. ಆದರೆ ಅಹಿಂಸಾತ್ಮಕ ವಿಧಾನದ ಕುರಿತು ನನ್ನ ವಿಶ್ವಾಸವು ಯಥಾಪ್ರಕಾರ ನಿಶ್ಚಲವಿರುತ್ತದೆ ಮತ್ತು ಜೆಕ್ಕರ ಸತ್ವಪರೀಕ್ಷೆಯ ಗಂಡಾಂತರದ ಸಂದರ್ಭದಲ್ಲಿ ನಾನು ಅವರಿಗೆ ಅಹಿಂಸಾತ್ಮಕ ವಿಧಾನವನ್ನು ಬೋಧಿಸದಿರುವುದು ಹೇಡಿತನವೆಂದು ನನಗನ್ನಿಸಿತು.

ಅಹಿಂಸಾತ್ಮಕ ಕಾರ್ಯವಿಧಾನಕ್ಕೆ ಹಿಂದೂದೇಶವು ಮಾತ್ರ ಅರ್ಹವಾದುದು. ಇತರ ಯಾವ ರಾಷ್ಟ್ರಕ್ಕಾದರೂ ಆ ಅರ್ಹತೆ ಇರಲಾರದೆಂದು ಭಾವಿಸಿಕೊಳ್ಳಲು ನನಗೆ ಯಾವ ಹಕ್ಕೂ ಇರುವುದಿಲ್ಲ. ತನ್ನ ಸ್ವಾತಂತ್ರ್ಯವನ್ನು ಸಾಧಿಸಲು ಅಹಿಂಸಾತ್ಮಕ ವಿಧಾನವನ್ನನುಸರಿಸಲು ಹಿಂದೂ ದೇಶವು ಅತ್ಯಂತ ಯೋಗ್ಯ ರಾಷ್ಟ್ರವೆಂಬ ನನ್ನ ದೃಢ ನಂಬಿಕೆಯಿದೆ. ಪ್ರತಿಕೂಲ ಚಿಹ್ನೆಗಳು ತೋರಿಬಂದರೂ, ಕಾಂಗ್ರೆಸಿಗಿಂತಲೂ ಪ್ರಾಮುಖ್ಯವಾಗಿರುವ ಜನಸಮುದಾಯವೆಲ್ಲಾ ಕೇವಲ ಅಹಿಂಸಾತ್ಮಕ ವಿಧಾನವನ್ನೇ ಅನುಸರಿಸಲು ಮುಂದಾಗುವರೆಂದು ನಾನು ನಿರೀಕ್ಷಿಸುತ್ತೇನೆ. ಅದಕ್ಕೆ ಲೋಕದ ಇತರ ಎಲ್ಲಾ ರಾಷ್ಟ್ರಗಳಿಗಿಂತ ಹಿಂದೂ ದೇಶವೇ ಮೊದಲು ಸಿದ್ಧವಾಗಿರುತ್ತದೆ. ಆದರೆ ಕೂಡಲೆ ಅಹಿಂಸಾತ್ಮಕ ವಿಧಾನವನ್ನು ಪ್ರಯೋಗಕ್ಕೆ ಹಚ್ಚುವ ಸಂದರ್ಭವೊಂದು ಉಪಸ್ಥಿತವಾದಾಗ ಅದನ್ನು ನಾನು ಜೆಕ್ಕರಿಗೆ ಸೂಚಿಸಲೇ ಬೇಕಾಯಿತು.

ದೊಡ್ಡ ರಾಷ್ಟ್ರಗಳು ತಮ್ಮಿಚ್ಛೆ ಬಂದಾಗ ಅಹಿಂಸಾತತ್ವವನ್ನು ಸ್ವೀಕರಿಸಿ ಚಿರಕೀರ್ತಿಯನ್ನೂ ಮುಂದಿನ ಜನಾಂಗದ ಮೆಚ್ಚಿಗೆಯನ್ನೂ ಸಂಪಾದಿಸಿಕೊಳ್ಳಬಹುದು. ಅವುಗಳು ಅಥವಾ ಅವುಗಳಲ್ಲಿ ಯಾವುದಾದರೊಂದು ರಾಷ್ಟ್ರವು ವಿನಾಶದ ಭೀತಿಯನ್ನು ಬಿಟ್ಟು ಶಸ್ತ್ರತ್ಯಾಗಮಾಡಿದುದೇ ಆದರೆ ಇತರರಲ್ಲಿ ಸ್ವತಃ ವಿವೇಕೋದಯವಾಗುವಂತಾಗುವುದು. ಆದರೆ ಈ ಪ್ರಬಲ ರಾಷ್ಟ್ರಗಳು ತಮ್ಮ ಸಾಮ್ರಾಜ್ಯ ಸ್ವಾರ್ಥವನ್ನೂ, ಲೋಕದ ಅನಾಗರಿಕ ಅಥವಾ ಅರೆ ನಾಗರಿಕವೆನಿಸುವ ಜನಾಂಗಗಳ ಸೂರೆಯನ್ನೂ ನಿಲ್ಲಿಸಿ ತಮ್ಮ ಜೀವನದ ರೀತಿ ನೀತಿಗಳನ್ನು ಬದಲಾಯಿಸಬೇಕು. ಅಂದರೆ ಅವರ ರಾಷ್ಟ್ರೀಯ ಜೀವನದಲ್ಲಿ ಸಂಪೂರ್ಣ ಕ್ರಾಂತಿಯಾಗಬೇಕು. ದೊಡ್ಡ ರಾಷ್ಟ್ರಗಳು ತಮ್ಮ ಪದ್ಧತಿಯ ದಾರಿಯನ್ನು ಬಿಟ್ಟು ಹೊಸಮಾರ್ಗವನ್ನನುಸರಿಸುವವೆಂದು ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ ಯಾರೂ ನಿರೀಕ್ಷಿಸದ ಅದ್ಭುತಗಳು ಹಿಂದೆ ಸಂಭವಿಸಿರುತ್ತವೆ. ಈಗಲೂ ಅವು ಉಂಟಾಗಲಾರವೆಂದು ಹೇಳಬರುವುದಿಲ್ಲ. ಅನ್ಯಾಯವನ್ನು ಸರಿಪಡಿಸುವ ದೇವರ ಶಕ್ತಿಯನ್ನು ನಿರ್ಬಂಧಿಸಲು ಯಾರಿಗೆ ತಾನೆ ಸಾಧ್ಯವಿದೆ.

ಒಂದು ಮಾತ್ರ ನಿಶ್ಚಯ. ಈಗಣ ಯುದ್ಧೋಪಕರಣ ಸಂಗ್ರಹದ ತಲೆಹೋಕ ಪ್ರತಿ ಸ್ಪರ್ಧೆಯು ಇದೇ ರೀತಿ ಮುನ್ನಡೆದ ಪಕ್ಷದಲ್ಲಿ, ಇತಿಹಾಸದಲ್ಲಿ ಎಂದೂ ನಡೆಯದ ನರಹತ್ಯೆಯು ನಡೆಯದಿರಲಾರದು. ಯಾವುದಾದರೊಂದು ರಾಷ್ಟ್ರವು ಜಯಶೀಲವಾಗಿ ಉಳಿಯುವಂತಾದರೆ ಅದಕ್ಕೆ ಆ ವಿಜಯವೇ ಸಜೀವಮೃತ್ಯುವಾಗುವುದು. ಸಂಪೂರ್ಣವಾಗಿ ಅಹಿಂಸಾವಿಧಾನವನ್ನು ಸ್ವೀಕರಿಸಿ ಅನುಸರಿಸದಿದ್ದ ಪಕ್ಷದಲ್ಲಿ ಲೋಕವು ಬೇಗನೆ ಭಯಂಕರ ಅನಾಹುತಕ್ಕೊಳಗಾಗುವುದಂತೂ ನಿಶ್ಚಯ. ಪ್ರಜಾಸತ್ತೆಯೂ, ಹಿಂಸೆಯೂ ಒಟ್ಟೊಟ್ಟಿಗೆ ಹೋಗಲು ಸಾಧ್ಯವಿಲ್ಲ. ಈಗ ನಾಮಮಾತ್ರವಾಗಿ ಪ್ರಜಾಸತ್ತಾತ್ಮಕವಾಗಿರುವ ರಾಷ್ಟ್ರಗಳು ಇನ್ನು ಮುಂದೆ ಒಂದೋ ಸಂಪೂರ್ಣವಾಗಿ ನಿರಂಕುಶ ಏಕಸೂತ್ರಾಧಿಕಾರಕ್ಕೊಳಗಾಗಬೇಕು, ಇಲ್ಲವೆ ಅವು ನಿಜವಾದ ಪ್ರಜಾಸತ್ತಾತ್ಮಕ ರಾಜ್ಯಭಾರವುಳ್ಳವಾಗಬೇಕಾದರೆ ಧೈರ್ಯದಿಂದ ಅಹಿಂಸಾವಿಧಾನವನ್ನು ಸ್ವೀಕರಿಸಬೇಕು. ಕೇವಲ ವೈಯಕ್ತಿಕವಾಗಿ ಮಾತ್ರ ಅಹಿಂಸಾವಿಧಾನವನ್ನು ಅನುಸರಿಸಬಹುದು. ಸಮಷ್ಟಿಯಾಗಿ ಅದು ಸಾಧ್ಯವಿಲ್ಲೆಂಬ ಮಾತು ಅರ್ಥರಹಿತವಾದುದು.

THE Bombay Life

ASSURANCE CO., LTD.

ಸ್ಥಾಪನೆ] **[1908**

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:

(1) ರಥಬೀದಿ, **ಮಂಗಳೂರು**

(2) ಪುತಿಯಾರ, **ಕಲ್ಲಿಕೋಟೆ.**

(3) ಪೋಸ್ಟ್ ಬಾಕ್ಸ್ 357, ಮೌಂಟ' ರೋಡು, ಮದ್ರಾಸು. (ಫೋನ್ ನಂ. 8245,)

(4) ವಿಶ್ವೇಶ್ವರಪುರಂ, ಸರ್ಕಲ್, **ಬೆಂಗಳೂರು ಸಿಟಿ.** (ಫೋನ್ ನಂ. 2182,)

(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, **ಬೊಂಬೈ** (ಫೋ. ನಂ. 26314)

ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು.

(6) ಪಟ್ಟಪಾಳಂ, **ದ. ಮಲಬಾರ್.**

(7) ಸೆಂಟ್ರಲ್ ಸ್ಟೇಶನ್ ರೋಡ್, **ತಿರುವಾಂಕೂರು.**

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡದೆ)

ರಿಜಿಸ್ಟ್ರಿಯಾದ ಆಫೀಸು: **ಉಡುಪಿ.**

ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ಮಗತಿಯ ವಿಮಾಸಂಸ್ಥೆ.

ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	ರೂ.	**1,40,08,725**
ಪ್ರೀಮಿಯಂ ಆದಾಯ ಮಿಕ್ಕಿದುದು ...	,,	**30,00,000**
ಒಟ್ಟು ಮೂಲ ಮಿಕ್ಕಿದುದು	,,	**1,00,00,000**
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	**50,00,000**

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ ಆತ್ಯಧಿಕ ಪ್ರತಿಫಲ.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. P. 8/1938.

ರಾಮಕೃಷ್ಣ ಐತಾಳ .... **ಅರ್ಜಿದಾರ**

1. ಸೀತಾರಾಮ ಐತಾಳ }
2. ವೆಂಕಮ್ಮ .... } ಎದ್ರಿರು.

ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನೆಂದ್ರೆ: —

ಅರ್ಜಿದಾರ ವ 1ನೇ ಎದ್ರಿಯ ತಂದೆ ವ 2ನೇ ಎದ್ರಿಳ ಗಂಡ ಕೃಷ್ಣ ಐತಾಳರು ಅರ್ಜಿದಾರನ ಹೆಸರಿಗೆ ತಾ. 13-9-'36ರಲ್ಲು ರಿಜಿಸ್ಟ್ರನಿ ವಿಲು ಬರೆದಿಟ್ಟು 1937ನೇ ಇಸವಿಯ ಆಗೋಸ್ತು ತಿಂಗಳಲ್ಲಿ ಮೃತಪಟ್ಟಿರುವುದರಿಂದ ಸದರೀ ವಿಲು ಮೇರೆಗೆ ಮೃತನಿಗೆ ಬರಬೇಕಾದ ಹಣದ ವಸೂಲಿಗೆ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರನು ಈ ಕೋರ್ಟಿಗೆ ಅರ್ಜಿಮಾಡಿರುತ್ತಾನೆ ಈ ಕುರಿತು ಆಕ್ಷೇಪ ಯಿರುವವರು ತಾ. 17-11-1938ನೇ ದಿವಸ ಹಗಲು 11 ಘಂಟೆಗೆ ಕೋರ್ಟಿನಲ್ಲಿ ಹ್ಯಾಜರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಸರ್ವರಿಗೂ ತಿಳಿಯಪಡಿಸಿದೆ.

(Sd.) **A. V. N. HEBBAR,**
Pleader for Petitioner.
Coondapoor, 11-11-'38.

ಈ ವಾರದ ಕತೆ

ಹಾಗಿರೋದೇ ಅವರಿಗೂ ಸುಖ, ಇವರಿಗೂ ಸುಖ!

(ಬಿ. ಗೋಪಾಲರಾವ್ ಕಾರ್ಯದರ್ಶಿ ಜಯಕರ್ನಾಟಕ ಕ್ಲಬ್ ಬಾರಕೂರು, ಇವರಿಂದ)

ಸೀತಮ್ಮನು ಆಗ ತಾನೇ ಸ್ನಾನ ತೀರಿಸಿ ಒಸ್ಟೆ ಇಟ್ಟಿಯನ್ನುಟ್ಟು ಕೈಯಲ್ಲಿ ಒಂದು ತಂಬಿಗೆ ಮಡಿನೀರನ್ನು ತಂದು ತುಳಸೀ ಕಟ್ಟೆಯ ಮುಂದಿಟ್ಟು, ಬಾಯಲ್ಲಿ ಯಾರನ್ನೋ ಶಪಿಸುತ್ತಿರುವವರಂತೆ ಮಣಮಣ ಹೇಳುತ್ತಾ, ನೀರನ್ನು ಆ ಕಟ್ಟೆಯೊಳಗೆ ಹೊಯ್ದು ಆ ತುಳಸೀ ಕಟ್ಟೆಗೆ ಆರೇಳು ಪ್ರದಕ್ಷಿಣೆ ಬಂದರು. ಬರಿದಾದ ಆ ತಂಬಿಗೆಯನ್ನು ಎತ್ತಿಕೊಂಡು ಅಂಗಳವನ್ನು ದಾಟಿ ಜಗುಲಿಯನ್ನು ಹತ್ತಿ ಚಾವಡಿಗೆ ಬಂದು ಅದನ್ನು ಒಂದು ಕಡೆ ಇಸಾಡಿ, ಕೋಪದಿಂದ 'ಈ ಮನೆ-ಗಿನೆ ಎಲ್ಲಾ ಯಾರಿಗೆ ಬೇಕು? ಗುಡಿಸಲಿಕ್ಕಿಲ್ಲ, ಸಾರಿಸಲಿಕ್ಕಿಲ್ಲ, ಹಟ್ಟಿಯ ಹಾಗಿದೆ ಮನೆ. ಮನೆಯವರಿಗೆಲ್ಲಾ ಎಲ್ಲಿಲ್ಲದ ಸಂಕಟ ತಪ್ಪುವುದಿಲ್ಲ. ಎಲ್ಲದಕ್ಕೂ ನಾನೇ ಸಾಯಬೇಕೇ? ಅಂಗಳ ಗುಡಿಸಲಿಕ್ಕೂ ಕೈ ಮುರಿದು ಹೋಗಿದೆಯೇ? ಯಾಕಪ್ಪಾ ಈ ಮೈಗಳ್ಳತನ? ಇಲ್ಲ ನನ್ನಿಂದ ಇದನ್ನೆಲ್ಲಾ ನೋಡಿಕೊಂಡಿರಲು ಸಾಧ್ಯವಿಲ್ಲ; ನಾನು ಎಲ್ಲಿಗಾದರೂ ಹೋಗಿ, ಕೆರೆಬಾವಿಗಾದರೂ ಬಿದ್ದು... ....' ಕೋಪದ ಆವೇಶದಲ್ಲಿ ಮುಂದೆ ಮಾತಾಡಲಾರದೆ 'ಬುಸ್' ಎನ್ನುತ್ತ ಅಲ್ಲಿಯೇ ಚಾವಡಿಯ ಕಂಬಕ್ಕೆ ಒರಗಿ ಕುಳಿತುಬಿಟ್ಟಳು.

೦ ೦ ೦ ೦ ೦

ಅನಸೂಯಾ ಬಾಯಿಯು ಆ ಮನೆಯ ಕೋಣೆಯೊಂದರಲ್ಲಿ ತನ್ನ ಒಂದು ವರ್ಷದ ಚಿಕ್ಕ ಮಗುವನ್ನು ಮಗ್ಗುಲಲ್ಲಿ ಮಲಗಿಸಿಕೊಂಡಿದ್ದಳು. ಅತ್ತೆಯ ಮಾತನ್ನು ಕೇಳಿ ಅವಳಿಗೆ ಸಹಿಸಲಸಾಧ್ಯವಾಯಿತು. ಮುಖವು ದುಃಖದಿಂದಲೂ ಸಿಟ್ಟಿನಿಂದಲೂ ಕೆಂಪಾಯಿತು. ಕೈಕಾಲುಗಳು ನಡುಗಲಾರಂಭಿಸಿದುವು. ಕಣ್ಣಿನಲ್ಲಿ ನೀರಿನ ಹನಿಯೊಸರಿತು. ಆದರೂ ದುಃಖವನ್ನೆಲ್ಲ ನುಂಗಿಕೊಂಡು 'ಅತ್ತೆಯವರೇ, ನಾನೇನುಮಾಡಲಿ! ನಾಲ್ಕೈದು ದಿನಗಳಿಂದಲೂ ಹಿಡಿದ ಜ್ವರ ಬಿಡಲೊಲ್ಲದು. ಎದೆಯೊಳಗೆ ಉಸಿರು ಉಸಿರಿಗೂ ಶೂಲದಿಂದ ಇರಿದಂತಾಗುತ್ತೆ. 'ನಿಮೋನಿಯಾದ ಲಕ್ಷಣ! ಎದ್ದು ತಿರುಗಾಡಬೇಡ, ಜೀವಕ್ಕೆ ಬಂದೀತು! ಜಾಗ್ರತೆ!' ಎಂದು ಡಾಕ್ಟರರು ನಿಮ್ಮೆದುರಿಗೇ ಹೇಳಿದ್ದು ಕೇಳಲಿಲ್ಲವೆ? ನಿಮ್ಮ ಮಗನೂ ಕೆಲ್ಸಗಿಲ್ಸಕ್ಕೆ ಹೋಗಿ ಎದ್ದು ತಿರುಗಾಡಿ ನನ್ನನ್ನ ಕಷ್ಟಕ್ಕೆ ಈಡುಮಾಡ್ಬೇಡಾ!' ಅಂದಿದ್ದಾರೆ ಒಂದೆರಡು ದಿನವಾದರೂ ಅತ್ತಿಗೆ ಒಂದಿಷ್ಟು ಮನೆಗೆಲಸಮಾಡಿದರೆ.'

ಏನಂದೆ? ಏನಂದೆ? ನಾನು ನಿನ್ನ ಮನೇಲಿ ಕೆಲಸಮಾಡ್ಬೇಕಾ! ನಾನು ನಿನ್ನ ತೊತ್ತು ಆಗಿ ಹೋದ್ನೇ! ಅಯ್ಯೋ! ನನಗೆ ಹಾಗೆ ಆಗ್ಬೇಕೋ, ನಾನು ನಿಮ್ಮ ಮನೆ ಬಾಗ್ಲು ಸೇರ್ಬೇಕೋ, ನಿನ್ನ ಬಾಯಿಂದ ತೊತ್ತಾಗಿ ಬಾಳೊಂತ ಕೇಳ್ಬೇಕೊ, ಅಂತ ನನ್ನ ಹಣೇಲಿ ಬರೀತೇ! ಅಯ್ಯೋ, ನಾನ್ಯಾಕೆ ಸಾಯೋಲ್ಲ ಅಮ್ಮಾ!' ಅಂದು ಕಣ್ಣೀರ ಹೊಳೆ ಹರಿಸಿಬಿಟ್ಟಳು ಸೀತಮ್ಮನ ಮುದ್ದಿನ ಮಗಳು ಚಾವಡಿಯಲ್ಲಿ ಹೊರಳಾಡುತ್ತಿದ್ದ ವಿಧವೆ ಶಾಂಭವಿ.

ಕೇಳಬೇಕೆ ಆಮೇಲೆ! ಬೆಂಕಿಗೆ ತುಪ್ಪ ಎರಚಿದಂತಾಯಿತು. ಸೀತಮ್ಮನ ಹೃದಯದ ಜ್ವಾಲೆ ಆಟ್ಟಕ್ಕೆ ಮುಟ್ಟುವಂತೆ ಹಾರಿತು! ಅವಳು ಅಲ್ಲಿಂದೆದ್ದು ಅನುಸೂಯೆ ಇದ್ದ ಕೋಣೆಗೆ ಓಡುತ್ತ 'ಏನು ಧಿಮಾಕು ನಿನ್ಗೆ! ಏನು ಎದೆ ಧೈರ್ಯ! ಕೂಳಿಗಾಗಿ ನಮ್ಮ ಮನೆ ಸೇರಿದೋಳು ನೀನು! ಮನೇಲಿ ಹುಟ್ಟಿದ ಹೆಣ್ಣೀನಾ ಬೆದರಿಸೋಕೆ ತೊಡಗಿದೆಯಲ್ಲ. ನಿನ್ನ ತೊತ್ತಾಗಬೇಕೇ ಅವಳು! ಮನೆಗೆಲಸಮಾಡ್ಬೇಕೇ? ನನ್ನ ಮಗಳಿಗೆ ಹಾಗೆ ಹೇಳೋಕೆ ನೀನು ಯಾರೇ? ಯಾರೇ ನೀನು? ನಿನಗೇನು ಅಧಿಕಾರ? ಹೇಳು, ಹೇಳು! ಹೇಳು! ಎನ್ನುತ್ತ ಆ ಆವೇಶದ 'ಹೇಳು'ಗೆ ತಾಳಹಾಕುವಂತೆ ಅನುಸೂಯೆಯ ಬೆನ್ನಮೇಲೆ ಮೂರು ಗುದ್ದಿಟ್ಟಳು. ಗುದ್ದಿಟ್ಟು ಬರುತ್ತ 'ಹ್ಞಾಂ ಹ್ಞಾಂ! ಲಕೆಲ್ಸಗ್ಸಿಮಾಡೋದು ಬ್ಯಾಡಾಂದಿದ್ದಾನೆಯೇ? ಯಾರನ್ನಿಟ್ಟಿದ್ದಾನಂತೆ ಇಲ್ಲಿ ಕೆಲ್ಸಕ್ಕೆ? ನನ್ನ ಮಗ್ಳು ನಿಮ್ಮ ಗೌಡಿಯಾಕ್ಬೇಕು? ಅಧ್ಬಾ ನಾನು ಅತ್ತೆ ಹೋಗಿ ಕತ್ತೆಯಾದ್ನಾ! ಗೊತ್ತಾಯ್ತಾ! ಗೊತ್ತಾಯ್ತಾ! ನಿನ್ನ ಮಂಕು ಬೂದಿ ಇಷ್ಟರವರೆಗೂ ಬಂತಾ? ಅವನನ್ನ ಕಂಕುಳಲ್ಲಿ ಹಾಕ್ಕೊಂಡು ನನಗೆ ಎದುರು ಉತ್ತರಕೊಡುವಷ್ಟು ಧೈರ್ಯವೂ ಬಂತಾ ನಿನ್ಗೆ? ಅಂದ ಬರ್ಲೀ ಬರ್ಲೀಂದೆ! ಯಾರು ಕೆಲ್ಸಮಾಡ್ಬೇಕೊಂತ ಹೇಳ್ತೀನೇನೆ!" ಎನ್ನುತ್ತ ಬಂದು ಚಾವಡಿಯಲ್ಲಿ ಕಂಭಕ್ಕೆ ಒರಗಿ ಕೂತಳು. ಸೊಸೆಯು ಮಾತಾಡಲಿಲ್ಲ. ಅತ್ತಿಗೆಗೆ ಸಂತೃಪ್ತಿಯಾಯಿತು. ಅತ್ತೆಯ ಮೈಮೇಲೆ ಬಂದಿದ್ದ ಆ ಸಿಟ್ಟಿನ ಭೂತ ಇಷ್ಟರಿಂದ ಹಿರಿಯಿತು

ತನ್ನ ಮಗ ಶ್ಯಾಮನ ಗುಟ್ಟು ಸೀತಮ್ಮನಿಗೆ ಗೊತ್ತಿತ್ತು, ತಾಯಿಗೆ ಹೆದರುವ ಮಗ ಅವ. ಆದುದರಿಂದ ಮನೆಯ ಸರ್ವಾಧಿಕಾರಿ ಸೀತಮ್ಮನೇ. ಶ್ಯಾಮನು ದಿನದಿನವೂ ತನ್ನ ಸಣ್ಣ ಸೈಕಲ್ ಸ್ಟೋರಿನಲ್ಲಿ ದುಡಿದುದನ್ನು ತಾಯಿಗೆ ತಂದು ಅರ್ಪಿಸಬೇಕು. ಮನೆಗೆ ಬಂದಾಗ ತನ್ನ ಹೆಂಡತಿಯ ಮೇಲಿನ ಫಿರ್ಯಾದುಗಳನ್ನು ಏಕಪಕ್ಷವಾಗಿ ಕೇಳಿ ತೀರ್ಮಾನಿಸಿ ಶಿಕ್ಷೆ ವಿಧಿಸಬೇಕು. ಹಾಗೆ ಮಾಡುವುದು ಅನ್ಯಾಯವೆಂದು ತಿಳಿದಿದ್ದ. ಆದರೆ ಹಸಿದ ಹೊಟ್ಟೆಯಿಂದ ಮನೆಹೊಕ್ಕಾಗ ತಾಯಿ ತಂಗಿಯರು ಆತನ ಮನಸ್ಸಿಗೆ ಅಷ್ಟು ರಗಳೆಕೊಡುತ್ತಿದ್ದರೆ ಆ ಸಿಟ್ಟನ್ನು ಯಾರ ಮೇಲೆ ತೆಗೆಯುವುದು? ಹಾಗಾಗುತ್ತಿತ್ತು ಅವನ ಪಾಡು. ಅಂಗಡಿಗೆ ಹೋಗಿ ಶಾಂತವಾಗಿ ಕುಳಿತಾಗ 'ಅಯ್ಯೋ, ಈ ಹೆಣ್ಣಿನ ಬಾಳೇ!' ಎಂದೆನ್ನುತ್ತಿತ್ತು ಹಲವು ವೇಳೆ ತನ್ನ ಮೂರ್ಖತನಕ್ಕಾಗಿ ಹೇಡಿತನಕ್ಕಾಗಿಯೂ ತನ್ನನ್ನೇ ಹಳಿಯುತ್ತಿದ್ದ.

ಇಂದು ತಾನು ಹದ್ದುಮೀರಿ ಹೋದೆನೆಂದು ಸೀತಮ್ಮನಿಗೆ ತೋರಿತು. ಜ್ವರವಿದ್ದವಳಿಗೆ ಗುದ್ದುಹಾಕಿದುದು ಅನುಚಿತವೆಂದು ಕಂಡಿತು. ಅಷ್ಟರಲ್ಲಿ ಶ್ಯಾಮು ಬರುವಹೊತ್ತಾಯಿತು, ತಾನು ಮಾಡಿರುವ ಅನ್ಯಾಯವೂ ನ್ಯಾಯವೆನ್ನಿಸುವಷ್ಟು ಪರಿಸ್ಥಿತಿಯು ಉದ್ವೇಗಗೊಳಿಸಿತ್ತೆಂಬುದನ್ನು ಮಗನಿಗೆ ತೋರಿಸಬೇಕಲ್ಲ. ಆದುದರಿಂದ ತಾಯಿಯೂ ಮಗಳೂ ಚಾವಡಿಯ ಒಂದೊಂದು ಬದಿಯಲ್ಲಿ ಕುಳಿತು ಬಾರದ ಕಣ್ಣೀರನ್ನು ಹೇಗೋ ಹೇಗೋ ಸುರಿಸುತ್ತಿದ್ದರು.

ಶ್ಯಾಮು ಸೈಕಲಿನಿಂದಿಳಿದು ಮನೆಯೊಳಗೆ ಬಂದ. ತಾಯಿತಂಗಿಯರನ್ನು ಕಂಡಾಕ್ಷಣ ಅಂದೂ ತನ್ನಿಂದ ಹೆಂಡತಿಗೆ ಬೈಯಿಸಿ ಹೊಡೆಯಿಸಿಬಿಡಬೇಕೆಂದು ಅವರು ಛಲತೊಟ್ಟವರಂತೆ ತೋರಿತು. ಅವನಲ್ಲಿ ತಾಯಿ ತಂಗಿಯರ ಮೇಲಿನ ಅಭಿಮಾನವು ನಿರನಿಟನಿರನಿಟಲೆಂದು ಎಷ್ಟೋದಿನಗಳಿಂದ ಮುರಿಯುತ್ತ ಬಂದಿತ್ತು. ಇಂದು ಅದು ಚಟ್ಟನೆ ತುಂಡಾಯಿತು!

'ಅಮ್ಮಾ, ಇದೇನು! ಮನೆಯೆಲ್ಲಾ ಕಣ್ಣೀರು! ಯಾರೂ ಸತ್ತಿಲ್ಲವಷ್ಟೆ!' ಎಂದ ಶ್ಯಾಮ. ಆ ಮಾತಿನಿಂದ ಶ್ಯಾಮನ ಒಲವು ಎತ್ತ ಕಡೆಗೆ ವಾಲಿದೆ ಎಂದು ಸೀತಮ್ಮನು ತಿಳಿದುಕೊಳ್ಳಲಾರದಷ್ಟು ಹೆಡ್ಡಳೇ? ಆದುದರಿಂದ ಸೊಸೆಯ ಬಾಯಿಂದಲೇ ಆತನೆಲ್ಲವನ್ನು ತಿಳಿದರೆ ಬೆಂಕಿಯೆದುರು ಬೆಣ್ಣೆಕರಗಿದಂತೆ ತನ್ನ ಮಗನ ಹೃದಯವು ನೀರಾಗಿಹೋಗಿ ಗೊಂದಲವಾದೀತೆಂದು ತಾನೇ ಸೊಸೆಯು ಹೇಳಿದ್ದನ್ನು ಹೇಳದ್ದನ್ನು ಉಪ್ಪುಕಾರ ಹಾಕಿ ಹೇಳಿ 'ನೀನು ಮನೆಯಲ್ಲಿರುವಾಗ ನಾಯಿಯಂತೆ ಇರುವವಳು, ನೀನು ಹೊರಗೆ ಕಾಲಿಟ್ಟೇ ಎಂದರೆ ತನ್ನ ಮೈ ಮುಟ್ಟುವವರು ಇಲ್ಲಾಂತ ಧೈರ್ಯಗೊಂಡು ಸಿಂಹದಂತಾಗಿ ನಮಗೆಲ್ಲಾ ಗರ್ಜಿಸಲಿಕ್ಕೆ ತೊಡಗುತ್ತಾಳೆ. ಆ ಧೈರ್ಯಬರಬಾರ್ದು, ನಾನೂ ಏಟುಕೊಟ್ಟುಬಿಟ್ಟೇನೂ ಅಂತ ತೋರ್ಸೋಕೆ ಮಾತ್ರ—ಇಕೋ ಹೀಗೆ ಮಕ್ಕಳ ಬೆನ್ನ ಮೇಲೆ ಕೈಯಾಡಿಸುವಂತೆ ಗುದ್ದುಕೊಟ್ಟೆ ಕಣ್ಣು ಕಟ್ಟುಮಾಡಿದೆ, ಜ್ವರ ಬಂದವಳೊಂತ ನನಗೇನೂ ಗೊತ್ತಿಲ್ಲಾ, ಹಾಗೆಲ್ಲಾ ಹೊಡಿಯೋಕೆ? ಆದರೆ ಅಷ್ಟೇ ಬಣ್ಣದಿಂದ ಹೊರಗೆಬರುತ್ತೋ! ಆದ್ರಿಂದ ಇನ್ನು ಅವಳ ತೊತ್ತಾಗಿ ನಾವಿಲ್ಲಿ ಬಾಳೋದು ಬೇಡ, ನೀವೇ ಗಂಡ ಹೆಂಡಿರು ಸುಖವಾಗಿ ಇದ್ದುಬಿಡಿ ನಾವು ತಾಯಿಮಗಳು ಎಲ್ಲಾದರೂ ಹೋಗಿ ಹಾದಿಬೀದಿಲಿ ಬಿದ್ದಾದರೂ ಸಾಯುತ್ತೇವೆ.' ಎಂದು ಹೇಳಿ ಗಂಟುಮೂಟೆ ಕಟ್ಟಲಿಕ್ಕೆ ತೊಡಗಿದಳು.

'ಬೇಡಮ್ಮಾ ಮುದಿತಾಯಿಯನ್ನ ಬೀದೀಲಿ ಹಾಕಿದ ಎಂಬ ಮಾತಾಗಲೀ ದಿಕ್ಕಿಲ್ಲದ ಅಕ್ಕನ್ನ ಕೈಬಿಟ್ಟ ಎಂಬ ಅಪವಾದವಾಗಲೀ ನನಗೆ ಬೇಡ ನೀವೇ ಇಲ್ಲಿ ಇರಿ. ಅವಳನ್ನೇ ಎಲ್ಲಾದರೂ ಬಿಟ್ಟುಬರುತ್ತೇನೆ. ಯಾರಲ್ಲಾದರೂ ಕೆಲಸಮಾಡಿ ಹೊಟ್ಟೆ ಹೊರುವಾಗ ಬುದ್ಧಿ ಬರುತ್ತೆ! ಅವಳ ಸೋದರಮಾವನ ಮನೆಯಲ್ಲಿ ಒಳಗಿನ ಕೆಲಸಕ್ಕೊಂದು ಜನಬೇಕಂತೆ ಇದ್ದುಕೊಳ್ಳಲಿ ಅಲ್ಲಿ!' ಎಂದ. ಸೀತಮ್ಮನಿಗೆ ಆ ಮಾತಿಂದ ಸಮಾಧಾನವಾದರೂ ಹೊರಗೆ ತೋರಿಸದೆ ಗುಣುಗುಟ್ಟುತ್ತ ಅಡಿಗೆಯ ಕೋಣೆಗೆ

ಜಯಕರ್ನಾಟಕ
ಶಿಕ್ಷಣಾಂಕ

ಡಿಸೆಂಬರ ೧ನೇ ತಾರೀಖಿಗೆ ಹೊರಡುವ ವಿಶೇಷ ಸಂಚಿಕೆ.

ವಾರ್ಧಾಶಿಕ್ಷಣ ಯೋಜನೆ, ರಾಷ್ಟ್ರೀಯ ಶಿಕ್ಷಣ, ಶಿಕ್ಷಣದ ಜೀವನಸಾಮರಸ್ಯ, ಆಧುನಿಕ ಶಿಕ್ಷಣ ಪದ್ಧತಿಗಳು, ಶಿಕ್ಷಣದ ಅಭಿನವ ದೃಷ್ಟಿ, ದೇಶವಿದೇಶಗಳೊಳಗಿನ ಶಿಕ್ಷಣ ಪ್ರಕಾರಗಳು ಮೊದಲಾದ ವಿವಿಧ ಶಿಕ್ಷಣ ಸಮಸ್ಯೆಗಳ ಮೇಲೆ ಅಧಿಕಾರಸಂಪನ್ನ ಲೇಖಕರ ಲೇಖನಗಳು ಬರುವವು.

ದಕ್ಷಿಣ ಕನ್ನಡದ ಶ್ರೀಯುತರಾದ ಕಾರಂತ, ಎಂ. ಎನ್. ಕಾಮತ, ಜಿ ಆರ್. ಶೆಣೈ, ಎಸ್. ಮುಕುಂದರಾವ್, ಉಲ್ಲಾಳ ಮಂಗೇಶರಾವ್, ಕೊರಡ್ಕಲ್ ಶ್ರೀನಿವಾಸರಾವ್ ಮೊದಲಾದ ಮಹನೀಯರು ಬರೆಯುವರು.

ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ ತುಂಬಾ ಸಂಗ್ರಾಹ್ಯವಾದ ಸಂದರ್ಭ ಗ್ರಂಥ.

ಲೇಖಕರಿಗೆ ಸೂಚನೆ —ಶಿಕ್ಷಣದ ಪ್ರಶ್ನೆಗಳ ವ್ಯಾಸಂಗ ಮಾಡಿದವರು ೨ ಕ ೩ ಪುಟಗಳಿಗೆ ಮಿಕ್ಕದಂತೆ ಯಾವುದೊಂದು ಸೂಕ್ತ ವಿಷಯವನ್ನು ತೆಗೆದುಕೊಂಡು ಸಂಗ್ರಹವಾಗಿ ಬರೆದು ಕಳಿಸಬೇಕ

ಸಂಚಿಕೆಯು ೧೦೦ ಪುಟಗಳನ್ನು ಮೀರುವುದು, ಆದರೂ ಬೆಲೆ ಆರೇ ಆಣೆ.

ಬಿಡಿ ಪ್ರತಿಗಳನ್ನು ಪಡೆಯಲಿಚ್ಛಿಸುವವರು ಆರ್ಡರು ದಾಖಲುಮಾಡಬೇಕು

ಜಾಹೀರಾತುದಾರರಿಗೆ ತಮ್ಮ ಸರಕುಗಳ ಪ್ರಚಾರಮಾಡಲು ಸುವರ್ಣ ಸಂಧಿ.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ ತಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. ಕ್ರಯ:-100ಮಾತ್ರೆಗಳಿಗೆ ರೂ 1-5-0, 500ಕ್ಕೆ ರೂ. 5-0-0, ಐದಾಣೆ ಸ್ಟಾಂಪು ಕಳಿಸಿದರೆ 13 ಮಾತ್ರೆ ಕಳಿಸಲ್ಪಡುತ್ತದೆ.

ಆಮಲಕೀ ತೈಲ (ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಪ್ರತಿಮ ತೈಲ.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ,

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ. ಭಾರತ

ಸಾಗಿದಳು ಶ್ಯಾಮಣ್ಣನು ತನ್ನ ಹೆಂಡತಿ ಮಲಗಿದ್ದ ಕೋಣೆಗೆ ಹೋದ. ಕಣ್ಣೀರು ಸುರಿಸುತ್ತಿದ್ದಳು ಆಕೆ. 'ದಿನದಿನವೂ ಇದನ್ನು ನೋಡಿ ಸಾಕಾಯ್ತು ನನಗೆ! ದುಡಿದು ದಣಿದು ಒಂದಿಷ್ಟು ಸುಖಶಾಂತಿ ಮನೆಯಲ್ಲಿ ಸಿಕ್ಕೀತೆಂದು ಬಂದರೆ ದಿನಾಲೂ ಇದೇ ಹಾಡು! ಆದುದರಿಂದ ನನಗಿನ್ನು ಈ ಮನೆಯ ಋಣತೀರಿತು ಎಲ್ಲಾದರೂ ಹೋಗಿ ಏನಾದರೂ ಮಾಡಿ ದಿನದೂಡುವ. ಆದರೂ ಈ ಮನೆಯ ಜೈಲನ್ನ ನಿನಗೂ ಬೇಡ, ನನಗೂ ಬೇಡ. ಇಲ್ಲದ್ದರೆ ನಿನಗೆ ಬಂದಿರುವ ಜ್ವರವೂ ಗುಣವಾಗಲಾರದು. ಇಲ್ಲಿಯ 'ನರ್ಸಿಂಗ್ ಹೋಮ್'ನಲ್ಲಿ ನಾಲ್ಕೆಂಟುದಿನ ಇದ್ದುಬಿಡು. ಅಷ್ಟರಲ್ಲಿ ನನ್ನ ಸೈಕಲ್ ಸ್ಟೋರ್ ಯಾರ ತಲೆಮೇಲಾದರೂ ಹಾಕಿ ನಾಲ್ಕು ಕಾಸು ಮಾಡಿಕೊಳ್ಳುತ್ತೇನೆ ಎಲ್ಲಾದರೂ ಹೋಗಿಬಿಡೋಣ. ಆದರೆ ಇದೆಲ್ಲ ಗುಟ್ಟಾಗಿರಲಿ ಸಂಜೆಗೆ ನರ್ಸಿಂಗ್ ಹೋಮಿಗೆ ಹೋಗಲು ಕಾರ್ ಬರುತ್ತೆ ಸಿದ್ಧವಾಗಿರು' ಎಂದು ಪಿಸುಪಿಸು ನುಡಿದ ಈ ಮಾತಿನಿಂದಲೇ ಅನುಸೂಯೆಯ ಕಾಹಿಲೆಯು ಮೂರು ಮುಪ್ಪಾಗ ಗುಣವಾಯಿತನ್ನಿ!

x x x x

ನಾನೂ ಗಣಪತಿರಾಯರೂ ಮೈಸೂರಿನ ದಸರಾಮಹೋತ್ಸವ ನೋಡಲಿಕ್ಕೆ ಹೋಗಿದ್ದೆವು ಒಂದುದಿನ ಅಲ್ಲಿಯದೊಂದು 'ಮಾರ್ಕೆಟ್ಟಿ'ನೊಳಗಿನ ಸ್ಟಾಲುಗಳನ್ನು ನೋಡುತ್ತ ಸುತ್ತುತ್ತಿದ್ದಾಗ 'The Kanara Pickles & Chatnys Emporium' ಎಂಬ ಸ್ಟಾಲನ್ನು ನೋಡಿ ಇದ್ಯಾರು ನಮ್ಮೂರವರು ಇಲ್ಲಿದ್ದಾರೆಂದು ನೋಡೋಣಾಂತ ಅದರ ಸಮೀಪ ಹೋದೆವು ನಮ್ಮ ಶ್ಯಾಮು! 'ಏನೋ ಶ್ಯಾಮಾ? ಊರಲ್ಲಿ ಯಾರಿಗೂ ನಿನ್ನ ಸರಿಯಾದ ಪತ್ತೇನೇ ಇಲ್ಲ. ಅಂತೂ ತಿಂಗಳಿಗೈದು ರೂಪಾಯಿ ಮನೆಗೆ ಬರುತ್ತೇಂತ ನಿನ್ನ ತಾಯಿ ಹೇಳಿದ್ಲು. ಹ್ಯಾಗೆ ಸುಖವಾಗಿದ್ದೀಯಾ ಇಲ್ಲಿ? ಅಂದೆ ನಾನು. ತಾಯಿಗೊಂದು ಎಮ್ಮೆ ಕಟ್ಟಿಕೊಳ್ಳೋಕೆ ಒಂದೆಪ್ಪತ್ತು ರೂಪಾಯಿ ಕಳುಹಿಸಿದ್ದೆ. ಒಂದು ಹೊತ್ತಿನ ಹಾಲು ಮಾರಿದ್ರೂ ಅವರ ಜೀವನ ನಡ್ದೀತು ಮೇಲಾಗಿ ತಿಂಗಳು ತಿಂಗಳು ಏನಾದರೂ ಕಳುಹಿಸಿಕೊಡ್ತಾ ಇದ್ದೇನೆ ಹಾಗಿರೋದೇ ಅವರಿಗೂ ಸುಖ; ನಮಗೂ ಸುಖ! ಮತ್ತೇನುಮಾಡೋದು ಹೇಳಿ!' ಎಂದ. ಶ್ಯಾಮಣ್ಣನ ಮನೆ ವಿಚಾರವೆಲ್ಲ ಗೊತ್ತಿದ್ದ ನನಗೆ ಅದೂ ಸರಿಯೆಂದು ತೋರಿತು. ಹಾಗಿರೋದೇ ಅವರಿಗೂ ಸುಖ; ಇವನಿಗೂ ಸುಖ!

ಕೂದಲು

ಬೆಳ್ಳಗಾಗುವುದನ್ನು ನಿಲ್ಲಿಸಿರಿ

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ಡಬ್ಬಲ ವಾಪಾಸು ಕೊಡಲು ಗ್ಯಾರಂಟಿ ಎಂಬುದಕ್ಕೆ ದೊರೆತ ನೂರಾರು ಸರ್ಟಿಫಿಕೇಟುಗಳೇ ಸಾಕ್ಷಿ.

ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ. 5-0-0. ಕಾಲಂಶಕ್ಕೂ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ. 7-0-0 ಬೆಲೆಯ ಎಣ್ಣೆ ಬೇಕಾಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

HAZRA & Co.,

P. O. Bihar Nursery, (DARBHANGA)

ಕಬ್ಬಿನ ಬೆಳೆ

ಗೊಬ್ಬರಗಳು ಮತ್ತು ಗೊಬ್ಬರ ಹಾಕುವ ಕ್ರಮ.

ಒಂದು ಭೂಮಿಯ ಸಾರವನ್ನು ಹೆಚ್ಚಿಸಿ ಅದನ್ನು ಫಲವತ್ತಾಗಿ ಮಾಡುವರೆ ಆ ಭೂಮಿಗೆ ಹಾಕುವ ಎಲ್ಲಾ ತರದ ಪದಾರ್ಥಗಳಿಗೆ ಗೊಬ್ಬರವೆಂದು ಹೆಸರು. ಪ್ರತಿಯೊಂದು ಬೆಳೆಯೂ ಅದನ್ನು ಕತ್ತರಿಸಿ ತೆಗೆಯುವಾಗ ಆ ಭೂಮಿಯಿಂದ ಬೆಳೆಗೆ ಪ್ರಾಮುಖ್ಯವಾದ ಯವಕ್ಷಾರಜನಕ ವಾಯು (Nitrogen) ಗಂಧಕ ಸತ್ವ (P_2O_5) ಮತ್ತು ಮರದ ಉಪ್ಪು (Potash) ಈ ಮೂರು ಮುಖ್ಯ ಸಸ್ಯಾಹಾರಗಳನ್ನು ತೆಗೆದುಬಿಡುವುದು. ಆದುದರಿಂದ ಆ ಭೂಮಿಗೆ ಇನ್ನೊಂದು ಬೆಳೆಯ ಮೊದಲು ಆ ಬೆಳೆಗೆ ಅವಶ್ಯವಿದ್ದಷ್ಟು ಸಸ್ಯಾಹಾರಗಳನ್ನು ತಿರುಗಿ ಹಾಕುವುದು ಅವಶ್ಯ.

ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬೇಕಾದಷ್ಟು ಸೊಪ್ಪಿನ ದರೆಗಳು ಕಂಡುಬಂದರೂ, ಕೆಲವೆಡೆಗಳಲ್ಲಿ ಅಂದರೆ ಮುಖ್ಯವಾಗಿ ಸಮುದ್ರ ತೀರದ ಹಳ್ಳಿಗಳಲ್ಲಿ ಇದು ದೊರಕುವುದು ದುರ್ಲಭ. ಇದರಿಂದಾಗಿ ಅನೇಕ ಹಳ್ಳಿಗಳಲ್ಲಿ ಗೊಬ್ಬರದ ಪ್ರಶ್ನೆಯು ಕಠಿಣವಾಗಿದೆ. ಇದಕ್ಕಾಗಿಯೇ ಗೊಬ್ಬರದ ಜೋಪಾನವು ಅತ್ಯಗತ್ಯ. ಎಲ್ಲಾ ತರದ ಕಸಕಡ್ಡಿಗಳನ್ನೂ ಗುಡಿಸಿ ಒಂದು ಗೊಬ್ಬರದ ಹೊಂಡದಲ್ಲಿ ಹಾಕಿ ಜೋಪಾನದಲ್ಲಿಡುವುದರಿಂದ ರೈತರ ಮನೆಯ ಸುತ್ತಲೂ ಸ್ವಚ್ಛವಾಗಿರುವುದು ಮಾತ್ರವಲ್ಲದೆ ಗೊಬ್ಬರದ ಪ್ರಶ್ನೆಯೇ ಮಾಯವಾಗುವುದು ಮುಖ್ಯವಾಗಿ ಎಲ್ಲಾ ತರದ ಕಸಕಡ್ಡಿಗಳನ್ನು ಸುಟ್ಟುಬಿಡುವುದನ್ನು ಬಿಟ್ಟು ಅದರಿಂದ ಒಳ್ಳೆಯ ಇಂದ್ರಿಯಗೊಬ್ಬರವನ್ನು ಮಾಡುವುದು ಅವಶ್ಯ. ಒಂದು ಗಾಡಿಯಷ್ಟು ಕಸಕಡ್ಡಿಗಳನ್ನು ಸುಟ್ಟರೆ ಒಂದು ಸೇರಿನಷ್ಟು ಬೂದಿಯಾಗಿ ಅದರ ಇಂದ್ರಿಯ ಧಾತುವು ನಷ್ಟವಾಗುವುದೆಂಬುದನ್ನು ಮನಗಂಡು, ಇಂಥಾ ಉಪಯುಕ್ತವಾದ ಗೊಬ್ಬರವನ್ನು ಸುಡುವುದನ್ನು ನಿಲ್ಲಿಸಿ ಇದರೊಂದಿಗೆ ಆಯಾ ಗದ್ದೆಗಳಲ್ಲೇ ಗೊಬ್ಬರದ ಗಿಡಗಳನ್ನು ಬೆಳೆಸುವುದನ್ನು ರೈತರು ತಮ್ಮ ಕರ್ತವ್ಯವೆಂದು ತಿಳಿದಲ್ಲಿ ಈ ಗೊಬ್ಬರದ ಪ್ರಶ್ನೆಯೇ ಮಾಯವಾಗಿ ಭೂಮಿಯು ಫಲವತ್ತಾಗುವುದು.

ಒಂದು ಸಾಧಾರಣ ಕಬ್ಬಿನ ಬೆಳೆಯು ಅದರೊಂದಿಗೆ ಎಕ್ರೆಒಂದರ 76.5 ರಾತ್ತಲುಗಳಷ್ಟು ಕ್ಷಾರಜನಕ ವಾಯುವನ್ನೂ, 64 ರಾತ್ತಲುಗಳಷ್ಟು ಗಂಧಕ ಸತ್ವವನ್ನೂ, 171 ರಾತ್ತಲುಗಳಷ್ಟು ಮರದ ಉಪ್ಪನ್ನೂ, ಆ ಭೂಮಿಯಿಂದ ತೆಗೆದುಬಿಡುತ್ತದೆ. ಇದಲ್ಲದೆ ಹಾಕಿದ ಗೊಬ್ಬರದ ಕೆಲವಂಶವು ಬಿಸಿಲಿನಿಂದಲೂ ಮಳೆಯಿಂದಲೂ ನಷ್ಟವಾಗಿ ಹೋಗುವುದು. ಆದುದರಿಂದ ಒಂದು ಕಬ್ಬಿನ ಬೆಳೆಗೆ ಕಡಿಮೆಯೆಂದರೆ ಎಕ್ರೆ ಒಂದರ 150 ರಾತ್ತಲುಗಳಷ್ಟು ಕ್ಷಾರಜನಕವಾಯುವನ್ನೂ, 80 ರಾತ್ತಲುಗಳಷ್ಟು ಗಂಧಕಸತ್ವವನ್ನೂ, 180 ರಾತ್ತಲುಗಳಷ್ಟು ಮರದ ಉಪ್ಪಿನ ಸತ್ವವನ್ನೂ ಗೊಬ್ಬರದ ರೂಪದಲ್ಲಿ ಹಾಕುವುದು ಅಗತ್ಯ.

ನಮ್ಮಲ್ಲಿ ರೈತರು ಸರ್ವಸಾಧಾರಣವಾಗಿ ಗದ್ದೆಯು ಪುಡಿಯಾದೊಡನೆ ಯಾವತರದ ಗೊಬ್ಬರವನ್ನೂ ಹಾಕದೆ ಕಬ್ಬನ್ನು ನಟ್ಟುಬಿಡುವುದು ವಾಡಿಕೆ, ಆದರೆ ಕಬ್ಬಿನ ಮೊಳಕೆಗಳಿಗೆ ಸಾಕಷ್ಟು ಗೊಬ್ಬರಗಳಿಲ್ಲದಲ್ಲಿ ಅವು ಪುಷ್ಟಿಯಾಗಿ ಬೆಳೆಯಲಾರವು ಮಾತ್ರವಲ್ಲದೆ ನಡುವ ಮೊದಲೇ ಗೊಬ್ಬರ ಮಿಶ್ರವಾಗದಿದ್ದರೆ ಮಣ್ಣು ಹದವಾಗದೆ ಕಬ್ಬಿನ ಬೇರುಗಳ ಬೆಳವಣಿಗೆಗೆ ತೊಂದರೆಯಾಗುತ್ತದೆ ಹಟ್ಟಿಗೊಬ್ಬರದ ಜೋಪಾಸನೆಯಿಲ್ಲದೆ ರೈತರಿಗೆ ಬೇಕಾದಷ್ಟು ಗೊಬ್ಬರವು ದೊರೆಯದಿರುವುದೂ, ಇದಕ್ಕೆ ಕಾರಣ. ಇನ್ನು ನಟ್ಟು ಒಂದು ತಿಂಗಳ ಮೇಲೊಮ್ಮೆ ಏರಿಗಳಿಗೆ ಗೊಬ್ಬರಹಾಕಿ ಕೊಟ್ಟುಬಿಡುವುದು ರೈತರ ಕ್ರಮ. ಆದು ಯಾವ ಗೊಬ್ಬರ ಮತ್ತು ಎಷ್ಟು ಹಾಕಬೇಕೆಂಬುದಕ್ಕೇನೂ ಗಮನಕೊಡದೆ ಆಗ ಒದಗಬಹುದಾದ ಯಾವುದಾದರೂ ಗೊಬ್ಬರಗಳನ್ನು ಹಾಕಿಬಿಡುವರು, ನಟ್ಟು ಮೂರು ತಿಂಗಳಾದ ಮೇಲೆ ಇನ್ನೊಂದು ಸಲ ಗೊಬ್ಬರ ಹಾಕಿ ಬುಡಕ್ಕೆ ಮಣ್ಣು ಎಳೆದು ಅನಂತರ ಎಕ್ರೆ ಒಂದರ ಸರಾಸರಿ 250 ಹೆಡಿಗೆಗಳ ವರೆಗೆ ಸುಡುಮಣ್ಣನ್ನು ಹಾಕಿ ದಂಡೆಮಾಡಿ ತೋಡು ಎಳೆದು ಬಿಡುವರು. ಸುಡುಮಣ್ಣು ಹಾಕುವುದರಿಂದ ಬೆಲ್ಲವು ಉತ್ತಮ ತರಗತಿಯದ್ದಾಗುವುದೆಂದು ಎಲ್ಲಾ ಕಸಕಡ್ಡಿಗಳನ್ನೂ ಕಬ್ಬಿನ ಓಲಿಗಳನ್ನೂ ಸುಟ್ಟುಬಿಡುವರು. ಆದರೆ 250 ಹೆಡಿಗೆಗಳ ಸುಡು ಮಣ್ಣಿಗೆ 10-15 ಗಾಡಿಗಳಷ್ಟು ಇಂದ್ರಿಯಗೊಬ್ಬರದ ಪದಾರ್ಥಗಳನ್ನು ಸುಟ್ಟು ಅದರಲ್ಲಿರುವ ಅತ್ಯಮೂಲ್ಯ ಸಸ್ಯಾಹಾರವಾದ ಕ್ಷಾರಜನಕವಾಯುವನ್ನು ಕಳಕೊಳ್ಳುವರು. ಇದೇ ಸುಡುವ ಕಸಕಡ್ಡಿಗಳನ್ನು ಗೊಬ್ಬರದ ಹೊಂಡದಲ್ಲಿ ಹಾಕಿ ಇಂದ್ರಿಯಗೊಬ್ಬರವನ್ನು ಹೆಚ್ಚಿಸಿದಲ್ಲಿ ಸಾಕಷ್ಟು ಗೊಬ್ಬರವು ರೈತರ ಮನೆಗಳಲ್ಲಿಯೇ ತಯಾರಾಗುವುದು, ಇನ್ನು ಹಲವು ರೈತರು ಹಟ್ಟಿಗೊಬ್ಬರವು ಸಾಕಷ್ಟು ದೊರೆಯದಿದ್ದುದರಿಂದಲೂ, ಗೊಬ್ಬರಹಾಕುವ ಕ್ರಮವು ಕಡಿಮೆಯಾಗುವುದರಿಂದಲೂ, ಅದರಲ್ಲಿರುವ ಕ್ಷಾರಜನಕವಾಯುವು ಕೂಡಲೇ ಪೈರಿಗೆ ದೊರೆತು ಕಬ್ಬು ಕಪ್ಪಾಗಿ ಬೆಳೆಯುವುದರಿಂದಲೂ, ಹಟ್ಟಿಗೊಬ್ಬರಕ್ಕೆ ಹೆಚ್ಚಿನ ಗಮನಕೊಡದೆ 'ಸೋಡಉಪ್ಪು' ಎಂದು ಕರೆಯಲ್ಪಡುವ 'ಎಮೋನಿಯಮ್ ಸಲ್ಫೇಟ್' (Sulphate of Ammonia) ಎಂಬ ಕಂಪೆನಿಯ ಗೊಬ್ಬರಗಳನ್ನೇ ಹೆಚ್ಚಾಗಿ ಉಪಯೋಗಿಸುವರು. ಇದನ್ನು ಹೆಚ್ಚೆಚ್ಚಾಗಿ ಉಪಯೋಗಿಸಿ ಇಂದ್ರಿಯ ಗೊಬ್ಬರಗಳನ್ನು ಕಡಿಮೆಮಾಡುತ್ತಿರುವುದರಿಂದ ನಮ್ಮ ಭೂಮಿಗಳು ಕೆಟ್ಟುಹೋಗುತ್ತಿವೆ. ಆದುದರಿಂದ ಈ ಉಪ್ಪುಗಳೊಂದಿಗೆ ಇಂದ್ರಿಯ ಗೊಬ್ಬರಗಳನ್ನು ಹಾಕುವುದು ಅಗತ್ಯ.

(ಮುಂದುವರಿಯುವುದು.)

K. J. Ballal,
President,
The Sugar Cane Growers' Co-operative Union LTD.
UDIPI

THE LAKSHMI INS. CO., LTD., LAHORE. Estd 1924.

Don't Say Can't Afford.

For

THERE IS A LAKSHMI POLICY SUITABLE FOR

Every Purse and Purpose.

WITH

NOVEL SCHEMES AND UNIQUE FEATURES

New Business completed } Exceeds 1.61 crores.
Business in Force. } Exceeds 7.09 crores.

APPLICATIONS FOR AGENCIES ARE INVITED FROM INFLUENTIAL LADIES AND GENTLEMEN FROM ALL UNREPRESENTED AREAS.

For Particulars, please apply to:

The Branch Manager,
334, Thambuchetty St.,
G. T. MADRAS.

OR

A. B. Krishna Raj,
ORGANISER,
UDIPI.

ಪ್ರಕಟಣೆ:

ಕೋವಿ ಲೈಸನ್ಸಿನ ಅವಧಿಯು ಗುಜಾರಾಗುವ ಮೊದಲು ಲೈಸನ್ಸು ರಿನ್ಯೂಮಾಡುವ ಬಗ್ಗೆ ಅಂದರೆ ಮುಂದೆ ಮುಂದರಿಸುವ ಬಗ್ಗೆ ಕಳುಹಿಸೋಣಾಗುವ ಅರ್ಜಿಗಳಿಗೆ ರಿನ್ಯೂವಲ್ ಫೀ ಅಲ್ಲದೆ ಪ್ರತ್ಯೇಕ ಒಂದಾಣೆ ವ್ಯಾಲ್ಯೂ ಕೋರ್ಟ್ ಫೀ ಲೇಬಲನ್ನು ಸಹ ಅಂಟಿಸತಕ್ಕದ್ದು. ಮತ್ತು ಲೈಸನ್ಸಿನ ಅವಧಿಯು ಗುಜಾರಾದ ನಂತ್ರ ಹಾಜರು ಮಾಡೋಣಾಗುವ ರಿನ್ಯೂವಲ್ ಅರ್ಜಿಗಳಿಗೆ 12ಆಣೆ ಮೌಲ್ಯದ ಕೋರ್ಟ್ ಫೀ ಲೇಬಲನ್ನು ಹಚ್ಚತಕ್ಕದ್ದು. ಎಂಬ ಸಂಗ್ತಿಯನ್ನು ಜಿಲ್ಲಾ ಮೇಜಿಸ್ಟ್ರೇಟ್ ದೊರೆಗಳ ತಾ. 9-9 38ರ ಸರ್ಕ್ಯುಲಾರಿನಲ್ಲಿ ಸರ್ವಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲಾಗಿದೆ. ಆದರೆ ಅನೇಕ ರಿನ್ಯೂವಲ್ ಅರ್ಜಿಗಳು ಒಂದಾಣೆ ಕೋರ್ಟ್ ಫೀ ಲೇಬಲು ಇಲ್ಲದೇನೇ ಬರುತ್ತಾ ಇವೆ ಅಂತಹ ಅರ್ಜಿಗಳನ್ನು ಕೋರ್ಟ್ ಫೀ ಲೇಬಲು ಹಚ್ಚುವ ಬಗ್ಗೆ ಅರ್ಜಿದಾರರಿಗೆ ವಾಪ್ಸುಮಾಡುತ್ತಾ ಇವೆ. ಆದುದರಿಂದ ಮೇಲೆ ನಮೂದಿಸಿದ ಸರ್ಕ್ಯುಲಾರಿನ ಅಭಿಪ್ರಾಯವನ್ನು ಎಲ್ಲಾ ಕೋವಿ ಲೈಸನ್ಸುದಾರರೂ ಚೆನ್ನಾಗಿ ತಿಳಿಯಬೇಕೆಂದೂ ಮತ್ತು ಅವರು ರಿನ್ಯೂವಲ್ ಅರ್ಜಿಗಳಿಗೆ ಕೋರ್ಟ್ ಫೀ ಲೇಬಲನ್ನು ಅಂಟಿಸಲು ಮರೆಯಬಾರದೆಂದೂ ಈ ಪ್ರಕಟಣೆಯನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ. ಕೋರ್ಟ್ ಫೀ ಲೇಬಲಿನ ಬದಲಿಗೆ ರಸೀದಿಗಳನ್ನಾಗಲೀ, ವ ಟಿಸ್ಟಾಲು ಚೀಟಾಗಲೀ ಅಂಗೀಕರಿಸೋಣಾಗಲಿಕ್ಕಿಲ್ಲ.

ಮಂಗಳೂರು
31-10-'38

M. V. Vellodi
Dt. Magistrate of South Kanara.

ನವಯುಗಕ್ಕೆ

ಇಂದೇ ಚಂದಾದಾರರಾಗಿರಿ.

ಈ ವಾರದ ನಿಮ್ಮ ಭವಿಷ್ಯ

ತಾ 17—11—38ರಿಂದ 24—11—38ರ ವರೆಗೆ

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ ನ.]

ಮಕರ ರಾಶಿಯವರ ಮಟ್ಟಿಗೆ ಈ ವಾರವು ಅತ್ಯುತ್ತಮವಿರುವುದು—ಮೇಷ, ಸಿಂಹ, ಕನ್ಯಾ, ತುಲಾ, ವೃಶ್ಚಿಕ ರಾಶಿಗಳವರಿಗೆ ಮಿಶ್ರಫಲದಾಯಕವಾಗಿರುವುದು—ಕರ್ಕಾಟಕ, ಧನು, ಕುಂಭ ಈ ರಾಶಿಯವರ ಸ್ಥಿತಿಯು ಕನಿಷ್ಠ ತರಗತಿಯಲ್ಲಿರುವುದು—ವೃಷಭ, ಮಿಥುನ, ಮೀನ ರಾಶಿಗಳವರ ಅದೃಷ್ಟ ಬಹ್ವಂಶ ಕೆಟ್ಟಿರುವುದು.

ಮೇಷರಾಶಿ—

ಶುಭಾಶುಭಗ್ರಹರ ದೃಷ್ಟಿಯು ನಿಮ್ಮ ರಾಶಿಯ ಮೇಲೆ ಏಕ ರೀತಿಯಿರುವುದರಿಂದ ನಿಮಗೀವಾರದಲ್ಲಿ ಲಾಭನಷ್ಟಗಳು, ಸುಖದುಃಖಗಳು, ಜಯಾಪಜಯಗಳು ಸಮಾನವಾಗಿ ಅನುಭವಕ್ಕೆ ಬರುವವು. ಕೆಲವು ಕಾರ್ಯಗಳಿಗೆ ಅನರ್ಥಶತಗಳು ಬಂದೊದಗಿ ಹೆಚ್ಚಿನ ಕಷ್ಟನಷ್ಟಗಳಿಗೆ ಗುರಿಯಾಗಬೇಕಾದೀತು. ಇನ್ನೂ ಕೆಲವು ಕಾರ್ಯಗಳು ನಿರಾತಂಕವಾಗಿ ಕೊನೆಗೊಂಡು ಲಾಭದಾಯಕವಾಗಿ ಪರಿಣಮಿಸುವವು. ಶತ್ರುಗಳಲ್ಲಿರತಕ್ಕ ಕಲಹವು ನಿವೃತ್ತಿಹೊಂದಿ ನಿಮಗನರು ಮಿತ್ರರಾಗುವರು ಸ್ವಸ್ತ್ರೀಯು ನಿಮಗನುಕೂಲಳಾಗಿಲ್ಲದಿದ್ದರೂ ಮಿತ್ರರು, ಪರಿಜನರು ಪುತ್ರರು ಮೊದಲಾದವರು ನಿಮಗೆ ಸರ್ವವಿಧದಲ್ಲಿಯೂ ನೆರವಾಗುವರು. ಶರೀರದ ಆರೋಗ್ಯವು ಸರಿಯಾಗಿರದು. ಸ್ತ್ರೀ ಸಂಬಂಧವಾದ ಧನಪ್ರಾಪ್ತಿಯ ಯೋಗವಿದೆ. ವಾರಾಂತ್ಯದ ಮೂರುದಿನಗಳಲ್ಲಿ ಅನಿಷ್ಟಗಳೇ ಹೆಚ್ಚಾಗಿ ತೋರಿಬರುವವು

ವೃಷಭರಾಶಿ—

"ಉಪಾಯೇನ ಹಿ ಯಚ್ಛಕ್ಯಂ ನ ತಚ್ಛಕ್ಯಂ ಪರಾಕ್ರಮೈಃ"ಎಂಬ ನೀತಿವಚನದಂತೆ ಪರಾಕ್ರಮದಿಂದ ಸಾಧಿಸಲಶಕ್ಯವಾದ ಕಾರ್ಯಗಳನ್ನು ಉಪಾಯದಿಂದ ಮಾಡಬಹುದು. ನಿಮಗೀವಾರದಲ್ಲಿ ಎಷ್ಟೆಷ್ಟೋ ಕಷ್ಟಗಳು ಗಂಡಾಂತರಗಳು ಬಂದೊದಗಬಹುದು. ಅದರವುಗಳಲ್ಲಿ ಹೆಚ್ಚಿನವುಗಳನ್ನು ಉಪಾಯದಿಂದಲೇ ತಪ್ಪಿಸಿಕೊಳ್ಳಬಹುದು. ಸ್ತ್ರೀಸಂಬಂಧವಾದ ಕಲಹದಿಂದಲೂ ಅನಾರೋಗ್ಯದ್ದೆಸೆಯಿಂದಲೂ ಹೆಚ್ಚಾಗಿ ಧನವ್ಯಯವಾಗುವುದರಿಂದ ನಿಮ್ಮ ಮನಸ್ಸಿಗೆ ನೆಮ್ಮದಿಯಿಲ್ಲವು ಪುತ್ರ ಭೃತ್ಯರಿಗೂ ನಿಮಗೂ ಮನಸ್ತಾಪವುಂಟಾಗುವುದು. ಏನೊಂದೂ ಪ್ರತಿಫಲವಿಲ್ಲದೆ ಕ್ಷಣಕಾಲ ನಿಂತಲ್ಲಿ ನಿಲ್ಲದೆ ಅಲೆಯುವಿರಿ ತಾ. 19ರಿಂದ 23ರವರೆಗಿನ ದಿನಗಳಲ್ಲಿ ಕಿಂಚಿದಾರೋಗ್ಯ, ಕಾರ್ಯಜಯ, ಧನಲಾಭ ಇತ್ಯಾದಿಗಳನ್ನು ಪಡೆಯುವಿರಿ.

ಮಿಥುನರಾಶಿ—

ಯಾವ ಭಾಗದಲ್ಲೂ ನಿಮಗೆ ಈ ವಾರದಲ್ಲಿ ಶುಭಚಿಹ್ನೆಗಳೇ ತೋರುವುದಿಲ್ಲ. ಆಪಾತತಃ ನಿಮಗಾರೂ ವೈರಿಗಳಿಲ್ಲವೆಂದು ತೋರಬಹುದು. ಸೂಕ್ಷ್ಮವಾಗಿ ವಿಚಾರಿಸಿದ್ದಲ್ಲಿ ಅನೇಕರು ನಿಮ್ಮ ಶತ್ರುಗಳಾಗಿರುವರು. ಗುಟ್ಟಿನ ವಿಷಯಗಳನ್ನು ಆಪ್ತರೊಡನೆಯೂ ಬಿಚ್ಚಬೇಡಿ ಗುಟ್ಟು ರಟ್ಟಾದೀತು. ಕೆಲವು ಹಿತಶತ್ರುಗಳಿಂದ ಗಂಡಾಂತರ ಒದಗುವ ಸಂಭವವಿದೆ ಉದ್ಯೋಗದಲ್ಲಿ ಜಾಗ್ರತೆಯಿಂದ ವರ್ತಿಸಿರಿ. ಹೆಜ್ಜೆಹೆಜ್ಜೆಗೂ ನಿಮಗೆ ಶತ್ರುಗಳ ಭಯವಿದೆಯೆನ್ನಬಹುದು. ನಿಮ್ಮ ಕಾರ್ಯಗಳೊಂದೂ ಕೊನೆಗೊಂದವು. ಉಷ್ಣಸಂಬಂಧವಾದ ಜ್ವರವು ತಲೆದೋರುವುದು ನಿಮ್ಮ ಮನಸ್ಸು ಕೆಟ್ಟಮಾರ್ಗಕ್ಕೆ ನಿಮ್ಮನ್ನೆಳೆವುದರಿಂದ ಅಪಕೀರ್ತಿಗೆ ಗುರಿಯಾಗುವಿರಿ. ಹೆಚ್ಚಿನ ಧನವು ದುರ್ಮಾರ್ಗದಲ್ಲಿ ವ್ಯಯವಾಗುವುದು ವಾರಾದಿಯ ಐದು ದಿನಗಳಲ್ಲಿ ಆಪ್ತಜನರೊಡನೆ ವಿರೋಧ, ಮಾನಸಿಕರೋಗಗಳು ವೃದ್ಧಿಯಾಗುವವು

ಕರ್ಕಾಟಕರಾಶಿ—

ನಿಮ್ಮ ಧರ್ಮಸ್ಥಾನದಲ್ಲಿ ಶನಿಮಹಾರಾಯನಿದ್ದು ನಿಮ್ಮನ್ನು ಧರ್ಮಭ್ರಷ್ಟರನ್ನಾಗಿ ಮಾಡುತ್ತಿರುವನು. ಈ ಕಾರಣದಿಂದಾಗಿ ನಿಮಗೆ ಅನೇಕ ಭಾಗದಲ್ಲಿ ಪರಾಜಯವುಂಟಾಗುವುದು. ಏಕೆಂದರೆ "ಯತೋ ಧರ್ಮಸ್ತತೋ ಜಯಃ"ಎಲ್ಲಿ ಧರ್ಮವಿದೆಯೋ ಅಲ್ಲಿ ಜಯ ಇದ್ದೇ ಇದೆ ಎಂದು ಪ್ರಾಜ್ಞರು ಸಾರಿರುವರು. ಆದಕಾರಣ ನಿಮಗೆ ಶತ್ರುಗಳು ಮಾತ್ರವಲ್ಲದೆ ಮನೆಯ ಜನರೇ ವಿರೋಧವಾಗಿ ವರ್ತಿಸಿ ಕಾರ್ಯಗಳಲ್ಲಿ ಪರಾಜಯವನ್ನು ತಂದುಕೊಡುವರು. ಆದರೂ ಬಂಧುಗಳ ಮತ್ತು ಮಿತ್ರರ ಸಹಾಯದಿಂದ ನೀವು ಶತ್ರುಗಳನ್ನು ತಿರಸ್ಕರಿಸಿ ಕಾರ್ಯದಲ್ಲಿ ವಿಜಯಿಗಳಾಗಿ ಧನಲಾಭವನ್ನು ಹೊಂದಲು ಶಕ್ತರಿರುವಿರಿ ಆರೋಗ್ಯಭಾಗ್ಯವು ನಿಮ್ಮ ಮಟ್ಟಿಗೆ ಬಹಳ ದೂರದಲ್ಲಿದೆ ಎಂದೇ ಹೇಳಬೇಕಾಗಿದೆ. ಇದ್ದುದರಲ್ಲಿ ಖರ್ಚಿಗೆ ತಕ್ಕ ಉತ್ಪತ್ತಿಯಿದೆಯೆಂಬುದು ಸಂತೋಷದ ವಿಷಯ. ತಾ 19ರಿಂದ 23ರ ವರೆಗಿನ ದಿನಗಳಲ್ಲಿ ಕಲಹ ಶೋಕಗಳು ವೃದ್ಧಿಯನ್ನೈದುವವು.

ಸಿಂಹರಾಶಿ—

ಈ ವಾರದಲ್ಲಿ ನಿಮ್ಮ ಭಾಗಕ್ಕೆ ಸ್ವಭಾವತಃ ಶುಭಗ್ರಹರು ಶುಭರೇ, ಅಶುಭ ಗ್ರಹರು ಅಶುಭರೇ ಆಗಿರುವುದೊಂದು ವಿಶೇಷದ ಸಂಗತಿ. ಆದ್ದರಿಂದ ಯಾವ ಭಾಗದಲ್ಲೂ ನಿಮ್ಮ ಪ್ರಯತ್ನವು ಹೆಸರಿಗೆ ಮಾತ್ರ ಇದ್ದರೆ ಸಾಕು ಬಾಕಿಯೆಲ್ಲವೂ ಗ್ರಹಗಳ ಪಾಲಿಗೆ ಸೇರಿರುತ್ತದೆ. ನಿಮ್ಮಲ್ಲಿರತಕ್ಕ ವಿಶೇಷ ಬುದ್ಧಿವಂತಿಕೆಗನುಸಾರವಾಗಿ ನಾಲಿಗೆಯೂ ಕೂಡ ಬಹಳ ಚುರುಕಾಗಿರುವುದರಿಂದ ಜನರಿಂದ ಗೌರವಾದರಗಳನ್ನು ಪಡೆಯುವಿರಿ ಸ್ವಕೀಯ ಜನರೂ ಸುಹೃದ್ವೃಂದವೂ ವೃದ್ಧಿಯನ್ನೈದುವುದು. ಸಾಂಸಾರಿಕ ತಾಪತ್ರಯಗಳು ನಿರ್ನಾಮವಾಗುವವು ಇಷ್ಟಿದ್ದರೂ ರಾಜಕೀಯ ಭಾಗದಲ್ಲಿ ಹಾನಿಯ ಚಿಹ್ನೆಗಳು ಕಂಡುಬರುತ್ತಿವೆ. ರೋಗಪೀಡೆಯಿಂದ ಹೆಚ್ಚಿನ ಧನವ್ಯಯವೂ ಕ್ಲೇಶವೂ ಉಂಟಾಗುವವು. ತಾ 19-20-21 ಈ ದಿನಗಳಲ್ಲಿ ವ್ಯವಹಾರದಲ್ಲಿ ಜಯವೂ, ಧನಲಾಭವೂ, ಸ್ತ್ರೀ ಸುಖವೂ ಲಭಿಸುವದು.

ಕನ್ಯಾರಾಶಿ—

ಈ ವಾರದಲ್ಲಿ ನಿಮಗೆ ಮಿಶ್ರಫಲಗಳೇ ಕಂಡುಬರುತ್ತವೆ. ಪ್ರಯಾಣದ ಕಾಲದಲ್ಲಿ ಕಳ್ಳರ ಬೆದರಿಕೆಗೂ, ಅಪಘಾತಕ್ಕೂ ಒಳಗಾಗುವಿರಿ ಶತ್ರುಗಳಿಂದ ನಿಮಗೆ ಹೆಚ್ಚಿನ ಪೀಡೆಯಿಲ್ಲದಿದ್ದರೂ ಮನೋರೋಗವು ಬಹಳವಾಗಿ ಪೀಡಿಸುವದು. ಆತ್ಮವಂಚಕರಾದ ನಿಮ್ಮ ಮನಸ್ಸಿನಲ್ಲಿ ಅಧಿಕಾರೀ ಜನರ ಮತ್ತು ವಿರೋಧಿಗಳ ಭಯವು ವಿಶೇಷ ಇದೆ ಉದ್ಯೋಗಿಗಳಿಗೆ ಈ ವಾರವು ಬಹಳ ಉತ್ತಮವಿರುವದು. ವ್ಯಾಪಾರಾದಿಗಳಲ್ಲಿ ಆದಾಯವು ತೃಪ್ತಿಕರವಾಗಿರುವುದು. ನಿರುದ್ಯೋಗಿಗಳಿಗೂ ಕೂಡ ಉದ್ಯೋಗ ಸಿಗುವ ಸಂಭವವಿದೆ. ನಿರೋಗಿಗಳಾದ ನೀವು ದೈಹಿಕ ಸುಖವನ್ನು ಚೆನ್ನಾಗಿ ಅನುಭವಿಸುವಿರಿ. ಇದೊಂದು ನಿಮ್ಮ ಪಾಲಿನ ಮುಖ್ಯ ಭಾಗ್ಯವೆನ್ನಬಹುದು ತಾ 19-20-21 ಮತ್ತು 24 ಈ ದಿನಗಳಲ್ಲಿ ವಿಚಾರ ಮಾಡಿ ಕರ್ತವ್ಯವನ್ನು ಮುಂದರಿಸಿರಿ. ಇಲ್ಲದಲ್ಲಿ ಧನಹಾನಿಗೂ ಕಲಹಕ್ಕೂ ಕಾರಣವಾದೀತು,

ತುಲಾರಾಶಿ—

ನಿಮಗೆ ಆರೋಗ್ಯದ ಮಟ್ಟಿಗೆ ಈ ವಾರವು ಅಷ್ಟೊಂದು ಚೆನ್ನಾಗಿಲ್ಲ. ಈ ವಿಷಯದಲ್ಲಿ ಸ್ವಲ್ಪ ಧನವ್ಯಯವೂ ಆಗುವುದು. ಮತ್ತು ನಿಮ್ಮ ಮನಸ್ಸು ಬಹಳ ಚಂಚಲವಾಗಿದ್ದು ಯಾವ ಕಾರ್ಯವನ್ನು ಮಾಡಲೂ ಭಯದಿಂದ ಹಿಂಜರಿಯುವುದು ಇಷ್ಟೇ ಹೊರತು ಇತರ ಎಲ್ಲಾ ಭಾಗಗಳಲ್ಲಿಯೂ ನಿಮಗೆ ಬಹಳ ಅನುಕೂಲವಿದೆ. ಹೆಚ್ಚಿನ ಕಾರ್ಯಗಳು ನಿರಾಯಾಸವಾಗಿ ಶೀಘ್ರದಿಂದ ಜಯಹೊಂದುವವು. ಇದಕ್ಕೆ ಮುಖ್ಯವಾಗಿ ನಿಮಗಿರುವ ಧನಜನ ಬೆಂಬಲವೇ ಕಾರಣವಾಗಿದೆ. ಗೃಹಸಂಪತ್ತುಗಳು ಪೂರ್ಣವಾಗಿರುವುದರಿಂದಲೂ ಪರಿಜನರು ಅನುಕೂಲವಾಗಿರುವುದರಿಂದಲೂ ಸರ್ವಾಶ್ರಮಗಳಿಗಿಂತಲೂ ಗೃಹಸ್ಥಾಶ್ರಮವೇ ಉತ್ತಮವೆಂದು ಕಂಡುಬರುವುದು. ಶಯನಸುಖಕ್ಕಾವ ಕೊರತೆಯೂ ಇಲ್ಲವು. ತಾ. 19-20-21 ಮತ್ತು 24 ಬಹಳ ಉತ್ತಮವಾಗಿವೆ.

ವೃಶ್ಚಿಕರಾಶಿ—

ಸದಾ ವಿದೇಶವಾಸಿಗಳಾಗಿದ್ದು ಅಲ್ಲಿಯೂ ಕೂಡ ಒಂದೇ ಕಡೆಯಲ್ಲಿ ಹೆಚ್ಚು ಸಮಯ ನಿಲ್ಲದೆ ಅಲ್ಲಲ್ಲಿ ತಿರುಗುತ್ತಾ ಇರುವ ನಿಮಗೆ ಮುಂಗೋಪವು ಸ್ವಲ್ಪ ಹೆಚ್ಚಾಗಿರುವುದು. ಇದು ನಿಮ್ಮ ಹುಟ್ಟು ಗುಣ, "ಹುಟ್ಟುಗುಣ ಘಟ್ಟಹತ್ತಿದರೂ ಬಿಡ"ದೆಂಬಂತೆ ನಿಮ್ಮ ಈ ಗುಣಗಳು ಹೆಚ್ಚಾಗಿ ನಿಮ್ಮಲ್ಲಿ ಅದ್ಯಾಪಿ ತೋರಿಬರುತ್ತಿವೆ. ಆದ್ದರಿಂದ ಕಲ್ಪ್ಯವ್ಯಕ್ತ ಕಲಹದಿಂದ ಏನಾನ ಹಾನಿಯೂ ಕೂಡ ಉಂಟಾಗುವುದು ಆದರೂ ಕೆಲವು ಗ್ರಹರ ಪರಿಸ್ಥಿತಿಯಿಂದಾಗಿ ಪಶುಪುತ್ರಾದಿ ಸಕಲ ಗೃಹಸಂಪತ್ತೂ ಬಹಳ ಯೋಗ್ಯರೀತಿಯಲ್ಲಿರುವುದು ಶತ್ರುಗಳು ನಾಶವಾಗಿ ಕಾರ್ಯಗಳಲ್ಲಿ ತುಂಬಾ ಧನಲಾಭವಾಗುವುದು ಸ್ವಪರ ಸ್ತ್ರೀಯರಿಂದಾಗಿ ಮನಃಕಾನಂದವಿಹುದು. ಅಂತೂ ವಾರದ ಆರಂಭದ ಭಾಗಗಳು ಉತ್ತಮ ರೀತಿಯಲ್ಲಿವೆ.

ಧನುರಾಶಿ—

ಶುಭಾಶುಭ ಗ್ರಹರ ಬಲಾಬಲ ತುಲನೆ ಮಾಡಲು ಅಶುಭ ಗ್ರಹರ ಬಲವೇ ಸ್ವಲ್ಪ ಅಧಿಕವಾಗಿ ತೋರುವುದು. ಆದರೂ ಹೆಚ್ಚಿನ ಕೆಡುಕೇನೂ ಸಂಭವಿಸಲಾರದು. ನೀವು ನಿಮ್ಮ ಕುಲಾಚಾರಗಳನ್ನು ಬಿಡದೆ ಆಚರಿಸಿಕೊಂಡು ಬಂದಲ್ಲಿ ನಿಮ್ಮ ಸದ್ಯದ ಖರ್ಚಿಗೆ ಬೇಕಾದ ಧನವಸ್ತ್ರಾದಿಗಳು ಆಗಾಗ ಸಿಕ್ಕಿಯೇ ಸಿಕ್ಕುವವು. ಅಭಿವೃದ್ಧರಾದ ಶತ್ರುಗಳಿಂದ ನಿಮಗೆ ಕೆಲವು ಕಾರ್ಯಗಳಲ್ಲಿ ತೊಂದರೆ ತೊಡಕುಗಳು ಬಂದು ಅಪಜಯವುಂಟಾಗಬಹುದು ಶರೀರ ಪೀಡೆಯಿಂದಾಗಿ ಮಾನಸಿಕ ದುಃಖವೂ ವೃದ್ಧಿಯಾದೀತು. ತಾ. 22-23ರಲ್ಲಿ ಆರೋಗ್ಯದ ಮೇಲೂ ಶತ್ರುಗಳ ಮೇಲೂ ಚೆನ್ನಾಗಿ ದೃಷ್ಟಿಯನ್ನಿಡತಕ್ಕದ್ದು.

ಮಕರರಾಶಿ—

ನಿಮ್ಮ ಭಾಗ್ಯರವಿಯು ಉದಯಾಚಲವನ್ನೇರಿ ಬರುತ್ತಿಹನು ಅದೃಷ್ಟ ಪರೀಕ್ಷೆಗೊಂದು ಸುವರ್ಣದಂತಹ ಸಮಯವಾಗಿದೆ ಆದ್ದರಿಂದ ನಿಮ್ಮಲ್ಲಡಗಿರುವ ಆಲಸ್ಯ

SAVING MONEY AND TIME

Thousands of prudent and thriving business-men prefer this Bank because attention is prompt and personal To most of these busy people their time is very valuable and they cannot afford to lose a few minutes every now and then in idle waiting Tey have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD 1906

CANARA BANK LIMITED

ವೆಂಬ ಶತ್ರುವನ್ನು ಹೊಡೆದೋಡಿಸಿ ಉದ್ಯೋಗಶೀಲರಾಗಿರಿ. ಯಾಕೆಂದರೆ "ಪ್ರಯತ್ನೇ ಕೃತೇ ಯದಿ ನ ಸಿದ್ಧ್ಯತಿ ಕೋಽತ್ರ ದೋಷಃ" ಕೆಲಸದಲ್ಲಿ ಧೈರ್ಯದಿಂದ ಮುಂಬರಿದು ತತ್ಫಲರೂಪವಾದ ಸಂಪತ್ತನ್ನು ಪಡೆಯತಕ್ಕದ್ದು. ನಿಮಗೆ ಶರೀರಪೀಡೆಯಿಂದಾಗಿ ಸ್ವಲ್ಪ ದೇಹದಲ್ಲಿ ಕಾರ್ಶ್ಯವು ಕಂಡ ಬರುವುದು ಹೊರತು ಇತರ ಸಕಲ ಭಾಗಗಳಲ್ಲೂ ನಿಮ್ಮ ಅದೃಷ್ಟವು ಬಲವತ್ತರವಾಗಿರುವುದು ಗೃಹಜನರ ಮತ್ತು ಬಂಧುಮಿತ್ರರ ಸಹಾಯವುಳ್ಳ ನಿಮಗೆ ಆವ ಕಾರ್ಯವೂ ತೃಣಸಮಾನ ಸರ್ವವಿಧದ ಉದ್ಯೋಗದಲ್ಲಿಯೂ ಧನಾಗಮಕ್ಕೆ ಏನೂ ವಿಘ್ನಗಳಿಲ್ಲವು. ವಾರಾದಿಯ ಎರಡು ದಿನಗಳನ್ನು ಬಿಟ್ಟು ಮಿಕ್ಕುಳಿದ ದಿನಗಳು ಬಹಳ ಉತ್ತಮವಿವೆ.

ಕುಂಭರಾಶಿ—

ನಿಮ್ಮ ಕೆಲವೊಂದು ಮನೋರಥಗಳು ನಿಮಗನುಕೂಲವಾಗಿ ಕೊನೆಹೊಂದಿ ತದ್ವಿಷಯಕವಾಗಿ ಧನಲಾಭವಾಗಬಹುದು. ಆದರೆ ಇತರ ಹಲವು ಭಾಗಗಳಲ್ಲಿ ನಿಮಗೆ ಹಾನಿಯೇ ತೋರಿಬರುತ್ತದೆ ಶತ್ರುಗಳು ಅನೇಕ ವಿಧದಲ್ಲಿ ಪೀಡಿಸುವರು. ಅನಾರೋಗ್ಯದಿಂದಲೂ ಚರ್ಮರೋಗಗಳಿಂದಲೂ ಶರೀರವು ವಿರೂಪಗೊಳ್ಳುವುದು. ಖರ್ಚಿನ ಮಾರ್ಗವು ವೃದ್ಧಿಹೊಂದಿ ಹಣಕ್ಕಾಗಿ ಬಹಳ ಪೇಚಾಡಬೇಕಾಗುವುದು. ಮಿತಭಾಷಿಯಾಗಿದ್ದರೂ ಕಲಹವು ತಪ್ಪಲೊಲ್ಲದು ಅಂತೂ ದೈಹಿಕ ಮಾನಸಿಕ ಸುಖಗಳಿಲ್ಲವೆನಬಹುದು ತಾ 17ರಿಂದ 21ರ ವರೆಗಿನ ದಿನಗಳಲ್ಲಿ ಆಯಾಸ, ಅನಾರೋಗ್ಯ, ರಾಜಭಯ, ಅನಿಷ್ಟಗಳು ಅಭಿವೃದ್ಧಿಹೊಂದುವವು

ಮೀನರಾಶಿ—

ಹೆಚ್ಚಿನ ಗ್ರಹರು ನಿಮಗೆ ವಿರೋಧವಾಗಿದ್ದುದರಿಂದ ನಿಮ್ಮ ಭವಿಷ್ಯವು ಬಹಳ ಕಳವಳಜನಕ ಸ್ಥಿತಿಯಲ್ಲಿರುವುದು ಆಪತ್ತುಗಳಿಂದಲೂ, ಸಾಂಸಾರಿಕ ಕಲಹಗಳಿಂದಲೂ, ದೇಹದ ಅನಾರೋಗ್ಯದ್ಧೆಸೆಯಿಂದಲೂ ವ್ಯಸನವು ವೃದ್ಧಿಯಾಗಿ ಮುಖವು ಸದಾ ತೇಜೋಹೀನವಾಗಿರುವುದು. ಪ್ರತಿಯೊಂದು ಕಾರ್ಯಕ್ಕೂ ವೈರಿಗಳು ವಿರೋಧಿಸಿ ಹಾನಿಯನ್ನು ಮಾಡುವರು. ಅಕಸ್ಮಾತ್ ಪ್ರವಾಸವು ಜರಗಿ ಹೆಚ್ಚಿನ ಧನವ್ಯಯ ಮುಖಗಳಿಗೆ ಕಾರಣವಾದರೂ ಪುಣ್ಯಕ್ಷೇತ್ರಾದಿಗಳ ದರ್ಶನವಾಗುವುದು. ಹಣದ ಬಿಕ್ಕಟ್ಟಿನಿಂದ ಜನರಿಗೆ ಮೋರೆತೋರಲು ನಾಚಿಕೆಯಾಗುವದು. ವಾರದ ಆದ್ಯಂತ ದಿನಗಳಲ್ಲಿ ನಿಮ್ಮ ಐಹಿಕ ಕರ್ಮ ಫಲದಿಂದ ಕಿಂಚಿತ್ಸುಖ ದೊರೆಯುವದು.

ಮುಂಬಾಯಿಕನ್ನಡಿಗ

ಮುಂಬಾಯಿಯಿಂದ ಪ್ರತಿ ರವಿವಾರ
ಹೊರಡುವ ರಾಷ್ಟ್ರೀಯ
ವಾರಪತ್ರಿಕೆ.

ವಾರ್ಷಿಕ ಚಂದಾ ೩—೮—೦
ಬಿಡಿ ಸಂಚಿಕೆ ೦—೧—೦

ಮಾದರಿಗೂ ಜಾಹೀರಾತುದರಗಳಿಗೂ ಬರೆಯಿರಿ

ಕನ್ನಡ ಪಬ್ಲಿಷರ್ಸ್
168 ಗಿರ್ಗಾಂ ರೋಡು,
ಬೊಂಬಾಯಿ 4.

ವಾರದ ಡೈರಿ

೩ನೇ ಪುಟದಿಂದ

ನೀಯರಲ್ಲುಂಟಾಗಿದೆ. ಜಾಪಾನರು ದೊಡ್ಡ ದೊಡ್ಡ ಪಟ್ಟಣಗಳನ್ನೂ, ನದಿಗಳ ತೀರದ ಮತ್ತು ರೈಲ್ವೇ ಲೈನುಗಳ ಬಳಿಯ ಪ್ರದೇಶವನ್ನೂ ವಶಪಡಿಸಿಕೊಂಡಿರುತ್ತಾರೆ ಅಂದರೆ ಇಷ್ಟರವರೆಗೆ ಚೈನದ ಸುಮಾರು ಮೂರನೇ ಒಂದಂಶವು ಜಾಪಾನರ ಅಧೀನವಾಗಿದೆ ಇಲ್ಲಿ ಸುಮಾರು 800,000 ಜಾಪಾನ ಸೈನಿಕರಿದ್ದಾರೆ ರಶ್ಯದ ಧಾಳಿಯ ಭೀತಿಯಿಂದ ಜಾಪಾನರು ತಮ್ಮ ಉತ್ಕೃಷ್ಟವಾದ 500,000 ಸೇನೆಯನ್ನು ರಶ್ಯದ ಎಲ್ಲೆಯಲ್ಲಿರಿಸಬೇಕಾಗಿದೆ. 750,000 ಜಾಪಾನ ಸೈನಿಕರು ಚೈನದ ಬೇರೆ ಬೇರೆ ರಣರಂಗಗಳಲ್ಲಿ ಕಾದಾಡುತ್ತಿದ್ದಾರೆ ರೈಲ್ವೇ ಲೈನು, ನದಿಗಳ ತೀರದ ಹೊರತು ಇತರ ಕಡೆಯ ಎಲ್ಲಾ ಚೀನೀಯರೂ ಚೀನೀ ಕೇಂದ್ರ ಸರಕಾರಕ್ಕೆ ವಿಧೇಯರಾಗಿ ಚೀನೀ ಗೊರಿಲ್ಲ ಸೈನಿಕರಿಗೆ ಬೇಕಾದ ಸಹಾಯ ಮಾಡುತ್ತಿದ್ದಾರೆ ಸರ್ವಸಾಮಾನ್ಯವಾಗಿ ಚೀನೀಯರು ಜಾಪಾನರಿಗೆ ಬದ್ಧವಿರೋಧವಾಗಿದ್ದಾರೆ. ಚೀನೀ ಕಮ್ಯೂನಿಸ್ಟ್ ಸೇನೆಯು ಗೊರಿಲ್ಲ ಯುದ್ಧ ಕ್ರಮದಲ್ಲಿ ಬಹಳ ನಿಪುಣವಾಗಿದೆ ಚೀನೀ ಸರಕಾರದ ಸೇನೆಯೂ, ಸಮರಂಗ ಯುದ್ಧದಲ್ಲಿ ಜಾಪಾನರ ಕೈಗೆ ಸಿಕ್ಕಿ ನಾಶವಾಗದೆ ಚತುರತೆಯಿಂದ ತಪ್ಪಿಸಿಕೊಂಡು ಈಗ ಗೊರಿಲ್ಲಯುದ್ಧದಲ್ಲಿ ನಿರತವಾಗಿದೆ ಇಷ್ಟರವರೆಗೆ ಜಾಪಾನರು ಧಾಳಿನಡಿಸಿ ವಶಪಡಿಸಿಕೊಂಡುದು ರೈಲ್ವೆ ಮತ್ತು ನದಿಗಳ ಮೂಲಕ ಸುಲಭವಾಗಿ ಹೋಗಲು ದಾರಿಯಿದ್ದ ಪ್ರದೇಶಗಳನ್ನು ಇನ್ನು ಮುಂದೆ ಅವರಿಗೆ ಅಂತಹ ಅನುಕೂಲತೆಯೇನೂ ಇರಲಾರದು. ಆಹಾರ ಸಾಮಗ್ರಿ ಸಿಗುವುದೂ ಕಷ್ಟವಾಗುವುದು. ಅವರು ಚೀನೀ ಗೊರಿಲ್ಲ ಪಂಗಡಿಗರ ಹಾವಳಿಗೊಳಗಾಗಿ ಬಹಳ ಕಷ್ಟಕ್ಕೊಳಗಾಗಬೇಕಾಗುವುದು ಚೈನಕ್ಕೆ ರಶ್ಯದಿಂದಲೂ ಇಂಡೋ ಚೈನದ ಮೂಲಕವೂ ಯುದ್ಧ ಸಾಮಾಗ್ರಿಗಳು ಬರುತ್ತಿರುವವು. ಆದುದರಿಂದ ಚೈನವನ್ನು ಜಾಪಾನರಿಗೆ ಬೇಗನೆ ಗೆಲ್ಲಲು ಸಾಧ್ಯವಿಲ್ಲ

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯ ಕನ್ಯೆಗಳು ಮೋಹಿಸುವ ರಹಸ್ಯಗಳ, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ ಪುರುಷರು

ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ—**T. ದೇವಕರ್ ಅಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T V Devkar & Co, *Nambulier Street*, G T. MADRAS

ಮೇಹಧ್ವಂಸಿನಿ

(REGD)



ಗುಪ್ತ ವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ನೋವನ್ನು ಕೊಡುವ ಶಸ್ತ್ರ ಚಿಕಿತ್ಸೆ ಅನಾವಶ್ಯಕ. ಶರೀರವನ್ನು ಕ್ಷಯಿಸಿ ಮಾನವನ ಜೀವ ಪ್ರವಾಗ್ನಿಯುತ್ತಿರುವ ಬಿಳುಪು, ಕೆಂಪು, ಪರಂಗಿ ಹುಣ್ಣು, ಮೇಹಗಡ್ಡೆ, ಮೇಹ ಜ್ವರ, ಚರ್ಮವ್ಯಾಧಿ, ಕೀಲುಗಳನೋವು ಅತಿಮೂತ್ರ ವಗೈರೆ ಚಿನ್ಹೆಗಳನ್ನು 'ಮೇಹಧ್ವಂಸಿನಿ'ಯು ಶೀಘ್ರವಾಗಿ ಖಂಡಿಸಿ, ರಕ್ತ ಶುದ್ಧಿ ಮಾಡಿ ನರಗಳಿಗೆ ಬಲವನ್ನೀಯುವುದು ಸೇವಿಸುವುದಕ್ಕೆ ಹಿತಕರ ಪ್ರತಿಯೊಂದು ಯೋಗ್ಯ ನ ಔಷಧದಲ್ಲಿಯೂ ಅದ್ಭುತ ಗುಣ

ದೊಡ್ಡ ಸೈಜು 4-0-0, ಮೀಡಿಯಂ ಸೈಜು 2-4-0, ಚಿಕ್ಕ ಸೈಜು 1-2-0

ಹಂಚಿಕೊಡುವ ಪ್ರಮುಖರು—ಬಾಸೆಲ್ ಮಿಶ್ಯನ್ ಪ್ರೆಸ್, ಮಂಗಳೂರು
ಸಬ್ ಏಜಂಟರು—ಉಡ್ಪಿ ಮಿಶ್ಯನ್ ಕೋಶ್, ಸಂತೆಕಟ್ಟೆ, ಉಡುಪಿ.
ಏ. ವಿ. ಶೆಣೈ, ಕಾರ್ಕಳ ಭಟ್ಟ ಬ್ರದರ್ಸ್, ಕಾಸರಗೋಡು

ಸ್ಥಾಪನ **ಕ್ರೌನ ರಬ್ಬರ ಸ್ಟ್ಯಾಂಪ್ ಕಂಪೆನಿ** 1926

18 ಬಲ್ಮರ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗಬೇಕಾದ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡ್, ಪೇದೆಗಳ ಬಿಲ್ಲೆ, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುವದು.

CROWN RUBBER STAMP CO,
Balmat Road, MANGALORE
Included by the Mysore Govt. Stores Purchase Committee in the list of approved Firms

ಜಾಪಾನು ವಿನಾಶದ ದಾರಿ ಹಿಡಿದಿದೆ.

ಸುಮಾರು 18 ತಿಂಗಳುಗಳ ಚೀನೀ ಜಾಪಾನ ಯುದ್ಧವು ಜಾಪಾನಿನ ಸಾಂಪತ್ತಿಕ ಸ್ಥಿತಿಯನ್ನು ತೀರಾ ಕೆಡಿಸಿ ಬಿಟ್ಟಿರುವುದು ಅದು ಸಂಪೂರ್ಣವಾಗಿ ಸೈನ್ಯಾಧಿಕಾರಿಗಳ ರಾಜ್ಯಭಾರಕ್ಕೊಳಗಾಗಿ ಅಸಹನೀಯ ಯಾತನೆಗೊಳಗಾಗಿರುವುದು. ತೆರಿಗೆಗಳ ಭಾರದಿಂದ ಜನತೆಯು ಮುಗ್ಗರಿಸುತ್ತಿರುವುದು. ಒಂದು ಮಿಲ್ಯಕ್ಕಿಂತಲೂ ಮಿಕ್ಕಿದ ಸೈನಿಕರನ್ನು ಅತ್ಯಾಧುನಿಕ ಯುದ್ಧ ಸಿದ್ಧತೆಯಿಂದ ಪರರಾಜ್ಯದಲ್ಲಿರಿಸುವ ಆಹಾರ ವೆಚ್ಚವನ್ನು ಸರಕಾರವು ವಹಿಸಬೇಕಾಗಿರುವುದು ಯುದ್ಧಕ್ಕಾಗಿ ದೊಡ್ಡದೊಂದು ಹಡಗ ಪಡೆಯನ್ನು ಜಾಪಾನು ಕಟ್ಟಬೇಕಾಗಿರುವುದು. ಪೆಟ್ರೋಲ್ ಮತ್ತು ಎಣ್ಣೆಯ ತೀವ್ರ ಅಭಾವದಿಂದ ಸರಕಾರವು ತಲ್ಲಣಗೊಂಡಿದೆ ರಬ್ಬರು ಕಡಿಮೆ ಬಿದ್ದಿದೆ. ಹಲವು ಕಚ್ಚಾಮಾಲುಗಳನ್ನದು ಹೊರಗಣಿಂದ. ತರಿಸಬೇಕಾಗಿದೆ ಜಪಾನಿನಿಂದ ರಫ್ತಾಗುವ ಸಾಮಾನುಗಳು ಬಹಳ ಕಡಿಮೆಯಾಗಿವೆ. ಆದುದರಿಂದ ಆದಕ್ಕೆ ಸಾಲ ಸಿಗುವುದು ಕಷ್ಟವಾಗಿದೆ ಆದರ ಚಿನ್ನ ಸಂಗ್ರಹವು 15 ಮಿಲ್ಯ ಪವನುಗಳಿಗಿಳಿದಿದೆ ಚೀನಾ ಯುದ್ಧಾರಂಭದಲ್ಲಿ ಇದರ ನಾಲ್ಕರಷ್ಟಿದ್ದಿತು ಯುದ್ಧವು ಇನ್ನು ಒಂದೆರಡು ವರ್ಷ ನಡೆದಲ್ಲ ಜಾಪಾನಿನ ಅವಸ್ಥೆಯೇನಾಗುವುದೆಂದು ಹೇಳಬರುವುದಿಲ್ಲ. ಒಂದು ಮಿಲ್ಯಕ್ಕಿಂತಲೂ ಮಿಕ್ಕಿದ ರಶ್ಯಾದ ಸೈಬೀರಿಯನ್ ಸೇನೆಯು ಮಂಚೂರಿಯದ ಎಲ್ಲೆಯಲ್ಲಿ ಕಾದುಕೂತಿವೆ ಅಮೇರಿಕವು ತನ್ನ ಹಡಗ ಮತ್ತು ವಿಮಾನ ಪಡೆಯನ್ನು ಪ್ರಚಂಡವಾಗಿ ಹೆಚ್ಚಿಸ ಹತ್ತಿದೆ ಜಾಪಾನು ಚೈನದ ಮೇಲೆ ಅನ್ಯಾಯವಾಗಿ ಧಾಳಿನಡಿಸಹೋಗಿ ವಿನಾಶದ ದಾರಿ ಹಿಡಿದಿದೆಯೆಂದೇ ಹೇಳಬಹುದು

ಕೇವಲ ೧। ರೂಪಾಯಿ

ಕಥಾಕುಂಜ ಚಂದಾದಾರರಿಗೆ ಇಮ್ಮಡಿ ಲಾಭ!

ಡಿಸೆಂಬರ ೧೫ರೊಳಗೆ ರೂ. ೧-೪-೦ ಮನಿಯಾರ್ಡರ್ ಕಳಿಸಿ ಇಮ್ಮಡಿ ಲಾಭ ಪಡೆಯಿರಿ. ಈ ಸುಸಂಧಿ ಮತ್ತೆ ಸಿಗಲಾರದು.

ಮೇಲಿನ ಅವಧಿಯಲ್ಲಿ ರೂ. ೧। ಕಳಿಸಿದವರಿಗೆ ಈ ವರ್ಷದ ಕಥಾಕುಂಜ ಮತ್ತು ಬೇಗನೆ ಪ್ರಕಟವಾಗಲಿರುವ **ಪಂಡಿತ ತಾರಾನಾಥರ ಸಣ್ಣ ಕತೆಗಳ ಸಂಗ್ರಹ** ಉಚಿತ ಕೊಡಲಾಗುವುದು. ಹಿಂದಿನಿಂದ ನಿರಾಶರಾಗಬೇಡಿರಿ. ಈಗಲೇ ೧। ರೂ. ಕಳಿಸಿ ಲಾಭಪಡೆಯಿರಿ.

ಕನ್ನಡ ನಾಡಿನ ಯಾವ ಪುಸ್ತಕಗಳು ಬೇಕಾದರೂ ನಮಗೇ ಬರೆಯಿರಿ—
ವ್ಯವಸ್ಥಾಪಕರು—
ಕಥಾಕುಂಜ ಕಾರ್ಯಾಲಯ,
ಬೆಳಗಾವಿ

M.V. RAGHUNATH & Co.
MAKERS OF
RUBBER
STAMPS
OPP. CITY POST OFFICE
BANGALORE CITY.

THE
Canara Banking Corporation, Udipi, Ltd.
Established.] (INCORPORATED IN BRITISH INDIA) [1906
MEMBER.-
RESERVE BANK OF INDIA
BANKERS' CLEARING HOUSE, MADRAS.

Capital Authorised, Issued & Subscribed	Rs.	3,50,000
Paid up Capital	Rs.	3,03,205
Reserves	Rs.	3,88,842

RATES OF INTEREST ON DEPOSITS

3 months	2½% p. a.
6 or 9 months	3 % p. a.
12 or 24 months	3½% p. a
Short Term	2 % p. a.

All kinds of Banking Transactions undertaken

ಉಡುಪಿ, ಗುರುವಾರ, ತಾ. ೧೭-೧೧-೩೮

ಮ್ಯೂನಿಚ್ ಒಡಂಬಡಿಕೆಯ ಅನಂತರ

ಮ್ಯೂನಿಚ್ ಒಡಂಬಡಿಕೆಯನ್ನು ಮಿ ಚರ್ಚಿಲ್, ಮಿ. ಲ್ಯೊಡ್ ಜೋರ್ಜರೇ ಮೊದಲಾದವರು, ಅತಿದೊಡ್ಡ ರಾಜನೈತಿಕ ಅಪಜಯವೆಂದು ಉದ್ಘೋಷಿಸಿದರೂ, ಮೇಜರ್ ಅಟ್ಲಿ, ಮಿ ಹರ್ಬರ್ಟ್ ಮೊರಿಸನರೇ ಮೊದಲಾದ ಮಜೂರ ಮುಖಂಡರು, ಇನ್ನೊಂದು ಮಹಾಯುದ್ಧಕ್ಕೆ ದಾರಿಮಾಡಿದಂತಾಯಿತೆಂದು ನಿಷೇಧಿಸಿದರೂ, ಮಿ. ಚೇಂಬರ್ಲೇನರು ಅದನ್ನು ಗೌರವಪೂರ್ವಕ ಶಾಂತಿಯೆಂದು ಸಂಬೋಧಿಸಿದಾಗ ಜನಸಾಮಾನ್ಯರು ನಂಬಿ, ಶಾಂತಿಯ ಪ್ರವಾದಿಯೆಂಬಂತೆ ಅವರನ್ನು ಅಸಂದಾತಿಶಯದಿಂದ ಸನ್ಮಾನಿಸಿದರು. ಆದರೆ ಈಗ ಮಿ. ಚೇಂಬರ್ಲೇನರ ಧೋರಣೆಯ ದುರ್ಬಲತೆ ಮತ್ತು ಅವಿವೇಕತನವು ಸ್ಪಷ್ಟವಾಗಹತ್ತಿರುವುದು. ಇಂಗ್ಲೆಂಡು ಫ್ರಾನ್ಸುಗಳೆಂದರೆ ಒಳಗಿಂದೊಳಗೆ ಬೆದರಿ ಅವುಗಳನ್ನು ಪ್ರತ್ಯಕ್ಷವಾಗಿ ವಿರೋಧಿಸಲು ಅಂಜುತ್ತಿದ್ದ ಯುರೋಪಿನ ಡಿಕ್ಟೇಟರರು ಇಂದು ಇಡೀ ಯುರೋಪಿನ ಸರ್ವಾಧಿಕಾರಿಗಳೇ ತಾವೆಂಬಂತೆ ವರ್ತಿಸಹತ್ತಿರುವರು. ಯುರೋಪಿನ ರಾಜಕೀಯದಲ್ಲಿ ಇಂಗ್ಲೆಂಡಿಗೆ ಕೈಹಾಕುವ ಅಧಿಕಾರವೇನೂ ಇಲ್ಲ. ಫ್ರಾನ್ಸು ತಮ್ಮೊಂದಿಗೆ ಸೇರಿಕೊಂಡು ತಾವು ಹೇಳಿದಂತೆ ಕೇಳಿಕೊಂಡಿರಬೇಕೆಂದೇ ಫೆಸಿಸ್ಟ್ ಡಿಕ್ಟೇಟರರ ಸ್ಪಷ್ಟವಾದ ಉದ್ದೇಶವಿರುತ್ತದೆ.

ಮ್ಯೂನಿಚ್ ಒಡಂಬಡಿಕೆಯಿಂದ ಹಿಟ್ಲರರ ಆಕಾಂಕ್ಷೆಯು ಬಹುತೇಕ ಈಡೇರಿದಂತಾಯಿತು. 80ಮಿಲ್ಯ ಜರ್ಮನರು ಒಂದೇ ಆಳ್ವಿಕೆಗೊಳಗಾಗಿ ಒಂದು ಜನಾಂಗ ಮತ್ತು ರಾಷ್ಟ್ರವಾಗಿ ಒಟ್ಟುಸೇರುವಂತಾಯಿತು. ಜರ್ಮನಿಗೆ ಸಾಕಷ್ಟು ಕಚ್ಚಾಮಾಲುಗಳೂ ದೊರೆಯಲು ಅವಕಾಶವಾಯಿತು ಇನ್ನು ಮುಂದಾದರೂ ಹಿಟ್ಲರರು ಸುಮ್ಮನಾಗಬಹುದು. ಯುದ್ಧೋಪಕರಣ ಸಿದ್ಧತೆ ಮತ್ತು ಸೇನಾಸಂಗ್ರಹದ ನೋಟವನ್ನು ನಿಲ್ಲಿಸಿ, ಅವನ್ನು ಮಿತಗೊಳಿಸುವುದಕ್ಕೂ ಒಪ್ಪಬಹುದೆಂಬ ಆಶೆಯು ಹಲವರಲ್ಲಿದ್ದಿತು ಆದರೆ ಮ್ಯೂನಿಚ್ ಒಡಂಬಡಿಕೆಯ ಅನಂತರದ ಹಿಟ್ಲರರೇ ಮೊದಲಾದ ಜರ್ಮನ್ ಮುಖಂಡರ ಭಾಷಣ ಮತ್ತು ಹೇಳಿಕೆಗಳಿಂದ ಜರ್ಮನಿಯು ಯುರೋಪಿನಲ್ಲಿ ಮಾತ್ರವಲ್ಲದೆ ಇಡೀ ಲೋಕದಲ್ಲೇ ಅಗ್ರಗಣ್ಯ ಸ್ಥಾನವನ್ನಾರಿಸುತ್ತದೆಂಬುದು ಸಿದ್ಧವಾಗುವುದು.

ಮ್ಯೂನಿಚ್ ಒಡಂಬಡಿಕೆಯ ಮರುದಿನವೇ ಎಂಬಂತೆ ಎದ್ದಿದೆ ಜರ್ಮನ್ ವಸಾಹತುಗಳನ್ನು ಹಿಂದೆ ಕೊಡಬೇಕೆಂಬ ಕೂಗು. ಹಿಟ್ಲರರು ಒಂದು ತಿಂಗಳ ಮೊದಲು ಫ್ರೆಂಕ್‌ಪರ್ಟ ಎಂಬಲ್ಲಿ ಮಾಡಿದ ಮತ್ತು ಇದೇ ತಾ. 8ರಲ್ಲಿ ಮ್ಯೂನಿಚಿನಲ್ಲಿ ಕೊಟ್ಟ ಭಾಷಣಗಳಲ್ಲಿ, ಅನ್ಯಾಯವಾಗಿ ಜರ್ಮನಿಯಿಂದ ಕಸಕೊಂಡ ಜರ್ಮನ್ ವಸಾಹತುಗಳು ಅದಕ್ಕೆ ಬೇಗನೆ ಹಿಂದೆ ಸಿಗಬೇಕೆಂದು ಹೇಳಿರುವರು. ಇಷ್ಟು ಮಾತ್ರವಲ್ಲದೆ, ತನ್ನ ಧೋರಣೆಯನ್ನು ಟೀಕಿಸಲು ಎದೆಗೊಂಡ ಬ್ರಿಟಿಷ್ ಮುತ್ಸದ್ದಿಗಳಾದ ಮಿ. ಚರ್ಚಿಲ್, ಡಫ್ ಕೂಪರರೇ ಮೊದಲಾದವರನ್ನು ಉಗ್ರವಾಗಿ ನಿಷೇಧಿಸಿ, ಅವರಲ್ಲಿ ಯಾವರೂ ಇಂಗ್ಲೆಂಡಿನಲ್ಲಿ ಅಧಿಕಾರಕ್ಕೆ ಬರುವಂತಾದರೆ ಅನಾಹುತವಾಗಲಿದೆಯೆಂದು ಎಚ್ಚರಿಸಿರುವರು ಇದರಿಂದ ಇಂಗ್ಲೆಂಡಿನಲ್ಲಿ ತನಗೆ ಬೇಕಾದವರು ಮಾತ್ರ ಅಧಿಕಾರಕ್ಕೆ ಬಂದರೆ ಪರಿಣಾಮ ನೆಟ್ಟಗಾದೀತೆಂದು ಹೇಳಿದಂತಾಯಿತು. ಇಷ್ಟೊಂದು ಎದೆಗೊಂಡಿದ್ದಾರೆ. ಹಿಟ್ಲರರೀಗ ಚೇಂಬರ್ಲೇನರ ದುರ್ಬಲತೆಯಿಂದ ಬೇರೆ ದೇಶಗಳ ಕಡೆಗೆ ಬೆಟ್ಟು ತೋರಿಸುವ ಬ್ರಿಟಿಷರು ಪೆಲೆಸ್ಟಿನದಲ್ಲಿ ತಾವೇನು ಮಾಡುತ್ತಿರುವುದೆಂಬುದನ್ನು ವಿಚಾರಿಸಿಕೊಳ್ಳಲಿ. ಜರ್ಮನಿಯಲ್ಲಿ ತಾನು ಸ್ಥಾಪಿಸಿರುವುದು ಸರ್ವಜನ ಸಮ್ಮತಿಯ ಪ್ರಜಾಸತ್ತಾತ್ಮಕ ರಾಜ್ಯಭಾರ. ಆಸ್ಟ್ರಿಯ ಮತ್ತು ಜೆಕೋಸ್ಲೊವೇಕಿಯದಲ್ಲಿ ತಾನು ಕೊನೆಗೊಳಿಸಿರುವುದು ಡಾಕ್ಟರ್ ಶುಸ್ನಿಗ್ ಮತ್ತು ಡಾಕ್ಟರ್ ಬೆನೆಸರ ಏಕತಂತ್ರಾಧಿಕಾರವೆಂದು ಹಿಟ್ಲರರು ಬ್ರಿಟಿಷರಿಗೆ ತಕ್ಕಬೋಧೆ ಮಾಡ ಹತ್ತಿದ್ದಾರೆ.

ಫೆಸಿಸ್ಟ್ ಡಿಕ್ಟೇಟರರು ತಮ್ಮ ಮಾತಿಗೆ ಮನ್ನಣೆಯಿತ್ತು ದಾರಿಗೆ ಬರಬೇಕಾದರೆ, ತಾವು ಅವರಿಗಿಂತಲೂ ಹೆಚ್ಚಿನ ಯುದ್ಧ ಸಿದ್ಧತೆಯುಳ್ಳವರಾಗಬೇಕೆಂಬುದನ್ನು ಮನಗಂಡ ಇಂಗ್ಲೆಂಡ್ ಮತ್ತು ಫ್ರಾನ್ಸುಗಳು, ಮ್ಯೂನಿಚ್ ಒಡಂಬಡಿಕೆಯಾದೊಡನೆಯೇ ತಮ್ಮ ನೆಲ, ಜಲ, ಮತ್ತು ಆಕಾಶ ಪಡೆಯನ್ನು ಭರದಿಂದ ಹೆಚ್ಚಿಸಿ ಸಿದ್ಧಗೊಳಿಸುವುದರಲ್ಲಿ ನಿರತವಾದುದರಿಂದ ಹಿಟ್ಲರರು ತಳಮಳಗೊಂಡಿದ್ದಾರ ಇವೇಕೆ ಈ ಯುದ್ಧಸಿದ್ಧತೆಯೆಂದು ಅವರು ಸಂದೇಹಗೊಂಡು ಪ್ರಶ್ನಿಸಹತ್ತಿದ್ದಾರೆ. ಹಿಟ್ಲರರು ಇದೇ ತಾ. 8ರಲ್ಲಿ ಮ್ಯೂನಿಚಿನಲ್ಲಿ ಮಾಡಿದ ಭಾಷಣದಲ್ಲಿ, ಇಂಗ್ಲೆಂಡು ಮತ್ತು ಫ್ರಾನ್ಸುಗಳು, ಪ್ರಬಲ ಸೇನಾಸಿದ್ಧತೆಯಲ್ಲಿ ತೊಡಗಿರುವಾಗ ಜರ್ಮನಿಯು ಸುಮ್ಮನಿರಲು ಸಾಧ್ಯವಿಲ್ಲ ಎಂತಹ ಪರಿಸ್ಥಿತಿಯನ್ನಾದರೂ ಎದುರಿಸಲು ಅದು ಸಿದ್ಧವೇ ಇರಬೇಕು. 1918ರ ಸ್ಥಿತಿಯು ಇನ್ನೆಂದಿಗೂ ಪುನರಾವರ್ತಿತವಾಗದು ನಾಜಿ ಜರ್ಮನಿಯು ಎಂದೂ ಬೇಡುತ್ತಾ ಹೋಗಲಾರದು. ರಾಜಿಯಿಂದ ತಾವು ತಮ್ಮ ಹಕ್ಕುಗಳನ್ನು ಪಡೆಯಲಿಳಸುವೆವು. ಆದರೆ ಇತರರು ಅವುಗಳನ್ನು ನಿರಾಕರಿಸಿದ ಪಕ್ಷದಲ್ಲಿ ತಾವು ಅದನ್ನು ಇನ್ನೊಂದು ರೀತಿಯಲ್ಲಿ ಸಾಧಿಸುವೆವೆಂದೇ ಹಿಟ್ಲರರ ಸ್ಪಷ್ಟೋಕ್ತಿ. ಜನರಲ್ ಗೋರಿಂಗರು ಇಷ್ಟರಲ್ಲೇ ಜರ್ಮನ್ ವಿಮಾನ ಪಡೆಯನ್ನು ಮತ್ತೂ ಹೆಚ್ಚಿಸುವ ಕೆಲಸದಲ್ಲಿ ತೊಡಗಿರುವರು. ಮ್ಯೂನಿಚ್ ಒಡಂಬಡಿಕೆಯ ಅನಂತರದ ಪರಿಸ್ಥಿತಿಯಿದು. ಮಿ ಚೇಂಬರ್ಲೇನರು, ಇನ್ನೂ ಹಿಟ್ಲರರನ್ನು ಒಲಿಸಿಕೊಂಡು ಯುರೋಪಿನಲ್ಲಿ ಶಾಂತಿಸ್ಥಾಪಿಸುವ ಆಶೆಯಿಂದಿರುವರು. ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಗಳು ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಬೇಕೆಂದು ಅವರ ಪ್ರಯತ್ನವಿರುವಂತಿದೆ. ಮುಸಲೋನಿಯವರು ಭೂಮಧ್ಯಸಾಗರದ ತನ್ನ ಸ್ಥಾನವನ್ನು ಬಲಗೊಳಿಸುವ ಕಡೆಗೆ ದೃಷ್ಟಿ ಇಟ್ಟಿರುವರು ಮಿ ಚೇಂಬರ್ಲೇನರು ಉದ್ದೇಶಪೂರ್ವಕವಾಗಿ ಯುರೋಪಿನ ರಾಜಕೀಯರಂಗದಿಂದಲೇ ಹೊರದೂಡಿದ ರಷ್ಯವು, ತನ್ನ ಅಪಾಯಕರ ಪರಿಸ್ಥಿತಿಯನ್ನು ಚೆನ್ನಾಗಿ ಮನಗಂಡು, ಎಷ್ಟೊಂದು ಪ್ರಬಲ ರಾಷ್ಟ್ರವನ್ನಾದರೂ ಪ್ರತಿಭಟಿಸಿ ಸದೆಬಡಿಯುವ ಪ್ರಚಂಡ ಸೇನಾಸಿದ್ಧತೆ ಮಾಡಿರುವುದು. ಇಷ್ಟರವರೆಗೆ ಯುದ್ಧದ ಯಾವ ಭೀತಿಯೂ ಇಲ್ಲದೆ, ಯುರೋಪಿನ ರಾಜಕೀಯದಲ್ಲೇ ಕೈಹಾಕದೆ ತಟಸ್ಥವಾಗಿದ್ದ ಅಮೇರಿಕ ಕೂಡಾ ಈಗ ಫೆಸಿಸ್ಟರ ಪ್ರಭಾವದಿಂದ ತಳಮಳಗೊಂಡು ತನ್ನ ನೌಕೆ ಮತ್ತು ವಿಮಾನ ಪಡೆಯನ್ನು ಒಮ್ಮೆಯೇ ಬಹಳವಾಗಿ ಹೆಚ್ಚಿಸತೊಡಗಿರುವುದು. ಗಾಂಧಿಯವರು ಅಭಿಪ್ರಾಯವಿತ್ತಿರುವಂತೆ, ಯುದ್ಧೋಪಕರಣ ಸಿದ್ಧತೆಯ ಈ ಉನ್ಮತ್ತ ಪ್ರತಿಸ್ಪರ್ಧೆಯು ಭಯಂಕರ ಅನಾಹುತದಲ್ಲಿ ಪರಿಣಮಿಸದಿರಲಾರದು.

ಪೆಲೆಸ್ತಿನದ ಪರಿಸ್ಥಿತಿ

ಪೆಲೆಸ್ತಿನದಲ್ಲಿ ಹಿಂದುಸ್ಥಾನದ ಇತಿಹಾಸವೇ ಪುನರಾವರ್ತಿತವಾಗುವಂತೆ ತೋರುತ್ತದೆ ನ್ಯೂಮನ್ ಕಮಿಶನನು ತೆಯೇ ಉಡ್ ಹೆಡ್ ಕಮಿಶನನೊಂದನ್ನು ಸ್ಥಾಪಿಸಿ ಪೆಲೆಸ್ತಿನವನ್ನು ಯಹೂದ್ಯ ಮತ್ತು ಅರಬರೊಳಗೆ ಹಂಚಿಹಾಕುವ ಕುತಂತ್ರ ನಡೆಸಲ್ಪಟ್ಟಿತು. ಆದರೆ ಅರಬರು ಅದನ್ನು ಪ್ರಬಲವಾಗಿ ವಿರೋಧಿಸಿ ಬಂಡಾಯವೆಬ್ಬಿಸಿದರು. ಪೆಲೆಸ್ತಿನದಲ್ಲಿ ಸೈನಿಕ ರಾಜ್ಯಭಾರವನ್ನು ಸ್ಥಾಪಿಸಿ ಅರಬರ ಬಂಡಾಯವನ್ನಡಗಿಸಲು ಬ್ರಿಟಿಷ್ ಸರಕಾರವು ಬಹಳ ಪ್ರಯತ್ನಮಾಡಿರುವುದು ಆದರೆ ಇದರಿಂದಾಗಿ ಅರಬರಲ್ಲಿ ಮಾತ್ರವಲ್ಲದೆ ಇಡೀ ಲೋಕದ ಮುಸಲ್ಮಾನರಲ್ಲೆಲ್ಲಾ ತೀವ್ರ ಅತೃಪ್ತಿಯುಂಟಾಗಿರುವುದು. ಆದುದರಿಂದ ಬ್ರಿಟಿಷ್ ಸರಕಾರವು ವುಡ್ ಹೆಡ್ ಕಮಿಶನಿನ ವರದಿಯನ್ನು ತಿರಸ್ಕರಿಸಿ ಮತ್ತು ಅರಬರೊಡನೆ ಅರಬರೂ ಸೇರಿ ಲಂಡನಿನಲ್ಲಿ ಪರಿಷತ್ತೊಂದನ್ನು ಕರೆಯುವ ಏರ್ಪಾಡು ಮಾಡಿರುವುದು ಅವರ ಬಂಡಾಯಗಾರ ಅರಬ ಪ್ರತಿನಿಧಿಗಳನ್ನು ಇದರಿಂದ ಹೊರಗಿರಿಸಿರುವುದು. ಆದುದರಿಂದ ಅವರೆಲ್ಲಾ ಈ ಪರಿಷತ್ತನ್ನು ಬಹಿಷ್ಕರಿಸುವ ಆಲೋಚನೆ ಮಾಡಿರುವರು

ಸ್ಪೈನಿನ ಯುದ್ಧ

ಮುಸಲೋನಿಯವರು ಸ್ಪೈನಿನಿಂದ 10,000ಮಂದಿ ಇಟಲಿಯನ ಸೈನಿಕರನ್ನು ಹಿಂದೆ ಕರೆದುದನ್ನೇ ಮಹತ್ವವಾಗಿ ಮಾಡಿಕೊಂಡು ಮಿ. ಚೇಂಬರ್ಲೇನರು ಇಂಗ್ಲೆಂಡು ಇಟಲಿಗಳೊಳಗಣ ಒಪ್ಪಂದವನ್ನು ಜ್ಯಾರಿಗೆ ತಂದೊಪ್ಪಿರುವರು. ಆದರೆ ಇನ್ನೂ 90,000ಮಂದಿ ಇಟಲಿಯನರು ಸ್ಪೈನಿನ ಬಂಡಾಯಗಾರರ ಕಡೆಯಲ್ಲಿ ಹೋರಾಡುತ್ತಿದ್ದಾರೆ, ಇವರಲ್ಲಿ 1000 ಮಂದಿ ವೈಮಾನಿಕರು, 2000 ಮಂದಿ ವೈಮಾನಿಕ ಯಾಂತ್ರಿಕರು, 10,000ಮಂದಿ ಮೋಟಾರ ವಾಹನ ಸಂಚಾಲಕರು 5000 ಇಂಜಿನಿಯರರು, 5000ಮಂದಿ ಯುದ್ಧಸಿದ್ಧತೆಗಾಗಿ ಕೆಲಸಮಾಡುವವರು 4000ಮಂದಿ ರೇಡಿಯೋ ಟೆಲಿಗ್ರಾಫಿಸ್ಟರು ಒಂದೊಂದು ಪಟಾಲಿಯನಲ್ಲಿ 12,000 ಮಂದಿ ಸೈನಿಕರಿರುವ 4 ಪಟಾಲಿಯನ್ ಬಂಡಾಯಗಾರರ ಕಡೆಯಲ್ಲಿ ಹೋರಾಡುತ್ತಿರುವುದೆಂಬ ಹಲವು ವಿವರಗಳನ್ನು ಸ್ಪೈನಿಶ್ ಸರಕಾರವು ಅಧಿಕಾರಿಕವಾಗಿ ಬ್ರಿಟಿಷ್ ಸರಕಾರಕ್ಕೊಪ್ಪಿಸಿರುವುದು. ಇದರಿಂದ ಮುಸಲೋನಿಯವರ ತಾಟಸ್ಥ್ಯದ ಕಣ್ಕಟ್ಟಿನ ಗುಟ್ಟು ಹೊರಬಿದ್ದಿರುವುದು ಆದರೂ ಬ್ರಿಟಿಷ್ ಪ್ರಧಾನ ಮಂತ್ರಿಗಳು ಈ ಕುರಿತು ಕಣ್ಣುಮುಚ್ಚಿಕೊಂಡೇ ಇರುವರು. ಎಬ್ರೋ ಮತ್ತು ಸೆಗ್ರೆ ನದಿಗಳ ಪ್ರದೇಶದಲ್ಲಿ ಭೀಕರ ಹೋರಾಟ ನಡೆದಿರುವುದು ಇದೇ ತಾ 11ನೇ ಆರ್ಮಿಸ್ಟಿಸ್ ದಿನದಲ್ಲಿ ಎಬ್ರೋ ರಣರಂಗದಲ್ಲಿ ಘೋರಕದನ ನಡೆದು ರಿಪಬ್ಲಿಕಾನರು ಬಂಡಾಯಗಾರರ ಧಾಳಿಯನ್ನು ತಡೆಗಟ್ಟಿರುವರು.

ಅಭಿನಂದನೆ

ಈ ಸಲ ಉಡುಪಿ ಮುನಿಸಿಪಲ್ ಚುನಾವಣೆಯು ಹೆಚ್ಚಿನ ಪ್ರತಿಸ್ಪರ್ಧೆಯೇನೂ ಇಲ್ಲದೆ ನಡೆದಿರುವುದು ಸಂತೋಷಕರ ತೆರಿಗೆದಾರರ ಪ್ರತಿನಿಧಿಗಳಾಗಿ ಆರಿಸಿಬಂದಿರುವ ಮೆಂಬರರ ಯೋಗ್ಯಾಯೋಗ್ಯತೆಯನ್ನು ನಾವಿಲ್ಲಿ ವಿಮರ್ಶಿಸಹೋಗುವುದಿಲ್ಲ ಅವರೆಲ್ಲರೂ ಹೆಚ್ಚಿನ ಉತ್ಸಾಹ ಮತ್ತು ಆಸಕ್ತಿಯಿಂದ ಪಟ್ಟಣದ ಸೇವೆಮಾಡಿ ತಮ್ಮ ನಂಬಿಕೆಯನ್ನು ಸಾರ್ಥಕಗೊಳಿಸಲೆಂದು ಹಾರೈಸುತ್ತೇವೆ. ಮುನಿಸಿಪಲ್ ಚೇಯರ್‌ಮೆನ್ ಮತ್ತು ವೈಸ್ ಚೇಯರ್‌ಮೆನರ ಚುನಾವಣೆಯಲ್ಲಿ ಯಾವ ತರದ ಪ್ರತಿಸ್ಪರ್ಧೆಯೂ ಇಲ್ಲದೆ ಮೊದಲು ಚೇಯರ್‌ಮೆನರಾಗಿ ಜನಪ್ರೀತರಾಗಿದ್ದ ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರೇ ಪುನಃ ಚೇಯರ್ ಮೆನರಾಗಿಯೂ, ಕೆಲವು ವರ್ಷಗಳಿಂದ ಲೋಕಲ್ ಬೋರ್ಡು ಮತ್ತು ಮುನಿಸಿಪಲ್ ಸದಸ್ಯರಾಗಿ ಅನುಭವ ಪಡೆದಿರುವ ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರು ವೈಸ್ ಚೇಯರ್‌ಮೆನರಾಗಿಯೂ ಸರ್ವಸಮ್ಮತಿಯಿಂದ ಆರಿಸಲ್ಪಟ್ಟಿರುವುದು ಅಭಿನಂದನೀಯವಿದೆ ಇವರ ಆಡಳಿತದಲ್ಲಿ ಉಡುಪಿ ಪಟ್ಟಣವು ಮತ್ತಷ್ಟು ಪ್ರಗತಿಹೊಂದಿ ಜನತೆಯ ನಾಗರಿಕ ಸೌಕರ್ಯಗಳ ಹೆಚ್ಚಿ ಸಂಕಲ್ಪಗಳು ರೂಪವಾಗುವಂತಾಗಲೆಂದು ನಿರೀಕ್ಷಿಸುತ್ತೇವೆ.

ಯೆಹೂದ್ಯರ ಮೇಲೆ ನಾಜಿಗಳ ಪೈಶಾಚಿಕ ಅತ್ಯಾಚ

ಇಂಗ್ಲೆಂಡಿನ ಪ್ರಚಂಡ ವಿಮಾನಪಡೆ • ಪಾ

ಯೆಹೂದ್ಯರ ಅಮಾನುಷ ಪೀಡೆ

ಇದೇ ತಾ. 7ರಲ್ಲಿ ಪೆರಿಸಿನಲ್ಲಿ ಗ್ರ್ಯುಂಜ್‌ಪಾನನೆಂಬ ಯೆಹೂದ್ಯ ತರುಣನೊಬ್ಬನು, ಜರ್ಮನಿಯ ನಾಜಿ ತಂತ್ರಜ್ಞರಾದ ಹರ್‌ವಾನ್‌ರಾತರೆಂಬುವರಿಗೆ ಗುಂಡಿಸೆದು ಅವರು ತಾ 9ರಲ್ಲಿ ಮೃತರಾಗಿರುವರು "ನಾನು ದ್ವೇಷ ಅಥವಾ ಪ್ರತೀಕಾರ ಬುದ್ಧಿಯಿಂದ ಪ್ರೇರೇಪಿತನಾಗಿರಲಿಲ್ಲ. ಅನ್ಯಾಯವಾಗಿ ಅಸಹನೀಯ ಕಷ್ಟಕ್ಕೀಡುಮಾಡಲ್ಪಟ್ಟಿದ್ದ ನನ್ನ ಹೆತ್ತವರ ಪ್ರೇಮದಿಂದಾಗಿ ನಾನು ಈ ಅತ್ಯಾಚಾರ ಮಾಡಿದೆ"ನೆಂದು ಗ್ರ್ಯುಂಜ್‌ಪಾನನು ತನ್ನ ಕೃತ್ಯಕ್ಕಾಗಿ ಪಾಶ್ಚಾತ್ತಾಪ ಸೂಚಿಸಿರುವನು. ಜರ್ಮನಿಯಲ್ಲಿದ್ದ ಹಲವು ಸಹಸ್ರಮಂದಿ ಪೋಲಂಡಿನ ಯೆಹೂದ್ಯರನ್ನು ಜರ್ಮನ್ ಸರಕಾರವು ಒಮ್ಮೆಯೇ ತಮ್ಮ ಮನೆಮಾರುಗಳಿಂದ ನಿವಾಳಿಸಿ ಜರ್ಮನಿಯಿಂದ ಹೊರಹಾಕಿ ನಿರ್ಗತಿಕರನ್ನಾಗಿ ಮಾಡಿದ್ದಿತು. ಆಮೇಲೆ ಪೋಲಂಡ್ ಸರಕಾರದ ಮಧ್ಯಸ್ಥಿಕೆಯಿಂದ ಹೊರಗಟ್ಟಲ್ಪಟ್ಟವರನ್ನೆಲ್ಲಾ ಪುನಃ ಹಿಂದೆ ಹೋಗಬಿಟ್ಟಿತು.

ಈ ಯೆಹೂದ್ಯ ತರುಣನೊಬ್ಬನ ಅತ್ಯಾಚಾರಕ್ಕಾಗಿ ಜರ್ಮನಿಯಲ್ಲಿರುವ ಯೆಹೂದ್ಯರೆಲ್ಲಾ ಅಮಾನುಷಪೀಡೆಗೊಳಗಾಗಬೇಕಾಗಿದೆ ನಾಜೀ ಪುಂಡರು ಕಂಡಕಂಡಲ್ಲೆಲ್ಲಾ ಯೆಹೂದ್ಯರ ಮನೆಮಾರು ಸುಟ್ಟು ಗಲಾಟೆಮಾಡಿರುತ್ತಾರೆ ಮ್ಯುನಿಚಿನಲ್ಲಿ ಅತಿ ಹೆಚ್ಚಿನ ಹಾವಳಿಯಾಗಿದೆ. ಈ ಅತ್ಯಾಚಾರಕ್ಕೆ ಸರಕಾರದ ಪ್ರೋತ್ಸಾಹವೇ ಇದೆ. ಬರ್ಲಿನಿನಲ್ಲಿ ನಾಜೀ ಪುಂಡರು ಯೆಹೂದ್ಯ ಪ್ರಾರ್ಥನಾಲಯಗಳಿಗೆ ಹೊಕ್ಕು ಅವುಗಳಿಗೆ ಬೆಂಕಿಕೊಟ್ಟು ಸುಟ್ಟುಹಾಕಿದ್ದಾರೆ. ಬರ್ಲಿನ್ ಒಂದೇ ಪಟ್ಟಣದಲ್ಲಿ 7ಯೆಹೂದ್ಯ ಪ್ರಾರ್ಥನಾಲಯಗಳು ಸುಟ್ಟುಹಾಕಲ್ಪಟ್ಟಿವೆ ಯೆಹೂದ್ಯ ಅಂಗಡಿ ಬೀದಿಗಳಲ್ಲೆಲ್ಲಾ ಇಚ್ಛಾನುಸಾರ ಪುಂಡಾಟಿಕೆ ಮತ್ತು ಲೂಟಿಯು ನಡೆದಿದೆ ಅಂಗಡಿ ಬಾಗಿಲು ಮತ್ತು ಕಿಟಕಿ ಒಡೆದು ಸಾಮಾನುಗಳು ಬೀದಿಗೆಸೆಯಲ್ಪಟ್ಟಿವೆ. ಹೇಂಬರ್ಗ್, ಮ್ಯುನಿಚ್ ಮೊದಲಾದ ಪಟ್ಟಣಗಳಲ್ಲಿದ್ದ ಯೆಹೂದ್ಯ ಪ್ರಾರ್ಥನಾಲಯಗಳೆಲ್ಲಾ ಸುಟ್ಟುಹಾಕಲ್ಪಟ್ಟಿವೆ. ಬರ್ಲಿನ್ ಪಟ್ಟಣವೊಂದರಲ್ಲೇ ಯೆಹೂದ್ಯ ಅಂಗಡಿಗಳ ಕಿಟಕಿಗಳೆಲ್ಲಾ ಒಡೆದುಹಾಕಲ್ಪಟ್ಟ ಸುಮಾರು 250,000 ಮಾರ್ಕ್ಸಗಳಷ್ಟು ನಷ್ಟವಾಗಿದೆ. ನಾಜಿಗಳ ಈ ಪುಂಡಾಟಿಕೆಯಲ್ಲಿ ಜನಸಾಮಾನ್ಯರು ಭಾಗವಹಿಸಲಿಲ್ಲ ಫ್ರೇಂಕ್ ಫರ್ಟನಲ್ಲಿ ಲುಟಾಯಿಸಲ್ಪಡದ ಒಂದೇ ಒಂದು ಯೆಹೂದ್ಯ ಅಂಗಡಿಯಾಗಲಿ, ಮನೆಯಾಗಲಿ ಇರುವುದಿಲ್ಲ. ಈ ಅತ್ಯಾಚಾರವನ್ನು ತಾಳಿಕೊಳ್ಳಲಾರದೆ ಕೆಲವು ಕಡೆ ಯೆಹೂದ್ಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ವಿಯನ್ನದಲ್ಲಿ ಒಂದೇ ದಿನ 25 ಮಂದಿ ಯೆಹೂದ್ಯರು ಆತ್ಮಘಾತ ಮಾಡಿಕೊಂಡಿದ್ದಾರೆ. 10,000 ಮಂದಿ ಕೈದುಮಾಡಲ್ಪಟ್ಟಿದ್ದಾರೆ. ಮ್ಯುನಿಚ್‌ನಲ್ಲಿ1400ಮಂದಿ ಯೆಹೂದ್ಯರ ದಸ್ತಗಿರಿಯಾಗಿದೆ

ಸಿಡ್ನೋಗಿಗಳೂ, ನಿಸ್ಸಹಾಯಕರೂ [illegible] ಪುಂಡರು ನಡಿಸಿರುವ ಬರ್ಬರ ಕೃತ್ಯಗಳಿಂದ ಇಡೀ ಲೋಕವೇ ಉದ್ವೇಗಗೊಂಡಿದೆಯೆಂದು ಹೇಳಬಹುದು. ಅಮೇರಿಕದ ಜನರು, ಫೆಸಿಸ್ಟರನ್ನು ನಿಷೇಧಿಸಿ ದೊಡ್ಡ ಪ್ರದರ್ಶನ ನಡಿಸಿರುವರು. ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ದೇಶಗಳವರೂ ಕೇವಲ ಮಧ್ಯಕಾಲೀನವಾದ ಈ ಬರ್ಬರತನದ ಕುರಿತು ತಮ್ಮ ವಿರೋಧ ಸೂಚಿಸಿರುವರು.

ಹರ್‌ವಾನ್ ರಾತರ ಕೊಲೆಗಾಗಿ ಜರ್ಮನಿಯ ಯೆಹೂದ್ಯರು ಒಂದು ಮಿಲಿಯರ್ಡ್ ಮಾರ್ಕ್ಸಗಳಷ್ಟರ ಜುಲ್ಮಾನೆ ತೆರಬೇಕೆಂದು ಜರ್ಮನ್ ಸರಕಾರವು ವಿಧಿಸಿರುತ್ತದೆ. ಇದನ್ನು ಯೆಹೂದ್ಯ ಸೊತ್ತುಗಳ ಮೇಲಿನ ಪ್ರತ್ಯೇಕವಾದ ತೆರಿಗೆಯ ರೂಪದಲ್ಲಿ ವಸೂಲು ಮಾಡಲಾಗುವುದು. ಒಟ್ಟು ಯೆಹೂದ್ಯರ ಸೊತ್ತುಗಳ ಬೆಲೆಯು 10ಮಿಲಿಯರ್ಡ್ಸ್ ಮಾರ್ಕ್ಸಗಳೆಂದು ಅಂದಾಜು ಮಾಡಲಾಗಿದೆ. ಅಂದ ಮೇಲೆ ಈ ತೆರಿಗೆಯು ಸೇಕಡ 10ರಂತೆ ಬೀಳುವುದು. ಇದೇ ತಾ. 12ರಲ್ಲಿ ಫೀಲ್ಡ್ ಮಾರ್ಶಲ್ ಗೋರಿಂಗರ ಅಧ್ಯಕ್ಷತೆಯಲ್ಲಿ ನಡೆದ ಜರ್ಮನ್ ಅಧಿಕಾರಿಗಳ ಸಭೆಯೊಂದರಲ್ಲಿ, ಜರ್ಮನಿಯಲ್ಲಿರುವ ಯೆಹೂದ್ಯರ ಮೇಲೆ ಅತ್ಯಂತ ಕಠಿಣವಾದ ಶಾಸನಗಳನ್ನು ಹೊರಿಸುವ ನಿರ್ಧಾರವಾಗಿದೆ. ಬರುವ ಜನವರಿ ತಿಂಗಳಿಂದ ಯೆಹೂದ್ಯರನ್ನು ಚಿಲ್ಲರೆ ವ್ಯಾಪಾರ ನಡಿಸುವುದಕ್ಕೂ ಆಮದು ರಫ್ತು ಮಾಡುವುದಕ್ಕೂ ಬಿಡಲಾಗುವುದಿಲ್ಲ. ಅವರು ಯಾವ ಕಂಪೆನಿಯ ಮೆನೇಜರರಾಗಿಯೂ ಇರಕೂಡದು ನಾಜಿ ಪುಂಡರು ಗಲಾಟೆ ಮಾಡಿ ಸೊತ್ತುಗಳಿಗೆ ಉಂಟುಗಿರುವ ನಷ್ಟವನ್ನೆಲ್ಲಾ ಯೆಹೂದ್ಯರು ಭರ್ತಿ ಮಾಡತಕ್ಕದ್ದು. ಜರ್ಮನಿಯ ಸಾಂಪತ್ತಿಕ ಜೀವನದಿಂದ ಯೆಹೂದ್ಯರನ್ನು ಸಂಪೂರ್ಣವಾಗಿ ನಿವಾರಿಸಲು ಬೇಕಾದ ಶಾಸನಗಳನ್ನೆಲ್ಲಾ ಬೇಗನೆ ಮಾಡಲಾಗುವುದು. ಆಸ್ಟ್ರಿಯ ಕೂಡಿ ಇಡೀ ಜರ್ಮನಿಯಲ್ಲೀಗ ಸುಮಾರು 6ಲಕ್ಷ ಮಂದಿ ಯೆಹೂದ್ಯರಿರುತ್ತಾರೆ ಇವರಲ್ಲಿ ಹೆಚ್ಚಿನವರೇನೂ ಶ್ರೀಮಂತರಿರುವುದಿಲ್ಲ ಹಲವರು ಚಿಕ್ಕ ಚಿಕ್ಕ ಅಂಗಡಿಗಳನ್ನಿಟ್ಟು ವ್ಯಾಪಾರ ನಡಿಸುವವರು. ಅವರ ಅಂಗಡಿಗಳೆಲ್ಲಾ ಈಗ ಲುಟಾಯಿಸಲ್ಪಟ್ಟಿವೆ. ಮತ್ತು ಅವರಿನ್ನು ತಮ್ಮ ವ್ಯಾಪಾರ ನಡಿಸದಂತೆ ಕಾನೂನು ಮಾಡಲ್ಪಟ್ಟಿದೆ ಶ್ರೀಮಂತ ಯೆಹೂದ್ಯರಾದ ಡಾಕ್ಟರರು, ವಕೀಲರು ಮೊದಲಾದವರೂ ತಮ್ಮ ವೃತ್ತಿ ಮಾಡದಂತೆ ಮೊದಲೇ ತಡೆ ಹಾಕಲಾಗಿದೆ. ಸಾವಿರಾರು ಮಂದಿ ಯೆಹೂದ್ಯರು ನಿರ್ಬಂಧದಲ್ಲಿರಿಸಲ್ಪಟ್ಟಿರುತ್ತಾರೆ. ನಾಜೀ ಸರಕಾರದ ಜುಲ್ಮಾನೆಯು ಯೆಹೂದ್ಯರ ಮೇಲೆ ತಲೆಯೊಂದರ 136ಪವನಾಗುವುದು. ಸ್ತ್ರೀಯರ ಮಕ್ಕಳ ಮೇಲೂ ಇದು ಬೀಳುವುದು. ಜುಲ್ಮಾನೆ ತೆರದಿದ್ದರೆ ಯೆಹೂದ್ಯರ ಸೊತ್ತು ಬೇಂಕುಗಳಲ್ಲಿರುವ ಅವರ ಚಿನ್ನಾಭರಣ ಮತ್ತು ಹಣವನ್ನೆಲ್ಲಾ ಸರಕಾರವು ಜಪ್ತಿಮಾಡುವುದು. ನಾಜೀ ಪುಂ[illegible]

[illegible] ವ ಅಂಗಡಿ ಮೊದಲಾದುವುಗಳನ್ನು ಒಂದು ಹಪ್ತೆಯೊಳಗೆ ಯೆಹೂದ್ಯರು ಸರಿ ಮಾಡಬೇಕೆಂದು ಹುಕುಮು ಕೊಡಲಾಗಿದೆ. ಯೆಹೂದ್ಯ ನಾಟಕ ಶಾಲೆ, ಸಿನೆಮ, ಶಾಲೆ, ಪತ್ರಿಕೆಗಳೆಲ್ಲಾ ಬಂದಾಗಿರಬೇಕೆಂದು ಕಟ್ಟಾಜ್ಞೆ ಕೊಡಲ್ಪಟ್ಟಿದೆ ಯೆಹೂದ್ಯರು ಇತರ ನಾಟಕ ಶಾಲೆ, ನರ್ತನಾಲಯಗಳಿಗೆ ಹೋಗದಂತೆ ನಿರ್ಬಂಧ ಹಾಕಲಾಗಿದೆ.

ಪಂಡಿತ ಜವಾಹರಲಾಲರು

ಬೊಂಬಾಯಿಯಲ್ಲಿಳಿದೊಡನೆಯೇ ನೆಟ್ಟಗೆ ವಾರ್ಧಕ್ಕೆ ಹೋಗಿ, ಹಿಂದೂದೇಶದ ರಾಜಕೀಯ ಪರಿಸ್ಥಿತಿ ಮತ್ತು ಇಂಗ್ಲೆಂಡಿನ ತನ್ನ ಅನುಭವದ ಕುರಿತು ಗಾಂಧಿಜಿಯವರೊಡನೆ ಮಾತಾಡಲಿರುವರು ಪಂಡಿತರು ಬೊಂಬಾಯಿಯಲ್ಲಿಳಿದೊಡನೆಯೇ ಅವರಿಗೆ ವಿಜೃಂಭಣೆಯ ಸ್ವಾಗತವೀಯುವ ಏರ್ಪಾಡು ನಡೆದಿದೆ ಸರ್ದಾರ್ ವಲ್ಲಭಾಯಿಯವರ ಅಧ್ಯಕ್ಷತೆಯಲ್ಲಿ ಪಂಡಿತರು ಬೊಂಬಾಯಿಯಲ್ಲಿ ಸಾರ್ವಜನಿಕ ಭಾಷಣವೀಯಲಿರುವರು. ಸರ್ದಾರ್ ವಲ್ಲಭಾಯಿಯವರು ಇದೇ ತಾ. 13ರಲ್ಲಿ ಗಾಂಧಿಜಿಯವರೊಡನೆ ಮಾತಾಡಲು ವಾರ್ಧಕ್ಕೆ ಹೋಗಿರುವರು. ಇವರು ತಾ. 18ರವರೆಗೆ ವಾರ್ಧದಲ್ಲೇ ಇದ್ದು ಕೆಲವು ಪ್ರಾಮುಖ್ಯ ಪ್ರಶ್ನೆಗಳ ಕುರಿತು ಗಾಂಧಿಜಿಯವರ ಸಲಹೆಪಡೆಯಲಿರುವರು, ರಾಜಕೋಟೆಯ ಸತ್ಯಾಗ್ರಹದ ವಿಷಯವನ್ನು ಚರ್ಚಿಸುವರು. ನವಂಬರ ತಾ. 19ರಲ್ಲಿ ಬೊಂಬಾಯಿಗೆ ಹಿಂತಿರಳುವರು. ಸರ್ದಾರರು ಇದೇ ತಾ. 13ರಲ್ಲಿ ವಾರ್ಧಕ್ಕೆ ತೆರಳುವರು ರಾಜಕೋಟೆಯ ಸತ್ಯಾಗ್ರಹದಲ್ಲಿ ಭಾಗವಹಿಸಲು ಬೊಂಬಾಯಿಂದ ಹೋಗುವ ಸ್ವಯಂಸೇವಕದಳವೊಂದಕ್ಕೆ ವಿದಾಯವಿತ್ತರು.

ಮಜೂರ ಮುಖಂಡರಿಗೆ ಸರ್ದಾರರ ಉತ್ತರ.

ಇದೇ ತಾ. 7ರಲ್ಲಿ ಬೊಂಬಾಯಿಯ ಟ್ರೇಡ್ ಡಿಸ್ಪ್ಯೂಟ್ ಆಕ್ಟನ್ನು ನಿಷೇಧಿಸಲು ನಡೆದ ಒಂದು ದಿನದ ಮುಷ್ಕರದಲ್ಲಿ ಸೇಕಡಾ 80ರಷ್ಟರ ಮಜೂರರು ಭಾಗಿಯಾಗಿರುವುದಿಲ್ಲೆಂದು ಸರ್ದಾರ್ ವಲ್ಲಭಾಯಿಯವರ ಅಭಿಪ್ರಾಯ. ಈ ಸಂದರ್ಭದಲ್ಲಿ ಪೋಲೀಸರು ನಡಿಸಿದ ಗೋಳಿಬಾರಿನ ಕುರಿತು ಬೊಂಬಾಯಿ ಸರಕಾರವು ವಿಚಾರಣೆ ನಡಿಸಲಿರುವುದು. ಸರ್ದಾರ್ ಪಟೇಲರು ಶ್ರೀ. ಜಮ್ನಾದಾಸ ಮೇಥಾರೇ ಮೊದಲಾದ ಮಜೂರ ಮುಖಂಡರು, ಮುಷ್ಕರವು ಶಾಂತಪರವಾಗಿ ನಡೆದಿರುವುದೆಂದು ಪ್ರತಿಪಾದಿಸಿನುದನ್ನು ಖಂಡಿಸಿ ಉತ್ತರವಿತ್ತಿರುವರು. "ಈ ಮುಷ್ಕರದಿಂದ ಶ್ರೀ. ಜಮ್ನಾದಾಸರೇ ಮೊದಲಾದವರು ಹೆಮ್ಮೆಪಡಬಹುದು. ಅವರಿಗೆ ಎಷ್ಟರ ಮಟ್ಟಿನ ಬೆಂಬಲವಿದೆಯೆಂಬುದನ್ನು ಈ ಮುಷ್ಕರವು ವ್ಯಕ್ತಪಡಿಸಿರುವುದು. ಶ್ರೀ. ಮೇಥಾರವರು ಕೆ. ಇ. ಎಮ್. ಆಸ್ಪತ್ರೆಯನ್ನು ಸಂದರ್ಶಿಸಿ, ಅಲ್ಲಿ ಗಾಯಗೊಂಡು ನರಳುತ್ತಿರುವವರನ್ನು ನೋಡುತ್ತಿದ್ದರೆ, ಮುಷ್ಕರವು ಶಾಂತವಾಗಿ ನಡೆಯಿತೆಂದು [illegible]

ಬಂಗಾಳದಲ್ಲಿ ಹೊ

ಶಿ ಹುಡುಗರ ಪರಿಸ್ಥಿತಿಯು ಅತ್ಯಂತ ಕರುಣಾಜನಕವಿರುವುದು. 10 ಮತ್ತು 12 ವರ್ಷ ಪ್ರಾಯದ ಈ ಹುಡುಗರು ಮೋಟರ್ ಕಾರಿನಲ್ಲಿ ಶಾಲೆಯಿಂದ ಹಿಂದೆ ಬರುವಾಗ ಮುಷ್ಕರಗಾರರು ಇವರ ಮೇಲೆ ಬಿದ್ದು ಹೊಡೆದರು. ಒಬ್ಬನ ತಲೆ ಒಡೆದುಹೋಗಿದೆ. ಅವನು ಬದುಕುವುದು ಕಷ್ಟ. ಈ ಇಬ್ಬರು ಹುಡುಗರ ಬಳಿಯಲ್ಲಿಯೂ ವಿಧವೆ ತಾಯಂದಿರಿಬ್ಬರು ಕುಳಿತು ಕಣ್ಣೀರಿಡುತ್ತಿದ್ದಾರೆ. ಈ ದೃಶ್ಯವು ಶ್ರೀ. ಜಮ್ನಾದಾಸರ ಹೃದಯವನ್ನು ಕರಗಿಸದಿರಲಾರದು. ಈ ವಿಷಯದಲ್ಲಿ ಸಹಾನುಭೂತಿಯ ಮಾತುಗಳನ್ನಾದರೂ ಈ ಮಜೂರ ಮುಖಂಡರು ಹೇಳಿರುವುದಿಲ್ಲ. ಗುಂಡಿಗೆ ಬಲಿಬಿದ್ದು ಮೃತನಾದ ಮಜೂರನು ಮುಷ್ಕರಕ್ಕೆ ಸೇರಿದವನಲ್ಲ ಇಡೀ ದಿನ ಕೆಲಸ ಮಾಡಿ ಮುಷ್ಕರಗಾರರು ಕಲ್ಲೆಸೆದು ಮಾಡುವ ಗಲಾಟೆ ನೋಡುವ ಉತ್ಸುಕತೆಯಿಂದ ಬಂದು ಜನರೊಂದಿಗೆ ನಿಂತವನು. ಅಕಸ್ಮಾತ್ತಾಗಿ ಗುಂಡಿನೇಟು ಅವನಿಗೆ ತಾಗಿ ಗಾಯಗೊಂಡು ಮೃತನಾದನು ಅವನ ಶವವನ್ನು ಕೆಲಮಂದಿ ಮಜೂರರು ಮೆರವಣಿಗೆಯಿಂದೊಯ್ದು ಸಂಸ್ಕಾರ ಮಾಡಿದರು ಪೋಲೀಸರು ಗುಂಡು ಹಾರಿಸಿದುದರಿಂದ ತಮ್ಮ ಮುಷ್ಕರವು ಜಯಶೀಲವಾಯಿತೆಂದು ಕಾಮದಾರ ಮೈದಾನಿನ ಸಭೆಯಲ್ಲೊಬ್ಬನು ಹೇಳಿದನು ಹಾಗಾದರೆ

ಪೋಲೀಸರು
ಅವರೇ ಪ್ರಯ
ಇದು ವಿಜಯ
ಯೂ ಜಯಶೀ
ಜನರ ಪ್ರಾಣ
ಗುಂಡುಹಾರಿಸ
ವಾಗಿಯೂ ಕ
ಚಿಕೆಕರವಿದೆ.
ತ್ಮಕ ಮನೋ
ವನ್ನುಂಟುಮಾ
ಗುವನಕ ಕೆಲ
ಯೋಗಿಸಬೇಕಾ
ಯಿಯವರ ಹೇ

ವಿ. ಏ

ಇಂಗ್ಲೆಂಡಿನ
ಳಾದ ಪಡೆನರು,
ತ ಸ್ಫೂರ್ತಿಯ
ಡು ಒಂದೋ ಪ್ರ
ವನ್ನು ಪಡೆಯ
ಶೇಷವಾಗಬೇಕ
ಸಾಮ್ರಾಜ್ಯ ವ
ಯಿಂದ ಅದು
ನೇ ತರಗತಿಯ
ವಿಸಿಕೊಂಡಿರಲ
ದ ಇಂಗ್ಲೆಂಡು
ಶಾಲಿಯಾದ

ಮೈಸೂರಿನ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮೈಸೂರು ನ. ೧೪.

ಕುಮಾರಿ ಶಾಂತಾ ಆಪ್ಟೆ— ಮೈಸೂರಿಗೆ ಆಗಮಿಸಿದ್ದ ಪ್ರಭಾತ್ ಫಿಲಂ ಕಂಪೆನಿಯ ಸುಪ್ರಸಿದ್ಧ ಸಿನಿಮ ತಾರೆಯಾದ ಕುಮಾರಿ ಶಾಂತಆಪ್ಟೆಯವರು ನಿನ್ನೆ ಬೆಳಗ್ಗೆ ಬೆಂಗಳೂರಿಗೆ ಪ್ರಯಾಣಬೆಳಸಿದರು

ಪಂಚಲಿಂಗದರ್ಶನ—ತಲಕಾಡಿನಲ್ಲಿ ಈ ತಿಂಗಳು ೨೧ನೇ ತಾ ಸೋಮವಾರ ನಡೆಯುವ ಪಂಚಲಿಂಗದರ್ಶನಕ್ಕೆ ಆಗಮಿಸುವ ಜನಗಳಿಗೆ ಆದಷ್ಟು ಸೌಕರ್ಯಗಳನ್ನು ಕೊಡಲು ಏರ್ಪಾಡುಗಳು ನಡೆಯುತ್ತಿವೆಂದು ತಿಳಿದುಬಂದಿದೆ.

ಟೇಬಲ್ ಟೆನಿಸ್—ಹಂಗೇರಿಯಾದ ಆಟಗಾರರೂ, ಪ್ರಪಂಚದ ಟೇಬಲ್ ಟೆನಿಸ್‌ನಲ್ಲಿ ಛಾಂಪಿಯನ್ ಶಿಪ ಪಡೆದು ಇಂದು ಭಾರತದಲ್ಲಿ ಸಂಚರಿಸುತ್ತಿರುವ ಬಾರ್ನ ಮತ್ತು ಬೆಲ್ಲಾಕ್‌ರವರು, ಶನಿವಾರ ಬೆಳಗ್ಗೆ ಮಹಾರಾಜ ಕಾಲೇಜಿನ ಅಂಗಳದಲ್ಲಿ ಟೇಬಲ್ ಟೆನಿಸ್ ಪ್ರದರ್ಶನ ಪಂದ್ಯಗಳನ್ನಾಡಿದರು. ಇದನ್ನು ನೋಡಲು ಅನೇಕ ಕ್ರೀಡಾಭಿಮಾನಿಗಳು ಕಿಕ್ಕಿರಿದು ತುಂಬಿದ್ದರು. ಈ ಆಟಗಾರರು. ಅದೇ ಮಧ್ಯಾಹ್ನ ಮದ್ರಾಸಿಗೆ ಪ್ರಯಾಣಬೆಳಸಿದರು.

ಜನಜಾಗ್ರತಿ ಸಂಘ——ಮೇಲ್ಕಂಡ ಸಂಘದ ಆಶ್ರಯದಲ್ಲಿ ಭಾನುವಾರ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಬೆಂಗಳೂರಿನ ಕಾಮರೇಡ್ ಎನ್. ಡಿ. ಶಂಕರ್‌ರವರು 'ಸಮತವಾದ' ಎನ್ನುವುದರ ವಿಚಾರವಾಗಿ ಭಾಷಣಮಾಡಿದರ.

ಕರ್ಣಾಟಕ ವಿಶೇಕರಣ—ಬೆಂಗಳೂರು ನೇಷನಲ್ ಹೈಸ್ಕೂಲ್‌ನ ಕಾರ್ಯದರ್ಶಿಯವರಾದ ಶ್ರೀ ತಾ ಸು ಪದ್ಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರೊವಿನ್‌ಶಿಯಲ್ ಹಿಂದಿಪ್ರಚಾರ ಸಭೆ

ವರು, ಭಾನುವಾರ
ಘದಲ್ಲಿ 'ಕರ್ನಾಟಕ
ವಾಗಿ ಭಾಷಣಮಾ

ದಿವಾನ
ಮಿರ್ಜಾಯಂ ಇ
ಯಲ್ಲಿ ಕೆಲವು ಭ
ಭಾನುವಾರ ರಾತ್ರಿ
ರಿಗೆ ಹಿಂತಿರುಗಿದ
ಒಂದು ಚಿನ್ನ ವ
ಈ ರೀತಿ ಅಪ್ಪ

ತಾರಾಪುರ
ರವರು ಜನವರಿ
ಆಗ ತಾರಾಪುರ
ನಡೆಯುವುದು.
ಯುತ್ತಿರುವ ಕೆಲ
ಕೆಂಡು ಬರಲು
ಮಿರ್ಜಾಯಂ
ತಾರಾಪುರಕ್ಕೆ
ನೋಡಿಕೊಂಡ

ಕ್ರಿಕೆಟ್—
ದಲ್ಲಿ ಮಹಾರಾ
ಮಹಾರಾಜ ಕ್ರಿ
ಕೆಟ್ ಪಂದ್ಯ
ಟ್ಟುಗಳಿಗೆ
ರನ್ನುಗಳನ್ನು

ನಂಜನಗೂ
ನಗೂಡು ಶ್ರೀ.
ನ್ಯ ನಾಮ ಸಂ
(19-11-38)

...ರ — ಮಜೂರ ಮುಖಂಡರಿಗೆ ಸರ್ದಾರರ ಉತ್ತರ

...ಮೆಂಟಿನಲ್ಲಿ ಏಡೆನರ ಸ್ಫೂರ್ತಿಯ ಭಾಷಣ

...ಸ ಮಂತ್ರಿಮಂಡಲವಾಗುವುದೇ?

...ಹೊಡೆಯುವಂತೆ
...ದ್ದರಿಂದಾಯಿತು
...ವರು ನಿಜವಾಗಿ
...ದ್ದರೆ. ನಿರ್ದೋಷಿ
...ಗಿ ಪೋಲೀಸರು
...ಬಂದುದು ನಿಜ
...ದೃಷ್ಟಿಯಲ್ಲಿ ನಾ
...ಂಗ್ರೆಸು ಅಹಿಂಸಾ
...ತ್ತು ವಾತಾವರಣ
...ಲ್ಲಿ ಜಯಶೀಲವಾ
... ಶಕ್ತಿಯನ್ನು ಪ
...ರ್ದಾರ್ ವಲ್ಲಭಾ
...ಸಾರಾಂಶ.

...ಸ್ಫೂರ್ತಿಯ

...
...ವಿದೇಶಮಂತ್ರಿಗ
...ಮೆಂಟಿನಲ್ಲಿ ಅತ್ಯಂ
...ತ್ತು "ಇಂಗ್ಲಂ
...ನದ ಸೇನಾಬಲ
...ಲ್ಲವೆ ನಾವಾವ
... ವಿಸ್ತಾರವಾದ
...ಸಂಖ್ಯೆಯ ಪೃಷ್ಠಿ
...ಅಥವಾ ಮೂರ
...ವುಳ್ಳದಾಗಿ ಜೀ
...ಲ್ಲ. ಆದುದರಿಂ
...ಗಿ ಅತ್ಯಂತ ಬಲ
...ಡೆಯನ್ನು ಸಿದ್ಧ



ಗೊಳಿಸಬೇಕು ಲೋಕದಲ್ಲಿ ಹಲವು ರಾಷ್ಟ್ರಗಳು ಯುದ್ಧದ ಮನೋವೃತ್ತಿಯನ್ನೇ ಬೆಳೆಸುತ್ತಿರುವಾಗ ಇಂಗ್ಲೆಂಡು ಸವ್ಯಸನಿರಲು ಸಾಧ್ಯವಿಲ್ಲ. ಪ್ರಮುಖ್ಯವಾದೊಂದು ರಾಷ್ಟ್ರವಾಗಿಯೂ, ಲೋಕದ ಅಗ್ರಗಣ್ಯ ಸಾಮ್ರಾಜ್ಯವಾಗಿಯೂ ಅದು ತನ್ನ ರಕ್ಷಣೆಯ ಮಹತ್ತಾದ ಜವಾಬ್ದಾರಿಯನ್ನು ಕಡೆಗಣಿಸಲು ಸಾಧ್ಯವಿಲ್ಲ. ಡಿಕ್ಟೇಟರರು ಇಂದು ಪ್ರಜಾಸತ್ತೆಗೆ ಸಡ್ಡು ಹೊಡೆದು ನಿಂತಿದ್ದಾರೆ. ಆದುದರಿಂದ ಇಂಗ್ಲೆಂಡು ಸಕ್ರಿಯವಾದೊಂದು ಪ್ಲೇನ್ ಹಾಕಿಕೊಂಡು, ತನ್ನ ಸೇನಾಬಲವನ್ನು ಹೆಚ್ಚಿಸಬೇಕು. ಈ ಸಂದಿಗ್ಧ ಕಾಲದಲ್ಲಿ ಬ್ರಿಟಿಷರೆಲ್ಲರೂ ಒಕ್ಕಟ್ಟಿನಿಂದ ನಡೆಯಬೇಕು. ಬ್ರಿಟಿಷ್ ಸಾಮ್ರಾಜ್ಯದ ಸುರಕ್ಷಿತೆಗಾಗಿ ಯಾವ ತ್ಯಾಗಕ್ಕಾದರೂ ಸಿದ್ಧರಾಗಬೇಕು. ಆಂಗ್ಲೇಯರೆಲ್ಲರೂ ಉದ್ಯೋಗಪರರು ಸ್ವಾಭಿಮಾನಿಗಳಾಗಿ ಜೀವಿಸುವಂತಾಗಬೇಕು" ಎಂದು ಮಿ ಏಡೆನರು ಭಾಷಣವಿತ್ತು ಎಲ್ಲಾ ಪಕ್ಷದ ಪಾರ್ಲಿಮೆಂಟ್ ಮೆಂಬರರ ಮೆಚ್ಚುಗೆಪಡೆದರು

ಟರ್ಕಿಯ ಹೊಸ ಪ್ರೆಸಿಡೆಂಟರು

ಆಧುನಿಕ ಟರ್ಕಿಯ ನಿರ್ಮಾಪಕರಾದ ಕೆಮಲ್ ಪಾಶರವರ ಸ್ಥಾನದಲ್ಲಿ ಜನರಲ್ ಇಸ್ಮೆಟ್ ಇನ್ನೋನುರವರು ಟರ್ಕಿಯ ಪ್ರೆಸಿಡೆಂಟರಾಗಿ ಸರ್ವ ಸಮ್ಮತಿಯಿಂದ ಆರಿಸಲ್ಪಟ್ಟಿರುವರು. ಇದರು ಕಮಲ್ ಪಾಶರ ಧೋರಣೆಯನ್ನೇ ಒಂದಿಷ್ಟು ಬದಲಾವಣೆಯಿಲ್ಲದೆ ಮುಂದುವರಿಸುವರೆಂದು ತಿಳಿದು ಬರುತ್ತದೆ. ಮಂತ್ರಿಮಂಡಲದಲ್ಲಿಯೂ ಹೆಚ್ಚಿನ ಬದಲಾವಣೆಯೇನೂ ಆಗುವ ಹಾಗಿಲ್ಲ. ಜನರಲ್ ಇಸ್ಮೆಟರು ಕೆಮಲರ ಅತಿ ಹಳೆಯ ಗೆಳೆಯರು ಮತ್ತು ಅತಿ ನಿಕಟ ಸಹೋದ್ಯೋಗಿಯು. 13 ವರ್ಷಗಳ ವರೆಗೆ ಟರ್ಕಿಯ ಪ್ರಧಾನ ಮಂತ್ರಿಗಳಾಗಿ ಕೆಲಸಮಾಡಿದವರು. ಟರ್ಕಿಯ ಸ್ವಾತಂತ್ರ್ಯ ಸಮರದಲ್ಲಿ ಕೆಮಲರ ಸೇನೆಯೊಂದರ ನಾಯಕರಾಗಿದ್ದವರು. ಗ್ರೀಕರ ದೊಡ್ಡ ಪರಾಜಯಕ್ಕೆ ಇವರೇ ಮುಖ್ಯಕಾರಣರು. ಇವರ ವಯಸ್ಸೀಗ 55. ಹಲವು ವರ್ಷಗಳ ವರೆಗೆ ಕೆಮಲರ ಬಲಗೈಯಂತಿದ್ದರಿವರು. ಇತ್ತಲಾಗಿ ಇವರು ಟರ್ಕೀಯ ರಾಜಕೀಯದಲ್ಲಿ ಯಾವ ಭಾಗವನ್ನೂ ವಹಿಸದೆ ಸುಮ್ಮನಿದ್ದರು. ರಷ್ಯದೊಡನೆಯೂ, ಇಂಗ್ಲೆಂಡು ಮತ್ತು ಫ್ರಾನ್ಸಿನೊಡನೆಯೂ ಸಹಾನುಭೂತಿಯುಳ್ಳವರಿರುವರು. ಇಂಗ್ಲಿಷ್ ಮಾತಾಡ ಬಲ್ಲರು. ಬ್ರಿಟಿಷ್ ಚಕ್ರವರ್ತಿಗಳ ಕಿರೀಟ ಧಾರಣೋತ್ಸವದಲ್ಲಿ ಟರ್ಕಿಯ ಪರವಾಗಿ ಭಾಗವಹಿಸಿದ್ದರು.

ಚೀನೀ ಜಪಾನ ಯುದ್ಧ

ಜಪಾನ ಸೇನೆಯು ಹೇಂಕೋ ಪಟ್ಟಣದಿಂದ ಮುಂದುವರಿದು ಕೆಲವು ಪ್ರಾಮುಖ್ಯ ಸ್ಥಳಗಳನ್ನು ವಶಪಡಿಸಿಕೊಂಡಿರುವುವು. ಚೆಕ್ವಾನ್ ಪ್ರಾಂತದ ಮುಖ್ಯಪಟ್ಟಣವಾದ ಚಾರಿಶ್ಯಾ ಪಟ್ಟಣವನ್ನು ಜಪಾನರು ವಶಪಡಿಸಿಕೊಂಡಿರುತ್ತಾರೆ. ಚೆಕ್ವಾನ್ ಪ್ರಾಂತದ ಪೂರ್ವದಲ್ಲಿ ಮಾರ್ಶಲ್ ಚ್ಯಾಂಗ್ ಕೈಶೆಕ್ಕರು, 150,000 ಕೇಂದ್ರ ಸರಕಾರದ ಸೈನಿಕರನ್ನು ಸಂಗ್ರಹಿಸಿರುತ್ತಾರೆ. ಕ್ವಿಟೋ ಎಂಬಲ್ಲಿ ಪುನಃ 100,000 ಸೇನೆಯನ್ನು ಸಿದ್ಧಗೊಳಿಸಿರುತ್ತಾರೆ. ಶಾನ್ಸಿ ಪ್ರಾಂತದಲ್ಲಿ ಗೆರಿಲ್ಲ ಯುದ್ಧವು ನಡೆಯುತ್ತಲೇ ಇದೆ. ಕ್ಯಾಂಟನ್ ಪಟ್ಟಣವನ್ನು ಪುನಃ ವಶಪಡಿಸಿಕೊಳ್ಳಲು ಚೀನೀಸೈನಿಕರು ಪ್ರಯತ್ನ ನಡಿಸುತ್ತಿರುವರು. ಕ್ಯಾಂಟನಿನ ಪೂರ್ವಭಾಗದಿಂದ 'ಮುಂದೊತ್ತಿ ಕ್ಯಾಂಟನ್ ಕಾಲೂನು ರೈಲ್ವೆಯನ್ನು ಕಡಿದು ಹಾಕಿರುವರು. ಇದೇ ತಾ. 11ರಲ್ಲಿ 18 ಜಪಾನ ವಿಮಾನಗಳು ಲಿಯುವಂಗ್ ಎಂಬ ಸ್ಥಳದ ಮೇಲೆ ಧಾಳಿನಡಿಸಿ ಸುಮಾರು 1000 ಮಂದಿ ಕೊಲ್ಲಲ್ಪಟ್ಟಿರುವರು

ಕ್ಯಾಂಟನನ್ನು ಒಂದು ಹಪ್ತೆಯೊಳಗೆ ಗೆಲ್ಲಬೇಕೆಂಬ ನಿರ್ಧಾರದಿಂದ ಮುಂದೊತ್ತುತ್ತಿರುವ ಕೇಂದ್ರ ಸರಕಾರದ ಚೀನೀ ಸೈನಿಕರು ಈಗ ಅದಕ್ಕಿಂತ ಏಳುವರೆ ಮೈಲು ದೂರಕ್ಕೆ ಮುಟ್ಟಿರುವರು.

ಶಾನ್ಸಿಯಲ್ಲಿ ಕಳೆದ ಸಪ್ಟಂಬರ ತಿಂಗಳಿನಿಂದ ಈ ವರೆಗೆ ನೂರಕ್ಕಿಂತಲೂ ಮಿಕ್ಕಿದ ತೀವ್ರ ಹೋರಾಟಗಳು ನಡೆದು 8000 ಮಂದಿ ಜಪಾನ ಸೈನಿಕರು ಕೊಲ್ಲಲ್ಪಟ್ಟು 10,000 ಮಂದಿ ಗಾಯಗೊಂಡಿರುವರು. ಇದೇ ತಾ 9ರಲ್ಲಿ 70 ಜಪಾನ ವಿಮಾನಗಳು ಹೆಂಗ್ಯಾನ ಮತ್ತು ಹೆಂಗ್ಸಾಂಗ್ ಪಟ್ಟಣಗಳ ಮೇಲೆ ಧಾಳಿನಡಿಸಿ ಅನೇಕ ಕಟ್ಟಡಗಳು ನಾಶವಾಗಿರುವವು. 200 ಮಂದಿ ಕೊಲ್ಲಲ್ಪಟ್ಟಿರುವರು. ಮಾರ್ಶಲ್ ಚ್ಯಾಂಗರ ಪ್ರಧಾನ ಪಟ್ಟಣವಾದ ಚುಂಗಿಂಗಿನ ಮೇಲೆ ಜಪಾನರು ವಿಮಾನಧಾಳಿ ನಡಿಸುವ ಸಂಭವವಿರುವುದರಿಂದ ಜನರು ಬೆಟ್ಟಗುಡ್ಡ ಪ್ರದೇಶಗಳಿಗೆ ಹೋಗಿ ವಾಸಿಸಹತ್ತಿರುವರು

ಇಂಗ್ಲೆಂಡಿನ ಪ್ರಚಂಡ ವಿಮಾನ ಪಡೆ

ಈ ವರ್ಷ ಇಂಗ್ಲೆಂಡು ವಿಮಾನ ಪಡೆಯ ಸಿದ್ಧತೆಗಾಗಿ 120 ಮಿಲ್ಯ ಪವನು ವ್ಯಯಿಸಿರುವುದು. ಬರುವ ವರ್ಷ 200 ಮಿಲ್ಯ ಪವನು ವ್ಯಯಿಸಲಿರುವುದು 6000ದ ವರೆಗೆ ಯುದ್ಧ ವಿಮಾನಗಳು ಹೊಸತಯಾರಿಸಲ್ಪಡಲಿವೆ ಬರುವ ಜೂನ್ ತಿಂಗಳೊಳಗೆ 100,000 ಮಂದಿ ವೈಮಾನಿಕರು ಸಿದ್ಧರಾಗುತ್ತಾರೆ. ಬ್ರಿಟಿಷ್ ಸಾಮ್ರಾಜ್ಯದ ಬೇರೆ ಬೇರೆ ರಾಜ್ಯಗಳಿಂದ ನೂರಾರು ತರುಣರು ಇಂಗ್ಲೆಂಡಿಗೆ ಬಂದು ವೈಮಾನಿಕ ತರಬೇತಿ ಹೊಂದುತ್ತಿದ್ದಾರೆ. 3500 ಕಂಪೆನಿಗಳು ವಿಮಾನಗಳನ್ನು ತಯಾರಿಸುವ ಕೆಲಸದಲ್ಲಿ ನಿರತವಾಗಿವೆ. ಕೆನಡಾ ಮೊದಲಾದ ಇತರ ದೇಶಗಳಲ್ಲಿಯೂ ವಿಮಾನಗಳು ತಯಾರಿಸಲ್ಪಡುತ್ತಿವೆ. ಅಧೀನ ರಾಷ್ಟ್ರಗಳ ವಿಮಾನ ಪಡೆಯನ್ನು ಕೂಡಾ ಹೆಚ್ಚಿಸಲು ಬ್ರಿಟಿಷ್ ಸರಕಾರವು ಗಮನ ಕೊಡಲಿದೆ.

ಬ್ರಿಟಿಷ್ ಚಕ್ರವರ್ತಿಗಳು ಅಮೇರಿಕಕ್ಕೆ ಹೋಗುವರು

ಇದೇ ತಾ ೮ರಲ್ಲಿ ಪಾರ್ಲಿಮೆಂಟನ್ನು ತೆರೆಯುವಾಗ ಬ್ರಿಟಿಷ್ ಚಕ್ರವರ್ತಿಗಳು ಕೊಟ್ಟ ಭಾಷಣದಲ್ಲಿ ಅವರು ಕೆನಡಾ ದೇಶವನ್ನು ಸಂದರ್ಶಿಸುವಾಗ ಯುನೈಟೆಡ್ ಸ್ಟೇಟ್ಸನ್ನೂ ಸಂದರ್ಶಿಸಬೇಕೆಂದು ಪ್ರೆಸಿಡೆಂಟ್ ರೂಸ್‌ವೆಲ್ಟರು ಅವರಿಗೆ ಆಮಂತ್ರಣವಿತ್ತುದನ್ನು ಆನಂದಪೂರ್ವಕವಾಗಿ ಸ್ವೀಕರಿಸಿರುವೆನೆಂದು ತಿಳಿಸಿದರು. ರುಮೇನಿಯದ ಅರಸ ಕೆರೊಲರೂ, ಫ್ರೆಂಚ್ ಪ್ರೆಸಿಡೆಂಟರೂ ಲಂಡನನ್ನು ಸಂದರ್ಶಿಸಿದ ಕುರಿತು ಪ್ರಸ್ತಾಪಿಸಿ, ಮ್ಯೂನಿಚ್ ಒಡಂಬಡಿಕೆಯ ಮೇರೆಗೆ ರಾಷ್ಟ್ರಗಳೊಳಗೆ ಸೌಹಾರ್ದವನ್ನುಂಟುಮಾಡಲು ತನ್ನ ಸರಕಾರವು ಎಲ್ಲಾ ವಿಧದ ಪ್ರಯತ್ನ ನಡಿಸುವುದು. ಮತ್ತು ದೇಶರಕ್ಷಣೆಯ ಸಿದ್ಧತೆಯನ್ನು ಮುಂದೊತ್ತುವುದೆಂದು ಹೇಳಿದರು. ಚೈನ ಮತ್ತು ಜಪಾನರೊಳಗೆ ಸಂಧಿಯಾಗುವಂತೆ ಪ್ರಯತ್ನಿಸಲು ತನ್ನ ಸರಕಾರವು ಯಾವಾಗಲೂ ಸಿದ್ಧವಿರುವುದು, ಯುರೋಪಿನಲ್ಲಿ ಮತ್ತು ಇತರ ಕಡೆಗಳಲ್ಲಿ ಶಾಂತಿಯು ನೆಲೆಗೊಳ್ಳುವಂತೆ ತನ್ನ ಸರಕಾರವು ಸಾಧ್ಯವಾದ ಪ್ರಯತ್ನ ನಡಿಸಿ, ಕೈಗಾರಿಕೆ ಮತ್ತು ವ್ಯಾಪಾರಾಭಿವೃದ್ಧಿಯಾಗುವಂತೆ ನೋಡಲಿರುವದೆಂದರು.

ರಾಜಕೋಟೆಯಲ್ಲಿ ಪುನಃ ಸತ್ಯಾಗ್ರಹ

ಗುಜರಾಥಿನ ರಾಜಕೋಟೆ ಸಂಸ್ಥಾನದ ರಾಜರು ತಮ್ಮಿಚ್ಛಾನುಸಾರ ನಡೆದು ಪ್ರಜೆಗಳನ್ನು ಪೀಡಿಸಹತ್ತಿರುವುದರಿಂದ ಪ್ರಜೆಗಳು ಜಯಶೀಲವಾಗಿ ಸತ್ಯಾಗ್ರಹ ಹೂಡಿ ನಡುವೆ ರಾಜಿಪ್ರಸ್ತಾಪ ನಡೆಯಿತಷ್ಟೆ. ಈ ಸಂಧಿ ಪ್ರಸ್ತಾಪವು ಜಯಶೀಲವಾಗದೆ ಮುರಿದುಹೋಗಿ ಸರಕಾರವು 144 ಸೆಕ್ಷನ್ ಜ್ಯಾರಿಗೆ ತಂದಿರುವುದು. ಪ್ರಜೆಗಳು ಇದನ್ನು ವಿರೋಧಿಸಿ ಪುನಃ ಸತ್ಯಾಗ್ರಹ ಹೂಡಿರುವರು. ಇದೇ ತಾ. ೯ರಲ್ಲಿ ಪ್ರಜಾಪರಿಷತ್ತಿನ ಪ್ರೆಸಿಡೆಂಟರು ದಸ್ತಗಿರಿಮಾಡಲ್ಪಟ್ಟಿರುವರು. ಅನಂತರ ಡಿಕ್ಟೇಟರಾಗಿ ಆರಿಸಲ್ಪಟ್ಟಿರುವ ೯ ಮಂದಿಯ ದಸ್ತಗಿರಿಯಾಗಿದೆ. ಸ್ವಯಂಸೇವಕರ ರಾಜರ ಅರಮನೆಯ ಮುಂದೆ ಪಹರ ನಡಿಸುತ್ತಿರುವರು. ಸುಮಾರು ೩೦೦೦ ಜನರು ಸೇರಿ 144 ನೆ

ಕ್ಷನನ್ನು ಉಲ್ಲಂಘಿಸಿ ಮೆರವಣಿಗೆ ನಡಿಸಿದಾಗ ಪೋಲೀಸರು ಬಂದು ಚೆದರ ಹೇಳಿದರು ಜನರು ಚೆದರಲಿಲ್ಲ ಆಗ ಪೋಲೀಸರು ಲಾಠಿಪ್ರಹರ ನಡಿಸಿ ೫೦ ಮಂದಿ ಗಾಯಗೊಂಡಿರುವರು.

ಬಂಗಾಳ ಮಂತ್ರಿ ಮಂಡಲ

ದಲ್ಲಿ ಈಗ ಹೆಚ್ಚಿನ ಅತೃಪ್ತಿಯುಂಟಾಗಿ ಮೊದಲಿನ ಒಕ್ಕಟ್ಟು ತೋರಿಬರುವುದಿಲ್ಲ, ಇದಕ್ಕೆ ಬಹುಮಟ್ಟಿಗೆ, ಪ್ರಧಾನ ಮಂತ್ರಿಗಳು ಕೃಷಿಕ ಪ್ರಜಾಪಕ್ಷದೊಂದಿಗೆ ನಡಿಸಿದ ಸಂಧಾನವು ನಿಷ್ಫಲವಾದುದೇ ಕಾರಣ ಇದು ಹೊರತು ರಾಜಕೀಯ ಕೈದಿಗಳ ಬಿಡುಗಡೆಯ ವಿಷಯದಲ್ಲಿ ಗಾಂಧಿ ನಾಜಿಮುದ್ದೀನರ ಪತ್ರವ್ಯವಹಾರವು ನಿರರ್ಥಕವಾದುದರಿಂದಲೂ ಕೆಲವರಲ್ಲಿ ಅತೃಪ್ತಿಯುಂಟಾಗಿದೆ ಒಹಳ ಹಿಂದುಳಿದಿದ್ದ ಅಸ್ಸಾಮಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ಸ್ಥಾಪಿತವಾಗಿ ಬಂಗಾಳವು ಹಿಂದೆ ಬಿದ್ದುದರಿಂದ ಹಲವರಲ್ಲಿ ಮನಸ್ತಾಪವುಂಟಾಗಿದೆ ಆದುದರಿಂದ ಬರುವ ವರ್ಷಾರಂಭದಲ್ಲಿ ಕಾಂಗ್ರೆಸ್ ಪಕ್ಷೀಯರು ಇತರ ಪಕ್ಷಗಳ ಸಹಾಯದಿಂದ ಮಂತ್ರಿ ಮಂಡಲವನ್ನೇರ್ಪಡಿಸುವ ಸಂಭವವಿದೆಯೆಂದೂ, ಈ ಸಂದರ್ಭದಲ್ಲಿ ಮಿ ಫಜ್ಲುಲ್ ಹಕ್ಕರೇ ಕಾಂಗ್ರೆಸ್ ಪಕ್ಷೀಯರೊಂದಿಗೆ ಸೇರಿ ಪ್ರಧಾನ ಮಂತ್ರಿಗಳಾಗಬಹುದೆಂದೂ ಸುದ್ದಿಯುಂಟಾಗಿದೆ ಈ ಕುರಿತು ಒಳಗಿಂದೊಳಗೆ ಮಾತುಕತೆಗಳು ನಡೆಯುತ್ತಿವೆ

ಬಂಗಾಳದ ರಾಜಕೀಯ ಕೈದಿಗಳ ಅನ್ನ ಸತ್ಯಾಗ್ರಹ

ತಮ್ಮನ್ನು ಜೈಲಿನಲ್ಲಿ ಒಳ್ಳೇ ರೀತಿಯಲ್ಲಿ ಕಾಣುವುದಿಲ್ಲೆಂಬ ಕಾರಣದಿಂದ ಕಲ್ಕತ್ತದ ಡಮ್ ಡಮ್ ಮತ್ತು ಅಲಿಪುರ ಜೈಲುಗಳಲ್ಲಿರುವ ಸುಮಾರು ೨೩೦ ಮಂದಿ ರಾಜಕೀಯ ಕೈದಿಗಳು ಇದೇ ತಾ 12ರಲ್ಲಿ ೩ ದಿನಗಳ ಅನ್ನ ಸತ್ಯಾಗ್ರಹವನ್ನಾರಂಭಿಸಿರುವರು. ಇವರು ತಾವು ಅನ್ನ ಸತ್ಯಾಗ್ರಹ ಹಿಡಿಯುವೆವೆಂದು ಮೊದಲೇ ಸರಕಾರಕ್ಕೆ ತಿಳಿಸಿದ್ದರು.

೧೦ನೇ ಪುಟದಿಂದ

ನ್ನು ಶ್ಲಾಘಿಸಿ, ತನಗೀ ಉತ್ಕೃಷ್ಟ ಸಮಾರಂಭದಲ್ಲಿ ಭಾಗವಹಿಸುವ ಸಂದರ್ಭವನ್ನೊದಗಿಸಿಕೊಟ್ಟದ್ದಕ್ಕಾಗಿ ತನ್ನ ಕೃತಜ್ಞತೆಯನ್ನರ್ಪಿಸಿದರು.

ಮರುದಿನ ಬೆಳಗ್ಗೆ ಸ್ಥಳೀಕ ಬಾರ್ ಎಸೋಸಿಯೇಷನವರ ಪರವಾಗಿ ಬಂದಿದ್ದ ಶ್ರೀಗಳು ರಾವ ಕೆ. ಜೆ ಬಲ್ಲಾಳ, ಎ ಎಸ್. ರಾವ್, ಸಿ. ಪಿ ರೇಗೊ, ಮೊದಲಾದವರಿಂದ ಕೂಡಿದ ಮಂಡಳಿಯನ್ನು ಕಂಡರು ... ಕೋರ್ಟನ್ನು ಉಳಿಸುವ ವಿಷಯ ತನ್ನ ಸಹಾನುಭೂತಿಯಿದೆಯೆಂದೂ, ಅದು ತನ್ನ ಕೈಯಲ್ಲಿಲ್ಲದಿದ್ದರೂ, ತಾನು ಅದು ಉಳಿಯುವಂತೆ ನೋಡುವೆನೆಂದೂ ಭರವಸೆಯಿತ್ತರು."

ಚೆಯರ್‌ಮೇನರ ಚುನಾವಣೆ— ಉಡಪಿ ಮುನಿಸಿಪಾಲಿಟಿಯ ಚೆಯರ್ ಮೇನರ ಚುನಾವಣೆಯ ಕೇಸು ... ತಾ ... ಜನವರಿ ... ಗೋಪಾಲರ ಸೂಚನೆ ... ಯು, ಎಮ ... ಇಬ್ರಾಹಿಮ್ ಸಾಹೇಬರಿಂದ ಅನುಮೋದಿಸಲ್ಪಟ್ಟಂತೆ ಶ್ರೀ ಅಡೂರು ಲಕ್ಷ್ಮೀನಾರಾಯಣರಾಯರು ಚೆಯರ್‌ಮೇನರಾಗಿ ಸರ್ವಾನುಮತದಿಂದ ಚುನಾಯಿಸಲ್ಪಟ್ಟರು. ಶ್ರೀ ವಾಮನಾಚಾರ್ಯರ ಸೂಚನೆಯಂತೆ ಮತ್ತು ಶ್ರೀ ... ರ ಅನುಮೋದನೆಯಂತೆ ಶ್ರೀ ... ಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರು ವೈಸ್ ಚೆಯರ್‌ಮೇನರಾಗಿ ಆರಿಸಲ್ಪಟ್ಟರು.

...ವಿದ್ಯಾನಿಲಯದ ಸಂ
...' ಎನ್ನುವ ವಿಷಯ

...ಸಾಹೇಬರಾದ ಸರ್
... ಮೈಸೂರು ಚೀಫ್
...ಚಾರಮಾಡಿಕೊಂಡು
...ಟಿಯಿಂದ ಮೈಸೂ
...ಬೇಟಿಯಲ್ಲಿ ಇವರಿಗೆ
...ಅರ್ಪಿಸಲು, ಅದಕ್ಕೆ
...ದನಮಾಡಿದರು,
...ಹೊಡ ಮೈಸರಾಯ್
...ನೂರಿಗೆ ಬರುವರಷ್ಟೆ
...ಹೆಡ್ ಆಪರೇಶನ್
... ಅಲ್ಲಿ ಇಂದು ನಡೆ
...ಗನ್ನು ಪರೀಕ್ಷೆ ಮಾಡಿ
...ಸಾಹೇಬರಾದ ಸರ್.
...ರು, ಈ ದಿನ ಬೆಳಗ್ಗೆ
...ಲಸಕಾರ್ಯಗಳನ್ನು
...ರಿಗೆ ಹಿಂತಿರುಗಿದರು.
...ಕಾಲೇಜಿನ ಮೈದಾನ
...(ಬೀಟೀಮ್) ಮತ್ತು
...ಮುದಿನ ಒಂದು ಕ್ರಿ
...ನಡೆಯುವದು 7ವಿಕೆ
...ಪಡನೆಯುವರಿಗಳಿಲ
...ಸಿಟ್ಟಿದರು.
...ಶ್ಯಶಾಲಾ ನಂಜ
...ಲ್ಲಿ ಇದೇ ಬಹುಧಾ
...ಕ್ಷ ೧೩, ಶನಿವಾರ
... ಗಂಟೆಗೆ ಸರಿಯಾ
...ಜರಗಲಿರುವುದು

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 13-11-'38

ನಗರಸಭೆ—ಕಳೆದ ತಾ.7ರಲ್ಲಿ ಮಂಗಳೂರು ನಗರ ಸಭೆಯು ಶ್ರೀ. ಬಿ. ಏ. ಬಾಳಿಗರ ಅಧ್ಯಕ್ಷತೆಯಲ್ಲಿ ಸೇರಿತು ಹೊಸ ಕಮಿಶನರಾದ ಶ್ರೀ. ಕೆ. ಪಿ. ಕಂದಸ್ವಾಮಿ ಪಿಳ್ಳೆಯವರು ಹಾಜರಿದ್ದರು. ಕೆಲವೆಚ್ಚಗಳಿಗೆ ಹಣ ಮಂಜೂರಾದ ಬಳಿಕ ಶ್ರೀ ರಂಗರಾವ್ ತಲಚೇರಿಕರರು ತಾವು ಸೂಚನೆ ಕೊಟ್ಟಿದ್ದ ಠರಾವುಗಳನ್ನು ಸಭೆಯ ಮುಂದಿರಿಸಿದರು. ಅವೆಲ್ಲಾ ಅನುಮೋದಕರಿಲ್ಲದೆ ಬಿದ್ದು ಹೋದವು.

ಇಂಟರ್ ಕಾಲೇಜ್ ಚರ್ಚೆ—ಕಳೆದ ತಾ. 7ನೇ ಸೋಮವಾರ ಸಾಯಂಕಾಲ ಸೈ. ಎ. ಕಾಲೇಜಿನಲ್ಲಿ ಗವರ್ನಮೆಂಟ್ ಕಾಲೇಜಿನ ಯೂನಿಯನಿನವರಿಗೂ, ಸೈ. ಎ. ಕಾಲೇಜ್ ಯೂನಿಯನಿನವರಿಗೂ ಒಂದು ಚರ್ಚೆಯು ನಡೆಯಿತು. ಚರ್ಚೆಯ ವಿಷಯ – ಹಿಂದ ಸ್ಥಾನಕ್ಕೆ ಸರ್ವಾಧಿಕಾರಿಗಳ ಸರಕಾರವು ಪ್ರಜಾಪ್ರಭುತ್ವಕ್ಕಿಂತ ಹೆಚ್ಚು ಪ್ರಯೋಜನಕರವೆಂಬುದಾಗಿತ್ತು. ಸರ್ವಾಧಿಕಾರಿಗಳ ಸರಕಾರ ಒಳ್ಳೆಯದೆಂದು ಗವರ್ನಮೆಂಟ್ ಕಾಲೇಜಿನವರು ವಾದಿಸಿದರು. ಪ್ರಜಾಪ್ರಭುತ್ವದ ಪರವಾಗಿ ಸೈ. ಎ. ಕಾಲೇಜಿನವರು ವಾದಿಸಿದರು. ಮತ ತೆಗೆದುಕೊಳ್ಳಲಾಗಿ ಪ್ರಜಾಪ್ರಭುತ್ವವೇ ಉತ್ತಮವೆಂಬುದಕ್ಕೆ ಅಧಿಕ ಮತ ದೊರೆಯಿತು. ಅಧ್ಯಕ್ಷತೆಯನ್ನು ವಹಿಸಿದ್ದ ಪಬ್ಲಿಕ್ ಪ್ರಾಸಿಕ್ಯೂಟರರಾದ ಶ್ರೀ. ಯಂ. ಕೆ. ನಂಬಿಯಾರರು ಸ್ಪರ್ಧಕರು ಉಚ್ಚ ಮಟ್ಟದಲ್ಲಿ ಚರ್ಚೆಯನ್ನು ನಡೆಸಿದ್ದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಕೆಲವು ಹಿತಸೂಚನೆಗಳನ್ನಿತ್ತರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ದ. ಕ. ಜಿಲ್ಲಾ ಬೋರ್ಡು ಸಭೆ, ದೇವಸ್ಥಾನದ ಮಸೂದೆ ಆಚರಣೆಗೆ ಬರಬೇಕು—ತಾ. 12ನೇ ಪೂರ್ವಾಹ್ನ 10 ಘಂಟೆಗೆ ದ. ಕ. ಜಿಲ್ಲಾ ಬೋರ್ಡು ಸಭೆಯು ಜಿ. ಬೋ. ಅಧ್ಯಕ್ಷರಾದ ಮಾನ್ಯ ಡಾ| ವಿಟ್ಠಲಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಕೊಡವೂರು ಶಾಲೆಯ ಮೇಲಿನ ತರಗತಿಗಳನ್ನು ವಡಭಾಂಡೇಶ್ವರಕ್ಕೆ ಒಯ್ದ ವಿಷಯವಾಗಿ ಮಾ| ಆಚಾರ್ಯರು ಹಲವು ಪ್ರಶ್ನೆಗಳನ್ನು ಕೇಳಿದರು. ಈ ದಿನದ ಸಭೆಯಲ್ಲಿ ಏರೋಪ್ಯ ಸದಸ್ಯರಾದ ಮಿ| ಜೆಫ್ರಿಸರು ರಾಜಭಕ್ತಿ ಪ್ರಮಾಣ ಮಾಡಿದರು. ಇನ್ನು ಮುಂದೆ ಕಡವುಗಳು ಪ್ರತಿವರ್ಷವೂ ಹರಾಜು ಹಾಕಲ್ಪಡಬೇಕೆಂದೂ, ಮೋಟರ್ ದೋಣಿಯನ್ನಿಡುವ ನಿರ್ಬಂಧ ಕಂಟ್ರಾಕ್ಟರರ ಮೇಲೆ ಹೊರಿಸಬಾರದೆಂದೂ, ಗಂಗೊಳ್ಳಿಯಲ್ಲಿ ಮೋಟರ್ ದೋಣಿ ಇಡುವ ವಿಷಯವು ಆ ಪ್ರಶ್ನೆ ಬೋರ್ಡಿನ ಮುಂದೆ ಬರುವಾಗ ತೀರ್ಮಾನಿಸಬಹುದೆಂದೂ ಶ್ರೀ. ಬಿ. ವೈಕುಂಠ ಬಾಳಿಗರು ತಂದ ಠರಾವು ಮಾನ್ಯವಾಯಿತು. ಕೆಲವು ರಸ್ತೆಗಳಲ್ಲಿರುವ ಸೇತುವೆ, ಮೋರಿಗಳು ಬಲಹೀನವಾದ್ದರಿಂದ ನಾಲ್ಕು ಟನ್ನುಗಳ ಭಾರಕ್ಕಿಂತ ಅಧಿಕ ತೂಕವುಳ್ಳ ಸರಕುಗಳನ್ನು ಸಾಗಿಸಕೂಡದೆಂದು ಸೂಚನೆ ಹಿಂದೆ ನಾಲ್ಕು ಟನ್ನುಗಳಿಗಿಂತ ಅಧಿಕವಾಗಿ ಲಾರಿಗಳಲ್ಲಿ ಸರಕುಗಳನ್ನೊಯ್ಯಲು ಲೈಸೆನ್ಸ್ ಪಡೆದವರು ಏನು ಮಾಡಬೇಕೆಂಬ ವಿಷಯದಲ್ಲಿ ಮಿ| ಜೆಫ್ರಿಸರು ಪ್ರಶ್ನಿಸಿ ವರ್ಷದಲ್ಲಿ ಕೆಲವು ತಿಂಗಳುಗಳ ಮಟ್ಟಿಗಾದರೂ 4ಕ್ಕಿಂತ ಅಧಿಕವಾಗಿ ಹೇರು ತರಲು (ಲಾರಿಗಳಲ್ಲಿ) ಸಾಧ್ಯವೇ ಎಂಬುದನ್ನು ವಿಚಾರಿಸಬೇಕೆಂದರು. ಡಿ. ಬೋ. ಇಂಜನಿಯರರು ಅದಕ್ಕೊಪ್ಪಿದರು. ಅಧ್ಯಕ್ಷರು ಸಹ ಇದೇ ವಿಷಯದಲ್ಲಿ ರೋಡ್ ಟ್ರಾನ್ಸ್‌ಪೋರ್ಟಿನಲ್ಲಿ ಚರ್ಚಿಸಿ ಅವರ ಅಭಿಪ್ರಾಯವನ್ನು ಬೋರ್ಡಿನ ಮುಂದಿಡುವುದಾಗಿ ಹೇಳಿದರು.

ಮಲಬಾರ್ ಕ್ಷೇತ್ರಪ್ರವೇಶದ ಮಸೂದೆಯನ್ನು ಈ ಜಿಲ್ಲೆಗೆ ಅನ್ವಯಿಸುವಂತೆ ಮಾಡಬೇಕೆಂದೂ, ಬರುವ ವರ್ಷ ಪಶ್ಚಿಮ ತಾಲೂಕುಗಳಲ್ಲಿ ಮದ್ಯಪಾನ ನಿರೋಧದ ಮಸೂದೆಯನ್ನು ಜಾರಿಗೆ ತರಬೇಕೆಂದೂ ಕರ್ನಾಟಕ ಪ್ರಾಂತರಚನೆಯು ಆಂಧ್ರಪ್ರಾಂತರಚನೆಯ ಕಾಲದಲ್ಲಿಯೇ ಆಗಬೇಕೆಂದೂ ಶ್ರೀ| ಪೂಂಜರು ತಂದ ಠರಾವುಗಳು ಸರ್ವಾನುಮತಿಯಿಂದ ಸ್ವೀಕೃತವಾದುವು. ಬಜೆಟ್ ಕಮಿಟಿಗೆ ಸದಸ್ಯರ ಚುನಾವಣೆಯಾಗಿ, ಲೋಕಲ್ ಬೋರ್ಡು ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸಿದ ಅನಂತರದಲ್ಲಿ ಇತರ ಕೆಲವು ವಿಷಯಗಳು ಚರ್ಚಿಸಲ್ಪಟ್ಟು ಸಭಾಂತ್ಯವಾಯಿತು.

ಭಾರತ ರಾಷ್ಟ್ರಸೇನಾ ಸಂಘ – ಸ್ಥಿತಿಯೊಬ್ಬ ಭಾರತೀಯನೂ ತನ್ನಿಂದ ಸಾಧ್ಯವಾದಷ್ಟು ಸೇವೆಯನ್ನು ತನ್ನ ದೇಶಕ್ಕೆ ಸಲಿಸುವುದು ಅಗತ್ಯ. ಅದರೆ ಒಬ್ಬೊಬ್ಬರೇ ಒಂದೊಂದು ಕಡೆಯಲ್ಲಿ ಸೇವೆಮಾಡಿದರೆ ಅದರಿಂದುಂಟಾಗುವ ಫಲಕ್ಕಿಂತ ಯಾವುದಾದರೂ ಒಂದು ಸಂಘದ ಮೂಲಕವಾಗಿ ಮಾಡಿದರೆ ಅಧಿಕ ಫಲಸಿಗುವುದು ಅದಕ್ಕಾಗಿ ಭಾರತರಾಷ್ಟ್ರ ಸೇವಾ ಸಂಘವು ಸ್ಥಾಪಿಸಲ್ಪಟ್ಟಿದೆ ಈ ಸಂಘವು ಭಾಷಣಪ್ರಚಾರಗಳಿಗಿಂತಲೂ ಕೂಡಿದಷ್ಟು ಕಾರ್ಯತಃ ಸೇವೆ ನಡೆಸುವುದೇ ಹೆಚ್ಚಿನ ಫಲಕಾರಿಯಾದ ಕೆಲಸವೆಂದು ಭಾವಿಸಿದೆ. ಖಾದಿ ಧರಿಸಬೇಕೆಂದು ಭಾಷಣಕೊಡುವುದಕ್ಕಿಂತಲೂ ಖಾದಿಯನ್ನು ಮನೆಮನೆಗಳಿಗೆ ಕೊಂಡುಹೋಗಿ ಮಾರಿ ಅನುಕೂಲ ಕಾರ್ಯತಃ ಖಾದಿಪ್ರಚಾರ ಮಾಡಬೇಕೆಂದು ಅಭಿಪ್ರಾಯಪಡುತ್ತದೆ. ಹಾಗೆಯೇ ವಿದ್ಯಾಪ್ರಸಾರವಾಗಬೇಕೆಂದು ಭಾಷಣ ಮಾಡುವ ಬದಲಾಗಿ ಕೆಲವಂದಿ ನಿರಕ್ಷರರಿಗೆ ಓದುಬರಹಗಳನ್ನು ಕಲಿಸುವುದು ಹೆಚ್ಚಿನ ಪ್ರಯೋಜನದ ಕೆಲಸವೆಂದು ಭಾವಿಸುತ್ತದೆ ದೇಶಪ್ರೇಮಿಗಳು ಯಾವುದಾದರೂ ಕೆಲಸವನ್ನು ಮಾಡುವಾಗ ಈ ಸಂಘದವರ ಕಿಂಚಿತ್ ಸೇವೆಯನ್ನು ಪಡೆಯಲಿಚ್ಛಿಸಿದರೆ ಸಂಘವು ಸದಾ ತನ್ನ ಸಹಾಯವನ್ನು ನೀಡಲು ಸಿದ್ಧವಾಗಿದೆ. ಈ ಸಂಘದಲ್ಲಿ ಮತ್ತೊಂದು ವಿಶೇಷತೆಯೇನೆಂದರೆ ಯಾವ ರಾಜಕೀಯ ಪಕ್ಷದವರೂ ಈ ಸಭೆಯನ್ನು ಸೇರಿ, ಅದರ ಆಶ್ರಯದಲ್ಲಿ ಕೂಡಿದ ಸೇವೆಮಾಡಬಹುದು. ಜಾತಿ, ಮತ, ಕೋಮು ಇತ್ಯಾದಿ ಭೇದಭಾವಗಳಿಗೆ ಈ ಸಂಘದಲ್ಲಿ ಎಡೆಯಿಲ್ಲ. ಎಲ್ಲರೂ ಭ್ರಾತೃಭಾವದಿಂದ ವರ್ತಿಸುವಂತೆ ಮಾಡಲು ಈ ಸಂಘವು ಸದಾ ಪ್ರಯತ್ನಿಸುತ್ತದೆ. ಕಾಂಗ್ರೆಸಿನವರು ರಚನಾತ್ಮಕ ಕೆಲಸಗಳನ್ನು ಮಾಡಬೇಕೆಂದು ಭಾರತರಾಷ್ಟ್ರ ಸಭೆಯು ಸಾರಿದೆ ಅದೇ ಉದ್ದೇಶದಿಂದ ಈ ಸಭೆಯೂ ಕೆಲಸಮಾಡಬೇಕಾಗಿದೆ. ಈ ಸಂಘದ ಶಾಖೆಗಳು ಎಲ್ಲೆಡೆಗಳಲ್ಲಿಯೂ ತಲೆಯೆತ್ತಿ ದೇಶಸೇವೆ ಮಾಡಲೆಂದು ಹಾರೈಕೆ.

ಸದಸ್ಯರು.

ಬೈಲೂರು—ತಾ. 1೬-11-೩೮ರಲ್ಲಿ ಬೈಲೂರು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಶ್ರೀ. ಸುಬ್ಬಣ್ಣ ಭಟ್ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಸಭೆ ಕಮಿಟಿಯಿಂದ ಏರ್ಪಡಿಸಿದ ಬಡಜನ ನಿಧಿಯಿಂದ ಸಹಾಯಪಡೆಯಲು ಸಭ್ರ ಕಾಂಗ್ರೆಸ್ ಕಮಿಟಿಗೆ ಸೇರಿದ ಗ್ರಾಮಗಳ ಬಡ ವಿದ್ಯಾರ್ಥಿಗಳ ಅರ್ಜಿಯ ವಿಮರ್ಶೆಗಾಗಿ ಜರಗಿತು

ನೀಲೇಶ್ವರ ಶಾಲಾ ವಾರ್ಷಿಕೋತ್ಸವ

ನೀಲೇಶ್ವರ ರಾಜಾಸ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. ೨೦ನೇ ರವಿವಾರ, ಪಾರ್ಲಿಮೆಂಟರಿ ಕಾರ್ಯದರ್ಶಿ ಪ್ರೊ. ಸಿ ಜೆ ವಾರ್ಕಿ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಹಳೆಯ ವಿದ್ಯಾರ್ಥಿಗಳು ಈ ಕಾರ್ಯಕಲಾಪಗಳಲ್ಲಿ ಸಹಭಾಗಿಗಳಾಗಬೇಕೆಂದೂ ಅದಷ್ಟು ವಂತಿಗೆ ತೆತ್ತು ಧನಸಹಾಯಮಾಡಬೇಕೆಂದೂ ಸಕಲರೂ ಇದನ್ನು ಆಮಂತ್ರಣ ಪತ್ರವನ್ನಾಗಿ ಸ್ವೀಕರಿಸಿ ಇಲ್ಲಿಗೆ ಬಂದು, ಸಮಾರಂಭವು ವಿಜೃಂಭಣೆಯಿಂದ ನೆರವೇರಲು ಸಹಾಯಕರಾಗಬೇಕೆಂದೂ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ. ರಾಮಕೃಷ್ಣರಾವ್, ಬಿ. ಎ. ಯಲ್. ಟಿ, ಅವರು ಈ ಮೂಲಕ ಕೇಳಿಕೊಳ್ಳುತ್ತಾರೆ.

ಆಯುವ್ಯಯದ ಅಚ್ಚುಗಟ್ಟು

ಪುಟ ೧೪ರಿಂದ

ಯ ಆಯವೆಷ್ಟು, ಸಾಲವೆಷ್ಟು, ಅದರ ಬಡ್ಡಿ ಹೋಗಿ ಉಳಿಯುವುದೆಷ್ಟು, ಮನೆ ಖರ್ಚೆಯೆಷ್ಟು ಎಂದು ಅವರ ಕೂಡೆ ಚರ್ಚಿಸಿ ಆಯವ್ಯಯದ ಪಟ್ಟಿಯನ್ನು ಮಾಡಿರಿ; ಮತ್ತು ಅವರಿಗೆ ಆಯಕ್ಕಿಂತ ವ್ಯಯ ಜಾಸ್ತಿಯಾಗಿರುವುದನ್ನು ತೋರಿಸಿ ಕೊಡಿ. ಇದನ್ನು ಅಂಕೆಸಂಖ್ಯೆ ಹಾಕಿ ಖಚಿತಪಡಿಸಿ. ಕೈಗೊಂದು ಕಾಲಿಗೊಂದು ಎಂಬಂತಿರುವ ಆ ಕೆಲಸದವರನ್ನೆಲ್ಲಾ ತೆಗೆಯಿರಿ-ಈಗ ನಿಮಗೆಲ್ಲರಿಗೂ ಅಗತ್ಯ ಬೇಕಾದರ ಒಬ್ಬ ಇರಲಿ—ಅವನನ್ನೂ ತೆಗೆಯುವುದು ಒಳ್ಳೇದು. ನಿಮ್ಮ ಮಕ್ಕಳಿಗೆ ಕಾಯಕ್ರಮದ ಗುರುತ್ವವನ್ನು (Dignity of Labour.) ಬೋಧಿಸಿರಿ. ನಿಮ್ಮ ಗರ್ಭಿಣಿ ಮಗಳಿಗೆ ಬೆಳಿಗ್ಗೆ ಎದ್ದು ಮನೆಯನ್ನು ಚಂದಮಾಡಿ ಗುಡಿಸಲಿಕ್ಕೆ ಹೇಳಿ, ಮತ್ತು ಒಂದು ಕೊಡಪಾನ ಕೊಟ್ಟು ಬಾವಿಯಿಂದ ನೀರು ಎಳೆದು ತೆಂಗಿನ ಸಸಿಗಳಿಗೆ ಹಾಕಲಿಕ್ಕೆ ಹೇಳಿ. ಆಗ 'ವ್ಯಾಯಾಮದಿಂದ' ಅವಳ ನಾಡಿಗಳು ಲಘುವಾಗುತ್ತವೆ, ಮತ್ತು ಅವಳಿಗೆ ಹೆರಲಿಕ್ಕೆ ಪ್ಯಾಟೆಗೆ ಹೋಗುವುದು ಬೇಡವಾಗುತ್ತದೆ. ನಿಮ್ಮ ಗಂಡುಮಕ್ಕಳಿಗೆ ಹಾರೆ, ಪಿಕ್ಕಾಸು, ಗುದ್ದಲಿ ಕೊಡಿ—ನೀವೂ ಅವರೊಡನೆ ಇಳಿಯಿರಿ. ನಮ್ಮನೆ ತೋರತೋರ ಮಾತಾಡುವುದು ಬಿಡಿ. ನಿಮ್ಮ ಮಕ್ಕಳು ಕೆಲಸ ಮಾಡದಿದ್ದರೆ ಅವರಿಗೆ ಮನೆಯಲ್ಲಿ ಅನ್ನ ಹಾಕಬೇಡಿ. ನೀವೂ, ನಿಮ್ಮ ಯಜಮಾನಿ ಇಬ್ಬರೂ ಹೊಲದಲ್ಲಿ ಕೆಲಸ ಮಾಡುವಾಗ ಅವರಿಗೆ ಸಹಜವಾಗಿ ನಾಚಿಕೆ ಆಗುತ್ತದೆ. ಪ್ರತಿ ಸಂಕ್ರಮಣ ದಿವಸ ನೀವೂ ನಿಮ್ಮ ಯಜಮಾನಿಯೂ ಆಯವ್ಯಯದ ಮಿಲಾಂಗು ಮಾಡಿ, ಪಟ್ಟಿಮಾಡಿ, ಒಂದುವೇಳೆ ಒಂದು ತಿಂಗಳಲ್ಲಿ ಸ್ವಲ್ಪ ವ್ಯಯ ಹೆಚ್ಚಿದರೆ ಅದಕ್ಕೆ ಮೇಲಿನ ತಿಂಗಳಲ್ಲಿ ಕಮ್ಮಿ ವ್ಯಯಮಾಡಿ ಆಯವ್ಯಯವನ್ನು ಸಮತೋಲಕ್ಕೆ ತನ್ನಿ, ಅಚ್ಚುಗಟ್ಟು ಮಾಡಿ. ಹೀಗೆ ಮಾಡಿದರೆ ನಿಮ್ಮ ಆರ್ಥಿಕರೋಗ ಖಂಡಿತ ನಿವಾರಣೆಯಾಗುತ್ತದೆ-ಮನೆಯ ವೃದ್ಧಿಯಾಗುತ್ತದೆ—ಮ

(ಪುಟ ೧೪ರಿಂದ ಸೋಡಿರಿ.)

ಕ್ಕಳಿಗೆ ಒಳ್ಳೇ ಬುದ್ಧಿ ಬರುತ್ತದೆ. ಬೇಗಡೆಯ ಬಾಳು ಹೋಗಿ ಚಿನ್ನದ ಬಾಳಾಗುತ್ತೆ ನಿಮ್ಮದು ಶೆಟ್ರೇ! ಆದರೆ ನೀವು ಈ ರೀತಿ 'ಬಜ್ಜೆಟ್ಟಿನ' ಕಟ್ಟುನಿಟ್ಟಿನ ಬಾಳಿಗೆ ಇಳಿದಾಗ ಹಲವರು ಹಳಿದಾರು! ಛೀ ಗೈದಾರು! ಹೆಂಡತಿ ಮಕ್ಕಳು ವಿರೋಧಿಸಿಯಾರು! ಸ್ನೇಹಿತರು ಪರಿಹಾಸ್ಯ ಮಾಡಿಯಾರು! ಊರು ಹಲ್ಲು ಕಿರಿದು ನೋಡೀತು. ಆದರೆ ಅವೆಲ್ಲಕ್ಕೂ ಅಳುಕದೆ ನೈತಿಕ ಧೈರ್ಯದಿಂದ ನೀವು ಮುಂದುವರಿದರೆ ಊರಿಗೊಂದು ಮಾದರಿಯಾಗುತ್ತೀರಿ. ಮುಂದೊಂದು ದಿನ ಊರೇ ನಿಮಗೆ ವಿಜಯದ ಮಾಲೆ ಹಾಕುತ್ತದೆ! **ಆದುದರಿಂದ ಅಳುಕದೆ, ಅಂಜದೆ ಮುಂದಾಗಿರಿ!**

ಬರುವ ಲೇಖನ: '**ಸ, ರಿ, ಗ, ಮ, ಪ, ದ, ನಿ, ಸ**'

ಉಡುಪಿ

ಡಾ ಸುಬ್ಬರಾಯನರ ಆಗಮನ ರೇಡಿಯೋ ಮಂದಿರದ ಉದ್ಘಾಟನಾ ಸಮಾರಂಭ—ವಿದ್ಯಾಖಾತೆಯ ಮಾನ್ಯ ಮಂತ್ರಿಗಳಾದ ಡಾ. ಸುಬ್ಬರಾಯನರು ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀಗಳಾದ ಸಿ ಜೆ ವಾರ್ಕಿ, ಮತ್ತು ಎ. ಬಿ ಶೆಟ್ಟಿ-ಅಲ್ಲದೆ, ಶ್ರೀ. ಕೆ. ಈಶ್ವರ, ಎಮ್. ಎಲ್. ಎ ಶ್ರೀಮತಿ ಕಮಲಾದೇವಿ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ. ಮಲ್ಯರೊಂದಿಗೆ ಉಡುಪಿಗೆ ತಾ. 15-11-38ನೇ ಮಧ್ಯಾಹ್ನದ ನಂತರ ಸಂದರ್ಶಿಸಿದರು. ಅವರನ್ನು ಉಡುಪಿ ನಗರಸಭೆಯ ಅಧ್ಯಕ್ಷ ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರು ನಾಗರಿಕರ ಪರವಾಗಿ ಸ್ವಾಗತೀಕರಿಸಿದರು. ನಂತರ ಮಾನ್ಯ ಮಂತ್ರಿಯವರು ಸ್ಥಳೀಕ ಹೈಸ್ಕೂಲುಗಳನ್ನೂ, ಬಾಲಿಕೆಯರ ಟ್ರೈನಿಂಗ್ ಶಾಲೆಯನ್ನೂ ಸಂದರ್ಶಿಸಿದರು. ಸಂಜೆ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆ ಜರಗಿತು ಮಿ. ಅಹಮ್ಮದರ ಶಿಷ್ಯರಿಂದ ವ್ಯಾಯಾಮ ಪ್ರದರ್ಶನವು ನಡೆಯಿತು. ಅನಂತರ ಬಾಲಿಕೆಯರ ರಾಷ್ಟ್ರಗೀತೆಯ ಕಾರ್ಯಕಲಾಪಗಳು ಆರಂಭಗೊಂಡವು. ಉಡುಪಿ ನಗರಸಭೆಯ ಪರವಾಗಿ ಅಧ್ಯಕ್ಷ ಆರೂರರು ಮಾನ್ಯ ಮಂತ್ರಿಯವರಿಗೆ ಮಾನಪತ್ರವನ್ನರ್ಪಿಸಿದರು. ಅದರಲ್ಲಿ ದಕ್ಷಿಣಕನ್ನಡಿಗರಾದ ಶ್ರೀಮತಿ ಸುಬ್ಬರಾಯನರು ಕೇಂದ್ರ ಸಭೆಯಲ್ಲಿ ಸದಸ್ಯರಾಗಿರುವುದು ಕನ್ನಡಿಗರಿಗೊಂದು ಅಭಿಮಾನ—ಉಡುಪಿಗೊಂದು ಇಂಟರ್ ಮೀಡಿಯೆಟ್ ಕೋಲೇಜು ಮತ್ತು ಟ್ರೇಡ್‌ಸ್ಕೂಲ್ ಅಗತ್ಯ. ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲನ್ನು ಇಲ್ಲಿಗೊಡಿಸಬೇಕು. ಬಾಲಿಕೆಯರ ಶಾಲೆಗಳನ್ನು ಸ್ಥಳೀಕ ಸಂಸ್ಥೆಗಳ ಸದಸ್ಯರು ಸಂದರ್ಶಿಸುವರೆ ತಡೆಯಿರಬಾರದು. ಹಿಂದ್ಲಿಯ ಶಿಕ್ಷಣ ಜಾರಿಗೆ ತರಲಾಗುವಂತೆ ಹೆಚ್ಚು ಧನಸಹಾಯವನ್ನೀಯಬೇಕು ಅಜ್ಜರಕಾಡಿನ ವಿಹಾರ ಸ್ಥಳದ ವಿಸ್ತಾರಕ್ಕಾಗಿ ಹೆಚ್ಚಿನ ಜಾಗದೊರೆಯುವ ಆವಶ್ಯಕತೆ ಇವೇ ಮೊದಲಾದ ವಿಷಯಗಳು ನಮೂದಿಸಲ್ಪಟ್ಟಿದ್ದುವು.

ಮಾನ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ಉತ್ತರವೀಯುತ್ತಾ ತಾನು ಮುನಿಸಿಪಾಲಿಟಿಯ ಕಾರ್ಯಕಲಾಪಗಳಿಂದ ತುಂಬಾ ಸಂತುಷ್ಟನಾದೆನೆಂದರು. ಹಿಂದ್ಲಿಯ ಶಿಕ್ಷಣ, ಅಜ್ಜರಕಾಡಿನ ಮೈದಾನದ ವಿಸ್ತಾರ-ಇವೇ ಮೊದಲಾದ ವಿಷಯಗಳಲ್ಲಿ ತನ್ನ ಸಹಾನುಭೂತಿಯಿರುವುದೆಂದೂ ಸ್ಥಳೀಕ ಸಂಸ್ಥೆಗಳ ಸದಸ್ಯರು ಬಾಲಿಕಾ ಶಾಲೆಗಳ ಸಂದರ್ಶನೆಗೆ ತಡೆಯಾಗದಂತೆ ಹಿಂದಿನ ಕ್ರಮದಲ್ಲಿ ಮಾರ್ಪಾಟುಮಾಡಲು ಸರಕಾರವು ತನ್ನ ವಿಚಾರದಲ್ಲಿರುವುದಾಗಿಯೂ ತಿಳಿಸಿದರು. ನಂತರ ಮಿ. ಅಹಮ್ಮದರಿಗೆ ಒಂದು ಜತೆ ಶಾಲನ್ನು ಸರಕಾರ ಬಹುಮಾನ ಪಾರಿತೋಷಕವಾಗಿ ಕೊಟ್ಟರು.

ನಂತರ ಕಾರ್ಯಕ್ರಮದಂತೆ ರೇಡಿಯೋ ಮಂದಿರದ ಉದ್ಘಾಟನಾ ಸಮಾರಂಭವನ್ನು ಜರಗಿಸುತ್ತಾ ರೇಡಿಯೋ ದಾನವಾಗಿ ಕೊಟ್ಟು-ಡಾ. ಯು. ಎಲ್. ನಾರಾಯಣರಾಯರ ಉದಾರತೆಯನ್ನು ಪ್ರಶಂಸಿಸಿ, ಮುನಿಸಿಪಾಲಿಟಿಯು ಈ ಸಂದರ್ಭ ಕೈಕೊಂಡ ಕಾರ್ಯಕಲಾಪವ

(ಪುಟ ೧೯ರಲ್ಲಿ ನೋಡಿರಿ)

The Commonwealth Assu. Co., Ltd.

ದಿ ಕೋಮನ್‌ವೆಲ್ತ್

ಎಸ್ಯೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.

ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:—

ಎಸ್. ಪಿ ಆರ್. ನಾಯಕ್ ಎಂಡ್ ಸನ್ಸ್,
ಸ್ಪೆಶಲ್ ಏಜೆಂಟ್.
ಕಾರ್ ಸ್ಟ್ರೀಟ್, ಮಂಗಳೂರು

ಗವಾನಕರ್ ಎಂಡ್ ಸನ್ಸ್,
ಚೀಫ ಏಜೆಂಟ್ಸ್,
ಆನಂದರಾವ್ ಸರ್ಕಲ್
ಬೆಂಗಳೂರು

ಶೆಟ್ರು—ಮುತ್ತಿನಂಥಾ ಮಾತು ತಮ್ಮದು, ಸ್ವಾಮಿಾ. ಚಿನ್ನದಂಥಾ ಯೋಜನೆ. ಆದರೆ ಕೌಡು ಎರಚಬೇಕಾದಲ್ಲಿ ಮುತ್ತು ಚೆಲ್ಲಿದ ಹಾಗಾಗುತ್ತೋ ಏನೋ! ಯಾಕಂದರೆ ನಮ್ಮ ಜನಗಳ ಬುದ್ಧಿಗೆ ಹೆಮ್ಮೆಯ ಕಿಲುಬು ಹಿಡಿದಿದೆ. ವಿಚಾರದ ಕೆಂಡದ ಮೇಲೆ ಆಡಂಬರದ ಬೂದಿ ಮುಸುಕಿ ಅದು ಹೊಳೆಯದಂತಾಗಿದೆ. ಆದುದರಿಂದ ಅವರು ಆಕಾಶದಲ್ಲಿ ಹಾರಾಡುತ್ತಾ ತಮ್ಮನ್ನು ತಾವು ಮರೆತುಬಿಡುತ್ತಾರೆ. ಇಂದಿನ ವೈಭವದ ಬಾಳಿಗಾಗಿ ನಾಳಿನ ಸ್ಥಿತಿಯನ್ನು ಹಾಳುಮಾಡುತ್ತಿದ್ದಾರೆ. ನೀವು ಹೇಳಿದಹಾಗೆ ಈ ಸಮಯದಲ್ಲಿ ಅವರಿಗೆ ಎರಡಕ್ಕೆ ಎರಡು ಕೂಡಿಸಿದರೆ ನಾಲ್ಕು ಆಗುತ್ತದೆ-ಹತ್ತರಿಂದ ಒಂದು ಕಳದರೆ ಒಂಭತ್ತು ಆಗುತ್ತದೆ ಎಂಬ ನಿತ್ಯಸತ್ಯವನ್ನು ಹೇಳಿ ತೋರಿಸಿದರೂ ಅದನ್ನು ಅವರು ವಿರೋಧಿಸಿ ಮಾತಾಡುವರು. ಈ ರೀತಿಯಾಗಿ ಹೋಗಿದೆ ಸ್ವಾಮಿ, ಲೋಕ—ಏನುಮಾಡಲಿ! ನಾನೂ ಆ ಸಾಲಿನಲ್ಲೇ ಇದ್ದ ಒಬ್ಬ ಹುಚ್ಚ. ಈ ಬುದ್ಧಿ, ಈ ಎಚ್ಚರಿಕೆ ನನಗೆ ಮುಂಚೆ ಇದ್ದಿದ್ದರೆ ಹೀಗಾಗುತ್ತಿದ್ದೆನೇ? ಚಿಂತೆಇಲ್ಲ—ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು? ಗದ್ದೆಗೆ ಬಿಟ್ಟನೀರೂ ಬೆನ್ನಿಗೆಕೊಟ್ಟ ಪೆಟ್ಟೂ ಹಿಂದಕ್ಕೆ ಬರುವುದೇ? ಬೆಟ್ಟದ ಅಳಿಯ, ಗುತ್ತಿನ ಅಳಿಯ ಮನೆತನದ ಅಳಿಯ, ಇಂಗ್ಲಿಷ್ ಅಳಿಯ, ಬಿಳಿ ಆನೆ(white Elephant)ಯಂತಾ ಅಳಿಯ ಎಂದು ತನ್ನ ಬೊಕ್ಕಸ ಕಾಲಿ ಮಾಡಿಕೊಳ್ಳುವವರೆಲ್ಲಾ ನನ್ನನ್ನು ನೋಡಿ ಕಲಿಯಲಿ! ಆ ಬಿಳಿ ಆನೆಗಳು ಮರ ಎಳೆಯಲಿಕ್ಕೆ ಬರುವುದಿಲ್ಲ—ಅವುಗಳಿಗೆ ಸೊಪ್ಪು ಹಾಕಿ ಸಾಧ್ಯವಿಲ್ಲ— ತನವರ ಮನೆಯ ಸೊಪ್ಪು ಸಾಕಾಗುವುದಿಲ್ಲ ಹೆಂಡತಿಮನೆಯ ಒಂದು ಮರದ ಸೊಪ್ಪೂ ಇಡುವುದಿಲ್ಲ, ಸಾವಿರ ಸಾವಿರ ರೂಪಾಯಿ ವರದಕ್ಷಿಣೆಕೊಡುವ ಸ್ಪರ್ಧೆಗಿಳಿದು, ಪಂಥಹಾಕಿ ದರ್ಬಾರನ್ನು ಏರಿಸಿ ಕೈಯಲ್ಲಿದ್ದ ಕಾಸನ್ನು ಕಳಕೊಳ್ಳುವವರು ನನ್ನನ್ನು ನೋಡಿ ಕಣ್ತೆರೆಯಲಿ! ಹೊಸ ಅಳಿಯ ನೆಂಬ ಚಿನ್ನದಕತ್ತಿಯನ್ನು ಎಷ್ಟು ಹೊಟ್ಟೆಗೆ ತಿವಿದುಕೊಂಡರೂ ಗಾಯವಾಗುವುದಿಲ್ಲವೆಂಬವರು ನನ್ನನ್ನು ನೋಡಿ ಮರೆಯಲಿ! ಅಳಿಯ ಬಂದ ಕೂಡಲೆ, 'ತೋಡು ತೊಡಮನೆ'ಯೆಂದು ಕುತ್ತಿಗೆಗೆ ಬಂಗಾರದ ಸರ, ಕೈತುಂಬ ಪವನು ಬಂಗಾರದ ತಟ್ಟೆಯಲ್ಲಿ ಕಾಫಿ, ಬೆಳ್ಳಿಬಟ್ಟಲಲ್ಲಿ ಊಟ, 'ಸ್ಪೆಶ್ಯಲ್ಲಾಗಿ ಬಿಲಾಯ್ತಿ', ಕಪ್ 'ಸೋಸರ್'' ತರಿಸಿ 'ರೋಸ್ ಟೀ' ಕೊಡುವವರೂ, ಕೊಟ್ಟ ಬದಿಯು ಕಾಲಿಯಾಗುವವರೆಗೆ ಅಳಿಯನ ಮನೆಯಲ್ಲಿ ಔತಣ ಹೊಡೆದು ಮೋಟರ್‌ಕಾರಿನಲ್ಲಿ ಅತ್ತಿತ್ತ ಹಾರಾಡಿ ಸುಖದ ಕನಸಿನಲ್ಲಿ ಓಲಾಡುವವರೂ, ನನ್ನ ಹೆಂಡತಿಯ, ನಮ್ಮ ಯಜಮಾಂತಿಯ, ದುಃಖವನ್ನು ನೋಡಿ ಜಾಗರೂಕರಾಗಲಿ! ದೊಡ್ಡಗಂಡನೆಂದು ನೆನಸಿ ನಾವು ಕೊಟ್ಟ ಸಣ್ಣ ಮೀನಿಗೆ ಹಿಂದಕ್ಕೆ ದೊಡ್ಡಮೀನುಬರುತ್ತದೆಂದು ಭ್ರಮಿಸಿ ಥಳುಕು ಗಂಡದಿರ ಮಿರುಮಿರುಗುವವೇಷ್ಟಿಗೆ ಮರುಳಾಗುವ ಪೊಳ್ಳುಕಲೆಯ ಜವ್ವನದ ಹೆಂಡಂದಿರು ನನ್ನ ಮಗಳು ಇದ್ದದ್ದನ್ನು ಕಳಕೊಂಡು ಶೋಕಪಡುವದನ್ನು ಕೇಳಿ ಕೇಳಿಯಾದರೂ ತಮ್ಮ ಹಾರಾಟದಹುಚ್ಚು ಕುದುರೆಗೆ ಕಡಿವಾಣ ಹಾಕಲಿ! ನಮ್ಮ ಸಮಾಜದ ಈಗಿನ ವಿದ್ಯಮಾನಗಳು ಆತ್ಮಘಾತಕದವು. ಹೀಗೆಮುಂದುವರಿದರೆ ನಾವು

ಆಯವ್ಯಯದ ಅಚ್ಚುಗಟ್ಟು (BUDGET)

(ಲೇಖಕರು:—ಶ್ರೀ ಬಿ. ಶ್ಯಾಮರಾಯ ಶೆಟ್ರು, ಬಿ.ಎ., ಎಲ್.ಟಿ., ಉಡುಪಿ.)

> Life tries every one Many are beaten by it. Only very few beat it The miser and the prodigal are both chastised by it—the one begets generally very extravagant children showing that extremes meet and the other invariably suffers a living death after a fast life thus establishing Nature's law that the greater the action, the greater the re-action **Sense of proportion** difficult, as it is to adopt, is the only formula that brings life to bay The temptations of modern life challenge your economic sense. Gentle reader, whenever you think of any purchase please, look at the budget and look at the budget and think of the purchase. Things will surely go to the bad, if the budget is not consulted previoulsy. Make necessaries of life march slowly and ask luxuries to wait, Here is the man who can smile through the tempests of life Life is an open book. He who runs can read it and profit by it

ಎಲ್ಲಿನಿಲ್ಲುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ. ಇಂದಿನ ಲೋಕಸ್ಥಿತಿಯು ಕೆಟ್ಟಿದೆ. ಎಲ್ಲಿಯೂ ಭದ್ರತೆಯಿಲ್ಲ—ಕೆಲಸಮಯದಿಂದೀಚೆಗೆ ಆಸ್ತಿಮಾಡಿದವರಿಗೆ ಉಳಿಗಾಲವಿಲ್ಲ—ಮನೆಕಟ್ಟಿದವರು ಮುಳುಗುತ್ತಿದ್ದಾರೆ. ನನ್ನ ರೀತಿಯಲ್ಲಿ ನೆಂಟಸ್ತಿಕೆಮಾಡಿದವರು ಬದುಕಿಯೂ ಸತ್ತಂತಿದ್ದಾರೆ ಕಷ್ಟಾ! ಕಷ್ಟಾ! ಕಷ್ಟಾ! ಎಲ್ಲಿ ನೋಡಿದರೂ ಕಷ್ಟ—ಮರ್ಯಾದೆವಂತರಿಗೆ ಬಹೂ ಕಷ್ಟ, ಸ್ವಾಮಿಾ!

ಲೇಖಕ—ಶೆಟ್ರೇ, ಈರೀತಿಯಲ್ಲಿ ಬರೇ ಬಾಯಿಯ ಗೋಳಾಟದಿಂದ ಪ್ರಯೋಜನವಿಲ್ಲ—ಕಾರ್ಯಜಾಣರು ಬೊಬ್ಬೆ ಹೊಡೆಯಬಾರದು. ನಾವು ಕೆಡುವುದು ಹದ ಮೀರಿದ ಮದದಿಂದ. ಯಾವ ಸಂದರ್ಭದಲ್ಲಿಯೂ ನಾವು ಆಯವನ್ನು ಮಿಕ್ಕಬಾರದು. ಗುಣಗಳಲ್ಲಿ ಮಿತವ್ಯಯ ಬುದ್ಧಿಯಷ್ಟು ಉತ್ಕೃಷ್ಟವಾದದ್ದು ಬೇರೊಂದಿಲ್ಲ ಈ ಸಂಸಾರಸಾಗರವನ್ನು ಸುಕ್ಷೇಮದಿಂದ ದಾಟಬೇಕಾದರೆ ಆ ಸಂಸಾರ ನೌಕೆಯ ನಾವಿಕನು ಹಿಡಿದಿರಬೇಕಾದ ಚುಕ್ಕಾಣಿಯೇ ಮಿತವ್ಯಯ ನಮ್ಮ ಆಯದ ಒಂದು ರೂಪಾಯಿಯಲ್ಲಿ ಹನ್ನೆರಡು ಆಣೆಗೆ ಮಿಕ್ಕಿ ವೆಚ್ಚಮಾಡಕೂಡದು, ಅಂದರೆ ನಮಗೆ ಹತ್ತು ರೂಪಾಯಿ ಸಂಪಾದನೆಯಿದ್ದರೆ ವೆಚ್ಚಮಾಡತಕ್ಕದರ ಪರಮಾವಧಿ ಏಳೂವರೆ ರೂಪಾಯಿ—ಇಪ್ಪತ್ತು ಇದ್ದರೆ ಹದಿನೈದು—ನೂರು ಇದ್ದರೆ ಎಪ್ಪತ್ತೈದು. ಕಾಲುಪಾಲು ಉಳಿಸಲೇಬೇಕು—ನೋಡಿ. ನಮ್ಮ ಜನರು ನಾಳೆಯಮಡಿಲಲ್ಲಿ ಚಿನ್ನದ ಗನಿಯಿದ್ದೀತೆಂದು ನಿರೀಕ್ಷಣೆಯ ಕನಸಿನಲ್ಲಿ ಇಂದು ದುಂದುಗಾರಿಕೆಗೆ ಇಳಿಯುತ್ತಾರೆ. ಇದು ಶುದ್ಧ ಅವಿವೇಕಿಯ ಹಾದಿ. ನಾಳೆಯನ್ನು ನಂಬಿದವ ಕೆಟ್ಟ—ಕೆಟ್ಟಾ!—ಬರದುಕೊಳ್ಳಿ—ಇನ್ನೊಂದು ವರ್ಷದ ಹುಟ್ಟುವಳಿಯಲ್ಲಿ ಉಳಿಸಬಹುದು—ಈ ವರ್ಷದ ಹುಟ್ಟುವಳಿಯನ್ನು ಪೂರಾ ವೆಚ್ಚ ಮಾಡಿಬಿಡುತ್ತೇನೆ. ಸ್ವಲ್ಪಮಟ್ಟಿಗೆ ಬರುವ ವರ್ಷದ ಹುಟ್ಟುವಳಿಯ ನಿರೀಕ್ಷಣೆಯ ಮೇಲೆ ಈ ವರ್ಷ ಸಾಲಮಾಡುತ್ತೇನೆಂದು ಆಳಸೋಡುವ ಸರಣಿ ಇಳಿಯುವುದು ತಪ್ಪು. ಏಕೆಂದರೆ, ಮುಂದಿನ ವರುಷ ಅನೇಕ ಅವಗಡ ಬರಬಹುದು ಕಾಯಿಲೆಗಳು ಕಂಗೆಡಿಸಿಯಾವು; ಪೈರು ಕೆಟ್ಟು ಬೆಳೆ ಇಳಿದು ಹೋದೀತು, ದವಸ ಧಾನ್ಯಗಳ ಧಾರಣೆ ಬಿದ್ದೀತು ಹೀಗೆ ಒಂದೋ ಎರಡೋ ಹಲವೋ ಅನಿರೀಕ್ಷಿತ ಗಂಡಾಂತರಗಳು ಬಂದಾವು ಆದಕಾರಣ ನಾಳೆಯನ್ನು ನಂಬದೆ ಇವತ್ತೇ ಆದಷ್ಟು ಮಟ್ಟಿಗೆ ಆಯದಲ್ಲಿ ಉಳಿಸುವವ ಜಾಣ—ಶೆಟ್ರೇ, ನಿಮಗೆ ಮಕ್ಕಳೆಷ್ಟು? ಆಸ್ತಿಯೆಷ್ಟು ಹುಟ್ಟುವಳಿಯೆಷ್ಟು? ಸಾಲವೆಷ್ಟು? ಏನೂ ಅಡಗಿಸದೆ ಹೇಳಿಬಿಡಿ, ನಿಮಗೆ ಕುಟುಂಬ ಉಂಟಾ? ನೀವು ಯಜಮಾನರಾ? ಬೇಸರ ಮಾಡಬೇಡಿ, ನಾನು ಕೇಳಿದೆನೆಂದು—ನಾನು ನಿಮ್ಮ ಹಿತಚಿಂತಕನಾಗಿ ನಿಮ್ಮ ಯಥಾರ್ಥಪರಿಸ್ಥಿತಿಯನ್ನು ತಿಳಿದು ಸಾಧ್ಯವಿದ್ದರೆ ನಿಮ್ಮ ಉದ್ಧಾರಕ್ಕೊಂದು ಹಾದಿ ತೋರಿಸೋಣವೆಂದು ಕೇಳುವುದು— ಮತ್ತಾವುದಕ್ಕೂ ಅಲ್ಲ—ನೀವಾಗಲೀ ನಿಮ್ಮ ಹೆಂಡ್ತಿಯಾಗಲೀ ನಿಮ್ಮ ಕುಟುಂಬವಿದ್ದರೆ ಅವರಿಗೆ 'ಬ್ರೋಕರ್' ಹಿಡಿಸಿದ್ದುಂಟಾ? ಹೆಂಡ್ತಿಗಿಂಡ್ತಿಗೆ ಆಸ್ತಿಗೀಸ್ತಿ ಮಾಡುವಾಗ ಮಗಳಿಗೆ ದೊಡ್ಡ ನೆಂಟಸ್ತಿಕೆ ಗಂಟುಹಾಕುವಾಗ ಕುಟುಂಬದ ಕಡೆಗೆ ಏನಾದರೂ ದೃಷ್ಟಿಯಿಟ್ಟಿದ್ದೀರಾ, ಇಲ್ಲವಾ? ಸತ್ಯಹೇಳಿ. ಅವರಿಗೇನಾದರೂ ಉಪದ್ರಕೊಟ್ಟಿದ್ದೀರಾ? ಕುಟುಂಬದ ಹೆಸರಿನಲ್ಲಿ ಎಷ್ಟು ಆಸ್ತಿಮಾಡಿದ್ದೀರಿ? ನೀವು ಕುಟುಂಬಕ್ಕೆ ಅನ್ನಗಿನ್ನ ಹಾಕದಿದ್ದು ಅವರ ಅನುದಿನದ ಹೊಟ್ಟೆಯ ಬೆಂಕಿಯ ಶಾಪಕ್ಕೇನಾದರೂ ಗುರಿಯಾಗಿದ್ದೀರಾ? ನೋಡಿ, ಕುಟುಂಬದ ಶಾಪ ರಾಮಬಾಣಕ್ಕಿಂತಲೂ ಕಠಿಣ—ನೀವು ಅದನ್ನು ಗಣ್ಯಮಾಡದಿದ್ದರೆ ಅದು ನಿಮ್ಮನ್ನು ಬಿಡುವುದಿಲ್ಲ, ಬಡಿದೇ ಬಿಡುತ್ತದೆ ಅದಕ್ಕೆ ಹುಸಿ ಇಲ್ಲ. ಕುಟುಂಬದ ಕಣ್ಣೀರ ಶಾಪವು ಹೆಂಡತಿಗೆ ಕೊಟ್ಟ ಮನೆಮಾರುಗಳನ್ನೆಲ್ಲ ಕೊಚ್ಚಿಕೊಂಡುಹೋಗಿಬಿಡುತ್ತೆ. ನಮ್ಮ ಕೆಲವು ಹಿರಿಯ ಗುರಿಕಾರರಿಗೆ ಹೆಂಡ್ತಿಯ ಹೆಸರಲ್ಲಿ ಆಸ್ತಿಮಾಡುವ ಉತ್ಸಾಹವು ನಮ್ಮ ಯುವಕ ಯುವತಿಯರಲ್ಲಿರುವ ಕಾರಿನಲ್ಲಿ ಹಾರಾಡುವ "ಸ್ಟೈಲ್'' ಮಾಡುವ ಆತುರಕ್ಕಿಂತಲೂ ಮಿಗಿಲು! ಆದುದರಿಂದ ನಿಮಗೆ ಕುಟುಂಬದ ಹೊಟ್ಟೆಯುರಿಯಿಂದ ಕಾದ ಕಣ್ಣೀರ ಶಾಪವೇನಾದರೂ ಇದ್ದರೆ ಈ "ಬಜ್ಜೆಟ್'' ಪ್ರಯೋಜನವಿಲ್ಲ! ಓ ದೇವರೇ, ಕುಟುಂಬದ ಹತ್ತುಜನರಿಗೆ ಅನ್ನಹಾಕದೆ ದುಡ್ಡು ಕಟ್ಟಿ ಕಟ್ಟಿ ಹೆಂಡ್ತಿ ಮಕ್ಕಳಿಗೆ ಆಸ್ತಿಮಾಡಿಕೊಟ್ಟರೆ ಆ ಕುಟುಂಬವು ಹೊಟ್ಟೆ ಬಡಕೊಂಡು ಬಡಕೊಂಡು ಕೊಡುವ ಶಾಪಕ್ಕೆ ಮದ್ದೇ ಇಲ್ಲ. ಹತ್ತು ಜನರ ಶಾಪಕ್ಕೆ ನೀವು, ನಾವುಬಿಡಿ, ದೇವರು ಸಹ ಹೆದರಲೇಬೇಕು. ಕುಟುಂಬಕ್ಕೆ ಅನ್ನ ಹಾಕದೆ ಮಣ್ಣುತಿನ್ನಿಸಿದ ಆ ಕೆಟ್ಟಕೈಯಿಂದ ಹೆಂಡ್ತಿಹೆಸರಲ್ಲಿ ಆಸ್ತಿಮಾಡಿದರೆ ಅದು ಸುಟ್ಟುಹೋಗುತ್ತದೆ—ದುಡ್ಡು ಸಪಾತಿ ದರೆ ಅದು ಮಾಡಿದವನನ್ನು ಬಿಟ್ಟು ಹೋಗುತ್ತದೆ, ಮಕ್ಕಳನ್ನು ಲಾಲಿಸಿದರೆ ಪೋಷಿಸಿದರೆ ಅವರ ಬುದ್ಧಿನಷ್ಟವಾಗಿ ಅವರು ಹುಚ್ಚರಾಗುತ್ತಾರೆ; ಅದೇ ದೇವರು ಬಿಟ್ಟ ದುಷ್ಟಕೈಯಿಂದ ಅಳಿಯಂದಿರಿಗೆ ವರದಕ್ಷಿಣೆ ಕೊಟ್ಟರೆ ಆ ಕೊಟ್ಟಹಣವೂ ಮಗಳ ಮೇಲಿನ ಆಭರಣಗಳೂ—ಕಾರಿನಲ್ಲಿ ಹಾರಿಹೋಗುತ್ತವೆ, ಸ್ಟೈಲಿನಲ್ಲಿ ಸುಟ್ಟುಹೋಗು

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು—ಶ್ರೀ ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

ಆತಂಕನಿಗ್ರಹ ಮಾತ್ರೆ

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಸ್ಮಿತ ಗುಣವುಂಟಾಗುವಂತೆ ಮಾಡುತ್ತದೆ ರಕ್ತವೃದ್ಧಿಯನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವದಕ್ಕೆ ಪೂರ್ವದಲ್ಲಿ ಭೋಗಮಾಡುವದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವದರಿಂದಲೂ ದುಷ್ಟಮಿಥುನ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವದೇ ಈ ತೈಲದ ಉತ್ಕೃಷ್ಟವಾದ ಗುಣವು ಜನನೇಂದ್ರಿಯದ ಜಿಗಿ ತಪ್ಪಿಹೋದವರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದವರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ 5—0—0.

'ಕಾಮಶಾಸ್ತ್ರ' ಧರ್ಮಾರ್ಥ ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಬರೆಯಿರಿ

ಆತಂಕನಿಗ್ರಹ ಫಾರ್ಮಸಿ, ೭೩, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ತ್ತವೆ, ಫಳಸಿನಲ್ಲ 'ಪಟ್ಟ'ಆಗುತ್ತವೆ.ಆದುದರಿಂದ ತನ್ನ ಕುಟುಂಬವೇ ದೇವರು-ಅದಕ್ಕೆ ಮುಂಚೆ ನಮಸ್ಕಾರ-ಆಮೇಲೆ ಗಣಪತಿಗೆ-ಯಾವ ವಿಘ್ನವೂ ಬರಲಾರದು-ಖಂಡಿತ!-ಶೆಟ್ರೇ, ನಿಮ್ಮ ಸುತ್ತುಮುತ್ತ ನೋಡಿ, ನೂರಾರು ನಿದರ್ಶನಗಳು ಕಾಣುವುದಿಲ್ಲವೆ? ಈ ನಮೂನೆಯಲ್ಲಿ ಆಸ್ತಿಕೆಟ್ಟು ಉದ್ಧಾರ ಆದ್ದು ಯಾರು? ತೆಕ್ಕೊಂಡವರು ಬಾಳಿ ಬದುಕಿದ್ದು ಎಲ್ಲಿ? ಹೇಳಿ ತೋರಿಸಿ-ಲೆಕ್ಕ ಮಾಡಿ-ಇದೆಲ್ಲ ಈ ಪೊಳ್ಳುತಲೆಯ ಜನರಿಗೆ ಯಾಕೆ ಗೊತ್ತಾಗುವುದಿಲ್ಲವೋ? ಕಣ್ಣಿದ್ದು ಯಾಕೆ ಕಾಣುವುದಿಲ್ಲವೋ? ಹೀಗೆ ಗುಟ್ಟು ಒಳಸಂಚು ಮೋಸಗಳಿಂದ ಮಾಡಿದ್ದು ಹೇಗೆ ಹೇಳದೇ ಹೋಗುತ್ತದೆ. 'ತಲಕುಸಲಕು' ಅಳಿಯಂದಿರು ಅದನ್ನೆಲ್ಲಾ ಕೆರೆದು ಕೊರೆದು ತೆಗಿಯಬೇಕಲ್ಲವಾ? ಇಲ್ಲದಿದ್ದರೆ ಗಂಡುಮಕ್ಕಳೇ ಲಯಮಾಡಬೇಕಲ್ಲವಾ? ಇದೇ ರಾಮಬಾಣ! ನೀವೇನಾದರೂ ಹೀಗೆ ಕುಟುಂಬಕ್ಕೆ ವಂಚನೆ ಮಾಡಿದ್ದರೆ ಈ ಮದ್ದು ಏನೂ ಪ್ರಯೋಜನವಿಲ್ಲ-ನೋಡಿ, ಹೆಂಡ್ತಿಮಕ್ಕಳಿಗೆ ದುಡ್ಡುಕಾಸು ಮಾಡಿಕೊಡುವುದರಲ್ಲಿಯೂ ಮಿತಿಯಿರಬೇಕು ಹೆಂಡ್ತಿಗೆ ಒಂದು ಕೊಡುವಾಗ ಕುಟುಂಬಕ್ಕೆ ಎರಡು ಇಡಲೇಬೇಕು. ಅದರಲ್ಲಿ ದೇವರ ಆಶೀರ್ವಾದ ಇದೆ. ಹಾಗೆ ಮಾಡದೆ ಪೂರಾ ಹೆಂಡತಿಗೇನೇ ಕೊಡುವದೆಂದರೆ ಎಂಥಾ ಅನ್ಯಾಯ ಅದು? ಯಾರ ಹಣವನ್ನು ಯಾರು ಯಾರಿಗೆ ಕೊಡುವುದಯ್ಯಾ? ಏನು ಅವಿಚಾರ. ನೀವು ಏನಾದರೂ ಹೀಗೆ ಮಾಡಿದ್ದು ಇದ್ದರೆ ನೀವು ದೇವರು ಕೈಬಿಟ್ಟವರು ಹಾಗಾದರೆ ನನ್ನ ಸಮಯವನ್ನು ನಿಮ್ಮ ಒಡನೆ ಹಾಳುಮಾಡುವುದಿಲ್ಲ-ನೀವು ಒಳ್ಳೆ ಧರ್ಮಿಷ್ಠರಾಗಿ ನಿಮಗೆ ಇಂಥಾ ಕಷ್ಟಬಂದಿದ್ದರೆ ಏನಾದರೂ ನಮ್ಮ 'ಬಜ್ಜೆಟ್' ಮುಖಾಂತರ ನಿಮ್ಮನ್ನು ರಕ್ಷಿಸೋಣ—ಹೇಳಿ-ಸತ್ಯ ಇದ್ದದ್ದು ಹೇಳಿ- ಹುಟ್ಟಿದ ಕುಟುಂಬವನ್ನು ತಿನ್ನುವ ಬಕಪಕ್ಷಿಗಳು ನನ್ನ ಹತ್ತರ ಬರಬಾರದು. ಅವರನ್ನು ಕುಷ್ಠವ್ಯಾಧಿಗ್ರಸ್ತರಿಗಿಂತಲೂ ದೂರಾಗಿರಬೇಕು.

ಶೆಟ್ರು—ಸ್ವಾಮಿ, ನಾನು ಅಳಿಯಸಂತಾನದ ಹಿರೇ ಮೆಂಬರನಲ್ಲ,-ನಾನು ಕಿರಿ ಮೆಂಬರು -ನನ್ನ ಅಣ್ಣ ಯಜಮಾನರು. ಅವರು ಕುಟುಂಬಕ್ಕೆ ಬಹಳ ಅನ್ಯಾಯಮಾಡಿದ್ದಾರೆ, ಅನ್ಯಾಯಮಾಡಿ ಹೆಂಡ್ತಿ ಮಕ್ಕಳಿಗೆ ಕೊಟ್ಟು ಅವರ ಅವಸ್ಥೆ ಬಹಳ ಕಠಿಣವಾಗಿದೆ-ಗಂಡು ಮಕ್ಕಳು ಮತ್ತು ಅವರ ಹೆಮ್ಮಕ್ಕಳ ಗಂಡಂದಿರು ಅವರನ್ನು ನೆಲಸಮ ಮಾಡಿದರು ಈಗ ಅವರಿಗೆ ಕುಟುಂಬವೂ ಇಲ್ಲ-ಮಕ್ಕಳೂ ಇಲ್ಲ-ಅಳಿಯಂದಿರೆಂತೂ ಇಲ್ಲ-ಬೊಬ್ಬೆಹೊಡಿಯುತ್ತಾರೆ. ನನಗೆ ಅವರು ಕೊಡುತ್ತಿದ್ದ ಕಷ್ಟವನ್ನು ತಾಳಲಾರದೆ ನಾನು ಊರುಬಿಟ್ಟು, ಗಟ್ಟ ಹತ್ತಿ, ಆಸುಕಟ್ಟಿ, ಬಹಳ ಕಷ್ಟದಿಂದ ಸಂಪಾದನೆಮಾಡಿದ ದುಡ್ಡು ನನ್ನದು ಸ್ವಾಮಿ,-ಸುಮಾರು ಹತ್ತು ಇಪ್ಪತ್ತು ಸಾವಿರ ರೂಪಾಯಿ ಸ್ವಂತ ಸಂಪಾದನೆಮಾಡಿದ್ದೆ ನನ್ನ ಹೆಂಡ್ತಿಗೆ ಕುಟುಂಬದ ಗಲಾಟೆ ಬೇಡವೆಂದು ಒಂದು ಪ್ರತ್ಯೇಕ ಮನೆ ಕಟ್ಟಿದೆ. ಇದಕ್ಕೆ ಐದು ಸಾವಿರ ರೂಪಾಯಿ ಖರ್ಚಾಯಿತು. ಸುತ್ತಮುತ್ತಲಿನ ಆಸ್ತಿ ತೆಕ್ಕೊಂಡೆ.-ಅದಕ್ಕೂ ಹದಿನೈದು ಸಾವಿರ ರೂಪಾಯಿ ಕೊಟ್ಟೆ. ಒಂದು ಎರಡು ಸಾವಿರ ರೂಪಾಯಿ ಒಳಪಡಿಸಿಕೊಂಡಿದ್ದೆ. ಈ ಸಾಲವನ್ನು ತೀರಿಸುತ್ತಾ ಬರವಾಗ ನನ್ನ ಮಗಳ ಈ ಡಂಭಗ ಸಂಟಸ್ತಿಕೆ ನಿಶ್ಚಯವಾಯಿತು ಅದಕ್ಕಾಗಿ ಏಳೆಂಟು ಸಾವಿರ ರೂಪಾಯಿ ಸಾಲಮಾಡಿದೆ ನನ್ನ ಮಗಳಿಗೆ ತರುವ ಸಮಯದಲ್ಲಿ ಪೇಟೆಗೆ ಹೋದಾಗ ಬಾಡಿಗೆ ಮನೆಯಲ್ಲಿರುವುದು ಚಂದವಲ್ಲ-ಮರ್ಯಾದೆಗೆ ಕುಂದು. ಆದಕಾರಣ ಒಂದು ಸ್ವಂತ ಮನೆಯನ್ನು ಪೇಟೆಯಲ್ಲಿ ತೆಕ್ಕೊಳ್ಳಬೇಕೆಂದು ನನ್ನ ಹೊಸ ಅಳಿಯ ಹೇಳಿದನೆಂದು ಮೂರು ಸಾವಿರ ರೂಪಾಯಿ ಕೊಟ್ಟು ಒಂದು ಪ್ಯಾಟೆಯಲ್ಲಿ ಸ್ವಂತ ಮನೆ ತೆಕ್ಕೊಂಡೆ. ಅದಕ್ಕೂ ಆಸ್ತಿ ಮೇಲೆ ಸಾಲಮಾಡಬೇಕಾಯಿತು ಈಗ ನೋಡಿದರೆ ನನ್ನ ಸ್ಥಿತಿ ಅಲುಗುತ್ತದೆ ಏನುಮಾಡಲಿ! ಈ ಸರಿಯೂ ನನ್ನ ಮಗಳಿಗೆ ಹೆರಲಿಕ್ಕೆ ಪ್ಯಾಟೆಗೆ ಹೋಗಬೇಕಂತೆ.-ಆದರೆ ನನ್ನ ಸ್ಥಿತಿಯು ಬಹಳ ಕೆಟ್ಟುಹೋಗಿದೆ, ಭಗವಂತ !

ಲೇಖಕ—ಶೆಟ್ರೇ, ಪ್ರದರ್ಶನಕ್ಕೆ ಬೇಕಾಗಿ ಸಾಲಮಾಡಿ ಆಸ್ತಿಮಾಡುವುದ ಮನೆಕಟ್ಟುವುದು, ಕೇವಲ ಹುಚ್ಚುತನ-ಇದರಿಂದ ನಮ್ಮ ಹತ್ತಿರ ಇದ್ದ ಸ್ವಲ್ಪ ಹಣವು ಸಹಾ ಲಯವಾಗುತ್ತದೆ ಐವತ್ತು ಸಾವಿರ ರೂಪಾಯಿ ಕೈಯಲ್ಲಿದ್ದವರು, ಅರವತ್ತು ಸಾವಿರ ರೂಪಾಯಿ ಆಸ್ತಿ, ಮನೆಮಾಡಿ ಅದರ ಅಲ್ಪ ಸ್ವಲ್ಪ ಹುಟ್ಟುವಳಿಯನ್ನು ದರ್ಬಾರಿನಲ್ಲಿ ಕರಗಿಸಿ ಸಾಲವನ್ನು ಬೆಳೆಯಬಿಟ್ಟು ಕೊನೆಗೆ ಆಸ್ತಿಯಲ್ಲಿ ಹಾಕಿದ ಐವತ್ತು ಸಾವಿರವನ್ನು ಕಳಕೊಂಡು ನಿರ್ಗತಿಕರಾಗಿ ಕೂತುಕೊಂಡಿದ್ದಾರೆ ನಮ್ಮ ಹತ್ತಿರವಿರುವ ಹಣದ ಅರೆವಾಸಿ ಮಾತ್ರ ಆಸ್ತಿ, ಮನೆಗೆ ಹಾಕಬೇಕು. ಅರೆವಾಸಿ ಹಣ ಹಾಗೆಯೇ ಭದ್ರತೆಯುಳ್ಳ ಬ್ಯಾಂಕಿನಲ್ಲಿರಬೇಕು. ಇದು ಮುಂದೆ ಬರುವ ವಿಪತ್ತುಗಳಿಗೆ ಬೇಕಾಗುತ್ತದೆ. ಇದ್ದದನ್ನೆಲ್ಲಾ ಆಸ್ತಿ ಮತ್ತು ಮನೆಯಲ್ಲಿ ಹಾಕಿದರೆ ಮುಂದೆ ಅಗತ್ಯಬಿದ್ದಾಗ ಈ ಆಸ್ತಿಯ ಮೇಲೆ ಸಾಲತೆಕ್ಕೊಂಡರ ನಮಗೆ ಬಡ್ಡಿ ಜಾಸ್ತಿ ಕೊಡಬೇಕಾಗುತ್ತದೆ-ನಾವು ಬಡ್ಡಿಕೊಡುವುದು ಕೂಡಲೇ ಬೇಕು-ಅವರ ಆಸ್ತಿಯ ಹುಟ್ಟುವಳಿಯು ಪೂರಾ ವಸೂಲಿ ಆಗುವುದಿಲ್ಲ-ಬಾಕಿ ನಿಲ್ಲುತ್ತದೆ-ಹೀಗಾಗಿ ಸಾಲವನ್ನು ತಗೆಯಲು ಆಗುವುದಿಲ್ಲ. ಆದಕಾರಣ ಆರ್ಥಿಕ ದೃಷ್ಟಿಯಿದ್ದವರು ತಮ್ಮ ಸಂಪಾದನೆಯ ನೂರರಲ್ಲಿ ಐವತ್ತರ ಮೇಲೆ ಆಸ್ತಿ, ಮನೆಯಲ್ಲಿ, ಹಾಕಬಾರದು ಉಳಿದ ಐವತ್ತು ತಮ್ಮ ಹತ್ತಿರ ಆಪದ್ಧನವಾಗಿ ಇಟ್ಟುಕೊಂಡು ಬಡ್ಡಿ ಕಮ್ಮಿಯಾದರೂ ಚಿಂತೆಯಿಲ್ಲವೆಂದು ಭದ್ರತೆಯಿರುವ ಗಟ್ಟಿ ಬ್ಯಾಂಕಿನಲ್ಲಿ ಇಡಬೇಕು. **ಎಲ್ಲಿ ಬಡ್ಡಿ ಹೆಚ್ಚೋ ಅಲ್ಲಿ ಅಸಲಿಲ್ಲ. ನೆನಪಿಟ್ಟುಕೊಳ್ಳಿ-ಶೆಟ್ರೇ** ನಿಮ್ಮಲ್ಲಿ ಕೆಲಸಕ್ಕೆ ಎಷ್ಟು ಜನವಿದ್ದಾರೆ? ನಿಮ್ಮ ಗಂಡು ಮಕ್ಕಳು ಏನುಮಾಡುತ್ತಿದ್ದಾರೆ?

ಶೆಟ್ರು—ನಮ್ಮ ಯಜಮಾಂತಿಗೆ ಮೂರುಜನರು ಕೆಲಸದವರು, ನನ್ನ ಹೆಣ್ಣುಮಕ್ಕಳಿಗೆ ಒಬ್ಬೊಬ್ಬರು-ನನ್ನ ಮಗಂದಿರಿಗೆ ಇಬ್ಬರು ಕೆಲಸದ ಗಂಡುಗಳು. ಅವರಿಗೆ ನನ್ನ ಗಂಡುಮಕ್ಕಳಿಗೆಯಾವಉದ್ಯೋಗವೂ ಇಲ್ಲ. ಸ್ಯಾಕಲ್ ಕಚ್ಚಗಿಚ್ಚ ಹಾಕಿ ಪ್ಯಾಟೆಗೆ ಹೋಗುತ್ತಾ ಇದ್ದಾರೆ-ಮೋಟರ್ ಬಸ್ಸಿಗೆ ದಿವಸಕ್ಕೆ ಹ್ಯಾಗೂ ಎಂಟಾಣೆ ಖರ್ಚುಮಾಡುತ್ತಾರೆ. ಇನ್ನು, ಕಾಫಿಗೀಫಿ ಡ್ರೆಸ್ ಇವುಗಳಲ್ಲೆಲ್ಲಾ ತಾವೇನೋ ರಾಜಕುಮಾರರೆಂದೇ ತೋರಿಸುತ್ತಾರೆ.

ಲೇಖಕ— ನೀವು, ನಿಮ್ಮ ಹೆಂಡ್ತಿ, ನಿಮ್ಮ ಮಕ್ಕಳನ್ನು ಇಟ್ಟುಕೊಂಡು ಒಂದು ಪಟ್ಟಿಮಾಡಬೇಕು. ಅದರಲ್ಲಿ ನಿಮ್ಮ ಆಸ್ತಿ

ಪುಟ ೧೨ರಲ್ಲಿ ನೋಡಿರಿ.

NO LIFE INSURANCE?

It often takes the dependants to know the difference between "LIFE INSURANCE" and "NO LIFE INSURANCE" The difference to them is cheque or no cheque when the bread-winner dies



The above is a cheque issued recently to a claimant by the Company.

"But if any provide not for his own, and especially for those of his own house, he hath denied the faith, and is worse than an infidel."

I. TIMOTHY, V. 8.

INSURE YOUR LIFE WITH

THE CANARA MUTUAL

ASSURANCE COMPANY, LIMITED.

THE COMPANY IS MUTUAL.

THERE ARE NO SHARE HOLDERS.

ದಿವಂಗತ ಕೆಮಾಲಪಾಶ

ಜಗತ್ತಿನ ಪ್ರಸಿದ್ಧ ಪುರುಷರಲ್ಲೊಬ್ಬರೂ ಟರ್ಕಿಯ ನವನಿರ್ಮಾಣಕರ್ತೃ ಆದ ಕೆಮಾಲಪಾಶರು ಇದೇ ನವಂಬರ ತಾ. ೧೦ರಲ್ಲಿ ದಿವಂಗತರಾದರು. ಇವರ ಸ್ಥಾನದಲ್ಲಿ ಬಹುಕಾಲದ ಅನುಭವವುಳ್ಳ ಮಾಜಿ ಪ್ರಧಾನರಾದ ಜನರಲ್ ಇಸ್ಮಾಯಿಲ್ ಇನ್ನೋನು—ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ ಇವರು ಕೆಮಾಲರ ಸಹೋದ್ಯೋಗಿಯಾಗಿದ್ದು ಅವರ ರೀತಿನೀತಿಯಲ್ಲೇ ರಾಜ್ಯಭಾರವನ್ನು ನಡಿಸಲಿದ್ದಾರೆ.

ಟರ್ಕಿಯ ಇತಿಹಾಸವನ್ನು ಮಾರ್ಪಡಿಸಿದ ಮುಸ್ತಾಫ ಕೆಮಾಲ ಬೇ ಪಾಶರು ಟರ್ಕಿಯನ್ನು ಉದ್ಧರಿಸಿ, ಅಖಂಡ ಜಗತ್ತಿನಲ್ಲಿ ತಮ್ಮ ಉಜ್ವಲ ಪ್ರಭೆಯನ್ನು ಬೀರಿದ ಮಹಾ ಪ್ರಭಾವಶಾಲಿಗಳು. ಭಾವೀ ಜೀವನದಲ್ಲಿ ಘನಸ್ಥಪದವಿಗೇರಿದ, ಹಲವು ಮಹಾಪುರುಷರಂತೆ, ಕೆಮಾಲರೂ ಬಡತನದಲ್ಲೇ ಹುಟ್ಟಿ, ಕಷ್ಟಪರಂಪರೆಯಲ್ಲೇ ಬೆಳೆದವರು. ಇವರ ತಂದೆಯೊಬ್ಬ ಬಡ ಕಸ್ಟಮ್ ನೌಕರನು. ಮಹಾಪುರುಷರ ಜೀವನಕ್ಕೆ ಬಹುಮಟ್ಟಿಗೆ ಅವರ ತಾಯಂದಿರ ಪ್ರಭಾವವು ಕಾರಣವಿರುತ್ತದೆ. ಹಾಗೆಯೇ ಕೆಮಾಲರ ತಾಯಿಯಾದ ಜುಬೇದ, ಈಕೆಯ ಆದರ್ಶ ಮಾತೃತ್ವದ ಪ್ರಭಾವವು ಕೆಮಾಲರ ಜೀವನ ಪ್ರಗತಿಗೆ ಬಂಗೋಲಾಗಿ ನಿಂತಿತೆನ್ನಬಹುದು.

ಮುಸ್ತಾಫರು ಬಹು ಚಿಕ್ಕಂದಿನಲ್ಲೇ ತಮ್ಮ ತಂದೆಯನ್ನು ಕಳಕೊಂಡರು ನಂತರ ಧರ್ಮಬೋಧಕನಾಗುವಂತೆ ಅವರ ತಾಯಿಯು ಅವರನ್ನು ಒಂದು ಮಸೀದಿಯ ಶಾಲೆಗೆ ಕಳುಹಿಸಿದಳು. ಮುಂದೆ ಅವರು ಅಲ್ಲಿಂದ ಒಂದು ಸೆಕೆಂಡರಿ ಶಾಲೆಯನ್ನು ಪ್ರವೇಶಿಸಿದರು ಇಲ್ಲಿ ಅವರ ಹೆಚ್ಚಿನ ಯೋಗ್ಯತೆಯಿಂದ ಅವರಿಗೆ ವಿದ್ಯಾರ್ಥಿವೇತನವು ದೊರೆಯಿತು. ಮಾತ್ರವಲ್ಲದೆ ಕೆಮಾಲನೆಂಬ ಹೆಸರು ಕೊಡಲ್ಪಟ್ಟಿತು. (ಕೆಮಾಲ ಎಂದರೆ ಪರಿಶುದ್ಧತೆ ಎಂದರ್ಥ.) ಗಣಿತದಲ್ಲಿ ಅವರಿಗಿದ್ದ ಬುದ್ಧಿಶಕ್ತಿಗೆ ಮೆಚ್ಚಿದ ಉಪಾಧ್ಯಾಯರು ಅವರಿಗೆ 'ಮುಸ್ತಾಫ' ಎಂಬ ಬಿರುದನ್ನೂ ದಯೆಪಾಲಿಸಿದರು. ಅತೀವ ಉತ್ಸಾಹಶಾಲಿಗಳಾದ ಕೆಮಾಲರು ಸೈನಿಕರ ಉಡುಗೆತೊಡುಗೆ ಚಟುವಟಿಕೆಗಳಿಂದ ಆಕರ್ಷಿತರಾಗಿ ಒಂದುದಿನ ಹಠಾತ್ತಾಗಿ ತಾಯಿಗಾಗಲೀ ಅಧ್ಯಾಪಕರಿಗಾಗಲೀ ತಿಳಿಸದೆ, ಓಡಿಹೋಗಿ, ಒಂದು ಸೈನಿಕ ಶಿಕ್ಷಣಶಾಲೆಯಲ್ಲಿ ಪ್ರವೇಶ ಕೋರಿದರು. ಮುಂದೆ ಅವರು ತನ್ನ ಸ್ವಾಭಾವಿಕ ಚೈತನ್ಯ, ಹುರುಪುಗಳಿಂದ ಕ್ರಮೇಣ ಯುದ್ಧವಿದ್ಯೆಯಲ್ಲಿ ಉತ್ಕೃಷ್ಟ ನೈಪುಣ್ಯತೆಯನ್ನು ಗಳಿಸಿಕೊಂಡರು.

ಕೆಮಾಲರ ಮೊದಲಣ ಇಪ್ಪತ್ತೆಂಟು ವರ್ಷಗಳು ಬಹು ತೊಡಕುಗಳಿಂದ ತುಂಬಿದ ನಿಬಿಡ ಹೋರಾಟದ ಕಾಲವಾಗಿತ್ತು. ಟರ್ಕಿಯು ಆ ಕಾಲದಲ್ಲಿ ಅತ್ಯಂತ ದುಃಸ್ಥಿತಿಗೆ ಮುಟ್ಟಿದ ನಾಡಾಗಿತ್ತು. ಸುಲ್ತಾನ ಅಹಮ್ಮದನ ಆಳ್ವಿಕೆಯೆಂಬುದು ಪ್ರಜಾಹಾನಿಕಾರಕವಾದ ನಿರಂಕುಶಪ್ರಭುತ್ವವಾಗಿತ್ತು. ಅಲ್ಲದೆ, 1886ರ ರಷ್ಯಟರ್ಕಿಯ ಯುದ್ಧದವೆಸೆಯಿಂದ ಟರ್ಕಿಯು ಇನ್ನಷ್ಟು ನಿಕೃಷ್ಟಾವಸ್ಥೆಗೆ ಬಂದಿಳಿಯಿತು. ಯುರೋಪಿಯಾನ ರಾಷ್ಟ್ರಗಳಲ್ಲಿ ಇಂಥಾ ದುರವಸ್ಥೆಗೆ ಬಲಿಬಿದ್ದ ಬೇರಾವ ರಾಷ್ಟ್ರವೂ ಇರಲಿಲ್ಲ. ಜನತೆಯು ಅಜ್ಞಾನ ಅಂಧಶ್ರದ್ಧೆಯ ಘೋರ ತಿಮಿರದಿಂದ ಮುಳುಗಿತ್ತು. ಸುಲ್ತಾನನ ಅವ್ಯವಸ್ಥೆಯ ನಿರಂಕುಶ ದಬ್ಬಾಳಿಕೆ ಬೇರೆ. ಹೀಗೆ ಬೇಸತ್ತು ಬೆಂದ ಟರ್ಕರು ಪಾರಾಗಲು ದಾರಿಗಾಣದೆ ಪೇಚಾಟಕ್ಕೊಳಪಟ್ಟಿದ್ದರು. ಫ್ರೆಂಚರ ಕ್ರಾಂತಿಯ ಮತ್ತು ರಷ್ಯದ ತೀವ್ರ ವಾರ್ಟಿದ ಹೊಸ ಭಾವನೆಗಳು ಅಲ್ಲಲ್ಲಿ ಯುವಕರ ಹೃದಯವನ್ನು ಹೊಕ್ಕು, ಅವರನ್ನು ಎದ್ದೇಳುವಂತೆ ಆವೇಶವನ್ನುಂಟುಮಾಡಿತು. ಅಲ್ಲಲ್ಲಿ ಸುಲ್ತಾನನಿಗೆ ವಿರುದ್ಧವಾಗಿ ಬಂಡಾಯವೆಬ್ಬಿಸುವ ರಹಸ್ಯ ಕೂಟಗಳು ನಿರ್ಮಾಣಹೊಂದಿದುವು ಕೆಮಾಲರು ಮೊದಲೇ ಕೆಚ್ಚೆದೆಯ ಉತ್ಸಾಹೀ ಯೋಧರು. ಅಲ್ಲದೆ 'ನಾಟನ್' ಎಂಬ ಕ್ರಾಂತಿಕಾರಕ ಗ್ರಂಥವನ್ನೋದುವದರಿಂದ ಅವರು ಅದರ ಪ್ರಭಾವಕ್ಕೆ ಒಳಗಾಗಿ, ಒಮ್ಮೆಲೆ ಅಸಾಧಾರಣ ಮನೋವೃತ್ತಿಯಿಂದ ಮುಂದಾಗಲು ಸಿದ್ಧರಾದರು. ಸುಲ್ತಾನನು ಆ ಗ್ರಂಥಪ್ರಸಾರವಾಗದಂತೆ ಅಡ್ಡಿಮಾಡಿದ್ದನು ಆದರೆ, ಅದಕ್ಕೆ ವಿರುದ್ಧವಾಗಿ ಕೆಮಾಲರು ಅದರ ಪ್ರಚಾರಕಾರ್ಯದಲ್ಲಿ ತೊಡಗಿದರು. ಮಾತ್ರವಲ್ಲದ, 1903ರಲ್ಲಿ ತಾನೇ ಸಂಪಾದಕನಾಗಿ ಒಂದು ಪ್ರಗತಿಪರ ಪತ್ರಿಕೆಯನ್ನು ಹೊರಡಿಸಿ, ಸುಲ್ತಾನನ ವಿರುದ್ಧವಾಗಿ ಬಂಡಾಯವೆಬ್ಬಿಸುವದರಲ್ಲಿ ಮುಂದಾದರು

1905ರಲ್ಲಿ ಅವರು ಕೈದುಮಾಡಲ್ಪಟ್ಟು ಮೂರುತಿಂಗಳ ಸಜೆಹೊಂದಿದರು ಆನಂತರವೂ ಅವರು ತಮ್ಮ ದೇಶೋದ್ಧಾರ ಕಾರ್ಯವನ್ನು ಇನ್ನಷ್ಟು ಕಸುವಿನಿಂದ ಸಾಧಿಸತೊಡಗಿದರು, ಟರ್ಕಿಯ ಯುವಕರಲ್ಲಿ ಸ್ವಾಭಿಮಾನವು ಬೇರೂರಿ ಅವರನ್ನು ಪ್ರಗತಿಗಾಮಿಗಳನ್ನಾಗಿ ಮಾಡಿತು. ಕಮಾಲರು ತಾನೀಗ ಯುವಕರ ಮುಂದಾಳಾಗಿ ಟರ್ಕಿಯನ್ನು ಅಂಧಕಾರದಿಂದ ಎಚ್ಚರಿಸಲು ತೊಡಗಿದರು, ಆಗ ಅಧಿಕಾರದಲ್ಲಿದ್ದ ಅನ್ವಾರ್ ಪಾಶನ ರೀತಿನೀತಿಗಳನ್ನು ಬಹಿರಂಗವಾಗಿ ಖಂಡಿಸುವ ಪಂಗಡದ ನಾಯಕರಾದರು. ಟರ್ಕಿಯಲ್ಲಿ ತೀವ್ರ ಅತೃಪ್ತಿ, ಅಶಾಂತತೆ ಹಬ್ಬಿಹೋಯಿತು, 1911–12ರ ಬಾಲ್ಕನಿನ ಯುದ್ಧದಲ್ಲಿ ಟರ್ಕಿಯು ಅಪಾರ ಹಾನಿಗೊಳಪಟ್ಟಿತು 1914ರಲ್ಲಿ ಯುರೋಪಿನ ಮಹಾಯುದ್ಧದ ಸಮಯ, ಟರ್ಕಿಯು ರಷ್ಯನರಿಗೆ ಹೆದರಿ ಜರ್ಮನಿಯ ಪಕ್ಷವಹಿಸಿತು ಈ ವಿಚಾರವು ಕೆಮಾಲರಿಗೆ ಸರಿಬೀಳಲಿಲ್ಲ; ಆದರೂ ಅವರು ಯುದ್ಧದಲ್ಲಿ ತಮ್ಮ ಸಾಹಸವನ್ನು ತೋರಿಸಲನುವಾದರು. ಬ್ರಿಟಿಷರು ಗೆಲಿಪೋಲಿಯವನ್ನು ಬಿಟ್ಟು ಹಿಂದೆ ಸರಿಯಬೇಕಾಯಿತು ಇದೀಗ ಕೆಮಾಲರ ಪ್ರಖ್ಯಾತಿಯು ದೇಶದಲ್ಲಿ ಹಬ್ಬಿತು, ಅವರೀಗ ಪಾಶ (ಜನರಲ್)ಪದವಿಗೇರಿಸಲ್ಪಟ್ಟರು. 1917ರಲ್ಲಿ ರಷ್ಯದೊಂದಿಗೂ 1918ರಲ್ಲಿ ಇಗ್ಲೆಂಡಿನೊಂದಿಗೂ ಒಪ್ಪಂದವಾಯಿತು. ಆದರೆ ಟರ್ಕಿಯು ಇನ್ನಷ್ಟು ದುರವಸ್ಥೆಯ ದುರ್ಗತಿಗೆ ಬಲಿಬಿದ್ದು ನಿಸ್ತೇಜತೆಯನ್ನು ಹೊಂದಿತ್ತು.

1918ರಿಂದ 1922ರ ವರೆಗಿನ ಕಾಲವು ಕೆಮಾಲಪಾಶರ ಮಹತ್ವಿಕೆಯ ಸಾಧನೆಯ ಹೋರಾಟದ ಕಾಲ ಮೊದಲಣ ಸುಲ್ತಾನನು ಮಡಿದು ಹೊಸ ಸುಲ್ತಾನನು ಅಧಿಕಾರಕ್ಕೆ ಬಂದನು. ಅನ್ವಾರ್ ಪಾಶನು ರಷ್ಯಕ್ಕೆ ತಲೆತಪ್ಪಿಸಿಕೊಂಡು ಹೋಗಿ ಅಲ್ಲಿ ಮಡಿದನು. ಟರ್ಕಿಯು ಕಳವಳದಿಂದ ಕಂಗೆಟ್ಟಿತು. ಈ ಕಾಲದಲ್ಲಿ ರಾಜನೂತ್ರವು ಪ್ರಬಲ ನಾಯಕರಾದ ಕೆಮಾಲರ ಕೈವಶವಾಗಿ, ಅವರ ಅಸಾಮಾನ್ಯ ವ್ಯಕ್ತಿತ್ವದ ಪ್ರಭಾವದಿಂದ ಟರ್ಕಿಯು ಜಗತ್ತಿನ ಉನ್ನತ ರಾಷ್ಟ್ರಗಳಲ್ಲೊಂದಾಗಿ ಮಾರ್ಪಡುವ ಸಂಯೋಗವನ್ನು ಕಂಡಿತು.

ಟರ್ಕಿಯು 1923ನೇ ಅಕ್ಟೋಬರ 29ರಲ್ಲಿ ಪ್ರಜಾಸ್ವಾತಂತ್ರವುಳ್ಳ ರಾಷ್ಟ್ರವಾಗಿ ಪ್ರಸಿದ್ಧಿಪಡೆಯಿತು ಕೆಮಾಲರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು. ಹಾಗೆಯೇ ತಾನಾಗಿ ತನ್ನ ವ್ಯಕ್ತಿತ್ವದಿಂದಾಗಿ, ಟರ್ಕಿಯ ಸರ್ವಾಧಿಕಾರಿಗಳಾದರು ಟರ್ಕಿ ಈಗ ತೀವ್ರ ಸುಧಾರಣೆಯಲ್ಲಿ ತೊಡಗಿತು.

ಕೆಮಾಲರ ಹಲಕೆಲವು ವಿರೋಧಿಗಳು ಅವರ ಕಾರ್ಯಕ್ಕೆ ವಿರುದ್ಧವಾಗಿ ದಂಗೆಯೇಳುವುದರಲ್ಲಿದ್ದರು ಆದರೆ ಧೀರರಾದ ಕೆಮಾಲರು ಅವರನ್ನು ಸದೆಬಡಿದು, ತನ್ನ ದೇಶದ ಸುಧಾರಣೆಯಲ್ಲಿ ಮುಂದಾದರು. ಅವರು ಒಂದರಮೇಲೊಂದು ಎಡೆಬಿಡದೆ ಬಂದ ಕಷ್ಟಗಳನ್ನು ಧೀರತನದಿಂದ ಎದುರಿಸಿ, ಅವಿಶ್ರಾಂತವಾಗಿ ಗೆದ್ದು, ಟರ್ಕಿಯನ್ನು ಕೆಲವೇ ಕಾಲದೊಳಗೆ ತನ್ನ ಉನ್ನತ ಧ್ಯೇಯದ ಗುರಿಮುಟ್ಟಿಸಿದರು

ಕೆಮಾಲ ಅಟಾಟರ್ಕ್ (ಟರ್ಕಿಯರ ಪಿತ) ಇವರ ಅಧಿನಾಯಕತನದಿಂದ ಟರ್ಕಿಯು ಹಿಂದೆಂದೂ ಊಹಿಸದ ಮಾರ್ಪಾಟವನ್ನು ಕಂಡಿತು. ರೂಢಿ ಬದ್ಧವಾದ ಹಳಕಾಲದ ಅಂಧಶ್ರದ್ಧೆ, ಅನಾಚಾರ, ಅವಿದ್ಯೆ, ಅಜ್ಞಾನವನ್ನು ನಿರ್ನಾಮ ಮಾಡುವದರಲ್ಲಿ ಕೆಮಾಲರು ತೊಡಗಿದರು ಗೋಷಾಪದ್ಧತಿ, ನಿರ್ನಾಮವಾಯಿತು. ಯುರೋಪಿಯಾನ ಉಡುಗೆ ತೊಡಿಗೆ, ಪತ್ರರೋಮನ್ ಲಿಪಿಯು ಪ್ರಚಾರಕ್ಕೆ ಬಂದು ದೇಶದ ಕೃಷಿ, ವ್ಯಾಪಾರ ವಹಿವಾಟುಗಳು ಅಭಿವೃದ್ಧಿ ಹೊಂದಿದುವು ಜನರು ವಿದ್ಯಾವಂತರಾದರು ದೇಶದ ಆರ್ಥಿಕ ಸ್ಥಿತಿಯು ಉನ್ನತಿಗೇರಿತು ದೇಶವು ಬಹುಕಾಲದ ಮಬ್ಬಿನಿಂದ ಎಚ್ಚತ್ತು, ನವೀನ ಮಾರ್ಗವನ್ನನುಸರಿಸಿ, ನವಚೇತನವನ್ನೇ ಹೊಂದಿ, ಗಣನೀಯ ಜನಾಂಗವಾಗಿ, ಅಭಿಮಾನದಿಂದ ತಲೆಯೆತ್ತಿ ನಿಲ್ಲುವ ರಾಷ್ಟ್ರವಾಗಿ ಮಾರ್ಪಟ್ಟಿತು. ಟರ್ಕಿಯ ಇತಿಹಾಸವು ಬದಲಾಯಿತು ತನ್ನ ದೇಶವನ್ನು ಇಂದಿನ ಘನತೆಗೇರಿಸಿದ ಕೆಮಾಲಪಾಶರು ನವ ಟರ್ಕಿಯ ಪಿತನೆನಿಸಿ, ಅವಸಾನಹೊಂದಿದರು ಅವರ ಮಾನವ ಕಾಯವು ನಷ್ಟಹೊಂದಿತು, ಆದರೆ ಅವರ ಯಶೋಶರೀರವು ಎಂದೆಂದೂ ಜಾಜ್ವಲ್ಯಮಾನವಾಗಿ ಇತಿಹಾಸದಲ್ಲಿ ವಿರಾಜಿಸುತ್ತಿರುವುದು.

ಬೇಕಾಗಿದ್ದಾರೆ

ಜಗತ್ಪ್ರಸಿದ್ಧವಾದ ಯುರೋಪಿಯನ್ ವಿಮಾ ಕಂಪೆನಿಗೆ ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆಗಳ ಪ್ರತಿ ಒಂದು ತಾಲೂಕುಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಯೋಗ್ಯ ರೀತಿಯಿಂದ ಕೆಲಸ ಮಾಡುವವನು ತಿಂಗಳಿಗೆ ರೂಪಾಯಿ 100ರಂತೆ ಸಂಪಾದನೆ ಮಾಡಬಹುದು.

ವಿಶೇಷ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಯಮ್ ಪಾಂಡ್ಯ, ಬಿ.ಯಸ್ಸಿ
ಸೆಕ್ರೆಟರಿ,
ಅಲ್ಲಿಯಾನ್ಸ್ ಉಂಡ್ ಸ್ಟುಟಗಾರ್ಟರ್
ಲೈಫ್ ಇನ್ಶೂರೆನ್ಸ್ ಬ್ಯಾಂಕ್, ಲಿಮಿಟೆಡ್,
ಪೋಸ್ಟ್ ಬಾಕ್ಸ್ ನಂ 451,
ಮುಂಬಾಯಿ.

C. M. PANDYA, B. Sc.
SECRETARY
ALLIANZ UND STUTTGARTER
LIFE INSURANCE BANK LIMITED
Post Box No. 451
BOMBAY.

READ
NAVAYUGA

ಕರ್ನಾಟಕ ಏಕೀಕರಣ ಮತ್ತು ಸ್ವತಂತ್ರ ಪ್ರಾಂತ್ಯ ನಿರ್ಮಾಣ ಸಮಸ್ಯೆ

ಲೇಖಕರು—ಶ್ರೀ। ಜನಗಲ್ ರಾಮರಾವ್, ಎಂ ಎ, ಎಲ್.ಎಲ್.ಬಿ., ಮಲ್ಲೇಶ್ವರ, ಬೆಂಗಳೂರು.

ನಮ್ಮ ಕರ್ನಾಟಕ ದೇಶದಲ್ಲಿ ಈ ಸಮಸ್ಯೆಯು ಹೊರಟು ಇಂದಿಗೆ ಸುಮಾರು ೨೦ ವರ್ಷಗಳ ಕಾಲವಾಯಿತು. ಅಲ್ಲಿಂದೀಚೆಗೆ ತೀವ್ರವಾದ ಚಳುವಳಿ ನಡೆದು, ಹಲವೆಲ್ಲ ಅವಸ್ಥಾಂತರಗಳನ್ನು ಹೊಂದಿ, ಕೊನೆಗೆ ರಾಷ್ಟ್ರೀಯ ಸಭೆಯವರು ಇದನ್ನು ತಮ್ಮ ಕೈಗೆ ತೆಗೆದುಕೊಂಡರು. ಮತ್ತು ಭಾಷಾವಾರು ಪ್ರಾಂತ್ಯ ನಿರ್ಮಾಣದ ಈ ಏರ್ಪಾಡು ವ್ಯವಹಾರ್ಯವೂ ಅವಶ್ಯವಾಗಿ ಆಗಬೇಕಾದುದೂ ಆದುದೆಂದು ಒಪ್ಪಿಕೊಂಡು, ತಾವು ಅಧಿಕಾರಾರೂಢರಾದೊಡನೆ ಇದನ್ನು ತಾವು ಆದಷ್ಟು ತ್ವರೆಯಾಗಿ ಕಾರ್ಯರೂಪಕ್ಕೆ ಬರುವಂತೆ ಮಾಡುವೆವೆಂದು ಆಶ್ವಾಸನವಿತ್ತರು. ಅದೃಷ್ಟವಶಾತ್, ಒಂದು ವರ್ಷದ ಕೆಳಗೆ ಕಾಂಗ್ರೆಸ್ ಪಕ್ಷದವರು ಪ್ರಚಂಡ ಬಹುಮತದಿಂದ ವಿಜಯಿಗಳಾಗಿ, ೭ ಸಂಸ್ಥಾನಗಳಲ್ಲಿ ಮಂತ್ರಿಮಂಡಲಗಳನ್ನು ರಚಿಸಿ ಅಧಿಕಾರ ಸೂತ್ರಗಳನ್ನು ತಮ್ಮ ಕೈಗೆ ತೆಗೆದುಕೊಂಡರು. ಆಗ ಇತರ ಉಪಜನಾಂಗಗಳು ಹೇಗೋ ಕನ್ನಡಿಗರೂ ಹಾಗೆಯೇ. "ಇನ್ನೇನು ಶೀಘ್ರದಲ್ಲಿಯೇ ನಮ್ಮ ಮಾತೃಭೂಮಿಯು ಸ್ವತಂತ್ರಳಾಗಿ ಬಾಳುವ ಸುದಿನಗಳನ್ನು ನೋಡುವೆವು" ಎಂದು ತುಂಬ ಆಶೆಯೊಡನೆ ಇದಿರು ನೋಡತೊಡಗಿದರು. ಇಷ್ಟರೊಳಗೆ ಅದೇನು ವಿಧಿವಿಲಾಸವೋ! ಬೊಂಬಾಯಿ ಮಂತ್ರಿ ಮಂಡಲದ ಸಚಿವರಲ್ಲೊಬ್ಬರೂ, ಕಾಂಗ್ರೆಸ್ ಪಕ್ಷದವರೂ, ಸ್ವತಃ ಅಚ್ಚ ಕನ್ನಡಿಗರೂ ಆದ ಶ್ರೀಮಾನ್ ಲಟ್ಠೆಯವರು ಅನಿರೀಕ್ಷಿತವಾಗಿ, 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಬಾತ್ಮೀದಾರನಿಗೆ ಕರ್ನಾಟಕ ಸ್ವತಂತ್ರ ಪ್ರಾಂತ್ಯ ನಿರ್ಮಾಣದ ವಿಷಯದಲ್ಲಿ ತಮ್ಮ ಪ್ರತಿಕೂಲಾಭಿಪ್ರಾಯವನ್ನು ತಿಳಿಯಪಡಿಸಿ, ಕರ್ನಾಟಕ ಜನತೆಯ ದೊಡ್ಡ ಭಾಗದವರ ಮನಸ್ಸು ನೋಯಿಸಿದರು. ಇವರ ಈ ಘೋಷಣೆಯು ಏಕೀಕರಣವಾದಿಗಳಾದ ಕನ್ನಡಿಗರ ಪಾಳೆಯದಲ್ಲಿ ದೊಡ್ಡದೊಂದು ಸಿಡಿಮದ್ದಿನ ಗುಂಡನ್ನೇ ಎಸೆದಂತಾಯಿತು. ಕನ್ನಡಿಗರನೇಕರು ಕೆರಳಿ, ಕೋಪಪರವಶರಾಗಿ, ಅಲ್ಲಲ್ಲಿ ಸಭೆಗಳನ್ನು ನೆರೆಯಿಸಿ ಕಾಂಗ್ರೆಸ್ಸಿಗೆ ಅಧೀನರಾಗಿ, ಕಾಂಗ್ರೆಸ್ಸಿನ ತತ್ವಗಳನ್ನನುಸರಿಸಿ ಮಂತ್ರಿಪದವಿಗೇರಿದ ಶ್ರೀ। ಲಟ್ಠೆಯವರು ಕಾಂಗ್ರೆಸ್ಸಿನ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಮಾತನಾಡಿ, ಅವಿಧೇಯತೆಯನ್ನು ತೋರಿಸಿರುವ ಪ್ರಯುಕ್ತ, ಇವರನ್ನು ಕಾಂಗ್ರೆಸ್ಸು ಪಕ್ಷದಿಂದಲೂ ಸಚಿವ ಪದವಿಯಿಂದಲೂ ದೂರಗೊಳಿಸತಕ್ಕದೆಂದು-ನಿರ್ಣಯಗಳನ್ನು ಮಾಡಿ ಬಲವಾದ ಚಳುವಳಿಯೆಬ್ಬಿಸಿದರು. ಅಂದಿನಿಂದೀಚೆಗೆ, ಶ್ರೀ। ಲಟ್ಠೆಯವರು ಆ ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯವೆಂದು ಪ್ರಚುರವಾಗಿರುವ ವಿಷಯಗಳೊಳಗೆ ಕೆಲಕೆಲವು ತಮ್ಮ ಅಭಿಪ್ರಾಯವನ್ನು ಸರಿಯಾಗಿ ವ್ಯಕ್ತಗೊಳಿಸಿಲ್ಲವೆಂದು ಹೇಳಿ, ಮುಂದಿನ (ಆಗಸ್ಟ ೩ನೇ ತಾರೀಕಿನ) ಸಂಚಿಕೆಯಲ್ಲಿ ಅವನ್ನು ಸ್ಪಷ್ಟಗೊಳಿಸಿದರು. ಈ ಕಾರಣದಿಂದಲೂ ಈ ಕುರಿತು ಆ ಬಳಿಕ ಕನ್ನಡಿಗರ ಮುಖಂಡರು ಶ್ರೀ। ವಲ್ಲಭಭಾಯಿ ಪಟೇಲರಲ್ಲಿಗೆ ದೂರು ಒಯ್ದು, ಅವರು ಕೊಟ್ಟ ಸ್ಪಷ್ಟವಾದ ಆಶ್ವಾಸನದಿಂದಲೂ ಕನ್ನಡಿಗರು ಸಂತುಷ್ಟರಾಗಿ ಶ್ರೀ। ಲಟ್ಠೆಯವರ ಸಂಬಂಧವಾದ ತಮ್ಮ ಚಳುವಳಿಯನ್ನು ಕೊಂಚಮಟ್ಟಿಗೆ ಶಾಂತಗೊಳಿಸಿರುವರು.

ಶ್ರೀ ಲಟ್ಠೆಯವರು ಹೇಳಿರುವುದೇನು? ಅವರು ಕೊಟ್ಟ ಅಭಿಪ್ರಾಯವು 'ಟೈಮ್ಸ್' ಪತ್ರಿಕೆಯೊಂದು ಬಿಟ್ಟು ಬೇರೆ ಯಾವ ಕನ್ನಡ ಅಥವಾ ಇಂಗ್ಲಿಷ್ ಪತ್ರಿಕೆಗಳಲ್ಲಿಯೂ ಅಚ್ಚಾಗಿರುವಂತೆ ತೋರಲಿಲ್ಲ. ಅದರ ಟೀಕೆಟಿಪ್ಪಣಿಗಳು ಮಾತ್ರ ಬಹಳವಾಗಿ ಬಂದಿವೆ. ಆದುದರಿಂದ ಆ ಅಭಿಪ್ರಾಯವನ್ನು ಸಂಗ್ರಹವಾಗಿ ಇಲ್ಲಿ ಕೊಡುವೆನು:—

೧. ಬೊಂಬಾಯಿ ಮತ್ತು ಮದ್ರಾಸು ಪ್ರಾಂತ್ಯಗಳಲ್ಲಿಯ ಕನ್ನಡ ಜಿಲ್ಲೆಗಳನ್ನು ಒಂದುಗೂಡಿಸಿ ಒಂದು ಪ್ರತ್ಯೇಕವಾದ ಸ್ವತಂತ್ರ ಆಡಳಿತದ ಪ್ರಾಂತ್ಯವನ್ನಾಗಿ ಮಾಡುವುದು ತತ್ಕಾಲದಮಟ್ಟಿಗಾದರೂ ಅನುಚಿತವು.

೨. ವಾರ್ಧಾದಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು, ಹಿಂದೀ (Indian) ಜನರಿಗೆ ಈಗಳಿನಕ್ಕಿಂತ ಹೆಚ್ಚು ಸ್ವಾತಂತ್ರ್ಯವು ಪ್ರಾಪ್ತವಾಗುವತನಕ, ಕರ್ನಾಟಕ ಏಕೀಕರಣ ಪ್ರಸಕ್ತಿಯು ಕೂಡಲೇ ಕೈಕೊಳ್ಳಬೇಕಾದ ವಿಷಯವಾಗಿರಕೂಡದೆಂದು ನಿರ್ಣಯಿಸಿರುವುದು ವಿವೇಕಯುಕ್ತವಾಗಿದೆ.

೩. ಪ್ರತ್ಯೇಕ ಪ್ರಾಂತ್ಯವಾಗಿ ಏರ್ಪಟ್ಟರೆ, ಕರ್ನಾಟಕವು ಆರ್ಥಿಕ ದೃಷ್ಟಿಯಿಂದ, ಖಂಡಿತವಾಗಿಯೂ ಆತ್ಮಾವಲಂಬಿಯಾಗದು. ಬಡತನದ ಬೀಡಾದ, ಬರಗಾಲದ ತವರುಮನೆಯಾದ ಕನ್ನಡ ಜಿಲ್ಲೆಗಳಿಂದ ಏರ್ಪಡುವ ಆ ಪ್ರಾಂತ್ಯದ ಉತ್ಪನ್ನವು, ಅದನ್ನು ನಡೆಯಿಸಿಕೊಂಡು ಹೋಗುವುದಕ್ಕೆ ಬೇಕಾಗುವ ಸಿಬ್ಬಂದಿಯ ವೆಚ್ಚವನ್ನು ಎಷ್ಟುಮಾತ್ರಕ್ಕೂ ಸಹಿಸಲಾರದು. ಈ ಮುಂದಾದರೂ ಉತ್ಪನ್ನವನ್ನು ಬೇಕಾದಷ್ಟು ಮಟ್ಟಿಗೆ ಹೆಚ್ಚಿಸಲು ಬೇಕಾದಂಥ ಮೂಲಾಧಾರಗಳಾವುವೂ ಆ ಪ್ರಾಂತ್ಯದಲ್ಲಿ ಇರುವುದಿಲ್ಲ. ಬಹಳ ಕಾಲದ ತರುವಾಯ, ಒಂದುವೇಳೆಗೆ, ಕೊಂಚ ಪ್ರಯೋಜನವಾದರೂ ಆಗಬಹುದು.

೪. ಪ್ರತ್ಯೇಕ ಪ್ರಾಂತ್ಯವೇರ್ಪಡಬೇಕೆಂಬ ಬಯಕೆಗೆ, ತೀವ್ರವಾದ ಉತ್ಸಾಹಕ್ಕೆ ಅಧಿಕಾರವು ತಮ್ಮ ಕೈಗೆ ಬರಬೇಕೆಂಬ ಆಶೆಯೇ ಕಾರಣವಾಗಿದೆ. ಪ್ರಾಂತ್ಯವು ಚಿಕ್ಕದಾದರೆ ಅಧಿಕಾರವನ್ನೂ, ಅಧಿಕಾರದ ಹುದ್ದೆಗಳನ್ನೂ ಪಡೆಯಲು ಸೌಕರ್ಯಗಳು ಹೆಚ್ಚಾಗವುವೆಂಬ ಭಾವನೆಯು ಜನರಲ್ಲಿ ನೆಲಸಿಕೊಂಡಿದೆ. ಬ್ರಾಹ್ಮಣರೂ ಲಿಂಗಾಯತರೂ, ಇತರ ಪಂಗಡಗಳವರೂ ಕೂಡ ತಾವು ತಾವು ಮುಂದಕ್ಕೆ ಬರುವುವೆಂದು ನಿರೀಕ್ಷಿಸುತ್ತಿದ್ದಾರೆ. ಅನುಷ್ಠಾನದಲ್ಲಿ ಇವರ ದೆಸೆಯಿಂದ ಜಗಳಗಳು ಇನ್ನಷ್ಟು ಹೆಚ್ಚುವುವು. ಕಾಂಗ್ರೆಸ್ಸಿನವರಲ್ಲಿ ಕೂಡ ಬೇರೆ ಬೇರೆ ಜಿಲ್ಲೆಗಳಲ್ಲಿ ಭಿನ್ನ ಭಿನ್ನ ಭಾವನೆಗಳೂ, ವೈಮನಸ್ಯಗಳೂ ಇವೆ. ಬ್ರಾಹ್ಮಣರಲ್ಲಿಯೂ ಲಿಂಗಾಯತರಲ್ಲಿಯೂ, ಹಲವೆಲ್ಲ ಪಂಗಡಗಳೂ, ಸ್ವಜಾತಿ ಪಕ್ಷಪಾತವೂ ಇರುವುದು. ಪ್ರತ್ಯೇಕ ಪ್ರಾಂತ್ಯ ನಿರ್ಮಾಣದಿಂದ ಇವು ಮತ್ತಷ್ಟು ಹೆಚ್ಚಾಗದಿರವು.

೫. ಸಾಹಿತ್ಯ ಮತ್ತು ಸಂಸ್ಕೃತಿಗಳ ಉನ್ನತಿಯಬಗ್ಗೆ ಕನ್ನಡ ಜನರು, ಬೇಕಾದರೆ, ತಮ್ಮದೇ ಒಂದು ಕರ್ನಾಟಕ ವಿಶ್ವವಿದ್ಯಾಲಯವನ್ನು ಇಟ್ಟುಕೊಳ್ಳಬಹುದು. ಈ ವಿಷಯದಲ್ಲಾದರೂ, ಕರ್ನಾಟಕದೊಳಗಣ ವಿದ್ಯಾಶಾಲೆಗಳನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಸಂಯೋಜಿಸುವ ಪ್ರಸಕ್ತಿಯನ್ನು ಕನ್ನಡ ಜಿಲ್ಲೆಗಳವರು ಆಲೋಚಿಸುವುದು ಉತ್ತಮ. ಪ್ರತ್ಯೇಕವಾಗಿ ಕರ್ನಾಟಕ ಯೂನಿವರ್ಸಿಟಿಯನ್ನು ಸ್ಥಾಪಿಸುವುದಕ್ಕೆ ಬೇಕಾದ ಸಾಧನ ಸಂಪತ್ತುಗಳು ಬ್ರಿಟಿಷ್ ಕರ್ನಾಟಕದ ಜಿಲ್ಲೆಗಳಲ್ಲಿ ಇರುವುದಿಲ್ಲ. ಅವು ಪ್ರಾಪ್ತವಾಗುವ ಪರ್ಯಂತ, ವಸ್ತುತಃ ಕರ್ನಾಟಕದ ವಿದ್ಯಾಪೀಠವೇ ಆಗಿರುವ ಮೈಸೂರು ಯೂನಿವರ್ಸಿಟಿಯನ್ನು ಸೇರಲು ಸಾಧ್ಯಪಡಿಸಿಕೊಳ್ಳುವುದು ಲೇಸು.

೬. ಕಾಂಗ್ರೆಸ್ ಸರಕಾರವು ಬಂದಂದಿನಿಂದೀಚೆಗಾದರೂ, ಕನ್ನಡಿಗರ ಹಿತಸಂಬಂಧಗಳಿಗೆ ತಕ್ಕಷ್ಟು ರಕ್ಷಣೆ ಸಿಕ್ಕುವುದಿಲ್ಲವೆಂಬ ಆಕ್ಷೇಪಣೆಯು ಅಷ್ಟೊಂದು ಸಕಾರಣವಾದುದಲ್ಲ. ಕಾಂಗ್ರೆಸ್ ಸರಕಾರದವರು ದೇಶದ ಯಾವಭಾಗದ ವಿಷಯದಲ್ಲಾದರೂ ಪಕ್ಷಪಾತದೃಷ್ಟಿಯಿಂದ ನೋಡುವವರಲ್ಲ. ಪರ್ಯಾಂತರದಲ್ಲಿ ಬೊಂಬಾಯಿ ಮದರಾಸುಗಳಂಥ ದೊಡ್ಡ ದೊಡ್ಡ ಪ್ರಾಂತ್ಯಗಳ ಅಂಗಗಳಾಗಿರುವುದರಿಂದಲೇ ಕನ್ನಡ ಜಿಲ್ಲೆಗಳಿಗೆ ಹೆಚ್ಚು ಲಾಭವಾಗುತ್ತಿದೆ.

೭. ಕನ್ನಡ ಜಿಲ್ಲೆಗಳನ್ನೆಲ್ಲ ಮುಂಬಯಿ ಅಥವಾ ಮದ್ರಾಸು (ವಿಶೇಷತಃ ಮುಂಬಯಿ) ಪ್ರಾಂತ್ಯದೊಳಗೆ ಸೇರಿಸುವ ವಿಷಯದಲ್ಲಿ ಆಕ್ಷೇಪವಿಲ್ಲ. ಎರಡು ಮೂರು ಜಿಲ್ಲೆಗಳನ್ನು ಬೊಂಬಾಯಿಗೆ ಸೇರಿಸಿದ ಮಾತ್ರದಿಂದ ಆಡಳಿತದಲ್ಲಿ ಅಡಚಣೆಗಳು ಬರುವಂತಿಲ್ಲ.

೮. ಭಾಷಾನುಗುಣ ಪ್ರಾಂತ್ಯರಚನೆಯ ತತ್ವವು ತನಗೂ (ಶ್ರೀ। ಲಟ್ಠೆಯವರಿಗೂ) ಒಪ್ಪಿತವಾಗಿದೆ. ಆದರೆ ಅವಸರದಿಂದ ಪ್ರತ್ಯೇಕ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗುವುದನ್ನು ತಾನು ವಿರೋಧಿಸುತ್ತೇನೆ.

ಇದೇ ಶ್ರೀ। ಲಟ್ಠೆಯವರ ಅಭಿಪ್ರಾಯಗಳ ಮುಖ್ಯಾಂಶವು. ಆ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ, ಶ್ರೀಯುತರು ತಮ್ಮ ಹೇಳಿಕೆಯಲ್ಲಿ ಪತ್ರಿಕಾ ಪ್ರತಿನಿಧಿಯು ತಪ್ಪಾಗಿಕೊಟ್ಟಿರುವ ಅಂಶಗಳನ್ನು ತಿದ್ದಿ ತಿಳಿಯಪಡಿಸಿರುವರು. ಅವು ಯಾವುವೆಂದರೆ:—

(a) ಕನ್ನಡ ಜಿಲ್ಲೆಗಳಲ್ಲಿ ಬೇರೆ ಬೇರೆ ಪಂಗಡಗಳಿರುವುದಕ್ಕೂ ಪ್ರತ್ಯೇಕ ಪ್ರಾಂತ್ಯ ನಿರ್ಮಾಣದ ಪ್ರಸಕ್ತಿಗೂ ಯಾವುದೊಂದು ಸಂಬಂಧವಿರುವುದಿಲ್ಲ.

(b) ನದಿಗಳಿಗೆ ಅಣೆಕಟ್ಟು ಕಟ್ಟಿ ನೀರಾವರಿಗೆ ಅನುಕೂಲಪಡಿಸುವ ಏರ್ಪಾಡು, ಕಾಡುಗಳ ಉತ್ಪತ್ತಿಯನ್ನು ಉಪಯೋಗಿಸಿಕೊಂಡು ನೂತನವಾಗಿ ಉದ್ಯಮಗಳನ್ನು ಹೊರಡಿಸುವ ಏರ್ಪಾಡು ಇತ್ಯಾದಿಗಳನ್ನು ಪರಿಶೋಧಿಸುವ ಬಗ್ಗಾಗಿ ಈ ಮೊದಲು ನೇಮಕಪಟ್ಟ ಅಧಿಕಾರಿಗಳ ವರದಿಗಳು ಅಷ್ಟೊಂದು ಆಶಾಜನಕವಾಗಿಲ್ಲವೆಂಬುದು ನಿಜವಾದರೂ, ಪ್ರಕೃತದ ಸರ್ಕಾರದವರು ಅವನ್ನು ಒಂದು ನೂತನ ಮತ್ತು ಸಹಾನುಭೂತಿಯುಕ್ತವಾದ ದೃಷ್ಟಿಕೋನದಿಂದ ಪುನಃ ವಿಮರ್ಶಿಸಬೇಕೆಂದಿರುವರು. ಉದಾಹರಣೆಯಾಗಿ, ಬಂಬಿನ (ಬಿದಿರಿನ) ಪಳುಕಿನಿಂದ ಕಾಗದಮಾಡುವ ಉದ್ಯೋಗಕ್ಕೆ ಸಹಾಯಕೊಡಬೇಕೆಂದು ಅವರು ಆಲೋಚಿಸುತ್ತಲಿದ್ದಾರೆ.

(c) ಮೇಲೆ ಹೇಳಿದಂಥ ಕೆಲವು ಏರ್ಪಾಡುಗಳಿಂದ ಕೆಲಕೆಲವು ಕರ್ನಾಟಕ ಜಿಲ್ಲೆಗಳ ಸಾಂಪತ್ತಿಕ ಸ್ಥಿತಿಯು ಈಗಣಕ್ಕಿಂತ ಉತ್ತಮವಾಗಬಹುದಾಗಿದೆ. ತಥಾಪಿ ಭಾಷಾನುಗುಣವಾಗಿ ಏರ್ಪಟ್ಟ ಪ್ರತ್ಯೇಕವಾದ ಒಂದು ಪ್ರಾಂತ್ಯದಲ್ಲಿ ಆತ್ಮಾವಲಂಬಿಯಾದ ಅಂಗಗಳಾಗಿ ಇರುವಷ್ಟು ಮಟ್ಟಿಗೆ ಅವುಗಳ ಆದಾಯವು ಬೆಳೆಯುವಂತಿದೆಯೇ? ಎಂಬ ಪ್ರಶ್ನೆಗೆ ಸಮರ್ಪಕವಾದ ಸಮಾಧಾನ ಸಿಕ್ಕುವಂತಿಲ್ಲ. ಆದರೆ ಈ ಸಂಗತಿಯನ್ನು ಮುಂದೆ ಎಂದಾದರೂ ಆಲೋಚನೆಗೆ ತೆಗೆದುಕೊಳ್ಳಬಹುದಾಗಿದೆ.

(d) ಭಾಷಾವಾರು ಪ್ರಾಂತ್ಯಗಳ ತತ್ವಕ್ಕೆ ತಾನು (ಶ್ರೀ। ಲಟ್ಠೆಯವರು) ವಿರೋಧಿಯಲ್ಲವೆಂದು ಪುನಃ ಒತ್ತಿ ಹೇಳುತ್ತೇನೆ. ಆದರೆ ದೇಶದ ಮತ್ತು ಜನತೆಯ ಸಾಂಪತ್ತಿಕ ಬಲವು ಕಡಿಮೆಯಾಗಿರುವ ಈಗಣ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

ಜಗತ್ಪ್ರಸಿದ್ಧ

"ಗೊನೊಕಿಲರ್" ರಜಿಸ್ಟರ್ಡ್



ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲ್ಲರ್' ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ. ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುಬಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇನ್ನೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ ಖರ್ಚು ೦-೬-೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer Dr. D N. JASANI, Vitalbhai Patel Road, BOMBAY 4.

ಸ್ಥಿತಿಯಲ್ಲಿ ಕನ್ನಡ ಭಾಷೆಯನ್ನಾಡುವ ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ಪ್ರತ್ಯೇಕ ಪ್ರಾಂತವಾಗಿ ಏರ್ಪಡಿಸುವುದು ವಿಹಿತವಲ್ಲವೆಂದು ತಮಗೆ (ಶ್ರೀ| ಲಟ್ಟೆಯವರಿಗೆ) ತೋರುತ್ತದೆ.

ಶ್ರೀ|| ಲಟ್ಟೆಯವರ ಅಭಿಪ್ರಾಯಗಳನ್ನು, ಅವರ ವಿಷಯದಲ್ಲಿ ವಾಚಕರಿಗೆ ತಪ್ಪು ಭಾವನೆಯುಂಟಾಗದಂತೆ ಸಾಧ್ಯವಾದಷ್ಟು ಸರಿಯಾಗಿ ಸಂಗ್ರಹಿಸಿರುವೆನು. ಅವನ್ನು ಸೂಕ್ಷ್ಮವಾಗಿ ಪರಿಶೀಲಿಸಿದುದರಲ್ಲಿ ಶ್ರೀ|| ಲಟ್ಟೆಯವರಿಗೆ ಭಾಷಾವಾರು ಪ್ರಾಂತ್ಯ ನಿರ್ಮಾಣದ ವಿಷಯದಲ್ಲಿ ನಂಬುಗೆಯೂ ಸಹಾನುಭೂತಿಯೂ ಇರುವುದಿಲ್ಲವೆಂದೂ ರಾಷ್ಟ್ರೀಯ ಪಕ್ಷದ ಕಡೆಯಿಂದ ಆಯ್ದು ಬಂದು ಮಂತ್ರಿ ಪದಕ್ಕೇರಿದ ಪ್ರಯುಕ್ತ 'ಒತ್ತಾಯದಿಂದ ದೇವಯ್ಯ ಭಟ್ಟನ ರುಜು' ಎಂಬಂತೆ ಶಿಸ್ತುಭಂಗವಾಗಬಹುದೆಂಬ ಅಂಜಿಕೆಯಿಂದ ಮಾತ್ರ ಒಂದು ರೀತಿಯಾಗಿ ತಮ್ಮ ಅನುಮತಿಯನ್ನು ಸೂಚಿಸಿರುವರೆಂದೂ ಸ್ಪಷ್ಟವಾಗುತ್ತಿದೆ. ಅವರು ಆ ಬಳಿಕ ತಿದ್ದಿ ಹೇಳಿದ ಸಮಾಧಾನಗಳಿಂದಲಾದರೂ ಅವರ ಮೂಲಹೇಳಿಕೆಯಲ್ಲಿ ಮುಖ್ಯವಾದ ಯಾವುದೊಂದು ಮಾರ್ಪು ಆಗುತ್ತದೆಂದು ನನಗೆ ತೋರಲಿಲ್ಲ

ಶ್ರೀ|| ಲಟ್ಟೆಯವರ ಹೇಳಿಕೆಗಳಲ್ಲಿ ನೂತನವಾಗಿ ಗಮನಿಸತಕ್ಕ ಯಾವ ಅಂಶಗಳೂ ಇರುವುವೆಂದು ನಾನು ಭಾವಿಸುವುದಿಲ್ಲ ಈ ಮೊದಲು ಎಷ್ಟೋ ಮಂದಿ ವಿರೋಧಿಗಳು ಭಾಷಾವಾರು ಪ್ರಾಂತ್ಯಗಳ ವಿಷಯದಲ್ಲಿ ಹೇಳಿರುವ ಆಕ್ಷೇಪಣೆಗಳನ್ನೇ ಇವರೂ ಪುನಃ ಹೇಳಿದ್ದಾರೆ ಇವಕ್ಕೆ ಹಲವು ಬಾರಿ ಹಲವೆಡೆಗಳಲ್ಲಿ ಹಲವು ಜನ ಮುಖಂಡರು ಸಮರ್ಪಕವಾದ ಪ್ರತ್ಯುತ್ತರಗಳನ್ನು ಕೊಟ್ಟೂ ಇರುವರು. ನಾನದನ್ನು ಬೇರೊಂದು ಕಡೆ ಏರ್ಪಡಿಸೋಣಾಗಿರುವ ಒಂದು ಉಪನ್ಯಾಸ ಮಾಲಿಕೆಯ ಮೂಲಕ ಇಂತಹ ವಾದಕ್ಕೂ, ಆಕ್ಷೇಪಣೆಗಳಿಗೂ ಸಂದೇಹಗಳಿಗೂ ಬೇಗನೆ ಸವಿಸ್ತಾರವಾಗಿ ಸಮಾಧಾನ ಕೊಡಲು ಕೈಕೊಂಡಿರುವೆನು "ಶರಣ ಸಾಹಿತ್ಯ"ವು ಇದರ ವಿವರವಾದ ವಿವೇಚನೆಗೆ ಯುಕ್ತವಾದ ಸ್ಥಳವಲ್ಲ. ಆದುದರಿಂದ ಒಂದೆರಡು ವಿಷಯಗಳನ್ನು ಮಾತ್ರ ಸ್ವಲ್ಪ ವಿಸ್ತಾರವಾಗಿ ನಿರೂಪಿಸಿ, ಉಳಿದುದನ್ನು ಸಂಗ್ರಹವಾಗಿ ಹೇಳುವೆನು. ಆದರೆ ಈ ಲೇಖನವು ಶ್ರೀ| ಲಟ್ಟೆಯವರು ಮಾಡಿರುವ ಹಾಗೂ ಮಾಡದಿರುವ ಆಕ್ಷೇಪಣೆಗಳಿಗೆ ಕೂಡ ಸಮಾಧಾನವಾಗಿರುವುದರಿಂದ ಇದು ಶ್ರೀ|| ಲಟ್ಟೆಯವರನ್ನೊಬ್ಬರನ್ನೇ ಉದ್ದೇಶಿಸಿ ನಾನು ಬರೆದಿರುವಂತೆ ಯಾರೂ ತಿಳಿಯಲಾಗದೆಂದು ಪ್ರಾರ್ಥಿಸುವೆನು

ಹೆಚ್ಚು ಕಡಮೆ, ರಷ್ಯವನ್ನು ಬಿಟ್ಟ ಯೂರೋಪು ಖಂಡದಷ್ಟು ದೊಡ್ಡದಾಗಿರುವ ನಮ್ಮ ಭರತ ಖಂಡದಲ್ಲಿ ಈಗಲಾದರೂ ೧೦-೧೨ ದೊಡ್ಡ ದೊಡ್ಡ ಸ್ವತಂತ್ರ ಆಡಳಿತದ ಪ್ರಾಂತ್ಯಗಳಿವೆ. ಭಾಷಾನುಗುಣವಾಗಿ ಈ ಪ್ರಾಂತ್ಯಗಳನ್ನು ಪುನರೇರ್ಪಡಿಸಿದ ಪಕ್ಷದಲ್ಲಿ, ಇನ್ನು ಬರೀ ಎರಡು ಮೂರು ಪ್ರಾಂತ್ಯಗಳು ಮಾತ್ರ ಹೆಚ್ಚಾಗುತ್ತವೆ ಇದರಿಂದ ಕೇಂದ್ರದ ಆಡಳಿತಕ್ಕಾಗಲೀ ಜನತೆಯ ರಾಷ್ಟ್ರೀಯ ಐಕ್ಯಭಾವಕ್ಕಾಗಲೀ ತಲೆಕೆಳಗಾಗತಕ್ಕಂತಹ ಯಾವ ಹೆಚ್ಚುಕಡಮೆಯೂ ಆಗಲಾರದೆಂದು ವಿವೇಕದಿಂದ ವಿವೇಚಿಸಬಲ್ಲ ಯಾರಿಗೂ ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ ಆಯಾ ಕಾಲದ ಆಡಳಿತದ ಆವಶ್ಯಕತೆಗಳಿಗೆ ಬೇಕಾದಂತೆ, ಮನಸ್ಸಿಗೆಯಾಗಿ ತಾಲೂಕುಗಳನ್ನೂ ಜಿಲ್ಲೆಗಳನ್ನೂ ಸೇರಿಸಿ ಪ್ರಾಂತ್ಯಗಳನ್ನು ಏರ್ಪಡಿಸಿರುವುದರಲ್ಲಿ ಅವನ್ನು ಇಂದಿನವರೆಗೆ ಇದ್ದಂತೆಯೇ ಇರಗೊಡಿಸಿ ಆಡಳಿತ ನಡೆಸುವುದರಲ್ಲಿರುವ ಅನುಕೂಲತೆಗಳೇನು? ಒಂದೇ ಭಾಷೆ ಪ್ರಚಲಿತವಾಗಿರುವ ದೇಶಭಾಗಗಳನ್ನು ಗೊತ್ತಾದ ಒಂದು ಕ್ರಮದಂತೆ ಒಟ್ಟುಗೂಡಿಸಿ ಸ್ವತಂತ್ರ ಪ್ರಾಂತ್ಯಗಳನ್ನಾಗಿ ಮಾಡಿ ಆ ಜನರ ಸಂಪದಭಿವೃದ್ಧಿಗೂ ಸಂಸ್ಕೃತಿಯ ಉನ್ನತಿಗೂ ಅನುರೂಪವಾಗುವಂತೆ ರಾಜ್ಯಭಾರಮಾಡುವುದರಲ್ಲಿರುವ ಅನಾನುಕೂಲತೆಯೇನು? ಈ ಎರಡನೆಯ ಮಾರ್ಗವು ಅನುಚಿತವೆಂದು ಸಾಧಿಸುವುದು, ಬಹುಕಾಲದ ಬಳಕೆಯ ಕಾರಣದಿಂದ ಹಿಂದಿನ ಏರ್ಪಾಡೇ ಉತ್ತಮವೆಂದು ಭಾವಿಸುವುದು, ಇದೂ-ಮಹಾತ್ಮಾ ಗಾಂಧಿಯವರ ಮಾತಿನಲ್ಲಿ ಹೇಳುವುದಾದರೆ, ಒಂದು ವಿಧವಾದ ದಾಸ್ಯ ಪ್ರವೃತ್ತಿ (Slave mentality) ಯ ಉದಾಹರಣೆಯೂ, ರಾಜತಂತ್ರ ಪಟುಗಳೆನ್ನಿಸಿಕೊಳ್ಳಬೇಕೆಂದಿರುವವರಿಗೆ ಶೋಭಿಸುವುದಿಲ್ಲವೆಂದೂ ನಾನು ಹೇಳದಿರಲಾರೆನು.

(ಮುಂದುವರಿಯುವುದು.)

ತಾಯಿ (Mother)

ಬಸಿರೊಳ್ ನವಮಾಸ ಪೊತ್ತು,
ಕೊನೆಗೊಂದು ದಿನ ಪೆತ್ತು ।
ಪಸುಳೆಯಾದೆನಗೆ ಈ ಭುವಿಯ
ಮೊದಲ ಬೆಳಕನು ತೋರಿಸಿದೆ ।
ಅಜ್ಞಾನದಿಂದಳುವ ಎನ
ಗಕ್ಕರೆಯಿಂದಂಬಲಿಯನಿಕ್ಕ ।
ನಿಸ್ಸೀಮ ಪ್ರೇಮದಿಂದೆನ್ನ
ನಾರ ಸಲಹಿದೆ ನೀನು ॥
ಜೊಂಪು ಬರೆ ತವಕದಿಂ
ತೊಟ್ಟಿಲೊಳ್ ತೂಗಾಡಿ ।
ಹಟವಿಡಿದು ಕೂಗೆ ಬೇಸರಿಲ್ಲದೆ ಮತೆ
ಪೊತ್ತು ತಿರುಗಾಡಿ ।
ತೊದಲು ನುಡಿಗಳನಾಡಿ ನಗಿನಗಿಸಿ
ಮುದ್ದು ನುಡಿಗಲಿಸಿ ।
ಬಿದ್ದು ಕೂಗುವ ವೇಳೆ ನೈದಡವಿ
ಮುದ್ದಿಟ್ಟು ತಿದ್ದಿ ನಡೆಗಲಿಸಿ ।
ಬಾಲಲೀಲೆಗಳ ಕಂಡು ಮನ
ದೊಳಗೆ ಮಿಗೆ ಹಿಗ್ಗಿ ।
ಯೆನ್ನ ಜೀವನ ಲತೆಗೆ ಪೊಸ
ಕಳೆಯ ತುಂಬಿಸಿದೆ ।
ಚಂದದುಡಿಗೆಯ ತೊಡಿಸಿ
ಮುಂಗುರುಳುಗಳ ತಿದ್ದಿ ।
ಎಚ್ಚರದ ನುಡಿಪೇಳಿ ಪಾಠಶಾಲೆಗೆ
ಕಳುಹಿಸಿದೆ ನೀ ಯೆನ್ನ ॥
ಪಾಠಗಳ ಮುಗಿಸಿ ನಾ ಮನೆಗೆ
ಮರಳುವ ವೇಳೆ ।
ಬೇಸಗೆಯ ಬೇಗೆಯಲಿ ಬಾಡಿ
ದೆನ್ನಯ ಮೊಗವ ।
ನೋಡಿ ಮನನೊಂದು,
ಓಡಿಬಂದೆನ್ನ ಪಿಡಿದಪ್ಪಿ ।
"ಪಸುಳೆ ನೀ ಬಳಲಿದೆಯಾ"
ಎಂದೆನ್ನ ಮೈದಡವಿ ।
ಪಸಿವ ನೀಗಿಸಿ ಯೆನ್ನ ಹರುಷ
ಗೊಳಿಸಿದೆ ತಾಯಿ ॥
ಸಂಸಾರ ಸಾಗರದ ನಡುವೆ ಹಾಯಿ
ಹರಿದು ಆಧಾರ ತಪ್ಪಿ ।
ಕಷ್ಟ ಸಂಕಷ್ಟಗಳ ಜಂಝಾ
ಮಾರುತವು ಬಿಡದೆ ಬೀಸಿ ।
ಯೆನ್ನ ಜೀವನ ನೌಕೆಯದು
ದೆಸೆಗಾಣದೆ ಕಂಗೆಡುತಲಿರೆ ।
ನಿನ್ನ ಅಮೃತವಾಣಿಯೊಂದೆನಗೆ
ದಿಕ್ಚಕ್ರವಾಯ್ತು ॥
ನಾನು ನನ್ನದುಯೆಂಬ
ಸ್ವಾರ್ಥಾಭಿಲಾಷೆ ಈರ್ಷಾಸೂಯೆ ।
ಅಜ್ಞಾನ ನಿಕಟ ನಿಶೀಥದಲ್ಲಿ
ಬೆಂದು ಬೇಗುದಿಗೊಳ್ಳೆ ।
ನಿನ್ನ ನಯನುಡಿಯೆ ದಾರಿದೋರುವ
ದಿವ್ಯ ಜ್ಞಾನದೀವಿಗೆಯಾಯ್ತು ॥
ಯೆನ್ನ ಜೀವನ ಪಥದ ತೊಡರುಗಳ
ತುಂಡರಿಪ ಶಕ್ತಿ ಸುದರ್ಶನವಾಯ್ತು ।
ಲೋಕದೊಳ್ ಆಳುವ ಅರಸಗೆ,
ಪೆರ್ಚಿದೈಸಿರಿಯ ಸಂಪಾದಿಸೆ ।
ದಾತನೆನಿಸೆಂದಿಂನಿಸೆ, ಖ್ಯಾತಿಯುತನೆಂದಿನಿಸೆ
ಪೇಳ್ ಸಕಲ ಸುಕಾರ್ಯಗಳನೆಸಗೆ ।
ಬಾಲ್ಯದಲಿ ಅಕ್ಕರೆಯಿಂ ನೀನೀವ
ಸವಿಯಾದ ನಿನ್ನ ಮೊಲೆಪಾಲು ।
ನಯ ನೀತಿ, ಪೇಳ್ ನಿನ್ನಂತರಂಗದಾ
ವಾಣಿಯೇ ಜೀವನದ ಮೂಲ ॥

ವಿ. ಕೆ. ಕಾಪು

ನವಯುಗದಲ್ಲೇ ಜಾಹೀರಾತುಕೊಡಿರಿ

ತಾರಾ ವಿಹಾರ ಗ್ರಂಥಮಾಲಾ

ಅಂತರ್ ರಾಷ್ಟ್ರೀಯ ಪ್ರಸಿದ್ಧಿಯನ್ನು ಪಡೆದ ಪಂಡಿತ ತಾರಾನಾಥರ ಹಾಗೂ ಇವರ ಸುಪ್ರಸಿದ್ಧ ಸಾಹಿತಿಗಳ ಪ್ರಚೋದನಾತ್ಮಕ ಕ್ರಾಂತಿಕಾರಕ ವಿಚಾರಗಳು ಗ್ರಂಥರೂಪವಾಗಿ ಪ್ರಕಟವಾಗುವವು ಒಂದು ವರ್ಷದಲ್ಲಿ ತಲೆ-ಎದೆಗಳನ್ನರಳಿಸುವ ಆರು ಗ್ರಂಥಗಳು ಹೊರಡುವವು ಅಲ್ಲದೆ ಒಂದು ವಿಶೇಷಾಂಕವು ಉಚಿತವಾಗಿ ಕೊಡಲಾಗುವುದು

ಚಂದಾ:- ಒಂದೇ ರೂಪಾಯಿ ಮಾತ್ರ.

ಕರ್ನಾಟಕದ ಮೂಲೆಮೂಲೆಗೂ ಬೇಕಾದ ಪತ್ರ. ಜಾಹೀರಾತುಗಳಿಗೆ ಒಳ್ಳೇ ಸುಸಂಧಿ.

ವಿಶೇಷ ವಿಚಾರಿಸಿಗೆ ಬರೆಯಿರಿ.

ವಿಶೇಷ ಕಾರಣಗಳಿಂದ ವಿ ಪಿ ಕಳುಹಿಸಲಾಗುವುದಿಲ್ಲ

ಮ್ಯಾನೇಜರ್

ತಾರಾ ವಿಹಾರ ಕಾರ್ಯಾಲಯ,

ಪ್ರೇಮಾಯತನ ಆಶ್ರಮ, ತುಂಗಭದ್ರಾ.

ಕಮ್ಮಿ ಕ್ರಯದ ಖಾತ್ರಿ ವಾಚುಗಳು



ಈಗತಾನೆ ಬಂದ ನವೀ ಹೊಸ ಸ್ಟಾಕಿನ ನವೀನ ವಾಚುಗಳು ಅಗ್ಗಮಾದ ಇತರ ಎಲ್ಲಾ ವಾಚುಗಳಿಗಿಂತ ಖಾತ್ರಿಯಾಗಿವೆ ಹೆಚ್ಚು ಬಾಳಿಕೆಬರುವ ಮತ್ತು ಸರಿ ಸಮಯ ಸೂಚಿಸುವ ಲಿವರ್ ವಾಚುಗಳಾಗಿವೆ ಖಾತ್ರಿ 3 ವರ್ಷದ ಗ್ಯಾರಂಟ ನಿಕ್ಕಲ್ ಕೇಸಿನ ರಿಸ್ಟುವಾಚಿಗೆ ರೂ 2 0 0 ಬಂಗಾರದಕ್ಕೆ ರೂ. 3 4-0 1ರಿಂದ 3 ವಾಚುಗಳವರೆಗೆ 10 ಆಣೆ ಟಪ್ಪಾಲುಖರ್ಚು ಬೀಳುತ್ತೆ. ನಂತರದ ಪ್ರತಿ 1ಕ್ಕೆ 4 ಆಣೆ ಮಾತ್ರ ಹೆಚ್ಚು.

ಟಿ. ಜ ಎಂಡ್ ಕೋ,
ಪೋಸ್ಟ್ ಬಾಕ್ಸ್ ನಂಬ್ರ 6757, ಕಲ್ಕತ್ತ.

T. Jha & Co ,
Post Box No. 6757, Calcutta

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ	ಬೆಲೆ:	0—1—0
೨ ಹೊಸ ಮಾದರಿ	,, ,,	0—1—3
೩ ಮೆಡಿಕೇಟೆಡ್ ನಂ. ೧. ಸೀಸೆಯಲ್ಲಿ	,,	0 —4 —0

ಶ್ರೀಕರ ಕಸ್ತೂರಿ ಮಾತ್ರೆ.

ಅನೇಕ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅಮೃತ, ,ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-4-0

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸದಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ ಬೆಲೆ 0-8-0 ಮತ್ತು ರೂ 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:— ಕುಂದಾಪುರ-ಕಾಮತ್ಸ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ ಶ್ರೀಕೃಷ್ಣ ಕಾಂತರಾ, ಆಯುರ್ವೇದೀಯ ಔಷಧಗಳ ಏಜೆಂಟರು, ಕಾರ್ಕಳ-ವಿ ವಿ ಶೆಣೈ-ಕೆ ಸ್ಟ್ರೆ, ಕಾಸರಗೋಡ-ಭಕ್ತ ಬ್ರದರ್ಸ್ ಮತ್ತು ಶ್ರೀರಾಮ ಸ್ಟೇಷನರಿ ಹೌಸ್, ಪುತ್ತೂರು-ಎ ಪಾಂಡುರಂಗ ಗೋವಿಂದ ಭಂಡಾರಿ ಮತ್ತು ಪೈ ಡಿಸ್ಪೆನ್ಸರಿ, ಮಂಜೇಶ್ವರ-ಬಿ. ಎಸ್ ಸೀತಾರಾಮ ಶ್ಯಾನುಭೋಗ್, ಜನರಲ್ ಮರ್ಚೆಂಟ್, ಮೂಡಬಿದ್ರೆ-ಸಂಜೀವ ಶೇಣಿ ಪ್ರಭು ಬ್ರದರ್ಸ್, ಬಂಟ್ವಾಳ-ಪ್ರಭು ಅಂಡ್ ಕೋ, ಉಡುಪಿ ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುವುದು

ಬರುವ ವಾರ
ತಿಂಗಳ ಕಾಣಿಕೆ
ಹೆಚ್ಚು ಪುಟ, ಹೆಚ್ಚು ವಿಷಯಗಳಿಂದ
ಕೂಡಿ
ಹೊರಡುವುದು.

ಓದಲು ಮರೆಯಬೇಡಿರಿ.

ಪತ್ರವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು, ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ. ನ]

ಅಧ್ಯಕ್ಷರು ಯಾರು?

ಈ ಸಾರೆ ಬಳ್ಳಾರಿಯಲ್ಲಿ ನೆರೆಯಲಿರುವ ನಿಖಿಲ ಕರ್ನಾಟಕ ಪ್ರಾಂತೀಯ ೧೧ನೇ ಆಯುರ್ವೇದ ಸಮ್ಮೇಲನದ ಅಧ್ಯಕ್ಷಸ್ಥಾನಕ್ಕೆ ಯಾರನ್ನು ಆರಿಸಬೇಕೆಂಬುದೊಂದು ವೈದ್ಯರಿಗೆಲ್ಲ ಮಹತ್ವ ಪ್ರಶ್ನೆಯೇ ಆಗಿದೆ. ಯಾಕೆಂದರೆ ಯೋಗ್ಯನಾದ ನಾಯಕನಿಲ್ಲದೆ ಸೇನೆಯು ಜಯಶಾಲಿಯಾಗದಿರುವಂತೆ ಯೋಗ್ಯ ಮುಂದಾಳು ಅಧ್ಯಕ್ಷನಿಲ್ಲದೇ ಜನತೆಯು ಏಳ್ಗೆಯೂ ಆಗುವುದಿಲ್ಲ. ಅಂಥವನನ್ನು ಆರಿಸುವುದೇ ನಮ್ಮ ಕರ್ತವ್ಯ. ಈಗ ನಮ್ಮ ಕರ್ನಾಟಕದಲ್ಲಿ ಸುಪ್ರಸಿದ್ಧ ವೈದ್ಯರನೇಕ ಜನರಿದ್ದಾರೆ. ಅವರೆಲ್ಲ ಒಳ್ಳೇ ವಿದ್ವಾಂಸರೂ ಆಗಿದ್ದಾರೆ. ಅಧ್ಯಕ್ಷರಾಗಲರ್ಹರಾದ ಘನ ವಿದ್ವಾಂಸರ ಸಂಖ್ಯೆ ಹೆಚ್ಚಾದಂತೆ ಕರ್ನಾಟಕದ ಗೌರವವೂ ಹೆಚ್ಚುಗುತ್ತದೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಈಗಿನ ಕಲಹಯುಗದಲ್ಲಿ, ಅದರಲ್ಲಿಯೂ ರಾಜಪ್ರಜಾ ಕಲಹಯುಗದಲ್ಲಿ ಬರೀ ವಿದ್ವಾಂಸರಷ್ಟೇ ಅಧ್ಯಕ್ಷರಾದರೆ ಸಾಲದು. ನಮ್ಮ ಅಧ್ಯಕ್ಷಸ್ಥಾನಕ್ಕೆ ಸುಪ್ರಸಿದ್ಧ ಪಂಡಿತರಾಗಿ ಇದ್ದುಕೊಂಡು ಪ್ರತಿಭಟನೆ, ಕಾದಾಡುವ ಯೋಧರು ಬೇಕು. ವಿಶೇಷವಾಗಿ ಇಂದಿನ ರಿಜಿಸ್ಟ್ರೇಷನ್ ಬಿಲ ಸಾಪದಿಂದ ವೈದ್ಯ ಹಕೀಮರನ್ನೆಲ್ಲ ಬಿಗಿಯುತ್ತಿರುವುದರಿಂದ ಈಗ ಈಗ ವೈದ್ಯರ ಪರವಾಗಿ, ವೈದ್ಯರ ಹಿತಸಾಧಿಸಲು, ಸರಕಾರದೊಡನೆ ಮಹಾತ್ಮಾಗಾಂಧಿ, ಪಂಡಿತ ಜವಾಹರ್, ಬೋಸಸುಭಾಸ್ ಆದಿ ಮಹನೀಯರು ಹೇಗೆ ಹೋರಾಡಿದರೋ ಹೋರಾಡುತ್ತಿರುವರೋ ಹಾಗೆ ಇವರೂ ಕಾದಾಡಿ ವೈದ್ಯರಾದ ನಮ್ಮ ಜನ್ಮಸಿದ್ಧ ಹಕ್ಕಾದ ಪರಂಪರಾಗತವಾಗಿ ಬಂದ ಔಷಧಿಕೊಟ್ಟು ಚಿಕಿತ್ಸೆಮಾಡುವ ಧರ್ಮ ಕರ್ತವ್ಯವನ್ನು ಕಾಪಾಡಲು, ಕಾದಾಡಲು ಯೋಗ್ಯತೆಯುಳ್ಳ ಯೋಧರು ಇಂದು ಅಧ್ಯಕ್ಷಸ್ಥಾನಕ್ಕೆ ಬೇಕು. ಸರಿಮಾತು ಕೆಲವ ಸರಕಾರವು ಅಮೃತದ ಹೆಸರಿನಿಂದ ಹಾಲಾಹಲವನ್ನೇ ಕೊಡಲು ಸಿದ್ಧವಾಗುತ್ತಲಿದೆ. "ವೈದ್ಯರ ಉತ್ತೇಜನಕ್ಕೆ" ಎಂದು ಬಿಲ ಅಂಟಿಸಿ ಹಿಂದಿನ ಬಿಲ್ಲನ್ನೇ ಇಂದು ಸಹ ಜಾರಿಗೆ ತರುತ್ತಲಿದೆ. ಇಂಥ ಕಾಲದಲ್ಲಿ ನಿಖಿಲ ಕರ್ನಾಟಕ ಆಯುರ್ವೇದ ಪರಿಷತ್ತಿಗೆ ಒಳ್ಳೇ ಪಂಡಿತರೂ ವಾಗ್ಮಿಗಳೂ ಯೋಧರೂ ಆದ ಅಧ್ಯಕ್ಷ ನಾಯಕರು ಬೇಕು. ಸದ್ಯಕ್ಕೆ ನಮ್ಮ ಕರ್ನಾಟಕದಲ್ಲಿ ಅಂಥ ಯೋಧರೆಂದರೆ ಪಂಡಿತ ತಾರಾನಾಥರೆಂದೇ ಹೇಳಬಹುದು. ಅವರು ಆಯುರ್ವೇದ ಒಂದೇ ಅಲ್ಲ, ಎಲೋಪಥಿ, ಹೋಮಿಯೋಪಥಿ, ನೇಚ್ಯೋಪಥಿ ಮುಂತಾದ ವಿವಿಧ ಚಿಕಿತ್ಸಾ ಪದ್ಧತಿಗಳಲ್ಲಿ ಪ್ರವೀಣರಾಗಿದ್ದಾರೆ. ಪ್ರತಿಕಕ್ಷಿಗಳನ್ನು ದಿಂಸಲು ಸಕಲ ಪದ್ಧತಿಗಳ ಸಮ್ಯಕ್ ಜ್ಞಾನವೂ ಅವರಿಗೆ ಉಂಟು.

ಇನ್ನು ಯೋಧ ಶಕ್ತಿ ಎಂದರೆ ಅವರ ರಕ್ತಗತ. ಚಿಕ್ಕವರಿರುವಾಗಲೇ ಮನೆಯಲ್ಲಿ ಕಾದಾಡಿ ಮನೆ ಬಿಟ್ಟುಹೋದವರು, ಶಾಲೆಯಲ್ಲಿ ಸ್ವಾಧೀಗಳಾದ ಶಿಕ್ಷಕರೊಡನೆ ಕಾದಾಡಿ ಶಾಲೆಬಿಟ್ಟು ಬಿಟ್ಟು ಹೋದವರು ಸಮಾಜದೊಡನೆ ಕಾದಾಡಿ ಯಾವ ಮಠಾಧೀಶರಿಗೂ ತಲೆಬಗ್ಗಿಸಲಿಲ್ಲ. ನಿಜಾಮ ರಾಜನೊಡನೆ ಕಾದಾಡಿ ರಾಜ್ಯವನ್ನೇ ಬಿಟ್ಟು ಹೊರಗೆ ಬಂದವರು ಮುಚ್ಚುಮರೆಯಲ್ಲಿ ಸತ್ಯದ ಹೆಸರಿನಿಂದ ನಡೆಯುವ ನ್ಯಾಯ ಧರ್ಮಗಳ ಹೆಸರಿನಿಂದ ಮೆರೆಯುವ ಅಧರ್ಮ, ಅನ್ಯಾಯದೊಡನೆ ಕಾದಾಡಲು ಈಗಲೂ ಸಿದ್ಧರಾಗಿಯೇ ಇದ್ದಾರೆ. ಮೊನ್ನೆ ಮುಂಬಯಿ ಪ್ರಾಂತ್ಯದ ವೈದ್ಯ ಹಕೀಮರ ಪರಿಷತ್ತಿಗೆ ಅಧ್ಯಕ್ಷರಾಗಿ ಪೂನಕ್ಕೆ ಹೋದಾಗ್ಗೆ "ಬ್ಲಾಕ್‌ಫ್ಲ್ಯಾಗ್" ಹಿಡಿದುಕೊಂಡು ನೂರಾರು ಜನರೊಡನೆ ನಾಯಕರಾಗಿ "ರಜಿಸ್ಟ್ರೇಷನ್ ಬಿಲ" ನಿಷೇಧಿಸುತ್ತ ಜನಹಿತವನ್ನು ಸಾರುತ್ತ "up, up with nations will" "down down with guilders bill" ಎಂದು ಗರ್ಜಿಸುತ್ತ ಕೌನ್ಸಿಲ ಹಾಲಿಗೆ ಹೋಗಿದ್ದರು. ಒಟ್ಟಾರೆ ಸರ್ಕಾರದೊಡನೆ ಹೋರಾಡುವ ಶಕ್ತಿ ಸಾಕಷ್ಟು ಅವರಿಗಿದೆ. ಯುಕ್ತಿ ಪ್ರಯುಕ್ತಿಗಳಿಂದ ವಾದಿಸಲು ಅವರು ಒಳ್ಳೇ ವಾಗ್ಮಿಗಳು, ಪ್ರಚಲಿತ, ಆಂಗ್ಲ, ಹಿಂದೀ, ಉರ್ದು, ಸಂಸ್ಕೃತ ಭಾಷಾ ಪ್ರವೀಣರಾದ ವೀರ ಕನ್ನಡಿಗರು. ಎಲೋಪಥಿಯ ಸಮ್ಯಕ್ ಜ್ಞಾನವುಳ್ಳವರು ಆಯುರ್ವೇದಾಚಾರ್ಯರು ಅವರಿಗೆ ಅಧ್ಯಕ್ಷಸ್ಥಾನ ಸಿಗಬೇಕೆಂದು ನನ್ನ ಅಭಿಪ್ರಾಯವಿದೆ. ಹಾಗೂ ಎಲ್ಲಾ ವೈದ್ಯ ಹಕೀಮರೂ ನನ್ನ ಅಭಿಪ್ರಾಯಕ್ಕೆ ಅನುಮೋದಿಸುವರೆಂದು ನನ್ನ ಅಭಿಪ್ರಾಯ ಇದೆ. ಸಕಲ ವೈದ್ಯ ಮಹಾಜನರಲ್ಲಿ ಸವಿನಯ ಪ್ರಾರ್ಥನೆ ಇದೆ.

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ. 2-4-0.

ಸಣ್ಣ ಸುಂದರ, ಆಕಾರಗಟ್ಟಿ ಮುಟ್ಟಾದ ಮೂಸಿನರ ಸರಿಯಾದ ಸಮಯ ತೋರಿಸುವಂಥದ್ದು ೩ವರ್ಷದ ಗ್ಯಾರಂಟಿ ದುಂಡಾಕೃತಿಯ ದೀರ್ಘ ಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಚಿತ್ರದಲ್ಲಿತೋರುವ ಲೇಡಿ ರಿಸ್ಟ್‌ವಾಚಿಗೆ ರೂ 6-0-0, ಬಾವಲಿಯ ರೋಲ್ಡ್ ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ಟ. ಖ ಪ್ರತ್ಯೇಕ.

ಎಚ್ ದಾವಿದ್ ಅಂಡ್ ಕೊ

ಪೊ. ಬಾಕ್ಸ 11424 ಕಲ್ಕತ್ತಾ.

H. David & Co.
Post Box No 11424. Calcutta

ಖಾದಿ

ಕಾಂಗ್ರೆಸ ಕಮಿಟಿಗಳ ಅಧಿಕಾರಿ ವರ್ಗದವರು, ತಾಲೂಕು, ಜಿಲ್ಲಾ, ಪ್ರಾಂತಿಕ ಮತ್ತು ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಸದಸ್ಯರು ಯಾವಾಗಲೂ ಸಂಪೂರ್ಣವಾಗಿ ಶುದ್ಧ (ಅಧಿಕೃತ) ಖಾದಿಯನ್ನು ಧರಿಸಲೇ ಬೇಕೆಂಬಿರುವ ಘಟನೆಯಲ್ಲಿಯ ನಿಯಮವನ್ನು ನಾವು ಮೇಲಿಂದ ಮೇಲೆ ಆಯಾ ಜನರ ಗಮನಕ್ಕೆ ತಂದು ಕೊಡುತ್ತೇವೆ. ಅಲ್ಲದೆ ಮಹಾತ್ಮಾ ಗಾಂಧಿಯವರಾದರೂ ಈ ವಿಷಯವಾಗಿ ಆಗಾಗ್ಗೆ ಲೇಖನಗಳನ್ನು ಬರೆಯುತ್ತಲಿರುವರು. ಹೀಗಿದ್ದು ಪ್ರಾಂತದಲ್ಲಿಯ ಕೆಲ ಕಾಂಗ್ರೆಸ ಕಮಿಟಿಗಳ ಅಧಿಕಾರೀ ವರ್ಗದವರು ಚುನಾಯಿತ ಪ್ರತಿನಿಧಿಗಳು ಸಂಪೂರ್ಣ-ಶತಶ ಖಾದೀ ಧಾರಿಗಳಲ್ಲವೆಂದು ನಮ್ಮ ಕಡೆಗೆ ಅನೇಕ ತಕರಾರುಗಳು ಬರುತ್ತಿರುವದು ವಿಷಾದಕರವಾದ ಸಂಗತಿಯು. ಈ ಪ್ರಕಾರ ಅವರು ವರ್ತಿಸಿದರೆ ತಾವೇ ಕಾಂಗ್ರೆಸ ಘಟನೆಯ ವಿರುದ್ಧ ವರ್ತಿಸಿದಂತಾಗುವುದು. ಕಾರಣ ಅವರು ತಮ್ಮ ಸ್ಥಾನಗಳಿಂದ (ಕಾಂಗ್ರೆಸ) ಚ್ಯುತರಾಗಬೇಕಾಗುವದು ಈ ಸಂಗತಿಗಳು ಆಯಾ ತಾಲೂಕು ಅಥವಾ ಜಿಲ್ಲಾ ಕಮಿಟಿಗಳ ಗಮನಕ್ಕೆ ಬಂದರೆ ಅವರು ಕೂಡಲೇ ಯೋಗ್ಯ ಉಪಾಯಗಳನ್ನು ಕೈಕೊಳ್ಳಬೇಕು. ಇಂಥ ಸಂದರ್ಭಗಳಲ್ಲಿ ಎಳ್ಳಷ್ಟೂ ದಾಕ್ಷಿಣ್ಯ ತೋರಿಸಕೂಡದು.

ಅಧಿಕೃತ ಖಾದಿ.-ಇನ್ನು ಖಾದಿಯ ಒಳ ಭೇದಗಳ ಬಗ್ಗೆ ತಾವು ಒಂದು ಪ್ರಕಟಣೆಯನ್ನು ಹೊರಡಿಸಿದ್ದೆವು. ಆದರಂತೆ ಮೊನ್ನೆ (೧೬-೧೦-೩೮) ಬೆಳಗಾವಿಯಲ್ಲಿ ಸೇರಿದ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಾಧಾರಣ ಸಭೆಯಲ್ಲಿ ಈ ಬಗ್ಗೆ ಒಂದು ಗೊತ್ತುವಳಿಯಾದರೂ ಸರ್ವಾನುಮತದಿಂದ ಸ್ವೀಕೃತವಾಯಿತು. ಕಾರಣ ಕರ್ನಾಟಕದಲ್ಲಿಯ ಕಾಂಗ್ರೆಸ ಅಧಿಕಾರೀ ವರ್ಗದವರು ಮತ್ತು ಚುನಾಯಿತ ಪ್ರತಿನಿಧಿಗಳು ಯಾವಾಗಲೂ ಅಖಿಲ ಭಾರತ ಚರಕ ಸಂಘದಿಂದ ಮನ್ನಣೆ ಪಡೆದ ಖಾದಿಯನ್ನು-ಅವರಿಂದ ಮನ್ನಣೆ ಪಡೆದ ಕೇಂದ್ರ, ಅಂಗಡಿಗಳಿಂದಲೇ ಕೊಂಡು ಧರಿಸಬೇಕು. ಮತ್ತು ಅದೇ ಅಧಿಕೃತ ಖಾದಿ ಎಂದು ತಿಳಿಯಬೇಕು. ಪ್ರಾಂತದಲ್ಲಿಯ ಅನಧಿಕೃತ ಖಾದಿಯ ಹುಟ್ಟುವಳಿ, ಮಾರಾಟ, ಇವೇ ಮೊದಲಾದವುಗಳಿಗೆ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷವಾಗಿ ಸಹಾಯಮಾಡಬಾರದು. ಮತ್ತು ಉತ್ತೇಜನ ಕೊಡಬಾರದು. ಈ ಬಗ್ಗೆ ಅಖಿಲ ಭಾರತ ಕಾಂಗ್ರೆಸ ಕಮಿಟಿಯವರು ಇದೇ ಅಭಿಪ್ರಾಯ ಕೊಟ್ಟಿರುವರು. ಮತ್ತು ವರ್ಕಿಂಗ್ ಕಮಿಟಿಯಲ್ಲಿ ಒಂದು ಗೊತ್ತುವಳಿಯನ್ನು ಪಾಸುಮಾಡಿರುವರು. ಕಾರಣ ಈ ಎಲ್ಲ ಮಹತ್ವದ ಸಂಗತಿಗಳನ್ನರಿತು ಅಧಿಕೃತ ಖಾದಿಯನ್ನೇ ಪ್ರೋತ್ಸಾಹಿಸುವುದು ಎಷ್ಟು ಅವಶ್ಯವೆಂಬುದನ್ನು ಕಾಂಗ್ರೆಸ ಕೆಲಸಗಾರರು ಲಕ್ಷ್ಯದಲ್ಲಿಡಬೇಕು.

ಸ್ಥಾನಿಕ ಸಂಸ್ಥೆಗಳಲ್ಲಿಯ ಕಾಂಗ್ರೆಸ ಸದಸ್ಯರು:-ಈ ಸಂಸ್ಥೆಗಳಲ್ಲಿರುವ ಕಾಂಗ್ರೆಸ ಸದಸ್ಯರು ತಾವು ಖಾದೀ ಧರಿಸುತ್ತೇವೆಂದು ಪ್ರತಿಜ್ಞಾ ಪತ್ರದ ಮೇಲೆ ಸಹಿ ಮಾಡಿದ್ದರೂ ಅದನ್ನು ಪಾಲಿಸುವದಿಲ್ಲವಾಗಿ ತಕರಾರುಗಳಿವೆ. ಆ ಸದಸ್ಯರಾದರೂ ಯಾವಾಗಲೂ ಸಂಪೂರ್ಣ ಖಾದಿಯನ್ನು ಧರಿಸುವದು ತಮ್ಮ ಕರ್ತವ್ಯವೆಂದೇ ತಿಳಿಯಬೇಕು.

ಧಾರವಾಡ, ೯-೧೧-೩೮

ಗುದ್ಲೆಪ್ಪ ಹಳ್ಳಿಕೇರಿ.
ಪ್ರ. ಕಾರ್ಯದರ್ಶಿ
ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ

ಸುಳ್ಳೆಂದು ರುಜುಪಡಿಸುವವರಿಗೆ ರೂ 50 ಇನಾಂ."

ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು.

1 **ವಶೀಕರಣ ಯಂತ್ರ:** ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರಧರಿಸಿದ ಮಾತ್ರದಿಂದಲೇ ಅವಳು ನಿಮ್ಮೊಡನೆ ಮಾತನಾಡಬಯಸುವಳು. ಮಾತ್ರವಲ್ಲದೆ ನಿಮ್ಮ ವಶಳಾಗುವಳು. ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ ತಾಯಿತಕ್ಕೆ 7-8-0.

2 **ಲಕ್ಷ್ಮೀಯಂತ್ರ:** ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ವಹಿವಾಟುಗಳು ಹೆಚ್ಚು ಲಾಭದಾಯಕ ಸುಸಂಧಿಬರುವುದು. ಬೆಳ್ಳಿ ಯಂತ್ರಕ್ಕೆ ರೂ. 2-4-0, ಚಿನ್ನದ್ದಕ್ಕೆ ರೂ. 7-8-0 ಇಂದೇ ಕೆಳಗಿನ ವಿಳಾಸಕ್ಕೆ ಬರೆಯಿರಿ, ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

SRI SADANAND RAM
No. 57, P. O. Warisaligung,
(Gaya)

Established] *[1906*

THE
UNITED INDIA
LIFE ASSURANCE COMPANY. LTD.
HEAD OFFICE—**MADRAS**.

Trustee—THE OFFICIAL TRUSTEE OF MADRAS.

Policies in force	**Rs. 486 Lakhs**
Annual income Exceeds	**Rs. 28 Lakhs**
Total Assets Exceed	**Rs. 100 Lakhs**
Total claims paid over	**Rs. 36 Lakhs.**

The oldest and largest Life Assurance Company of South India having 31 years of record service

A POLICY IN THE UNITED INDIA *COMBINES PERFECT SAFETY WITH PRUDENCE*

BRANCHES ALL OVER INDIA.

WANTED AGENTS

For particulars, please apply to:—

THE BRANCH MANAGER
The United India,
Life Assurance Company Ltd
BLOCK No 2, Pettah Bazaar,
BRANCH, **MANGALORE, S. K**

OR

K. Keshava Shenoy,
M. A.
Organiser, Shantiniketan,
PENTLANDPET,
MANGALORE.

General Assurance Society Ltd.

ಹಿಂದೂದೇಶದ ಪ್ರಮುಖ ವಿಮಾ ಕಂಪೆನಿ:

ಜನರಲ್ ಎಶ್ಶೂರೆನ್ಸ್ ಸೊಸೈಟಿ ಲಿಮಿಟೆಡ್.

ಪ್ರಧಾನ ಆಫೀಸು:-ಅಜ್ಮೀರ್ ಸ್ಥಾಪನೆ **1907**

- ಸಂತೃಪ್ತಿಹೊಂದಿರುವ **50,000** ಪೋಲಿಸಿದಾರರೇ ನಮ್ಮ ಉತ್ಕೃಷ್ಟ ಪ್ರಶಸ್ತಿ ಪತ್ರ
- ಎಲ್ಲಾ ವರ್ಗದವರ ಪ್ರತಿಯೊಂದು ಅವಶ್ಯಕತೆಗೂ ಅನುಕೂಲವಾದ ಪೋಲಿಸಿಗಳು.
- ಏಜನ್ಸಿ ಶರ್ತಗಳು: ಉದಾರ ಮತ್ತು ಲಾಭಕರ

ಹೆಚ್ಚಿನ ವಿವರವನ್ನು ಈ ಕೆಳಗಿನವರಿಂದ ಪಡೆಯಬಹುದು:-
ಜನರಲ್ ಮೆನೇಜರ್, ಅಜ್ಮೀರ್.
ಅಥವಾ, ಶಾಖಾ ಮೆನೇಜರ್:—ಮದ್ರಾಸ್, ಹುಬ್ಬಳ್ಳಿ, ಬೆಂಗಳೂರು.
ಅಥವಾ, ಚೀಫ್ ಏಜಂಟರು:—ಮಧುರ, ರಾಜಮಹೇಂದ್ರಿ, ಸಿಕಂದರಾಬಾದ್, ತಿರುಚಿನಾಪಳ್ಳಿ.
ಅಥವಾ ಒರ್ಗನೈಸರ್ಸ್:-ಔರಂಗಬಾದ್, ಬಳ್ಳಾರಿ, ವೆಲ್ಲೂರು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಪ್ಪರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

HOTEL INDIANA

BAR AND RESTAURANT

ಮಂಗಳೂರಿಗೆ ಹೋದಲ್ಲಿ ಉಳಕೊಳ್ಳುವುದೆಲ್ಲೆಂದು ಯೋಚಿಸುವಿರೇಕೆ!

ಹೋಟೆಲ್ ಇಂಡಿಯಾನವು

ರೈಲ್ವೆ ಸ್ಟೇಶನು, ಬಸ್ಸು ಸ್ಟೇಶನು ಮೊದಲಾದ ಎಲ್ಲಾ ಸ್ಥಳಗಳಿಗೂ
ಕೇಂದ್ರವಾದ ಹಂಪನ್‌ಕಟ್ಟೆಯಲ್ಲೇ ಇದ್ದು ಸರ್ವ ಅತ್ಯಾಧುನಿಕ
ಸೌಕರ್ಯಗಳಿಂದ ನಿಮ್ಮನ್ನಿದಿರುಗೊಳ್ಳುತ್ತದೆ

ಹೊಸ ಆಡಳಿತ! ಹೊಸ ವ್ಯವಸ್ಥೆ !!

ಎಲ್ಲವೂ ಹೊಸತೇ ಆಗಿ
ನವೀನ ಮಾದರಿಯ ಭೋಜನ, ಪಾನ ಮತ್ತು ವಿಶ್ರಾಮ ಗೃಹವಾಗಿದೆ.

Proprietor, HOTEL INDIANA
Hampankatta, Mangalore.

THE

MOOLKY BANK, LTD,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸಂಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.
ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja,	ಯಂ. ಆರ್. ಪೂಂಜ,
President & Manager,	ಪ್ರಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಯಿ (first quality, selected) ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,
ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸವಣ , ಸಾಲಾಮಿಶ್ರಿ, ಕಲ್ಕದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಡೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಆಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವದು ಬಾಟ್ಲಿ ೧ರ ರೂ 2—8—0.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ಬಾಟ್ಲಿ 1ರ ರೂ 1—8—0.

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ
ಬಾಟ್ಲಿ 1ರ ರೂ 0—10—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ರಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager

Kanara Printing Works,
Hampankatte, **MANGALORE**

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):— ಈ ವಾರಪ್ಪ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು.
ಎಲ್ಲ ತೋಟದಲ್ಲಿಯೂ ಇರತಕ್ಕದ್ದು ಗಿಡವೊಂದರ ಕ್ರಯ ರೂ 1-0-0 ಮಾತ್ರ.
ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ
ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಕೆ. ಎಮ್. ಸೆಟ್ಟಿ, ಕೆನರಾ ನರ್ಸರಿ,
ಪೋಸ್ಟ್:—ಕಾಪು, ದ. ಕ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೋಲೆರಾ ರೋಗಕ್ಕೆ ರಾಮಬಾಣ ಔಷಧ	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ. ಮೇಸ್ತ, ಗೋಲ್ಡ್ ಮೆಡಲ್ ಫಿಜಿಸಿಯನ್

ಶೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ **ಅಭಿರುಚಿಗೆ** ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, **ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ**

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!
ಮನಮೋಹಕ ಸೀನ್‌ಸೀನರಿಗಳು ಕಿತ್ತಿನ ಕೆಲಸಗಳು, ನಮೂನೆವಾರು
ಸೈನ್ ಬೋರ್ಡುಗಳು, ಇತ್ಯಾದಿ ಯಾವತ್ತು ಪೈಂಟಿಂಗ ಕೆಲಸಗಳು
ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತವೆ [ಗ್ಯಾರಂಟಿ ಕೆಲಸ!
ಹೊರಗಿನ ಯಾವ ಕಂಟ್ರಾಕ್ಟ್ ಕೆಲಸವನ್ನೂ ಕೈಕೊಳ್ಳಲಾಗುವುದು
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ

ಪೈಂಟರ್ ಗಣಪತಿರಾವ್,

ಸೋದೆ ಮಠದ ಲೇನು - - ಉಡುಪಿ, ದ ಕ

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

ಎಂದಾದರೊಮ್ಮೆ ನೋಡಬಹುದು
ಎಂದೆಣಿಸಲಾಗದ ಪರ್ವಕಾಲ.

ಕಾವೇರೀ ನದೀತೀರವಾದ ತಲಕಾಡಿನಲ್ಲಿ

ಪಂಚಲಿಂಗ ದರ್ಶನ

ಭಕ್ತವೃಂದವು ಹಾರೈಸುವ
ಪುಣ್ಯಕಾಲ.

ಅನೇಕ ವರುಷಗಳಿಗೊಮ್ಮೆ
ಬಂದೊದಗುವ ಜಾತ್ರೆ ಇದು

ಕಳೆದ **1925**ರಲ್ಲಿ ಜರಗಿದ ಜಾತ್ರೆ ಇದು
ಇದೀಗ **1938**ರಲ್ಲಿ ತಾರೀಕು **21-11-38**ರಲ್ಲು

ಜರಗಲಿಕ್ಕಿದೆ.

ಕಾರ್ತಿಕಮಾಸ, ವೃಶ್ಚಿಕಮಾಸ, ಅಮಾವಾಸ್ಯೆ, ಸೋಮವಾರ, ಮಹಾಯೋಗ, ಇವಿಷ್ಟು ಯೋಗಗಳು ಒಟ್ಟಿಗೆ ಬರುವ ದಿವಸದಲ್ಲಿಮಾತ್ರ ಈ ಜಾತ್ರೆಯು ಜರಗುವುದು

ಈ ಪರ್ವಕಾಲದಲ್ಲಿ ಉತ್ತರವಾಹಿನಿಯಾಗಿಯೂ, ಪೂರ್ವವಾಹಿನಿಯಾಗಿಯೂ, ದಕ್ಷಿಣವಾಹಿನಿಯಾಗಿಯೂ, ಪಶ್ಚಿಮವಾಹಿನಿಯಾಗಿಯೂ, ಹರಿಯುವ ಕಾವೇರಿ ಪುಣ್ಯೋದಕದಲ್ಲಿ ಸ್ನಾನವನ್ನು ಮಾಡಿ, ವೈದ್ಯೇಶ್ವರ, ಅರ್ಕೇಶ್ವರ, ಪಾತಾಳೇಶ್ವರ, ಮರಳೇಶ್ವರ, ಮಲ್ಲಿಕಾರ್ಜುನೇಶ್ವರ ಸ್ವಾಮಿಯ ದರ್ಶನ ಲಾಭವನ್ನು ಪಡೆಯಿರಿ. ಕಾರ್ತಿಕ ಬಹುಳ ಅಮಾವಾಸ್ಯೆ, ಸೋಮವಾರ ದಿವಸ ತಲಕಾಡಿನ ಗೋಕರ್ಣ ಸರೋವರದಲ್ಲಿ ಸ್ನಾನಮಾಡಿ, ಗೋಕರ್ಣೇಶ್ವರ ಸ್ವಾಮಿ ದರ್ಶನ ಪಡೆದು ಚಾಮುಂಡೇಶ್ವರೀ ದರ್ಶನವನ್ನು ಹೊಂದಿ, ವೈದ್ಯೇಶ್ವರ ದರ್ಶನ ಲಾಭವನ್ನು ಹೊಂದುವದು. ಅಲ್ಲಿಂದ ಮೂರು ಮೈಲು ದೂರದಲ್ಲಿರುವ ವಿಜಾಪುರಕ್ಕೆ ಹೋಗಿ, ಉತ್ತರವಾಹಿನಿ ಕಾವೇರಿನದಿಯಲ್ಲಿ ಸ್ನಾನಮಾಡಿ ಅಲ್ಲಿರುವ ಅರ್ಕೇಶ್ವರನ ದರ್ಶನ ಲಾಭ ಪಡೆದು, ಅಲ್ಲಿಂದ ತಲಕಾಡಿಗ ದಕ್ಷಿಣದಲ್ಲಿರುವ ಪೂರ್ವವಾಹಿನಿ ಕಾವೇರಿ ನದಿಯಲ್ಲಿ ಸ್ನಾನಮಾಡಿ, ಪಾತಾಳೇಶ್ವರನ ದರ್ಶನ ಲಾಭ ಪಡೆದು, ಪಶ್ಚಿಮ ಪಾರ್ಶ್ವದಲ್ಲಿ ದಕ್ಷಿಣವಾಹಿನಿಯಾಗಿ ಹರಿಯುವ ಕಾವೇರಿಯಲ್ಲಿ ಸ್ನಾನ ಮಾಡಿ, ಮಲ್ಲಿಕಾರ್ಜುನೇಶ್ವರ ಸ್ವಾಮಿ ದರ್ಶನ ಲಾಭವನ್ನು ಪಡೆಯುವುದು. ಇದು ಪಂಚಲಿಂಗ ದರ್ಶನ ಕ್ರಮ.

ಈ ಸ್ಥಳವು ಮೈಸೂರಿನಿಂದ ಬರೇ 30 ಮೈಲು ದೂರದಲ್ಲಿದೆ. ಯಾತ್ರಾರ್ಥಿಗಳ ಸವಾರಿ ಅನುಕೂಲತೆಯು ವ್ಯವಸ್ಥೆ ಮಾಡಲಾಗಿದೆ. ನಮ್ಮ ಜಿಲ್ಲೆಯಲ್ಲಿ ವ ಮಡಿಕೇರಿ, ಮೈಸೂರು ಕಡೆಗಳಲ್ಲಿ ಪ್ರಯಾಣಿಕರಿಗೆ ಉಳಕೊಳ್ಳುವರೆ ನಮ್ಮ ಭವ್ಯವಾದ ವಿಶ್ರಾಂತಿ ಗೃಹಗಳಿವೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರಮೂಲಕವಾಗಿಯೂ ಅಥವಾ ಸ್ವತಃ ಬಂದು ಕೇಳಿ ತಿಳಕೊಳ್ಳಿರಿ.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ
ದೊರೆಯುವುದು.

ವಾರ್ಷಿಕ ಚಂದಾ ರೂ 3 0 0 ಬಿಡಿ ಪ್ರತಿ 0 1 0

ಮೆನೇಜರ್— ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital		**Rs 1,00,000**
Subscribed & Paid up	„ ...	**Rs. 30,500**
Reserves		**Rs. 1,078**

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು
ಸ್ವೀಕರಿಸಲ್ಪಡುತ್ತವೆ.

3ರಿಂದ	**6** ತಿಂಗಳ ವರೆಗೆ	**4**	ಸಲೆ
7 „	**11** „	**5**	„
12 „	**18** „	**6**	„

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯಿತಿ ದರದ
ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.
ಧರ್ಮಕ್ಕೆ ಅಂತರಂಗವನ್ನು ಓದಬೇಕೇ?
ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ನ್ಯಾಸ ಭವನಂ
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S.S KARANTH, for & on behalf of SUPPLY AGENCY LTD, at THULUNAD PRESS, UDIPI
and Published by K H SHETTY at "NAVAYUGA" OFFICE, UDIPI, South India

Registered No. M. 3618.

24-11-1938

ನವ ಯುಗ
NAVA YUGA

ತಿಂಗಳ
ಕಾಣಿಕೆ
೩

ಪಂಡಿತ ನೆಹರು ಮತ್ತು ಕುಮಾರಿ ಇಂದಿರಾ.

MONTHLY
SPECIAL
3

NAVAYUGA

ANNOUNCING

A new year present to its readers in its

1939 ANNUAL

NEW SIZE
GET UP
SURPRISE

All making it The Brightest Annual of the year.
ADVERTISEMENT ASSURES COMMERCIAL SUCCESS.

Send your Advertisement now and achieve success.

DATE OF PUBLICATION: 12-1-1939.
Closing date for receipt of Advertisement 25 12 1938

☞ This space is available for Advt Rs. 10 per insertion

The Canara Industrial & Banking Syndicate, Limited.

(INCORPORATED IN BRITISH INDIA)
[ESTD. 1925]

HEAD OFFICE:—MUKUND NIVAS, **UDIPI**, S. INDIA

MEMBER:

RESERVE BANK OF INDIA

BANKERS' CLEARING HOUSE, BOMBAY.

Authorised Capital	„	10,00,000
Issued Capital	„	8,00,000
Subscribed Capital	„	7,74,500
Paid up Capital	„	3,87,730
Reserves	„	2,16,700

BANKING BUSINESS OF

EVERY DESCRIPTION TRANSACTED.

Please Note

The Subscribers, Agents & Advertisers *in*

NAVAYUGA

PLEASE NOTE THAT PAYMENTS DUE TO **NAVAYUGA** MAY BE MADE TO THE CREDIT OF NAVAYUGA ACCOUNT IN ANY BRANCH OF

THE CANARA INDUSTRIAL & BANKING SYNDICATE, LIMITED, UDIPI

Without being liable to pay any amount by way of Commission.

WHERE THE SYNDICATE HAS BRANCHES

Bombay, Bangalore, Belgaum, Byadgi, Bellary, Adoni, Hospet, Nandyal, Prodattur, Tadpatri, Taliparamba, Hubli' Gadag Mangalore, Cannanore, Payyanur, Kanhangad, Kasargode, Karkal, Udipi, Uppinangady, Karwar, Kumta, Ankola Honavar, Bhatkal, Sirsi, Sagar, Coondapoor, Brahmavar, Hungarcutta, Nippani, Tumkur & Hindupur.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಅಸನ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಶೀತಾಂಜನ
ಹಲ್ಲುನೋವು, ಅಜೀರ್ಣಗಳಿಗೆ	ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಧಾತುಪುಷ್ಟಿಗೆ	—ಮದನಕಾಮೇಶ್ವರಿ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE.	BRANCHES.
MANGALORE	Udipi, Coondapoor, Kaup & Karkal

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.

6 Months / 9 months Fixed Deposits at $3\frac{1}{2}$ p. c. per annum.

One year Fixed Deposits at 4 p. c. per annum.

Two years' Fixed Deposits at $4\frac{1}{2}$ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

NOTICE.

The Pangal Nayak Bank Ltd., Katapadi, S. K.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಕಟಪಾಡಿ, ದ. ಕ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬೇಂಕಿನಿಂದ ಚಿನ್ನಾಭರಣದ ಈಡಿನಮೇಲೆ ಸಾಲ ಪಡೆದು ಸದ್ರಿಯವರು ಮೃತಪಟ್ಟಿರುವುದರಿಂದಲೂ ಮೃತರ ನ್ಯಾಯವಾದ ವಾರೀಸುದಾರರು ಯಾ ಹಕ್ಕುದಾರರು ಹಕ್ಕುಸ್ಥಾಪಿಸಿ ಸದ್ರಿ ನಗವನ್ನು ಈ ವರೆಗೆ ಬಿಡಿಸಿಕೊಳ್ಳದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಕೂಡದ ಅಸಲು ಬಡ್ಡಿ ವ ನೋಟೀಸು ಖರ್ಚು ಸಹಾ ಇದೇ ಬರುವ ತಾ 30-11-1938ರೊಳಗೆ ಸದ್ರಿ ಮೃತರ ನ್ಯಾಯವಾದ ಹಕ್ಕುದಾರರು ಬ್ಯಾಂಕಿಗೆ ತಂದು ಸಲ್ಲಿಸಿ ಸದ್ರಿ ಅಡವಿಟ್ಟ ನಗವನ್ನು ಬಿಡಿಸಿಕೊಂಡು ಹೋಗಲಿಕ್ಕೆ ತಪ್ಪಿದ್ದಲ್ಲಿ ಈಡಿಟ್ಟ ಸದ್ರಿ ನಗವನ್ನು ಇದೇ ಬರುವ ತಾ. 3-12-'38ನೇ ಶನಿವಾರ ಅಪರಾಹ್ನ ಘಂಟೆ 2ಕ್ಕೆ ಯಾ ಅನಂತರ ಬ್ಯಾಂಕಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಃ ಯಾವತರದ ನೋಟೀಸೂ ಕೊಡದೇನೇ ಬಹಿರಂಗ ಏಲಂ ಮಾಡಲಾಗುವುದು. ತಿಳಿದಿರಲಿ

ಲೋನು ನಂಬ್ರ	ಸಾಲಪಡಕೊಂಡವರ ಹೆಸರು ಮತ್ತು ವಿಳಾಸ.	ಅಸಲು ರೂಪಾಯಿ.
L. No. 136/37	**ಕೆ. ಕೇಶವ ಶೆಟ್ಟಿ, ಕೆ.** ನಾರಾಯಣ ಶೆಟ್ಟಿಯವರ ಮಗ, ಕಟಪಾಡಿ, ದ. ಕ.	**35/-**

OFFICE OF THE BANK,
KATAPADI, 17-11-1938

K. J. KUDVA,
Agent.

FSTD 1924

FOUNDER

Sri A B SHETTY M.L.A.

Parliamentary Secretary Govt of Madras

ಸಂಸ್ಥಾಪಕರು:

ಶ್ರೀ ಎ. ಬಿ. ಶೆಟ್ಟಿ, ಎಂ ಎಲ್ ಎ

ಸಂಪಾದಕ:

ಕೆ. ಕೆ. ಶೆಟ್ಟಿ.

ನವಯುಗ

NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೨೪-೧೧-೧೯೩೮ | Vol. XVIII

ಸಂಚಿಕೆ ೧೩ | Udipi, Thursday 24—11—1938 | No. 13

ಸ್ಥಾಪನೆ: ೧೯೨೪

ಚಂದಾ ವಿವರ:

೧ ವರ್ಷಕ್ಕೆ ರೂ ೩-೪-೦

೬ ತಿಂಗಳಿಗೆ ರೂ ೧-೧೦-೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ವಿ ಪಿ. ಕ್ರಮವನ್ನು ನಿಲ್ಲಿಸಲಾಗಿದೆ

ವಾರ್ತಾವಾಹಿನಿ

ಕಲ್ಕತ್ತದ ಟೀಟಾಗಾರಿನ ಗಲಭೆ

ಕಲ್ಕತ್ತದ ಟೀಟಾಗಾರಿನ ನಾಲ್ಕು ಗಿರಣಿಗಳ ಮುಷ್ಕರವು ಶಾಂತಿಸ್ಥಾಪನಾ ಕಮಿಟಿಗಳ ಕಾರ್ಯದ ಸಲುವಾಗಿ ಸ್ವಲ್ಪ ಶಾಂತಸ್ಥಿತಿಗೆ ಬಂದು ಮುಟ್ಟಿದೆ. ಪೋಲೀಸು ಮತ್ತು ಮಿಲಿಟರಿ ಇನ್ನೂ ಎಚ್ಚರಿಕೆಯ ದೃಷ್ಟಿಯಿಂದ ಪಹರೆ ನಡೆಸುತ್ತಿರುವುದು. ಶಾಂತಿಸ್ಥಾಪನಾ ಕಮಿಟಿಯವರು ಜನರು ಈ ಪ್ರದೇಶದಲ್ಲಿ ಸಂಚರಿಸಿ, ಜನರನ್ನು ಶಾಂತತೆಯಿಂದಿರಲು ಬೋಧಿಸುತ್ತಿರುವರು.

ಅಲ್ಲಹಾಬಾದು ಯೂನಿವರ್ಸಿಟಿ ವೈಸ್ ಚಾನ್ಸೆಲ್ಲರ ಚುನಾವಣೆ

ಕಳೆದ ತಾ. 17ರಲ್ಲಿ ನಡೆದ ಚುನಾವಣೆಯಲ್ಲಿ ಅಲ್ಲಹಾಬಾದ ಯೂನಿವರ್ಸಿಟಿಯ ವೈಸ್ ಚಾನ್ಸಲರಾಗಿ, ಪಂಡಿತ ಅಮರನಾಥ ಜಹರು ಆರಿಸಲ್ಪಟ್ಟಿರುತ್ತಾರೆ. ಸರ್ ಸಯ್ಯದ ವಜೀರ್ ಹಸನ ಮತ್ತು ರಾವ್ ರಾಜಾಶ್ಯಾಮ ಬೇಹರಿ ಮಿಶ್ರ, ಇವರು ತಮ್ಮ ಉಮೇದ್ವಾರಿಕೆಯನ್ನು ಈ ಸಂದರ್ಭದಲ್ಲಿ ಹಿಂದೆಗೆದರು.

ಯೂನಿವರ್ಸಿಟಿಯು ಹರಿಜನ ವಿದ್ಯಾರ್ಥಿಗಳಿಗೆ ಫೀಸು ಮಾಫಿಮಾಡದಿರುವುದು ಸರಿಯಲ್ಲವೆಂದು ಮುನ್ಶಿ ಈಶ್ವರರು ಟೀಕಿಸಿದರು. ಆದರೆ ವೈಸ ಚಾನ್ಸಲರು ಈ ವಿಷಯದಲ್ಲಿ 'ಎಲ್ಲಾ ಬಡ ವಿದ್ಯಾರ್ಥಿಗಳಿಗೂ ಸಮಾನತೆಯ ದೃಷ್ಟಿಯಿಂದಲೇ ಕಾಣಲ್ಪಡುವರೆಂದು ಈ ಸೂಚನೆಯನ್ನು ಖಂಡಿಸಿದರು

ಮೈಸೂರು ಯೂನಿವರ್ಸಿಟಿಯಲ್ಲಿ ಖಾದಿ ತೊಡಿಗೆ.

ಚಿತ್ರಾಲದುರ್ಗ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ, ಎಮ್. ಎಲ್. ಸಿ ಮತ್ತು ಸನೇಟ್ ಮೆಂಬರರೂ ಆದ ಮಿ ಮಹಮ್ಮದ ಇಸ್ಮಾಯಿಲರವರು ಬರುವ ತಾ 20ರಲ್ಲಿ ನಡೆಯುವ ಸನೆಟ್ ಸಭೆಯಲ್ಲಿ ಈ ಸೂಚನೆ ತರಲಿರುವರು

ಇವರಂತೆ ಸನೆಟ್ ಯೂನಿವರ್ಸಿಟಿಯ ಉದ್ಯೋಗಸ್ಥ ಮಂಡಳಿಯವರು ಮತ್ತು ವಿದ್ಯಾರ್ಥಿಗಳು, ದೇಶೀಯ, ಮೇಲಾಗಿ ಖಾದಿ ಬಟ್ಟೆಯ ಯುನಿಫೋರ್ಮ ಧರಿಸುವಂತೆ ನೇಮಿಸಬೇಕೆಂಬುದಾಗಿದೆ

ಹಾಗೆಯೇ ಇನ್ನೊಬ್ಬ ಸದಸ್ಯ ನಾಗಯ್ಯಗೌಡರು ಯೂನಿವರ್ಸಿಟಿಯ ಮಂಡಳಿಗೆ ಖಾದಿಯಿಂದಲೇ ತಯಾರಿಸಿದ ಯುನಿಫೋರ್ಮನ್ನು ಒದಗಿಸತಕ್ಕದ್ದೆಂಬ ಮತ್ತೊಂದು ಸೂಚನೆ ಕೊಟ್ಟಿರುತ್ತಾರೆ.

ಹೈದರಾಬಾದು ಸ್ಟೇಟ್ ಕಾಂಗ್ರೆಸು

ಹೈದರಾಬಾದಿನ ಸ್ಟೇಟ್ ಕಾಂಗ್ರೆಸಿನ ಎಂಟನೆಯ ಡಿಕ್ಟೇಟರರಾದ ಶ್ರೀ ಎನ್. ಕೋದಂಡ ರಾಮರಾಯರು ಹೈದರಾಬಾದಿನ ಪ್ರಸಿದ್ಧ ವಕೀಲರು. ಶ್ರೀಗಳಾದ ವೆಂಕಟರಾವ್, ನಾರಾಯಣರಾವ, ಕಮಾಲರಾವ ಮಾನ್ವಿಕರ್, ವಸುದೇವ ಕುಲಕರ್ಣಿ ಮತ್ತು ರಾಮಚಂದ್ರ ಬ್ರಾಹ್ಮಣ ಇವರನ್ನು ಕಾಂಗ್ರೆಸ್ ಪ್ರಚಾರ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

ಶ್ರೀ ಕೋದಂಡ ರಾಮರಾಯರು ತಮ್ಮ ಅಭಿಪ್ರಾಯವನ್ನೀಯುತ್ತಾ ಹೀಗೆಂದರು. "ಸತ್ಯಾಗ್ರಹಕ್ಕೆ ನಿಜವಾದ ನೈತಿಕ ಬೆಂಬಲ ವಿಲ್ಲ- ಉತ್ತಮ ಸರಕಾರವು ಹೈದರಾಬಾದಿನಲ್ಲಿ ನೆಲೆಸಿಂತಿಲ್ಲ. ಅಂತೂ ಒಳ್ಳೆಯ ಸರಕಾರವಾದರೂ, ಪ್ರಜಾ ಸ್ವಾತಂತ್ರ್ಯ ಸರಕಾರಕ್ಕೆ ಸರಿಯಲ್ಲವೆಂಬುದು ತಿಳಿದ ವಿಷಯವಷ್ಟೆ. ಒಬ್ಬ ಸತ್ಯಾಗ್ರಹಿಯು ಚಳವಳಿ ಹೂಡಿದರೆ, ಆತನ ಬೆನ್ನ ಹಿಂದೆ ನೂರಾರು ಜನರು ತಮ್ಮ ಸಹಾನುಭೂತಿಯುಳ್ಳವರಿದ್ದಾರೆಂಬುದು ನಿಶ್ಚಯ. ಕೆಲವು ಪತ್ರಿಕೆಗಳು ಮತ್ತು ಸ್ಥಳೀಕ ಕೆಲ ಮಂಡಳಿಗಳೇನೋ ಇನ್ನೂ ಸ್ಟೇಟ ಕಾಂಗ್ರೆಸನ್ನು ಮೂಲೆಗೊತ್ತಲು ಅಪಪ್ರಚಾರಮಾಡಲು ಬಯಸಬಹುದು. ಆದರೆ, ಅಂಥಾ ದುರುದ್ದೇಶದ ಪ್ರಚಾರದಿಂದ ನಾವೇನೂ ಬಗ್ಗುವಂತಿಲ್ಲ ನಾವು ಶಾಂತಿ ಮತ್ತು ಅಹಿಂಸಾಬದ್ಧರಾಗಿ ಚಳವಳವನ್ನು ಹೂಡುತ್ತಿರುವೆವು"

ತಂದೆಯು ಪ್ರಾಯಕ್ಕೆ ಬಂದ ತನ್ನ ಮಗಳ ಮೇಲೆ ಅತ್ಯಾಚಾರಕ್ಕೆಳಸಿ, ಮರಣೋನ್ಮುಖನಾದನು.

ನಾಡೆಮ್ ಆಲಿಯೆಂಬ ಒಬ್ಬ ಕಸಾಯಿಯು ತನ್ನ ಹದಿನೆಂಟು ವರ್ಷಪ್ರಾಯದ ಮಗಳ ಮೇಲೆ ಕೈಮಾಡಲೆತ್ನಿಸಿದ, ಇವರಿಂದ ಮಗಳು ಸಿಟ್ಟುಗೊಂಡು ತಂದೆಯನ್ನು ತನ್ನ ಮರ್ಯಾದೆ ರಕ್ಷಣೆಯ ಭರದಿಂದ ಕತ್ತಿಯಿಂದ ತಿವಿದುಬಿಟ್ಟಳು. ಆವನು ಮೃತನಾದನು. ತಕ್ಷಣದಲ್ಲಿ ಆವಳು ತನ್ನ ಆತ್ಮರಕ್ಷಣೆಗಾಗಿ ಹೀಗೆಮಾಡಿದಳೆಂಬ ಕಾರಣದಿಂದ ನ್ಯಾಯಾಧಿಪತಿಗಳು ಆಪಾದಿತಳನ್ನು ಬಿಡುಗಡೆಮಾಡಿದರು

ಮದ್ರಾಸು ಸಾರಾಯಿನಿಷೇಧದಿಂದ ಕಳೆದ ಆಗೋಸ್ತಿನ ವರೆಗೆ ಜನತೆಗೆಷ್ಟು ಉಪಕಾರವಾಯಿತು ಎಂಬುದರ ತಖ್ತೆ ಕೆಳಗಣಂತಿದೆ

ಈ ಅರ್ಧ ವರ್ಷದಲ್ಲಿ ದಾಖಲಾದ ವ್ಯಾಜ್ಯಗಳು 55105

ಈ ಅರ್ಧವರ್ಷದಲ್ಲಿ ದಾಖಲಾದ ವ್ಯಾಜ್ಯಗಳ ಮೊಬಲಗು 7,609,786-6-3

ಇದರಲ್ಲಿ ತಗ್ಗಿಸಲ್ಪಟ್ಟ ಮೊಬಲಗು 4,044,609-9-3

ದೊರೆತರಿಯಾಯತಿ 3,565,176-13 0

ಅಥವಾ 47%

ಫೈಸಲಾದ ವ್ಯಾಜ್ಯಗಳು 36,005

ಮೇಲಣ ತಖ್ತೆಯ ಮೇರೆಗೆ ಮೂರು ಮಿಲಿಯದ ಐನೂರ ಅರುವತ್ತೈದು ಸಾವಿರದ ನೂರ ಎಪ್ಪತ್ತೆಂಟು ರೂಪಾಯಿ ಹದಿಮೂರಾಣೆಯ ಮಾಫಿ ದೊರೆತಂತಾಯಿತು.

ಸ್ಪೈನಿನ ರಿಪಬ್ಲಿಕ್ ಸರಕಾರಕ್ಕೆ ಹಿಂದೂದೇಶದ ಸಹಾನುಭೂತಿ.

ಸ್ಪೈನಿನಲ್ಲಿ ದುರ್ಭಿಕ್ಷಕ್ಕೆ ಬಲಿಬಿದ್ದ ಜನತೆಯ ಸಲುವಾಗಿ ನೆರವಾಗಲೆಂದು ಕಾರ್ಯದಲ್ಲಿ ದ್ಯುಕ್ತನಾದ ಲಂಡನಿನ ಇಂಡಿಯಾ ಲೀಗಿಗೆ ಹಿಂದೂಸ್ಥಾನದ ಸಹಾನುಭೂತಿಯು ಸಂಪೂರ್ಣವಾಗಿ ಸ್ಪೈನಿನ ರಿಪಬ್ಲಿಕ ಸರಕಾರಕ್ಕಿದೆಯೆಂದೂ, ಲಂಡನಿನ ಲೀಗಿನ ಕಾರ್ಯವು ಯಶಸ್ವಿಯಾಗಲೆಂದೂ ಹಾರೈಸಿ ಸಂದೇಶವನ್ನಿತ್ತಿರುವರು.

ಸರ್ದಾರ ಪಟೇಲರು ಜವಾಹರಲಾಲರನ್ನು ಮುಂಬಯಿಯಲ್ಲಿ ಸಂದರ್ಶಿಸಿದರು.

ಅಖಿಲ ಭಾರತ ಕಾಂಗ್ರೆಸ ಪಾರ್ಲಿಮೆಂಟರಿ ಸಬ್ ಕಮಿಟಿಯ ಅಧ್ಯಕ್ಷರಾದ ಪಟೇಲ ಸರ್ದಾರರು ಗಾಂಧಿಯವರೊಡನೆ ವಾರ್ಧಾದಲ್ಲಿ ಮಾತುಕತೆ ನಡೆಸಿ ಮುಂಬಾಯಿಗೆ ಹಿಂದಿರುಗಿದರು

ಅಲ್ಲಿ ಒಡನೆ ಪಂಡಿತ ನೆಹರುರನ್ನು ಸಂದರ್ಶಿಸಿ ಅಂತರರಾಷ್ಟ್ರೀಯ ವಿಚಾರದಲ್ಲೆಲ್ಲ ಸಂಭಾಷಣೆ ನಡೆಸಿ ಗುಜರಾಥಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲು ತೆರಳಿರುವರು

ಜಸ್ಟೀಸ್ ಪಾರ್ಟಿಯು ಬರಿದಾಗುತ್ತಾ ಬರುತ್ತದೆ.

ಮೀನಂಪಳ್ಳಿಯ ಪ್ರಸಿದ್ಧ ಜಮೀನ್ದಾರರಾದ ರಾ. ಕೆ ಸಿ. ಎಮ್ ವೆಂಕಟಾಚಲ ರೆಡ್ಡಿಯವರು ಜಸ್ಟೀಸ್ ಪಾರ್ಟಿಯಿಂದ ತನ್ನ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿರುವರು.

ಪತ್ನಿಯು ಪತಿಯ ದುಃಖಕ್ಕಾಗಿ ಆತ್ಮಹತ್ಯೆಮಾಡಿಕೊಂಡಳು

ಹೊಸಪೇಟೆಯಲ್ಲಿ ಮುಲಾ ವೆಂಕಟಸಾಮಿಯೆಂಬ ಪ್ರಮುಖ ಅಬ್ಕಾರಿ ಗುತ್ತೇದಾ

ಪುಟ ೨ರಲ್ಲಿ ನೋಡಿರಿ.

THE UDIPI BANK LTD.

ನಿರಖು ಠೇವಣಾತಿ (ಡಿಪೋಜಿಟು)ಗಳು

ಸಾ. ಶೇ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ

ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100,-ರ ತನಕವೂ ವಾರಕ್ಕೆರಡಾವರ್ತಿಯೂ ಚಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್,

ಉಡುಪಿ

The Canara Industrial & Banking Syndicate, Limited.

(INCORPORATED IN BRITISH INDIA)
[ESTD. 1925]

HEAD OFFICE:—MUKUND NIVAS, **UDIPI**, S INDIA

MEMBER:

RESERVE BANK OF INDIA

BANKERS' CLEARING HOUSE, BOMBAY.

Authorised Capital	„	10,00,000
Issued Capital	,	8,00,000
Subscribed Capital	„	7,74,500
Paid up Capital	„	3,87,730
Reserves	„	2,16,700

BANKING BUSINESS OF

EVERY DESCRIPTION TRANSACTED.

Please Note

The Subscribers, Agents & Advertisers

in

NAVAYUGA

PLEASE NOTE THAT PAYMENTS DUE TO **NAVAYUGA** MAY BE MADE TO THE CREDIT OF NAVAYUGA ACCOUNT IN ANY BRANCH OF

THE CANARA INDUSTRIAL & BANKING SYNDICATE, LIMITED, UDIPI

Without being liable to pay any amount by way of Commission.

WHERE THE SYNDICATE HAS BRANCHES

Bombay, Bangalore, Belgaum, Byadgi, Bellary, Adoni, Hospet, Nandyal, Prodattur, Tadpatri, Taliparamba, Hubli, Gadag, Mangalore, Cannanore, Payyanur, Kanhangad, Kasargode, Karkal, Udipi, Uppinangady, Karwar, Kumta, Ankola, Honavar, Bhatkal, Sirsi, Sagar, Coondapoor, Brahmavar, Hungarcutta, Nippani, Tumkur & Hindupur.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವೀಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅನ್ಯತ್ರ ಸಮಾನ ಔಷಧಗಳು.

ಕ್ರಯ ಕಡಿಮೆ !   ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.
ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾಮಗಲೂ ತಯಾರಿವೆ
ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ
ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಕ್ಷೀರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	· ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಧಾತುಪುಷ್ಟಿಗೆ	—ಮದನಕಸ್ತೂರಿ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE. MANGALORE   BRANCHES. Udipi, Coondapoor, Kaup & Karkal

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months } Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken

Further particulars can be had on application to the Head Office or any of the branches.

K. Gopalkrishna Shetty,
Secretary

NOTICE.

The Pangal Nayak Bank Ltd., Katapadi, S. K.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಕಟಪಾಡಿ, ದ. ಕ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬೇಂಕಿನಿಂದ ಚಿನ್ನಾಭರಣದ ಈಡಿನಮೇಲೆ ಸಾಲ ಪಡೆದು ಸದ್ರಿಯವರು ಮೃತಪಟ್ಟಿರುವುದರಿಂದಲೂ ಮೃತರ ನ್ಯಾಯವಾದ ವಾರೀಸುದಾರರು ಸಹಾ ಹಕ್ಕು ಮಾರರು ಹಕ್ಕುಸ್ಥಾಪಿಸಿ ಸದ್ರಿ ನಗವನ್ನು ಈ ವರೆಗೆ ಬಿಡಿಸಿಕೊಳ್ಳದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದ್ರಿಯವರಿಂದ ಬೇಂಕಿಗೆ ಸಲ ತಕ್ಕ ಸಾಲದ ಅಸಲ ಬಡ್ಡಿ ವ ನೋಟೀಸು ಖರ್ಚು ಸಹಾ ಇದೇ ಬರುವ ತಾ 30-11-1938ರೊಳಗೆ ಸದ್ರಿ ವ್ಯಕ್ತಿರ ನ್ಯಾಯವಾದ ಹಕ್ಕುದಾರರು ಬ್ಯಾಂಕಿಗೆ ತಂದು ಸಲ್ಲಿಸಿ ಸದ್ರಿ ಅಡವಿಟ್ಟ ನಗವನ್ನು ಬಿಡಿಸಿಕೊಂಡು ಹೋಗಲಿಕ್ಕೆ ತಪ್ಪಿದ್ದಲ್ಲಿ ಈಡಿಟ್ಟ ಸದ್ರಿ ನಗವನ್ನು ಇದೇ ಬರುವ ತಾ 3-12-'38ನೇ ಶನಿವಾರ ಅಪರಾಹ್ನ ಘಂಟೆ 2ಕ್ಕೆ ಯಾ ಅನಂತರ ಬ್ಯಾಂಕಿಗೆ ಯುಕ್ತತೋರ ವ ಬೇರೆ ತಾರೀಕಿನಲ್ಲಿ ಪುನಃ ಯಾವತರದ ನೋಟೀಸೂ ಕೊಡದೇನೇ ಬಹಿರಂಗ ಏಲಂ ಮಾಡಲಾಗುವುದು. ತಿಳಿದಿರಲಿ

ಲೋನು ನಂಬ್ರ.	ಸಾಲಪಡಕೊಂಡವರ ಹೆಸರು ಮತ್ತು ವಿಳಾಸ.	ಅಸಲು ರೂಪಾಯಿ.
L No. 136/37	ಕೆ. ಕೇಶವ ಶೆಣೈ, ಕೆ. ನಾರಾಯಣ ಶೆಣೈಯರ ಮಗ, ಕಟಪಾಡಿ, ದ. ಕ.	35/-

OFFICE OF THE BANK,
KATAPADI, 17-11-1938

K. J. KUDVA,
Agent.

ESTD 1921
FOUNDER
Sri A B SHETTY, M.L.A.
Parliamentary Secretary Govt of Madras
ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೨೪-೧೧-೧೯೩೮ | Vol. XVIII
ಸಂಚಿಕೆ ೧೩ | Udipi, Thursday 24—11—1938 | No 13

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩-೪-೦
೬ ತಿಂಗಳಿಗೆ ರೂ ೧-೧೨-೦
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ ಪಿ. ಕ್ರಮವನ್ನು ನಿಲ್ಲಿಸಲಾಗಿದೆ

ವಾರ್ತಾವಾಹಿನಿ

ಕಲ್ಕತ್ತದ ಟೀಟಾಗಾರಿನ ಗಲಭೆ

ಕಲ್ಕತ್ತದ ಟೀಟಾಗಾರಿನ ನಾರಿನ ಗಿರಣಿಗಳ ಮುಷ್ಕರವು ಶಾಂತಿಸ್ಥಾಪನಾ ಕಮಿಟಿಗಳ ಕಾರ್ಯದ ಸಲುವಾಗಿ ಸ್ವಲ್ಪ ಶಾಂತಸ್ಥಿತಿಗೆ ಬಂದು ಮುಟ್ಟಿದೆ. ಪೋಲೀಸು ಮತ್ತು ಮಿಲಿಟರಿ ಇನ್ನೂ ಎಚ್ಚರಿಕೆಯ ದೃಷ್ಟಿಯಿಂದ ಪಹರೆ ನಡೆಸುತ್ತಿರುವುದು. ಶಾಂತಿಸ್ಥಾಪನಾ ಕಮಿಟಿಯವರು ಜನರು ಈ ಪ್ರದೇಶದಲ್ಲಿ ಸಂಚರಿಸಿ, ಜನರನ್ನು ಶಾಂತತೆಯಿಂದಿರಲು ಬೋಧಿಸುತ್ತಿರುವರು.

ಅಲ್ಲಹಾಬಾದು ಯೂನಿವರ್ಸಿಟಿ ವೈಸ್ ಚಾನ್ಸೆಲ್ಲರ ಚುನಾವಣೆ

ಕಳೆದ ತಾ. 17ರಲ್ಲಿ ನಡೆದ ಚುನಾವಣೆಯಲ್ಲಿ ಅಲ್ಲಹಾಬಾದ ಯೂನಿವರ್ಸಿಟಿಯ ವೈಸ್ ಚಾನ್ಸಲರಾಗಿ, ಪಂಡಿತ ಅಮರನಾಥ ಝಾರು ಆರಿಸಲ್ಪಟ್ಟಿರುತ್ತಾರೆ. ಸರ್ ಸಯ್ಯದ ವಜೀರ್ ಹಸನ ಮತ್ತು ರಾವ್ ರಾಜಾಶ್ಯಾಮ ಬಿಹಾರಿ ಮಿಶ್ರ, ಇವರು ತಮ್ಮ ಉಮೇದ್ವಾರಿಕೆಯನ್ನು ಈ ಸಂದರ್ಭದಲ್ಲಿ ಹಿಂದೆಗೆದರು.

ಯೂನಿವರ್ಸಿಟಿಯು ಹರಿಜನ ವಿದ್ಯಾರ್ಥಿಗಳಿಗೆ ಫೀಸು ಮಾಫಿಮಾಡದಿರುವುದು ಸರಿಯಲ್ಲವೆಂದು ಮುನ್ನಿ ಈಶ್ವರರು ಟೀಕಿಸಿದರು. ಆದರೆ ವೈಸ ಚಾನ್ಸಲರು ಈ ವಿಷಯದಲ್ಲಿ 'ಎಲ್ಲಾ ಬಡ ವಿದ್ಯಾರ್ಥಿಗಳಿಗೂ ಸಮಾನತೆಯ ದೃಷ್ಟಿಯಿಂದಲೇ ಕಾಣಲ್ಪಡುವರೆಂದು ಈ ಸೂಚನೆಯನ್ನು ಖಂಡಿಸಿದರು.

ಮೈಸೂರು ಯೂನಿವರ್ಸಿಟಿಯಲ್ಲಿ ಖಾದಿ ತೊಡಿಗೆ.

ಚಿತ್ರದುರ್ಗ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ, ಎಮ್. ಎಲ್. ಸಿ ಮತ್ತು ಸನೇಟ್ ಮೆಂಬರರೂ ಆದ ಮಿ ಮಹಮ್ಮದ ಇಸ್ಮಾಇಲರವರು ಬರುವ ತಾ 26ರಲ್ಲಿ ನಡೆಯುವ ಸೆನೆಟ್ ಸಭೆಯಲ್ಲಿ ಈ ಸೂಚನೆ ತಂದಿರುವರು

ಇವರಂತೆ ಸೆನೆಟ್ ಯೂನಿವರ್ಸಿಟಿಯ ಉದ್ಯೋಗಸ್ಥ ಮಂಡಳಿಯವರು ಮತ್ತು ವಿದ್ಯಾರ್ಥಿಗಳು, ದೇಶೀಯ, ಮೇಲಾಗಿ ಖಾದಿ ಬಟ್ಟೆಯ ಯುನಿಫೋರ್ಮ್ ಧರಿಸುವಂತೆ ನೇಮಿಸಬೇಕೆಂಬುದಾಗಿದೆ

ಹಾಗೆಯೇ ಇನ್ನೊಬ್ಬ ಸದಸ್ಯ ನಾಗಯ್ಯಗೌಡರು ಯೂನಿವರ್ಸಿಟಿಯ ಮಂಡಳಿಗೆ ಖಾದಿಯಿಂದಲೇ ತಯಾರಿಸಿದ ಯುನಿಫೋರ್ಮನ್ನು ಒದಗಿಸತಕ್ಕದ್ದೆಂಬ ಮತ್ತೊಂದು ಸೂಚನೆ ಕೊಟ್ಟಿರುತ್ತಾರೆ.

ಹೈದರಾಬಾದು ಸ್ಟೇಟ್ ಕಾಂಗ್ರೆಸು

ಹೈದರಾಬಾದಿನ ಸ್ಟೇಟ್ ಕೊಂಗ್ರೆಸಿನ ಎಂಟನೆಯ ಡಿಕ್ಟೇಟರರಾದ ಶ್ರೀ ಎನ್. ಕೋದಂಡ ರಾಮರಾಯರು ಹೈದರಾಬಾದಿನ ಪ್ರಸಿದ್ಧ ವಕೀಲರು. ಶ್ರೀಗಳಾದ ವೆಂಕಟರಾವ್, ನಾರಾಯಣರಾವ, ಕನೂಲರಾವ ಮಾನ್ವಿಕರ್, ವಸುದೇವ ಕುಲಕರ್ಣಿ ಮತ್ತು ರಾಮಚಂದ್ರ ಬ್ಯಾಲೆರಾವ ಇವರನ್ನು ಕಾಂಗ್ರೆಸ್ ಪ್ರಚಾರ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

ಶ್ರೀ ಕೋದಂಡ ರಾಮರಾಯರು ತಮ್ಮ ಅಭಿಪ್ರಾಯವನ್ನೀಯುತ್ತಾ ಹೀಗೆಂದರು. "ಸತ್ಯಾಗ್ರಹಕ್ಕೆ ನಿಜವಾದ ನೈತಿಕ ಬೆಂಬಲವಿಲ್ಲ- ಉತ್ತಮ ಸರಕಾರವು ಹೈದರಾಬಾದಿನಲ್ಲಿ ನೆಲೆನಿಂತಿಲ್ಲ ಅಂತೂ ಒಳ್ಳೆಯ ಸರಕಾರವಾದರೂ, ಪ್ರಜಾ ಸ್ವಾತಂತ್ರ್ಯ ಸರಕಾರಕ್ಕೆ ಸರಿಯಲ್ಲವೆಂಬುದು ತಿಳಿದ ವಿಷಯವಷ್ಟೆ ಒಬ್ಬ ಸತ್ಯಾಗ್ರಹಿಯು ಚಳವಳಿ ಹೂಡಿದರೆ, ಅವನ ಬೆನ್ನ ಹಿಂದೆ ನೂರಾರು ಜನರು ತಮ್ಮ ಸಹಾನುಭೂತಿಯುಳ್ಳವರಿದ್ದಾರೆಂಬುದು ನಿಶ್ಚಯ ಕೆಲವುಪತ್ರಿಕೆಗಳು ಮತ್ತು ಸ್ಥಳೀಕ ಕೆಲ ಸಂಗಡಿಗಳೇನೋ ಇನ್ನೂ ಸ್ಟೇಟ ಕಾಂಗ್ರೆಸನ್ನು ಮುಂಲೆ ಗೊತ್ತಿಲ್ಲ ಅಪಪ್ರಚಾರಮಾಡಲು ಬಯಸಬಹುದು. ಆದರೆ, ಅಂಥಾ ದುರುದ್ದೇಶದ ಪ್ರಚಾರದಿಂದ ನಾವೇನೂ ಬಗ್ಗುವಂತಿಲ್ಲ ತಾವು ಶಾಂತಿ ಮತ್ತು ಅಹಿಂಸಾಬದ್ಧರಾಗಿ ಚಳವಳವನ್ನು ಹೂಡುತ್ತಿರುವೆವು"

ತಂದೆಯು ಪ್ರಾಯಕ್ಕೆ ಬಂದ ತನ್ನ ಮಗಳ ಮೇಲೆ ಅತ್ಯಾಚಾರಕ್ಕೆಳಸಿ, ಮರಣೋನ್ಮುಖನಾದನು.

ನಾಡೆಮ್ ಅಲಿಯೆಂಬ ಒಬ್ಬ ಕಸಾಯಿಯು ತನ್ನ ಹದಿನೆಂಟು ವರ್ಷಪ್ರಾಯದ ಮಗಳ ಮೇಲೆ ಕೈಮಾಡಲೆತ್ನಿಸಿದ, ಇದರಿಂದ ಮಗಳು ಸಿಟ್ಟುಗೊಂಡು ತಂದೆಯನ್ನು ತನ್ನ ಮರ್ಯಾದ ರಕ್ಷಣೆಯ ಭರದಿಂದ ಕತ್ತಿಯಿಂದ ತಿವಿದುಬಿಟ್ಟಳು. ಅವನು ಮೃತನಾದನು. ತಕ್ಷಣದಲ್ಲಿ ಅವಳು ತನ್ನ ಆತ್ಮರಕ್ಷಣೆಗಾಗಿ ಹಾಗೆಮಾಡಿದಳೆಂಬ ಕಾರಣದಿಂದ ನ್ಯಾಯಾಧಿಪತಿಗಳು ಅಪಾದಿತರನ್ನು ಬಿಡುಗಡೆಮಾಡಿದರು

ಮುನ್ಸಾಫಿ ಸಾಲನಿವಾರಣಾ ಮಸೂದೆಯಿಂದ ಕಳೆದ ಆಗೋಸ್ತಿನ ವರೆಗೆ ಜನತೆಗೆಷ್ಟು ಉಪಕಾರವಾಯಿತು ಎಂಬುದರ ತಖ್ತೆ ಕೆಳಗಣಂತಿದೆ

ಈ ಅರ್ಧ ವರ್ಷದಲ್ಲಿ ದಾಖಲಾದ ವ್ಯಾಜ್ಯಗಳು 55105

ಈ ಅರ್ಧವರ್ಷದಲ್ಲಿ ದಾಖಲಾದ ವ್ಯಾಜ್ಯಗಳ ಮೊಬಲಗು 7,609,788-6-3

ಇದರಲ್ಲಿ ತಗ್ಗಿಸಲ್ಪಟ್ಟ ಮೊಬಲಗು 4,014,609-9-3

ದೊರೆತರಿಯಾಯತಿ 3,565,178-13-0

ಅಥವಾ 47%

ತೈಸಲಾದ ವ್ಯಾಜ್ಯಗಳು 36,005

ಮೇಲಣ ತಖ್ತೆಯ ಮೇರೆಗೆ ಮೂರು ಮಿಲಿಯಯದ ಐನೂರ ಆರುವತ್ತೈದು ಸಾವಿರದ ನೂರ ಎಪ್ಪತ್ತೆಂಟು ರೂಪಾಯಿ ಹದಿಮೂರಾಣೆಯ ಮಾಫಿ ದೊರೆತಂತಾಯಿತು.

ಸ್ಪೈನಿನ ರಿಪಬ್ಲಿಕ್ ಸರಕಾರಕ್ಕೆ ಹಿಂದೂದೇಶದ ಸಹಾನುಭೂತಿ.

ಸ್ಪೈನಿನಲ್ಲಿ ದುಃಖಕ್ಕೆ ಬಲಿಬಿದ್ದ ಜನತೆಯ ಸಲುವಾಗಿ ನೆರವಾಗಲೆಂದು ಕಾರ್ಯದಲ್ಲಿ ದ್ಯುಕ್ತರಾದ ಲಂಡನಿನ ಇಂಡಿಯಾ ಲೀಗಿಗೆ ಹಿಂದೂಸ್ಥಾನದ ಸಹಾನುಭೂತಿಯು ಸಂಪೂರ್ಣವಾಗಿ ಸ್ಪೈನಿನ ರಿಪಬ್ಲಿಕ ಸರಕಾರಕ್ಕಿದೆಯೆಂದೂ, ಲಂಡನಿನ ಲೀಗಿನ ಕಾರ್ಯವು ಯಶಸ್ವಿಯಾಗಲೆಂದೂ ಹಾರೈಸಿ ಸಂದೇಶವನ್ನಿತ್ತಿರುವರು

ಸರ್ದಾರ ಪಟೇಲರು ಜವಾಹರಲಾಲರನ್ನು ಮುಂಬಯಿಯಲ್ಲಿ ಸಂದರ್ಶಿಸಿದರು.

ಅಖಿಲ ಭಾರತ ಕಾಂಗ್ರೆಸ ಪಾರ್ಲಿಮೆಂಟರಿ ಸಬ್ ಕಮಿಟಿಯ ಅಧ್ಯಕ್ಷರಾದ ಪಟೇಲ ಸರ್ದಾರರು ಗಾಂಧಿಯವರೊಡನೆ ವಾರ್ಧಾದಲ್ಲಿ ಮಾತುಕತೆ ನಡೆಸಿ ಮುಂಬಾಯಿಗೆ ಹಿಂದಿರುಗಿದರು

ಅಲ್ಲಿ ಒಡನೆ ಪಂಡಿತ ನೆಹರುರನ್ನು ಸಂದರ್ಶಿಸಿ ಅಂತರರಾಷ್ಟ್ರೀಯ ವಿಚಾರದಲ್ಲೆಲ್ಲ ಸಂಭಾಷಣೆ ನಡೆಸಿ ಗುಜರಾಥಿನ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲು ತೆರಳಿರುವರು

ಜಸ್ಟೀಸ್ ಪಾರ್ಟಿಯು ಬರಿದಾಗುತ್ತಾ ಬರುತ್ತದೆ.

ವಿನಂಪಳ್ಳಿಯ ಪ್ರಸಿದ್ಧ ಜಮೀನ್ದಾರರಾದ ರಾ. ಕೆ. ಸಿ. ಎಮ್. ವೆಂಕಟಾಚಲ ಶೆಟ್ಟಿಯವರು ಜಸ್ಟೀಸ್ ಪಾರ್ಟಿಯಿಂದ ತನ್ನ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿರುವರು.

ಪತ್ನಿಯು ಪತಿಯ ದುಃಖಕ್ಕಾಗಿ ಆತ್ಮಹತ್ಯೆಮಾಡಿಕೊಂಡಳು

ಹೊಸಪೇಟೆಯಲ್ಲಿ ಮುಲಾ ವೆಂಕಟಸ್ವಾಮಿಯೆಂಬ ಪ್ರಮುಖ ಅಬ್ಕಾರಿ ಗುತ್ತೇದಾ

ಪುಟ ೫ರಲ್ಲಿ ನೋಡಿರಿ.

THE UDIPI BANK LTD.

ಸಿರಖು ಠೇವಣಾತಿ (ಡಿಪೋಜಿಟು)ಗಳು

ನೂ. ಕೆ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ

ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100/-ರ ತನಕವೂ ವಾರಕ್ಕೆರಡಾವರ್ತಿಯೂ ಚಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ಮುಂಬಾಯಿಯಲ್ಲಿ ಪಂಡಿತ ನೆಹರುಗಳು

ಭಾರತವೀರ ಪಂಡಿತ ನೆಹರುಗಳಿಗೆ ಜನತೆಯು ಪ್ರಚಂಡ ಸ್ವಾಗತ!

ಪಂಡಿತರು ಇಂಗ್ಲೆಂಡಿನಲ್ಲಿ ನಡೆಸಿದ ಮಾತುಕತೆಗಳು ತೃಪ್ತಿಕರವಾದವು ಗಳು. ಚೇಂಬರ್ಲೇನರ ಸರಕಾರದಲ್ಲಿ ಜನರಿಗೆ ಹೆಚ್ಚಿನ ನಂಬುಗೆಯಿಲ್ಲ. ಸ್ಪೈನಿನ ಜನತೆಯ ಕಡೆಗೆ ಹಿಂದೂದೇಶವು ಸಹಾನುಭೂತಿ ತೋರಿಸಬೇಕು. ಹಿಂದೂದೇಶವು ಅಂತರರಾಷ್ಟ್ರೀಯ ವಿಚಾರದಲ್ಲಿ ಗಣನೀಯ ಸ್ಥಾನವನ್ನು ಪಡೆದಿದೆ. ಹಿಂದೂಸ್ಥಾನದ ಸಣ್ಣ ಪುಟ್ಟ ಆರ್ಥಿಕ ಬಲದ ಸಂಸ್ಥಾನಗಳು ನಿರ್ನಾಮವಾಗಬೇಕು. ದೊಡ್ಡ ಸಂಸ್ಥಾನಗಳು ಪ್ರಜಾಜವಾಬ್ದಾರಿಯಿಂದ ಹಿಂದೂದೇಶದ ಸಮಸ್ಯೆಯಲ್ಲಿ ಭಾಗ ವಹಿಸಬೇಕು

ಪಂಡಿತ ಜವಾಹರಲಾಲರು ತಮ್ಮ ಯುರೋಪಿನ ಪ್ರಯಾಣವನ್ನು ಮುಗಿಸಿ, ಮುಂಬಾಯಿಗೆ ಬಂದಿಳಿದಾಗ ಪ್ರಚಂಡ ಸ್ವಾಗತವು ದೊರೆಯಿತು. 1931ರಲ್ಲಿ ಮಹಾತ್ಮಾ ಗಾಂಧಿಯವರು ದುಂಡುಮೇಜಿನ ಪರಿಷತ್ತಿನಿಂದ ಮರಳಿದಾಗ ಯಾವ ರೀತಿಯಲ್ಲಿ ಜನತೆಯು ಉತ್ಸುಕತೆಯಿಂದ ಅವರನ್ನು ಇದಿರುಗೊಂಡಿತೋ, ಅದೇ ರೀತಿಯಲ್ಲಿ ಪಂಡಿತರನ್ನು ತಿರುಗಿ ಸ್ವಾಗತಿಸುವರೆ ಜನರು ತುಂಬಾ ಆತುರ ತೋರ್ಪಡಿಸಿದರು. ನೆಹರುಗಳು ತಮ್ಮ ಯುರೋಪಿಯಾನ ಸಂಚಾರದ ಪರಿಣಾಮವಾಗಿ ಇನ್ನಷ್ಟು ಉತ್ಸಾಹಿತರಾಗಿರುವಂತೆ ಕಂಡು ಬಂದರು. ಕುಮಾರಿ ಇಂದಿರೆಯು ಆಕೆಯ ಇತ್ತೀಚೆಯ ಅಸ್ವಸ್ಥತೆಯ ಕಾರಣದಿಂದ ಸ್ವಲ್ಪ ನಿಸ್ತೇಜಳಾಗಿದ್ದಳು.

ಅನಂತರ ನೆಹರೂರವರು ತಮ್ಮ ನಿವಾಸಗೃಹದಲ್ಲಿ ಪತ್ರಿಕೆ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಅವರು ಹೀಗೆಂದರು: "ನಾನು ಇಂಗ್ಲೆಂಡಿನಲ್ಲಿ ಲಾರ್ಡ್ ಜೆಟ್ಲೆಂಡ್, ಲಾರ್ಡ್ ಲಿನ್ಲಿತ್‌ಗೋ, ಲಾರ್ಡ್ ಹ್ಯಾಲಿಫೇಕ್ಸ್ ಮತ್ತು ಇನ್ನಿತರ ಮಹನೀಯರೊಡನೆ ನಡೆಸಿದ ಮಾತುಕತೆಗಳೆಲ್ಲಾ ಗೆಳೆತನದ ವ್ಯಾವಹಾರಿಕ ವೈಯಕ್ತಿಕ ಅಭಿಪ್ರಾಯಗಳಿಗಿಂತ ಪ್ರಾಮುಖ್ಯವಾದುದಲ್ಲ. ನಾನು ಹಿಂದೂದೇಶದಿಂದ ನಾಲ್ಕೈದು ತಿಂಗಳು ದೂರಗಿದ್ದೆನು. ಕಾರಣ, ಇಂದಿನ ದೇಶದ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಕೊಡುವುದು ಸುಲಭವಾಗಿಲ್ಲ. ಆದರೆ, ನಾನು ಯುರೋಪಿಯನ ಜನಾಂಗಗಳ ಪರಿಸ್ಥಿತಿಯನ್ನು ಸಮೀಪದಿಂದ ಪರಿಶೀಲಿಸಿದ್ದೇನೆ. ಬ್ರಿಟಿಷ ಸರಕಾರದ ವಿದೇಶೀಯ ನೀತಿಯು ಬಹು ವಿಚಿತ್ರವಾದುದು; ಜನತೆಯು ಬ್ರಿಟಿಷ ರಾಜಸೂತ್ರದಿಂದ ಬೇಸತ್ತಿರುವದು. ಪ್ರಧಾನ ಮಂತ್ರಿ ಚೇಂಬರ್ಲೇನರ ಸೂತ್ರವು ಸಂಪೂರ್ಣ ನಾಜಿ ಪಕ್ಷಪಾತವುಳ್ಳದ್ದೆಂಬುದು ಯೋಚನೀಯ. ಯುರೋಪಿನಲ್ಲಿ ಪ್ರಜಾ ಜವಾಬ್ದಾರಿಕೆಯ ಅಸ್ತಿವಾರವು ಸಂಪೂರ್ಣವಾಗಿ ಅಡಿಮೇಲಾಗುವ ಪರಿಸ್ಥಿತಿಯಲ್ಲಿದೆ. ಸಾರ್ವಜನಿಕ ಅಭಿಪ್ರಾಯವು ನಾಜೀ ವಿಚಾರಕ್ಕೆ ತೀವ್ರ ವಿರುದ್ಧವಿದೆ. ಇಟಲಿ ಜರ್ಮನಿಯಲ್ಲಿ ಕೂಡಾ ಬಹುಮತವು ಯುದ್ಧಕ್ಕೆ ತೀರಾ ವಿರೋಧವಿದೆ. ಸರಕಾರದ ಧ್ಯೇಯವು ಅವರಿಗೆ ಸರಿಯಾಗಿ ಕಾಣುವುದಿಲ್ಲ.

ಸ್ಪೈನಿನ ಜನತೆಯು ಪ್ರಜಾಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿರುವದು. ಚೇಂಬರ್ಲೇನರ ರಾಜಕೀಯ ವಿಚಾರವು ಬಂಡಾಯಗಾರರಿಗೆ ಅನುಕೂಲವಾಗಿರುವುದು. ನಾನು ಸ್ಪೈನಿಗೆ ಸಂದರ್ಶಿಸಿದಾಗ ನಾನು ಅಲ್ಲಿ ಕಂಡ ವಿಷಯಗಳು ಹೆಚ್ಚಿನ ಪರಿಣಾಮವನ್ನುಂಟುಮಾಡಿರುವವು. ಜನರಲ್ ಫ್ರಾಂಕೋನ ಪಕ್ಷವು ಇಟಲಿಯಿಂದಲೂ, ಜರ್ಮನಿಯಿಂದಲೂ ಯುದ್ಧಸಾಮಗ್ರಿಯ ಸಹಾಯವನ್ನು ಪಡೆಯುತ್ತಿರುವುದು. ಆದರೂ ರಿಪಬ್ಲಿಕನರ ಪರಿಸ್ಥಿತಿಯು ಇಂದು ಇನ್ನಷ್ಟು ಬಲವತ್ತಾಗಿಯೇ ಇದೆಯೆನ್ನಬಹುದು. ಆದರೆ ಈದೀಗ ಆಹಾರ ಸಾಮಗ್ರಿಯ ಅಭಾವದಿಂದ ತೊಂದರೆ ಪಟ್ಟಿರುವುದು. ಆದುದರಿಂದ ಈ ಸಂದರ್ಭದಲ್ಲಿ ಹಿಂದೂದೇಶವು ತನ್ನ ಕೈಲಾದ ರೀತಿಯಲ್ಲಿ ನೆರವಾಗುವುದು ಅಗತ್ಯ. ನಾವು ಹಿಟ್ಟು, ಬಟ್ಟೆ, ಧಾನ್ಯ... ಇವೇ ಮೊದಲಾದುವನ್ನು



ಕಳುಹಿಸಿ, ನಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುವುದು, ಪ್ರಜಾಹಿತ ಧ್ಯೇಯದಿಂದಲೂ, ಮಾನವೀಯತೆಯ ಸಹಕಾರದ ದೃಷ್ಟಿಯಿಂದಲೂ ಅತ್ಯಾವಶ್ಯಕ. ನಾನು ಸ್ಪೈನಿನಲ್ಲಿರುವಾಗ ಅಲ್ಲಿಯ ಜನತೆಯು ನಮ್ಮ ವಿಷಯ ತುಂಬಾ ಸಹಾನುಭೂತಿಯನ್ನು ತೋರಿಸಿರುವರು. ನಾವು ಸ್ವಾತಂತ್ರ್ಯ ರಾಷ್ಟ್ರವಾಗಿರಬೇಕೆಂಬುದು ಅವರ ಆಶಯವದ. ಅವರು ನಮ್ಮ ಸ್ವಾತಂತ್ರ್ಯವನ್ನು ಮಾತ್ರವಲ್ಲದೆ, ಜಗತ್ತಿನ ಬೇರೆ ಜನಾಂಗಗಳ ಸ್ವಾತಂತ್ರ್ಯತೆಯನ್ನು ಬಯಸುವ ಉದಾತ್ತ ಧ್ಯೇಯವುಳ್ಳವರು.

ಹಿಂದೂದೇಶದ ಪರಿಸ್ಥಿತಿಯ ಕಡೆಗೆ ಜಗತ್ತಿನ ದೃಷ್ಟಿಯು ತಿರುಗಿದೆ. ಅಂತರಾಷ್ಟ್ರೀಯ ವಿಚಾರಗಳಲ್ಲಿ ಹಿಂದೂದೇಶವೀಗ ಗಣನೀಯ ಸ್ಥಾನವನ್ನು ಪಡೆಯುತ್ತಿದೆ. ಭಾರತಭೂಮಿಯು ಇಂದೀಗ ಸ್ವಾತಂತ್ರ್ಯದ ಹೋರಾಟದಲ್ಲಿ ಕಾಲಿಟ್ಟಿರುವುದು. ಹಲವು ಜನಾಂಗಗಳ ಅಭಿಪ್ರಾಯ ಅದರಿಂದ ಹಿಂದೂದೇಶದೊಡನೆ ಮೈತ್ರಿ ಬೆಳೆಸುವುದು ಹಿತಕರವೆಂಬ ಅಭಿಪ್ರಾಯಗಳ ನಂಬಿಕೆ ಬೆಳೆಯುತ್ತಿದೆ"

ನಂತರ ಪಂಡಿತರು, ಆಫ್ರಿಕ ಸಂಸ್ಥಾನ ಕುರಿತು ಪ್ರಸ್ತಾಪಿಸುತ್ತಾ ಹೀಗೆಂದರು, "ಇಂದಿನ ಆಶ್ರಿತ ಸಂಸ್ಥಾನಗಳ ಆಡಳಿತೆಯ ಕ್ರಮವು ಸರಿಯಾದುದಲ್ಲ. ಇದು ಹಾಸ್ಯಾಸ್ಪದವಾದುದು, ಪ್ರಗತಿಮಾರ್ಗಕ್ಕೆ ತಡೆಯಾದುದು; ನಿರರ್ಥಕವಾದುದು; ಆದುದರಿಂದ ಈ ಪದ್ಧತಿಯು ಸಂಪೂರ್ಣ ಮಾರ್ಪಡಬೇಕು. ಈ ಪರಿಸ್ಥಿತಿಯನ್ನು ಹೇಗೆ ಸರಿಪಡಿಸಿಕೊಳ್ಳಬಹುದೆಂಬ ವಿಚಾರದಲ್ಲಿ ನಿಶ್ಚಿತ ಅಭಿಪ್ರಾಯವನ್ನು ಸುಲಭವಾಗಿ ಕೊಡಲು ಬರುವುದಿಲ್ಲ. ಆಶ್ರಿತ ಸಂಸ್ಥಾನಗಳು ಪ್ರಜಾಪ್ರಾತಿನಿಧ್ಯವುಳ್ಳವುಗಳಾಗಿ, ಬ್ರಿಟಿಷ ಭಾಗಗಳಂತೆ, ಸರಿಯಾಗಿ ದೇಶದ ವಿಚಾರದಲ್ಲಿ ಭಾಗವಹಿಸುವಂತಾಗಬೇಕು. ಹಿಂದೂದೇಶದಲ್ಲಿರುವ ನೂರಾರು ಸಣ್ಣಪುಟ್ಟ ದೇಶೀಯ ಸಂಸ್ಥಾನಗಳು, ಸ್ವತಂತ್ರವಾಗಿ ನೆಲೆನಿಲ್ಲಲಾರದ ಪರಿಸ್ಥಿತಿಯಲ್ಲಿವೆ, ಆರ್ಥಿಕ ಪರಿಸ್ಥಿತಿಯಲ್ಲಿ ಅವುಗಳು ಸ್ವತಂತ್ರವಾಗಿ ಪ್ರಗತಿಯನ್ನು ಹೊಂದುವಂತಿಲ್ಲ. ಇಂಥಾ ಪರಿಸ್ಥಿತಿಯ ಸಂಸ್ಥಾನಗಳನ್ನು ಇರಗೊಡಿಸುವುದರಲ್ಲಿ ಅರ್ಥವಿಲ್ಲ. ಆದರೆ, ದೊಡ್ಡ ಸಂಸ್ಥಾನಗಳು ಅಂತರ್ಗತ ಜವಾಬ್ದಾರಿಕೆಯುಳ್ಳವುಗಳಾಗಿ ರಾಜರುಗಳ ಮೇಲಾಧಿಕಾರದಲ್ಲಿ ಉಳಿಯಬಹುದು. ಕಾಂಗ್ರೆಸಿನ ಮತ್ತು ಸಂಸ್ಥಾನಿಕ ಪ್ರಜಾಜನತೆಯ ಸಮ್ಮೇಳನಗಳ ಉದ್ದೇಶವೆಂದರೆ, ಆಶ್ರಿತ ಸಂಸ್ಥಾನಗಳಲ್ಲಿ ಪ್ರಜಾಜವಾಬ್ದಾರಿ ಸರಕಾರವು ತಲೆಯೆತ್ತಬೇಕೆಂಬುದಾಗಿದೆ."

ಅನಂತರ ತನಗೆ ಈ ಸಮಯದಲ್ಲಿ ರಷ್ಯಕ್ಕೆ ಹೋಗಲಿಕ್ಕಾಗಲಿಲ್ಲವೆಂಬುದು ವಿಷಾದಕರ. ತನ್ನ ಮಗಳ ಕಾಹಿಲೆಯ ದೆಸೆಯಿಂದಾಗಿ ತನ್ನ ಯುರೋಪಿಯಾನ ಸಂಚಾರದ ಕಾರ್ಯಕ್ರಮವು ಅವ್ಯವಸ್ಥಿತವಾಯಿತು. ಮೇಲಾಗಿ ತನಗೆ ಹಿಂದೂದೇಶಕ್ಕೆ ಬೇಗನೇ ಹಿಂದಿರುಗುವ ಸ್ಪೃಹೆಯಿದ್ದಿತು. ತಾನು ಬರುವಾಗ ಈಜಿಪ್ಟಿನಲ್ಲಿ ಕೆಲದಿನ ಉಳಕೊಂಡಿದ್ದ. ಈಜಿಪ್ಟಿನ ನಾಯಕನಾದ ನಾಹಶಪಾಷರವರು ತನ್ನನ್ನು ಸ್ವಾಗತೀಕರಿಸಿ ತುಂಬಾ ಭಾರತೀಯ ಸಂಬಂಧಿ ಮಾನದಿಂದ ಗೌರವಿಸಿದರು. ವಾಫ್ದ ಪಂಗಡದ ಅಪಜಯಕ್ಕೆ ಕಾರಣವೆಂದರೆ ವಿರುದ್ಧ ಪಂಗಡದ ಮತದಾನದ ಕಪಟೋಪಾಯವು. ಅವರು ತಮಗೆ ಬೇಕಾದಂತೆ ಸೂತ್ರಚಾಲನೆ ಮಾಡಿದರು. ಸರಕಾರವೀಗ ಜಮೀನ್ದಾರರ ಕೈವಶವಾಗಿರುವುದು. ಚಳವಳಿಯಲ್ಲಿ ಕೃಷಿಕ ಮಜೂರರೇ ಮೊದಲಾದ ಸಾಮಾನ್ಯ ಜನತೆಯು ಭಾಗವಹಿಸದುದೇ ಅಲ್ಲಿಯ ಪ್ರಗತಿಪರ ಚಳವಳಿಯು ಯಶಸ್ವಿಯಾಗದಿರಲು ಕಾರಣವಾಯಿತು. ಅವರ ಇಂದಿನ ಸ್ವಾತಂತ್ರ್ಯವೆಂಬುದು ನಿಜವಾದ ಸ್ವಾತಂತ್ರ್ಯವಾಗಿರದೆ, ಬರೇ ನೋಟಕ್ಕಾಗಿದೆಯೆಂದು ಅಭಿಪ್ರಾಯಪಟ್ಟರು.

ಇಂಗ್ಲೆಂಡಿನ ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತಾಗಿ ಪ್ರಸ್ತಾಪಿಸುತ್ತಾ "ಈಗಿನ ರಾಜ್ಯಾಡಳಿತ ಸೂತ್ರಚಾಲನೆಯಲ್ಲಿ ಜನರು ಜುಗುಪ್ಸೆಗೊಂಡಿದ್ದಾರೆ. ಅದರಲ್ಲಿ ಜನತೆಗೆ ಹೆಚ್ಚಿನ ಪ್ರೇಮವಿಶ್ವಾಸವುಳಿದಿಲ್ಲ. ಆದರೆ, ಜನರಿಗೆ ಬೇರಾವ ಉಪಾಯವಿಲ್ಲದೆ ಸಹಿಸಿಕೊಂಡಿರಬೇಕಾಗುತ್ತದೆ. ಲೇಬರ ಪಂಗಡವೀಗ ಏನು ಮಾಡಲೂ ಹೆದರಿದೆ. ಆದರೆ ಈ ಪಾರ್ಟಿಯ ಸಹಾನುಭೂತಿ ಹಿಂದೂದೇಶದ ಕಡೆಗಿದೆ. ಇಂದಿನ ಮಾರ್ಪಾಟ್ಟ ವಾತಾವರಣದ ಪರಿಣಾಮವಾಗಿ ಅವರು ಭಾರತೀಯರು ಆತ್ಮನಿರ್ಧಾರದಲ್ಲಿ ಮುಂದುವರಿಯಬೇಕೆಂದು ಅಭಿಪ್ರಾಯಪಡುವರು. ಕನ್ಸರ್ವೇಟಿವ್ ಪಂಗಡವೇನೂ ನಮ್ಮಿಂದ ಗೊಂದಲಕ್ಕೀಡಾಗಿದೆ, ಆದರೆ,

ಪುಟ ೧೧ರಲ್ಲಿ ನೋಡಿರಿ.

SAVING MONEY AND TIME

Thousands of prudent and thriving business men prefer this Bank because attention is prompt and personal To most of these busy people their time is very valuable and they cannot afford to lose a few minutes every now and then in idle waiting. Tey have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD 1906
CANARA BANK
LIMITED

ಈ ವಾರದ ಕಥೆ

ಎಸ್. ಪೀ. ಸೀ. ಎಚ್.

"ನೀವು ಷೋಕಿ ಜೋಕಿ ಇದ್ದರೆ ಯಾವಳಾದರೂ ಬೀದಿಸೂಳೆ ನಿಮ್ಮ ಬೆನ್ನುಹತ್ತಿಯಾಳು" ಎಂದು ಹೆಂಡತಿಯು ರಿಮಾರ್ಕು ಗಂಡನಿಗೆ! ಆದರೆ ಹೆಂಡತಿ?—ರಂಭೆ ಊರ್ವಶಿಯರಿಗಿಂತ ಒಂದು ಮುಷ್ಟಿ ಹೆಚ್ಚು! — — — — — —

(ಶ್ರೀ. ಕೊರ್ಡಿತ್ತು ಯು. ನಾರಾಯಣ ಭಟ್, ಕೊಪ್ಪ–ಕಡೂರು.)

"ಮಂ..., ಸುಂದರ, ನಾವಿನ್ನು ಹೆಚ್ಚು ಕಾಲ ಬದುಕಲಾರೆವು. ಸಾಯುವುದರೊಳಗಾಗಿ ನಿನ್ನ ಮದುವೆ, ಆ ಗಂಡಹೆಂಡಂದಿರ ಸುಖ ಸಾಮ್ರಾಜ್ಯದಲ್ಲಿ ನಲಿದಾಡಲು ನಮಗೆ ಅವಕಾಶ ಕೊಡಲಾರೆಯಾ?"

"ಅಮ್ಮಾ! ನಾನು ಮಧುಸೂದನ ರಾಯರ ಮಗಳನ್ನು ಎಂದಿಗೂ ಮದುವೆಯಾಗಲಾರೆ. ಆ ಗಿರಿಜೆ ನೋಡಲಿಕ್ಕೆ ಏನೂ ಸುಂದರಳಲ್ಲ. ನಾನು ಮದುವೆಯಾಗುವುದಾದರೆ ಕೇಶವರಾಯರ ಮಗಳಾದ ಪೂರ್ಣಾಬಾಯಿಯನ್ನೇ ಆಗುವೆನು."

"ಸುಂದರ, ಹಟಮಾಡಬಾರದು! ನಿನ್ನ ಪೂರ್ಣಾಬಾಯಿಯ ಮೇಲಿನ ಅನುರಾಗವು ಬಲವಾಗಿದೆಯೆಂದು ಕಾಣಿಸುತ್ತದೆ. ಆದರೆ........ಮಗೂ! ಏನೋ ದೊಡ್ಡವರ ಹುಡುಗಿ—ಗಯ್ಯಾಳಿ ಪೂರ್ಣೆಯು ಥಳಕ್ ಬೆಳಕ್ ಆಗಿ ತೋರುತ್ತಾಳೆ. ಆದರೆ ಗಿರಿಜೆ—ಸಾಧು ಹುಡುಗಿ."

"ಹೌದೌದು! ಸಾಧು ಹುಡುಗಿ—ನೋಡಿದರೆ ಸುಣ್ಣ—ಮಾಡಿದರೆ ಬಣ್ಣ!-ನಾನು ಆ. ಗಿರಿಜೆಯನ್ನು ಎಂದಿಗೂ ಮದುವೆಯಾಗಲಾರೆ ದೊಡ್ಡವರ ಮನೆಯ ಹುಡುಗಿ ಪೂರ್ಣೆ! ಕೈತುಂಬಾ ವರದಕ್ಷಿಣೆ ಸಿಗುತ್ತದೆ. ಅದನ್ನೇತಕ್ಕೆ ಕೈಯ್ಯಾರೆ ಕಳೆದುಕೊಳ್ಳಬೇಕು?"

"ಸುಂದರ! ನಿನ್ನ ಇಚ್ಛೆ ಇದ್ದಂತೆಯೇ ಆಗಲಿ!! ಈಗಿನ ಕಾಲದ ಮಕ್ಕಳು ಹಿರಿಯರ ಮಾತನ್ನು ಕೇಳುವರೇ! ಅವರ ಸಾಲಿನಲ್ಲಿ ನೀನೂ ಒಬ್ಬ!"

"ಅಮ್ಮಾ! ನಿನ್ನ ವೇದಾಂತ ಎಲ್ಲಾ ಕಟ್ಟಿಡು! ಈಗಿನ ಕಾಲದ ತಾಯಿತಂದೆಯರು ಮಕ್ಕಳ ಮಾತನ್ನು ಕೇಳುತ್ತಾರೆಯೇ?"

x x x x

ನನಗಾವಾಗಲೂ ಮದುವೆಯದೇ ವಿಚಾರ. ಅನೇಕ ಸಾರೆ, ನಾನು ಅದರ ವಿಚಾರದಲ್ಲೇ ಮುಳುಗಿದಾಗ, ನನಗೆ ಹೊರಗಿನದೆಲ್ಲವೂ ಅಂಧಕಾರಮಯವಾಗಿ ಕಾಣುತ್ತಿದ್ದವು. ಗಿರಿಜೆಯನ್ನು ಮದುವೆಯಾಗೋಣವೆಂದರೆ ಮನಸ್ಸು ಒಗ್ಗದು. ಆಗಲಿ! ಪೂರ್ಣಾಬಾಯಿಯನ್ನೇ ಮದುವೆಯಾಗೋಣವೆಂದು ನನ್ನ ಆಲೋಚನೆಯನ್ನು ಪೂರ್ಣೆಯ ತಂದೆ ಕೇಶವ ರಾಯರಿಗೆ ತಿಳಿಸಿಬಿಟ್ಟೆ. ಅವರೂ 'ಹಿಡಿಂಬೆಗೆ ತಕ್ಕ ಭೀಮ' ಎಲ್ಲಿ ಸಿಗುವನೋ ಎಂದು ವರಾನ್ವೇಷಣೆಯಲ್ಲೇ ಇದ್ದಿದ್ದರು. ಆಯಿತು-ಸಂತೋಷದ ಮೇಲೆ ಆನಂದ. ಮದುವೆಯೂ ಅತೀ ಶೀಘ್ರದಲ್ಲಿಯೇ ಆಯಿತು. ಮದುವೆ ಎಂದರೆ ಏನು ಕೇಳ್ತೀರಿ,........ ಆ ಬಿರುಸೇನು! ಆ ಗರ್ನಾಲು!! ಬೇಂಡು ವಾದ್ಯ!!! ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಹೆಂಡತಿಯನ್ನು ಮನೆಗೆ ಕರೆದುಕೊಂಡು ಬಂದೆ, ಅವಳನ್ನು ಕೈಹಿಡಿದ ಮುಹೂರ್ತವೋ ಏನೋ.......ನಾನು ಬಿ. ಎ. ಪರೀಕ್ಷೆಯಲ್ಲಿಯೂ ಉತ್ತೀರ್ಣನಾದೆ. ಇನ್ನು ನಮ್ಮ ಸಂಸಾರ ನೌಕೆಗೆ ತುಫಾನು ಬಡಿಯುವ ಸಮಯವೂ ಒದಗಿತು. ಮದುವೆ ಎಂಬ ಶಬ್ದವೇ ಮೊದಮೊದಲು ಚಂದ ನೋಡಿ! ಮದುವೆಯಾದ ಮೇಲಂತೂ ಪೂರ್ಣಾನಂದ!! ಅದೇ ಇನ್ನು ಶೂನ್ಯಾನಂದವಾಗಿ ಪರಿಣಮಿಸಬಾರದೇಕೆ?

x x x

ಅಯ್ಯೋ ದೇವರೆ! ಮದುವೆ ಆಯಿತು ನಿಜ ಈಗ ಹೆಂಡತಿಯ ಹೊಟ್ಟೆ ಹೊರೆಯುವುದು ಹೇಗಪ್ಪಾ! ಮೂಲಗಾರನಾಗಲು ಮೂಲ ಆಸ್ತಿಪಾಸ್ತಿ ಸೊನ್ನೆ! ಸಾಲಗಾರನಾಗಲು ಸಾಲ ಯಾರು ಕೊಡುತ್ತಾರೆ? ನೌಕರಿಗಾಗಿ ಊರೂರು ಅಲೆದರೂ, ನನ್ನ ಸುಟ್ಟ ಮೋರೆಯನ್ನು ನೋಡಿಯೋ... ಯಾರೂ ನೌಕರಿ ಕೊಡಲೊಲ್ಲರು. ಇತ್ತಲಾಗಿ ನನ್ನ ಹೆಂಡತಿ "ಉದ್ದುದ್ದ ಮೀಸೆ ಹೊತ್ತ ಗಂಡಸಂತೆ; ಒಂದು ನೌಕರಿ ಮಾಡಿಕೊಳ್ಳಲಿಕ್ಕಾಗದ ಹೇಡಿ" ಎಂದು ಗದರಿಸುತ್ತಿದ್ದಳು. ಅಲ್ಲ...ಮೀಸೆ ಉದ್ದವಾಗಿ ಬೆಳಸಿದುದು ನನ್ನ ತಪ್ಪೇ ಅನ್ನಿ! ಇನ್ನು ಉದ್ದಮೀಸೆ ಬೇಡವೆಂದು ಬೋಳಿಸುವ ಎಂದರೆ ಕುಂಕುಮದ ಕರಡಿಗೆ ಬಳೆಗಳ ಸರ ತಂದು ನನ್ನೆದುರಿಗಿಟ್ಟು, "ಅಯ್ಯೋ! ಹೆಂಗಸಾಗಿ ಹುಟ್ಟಿದರೆ ಒಳಿತಾಗಿತ್ತೆ"ಂದು ನನ್ನನ್ನು ಅಣಕಿಸುತ್ತಿದ್ದಳು. ಅಂತೂ ಹೆಂಡತಿಯ ಕಾಟದಿಂದ ನಾನು ಕಂ....ಗಾ....ಲಾಗಿಬಿಟ್ಟೆ. ದೇವರೇನೋ ಕಣ್ಣು ತೆರದನೆಂದು ತೋರುತ್ತೆ. ತಿಂಗಳೊಂದರ ನಲ್ವತ್ತು ರೂಪಾಯಿಯ ತಲಬಿನ ಒಂದು ನೌಕರಿ ಸಿಕ್ಕಿತು. ಆಗ ನಾನು ಮುನಿಸಿಪಾಲಿಟಿಯ ನೌಕರನೆಂದು ಮನೆಯ ಹೊರಗೆ ತುಂಬಾ ಬಹುಮಾನ. ಮನೆಯ ಒಳಗೆ ಮಾತ್ರ ನನ್ನ ಹೆಂಡತಿ ಮುನಿಸಿ (ಸಿಟ್ಟಾಗಿ) ಪಲಿಟಿ (ಲಾಗ)ಹಾಕುವುದರಿಂದ ನನಗೆ ಸ್ವಲ್ಪ ಅವಮಾನ. ನಲ್ವತ್ತು ರೂಪಾಯಿಯ ಯಜಮಾನಿಯು ಅವಳೇ ಆಗಿದ್ದಳು. ಅಷ್ಟಕ್ಕೆ ಒಂದು ಕಾಸು ಕಡಿಮೆಯಾದರೆ ನಾನು ಕೂಡಲೇ ಮನೆಯ ಪಕಾಸು ನೋಡಬೇಕಾಗುತಿತ್ತು. ಕಾರಣ....ಆ ದಿವಸ ನನಗೆ ಏಕಾದಶಿಯಾಗುತ್ತಿತ್ತು. ಇನ್ನು ನನ್ನ ಸಂಪಾದನೆಯ ಹಣ ಖರ್ಚು ಮಾಡಲಿಕ್ಕೆ ಎಳ್ಳಷ್ಟೂ ಅಧಿಕಾರ ನನಗಿರಲಿಲ್ಲ. ಒಂದು ವೇಳೆ ಹಾಗೆ ಅಧಿಕಾರ ತೋರಿಸುವ ಧೈರ್ಯವೂ ನನಗೆ ಬಾರದು. ಕಾರಣ ಅವಳಪ್ಪನು ಕೊಟ್ಟ ವರದಕ್ಷಿಣೆಯ ಹಂಗು ಉಂಟಲ್ಲ!

ಇನ್ನು ನನ್ನ ಖರ್ಚು ವೆಚ್ಚದ ಮಾತು ಎರಡು ತಿಂಗಳಿಗೊಂದು ಬಾರಿ ಕ್ಷೌರಿಕನಿಗೆ ದರ್ಶನಕೊಡುತ್ತಿದೆ ನನ್ನ ಬಟ್ಟೆಬರೆಯನ್ನು ಯಾರಾದರೂ ನೋಡಿದರೆ ನಾನೊಬ್ಬ ಸನ್ಯಾಸಿಯೆಂದೇ ತಿಳಿಯಬಹುದಾಗಿತ್ತು. ಹೆಚ್ಚೇಕೆ? ಒಬ್ಬ ಹರಾಮಖೋರ ನಾನು ಸನ್ಯಾಸಿಯೆಂದು ತಿಳಿದೂ ಬಿಟ್ಟಿದ್ದ. ಈ ಸಂಗತಿಯನ್ನು ಹೆಂಡತಿಗೆ ತಿಳಿಸಿದೆ. ಅವಳು-"ಹಾಗೆಯೇ ಆಗಬೇಕು. ನೀವು ಷೋಕಿ ಜೋಕಿ ಇದ್ದರೆ ಯಾವಳಾದರೂ ಬೀದಿಸೂಳೆ ನಿಮ್ಮ ಬೆನ್ನುಹತ್ತಿಯಾಳು" ಎಂದು ರಿಮಾರ್ಕು ಪಾಸ್ ಮಾಡಿಬಿಟ್ಟಳು. ಇನ್ನು ಅವಳ ವಿಚಾರ. ಅವಳಂತೂ ರಂಭೆ ಊರ್ವಶಿಯರಿಗಿಂತ ಒಂದು ಮುಷ್ಟಿ ಹೆಚ್ಚು! ಮಿರಿ ಮಿರಿ ಜರತಾರಿ ಸೀರೆ ಅಥವಾ ಇನ್ನೂ ಹೆಚ್ಚು ಬೆಲೆಯ ಸೀರೆ, ಅರ್ಧ ತೋಳಿನ ಬೋಡೀಸ್, ಬಣ್ಣ ಬಣ್ಣದ ಟೇಪುಗಳಿಂದ ಶೋಭಿಸುತ್ತಾಳೆ. ಆದರೆ ಗಂಡನಾದ ನನಗೆ ಏನೂ ಕಟ್ಟಚಾಳಿ ಇರಬಾರದಂತೆ. ಅವಳು ಅದಕ್ಕೋಸುಗ ಪಟ್ಟ ಪ್ರಯತ್ನವೂ ಸ್ತುತ್ಯವಾದುದ ಇರುತ್ತದೆ. ನನಗೆ ಬಹಳ ವರುಷಗಳಿಂದ ಇದ್ದ ನಶ್ಯ ಸೇದುವ ಅಭ್ಯಾಸವನ್ನು ಹೇಗೆ ನಿಲ್ಲಿಸಿದಳು ನಿಮಗೆ ಗೊತ್ತುಂಟೇ? ಒಂದು ದಿನ ನಾನು ಆಫೀಸಿಗೆ ಹೋದಾಗ-ಆದಿನ ನಶ್ಯದ ಡಬ್ಬಿ ಮನೆಯಲ್ಲೇ ಬಿಟ್ಟಿದ್ದೆ, ಅವಳು ಅದರಲ್ಲಿ ಒಣ ಮೆಣಸಿನ ಪುಡಿ ಮಾಡಿ ತುಂಬಿಟ್ಟಿದ್ದಳು—ನನ್ನ ಹೆಂಡತಿ! ನಾನು ಮನೆಗೆ ಬಂದು ಸೊರಕ್ಕೆಂದು ಒಂದೇಸಲ ಸೇದುತ್ತೇನೆ....ಮೂಗಿನಿಂದ ಬಳ ಬಳ ರಕ್ತ ಸುರಿಯಲಿಕ್ಕೆ ಆರಂಭವಾಯಿತು! ಇದ್ದರ ಇರಬೇಕು ಇಂತಹ ಹೆಂಡತಿ ಬುದ್ಧಿ ಕಲಿತುಕೊಳ್ಳಲಿಕ್ಕೆ! ಇವಳ ಕರುಣಾ ಕಟಾಕ್ಷದಿಂದ ಗೋಕರ್ಣಕ್ಷೇತ್ರವನ್ನು ಒಂದೆರಡು ಬಾರಿ ನೋಡಿದ್ದೆನೆಂದು ನೆನಪು ಬರುತ್ತದೆ!

ಸಾಕಪ್ಪಾ ಈ ಹಾಳು ಸಂಸಾರ! ನವನಾಗರಿಕರೆಲ್ಲರೂ ಒಟ್ಟಾಗಿ 'Society for Prevention of Cruelty to Husbands' ಎನ್ನುವ ಒಂದು ಸಂಘವನ್ನು ಏರ್ಪಡಿಸಿದರೆ ಬಹಳ ಉಪಕಾರವಾಗುತ್ತಿತ್ತು. ಕಾರಣ ನಮ್ಮಂಥಾ ಗಂಡಂದಿರು ತಮ್ಮ ಕಷ್ಟಗಳನ್ನು ರಿಪೋರ್ಟು ಮಾಡಲಿಕ್ಕೆ ಹೇಳಬಹುದಷ್ಟೇ!

ನಮ್ಮ ಮದ್ರಾಸಿನ ಏಜಂಟರು -

ಶ್ರೀ. ವಿ. ಲಕ್ಷ್ಮಣರಾವ್
ಚೈನಾ ಬಜಾರ್, ಮದ್ರಾಸ್.

ಬೇಲೂರಿನ ಏಜಂಟರು—

ಬಿ. ಆರ್. ಕುಂದಯ್ಯ ಶೆಟ್ಟಿ
ಮತ್ತು ಬ್ರದರ್ಸ್.

THE Bombay Life
ASSURANCE CO., LTD.
ಸ್ಥಾಪನೆ] [1908
ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:
(1) ರಥಬೀದಿ, ಮಂಗಳೂರು
(2) ಪುತಿಯಾರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು. (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, ಬೊಂಬೈ (ಫೋ. ನಂ. 26314)
ಇನ್ಸ್ಪೆಕ್ಟರೇಟ್ ಆಫೀಸ್‌ಗಳು.
(6) ಪಟ್ಟಾಂಬಿ, ದ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂಕೂರು.

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)
ರಿಜಿಸ್ಟ್ರಿಯಾದ ಆಫೀಸು: ಉಡುಪಿ.
ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.
ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ ...	..	ರೂ.	1,40,08,725
ಪ್ರೀಮಿಯಂ ಆದಾಯ ಮಿಕ್ಕಿದುದು	..	,,	30,00,000
ಒಟ್ಟು ಮೂಲ ಮಿಕ್ಕಿದುದು	..	,,	1,00,00,000
ಒಟ್ಟು ವಿಮಾಹಣ ಕೊಟ್ಟಿದ್ದು ಮಿಕ್ಕಿದುದು		,,	50,00,000

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ **ಅತ್ಯಧಿಕ ಪ್ರತಿಫಲ.**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

ಬಂಕಿಂಚಂದ್ರ ಚಟರ್ಜಿ

'ವಂದೇ ಮಾತರಂ' ಎಂಬುದು ರಾಷ್ಟ್ರಗೀತೆ. ಇದನ್ನು ಕೇಳದವರಿಲ್ಲ. ಇದನ್ನು ರಚಿಸಿದವರಾರು? ಎಂಬುದನ್ನು ಪ್ರತಿಯೊಬ್ಬ ದೇಶಾಭಿಮಾನವುಳ್ಳವನು ಅರಿತುಕೊಳ್ಳಬೇಕು; ಬಂಕಿಂ ಬಾಬುಗಳು ಉಜ್ವಲ ಪ್ರತಿಭೆಯವರು, ಅಸಾಧಾರಣ ಸಾಹಿತಿಗಳು. ಬಹು ತಾತ್ವಿಕರು. ಸರ್ವರ ಪೂಜ್ಯತೆಗೆ ಪಾತ್ರರಾದ ಯೋಗಿ ಅರವಿಂದರಿಂದ ಋಷಿಯೆನಿಸಿಕೊಂಡ, ಬಾಬು ಬಂಕಿಂಚಂದ್ರರೇ, ಸಾದೃಶರಹಿತವಾದ, ಉಜ್ವಲ ದೇಶಭಕ್ತಿಯಿಂದ ಜನರನ್ನೊಂದುಗೂಡಿಸುವ, ಅಮೃತತುಲ್ಯವಾದ ಈ ರಾಷ್ಟ್ರಗೀತೆಯನ್ನು ರಚಿಸಿದವರು. ಸ್ವತಂತ್ರ್ಯಭಾರತದ ಸ್ವಾತಂತ್ರ ದಿನಗಳ ಆನಂದ ಕೋಲಾಹಲದಲ್ಲಿ ಕನ್ಯಾಕುಮಾರಿಯಿಂದ ಹಿಮಾಲಯದ ವರೆಗಿರುವ, ಭಾರತೀಯರು ಈ ಅಮರಗಾನವನ್ನು ಹಾಡಿ, ಸುಖಸಂತೋಷದಿಂದ ನಲಿಯುವ ಸುದಿನಗಳು ಸಮೀಪಿಸುವಂತಾಗಲಿ!

●

"ವಂದೇ ಮಾತರಮ್" ಎಂಬುದೀಗ ರಾಷ್ಟ್ರಗೀತೆ. ಈ ಗೀತೆಯನ್ನು ರಚಿಸಿದ ಮಹಾಪುರುಷನಾರು? ಅವನಿಗೆಂದು ಈ ದಿವ್ಯಗೀತೆಯು ಗೋಚರಿಸಿತೆಂದು ಅರಿತವರು ಹೆಚ್ಚಾಗಿಲ್ಲ ಆದರೆ ಪಂಡಿತ ಪಾಮರರ, ಸ್ತ್ರೀಪುರುಷರ, ಬಾಲಕ ಬಾಲಕಿಯರ ಮನಸ್ಸನ್ನು ಅದೊಂದು ಅಸಾಧಾರಣ ಶಕ್ತಿಯಿಂದ ಆಕರ್ಷಿಸಬಲ್ಲ, ಹೃದಯವನ್ನು ಪುಳಕಿತಗೊಳಿಸುವ, ರಾಷ್ಟ್ರಭಕ್ತಿಯ ಮಾತೃಪ್ರೇಮದ, ಏಕನಿಷ್ಠೆಯ, ಸ್ವಾತಂತ್ರ್ಯ ಭಾವನೆಯ, ಐಕ್ಯಸಾರೂಪ್ಯದ ತನಿರಸದ ಜೇನಾದ ಸೊಗಸಿನ ಸುಮಧುರ ಸುಧೆಯ ಸ್ವಾದವನ್ನೀಯುವ ಆತ್ಮವನ್ನು ಅನಂತಾತ್ಮದೊಂದಿಗೆ ಒಂದೊಮ್ಮೆ ಒಂದುಗೂಡಿಸುವಂತಹ ಅಲೌಕಿಕ ಶಕ್ತಿಯ ಅತ್ಯದ್ಭುತ ಆಕರ್ಷಿತ ಭಾವದಿಂದ ಕೂಡಿದ– ಈ ನಮ್ಮ 'ವಂದೇ ಮಾತರಂ' ಗೀತೆಯನ್ನು ಅಖಂಡ ಭಾರತದಲ್ಲಿ ಕೇಳದವರಿಲ್ಲ. ಸ್ವಾತಂತ್ರ್ಯ ಸಮರದ ರಾಷ್ಟ್ರದ ನಿರ್ಮಾಣ ಸಮನ್ವಯ ಸಂಧಿಕಾಲದಲ್ಲಿ ದೇಶಾಭಿಮಾನವುಳ್ಳ ಪ್ರತಿಯೊಬ್ಬ ಭಾರತೀಯನು ಈ ದಿವ್ಯಗೀತೆಯನ್ನು ರಚಿಸಿದ, ಇಂದಿಗೆ ಋಷಿಯೆನಿಸಿಕೊಂಡ, ಬಂಕಿಂ ಬಾಬುಗಳ ವಿಷಯ ತಿಳಿದುಕೊಳ್ಳುವುದು ದೇಶಾಭಿಮಾನದ ಉಜ್ವಲ ವಿಚಾರವಾಗಿರುವುದು. ಈ ಭಾರತ ಮಾತೆಯ ಮುದ್ದು ಸುಕುಮಾರನು ಜನಿಸಿ, ಇಂದಿಗೆ ನೂರು ವರ್ಷಗಳು ಕಳೆದುವು. ಅಖಂಡ ಬಂಗಾಳವು ಈ ವರ್ಷ ಅತ್ಯಾದರದಿಂದ ಈ ಪುರುಷನ ಶತಮಾನೋತ್ಸವವನ್ನು ಬಹು ವಿಜೃಂಭಣೆಯಿಂದ ಜರಗಿಸಿ, ತನ್ನ ಕೃತಜ್ಞತೆಯನ್ನರ್ಪಿಸಿತು. ಮುಂದೆ ದೇಶದ ಮಹಾಪುರುಷರಲ್ಲೊಬ್ಬನೆನಿಸಿದ ಬಂಕಿಂ ಬಾಬುಗಳನ್ನು ಇಡೀ ದೇಶವೇ ಅರಿತುಕೊಂಡು ವರ್ಷವರ್ಷವೂ ಅವರ ಜನ್ಮದಿನವನ್ನು ಆಚರಿಸುವುದು ಆವಶ್ಯಕ. ಇದರಿಂದ ಭಾರತ ಮಾತೆಯ ಅಭಿಮಾನವು ಹೆಚ್ಚಿದಂತಾಗುವುದು.

ಬಂಕಿಂ ಬಾಬುಗಳು ಉತ್ತಮ ಕಲಾವಿದರು. ಕಲ್ಕತ್ತ ವಿಶ್ವವಿದ್ಯಾಲಯದ ಪ್ರಥಮ ಪದವೀಧರರು. ಕಲ್ಕತ್ತ ವಿಶ್ವವಿದ್ಯಾಲಯ ಸ್ಥಾಪನೆ ಹೊಂದಿದ ಕಾಲದಲ್ಲೇ ಅವರು ಬಿ. ಎ. ಡಿಗ್ರಿಯನ್ನು ಪಡೆದರು. ಅನಂತರ ಡಿಪ್ಯುಟಿ ಮ್ಯಾಜಿಸ್ಟ್ರೇಟರಾಗಿ ಮತ್ತು ಕಲೆಕ್ಟರರಾಗಿ ನೇಮಕ ಹೊಂದಿದರು. ಕೆಲಸಮಯ ಬಂಗಾಳ ಸರಕಾರದ ಸಹಾಯಕ ಕಾರ್ಯದರ್ಶಿಯರಾಗಿಯೂ ಉದ್ಯೋಗ ನಡಿಸಿದ್ದರು. ಅವರು ಉನ್ನತ ಪದವಿಯಲ್ಲಿದ್ದು ಉತ್ಕೃಷ್ಟ ವೇತನದಿಂದ ನಮ್ಮ ಸರಕಾರದ ಹುದ್ದೆಯಿಂದ ನಿವೃತ್ತರಾದರು. ಆದರೆ ಬಹುಕಾಲ ಬಾಳಲಿಲ್ಲ. ತನ್ನ ೫೬ ನೇ ವರ್ಷದಲ್ಲೇ ಅಂದರೆ ೧೮೯೪ರಲ್ಲಿ ದಿವಂಗತರಾದರು.

ಬಂಕಿಂ ಬಾಬುಗಳ ಪ್ರತಿಭೆಯು ಅಸ್ವಾಭಾವಿಕವಾದುದು. ಅವರೇ ಉನ್ನತ ಪದವಿಯ ಬಹು ಹೊಣೆಗಾರಿಕೆಯ, ನಿಬಿಡ ಕೆಲಸದ ಕಾಲದಲ್ಲಿ ತನ್ನ ಸುಖ, ವಿಶ್ರಾಂತಿಯನ್ನು ಲಕ್ಷಿಸದೆ ಸ್ವಭಾವಜನ್ಯ ಕಲಾನೈಪುಣ್ಯತೆಯಿಂದ ಕೂಡಿದವರಿದ್ದು ಅನುಪಮ ಸಾಹಿತ್ಯಸೇವೆಯನ್ನು ಸಲ್ಲಿಸಿ, ವಂಗ ಸಾಹಿತ್ಯಕ್ಕೆ ಹೊಸ ಹುರುಪು, ಹೊಸ ಚೇತನ, ಹೊಸ ಹೊಳಪನ್ನಿತ್ತು ಉಚ್ಚಸ್ಥಾನವನ್ನು ಕಲ್ಪಿಸಿಕೊಟ್ಟು ಅಮರ ಕೀರ್ತಿಯನ್ನು ಪಡೆದಂಥಾ ಅಸಾಧಾರಣ ವಂಗ ಸಾಹಿತಿಗಳು. ಅವರಿಗೆ ತನ್ನ ಎಳೇ ವಯಸ್ಸಿನಲ್ಲೇ ಸಾಹಿತ್ಯದ ಕಡೆಗೆ ಮನಸ್ಸು ಚಿಮ್ಮಿ ಚಿಗಿಯುತ್ತಿತ್ತು. ತೀಕ್ಷ್ಣಮತಿಯ ಬಂಕಿಂ ಬಾಬುಗಳು ಕಲಾಶಾಲೆಯಿಂದ ಹೊರಬರುವ ಮೊದಲೇ ಉನ್ನತ ಭಾವನೆಯ ಕವನ ಕಥೆಗಳನ್ನು ಬರೆಯುವುದಿತ್ತು. ಸ್ವಲ್ಪ ಸಮಯ 'ಸಂಗವಾದ ಪ್ರಭಾಕರ' ಬಂಗಾಳೀ ಪ್ರಥಮ ಪತ್ರಿಕೆಯ ಪ್ರಖ್ಯಾತ ಸಂಪಾದಕರಾದ ಈಶ್ವರ ಚಂದ್ರಗುಪ್ತರ ಕೈಕೆಳಗೆ ತರಬೇತಿ ಪಡೆದಿದ್ದರು. ಕಲಾಶಾಲೆಯಿಂದ ಹೊರಬರುವಂದು ಬಂಕಿಂ ಬಾಬುಗಳು ಆಂಗ್ಲೇಯ ಸಾಹಿತ್ಯದಲ್ಲಿ ಉತ್ತಮ ಬರೆಹಗಾರರೂ ಕಲಾನಿಪುಣತೆಯುಳ್ಳವರೂ ಆಗಿದ್ದರು. ಅವರು ಆ ಕಾಲದಲ್ಲಿ ಬರೆದಿದ್ದ ಇಂಗ್ಲಿಷ್ ಕಾದಂಬರಿಯೊಂದು ಇತ್ತೀಚೆ 'ಮೋಡರ್ನ್ ರಿವ್ಯೂ'ನಲ್ಲಿ ಪ್ರಕಟವಾಗಿರುವುದು. ವಂಗ ಭಾಷೆಯಲ್ಲಿ ಪ್ರಖ್ಯಾತವಾದ ಕಾದಂಬರಿಗಳಲ್ಲೊಂದಾದ 'ದುರ್ಗೇಶ ನಂದಿನೀ (ನಾಯಕ ಸುತೆ) ಎಂಬ ಕಾದಂಬರಿಯು ಅವರ ಇಪ್ಪತ್ತೈದನೇ ವಯಸ್ಸಿನಲ್ಲಿ ರಚಿತವಾದುದು. ಇದರ ರಚನೆಯಿಂದ ಅವರಿಗೆ ವಂಗಸಾಹಿತ್ಯಸಾಮ್ರಾಜ್ಯದಲ್ಲಿ ಬಹುಬೇಗನೇ ಉನ್ನತ ಕೀರ್ತಿಯು ದೊರೆಯಿತು. ತಮ್ಮ ಹುದ್ದೆಯ ಕಾಲದಲ್ಲಿಯೂ ಸಮಯವನ್ನು ಸಾಧಿಸಿಕೊಂಡು, ತಿರುಗಿ ಎರಡು ಕಾಲ್ಪನಿಕ ಕಥೆಗಳನ್ನು ರಚಿಸಿದರು. ಇದರಿಂದಾಗಿ ಅವರ ಕೀರ್ತಿಯು ಇನ್ನಷ್ಟು ಹೆಚ್ಚಿತು.

ವಂಗ ಭಾಷೆಯಲ್ಲಿ ಅವರು ಸೃಷ್ಟಿಸಿದ 'ವಂಗದರ್ಶನ'ವೆಂಬ ಮಾಸಿಕವು ಬಹು ಶ್ರೇಷ್ಠವೆನಿಸಿತು. ಅವರು ತಮ್ಮ ಸರಕಾರಿ ಹುದ್ದೆಯ ಕಾಲದಲ್ಲಿ ಒಂದೆಡೆಯಿಂದ ಇನ್ನೊಂದು ಜಿಲ್ಲೆಗೆ ವರ್ಗಾಯಿಸಲ್ಪಡುತ್ತಿದ್ದಾಗ ತಮ್ಮ ಕಾರ್ಯಸಾಧನೆಗೆ ಬೇಕಾದ ಪುಸ್ತಕ ಭಂಡಾರ ಮತ್ತು ಇನ್ನಿತರ ಸಾಹಿತ್ಯ ಸಾಮಗ್ರಿಗಳ ಅಭಾವವು ಅವರನ್ನು ಬಹು ತೊಂದರೆಗೊಳಪಡಿಸುತಿದ್ದಿತು. ಆದರೆ ಇಗಲ್ಲಾ ಎಡರುಗಳನ್ನು ಸಹಿಸಿಕೊಂಡು 'ವಂಗದರ್ಶನ'ದ ಸಂಪಾದಕರಾಗಿ ವಂಗಭಾಷೆಯ ಕೀರ್ತಿಯನ್ನು ಬೆಳಗಿಸಿದರು. ಈ ಪತ್ರಿಕೆಗೆ ಬೇರೆ ಬೇರೆ ಅಧಿಕಾರದಲ್ಲಿದ್ದ ಕಲಾವಿದರು ತಮ್ಮ ಸಲಹೆಯನ್ನೀಯುತ್ತಿದ್ದರು. ಇದರಲ್ಲಿ ಕ್ರಮವಾಗಿ ಬಂಕಿಂ ಬಾಬುಗಳ ನಾವೆಲ್ಗಳು ಮುದ್ರಿತವಾಗುತ್ತಿದ್ದುವು. ಬಂಕಿಂ ಬಾಬುಗಳು ಸಾಹಿತ್ಯದಲ್ಲಿ ಸರ್ವತೋಮುಖವಾದ ಪಾಂಡಿತ್ಯವುಳ್ಳವರು. ಅವರು ಕೈಯಿಕ್ಕದ ಭಾಗವಿಲ್ಲವೆನ್ನಬಹುದು. ಅವರ ಸಣ್ಣ ಕಥೆಗಳು, ಉತ್ತಮ ಉಪನ್ಯಾಸಗಳು, ಚಾರಿತ್ರಿಕ, ವೈಜ್ಞಾನಿಕ, ವಿನೋದಪರ ಲೇಖನಗಳು, ಹೆಚ್ಚಿನ ಪ್ರೇಮಾದರಣೆಗೆ ಒಳಪಟ್ಟಿದ್ದುವು. ಹೀಗೆ ಸರ್ವರೀತಿಯಲ್ಲಿಯೂ ಪಾಂಡಿತ್ಯವನ್ನುಗಳಿಸಿದ ಬಂಕಿಂ ಬಾಬುಗಳ ಸಂಪಾದಕತ್ವದಿಂದ ಹೊರಡುತ್ತಿದ್ದ 'ವಂಗದರ್ಶನ'ವೆಂದರೆ ವಂಗವಾಚಕರು ಹಾತೊರೆಯುತ್ತಿದ್ದರು. ಅದು ಕೀರ್ತಿ ಶಿಖರವನ್ನೇರುವ ಕಾಲಕ್ಕೆ ಬಂಕಿಂಬಾಬುಗಳು ಅದನ್ನು ನಿಲ್ಲಿಸಿದರು. ಹಲವು ವರ್ಷಗಳ ನಂತರ ಅವರ ಸಹೋದರರೊಬ್ಬರು ಇದರ ಸಂಪಾದಕರಾಗಿ ತಿರುಗಿ ಮುಂದರಿಸಿದರು. ಆದರೆ ಆ ಕಾಲಕ್ಕೆ ಅದರ ಆಕರ್ಷಣೆಯುಳಿದಿರಲಿಲ್ಲ

ವಂಗಭಾಷೆಯ ಉಜ್ವಲತೆಗೆ ಬಂಕಿಂ ಬಾಬುಗಳ ಆಕರ್ಷಿತ ಭಾಷಾ ಸರಣಿ ಇನ್ನೊಂದು ಕಾರಣ. ವಂಗ ಭಾಷೆಯು ಆ ಕಾಲದಲ್ಲಿ ಜನತೆಯ ಅಷ್ಟೊಂದು ಆಕರ್ಷಣೆಕ್ಕೆ ಒಳಗಾಗಿರಲಿಲ್ಲ. ಆಂಗ್ಲೇಯ ವಿದ್ಯಾಭ್ಯಾಸದ ಪ್ರಭಾವಕ್ಕೆ ಬಲಿಬಿದ್ದ ಬಂಗಾಳಿ ತರುಣರಿಗಾಗಲೀ, ನೀರಸ ವೈಯಾಕರಣಿಗಳಿಗಾಗಲೀ, ಪಂಡಿತರಿಗಾಗಲೀ, ಆ ಕಾಲದ ಬಂಗಾಳಿ ಭಾಷೆಯಲ್ಲಿ ಆದರವಿರಲಿಲ್ಲ. ಈ ಸಮಯ ಬಂಕಿಂಚಂದ್ರರು ವಂಗಸಾಹಿತ್ಯ ಆಕಾಶದಲ್ಲಿ ಚಂದ್ರನಂತೆ ಪೂರ್ಣ ಕಳೆಯಿಂದ ಶೋಭಾಯಮಾನರಾಗಿ ಕಾಣಿಸಿಕೊಂಡರು. ಅವರು ಕ್ರಮೇಣ ಬಹು ಉನ್ನತ ಸರಣಿಯ ಉತ್ತಮ ಬರೆಹಗಳಿಗ ವಂಗಸಾಹಿತ್ಯದಲ್ಲಿ ಮಾರ್ಗದರ್ಶಕರಾದರು. ಹೀಗೆ ವಂಗಸಾಹಿತ್ಯದಲ್ಲಿ ಹೊಸ ಯುಗ ನಿರ್ಮಾಣ ಮಾಡಿದ ಬಂಕಿಚಂದ್ರ ಬಾಬುಗಳ ಮಹತ್ವಿಕೆಯನ್ನು ಎಷ್ಟು ಹೊಗಳಿದರೂ ತೀರದು.

ಕಾದಂಬರಿ ಬರೆಹಗಾರರಲ್ಲಿ ಬಂಕಿಂ ಬಾಬುಗಳಿಗೆ ಅಮರ ಕೀರ್ತಿಯು ಸಲ್ಲತಕ್ಕದಿದೆ. ಅವರ ಕಾದಂಬರಿಗಳು ಪ್ರಾಮುಖ್ಯವಾಗಿ ಅದ್ಭುತ ಕಥೆಗಳ ಕಲ್ಪನೆಯ ಕಡೆಗೇನೇ ಇದ್ದರೆ, ಸಾಮಾಜಿಕ ವಿಷಮತೆಯ ಕಡೆಗೂ ದೃಷ್ಟಿಯುಳ್ಳವುಗಳಾಗಿದ್ದುವು. ಅವರ ಸಾಮಾಜಿಕ ಕಾದಂಬರಿಗಳ ದಾರಿಯು ಪ್ರಭೆಯಿಂದ ಕೂಡದುದು, ಉನ್ನತವಾದುದು. ಅವರ ಕಾದಂಬರಿಗಳು ಓದುಗರ ಹೃದಯಾಂತರಾಳವನ್ನು ಹೊಕ್ಕು, ಮನಸ್ಸನ್ನು ಕಥಾಧ್ಯೇಯದಿಂದ ತುಂಬಿಸಿ ಬಿಡತಕ್ಕಂತಹ ಅಸಾಮಾನ್ಯ ಆಕರ್ಷಣೆಯಿಂದ ಕೂಡಿದಂಥಹವುಗಳು. ಮನಸ್ಸಿನಲ್ಲಿ ಸ್ಥಿರವಾಗಿ ಬಿಂಬಿಸುವ ಕಥಾವಸ್ತುಗಳು, ಪಾತ್ರಗಳು, ಮನೋಜ್ಞ ವಿಷಯ ವಿಚಾರಗಳು ಅವರ ಕಾದಂಬರಿಗಳಲ್ಲಿರುವ ಹಿರಿಯ ಗುಣ. ಅವರು ಆಂಗ್ಲೇಯ ಸಂಸ್ಕೃತಿಯಿಂದ ಕೂಡಿದವರು, ಆದರ ಪ್ರಭಾವವು ಅ ಪ್ರತ್ಯಕ್ಷವಾಗಿ ಅವರ ಕೃತಿಗಳಿಗೆ ತಗಲಿರಬಹುದು; ಪರಂತು, ಅವರ ಭಾವನಾ ವಿಚಾರಗಳು, ಅವುಗಳ ಬೆಳವಣಿಗೆಯೆಲ್ಲಾ ಹಿಂದೀ ಸಂಸ್ಕೃತಿಯನ್ನುಳಿದು ಒಂದಿಷ್ಟು ದೂರ ಸರಿಯದಂತಹದು. ಅವರ ಉತ್ಕೃ

ಪುಟ ೬೦ರಲ್ಲಿ ನೋಡಿರಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" ರಿಜಿಸ್ಟರ್ಡ್

GONO KILLER ORIGINAL

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗನಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೪. ವಿ. ಪಿ. ಖರ್ಚು ೦-೮-೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗ ಬೇಡಿ. ಪದಕಲ್ಪಿತ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲ್ಲರ' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer Dr. D N. JASANI, Vitalbhai Patel Road, BOMBAY 4

ಡಿಕ್ಟೇಟರಶಾಹಿ ಮತ್ತು ಪ್ರಜಾಶಾಹಿ

ಇತ್ತಲಾಗಿ ಹಿಟ್ಲರರು ತನ್ನದೂ ಪ್ರಜಾಪ್ರಭುತ್ವ, ಜನತೆಯ ಸಮ್ಮತಿಯ ರಾಜ್ಯವೆಂದು ಹೇಳಿದ್ದಾರೆ. ನಾಜೀರಾಜ್ಯವು ಎಷ್ಟೊಂದು ಪ್ರಜಾಸಮ್ಮತಿಯದಾಗಿದೆ ಮತ್ತು ನಿಜವಾದ ಪ್ರಜಾಪ್ರಭುತ್ವವೆಂದರೇನೆಂಬುದನ್ನು ಈ ಕೆಳಗಣ ತುಲನಾತ್ಮಕ ಲೇಖನವು ವ್ಯಕ್ತಪಡಿಸುವುದು.

ಡಿಕ್ಟೇಟರಶಾಹಿಯ ರೀತಿನೀತಿ

ಒಂದು ರಾಷ್ಟ್ರದ ಮೇಲೆ ಒಬ್ಬನ ಅಳ್ವಿಕೆಯೇ ಡಿಕ್ಟೇಟರತನ. ಅದು ತಪ್ಪಾಗಲೀ ಸರಿಯಾಗಲೀ ಒಂದೇ ಮನಸ್ಸಿನ ಪ್ರೇರಣೆಯಂತೆ ನಡಿಸಲ್ಪಡುವ ರಾಜ್ಯಭಾರ. ಜನತೆಯು ಒಬ್ಬನ ಅಜ್ಞಾನುವರ್ತಿಗಳಾಗಬೇಕು. ತಮ್ಮ ಆಡಳಿತ ವಿಷಯವಲ್ಲೇ ಅವರಿಗೆ ಅಭಿಪ್ರಾಯವೀಯುವ ಹಕ್ಕಿರುವುದಿ . ಈ ಒಬ್ಬ ಮನುಷ್ಯನು ತನ್ನ ಪಾರ್ಟಿಯೆಂದು ಕರೆಯಲ್ಪಡುವ ಯಂತ್ರದ ಮೂಲಕ ಕೆಲಸ ನಡಿಸುತ್ತಾನೆ. ಈ ಪಾರ್ಟಿಗಾಗಿ ಅವನೊಬ್ಬನೇ ಆಲೋಚಿಸುವವನು. ಅವರ ಅನುಜ್ಞೆಯನ್ನು ಜನರು ವಿಧೇಯವಾಗಿ ಕಣ್ಣುಮುಚ್ಚಿ ಪಾಲಿಸುವಂತೆ ಈ ಪಾರ್ಟಿಯಂತ್ರವು ನೋಡುವುದು. ಇಂತಹ ಒಬ್ಬ ಮನುಷ್ಯನ ರಾಜ್ಯದಲ್ಲಿ ಏನೆಲ್ಲಾ ನಡೆಯಬಹುದೆಂಬುದನ್ನು ಜರ್ಮನಿಯ ಉದಾಹರಣೆಯಿಂದ ತಿಳಿದುಕೊಳ್ಳಬಹುದು. ಹಿಟ್ಲರರು ಜರ್ಮನಿಯ ಡಿಕ್ಟೇಟರರು. ನೇಶನಲ್ ಸೋಸಿಯಲಿಸ್ಟ್ ಪಾರ್ಟಿಯೆಂಬುದು ಅವರ ಉಪಕರಣ ಈ ನೇಶನಲ್ ಸೋಸಿಯಲಿಸ್ಟ್ ಪಾರ್ಟಿಯೆಂಬುದು ಒಂದು ರಾಜಕೀಯ ಅಭಿಪ್ರಾಯವನ್ನು ಜನರು ಪಾಲಿಸುವಂತೆ ನೋಡುವ ಶಸ್ತ್ರ ಒಂದೇ ಅಭಿಪ್ರಾಯ ಮತ್ತು ಉದ್ದೇಶದಿಂದ ಸ್ವೇಚ್ಛೆಯಿಂದ ಒಟ್ಟಾಗಿರುವ ವ್ಯಕ್ತಿಗಳ ಕೂಟವಲ್ಲ. ಒಬ್ಬನ ಅಭಿಪ್ರಾಯವನ್ನು ಕಣ್ಣುಮುಚ್ಚಿ ಜ್ಯಾರಿಗೆ ತರುವ ವ್ಯಕ್ತಿಗಳ ಕೂಟ. ಅದರ ಅಧಿಕಾರಿಗಳು ಜನಮತದ ಮೇರೆಗೆ ಚುನಾಯಿಸಲ್ಪಡುವುದಲ್ಲ ಒಬ್ಬ ವ್ಯಕ್ತಿಯು ತನಗೆ ಬೇಕಾದವರನ್ನು ಆರಿಸಿ ನೇಮಿಸುವುದು. ನಾಜಿ ಪಕ್ಷದ ಆಧೀನವಿರುವ ಅಪಾರ ಹಣವು ಕೈಗಾರಿಕೆಗಳಿಂದ ಇತರ ಧನಿಕಜನರಿಂದ ಬಲಾತ್ಕಾರದಿಂದ ಕಸಕೊಂಡುದಾಗಿದೆಯೇ, ಸ್ವೇಚ್ಛೆಯಿಂದ ಜನರು ಕೊಟ್ಟುದಲ್ಲ.

ರಿಚ್‌ಸ್ಟೇಗ್ ಎಂಬ ಜರ್ಮನ್ ಪಾರ್ಲಿಮೆಂಟೊಂದಿದೆ ಆದರೆ ಅದಕ್ಕೆ ಆಡಳಿತಾಧಿಕಾರವೇನೂ ಇರುವುದಿಲ್ಲ. ಅದು ಡಿಕ್ಟೇಟರನು ಮಾಡಿದ ಕೆಲಸಗಳಿಗೆ ಸಮ್ಮತಿಯ ಮುದ್ರೆಯೊತ್ತ ಬಲ್ಲುದೇ ಹೊರತು ಮತ್ತೇನೂ ಮಾಡುವ ಅಧಿಕಾರ ಅದಕ್ಕಿಲ್ಲ. ಡಿಕ್ಟೇಟರನಿಗೆ ಮನಸ್ಸು ತೋರಿದಾಗ ರಿಚ್‌ಸ್ಟೇಗಿಗೆ ಚುನಾವಣೆ ನಡೆಯುವುದು ಅದಕ್ಕೊಂದು ಅವಧಿಯೇನೂ ಇಲ್ಲ. ಆದರೆ ಚುನಾವಣೆಯ ಫಲಿತಾಂಶವೂ ಪೂರ್ವನಿಶ್ಚಿತವಾದುದೇ. ಯಾಕೆಂದರೆ ವಿರೋಧ ಪಕ್ಷವೆಂಬುದು ಇರುವುದೇ ಇಲ್ಲ ಒಂದೇ ಪಕ್ಷ, ಒಬ್ಬನೇ ನಾಯಕ. ಎಲ್ಲವೂ ಅವನಿಚ್ಛೆ. ಇತರ ಕಡೆಗಳಂತೆ ಸ್ಥಳೀಯ ಆಡಳಿತ ಸಂಸ್ಥೆಗಳೂ ಇರುವುದಿಲ್ಲ ನಗರ, ಪಟ್ಟಣ ಮತ್ತು ಹಳ್ಳಿ ಪ್ರದೇಶಗಳು ನಾಜಿ ಪಾರ್ಟಿಯ ನಿರ್ದೇಶಗಳ ಮೇರೆಗೆ ನಡಿಸಲ್ಪಡುತ್ತವೆ. ಬರ್ಲಿನ್ ಪಟ್ಟಣದ ಆಡಳಿತೆಯನ್ನು ಬರ್ಲಿನಿನ ಜನತೆಯ ಅನುಕೂಲತೆ ಮತ್ತು ಅಪೇಕ್ಷೆಯ ಮೇರೆಗೆ ನಡಿಸಲು ಸಾಧ್ಯವಿಲ್ಲ. ಜರ್ಮನಿಯ ಪ್ರತಿಯೊಂದು ಪಟ್ಟಣ ಮತ್ತು ಹಳ್ಳಿಯ ಆಡಳಿತವೂ ನಾಜಿಪಕ್ಷದ ಅನುಜ್ಞೆಯಂತೆ ನಡೆಯಬೇಕು. ಇಂತಹ ಏಕ ಸೂತ್ರಾಧಿಕಾರದ ಪ್ರಯೋಜನವೆಂದರೆ ಕೆಲಸಗಳನ್ನು ಶೀಘ್ರವಾಗಿ ನೆರವೇರಿಸಬಹುದು. ಒಂದು ಸಂಗತಿಯ ಯುಕ್ತಾಯುಕ್ತತೆಯನ್ನು ಚರ್ಚಿಸುವುದರಲ್ಲಾಗಲೀ, ಆ ಕುರಿತು ಜನತೆಯ ಮನೋಭಾವವನ್ನು ತಿಳಿಯುವುದರಲ್ಲಾಗಲೀ ಸಮಯ ಹೋಗುವುದಿಲ್ಲ.

ಜರ್ಮನಿಯಲ್ಲಿ ಕಮ್ಮಿಲ್ಯಕ್ಕೇರಿದ ನಿರುದ್ಯೋಗಿಗಳ ಸಂಖ್ಯೆಯು ಹಿಟ್ಲರ್ ಶಾಹಿಯಲ್ಲಿ ಸಂಪೂರ್ಣ ಇಲ್ಲದಂತಾಗಿದೆ. ಡಿಕ್ಟೇಟರತನವು ಜರ್ಮನಿಯ ಪ್ರತಿಯೊಬ್ಬನಿಗೂ ಒಂದೊಂದು ಉದ್ಯೋಗವನ್ನೊದಗಿಸಿಕೊಟ್ಟಿದೆ. ಖಡ್ಡಾಯವಾಗಿ ಜನರು ಸೇನಾ ಕೆಲಸಕ್ಕೆ ಸೇರಿಸಲ್ಪಡುತ್ತಾರೆ. ಪಟ್ಟಣಗಳನ್ನು ನವೀನವಾಗಿ ಕಟ್ಟುವ, ಹೊಸ ಮೋಟರ್ ರಸ್ತೆಗಳನ್ನು ರಚಿಸುವ, ಕೋಟೆ ಕೊತ್ತಳ ಮತ್ತು ಯುದ್ಧೋಪಕರಣಗಳನ್ನು ತಯಾರಿಸುವ ಪ್ರಚಂಡ ಯೋಜನೆಗಳನ್ನು ಹಿಟ್ಲರರು ಕೈಕೊಂಡಿದ್ದಾರೆ. ಕೈಗಾರಿಕೆಗಳ ಪುನರುಜ್ಜೀವನವು ವಿಸ್ಮಯಕರವಿದೆ, ಶ್ರೀಮಂತನಿರಲಿ, ಬಡವನಿರಲಿ ಪ್ರತಿಯೊಬ್ಬ ತರುಣನೂ ಒಂದು ಉದ್ಯೋಗ ಶಿಬಿರದಲ್ಲಿ ದುಡಿಯಲೇ ಬೇಕು. ಮತ್ತು ಎರಡು ವರ್ಷ ಸೇನೆಯಲ್ಲಿ ಕೆಲಸಮಾಡಬೇಕು ಖಡ್ಡಾಯದ ಉದ್ಯೋಗವು ಜನರನ್ನು ತಮ್ಮ ಮನೆ ಮತ್ತು ಕುಟುಂಬಗಳಿಂದ ಪ್ರತ್ಯೇಕಿಸಿ ದೂರಕ್ಕೊಯ್ದು ಅವರನ್ನು ಗುಲಾಮರಂತೆ ಕೆಲಸಮಾಡಿಸುವುದು. ವೈಯಕ್ತಿಕ ಅಪೇಕ್ಷೆ ಮತ್ತು ಉದ್ದೇಶಗಳನ್ನು ಕೇಳುವವರಿಲ್ಲ. ಡಿಕ್ಟೇಟರನ ಇಚ್ಛೆ ಪ್ರಕಾರ ಪಾರ್ಟಿಯ ನಿರ್ದೇಶದ ಮೇರೆಗೆ ಎಲ್ಲರೂ ಯಂತ್ರದೋಪಾದಿ ನಡೆಯಬೇಕು. ಮಜೂರ ಸಂಘಗಳು ನಿಷೇಧಿಸಲ್ಪಟ್ಟಿವೆ. ತಮ್ಮ ಹಿತರಕ್ಷಣೆಗಾಗಿ, ತಮ್ಮ ವೃತ್ತಿಯ ಅಭಿವೃದ್ಧಿ ಸಾಧನೆಗಾಗಲಿ, ಜನರು ಒಟ್ಟಾಗಿ ಸಂಘಗಳನ್ನು ಸ್ಥಾಪಿಸಕೂಡದು. ಮುಷ್ಕರಗಳು ನಡೆಯಲು ಸಾಧ್ಯವಿಲ್ಲ. ತಮ್ಮ ಸಂಬಳ ಅಥವಾ ಮಜೂರಿಯನ್ನು ನಿಶ್ಚೈಸುವ ವಿಷಯದಲ್ಲಿ ಕೆಲಸಗಾರರು ಅಭಿಮತವೀಯುವ ಹಕ್ಕೇ ಇಲ್ಲ ಕೊಟ್ಟಷ್ಟು ಸಂಬಳವನ್ನು ಅವರು ತಗೆದುಕೊಂಡು ಉಸಿರೆತ್ತದೆ ಸುಮ್ಮನಿರಬೇಕು

ಜನತೆಗಾಗಿ ಅಭಿಪ್ರಾಯಗಳು ತಯಾರಿಸಲ್ಪಡುವವು. ಮತ್ತು ಅವು ಜನತೆಯ ಅಭಿಪ್ರಾಯಗಳೆಂದು ಉದ್ಘೋಷಿಸಲ್ಪಡುವವು. ಎಲ್ಲಾ ಪತ್ರಿಕೆ, ಪ್ರಕಟಣೆ ಮೊದಲಾದುವುಗಳು ಸರಕಾರದ ಬಾಯಿಯಂತಿರತಕ್ಕದ್ದು. ಯಾವ ತರದ ಟೀಕೆಮಾಡುವ ಮತ್ತು ತನಗೆ ಬೇಕಾದಂತಹ ಲೇಖನ ಮತ್ತು ಸಮಾಚಾರಗಳನ್ನು ಪ್ರಕಟಿಸುವ ಸ್ವಾತಂತ್ರ್ಯ ಅವುಗಳಿಗಿರುವುದಿಲ್ಲ. ನಾಜಿ ಪಕ್ಷದ ವಿರೋಧ ಪ್ರಚಾರಮಾಡುವ ಹೊರ ದೇಶದ ರೇಡಿಯೋ ಸಮಾಚಾರ ಕೇಳುವುದೂ ಶಿಕ್ಷಾರ್ಹವಾಗಬಹುದು. ಮೋಸ್ಕೋ ರೇಡಿಯೋ ಸಮಾಚಾರ ಕೇಳಿದುದಕ್ಕಾಗಿ ಹಲವರು ಸೆರೆಯಲ್ಲಿರಿಸಲ್ಪಟ್ಟಿರುತ್ತಾರೆ ಕ್ರಾಂತಿಗೆ ಸಿದ್ಧತೆಮಾಡುವ ಆರೋಪವು ಅವರ ಮೇಲೆ ಹಾಕಲ್ಪಡುತ್ತದೆ.

ಡಿಕ್ಟೇಟರತನವನ್ನು ಖಂಡಿಸುವ ವಿದೇಶೀ ಪತ್ರಿಕೆಗಳು ಜರ್ಮನಿಗೆ ಪ್ರವೇಶಿಸಲಿಕ್ಕಿಲ್ಲ ಅವುಗಳನ್ನೋದುವುದು ತಕ್ಷೀರಾಗುತ್ತದೆ. ಆ ತಪ್ಪಿಗಾಗಿ 2ವರ್ಷ ಶಿಕ್ಷೆಗೊಳಗಾದವರೂ ಇದ್ದಾರೆ ಒಬ್ಬರೊಬ್ಬರೊಡನೆ ಸಂಭಾಷಣೆ ನಡಿಸಿ ಇಚ್ಛೆ ಪ್ರಕಾರ ಅಭಿಪ್ರಾಯವೀಯುವುದೂ, ಪತ್ರಗಳ ಮೂಲಕ ತೋರಿದುದನ್ನು ಬರೆದುಕಳುಹಿಸುವುದೂ ಅಪಾಯಕರ. ಆಫೀಸು, ಕಾರ್ಖಾನೆ, ಹೋಟೆಲು, ಅಂಗಡಿ ಬೀದಿಗಳಲ್ಲೆಲ್ಲಾ ಗುಪ್ತಚರರು ಸುಳಿಯುತ್ತಲೇ ಇದ್ದಾರೆ. ತರುಣ ಅಂಗ್ಲೇಯನೊಬ್ಬನು ತನ್ನ ಮನೆಗೆ ಬರೆದ ಸಂಪೂರ್ಣ ಮುಗಿಸಿದ ಪತ್ರವೊಂದನ್ನು ಅಜಾಗ್ರತೆಯಿಂದ ಹೊಟೆಲಿನ ಮೇಲೆ ಬಿಟ್ಟುಹೋದ. ಅದರಲ್ಲಿ ಡಿಕ್ಟೇಟರರ ಖಂಡನೆಯಿದ್ದಿತು. ಅದಕ್ಕಾಗಿ ಅವನು ವಾರ ಕೈದಿಯಾಗಿ ಅನಂತರ ಗಡಿಪಾರುಮಾಡಲ್ಪಟ್ಟನು ಡಿಕ್ಟೇಟರ ಶಾಹಿಯ ನ್ಯಾಯವೆಂದರೆ ಯಾವಾಗಲೂ ಅದು ಗುಪ್ತ ವ್ಯವಹಾರ. ಜರ್ಮನಿಯ ಕೋರ್ಟುಗಳಲ್ಲಿ ನಡೆಯುವ ಪ್ರಾಮುಖ್ಯ ವಿಚಾರಣೆಗಳೆಲ್ಲಾ ಗುಪ್ತವಾಗಿ ನಡೆಯುತ್ತವೆ. ಈ ವಿಚಾರಣೆಯಲ್ಲಿ ನಡೆಯುವುದೇನೆಂದು ಪ್ರಕಟಿಸಲ್ಪಡುವುದಿಲ್ಲ ತಕ್ಷೀರುಗಳ ಆರೋಪದಿಂದ ಕೈದುಮಾಡಲ್ಪಟ್ಟವರನ್ನು ಹಲವು ತಿಂಗಳ ವರೆಗೆ ಸೆರೆಯಲ್ಲಿ ನರಳಿಸಿ ಅವರಿಗೆ ನಾನಾ ಪ್ರಶ್ನೆ ಹಾಕಿ ಪೀಡೆಕೊಡಲಾಗುವುದು. ಹಿಟ್ಲರ್ ಶಾಹಿಯ ಬದ್ಧ ವಿರೋಧಿಯಾಗಿ ಕೈದುಮಾಡಲ್ಪಟ್ಟ ಜರ್ಮನ್ ಕನ್‌ಫೆಸನಲ್ ಚರ್ಚಿನ ಪ್ರಾಮುಖ್ಯ ಪಾದ್ರಿಯಾದ ಡಾಕ್ಟರ್ ಮಾರ್ಟಿನ್ ನಿಮೋಲ್ಲರರು ಸರೆಯೊಳಗಣ ವಿಚಾರಣೆಗೊಳಗಾಗುವ ಮೊದಲು 7 ತಿಂಗಳು ಜೈಲಲ್ಲಿ ಕೊಳೆಯುತ್ತಿರಬೇಕಾಗಿದ್ದಿತು. ಇವರು ಒಮ್ಮೆ ಬಿಡುಗಡೆ ಹೊಂದಿ ಆಮೇಲೆ ಪುನಃ ಕೈದುಮಾಡಲ್ಪಟ್ಟು ದಂಡನಾಶಿಬಿರಕ್ಕೆ ಕಳುಹಿಸಲ್ಪಟ್ಟಿರುವರು.

ನೂರಕ್ಕಿಂತಲೂ ಮಿಕ್ಕಿದ ದಂಡನಾಶಿಬಿರಗಳು ಜರ್ಮನಿಯಲ್ಲಿರುತ್ತವೆ. ಆಗೋಸ್ತು ಒಂದೇ ತಿಂಗಳಲ್ಲಿ ಉತ್ತರ ಜರ್ಮನಿಯಲ್ಲಿ 8 ದಂಡನಾಶಿಬಿರಗಳು ತೆರೆಯಲ್ಪಟ್ಟಿವೆ. ಇವುಗಳಲ್ಲಿ ಅತಿ ದೊಡ್ಡ ಶಿಬಿರದಲ್ಲಿ 3,500ಮಂದಿ ಬಂದಿಗಳಿರುತ್ತಾರೆ ಇವರಲ್ಲಿ ಹೆಚ್ಚಿನವರು ಯೆಹೂದ್ಯರು ಮತ್ತು ಜರ್ಮನ್ ಬೈಬ್ಲ ಶೋಧಕ ಸಂಘದ ಮೆಂಬರು. ಕಳೆದ 12ತಿಂಗಳುಗಳಲ್ಲಿ 200ಮಂದಿ ಬಂಧಿಗಳು ಈ ಶಿಬಿರಗಳಲ್ಲಿ ಮೃತರಾಗಿರುವರು. ರಾಜಕೀಯ ದಂಡನಾಶಿಬಿರಗಳಲ್ಲಿ ಎಷ್ಟು ಮಂದಿ ಇರುವರೆಂದು ತಿಳಿದಿಲ್ಲ. ಈ ಶಿಬಿರಗಳ ಹೊರತು ಜರ್ಮನ್ ಕಾರಾಗೃಹಗಳಲ್ಲಿ 1,13,000 ಮಂದಿ ರಾಜಕೀಯ ಕೈದಿಗಳಿರುವರೆಂದು ತಿಳಿದುಬರುತ್ತದೆ, ಇವರಲ್ಲಿ 24,000 ಮಂದಿ ಕೇವಲ ಗುಮಾನಿಯಿಂದ ಸೆರೆಯಲ್ಲಿರಿಸಲ್ಪಟ್ಟವರು.

ಕೌಟುಂಬಿಕ ಜೀವನದಲ್ಲಿಯೂ ಡಿಕ್ಟೇಟರ್ ಶಾಹಿಯ ಕೈವಾಡವು ಇದ್ದೇ ಇದೆ ಗೃಹಿಣಿಯರು ಯಾವ ಸಾಮಾನುಗಳನ್ನು ಎಲ್ಲಿ ತೆಗೆದುಕೊಳ್ಳಬೇಕು, ಎಷ್ಟು ಖರ್ಚು ಮಾಡಬೇಕು, ಯಾವ ರೀತಿ ಜೀವನ ನಡಿಸಬೇಕೆಂದೆಲ್ಲಾ ಸಲಹೆಗಳು ರೇಡಿಯೋ ಮೂಲಕ ಕೊಡಲ್ಪಡುತ್ತವೆ. ಅದರಂತೆ ಅವರು ನಡೆಯಬೇಕು ಕುಟುಂಬ ಖಳಿತಾಯ ಹಣನೆಲ್ಲಾ ಸರಕಾರದ್ದಾಗಿದೆ. ಸರಕಾರವು ಕೇಳುವಾಗ ಅದನ್ನು ಸ್ವ ತಃ

ಪುಟ ೧೧ರಲ್ಲಿ ನೋಡಿರಿ.

ಮೋಹಧ್ವಂಸಿನಿ (REGD)

ಗುಪ್ತ ವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ನೋವನ್ನು ಕೊಡುವ ಶಸ್ತ್ರ ಚಿಕಿತ್ಸೆ ಅನಾವಶ್ಯಕ. ಶರೀರವನ್ನು ಕ್ಷಯಿಸಿ ಮಾನವನ ಜೀವ ಪ್ರವಾಹವೆ ಯ ಕೃತ್ತಿರ ದ ಬಿಳುಪು, ಕೆಂಪು, ಪರಂಗಿ ಹುಣ್ಣು, ಮೇಹಗಡ್ಡೆ, ಮೇಹ, ಜ್ವರ, ಚರ್ಮವ್ಯಾಧಿ, ಕೀಲುಗಳನೋವು ಅತಿಮೂತ್ರ ಮುಂತಾದ ಚಿಹ್ನೆಗಳನ್ನು 'ಮೋಹಧ್ವಂಸಿನಿ'ಯು ಶೀಘ್ರವಾಗಿ ಹಿಂಡಿಸಿ, ರಕ್ತ ಶುದ್ಧಿ ಮಾಡಿ ನರಗಳಿಗೆ ಬಲವನ್ನೀಯುವುದು ಸೇವಿಸುವುದಕ್ಕೆ ಹಿತಕರ ಪ್ರತಿಯೊಂದುಹೊತ್ತಿನ ಔಷಧವಿದ್ದಿಯೂ ಅದ್ಭುತ ಗುಣ.

ದೊಡ್ಡ ಸೈಜು 4-0-0, ಮಿಡಿಯಂ ಸೈಜು 2-4-0, ಚಿಕ್ಕ ಸೈಜು 1-2-0.

ಹಂಚಿಕೊಡುವ ಪ್ರಮುಖರು:--ಬಾಸೆಲ್ ಮಿಶ್ಯನ್ ಪ್ರೆಸ್, ಮಂಗಳೂರು.

ಸಬ್ ಏಜಂಟರು:-ಉಡ್ಪಿ ಮಿಶ್ಯನ್ ಕೋಸ್, ಸಂತೆಕಟ್ಟೆ, ಉಡುಪಿ.

ವಿ. ವಿ. ಶೆಟ್ಟಿ, ಕಾರ್ಕಳ ಭಕ್ತಾ ಬ್ರದರ್ಸ್, ಕಾಸರಗೋಡು.

ಬಂಕಿಂಚಂದ್ರ ಚಟರ್ಜಿ

ಪುಟ ೧೧ರಿಂದ

ಷ್ಟ ಕಾದಂಬರಿಗಳು, ವೀರ ಕಥೆಗಳು, ರಾಮಾಯಣ ಮತ್ತು ಮಹಾಭಾರತದ ಪುರಾಣದ ವೀರ ಚಾರಿತ್ರಿಕ ವಿಚಾರಗಳಿಗೆ ಸರಿ ಹೋಲುವಂತಹ ಶ್ರೇಷ್ಠ ತರಗತಿಯದ್ದು.

ಬಂಕಿಂ ಬಾಬುಗಳು ವಿನೋದಪ್ರಿಯರು. ಅವರ ಲಘುಹಾಸ್ಯದಿಂದ ಕೂಡಿದ ಶುದ್ಧ ಭಾವನೆಯ ಉನ್ನತ ವಿಚಾರದ ಕೃತಿಗಳು ಬಹು ಶ್ರೇಷ್ಠಸ್ಥಾನವನ್ನಾವರಿಕೊಳ್ಳುವಂಥವುಗಳು. 'ಕಮಲಾಕಾಂತನ ದಪ್ತರ' ಎಂಬುದು ಇಂಥಾ ಸಾಲಿಗೆ ಸೇರಿದುದು. ಬಂಕಿಂ ಬಾಬುಗಳ ಹೃದಯಾಂತರಾಳದಲ್ಲಿ ಆತ್ಮಸ್ಫುರಣೆಯ ಶುದ್ಧ ಸಾತ್ವಿಕ ಪ್ರಭಾವದ ಧಾರ್ಮಿಕ ವಿಚಾರಗಳ ತರಂಗಗಳು ಪ್ರವಹಿಸುತ್ತಿದ್ದುವು. ಅವರ ಕೊನೆಯ ದಿನಗಳು ಹೆಚ್ಚಾಗಿ ತಾತ್ವಿಕ ವಿಚಾರಗಳಿಂದ ಕಳೆದು ಹೋದುವು. ಗೀತೆಯನ್ನು ಭಾಷಾಂತರಿಸುವುದರಲ್ಲಿಯೂ ಶ್ರೀಕೃಷ್ಣ ಜೀವನ ವಿಚಾರ ರಚನೆಯಲ್ಲಿಯೂ ಅವರು ಬಹು ಸಮಯ ವಿನಿಯೋಗಿಸಿದ್ದರು.

ಅಖಂಡ ಭಾರತದ ಸ್ಥಿರ ಪ್ರೇಮ ಗೌರವಕ್ಕೆ ಅವರನ್ನು ಪಾತ್ರರನ್ನಾಗಿ ಮಾಡಿದುದು ಅವರ 'ವಂದೇ ಮಾತರಂ' ರಾಷ್ಟ್ರಗೀತೆಯ ಸ್ಫುರಣೆ. ಬಂಕಿಂ ಬಾಬುಗಳು ಉಚ್ಚ ಪದವೀಧರರು; ಉಜ್ವಲ ಸಾಹಿತಿಗಳು, ಉತ್ಕೃಷ್ಟ ತಾತ್ವಿಕರು, ಅವರಿಗೆ ಬಿರುದು ಬಾವಲಿಗಳಲ್ಲಿ ಆಸಕ್ತಿಯಿರಲಿಲ್ಲ. ಸಾರ್ವಜನಿಕ ಸಭೆಗಳಿಗೆ ಅವರು ಹೋಗುತ್ತಿದ್ದುದು ವಿರಳ. ಅಡಂಬರವೆಂಬುದು ಅವರ ಸ್ವಭಾವಕ್ಕೆ ವಿರುದ್ಧ. ಅವರ ದೇಶಭಕ್ತಿಯ ಆಳವೆಷ್ಟೆಂದರಿಯಲು, ಅವರ 'ಆನಂದ ಮಠ'ದಲ್ಲಿ ಅಂಕಿತಗೊಂಡಿರುವ ಅದೊಂದು ಭಾವಾಮೃತದ ಸ್ವಾದದಿಂದ ಕಂಡುಕೊಳ್ಳಬಹುದು. 'ವಂದೇ ಮಾತರಂ' ಇದರಲ್ಲಿದೆ. ಬಂಕಿಂ ಬಾಬುಗಳ ಪ್ರತಿಭೆಯು ಅಸಾಧಾರಣವಾದುದು. ಸಾಹಿತ್ಯ ವಿಚಾರದಲ್ಲಿ ಸರಿಗಟ್ಟಲು ಬೇರೆಯವರು ದೊರೆಯುವುದು ದುರ್ಲಭ. ಪರಂತು, ಅವರ ಕವಿತೆಯು ಅಷ್ಟೊಂದು ಉತ್ತಮ ಸರಣಿಯವುಗಳೆನ್ನಬರುವುದಿಲ್ಲ. ಹೀಗಾಗಿ 'ವಂದೇ ಮಾತರಂ' ಎಂಬ ಗೀತೆಯು ಅವರ ಹೃದಯಾಂತರಾಳದಿಂದ ಮೇಲೆದ್ದ ದೈವಿಕ ಸ್ಫುರಣೆಯ ರಚನೆಯೆನ್ನಬಹುದಲ್ಲದೆ, ಅದೊಂದು ಅವರ ಕವಿತಾರಚನೆಯ ಸಾಲಿನಲ್ಲಿದೆಯೆಂದು ಹೇಳಬರುವುದಿಲ್ಲ. ಜರ್ಮನಿ, ಇಂಗ್ಲೆಂಡು ಅಥವಾ ಇನ್ನೊಂದು ಉನ್ನತ ಜನಾಂಗದ ರಾಷ್ಟ್ರಗೀತೆಯಾದರೂ, ಮಾಧುರ್ಯದಲ್ಲಿ ಅಪಾರ ದೇಶಭಕ್ತಿಯ ಆದರ್ಶತೆಯಲ್ಲಿ ಇದರ ಸಾಲಿನಲ್ಲಿ ನಿಲ್ಲಲರ್ಹತೆ ಪಡೆಯದು. ಈ 'ವಂದೇ ಮಾತರಂ' ಎಂಬುದು ದುರ್ಗೇಶ ನಂದಿನಿಯ ಕಾದಂಬರಿಗಾಗಿ ಪೋಣಿಸಿದುದಲ್ಲ. ಅವರ ರಚನೆಯು ಇದರ ಕೆಲಕಾಲದ ಮೊದಲೇ ನಡೆದಿತ್ತು. ಆನಂದಮಠದಲ್ಲಿ ಅದು ಸೇರಿಕೊಂಡಿತು, ಆದರೆ, ಇದರ ಪ್ರಕಾಶವು ಬಂಗಾಳದಲ್ಲಿ ಕಾಣಿಸಿಕೊಂಡುದು ಅದಾಗಿ 25 ವರ್ಷಗಳ ನಂತರ. ಬಂಕಿಂ ಬಾಬುಗಳು ಬರೆದ ಹಲವು ನಾಟಕಗಳು ನಾಟಕ ಶಾಲೆಯಲ್ಲಿ ಪ್ರದರ್ಶಿಸಲ್ಪಟ್ಟಿದ್ದುವು. ಆನಂದ ಮಠವೂ ಒಮ್ಮೆ ಅಭಿನಯಿಸಲ್ಪಟ್ಟಿತು. ಪರಂತು ಈ 1880ರಲ್ಲಿ ರಚಿಸಲ್ಪಟ್ಟ 'ವಂದೇ ಮಾತರಂ' ಎಂಬ ಹಾಡು ಸಾರ್ವಜನಿಕ ಸಭೆಯಲ್ಲಿ ಹಾಡಲ್ಪಡುವುದು, ಅದಕ್ಕೆ ಪ್ರಾಶಸ್ತ್ಯ ಸ್ಥಾನ ದೊರೆತುದು, ಅದಾಗಿ ಕಾಲು ಶತಮಾನಗಳ ನಂತರ. ಕ್ರಿ. ಶ. 1905ರಲ್ಲಿ ಕರ್ಝನ್ ಪ್ರಭುಗಳ ರಾಜ್ಯಾಧಿಕಾರ ಕಾಲದಲ್ಲಿ ಬಂಗಾಳದ ವಿಭಾಗ ಪ್ರಶ್ನೆಯು ಮುಂದೆ ಬಂದಿತು. ಜನರು ಇದಕ್ಕೆ ತೀವ್ರ ವಿರೋಧ ವಿತ್ತರು. ಇದರಿಂದಾಗಿ ಬಂಗಾಳದಲ್ಲಿ ಭಯಂಕರ ಪ್ರಸಂಗವು ತಲೆದೋರಿ ಹಲವು ಅನಾಹುತಗಳಿಗೆ ಬಂಗಾಳವು ಬಲಿಬಿತ್ತು. ಈ ಕಾಲದಲ್ಲಿ ಜನರು ಒಂದಾಗಿ, ತಮ್ಮ ದೇಶಭಕ್ತಿಯ ಉನ್ನತ ಧ್ಯೇಯದಿಂದ ಸರಕಾರದ ರೀತಿನೀತಿಗಳನ್ನು ಖಂಡಿಸಿದರು. ಆಮರವಾಣಿ, 'ವಂದೇ ಮಾತರಂ' –ಗೀತೆ–ಈ ಕಾಲದಲ್ಲಿ ಹೊರಬಂದುದು. ಆಬಾಲವೃದ್ಧರ–ಸ್ತ್ರೀಪುರುಷರ, ಅಧರಗಳಲ್ಲಿ ಈ ಅಮೃತ ಸದೃಶ ಸುಮಧುರ ವಾಣಿಯು ಸ್ಫೂರ್ತಿಯಿಂದ ಹೊರ ಹೊರಡತೊಡಗಿತು. ಕೆಲಕಾಲದ ನಂತರ ಇದರ ಪೂಜೆಯು ಅಖಂಡ ಹಿಂದೂಸ್ಥಾನದಲ್ಲಿ ಪಸರಿಸಿ, ಜನರನ್ನು ಆಕರ್ಷಿಸಿಬಿಟ್ಟಿತು.

'ವಂದೇ ಮಾತರಂ' ದಿವ್ಯವಾಣಿಯು; ಅದು ರಾಷ್ಟ್ರವನ್ನೊಂದುಗೂಡಿಸುವಂತಹ ಸ್ಫುರಣಾತ್ಮಕ ದೇಶ ಗೀತೆಯು ಬಂಗಾಳಿ ಸಂಸ್ಕೃತ ಸಮ್ಮಿಳಿತದಿಂದ ಸಂಸ್ಕೃತಿ ಹೊಂದಿದ ಬಹು ಸರಳ ಭಾಷೆಯಿಂದ ಕೂಡಿದ, ಸುಲಭವಾಗಿ ಜನತೆಯ ಹೃದಯವನ್ನು ಸೂರೆಗೊಳ್ಳುವ, ಸಾಮಾನ್ಯರಿಗೂ ಮನದಟ್ಟಾಗಬಹುದಾದ ಸುಮಧುರತೆಯ ಸ್ವಾದವುಳ್ಳ ಉತ್ಕೃಷ್ಟ ಭಾವನೆಯನ್ನೊಳಗೊಂಡ ತನ್ನದೇ ಆದ ಅದೊಂದು ವೈಶಿಷ್ಟ್ಯ ಸ್ಥಾನವನ್ನಡರಿದ ಅಸಾಮಾನ್ಯ ದೇಶ ಗೀತೆಯಾಗಿದೆ. ಹಲವರು ಇದನ್ನು ತಮ್ಮ ತಮ್ಮ ಭಾಷೆಗೆ ಬಟ್ಟಿಯಿಳಿಸಲು ಪ್ರಯತ್ನಿಸಿದರು. ಆದರೆ ಇದರ ಮೂಲತಃ ಭಾವನೆಯನ್ನು ಬರಗೊಡಿಸುವುದು ಕೈಮೀರಿದ ಮಾತೆಂದು ತೋರುವುದು. ಇದಕ್ಕೆ ಸದೃಶವಾದ ರಾಷ್ಟ್ರಗೀತೆಯು ಇನ್ನೊಂದಿರುವುದು ಅಸಂಭವ. ಹಿಂದೂದೇಶವು ಸ್ವಾತಂತ್ರ್ಯ ಮಂದಿರವನ್ನು ನಿರ್ಮಾಣ ಮಾಡಿತೆಂದರೆ, ಈ ಸ್ವಾತಂತ್ರ್ಯ ಭವನದ ಸ್ವಾತಂತ್ರ್ಯ ಸಭಾಸ್ಥಾನದಲ್ಲಿ ಈ ಗೀತೆಯು ಅಕ್ಷರಕ್ಷರವೂ ಕ್ರಮವಾಗಿ ಸುವರ್ಣದಿಂದ ಕೆತ್ತಲ್ಪಟ್ಟು, ಜಾಜ್ವಲ್ಯತೆಯಿಂದ ಸ್ಥಿರ ಪ್ರಭೆಯನ್ನು ಬೀರಿ ಬೆಳಗುವಂತಾಗದಿರದು. ಅಖಂಡ ಭಾರತದಲ್ಲಿ ಜಾತಿ,ಮತ, ಭೇದವಿಲ್ಲದೆ, ಸರ್ವರ ಪೂಜ್ಯತೆಗೆ ಪಾತ್ರರಾದ ಯೋಗಿ ಅರವಿಂದರು ಬಂಕಿಂ ಚಂದ್ರರನ್ನು 'ಋಷಿ'ಯೆಂದು ಹೇಳಿರುವರು. ಇ ದೀ ಗ ಎ ಲ್ಲ ರೂ ಒ ಪ್ಪು ವಂ ತ ಹ ದ್ದಾ ಗಿದೆ. ಭಾರತ ಮಾತೆಯು ತನ್ನ ಬಂಧನದಿಂದ ಮೋಕ್ಷವನ್ನುಗಳಿಸಿ, ಆಕೆಯ ಮಕ್ಕಳು, ಕನ್ಯಾಕುಮಾರಿಯಿಂದ ಹಿಮಾಲಯ ಪರ್ವತಗಳ ವರೆಗೆ, ಋಷಿ ಬಂಕಿಂ ಬಾಬುಗಳಿಗೆ ಗೋಚರವಾದ ಈ ದಿವ್ಯ 'ವಂದೇ ಮಾತರಂ' ಮಂತ್ರವನ್ನು ಪಠಿಸಿ ಹಿರಿ ಹಿಗ್ಗಿ ನಲಿನಲಿದು ಹಾಡುವ ದಿನವು ಸಾಮೀಪಿಸಬಹುದಲ್ಲವೇ?

'ವಂದೇ ಮಾತರಂ'

'ಮಲೆನಾಡು ಒಕ್ಕಲಿಗರ ಸಂಘ'ದ ಸಂಕುಚಿತ ಮನೋವೃತ್ತಿ!

ಶಿವಮೊಗ್ಗದ ತಾಯಿನಾಡು ಬಾತ್ಮಿದಾರರಿಂದ ಶಿವಮೊಗ್ಗ, ಅಕಟೋಂಬರ್೩೦ 'ಮಲೆನಾಡು ಒಕ್ಕಲಿಗರ ಸಂಘ'ಎಂಬ ಶಿರೋನಾಮೆಯ ಲೇಖನದ ಸಾರಾಂಶ ಹೀಗಿದೆ.

ಒಕ್ಕಲಿಗರೆಲ್ಲಾ ದಕ್ಷಿಣಕನ್ನಡ ಜಿಲ್ಲೆಯ, ಬಂಟರು ಯಾನೆ ನಾಡವರು, ಮುಂತಾದ ಇತರ ಕೋಮಿನವರು, ತಾವು ಮೈಸೂರು ಸೀಮೆಯಲ್ಲಿ, ವಿದ್ಯಾರ್ಥಿವೇತನ, ಸರಕಾರಿ ನೌಕರಿ ಮುಂತಾದುವುಗಳನ್ನು ಸರಕಾರದವರಿಂದ, ಹೊಂದುತ್ತಿರುವುದು ಈ ಸಂಘದ ಗಮನಕ್ಕೆ ಬಂದಿರುವುದರಿಂದ ಈ ರೀತಿ ಸರಕಾರದಲ್ಲಿ ಸುಳ್ಳು ವಿದ್ಯಮಾನವನ್ನು ನಮೂದಿಸಿ ಪ್ರಯೋಜನ ಪಡೆಯುತ್ತಿರುವ ವರ್ತನವನ್ನು ಈ ಸಭೆಯು ತೀವ್ರವಾಗಿ ಖಂಡಿಸುವುದಲ್ಲದೆ- ಒಕ್ಕಲಿಗರಿಗೆ ಮೀಸಲಾಗಿರಿಸಿರುವ, ವಿದ್ಯಾರ್ಥಿ ವೇತನದ, ಸರಕಾರಿ ನೌಕರಿ ಮುಂತಾದ್ದನ್ನು ಒಕ್ಕಲಿಗರಲ್ಲದವರಿಗೆ ಕೊಡಬಾರದಾಗಿ, ಸರಕಾರವನ್ನು ಈ ಸಮಿತಿಯು ಪ್ರಾರ್ಥಿಸುತ್ತದೆ. ಈ ಠರಾವು ಶ್ರೀಯುತ ದೀವಂಗಿ ರಾಮಣ್ಣ ಗೌಡರೆಂಬುವರ ಅಡಿಕೆ ಮಂಡಿಯಲ್ಲಿ ಶ್ರೀಯುತ ಜಿ. ಯಂ. ದುಗ್ಗಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನಿರ್ಣಯಿಸಲ್ಪಟ್ಟಿದು.

(ಮೇಲಣ ಠರಾವಿನ)ಕುರಿತಾಗಿ ತೀರ್ಥಹಳ್ಳಿಯಿಂದ ಬಂಟರ ಯಾನೆ ನಾಡವರ ಪರವಾಗಿ ನಮಗೆ ಸುದೀರ್ಘವಾದ ವಿಮರ್ಶೆಯೊಂದು ಬಂದದೆ. ಮೈಸೂರು ಸಂಸ್ಥಾನದ ರಾಜಕೀಯ ವಿಚಾರ, ಕನ್ನಡ ರಾಷ್ಟ್ರದ ಧ್ಯೇಯ, ಜನತೆಯ ಐಕ್ಯತೆ, ಜಾತಿ ಕೋಮುವಾರುಗಳ ಯಥಾರ್ಥ ವಿಚಾರ- ಇವುಗಳು ಯಾವುದೊಂದು ಸರಿಯಾಗಿ ಗ್ರಹಿಸದೆ ಸ್ವಾರ್ಥ, ಸಂಕುಚಿತ ದೃಷ್ಟಿಯಿಂದ ಜನತೆಯ ಸಾಮಾನ್ಯ ಹಕ್ಕಿನ ನೀತಿನಿಯಮ ಔದಾರ್ಯವನ್ನು ಮೀರಿ ಈ ರೀತಿ ತಮ್ಮದೇ ಆದ ಅದೊಂದು ಕೃತ್ರಿಮ ದಾರಿಯಲ್ಲಿ ಕಾಲಬುಡವನ್ನಷ್ಟನ್ನೇ ನೋಡಿಕೊಂಡು ಗೊಂದಲವೆಬ್ಬಿಸಲು ಬಗೆದ ಈ ಠರಾವು ಅರ್ಥರಹಿತವಾದುದು, ಆಧಾರವಿಲ್ಲದುದು, ಆದುದರಿಂದ ಇದಕ್ಕೇನೂ ಬೆಲೆಯಿರದು. ಇನ್ನಾದರೂ ಇಂಥಾ ಕ್ಷುದ್ರ ವಿಷಯಕ್ಕೆ ಮನಸುಮಾಡದೆ ಜಾತಿಭೇದಕ್ಕಾಸ್ಪದಕೊಡದೆ ಜನತೆಯು ಕಣ್ಣುತೆರೆಯುವಂತಾಗಲೆಂಬುದೇ ಈ ವಿಚಾರ ವಿಮರ್ಶೆಯ ಸಾರ. ಸ್ಥಳಾಭಾವದಿಂದ ಸಂಪೂರ್ಣ ಪ್ರಕಟಿಸಲಾಗಲಿಲ್ಲ. (ಸಂ.ನ)

Established] [1906

THE

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	Rs 486 Lakhs
Annual income Exceeds	Rs. 28 Lakhs
Total Assets Exceed	Rs. 100 Lakhs
Total claims paid over	Rs. 36 Lakhs.

The oldest and largest Life Assurance Company of South India, having 31 years of record service

A POLICY IN THE UNITED INDIA *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to:—

THE BRANCH MANAGER.
The United India,
Life Assurance Company Ltd.
BLOCK No. 2, Felix Pai Bazaar,
BRANCH, MANGALORE, S. K.

OR

K. Keshava Shenoy, M. A.
Organiser, Shantiniketan,
PENTLANDPET,
MANGALORE.

General Assurance Society Ltd.

ಹಿಂದೂದೇಶದ ಪ್ರಮುಖ ವಿಮಾ ಕಂಪೆನಿ:

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಪ್ರಧಾನ ಆಫೀಸು:- ಅಜ್ಮೀರ್ ಸ್ಥಾಪನೆ 1907

- ಸಂತೃಪ್ತಿಹೊಂದಿರುವ 50,000 ಪೊಲಿಸಿದಾರರೇ ನಮ್ಮ ಉತ್ಕೃಷ್ಟ ಪ್ರಶಸ್ತಿ ಪತ್ರ
- ಎಲ್ಲಾ ವರ್ಗದವರ ಪ್ರತಿಯೊಂದು ಅವಶ್ಯಕತೆಗೂ ಅನುಕೂಲವಾದ ಪೊಲಿಸಿಗಳು.
- ನಿಜನ್ನಿ ಶರ್ತಗಳು: ಉದಾರ ಮತ್ತು ಲಾಭಕರ!

ಹೆಚ್ಚಿನ ವಿವರವನ್ನು ಈ ಕೆಳಗಿನವರಿಂದ ಪಡೆಯಬಹುದು:–

ಜನರಲ್ ಮೆನೇಜರ್, ಅಜ್ಮೀರ್.

ಅಥವಾ, ಶಾಖಾ ಮೆನೇಜರ್—ಮದ್ರಾಸ್, ಹುಬ್ಬಳ್ಳಿ, ಬೆಂಗಳೂರು.

ಅಥವಾ, ಚೀಫ್ ಏಜಂಟರು:—ಮಧುರ, ರಾಜಮಹೇಂದ್ರಿ, ಸೆಕುಂದರಾಬಾದ್, ತಿರುಚಿನಾಪಳ್ಳಿ.

ಅಥವಾ ಒರ್ಗನೈಸರ್:–ಔರಂಗಬಾದ್, ಬಳ್ಳಾರಿ, ವೆಲ್ಲೂರು.

ದಕ್ಷಿಣ ಕನ್ನಡ

ಸುಬ್ರಹ್ಮಣ್ಯ— ತಾ. 14ರಲ್ಲಿ ಸುಬ್ರಹ್ಮಣ್ಯ ಸಂಯುಕ್ತ ಕಾಂಗ್ರೆಸ್ ಕಮಿಟಿಯ ಪ್ರಥಮ ವಾರ್ಷಿಕ ಸಭೆಯು ದೇವಸ್ಥಾನದ ಸತ್ರದ ಮುಂಭಾಗದಲ್ಲಿ ಹಾಕಲ್ಪಟ್ಟಿದ್ದ ಚಪ್ಪರದಲ್ಲಿ ರಾಷ್ಟ್ರಬಂಧು ಪತ್ರಿಕೆಯ ಉಪಸಂಪಾದಕರಾದ ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ನಾರಾಯಣ ಶೆಟ್ಟಿಯವರು ಉಜ್ವಲ ಭಾಷಣ ಮಾಡಿ ಎಲ್ಲರೂ ಕಾಂಗ್ರೆಸನ್ನು ಸೇರಿ ಆ ಸಂಸ್ಥೆಯನ್ನು ಬಲಗೊಳಿಸಬೇಕೆಂದು ಪ್ರಾರ್ಥಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ರಾಷ್ಟ್ರ ಸಭೆಯ ಅರ್ಧ ಶತಮಾನದ ಇತಿಹಾಸವನ್ನು ಸ್ವಲ್ಪದರಲ್ಲಿ ವಿವರಿಸಿ, ಇಂದು ಬ್ರಿಟಿಷ್ ಸಾಮ್ರಾಜ್ಯವೇ ಕಾಂಗ್ರೆಸಿಗೆ ತಲೆಬಾಗಿರುವ ಸ್ಥಿತಿಗೆ ಬಂದಿದೆಯೆಂದೂ, ಎಲ್ಲರೂ ಕಾಂಗ್ರೆಸಿಗೆ ಸೇರಿ ಅದನ್ನು ಬಲಪಡಿಸಿದರೆ ಸ್ವರಾಜ್ಯವು ಕೂಡಲೆ ನಮ್ಮ ಹಸ್ತಗತವಾಗುವುದೆಂದೂ ಹೇಳಿದರು.

ಶ್ರೀ. ಸುಬ್ರಹ್ಮಣ್ಯಕ್ಕೆ ಒಂದು ಆಸ್ಪತ್ರೆಯು ಅಗತ್ಯವೆಂದೂ ಸೂಚಿಸಿದರು.

ಅನಂತರ ಮೂರು ಠರಾವುಗಳು ಮಂಜೂರಾತಿ ಪಡೆದುವು. ಸಂಯುಕ್ತ ಕಾಂಗ್ರೆಸ್ ಸಮಿತಿಯ ಮಾನ್ಯ ಅಧ್ಯಕ್ಷರಾದ ಶ್ರೀ. ಕೆ. ವ್ಯಾಸರಾಯರು ಅಧ್ಯಕ್ಷರಿಗೂ, ಶ್ರೀ. ಶೆಟ್ಟಿಯವರಿಗೂ, ಇನ್ನಿತರ ಭಾಷಣಕರ್ತರಿಗೂ, ಸಭಾಜನರಿಗೂ ಧನ್ಯವಾದಗಳನ್ನರ್ಪಿಸಿದ ಮೇಲೆ ಸಭಾಂತ್ಯವಾಯಿತು.

ಕುಂದಾಪುರ—ಇಲ್ಲಿ ತಾ. 16ನೇ ಬುಧವಾರ ಮಧ್ಯಾಹ್ನ 12ಗಂಟೆಗೆ ಚಿತ್ತೈಸಿದ ವಿದ್ಯಾಂಗ ಸಚಿವರಾದ ಮಾನ್ಯ ಡಾ. ಸುಬ್ಬರಾಯನವರಿಗೂ ಇತರ ಅತಿಥಿಗಳಿಗೂ ಇಲ್ಲಿಯ ಜನಾಬ ಅಬ್ದುಲ ಕಾದರ ಸಾಹೇಬ ಬಹದ್ದೂರರವರು ಮುಸಾಫರಿ ಬಂಗಲೆಯಲ್ಲಿ ಔತಣವನ್ನಿತ್ತು ಸತ್ಕರಿಸಿದರು. ಶಹರದ ಶಾಲೆಗಳನ್ನೆಲ್ಲಾ ಸಂದರ್ಶಿಸಿದ ನಂತರ ಹೈಸ್ಕೂಲು ಪರಾರದಲ್ಲಿ ಪುರಜನರ ಸಭೆ ಜರಗಿ ಮಾನಪತ್ರಗಳನ್ನು ಅರ್ಪಿಸಲಾಯಿತು. ಮಾನ್ಯ ಮಂತ್ರಿಗಳ ಭಾಷಣವಾದೊಡನೆ ರಾತ್ರಿ 8ಗಂಟೆಗೆ ಪಟ್ಟಣಿಗರು ಮಂತ್ರಿಗಳಿಗೂ, ಇತರರಿಗೂ ಉಪಹಾರಕೂಟವನ್ನು ಜರಗಿಸಿ (Social) ಸತ್ಕರಿಸಿದರು.

ಕೋಟ—ತಾ. 16-11-1938ರಲ್ಲಿ ಮದ್ರಾಸು ವಿದ್ಯಾ ಇಲಾಖಾ ಮಂತ್ರಿಗಳಾದ ಮಾ. ರಾ. ರಾ. ಸುಬ್ಬರಾಯನರು ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ. ಸಿ. ಜೆ. ವಾರ್ಕಿಯವರ ಹಾಗೂ ಶ್ರೀ. ಎ. ಬಿ. ಶೆಟ್ಟಿ ಎಂ.ಎಲ್.ಎ.ಮೊದಲಾದವರೊಡನೆ ಗಿಳಿಯಾರು ಶ್ರೀ. ಶಾಂಭವೀ ವಿದ್ಯೋದಯಿನೀ ಹಾಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿದರು. ಶಾಲೆಯಲ್ಲಿ ಮಾನಸ್ಕಾರಕ್ಕೆ ಮಕ್ಕಳಿದ್ದು, ಹೆಚ್ಚಾಗಿ ಹೆಣ್ಣು ಮಕ್ಕಳು ಸಹ ವಿದ್ಯಾತುರರಾಗಿರುವುದನ್ನು ಕಂಡು ಎಲ್ಲರೂ ಸಂತೋಷಗೊಂಡರು. ಉಪಹಾರಾನಂತರ ಇಲ್ಲಿಂದ ಕುಂದಾಪುರಕ್ಕೆ ತೆರಳಿದರು.

"ಕೋಟ ಮತ್ತು ಇತರ ನೆರೆಹೊರೆಯ ಹಳ್ಳಿಗಳಲ್ಲಿರುವ ಅನೇಕ ಜನರಿಗೆ ಹುಚ್ಚು ನಾಯಿಗಳು ಕಚ್ಚಿ ಅವರೆಲ್ಲರೂ ಕುಂದಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದಾರೆ."

ಹೆಜಮಾಡಿ—ನಮ್ಮ ಮದ್ರಾಸ್ ಸರಕಾರದ ವಿದ್ಯಾ ಇಲಾಖೆಯ ಮಾನ್ಯ ಮಂತ್ರಿಗಳಾದ ಡಾ. ಸುಬ್ಬರಾಯನ್‌ರವರು ತಾ 17-11-38ರಲ್ಲಿ ಇಲ್ಲಿಯ ಬೋರ್ಡು ಶಾಲೆಗೆ ಚಿತ್ತೈಸಿದ ಸಮಯ ಇಲ್ಲಿಯ ಸಾಹುಕಾರರು ಜನರು ಮಾನ್ಯ ಮಂತ್ರಿಗಳನ್ನು ಎದುರುಗೊಂಡು 'ಶಾಲಾ ಪಾಂಡಿದ ಏಕ್ಸಾರಕ ಸಮಿತಿಯವರು' ಮಾನ್ಯ ಮಂತ್ರಿಗಳಿಗೆ ಮಾನಪತ್ರವನ್ನು ಕೊಟ್ಟಿರುತ್ತಾರೆ.

ಶಿರ್ವ—ಕಳೆದ ವಾರ ಇಲ್ಲಿಯ ಟಿ. ಬಿ. ಯಲ್ಲಿ ಹೆಲ್ತ್ ಆಫೀಸರರು ಮೂರು ದಿವಸಗಳ ವರೆಗೆ 'ಕ್ಯಾಂಪ್' ಮಾಡಿ ಸ್ಥಳೀಯ ಫಿಯರ್ಾದಿಗಳನ್ನು ತಾಳ್ಮೆಯಿಂದ ತನಿಖೆ ನಡೆಸಿದರು. ತುಂಬಾ ಕುಷ್ಠರೋಗದ ಹಾವಳಿಯಿರುವ ಈ ಕೇಂದ್ರದಲ್ಲಿ ಯಶಸ್ವಿಯಾಗಿ ಕೆಲಸಮಾಡುತ್ತಿದ್ದ ಕುಷ್ಠರೋಗದ ಡಾಕ್ಟರರನ್ನು ಹೇಳದೆ ಕೇಳದೆ ಮನ್ನಾಮಾಡಿ ಆರು ತಿಂಗಳುಗಳಾದರೂ, ಸಂಬಂಧಪಟ್ಟ ಕೌನ್ಸಿಲುಗಳು, ಅವನೇನು ಕನ್ನೊ ಇಲ್ಲದೆ ತಟಸ್ಥವಾಗಿರುವುದು ತುಂಬಾ ದುಃಖಾಸ್ಪದವಾಗಿದೆ. ಮೂಕಗ್ರಾಮಸ್ಥರನ್ನು ಇನ್ನಾದರೂ ಬದುಕಿಸಲು ಕಾರ್ಯವೆಸಗುತ್ತಿದ್ದರೆ ತುಂಬಾ ಉಪಕಾರವಾದೀತು!

ಫಿಲಾರಿನಲ್ಲಿ ಹೊಸ ಪೋಸ್ಟಾಫೀಸು. ಕಳೆದ 16-11-1938ರಲ್ಲಿ ಸಾಂತೂರು, ಫಿಲಾರು ಗ್ರಾಮಗಳ ಮಧ್ಯಸ್ಥಳವಾದ ಫಿಲಾರು ಹಿಂದೂ ಶಾಲೆಯಲ್ಲಿ ಇಲಾಖಾ ಅಧೀಕಾರರಿಂದ ಸರ್ವಗ್ರಾಮಸ್ಥರ ಅಭಿಮತದಂತೆ ತೆರೆಯಲ್ಪಟ್ಟಿತು. ಬಡ ಹಳ್ಳಿಗರಿಗೆ ಉಪಕಾರವಾದಂತಾಯಿತು.

ಕಟಪಾಡಿ:—ವಿದ್ಯಾ ಇಲಾಖಾ ಮಂತ್ರಿ ಮಂತ್ರಿಗಳಾದ ಡಾ. ಸುಬ್ಬರಾಯನರು ಇಲ್ಲಿಯ ಶ್ರೀ ವೆಂಕಟರಮಣಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯನ್ನು ತಾ. 17-11-'38ರಲ್ಲಿ ಸಂದರ್ಶಿಸಿದರು. ಶಾಲಾ ಮೆನೇಜರರಾದ ಶ್ರೀ. ಪಿ. ರಾಮದಾಸ ನಾಯಕ್, ಬಿ. ಎ. ಎಲ್. ಟಿ. ಯವರೂ, ಶಾಲಾ ಆಡಳಿತ ಸದಸ್ಯರೂ ಅವರನ್ನು ಸ್ವಾಗತೀಕರಿಸಿದರು. ಆ ಬಳಿಕ ಅವರು ಶಾಲೆಯ ಪ್ರತಿಯೊಂದು ತರಗತಿಯನ್ನೂ ಹುರಿಹಗ್ಗದಿಂದ ವಿದ್ಯಾರ್ಥಿಗಳು ತಯಾರಿಸಿದ ವಿವಿಧ ಸಾಮಾಗ್ರಿಗಳನ್ನೂ, ಹೆಮ್ಮಕ್ಕಳ ಕಸೂತಿ ಕೆಲಸವನ್ನೂ ಕಂಡು ಇದೊಂದು ಅತ್ಯುತ್ತಮವಾದ ಹಾಗೂ ತುಂಬಾ ವಿದ್ಯಾರ್ಥಿಗಳಿರುವ ಶಾಲೆಯೆಂದೂ, ವ್ಯಕ್ತಿ ಹಾರದಲ್ಲಿ ತಯಾರಿಸಲ್ಪಟ್ಟ ವಸ್ತುಗಳು ಉತ್ತಮವಿವೆಯೆಂದೂ ಅಭಿಪ್ರಾಯಪಟ್ಟರು. ಬಳಿಕ ಇಂತಹ ಶಾಲೆಯ ಬಗ್ಗೆ ಹಿಬ್ಬ ಹೆಚ್ಚಿಗೆ ಅಧ್ಯಾಪಕನನ್ನು ನೇಮಿಸುವಂತೆ ನಿಯಮಗಳಲ್ಲಿ ಬದಲಾವಣೆಯಾಗಬೇಕೆಂದೂ, ಆಟದ ಬಯಲಿಗಾಗಿ ಸ್ವಲ್ಪ ಸರಕಾರಿ ಸ್ಥಳವನ್ನು ದಯಪಾಲಿಸುವಂತೆಯೂ ಒಂದು ಬಿನ್ನವತ್ತಳೆಯನ್ನು ಮಾನ್ಯ ಮಂತ್ರಿಗಳಿಗೆ ಶಾಲಾಧಿಕಾರಿಗಳ ಪರವಾಗಿ ಒಪ್ಪಿಸಲ್ಪಟ್ಟಿತು. ಇದಕ್ಕೆ ಉತ್ತರವನ್ನಿತ್ತು ಶ್ರೀ ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್ ಸಂಸ್ಥೆಯನ್ನು ಸಂದರ್ಶಿಸಿ ಅಲ್ಲಿಯ ಆಯುರ್ವೇದಿಕ್ ಔಷಧಿಗಳ ಕುರಿತು ಸದಭಿಪ್ರಾಯವನ್ನಿತ್ತು ಮೂಲ್ಕಿಗೆ ತೆರಳಿದರು.

ಮುಲ್ಕಿ—ತಾ. 16ರಲ್ಲಿ ಮಾನ್ಯ ಸುಬ್ಬರಾಯನ್‌ರವರು ಮುಲ್ಕಿ ಶ್ರೀ ಸೋಮನವರ ಐಸ್ ಫೆಕ್ಟರಿಯಲ್ಲಿ ಇತ್ತೀಚೆಗೆ ತೆರಯಲಾದ ವಡಭಾಂಡೇಶ್ವರ ಹೈ ಎ ಶಾಲೆಯನ್ನು ಸಂದರ್ಶಿಸಿ ಹರ್ಷ ಪ್ರದರ್ಶಿಸಿದರು. ಆ ಬಳಿಕ ರಾತ್ರಿ ಭೋಜನೋಪಹಾರವನ್ನು ಪೂರೈಸಿ ಕಲ್ಯಾಣಪುರ ಮಿಲಾಗ್ರಿಸ್ ಶಾಲೆಯನ್ನು ಸಂದರ್ಶಿಸಿ ಕುಂದಾಪುರಕ್ಕೆ ತೆರಳಿದರು.

ಗ್ರಂಥ ಸ್ವೀಕಾರ ಮತ್ತು ವಿಮರ್ಶೆ

ಮೋಕ್ಷ ವಿಮರ್ಶೆ

ಈ ಪುಸ್ತಕದಲ್ಲಿ ಪಂಡಿತ ಪುರಾಣಿಕರು ಮೋಕ್ಷವು ನಿತ್ಯವೋ ಅನಿತ್ಯವೋ' ಎಂಬ ಸಂದೇಹವನ್ನು ಸ್ಮೃತಿ, ಶಾಸ್ತ್ರ, ಪುರಾಣಾಧಾರಗಳಿಂದ ನಿವೃತ್ತಿಗೊಳಿಸುವ ಪ್ರಯತ್ನಮಾಡಿರುತ್ತಾರೆ. ದಯಾನಂದರ ಮೋಕ್ಷವಿಚಾರವನ್ನು ವಿಮರ್ಶಿಸಿ, ಅವರ ಅಭಿಪ್ರಾಯವನ್ನು ಕಟುವಾದ ಬಿರುನುಡಿಗಳಿಂದ ಖಂಡಿಸಿ, ಮೋಕ್ಷವು ನಿತ್ಯವೆಂದು ಹಲವು ಉದಾಹರಣೆಗಳಿಂದ ವಿವರಿಸುವರು. ವಾಚಕರಲ್ಲಿ ವಿಚಾರ ಕ್ರಾಂತಿಯನ್ನುಂಟುಮಾಡುವಂತಹ ವಿಮರ್ಶೆಯು. ರೀತಿ, ಉತ್ಕೃಷ್ಟ ಪಾಂಡಿತ್ಯವು ಪ್ರಶಂಸನೀಯವು. ಪರಂತು, ದಯಾನಂದ ಸರಸ್ವತಿಯವರ ಅಭಿಪ್ರಾಯವನ್ನು ಖಂಡಿಸುವ ಭರದಲ್ಲಿ ಅಲ್ಲಲ್ಲಿ ಮೇರೆ ಮೀರಿ ಅನಾದರಣೆಯನ್ನು ತೋರಿಸುವುದು ಸಮಂಜಸವೆಂದು ತೋರುವುದಿಲ್ಲ.

ಜೀವನ ಪ್ರಭಾತ

ವಿಮಾ-ವಾಣಿಜ್ಯದ ಮೊದಲನೇ ಪುಷ್ಪ—(ಶ್ರೀಮಾನ್ ಡಿ. ವಿ. ಗುಂಡಪ್ಪನವರ ಮುನ್ನುಡಿಯೊಡನೆ) ವ್ಯವಸ್ಥಾಪಕ ಸಂಪಾದಕರು—ಶ್ರೀ. ಜಿ. ವಿ. ದೊಡ್ಡ ವೀರಪ್ಪ, ವಿಮಾ-ವಾಣಿಜ್ಯ, ಬೆಂಗಳೂರು ಸಿಟಿ.

'ವಿಮಾ-ವಾಣಿಜ್ಯ'ದಂಥಾ ಉಚ್ಚ ವಿಷಯಗಳನ್ನು ಕಥೆ, ಕವನ, ನಾಟಕ, ಪ್ರಬಂಧಗಳಿಂದ ಸರಸವಾಗಿ, ವರ್ಣಿಸುವ ನವಹಾದಿಯನ್ನು ಕಂಡುಕೊಂಡು, ಕನ್ನಡಿಗರೆಲ್ಲರ ಪ್ರೇಮಾಭಿಮಾನ ಪ್ರಶಂಸೆಗೆ ಪಾತ್ರವಾದ ವಿಮಾ-ವಾಣಿಜ್ಯ'ದ ಸಂಪಾದಕರಾದ ದೊಡ್ಡ ವೀರಪ್ಪನವರು ಕನ್ನಡ ನಾಡಿಗೆ ಮೊದಲೇ ಪರಿಚಿತರು.

ಇವರು ಈ 'ವಿಮಾ-ವಾಣಿಜ್ಯ' ಸಂಚಿಕೆಗಳಲ್ಲಿ ಈ ಮೊದಲೇ ಪ್ರಕಟವಾಗಿರುವ ಮತ್ತು ಈ ವಿಷಯಕ್ಕೆ ಸಂಬಂಧಪಟ್ಟ ಜನಜೀವನಕ್ಕೆ ಸಾಮೀಪ್ಯಹೊಂದಿರುವ, ಉಚ್ಚವಿಷಯಗಳನ್ನು ಹೃದಂಗಮವಾಗಿ ಪೋಣಿಸಿ, "ಜೀವನ ಪ್ರಭಾತ' ವೆಂಬ ವಿಮಾ-ವಾಣಿಜ್ಯದ ಮೊದಲನೆಯ ಪುಷ್ಪವನ್ನು ಕನ್ನಡ ಮಾತೆಗೆ ಕಾಣಿಕೆಯಾಗಿ ಇದೀಗ ಒಪ್ಪಿಸಿರುವರು. ಜನಮನೋರಂಜಕವಾದ, ಅನುದಿನದ ಜೀವನದ ರೀತಿ ನೀತಿ ಕಾರ್ಯವಿಚಾರಕ್ಕೆ ಅನುಕೂಲವಾದ, ಸಾಮಾನ್ಯ ಜನತೆಗೂ ಸರಿಯಾಗಿ ಮನದಟ್ಟಾಗಬಹುದಾದ ಇಂಥಾ ಕವನಗಳ ಸಂಗ್ರಹವು ಕನ್ನಡ ಸಾಹಿತ್ಯಕ್ಕೆ ಹೊಸತು

ಇದರಲ್ಲಿ ಶ್ರೀಗಳಾದ ಈಶ್ವರ ಸಣಕಲ್ಲ, ಎಲ್. ಗುಂಡಪ್ಪ, ಪುಟ್ಟಪ್ಪ, ನೀರಪ್ಪ, ಮೊಯ್ಲಿ, ಅಂಬಿಕಾತನಯದತ್ತ, ಗಿರಿಮಾಜಿ, ಅಡಿಗ, ಸ್ವಾಮಿ, ಉಪಾಧ್ಯಾಯ, ಪ್ರಭು, ಮಹಿಷಿ, ಮೊದಲಾದ ಅನೇಕ ಕನ್ನಡನಾಡಿನ ಆಧುನಿಕ ಕವಿಗಳ ಕವಿತೆಗಳು ಸಂಗ್ರಹವಾಗಿವೆ. ಸಾಹಿತ್ಯದೃಷ್ಟಿಯಿಂದಲೂ, ಉದ್ದೇಶ, ಭಾವನೆಗಳ ಆದರ್ಶತೆಯಿಂದಲೂ ಇದು ಉತ್ತಮ ಕಾವ್ಯ ಸಂಗ್ರಹಗಳ ಸಾಲಿನ ಸೌಂದರ್ಯತೆಯುಳ್ಳದ್ದು. ಕನ್ನಡ ದಿಗಂತದಲ್ಲಿ ನವಚೇತನ, ನವಜೀವನದ ಸೃಷ್ಟಿಯಿಂದ, ಮೇಲೇರುತ್ತಿರುವ, ಈ ಜೀವನ ಪ್ರಭಾತದ ಬೆಳಕನ್ನು ಕನ್ನಡಿಗರು ಕಣ್ಣಾರೆ ಕಂಡು ಸುಖಿಸಲೆಂದು ನಾವು ಹಾರೈಸುವೆವು.

ಭಾರತೀ ಗ್ರಂಥಮಾಲಾ, ಕಟಪಾಡಿ.

ನಿರ್ದೇಶಕ. ಕೆ. ಸೀತಾರಾಮ ದೊರೆಬಲ್ಲಾಳ. ಸಂಪಾದಕ, ಎಂ ಎಸ್. ಹೆಗ್ಡೆ, ಶಿರ್ವ, ಪ್ರಾಥಕಳ, ವ್ಹಿ. ರಾಮಕೃಷ್ಣ ಪುರಾಣಿಕ, ಬಿಡಿಸಂಚಿಕೆ 0—4—0, ವಾರ್ಷಿಕ ಚಂದ 1—8—0.

ಹಳ್ಳಿಗರ ಅಂಧಶ್ರದ್ಧೆ, ಅಜ್ಞಾನವನ್ನು ದೂರಗೊಳಿಸಿ, ನಿತ್ಯ ಜೀವನ ಪಥದಲ್ಲಿ ಬೆಳಕನ್ನು ಕಂಡು ಮುಂಬರಿಯುವಂತೆ ಮಾಡುವುದೇ ಈ ಗ್ರಂಥಮಾಲೆಯ ಉದ್ದೇಶವಾಗಿರುವುದೆಂದು ತಿಳಿದು ಬರುತ್ತದೆ. ಇಂಥಾ ಉಚ್ಚ ಸೇವಾಪೇಕ್ಷೆಯಿಂದ ಮುಂದಾದ ಈ ಗ್ರಂಥಮಾಲೆಯ ಉದ್ದೇಶವು ಶ್ಲಾಘನೀಯವಾದುದು. ಪ್ರತಿ ಎರಡು ತಿಂಗಳಿಗೊಂದಾವರ್ತಿ ಈ ಗ್ರಂಥಮಾಲೆಯ ಮಣಿಗಳು ಪ್ರಕಾಶಿಸುವುವು. ಮೊದಲನೆಯ ಮಣಿಗಿಂತ ಎರಡನೆಯ ಮಣಿಯು ಸಾಕಷ್ಟು ಶುಭ್ರವಾಗಿಯೂ, ಗಾತ್ರವಾಗಿಯೂ ಇದೆ. ಮುಂದಣ ಮಣಿಗಳು ಇನ್ನಷ್ಟು ಉತ್ತಮವಾಗಬಹುದೆಂದು ನಿರೀಕ್ಷಿಸಲಾಗಿದೆ. ಹಳ್ಳಿ, ಪೇಟೆ, ಪಟ್ಟಣಗಳ ವಿಷಯ ವಿಚಾರದಲ್ಲಿ ನುರಿತ ಬರಹಗಾರರ ಲೇಖನಗಳಿವೆ. ಹಳ್ಳಿಗರ ಅಭ್ಯುದಯ ಧ್ಯೇಯದಿಂದ ನೆಲೆಗೊಂಡ ನಿಂಜೂರು ವಿವೇಕಾನಂದ ಸೇವಾಸಂಘ, ಶಿರ್ವ ಹಳ್ಳಿಯ ಕೂಟ, ಇವೇ ಮೊದಲಾದ ಸಂಸ್ಥೆಗಳ ಬರಹಗಾರರು ಈ ಕಾರ್ಯಭಾಗದಲ್ಲಿ ಭಾಗವಹಿಸುವರೆಂಬುದು ಸಂತೋಷಕರ. ಅಭ್ಯುದಯ ಪಥದಲ್ಲಿ ಮುನ್ನಡೆಯಲೆಂದು ಹಾರೈಕೆ.

೧೯೩೯ ಮತ್ತು ೧೯೪೦ನೇ ಇಸವಿಯ ಪ್ರಪಂಚದ ಭವಿಷ್ಯ

ಲೇಖಕರು:—ಬಿ. ವಿ. ರಾಮನ್, (Editor, Astrological Magazine) ಪ್ರಕಾಶಕರು: ಶ್ರೀ ಬಿ ಶಿವಪ್ಪ. (S.G.N Press Bangalore City) ಬೆಲೆ ಅಂಚೆವೆಚ್ಚ ಸೇರಿ 0-5-0.

ಈ ಪುಸ್ತಕವನ್ನು ಶ್ರೀ. ಬಿ ವಿ. ರಾಮನ್, ಇವರು ತಮ್ಮ 'ದಿ ವರ್ಲ್ಡ್ ಪ್ರಾಸ್ಪೆಕ್ಟ್ಸ್' ಎಂಬ ಆಂಗ್ಲ ಭಾಷೆಯ ಪುಸ್ತಕದಿಂದ ಎತ್ತಿ ಕನ್ನಡಕ್ಕೆ ಭಾಷಾಂತರಿಸಿರುವರು. ಇದರಲ್ಲಿ ಮುಂದಿನ ಯುದ್ಧ, ಪ್ರಪಂಚದ ರಾಷ್ಟ್ರಗಳ ಭವಿಷ್ಯ, ವ್ಯಾಪಾರ ವಿಷಯ ಮಳೆ, ಬೆಳೆಗಳು, ಹವಾ, ಪ್ರಪಂಚದ ಭವಿಷ್ಯ, ಹಾಗೂ ಇಂದಿನ ಜಗತ್ತಿನ ಪ್ರಖ್ಯಾತ ಪುರುಷರಾದ ಗಾಂಧಿ, ಮುಸ್ಸೋಲಿನಿ, ಹಿಟ್ಲರ್, ರೂಸವೆಲ್ಟ್, ಸ್ಟಾಲಿನ್, ಜವಾನ ಚಕ್ರವರ್ತಿ ಮೊಂತಾದವರ ಜಾತಕ ವಿಮರ್ಶೆಗಳೇ ಮೊದಲಾದುವು ಅಡಕವಾಗಿರುವುವು. ಅಗಾಧವಾದ ವಿಷಯವನ್ನು ಕೆಲಗೆರೆಗಳಲ್ಲಿ ಜ್ಯೋತಿಷ್ಯ ಆಧಾರದಿಂದ ವಿಮರ್ಶಿಸಿ ಕನ್ನಡಿಗರಲ್ಲಿ ಪ್ರಕಾಶಕ್ಕೆ ತಂದ, ಪ್ರಕಾಶಕರ ಮತ್ತು ಲೇಖಕರ ಕಾರ್ಯವು ಸ್ತುತ್ಯಾರ್ಹವಾದುದು. ಅಮೂಲ್ಯ ವಿಷಯಗಳ ದೃಷ್ಟಿಯಿಂದ ಪುಸ್ತಕದ ಬೆಲೆಯು ಬಹಳ ಕಡಿಮೆಯೆಂದು ಹೇಳಬಹುದು.

A Handbook of Udipi.

ಇದು ಆಂಗ್ಲೇಯ ಭಾಷೆಯಲ್ಲಿ ಶ್ರೀ. ಬಿ. ರಾಮಕೃಷ್ಣಾಚಾರ್ ಬಿ. ಎ. ವಿದ್ವಾನ್ (ಹಿಂದಿ) ಇವರಿಂದ ಬರೆಯಲ್ಪಟ್ಟ ಉಡುಪಿಯ ಕೈಪಿಡಿ. ಬೆಲೆ 0-4-0 ಪ್ರಕಾಶಕರು ಶ್ರೀ. ಪಾವಂಜೆ ಗುರುರಾವ್, ಉಡುಪಿ. ಲೇಖಕರು ಇಂಗ್ಲೀಷು, ಕನ್ನಡ, ಸಂಸ್ಕೃತ ಹಾಗೂ ಹಿಂದೀ ಸಾಹಿತ್ಯದಲ್ಲಿ ಸಾಕಷ್ಟು ಅನುಭವವುಳ್ಳವರು. ಪ್ರಸಿದ್ಧ ಯಾತ್ರಾಸ್ಥಳವಾದ ಉಡುಪಿಯ ವರು. ಉಡುಪಿಯ ಇತಿಹಾಸ, ಮಠಗಳು, ದೇವಸ್ಥಾನಗಳು, ಪ್ರಸಿದ್ಧ ಕ್ಷೇತ್ರಗಳು, ಪೂಜೆ ವಿನಿಯೋಗಾದಿಗಳ ವಿಚಾರಗಳು ಮತ್ತು ಉಡುಪಿಗೆ ಸಂಬಂಧಪಟ್ಟ ಪ್ರಾಚೀನ ಅರ್ವಾಚೀನ ವಿಷಯ, ವಿವರಗಳು ಈ ಪುಸ್ತಕದಲ್ಲಿ ಸರಳ ಶೈಲಿಯಲ್ಲಿ, ಸುಲಭ ಭಾಷೆಯಿಂದ ಸರಸವಾಗಿ ವರ್ಣಿತವಾಗಿದೆ. ಲೇಖಕರ ಸಾಹಸವನ್ನು ಅಭಿನಂದಿಸಬೇಕಾಗಿದೆ.

ಎನ್. ಎಸ್. ಎಸ್.

The Commonwealth Assu. Co., Ltd.

ದಿ ಕೋಮನ್‌ವೆಲ್ತ್

ಎಸ್ಯೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.

ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:—

ಎಸ್. ಪಿ ಆರ್. ನಾಯಕ್	ಗವಾನಕರ್ ಎಂಡ್ ಸನ್ಸ್,
ಎಂಡ್ ಸನ್ಸ್,	ಚೀಫ ಏಜಂಟ್ಸ್,
ಸ್ಪೆಶಲ್ ಏಜಂಟ್.	ಆನಂದರಾವ್ ಸರ್ಕಲ್
ಕಾರ್ ಸ್ಟ್ರೀಟ್, ಮಂಗಳೂರು.	ಬೆಂಗಳೂರು

ಬೊಂಬಾಯಿ ಸಮಾಚಾರ

(ಸ್ವಂತ ಬಾತ್ಮೀದಾರರಿಂದ)

18-11-'38

ಹೋಟೆಲು ಕೆಲಸಗಾರರ ಸಂಘ (ಕೆಂಪು ಧ್ವಜ)—ಮುಂಬಯಿ ನಗರದಲ್ಲಿಯ ಹೋಟೆಲು ಕೆಲಸಗಾರರ ಅಭಿವೃದ್ಧಿಯನ್ನು ಚಿಂತಿಸುವುದಕ್ಕಾಗಿ ಒಂದು ಯೂನಿಯನ್ನನ್ನು ಮಾಡಬೇಕೆಂದು ಇಲ್ಲಿಯ ಕೆಲಸಗಾರರೂ ಮತ್ತು ಲೇಬರ್ ಮುಂದಾಳುಗಳೂ ಕಳೆದ ರವಿವಾರ ಹೀರಾ ಬಾಗಿನಲ್ಲಿ ನೆರೆದು ಆಲ್ ಬಾವಟ ಹೋಟೇಲ ಕೆಲಸಗಾರರ ಸಂಘವನ್ನು ಸ್ಥಾಪಿಸಿದರು. ಶ್ರೀ. ಗೌಡರವರು ಅಧ್ಯಕ್ಷರಾಗಿಯೂ, ವಿ. ಜಿ. ನಿಂಬಕರಾರವರು ಕಾರ್ಯದರ್ಶಿಯವರಾಗಿಯೂ ಮತ್ತು ಉಪಾಧ್ಯಾಯರವರು ಉಪಕಾರ್ಯದರ್ಶಿಯವರಾಗಿಯೂ ನೇಮಿಸಲ್ಪಟ್ಟರು. ಕಾಮಗಾರರಿಂದಲೇ ಕೂಡಿದ ಒಂದು ಮೇನೇಜಿಂಗ್ ಕಮಿಟಿಯೂ ನೇಮಿಸಲ್ಪಟ್ಟಿತು.

ದಿ ಯಂಗ್ ಮೊಗವೀರ ಸ್ಪೋರ್ಟ್ಸ್ ಕ್ಲಬ್—ಈ ಮೇಲಿನ ಕ್ಲಬ್ಬಿನ ಅಷ್ಟಮ ವಾರ್ಷಿಕೋತ್ಸವವು 13ನೇ ತಾರೀಕಿಗೆ, ಮೊಗವೀರ ಸೊಸೈಟಿ ಸ್ಕೂಲಲ್ಲಿ ವಿಜೃಂಭಣೆಯಿಂದ ಜರಗಿತು. ಮುಂಬಯಿಯಲ್ಲಿಯ ಪ್ರವೀಣ ಸುಮ್ಯುನಿಸಿಪಲ್ ಕೆಲಸಗಾರರಲ್ಲೊಬ್ಬರಾದ ಶ್ರೀ। ಎನ್. ಎಲ್. ಉಪಾಧ್ಯಾಯರವರ ಅಧ್ಯಕ್ಷರಾಗಿದ್ದರು. ಸಭಿಕರಲ್ಲಿ ಶ್ರೀ। ಬೆಂಜರ್ಸ್, ವೆಂಕಟರಮಣ, ಉಚ್ಚಿಲ್, ಕಾಂಚನ್, ಉಪಾಧ್ಯಾಯ, ಮೇವಜೀ ಮೊದಲಾದವರೆಲ್ಲಾ ಭಾಷಣ ಮಾಡಿದ ನಂತರ, ಅಧ್ಯಕ್ಷರು ತಮ್ಮ ಭಾಷಣದಲ್ಲಿ ಭಾರತದ ಜೀವನವನ್ನು ಆಟಕ್ಕೆ ಹೋಲಿಸಿ, ಇವರಡೂ ಯಾವ ರೀತಿಯಲ್ಲಿ ಸಂಬಂಧಿಸಿದೆಂಬುದನ್ನು ವಿವರಿಸಿ, ಸಾಮ್ರಾಜ್ಯಶಾಹೀ ದಬ್ಬಾಳಿಕೆದ ಜನಜೀವನವನ್ನು ವಿವರಿಸಿ, ಅದರಂತೆಯೇ ಭಾರತವೂ ಕೂಡ ಸುಖ ಸಂಪತ್ತಿನಿಂದ, ಮೆರೆಯುವಂತೆ ಮಾಡಬೇಕಾದರೆ ಜಾತಿಮತ ಭೇದಗಳನ್ನು ತೊರೆಯಬೇಕೆಂದು ಹೇಳಿ, ಆಟಗಳಲ್ಲಿಯೂ ಕೂಡ ನಾವು ಪ್ರಖ್ಯಾತಿಗಳಾಗಬೇಕೆಂದು ಹೇಳಿದರು. ಶ್ರೀ. ಕುಮಾರರವರು ವಂದನಾರ್ಪಣೆಗಳನ್ನರ್ಪಿಸಿದ ತರುವಾಯ ಲಘು ಫಲಾಹಾರದೊಡನೆ ಸಭಾಂತ್ಯವಾಯಿತು.

ಮುಂಬಯಿಯಲ್ಲಿ ಶ್ರೀ. ನೆಹರೂರವರು ಸ್ಪೈನ್, ರಷ್ಯಾ ಮೊದಲಾದ ಪಶ್ಚಿಮ ದೇಶಗಳಿಗೆ ಹೋಗಿದ್ದ ಪಂಡಿತ ಜವಹರಲಾಲ್ ನೆಹರೂರವರು ನಿನ್ನೆ ಮಧ್ಯಾಹ್ನ 2ಗಂಟೆಗೆ ಮುಂಬಯಿಯನ್ನು ತಲ್ಪಿದರು. ಸಾವಿರಾರು ಜನರು ಇವರ ಸ್ವಾಗತಕ್ಕಾಗಿ ಬಂದು ನೆರೆದಿದ್ದರು. ಮೊದಲಾಗಿಯೇ ನಿರ್ಮಿಸಲ್ಪಟ್ಟಿದ್ದ ಖಾದಿ ವಸ್ತ್ರದಿಂದ ಶೋಭಿಸುತ್ತಿರುವ ಮೇಲ್ಮನೆಗೆ ಇವರು ಬಂದೊಡನೆ, ಹೂಮಾಲೆಗಳ ಮಳೆಯನ್ನೇ ಇವರ ಮೇಲೆ ಸುರಿಸಿದರು. ಅನಂತರ ಜವಹರಲಾಲರು ಸ್ಪೈನಿನ ಯುದ್ಧರಂಗದಲ್ಲಿ ತಾನು ಏನೇನು ನೋಡಿದೆನೆಂಬುದನ್ನೂ, ಸ್ಪೈನಿನ ಒಲಿತ ಜನ ಸಹಾಯಾರ್ಥವಾಗಿ ಭಾರತದಿಂದ ಕೂಡಿದಷ್ಟು ಸಹಾಯವನ್ನು ಕಳುಹಿಸಲು ಪ್ರಯತ್ನ ಮಾಡಬೇಕೆಂದು ಹೇಳಿ ಪಶ್ಚಿಮ ದೇಶದ ತನ್ನ ಅನುಭವವನ್ನೆಲ್ಲಾ ಸಂಕ್ಷೇಪವಾಗಿ ವಿವರಿಸಿ, ತನಗಿತ್ತ ಈ ಪ್ರಚಂಡ ಸ್ವಾಗತಕ್ಕಾಗಿ ಮುಂಬಯಿ ನಗರವಾಸಿಗಳಿಗೆ ತಮ್ಮ ಹೃದಯಪೂರ್ವಕ ವಂದನೆಯನ್ನರ್ಪಿಸಿದರು.

ಕೋಂಗ್ರೆಸ್ ವರ್ಕಿಂಗ್ ಕಮಿಟಿಯು ದಿಸಂಬ್ರ 5ನೇ ತಾರೀಕಿಗೆ ವಾರ್ಧಾದಲ್ಲಿ ಕೂಡಲಿದೆ. ಅಲ್ಲಿ ಸಂಸ್ಥಾನಗಳಲ್ಲಿಯ ಜನರ ಸ್ವಾತಂತ್ರ್ಯತೆಯ ಜವಾಬ್ದಾರಿ, ಇನ್‌ಕಮ್ ಟೇಕ್ಸ್ ಬಿಲ್ಲು ಮೊದಲಾದವುಗಳನ್ನು ಚರ್ಚಿಸಲಿರುವರು.

ಮುಂಬಯಿ ಮಂತ್ರಿಮಂಡಲ—ಈಗ ಪೂನದಲ್ಲಿರುವ ಮುಂಬಯಿ ಸರಕಾರವು (ಮಂತ್ರಿ ಮಂಡಲವು) ಸಾಧಾರಣ ಈ ತಿಂಗಳ 19ಕ್ಕೆ ಮುಂಬಯಿಗೆ ಹಿಂತಿರುಗಿ, ಇಲ್ಲಿ 21ಕ್ಕೆ ತಿರಿಗೊಮ್ಮೆ ಸೇರಲಿದೆ. ಶ್ರೀ. ಬಿ. ಜಿ. ಖೇರರವರು ಕರ್ನಾಟಕ ಸಂಚಾರಕ್ಕೂ, ಶ್ರೀ. ನೋರಿಯವರು ಅಹಮ್ಮದಾಬಾದಿನಲ್ಲಿ ಜರಗಲಿರುವ ಹಳ್ಳಿಯರ ಸಮ್ಮೇಳನಕ್ಕೂ, ಅಲ್ಲಿಂದ ಹಲವು ಸಂಸ್ಥಾನಗಳನ್ನು ಸಂದರ್ಶಿಸಲಿಕ್ಕೂ ಹೋಗಲಿರುವರು.

ಮುಂಬಯಿ ಸರಕಾರಕ್ಕೆ ಎರಡನೆಯ ನರಬಲಿ—7ನೆಯ ತಾರೀಕಿನ ಮುಷ್ಕರದಿನದ ದಿವಸ ಪೋಲೀಸರ ಗೋಳಿಬಾರಿನಿಂದಾಗಿ ಗಾಯಗೊಂಡು, ಆಸ್ಪತ್ರೆಯಲ್ಲಿದ್ದ ಭಾಗೋಜಿ ವಾಗ್ಮಾರೆ ಎಂಬ ಕಾಮಗಾರನು ಬುಧವಾರ ದಿವಸ ಸ್ವರ್ಗವನ್ನೇರಿದನು. 3,000 ಕಾಮಗಾರರು ನೆರೆದು, ಮೆರವಣಿಗೆ ಮಾಡಿಕೊಂಡು, ಈ ಮೃತದೇಹವನ್ನು ಪುಷ್ಪಹಾರಗಳಿಂದ ಅಲಂಕರಿಸಿ, ಮುಖ್ಯ ಮಿಲ್ಲು ಸ್ಥಳಗಳಲ್ಲಿ ಕೊಂಡುಹೋಗಿ, ಕಾಮಗಾರ ಮೈದಾನಿನಲ್ಲಿ ಒಂದು ಸಭೆ ನೆರೆದು, ಶ್ರೀ. ಡಾಂಗೆ, ನಿಂಬಕರ್ ಮೊದಲಾದವರ ಭಾಷಣಗಳಾದ ನಂತರ, ವರ್ಲಿಯಲ್ಲಿ ಅಂತಿಮ ಸಂಸ್ಕಾರವನ್ನು ವಿಜೃಂಭಣೆಯಿಂದ ತೀರಿಸಿದರು. ಜಿ. ಐ. ಪಿ. ಮತ್ತು ಬಿ. ಬಿ & ಸಿ ಐ ಮೊದಲಾದ 22 ಯೂನಿಯನುಗಳು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಶುದ್ಧಿ — ಇಲ್ಲಿಯ ಪ್ರೋರ್ಟ್ ಆರ್ಯ ಸಮಾಜ ಮಂದಿರದಲ್ಲಿ ತಾ 5-11-38ಕ್ಕೆ ಎಸ್ತಲಾಡಿ ಸೋಝು ಎಂಬ ರೋಮನ್ ಕೆಥೋಲಿಕ್ ಸ್ತ್ರೀಗೆ ಶುದ್ಧಿಯ ಮೂಲಕ ಹಿಂದೂ ಅಂದರೆ, ವೈದಿಕ ಧರ್ಮದ ದೀಕ್ಷೆಯನ್ನು ಕೊಡಲಾಯಿತು.

"ಸುಳ್ಳೆಂದು ರುಜುಪಡಿಸುವವರಿಗೆ ರೂ 50 ಇನಾಂ"

ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು

1 ವಶೀಕರಣ ಯಂತ್ರ: ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರ ಧರಿಸಿದ ಮಾತ್ರದಿಂದಲೇ ಅವಳು ನಿಮ್ಮೊಡನೆ ಮಾತನಾಡಬಯಸುವಳು ಮಾತ್ರವಲ್ಲದೆ ನಿಮ್ಮ ವಶಳಾಗುವಳು. ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ ತಾಯಿತಕ್ಕೆ 7-8-0.

2 ಲಕ್ಷ್ಮೀಯಂತ್ರ: ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ವಹಿವಾಟುಗಳು ಹೆಚ್ಚಿ ಲಾಭದಾಯಕ ಸುಸಂಧಿಬರುವುದು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ್ದಕ್ಕೆ ರೂ. 7-8-0 ಇಂದೇ ಮೇಲಣ ವಿಳಾಸಕ್ಕೆ ಬರೆಯಿರಿ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

SRI SADANANDA RAM
No. 57, P. O. Warisaligung,
(Gaya)

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಅಪೇಕ್ಷಿತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗಳಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ನವ ಕಾಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲ ಸೀಸೆ 1ಕ್ಕೆ ರೂ 5—0—0.

'ಕಾಮಶಾಸ್ತ್ರ' ದರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೩೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ದೇಶಭಕ್ತ (ನಾಟಕ)	೦—೧೦—೦
ವ್ಯಭಿಚಾರಿಣಿ ಯಾರು	೦—೬—೦
ನಂದಾದೀಪ(ಕಥಾಸಂಗ್ರಹ)	೦—೬—೦

ಮೈಸೂರು ಸಮಾಚಾರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಪ್ರಿನ್ಸ್ ಜಯ ಚಾಮರಾಜ ಒಡೆಯರ್—ಇವರು ತಾ. ೧೬ನೇ ಬೆಳಿಗ್ಗೆ ಮಾರ್ಕೆಟ್ ಮತ್ತು ಬಸ್ ಸ್ಟ್ಯಾಂಡಿಗೂ ತಾ 17ರಲ್ಲಿ ಪ್ರಿಂಜ್ಯಾ ಪೋಲ್ ಮತ್ತು ನರ್ಸರಿ ಸ್ಕೂಲ್‌ಗೂ ಭೇಟಿಯಿತ್ತು, ಅಲ್ಲಿ ನಡೆಯುವ ಕಾರ್ಯಗಳನ್ನೂ ತಿಳಿದುಕೊಂಡು ಹೋದರು.

ವಾರ್ಷಿಕೋತ್ಸವ—ಮುಂದಿನ ಡಿಸೆಂಬರ್ ತಿಂಗಳಲ್ಲಿ ನಡೆಯಲಿರುವ ಮಹಾರಾಜಾಸ್ ಪ್ರಿನ್ಸ್ ವರ ಹೈಸ್ಕೂಲ್ ದಿನಾಚರಣೆಗೆ ದಿವಾನ್ ಸಾಹೇಬರಾದ ಸರ್. ಮಿರ್ಜಾ, ಎಂ ಇಸ್ಮಾಯಿಲ್ ರವರು ಅಧ್ಯಕ್ಷತೆವಹಿಸುವರೆಂದು ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ.

ದನಗಳ ಸಂತೆ—ಡಿಸೆಂಬರ್ ೩ನೇ ತಾರೀಕಿನಿಂದ ಸಿಂಡಿಯಲ್ಲಿ ದನಗಳ ಸಂತೆ ನಡೆಯಲಿರುವದು.

ಇಂಟರ್ ವಾರ್ಸಿಟಿ ಕ್ರಿಕೆಟ್—ಅಂತರ ವಾರ್ಸಿಟಿ ಕ್ರಿಕೆಟ್ ಟೂರ್ನಿಯಲ್ಲಿ ಭಾಗವಹಿಸಲು, ಕೆಳಗೆ ಕಂಡ ಆಟಗಾರರನ್ನು ಮೈಸೂರು ಸಂಸ್ಥಾನದಿಂದ ಆರಿಸಲಾಗಿದೆ. ವೈ. ಯಸ್. ರಾಮಸ್ವಾಮಿ ಬಸವರಾಜ ಅರಸ್ ಎ. ಯಾಲ್. ಲಿಂಗಯ್ಯ, ಕೆ. ಮುನಿಸ್ವಾಮಿ, ಎಂ ರಾವ ರಿಂವ್, ಎಂ. ಬಿ. ರಾಮರಾವ್, ಸಿ. ರಾಮಸ್ವಾಮಿ, ಕೆ. ಯಸ್. ರಂಗರಾಜ್, ಸಿ. ಜೆ. ರಾಂಡೇಲ್, ರಾಜಶೇಖರ್ ಮತ್ತು ಶಿವಪ್ಪಯ್ಯ.

ಹೊಸ ಪೋಲಿಸ್ ಕಟ್ಟಡ—ಮೈಸೂರು ದೊಡ್ಡ ಪೇಟೆಯಲ್ಲಿ ಹೊಸದಾಗಿ ಕಟ್ಟಿರುವ ಸೆಂಟ್ರಲ್ ಪೋಲಿಸ್ ಸ್ಟೇಷನ್ ಕಟ್ಟಡಗಳು ಪೋಲಿಸ್ ಐ. ಜಿ. ಆಗಿರುವ ಮಿ। ಹೆಮಿಲ್ಟನ್‌ರವರ ಹೆಸರಿಡಲಾಗಿದೆ.

ಹಿಂದುಳಿದ ಪಂಗಡ—ಮೂರು ವರ್ಷಗಳು ಕೆಲಸ ಮಾಡುವ ಮೈಸೂರು ಹಿಂದುಳಿದ ಪಂಗಡಗಳ ಶಿಕ್ಷಣ ಸಲಹೆ ಸಮಿತಿಯನ್ನು ಪುನಸ್ಸಚಿಸಲಾಗಿರುವ ಮೆಂಬರುಗಳಿವರು. 1. ವಿದ್ಯಾ ಖಾತೆ ಡೈರೆಕ್ಟರು 2. ಪುತ್ತು 3. ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಡಿ. ಡಿ. ಪಿ. ಐ ಗಳು. 4. ಬೆಂಗಳೂರು ನರಸಿಂಹ ರಾಜ ಹಾಸ್ಟೆಲ್ ಅಧ್ಯಕ್ಷರು. 5. ಮೈಸೂರಿನ ಸೆಂಟ್ರಲ್ ಆದಿ ಕರ್ನಾಟಕ ಇನ್ಸ್ಟ್ಯೂಟಿನ ಅಧ್ಯಕ್ಷರು. 6. ಟಿ. ರಾಮಚಂದ್ರ. 7. ಆರ್. ಗೋಪಾಲ ಸ್ವಾಮಿ 8. ಎನ್ ಹನುಮಂತಪ್ಪ 9. ಬಿ. ಆರ್. ಐಸಾಕ್. 10. ಶ್ರೀ ಜಾತಪ್ಪಾ ನಾಯಿಕ್ ಮತ್ತು 11. ಶ್ರೀ. ಚೆನ್ನಿಗರಾಮಯ್ಯ.

ಖಾದಿಗೆ ಪ್ರೋತ್ಸಾಹ— ಭರತಖಂಡದ ವೈಸರಾಯರು ಜನವರಿಯಲ್ಲಿ ಮೈಸೂರಿಗೆ ಬಂದು ಖೆಡ್ಡಕ್ಕೆ (KHEDDA) ವೀಕ್ಷಣೋತ್ಸವಕ್ಕೆ ಹೋಗುವರಷ್ಟೆ. ಆಗ ಅಲ್ಲಿ ಅವರ ಬಿಡಾರಗಳಿಗೆ ಉಪಯೋಗಿಸುವ ಬಟ್ಟೆಗಳು ಖಾದಿಯಿಂದ ಕೂಡಿರುವುದೆಂದೂ ಇದಕ್ಕಾಗಿ ಸರಕಾರದವರು ಸುಮಾರು ೧,೦೦೦ ರೂ.ಗಳನ್ನು ಉಪಯೋಗಿಸುವರೆಂದೂ ತಿಳಿಸಲಾಗಿದೆ.

ರಾಜ ಅತಿಥಿಗಳು —ವೈಸರಾಯರು ಬರುವ ಜನವರಿಯಲ್ಲಿ ಮೈಸೂರಿಗೆ ಬರುವ ಕಾಲದಲ್ಲೇ ಮೈಸೂರಿಗೆ ಮದ್ರಾಸಿನ ಗವರ್ನರೂ ಮತ್ತು ಬಿಕಾನೇರಿನ ಮಹಾರಾಜರೂ ರಾಜ ಅತಿಥಿಗಳಾಗಿ ಬರುವರೆಂದು ತಿಳಿದು ಬಂದಿದೆ.

ಸಿರಿಕಲ್ಚರ್ ಬೋರ್ಡು—ಎರಡು ವರ್ಷಗಳ ಕಾಲ ಕೆಲಸ ಮಾಡುವ ಸಿರಿಕಲ್ಚರ್ ಬೋರ್ಡನ್ನು ಪುನರ್ರಚಿಸಲಾಗಿರುವ ಸದಸ್ಯರುಗಳಿವರು 1 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಡೈರೆಕ್ಟರು (ಅಧ್ಯಕ್ಷರು). 2. ಡೆವಲಪ್‌ಮೆಂಟ್ ಇಲಾಖೆ ಸೆಕ್ರೆಟರಿಯವರು 3. ಸಿರಿಕಲ್ಚರ್ ಸುಪರಿಂಟೆಂಡೆಂಟ್. 4. ಶ್ರೀ. N. ರಾಮರಾವ . 5. ಡಿ. ಬಿ. ಕೆ. ಆರ್. ಯಸ್. ಐಯ್ಯಂಗಾರ್. 6. ಮಿ. ಅಬ್ದುಲ್ ಖುದ್ದೂಸ್. 7. ಪಿ. ಕೆ. ಶಂಸುದ್ದೀನ್. 8. ಶ್ರೀ. ಬಿ. ಯನ್. ಶಂಕರಪ್ಪ ಶೆಟ್ಟಿ. 9. ಶ್ರೀ. ಎಂ. ಎನ್. ನಂಜುಂಡಯ್ಯ 10. ಬಿ. ನಾರಾಯಣ ರೆಡ್ಡಿ. 11. ಶ್ರೀ. ಎಂ. ಬಸವಣ್ಣ ದೇವರು, ಇವರ ಕಾರ್ಯದರ್ಶಿಗಳು ಹೆಚ್. ಯಸ್. ಗೋವಿಂದರಾಯರು.

ರಂಜಿ ಟೂರ್ನಿ—ಸಿಕಂದರಾಬಾದಿನಲ್ಲಿ, ಹೈದ್ರಾಬಾದಿಗೂ ಮತ್ತು ಮೈಸೂರಿಗೂ ನಡೆಯುವ ರಂಜಿ ಕ್ರಿಕೆಟ್ ಟೂರ್ನಿಯಲ್ಲಿ ಮೈಸೂರಿನಿಂದ 14 ಜನ ಕ್ರಿಕೆಟ್ ಆಟಗಾರರು, ಸಿಕಂದ್ರಾಬಾದಿಗೆ ಈ ತಿಂಗಳು ಕೊನೆಯಲ್ಲಿ ಪ್ರಯಾಣ ಬೆಳಸಲಿದ್ದಾರೆ. ಇವರ ಹೆಸರುಗಳನ್ನು ಮೊನ್ನೆ ಪ್ರಕಟಿಸಲಾಯಿತು. ಇವರ ನಾಯಕರು ಡಾ। ಕೆ। ಮುರಾರಿಯವರು.

ಕ್ರೈಸ್ತರ ಸಮ್ಮೇಳನ—ಮುಂದಿನ ಬೇಸಿಗೆ ಕಾಲದಲ್ಲಿ ಮೈಸೂರು ಚಾಮರಾಜ ನಗರದಲ್ಲಿ ಕ್ರೈಸ್ತರ ತೃತೀಯ ಸಮ್ಮೇಳನ ನಡೆಯುವುದೆಂದು ಈ ಸಮ್ಮೇಳನದ ವ್ಯವಸ್ಥಾಪಕರಾದ ಶ್ರೀ. ಜೆ. ಸ್ವಾಮಿದಾಸರು ತಿಳಿಸುತ್ತಾರೆ.

ಕಾಂಗ್ರೆಸಿನವರು ಬಹಿಷ್ಕರಿಸಿದರು— ಮೈಸೂರು ಮಹಾರಾಜ ಕೋಲೇಜು ದಿನಾಚರಣೆಯು ಜಿಲ್ಲಾಧಿಕಾರಿಗಳಾದ ಮಿ। ವೆಂಕ್ಟ್ರಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ನಡೆಯಿತು. ಇವರ ಕಾರ್ಯಕಲಾಪಗಳಲ್ಲಿ ಬ್ರಿಟಿಷ್ ಸಾರ್ವಭೌಮರಿಗೆ ಟೋಸ್ಟ್ ಮಾಡಲಾಗುವುದೆಂದು ಪ್ರಕಟವಾಗಿತ್ತು. ಇವರ ಮೇಲೆ ಕಾಲೇಜಿನ ಹಳೆಯ ವಿದ್ಯಾರ್ಥಿಗಳು, ಇಂದು ಕಾಂಗ್ರೆಸ್ ಮೆಂಬರಾಗಿರುವವರು, ಇದು ಸರಿಯಲ್ಲವೆಂದು ತಿಳಿಸಿ ಇದರಲ್ಲಿ ಭಾಗವಹಿಸಲಿಲ್ಲವೆಂದು ತಿಳಿದುಬಂದಿದೆ.

ನವಯುಗಕ್ಕೆ
ಏಜಂಟರಿಲ್ಲದ ಸ್ಥಳಗಳಲ್ಲಿ
ಏಜಂಟರು ಬೇಕಾಗಿದ್ದಾರೆ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇವರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತ್ರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಓಗ್ಗೆಯೂ ತಾನು ಕಳಕೊಂಡ ಮೂಲಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಎಸೋಹವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ ೧ಕ್ಕೆ ರೂ.೩-೦-೦.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು—**ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.**

THE
Canara Banking Corporation, Udipi, Ltd.
Established] (INCORPORATED IN BRITISH INDIA) [1906
MEMBER:-
RESERVE BANK OF INDIA
BANKERS' CLEARING HOUSE, MADRAS

Capital Authorised, Issued & Subscribed	Rs. 3,50,000
Paid up Capital	Rs. 3,03,205
Reserves	Rs. 3,88,842

RATES OF INTEREST ON DEPOSITS

3 months ...	2½% p. a.
6 or 9 months ...	3 % p. a.
12 or 24 months ...	3½% p. a.
Short Term ...	2 % p. a.

All kinds of Banking Transactions undertaken.

ನವಯುಗ

ಉಡುಪಿ, ಗುರುವಾರ, ತಾ. ೨೪-೧೧-೩೮

ವಿದುರಾಶ್ವತ್ಥ ವಿಚಾರಣಾ ಸಮಿತಿಯ ವರದಿ

ಮೈಸೂರು ಸಂಸ್ಥಾನದ ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ವಿದುರಾಶ್ವತ್ಥದಲ್ಲಿ ೧೯೩೮ನೆಯ ಇಸವಿ ಎಪ್ರಿಲ್ ತಾ ೨೫ರಲ್ಲು ನಡೆದ ಘಟನೆಗಳ ವಿಚಾರದಲ್ಲಿ ನೇಮಕ ಹೊಂದಿದ ಕಮಿಟಿಯು ತನ್ನ ಸಂಸ್ಕಾರವಾದ ವರದಿಯನ್ನು ಒಪ್ಪಿಸಿರುತ್ತದೆ. ಈ ವರದಿಯು ಸರಕಾರಿ ಹುಕುಮಿನಿಂದ ಕೂಡಿ, ನೂರ ಅರುವತ್ತೇಳು ಪುಟಗಳಷ್ಟಿವೆ. ಕಮಿಟಿಯವರು ವಿಚಾರಣೆಯ ಸಂದರ್ಭದಲ್ಲಿ ನೂರ ಅರುವತ್ತೇಳು ಮಂದಿಯ ಸಾಕ್ಷ್ಯವನ್ನು ವಿಚಾರಣೆ ಮಾಡಿರುವರು. ತಮ್ಮ ಪರಿಶೀಲನೆಗೆ ಸರಕಾರದವರು ವಹಿಸಿದ್ದ ಅಂಶಗಳನ್ನು ಕುರಿತೂ ತಮ್ಮ ನಿರ್ಧಾರವನ್ನು ಸೂಚಿಸಿದ್ದಾರೆ. ಈ ಸಮಿತಿಯವರ ವರದಿಯು ೮ ಅಧ್ಯಾಯಗಳನ್ನೊಳಗೊಂಡಿದೆ. ಅಲ್ಲದೆ ಡಿ'ಸೋಜರವರ ೪೦ ಪುಟಗಳಷ್ಟು ಸಪ್ಲಿಮೆಂಟರಿ ಲೇಖನವೂ ಸೇರಿರುವುದು. ಈ ಸಮಿತಿಯ ಮುಖ್ಯ ನಾಗೇಶ್ವರ ಅಯ್ಯರರು ಡಿ'ಸೋಜರವರ ಲೇಖನಕ್ಕೆ ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ವಿದುರಾಶ್ವತ್ಥದ ಒಂದು ನಕಾಶೆಯೂ ಈ ವರದಿಯೊಂದಿಗಿದೆ.

ಈ ವರದಿಯ ಮೇರೆಗೆ ಕಾಂಗ್ರೆಸ್ ಭಾಷಣಕಾರರು ಜನತೆಯ ಮನೋವೃತ್ತಿಯನ್ನು ಮಾರ್ಪಡಿಸುವ ಸಲುವಾಗಿ ಅಲ್ಲದ ಸಲ್ಲದ ಹಲವು ಆರೋಪಣೆಗಳನ್ನು ಸರಕಾರದ ಮೇಲೆಹೊರಿಸಿ, ತಿಳುವಿಲ್ಲದ ಹಳ್ಳಿಗರ ಮನಸ್ಸನ್ನು ಕೆರಳಿಸಿ ಉದ್ರೇಕಗೊಳಿಸಿದ್ದರು. ಇಂಥಾ ಪರಿಸ್ಥಿತಿಯಲ್ಲಿ ಒಟ್ಟಾದ ಜನರ ಗುಂಪು ಸುಲಭವಾಗಿ ರೇಗುವಂಥಾ ಸ್ಥಿತಿಯಲ್ಲಿದ್ದಿತು. ಅಲ್ಲದೆ, ವಿದುರಾಶ್ವತ್ಥದಲ್ಲಿ ಜನಸಂಖ್ಯೆಯು ಬಹುವಾಗಿ ಸೇರಲು, ಶಾಸನ ಭಂಗದ ಉದ್ದೇಶವಾಗಿದ್ದಿತು. ಯಾತ್ರಾರ್ಥವಾಗಿ ಬಂದವರ ಸಂಖ್ಯೆಯು ಹೆಚ್ಚಿರಲಿಲ್ಲ. ಅಧಿಕಾರಿಗಳಾದರೂ, ಬೇಕಾದ ಮುಂಜಾಗ್ರತೆಯನ್ನು ತೆಗೆದುಕೊಳ್ಳುವುದು ಅವಶ್ಯಕವಿತ್ತು. ಸಿಟ್ಟಿಗೆದ್ದ ಜನತೆಯನ್ನು ಲಾಠಿ ಚಾರ್ಜಿನಿಂದ ಚದರಿಸಲು ನೋಡುವ ಬದಲಿಗೆ, ಪೋಲೀಸರ ಅಧಿಕಾರಿಗಳು, ಕಾನೂನು ಉಲ್ಲಂಘಿಸಿದವರನ್ನು ದಸ್ತಗಿರಿ ಮಾಡಿ, ಹೊರಟು ಹೋಗಿದ್ದರೆ, ಸಭೆಯು ತಾನಾಗಿ ಚದರುತಿದ್ದಿತು. ಆದರೆ, ಒಮ್ಮೆ ಗಲಭೆಯೆದ್ದು, ಅಪಾರ ಜನಸ್ತೋಮವು ರೇಗಿ ಮೇಲೆ ಬೀಳುವ ಸಂದರ್ಭದಲ್ಲಿ, ಪೋಲೀಸರು ತಮ್ಮ ಆತ್ಮರಕ್ಷಣೆಯ ಬಗ್ಗೆ ಗುಂಡು ಹಾರಿಸುವುದು ಅಗತ್ಯವಿತ್ತು. ಪೋಲೀಸರು ಈ ಗುಂಡು ಹಾರಿಸುವ ವ್ಯವಸ್ಥೆಯಲ್ಲಿಯೂ, ಸಂದರ್ಭೋಚಿತ ರೀತಿನೀತಿಗಳನ್ನು ವಿಚಾರಬಾರದಿತ್ತು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತಮ್ಮ ಪ್ರಾಮುಖ್ಯ ಕರ್ತವ್ಯವನ್ನು ಪಾಲಿಸಿ, ಪೋಲೀಸರಿಗೆ ತಾನಿದ್ದು, ಯುಕ್ತ ಸಲಹೆಯನ್ನೀಯುವುದು ಅವಶ್ಯವಿತ್ತು. ಇವರು ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸಲಿಲ್ಲ. ಕಾಂಗ್ರೆಸು ಕೆಲಸಗಾರರ ಹಲವು ವರ್ತನೆಗಳು ದೋಷಯುಕ್ತವಾದುವುಗಳು. ಅವರು ಮಹಾತ್ಮಾ ಗಾಂಧಿಯವರ ಆದರ್ಶ ತತ್ವವನ್ನು ಪರಿಪಾಲಿಸಲಿಲ್ಲ ಇವೇ ಮೊದಲಾದ ಹಲವು ವಿಚಾರಗಳು ವರದಿಯನ್ನೊಳಗೊಂಡಿವೆ. ಕಾನೂನು ಭಂಗದಿಂದ ಗಲಭೆಯೇಳದಂತೆ, ಕಮಿಟಿಯು ಇನ್ನೊಂದು ನಿರೂಪಣೆಯೆಂದರೆ, ಕ್ರಿಮಿನಲ್ ಲಾ ಎಮೆಂಡಮೆಂಟು ಆಕ್ಟನ್ನು ಜಾರಿಗೆ ತರಬೇಕೆಂಬುದು ಮತ್ತು ಕಾನೂನು ಭಂಗಕ್ಕೆ ಪ್ರೋತ್ಸಾಹಿಸುವ ವಕೀಲರ ಮೇಲೆ ಶಿಸ್ತಿನ ಕಾರ್ಯಕ್ರಮ ಕೈಕೊಳ್ಳಬೇಕೆಂದಾಗಿದೆ.

ವಿಚಾರಣಾ ಸಮಿತಿಯ ವರದಿಯು ಇಷ್ಟು ಸುದೀರ್ಘವಾಗಿದ್ದರೂ, ಅವರಿತ್ತ ಸಲಹೆ ಸೂಚನೆಗಳು ಹೆಚ್ಚಿನ ಮಹತ್ವಿಕೆಯದಲ್ಲ. ಮೈಸೂರು ಸಂಸ್ಥಾನವು ಹಲಕಾಲದಿಂದ ಆದರ್ಶ ಆಶ್ರಿತ ರಾಜ್ಯವೆಂಬ ಕೀರ್ತಿಗೆ ಭಾಗಿಯಾದುದು. ಇಂದಿನ ಮೈಸೂರಿನ ಮಹಾರಾಜರು ಪ್ರಜೆಗಳ ಭಕ್ತಿ ವಿಶ್ವಾಸಕ್ಕೆ ಪಾತ್ರರೇ ಇರುವರು. ದಿವಾನ ಸರ್. ಮಿರ್ಜಾ ಇಸ್ಮಾಯಿಲರು ಬಹುಚತುರರು, ಕಾರ್ಯದಕ್ಷರು, ಇವರ ಆಡಳಿತವು ಸಾಕಷ್ಟು ಪ್ರಗತಿಪರವಲ್ಲಿ ಮುಂದರಿಯುತ್ತಿದೆ ಆದರೆ,ಕಾಲಚಕ್ರವು ಮಾರ್ಪಾಟಾಗುತ್ತಿದೆ. ಎಲ್ಲೆಲ್ಲಿಯೂ, ಪ್ರಜಾಜವಾಬ್ದಾರಿ ಸರಕಾರಕ್ಕೆ ಜನರು ಹಂಬಲಿಸುವರು ಎಷ್ಟೊಂದು ಒಳ್ಳೆಯ ಸರಕಾರವೇ ಇರಲಿ, ಅದು ಪ್ರಜಾಪ್ರಭುತ್ವದ ಸರಕಾರದ ಪ್ರತಿಯಾಗಿ ನಿಲ್ಲುವುದು ನ್ಯಾಯವಾಗಿಲ್ಲ. ಆದುದರಿಂದ ಮೈಸೂರು ಆಡಳಿತ ಅಧಿಕಾರಿಗಳು ಈ ವಿಷಯ ಮುಂಜಾಗ್ರತೆ ತೆಗೆದುಕೊಂಡು, ಜನತೆಯ ಪ್ರಭುತ್ವವು ರಾಜರ ಪ್ರಭುತ್ವಕ್ಕಿಂತ ಮೇಲಿನದೆಂದು ಗ್ರಹಿಸಿಕೊಳ್ಳಬೇಕು. ಸ್ವಾತಂತ್ರದ ಶುದ್ಧ ಹೆಸರಿಂದ ಹೋರಾಟ ನಡೆಸುವ ಕಾಂಗ್ರೆಸಿನ ಹೆಸರೆತ್ತಿ, ಸ್ವಾತಂತ್ರ್ಯ ಸವೆ.ರಕ್ಕೆಳಸುವ ಪ್ರಮುಖ ಮುಖಂಡರಾದರೂ, ಕಾಂಗ್ರೆಸಿನ ಜೀವಾಳವಾದ ಸತ್ಯ, ಅಹಿಂಸೆಯ ತತ್ವದ ಮೇರೆ ಮೀರಿ ವರ್ತಿಸುವುದರಿಂದ ನಿಜವಾದ ಕಾರ್ಯವು ಸಿದ್ಧಿಸದೆಂಬುದನ್ನು ಮನಗಂಡು, ಅವಶ್ಯಬಿದ್ದಾಗ, ಈ ಸತ್ಯ ಅಹಿಂಸೆಯ ತಳಹದಿಯ ಮೇಲೆ ತಮ್ಮ ಕಾರ್ಯಕ್ರಮವನ್ನು ಸುಭದ್ರವಾಗಿ ನಿಲ್ಲಿಸಿ, ಹೋರಾಟ ನಡೆಸಲು ಮರೆಯಲಾರದು. ಪೋಲೀಸರು ಜನತೆಯ ಸೇವಕರೆಂಬುದು ಅಧಿಕಾರಿಗಳು ಸದಾ ನೆನಪಿಟ್ಟುಕೊಂಡೇ, ತಮ್ಮ ಕಾರ್ಯವನ್ನು ಸಾಕಷ್ಟು ಮುಂಜಾಗ್ರತೆಯಿಂದ ಪ್ರಜಾಹಿತ ಸಾಧನೆಯ ಧ್ಯೇಯದಿಂದ, ತಮ್ಮ ಕಾರ್ಯವನ್ನು ಚತುರತೆಯಿಂದ, ನ್ಯಾಯಬದ್ಧವಾದ ರೀತಿಯಲ್ಲಿ ನಿರ್ವಹಿಸತಕ್ಕದ್ದು. ಮಿಂಚಿದ ಕಾರ್ಯಕ್ಕೆ ಚಿಂತಿಸಿ, ದ್ವೇಷಾಸೂಯೆಯನ್ನು ಆಳರಸರು ಇನ್ನು ಬೆಳಸಿಕೊಳ್ಳುವಂತಾಗಬಾರದು. ಪರಸ್ಪರ ಪ್ರೇಮ ವಿಶ್ವಾಸಗಳು ನೆಲೆಗೊಳ್ಳಲು ಯೋಗ್ಯ ಯೋಜನೆಯನ್ನು ಇಕ್ಕಡೆಯವರೂ ಯಥಾರ್ಥತೆಯಿಂದ ಕೈಕೊಳ್ಳಬೇಕು. ಪ್ರಜೆಗಳು ಅಧಿಕಾರವನ್ನು ತೋರುವುದು ಅವರ ಜನ್ಮಸಿದ್ಧವಾದ ಹಕ್ಕಾಗಿದೆ ಇದನ್ನು ಅಲ್ಲಗಳೆದು, ಎಷ್ಟೇ ಶಕ್ತಿಯ ಅಧಿಕಾರವಾದರೂ ಬಹುಕಾಲ ಬಾಳದು. ಅಂತರ್ಗತ ಹೋರಾಟವನ್ನು ಇತ್ಯರ್ಥಿಸಿ, ದೇಶದ ಮೇಲ್ಮೆಯಲ್ಲಿ ಭಾಗವಹಿಸುವುದು ಅವಶ್ಯಕ ಆದುದರಿಂದ ಮೈಸೂರು ಸಂಸ್ಥಾನವು ರಾಜಕೀಯ ಪ್ರಗತಿಯಲ್ಲಿಯೂ ಆದರ್ಶ ಸಂಸ್ಥಾನವಾಗುವಂತೆ, ಪ್ರಜಾ ಜವಾಬ್ದಾರಿ ಸರಕಾರವು ಬೇಗನೆ ಸ್ಥಾಪನೆಯಾಗಿ ಮೈಸೂರಿನ ಹೆಸರು ಜಗತ್ತಿನಲ್ಲಿ ಉಜ್ವಲವಾಗಿ ಪ್ರಜ್ವಲಿಸುವಂತಾಗಲಿ.

ಹಿಂದೀ ಚಲಚ್ಚಿತ್ರಗಳ ರಜತೋತ್ಸವ. ಬೊಂಬಾಯಿಯಲ್ಲಿ ಪ್ರಥಮ ಅಧಿವೇಶನ ಸತ್ಯಮೂರ್ತಿಯವರು ಅಧ್ಯಕ್ಷರಾಗಲು ಆಮಂತ್ರಣ.

ಚಲಚ್ಚಿತ್ರಗಳ ಕೈಗಾರಿಕೆಯ ರಜತೋತ್ಸವ ಸಮಾರಂಭವನ್ನು ಫಿಲ್ಮ್ ಕಂಪೆನಿಗಳ ಸ್ಥಾಪಕರು ಪ್ರೋತ್ಸಾಹಕರೇ ಮೊದಲಾದವರ ಸಭಾಕೂಟವೊಂದನ್ನು ದಶಂಬರ ಅಂತ್ಯದಲ್ಲಾಗಲೀ ಜನವರಿ ಆರಂಭದಲ್ಲಾಗಲೀ ಬೊಂಬಾಯಿ ನಗರದಲ್ಲಿ ಜರಗಿಸುವ ಏರ್ಪಾಡು ಮಾಡಲಾಗಿಯದೆ. ಆ ಬಗ್ಗೆ ಸ್ವಾಗತ ಕಮಿಟಿಯು ರಚನೆಯು ಆಯಿತು. ಶ್ರೀಗಳಾದ ಚಂದುಲಾಲ್‌ರವರು ಅಧ್ಯಕ್ಷರಾಗಿಯೂ ಕೆವಾಲ್ ಚಂದಮೊಹತಾರವರು ಖಜಾನ್ಜಿಯರಾಗಿಯೂ, ಕೆ. ಎಸ್. ಹಿರೇಲ್‌ಕರ್ ಮತ್ತು ಬಾಬುರಾವ್ ಪತೇಲರು ಜತೆಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟಿರುವರು. ಕೇಂದ್ರ ನ್ಯಾಯವಿಧಾಯಕ ಸಭೆಯ ಸದಸ್ಯರಾದ ಶ್ರೀಮಾನ್ ಎಸ್. ಸತ್ಯಮೂರ್ತಿ ಎಮ್. ಎಲ್. ಎ. ಇವರನ್ನು ಅಧ್ಯಕ್ಷಪೀಠವನ್ನು ಅಲಂಕರಿಸುವಂತೆ ಕೇಳಿಕೊಳ್ಳಲಾಗಿಯದೆ.

ಚಲಚ್ಚಿತ್ರ ಚಲನವಲನಗಳಲ್ಲಿ ಕೈಯಿಕ್ಕಿದ ಸರ್ವರಿಗೂ ಒಂದು ತರದ ಜವಾಬ್ದಾರಿಯಿದ್ದು ಆ ಜವಾಬ್ದಾರಿಯು ಅಖಿಲ ಭಾರತದ ಸಮದೃಷ್ಟಿಯಿಂದ ಸರ್ವತೋಮುಖವಾಗಿ ಮೆರೆಯುವಂತಾಗಬೇಕೆಂಬುದೇ ಈ ಮಹಾ ಅಧಿವೇಶನದ ಉದ್ದೇಶ.

ನೋಟಗಳು.

ಓವರಂ ಮೆಜಿಸ್ಟ್ರೇಟರ ಇಷಮುಗಳನ್ನು ತೆಗೆದುಹಾಕಬೇಕೆಂದು ಬೊಂಬಾಯಿ ಸರಕಾರಕ್ಕೆ ಗುಜರಾಥ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಶಿಫಾರಸು ಆಗಿಯದೆ.

ಮಿ| ಹಾಜಿಫಕೀರಖಾನರಾಗಲಿ ಇನ್ನಿತರ ಸದಸ್ಯರಾಗಲಿ ಕಾಂಗ್ರೆಸ್ ಪಾರ್ಟಿಯನ್ನು ಬಿಡುವ ಸಂದರ್ಭದಲ್ಲಿ ಬಾಸು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಮಿ| ಹಾಜಿ ಅಸ್ಲಾನ್‌ಖಾನರು ಮರಣಾಂತ ಉಪವಾಸವ್ರತವನ್ನು ಕೈಕೊಳ್ಳುವರಂತೆ

ಕರಾಚಿ ಸಿಟಿಯಲ್ಲಿ ನಿರುದ್ಯೋಗಿಗಳ ಖಾನೆಸುಮಾರಿಯನ್ನು ಸದ್ಯದಲ್ಲೇ ತೆಗೆಯಲಾಗುವುದಂತೆ

ಬೊಂಬಾಯಿ ಕಾಂಗ್ರೆಸ್ ಸೋಸಿಯಲಿಸ್ಟ್ ಸಂಗಡದವರು ಯುದ್ಧ ನಿಷೇಧದಿನದಲ್ಲಿ ರೂಪಾಯಿ 2686–11–0ನ್ನು ಶೇಖರಿಸಿರುವರಂತೆ.

ಬಂಗಾಳ ಪ್ರಾಂತದಲ್ಲಿ ನಾಲ್ಕು ಲಕ್ಷಕ್ಕೂ ಮಿಕ್ಕಿದಷ್ಟು ಮಂದಿ ಕಾಂಗ್ರೆಸ್ ಮೆಂಬರರಾಗಿರುವರು. ಕಳೆದ ವರುಷದ ಮೆಂಬರರ ಸಂಖ್ಯೆ 2,56,000.

ರಾಜಕೋಟೆ ಸತ್ಯಾಗ್ರಹದ ನಿಮಿತ್ತ ಗುಜರಾಥ ಕಾಂಗ್ರೆಸ್ ಸೋಶಿಯಲ್ ಪಾರ್ಟಿಯವರು ಸ್ವಯಂಸೇವಕ ದಳದ ನಿರ್ಮಾಣದಲ್ಲಿ ನಿರತರಾಗಿರುವರು.

ಸಾಲಸಿವಾರಣಾ ಮಸೂದೆಯುದ್ದೆಸೆಯಿಂದಾಗಿ ಅನಂತಪುರದ ಪಾರ್ವತಿಬಾಯಿ ಎಂಬಾಕೆಗೆ ರೂ. 21,000ಕ್ಕೆ ಮೇಲ್ಪಟ್ಟ ರಿಯಾಯತಿಯು ದೊರೆತಿದೆ. ಕಾರಣ ಆಕೆಯು ಕೃಷಿಕ ವರ್ಗಕ್ಕೆ ಸೇರಿದವಳೆಂಬುದು.

ಪುಟ ೪ರಿಂದ

ಅದರಿಂದ ನಾವು ಹೆಚ್ಚೇನೂ ನಿರೀಕ್ಷಿಸುವಂತಿಲ್ಲ. ಕನಸರ್‌ವೇಟಿವ್ ಪಂಗಡದಲ್ಲಿ ಕೂಡಾ ಬಿರುಕುಎಂದರೆ. ಚರ್ಚಿಲರು ಮತ್ತು ಈಡನ್—ಇವರಿಗೆ ದರ್ಬಾರದ ಹೊರಗೆ ಜನಮತದ ಬೆಂಬಲ ಹೆಚ್ಚಾಗಿದೆ ಚರ್ಚಿಲರ ರಾಜಕೀಯ ಮನೋವೃತ್ತಿ ಹೇಗಿದ್ದರೂ ಅವರೊಬ್ಬ ಉತ್ಕೃಷ್ಟ ರಾಜಕೀಯ ಪಟುವೆಂಬದರಲ್ಲಿ ಸಂದೇಹವಿಲ್ಲ ಇಂದಿನ ಸರಕಾರವು ತಾನು ಉರುಳಿನೊಳಗೆ ಸಿಕ್ಕಿಕೊಂಡು, ಏನೋ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು ಹವಣಿಸುತ್ತದೆ. ಆದರೆ ಅದೇನೂ ಪಟರ್ಸು ಕಳಕೊಂಡ, ಮಂದಗಾಮಿತ್ವದ ಸರಕಾರಕಾರವಾಗಿದೆ.

ಮುಂಬಾಯಿಯಿಂದ ನೆಹರುಗಳು ವಾರ್ಧಕ್ಕೆ ತೆರಳಿ ಗಾಂಧಿಯವರೊಡನೆಮಾತು ಕಥೆನಡೆಸಿ ಅನಂತರ ಅಲ್ಲಿಂದ ಅಲ್ಲಹಾಬಾದಿಗೆ ತೆರಳುವರು.

ಏನೆಂದಿರಿ!

ಕನ್ನಡದಲ್ಲಿ ಒಳ್ಳೇ ಪುಸ್ತಕಗಳಿಲ್ಲವೆಂದೆ! ಅದೇಕೆ?

ಅತ್ಯುತ್ತಮ ಐತಿಹಾಸಿಕ ಕಾದಂಬರಿಗಳೂ, ಚರಿತ್ರೆಗಳೂ, ರಸವತ್ತಾದ ಸಾಮಾಜಿಕ-ಪೌರಾಣಿಕ ಕಥೆ-ಕಾದಂಬರಿಗಳೂ, ಶ್ರೇಷ್ಠತರಗತಿಯ ಹಾಗೂ ಹೆಸರುವಾಸಿಗಳಾದ ಪತ್ತೆದಾರೀ ಕಥೆಗಳೂ ಶ್ರೀ ಶೇಷಾಚಲ ಗ್ರಂಥಮಾಲೆಯಲ್ಲಿ ಕಳೆದ ೨೦ ವರ್ಷಗಳಿಂದಲೂ ಕ್ರಮಶಃ ಪ್ರಕಟವಾಗುತ್ತಲಿದ್ದು ಅಂಥ ೧೦೦-೧೫೦ ಮನೋಹರ ಪುಸ್ತಕಗಳು ಈಗಾಗಲೇ ಹೊರಟು ಕನ್ನಡ ವಾಚಕರನ್ನು ತೃಪ್ತಿಗೊಳಿಸುತ್ತವೆ ಹಾಗೂ ಪ್ರತಿವರ್ಷವೂ ಈ ಗ್ರಂಥಮಾಲೆಯ ದ್ವಾರಾ ೬-೮ರ ಬೆಲೆಯ ಹೊಸ ಪುಸ್ತಕಗಳು ತಪ್ಪದೆ ಪ್ರಕಟವಾಗುತ್ತಲಿವೆ. ಗ್ರಂಥಮಾಲೆಯ ಖಾಯಂ ಗ್ರಾಹಕರಿಗೆ **ಬೆಲೆ ಕಡಿಮೆ**

ಅಪೇಕ್ಷಿತರು: **ಶ್ರೀ ಶೇಷಾಚಲ ಪ್ರೆಸ್,**

ಪೋ. ಆನಂದವನ (ಹಾವೇರಿ) ಜಿ. ಧಾರವಾಡ ಈ ಅಡ್ರೆಸ್ಸಿಗೆ ಬರೆಯಬೇಕು. ಕ್ಯಾಟಲಾಗ್ ಫ್ರೀ ಇದೆ.

ಬಾಬಾ ಸಾಗರಿಕರಿಂದ ಬರೆದ ಅತಿ

"ಕಾಳಪಾಣಿ ಪುಸ್ತಕವು ಕರಿನೀರು"

ಎಂದು ಕನ್ನಡದಲ್ಲಿ ನಮ್ಮಲ್ಲಿ ಬೇಗನೆ ಪ್ರಕಟವಾಗುವದು.

ಅಹಮ್ಮದಾಬಾದಿನಲ್ಲಿ ಮದ್ಯಪಾನ ನಿಷೇಧ — ಜರ್ಮನಿಯಲ್ಲಿ ಮ

ಶರ್ತಯುಕ್ತ ಬಿಡುಗಡೆ ಬೇಕಾಗಿಲ್ಲ

ಡಿಲ್ಲಿ ಡಿಸ್ಟ್ರಿಕ್ಟ್ ಜೈಲಿನಲ್ಲಿರುವ ಜ್ವಾಲಾ ಶರ್ಮ, ಭವಾನಿ ಶಹಶರ್ಮ ಮತ್ತು ವೈಶಂಪಾಯನ್, ಇವರು ಮೂರು ಮಂದಿ ಸ್ಟೇಟ್ ಕೈದಿಗಳು ಶರ್ತಯುಕ್ತ ಬಿಡುಗಡೆಯನ್ನು ನಿರಾಕರಿಸಿದರು.

"ಯಾವ ಸ್ವಾಭಿಮಾನವುಳ್ಳ ರಾಜಕೀಯ ಕೈದಿಯಾದರೂ ಇಂಥಾ ಶರ್ತಯುಕ್ತ ಬಿಡುಗಡೆಗೆ ಆಶಿಸಲಾರನು. ನಾವಂತೂ ಯಾವ ವಿಚಾರಣೆಯೂ ನಡೆಯದೆ ಜೈಲಿನಲ್ಲೇ ಬಹುಕಾಲ ಇರಿಸಲ್ಪಟ್ಟವರು. ಇಡೀ ಬ್ರಿಟಿಷ್ ಇಂಡಿಯಾದಲ್ಲಿ ನಾವು ಮೂರು ಮಂದಿ ಈಗ ಜೈಲಿನಲ್ಲಿ ಕೊಳೆಯುವ ಕೈದಿಗಳು. ನಿಮಗೆ ನಮ್ಮನ್ನು ಬಿಡುಗಡೆ ಮಾಡಬೇಕೆಂಬ ಬಯಕೆಯಿದ್ದರೆ, ಶರ್ತರಹಿತವಾಗಿ ಸ್ವಲ್ಪ ಸಮಯದಲ್ಲೇ ಬಿಡುಗಡೆ ಮಾಡಿರಿ." ಎಂದು ಹೇಳಿರುವರು.

ಕಾಂಗ್ರೆಸು ಬಂಗಾಳದಲ್ಲಿ ಮಂತ್ರಿಮಂಡಲವನ್ನು ರಚಿಸಿದರೆ ಪ್ರಧಾನರು ಮುಸಲ್ಮಾನರಾಗುವರು

ರಾಜಶಾಹಿಯಲ್ಲಿ ಸುಭಾಷಚಂದ್ರ ಭೋಸರು ಭಾಷಣವೀಯುತ್ತಾ, ಕಾಂಗ್ರೆಸು ಮಂತ್ರಿಮಂಡಲ ರಚನೆ ಮಾಡುವ ಸಂದರ್ಭದಲ್ಲಿ ಮುಖ್ಯ ಮಂತ್ರಿಯಾಗಿ ಮುಸಲ್ಮಾನರಿಂದಲೇ ಆರಿಸಲ್ಪಡುವುದು. ಇದರಿಂದ ಕಾಂಗ್ರೆಸು ಹಿಂದುಗಳ ಪಕ್ಷಪಾತಿ ಸಂಸ್ಥೆಯಲ್ಲವೆಂದು ತಿಳಿಯದಿರದು. ಎಂದರು.

ಬೆಂಗಳೂರಲ್ಲಿ ಅಖಿಲಭಾರತ ಆನುವಂಶಿಕ ವೈದ್ಯ ಸಮ್ಮೇಳನ

ಬೆಂಗಳೂರಿನ ಹಲವು ಪ್ರಮುಖ ವೈದ್ಯರ ನೆರವಿಂದ ಬರುವ ದಶಂಬರಾದಿವಾರದಲ್ಲಿ ಒಂದು ಅಖಿಲ ಭಾರತ ಆನುವಂಶಿಕ ವೈದ್ಯ ಸಮ್ಮೇಳನವು ಜರಗುವುದಾಗಿಯೂ ಅದಕ್ಕೆ ತುಂಗಭದ್ರೆಯ ಶ್ರೀಗಳವರು ಅಧ್ಯಕ್ಷರಾಗಬಹುದಾಗಿಯೂ ತಿಳಿದು ಬಂದದ.

ಮಹಾತ್ಮಾ ಗಾಂಧಿಯವರಿಗೆ ಗಡಿನಾಡಿನ ಸಲಹೆ

ಗಡಿನಾಡಿನ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಖಾನ್ ಗುಲಾಮ ಮಹಮ್ಮದ ಖಾನರು, ಬರುವ ವರ್ಷದ ನ್ಯಾಶನಲ್ ಕಾಂಗ್ರೆಸಿನ ಅಧ್ಯಕ್ಷ ಸ್ಥಾನಕ್ಕೆ ಖಾನ್ ಅಬ್ದುಲ ಗಾಫರ ಖಾನರು ಅಧ್ಯಕ್ಷರಾಗಿ ನೇಮಿಸಲ್ಪಡುವಂತೆ ಸೂಚಿಸಿ ಮಹಾತ್ಮರಿಗೆ ಪತ್ರ ಬರೆದಿರುವರು ಖಾನ್ ಅಬ್ದುಲ ಗಾಫರ ಖಾನರು ಅಂಥಾ ಸೂಚನೆಗಳು ಮೊದಲುಬಂದಿದ್ದರೂ ಸಮ್ಮತಿಸಲಿಲ್ಲ. ಆದುದರಿಂದ ಗಾಂಧೀಜಿಯವರು ಅವರು ಒಪ್ಪುವಂತೆ ಕೇಳಿಕೊಳ್ಳಬೇಕು. ಅವರು ಅಧ್ಯಕ್ಷರಾಗುವಂತಾದರೆ ಗಡಿನಾಡು ಪ್ರಾಂತ್ಯಕ್ಕೆ ಬಹಳ ಗೌರವಿಸಿದಂತಾಗುವುದೆಂದು ಅವರ ಅಭಿಪ್ರಾಯ!

ಅಹಮ್ಮದಾಬಾದಿನಲ್ಲಿ ಮದ್ಯಪಾನ ನಿಷೇಧ

ಮುಂಬಾಯಿ ಸರಕಾರದ ಅರ್ಥಿಕ ಸಚಿವರಾದ ಶ್ರೀ. ಲಟ್ಟೆಯವರು ಅಹಮ್ಮದಾಬಾದಿನ ಕಾಮಗಾರ ಸಂಘದಲ್ಲಿ ಮದ್ಯಪಾನ ನಿಷೇಧದ ಕುರಿತು ಪ್ರಸ್ತಾಪಿಸುತ್ತಾ ಹೀಗೆಂದರು.

ಮದ್ಯಪಾನ ನಿಷೇಧವು ಜ್ಯಾರಿಗೆ ತಂದಿರುವ ಮಹತ್ವಿಕೆಯು ಮಹಾತ್ಮಾ ಗಾಂಧಿಯವರಿಗೆ ಮತ್ತು ಕಾಂಗ್ರೆಸಿಗೆ ಸಲ್ಲತಕ್ಕದ್ದಲ್ಲದೆ, ವ್ಯಕ್ತಿಗತ ಯಾವ ಮಂತ್ರಿಯೂ ಇಂಥಾ ಪ್ರಶಂಸೆಗೆ ಪಾತ್ರನಲ್ಲ, ನಾವು ಮಹಾತ್ಮಾ ಗಾಂಧಿಯವರ ಮತ್ತು ಕಾಂಗ್ರೆಸಿನ ಅಪ್ಪಣೆಯನ್ನು ಶಿರಸಾವಹಿಸಿ ನಡೆಯುತ್ತಿರುವೆವು. ಮದ್ಯಪಾನ ನಿಷೇಧವನ್ನು ಜಾರಿಗೆ ತರುವುದರಿಂದ ಸರಕಾರಕ್ಕೆ ನಾಲ್ಕು ಕೋಟಿ ರೂಪಾಯಿ ನಷ್ಟವಾಗಬಹುದು. ಇಂಥಾ ನಷ್ಟವನ್ನು ಜನರು ಮದ್ಯಪಾನದಿಂದ ದೂರವಿರುವುದಾದರೆ, ಸರಕಾರವು ಸಂತೋಷದಿಂದ ಸಹಿಸಬಲ್ಲುದು ಈ ನಷ್ಟವನ್ನು ಶ್ರೀಮಂತರ ಮೇಲೆ ಹೊರಿಸಿ, ಭರ್ತಿಮಾಡಿಕೊಳ್ಳಬಹುದು ಆದರೆ ಸರಕಾರವು ಆದಾಯವನ್ನು ನಷ್ಟ ಮಾಡಿಕೊಳ್ಳುತ್ತಿರುವಾಗ ಜನರು ಕುಡಿಯುವುದನ್ನು ಸಂಪೂರ್ಣ ತ್ಯಜಿಸಬೇಕು ಅಹಮ್ಮದಾಬಾದಿನಲ್ಲಿ ನಿಷೇಧಾಚರಣೆಯು ಸಾಕಷ್ಟು ಯಶಸ್ವಿಯಾಗಿ ಕೈಕೊಳ್ಳಲಾಗಿದೆಯೆಂಬುದು ಸಂತೋಷಕರ. ಸರಕಾರದ ಕಾನೂನಿನ ವಿರುದ್ಧವಾಗಿ ಈ ವಿಷಯದಲ್ಲಿ ವರ್ತಿಸುವವರನ್ನು ತಕ್ಷೀರಿಗೆ ಒಳಪಡಿಸುವಂತೆ ಜನರು ನೆರವಾಗಬೇಕು' ಎಂದರು.

ಚಿತ್ತೂರು ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸು ಪಕ್ಷ

ಚಿತ್ತೂರು ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆ ನಡೆದು 62ರಲ್ಲಿ 48 ಜನರು ಕಾಂಗ್ರೆಸು ಕಡೆಯಿಂದ ಆರಿಸಿ ಬಂದಿದ್ದಾರೆಂದು ತಿಳಿದು ಬರುತ್ತದೆ.

ಚಿಕ್ಕಮಗಳೂರಿನಲ್ಲಿ ಪ್ಲೇಗು

ಜಿಲ್ಲಾ ಬೋರ್ಡು ಮೆಡಿಕಲ್ ಅಫೀಸರರ ಸಲಹೆಯಂತೆ ಕಡೂರು ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಸ್ಕೂಲು ಬೋರ್ಡು ಆಫೀಸರರು, ಎಲ್ಲಾ ಮಿಡ್ಲ್ ಸ್ಕೂಲು ಮತ್ತು ಪ್ರೈಮರಿ ಶಾಲೆಗಳನ್ನು ಪ್ಲೇಗಿನ ಹಾವಳಿಯ ನಿಮಿತ್ತ ಮುಚ್ಚುವಂತೆ ಹುಕುಂ ಕೊಟ್ಟಿದ್ದಾರೆ.

ಜರ್ಮನಿಯಲ್ಲಿ ಮದುವೆಯಾಗದ ತಾಯಂದಿರು

ನಾಜೀ ಹುಡುಗಿಯರು ಮದುವೆಯಾಗದಿದ್ದರೂ ಮಾತೃತ್ವವು ಕರ್ತವ್ಯವೆಂದು ಬೋಧಿಸಲ್ಪಡುತ್ತಾರೆ. ಇದರಿಂದ ಮದುವೆಯಾಗದೇನೇ ಗರ್ಭಿಣಿಯರಾಗುವ ಸ್ತ್ರೀಯರ ಸಂಖ್ಯೆಯು ಬಹು ಹೆಚ್ಚುತ್ತಿದೆ. ಅಪ್ರಾಯಸ್ಥರಾದ ತಂದೆಯರು ಪ್ರಾಯಸ್ಥರೆಂದು ದಾಖಲೆ ಪಡೆದು ತಮ್ಮ ಪ್ರಣಯಿನಿಯರನ್ನು ಮದುವೆಯಾಗಲು ಸರಕಾರವೇ ಅನುಕೂಲತೆಯನ್ನು ಒದಗಿಸಿಕೊಡುತ್ತಿದೆ.

ರಷ್ಯದಲ್ಲಿ ಸ್ತ್ರೀಯರ ಪ್ರಾಮುಖ್ಯತೆ

ಮೊಸ್ಕೊ ರಿಂಗ್ ರೈಲ್ವೆಯ ಪ್ರಾಮುಖ್ಯ ಅಧಿಕಾರಿಣಿಯಾಗಿ ಜಿನ್ನ್ಯಾದ ಟ್ರೊಯಿಸ್ಕಿತ ಎಂಬಾಕೆ ನೇಮಕಹೊಂದಿರುವಳು. ಮೊಸ್ಕೋದ ಪತ್ರಿಕೆಯು ರಷ್ಯವು ಸ್ತ್ರೀಯರಿಗೀಯುತ್ತಿರುವ ಪ್ರಾಮುಖ್ಯತೆಯನ್ನು ಬಣ್ಣಿಸುತ್ತ ಹೀಗನ್ನುತ್ತಿದೆ. ಸೋವಿಯಟ್ ಸರಕಾರವು ಪ್ರತಿಯೊಂದು ಜವಾಬ್ದಾರಿ ಹುದ್ದೆಯಲ್ಲಿಯೂ ಸ್ತ್ರೀಯರ ಪ್ರಾಮುಖ್ಯತೆಯನ್ನು ಮರೆಯಲಾರದು. ಕಳೆದ ತಿಂಗಳಲ್ಲಿ ಮೂರು ಮಂದಿ ವೈಮಾನಿಕ ಸ್ತ್ರೀಯರ ನೇಮಕವಾಯಿತು. ಸೋವಿಯೆಟ್ ಸರಕಾರದಲ್ಲಿ ಸ್ತ್ರೀಯರು ಪುರುಷರಂತೆ ವಾಹನ, ಕೃಷಿ, ಕಸಬು, ಕೈಗಾರಿಕೆ, ರೈಲ್ವೆ ಮೊದಲಾದ ಖಾತೆಗಳಲ್ಲಿ ಶಿಕ್ಷಣ ಅಧಿಕಾರ ಪಡೆಯುತ್ತಿರುವರು. ಯುದ್ಧ ಕಾಲದಲ್ಲಿ ವಿಮಾನವೇ ಮೊದಲಾದ ಕಾರ್ಯಭಾಗದಲ್ಲಿ ಪುರುಷರಂತೆ ಸ್ತ್ರೀಯರೂ ಭಾಗ ವಹಿಸಬಲ್ಲರು



ತಾ. 19ರಲ್ಲಿ ಉಪವಾಸ ಚಿತ್ತೈಸಿದ ಮದ್ರಾಸಿನ ಪಬ್ಲಿಕ ವರ್ಕ್ಸ್ ಮಂತ್ರಿಗಳಾದ ಮಿ ಯಾಕೂಬ್ ಹಸನರು.

ಹುಚ್ಚು ಡಾಕ್ಟರನೊಬ್ಬನು ಹಲವು ರೋಗಿಗಳನ್ನುಗುಣಪಡಿಸಿದ

ಪ್ಯಾರಿಸಿನಲ್ಲಿ ಡಾ. ಲುಯಿಸ್ ಬೆನ್ದೆಟಾ ಎಂಬವನೊಬ್ಬನು ಹುಚ್ಚನೆನಿಸಿ, ಹುಚ್ಚರ ಆಸ್ಪತ್ರೆಗೊಯ್ಯಲ್ಪಟ್ಟನು ಒಂದು ದಿನ ಅವನು ತಲೆತಪ್ಪಿಸಿಕೊಂಡು, ಆಸ್ಪತ್ರೆಯಿಂದ ಹೊರಬಿದ್ದನು. ಕೆಲಸಮಯ ಪೋಲೀಸರು ಅವನ ಪತ್ತೆ ಕೂಡಾ ಹಚ್ಚಲಾರದಾದರು. ಒಮ್ಮೆ ಪ್ಯಾರಿಸಿನ ಬಳಿಯಲ್ಲಿ ಒಬ್ಬ ಡಾಕ್ಟರನು ಫೀಸು ತೆಗೆದುಕೊಳ್ಳದೇನೇ ರೋಗಿಗಳನ್ನು ಗುಣಪಡಿಸುತ್ತಿರುವನು ಎಂಬ ಸುದ್ದಿಯು ಪೋಲೀಸರಿಗೆ ಸಿಕ್ಕಿತು. ಅವರು ಸಂಶಯದಿಂದ, ವಿಚಾರಿಸಿದಾಗ ಹುಚ್ಚು ಆಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದ ಆ ಹುಚ್ಚು ಡಾಕ್ಟರ ಇವನೆಂದು ಖಚಿತವಾಯಿತು.

ಈ ಹುಚ್ಚು ವೈದ್ಯನು ಹಲವು ರೋಗಿಗಳನ್ನು ಯಶಸ್ವಿಯಾಗಿ ಚಿಕಿತ್ಸೆ ನಡೆಸಿದ್ದನು ಬೇರೆ ಪ್ರಸಿದ್ಧ ಡಾಕ್ಟರರು ಕೂಡಾ ಇವನ ಪರೀಕ್ಷಾಕ್ರಮವು ಸರಿಯಾಗಿತ್ತೆಂದು ಅಭಿಪ್ರಾಯಪಟ್ಟಿದ್ದರು. ಪೋಲೀಸರು ಅವನ ಕೋಣೆಗೆ ಬಂದು ಶೋಧಿಸಿದಾಗ ಅವನು ಫ್ರಾನ್ಸಿನ ಪ್ರಸಿದ್ಧ ವೈದ್ಯಕೀಯ ಮಂಡಲದೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದವನಾಗಿಯೂ ಮತ್ತು ಇತ್ತೀಚೆ ಇನ್ನೊಂದು ಕೇಂದ್ರದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣವನ್ನು ಕೂಡಾ ಮಾಡಿದ್ದನಾಗಿಯೂ ತಿಳಿಯಿತು

ಇಂಗ್ಲಿಷ್ ಪಟ್ಟಣಕ್ಕೆ ಹಿಂದೀ ಮೇಯರ್

ಫಿನ್ಸ್‌ಬರಿಯಲ್ಲಿ ವೈದ್ಯಕೀಯ ವೃತ್ತಿಯನ್ನನುಸರಿಸಿಕೊಂಡಿರುವ ಡಾಕ್ಟರ್ ಕತಿಯಾಲ ಎಂಬವರು ಮೇಯರರಾಗಿ ಚುನಾವಣೆಹೊಂದಿರುವರು ಇಂಥಾ ಉತ್ತಮ ಗೌರವಕ್ಕೆ ಪಾತ್ರರಾದವರಲ್ಲಿ ಇವರು ಪ್ರಥಮ ಭಾರತೀಯರು, ಕತಿಯಾಲರು ಅಲ್ಲಿಯ ಪ್ರಸಿದ್ಧ ಡಾಕ್ಟರರು. ಮಹಾತ್ಮಾ ಗಾಂಧಿಯವರು ರೌಂಡ್ ಟೇಬಲ್ ಪರಿಷತ್ತಿಗೆ ಭಾಗವಹಿಸಲು ಇಂಗ್ಲೆಂಡಿಗೆ ಹೋದಾಗ ಕತಿಯಾಲರು ಮುಂದೆಬಂದರು. ಚಾರ್ಲಿ ಚಾಪ್ಲಿನನಿಗೆ ಗಾಂಧಿಜಿಯವರ ಪರಿಚಯವನ್ನು ಮಾಡಿಸಿಕೊಟ್ಟವರು ಇವರು. ಡಾಕ್ಟರ್ ಕತಿಯಾಲರು ಮುಂಬಾಯಿಯವರು.

ಆಫ್ರಿಕದಲ್ಲಿ ಹಿಂದೀಯರ ವಸಾಹತುಗಳು

ಆಫ್ರಿಕದಲ್ಲಿ ಜರ್ಮನರು ತಮ್ಮ ವಸಾಹತಗಳನ್ನು ಸ್ವಾಧೀನ ಪಡಿಸುವ ಶರ್ತವನ್ನು ಮುಂದೊತ್ತುವಾಗ ಭಾರತೀಯರೂ ತಮ್ಮ ಹಕ್ಕನ್ನು ಪ್ರಕಟಿಸುವರು. ಈ ವಿಷಯವನ್ನು ಪೂರ್ವ ಆಫ್ರಿಕದಲ್ಲಿ "ಟಂಗನಿಯಾಕ ಹೆರಾಲ್ಡ್" ಎಂಬ ಹಿಂದೀಯರಿಂದ ನಡೆಸಲ್ಪಡುವ ಪತ್ರಿಕೆಯು ಸಮರ್ಥಿಸುತ್ತಿರುವುದು.

ಹಿಂದೀಯರಿಗೆ ವಸಾಹತುಗಳ ಹಕ್ಕನ್ನು ಬಲಪಡಿಸುವ ಹಲವು ಆಧಾರಗಳಿವೆ. ಹಿಂದೂದೇಶವು ಬಹಳ ಜನಸಂಖ್ಯೆಯುಳ್ಳದ್ದಾದುದರಿಂದ ಅದು ಕೊಲೊನಿಗಳನ್ನು ಬಯಸುವುದು ಹೆಚ್ಚಲ್ಲ ಹಿಂದೀ ಜನರು ಬಹು ಕಾಯಕಷ್ಟವುಳ್ಳವರು. ಸನಾತನ ಸಂಸ್ಕೃತಿಯುಳ್ಳವರು. ಮತ್ತು ಪರಸ್ಪರ ಸಾಮೂಹಿಕ ಸಹಾನುಭೂತಿಯ ವರ್ತನೆಯವರು ಕೊಲೋನಿಗಳ ಅಧಿಕಾರವು ಹಿಂದೀಯರ ಹಸ್ತಗತವಾದರೆ, ಅವರು ಬಹಳ ಒಳ್ಳೆಯ ರೀತಿಯಲ್ಲಿ ಅಲ್ಪವೆಚ್ಚದಿಂದ ನಡೆಸಲು ಸಮರ್ಥರಾಗುವರು ಹಿಂದೀಯರು ಜಗತ್ತಿಗೆ ಭ್ರಾತೃಭಾವದ ಶಿಕ್ಷಣವೀಯುವವರು, ಆದುದರಿಂದ ವರ್ಣಭೇದದ ವಿಚಾರವು ಅವರನ್ನು ತಟ್ಟದು. ಹಿಂದೀಯರು ಬಹುಕಾಲದಿಂದಲೂ ವಸಾಹತುಗಳಲ್ಲಿ ಹಿತಕಾರಿಯಾಗಿ ಜೀವನ ನಡೆಸುವುದರಲ್ಲಿ ತಮ್ಮ ಆದರ್ಶತೆಯನ್ನು ಹಲವುಕಾಲದಮೊದಲೇ ಪ್ರಕಟಿಸಿರುವರು. ಭಾರತೀಯರು ಇನ್ನಾವ ಜನಾಂಗವನ್ನೂ ಅಪಹರಿಸಿ, ತಾವು ಮೇಲುಗೈಯ್ಯವರಾಗಿರಬೇಕೆಂದು ಹವಣಿಸುವ ಬರ್ಬರ ಸಂಸ್ಕೃತಿಯವರಲ್ಲ ಹಿಂದೀಯರಿಗೆ ವಸಾಹತುಗಳನ್ನು ಜನತೆಯ ಹಿತದೃಷ್ಟಿಯಿಂದ ನಡೆಸಿಕೊಂಡು ಬರುವಹಕ್ಕು ಸ್ವಾಭಾವಿಕವಾಗಿ ಇರುತ್ತದೆ'. ಎಂದು ಈ ಪತ್ರಿಕೆಯು ಅಭಿಪ್ರಾಯಪಡುತ್ತದೆ.

ರೋಮಿನಲ್ಲಿ ಜಗತ್ತಿನ ಅತಿ ದೊಡ್ಡ ಕ್ಷಯರೋಗ ಪರೀಕ್ಷಾಲಯದ ನಿರ್ಮಾಣ

ಮುಸಲೋನಿಯು ಜಗತ್ತಿನಲ್ಲಿ ಅತೀ ದೊಡ್ಡದಾದ ಕ್ಷಯರೋಗ ಪರೀಕ್ಷಾಲಯವನ್ನು ನಿರ್ಮಿಸುವ ಕಾರ್ಯವನ್ನು ಕೈಕೊಂಡಿರುವನು ಈ ಮಂದಿರವು ಇಟೆಲಿಯ ಪ್ರಸಿದ್ಧ ವೈದ್ಯನಾದ ಡಾ. ಕಾರ್ಲೊ ಫೋ

ಶರ್ತಯುಕ್ತ ಬಿ

ರ್ನ್ನಿನಿಸಿಯೆಂಬ
ಡುವುದು.
ಇಲ್ಲಿ ನಡೆಸಲ್ಪ

ಮಧ್ಯಪಾ ನಿಚಾರದಲ್ಲ

ಕಳೆದ ಬ
ವಾದಂತೆ
ಅಸೆಂಬ್ಲಿಯ
ವುಳ್ಳ ಹನ್ನೆ
ಒಂದು ಕಮಿ
ಧ ನೀರಾವರಿ
ಟ್ಟಿ, ಇವೇ
ಹೊಸ ರಾಜ
ಕಾರ್ಯ
ವಂತೆ ಅಧಿ
ರಿಸಿ ಸಾಧ್ಯ
ಪ್ಪಿಸುವರೆ
ಕ ಸಚಿವರಾ
ಮಂಡಳಿಯ

ಆಲಿಘಾರ

ಜಾತೀಯ ಮನೋ

ಮುಸ್ಲಿ ಪ್ರ

ಗೂನಿವ
ಯ ಜಾಹ
,ನ್ಯಾಶನಲ್
ಹೀಗೆಂದಿರು
"ಡಾ. ಸ
ಚಾನ್ಸಲ್ಲರ
ದಿನಿಂದ
ಪರಿಸ್ಥಿತಿಯ
ಟ್ಟಿ,
ಪದಧೋರಣೆ
ಹಲವು ವಿ
ರಿಸಲ್ಪಟ್ಟಿತು
ಚಾನ್ಸಲರಾಗಿ
ತೀಯತೆಯ
ಬೆಳೆಯುತ್ತಿ
ಅಧಿಕಾರಿಗಳ
ಬಲವನ್ನು
ರುವ ಆಲಿ
ಲಗಳಿಗೆ ಅ
ಅಭಾವವೇ
ಶುದ್ಧ ಹ
ಕಳಂಕವಾಗಿ
ಮುಸಲ್ಮಾ
ಅಲಿಘಾರ
ಪ್ರಗತಿಪರ
ಪ್ರವಾಗಿರ
ಹೀಗಿರದೆ,
ಪರಿಸ್ಥಿತಿಯ
ಬಂದುದು
ಬಹು ದೊಡ್ಡ
ವಿದ್ಯಾರ್ಥಿಗ
ನ್ನುಂಟುಮಾ

...ವೆಯಾಗದ ತಾಯಂದಿರು — ರಸ್ಯದಲ್ಲಿ ಸ್ತ್ರೀಯರ ಪ್ರಾಮುಖ್ಯತೆ

...ಗಡೆ ಬೇಕಾಗಿಲ್ಲ

...ನಲ್ಲಿ ಕರೆಯಲ್ಪ
...ಗ ಚಿಕಿತ್ಸೆಯು

ಆರ್ಥಿಕ
ಕಮಿಟಿಯ

...ಪ್ಲಿಯಲ್ಲಿ ಠರಾ
...ರ ಸರಕಾರವು
...ಪ್ರಾತಿನಿಧ್ಯ
...ಸ್ನೊಳಗೊಂಡ
...ದ್ಯಪೀಠ ನಿಷೇ
...ಗ್ರಾಪುಸಂಘ
...ಸಂಸ್ಥಾನದ
...ವರ ವಿಚಾರವು
...ಸಾಧ್ಯವಾಗು
...ನ್ನು ಪರಾಂಬ
...ವರದಿಯನ್ನೊ
...ವುದು. ಆರ್ಥಿ
...ಚೇತರವರು ಈ
...ರಾಗಿರುವರು.

...ಟಿಯಲ್ಲಿ
...ಕುಚಿತ
...ಸ್ತ್ರೀಯ
...ರ್ಥಿಗಳ
...ರಣೆ.

...ಟಣಾ ಶಾಖೆ
...ವಿಚಾರದಲ್ಲಿ
...ಪತ್ರಿಕೆಯು

...ಇವರು ವೈಸ್
...ಮೆ ಕೊಟ್ಟಂ
...ನಿವರ್ಸಿಟಿಯ
...ತಿಗೆ ಮಾರ್ಗ
...ಯ ಪ್ರಗತಿ
...ಕಾರಣದಿಂದ
...ವೇಶ ನಿಂತ
...ನರು ವೈಸ್
...ಂದಿನಿಂದ ಜಾ
...ವೃತ್ತಿಯು
...ಯೂನಿವರ್ಸಿಟಿ
...ತಮ್ಮ ಬೆಂ
...ಈಗ ಒದಗಿ
...ದ ಗೊಂದ
...ಕವೃತ್ತಿಯ
...ಅಲಿಘಾರದ
...ಪರಿಸ್ಥಿತಿಯು
...ದೇ ಒಂದಾದ
...ಲಯವೆಂದರೆ
...ಮುಸಲ್ಮಾನ
...ತ್ಮಿಕ ಕೇಂ
...ವೆಶ್ಯಕವಿತ್ತು.
...ಹೋರಾಟದ
...ರ್ಶ ಸಂಸ್ಥೆಗೆ
...ಪ್ರಗತಿಗೇ ನೇ
...ಮ ಹಳೆಯ
...ವಿವಾದದ
...ಈ ಮಹಾ

ಸಂಸ್ಥೆಯು ಉಳಿಯುವಂತಾಗಬೇಕಾದುದು ಆವಶ್ಯಕ; ಆದುದರಿಂದ ನಿಷ್ಪಕ್ಷಪಾತದೃಷ್ಟಿಯ ವಿಚಾರಣಾ ಸಮಿತಿಯನ್ನು ನೇಮಿಸಿ ಈ ಕುರಿತು ಯುಕ್ತಯೋಜನೆ ನಡೆಸುವುದು ಅತ್ಯಗತ್ಯ. ಪಂಗಡಪಂಗಡವಾಗಿ ಮಾರ್ಪಡಿಸಿ, ಭೇದಭಾವವನ್ನು ಬೆಳೆಸಲು ಪರದೆಯ ಹಿಂದೆ ಜಾತೀಯತೆಯ ನೆಪದಿಂದ ಸೂತ್ರಚಾಲನೆ ನಡಿಸುತ್ತಿರುವ ಅಧಿಕಾರಿಗಳನ್ನು ಹೊರಪಡಿಸಬೇಕು. ಆದುದರಿಂದ ನಾವು ಸದ್ಯದ ವೈಸ್‌ಚಾನ್ಸಲರಾದ ಸರ್ ಮಹಮ್ಮದ ಸುಲೇಮಾನರಿಗೆ ಸೂಚಿಸುವುದೇನೆಂದರೆ, ಅವರು ಲೋರ್ಡ ರಕ್ಷಕರನ್ನು ಈ ಸಮಸ್ಯೆಯ ವಿವರಣೆಗಾಗಿ ಒಂದು ಸಮಿತಿಯನ್ನು ನೇಮಿಸಿ ಅಲಿಘಾರ ಯೂನಿವರ್ಸಿಟಿಯಲ್ಲಿ ಕಲಹಗೊಂದಲವನ್ನು ನಿವಾರಿಸುವ ನಿಶ್ಚಿತ ದಾರಿಯನ್ನು ಪಡೆದು ಮುನ್ನಡೆಸುವಂತೆ ಕೇಳಿಕೊಳ್ಳಬೇಕು."

ಮತ ಸಮ್ಮೇಳನ ಕೇಶವ ಚಂದ್ರಸೇನರ ಶತಮಾನೋತ್ಸವ

ಮದ್ರಾಸು ಕಾಂಗ್ರೆಸು ಭವನದಲ್ಲಿ ಧರ್ಮಸಭೆಯು ಕೇಶವ ಚಂದ್ರಸೇನರ ಶತಮಾನೋತ್ಸವವನ್ನು ಜರಗಿಸಲು ನೆರೆಯಿತು. ಅರುಂಡಲೆಯವರ ಗೈರುಹಾಜರಿಯಲ್ಲಿ ಪ್ರೊ. ಡಿ. ಎಸ್. ಶರ್ಮರು ಅಧ್ಯಕ್ಷರಾಗಿದ್ದರು. ಜನರು ತುಂಬಾ ನೆರೆದಿದ್ದರು. ಹಲವರು ಧರ್ಮದ ಮಹತ್ವಿಕೆಯನ್ನು ಮನಗಣಿಸಿ, ಕೇಶವ ಚಂದ್ರರ ಗುಣಕಥನ ಮಾಡಿದರು.

"ಕೇಶವ ಚಂದ್ರರ ಮೂಲಕ ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ದಿನಗಳಲ್ಲಿ ಯುವಕರ ಮನಃಸ್ಥಿತಿಯನ್ನರಿತುಕೊಂಡರು. ರಾಮಕೃಷ್ಣ ಪರಮಹಂಸರ ಧರ್ಮವೆಂಬುದು ಸೇವಾಧರ್ಮವಾಗಿದೆ. ಹಿಂದೂಧರ್ಮದ ಅತೀವ ವ್ಯಾಪಕ ವಿಚಾರ ಮತ್ತು ವೇದದ ಉನ್ನತ ತತ್ವವು ಪರಮಹಂಸರಿಂದ ಬೋಧಿಸಲ್ಪಟ್ಟಿತು. ಅವರು ಧರ್ಮ ಪಂಗಡವನ್ನು ಸ್ಥಾಪಿಸದೆ, ಮಾನವರ ಶ್ರೇಯಸ್ಸಿಗಾಗಿ ಸಾಧಿಸುವ, ಪ್ರೇಮ, ತ್ಯಾಗ ಮತ್ತು ಸೇವೆಯನ್ನು ಪ್ರಚಾರಗೊಳಿಸುವ ಪ್ರಚಾರಕರನ್ನು ನೇಮಿಸಿದರು." ಎಂದು ವಿವೇಕಾನಂದರೆಂದರು.

ಅಲ್ಲಾಹಾಬಾದಿನ ವಿದ್ಯಾರ್ಥಿಗಳಿಗೆ ಸರೋಜಿನಿ ದೇವಿಯರ ಸಂದೇಶ

ಕಳೆದ ತಾ. ೧೯ರಲ್ಲು ಜರಗಿದ ಅಲ್ಲಾಹಾಬಾದು ಯೂನಿವರ್ಸಿಟಿ ಕನ್ವಕೇಶನಿನ ಸಮಾರಂಭದಲ್ಲಿ ಶ್ರೀಮತಿ ಸರೋಜಿನಿ ದೇವಿಯರು ವಿದ್ಯಾರ್ಥಿಗಳಿಗೆ ಬಹು ಸ್ಫೂರ್ತಿದಾಯಕವಾದ ಆದರ್ಶ ಸಂದೇಶವನ್ನಿತ್ತರು. ವಿದ್ಯಾರ್ಥಿಗಳು ತಾವು ಪ್ರತ್ಯೇಕವಾಗಿರದೆ, ಜೀವಿತದ ಪ್ರಾಮುಖ್ಯ ಉದ್ದೇಶವನ್ನು ಮನಗಂಡು, ಜೀವನ ಪಥದಲ್ಲಿ ಮುಂಬರಬಹುದಾದ ತೊಡಕುತೊಂದರೆಗಳನ್ನು ಧೀರತೆಯಿಂದಲೂ, ಪ್ರತಿಭೆಯಿಂದಲೂ ಇದಿರಿಸತಕ್ಕದ್ದು. ಇಂದಿನ ದಿನದ ಹರಣೆಯ ಸಮಸ್ಯೆಯು ಬಹುಭೀಕರವಾಗಿದೆ. ಮಿಲಿಯಾಂತರ ಜನರು ನಿರಾಧಾರಿಗಳಾಗಿ ತುತ್ತು ಆಹಾರಕ್ಕಾಗಿ ಅಲೆದಾಡುತ್ತಿದ್ದಾರೆ. ಆದರೂ ಮಾನವರು ಅನ್ನದಿಂದಲೇ ಜೀವಿಸುವವರಲ್ಲ. ವಿದ್ಯಾ ಬೇಕು. ಕಲಾವಂತರಾಗಿರಬೇಕು. ಕಲೆಯೆಂಬುದು ಭೇದವನ್ನಳಿಸಿ, ಸೌಂದರ್ಯವನ್ನಾರಾಧಿಸಿ, ಐಕ್ಯತೆಯನ್ನು ಸಾಧಿಸುವುದಾಗಿದೆ. ವಿದ್ಯಾರ್ಥಿಗಳು ಭವಿಷ್ಯತ್ತನ್ನು ಉಜ್ವಲಗೊಳಿಸುವವರಾಗಿರಬೇಕು. ವರ್ತಮಾನ ಕಾಲವನ್ನು ಸಾಧಿಸುವವರಿರಬೇಕು. ಪೂರ್ವ ಸಂಸ್ಕೃತಿಗೆ ಕೃತಜ್ಞ

ರಾಗಬಾರದು. ದೇಶದಲ್ಲಿ ದೊಡ್ಡ ದೊಡ್ಡ ಕಸಬು ಕೈಗಾರಿಕಾ ಮಂಡಿಗಳ ನೂರಾರು ಮಂದಿ ಜನತೆಯ ಏಳಿಗೆಗಾಗಿ ಸಾಧಿಸುವವರು, ಇರುವಂತೆಯೇ ಶೋಧನಾಲಯಗಳು, ವಿಜ್ಞಾನಿಗಳು, ತತ್ವವಿದರು, ವಿದ್ಯಾಮಂದಿರಗಳು ಇರುವುದು ಅಗತ್ಯ. ಉರ್ದು ಹಿಂದೀ ವಾದದಲ್ಲಿ ಹುರುಳಿಲ್ಲ. ಸಾಮಾನ್ಯ ಭಾಷೆ ಮತ್ತು ಸುಲಭ ಶಬ್ದಗಳು ರೂಢಿಗೆ ಬರುವಂತಾಗಬೇಕು. ಪ್ರೊಫೆಸರರನ್ನು ಕುರಿತು ಪ್ರಸ್ತಾಪಿಸಿ, ಅವರು ತಾವು ಕಲಾ ಉಪಾಸಕರಾಗಿದ್ದು ಕಲೆಯ ಬೆಳವಣಿಗೆಯ ಸಾಧಕರಿರಬೇಕು. ದೇಶದ ಆಯಾಯ ಕಾಲದ ಪರಿಸ್ಥಿತಿಗನುಸಾರವಾಗಿ ಶಿಕ್ಷಣದ ಸೂತ್ರವನ್ನು ವ್ಯಾಪನೆಗೆ ತರುವ ಸಾಮರ್ಥ್ಯವುಳ್ಳವರಿರಬೇಕು ಎಂದು ಅವರ ಸಾರವತ್ತಾದ ಸುರಸಯುಕ್ತ ಉಜ್ವಲ ಭಾಷಣದ ಸಾರ.

ವಿದುರಾಶ್ವತ್ಥದ ಕಮಿಟಿಯ ವರದಿಯಿಂದ ಮೈಸೂರು ಕಾಂಗ್ರೆಸು ಅಸಮಾಧಾನಪಟ್ಟಿತು

ವಿದುರಾಶ್ವತ್ಥ ಗಲಭೆಯ ಮತ್ತು ಸರಕಾರಿ ಹುಕುಮಿನ ಕುರಿತಾದ ವಿಚಾರಣ ಸಮಿತಿಯ ವರದಿಯು ಪ್ರಕಟಿತವಾಗಿಯದೆ. ಇದು ಮೈಸೂರು ಕಾಂಗ್ರೆಸಿಗೆ ತುಂಬಾ ಅಸಮಾಧಾನವೆಂದು ಕಂಡು ಬಂದಿದೆ. ವರ್ಕಿಂಗ್ ಕಮಿಟಿ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದು. ಈ ವರದಿಯು ತೀರಾ ಅಸಮಾಧಾನಕರವೆಂದು ದೀರ್ಘ ರರಾವು ಮಂಜೂರಾಗಿದೆ.

ಕಾಂಗ್ರೆಸು ಯಾವಾಗ ತಿರುಗಿ ಸತ್ಯಾಗ್ರಹಕ್ಕೆ ತೊಡಗುವುದು?

ಯಾರಿಗೂ ಬೇಡವಾದ ಫೆಡರೇಶನನ್ನು ಆಂಗ್ಲೇಯರು ಹಿಂದೂದೇಶದ ಮೇಲೆ ಹೊರಿಸಲು ತೊಡಗಿದರೆ, ಮತ್ತು ಹಿಂದೂದೇಶದ ಪ್ರಜಾ ಸ್ವಾತಂತ್ರ್ಯ ಕೋರಿಕೆಯು ಮಾರೀಕರಿಸಲ್ಪಟ್ಟರೆ, ಕಾಂಗ್ರೆಸು ತಿರುಗಿ ಮಹಾತ್ಮಾ ಗಾಂಧಿಯವರು ಕೊಡಲ್ಪಟ್ಟ ಸತ್ಯಾಗ್ರಹ ಆಯುಧವನ್ನು ಧರಿಸುವುದು, ಎಂದು ಸುಭಾಷರು ಲಕ್ನೋದಲ್ಲಿ ಜರಗಿದ ಸಭೆಯಲ್ಲಿ ಉದ್ಗಾರ ತೆಗೆದರು.

ಕೆಮೂಲ ಅಟಾಟರ್ಕರ ಶವಸಂಸ್ಕಾರ

ತಾ ೨೧ನೇ ಬೆಳಗ್ಗೆ ಟರ್ಕಿಯ ಪಿತ ಕೆಮಾಲ ಅಟಾಟರ್ಕರ ಶವಸಂಸ್ಕಾರ ಕಾಲ ಜನತೆಯು ಗುಂಪು ಗುಂಪಾಗಿ ಟರ್ಕಿಯ ನಿರ್ಮಾಣಕನ ಕೊನೆಯ ಸಂಸ್ಕಾರಕ್ಕೆ ನೆರೆದಿತ್ತು. ಜನತೆಯ ದುಃಖವು ಅಮಿತವಾದುದು. ಸಾವಿರಾರು ಜನರು ಸಾಲುಗಟ್ಟಿದ್ದರು. ಸ್ತ್ರೀಯರು ಹಲವರು ಬೊಬ್ಬಿಟ್ಟುಕೊಳ್ಳುತಿದ್ದರು. 'ಅಯ್ಯೋ ನಮ್ಮ ಪಿತನೇ, ಎಲ್ಲಿ ಹೋದೆ?' ಎಂಬ ಚೀತ್ಕಾರಗಳು ದುಃಖದ ನಿನಾದಗಳು, ಅತ್ಯಂತ ಮರುಕುವನ್ನುಂಟುಮಾಡುತ್ತಿದ್ದುವು. ಪ್ರೆಸಿಡೆಂಟರ ಸಹೋದರಿಯು ಅತ್ಯಂತ ಕಾತರೆಯಾಗಿದ್ದಳು. ಬೇರೆ ಬೇರೆ ಜನಾಂಗಗಳ ರಾಜರ ಪ್ರತಿನಿಧಿಗಳು ಈ ಸಮಯ ತಮ್ಮ ರಾಜರುಗಳ ಪರವಾಗಿ ಅಲ್ಲಿ ನೆರೆದಿದ್ದರು.

ಬಳ್ಳಾರಿ ಸಾಹಿತ್ಯ ಪರಿಷತ್ತಿಗೆ ಶ್ರೀ ದಿವಾಕರರು ಅಧ್ಯಕ್ಷರು.

ಈ ವರ್ಷ ಬಳ್ಳಾರಿಯಲ್ಲಿ ಜರಗಲಿರುವ ಕರ್ನಾಟಕಸಾಹಿತ್ಯ ಪರಿಷತ್ತಿಗೆ ಶ್ರೀ ದಿವಾಕರರು ಅಧ್ಯಕ್ಷರಾಗುವರೆಂದು ತಿಳಿದುಬಂದಿದೆ. ಸಾಹಿತ್ಯಸಮ್ಮೇಳನದ ಸ್ವಾಗತ ಕಮಿಟಿಯವರು ಕ. ಸಾ. ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಗೆ ಕಳುಹಿಸಿದ ಮೂರು ಹೆಸರುಗಳಲ್ಲಿ ಮೊದಲಿನದು ದಿವಾಕರರದ್ದಾಗಿತ್ತು. ಅದರಂತೆ ಅವರನ್ನು ಕೇಳಿಕೊಂಡಾಗ ಕಾರ್ಯಬಾಹುಳ್ಯತೆಯ ದೆಸೆಯಿಂದ ಮೊದಲು ಅವರು ಸಮ್ಮತಿಸಲಿಲ್ಲವೆಂದೂ ಕಡೆಗೆ ಸ್ನೇಹಿತರ ಆಗ್ರಹದ ಮೇರೆಗೆ ಒಪ್ಪಿರುವರೆಂದೂ ತಿಳಿದುಬರುತ್ತವೆ.

ಆಶ್ರಿತರಾಜರೂ ಪ್ರಜೆಗಳೂ ಸರ್ ಷಣ್ಮುಖಂ ಚೆಟ್ಟಿಯವರ ನೀತಿ

ಮದ್ರಾಸಿನಲ್ಲಿ ಕನ್ನಮಾರ ಹೊಟೆಲಿನಲ್ಲಿ ಶ್ರೀ. ಎಮ್. ಮುರುಗಪ್ಪ ಚೆಟ್ಟಿಯಾರರು ಕೊಟ್ಟ ಔತಣ ಸಮಾರಂಭದ ಕಾಲದಲ್ಲಿ ಕೊಚ್ಚಿ ಸಂಸ್ಥಾನದ ದಿವಾನರು ತನ್ನ ಸಂಸ್ಥಾನದ ಸುಧಾರಣೆಯನ್ನು ಪ್ರಸ್ತಾಪಿಸುತ್ತಾ ಹೀಗೆಂದರು. ನನಗೀಗ ನನ್ನ ಮುಂದಿರುವ ಪ್ರಮುಖ ವಿಚಾರಗಳಲ್ಲಿ ಮಹಾರಾಜರ ಮತ್ತು ಅವರ ವಂಶದ ಏಳಿಗೆಯು ಹೇಗೆ ನಿಂತೀತೆಂಬುದೊಂದು. ದೇಶೀಯ ರಾಜರುಗಳ ಭದ್ರತೆಯು ಪ್ರಜೆಗಳ ಪ್ರೇಮ ಗೌರವಗಳಲ್ಲಿ ನೆಲೆನಿಂತಿರುವುದೆಂಬುದು ನನಗೆ ಸಂಪೂರ್ಣ ಗೊತ್ತಿದೆ. ಪ್ರಜೆಗಳಿಗೆ ರಾಜನ ಮೇಲೆ ಭಕ್ತಿಯು ಕಂಪಿಸತೊಡಗಿತೆಂದಾದರೆ, ಇದರಿಂದ ರಾಜನ ಸ್ಥಾನವೇ ಕಂಪಿಸುವುದು. ಮಾತ್ರವಲ್ಲದೆ, ರಾಜವಂಶದ ಏಕಕ್ಕೇನೇ ಧಕ್ಕೆ ಬಡಿಯುವುದು. ಪ್ರಜೆಗಳ ವಿಚಾರವನ್ನು ತಿಳಿದು, ಅವರನ್ನು ಭಾಗ ವಹಿಸುವಂತೆ ಮಾಡುವುದು ಎಷ್ಟು ಪ್ರಜೆಗಳ ಮೇಲ್ಮೆಗೆ ಕಾರಣವೋ, ಅಷ್ಟೇ ರಾಜರ ಮತ್ತು ಅವರ ವಂಶದವರದ್ದಾಗಿದೆ ಯೆಂಬದನ್ನು ನಾನು ರಾಜರಿಗೆ ಮನದಟ್ಟು ಮಾಡುತ್ತಿರುವೆನು. ಷಣ್ಮುಖ ಚೆಟ್ಟಿಯವರ ಅಭಿಪ್ರಾಯವನ್ನು ಬೇರೆ ಬೇರೆ ಸಂಸ್ಥಾನಗಳ ದಿವಾನರುಗಳೂ ರಾಜರೂ ಮನ್ನಿಸುವರೇ?

ರಾಮಕೃಷ್ಣ ಮಿಶನ್

ಕಲ್ಕತ್ತದ ರಾಮಕೃಷ್ಣ ಮಠ ಮತ್ತು ಮಿಶನಿನ ಅಧ್ಯಕ್ಷರಾಗಿದ್ದ ಸ್ವಾಮಿ ಶುದ್ಧಾನಂದರು ಕಳೆದ ತಿಂಗಳಲ್ಲಿ ಕಾಲಾಧೀನರಾಗಲು, ಅವರ ಸ್ಥಾನಕ್ಕೆ ಸ್ವಾಮಿ ವಿರಜಾನಂದರು ಆರಿಸಲ್ಪಟ್ಟಿರುವರು. ಇವರು ಸ್ವಾಮಿ ವಿವೇಕಾನಂದರ ಸ್ವಂತ ಶಿಷ್ಯರು.

ರಾಮಕೃಷ್ಣ ಪರಮ ಹಂಸರ ಬೋಧೆಯಿಂದ ಆಕರ್ಷಿತರಾಗಿ, ಇವರು ತಮ್ಮ ಹದಿನೇಳನೇ ವರ್ಷ ಪ್ರಾಯದಲ್ಲಿ ಬೆಂಗಳೂರಲ್ಲಿ ರಾಮಕೃಷ್ಣ ಆಶ್ರಮವನ್ನು ಸೇರಿದರು. ಪರಮ ಹಂಸರ ಹಲವು ಶಿಷ್ಯರೊಂದಿಗೆ ವಾಸಿಸುವ ಸಂದರ್ಭವು ಇವರಿಗೆ ದೊರಕಿದ್ದಿತು. ಸ್ವಾಮಿ ವಿವೇಕಾನಂದರು 1897ರಲ್ಲಿ ಪಾಶ್ಚಿಮಾತ್ಯ ದೇಶಗಳಿಂದ ಮರಳಿಬಂದಾಗ, ಸ್ವಾಮಿ ವಿರಜಾನಂದರು ಸ್ವಯಂ ಅವರ ಕೈಕೆಳಗೆ ಸೇವೆ ನಡೆಸಿದ್ದರು. ಅದೇ ವರ್ಷ ಅವರು ಸನ್ಯಾಸ ಸ್ವೀಕಾರ ಪಡೆದು, ಪೂರ್ವ ಬಂಗಾಳಕ್ಕೆ ಧರ್ಮ ಪ್ರಚಾರಕ್ಕಾಗಿ ಹೋದರು. ನಂತರ ಹಲ ಕಾಲ ಅವರು ಉತ್ತರ ಬಂಗಾಳದಲ್ಲಿ ಹೆಚ್ಚಾಗಿ ಆಲ್ಮೋರಾದ ಅದ್ವೈತ ಆಶ್ರಮದಲ್ಲಿದ್ದರು.

ಅವರು 1906ರಲ್ಲಿ ಬೇಲೂರು ಮಠದ ಟ್ರಸ್ಟಿಗಳಾಗಿ ನೇಮಕಹೊಂದಿದರು. ಪ್ರಥಮ ಅಧ್ಯಕ್ಷಸ್ವರೂಪಾನಂದರ ನಂತರ ಅದೇ ವರ್ಷ ಅವರು ಮಾಯಾವತಿ ಆಶ್ರಮದ ಮೇಲಧಿಕಾರಿಗಳಾದರು. 1913ರ ವರೆಗೆ ಅವರು ಈ ಹುದ್ದೆಯನ್ನು ನಿರ್ವಹಿಸುತ್ತಿದ್ದು, ಪ್ರಬುದ್ಧ ಭಾರತ ಪತ್ರಿಕೆಯ ಸಂಪಾದಕರಾಗಿಯೂ ಇದ್ದರು. ಮರುವರ್ಷ ಸ್ವಾಮಿ ವಿರಾಜಾನಂದರು ಆಲ್ಮೋರ ಜಿಲ್ಲೆಯ ಶ್ಯಾಮಲತಲದಲ್ಲಿ ವಿವೇಕಾನಂದ ಆಶ್ರಮವನ್ನು ಸ್ಥಾಪಿಸಿ, ಅನೇಕ ವರ್ಷ ಅಲ್ಲಿ ಹಿಮಾಲಯದ ಗುಡ್ಡ ಕಾಡುಗಳ ಶಾಂತ ವಾತಾವರಣದಲ್ಲಿ ಧ್ಯಾನಮಗ್ನರಾಗಿ ಜೀವಿಸುತಿದ್ದರು. 1926ರಲ್ಲಿ ಅವರು ಬೇಲೂರಿಗೆ ಜಾತ್ರೆಗೆ ಬಂದರು. ಅಂದಿನಿಂದ ರಾಮಕೃಷ್ಣ ಮಠದ ಕಾರ್ಯಗಳಲ್ಲಿ ಚಟುವಟಿಕೆಯ ಭಾಗವನ್ನು ವಹಿಸುತ್ತಿದ್ದರು. 1934ರಲ್ಲಿ ಕಾರ್ಯದರ್ಶಿಯಾಗಿಯೂ, ಕಳೆದ ಮೇ ತಿಂಗಳಲ್ಲಿ ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

— ಜೈ ರಾಮಕೃಷ್ಣ.

ಮುಂಬಯಿ ಅಸೆಂಬ್ಲಿಯಲ್ಲಿ ಕನ್ನಡದಲ್ಲಿ ಪ್ರಶ್ನೋತ್ತರ

ತಾ 17ರಲ್ಲಿ ಪೂಣೆಯಲ್ಲಿ ಅಸೆಂಬ್ಲಿ ಸಭೆ ಜರಗಿದಾಗ ಶ್ರೀ. ಪದಪ್ಪ ಜಕಾತಿಯವರು ಮುಖ್ಯ ಮಂತ್ರಿಗಳಿಗೆ ಕನ್ನಡದಲ್ಲಿ ಕೆಲವು ಅವಸರದ ಪ್ರಶ್ನೆಗಳನ್ನು ಕೇಳಿದರು. ಅವಸರದ ಪ್ರಶ್ನೆಗಳನ್ನು ಅಸೆಂಬ್ಲಿಯಲ್ಲಿ ಕನ್ನಡದಲ್ಲಿ ಕೇಳಿದ್ದು ಇದೇ ಮೊದಲನೆಯದು. ಈ ತನಕ ಯಾರೂ ಹಾಗೆ ಕೇಳಿದವರಿಲ್ಲ.

ಪ್ರಶ್ನೆಯ ವಿಷಯವು ಸರಕಾರಿ ನೌಕರರಲ್ಲಿಯ ತರಗತಿ ಮತ್ತು ವರ್ಗೀಕರಣ. ಅವರ ಸಂಬಳದ ಹೊಸ ಸ್ಕೇಲ್ ಆಗಿತ್ತು. ಪ್ರಧಾನಮಂತ್ರಿಗಳಾದ ಶ್ರೀ. ಖೇರರು ಉತ್ತರ ಕೊಟ್ಟುದಾದರೂ ಕನ್ನಡದಲ್ಲಿ ಯೇ. ಶ್ರೀ ಜಕಾತಿಯವರ ಕನ್ನಡಾಭಿಮಾನವು ಸ್ತುತ್ಯಾರ್ಹವಾಗಿದೆ.

ಗಡಿನಾಡು ಅಹಿಂಸೆಗೆ ಉತ್ತಮ ಕ್ಷೇತ್ರ

ಖಾನಸಾಹೇಬರು ನಿಷ್ಕಪಟಿಗಳು, ದೈವಿಕ ಮನುಷ್ಯರು; ಅಹಿಂಸೆಯಲ್ಲಿ ಅಚಲ ನಂಬುಗೆಯುಳ್ಳವರು.

ಮಹಾತ್ಮಾ ಗಾಂಧಿಯವರು, ತಮ್ಮ ಗಡಿನಾಡಿನ ಇತ್ತೀಚೆಯ ಸಂಚಾರದ ಕುರಿತು ಹರಿಜನದಲ್ಲಿ ಬರೆದಿರುವರು. ಈ ಸಂದರ್ಭದಲ್ಲಿ ಅವರು ಹೀಗೆ ಅಭಿಪ್ರಾಯಪಟ್ಟಿರುವರು. "ಗಡಿನಾಡೆಂಬುದು ನಾನು ಆಗಾಗ್ಯೆ ಸಂದರ್ಶಿಸಬಹುದಾದ ಯಾತ್ರಾಸ್ಥಳ ಹಿಂದೂದೇಶದ ಬೇರೆ ಪ್ರಾಂತ್ಯಗಳು ಒಂದು ವೇಳೆ ಅಹಿಂಸೆಯ ಆಚರಣೆಯಲ್ಲಿ ಹಿಂದೆ ಬೀಳಬಹುದು ಆದರೆ, ಗಡಿನಾಡು ಈ ಕಠಿಣ ಪರೀಕ್ಷೆಯಲ್ಲಿ ಉತ್ತೀರ್ಣತೆಯನ್ನು ಪಡೆಯುವುದೆಂದು ನನಗೆ ತೋರುತ್ತ"ದೆ. ಅವರು, ಅಬ್ದುಲಗಾಫರ ಖಾನ ಮತ್ತು ಅವರ ಹಿಂಬಾಲಕರನ್ನು ಪ್ರಶಂಶಿಸುತ್ತಾ ತಿರುಗಿ ತನಗೆ ಮಾರ್ಚ ತಿಂಗಳಲ್ಲಿ ಅಲ್ಲಿಗೆ ಹೋಗಬೇಕೆಂಬ ಇರಾದೆಯನ್ನು ವ್ಯಕ್ತಪಡಿಸಿದರು.

ಅನಂತರ ಅವರು ಮುಂದರಿಸುತ್ತಾ, "ಖಾನ ಸಾಹೇಬರ ದಳವು ಹೇಗೂ ಇರಲಿ, ಅಂತೂ ನಾಯಕ ಖಾನರು ಶುದ್ಧ ದೈವಿಕ ಮನುಷ್ಯರೆಂಬುದರಲ್ಲಿ ಅನುಮಾನವಿಲ್ಲ ಅವರು ದೇವರ ಚೇತನ ಶಕ್ತಿಯನ್ನರಿತವರು. ತನ್ನನ್ನು ದೈವೇಚ್ಛೆಗೆ ಒಳಪಡಿಸಿಕೊಂಡವರು. ಹೀಗಾಗಿ ಅವರು ತನ್ನನ್ನು ದೇವರ ಆಧೀನಕ್ಕರ್ಪಿಸಿ, ಆಗುಹೋಗುಗಳ ಕಡೆಗೆ ಅವರು ನಿರ್ಲಕ್ಷಿಸಿರುವರು. ಅವರಿಗೆ ಅಹಿಂಸೆ ವಿನಾ ಪಠಾಣರು ಉದ್ಧಾರ ಹೊಂದಲು ಬೇರೆ ಮಾರ್ಗವಿಲ್ಲವೆಂದು ಪೂರ್ಣ ನಂಬಿಕೆಯಿದೆ ಪಠಾಣರು ಚತುರ ಯೋಧರೆಂಬುದರಲ್ಲಿ ಅವರು ಅಭಿಮಾನಪಡುವುದಿಲ್ಲ ಪಠಾಣರು ಧೀರರಿರುವುದು ಸಹಜ; ಆದರೆ ಧೀರರೆಂಬ ಅತೀವ ಹೊಗಳುವಿಕೆಯಿಂದ ಅವರು ಹಾಳಾಗಿದ್ದರೆಂದೂ ಅವರು ಅಜ್ಞಾನದಲ್ಲಿರಿಸಲ್ಪಟ್ಟಿದ್ದಾರೆಂದೂ ಅವರ ಭಾವನೆ. ಪಠಾಣರು ಇಂದಿಗಿಂತಲೂ ಹೆಚ್ಚಿನ ಧೀರರಾಗಬೇಕು. ಆದರೆ ಅಧೀರತೆಯೊಂದಿಗೆ ತಿಳುವಳಿಕೆಯು ಸೇರಿರಬೇಕು. ಹೀಗಾಗಲು ಅಹಿಂಸೆಯೊಂದರಿಂದಲೇ ಸಾಧ್ಯವೆಂದು ಅವರ ವಿಶ್ವಾಸ.

ಖಾನಸಾಹೇಬರು ನನ್ನ ಅಹಿಂಸೆಯಲ್ಲಿ ನಂಬುಗೆ ಹಿಡಿದವರಾದುದರಿಂದ ನಾನು ತನ್ನ ಕಿಸ್ಮತಗಾರರೊಂದಾಗಿ ಆದಷ್ಟು ಸಮಯ ನಿಲ್ಲಬೇಕೆಂದು ಅವರ ಆಶೆ ನನಗೆ ಈ ವಿಷಯದಲ್ಲೇನೂ ಒತ್ತಾಯಬೇಕಾಗಿರಲಿಲ್ಲ. ಯಾಕೆಂದರೆ ನನಗೆ ಅವರ ಪರಿಚಯ ಮಾಡಿಕೊಳ್ಳಬೇಕೆಂದು ತುಂಬಾ ಆಶೆಯಿತ್ತು. ಅವರ ಹೃದಯವನ್ನು ಸೇರಬೇಕೆಂಬುದು ನನ್ನ ಬಯಕೆ. ನಾನು ನನ್ನ ಕಾರ್ಯದಲ್ಲಿ ಎಷ್ಟು ಯಶಸ್ವಿಯಾದೆನೆಂದು ಹೇಳಲಾರೆ ಹಾಗೂ ನನ್ನ ಪ್ರಯತ್ನವೆಂತೂ ಮಾಡಿದೆ.

ನಾನೆಂತು ಅವರೊಂದಿಗೆ ನನ್ನ ತತ್ವವನ್ನು ಪ್ರಯೋಗಿಸುವಂತೆ ನೋಡಿದೆ ಎಂಬುದರ ಮೊದಲು ನನಗೆ ಆತಿಥ್ಯವಿತ್ತ ಖಾನ್ ಸಾಹೇಬರ ವಿಷಯ ಸ್ವಲ್ಪ ತಿಳಿಸಬೇಕಾಗುತ್ತದೆ. ಈ ಸಂಚಾರದ ಕಾಲದಲ್ಲೆಲ್ಲಾ ನಾನು ಸಾಧ್ಯವಾದಷ್ಟು ಸೌಖ್ಯದಲ್ಲಿರಬೇಕೆಂಬುದು ಅವರ ಹಂಬಲು. ಅವರು ಸಾಧ್ಯವಾದರೀತಿಯಲ್ಲಿ ನಾನು ಆಯಾಸಗೊಳ್ಳದಂತೆ, ತೊಂದರೆಗೊಳ್ಳದಂತೆ ಲಕ್ಷಿಸುತ್ತಿದ್ದರು. ಅವರ ಉಪಚಾರವೆಂಬುದು ಸೋಗಿನದ್ದಲ್ಲ. ಅವರ ಸ್ವಾಭಾವಿಕ ಗುಣ ಹೃದಯದ ವರ್ತನೆ. ಅವರಲ್ಲಿ ಯಾವ ವಿಷಯದಲ್ಲಿಯೂ ವಂಚನೆಯ ಲಾಂಛನವಿರದು ನಾವು ಒಬ್ಬರನ್ನೊಬ್ಬರು ಅಗಲುವಾಗ ನಮ್ಮ ಕಣ್ಣಿನಲ್ಲಿ ನೀರು ಸುರಿಯಿತು. ತಿರುಗಿ ಮಾರ್ಚಿಯಲ್ಲಿ ಸೇರುವೆವು ಎಂಬುದು ನಮ್ಮ ನಿರೀಕ್ಷೆ. ನನಗೆ ಗಡಿನಾಡೆಂಬುದು ಆಗಾಗ್ಗೆ ಸಂದರ್ಶನೆಮಾಡಬಹುದಾದ ಯಾತ್ರಾಸ್ಥಳವಾಗಿರುವುದು. ಹಿಂದೂದೇಶದ ಇನ್ನಾವಭಾಗವೂ ಅಹಿಂಸಾಚರಣೆಯಲ್ಲಿ ಹಿಂದೆ ಬೀಳಬಹುದು ಆದರೆ ಗಡಿನಾಡು ಉತ್ಕೃಷ್ಟ ಕ್ಷೇತ್ರವಾಗಿ ಉಳಿದೀತೆಂದು ನನ್ನ ಭರವಸೆ.

ವಾರ್ತಾವಾಹಿನಿ

ಕ್ಷಾಮ ಪೀಡಿತ ರೈತರಿಗೆ ಸಹಾಯ

ಪಂಜಾಬ್ ಸರ್ಕಾರದವರು ನೀರಾವರಿ ತೆಂಗೆಯಲ್ಲಿ ೯॥ ಲಕ್ಷ ರೂಪಾಯಿಗಳನ್ನು ಕ್ಷಾಮ ಪೀಡಿತ ರೈತರಿಗೆ ಮಾಫಿ ಮಾಡಿರುತ್ತಾರೆ.

ಕಾನ್ಪುರದಲ್ಲಿ ಭಿಕ್ಷ ವೃತ್ತಿ ನಿಲ್ಲಿಸಲ್ಪಡುವಂತೆ ಪೌರ ಸಭೆಯವರು ಕಾಯಿದೆಯನ್ನು ಏರ್ಪಡಿಸುವರಾಗಿ ತಿಳಿದುಬರುತ್ತದೆ.

ದಕ್ಷಿಣ ಭಾರತ ಹಿಂದೀ ಸಭೆಯ ಕಾರ್ಯದರ್ಶಿಯವರು ಹೀಗೆ ತಿಳಿಸುತ್ತಾರೆ.

'ದಕ್ಷಿಣ ಭಾರತ ಹಿಂದೀ ಸಭೆಯ ಆಡಳಿತ ಮಂಡಲವನ್ನು ಪುನರಾವರ್ತಿ ರಚನೆ ಮಾಡುವ ಸಂದರ್ಭದಲ್ಲಿ ಸಭೆಯು ಆರುಮಂದಿ ಪದವೀಧರರಿಂದ ಸೇರಿಸಲಾಗುವುದು. 1936ನೇ ಇಸವಿಯಲ್ಲಿಯ ಮೊದಲು ರಾಷ್ಟ್ರಭಾಷಾ, ವಿಶಾರದ ಅಥವಾ ಹಿಂದೀ ಪ್ರಚಾರಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ತಮ್ಮ ಹೆಸರನ್ನು ಹಿಂದೀ ಸಭೆಯಲ್ಲಿ ರಿಜಿಸ್ಟರ್ ಮಾಡಿದವರು, ಈ ಮೇಲಣದಕ್ಕೆ ನೇಮಕಹೊಂದಲರ್ಹರು. ನವಂಬರ ತಾ. 30ರ ಮೊದಲು ಹೆಸರನ್ನು ರಿಜಿಸ್ಟ್ರಿ ಮಾಡಿಸಬೇಕು. ಆದುದರಿಂದ ಸಂಬಂಧಪಟ್ಟವರು ಸಭೆಯ ಕಾರ್ಯಾಲಯಕ್ಕೆ ಬರೆಯತಕ್ಕದ್ದು.'

ಮಿಲಿಟರಿ ತರಬೇತಿ ಮತ್ತು ಕಾಂಗ್ರೆಸ್ಸು

ಪೂನಾ ಸಿಟಿ ಕಾಂಗ್ರೆಸಿನ ಸೇವಾದಳದ ವಿಚಾರವಾಗಿ ಶ್ರೀ ರಾನಡೆಯವರು ಮಾತಾಡುತ್ತಾ ಈ ದಳವು ಕಾಂಗ್ರೆಸಿನ ಪ್ರಾಮುಖ್ಯ ತಿರುಳಾದ ಅಹಿಂಸೆಯ ನೀತಿಯ ಮೇಲೆ ತರಬೇತು ಪಡೆಯುತ್ತಿದೆಯೆಂದರು. ಆದಿನ ಮುಂಬಾಯಿ ಎಸೆಂಬ್ಲಿ ಸ್ಪೀಕರ ಮಲ್ವಾನಕರರು–ಅಧ್ಯಕ್ಷರು, ಯೋಗ್ಯತಾ ಪತ್ರವನ್ನು ಹಂಚುತ್ತಾ ಹೀಗೆಂದರು "ಕೋಂಗ್ರೆಸ್ ಸ್ವಯಂ ಸೇವಕರಿಗೆ ಮಿಲಿಟರಿ ತರಬೇತು ಆಗತ್ಯ. ಪ್ರತಿಹಿಂಸೆಮಾಡುವಷ್ಟು ಸಾಮರ್ಥ್ಯವುಳ್ಳವರಿದ್ದೂ ಹಾಗೆ ಮಾಡದಿರುವವರಿಗೇನೇ ಅಹಿಂಸೆಯು ಭೂಷಣ ಇಂದಿನ ಜಗತ್ತಿನ ಜನಾಂಗಗಳು ಹಿಂಸಾಮಯ ತರಬೇತು ಪಡೆಯುತ್ತಿರುವಾಗ ಹಿಂದೂಸ್ಥಾನವು ಅಹಿಂಸೆಯ ಪ್ರಭಾವದಿಂದ ದೇಶದ ಮತ್ತು ಜಗತ್ತಿನ ಕಲ್ಯಾಣಕ್ಕಾಗಿ ಕೋರುತ್ತಿದೆ.' ಎಂದರು.

ಪ್ರೆಸಿಡೆಂಟ ಭೋಸರ ಸಂಚಾರ

ಭೋಸರು ಕಾನ್ಪೂರದಿಂದ ಲಾಹೋರಿಗೆ ತೆರಳಿ, ಅಲ್ಲಿ ಪ್ರಮುಖ ಮುಖಂಡರೊಡನೆ ಪಂಜಾಬಿನ ಕಾಂಗ್ರೆಸ ವಿಚಾರದಲ್ಲಿ ಮಾತುಕತೆ ನಡೆಸುವರು. ಅನಂತರ ಅವರು ಅಲ್ಲಿಂದ ಕರಾಚಿಗೆ ಹೋಗಿ, ಅಲ್ಲಿಂದ ಹೈದರಾಬಾದು, ಕಲ್ಕತ್ತೆಕ್ಕೆ ತೆರಳುವರಾಗಿ ತಿಳಿದು ಬಂದಿದೆ. ವಾರ್ಧದ ವರ್ಕಿಂಗ್ ಕಮಿಟಿ ಮೀಟಿಂಗು ಜರಗಿದ ನಂತರ ಮದ್ರಾಸು ಸಂಚಾರ ಮಾಡಲಿರುವರೆಂದು ಅಭಿಪ್ರಾಯವಿದೆ. ವಾರ್ಧದಲ್ಲಿ ಡಿಸೆಂಬರದಲ್ಲಿ ಮೀಟಿಂಗಿನ ವ್ಯವಸ್ಥೆ ಮಾಡುವಂತೆ ಜನರಲ್ ಸೆಕ್ರೆಟರಿ ಶ್ರೀ ಕೃಪಾಲಿನಿಯವರಿಗೆ ತಿಳಿಸಿರುವರು

ಆಶ್ರಿತ ಸಂಸ್ಥಾನಗಳಲ್ಲಿ ಹೋರಾಟ

ಇಂದೀಗ ದೇಶೀಯ ಸಂಸ್ಥಾನಗಳಲ್ಲಿ ಪ್ರಜಾ ಪ್ರಭುತ್ವಕ್ಕಾಗಿ ಹೋರಾಟ ಹೆಚ್ಚುತ್ತಿರುವುದು. ತಿರುವಾಂಕೂರಿನಲ್ಲಿ ಗಲಭೆಯು ಮುಗಿದಿಲ್ಲ ಹೈದರಾಬಾದಿನಲ್ಲಿ ಸೆರೆಮನೆಯಲ್ಲ ಜನರು ಹೆಚ್ಚುತ್ತಿದ್ದಾರೆ. ಒರಿಸ್ಸಾ ಸಂಸ್ಥಾನದಲ್ಲಿ ಗೋಳಿಬಾರು ಮುಂದರಿಯುತ್ತಿದೆ. ರಾಜಾಧಿಕಾರಿಗಳು ಪ್ರಜೆಗಳ ಮಾತಿಗೆ ಗಮನ ಕೊಡದ ವಿನಾ ಹೋರಾಟವು ನಿಲ್ಲುವಂತಿಲ್ಲ, ಪ್ರಜಾ ಪ್ರಾತಿನಿಧ್ಯ ಸರಕಾರವು ದೊರೆಯುವಂತಾದರೆ ಮಾತ್ರ ಈ ಗಲಭೆಯು ನಿಲ್ಲಬಹುದು

ವಿಶೇಷ ಸಂಚಿಕೆ.

ನವಯುಗದ

ಮಕರ ಸಂಕ್ರಾಂತಿ ವಿಶೇಷ ಸಂಚಿಕೆಯು

ನಿರೀಕ್ಷಿಸಿರಿ

ಕರ್ನಾಟಕದ ಪ್ರಸಿದ್ಧ ಗಾರರ ಬರಹಗಳಿಂದಲೂ ನೂರಾರು ಚಿತ್ರಗಳಿಂದಲೂ ನೂರೈವತ್ತಕ್ಕೂ ಮಿಕ್ಕಿದ ಪುಟಗಳಿಂದಲೂ ಕೂಡಿ ಚಿತ್ತಾಕರ್ಷಕವಾಗಿ

ತಾ. 12—1—1939ಕ್ಕೆ ಹೊರಡುವುದು.

10,000ಕ್ಕೂ ಹೆಚ್ಚು ಪ್ರತಿಗಳು ಮುದ್ರಿಸಲ್ಪಟ್ಟು ಅಖಿಲ ಕರ್ನಾಟಕದಲ್ಲೂ ಕನ್ನಡಿಗರು ನೆಲಸಿರುವ ಎಲ್ಲ ಕಡೆಗಳಲ್ಲೂ ಪ್ರಸಾರವಾಗುವುದು. ಈಗಾಗಲೇ ಸಾವಿರಾರು ಪ್ರತಿಗಳಿಗೆ ಆರ್ಡರು ಬಂದಿರುವುದು.

ಜಾಹೀರಾತುದಾರರಿಗೆ ಸುವರ್ಣ ಸಂದರ್ಭ!

ಜಾಹೀರಾತಿನ ದರಗಳಿಗೂ ಏಜನ್ಸಿ ಶರ್ತಗಳಿಗೂ ಮಿಕ್ಕ ವಿಚಾರಗಳಿಗೂ ಒಡನೆ ಬರೆಯಿರಿ.

ಮೆನೇಜರ್: - - - ನವಯುಗ, - - - ಉಡುಪಿ.

'ಸ, ರಿ, ಗ, ಮ, ಪ, ದ, ನಿ, ಸ.'

(The seven notes of the gamut.)

(ಲೇಖಕರು:-ಶ್ರೀ ಬಿ. ತ್ಯಾಂಪು ರಾಯ. ಶೆಟ್ರು, ಬಿ. ಎ., ಎಲ್. ಟಿ, ಉಡುಪಿ.)

Gentle reader, do you want the sweet music of life? Do you want to pass from chaos to cosmos, harmony to harmony and victory to victory? Then you must know how to play on the violin of life. Very often we mishandle this instrument and overemphasize certian notes. Thus harmony is lost and disharmony prevails. Wealth alone does not suffice, fine arts alone do not touch all points of life. Life is very wide and varied. A woman who is good only at her banjo and bad at her brooms and neglects her pots and pans is only a tinted butterfly—a doll. A man, who looks majestic with his pen only or his tongue but is awkward with his spade, is only a milk-sop. We must touch all points of life—at least try to touch as many points as possible. If one of the notes of the gamut is missing, there is no music, there is only noise. So there is no use overpitching only certain points. We must coordinate all points. Life wants the hand-shake of the big man as well as the touch of the poor man. A broad observer of life is an artist. He will stress every point properly and thus evolve the sweet music of life.

ಮಗಳು—ಸರಿಗಮ ಪದನಿಸ। ಸನಿಧಪ ಮಗರಿಸ॥ ಸರಿಗಮ ಸರಿಗಮ ಸರಿಗಮಪಧನಿಸ। ಸನಿಧಪ ಸನಿಧಪ ಸನಿಧಪ ಮಗರಿಸ॥ ಸರಿಗಮ ಸರಿಸರಿ.......

ತಂದೆ—ವಿಮ್ಲಾ, ಸಾಕುಮಾಡೇ. ಸರಿ ಸರಿ, ಗಸ, ಗಮ! ಎರಡು ಬಿದಿರಿನ ತುಂಡುಗಳನ್ನು ಹಿಡಿದುಕೊಂಡು ಇದೇ ಆಯಿತು. ಇಡೀ ದಿವಸ ಇದೇ- ಸರಿ, ಸರಿ! ಏನು ಸರಿ? ಮನೆಯೆಲ್ಲಾ ಸರಿಯಾಗೋದೇ? ಬೆಳಿಗ್ಗೆ ಏಳು ಗಂಟೆಗೆ ಎಳ್ಳೋದು, ತಲೆ ಚೆಂದಾಗಿ ಬಾಚಿ ಪೌಡರ್ ಬೈತಲೆಹಾಕಿ ಪ್ಯಾಟೀ ಸೂಳೇರ ಹಾಂಗೆ ಕೂತುಕೊಂಬೋದು! ಇದೇ ಆಯಿತು ಇವ್ಳಕ್ಕೆ, ಅಡಿಗೆಕೋಣೆ ಎಲ್ಲಿ, ಏನು ಅಂತ ಗೊತ್ತೇ ಇಲ್ಲ. ಅಡಿಗೆ ಮಾಡೋಕೆ ಬೇರೆ ಜನಬೇಕು. ಒಂದು ತಂಬಿಗೆ ನೀರು ಎಳಿಯೋಕೆ ಗೊತ್ತಿಲ್ಲ! ಈ ಬಿಳೀ ಸೀರೆ ಉಟ್ಕೊಂಡು ಅಡಿಗೆಮನೆಗೆ ಹೋದರೆ ಎಲ್ಲಾ ಕಪ್ಪು ಆಗುತ್ತೆ. ಅಯ್ಯೋ, ಈ ಸಿಲ್ಕಿಗಿಲ್ಕೊಂತ ನಮ್ಮ ಶಿಲ್ಕಿ ಇಲ್ಲಾ! ಇದೆಲ್ಲಾ—ಈ ಸರಿ, ಸರಿ, ಗಮ, ಗಮ ನಮ್ಮ ಹೆಮ್ಮಕ್ಕಳಿಗೆ ಯಾಕೆ? ಅದರಿಂದ ಹೊಟ್ಟೆ ತಣಿಯುತ್ತೋ? ಮನೆ ತುಂಬುತ್ತೋ? ಮನೆಗೆಲಸ ಕಲಿಯೋ ಮೊದಲು! ಈಗಿನ ಹೆಮ್ಮಕ್ಕಳಿಗೆ ಬೇಡಾದ್ದು ಮೊದಲಾಗಿ ಬೇಕು! ಬೇಕಾದ್ದು ಬೇಡವೇ ಬೇಡ! ಹಳ್ಳಿ, ಹಲ್ಲಿ ವ್ಯಾಪಾರ! ಹೋಗೆ, ಬಿಡು ಅದನ್ನು!

ಮಗ—ಅಪ್ಪಯ್ಯಾ, ಯಾಕೆ ಅನಾವಶ್ಯಕವಾಗಿ ರೇಗುತ್ತೀರಿ? ನಮ್ಮ ವಿಮಲೆಯು ಗಾಯಕಲೋಲೆಯಾಗುವುದು ಬೇಡವೇ? ಈ ಕಾಲದಲ್ಲಿ ಗಾಯನ ಕಲಿಯದ ಹುಡುಗಿಯರನ್ನು ಈಗಿನ ಕಲಿತ ಹುಡುಗರು ವಿವಾಹ ಮಾಡಿಕೊಳ್ಳಲು ಕೇಳುವುದಿಲ್ಲ. ಅಪ್ಪಾ! ಕಾಲ ಯಾವುದು, ಏನು ಎಂಬುದನ್ನು ನೋಡದೆ, 'ಏಕ್ ಡಂ', ಹುಡುಗಿಯನ್ನು ಗದರಿಸುವದೆಂದರೇನು? ನಾನು ನಮ್ಮ ವಿಮಲೆಗೆ ಗಾಯನ ಕಲಿಸಲು ಮೊನ್ನೆ ಏರ್ಪಾಡು ಮಾಡಿದ್ದಷ್ಟೆ! ಗಾಯನ ಮಾಸ್ತರು ಪ್ರತಿ ಸಂಜೆಗೂ ಬರುತ್ತಾರೆ. ವಿಮಲೆಯು ಕಲಿಯಲಿ. ಅವಳಿಗೆ ಅದರಲ್ಲಿ ನಿರುತ್ಸಾಹಗೊಳಿಸಬಾರದು. ಇದೆಲ್ಲಾ ಇಂದಿನ ಜೀವನಕ್ಕೆ ಅಗತ್ಯ, ಅತಿ ಅಗತ್ಯ!

ತಂದೆ—ಇಂದಿನ ಜೀವನ, ಇಂದಿನ ಜೀವನವೆಂದು ಕುಣಿಕುಣಿದು ಮನೆ ಎಲ್ಲಾ-ಕೊರೆದು ಹೋಯಿತು. ಆ ಕಡೆಗೆ ಕಣ್ಣು ಬೀಳೋದೇ ಇಲ್ಲ. 'ಏಕ್ ಡಂ,' ಇಂದಿನ ಜೀವನ ಪ್ರವಾಹದಲ್ಲಿ ಹಾರಿಬಿಡುತ್ತೇವೆ. ಬಳಿದು ಹೋಗುವುದು ಗೊತ್ತೇ ಆಗುವುದಿಲ್ಲ. ನಿನಗೆ ನಾನು ಸ್ವಲ್ಪ ಇಂಗ್ಲಿಷ್ ಕಲಿಸಿ ಸಿಕ್ಕಿಬಿದ್ದೆ. ಮೋಸವಾಯಿತೆಂತೀನೆ. ನೀನು ಮನೆಯಲ್ಲಿ ಕೆಲಸ ಮಾಡೋದಿಲ್ಲ. ನಿನಗೆ 'ಕ್ರೋಪ್' ಕಟ್ಟು, ಬೀಡಿ, ಸಿಗ್ರೇಟು, ಪೇಟೆಗೆ ಹೋಗುವುದಕ್ಕೆ ದುಡ್ಡು, ವಿಮಲೆಗೆ ಗಾಯನ, ಈ ನಡುವೆ ನಾನು ಬಾಳೋದು ಹ್ಯಾಗೆ? ಈ ಮನೆ ಉಳಿಯೋದು ಹ್ಯಾಗೆ? ನೀವು ಇಂದಿನ ಹುಡುಗರು ಅರ್ಧ ಇಂಗ್ಲೀಷ್ ಕಲ್ತು ಹಳ್ಳಿಗೆ ಹೆಚ್ಚಾಗಿದ್ದೀರಿ; ಪ್ಯಾಟೆಗೆ ಕಮ್ಮಿ ಆಗಿದ್ದೀರಿ. ನಮ್ಮ ಹಿರಿಯರು ಇದನ್ನೆಲ್ಲಾ ನೋಡಲಿಲ್ಲ. ಅವರೆ ಮನೆಗಿನ ಗಟ್ಟಿಮಾಡಿದ್ದಾರೆ. ನಮಗೆ ಅದು ಇದ್ದದ್ದರಿಂದ ಗೊತ್ತಾಗುವುದಿಲ್ಲ. ಹೋದಮೇಲೆ ತಿಳಿಯುತ್ತದೆ. ನಿಮಗೆಲ್ಲಾ ಸಣ್ಣ ಹುಡುಗರಿಗೆ ಏನು ಗೊತ್ತುಂಟು? ನೋಡು, ಯಾವುದಾದರೂ ಒಂದು ವಸ್ತು ನಮ್ಮ ಹತ್ತಿರ ಇದ್ದಾಗ ಅದರ ಬೆಲೆ ಗೊತ್ತಾಗೋದಿಲ್ಲ. ಹೆಂಡತಿ ಇದ್ದಾಗ, ಹೆಂಡತಿ ಬೆಲೆ ತಿಳಿಯುತ್ತೋ? ನೀರು ಧಾರಾಳ ಇರುವಾಗ ನೀರಿಗೆ ಬೆಲೆ ಎಲ್ಲಿ? ಬರಗಾಲ ಬಂದಾಗ ಮಾತ್ರ ನೀರಿನ ಬೆಲೆ ಗೊತ್ತಾಗುತ್ತೆ. ಹಿರಿಯರು ಹೇರಾಳ ದುಡ್ಡು ಮಾಡಿದ್ದು ಇರುವಾಗ ಅದರ ಬೆಲೆಯೇ ನನಗೆ ಗೊತ್ತಿಲ್ಲ. ಅದು ಬರಿದಾದಾಗ ಒಂದು ಪೈಗೆ ಒಂದು ರೂಪಾಯಿ ಬೆಲೆ ಬರುವುದು. ಮಗಾ, ಒಂದು ವಸ್ತುವಿನ ಬೆಲೆ ಗೊತ್ತಾಗ ಬೇಕಾದರೆ ಆ ವಸ್ತುವು ನಮ್ಮ ಕೈಯಲ್ಲಿ ಇರಬಾರದು. ಆಗ ಅದಕ್ಕೆ ಬೆಲೆ ಜಾಸ್ತಿ. ನಿಮಗೆಲ್ಲಾ ಏನು ಗೊತ್ತು! ನಮ್ಮ ಹಿರಿಯರು ಬಹಳ ಕಷ್ಟಪಟ್ಟು ಸರಳ ಜೀವನಮಾಡಿ ನಮಗೆ ಹೇರಳ ಸಂಪತ್ತನ್ನು ಮಾಡಿಟ್ಟಿರುವರು. ನಮ್ಮ ಹಾಗೆ ಅವರೂ ಮಾಡುತ್ತಿದ್ದರೆ ನಾವಿಂದು ಬೆರಳು ಬಾಯಿಗೆ ಹಾಕಿಕೊಳ್ಳಬೇಕಿತ್ತು. ಹೀಗೆ ನಾವು ಇದ್ದುದನ್ನೆಲ್ಲಾ ತೆಗೆಯುತ್ತ ಹೋದರೆ ಮುಂದೆ ನಮ್ಮ ಕಿರಿಯರ ಹಾಡೇನು? ನಮ್ಮ ಇಂದಿನ ಆರ್ಥಿಕ ಸ್ಥಿತಿಗೆ ಎಂಥಾ ಇಳಿತ ಬಂದದೆ ಎಂಬೋದು ಗೊತ್ತುಂಟಾ, ಮಗಾ? ನೀನು ಅದನ್ನು ಒಂದಿಷ್ಟು ತಲೆಗೆ ತೆಕೊಳ್ಳಬೇಡವೇ? ನೋಡು ನಮ್ಮ ತೆಂಕಬೆಟ್ಟು ತ್ಯಾಂಪು ಶೆಟ್ರು ಏನು ಹೇಳುತ್ತಾರೆ ಗೊತ್ತುಂಟಾ? ಕೇಳು, ಅವರ ಮಾತನ್ನು ಕೇಳು "ಕರಿಗಂತ್ತು ಪಾಂಬು ಶೆಟ್ರೇ, ಈಗಿನ ಜೀವನವು ಕುತ್ತಿಗೆಗೊಂದು ಪಾಶ! ನನ್ನ ಮಗಳು ಸ್ವಲ್ಪ ಪಿಟಿಲು ಗಿಟಿಲು ಕಲ್ತಿದ್ಲು. ಅವಳಿಗೊಂದು ಇಂಗ್ಲಿಷ್ ಗಂಡ ಮಾಡಿಕೊಟ್ಟಿದ್ದೆ. ಐದಿಗಿದಿ ಸಾವಿರ ಸಾವಿರ ಗಟ್ಟಿಯಲ್ಲಿ ಕೊಟ್ಟಿದ್ದ ಅನ್ನಿ. ಇದೊಂದು ರೋಗ ಉಂಟಲ್ಲಾ ನಮ್ಮ ಜಾತಿಯಲ್ಲಿ! ಈಗ ಎಲ್ಲಾ ಕಣ್ಣು ತೆರೆಯುತ್ತಾ ಬರುತ್ತವೆ. ಅದರ ಮಾಡುವುದೇನು? ಕ್ಷೌರಮಾಡಿಸಿ ದಿನ ಕೇಳಿದ ಹಾಗಂತಾರಲ್ಲ! ಆ ಪಾಡು ನಮ್ಮದು! ನನ್ನ ಅಳಿಯನಿಗೆ ಎಲ್ಲಿಯೋ ಅತ್ತಲಾಗೆ, ಮದ್ರಾಸ್ ಹತ್ತಿರ ಒಂದು ಊರಂತೆ, ಅದರ ಹೆಸರೆಲ್ಲಾ ಯಾರಿಗೆ ಬರುತ್ತದೆ! ಅಲ್ಲಿ ಅವನಿಗೆ ವೆಟ್ರನ್ನೀ (Veterinary ಗೋಡಾಕ್ಟ್ರು) ಕೆಲಸ! ಸಂಬಳ ಎಂಭತ್ತು ಉಂಟಂತೆ! ನನ್ನ ಮಗಳು ಅವಳ ತಾಯಿಗೆ ಪದೇ ಪದೇ ರೂಪಾಯಿಗೆ ಬರೆಯುತ್ತಾ ಇದ್ದಾಳೆ. ಅವಳ ಕೈಯಲ್ಲಿ ಹತ್ತೈವತ್ತು ಸೀರೆ, ಒಂದು ಗ್ರಾಮಫೋನ್, ಹಾರ್ಮೋನಿ, ಪಿಟೀಲು; ಅವನ ನನ್ನ ಅಳಿಯನ ಹತ್ತಿರ ಒಂದು ಹತ್ತು ಹದಿನೈದು ಕೋಟುಗಳು. ಇಬ್ಬರಿಗೂ ರಿಸ್ಟ್‌ವಾಚ್, ಪಾಪಾಸ್, ಬೂಟ್ಸ್ ಅವಕ್ಕೆ ಕಮ್ಮಿಯೇ ಇಲ್ಲ ಅನ್ನಿ! ನಾನು ಒಮ್ಮೆ ಹೋಗಿದ್ದೆ ಅಲ್ಲಿಗೆ; ನನಗೆ ಹಿಂದೆ ಬರುವ ತನಕ ಸಾಕಾಯಿತು. ಇವನ್ನೆಲ್ಲಾ ನಾಳೆ ಮಾರಿದರೆ ಪೈಯೊಂದು ಕೊಡುವವ ಇಲ್ಲ. ಆಸ್ತಿಗೀಸ್ತೀಲಿ ದುಡ್ಡು ಹಾಕುವ ತಲೆಯೇ ಇಲ್ಲ ಅವಕ್ಕೆ! ಇದ್ದದ್ದು ತೆಗೀತೊ! ಕಣ್ಣೋ ಕಾಲೋ ಆಗಿದೆ, ಶೆಟ್ರೇ. ಈ 'ಸರಿಗಮ'ದಿಂದ ನಾವು ಬೇಗ ಸರಿಯಾಗುವುದು ನಿಶ್ಚಯ. ವಿಪರೀತ ಆಯ್ತು, ಶೆಟ್ರೇ, ಎಲ್ಲಾ ವಿಪರೀತ. ಈ ಕಣ್ಣಿನಿಂದ ನನಗೆ ನೋಡಲಿಕ್ಕೆ ಸಾಧ್ಯವಿಲ್ಲ. ಹೇಳಿದರೆ ಅಳಿಯನಿಗೂ ಮಗಳಿಗೂ ಒಟ್ಟು ಸಿಟ್ಟು ಬರುತ್ತದೆ, ಹೇಳದೆಬಿಟ್ಟರೆ ಅವರಿಗೆ ಮನೆಯಿಲ್ಲ, ನಮ್ಮ ಮನೆ ಹೋಗುತ್ತೆ. ಏನೋ, ಎಂಥೋ ಶ್ರೀ. ಭಗವಂತನೇ ಬಲ್ಲ" ಅಂದರು. ಆದಕಾರಣ ಹೆಮ್ಮಕ್ಕಳಿಗೆ ಕೆಲಸಕ್ಕೆ ಬಾರದ ಈ 'ಸ,ರಿ,ಗ,ಮ' ಕಲಿಸಿ ರಂಡಾಬಟ್ಟೆ ಖರ್ಚುಮಾಡಿ, ಆಮೇಲೊಂದು ಥಳಕು ಗಂಡನನ್ನು ಮಾಡಿಕೊಟ್ಟರೆ ಅವರು 'ಸ, ರಿ, ಗ, ಮ' ಹಾಡಿ ಎಲ್ಲಾ ಸರಿಮಾಡುತ್ತಾರೆ. ಮತ್ತೆ ಹಿಟ್ಟುಬಟ್ಟೆಗೆ ಆಕಾಶ ನೋಡಿದರೆ ಸೈ. ವಿಮ್ಲಾ, ವಿಮ್ಲಾ! ನೀನು ಮಣ್ಣಿನ ಪಾತ್ರೆಯನ್ನು ಸಮ ಉಜ್ಜಲಿಕ್ಕೆ ಕಲಿ. ದಾಸೂ, ನೀನು ಕೊಡಲಿ ಹಿಡಿದು ಆ ಸೌದೆ ಒಡೆಯುವ ಪಿಡಿ ಹಿಡಿ. ನಮ್ಮ ಮನೆಯಲ್ಲಿ ನಮ್ಮ ನಮ್ಮ ಕೆಲಸ ಮಾಡುವದರಿಂದ ನಮ್ಮ ಗೌರವ ಇಳಿಯುವುದಿಲ್ಲ. ಕೆಲಸದವರಿಗೆ ಕೊಡುವ ದುಡ್ಡು ಉಳಿಯುತ್ತದೆ. ಸಮಯ ಹಾಳಾಗೋದಿಲ್ಲ. ಕೈ ಮೈ ತುಂಬುತ್ತೆ. ದುರ್ಬುದ್ಧಿ ಬರೋದಿಲ್ಲ. ಹೋಗಿ, ಮಕ್ಕಳೇ ಹೋಗಿ! ಇದೆಲ್ಲಾ ಬೇಡ ಇನ್ನೂ ಇನ್ನೂ! ಹುಡುಗಿಯರು ನಮ್ಮ ಹಿರಿಯರ ಕಾಲದ ಹಾಗೆ ಮನೆಕೆಲಸ ಸಮಾ ಕಲಿಯಬೇಕು—ತ್ಯಾಂಪು ಶೆಟ್ರು ಹೇಳುತ್ತಾರೆ-ಅವರ ಅಳಿಯನಿದ್ದಲ್ಲಿಗೆ ಕೆಲಸದವರನ್ನು ಕಳುಹಿಸಿ ಕಳುಹಿಸಿ ಸಾಕಾಯಿತು ಅಂತೆ-ಅಳಿಯನು ಮತ್ತು ಮಗಳು ಜೋಕುಮಾಡುವುದೇ-ಮನೆ ಗುಡಿಸಲಿಕ್ಕೂ ಮಗಳಿಗೆ ಗೊತ್ತಿಲ್ಲ-ಕೆಲಸದವರು ಮಾಡಿದ್ದು ಸ್ವಲ್ಪ 'ಮಿಸ್ಟೇಕ್' ಆದರೆ-ಡಿಸ್‌ಮಿಸ್'! ಇನ್ನು ಊರಲ್ಲಿ ಯಾವ ಆಳೂ ಉಳಿದಿಲ್ಲ! ಅವರ ಅಳಿಯನಿಂದ ಒಂದು ಜನಮಾಡುವುದಕ್ಕೆ ಸಾಧ್ಯವಿಲ್ಲ. ಬೇರೆಯವರು ಮಾಡಿಕೊಟ್ಟರೆ 'ಡಿಸ್‌ಮಿಸ್' ಮಾಡುವುದಕ್ಕೆ ಮಾತ್ರ ತಯಾರು! ಅವರು ಹೇಳುತ್ತಾರೆ, "ನೋಡಿ, ಪಾಂಬು ಶೆಟ್ರೇ, ಇನ್ನು ಇಂಥಾ ಜಂಜಾಲು ಎಲ್ಲಾ ಹಚ್ಚಿಕೊಳ್ಳುವುದಕ್ಕಿಂತ ಸುಲಭ ಕೆಲಸ ಯಾವುದು ಗೊತ್ತೋ? ಹೆಣ್ಣುಮಕ್ಕಳಿಗೆ ಈ 'ಸರಿಗಮ' ಕಲಿಸಿ ಸಾವಿರ ಸಾವಿರ ರೂಪಾಯಿ ಬದಿಕೊಟ್ಟು ಒಣ ಹೆಸರಿಗೆ ಬೇಕಾಗಿ ಈ 'ಇಂಗ್ಲೀಷ್ ಹುಡುಗರನ್ನೋ, ಈ ಗುತ್ತು, ಆ ಬೆಟ್ಟಿನ, ಥಳಕು, ದುರಭ್ಯಾಸದ ಭರವಸೆಗಾರರನ್ನೋ ಕಟ್ಟಿಕೊಡುವುದನ್ನು ಬಿಟ್ಟು, ಮನೆಗೆಲಸ ಚೆನ್ನಾಗಿ ಕಲಿಸಿಕೊಟ್ಟು, ಒಳ್ಳೇ ಗದ್ದೆ ಕೆಲಸಮಾಡುವ ಗಟ್ಟಿಮುಟ್ಟಿನ ಒಬ್ಬ ಹುಡುಗನಿಗೆ ಗಟ್ಟಿ ಹೋರಿಜೋಡಿನ ವರದಕ್ಷಿಣೆಕೊಟ್ಟು ಲಗ್ನಮಾಡಿದರೆ ಸುಖ ಹೆಚ್ಚು-ಅಂತ ನನ್ನ ಅಭಿಪ್ರಾಯ. ಅವರಿಗೂ ಸುಖ, ನಮಗೂ ಸುಖ ಇಂದಿಗೂ ಕ್ಷೇಮ, ಮುಂದಿಗೂ ಕ್ಷೇಮ. ಅಂತೂ ಜಾತಿಗೊಂದು ಪ್ಯಾಶ! ಇದ್ದ ಮನೆಯನ್ನು ಕಳಕೊಳ್ಳುವ ಈ ವ್ಯಾಪಾರ ಬೇಡ," ಎಂದು.

ಮಗ—ಅಪ್ಪಯ್ಯಾ, ಇವಕ್ಕೆಲ್ಲಾ ಇಂದು ಹಳಸಿ ತಂಗಳಾದ ಅಭಿಪ್ರಾಯ ಆಗು

ಬೇಕಾಗಿದ್ದಾರೆ

ಜಗತ್ಪ್ರಸಿದ್ಧವಾದ ಯುರೋಪಿಯನ್ ವಿಮಾ ಕಂಪೆನಿಗೆ ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆಗಳ ಪ್ರತಿ ಒಂದು ತಾಲೂಕುಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಯೋಗ್ಯ ರೀತಿಯಿಂದ ಕೆಲಸ ಮಾಡುವವನು ತಿಂಗಳಿಗೆ ರೂಪಾಯಿ 100ರಂತೆ ಸಂಪಾದನೆ ಮಾಡಬಹುದು.

ವಿಶೇಷ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ ಯಮ್ ಪಾಂಡ್ಯ, ಬಿ.ಯಸ್ಸಿ ಸೆಕ್ರೆಟರಿ, ಅಲ್ಲಿಯಾನ್ಸ್ ಉಂಡ್ ಸ್ಟೆಟಗಾರ್ಟರ್ ಲೈಫ್ ಇನ್ಶೂರೆನ್ಸ್ ಬ್ಯಾಂಕ್, ಲಿಮಿಟೆಡ್, ಪೋಸ್ಟ್ ಬಾಕ್ಸ್ ನಂ 451, ಮುಂಬಾಯಿ.	C. M. PANDYA, B. Sc. *SECRETARY*, ALLIANZ UND STUTTGARTER LIFE INSURANCE BANK LIMITED Post Box No 451 BOMBAY.

ತ್ತಾರೆ! ಇಂದಿನ ಬಿಸಿ ಬಿಸಿ ಹೊಸ ಹೊಸ ಅಭಿಪ್ರಾಯವೇ ಬೇರೆ ಇದೆ. ಲೋಕವು ಬಹಳ ಪ್ರಗತಿಯನ್ನು ಹೊಂದಿದೆ. ಮುಂದಿನವರ ಜೀವನದ ರೀತಿಯಲ್ಲಿ ಈಗಿನವರಿಗೆ ಸಾರವಿಲ್ಲ ನೀವು ಈ ತರದ ಸಂಶಯವನ್ನು ಬಿಡಬೇಕು. ನಮ್ಮ ವಿಮಲೆಗೆ ತಕ್ಕ ಗಂಡನನ್ನು ನಾನು ನಿಶ್ಚಯಿಸಿದ್ದೇನೆ. ಅವನು ಡಾಕ್ಟರ್ ಪರೀಕ್ಷೆ ಕಲಿಯುತ್ತಾನೆ-ಹೈದರಾಬಾದಿನ 'ಒಸ್ಮಾನಿಯಾ ಯುನಿವರ್ಸಿಟಿ'ಯಲ್ಲಿದ್ದಾನೆ-ಅವನಿಗೆ ಉದ್ಯೋಗ ನಾಳೆ ಖಂಡಿತ ಉಂಟು-ಖಾಸ್ಗಿ ವೃತ್ತಿ-ನಾವು ಅವನಿಗೆ ತಿಂಗಳಿಗೆ ಐವತ್ತು ರೂಪಾಯಿ ಕೊಡುತ್ತಾ ಬಂದರೆ ಸಾಕು ನಮ್ಮ ವಿಮಲೆಯು ನಾಳೆ ಡಾಕ್ಟ್ರ 'ಹೆಂಡತಿಯಾಗುವಳು. ಅಪ್ಪಯ್ಯಾ, ನನಗೆ ಅವನ 'ಟೆಲಿಗ್ರಾಫ' ಬಂದಿದೆ ಇಪತ್ತು-ಇಲ್ಲಿಯೇ ಇದೆ-ನೋಡಿ- (Glad to accept your proposal--post guaranteed—private practice-pocket empty, wire fifty- Doctor Timsi.) ಅವನು ನಮ್ಮ ನೆಂಟಸ್ಥಿಕೆಯನ್ನು ಸ್ವೀಕರಿಸಿದ್ದಾನೆ-ನಾವು ಇನ್ನು ಮುಂದೆ ಪ್ರತಿ ತಿಂಗಳಿಗೆ ಐವತ್ತು ರೂಪಾಯಿ ಕಳುಹಿಸುತ್ತಾ ಬಂದರೆ ಸೈ—

ತಂದೆ—ಸೈ, ಸೈ, ಸೈ ಮತ್ತೆ ಮನೆಯಲ್ಲಿ ಪೈಯ್ಯೂ ಇಲ್ಲ—ನನಗೇನೂ ಈ 'ಸ,ರಿ,ಗ,ಮ'ದಲ್ಲಿ ನಂಬಿಕೆಯಿಲ್ಲ—ಈ ಇಂಗ್ಲೀಷ್ ಗಂಡಂದಿರಲ್ಲಂತೂ ವಿಶ್ವಾಸವೇ ಇಲ್ಲ—ನಮ್ಮ ಹಿರಿಯರ ಜೀವನದ ಕ್ರಮವೇ ಸಮ-ಇದೆಲ್ಲಾ 'ಗಿಲಿಟ್' ನನ್ನ ಹತ್ತಿರ ಬೇಡ-ಚಿನ್ನ ಮಾರಿ ಬೇಗಡೆ ತೆಕ್ಕೊಳ್ಳುವ ಹುಚ್ಚು ಬೇಡ, ಮಗಾ ಬೇಡ!

ಮಗ—ಅಲ್ಲ, ಅಪ್ಪಯ್ಯಾ ನಿಮ್ಗೊತ್ತಿಲ್ಲ-ನಾವು ಇಪ್ಪತ್ತನೇ ಶತಮಾನದಲ್ಲಿರುವುದು-ಈ ಚರ್ಚೆಯನ್ನು ನಾವು ಯೋಗ್ಯರ ಮುಂದೆ ಇಡುವ-ನಮ್ಮ ಗುರುಗಳು ಇದ್ದಾರೆ-ವಯೋವೃದ್ಧರು, ಜ್ಞಾನವೃದ್ಧರು-ಆಧುನಿಕ ವಿಚಾರ ಗೊತ್ತಿದ್ದವರು-ನಾವಿಬ್ಬರೂ ಅವರೊಡನೆ ಕೇಳುವ—ಅವರು ಹೇಳಿದ ಹಾಗೆ ಮಾಡುವ—ಏಳಿ, ಹೋಗೋಣ.

० ० ० ०

ಗುರುಗಳು—ಏನು, ತಂದೆ ಮತ್ತು ಮಗ ಇಬ್ಬರೂ ಇಲ್ಲಿಗೆ ಬಂದಿರಲ್ಲ?

ಮಗ—ಸ್ವಾಮಿ, ನನಗೂ ನನ್ನ ತಂದೆಯವರಿಗೂ ಒಂದು ಚರ್ಚೆ ಬಿದ್ದಿದೆ—ಅದರ ಇತ್ಯರ್ಥ ತಮ್ಮಿಂದಾಗಬೇಕು.

ಗುರುಗಳು—ಏನದು ಹೇಳಿ?

(ತಂದೆ ಮತ್ತು ಮಗ ಅವರ ವಾದ ವಿವಾದಾಂಶವನ್ನು ಹೇಳಿಕೊಳ್ಳುವರು.)

ಗುರುಗಳು—ಒಂದು ರೀತಿಯಲ್ಲಿ ನೋಡಿದರೆ ನೀವಿಬ್ಬರೂ ಸಮ ಮತ್ತೊಂದು ರೀತಿಯಲ್ಲಿ ನೋಡಿದರೆ ನೀವಿಬ್ಬರೂ ತಪ್ಪು. ಜೀವನಕ್ಕೆ ಹಲವು ಮುಖಗಳು ಇವೆ—ಆದರೆ ಚರ್ಚೆಗೆ ಇರುವುದು ಎರಡೇ ಮುಖ. ಕೆಲವು ವೇಳೆ ಮೂರು ಇರುವುದೂ ಉಂಟು. ನಿಮ್ಮ ಭಾಗ, ನಮ್ಮ ಭಾಗ ಮತ್ತು ಸತ್ಯದ ಭಾಗ. ಸತ್ಯವು ಎಲ್ಲಿ ಉಂಟೆಂದು ಶೋಧಿಸುವುದು ಬಹು ಕಷ್ಟ. ವಾದ ವಿವಾದದಲ್ಲಿ ಪ್ರತಿಯೊಬ್ಬನೂ ಸತ್ಯವು ತನ್ನ ಕಡೆಯಲ್ಲಿದೆ, ಧರ್ಮವು ನನ್ನ ಪಕ್ಷಕ್ಕಿದೆ—ನನ್ನ ಸೂತ್ರವು ಸಮಯೆಂದು ಹೇಗಿ ಎದುರುಕಡೆಯವನನ್ನು ತುಚ್ಛೀಕಾರಮಾಡಿ ಮಾತಾಡಿಬಿಡುತ್ತಾನೆ. ಇದು ವಾದ ವಿಚಾರದ ಧರ್ಮವಲ್ಲ—ಕೇವಲ ತಪ್ಪು. ವಾದಕ್ಕೆ ಇಳಿಯುವಾಗ ನಮಗೆ ತಾಳ್ಮೆ ತುಂಬಾ ಬೇಕು ಎದುರುಕಡೆಯವನ ಅಭಿಪ್ರಾಯವನ್ನು ಸಹಾನುಭೂತಿಯಿಂದ ನೋಡುವ ಸ್ವಭಾವಬೇಕು—ನೋಡಿ, ಸೂಕ್ಷ್ಮದಲ್ಲಿ ಹೇಳುವದಾದರೆ ನಿಮ್ಮ ಮಗನು ಹೇಳುವಪ್ರಕಾರ 'ಸ,ರಿ,ಗ,ಮ'....ಅಂದರೆ ಗಾಯನವು ಅಗತ್ಯವೆಂದು ಕಾಣುತ್ತದೆ. ನೀವು ಹೇಳುವ ಪ್ರಕಾರ ಈಗಿನ ಜನರ ಜೀವನವು ಹುಚ್ಚುಬೆಚ್ಚದಹಾದಿ ಹಿಡಿದಿದೆಯೆಂದು ತೋರುತ್ತೆ. ಈ ಎರಡು ಅಭಿಪ್ರಾಯಗಳ ನಡುವೆ ಜನರು ಈಗಿನ ಕಾಲದಲ್ಲಿ ಸಿಕ್ಕಿಬಿದ್ದಿದ್ದಾರೆ. ನೋಡಿ, ಸಪ್ತಸ್ವರಗಳಲ್ಲಿ ಎಲ್ಲವನ್ನೂ ಒಂದು ಕ್ರಮದಲ್ಲಿ ಒತ್ತಿದರೆ ಒಳ್ಳೆಯ ಸ್ವರವು ಬರುವುದು ಕ್ರಮತಪ್ಪಿ ಸಿಕ್ಕಾ ಬಟ್ಟೆ ಬೆರಳಿಟ್ಟರೆ ಅಪಸ್ವರವು ಹೊರಡುವುದು. ಹಾಗೆಯೇ ನಾವು ಈ ಜೀವನವೆಂಬ ವೀಣೆಯನ್ನು ಬಾರಿಸುವಾಗ ಯಾವುದಾದರೂ ಕೆಲವು ಸ್ವರಳಿಗೆ ಅಂದರೆ—ಗಾಯನಕ್ಕೆ, ಡ್ರೆಸ್ಸಿಗೆ, ಹಣಕ್ಕೆ, ಕಾಫಿಗೆ ಯಾ ಒಣಮರ್ಯಾದೆಗೆ ಮಾತ್ರ ಹೆಚ್ಚು ಮಹತ್ವವನ್ನು ಕೊಟ್ಟು—ಗುಡಿಸುವುದು, ಅಡಿಗೆಮಾಡುವುದು, ಪಾತ್ರ ತೊಳೆಯುವುದು, ಬಟ್ಟೆ ಒಗೆಯುವುದು, ಕಟ್ಟಿಗ ಒಡೆಯುವುದು, ಉಳುವುದು, ಮುಂತಾದುವೆಲ್ಲ ಕೀಳು ಎಂಬ ಹೆಡ್ಡ ಅಭಿಪ್ರಾಯದಿಂದ ಬಿಟ್ಟುಬಿಟ್ಟರೆ ಜೀವನದ ಶ್ರುತಿ ಕೆಡುತ್ತದೆ ಅದು ಕರ್ಕಶವಾಗುತ್ತದೆ ಬಾಳು ಹಾಳಾಗುತ್ತದೆ! ಈ ಜೀವನದ ವೀಣೆಯಲ್ಲಿ ಕೆಲವು ಸ್ವರಗಳನ್ನು ಮಾತ್ರ ನಾವು ಒತ್ತಲಿಕ್ಕೆ ಕಲಿತು ಉಳಿದವುಗಳನ್ನು ನಾವು ಅಲಕ್ಷ್ಯ ಮಾಡಿ ಮತ್ತೊಬ್ಬರಿಂದ ಬಾರಿಸಿಕೊಳ್ಳುತ್ತೇವೆ. ಇಬ್ಬರು ಒಂದು ವೀಣೆಯನ್ನು ಬಾರಿಸಿದರೆ ಹ್ಯಾಗೆ ಸ್ವಾಮಿ, ಅಪಸ್ವರವಲ್ಲವೇ? ಎಲ್ಲಾ ಸ್ವರಗಳೂ ಹಿಡಿದು ಕೂಡಿ ನುಡಿಗೊಡುವಂತೆ ಒಬ್ಬರೇ ಬಾರಿಸಲು ಬಲ್ಲವರಾಗಿರಬೇಕು—ಬಾರಿಸಬೇಕು, ಆಗ ಮಾತ್ರ ಜೀವನದ ಸಮಸ್ಯೆಯು ವಿಷಮತೆಯು ನಮ್ಮನ್ನು ಕಂಗೆಡಿಸುವುದಿಲ್ಲ. ವೀಣೆಯನ್ನು ಚಮತ್ಕಾರದಿಂದ ಹಿಡಿಯುವ ಹೆಂಗಸು, ಮಡಿಕೆಯನ್ನು ಚಂದವಾಗಿ ಉಪಯೋಗಿಸಲು ಕಲಿತರೆ ಎನು ಸೊಗಸು! ಲೇಖನಿಯನ್ನು ಹಿಡಿದು ಹೆಮ್ಮೆಪಡುವ ಮನುಷ್ಯ, ಹಾರ್ಸ್ ಪಿಕ್ಕಾಸಿನಲ್ಲಿಯೂ ಅಷ್ಟೇ ಅಭ್ಯಾಸಮಾಡಿದರೆ ಎಷ್ಟು ಸುಖ! ನಮ್ಮ ಜೀವನದ ಎಲ್ಲಾ ಹಾದಿಗಳಲ್ಲಿಯೂ ಕಾಲಿಡಲು ಹೆಂಗಸೂ, ಗಂಡಸೂ ಕಲಿತಿರಬೇಕು. ಬರೇ ಒಂದು 'ಸ,ರಿ,ಗ,ಮ....'ದ ಹಾದಿಯನ್ನು ಹಿಡಿದು ಮುಂದರಿದರೆ ಗುರಿಮುಟ್ಟೀತೆಂಬ ಮಿಥ್ಯಾಭಿಪ್ರಾಯವನ್ನು ಕಟ್ಟಿಕೊಳ್ಳಬಾರದು. ನಾವು ಜೀವನದ ಶ್ರುತಿ ಗೆಡದಂತೆ ಕೂಡಿದಷ್ಟು ತಂತಿಗಳನ್ನು ಮಿಟಿಸಲು ಕಲಿಯಬೇಕು. ತಾರಕಕ್ಕೇ ಹಾರಬಾರದು; ಮಧ್ಯಮಕ್ಕೂ ಬರಬೇಕು, ಮಂದರಕ್ಕೂ ಇಳಿಯಬೇಕು. ಬಳ್ಳಿಯ ಸರಿಗೆಯೆಂದು ನೆಚ್ಚಬಾರದು. ಉಕ್ಕಿನ ಸರಿಗೆಯೆಂದು ಬಿಡಬಾರದು. ವೀಣಾವಿಶಾರದೆಯಾದ ಹೆಂಗಸು ಮಡಿಕೆಯನ್ನು ಮರೆತರೆ ಅವಳ ಜೀವನವು ಅಪೂರ್ಣ, ನಿರರ್ಥಕ, ನಿಸ್ಸಾರ. ಆದಕಾರಣ ಜೀವನದ ಎಲ್ಲಾ ಸ್ವರಗಳನ್ನು ಹಿಡಿದು ಅದರಿಂದ ಸುಖವೆಂಬ ಅಮೃತವನ್ನು ಹೀರುವುದೇ ನಮ್ಮ ಇಂದಿನ ಧ್ಯೇಯವಾಗಿರಬೇಕು—ಇದೇ ನಾನು ಕೊಡುವ ತೀರ್ಪು.

ಬರುವ ಲೇಖನ:—

'ಸಿಟ್ಟು, ಪೆಟ್ಟು, ಕತ್ತಿ, ದೊಣ್ಣೆ'

ದಿ ಕರ್ನಾಟಕ ಎಜ್ಯುಕೇಶನಲ್ ಕೋನ್ಫರೆನ್ಸ್.

ಬೆಳಗಾವಿಯಲ್ಲಿ ತಾ 16, 17 ಮತ್ತು 18ರಲ್ಲಿ ಶ್ರೀ. ಗಂಗಾಧರ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಅಧಿವೇಶನದಲ್ಲಿ ಈ ಕೆಳಗಣ ಠರಾವು ಮಂಜೂರಾತಿ ಪಡೆದಿರುವವು.

"ಮುಂಬಾಯಿ ಮತ್ತು ಮದ್ರಾಸು ಸರಕಾರಗಳು ಮುಂದೆ ಕರ್ನಾಟಕದ ವಿದ್ಯಾನಿಲಯವಾಗಬಹುದಾದ, ಹೊಸ ವಿದ್ಯಾಸಂಸ್ಥೆಗಳನ್ನು ತೆರೆಯುವ ಯೋಚನೆಯಲ್ಲಿರುವುದರಿಂದ, ಈ ಸಂಬಂಧಪಟ್ಟ ಸರಕಾರಗಳಿಗೆ ಈ ಮೊದಲು ಈ ಕುರಿತಾಗಿ ಯುಕ್ತ ಸಲಹೆ ಸೂಚನೆಗಳನ್ನು ಕೊಡುವರೆ ಅನುಕೂಲವಾಗುವಂತೆ, ಈ ಸಭೆಯು ವಿದ್ಯಾವಿಚಕ್ಷಣರ ಸಭೆಯೊಂದನ್ನು ಜರಗಿಸುವ ಅಭಿಪ್ರಾಯ ಮಾಡಿರುತ್ತದೆ."

"ಈ ಅಭಿಪ್ರಾಯದ ಮೇರೆಗೆ ಶ್ರೀ. ಆರ್. ಆರ್. ದಿವಾಕರರು ಮತ್ತು ಗುದ್ಲೆಪ್ಪ ಹುಕ್ಕೇರಿಯವರು-ಸಭೆಯನ್ನು ಜರಗಿಸುವ ವ್ಯವಸ್ಥೆಗಾಗಿ—ಕನ್ವೀನರರಾಗಿ ಆರಿಸಲ್ಪಟ್ಟಿರುವರು."

"ಶ್ರೀಗಳಾದ ವಿ. ಆರ್. ಮುದೋಳಿಕರ ಮತ್ತು ಬಿ ಎಸ್. ಹಂಚಿನಾಳ್ ಬಿ. ಎ., ಬಿ. ಟಿ.—ಇವರಿಬ್ಬರು ಕಾರ್ಯದರ್ಶಿಗಳಾಗಿ ನೇಮಕಹೊಂದಿರುವರು."

"ಈ ಸಭೆಯು ದಪಂಬ್ರ ತಾ. 26 ಮತ್ತು 27ರಲ್ಲು ಧಾರವಾಡದಲ್ಲಿ ಜರಗಲಿರುವುದು. ಇದರ ಸಂಪೂರ್ಣ ಕಾರ್ಯಕ್ರಮವನ್ನು ಸಕಾಲದಲ್ಲಿ ಜಾಹೀರುಪಡಿಸಲಾದೀತು. ಪ್ರಾಮುಖ್ಯವಾಗಿ ಕರ್ನಾಟಕ ಹಿತದೃಷ್ಟಿಯಿಂದ ವಿದ್ಯಾಯೋಚನೆ, ವಿಶ್ವವಿದ್ಯಾನಿಲಯ ನಿರ್ಮಾಣ, ಅದರ ಗುರಿ, ಹಾಯ್ ಸ್ಕೂಲು ಮತ್ತು ಕಲಾಶಾಲೆಗಳಲ್ಲಿ ಕನ್ನಡ ಭಾಷೆಗಿರಬೇಕಾದ ಸ್ಥಾನ, ಬೇರೆ ಬೇರೆ ಜಿಲ್ಲೆಗಳ ಭಾಷೆಯ ಮತ್ತು ಪಠ್ಯಪುಸ್ತಕ ಏಕೀಕರಣವಿಚಾರ, ಕಾರ್ಯನಿರ್ವಾಹಕ ಮಂಡಳಿಯ ನಿರ್ಮಾಣ, ಸರಕಾರಕ್ಕೆ ಕೊಡತಕ್ಕ ಸಲಹೆ ಸೂಚನೆಗಳು-ಮೊದಲಾದ ಪ್ರಾಮುಖ್ಯ ವಿಷಯಗಳು ಮುಂಬರಲಿರುವುವು. ಈ ಕುರಿತಾದ ಸಲಹೆಗಳನ್ನು ಅತ್ಯಾದರದಿಂದ ಸ್ವೀಕರಿಸಲಾಗುವುದು, ಮತ್ತು ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಲನುಕೂಲವಾಗುವಂತೆ ತಮ್ಮ ಸೂಚನೆಗಳನ್ನು ತಾ. ೨೫ರ ಮೊದಲು ಕಾರ್ಯದರ್ಶಿಗಳಿಗೆ ತಲಪುವಂತೆ ಕಳುಹಿಸಬೇಕಾಗಿರುವುದು. ಹೆಚ್ಚಿನ ಮಾತುಗಳನ್ನು ಈ ಕೆಳಗಣವರಿಂದ ಪಡೆಯಬಹುದು."

Sjt. V. R. Mudholkar,
C/o K. P. C. C. Office, DHARWAR.

ವಿದ್ಯಾ ಸಂಬಂಧಪಟ್ಟ ಶಿಕ್ಷಕರು ಮತ್ತು ವಿದ್ಯಾಧಿಕಾರಿಗಳು ಹೆಚ್ಚಿನ ಸಲಹೆಯನ್ನೀಯುವಂತೆಯೂ, ಸಭೆಗೆ ಹಾಜರಾಗುವಂತೆಯೂ ಈ ಮೂಲಕ ವಿನಂತಿಸೋಣಾಗಿದೆ.

B. S. Hanchinal,
V. R. Mudholkar,
Working Secretaries.

1938ನೇ ಇಸ್ವಿ ನವಂಬರ ತಿಂಗಳ ತಾ. 14ನೇ ಸೋಮವಾರ ದಿವಸದ ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆಗಳು—

(ಬಜಾರು ಟ್ರಜರಿಯಿಂದ)

ಹೆಸರು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	—	—
" ದುಯಂ " " "	1—6—0	1—7—0
" ಅವ್ವಲ್ " ಸುಗ್ಗಿ "	—	—
" ದುಯಂ " " "	—	—
ಅಕ್ಕಿ ಅವ್ವಲ್ " ಗುದ್ದ "	4—8—0	4—10—0
" ದುಯಂ " " "	4—4—0	4—6—0
" ಅವ್ವಲ್ " ಸುಗ್ಗಿ "	4—7—0	—
" ದುಯಂ " " "	4—2—0	4—4—0
ಸುಲಿದ ತೆಂಗಿನಕಾಯಿ 1000ಕ್ಕೆ "	32—8—0	42—8—0
ಸಿಪ್ಪೆಯಿದ್ದ " " "	35—0—0	46—4—0
ಕೊಬ್ಬರಿ ಆಫೀಸು ಖಂಡಿಗೆ "	48—0—0	—
" ದಿವಿ " "	50—0—0	—
" ದಿಲ್‌ಪಸಂದ್ " "	52—8—0	—
ತೆಂಗಿನಎಣ್ಣೆ ಮುಡಕ್ಕೆ "	3—6—0	—
ಸಿಪ್ಪೆಯಿದ್ದ ಅಡಿಕೆ 1000ಕ್ಕೆ "	3—0—0	3—12—0
ಗೇರುಬೀಜ ಮುಡಿಗೆ "	3—8—0	3—12—0
ಕೆಬ್ಬಿನ ಬೆಲ್ಲ ಖಂಡಿಗೆ "	42—8—0	45—0—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ "	16—4—0	17—0—0

ಪುಟ ೧೬ರಿಂದ

ವಿಧದ ಕಷ್ಟನಷ್ಟಗಳಿಗೆ ಪಾತ್ರರಾಗುವಿರಿ. ಶರೀರ ಪ್ರಕೃತಿಯು ಕೆಟ್ಟಿರುವುದರಿಂದಲೂ ಖರ್ಚಿನ ಮಾರ್ಗಗಳು ಅಧಿಕವಾಗುತ್ತಾ ಬರುವುದರಿಂದಲೂ ಆರ್ಥಾಂಗಿಯು ಕಲಹಪ್ರಿಯಳಾಗುವುದರಿಂದಲೂ ಶಾರೀರಕ ಮಾನಸಿಕ ಸುಖಗಳೆಲ್ಲವೂ ನಿಮ್ಮಿಂದ ಬಹಳ ದೂರಹೋಗುವುವು. ಹಿತಜನರ ವಿಯೋಗವು ಮತ್ತಷ್ಟು ಚಿಂತಾಜನಕವಾಗುವುದು. ಆದರೂ ತಾ. 24ರಿಂದ 28ರ ವರೆಗೆ ಮಿತ್ರಲಾಭ, ಧನವೃದ್ಧಿ ಸಂಪನ್ನ ಸ್ತ್ರೀಲಾಭ, ಇಷ್ಟಸಿದ್ಧಿ ಇತ್ಯಾದಿಗಳು ನೆರವೇರಲಿವೆ.



ಈ ವಾರದ ನಿಮ್ಮ ಭವಿಷ್ಯ

ತಾ 24—11—38ರಿಂದ 1—12—38ರ ವರೆಗೆ

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ನ.]

●

ತುಲಾರಾಶಿಯವರ ಗ್ರಹಸ್ಥಿತಿಯು ಸ್ವಲ್ಪಮಟ್ಟಿಗೆ ಉತ್ತಮಸ್ಥಿತಿಯಲ್ಲಿರುವುದು. ಕರ್ಕಾಟಕ, ವೃಶ್ಚಿಕ, ಕುಂಭರಾಶಿಗಳವರ ಭವಿಷ್ಯವು ಮಿಶ್ರಫಲವುಳ್ಳದು. ವೃಷಭ, ಮಿಥುನ, ಸಿಂಹ, ಧನು, ಮಕರ, ಮೀನ—ಈ ರಾಶಿಗಳವರ ಅದೃಷ್ಟವು ಕನಿಷ್ಟ ತರಗತಿಯಲ್ಲಿರುವುದು. ಮೇಷ, ಕನ್ಯಾ ರಾಶಿಗಳವರ ಗ್ರಹಮಾನವು ಬಹಳ ಕೆಟ್ಟಿರುವುದು.

●

ಮೇಷರಾಶಿ—

ನಿಮ್ಮ ಭವಿಷ್ಯವು ಈ ವಾರದಲ್ಲಿ ಬಹಳ ಹೀನಾವಸ್ಥೆಗೆ ಬಂದಿರುತ್ತದೆ. ಮೊದಲೇ ನಿಮ್ಮನ್ನು ಏಳೂವರೆ ಶನಿಯು ಹೆಚ್ಚಾಗಿ ಪೀಡಿಸುತ್ತಿದ್ದನು. ಅದಕ್ಕೆ ಸರಿಯಾಗಿ ಇತರ ಗ್ರಹರ ಬೆಂಬಲವೂ ಆತನಿಗೆ ದೊರೆತ ಮೇಲೆ ಕೇಳಬೇಕೆ? ಉರಿಯುವ ಬೆಂಕಿಗೆ ತುಪ್ಪವನ್ನಿತ್ತಂತೆ ಆತನ ಉಪಟಳವು ದಿನೇ ದಿನೇ ವೃದ್ಧಿಗೊಳ್ಳುವುದು. ಎಲ್ಲದಕ್ಕಿಂತಲೂ ಹಣದ ತಾಪತ್ರಯವು ನಿಮಗೆ ಬಹಳ ಮುಖ್ಯವಾಗಿ ಪರಿಣಮಿಸುವುದು. ನಿಮ್ಮ ಕೆಲವೊಂದು ಕಾರ್ಯಗಳು ವಿಫಲಗಳಾಗುವುದರಿಂದ ಮನೋವ್ಯಥೆಯು ಬಹಳ ಹೆಚ್ಚುವುದು. ಆರೋಗ್ಯಸ್ಥಿತಿಯೂ ಕೆಡುವುದು. ಸ್ತ್ರೀವರ್ಗದಿಂದ ಬಹಳ ಅನಿಷ್ಟವಿದೆ. ಗೃಹಿಣಿಯೊಡನೆ ನಿತ್ಯ ಕಲಹವಾಗುವುದು. ಇತ್ಯಾದಿ ಶೋಕದಾಯಕಗಳಾದ ಅನರ್ಥಗಳು ಸಮುದ್ರದ ಅಲೆಗಳಂತೆ ಒಂದರ ಹಿಂದೊಂದು ಬರುತ್ತಲೇ ಇರುವವು. ಆದರೂ ತಾ. 27ರಿಂದ ವಾರಾಂತ್ಯದವರೆಗೂ ಬುಧ ಚಂದ್ರರ ಅನುಗ್ರಹದಿಂದಾಗಿ ಕೆಲವು ಕಾರ್ಯಗಳು ಕೊನೆಗೊಳ್ಳುವುವಲ್ಲದೆ ಮಿತ್ರವರ್ಗದವರಿಂದಾಗಿ ಲಾಭವಿದೆ.

ವೃಷಭರಾಶಿ—

ಒಂದು ಭಾಗದದಲ್ಲಿ ನಿಮ್ಮ ಇಷ್ಟವು ನೆರವೇರಿದರೆ ಎರಡು ಭಾಗಗಳಲ್ಲಿ ನಿಮ್ಮ ಮನೋರಥಕ್ಕೆ ಪ್ರತಿಕೂಲವಾಗಿ ಕಾರ್ಯಗಳು ಆಗುವವು. ಆ ರೀತಿಯಾಗಿ ಗ್ರಹಸ್ಥಿತಿಯು ನಿಂತವೆ ನಿಮ್ಮ ರಾಶಿಗೆ ಈ ವಾರದಲ್ಲಿ. ಪುತ್ರರ ಸಹಾಯದಿಂದ ಧನಲಾಭವಾಗುವುದು. ಕೆಲ ಮನೋರಥಗಳು ಪೂರ್ತಿಹೊಂದುವವು. ಜನರಿಂದ ಗೌರವಾದರಗಳನ್ನು ಪಡೆಯುವಿರಿ. ಆದರೆ ಬಂಧುಮಿತ್ರರ ಅಗಲುವಿಕೆಯಿಂದಲೂ ಶತ್ರುಗಳ ವೃದ್ಧಿಯಿಂದಲೂ ಮನಸ್ಸು ತಲ್ಲಣಗೊಳ್ಳುವುದು. ವಾಸನಿಕ ಸುಖವು ನಾಶವಾಗುವುದಲ್ಲದೆ ವಿಪತ್ತುಗಳೂ ತಾಪದಾಯಕಗಳಾದ ರೋಗಗಳೂ ಹೆಚ್ಚಿ ಶಾರೀರಿಕಸುಖವನ್ನು ಕೆಡಿಸುವವು. ತಾ. 24ರಿಂದ 28ರ ವರೆಗೆ ರಾಜಭಯ ಉದರ ರೋಗಾದಿ ಅನಿಷ್ಟಗಳೇ ಹೆಚ್ಚಾಗುವವು.

ಮಿಥುನರಾಶಿ—

"ಮನ ಏವ ಮನುಷ್ಯಾಣಾಂ ಕಾರಣಂ ಬಂಧವಿಮೋಕ್ಷಯೋಃ" ಮನುಷ್ಯರ ಬಂಧವಿಮೋಚನೆಗೇಗೆ ಮುಖ್ಯವಾಗಿ ಅವರವರ ಮನಸ್ಸೇ ಕಾರಣವಾಗಿರುವುದು. ಆದಕಾರಣ ಈ ವಾರದಲ್ಲಿ ನಿಮ್ಮ ಮನಸ್ಸು ಬಹಳ ಚಂಚಲವಾಗಿರುವುದಲ್ಲದೆ ಕುಮಾರ್ಗದಲ್ಲೇ ಹೆಚ್ಚಾಗಿ ಮುಂದರಿಯುವದು. ಇದರಿಂದ ನಿಮ್ಮ ಸ್ಥಾನಕ್ಕೆ ಹಾನಿಕರವಾದ ಕೆಲವು ಕಾರ್ಯಗಳು ನಡೆಗುವವು. ವಿದ್ಯಾಭ್ಯಾಸಿಗಳಿಗೆ ಈ ವಾರವು ಬಹಳ ಹಾನಿಕರವಾಗಿಹುದು. ಜನರೊಡನೆ ಕಲಹವು ಹೆಚ್ಚುವುದು. ತಾತ್ಕಾಲಿಕ ಮಿತ್ರರಿಂದಾಗಿ ಕೆಲವೊಮ್ಮೆ ಅವಮಾನಹಾನಿಯೂ ಆಗುವುದು. ಆದರೂ ಬಂಧುಮಿತ್ರರು ನಿಮಗೆ ಸಕಲ ಭಾಗಗಳಲ್ಲಿಯೂ ಮನಃಪೂರ್ವಕವಾಗಿ ಸಹಾಯಮಾಡುವುದರಿಂದ ಶತ್ರುಗಳ ಬಲೆಗೆ ನೀವು ಸಿಲುಕಲಾರಿರಿ. ಕೆಲವು ಕಾಲದಿಂದ ನಿಮ್ಮಲ್ಲಿ ರೂಢಮೂಲವಾಗಿದ್ದ ಮನೋರೋಗವೂ ನಿವಾರಣೆಯಾಗವುದು. ವಾರಾದಿಯ ಮೂರು ದಿನಗಳು ಹೆಚ್ಚಿನ ಹಿತಕಾರಿಗಳಾಗಿವೆ.

ಕರ್ಕಾಟಕರಾಶಿ—

ಈ ರಾಶಿಗೆ ಸೇರಿದ ಪುಷ್ಯ ಆಶ್ಲೇಷಾ ನಕ್ಷತ್ರಗಳ ಜನರ ಗುಣವು ಪರಸ್ಪರ ವಿರೋಧವಿರುವುದು. ಹೇಗಂದರೆ, ಪುಷ್ಯ ನಕ್ಷತ್ರದವರು ಸಾಮಾನ್ಯ ಜಿತೇಂದ್ರಿಯರೂ, ಜನಪ್ರಿಯರೂ, ಧರ್ಮಕಾರ್ಯನಿರತರೂ ಆಗಿರುವರು. ಆಶ್ಲೇಷಾ ನಕ್ಷತ್ರ ಜಾತರು ಪರವಂಚನೆಯಲ್ಲಿ ಒಳ್ಳೇ ನಿಷ್ಣಾತರೂ, ಸ್ವಾರ್ಥಿಗಳೂ, ಮಾಡಿದ ಉಪಕಾರವನ್ನು ನೆನಸದವರೂ ಆಗಿರುವರು. ಅದ್ದರಿಂದ ಈ ರಾಶಿಗೆ ಸಂಬಂಧಪಟ್ಟ ಶುಭಾಶುಭ ಫಲಗಳು ಆಯಾಯ ನಕ್ಷತ್ರದವರಿಗೆ ಹೆಚ್ಚಾಗಿ ಅನ್ವಯಿಸುವುದು. ಈ ವಾರದಲ್ಲಿ ನಿಮಗೆ ಮಿಶ್ರ ಫಲಗಳೇ ಸಂಭವಿಸುವವು. ಹೆಚ್ಚಿನ ಮಿತ್ರರ ಭೇಟಿಯಾಗುವುದು. ವ್ಯಾಪಾರ ವ್ಯವಹಾರಾದಿಗಳಲ್ಲಿ ಅನೇಕ ರೀತಿಯಿಂದ ಧನಸಿಗುವುದು. ಆದರದು ಪ್ರಯಾಣ ಮತ್ತು ದೇಹಾರೋಗ್ಯದ ಸಲುವಾಗಿ ಖರ್ಚಾಗುವುದು. ಕಾರ್ಯಗಳಿಗೆ ವಿಘ್ನಗಳು ಆಗಾಗ ಒದಗುವವು. ಒಟ್ಟಾರೆ ಹೇಳುವುದಾದರೆ ಹೆಚ್ಚಿನ ಭಾಗಗಳಲ್ಲಿ ವಾರಾದಿಯ ಐದುದಿನಗಳು ಉತ್ತಮವಿರುವವು.

ಸಿಂಹರಾಶಿ—

ಯುಗಮಹಿಮೆಯನ್ನನುಸರಿಸಿ "ದಾತಾ ದರಿದ್ರಃ ಕೃಪಣೋ ಧನಾಢ್ಯಃ" ಎಂಬ ನೀತಿ ವಾಕ್ಯವನ್ನು ಕೇಳಿರುವರು. ದಾನಮಾಡತಕ್ಕ ಬುದ್ಧಿಯುಳ್ಳವರು ಯಾವಾಗಲೂ ದರಿದ್ರರಾಗಿಯೇ ಇರುವರು. ಯಾವನು ಕಾಸಿಗೆ ಕಾಸುಮಾಡಿ ಕೂಡಿಸಿ ಕಟ್ಟಿಡುವನೋ ಆತನು ಒಳ್ಳೇ ಧನವಂತನಾಗಿರುವನು ಈ ಕಾಲದಲ್ಲಿ. ನಿಮ್ಮಲ್ಲಿ ದಾನಬುದ್ಧಿಯು ಚೆನ್ನಾಗಿಹುದು. ಒಂದು ಸಿಕ್ಕಿದರೆ ಎರಡು ಖರ್ಚುಮಾಡುವ ಸ್ವಭಾವವು ನಿಮ್ಮದಾಗಿಹುದು. ಅದ್ದರಿಂದ ಹಿಂದೆ ಹೇಳಿದ "ದಾತಾ ದರಿದ್ರಃ" ಎಂಬ ವಾಕ್ಯವು ನಿಮ್ಮಲ್ಲಿ ಚೆನ್ನಾಗಿ ಕೂಡಿಬರುತ್ತದೆ. ನಿಮ್ಮ ಆರೋಗ್ಯವು ಈ ವಾರದಲ್ಲಿ ಸರಿಯಾಗಿ ಉಳಿಯಲಾರದು. ರಾಜಕೀಯ ಸಂಬಂಧಿಗಳಾದ ಅಧಿಕಾರಿಗಳಿಂದ ಪೀಡೆಗಳು ಸಂಭವಿಸುವವು. ನಿಮ್ಮ ಸ್ವಂತ ಕಾರ್ಯಗಳಲ್ಲಿ ನಿಮಗೆ ಅಹಿತವಾದರೂ ನಷ್ಟಕ್ಕೆ ಗುರಿಯಾಗಲಾರಿರಿ. ತಾ. 27ರಿಂದ ವಾರಾಂತ್ಯದ ವರೆಗಿನ ದಿನಗಳು ಹೆಚ್ಚಿನ ಕಷ್ಟದಾಯಕಗಳಾಗಿಲ್ಲ.

ಕನ್ಯಾರಾಶಿ—

ಗ್ರಹರಾಜನಾದ ರವಿಯು ಹೊರತು ಇತರ ಎಲ್ಲಾ ಗ್ರಹರೂ ನಿಮ್ಮ ವಿಷಯದಲ್ಲಿ ಪ್ರತಿಕೂಲರಾಗಿಗಳಾಗಿರುವರು. ಪ್ರಜಾಪ್ರಭುತ್ವದ ದೇಶದಲ್ಲಿ ಡಿಕ್ಟೇಟರ ಕಾಟಿಗೆ ಎಡೆಇಲ್ಲವಷ್ಟೆ. ಡಿಕ್ಟೇಟರಮಹಿಯು ಅಬಲವೂ ಚಲವೂ ಅಸ್ಥಿರವೂ ಆಗಿರುವುದರಿಂದ ಪ್ರಜಾಮಹಿಯನ್ನೇ ಎಲ್ಲರೂ ಹಾರೈಸುವರು. ಅಂದ ಮೇಲೆ ನಿಮ್ಮ ಗ್ರಹರಾಜನೂ ಕೂಡ ಪ್ರಜಾಪ್ರಭುತ್ವಕ್ಕೇನೇ ಮಣ್ಣಣೆಕೊಡುವನು. ಅದ್ದರಿಂದ ನಿಮಗೀವಾರವು ಬಹಳ ಕಷ್ಟದಲ್ಲಿ ಪರಿಣಮಿಸುವುದು. ಗಾಯಾದಿಗಳಿಂದ ದೇಹಪೀಡೆಯೂ ಸ್ತ್ರೀಯರಿಂದ ಅನಿಷ್ಟಗಳೂ ಹೆಚ್ಚುವವು. ಶತ್ರುಗಳ ಪೀಡೆಯಿಂದಾಗಿ ಮನೋವ್ಯಥೆಯು ವೃದ್ಧಿಯಾಗುವುದು. ಸ್ವಕೃತ ದುಶ್ಚಾರಿತ್ರ್ಯದಿಂದ ಮನಸ್ಸು ಬಹಳ ಕಳವಳಗೊಂಡಿರುವುದು. ವಾರಾಂತ್ಯದ ಮೂರು ದಿನಗಳಲ್ಲಿ ಕೆಲವಂತ ಪೀಡೆಗಳು ಕಡಿಮೆಯಾಗುವವು.

ತುಲಾರಾಶಿ—

ಕಳೆದ ವಾರಕ್ಕಿಂತಲೂ ಈ ವಾರವು ನಿಮಗೆ ಹಲವು ವಿಷಯಗಳಲ್ಲಿ ಉತ್ತಮವಾಗಿರುವುದು. ಆದುದರಿಂದ ಉದ್ಯಮಶೀಲರಿಗೆ ಇದು ಉತ್ತಮ ಸಂದರ್ಭವಾಗಿರುವುದು. ನಿಮ್ಮ ಮನಸ್ಸು ಬಹಳ ಅಧೈರ್ಯವನ್ನು ಹೊಂದಿದ ಕಾರಣ ಯಾವ ಕಾರ್ಯವನ್ನೂ ಮಾಡಲು ನೀವು ಹಿಂಜರಿಯುವಿರಿ. ಆದರೂ ಧೈರ್ಯತಾಳಿಕೊಂಡು ಕಾರ್ಯಪ್ರವೃತ್ತರಾಗಿರಿ. ಜನಬೆಂಬಲವು ನಿಮಗನಕೂಲವಾಗಿರುವುದು. ಶತ್ರುಗಳು ನಿಮ್ಮ ಮುಂದೆ ತಲೆಯೆತ್ತಲಾರರು. ಗೃಹಪರಿವಾರವು ಉತ್ತಮ ರೀತಿಯಲ್ಲಿರುವುದರಿಂದ ಸಂಸಾರವು ಸುಗಮವಾಗಿ ಸಾಗಿಸವುದು. ಸ್ವಕೀಯ ಉದ್ಯಮದಲ್ಲಿ ಆದಾಯವು ಚೆನ್ನಾಗಿರುವುದು ಮತ್ತು ಅನೇಕ ವಿಧದಿಂದ ಧನವು ನಿಮ್ಮ ಕೈಸೇರುವುದು. ಶರೀರ ಪ್ರಕೃತಿಯು ಬಹಳ ಸುಧಾರಿಸುವುದು. ತಾ. 27ರಿಂದ ವಾರಾಂತ್ಯದ ವರೆಗಿನ ದಿನಗಳು ಅಷ್ಟೊಂದು ಪ್ರಶಸ್ತವಾಗಿಲ್ಲದಿರುವುದರಿಂದ ಆಪ್ತಜನರಲ್ಲಿ ಅವಿಶ್ವಾಸವೂ, ರಾಜಕೀಯ ಭಯವೂ ತಲೆದೋರುವುದು.

ವೃಶ್ಚಿಕರಾಶಿ—

ಹಿಂದಿನ ಪರಿಸ್ಥಿತಿಗೆ ಯಾವ ಭಾಗದಲ್ಲೂ ಕುಂದು ಬಾರದು. ನಿಮಗೀವಾರದಲ್ಲಿ ಮಿಶ್ರಫಲದಾತೃಗಳಾದ ಗ್ರಹರು ಸಹ ಬಲಿರುವುದರಿಂದ ಮಿತಿಗೆ ಬೇಕಾದಷ್ಟು ಧನದ ಉತ್ಪತ್ತಿಯಾಗುವುದು. ಗುಣವು ಸ್ವಲ್ಪ ತೀಕ್ಷ್ಣವಾಗಿ ಕಂಡು ಬಂದರೂ ಶತ್ರುಗಳ ಭಾಗಕ್ಕದು ಯುಕ್ತವಾಗಿರುವುದು. ಪಶ್ವಾದಿ ಸಕಲ ಗೃಹೋಪಕರಣಗಳು ಸಮೃದ್ಧಿಯಾಗಿರುವುದರಿಂದ ಸಾಂಸಾರಿಕ ತಾಪತ್ರಯವು ಇಂತೂ ಇಲ್ಲವು. ಆದರೂ ಪತ್ನೀ ಪುತ್ರರಲ್ಲಿ ಸ್ವಲ್ಪ ವೈಮನಸ್ಸು ಹುಟ್ಟುತ್ತಲುವಾಗಿ ಸ್ವಲ್ಪ ಚಿಂತಿಸುವಿರಿ. ದುಡಿದುದನ್ನು ಕಟ್ಟಿಡುವ ಆಲೋಚನೆಯು ನಿಮಗಿಲ್ಲ. ಪ್ರಯಾಣದ ಸಲುವಾಗಿಯೂ, ಉದರರೋಗದ ನಿಮಿತ್ತವಾಗಿಯೂ ಧನವ್ಯಯವಾಗುವುದು. ವಾರದ ಆದ್ಯಂತಭಾಗಗಳಲ್ಲಿ ಆಯಾಸ, ಧನಮಾನಗಳಿಗೆ ಹಾನಿಯೂ ಉಂಟಾಗುವುದು.

ಧನೂರಾಶಿ—

ಮಿತ್ರಜನರಿಂದಾಗಿ ಕೆಲವೊಂದು ಕಾರ್ಯಗಳಲ್ಲಿ ನಿಮಗೆ ಧನಲಾಭವಾದರೂ ಅದು ಅಚಿರದಲ್ಲೇ ವ್ಯಯವಾಗಿ ಮತ್ತೂ ಸಾಲಮಾಡಬೇಕಾದ ಪ್ರಸಂಗ ಬರುವುದು. ಲೋಭತ್ವವೂ, ನಿಷ್ಠುರತೆಯೂ ನಿಮಗೆ ಅನೇಕ ಪ್ರಕರಣಗಳಲ್ಲಿ ದೊಡ್ಡ ತಡೆಯಾಗಿ ನಿಲ್ಲುವುದು. ಅದರಿಂದಾಗಿ ಕಲಹವೂ ತಿರಸ್ಕಾರವೂ ಹೆಚ್ಚುವುದು. ವಿರೋಧಿಗಳಿಂದ ಪೀಡೆಗಳು ಹೆಚ್ಚಿ ಮಾನಸಿಕ ಸುಖವು ನಿರರ್ಥವಾಗುವುದು. ಕ್ರೋಧಪಿತ್ತಳ ಆಧಿಕ್ಯದಿಂದ ಆನಯುವಗಳಲ್ಲಿ ನೋವುಂಟಾಗಿರುವುದು. ದುರ್ಬುದ್ಧಿಯು ನಿಮ್ಮಲ್ಲಿ ಹೆಚ್ಚುವುದು. ಸಂಸಾರಕ್ಕೂ ನಿಮಗೂ ವಿಯೋಗವುಂಟಾಗಿ ಅತ್ಯಾಪತ್ತಿಗೆ ಗುರಿಯಾಗುವಿರಿ. ತಾ. 27-28 ಈ ಎರಡು ದಿನಗಳಲ್ಲಿ ಆಗತಕ್ಕ ಖರ್ಚು, ಸಂಭವಿಸತಕ್ಕ ಆಪತ್ತು ನಿಮ್ಮನ್ನು ದಿಙ್ಮೂಢರನ್ನಾಗಿಮಾಡುವುದು.

ಮಕರರಾಶಿ—

ಹೆಚ್ಚಿನ ಗ್ರಹರು ವಿಮುಖರಾಗಿರುವುದರಿಂದ ನಿಮಗೀವಾರವು ಸಮರ್ಪಕವಾಗಿ ಪರಿಣಮಿಸಲಾರದು. "ಊಟಬಲ್ಲವನಿಗೆ ರೋಗವಿಲ್ಲ, ಮಾತುಬಲ್ಲವನಿಗೆ ಜಗಳವಿಲ್ಲ" ಎಂಬಿರುವುದರಿಂದ ಈ ವಾರದಲ್ಲಿ ನೀವು ಎಷ್ಟೊಂದು ವಿಚಾರಮಾಡಿ ಮಾತನಾಡಿದರೂ ಮಿತಭಾಷಿಯಾಗಿದ್ದರೂ ಕಲಹವು ಬಗೆಯೇ ತೀರುವುದು. ದೇಹಕ್ಕೂ ಮನಸ್ಸಿಗೂ ಪೀಡೆಯು ತಪ್ಪದು. ವ್ಯಸನಾತಿರೇಕದಿಂದ ದೇಹವು ಕೃಶವಾಗುವುದು. ಆದರೂ ಅನುಕೂಲರಾಗಿದ್ದ ಗ್ರಹರಿಂದಾಗಿ ಕೈಕೊಂಡ ವ್ಯಾಪಾರವ್ಯವಹಾರ ಇತ್ಯಾದಿ ಕಾರ್ಯಗಳಲ್ಲಿ ಜಯವನ್ನೂ ಸಾಕಷ್ಟು ಧನಲಾಭವನ್ನೂ ಹೊಂದುವಿರಿ. ಪತ್ನೀ-ಪುತ್ರ-ಮಿತ್ರರ ಸಮಾಗಮದಿಂದುಂಟಾದ ಮಾನಸಿಕ ಸಂತೋಷವನ್ನು ಅನುಭವಿಸುವಿರಿ. ತಾ. 27-28 ಈ ದಿನಗಳು ಭೋಗದಾಯಕಗಳಾಗಿವೆ.

ಕುಂಭರಾಶಿ—

ಒಂದು ವಿಷಯದಲ್ಲಿ ಕೆಡುಕಾದರೆ ಇನ್ನೊಂದು ಭಾಗದಲ್ಲಿ ಒಳ್ಳೇದು ಆಗಿಯೇ ತೀರುವುದು. ಅಂತೂ ಇಷ್ಟಾನಿಷ್ಟಗಳು ಸಮಾನವಾಗಿರುವವು. ಕಾರ್ಯಗಳು ಜಯಶೀಲವಾಗಿಯೂ, ಲಾಭದಾಯಕವಾಗಿಯೂ ಕೊನೆಗೊಳ್ಳುವವು. ಶತ್ರುನಾಶದಿಂದ ನೆಮ್ಮದಿ ಹೊಂದಿದ ಮನಸ್ಸು ವಿವಿಧ ವಸ್ತ್ರಲಾಭ, ಧನಲಾಭ, ವಾಹನ ಸುಖಗಳಿಂದ ಸಂತೋಷಾಂಬುಧಿಯಲ್ಲಿ ತೇಲಾಡುವುದು. ಆದರೆ ಈ ಸುಖವು ಬಲು ಚಂಚಲವಾದುದು. ಯಾಕೆಂದರೆ ಗಾಯವೇ ಮೊದಲಾದ ದೇಹಪೀಡೆಗಳಿಗಾಗಿ ಧನವ್ಯಯವಾಗುವುದರಿಂದಲೂ ಆಚಾತುರ್ಯದಿಂದಾಗಿ ಕೆಲವಂಶ ನಿರರ್ಥಕವಾಗಿ ನಷ್ಟ ಹೊಂದುವುದರಿಂದಲೂ ವಿಶೇಷ ಚಿಂತೆಗೆ ಪಾತ್ರರಾಗುವಿರಿ. ಶಾರೀರಿಕ ಸುಖವೂ ಉಳಿಯಲಾರದು. ಅಂತೂ ವಾರದ ಆದ್ಯಂತ ಭಾಗಗಳಲ್ಲಿ ಹೆಚ್ಚಿನ ಶುಭವೇ ಆಗುವುದು.

ಮೀನರಾಶಿ—

ಕೆಲವೊಂದು ಭಾಗದಲ್ಲಿ ನಿಮಗೀವಾರವು ಉತ್ತಮವಾಗಿ ತೋರಿದರೂ ಹೆಚ್ಚಿನಂಶ ಕೆಟ್ಟದಾಗಿರುವುದು. ಊರುಬಿಟ್ಟರೂ ಗ್ರಹಚಾರಬಿಡದು ಎಂಬಂತೆ ನೀವು ಊರ ಬಿಟ್ಟುಹೋದರೂ ನಾಗಾವರದಲ್ಲಿ ನಾಗಾ ಫಟ ಗಾ ನೋಡಿರಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ
ನಂಜನಗೂಡುಟೂತ್‌ಪೌಡರ್
(ರಿಜಿಸ್ಟರ್ಡ್)
೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ „ „ 0—1—3
೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ „ 0—4—0
ಶ್ರೀಕರ ಕಸ್ತೂರಿ ಮಾತ್ರೆ.
ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಸೆಳತಗಳಿಗೂ ಅಮೃತ. ಬೆಲೆ 0-4-0, 0-2-0.
ಶ್ರೀಕರ ಬಾಲಸಂಜೀವಿನಿ
ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-1-0.
ಹಿಮತೈಲ
ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸಹಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ ಬೆಲೆ. 0-8-0 ಮತ್ತು ರೂ. 1.
ನಂಜನಗೂಡು ಸದ್ವೈದ್ಯ ಶಾಲಾ,
ಬ್ರಾಂಚ್ ರಥಬೀದಿ, ಮಂಗಳೂರು.
ನಮ್ಮ ಸ್ಟಾಕಿಸ್ಟರು:—ಕುಂದಾಪುರ-ಕಾಮತ್ಸ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ-ಜಿ. ಕೃಷ್ಣ ಕಾರಂತರು, ಆಯುರ್ವೇದೀಯ ಔಷಧಗಳ ಏಜೆಂಟರು, ಕಾರ್ಕಳ-ವಿ. ವಿ. ಶೆಣೈ-ಕೆಮಿಸ್ಟ್. ಕಾಸರಗೋಡು-ಭಕ್ತ ಬ್ರದರ್ಸ್ ಮತ್ತು ಶ್ರೀರಾಮ ಸ್ಟೇಶನರಿ ಹೌಸ್, ಪುತ್ತೂರು-ಬಿ ಪಾಂಡುರಂಗ ಗೋವಿಂದ ಭಂಡಾರಿ ಮತ್ತು ಪೈ ಡಿಸ್ಪೆನ್ಸರಿ, ಮೂಲ್ಕಿ-ಬಿ. ಎಸ್. ಸೀತಾರಾಮ ಕ್ಯಾನುಫೋಗ್, ಜನರಲ್ ಮರ್ಚೆಂಟ್ಸ್, ಮೂಡಬಿದ್ರೆ-ಸಂಜೀವ ಶೇಷಗಿರಿ ಪ್ರಭು ಬ್ರದರ್ಸ್, ಬಂಟ್ವಾಳ-ಪ್ರಭು ಆಂಡ್ ಕೋ, ಉಡುಪಿ-ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.

ಡಿಕ್ಟೇಟರಶಾಹಿ ಮತ್ತು ಪ್ರಜಾಶಾಹಿ

(೭ನೇ ಪುಟದಿಂದ)

ಮಾತೆತ್ತದೆ ಕೊಡಲೇಬೇಕು. ಹಿಟ್ಲರರ ಆತ್ಮವೃತ್ತವಾದ 'ಮೈನ್ ಕಾಂಪ್' ಜರ್ಮನರ ಬೈಬುಲು, ಹೊಸತಾಗಿ ಮದುವೆಯಾಗುವ ಜರ್ಮನ್ ದಂಪತಿಗಳು ಅದರ ಪ್ರತಿಯನ್ನು ತೆಗೆದುಕೊಂಡು ಓದಲೇಬೇಕು. ಮಕ್ಕಳು ಹಿಟ್ಲರ್ ಯುವಕ ಸಂಘಕ್ಕೆ ಸೇರಲೇಬೇಕು. ಹೇಗೆ ಜೀವಿಸಬೇಕು, ಹೇಗೆ ನಡೆಯಬೇಕು, ಯಾವ ರೀತಿ ಕೆಲಸ ಮಾಡಬೇಕು, ಹೇಗೆ ವಿರಾಮ ತೆಗೆದುಕೊಳ್ಳಬೇಕು. ಎಂಬುದನ್ನೆಲ್ಲಾ ನಾಜಿಪಕ್ಷವು ನಿರ್ದೇಶಿಸುವುದು. ಬಾಲ್ಯದಿಂದ ವೃದ್ಧಾಪ್ಯದ ವರೆಗೆ ಪ್ರತಿಯೊಬ್ಬ ಜರ್ಮನರ ಜೀವನದಲ್ಲಿ ನಾಜೀಪಕ್ಷದ ಕೈವಾಡವು ಇದ್ದೇ ಇದೆ.

ಪ್ರಜಾಶಾಹಿಯ ರೀತಿನೀತಿ

ಜನರಿಗಾಗಿ ಜನರಿಂದ ನಡಿಸಲ್ಪಡುವ ಜನತಾ ರಾಜ್ಯವೆಂಬ ಪ್ರಜಾಶಾಹಿಯ ಹಳೆಯ ವ್ಯಾಖ್ಯೆಯೇ ಇಂದೂ ಸಂಹೋಗುವುದು. ಬ್ರಿಟಿಷ್ ಸಾಮ್ರಾಜ್ಯದ ರಾಜ್ಯಭಾರದ ಮೂಲ ಸೂತ್ರವೇ ಇದು ಇಂಗ್ಲೆಂಡಿನ ಪ್ರಧಾನ ಮಂತ್ರಿಯು ತನ್ನ ಆಡಳಿತದ ವಿಷಯದಲ್ಲಿ ಪಾರ್ಲಿಮೆಂಟಿಗೆ ಜವಾಬ್ದಾರನಿರುವನು. ತನ್ನ ಮಂತ್ರಿ ಮಂಡಲದ ಬಹು ಪಕ್ಷದ ಒಪ್ಪಿಗೆಯ ವಿನಹ ಅವನಿಗೆ ಯಾವ ಪ್ರಾಮುಖ್ಯ ಪ್ರಶ್ನೆಯ ಕುರಿತಾದರೂ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ಮತ್ತು ಅವರು ತನ್ನ ನಿರ್ಧಾರದ ಕುರಿತು ಪಾರ್ಲಿಮೆಂಟಿನಲ್ಲಿ ಎಂತಹ ಚರ್ಚೆ ಮತ್ತು ಟೀಕೆಗಾದರೂ ಒಳಗಾಗಲು ಸಿದ್ಧರಿರಬೇಕು. ಜನತೆಯ ವಿಶ್ವಾಸ ಬಲದಿಂದ ಮಾತ್ರ ಅವರು ಅಧಿಕಾರ ನಡಿಸಬಹುದು. ಇಂಗ್ಲೆಂಡಿನಂತಹ ಪ್ರಜಾಶಾಹಿರಾಜ್ಯದಲ್ಲಿ ಅದೊಂದು ನಿಶ್ಚಿತ ಅವಧಿಯೊಳಗೆ ಚುನಾವಣೆ ನಡೆಯಲೇ ಬೇಕು. ಇದು ಹೊರತು ಪ್ರಧಾನ ಮಂತ್ರಿಗಳು, ತನಗೆ ಅಗತ್ಯವೆಂದು ತೋರಿದಾಗ ಪ್ರಾಮುಖ್ಯ ಪ್ರಶ್ನೆಯನ್ನು ಜನತೆಯ ಮುಂದಿಟ್ಟು ಚುನಾವಣೆ ನಡಿಸಬಹುದು. 21ವರ್ಷ ತುಂಬಿದವರೆಲ್ಲರೂ ಈ ಚುನಾವಣೆಯಲ್ಲಿ ಭಾಗವಹಿಸಿ ಗುಪ್ತವಾಗಿ ಮತ್ತು ಸ್ವತಂತ್ರವಾಗಿ ಓಟುಕೊಡಬಹುದು. ಇಚ್ಛಾನುಸಾರ ಓಟುಕೊಡಲು ಯಾವ ತರದ ತಡೆಯಾಗಲಿ ಭೀತಿಬೆದರಿಕೆಯಾಗಲಿ ಇರಲಾರದು. ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿಯೂ ಇದೇ ತತ್ವವು ಜ್ಯಾರಿಯಲ್ಲಿರುವುದು. ತಮಗೇನುಬೇಕೆಂದು ಹೇಳುವ ಸಂದರ್ಭವು ಮತದಾರರಿಗಿರುವುದು

ಪ್ರಜಾಸತ್ತೆಯಲ್ಲಿ ಶಿಸ್ತು ಸಂಯಮವೆಂಬುದೇನೂ ಇಲ್ಲ. ಆದುದರಿಂದ ಅದು ದುರ್ಬಲವಿರುತ್ತದೆಂದು ಕೆಲವರ ಟೀಕೆ ತಮ್ಮ ಓಟುಗಳನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕೆಂಬುದನ್ನೂ ಸರಿಯಾಗಿ ತಿಳಿಯುವ ಶಕ್ತಿ ಮತ್ತು ಆಸಕ್ತಿಯಿದ್ದರೆ ಮಾತ್ರ ಪ್ರಜಾಸತ್ತೆಯು ಸಾರ್ಥಕವಾಗುವುದು. ಇಲ್ಲವಾದರೆ ಅದು ಬರೇ ಫಾರ್ಸಾಗುವುದೆಂದು ಈ ಟೀಕಾಕಾರರ ಅಭಿಮತ. ಇಂತಹ ಜನ ಹಕ್ಕಿಗೆ ಜವಾಬ್ದಾರಿಗಳೂ ಇವೆ. ಜನರು ಆ ಜವಾಬ್ದಾರಿಗಳನ್ನರಿತುಕೊಳ್ಳದಿದ್ದರೆ ಫಲವಿಲ್ಲ. ಚುನಾವಣೆಗಳಲ್ಲಿ ನೇಕಡ 50ರ ವರೆಗಣ ಜನರು ಭಾಗಿಯಾಗದಿರುವುದೂ ಇದೆ. ಇದರಿಂದ ನಿಜವಾದ ಪ್ರಜಾ ಸತ್ತೆಯ ತತ್ವವನ್ನೇ ಮೂಲೆಗೊತ್ತಿದಂತಾಗುತ್ತದೆ ಮತ್ತು ಎಲ್ಲಾ ಪ್ರಜೆಗಳ ಹೆಸರಲ್ಲಿ ಕೆಲವರೇ ತಮ್ಮಿಚ್ಛಾನುಸಾರ ರಾಜ್ಯಭಾರ ಮಾಡುವ ಅಪಾಯ ಬರುವ ಸಂಭವವಿದೆಯೆಂದು ಕೆಲವರ ವಾದ.

ಪ್ರಜಾಶಾಹಿಯ ರೀತಿನೀತಿ

ಇಂಗ್ಲೆಂಡಿನ ರಾಜ್ಯಭಾರವು ಬಹುತೇಕ ನಿಜವಾದ ಪ್ರಜಾಸತ್ತಾತ್ಮಕ ತತ್ವಗಳಿಗನುಗುಣವಾಗಿಯೇ ನಡೆಯುತ್ತದೆ. ಆದುದರಿಂದಲೇ ಅದು ಇಡೀ ಲೋಕಕ್ಕೊಂದು ಮಾದರಿಯ ರಾಷ್ಟ್ರವಾಗಿದೆ ಅಲ್ಲಿ ಡಿಕ್ಟೇಟರತನವು ಕಾಲೂರಲು ಸಾಧ್ಯವೇ ಇಲ್ಲ. ಫೆಸಿಸ್ಟ್ ತತ್ವವನ್ನೂ ಪ್ರಚಾರಕ್ಕೆ ತರಲೆತ್ನಿಸುತ್ತಿರುವ ಸರ್ ಒಸ್ವಾಲ್ಡ್ ಮೋಸ್ಲೆಯವರು ಜನರ ಪ್ರಬಲ ವಿರೋಧಕ್ಕೊಳಗಾಗಿ ನಿರಾಶೆಗೊಂಡು ಸುಮ್ಮನಿರಬೇಕಾಗಿದೆ.

ಇಂಗ್ಲೆಂಡಿನಲ್ಲಿ ಪತ್ರಿಕೆಗಳ ಮೇಲೆ ಯಾವ ನಿರ್ಬಂಧವೂ ಇರುವುದಿಲ್ಲ ಯಾವ ಪತ್ರಿಕೆಗಳಾದರೂ ಸಭ್ಯತೆಯ ಮೇರೆ ಮೀರದೆ ಯಾವ ಅಭಿಪ್ರಾಯವನ್ನಾದರೂ ಪ್ರಕಟಿಸಬಹುದು. ಸರಕಾರದ ಅಧಿಕಾರಗಳನ್ನು ಎಷ್ಟೊಂದು ತೀವ್ರವಾಗಿಯಾದರೂ ಖಂಡಿಸಬಹುದು. ಜರ್ಮನಿಯ ರಾಯಭಾರಿಯಾಗಿದ್ದ ಹರ್ ವಾನ್ ರಿಬಂಟ್ರೋಪರು ಒಮ್ಮೆ ಬ್ರಿಟಿಷ್ ಮಂತ್ರಿಗಳೊಬ್ಬರೊಂದಿಗೆ ರಸ್ತೆಯಲ್ಲಿ ನಡೆದು ಹೋಗುತ್ತಿದ್ದರು. ರಸ್ತೆಯ ಪತ್ರಿಕಾ ವಿಕ್ರಯಿಯೊಬ್ಬನಿಂದ ಬ್ರಿಟಿಷ್ ಮಂತ್ರಿಗಳು ಕಮ್ಯೂನಿಸ್ಟ್ ಪತ್ರಿಕೆಯೊಂದನ್ನು ತೆಗೆದುಕೊಂಡುದನ್ನು ಕಂಡು ರಿಬಂಟ್ರೋಪರು ಉರಿದುಬಿದ್ದರು. ಅವರಿಗದು ಅರ್ಥವೇ ಆಗಲಿಲ್ಲ. 'ಆ ಪತ್ರಿಕಾ ವಿಕ್ರಯಿಯು ಕೈದುಮಾಡಲ್ಪಡಬೇಕು. ಪತ್ರಿಕೆಯು ನಿಷೇಧಿಸಲ್ಪಡಬೇಕು', ಎಂದವರು ಗಜರಿದರು. ಅನಂತರ ಒಂದು ಸಭೆಯಲ್ಲಿ ಮಾತಾಡುವಾಗ, ಆಂಗ್ಲೇಯರ ಅಪಾಯಕರ ಸಹನಾ ಶೀಲತೆಯ ಕುರಿತು ಟೀಕಿಸಿದರು.

ಇಂಗ್ಲೆಂಡಿನಲ್ಲಿ ಒಬ್ಬನು ತನಗೆ ಇಚ್ಛೆ ತೋರಿದ ಧರ್ಮಾನುಯಾಯಿಯಾಗಿರಬಹುದು ಆ ಕುರಿತು ಯಾವ ನಿರ್ಬಂಧವೂ ಇರಲಾರದು. ಒಬ್ಬನು ಎಷ್ಟೊಂದು ವಿಲಕ್ಷಣ ತತ್ವ ಪ್ರಚಾರವನ್ನಾದರೂ ಮಾಡಬಹುದು ರೇಡಿಯೋ ಯಂತ್ರಗಳಿಗೆ ಲೈಸನ್ಸ್ ಫೀಸನ್ನೇನೂ ತೆರಬೇಕಾಗಿಲ್ಲ. ಅವರು ಲೋಕದ ಯಾವ ರೇಡಿಯೋ ಸ್ಟೇಶನುಗಳಿಂದಾದರೂ ಸಂಗತಿಗಳನ್ನು ಕೇಳಿ ತಿಳಕೊಳ್ಳಬಹುದು. ಯಾವ ಬ್ರಿಟಿಷ್ ಪ್ರಜೆಯೇ ಆಗಲಿ, ಅವನು ಎಂತಹ ತಪ್ಪು ಮಾಡಿದವನೇ ಇರಲಿ, ಕೈದುಮಾಡಲ್ಪಟ್ಟ 24 ಘಂಟೆಗಳೊಳಗೆ ಕೋರ್ಟಿನ ಮುಂದೆ ವಿಚಾರಣೆಗೆ ತರಲ್ಪಡಬೇಕು. ಗುಮಾನಿಗೊಳಗಾಗಿ ವಿಚಾರಿಸಲ್ಪಡಬೇಕಾದವನನ್ನು ಸ್ವಲ್ಪ ಸಮಯ ಮಾತ್ರ ನಿರ್ಬಂಧದಲ್ಲಿರಿಸಬಹುದು. ಸರ್ವಸಾಮಾನ್ಯವಾಗಿ ಇದು 48 ಘಂಟೆಗಿಂತ ಹೆಚ್ಚಾಗುವುದಿಲ್ಲ ಗುಮಾನಿಗೊಳಗಾದವನನ್ನು ಕೂಡಾ ಪೋಲೀಸರ ಇಚ್ಛಾನುಸಾರ ಪ್ರಶ್ನಿಸಕೂಡದು. ಅವನು ಪೋಲೀಸರ ಪ್ರಶ್ನೆಗೊಳಗಾಗಲಾರನು. ಕೈದಿಯು ಒಮ್ಮೆ ವಿಚಾರಣೆಗೊಳಗಾದ ಮೇಲೆ ಆದಷ್ಟು ಬೇಗನೆ ಅದನ್ನು ಮುಗಿಸಲು ಪ್ರಯತ್ನ ಮಾಡಲಾಗುವುದು. ಹೆಚ್ಚೆಂದರೆ ಒಬ್ಬ ಕೈದಿಯು 3 ತಿಂಗಳಿಗಿಂತ ಹೆಚ್ಚು ಸಮಯ ಬಂಧನದಲ್ಲಿರಬೇಕಾಗಿಲ್ಲ. ಕೈದಿಯು ತಲೆತಪ್ಪಿಸಿಕೊಂಡು ಹೋಗುವಂತಹ ಸಂದರ್ಭದಲ್ಲಿ ಮಾತ್ರ ಜಾಮೀನಿನಲ್ಲ ಬಿಡಲು ನಿರಾಕರಿಸಲಾಗುವುದು. ಜಾಮೀನು ನಿರಾಕರಿಸಲ್ಪಟ್ಟ ಕೈದಿಗೆ ಹ್ಯಾಕೋರ್ಟಿಗೆ ಅಪೀಲು ಮಾಡುವ ಹಕ್ಕಿದೆ. ವಿಚಾರಣೆಯು ಯಾವಾಗಲೂ ಪಂಚರ ಎದುರಲ್ಲ ನಡೆಯುವುದು. ಮತ್ತು ರುಜುವಾತಿನ ವಿಷಯಗಳನ್ನೆಲ್ಲಾ ಪಂಚರು ಪರಿಶೀಲಿಸಿ ತೀರ್ಮಾನವೀಯತಕ್ಕದ್ದು. ಪರದೆಯೊಳಗಿನ ವಿಚಾರಣೆಯೇ ಇರುವುದಿಲ್ಲ.

ಬ್ರಿಟಿಷರ ಸಾಮಾಜಿಕ ಮತ್ತು ಕೌಟುಂಬಿಕ ಜೀವನದಲ್ಲಿ ಸರಕಾರವು ಎಂದೂ ಕೈಹಾಕಲಾರದು ಪ್ರತಿಯೊಂದು ಕುಟುಂಬವೂ ತನ್ನ ಮನೋವೃತ್ತಿ ಮತ್ತು ಶಕ್ತಿಯಂತೆ ಜೀವಿಸಿ ಬೆಳೆಯಬಹುದು. ಮಗನೊಬ್ಬನ ಉದ್ಯೋಗ ಶಿಬಿರದಲ್ಲಿ ಕೆಲಸಮಾಡಲು ಮತ್ತು ಸೇನಾಶಿಕ್ಷಣ ಪಡೆಯಲು ಬಲಾತ್ಕಾರದಿಂದ ಒಯ್ಯಲ್ಪಡುವುದೆಂದೇನೂ ಇಲ್ಲ. ಮಗಳೊಬ್ಬಳು ಇಂತಹ ಪೋಷಕನ್ನೇ ಹಾಕಿಕೊಂಡು ಕವಾತು ಕಲಿಯಬೇಕೆಂಬ ನಿರ್ಬಂಧವಿಲ್ಲ. ವ್ಯೆಯಕ್ತಿಕ ಸ್ವಾತಂತ್ರ್ಯವೇ ಪ್ರಜಾಸತ್ತೆಯ ಮೂಲತತ್ವ. ಆದರೂ ಅದರಲ್ಲಿ ಕೆಲವು ದೋಷಗಳು ಇದ್ದೇ ಇವೆ. ಸ್ವಾತಂತ್ರ್ಯವು ಅನಾಸಕ್ತಿ ಮತ್ತು ಜಡಮನೋವೃತ್ತಿಯನ್ನುಂಟುಮಾಡಬಹುದು. ಕಾರ್ಯೋತ್ಸಾಹವನ್ನು ಕುಂದಿಸಿ ಅಸಡ್ಡೆಯನ್ನುಂಟುಮಾಡಬಹುದು. ಇದು ಸ್ವಾತಂತ್ರ್ಯದ ದುಷ್ಪರಿಣಾಮ. ಸಮಷ್ಟಿಯ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ವ್ಯಕ್ತಿಯು ಸರ್ವಸಾಧಾರಣ ಮತ್ತು ವಿಶಿಷ್ಟ ಪರಿಸ್ಥಿತಿಗಳಲ್ಲಿ ಕೆಲಮಟ್ಟಿನ ತ್ಯಾಗಮಾಡುವ ಆವಶ್ಯವಿದೆ. ನಾಜೀಶಾಹಿ ಅಥವಾ ಡಿಕ್ಟೇಟರಶಾಹಿಯಲ್ಲಿ ಇಂತಹದನ್ನು ಮಾಡಿಯೇ ತೀರಬೇಕೆಂಬ ಕರ್ತವ್ಯಕ್ಕೇನೇ ಪ್ರಾಧಾನ್ಯ ಕೊಡಲಾಗುತ್ತದೆ. ಪ್ರಜಾಶಾಹಿಯಲ್ಲಿ ಪ್ರತಿಯೊಬ್ಬನ ಹಕ್ಕೇ ಪ್ರಧಾನವಾಗಿರುತ್ತದೆ. ಇಷ್ಟೇ ಭೇದ. ಆದರೆ ಪ್ರತಿಯೊಬ್ಬನ ಹಕ್ಕಾದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಪ್ರಜಾಶಾಹಿ ಸಮಾಜದ ಪ್ರತಿಯೊಂದು ಅಂಗವೂ ತನ್ನ ಪಾಲಿನ ಕೆಲಸವನ್ನು ಸರಿಯಾಗಿ ಮಾಡುವ ಕರ್ತವ್ಯಬುದ್ಧಿಯುಳ್ಳದಾಗಬೇಕು.

ವಿಜಾಪುರ ಜಿಲ್ಲೆಯ ಸುದ್ದಿ

ಸಾಮಾನ್ಯ ಸ್ಥಿತಿ—ಚಳಿಯು ಬಿಡಹತ್ತಿದೆ ಆದರೆ ಜನತೆಗೆ ಮಳೆ ಬೇಕಾಗಿದೆ ಬೆಳೆಗಳ ಸ್ಥಿತಿಯು ಚನ್ನಾಗಿಲ್ಲ, ರೋಗರುಜಿಗಳೇನೂ ಇಲ್ಲಾ.

ನಿಷೇಧ ಸಭೆ—ಶ್ರೀರಂಗರಾವ ತಿಳಗೂಳ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ "ಕೂಲಿಕಾರ ಕಲಹ ನಿವಾರಕ ಬಿಲ್ಲಿಗೆ ತೀವ್ರ ನಿಷೇಧವು ಸೂಚಿಸಲಾಯಿತು.

ಕೆಲಸದಿಂದ ದೂರಮಾಡಿದರು—ಲಂಚ ತಿಂದರೆಂಬ ಆರೋಪನೆಯ ಮೇರೆಗೆ ಇಲ್ಲಿಯ ಸ್ಪೆಶಲ್ ಹೆಡ ಕಾರಕೂನರಾದ ಹೂಲಿಕಟ್ಟಿಯವರನ್ನು ಕೆಲಸದಿಂದ ದೂರಮಾಡಿದರು.

ಹಿಂದೀ ಪರೀಕ್ಷೆ—ವಿಜಾಪುರ ಕೇಂದ್ರದಲ್ಲಿ ಪ್ರಾಥಮಿಕ ಪರೀಕ್ಷೆಗಾಗಿ ಕುಳಿತ ೨೭ ವಿದ್ಯಾರ್ಥಿಗಳಲ್ಲಿ ೨೦ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಚುನಾವಣೆ—ಜಿಲ್ಲಾ ಲೋಕಲ್ ಬೋರ್ಡ ಚುನಾವಣೆಯು ಮುಂದಿನ ತಿಂಗಳ ಕೊನೆಯ ವಾರದಲ್ಲಿ ನಡೆಯಲಿದೆ. ಈಗಾಗಲೇ ಪೂರ್ವ ತಯಾರಿಯು ಬಳ್ಳೇ ಜೋರಾಗಿ ನಡೆದಿದೆ.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಗೆಯೇ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅದರಲ್ಲಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಅಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಸ್ಥಾಪನೆ: **ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು. ಪೇಡೆಗಳ ಬಿಲ್ಲು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBBER STAMP CO,
Balmat Road, MANGALORE.

Included by the Mysore Govt. Stores Purchase Committee in the list of approved Firms.

ಕಮ್ಮಿ ಕ್ರಯದ ಖಾತ್ರಿ ವಾಚುಗಳು

ಈಗತಾನೆ ಬಂದ ನಮ್ಮ ಹೊಸ ಸ್ಟಾಕಿನ ನವೀನ ವಾಚುಗಳು ಅಗ್ಗವಾದ ಇತರ ಎಲ್ಲಾ ವಾಚುಗಳಿಗಿಂತ ಖಾತ್ರಿಯಾಗಿವೆ. ಹೆಚ್ಚು ಬಾಳಿಕೆಬರುವ ಮತ್ತು ಸರಿ ಸಮಯ ಸೂಚಿಸುವ ಲಿವರ್ ವಾಚುಗಳಾಗಿವೆ. ಖಾತ್ರಿ 3 ವರ್ಷದ ಗ್ಯಾರಂಟಿ. ನಿಕ್ಕಲ್ ಕೇಸಿನ ರಿಸ್ಟ್‌ವಾಚಿಗೆ ರೂ 2-0 0 ಬಂಗಾರದ ಬಣ್ಣ ರೂ. 3-4-0 1ರಿಂದ 3ವಾಚುಗಳವರೆಗೆ 10ಆಣೆ ಟಪ್ಪಾಲುಖರ್ಚು ಬೀಳುತ್ತೆ. ನಂತರದ ಪ್ರತಿ 1ಕ್ಕೆ 4ಆಣೆ ಮಾತ್ರ ಹೆಚ್ಚು.

ಟಿ. ಝ ಎಂಡ್ ಕೊ.,
ಪೋಸ್ಟ್ ಬಾಕ್ಸ್ ನಂಬ್ರ 6757, ಕಲ್ಕತ್ತ.

T. Jha & Co ,
Post Box No. 6757, Calcutta

ಕರ್ನಾಟಕ ಏಕೀಕರಣ
ಮತ್ತು
ಸ್ವತಂತ್ರ ಪ್ರಾಂತ್ಯ ನಿರ್ಮಾಣ ಸಮಸ್ಯೆ

ಲೇಖಕರ :— ಶ್ರೀ. ಬೆನಗಲ್ ರಾಮರಾವ್, ಎಂ.ಎ., ಎಲ್.ಎಲ್.ಬಿ., ಮಲ್ಲೇಶ್ವರ, ಬೆಂಗಳೂರು.

(ಕಳೆದ ಸಂಚಿಕೆಯಿಂದ ಮುಂದುವರಿದಿದ್ದು.)

ಭಾಷಾವಾರು ಪ್ರಾಂತ್ಯಗಳನ್ನೇರ್ಪಡಿಸುವ ಪಕ್ಷದಲ್ಲಿ ಅವು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಗಳಾಗಿ ನಿಲ್ಲಲಾರವೆಂಬ ಆಕ್ಷೇಪಣೆಯು 'ಗುಮ್ಮ' ನನ್ನು ನಮ್ಮ ಪ್ರತಿಪಕ್ಷಿಗಳು ನಮ್ಮ ಇದಿರಿಗೆ ಒಡ್ಡಿ, ಜನರ ಮನಸ್ಸುಗಳಲ್ಲಿ ಭಯವನ್ನೂ ಸಂದೇಹವನ್ನೂ ಉಂಟುಮಾಡುತ್ತಿರುವರು, ಮತ್ತು ಈ ಮಾತಿಗೆ ಉತ್ಕಲ, ಸಿಂಧುದೇಶಗಳನ್ನು ಆಧಾರವಾಗಿ ಹೇಳುತ್ತಿರುವರು ಆದರೆ ಇಂತಹ ದುರವಸ್ಥೆಯು ಆಯಾ ಭಾಷಾಪ್ರದೇಶಗಳಿಗೆ ಉಂಟಾಗಿರುವುದು ಆ ಆ ಪ್ರದೇಶಗಳಲ್ಲಿರುವ ನೈಸರ್ಗಿಕವಾದ ಕುಂದಕವಲ್ಲ. ಮನಸ್ಸಿಗೆ ಬಂದಂತೆ ದೇಶವನ್ನು ವಿಂಗಡಿಸಿ, ಪ್ರಾಂತಗಳನ್ನೇರ್ಪಡಿಸಿ (ಉದ್ದೇಶಪೂರ್ವಕವಾಗಿ ಎಂದು ನಾನು ಹೇಳುವುದಿಲ್ಲ.) ಆ ಆ ಸರ್ಕಾರದ ಮುಖ್ಯ ಠಾಣ್ಯವಾಗಿರುವ ಪಟ್ಟಣಗಳ ಮತ್ತು ಅವರ ಸುತ್ತಮುತ್ತಲಿನ ಪ್ರದೇಶಗಳ ಸಂಪದಭಿವೃದ್ಧಿಗೆ ಹೆಚ್ಚು ಗಮನಕೊಟ್ಟುದೇ, ಉಳಿದ ಜನರ, ಪಟ್ಟಣಗಳ ಮತ್ತು ಪ್ರದೇಶಗಳ ಅವನತಿಗೆ ಕಾರಣವಾಗುವುದಾಯಿತು. ಈ ಪರಿಸ್ಥಿತಿಯು ತೊಲಗಿ ಸರ್ವ ಉಪಜನಾಂಗಗಳಿಗೂ ಏಕಪ್ರಕಾರವಾದ ಉನ್ನತಿಮಾರ್ಗವು ಲಭಿಸಬೇಕಾದರೆ ಅದಕ್ಕೆ ಸ್ವತಂತ್ರ ಆಡಳಿತದ ಭಾಷಾವಾರು ಪ್ರಾಂತ್ಯ ನಿರ್ಮಾಣವೊಂದೇ ರಾಮಬಾಣ ಔಷಧವೆಂದು ನಾನು ನೆನಸುತ್ತೇನೆ ಕಾಂಗ್ರೆಸ್ಸಿನ ಆಡಳಿತದಲ್ಲಿ ಇಂತಹ ಪಕ್ಷಪಾತಕ್ಕೆ ಅವಕಾಶವಿಲ್ಲವೆಂದೂ, ಎಲ್ಲ ಪ್ರಾಂತ್ಯಗಳಿಗೂ ಈ ಮುಂದೆ ಸಮಾನವಾದ ಲಕ್ಷ್ಯಕೊಡಲ್ಪಡುವುದೆಂದೂ ಶ್ರೀ ಟಿಟ್ಟೆಯವರು ಆಶ್ವಾಸನಕೊಡುತ್ತಲಿದ್ದಾರೆ, ನಿಜ. ಆದರೆ ಇಂಥಾ ಆಶ್ವಾಸನದಿಂದ ತಕ್ಕಷ್ಟು ಪ್ರಯೋಜನವಾಗುವುದೆಂದು ನನಗೆ ತೋರುವುದಿಲ್ಲ ಈಗಳಿನ ಪದ್ಧತಿಯೇ ಸದೋಷವಾಗಿರುವಲ್ಲಿ ನಿಷ್ಪಕ್ಷಪಾತದ ವರ್ತನಮಾತ್ರದಿಂದ ಕುಂದಕಗಳು ಚೆನ್ನಾಗಿ ಪರಿಹಾರವಾಗುವಂತಿದೆಯೇ? ಪ್ರತ್ಯೇಕ ಪ್ರಾಂತ್ಯ ನಿರ್ಮಾಣವೊಂದರಿಂದಲೇ ಹೋಗಲಾಡಿಸಲು ಸಾಧ್ಯವಾದ, ಅನ್ಯಥಾ ಸಾಧ್ಯವಿಲ್ಲದ, ಪ್ರಬಲವಾದ ಎಷ್ಟೋ ಸಂಗತಿಗಳನ್ನು ನಾನು ವಾಚಕರ ಮುಂದಿಡಬಲ್ಲೆನು, ಮತ್ತು ಕ್ಷಿಪ್ರದಲ್ಲಿಯೇ ಮುಂದಿಡಲು ಕೈಕೊಂಡಿರುವೆನು.

ಆರ್ಥಿಕ ನಿರ್ಬಲತೆಯ ವಿಚಾರವೂ ನಮ್ಮನ್ನು ಬೆದರಿಸಬೇಕಾಗಿಲ್ಲ ಈ ಭೂಲೋಕದಲ್ಲಿ ಆದಾಯದ ವಿಷಯದಲ್ಲಿ ಎಲ್ಲ ಜನರೂ, ಎಲ್ಲ ದೇಶಗಳೂ, ಒಂದೇ ರೀತಿಯಾಗಿರುವುದಿಲ್ಲ. ಆದರೆ ಆ ಒಂದು ಕಾರಣಕ್ಕಾಗಿಯೇ ತಮ್ಮ ವ್ಯಕ್ತಿಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಯಾವ ದೇಶವೂ, ಪ್ರತ್ಯೇಕ ಸಂಸಾರಹೂಡಲು ಯಾವ ಮನುಷ್ಯನೂ ಹಿಂಜರಿಯುವುದಿಲ್ಲ ಪ್ರತಿಯೊಬ್ಬರೂ ತಮ್ಮ ತಮ್ಮ ಅಂತಸ್ತಿಗೆ ಸರಿಹೋಗುವಂತೆ ತಮ್ಮ ತಮ್ಮ ಆದಾಯ ವೆಚ್ಚಗಳನ್ನು ಹೊಂದಿಸಿಕೊಂಡು ಜೀವನವನ್ನು ನಡೆಯಿಸುವರು ಕರ್ಣಾಟಕ ಜನತೆಗೆ ಮತ್ತು ಜನಪದಕ್ಕೆ ಮಾತ್ರ ಇದು ಸಾಧ್ಯವಲ್ಲವೇನು? ೫೦೦ರಿಂದ ೫೦ ಸಾವಿರ ಚಚ್ಚೌಕ ಮೈಲಿಯಷ್ಟು ವಿಸ್ತಾರವುಳ್ಳ ಎಷ್ಟೋ ದೇಶೀಯ ರಾಜ್ಯಗಳು ಇಂಡಿಯದಲ್ಲೇ ಇರುವುದಿಲ್ಲವೇ? ಇವೆಲ್ಲ ಆಡಳಿತ ನಡೆಸಿಕೊಂಡು ಬರುತ್ತಿಲ್ಲವೇ? ಆಡಳಿತದ ವೆಚ್ಚವನ್ನು ನಮ್ಮ ಧನಬಲಕ್ಕೆ ಸರಿಹೋಗುವಂತೆ ಹೊಂದಿಸಿಕೊಂಡು, ನಮ್ಮ ಈಗಳಿನ ಸ್ಥಿತಿಯಲ್ಲಿ ಕೂಡ ಆತ್ಮಾವಲಂಬಿಯಾಗಿ ಬಾಳಿಕೊಂಡಿರಲು ಕರ್ಣಾಟಕ ದೇಶಕ್ಕೆ ಸಾಧ್ಯವಲ್ಲದಿಲ್ಲವೆಂದು ನನಗೆ ದೃಢವಾದ ನಂಬುಗೆಯಿದೆ. ಮುಂದಿನ ಬೆಳವಣಿಗೆಯ ಅವಕಾಶಗಳಂತೂ ಬೇಕಾದಷ್ಟು ಇದ್ದೇ ಇವೆ ಈಗಳಿನ ಮದ್ರಾಸು ಬೊಂಬಾಯಿ ಪ್ರಾಂತಗಳೊಡನೆ ಹೋಲಿಸಿದರೆ ಕರ್ಣಾಟಕ ಪ್ರಾಂತ್ಯವು ಎಷ್ಟೋ ಚಿಕ್ಕದಾಗುವುದೆಂಬುದು ನಿಜ. ಆದರೆ ಅದರಲ್ಲಿಯೂ ಒಂದು ಲಾಭವಿದೆ. ನಮ್ಮ ದೇಶದ ಹಿತಾಹಿತಗಳನ್ನು ಸೂಕ್ಷ್ಮವಾಗಿ ನೋಡಿಕೊಂಡು, ಪರಿಹಾರಗಳನ್ನು ಕಲ್ಪಿಸಲು ಸಾಧ್ಯವಾಗುತ್ತವೆ

ನಮ್ಮ ನಮ್ಮ ದೇಶದ ದೊಡ್ಡ ದೊಡ್ಡ ಹುದ್ದೆಗಳು ನಮಗನಮಗೇ ಸಿಕ್ಕಬೇಕು ಮತ್ತು ಅಧಿಕಾರಸೂತ್ರಗಳೆಲ್ಲ ತಮ್ಮ ಕೈಯಲ್ಲಿಯೇ ಇರಬೇಕೆಂದು ಕನ್ನಡಿಗರು ಬಯಸಿದರಾದರೆ ಅದೊಂದು ಅಕ್ಷಮ್ಯವಾದ ಅಪರಾಧವಾಗುವುದೆಂದು ನನಗೆ ತೋರುವುದಿಲ್ಲ. ಪ್ರತ್ಯೇಕ ಪ್ರಾಂತವೇರ್ಪಟ್ಟುದಾದರೆ ಕೆಲಕೆಲವು ಪಂಗಡಗಳು ಮಾತ್ರ ಮುಂದೆ ಬಂದು ಅಲ್ಪ ಸಂಖ್ಯಾತರಾದ ಇತರರನ್ನು ತುಳಿಯುವರೆಂಬ ಭೀತಿಯೂ ಕೂಡ ಕೆಲವರನ್ನು ಪೀಡಿಸುತ್ತಿರುವಂತಿದೆ. ಆದರೆ ಇದು ಅಷ್ಟೊಂದು ಪ್ರಬಲವಾದ ಭಯಮೂಲವೆಂದು ನಾನು ಎಣಿಸುವುದಿಲ್ಲ. ಮದ್ರಾಸಿನಲ್ಲಿ ಉತ್ಪನ್ನವಾದ ಅಬ್ರಾಹ್ಮಣರ ತೀವ್ರವಾದ ಚಳುವಳಿಯೂ ಬ್ರಾಹ್ಮಣರ ಹುಟ್ಟಡಗಿಸಬೇಕೆಂಬ ದುರ್ಬುದ್ಧಿಯೂ ಕಾಲಾಂತರದಲ್ಲಿ ತಾನಾಗಿ ಬಲಗುಂದಿ ಸರಿಮಾರ್ಗಕ್ಕೆ ಬರುತ್ತಲಿಲ್ಲವೆ? ಕರ್ಣಾಟಕದಲ್ಲಿಯೇ ಒಂದು ವೇಳೆಗೆ ಕೆಲವು ಪಂಗಡಗಳು ಮಾತ್ರ ಕೊಂಚಕಾಲ ಪರ್ಯಂತ ಮುಂದೆಬರುವುದೆಂದೆಣಿಸಿದರೂ ಒಂದಲ್ಲ ಒಂದು ದಿನ, ಇತರರೂ ಮುಂದೆಬರಲು ಸಾಧ್ಯವಿದೆ, ಆದರೆ ಇಂತಹ ನಿರರ್ಥಕ ಭೀತಿಯಿಂದ ನಾವು ಪರಾಧೀನರಾಗಿಯೇ ಇರೋಣವೆಂದು ಬಯಸಿದೆವಾದರೆ, ಕಲ್ಪಾಂತದವರೆಗೂ ನಾವು ದಾಸ್ಯಪಂಕದಲ್ಲಿಯೇ ಕೊಳೆಯುತ್ತ ಬೀಳಬೇಕಾಗುವುದು. ಲಿಂಗಾಯತರು ಪ್ರಬಲರಾಗುವರೆಂಬ ವಾದವು ಗೊಡ್ಡು ಬೆದರಿಕೆಯೇ ಸರಿ ಆ ಜನರೇ ಕರ್ಣಾಟಕದಲ್ಲಿ ಬಹು ಸಂಖ್ಯಾತರಾಗಿದ್ದ ಬಳಿಕ, ಅವರೇ ಹೆಚ್ಚುಹೆಚ್ಚಾಗಿ ಅಧಿಕಾರ ಸ್ಥಾನಗಳನ್ನು ಅಪೇಕ್ಷಿಸಿದರೂ, ಪಡೆದರೂ, ಅದರಲ್ಲಿ ಅನ್ಯಾಯವೇನಿದೆ? ಅದಕ್ಕಾಗಿ ಇತರರು ಏತಕ್ಕೆ ಕಡುಬಬೇಕು? ಲಿಂಗಾಯತರಿಗೂ ಇತರರಿಗೂ ಮೊದಲಿಂದ ಅಂಥ ರಕ್ತಗತವಾದ ದ್ವೇಷವೇನೂ ಇರುವುದೆಂದು ನನಗೆ ತೋರುವುದಿಲ್ಲ. ಇರುವ ದ್ವೇಷವೂ, ಸ್ಪರ್ಧೆಯೂ ಮುಖ್ಯವಾಗಿ ಸರ್ಕಾರದ ಹುದ್ದೆಗಳಿಗೆ ಸಂಬಂಧಪಟ್ಟುದು, ಮತ್ತು ಕೇವಲ ಇತ್ತೀಚಿನದೆಂದು ನಾನು ಎಣಿಸುತ್ತೇನೆ ಸರ್ಕಾರದ ನೌಕರಿಗಳಿಗೂ ಮತ್ತು ಅವುಗಳಿರುವ ಮಿತಿಮೀರಿದ ದೊಡ್ಡ ಸಂಬಳ ಸಾರಿಗೆಗಳಿಗೂ ಪ್ರಜೆಗಳ ಮೇಲೆ ನಡೆಸಬರುವ ನಿರಂಕುಶಾಧಿಕಾರಗಳಿಗೂ ನಮ್ಮ ಜನರು ಮರುಳಾಗಿ, ಬಲಿಬಿದ್ದು ಕುಲಗೆಟ್ಟು ಹೋಗಿರುವರು. ಆದರೆ ಪ್ರಜಾಮತವೇ ರಾಜನೀತಿಯಾಗಿಯೂ ಜೀವನಕ್ಕೆ ಸಾಕಾಗುವಷ್ಟು ಅತ್ಯಲ್ಪ ಸಂಬಳ ಪಡೆದು ಮಾಡುವ ಪ್ರಜಾಸೇವೆಯೇ ಸರ್ಕಾರದ ಹುದ್ದೆಯೆಂದೂ ತಿಳಿಯತಕ್ಕ ಈ ಮುಂದಿನ ಆಡಳಿತ ಕ್ರಮದಲ್ಲಿ ಇಂತಹ ದ್ವೇಷಾಸೂಯೆಗಳಿಗೆ ಅವಕಾಶವು ಬಹಳ ಮಟ್ಟಿಗೆ ಕಡಿಮೆಯಾಗುವುದೆಂದು ನನ್ನ ಭಾವನೆ

ಇತರ ಪಂಗಡದವರಂತೆಯೇ ಲಿಂಗಾಯತರು ಕೂಡ ಕನ್ನಡ ಜನರೊಳಗಣ ಒಂದು ಪಂಗಡದವರು ಕುಟಿಲಾತ್ಮರ ದುರ್ಬೋಧನೆಗಳಿಗೆ ಕಿವಿಗೊಟ್ಟು ಅವರು ತಮ್ಮವರಲ್ಲವೆಂದು ಇತರರು ಭ್ರಮಿಸಲಾಗದು. ಪರಸ್ವಾತಂತ್ರ್ಯಗಳಲ್ಲಿರುವ ಸ್ವಜನರಿಗಿಂತ ಸ್ವದೇಶದಲ್ಲಿರುವ ಲಿಂಗಾಯತರೇ ತಮಗೆ ಅಧಿಕ ಆಪ್ತಬಂಧುಗಳೆಂದು ಬ್ರಾಹ್ಮಣರು ತಿಳಿಯಬೇಕು ಲಿಂಗಾಯತರು ಇತರ ಪಂಗಡಗಳ ವಿಷಯದಲ್ಲಿ, ತಮ್ಮ ಉತ್ಕರ್ಷೆಯ ಕಾಲದಲ್ಲಿ ಕೂಡ, ಕ್ರೂರವಾಗಿ ನಡೆದ ಉದಾಹರಣೆಗಳು ಪೂರ್ವಚರಿತ್ರೆಯಲ್ಲಿ ಎಲ್ಲಿಯೂ ಸಿಕ್ಕುವುದಿಲ್ಲ. ಪಕ್ಷಾಂತರದಲ್ಲಿ, ಬ್ರಾಹ್ಮಣನಾದ ಪೇಶ್ವೆಯ ಕಡೆಯವರು ಶೃಂಗೇರಿಯ ಶ್ರೀ ಜಗದ್ಗುರುಗಳ ಮಠವನ್ನು ಕೊಳ್ಳೆಹೊಡೆದು ಶ್ರೀ ಸ್ವಾಮಿಗಳನ್ನು ದೇಶಭ್ರಷ್ಟರಾಗಿ ಮಾಡಿದುದನ್ನು ಕೇಳಿ, ವ್ಯಸನಪಟ್ಟು, ಇಕ್ಕೇರಿಯ ಲಿಂಗಾಯತ ರಾಜನು ಅವರನ್ನು ಗೌರವಪುರಸ್ಸರವಾಗಿ ಸ್ವದೇಶಕ್ಕೆ ಬರಮಾಡಿಸಿ ಯಥೇಷ್ಟವಾದ ದ್ರವ್ಯವನ್ನು ಕೊಟ್ಟು ಶ್ರೀ ಮಠದ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಗೊಳಿಸಿದ ಬಗ್ಗೂ, ಇನ್ನಿತರ ಬ್ರಾಹ್ಮಣ ದೇವಾಲಯಗಳಿಗೆ ಉದಾರವಾದ ಉಂಬಳಿ ದತ್ತಿಗಳನ್ನು ಬಿಟ್ಟು ಬ್ರಾಹ್ಮಣ ವಿದ್ವಾಂಸರನ್ನು ಅಗ್ರಹಾರಾದಿ ದಾನಗಳಿಂದ ಸಂತುಷ್ಟಗೊಳಿಸಿದ ಬಗ್ಗೂ ಬೇಕಾದಷ್ಟು ಆಧಾರಗಳು, ಶಾಸನಗಳಲ್ಲಿಯೂ ಇತಿಹಾಸ ಗ್ರಂಥಗಳಲ್ಲಿಯೂ ದೊರಕುತ್ತವೆ. ಹಿಂದೆ ಲಿಂಗಾಯತರು ಚಿಕ್ಕ ದೊಡ್ಡ ರಾಜ್ಯಗಳನ್ನು ಕಟ್ಟಿ ರಾಜಪುರುಷರಾಗಿಯೂ, ವಿದ್ವಾಂಸರಾಗಿಯೂ, ಕವಿಗಳಾಗಿಯೂ, ಕಲಾಕೋವಿದರಾಗಿಯೂ, ಲಕ್ಷ್ಮೀಪುತ್ರರಾಗಿಯೂ, ವರ್ತಕರಾಜರಾಗಿಯೂ, ಸಮಾಜ ನಾಯಕರಾಗಿಯೂ, ಮೆರೆದು, ದೇಶದ ಮುಂದಾಳುಗಳಾಗಿ ಕರ್ಣಾಟಕ ರಾಷ್ಟ್ರಕ್ಕೆ ತುಂಬ ಕೀರ್ತಿಯನ್ನು ತಂದರು. ಕಾಲಾಂತರದಲ್ಲಿ, ದೈವಗತಿಯಿಂದ ಇವರ ಪ್ರಾಬಲ್ಯವು ಕುಂದಿ ವಾಣಿಜ್ಯವೊಂದೇ ಇವರ ಮುಖ್ಯ ಕಾಯಕವಾಗಿ ನಿಂತಿತು. ಈಗ ಸುಮಾರು ೨೫ ವರ್ಷಗಳಿಂದೀಚೆಗೆ ಈ ಜನರಲ್ಲಿ ಬಲವಾದ ಜಾಗ್ರತಿಯುಂಟಾಗಿ ಪೂರ್ವದ ತಮ್ಮ ಪ್ರಾಮುಖ್ಯತೆಯನ್ನು ಪುನಃ ಪಡೆದುಕೊಳ್ಳಲು ಪ್ರಯ

THE LAKSHMI INS. CO., LTD., LAHORE. Estd 1924

Don't Say Can't Afford.

For

THERE IS A LAKSHMI POLICY SUITABLE FOR

Every Purse and Purpose.

WITH

NOVEL SCHEMES AND UNIQUE FEATURES

New Business completed } Exceeds 1.61 crores.
Business in Force. } Exceeds 7.09 crores.

APPLICATIONS FOR AGENCIES ARE INVITED FROM INFLUENTIAL LADIES AND GENTLEMEN FROM ALL UNREPRESENTED AREAS.

For Particulars, please apply to:

The Branch Manager, *334, Thambuchetty St.,* G. T. MADRAS. OR *A. B. Krishna Raj,* ORGANISER, UDIPI.

ತ್ನಗಳು ನಡೆಯುತ್ತಲಿವೆ ನನಗಾದರೆ ಇದೊಂದು ಸಂತೋಷದ ವಿಷಯವೇ ಸರಿ. ಎಷ್ಟೋ ಕಾಲದಿಂದ ಇದನ್ನೇ ನಾನು ಇದಿರುನೋಡುತ್ತಿದ್ದೆನು. ವೀರಶೈವರ ಸರ್ವತೋಮುಖವಾದ ಉನ್ನತಿಯೇ ಕರ್ನಾಟಕದ ಉನ್ನತಿಯೆಂದು ನಾನು ತಿಳಿದಿದ್ದೇನೆ ಹೆಚ್ಚೇಕೆ? ಕರ್ನಾಟಕದ ಏಕೀಕರಣದ ಈ ಚಳುವಳಿಯೂ ಕೂಡ ಲಿಂಗಾಯಿತರ ಕೈಗೆ ಬಂದ ಬಳಿಕವೇ, ಅವರ ಬೆಂಬಲದಿಂದಲೇ ತುಂಬ ಪುಷ್ಟವಾಗಿ ಬೆಳೆದಿದೆಯೆಂದು ನಾನು ಎಣಿಸುತ್ತೇನೆ.

ಮೈಸೂರು ವಿದ್ಯಾಪೀಠವನ್ನೇ ಕರ್ನಾಟಕದ ವಿದ್ಯಾಪೀಠವನ್ನಾಗಿ ಮಾರ್ಪಡಿಸಿಕೊಂಡು ಬ್ರಿಟಿಷ್ ಕರ್ನಾಟಕದ ಪಾಠಶಾಲೆಗಳನ್ನು ಅದಕ್ಕೆ ಒಳಪಡಿಸಬಹುದೆಂದು ಶ್ರೀ ಲಟ್ಟಿಯವರು ಸೂಚಿಸಿರುವರು. ಕೆಲವು ವರ್ಷಗಳಿಗೆ ಹಿಂದೆ ರಾ. ಬ. ಡಾ। ಸಿ. ಬಿ. ರಾಮರಾವ್ ಎಂ.ಡಿ ಅವರೂ, ಶ್ರೀ ಕೆ. ಸಂಪದ್ಗಿರಿರಾವ್ ಎಂ.ಎ. ಅವರೂ ನಾನೂ ಕೂಡ ಒಂದು ಕಮಿಟಿಯಾಗಿ ಏರ್ಪಟ್ಟು, ಈ ಆಲೋಚನೆಯನ್ನೇ ನಮ್ಮ ಹೆಗ್ಗುರಿಯಾಗಿ ಇಟ್ಟುಕೊಂಡು ಎಷ್ಟೆಷ್ಟೋ ಪ್ರಯತ್ನಗಳನ್ನು ನಡಿಸಿದೆವು. ಆದರೆ ಉಭಯ ಪಕ್ಷದವರಲ್ಲಿಯೂ ತೀವ್ರವಾದ ಮತಭೇದವು ತೋರಿಬಂದು, ನಮ್ಮ ಉದ್ದೇಶವು ಸಫಲವಾಗದೆ ಅಲ್ಲಿಂದಲ್ಲಿಗ ನಿಂತು ಹೋಯಿತು. ಈಗಲಾದರೂ ಅಂಥ ಪ್ರಯತ್ನಗಳು ಸಫಲವಾಗಿ ನಡೆಯಬಹುದಾದ ಕಾಲವು ಬಂದಿಲ್ಲವೆಂದೇ ನನ್ನ ಭಾವನೆ ಇನ್ನು ಸ್ವತಂತ್ರವಾದ ಆಡಳಿತದ ಪ್ರಾಂತ್ಯಗಳ ಅಭಾವದಲ್ಲಿ ಕರ್ನಾಟಕಕ್ಕೊಂದು ಪ್ರತ್ಯೇಕ ವಿದ್ಯಾಪೀಠವನ್ನೇರ್ಪಡಿಸಿಯೂ ಹೇಳತಕ್ಕಂತಹ ಪ್ರಯೋಜನವಾವುದೂ ಆಗಲಾರದೆಂದು ರುಜುಪಡಿಸಲು ಮದ್ರಾಸು ಪ್ರಾಂತ್ಯದೊಳಗಣ ಆಂಧ್ರ ಮತ್ತು ಅಣ್ಣಾಮಲೈ ಯೂನಿವರ್ಸಿಟಿಗಳೇ ಸಾಕಾಗಿವೆ.

ಬೇಕಾದರೆ, ಎಲ್ಲ ಕನ್ನಡ ಜಿಲ್ಲೆಗಳನ್ನು ಮದ್ರಾಸು ಅಥವಾ ಮುಂಬಯಿ ಆಧಿಪತ್ಯಕ್ಕೆ (ವಿಶೇಷತಃ ಮುಂಬಯಿ ಆಧಿಪತ್ಯಕ್ಕೆ) ಸೇರಿಸಿ ಏಕೀಕರಣವನ್ನು ಸಾಧಿಸಿಕೊಳ್ಳಬಹುದೆಂದೂ, ೨-೩ ಜಿಲ್ಲೆಗಳನ್ನು ಬೊಂಬಾಯಿಗೆ ಹೆಚ್ಚಾಗಿ ಸೇರಿಸುವುದರಿಂದ ಆಡಳಿತದ ಅಡಚಣೆಗಳೇನೂ ಬರಲಾರವೆಂದೂ ಶ್ರೀ। ಲಟ್ಟಿಯವರು ದಯವಿಟ್ಟು ಸೂಚಿಸಿದ್ದಾರೆ. ಇದಕ್ಕಾಗಿ ಶ್ರೀಯುತರಿಗೆ ಕನ್ನಡಿಗರ ಅನಂತಾನಂತ ವಂದನೆಗಳು. ಆದರೆ, ನಾವು ಕೇಳುವುದು ಏಕೀಕರಣವಷ್ಟೇ ಅಲ್ಲ ಸ್ವತಂತ್ರ ಪ್ರಾಂತ್ಯವನ್ನು ಕೂಡ ಕೇಳುತ್ತಿರುವೆವೆಂಬುದನ್ನು ಶ್ರೀಯುತರು ಮರೆತಂತಿದೆ. ಕನ್ನಡ ಜಿಲ್ಲೆಗಳೆಲ್ಲ ಮದ್ರಾಸಿಗೆ ಸೇರಲಿ, ಅಥವಾ ಬೊಂಬಾಯಿಗೇ ಸೇರಲಿ, ಅದರಿಂದ ನಮ್ಮ ದೈನ್ಯಾವಸ್ಥೆಯು ತೊಲಗುವಂತಿಲ್ಲ. ಎರಡು ಪ್ರಾಂತ್ಯಗಳಲ್ಲಿಯೂ ಕನ್ನಡ ಜಿಲ್ಲೆಗಳು ಬರೀ ಬಾಲದಂತಿವೆ, ತಲೆಯಂತೆ ಅಥವಾ ದೇಹದಂತಿಲ್ಲ. ಹೀಗಾಗಿ ಆಯಾ ಆಧಿಪತ್ಯಗಳ ಆಡಳಿತಗಳ ಮೇಲೆ ಅವರ ವರ್ಚಸ್ಸು ಸ್ವಲ್ಪವೂ ಬೀಳುವ ಹಾಗಿಲ್ಲ. ಇಷ್ಟೇ ಅಲ್ಲದೆ, ಮದ್ರಾಸು ಕಡೆಯವರು ಬೊಂಬಾಯಿಗೂ, ಬೊಂಬಾಯಿ ಕಡೆಯವರು ಮದ್ರಾಸಿಗೂ, ಯಾವ ಕಾರಣದಿಂದಲಾದರೂ ಸರಿಯೇ ಸೇರಲು ಸುತರಾಂ ಇಷ್ಟಪಡುವವರಾಗಿಲ್ಲ. ಇನ್ನು ಬೊಂಬಾಯಿಗೆ ಸೇರಿದರಂತೂ ಶಾಲ್ಯಾ, ಕೊಯಮುತ್ತೂರು, ಆರ್ಕಾಟು, ನೀಲಗಿರಿಯೇ ಮುಂತಾದ (ಕರ್ನಾಟ) ಭಾಗಗಳು ನಮ್ಮ ಕೈತಪ್ಪಿಹೋಗುವ ಭಯವು ಕೂಡ ಬಹಳವಿದೆ, ಆದುದರಿಂದ ಈ ಸೂಚನೆಯೂ ನಮಗೆ ಗ್ರಾಹ್ಯವಲ್ಲ.

ಕೊನೆಯದಾಗಿ, ಒಂದೇ ಒಂದು ಮಾತು ಹೇಳಿ ಈ ಲೇಖನವನ್ನು ಮುಗಿಸುವೆನು. ನಮಗೆ ಮುಖ್ಯವಾಗಿ ಬೇಕಾಗಿರುವದು ಸ್ವಾತಂತ್ರ್ಯ—ನಮ್ಮ ಆಡಳಿತವನ್ನು ನಾವೇ ನೋಡಿಕೊಳ್ಳಲು, ನಮ್ಮ ಸಂಪದಭಿವೃದ್ಧಿಯನ್ನು ನಾವೇ ಮಾಡಿಕೊಳ್ಳಲು ನಮ್ಮ ಭವಿಷ್ಯತ್ತಿನ ಚಿತ್ರವನ್ನು ನಾವೇ ಕೆತ್ತಿಕೊಳ್ಳಲು ಅವಶ್ಯವಿರುವ ಸ್ವಾತಂತ್ರ್ಯ! ಈ ಹಿಂದೆ ರಾಜ್ಯಸೂತ್ರಗಳೆಲ್ಲ ಪರದೇಶೀಯರ ಕೈಯಲ್ಲಿ ನಿಂತು ನಿರಂಕುಶವಾಗಿ ಆಡಳಿತ ನಡೆಯುತ್ತಿದ್ದಾಗ, ದೇಶೀಯರಲ್ಲಿ ಯಾವ ಉಪಜನಾಂಗದವರಿಗೂ ಯಾವದೊಂದು ಸ್ವಾತಂತ್ರ್ಯವಿಲ್ಲದಿದ್ದಾಗ, ಮೂಕಪಶುಗಳಂತೆ ತಾಳ್ಮೆಯಿಂದ ಸಹಿಸಿಕೊಂಡು ಇರುತ್ತಿದ್ದ ಸನ್ನಿವೇಶವೇ ಬೇರೆ. ಅಲ್ಪ ಪ್ರಮಾಣದಲ್ಲಿಯೇ ಆದರೂ ಸ್ವಾತಂತ್ರ್ಯವು ಕೆಲವು ಉಪಜನಾಂಗಗಳಿಗೆ ದೊರೆತು ಉಳಿದವರು ಅವರ ಹಿಮ್ಮೇಳದವರಾಗಿ ಬಾಳಬೇಕಾದ ಸನ್ನಿವೇಶವನ್ನು ಈ ಮುಂದೆ ನಾವು ಎಷ್ಟು ಮಾತ್ರಕ್ಕೂ ಒಪ್ಪಲಾರೆವು ಈ ಮೇಲೆ ರಾಜ್ಯಭಾರವು ಸರ್ವರಿಗೂ ಸಮಾನವಾದ ಸೌಕರ್ಯಗಳು ಲಭಿಸುವಂತೆ ನಡೆಯಿಸಲ್ಪಡುವುದೆಂಬೀ ರೀತಿಯ ಭರವಸೆಯ ಮಾತುಗಳಿಂದ ನಾವು ಮರುಳಾಗಲಾರೆವು ನಾವು ಅಪೇಕ್ಷಿಸುವುದು ಸುರಾಜ್ಯವಷ್ಟೇ ಅಲ್ಲ. 'Swaraj is my birthright' ಎಂಬುದಾಗಿ ಲೋಕಮಾನ್ಯ ತಿಲಕರು ಘಂಟಾಘೋಷವಾಗಿ ಸಾರಿದ್ದರು ಆ ಸ್ವರಾಜ್ಯವನ್ನು ನಾವು ಇಂದು ಕೇಳುತ್ತಲಿದ್ದೇವೆ. ಅದಕ್ಕೂ ಕಡಿಮೆಯು ಬೇರೆ ಯಾವ ವರವೂ ನಮ್ಮ ಇಷ್ಟಾರ್ಥವನ್ನು ಪೂರೈಸುವಂತಿಲ್ಲ. ಕೆಲವು ವರ್ಷಗಳಿಗೆ ಹಿಂದೆ ಇಂಗ್ಲೆಂಡಿನ ಮಹಾ ಪ್ರಧಾನರಾಗಿದ್ದ ಸರ್ ಹೆನ್ರಿ ಕ್ಯಾಂಬೆಲ್ ಬೆನರ್ಮನ್ (Sir Henry Campbell-Bannerman) ಎಂಬಾತನು 'Good Government is no substitute for Self-Government' ಎಂದರೆ ಸುರಾಜ್ಯ ದೊರೆತ ಮಾತ್ರದಿಂದ ಸ್ವರಾಜ್ಯ ದೊರೆತಂತಾಗುವುದಿಲ್ಲ—ಎಂಬುದಾಗಿ ಹೇಳಿದ್ದನು. ಈ ಮಹಾವಾಕ್ಯವು ಸದಾಸರ್ವದಾ ಕನ್ನಡಿಗರ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ನಿಂತಿರಲಿ!!

ಕಬ್ಬಿನ ಬೆಳೆ | ಗೊಬ್ಬರಗಳು ಮತ್ತು ಗೊಬ್ಬರ ಹಾಕುವ ಕ್ರಮ.

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು)

ಸುಧಾರಿತ ರೀತಿಯ ಕಬ್ಬಿನ ಗೊಬ್ಬರದ ಕ್ರಮದಲ್ಲಿ ಬೇರೆ ದೇಶಗಳು ಮುಂದೊತ್ತಿವೆಯಾದರೂ ನಾವು ಹಿಂದುಳಿದಿರುವೆವು. ಈ ಕೆಳಗಣ ವಿಷಯಗಳಿಗೆ ಪ್ರತಿಯೊಬ್ಬ ಕಬ್ಬಿನ ರೈತನೂ ಗಮನ ಕೊಡತಕ್ಕದ್ದು:—

1. ಪ್ರತಿಯೊಂದು ಹಟ್ಟಿಯ ಹಿಂಬದಿಯಲ್ಲಿ ನಾಜೂಕಾದ ಒಂದು ದೊಡ್ಡ ಗೊಬ್ಬರದ ಹೊಂಡವಿದ್ದು ಹಟ್ಟಿಯ ಮೂತ್ರ, ನೀರು ವಗೈರೆ ಆ ಹೊಂಡಕ್ಕೇನೇ ಇಳಿಯುವಂತೆ ಮಾಡತಕ್ಕದ್ದು. 2. ಗದ್ದೆಗಳಲ್ಲಿಯ ಮತ್ತು ಮನೆ ಸುತ್ತಲಿನ ಎಲ್ಲಾ ಕಸಕಡ್ಡಿಗಳನ್ನೂ ಗುಡಿಸಿ ಆ ಗೊಬ್ಬರದ ಹೊಂಡದಲ್ಲಿ ಗೊಬ್ಬರದೊಂದಿಗೆ ತುಂಬಿ ಗೊಬ್ಬರವನ್ನು ಅದಷ್ಟು ಹೆಚ್ಚಿಸಬೇಕು. 3. ಕಸಕಡ್ಡಿಗಳನ್ನು ಸುಡುಮಣ್ಣಿಗಾಗಿ ಸುಡುವುದನ್ನು ನಿಲ್ಲಿಸಿ ಅದರಿಂದ ಉಪಯುಕ್ತವಾದ ಇಂದ್ರಿಯ ಗೊಬ್ಬರವು ಹೆಚ್ಚಾಗುವಂತೆ ಮಾಡಬೇಕು. 4. ಪೈರಿನ ಬೆಳೆಯು ಗೊಬ್ಬರದ ಜೋಪಾಸನೆಯ ಮೇಲೆ ಹೊಂದಿಕೊಂಡಿರುವುದರಿಂದ ಗೊಬ್ಬರವನ್ನು ಕಾಪಾಡುವುದು ಅತ್ಯವಶ್ಯ. ಅದು ಹೊಂಡದಲ್ಲಿ ಬಿದ್ದೊಡನೆ, ಸ್ವಲ್ಪ ಮಣ್ಣಿನಿಂದ ಅದರ ಮೇಲ್ಭಾಗವನ್ನು ಮುಚ್ಚಿ ಗದ್ದೆಗೆ ಒಯ್ಯುವ ತನಕ ಅದನ್ನು ಭದ್ರವಾಗಿಡಬೇಕು. ನಮ್ಮ ಕೈಯಿಂದ ಒಂದು ಚಿಕ್ಕ ನಾಣ್ಯವಾದರೂ ಬಿದ್ದುಹೋದಲ್ಲಿ ಅದು ವ್ಯರ್ಥವಾಯಿತೆಂದು ನಮಗೆಷ್ಟು ಸಂಕಟವಾಗುವುದು, ಆದರೆ ಹಣದ ರೂಪದಲ್ಲಿಯೇ ನಮ್ಮ ಕೈಸೇರಲಿರುವ ಎಷ್ಟೊಂದು ಇಂದ್ರಿಯ ಗೊಬ್ಬರದ ಸತ್ವವು ನಾಶವಾಗುವುದಿಲ್ಲ! ಆದರೂ ಅದನ್ನು ಅಲಕ್ಷಿಸುತ್ತೇವೆ!

ಕಬ್ಬಿನ ಬೆಳೆಗೆ ಅಗತ್ಯವಾದ ಉಪಯುಕ್ತವಾದ ಗೊಬ್ಬರಗಳನ್ನು ಹಾಕುವ ಕ್ರಮ:—

(ಒಂದು ಎಕ್ರೆ ಸ್ಥಳಕ್ಕೆ)—

1. ಗದ್ದೆಯು ನಾಲ್ಕು ಸಾಲುಗಳಾದ ಮೇಲೆ 10 ಗಾಡಿಗಳಷ್ಟು ಹಟ್ಟಿಗೊಬ್ಬರವನ್ನು ಚೆಲ್ಲಿ ಅದನ್ನು ಭೂಮಿಯೊಳಕ್ಕೆ ಉತ್ತು ಬಿಡಬೇಕು. ಇದರಿಂದ ಇಡೀ ಗದ್ದೆಯ ಮಣ್ಣು ಹದವಾಗಿ ಕಬ್ಬಿನ ಮೊಳಕೆಗಳು ಸ್ಫುಟವಾಗಿ ಅವುಗಳ ಬೇರುಗಳು ಹರಡಿ ಬೆಳೆಯಲು ಅನುಕೂಲವಾಗುತ್ತದೆ. 2. ನಮ್ಮ ಊರಿನ ಮಣ್ಣುಗಳಲ್ಲಿ ಗಂಧಕ ಸತ್ವವು ಕಡಿಮೆಯಾಗಿರುವುದರಿಂದಲೂ, ಬೇರಿನ ಬೆಳವಣಿಗೆಗೆ ಈ ಸತ್ವವು ಅಗತ್ಯವಾದುದರಿಂದಲೂ, ನಡುವ ಸಮಯ 100–150 ರಾತ್ತಲುಗಳಷ್ಟು "ಡಬ್ಬಲ್ ಸುಪರ್" (Double Super Phosphate) ಎಂಬ ಗಂಧಕಸಾರ ಗೊಬ್ಬರವನ್ನು ಏರಿಗಳಲ್ಲಿ ಹಾಕಿ ನಡುವುದು ಉತ್ತಮ 3. ಕಬ್ಬಿನ ಬೆಳೆಗೆ ಅದಷ್ಟು ಗೊಬ್ಬರವು ಅದರ ಬೆಳವಣಿಗೆಯ ಎಳೆ ಪ್ರಾಯದಲ್ಲಿ ಬೀಳುವುದರಿಂದ ಹೆಚ್ಚಿನ ಪ್ರಯೋಜನವಿದೆ. ಈ ಗೊಬ್ಬರವು ಬಹು ಬೇಗನೇ ಹೀರಲ್ಪಡುವ ಸಸ್ಯಾಹಾರವಾಗಿರಬೇಕಾದುದರಿಂದ ನಟ್ಟು ಒಂದು ತಿಂಗಳ ಮೇಲೆ 150 ರಾತ್ತಲುಗಳಷ್ಟು "ಬಿಳಿ ಸೋಡಾ" (Sulphate of Ammonia) ವನ್ನು ಸಸಿಗಳ ಬುಡಕ್ಕೆ ಹಾಕಿ ಸ್ವಲ್ಪ ಮಣ್ಣು ಹಾಕಬೇಕು. 4 ಆ ಮೇಲೆ ಬೆಳೆಗೆ ಮೂರು ತಿಂಗಳಾದ ನಂತರ 5 ಗಾಡಿ ಹಟ್ಟಿಗೊಬ್ಬರ, 2 ಖಂಡಿ ಮೀನಿನ ಗೊಬ್ಬರ ಮತ್ತು 20 ಗೋಣಿ ಬೂದಿ ಮಿಶ್ರಮಾಡಿ; ಅಥವಾ 5 ಗಾಡಿ ಹಟ್ಟಿಗೊಬ್ಬರ, 20 ಗೋಣಿ ಬೂದಿ ಮತ್ತು 2 ಖಂಡಿ ನೆಲಗಡಲೆ ಹಿಂಡಿ; ಅಥವಾ 10 ಗಾಡಿ ಹಟ್ಟಿಗೊಬ್ಬರ, 20 ಚೀಲ ಬೂದಿ ಮತ್ತು 150 ರಾತ್ತಲು ಸೋಡಾ ಬುಡಕ್ಕೆ ಹಾಕಿ ಮಣ್ಣು ಎಳೆದು ಬಿಡಬೇಕು.

ಈ ಮೇಲಿನ ಕ್ರಮದಲ್ಲಿ ಸೋಡಾವನ್ನು ಉಪಯೋಗಿಸಿದರೂ ಅದಕ್ಕಿಂತ ಅಧಿಕವಾಗಿ ಬೇರೆ ಇಂದ್ರಿಯಗೊಬ್ಬರಗಳು ಭೂಮಿಗೆ ಬೀಳುವುದರಿಂದ ಆ ಭೂಮಿಯಲ್ಲಿ ಒಳ್ಳೇಯ ಕಬ್ಬಿನ ಬೆಳೆಕೊಡುವುದು ಮಾತ್ರವಲ್ಲದೆ ಯಾವಾಗಲೂ ಫಲವತ್ತಾಗಿ ಉಳಿಯುವುದು. ಇನ್ನು ಕಬ್ಬು ಕಡಿದೊಡನೆಯೇ ಭತ್ತದ ಪೈರಿನ ಮೊದಲು ಕೊಳಿಂಜಿ ಗೊಬ್ಬರವನ್ನು ಬೆಳೆಯಿಸಿ ಭೂಮಿಯೊಳಕ್ಕೆ ಉತ್ತು ಬಿಡಬೇಕು.

ಆದುದರಿಂದ ಕಸಕಡ್ಡಿಗಳನ್ನು ಅಲಕ್ಷ್ಯಮಾಡಿ ಸುಟ್ಟುಬಿಡದೆ ಇಂದ್ರಿಯಗೊಬ್ಬರಗಳನ್ನು ಹೆಚ್ಚಿಸಿ ಕಬ್ಬಿನ ಪೈರಿಗೆ ಒಳ್ಳೇಯ ಗೊಬ್ಬರಗಳನ್ನು ಹಾಕಿರಿ. ಸಮತೂಕ ಗೊಬ್ಬರಗಳನ್ನು ಹಾಕಿ ನಿಮ್ಮ ಗದ್ದೆಗಳನ್ನು ಕಾಪಾಡಿರಿ ಆದಾಯವನ್ನು ಹೆಚ್ಚಿಸಿರಿ.

ಕಬ್ಬಿನ ಬೀಜ ಮತ್ತು ನಡುವ ಕ್ರಮಗಳನ್ನು ಮುಂದಿನ ಸಂಚಿಕೆಯಲ್ಲಿ ನೋಡಿ ತಿಳಿಯಿರಿ.

K. J. Ballal,
President,
The Sugarcane Growers' Co-operative Union, Ltd, Udipi.

ತುಸು ವಿನೋದ

ಸಾಹುಕಾರ—ಯಾಕ್ರೀ! ಸಾಮಾನು ಹಿಂದೆ ತಂದ್ರಿ?

ಗಿರಾಕಿ—ನೀವು ಕೊಟ್ಟ ಸಾಮಾನು ಮನಸ್ಸಿಗೆ ಹಿಡಿಯಲಿಲ್ಲ. ಅದ್ದರಿಂದ ಹಣ ವಾಪಾಸು ಕೊಡಿ.

ಸಾಹುಕಾರ—ಹೋಗಯ್ಯಾ! ನೋಡಿಕೊಂಡು ಹೋಗಿಲ್ಲವೇನು ನೀನು? ಕಣ್ಣಿಲ್ಲವೇ ನಿನಗೆ?

ಗಿರಾಕಿ—ಏನ್ರಿ! ಹಾಗನ್ನುತ್ತೀರಿ. ನೀವು ಪ್ರಿಂಟುಮಾಡಿದ ನೋಟೀಸಿನಲ್ಲೇ ಇದೆಯಲ್ರಿ? "ಮನಸ್ಸಿಗೆ ಹಿಡಿಯದಿದ್ರೆ ಹಣ ವಾಪಾಸ್"ಂದು.

ಸಾಹುಕಾರ:—ಯಾರಯ್ಯಾ ಇಲ್ಲಾಂದದ್ದು. ನಿನಗೆ ಸಾಮಾನು ಮನಸ್ಸಿಗೆ ಹಿಡಿಯದಿದ್ರೆ, ಹಿಂದೆ ಹಾಕಿಹೋಗು, ನನಗೆ ಹಣ ಮನಸ್ಸಿಗೆ ಹಿಡಿಯಿತು ಅದನ್ಯಾಕೆ ನಾನು ವಾಪಾಸುಮಾಡ್ಲಿ?

ε ε ε

ಆಕೆ—ಯಾಕ್ರೀ ಯಾವಾಗಲೂ ನಾನು ಹಾಡುವಾಗ್ಗೆ ನೀವು ಬಾಗಿಲಬಳಿ ನಿಲ್ಲುವುದು?

ಆತ—ನೆರೆಕರೆಯವರು ನಿನ್ನ ಹಾಡು ಕೇಳಿ ಓಡಿಬರಬಾರದೆಂದು.

ಆಕೆ—ಬಂದರೇನು? ಹಾಡು ಕೇಳಬಾರದೇ?

ಆತ—ಹ್ಞುಂ. ಹಾಡು ಕೇಳಲಿಕ್ಕಲ್ಲ. ನಾನು ನಿನಗೆ ಹೊಡಿಯುತ್ತೇನೋ ಏನೋ ಎಂದು ನೋಡಲಿಕ್ಕೆ.

ವಿ. ಆರ್. ಉದ್ಯಾವರ, ಮದ್ರಾಸ್.

ಫ್ಯಾನ್ಸಿ ಲಿವರ್ ರಿಸ್ಟ್‌ವಾಚ್

ರೂ. **2–4–0.**

ನೋಡಲು ಸುಂದರ, ಆಕಾರ ಗಟ್ಟಿ ಮುಟ್ಟಾದ ಮಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು ೫ ವರ್ಷದ ಗ್ಯಾರಂಟಿ ದುಂಡಾಕೃತಿಯ ದೀರ್ಘಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2–10–0, ಅತ್ಯುತ್ತಮವಾದುದಕ್ಕೆ 3–4–0, ಸುವರ್ಣದಕ್ಕೆ ರೂ. 3–8–0 ಅತ್ಯುತ್ತಮವಾದುವಕ್ಕೆ ರೂ. 4-8-0, ಚಿತ್ರದಲ್ಲಿತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0–0, ಜುವೆಲಿರುವ ರೋಲ್ಡ್ ಗೋಲ್ಡಿಗೆ ರೂ. 8–0–0, ಸರ್ವೋತ್ತಮವಾದುದಕ್ಕೆ ರೂ. 10–0–0 ಟ. ಖ. ಪ್ರತ್ಯೇಕ.

ಎಚ್. ಡಾವಿದ್ ಅಂಡ್ ಕೊ.

ಪೋ. ಬಾಕ್ಸ್ 11424 ಕಲ್ಕತ್ತೆ.

H. David & Co.
Post Box No. 11424, Calcutta

ತಾರಾ ವಿಹಾರ ಗ್ರಂಥಮಾಲಾ

ಅಂತರ್ ರಾಷ್ಟ್ರೀಯ ಪ್ರಸಿದ್ಧಿಯನ್ನು ಪಡೆದ ಪಂಡಿತ ತಾರಾನಾಥರ ಹಾಗೂ ಇವರ ಸುಪ್ರಸಿದ್ಧ ಸಾಹಿತಿಗಳ ಪ್ರಚೋದನಾತ್ಮಕ ಕ್ರಾಂತಿಕಾರಕ ವಿಚಾರಗಳು ಗ್ರಂಥರೂಪವಾಗಿ ಪ್ರಕಟವಾಗುವವು. ೧ ವರ್ಷದಲ್ಲಿ ತಲೆ-ಎದೆಗಳನ್ನರಳಿಸುವ ಆರು ಗ್ರಂಥಗಳು ಹೊರಡುವವು. ಅಲ್ಲದೆ ಒಂದು ವಿಶೇಷಾಂಕವು ಉಚಿತವಾಗಿ ಕೊಡಲಾಗುವುದು.

ಚಂದಾ: ಒಂದೇ **ರೂಪಾಯಿ ಮಾತ್ರ.**

ಕರ್ನಾಟಕದ ಮೂಲೆಮೂಲೆಗೂ ಬೇಕಾದ ಪತ್ರ, ಜಾಹೀರಾತುಗಳಿಗೆ ಒಳ್ಳೇ ಸುಸಂಧಿ.

ವಿಶೇಷ ಮಾಹಿತಿಗೆ ಬರೆಯಿರಿ.

ವಿಶೇಷ ಕಾರಣಗಳಿಂದ ವಿ. ಪಿ. ಕಳುಹಿಸಲಾಗುವುದಿಲ್ಲ

ಮ್ಯಾನೇಜರ್:

ತಾರಾ ವಿಹಾರ ಕಾರ್ಯಾಲಯ,

ಪ್ರೇಮಾಯತನ ಆಶ್ರಮ, ತುಂಗಭದ್ರಾ.

ರನು ವಿಷಮ ಜ್ವರದಿಂದ ಮರಣಹೊಂದಿದನು. ಪತ್ನಿಯು ತನ್ನ ಪತಿಯ ನಿಧನ ದುಃಖವನ್ನು ಸಹಿಸಲಾರದೆ ಪಿನ್ಯೆಲ್ ಕುಡಿದು ಮೃತಳಾದಳು. ಇವರಿಬ್ಬರ ಶವಸಂಸ್ಕಾರವು ಒಟ್ಟಿಗೆ ನಡೆಯಿತು.

ಕಾಂಗ್ರೆಸನ್ನು ಬಲಗೊಳಿಸಿರಿ.

ಕಳೆದ ತಾ. 14ರಲ್ಲಿ ಕ್ವಿಲೋನಿನಲ್ಲಿ ಶ್ರೀ ಎ. ನಾರಾಯಣ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆಯು ಜರಗಿತು. ಸ್ಟೇಟ್ ಕಾಂಗ್ರೆಸಿನ ಉಜ್ವಲ ವಿಚಾರ ಧ್ಯೇಯಗಳನ್ನು ಸಭಿಕರಿಗೆ ವಿವರಿಸಿ, ಸ್ಟೇಟ್ ಕಾಂಗ್ರೆಸಿಗೆ ಜನತೆಯು ಸೇರಿ, ಬೆಂಬಲವಿತ್ತು ಬಲಗೊಳಿಸಬೇಕೆಂದು ಕೋರಿದರು.

ಬಾಲಕರೂ ಸಭ್ಯತೆಯೂ

ಸಂಯುಕ್ತ ಪ್ರಾಂತ್ಯದ ವಿದ್ಯಾಂಗದ ಡೈರೆಕ್ಟರರು ಶಾಲಾ ಪರೀಕ್ಷಕರಿಗೆ 'ಶಾಲೆ ಮತ್ತು ಕೋಲೇಜು ವಿದ್ಯಾರ್ಥಿಗಳು ಸಭ್ಯ ವರ್ತನೆಯುಳ್ಳವರಾಗುವಂತೆ ಶಿಕ್ಷಕರು ತಕ್ಕ ಎಚ್ಚರ ತೆಗೆದುಕೊಳ್ಳುವಂತೆ ತಿಳಿಸತಕ್ಕದ್ದೆಂದು ಸರ್ಕಲಾರು ಕೊಟ್ಟಿರುವರು. ಮುಖ್ಯವಾಗಿ ಡೈರೆಕ್ಟರರಿಗೆ ಕಳೆದ ಮಳೆಗಾಲದ ತನ್ನ ಸಂಚಾರ ಕಾಲದಲ್ಲಿ ವಿದ್ಯಾರ್ಥಿಗಳ ಸಭ್ಯತೆಯ ಅಭಾವವು ತೋರಿಬಂತು. ಇದಕ್ಕೆಲ್ಲಾ ಸಹಾಯಕ ಅಧ್ಯಾಪಕರ ನಿರ್ಲಕ್ಷತೆಯೇ ಕಾರಣವೆಂದು ಅಭಿಪ್ರಾಯಪಟ್ಟಿರುವರು.

ಸಂಸಾರಕ್ಕಿಂತ ಕಾರು ಹೆಚ್ಚು

ಅಮೇರಿಕಾನನೊಬ್ಬನು ವಾರಕ್ಕೆ ಮೂರು ಪವನು ಸಂಪಾದಿಸುತ್ತಿದ್ದನು. ಅವನ ಸಂಸಾರ ನಡೆಸಲು ಕನಿಷ್ಟ ಮೂರು ಪವನು ವಾರಕ್ಕೆ ಬೇಕಾಗಿತ್ತು. ಆದರೆ, ಅವನು ಒಂದು ಕಾರನ್ನು ಪಡೆಕೊಂಡು ಕೆಲಸವು ಯವಲ್ಲೇ, ಸಂಸಾರದ ಪೋಷಣೆಯೂ ಕಾರನ್ನು ಇಟ್ಟುಕೊಂಡಿರುವುದೂ ಕಷ್ಟವೆಂದು ಕಂಡುಕೊಂಡನು. ಹೀಗಾಗಿ ಅವನು ತನ್ನ ಕಾರನ್ನುಳಿಸಿಕೊಳ್ಳಲು, ಸಂಸಾರವನ್ನು ದೂರಮಾಡಿಬಿಟ್ಟ.

ಪತ್ನಿಯು ನ್ಯಾಯಸ್ಥಾನದಲ್ಲಿ ದೂರು ಕೊಟ್ಟಳು. ಕಾರು ಪಡೆದುಕೊಂಡ ಒಂದು ತಿಂಗಳ ನಂತರ ಅವನು ತನ್ನನ್ನು, ಎರಡು ಮಕ್ಕಳನ್ನು ಬಿಟ್ಟುಹೋದನು. ಹೀಗಾಗಿ ತಾನೀಗ ಹೆತ್ತವರ ರಕ್ಷಣೆಯಲ್ಲಿರಬೇಕಾಗಿದೆ ಎಂದು ಅವಳ ದೂರು. ಗಂಡನು ಕೋರ್ಟಿಗೆ ಹಾಜರಾದಾಗ ತನಗೆ ಕಾರು ಇರಿಸಿಕೊಂಡಿರಲು ಮೂರುವರೆ ಪವನು ಕೊಡಬೇಕಾಗುವದೆಂದೂ ಹೀಗಾಗಿ, ತನಗೆ ಕುಟುಂಬ ನಡೆಸುವುದು ಕಷ್ಟವೆಂದೂ, ಹೇಳಿದನು. ನ್ಯಾಯಾಧೀಶರು 'ಕಾರನ್ನು ಕಂಪೆನಿಗೆ ಕಳುಹಿಸು, ಮನೆಗೆ ಹೋಗಿ ಸುಖದಿಂದಿರು' ಎಂದು ತೀರ್ಮಾನಿಸಿದರು.

ಹಿಂದೂದೇಶದೊಡನೆ ಐಕ್ಯತೆ

ಹಿಂದೂದೇಶವು ಇನ್ನೊಮ್ಮೆ ಬ್ರಿಟನರ ಸಾಮ್ರಾಜ್ಯಜಾಲದಲ್ಲಿ ಸಿಕ್ಕಿ ಬೀಳದು. ಬರುವ ಯುದ್ಧದಲ್ಲಿ ಕಳೆದ ಯುದ್ಧಕ್ಕಿಂತಲೂ ಭಂಗಪಡಿಸುವ ಜನಗಳಿಗೆ ಘಾತವಾಗುವುದು. ಈ ಸಂದರ್ಭದಲ್ಲಿ ಜಗತ್ತಿನ ಪ್ರತಿಯೊಂದು ಕಡೆಯ ನೆರವು ಬಲಿಬಿದ್ದ ದೇಶಗಳಿಗೆ ಅಗತ್ಯ ಬೀಳದಿರದು. ಹೀಗಿರುವದರಿಂದ ಯುದ್ಧ ಆರಂಭವಾಗುವ ಮೊದಲೇ ಸಮಾಧಾನಕರವಾದ ಇತ್ಯರ್ಥ ಮಾಡಿಕೊಂಡು ಐಕ್ಯತೆಯುಳ್ಳರುವುದು ಬ್ರಿಟನಿಗೆ ಮೇಲು.

(*Hindustan Times*)

ಅಮೇರಿಕದಲ್ಲಿ ಗಾಂಧಿಜಿಯವರ ಗುಣಕಥನ

ಅಮೇರಿಕಾದ ಇಂಡಿಯಾ ಲೀಗಿನವರು ಗಾಂಧಿಜಿಯವರ ಜನ್ಮದಿನವನ್ನು ಆಚರಿಸಿದರು. ಈ ಸಂದರ್ಭದಲ್ಲಿ ರೆವರೆಂಡ್ ಜೋನ್ ಹೇನ್ಸ್ ಹೋಮ್ಸ್ ಎಂಬವರು ಗಾಂಧಿಜಿಯವರ ಗುಣಕಥನ ಮಾಡುತ್ತಾ ಹೀಗೆಂದರು

"ಗಾಂಧಿಜಿಯವರು ದಿವ್ಯಲೋಕದ ತಾರೆಯು. ಸಾವಿರಾರು ಹೀರಾಗಳ ಹೆಬ್ಬವಾಗಿದ್ದಂತೆ ಗಾಂಧಿಜಿಯವರು ಹಿಂದುಗಳ ಹಿಂದುವು. ಮಾನವ ಸಮಾಜದ ರಕ್ಷಣೆಗಾಗಿ ಜನ್ಮವೆತ್ತಿದ ಜಗತ್ತಿನ ಮಹಾಪುರುಷರಲ್ಲಿ ಗಾಂಧಿಯವರೊಬ್ಬರು. ದಿನದಿನಕ್ಕೆ ಜಗತ್ತಿನಲ್ಲಿ ಪ್ರಜ್ವಲಿಸಿ ಉನ್ನತಿಗೇರುತ್ತಿರುವ ಅವರ ವ್ಯಕ್ತಿತ್ವವು ಅಸಾಧಾರಣವಾದುದು. ಗಾಂಧಿಜಿಯವರ ಜೀವನ ಇಂದಿನವರೆಗಿನ ಶುಭ್ರವಾದ ಮೂರು ವಿಭಾಗಗಳನ್ನು ಹೋಮ್ಸರು ವರ್ಣಿಸುತ್ತಾ ಹೀಗೆಂದರು:-"ಪ್ರಥಮತಃ ತನ್ನ ಮೊದಲಿನ ಇಪ್ಪತ್ತು ವರ್ಷಗಳಲ್ಲಿ ಆಫ್ರಿಕ ಮತ್ತು ಇನ್ನಿತರ ಕಡೆಗಳಲ್ಲಿ ಅವರು ಸಮಾಜದ ಉನ್ನತಿಯ ಧ್ಯೇಯದಿಂದ ಅಹಿಂಸೆ ಮತ್ತು ಸತ್ಯಾಗ್ರಹದ ಪ್ರಭಾವದ ದಾರಿಯನ್ನು ಕಂಡುಹಿಡಿದರು. ವ್ಯಕ್ತಿಗತ ಮತ್ತು ಸಾಮಾಜಿಕ ಉದ್ಧಾರದ ಸಲುವಾಗಿ ಈ ಸತ್ಯ ಮತ್ತು ಅಹಿಂಸೆಯ ಮಾರ್ಗವನ್ನು ಪ್ರಯೋಗಿಸಿ ಯಶಸ್ವಿಗಳಾದುದೊಂದು ಮಹತ್ವಿಕ

ಎರಡನೆಯದಾಗಿ ಅವರು ತಮ್ಮ ಅಹಿಂಸೆ ಮತ್ತು ಸತ್ಯಾಗ್ರಹದ ಆಧಾರದಿಂದ ಹಿಂದೂದೇಶದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದುದು. ಇಂದಿನ ವರೆಗೆ ಮಾನವ ಇತಿಹಾಸದಲ್ಲಿ ಇಂಥಾ ಶುದ್ಧ ಸಾತ್ವಿಕ ಶಕ್ತಿಯ ಆಧಾರದ ಮೇಲೆ, ಇಷ್ಟೊಂದು ಉಚ್ಚ ರೀತಿಯಲ್ಲಿ ಸ್ವಾತಂತ್ರ್ಯ ಸಮರಕ್ಕೆ ದೇಶವನ್ನು ಭಾಗಿಯನ್ನಾಗಿ ಮಾಡಿದಂತೆ ಎಲ್ಲಿಯೂ ಕಂಡುಬರುವುದಿಲ್ಲ

ಈ ಮಹಾತ್ಮನ ಆತ್ಮಶಕ್ತಿಯ ಕಾರಣದಿಂದಾಗಿ ಭಾರತ ಭೂಮಿಯು ಅಂತರ್ಗತ ಸ್ವಾತಂತ್ರ್ಯದ ವಿಷಯಗಳಲ್ಲಿ ಮೊದಲೇ ಜಯಶೀಲನಾಗಿರುವುದು. ಇನ್ನು ಬಾಹ್ಯರೀತಿಯ ಸ್ವಾತಂತ್ರ್ಯವು ದೊರೆಯಲಿದೆ. ಮೂರನೆಯದಾಗಿ ಗಾಂಧಿಜಿಯವರ ಜೀವನದ ಅನಂತ ಶಕ್ತಿಯುಳ್ಳದು. ಗಾಂಧಿಜಿಯವರೀಗ ಜಗತ್ತಿನ ಧಾರ್ಮಿಕ ಮಹಾಪುರುಷರಾಗಿರುವರು. ಅವರು ಈಗ ಹಳಿಗರ ಬ್ರಾಹ್ಮತ್ವದಿಂದ ಗ್ರಾಮ ಸಂಘಟನಾ ಕಾರ್ಯದಲ್ಲಿ ವ್ಯಸ್ತರಾಗಿರುವರು. ಹಿಂದೂ ಮುಸಲ್ಮಾನರ ಐಕ್ಯತೆಗಾಗಿ ಅವರು ಸಾಧಿಸುವವರು. ಕ್ರೈಸ್ತನ ಅನುಯಾಯಿಗಳಾದ ಪ್ರೊಟೆಸ್ಟಂಟ್ ಕೆಥೋಲಿಕರೂ, ತಮ್ಮ ಸಮಸ್ಯೆಯನ್ನು ಬಿಡಿಸುವ ಮೊದಲು ಹಿಂದೂ ಮುಸಲ್ಮಾನರ ಐಕ್ಯತೆಯು ಮಹಾತ್ಮರ ಪ್ರಭಾವದಿಂದ ಕೈಗೂಡಬಹುದು. ಗಾಂಧಿಜಿಯವರು ಇನ್ನೂ ಅಸ್ಪೃಶ್ಯರ ಉದ್ಧಾರಕ್ಕಾಗಿ ತನ್ನ ಆದರ್ಶ ವ್ಯಕ್ತಿತ್ವದಿಂದ ಪ್ರಯತ್ನಿಸುತ್ತಿರುವರು. ಒಮ್ಮೆ ಅಬ್ರಹಮ ಲಿಂಕನನು ಅಮೇರಿಕದ ಮೂರುವರೆ ಮಿಲಿಯ ಜನರ ಬಿಡುಗಡೆಯನ್ನು ಸಾಧಿಸಿದನೆಂದರೆ, ರಷ್ಯದ ಝಾರನು ಇನ್ನೂ ಕೆಲವು ಮಿಲ್ಲಿಯ ಹೆಚ್ಚು ಜನರ ಹಿತವನ್ನು ಸಾಧಿಸಿದನೆಂದರೆ ಗಾಂಧಿಜಿಯವರು, ಅರವತ್ತು ಮಿಲಿಯ ಜನರನ್ನು ಉದ್ಧರಿಸುವವರಾಗಿ ಇದ್ದಾರೆ. ಗಾಂಧಿಜಿಯವರು ಅಪಾರಜಗತ್ತಿನಲ್ಲಿ ಅನಂತಕಾಲದಲ್ಲಿಯೂ ಸ್ಮರಣೀಯರು. ಅವರ ಕ್ಷೇತ್ರವು ದಿವ್ಯವಾದುದು'

ನಮ್ಮಲ್ಲಿ

ಕನ್ನಡ ಪುಸ್ತಕಗಳು.

ಶಾಂತಿ ಪುರಾಣ - -	೩	0	0
ಚಂದ್ರಗುಪ್ತ ಚಕ್ರವರ್ತಿ -	1	0	0
ಸರಸ್ವತೀ - - - (ಸಾಮಾಜಿಕ ನಾಟಕ)	0	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್ - (ಇಂಗ್ಲಿಷ್ ಸ್ವಯಂಬೋಧಿನಿ)	0	8	0
ಸಾಮುದ್ರಿಕ ಶಾಸ್ತ್ರ - -	0	8	0
ಹೊಂದೊವಲ ಹಂಬಲು -	0	6	0
ವೀರಭೂಮಿ (ಕತೆ) - -	0	1	0
ಗೀತೆಯ ಕೈಗನ್ನಡಿ - -	0	4	0
ಗೀತೆಯ ಮೂಲ - - (ಅತಿವಾಸ್ಯೋಪನಿಷತ್ತಿನ ಭಾಷಾಂತರ)	0	1	0
ಸ್ತ್ರೀಪದ್ಯರತ್ನಾಕರ ಭಾಗ I -	0	1	0
ಡಿ II -	0	1	0
ಡಿ III -	0	1	0
ಡಿ IV -	0	1	0

ಪುರಂದರ ದಾಸರ ಪದಭಾಗ I -	0	4	0
ಡಿ II -	0	1	0
ಡಿ III -	0	4	0
ಮಧುವನ (ಕಥಾಸಂಗ್ರಹ) -	1	8	0
ಧರ್ಮಸಂಕಟ (ಸಾಮಾಜಿಕ ನಾಟಕ)	0	1	0
(Gontham the Buddha) -	0	8	0
ಭಗವದ್ಗೀತೆ - -	0	2	0
ಕುಕ್ಕುಟ ಪಂಚಾಂಗ - -	0	1	0
ಮಗ್ಗಿ - -	0	1	0
ತುಳುನಾಡ್ ಕಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ -	0	2	6
ಜಯಪಾಂಡ್ಯ ವಿಜಯ -	0	2	0

ತುಳು ಪುಸ್ತಕಲು.

ಕೃಷ್ಣ ಸಂಧಾನ (ಪ್ರಸಂಗ) - (ಕನ್ನಡ ಕೃಷ್ಣ ಸಂಧಾನವನ್ನೂ ಸೇರಿಸಿದೆ.)	0	8	0
ಒಲಿಂಪ್ರ (ಕತೆ) - - (ಐತಿಹಾಸಿಕ ಲೇಖನ.)	0	2	0
ಅಳಿಯ ಸಂತಾನ ಕಟ್ಟಿನ ಗುಟ್ಟು	0	1	0

ಕಾನಿಗೆ - - -	0	1	0
ತುಳುವ್ಯಾಕರಣ - -	0	8	0
ಜನಮುಲ್ (ನಾಟಕ) - -	0	6	0
ಮದ್‌ಮಾತ್ತ್ ಮದ್‌ಮಾಯೆ (ಕತೆ)	0	2	0
ಬಂಗಾರ್‌ದಂಗಿದ ಕತೆ -	0	1	0
ಪದ್ಯಮಾಲಿಕೆ - -	0	1	0
ಸತ್ಯನಾರಾಯಣ ಕತೆ -	0	8	0
ಸತೀ ಕಮಲೆ (ನಾವೆಲ್) -	0	6	0
ಪನ್ವ್ಯೋಪದೇಶ -	0	2	0
ಕನ್ನಡಕೊ - - -	0	0	6
ವಾಲಿಸುಗ್ರೀವರ ಕಾಳಗ -	0	3	0
ಬೊಬ್ಬರ್ಯ (ಪಾಡ್ದನ)	0	2	0
ತೊಡಕಿನಾರ್ ,, -	0	2	0
ಮುಂಡತ್ತಾಯ ,, -	0	2	0
ವಿಶ್ವರೂಪ ದರ್ಶನ - - (ಗೀತೆಯ 11ನೇ ಅಧ್ಯಾಯದ ಪದ್ಯಾತ್ಮಕ ಭಾಷಾಂತರ)	0	1	0
ಭಗವದ್ಗೀತೆ -	0	5	6

ತುಳುನಾಡ್ ಛಾಪಖಾನೆ, ಉಡುಪಿ, ದ. ಕ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ 21-11-38

ಮದ್ರಾಸು ಮಂತ್ರಿಗಳ ಕಾರ್ಯಕ್ರಮ —ಮದ್ರಾಸ್ ಸರಕಾರದ ವಿದ್ಯಾಂಗದ ಮಂತ್ರಿಗಳಾದ ಮಾನ್ಯ ಡಾ। ಸುಬ್ಬರಾಯನವರು ತಾ 14ನೇ ಸೋಮವಾರ ಮಂಗಳೂರಿಗೆ ಬಂದರು. ಅವರನ್ನು ಅಧಿಕಾರಿ ಮತ್ತು ಅನಧಿಕಾರಿಗಳು ರೈಲ್ವೇ ನಿಲ್ದಾಣದಲ್ಲಿ ಇದಿರುಗೊಂಡರು.

ವಿದ್ಯಾಸಪ್ತಾಹದ ಆರಂಭೋತ್ಸವ ಮಾನ್ಯ ಮಂತ್ರಿಗಳು ಬಂದ ದಿನವೇ ಕೆನರಾ ಹೈಸ್ಕೂಲಿನಲ್ಲಿ ವಿದ್ಯಾ ಸಪ್ತಾಹವನ್ನೂ, ಕಲಾವಸ್ತು ಪ್ರದರ್ಶನವನ್ನೂ ತೆರೆದರು. ದ. ಕನ್ನಡ ಜಿಲ್ಲಾ ಟೀಚರ್ಸ್ ಗಿಲ್ಡಿನ ಅಧ್ಯಕ್ಷರಾದ ಶ್ರೀ। ಏಕಾಂಬರ ರಾಯರು ಮಾನ್ಯ ಮಂತ್ರಿಗಳನ್ನು ಸಪ್ತಾಹದ ಆರಂಭೋತ್ಸವವನ್ನು ನೆರವೇರಿಸಬೇಕೆಂದು ಕೇಳಿಕೊಳ್ಳುವಾಗ ಈ ಸಪ್ತಾಹದ ಉದ್ದೇಶವೇನೆಂಬುದನ್ನೂ, ಈ ಸಪ್ತಾಹದಲ್ಲಿ ಎಂತೆಂತಹ ವಿಷಯಗಳನ್ನು ಚರ್ಚಿಸಬೇಕಾಗಿದೆಯೆಂಬುದನ್ನೂ ವಿವರಿಸಿದರು.

ಮಾನ್ಯ ಮಂತ್ರಿಗಳು ಸಮಾರಂಭದ ಉದ್ಘಾಟನೆ ಮಾಡುತ್ತಾ ಕಲಾ ಮತ್ತು ವಸ್ತು ಪ್ರದರ್ಶನದ ಉಪಯುಕ್ತತೆಯನ್ನು ಹೇಳಿ ವಿದ್ಯಾಸಂಬಂಧವಾದ ವಿಷಯಗಳನ್ನು ಗಿಲ್ಡಿನವರ ಪರ್ಯಾಲೋಚನೆ ಮಾಡಬೇಕೆಂದು ನಿಶ್ಚಯ ಮಾಡಿರುವುದು ಬಹಳ ಉತ್ತಮವೆಂದರು. ಬೇಸಿಕ್ ಇಂಗ್ಲೀಷಿನ ವಿಷಯವಾಗಿ ಗಿಲ್ಡಿನವರು ಆಲೋಚಿಸುವುದು ಯುಕ್ತವೆಂದೂ, ದೇಶಭಾಷೆಯಲ್ಲಿ ವಿದ್ಯಾಭ್ಯಾಸ ಕೊಡುವುದು ಇವೇ ಮೊದಲಾದ ವಿಷಯಗಳಲ್ಲಿ ತಕ್ಕ ಯೋಚನೆಗಳನ್ನು ಪರ್ಯಾಲೋಚಿಸಿ ಸೂಚಿಸಬೇಕೆಂದೂ ಕೇಳಿಕೊಂಡರು. ಇಂಗ್ಲೀಷ್ ಭಾಷೆಯು ಒಂದು ವ್ಯವಹಾರಕ್ಕೆ ಬೇಕಾದ ಪರಭಾಷೆಯಾಗಿರತಕ್ಕುದು ಅಗತ್ಯವೆಂದರು. ಅನಂತರ ಆರಂಭೋತ್ಸವವನ್ನು ನೆರವೇರಿಸಿದರು.

ಕಾಲೇಜ್ ಸೋಶಿಯಲ್ —ಅಂದೇ ಸಾಯಂಕಾಲ ಸೈ. ಎ. ಕಾಲೇಜ್ ಯೂನಿಯನ್ ಅಸೆಂಬ್ಲಿಯ ಸೋಶಿಯಲ್ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದರು. ಅದೇ ಸಂದರ್ಭದಲ್ಲಿ ರೆ ಫಾದರ್ ಪ್ರೊಸೆರ್ಪಿಯೋ, ರೆ ಫಾ. ಆಂಬ್ರೋಸಿ ಮತ್ತು ಪ್ರೊ ಸಿ ಜೆ. ವಾರ್ಕಿಯವರ ಭಾವಚಿತ್ರಗಳನ್ನು ಅನಾವರಣ ಮಾಡಿದರು. ವಿದ್ಯಾರ್ಥಿಗಳು ತಮ್ಮ ಯೂನಿಯನನ್ನು ಪ್ರಜಾಪ್ರಭುತ್ವ ತತ್ವಕ್ಕನುಸಾರವಾಗಿ ಏರ್ಪಡಿಸಿದುದಕ್ಕಾಗಿ ಸಂತೋಷಪಟ್ಟರು. ಧನ್ಯವಾದಗಳನ್ನರ್ಪಿಸಿದ ನಂತರ ವಿವಿಧ ವಿನೋದಾವಳಿಗಳಾಗಿ ಸಭಾಂತ್ಯವಾಯಿತು.

ಸೈಂಟ್ ಆಗ್ನೇಸ್ ಹೈಸ್ಕೂಲು ವರ್ಧಂತಿ ಸೈ. ಆಗ್ನೇಸ್ ಹೈಸ್ಕೂಲಿನ ವರ್ಧಂತಿಯ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ, ಇನ್ನು ಪ್ರತಿಯೊಬ್ಬರೂ ತಮ್ಮ ತಮ್ಮ ಮಾತೃಭಾಷೆಯಲ್ಲಿ ವಿದ್ಯಾಭ್ಯಾಸ ಕೊಡಿಸಬೇಕೆಂದು ಕೇಳದೆ ಕನ್ನಡದಲ್ಲಿ ವಿದ್ಯೆಯನ್ನು ಪಡೆಯಲು ಸಿದ್ಧರಿರಬೇಕೆಂದರು.

ಮಂತ್ರಿಗಳು ತಾ 19ರಲ್ಲಿ ಕೆಲವು ಸಂಘ ಸಂಸ್ಥೆಗಳವರಿಗೆ ಭೇಟಿಯಿತ್ತರು.

ಪಬ್ಲಿಕ್ ವರ್ಕ್ಸ್ ಇಲಾಖಾ ಮಂತ್ರಿಗಳ ಆಗಮನ —ಮದ್ರಾಸ್ ಸರಕಾರದ ಪಬ್ಲಿಕ್ ವರ್ಕ್ಸ್ ಇಲಾಖಾ ಮಂತ್ರಿಗಳಾದ ಮಾನ್ಯ ಮೌಲಾನಾ ಯಾಕೂಬ್ ಹಸನ್ ಸಾಹೇಬರು, ತಾ. 18ನೇ ಅಪರಾಹ್ನ ಮಂಗಳೂರಿಗೆ ಬಂದರು. ಅದೇ ದಿನ ಬಬ್ಬಯ್ಯಾ ಶಾಲಾ ವರಾಂಡದಲ್ಲಿ ಮುಸ್ತಾಫಾ ಕೆಮಾಲ್ ಪಾಶಾರವರ ನಿಧನಕ್ಕಾಗಿ ದುಃಖಸೂಚಕ ಸಭೆಯಲ್ಲಿ ಅಧ್ಯಕ್ಷರಾಗಿ ದಿವಂಗತರ ಗುಣಕಥನ ಮಾಡಿ ಅವರ ಆಧುನಿಕ ಟರ್ಕಿಗೆ ಮಾಡಿದ ಮಹದುಪಕಾರವನ್ನು ತಿಳಿಸಿದರು.

ಮಾನ್ಯ ಮೌಲಾನಾ ಯಾಕೂಬ್ ಹಸನರವರಿಗೆ ಜಿಲ್ಲೆಯ ಸಣ್ಣ ಬಂದರುಗಳ ಉದ್ಧಾರ ಮಾಡಬೇಕೆಂಬ ಮನವಿಯನ್ನು ಶ್ರೀ। ಯಂ ಶಂಕರನಾರಾಯಣರಾಯರಿಂದ ಕೂಡಿದ ಶಿಷ್ಟ ಮಂಡಲದವರು ಮಂತ್ರಿಗಳ ಮುಂದಿರಿಸಿದರು. ಮಾನ್ಯ ಮಂತ್ರಿಗಳು ಜಿಲ್ಲೆಯ ಕೆಲವು ಬಂದರುಗಳನ್ನು ಸಂದರ್ಶಿಸುವುದಕ್ಕಾಗಿ ತಾ. 19ರಲ್ಲಿ ಪ್ರವಾಸ ಕೈಕೊಂಡಿರುವರು. ಅವರೊಡನೆ ಶ್ರೀ। ಕೆ. ಆರ್ ಕಾರಂತ್ ಯಂ ಎಲ್. ಎ. ಇವರೂ ಹೋಗಿರುವರು.

ಕೆಮಾಲ್ ಪಾಶಾರವರ ದಿನಾಚರಣೆ ತಾ. 19ನೇ ಸಾಯಂಕಾಲ ಮಂಗಳೂರಿನಲ್ಲಿ, ವಿದ್ಯಾರ್ಥಿಗಳ ಸಂಘ, ಮಲಯಾಳೀ ಯುವಜನ ಸಂಘ, ಬೀಡಿ ಲೇಬರ್ ಸಂಘ, ಈ ಸಂಘಗಳ ಆಶ್ರಯದಲ್ಲಿ ಕೆಮಾಲ್ ಪಾಶಾರವರ ನಿಧನಕ್ಕಾಗಿ ದುಃಖ ಸೂಚಿಸುವ ಬಗ್ಗೆ ಸಭೆಯು ಮೈದಾನದಲ್ಲಿ 'ನವಯುಗ' ಪತ್ರಿಕೆಯ ಸಂಪಾದಕರಾದ ಶ್ರೀ ಕೆ ಕೆ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕೆಮಾಲ್ ಅಟಾಟರ್ಕರ ಜೀವನ ಚರಿತ್ರೆಯನ್ನು ವಿವರಿಸಿ ಅವರು ಆಧುನಿಕ ತುರ್ಕಿಯ ಉದ್ಧಾರವನ್ನು ಹೇಗೆ ಮಾಡಿದರೆಂಬುದಕ್ಕೆ ಬೇಕಾದ ನಿದರ್ಶನಗಳನ್ನಿತ್ತು ಹೇಳಿದರು. ಅನಂತರ ಶ್ರೀಗಳಾದ ಎಸ. ಎನ್. ಹೊಳ್ಳ, ಕೆ. ಕೆ ಪೂವಯ್ಯ, ಯು. ಜಿ. ರಾವ್, ಬಾಲಕೃಷ್ಣನ್ ನಾಯರ್‌ರವರೇ ಮೊದಲಾದವರು ಕೆಮಾಲ್ ಪಾಶಾರವರ ಜೀವನ ಚರಿತ್ರೆಯ ವಿಷಯವಾಗಿ ಭಾಷಣ ಮಾಡಿದರು.

ಶ್ರೀ ಎ ಸುಬ್ರಾಯ ಪೈ ಮಾಮೋರಿಯಲ್ —ಮಾನ್ಯ ಮಂತ್ರಿಗಳಾದ ಡಾ। ಸುಬ್ಬರಾಯನವರ ಅಧ್ಯಕ್ಷತೆಯಲ್ಲಿ ಶ್ರೀ। ಸುಬ್ರಾಯ ಪೈ ಮಮೋರಿಯಲ್ ಕಮಿಟಿಯ ಸಭೆಯು ತಾ. 19ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಅದೇ ದಿನ ಒಂದು "ಪೆವಿಲಿಯನ" ಸಂಕು ಸ್ಥಾಪನೆಯ ಕಾರ್ಯವನ್ನೂ ಮಾನ್ಯ ಮಂತ್ರಿಗಳು ನೆರವೇರಿಸಿದರು.

ಉಪನ್ಯಾಸಗಳು — ಸೈ. ಎ. ಕಾಲೇಜಿನ ಹಾಲಿನಲ್ಲಿ ತಾ 21ರಿಂದ ಒಂದು ವಾರದ ವರೆಗೆ ಪ್ರತಿನಿತ್ಯ 5 30ಕ್ಕೆ ಉಪನ್ಯಾಸಗಳು ನಡೆಯುವುವು. ಕೊನೆಯ ದಿನ ಒಂದು ಚರ್ಚಾ ಸಭೆ ಏರ್ಪಟ್ಟಿರುವುದು.

ಕೇಶವಚಂದ್ರ ಸೇನರು —ದಿವಂಗತ ಶ್ರೀ. ಕೇಶವಚಂದ್ರ ಸೇನರ 1 ೦ನೇ ವರ್ಧಂತಿ ಉತ್ಸವವು ನಿನ್ನೆಯ ದಿನ ಬೆಳಿಗ್ಗೆ ಬ್ರಹ್ಮ ಮಂದಿರದಲ್ಲಿ, ಮಾನ್ಯ ಡಾ ಸುಬ್ಬರಾಯನರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಗಣೇಶ ವಾಚನಾ ಸಂಘ —ಈ ದಿನ ಸಾಯಂಕಾಲ ಈ ಸಂಘದಲ್ಲಿ ಮದ್ರಾಸ್ ಕೌನ್ಸಿಲ್ ಅಧ್ಯಕ್ಷರಾದ ಮಾನ್ಯ ಡಾ. ಯು. ರಾಮರಾಯರ ಅಧ್ಯಕ್ಷತೆಯಲ್ಲಿ ವಾಚನಗಳ ಅವಶ್ಯಕತೆಯ ಕುರಿತು ಜಿಲ್ಲಾ ಜಡ್ಜರಾದ ಶ್ರೀ. ಪಿ. ರಾಜಗೋಪಾಲಾಚಾರ್ಯರು ಭಾಷಣ ಮಾಡಿದರು.

ಮದ್ರಾಸು ಮಂತ್ರಿಮಂಡಲವೇನು ಮಾಡಿದೆ?

ಕಾಂಗ್ರೆಸ್ ಮಂತ್ರಿಗಳ ಟೀಕಾಕರ್ತರ ಖಂಡನೆ

ಡಾ. ಸುಬ್ಬರಾಯನರ ಉಪನ್ಯಾಸ

ನಿನ್ನೆಯ ದಿನ (ತಾ. 20) ಸಾಯಂಕಾಲ ಮಾನ್ಯ ಮಂತ್ರಿಗಳಾದ ಡಾ. ಪಿ. ಸುಬ್ಬರಾಯನವರು ವ್ಯಾಖ್ಯಾನವಲ್ಲಿ ಸೇರಿದ ಸಾರ್ವಜನಿಕ ಸಭೆಯ ಮುಂದೆ ಭಾಷಣ ಮಾಡಿದರು. ಶ್ರೀ. ಬಿ. ಎ. ಬಾಳಿಗ ಯಂ. ಎಲ್. ಎ. ಇವರು ಅಧ್ಯಕ್ಷತೆವಹಿಸಿದ್ದರು.

ಮಂತ್ರಿವರ್ಯರು ಕಾಂಗ್ರೆಸ್ ಮಂತ್ರಿಮಂಡಲವೇನು ಮಾಡಿದೆ ಎಂಬುದನ್ನು ವಿವರಿಸುತ್ತಾ ಒಬ್ಬನೇ ಒಬ್ಬ ರಾಜಕೀಯ ಕೈದಿಯು ಜೈಲುಗಳಲ್ಲಿರುವುದಿಲ್ಲವೆಂದೂ, ಮದ್ಯಪಾನ ನಿರೋಧದ ಕಾನೂನು ಮೂರು ಜಿಲ್ಲೆಗಳಲ್ಲಿ ಜಾರಿಗೆ ತರಲ್ಪಟ್ಟಿದೆಯೆಂದೂ, ರೈತರನ್ನು ಸಾಲದ ಹೊರೆಯಿಂದ ತಪ್ಪಿಸಲು ಪ್ರಯತ್ನಮಾಡಿದೆಯೆಂದೂ, ಗ್ರಾಮಾಧಿಕಾರಿಗಳಿಗೆ ಪುನಃ ಅವರ ಕೆಲಸಗಳು ಸಿಗುವ ಹಾಗೆ ಸರಕಾರದವರು ಮಾಡಿದ್ದಾಗಿಯೂ ತಿಳಿಸಿದರು. ದ. ಕನ್ನಡ ಜಿಲ್ಲೆಗೆ ಸಾಕಷ್ಟು ಸಹಾಯವಾಗಿಲ್ಲವೆಂಬ ವಿಷಯವನ್ನು ಹೇಳುತ್ತಾ, ಈ ಜಿಲ್ಲೆಯಿಂದ ಬರುವ ಉತ್ಪತ್ತಿಗಿಂತ ಹೆಚ್ಚಾಗಿ ಇಲ್ಲಿಗೆ ವೆಚ್ಚವಾಗುತ್ತಿದೆಯೆಂದೂ, ಆದರೆ ಸರಕಾರದವರು ಆಯಾ ಜಿಲ್ಲೆಯಲ್ಲಿ ಆಯಾ ಉತ್ಪತ್ತಿಗೆ ಸರಿಯಾಗಿ ವೆಚ್ಚ ಮಾಡುವ ಆಲೋಚನೆ ಮಾಡಿರುವುದಿಲ್ಲವಾಗಿ ಹೇಳಿದರು.

ಅನಂತರ ದೇವಸ್ಥಾನಗಳ ಪ್ರವೇಶದ ಮಸೂದೆಯನ್ನು ತರುವ ವಿಷಯದಲ್ಲಿ ಮಾತಾಡುತ್ತಾ ಮಿ. ಯಂ. ಸಿ. ರಾಜರ ಮಸೂದೆಯನ್ನು ವಿರೋಧಿಸಲು ಏನು ಕಾರಣವೆಂಬುದನ್ನು ಸೂಚಿಸಿದರು. ಆದಾದ ಮೇಲೆ ಖಾದಿಗೆ ಸಕಲರೂ ಪ್ರೋತ್ಸಾಹಕೊಡಬೇಕೆಂದೂ, ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆಂದೂ, ಶಾಲೆಗಳಲ್ಲಿ ಹರಿಜನ ಮಕ್ಕಳಿಗೆ ಪ್ರವೇಶ ದೊರೆಯುವಂತೆ ಸರಕಾರವು ಮಾಡಲು ಸರ್ವ ಪ್ರಯತ್ನವನ್ನು ಮಾಡುವುದೆಂದೂ, ಹಿಂದೂ ಮುಸಲ್ಮಾನರಲ್ಲಿ ಸ್ನೇಹವನ್ನು ಬೆಳೆಸಬೇಕೆಂದೂ ಹೇಳಿದರು.

ಸಕಲರೂ ಕಾಂಗ್ರೆಸನ್ನು ಸೇರಿ ಅದನ್ನು ಬಲಪಡಿಸಬೇಕೆಂದು ಹೇಳಿದರು. ಕರ್ನಾಟಕ ಏಕೀಕರಣದ ವಿಷಯವಾಗಿ ಹೇಳುತ್ತಾ ಕಾಂಗ್ರೆಸ್ ಸಂಸ್ಥೆಯೇ ಅದನ್ನು ಒಪ್ಪಿರುತ್ತಾ ಮದ್ರಾಸ್ ಸರಕಾರವೇ ಆ ಬಗ್ಗೆ ಠರಾವುಮಾಡಿರುತ್ತಾ ತಾವೆಂದೂ ವಿರೋಧವಾಗಿ ಮಾತಾಡಿಲ್ಲವೆಂದರು. ಮತ್ತು ಮೆಟ್ರಿಕ್ ವರೆಗೆ ಕನ್ನಡದಲ್ಲಿಯೇ ಶಿಕ್ಷಣಕೊಡುವಂತೆ ಏರ್ಪಾಡುಮಾಡುವುದಾಗಿಯೂ ಹೇಳಿದರು.

ಸಭೆಯಲ್ಲಿ ಕೆಲವರು ಕೆಲಪ್ರಶ್ನೆಗಳನ್ನು ಮಂತ್ರಿಗಳಿಗೆ ಕೇಳಿದರು. ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ಓರ್ವ ಸದಸ್ಯರು ಕಾಂಗ್ರೆಸಿಗೆ ವಿರುದ್ಧವಾಗಿ ಚಳವಳಮಾಡುತ್ತಿರುವುದರಿಂದ ಅವರನ್ನು ಖಂಡಿಸುವುದು ತಮ್ಮ ಕರ್ತವ್ಯವೆಂಬ ಅಭಿಪ್ರಾಯವನ್ನು ಸೂಚಿಸಿದರು.

ಮಾನ್ಯ ಮಂತ್ರಿಗಳು ತಮ್ಮ ಭಾಷಣವನ್ನು ಅತ್ಯಂತ ಉತ್ತಮ ರೀತಿಯಿಂದ ಕನ್ನಡಕ್ಕೆ ಪರಿವರ್ತನೆಮಾಡಿದ ಬಗ್ಗೆ ಶ್ರೀ। ಶೆಟ್ಟಿಯವರಿಗೆ ತಮ್ಮ ಹೃತ್ಪೂರ್ವಕ ಅಭಿವಂದನಗಳನ್ನರ್ಪಿಸಿದರು. ಶ್ರೀ। ಬಾಳಿಗರು ಧನ್ಯವಾದಗಳನ್ನರ್ಪಿಸಿದ ಅನಂತರ ಸಭಾಂತ್ಯವಾಯಿತು.

ಅವಿಶ್ವಾಸದ ಠರಾವು —ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಮೇಲೆ ಅವಿಶ್ವಾಸದ ಠರಾವನ್ನು ತರುವುದಕ್ಕಾಗಿ 44 ಸದಸ್ಯರು ಸಹಿ ಹಾಕಿ ತಾ. 20-11-38ಕ್ಕೆ ಮೀಟಿಂಗ್ ಕರೆಯಬೇಕೆಂದು ಕೇಳಿಕೊಂಡಿದ್ದರಷ್ಟೆ! ಅದರ ಕೇಳಿಕೆಯ ಪತ್ರದಲ್ಲಿ ಕೆಲವು ಮುಖ್ಯ ತಿದ್ದುಪಡಿಗಳಿದ್ದು ಆ ಬಗ್ಗೆ ತಕ್ಕ ಸಹಿಗಳಿಲ್ಲದುದರಿಂದ ಸಹಿ ಮಾಡಿದವರೆಲ್ಲರ ಒಪ್ಪಿಗೆ ತರಬೇಕೆಂದು ತಿಳಿಸಲಾಗಿದೆಯೆಂದೂ ಒಪ್ಪಿಗೆ ಇನ್ನೂ ಬಂದಿಲ್ಲವೆಂದೂ ತಿಳಿದುಬರುತ್ತದೆ.

ರೂ. **1—8—0**ಕ್ಕೆ **3** ವಾಚುಗಳು ಮತ್ತು **495** ಮನೋಹರ ವಸ್ತುಗಳು.



ನಮ್ಮ ರೂ 1—8—0 ಕ್ರಯದ 16 ಸಣ್ಣ ಸೀಸೆ "ಒಟೋರೋಸ"ನ್ನು ಕೊಂಡು ಕೊಳ್ಳುವವಗೆ ಒಂದು ಬಂಗಾರದ ಡಮ್ಮಿ ರಿಸ್ಟುವಾಚು, ಒಂದು ಪೌಡರ್ ಪೇಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿ ಕಡ್ಡಿಯ ಕೇಸು, ಒಂದು ಸಿಗರೇಟುಲೈಟ್, ಒಂದು ಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ್ ಸ್ಕ್ರೂ, 500 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರೆಂಟಿಯಿರುವ ಭವ್ಯ ಮೆಶಿನರಿಯುಳ್ಳ ಗಡಿಯಾರ, ಒಂದು ಫೌಂಟೆನ್ ಪೇನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ ಮತ್ತು ಟಪ್ಪಾಲು ಖರ್ಚು 14 ಆಣೆ ಹೆಚ್ಚಿಗೆ—

Oriental Fancy Stores, S. C. E 90.

Post Box. No. 12204, **CULICUTTA.**

ಉಡುಪಿ

ಪಬ್ಲಿಕ್ ವರ್ಕ್ಸ್ ಮಿನಿಸ್ಟರರ ಆಗಮನ —ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳಾದ ಮಾನ್ಯ ಯಾಕೂಬ್ ಹಸನ ಸಾಹೇಬರು ತಾ. 19-11-38ರಲ್ಲಿ ಉಡುಪಿಗೆ ಆಗಮಿಸಿದರು. ಶ್ರೀ ರಾಮಕೃಷ್ಣಾ ಥಿಯೇಟರಿನಲ್ಲಿ ಮುನಿಸಿಪಾಲಿಟಿ ಮತ್ತು ಸಾರ್ವಜನಿಕರ ಕಡೆಯಿಂದ ಮಾನಪತ್ರಗಳು ಶ್ರೀಗಳಾದ ಎ. ಲಕ್ಷ್ಮೀನಾರಾಯಣ ರಾವ್ ಮತ್ತು ವೇಲ್ಜಿ ಕಲ್ಯಾಣಜೀ ಶೇಟರಿಂದ ಕೊಡಲ್ಪಟ್ಟವು. ಮಲ್ಪೆ ಬಂದರವು ಉದ್ಧಾರವಾಗಬೇಕು. ನದಿಗಳಿಗೆ ಸೇತುವೆಗಳು ಬೇಕು. ಸೋಮೇಶ್ವರ-ಆಗುಂಬೆ-ಉಡುಪಿ ಮಾರ್ಗವನ್ನು ಟ್ರಂಕ್‌ರೋಡನ್ನಾಗಿಮಾಡಿಸಬೇಕೆಂಬುದೇ ಮಾನಪತ್ರಗಳ ಸಾರವಾಗಿತ್ತು. ತಾನು ದಕ್ಷಿಣಕನ್ನಡಜಿಲ್ಲೆಯನ್ನು ಸಂದರ್ಶಿಸ ಬಂದುದರೂ ಸೀಘ್ರ ಸೂಚಿಸಲ್ಪಟ್ಟ ವಿಷಯಗಳನ್ನು ತಿಳಿಯುವ ಸಲುವಾಗಿಯೇ. ಮಲ್ಪೆ ಬಂದರದ ಉದ್ಧಾರದ ಕುರಿತು ಸಾಧ್ಯವಿದ್ದಷ್ಟು ತಾನು ಸಹಾನುಭೂತಿ ತೋರಿಸಲಿರುವೆನೆಂದರು. ಇತರ ವಿಷಯಗಳನ್ನು ನಿಮ್ಮ ಜಿಲ್ಲಾ ಬೋರ್ಡಿನವರೇ ಮಾಡತಕ್ಕದ್ದಿರುತ್ತದಾದರೂ ಆ ಬಾಬಿನಲ್ಲಿ ಹೆಚ್ಚಿನ ಸಹಾಯ ಬೇಕೆಂದು ವಂತೆ ನಾಮದಾರ್ ಗೋಪಾಲ ರೆಡ್ಡಿಯವರೊಡನೆ ಹೇಳುವೆನು. ಮಲ್ಪೆ ಬಂದರವನ್ನು ಸಂದರ್ಶಿಸಿ ಅಲ್ಲಿಯ ಕಾಂಗ್ರೆಸ್ ಪ್ರೆಸಿಡೆಂಟ ಶ್ರೀ. ಯಂ. ಕೆ. ಮಂಜಪ್ಪನವರು ಅರ್ಪಿಸಿದ ಮನವಿಯನ್ನು ಸ್ವೀಕರಿಸಿ ಅಲ್ಲಿಂದ ಮುಂದೆ ಕುಂದಾಪುರಕ್ಕೆ ಪ್ರಯಾಣಬೆಳೆಸಿದರು.

ಸೈಂಟ್ ಮೇರಿ ಹಬ್ಬ — ಸ್ಥಳೀಯ ರೋಮನ್ ಕೆಥೋಲಿಕರ ಚರ್ಚಿನಲ್ಲಿ ವರ್ಷಂಪ್ರತಿ ಜರಗುವ ಸೈಂಟ್ ಮೇರಿ ಹಬ್ಬವು ವಿಜೃಂಭಣೆಯಿಂದ ತಾ. 16ರಿಂದ 23ರ ತನಕ ಜರಗಿತು. ಶ್ರೀ ಕೃಷ್ಣಾ ಇಲೆಕ್ಟ್ರಿಕ್ ಸ್ಟೋರ್ಸಿನವರ ಇಲೆಕ್ಟ್ರಿಕ್ ಫಿಟ್ಟಿಂಗ್ಸ್ ಅತಿ ಮನೋಹರವಾಗಿದ್ದವು.

ರಬ್ಬರ್ ಬಾಲ್ ಕ್ರಿಕೆಟ್ ಪಂದ್ಯಾಟ ಉಡುಪಿ ಗಾಂಧಿ ಮೈದಾನಿನಲ್ಲಿ ತಾ. 26-11-38 ರಿಂದ ಈ ಪಂದ್ಯಾಟವು ನಡೆಯಲಿದೆ. ಪಂದ್ಯಾಟದ ಫಿಕ್ಚರ್ಸ್ ಈ ಕೆಳಗಿನಂತಿರುವುದು. ತಾ 26-11-38 ಕ್ಕೆ ಕೊಸ್ಮೋಪೊಲಿಟನ್ ಕ್ರಿಕೆಟ್ ಕ್ಲಬ ಮತ್ತು ಕಲ್ಯಾಣಪುರ ಕ್ಲಬ. 28 11-38ಕ್ಕೆ ಜೋಲಿ ಟೀಮ್ ಮತ್ತು ಲಕ್ಕೀ 11, 3 12 38ಕ್ಕೆ ಸೋಶಿಯಲ ಕ್ರಿಕೆಟ ಕ್ಲಬ ಮತ್ತು ಮೊದಲನೆಲ್ಲಿ ಗೆದ್ದವರು, 10-12-38ಕ್ಕೆ ಕೊನೆಗೆ ಗೆದ್ದವರೊಳಗೆ

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

O.S. 1347/1938 O.E.P. 377/1938

ಪದ್ಮನಾಭ ಪಾಂಗಣ್ಣಾಯ ... **ಅರ್ಜಿದಾರ**

ಇಸ್ಮಾಯಿಲ್ ಸಾಹೇಬ
ಹುಸೈನ್ ಸಾಹೇಬರ ಮಗ,
ಪುತ್ತೂರು ತಾಲೂಕು ಮಿತ್ತ
ಬಾಗಿಲು ಗ್ರಾಮದಲ್ಲಿರುವವ } ... ಎದ್ರಿ.

ಮೇಲಿನ ಅಮಲ್ಜಾರಿಯು, ಎದ್ರಿಗೆ ಆಗತಕ್ಕ ಸೇಲ್‌ನೋಟೀಸಿನ ಬಗ್ಗೆ ತಾ. 8-12-1938ಕ್ಕೆ ಸದ್ರಿ ಕೋರ್ಟಿನಲ್ಲಿ ವ್ಯಾದೆ ಆಗಿರುವುದರಿಂದ ಎದ್ರಿರು ಆ ವ್ಯಾದೆ ದಿವಸ ಹಗಲು 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಉಪಸ್ಥಿತರಿರಲು ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ಅಮಲ್ಜ್ಯಾರಿ ಮುಂದರಿಸಲಾದೀತೆಂಬ ಸಂಗತಿ ಕೋರ್ಟ್ ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗುತ್ತದೆ.

(*Sd*) **K. K. Shenai,**
Pleader for Petitioner.
ಪುತ್ತೂರು, ತಾ. 18-11-'38.

ಕೂದಲು

ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಗಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ದಬ್ಬಲ್ ವಾಪಾಸು ಕೊಡಲು ಗ್ಯಾರಂಟಿ ಎಂಬುದಕ್ಕೆ ದೊರೆತ ಸಾವಿರ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ. 5—0—0 ಕಾಲಂಕಕ್ಕೆ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ. 7—0—0 ಬೆಲೆಯ ಎಣ್ಣೆ ಬೇಕಾಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲೇ

HAZRA & Co.,

P. O. **Bihar Nursery** (DARBHANGA).

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ಪೋವಿನ ರೆಂಗ್‌ವರ್ಸ್ ವು ಲಾಮು —

ಇತ್ಯರ ಪರಿಗಣ ನನ್ನ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಜಯ ಟ್ರೇಡ್‌ಮಾರ್ಕ್ ರೆಂಗ್‌ವರ್ಸ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪ್ಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ಥ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯಂತ ಯುಕ್ತವಾಗಿದೆ. ಕ್ರಯ:-100 ಮಾತ್ರೆಗಳಿಗೆ ರೂ 1-6-0, 500ಕ್ಕೆ ರೂ. 5-0-0. ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ

ಆಮಲಕೀ ತೈಲ (ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ .0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ.

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ,

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ. ಭಾರತ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ನೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಕೃಶತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಅಶಕ್ತಿ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವದು ಬಾಟ್ಲಿ ೧ರ ರೂ 2-8-0.

ಕಸ್ತೂರಿಮಿಶ್ರಿತ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager,

Kanara Printing Works,

Hampankatte, **MANGALORE.**

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):— ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೫ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು ಎಳ್ರಿಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು.

ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ.

ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ.

ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,

ಪೋಸ್ಟ್—ಕಾಪು, ದ. ಕ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್

ಕೊಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಶೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ. [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು

ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿ ರಾವ್,

ಸೋದೆ ಮಠದ ಲೇನು — — — ಉಡುಪಿ, ದ. ಕ.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

ಸೀತಾನದಿ ಜಾನುವಾರ ಸಂತೆ

ತಾರೀಕು **3-12-1938**ರಿಂದ ತಾರೀಕು **9-12-38**ರ ವರೆಗೆ ಮಾತ್ರ.

ಜಾನುವಾರುಗಳನ್ನು ಪಡಕೊಳ್ಳುವವರಿಗೆ ಇದೇ ಅತ್ಯುತ್ತಮ ಸಂದರ್ಭ.

ಪ್ರಯಾಣಿಕರಿಗೆ ಅನುಕೂಲವಾಗುವಂತೆ ಅಗತ್ಯವಿದ್ದಲ್ಲಿ ಸ್ಪೆಶಲು
ಸರ್ವಿಸು ಚಾಲುಮಾಡುವ ಯೋಗ್ಯ ವ್ಯವಸ್ಥೆ ಮಾಡಲಾಗುವುದು.
ಪ್ರಯಾಣಿಕರ ಸೌಕರ್ಯದ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ
ದೊರೆಯುವುದು.

ವಾರ್ಷಿಕ ಚಂದಾ ರೂ 3 0 0 ಬಿಡಿ ಪ್ರತಿ 0 1 0

ಮೆನೇಜರ್— ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital	Rs. 1,00000
Subscribed & Paid up „	Rs. 30,500
Reserves	Rs. 1,078

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು
ಸ್ವೀಕರಿಸಲ್ಪಡುತ್ತವೆ.

3ರಿಂದ	6	ತಿಂಗಳ ವರೆಗೆ	4 ಸಲೆ
7 „	11	„	5 „
12 „	18	„	6 „

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯತಿ
ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?

ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ವ್ಯಾಸಭವನಂ
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S S. KARANTH, for & on behalf of SUPPLY AGENCY LTD, at THULUNAD PRESS, UDIPI
and Published by K. H SHETTY at "NAVAYUGA" OFFICE, UDIPI, South India.

Registered No M 3618.

1-12-1938

NAVA YUGA

ಹೊಸ ಮಾದರಿ! ಹೊಸ ಆಕರ್ಷಣೆ! ಹೊಸ ವಿಚಾರ!

ದಕ್ಷಿಣ ಹಿಂದೂಸ್ಥಾನದ
ಪ್ರಸಿದ್ಧ ಯಾತ್ರಾಸ್ಥಳವಾದ
ಉಡುಪಿ ಕ್ಷೇತ್ರದಲ್ಲಿ
ಜರಗುವ ಉತ್ಸವಗಳಲ್ಲಿ
ಅತಿ ವಿಶೇಷತರದ ಮಕರ
ಸಂಕ್ರಾಂತಿ ಜಾತ್ರೆಯ
ಕಾಲದಲ್ಲೇ ಎಲ್ಲೆಲ್ಲಿಯ
ಸಹಸ್ರಾರು ಜನರು ಬಂದು
ಸೇರುವ ಸಮಯದಲ್ಲಿ
12-1-1939ಕ್ಕೆ
ಹೊರಡುವ
ವಿಶೇಷ ಸಂಚಿಕೆ!

ಸುವರ್ಣಸಂದರ್ಭ!
ಪ್ರಸಿದ್ಧ ಬ್ಯಾಂಕುಗಳು,
ಇನ್ಶ್ಯೂರೆನ್ಸ್ ಕಂಪನಿಗಳು,
ಇತರ ವ್ಯಾಪಾರಿ ಮತ್ತು
ಕೈಗಾರಿಕ ಸಂಸ್ಥೆಗಳ
ಪರಿಚಯ, ಬೆಳವಣಿಗೆಯ
ಸಂಕ್ಷೇಪ ಮಾಹಿತಿಯನ್ನು
ಈವಿಶೇಷ ಸಂಚಿಕೆಯಲ್ಲೇ
ಮಾಡಿಕೊಡುವ
ವ್ಯವಸ್ಥೆ ಮಾಡಲಾಗಿದೆ.
ತ್ವರೆ ಮಾಡಿರಿ!

ನವಯುಗದ ಮಕರ ಸಂಕ್ರಾಂತಿ ವಿಶೇಷ ಸಂಚಿಕೆ

ವಿಚಾರಕ್ರಾಂತಿಯ ವಿವಿಧ ಲೇಖನಗಳು! ನೂರಾರು ಚಿತ್ರಗಳು! ನೂರೈವತ್ತರಷ್ಟು ಪುಟಗಳು!

**ಕನ್ನಡ
ಪತ್ರಿಕಾ
ಪ್ರಪಂಚದಲ್ಲಿ
ಕ್ರಾಂತಿ!
ಹೊಸ ವರ್ಷದಲ್ಲಿ
ಹೊಸ
ಸಾಹಸ!**

ಜಾಹೀರಾತಿಗೆ
ಅತ್ಯುತ್ತಮ ಸಂದರ್ಭ!
ಕನ್ನಡನಾಡಿನ ಪ್ರತಿಯೊಬ್ಬರೂ
ಈ ಸಂಚಿಕೆಯನ್ನೋದುವರು.

ಜಾಹೀರಾತಿನ ದರಗಳು

1 ಪುಟ	ರೂ.	25
½ "	ರೂ.	15
¼ "	ರೂ	8
⅛ "	ರೂ	5

ವಾಚಕರನೇಕರ ಸೂಚನೆಯಂತೆ
ಅತ್ಯಂತ ಅನುಕೂಲವಾದ
ಕ್ರೌನ್ ¼ ಸೈಜನಲ್ಲಿ
ಈ ಸಂಚಿಕೆಯು
ಹೊರಡುವುದು.
(ನವಯುಗದ ಅರ್ಧ ಸೈಜು)

ಜಾಹೀರಾತು ಕೊಡುವವರು
ದಸಂಬರ 15ರೊಳಗೆ ನಮಗೆ
ತಿಳಿಸಬೇಕು. ಅಪೇಕ್ಷಿಸಿದ್ದಲ್ಲಿ
ಜಾಹೀರಾತುಗಳು ಬಣ್ಣದ ಶಾಯಿ
ಮತ್ತು ಕಾಗದದಲ್ಲಿ ಕೂಡ
ಮುದ್ರಿಸಲ್ಪಡುವವು

Advertise in Navayu 1 1939

DATE OF PUBLICATION
12-1-1939

The Canara Industrial & Banking Syndicate, Limited.

(INCORPORATED IN BRITISH INDIA)
[ESTD. 1925]

HEAD OFFICE:—MUKUND NIVAS, UDIPI, S. INDIA.

MEMBER:

RESERVE BANK OF INDIA

BANKERS' CLEARING HOUSE, BOMBAY.

DEPOSIT RATES.

3 to 5 MONTHS	....	...	2½% p. a.
6 to 11 „	....	....	3% „
12 to 23 „	....	....	3½% „
24 „	....	...	4% „
SHORT TERM	....	....	2% „

BANKING BUSINESS OF EVERY DESCRIPTION TRANSACTED.

Please Note

The Subscribers, Agents & Advertisers *in*

NAVAYUGA

PLEASE NOTE THAT PAYMENTS DUE TO **NAVAYUGA** MAY BE MADE TO THE CREDIT OF NAVAYUGA ACCOUNT IN ANY BRANCH OF

THE CANARA INDUSTRIAL & BANKING SYNDICATE, LIMITED, UDIPI

Without being liable to pay any amount by way of Commission.

WHERE THE SYNDICATE HAS BRANCHES:

Bombay, Bangalore, Belgaum, Byadgi, Bellary, Adoni. Hospet, Nandyal, Prodattur, Tadpatri, Taliparamba, Hubli, Gadag. Mangalore, Cannanore, Payyanur, Kanhangad, Kasargode, Karkal, Udipi, Uppinangady, Karwar, Kumta, Ankola, Honavar, Bhatkal, Sirsi, Sagar, Coondapoor, Brahmavar, Hungarcutta, Nippani, Tumkur & Hindupur,

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವೀಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ,

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಕುರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಖ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಧಾತುಪುಷ್ಟಿಗೆ	—ಮದನಕಾಮೇಶ್ವರಿ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: MANGALORE

BRANCHES: **Udipi, Coondapoor, Kaup & Karkal.**

Fixed deposits are now received at all the offices of the Bank at the following terms:—

3 Months Fixed Deposits at 3 p. c. per annum.
6 Months / 9 months } Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] **H. O. UDIPI.** [1920

BRANCHES

MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at 3½ p. c per annum.
Two years' Fixed Deposits at 4 p. c. per annum.
Savings Bank Deposits .... 3 p. c per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD 1921
FOUNDER
Sri A. B. SHETTY, M.L.A.
Parliamentary Secretary Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ
ಸಂಪಾದಕ.
ಕೆ. ಕೆ. ಶೆಟ್ಟಿ.

ನವಯುಗ

NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೧೪ | ಉಡುಪಿ, ಗುರುವಾರ ೧-೧೨-೧೯೩೮ | Udipi, Thursday 1—12—1938 | Vol XVIII No 14

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೮—೦
೬ ತಿಂಗಳಿಗೆ ರೂ ೧—೧೨—೦
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ

ಮಹಾಯುದ್ಧಕ್ಕಿಂತಲೂ ಭೀಕರ ಕೊಲೆ

ಲೋಕಶಾಹಿ ರಾಷ್ಟ್ರಗಳಲ್ಲಿ 1918 ರಿಂದ ಮಿತಸಂತತಿಯಿಂದಾಗಿ ಮಹಾಯುದ್ಧಕ್ಕಿಂತಲೂ ಭೀಕರ ಕೊಲೆಯು ನಡೆದಿರುತ್ತದೆ. ಡಿಕ್ಟೇಟರಶಾಹಿ ರಾಷ್ಟ್ರಗಳಲ್ಲಿ ಜನ ಸಂಖ್ಯೆಯು ಬಹಳವಾಗಿ ಹೆಚ್ಚುತ್ತಿರುವಾಗ ಪ್ರಜಾಶಾಹಿ ರಾಷ್ಟ್ರಗಳು ಹಿಂದುಳಿದಿರುತ್ತವೆ. ಕೆಮಲ್ ಪಾಶರರು ಆಧುನಿಕ ಟರ್ಕಿಯಲ್ಲಿ ಸ್ತ್ರೀಸ್ವಾತಂತ್ರ್ಯವಿತ್ತಂದಿನಿಂದ ಟರ್ಕಿಯ ಜನ ಸಂಖ್ಯೆಯು 13½ ಮಿಲ್ಯದಿಂದ 16 ಕ್ಕೇರಿದೆ. 30 ಮಿಲ್ಯ ವರ್ಷದ ಪ್ರಚಂಡ ಸೇನೆಯನ್ನು ಯುದ್ಧರಂಗಕ್ಕೆ ಕಳುಹಿಸುವಷ್ಟು ರಶ್ಯದ ಜನಸಂಖ್ಯೆಯು ಏರಿದೆ. 1940ರಲ್ಲಿ 20 ವರ್ಷದ ತರುಣರ ಸಂಖ್ಯೆಯು ಫ್ರಾನ್ಸಿನಲ್ಲಿ 360,000 ಇಂಗ್ಲೆಂಡಿನಲ್ಲಿ 433,000 ಜರ್ಮನಿಯಲ್ಲಿ 636,000, ಜಪಾನಿನಲ್ಲಿ 740,000 ಮತ್ತು ರಶ್ಯದಲ್ಲಿ 1,400,000 ಇರುವದೆಂದು ಅಂದಾಜುಮಾಡಲಾಗಿದೆ. ಜಪಾನಿನ ಜನಸಂಖ್ಯೆಯು 1872ರಲ್ಲಿ 33 ಮಿಲ್ಯ ಇದ್ದುದು ಈಗ 70 ಮಿಲ್ಯಕ್ಕೇರಿದೆ. ಡಿಕ್ಟೇಟರ ಶಾಹಿ ರಾಷ್ಟ್ರಗಳಲ್ಲಿ ಮಿತ ಸಂತತಿಯು ನಿಷೇಧಿಸಲ್ಪಟ್ಟು ದಾಂಪತ್ಯ ಮತ್ತು ಸಂತತಿ ಉತ್ಪಾದನೆಗೆ ಪ್ರೋತ್ಸಾಹ ತೋರೆಯುತ್ತಿರುವಾಗ, ಪ್ರಜಾಶಾಹಿ ರಾಷ್ಟ್ರಗಳಲ್ಲಿ ದಂಪತಿಗಳು ಸಂತತಿ ಸಂಯಮ ಮಾಡಿ ಮಕ್ಕಳ ಸಂಖ್ಯೆಯನ್ನು ಬಹಳವಾಗಿ ಮಿತಗೊಳಿಸುತ್ತಿದ್ದಾರೆ.

ಹಿಂದೂದೇಶದ ಪ್ರತಿಷ್ಠೆ ಹೆಚ್ಚಿದೆ

ಅಂತರ ರಾಷ್ಟ್ರೀಯ ರಾಜಕೀಯದಲ್ಲಿ ಹಿಂದೂದೇಶದ ಪ್ರತಿಷ್ಠೆಯು ಈಗ ಬಹಳವಾಗಿ ಹೆಚ್ಚಿದೆ. ಹಿಂದೀಯರ ರಾಷ್ಟ್ರೀಯ ಆಕಾಂಕ್ಷೆಗಳನ್ನು ಯುರೋಪಿನ ರಾಷ್ಟ್ರಗಳು ಮನ್ನಿಸಹತ್ತಿವೆ. ಹಿಂದೀ ರಾಷ್ಟ್ರೀಯ ಮುಖಂಡರು ಎಲ್ಲೆಲ್ಲಿಯೂ ಗಣನೀಯರಾಗಿ ಮನ್ನಣೆ ಪಡೆಯುತ್ತಿದ್ದಾರೆ. ವಿಚಾರಪರ ಬ್ರಿಟಿಷರು ಕೂಡ ಹಿಂದೀಯರ ರಾಷ್ಟ್ರೀಯ ಆಕಾಂಕ್ಷೆಯನ್ನು ಇಂಗ್ಲೆಂಡಿಗಿನ್ನು ತಡೆದಿಡಲು ಸಾಧ್ಯವಿಲ್ಲೆಂಬ ನಿರ್ಧಾರಕ್ಕೆ ಬಂದಿರುತ್ತಾರೆ. ಇದಕ್ಕೆ ಪಂಡಿತ ಜವಾಹರಲಾಲರೇ ಮೊದಲಾದ ಹಿಂದೀ ಮುಖಂಡರು ಯುರೋಪಿನಲ್ಲಿ ನಡಿಸಿರುವ ಪ್ರಚಾರವೇ ಕಾರಣವಾಗಿರುತ್ತದೆ. ಪರದೇಶಗಳಲ್ಲಿನ ಪ್ರಚಾರದ ಕಡೆಗೆ ಕಾಂಗ್ರೆಸು ಇನ್ನುಮುಂದೆ ಹೆಚ್ಚಿನ ಗಮನವೀಯುವುದು ಅವಶ್ಯವಿದೆ.

ಗಾಂಧಿಜಿಯವರ ಯಾತ್ರಾ ಸ್ಥಳ

ಗಾಂಧಿಜಿಯವರು ಗಡಿನಾಡಿನ ತಕ್ಷಶಿಲೆಯಲ್ಲಿ ಬಹಳ ಕಷ್ಟದಿಂದ ಖಾನ್ ಅಬ್ದುಲ್ ಗಾಫರ್ ಖಾನರಿಗೆ ವಿದಾಯವಿತ್ತು

ವಾರದ ಟೀಕೆ

ವಾರ್ಧಕ್ಕೆ ಬಂದಿರುವರು. ಮಿತ್ರರನ್ನಗಲಿರುವಾಗ ಅವರ ಹೃದಯ ಎಂದೂ ಇಷ್ಟೊಂದು ಕರಗಿಹೋದುದಿಲ್ಲ. ಖಾನರು ನಿಜವಾಗಿಯೂ ದೇವರ ಮನುಷ್ಯ. ಅವರ ಮೇಲೆ ಗಡಿನಾಡಿನ ಪಠಾಣರಿಗೆ ಅಚಲ ವಿಶ್ವಾಸವಿದೆ. ಅವರ ತುಟಿಯಿಂದೊಂದು ಶಬ್ದ ಹೊರಟಿತೆಂದರೆ ಅದನ್ನು ಅತ್ಯಂತ ನಿಷ್ಠೆಯಿಂದ ಪಾಲಿಸಲು ಒಂದು ಲಕ್ಷಕ್ಕಿಂತಲೂ ಮಿಕ್ಕಿದ ಖುದಾಯಿ ಖಿದ್ಮತ್‌ಗಾರರು ಸಿದ್ಧರಿದ್ದಾರೆ. ವಾಯವ್ಯ ಗಡಿನಾಡು, ಅಹಿಂಸೆಯ ಮೇಲೆ ದೃಢವಿಶ್ವಾಸವುಳ್ಳುದಾಗಿದೆ. ಅಹಿಂಸಾತ್ಮಕ ಸಮರದ ಅಗ್ನಿ ಪರೀಕ್ಷೆಗೊಳಗಾಗಿ ದೇಶದ ಇತರ ಪ್ರಾಂತಗಳಿಗೂ ಒಂದು ಮಾದರಿಯಾಗಿ ಆಶೋದಯವು ಗಾಂಧಿಜಿಯವರಲ್ಲುಂಟಾಗಿದೆ. ಆದುದರಿಂದಲೇ ಗಡಿನಾಡನ್ನು ತನ್ನ ಯಾತ್ರಾಸ್ಥಳವಾಗಿ ಪರಿಗಣಿಸಿ ಅದಕ್ಕೆ ಆಗಾಗ ಹೋಗಿಬರುವ ಆಶೆಯುಳ್ಳವರಾಗಿದ್ದಾರೆ. ಇತರ ಪ್ರಾಂತಗಳಲ್ಲಿಯೂ ಬೇಕಾದುದು ಇದೇ ರೀತಿಯ ಸಿದ್ಧತೆ. ಅದರ ಬದಲಿಗೆ ಅವುಗಳಲ್ಲಿ ಅಂತಃಕಲಹವೇ ಹೆಚ್ಚುತ್ತಿರುವುದು ಅತ್ಯಂತ ವಿಷಾದಕರ.

ಗಾಂಧಿಜಿಯವರ ಅಂತರ ರಾಷ್ಟ್ರೀಯ ದೃಷ್ಟಿ

ಗಾಂಧಿಜಿಯವರು ತನ್ನ ಅಹಿಂಸಾತತ್ವವನ್ನೀಗ ಅಂತರ ರಾಷ್ಟ್ರೀಯ ಕ್ಷೇತ್ರಕ್ಕೂ ವ್ಯಾಪಿಸುವ ಮನೋವೃತ್ತಿಯುಳ್ಳವರಿದ್ದಾರೆ. ಅವರು ಈಗ ಅಂತರ ರಾಷ್ಟ್ರೀಯ ದೃಷ್ಟಿಯುಳ್ಳವರಿದ್ದಾರೆ. ಜೆಕ್ ಪ್ರಶ್ನೆಯನ್ನು ಅಹಿಂಸಾತ್ಮಕ ವಿಧಾನದಿಂದ ಯಾವ ರೀತಿಯಲ್ಲಿ ಬಗೆಹರಿಸಬಹುದಿತ್ತೆಂಬುವನ್ನವರು ಸೂಚಿಸಿರುತ್ತಾರೆ. ಈಗ ಯೆಹೂದ್ಯರು, ನಾಜಿ ಜರ್ಮನಿಯ ಅಮಾನುಷ ಪೀಡೆಯನ್ನು ಸತ್ಯಾಗ್ರಹ ಹೂಡಿ ವಿರೋಧಿಸಬಹುದೆಂಬ ಅಭಿಪ್ರಾಯಪಟ್ಟಿರುತ್ತಾರೆ. ಸ್ಪೆನಿಶ್ ರಿಪಬ್ಲಿಕನ್ ಸರಕಾರದ ಪ್ರಧಾನ ಮಂತ್ರಿಗಳಾದ ಮಿ. ನೇಗ್ರಿನರಿಗೆ ಸಂಪೂರ್ಣ ಸಹಾನುಭೂತಿಯ ಸಂದೇಶವಿತ್ತಿರುತ್ತಾರೆ. ಮೊದಲು ಹಿಂದೂದೇಶದ ಪ್ರಶ್ನೆಯ ಹೊರತು ಇತರ ಅಂತರ ರಾಷ್ಟ್ರೀಯ ವಿಷಯಗಳಿಗೆ ಮಹಾತ್ಮರು ಅಷ್ಟೊಂದು ಗಮನ ಕೊಡುತ್ತಿದ್ದಿಲ್ಲ. ಈಗ ಅವರು ಅಂತರ ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯ ಕುರಿತು ಇಷ್ಟೊಂದು ಆಸಕ್ತಿ ತೋರಿಸುತ್ತಿರುವುದು ಅವರ ಮನೋವೃತ್ತಿಯ ಮಾರ್ಪಾಟನ್ನು ಸೂಚಿಸುತ್ತದೆ.

ಗಾಂಧಿಜಿ ಜವಾಹರಲಾಲರ ಭೇಟಿ

ವಾಯವ್ಯ ಗಡಿನಾಡಿನಿಂದ ಗಾಂಧಿಜಿಯವರು, ಯುರೋಪಿನಿಂದ ಪಂಡಿತ ಜವಾಹರಲಾಲರೂ ವಾರ್ಧಕ್ಕೆ ಬಂದು ಮಾತುಕತೆ ನಡಿಸಿ ಪರಸ್ಪರ ಅಭಿಪ್ರಾಯ ವಿನಿಮಯ ಮಾಡಿಕೊಂಡಿರುವರು. ಗಾಂಧಿಜಿಯವರು ಅಂತರ ರಾಷ್ಟ್ರೀಯ ದೃಷ್ಟಿಯುಳ್ಳವರಾಗಲು ಬಹುಶಃ ಪಂಡಿತ ಜವಾಹರಲಾಲರೇ ಕಾರಣವೆನ್ನಬಹುದು. ಹಿಂದೂದೇಶದ ಹೋರಾಟವು ಲೋಕದ ಹೋರಾಟದ ಒಂದು ಅಂಗ. ಆದುದರಿಂದ ಅದನ್ನು ಅಂತರ ರಾಷ್ಟ್ರೀಯ ರಾಜಕೀಯದ ದೃಷ್ಟಿಯಿಂದ ಪೋಷಿಸಿ ಬೆಳೆಸಬೇಕು. ಲೋಕದ ರಾಜಕೀಯ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಹಿಂದೂದೇಶದ ಸಮಸ್ಯೆಯನ್ನು ಬಗೆಹರಿಸಲೆತ್ನಿಸುವಾಗ ನಾವು ಲೋಕದ ಪರಿಸ್ಥಿತಿಯನ್ನು ಕಡೆಗಣಿಸಲು ಸಾಧ್ಯವಿದೆ. ಅವುಗಳೊಳಗೆ ನಿಕಟ ಸಂಬಂಧವಿದೆ. ಸ್ಪೈನಿನ ಯುದ್ಧವು ಅಂತಃಕಲಹವೇನೂ ಅಲ್ಲ. ಪ್ರಜಾಶಾಹಿ ಮತ್ತು ಸಾಮ್ರಾಜ್ಯ ಶಾಹಿಗಳೊಳಗಣ ಜೀವನ್ಮರಣ ಹೋರಾಟವದು. ಚೈನವನ್ನು ಕೂಡಾ ಜಪಾನ ಸಾಮ್ರಾಜ್ಯ ಶಾಹಿಯು ನುಂಗಲೆತ್ನಿಸುತ್ತಿರುವುದು. ಸ್ಪೈನ್ ಮತ್ತು ಚೈನದ ರಣಕ್ಷೇತ್ರಗಳಲ್ಲಿ ಲೋಕದ ಸ್ವಾತಂತ್ರ್ಯಸಮರವು ನಡೆಯುತ್ತಿರುವುದು. ಆದುದರಿಂದಲೇ ಅವಕ್ಕೂ ನಮಗೂ ಸಂಬಂಧವಿರುವುದು. ನಾವು ಸ್ಪೆನಿಶ್ ಮತ್ತು ಚೀನೀ ಸರಕಾರಕ್ಕೆ ಸಾಧ್ಯವಾದ ಸಹಾಯವೀಯಬೇಕು. ಇದರಿಂದ ಹಿಂದೀಯರು ಪರೋಪಕಾರ ಮಾಡಿದಂತಾಗುತ್ತದೆ ಮಾತ್ರವಲ್ಲದೆ ತಮ್ಮ ದೇಶಕ್ಕೆ ಅಂತರ ರಾಷ್ಟ್ರೀಯ ಸ್ಥಾನವೊಂದನ್ನು ಸಂಪಾದಿಸಿಕೊಳ್ಳುವಂತಾಗುವುದೆಂದೇ ಪಂಡಿತ ಜವಾಹರಲಾಲರ ಮನೋನಿರ್ಧಾರ. ಯುರೋಪಿನ ಪರಿಸ್ಥಿತಿ ಮತ್ತು ಬ್ರಿಟಿಷ್ ಜನತೆಯ ಮನೋವೃತ್ತಿಯನ್ನು ಪಂಡಿತರು ಗಾಂಧಿಯವರಿಗೆ ಮನಬಿಚ್ಚಿ ತಿಳಿಸಿ ಅವರಿಂದ ದೇಶದ ಮತ್ತು ವಾಯವ್ಯ ಗಡಿನಾಡಿನ ಸ್ಥಿತಿಗಳನ್ನು ಅರಿತುಕೊಂಡಿರಬೇಕು.

ಸಂಸ್ಥಾನಿಕ ಪ್ರಜೆಗಳ ಸ್ವಾತಂತ್ರ್ಯ ಹೋರಾಟ

ಪಂಡಿತ ಜವಾಹಿರಲಾಲರು ಬೊಂಬಾ

THE UDIPI BANK LTD.
ನಿರಖು ಠೇವಣಾತಿ (ಡಿಪೋಜಿಟು)ಗಳು
ಸಾ. ಶೇ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.
ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ
ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100/-ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.
ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ
ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ಹಿಂದೀ ದೇಶೀಯ ಸಂಸ್ಥಾನಗಳ ನಿರಂಕುಶ ಆಳ್ವಿಕೆ ಮತ್ತು ಪ್ರಜೆಗಳ ಸ್ವಾತಂತ್ರ್ಯಾಕಾಂಕ್ಷೆಗಳನ್ನು ಅಡಗಿಸುವ ಕಠಿಣ ದಬ್ಬಾಳಿಕೆಯನ್ನು ಉಗ್ರವಾಗಿ ನಿಷೇಧಿಸಿ, ಪ್ರಜೆಗಳ ಸ್ವಾತಂತ್ರ್ಯ ಸಂರಕ್ಷೆಗೆ ಬೇಕಾದ ಸಹಾಯವಿತ್ತು ಆದರಲ್ಲ ಆಸಕ್ತಿಯಿಂದ ಭಾಗವಹಿಸುವ ನಿರ್ಧಾರ ಸೂಚಿಸಿರುವರು. ಲಂಡನಿನಲ್ಲೇ ಪಂಡಿತರು, ದೇಶೀಯ ಸಂಸ್ಥಾನಗಳ ಪ್ರಜೆಗಳ ಚಳವಳವನ್ನು ಪ್ರತಿಪಾದಿಸುವ ಪ್ರಯತ್ನ ಮಾಡಿತಿರುವಾಂಕೂರಿನ ದಬ್ಬಾಳಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಿದ್ದರು. ಇಂದೀಗ ದೇಶೀಯ ಸಂಸ್ಥಾನಗಳ ಪ್ರಜೆಗಳಲ್ಲೆಲ್ಲಾ ತೀವ್ರ ಅತೃಪ್ತಿ ನೆಲೆಗೊಂಡಿದೆ ಗಾಂಧಿಜಿ ಸರ್ದಾರ್ ವಲ್ಲಭಾಯಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರು ಈ ಕುರಿತು ಹೆಚ್ಚಿನ ಗಮನ ಕೊಡಹತ್ತಿರುತ್ತಾರೆ. ತಿರುವಾಂಕೂರಿನಲ್ಲಿ ದಬ್ಬಾಳಿಕೆಯು ನಿಲ್ಲಿಸಲ್ಪಟ್ಟಿರುವುದಾದರೂ ಪ್ರಜೆಗಳಿಗೆ ಜವಾಬ್ದಾರಿ ರಾಜ್ಯಭಾರವೀಯುವ ಪ್ರಶ್ನೆಯು ಕಡೆಗಣಿಸಲ್ಪಟ್ಟಿದೆ ಇದರಿಂದ ಪ್ರಜೆಗಳಲ್ಲಿ ತೀವ್ರ ಅತೃಪ್ತಿಯುಂಟಾಗಿದೆ. ತಿರುವಾಂಕೂರು ಸ್ಟೇಟ್ ಕಾಂಗ್ರೆಸ್ ಪ್ರತಿನಿಧಿಗಳು ಮುಂದಿನ ತಮ್ಮ ಧೋರಣೆಯ ಕುರಿತು ಗಾಂಧಿಜಿಯವರ ಸಲಹೆ ಪಡೆದು ಹಿಂತಿರುಗಿದ್ದಾರೆ. ಮೈಸೂರಿನ ವಿದುರಾಶ್ವತ್ಥ ಪ್ರಕರಣದ ಕುರಿತಾದ ವಿಚಾರಣಾ ಕಮಿಟಿಯ ವರದಿಯು ತೀರಾ ಅತೃಪ್ತಿಕರವಿದೆ. ಇನ್ನು ರಾಜಕೀಯ ಸುಧಾರಣಾ ಕಮಿಟಿಯ ವರದಿಯು ಗತಿಯೇನೆಂಬುದರ ಮೇಲೆ ಮೈಸೂರು ಸ್ಟೇಟ್ ಕಾಂಗ್ರೆಸಿನ ಮುಂದಿನ ಧೋರಣೆಯು ಹೊಂದಿಕೊಂಡಿದೆ. ಹೈದರಾಬಾದಿನಲ್ಲಿ ಸತ್ಯಾಗ್ರಹ ನಡೆದಿದೆ. ಈ ಕುರಿತು ವಿಚಾರಿಸಿ ವರದಿಯೊಪ್ಪಿಸಲು ಮಹಾತ್ಮರು ಸರೋಜಿನಿ ದೇವಿಯವರ ಪುತ್ರಿ ಶ್ರೀಮತಿ ಪದ್ಮಜನಾಯಡುವನ್ನು ಹೈದರಾಬಾದಿಗೆ ಕಳುಹಿಸಿರುತ್ತಾರೆ ರಾಜಕೋಟೆಯಲ್ಲಿ ಸರ್ದಾರ್ ವಲ್ಲಭಾಯಿಯವರ ಪ್ರತ್ಯಕ್ಷ ಪ್ರೋತ್ಸಾಹದಿಂದಲೇ ಸತ್ಯಾಗ್ರಹ ನಡೆದಿದೆ. ಕಾಶ್ಮೀರದ ಪ್ರಜೆಗಳು ಉದ್ವೇಗಗೊಂಡಿದ್ದಾರೆ. ಇತರ ಹಲವು ದೇಶೀಯ ಸಂಸ್ಥಾನಗಳ ಪ್ರಜೆಗಳೂ ತಮ್ಮ ಹಕ್ಕು ಬಾಧ್ಯತೆಗಳ ಕುರಿತು ತೀವ್ರಜಾಗ್ರತಿ ಹೊಂದುತ್ತಿದ್ದಾರೆ. ದೇಶೀಯ ರಾಜ ಮಹಾರಾಜರುಗಳೆಲ್ಲಾ ತಮ್ಮ ಪ್ರಜೆಗಳಿಗೆ ಪ್ರಜಾಜವಾಬ್ದಾರಿ ರಾಜ್ಯಭಾರವೀಯಬೇಕೆಂದು ಚಕ್ರವರ್ತಿ ಸರಕಾರವು ಯಾಕೆ ಬಲವಂತಗೊಳಿಸ ಬಾರದೋ ತಿಳಿಯದು! ಇವರಲ್ಲಿಯೂ ಬ್ರಿಟಿಷರ ಭೇದ ನೀತಿಯು ಒಡೆದು ಕಾಣುತ್ತದೆ.

ಚೇಂಬರ್ಲೇನರ ಕುಟಿಲನೀತಿ

ಚೇಂಬರ್ಲೆನರು ರಶ್ಯದ ಸೋವಿಯೆಟ್ ಸರಕಾರದ ಬದ್ಧದ್ವೇಷಿ. ಜರ್ಮನಿ ಜಪಾನ್ ಗಳ ಪ್ರಾಬಲ್ಯವು ಅಸಹನೀಯವಾಗಿದೆ ಅವರಿಗೆ. ಆಸ್ಟ್ರಿಯ ಮತ್ತು ಜೆಕೊಸ್ಲೋವೇಕಿಯಗಳನ್ನು ಹಿಟ್ಲರರು ನುಂಗುವಾಗ ಚೇಂಬರ್ಲೇನರು ಸಮ್ಮತಿಸಿದುದ ಕುಟಿಲವಾದುದೊಂದು ಉದ್ದೇಶದಿಂದ. ಅದರಿಂದ ಹಿಟ್ಲರರ ದೃಷ್ಟಿಯು ಪೂರ್ವದ ಕಡೆಗೆ ತಿರುಗಿ ಜರ್ಮನಿಗೂ ರಶ್ಯಕ್ಕೂ ಯುದ್ಧ ಆನಿವಾರ್ಯವಾಗುವದು. ಆಗ ಜಪಾನೂ ರಶ್ಯದ ಮೇಲೆ ಬೀಳುವುದು. ರಶ್ಯವು ನಿಪಾತವಾಗುವುದು. ಜರ್ಮನಿ ಜಪಾನುಗಳೂ ಯುದ್ಧದ ಹಾನಿಯಿಂದ ನೆಲಹಿಡಿದು ಇಂಗ್ಲೆಂಡಿನ ಅಧೀನವಾಗುವವು ಆಗ ತನ್ನ ಮನೋರಥ ಸಿದ್ಧಿಯಾಗುವುದೆಂದೇ ಬ್ರಿಟಿಷ್ ಪ್ರಧಾನ ಮಂತ್ರಿಗಳ ತಂತ್ರವೆಂದು ರಶ್ಯನ್ ಪತ್ರಿಕೆಗಳು ಟೀಕಿಸಿವೆ. ಆದರೆ ಹಿಟ್ಲರರು ಅಂತಹ ಮೂರ್ಖರೇನೂ ಇರುವುದಿಲ್ಲ.

ಫೆಸಿಸ್ಟರ ಲೋಕದಿಗ್ವಿಜಯದ ಪ್ಲೇನು

ಕಮ್ಯೂನಿಸ್ಟ್ ಇಂಟರ್ನೇಶನಲ್ ಎಂಬ ಕ್ರಾಂತಿಕಾರಕ ಅಂತರ ರಾಷ್ಟ್ರೀಯ ಸಂಘದ ಕಾರ್ಯದರ್ಶಿಯಾದ ಡಿಮಿಟ್ರೋರವರು, ಫೆಸಿಸ್ಟ್ ರಾಷ್ಟ್ರಗಳ ಲೋಕ ದಿಗ್ವಿಜಯದ ಪ್ಲೇನನ್ನು ಹೊರಗೆಡವಿರುವರು. ಅವರ ಅಭಿಪ್ರಾಯದ ಮೇರೆಗೆ, 1939ನೇ ಇಸ್ವಿಯ ಆರಂಭದಲ್ಲಿ ಹಂಗೇರಿಯ ಮೇಲೆ ಧಾಳಿನಡಿಸಲ್ಪಡುವುದು ಆ ಮೇಲೆ ಪೋಲಂಡನ್ನು ವಶಪಡಿಸಿಕೊಳ್ಳಲಾಗುವುದು 1940ರಲ್ಲಿ ರುಮೇನಿಯ ಮತ್ತು ಜುಗೋಸ್ಲಾವಿಯಗಳನ್ನು ಅಧೀನ ಪಡಿಸಿಕೊಳ್ಳಲಾಗುವುದು. 1941ರಲ್ಲಿ ಫ್ರಾನ್ಸ್, ಬೆಲ್ಜಿಯಮ್, ಹೋಲೆಂಡ್, ಡೆನ್ಮಾರ್ಕ್, ಮತ್ತು ಸ್ವಿಜರ್ಲೆಂಡುಗಳ ಮೇಲೆ ಧಾಳಿನಡಿಸಲಾಗುವುದು. 1941ರ ಕೊನೆಯಲ್ಲಿ ಸೋವಿಯೆಟ್ ರಶ್ಯದ ವಿರೋಧವಾಗಿ ಯುದ್ಧ ಹೂಡಲ್ಪಡುವುದು. ಜರ್ಮನ್ ನಾಜಿ ಸರಕಾರವು ಸ್ಪೈನಿನ ಹೆಚ್ಚಿನ ಭಾಗವನ್ನೂ ಫ್ರಾನ್ಸಿನ ದಕ್ಷಿಣ ಪ್ರದೇಶವನ್ನೂ ಟರ್ಕಿ, ಸೀರಿಯ, ಪೆಲೆಸ್ತಿನ ಮತ್ತು ಆಫ್ರಿಕದ ಕೆಲವು ಅಂಶಗಳನ್ನೂ ಉದಾರಬುದ್ಧಿಯಿಂದ ಇಟಲಿಗೆ ಕೊಡುವುದು ಪ್ರಜಾಸತ್ತಾತ್ಮಕ ರಾಷ್ಟ್ರಗಳು ಪ್ರಬಲ ಒಕ್ಕಟ್ಟಿನಿಂದ ಫೆಸಿಸ್ಟರನ್ನು ವಿರೋಧಿಸದಿದ್ದಲ್ಲಿ ಇಡೀ ಲೋಕದಲ್ಲಿ ಅವರ ಪ್ರಭಾವವೇ ಹೆಚ್ಚುವುದೆಂಬುದರಲ್ಲಿ ಸಂಶಯವೇ ಇಲ್ಲ

ಪ್ರಕೃತಿ ಪಾಠ
ಚೌಪದಿ

ಕಲಿ ಗಾನ ಸುಸ್ವರವ 'ಭ್ರಮರ'ಂಗಳಿಂದ
ಕಲೆಯುವ್ವದ ಕಲಿ ನೀನು 'ತರುಲ'ತೆಗಳಿಂದ।
ಕಲಿ ಸೋದರತ್ವವನು 'ಹಾಲು ಜಲ'ದಿಂದ
ಚಲಸೆಯನು ಕಲಿ ಜಗದಿ 'ಗಾಳಿಯೆಲೆ'ಯಿಂದ।
'ಮರದ ರೆಂಬೆ'ಗಳಿಂದ ಕಲಿ ವಿಧೇಯತೆಯ
'ಬದಲಾದ ಮರ' ನೋಡಿ ಕಲಿ ಧೈರ್ಯ ಸ್ಥೈರ್ಯ।
'ಧರಣಿಯನು' ನೋಡಿ ಕಲಿ ನಿಜಪ್ರಾಣ ಸೇವೆ
'ಚರ ಮೀನು'ಗಳಿಂದ ಕಲಿದೇಶಾಟನವ॥
'ಕುಸುಮ'ಂಗಳಿಂದ ಕಲಿ ಮುಗುಳು ನಗುವುದನು
ಲೇಸಾದ 'ಹೊಗೆ'ಯಿಂದ ಉತ್ಥಾನವನ್ನು॥
'ಕುಸುಮ ಮದರಂಗಿ'ಯಿಂ ಕಲಿ ಪ್ರಭಾವವನು
ಬೇಡಾದ 'ಮಳೆಹನಿಯಿಂ ಸೋದರತೆಯನ್ನು॥
ನೋಡು 'ಪ್ರಮಾಯ'ದಂ ಜೀವ ಪಥಕಾಗಿ
ನೋಡು ಸಾಹಸವನ್ನು 'ಇರುವೆಯಿಂ'ದಾಗಿ।
ನೋಡು 'ನವಯುಗವನ್ನು' ವಾರ್ತೆಗಳಿಗಾಗಿ
ಬೇಡು ವೆಂಕಟ 'ಕೃಷ್ಣನೊಳು ತಲೆಯ ಬಾಗೀ॥

ಪಿ. ಆರ್. ಉದ್ಯಾವರ,
ಮಯೂರ ಫಿಲ್ಮ್ಸ್, ಲಿಮಿಟೆಡ್, ಮದ್ರಾಸ್.

ಏನಂದಿರಿ!

ಕನ್ನಡದಲ್ಲಿ ಒಳ್ಳೇ ಪುಸ್ತಕಗಳಿಲ್ಲವೆಂದೆ? ಅದೇಕೆ?

ಅತ್ಯುತ್ತಮ ಐತಿಹಾಸಿಕ ಕಾದಂಬರಿಗಳೂ, ಚರಿತ್ರೆಗಳೂ, ರಸಭರಿತವಾದ ಸಾಮಾಜಿಕ-ಪೌರಾಣಿಕ ಕಥ-ಕಾದಂಬರಿಗಳೂ, ಶ್ರೇಷ್ಠತರಗತಿಯ ಹಾಗೂ ಹೆಸರುವಾಸಿಗಳಾದ ಪತ್ತೇದಾರೀ ಕಥೆಗಳೂ ಶ್ರೀ ಶೇಷಾಚಲ ಗ್ರಂಥಮಾಲೆಯಲ್ಲಿ ಕಳೆದ ೨೦ ವರ್ಷಗಳಿಂದಲೂ ಕ್ರಮಶಃ ಪ್ರಕಟವಾಗುತ್ತಲಿದ್ದು ಅಂಥ ೧೦೦-೧೫೦ ಮನೋಹರ ಪುಸ್ತಕಗಳು ಈಗಾಗಲೇ ಹೊರಟು ಕನ್ನಡ ವಾಚಕರನ್ನು ತೃಪ್ತಿಗೊಳಿಸಿರುತ್ತವೆ. ಹಾಗು ಪ್ರತಿವರ್ಷವೂ ಈ ಗ್ರಂಥಮಾಲೆಯ ದ್ವಾರ ೩-೪ ವಾಚನೀಯ ಹೊಸ ಪುಸ್ತಕಗಳು ತಪ್ಪದೆ ಪ್ರಕಟವಾಗುತ್ತಲಿವೆ. ಗ್ರಂಥಮಾಲೆಯ ಖಾಯಂ ಗ್ರಾಹಕರಿಗೆ **ಬೆಲೆ ಕಡಿಮೆ**

ಅಪೇಕ್ಷಿತರು: **ಶ್ರೀ ಶೇಷಾಚಲ ಪ್ರೆಸ್,**
ಪೋ: ಆನಂದವನ (ಹಾವೇರಿ) ಜಿ. ಧಾರವಾಡ

ಈ ಅಡ್ರೆಸ್ಸಿಗೆ ಬರೆಯಬೇಕು. ಕ್ಯಾಟಲಾಗ್ ಪುಕ್ಕಟೆ. ದೇ. ಭ. ಬ್ಯಾರಿಸ್ಟರ್ ಸಾವರಕರರಿಂದ ಬರೆಯಲ್ಪಟ್ಟ ರಮ್ಯ ಭೀಷಣ "**ಕಾಳೇಪಾಣಿ** ಪುಸ್ತಕವು ಕರಿನೀರು"ಎಂದು ಕನ್ನಡದಲ್ಲಿ ನಮ್ಮಿಂದ ಬೇಗನೇ ಪ್ರಕಟವಾಗುವುದು

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ. 2-4-0.

ಸಣ್ಣ ಸುಂದರ, ಆಕಾರಗಟ್ಟಿ ಮುಟ್ಟಾದ ಮತಿಸರಿ ಸರಿಯಾದ ಸಮಯ ತೋರಿಸು ವಂಥದು ೫ ವರ್ಷದ ಗ್ಯಾರಂಟಿ ದಂಡಾಕೃತಿಯ ದೀರ್ಘ ಚತುಷ್ಕೋಣಾಕೃತಿಯು ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮಪರಿದ್ದಕ್ಕೆ 2-10-0, ಅತ್ಯುತ್ತಮಪಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮಪಾದುದಕ್ಕೆ ರೂ. 4-8-0, ಚಿತ್ರದಲ್ಲಿತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0-0, ಜುವೆಲಿರುವ ರೋಲ್ಡ್ ಗೋಲ್ಡಿಗೆ ರೂ. 8-0-0, ಸರ್ವೋತ್ತಮಪಾದುದಕ್ಕೆ ರೂ. 10-0-0 ಟಿ. ಪಿ. ಪ್ರತ್ಯೇಕ.

ಎಚ್. ಡಾವಿದ್ ಅಂಡ್ ಕೊ.
ಪೊ. ಬಾಕ್ಸ್ 11424 ಕಲ್ಕತ್ತಾ.

H. David & Co.
Post Box No. 11424, Calcutta

ತಾರಾ ವಿಹಾರ ಗ್ರಂಥಮಾಲಾ

ಅಂತರ್ ರಾಷ್ಟ್ರೀಯ ಪ್ರಸಿದ್ಧಿಯನ್ನು ಪಡೆದ ಪಂಡಿತ ತಾರಾನಾಥರ ಹಾಗೂ ಇವರ ಸುಪ್ರಸಿದ್ಧ ಸಾಹಿತಿಗಳ ಪ್ರಬೋಧನಾತ್ಮಕ ಕ್ರಾಂತಿಕಾರಕ ವಿಚಾರಗಳು ಗ್ರಂಥರೂಪವಾಗಿ ಪ್ರಕಟವಾಗುವವು. ೧ ವರ್ಷದಲ್ಲಿ ತಲೆ-ಎದೆಗಳನ್ನರಳಿಸುವ ೪೦. ಗ್ರಂಥಗಳು ಹೊರಡುವವು. ಅಲ್ಲದೆ ಒಂದು ವಿಶೇಷಾಂಕವು ಉಚಿತವಾಗಿ ಕೊಡಲಾಗುವುದು.

ಚಂದಾ: **ಒಂದೇ ರೂಪಾಯಿ ಮಾತ್ರ.**

ಕರ್ನಾಟಕದ ಮೂಲೆಮೂಲೆಗೂ ಬೇಕಾದ ಪತ್ರ ವ್ಯವಹಾರಗಳಿಗೆ ಒಳ್ಳೇ ಸುಸಂಧಿ.

ವಿಶೇಷ ಮಾಹಿತಿಗೆ ಬರೆಯಿರಿ
ವಿಶೇಷ ಕಾರಣಗಳಿಂದ ವಿ. ಪಿ. ಕಳುಹಿಸಲಾಗುವುದಿಲ್ಲ

ಮ್ಯಾನೇಜರ್

ತಾರಾ ವಿಹಾರ ಕಾರ್ಯಾಲಯ,
ಪ್ರೇಮಾಯತನ ಆಶ್ರಮ, ತುಂಗಭದ್ರಾ

ನಮ್ಮ ಮದ್ರಾಸಿನ ಏಜಂಟರು—
ಶ್ರೀ. ವಿ. ಲಕ್ಷ್ಮಣರಾವ್,
ಚೈನಾ ಬಜಾರ್, ಮದರಾಸು.

THE Bombay Life
ASSURANCE CO., LTD.
ಸ್ಥಾಪನೆ] [1908

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:

(1) ರಥಬೀದಿ, **ಮಂಗಳೂರು**
(2) ಪುತಿಯಾರ, **ಕಲ್ಲಿಕೋಟೆ.**
(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು. (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, **ಬೊಂಬಾಯಿ** (ಫೋ. ನಂ. 26314)

ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು.

(6) ಪಟ್ಟಾಂಬಿ, **ದ. ಮಲಬಾರ್.**
(7) ಸೆಂಟ್ರಲ್ ಸ್ಟೇಶನ್ ರೋಡ್, **ತಿರುವಾಂಕೂರು**

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘಟಿಕರಿಸಿಕೊಂಡಿದೆ)

ರಿಜಿಸ್ಟ್ರಿಯಾದ ಆಫೀಸು: **ಉಡುಪಿ.**

ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ದರಗತಿಯ ವಿಮಾಸಂಸ್ಥೆ.

ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	.... ರೂ.	1,40,08,725
ಪ್ರೀಮಿಯಂ ಆದಾಯ ಮಿಕ್ಕಿದುದು	.... „	30,00,000
ಒಟ್ಟು ಮೂಲ ಮಿಕ್ಕಿದುದು	.... „	1,00,00,000
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	„	50,00,000

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಒದಗುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ. **ಆಕರ್ಷಕ ಪ್ರತಿಫಲ.**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

ಈ ವಾರದ ಕಥೆ

ನಾನು-ಕತೆಗಾರ

(ಕಲ್ಪನೆಯ ಚಿತ್ರ)

ಬರೆದವರು—ಶ್ರೀಪ್ರಮೋದಕುಮಾರ.

ಇಂದಿರೆ ಕೇಳಿದಳು—"ಏನದು?....ನೀವು ಬರೆದುದು? ಎಂದು. ನಾನು ತೋರಿಸಲಿಲ್ಲ. ಕಾಗದವನ್ನು ಹರಿದೊಗೆದೆನು ಕಿಟಕಿಯ ಹೊರಗೆ. ಅವಳಿಗದು ಸಿಟ್ಟುಗೆಬ್ಬಿಸಿತೇನೋ! ಕೈಯಲ್ಲಿನ್ನ ಪೆನ್ಸಿಲು ಇದ್ದುದನ್ನು ಇಸುಕೊಂಡಳು,—'ಮಾತಿಗಿಲ್ಲ.......ಬರೆವುದು—ಏನೂ.......ಹೇಳುವುದೂ ಇಲ್ಲ.......ಆರಿಗೆ... ....ಪತ್ರ ಬರೀತೀಯಾ.......?' ಎಂದೆನ್ನುತ್ತ.

ವಾಚನಾಗೃಹದಲ್ಲಿ ಒಂಟಿಯಾಗಿ, ಕುರ್ಚಿಯೊಂದರಲ್ಲಿ ಒರಗಿ ಬಹಳವಾಗಿ ಯೋಚಿಸುತ್ತಿದ್ದೆ—'ಆವ ವಿಷಯ?' ಎಂದು. ಮೊತ್ತಮೊದಲು, ಕೈಲೊಂದು ಪೆನ್ಸಿಲು ತೆಗೆದುಕೊಂಡು ಎದುರಿಗೆ, ಮೇಜಿನ ಮೇಲೆ-ಕೆಲಹಾಳೆಕಾಗದಗಳನ್ನಿರಿಸಿದೆನು. ಇದುವೆ ಇನ್ನೂ ವಿಚಾರ-'ಅದಾವ ಕತೆ.......?' ಅಂತ. ಒಮ್ಮೆ ನನ್ನ ಸುತ್ತ ಮುತ್ತಲಿನ ವಸತಿಯರ ವಿಷಯ ನೆನೆದೆ. ಅವರಲ್ಲಿ ಆಗಾಗ ಒಂದಲ್ಲದಿದ್ದರೆ ಒಂದು ಸಂಭವಿಸಿಯೇ ತೀರುತ್ತದೆ. ಅದರೆ, ನನ್ನ ಮಿತ್ರನೊಬ್ಬ-'ಶ್ರೀಪತಿ! ನೀವಂದು ಬರೆದ 'ತುಂಕುರು' ಕತೆಯ ಆ ಹುಡುಗಿಯಾರು? ಅವಳ ನಾಯಕನವನಾರು?....ನೀವು ಯಾರನ್ನು ಸಂಬಂಧಿಸಿ ಬರೆದಿರಿ' ಎಂದನು. ನಾನೊಮ್ಮೆ ತಬ್ಬಿಬ್ಬಾದೆ, ಅದಕ್ಕೆ. ಎಂದರೆ ಎಲ್ಲವೂ ಸತ್ಯ ಅವನಂದುದು ನೆರೆಯ ನಿರುಪಮೆಯನ್ನು ನಾನೇ ಬಹಳವಾಗಿ ಪ್ರೀತಿಸುತ್ತಿದ್ದೆ. ಆದರೆ ಅದು....ಆಗಲಿಲ್ಲ...! ಅವಳು ಲಗ್ನವಾಗಿ ಬೇರೆ ಹೋದಳು ಈ ಊರು ಬಿಟ್ಟು. ಅವಳಲ್ಲಿ ನಟ್ಟುಹೋದ ಆ ಪ್ರೇಮದ ಪ್ರೇರಣೆಯಿಂದಲೇ ಅದನ್ನು ನಾನಂದು ಬರೆದುದು. ನಾನಂದು ಅವಳ ಪ್ರೀತಿ ಸಂಪಾದನೆಗಾಗಿ ಎಸಗಿದ ಕೃತ್ರಿಮ ಥಟ್ಟನೆ ನೆನಪಾದುದೂ, ಮತ್ತು ಒಂದು ಬಗೆಯಿಂದ ಸಹಜವಾಗಿ ಚಿತ್ರಿಸಲು ಸಾಧ್ಯವಾಯಿತೆನಗೆ—ಅದರಲ್ಲಿಯ ಬೇರೆ ಕೆಲಭಾವ-ರೋಮಾಂಚಕ ಘಟನೆ-ನಾಯಕಿಯ ಹೃದಯದ ನೆಲೆ-ನಾಯಕನ ಸಹಜ ಭಾವನೆ-ಇತ್ಯಾದಿ. ನಿಷ್ಕಲ್ಮಷ(?)ವಾದ ಹೃದಯದ ಉದಾತ್ತ ಭಾವಗಳು ಕಲ್ಪನೆಯ ಹಾವಭಾವಗಳೊಂದಿಗೆ ಬೆರಕೆಗೊಂಡು ಕತೆಯ ಸೊಬಗನ್ನು ಮಡಿಯಾಗಿ ಗಣಿಸಿ ಸೊಗಯಿಸಿತು, ವಾಚಕರಿಗೆ.

'ನೀಲಾಂಬರ'ದಲ್ಲಿ ಅಚ್ಚಾಗಿದ್ದಿತದು. ನೀವದನ್ನು ಓದಬೇಕಿತ್ತು. ಆದರೆ ಮಾಡಲೇನು? ಆ ಎನ್ನ ಸಲ್ಲತೆಯು 'ನೀಲಾಂಬರದ ಆವ ಸಂಚಿಕೆಯಲ್ಲಿ ಪ್ರಕಟವಾಗಿತ್ತೋ ಆ ಸಂಚಿಕೆಯ ಒಂದು ಪ್ರತಿಯೂ ಉಳಿಯದಂತೆ ಮಾರಾಟವಾಗಿತ್ತಂತೆ! ಇನ್ನು ನಿಮಗದು ಎಲ್ಲಿಯೂ ಸಿಗುವಂತಿಲ್ಲ. ಅಂದರೆ ಇಹಲೋಕದವರೆಲ್ಲರೂ ಅದನ್ನು ಓದಿದ ಮೇಲೆ ಅದರಿಂದ ಬಹಳ ಪುಣ್ಯ ಸುಖ ಸಂಪಾದಿಸಿದರು. ಅಲ್ಲದೆ ಪರದಲ್ಲಿರುವ ತಮ್ಮ ಹಿರಿಯರೂ ಓದಲೆಂದು ಅಗ್ನಿದ್ವಾರಾ ಅದನ್ನು ಪರಲೋಕಕ್ಕೆ ಕಳುಹಿಸಿಬಿಟ್ಟರು. (ಆದರಿಂದ ನನಗೆ ನಷ್ಟವಾಗಲಿಲ್ಲ....ಲಾಭವೇ....ಮೇಲೆ ೨೦೦೦ರೂ. ಕೊಟ್ಟಿರುತ್ತೇನೆ ಅವರ ಅಂಬೋಣದಂತೆ........(?)....!

ಅದೇ ಅಂದು ನಿರುಪಮೆಯ ಕತೆಯಾಯಿತು. ಇನ್ನು ಆವುದನ್ನು ಬರೆಯಲಿ? ಅದುವೇ ಕಿರುಬಿಲಗಳಿಂದ ಒಂದೇ ಸವನೆ ಹರಿವ ಇರುವೆಯ ಸಾಲುಗಳಂತೆ ಬಂದುದು, ವಿಚಾರ ಸರಣಿ. ಅದ ತುಸು ತಡೆಯೋಣವೆಂದರೆ ದಾರಿಕಡಿದ ಸಾಲು ಇರುವೆಗಳಂತಾಗುತ್ತವೆ, ಮೇಲೆ ಮಾಯವಾಗುತ್ತವೆ, ಚದರಿ. ಇಷ್ಟರಲ್ಲಿ, ಸುಮಾರು ಹೊತ್ತು ವ್ಯರ್ಥವಾಗಿಹೋಯಿತು. ಪೆನ್ಸಿಲನ್ನು ಕೆಳಗಿಟ್ಟು, ತುಸು ಮೇಲೆಕೆಳಗೆ ನೋಡುವುದಾಯಿತು

ಸಿಗರೇಟೊಂದನ್ನು ಉರಿಸಿ, ಸೇದತೊಡಗಿದೆ. ಅದರ ಧೂಮ್ರವನ್ನು ಸುರುಳಿಸುರುಳಿಯಾಗಿ ಬಾಯಿಂದ ಹೊರಬಿಟ್ಟು ಹರಿವ ವೈಖರಿಯನ್ನು ನೋಡುತ್ತ ಕುಳಿತೆ. "ನಾನೊಬ್ಬ ಕತೆಗಾರ" ಎಂದಂತೆ ಎಂದು ಬರೆದಂತೆ, ಭಾಸವಾಯಿತದರ ಕಡೆಯಿಂದ.

ಏಕಾಗಬಾರದು? ನೆರೆಯ ಮಾಧವನು ಬರೆಯುತ್ತಾನೆ-ಪತ್ರಿಕೆಗಳಿಗೆ, ಕತೆಗಳನ್ನ! ಆಗಾಗ 'ಶ್ರೀ ಮಾಧವ-ದೇವರಾವ್ ಬರೆದುದು' ಎಂದು ಕವನಗಳೂ ಪ್ರಬಂಧಗಳೂ ಕಂಡುಬರುತ್ತಿವೆ....! ನಾನೂ ಏಕೆ ಬರೆಯಬಾರದು....? ನನಗಂತದೊಂದು ಬಗೆಯ ಉತ್ಸಾಹವೂ ಸ್ಫೂರ್ತಿಯೂ ತಾನಾಗಿಯೇ ಮೂರ್ತೀಭವಿಸಿಕೆನ್ನಲ್ಲಿ. ಆದರೆ "ಕತೆಗಾರ"ನಾರು? ನಾನು ಕಂಡಿಲ್ಲ, ಈ ತನಕ. ಕತೆಗಾರನು ಹೇಗಿರಬೇಕು? ಕತೆಗಳೊಂದಿಗೆ ಬರುವ ಚಿತ್ರಗಳಂತೆಯೆ....? ಹಾಗಾದರೆ ನಾನು ಕತೆಗಾರನೆಂತಾಗಬೇಕು-? ಪತ್ರಿಕಾ ಸಂಪಾದಕನು-"....... ನೀವೊಬ್ಬ ಚತುರ ಕತೆಗಾರರಿರುವಿರಿ. ನಿಮ್ಮ ಪ್ರಥಮ ಪ್ರಯತ್ನವಾದ 'ತುಂತುರು' ಶ್ಲಾಘ್ಯವಾಗಿದೆ........ಜಾಣ್ಮೆಯು ಒಡೆದು ಕಾಣುತ್ತಿದೆ......ಅಂತೂ ನಿಮ್ಮ ಶ್ರೇಯಸ್ಸಿಗಾಗಿ ಪ್ರಯತ್ನಿಸುವೆವು. ಸಂಪಾದಕ'ನೀಲಾಂಬರ' ಎಂದೇಕೆ ಬರೆದಿದ್ದಾನೆ? ಹಾಗಾದರೆ ನಾನೂ!ಕತೆಗಾರನೇ! ಇನ್ನು 'ಶ್ರೀಪತಿ' (ನನ್ನ ಹೆಸರು ರಮಾಪತಿಯೇ ಆದರೂ ಶ್ರೀ-ಪತಿಯೆಂದೇ ಕರೆಯಿಸಲ್ಪಡುತ್ತಿದ್ದೆನು ಎಂದರೆ ನನ್ನ ಮುಪ್ಪಿನ ಅಜ್ಜಿಗೆ "ರಮಾ" ಎಂದು ಹೇಳಬರುತ್ತಿಲ್ಲ...) ಬರೆದುದು? ಅಂತ-ಒಂದಿಗೆ ಭಾವಚಿತ್ರವೂ ಕೂಡಿ.

ಈ ವಿಚಾರ ಬಂದುದೇ ತಡ. ಕತೆಬರೆವುದೊತ್ತಟ್ಟಿಗಾಯಿತು. ಏನೇ ಇರಲಿ, ಸಂಪಾದಕನಿಗೆನ್ನ ಭಾವಚಿತ್ರವನ್ನು ಕೊಟ್ಟೇ ತೀರಬೇಕು—ಎಂಬ ನಿಶ್ಚಯದಿಂದ ಕುಳಿತೆ. ಅದರಲ್ಲಿ ಆವ ಪೋಸ್‌ನಲ್ಲಿ ಕುಳ್ಳಿರಬೇಕೆಂಬುದೇ ವಿಚಾರ. ಒರಗು ಕುರ್ಚಿಯಲ್ಲೊಮ್ಮೆ ಡೌಲಿನಿಂದ ಕಾಲಿನಮೇಲೆ ಕಾಲು ಹಾಕಿಕೊಂಡು ಅದೊಂದು ಸಿಟ್ಟಿನ ನೋಟದಿಂದ ಕೆಳದಿಟ್ಟಿಯ ವಿಚಾರ ಮಗ್ನನಾದನ ಬಗೆಯ, ಮೇಲೊಂದು ಶಿಸ್ತಿನ ಚಿತ್ರ,.....ಎಂದು ಒಮ್ಮೆ ಕುಳಿತು ಎದ್ದು—ಕುಳಿತು ಎದ್ದು ನಾನಾಬಗೆಯ ಅಂಗವಿಕಾರಗಳಾದುವು......

ಇದಾಗುವಷ್ಟರಲ್ಲಿಯೇ ಅತ್ತ ಸುಂದರಿ ಸುದತೀಮಣಿ-ಬಾಲೆ-ಇಂದಿರೆ ಕೋಣೆಯೊಳಕ್ಕೆ ಬಂದಳು. ಎದುರಿಗೆ ನಿಂತು ನೋಡಿದಳು ಕಿರುನಗೆಯ ಬೀರಿ ಆಗ ಹೊಳೆಯಿತೆನಗೆ ಕಥಾಭಾಗಕ್ಕೆ ಅಡಿಕಟ್ಟಿನ ಮೂಲ. ಕೂಡಲೇ ಮತ್ತೊಮ್ಮೆ ಪೆನ್ಸಿಲು ಎತ್ತಿಕೊಂಡು ಉತ್ಸಾಹದಿಂದ ಬರೆಯತೊಡಗಿದೆ. ಏನನ್ನು...? ಇಂದಿರೆಯ ಚಿತ್ರ-ಅವಳ ಮೊಗ, ಕಣ್ಣು, ಮೂಗು, ಚೆಂದುಟಿ, ತೋಳು, ತೊಡೆ ಇತ್ಯಾದಿಗಳನ್ನು ಬಗೆಬಗೆಯ ಉಪಮೆಗಳಿಂದ ಬಣ್ಣಿಸಿ. ಕಡೆಗೆ ಒಂದಾಗಿ ಅವಳ ಸೌಂದರ್ಯವನ್ನು ಅನುಪಮವೆಂದು ಬಿಟ್ಟು, ಇನ್ನೂ ಮುಂದುವರಿಯಲಿದ್ದೆ. ಇಲ್ಲಿಯೂ ಬಂತು ತೊಡಕು. ಸಂಪಾದಕ ಬರೆದಿದ್ದ—ಸ್ತ್ರೀವರ್ಣನೆ ಕೂಡದು, ಸುಧಾಂಕರಿಕದು ಒಗ್ಗುವುದಿಲ್ಲ. ಸರಳವಾಗಿರಬೇಕು—ಎಲ್ಲರ ಮನದೊಲವಿಗೆ ಪಾತ್ರವಾಗಬೇಕು....ಎಂದ ಮಾತು ನೆನಪಿಗೆ ಬಂತು. ಅವನೊಬ್ಬ ಕವಿಯೆಂದ ಮಾತಿಗೆ ಮಾನ್ಯತೆಯಿತ್ತು, ದಾಗಿ—

ಅಳಿಯಲರಂ ಗಿಳಿಪಣ್ಣಂ।
ತಳಿರಂ ಪಿಕನೊಲ್ದು ತೆರದೆ ಕುಜದೊಳ್
ಕೃತಿಯೋ ॥
ಳ್ಳಳಸಿತ ಪದಮಂ ಅರ್ಥಮ
ವಳಂಕೃತಿಪ್ರಹಿತಭಾವಮಂ ಕೆಲರೊ
ಲ್ವರ್ ॥........

ಎಂದಾದರೆ ಉಳಿದವರ ಒಲುಮೆ ಯಾವೆಡೆ ಮತ್ತು ಯಾವುದರಲ್ಲಿ—? ಎಂದು ಬಗೆದು ಸುಮ್ಮನೆ ಕುಳಿತೆ, ಈ ಮೂಢಮತಿಗೆ ಅವುದೂ ಬಗೆಹರಿಯದೇ ಇದ್ದುದು ಆಶ್ಚರ್ಯವಲ್ಲ ರಾಯನ ಕುದುರೆ ಕತ್ತೆಯಾದಂತಿದೆ ಇದು. ಅಲ್ಲಿಂದೊಮ್ಮೆ ಎದ್ದು ಹೊರಗಡೆ ಕೊಂಚ ತಿರುಗಾಡಿ ಬರೋಣವೇ ಅಂತ ಎದ್ದೆ, ಇಂದಿರೆ ಇನ್ನೂ ಅಲ್ಲಿಯೇ ನಿಂತಿದ್ದಳು—ಕಲ್ಲುಕಂಬದಂತೆ, ತಡೆದು ನಿಲ್ಲಿಸಿದಳೆನ್ನ. ನಾನು ಅಲ್ಲೇ ಕುಳಿತುಕೊಂಡೆ, ಚಮತ್ಕಾರವಾಗಿ ನುಡಿದಳವಳು—"ಏನದು... ನೀವು ಬರೆದುದು?" ಎಂದು ನಾನು ತೋರಿಸಲಿಲ್ಲ, ಕಾಗದವನ್ನು ಹರಿದೊಗದೆನು ಕಿಟಕಿಯ ಹೊರಗೆ. ಅವಳಿಗದು ಸಿಟ್ಟುಗೆಬ್ಬಿಸಿತೇನೋ! ಕೈಯಲ್ಲಿನ್ನ ಪೆನ್ಸಿಲು ಇದ್ದುದನ್ನು ಇಸುಕೊಂಡಳು—ಮಾತಿಗಿಲ್ಲ...ಬರೆವುದು-ಏನೂ... ಹೇಳುವುದೂ ಇಲ್ಲ.... ...ಆರಿಗೆ ಪತ್ರ ಬರಿಯುತೀಯಾ........?" ಎಂದೆನ್ನುತ್ತ.

ನನಗೆ ನಗೆಬಂತು. ಏಕೆಂದು ಇನ್ನೂ ಅರಿವಿಲ್ಲ. ಅವಳೂ ನಕ್ಕಳು. ನಮ್ಮಿಬ್ಬರ ಹೃದಯಗಳೂ ಪರಸ್ಪರ ಸಮ್ಮಿಲನವಾದುವು. ನಗೆಯು ವಿಕಾಸಗೊಂಡು ಪ್ರೀತಿಯ ಮುದ್ದಿನಿಂದ ಕೊನೆಗೊಂಡಿತು. ಆಮೇಲೆ ಅವಳ ಸಿಟ್ಟು....? ನಗುತ್ತ ನಲಿಯುತ್ತ ಕ್ಷಣದಲ್ಲಿ ಅಲ್ಲಿಂದ ಬೇರೆಯಾದಳವಳು.

ಕೈ ಬರಿದಾಗಿತ್ತು. ಮೇಜಿನ ಮೇಲೆ ಕಾಗದ ಹಾಳೆಗಳೂ ಹಾಗೇ ಉಳಿದಿದ್ದುವು. ನಂತರ 'ಡ್ರೋವರಿ'ನಿಂದ 'ಪೆನ್' ತೆಗೆದೆ. ಆಗತಾನೇ ನಡೆದ ಕತೆ ಬರೆಯಲೋ ಅಂತ—'ಒಂದು ಸುಪ್ರಭಾತ ತಂಗಾಳಿ ಬೀಸುತ್ತಿರಲು ನಾನು—' ಎಂದು ಬರೆಯ ಪ್ರಾರಂಭಿಸಿದ್ದುದರಲ್ಲಿ 'ನಾನು' ಎಂದು ಬರೆದಾಗ 'ನಾ' ಅಂತ ಬರೆಯಲು ಪೆನ್ನಿನಿಂದ ಒಂದು ತಟುಕು ಶಾಯಿ ಉರುಳಿತು, ಕಾಗದ ಕೆಟ್ಟಿತು. ಸರಾಗವಾಗಿ ಹರಿಯುತ್ತಲಿದ್ದ ಲೇಖನಿ ಥಟ್ಟನೆ ತಡೆದುದು ಅನರ್ಥವಾಯಿತು,....ಮುಂದೆ ಭಾವವೇ ಬರಲಿಲ್ಲ.—

'ಹಾಗಾದರೆ ನಿಮ್ಮಂತಹ ಸುಪ್ರಸಿದ್ಧ ಕತೆಗಾರರು ಅಂತಹ ಪೇನುಗಳನ್ನೇಕೆ ಕಟ್ಟಿಕೊಂಡಿದ್ದೀರಿ ಸಂಗಡ?' ಎಂದರೆ, ನನ್ನ ಗೆಳೆಯರಿಗೆ ನನ್ನದೊಂದ. ಉತ್ತರವಿತ್ತು—'ಹಿಂದಿನ ಜನ್ಮದಲ್ಲಿ ಸಹೋದರರಾಗಿದ್ದೆವೋ ಎಂಬ ಭಾವದಿಂದ ಪರಸ್ಪರ ಸ್ನೇಹದಿಂದ ಬೆರೆತು ಬಹಳವಾಗಿ ಪ್ರೀತಿಸುತ್ತಿದ್ದ ಆ ನನ್ನ ಗೆಳೆಯ, ಸುಬ್ಬಯ್ಯನಿಂದ ಪಡೆದ ಅತ್ಯುತ್ತಮವಾದ ಪೆನ್ನಿದು. ಅವನ ನೆನಹಿಗಾಗಿ ಅವನಿಂದ ಕೊಡಲ್ಪಟ್ಟುದೆಂದು

ಬೇಕಾಗಿದ್ದಾರೆ

ಜಗತ್ಪ್ರಸಿದ್ಧವಾದ ಯುರೋಪಿಯನ್ ವಿಮಾ ಕಂಪೆನಿಗೆ ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆಗಳ ಪ್ರತಿ ಒಂದು ತಾಲೂಕುಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಯೋಗ್ಯ ರೀತಿಯಿಂದ ಕೆಲಸ ಮಾಡುವವನು ತಿಂಗಳಿಗೆ ರೂಪಾಯಿ 100ರಂತೆ ಸಂಪಾದನೆ ಮಾಡಬಹುದು.

ವಿಶೇಷ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ಯಮ್. ಪಾಂಡ್ಯ, ಬಿ.ಯಸ್ಸಿ.
ಸೆಕ್ರೆಟರಿ,
ಅಲ್ಲಿಯಾನ್ಸ್ ಉಂಡ್ ಸ್ಟುಟ್‌ಗಾರ್ಟರ್
ಲೈಫ್ ಇನ್ಶ್ಯೂರೆನ್ಸ್ ಬ್ಯಾಂಕ್, ಲಿಮಿಟೆಡ್,
ಪೋಸ್ಟ್ ಬಾಕ್ಸ್ ನಂ. 451,
ಮುಂಬಾಯಿ.

C. M. PANDYA, B. Sc.
SECRETARY,
ALLIANZ UND STUTTGARTER
LIFE INSURANCE BANK LIMITED
Post Box No. 451
BOMBAY.

ಹೆಸರು ಕೆತ್ತಿಸಿದ್ದೆನು. (ಅದರ ಅರ್ಧ ಹಣ ನಾನೇ ಕೊಡುವುದು ಪದ್ಧತಿ. ನಾವಿಬ್ಬರೂ ಪ್ರತಿಯೊಂದನ್ನೂ ಹಾಗೆ....) ಅಲ್ಲದೆ ಅದನ್ನು ಎನಗಿತ್ತಾಗ ಎಲ್ಲರಿಗೂ ತಿಳಿವಂತೆ ನೆರೆದ ಸಭೆಯೊಂದರಲ್ಲಿ 'ಶ್ರೀ....ರಿಗೆ.... ಪರವಾಗಿ....ರಿಂದ....ಗೆ ಬಹುಮಾನ' ಎಂದು ಹೇಳಿಸಿ ಕೊಡಿಸಿದ್ದನು. ಅವನಿಗೆ ಅದರಿಂದ ಸಂತೋಷ. ಅದನ್ನು ಎನ್ನಲ್ಲಿ ಬಂದು ಆಗಾಗ ಕೇಳುವನು 'ಪೇನು' ಅಂತ ಅದಕ್ಕಾಗಿ, ಅವನ ಮನಃಸಂತುಷ್ಟಿಗಾಗಿ ಮಾತ್ರ, ನಾನಿಟ್ಟುಕೊಂಡುದು.

ಪೇನು ಕೈ ತಪ್ಪಿತು, ಮೇಜಿನ ಮೇಲೆ ಉರುಳಿಕೊಂಡಿತು—ವಿಶ್ರಾಂತಿಗಾಗಿ? ಅವಶ್ಯವೂ ಇರಲಿಲ್ಲ ಇಂದಿರೆ ಇನ್ನೂ ನನ್ನ ಹಿಂದೆ ಬಂದಿದ್ದಳು. ನನ್ನ ತಲೆಯನ್ನು ತನ್ನೆರಡು ಕೋಮಲ ಕೈಗಳಿಂದ ಹಿಂದಕ್ಕೆ ಬಗ್ಗಿಸಿ ಮುದ್ದಿಟ್ಟಳು (ಕತೆಗಾರರು ಆವಾಗಲೂ ಹೀಗೆ. ಅಂದರೆ ಮುತ್ತುಗಳು ಬೆಲೆ ಕೊಡದೆನೆಯೇ ಸಿಗುತ್ತವೆ.) ಹೊರ ಓಡಿದಳು.

ಕತೆ ಬರೆವುದು ಅಲ್ಲಿಯೇ ಉಳಿಯಿತು. ಇಂದಿರೆಯು ಮೊದಲಿನಂತೆಯೇ ಬಂದೇ ಬಂದಿರುವಳೆಂದು ಕಣ್ಣು ಮುಚ್ಚಿಕೊಂಡು ತುಸು ಹೊತ್ತು ಹಾಗೇ ಕುಳಿತುಕೊಂಡೆನು. ಅಲ್ಲಿಯೇ ಎನಗೆ ಜೊಂಪು ಹಿಡಿಯಿತು.

0 0 0 0

ಮಂಚದ ಮೇಲೆ ನನ್ನನ್ನು ಮಲಗಿಸಿದ್ದರು. ಎನ್ನ ತಲೆಗೆ ಬಿಗಿಯಾಗಿ ಬಟ್ಟೆ ಸುತ್ತಿದ್ದರು ಇಂದಿರೆ, ಎನ್ನ ಭಾವೀ ಸತಿ, ಬಳಿಬಂದು ಕಂಪಿಸುವಧರದಿಂದ "ತುಂತುರು...." ಎಂದಳು. ಎನಗೆ ಆಶ್ಚರ್ಯವಾಯಿತು 'ತುಂತುರು', ನಾನು ಬರೆದ ಕತೆಯಲ್ಲಿ ಭಾವೀ ಸೊಗದ ನಾಡಿನ ಸುಂದರ ತೋಟದೊಂದೆಡೆಯಲ್ಲಿ ವಿಹರಿಸುತ್ತಲಿದ್ದ ನಿರುಪಮೆಯ ಬೆನ್ನಹತ್ತಿ ಅವಳ ಪ್ರೇಮ ಯಾಚನೆಯ ವೇಳೆ, ವಿದ್ಯುತ್ ಪ್ರವಾಹದಂತಿಹ ಅದೊಂದು ಶಕ್ತಿಯಿಂದ ಅವಳ ಮೇಲೆ ನೆಗೆದು, ಅವಳನ್ನ ಅಪ್ಪಿಕೊಂಡಿರಲು ತಟುಕು ತಟುಕಾಗಿ ತುಂತುರು ಸುರಿಯುತ್ತಿತ್ತು. 'ಅದೇಕೆ ಅಳುವಿರಿ!....?' ಎಂದವಳ ಬೆಕ್ಕಸದ ಮಾತು—, ಸಹಜವಾಗಿ ಎನ್ನ ಮೊಗದಲ್ಲಿದ್ದ ನೀರ ಹನಿಗಳನ್ನು ಕಂಡು. 'ನೀನೂ!....' ಎಂದು ನನ್ನ ಉತ್ತರ. ಆದರೆ ವಾಸ್ತವವಾಗಿ ಅದು ಹೇಗಾಯಿತೆಂದು ನಮಗಿಬ್ಬರಿಗೂ ಆಮೇಲೆ ತಿಳಿದುದು. ಇತ್ತ ಸುಖದಿಂದ ಸಮಯ ಕಳೆಯುತ್ತಲಿರಲು, ಅವಳಮ್ಮ ಅವಳನ್ನು ಕೂಗಿದಳು; ಅವಳು ಓಡಿದಳು. ನಾನೂ ಓಡಿದೆ ಪ್ರಕೃತ ಪ್ರೇಮದ ಬಂಧನದಿಂದ ಮುಕ್ತವಾಗದೆ ಅವಳೊಂದಿಗೇ ನಡೆದಿತ್ತೆನ್ನ (ಕಥಾನಾಯಕ) ಮನಸ್ಸು. ಕಾಣದೆ ಕಾಲೆಡವಿ ಬಿದ್ದೆ—'ಆ ತುಂತುರು' ಎಂದು. ಇದು ಎನಗೆ ಸ್ವಪ್ನದಲ್ಲಿ ಕಂಡುಬಂದಿತು. ಅಂತೇ ನಾನೂ........ತಲೆಯನ್ನು ಒಡೆದುಕೊಂಡೆನು. ಅದನ್ನೇ ನಾನು ಕೂಗಿದೆನಂತೆ!

ಇಂದಿರೆ ಮೆಲ್ಲಗೆ, 'ಕತೆಯಾಯಿತೆ ಬರೆದುದು?—' ಎಂದಳು.

'ಇದುವೇ ಒಂದು ಕತೆ'-ಅಂತ ಸುಮ್ಮನಾದೆ.

'ಏನದು ಮತ್ತೆ,....?' 'ತುಂತುರು!'

'ನಿನಗೇಕೆ ಅದೆಲ್ಲ....?'

'ಬಿಡಿ ಹೇಳದಿದ್ದರೆ....'

ನಾನು ಹೇಳಲಿಲ್ಲ,—ಹೇಳುವುದೂ ಇಲ್ಲ. ನೀವು ಮಾತ್ರ ದಯವಿಟ್ಟು ಮತ್ತೊಬ್ಬನಿಗೆ ಹೇಳದೆ....

ಹೊಗೆಸೊಪ್ಪಿನಲ್ಲಿ ಹೊಯ್ಗೆ ಬೆರೆಸುವುದರಿಂದಾದ ಪರಿಣಾಮ.

ಉತ್ಕೃಷ್ಟವಾದ ಹೊಗೆಸೊಪ್ಪನ್ನು ತಯಾರಿಸಿ ವ್ಯಾಪಾರವನ್ನು ವ್ಯಾಪಕಗೊಳಿಸಬೇಕು. ತನ್ಮೂಲಕ ಜಿಲ್ಲೆಯ ಆರ್ಥಿಕಸಂಪತ್ತನ್ನು ಹೆಚ್ಚಿಸಬೇಕು. ಇದಕ್ಕೆ ಕೃಷಿಕರೂ ವರ್ತಕರೂ ನೆರವಾಗಬೇಕು.

ಜಿಲ್ಲಾ ಕಲೆಕ್ಟರರವರ ಪ್ರಕಟಣೆ.

ದ. ಕ ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಕಲ್ಲಡ್ಕ, ಉದ್ಯಾವರ, ಕೀರಾನ, ಪಳ್ಳಿಕೆರೆ, ಚಿತ್ತಾರಿ, ಅಜಾನೂರು, ಬಲ್ಲ, ಕಾಂಞಂಗಾಡು ಗ್ರಾಮಗಳಲ್ಲಿ ನಶ್ಯ, ಎಲೆ, ಸಿಗರೇಟುಗಳಿಗೆ ಕೂಡಾ ಪ್ರಯೋಜನವಾಗಬಹುದಾದ ಉತ್ಕೃಷ್ಟ ಜಾತಿಯ ಹೊಗೆಸೊಪ್ಪು ಬೆಳೆಯುತ್ತದೆ. ಈ ಹೊಗೆಸೊಪ್ಪು ಕೆಲವು ವರ್ಷಗಳ ಹಿಂದಿನ ತನಕ ಪರಬಂದರುಗಳಿಗೆ ಹೋಗುತ್ತಿದ್ದು ಅದರ ಮಾರಾಟದಿಂದ ಈ ಜಿಲ್ಲೆಯ ಕೃಷಿಕರಿಗೆ ಬಹಳ ಲಾಭವಿರುತ್ತಿತ್ತು. ಆಗಿನ ಕಾಲದಲ್ಲಿ ಕುಮ್ಟ, ಬೆಂಗಳೂರು ಇನ್ನೂ ದೂರದ ಜನರು ಕೂಡ ಇಲ್ಲಿಯ ಹೊಗೆಸೊಪ್ಪನ್ನು ಸಂತೋಷದಿಂದ ತರಿಸಿಕೊಳ್ಳುತ್ತಿದ್ದರು.

20-30 ವರ್ಷಗಳಿಂದೀಚೆ ಈ ಹೊಗೆಸೊಪ್ಪನ್ನು ಬೆಳೆಸುವವರು ತಮ್ಮ ಹೊಗೆಸೊಪ್ಪಿನೊಂದಿಗೆ ಹೊಯ್ಗೆ ಮಿಶ್ರಣ ಮಾಡತೊಡಗಿದರು. ಅಂದಿನಿಂದ ಇಲ್ಲಿಯ ಹೊಗೆಸೊಪ್ಪಿಗೆ ದೂರ ಗಿರಾಕಿಗಳಿಲ್ಲ ತಪ್ಪಿ. ಹೊಗೆಸೊಪ್ಪಿನ ಕೃಷಿಕರ ಜೀವನವು ದಿನೇ ದಿನೇ ಕಷ್ಟತರವಾಗುತ್ತಾ ಬಂದಿದೆ. ಈಗ ಈ ಜಿಲ್ಲೆಯಲ್ಲಾಗುವ ಹೊಗೆಸೊಪ್ಪಿನ ಮಾರಾಟದಿಂದ ಕೃಷಿಕರಿಗೆ ತಮ್ಮ ಕೃಷಿಯ ಖರ್ಚುಕೂಡಾ ಸಂಪೂರ್ಣ ದೊರೆಯುವಂತಿಲ್ಲ.

ಈ ಶೋಚನೀಯ ಸಂಗತಿಯು ಈ ಜಿಲ್ಲೆಯ ಆರ್ಥಿಕ ವಿಚಾರ ಸಭೆ (ಡಿಸ್ಟ್ರಿಕ್ಟ್ ಇಕೊನೋಮಿಕ್ ಕೌನ್ಸಿಲ್)ಯವರ ತಿಳುವಳಿಕೆಗೆ ಬಂದು, ಈ ಜಿಲ್ಲೆಯ ಕೃಷಿಕರು ಹೊಯ್ಗೆ ಮಿಶ್ರಣ ಮಾಡುವ ಅಭ್ಯಾಸವನ್ನು ಹೇಗೆ ನಿಲ್ಲಿಸಬಹುದೆಂಬುದರ ಕುರಿತು ಅವರು ತುಂಬಾ ವಿಚಾರಮಾಡತೊಡಗಿದರು. ಕೊನೆಗೆ ಇದೇ ಕಳೆದ ಸೆಪ್ಟೆಂಬರ ತಾ. ೨೦ಕ್ಕೆ ಮಂಗಳೂರಿನ ಹೊಗೆಸೊಪ್ಪು ವ್ಯಾಪಾರಮಾಡುವ ಸಾಹುಕಾರರೆಲ್ಲರ ಸಭೆಯೊಂದನ್ನು ಅವರು ಜರಗಿಸಿ, ಈ ಕುರಿತು ಮಾಡಬಹುದಾದ ಕಾರ್ಯಕ್ರಮಗಳನ್ನು ನಿಶ್ಚೈಸಲು ಪ್ರಯತ್ನಿಸಿದರು.

ಹೊಗೆಸೊಪ್ಪಿನಲ್ಲಿ ಹೊಯ್ಗೆ ಮಿಶ್ರಣಮಾಡುವದರಿಂದಾಗುವ ಅನಾಹುತವನ್ನು ಕೃಷಿಕರೂ, ವರ್ತಕರೂ, ಎಲ್ಲರೂ ಒಪ್ಪುತ್ತಾರೆ. ಆದರೆ ಈ ದುರಭ್ಯಾಸಕ್ಕೆ ನಿಜವಾದ ಕಾರಣಭೂತರ್ಯಾರೆಂಬುದರ ಕುರಿತು ಅಭಿಪ್ರಾಯ ವ್ಯತ್ಯಾಸವಿದೆ. ಹೊಯ್ಗೆ ಮಿಶ್ರಮಾಡಿದ ಹೊಗೆಸೊಪ್ಪನ್ನೇ ವರ್ತಕರು ಬೇಕೆಂದೆನ್ನುವದರಿಂದ ಅವರೇ ಈ ದುರಭ್ಯಾಸಕ್ಕೆ ಮೂಲ ಕಾರಣರೆಂದು ಕೃಷಿಕರು ಹೇಳುತ್ತಾರೆ. ತೂಕದಲ್ಲಿ ಹೆಚ್ಚಾಗಿ, ಲಾಭಪಡೆಯಬೇಕೆಂದು ಕೃಷಿಕರೇ ಈ ರೀತಿ ಹೊಯ್ಗೆ ಮಿಶ್ರಮಾಡಿ ಹೊಗೆಸೊಪ್ಪನ್ನು ಮಾರಾಟಕ್ಕೆ ತರುವರೆಂದು ವರ್ತಕರು ಹೇಳುತ್ತಾರೆ. ಇದು ಹೇಗಿದ್ದರೂ ಈ ದುರಭ್ಯಾಸವನ್ನು ನಿಲ್ಲಿಸಲಿಕ್ಕೆ ತಮ್ಮ ಸಂಪೂರ್ಣ ಸಹಾಯ ಸಹಕಾರವಿದೆಯೆಂದು ಈಗ ಮಂಗಳೂರಿನ ಸಾಹುಕಾರರೆಲ್ಲರೂ ನಚ್ಚೊತ್ತಿ ಹೇಳಿರುವರು; ಆದರೆ ತಾವು ಮಾತ್ರ ಈ ಕಾರ್ಯದಲ್ಲಿ ಮುಂದರಿದು ಶುದ್ಧ ಹೊಗೆಸೊಪ್ಪನ್ನು ಪಡಕೊಳ್ಳ ಪ್ರಯತ್ನಿಸಿದರೆ ಕೃಷಿಕರು ತಮ್ಮ ಹೊಗೆಸೊಪ್ಪನ್ನು ಇತರ ಕಡೆಗಳಿಗೆ ಕೊಂಡುಹೋಗಿ ಮಾರಾಟಮಾಡುವರೆಂದೂ, ಈ ಜಿಲ್ಲೆಯಲ್ಲಿ ಬೆಳೆಸುವ ಹೊಗೆಸೊಪ್ಪಿನಲ್ಲಿ ನಾಲ್ಕರಲ್ಲಿ ಒಂದಂಶ ಮಾತ್ರ ಮಂಗಳೂರಿಗೆ ಈಗ ಬರುತ್ತಿದೆಯಾದ್ದರಿಂದ ತಮ್ಮ ಸಹಕಾರದಿಂದ ಮಾತ್ರ ಕೆಲಸವು ಕೈಗೂಡದೆಂದೂ ಅವರು ಸೂಚಿಸಿರುವರು. ಮಂಗಳೂರಿನ ಹೊರಗಿರುವ ಹೊಗೆಸೊಪ್ಪಿನ ವ್ಯಾಪಾರಿಗಳೂ ಈ ಕಾರ್ಯದಲ್ಲಿ ಕೂಡಬೇಕು; ಅವರು ಕೂಡದಿದ್ದರೆ ತಮ್ಮ ವ್ಯಾಪಾರ, ವ್ಯವಹಾರಗಳಿಗೆ ಮಾತ್ರ ನಷ್ಟ ಬಂದೀತಲ್ಲದೆ ಹೊಗೆಸೊಪ್ಪಿನ ಸ್ಥಿತಿಯಲ್ಲೇನೂ ಅಭಿವೃದ್ಧಿ ತೋರಿಬಾರದೆಂದು ಅವರ ಅಭಿಪ್ರಾಯವಿದೆ.

ಇದರಲ್ಲಿ ಯಥಾರ್ಥವಿದೆ, ಕೃಷಿಕರು ಹೊಗೆಸೊಪ್ಪನ್ನು ಬೆಳೆಸುವವರಾದರೂ ಹೊಗೆಸೊಪ್ಪಿನ ಮಾರಾಟಕ್ಕೆ ಅವರಿಗೆ ವರ್ತಕರ ಸಹಾಯವು ಅಗತ್ಯವೇ ಇದೆ. ಆದ್ದರಿಂದ ಈ ಜಿಲ್ಲೆಯ ಹೊಗೆಸೊಪ್ಪು ವ್ಯಾಪಾರದ ವರ್ತಕರೆಲ್ಲರೂ ಕೂಡಿ ಮನಸ್ಸುಮಾಡದರೆ ಹೊಯ್ಗೆ ಮಿಶ್ರಣದ ಅಭ್ಯಾಸವು ತನ್ನಂತೆಯೇ ನಿಂತುಹೋಗುವುದೆಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈ ಜಿಲ್ಲೆಯ ಆರ್ಥಿಕ ಉನ್ನತಿಯ ಕಡೆ ದೃಷ್ಟಿಯನ್ನಿಟ್ಟು ಜಿಲ್ಲೆಯ ಸರ್ವ ವರ್ತಕ ಸಾಹುಕಾರರೂ ಈ ಕಾರ್ಯದಲ್ಲಿ ಭಾಗವಹಿಸಬೇಕಾಗಿ ನಾವು ಅವರನ್ನು ಈ ಮೂಲಕ ವಿನಂತಿ ಮಾಡುವವರಾಗಿದೆ. ಕಾರ್ಯಗಳಲ್ಲೆಲ್ಲಾ ವ್ಯಾಪಾರಿಗಳ ಸ್ವಾತಂತ್ರ್ಯವನ್ನು ಲೇಶವಾದರೂ ಕಡಿಮೆಮಾಡುವ ಉದ್ದಿಶ್ಯವು ನಮ್ಮಲ್ಲಿಲ್ಲ, ಜಿಲ್ಲೆಯ ಹಿತವೇ ನಮ್ಮ ಪ್ರಧಾನ ಚಿಂತೆಯಾಗಿದೆಯೆಂಬುದನ್ನು ನಾವು ಹೇಳಬೇಕೆಂದಿದ್ದು.

ಕೆಲವು ವರ್ಷಗಳ ಹಿಂದೆ ಗುಂಟೂರು ಜಿಲ್ಲೆಯಲ್ಲಿ ವರ್ಜಿನೀಯ ಜಾತಿಯ ಹೊಗೆಸೊಪ್ಪಿಂದನ್ನು ಬ್ರಿಟಿಷ್ ಅಮೇರಿಕನ್ ಕಂಪನಿಯವರೊಬ್ಬರು ರೂಢಿಗೆ ತಂದರು. ಆ ಜಾತಿಯ ಹೊಗೆಸೊಪ್ಪಿನ ಕೃಷಿಯನ್ನು ಉತ್ತಮರೀತಿಯಿಂದ ಹೇಗೆ ಮಾಡಬಹುದೆಂಬುದನ್ನೂ, ಕೃಷಿಯಿಂದ ದೊರೆತ ಹೊಗೆಸೊಪ್ಪನ್ನು ಹೇಗೆ ಉತ್ತಮ ರೀತಿಯಿಂದ ಒಣಗಿಸಿ, ಕಟ್ಟುಮಾಡಿ ಪರ ಊರುಗಳಿಗೆ ಕಳುಹಿಸಬಹುದೆಂಬುದನ್ನೂ ಅಲ್ಲಿಯ ಜನರಿಗೆ ಅವರು ತೋರಿಸಿಕೊಟ್ಟರು. ಆ ಕಂಪೆನಿಯವರು ಅಲ್ಲಿ ಈಗ ತಮ್ಮ ಸ್ವಂತ ಬೀಜಕ್ಷೇತ್ರಗಳನ್ನು ಬೆಳೆಸಿ, ಒಣಗಿಸಲಿಕ್ಕೆ ಪ್ರತ್ಯೇಕ ಅಂಗಡಿಗಳನ್ನು ಸ್ಥಾಪಿಸಿ, ಉತ್ತಮ ರೀತಿಯಿಂದ ಹೊಗೆಸೊಪ್ಪನ್ನು ಶುದ್ಧಗೊಳಿಸಿ, ಕಟ್ಟುಗಳನ್ನು ಕಟ್ಟುತ್ತಾರೆ. ಗುಂಟೂರಿನ ಜನರೆಲ್ಲರೂ ಅವರಿಂದ ಆ ವಿಧಾನಗಳನ್ನೆಲ್ಲಾ ವಿಚಾರದಿಂದ ತಿಳಕೊಂಡು ಈಗ ಹೊಗೆಸೊಪ್ಪಿಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳಲ್ಲಿಯೂ ನಿಪುಣತೆಯನ್ನು ಹೊಂದಿರುವರು ಅಲ್ಲಿಯ ದೊಡ್ಡ ಕೃಷಿಕರೆಲ್ಲರೂ ಈಗ ಆಂಗ್ಲ, ಅಮೇರಿಕ ಕಂಪೆನಿಗಳ ಸಹಾಯದ ಅವಶ್ಯವಿಲ್ಲದೆ ತಮ್ಮ ಹೊಗೆಸೊಪ್ಪನ್ನು ಉತ್ತಮ ರೀತಿಯಿಂದ ಒಣಗಿಸಿ, ಮಾರಾಟಕ್ಕೆ ತಯಾರಿಸುವುದನ್ನು ಕಲಿತುಕೊಂಡಿರುವರು. ಹೊಗೆಸೊಪ್ಪನ್ನು ಬೆಳೆಸಿ, ಶುದ್ಧಮಾಡಿ ಒಣಗಿಸುವ ಕುರಿತು ಅಲ್ಲಿಯ ಜನರಿಗೆಲ್ಲಾ ಸಂಪೂರ್ಣ ಜ್ಞಾನವಿದೆ ಹೊರ ದೇಶಗಳೊಡನೆ ನೇರ ವ್ಯಾಪಾರವನ್ನು ಬೆಳೆಸಿರುವ ದೇಶೀಯ ವಾಣಿಜ್ಯ ಸಂಘಗಳು ಅಲ್ಲಿ ಅನೇಕವಿದ್ದು ಅವುಗಳಿಗೆಲ್ಲಾ ಇಂಗ್ಲಾಂಡು ವ ಇತರ ದೇಶಗಳಲ್ಲಿ ಸ್ವಂತ ಏಜಂಟರಿರುವರು. ಹೀಗೆ ವ್ಯಾಪಾರಕ್ಕೆ ಅನುಕೂಲವಾಗುವಂತೆ ವಿವಿಧ ಜಾತಿಯ ಹೊಗೆಸೊಪ್ಪನ್ನು ಪ್ರತ್ಯೇಕಿಸಿ ಕಟ್ಟಲಿಕ್ಕೆ ಹೊಗೆಸೊಪ್ಪಿನ ಕುರಿತಾದ ಜ್ಞಾನವು ಅವಶ್ಯವಾಗುತ್ತದೆ; ಆದ್ದರಿಂದ ಈ ಕುರಿತು ಇತ್ತ ಒಂದು ಸಂಸ್ಥೆಯನ್ನು ಅಲ್ಲಿ ಸ್ಥಾಪಿಸಿರುವರು. ಈ ಸಾಹಸ, ಉದ್ಯಮಗಳಿಂದ ಗುಂಟೂರಿಗೆ ಒಂದು ವರ್ಷಕ್ಕೆ ಹಲವು ಲಕ್ಷ ರೂಪಾಯಿಯ ಆರ್ಥಿಕ ಲಾಭವು ಹೆಚ್ಚಿರುತ್ತದೆ.

ಈ ಜಿಲ್ಲೆಯ ಜನರು ಗುಂಟೂರಿನ ಜನರಿಂದ ವಿವೇಕ, ಸಾರ್ವಜನಿಕ ವಿಚಾರಗಳಲ್ಲೇನೂ ಕಡಿಮೆಯವರಲ್ಲ. ಹೊಗೆಸೊಪ್ಪಿನಲ್ಲಿ ಹೊಯ್ಗೆ ಮಿಶ್ರಣ ಮಾಡುವದು ದುಷ್ಟ ಅಲ್ಪ ವಿಚಾರದ ಕಾರ್ಯವೆಂದು ನಮಗೆ ತೋರುತ್ತದೆ. ಅದಷ್ಟು ಉತ್ಕೃಷ್ಟ ತರದ ಹೊಗೆಸೊಪ್ಪನ್ನು ಬೆಳೆಸಲಿಕ್ಕೆ ಇಲ್ಲಿ ಕೃಷಿಕರೂ ವರ್ತಕರೂ ಸೇರುವುದೇ ಅವರಿಬ್ಬರಿಗೂ ನಿಜವಾಗಿ ಒಳ್ಳೆಯದೆಂಬುದಕ್ಕೆ ಸಂಶಯವಿಲ್ಲ. ಕೆಲವು ಶತಮಾನಗಳ ಹಿಂದೆ ಈ ಜಿಲ್ಲೆಯ ಹೊಗೆಸೊಪ್ಪು ಲಿವರ್ ಪೂಲ್, ಅಮ್ಸ್ಟರ್ಡಮ್ ವಗೈರೆ ಪರ ರಾಷ್ಟ್ರಗಳಿಗೆಲ್ಲಾ ಕೊಂಡುಹೋಗಿ ಮಾರಾಟ ಮಾಡುತ್ತಿದ್ದರು. ಆ ಕಾಲದಲ್ಲಿ ಈ ಜಿಲ್ಲೆಯ ಹೊಗೆಸೊಪ್ಪನ್ನಪೇಕ್ಷಿಸುತ್ತಿದ್ದ ದೂರದೇಶಗಳ ಜನರಿಗೆ ನಾವು ಪುನಃ ಉತ್ಕೃಷ್ಟವಾದ ಹೊಗೆಸೊಪ್ಪನ್ನು ನಾವು ಒದಗಿಸಿ ಅವರೊಡನೆ ವ್ಯಾಪಾರವನ್ನು ಬೆಳೆಸಬೇಕು. ಹೊಯ್ಗೆ ಮಿಶ್ರಣವನ್ನು ನಿಲ್ಲಿಸುವದೇ ಈ ಕಾರ್ಯಕ್ಕೆ ಆರಂಭವೆನ್ನಬಹುದು.

ಆದ್ದರಿಂದ ಈ ಕಾರ್ಯದಲ್ಲಿ ಸರ್ವರೂ ಸಂತೋಷದಿಂದ ಸೇರಿ, ಜಿಲ್ಲೆಯ ಆರ್ಥಿಕ ಸಂಪತ್ತನ್ನು ಹೆಚ್ಚಿಸಲಿಕ್ಕೆ ಪ್ರಯತ್ನಿಸಬೇಕಾಗಿ ಈ ಜಿಲ್ಲೆಯ ಮಹಾಜನರೊಡನೆ ನಾವು ವಿನಂತಿ ಮಾಡುತ್ತೇವೆ. ಕಾನೂನುಗಳಿಂದ ಪ್ರಯೋಜನವಿಲ್ಲ. ಸಹಕಾರ, ಭಕ್ತಿಗಳಿಂದ ಆಗುವ ಕಾರ್ಯಗಳು ಕಾನೂನುಗಳಿಂದಾಗವು. ಸರ್ವರೂ ಸೇರಿ, ಈ ಜಿಲ್ಲೆಗೆ ಬೇಗನೇ ಶ್ರೇಯಸ್ಸನ್ನು ಸಂಪಾದಿಸಿಕೊಳ್ಳುವ ಕಾರ್ಯದಲ್ಲಿ ಸಹಕಾರವನ್ನೀಯಬೇಕೆಂದು ನಮ್ಮ ಅಪೇಕ್ಷೆಯಾಗಿದೆ.

ಮಂಗಳೂರು, ತಾ.16-11-38 — **M. V. Veliodi,** *Collector.*

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:—**ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:—**ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:—**ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:— ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

1939 ನೇ ಇಸವಿಯ

ಡೈರಿಗಳು

ನವಭಾರತ ಬುಕ್ ಡಿಪೋ,

ಚರ್ಚ್ ರೋಡು, ಉಡುಪಿ.

ವಾರ್ತಾವಾಹಿನಿ

ಯುದ್ಧದ ಗದ್ದಲವೆದ್ದರೆ ಕಾಂಗ್ರೆಸ್ಸಿನ ಧೋರಣೆಯೇನು?

ರಾಷ್ಟ್ರಸಭಾಧ್ಯಕ್ಷ ಸುಭಾಸಭೋಸರ ಹೇಳಿಕೆ.

ಇದೊಂದು ಕಷ್ಟದ ಸಮಸ್ಯೆ. ಕೂಲಂಕಷವಾಗಿ ಈಗ ಬಿಡಿಸಿಹೇಳಲು ಬರುವುದಿಲ್ಲ. ಆದರೆ ಕಾಂಗ್ರೆಸ್ ಹಿಡಿಯುವ ಹಾದಿಯನ್ನು ಸೂಚಿಸಬಹುದಷ್ಟೇ. ಯುದ್ಧವನ್ನು ಅದು ವಿರೋಧಿಸುವ ರೀತಿನೀತಿ ಸ್ವರೂಪವು ಅಹಿಂಸಾತ್ಮಕವಾಗಿರುವುದು ಅವಶ್ಯಕ. ಯುದ್ಧದಲ್ಲಿ ಬ್ರಿಟಿಷರೊಡನೆ ಅದು ಸಹಕರಿಸಲು ತಿರಸ್ಕರಿಸಿ ಸುಮ್ಮಗಿರಬಹುದು, ಇಲ್ಲವೆ ಹಿಂದೂಸ್ಥಾನದ ಜನತೆಯು ಯಾವಭಾಗವಾದರೂ ಬ್ರಿಟಿಷ್ ಸರಕಾರದೊಡನೆ ಸಹಕರಿಸಲು ಪ್ರಯತ್ನಿಸಿದಲ್ಲಿ ಅಂತಹ ಹೆಜ್ಜೆಯನ್ನು ತಡೆಯಲು ಅಹಿಂಸಾತ್ಮಕವಾದ ಕಾರ್ಯಕ್ರಮವನ್ನು ಕೈಗೊಳ್ಳಲೂ ಬಹುದು. ನಮ್ಮ ದೇಶದ ಜನತೆಯ ಕೆಲವು ಪಂಗಡಗಳ ಆರ್ಥಿಕ ಪರಿಸ್ಥಿತಿಗೆ ಯುದ್ಧದಿಂದ ಹಾನಿತಟ್ಟುವುದೆಂದೂ ಅದುಕಾರಣ ತಮ್ಮೊಡನೆ ಸಹಕರಿಸಿರೆಂದೂ ಬ್ರಿಟಿಷ ಸರಕಾರವು ಕೇಳಿಕೊಂಡೀತು. ಆದರೆ ಹಿಂದೂಸ್ಥಾನದ ಧನಜನ ಬಲದಿಂದ ಬ್ರಿಟಿಷರಿಗೆ ಸಹಾಯ ಮಾಡಲು ಮುಂದರಿವುದು ಪ್ರಜಾಕೋಟಿಯ ಬಹುಪಕ್ಷದ ಹಿತದೃಷ್ಟಿಯಿಂದ ಕ್ಷೇಮಕರವಲ್ಲ. ಉದಾಹರಣೆಗಾಗಿ ಸಿಪಾಯಿಗಳಾಗಿ ಸೇನೆಯನ್ನು ಸೇರಲು ಹವಣಿಸುವವರು ಸಹ ತಮಗೆ ತಾತ್ಕಾಲಿಕವಾಗಿ ಪ್ರಯೋಜನ ತೋರಿಸಿದರೂ ವಿದೇಶದ ಯುದ್ಧರಂಗದಲ್ಲಿ ಹೋರಾಡಲು ದಂಡಾಳಾಗುವುದರ ಗಂಡಾಂತರಗಳನ್ನು ಮೊದಲಾಗಿ ಮನಸ್ಸಿಗೆ ತಂದುಕೊಳ್ಳತಕ್ಕದ್ದು. ಪರಿಣಾಮವಾಗಿ ಯುದ್ಧವನ್ನು ಅಹಿಂಸಾತ್ಮಕವಾಗಿ ವಿರೋಧಿಸುವ ಧೋರಣೆಯು ಪ್ರಜಾಕೋಟಿಯಲ್ಲಿ ಸಾರ್ವತ್ರಿಕವಾಗಿ ತಲೆದೋರಿತೆಂದರೆ ಹಿಂದಿನ ಮಹಾಯುದ್ಧಕಾಲದಲ್ಲಿ ಹಿಂದೂಸ್ಥಾನದಿಂದ ಬ್ರಿಟಿಷರಿಗೆ ದೊರಕಿದಷ್ಟು ಜನಬಲ ಧನಬಲ ಮುಂತಾದ ಸಮರ ಸಾಕರ್ಯಗಳು ಸಿಗುವುದು ಸಾಧ್ಯವೆಂದು ನಾನು ನಂಬುವುದಿಲ್ಲ, ಎಂದು ಪತ್ರಿಕೋದ್ಯಮಿಗಳ ಕಾನ್ಫರೆನ್ಸಿನಲ್ಲಿ ಬಂದ ಪ್ರಶ್ನೆಗೆ ಉತ್ತರವಿತ್ತಿರುವರು

ಜಾಪಾನಿನೊಡನೆ ಹೋರಾಡಲು ಬ್ರಿಟಿಷರೂ ಅಮೇರಿಕನ್ನರೂ ಒಟ್ಟಾಗಿ ಸೊಂಟ ಕಟ್ಟಿಗರೆ ಆಗ ಕಾಂಗ್ರೆಸ್ಸಿನ ಧೋರಣೆಯೇನು?

ಈ ಪ್ರಶ್ನೆಗೆ ಉತ್ತರವಾಗಿ ನಮ್ಮ ರಾಷ್ಟ್ರ ಸಭಾಧ್ಯಕ್ಷರು ಹೀಗೆಂದರು! ಜಾಪಾನೀಯರನ್ನು ಸದೆಬಡಿಯುವುದಕ್ಕಾಗಿ ಬ್ರಿಟಿಷರೂ ಅಮೇರಿಕನ್ನರೂ ಒಂದಾಗಿ ಚೀನಿಯರಿಗೆ ಬೆಂಬಲವಾಗಿ ನಿಂತರೆ ನಾವು ಅವರೊಡನೆ ಸೇರಬೇಕೋ ಬೇಡವೋ ಎಂಬುದನ್ನು ನಿರ್ಣಯಿಸುವ ಮೊದಲು ನಾವು ಯೋಚಿಸಬೇಕಾದ ಒಂದು ವಿಷಯವಿದೆ ಅದೇನೆಂದರೆ ನಾವು ಬ್ರಿಟಿಷರಿಗೆ ಸಹಾಯ ಮಾಡುವುದರಿಂದ ಚೀನಾ ರಾಜ್ಯವನ್ನು ಚೀನಿಯರಿಗೆ ದಕ್ಕಿಸಿಕೊಡುತ್ತೇವೋ ಅಥವಾ ಅದನ್ನು ಬ್ರಿಟಿನ್ ಸಾಮ್ರಾಜ್ಯಶಾಹಿಗೆ ಉಳಿಸಿಕೊಡುತ್ತೇವೋ ಎಂಬುದನ್ನು ವಿಚಾರಮಾಡತಕ್ಕದ್ದು. ನಾವು ಚೀನಾವನ್ನು ಉಳಿಸುವುದು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಸಂಸ್ಥಾಪನೆಗೆ ಹಾದಿಯಾಗುವ ಸಂಭವವಿದ್ದರೆ ನಾನು ಬ್ರಿಟಿಸಿಗೆ ಯಾವ ತರದ ಸಹಾಯ ತೋರುವುದಕ್ಕೂ ವಿರೋಧಿಯೇ. ಅಮೇರಿಕದವರ ವಿದೇಶೀಯ ಧೋರಣೆಯ ವಿಷಯದಲ್ಲಿ ನಮ್ಮ ಅಭಿಪ್ರಾಯವೇನಿದ್ದರೂ ಬ್ರಿಟಿಷರದು ಮಾತ್ರ ಪರೋಪಕಾರ ಹಾಗೂ ಅಬಲರಕ್ಷಣೆಯ ಧ್ಯೇಯದಿಂದಲ್ಲವೆಂಬುದು ಎಲ್ಲರೂ ಒಪ್ಪತಕ್ಕ ವಿಷಯ. ಚೀನಾರಾಜ್ಯದ ಮೇಲೆ ಬ್ರಿಟಿಷರ ಹಿಡಿತವನ್ನು ಬಲಗೊಳಿಸಿದಷ್ಟು ಅದರ ಬಾಧಕವು ಹಿಂದೂದೇಶದ ಮೇಲೆ ತಟ್ಟುವುದು. ಆದುದರಿಂದ ಪರೋಕ್ಷವಾಗಿ ಹಿಂದೂಸ್ಥಾನದ ಮೇಲೆ ಬ್ರಿಟಿಷರ ಹಿಡಿತವನ್ನು ನಾವೇ ಬಲಗೊಳಿಸಿದಂತಾಗುತ್ತದೆ. ಅಂತಹ ಪರಿಸ್ಥಿತಿ ಬರುವುದನ್ನು ನಾವು ತಪ್ಪಿಸಿಕೊಳ್ಳಬೇಕಾಗುವುದಿಲ್ಲ ಒಟ್ಟಿನ ಮೇಲೆ ಹೇಳುವುದಾದರೆ ಈ ಸಮಸ್ಯೆಯು ಸಿಕ್ಕಿನದು. ಆದುದರಿಂದ ಚೀನಾರಾಜ್ಯದ ಕಡೆಗೆ ನಮ್ಮ ಧೋರಣೆಯು ಹೇಗಿರಬೇಕೆಂಬ ಜಟಿಲ ಸಮಸ್ಯೆಯನ್ನು ಬಿಡಿಸುವಾಗ ವಿಶೇಷ ಮುಂಜಾಗ್ರತೆಯೂ ದೂರದೃಷ್ಟಿಯೂ ನಮಗೆ ಬೇಕಾಗಿದೆ.

ನಾಲ್ಕು ಸಾವಿರ ಗಿರಣಿಯಾಳುಗಳ ಮುಷ್ಕರ

ಮುರ್ಲಾದ ಸ್ವದೇಶೀ ಮಿಲ್ಸ್ ಎಂಬುದರ ನಾಲ್ಕು ಸಾವಿರ ಗಿರಣಿಯಾಳುಗಳು ಕೆಲಸವಿಲ್ಲದೆ ಕೂತಿದ್ದಾರೆ. ಅವರ ನೂಲುವ ಖಾತೆಯವರಲ್ಲಿ ಮೂವರನ್ನು ಡಿಸ್‌ಮಿಸ್ ಮಾಡಿದ ಪ್ರಯುಕ್ತ ಅವರೆಲ್ಲ ಸಂಪು ನಡೆಯಿಸಿದರು. ಆ ಪ್ರಯುಕ್ತ ಗಿರಣಿಯ ಮಾಲಕರು ಗಿರಣಿಯ ಯಾವತ್ತು ವಿಭಾಗಗಳನ್ನು ಮುಚ್ಚಿ ಬಿಟ್ಟರು. ಅವಧಿ ನಿಶ್ಚಿತವಿಲ್ಲದ ಈ ಮುಚ್ಚುವಿಕೆಯಿಂದ ನಾಲ್ಕು ಸಾವಿರ ಕೆಲಸಗಾರರು ನಿರುದ್ಯೋಗಿಗಳಾಗಿ ದಿನ ದೂಡಬೇಕಾಗಿದೆ

ಮಹಾದಾನಿಯಾದ ಲಾರ್ಡ್ ನಫೀಲ್ಡ್‌ರ ಮತ್ತೊಂದು ಉದಾರ ದಾನ

ಐದು ಸಾವಿರ ಕಬ್ಬಿಣದ ಶ್ವಾಸಕೋಶಗಳು ಬ್ರಿಟಿಷ್ ಸಾಮ್ರಾಜ್ಯದ ಪ್ರತಿಯೊಂದು ಆಸ್ಪತ್ರೆಗೆ ಒಂದೊಂದು

ಕಬ್ಬಿಣದ ಶ್ವಾಸಕೋಶವೆಂದರೇನು? ರೋಗಿಗಳ ಶ್ವಾಸಕೋಶವು ತಾತ್ಕಾಲಿಕವಾಗಿ ಕೆಲಸಮಾಡಲಾರದಷ್ಟು ಬಲಗುಂದಿದ ಸ್ಥಿತಿಯಲ್ಲಿದ್ದಾಗ ಈ ಯಂತ್ರದ ಮೂಲಕ ಬಹಳ ಕಾಲದ ವರೆಗೆ ಕೃತಕ ಶ್ವಾಸೋಚ್ಛ್ವಾಸ ಕ್ರಿಯೆಯನ್ನು ನಡೆಯಿಸಲಿಕ್ಕಾಗುತ್ತೆ. ಹೀಗೆ ಪ್ರಾಣರಕ್ಷಣೆಗೆ ಸಾಧಕವಾದ ಯಂತ್ರದ ಹೆಸರು ಐಯರ್ನ್ ಲಂಗ್ಸ್—ಕಬ್ಬಿಣದ ಶ್ವಾಸಕೋಶ ಈ ಮಹಾ ದಾನಕ್ಕಾಗಿ ಅರ್ಧ ಮಿಲಿಯ ಪವನು ತೆಗೆದಿಡಲಾಗಿಯದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ವಾರ್ಧಾದಲ್ಲಿ ದಸಂಬರ ತಾ. ೮ಕ್ಕೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು ಜರಗಬೇಕೆಂದು ನಿರ್ಣಯಿಸಲ್ಪಟ್ಟಿತಾದರೂ, ತಾ. ೧೨ರ ವರೆಗೆ ಮುಂದುವರಿಯುವುದೆಂದು ತಿಳಿಸಲಾಗುತ್ತದೆ. ಮುಖ್ಯವಾಗಿ ಕೇಂದ್ರ ನ್ಯಾಯವಿಧಾಯಕ ಸಭೆಯ ಕಾರ್ಯಕಲಾಪಗಳಿಂದ ಬಿಡುಗಡೆಯಾದ ದೇಸಾಯಿಗಳಿಗೆ ಅಷ್ಟರ ವರೆಗೆ ವಾರ್ಧಾಕ್ಕೆ ಬರಲು ತೊಂದರೆಯಾದ ಕಾರಣ ಕಾಂಗ್ರೆಸು ಅಧ್ಯಕ್ಷರು ದಸಂಬರ ೧೨ಕ್ಕೆ ಮುಂದುವರಿಸಲು ತಿಳಿಸಿದ್ದಾರಾಗಿಯೂ, ಪಟೇಲ ಸರದಾರರೂ ಇದಕ್ಕೊಪ್ಪಿರುವರಾಗಿಯೂ ತಿಳಿಯುತ್ತದೆ.

ಪುಟ ೧೩ರಿಂದ

ಮಾಗಿ ಈ ಚಳಿಗಾಲದಲ್ಲಿ ಸಂಬಂಧಕಳವಾಗುವುದು. ಈ ಚಿಂತೆಯಿಂದಾಗಿಯೇ ಕುಂದುವಿರಿ, ಚಿಕ್ಕಚಿಕ್ಕ ರೋಗಗಳು ದೇಹವನ್ನು ಕ್ರಮಿಸುವವು. ಆದದರಿಂದ ಭಾಗದಲ್ಲಿ ಸ್ತ್ರೀಯರು ಪ್ರಯೋಗದಿಂದ ಧನಸಿಗುವ ಯೋಗವಿದೆ. ತಾ. 2–3 ಮತ್ತು 6–7ರಲ್ಲಿ ಮ್ಯಾಸ್ಸನ್ನು, ರಸವಸ್ತುಗಳು ಲಭಿಸುವವು.

ಸುಂದರವಾದ ಸಾಹಿತ್ಯ ಪಾಕೆಟ್ ಡೈರಿಗಳು

(ಪೆನ್ಸಿಲು ಸಹಿತ)

ಕ್ರಯ 0—8—0 ಮಾತ್ರ

ಅಂಚೆ ವೆಚ್ಚ ಪ್ರತ್ಯೇಕ

ವ್ಯಾ. ಧಾ. ಕಮಿಶನ್ ಕೊಡಲಾಗುತ್ತೆ.

ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ಸಿಗುತ್ತವೆ.

ಬರೆಯಿರಿ:—

The Kanara Books & News Agency.

Batatawala Mansion, Lalbag, Bombay 12.



SAVING MONEY AND TIME

Thousands of prudent and thriving business men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. Tey have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906

CANARA BANK LIMITED

ಮಹಾದ್ರಾಕ್ಷಿನಿ (Regd.)

ಗರ್ಭಸ್ತ್ರೀಯರ ಮೇಲೆ ಬ್ರಹ್ಮಾಸ್ತ್ರ! ಸೋವನ್ನು ಕೊಡುವ ರಕ್ತ ಚಿಕಿತ್ಸೆ ಅನಾವಶ್ಯಕ. ಶಾಂತವನ್ನು ಕೃತಿಸಿ ಮಾನವನ ಜೀವ, ಪ್ರಸವಗೈಯ್ಯತಕ್ಕ ವಿಳಂಬ, ಕೆಂಪು ಪರಂಗಿ ಹುಣ್ಣು, ನೀಪಗಡ್ಡೆ, ಮೋಪ ಪ್ರಸ, ಚರ್ಮವ್ಯಾಧಿ, ಕೀಲುಗಳನೋವು ಅತಿಮೂತ್ರ ವಗೈರೆ ಚಿಹ್ನೆಗಳನ್ನು 'ಮಹಾದ್ರಾಕ್ಷಿನಿ'ಯು ಶೀಘ್ರವಾಗಿ ಹಿಂಡಿಸಿ, ರಕ್ತ ಶುದ್ಧಿಮಾಡಿ ನರಗಳಿಗೆ ಬಲವನ್ನೀಯುವುದು ಸೇವಿಸುವವಕ್ಕೆ ಹಿತಕರ ಪ್ರತಿಯೊಂದು ಋತುವಿನ ಔಷಧದಲ್ಲಿಯೂ ಅದ್ಭುತ ಗುಣ.

ದೊಡ್ಡ ಸೈಜು 4-0-0, ಮೀಡಿಯಂ ಸೈಜು 2-4-0, ಚಿಕ್ಕ ಸೈಜು 1-2-0.

ಹಂಚಿಕೊಡುವ ಪ್ರಮುಖರು—ಬಾಸೆಲ್ ಮಿಶ್ಯನ್ ಪ್ರೆಸ್, ಮಂಗಳೂರು.

ಸಬ್ ಏಜಂಟರು:- ಉಡ್ಪಿ ಮಿಶ್ಯನ್ ಶೋಪ್, ಸಂತೆಕಟ್ಟೆ, ಉಡುಪಿ.

ವಿ. ವಿ. ಶೆಣೈ, ಕಾರ್ಕಳ. ಭಕ್ತಾ ಬ್ರದರ್ಸ್, ಕಾಸರಗೋಡು

ನಿಜಾಮ ರಾಜ್ಯದಲ್ಲಿ ಹಿಂದುಗಳ ಪರಿಸ್ಥಿತಿ

ನೈಜಾಮ ಹೈದರ್‌ಬಾದ್ ಮುಸ್ಲಿಮರ

ಆಕ್ಷೇಪಕ್ಕೆ ಬ್ಯಾರಿಸ್ಟರ್ ಸಾವರ್ಕರರ ಉತ್ತರ.

ಹಿಂದೂ ಮಹಾಸಭೆಯ ಅಧ್ಯಕ್ಷರಾದ ಸಾವರ್ಕರರವರು ಈ ಕೆಳಗಿನ ಹೇಳಿಕೆಯನ್ನು ಸಾರಿರುವರು.—"ನೈಜಾಮ ರಾಜ್ಯದ ಮುಸ್ಲಿಮ್ ಸಂಗಡದ ಮುಖಂಡರು ಮತ್ತು ಮಿರ್ ಅಕ್ಬರಾಲಿಖಾನ್ ಎಂಬವರು ತಮ್ಮನ್ನು "ರಾಷ್ಟ್ರವಾದಿ"ಗಳೆಂದು ಕರೆದುಕೊಳ್ಳುತ್ತಾ, ಹಿಂದೂ ಸಂಘಟನ ಚಳವಳದವರು, ಹಿಂದುಗಳ ಮೇಲೆ ಅನೇಕ ವರ್ಷಗಳಿಂದ ನಡೆಸುವ ಅತ್ಯಾಚಾರ ಮತ್ತು ದಂಡನೆಗಳನ್ನು ವಿರೋಧಿಸುವ ಅಸಹಕಾರದ ಚಳವಳವನ್ನು ತೆಗಳಿ ಒಂದು ಹೇಳಿಕೆಯನ್ನು ಪ್ರಕಟಿಸಿದ್ದಾರೆ ಈ ಕೃತಕ ರಾಷ್ಟ್ರವಾದೀ ಮುಸ್ಲಿಮರು ಈ ಚಳವಳದಿಂದ ಹಿಂದೂ ಮುಸ್ಲಿಮರಲ್ಲಿ ವೈಷಮ್ಯ ಹುಟ್ಟಿ ಶಾಂತಿಯ ಭಂಗವಾಗುವುದೆಂದು ಹೇಳುತ್ತಾರೆ. ಅವರ, ಜಾತೀಯ ಶಾಂತಿಯೆಂಬುದು ಕುರಿಯ ಚರ್ಮದಲ್ಲಿದ್ದ ತೋಳನಂತೆ ಎರವಾಗಿ ಪಡೆದದ್ದಾಗಿರುತ್ತದೆ.

ಹಿಂದುಗಳು ಸಭೆಜರಗಿಸಲು ಅವರಿಗೆ ಅಧಿಕಾರವಿಲ್ಲ. ಮೆರವಣಿಗೆ ಕೊಂಡುಹೋಗಲು ಅಧಿಕಾರವಿಲ್ಲ. (ಅಂದರೆ ಧಾರ್ಮಿಕವಾಗಲೀ, ಸಾರ್ವಜನಿಕವಾಗಲೀ) ಹಿಂದೂದೇವಸ್ಥಾನಗಳನ್ನು ದುರುಸ್ತುಮಾಡಲು ಹಿಂದುಗಳಿಗೆ ಹಕ್ಕಿಲ್ಲ! ತಮ್ಮ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣವೀಯಲು ಶಾಲೆಗಳನ್ನು ಸ್ಥಾಪಿಸಲು ಅವರಿಗೆ ಹಕ್ಕಿಲ್ಲ! ನಿಝಾಮ ರಾಜ್ಯದಲ್ಲಿ 85%ನೂರಕ್ಕೆ ಎಂಭತ್ತೈದರಂತಿದ್ದ ಹಿಂದುಗಳಮೇಲೆ ಕೇವಲ ವೈದೇಶಿಕ ಅನ್ಯ ಭಾಷೆಯಾದ 'ಉರ್ದು' ಸ್ಟೇಟಿನ ಮತ್ತು ಕೋರ್ಟುಭಾಷೆಯಾಗಿ ತುರುಕಿಸಲ್ಪಡುವುದರಲ್ಲಿ ನ್ಯಾಯವಿದೆಯೋ? ನೂರರಲ್ಲಿ 12% ಜನಸಂಖ್ಯಾಕರಿರುವ ಮುಸ್ಲಿಮರು ಪಬ್ಲಿಕ್‌ಸರ್ವಿಸಿನಲ್ಲಿ 80%ರಾಗಿರುವುದರ ಕಾರಣವಾದರೂ ಏನಾಗಿದೆ? ಹಿಂದುಗಳು ಬಲಾತ್ಕಾರದಿಂದ ಮತ್ತು ಮೋಸದಿಂದ ಇಸ್ಲಾಮಿಗೆ ಮತಪರಿವರ್ತನೆ ಮಾಡಲ್ಪಡುವುದಿಲ್ಲವೋ

ಸ್ಟೇಟ್ ಖಜಾನೆಯಿಂದ ಹಿಂದುಗಳನ್ನು ಇಸ್ಲಾಮಿಗೆ ಮತಪರಿವರ್ತನೆಮಾಡುವ ಚಳವಳಕ್ಕಾಗಿ ಸ್ಟೇಟಿನ ಒಳಗೆ ಮತ್ತು ಹೊರಗೆ ನೈಜಾಮರು ಮಿತಿಯುಗಟ್ಟಲೆ ಧನಸಹಾಯ ಮಾಡುತ್ತಿಲ್ಲವೇ? ಹಿಂದೂ ಟೇಕ್ಸ್‌ಕೊಡುವವರಿಂದ ಎತ್ತಿದ ಹಣವು ಈ ಕಾರ್ಯಗಳಿಗೆ ಉಪಯೋಗಿಸಲ್ಪಡುವುದಿಲ್ಲವೇ? ಸಂಘಟಿತ ಮುಸ್ಲಿಮರು ಹಿಂದೂ ಜಾತಿಯ ಮೇಲೆ ಅತಿನಿಂದ್ಯ ಅಪರಾಧ- ಹಿಂದೂ ಸ್ತ್ರೀಯರ ಮಾನಹಾನಿ ಮತ್ತು ಕಳವು ಇತ್ಯಾದಿಗಳನ್ನುಮಾಡುತ್ತಿಲ್ಲವೇ? ಇಂಥಾ ಕಾರ್ಯಗಳನ್ನು ಮಾಡಲು ನಿರ್ಭಯವಾಗಿ ಮುಸ್ಲಿಮ್ ಗುಂಡರು ಬಿಡಲ್ಪಟ್ಟಿಲ್ಲವೆ? ಹಿಂದೂದೇವಸ್ಥಾನಗಳನ್ನು ಭ್ರಷ್ಟಗೊಳಿಸುವುದೂ, ಹಗಲಲ್ಲಿಯೇ ಹಿಂದೂ ಬಾಜಾರಗಳನ್ನು ಲೂಟಾಯಿಸುವದೂ ಹಿಂದೂಲೀಡರುಗಳನ್ನು ಮತ್ತು ಉಪದೇಶಕರನ್ನು ಕೊಲೆಮಾಡುವುದೂ ಇಂಥಾಗುಂಡರಿಂದ ಮಾಡಲ್ಪಡುತ್ತಿವೆಯಾದರೂ ನಿಜಾಮ ಪೋಲೀಸರು ಗಮನವೀಯುವುದಿಲ್ಲ. (ಆ ಪೋಲೀಸ್ ವಿಭಾಗದಲ್ಲಿ 80%ನೂರಕ್ಕೆ ಎಂಭತ್ತರಂತೆ ಮುಸ್ಲಿಮರೇ ಅಧಿಕಾರಿಗಳು) ಈ ವರ್ಷವಲ್ಲೊಂದರಲ್ಲಿಯೇ ವೇದಪ್ರಕಾಶ, ಧರ್ಮಪ್ರಕಾಶ ನಾಗಪ್ಪ, ಮಹದೇವ ಮತ್ತು ಇನ್ನು ಬೇರೆ ಉಪದೇಶಕರೂ, ನಾಗರಿಕರೂ ಸಂಘಟಿತ ಮುಸ್ಲಿಮ್ ಮುಂತಾದ ಸಂಗಡದವರಿಂದ ಅತ್ಯಂತ ನಿಂದನೀಯಾವಸ್ಥೆಯಲ್ಲಿ ಕೊಲೆಮಾಡಲ್ಪಡಲಿಲ್ಲವೇ? ಸ್ಥಿತಿ ಹೀಗಿದ್ದರೂ ಕೊಲೆಗಡುಕ ಮುಸ್ಲಿಮರು ಶಿಕ್ಷೆಯಿಲ್ಲದೆ ಎಂದಿನಂತೆ ಬಿಡಲ್ಪಡಲಿಲ್ಲವೇ? ಈ ಎಲ್ಲಾ ಬಲವತ್ತರವಾದ ದುಃಖದಾಯಕ ಕಷ್ಟಗಳನ್ನು ನಿವೇದಿಸಿ ಆರ್ಯ ಸಮಾಜದವರು ಪ್ರತಿನಿಧಿಗಳನ್ನು ಕಳುಹಿಸಿ ವಿಚಾರಣಾಕಾರ್ಯಕ್ಕೆ ಕೈಹಚ್ಚಬೇಕೆಂದು ಕೇಳಿಕೊಳ್ಳಲಿಲ್ಲವೇ? ನಿಜಾಮ ಸರಕಾರವು ಅವರ ನಿವೇದನೆಯನ್ನು ಬಲುತರ ಕೈನೀತಿಯಿಂದ ಆಲಿಸಲಿಕ್ಕಾದರೂ ನಿರಾಕರಿಸಿದ್ದಿಲ್ಲವೇ? 'ಎರಡು ಜಾತಿಗಳೂ ಐಕ್ಯದಿಂದ ಶತಮಾನಗಳ ವರೆಗೆ ಜೀವಿಸುತ್ತಿದ್ದರೆನ್ನುವ "ಐಕ್ಯ"ತೆಯೆಂದರೆ ಇದೇ ತರಹದ್ದೋ? ಅದರ "ಭಂಗ"ಕ್ಕೆ ಈಗ 'ಹೆದರಿಕೆ'ಯೋ? ಹಾಗಿದ್ದರೆ ಆ ರೀತಿಯ ಐಕ್ಯದ ಭಂಗಮಾಡಲು ಹಿಂದೂ ಮಹಾಸಭೆಯು ಬೇಕೆಂದು ನಿಶ್ಚೈಸಿಕೊಂಡಿದೆ. ನ್ಯಾಯಪೂರ್ಣವಾದ ಪ್ರತಿಯತ್ನವನ್ನು ಅತಿಶೀಘ್ರಸಾಧ್ಯವಾಗಿ ಮಹಾಸಭೆಯು ಮಾಡುತ್ತದೆ

ಪ್ರತಿಯತ್ನದ ಜಾತೀಯತೆಯ ಸ್ಥಿತಿ

ಹಿಂದೂಸ್ವಾತಂತ್ರ್ಯಸಂಘ ಭಾಗನಗರ ಹೈದರಾಬಾದ್ ಮತ್ತು ಹಿಂದೂ ಸತ್ಯಾಗ್ರಹ ಮಂಡಲ ಪೂನಾ, ಈ ಸಭೆಗಳಲ್ಲಿ ಹಿಂದೂ ಸಭೆಯವರ ಬೆಂಬಲದಿಂದ ಶ್ರೀ-ಕೇಳ್ಕರರು ಅಧ್ಯಕ್ಷರಾಗಿ ಮಾಡಿದ್ದ ಈ ಸಭೆಗಳು ಸ್ವಭಾವದಲ್ಲಿ ಜಾತೀಯವಾಗಿವೆ ಎಂದು ಮೇಲ್ತೋರಿಸಿದ ಮುಸ್ಲಿಮರ ಅಂಬೋಣವಾಗಿದೆ. ಜಾತೀಯವಾಗಿಲ್ಲದೆ ಮತ್ತೇನು? ಯಾವ ಜಾತಿಯೊಂದನ್ನು ಮತ್ತೊಂದು ಜಾತಿಯ ಉಗ್ರ ಶಾಸನಕ್ಕೊಳಪಡಿಸಿ ಒಂಟಿಯಾಗಿ ಬಿಡಲ್ಪಡುತ್ತದೋ ಆಗ್ಗ, ಎಲ್ಲಾ ಸಾಹಸವು ಅದರ ರಕ್ಷಣೆಗೆ ಮತ್ತು ಅದರ ಬಂಧ ವಿಮೋಚನೆಗೆ ಸಾಗಿರುವಾಗ ಅಂಥಾ ಬಳಲಿದವರಿಗೆ ಜಾತಿಯ ಪ್ರಶ್ನೆ ಎನ್ನುವ ಸಂಬಂಧವು ಆ ಒಂಟಿ ಜಾತಿಗೆ ಇರಲೇಬೇಕಾಗುತ್ತದ. ನಿಜವಾಗಿಯೂ ಅಂಥಾ ಹೋರಾಟವು ನಿಜತ್ವದಲ್ಲಿ ಜಾತೀಯವಾಗಿಲ್ಲ. ಉದಾಹರಣೆಗಾಗಿ ಅಸ್ಪೃಶ್ಯದ ಪ್ರಶ್ನೆಯನ್ನು ನೋಡಿರಿ. ಅಸ್ಪೃಶ್ಯರು ಒಂದು ಜಾತಿಯಾಗಿ ಅಸಾಮರ್ಥ್ಯದಿಂದ ಕೆಲವು ರೀತಿಯಲ್ಲಿ ಬಳಲಬೇಕಾಯಿತು ಅಂಥಾ ತೊಡಕುಗಳ ನಿವಾರಣೆಯು ಮುಖ್ಯವಾಗಿ ಆ ಜಾತಿಗೆ ಸಂಬಂಧವಿರುವಂಥಾದಿರುತ್ತದೆ. ಹಾಗಾದರ ಅಸ್ಪೃಶ್ಯತೆಯನ್ನು ಹೋಗಲಾಡಿಸುವದು ಜಾತೀಯತೆ ಎಂದು ಎನ್ನಲಾಗುವುದೇ? ಅದು ದೂಷ್ಯ ಅಥವಾ ರಾಷ್ಟ್ರೀಯತೆಯಲ್ಲಿ ಅಪವಿತ್ರವಾಗಿ ಎಣಿಸಲ್ಪಟ್ಟಿದೆಯೇ? ಹಿಂದೂ ಸಂಘಟನೆಯವರಿಂದ ಹೂಡಲ್ಪಟ್ಟ ಪ್ರತಿಯತ್ನದ ಜಾತೀಯತೆಯ ತರಹವು ಇದೇ ರೀತಿಯಾಗಿರುತ್ತದೆ.

ಹಿಂದುಗಳನ್ನು ವಂಚಿಸುವಿಕೆ

ಎಲ್ಲಾ ಜಾತಿಯವರಿಗೂ ನಾಗರಿಕ ಅಧಿಕಾರ ಸ್ವಾತಂತ್ರ್ಯವು ನಿರಾಕರಿಸಲ್ಪಟ್ಟಿದೆಯೆನ್ನುವುದು ಒಂದು ಸುಳ್ಳಾಗಿದೆ. ಹಿಂದುಗಳಿಗೆ ಭಾಷಣದ ನಾಗರಿಕ ಸ್ವಾತಂತ್ರ್ಯ ಸಂಘ, ಸಭೆ, ದೇವೋಪಾಸನೆಯೆಲ್ಲವೂ ನಿರಾಕರಿಸಲ್ಪಟ್ಟಿದೆ. ಪಬ್ಲಿಕ್ ಸರ್ವೀಸಿನಲ್ಲಿ ಭಾಗವಹಿಸಲು ಬಹಿಷ್ಕಾರವಿದೆ. ಅಲ್ಲದೆ ಆಡಳಿತೆಯಲ್ಲಿ ಯಾವದೇ ರೀತಿಯಲ್ಲಾದರೂ ಉಸಿರೆತ್ತಲು ಸ್ವಾತಂತ್ರ್ಯವಿಲ್ಲ ಮುಸ್ಲಿಮರು ಹಗೆ ತೀರಿಸುವ ರೀತಿಯಲ್ಲಿ ಪಬ್ಲಿಕ್ ಸರ್ವೀಸುಗಳನ್ನು ಮತ್ತು ಆಫೀಸುಗಳನ್ನು ತಮ್ಮ ಹಕ್ಕಾಗಿ ಮಾಡಿ, ಹಿಂದುಗಳೇ ಬಹುವಧಿಕ ರೆವಿನ್ಯೂ ಮತ್ತು ಟೇಕ್ಸ್ ಕೊಡುವವರಾದರೂ ಆಡಳಿತೆಯನ್ನು ತಮ್ಮ ಸ್ವಾಧೀನವೇ ಇಟ್ಟು ಅನುಭೋಗಿಸುತ್ತಾರೆ. ಹಿಂದುಗಳಿಂದಲೇ ಹೆಚ್ಚಾಗಿ ಸ್ಟೇಟಿನ ಟ್ರೆಜರಿಯು ತುಂಬುವುದಾದರೂ ಪರಿಸ್ಥಿತಿ ಹೀಗಿದೆ ಹಿಂದುಗಳು ಒಂದು ಜಾತಿ, ಧರ್ಮ ಮತ್ತು ನಾಗರಿಕತೆಯ ಹುಟ್ಟಳಿಸುವಂತೆ ಬೆದರಿಸಲ್ಪಟ್ಟಿದ್ದಾರೆ ಆದುದರಿಂದ ಹಿಂದೂ-ಮುಸ್ಲಿಮ್ ಚಳವಳವೆಂಬ ಬಣ್ಣ ಹಾಕಿಕೊಂಡು ಹೋರ್‍ಡಲು ಮಹಾಸಭೆಯು ನಿರಾಕರಿಸುತ್ತದೆ. ಆದುದರಿಂದ ಮಿಶ್ರಣವಿಲ್ಲದ ಹಿಂದೂ ಝುಂಡೆ ಪತಾಕೆಯ ಕೆಳಗೆ ಹಿಂದೂ ಭ್ರಾತೃಗಳ ರಕ್ಷಣೆಗೆ ಹಿಂದೂ ಮಹಾಸಭೆಯು ಪ್ರಥಮತಃ ಪ್ರವೇಶಿಸುತ್ತದೆ. ಹಿಂದೂ ಮಹಾಸಭೆಯ ಈ ಕಾರ್ಯವನ್ನು ಜಾತೀಯತೆ ಯಾ ಮರಮಾನ್ಯ ಅಥವಾ ಇನ್ನಿತರ ರೀತಿಯಲ್ಲಿ ತಿಳಿದು ಕರೆದರೂ ನಾವು ಅದಕ್ಕೆ ಒಂದು ಅಂಜೂರದ ಬೆಲೆಕೊಡುತ್ತೇವೆ.

"ರಾಷ್ಟ್ರವಾದಿ"ಗಳೆಂದು ಮಧ್ಯರಾತ್ರಿಯಲ್ಲಿ ಗೋಚರಕ್ಕೆ ಬಂದ ಮುಸ್ಲಿಮರು ಸಹಜವಾಗಿಯೂ ಜಾತಿಯಲ್ಲಿ ಶಾಂತಿಭಂಗವಾಗುತ್ತದೆಂದು ತಿಳಿಯುವುದಾದರೆ ಮೊತ್ತಮೊದಲು ಎಲ್ಲಾ ಮುಸ್ಲಿಮ್ ಮತಾಂಧ ಸಂಸ್ಥೆಗಳನ್ನು ಬಹಿಷ್ಕರಿಸಬೇಕು. ಮತ್ತು ಅಂದರೆ ಖಾಕ್ಸಾರಗುಂಡ ಸಂಸ್ಥೆಗಳ ಹಾಗಿನ ಸಂಸ್ಥೆಗಳನ್ನು ಮತ್ತು ನಿಜಾಮರು ಎಲ್ಲಾ ಜಾತಿಯವರಿಗೂ ಸರಿಸಮಾನ ರೀತಿಯಲ್ಲಿ ವ್ಯವಹಾರವಿಡುವಂತೆ ಅಂದರೆ ವಚನದಲ್ಲಿಯೂ, ಕಾರ್ಯದಲ್ಲಿಯೂ ನಿವೇದನೆಮಾಡಬೇಕು ಸ್ಟೇಟಿನಲ್ಲಿ 85% ನೂರಕ್ಕೆ ಎಂಭತ್ತೈದರಂತೆ ಹಿಂದುಗಳಿರುವದರಿಂದ ಪೂರ್ಣ ಪ್ರತಿನಿಧಿಗಳಿರುವ ಸರಕಾರವನ್ನು ರಚಿಸಿ 75% ಹಿಂದೂ ಪ್ರತಿನಿಧಿಗಳಿರುವ ನ್ಯಾಯವಿಧಾಯಕ (Assembly) ಸಭೆಯ ಗ್ಯಾರೆಂಟಿಕೊಡಬೇಕು. ಇದು ನಿಜವಾಗಿಯೂ ಫಲಕಾರಿ ಮತ್ತು ರಾಷ್ಟ್ರೀಯವಾದ ಮಾರ್ಗವಾಗಿದೆ. ಹೀಗೆಮಾಡುವದರಿಂದ .ಜಾತಿಯ ಐಕ್ಯಭಂಗಕ್ಕೆ ಕಾರಣವಿಲ್ಲ. ಹಿಂದುಗಳು ಸತ್ಯಾಗ್ರಹ ಹೂಡಿದರೆ ಬೆದರಿಕೆ ಹಾಕಿ ಅವ

ಪುಟ ೧೩ರಲ್ಲಿ ನೋಡಿರಿ

THE TROPICAL
Insurance Co., Ltd.
NEW DELHI

Chairman: Sjt SUBHAS CHANDRA BOSE.
(*PRESIDENT*, INDIAN NATIONAL CONGRESS)

100% Swadeshi Concern founded by such eminent Leaders as
PANDIT MOTHILAL NEHRU. Dr M. A. ANSARI,
HAKIM AJMAL KHAN, T. A. K. SHERWANI.
and others

WANTED influential Agents, Special Agents and Organisers on liberal commission and salary.

APPLY TO

M. SUNDER RAM SHETTY, BRANCH MANAGER, HAMPANKATTA MANGALORE.
Or
K. S. RAMAMURTHI, M. A. BRANCH SECRETARY, 160 MOUNT ROAD, MADRAS.

ಮದನರತಿಕಾಮಶಾಸ್ತ್ರವೆಂಬಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ ಇದರಲ್ಲಿ ಎಲ್ಲಾ ದೇಶದ ವೇಶ್ಯಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಗೆಯೆ ಸುಖ ವಿಲಾಸಗಳು ಸ್ತ್ರೀ-ಪುರುಷರು

ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳ ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ ಓದಿನೋಡಿರಿ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಅಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

THE
Canara Banking Corporation, Udipi, Ltd.
Established] (INCORPORATED IN BRITISH INDIA) [1906.
MEMBER:-
RESERVE BANK OF INDIA
BANKERS' CLEARING HOUSE, MADRAS.

Capital Authorised, Issued & Subscribed	Rs.	3,50,000
Paid up Capital	.... Rs.	3,03,205
Reserves	... Rs.	3,88,842

RATES OF INTEREST ON DEPOSITS

3 months	...	2½% p. a.
6 or 9 months	...	3 % p. a.
12 or 24 months	...	3½% p. a.
Short Term	..	2 % p. a.

All kinds of Banking Transactions undertaken.

ಉಡುಪಿ, ಗುರುವಾರ, ತಾ. ೧-೧೨-೩೮

ಯೆಹೂದ್ಯ ಪ್ರಶ್ನೆ

ಜರ್ಮನಿ ಇಟಲಿ ಮೊದಲಾದ ಫೆಸಿಸ್ಟ ರಾಜ್ಯಗಳಲ್ಲಿ ಯೆಹೂದ್ಯರೀಗ ಅಮಾನುಷ ಪೀಡೆಗೊಳಗಾಗಿದ್ದಾರೆ. ಜರ್ಮನಿಯಿಂದ ಯೆಹೂದ್ಯರನ್ನು ಸಂಪೂರ್ಣವಾಗಿ ಹೊರ ದಬ್ಬುವುದೇ ನಾಜಿ ಸರಕಾರದ ಉದ್ದೇಶವಿದೆ. ಯೆಹೂದ್ಯರ ಕುರಿತು ನಾಜಿಗಳು ನಡಿಸಿರುವ ಪೈಶಾಚಿಕ ಅತ್ಯಾಚಾರಗಳಿಂದ ನಾಗರಿಕ ಲೋಕವೇ ಜುಗುಪ್ಸೆಗೊಂಡಿದೆ. ಈ ಸಂಬಂಧವಾಗಿ ಅಮೇರಿಕಕ್ಕೂ ಜರ್ಮನಿಗೂ ತೀವ್ರ ವೈಷಮ್ಯವೆದ್ದಿದೆ. ಜರ್ಮನಿ, ಇಟಲಿ ಮೊದಲಾದ ದೇಶಗಳಿಂದ ಹೊರ ಹಾಕಲ್ಪಡುವ ಸಾವಿರಾರು ಮಂದಿ ಯೆಹೂದ್ಯರು ಜೀವನೋಪಾಯಕ್ಕೆ ಗತಿಯಿಲ್ಲದೆ ಕಂಗೆಟ್ಟು ನರಳುತ್ತಿದ್ದಾರೆ. ಇವರಿಗೆ ಸಾಧ್ಯವಾದ ಸಹಾಯವಮಾಡುವ ಪ್ರಯತ್ನವು ನಡೆದಿದೆ. ಲೋಕದ ಯೆಹೂದ್ಯರೆಲ್ಲಾ ಪೆಲೆಸ್ತಿನವನ್ನು ತಮ್ಮ ಪವಿತ್ರ ನಿವಾಸವಾಗಿ ಪರಿಗಣಿಸುತ್ತಾರೆ. ಪೆಲಿಸ್ತಿನದಲ್ಲಿ ತಮ್ಮ ನಿವಾಸವೊಂದನ್ನು ಸ್ಥಾಪಿಸಲು ಬ್ರಿಟಿಷ್ ಸರಕಾರದ ಸಹಾಯದಿಂದ ಅವರು ನಡಿಸಿದ ಪ್ರಯತ್ನವು, ಅರಬರ ಪ್ರಬಲ ವಿರೋಧದಿಂದ ತಡೆಗಟ್ಟಲ್ಪಟ್ಟಿದೆ. ಪೆಲೆಸ್ತಿನದಲ್ಲಿ ಅರಬರು ದೊಡ್ಡ ಬಂಡಾಯವೆಬ್ಬಿಸಿರುತ್ತಾರೆ. ಅನಾದಿಕಾಲದಿಂದಲೂ ತಮ್ಮದಾಗಿದ್ದ ಪೆಲೆಸ್ತಿನವನ್ನು ಈಗ ಬ್ರಿಟಿಷರು ಬಲಾತ್ಕಾರದಿಂದ ಯೆಹೂದ್ಯ ಮತ್ತು ಅರಬರೊಳಗೆ ಹಂಚಿಹಾಕುವ ಕುತಂತ್ರ ನಡಿಸುತ್ತಿದ್ದಾರೆಂದು ಅರಬರೆಲ್ಲಾ ಉರಿದೆದ್ದಿದ್ದಾರೆ. ಲೋಕದ ಮುಸಲ್ಮಾನ ಜನತೆಯ ಸಹಾನುಭೂತಿ ಮತ್ತು ಸಹಾಯವು ಅವರಿಗಿದೆ. ಆದುದರಿಂದ ಪೆಲೆಸ್ತಿನದಲ್ಲಿ ತಮ್ಮ ಜನರಿಗೆ ನಿವಾಸವೊಂದನ್ನು ಸ್ಥಾಪಿಸುವ ಯೆಹೂದ್ಯರ ಪ್ರಯತ್ನವು ಕೈಗೂಡುವುದೆಂದು ಹೇಳಬರುವಂತಿಲ್ಲ.

ಮಹಾತ್ಮ ಗಾಂಧಿಯವರು ಯೆಹೂದ್ಯ ಪ್ರಶ್ನೆಯ ಕುರಿತು ಹರಿಜನದಲ್ಲಿ ಪ್ರಕಟಿಸಿರುವ ಲೇಖವು ಅತ್ಯಂತ ಬೋಧಪರವಿದೆ. ಯೆಹೂದ್ಯರ ಕುರಿತು ನಾಜಿ ಸರಕಾರವು ನಡಿಸುತ್ತಿರುವ ಬರ್ಬರ ಅತ್ಯಾಚಾರವನ್ನವರು ಸಂಪೂರ್ಣವಾಗಿ ನಿಷೇಧಿಸಿರುತ್ತಾರೆ. ಮತ್ತು ಕ್ರೈಸ್ತರ ದೃಷ್ಟಿಯಲ್ಲಿ ಹಿಂದೂ ದೇಶದ ಅಸ್ಪೃಶ್ಯರಂತಿರುವ ಯೆಹೂದ್ಯರು ಈ ಪೈಶಾಚಿಕ ಪೀಡೆಯನ್ನು ಅಹಿಂಸಾತ್ಮಕ ಸತ್ಯಾಗ್ರಹದ ಮೂಲಕ ಪ್ರತಿಭಟಿಸಬೇಕೆಂದು ಸೂಚಿಸಿರುತ್ತಾರೆ. ದಕ್ಷಿಣ ಆಫ್ರಿಕದಲ್ಲಿನ ಹಿಂದೀಯರ ಹಕ್ಕುಬಾಧ್ಯತೆಗಳನ್ನು ಕಾಪಾಡಲು ತಾನು ಸತ್ಯಾಗ್ರಹ ಹೂಡುವ ಮೊದಲು ಹಿಂದೀಯರ ಅವಸ್ಥೆಯು ಯೆಹೂದ್ಯರಿಗಿಂತಲೂ ಬಹಳ ಕಳತೆಯಾಗಿತ್ತು. ಅವರಿಗೆ ಲೋಕದ ಸಹಾನುಭೂತಿಯಿರಲಿಲ್ಲ. ಅವರ ಸಂಕಷ್ಟದ ಸಂಗತಿಯೇ ಲೋಕಕ್ಕೆ ತಿಳಿದಿರಲಿಲ್ಲ. ಆದರೂ ಸತ್ಯಾಗ್ರಹವನ್ನವರು ಜಯಶೀಲವಾಗಿ ನಡಿಸಿ ತಮ್ಮ ಗೌರವವನ್ನು ಕಾಪಾಡಿಕೊಂಡರು. ಇದೇ ರೀತಿ ಯೆಹೂದ್ಯರು ಜರ್ಮನ್ ಸರಕಾರದ ಎದುರಿಗೆ ಸತ್ಯಾಗ್ರಹ ಮಾಡಿ, ಅವರ ಎಂತಹ ಹಿಂಸೆಗಾದರೂ ಸಂತೋಷದಿಂದ ಎದೆಯೊಡ್ಡಿ ತಮ್ಮ ಗೌರವವನ್ನು ಕಾಪಾಡಿಕೊಳ್ಳಬಹುದು. ಯೆಹೂದ್ಯರು ಬ್ರಿಟಿಷ್ ತೋಪಿನ ಆಶಯದಲ್ಲಿ ಪೆಲೆಸ್ತಿನವನ್ನು ತಮ್ಮ ನಿವಾಸವಾಗಿ ಮಾಡಲು ಪ್ರಯತ್ನಿಸುತ್ತಿರುವುದು ಶುದ್ಧ ಅವಿವೇಕ. ಅರಬರ ಹೋರಾಟವು ನ್ಯಾಯವಾದುದು. ಯೆಹೂದ್ಯರು ತಾವು ವಾಸಿಸುವ ದೇಶವನ್ನೇ ತಮ್ಮ ಮಾತೃಭೂಮಿಯನ್ನಾಗಿ ಮಾಡಿಕೊಳ್ಳಬೇಕು. ಪ್ರೀತಿ ಮತ್ತು ಸೌಹಾರ್ದದಿಂದ ಅರಬರನ್ನೊಲಿಸಿಕೊಂಡೇ ಪೆಲೆಸ್ತಿನದಲ್ಲಿ ವಾಸಿಸಲೆತ್ನಿಸಬೇಕೇ ಹೊರತು ಬಲಾತ್ಕಾರವನ್ನು ಉಪಯೋಗಿಸಿದರೆ ಎಂದಿಗೂ ಅದರ ಪರಿಣಾಮ ನೆಟ್ಟಗಾಗಲಾರದೆಂದೇ ಮಹಾತ್ಮರ ಅಭಿಮತ.

ಮೌಲಾನ ಶೌಕತಾಲಿಗಳ ನಿಧನ

ಇದೇ ತಾ. 27ರಲ್ಲು ಮೌಲಾನ ಶೌಕತಾಲಿಗಳು ತನ್ನ 65ನೇ ವಯಸ್ಸಿನಲ್ಲಿ ಅಕಸ್ಮಾತ್ತಾಗಿ ನಿಧನ ಹೊಂದಿದುದು ಅತ್ಯಂತ ವಿಷಾದಕರವಿದೆ. ಮೌಲಾನರು ಇತ್ತಲಾಗಿ ಮುಸ್ಲಿಮ್ ಲೀಗಿಗೆ ಸೇರಿ, ಮಿ. ಜಿನ್ನರವರ ನಾಯಕತ್ವದಲ್ಲಿ ಉಗ್ರ ಘೋಷಣೆ ವಹಿಸಿದರೂ ಸಂದರ್ಭ ಬಂದಾಗ ಅವರ ಹೃದಯವು ಹಿಂದೂ ಮುಸಲ್ಮಾನ ಐಕ್ಯ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯದ ಕಡೆಗೇನೇ ಒಲಿಯುತ್ತಿತ್ತೆಂದು ಧೈರ್ಯದಿಂದ ಹೇಳಬಹುದು. ಕಾಂಗ್ರೆಸಿನೊಂದಿಗೆ ಗೌರವಪೂರ್ವಕವಾದ ಒಪ್ಪಂದಕ್ಕಾಗಿ ಅವರು ಸದಾ ಹಾತೊರೆಯುತ್ತಿದ್ದರು. ಮಿ. ಜಿನ್ನರವರ ಹಿಡಿತದಿಂದ ಮಾತ್ರ ಅವರು ಇಷ್ಟೊಂದು ಉಗ್ರಜಾತೀಯ ವಾದಿಗಳಾಗಲು ಕಾರಣ. ಅಸಹಕಾರದ ಆರಂಭದಲ್ಲಿ ಖಿಲಾಫತ್ ಚಳವಳದ ಆಧಾರಸ್ತಂಭರಾಗಿ ಗಾಂಧಿಜಿಯವರೊಂದಿಗೆ ಸಹೋದರರಂತೆ ಬೆರೆತು ಇಡೀ ದೇಶದಲ್ಲೆಲ್ಲಾ ಸಂಚರಿಸಿ ದೇಶವನ್ನು ರೋಮಾಂಚಗೊಳಿಸಿದ ಆ ಕಾಲವು ಕಾಂಗ್ರೆಸಿನ ಇತಿಹಾಸದಲ್ಲಿ ಸ್ಮರಣೀಯವಿರುವುದು. ಅಂದು ಅಲಿಸಹೋದರರು ಹಿಂದೂಮುಸಲ್ಮಾನ ಐಕ್ಯದ ಮೂರ್ತಸ್ವರೂಪರಿದ್ದರು. ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಎಂತಹ ತ್ಯಾಗಕ್ಕಾದರೂ ಸಿದ್ಧರಿದ್ದರು. ಕಠಿಣ ಕಾರಾಗೃಹವಾಸವನ್ನು ಅನುಭವಿಸಿದ್ದರು. ಅಶಿಕ್ಷಿತರಾಗಿ ಬಹಳವಾಗಿ ಹಿಂದುಳಿದಿದ್ದ ಮುಸಲ್ಮಾನ ಜನ ಸಾಮಾನ್ಯರಲ್ಲಿ ರಾಜಕೀಯ ಮತ್ತು ಧಾರ್ಮಿಕ ನವಜಾಗ್ರತಿಯನ್ನುಂಟುಮಾಡಿದವರು ಅಲಿಸಹೋದರರು. ಆ ಕಾಲದಲ್ಲಿ ಎಡಬಲ ಕೈಗಳಂತೆ ಅಲಿಸಹೋದರರು ಮಹಾತ್ಮರನ್ನನುಸರಿಸುತ್ತಿದ್ದರು. ಮೌಲಾನ ಶೌಕತಾಲಿಯು ತನ್ನ ದೇಹದಂತೆಯೇ ದೊಡ್ಡ ಹೃದಯವಿದ್ದವರು, ಜನತೆಯಿಂದ ಆವೇಶದಿಂದ ತುಂಬುವ ಸ್ಫೂರ್ತಿಪರ ವ್ಯಕ್ತಿತ್ವವಿದ್ದವರು. ಎಂತಹ ಪರಿಣಾಮಕ್ಕಾದರೂ ಅಂಜದೆ ಎದೆಯೊಡ್ಡಿ ಕಾರ್ಯರಂಗಕ್ಕಿಳಿದು ಹೋರಾಡುವ ಯೋಧರು. ಮೌಲಾನರ ನಿಧನದಿಂದ ಹಿಂದುದೇಶವು ದೇಶದ ಅಗ್ರಗಣ್ಯ ಹಾಗೂ ಜನ ಮೆಚ್ಚಿಗೆಯ ಅಮೂಲ್ಯನಾಯಕರೊಬ್ಬರನ್ನು ಕಳಕೊಂಡಂತಾಗಿದೆ.

ಉಡುಪಿ

ಬಾಳೆ ಮುಹೂರ್ತ—ಬರುವ ವರ್ಷ ಜರಗಲಿರುವ ಅದಮಾರು ಮಠಾಧಿಪತಿಗಳ ಪರ್ಯಾಯದ ಸಲುವಾಗಿ ಜರಗತಕ್ಕ ಬಾಳೆ ಮುಹೂರ್ತವು ಕಳದ ತಾ. 27-11-38ನೇ ಆದಿತ್ಯವಾರ ಪೂರ್ವಾಹ್ನ ಸಂಪ್ರದಾಯ ವಿಧಿಗನುಸರವಾಗಿ ಜನರಲ್ ಏಜಂಟ್ ಶ್ರೀ. ವೆಂಕೋಬಾಚಾರ್ಯರ ನಾಯಕತ್ವದಲ್ಲಿ ಸಾಂಗವಾಗಿ ಆಚರಿಸಲ್ಪಟ್ಟಿತು.

ಸಾರಸ್ವತ ಸ್ವಾಮಿಗಳು—ಸಾರಸ್ವತ ಬ್ರಾಹ್ಮಣ ಸಮಾಜದ ಸ್ವಾಮಿಗಳವರು ಕಳದ ಅಮಾವಾಸ್ಯೆ ಲಕ್ಷದೀಪೋತ್ಸವದ ಸಲುವಾಗಿ ಉಡುಪಿಗೆ ಚಿತ್ತೈಸಿದಾಗ ಸಮಾಜದ ಹತ್ತು ಸಮಸ್ತರು ಶ್ರೀಗಳವರಿಗೆ ಸ್ವಾಗತವನ್ನಿತ್ತರು. ಪರ್ಯಾಯ ಶ್ರೀ ಫಲಿಮಾರು ಸ್ವಾಮಿಗಳವರು ಪರ್ಯಾಯ ಮಠದ ಕಡೆಯಿಂದ ಉಲುಪೆಯನ್ನು ಕಳುಹಿಸಿ ಗೌರವಿಸಿದರು, ಪ್ರತಿರೂಪವಾಗಿ ಸನ್ನಿಧಾನಕ್ಕೆ ಯಥಾಶಕ್ತಿ ಕಾಣಿಕೆ ಕಳುಹಿಕೊಟ್ಟರು. ಶ್ರೀಗಳವರು ವಿಠಲದಲ್ಲಿ ಮೊಕ್ಕಾಂಮಾಡಿ ಮಂಗಳೂರಿಗೆ ಹೋಗಲಿರುವರಂತೆ.

ಸುಬ್ರಹ್ಮಣ್ಯ ಷಷ್ಠಿ—ಚಂಪಾ ಷಷ್ಠಿ ನಿಮಿತ್ತ ಶ್ರೀ ಕೃಷ್ಣಮಠದಲ್ಲಿ ರಥೋತ್ಸವವೂ ಮಹಾಜನ ಸಂತರ್ಪಣೆಯೂ ಪರ್ಯಾಯ ಶ್ರೀ ಫಲಿಮಾರು ಸ್ವಾಮಿಗಳವರಿಂದ ನಡಿಸಲಾಯಿತು.

ಸರೋವರದಲ್ಲಿ ಹೆಣ—ಶ್ರೀಕೃಷ್ಣ ಸನ್ನಿಧಾನದ ಸರೋವರದಲ್ಲಿ ತಾ. 29ನೇ ಮಂಗಳವಾರ ಬೆಳಗ್ಗೆ ಪರವೂರ ಓರ್ವ ಯುವಕನ ಹೆಣವು ತೇಲುತ್ತಿದ್ದುದನ್ನು ಮೇಲಕ್ಕೆ ತೆಗೆಯಲಾಯಿತು. ಇವನು ಆತ್ಮಹತ್ಯೆ ಮಾಡಿಕೊಂಡನೋ ಪರಾಮೋತಿಯಿಂದ ಬಿದ್ದನೋ ಏನೆಂದು ತಿಳಿದು ಬಂದಿಲ್ಲ.

ಪ್ರಚಾರ—ಉಡುಪಿಯಲ್ಲೊಂದು ಆರ್ಯಸಮಾಜ ಪ್ರಚಾರ ಸಭೆಯು ಇತ್ತೀಚೆಗೆ ಸ್ಥಾಪಿಸಲ್ಪಟ್ಟಿತಷ್ಟೆ. ತಾ. 29, 30ರಲ್ಲು ಶ್ರೀ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರು 'ವೈದಿಕ ಧರ್ಮದ ಮಹತ್ವ'ದ ಕುರಿತು ರಥಬೀದಿಯಲ್ಲಿ ಭಾಷಣವಿತ್ತರು.

ದತ್ತ ಜಯಂತಿ—ವಾದಿರಾಜಪೇಟೆಯಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಶ್ರೀದತ್ತಾತ್ರೇಯ ಮಂದಿರದಲ್ಲಿ ಶ್ರೀ ದತ್ತಜಯಂತಿ ಸಪ್ತಾಹವು ತಾ. 1 12-38 ರಿಂದ ತಾ 8-12-38ರ ತನಕ ವಿವಿಧ ಕಾರ್ಯಕ್ರಮಗಳಿಂದ ಜರಗಲಿರುವುದರಿಂದ ಎಲ್ಲರಿಗೂ ಸ್ವಾಗತವೀಯುವುದಾಗಿ ಶ್ರೀ. ಕೆ. ಶ್ರೀನಿವಾಸ ಕುಡ್ವರು ತಿಳಿಸುತ್ತಾರೆ.

ಸರೋಜಿನಿ ದೇವಿಯವರು ಬಂಗಾಳ ಗವರ್ನರರನ್ನು ಕಂಡರು

ಕಲ್ಕತ್ತಾಕ್ಕೆ ಬಂದಿದ್ದ ಶ್ರೀಮತಿ ಸರೋಜಿನಿ ನಾಯುಡು, ಇವರು ಕಳದ ತಾ. ೨೬ನೇ ಮಧ್ಯಾಹ್ನ ನಂತರ ಬಂಗಾಳ ಗವರ್ನರರ ಮತ್ತು ಅವರ ಪತ್ನಿಯೊಡನೆ ಮಾತುಕಥೆ ನಡೆಸಿದರು. ಈ ಸಂದರ್ಶನೆಯು ವೈಯಕ್ತಿಕವಾದುದೆಂದು ತಿಳಿದುಬರುತ್ತದೆ.

ಜಸ್ಟಿಸ್ ಪಾರ್ಟಿಯ ನೋಟೀಸು

ಮದ್ರಾಸು ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಜಸ್ಟಿಸ್‌ಪಾರ್ಟಿಯು, 'ಹಿಂದಿಹೋಗಲಿ, ತಮಿಳು ಬಾಳಲಿ' ಎಂದು ಉಚ್ಚರಿಸುತ್ತಿದ್ದ ಮಹಿಳೆಯರನ್ನು ಕೂಡಾ ಶಿಕ್ಷೆಗೆ ಒಳಪಡಿಸಿದ ಸರಕಾರದ ವರ್ತನೆಯನ್ನು ಚರ್ಚಿಸುವರೆ, ಸಭೆ ಮುಂದರಿಸಲು ನೋಟೀಸು ಕೊಟ್ಟಿದ್ದಾರಾಗಿ ತಿಳಿಯುತ್ತದೆ.

ಮೇಜರ್ ಎ. ಎನ್. ಕೆ. ಮರಣ ಹೊಂದಿದರು.

ನವಶೇರದಲ್ಲಿ ಹುಚ್ಚುಗಟ್ಟಿದ ಸಿಪಾಯಿಯೊಬ್ಬನ ಗುಂಡಿಗೆ ಬಲಿಬಿದ್ದ ಮೇಜರ್ ಎ. ಎನ್. ಕೆ.ಯವರು ಮರಣ ಹೊಂದಿದರು. ಅದೇ ಸಮಯದಲ್ಲಿ ಗುಂಡಿನಿಂದ ಹೊಡೆಯಲ್ಪಟ್ಟ ಜಮಾದಾರ್ ಪಟಿಹೆಖಾನರು, ಪೆಟ್ಟಿನಿಂದ ಮಡಿದರು ಎಂದಾಗಿ ತಿಳಿದುಬರುತ್ತದೆ.

ನೋಟೀಸು.

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. P. No. 52/1938.

1. ಚುಂಗಮ್ಮ ಶೆಟ್ರು, ಹಾಡಿಮನೆ ವೆಂಕಪ್ಪ ಶೆಟ್ರ ಹೆಂಡತಿ ...
2. ಕಮಲ ಶೆಟ್ಟಿ, 1ನೇ ಅರ್ಜದಾರಳ ಮಗಳು ...

ಉಡುಪಿ ತಾಲೂಕು ಮೂಡಬೆಟ್ಟು ಗ್ರಾಮದಲ್ಲಿರುವವರು. } ಅರ್ಜದಾರರು.

1ನೇ ಅರ್ಜದಾರಳ ಮಗ ವ 2ನೇ ಅರ್ಜದಾರಳ ಸಹೋದರ ಹಾಲ್ ಮೃತಪಟ್ಟ ಐತು ಯಾನೆ ವಿಟ್ಠಲ ಶೆಟ್ಟಿಗೆ "Oriental Government Security Life Assurance Company Ltd.," ಈ ಕಂಪೆನಿಯಿಂದ ನಂಬ್ರ 384601ನೇ ಪೋಲಿಸಿಯ ಬಾಬ್ತು ಬರಬೇಕಾದ ರೂಪಾಯಿ 500—0—0, ಐದುನೂರು ರೂಪಾಯಿಗಳನ್ನು ಸದ್ರಿ ಕಂಪೆನಿಯಿಂದ ವಸೂಲು ಪಡೆಯುವರೆ ಅರ್ಜದಾರರ ಕಡೆಯ ಯಜಮಾನ್ತಿಯಾದ 1ನೇ ಅರ್ಜದಾರಳ ಹೆಸರಲ್ಲಿ ಸಕ್ಸೇಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜದಾರರು ಅರ್ಜಿಕೊಟ್ಟಿರುತ್ತಾರಾಗಿಯೂ, ಸದ್ರಿ ಅರ್ಜಿಯು ತಾರೀಕು 15-12-38ಕ್ಕೆ ತನಿಖೆ ಬಗ್ಗೆ ಇಟ್ಟಿರುತ್ತದಾಗಿಯೂ, ಸದ್ರಿ ಅರ್ಜಿ ನ್ಯಾಯ ಹರಣೆಯಲ್ಲಿ ಆಕ್ಷೇಪ ಹೇಳುವವರು ಇರುವ ಪಕ್ಷದಲ್ಲಿ ಸದ್ರಿ ದಿವಸ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದೆಂತಲೂ ಸಹಾ ಈ ಮೂಲಕ ಸರ್ವ ಜನರಿಗೂ ತಿಳಿಸಲಾಗಿಯದೆ.

ಉಡುಪಿ, ತಾ.26-11-38 } **T. G. Shetty,** *Vakil for Petr.*

ಮೌಲಾನಾ ಶೌಕತಾಲಿಯವರ ನಿಧನ — ಫ್ರಾನ್ಸಿನಲ್ಲಿ ಮುಷ್ಕರ

ಸುಭಾಸಭೋಸರು ಸಿಂಧನ್ನು ಪ್ರಥಮತಃ ಸಂದರ್ಶಿಸ ಲಿರುವರು

ಸಿಂಧಿ ಪ್ರಾಂತೀಯ ಕಾಂಗ್ರೆಸು ಕಮಿಟಿಯ ಕಾರ್ಯದರ್ಶಿಯರಿಗೆ ಸುಭಾಸರು ತಾನು ದಶಂಬರ ತಾ. 10ರಿಂದ ಮೂರು ದಿನಗಳವರೆಗೆ ಸಿಂಧಿ ಪ್ರಾಂತ್ಯದಲ್ಲಿ ಸಂಚರಿಸುವೆನಾಗಿ ತಿಳಿಸಿದ್ದಾರೆ. ವಾರ್ಧಾದ ಮೀಟಿಂಗು ದಶಂಬರ 12ರ ವರೆಗೆ ಮುಂದರಿಯುವುದಾದರೆ ತಾನು ಮತ್ತೆರಡು ದಿನ ಸಿಂಧಿನಲ್ಲಿರುವೆನೆಂದು ತಿಳಿಸಿದ್ದಾರೆ. ಇದೀಗ ಭೋಸರು ಸಿಂಧಿಗೆ ಪ್ರಥಮ ಬಾರಿ ಸಂದರ್ಶನೆಯನ್ನೀಯುವುದಾಗಿದೆ.

ದೇವಸ್ಥಾನ ಪ್ರವೇಶ ಮಸೂದೆ

ಶ್ರೀಗಳಾದ ಪಿ. ಎಸ್. ನಾರಾಯಣ ಅಯ್ಯರ್, ಸಿ. ಉನ್ನಿಕಂಡಮೆನನ್, ಕೆ. ಪಿ. ರಾಮಕೃಷ್ಣ ಅಯ್ಯರ್, ಟಿ. ಕೆ. ಕೃಷ್ಣ ಅಯ್ಯರ್, ಎಮ್. ಸಿ. ಉದಯವರ್ಮ ರಾಜ ಮತ್ತು ಡಾ ಕೆ ಎ. ಶಂಕರನಾರಾಯಣ ಅಯ್ಯರ್—ಇವರಿಂದ ಕೂಡಿದ ಡೆಪ್ಯುಟೇಶನು ಪ್ರಧಾನ ಮಂತ್ರಿಗಳಾದ ರಾಜಾಜಿಯವರನ್ನು ತಾ. 28ರಲ್ಲಿ ಕಂಡಿತು. ಮತ್ತು ಮಲಬಾರು ದೇವಸ್ಥಾನ ಪ್ರವೇಶ ಮಸೂದೆಯ ಪ್ರತಿಯಾಗಿ ತಮ್ಮ ವಿಚಾರವನ್ನು ನಿವೇದಿಸಿತು.

ಅವರು ಮುಖ್ಯವಾಗಿ ತಮ್ಮ ಪತ್ರದಲ್ಲಿ ಸೂಚಿಸಿದ ವಿಷಯಗಳ ಸಾರವೆಂದರೆ ಒನ್ನು ಈ ಮಸೂದೆಯಂತೆ ಹರಿಜನರು ದೇವಸ್ಥಾನ ಪ್ರವೇಶಮಾಡಿದರೆಂದರೆ, ತಮ್ಮ ಹಕ್ಕು ಸ್ಥಾಪನೆಯಾದ ನಂತರ ಅವರಾಗಿಯೇ ದೇವಸ್ಥಾನವನ್ನು ತ್ಯಜಿಸುವರು ಅಲ್ಲದೆ, ಸವರ್ಣ ಹಿಂದುಗಳಾದರೋ, ಅಸ್ಪೃಶ್ಯರ ಪ್ರವೇಶದಿಂದ ಅಪವಿತ್ರವಾದದೇವಸ್ಥಾನ ಸಂದರ್ಶನೆಯನ್ನು ನಿಲ್ಲಿಸಿಬಿಡುವರೆಂಬುದು ತಮ್ಮ ಹೆದರಿಕೆಯ ಕಾರಣಗಳಾಗಿವೆಯೆಂದಾಗಿದೆ.

ಸತ್ಯಾಗ್ರಹವು ಕೈಕೊಳ್ಳಲಾಗುವುದು

ಜಲಂಧರದಲ್ಲಿ ರಾಷ್ಟ್ರಪತಿ ಸುಭಾಸ ಭೋಸರು ಭಾಷಣಮಾಡುತ್ತಾ "ಫೆಡರೇಶನನ್ನು ಬ್ರಿಟಿಷರು ಹಿಂದೂದೇಶದ ಮೇಲೆ ಹೊರಿಸಲು ಮುಂದಾದರೆ, ನಿಶ್ಚಯವಾಗಿ ಸತ್ಯಾಗ್ರಹವು ಕೈಕೊಳ್ಳಲಾಗುವುದು. ಮುಂದಣ ಹಿಂದೂದೇಶದ ಮತ್ತು ಬ್ರಿಟಿಷರ ಹೋರಾಟವನ್ನು ತಿರುಗಿ ಬರಮಾಡಿಸುವುದು, ಇಲ್ಲವೆ, ನಿಲ್ಲಿಸುವುದು ಬ್ರಿಟಿಷರ ಹೊಣೆಗಾರಿಕೆ." ಎಂದು ಉದ್ಗರಿಸಿದರು. ನಂತರ ಅವರು ಪಂಜಾಬು ಮತ್ತು ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಗಾಗಿ ಜನರು ಒತ್ತಾಯಪಡಿಸಬೇಕೆಂದರು ಕಾಂಗ್ರೆಸು ಆಡಳಿದ ಪ್ರಾಂತೀಯ ಸರಕಾರಗಳ ಮತ್ತು ಕಾಂಗ್ರೆಸು ಅಧಿಕಾರಕ್ಕೆ ಬಾರದ ಪ್ರಾಂತಗಳ ವಿಷಯ ವಿಮರ್ಶಿಸುತ್ತಾ ಕಾಂಗ್ರೆಸು ಆಳಿತದ ಪ್ರಾಂತಗಳೆಷ್ಟೋ ಬದಲಾವಣೆ ಹೊಂದಿವೆಯೆಂದರು. ಮುಸಲ್ಮಾನರು ಮತ್ತು ಬೇರೆ ಪಂಗಡದವರು ಕಾಂಗ್ರೆಸಿಗೆ ಸೇರಿ, ಬಲಗೊಳಿಸಬೇಕೆಂದು ವಿನಂತಿಮಾಡಿಕೊಂಡರು. ಮಜೂರರ ಮತ್ತು ಕೃಷಿಕರ ಪರಿಸ್ಥಿತಿಯು ಸ್ವರಾಜ್ಯಗಳಿಸಿದ ನಂತರವೇ ಉತ್ತಮವಾಗಲು ಸಾಧ್ಯವೆಂದರು. ಸದ್ಯದ ಅಂತರರಾಷ್ಟ್ರೀಯ ಪರಿಸ್ಥಿತಿಯು ಹಿಂದೂದೇಶಕ್ಕೆ ಅನುಕೂಲವಾಗಿರುವುದೆಂದೂ ಈ ಸುಸಂದರ್ಭವನ್ನು ಹಿಂದೂದೇಶವು ಉಪಯೋಗಿಸಿಕೊಳ್ಳುವುದು ಅಗತ್ಯವೆಂದೂ ತಿಳಿಸಿದರು

ಕಾಂಗ್ರೆಸ್ ಕೆಲಸಗಾರರ ಮೇಲೆ ತಕ್ಸೀರು

ಬಲರಾಮಪುರ ಯುವಕ ಸಮ್ಮೇಳನದ ಸದಸ್ಯನಾಗಿರುವ ಮತ್ತು ತಿರುವಾಂಕೂರು ಸ್ಟೇಟ್ ಕಾಂಗ್ರೆಸ್ ಕೆಲಸಗಾರನಾದ ಎಮ್. ಎನ್. ಕಾಸಿಮ್ ಎಂಬವನನ್ನು ಪೋಲೀಸರು ಸಿ. ಐ. ಡಿ ಸುಪರಿಂಡೆಂಟರ ಕಾರನ್ನು ಸುಟ್ಟು ಹಾಕಿದ ಆರೋಪದ ಮೇಲೆ ಕೈದು ಮಾಡಿದರು. ನಂತರ ಜಾಮೀನಿನ ಮೇಲೆ ಬಿಡಲಾಯಿತು

ಕಲ್ಕತ್ತದಲ್ಲಿ ಸುಭಾಸಭೋಸರು ವಿದ್ಯಾರ್ಥಿಗಳಿಗೆ ಕೊಟ್ಟ ಬೋಧೆ

ಕಲ್ಕತ್ತೆಯ ಆಕ್ಸಫರ್ಡ್ ಹೋಸ್ಟಲ್ ಯೂನಿಯನ್ನಿನ ವಾರ್ಷಿಕೋತ್ಸವ ಕಾಲದಲ್ಲಿ ಶರಚ್ಚಂದ್ರ ಭೋಸರು ವಿದ್ಯಾರ್ಥಿಗಳಿಗೆ ಬೋಧಿಸುತ್ತಾ, 'ಸಾರ್ವಜನಿಕ ವಿಚಾರದಲ್ಲಿ ವಿದ್ಯಾರ್ಥಿಗಳು ನಿಜವಾದ ಮತ್ತು ಚೈತನ್ಯಯುಕ್ತವಾದ ಗಮನವನ್ನು ಕೊಡಬೇಕು ಎಂದರು. ಯೂನಿವರ್ಸಿಟಿಗಳಲ್ಲಿ ವಿದ್ಯಾರ್ಥಿಗಳು ಒಂದೆರಡು ವಿಷಯಗಳಲ್ಲೇ ವಿಶೇಷ ಅಭ್ಯಾಸ ಪಡೆಯುವಂತಾಗಬೇಕೆಂಬ ಇರಾಧೆಯು ಶೋಚನೀಯವು. ಬುದ್ಧಿ ಸಾಮರ್ಥ್ಯದ ವಿಶೇಷ ಪ್ರಚಾರವನ್ನು ತಡೆಗಟ್ಟಿ, ವಿಶಾಲವಾದ ವಿಷಯದ ಕಡೆಗೆ ಲಕ್ಷಿಸದೆ, ಒಂದೆರಡು ವಿಷಯಗಳ ಕಡೆಗೆ ಬುದ್ಧಿಯನ್ನು ಪೂರ್ಣ ತಿರುಗಿಸುವುದು ಸರಿಯಲ್ಲ ವಿದ್ಯಾರ್ಥಿಗಳು ತಾವು ನಿಜವಾದ ಮತ್ತು ಉಪಯುಕ್ತ ಕೆಲಸ ಮಾಡಲು ಸಮರ್ಥರಿರಬೇಕೆಂದಿರುವುದಾದರೆ ಮೊದಲಾಗಿ ಗುಣವನ್ನು ತಿದ್ದಿಕೊಂಡು, ಶಿಸ್ತಿಗೆ ಒಳಪಡಿಸಿಕೊಂಡಿರಬೇಕು' ಎಂಬೀ ಮೊದಲಾದ ಹಲವು ವಿಚಾರಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಿದರು

ಮೌಲಾನಾ ಶೌಕತಾಲಿಯವರ ನಿಧನ.

ನವಂಬರ ತಾ. 27ನೇ ಬೆಳಗ್ಗೆ ಘಂಟೆ 6-30ಕ್ಕೆ ಮೌಲಾನಾ ಶೌಕತಾಲಿಯವರು ನ್ಯೂಡಿಲ್ಲಿಯಲ್ಲಿ ಬೇಗಮ್ ಮಹಮ್ಮದಾಲಿಗಳ ನಿವಾಸದಲ್ಲಿ ಹೃದ್ರೋಗದಿಂದ ಅಕಸ್ಮಾತ್ತಾಗಿ ಮೃತರಾಗಿರುವರು. ಇವರು ಎರಡು ಮೂರು ದಿನಗಳಿಂದ ಕೆಮ್ಮಿನಿಂದ ಪೀಡಿತರಾಗಿದ್ದರು. ತಾ. 27ನೇ ಬೆಳಗ್ಗೆ ಎರಡು ಮೂರು ಕಾಗದ ಬರೆದು, ಒಬ್ಬಿಬ್ಬರು ಸ್ನೇಹಿತರೊಡನೆ ಮಾತಾಡಿ, ಆ ಮೇಲೆ ಹೊರಗೆ ಅಂಗಳಕ್ಕೆ ಒಯ್ಯಲ್ಪಟ್ಟು ಬಿಸಿಲಲ್ಲಿ ಕೂತವರು ಅಲ್ಲಿಯೇ ಪ್ರಾಣಬಿಟ್ಟರು. ಹೃದ್ರೋಗದಿಂದ ಈ ಮರಣವುಂಟಾಯಿತೆಂದು ತಿಳಿದು ಬರುತ್ತದೆ.

ಮೌಲಾನಾ ಶೌಕತಾಲಿಗಳಿಗೆ ಸಾಯುವಾಗ 65ವರ್ಷ ಪ್ರಾಯವಾಗಿತ್ತು. ಅವರು 1873ರಲ್ಲಿ ರಾಮಪುರ ಸಂಸ್ಥಾನದಲ್ಲಿ ಹುಟ್ಟಿದರು. ಮೌಲಾನಾ ಮಹಮ್ಮದಾಲಿ ಮತ್ತು ಮೌಲಾನಾ ಶೌಕತಾಲಿಗಳು ತರುಣರಾಗಿರುವಾಗಲೇ, ರಾಮಪುರ ಸಂಸ್ಥಾನದ ದೊಡ್ಡ ಅಧಿಕಾರಿಯಾಗಿದ್ದ ಅವರ ತಂದೆಯು ಮೃತರಾದರು. ಇವರ ಮಾತೆಯಾದ ಅಬ್ದುಲ್ ಅಲಿ ಬೇಗಮರು ಬಹಳ ಉದಾರ ಹಾಗೂ ಉದಾತ್ತ ಸ್ವಭಾವದ ಸ್ತ್ರೀಯಿದ್ದು ಇಬ್ಬರು ಮಕ್ಕಳಿಗೂ ಇಂಗ್ಲಿಷ್ ವಿದ್ಯೆಕೊಟ್ಟರು. ಆವೇಳೆ ಮಕ್ಕಳ ಆಗುಹೋಗುಗಳಲ್ಲೆಲ್ಲಾ ಸಮಭಾಗಿಯಾಗಿ ಅವರ ಜೀವನದ ಸ್ಫೂರ್ತಿಯಾಗಿದ್ದರು. ಅಸಹಕಾರ ಚಳವಳದಲ್ಲಿ ಕೂಡಾ ಭಾಗವಹಿಸಿದ್ದರು.

1908ರಲ್ಲಿ ಮೌಲಾನಾಮಹಮ್ಮದಾಲಿಯವರು ಮುಸ್ಲಿಮ್ ಲೀಗನ್ನು ಸ್ಥಾಪಿಸಿದಂದಿನಿಂದ ಇಬ್ಬರು ಸಹೋದರರೂ ರಾಜಕೀಯದಲ್ಲಿ ಭಾಗವಹಿಸಿದರು. ಕಳೆದ ಮಹಾಯುದ್ಧದಲ್ಲಿ ಅಲಿ ಸಹೋದರರು, ಟರ್ಕಿಯ ಕುರಿತು ಮಿತ್ರ ರಾಷ್ಟ್ರಗಳ ಧೋರಣೆಯನ್ನು ಖಂಡಿಸಿದುದರಿಂದ 1915 ರಲ್ಲಿ ನಿರ್ಬಂಧದಲ್ಲಿರಿಸಲ್ಪಟ್ಟರು. ಇದರಿಂದ ದೇಶವಲ್ಲೆಲ್ಲಾ ಉದ್ವೇಗವುಂಟಾಯಿತು. ಎಷ್ಟೊಂದು ಚಳವಳ ನಡೆದರೂ 1919ರವರೆಗೆ ಬಿಡುಗಡೆ ಹೊಂದಲಿಲ್ಲ. ಅನಂತರ ಅಲಿ ಸಹೋದರು 1920ರಲ್ಲಿ ಖಿಲಾಫತ್ ಚಳವಳವನ್ನಾರಂಭಿಸಿದರು. ಮಹಾತ್ಮ ಗಾಂಧಿಯವರು ಅಲಿ ಸಹೋದರರೊಂದಿಗೆ ಸೇರಿ ಖಿಲಾಫತ್ ಚಳವಳಕ್ಕೆ ಬೇಕಾದ ಬೆಂಬಲವಿತ್ತರು. ಆಗೋಸ್ತು ತಾ. 1ರಲ್ಲು ಅಲಿ ಸಹೋದರರೂ ಮಹಾತ್ಮ ಗಾಂಧಿಯವರೂ ಸೇರಿ ಅಸಹಕಾರ ಚಳವಳ ಹೂಡಿದರು ಮೌಲಾನಾ ಶೌಕತಾಲಿಗಳೂ ಮೌಲಾನಾ ಮಹಮ್ಮದಾಲಿಗಳೂ ಗಾಂಧಿಜಿಯವರೊಂದಿಗೆ ದೇಶದಲ್ಲೆಲ್ಲಾ ಸಂಚರಿಸಿ ಪ್ರಚಂಡ ಆಂದೋಲನವೆಬ್ಬಿಸಿದರು. ಇದರಿಂದ ದಿಗಿಲುಗೊಂಡ ಸರಕಾರವು ಮೊದಲು ಮೌಲಾನಾ ಮಹಮ್ಮದಾಲಿಯವರನ್ನು ಅನಂತರ ಮೌಲಾನಾ ಶೌಕತಾಲಿಗಳನ್ನೂ ಬೊಂಬಾಯಿಯಲ್ಲಿ ದಸ್ತಗಿರಿಮಾಡಿತು, ಕರಾಚಿಯಲ್ಲಿ ಅಲಿ ಸಹೋದರರ ಖಟ್ಲೆನಡೆದು 2ವರ್ಷಗಳ ಕಠಿಣ ಶಿಕ್ಷೆ ವಿಧಿಸಲಾಯಿತು. ಕೆಮಲ್ ಪಾಶರವರು ಖಲೀಫತನವನ್ನೇ ತೆಗೆದು ಹಾಕಿದುದರಿಂದ ಖಲೀಫತ್ ಚಳವಳವು ನಿಂತುಹೋಯಿತು.

ಅನಂತರ ಮುಸ್ಲಿಮ್ ಲೀಗು ಕಾಂಗ್ರೆಸಿನಿಂದ ದೂರವಾದಂತೆ ಅಲಿ ಸಹೋದರರೂ ಅದರಿಂದ ದೂರವಾದರು ಮೌಲಾನಾ ಶೌಕತಾಲಿಯವರು ರೌಂಡ್‌ಟೇಬಲ್ ಪರಿಷತ್ತಿಗೆ ಮುಸಲ್ಮಾನರ ಪ್ರತಿನಿಧಿಯಾಗಿ ಹೋಗಿದ್ದರು. ಅನಂತರ ಮೌಲಾನರು ಮುಸ್ಲಿಮ್ ಲೀಗಿನ ಪರವಾಗಿ ತೀವ್ರ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದರು. ಎಸೆಂಬ್ಲಿ ಮೆಂಬರರಾಗಿದ್ದರು. ಸಾಯುವುದಕ್ಕಿಂತ ಸ್ವಲ್ಪ ಮೊದಲು ಆಸ್ಸಾಮಿಗೆ ಹೋಗಿ ಮುಸ್ಲಿಮ್ ಲೀಗಿನ ಪರವಾಗಿ ಪ್ರಬಲ ಪ್ರಚಾರಮಾಡಿ ಕಾರ್ಯಕ್ರಮವನ್ನು ಕೈಕೊಂಡಿದ್ದರು.

ಮೌಲಾನರ ನಿಧನಕ್ಕಾಗಿ ನವಂಬರ ತಾ. 28ರ ಎಸೆಂಬ್ಲಿ ಅಧಿವೇಶನವು ಮುಂದುವರಿಸಲ್ಪಟ್ಟಿತು. ಆ ಮೊದಲು ಸರ್. ಎನ್. ಎನ್. ಸರಕಾರರು ತಂದ ದುಃಖ ಸೂಚಕ ಠರಾವು ಸರ್ವಸಮ್ಮತಿಯಿಂದ ಮಂಜೂರಾಯಿತು. ಶ್ರೀ ಭೂಲಾಭಾಯಿ ದೇಸಾಯಿ, ಮಿ. ಎಮ್. ಎ ಜಿನ್ನಾ, ಶ್ರೀ ಎಮ್. ಎಸ್. ಅಣೆ ಮೊದಲಾದವರು ಮೃತರ ಗುಣಕಥನ ಮಾಡಿ ಮಾತಾಡಿದರು. ಪಂಡಿತ ನೆಹರು, ರಾಷ್ಟ್ರಪತಿ ಭೋಸ್ ಮೌಲಾನಾ ಅಜದ್, ಸರ್. ಸಿಕಂದರ್ ಹಯತ್ ಖಾನ್ ಮೊದಲಾದವರು ಮೌಲಾನರ ನಿಧನದಿಂದ ದೇಶಕ್ಕೆ ದೊಡ್ಡ ನಷ್ಟವುಂಟಾಗುವುದೆಂದು ಹೇಳಿ ಅವರ ಹಲವು ಬಗೆಯ ಗುಣಗಳನ್ನು ವಿವರಿಸಿ ಸಂತಾಪ ಸೂಚಿಸಿರುವರು, ಬೊಂಬಾಯಿ, ಅಹಮ್ಮದಾಬಾದ್ ಮೊದಲಾದ ಪಟ್ಟಣಗಳಲ್ಲಿ ಕೆಲವಂಟ್ಟಿನ ಹರತಾಳ ಆಚರಿಸಲ್ಪಟ್ಟಿರುವುದು.

ಡ್ಯೂಕ್ ಆಫ್ ವಿಂಡ್ಸರರು

ಆಶ್ರಿತ ರಾಜ್ಯಗಳೂ ಜವಾಬ್ದಾರಿ ಸರಕಾರವೂ

ಬಿಹಾರಿನ ಪ್ರಮುಖ ಸೋಶಿಯಲಿಸ್ಟ ನಾಯಕರಾದ ಜೈ ಪ್ರಕಾಶ ನಾರಾಯಣರು ಮೈಸೂರಿಗೆ ಕಳೆದ ತಾ. 25ರಲ್ಲು ಉಟಕಮಂಡಿನಿಂದ ತನ್ನ ಪತ್ನಿಯೊಂದಿಗೆ ಬಂದಿದ್ದರು. ಅವರು ಎರಡು ತಿಂಗಳು ಕೇರಳದಲ್ಲಿ ಅಸ್ವಸ್ಥತೆಯ ಕಾರಣದಿಂದ ಆಯುರ್ವೇದ ಚಿಕಿತ್ಸೆಯನ್ನು ಹೊಂದುತ್ತಿದ್ದರು, ಜೈ ಪ್ರಕಾಶರು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸಿಟ್ಯೂಟ್, ಸಿಲ್ಕ್ ಫೇಕ್ಟರಿ ಇವೇ ಮೊದಲಾದ ಸಂಸ್ಥೆಗಳನ್ನು ಸಂದರ್ಶಿಸಿದರು ತಾ. 26ರಲ್ಲು ಬೆಳಿಗ್ಗೆ ಕಾಂಗ್ರೆಸ್ ಆಫೀಸಿನಲ್ಲಿ ಕಾಂಗ್ರೆಸ್ ಮುಖಂಡರ ಭೇಟಿಯಾಯಿತು. ಈ ದಿನ ಸಂಜೆ ಹಿಂದೀ ಕೆಲಸಗಾರರ ಸಭೆಯನ್ನು ಸಂದರ್ಶಿಸಿದ್ದರು. ಬರುವ ಹಿಂದೂದೇಶದ ಆಶ್ರಿತರಾಜ್ಯಗಳ ಜನರ ಸಮ್ಮೇಳನಕ್ಕೆ ಪಂಡಿತ ನೆಹರುಗಳು ಅಧ್ಯಕ್ಷರಾಗಲಿ, ಅಥವಾ ಆಗದಿರಲಿ ನಿಶ್ಚಯವಾಗಿ ಪ್ರಜಾಜವಾಬ್ದಾರಿ ಸರಕಾರದ ಹೋರಾಟವು ದಿನದಿನಕ್ಕೆ ಶಕ್ತಿಯುತವಾಗುವುದು ಎಂದರು.

ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಾರ್ಟಿ ಮೀಟಿಂಗ್

ನಿನ್ನೆ ಸಂಜೆಗೆ ಮದ್ರಾಸ್ ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಾರ್ಟಿ ಮೀಟಿಂಗ್ ಜರಗಿ ಎಸೆಂಬ್ಲಿಯ ಮುಂದೆ ಬರಲಿರುವ ಬಿಲ್ಲುಗಳ ಕುರಿತು ಚರ್ಚಿಸಲಾಯಿತು,

ಶ್ರೀಗಳಾದ ಟಿ. ಪ್ರಕಾಶಂ, ಎ ಕೆ. ಮೊಹಿದಿನ್ ಮರಕ್ಕಯಾರ್, ಎ. ವೇದರತ್ನಮ್, ಎಸ್. ರಾಮನಾಥನ್ ಮತ್ತು ಡಾ ಪಿ ಸುಬ್ಬರಾಯನವರಿಂದ ಕೂಡಿದ ಒಂದು ಕಮಿಟಿಯನ್ನು ಕೆಲಮೆಂಬರರ ಮೇಲೆ ಬಂದ ದೂರನ್ನು ವಿಚಾರಿಸಿ ಅವರ ಮೇಲೆ ಶಿಸ್ತುಜ್ಯಾರಿಮಾಡುವ ಅಗತ್ಯದ ಕುರಿತು ಅಭಿಪ್ರಾಯ ಸೂಚಿಸುವಂತೆ ನೇಮಿಸಲಾಗಿಯೆಂದು ತಿಳಿದು ಬರುತ್ತದೆ.

ಹಿಂದೀವಿರುದ್ಧ ನಾಯಕನಿಗೆ ಮೂರುವರ್ಷ ಕಾರಾಗೃಹ

ಬಾಲಸುಂದರ ನಾವಲಾರ್ ಎಂಬವರು ಹಿಂದೀವಿರುದ್ಧ ಚಳವಳದಲ್ಲಿ ...

ಭಾಗವಹಿಸುವ...
ರು ಅವರನ್ನು ...
ಸಾರ್ವಜನಿಕರ...
ದರೆಂಬ ಆರೋ...
ರ್ಷ ಕಠಿಣ ಸಜ...

ಅಪಾದಿತರು...
ಗಳು ಬ್ರಾಹ್ಮಣ...
ಹ್ಮಣ ಸ್ತ್ರೀಯ...
ಕೆಯೆಂದ, ಮ...

ರಾಜಗೋ... ಬೆಂಗಳೂರಿ... ಮು...

ಮದ್ರಾಸು ...
ಸನ್ಮಾನ್ಯ ಸಿ ...
ರು ಬೆಂಗಳೂರಿ...
ದು ವಾರವಿದ್ದು...
ರುವರು.

ಕ್ಷಯರೋ...

ನವೆಂಬರ 1...
63,46,981-...
ನಿವಾರಣಾ ಫಂ...
ಗಿ ತಿಳಿದುಬರು...

ಕೈಗಾರಿಕೆ... ಮುಂದ...

ಕೈಗಾರಿಕೆಗ...
ಬಾಯಿಯಲ್ಲಿ ...
ಕ್ಕೆ ಜರಗಲಿರು...
ತು. ಆದರೆ ...
ಮೂರನೆಯ ...
ಗಿಯದೆಯೆಂದು...
ಪ್ರದರ್ಶನವನ್ನು...
ಲಿರುವರು.

ಭಾವನ...

ಮಹಾತ್ಮಾ... ಸಲಹೆ

ಭಾವನಗರ ...
ಬ್ದಾರಿ ಸರಕಾರ...
ಡಲು ಸಮ್ಮತಿ...
ರಿತು ಮಹಾ...
ಮತ್ತು ಸರ್ದಾ...
ವಹಾರವನ್ನು ...
ದಾಗಿಯೂ ತಿ...

ಬಿಹಾರಿನ... ರಕ್ಷ...

ಜಾತೀಯತೆ...
ಗೆಯು ಏಳದ...
ವನ್ನು ಬೆಳಸಿ...
ರನ್ನು ಶಿಕ್ಷಿಸುವ...
ರಿಗೆ ತರುವಂತೆ...
ಯಲ್ಲಿ ಮಸೂದೆ...
ರದಲ್ಲಿ ಸರಕಾರ...

ಮದ್ರಾಸ... ಬಿರುಗಾ...

ನವಂಬರ ...
ಕರಾವಳಿಯ ...
ಅಗ ಬಿರುಗಾಳಿ...

ಗಲಾಟೆ — ಮದ್ರಾಸ್ ಕರಾವಳಿಯಲ್ಲಿ ಬಿರುಗಾಳಿಯ ಹಾವಳಿ

ಇಂಗ್ಲೆಂಡಿಗೆ ಹೋಗುವರು

ಫ್ ಪ್ರೆಸಿಡೆಂಟ
ವನ್ನು ಮತ್ತು
ಗಲಭೆಯೆಬ್ಬಿಸಿ
ಲೆ ಮೂರು ವ
ವಿಧಿಸಿದರು.
ಾಡಿದ ಭಾಷಣ
ಮೇಲಾಗಿ ಬ್ರಾ
ಕರಣಕರವ ಟೀ
ಅಭಿಪ್ರಾಯ

**ಾರ್ಯರ ತು
ಲದಿನವಿದ್ದು
ದರು**

ಪ್ರಧಾನಮಂತ್ರಿ
ಾಲಾಚಾರ್ಯ
ೋಗ್ಯಕ್ಕಾಗಿ ಒಂ
ದ್ರಾಸಿಗೆ ಬಂದಿ

ರಣಾ ಫಂಡು
ಒಟ್ಟಿಗ ರೂ.
ಕ್ಷಯರೋಗ
ಯಾಗಿದೆಯಾ

**್ಭೀಳನವು
ಪಡಿಸಲಾ**
ನ್ನೊಂದು ಬೊಂ
19 ಮತ್ತು 20
ನಿಶ್ಚಯಿಸಲ್ಪಟ್ಟ
39ನೇ ಜನವರಿ
ಂದುವರಿಸಲಾ
ಬರುತ್ತದೆ. ಈ
ಯರು ತೆರೆಯ

**ಾನರು
ುವರೊಡನೆ
ತ್ತಾರೆ**
ಪ್ರಜಾ ಜವಾ
ಪಟ್ಟಿಗೆ ಕೊ
ಯೂ ಈ ಕು
ಯುವರೊಡನೆ
ೊಡನೆ ಪತ್ರವ್ಯ
ನಡೆಸುತ್ತಿರುವು
ದೆ.

**ರ್ವಜನಿಕ
ೇಲು**
ಮಜೂರರ ಜಂ
ಾತಿ ವೈಶಮ್ಯ
ದುಂಬಿಸುವವ
ಾನನ್ನು ಜಾ
ಾಯಕ ಸಭೆ
ರುವ ವಿಚಾ
ಸುತ್ತಿದೆ.

**ಯಲ್ಲಿ
ಾವಳಿ**
ಮದ್ರಾಸ್
ಗಳಲ್ಲಿ ಭಯಂ
ಕರ ಹಾವಳಿ

ಯಾಗಿರುವುದು. ಬಿರುಗಾಳಿಯೊಂದಿಗೆ ಜಡಿಮಳೆ ಕೂಡಾ ಬಂದಿರುವುದು. ಹವಾಗುಣವು ಬಹಳ ಶೀತವಾಗಿದೆ. ಮಚಲೀಪಟ್ಟಣದ ರಸ್ತೆಗಳಲ್ಲೆಲ್ಲಾ ನೀರೇರಿ ಮನೆ ಮಾರುಗಳು ಬಿದ್ದು ರೂ. 10ಲಕ್ಷಕ್ಕಿಂತಲೂ ಮಿಕ್ಕಿದ ಹಾವಳಿಯಾಗಿರುವುದು. ವಾಹನ ಸಂಚಾರವೆಲ್ಲಾ ನಿಂತುಹೋಗಿರುತ್ತದೆ. ರೈಲ್ವೇ ಚಲಾವಣೆಯೂ ಸ್ವಲ್ಪ ಸಮಯ ನಿಂತುಹೋಗಿದ್ದಿತು. ರಸ್ತೆಗಳಲ್ಲಿ ಸಾಲುಸಾಲಾಗಿ ಮರಗಳು ಉರುಳಿಬಿದ್ದಿರುವವು ಮನೆ ಮತ್ತು ಮರಗಳ ಅಡಿಗೆ ಬಿದ್ದು ಕೆಲವರು ಕೊಲ್ಲಲ್ಪಟ್ಟಿರುವರು. ಸಿನೆಮಮಂದಿರ, ಅಕ್ಕಿಗಿರಣಿ, ಶಾಲೆ, ಆಸ್ಪತ್ರೆ, ಪೋಸ್ಟ್ ಆಫೀಸು ಮೊದಲಾದ ಕಟ್ಟಡಗಳೆಲ್ಲಾ ನೆಲಸಮವಾಗಿವೆ. ಕಟಾವಿಗೆ ತಯಾರಾಗಿದ್ದ ಆಸುಪಾಸಿನ ಬೆಳೆಯೆಲ್ಲಾ ನಾಶವಾಗಿದೆ ಮಚಲೀಪಟ್ಟಣದ ಬಂದರಿನಲ್ಲಿದ್ದ 1,20,000, ಗೋಣಿ ನೆಲಗಡಲೆಯು ನೀರಲ್ಲಿ ಮುಳುಗಿ ಹೋಗಿರುವುದು. ಕೃಷ್ಣಾ ಜಿಲ್ಲೆಯ ಗುಡಿವಾಡವೇ ಮೊದಲಾದ ಸ್ಥಳಗಳಲ್ಲಿ ಭತ್ತದ ಬೆಳೆಗೆ ಅತಿ ಹೆಚ್ಚಿನ ಹಾವಳಿಯಾಗಿದೆ. ನುಜ್ವಿಡಿನಲ್ಲಿ 1000 ಕುರಿಗಳು ಕೊಲ್ಲಲ್ಪಟ್ಟಿವೆ. ಗೋದಾವರಿ, ರಾಜಮಹೇಂದ್ರಿ, ಭೀಮಾವರಮ್, ರಾಚೋಲ್ ಎಬ್ಲೋರ್, ಪಲಕೋಲ್, ನರಸಾಪುರ, ಮೊದಲಾದ ಸ್ಥಳಗಳಲ್ಲಿಯೂ ಹೆಚ್ಚಿನ ಹಾವಳಿಯಾಗಿದೆ.

ಕರ್ನಾಟಕಸ್ಥ ಮಹಾರಾಷ್ಟ್ರೀಯರ ಸ್ನೇಹಸಮ್ಮೇಲನ

ಇದರ ನೂರನೆಯ ಅಧಿವೇಶನವು ಧಾರವಾಡದಲ್ಲಿ ಜನವರಿಯಲ್ಲಿ ಕೂಡುವುದಾಗಿಯೂ, ಬ್ಯಾ. ಸಾವರಕರರು ಅದರ ಉದ್ಘಾಟನಾ ಸಮಾರಂಭವನ್ನು ನಡೆಸುವರಾಗಿಯೂ ತಿಳಿಯುತ್ತದೆ.

ಕೊಡಗು ಕರ್ನಾಟಕ ಪ್ರಾಂತ್ಯದಲ್ಲೇ ಕೂಡುವುದು ಯೋಗ್ಯ

ನಾ. ಯಾಕೂಬ ಹಸನರು ಕಾಂಗ್ರೆಸ ಕಮಿಟಿಯರ ಮಾನಪತ್ರಕ್ಕೆ ಉತ್ತರಕೊಡುತ್ತಾ ಹೀಗೆಂದರು. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಭಾಷೆಯೊಂದೇ ಆಗಿದೆ. ಆದುದರಿಂದ ಕೊಡಗು ಕರ್ನಾಟಕ ಪ್ರಾಂತ್ಯದೊಂದಿಗೆ ಸೇರುವುದು ಯೋಗ್ಯ.

ಡ್ಯೂಕ್ ಆಫ್ ವಿಂಡ್ಸರರು

ಅವರ ಪತ್ನಿಯೊಂದಿಗೆ ಸದ್ಯದಲ್ಲೇ ಇಂಗ್ಲೆಂಡಿಗೆ ಹೋಗಿ ವಾಸಿಸಲಿರುವರೆಂದು ಸುದ್ದಿಯುಂಟಾಗಿದೆ. ಇಂಗ್ಲೆಂಡು ಮತ್ತು ಫ್ರಾನ್ಸುಗಳೊಳಗೆ ವ್ಯಾಪಾರದ ಒಪ್ಪಂದದ ಕುರಿತು ಫ್ರೆಂಚ್ ಮಂತ್ರಿಗಳೊಂದಿಗೆ ಮಾತಾಡಲು ಪೆರಿಸಿಗೆ ಹೋಗಿದ್ದ ಪ್ರಧಾನಮಂತ್ರಿ ಮಿ. ಚೇಂಬರ್ಲೇನರೂ, ವಿದೇಶ ಮಂತ್ರಿ ಲೋರ್ಡ್ ಹೆಲಿಫೆಕ್ಸರೂ ಡ್ಯೂಕ್ ಆಫ್ ವಿಂಡ್ಸರರನ್ನು ಕಂಡು ಮಾತಾಡಿರುವರು. ವಿಂಡ್ಸರರ ತಮ್ಮ ಡ್ಯೂಕ್ ಆಫ್ ಗ್ಲೋಸೆಸ್ಟರರೂ ಅವರ ಪತ್ನಿಯೂ ಇತ್ತೀಚಾಗಿ ತನ್ನ ಅಣ್ಣ ಮತ್ತು ಅವರ ಪತ್ನಿಯ ಬಳಿಗೆ ಹೋಗಿ ಮಾತಾಡಿರುವರು. ಸ್ವತಃ ಜೋರ್ಜ್ ಚಕ್ರವರ್ತಿಗಳೇ ತನ್ನ ಅಣ್ಣನನ್ನೂ ಅವರ ಪತ್ನಿಯವರನ್ನೂ ಹಿಂದೆ ಬರಲು ಆಮಂತ್ರಿಸಿರುವರೆಂದು ಸುದ್ದಿ

ಹಬ್ಬಿದೆ 2ವರ್ಷಗಳ ಮೊದಲು ಡ್ಯೂಕ್ ಆಫ್ ವಿಂಡ್ಸರರು ಮಿಸೆಸ್ ಸಿಂಪ್ಸನಳನ್ನು ಮದುವೆಯಾಗುವುದು ನಿಶ್ಚಯವೆಂದಾಗಿ, ಅವರು ಪಟ್ಟವನ್ನು ಬಿಟ್ಟುಕೊಡಬೇಕೆಂದು ನಿಶ್ಚಯವಾದಾಗ, ತನ್ನ ತಮ್ಮನ ಮತ್ತು ದೇಶದ ಹಿತದೃಷ್ಟಿಯಿಂದ ಡ್ಯೂಕ್ ಆಫ್ ವಿಂಡ್ಸರರು ರಾಜ್ಯ ಬಿಟ್ಟುಹೋಗುವುದೊಳ್ಳೇದೆಂದು ಬಾಲ್ಡ್ವಿನ್ ಸರಕಾರವೂ, ಮೇರಿ ರಾಣಿಯವರೇ ಮೊದಲಾದ ಅರಸು ಮನೆತನದವರೂ ಅಭಿಪ್ರಾಯಪಟ್ಟ ಪ್ರಕಾರ ವಿಂಡ್ಸರರು ದೇಶ ಬಿಟ್ಟು ಹೋದುದೇ ಹೊರತು ಅವರೇನೂ ಗಡಿಪಾರುಮಾಡಲ್ಪಟ್ಟಿರುವುದಿಲ್ಲ. ಅವರು ಇಂಗ್ಲೆಂಡಿಗೆ ಹಿಂದೆ ಹೋಗಲು ಕಾನೂನು ಮೇರೆಗಿನ ಯಾವ ತಡೆಯೂ ಇರುವುದಿಲ್ಲ. ಅವರೇ ಸ್ವೇಚ್ಛೆಯಿಂದ ಈಗ ಎರಡು ವರ್ಷಗಳಿಂದ ಯುರೋಪಿನಲ್ಲಿ ಹೆಚ್ಚಾಗಿ ಫ್ರಾನ್ಸಿನಲ್ಲಿ ವಾಸಮಾಡಿಕೊಂಡಿರುತ್ತಾರೆ. ಇನ್ನು ಸದ್ಯವೇ ಡ್ಯೂಕರು ತನ್ನ ಪತ್ನಿಯೊಂದಿಗೆ ಇಂಗ್ಲೆಂಡಿಗೆ ಹೋಗಿ ತನ್ನ ಪ್ರೀತಿಯ ಬೆಲ್ವಡೇರ್ ಅರಮನೆಯಲ್ಲಿ ವಾಸಮಾಡಲಿರುವರೆಂದು ಪತ್ರಿಕೆಗಳ ಸುದ್ದಿ.

ಜವಾಹರಲಾಲರ ಉಪದೇಶ

ಸಹನಶೀಲತೆಯೂ, ವಿಶಾಲದೃಷ್ಟಿಯೂ ಆವಶ್ಯಕ

ಹಿಂದೂದೇಶದ ಪ್ರಾಚೀನ ಸಂಸ್ಕೃತಿಯನ್ನು ತಿಳಿದುಕೊಳ್ಳಿರಿ. ಧೀರರಾಗಿರಿ; ವಿನಯಪರರಾಗಿ, ನಿರ್ಭೀತರಾಗಿ, ಅಭಿಮಾನದಿಂದ ತಲೆಯೆತ್ತಿರಿ.

ಪಂಡಿತ ನೆಹರುಗಳು ವಾರ್ಧದಲ್ಲಿರುವಾಗ ಶ್ರೀಮಾನ್ ನಾರಾಯಣ ಅಗರವಾಲರೊಂದಿಗೆ ನವಭಾರತ ವಿದ್ಯಾಲಯವನ್ನು ಸಂದರ್ಶಿಸಿದರು. ಅಲ್ಲಿಯ ಕೈಗಾರಿಕೆಗಳನ್ನೆಲ್ಲಾ ನೋಡಿದರು. ವಿದ್ಯಾರ್ಥಿಗಳಿಗೆ ಉಪದೇಶವೀಯುತ್ತಾ ಹೀಗೆಂದರು.

ನಿಮ್ಮ ದೇಶದ ವಿಚಾರವಂತುಕೊಳ್ಳಬೇಕೆಂದಿದ್ದರೆ, ಅದರ ಇತಿಹಾಸವನ್ನು ತಿಳಿದುಕೊಳ್ಳಿರಿ. ಇತಿಹಾಸಜ್ಞಾನ, ರಾಜರ ಮತ್ತು ಅವರ ಜನನ–ಮರಣ ತಾರೀಕಿನ ತಿಳುವಳಿಕೆಯಲ್ಲಡಕವಾಗಿಲ್ಲ. ದೇಶದ ಸಾಮಾಜಿಕ, ವ್ಯವಸ್ಥೆ, ಉತ್ಕೃಷ್ಟತೆಯ ಸಾಧನ ವಿಚಾರಗಳನ್ನು ತಿಳಿದುಕೊಳ್ಳಬೇಕು. ಹಿಂದೂಸ್ಥಾನವು ಸಾವಿರಾರು ವರ್ಷಗಳ ಪೂರ್ವದಲ್ಲಿ ಕೂಡಾ ಬಹು ಉಚ್ಚಸಾಮಾಜಿಕ ವ್ಯವಸ್ಥೆ ಮತ್ತು ಸಭ್ಯತೆಯ ನಾಡಾಗಿತ್ತೆಂದು ನಾವು ಸರಿಯಾಗಿ ವಿಚಾರಿಸಿದರೆ ತಿಳಿದುಬರುತ್ತದೆ ನಿಶ್ಚಯ. ನೀವು ನಿಮ್ಮ ದೇಶವನ್ನು, ಬಹು ಪ್ರೇಮಭಕ್ತಿಯಿಂದ

ಕಂಡು, ಸೇವಿಸತಕ್ಕದ್ದು. ಹೀಗೆ ನಿಮ್ಮ ದೇಶವನ್ನು ನೀವು ಪ್ರೀತಿಸುವುದರಿಂದ, ನೀವು ಇತರ ಜನಾಂಗಗಳನ್ನು ಹಗೆತನ ದೃಷ್ಟಿಯಿಂದ ನೋಡಬೇಕೆಂದಿಲ್ಲ. ನಿಮ್ಮ ದೇಶವೊಂದೇ ಅತ್ಯುತ್ತಮವೆಂದು ಭಾವಿಸುವುದು ಸಂಕುಚಿತ ಭಾವವು ನಿಜ. ಅದೊಂದು ಕಾಲದಲ್ಲಿ ನಿಮ್ಮ ದೇಶವು ಬೇರೆ ದೇಶಗಳಿಗಿಂತ ಉತ್ತಮ ಸ್ಥಿತಿಯಲ್ಲಿದ್ದಿತು. ಆದರೆ, ಇಂದು ಪ್ರಗತಿಪರ ಹಾದಿಯಲ್ಲಿರುವ ದೇಶವು ಸ್ವಲ್ಪ ಸಮಯದ ನಂತರ ಧ್ವಂಸವಾಗಿ ಮಾರ್ಪಡಬಹುದು. ಹೇಗೂ ಪ್ರತಿಯೊಂದು ದೇಶಕ್ಕೂ ಅದರದರ ಒಳ್ಳೆಯ ವಿಷಯಗಳಿವೆ. ಹೀಗೆ ಗ್ರಹಿಸಿಕೊಂಡರೆ, ಮಾತ್ರ ನಮ್ಮ ಸಂಕುಚಿತ ಭಾವವು ಅಳಿಯುವುದು. ನೀವು ವಿದ್ಯಾರ್ಥಿಗಳು, ಹಲವು ಕಸಬು ಕೈಗಾರಿಕೆಗಳ ಕಲೆಗಳಲ್ಲಿ ಅಭ್ಯಾಸ ಹೊಂದುತ್ತಿರುವಿರಿ. ನಿಮ್ಮಂತೆ ಬೇರೆ ಬೇರೆ ದೇಶಗಳಲ್ಲಿ ಒಂಟಿಗರಾಗಿ ಅಭ್ಯಾಸ ಹೊಂದುತ್ತಿರುವ ವಿದ್ಯಾರ್ಥಿಗಳ ಚಿತ್ರವನ್ನು ಮನಸ್ಸಿಗೆ ತಂದುಕೊಳ್ಳಿರಿ. ಹೀಗೆ ಮಾಡುವುದರಿಂದ ಮನಸ್ಸು ವಿಶಾಲವಾಗುವುದು. ಮತ್ತು ಬೇರೆ ಜನಾಂಗಗಳನ್ನು ಅರಿತುಕೊಂಡು ನಿಮ್ಮ ಅಂತರರಾಷ್ಟ್ರೀಯ ಬಾಂಧವ್ಯವನ್ನು ವಿಸ್ತರಿಸಿಕೊಳ್ಳಿರಿ. ನಮ್ಮ ದೇಶವು ಜಗತ್ತಿನ ಒಂದು ಭಾಗ. ಬೇರೆ ದೇಶಗಳಿಗಾಗುವ ಹಾನಿವೃದ್ಧಿಗಳಲ್ಲಿ ನಾವೂ ಬೆರೆಯದಿರಲಾರೆವು ಯಾವ ದೇಶವೂ ಏಕಾಂಗಿಯಾಗಿರಲಸಾಧ್ಯ. ಆದುದರಿಂದ ಜಗತ್ತಿನೊಂದಿಗಿರುವ ನಾವು ನಮ್ಮ ದೃಷ್ಟಿಕೋನವನ್ನು ವಿಶಾಲಗೊಳಿಸಬೇಕು. ಯುರೋಪಿನ ಕಡೆಗೆ ಇಂದು ನೀವು ಕಣ್ಣೆತ್ತಿ ನೋಡಿದರೆ, ಅದರ ಸಂಕುಚಿತ ಮನೋವೃತ್ತಿಯ ಹಾನಿಯು ಅರಿವು ನಿಮಗಾಗಬಹುದು.

“ಧೀರರಾಗಿರಿ, ನಿರ್ಭೀತಿಯಿಂದ ಉತ್ಸಾಹಿಗಳಾಗಿ, ಚತುರರಾಗಿ, ಸ್ವಾಭಿಮಾನದಿಂದ ತಲೆಯೆತ್ತಿರಿ.

ಫ್ರಾನ್ಸಿನಲ್ಲಿ ಮುಷ್ಕರದ ಗಲಾಟೆ

ಭರದಿಂದ ಯುದ್ಧೋಪಕರಣಗಳನ್ನು ಸಿದ್ಧಪಡಿಸಲು ಫ್ರೆಂಚ್ ಸರಕಾರವು ಮಜೂರರ ಕೆಲಸದ ಕುರಿತು ಕೆಲವು ನಿರ್ಬಂಧಗಳನ್ನು ಹಾಕಿ ಕಾನೂನೊಂದನ್ನು ಜ್ಯಾರಿಗೆ ಬಂದಿರುವುದು. ಇದನ್ನು ನಿಷೇಧಿಸಲು ಮಜೂರ ಸಂಘಗಳವರು ನವಂಬರ ತಾ 30 ರಲ್ಲು ಎಲ್ಲಾ ಮಜೂರರ ಮುಷ್ಕರವೊಂದನ್ನು ಆಚರಿಸುವ ನಿರ್ಧಾರಮಾಡಿರುವರು. ಆ ಮೊದಲೇ ಹಲವು ಗನಿ ಮತ್ತು ಕಾರ್ಖಾನೆಗಳಲ್ಲಿ ಮುಷ್ಕರ ಆರಂಭವಾಗಿರುವುದು. ನವಂಬರ ತಾ. ೨೬ರಲ್ಲು ವೆಲೆನ್ಸಿಯಾ ಜಿಲ್ಲೆಯಲ್ಲಿ ಸುಮಾರು 100,000 ಮಜೂರರು ಮುಷ್ಕರ ಹಿಡಿದಿರುವರು. ಸರಕಾರವು ಈ ಮುಷ್ಕರವನ್ನಡಗಿಸಲು ಕಠಿಣ ಧೋರಣೆ ವಹಿಸಿರುವುದು. ಪೋಲೀಸ್ ಮತ್ತು ಸೈನಿಕರನ್ನು ಉಪಯೋಗಿಸಿ ಕೆಲಸಗಾರರು ಕೆಲಸಕ್ಕೆ ಬರುವಂತೆ ಮಾಡುತ್ತಿರುವರು ಕೆಲವು ಕಾರ್ಖಾನೆಗಳ ಕೆಲಸಗಾರರು ಕಾರ್ಖಾನೆಗಳೊಳಗೇನೇ ಮುಷ್ಕರ ಹಿಡಿದಿರುವರು. ಬುಧವಾರದ ಸರ್ವಸಾಮಾನ್ಯ ಮುಷ್ಕರದ ಮೇಲೆ ಹೊಂದಿದೆ ಫ್ರೆಂಚ್ ಮಂತ್ರಿ ಮಂಡಲದ ಅದೃಷ್ಟ ಸರಕಾರದ ವಿರೋಧವಾಗಿ ಪೆರಿಸಿನಲ್ಲಿ ನವಂಬರ ತಾ. ೨೬ರಲ್ಲು ನಡೆದ ಮಜೂರರ ಕೆಲವು ಪ್ರದರ್ಶನಗಳನ್ನು ಪೋಲೀಸರು ಚೆದರಿಸಿರುವರು.

ಮಜೂರ ಮುಷ್ಕರದ ನೆವನದಲ್ಲಿ ಡೆಲಿಡಿಯರ್ ಮಂತ್ರಿ ಮಂಡಲವು ಬಿದ್ದುಹೋಗುವಂತೆ ಅವರ ವೈರಿಗಳು ಪ್ರಯತ್ನಿಸುತ್ತಿರುವರೆಂದು ಸರಕಾರದ ಅಭಿಪ್ರಾಯವಿರುತ್ತದೆ. ಆದುದರಿಂದ ಅದನ್ನು ತಡೆಗಟ್ಟಲು ಬೇಕಾದ ಪೋಲೀಸ್ ಮತ್ತು ಸೈನಿಕ ಸಿದ್ಧತೆಯೆಲ್ಲಾ ನಡೆದಿದೆ.

೯೪ ವರ್ಷದವನಿಗೆ ಹನ್ನೊಂದನೆಯ ಹೆಂಡತಿ

“ಇಸ್ತಾಂಬುಲ್‌ದ, ಬೆಫರಿದ ಎಂಬವನು ಈಗ ೯೪ ವರ್ಷದವ. ಈಗೀಗಲೇ ಹತ್ತು ಜನ ಹೆಂಡಂದಿರನ್ನು ದಾಂಪತ್ಯ ಬಂಧನದಿಂದ ವಿಚ್ಛೇದನಮಾಡಿಕೊಂಡಿದ್ದಾನೆ. ಇವನು ತನ್ನ ಹತ್ತನೆಯ ಹೆಂಡತಿಯ ವಿಚ್ಛೇದನಕ್ಕಾಗಿ ಕೋರ್ಟಿನಲ್ಲಿ ದಾವೆ ಹೂಡಿದನು. ತನ್ನ ಹತ್ತನೆಯ ಹೆಂಡತಿ ತನ್ನನ್ನು ತುಂಬಾ ಬೈಯುವಳೆಂದೂ, ಅವಳು ೪೦ ವರ್ಷಕ್ಕಿಂತಲೂ ಮಿಕ್ಕಿದವಳಾದುದರಿಂದ ತನಗೆ ಅವಳಿಂಗಿತ ಚಿಕ್ಕ ಪ್ರಾಯದವಳನ್ನು ಮದುವೆಯಾಗುವ ಅಪೇಕ್ಷೆಯಿರುವುದೆಂದೂ ಅವನ ಹೇಳಿಕೆ. ಆಸರೆ ಆನನ ಪ್ರಶ್ನೆಯು ತಾನು ನಿಜವಾದ ಉತ್ತರಾಧಿಕಾರಿಯಾಗಿರುವೆನೆಂದು ಸಾಧಿಸಿದಳು. ಕೊನೆಗೆ ನ್ಯಾಯಾಧೀಶರು ಸಾಕಯ್ಯಾ, ೯೪ ವರ್ಷದವನಿಗೆ ಹತ್ತುಜನ ಹೆಂಡಂದಿರು” ಎಂದು ಫಿರ್ಯಾದೆಯನ್ನು ತೆಗೆದುಹಾಕಿದರು.

ಪೋಲಿಸ್ ಆಫೀಸರನ ಕೊಲೆ

ನವಂಬರ ತಾ. 27ರಲ್ಲು ಜೆಕೊಸ್ಲೋವೇಕಿಯದ ಎಲ್ಲೆಯಲ್ಲಿ ಪೋಲೀಸ್ ಮತ್ತು ಜೆಕ್ ಸೈನಿಕರೊಳಗೆ ಕಾದಾಟವಾಗಿ ಪೋಲೀಸ್ ಸೈನ್ಯಾಧಿಕಾರಿಯೊಬ್ಬನು ಗುಂಡು ಹೊಡೆದು ಕೊಲ್ಲಲ್ಪಟ್ಟಿರುವನು ಇನ್ನೊಬ್ಬ ಸೈನಿಕನಿಗೆ ಬಹಳ ಪೆಟ್ಟಾಗಿರುವುದು. ಈ ಕುರಿತು ಕೂಡಲೇ ಸರಿಯಾದ ವಿಚಾರಣೆ ನಡಿಸಿ ತಪ್ಪಿತಸ್ಥರಿಗೆ ಶಿಕ್ಷಿಸಬೇಕೆಂದು ಪೋಲಿಸ್ ಸರಕಾರವು ಜೆಕ್ ಸರಕಾರ ತಿಳಿಸಿರುವುದು. ಜೆಕ್ ಸರಕಾರವು ಈ ವ್ಯವಹಾರಕ್ಕಾಗಿ ವಿಷಾದ ಸೂಚಿಸಿ ವಿಚಾರಣೆ ನಡಿಸುವ ಆಶ್ವಾಸನೆ ಇತ್ತಿರುವದೆಂದು ತಿಳಿದುಬರುತ್ತದೆ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 28-11-38

ಸಂಯುಕ್ತ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಉಪನ್ಯಾಸಗಳು

ಹಿಂದೂಸ್ಥಾನವ್ಯ ಸಂಯುಕ್ತ ರಾಜ್ಯ ಪದ್ಧತಿಯೂ—ಕಳೆದ ತಾ. 21ನೇ ಸೋಮವಾರ ಸಾಯಂಕಾಲ ಸೈ. ಎ. ಕಾಲೇಜಿನ ಹಾಲಿನಲ್ಲಿ ದಕ್ಷಿಣ ಕನ್ನಡದ ಸಂಯುಕ್ತ ವಿದ್ಯಾರ್ಥಿ ಸಂಘದವರು ಏರ್ಪಡಿಸಿದ್ದ ಸಾಪ್ತಾಹಿಕ ಉಪನ್ಯಾಸಗಳು ಆರಂಭವಾದುವು. ಈ ಸಮಾರಂಭವನ್ನು ಸೈ. ಎ. ಕಾಲೇಜಿನ ಪ್ರಿನ್ಸಿಪಾಲರಾದ ರೆ ಫಾ. ಟಿ. ಗೋನ್ಸಾಲ್ವಿಸರು ನೆರವೇರಿಸುತ್ತಾ ವಿದ್ಯಾರ್ಥಿಗಳು ಈ ರೀತಿಯ ಉಪಯುಕ್ತ ಉಪನ್ಯಾಸಗಳನ್ನು ಏರ್ಪಡಿಸುವುದು ಬಹಳ ಯುಕ್ತವೆಂದರು. ಡಾ| ಕೆ. ವಿಟ್ಠಲ ಶೆಟ್ಟಿಯವರು ಅಧ್ಯಕ್ಷತೆಯನ್ನು ವಹಿಸಿ ಈ ಉಪನ್ಯಾಸಗಳ ಉದ್ದೇಶ, ಪ್ರಯೋಜನಗಳನ್ನು ವಿವರಿಸಿದರು. ಶ್ರೀ. ಬಿ. ವೈಕುಂಠ ಬಾಳಿಗರು ಉಪನ್ಯಾಸ ಮಾಡುತ್ತಾ 1935ನೇ ಇಸವಿಯ ಸಂಯುಕ್ತ ರಾಜ್ಯ ಪದ್ಧತಿಯ ಗುಣದೋಷಗಳನ್ನು ವಿಮರ್ಶಿಸಿ, ಅದರಿಂದ ಈಗ ಜನರಿಗೆ ದೊರೆತ ಹಕ್ಕುಗಳೂ ಹೋಗುವ ಸಂಭವವಿದೆಯೆಂದರು, ಮತ್ತು ಬ್ರಿಟಿಷ್ ಪ್ರಾಂತಗಳನ್ನು ಮಾತ್ರ ಫೆಡರೇಶನಿಗೆ ಸೇರಿಸುವುದು ಉತ್ತಮವೆಂದರು;

"ದೈನ ವಿಕ್ಸ್ ಆಫ್ ರಿಸ್ಪಾನ್ಸಿಬ್‌ಲ್ ಗವರ್ನಮೆಂಟ್" ತಾ. 22ರಲ್ಲಿ ಮೇಲಿನ ವಿಷಯವಾಗಿ ಶ್ರೀ| ಯಂ. ಕೆ. ನಂಬಿಯಾರ್ ಬಾರ್ ಆಟ್‌ಲಾ ಇವರು ಉಪನ್ಯಾಸ ಮಾಡುತ್ತಾ ಹಿಂದೂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಪದ್ಧತಿಯು ಹೇಗೆ ಬೆಳೆಯಿತೆಂಬುದನ್ನು ವಿವರಿಸಿದರು. ಜವಾಬ್ದಾರಿ ಸರಕಾರ, ಪ್ರಜಾಪ್ರಭುತ್ವ ರೀತ್ಯಾ ಸರಕಾರ ಇವುಗಳು ಚೆನ್ನಾಗಿ ನಡೆಯಬೇಕಾದರೆ, ಸರಕಾರಕ್ಕೆ ಇದಿರು ಪಕ್ಷವಿರಬೇಕೆಂದೂ, ಆದರೆ ಈಗ ಕಾಂಗ್ರೆಸ್ ಸರಕಾರವಿರುವುದಾದರೂ ಇದಿರು ಪಕ್ಷಗಳು ಬಹಳ ಬಲಹೀನವಾಗಿವೆಯೆಂದೂ ಹೇಳಿದರು. ಲಂಡನಿನ ಪ್ರೈಕಮಿಶನರ ಕಛೇರಿಯ ಮುಖ್ಯ ಕಾರ್ಯಕಾರಿ ಅಧಿಕಾರಿಗಳಾದ ಶ್ರೀ| ಟಿ. ಎನ್. ಮೇನನ್‌ರವರು ಸಭಾಧ್ಯಕ್ಷರಾಗಿದ್ದರು.

"ಇನ್‌ಸ್ಟಿಟ್ಯೂಶನ್ಸ್ ಎಂಡ್ ದೈಯರ್ ವ್ಯಾಲ್ಯೂಸ್" ಈ ವಿಷಯದಲ್ಲಿ ಗವರ್ನ್‌ಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಕೆ. ಎಸ್. ಯು ನಾಯರ್‌ರವರು ಮಾತಾಡಿದರು. ರೆ. ಫಾ. ರೆಕ್ಟರರು ಅಧ್ಯಕ್ಷತೆ ವಹಿಸಿದ್ದರು.

"ಹಿಂದೂಸ್ಥಾನದ ರಾಜ್ಯರಚನೆಯ ಅಭಿವೃದ್ಧಿ" ಶ್ರೀ| ಕೆ. ಆರ್ ಕಾರಂತರು ಈ ವಿಷಯವಾಗಿ ಭಾಷಣ ಮಾಡಿದರು. 1774ರಿಂದ ಹಿಂದೂಸ್ಥಾನದ (ಬ್ರಿಟಿಷ್) ರಾಜ್ಯರಚನೆಯನ್ನು 1935ನೇ ಇಸವಿಯ ರಾಜ್ಯ ರಚನೆಯ ತನಕ, ಯಾವ ಯಾವ ಕಾಲದಲ್ಲಿ ಎಷ್ಟೆಷ್ಟರ ಮಟ್ಟಿಗೆ ದೇಶಕ್ಕೆ ಸುಧಾರಣೆಗಳು ಬಂದಿವೆಯೆಂಬುದನ್ನು ವಿವರಿಸಿದರು. ಪ್ರಕೃತದ ಪ್ರಾಂತಿಕ ಸುಧಾರಣೆಗಳು ಕೆಲ ರೀತಿಯಲ್ಲಿ ದ್ವಿದಳ ರಾಜ್ಯ ಪದ್ಧತಿಯು ಕೊಟ್ಟಷ್ಟು ಹಕ್ಕುಗಳನ್ನು ಕೊಡುವುದಿಲ್ಲವೆಂದು ಹೇಳಿದರು. ಸಂಯುಕ್ತ ರಾಜ್ಯ ಪದ್ಧತಿಯನ್ನು ಟೀಕಿಸಿ ಅದೊಂದು ದೊಡ್ಡ ವಂಚನೆಯ ಸುಧಾರಣೆಯೆಂದರು. ಈಗಿನ ಕಾಲದಲ್ಲಿ ಅಧಿಕಾರಿಗಳ ಕೈಗೆ ಹೆಚ್ಚು ಅಧಿಕಾರಗಳು ಕಾಂಗ್ರೆಸ್ ಪಕ್ಷದವರಾಗಿರುವುದರಿಂದ ಜನರಿಗೆ ಹೆಚ್ಚು ತೊಂದರೆಯಾಗಲಾರದಾದರೂ ಮುಂದಕ್ಕೆ ಕಾಂಗ್ರೆಸಿನವರು ಅಧಿಕಾರದಿಂದ ಹೊರ ನಡೆದ ಮೇಲೆ ಅಧಿಕಾರಿಗಳು ತಮ್ಮ ಅಧಿಕಾರವನ್ನು ಕಾಂಗ್ರೆಸಿನ, ಜನತೆಯ ಸ್ವಾತಂತ್ರ್ಯ ಭಂಜನಕ್ಕೆ ಉಪಯೋಗಿಸಲು ಅವಕಾಶವಾಗುವುದೆಂದರು.

ಈ ಸಭೆಗೆ ಶ್ರೀ. ಯು. ಜಿ. ರಾಯರು ಅಧ್ಯಕ್ಷರಾಗಿದ್ದರು. ಶ್ರೀ. ಕೆ. ಕೆ. ಪೂವಯ್ಯನವರು ಧನ್ಯವಾದಗಳನ್ನರ್ಪಿಸಿದರು.

"ಹಿಂದೂದೇಶದ ಸಂಸ್ಕೃತಿಯ ಪುನರುಜ್ಜೀವನ" ಈ ವಿಷಯವಾಗಿ ಕರ್ನಾಟಕದ ಪ್ರಸಿದ್ಧ ಸಾಹಿತಿಗಳಾದ ಶ್ರೀ. ಶಿವರಾಮ ಕಾರಂತರು, ಶ್ರೀ. ಏಕಾಂಬರರಾಯರ ಅಧ್ಯಕ್ಷತೆಯಲ್ಲಿ ತಾ. 26ನೇ ಸಾಯಂಕಾಲ ಭಾಷಣ ಮಾಡಿದರು. ಆರ್ಯರ ಮತ್ತು ದ್ರಾವಿಡರ ಸಂಸ್ಕೃತಿಗಳು ಹೇಗೆ ಸಮ್ಮಿಲನವಾದುವೆಂಬುದನ್ನು ಅನೇಕ ನಿದರ್ಶನಗಳನ್ನಿತ್ತು ತಿಳಿಸಿದರು.

ವಾಕ್ ಸ್ಪರ್ಧೆ—ತಾ. 26ನೇ ದಿನ ಸಾಯಂಕಾಲ ಗವರ್ನಮೆಂಟ್ ಕಾಲೇಜಿನ ಹಾಲಿನಲ್ಲಿ, ಶ್ರೀ. ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಅಂತರ ಕಾಲೇಜು ವಾಕ್ ಸ್ಪರ್ಧೆ ನಡೆಯಿತು.

ಕರ್ನಾಟಕ ವಿಜಯ—ಮೈಸೂರಿನ ಪ್ರಸಿದ್ಧ ಕೀರ್ತನಕಾರರಾದ ಕೀರ್ತನ ಕೇಸರಿ ಶ್ರೀ. ಬಿ. ಶಿವಮೂರ್ತಿ ಶಾಸ್ತ್ರಿಗಳು ಸ. ಬಾ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಮೇಲಿನ ವಿಷಯದಲ್ಲಿ ಅತ್ಯಂತ ಮನೋಹರವಾದ ಕೀರ್ತನೆಯನ್ನು ಮಾಡಿದರು. ಶ್ರೀ| ಶಾಸ್ತ್ರಿಗಳ ಈ ಕಥೆಯು ಜಿಲ್ಲೆಯ ಬೇರೆಬೇರೆ ಕಡೆಗಳಲ್ಲಿ ನಡೆಸಿದರೆ ಕರ್ನಾಟಕ ಏಕೀಕರಣ ವಿಷಯದಲ್ಲಿ ಜನಜಾಗೃತಿಯು ಕ್ಷಿಪ್ರದಲ್ಲಿ ಆಗುವುದೆಂಬುದರಲ್ಲಿ ಸಂದೇಹವಿಲ್ಲ

ತರ್ಕಸಭೆ—ನಿನ್ನೆಯ ದಿನ ಸೈ. ಎ. ಕಾಲೇಜಿನಲ್ಲಿ ಒಂದು ಪ್ರಚಂಡ ವಾಕ್ ಸ್ಪರ್ಧೆಯು ನಡೆಯಿತು. ಚರ್ಚೆಯ ವಿಷಯವು ಹಳಬರು ಪ್ರಗತಿಗೆ ವಿರೋಧಿಗಳು, ಮತ್ತು ಹಳೆ ಸಾಂಪ್ರದಾಯವಾದಿಗಳೆಂಬುದಾಗಿತ್ತು. ಠರಾವನ್ನು ತಂದು ಮುಂದಿಡಿಸಿದವರು ಶ್ರೀ| ಯು. ಜಿ. ರಾವ್ ಬಿ. ಎ. ಯವರು. ಶ್ರೀಯುತರು ಠರಾವನ್ನು ಸಭೆಯ ಮುಂದಿರಿಸುತ್ತಾ ಬಹಳ ರಸಭರಿತ ಭಾಷಣವನ್ನು ಮಾಡಿದರು. ಶ್ರೀ. ಜೆ. ಯಂ ಸಿಕೇರ ಬಿ. ಎ. ಎಂ. ಎಲ್. ಇವರು ಠರಾವನ್ನು ವಿರೋಧಿಸಿ ಮಾತಾಡಿದರು. ಎರಡು ಕಡೆಯಲ್ಲಿಯೂ ಹೆಚ್ಚು ಮಂದಿ ಭಾಷಣಕರ್ತರಿದ್ದರು. ವಿದ್ಯಾರ್ಥಿಗಳೂ ಪುರಜನರೂ ಸೌಹಾರ್ದದಿಂದ ಈ ರೀತಿಯ ಸ್ಪರ್ಧೆಯನ್ನು ಜರಗಿಸಿದುದು ಬಹಳ ವಿಶೇಷದ ಸಂಗತಿ. ಶ್ರೀ. ಬಿ. ಅಚ್ಯುತ ಬಾಳಿಗರು ಅಧ್ಯಕ್ಷತೆ ವಹಿಸಿ ಹಲವು ಹಿತೋಕ್ತಿಗಳನ್ನು ಹೇಳಿದರು.

ಯಕ್ಷಗಾನ—ನಾಳೆ ಶ್ರೀ ಮಂಜುನಾಥೇಶ್ವರ ಥಿಯೇಟರಿನಲ್ಲಿ ಶ್ರೀ| ಯಂ. ಆರ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಯಕ್ಷಗಾನ ಕಾಲಕ್ಷೇಪವು ಜರಗುವುದು. ಶ್ರೀ| ಕೆ. ಕೃಷ್ಣರಾಯರ ಭಾಷಣವೂ ನಡೆಯಲಿದೆ.

ಪುನಃ ಅವಿಶ್ವಾಸದ ಠರಾವು—ಹಿಂದೊಂದು ಸಾರಿ 34 ಮಂದಿ ಸದಸ್ಯರು ಸಹಿಹಾಕಿ ಜಿ. ಕಾಂ. ಸಮಿತಿಯ ಅಧ್ಯಕ್ಷ, ಜತೆಕಾರ್ಯದರ್ಶಿ ಮತ್ತು ಶ್ರೀಮತಿ ಕಮಲಾದೇವಿಯರ ಮೇಲೆ ಅವಿಶ್ವಾಸದ ಠರಾವನ್ನು ತರಲು ಜಿ. ಕಾಂ. ಕಮಿಟಿಯ ಜನರಲ್ ಬಾಡಿ ಸದಸ್ಯರ ಸಭೆಯೊಂದನ್ನು ಕರೆಯಬೇಕೆಂದು ಕೊಟ್ಟ ಅರ್ಜಿಯನ್ನು ನಿರಾಕರಿಸಲ್ಪಟ್ಟ ನಿಮಿತ್ತವೂ ಸಂಧಾನವು ಆಗದುದರಿಂದಲೂ ನಿನ್ನೆಯ ದಿನ 34 ಮಂದಿ ಸದಸ್ಯರ ಸಹಿಯನ್ನೊಳಗೊಂಡ ಮತ್ತೊಂದು ಅರ್ಜಿಯು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಕಳುಹಿಸಲ್ಪಟ್ಟಿದೆಯೆಂದು ತಿಳಿದುಬರುತ್ತದೆ.

ನೋಟೀಸು

ಬೆಳ್ಳಿಪ್ಪಾಡಿ ಯಜಮಾನ ಮಂಜಪ್ಪ ರೈಯ ಕುಟುಂಬದ ಮೆಂಬರ್ರಿಗೆ ತಿಳಿಯಪಡಿಸುವುದು—

ನಾನು ಕಳೆದ ತಿಂಗಳ 27ನೇ ನವಯುಗದಲ್ಲಿ ಪ್ರಕಟಿಸಿದಂತೆ ಹೆಚ್ಚಿನ ಮೆಂಬರ್ರು ಹಾಜರಾಗದ್ದರಿಂದ ವಿಷಾದಪಡುತ್ತೇನೆ.

ಹಾಜರಿದ್ದ ಮೆಂಬರ್ರ ಸಮಕ್ಷಮ ಈ ಕೆಳಗಿನ ವಿವರದಂತೆ ನಿರ್ಣಯಿಸಲಾಯಿತು. ಅದೇನೆಂದರೆ ರಾಮಣ್ಣ ರೈಗಳ ಆಡಳ್ತೆ, ರಿಕಾರ್ಡುಗಳು ಆತನ ಜನರಲ್ ಪವರ್ ಪಡೆದ ಸಂಕಪ್ಪ ರೈಗಳಿಂದ ತರಿಸಿ ಪಡೆಕೊಂಡದ್ದಾಯಿತು. ಸದ್ರಿ ರಿಕಾರ್ಡುಗಳು ಪರಾಂಬರ್ಸಿದ್ದಲ್ಲಿ ಯಜಮಾನರಿಗೆ ವಸೂಲಾದ ಗೇಣಿ ಅಲ್ಪ ಮಾತ್ರ-ಪೆರ್ನೆ ಬಲಿಯೂರು ಗ್ರಾಮಗಳ ಸುಮಾರು 1600 ಮುಡಿ ಅಕ್ಕಿ, ನೆಲ್ಲೊತ್ತು ರಾಮಣ್ಣ ರೈ ತಂಗಿ ವ ಪೆರ್ನೆ ಮ್ಯಾಲ್ರೈ ಅತ್ತೆ ಚನ್ನಮ್ಮನಿಗೆ ವಸೂಲುಕೊಟ್ಟದ್ದೇವಾಗಿ ಒಕ್ಕಲುಗಳಿಗೆ ಯಜಮಾನರು ಬಿಟ್ಟ ರಿಕಾರ್ಡಿನ ಜವಾಬಿನಿಂದ ತಿಳಿದುಬಂತು. ಬೆಳ್ಳಿಪ್ಪಾಡಿ ಮನೆತನಕ್ಕೆ ವಸೂಲಾಗತಕ್ಕ ಗೇಣಿ ಆದಾಯದ ಬಡ್ಡಿ ಕೂಡಾ ಅಂದಾಜು ರೂಪಾಯಿ ಮೂವತ್ತು ಸಾವಿರಕ್ಕೆ ಮಿಕ್ಕಿ ನೆಲ್ಲೊತ್ತು ರಾಮಣ್ಣ ರೈ ಅಕ್ರಮ ಸ್ವಾಧೀನತೆಯಿಂದ ವಸೂಲುಮಾಡಿದ್ದಾಗಿ ರಿಕಾರ್ಡುಗಳಿಂದ ವ ಪುತ್ತೂರು ತಾಲೂಕು ಕಛೇರಿಯಲ್ಲಿ ಸಿಕ್ಕಿದ ರಿಕಾರ್ಡುಗಳಿಂದಲೂ ಕಂಡುಬರುತ್ತದೆ. 1935ನೇ ಯಿಸ್ವಿ ತೀರ್ವೆಗೆ ಜಿಲ್ಲಾ ಕಲೆಕ್ಟರ ಘೋಷಣೆ ಹುಕುಂ ಪ್ರಕಾರ ಪುತ್ತೂರು ತಾಲೂಕು ತಹಸಿಲ್‌ದಾರ್ರು 5 ಗ್ರಾಮಗಳ ಸುಮಾರು 5000 ಮುಡಿ ಅಕ್ಕಿಗೇಣಿ ಒಕ್ಕಲುಗಳ ಮನೆ ಜಪ್ತಿ ಮಾಡಿದ್ದಲ್ಲಿ ಏನೂ ವಸೂಲು ಸಿಕ್ಕಲಿಲ್ಲ. ತೀರ್ವೆ ಬಾಕಿ ಆಗಿ ಕುಟುಂಬದ ಹೆಚ್ಚಿನ ಆಸ್ತಿಗಳು ಏಲಂ ಆಗಿಯದೆ, ಸದ್ರಿ ಏಲಂ ರದ್ದು ಬಗ್ಗೆ ಸಂಕಪ್ಪರೈಗಳು ಹಣ ಒದಗಿಸಿ ತನ್ನ ಮಗನ ಮುಖಾಂತರ ಸಲ್ಲಿಸಿ ಪಡೆದ ರಶೀದಿಗಳಿಂದಲೂ ಯಜಮಾನರು ಸದ್ರಿ ಹಣಕ್ಕೆ ಜವಾಬ್ದಾರಿ ಕಾಣ್ಸಿ ಬರಕೊಟ್ಟ ಜನರಲ್ ಪವರ್ ರಿಕಾರ್ಡುಗಳಿಂದಲೂ ಕಂಡುಬರುತ್ತದೆ. ಆ ನಂತರ ಆ ಯಜಮಾನರ ಮರಣದ ವರೆಗೆ ಸಂಕಪ್ಪ ರೈಗಳು ನಡ್ಸಿದ ಆಡಳ್ತೆ ಯಜಮಾನ ಮರ್ಜುಗಳ ಲೆಕ್ಕ ಪರಿಶೋಧಿಸಿ, ಸಂಕಪ್ಪರೈಗಳಿಗೆ ಸಲತಕ್ಕ ವಿನೀಜಗೆ ಅವರಿಗೆ ವ್ಯಾದೆ ಸಮಾಪಿಸಿರುವದ್ರಿಂದ ಸದ್ರಿಯವರಿಗೆ ನ್ಯಾಯವಾಗಿ ಸಲತಕ್ಕ ಹಣ ಒದಗಿಸಿ ಸಲಾಯಿಸಬೇಕು ಯಾ ತಕ್ಕ ಜವಾಬ್ದಾರಿ ರಿಕಾರ್ಡುಮಾಡಿಕೊಟ್ಟು ಅವರಿಗೆ ಸಮಾಧಾನ ಪಡ್ಸಿ ಅವರು ವ್ಯಾಜ್ಯಕ್ಕೆ ಮುಂದರಿಸದಂತೆಮಾಡಬೇಕಾಗಿ ನಿರ್ಣಯಿಸಲಾಯಿತು.

ಪಟ್ಟೆ ತಬ್ದೀಲ್ ಬಗ್ಗೆ ರೇವಿನ್ಯು ಆಫೀಸರ್ರಲ್ಲಿ ಅರ್ಜಿದಾಖ್ಲೆ ಮಾಡಿಯದೆ, ಈ ಸಂಗ್ತಿ ತಿಳಿದು ನೆಲ್ಲೊತ್ತು ರಾಮಣ್ಣರೈ ಕಡೆಯಿಂದ ಪೆರ್ನೆ ಮ್ಯಾಲ್ರೈಯು ಬಲಾತ್ಕಾರ ನಡಿಸಲಿಕ್ಕೂ, ನನ್ನ ಸ್ವಂತ ಆಸ್ತಿಯು ಮತ್ತು ನನ್ನ ಕಡೆಯ ಬೇರೆಜನರ ಒಕ್ಕಲುಗಳನ್ನು ಬೆದರಿಸಿ ಆಸ್ತಿ ಸ್ವಾಧೀನಪಡಿಸಿಕೊಂಡು ಗೇಣಿ ನಮಗೆ ಸಿಕ್ಕವಂತೆಯೂ ಮತ್ತು ನನ್ನ, ವ ನನ್ನ ಕಡೆಯ ಜನರ ಜೀವಕ್ಕೆ ಹಾನಿ ಪಡಿಸುವ ಕೃತ್ಯಗಳು ನಡಿಸುವದಾಗಿ, ಕಪಟಕಟ್ಟಿಕೊಂಡಿರುತ್ತಾನೆಂತ ತಿಳಿದು ಬಂದದ್ದರಿಂದ ಅಂಥಾ ಕೃತ್ಯಗಳು ನಡಿಸದಂತೆ ತಕ್ಕ ಬಂದೋಬಸ್ತು ಬಗ್ಗೆ ಸಮ್ಮಂಧಪಟ್ಟ ಆಫೀಸರಿಗೆ ಅರ್ಜಿ ಬರಕೊಂಡಿದ್ದೇನೆ.

ರಾಜಿಯಿಂದ ವಸೂಲು ಸಿಕ್ಕಿದ ಗೇಣಿ ಒಕ್ಕಲುಗಳ ಮೇಲೆ ಮತ್ತು ರಾಮಣ್ಣರೈ ದುರುಪಯೋಗ ಪಡಿಸಿದ ವಿವಜು ಬರಮಾಡಿಕೊಳ್ಳುವರೆ ಕೂಡಾ ಸಿವಿಲ್ ವ್ಯಾಜ್ಯ ಮಾಡಬೇಕೆಂತಲೂ ಅದಕ್ಕೆ ಮುಂಚಿತವಾಗಿ ಈ ಕೆಳಗೆ ಕಾಣಿಸಿದ ವಿವಜುಗಳು ವಸೂಲ್ ಮಾಡಿ ಯಾವ್ಯಾವ ಕುಟುಂಬ ಪ್ರಯೋಜನಗಳಿಗೆ ಉಪಯೋಗಿಸಿದ್ದಾನೆಂಬ ಬಗ್ಗೆ ನವಯುಗದಲ್ಲಿ ಪ್ರಕಟಣೆ ಮೂಲಕ ಆತನ ಜವಾಬು ಪಡಿಯ ಬೇಕೆಂತಲೂ ನಿರ್ಣಯಿಸಲಾಯಿತು.

ಮುಂಚಿನ ಪ್ರಕಟನೆಗೆ ನಾನು ಪ್ರಕಟಿಸಿದ ಸಂಗತಿ ಪೂರಾ ಸುಳ್ಳುಯೆಂತ ವಂದೇ ವಾಚಕದ ಉತ್ತರ ಬರೆದಿದ್ದಾನೆ. ಆದ್ರಿಂದ ಇದರಲ್ಲಿ ವಿವರಿಸಿದ್ರಲ್ಲಿ ಯಾವ್ಯಾವದು ಸುಳ್ಳುಯೆಂತ ವಿವರ ಪಡಿಸಬೇಕಾಗಿರುತ್ತದೆ.

1. ಬಲಿಯೂರು ಹಿರಿಯಣ್ಣಾರಿಗರಿಂದ ಬಹ ಅಸ್ಲು ಕಾಣ್ಸಿದ ವಸೂಲಿ ಹಕ್ಕನ್ನು ನೆಟ್ಟಿಬೈಲು ಬಿ. ವೆಂಕಪ್ಪರೈ ಹೆಂಡ್ತಿ ಲಕ್ಷ್ಮಿ ಹೆಂಗ್ಸಿಗೆ ಟ್ರ್ಯಾಪರನ್ಸ್ ಕೊಟ್ಟು ಪಡೆದ ರೂ. ... 6500—0—0

2. ಕಳಂಜ ಸಿದ್ದಮ್ಮನ ಮಾರಿಸ್ತಾರ್ರಿಂದ ಬಹ ಅಸ್ಲು ಕಾಣಿಸಿದ ಟ್ರಾನ್ಸ್‌ಫರ್ ಕೊಟ್ಟು ಪಡದ್ದು 6500—0—0

3. ಅಡಕಳ ರಾಮಣ್ಣ ರೈರ ಆಡಳ್ತೆಯಲ್ಲಿ ಅಕ್ರಮವಾಗಿ ಗೇಣಿ ವಸೂಲು ಪಡೆದ ಅಂದಾಜು ರೂಪಾಯಿ .. ... 30,000—0—0

4. ಬೇಳೂರು, ಸಚೇರು ಗ್ರಾಮಗಳ ಆಸ್ತಿಯಿಂದ ಅವಮಣ್ಣು ಮೋಪಿನ ಮರಗಳು, ತಾಳಮರಗಳು ವಿಕ್ರಯಿಸಿ ಪಡದ್ದು ... 3000—0—0

5. ಬಾಯಾ ಗ್ರಾಮದ ವರ್ಗ ಮತ್ತು ಸರಕಾರಿ ಸ್ಥಳಗಳಿಂದ ಮಾರಾಟಮಾಡಿ ಸಿಕ್ಕಿದ್ದು ... 2000—0—0

ಇದರಲ್ಲಿ ರೂ. 1000 ಕಂಪೌಂಡು ಆದ್ದನ್ನು ಕಟ್ಟದ್ರಿಂದ ಕುಮ್ಕಿ ಹಕ್ಕು ರದ್ದುಪಡಿಸಿದ್ದಾರೆ.

6 ಕಣಿಯೂರು ಗ್ರಾಮದ ಆಸ್ತಿಗಳ ಮರ ಮಾರಾಟದಿಂದ ಸಿಕ್ಕಿದ ರೂ. 1000—0—0

7. ಬಲಿಯೂರು ಶಾಂತಿರಾಜಾರಿಗರಿಂದ ಬಹ ಅಸ್ಲು ಹಣ ವಸೂಲಾದ್ದು 2000—0—0

51,000—0—0

ಇನ್ನು ಕೆಲವು ವಿವಜು ವಸೂಲು ಮಾಡಿದ್ದಾನೆ, ರಿಕಾರ್ಡುಗಳು ಸಿಕ್ಕದ್ರಿಂದ ಹಿಂದಿನಿಂದ ಪ್ರಕಟಿಸಲಾಗುತ್ತದೆ.

ಈ ಪ್ರಕಟಣೆಯನ್ನು ನವಯುಗ ಆಫೀಸಿನಿಂದಲೇ ರಾಮಣ್ಣ ರೈ ವಿಳಾಸಕ್ಕೆ ರವಾನಿಸಬೇಕಾಗಿ ನಿರ್ಣಯಿಸಲಾಯಿತು.

ಮಂಜಪ್ಪ ರೈ ರುಜು,

ತಾ. 29-11-'38.

ಮದ್ರಾಸು ಪೋಲೀಸರ ಕುದುರೆಗಳು

ಮದ್ರಾಸು ಪೋಲೀಸರಿಗೆ ಬೇಕಾಗುವ ಕುದುರೆಗಳನ್ನು ಕೊಂಡುಕೊಳ್ಳುವ ರೀತಿಯಲ್ಲಿ ಈ ವರ್ಷ ಹೊಸ ರೀತಿ ಅನುಸರಿಸಲಾಗಿಯದೆ. ಇಷ್ಟರವರೆಗೆ ಹೆಚ್ಚಾಗಿ ಪತ್ರ ವ್ಯವಹಾರದಿಂದಲೇ ಖರೀದಿ ನಡೆಯುತ್ತಿತ್ತು. ಈ ವರ್ಷ ಸರಕಾರವು, ಪಶುವೈದ್ಯರು ಪರೀಕ್ಷೆನಡೆಸಿದನಂತರ ಕೊಂಡುಕೊಳ್ಳಬಹುದೆಂದು ಸೂಚಿಸಿತು. ಈ ಮೇರೆಗೆ ಈ ಸಂದರ್ಭ ಮದ್ರಾಸು ವೆಟರ್ನರಿ ಕಾಲೇಜಿನ ಪ್ರಿನ್ಸಿಪಾಲರಾದ ಟಿ. ಜೆ. ಹಾರ್ಲಿಯವರು ಕಲ್ಕತ್ತಕ್ಕೆ ಕಳೆದ ಶನಿವಾರ ತೆರಳಿರುವರಾಗಿ ತಿಳಿದುಬರುತ್ತದೆ.

The Commonwealth Assu. Co., Ltd.

ದಿ ಕೋಮನ್‌ವೆಲ್ತ್

ಎಸ್ಯೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.

ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:—

ಎಸ್. ಪಿ ಆರ್. ನಾಯಕ್ ಎಂಡ್ ಸನ್ಸ್,
ಸ್ಪೆಶಲ್ ಏಜಂಟ್.
ಕಾರ್ ಸ್ಟ್ರೀಟ್, ಮಂಗಳೂರು.

ಗವಾಸಕರ್ ಎಂಡ್ ಸನ್ಸ್,
ಚೀಫ್ ಏಜಂಟ್ಸ್,
ಆನಂದರಾವ್ ಸರ್ಕಲ್
ಬೆಂಗಳೂರು.

ನಿಜಾಮು ರಾಜ್ಯದಲ್ಲಿ ಹಿಂದುಗಳ ಪರಿಸ್ಥಿತಿ

ಪುಟ ೪ರಿಂದ

ರನ್ನು ಉಪಾಯದಲ್ಲಿ ಹಿಡಿಯುವುದರಿಂದ ಪ್ರಯೋಜನವಿಲ್ಲ."

ಆರ್ಯನ್ ಡಿಫೆನ್ಸ್ ಲೀಗ್

ಆರ್ಯನ್ ಡಿಫೆನ್ಸ್ ಲೀಗಿನ ಅಧ್ಯಕ್ಷರಾದ ದೇವಿಲಾಲ್ ಓಝಾ, ಎಂಬವರು, ಆರ್ಯನ್ ಲೀಗಿನ ಇತರ ಮೆಂಬರರೊಂದಿಗೆ ಸತ್ಯಾಗ್ರಹ ಹೂಡಿ ಕೈದುಮಾಡಲ್ಪಟ್ಟಾಗ್ಗೆ, ಸುಮಾರು ನಾಲ್ಕು ಸಾವಿರ ಜನರೆದುರು ಕೈದುಮಾಡಲ್ಪಡುವ ಮುಂಚೆ ಈ ರೀತಿಯ ಹೇಳಿಕೆಯನ್ನು ಓದಿದರು:—

"ಅನೇಕಾವರ್ತಿ ಸರಕಾರದ ಆಫೀಸರುಗಳಿಂದ, ಆರ್ಯ ಸಮಾಜದ ವಿರೋಧವಾಗಿ ಹೂಡಿದ ದಬ್ಬಾಳಿಕೆಯ ವಿಷಯವಾಗಿ, ಸರಕಾರದ ಗಮನಕ್ಕೆ ತರಲಾಯಿತು. ಅಲ್ಲದೆ ಸುಳ್ಳು ಕೇಸುಗಳನ್ನು ಹೂಡಿದ ಸಂಗ್ತಿಯನ್ನೂ ಸರಕಾರಕ್ಕೆ ತೋರಿಸಲಾಯಿತು. ಇವುಗಳನ್ನು ಸರಿಪಡಿಸಲು ಸರಕಾರವು ಸಮಾಧಾನಕರವಾದ ಯಾವದೇ ಕ್ರಮವನ್ನಾದರೂ ಈ ವರೆಗೂ ಮಾಡಲಿಲ್ಲ. ಇತ್ತಲಾಗೆ ಮುಖೇಡ್ ಆರ್ಯ ಸಮಾಜದ ಕಾರ್ಯದರ್ಶಿಯು ಹವನ ಕುಂಡ ಇಡಲು ತಯಾರುಮಾಡಿದುದಕ್ಕಾಗಿ ಶಿಕ್ಷಿಸಲ್ಪಟ್ಟರು. ಇಂಥಾ ವಿಪತ್ತುಗಳನ್ನು ಎದುರಿಸಲು ಆರ್ಯನ್ ಡಿಫೆನ್ಸ್ ಲೀಗ್ ಸ್ಥಾಪಿಸಲ್ಪಟ್ಟಿದೆ. ನೈಜಾಮರ ಕೈಕೆಳಗಿರುವ ಪ್ರತಿಯೊಬ್ಬನೂ ಪೂರ್ಣ ಧಾರ್ಮಿಕ ಹಕ್ಕು ಪಡೆಯುವಂತೆ ಸತ್ಯ ಮತ್ತು ಅಹಿಂಸೆಯ ಮೂಲತತ್ವಗಳಿಂದ ಸತ್ಯಾಗ್ರಹವು ಹೂಡಲ್ಪಟ್ಟಿದೆ. ಈ ಕಮಿಟಿಗೆ ಯಾವ ಜಾತಿಯು ಇಲ್ಲವೆ, ಯಾವ ಸಂಗಡದ ಮೇಲೆ ದ್ವೇಷ ಅಥವಾ ವಿರೋಧ ಹುಟ್ಟಿಸುವ ಇಂಛೆ ಇಲ್ಲ. ಎಲ್ಲರಲ್ಲಯೂ ಪ್ರೀತಿಯನ್ನು ವೃದ್ಧಿಸಲು ಅದು ಪ್ರತಿಬಂಧಿತವಾಗಿದೆ.

ಪಂಚಲಿಂಗ ದರ್ಶನ

(ನಮ್ಮ ಸ್ವಂತ ಬಾತ್ಮೀದಾರರಿಂದ.)

ತಲಕಾಡಿನ ಇತಿಹಾಸದಲ್ಲಿ ಒಂದು ಮಹಾ ದಿನ ಒದಗಿತು. ಕಾರ್ತಿಕಮಾಸ, ಅಮಾವಾಸ್ಯೆ, ಸೋಮವಾರ ಇವಿಷ್ಟು ಯೋಗಗಳೂ ಒಟ್ಟಾಗಿ ಬಂದ (ಹದಿಮೂರು ವರ್ಷಗಳಿಗೊಮ್ಮೆ ಹೀಗೆ ಬರುವುದೆಂದು ಹೇಳುತ್ತಾರೆ.) ಈ ದಿವದಲ್ಲಿ ಸುಮಾರು ಅರ್ಧಲಕ್ಷ ಜನರು ತಲಕಾಡಿನಲ್ಲಿ ೩೦ ಮೈಲು ರಾತ್ರಿಯ ವಧದಲ್ಲಿ ರಮಣೀಯವಾದ ಪ್ರದೇಶದಲ್ಲಿ ಒಡಳ ಗಂಭೀರವಾಗಿಯೂ ಮತ್ತು ಮನಸ್ಸಿಗೆ ಒಂದು ಬಗೆಯ ಉಲ್ಲಾಸವನ್ನುಂಟುಮಾಡುವ ಹರಿಯುವ ಕಾವೇರಿ ನದಿಯಲ್ಲಿ ಮುಂಜಾನೆ ಎದ್ದು ಸ್ನಾನಮಾಡಿ ದೇವರ ದರ್ಶನ ಲಾಭಪಡೆದರು. ಅಲ್ಲಿ ಸೇರಿದ್ದ ಜನಗಳ ಗುಂಪನ್ನು ಅಲಹಾಬಾದಿನಲ್ಲಿ ನಡೆಯುವ ಕುಂಭಮೇಳಕ್ಕೆ ಹೋಲಿಸಿದರೆ ತಪ್ಪಾಗಲಾರದು.

ತಲಕಾಡಿನಲ್ಲಿ ಸುಮಾರು 3ದಿನಗಳ ಮುಂಚೆಯೇ ಜನಗಳು ಜಮಾಯಿಸಲು ಶುರುಮಾಡಿದರು. ಮೈಸೂರು ಸೀಮೆಯಿಂದಲ್ಲದೆ, ಕಣಿವೆ ಕೆಳಗಿನಿಂದಲೂ ಕೊಡಗಿನಿಂದಲೂ, ದಕ್ಷಿಣ ಕನ್ನಡದಿಂದಲೂ ಜನಗಳು ಬಂದಿದ್ದರು. ಇಷ್ಟು ಜನಗಳಿಗೂ ಅಲ್ಲಿ ಬಿಡಾರವಾಸಲು ಜಾಗವಿಲ್ಲದಿದ್ದರೂ, ಇದ್ದಲ್ಲೇ ಇಳಿದುಕೊಂಡ ಕಾರ್ಯವು ಸಾಂಗವಾಗಿ ನೆರವೇರುವಂತೆ ಮಾಡಿಕೊಂಡರು. ಸೋಮವಾರ ಬೆಳಗಿನ ಝಾಮ 3 ಘಂಟೆ ಹೊತ್ತಿಗೇನೇ ಜನಗಳು ಎದ್ದು ಪರ್ವಕಾಲದಲ್ಲಿ ಸ್ನಾನಮಾಡಿ ವೈದೀಶ್ವರ, ಅರ್ಕೇಶ್ವರ, ಪಾತಾಳೇಶ್ವರ, ಮತ್ತು ಮಲ್ಲಿಕಾರ್ಜುನೇಶ್ವರ ಸ್ವಾಮಿಯ ದರ್ಶನ ಲಾಭಪಡೆಯಲು ಉದ್ಯುಕ್ತರಾದರು. ಅನೇಕರಿಗೆ ದೇವದರ್ಶನಕ್ಕೆ ಕಷ್ಟವಾಗಿ ಹೊರಗಡೆಯಿಂದಲೇ ಸೇವೆ ಸಲ್ಲಿಸಿದರು. ಇಂದು ಪ್ರಿನ್ಸ್ ಜಯಚಾಮರಾಜ ಒಡೆಯರೂ, ಜನಾನಾದವರೂ ಬಂದಿದ್ದರು. ಪ್ರಿನ್ಸ್‌ರವರನ್ನು ಮೈಸೂರಿನ ಡಿ. ಸಿ., ನಂಜನಗೂಡಿನ ಯಸ್. (ಕ್ಯಾಂಪ್), ತಲಕಾಡು, ನಂ. ೨೭ ಡಿ. ಓ., ಮತ್ತು ಮೈಸೂರಿನ ಡಿ. ಯಸ್. ಪಿ ರವರು ಸ್ವಾಗತಿಸಿದರು. ಅನೇಕ ಜನರು ಇವರಿಗೆ ರಾಜಭಕ್ತಿಯನ್ನೂ ಸೂಚಿಸಿದರು. ಕೊನೆಗೆ ಪ್ರಿನ್ಸ್‌ರವರು ನೋಟಾರಿನಲ್ಲಿ ಕುಳಿತು ಮೆರವಣಿಗೆ ಹೊರಟರು. ಜನರು ಜಯಕಾರಮಾಡಿ ದರ್ಶನಮಾಡಿದರು. ಪ್ರಿನ್ಸ್‌ರವರು ದೇವರ ದರ್ಶನಲಾಭ ಪಡೆದು ಸುಮಾರು ಹತ್ತು ಘಂಟೆ ಹೊತ್ತಿಗೆ ಮೈಸೂರಿಗೆ ಹಿಂತಿರುಗಿದರೆಂದು ಹೇಳಲಾಗಿದೆ.

ಏನ ಸರಕಾರದವರು ಬಹಳ ಮುತುವರ್ಜಿವಹಿಸಿ ಜನಗಳಿಗೆ ನಾನಾ ಸೌಕರ್ಯಗಳನ್ನು ಒದಗಿಸಿದ್ದಾರಲ್ಲದೆ, ಜಿಲ್ಲಾಧಿಕಾರಿಗಳು ಡಿ. ಯಸ್. ಪಿ.ರವರೂ ನಂಜನಗೂಡಿನ ಯಸ್. ಡಿ. ಓ., ಮತ್ತು ಪಿ. ಯಸ್. ಪಿ. ಯವರೂ, ಸ್ಥಳೀಯ ಮುನಿಸಿಪಾಲಿಟಿಯವರೂ, ಎಲ್ಲದಕ್ಕಿಂತ ಮೇಲಾಗಿ ವೈದ್ಯ ಮತ್ತು ಆರೋಗ್ಯ ಇಲಾಖೆಯವರು ಕಷ್ಟಪಟ್ಟು ಕೆಲಸಮಾಡಿ ಜನಗಳಿಗೆ ಬಾಯಿಲೆಯಾಗಲಿ ಅಥವ ಇನ್ನಾವ ತೊಂದರೆ ಆಗಲಿ ಆಗದಂತೆ ನೋಡಿಕೊಳ್ಳುತ್ತಿದ್ದರು.

ಪೋಲೀಸ್ ಇಲಾಖೆಯ ಏರ್ಪಾಡೂ ಉತ್ತಮವಾಗಿದ್ದಿತು. ಈಮಧ್ಯೆ ಸುಮಾರು ೧೨ ಘಂಟೆಯ ಹೊತ್ತಿಗೆ ಮೈಸೂರು ಸಂಸ್ಥಾನದ ಪ್ರಥಮ ಸಚಿವರು ಭೇಟಿಕೊಟ್ಟರು. ಇವರನ್ನು ಅಧಿಕಾರಿಗಳು ಸ್ವಾಗತಿಸಿ ಎಲ್ಲವನ್ನು ತೋರಿಸಿದರು.

ಆದರೆ ಅಲ್ಲಲ್ಲಿ ಒಂದೆರಡು ಅನಾಹುತವು ನಡೆಯಿತೆಂದೂ ಇದು ಕೇವಲ ಚಿಕ್ಕದೆಂದೂ ಹೇಳಲಾದೆ.

ಅಂತು ತಲಕಾಡಿನಲ್ಲಿ ಪಂಚಲಿಂಗ ದರ್ಶನವು ಬಹಳ ಯಶಸ್ವಿಯಾಗಿ ನಡೆಯಿತು.

ಶ್ರೀ ಕೆಲಸಗಾರರ ಸಂಪು - ಘಾನಾಟೆಕ್ಸಟೈಲ್ ಫ್ಯಾಕ್ಟರಿಯ 175 ಹಿಂಗಸರಲ್ಲಿ 150 ಜನರು, (ಪೆಟ್ಟಿಗೆ ತುಂಬಿಸುವ ಭಾಗ ಮಾತ್ರ) ತಮ್ಮ ಸಂಬಳವನ್ನು ಒಂದಾಣೆಯಿಂದ ಒಂದು ಕಾಲಾಣೆಮಾಡಬೇಕೆಂದು ಕೇಳಿಕೊಳ್ಳಲು, ಅಧಿಕಾರಿಗಳು ಇದನ್ನು ನಿರಾಕರಿಸಿರುವುದರಿಂದ ಮಂಗಳವಾರದಿಂದ ಸಂಪು ಹೂಡಿರುವರು. ೭೦ ಪುಗಾರರು ಫ್ಯಾಕ್ಟರಿಯ ಮುಂಗಡೆ ಪಿಕೆಟಿಂಗ್ ಮಾಡುತ್ತಿರಲು, ಪೋಲೀಸರು ಇವರನ್ನು ಕಾಯುತ್ತಿರುವರು.

ಮುಂಬಯಿಯಲ್ಲಿ ಚೈನೀಯರು—ಚೈನದಲ್ಲಿ ಕಷ್ಟಪಡುತ್ತಿರುವ ಜನರಿಗೆ ತೀವ್ರ ತೋರಿಸುತ್ತಿರುವ ದಯೆಗೂ ಮತ್ತು ಸಹಾಯಕ್ಕೂ ಪ್ರತಿಯಾಗಿ ತಮ್ಮ ಅಭಿನಂದನೆಗಳನ್ನರ್ಪಿಸುವ ಸಲುವಾಗಿ ಭಾರತಕ್ಕೆ ಬಂದಿದ್ದ, ಚೈನೀಸ್ ಲೀಗ್ ಆಫ್ ನೇಶನ್ಸ್ ಯೂನಿಯನಿನ ಕೆಲವರು ಮುಂಬಯಿಯಲ್ಲಿ ತಲ್ಪಿರುವರು. ಇವರು ಶ್ರೀ. ಜಿನ್ನಾ, ಮತ್ತು ಜವಹರಲಾಲ್ ನೆಹರುಗಳನ್ನು ಸಂದರ್ಶಿಸಿ, ಭಾರತೀಯರೊಡನೆ ಇನ್ನೂ ಹೆಚ್ಚಿನ ಸಂಬಂಧವನ್ನು ಕಟ್ಟಿಕೊಳ್ಳಲು ಇಚ್ಛಿಸುತ್ತಿರುವರು.

ಫೋರ್ಟ್ ಆರ್ಯಸಮಾಜ ಮುಂಬಾಯಿ—ಇದೇ ತಾ. 20-11-38ರಲ್ಲಿ ಸ್ವ. ಪಂಜಾಬ ಕೇಸರಿ ಲಾಲಾ ಲಜಪತರಾಯರ ದಿನಾಚರಣೆಯು ಶ್ರೀಮಾನ್ ಎಚ್. ಕೆ. ಪಾಲ್ ಇವರ ಸಭಾಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಪಂಡಿತ ಪದ್ಮದತ್ತಜಿ, ಶ್ರೀ. ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದರು, ಮತ್ತು ಶ್ರೀ. ಭಗವಾನ್‌ಚಂದ್ರಜಿಯವರು ಲಾಲಾಜಿಯವರ ಆದರ್ಶಮಯ ಜೀವನದ ಕುರಿತು ಮುಖ್ಯ ಮುಖ್ಯ ವಿಷಯಗಳನ್ನೆತ್ತಿ ಭಾಷಣವಿತ್ತರು. ಅನಂತರ ದಿವಂಗತ ಹಂಸರಾಜರ ನಿಧನದ ಕುರಿತು ದುಃಖಸೂಚಕ ಠರಾವು ಮಾಡಲಾಯಿತು.

ಅಂತರ್ವಿವಾಹ—ಇಲ್ಲಿಯ ಫೋರ್ಟ್ ಆರ್ಯಸಮಾಜ ಮಂದಿರದಲ್ಲಿ ತಾ. 5-11-38 ಕ್ಕೆ ಎಸ್ತೇರಾ ಡಿಸೋಜು ಎಂಬ ರೋಮನ್ ಕೆಥೋಲಿಕ್ ಕನ್ಯೆಯೋರ್ವಳನ್ನು ಶುದ್ಧಿ ಸಂಸ್ಕಾರದಿಂದ ವೈದಿಕ ಧರ್ಮಕ್ಕೆ ಸೇರಿಸಿ, ರುಕ್ಮಿಣೀದೇವಿ ಎಂಬ ನಾಮವನ್ನಿಡಲ್ಪಟ್ಟವಳ ವಿವಾಹ ಸಂಸ್ಕಾರವು ಇದೇ ತಿಂಗಳ ತಾ. 20-11-38 ರಲ್ಲಿ ನಡೆಯಿತು.

"ಸರಸ್ವತಿ"

ಸರಸ್ವತಿಯ ಹದಿನೆಂಟನೆಯ ಸಂಪುಟವು ೧೯೩೯ನೆಯ ಜನವರಿ ತಿಂಗಳಿನಿಂದ ಪ್ರಾರಂಭವಾಗುವುದು. ಕನ್ನಡನಾಡಿನ ಸುಪ್ರಸಿದ್ಧವಾದ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟ ಕಥೆಕವಿತೆ ನಾಟಕಗಳಿಂದ ಮಹಿಳೆಯರಿಗತ್ಯುಪಯುಕ್ತವಾದ ಲೇಖನಗಳಿಂದ ಕೂಡಿದೆ. ಪ್ರತಿ ಸಂಚಿಕೆಗಳಲ್ಲಿಯೂ ಮಕ್ಕಳ ಪುಟಗಳಿವೆ. ಮಕ್ಕಳಿಗಾಗಿಯೇ "ಕನ್ನಡಿಗರ ಕಣಜ" ಎಂಬ ಗ್ರಂಥ ಮಾಲೆಯು ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ:— ೩—೬—೦ ಮಾತ್ರ.

ವಿಳಾಸ:- ಸರಸ್ವತಿ ಕಾರ್ಯಾಲಯ, ಚಾಮರಾಜ ಪೇಟೆ, ಬೆಂಗಳೂರು ನಗರ.

ಬೊಂಬಾಯಿ ಸಮಾಚಾರ

(ಸ್ವಂತ ಬಾತ್ಮೀದಾರರಿಂದ)

21—11—38

ಹೊಸ ಮಿಲ್ಲು ಸ್ಥಾಪನೆ—"ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಬಿಲ್ಲು 'ಕಪ್ಪು' ಎಂದು ಹಲವರೆಲ್ಲಾ ದೂರುತ್ತಿರುವರು, ಆದರೆ ಇದು ಕಪ್ಪಾಗಿರದೆ, ಚಿನ್ನದಂತೆ ಹಳದಿಯಾಗಿದೆ" ಎಂದು ಮುಂಬಯಿಯ ಮುಖ್ಯ ಮಂತ್ರಿಯವರಾದ ಶ್ರೀ. ಬಿ. ಜಿ. ಖೇರರವರು, ಲೇಬರ್ ರಿಕ್ರಿಯೇಷನ್ ಸೆಂಟರಿಗೆ ಅಡಿಗಲ್ಲು ಹಾಕುವಾಗ ಹೇಳಿದರು. ಇವರು ಭಾಷಣದ ಮಧ್ಯೆ ಪೂರ್ವದ ಕೈಗಾರಿಕೆಯನ್ನೂ ಇಂದಿನ ಕೈಗಾರಿಕೆಯನ್ನೂ ಹೋಲಿಸಿ, ಇಂದು ಮೆಶಿನುಗಳು ಬಂದಿದ್ದರೂ, ಇವುಗಳಲ್ಲಿ ಜನರು ಇಡೀ ದಿವಸ ಕೆಲಸಮಾಡಿ ಸೋತಾಗ, ಇವರಿಗೆ ಸಂಜೆ ಹೊತ್ತಿನಲ್ಲಿ ಒಂದು ಗಳಿಗೆಯ ವಿಶ್ರಾಂತಿ ಕೊಡುವುದಕ್ಕಾಗಿ ಈ ಸೆಂಟರು ಕಟ್ಟಲ್ಪಟ್ಟಿದೆ. ಹಲವು ಧಂಡವಾಳ ಶಾಹಿಗಳು ತಮ್ಮ ಸುಖ ಶಾಂತಿಗಾಗಿ ಗಿರಣಿಗಳನ್ನು ಸ್ಥಾಪಿಸಿ, ಜನರಿಗೆ ಕಷ್ಟಕೊಡುತ್ತಿದ್ದರೂ ಈ ಸೆಂಟರು ಕಾಮಗಾರರಿಗೆ ವಿಶ್ರಾಂತಿಗಾಗಿ ಸ್ಥಾಪಿಸಲ್ಪಟ್ಟಿದೆ ಎಂದು ಹೇಳಿದರು.

ಕಾಂಗ್ರೆಸನ್ನು ತೊರೆಯಬೇಡಿ—ಅಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷರಾದಂಥಾ ಡಾ। ಸುರೇಶ್‌ಚಂದ್ರ ಬೇನರ್ಜಿಯವರು ಕಳೆದ ಶನಿವಾರ ಇಲ್ಲಿಗೆ ಚಿತ್ತೈಸಿದಾಗ, ಸ್ಥಳೀಕ ಟ್ರೇಡ್ ಯೂನಿಯನಿನವರು ಇವರಿಗೆ ಸಾದರಸ್ವೀಕಾರವನ್ನಿತ್ತರು.

ಕಳೆದ ಮಂಗಳವಾರ ಡಾ। ಬೇನರ್ಜಿಯವರು ಸಾರ್ವಜನಿಕ ಸಭೆಯಲ್ಲಿ ಅಮೋಘ ಭಾಷಣವೀಯುತ್ತ "ಕಾಂಗ್ರೆಸನ್ನು ಬಿಟ್ಟೋಡುವುದರಿಂದ, ನಿಮ್ಮ ಧ್ಯೇಯವು ಪೂರ್ಣವಾಗಲಿಕ್ಕಿಲ್ಲ. ನಿಮ್ಮ ಕತ್ತನ್ನು ನೀವೇ ಹಿಚುಕಿಕೊಂಡಂತಾಗುವುದು. ಕಾಮಗಾರರಿಗೆ ವಿರುದ್ಧವಾಗಿ ಕಾಂಗ್ರೆಸ್ ಏನಾದರೂ ಕಾನೂನುಗಳನ್ನು ಜಾರಿಮಾಡಿದ್ದಲ್ಲಿ, ತಂದೆ ಮತ್ತು ಮಗನು ಕಾದುವಂತೆ ನಾವು ಕಾದ ಕೊಳ್ಳಬೇಕಲ್ಲದೆ ಮತ್ತೇನಲ್ಲ. ಕಾಂಗ್ರೆಸ್ ಸಂಸ್ಥೆಯಲ್ಲಿ ಯಾರಿಗೂ ದ್ವೇಷವಿಲ್ಲ. ಆದರೆ ಅದರ ಮುಂದಾಳುತ್ವವನ್ನು ದೂಷಿಸುವರಷ್ಟೆ. ಅದ್ದರಿಂದ ಇದು ಧಂಡವಾಳ ಶಾಹಿಗಳ ಹಸ್ತಗತವಾಗದಂತೆ ನೋಡಿಕೊಳ್ಳಬೇಕಾದರೆ, ಇದಕ್ಕೆ ಸಾವಿರಗಟ್ಲೆ ಕಾಮಗಾರರು ಸೇರಬೇಕು." ಎಂದರು. ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ಲಿನ ಕುರಿತು ವಿಚಾರಿಸುವರೆ ಇವರು ಇಲ್ಲಿಗೆ ಚಿತ್ತೈಸಿರುವರು.

ಸರಕಾರಿ ಪ್ರೆಸ್ ಕಾಮುಗಾರರ ಸಂಪು—ತಾವು ಕೇಳಿದ ಬೇಡಿಕೆಗಳನ್ನು ಆದಷ್ಟು ಬೇಗನೆ ಸಲ್ಲಿಸದಿದ್ದಲ್ಲಿ ಸಂಪು ಹೂಡುವೆವೆಂದು ಸರಕಾರಿ ಪ್ರೆಸ್ ಕಾಮಗಾರರು ಪ್ರೆಸ್ಸಿನ ಅಧಿಕಾರಿಗಳಿಗೆ ಸೂಚಿಸಿರುವರು.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಅದ್ಭುತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗ ವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ವಿತಿಮೀರಿ ಭೋಗಮಾಡುವುದರಿಂದಲೂ ದುಷ್ಟಮದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವವೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೩೪೪, ಚಿಕ್ಕಪೇಟೆ ಚಾರಕ, ಬೆಂಗಳೂರು ಸಿಟಿ.

ದೇಶಭಕ್ತ (ನಾಟಕ)	೦—೧೦—೦
ವ್ಯಭಿಚಾರಿಣಿ ಯಾರು	೦—೮—೦
ನಂದಾದೀಪ(ಕಥಾಸಂಗ್ರಹ)	೦—೮—೦

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು. ಹೆಸರುಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರೆಗಳಲ್ಲಿ ಮಾಡಿ ಕೊಡೋಣಾಗುವುದು.

CROWN RUBBER STAMP CO,
Balmat Road, MANGALORE.
Included by the Mysore Govt Stores Purchase Committee in the list of approved Firms.

ಕೂದಲು ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲುಗಳೇ ಸ್ಥಿರವಾಗಿ ಕಪ್ಪಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟಹಣಕ್ಕೆ ಡಬ್ಬಲ ವಾಪಾಸು ಕೊಡಲು ಗ್ಯಾರಂಟಿ ಎಂಬುದಕ್ಕೆ ದೊರಕಿದ ಸಾವಿರ ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ 5-0-0. ಅನೇಕ ಕಪ್ಪು ಮಿಶ್ರಿತ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ. 7-0-0 ಬೆಲೆಯ ಎಣ್ಣೆ ಬೇಕಾಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

HAZRA & Co.,
P. O. Bihar Nursery (DARBHANGA)

ಸಿಟ್ಟು, ಪೆಟ್ಟು, ಕತ್ತಿ, ದೊಣ್ಣೆ, ಕೋಪಿ.

(Temper and its allies.)

(ಲೇಖಕರು: ಶ್ರೀ ಬಿ. ಶ್ಯಾಮರಾಯ ಶೆಟ್ಟಿ, ಬಿ.ಎ., ಎಲ್.ಟಿ., ಉಡುಪಿ.)

Man is more psychological than logical For he knows that a certain thing is wrong and yet he does it—Why? Because the animal in him prevails. It is five hundred generations between us and our forbear the Neanderthal man (the subman, the bushman of the stone age) who ate raw flesh. We to-day boast of our education and culture. We say we have tamed and bred the beasts, schooled lightning and drawn electricity, but have we sufficiently tamed and refined ourselves? Look around, there is temper everywhere In our boasted scientific age the stone-age man still persists What a nasty thing it is! How unworthy of man! How brutal! How many nations have been ruined! How many houses have been reduced to ashes! How many acquaintances are shattered and how many friends driven apart by a fit of temper! Man knows it, but still he feels helpless, for man has not sufficiently disciplined himself But oh! When will man learn to talk like man? When will he walk like man? When man thinks and acts like man, then only will man be man, and the world be happy

ಕಿಟ್ಟ:—ಚಿಕ್ಕಾ, ಪೇಟೆಲೆಲ್ಲಾ ಸುದ್ದಿ—ಬಿಸಿ ಬಿಸಿ ಸುದ್ದಿ—ಕೊಲೆಯಂತೆ, ಪೋಲೀಸು ಹೋಗಿದೆಯಂತೆ ಹೆಣ ಆಸ್ಪತ್ರೆಗೆ ಬರುತ್ತಂತೆ! ಎಲ್ಲಿ, ಯಾರು? ನನಗೊಂದೂ ಸ್ಪಷ್ಟವಾಗಲಿಲ್ಲ. ಎಲ್ಲ ಗುಜು ಗುಜು ಮಾತಾಡುತ್ತಾರೆ ದಾರಿಯಲ್ಲಿ ಇಬ್ಬರು ಹೀಗೆ ಮಾತಾಡುತ್ತಾ ಹೋಗುತ್ತಿದ್ದರು, "ಡೊಂಬಿಯಂತೆ, ಖೂನಿಯಂತೆ—ಯಾವ ಜಾತಿಯೋ—ಏನೋ" ಅಂದ ಒಬ್ಬ. ಮತ್ತೊಬ್ಬ ಹೇಳಿದ. "ಬಹುಶಃ ನಾಡವರ ಜಾತಿ ಆಗಿರಬೇಕು. ಅವಕ್ಕೆ ಮತ್ತೇನು ಕೆಲಸ? ಕುಟುಂಬದ ಹೊಟ್ಟೆ ಉರ್ಸೋದು, ಸಿಟ್ಟೇರಿಸೋದು, ಬಡ ಒಕ್ಕಲುಗಳನ್ನು ಮುಕ್ಕಿ ತಿನ್ನೋದು, ಕೋರ್ಟುಕಛೇರಿ ಹತ್ತೋದು, ಡೊಂಬಿ, ಖೂನಿ, ನಡ್ಸೋದು. ಕಡೀಗೆ ತನ್ನ ಜೀವಕ್ಕೆ ಸಂಚಕಾರ ತಂದುಕೊಂಬೋದು! ಹೀಗೇ ಎಲ್ಲಾ ಮಾಡಿ ಮನೆಕಳಕೊಳ್ಳುವ ವ್ಯಾಪಾರ ಅಲ್ಲಾ ಅವಕ್ಕೆ! ದರ್ಪ, ಗರ್ವ, ಭರಂ, ಘರಂ, ಅಂತ ಇದ್ದದ್ದನ್ನೆಲ್ಲಾ ಮುಕ್ಕಾಲುವಾಸಿ ಕಳಕೊಂಡವು ಇನ್ನು ಇರುವುದು ಸ್ವಲ್ಪ. ಆದರೂ ಒಣ ಬಡಿವಾರ ಬಿಡೋದಿಲ್ಲ. ಹಿರಿಯರು ಕಷ್ಟಪಟ್ಟು ಏನೋ ಗುತ್ತು-ಗಿತ್ತು-ಮನೆ-ಗಿನೆ ಬಿಟ್ಟು-ಬೈಲು ಮಾಡಿದ್ದಾರೆ. ಈಗಿನವು ಅವನ್ನೆಲ್ಲಾ ಕಿತ್ತು, ಗಿತ್ತು, ಕುಟ್ಟಿ, ಮಾರಿ ತಿಂಗೀತೋ. ಇಟ್ಟುಕೊಳ್ಳೋ ಲಕ್ಷಣ ಅವುಗಳಲ್ಲಿ ಕಾಣ್ತಾ? ಹಿರಿಯರ ಹಾಂಗೆ ದುಡಿಯೋಕೆ ಇವ್ರುಗಳ ಮೈ ಬಗ್ಗುತ್ತಾ? ಕಂಬಳದ ಹೋರಿಗಳ ಹಾಗೆ ಮೆರವಣಿಗೇಲಿ ಹೋಗೋಕೆ ಮಾತ್ರ ಗೊತ್ತು. ಪ್ಯಾಟೆಗೆ ಹೋಗಿ ಕಚ್ಚ ಏನು ಹಾರಿಸ್ತೋ! ಕಾಫಿ ಕುಡಿಕೋ—ಅದೋಪಾದಿಯ ದುರ್ವ್ಯಸನಗಳಿಗೆಲ್ಲಾ ತಮ್ಮ ತೋರ ಭರಂ ತೋರಿಸೋಕೆ ಹೋಗಿ ಎರಡು ಖರ್ಚು ಮಾಡುವಲ್ಲಿ ಇಪ್ಪತ್ತು ಪುಡಿಮಾಡುತ್ತೊ! ಹಾಳುಗೇಡಿಗಳು! ಒಹೋ, ಕೊಲೆಯಾ! ಅದು ನಾಡವರ ಮಕ್ಕಳು, ಅದಕ್ಕೆ ಸಂಶಯವಿಲ್ಲ. ಸಿಟ್ಟು ಪೆಟ್ಟು, ಕತ್ತಿ, ದೊಣ್ಣೆ, ಕೋಪಿ, ಡೊಂಬಿ ಖೂನಿ ಅಂದರೆ ಅದು ನಾಡವರ ಕುಲಬಿರುದು. ಅವರ ಹಟ್ಟಿಯ ಕಂಬ ಮಾರಿಸೋದ ಆದೇ. ಹ್ಯಾಗಂತಿಯಾ? ಹೆಣಬೀಳಿಸಿದೋರು ಹಣಸುರಿಸಬೇಕು ಏನು ಹತ್ತಿಪ್ಪತ್ತಾ? ನೂರು ನೂರು ಗಟ್ಲೇಲಿ, ಸಾವಿರ ಸಾವಿರ ಗಟ್ಲೇಲಿ. ಥೈಲಿ ಥೈಲೀನೇ ಮುಂದು ದೂಡಿ ನೋಟಿನ ಕಟ್ಟು ಕಟ್ಟು ಹಿಡಕೊಂಡೇ ಕ್ರಿಮಿನಾಲ್ ಇನ್ಸ್ಪೆಕ್ಟರ್ ಆದೋಕೆ ತಯಾರಾಗಿರಬೇಕು. ಕ್ರಿಮಿನಾಲ್ ಸಿವಿಲ್ ವ್ಯಾಜ್ಯಾಸಾಜ್ಯಾ 'ಇವೆಲ್ಲಾ ಹೆಂಡ ಕುಡಿದ ಹಾಗೆ, ಜುಗಾರಾಡಿದಹಾಗೆ. ಹೋಗೋದೂ ಹೋಗದಿರೋದೂ ನಮ್ಮ ಆಧೀನ ಹೋದಮೇಲೆ ಎಲ್ಲಾ ಅವರ ಆಧೀನ—ಅಲ್ಲಿಗೂ ತಮ್ಮ ಭರಂಗಂಟನ್ನು ಕಟ್ಟಿಕೊಂಡೇ ಹೋಗಿ ಪ್ಯಾಗೆ ಕೀಸುಳಿ ಹಾಕಿಸಿಕೊಳ್ತಾವೆ ಗೊತ್ತೇ—ತಲೆ ಇಲ್ಲದ ಜಾತಿ. ಅವಕ್ಕೆ ಉದ್ಯೋಗ ಇಲ್ಲ— ಯಾರಿಗಾದರೂ ಹೊಡಿಯುವುದು—ಮುನ್ನೂರ ಅರ್ವತ್ತೈದು ದಿವಸ ಕೋರ್ಟು, ಖಚೇರಿ, ಕಾಫಿ ಹೋಟೆಲ್, ಅಂಕ ಆಯನದಲ್ಲಿ ತಿರುಗಾಡುವುದು—ಷ್ಟೇ! ಅಸಿಪ್ಪದವು" ಅಂತ—ನೋಡಿದಿಯಾ! ಏನು ಸಸಾರ! ಎಲ್ಲ ಕೊಲೆಯಾದರೂ ಊರಿನ ಜನರ ಅಭಿಪ್ರಾಯ—ನಾಡವರೇ ಅಂದು. ಅಲ್ಲನಾ! ಥೂ! ಸುಡು ಈ ಜನ್ಮವನ್ನು. ನಮ್ಮನ್ನು ಊರೇ ಮೃಗಗಳೆಂದು ಆಲೋಚಿಸುತ್ತಿದೆ. ಅಯ್ಯೋ! ನಮ್ಮ ಜನರಿಗೆ ಬುದ್ಧಿ ಬರೋದು ಯಾವಾಗ? ಅಲ್ಲ, ಆ ಭಗವಂತ ನಮ್ಮ ಜಾತಿ ತಲೆಯೊಳಗೆ ಬುದ್ಧಿ ವಿಚಾರ, ವಿವೇಕ, ತುಂಬೋದರ ಬದಲು, ಕ್ರೋಧ, ಮದ, ಅಜ್ಞಾನ, ಅವಿಚಾರ ಇವುಗಳ ಮುದ್ದೇನೇ ಇಟ್ಟು ಬಿಟ್ಟಿದ್ದಾನೋ ಏನೋ.

ಚಿಕ್ಕ—ಕಿಟ್ಟಾ, ಈ ಖೂನಿಯ ವಿಚಾರ ನಾನು ಸ್ವಲ್ಪ ಮಟ್ಟಿಗೆ ತಿಳಿದಿದ್ದೇನೆ. ನಾನೂ, ಸಹಾ ಈಗಲೇ ಪೇಟೆಯಿಂದ ಬಂದವನು. ಕೊಲೆಯಾದ ಊರಿನಿಂದ ಬಂದ ಒಂದು ಜನ ವಿದ್ಯಮಾನಗಳನ್ನು ಸ್ವಲ್ಪ ಮಟ್ಟಿಗೆ ಹೇಳಿತು. ಜನರು ಹೇಳುವುದಕ್ಕೂ ನಾವು ಮಾಡುವುದಕ್ಕೂ ಸರಿಬಿದ್ದಿದೆ. ವಜ್ರಬೆಟ್ಟಿನ ಗರಂ ಶೆಟ್ರನ್ನು ಅವರ ಅಳಿಯಂದಿರು ನಿನ್ನೆ ರಾತ್ರಿ ಸುಮಾರು 9 ಘಂಟೆಗೆ 'ಶೂಟ್' 'ಶೂಟ್' ಮಾಡಿ ಬಿಟ್ರಂತೆ. ಅವರು ಹಾಗೆ ಮಾಡದೆ ಬದುಕಿರಲಿಕ್ಕೂ ಸಾಧ್ಯವಾಗಿರಲಿಲ್ಲ. ಈಗ ಹೀಗೆ ಮಾಡಿಯೂ ಅವರು ಉದ್ಧಾರ ಆಗೋದಿಲ್ಲ, ಈ ಯಜಮಾನರಲ್ಲಿ ಅನೇಕರು ವರ್ತಿಸುವುದೂ ಹಾಗೆಯೇ—ಅದರಲ್ಲಿಯೂ ನಮ್ಮ ಗರಂ ಶೆಟ್ರು ಮರ್ಜಿಯಂತೂ, ಎಲ್ಲಾದರಲ್ಲಿಯೂ 'ಗರಮ್ಮೇ'—ಹೆಂಡ್ತಿಗೆ ಆಸ್ತಿ ಮಾಡುವುದರಲ್ಲಿಯೂ 'ಗರಂ' ಕುಟುಂಬವನ್ನು ಕಷ್ಟ ಪಡಿಸುವುದರಲ್ಲಿಯೂ 'ಗರಂ' ಒಕ್ಕಲುಗಳಿಂದ ಗೇಣಿ ವಸೂಲು ಮಾಡುವುದರಲ್ಲಿಯೂ 'ಗರಂ' ಒಕ್ಕಲುಗಳ ಬಿಟ್ಟಿ ಬೇಗಾರಿಗೆಲೆಕ್ಕಾಗಿಕ್ಕಾ ಎಂಬೋದೇ ಇಲ್ಲ. ಅವುಗಳ ಮನೇಲಿ ಕೋಳಿಯಿಂದ ತೊಡಗಿ ಹರ್ವೇ ಸೊಪ್ಪಿನ ವರೆಗೆ ಏನು ಬೆಳ್ದಿದ್ದರೂ ಗರಂ ಶೆಟ್ರಿಗೆ ಕಾಣಿಕೆಯಿಡ್ಬೇಕು! ನಿರ್ದಯ, ನಿಷ್ಠುರ, ಅಂತಹ ಸ್ವಾರ್ಥಿ! ಇಂಥವರ ಅವಸ್ಥೆಯಾಗುವುದು ಕಡೆಗೆ ಹೀಗೆಯೇ. ಕೇಳಿದವರು ಯಾರೂ ಅವರ ವಿಷಯ ಕನಿಕರ ಪಡುವುದಿಲ್ಲ—ಎಲ್ಲರೂ ಆದ್ದು ಚೆನ್ನಾಯಿತು ಎನ್ನುತ್ತಾರೆ ನೋಡಿದಿಯಾ! ಅವಿಚಾರದ ಜೀವನದ ಪರಿಣಾಮ ಎಲ್ಲಿ ಬಂದು ನಿಲ್ಲುತ್ತದೆ ನೋಡು— ಅವರ ಅಳಿಯಂದಿರು ಇದ್ದಾರಲ್ಲ—ಅವರ ತಲೆಯಲ್ಲಿ ಏನು ಉಂಟು? ಮಾವ ಇರುವಾಗ ಇವುಗಳಿಗೆ ಹ್ಯಾಗೂ ಕೂಳು ಇದ್ದಿಲ್ಲ ಅವನ್ನ ಕೊಂದರೆ ಕೂಳು ಸಿಕ್ಕೀತೂಂತ ನೆನಸಿ ದೊಣ್ಣೆ ಹಿಡಿದ್ದೇ ಬಂತು! ಪರಿಣಾಮ ಮಾತ್ರ ಜೀವಾಂತ ಭಿಕ್ಷಾಪಾತ್ರೆ! ಇಲ್ಲವೇ ಗಡೀಪಾರು! ಇಲ್ಲವೇ ಪಾಶೀಕಂಬ! —ನೋಡಿದಿಯಾ ಒಂದು ಸಿಟ್ಟಿನ ಪರಿಣಾಮ—ಸಿಟ್ಟು ವಿಪರೀತವಾದರೆ ಕಡೆಗೆ ಬೇಡುವುದೇ ಗತಿ—ಸಿಟ್ಟಿನಷ್ಟು ದೊಡ್ಡ ಬೆಂಕಿ ಯಾವುದೂ ಇಲ್ಲ. ಆದರೆ ಕೆಲವು ಸಲ ಸಿಟ್ಟು ಬೇಕಾಗುತ್ತದೆ—ಸ್ವಲ್ಪವಾದರೂ ಪಿತ್ತವಿಲ್ಲದ ಮನುಷ್ಯ ಪ್ರಯೋಜನವಿಲ್ಲ. ಸಿಟ್ಟು ಬರಬಾರದೆಂದು ಹೇಳಲಿಕ್ಕೆ ಸುಲಭವಾಗುತ್ತದೆ—ಕೆಲವು ಸಾರಿ ಗುರಿಕಾರರಲ್ಲಿ ಹಲವರು ಮಾಡುವ ಅನ್ಯಾಯವನ್ನು ಸಹಿಸಲಿಕ್ಕೆ ಸಾಧ್ಯವಾಗುವುದಿಲ್ಲ—ಬಾಯಿಯ ಹೇಳಿಕೆ, ಪಂಚಾಯತದಾರರ ಹೇಳಿಕೆ, ಎಲ್ಲವನ್ನೂ ಮೀರಿ ನಡೆದಾಗ ಕಡೆಗೆ ದೊಣ್ಣೆಯ ಹೇಳಿಕೆ! ಮತ್ತೆ ಮಾಡುವದೇಂಥಾದ್ದು?—

ಕಿಟ್ಟ—ತಪ್ಪು, ನಿನ್ನ ಅಭಿಪ್ರಾಯವು ತೀರಾ ತಪ್ಪು,—ಯಾವ ವಿದ್ಯಮಾನದಲ್ಲಿಯೂ ನಾವು ಕತ್ತಿ, ಕೋವಿಯನ್ನು ಎತ್ತಬಾರದು ಯಾವನು ಕತ್ತಿ ಕೋವಿಯನ್ನು ಹಿಡಿಯುವನೋ, ಅವನು ಅದರಿಂದಲೇ ಅಂತ್ಯವಾಗುವನು— ಹಿಂಸೆಯು ಮೃಗದ ತತ್ವ—ಮನುಷ್ಯ ತತ್ವವಲ್ಲ—ಯಾವುದರಲ್ಲಿಯೂ ನಾವು ಹಿಂಸೆಗೆ ಇಳಿಯಬಾರದು. ಕಾರ್ಯದಲ್ಲಿಯಾಗಲಿ, ಮಾತಿನಲ್ಲಿಯಾಗಲೀ ನಾವು ಹಿಂಸೆಯನ್ನು ತೋರಬಾರದು

ಚಿಕ್ಕ—ಹೌದು, ಈ ಸೂತ್ರ—ತಂಪಿನಲ್ಲಿ ಸುಖವಾಗಿ ಕೂತುಕೊಳ್ಳುವಾಗ ಯೋಗ್ಯವೆಂದು ಕಾಣುತ್ತದೆ. ನೀನೂ, ನಾನೂ ಆ ಅಳಿಯಂದಿರ ಸ್ಥಾನದಲ್ಲಿದ್ದಿದ್ದರೆ ಏನು ಮಾಡುತಿದ್ದೇವೋ! ಇಡೀ ಮನೆಯ ಹುಟ್ಟುವಳಿ ಒಬ್ಬನೇ ತಿನ್ನುವನೆಂದರೆ ಏನು ಅನ್ಯಾಯ! ಉಳಿದವರೆಲ್ಲಾ ಎಲ್ಲಿ ಹೋಗುವುದು? ಬೇಡುವುದಾ! ಹೌದು ಒಮ್ಮೊಮ್ಮೆ ನಮ್ಮ ಹೊಟ್ಟೆ ತುಂಬಾ ಊಟ ಮಾಡಿ ಹಾಯಾಗಿ ಒರಗಿರುವಾಗ ದೊಡ್ಡ ದೊಡ್ಡ ಆದರ್ಶಗಳನ್ನೂ. ತತ್ವಗಳನ್ನೂ ನಾವು ಮುಂದಕ್ಕೆ ಇಟ್ಟುಕೊಳ್ಳುತ್ತೇವೆ. ಆದರೆ ಬೇರೊಬ್ಬರು ಮನುಷ್ಯರಾಗಿ ಹುಟ್ಟಿ, ಮನುಷ್ಯರ ಹಾಗೆ ವರ್ತಿಸದೆ, ಪರಮಾವಧಿ ಸ್ವಾರ್ಥಿಗಳಾಗಿ, ಕುಟುಂಬದ ರಕ್ತವನ್ನೇ ಕುಡಿಯುವಾಗ ನಾನು ನೀನು ಏನು, ಹುಟ್ಟಿ ಬಿಟ್ಟೆ ಬಂತೆ ಬಿಟ್ಟ ಸನ್ಯಾಸಿಗಳಿಗೂ ಸಿಟ್ಟು ಬಂದು ಇಂಥಾ ವ್ಯಕ್ತಿಗಳನ್ನು ಸುಟ್ಟು ಭಸ್ಮ ಮಾಡಿ ಬಿಟ್ಟಾರು! ಅಳಿಯ ಸಂತಾನದ ಕೆಲವು ಯಜಮಾನರು ಮಾಡುವ ಅನ್ಯಾಯವನ್ನು ಭೂಮಿ ಹೊರಲಿಕ್ಕಿಲ್ಲ. ಅವರ ಪಾಪದ ಭಾರ ಏರಿ ಏರಿ ಕೊನೆಗೆ ಆ ಭಾರದ ರಭ

ಪುಟ ೧೭ ನೋಡಿರಿ.

LAKSHMI

OFFERS

ATTRACTIVE—POLICIES under New Schemes and Plans Suitable for Every Purse and Purpose.

"The Golden Policy"
"Family Income Policy"
"Optional Endowment Policy"
"Your Child's Future"
AND
"Marriage Endowment Policy"
are the Latest & the Best.

For Particulars Write to:—

The Branch Manager, *334, Thambuchetty St.,* G. T. MADRAS. OR *A. B. Krishna Raj,* ORGANISER, UDIPI.

THE
Lakshmi Insurance Co., Limited,
LAHORE.

ಈ ವಾರದ ನಿಮ್ಮ ಭವಿಷ್ಯ

ತಾ. 1—11—38ರಿಂದ 8—12—38ರ ವರೆಗೆ

[ಜ್ಯೋತಿಷವು ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊದಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ.

ಸಂ. ನ.]

ವೃಷಭ, ತುಲಾ, ಮಕರ, ಕುಂಭ, ಈ ರಾಶಿಗಳವರ ಭವಿಷ್ಯವು ಶುಭಾಶುಭ ಫಲಗಳಿಂದ ಮಿಶ್ರೀಭೂತವಾಗಿರುವುದು—ಮಿಥುನ, ಕರ್ಕಾಟಕ, ಸಿಂಹ, ವೃಶ್ಚಿಕ, ಧನು, ಮೀನ ರಾಶಿಗಳವರ ಅದೃಷ್ಟವು ಕನಿಷ್ಟತರಗತಿಯನ್ನೈದಿರುವುದು—ಕನ್ಯಾರಾಶಿಯವರ ಗ್ರಹಸ್ಥಿತಿಯು ಬಹಳ ಕೀಳುತರಗತಿಯಲ್ಲಿರುವುದು—ಮೇಷರಾಶಿಯವರ ವಿಷಯದಲ್ಲಿ ಸಂಪೂರ್ಣ ಗ್ರಹರು ಪ್ರತಿಕೂಲರಾಗಿರುವರು.

ಮೇಷರಾಶಿ—

"ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ" ಮನುಷ್ಯರಾದರೂ ಸರಿಯೆ, ಯಾ ಪ್ರಾಣಿಗಳಾದರೂ ಸರಿಯೆ ತಾವುತಾವು ಮಾಡಿದ ಪುಣ್ಯ ಮತ್ತು ಪಾಪಕರ್ಮಗಳ ಫಲ ರೂಪವಾದ ಇಷ್ಟಾನಿಷ್ಟಗಳನ್ನು ಅನುಭವಿಸಿಯೇ ತೀರಿಸಬೇಕು. ಪ್ರಕೃತ ಈ ವಿಷಯವು ಏತಕ್ಕೆ ಬಂತೆಂದರೆ, ಈ ವಾರದಲ್ಲಿ ಸರ್ವ ಗ್ರಹರೂ ನಿಮ್ಮ ಅನಿಷ್ಟ ಸ್ಥಾನದಲ್ಲಿದ್ದು ಪೂರ್ವಕೃತ ಪಾಪಕರ್ಮದ ಫಲವನ್ನನುಭವಿಸುವ ಕಾಲವೊಂದಗಿದೆ ಎಂದು ಸೂಚಿಸುತ್ತಿರುವರು. ಏಕಾದಶಗತನಾದೊಬ್ಬ ಗುರುವೂ ವೇಧ ದೋಷದಿಂದ ಕೆಟ್ಟು ಹೋದನೆಂದ ಮೇಲೆ ನಿಮ್ಮ ಅದೃಷ್ಟವು ಎಷ್ಟೊಂದು ಕೆಟ್ಟಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದ ಕಾರಣ ನಿಮ್ಮ ಪ್ರಕೃತಿಯು ಸರಿಯಿರದು. ಕಾರ್ಯಕ್ಕೆ ತೊಡಕುಗಳೇ ಹೆಚ್ಚಾಗುವವು. ಆರ್ಥಿಕ ದುರವಸ್ಥೆಯಿಂದಾಗಿ ಮನಸ್ಸಿಗೆ ಎಳ್ಳಷ್ಟೂ ನೆಮ್ಮದಿ ಸಿಗದು. ಸ್ತ್ರೀ ವರ್ಗದಿಂದಾಗಿ ವಿಶೇಷ ಹಾನಿಯಿದೆ. ಅದರಲ್ಲೂ ಸ್ವಕೀಯ ಸ್ತ್ರೀಯರಿಂದ ವಿಶೇಷವಾಗಿ ಕಲಹವಾಗುವುದು. ತಾ. 2, 3ಮತ್ತು 6, 7ರಲ್ಲಿ ಮಾನಹಾನಿಯೂ ಕೂಡ ಸಂಭವಿಸೀತು.—

ವೃಷಭರಾಶಿ—

ಸಿಟ್ಟೆಂಬುದು ಬಹಳ ಕೆಟ್ಟದು, ಅದು ಮಾನವ ಜನ ಶ್ರೇಯಸ್ಸಿಗೆ ವಿಶೇಷವಾಗಿ ಹಾನಿಯನ್ನುಂಟು ಮಾಡುವುದೆಂದು ಬಲ್ಲವರು ಹೇಳುವರು ನಿಜ. ಆದರೆ, "ಅಮರ್ಷಶೂನ್ಯೇನ ಜನಸ್ಯ ಜಂತುನಾ ನ ಜಾತಹಾರ್ದೇನ ನವಿದ್ವಿಷಾದರಃ" ಕೋಪವಿಲ್ಲದಿರುವ ಮನುಷ್ಯನೊಡನೆ ಗೆಳೆತನವನ್ನು ಬೆಳೆಸಿದರೂ, ವಿರೋಧವನ್ನು ಕಟ್ಟಿಕೊಂಡರೂ ಅದರಿಂದ ಸಿಗತಕ್ಕ ಫಲವು ಶೂನ್ಯವೇ. ಆದ ಕಾರಣ ಮನುಷ್ಯನಲ್ಲಿ ಕಾರ್ಯಕಾರಿಯಾಗಿರತಕ್ಕ ಸಿಟ್ಟು ಅವಶ್ಯವಾಗಿರಬೇಕು ಎಂದು ಭಾರವಿ ಕವಿಯು ಹೇಳಿರುವನು. ಅದ್ದರಿಂದ ಮನುಷ್ಯನಲ್ಲಿ ದಯಾದಾಕ್ಷಿಣ್ಯಾದಿಗುಣಗಳಿರುವಂತೆ ಈ ಕಾರ್ಯಕತೃತ್ವ ಶಕ್ತಿಯುಕ್ತವಾದ ಕೋಪವೂ ಇರತಕ್ಕದ್ದು. ನಿಮ್ಮಲ್ಲೀಕೆರನಾವ ಗುಣವಿರುವುದು. ಕಾರಣದಿಂದಲೇ ನೀವು ಅನೇಕ ಕಾರ್ಯಗಳನ್ನು ಕೊನೆಗಾಣಿಸಿ ಜಯಶಾಲಿಗಳಾಗುವಿರಿ, ಇದರಿಂದಾಗಿ ಶತ್ರುಗಳೂ ಕೂಡ ನಿಮ್ಮೊಡನೆ ರಾಜಿಗೆ ಬರುವರು. ಧನ ಸಂಪತ್ತಿಯು ತೃಪ್ತಿಕರವಾಗಿರುವುದು. ಇಷ್ಟಿದ್ದರೂ ನಿಮಗೆ ಆರೋಗ್ಯ ಭಾಗ್ಯವಿಲ್ಲೆನ್ನಬೇಕು. ತಾ. 4, 5ಮತ್ತು 8ರಲ್ಲಿ ಪ್ರಯಾಣದ ನಿಮಿತ್ತವಾಗಿಯೂ, ಪ್ರಕೃತಿಯ ಸಲುವಾಗಿಯೂ ಸ್ವಲ್ಪ ಧನ ವ್ಯಯವಾಗುವುದು.—

ಮಿಥುನರಾಶಿ—

ನಿಮಗೀವಾರದಲ್ಲಿ ಇಷ್ಟಕ್ಕಿಂತಲೂ ಸ್ವಲ್ಪ ಅನಿಷ್ಟಗಳೇ ಹೆಚ್ಚಾಗಿ ಕಂಡುಬರುವವು. ಮೇಲಿಂದಮೇಲೆ ನಿಮ್ಮ ಆರೋಗ್ಯವು ಸುಧಾರಿಸಿದೆಯೆಂದು ಕಂಡು ಬಂದರೂ ಅಂತರಿಕದಲ್ಲಿ ತೀರಾ ಕೆಟ್ಟಿರುವುದು. ಜನತೆಯೊಡನೆ ಕಲಹವಾಗುವುದರಿಂದ ನಿಮ್ಮ ಅನೇಕ ಕಾರ್ಯಗಳಿಗೆ ಹಾನಿಯಾಗುವುದು. ಬಂಧು ಮಿತ್ರರ ಸಹಕಾರವು ಬಹುನಾಗಿರುವುದರಿಂದ ಶತ್ರುಗಳಿಂದ ಹೆಚ್ಚಾಗಿ ಪೀಡಿಸಿಕೊಳ್ಳಲಾರಿರಿ. ನೀವು ಸಂಪಾದಿಸುವುದಕ್ಕಿಂತಲೂ ಹೆಚ್ಚಾಗಿ ಧನವ್ಯಯ ಮಾಗುವುದರಿಂದ ಹಣದ ಅಡಚಣೆಗೆ ಸಿಲುಕುವಿರಿ, ದುರ್ಮನಸ್ಸಿನಿಂದಾಗಿ ವಿದ್ಯೆಗೆ ಹಾನಿಯೂ ಕೀರ್ತಿಗೆ ಕಳಂಕವೂ ಬರುವುದು. ತಾ. 2 ರಿಂದ 5 ಮತ್ತು 8 ಈ ದಿನಗಳು ಸ್ವಲ್ಪಮಟ್ಟಿಗೆ ಅನುಕೂಲವಾಗಿರುವುದರಿಂದ ಮನೋರಥಗಳು ಕಾರ್ಯರೂಪಕ್ಕೆ ಬರುವವು ತತ್ಸ್ಥಿತಿಯ ಕಾರ್ಯಗಳಲ್ಲಿ ಧನಲಾಭವು ತೃಪ್ತಿಕರವಾಗಿರುವುದು.

ಕರ್ಕಾಟಕ ರಾಶಿ—

"ಸಂಸರ್ಗಜಾ ದೋಷಗುಣಾ ಭವಂತಿ" ಎಂಬ ಲೋಕೋಕ್ತಿಯು ಅಕ್ಷರಶಃ ನಿಜವಾದುದು. ಎಂತಹ ಸತ್ಕುಲಪ್ರಸೂತನಾದ ಪುರುಷನೇ ಆಗಿರಲಿ, ದುರ್ಜನರ ಸಹವಾಸದಿಂದವನು ಕೆಟ್ಟುಹೋಗುವನು. ಸ್ವಭಾವತಃ ದುಷ್ಟನಾಗಿದ್ದವನೂ ಕೂಡ ಸತ್ಪುರುಷರ ಸಂಸರ್ಗದಿಂದ ಸನ್ಮಾರ್ಗಕ್ಕೆ ಬರುವನು. ಹೇಗೆಂದರೆ ಸ್ವಾತೀ ನಕ್ಷತ್ರದ ಮಳೆಹನಿಯು ಮುತ್ತಿನ ಚಿಪ್ಪಿನಲ್ಲಿ ಬಿದ್ದರೆ ಮುತ್ತಾಗುವುದು. ತಾವರೆ ಎಲೆಯ ಮೇಲೆ ಬಿದ್ದರೆ ಮುತ್ತಿನಂತೆ ತೋರುವುದು. ಕಾದ ಭೂಮಿಯ ಮೇಲೆ ಕಂಡದ ಮೇಲೆ ಬಿದ್ದಲ್ಲಿ ಕಾಣದೇ ನಶಿಸಿ ಹೋಗುವುದಲ್ಲವೇ. ಇದೇ ರೀತಿಯಾಗಿ ಪ್ರಕೃತದ ವಾತಾವರಣದಲ್ಲಿ ನೀವು ದುರ್ಜನರ ಸಂಗಕ್ಕೆ ಸಿಲುಕುವ ಸಂಭವವಿದೆ. ಇದರಿಂದ ನಿಮ್ಮ ಮುಂದಿನ ಕಲ್ಯಾಣವು ತೀರಾ ಕೆಡುವುದು. ನಿಮಗೆ ಒದಗತಕ್ಕ ಖರ್ಚು ನಿಮ್ಮ ಯೋಗ್ಯತೆಯನ್ನು ಮೀರಿ ಹೋಗುವುದು, ಪ್ರವಾಸದಲ್ಲಿ ಹೆಚ್ಚಿನ ಕಷ್ಟಕ್ಕೆ ಈಡಾಗುವಿರಿ. ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ಹಾನಿಯಿದೆ ಆರೋಗ್ಯವು ಸ್ವಲ್ಪಮಟ್ಟಿಗೆ ಕೆಡುವುದು. ತಾ. 4 ರಿಂದ 7ರ ವರೆಗೆ ಇಷ್ಟಸಿದ್ಧಿ, ಮಿತ್ರ ಸಮಾಗಮಗಳುಂಟಾಗುವವು.

ಸಿಂಹರಾಶಿ—

ಶಾರೀರಕ ಮಾನಸಿಕ ಸುಖಗಳೆರಡೂ ಈ ವಾರದಲ್ಲಿ ನಿಮ್ಮ ಭಾಗಕ್ಕೆ ಇಲ್ಲವೆಂದರೆ ತಪ್ಪಾಗದು. ಕಾರಣ ಉದರರೋಗ ಅಂಗಕ್ಲೇಶ ಇವುಗಳಿಂದ ನಿಮ್ಮ ಶರೀರದ ಪೀಡೆಯು ವೃದ್ಧಿಯಾಗುವುದು. ಸಾಂಸಾರಿಕ ಅಂತಃಕಲಹಗಳಿಂದ ಒಬ್ಬೊಬ್ಬರ ಬುದ್ಧಿಯು ಒಂದೊಂದು ರೀತಿಯಾಗಿ ವಿಶೇಷವಾದ ಮನೋರೋಗಕ್ಕೆ ತುತ್ತಾಗುವಿರಿ. ಇಷ್ಟಾರ್ಥಗಳೂ ಅನೇಕ ಕಾರ್ಯಗಳೂ ವಿಘ್ನಶತಗಳಿಂದ ಕೊನೆಗೊಳ್ಳುವುದಿಲ್ಲವು. ಆದರೂ ಇವುಗಳಲ್ಲಿ ಸಂತೋಷವೆಂದರೆ ಸಾಂಪತ್ತಿಕ ಭಾಗದಲ್ಲಿ ಪುತ್ರ ಬೋರುದಿ ಜನಗಳಿಂದ ಲಾಭವಿಮಗೆ ಧನಸಿಗುವುದು. ಯಾವ ಭಾಗದಲ್ಲಿಯೂ ನಿಮಗೆ ಖರ್ಚು ಹೆಚ್ಚಾಗಿ ತೋರಿಬರುವುದಿಲ್ಲವು. ವಾರದ ಮಧ್ಯಭಾಗವು ವಿಶೇಷ ಹಾನಿಕರವಾಗಿದ್ದರೂ ಆದ್ಯಂತ ಭಾಗಗಳಲ್ಲಿ ಜನರಿಂದ ಮಾನವನ್ನು ಹೊಂದುವಿರಿ. ವಾಹನಾದಿಗಳಲ್ಲಿ ಪ್ರಯಾಣನುಭವಿಸುವಿರಿ.

ಕನ್ಯಾರಾಶಿ—

ಈ ವಾರದಲ್ಲಿ ನಿಮ್ಮ ಭವಿಷ್ಯವು ಬಹಳ ಕರುಣಾಜನಕ ಸ್ಥಿತಿಯಲ್ಲಿರುವುದು. 'ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವಿತಂ ಅಂದರೆ ಚಿತೆಯು (ಕಾಷ್ಠವು) ನಿರ್ಜೀವವಾದ ಶವವನ್ನು ದಹಿಸುವದು. ಚಿಂತೆಯಾದರೋ ಸಜೀವನಾದ ಮನುಷ್ಯನನ್ನೆ ದಹಿಸುವುದು. ಅಂದ ಮೇಲೆ ಚಿಂತೆಗಿಂತ ಮಿಗಿಲಾದ ದುಃಖವು ಬೇರೊಂದಿರಲಾರದಷ್ಟೆ. ಇಂತಹ ದುಃಖಕ್ಕೆ ಮೂಲದ ಚಿಂತೆಯು ನಿಮ್ಮನ್ನು ಬಹುವರಿಯಿಂದ ಪೀಡಿಸುತ್ತಿರುವುದು. ಆರೋಗ್ಯವು ಸರಿಯಾಗಿ ಉಳಿಯಲಾರದು ಅಕರ್ಮಗಳಿಂದ ರಾಜಭಯಕ್ಕೊಳಗಾಗುವಿರಿ. ಸ್ತ್ರೀಯರು ನಿಮ್ಮ ಭಾಗಕ್ಕೆ ಶತ್ರುಗಳಂತಿಹರು. ತಾ 4ರಿಂದ 7ರ ತನಕ ದಿನಗಳು ವಿಶೇಷ ಪ್ರಮಾದಾಯಕಗಳಾಗಿರುವವು.

ತುಲಾರಾಶಿ—

ಈ ವಾರದಲ್ಲಿ ನಿಮಗೆ ಹೆಚ್ಚಿನ ಅನುಕೂಲ ಪರಿಸ್ಥಿತಿಗಳು ಕಂಡುಬರುತ್ತಿವೆ. ಮೃಗಳಂತೆ ಕಾಲಹರಣಮಾಡುವುದೊಳ್ಳೆಯದಲ್ಲ ಕಾರ್ಯ ಪ್ರವೃತ್ತರಾಗಿರಿ. ಯಾಕೆಂದರೆ ಹೊತ್ತು ಹೋದರೆ ಮತ್ತೆ ಬಾರದು. ಮುತ್ತು ಹೋದರೆ ಮತ್ತೆ ಬಪ್ಪದು. ಎಂದು ನಾಣ್ಣುಡಿಯಿರುವುದಲ್ಲವೇ. ಉದ್ಯೋಗದಲ್ಲಿ, ವ್ಯಾಪಾರದಲ್ಲಿ ಇನ್ನಿತರ ಯಾವ ಕಾರ್ಯಗಳಲ್ಲೇ ಆಗಲಿ, ಸಾಕಷ್ಟು ಧನಲಾಭವಾಗುವುದು. ಶರೀರವು ರೋಗಿಯಾಗಿಹುದು, ವಾಹನಾದಿಗಳಲ್ಲಿ ಪ್ರಯಾಣಮಾಡುವಾಗ ಜಾಗ್ರತೆಯಿಂದಿರಿ. ಅಪಘಾತಗಳು ಸಂಭವಿಸಬಹುದು. ಗೃಹ ಪರಿವಾರವು ತೃಪ್ತಿಕರವಾಗಿರುವುದರಿಂದ ಸಾಂಸಾರಿಕ ಸುಖಕ್ಕೇನೂ ತೊಂದರೆಯಿಲ್ಲವು. ಚಂಚಲಮತಿಯು ನಿಮ್ಮಲ್ಲಿ ಹೆಚ್ಚಿರುವುದರಿಂದ ನೀವು ಉದಾಸೀನರಾಗಬಹುದು. ತಾ. 2ರಿಂದ 5ರವರೆಗಿನ ದಿನಗಳು ಉತ್ತಮವಿದೆ.

ವೃಶ್ಚಿಕರಾಶಿ—

ಸಂಸಾರದಲ್ಲಿ ಒಡಕುಗಳು ಹೆಚ್ಚಿ ಒಬ್ಬೊಬ್ಬರು ಒಂದೊಂದು ಮಾರ್ಗವನ್ನನುಸರಿಸುವರು. ಸ್ತ್ರೀಯರಿಂದ ವಿಶೇಷವಾಗಿ ಕಲಹವಾಗುವುದು ಪಿತ್ಥವಿಕಾರದವು ಹೆಚ್ಚಿ ತಲೆತಿರುಗು ಮೊದಲಾದ ರೋಗಗಳು ಹೆಚ್ಚುವವಲ್ಲದೆ ದೇಹಕ್ಕೆ ಹೆಚ್ಚಿನ ಆಯಾಸವಾಗವುದು ಪುತ್ರ ಭೃತ್ಯರಿಗೂ ನಿಮಗೂ ಕಲಹವಾಗುವುದು. ಆದರೂ ಸಾಂಪತ್ತಿಕ ಸ್ಥಿತಿಯು ಸುಧಾರಿಸಿರುವುದು. ಧನವಸನಾದಿಗಳು ಖರ್ಚಿಗೆ ಬೇಕಾದಷ್ಟು ದೊರೆಯುತ್ತವೆ. ಬಂಧು ಮತ್ತು ಮಿತ್ರವರ್ಗದವರ ಅನುಗ್ರಹಕ್ಕೆ ಪಾತ್ರರಾಗುವಿರಿ. ತಾ. 4ರಿಂದ 7ರ ವರೆಗಿನ ದಿನಗಳಲ್ಲಿ ದೇಹದಲ್ಲಿ ಆರೋಗ್ಯವು ತೋರಿಬರುವುದು. ಮಾನಸಿಕ ಸುಖದೊರೆಯುವುದು.

ಧನುರಾಶಿ—

ದೈವಭಕ್ತಿಯೂ, ಸತ್ಕರ್ಮಾಚರಣೆಯೂ ನಿಮ್ಮಲ್ಲಿರುವುದಾದರೆ ನಿಮಗೀವಾರದಲ್ಲಿ ಸಂಭವಿಸುವ ಇಷ್ಟಾನಿಷ್ಟಗಳಲ್ಲಿ ವಿಶೇಷ ವ್ಯತ್ಯಾಸ ಬಾರದು. ಒಂದರಲ್ಲಿ ಒಳ್ಳಿತಾದರೆ ಇನ್ನೊಂದರಲ್ಲಿ ಕೆಡುಕು ಈ ರೀತಿಯಲ್ಲಿ ಬಂದೇ ತೀರುವುದು. ಕಾರ್ಯದಕ್ಷತೆಯಿದ್ದುದರಿಂದ ಸಮಾಜದಲ್ಲಿ ಗೌರವ ಸ್ಥಾನವನ್ನು ಪಡೆಯುವಿರಿ. ಮಿತ್ರಜನರಿಂದಾಗಿ ಸರ್ವತೋಮುಖದಿಂದ ಅಭಿವೃದ್ಧಿಯುಂಟಾಗುವುದು. ಆದರೆ ನಿಮ್ಮ ಅಂತರ್ಯವು ನಿರ್ಮಲವಾಗಿಲ್ಲದುದರಿಂದ ಕೆಲವರ ಪ್ರಕೋಪಕೇಡುಗಳಿಗೆ ಗುರಿಯಾಗವಿರಿ. ಮೈ ಕೈಗಳಲ್ಲಿ ನೋವು ತೋರೀತು. ತಾ. 2ರಿಂದ 5ರ ವರೆಗಿನ ದಿನಗಳನ್ನು ಬಿಟ್ಟು ಇತರ ದಿನಗಳು ಅನುಕೂಲಗಳಾಗಿವೆ.

ಮಕರ ರಾಶಿ—

ನಿಮಗೂ ಕೂಡ ಈ ವಾರವು ಇಷ್ಟಾನಿಷ್ಟ ಫಲಗಳಿಂದ ಮಿಶ್ರೀಕೃತವಾಗಿರುವುದು. ಸ್ತ್ರೀ ಪುತ್ರರ ಅನುಕೂಲ್ಯದಿಂದಲೂ ಮಿತ್ರ ಜನರ ಸಹಾಯದಿಂದಲೂ ಹೆಚ್ಚಿನ ಕಾರ್ಯಗಳನ್ನು ಕೊನೆಗಾಣಿಸುವಿರಿ. ರಾಜಕೀಯ ವ್ಯವಹಾರದಲ್ಲಿ ಜಯಲಾಭವಿದೆ. ಆದರೂ ಅನೇಕರಲ್ಲಿ ನಿಮ್ಮ ನಿಮಿತ್ತವಾಗಿ ಜಗಳವಾಗುವುದರಿಂದ ಅಪಹಾಸ್ಯಕ್ಕೆ ಪಾತ್ರರಾಗುವಿರಲ್ಲದೆ ಮನೋರೋಗಕ್ಕೆ ತುತ್ತಾಗುವಿರಿ. ಪ್ರವಾಸಕ್ಕೆ ಈ ವಾರವು ಒಳ್ಳಿತಲ್ಲ. ಮಾರ್ಗದಲ್ಲಿ ನಾನಾ ತರದ ದುಃಖಗಳೂ ಅನರ್ಥಗಳೂ ಸಂಭವಿಸುವವು. ಅಕಸ್ಮಾತ್ತಾಗಿ ಆಪ್ತಜನರೊಡನೆ ಮನಸ್ತಾಪವುಂಟಾದೀತು. ತಾ. 2-3 ಮನಸ್ತಾಪವುಂಟಾದೀತು. ತಾ. 2-3 ಮತ್ತು 8 ಈ ದಿನಗಳು ಸ್ವಲ್ಪ ಮಟ್ಟಿಗೆ ಅನುಕೂಲಗಳಾಗಿರುವುದರಿಂದ ಕಾರ್ಯಜಯ, ಧನಲಾಭ, ಸ್ತ್ರೀಸುಖ.

ಕುಂಭರಾಶಿ—

ನಿಮ್ಮ ರಾಶಿಗೆ ಈ ವಾರದಲ್ಲಿ ಎಲ್ಲಾ ಗ್ರಹರೂ ಮಿಶ್ರ ಸ್ಥಾನದಲ್ಲಿರುವುದರಿಂದ ವಿಮುಕ್ತ ಪೂರ್ವಸ್ಥಿತಿಯನ್ನೇ ಹೊಂದಿಕೊಂಡಿರುವುದರಿಂದ ಯಾವ ಭಾಗದಲ್ಲಿಯೂ ನಿಮ್ಮ ಭವಿಷ್ಯವು ಮುಂಚಿನ ಸ್ಥಿತಿಗಿಂತ ವ್ಯತ್ಯಾಸವಾಗಲಾರದು. ಧರ್ಮ ಕರ್ಮಾಸಕ್ತರಾದ ನಿಮಗೆ ದೈವಾನುಗ್ರಹದಿಂದ ವಿವಿಧ ರೀತಿಯಿಂದ ಧನವಸ್ತ್ರಗಳ ಲಾಭವಾಗುವುದು. ಗೃಹಜನರು ಒಮ್ಮನಸಿನಿಂದಿದ್ದು ಕಾರ್ಯನಿರ್ವಾಹಕ್ಕೆ ತುಂಬಾ ನೆರವಾಗುವರು. ಆದರೂ ಕೂಡ ನಿಮ್ಮ ಅಜಾಗರೂಕತೆಯಿಂದಾಗಿ ವಾ ಅನೇಕದಿಂದಾಗಿ ಕೆಲವು ಭಾಗದಲ್ಲಿ ಧನವ್ಯಯಿಸುವಿರಿ. ಆರೋಗ್ಯವು ಸರಿಯಿರದೆ ದೇಹಕಾರ್ಶ್ಯವು ವಿಶೇಷವಾಗಿ ತೋರುವುದು. ತಾ 1-4-5 ಈ ದಿನಗಳು ಸಕಲ ಕಾರ್ಯಗಳಿಗೂ ಉತ್ತಮ.

ಮೀನರಾಶಿ—

"ಸರ್ವೇ ಜನಾಃ ಕಾಂಚನಮಾಶ್ರಯಂತಿ" ಎಂಬ ನೀತಿಯ ಮಾತು, ಕಾರಣ ಹಣವೊಂದಿದ್ದರೆ ಅದರಲ್ಲಿ ಸಕಲ ಗುಣಗಳೂ ಉಂಟಾಗುವವು. ಅದ್ದರಿಂದ ಲೋಕದಲ್ಲಿ ಮನುಷ್ಯವರ್ಗವೇ ಹೆಚ್ಚಾಗಿ ಮೊದಲಾಗಿ ಅಪೇಕ್ಷಿಸುವುದು ಹಣವನ್ನು, ಆ ಮೇಲೆ ಇತರ ವಸ್ತುಗಳನ್ನು. ಈ ಹಣದಿಂದಾಗಿಯೇ ಶತ್ರುತ್ವವೂ ಮಿತ್ರತ್ವವೂ ಬೆಳೆಯುವುದು. ನಿಮಗೀವಾರದಲ್ಲಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ " " 0—1—3
೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ " 0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ, ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ. ಬೆಲೆ 0-1-0, 0-2-0.

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-1-0

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸಹಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ. ಬೆಲೆ. 0-8-0 ಮತ್ತು ರೂ 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:— ಕುಂದಾಪುರ-ಕಾಮತ್ಸ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ-ಪಿ. ಕೃಷ್ಣ ಕಾರಂತರು, ಆಯುರ್ವೇದೀಯ ಔಷಧಗಳ ಏಜಂಟರು, ಕಾರ್ಕಳ-ವಿ ವಿ ಶೆಣೈ-ಕೆಮಿಸ್ಟ್, ಕಾಸರಗೋಡು-ಭಕ್ತಾ ಬ್ರದರ್ಸ್ ಮತ್ತು ಶ್ರೀರಾಮ ಸ್ಟೇಷನರಿ ಹೌಸ್, ಪುತ್ತೂರು-ಬಿ ಪಾಂಡುರಂಗ ಗೋವಿಂದ ಭಂಡಾರಿ ಮತ್ತು ಪೈ ಬಿಷ್ಪ್ರಸರಿ, ಮೂಲ್ಕಿ ಬಿ ಎನ್. ಸೀತಾರಾಮ ಶ್ಯಾನುಭೋಗ್, ಜನರಲ್ ಮರ್ಚಂಟ್ಸ್, ಮೂಡಬಿದ್ರೆ ಸಂಜೀವ ಶೇಣಗಿರಿ ಪ್ರಭು ಬ್ರದರ್ಸ್, ಬಂಟ್ವಾಳ-ಪ್ರಭು ಅಂಡ್ ಕೋ, ಉಡುಪಿ-ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ

CO-OPERATIVE LAND MORTGAGE BANKS IN SOUTH KANARA

ಭೂಮಿ ಅಡವಿನ ಸಹಕಾರಿ ಬೇಂಕುಗಳು

ಇವುಗಳಿಂದ ಯಾರು ಸಾಲ ಪಡೆಯಲು ಅರ್ಹರಾಗುವರು?

ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಸ್ಥಾಪಿತವಾದ ಮೂರು ಸಹಕಾರಿ ಭೂಮಿ ಅಡವಿನ ಬೇಂಕುಗಳ ಕ್ರಮನಿಯಮಗಳ ಕುರಿತು ಅನುಭವ ತಿಳಿಯಬೇಕೆಂದು ಜನರು ಸ್ವಾಭಾವಿಕವಾದ ಆತುರದಿಂದಿರುವುದರಿಂದ ಆ ವಿಷಯದ ಮುಖ್ಯಾಂಶಗಳನ್ನು ಈ ಲೇಖನದಲ್ಲಿ ಕೊಟ್ಟಿದೆ. ಹೆಚ್ಚಿನ ಮಾಹಿತಿ ಪಡೆಯಬೇಕೆಂದಿರುವವರು ಆಯಾ ಬೇಂಕಿನ ಮುಖ್ಯ ಕಾರ್ಯಾಲಯದಲ್ಲಿ ವಿಚಾರಿಸಿ ತಿಳಿಯಬಹುದು

ಪ್ರಕೃತ ಉಡುಪಿ, ಮಂಗಳೂರು ಮತ್ತು ಪುತ್ತೂರು ಹೀಗೆ ಮೂರು ಕಡೆಗಳಲ್ಲಿ ಇಂತಹ ಬೇಂಕುಗಳಿವೆ ಪ್ರತಿ ಒಂದು ಬೇಂಕಿಗೆ ಎರಡೆರಡು ತಾಲೂಕುಗಳು ಸೇರಿವೆ. ಉಡುಪಿ ಕುಂದಾಪುರ ತಾಲೂಕುಗಳಿಗೆ ಉಡುಪಿಯಲ್ಲಿ ಬೇಂಕು ಇದೆ ಮಂಗಳೂರು ಬೇಂಕಿನ ವ್ಯವಹಾರ ಕ್ಷೇತ್ರವು ಮಂಗಳೂರು ಮತ್ತು ಕಾರ್ಕಳ ತಾಲೂಕುಗಳಾಗಿರುತ್ತವೆ. ಇನ್ನುಳಿದ ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳು ಪುತ್ತೂರು ಬೇಂಕಿಗೆ ಸೇರಿವೆ

ಈ ಮೂರು ಬೇಂಕುಗಳೂ ಒಂದಕ್ಕೊಂದು ಸಂಬಂಧವಿಲ್ಲದ ಮಿತಜವಾಬ್ದಾರಿಯ ಸ್ವತಂತ್ರ ಸಂಸ್ಥೆಗಳಾಗಿವೆ. ಇವುಗಳೆಲ್ಲ ೧೯೩೨ನೆಯ ಇಸವಿಯ ಮದರಾಸು ೬ನೇ ಆಕ್ಟಿನ ಮೇರೆಗೆ ರಿಜಿಸ್ಟ್ರಿಯಾದ ಸಹಕಾರಿ ಸಂಘಗಳಾಗಿವೆ.

ಪ್ರತಿಯೊಂದು ಬೇಂಕಿಗೆ ಪಾಲು ೧ರ ರೂಪಾಯಿ ೧೦ರಂತೆ ಪಾಲು ಭಂಡವಾಳ ಕೂಡಿದೆ ಅಡವು ದಸ್ತೈವಜಿಗೆ ಸೇರತಕ್ಕ ಹಕ್ಕುದಾರರೆಲ್ಲರ, ಮೆಂಬರರಾಗಲು ಅನುಕೂಲವಾಗುವಂತೆ ಪಾಲು ೧ರ ರೂ, ೧೦ರಂತೆ, ಬಿ ತರಗತಿಯ ಪಾಲುಗಳನ್ನೂ ಪ್ರತ್ಯೇಕವಾಗಿಯೇ ಏರ್ಪಡಿಸಿದೆ.

ಮೆಂಬರಿಕೆ—ಸಾಲು ಪಡೆಯಬೇಕೆಂದಿರುವವರು ಆ ಬಗ್ಗೆ ನೇಮಕವಿರುವ ಛಾಪಾ ಫೋರ್ಮಿನಲ್ಲಿ ಅರ್ಜಿಯನ್ನು ಕಾರ್ಯದರ್ಶಿಯವರಿಗೆ ಬರೆದುಕೊಳ್ಳಬೇಕು ಈ ಅರ್ಜಿಯ ಫೋರ್ಮುಗಳನ್ನು ಆಯಾ ಬೇಂಕಿನ ಆಫೀಸಿನಿಂದ ಧರ್ಮಾರ್ಥವಾಗಿ ಪಡೆಯಬಹುದು ಆಯಾ ಬೇಂಕಿಗೆ ಸಂಬಂಧಿಸಿದ ಎರಡು ತಾಲೂಕುಗಳ ಯಾವ ಗ್ರಾಮದಲ್ಲಾದರೂ ಕೃಷಿಕ ಭೂಮಿಯುಳ್ಳ ೧೮ ವರುಷ ಪ್ರಾಯದಾಟಿದ ಕಾನೂನಿನ ಮೇರೆಗೆ ಕಂಟ್ರಾಕ್ಟು ಮಾಡಲು ಅರ್ಹನಾದ ಯಾರೊಬ್ಬನೂ ಸೇರಲು ಅರ್ಹನಾಗಿರುತ್ತಾನೆ. ವ್ಯವಹಾರ ಕ್ಷೇತ್ರದೊಳಗೆ ಭೂಮಿಯಿರಬೇಕು ಹೊರತು ಮೆಂಬರನಾಗುವವನು ವಾಸಿಸಿರಬೇಕೆಂದಿಲ್ಲ ಪಾಲು ೧ರ ೧ಆಣೆ ಯಂತೆ ಪ್ರವೇಶ ಹಾಸಲು ಕೊಡಬೇಕು ಹೀಗೆ ತೆರಬೇಕಾದ ಹಾಸಲನ್ನು ಯಾವ ಸಂಗತಿಯಲ್ಲಾದರೂ ರೂ ೫ಕ್ಕೆ ಮಿಕ್ಕಿ ಕೊಡಬೇಕಾಗಿಲ್ಲ, ಒಮ್ಮೆ ತೆತ್ತ ಪಾಲು ಭಂಡವಾಳವನ್ನು ಹಿಂತೆಗೆಯಕೂಡದು; ಆದರೆ ಆಡಳಿತೆಯವರ ಅನುಮತಿಯಿಂದ ಬೇರೆಯವರಿಗೆ ವರ್ಗಾವಣೆ ಮಾಡಬಹುದು

ಬೇಂಕಿನ ನಿಧಿ—ಈ ಬೇಂಕುಗಳಲ್ಲಿ ಠೇವಣಾತಿಗಳನ್ನು ಪಡೆಯುವದಿಲ್ಲ. ಮೆಂಬರರಿಗೆ ಕೊಡುವ ಸಾಲಗಳನ್ನೆಲ್ಲ ಅವರು ಬರೆದುಕೊಡುವ ಅಡವು ದಸ್ತೈವಜುಗಳ ಮೇಲ್ಚೀಟು ಕೊಟ್ಟು ಮದರಾಸಿನಲ್ಲಿರುವ ಕೇಂದ್ರ ಭೂಮಿ ಅಡವಿನ ಬೇಂಕಿನಿಂದ ತರಿಸಿಕೊಡಲಾಗಿದೆ. ಹೀಗೆ ಮೇಲ್ಚೀಟು ಕೊಟ್ಟರೂ ಮೆಂಬರರಿಂದ ಅಡವು ದಸ್ತಾವೇಜಿನ ಮೇರೆಗೆ ಕಂತುಗಳನ್ನು ವಸೂಲುಮಾಡುವ ಮತ್ತು ಆ ಬಗ್ಗೆ ವ್ಯವಹರಣೆ ನಡಿಸುವ ಸಂಪೂರ್ಣ ಅಧಿಕಾರವು ಈ ಬೇಂಕಿಗೇನೇ ಇದೆ. ಕೇಂದ್ರ ಬೇಂಕಿನವರು ತಮಗೆ ಸಂಯೋಜಿತನಾದ ಮೂಲ ಬೇಂಕುಗಳಿಗೆಲ್ಲ ಸಾಲಕೊಡಲು ಜನರಿಂದ ಬಹಿರಂಗವಾಗಿ ಸಾಲಪಡೆಯುತ್ತಾರೆ. ಈ ಬಗ್ಗೆ ಅವರು ಹೊರಡಿಸುವ ಸಾಲದ ಪತ್ರಗಳ ಅಸಲು ಮತ್ತು ಬಡ್ಡಿ ಸಂದಾಯ ಮಾಡಲು ಸರಕಾರದವರ ಭದ್ರತೆ ಇದೆ ಈ ರೀತಿಯಲ್ಲಿ ಇದುವರೆಗೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳ ಸಾಲವೆತ್ತಿದೆ ಮೊನ್ನೆ ತಾನೇ ಇನ್ನೂ ಎರಡೂವರೆ ಕೋಟಿ ವರೆಗೆ ಸಾಲಕೊಡುವರೆ ಕೇಂದ್ರ ಬೇಂಕಿಗೆ ಸರಕಾರದವರು ಅನುಮತಿಕೊಟ್ಟಿರುತ್ತಾರೆ ಈ ಸಾಲಗಳ ಸಂದಾಯದ ಏರ್ಪಾಡಿನ ಬಗ್ಗೆ ಸರಕಾರದ ಕಡೆಯಿಂದ ಸಹಕಾರಿ ಸಂಘಗಳ ರಿಜಿಸ್ಟ್ರಾರರವರು ಕಾನೂನಿನ ಮೇರೆಗೆ ಜವಾಬುದಾರರಾದ ಟ್ರಸ್ಟಿಯಾಗಿರುತ್ತಾರೆ.

ಬೇಂಕಿನ ಸಾಲದ ಮಿತಿ—ಬೇಂಕಿನಲ್ಲಿ ತೆತ್ತ ಪಾಲು ಭಂಡವಾಳದ ೨೦ಪಾಲಿಗೆ ಮೀರಕೂಡದು.

ಆಡಳಿತೆ—ಆಡಳಿತೆಗೆ ೯ ಮಂದಿ, ಈ ಪೈಕಿ ೭ ಮಂದಿ ಬೇಂಕಿನ ಮೆಂಬರರು ಮಹಾಸಭೆಯಲ್ಲಿ ತಮ್ಮೊಳಗಿಂದ ಆರಿಸಲ್ಪಡತಕ್ಕವರು ಮಿಕ್ಕ ಇಬ್ಬರಲ್ಲಿ ಒಬ್ಬರನ್ನು ಮದರಾಸು ಸಹಕಾರಿ ಸಂಘಗಳ ರಿಜಿಸ್ಟ್ರಾರವರೂ. ಇನ್ನೊಬ್ಬರನ್ನು ಮದರಾಸು ಕೇಂದ್ರ ಅಡವಿನ ಬೇಂಕಿನ ಅಧ್ಯಕ್ಷರೂ ನೇಮಕಮಾಡುವರು. ಆಡಳಿತೆ ಮೆಂಬರರ ಉದ್ಯೋಗದ ಅವಧಿಯು ಮೂರು ವರುಷಗಳಾಗಿದೆ. ಆದರೆ ಅವಧಿ ಮುಗಿದ ಅನಂತರವೂ ಹೊಸ ಆಡಳಿತೆಯವರನ್ನು ಆರಿಸುವ ವರೆಗೆ ಕೆಲಸವನ್ನು ನಿರ್ವಹಿಸಬೇಕು. ಬೇಂಕಿನ ಸ್ಥಾಪನೆಯಾದ ಪ್ರಥಮದ ಎರಡು ವರ್ಷಗಳಲ್ಲಿ ಆಡಳಿತೆಯ ಒಗ್ಗೆ ರಿಜಿಸ್ಟ್ರಾರರವರೇ ಎಲ್ಲರನ್ನೂ ನೇಮಕಮಾಡತಕ್ಕದ್ದಾಗಿದೆ, ಎರಡು ವರ್ಷಗಳ ಅನಂತರ ಮಾತ್ರವೇ ಮೆಂಬರರು ಆಡಳಿತೆಗೆ ತಮಗೆ ಇಷ್ಟವಿರುವವರನ್ನು ಆರಿಸುವುದಾಗಿದೆ.

ಆಡಳಿತೆಯವರು ತಮ್ಮೊಳಗಿಂದ ಒಬ್ಬರು ಅಧ್ಯಕ್ಷರು, ಒಬ್ಬರು ಕಾರ್ಯದರ್ಶಿ, ಇನ್ನೊಬ್ಬರು ಖಜಾಂಚಿ—ಹೀಗೆ ಆರಿಸಿಕೊಳ್ಳುವರು

ಸಾಲಗಳು—ಮೆಂಬರರಿಗೆ ಮಾತ್ರ ಸಾಲಸಿಗುವುದು ಆದರೆ ಸಾಲಕೊಡಲೇಬೇಕೆಂಬ ಹಕ್ಕು ಯಾರಿಗೂ ಇಲ್ಲ ಸಾಲದ ಅರ್ಜಿಯನ್ನು ಆಡಳಿತೆಯವರು ತೀರ್ಮಾನಿಸತಕ್ಕದ್ದು. ಆದರೆ ಕೇಂದ್ರ ಬೇಂಕಿನವರ ಮಂಜೂರಾತಿ ಇಲ್ಲದೆ ಯಾವ ಸಾಲವನ್ನಾದರೂ ಕೊಡಕೂಡದು.

ಸಾಲದ ಅರ್ಜಿಗಳನ್ನು ಕ್ಲೃಪ್ತವಾದ ಛಾಪಾ ಫೋರ್ಮುಗಳಲ್ಲಿ ದ್ವಿಪ್ರತಿಯಾಗಿ ತಯಾರಿಸಿ ಅವುಗಳೊಂದಿಗೆ ಆಸ್ತಿಯ ಹಕ್ಕು ಮತ್ತು ಅನುಭೋಗವನ್ನು ರುಜುಪಡಿಸುವ ಸಮಸ್ತ ದಾಖಲೆಗಳನ್ನು ಒಂದು ಪ್ರತ್ಯೇಕ ಪಟ್ಟಿ ಸಮೇತ ಹಾಜರುಪಡಿಸಬೇಕು ಫೋರ್ಮು ೧ರ ಒಂದಾಣೆಯಂತೆ ಆಯಾ ಬೇಂಕಿನ ಆಫೀಸಿನಿಂದ ಪಡೆಯಬಹುದು.

ಸಾಲದ ಉದ್ದೇಶ—ಸಾಲಗಳನ್ನು ಕೆಳಗೆ ಕಾಣಿಸಿದ ಉದ್ದೇಶಗಳಿಗೋಸ್ಕರ ಮಾತ್ರ ಕೊಡಲಾಗುವುದು. ಯಾವುದೆಂದರೆ—

(೧) ಅಡವಿನ ಸಾಲಗಳ ಪರಿಹಾರಕ್ಕೆ

(೨) ಇತರ ಸಾಲ ಸಂದಾಯಕ್ಕೆ.

(೩) ಭೂಮಿಯಲ್ಲಿ ಕೃಷಿಮಾಡುವ ಮತ್ತು ಸುಧಾರಿಸಿದ ರೀತಿಯ ಸಾಗುವಳಿಯ ಬಗ್ಗೆ

(೪) ತುಂಡು ತುಂಡುಗಳಾಗಿ ಅಲ್ಲಲ್ಲಿ ಚದರಿ ಇರುವ ಭೂಮಿಯನ್ನು ಒಮ್ಮತಿಮಾಡಿ ಅನುಭೋಗಕ್ಕೆ ಸುಲಭವಾಗುವ ಸಂಗತಿಯಲ್ಲಿ ಮಾತ್ರ ಭೂಮಿಯನ್ನು ಕೊಂಡುಕೊಳ್ಳುವ ಬಗ್ಗೆ

ಮಿತಿ:—ರೂ ೫೦೦೦ಕ್ಕಿಂತ ಹೆಚ್ಚಿಗೆ ಸಾಲವು ಈ ಬೇಂಕುಗಳಿಂದ ತಕ್ಕಾಲ ಸಿಗುವುದಿಲ್ಲ ಯಾವ ಮೆಂಬರನಾದರೂ ತೆತ್ತ ಪಾಲು ಭಂಡವಾಳದ ೨೦ಪಾಲಿಗೆ ಮಿಕ್ಕಿ ಸಿಗುವುದಿಲ್ಲ ಎಂದರೆ ರೂ. ೧೦ರ ಒಂದು ಪಾಲು ಪಡೆದವನಿಗೆ ರೂ ೨೦೦, ಎರಡು ಪಾಲು ಪಡೆದವನಿಗೆ ರೂ. ೪೦೦-ಹೀಗೆ ಅತ್ಯಧಿಕ ಸಾಲ ಸಿಗುವ ಮಿತಿಯಾಗಿರುವದು.

ಅಡವಿನ ಭೂಮಿಯ ಬಜಾರು ಧಾರಣೆಯ ಅರೆವಾಸಿಗಿಂತ ಮಿಕ್ಕಿಯಾಗಲಿ ಸಾಲದ ಅವಧಿಯೊಳಗೆ ಆ ಭೂಮಿಯಿಂದ ಸಿಗಬಹುದಾದ ಏನ್ ಮಿಗ್ತೆಯ ಮುಕ್ಕಾಲಂಶಕ್ಕೆ ಮಿಕ್ಕಿಯಾಗಲಿ ಸಾಲಸಿಕ್ಕಲಾರದು.

ಬಡ್ಡಿ—ಸೇಕಡಾ ೬|| ದರ ವಾಯಿದೆ—ಸಾಮಾನ್ಯವಾಗಿ ೨೦ ವರುಷಗಳ ಮೀರದಷ್ಟು. ಅಡವು ಕೊಡುವ ಆಸ್ತಿಗೆ ಬೇಂಕಿನಿಂದ ಪಡೆಯುವ ಸಾಲದಿಂದ ಸಂದಾಯವಾಗುವ ಮುಂಚಿನ ಅಡವಿನ ಹೊರತು ಬೇರೆ ಯಾವದೊಂದೂ ಹೊಣೆಯ ಜವಾಬುದಾರಿ ಇರಕೂಡದು,

ಸಾಮಾನ್ಯವಾಗಿ ಕಟ್ಟಡಗಳ ಜವಾಬ್ದಾರಿಯಿಂದ ಸಾಲ ಸಿಗಲಾರದು—ಮುನಿಸಿಪಾಲಿಟಿಯಾ ದೊಡ್ಡ ಯೂನಿಯನುಗಳಲ್ಲಿ ಯಾವಾಗಲೂ ಸರಾಗವಾಗಿ ಬಾಡಿಗೆ ಹುಟ್ಟಿ ಬರುವ ಕಟ್ಟಡಗಳನ್ನು ೧/೫ರ ವರೆಗೆ ಜವಾಬ್ದಾರಿಯಾಗಿ ಅಂಗೀಕರಿಸಿಕೊಳ್ಳಬಹುದು. ಆದರೆ ೪/೫ ಅಂಶಕ್ಕೆ ಕೃಷಿಯ ಆಸ್ತಿಯೆ ಜವಾಬ್ದಾರಿಯಾಗಿ ಕೊಡತಕ್ಕದ್ದು. ಉದಾ:—ರೂ ೫೦೦ರ ಸಾಲಕ್ಕೆ ರೂ. ೮೦೦ಕ್ಕೆ ಕಡಿಮೆಯಾಗದಷ್ಟು ಮೌಲ್ಯದ ಕೃಷಿಕ ಭೂಮಿಯು ರೂ ೨೦೦ಕ್ಕೆ ಕಡಿಮೆಯಾಗದ ಮೌಲ್ಯದ ಶಹರು ಸರಹದ್ದಿನ ಕಟ್ಟೋಣವೂ ಜವಾಬ್ದಾರಿ ಆಗಬಹುದು.

ಬೇಂಕಿಗೆ ಒಮ್ಮೆ ಅಡವು ಬರಕೊಟ್ಟ ಅನಂತರ ಬೇಂಕಿನ ಅನುಮತಿ ವಿನಾ ಆಸ್ತಿಯನ್ನು ಸ್ವಾಧೀನಮಾಡಕೂಡದು. ಬೇಂಕಿನ ಸಾಲ ಸಂದಾಯಮಾಡುವ ಜವಾಬ್ದಾರಿಯನ್ನು ಇನ್ನೊಬ್ಬನಿಗೆ ವರ್ಗಾವಣೆ ಕೊಡಲು ಕೇಂದ್ರ ಬೇಂಕಿನ ಪ್ರೆಸಿಡೆಂಟ ಮತ್ತು ರಿಜಿಸ್ಟ್ರಾರರವರ ಅಪ್ಪಣೆಯನ್ನು ಮುಂದಾಗಿ ಪಡೆಯತಕ್ಕದ್ದು

ಬೇಂಕಿಗೆ ಬರಕೊಡುವ ಅಡವಿಗೆ ಎಲ್ಲ ಹಕ್ಕುದಾರರು ಕೂಡತಕ್ಕದ್ದು. ಅವರ ಯಜಮಾನ ವ ಮುಖ್ಯಸ್ಥನು ಮಾತ್ರ ಸಾಲದ ೧|೨೦ರಷ್ಟು ಮೌಲ್ಯದ ಪಾಲುಗಳನ್ನು ಪಡೆದರೆ ಸಾಕು. ಮಿಕ್ಕಾದವರು ಒಂದೊಂದು ರೂಪಾಯಿಯ 'ಬಿ' ತರಗತಿಯ ಒಂದೊಂದು ಪಾಲನ್ನು ಪಡೆದರಾಯಿತು.

ಸಾಲದ ಅರ್ಜಿಯ ಜೊತೆಯಲ್ಲಿಯೇ ಎಲ್ಲ ದಾಖಲೆಗಳನ್ನು ಹಾಜರುಪಡಿಸಬೇಕು ಅಡವಿನ ಭೂಮಿಯನ್ನು ಆ ಬಗ್ಗೆ ನೇಮಕಮಾಡಲ್ಪಡುವ ಬೇಂಕಿನ ಆಡಳಿತೆಯವರ ಒಬ್ಬರು ಸಂದರ್ಶಿಸಿ ಆ ಭೂಮಿಯ ಬಜಾರು ಧಾರಣೆ ಎಷ್ಟು ಎಂಬುದನ್ನೂ, ಹಕ್ಕುದಾರರು ಯಾರು ಯಾರು, ಅವರಿಗೆ ಪ್ರತಿ ಒಬ್ಬನಿಗೆ ಎಷ್ಟೆಷ್ಟರ ಹಕ್ಕು ಎಂಬುದನ್ನೂ ತನಿಖೆಯಿಂದ ನಿರ್ಧರಿಸಿ ರಿಪೋರ್ಟುಮಾಡಬೇಕು. ಅವರ ಪ್ರಯಾಣದ ಭತ್ತೆಯ ಬಗ್ಗೆ ವ ಬೇಂಕಿನ ಆಡಳಿತೆಯ ಖರ್ಚಿನ ಬಗ್ಗೆ ಸಾಲದ ಪೈಕಿ ನೂರು ರೂಪಾಯಿ ಯಾ ಭಿನ್ನಾಂಶಕ್ಕೆ ೪ಆಣೆಯಂತೆ ಅರ್ಜಿಯೊಂದಿಗೆ ಕಟ್ಟಬೇಕು. ಇದಲ್ಲದೆ ದಾಖಲೆಗಳನ್ನು ಪರಿಶೋಧಿಸಿ ಹಕ್ಕಿನ ಕುರಿತು ಅಭಿಪ್ರಾಯ ಕೊಡುವ ಬಗ್ಗೆ ವಕೀಲರ ಫೀಸು ಸಾಲದ ರೂ ೧೦೦ಕ್ಕೆ ಯಾ ಅದರ ಭಿನ್ನಾಂಶಕ್ಕೆ ರೂಪಾಯಿ ೧ರಂತೆ ಕೂಡ ಅರ್ಜಿಯ ಸಂಗಡಲೇ ಕೊಡಬೇಕು. ಫೀಸು ರೂ. ೩ಕ್ಕಿಂತ ಯಾವ ಸಂಗತಿಯಲ್ಲಿಯೂ ಕಡಿಮೆಯಾಗಕೂಡದು.

ಒಳಪಡಿಸಿಕೊಂಡ ಸಾಲಗಳನ್ನೆಲ್ಲ ಬೇಂಕಿನಿಂದಲೇ ಆಯಾ ಸಾಲಗಾರರಿಗೆ ನೋಟೀಸು ಕೊಟ್ಟು ಸಂದಾಯ ಮಾಡಲಾಗುವದು. ಹೀಗೆ ನೋಟೀಸು ಕೊಡಲ್ಪಟ್ಟ ಸಾಲಗಾರರು ಬೇಂಕಿಗೆ ವಾಯಿದೆಗೆ ಹಾಜರಾಗಿ ಹಣವನ್ನು ಪಡೆಯದಿದ್ದರೆ ಆ ದಿನದಿಂದ ಅದಕ್ಕೆ ಬಡ್ಡಿ ನಿಂತು ಹೋಗುವದು. ಒಂದು ವೇಳೆ ಸಾಲಗಾರನ ತಕ್ರೀರು ಏನಾದರೂ ಇದ್ದರೆ ವಿವಾದಾಂಶವನ್ನು ಮಾತ್ರ ಕೋರ್ಟಿನಲ್ಲಿ ತೀರ್ಮಾನಿಸಿಕೊಳ್ಳಲಿಕ್ಕೆ ಬಾಕಿ ಇರಗೊಡಿಸಿ ಬೇಂಕಿನವರು ಕೊಡುವಷ್ಟು ಹಣವನ್ನು ತೆಗೆದುಕೊಳ್ಳಬೇಕೆಂದು ಕಾನೂನಿದೆ. ಇದರಿಂದ ಕೋರ್ಟು ಖರ್ಚಿನ ನಷ್ಟದಿಂದ ಈ ಬೇಂಕುಗಳ ಆಶ್ರಯ ಹೊಂದುವವರು ತಪ್ಪಿದಂತಾಗುವುದು

(ಮುಂದರಿಯುವುದು.)

ಸಿಟ್ಟು, ಪಿಟ್ಟು, ಕತ್ತಿ, ದೊಣ್ಣೆ, ಕೋವಿ.

ಪುಟ ೧೪ರಿಂದ

ಸದಿಂದ ನರಕದಲ್ಲಿ ಬಿದ್ದು ಯಾವ ಜನ್ಮಕ್ಕೂ ಎದ್ದೇಳಲಾರದಂತಹ ಆಳವನ್ನು ಸೇರಿ ಹೋಗಲೆಂದು ಬಹುಶಃ ದೇವರು ಬಿಟ್ಟಿರಬೇಕು. ಆದಕಾರಣ ಈ ತರದ ಕೊಲೆಯಲ್ಲಿ ಹೆಚ್ಚು ಆಶ್ಚರ್ಯವೇನೂ ಇಲ್ಲ—ಮಾಡಿದ ಕರ್ಮದ ಫಲ—

ಕಿಟ್ಟ—ಹೌದು, ಈಗ ನೀನು ಹೇಳುವ ಪ್ರಕಾರ ಕೆಲವು ಯಜಮಾನರು ಶುದ್ಧ ಮೂರ್ಖರು. ಅವರು ಇಂಥಾ ಶಿಕ್ಷೆಗೆ ಅರ್ಹರಲ್ಲವೆಂಬ ವಾದ ನನ್ನದಲ್ಲ. ಈಗ ನೀನೇ ಹೇಳಿದ ಪ್ರಕಾರ ಕೊಲೆ ಮಾಡಿದವರ ಪಾಡೇನು? ಗಲ್ಲಿಗೆ ಹೋದರೆ ಹ್ಯಾಗೂ ಹೋದರಲ್ಲವಾ—ಉಳಿದರೆ ಇವರಿಗೆ ಊರು ಮನೆ ಉಂಟೋ. ಅದು ಯಾಕೆ ನೀನು ಆಲೋಚನೆ ಮಾಡುವುದಿಲ್ಲ?

ಚಿಕ್ಕ—ಆದರೆ ಮತ್ತೇನು ಮಾಡೋದು ಹೇಳು. ಸುಮ್ಮನೆ ಕೂತುಕೊಳ್ಳಲಿಕ್ಕೆ ಹೊಟ್ಟೆ ಕೇಳೋದಿಲ್ಲ. ವ್ಯಾಪಾರಕ್ಕೆ ಹೋಗಲಿಕ್ಕೆ ದುಡ್ಡಿಲ್ಲದಿದ್ದರೆ—ಸಾಲ ಸಿಕ್ಕದಿದ್ದರೆ—ಬೇಡಲಿಕ್ಕೆ ಮರ್ಯಾದೆ ಬಿಡದಿದ್ದರೆ ಏನು ಮಾಡುವುದಪ್ಪಾ ಸ್ವಲ್ಪ ಹೇಳು—ಕತ್ತಿ ಕೋವಿಗೆ ಶರಣು ಹೋಗದೆ—ಮಾಡುವುದೇನು? ಎಷ್ಟರ ತನಕ ಹೊಟ್ಟೆಗೆ ಬಟ್ಟೆ ಬಿಗಿದು ಇರಬಹುದು? ಎಷ್ಟರ ವರೆಗೆ ಅನ್ಯಾಯ ಅನೀತಿಗಳನ್ನು ಪಿಳಿ ಪಿಳಿ ನೋಡುತ್ತ ಕುಳಿತಿರಲಿಕ್ಕಾದೀತು. ಯಾವ ಸಮಾಜವೇ ಆಗಲಿ ಹದ್ದು ಮೀರಿ ಹೋಗಿ ಒಳಗೊಳಗೆ ಕಲಹಗಳ ಬೆಳೆ ಬೆಳಸಿದರೆ ಕ್ರಾಂತಿಯೇ ಗತಿ! ನೀನು ಬೇಕಾದರೆ ಅದಕ್ಕೆ ಭ್ರಾಂತಿ ಎನ್ನು! ಎಷ್ಟೆಂದು ಸಿಟ್ಟು ಕಟ್ಟಿ ಕೂತುಕೊಳ್ಳಬಹುದು?

ಕಿಟ್ಟ:—ನೋಡು, ನೀನು ವಿಚಾರ ಮಾಡಿಲ್ಲ-ಇಂಥಾ ಕೆಲವು ಮೂರ್ಖ ಯಜಮಾನರಿಗೆ ಶಿಕ್ಷೆಯೇ ಇಲ್ಲವಂತ ಮಾಡಿದಿಯಾ? ಅಳಿಯಂದಿರು ಶಿಕ್ಷೆ ಕೊಡಬೇಕೆಂದೂ ಇಲ್ಲ. ಸರಕಾರವೂ ಕೊಡಬೇಕಾಗಿಲ್ಲ—ಅವರು ಒಂದು ಕೈಯಲ್ಲಿ ಮಾಡಿದ ಕರ್ಮಕ್ಕೆ ಅವರ ಮತ್ತೊಂದು ಕೈಯ್ಯು ಶಿಕ್ಷೆಯನ್ನು ಕೊಡುವುದು—ನೋಡು ನಾವು ಸ್ವಲ್ಪ ತಾಳ್ಮೆಯಿಂದಿರಬೇಕು. ಶಿಕ್ಷೆಯು ದುಷ್ಕಾರ್ಯದ ಹಿಂದೆಯೇ ಉಂಟು. ಭಂಗಾರದ ಗುತ್ತಿನ ಭರಂ ಶೆಟ್ರ ಅವಸ್ಥೆ ಕೇಳಿಲ್ಲವೇ ನೀನು? ಮೊನ್ನೆ ಏನಾಯಿತು? ಅವರೇ ದೊಡ್ಡ ಕಲ್ಲನ್ನು ಕುತ್ತಿಗೆಗೆ ಕಟ್ಟಿ ಹೊಳೆಯಲ್ಲಿ ಬಿದ್ದು ಸತ್ತರು! ನೋಡು, ಅವರು ಕುಟುಂಬವನ್ನು ಬಹಳ ಕಷ್ಟಪಡಿಸಿ, ಒಕ್ಕಲುಗಳನ್ನು ಹಿಂಡಿ, ಹೆಂಡ್ತಿಯ ಹೆಸರಲ್ಲಿ ಆಸ್ತಿ ಮಾಡಿದರು— ಕುಟುಂಬದವರನ್ನೆಲ್ಲ ನಾಯಿಗಳೆಂದು ತಾತ್ಸಾರ ಮಾಡಿ ಒಂದು ತಲೆಗೆ ಒಂದು ಸಿದ್ದೆ ಪ್ರಕಾರ ದಿನವೂ ಅಕ್ಕಿ ಅಳೆದು ಕೊಟ್ಟು ಅವರನ್ನು ಗೋಳು ಗೆಡಿಸಿದ ಕರ್ಮ ಹ್ಯಾಗೆ ಶೆಟ್ಟರ ಬೆನ್ನು ಹಿಡಿದು ಬಂತು ನೋಡು—ಒಬ್ಬ ಮಗ ದೊಡ್ಡ ಹೆಂಡಗುಡುಕ—ಮತ್ತೊಬ್ಬ ಶುದ್ಧ ಜುಗಾರಿ ಕೋರ—ಇನ್ನೊಬ್ಬ ಗಟ್ಟಕ್ಕೆ ಅಳುಕಟ್ಟುವ ಕಂಟ್ರಾಕ್ಟರಿಕೆ ನಡೆಯಿಸಿ ಗಟ್ಟದ ವಾರಂಟು ಬಂದು ಬಂದಂತೆ ಇವರಿಗೆ ದುಡ್ಡು ಕಟ್ಟಿ ಅವನನ್ನು ಬಿಡಿಸಿ ಸಾಕಾಯಿತು—ಇಬ್ಬರು ಹೆಣ್ಣುಮಕ್ಕಳ ಗಂಡಂದಿರಂತೂ ಪ್ರಯೋಜನವೇ ಇಲ್ಲ—ಒಬ್ಬ ಹೆಂಡ್ತಿಯ ಕೈ ಮೈ ಕತ್ತು ನತ್ತೆನ್ನದೆ ಎಲ್ಲ ತೆಗೆದು ಈಗ ಎಲ್ಲಿ ಇದ್ದಾನೆಂದು ಗೊತ್ತಿಲ್ಲ. ಮತ್ತೊಬ್ಬನು ಹೆಂಡತಿಯನ್ನು ಮನೆಯಲ್ಲಿ ಬಿಟ್ಟು ಮಾವನಸಿಗೊಂದು ಬ್ಯಾಂಕಿನಲ್ಲಿ ದಸ್ಕತು ಹಾಕಿಸಿ ಮಾಯವಾಗಿದ್ದಾನೆ. ಈ ಶೋಕವನ್ನು ಸಹಿಸಲಾರದೆ ಭರಂ ಶೆಟ್ರ ಮೊನ್ನೆ ಬೆಳಗ್ಗೆ ಯಮ ಪಟ್ಟಣಕ್ಕೆ ಚೀಟು ತಕ್ಕೊಂಡು ಹತ್ತಿರದ ನದಿಗೆ ಕಾಲಿಟ್ಟು ಬಿಟ್ಟರು. ಇದು ಒಂದೆಯೋ— ಗೇಣಸುಬೆಟ್ಟು ಕಪ್ಪು ಶೆಟ್ರ ಪಾಡೇನು? ಕಡಲೆಬೆಟ್ಟು ಬಿಳಿ ಶೆಟ್ರ ಗತಿ ಏನಾಯಿತು? ಹಸರುಗುತ್ತಿನ ಹಳದಿ ಶೆಟ್ರು ಹ್ಯಾಗಾಗಿ ಹೋದರು! ಉದ್ದಿನ ಮನೆಯ ಪಕಳಿ ಶೆಟ್ರ— ಅಡಿಕೆ ಮನೆ ತೋಮರ ಶೆಟ್ರ—ಮಾವಿನ ಬೆಟ್ಟು ಪಟ್ಟು ಹೆಗ್ಗಡೇರು—ತುಳಸೀ ಬೆಟ್ಟು ಬೆಂಡೆ ಬಂಡಾರರು—ಇವರೆಲ್ಲ ದೊಡ್ಡ ದೊಡ್ಡ ಕುಟುಂಬದ ಯಜಮಾನರಲ್ಲಾ? ಹೆಂಡ್ತಿ ಮಕ್ಕಳಿಗೆ ಕೋರ್ಜಿ ಕೋರ್ಜಿ ಕೊಟ್ಟು ಕಡೆಗೆ ಇವರ ಅವಸ್ಥೆ ಎಲ್ಲಿಗೆ ಬಂತು! ಇವರ ಮಕ್ಕಳ ಗತಿ ಏನಾಯಿತು! ಇವನ್ನೆಲ್ಲಾ ನಮ್ಮ ಕಣ್ಣಾರೆ ನೋಡಿಲ್ಲವೇ. ಇವರಲ್ಲಿ ಇಬ್ಬರು ಕೊನೆಗೆ ಹುಚ್ಚು ಹಿಡಿದು ಬಹಳ ಗಲೀಜಿ ಆಗಿ ಸತ್ತರು—ಇವರಲ್ಲಿ ಎಲ್ಲರೂ ಹೆಂಡಂದಿರಿಗೆ ಆಸ್ತಿ ಮಾಡುವುದರಲ್ಲಿ ಸ್ಪರ್ಧೆಗೆ ನಿಂತಿದ್ದರಲ್ಲಾ? ಅವರು ಮಾಡಿಕೊಟ್ಟ ಆಸ್ತಿ ಪೂರ್ಣ ಒಂದು ತಲೆಗಾದರೂ ಬಂತಾ? ಆ ಮಕ್ಕಳೆಲ್ಲಾ ಈಗ ಬೀದಿ ಭಿಕಾರಿಗಳಾಗಿ ಊರಲ್ಲಿ ಅಲೆದಾಡುತ್ತಾರೆ ಅವರ ತಂದೆ ತಾಯಿಗಳ ಕರ್ಮ ಅಲ್ಲವಾ? ಪಾಪ, ಎಲ್ಲಿಯಾದರೂ ಬೊಂಬಾಯಿ ಗಿಂಬಾಯಿಗೆ ಹೋಗುತ್ತಿದ್ದರೆ ಏನಾದರೂ ಸಂಪಾದನೆ ಮಾಡಿಕೊಂಡು ಇರುತ್ತಿದ್ದರು. ಆದರೆ ತಮ್ಮ ತಾಯಿಯ ಹೆಸರಿನಲ್ಲಿ ಕುಟುಂಬಕ್ಕೆ ವಂಚನೆ ಮಾಡಿ ಮಾಡಿಕೊಟ್ಟ ಆಸ್ತಿ ಉಂಟೆಂದು ತಮ್ಮನ್ನು ತಾವು ಮರೆತುಬಿಟ್ಟು ಇಲ್ಲದ್ದು ಸಲ್ಲದ್ದು ಮಾಡಿದರು— ಸಿಕ್ಕಿ ಸಿಕ್ಕಿದವರ ಮೇಲೆ ಜುಲುಂ ಮಾಡುವುದು—ಮನೆ ಸುಡುವುದು,ಬಡವರಿಗೆ ಉಪದ್ರಕೊಡುವುದು, ಕುಡಿಯುವುದು, ಜುಗಾರಿ ಆಡುವುದು ಮೊದಲಾದ ದುರಾಚಾರಗಳೆಲ್ಲಾ ತಮ್ಮ ಮಹಾ ಶೌರ್ಯ ಧೈರ್ಯ ಪರಾಕ್ರಮ ಕಾರ್ಯಗಳೆಂದು ಬಡಾಯಿ ಹೊಡೆಯುತ್ತ ತಮಗ್ಯಾರು ಸರಿ ತಮಗೇನು ಕಡಿಮೆಯೆಂದು ಹಾರಿ ಹಾರಿ ಈಗ ದೂಳೀಲಿ ಹೊರಳುತ್ತಾರೆ, ಪಿಳಿ ಪಿಳಿ ಆಕಾಶ ನೋಡುತ್ತಾರೆ. ಇದೇ ದೊಡ್ಡ ಶಿಕ್ಷೆಯಲ್ಲವೇ—ನಾವು ಹಿಂಸೆಯ ಶಿಕ್ಷೆ ಕೊಡಲಿಕ್ಕೆ ಹೋದರೆ ಅದು ನಮಗೆ ಹಿಂದೆ ಬಡಿದು ಬಿಡುತ್ತದೆ. ನೋಡು, ಆ ದುಷ್ಕರ್ಮದ ಹಿಂದೆ ತಾನಾಗಿ ಬರುವ ಶಿಕ್ಷೆಯೇ ಕಠಿಣದ್ದು—ಈ ಶಿಕ್ಷೆಗೆ ಮಿಕ್ಕಿದ ಶಿಕ್ಷೆ ಯಾವುದೂ ಇಲ್ಲ—ಇಂಥಾ ಸಿಟ್ಟು, ಪಿಟ್ಟು, ಕತ್ತಿ, ದೊಣ್ಣೆ, ಕೋವಿಯಿಂದ ನಾವೇನಾದರೊಂದು ಇತಿಹಾಸ ಪ್ರಸಿದ್ಧ ಪುರುಷರಾಗುವುದಿಲ್ಲ. ಅಂತಹ ದೊಡ್ಡ ಆದರ್ಶವಿಲ್ಲ ಅದರಲ್ಲಿ. ಇಳಿದವನಿಗೆ ಅಧೋಗತಿ, ಜಾತಿಗೊಂದು ಅಪಕೀರ್ತಿ!—ಅನ್ಯಾಯ ಮಾಡಿದವನಿಗೆ ಶಿಕ್ಷೆ ಉಂಟೇ ಉಂಟು—ಆ ಶಿಕ್ಷೆಯನ್ನು ನಾವು ಕೊಡಬೇಕಾಗಿಲ್ಲ. ಅದು ತನ್ನಷ್ಟಕ್ಕೆ ಬರುತ್ತದೆ. ನಾವು ಈ ಹಿಂಸಾತ್ಮಕ ನಿವೃತ್ತಿ ಮಾರ್ಗದಲ್ಲಿ ನಂಬಿಕೆ ಇಟ್ಟು, ಇಷ್ಟು ಕೆಟ್ಟೆವು. ಒಂದು ಕ್ರಿಮಿನಲ್ ಮಾಡಿದರೆ ಒಂದು ಮನೆಗೆ ದೊಡ್ಡ ಶಸ್ತ್ರ ಚಿಕಿತ್ಸೆ (Surgical operation) ಮಾಡಿದ ಹಾಗೆ ಅದರಿಂದ ಮೇಲೆ ಬಿದ್ದು ನಮ್ಮ ಆರ್ಥಿಕ ಸ್ಥಿತಿಯನ್ನು ವೃದ್ಧಿ ಮಾಡಿಕೊಳ್ಳಬೇಕಾದರೆ ನಮಗೆ ಬಹು ಕಾಲ ಸಾಗುತ್ತದೆ ತೋರಿಕೆಯ ತೋರದ ರಕ್ಷಣೆಗಾಗಿ ಕ್ರಿಮಿನಲ್ ಮಾಡಬಾರದು. ತಲೆ ಇದ್ದವರು ಇದನ್ನು ಮಾಡುವುದಿಲ್ಲ. ಆದರೆ ಕೆಟ್ಟವರು ತಾವಾಗಿ ಕೆಟ್ಟು ಹೋಗುತ್ತಾರೆಂದು ಸುಮ್ಮಗೆ ಕುಳಿತರೆ ಅವರು ಸುಟ್ಟು ಹೋಗುವಾಗ ಅದರ ಸೆಕೆ ನಮಗೂ ತಟ್ಟದಿರುವುದಿಲ್ಲ. ಆದುದರಿಂದ ಅವರು ಕೆಡದಂತೆ ನಮಗೆ ಹಾನಿ ಬಾರದಂತೆ ನೋಡಿಕೊಳ್ಳುವುದು ಉತ್ತಮ ಮಾರ್ಗ. ಅವರು ಹಾಳಾಗಬಾರದು. ನಾವು ಬಾಳಿ ಬದುಕಬೇಕು, ನಮ್ಮ ಬದುಕಿಂದ ಸಮಾಜವು ಬೆಳಗಬೇಕು. ಹಾಗಾಗಲು ಹಿಡಿಯಬೇಕಾದ ಹಾದಿ ಮಾತ್ರ ಸಿಟ್ಟು, ಪಿಟ್ಟು, ಕತ್ತಿ, ದೊಣ್ಣೆ, ಕೋವಿಯಲ್ಲ. ಸೇವಾಬುದ್ಧಿಯಿಂದ ಸ್ವಾರ್ಥತ್ಯಾಗದಿಂದ ಕಾರ್ಯೋತ್ಸಾಹದಿಂದ, ಕಿರಿಯರು ಹುರುಪಿನಿಂದ ಐಕ್ಯದಿಂದ ಮಾಡಬೇಕಾದ ಅಹಿಂಸಾಮಯ ಚಳವಳಿ ಮತ್ತು ಸತ್ಯಾಗ್ರಹ! ಭೂಮ್ಯಾಕಾಶಪಾತಾಳಗಳಲ್ಲಿಯೂ ಗುಂಡು ಫಿರಂಗಿ ಹಾರಿಸಲಾಪ ಎಂತೆಂತಹ ಸರಕಾರಗಳೇ ಈ ಅಹಿಂಸಾ ವ್ರತದ ಸತ್ಯಾಗ್ರಹಕ್ಕೆ ಬಗ್ಗಿ ಬಾಗುತ್ತವೆಂದಾಗಿರುವಾಗ ಕೆಲವು ನಾಡವ ಗುರಿಕಾರರ ಪಾಡೇನು? ಕಿರಿಯರೆಲ್ಲ ಮನಸ್ಸು ಮಾಡಿದರೆ ಸಮಾಜದ ಎಂತೆಂತಹ ಕುಂದು ಕೊರತೆಗಳನ್ನೂ ಅಹಿಂಸಾತ್ಮಕವಾಗಿಯೇ ಕ್ರಮ ಬದ್ಧವಾದ ಶಿಸ್ತಿನ ಚಳುವಳಿಯಿಂದಲೂ, ಸತ್ಯಾಗ್ರಹದಿಂದಲೂ ನಿವಾರಿಸಿಕೊಳ್ಳಬಹುದು. ಬಗ್ಗದವರನ್ನು ಬಗ್ಗಿಸುವ, ಒಪ್ಪದವರನ್ನು ಒಪ್ಪಿಸುವ, ಬಾರದವರನ್ನು ಬರಿಸುವ, ಕೊಡದವರಿಂದ ಕೊಡಿಸುವ, ಬಿಡದವರನ್ನು ಬಿಡಿಸುವ, ವಿಚಾರ ಮಾಡದವರನ್ನು ವಿಚಾರ ಮಾಡಿಸುವ, ಅವಿವೇಕಿಗಳಿಗೆ ಬುದ್ಧಿ ಬರಿಸುವ, ಒಂದೇ ಒಂದು ಸಾಧನವೆಂದರೆ ದೊಣ್ಣೆಯಲ್ಲ. ಕಿರಿಯರು ಕ್ರಮಬದ್ಧವಾಗಿ ಶಿಸ್ತನ್ನೊಳಗೊಂಡು ಸಮಾಜ ಕ್ಷೇಮಕಾರಿಯಾದ ಈ ಹಾದಿಯನ್ನು ಬಿಟ್ಟು ಸಿಟ್ಟು ಪಿಟ್ಟು, ಕತ್ತಿ, ದೊಣ್ಣೆ, ಕೋವಿಯ ಹಾದಿ ಹಿಡಕೊಂಡರೆ ಅವಕ್ಕೆ ಗುರಿಯಾದವರಿಗೂ ಉಳಿಗಾಲವಿಲ್ಲ ಗುರಿಯಿಟ್ಟವರಿಗೂ ಕ್ಷೇಮವಿಲ್ಲ. ಆ ದುಷ್ಟ ಹಾದಿಯನ್ನು ಹಿಡಿಯುವ ಜನರು ಹೆಚ್ಚಾದಂತೆ ವ್ಯಕ್ತಿಯೂ ಮನೆಯೂ, ಸಮಾಜವೂ ಹೇಳಹೆಸರಿಲ್ಲದಂತಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಜೋಕೆ! ಸಿಟ್ಟು, ಪಿಟ್ಟು, ಕತ್ತಿ, ದೊಣ್ಣೆ ಕೋವಿಗಿಂತಲೂ ಫಲಕಾರಿಯಾದ ಮಂಗಳದಾಯಕವಾದ, ಸುಲಭ ಸಾಧ್ಯವಾದ, ಸರ್ವತ್ರ ವ್ಯವಹಾರ್ಯವಾದ, ಹಾದಿ ಇದೆ, ಅದನ್ನು ಹಿಡಿಯುವುದು ವಿವೇಕವಲ್ಲವೇ?

ಬರುವ ಲೇಖನ—

"ಲಗಾಂ ಇಲ್ಲದ ಕುದುರೆ"

ಯಾ

"ಅಂಕೆ ಇಲ್ಲದ ಕೆಚ್ಚು"

ಕರ್ನಾಟಕದ ಅಚ್ಚುಮೆಚ್ಚಿನ ಉತ್ತಮವರ್ಗದ
ಕನ್ನಡ ಚಲನ ಚಿತ್ರ ಮಾಸಪತ್ರಿಕೆ.

ಚಿತ್ರ ಸಮಾಚಾರ್

೧೯೩೯ನೇ ಜನವರಿ ಮಾಹೆಯಿಂದ ಈ ಪತ್ರಿಕೆಯು ಸುಂದರವಾದ ಆರ್ಟ್‌ಪೇಪರಿನಲ್ಲಿ ಅನೇಕ ಮುದ್ದಾದ ಚಿತ್ರಗಳೊಂದಿಗೆ ಮುದ್ರಿಸಿ ಪ್ರಕಟಿಸಲಾಗುವುದು.

ಬಿಡಿ ಪತ್ರಿಕೆ ೨ ಆಣೆ ... ... ವಾರ್ಷಿಕ ಚಂದಾ ರೂ. ೨—೦—೦

ಎಲ್ಲಾ ಬಗೆಯ ಜಾಹಿರಾತು ಮಾಡುವುದಕ್ಕೂ
-·- ಉತ್ತಮ ತರದ ಪತ್ರಿಕೆ -·-

ಮ್ಯಾನೇಜರ್:—

"ಚಿತ್ರ ಸಮಾಚಾರ್"

ರಾಮಮಂದಿರ -·- ಚಾಮರಾಜ ಪೇಟೆ -·- ಬೆಂಗಳೂರು ಸಿಟಿ

ರೂ. **1—8—0**ಕ್ಕೆ **3** ವಾಚುಗಳು ಮತ್ತು **495** ಮನೋಹರ ವಸ್ತುಗಳು.



ನಮ್ಮ ರೂ 1-೮-0 ಕ್ರಯದ 16 ಸಣ್ಣ ಸೀಸೆ "ಬಟೋಲೋಸ"ನ್ನು ಕೊಂಡುಕೊಳ್ಳುವವರಿಗೆ ಒಂದು ಬಂಗಾರದ ಹಮ್ಮಿ ರಿಸ್ಟ್ ವಾಚು, ಒಂದು ಪೌಡರ್ ಪೇಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿ ಕಡ್ಡಿಯ ಕೇಸು, ಒಂದು ಸಿಗರೇಟು ಲೈಟು, ಒಂದು ಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ ಸ್ಕ್ರೂ, 600 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರೆಂಟಿಯಿರುವ ಭದ್ರ ಮೆಶಿನರಿಯುಳ್ಳ ಗಡಿಯಾರ, ಒಂದು ಫೌಂಟೆನ್ ಪೇನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು 14ಆಣೆ ಹೆಚ್ಚಿಗೆ.

Oriental Fancy Stores, S. C. E. 90.

Post Box. No. 12204, **CULICUTTA.**

ನವಯುಗದ

ಚಂದಾ ಹಣ ಬಾಕಿಯಿರುವವರು ಆದಷ್ಟು ಬೇಗನೆ ತಲುಪಿಸಬೇಕಾಗಿ ವಿನಂತಿ.

ಮೆನೇಜರ್.

ಮೈಸೂರು ಸಮಾಚಾರ

(ಸ್ವಂತ ಬಾತ್ಮೀದಾರರಿಂದ)

21—11—18

ಅಂಚೆ ಸೌಕರ್ಯ:— ಬೆಂಗಳೂರು ನಗರ ಪೋಸ್ಟಾಫೀಸಿನಲ್ಲಿ ಇನ್ನುಮೇಲೆ ಕಡೆಯ ಕ್ಲಿಯರೆನ್ಸು ಸಾಯಂ. 6 ಘಂಟೆಗೆ ಮಾಡಲಾಗುವುದು. ಇದನ್ನು ಮೈಸೂರು ವಾಣಿಜ್ಯ ಸಂಸ್ಥೆಯವರು, ಡೈರೆಕ್ಟರ್ ಜನರಲ್ ಪೋಸ್ಟ್ ಮತ್ತು ಟೆಲಿಗ್ರಾಫರಿಗೆ ಮಾಡಿದ್ದ ವಿನಮೇಲೆ ಬದಲಾಯಿಸಿತೆಂದು ತಿಳಿಯುವುದು.

ಮೈಸೂರು ಕಾಂಗ್ರೆಸ್ ಪ್ರೆಸಿಡೆಂಟರು:— ಮೈಸೂರು ಸಂಸ್ಥಾನದ ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ವಾರ್ಧಾದಲ್ಲಿ ನಡೆಯುವ ಎ. ಐ. ಸಿ. ಸಿ.ಯ ಮುಂದೆ ಮೈಸೂರಿನ ಭಾವೀವಿಷಯವನ್ನು ಚರ್ಚಿಸುವರೆಂದೂ, ಅದಕ್ಕೋಸ್ಕರ ವಾರ್ಧಾಕ್ಕೆ ಡಾ|| ನಾ. ಸು. ಹಾರ್ಡೀಕರ್‌ರವರೊಡನೆ ಪ್ರಯಾಣಬೆಳೆಸುವರೆಂದೂ ತಿಳಿದುಬಂದಿದೆ.

ಅರ್ಧ ಧ್ವಜ ಹಾರಿಸಲಾಗಿತ್ತು:— ದಿವಂಗತ ಕೆಮಾಲ್ ಅಟಾಟರ್ಕರ ಸ್ಮಶಾನಯಾತ್ರೆಯ ಸಲುವಾಗಿ, ಚಕ್ರವರ್ತಿ ಸಾರ್ವಭೌಮರ ಆಜ್ಞೆಯ ಮೇಲೆ ರಾಜಧಾನಿಯ ಪೋಸ್ಟಾಫೀಸಿನಮೇಲೆ ಯೂನಿಯನ್ ಜಾಕನ್ನು ಅರ್ಧಕ್ಕೆ ಹಾರಿಸಿದ್ದರು.

ಉಪನ್ಯಾಸ:— ಶ್ರೀ ಸಂಗೀತ ಶಾಸ್ತ್ರ ಆಸ್ಥಾನ ವಿದ್ವಾನ್, ಶ್ರೀ. ಕೆ. ವಾಸುದೇವಾಚಾರ್ಯರು, ೨೨ನೆ ಮಂಗಳವಾರ ಸಂಜೆ ಕಾಲೇಜಿನಲ್ಲಿ "ಸಂಗೀತ" ಎನ್ನುವುದರ ಮೇಲೆ, ಪ್ರಚಾರೋಪನ್ಯಾಸದ ಆಶ್ರಯದಲ್ಲಿ ಭಾಷಣಮಾಡಿದರು.

ಅ. ಭಾ. ಆನುವಂಶಿಕ ವೈದ್ಯಸಮ್ಮೇಳನ:— ಮೇಲ್ಕಂಡ ಸಮ್ಮೇಳನವು ಡಿಸೆಂಬರ್ ತಿಂಗಳಲ್ಲಿ ನಡೆಯುವುದು. ಇದಕ್ಕೆ ಅಧ್ಯಕ್ಷರು ಪಂಡಿತ ತಾರಾನಾಥರು, ಇದಕ್ಕೆ ಒಂದು ಸ್ವಾಗತ ಸಮಿತಿ ಕೂಡಿಸಿ, ನಂಜನಗೂಡಿನ ಭಿಷಗ್ರತ್ನ ಬಿ. ವಿ. ಪಂಡಿತರನ್ನು ಅಧ್ಯಕ್ಷರನ್ನಾಗಿಯೂ ಮತ್ತು ಇನ್ನು ಕೆಲವು ಇತರ ಮಹನೀಯರುಗಳನ್ನು ಸದಸ್ಯರನ್ನಾಗಿಯೂ ಆರಿಸಲಾಗಿದೆಯೆಂದೂ ತಿಳಿಸಲಾಗಿದೆ.

ಮೈಸೂರು ಬೇಂಕ್:— ಮೇಲ್ಕಂಡ ಬೇಂಕಿನ ರಜತ ಮಹೋತ್ಸವವು ಡಿಸೆಂಬರ್ ೨ನೇ ತಾರೀಕು, ಶುಕ್ರವಾರ ನಡೆಯುವುದು. ಇದಕ್ಕೆ ನಮ್ಮ ಮಹಾ ಪ್ರಭುಗಳಾದ, ಶ್ರೀಮನ್ಮಹಾರಾಜರವರು ದಯಮಾಡಿ ಅಧ್ಯಕ್ಷತೆ ವಹಿಸುವರು. ಆದಿನ ಸಾರ್ವಜನಿಕ ರಜಾವೆಂದೂ ಪ್ರಕಟಿಸಲಾಗಿದೆ.

ಕ್ರಿಕೆಟ್ ಪಂದ್ಯ:— ಮೈಸೂರಿಗೂ ಮದ್ರಾಸಿಗೂ ನಡೆಯುವ ಅಖಿಲಭಾರತ ವಿಶ್ವವಿದ್ಯಾನಿಲಯ ಪಂದ್ಯವು ಮುಂದಿನ ಡಿಸೆಂಬರ್ ತಿಂಗಳಲ್ಲಿ 7,8,9 ರಲ್ಲಿ ನಡೆಯುವುದೆಂದು ತಿಳಿಸಲಾಗಿದೆ.

ಶ್ರೀ. ಎಂ. ಸಿ. ತಮ್ಮಯ್ಯನವರು:— ಇವರು, ಕೆಲವು ದಿನಗಳ ಕೆಳಗೆ ನಮ್ಮ ಮಹಾಪ್ರಭುಗಳಾದ, ಶ್ರೀಮನ್ಮಹಾರಾಜರನ್ನು, ಅರಮನೆಯಲ್ಲಿ ಭೇಟಿಮಾಡಿ, ಚಾಮರಾಜನಗರ ಸತ್ಯಮಂಗಲ ರೈಲ್ವೆ ವಿಚಾರವಾಗಿ ಸ್ವಲ್ಪ ಚರ್ಚಿಸಿದರೆಂದು ತಿಳಿದುಬಂದಿದೆ.

ದಿವಾನರ ಬಳಿಯಲ್ಲಿ:— ಶಿವಮೊಗ್ಗ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ. ಕೆ. ಹಾಲಪ್ಪನವರು ಅದೇ ಬೋರ್ಡಿನ ಕೆಲವು ಇತರ ಸದಸ್ಯರೊಡಗೂಡಿ ೨೧ನೇ ಸೋಮವಾರ ಬೆಂಗಳೂರಿನಲ್ಲಿ ದಿವಾನ್ ಸಾಹೇಬರ ಬಳಿ ಡೆಪ್ಯುಟೇಶನ್ ಹೋಗಿ ಬೋರ್ಡಿನ ಆರ್ಥಿಕ ದುಸ್ಥಿತಿ ವಿಚಾರವಾಗಿ ಚರ್ಚಿಸಿದರೆಂದೂ ಇದಕ್ಕೆ ದಿವಾನರು, ಅವರಿಗೆ ಒಂದು ವಿಧವಾದ ಭರವಸೆಯಿತ್ತು ಸಹಾಯಮಾಡುವುದಾಗಿ ತಿಳಿಸಿದರೆಂದೂ ತಿಳಿದುಬಂದಿದೆ.

ಎ. ಐಂ. ಸಿ.—ಆಲ್ ಮೈಸೂರು, ಕಾಂಗ್ರೆಸ್ ಸಭೆಯ ದ್ವಿತೀಯ ಅಧಿವೇಶನವು ಇದೇ (1938) ಡಿಸೆಂಬರ್ ೩ ಮತ್ತು 4ರಲ್ಲಿ ತುಂಕೂರಿನಲ್ಲಿ ನಡೆಯುವುದು. ಇದಕ್ಕೆ ಈಗಾಗಲೇ ಅನೇಕ ಸಿದ್ಧತೆಗಳುಮಾಡಲಾಗಿವೆಯಲ್ಲದೆ, ಇತರ ಸಂಸ್ಥಾನಗಳಿಂದಲೂ ಪ್ರತಿನಿಧಿಗಳು ಬರುವರೆಂದು ಹೇಳಲಾಗಿದೆ.

ಪ್ರಯಾಣ:— ಸಿಕಂದ್ರಾಬಾದಿನಲ್ಲಿ (ರಂಜಿ ಟೂರ್ನಿನಲ್ಲಿ) ಹೈದರಾಬಾದಿನ ಮೇಲೆ ಕ್ರಿಕೆಟ್ ಪಂದ್ಯವನ್ನು ಗೆದ್ದ ಮೈಸೂರಿನಿಂದ ಚನಾಯಿತರಾದ ಕ್ರಿಕೇಟ ಆಟಗಾರರು, ನಿನ್ನೆಯ ದಿನ ಹೈದ್ರಾಬಾದಿಗೆ ಪ್ರಯಾಣಬೆಳೆಸಿದರು.

ಟ್ರಾವಂಕೂರು ಪ್ರತಿನಿಧಿಗಳು:— ಟ್ರಾವಂಕೂರಿನ ಪ್ರತಿನಿಧಿಗಳು ಶ್ರೀ. ಪಟ್ಟಿ ಕಾಂ ಪಿಳ್ಳೆಯವರ ನಾಯಕತ್ವದಲ್ಲಿ, ಬೊಂಬಾಯಿಯಿಂದ, ಬೆಂಗಳೂರಿಗೆ ಮಂಗಳವಾರ ಬಂದು ಆದೇ ದಿನ ಸಾಯಂಕಾಲ, ಸಾರ್ವಜನಿಕ ಸಭೆಯಲ್ಲಿ ಒಂದು ಭಾಷಣಮಾಡಿ (ಕೆಲವರು ಮಾತ್ರ) ಟ್ರಾವಂಕೂರಿನಲ್ಲಿ ಸರಕಾರದವರು ನಡೆಸುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿದರು. ಇವರುಗಳು ಬುಧವಾರ ಬೆಳಿಗ್ಗೆ ಟ್ರಾವಂಕೂರಿಗೆ ಪ್ರಯಾಣ ಬೆಳೆಸಿದರು.

ರಾಮಸ್ವಾಮಿ ಪಾರ್ಕ್:— ಮೈಸೂರು ನಂಜನಗೂಡು ರೈಲ್ವೆ ರಸ್ತೆಯ ಮಗ್ಗುಲಲ್ಲಿ ಅಂದರೆ ದುಕ್ಕರಹಳ್ಳಿ ಕೆರೆಯ ಹತ್ತಿರ, ವೆ|| ಮೆಗ್ಗೀನ್ ರೋಡ್ ಮಗ್ಗುಲಲ್ಲಿ ಒಂದು ರಸ್ತೆ ಮಾಡಿದ್ದಾರೆ. ಇದರ ಎರಡು ಕಡೆಗಳಲ್ಲೂ ಬಣ್ಣಬಣ್ಣದ ಹೂಗಿಡಗಳನ್ನು ಬೆಳೆಸಿದ್ದಾರೆ. ಇದಕ್ಕೆ ರಾಮಸ್ವಾಮಿ ಪಾರ್ಕ್ ಎಂದು ಹೆಸರಿಡಲಾಗಿದೆ.

ಈಜುವ ಕೊಳ:— ರಾಜಧಾನಿಯಲ್ಲಿ ಸಾರ್ವಜನಿಕರ ಉಪಯೋಗಕ್ಕೋಸ್ಕರ ಒಂದು ಈಜುವ ಕೊಳವನ್ನು ಕಟ್ಟುವರೆಂದು ತಿಳಿದುಬಂದಿದೆ.

ಪ್ರಯಾಣ:— ಶ್ರೀಮಾನ್ ಮಹಾರಾಜರು ಮೊನ್ನೆ ಮಧ್ಯಾಹ್ನ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

"ಗೀತಾಜಯಂತಿ":— ರಾಜಧಾನಿಯಲ್ಲಿರುವ ಗೀತಾಪ್ರಚಾರ ಸಭಾದವರು ಡಿಸೆಂಬರ್ 3ರಿಂದ 12ನೇ ತಾರೀಕುವರೆಗೆ ಜಗನ್ಮೋಹನ ಚಿತ್ರದಲ್ಲಿ ಗೀತಾ ಸಪ್ತಾಹವನ್ನು ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ನೆರವೇರಿಸುವರು.

ಶ್ರೀ. ಜೈಪ್ರಕಾಶ್ ನಾರಾಯಣ್:— ಕಾಂಗ್ರೆಸ್ ಸೋಶಿಯಲಿಸ್ಟರಾದ ಇವರು ಮಲಬಾರಿನಿಂದ, ತಮ್ಮ ಪತ್ನಿ ಮತ್ತು ಕಾಂತಿಲಾಲ್ ಗಾಂಧಿಯೊಡನೆ ರಾಜಧಾನಿಗೆ ಶನಿವಾರ ಬಂದಿದ್ದರು. ಆಯುರ್ವೇದ ಚಿಕಿತ್ಸೆಗಾಗಿ ಮಲಬಾರಿಗೆ ಪ್ರಯಾಣ ಬೆಳೆಸಿದ್ದರೆಂದು ಗೊತ್ತಾಯಿತು. ಮಧ್ಯಾಹ್ನ ಕಾಂಗ್ರೆಸ್ ಮುಖಂಡರನ್ನು ಭೇಟಿಮಾಡಿ ರಾಜಕೀಯ ವಿಚಾರವಾಗಿ ಚರ್ಚಿಸಿದರು. ಬೆಳಿಗ್ಗೆ ಪ್ರಮುಖ ಸ್ಥಳಗಳಿಗೆ ಭೇಟಿಕೊಟ್ಟರು. ಸಂಜೆ ಹಿಂದೀ ಕೆಲಸಗಾರರನ್ನು ಭೇಟಿಮಾಡಿದ್ದರು. ರಾತ್ರಿ ಮದ್ರಾಸಿಗೆ ಪ್ರಯಾಣ ಬೆಳೆಸಿದರು.

ಮಿಸೆಸ್ ಕಜಿನ್ಸ್:— ಇವರು ರಾಜಧಾನಿಗೆ ಬಂದು, ಒಂಟಿಕೊಪ್ಪಲ್‌ನಲ್ಲಿರುವ "ಮಾತೃಮಂಡಲ"ದ ವಾರ್ಷಿಕ ಸಭೆಯಲ್ಲಿ ಭಾಗವಹಿಸಿ, ಸ್ತ್ರೀಯರಿಗೆ ಉಪದೇಶಮಾಡಿದರೆಂದು ತಿಳಿದುಬಂದಿದೆ.

ವಿದುರಾಶ್ವತ್ಥ ದಿನಾಚರಣೆ:— ಈ ಮೇಲ್ಕಂಡ ದಿನಾಚರಣೆಯು ಪ್ರಯುಕ್ತ ೨೦ನೇ ತಾ. ಹರತಾಳವಾಚರಿಸಲಾಯಿತು, ಅನೇಕ ಅಂಗಡಿಗಳು ಬಂದಾಗಿದ್ದುವು. ಸಂಜೆ ಟೌನ ಹಾಲ್ ಮೈದಾನದಲ್ಲಿ ಕಾಂಗ್ರೆಸ್ ಸಭೆಸೇರಿ, ಮುಖಂಡರುಗಳು ಮಾತನಾಡಿ, ವಿದುರಾಶ್ವತ್ಥ ವರದಿಯನ್ನು ಖಂಡಿಸಲಾಯಿತು.

ಬಹುಮಾನ ವಿನಿಯೋಗ:— ಪ್ರಪಂಚದ ಸುಪ್ರಸಿದ್ಧ ಜಟ್ಟಿಗಳ ಕಾಳಗವು ಗಾರ್ಡನ್ ಹೋಟೆಲ್ ಬಳಿ ನಡೆಯಿತು. ಇದರಲ್ಲಿ ಗೆದ್ದವರಿಗೆ ಶ್ರೀ. ಯುವರಾಜರು ಬಹುಮಾನ ಹಂಚಿದರು. ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆಯೊಡನೆ ಸಭೆಯು ಚೆದರಿತು.

ಆಯುರ್ವೇದ ಕಾಲೇಜ್:— ಮೇಲ್ಕಂಡ ಕಾಲೇಜಿಗೆ ಸೇರಿದ ಹಾಗೆ ಒಂದು ಕಟ್ಟಡಕಟ್ಟಿದ್ದಾರೆ. ಇದರ ಆರಂಭೋತ್ಸವವನ್ನು ಶ್ರೀಯುವರಾಜರು, ಭಾನುವಾರ 27ನೇ ತಾರೀಕಿನಲ್ಲಿ ನೆರವೇರಿಸಿ ಸಮಯೋಚಿತ ಭಾಷಣಮಾಡಿದರು.

ಮಿತ್ರಮಂಡಳಿ— "ಕವಿಯೂ ಕಲಾವಿದರೂ ಆದ ಕೊಡಿಗೆ ಶ್ರೀ. ಯು. ನಾರಾಯಣ ಭಟ್ಟರನ್ನು ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ಶ್ರೀ ಎಂ. ಗೋಪಾಲಕೃಷ್ಣ ಅಡಿಗ, ಕವಿ, ಸಂಸ್ಕೃತ ಕಾಲೇಜಿನ ವಿದ್ಯಾರ್ಥಿ ಹಾಗೂ ತಾರ್ಕಿಯರಾದ ಎಚ್. ರಾಮಚಂದ್ರ ಭಟ್ಟ, ಕವಿ ಬಿ. ಎಸ್. ವಿಷ್ಣುಮೂರ್ತಿ ಶಾಸ್ತ್ರಿ, ಸಾಹಿತಿಗಳಾದ ಬಿ. ಎಚ್. ಶ್ರೀಧರ ಡಿಸೆಂಬರ್ ತಿಂಗಳಲ್ಲಿ ಬರಮಾಡಿಕೊಂಡು, ಅಲ್ಲಿ ಮಿತ್ರಮಂಡಲಿಯನ್ನು ಸ್ಥಾಪಿಸಿ, ಇವರಿಂದ ಅನೇಕ ಸಲಹೆಗಳನ್ನು ಪಡೆಯಲಿರುವರೆಂದು ತಿಳಿದುಬಂದಿದೆ"

ಭಾವಚಿತ್ರ ಅನಾವರಣ— ಇಂಡಿಯನ್ ನೇಶನಲ್ ಕಾಂಗ್ರೆಸ್, ಇಂದಿನ ಪ್ರೆಸಿಡೆಂಟರಾದ ಶ್ರೀ ಸುಭಾಸ್‌ಚಂದ್ರ ಭೋಸ್‌ರವರ ಭಾವಚಿತ್ರವನ್ನು, ಮದ್ರಾಸಿನ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ಸಿ. ರಾಜಗೋಪಾಲಾಚಾರಿಯವರು ೨೩ನೇ ಬುಧವಾರ ಸಂಜೆ ಬೆಂಗಳೂರು ಕ್ರಿಕೆಟ್ ಪೆವಿಲಿಯನ್‌ನಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಸಂಘದಾಶ್ರಯದಲ್ಲಿ ಅನಾವರಣ ಮಾಡಿದರು. ಈ ಸಮಾರಂಭಕ್ಕೆ ಯುವಕರುಗಳು ತುಂಬಿದ್ದರಲ್ಲದೆ, ಅನೇಕ ಮಾನ್ಯ ಮಹನೀಯರುಗಳು ಬಂದಿದ್ದರು. ಯೂನಿಯನ್ನಿನ ಉಪಾಧ್ಯಕ್ಷರಾದ ಶ್ರೀ. ಸೀತಾಪತಿ ರತ್ನಂರವರು ಅಧ್ಯಕ್ಷತೆವಹಿಸಿದ್ದರು.

ಮೊಟ್ಟಮೊದಲು ಯೂನಿಯನ್ನಿನ ಅಧ್ಯಕ್ಷರಾದ ಡಾ. ಎಂ. ಎ. ಸಂಪತ್ಕುಮಾರನ್‌ರವರು ಸಭಿಕರಿಗೆ ಶ್ರೀ. ರಾಜಾಜಿಯವರ ಪರಿಚಯಮಾಡಿಕೊಟ್ಟರು.

ಶ್ರೀ ರಾಜಾಜಿಯವರು ಕರತಾಡನಗಳ ಮಧ್ಯೆ ಎದ್ದು, ಶ್ರೀ. ಭೋಸರ ಭಾವಚಿತ್ರವನ್ನು ಅನಾವರಣ ಮಾಡುತ್ತ, ಶ್ರೀ. ಭೋಸರ ಬಾಲ ವಿದ್ಯಾಭ್ಯಾಸ ವಿಚಾರ ತಿಳಿಸಿ, ಐ. ಸಿ. ಯಸ್. ನಲ್ಲಿ ತೇರ್ಗಡೆಹೊಂದಿ ಸರ್ಕಾರಿ ನೌಕರಿಗೆ ರಾಜಿನಾಮೆಯಿತ್ತು ಎಷ್ಟು ಖಾಯಿಲೆ ಇದ್ದರೂ ಲಕ್ಷಿಸದೆ, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್ ಪಾರ್ಟಿಗೆ ಸೇರಿ ಹೇಗೆ ಪ್ರತಿಯೊಬ್ಬರ ಮನಸ್ಸಿನಲ್ಲೂ ಹೊಕ್ಕಿರುತ್ತಾರೆ ಎಂದು ತಿಳಿಸಿ ಯುವಕರು ಅವರನ್ನು ಹಿಂಬಾಲಿಸಲು ಪ್ರಯತ್ನ ಪಡಬೇಕೆಂದರು.

ಶ್ರೀ ರಾಜಾಜಿಯವರು ಮುಂದುವರಿಯುತ್ತ ಪರೋಪ್ಯದಲ್ಲಿ ಇಂದು ನಡೆಯುತ್ತಿರುವ ವಿದ್ಯಮಾನವನ್ನು ತಿಳಿಸಿ ಡಿಕ್ಟೇಟರ್ ಶಿಪ್‌ನ್ನು ಖಂಡಿಸಿದರು. ಇನ್ನೂ ಮುಂದುವರಿಯುತ್ತ ಹೇಳಿದ್ದೇನೆಂದರೆ, ಪ್ರಜಾಸತ್ತಾತ್ಮಕ ಮತ್ತು ಸರ್ವಾಧಿಕಾರಿ ಇವೆರಡರಲ್ಲಿ ಇಂಗ್ಲೆಂಡಿನಲ್ಲಿ ಯಾವುದು ಉಳಿಯುವುದೋ ಹೇಳಲು ಸಾಧ್ಯವಿಲ್ಲವೆಂದರು.

ಶ್ರೀ. ಅನಂತರಾಮಯ್ಯನವರು ವಂದನಾ ಸಮರ್ಪಣೆಯನ್ನು ಅರ್ಪಿಸಲು, ಶ್ರೀಮಾನ್ ಮಹಾರಾಜರ ಶ್ರೇಯಃಪ್ರಾರ್ಥನೆಯೊಡನಂತರ, ಸಭೆಯು ಮುಕ್ತಾಯವಾಯಿತು.

ಮುಖ್ಯಮಂತ್ರಿ ಶ್ರೀ. ರಾಜಗೋಪಾಲಾಚಾರಿಯವರು ಅದೇ ರಾತ್ರಿ ಮದ್ರಾಸಿಗೆ ಪ್ರಯಾಣಬೆಳೆಸಿದರು.

ಶ್ರೀ ಸುಭಾಸ್ ಭೋಸ್— ಇವರು ಬರುವ ಡಿಸೆಂಬರ್, ಅಥವಾ ಜನವರಿಯಲ್ಲಿ, ಬೆಂಗಳೂರಿಗೆ ಬರುವರೆಂದೂ, ಆಗ್ಯ ದಂಡಿನ ಕಾಂಗ್ರೆಸ್‌ನವರು ಇವರನ್ನು ವಿಶೇಷ ರೀತಿಯಲ್ಲಿ ಸ್ವಾಗತಿಸುವ ಸಲುವಾಗಿ, ಏರ್ಪಾಡುಗಳು ಮಾಡಲಾಗುತ್ತಿದೆ ಎಂದೂ ತಿಳಿದುಬಂದಿದೆ.

ಬೇಂಕನ್ನು ಮುಚ್ಚಿಬಿಡಿ— ಬೆಂಗಳೂರು ಬೇಂಕ್ ಸರಿಯಾಗಿ ಕೆಲಸ ನಡಿಸುತ್ತಿಲ್ಲವೆಂದು ಅದರ ಕಾನ್‌ಸ್ಟಿಟ್ಯುಮೆಂಟರುಗಳು, ೯ ಜನ, ಅರ್ಜಿಯನ್ನು ದಂಡಿನ ಡಿ| ಮೆಜಿಸ್ಟ್ರೇಟರಿಗೆ ಸಲ್ಲಿಸಿದ್ದರು. ಡಿ| ಮೆ| ಇವರ ಅರ್ಜಿಯನ್ನು ಸ್ವೀಕರಿಸಿ, ಚರ್ಚೆನಡಿಸಿ ಸದರಿ ಬೇಂಕನ್ನು ಮುಚ್ಚುವಂತೆ ಆಜ್ಞೆ ಮಾಡಿದ್ದಾರೆ.

Established] [1906

THE

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	**Rs**	**486 Lakhs**
Annual income Exceeds	**Rs.**	**28 Lakhs**
Total Assets Exceed	**Rs.**	**100 Lakhs**
Total claims paid over	**Rs.**	**36 Lakhs.**

The oldest and largest Life Assurance Company of South India, having 31 years of record service

A POLICY IN THE UNITED INDIA *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to:—

THE BRANCH MANAGER,
The United India,
Life Assurance Company Ltd.
BLOCK No 2, Felix Pai Bazaar,
BRANCH, **MANGALORE, S. K.**

OR

K. Keshava Shenoy, M. A.
Organiser, Shantiniketan,
PENTLANDPET,
MANGALORE.

1938ನೇ ಇಸ್ವಿ ನವಂಬರ ತಿಂಗಳ ತಾ. 14ನೇ ಸೋಮವಾರ ದಿವಸದ ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆಗಳು—

(ಹಜೂರು ಟ್ರೆಜರಿಯಿಂದ)

ಹೆಸರು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ ..	1— 9—0	—
,, ದುಯಂ ,, ,, ,, ...	1— 8—0	
,, ಅವ್ವಲ್ ,, ಸುಗ್ಗಿ ,, ...	—	—
,, ದುಯಂ ,, ,, ,, ..	—	—
ಅಕ್ಕಿ ಅವ್ವಲ್ ,, ಗುಡ್ಡ ,, . ..	4— 8—0	4—10—0
,, ದುಯಂ ,, ,, ,, ...	3—14—0	4— 6—0
,, ಅವ್ವಲ್ ,, ಸುಗ್ಗಿ ,, ...	4— 5—0	—
,, ದುಯಂ ,, ,, ,, ...	4— 0—0	
ಸುಲಿದ ತೆಂಗಿನಕಾಯಿ 1000ಕ್ಕೆ ,, ...	33— 0—0	43— 0—0
ಸಿಪ್ಪೆಯಿದ್ದ ,, ,, ,, . ..	36— 0—0	46— 8—0
ಕೊಬ್ಬರಿ ಆಫೀಸು ಖಂಡಿಗೆ ,, ...	50— 0—0	—
,, ಪಿಪಿ ,, ,, ...	52— 0—0	—
,, ದಿಲ್‌ಪಸಂದ್ ,, ,, ...	52— 0—0	—
ತೆಂಗಿನಎಣ್ಣೆ ಮಣಕ್ಕೆ ,, ...	3— 5—0	3—6—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ ,, ...	3— 4—0	3—14—0
ಗೇರುಬೀಜ ಮುಡಿಗೆ ,, ...	3— 4—0	3— 8—0
ಕಬ್ಬಿನ ಬೆಲ್ಲ ಖಂಡಿಗೆ ... ,, ...	37— 8—0	42— 0—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ ,, ...	15— 8—0	17— 0—0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಪರ್ಕ ಪಲಾಮು —

ಇಪ್ಪರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಜೆಯ ಟ್ರೇಡ್‌ಮಾರ್ಕುಳ್ಳ ರಿಂಗ್‌ಪರ್ಕ

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. ಕ್ರಯ:-100 ಮಾತ್ರೆಗಳಿಗೆ ರೂ 1-6-0, 500ಕ್ಕೆ ರೂ 6-0-0. ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ

ಆಮಲಕೀ ತೈಲ (ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ,

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ ಭಾರತ

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸ್ಥಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Funja, ಯಂ. ಆರ್. ಫೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DA.MONDS! **DAIMONDS!!**

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪು ಯೋದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಸುಷ್ಕತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ 2-8-0

ಕಸ್ತೂರಿಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager,

Kanara Printing Works,

Hampankatte, **MANGALORE**

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):— ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು ವಿಕ್ರಯದಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು

ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ.

ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ.

ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಕೆ. ಎನ್. ಸೆಟ್ಟಿ, ಕೆನರಾ ನರ್ಸರಿ,

ಪೋಸ್ಟ್:—ಕಾಪು, ದ. ಕ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೇರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೧—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ. [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರ್ಯಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,

ಸೋಪಿ ಪುರದ ಲೇನು — — — ಉಡುಪಿ, ದ ಕ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು.
ಮಂಗಳೂರು. ಕೊಡಿಯಾಲಬೈಲು.

ಶ್ರೀ ತಾ ನ ದಿ ಜಾ ನು ವಾ ರು ಸಂ ತೆ

ತಾರೀಕು **3-12-1938**ರಿಂದ ತಾರೀಕು **9-12-38**ರ ವರೆಗೆ ಮಾತ್ರ.

ಜಾನುವಾರುಗಳನ್ನು ಪಡಕೊಳ್ಳುವವರಿಗೆ ಇದೇ ಅತ್ಯುತ್ತಮ ಸಂದರ್ಭ.

ಪ್ರಯಾಣಿಕರಿಗೆ ಅನುಕೂಲವಾಗುವಂತೆ ಅಗತ್ಯವಿದ್ದಲ್ಲಿ ಸ್ಪೆಶ್ಯಲು
ಸರ್ವಿಸು ಚಾಲುಮಾಡುವ ಯೋಗ್ಯ ವ್ಯವಸ್ಥೆಮಾಡಲಾಗುವುದು.
ಪ್ರಯಾಣಿಕರ ಸೌಕರ್ಯದ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ
ದೊರೆಯುವುದು.

ವಾರ್ಷಿಕ ಚಂದಾ ರೂ. 3 0 0 ಬಿಡಿ ಪ್ರತಿ 0 1 0

ಮೆನೇಜರ್— ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital	..	**Rs 1,00000**
Subscribed & Paid up „	..	**Rs. 30,500**
Reserves	..	**Rs. 1,078**

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು
ಸ್ವೀಕರಿಸಲ್ಪಡುತ್ತವೆ.

3ರಿಂದ	**6** ತಿಂಗಳ ವರೆಗೆ	**4** ಸಲೆ
7 „	**11** „	**5** „
12 „	**18** „	**6** „

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯತಿ
ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?

ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ವ್ಯಾಸಭವನಂ
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S S KARANTH, for & on behalf of SUPPLY AGENCY LTD, at THULUNAD PRESS, UDIPI
and Published by K H SHETTY at "NAVAYUGA" OFFICE, UDIPI, South India

Registered No. M 3618.

8-12-1938

NAVA YUGA

To Ensure Larger volume of Business,

Advertisement Assures Commercial Success.

TAKE TO *ADVERTISEMENT*

in

to be published on 12th January 1939

Navayu a

ADVT. TARIFF

1 Page	–	Rs. 25/-
1/2 ,,	–	Rs. 12/-
1/4 ,,	–	Rs 8/-
1/8 ,,	–	Rs. 5/-

Special rates for Special positions or in coloured paper or in Coloured ink.

An Annual will be looked into again and again and every time your Advertisement will be there to catch the eye of the reader reminding him how he could save time and money.

Book your space now to avoid disappointment.

Advt. Manager, *'Navayuga'* UDIPI, S. India.

The Canara Industrial & Banking Syndicate, Limited.

(INCORPORATED IN BRITISH INDIA)
[ESTD. 1925]

HEAD OFFICE:—MUKUND NIVAS, **UDIPI**, S. INDIA

MEMBER:

RESERVE BANK OF INDIA

BANKERS' CLEARING HOUSE, BOMBAY.

DEPOSIT RATES.

3 to 5 MONTHS	....	....	2½% p. a.
6 to 11 ,,	...	....	3% ,,
12 to 23 ,,	.	....	3½% ,,
24 ,,	...	...	4% ,,
SHORT TERM	....	....	2% ,,

BANKING BUSINESS OF EVERY DESCRIPTION TRANSACTED.

Please Note

The Subscribers, Agents & Advertisers *in*

NAVAYUGA

PLEASE NOTE THAT PAYMENTS DUE TO **NAVAYUGA** MAY BE MADE TO THE CREDIT OF NAVAYUGA ACCOUNT IN ANY BRANCH OF

THE CANARA INDUSTRIAL & BANKING SYNDICATE, LIMITED, UDIPI

Without being liable to pay any amount by way of Commission.

WHERE THE SYNDICATE HAS BRANCHES.

Bombay, Bangalore, Belgaum, Byadgi, Bellary, Adoni. Hospet, Nandyal, Prodattur, Tadpatri, Taliprramba, Hubli, Gadag. Mangalore, Cannanore, Payyanur, Kanhangad, Kasargode, Karkal, Udipi, Uppinangady, Karwar, Kumta, Ankola, Honavar, Bhatkal, Sirsi, Sagar, Coondapoor, Brahmavar, Hungarcutta, Nippani, Tumkur & Hindupur,

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಶೀತಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ರು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ್
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE. **MANGALORE** BRANCHES **Udipi, Coondapoor, Kaup & Karkal.**

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at 3½ p. c. per annum
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.
Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE PANGAL NAYAK BANK LIMITED.

Estd.] **H. O. UDIPI.** [1920

BRANCHES
MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at 3½ p. c per annum.
Two years' Fixed Deposits at 4 p. c per annum.
Savings Bank Deposits .... 3 p. c per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD. 1921
FOUNDER
Sri. A. B. SHETTY, M.L.A.
Parliamentary Secretary Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೮-೧೨-೧೯೩೮ | Vol. XVIII
ಸಂಚಿಕೆ ೧೫ | Udipi, Thursday 8—12—1938 | No. 15

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ವಿ. ಪಿ. ಕ್ರಮವನ್ನು ನಿಲ್ಲಿಸಲಾಗಿದೆ.

ಬ್ರಿಟಿಷ್ ಸರಕಾರಕ್ಕೆ ಗಾಂಧಿಜಿಯವರ ಎಚ್ಚರಿಕೆ

ದೇಶೀಯ ರಾಜರು ಕಾಂಗ್ರೆಸನ್ನು ಗೌರವಿಸಬೇಕು.

ದೇಶೀಯ ಸಂಸ್ಥಾನಿಕ ಪ್ರಜೆಗಳ ಅತೃಪ್ತಿಯ ಕುರಿತು ಗಾಂಧಿಯವರ ಅಭಿಪ್ರಾಯ.

ಹಿಂದೀ ರಾಜರುಗಳು ಕಾಲಧರ್ಮವನ್ನರಿತು ಪ್ರಜೆಗಳಿಗೆ ಆಡಳಿತದ ಜವಾಬ್ದಾರಿಯನ್ನೀಯಬೇಕು.

ದೇಶೀಯ ಸಂಸ್ಥಾನಗಳೂ ಜನತೆಯೂ ಎಂಬ ಶಿರೋನಾಮೆಯಲ್ಲಿ ಗಾಂಧಿಜಿಯವರು ಹರಿಜನ ಪತ್ರಿಕೆಯಲ್ಲಿ ಈ ಕೆಳಗಣ ಸಾರಾಂಶದ ಲೇಖನ ಬರೆದಿರುವರು. ಬಹುತೇಕ ಏಕಕಾಲದಲ್ಲಿ ಬೇರೆ ಬೇರೆ ದೇಶೀಯ ಸಂಸ್ಥಾನಗಳ ಪ್ರಜೆಗಳಲ್ಲುಂಟಾಗಿರುವ ಜಾಗೃತಿಯು, ದೇಶದ ಸಂಪೂರ್ಣ ಸ್ವಾತಂತ್ರ್ಯ ಸಮರದಲ್ಲಿ ಗಣನೀಯ ಸಂಗತಿಯಿದೆ. ಹೊರಗಣ ವ್ಯಕ್ತಿಗಳ ಅಥವಾ ಸಂಸ್ಥೆಯ ಪ್ರೇರೇಪಣೆ ಅಥವಾ ಉತ್ತೇಜನದಿಂದ ಈ ಜಾಗ್ರತಿಯುಂಟಾಗಿರುವುದೆಂದು ನೆನಸುವುದು ತಪ್ಪು. ಹರಿಪುರ ಕಾಂಗ್ರೆಸಿನ ನಿರ್ಣಯದಿಂದಾಗಿ ದೇಶೀಯ ಸಂಸ್ಥಾನಗಳ ಪ್ರಜೆಗಳು, ತಮ್ಮ ವಿಮೋಚನೆಯು ತಮ್ಮ ಕೈಯಲ್ಲೇ ಇರುವುದೆಂಬ ಸ್ವಾವಲಂಬನೆಯ ಸ್ವಾಭಿಮಾನವುಳ್ಳವರಾಗಬಹುದು. ಎಲ್ಲಕ್ಕಿಂತಲೂ ಹೆಚ್ಚಾಗಿ ಕಾಲಸ್ಫೂರ್ತಿಯೇ ಈ ಪ್ರಚಂಡ ಜಾಗೃತಿಗೆ ಮುಖ್ಯ ಕಾರಣ. ದೇಶೀಯ ರಾಜ ಮಹಾರಾಜರುಗಳೂ ಅವರ ಉಪದೇಶಕರೂ ಕಾಲಧರ್ಮಕ್ಕನುಸಾರವಾಗಿ ಪ್ರಜೆಗಳ ನ್ಯಾಯವಾದ ಆಕಾಂಕ್ಷೆಯನ್ನು ಮನ್ನಿಸುವರೆಂಬ ಆಶೆಯಿದೆ. ಒಂದೋ ಈ ಸಂಸ್ಥಾನಗಳು ಸಂಪೂರ್ಣವಾಗಿ ತೆಗೆದುಹಾಕಲ್ಪಡಬೇಕು. ಇಲ್ಲವೆ ದೇಶೀಯ ರಾಜರುಗಳು ಕೇವಲ ಪ್ರಜೆಗಳ ಟ್ರಸ್ಟಿಗಳಾಗಿದ್ದು, ತಮ್ಮ ಸಂಸ್ಥಾನದ ಆಡಳಿತಕ್ಕೆ ಪ್ರಜೆಗಳನ್ನು ಜವಾಬ್ದಾರರನ್ನಾಗಿ ಮಾಡಬೇಕು. ಇವೆರಡರ ನಡುವಿನ ಸ್ಥಿತಿಯು ಸಾಧ್ಯವಿಲ್ಲ.

ಬ್ರಿಟಿಷ್ ಪ್ರಾಂತದ ಮಂತ್ರಿಗಳ ಜವಾಬ್ದಾರಿ

ತಮ್ಮ ಪ್ರಾಂತದಲ್ಲಿರುವ ದೇಶೀಯ ಸಂಸ್ಥಾನಗಳ ಪ್ರಜೆಗಳ ಸಂಬಂಧವಾಗಿ ಸದರಿ ಪ್ರಾಂತದ ಮಂತ್ರಿಗಳಿಗೆ ನೈತಿಕ ಜವಾಬ್ದಾರಿಯಿರುವುದಿಲ್ಲವೋ ಎಂಬುದು ವಿಚಾರಣೀಯವಿದೆ. ರಾಜಕೀಯ ಘಟನೆಯ ಮೇರೆಗೆ ಅವರ ಮೇಲೆ ಮಂತ್ರಿಗಳಿಗೇನೂ ಅಧಿಕಾರವಿರುವುದಿಲ್ಲ. ಚಕ್ರವರ್ತಿ ಸರಕಾರದ ಪ್ರತಿನಿಧಿಗಳಾದ ವೈಸರಾಯರು ಯಾ ಏಜಂಟರಾಗಿ ಆಯಾಪ್ರಾಂತದ ಗವರ್ನರರಿರುತ್ತಾರೆ. ಆದರೆ ಸ್ವಾಯತ್ತತೆಯನ್ನು ಹೊಂದಿರುವ ಬ್ರಿಟಿಷ್ ಪ್ರಾಂತ್ಯಗಳ ಮಂತ್ರಿಗಳಿಗೆ ತಮ್ಮ ಪ್ರಾಂತ್ಯದೊಳಗಣ ದೇಶಿಯಸಂಸ್ಥಾನಗಳ ಆಗುಹೋಗುಗಳ ಕುರಿತು ನೈತಿಕ ಜವಾಬ್ದಾರಿಯಿದೆ. ದೇಶೀಯ ಸಂಸ್ಥಾನದ ಪ್ರಜೆಗಳು ತೃಪ್ತಿಯಿಂದಿರುವ ವರೆಗೆ ಬ್ರಿಟಿಷ್ ಪ್ರಾಂತದ ಮಂತ್ರಿಗಳಿಗೇನೂ ಗೊಡವೆಯಿಲ್ಲ. ದೇಶೀಯ ಸಂಸ್ಥಾನದಲ್ಲಿ ತೀವ್ರ ಸಾಂಕ್ರಾಮಿಕ ರೋಗ ಹಬ್ಬಿದಾಗ ಅದನ್ನು ಅಲಕ್ಷಿಸಿದರೆ ಬ್ರಿಟಿಷ್ ಪ್ರಾಂತ್ಯಕ್ಕೂ ಅದು ಸುಲಭವಾಗಿ ಹಬ್ಬಿ ಹಾವಳಿ ಮಾಡುವುದಿಲ್ಲವೇ? ಢೆಂಕನಾಲಿನಂತಹ ಸಂಸ್ಥಾನದಲ್ಲಿ ನೈತಿಕ ಸಾಂಕ್ರಾಮಿಕವು ಹಬ್ಬಿರುವದಂತಿರುವಾಗ ಅದರ ಕುರಿತು ಅವರಿಗೆ ಜವಾಬ್ದಾರಿಯೇನೂ ಇಲ್ಲವೇ? ಕ್ರೂರ ಪೀಡೆಗೊಳಗಾಗಿರುವ ಢೆಂಕನಾಲ್ ಸಂಸ್ಥಾನದ ಪ್ರಜೆಗಳು ಬ್ರಿಟಿಷ್ ಒರಿಸ್ಸಕ್ಕೆ ಹೋಗಿ ಆಶ್ರಯ ಪಡೆಯುತ್ತಿರುವರೆಂದು ನಾನು ತಿಳಿಯುತ್ತೇನೆ. ಮಂತ್ರಿಗಳು ಅವರಿಗೆ ಆಶಯವನ್ನು ನಿರಾಕರಿಸಲಾಗುವುದೇ? ಈ ಸಂಸ್ಥಾನದಲ್ಲಿ ಒಳ್ಳೆಯದಾಗಲಿ ಕೆಟ್ಟದಾಗಲಿ ಏನಾದರೂ ಅದರ ಪರಿಣಾಮವು ಬ್ರಿಟಿಷ್ ಪ್ರಾಂತದಲ್ಲಿ ಆಗಿಯೇ ಆಗುವುದು. ಆದುದರಿಂದ ಬ್ರಿಟಿಷ್ ಪ್ರಾಂತದ ಮಂತ್ರಿಗಳು ದೇಶೀಯ ಸಂಸ್ಥಾನಗಳಿಗೂ ತಮಗೂ ಏನೂ ಸಂಬಂಧವಿಲ್ಲೆಂದು ತಣ್ಣಗಿರಲು ಸಾಧ್ಯವಿಲ್ಲ. ಇಡೀ ಪ್ರಾಂತದ ಸ್ವಾಸ್ಥ್ಯ ಮತ್ತು ಸುಭಿಕ್ಷೆಯ ಕುರಿತು ಅವರ ಹೆಗಲ ಮೇಲೆ ಮಹತ್ತಾದ ಜವಾಬ್ದಾರಿಯಿದೆ. ಚಕ್ರವರ್ತಿ ಸರಕಾರವು ನಿರ್ಮಿಸಿರುವ ದೇಶೀಯ ಸಂಸ್ಥಾನದ ಪ್ರಜೆಗಳು, ಢೆಂಕನಾಲ್ ಸಂಸ್ಥಾನದಂತೆ ಕ್ರೂರ ದಬ್ಬಾಳಿಕೆಗೊಳಗಾಗಿ ನುಚ್ಚುನೂರಾಗುವಾಗ ಮಂತ್ರಿಗಳದನ್ನು ಕಡೆಗಣಿಸಿ ಸುಮ್ಮನಿರಲು ಸಾಧ್ಯವಿಲ್ಲ. ಬ್ರಿಟಿಷ್ ಪ್ರಾಂತಗಳ ಮಂತ್ರಿಗಳು, ತಮ್ಮ ಪ್ರಾಂತಗಳೊಳಗಿನ ದೇಶೀಯ ಸಂಸ್ಥಾನಗಳ ಕೆಟ್ಟ ಆಡಳಿತದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಿ ಸಲಹೆ ಕೊಡಬೇಕು. ಚಕ್ರವರ್ತಿಸರಕಾರವು ಈ ಮಂತ್ರಿಗಳೊಡನೆ ಮೈತ್ರಿಯಿಂದಿದ್ದರೆ ಅವರ ಸಲಹೆಗೆ ಕಿವಿಕೊಡತಕ್ಕದ್ದು.

ಬ್ರಿಟಿಷ್ ಸರಕಾರದ ಕರ್ತವ್ಯ.

ಕೆಲಮಂದಿ ದೇಶೀಯ ರಾಜರುಗಳ ಮತ್ತು ಅವರ ದಿವಾನರ ಪ್ರೇರೇಪಣೆಗೆ, ಬ್ರಿಟಿಷ್ ಸರಕಾರವು, ದೇಶೀಯ ರಾಜರುಗಳಿಗೆ ತಮ್ಮ ಪ್ರಜೆಗಳಿಗೆ ಜವಾಬ್ದಾರಿ ರಾಜ್ಯಭಾರವನ್ನೀಯುವ ಶಕ್ತಿಯು ಎಷ್ಟರಮಟ್ಟಿಗಿರುವುದೆಂಬುದರ ಕುರಿತು ಅರ್ಲ್ ಎಂಟರ್ಟನರು ಪಾರ್ಲಿಮೆಂಟಿನಲ್ಲಿ ವ್ಯಕ್ತಪಡಿಸಿರುವ ಧೋರಣೆಯನ್ನು ಬದಲಾಯಿಸಲಿರುವುದೆಂಬ ಸುದ್ದಿಯು ನಿಜವಲ್ಲೆಂದು ನಂಬುತ್ತೇನೆ. ಹಿಂದೀರಾಜರುಗಳಾದರೂ, ಬ್ರಿಟಿಷ್ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸುವಂತೆ ಕೇಳಿಕೊಂಡಿದ್ದರೆ ಅದರಿಂದ ತಮಗೇನೇ ತಾವು ಹಾನಿಮಾಡಿಕೊಂಡಂತಾಗಿರುವುದು ಮತ್ತು ಬ್ರಿಟಿಷ್ ಸರಕಾರವು ಆಯುಕ್ತವಾದ ಈ ಅಪೇಕ್ಷೆಯನ್ನು ಸಲಿಸಹೋದರೆ ಅದರಿಂದ ದೊಡ್ಡ ಬಿಕ್ಕಟ್ಟೊಂದಕ್ಕೆ ಕಾರಣವಾದಂತಾಗಿ ಅದರಿಂದ ಎಂತಹ ಪರಿಣಾಮವುಂಟಾಗುವುದೆಂದು ಹೇಳಬರುವುದಿಲ್ಲ. ಅಂತಹ ಅನರ್ಥವನ್ನು ಬ್ರಿಟಿಷ ಸರಕಾರವು ಮಾಡಲಾರದೆಂದು ನಂಬುತ್ತೇನೆ. ಅರ್ಲ್ ಎಂಟರ್ಟನ ಹೇಳಿಕೆಯು ಹಿಂದಿನ ಪದ್ಧತಿಯನ್ನು ಸಮರ್ಥಿಸಿರುವುದಷ್ಟೆ. ದೇಶೀಯ ರಾಜರುಗಳು ತಮ್ಮ ಪ್ರಜೆಗಳಿಗೆ ಎಷ್ಟೊಂದು ಹೆಚ್ಚಿನ ಅಧಿಕಾರವಿತ್ತರೂ ಬ್ರಿಟಿಷ್ ಸರಕಾರವು ಇಷ್ಟರವರೆಗೆ ಅದರಲ್ಲಿ ಕೈಹಾಕಿರುವುದಿಲ್ಲ. ನಾನು ಇದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗುವೆನು. ದೇಶೀಯ ಸಂಸ್ಥಾನಗಳಿಗೆ ಹೊರಗಣಿಂದ ಅಥವಾ ಒಳಗಣಿಂದ ಏನಾದರೂ ಹಾನಿಯುಂಟಾಗುವ ಪಕ್ಷದಲ್ಲಿ ಹೇಗೆ ಚಕ್ರವರ್ತಿ ಸರಕಾರವು ಅವುಗಳಿಗೆ ರಕ್ಷಣೆ ಕೊಡುತ್ತದೋ ಅದೇರೀತಿ ದೇಶೀಯ ರಾಜರುಗಳು ತಮ್ಮ ಪ್ರಜೆಗಳನ್ನು ನ್ಯಾಯವಾದ ರೀತಿಯಲ್ಲಿ ಆಳುವಂತೆ ನೋಡುವುದು ಅವರ ಕರ್ತವ್ಯವಿದೆ. ಆದುದರಿಂದ ಅವರು ಯಾವುದಾದರೊಂದು ದೇಶೀಯ ಸಂಸ್ಥಾನಕ್ಕೆ ಪೋಲೀಸ್ ಅಥವಾ ಸೈನಿಕ ಸಹಾಯವೀಯುವ ಮೊದಲು ನ್ಯಾಯವಾಗಿ ಅಂತಹ ಪರಿಸ್ಥಿತಿಯುಂಟಾಗಿರುವುದೋ ಎಂಬುದನ್ನು ಮೊದಲು ವಿಚಾರಿಸಿಕೊಳ್ಳಬೇಕು. ಮತ್ತು ಈ ಪೋಲೀಸರು ಮತ್ತು ಸೈನಿಕರು ಬಹಳ ನಿಯಂತ್ರತೆಯಿಂದ ಉಪಯೋಗಿಸಲ್ಪಡುವಂತೆ ಮುಂಜಾಗ್ರತೆ ತೆಗದುಕೊಳ್ಳಬೇಕು. ಒರಿಸ್ಸದ ಢೆಂಕನಾಲ್ ಸಂಸ್ಥಾನದಲ್ಲಿ, ಚಕ್ರವರ್ತಿಸರಕಾರವು ಒದಗಿಸಿರುವ ಪ್ರೊ

ಪುಟ ೧೧ರಲ್ಲಿ ನೋಡಿರಿ.

THE UDIPI BANK LTD.

ನಿರಖು ಠೇವಣಾತಿ (ಡಿಪ್ರೋಜಿಟು)ಗಳು

ಸಾ. ಶೇ. 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ

ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100/-ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ಈ ವಾರದ ಕಥೆ

ಅದೊಂದು ದಿನ!

ಶ್ರೀ. ಕೊರ್ಡಿಕಲ್ಲು ಯು. ಯನ್. ಭಟ್.
ಕೊಪ್ಪ—ಕದೂರು.

ನಾನು ಬಿ.ಎ ಪರೀಕ್ಷೆಯಲ್ಲಿ ಉತ್ತೀರ್ಣನಾದೆನೆಂದು ನನಗೆ ಬಹಳ ಸಂತೋಷ. ನನ್ನ ತಂದೆ ತಾಯಂದಿರಿಗೆ ಏನಾದರೂ ನೌಕರಿ ನನಗೆ ಸಿಕ್ಕೀತೆಂದು ಆಸೆ. ಆದರೆ ಈಗಿನ ಕಾಲಸ್ಥಿತಿಯನ್ನು ನೋಡಿದರೆ, 'ಸಿಕ್ಕರೆ ಶಿಕಾರಿ ಸಿಗದಿದ್ದರೆ ಬೇಕಾರಿ'ಎಂದಾಗಿದೆ. ಕಲಿತರೆ ನೌಕರಿಯಿಲ್ಲ; ಕಲಿಯದಿದ್ದರೆ ನಮ್ಮನ್ನು ಮೂಸುವವರು ಸಹ ಇಲ್ಲ. ಊರಿನಲ್ಲಿ ನಾನು ಗಾಳಿಯ ಕೋಳಿಯಂತೆ ತಿರುಗಿ ಬೇಸತ್ತೆ. ಎಲ್ಲಿಯಾದರೂ ರೈಲ್ವೇ ಕಂಪೆನಿಯಲ್ಲಿ ಕೆಲಸಸಿಕ್ಕಿತೆಂಬ ಭಾವನೆಯಿಂದ, ಹುಬ್ಬಳ್ಳಿಗೆ ನನ್ನ ಪ್ರಯಾಣವನ್ನು ಬೆಳೆಸಿದೆ. ಅಲ್ಲಿಯೂ 'ಎಡದು ದಾಸರನ್ನು ನಂಬಿಕುರುಡುದಾಸಕೆಟ್ಟ'ನೆನ್ನುವಂತೆ ನನಗೆ ಕೆಲಸವು ಸಿಕ್ಕಲೇ ಇಲ್ಲ. ಕೈಯಲ್ಲಿ ಇದ್ದ ಅಲ್ಪ ಸ್ವಲ್ಪ ಹಣವೂ ಶೀಘ್ರವಾಗಿ ವ್ಯಯವಾಯಿತು.

ಇನ್ನೇನು ಮಾಡುವುದು? ಊರಿಗೆ ಬರಲಿಕ್ಕೆ ನಾಚಿಕೆ; ಇದ್ದಲ್ಲಿ ಇರಲಿಕ್ಕೆ ನಮಗೆ ಕೂಳಿಗೆ ನಾಸ್ತಿ! ತಿರುವಣಿ ಚೀಲ ಒಂದು ಹಿಡಿಯುವುದರಲ್ಲಿ ಇದ್ದೆ—ಆಗಲಿ! ರೈಲ್ವೇ ನಿಲ್ದಾಣದಲ್ಲಿ, ಬರಹೋಗುವ ಸಭ್ಯ ಗೃಹಸ್ಥರ ಗಂಟುಗದಡಿಗಳನ್ನು ಹೊರುವ ಆಳಾದೆ. ಅಲ್ಲಿಯಾದರೂ ಸುಖವುಂಟೇ? ಅಲ್ಲಿರುವ ನನ್ನಂತೆ ಕೂಲಿಯಾಳುಗಳು; ಹೊರೆಯಾಳುಗಳು—ಇವರಲ್ಲಿ ಕೊಂಪಿಟೇಶನ್, ಈ ಕೊಂಪಿಟೇಶನ್ ಮಧ್ಯದಲ್ಲಿ ನಾನು ಜೆಟ್ಟಿ! ಒಂದು ದಿನ, ಇಬ್ಬರು ಸಭ್ಯ ಗೃಹಸ್ಥರು ಟ್ರೈನಿನಿಂದ ಇಳಿದರು. ಅವರೊಟ್ಟಿಗೆ ಇಬ್ಬರು ಹೆಂಗಸರು. ಒಬ್ಬಳು ಹೆಂಡತಿ, ಇನ್ನೊಬ್ಬಳು ಮಗಳೆಂದು ಕಾಣಿಸುತ್ತಿ ಅವರ ಬೇಗು-ಬೆಡ್ಡಿಂಗ್ ಹೊರಲಿಕ್ಕೆ ನಾನು ಮುಂದೆ ಹೋದೆ ಬೇಗು-ಬೆಡ್ಡಿಂಗನ್ನು ಅವರ ಮನೆಯ ಕಡೆಗೆ ಸಾಗಿಸಿದೆ. ತದನಂತರ, ಅವರು ಮನೆಯಲ್ಲಿಳಿದಾಗ, ಪಾಕೇಟಿನಿಂದ ತೆಗೆದು, ಎರಡಾಣೆ ದುಡ್ಡನ್ನು ನನಗೆ ಕೊಟ್ಟರು. ಎರಡಾಣೆ! ನನಗೆ ಚಿನ್ನದ ಕೊಪ್ಪರಿಗೆಯೇ ಸಿಕ್ಕಿದ ಹಾಗಾಯಿತು. ಒಂದು ತರದ ಮನೋಲ್ಲಾಸದಿಂದ ನಾನು ನಕ್ಕುಬಿಟ್ಟೆ. ಆಗ, ಅವರು ತಾನು ಕೊಟ್ಟ ಎರಡಾಣೆ ನನಗೆ ಸಾಕಾಗಲಿಲ್ಲವೆಂದು ಇನ್ನೂ ಎರಡಾಣೆಯನ್ನು ಕೊಟ್ಟು ಒಳಕ್ಕೆ ಹೋದರು. ಆಗಂತೂ ನನ್ನ ಆನಂದಕ್ಕೆ ಮಿತಿಯೇ ಇಲ್ಲವಾಯಿತು. ಆಗ ರಾಯರು ಒಳಗೆ ಕಾಫಿಯನ್ನು ಕುಡಿಯುತ್ತಾ ಇದ್ದರು. ನಾನು ಇನ್ನೂ ನಗಾಡುತ್ತಲೇ ಇದ್ದೆನೆಂದು ರಾಯರ ಹುಡುಗಿ ಒಳಗೆ ಹೋಗಿ ಹೇಳಿದಳು. ಹೇಳಿದವಳೇ ಒಂದು ಲೋಟಾ ಕಾಫಿ, ಚಪಾತಿ, ಬಟಾಟೆ ಬಾಜಿ ಮುಂತಾದುವನ್ನು ತಂದು ನನ್ನೆದುರಿಗಿಟ್ಟಳು. ನಾನು ನಿರ್ದಾಕ್ಷಿಣ್ಯದಿಂದ ಎಲ್ಲವನ್ನೂ ತಿಂದು ಬರಿದು ಮಾಡಿದೆ

ರಾಯರು ಹೊರಗೆ ಬಂದರು. ಬಂದವರಿಗೆ ನನ್ನ ಮೇಲೆ ಕನಿಕರ ಹುಟ್ಟಿತೋ ಏನೋ....ನನ್ನ ಹೆಸರು, ಜಾತಿ ಮುಂತಾದುವನ್ನು ಕೇಳುವಂಥವರಾದರು. ನಾನು ಬಿ.ಎ. ಗ್ರೇಜ್ಯುಯೇಟ' ಇನ್ದುದರಿಂದ ಬಹಳ ನಾಚಿಗೆಯಿಂದ, ನನ್ನ ಹೆಸರನ್ನು ಮರೆಮಾಜಿ ಹೇಳಿದೆ. ಅವರಿಗೊಬ್ಬ ಅಡಿಗೆಯವನ ಆವಶ್ಯಕತೆ ಇದ್ದಿತು. ಆದುದರಿಂದ, ನಮಗೆ ಅಡಿಗೆಯ ಕಲಸಕ್ಕೆ ನೇಮಕಾತಿ ಆಯಿತು ಇನ್ನು ನಮಗೆ ಅಡಿಗೆಯ ಕೋಣೆ, ಒಲೆಯ ಬೂದಿ, ಇವಿಷ್ಟು ಅನುಭವಸಿದ್ಧಿಯ ಒಡನೆಗಳಾದವು ಇರಲಿ! ಬಡವನು ಬಲ್ಲಿದನಾಗನೇ? ರಾಯರು ... ಅವರ ಹೆಸರು ಶ್ರೀನಿವಾಸರಾಯರೆಂದು—ದೊಡ್ಡ ಇಂಜಿನಿಯರ ಹುದ್ದೆಯಲ್ಲಿರುವವರು. ಹೆಂಡತಿ ಗೋದೂ ಬಾಯಿ, ಮಗಳು ಮಾಲತಿ. ನಾನು ಅಡಿಗೆಭಟ್ಟನಾದುದರಿಂದ, ನನಗೂ ಮಾಲತಿಗೂ ಸಲಿಗೆ ಹೆಚ್ಚಾಯಿತು. ಅವಳು ಶಾಲೆಗೆ-ಹಾಯ್‌ಸ್ಕೂಲಿಗೆ ಹೋಗುತ್ತಾಳೆ.

ಒಂದು ದಿವಸ ಮಾಲತಿಯ ಮುಖ ಬಹಳ ಬಾಡಿಹೋಗಿತ್ತು. ಪಾಪ! ಇಂಗ್ಲೀಷಿನಲ್ಲ ಎನಾಲಿಸಿಸ್ ಮತ್ತು ಸಿಂತೆಸಿಸ್ ಕಲಿಸಿದ್ದಾರಂತೆ. ಅದು ಅವಳಿಗೆ ಏನೂ ತಿಳಿಯಲಿಲ್ಲವಾಗಿತ್ತು. ನಾನು ಅವಳ ಕೋಣೆಗೆ ಕಾಫಿ ತೆಗೆದುಕೊಂಡು ಹೋದಾಗ, ಅವಳು ಬಾಡಿದ ಮುಖದಿಂದ ಏನನ್ನೋ ಆಲೋಚಿಸುತ್ತಾ ಕುಳಿತಿದ್ದಳು ನಾನು ಬೇಸರದ ಕಾರಣವನ್ನು ಕೇಳಿದೆ. ಕೂಡಲೇ ಅವಳ ಡಿಫಿಕಲ್ಟಿಯನ್ನು ಸೋಲ್ವ್‌ಮಾಡಿಯೂ ಕೊಟ್ಟೆ. ಕೇಳುವುದೇನು? ಮಾಲತಿಗೆ ಪರಮಾಶ್ಚರ್ಯ! ಅಡಿಗೆ ಭಟ್ಟ ಮೆಟ್ರಿಕ್ ಕಲಿಯುವ ಹುಡುಗಿಗೆ ಕಲಿಸುವುದೆಂದರೇನು? ನನ್ನ ಹತ್ತಿರ ಕೇಳುತ್ತಾಳೆ-ನಾನು ಓನರ್ಸ್ ಗ್ರೇಜ್ಯುಯೇಟ್.

ಓಡಿ ಒಳಗ ಹೋಗಿ, ಈ ಸಂಗತಿಯನ್ನು ತಂದೆಗೆ ತಿಳಿಸಿದಳು, ತಂದೆಗೂ ಆಶ್ಚರ್ಯವಾಯಿತು, ಆಗ ನನ್ನ ನಿಜ ಸಂಗತಿಯನ್ನು ಕೇಳಿದರು, ನಾನೂ ಹೇಳಿದೆ. ಕೂಡಲೇ ನನ್ನ ಕುಕಿಂಗ್ ಕೆಲಸ ಟ್ರಾನ್ಸ್‌ಫರ್ ಮಾಡಿ, ಪ್ರಾಯ'ವೇಟ' ಟ್ಯೂಶನ್ ಕೆಲಸ ದಯಪಾಲಿಸಿದರು ಆಯಿತಪ್ಪ ಕಲಿತದ್ದು ಸಾರ್ಥಕವಾಯಿತು. ಮುಂದೆ ಐದಾರು ತಿಂಗಳುಗಳಲ್ಲ, ನನಗೆ ಒಂದು ನೌಕರಿಯೂ ಸಿಕ್ಕಿತು. ಮಾಲತಿಯನ್ನು ನನಗೆ ಕೊಟ್ಟು ವಿವಾಹವೂ ಆಯಿತು! ಅದೊಂದು ದಿನ!! ಮನೆ ಬಿಟ್ಟು ಹೊರಟದ್ದು ಸುದಿನವೆಂದೇ ಹೇಳಬೇಕು!!!

ಸ್ವೀಕಾರ ಮತ್ತು ವಿಮರ್ಶೆ

ಇಷ್ಟೋಪದೇಶ

ಪ್ರಕಾಶಿಕೆ, ಶ್ರೀಮತಿ ದೇವಮ್ಮನವರು, ಪಣಿಲ ಅರಮನೆ, ವ್ಯಾಖ್ಯಾನಕಾರರು, ಆಸ್ಥಾನ ವಿದ್ವಾನ್, ನ್ಯಾಯತೀರ್ಥ ಶ್ರೀಮಾನ್. ಎ. ಶಾಂತಿರಾಜ ಶಾಸ್ತ್ರಿಗಳವರು, ಮೈಸೂರು. ಸಕಲ ಶಾಸ್ತ್ರಗಳಲ್ಲಿ ಮುಖ್ಯವಾದುದು ಅಧ್ಯಾತ್ಮಶಾಸ್ತ್ರ, ಸಕಲ ವಿದ್ಯೆಗಳಲ್ಲಿ ಮುಖ್ಯ ಸಾರವಾದುದು, ವೇದಾಂತವಿದ್ಯೆ. ಇಂತಹ ವಿಷಯವನ್ನು ಬೋಧಿಸುವ ಗ್ರಂಥಗಳಲ್ಲಿ ಈ 'ಇಷ್ಟೋಪದೇಶ' ಗ್ರಂಥವು ಒಂದಾಗಿದೆ. ಈ ಗ್ರಂಥದ ಮೂಲ ನಿರ್ಮಾಣರು ಜೈನ ಸಮಾಜಕ್ಕೆ ಪರಮಪೂಜರಾದ ಪೂಜ್ಯಪಾದಾಚಾರ್ಯರು. ಇವರ ಅಧ್ಯಾತ್ಮ ವಿಷಯಕ ಗ್ರಂಥಗಳು ಅತ್ಯಂತ ಪ್ರಸಿದ್ಧಿಯನ್ನು ಪಡೆದಿವೆ. ಇಂಥಾ ಜ್ಞಾನದಾಯಕ ಗ್ರಂಥ ವಿಚಾರವನ್ನ ಕನ್ನಡಿಗರ ತಿಳುವಳಿಕೆಗೆ ತರುವಂತೆ ಯತ್ನಿಸಿದ ಲೇಖಕರ ಹಾಗೂ ಪ್ರಕಾಶಿಕೆಯರ ಕಾರ್ಯ ಧ್ಯೇಯವು ಅಭಿನಂದನೀಯವು.

ಕರ್ನಾಟಕ ಫ್ರೀ ನೈಟ್ ಸ್ಕೂಲು ಮುಂಬಾಯಿ

ಇದರ 1937ನೇ ಇಸವಿ ದಶಂಬರ 31ಕ್ಕೆ ಅಂತ್ಯವಾಗುವ 14ನೇ ವಾರ್ಷಿಕ ವರದಿಯು ನಮ್ಮ ಕೈಸೇರಿರುವುದು ಈ ಸಂಸ್ಥೆಯ ಆಡಳಿತ ಮಂಡಲದ ಅಧ್ಯಕ್ಷರು ಶ್ರೀಮಾನ್ ಎಸ್. ಎಸ್. ಸೆಟ್ಟಿ, C. A. I. I. B. F. R. E. S. (Londen) ಇವರು, ಅಲ್ಲದೆ ಹಲವು ಉಚ್ಚ ಶಿಕ್ಷಣ ಹೊಂದಿದ ಅನುಭವಿಕರು ಇದರ ಏಳಿಗೆಗಾಗಿ ದುಡಿಯುತ್ತಿರುವರೆಂಬುದು ಅಭಿನಂದನೀಯವಾದುದು. ಮುಂದಣ ಕಾರ್ಯಕಲಾಪಗಳು ಯಶಸ್ವಿಯಾಗಿ ಜರಗಲೆಂದು ಹಾರೈಕೆ.

ಕುಂದಾಪುರ ಕರ್ನಾಟಕ ಸಾಹಿತ್ಯ ಸಂಘ

ಇದರ ವರದಿ ನಮಗೆ ದೊರೆತಿದೆ. ಅಧ್ಯಕ್ಷರು ಶ್ರೀಮಾನ್. ಕೆ. ವೆಂಕಟರಮಣಾಚಾರ್ಯರು, ವಿದ್ವಾನ್. ವಿ. ಕೃಷ್ಣಾಚಾರ್ಯರು ಮತ್ತು ಯಡ್ಕೋಟಿಯಣ್ಣ ಶೆಟ್ಟರು ಇವರು ಜತೆ ಕಾರ್ಯದರ್ಶಿಯವರು, ಅಲ್ಲದೆ ಹಲವು ನುರಿತ ಕನ್ನಡಿಗರು ಇದರ ಕಾರ್ಯನಿರ್ವಾಹಕ ಸಮಿತಿಯಲ್ಲಿರುವರು. ಭಾಷಾ ಸೇವಾಧ್ಯೇಯದಿಂದ ಮುಂದಾದ ಈ ಸಂಘದ ಕಾರ್ಯವು ಇನ್ನಷ್ಟು ಉಜ್ವಲವಾಗಿ ನಡೆಯಬೇಕೆಂದು ನಾವು ಅಪೇಕ್ಷಿಸುತ್ತೇವೆ.

ಶ್ರೀ ರಾಘವೇಂದ್ರ ಸ್ತೋತ್ರಂ—ಇದು ಮಾಧ್ವರ ಉಪಯೋಗಾರ್ಥವಾಗಿ ಕನ್ನಡ ಟೀಕು ಸಹಿತ ಪ್ರಕಟವಾಗಿದೆ: ಧಾರ್ಮಿಕದೃಷ್ಟಿಯಿಂದ ಪಾರಾಯಣಿಸುವವರಿಗೆ ಧರ್ಮಾರ್ಥವಾಗಿ ಕೊಡಲಾಗುತ್ತದೆ. ಅಂಚೆಚೀಟು ವೆಚ್ಚಕ್ಕೆ ಖರ್ಚು 0-1-3 ಯನ್ನು ಕಳುಹಿಸತಕ್ಕದ್ದು. ವಿಳಾಸ: Pavanje Guru Rao, S. M. S Granthamala, Udipi, S. K.

ಶರಣ ಸಾಹಿತ್ಯ—(ಸಚಿತ್ರ ಮಾಸಪತ್ರಿಕೆ) ಸಂಪಾದಕರು ಕೀರ್ತನ ಕೇಸರಿ, ಬಿ. ಶಿವಮೂರ್ತಿ ಶಾಸ್ತ್ರಿಗಳು, ಬೆಂಗಳೂರು ಸಿಟಿ. ಹಿಂದೂಧರ್ಮ, ಕನ್ನಡ ಸಾಹಿತ್ಯ, ಲಿಂಗವಂತ ಸಂಸ್ಕೃತಿಗಳ ಉನ್ನತಿಗಾಗಿ ಪ್ರಯತ್ನಿಸುವುದೇ ಈ ಪತ್ರಿಕೆಯ ಪ್ರಮುಖ್ಯ ಉದ್ದೇಶವೆಂದು ತಿಳಿದುಬರುತ್ತದೆ. ಕರ್ನಾಟಕದ ಹಲವು ಸುಪ್ರಸಿದ್ಧ ಬರೆಹಗಾರರು ಈ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಭಾಗವಹಿಸುತ್ತಿರುವರೆಂಬುದು ಸಂತೋಷಕರ. ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳು ಪ್ರಾಚೀನ ಅರ್ವಾಚೀನ ವಿಚಾರಗಳಲ್ಲಿ ನುರಿತ ಪ್ರಸಿದ್ಧ ಕನ್ನಡಿಗರು. ಇಂಥವರು ಈ ಉತ್ಕೃಷ್ಟ ಕಾರ್ಯದಲ್ಲುದ್ಯುಕ್ತರಾದುದು ಕನ್ನಡ ನಾಡಿಗೆ ತುಂಬಾ ಸಂತೋಷಕರ. ಶರಣ ಸಾಹಿತ್ಯವು ತನ್ನ ಬಾಲ್ಯಕಾಲದಿಂದಲೇ ಬಹು ಸೊಗಸಾಗಿ ಸಾಹಿತ್ಯ ದಿಗಂತದಲ್ಲಿ ತನ್ನ ಪ್ರಭೆಯಿಂದ ಮೆರೆಯುತ್ತಿದೆಯೆನ್ನಬಹುದು. ಕನ್ನಡಿಗರು ಪ್ರೇಮಾಭಿಮಾನದಿಂದ ಶರಣಸಾಹಿತ್ಯದ ಸೇವೆಯು ಇನ್ನಷ್ಟು ಹೆಚ್ಚಾಗಿ ಪ್ರಸರಿಸುವಂತೆ ನೆರವಾಗಲೆಂದು ನಮ್ಮ ಕೋರಿಕೆ.

ಶ್ರೀ ಪ್ರಮಾಥಿ ಸಂವತ್ಸರದ ಪಂಚಾಂಗಂ—ಈ ಪಂಚಾಂಗವು ದಕ್ಷಿಣ ಕನ್ನಡ ಜಿಲ್ಲಾ ಕುಂದಾಪುರ ತಾಲೂಕು ಬೇಳೂರು ಗ್ರಾಮದ ಬ್ರಹ್ಮಶ್ರೀ ಸಿದ್ಧಾಂತಿ ಶ್ರೀಪತಿ ಕೃಷ್ಣ ಅಡಿಘಟ ಒರಲ್ಲಿ ನೋಡಿರಿ.

THE Bombay Life ASSURANCE CO., LTD.

ಸ್ಥಾಪನೆ] [1908

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:

(1) ರಥಬೀದಿ, **ಮಂಗಳೂರು.**
(2) ಪುತಿಯಾರ, **ಕಲ್ಲಿಕೋಟೆ.**
(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು. (ಫೋನ್ ನಂ. 8215,)
(4) ವಿಶ್ವೇಶ್ವರಪುರಂ, ಸರ್ಕಲ್, **ಬೆಂಗಳೂರು ಸಿಟಿ.** (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, **ಬೊಂಬೈ** (ಫೋ. ನಂ. 26314)

ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು.

(6) ಪಟ್ಟಿಪಾಳಂ, **ದ. ಮಲಬಾರ್.**
(7) ಸೆಂಟ್ರಲ್ ಸ್ಟೇಶನ್ ರೋಡ್, **ತಿರುವಾಂಕೂರು.**

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)

ರಿಜಿಸ್ಟ್ರಿಯಾದ ಆಫೀಸು: **ಉಡುಪಿ.**

ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.

ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	ರೂ.	**1,40,08,725**
ಪ್ರೀಮಿಯಂ ಆದಾಯ ಮಿಕ್ಕಿದುದು	,,	**30,00,000**
ಒಟ್ಟು ಮೂಲ ಮಿಕ್ಕಿದುದು	,,	**1,00,00,000**
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	**50,00,000**

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ **ಅತ್ಯಧಿಕ ಪ್ರತಿಫಲ.**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

ಮ ಹಿ ಳಾ ಲೋ ಕ

ಹಿಂದೂ ವಿಧವೆಯರ ಭಯಂಕರ ಸ್ಥಿತಿ.

(ಲೇಖಕ—ಸುಬ್ರಹ್ಮಣ್ಯಂ, ಉರ್ದು ಸ್ಕೂಲ್, ಹರಿಹರ.)

ಪುರುಷರು ಮರಣಪರ್ಯಂತ ಎಷ್ಟು ಸಾರಿಯೂ ಮದುವೆ ಮಾಡಿಕೊಳ್ಳಬಹುದು. ಅದಕ್ಕೆ ಶಾಸ್ತ್ರಸಮ್ಮತಿಯಿದೆ. ಆದರೆ ಸ್ತ್ರೀಯರು ಬಾಲವಿಧವೆಯರಾದರೂ ಕೊನೆವರೆಗೆ ಬ್ರಹ್ಮಚಾರಿಣಿಯಾಗಿರಬೇಕು! ಇದೀಗ ಅಮಾನುಷತೆಯ ಪರಮಾವಧಿಯಲ್ಲವೇ?

ನಮ್ಮ ಹಿಂದೂ ಸಮಾಜದಲ್ಲಿ ವಿಧವೆಯರ ಸಂಖ್ಯೆಯು ದಿನದಿನಕ್ಕೆ ಹೆಚ್ಚುತ್ತಿದೆ. ಕೇವಲ ಚಿಕ್ಕ ವಯಸ್ಸಿನಲ್ಲಿಯೇ ಯುವಕರು ನಿರ್ಬಲತೆಯಿಂದ ಮೃತ್ಯುವಶರಾಗಿ, ಬಾಲಕಿಯರು ವೈಧವ್ಯವನ್ನು ಅನುಭವಿಸಬೇಕಾಗುತ್ತದೆ ಪಾಪ! ಏನೂ ಅರಿಯದ ಆ ಹೆಣ್ಣುಮಕ್ಕಳು ಪ್ರಪಂಚದ ಸುಖವನ್ನನುಭವಿಸುವ ಮೊದಲೇ ವಿಧವೆಯರಾಗಿ ಸರ್ವ ಸುಖಗಳಿಂದ ವಂಚಿತರಾಗುವರು. ಮನೆಯಲ್ಲಿ ಅವರಿಗೆ ಆದರ ಮರ್ಯಾದೆಗಳಿಲ್ಲ. ಅವರ ಅಸ್ತಿತ್ವಕ್ಕೆ ಬೆಲೆಯಿಲ್ಲ. ಅವರ ಈ ದುಃಖಮಯ ಜೀವನವನ್ನು ದೂರಮಾಡಲು ಯಾರೂ ಸಹಾಯ ಮಾಡಿರುವುದಿಲ್ಲ—ಮಾಡುವಂತೆಯೂ ಕಾಣುವುದಿಲ್ಲ ಶುಭಕಾರ್ಯಗಳಲ್ಲಿ ಅವರ ಇರುವಿಕೆಯು ಅಪಶಕುನವಂತೆ! ಆದರೆ ಅದೇ ವಿಧವೆಯರ ಪವಿತ್ರ ಹಸ್ತಗಳಿಂದಲೇ ಮಾಡಲ್ಪಟ್ಟ ಅಡಿಗೆ ಸಾಮಾಗ್ರಿಗಳು, ದೇವರ ನೈವೇದ್ಯಾದಿ ಶುಭ ಕಾರ್ಯಗಳಲ್ಲಿ ಇಡಲ್ಪಡುತ್ತವೆ. ಸಾಧಾರಣವಾಗಿ ಅಡಿಗೆ ಮನೆಯಲ್ಲಿ ಕೆಲಸ ಮಾಡುವವರ ಪೈಕಿ ವಿಧವೆಯರೇ ಹೆಚ್ಚಿಲ್ಲವೆ? ಈ ರೀತಿಯ ವರ್ತನೆಯಿಂದ ಅವರಿಗೆ ಎಷ್ಟು ಹೃದಯ ವೇದನೆಯಾಗುತ್ತದೆಂಬುದನ್ನು ಊಹಿಸಬಹುದೇ ವಿನಃ ಸರಿಯಾಗಿ ವಿವರಿಸಲಾಗುವುದಿಲ್ಲ.

ಪ್ರಾಚೀನ ಕಾಲದಲ್ಲಿ ಗಂಡಸರ ಆರೋಗ್ಯವು ಉತ್ತಮವಾಗಿದ್ದು ಅವರ ಆಯುಸ್ಸು ಈಗಿನವರಿಗಿಂತ ಹೆಚ್ಚಿರುತ್ತಿತ್ತು. ಈ ಕಾರಣದಿಂದ ಆಗ ವಿಧವೆಯರ ಸಂಖ್ಯೆಯು ಕಡಿಮೆಯಾಗಿತ್ತು. ಒಂದು ವೇಳೆ ಕೆಲವರು ವಿಧವೆಯರಾದರೂ ಅವರು ಸಹಗಮನವನ್ನು ಮಾಡಿಬಿಡುತ್ತಿದ್ದರು ಇದರಿಂದ ಕುಟುಂಬದ ಕಷ್ಟವೂ ಸಹ ಕಡಿಮೆಯಾಗುತ್ತಿತ್ತು. ಈಗಿನ ಕಾಲದಲ್ಲಿ ವಿಧವೆಯರು ಇಲ್ಲದೆ ಇರುವ ಒಂದು ಮನೆಯೂ ಇಲ್ಲವೆಂದರೆ ಉತ್ಪ್ರೇಕ್ಷೆಯಾಗಲಾರದು. ನೋಡುವವರಿಗಂತೂ ವಿಧವೆಯರು ಮರಣ ಪರಿಯಂತವೂ ಬ್ರಹ್ಮಚರ್ಯ ವ್ರತವನ್ನು ಪಾಲಿಸಿಕೊಂಡೇ ಇರುವಂತೆ ತೋರುವುದು. ಆದರೆ ಅವರಲ್ಲಿ ಕೊನೆಯವರೆಗೆ ಎಷ್ಟು ಜನರು ಸಫಲರಾಗಿರುವರೆಂಬುದು ನಿಜವಾಗಿಯೂ ಅನುಮಾನಾಸ್ಪದವಾದ ವಿಚಾರ.

ಪುರುಷರು ಮಾತ್ರ ಮರಣ ಪರ್ಯಂತ ವಿವಾಹವನ್ನು ಮಾಡಿಕೊಳ್ಳುತ್ತಲೇ ಇದ್ದರೂ ಸ್ತ್ರೀಯರು-ಬಾಲ ವಿಧವೆಯರಾದರೂ-ಕೊನೆ ವರೆಗೆ ಬ್ರಹ್ಮಚಾರಿಣಿಯರಾಗಿರಬೇಕೆಂದು ಹೇಳುವುದು ಅಮಾನುಷತೆಯ ಪರಮಾವಧಿಯಲ್ಲವೆ? ಅಂದರೆ ಎಲ್ಲ ವಿಧವೆಯರೂ ಪುನರ್ವಿವಾಹವಾಗಲೇಬೇಕೆಂಬುದು ಈ ಲೇಖನದ ಉದ್ದೇಶವಲ್ಲವಾದರೂ ಬಾಲ ವಿಧವೆಯರೂ ಬ್ರಹ್ಮಚಾರಿಣಿಯರಾಗಿರಬೇಕೆಂದು ವಾದಿಸುವವರು ವೃದ್ಧಾಪ್ಯದಲ್ಲಿ ಸಹ ವಿವಾಹಮಾಡಿಕೊಳ್ಳುತ್ತಲೇ ಇರುವುದು ಎಷ್ಟು ಅನ್ಯಾಯವೆಂಬುದನ್ನು ತೋರಿಸುವುದಾಗಿದೆ. ಪುನರ್ವಿವಾಹನಾಗಬಯಸುವ ಗಂಡಸರು ಬಾಲಕಿಯರೊಡನೆ ಆಗಕೂಡದು. ಮನಃಪೂರ್ವಕವಾಗಿ ವಿಧವೆಯರು ಬ್ರಹ್ಮಚರ್ಯ ವ್ರತವನ್ನು ಪಾಲಿಸುವುದರಲ್ಲಿ ಏನೂ ಅಭ್ಯಂತರವಿಲ್ಲ.

ಮನೆಗಳಲ್ಲಿ ವಿಧವೆಯರಿಗೆ ಸನ್ಮಾನ ಮಾಡುವುದು ನಮ್ಮ ಪ್ರಥಮ ಕರ್ತವ್ಯವಾಗಬೇಕು. ನಾರಿಯರ ಗೋಳಿನ ಕಣ್ಣೀರು ಯಾವ ಮನೆಯಲ್ಲಿ ಹರಿಯುವುದೋ, ಆ ಮನೆಯು ಆ ಜ್ವಾಲೆಯಿಂದ ದಗ್ಧವಾಗುವುದೆಂದು ಶಾಸ್ತ್ರಗಳು ಸಾರುತ್ತಿದ್ದರೂ, ನಮ್ಮ ಸಹೋದರಿಯರ ದುಃಖಜ್ವಾಲೆಗಳು ಇಲ್ಲದಿರುವ ಮನೆಯೇ ಇಲ್ಲ!

ಸ್ತ್ರೀಯು ತನ್ನ ಮೂರು ಅವಸ್ಥೆಗಳಲ್ಲಿಯೂ ತಂದೆ, ಪತಿ, ಪುತ್ರರ ಅಧೀನದಲ್ಲೇ ಇರಬೇಕೆಂಬುದೇನೋ ಸರಿ. ಆದರೆ, ಪುತ್ರರಿಲ್ಲದ ವಿಧವೆಯರ ಪಾಡೇನು? ಅನಾಥ ಬಾಲ ವಿಧವೆಯರ ಗೋಳನ್ನು ಕೇಳುವರಾರು? ಅವರ ಜೀವನ ನಿರ್ವಾಹಕ್ಕೆ ವ್ಯವಸ್ಥೆಯನ್ನು ಮಾಡುವುದು ಅಗತ್ಯವಲ್ಲವೆ? ಕೇವಲ 1–2 ವಿಧವಾಸಂಸ್ಥೆ ಅಥವಾ ವಿಧವಾ ಫಂಡಿನಿಂದ ಈ ಸಮಸ್ಯೆಯು ಬಗೆಹರಿಯುವಂತಿಲ್ಲ.

ನಮ್ಮ ಸನಾತನಿಗಳು ವಿಧವಾವಿವಾಹದ ಸುದ್ದಿಯನ್ನು ಕೇಳಿದ ಕೂಡ್ಲೆ ಉರಿದುಬೀಳುವರು. ಆದರೆ ಆ ನಮ್ಮ ಹತಭಾಗಿನಿಯರ ಮೇಲೆ ಆಗುತ್ತಿರುವ ಅತ್ಯಾಚಾರ, ಅವರು ಮೂಗರಂತೆ ಅನುಭವಿಸುತ್ತಿರುವ ಅವರ್ಣನೀಯ ತೊಂದರೆಗಳು, ಇವುಗಳನ್ನು ದೂರಮಾಡಲು ಮಾತ್ರ ಅವರು ಹಿಂಜರಿಯುವರು. ಅವರೊಡನೆ ಕೇವಲ ಸಹಾನುಭೂತಿಯನ್ನು ತೋರಿಸುವುದರಿಂದ ಅವರಿಗೆ ಯಾವ ಮುಕ್ತಿಯೂ ದೊರೆಯುವಂತಿಲ್ಲ. ಪತ್ನಿಯ ಮರಣಾನಂತರ, ಪುರುಷರು ಪುನರ್ವಿವಾಹವಾಗದೇ ಇದ್ದರೂ, ಅವರ ಮನೋರಂಜನೆಗೆ ಹೇರಳವಾದ ಅವಕಾಶವಿದೆ. ಈ ಕಾರಣದಿಂದ ಅವರ ಕಾಲವು ಸುಲಭವಾಗಿ ಕಳೆಯುವುದು. ಆದರೆ ಪತಿಯ ಮರಣಾನಂತರ ತನ್ನ ಪೋಷಣೆಯ ಭಾರನೇ ಹೆಚ್ಚಾಗಿರುವುದಲ್ಲದೆ, ಮನೆಯಲ್ಲಿ ಪಡಬಾರದ ಕಷ್ಟಗಳನ್ನು ಸಹ ಪಡಬೇಕಾಗುವುದು. ಪತಿವಿಹೀನೆಯ ಭಾವೀ ಜೀವನವು ಅಂಧಕಾರಮಯವೂ, ನಿರಾಶಾಯುತವೂ ಆಗಿರುವುದು. ಮನೆಯಲ್ಲಿ ಏಕಾಂಗಿನಿಯರಾದರೆ ಕೇಳುವವರೇ ಇಲ್ಲ. ಅತ್ತಿಗೆ ನಾದಿನಿಯರಿದ್ದಂತೂ ಅವಳ ಸ್ಥಿತಿಯು ಅತ್ಯಂತ ಶೋಚನೀಯ. ಕಾರಣ ಈಕೆಯು ಮನೆಯ ಗುಲಾಮಳಂತೆ ಭಾವಿಸಲ್ಪಡುವಳು. ಕೆಲ ಸಮಾಜದೇ ಇದ್ದಲ್ಲಿ, ಅವರನ್ನು ಅಪಮಾನಗೊಳಿಸಲಾಗುತ್ತದೆ. ಸಮಾಜದ ಕರ್ಣಧಾರಿಗಳೇ! ತಮ್ಮ ಕಠೋರವಾದ ಎದೆಯ ಮೇಲೆ ಕೈಯಿಟ್ಟು ವಿಚಾರಿಸಿರಿ. ಜನ್ಮಾವಧಿ ಬ್ರಹ್ಮಚಾರಿಣಿಯರಾಗಿರಬೇಕೆಂದು ವಿಧವೆಯರಿಗೆ ಉಪದೇಶಮಾಡುವ ನೀವು ಆ ಅಭಾಗಿನೀ ಸಹೋದರಿಯರ ಆಶ್ರಯದಾತರೆಂಬುವನ್ನೂ ನೆನಪಿನಲ್ಲಿಡಿರಿ.

ಸಮಾಜವನ್ನು ಸರ್ವನಾಶದಿಂದ ರಕ್ಷಿಸಬೇಕಾಗಿದ್ದಲ್ಲಿ ಆ ಹತಭಾಗ್ಯೆಯರ ಸಲುವಾಗಿ ಏನಾದರೊಂದು ಉಪಾಯವನ್ನು ಹುಡುಕಲೇಬೇಕು. ವಿಧವಾವಿವಾಹದ ಪಕ್ಷಪಾತಿಗಳಾದ ಸುಧಾರಕರು ಕೇವಲ ಮಾತಿನ ಸಹಾನುಭೂತಿಯನ್ನು ತೋರಿಸಿದರೆ ಸಾಲದು. ಅವರ ಮನೆಗಳಲ್ಲೇ ಬಾಲ ವಿಧವೆಯರಿದ್ದರೂ, ಅವರಿಗೆ ಪುನರ್ವಿವಾಹ ಮಾಡುವ ಸಾಹಸವು ಮಾತ್ರ ಅವರಿಗಿರುವುದಿಲ್ಲ.

ಸ್ತ್ರೀಯರನ್ನು ಮರ್ಯಾದೆಯಿಂದ ಕಾಣಬೇಕೆಂದು ಅಲಂಕಾರಿಕ ಭಾಷೆಗಳಲ್ಲಿ ಹೇಳಿರುವುದು ಕೇವಲ ಪುಸ್ತಕದ ಬದನೆಕಾಯಿ ಮಾತ್ರವೇ ಆಗಿದೆ. ಇಲ್ಲದಿದ್ದರೆ ಅಸಂಖ್ಯಾತ ವಿಧವೆಯರು ನಮ್ಮ ಎದುರಿಗೇ ಪ್ರತ್ಯಕ್ಷ ನರಕವನ್ನು ನಿಜವಾಗಿಯೂ ಅನುಭವಿಸುತ್ತಿರಲಿಲ್ಲ.

ನಮ್ಮ ಮದ್ರಾಸಿನ ಏಜಂಟರು—

ಶ್ರೀ. ವಿ. ಲಕ್ಷ್ಮಣರಾವ್,
ಚೈನಾ ಬಜಾರ್, ಮದರಾಸು.

Established] [1906

THE
UNITED INDIA
LIFE ASSURANCE COMPANY, LTD.
HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	**Rs. 486 Lakhs**
Annual income Exceeds	**Rs. 28 Lakhs**
Total Assets Exceed	**Rs. 190 Lakhs**
Total claims paid over	**Rs. 36 Lakhs.**

The oldest and largest Life Assurance Company of South India, having 31 years of record service

A POLICY IN THE UNITED INDIA *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to:—

THE BRANCH MANAGER,
The United India,
Life Assurance Company Ltd.
BLOCK No. 2, Felix Pai Bazaar,
BRANCH, MANGALORE, S. K.

OR

K. Keshava Shenoy, M. A.
Organiser, Shantiniketan,
PENTLANDPET,
MANGALORE.

ಮೋಹದ್ವಂಸಿನಿ (REGD)



ಗುಪ್ತ ವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ಸೋವನ್ನು ಕೊಡುವ ಶಸ್ತ್ರ ಚಿಕಿತ್ಸೆ ಅನಾವಶ್ಯಕ. ಶರೀರವನ್ನು ಕೃಶಿಸಿ ಮಾನವನ ಜೀವ ಪ್ರವಾಹವನ್ನು ಹೀರುತ್ತಿರುವ ಬಿಳುಪು, ಕೆಂಪು, ಪರಂಗಿ ಹುಣ್ಣು, ವೀಳ್ಯಗತ್ತೆ, ವೀಷ ಜ್ವರ, ಚರ್ಮವ್ಯಾಧಿ, ಕೀಲುಗಳನೋವು ಅತಿಮೂತ್ರ ವಗೈರೆ ಜಾಡ್ಯಗಳನ್ನು 'ಮೇಹದ್ವಂಸಿನಿ'ಯು ಶೀಘ್ರವಾಗಿ ಹಿಂಡಿಸಿ, ರಕ್ತ ಶುದ್ಧಿ ಮಾಡಿ ನರಗಳಿಗೆ ಬಲವನ್ನೀಯುವುದು ಸೇವಿಸುವವರಿಕ್ಕೆ ಹಿತಕರ. ಪ್ರತಿಯೊಂದು ಸೊತ್ತಿನ ವಿಷಯದಲ್ಲಿಯೂ ಅದ್ಭುತ ಗುಣ.

ದೊಡ್ಡ ಸೈಜು 4-0-0, ಮೀಡಿಯಂ ಸೈಜು 2-4-0, ಚಿಕ್ಕ ಸೈಜು 1-2-0.

ಹಂಚಿಕೊಡುವ ಪ್ರಮುಖರು—ಬಾಸೆಲ್ ಮಿಶ್ಯನ್ ಪ್ರೆಸ್, ಮಂಗಳೂರು.

ಸಬ್ ಏಜಂಟರು—ಉಡುಪಿ ಮಿಶ್ಯನ್ ಟೋರ್, ಸಂತೆಕಟ್ಟೆ, ಉಡುಪಿ.

ವಿ. ವಿ. ಶೆಟ್ಟಿ, ಕಾರ್ಕಳ. ಭಟ್ತ ಬ್ರದರ್ಸ್, ಕಾಸರಗೋಡು

ನಿವಿಷ್ಟ ಭಾರತೀಯ ವೈದ್ಯಸಂಘ

Registered Indian Medical Practitioners' Association.

ತಾ. 25-9-1938ರಲ್ಲಿ ನಡೆದ ನಿವಿಷ್ಟ ವೈದ್ಯರ ಸಭೆಯಲ್ಲಿ ಆದ ನಿರ್ಣಯದಂತೆ ನಿವಿಷ್ಟ ಭಾರತೀಯ ವೈದ್ಯ ಸಂಘವು ನಿಯಮದಂತೆ ನಿವೇಶಿಸಲ್ಪಟ್ಟಿತು.

ಬಹುಜನರ ಏಳಿಗೆಗೆ ಆವಶ್ಯವೆಂದು ಕಂಡು ಬರುವ ಉದ್ದೇಶಗಳನ್ನು ಸಾಧಿಸಲಿಕ್ಕೆ ಪ್ರಯತ್ನಿಸುವ ಅನೇಕ ವ್ಯಕ್ತಿಗಳ ಕೂಟವು ಸಂಘವಾಗಿರುತ್ತದೆ. ಉದ್ದೇಶದ ಪ್ರಾಪ್ತಿಯು ಸಂಘಕ್ಕೆ ಸಂಬಂಧಿಸಿರುವ ಸದಸ್ಯರುಗಳ ಗುಣಧರ್ಮಗಳನ್ನು ಅನುಸರಿಸಿರುವದು. ಸಂಘಕ್ಕೊಂದು ವಿಧದ ಅಸಾಧಾರಣ ಭದ್ರತೆಯು ಬೇಕಾಗುವದು. ಈ ಭದ್ರತೆಗಾಗಿ ಇದು ನಿವೇಶಿಸಲ್ಪಡುವುದು: ಭದ್ರತೆಗಾಗಿಯೇ ನಿವಿಷ್ಟ ಭಾರತೀಯ ವೈದ್ಯ ಸಂಘವು ಸಂಘದ ನಿಯಮವನ್ನು ಅನುಸರಿಸಿ ನಿವೇಶಿಸಲ್ಪಟ್ಟಿದೆ.

(REGISTERED)

ವೈದ್ಯಮಹಾಶಯರೇ, ಉಚಿತವಾದ ಒಂದು ಸಂಘದ ಕೊರತೆಯಿಂದ ನಮ್ಮ ವೈದ್ಯರೊಳಗೆ ಅನೇಕ ಕುಂದುಕೊರತೆಗಳಿರಬಹುದೆಂಬುದನ್ನು ನೀವು ನಿರಾಕರಿಸಲಾರಿರಿ. ಅಲ್ಲವೇ, ನೋಡಿರಿ. ಮೊದಲಾಗಿ ಕನ್ನಡ ಜಿಲ್ಲೆಯಲ್ಲಿಯೇ ಒಂದೇ ವಿಧದ ವೈದ್ಯ ಪದ್ಧತಿಯನ್ನು ನಡಿಸಿಕೊಂಡು ಬರುವ ನಮ್ಮ ವೈದ್ಯರೊಳಗೇನೇ ಅನ್ಯೋನ್ಯ ಪರಿಚಯವಿಲ್ಲ. ನಿಜವಾಗಿಯೂ ಅನೇಕ ವೈದ್ಯರು ಪ್ರಮೇಹ, ಒಟೀಕಾ (ಭಗಂದರ) ಮೂತ್ರಕೃಚ್ಛ್ರ, ಗ್ರಹಿಣೀ, ಪಕ್ಷವಧ, ಬಾಣಂತಿಯ ನಂಜಿನಜ್ವರ, ವಿದ್ರಧಿ. ರಕ್ತಾತಿಸಾರ, ಪ್ರದರ, ಸನ್ನಿಪಾತ ಜ್ವರ, ರಾಜಯಕ್ಷ್ಮ, ಬಾಲಗ್ರಹ, ಅಪಸ್ಮಾರ, ಜಂಗಮ ಮತ್ತು ಸ್ಥಾವರ ವಿಷ ಉನ್ಮಾದ ಮೊದಲಾದ ಪುರಾಣ ಮಹಾವ್ಯಾಧಿಗಳಲ್ಲಿ ಕೆಲಕೆಲವು ವ್ಯಾಧಿಗಳಿಗೆ ಕೆಲವು ಕೆಲವು ವೈದ್ಯರು ಅಪ್ರತಿಮವಾದ ಚಿಕಿತ್ಸೆಯನ್ನು ಬಲ್ಲರು. ಆದರೆ ಆ ವಿಷಯವನ್ನು ಎಲ್ಲಾ ವೈದ್ಯರು ಅನ್ಯೋನ್ಯದಿಂದ ತಿಳಿಯರು ಈ ಸಂದರ್ಭದಲ್ಲಿ ಅನ್ಯೋನ್ಯವಾಗಿ ತಿಳುವಳಿಕೆಯ ಬದಲಾವಣೆ ಉಂಟಾಗಿದ್ದಲ್ಲಿ ರೋಗಿಗಳಿಗೆ ಎಷ್ಟು ಪ್ರಯೋಜನವಾಗುತ್ತಿತ್ತು. ಮತ್ತು ನಮ್ಮ ಭಾರತೀಯ ವೈದ್ಯಕ್ಕೆ ಎಷ್ಟು ಗೌರವವಿತ್ತು? ಇದೇ ರೀತಿ ಭಿನ್ನ ಭಿನ್ನ ವೈದ್ಯರಲ್ಲಿ ಎಷ್ಟೋ ಗುಪ್ತ ಗ್ರಂಥಗಳಿವೆ. ಒಬ್ಬರಲ್ಲಿದ್ದವನ್ನು ಇನ್ನೊಬ್ಬರು ತಿಳಿಯದೆ ಅವರವರ ಬಳಿಕ ಹಿಂದೆಯೇ ಅಮೂಲ್ಯಗಳಾದ ಅಂಥಾ ಗ್ರಂಥಗಳು ಮಾಯವಾಗುತ್ತವೆ. ಸಾರ್ವಜನಿಕ ದೃಷ್ಟಿಯಿಂದ ನಮ್ಮ ಭಾರತೀಯ ವೈದ್ಯ ಸರ್ವಸ್ವಕ್ಕೆ ಮಾತ್ರವಲ್ಲ, ಇಡೀ ಜನಾಂಗಕ್ಕೇನೇ ಎಷ್ಟರ ಮಟ್ಟಿನ ಹಾನಿಇದೆ. ಇನ್ನೊಬ್ಬ ವೈದ್ಯರಿರುವ ಆಸುಪಾಸಿನಲ್ಲಿ ಎಷ್ಟೋ ದಿವ್ಯವಾದ ವನೌಷಧಿಗಳಿರಬಹುದು ಅವುಗಳೇ ಇನ್ನೊಬ್ಬ ವೈದ್ಯನ ಆಸುಪಾಸಿನಲ್ಲಿ ಇಂದೆ ಇರಬಹುದು. ಆದರೆ ಮತ್ತೊಬ್ಬರಲ್ಲಿರುವ ದಿವ್ಯೌಷಧಿಗಳು ಬೇರೊಬ್ಬ ವೈದ್ಯರ ಆಸುಪಾಸಿನಲ್ಲಿರಬಹುದು ಅನ್ಯೋನ್ಯ ಪರಿಚಯ ಮತ್ತು ಅಭಿಮಾನಗಳಿಲ್ಲದಿರುವುದರಿಂದ ಈ ಎಲ್ಲಾ ವೈದ್ಯರು ಅಪೇಕ್ಷಿತವಾದ ವನೌಷಧಿಗಳಿಲ್ಲದ ಕಾರಣ, ಕೈಕೊಂಡ ವ್ಯಾಧಿಗೆ ಸಮುಚಿತವಾದ ಯೋಗಗಳನ್ನು ಮಾಡದಿರಬಹುದು, ಅಥವಾ ಯೋಗಕ್ಕೆ ಪ್ರಧಾನವಾಗಿರುವ ಅಂಥಾ ಔಷಧಿಯನ್ನು ಬಿಟ್ಟೇ ಯೋಗವನ್ನು ಮಾಡಬಹುದು. ಆದರಿಂದ ಎಷ್ಟೋ ಸಲ ರೋಗಿಗಳಿಗೆ ಫಲಪ್ರಾಪ್ತಿಯು ಇಲ್ಲದೇ ಹೋಗಬಹುದು. ಈ ರೀತಿಯು ನಮ್ಮ ಸ್ವಭಾವದಿಂದಲೇ ಕಾಕೋಲೀ, ಕ್ಷೀರಕಾಕೋಲೀ, ಮೇಧಾ, ಮಹಾ ಮೇದಾ ಮೊದಲಾದ ಜೀವನೌಷಧಗಳೂ ಆದಿತ್ಯಪರ್ಣೀ, ನಾಡೀ, ಅಜಾ, ಕಾಷ್ಠಗೋಧಾ [?], ಸೋಮ, ಪದ್ಮಾ, ಮೊದಲಾದ ರಸಾಯನೌಷಧಿಗಳೂ, ಸಂಜೀವ ಕರಣೀ, ವಿಶಲ್ಯಕರಣೀ, ಸಂಧಾನಕರಣೀ, ಸವರ್ಣಕರಣೀ ಮೊದಲಾದ ಆಗಂತುಕ ವ್ರಣಹರಣ ದಿವ್ಯೌಷಧಿಗಳೂ, ಇನ್ನೂ ಲೋಹಾದಿಗಳನ್ನು ಸುವರ್ಣ ಮಾಡುವ, ಆಕಾಶದಲ್ಲಿ ಸಂಚರಿಸುವ ರಸಯೋಗಗಳೂ ಆಗಲೇ ನಮ್ಮ ಕೈಬಿಟ್ಟು ಬಹಳ ದೂರ ಓಡಿದವು. ಆಯುರ್ವೇದದ ಶಲ್ಯಕರ್ಮ, ಶಾಲಾಕ್ಯಕರ್ಮ, ಕೌಮಾರಭೃತ್ಯ ಮೊದಲಾದವುಗಳೂ ನಮಗೆ ಅಪೂರ್ವ ಗ್ರೀಕ್ ಆಗಿವೆ. ಇನ್ನು ನೋಡಿ, ಕಾಲದ ಕುಟಿಲವಾದ ಗತಿಯಿಂದ ದಿನೇ ದಿನೇ ಭಾರತೀಯ ವೈದ್ಯವು ಕ್ಷೀಣಗತಿಗೆ ಬಂತು. ಪ್ರಕೃತ ಆ ಭಾರತೀಯ ವೈದ್ಯವೆಂಬರೆ ರೋಗಗಳನ್ನು ಅದರ ಕಾರಣವನ್ನು ಅದರ ಪರಿಣಾಮವನ್ನು ಅದರ ಉಚಿತ ಚಿಕಿತ್ಸೆಯನ್ನು ಅದರಂತೆಯೇ ಔಷಧಿ ವನಸ್ಪತಿಗಳ ತತ್ತ್ವ ಎಲ್ಲವನ್ನು ತಿಳಕೊಳ್ಳದೆ ವೈದ್ಯನು ತನ್ನ ಎದೆಯಲ್ಲಿ ನಿಬಿಡವಾದ ಕತ್ತಲೆಯನ್ನು ಇಟ್ಟುಕೊಂಡು, ಪಾಪ ಮುಗ್ಧರೋಗಿಗಳನ್ನು ಪಾತಾಳಕ್ಕೆ ಇಳಿಸುವನೆಂಬ ಅಭಿಪ್ರಾಯವು ವಿದ್ವಾಂಸತೆಯಲ್ಲಿ ಅಂಕುರಿಸುತ್ತಿದೆ; ವಿವಿಧಗಳಾದ ವೈದೇಶಿಕ ಚಿಕಿತ್ಸೆಗಳು ಬಹು ಚಮತ್ಕಾರಗಳಾದ ಅತ್ಯದ್ಭುತ ಸಾಧನಗಳಿಂದ ಭಾರತೀಯ ಜನತೆಯನ್ನು ಭ್ರಾಂತಿಗೊಳಿಸುತ್ತಿವೆ. ಈ ವೈದೇಶಿಕ ಅಥವಾ ಅಭಿನವ ಚಿಕಿತ್ಸಾಪದ್ಧತಿಯು ಸ್ವಬಲದಿಂದಲೂ ಪಾಶ್ಚಾತ್ಯ ಪ್ರಭುತ್ವದ ಪ್ರೋತ್ಸಾಹದಿಂದಲೂ ಕ್ಷಣೇ ಕ್ಷಣೇ ಭಾರತ ಭೂಮಿಯನ್ನು ಆಕ್ರಮಿಸುತ್ತಿದೆ. ಈ ರೀತಿಯ ಆಕ್ರಮಣವು ವಿವಿಧಗಳಾದ ಪ್ರಬಲ ರೋಗಗಳನ್ನು ಹೋಗಲಾಡಿಸಿ ಜನತೆಯ ಆರೋಗ್ಯವನ್ನು ಉಂಟುಮಾಡುವ ದೃಷ್ಟಿಯಿಂದ ಹಿತವೆಂತೆ ಕಂಡರೂ ಸಾಧಾರಣವಾಗಿ ಜನತೆಯಲ್ಲಿ ದಾರಿದ್ರ್ಯವನ್ನು ಉಂಟುಮಾಡುವ ದೃಷ್ಟಿಯಿಂದ ಜನಾಂಗಕ್ಕೆ ಕ್ರಮೇಣ ಬಾಧೆಯುಂಟಾಗಬಹುದು. ಅಭಿನವ ಚಿಕಿತ್ಸೆಯಲ್ಲಿ ದ್ವೇಷವಾಗಲೀ ಅಸೂಯೆಯಾಗಲೀ ನಮಗೆ ಸರ್ವಥಾ ಇಲ್ಲ. ಆದರೆ ಹೊಸ ಧಾಟಿಯಿಂದ ಹಳೇ ಕಾಲಗಳನ್ನು ಕಳಕೊಳ್ಳಬಾರದೆಂಬುದೇ ನಮ್ಮ ನೀತಿ. ನಮ್ಮ ಜಿಲ್ಲೆಯ ವೈದ್ಯರೊಳಗೆ ಅನ್ಯೋನ್ಯ ಭಾವನೆಯು ಹೀನವಾಗಿರುವದರಿಂದ ಸಮುತ್ಕರ್ಷದ ಭಾರತೀಯ ಚಿಕಿತ್ಸೆಯ ವೃದ್ಧಿ ಮತ್ತು ಕ್ಷಯವನ್ನು ತಿಳಕೊಳ್ಳಲಿಕ್ಕೆ ನಮಗೆ ಸಂದರ್ಭ ದೊರಕುವದಿಲ್ಲ. ಆದ್ದರಿಂದಲೇ ಉತ್ತರ ಹಿಂದೂಸ್ಥಾನ, ವಾಯುವ್ಯ ಪ್ರಾಂತ್ಯ, ಮಧ್ಯ ಹಿಂದೂಸ್ಥಾನ, ಬಂಗಾಲ, ಪಂಜಾಬು, ಗುಜರಾತ, ಮಹಾರಾಷ್ಟ್ರ, ಆಂಧ್ರ, ದ್ರಾವಿಡ, ಕೇರಳ ಮೊದಲಾದ ಪ್ರದೇಶಗಳಲ್ಲಿ ಭಾರತೀಯ ವೈದ್ಯವನ್ನು ಮುಂದೊತ್ತುವದಕ್ಕೆ ಏನೆಲ್ಲಾ ವಿಧಾನಗಳನ್ನು ಮಾಡುತ್ತಾರೆಂದು ನಾವರಿಯೆವು. ಅಲ್ಲದೆ ಕೊಂಗ್ರೆಸ್ ಗವರ್ನ್‌ಮೆಂಟ್ ಬಂದ ಮೇಲೆ ನಮ್ಮದೇ ಆಡಳಿತೆ— ನಾವು ಸುಖವಾಗಿದ್ದೇವೆಂದು ನಂಬಿಕೊಂಡು ನೆಮ್ಮದಿಯಿಂದಿರುವ ಕಾಲದಲ್ಲಿ ನಮ್ಮವರೇ ಕೆಲವು ಪ್ರಾಂತ್ಯಗಳಲ್ಲಿ ನಮ್ಮ ಭಾರತೀಯ ಚಿಕಿತ್ಸೆಯನ್ನು ಭಾರತ ಭೂಮಿಯಿಂದ ಹೊರಗೆ ಓಡಿಸಲಿಕ್ಕೆ ಯಾವ ವಿಧವಾದ ಉಪಾಯಗಳನ್ನು ಮಾಡುತ್ತಾರೆಂಬುದನ್ನು ಪಾಪ, ಅಜ್ಞಾನಿಗಳಾದ ನಾವರಿಯೆವು.

ಅನಂತ ಶಯನ, ಮೈಸೂರು, ಬರೋಡ, ಹೈದರಾಬಾದ್, ಡಿಲ್ಲಿ, ಲಾಹೋರ್, ಕಾಶೀ, ಬೊಂಬಾಯಿ ಮೊದಲಾದ ಕಡೆಗಳಲ್ಲಿ ಆಯುರ್ವೇದದ ಅಭಿವೃದ್ಧಿಯ ವಿಷಯವಾಗಿ ಏನು ಮಾಡುತ್ತಾರೆಂಬುದನ್ನು ತಿಳಕೊಳ್ಳಲಿಕ್ಕೆ ನಮ್ಮ ಪ್ರಯತ್ನಗಳಿಲ್ಲ. ಈ ವಿಧದ ಭಾರತೀಯ ಚಿಕಿತ್ಸೆಗೆ ಸಂಬಂಧಪಟ್ಟ ವೃದ್ಧಿ ಮತ್ತು ಕ್ಷಯದ ಅವಸ್ಥೆಗಳನ್ನು ಅರಿತುಕೊಂಡು ಅದಕ್ಕೆ ತಕ್ಕುದಾದ ಪ್ರತೀಕಾರವನ್ನು ಮಾಡುವದು ಪರಮ ಪುರುಷಾರ್ಥದಲ್ಲಿ ಮುಖ್ಯವಾದ ಒಂದು ವಿಷಯವಾಗಿದೆ. ಈ ಕಾರಣಗಳಿಂದ ಸರ್ವ ವೈದ್ಯಮಹಾಶಯರಲ್ಲಿ ನಿವಿಷ್ಟ ಭಾರತೀಯ ವೈದ್ಯ ಸಂಘದ ವಿನಂತಿ ಏನೆಂದರೆ, ಲಂಕೆಯಿಂದ ಹಿಮಾಲಯ ಮತ್ತು ಪೂರ್ವ ಪಶ್ಚಿಮ ಸಮುದ್ರಗಳ ಮಧ್ಯದಲ್ಲಿರುವ ನಿಖಿಲ ಭಾರತಕ್ಕೆ ಸಂಬಂಧಿಸಿರುವ ಆಯುರ್ವೇದ ಮಹಾ ಮಂಡಲದ ಮತ್ತು ಕರ್ನಾಟಕಕ್ಕೆ ಸಂಬಂಧಿಸಿರುವ ಅಖಿಲ ಕರ್ನಾಟಕ ಆಯುರ್ವೇದ ಮಂಡಲದ ಸಂಬಂಧವನ್ನಿಟ್ಟುಕೊಂಡು ನಮ್ಮ ದೇಶದ ಹಿತದ ದೃಷ್ಟಿಯಿಂದ ನಮ್ಮ ಸರ್ಕಾರ ಚಿಕಿತ್ಸೆಯನ್ನು ಕಾಪಾಡಲಿಕ್ಕೆ ಏನು ಮಾಡುತ್ತಾರೆ? ನಾವು ಏನು ಮಾಡಬೇಕು? ಮದ್ರಾಸ್ ಸರಕಾರದವರು ಶ್ರೀ. ರಾಜಾ ಪೆನಗಲ್ ಮಹಾಶಯರ ಕಾಲದಲ್ಲಿ ಸ್ಥಾಪಿಸಿದ ಭಾರತೀಯ ವೈದ್ಯ ಶಾಲೆ, ಕಾಶಿಯಲ್ಲಿ ಹಿಂದೂ ಯೂನಿವರ್ಸಿಟಿಯವರು ಸ್ಥಾಪಿಸಿದ ಭಾರತೀಯ ವೈದ್ಯಶಾಲಾ, ಡಿಲ್ಲಿಯಲ್ಲಿ ಹಕೀಮ್ ಅಲ್ ಮುಲ್ಕ್ ಅಜಮಲ್ ಖಾನರಿಂದ ಟಿಬ್ಬಿ ಆಯುರ್ವೇದಿಕ್ ಕಾಲೇಜು ಮತ್ತು ಕಲ್ಕತ್ತೆಯ ಭಾರತೀಯ ಅಷ್ಟಾಂಗ ವೈದ್ಯ ಶಾಲಾ ಇವುಗಳಲ್ಲದೆ ಇನ್ನೂ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸ್ಥಾಪಿಸಿರುವ ಅನೇಕ ಬೇರೆ ಬೇರೆ ವೈದ್ಯಶಾಲೆಗಳ ವಿಷಯಗಳನ್ನು ತಿಳಕೊಳ್ಳಲಿಕ್ಕೂ ಭಾರತೀಯ ವೈದ್ಯ ಮತ್ತು ವೈದ್ಯಕದ ಕಡೆ ರಾಷ್ಟ್ರ ಸರಕಾರದವರ ಧೋರಣೆಯು ಯಾವ ರೀತಿಯಲ್ಲಿದೆ? ದೇಶೀಯ ವೈದ್ಯಕವನ್ನು ಯಾವ ರೀತಿಯಲ್ಲಿ ಉದ್ಧರಿಸಿಕೊಳ್ಳುವುದು? ಕಳಕೊಂಡ ದೇಶೀಯ ವೈದ್ಯಜ್ಞಾನವನ್ನು ಹೇಗೆ ತಿರುಗಿ ಸಂಪಾದಿಸಿಕೊಳ್ಳುವುದು? ಎಂಬುದೇ ಮೊದಲಾದ ವಿಷಯಗಳನ್ನು ತಿಳಕೊಳ್ಳಲಿಕ್ಕೆ ನಿವಿಷ್ಟ ಭಾರತೀಯ ಸಂಘದಂಥಾ ಸಂಸ್ಥೆಯಲ್ಲದೆ ಬೇರೊಂದಿಲ್ಲವೆಂದು ನಿಶ್ಚಯ. ಈ ಕಾರಣದಿಂದ ವೈದ್ಯ ಮಹಾಶಯರೇ! ನೀವೆಲ್ಲಾ ಇದರ ಸದಸ್ಯರಾಗಿ ಭಾರತೀಯ ವೈದ್ಯದ ಕಾರಣವನ್ನು ಒಲಿಸಿರಿ. ಭಾರತೀಯ ವೈದ್ಯಕವನ್ನು ನಮ್ಮ ಜನಾಂಗದ ಸ್ವಾಸ್ಥ್ಯ ಸಂರಕ್ಷಣೆ ಮಾಡುವುದರಲ್ಲಿಯೂ ಅಸ್ವಾಸ್ಥ್ಯವನ್ನು ಹೋಗಲಾಡಿಸುವದರಲ್ಲಿಯೂ ಜನತೆಗೆ ಪ್ರತ್ಯಕ್ಷವಾಗುವಷ್ಟು ಅಭಿವೃದ್ಧಿಗೆ ತರುವದೂ, ನಮ್ಮ ನಮ್ಮೊಳಗೆ ಪರಮ ಮೈತ್ರ್ಯವನ್ನು ಸಂಪಾದಿಸಿಕೊಂಡು ಲೋಕಕ್ಕೆ ಹಿತವನ್ನು ಮಾಡುವುದೂ ಮೊದಲಾದ ಭಾವದಿಂದ, ಕರ್ಮಗಳಿಂದ ನಮ್ಮ ಪೂರ್ವ ಋಷಿಗಳ ಮನೋರಥವನ್ನು ಆದಷ್ಟು ಮಟ್ಟಿಗೆ ಸಾಧಿಸುವ ಯತ್ನವನ್ನು ಮಾಡುವುದೂ ನಮ್ಮ ಕರ್ತವ್ಯವಾಗಿದೆ. ಸಂಘದ ಹೆಚ್ಚಿನ ಉದ್ದೇಶಗಳೂ ನಿಬಂಧನೆಗಳೂ ಮತ್ತು ನಿಯಮಗಳೂ ಸಂಘದ ಸದಸ್ಯರಾದ ನಂತರ ಸಂಪೂರ್ಣ ತಿಳಿಯಲ್ಪಡುವವು. ಹೆಚ್ಚಿನ ಮಾಹಿತ್ಯಕ್ಕೆ ಸಂಘದ ಕಾರ್ಯದರ್ಶಿಗಳಿಗೆ ಬರೆಯಿರಿ

ಯಮ್. ವಿ ಶಾಸ್ತ್ರೀ,
ಅಧ್ಯಕ್ಷ,
ದ. ಕ. ಜಿಲ್ಲಾ ರಿಜಿಸ್ಟರ್ಡ್ ಇಂಡಿಯನ್ ಮೆಡಿಕಲ್ ಪ್ರಾಕ್ಟಿಶನರ್ಸ್ ಸಂಘ,
ಜೆಪ್ಪು, ಮಂಗಳೂರು.

ತಾ. 15-11-38

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ
"ಗೊನೊಕಿಲರ್" ರಿಜಿಸ್ಟರ್ಡ್
ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯುವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer Dr. D. N. JASANI, Vitalbhai Patel Road, BOMBAY 4

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲ್ಲರ್' ಹೆಸರನ್ನೂ ಗಮನಿಸಿರಿ

ಸುಂದರವಾದ ಸಾಜೂಕಾದ
ಪಾಕೆಟ್
ಡೈರಿಗಳು
(ಪೆನ್ಸಿಲು ಸಹಿತ)
ಕ್ರಯ 0—8—0 ಮಾತ್ರ
ಅಂಚೆ ವೆಚ್ಚ ಪ್ರತ್ಯೇಕ
ವ್ಯಾ. ಧಾ. ಕಮಿಶನ್ ಕೊಡಲಾಗುತ್ತೆ.
ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ಸಿಗುತ್ತವೆ.
ಬರೆಯಿರಿ:—
The Kanara Books & News Agency.
Batatawala Mansion, Lalbag,
Bombay 12.

ವಾರ್ತಾವಾಹಿನಿ

ಹಿಂದೂ ರಾಜಕುಮಾರ ಸಂಘ (ಛೇಂಬರ್ ಆಫ್ ಪ್ರಿನ್ಸೆಸ್) ಇದರ ಪುನರ್ವ್ಯವಸ್ಥೆಗಾಗಿ ಮಹಾಸಭೆ ಬೊಂಬಾಯಿಯಲ್ಲಿ

ಈ ಸಂಘದ ಪುನರ್ವ್ಯವಸ್ಥೆಯ ನಿಯಮಾವಳಿಗನುಸಾರವಾಗಿ ಸ್ಥಾಪಿತವಾಗುವ ಸ್ಥಾಯೀ ಮಂಡಳ (ಸ್ಟೇಂಡಿಂಗ್ ಕಮಿಟಿ) ದಲ್ಲಿ ಆಯಾ ಸಂಸ್ಥಾನಕ್ಕೆ ರಕ್ಷಕ್ಕಸ್ಟು ಪ್ರಾತಿನಿಧ್ಯದ ಸಂಖ್ಯೆಗಳ ಕುರಿತು ತುಂಬ ಚರ್ಚೆ ನಡೆದಿರುತ್ತದೆ. 21 ತೋಪಿನ ಬಹುಮಾನದ ಗೊಂಡೆಯಿರುವ ಸಂಸ್ಥಾನಕ್ಕೆಷ್ಟು ಸ್ಥಾನ (ಸೀಟ್ಸ್) 19-17 ತೋಪಿನವರಿಗೆಷ್ಟು? 15-13-11 ರವರಿಗೆಷ್ಟು? ಇವಕ್ಕಿಂತ ಕಡಿಮೆಯುವರಿಗೆಷ್ಟು? ಈ ಪ್ರಶ್ನೆಯ ನಿರ್ಧಾರವು ಮಹಾಸಭೆಯಲ್ಲಿ ಎಷ್ಟು ಚರ್ಚೆ ನಡೆದರೂ ಕೊನೆಮುಟ್ಟದ್ದರಿಂದ ಇದರ ಇತ್ಯರ್ಥಕ್ಕೆ ಒಂದು ಉಪಸಮಿತಿ (ಸಬ್ ಕಮಿಟಿ) ಯನ್ನು ನಿರ್ಮಿಸಲಾಗಿದೆ. ಕ್ಷಿಪ್ರದಲ್ಲೇ ಕೊಡಬೇಕಾದ ಅದರ ತೀರ್ಮಾನವನ್ನು ಮಹಾಸಭೆಯು ನಿರೀಕ್ಷಿಸುತ್ತಲಿದೆ

ಕಾನ್ಪುರದಲ್ಲಿ ತಿರುಗಿ ಗಿರಣಿಯಾಳುಗಳ ಮುಷ್ಕರ

ಬೇವೀಸ್ ಕಂಪೆನಿಯ 600 ಕೆಲಸಗಾರರು ತಮ್ಮಲ್ಲೊಬ್ಬನನ್ನು ಅವಿಧೇಯತೆ ತಪ್ಪಿನ ನೆವನದಿಂದ ತಾತ್ಕಾಲಿಕವಾಗಿ ಸಸ್ಪೆಂಡ್ ಮಾಡಿದುದಕ್ಕಾಗಿ ಮುಷ್ಕರ ಹಿಡಿದಿರುವರು. ಅದು ಪ್ರಬಲವಾಗುತ್ತ ಈಗ 1500 ಮಂದಿಯ ಮುಷ್ಕರವಾಗಿದೆ. ಕಳೆದ ಜುಲೈಯಲ್ಲಿ ನಡೆದ ಮುಷ್ಕರದ ರಾಜಿಯ ನಂತರ ಇದೇ ಮೊದಲನೆಯ ಸಲದ ಸಂಪಿನ ರೋಗ ಅಲ್ಲಿ ತಲೆದೋರಿದುದು.

50 ತಾಸುಗಳಲ್ಲಿ. ಜರ್ಮನ್ ವಾಯು ವಿಮಾನದ ಪ್ರಯತ್ನ.

"ಕೊಂಡೋರ್" ಎಂಬ ಜರ್ಮನ್ ವಾಯುವಿಮಾನವು ಬರ್ಲಿನಿನಿಂದ ಹೊರಟು ಟೋಕಿಯೋಕ್ಕೆ 9,000 ಮೈಲುಗಳ ಪ್ರಯಾಣವನ್ನು 50 ತಾಸುಗಳೊಳಗೆ ಮುಗಿಸಬೇಕೆಂದು ಹೊರಟಿರುವುದು ಅದು ತಾಸಿಗೆ ಸುಮಾರು 200 ಮೈಲುಗಳ ವೇಗದಲ್ಲಿ ಬರ್ಲಿನ್, ಬಾಸ್ರಾ, ಕರಾಚಿ, ಅಲ್ಲಾಬಾದ್, ಕಲ್ಕತ್ತಾಗಳ ಮೇಲಿನಲ್ಲಿ ಹಾರುತ್ತ ಹೋಗಿಯದೆ.

ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನಗಳು ಒಂದಾಗಿಯಾವೇ? ಗಾಂಧಿಜಿಗಳಿಗೊಂದು ಪ್ರಶ್ನೆ.

ದಕ್ಷಿಣ ಹಿಂದೂಸ್ಥಾನದ ದೊಡ್ಡ ಅಧಿಕಾರಿಯೊಬ್ಬರು ಪೇಷಾವರದಲ್ಲಿ ಗಾಂಧೀಜಿಗಳನ್ನು ಸಂದರ್ಶಿಸಿ ಈ ಪ್ರಶ್ನೆಯನ್ನು ಕೇಳಿದರು. ದಕ್ಷಿಣದಿಂದ ಉತ್ತರಕ್ಕೆ ನಾನು ಪ್ರಯಾಣಬೆಳೆಸಿದಾಗ ನನಗೇನೋ ತೀರ ನವೀನ ಮಾನವಕೋಟಿಯನ್ನು ಕಂಡಂತಾಗಿದೆ ಇಲ್ಲಿರುವ ಜನತೆಗೂ ದಕ್ಷಿಣದಲ್ಲಿರುವುದಕ್ಕೂ ಒಂದುಗೂಡು ಸಂದು ತೋರುವುದೇ ಇಲ್ಲವಲ್ಲ! ಎಂದರು ಆ ಅಧಿಕಾರಿಗಳು. ಅದಕ್ಕೆ ಗಾಂಧಿಜಿಗಳು ನೀವು ಕಂಡ ಭಿನ್ನತೆಯು ಕೇವಲ ತೋರಿಕೆಯದು. ಹೊರಗಣ ಸಿಪ್ಪೆಯಲ್ಲದೆ ಒಳಗಿನ ತಿರುಳಿನದಲ್ಲ. ಈ ಭಿನ್ನತೆಯನ್ನು ಅಹಿಂಸಾತ್ಮಕ ಹಾದಿಹಿಡಿದು ತೆಗೆದು ಹಾಕಬಹುದು. ಸೆಣಸಾಟದ ಚಟವಿರುವ ವಿಗಡ ಪಠಾಣರನ್ನು ಸಾಧು ಹಾಗೂ ಮಾನಸಿಕ ವಿಚಕ್ಷಣತೆಯುಳ್ಳ ಉತ್ತರ ಹಿಂದೂಸ್ಥಾನದವರೊಡನೆ ಒಂದುಗೂಡಿಸಿದ ಸುವರ್ಣ ಸೇತುವೂ ಆ ಅಹಿಂಸೆಯೇ. ಈ ಅಹಿಂಸಾ ವ್ರತವನ್ನು ಸ್ವೀಕರಿಸಿದ ಖುದೈಖಿದ್ಮತ್ಗಾರರು ಈಗ ಹಿಂದೂಸ್ಥಾನದ ಇತರ ಪಂಗಡಗಳಿಗಿಂತ ಭಿನ್ನರಾಗಿರುವುದು ನಿಂತುಹೋಗಿಲ್ಲವೆ? ಹೀಗೆಯೇ ವಿವಿಧ ಜಾತಿ ಪಂಗಡಗಳ ಐಕ್ಯತೆಯ ಪ್ರಶ್ನೆಯಲ್ಲಿ ನಾವು ಅಹಿಂಸಾತತ್ವವನ್ನು ಕೈಗೊಂಡಕ್ಷಣವೇ ಜಟಿಲ ಸಮಸ್ಯೆಗಳೆಲ್ಲ ಕರಗಿ ನೀರಾಗಿ ಬಿಡುತ್ತವೆ ಎಂದರು.

ಅಹಿಂಸಾತತ್ವವು ಗಡಿನಾಡಿನಲ್ಲಿ ಶಾಂತ ವಾತಾವರಣವನ್ನುಂಟುಮಾಡಿದುದರ ಒಂದು ನಿದರ್ಶನ

ಗಡಿನಾಡಿನ ಅಪಾಯಕರವಾದ ಹಾದಿಗಳಲ್ಲಿ ಗಾಂಧೀಜಿಗಳೂ ಅವರ ಸಂಚಾರ ಕೂಟವೂ ಹೇಗೆ ನಿರ್ವಿಘ್ನವಾಗಿ ಸುಗಮವಾಗಿ ಸಾಗಿತೆಂಬುದಕ್ಕೆ 'ಹರಿಜನ' ಪತ್ರಿಕೆಯಲ್ಲಿ ಹೀಗೆ ಬರೆದಿದೆ—ನಾವು ಮಿರೇಟಲನ್ನು ಮುಟ್ಟಿದಾಗ ಕತ್ತಲಾಗಿತ್ತು. ಮುಖ್ಯ ರಸ್ತೆಯಲ್ಲಿ ಮುಂದುವರಿಯಲು ಆತಂಕವಿತ್ತು. ಅದರಲ್ಲಿ ಪ್ರಯಾಣಮಾಡುವುದು ಅಪಾಯಕರವೆಂಬುದು ಗೊತ್ತಿದ್ದ ಸಂಗತಿ. ವಾಹನ ಸಂಚಾರಕ್ಕೆ ಸಂಜೆ ನಾಲ್ಕು ಗಂಟೆಯನಂತರ ಅನುಮತಿಯಿದ್ದಿಲ್ಲ. ಆದರೆ ಖಾನ್ ಸಾಹೇಬರು ಸನ್ನೊಡನಿದ್ದುದು ಪ್ರತಿಯೊಂದು ಕಡೆಯಲ್ಲಿಯೂ ಸ್ತಂಭನ ವಿದ್ಯೆಯಂತೆ ಜಾದುಗಾರಿಕೆಯನ್ನೆಸಗಿತು ಹಾದಿತಡೆದಿರುವ ಮೊದಲಗುಂಪನ್ನು ಕಂಡಾಗ ಕಾರಿನ ಸ್ಟೀಯರಿಂಗ್ ಹಿಡಿದು ಕುಳಿತಿದ್ದ ತನ್ನ ಮಗ ವಾಲೀಖಾನರಿಗೆ ಅವರು ಹೀಗೆಂದು ಹೇಳಿದರು "ಗಂಡಾಂತರಗಳಿಗೆಲ್ಲ ಸವಿನಯದಿಂದ ತಲೆವಾಗಿಯೇ ನಾವು ಈ ಹಾದಿಯಲ್ಲಿ ಮುಂದಾಗುವುದೆಂದು ಅವರಿಗೆ ಹೇಳು. ಯಾರಾದರೂ 'ನಿಲ್ಲು' ಎಂದು ಕೂಗಿದಾಕ್ಷಣ ಕಾರಿಗೆ ಬ್ರೇಕ್ ಹಾಕು. ನಾವು ಯಾರೆಂದು ತಿಳಿದೊಡನೆ ಯಾರೂ ನಮ್ಮ ಮೇಲೆ ಕೈಮಾಡರು. ಆದರೆ ಹಾಗೆ ಮಾಡದೆ ನೀನು ದುಡುಕಿಂದ ಕಾರು ಓಡಿಸಲು ತೊಡಗಿದರೆ ಗುಂಡುಬಿದ್ದೀತು." ಈ ಸೂತ್ರವನ್ನನುಸರಿಸಿ ಸುಕ್ಷೇಮದಿಂದ ಆ ಹಾದಿಯನ್ನು ಹಾದುಹೋದೆವು.

ರೋಗಾಣುಗಳನ್ನು ನಾಶಮಾಡುವ ದೀಪ.

ನ್ಯೂಯೋರ್ಕಿನ ಡಾಕ್ಟರ್ ಹಾರ್ವೇ ಎಂಬವರು ಒಂದು ದೀಪರಚನೆಯನ್ನು ಕಂಡುಹಿಡಿದಿರುವರು. ಅದರಿಂದ ಹೊರಡುವ ಮಿಂಚಿನಿಂದ ರೋಗಾಣುಗಳು ನಾಶವಾಗುವವು. ದೀಪವು ಕಿರುಬೆರಳಿನಷ್ಟಿದೆ. ಅದರಿಂದೊಂದು ನೀಲ ಛಾಯೆಯ ಮಿಂಚು ಹೊರಡುವುದು. ಈ ಬೆಳಕು ಬೇಕ್ಟೀರಿಯಾ ಅಣುಜೀವಿಗಳ ನಾಶಕಾರಿ. ಈ ಬೆಳಕು ಪಾದರಸ ಮತ್ತು ಕೆಲವು ಅಪೂರ್ವ ಗ್ಯಾಸುಗಳ ಸಮ್ಮಿಳನದಿಂದ ಹುಟ್ಟುತ್ತದೆ.

ಹಾವು ಹಾವನ್ನು ನುಂಗುತ್ತೆ.

ಲಂಡನಿನ ಜೂ (ಪ್ರಾಣಿ ಪ್ರದರ್ಶನ ಶಾಲೆ)ಯ ಉರಗ ಗೃಹದಲ್ಲಿ ಕಂಡ ನೋಟವಿದು. ಒಂದೇ ಗೂಡಿನಲ್ಲಿದ್ದ ಎರಡು ನಾಗರ ಹಾವುಗಳಲ್ಲಿ ಒಂದು ತುಸು ಸಣ್ಣದಾಗಿದ್ದ ತನ್ನ ಸಂಗಾತಿಯನ್ನು ನುಂಗಿಬಿಟ್ಟಿತು. ನುಂಗಿದ ಸನ್ನಿವೇಶ ಹೀಗಿದೆ— ಒಂದು ರಾತ್ರೆ ಅವುಗಳಿಗೆ ತಿನ್ನ ಹಾಕಿದ ಸತ್ತ ಇಲಿಯೊಂದರ ಒಂದು ಕಡೆಯನ್ನು ಒಂದು ಹಾವೂ ಮತ್ತೊಂದು ತುದಿಯನ್ನು ಮತ್ತೊಂದು ಹಾವೂ ನುಂಗಲು ತೊಡಗಿದುವು. ನುಂಗುವ ಭರದಲ್ಲಿದ್ದ ದೊಡ್ಡ ಹಾವು ಇಲಿಯನ್ನು ನುಂಗುತ್ತ ಆ ಮದಿಯಲ್ಲಿ ಹಿಡಿದಿದ್ದ ಹಾವನ್ನು ನುಂಗಿಯೇ ಬಿಟ್ಟಿತು. ಕಾವಲುಗಾರರು ಕಂಡು ನುಂಗಲ್ಪಡುತ್ತಿದ್ದ ಹಾವನ್ನು ಹೊರಗೆಳೆಯಲು ಯತ್ನಿಸಿದರೂ ಸಫಲವಾಗಲಿಲ್ಲ.

ಪುಟ ೧೩ರಿಂದ

ಲವಾಗಿರುವದು. ಆದಕಾರಣದಿಂದಲೇ ನಿಮಗೆ ದಿವಸವು ಕ್ಷಣಪ್ರಾಯವಾಗಿ ತೋರುವದು. ಕೆಲವೊಂದು ಕಾರಣದಿಂದ ನೀವು ಮಾರ್ಗದಲ್ಲಿ ಬಹಳ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಮಾತದ ಅಂತಾರ್ಧವಾದ ತಾ. ೧೩ರಿಂದ ೧೬ರ ವರೆಗಿನ ದಿನಗಳಲ್ಲಿ ಕೆಲವು ಅನಿಷ್ಟಗಳು ವಿಘ್ನಗಳು ನಿಮ್ಮ ಕಾರ್ಯಕ್ಕೆ ಭಂಗತಂದಾವು. ಜಾಗ್ರತೆಯಿಂದಿದ್ದರೆ ಹಾನಿಗಳು ಏನೂ ತೋರದಿರಿಯಲ್ಲವು.

ಕುಂಭರಾಶಿ—

"ತಾನು ಮಾಡುವುದು ಉತ್ತಮ, ಹುಗಮಾಡುವುದು ಮಧ್ಯಮ, ಆಳುಮಾಡುವುದು ಹಾಳು" ಎಂಬ ಗಾದೆಯು ಮನುಷ್ಯನು ಸರ್ವದಾ ಸ್ವತಂತ್ರನಿರಬೇಕೆಂಬ ತತ್ವವನ್ನು ಸೂಚಿಸುತ್ತಿರುವದು. ಪ್ರಾಣಿಮಾತ್ರವೂ ಕೂಡ ಪರತಂತ್ರದೊಳಿರಲು ಒಡಂಬಡುವುದಿಲ್ಲ. ಅದರಲ್ಲೂ ಬುದ್ಧಿಶಕ್ತಿಯಿಂದ ಶ್ರೇಷ್ಠನೆನಿಸಿದ ಮನುಷ್ಯನು ಎಂದಾದರೂ ಪರತಂತ್ರದೊಳಿರಲು ಅರಿಸುವನೇ? ಸ್ವತಂತ್ರನಾಗಿರಲು ಮುಖ್ಯವಾಗಿ ಶರೀರದಾರ್ಢ್ಯತೆ ಮಾ ಆರೋಗ್ಯಭಾಗ್ಯ ಬೇಕಾಗಿರಬೇಕು. ನಿಮಗೀ ವಾರದಲ್ಲಿ ಈ ಭಾಗ್ಯಕ್ಕೇನೇ ಹಾನಿಬಂದಿದೆ. ಅದ್ದರಿಂದ ರೋಗಬರುವುದರ ಮುಂಚೆಯೇ ಜಾಗ್ರತೆಯಿಂದಿದ್ದರೆ ಅದನ್ನು ದೂರದಿಂದಲೇ ಕಳುಹಿಸಬಹುದು. ಕೆಲವೊಂದುವೇಳೆ ನಿಮ್ಮಿಂದ ಆಗತಕ್ಕ ಖರ್ಚ ನಿಮಗೆ ಸಂಭವಿಸುವ ಕೆಲಸವೂ ನಿಮ್ಮ ಬುದ್ಧಿಯ ದೌರ್ಬಲ್ಯವನ್ನು ಪ್ರದರ್ಶಿಸುವದು. ಹಿಡಿದ ಕಾರ್ಯವನ್ನು ಕೊನೆಗೊಳಿಸುವ ಶಕ್ತಿಯು ನಿಮ್ಮಲ್ಲಿರುವುದರಿಂದ ತತ್ಫಲವನ್ನು ನೀವು ಪಡೆಯುವಿರಿ. ತಾ. ೮,೯ ಮತ್ತು ೧೪,೧೫ ಈ ದಿನಗಳು ಒಳ್ಳೆಯದಿಲ್ಲವು.

ಮೀನರಾಶಿ—

ಅಪರಿಚಿತರಾದ ಇಬ್ಬರು ವ್ಯಕ್ತಿಗಳಿಗೆ ಪರಸ್ಪರ ಪ್ರೀತಿಯನ್ನುಂಟುಮಾಡಲಿಕ್ಕೂ ಅತ್ಯಾಪ್ತರಾದ ಮಿತ್ರರೀರ್ವರ ವಿಭಜನೆಗೆ ಮಾ ಹುಸಪ್ತಪಕ್ಕೂ ಹೇತುವಾಗಿ ಧನವು ಅದಿಂಕಾರಣವಾಗುವದು. ಇದರಲ್ಲಿ ಎರಡನೇ ವಿಷಯವು ನಿಮ್ಮ ಅನುಭವಕ್ಕೆ ಈ ವಾರ ಬರಲಿದೆ. ಸ್ವಜನ ವಿಯೋಗದಿಂದಲೂ ದಾಯಾದಿಗಳಿಂದಲೂ ತನು ಮಾನಸ ಪೀಡೆಗಳು ಅಧಿಕವಾಗುವವು. ಖರ್ಚಿಗೆ ತಕ್ಕ ಉತ್ಪತ್ತಿಯಿರೋದರಿಂದ ಕಷ್ಟಪಡುವಾದ ಚಿಂತೆಯಿಲ್ಲವು. ಕೆಲವೊಂದು ಕಾರಣಗಳಿಂದಾಗಿ ನಿಮ್ಮ ವಿರೋಧಿಗಳಿಗೆ ಶರಣು ಹೋಗಬೇಕಾದ ಪ್ರಸಂಗವೂ ಬಂದೀತು. ಆದಕಾರಣ ಜಾಗ್ರತೆಯಿಂದಿರಬೇಕಾದುದು ಅವಶ್ಯ. ತಾ. ೬ರಿಂದ ೧೧ರ ವರೆಗೆ ಉದರರೋಗವೂ, ವಾಯುನಾಶದಿಂದ ಶೋಕವೂ ಮಿತ್ರರಲ್ಲಿ ಅಪನಂಬಿಕೆಯೂ ತೋರಿಬರುವುದು.

ಪುಟ ೪ರಿಂದ

ಗಳ ಮಗ ಶ್ರೀಪತಿ ನರಸಿಂಹ ಅತಿಗರಿಂದ ಸೂರ್ಯ ಸಿದ್ಧಾಂತ ರೀತ್ಯಾ ಗುಣಿಸಿ ಪ್ರಕಟಿಸಲ್ಪಟ್ಟಿರುವದು. ಶ್ರೀಪತಿಯವರ ಪಂಚಾಂಗಗಳು ಸಾಕಷ್ಟು ಕನ್ನಡ ನಾಡಿನಲ್ಲಿ ಪ್ರಸಿದ್ಧಿ ಹೊಂದಿರುವವು. ಈ ಹೊಸ ವರ್ಷದ ಪಂಚಾಂಗವು ಇನ್ನಷ್ಟು ಹಲವು ಉಪಯುಕ್ತ ವಿಷಯಗಳೊಂದಿಗೆ ಸಂಗ್ರಹಿತವಾಗಿರುವದೆಂಬುದು ಸಂತೋಷಕರ.

ತಾರಾ ವಿಹಾರ ಗ್ರಂಥಮಾಲಾ

ಅಂತರ್ ರಾಷ್ಟ್ರೀಯ ಪ್ರಸಿದ್ಧಿಯನ್ನು ಪಡೆದ ಪಂಡಿತ ತಾರಾನಾಥರ ಹಾಗೂ ಇವರ ಸುಪ್ರಸಿದ್ಧ ಸಾಹಿತಿಗಳ ಪ್ರಚೋದನಾತ್ಮಕ ಕ್ರಾಂತಿಕಾರಕ ವಿಚಾರಗಳು ಗ್ರಂಥರೂಪವಾಗಿ ಪ್ರಕಟವಾಗುವವು. ೧ ವರ್ಷದಲ್ಲಿ ತಲೆ-ಎದೆಗಳನ್ನರಳಿಸುವ ೬೦. ಗ್ರಂಥಗಳು ಹೊರಡುವವು. ಅಲ್ಲದೆ ಒಂದು ವಿಶೇಷಾಂಕವು ಉಚಿತವಾಗಿ ಕೊಡಲಾಗುವುದು.

ಚಂದಾ:- ಒಂದೇ ರೂಪಾಯಿ ಮಾತ್ರ.

ಕರ್ನಾಟಕದ ಮೂಲೆಮೂಲೆಗೂ ಬೇಕಾದ ಪತ್ರ. ಜಾಹೀರಾತುಗಳಿಗೆ ಒಳ್ಳೇ ಸುಸಂಧಿ.

ವಿಶೇಷ ವಿವರಕ್ಕೆ ಬರೆಯಿರಿ.

ವಿಶೇಷ ಕಾರಣಗಳಿಂದ ವಿ. ಪಿ. ಕಳುಹಿಸಲಾಗುವುದಿಲ್ಲ

ಮ್ಯಾನೇಜರ್:

ತಾರಾ ವಿಹಾರ ಕಾರ್ಯಾಲಯ, ಪ್ರೇಮಾಯತನ ಆಶ್ರಮ, ತುಂಗಭದ್ರಾ.

SAVING MONEY AND TIME

Thousands of prudent and thriving business men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906

CANARA BANK LIMITED

ಎಲ್ಲಾ ತರದ

ಶುದ್ಧ ಖಾದಿ

ಮಂಗಳೂರು

ಸ್ವದೇಶಿ ಸ್ಟೋರ್ಸ್,

ರಥಬೀದಿ -- ಮಂಗಳೂರು

ಅಖಿಲ ಭಾರತ ಚರಕಾ ಸಂಘದಿಂದ ಸರ್ಟಿಫೈ ಮಾಡಲ್ಪಟ್ಟಿದೆ.

ಜಾಪಾನು ಚೀನವನ್ನು ಗೆಲ್ಲಬಹುದೇ

೧೦ ವರ್ಷಗಳ ವರೆಗಾದರೂ ಯುದ್ಧನಡಿಸಿ ಚೈನವನ್ನು ಗೆದ್ದೇ ತೀರಬೇಕೆಂದು ಜಾಪಾನರ ನಿರ್ಧಾರ!

ಇಂಗ್ಲೆಂಡ್ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳ ಮಧ್ಯಸ್ಥಿಕೆಯಿಂದ ಚೀನಾಜಾಪಾನುಗಳೊಳಗೆ ರಾಜಿಯಾಗುವ ಸಂಭವ ವಿದೆಯೆಂದು ಆಗಾಗ ಸುದ್ದಿಯೇಳುತ್ತಿದೆ. ಆದರೆ ಅಧಿಕಾರಿಕವಾಗಿ ಪ್ರತಿವಿರುದ್ಧ ಪರಿಸ್ಥಿತಿಯು ತೋರಿಬರುತ್ತಿದೆ. ಜಾಪಾನರಿಗೆ ಎಷ್ಟುಕ್ಕೂ ಶರಣಾಗತವಾಗಲಿಕ್ಕಿಲ್ಲ. ಕೊನೆಯವರೆಗೂ ಹೋರಾಡಿಯೇ ಸಿದ್ಧವೆಂದು ಮಾರ್ಶಲ್‌ಚ್ಯಾಂಗರು ವ್ಯಕ್ತಪಡಿಸಿರುತ್ತಾರೆ. ಜಾಪಾನಿನ ಹೊಸಯುದ್ಧ ಮಂತ್ರಿಯಾದ ಜನರಲ್ ಇಟಗಾಕಿಯವರು ತಮ್ಮ ಉದ್ದೇಶಸಾಧನೆಗಾಗಿ 10ವರ್ಷಗಳವರೆಗಾದರೂ ಯುದ್ಧನಡಿಸಲೇ ಬೇಕು. ಮಾರ್ಶಲ್ ಚ್ಯಾಂಗರ ಆಳ್ವಿಕೆಯನ್ನು ಸಂಪೂರ್ಣ ನಾಶಗೊಳಿಸಲೇಬೇಕೆಂದು ಉದ್ಘೋಷಿಸಿರುವರು. ಏಸ್ಯಾಖಂಡದ ಪೂರ್ವಭಾಗದಲ್ಲೆಲ್ಲಾ ತಮ್ಮ ಸಾಮ್ರಾಜ್ಯವು ವ್ಯಾಪಿಸಿ ಹೊಂದಬೇಕು. ತಮ್ಮ ಸಾರ್ವಭೌಮತ್ವವೇ ನೆಲೆಗೊಳ್ಳಬೇಕೆಂದು ಜಾಪಾನ ಸೇನಾನಿಗಳ ಮತ್ತು ರಾಷ್ಟ್ರಾಭಿಮಾನಿಗಳ ಆಕಾಂಕ್ಷೆ. ಈಗ ಕೆಲಕಾಲ ಯುದ್ಧದಿಂದ ತಮ್ಮ ವ್ಯಾಪಾರ ಕೈಗಾರಿಕೆಗಳಿಗೆಲ್ಲಾ ಕೆಲಮಟ್ಟಿನ ನಷ್ಟವಾದರೂ, ಮುಂದೆ ಚೈನವು ತಮ್ಮಾಧೀನವಾದಮೇಲೆ, ಚೈನದ ಕಚ್ಚಾಮಾಲು ಮತ್ತು ವ್ಯಾಪಾರ ಮಾರ್ಕೇಟು ದೊರೆತು ಹೆಚ್ಚಿನ ಲಾಭಪಡೆಯಬಹುದೆಂದು ಜಾಪಾನಿನ ವ್ಯಾಪಾರಿಗಳೂ ಭಂಡವಾಳದಾರರೂ ಆಶೆಕಟ್ಟಿಕೊಂಡಿದ್ದಾರೆ. ಆದರೆ ಇವೆಲ್ಲಕ್ಕಿಂತಲೂ ಮುಖ್ಯ ಉದ್ದೇಶವೆಂದರೆ, ಪೂರ್ವಏಸ್ಯದ ಸುರಕ್ಷಿತತೆ ಮತ್ತು ಶಾಂತಿ. ಚೈನವು ಜಾಪಾನಿನ ಅಧೀನವಾದರೆ ಮುಂದೆ ಅದರ ಸುರಕ್ಷಿತತೆಗೆ ಯಾವತರದ ಹಾನಿಯೂ ಉಂಟಾಗುವ ಸಂಭವವಿಲ್ಲ. ಮುಂದೆ ಆಗಾಗ ಯುದ್ಧ ನಡಿಸಬೇಕಾಗುವ ಸಂದರ್ಭಗಳುಂಟಾಗಲಿಕ್ಕಿಲ್ಲೆಂದೇ ಜಾಪಾನರ ಅಭಿಮತ. ತಾವೇನೂ ಬೇಕೆಂದು ಚೈನದೊಡನೆ ಹೋರಾಡುತ್ತಿರುವುದಿಲ್ಲ ವಿದೇಶೀ ರಾಷ್ಟ್ರಗಳು ಜಾಪಾನ ವಿರೋಧಿಯಾದ ಮಾರ್ಶಲ್ ಚ್ಯಾಂಗರನ್ನು ಎತ್ತಿಕಟ್ಟಿದುದರಿಂದ ತಮಗೆ ಯುದ್ಧಮಾಡದೆ ನಿರ್ವಾಹವಿಲ್ಲದಾಯಿತು. ಒಂದೊಮ್ಮೆ ಮಾರ್ಶಲ್ ಚ್ಯಾಂಗರನ್ನು ಸದೆಬಡಿದು ಚೈನವನ್ನು ಸ್ವಾಧೀನಪಡಿಸಿದರೆ ಅನಂತರ ಪೂರ್ವಏಸ್ಯದಲ್ಲಿ ಶಾಂತಿಯು ನೆಲೆಗೊಳ್ಳುವುದು. ಮುಂದೆ ಜಾಪಾನಿನ ಸುರಕ್ಷಿತತೆಗೆ ಯಾವ ಅಪಾಯವೂ ಉಂಟಾಗಲಾರದೆಂಬ ಅಭಿಪ್ರಾಯವನ್ನು ಜಾಪಾನ ಸೇನಾನಿಗಳು ಜನಸಾಮಾನ್ಯರಲ್ಲಿ ಹಬ್ಬಿರುತ್ತಾರೆ.

ಯುದ್ಧದಿಂದಾಗಿ ಜಪಾನ ಜನಸಾಮಾನ್ಯರು ನಾನಾರೀತಿಯ ಸಂಕಷ್ಟಗಳಿಗೊಳಗಾಗಬೇಕಾಗಿ ಬಂದಿದೆ. ವಸ್ತ್ರವು ಕಡಿಮೆಯಾಗಹತ್ತಿದೆ. ಚರ್ಮದ ಪಾದರಕ್ಷೆಗಳ ಬದಲಿಗೆ ಮರದ ಮೆಟ್ಟುಗಳನ್ನು ಜನರು ಹಾಕಿಕೊಳ್ಳಬೇಕೆಂದು ಪ್ರಚಾರ ನಡೆದಿದೆ. ಹೊಸ ಶಾಲೆಗಳೇನೂ ಕಟ್ಟಲ್ಪಡುವುದಿಲ್ಲ. ಬಸ್ ಮೊದಲಾದ ಮೋಟರ್ ವಾಹನಗಳು ಕಡಿಮೆಯಾಗಹತ್ತಿವೆ. ಗ್ಯಾಸೊಲೆನಿನ ಉಪಯೋಗವು ಬಹಳ

ಎಷ್ಟಕ್ಕೂ ಜಾಪಾನಿನ ಅಧೀನವಾಗಬಾರದೆಂದು ಚೀನೀಯರೆಲ್ಲರೂ ಮಾರ್ಶಲ್‌ಚ್ಯಾಂಗ್ ಕೈಶೆಕ್ಕರ ಕೈಕೆಳಗೆ ಒಕ್ಕಟ್ಟಾಗಿ ನಡಿಸುತ್ತಿರುವ ನವೀನ ರೀತಿಯ ಹೋರಾಟ!

ಕಟ್ಟಕಡೆಗೆ ಜಯಶ್ರೀಯು ಯಾರಿಗೆ ಒಲಿವಳು?

ನಿರ್ಬಂಧಿಸಲ್ಪಟ್ಟಿದೆ. ಆಹಾರದ ಅಭಾವವು ಅಷ್ಟೊಂದೇನೂ ಇಷ್ಟರತನಕ ಉಂಟಾಗಿರುವುದಿಲ್ಲ. ಜಾಪಾನರು ರಾಷ್ಟ್ರಕ್ಕಾಗಿ ಯಾವ ತ್ಯಾಗಮಾಡುವುದಕ್ಕೂ ಸಿದ್ಧರೇ ಇದ್ದಾರೆ. ಜಾಪಾನ ಸೇನೆಗೂ ಸರ್ವ ಸಾಮಾನ್ಯ ಜನತೆಗೂ ತೀವ್ರ ದ್ವೇಷವಿರುವುದೆಂಬುದೂ ಆಧಾರವಿಲ್ಲದ ಮಾತು. ತೀವ್ರ ಸಾಂಪತ್ತಿಕ ಮತ್ತು ಆರ್ಥಿಕ ಸಂಕಷ್ಟಕ್ಕೊಳಗಾಗಿ ಮತ್ತು ಜೀವನದ ಆವಶ್ಯಕತೆಗಳು ಬಹಳ ಕಡಿಮೆಯಾದರೂ ಜಾಪಾನು ಚೈನದೊಡನೆ ಅನಿಶ್ಚಿತಕಾಲದ ವರೆಗೆ ಯುದ್ಧನಡಿಸಲು ಸಿದ್ಧವೇ ಇರುವುದು.

ಚೈನವು ಎಂದಿಗಿಂತಲೂ ಬಲವಾಗಿದೆ

ಇಂದೀಗ ಚೀನಾ ಜಾಪಾನು ಯುದ್ಧವು ಹೊಸ ಸ್ವರೂಪ ತಳೆದಿದೆ. ಜಾಪಾನು ಈವರೆಗೆ ರೈಲ್ವೆ, ನದಿ, ಕಾಲುವೆಗಳ ಮೂಲಕ ಪ್ರಬಲ ಯುದ್ಧೋಪಕರಣಗಳನ್ನೊಯ್ದು ಚೈನದ ದೊಡ್ಡದೊಡ್ಡ ಪಟ್ಟಣಗಳನ್ನೂ ಗೆದ್ದು ವಶಪಡಿಸಿಕೊಂಡಿದೆ ಮತ್ತು ಉತ್ತರದ ಪೈಪಿಂಗಿನಲ್ಲಿಯೂ ದಕ್ಷಿಣದ ನಾನ್ಕಿಂಗಿನಲ್ಲಿಯೂ ತನ್ನ ಕೈಗೊಂಬೆಗಳಾದ ಸರಕಾರಗಳನ್ನು ಸ್ಥಾಪಿಸಿರುತ್ತದೆ. ಆದರೆ ಈ ಸರಕಾರಗಳಿಗೆ ಚೀನೀ ಜನಸಾಮಾನ್ಯರು ಬದ್ಧವಿರೋಧವಿದ್ದಾರೆ. ಕ್ರಾಂತಿಕಾರ ಚೀನಿಯರು ಈ ಅಧಿಕಾರಿಗಳು ಕೆಲವರನ್ನು ಕೊಲೆಮಾಡಿರುತ್ತಾರೆ. ಮಾರ್ಶಲ್ ಚ್ಯಾಂಗರು ಶ್ಯಾಂಘಾಯಿಯ ಘೋರ ಕೆಲಸದ ಅನಂತರ ಜಾಪಾನರನ್ನು ಸಮರಂಗದಲ್ಲಿ ಎದುರಿಸಲು ತನ್ನ ಸೇನೆಯನ್ನು ಉಪಯೋಗಿಸಿರುವುದಿಲ್ಲ. ಆದುದರಿಂದ ಚೀನೀ ಸೇನೆಯು ದೊಡ್ಡ ಅಪಜಯವನ್ನೇನೂ ಪಡೆಯದೆ ಸಂಘಟಿತವಾಗಿಯೇ ಇದೆ. ಈ ಸೈನಿಕರು ತಂಡ ತಂಡವಾಗಿ ವಿಂಗಡಿಸಲ್ಪಟ್ಟು ಗೊರಿಲ್ಲಯುದ್ಧದಲ್ಲಿ ನಿರತರಾಗಿರುತ್ತಾರೆ. ಈ ಗೊರಿಲ್ಲ ಪಂಗಡಿಗರು ಶಾಂಘಾಯಿಯ ಗಡಿಯವರೆಗೂ ಹೋಗಿ ಪೀಡೆ ಕೊಡುತ್ತಿದ್ದಾರೆ. ರೈಲ್ವೆಮಾರ್ಗ ಮತ್ತು ರಸ್ತೆಗಳನ್ನು ಸಮಪಾಡದಷ್ಟು ಕಡಿದು ಹಾಕುತ್ತಿದ್ದಾರೆ.

ಚೀನೀ ಸರಕಾರವು ಇಂದೀಗ ದೊಡ್ಡ ಪಟ್ಟಣ ಮತ್ತು ಸಮುದ್ರ ಮತ್ತು ನದಿ ತೀರದ ಪ್ರದೇಶವನ್ನು ಬಿಟ್ಟು ಒಳಭಾಗಕ್ಕೆ ಸರಿದು ಹಳ್ಳಿಪ್ರದೇಶಗಳನ್ನು ಸಂಘಟಿಸಹತ್ತಿದೆ. ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ತಮಗೆ ಬೇಕಾದ ಸಾಮಗ್ರಿಗಳನ್ನು ತಯಾರಿಸತೊಡಗಿದೆ. ಜಾಪಾನರ ಧಾಳಿಯಿಂದ ಚೀನಿಯರು ಹೊಸಪಾಠ ಒಂದನ್ನು ಕಲಿತಿರುವಂತಿದೆ. ಹಳ್ಳಿ ಪ್ರದೇಶಗಳ ಸಾವಿರಾರು ಜನರು ಸೈನಿಕರಾಗಿ ಯುದ್ಧ ತರಬೇತಿಹೊಂದುತ್ತಿದ್ದಾರೆ. ವಿಲ್ಯಗಟ್ಲೆ ಹೊಸಸೇನೆಯು ತಯಾರಾಗುತ್ತಿದೆ. ಅಲ್ಲಲ್ಲಿ ಮದ್ದು ಗುಂಡು ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. ಇಷ್ಟರವರೆಗೆ ಕಡೆಗಣಿಸಲ್ಪಟ್ಟು ಹಿಂದುಳಿದಿದ್ದ ಕೆಲವು ಪ್ರಾಂತಗಳು ಈಗ ತೀವ್ರ ಅಭಿವೃದ್ಧಿಹೊಂದಿ ಮುಂದುವರಿಯುತ್ತಿವೆ. ದೊಡ್ಡ ತೋಪು ಮತ್ತು ವಿಮಾನಗಳು ರಷ್ಯ ಮತ್ತು ಇಂಗ್ಲೆಂಡ ಮೊದಲಾದ ಪಾಶ್ಚಾತ್ಯ ದೇಶಗಳಿಂದ ನೆಲಮಾರ್ಗವಾಗಿ ಬರುತ್ತಿವೆ. ಇನ್ನೊಂದು ಪ್ರಾಮುಖ್ಯ ವಿಷಯವೆಂದರೆ ಚೈನವು ಜಾಪಾನರಿಗಿಂತ ಐದಾರುಮಡಿ, ಹೆಚ್ಚಿನ ಸೇನೆಯನ್ನು ಅವರಿಗಿಂತ ನಾಲ್ಕೈದು ಪಾಲು ಕಡಿಮೆವೆಚ್ಚದಲ್ಲಿ ತಯಾರಿಸುತ್ತಿದೆ.

ಮಾರ್ಶಲ್ ಚ್ಯಾಂಗರ ಆಳ್ವಿಕೆಯನ್ನು ಜಾಪಾನರು ಸಂಪೂರ್ಣನಾಶಗೊಳಿಸದೆ ಸಂಧಿಯುಂಟಾಗಲಾರದು. ಮಾರ್ಶಲ್ ಚ್ಯಾಂಗರು ಕ್ರೂರನೀತಿಯಲ್ಲಿ ನಿರಂಕುಶವಾಗಿ ರಾಜ್ಯಭಾರಮಾಡುತ್ತಿರುವರು. ಅವರನ್ನು ನಾನ್ಕಿಂಗಿನಿಂದ ಓಡಿಸಿದೊಡನೆಯೇ ಜನರೆಲ್ಲಾ ಅವರೆದುರಾಗಿ ಬಂಡಾಯವೆದ್ದು ತಮ್ಮ ಆಶಯ ಪಡೆಯುವರು, ಸೈನ್ಯದಲ್ಲೆಲ್ಲಾ ಅನಾಯಕತ್ವವುಂಟಾಗುವುದೆಂದು ಜಾಪಾನರು ನಿರೀಕ್ಷಿಸಿದ್ದರು. ಆದರೆ ಪರಿಣಾಮವು ಪ್ರತಿವಿರುದ್ಧವಾಗಿರುವುದು ಚ್ಯಾಂಗರ ಪ್ರಬಲ ವೈರಿಗಳಾಗಿದ್ದ ಕಮ್ಯೂನಿಸ್ಟ್ ಪಕ್ಷೀಯರೂ, ಇನ್ನಿತರ ಕೆಲಮಂದಿ ಸೇನಾನಿಗಳೂ ಈಗ ಸಂಪೂರ್ಣವಾಗಿ ಅವರ ವಿಧೇಯರಾಗಿ ಚೈನದ ಸ್ವಾತಂತ್ರ್ಯ ರಕ್ಷಣೆಯಲ್ಲಿ ಅವರಿಗೆ ಬೇಕಾದ ಸಹಾಯವೀಯುತ್ತಿರುವರು. ಆದುದರಿಂದ ಮಾರ್ಶಲ್ ಚ್ಯಾಂಗರು ಇಂದು ಎಂದಿಗಿಂತಲೂ ಬಲಶಾಲಿಯಾಗಿರುವರು. ಅವರ ಕೈಕೆಳಗೆ ಇಡೀ ಚೈನವು ಒಕ್ಕಟ್ಟಾಗಿ ಜಾಪಾನರನ್ನು ವಿರೋಧಿಸಲು ಎದ್ದು ನಿಂತಿರುವುದು. ಜಾಪಾನರು ಚೀನೀಯರ ಒಕ್ಕಟ್ಟನ್ನು ಮುರಿಯುವ ಬದಲಿಗೆ ಬಲಪಡಿಸಿರುವರು. ಅವರು ಇನ್ನು ಮುಂದೆ ಅಪಾರವೆಚ್ಚಮಾಡಿ ಯುದ್ಧವನ್ನು ಮುಂದೊತ್ತಬೇಕಾಗಿದೆ. ಪರಿಸ್ಥಿತಿಯು ಅವರಿಗೆ ಬದ್ಧ ವಿರೋಧವಾಗಿದೆ. ಸರಿಯಾದ ರಸ್ತೆಯಿಲ್ಲದ ಹಳ್ಳಿಪ್ರದೇಶಗಳಿಗೆ ಪ್ರಬಲ ಯುದ್ಧೋಪಕರಣಗಳನ್ನೊಯ್ಯಲು ಕಷ್ಟಸಾಧ್ಯ. ಎಡೆಬಿಡದೆ ಅವರು ಚೀನೀ ಗೊರಿಲ್ಲ ಪಂಗಡಿಗರ ಹಾವಳಿಗೊಳಗಾಗಬೇಕಾಗಿದೆ. ಕಟ್ಟಕಡೆಗೆ ಚೀನೀಯರ ಯುದ್ಧತಂತ್ರವೇ ಜಯಶೀಲವಾಗಬಹುದು.

LAKSHMI

OFFERS

ATTRACTIVE – POLICIES under New Schemes and Plans Suitable for Every Purse and Purpose.

"The Golden Policy"
"Family Income Policy"
"Optional Endowment Policy"
"Your Child's Future"

AND

"Marriage Endowment Policy" are the Latest & the Best.

For Particulars Write to:—

The Branch Manager, 334, Thambuchetty St., G. T. MADRAS. OR *A. B. Krishna Raj,* ORGANISER, UDIPI.

THE
Lakshmi Insurance Co., Limited,
LAHORE.

THE

Canara Banking Corporation, Udipi, Ltd.

Established:] (INCORPORATED IN BRITISH INDIA) [1906.

MEMBER:-

RESERVE BANK OF INDIA

BANKERS' CLEARING HOUSE, MADRAS.

Capital Authorised, Issued & Subscribed	Rs.	3,50,000
Paid up Capital	Rs	3,03,205
Reserves	Rs.	3,83,842

RATES OF INTEREST ON DEPOSITS

3 months ...	2½% p. a.
6 or 9 months .	3 % p. a.
12 or 24 months ...	3½% p. a
Short Term ..	2 % p. a.

All kinds of Banking Transactions undertaken.

ಉಡುಪಿ, ಗುರುವಾರ, ತಾ. ೮-೧೨-೩೮

ಮಲಬಾರು ದೇವಸ್ಥಾನ ಪ್ರವೇಶ ಮಸೂದೆಯು

ಇದೇ ತಾ. 1 ಮತ್ತು 2ರ ಮದ್ರಾಸ್ ಎಸೆಂಬ್ಲಿಯ ಅಧಿವೇಶನದ ಮುಂದೆ ತರಲ್ಪಟ್ಟು ಚರ್ಚೆ ನಡೆದು ಪರಿಶೀಲನೆಗಾಗಿ ಸಿಲೆಕ್ಟ್ ಕಮಿಟಿಗೊಪ್ಪಿಸಲ್ಪಟ್ಟಿರುವುದು. ಈ ಮಸೂದೆಯ ಕುರಿತು ನಡೆದ ಚರ್ಚೆಗೆ ಶ್ರೀ. ರಾಜಗೋಪಾಲಾಚಾರ್ಯರು ಉತ್ತರ ಕೊಡುವಾಗ ಹೇಳಿದಂತೆ, ಇದೊಂದರಿಂದಲೇ ಅವರು ತನ್ನ ಜೀವನದ ಮಹತ್ತ್ವಾದ ಉದ್ದೇಶವೊಂದನ್ನು ನೆರವೇರಿಸಿ ಹಿಂದೂ ಸಮಾಜದ ಚಿರಕೃತಜ್ಞತೆಗೆ ಪಾತ್ರರಾಗುವಂತಾಗಿದೆ. ರಾಷ್ಟ್ರದ ಒಕ್ಕಟ್ಟು ಸಂಘಟನೆ ಮತ್ತು ಸರ್ವಾಂಗಿಕವಾದ ಉನ್ನತಿಗೆ, ಇಷ್ಟರವರೆಗೆ ಪಶುಗಳಿಗಿಂತಲೂ ಕೀಳತೆಯಾಗಿ ಕಾಣಲ್ಪಟ್ಟು ಧರ್ಮದ ಹೆಸರಲ್ಲಿ ಅಸ್ಪೃಶ್ಯರಾಗಿ ದೂರೀಕರಿಸಲ್ಪಟ್ಟು ಭಯಂಕರ ಅನ್ಯಾಯಕ್ಕೊಳಗಾಗಿ ಜೀವನ್ಮೃತಾವಸ್ಥೆಯಲ್ಲಿ [illegible]ವಾಗಿರುವ ಸುಮಾರು 70 ಮಿಲ್ಯ ಹರಿಜನರ ಉದ್ಧಾರವು ಅದೆಷ್ಟು ಆವಶ್ಯಕ ಮತ್ತು ಮಹತ್ತಾದುದೆಂಬುದು ಪ್ರಕೃತವಿಚಾರದಲ್ಲಿ ಸ್ವಯಂ ವ್ಯಕ್ತವಿದೆ. ಹಿಂದುಗಳಾಗಿರುವ ಹರಿಜನರಿಗೆ ಹಿಂದೂಸಮಾಜದಲ್ಲಿ ಸರಿಸಮಾನ ಸ್ಥಾನಮಾನ ದೊರೆಯದಿದ್ದರೆ ಅವರ ಅಧೋಗತಿ ಮತ್ತು ನಾಶವು ನಿಶ್ಚಯ. ಹಿಂದೂ ಸಮಾಜವು ಸಂಘಟಿತವಾಗಿ ಪುನರುಜ್ಜೀವಿತವಾಗಬೇಕಾದರೆ, ನವಚೈತನ್ಯ ಹೊಂದಿ ಬಲಗೊಳ್ಳಬೇಕಾದರೆ ಮೊದಲು ಹರಿಜನೋದ್ಧಾರ ಕಾರ್ಯವಾಗಬೇಕು. ಹಿಂದೂಧರ್ಮದ ಹೃದಯವನ್ನೇ ಕೊರೆದು ಕ್ಷಯಿಸುತ್ತಿರುವ ಅಸ್ಪೃಶ್ಯತಾ ಕೀಟವು ನಾಶವಾಗಬೇಕು. ಈ ದೃಷ್ಟಿಯಿಂದಲೂ ಹರಿಜನ ದೇವಸ್ಥಾನ ಪ್ರವೇಶವು ಪ್ರಾಮುಖ್ಯಹೊಂದುದಿದೆ

ಸಾರ್ವಜನಿಕ ವ್ಯವಹಾರದಲ್ಲಿ ಹರಿಜನರಿಗಿದ್ದ ತೊಡಕುಗಳೆಲ್ಲಾ ಈಗ ತೆಗೆದು ಹಾಕಲ್ಪಟ್ಟು ಅವರು ಯಾವ ಆತಂಕವೂ ಇಲ್ಲದೆ ಇತರರಂತೆಯೇ ನಡೆಯಬಹುದಾಗಿದೆ. ಇದರಿಂದಾಗಿ ಅವರು ಸಾಮಾಜಿಕ ವ್ಯವಹಾರದಲ್ಲಿಯೂ ಕೆಲಮಟ್ಟಿನ ಸ್ವತಂತ್ರ ಪಡೆದಿರುತ್ತಾರೆ. ಆದರೆ ಅವರು ಇತರ ಹಿಂದುಗಳಂತೆಯೇ ಹಿಂದೂ ದೇವಸ್ಥಾನಗಳಿಗೆ ಪ್ರವೇಶಿಸುವಂತಾಗುವ ವರೆಗೆ ಅವರಿಗೆ ಹಿಂದೂ ಸಮಾಜದಲ್ಲಿ ಸಮಾನ ಸ್ಥಾನವು ದೊರೆಯಲಾರದು. ದೇವಸ್ಥಾನದ ಪ್ರವೇಶ ವಿಷಯದಲ್ಲಿ, ಸವರ್ಣ ಹಿಂದೂ ಬಹುಮತವು ಅನುಕೂಲವಿದ್ದರೂ ಕಾನೂನಿನ ಆತಂಕವೊಂದಿದೆ ಹಿಂದಿನ ರೂಢಿ ಸಂಪ್ರದಾಯಗಳು ಯಥಾಪ್ರಕಾರ ನಡೆದುಕೊಂಡು ಬರುವಂತೆ ನೋಡುವ ಜವಾಬ್ದಾರಿಯೊಂದನ್ನು ಸರಕಾರವು ಹೊತ್ತಿದೆ ಅಂದರೆ ಒಂದು ವೇಳೆ ಮೊಕ್ತೇಸರರಿಗೆನೇ ಹರಿಜನರನ್ನು ದೇವಸ್ಥಾನಕ್ಕೆ ಪ್ರವೇಶಿಸಬಿಡಲು ಸಮ್ಮತಿಯಿರುವುದಾದರೂ, ಹಿಂದಿನ ರೂಢಿಗೆ ಕಾನೂನಿನ ಸಮ್ಮತಿಯ ಮುದ್ರೆಯಿರುವುದರಿಂದ ಯಾವನಾದರೊಬ್ಬನು ಆಕ್ಷೇಪಿಸಿದಲ್ಲಿ ಈಗ ಹಾಗೆ ಮಾಡಲು ಸಾಧ್ಯವಿಲ್ಲ. 1932ರಲ್ಲಿ ಮಲಬಾರಿನ ಗುರುವಾಯೂರು ದೇವಸ್ಥಾನ ಪ್ರವೇಶ ಬಿಡುವ ಕುರಿತು ಸವರ್ಣ ಹಿಂದೂ ಜನಮತ ಕೂಡಾ ತೆಗೆಯಲ್ಪಟ್ಟು, ಸೇಕಡ 73ರಷ್ಟರ ಪ್ರಾಯಸ್ಥ ಸವರ್ಣ ಹಿಂದುಗಳು ಅನುಕೂಲ ಮತವಿತ್ತಿದ್ದರು ಆದರೂ ಸದ್ರಿ ದೇವಸ್ಥಾನದ ಮೊಕ್ತೇಸರರಾದ ಜಾಮೋರಿನ್ ರಾಜರು, ಕಾನೂನಿನ ತಡೆಯ ಕಾರಣವನ್ನು ಮುಂದೊಡ್ಡಿ ಹರಿಜನರಿಗದನ್ನು ತೆರೆದು ಹಾಕಲೊಪ್ಪಲಿಲ್ಲ. ಅನಂತರ ದೇವಸ್ಥಾನ ಪ್ರವೇಶ ಮಸೂದೆಯೊಂದನ್ನು ತರಲು, ಶ್ರೀ ಎಮ್. ಸಿ. ರಾಜ, ಶ್ರೀ. ರಾಜಗೋಪಾಲಾಚಾರ್ಯರೇ ಮೊದಲಾದವರು ಎಷ್ಟೊಂದು ಪ್ರಯತ್ನಪಟ್ಟರೂ ಒಂದಲ್ಲೊಂದು ವಿಘ್ನಗಳಿಂದ ಅದು ಫಲಕಾರಿಯಾಗಲಿಲ್ಲ.

ಸ್ವಲ್ಪ ಸಮಯದ ಹಿಂದೆ ಶ್ರೀ. ಎಮ್. ಸಿ. ರಾಜರು, ಇಡೀ ಮದ್ರಾಸ್ ಪ್ರಾಂತಕ್ಕೆ ಅನ್ವಯಿಸುವ ದೇವಸ್ಥಾನ ಪ್ರವೇಶ ಮಸೂದೆಯೊಂದನ್ನು ಮದ್ರಾಸ್ ಎಸೆಂಬ್ಲಿಯಲ್ಲಿ ತಂದಾಗ ಪ್ರಕೃತ ಮಲಬಾರಿಗೆ ಮಾತ್ರ ಅನ್ವಯಿಸುವ ಮಸೂದೆಯೊಂದನ್ನು ಸರಕಾರವೇ ತರುವುದೆಂದು ಪ್ರಧಾನ ಮಂತ್ರಿಗಳು ಅಭಿಪ್ರಾಯಪಟ್ಟುದರಿಂದ ಅದಕ್ಕೆ ಬೆಂಬಲ ದೊರೆಯಲಿಲ್ಲ. ಒಮ್ಮೆಯೇ ಇಡೀ ಪ್ರಾಂತದಲ್ಲ ದೇವಸ್ಥಾನ ಪ್ರವೇಶ ಮಸೂದೆಯನ್ನು ಜ್ಯಾರಿಗೆ ತಂದು ಎಲ್ಲಿಯೂ ಅದು ಕಾರ್ಯಕ್ಕೆ ಹಚ್ಚಲ್ಪಡದೆ ಹಾಗೆಯೇ ಉಳಿದು ಬಿಟ್ಟಲ್ಲಿ ಮಸೂದೆ ತಂದೂ ಪ್ರಯೋಜನವಿಲ್ಲದಂತಾಗುವುದು. ಆದುದರಿಂದ ಮದ್ಯಪಾನ ನಿಷೇಧದಂತೆಯೇ ಮೊದಲಾಗಿ ಮಲಬಾರು ಜಿಲ್ಲೆಯಲ್ಲಿ ಮಾತ್ರ ಈ ಮಸೂದೆಯನ್ನು ಜ್ಯಾರಿಗೆ ತಂದು ಪ್ರಯೋಗಕ್ಕೆ ಹಚ್ಚಿನೋಡಬೇಕು. ಅಸ್ಪೃಶ್ಯತೆಯು ಮಲಬಾರಿನಲ್ಲಿರುವಷ್ಟು ಉಗ್ರ ಸ್ವರೂಪದಲ್ಲಿ ಮತ್ತೆಲ್ಲಿಯೂ ಇರುವುದಿಲ್ಲ. ಅಲ್ಲಿ ಅದರ ನಿಷೇಧಾರ್ಥವಾಗಿ 1932ರಿಂದ ತೀವ್ರ ಚಳವಳ ನಡೆದಿದೆ ಇದು ಹೊರತು ನೆರೆಯ ತಿರುವಾಂಕೂರು ಸಂಸ್ಥಾನದ ಪ್ರಾಮುಖ್ಯ ದೇವಸ್ಥಾನಗಳೆಲ್ಲಾ ಹರಿಜನರಿಗೆ ತೆರೆಯಲ್ಪಟ್ಟಿರುವುದರಿಂದ ಇಡೀ ಮಲಬಾರಿನಲ್ಲೆಲ್ಲಾ ಹೆಚ್ಚಿನ ಪರಿಣಾಮವಾಗಿದೆ. ಆದುದರಿಂದ ದೇವಸ್ಥಾನ ಪ್ರವೇಶ ಮಸೂದೆಯನ್ನು ಮೊದಲಾಗಿ ಜ್ಯಾರಿಗೆ ತರಲು ಮಲಬಾರೇ ಹುಲುಸು ಕ್ಷೇತ್ರವಾಗಿದೆಯೆಂದು ಪ್ರಧಾನ ಮಂತ್ರಿಗಳ ಮನೋನಿರ್ಧಾರ. ಈ ದೃಷ್ಟಿಯಿಂದಲೇ ಅವರು ಮಲಬಾರು ದೇವಸ್ಥಾನ ಪ್ರವೇಶ ಮಸೂದೆಯನ್ನು ಈಗ ತಂದಿರುವುದು. ಹರಿಜನರ ವಿನಹ ಕೇವಲ ಸವರ್ಣ ಹಿಂದುಗಳ ಬಹುಪಕ್ಷದ ಸಮ್ಮತಿಯಿದ್ದರೆ ಮಾತ್ರ ಹರಿಜನರನ್ನು ದೇವಸ್ಥಾನ ಪ್ರವೇಶಿಸ ಬಿಡಬೇಕೆಂಬುದೇ ಈ ಮಸೂದೆಯ ಮೂಲತತ್ವ. ಇದು ನಿರಾತಂಕವಾಗಿ ಎಸೆಂಬ್ಲಿಯಲ್ಲಿ ಬೇಗನೆ ಮಂಜೂರಾಗಿ ಮಲಬಾರಿನಲ್ಲಿ ಜಯಶೀಲವಾಗಿ ಪ್ರಯೋಗಿಸಲ್ಪಟ್ಟ ಮೇಲೆ ಇಡೀ ಪ್ರಾಂತಕ್ಕದನ್ನು ಅನ್ವಯಿಸುವ ಸುದಿನವು ಬೇಗನೆ ಬರುವಂತಾಗಿ ಹಿಂದೂಧರ್ಮದ ಅತ್ಯಂತ ಲಜ್ಜಾಸ್ಪದವಾದ ಕಳಂಕವೊಂದು ದೂರವಾಗುವಂತಾಗಲೆಂದು ಹಾರೈಸುತ್ತೇವೆ.

ಜಪಾನಿಗೆ ಹಿಂದೂದೇಶದ ಮೇಲೆ ಕಣ್ಣಿಲ್ಲ!

ಜಪಾನು ಕ್ಯಾಂಟನ್ ಪಟ್ಟಣವನ್ನು ಗೆದ್ದುದರಿಂದ ಹೊಂಕೊಂಗ್ ಮಾರ್ಗವಾಗಿ ಚೀನಕ್ಕೆ ಯುದ್ಧ ಸಾಮಾಗ್ರಿ ಬರುವುದು ನಿಂತುಹೋಗಿದೆ ಇನ್ನು ಬರ್ಮ ಮತ್ತು ಚೀನೀ ಎಲ್ಲೆಯ ಮಾರ್ಗವಾಗಿ ಪಾಶ್ಚಾತ್ಯ ರಾಷ್ಟ್ರಗಳು ಚೈನಕ್ಕೆ ಯುದ್ಧೋಪಕರಣಗಳನ್ನು ಕಳುಹಿಸುವುದಾದರೆ ಬರ್ಮದ ಎಲ್ಲೆಯವರೆಗೂ ಜಪಾನು ಧಾಳಿ ನಡಿಸಿ ಅದನ್ನು ತಡೆಗಟ್ಟಲೇ ಬೇಕಾಗುವುದು. ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ನಿಕಟಸಂಬಂಧವಿರುವ ಹಿಂದೂದೇಶ, ಬರ್ಮ, ಸಯಮ್, ಮಲಯ, ಮತ್ತು ಇಂಡೋ ಚೈನಗಳನ್ನು ಒಂದುಗೂಡಿ ಪೂರ್ವ ಆಸ್ಯದ ರಾಷ್ಟ್ರಕೂಟವೊಂದನ್ನು ಸ್ಥಾಪಿಸುವುದೇ ಜಪಾನಿನ ಉದ್ದೇಶ. ಹಾಗಾದರೆ ಪಾಶ್ಚಾತ್ಯ ಪ್ರಭಾವದ ಬೆದರಿಕೆಯೇ ಇರಲಾರದು. ಜಪಾನು ಹಿಂದೂದೇಶದ ಕುರಿತೇನೂ ಆಶೆಕಟ್ಟಿಕೊಂಡಿಲ್ಲೆಂದು ಜಪಾನ ಪಾರ್ಲಿಮೆಂಟ್ ಮೆಂಬರರಾದ ಮಿ. ಕಾಕೋಕರರು ವ್ಯಕ್ತಿಗೊಳಿಸಿರುವರು. ಸಾಮ್ರಾಜ್ಯದಾಹವು ತಣಿಯುವುದೆಂದೇನೂ ಇಲ್ಲ ಚೈನವನ್ನು ಗೆಲ್ಲುವನಕ ಜಪಾನರಿಗೆ ಹಿಂದೂದೇಶದ ಆಶೆಯಿಲ್ಲದಿರಬಹುದು ಆ ಮೇಲೆ ಹಿಂದೂದೇಶವನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳುವ ಆಕಾಂಕ್ಷೆಯುಂಟಾಗಬಹುದು

ಚೇಂಬರ್ಲೇನರ ಚದುರಂಗದಾಟ

ಬ್ರಿಟಿಷ್ ಪ್ರಧಾನಮಂತ್ರಿಗಳಾದ ಮಿ. ಚೇಂಬರ್ಲೇನರು ಯುರೋಪಿನ ರಾಜನೀತಿಯದಲ್ಲಿ ಚದುರಂಗದಾಟವಾಡುತ್ತಿರುವಂತಿವೆ. ರಶ್ಯವನ್ನು ಮೂಲೆಗೊತ್ತಿ, ಫ್ರಾನ್ಸ್, ಜರ್ಮನಿ ಮತ್ತು ಇಟೆಲಿಗಳೊಂದಿಗ ಮೈತ್ರಿಯಿಂದಿರಲು ಅವರು ಪ್ರಯತ್ನಿಸುತ್ತಿರುವಂತಿದೆ ಅವರ ಅವರು ಜರ್ಮನಿಗೆ ಹೋಗಿ ಹಿಟ್ಲರರೊಡನೆ ಮಾತಾಡುವಾಗ ಫ್ರೆಂಚರಲ್ಲಿ ಸಂದೇಹಕ್ಕೆ ಕಾರಣವಾಗುತ್ತದೆ ಫ್ರಾನ್ಸಿಗೆ ಹೋಗಿ ಒಪ್ಪಂದಮಾಡಿಕೊಳ್ಳಲು ಹೋದಾಗ ಇಟೆಲಿಯು ಅಸೂಯೆಪಡುತ್ತದೆ. ಫ್ರಾನ್ಸಿಗೆ ಸೇರಿದ ಟ್ಯುನೀಸಿಯು, ಕೋರ್ಸಿಕ ಮೊದಲಾದ ಸ್ಥಳಗಳನ್ನು ತಮಗೆ ಬಿಟ್ಟುಕೊಡಬೇಕೆಂಬ ಕೂಗೆದ್ದಿದೆ ಇಟೆಲಿಯಲ್ಲಿ. ಇದರಿಂದ ಫ್ರಾನ್ಸ ಕ್ರೋಧಗೊಂಡಿದೆ. ಯೆಹೂದ್ಯರ ಸಂಬಂಧವಾದ ಇಂಗ್ಲೆಂಡಿನ ಧೋರಣೆಯಿಂದಾಗಿ ಜರ್ಮನಿಯು ಕೆರಳಿ ಇಂಗ್ಲೆಂಡನ್ನು ಇಚ್ಛಾನುಸಾರ ಟೀಕಿಸುತ್ತಿದೆ. ಎಲ್ಲರನ್ನೂ ಮೆಚ್ಚಿಸಲೆತ್ನಿಸಿ ಚೇಂಬರ್ಲೇನರು ಯಾರೂ ಕಡೆಗೆ ಗತಿಯಿಲ್ಲದಂತಾಗುವರೋ ಏನೋ?

ಲಗಾಂ ಇಲ್ಲದ ಕುದುರೆ

ಪುಟ ೧೮ರಿಂದ

ಆಗುವುದಿಲ್ಲ—ಮೊನ್ನೆ ನನ್ನ ಹತ್ತರ ಬಂದು ಅಳುತ್ತಾಳೆ,—"ಮೂರು ಹೆಣ್ಣು ಮಕ್ಕಳು ಇದ್ದಾವಲ್ಲವೋ—ಅದರಲ್ಲಿ ಹ್ಯಾಗೂ ಸಣ್ಣದನ್ನು ನಿನ್ನ ಕಲಿಯುವ ಹುಡುಗನಿಗೆ ಮಾಡಿದರೆ ಆದೀತು," ಯೆಂದು ಬಿಸಿಬಿಸಿ ಕಣ್ಣೀರು ತೆಗೆಯುತ್ತಾಳೆ—ಸೈ ಸೈ ಮಾಡಿಬಿಟ್ಟರೆ ರಗಳೆಯಿಲ್ಲ—ಮುಂಚೆಯೆಲ್ಲಾ ಆಕಾಶಕ್ಕನೇ ಏಣಿಯಿಡುತಿದ್ದಳು ಈಗ ಬೇರೆ ಉಪಾಯವಿಲ್ಲ—ನಮ್ಮ ಕಾಲಿನ ಬುಡಕ್ಕೇ ಬಂತು. ಈಗ ಈ ಕೊಳಕು ನಮಗೆ ಬೇಕಾ! ಈ ಅವಸ್ಥೆಗಳೆಲ್ಲಾ! ನೋಡಿ ಈ ನನ್ನ ಅಕ್ಕನ ಮಕ್ಕಳು ಈ ಅವಸ್ಥೆಗೆ ಬಂದರೂ ಅವರಿಗೆ ಬುದ್ಧಿ ಬಂದಿದೆ ಅಂತ ಮಾಡಿದಿರಾ? ಬೆಳಗ್ಗೆ ಏಳುವುದು, ಮುಖ ತೊಳೆಯುವುದು—ಒಂದು ಕನ್ನಡಿ, ಒಂದು ಬಾಚಣಿಗೆ ಹಿಡಕೊಂಡು ಬಾಚುವುದು. ತಂದೆ ಕೊಟ್ಟದ್ದು ಬಾಚಿಯಾಯಿತು—ತಲೆ ಬಾಚುವುದು ನಡಿಯುತ್ತಾ ಇದೆ—ಸೀದ ಹತ್ತರದ ಪ್ಯಾಟೆಗೆ ಹೋಗುವುದು, ಅಲ್ಲಿ ಕಾಫಿ ಹೋಟೆಲಿನಲ್ಲಿ ಕೂತುಕೊಂಡು ಕಾಫಿ ಕುಡಿಯುವುದು—ಸಮಯ ಹಾಳು ಮಾಡುವುದು—ಮನೆಯಲ್ಲಿ ಒಂದು ಕಡ್ಡಿ ಎತ್ತಿ ಅತ್ತಿತ್ತ ಇಡುವುದಿಲ್ಲ—ಎಲ್ಲಾ ಕೆಲಸ ಕೂಸುಗಳಿಂದ ಅಂತು ಇಂತೂ ಈ ವರ್ಷ ತೀರ್ವಗೆ ಅಸ್ತಿ ಏಲವೇ ಆಗಬೇಕು—ಮತ್ತೇನು ಮಾಡುವುದಪ್ಪಾ—ಇಷ್ಟೆಯೋ! ಮೊನ್ನೆ ನನ್ನ ಸಣ್ಣ ಮಗುವಿನ ಕುತ್ತಿಗೆ ನೂಲು ಕಾಣೆ—ಚಲ್ಲಾ, ನಾಚಿಕೆ ಮಾಡಿ ಪ್ರಯೋಜನ ಏನು—ಇದ್ದದ್ದು ಹೇಳಬೇಕಲ್ಲವಾ—ಸಿಕ್ಕಿ ಸಿಕ್ಕಿದವರ ಮೇಲೆ ಅನುಮಾನ—ಅನಾವಶ್ಯಕವಾಗಿ ನಮ್ಮ ಯಜಮಾಂತಿ ಕೆಲಸದ ಹುಡುಗಿಗೆ ಕಣ್ಣಿಗೆ ಉಪ್ಪಿನಕಾಯಿರಸ ಹಾಕಿ ಕೊಡ್ತದ್ದೇ ಬಂತು—ಮತ್ತೆ ಕೇಳುವಾಗ ಸುದ್ದಿಯೇ ಬೇರೆ—ನಮ್ಮ ಅಳಿಯ ಇದ್ದನಲ್ಲವಾ, ನನ್ನ ಅಕ್ಕನ ಮೂರನೇ ಮಗ—ನೂಲನ್ನು ಮೆಲ್ಲ ಜಾರಿಸಿ ಪೇಟೆಯಲ್ಲಿ ಮಾರಿದ ಮತ್ತೆ ಪಾನ ಕಡೆಗೆ ಸಿಕ್ಕಿತು.ಕಡೆಗೆ ಏನುಮಾಡುವುದು? ಎಲ್ಲಾ ಅಲ್ಲಿಯೇ ಚಪ್ಪೆ ಮಾಡಿತು—ನಮ್ಮ ಮಾಗಿನ ಮಾಂಸನಾವು ಮಾರುವುದಾ? ಹೀಗೆಲ್ಲಾ ಆದರೆ ಇನ್ನು ಉಳಿಯುವುದು ಹ್ಯಾಗ— ಒಮ್ಮೊಮ್ಮೆ ನೋಡುವಾಗ ಎಲ್ಲಿಯಾದರೂ ಓಡಿ ಬಿಡುವನಾ ಎಂದು ಕಾಣುತ್ತದೆ— ಯಾವ ರೀತಿಯಲ್ಲಿ ಈ ಮಕ್ಕಳನ್ನು ಶಿಸ್ತಿಗೆ ತರುವುದು?—ಯಾವ ರೀತಿಯಲ್ಲಿ ಮನೆ ಉಳಿಸುವುದು? ದೇವರೇ ಒಲ್ಲ— ವಿಪರೀ ಹೋಗಿದೆ—ಎಲ್ಲಾ ಮೀರ ವಿಪರೀ ಹೋಗಿದೆ ಆಗಲಿ—ನಿಮ್ಮ ಅಳಿಯನ ಕಾಗ್ದ ಕೊಡಿ ಅದನ್ನು ನನ್ನ ಜೊತೆಗೆ ಸಣಗೆ ತೋರಿಸಿಬಿಡುತ್ತೇನೆ—

ಬರುವ ಸಂಚಿಕೆ –

"ಸ್ವಾವಲಂಬನದ ಹಾದಿ ಹಿಡಿಯುವುದೇ ಜೀವನದ ಸಮಸ್ಯೆಯನ್ನು ಬಿಡಿಸುವುದು!"

ಉಡುಪಿ

ಉಡುಪಿಗೊಂದು ಹೊಸ ಬಾಲಸನ್ಯಾಸಿ — ಶ್ರೀ ಪೇಜಾವರದ ಶ್ರೀ. ವಿಶ್ವಮಾನ್ಯ ತೀರ್ಥಸ್ವಾಮಿಗಳವರು ತಮ್ಮ ಪ್ರತಿನಿಧಿ ಉತ್ತರಾಧಿಕಾರಿಯಾಗಿ ಶ್ರೀ. ನಿರಾಯಾಳ ನಾರಾಯಣಾಚಾರ್ಯರ ಮಗ ವೆಂಕಟ್ರಮಣ ಎಂಬ ಬಾಲ ಬ್ರಹ್ಮಚಾರಿಗೆ ಸನ್ಯಾಸ ಆಶ್ರಮ ದೀಕ್ಷೆಯನ್ನು ಇದೇ ತಾ. 2ನೇ ರಕ್ತಾಕ್ಷಿ ಕ್ಷೇತ್ರದಲ್ಲಿ ಅನುಗ್ರಹಿಸಿ, ಶ್ರೀ. ... ತೀರ್ಥರೆಂಬ ನಾಮಕರಣ ಮಾಡಿರುವರೆಂದು ತಿಳಿದು ಬರುತ್ತದೆ.

ನಗರ ಸಭೆ—ಕಳೆದ ತಾ. 30ರಲ್ಲು ಸೇರಿದ ನಗರ ಸಭೆಯಲ್ಲಿ ಕೆಮಾಲ್ ಅಟಾಟರ್ಕ ಮತ್ತು ಪ್ರೌಲಾನ ಶೌಕತಾಲಿಯವರ ನಿಧನದ ಬಗ್ಗೆ ದುಃಖಸೂಚಕ ಠರಾವುಗಳಾದುವು. ಅಪೀಲು ಕಮಿಟಿ, ಪಬ್ಲಿಕ ಹೆಲ್ತ್ ಕಮಿಟಿ, ಡಿರೆಕ್ಷನ್ ಕಮಿಟಿ, ಲೈಟಿಂಗ್ ಕಮಿಟಿ, ಕಮ್ಯೂನಿಕೇಶನ್ ಕಮಿಟಿ, ಜನ್ಮಾನಾ ಕಮಿಟಿ, ವಿದ್ಯಾ ಸಮಿತಿ, ಫೈನಾನ್ಸ ಕಮಿಟಿ, ಟೌನ್ ಪ್ಲಾನಿಂಗ್ ಕಮಿಟಿಗಳ ರಚನೆಯೂ ಆಯಿತು.

ಹೈದರಾಬಾದು ದಿನಾಚರಣೆ ಮತ್ತು ಗೀತಾ ಜಯಂತಿ—ಕಳೆದ ತಾ. 3ರಲ್ಲು ರಥಬೀದಿಯಲ್ಲಿ ವೈದಿಕ ಧರ್ಮವೀರ ಸಂಘದ ಕಡೆಯಿಂದ ಗೀತಾ ಜಯಂತಿಯೂ ಉಡುಪಿ ತಾಲೂಕು ಕೃಷಿಕ ಮಜೂರ ಸಂಘದ ಆಶ್ರಯದಲ್ಲಿ ಹೈದರಾಬಾದು ದಿನವೂ ಆಚರಿಸಲಾಯಿತು.

ಪಂಡಿತ ಧರ್ಮ ದೇವಜಿಯವರ ಪೌರೋಹಿತ್ಯದಲ್ಲಿ ಕಳೆದ ತಾ. 2ರಲ್ಲಿ ಹಿರಿಯಡ್ಕದಲ್ಲೊಂದು ವಿವಾಹ ಸಂಸ್ಕಾರವು ಆರ್ಯಸಮಾಜ ಪದ್ಧತಿಗನುಸಾರವಾಗಿ ನಡೆಯಿತು.

ಉಡುಪಿ ಬೋರ್ಡ್ ಹೈಸ್ಕೂಲ್ ಉಪಾಧ್ಯಾಯರಾದ ಶ್ರೀಯುತ ಯಂ. ಪಿ. ದೇವರಾವ್ ಬಿ. ಎ, ಎಲ್. ಟಿ. ಇವರಿಂದ ರಚಿತವಾದ ಮಾಧ್ಯಮಿಕ ಶಾಲಾ ಗಣಿತ (Middle School Mathematics) ಪುಸ್ತಕಗಳು ಮದ್ರಾಸ ಟೆಕ್ಸ್ಟ್ ಬುಕ್ಸ್ ಕಮಿಟಿಯವರಿಂದ ಮಂಜೂರಾತಿಯನ್ನು ಪಡೆದಿದ್ದು I, II, III, ಫಾರ್ಮುಗಳ ಹಾಗೂ, 6ನೆ, 7ನೆ, 8ನೇ ದರ್ಜೆಗಳ ಉಪಯೋಗಕ್ಕೆ ಕನ್ನಡದಲ್ಲಿ ಉತ್ತಮ ಗಣಿತ ಪುಸ್ತಕಗಳಾಗಿವೆ. ಎಲ್ಲಾ ವಿದ್ಯಾರ್ಥಿಗಳ ಪ್ರೋತ್ಸಾಹಕ್ಕೆ ಅರ್ಹವಾಗಿದೆ.

ಕಾಡಬೆಟ್ಟು ರಸ್ತೆಯಲ್ಲಿ ಶ್ರೀ. ಕೇಶವ ಶ್ಯಾನುಭಾಗರ ಮನೆಯ ಇದಿರು ಇರುವ ಕಲ್ವರ್ಟನ್ನು ಮುನ್ಸಿಪಾಲಿಟಿಯವರು ಇತ್ತೀಚೆಗೆ ಅಗಲಪಡಿಸಿರುತ್ತಾರೆ. ಆದರೆ ಅಲ್ಲಿರುವ ಇಲೆಕ್ಟ್ರಿಕ್ ಕಂಬವನ್ನು ಹಿಂದೆ ಹಾಕುವ ಹಾಗೆ ಪ್ರಯತ್ನಿಸಿದಂತೆ ಕಾಣುವುದಿಲ್ಲ. ಇನ್ನಾದರೂ ಸಂಬಂಧಪಟ್ಟವರು ಆ ಕಡೆಗೆ ಗಮನ ಕೊಡುವರೋ ಎಂದೊಂದು ಬಿನ್ನಪ.

ಸ್ಟೂಡೆಂಟ್ಸ್ ಫೆಡರೇಶನ್—ಪುತ್ತೂರು ಹೈಸ್ಕೂಲು ಶಾಲಾ ವಿದ್ಯಾರ್ಥಿಗಳ ಮುಷ್ಕರದ ಕುರಿತು ಡಿಸ್ಟ್ರಿಕ್ಟ್ ಸ್ಟೂಡೆಂಟ್ಸ್ ಫೆಡರೇಶನಿನ ಜನರಲ್ ಸೆಕ್ರೆಟರಿಯವರ ಪ್ರಕಟಣೆಯೊಂದು ಹೊರಟಿರುವುದು, ಮುಷ್ಕರವು ನ್ಯಾಯನೀತಿಗನುಸಾರವಾಗಿದ್ದು ಮಹಾಜನ ಸಹಾನುಭೂತಿ ದೊರೆಯುವಂತಹದ್ದಾಗಿರಬೇಕು. ಹೀಗಾದರೇನೇ ನಮ್ಮ ಫೆಡರೇಶನ್ ಬಲವಂತವಾಗಿ ನ್ಯಾಯವಾದ ನಮ್ಮ ಬೇಡಿಕೆಗಳು ಲಭಿಸುವವು ಎಂದೇ ಅದರ ಸಾರ.

ದಿ ಕೆನರಾ ಲೇಂಡ್ ಇನ್‌ವೆಸ್ಟ್‌ಮೆಂಟ್ ಲಿಮಿಟೆಡ್:—ಇದರ ಮಹಾಸಭೆಯೊಂದು ತಾ. 4-12-38ರಲ್ಲಿ ಕೆಲವು ನಿಬಂಧನೆಗಳನ್ನು ತಿದ್ದುಪಡಿಗಾಗಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಚೆಯರ್‌ಮೆನರಾದ ದಾ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಬೊಂಬೇಲೈಫ್:—ಬೊಂಬೇ ಲೈಫ್ ಇನ್ಶೂರೆನ್ಸ್ ಕಂಪೆನಿಯು ಮದ್ರಾಸ್ ಶಾಖಾ ಸೆಕ್ರೆಟರಿಗಳೂ ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸ ಲಿಮಿಟೆಡ್‌ನವರ ಆಫೀಸು ತಾ. 70ರ ಅಜ್ಜರಕಾಡಿನ ಊಟೆಕಟ್ಟಡಕ್ಕೆ ಒಪ್ಪಿಸಲ್ಪಟ್ಟಿರುವುದು.

ಕೋಟೇಶ್ವರ:—ತಾ. 27-11-38ನೇ ಭಾನುವಾರ ಯಡಾಡಿ ಮೋನಪ್ಪ ಸೆಟ್ಟರ ಮಕ್ಕಳು ಇವರ್ನಾಡಿ ನಾರಾಯಣ ಸೆಟ್ಟಿ & ಬ್ರದರ್ಸರ ನೂತನ ಗೃಹದಲ್ಲಿ ಶ್ರೀ. ಇವರ್ನಾಡಿ ದುಗ್ಗಪ್ಪ ಸೆಟ್ಟರ ಮೊಮ್ಮಗ ವ. ಪಿ. ನಾರಾಯಣ ಸೆಟ್ರ ಹಾಗೂ ಪಿ. ವಿಟ್ಠಲ ಸೆಟ್ರ ಸಹೋದರ ಶ್ರೀಯುತ ಸದಾಶಿವ ಸೆಟ್ಟರಿಗೂ ಶ್ರೀ ಕೂರ್ಗಿ ವೆಂಕಪ್ಪ ಸೆಟ್ಟರ ಮಗಳು ವ. ದಿವಂಗತ ಹುಯ್ಯಾರು ನಾಗಯ್ಯ ಹೆಗ್ಡೇರ ಸೊಸೆ ಶ್ರೀಮತಿ ಕಮಲ ಬಾಯಿಗೂ, ಮತ್ತು ಉಡುಪಿ ಸಬ್ ಮೆಜಿಸ್ಟ್ರೇಟ್ ಶ್ರೀಯುತ ತಿಮ್ಮಪ್ಪ ಸೆಟ್ಟರವರಿಗೂ, ಸದ್ರಿ ಇವರ್ನಾಡಿ ಬ್ರದರ್ಸರ ಸಹೋದರಿ ಶ್ರೀಮತಿ ಲಲಿತಾ ಬಾಯಿಗೂ ವಿವಾಹವು ಅತಿ ವಿಜೃಂಭಣೆಯಿಂದ ಜರಗಿತು. ಸದ್ರಿ ಸಮಾರಂಭಕ್ಕೆ ಹೆಚ್ಚಿನ ಸರಕಾರೀ ವ. ಲೋಕಲ್ ಗವರ್ನಮೆಂಟು ಉದ್ಯೋಗಸ್ಥರು ಹಾಗೂ ವಿದ್ಯಾವಂತರಾದಿಯಾಗಿ ಲಕ್ಷಾಧಿಪತಿಗಳಿಂದ ಭಿಕ್ಷಾಧಿಪತಿಗಳ ವರೆಗೆ ಸುಮಾರು ಎಂಟ್ಹತ್ತು ಸಾವಿರಕ್ಕೆ ಮಿಕ್ಕಿದ ಜನರು ಸೇರಿದ್ದು, ಉಚ್ಚತರಗತಿಯ ಬ್ರಾಹ್ಮಣರಿಂದ ಹರಿಜನರ ವರೆಗೆ ಸರ್ವರಿಗೂ ನವಸಂಭಾವನೆ ರೀತ್ಯಾ ತಕ್ಕ ಸ್ಥಳದಲ್ಲಿ ತಾಂಬೂಲಾದಿ ಊಟ ಉಪಚಾರಗಳಿಂದ ಸಂತೃಪ್ತಿ ಪಡಿಸಿದುದು ಇದೇ ಪ್ರಥಮ ಬಾರಿಯಾದಂತೆ. ಇವರ್ನಾಡಿ ಬ್ರದರ್ಸರು ಶ್ರೀ ದೇವತಾನುಗ್ರಹದಿಂದ ನೆರವೇರಿಸಿದ ಈ ಕಾರ್ಯವು ಸ್ತುತ್ಯಾರ್ಹವಾಗಿರಲು ಸದ್ರೀ ದಂಪತಿವರ್ಗಕ್ಕೂ ಇವರ್ನಾಡಿ ಬ್ರದರ್ಸರಿಗೂ ಶ್ರೀ ಭಗವಂತನು ಶ್ರೇಯೋಭಿವೃದ್ಧಿಗಳನ್ನೀಯಲೆಂದೇ ಹಾರೈಕೆ.

ಕ್ರಿಸ್‌ಮಸ್ ಕಾಣಿಕೆ



ಲಿವರ್ ಚಲನವಲನಗಳುಳ್ಳ ಉತ್ತಮ ತಂಗಡಿಯ ಸ್ವಿಸ್ಸ್ ನ್ಯಾವಟ್ಸ್ ರೋಲ್ಡ್‌ಗೋಲ್ಡ್ ಮುಚ್ಚಳಗಳುಳ್ಳ ರಿಸ್ಟ್ ವಾಚುಗಳು ಚೌಕಾಕೃತಿ ಮತ್ತು ಅಷ್ಟಕೋಣಾಕೃತಿಯ ಲೈಟ್ಸ್ ಕ್ರಿಸ್‌ಮಸ್ ಹಬ್ಬದ ನಿಮಿತ್ತ ಒಂಭತ್ತು ರೂಪಾಯಿ ಬೆಲೆಬಾಳುವಂತಹವು ರೂಪಾ 5-15-0ಕ್ಕೇನೇ ಮಾರಲ್ಪಡುವವು.

ಟಪ್ಪಾಲು ಖರ್ಚು ಪ್ರತ್ಯೇಕ.

ಇಂದೇ ಬರೆಯಿರಿ—

Nelson Watch Co ,
Wall Tax Road, P. O. MADRAS.

The Commonwealth Assu. Co., Ltd.

ದಿ ಕೋಮನ್‌ವೆಲ್ತ್

ಎಸ್ಯೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.

ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:—

ಎಸ್. ಪಿ. ಆರ್. ನಾಯಕ್ ಎಂಡ್ ಸನ್ಸ್,	**ಗವಾಸಕರ್ ಎಂಡ್ ಸನ್ಸ್,**
ಸ್ಪೆಶಲ ಏಜಂಟ್,	ಚೀಫ್ ಏಜಂಟ್ಸ್,
	ಅನಂತರಾವ್ ಸರ್ಕಲ್
ಕಾರ್ ಸ್ಟ್ರೀಟ್, ಮಂಗಳೂರು.	ಬೆಂಗಳೂರು.

ಪುತ್ತೂರು

(ನಮ್ಮ ಸ್ವಂತ ಸುದ್ದಿಗಾರರಿಂದ)

ಪುತ್ತೂರು ಹೈಸ್ಕೂಲಿನ ನಾಲ್ಕು ಮಂದಿ ವಿದ್ಯಾರ್ಥಿಗಳನ್ನು ಶಾಲಾಧಿಕಾರಿಗಳು ಸಸ್ಪೆಂಡ್ ಮಾಡಿದರಂತೆ. ಶಿಕ್ಷಕರ ಮೇಲೆ ಆಕ್ಷೇಪಕರವಾದ ಬರವಣಿಗೆ ಯಾರೋ ಬರೆದುದಕ್ಕೆ ಗುಮಾನಿಯ ಮೇಲೆ ಮೇಲಿನ ನಾಲ್ಕು ಮಂದಿಗೆ ದಂಡನೆ, ವಿಚಾರಣೆಯಿಲ್ಲದೆ ದಂಡನೆಕೊಟ್ಟುದಕ್ಕಾಗಿ ವಿದ್ಯಾರ್ಥಿಗಳು ಪ್ರತಿಭಟಿಸಿದರು. ತಾ. 2ರಲ್ಲಿ ಸುಮಾರು 150 ವಿದ್ಯಾರ್ಥಿಗಳು ಕ್ಲಾಸುಗಳಿಗೆ ಹೋಗದೆ ಹೊರನಿಂತರು. ಈ ವಾರ್ತೆ ತಿಳಿದು ಮಂಗಳೂರು ವಿದ್ಯಾರ್ಥಿ ಫೆಡರೇಶನಿನ ಅಧಿಕಾರಿಗಳಾದ ಶ್ರೀ. ಎ. ಎಸ್. ರಾವ್ ಬಿ. ಎ., ಶ್ರೀ| ಬಾಲಕೃಷ್ಣನ್ ನಾಯರ್ ಮತ್ತು ಶ್ರೀ| ಕುಂದರ ಇವರುಗಳು ಪುತ್ತೂರಿಗೆ ಹೋಗಿ ವಿದ್ಯಾರ್ಥಿಗಳನ್ನೂ ಶಾಲಾಧಿಕಾರಿಗಳನ್ನೂ ನೋಡಿ ರಾಜಿ ಮಾಡಿಸಿದರು. ಯಾವ ಶರತ್ತುಗಳೂ ಇಲ್ಲದೆ ವಿದ್ಯಾರ್ಥಿಗಳು ಪುನಃ ಕ್ಲಾಸುಗಳಿಗೆ ಸೇರಿಸಲ್ಪಟ್ಟರು. ಮುಷ್ಕರ ಹಿಡಿದುದಕ್ಕಾಗಿ ಯಾರಿಗೂ ದಂಡನೆ ಮಾಡುವುದಿಲ್ಲವೆಂದು ಶಾಲಾಧಿಕಾರಿಗಳು ಆಶ್ವಾಸನೆಯಿತ್ತರು. ಹೀಗಾಗಿ ಮುಷ್ಕರ ನಿಂತಿತು. ಶಾಲಾ ಹೆಡ್ಮಾಸ್ಟರರು ಫೆಡರೇಶನಿನ ಅಧಿಕಾರಿಗಳಿಗೂ, ಶಾಲಾ ಉಪಾಧ್ಯಾಯ ವೃಂದಕ್ಕೂ ಒಂದು ಟೀಪಾರ್ಟಿಯನ್ನಿತ್ತು ಮನ್ನಿಸಿದರೆಂದು ತಿಳಿದುಬರುತ್ತದೆ.

ಕುಂದಾಪುರ:—ಕರ್ನಾಟಕ ಸಾಹಿತ್ಯ ಸಂಘದ ವರ್ಧಂತಿ ಮಹೋತ್ಸವವು ಇದೇ ತಾ. 15ರಿಂದ 18ರ ವರೆಗೆ ಜರಗಲಿರುವುದು. ಕಾರ್ಯಕ್ರಮ:- ತಾ. 15ನೇ ರಾತ್ರಿ ಯಕ್ಷಗಾನ. ತಾ. 16ನೇ ಅ. ಘ. 5ಕ್ಕೆ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು. ತಾ. 17ನೇ ಬೆಳಗ್ಗೆ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು, ಮಧ್ಯಾಹ್ನ ಘ 4ಕ್ಕೆ ಜಿಲ್ಲಾ ಯಕ್ಷಗಾನ ಸೇವಕರ ಪರಿಷತ್ತು. (ರಾತ್ರೆ ಯಕ್ಷಗಾನ ಸಭೆ) ತಾ. 18ನೇ ಬೆಳಗ್ಗೆ ಕನ್ನಡ ಸಾಹಿತ್ಯೋತ್ಸವ. ಮಧ್ಯಾಹ್ನ ವರ್ಧಂತಿ ಸಭೆ, ರಾತ್ರೆ ಯಕ್ಷಗಾನ ಸಭೆ

ಯಕ್ಷಗಾನ ಸಭೆಗಳಿಗೆ ಜಿಲ್ಲೆಯ ಸುಪ್ರಸಿದ್ಧ ಅರ್ಥಗಾರರೂ ಬಿತ್ತೈಸಲಿರುವರು. ಸಭೆಯಲ್ಲಿ ಭಾಗವಹಿಸುವ ವಿದ್ವಾಂಸರು ಮುಂದಾಗಿ ಸಂಘದ ಕಾರ್ಯದರ್ಶಿಗಳಿಗೆ ಬರೆಯಬೇಕಾಗಿ ಅಪೇಕ್ಷಿಸಲಾಗಿದೆ.

ನೋಟೀಸು

ಉಡುಪಿ ತಾಲೂಕು ಹೆಗ್ಗ ಗ್ರಾಮದ ಚೆಟ್ಟಿಬೆಟ್ಟಿನಲ್ಲಿರುವ ಲಕ್ಷ್ಮಿ ಹೆಗ್ಗಡ್ತಿಯ ಮಗಳು ವ ಹೆರಿಬೆಟ್ಟು ಪಟೇಲ ಚೆಂದಯ್ಯ ಹೆಗ್ಡೇರ ಹೆಂಡತಿ ಚೆಂದ್ರಬಾಗಿ ಹೆಗ್ಗಡ್ತಿಯು ಈ ಮೂಲಕ ತಿಳಿಸುವದೇನಂದ್ರೆ —

ನನ್ನ ಕುಟುಂಬದಲ್ಲಿ ಹಿರಿಯಳು ವ ಯಜಮಾನ್ತಿಯಾಗಿದ್ದ ನನ್ನ ತಾಯಿ ಲಕ್ಷ್ಮಿ ಹೆಗ್ಗಡ್ತಿಯವರು ತಾರೀಕು 5-12-1938ನೇ ಸೋಮವಾರ ದಿವಸ ಚೆಟ್ಟಿಬೆಟ್ಟಿನಲ್ಲಿ ಮೃತರಾಗಿರುತ್ತಾರೆ. ಅನಂತ್ರ ನಾನು ನಮ್ಮ ಚೆಟ್ಟಿಬೆಟ್ಟು ಕುಟುಂಬದ ಯಜಮಾನ್ತಿಯಾಗಿರುತ್ತೇನೆ. ಸದ್ರಿಯವರು ಮೃತಪಡುವ ಕಾಲದಲ್ಲಿ ನಾನು ನನ್ನ ಗಂಡನ ಮನೆಯಾದ ಹೆರಿಬೆಟ್ಟಿನಲ್ಲಿದ್ದು ಸದ್ರಿ ವರ್ತಮಾನ ತಿಳಿದು ಚೆಟ್ಟಿಬೆಟ್ಟಿಗೆ ಬಂದಾಗ್ಗೆ ಅವರು ಮೃತಪಟ್ಟು ಕೊಂಡ್ಲೇ ಅವರ ಮಗ ದಾಸಪ್ಪ ಹೆಗ್ಡೆ ವ ಆತನ ವ ನನ್ನ ತಂದೆ ರಾಮಯ್ಯ ಹೆಗ್ಡೇರು ಒಟ್ಟಾಗಿ ಕುಟುಂಬಕ್ಕೆ ಹಾನಿಮಾಡಿ ತಾವು ಅಕ್ರಮ ಲಾಭಹೊಂದುವ ಉದ್ದೇಶದಿಂದ ಕೆಲವು ಖಾಲಿ ಕಾಗ್ದಗಳಿಗೆ ಮೃತಳ ಕೈವೊಹರುಗಳನ್ನು ಮಾಡ್ಸಿ ಇಟ್ಟುಕೊಂಡಿರುತ್ತಾರಾಗಿ ನನ್ನ ತಿಳುವಳಿಕೆಗೆ ಬಂದಿರುತ್ತದೆ. ನಮ್ಮ ಕುಟುಂಬಕ್ಕೆ ಈ ವರೇಗೆ ಸಾಲ ವಗೈರೆ ಏನೂ ಇರುವದಿಲ್ಲ. ಸದ್ರಿಯವರು ಈಗ ಕೈವೊಹರು ಮಾಡಿಸಿರುವ ಕಾಗ್ದಗಳ ಮೂಲಕ ಯಾವ ತರದ ರಿಕಾರ್ಡುಗಳನ್ನು ಸೃಷ್ಟಿ ಮಾಡಿದ್ದಾದರೆ ಅವುಗಳು ನನ್ನನ್ನು ವ ನಮ್ಮ ಕುಟುಂಬದ ಸೊತ್ತುಗಳನ್ನು ಕೂಡಾ ಬದ್ಧೀಕರಿಸತಕ್ಕದ್ದಲ್ಲವೆಂಬ ಸಂಗ್ತಿ ಈ ಮೂಲಕ ಸರ್ವರಿಗೂ ತಿಳಿಸಿರುತ್ತೇನೆ.

ಚೆಂದ್ರಬಾಗಿ ಹೆಗ್ಗಡ್ತಿ

ಚೆಟ್ಟಿಬೆಟ್ಟು, ತಾ. 6-12-1938

ಜರ್ಮನಿಯಲ್ಲಿ ಯೆಹೂ...

ಜರ್ಮನಿಯಲ್ಲಿ ಯೆಹೂದ್ಯ ಹಿಂಸೆ

ಜರ್ಮನಿಯಲ್ಲಿ ಯೆಹೂದ್ಯ ಹಿಂಸೆಯು ಅತ್ಯುಗ್ರ ಸ್ವರೂಪ ತಾಳಿದೆ. ಇದರಿಂದಾಗಿ ಅವರು ಸಿನೇಮ, ಥಿಯೇಟರು, ನರ್ತನ ಮತ್ತು ಗಾಯನ ಶಾಲೆ, ವಿಹಾರ ಸ್ಥಳ, ಮ್ಯೂಸಿಯಮ್, ಆಟರಂಗ, ಕೆರೆ ಮೊದಲಾದುವುಗಳಿಗೆ ಹೋಗದಂತಾಗಿದೆ ಹೀಗೆ ನಿಷೇಧಿಸಲ್ಪಟ್ಟಿರುವವರು ಸ್ಥಳಗಳನ್ನು ದಾಟಿಹೋಗಬೇಕಾದರೂಯೆಹೂದ್ಯರು ಪೋಲೀಸ್ ಪರ್ಮಿಟ್ ತೆಗೆದುಕೊಳ್ಳಬೇಕಾಗಿದೆ ಬರ್ಲಿನಿನ ಮುಖ್ಯರಸ್ತೆಗಳಲ್ಲಿ ಕೂಡಾ ಯೆಹೂದ್ಯರು ಸಂಚರಿಸಕೂಡದೆಂದು ಆಜ್ಞೆ ಹೊರಡಲಿದೆ

ಮಾರ್ಶಲ್ ಬ್ಲುಚರರೆಲ್ಲಿ?

ಮಾರ್ಶಲ್ ಬ್ಲುಚರರು ರಶ್ಯದ ಪ್ರಖ್ಯಾತ ಸೇನಾನಾಯಕರು. ಸೋವಿಯಟ್ ಸರಕಾರದ ಪೂರ್ವದ ಸೇನೆಯನ್ನು ಸಂಘಟಿಸಿ ಅಜೇಯವಾಗಿ ಮಾಡಿ ಜಾಪಾನಿಗೆ ಚಳಹಿಡಿಸಿದವರು ಅಂಥವರೀಗ ಕೆಲಕಾಲದಿಂದ ಅದೃಶ್ಯರಾಗಿರುವರೆಂಬ ಸುದ್ದಿಯೆದ್ದಿದೆ. ಸ್ಟೆಲಿನರ ಕೋಪಕ್ಕೊಳಗಾಗಿ ಗಲ್ಲಿಗೇರಿಸಲ್ಪಟ್ಟರೆಂಬ ವಾರ್ತೆಯುಂಟಾಗಿತ್ತು. ಆದರೆ ಈಗ ಅವರು ಚೈನದ ಕಮ್ಯೂನಿಸ್ಟ್ ಸೇನೆಯನ್ನು ಸಂಘಟಿಸುವುದರಲ್ಲಿ ನಿರತರಿರಬಹುದೆಂದು ನಂಬಲಾಗಿದೆ ಚೈನಕ್ಕೆ ರಶ್ಯವು ಹೆಚ್ಚೆಚ್ಚಾಗಿ ಸಹಾಯ ಮಾಡುತ್ತಿದೆ.

ವಾಯುವ್ಯ ಗಡಿನಾಡಿನ ಮೇಲೆ ನಿರರ್ಥಕ ಧಾಳಿ

ಬಲವನ್ನುಪಯೋಗಿಸಿ ವಾಯುವ್ಯ ಗಡಿನಾಡಿನ ಬಂಡಾಯಗಾರ ಪಂಗಡಿಗರನ್ನು ದಾರಿಗೆ ತರಬೇಕೆಂದು ಬ್ರಿಟಿಷ್ ಸರಕಾರವು ಈಗ ಸುಮಾರು ಎಂಟು ವರ್ಷಗಳಿಂದ ನಡಿಸುತ್ತಿರುವ ಧಾಳಿಯು ನಿರರ್ಥಕವಾಗಿರುವುದು. ಬಂಡಾಯಗಾರ ನಾಯಕರಾದ ಇಪ್ಪಿಯ ಫಕೀರರು ಇನ್ನೂ ಹಿಡಿಯಲ್ಪಟ್ಟಿರುವುದಿಲ್ಲ. ಅವರ ಅನುಯಾಯಿಗಳು ಆಗಾಗ ಧಾಳಿನಡಿಸಿ ಹಾವಳಿಮಾಡುತ್ತಲೇ ಇರುವರು. ಇಷ್ಟರ ವರೆಗೆ ಈ ವಾಯುವ್ಯ ಗಡಿನಾಡಿನ ಧಾಳಿಯಿಂದಾಗಿ ಸುಮಾರು 1000 ಮಂದಿ ಬ್ರಿಟಿಷ್ ಸೈನಿಕರು ಕೊಲ್ಲಲ್ಪಟ್ಟು 2,000,000 ವ್ಯಯವಾಗಿರುವುದು. ಪಠಾಣರನ್ನು ಬಲತ್ಕಾರದಿಂದ ಬಗ್ಗಿಸಲು ಸಾಧ್ಯವೇ ಇಲ್ಲ. ಮಹಾತ್ಮಗಾಂಧಿಯವರು ಸೂಚಿಸಿದಂತೆ ಮೈತ್ರಿಯಿಂದ ಒಲಿಸಿಕೊಂಡು ಅವರನ್ನು ನಾಗರಿಕರನ್ನಾಗಿ ಮಾಡಬೇಕು. ವಾಯುವ್ಯ ಗಡಿನಾಡಿನ ಪ್ರಾಂತದ ಪಠಾಣರ ರೀತಿನೀತಿಗಳನ್ನು ಖಾನ್ ಅಬ್ದುಲ್‌ಗಾಫರ್ ಖಾನರು ಕೆಲವೇ ವರ್ಷಗಳಲ್ಲಿ ಸಂಪೂರ್ಣವಾಗಿ ಬದಲಾಯಿಸಿ ದೊಡ್ಡ ಕ್ರಾಂತಿಯನ್ನುಂಟುಮಾಡಿರುವರು. ಗಾಂಧಿಜಿಯವರ ಅಹಿಂಸಾ ತತ್ವಪಾಲನೆಯಲ್ಲಿ ವಾಯುವ್ಯ ಗಡಿನಾಡು ಇಂದೀಗ ಇಡೀ ದೇಶಕ್ಕೊಂದು ಮಾದರಿಯಾಗಿರುವುದು. ಅದರ ಮೇಲೆ ಕೆಲವೇ ಮೈಲು ದೂರವಾಸಿಸುವ ಸ್ವತಂತ್ರ ಪಠಾಣ ಪಂಗಡಿಗರನ್ನು ಇದೇ ರೀತಿ ಮಾರ್ಪಡಿಸಲು ಸಾಧ್ಯವಿದೆ. ಬ್ರಿಟಿಷ್ ಸರಕಾರವು ಸೈನಿಕ ಮತ್ತು ವೈಮಾನಿಕ ಧಾಳಿಯನ್ನು ನಿಲ್ಲಿಸಿ ಗಡಿನಾಡಿನ ಪಂಗಡಿಗರನ್ನು ಇದೇ ರೀತಿ ಮಾರ್ಪಡಿಸಲು ಸಾಧ್ಯವಿದೆ. ಬ್ರಿಟಿಷ್ ಸರಕಾರವು ಸೈನಿಕ ಮತ್ತು ವೈಮಾನಿ... ಗಡಿನಾಡಿನ ಪಂಗ... ಬ್ದಾರಿಯನ್ನು ಕಾ... ಲಕ್ಕೊಪ್ಪಿಸಬೇಕು... ವರ ಮತ್ತು ಖಾ... ಖಾನರ ಸಲಹೆ... ಹೊಸಧೋರಣೆಯ... ಲ್ಲವಾದರೆ ಗಡಿನಾ... ವಾಗಲಾರದು.

ಮೋಟರ್ ವಾ...

ಜರ್ಮನ್ ... ದ ಮೋಟರ್ ವಾ... ಬಾರದೆಂದು ಗುಪ್ತ... ಧಿಕಾರಿಯು ಆಜ್ಞೆ... ಟರ್ ವಾಹನ ನ... ಯೆಹೂದ್ಯರು ವ... ಪೋಲೀಸರಿಗೊಪ್ಪಿ... ದ್ಯ ಗಂಡಸರು ... ಬಿಟ್ಟು ಹೊರಹೋ... ಕಾಶೆಯಿರುವ ... ಧರಿಸಿಕೊಳ್ಳಬೇಕ... ಟೆರುವುದು ಯ... ಸಲ್ಪಟ್ಟಿರುವ ಒ... ಕ್ಸ್‌ಗಳ ವಸೂಲಿ... ನಡಿಯುತ್ತಿದೆ. ... ಟ್ಟುಕೊಳ್ಳುವ ... ದ್ಯನೂ ಇರುವುದಿ... ಮೋಟರ್‌ಕಾರಿ... ಕೊಡುತ್ತಿದ್ದಾಕೆ... 1500ಪವನು ... ಕಾರನ್ನು ತಾನಾ... ಮೆ ಬೆಲೆಗೆ ಮಾ... ಒಂದು ಪವನಿಗೆ... ಗಳನ್ನು ವಿಕ್ರಯ... ಇಷ್ಟರ ವರೆ... ರನ್ನು ನ್ಯಾಯವ... ಮಾತ್ತಿದ್ದರು. ... ಟ್ಲರ್ ರಸ್ತೆಗಳ... ಯೋಗಿಸ ಸು... ಬಹಳ ತಾಳ್ಮೆಯ... ರು. ಆದರೆ ... ತಾಳಿಕೊಳ್ಳಲಾ... ನ್ ಸರಕಾರಕ್ಕೆ... ಸಹಾಯ ಕೇಳ... ಗ್, ಡಾಕ್ಟರ್‌ಗಳ... ವರು ಜನತೆಯ... ಆಫೀಸುಗಳ... ನೆಯೊಳಗೇನೆ... ನೆಕೊಡಲಿಕ್ಕಾಗಿ... ತಮ್ಮ ಪೆನ್ಶನ... ಸಾಮಾನುಗಳ... ನೆಮಾರನ್ನೂ ...

... ಲೀಸರ ಅಧಿ... ಚಾರಗಳು ... ವಾರ್ತೆ ಬಂದಿದೆ... ಕಾಂಗ್ರೆಸಿನ... ಪೇಟೆಯು ... ಹೆಗಾರರೂ ...

...ದ್ಯರ ಹಿಂಸೆ - ಮಾರ್ಶಲ್ ಬ್ಲುಚರರೆಲ್ಲಿ?

...ಳಿಯನ್ನು ನಿಲ್ಲಿಸಿ
...ಅಲ್ಲಿಕೆಯ ಜವಾ
...ಮಂತ್ರಿಮಂಡ
...ವ ಗಾಂಧೀಜಿಯ
...ಬ್ದುಲ್ ಗಾಫರ್
...ಸಂಪೂರ್ಣವಾಗಿ
...ರಿಸಬೇಕು. ಇ
...ಶಾಂತಿಸ್ಥಾಪಿತ

...ಲ್ಲಿ ತಿರುಗಾಡ

...ರು ಯಾವತರ
...ಲ್ಲೂ ಸಂಚರಿಸ
...ಸರ ಮುಖ್ಯಾ
...ರುವನು. ಮೋ
...ಕೈಸನ್ಸುಗಳನ್ನು
...ತಾ. 31ರೊಳಗೆ
...ದ್ದು. ಯೆಹೂ
...ಗಸರು ಮನೆ
...ಗ ದಾವಿದನ ನ
...ಟ್ಟಿಯೊಂದನ್ನು
...ಕುಮು ಹೊರ
...ಮೇಲೆ ಹೊರಿ
...ಯರ್ಡ್ ಮಾ
...ರಿಣ ಪ್ರಯತ್ನ
...ಕಾರುಗಳನ್ನಿ
...ಯಾವ ಯೆಹೂ
...ಹೂದ್ಯರು ತಮ್ಮ
...ಧರ್ಮಕ್ಕೆಂಬಂತೆ
...ಯೆಹೂದ್ಯನು
...ತನ್ನ ಮೋಟರ್
...ನಿಂತಲೂ ಕಡಿ
...ಇನ್ನೊಬ್ಬನು
...ಮೋಟರ್‌ಕಾರು

...ನರು ಯೆಹೂದ್ಯ
...ಯಲ್ಲಿಯೇ ಕಾ
...ರಚಿಸಿರುವ ಹಿ
...ಹೂದ್ಯರು ಉಪ
...ನ್ನು ಜರ್ಮನರು
...ಸಿಕೊಳ್ಳುತ್ತಿದ್ದ
...ಯಿಂದ ಅದನ್ನು
...ಲ್ಲಿಂದು ಜರ್ಮ
... ಚಳಗಾಲದ
...ಲ್ ಗೋರಿಂ
...ಮೊದಲಾಗ
...ಕಾಂಗ್ರೆಸ್ಸಿನಾಗ
...ಹೂದ್ಯರೆಲ್ಲಾ ಮ
...ಗಿತ್ತು ಜುಲ್ಮಾ
...ದ್ಯರು ಕೆಲವರು
...ರಿಗಳು ತಮ್ಮ
...ಕೆಲವರು ಮ
...ಗಿರುವುದು

...ಪಿಟಿಕ ಅಕ್ರಾ
...ಮತ್ತವೆಯೆಂದು

...ತ್ರಿಯುಂದಿರ

... ಅವರ ಸಲ
...ಪ್ರಮುಖ್ಯ ವಿ

ಚೀನೀ ಜಾಪಾನ ಯುದ್ಧ

ಷಯವನ್ನು ಚೆನ್ನಾಗಿ ಗಮನಿಸತಕ್ಕದ್ದು. ಕಾಂಗ್ರೆಸಿನ ಹೆಸರೆತ್ತಿದರೆ ಅದೇಕೋ ಅವರಿಗಾಗುವುದಿಲ್ಲ. ಕಾಂಗ್ರೆಸಿನವರನ್ನವರು ಪರದೇಶೀಯರು, ಹೊರಗಣವರೆಂದೆಲ್ಲಾ ಕರೆಯುತ್ತಾರೆ. ಕಾನೂನು ಪ್ರಕಾರ ಅವರು ಅದೆಲ್ಲಾ ಆಗಿರಬಹುದು. ಆದರೆ ಮಾನವ ಕೃತ ಕಾನೂನು, ನಿಸರ್ಗ ನಿಯಮಕ್ಕೆ ವಿರೋಧವಾದರೆ ಮೊದಲಿನದು ನಿರರ್ಥಕವಾಗಿ ಎರಡನೇದೇ ಪ್ರಭಾವಿತವಾಗುವುದು ದೇಶೀಯ ಸಂಸ್ಥಾನಗಳ ಪ್ರಜೆಗಳು ತಮ್ಮ ಹಿತಸಾಧನೆಗಾಗಿ ಕಾಂಗ್ರೆಸಿನ ಕಡೆಗೆ ದೃಷ್ಟಿಯುಳ್ಳವರಿರುತ್ತಾರೆ. ಅವರಲ್ಲನೇಕರು ಕಾಂಗ್ರೆಸ್ ಮೆಂಬರರಿರುತ್ತಾರೆ. ಶೇಟ್ ಜಮುನಾಲಾಲಜಿಯಂಥವರು ಕಾಂಗ್ರೆಸಿನಲ್ಲಿ ಉಚ್ಚ ಹುದ್ದೆಗಳನ್ನು ಪಡೆದಿರುತ್ತಾರೆ. ಕಾಂಗ್ರೆಸಿನ ದೃಷ್ಟಿಯಲ್ಲಿ ಬ್ರಿಟಿಷ್ ಮತ್ತು ದೇಶೀಯ ಸಂಸ್ಥಾನಿಕ ಪ್ರಜೆಗಳೆಂಬ ಭೇದವೇನೂ ಇಲ್ಲ. ಹಲವು ಸಂದರ್ಭಗಳಲ್ಲಿ ದೇಶೀಯ ಸಂಸ್ಥಾನಗಳ ಪ್ರಜೆಗಳು ಕಾಂಗ್ರೆಸಿನ ನಿರ್ದೇಶದಂತೆ ನಡೆಯುತ್ತಾರೆ. ಕಾಂಗ್ರೆಸು ದೇಶೀಯ ಸಂಸ್ಥಾನಗಳ ಕುರಿತು ಇಷ್ಟರ ವರೆಗೆ ವಹಿಸಿದ ತಾಟಸ್ಥ್ಯದ ಧೋರಣೆಗೆ ನಾನು ಜವಾಬ್ದಾರನೆಂಬುದು ಅವರಿಗೆ ಗೊತ್ತಿದೆ. ಅವರೆ ಕಾಂಗ್ರೆಸಿನ ಪ್ರಾಮುಖ್ಯತೆಯು ಬೆಳೆಯುತ್ತಿರುವಾಗ, ದೇಶೀಯ ಸಂಸ್ಥಾನಗಳಲ್ಲಿನ್ನೂ ಅನ್ಯಾಯಗಳು ನಡೆಯುವುದನ್ನು ಕಂಡು ಇನ್ನು ಮುಂದೆ ಈ ತಾಟಸ್ಥದ ಧೋರಣೆಯನ್ನು ಕಾಪಾಡಿಕೊಳ್ಳಲು ನನಗೆ ಸಾಧ್ಯವಾಗಲಾರದು. ದೇಶೀಯ ಸಂಸ್ಥಾನದ ಪ್ರಜೆಗಳಿಗೆ ಫಲಕಾರಿಯಾಗಿ ಸಹಾಯಮಾಡುವ ಶಕ್ತಿಯು ಕಾಂಗ್ರೆಸಿಗಿರುವುದೆಂದು ಅದು ತಿಳಿಯುವುದಾದರೆ ಕರೆಬಂದಾಗ ಅದು ಹಾಗೆಯೇ ನಡೆಯಬೇಕಾಗುವುದು. ಜನತೆಯ ಹಿತವೇ ತಮ್ಮ ಹಿತವೆಂದು ದೇಶೀಯ ರಾಜರುಗಳು ನಂಬುವುದಾದರೆ ಅವರು ಕಾಂಗ್ರೆಸಿನ ಸಹಾಯವನ್ನು ಕೃತಜ್ಞತೆಯಿಂದ ಸ್ವಾಗತೀಕರಿಸಬೇಕು. ಇನ್ನು ಮುಂದೆ ಸ್ವಲ್ಪ ಕಾಲದಲ್ಲೇ, ನಾನು ಆಶಿಸುವಂತೆ ಸ್ನೇಹಪೂರ್ವಕವಾದ ವ್ಯವಸ್ಥೆಯಿಂದ ಬ್ರಿಟಿಷ್ ಚಕ್ರವರ್ತಿ ಸರಕಾರದ ಅಧಿಕಾರಕ್ಕೆ ಬರುವ ಸಂಭವವಿರುವ ರಾಷ್ಟ್ರೀಯ ಸಂಸ್ಥೆಯೊಡನೆ ದೇಶೀಯ ರಾಜರುಗಳು ಅವರ ಹಿತದೃಷ್ಟಿಯಿಂದಲೇ ಸ್ನೇಹಭಾವದಿಂದಿರುವುದೊಳ್ಳೇದು. ಕಾಲಪುರುಷನ ಲಿಖಿತವನ್ನವರು ಸಕಾಲದಲ್ಲ ಓದಿ ತಿಳಿಯುವಷ್ಟು ವಿವೇಕಶಾಲಿಗಳಾಗಲಾರರೇ?

ಚೈನದಲ್ಲಿ ಸಂಯುಕ್ತ ಸರಕಾರವೊಂದನ್ನು ಸ್ಥಾಪಿಸಬೇಕೆಂಬ ಜಾಪಾನರ ಪ್ರಯತ್ನವು ಫಲಕಾರಿಯಾಗಿರುವುದಿಲ್ಲ. ಚೀನದ ಸೈನಿಕ ಕವಿಯಾದ ಮಾರ್ಶಲ್ ವೂ ಪೇ ಪೂ ಎಂಬವರು ಮೊದಲು ಈ ಸರಕಾರದ ಪ್ರೆಸಿಡೆಂಟರಾಗಲೊಪ್ಪಿ ಕಡೆಗೆ ಸಂಪೂರ್ಣವಾಗಿ ನಿರಾಕರಿಸಿರುವರು. ಇದು ಹೊರತು ಈ ವಿಷಯದಲ್ಲಿ ಜಾಪಾನ ಸೈನ್ಯಾಧಿಕಾರಿಗಳೊಳಗೇನೇ ಭಿನ್ನಾಭಿಪ್ರಾಯವುಂಟಾಗಿದೆ. ಆದುದರಿಂದ ಸದ್ಯ ಸಂಯುಕ್ತ ಸರಕಾರವನ್ನು ಸ್ಥಾಪಿಸುವ ಆಲೋಚನೆಯನ್ನು ಬಿಟ್ಟುಬಿಡಬೇಕಾಗಿದೆ. ನಾನ್ಕಿಂಗಿನಲ್ಲಿ ಕೇಂದ್ರ ಸರಕಾರವೊಂದನ್ನು ಸ್ಥಾಪಿಸುವ ಪ್ರಯತ್ನ ನಡೆಯಲಿದೆ.

ಕ್ಯಾಂಟನ್ ಪಟ್ಟಣದ ಬಳಿಯ ಹೊಂಕೊಂಗ್ ಎಂಬ ಸಂದುಕಟ್ಟಿನ ಪ್ರಾಮುಖ್ಯ ಸ್ಥಳವನ್ನು ಜಾಪಾನರು ಇದೇ ತಾ|4ರಲ್ಲು ಸಂಪೂರ್ಣವಾಗಿ ವಶಪಡಿಸಿಕೊಂಡಿರುವರೆಂದು ತಿಳಿದು ಬರುತ್ತದೆ. ಮಾರ್ಶಲ್ ಚ್ಯಾಂಗರಿಗೆ ಈ ಮಾರ್ಗವಾಗಿ ಮದ್ದುಗುಂಡು ಹೋಗದಂತೆ ಸಂಪೂರ್ಣ ತಡೆಮಾಡುವುದೇ ಜಾಪಾನರ ಉದ್ದೇಶವಾಗಿದೆ

ಕ್ಯಾಂಟನಿನ ಉತ್ತರಭಾಗದಲ್ಲಿ ಚೀನೀ ಸೈನಿಕರು ಜಾಪಾನರ ಮೇಲೆ ಯುದ್ಧನಡಿಸಿ ಜಾಪಾನ ಸೇನೆಯು ಎಡಭಾಗದ ಮೇಲೇರಿ ಹೋಗುವಂತೆ ನಟಿಸಿ ಜಾಪಾನರನ್ನು ವಂಚಿಸಿ ಫಕ್ಕನೆ ಬಲಭಾಗದ ಮೇಲೇರಿ ಹೋಗಿ ಪ್ರಬಲ ಹೋರಾಟ ನಡಿಸಿ ಟೈವಿಂಗ್ ಚೆಂಗ್ ಎಂಬ ಸ್ಥಳವನ್ನು ವಶಪಡಿಸಿಕೊಂಡಿರುವರು. ಹೊನಾನ್‌ಜಿಲ್ಲೆಯಲ್ಲಿ ಮತ್ತು ಪರ್ಲ್ ನದಿಯ ದಡದಲ್ಲಿ ಚೀನೀ ಗೊರಿಲ್ಲ ಪಂಗಡಿಗರು ಜಾಪಾನರಿಗೆ ಪೀಡೆಕೊಡುತ್ತಿದ್ದಾರೆ.

1939-40ರ ಜಾಪಾನಿನ ಸೇನಾವೆಚ್ಚದ ಅಂದಾಜು ಪಟ್ಟಿಯು 600ಮಿಲ್ಯಯೆನ್ನಿನಷ್ಟಾಗಿರುವುದೆಂದು ತಿಳಿದುಬರುತ್ತದೆ ಚೀನೀ ಯುದ್ಧಕ್ಕಾಗಿಯೇ 400 ಮಿಲ್ಯಯೆನ್ ವಿನಿಯೋಗಿಸಲ್ಪಡುವುದು.

ಸೋವಿಯೆಟ್ ರಷ್ಯದಿಂದ ಮಾರ್ಶಲ್ ಚ್ಯಾಂಗರಿಗೆ ಯುದ್ಧೋಪಕರಣಗಳು ಬರುತ್ತಿದ್ದ ರಸ್ತೆಯ ಮೇಲೆ ಜಾಪಾನ ವಿಮಾನಗಳು ಇದೇ ತಾ. 3ರಲ್ಲು ಮೂರು ಸಲ ಬೊಂಬೆಸೆದು ಹಾವಳಿಮಾಡಿರುತ್ತವೆ.

ಚೀನೀ ಜಾಪಾನ ಯುದ್ಧ ವಿಮಾನ ಧಾಳಿಯಿಂದ 5000 ಮಂದಿಯ ಪ್ರಾಣಹಾನಿ

ಇದೇ ತಾ 3ರಲ್ಲು ಕ್ವಾಂಗ್ಸಿ ಪ್ರಾಂತದ ಮುಖ್ಯ ಪಟ್ಟಣವಾದ ಕ್ವೆಲನಿನ ಮೇಲೆ ಜಾಪಾನ ವಿಮಾನಗಳು 300ಬೋಂಬುಗಳನ್ನು ಸುರಿಸಿ 5000ಮಂದಿ ಕೊಲ್ಲಪ್ಪಟ್ಟಿರುವರೆಂದು ತಿಳಿದು ಬರುತ್ತದೆ. 600ಮನೆಗಳು ನಾಶವಾಗಿವೆ. ಕಿಚ್ಚಿಬ್ಬಿಸುವ ಬೋಂಬುಗಳಿಂದ ಪ್ರಚಂಡ ಬೆಂಕಿಯೆದ್ದು ಮುಖ್ಯ ರಸ್ತೆಗಳು ಸುಟ್ಟು ಹೋಗಿವೆ.

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ. 2—4—0.

ಸಣ್ಣ ಸುಂದರ, ಅಕಾರಗಟ್ಟಿ ಮಜಬೂದ ಮೆಶಿನರಿ ಸರಿಯಾದ ಸಮಯ ತೋರಿಸುವಂಥದ್ದು ೩ವರ್ಷದ ಗ್ಯಾರಂಟಿ ದುಂಡಾಕೃತಿಯು ಏಕಚತುಷ್ಕೋಣಾಕೃತಿಯು ಇಲ್ಲವೆ ಚೌಕಾಕೃತಿಯು ವಾಚಿಗೆ ರೂ. 2-4-0 ಉತ್ತಮತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಚಿತ್ರ ದಲ್ಲಿತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0-0, ಜುವೆಲಿರುವ ರೋಲ್ಡ್ ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ಟ. ಖ. ಪ್ರತ್ಯೇಕ.

ಎಚ್. ದಾವಿದ್ ಅಂಡ್ ಕೊ.
ಪೊ ಬಾಕ್ಸ್ 11424 ಕಲ್ಕತ್ತಾ.

H. David & Co.
Post Box No 11424, Calcutta

ಮೈಸೂರು ಸಮಾಚಾರ

(ನವಯುಗದ ಬಾತ್ಮೀದಾರರಿಂದ)
ಮೈಸೂರು ೩, ೧,

ಪ್ರಯಾಣ—ಶ್ರೀಮನ್ಮಹಾರಾಜರು ಮದ್ರಾಸಿಗೆ ಈ ದಿನ ಪ್ರಯಾಣ ಬೆಳೆಸಿದರು. ಅಲ್ಲಿ ಅವರು ಈ ತಿಂಗಳು ತಾ ೩೫ರಲ್ಲಿ ನಡೆಯುವ ಸಂಗೀತ ಸಮ್ಮೇಳನದ ಆರಂಭೋತ್ಸವ ನಡೆಸುತ್ತಾರೆ.

ಉದಾರ ದಾನ—"ಜೀವಮ್ಮ ಪಟೇಲ" ಎಂಬ ಹೆಸರಿನ ಮೇಲೆ ಬೆಂಗಳೂರು ವಾಣೀವಿಲಾಸ ಆಸ್ಪತ್ರೆಯಲ್ಲಿ ಒಂದು ವಾರ್ಡ್ ಕಟ್ಟಿಸಲು, ಬೆಂಗಳೂರಿನ ಸೆಲೆಕ್ಟ್ ಪಿಕ್ಚರ್ಸ್ ಸರ್ಕೀಟಿನ ಡೈರೆಕ್ಟರುಗಳು ಸುಮಾರು ೫೦,೦೦೦ರೂ. ದಾನ ಮಾಡಿರುತ್ತಾರೆಂದು, ಸರ್ಕಾರದ ಪ್ರಕಟಣಾ ಶಾಖಾಧಿಕಾರಿಗಳು ತಿಳಿಸುತ್ತಾರೆ.

ಪಾಸ್ ಪಡೆಯಕೂಡದು — ಯಾವ ಸರ್ಕಾರಿ ಉದ್ಯೋಗಸ್ಥನಾಗಲಿ, ಮನರಂಜನೆಗೆ ಆಥವಾ ಇತರರಿಂದ ಯಾವ ವಿಧವಾದ ಪಾಸನ್ನೂ ಪಡೆಯಕೂಡದೆಂದು ಸರ್ಕಾರದ ಒಂದು ಆರ್ಡರ್ ಸೂಚಿಸುತ್ತದೆ.

ಸಂಬಳ ಜಾಸ್ತಿಯಾಯ್ತು— ಪ್ರಭುಸರ್ಕಾರದವರು ಮೈಸೂರು ಸೀಮೆಯಲ್ಲಿರುವ ಹೈಸ್ಕೂಲ್ ಉಪಾಧ್ಯಾಯರಿಗೆ 75ರೂ. ಬರುವವರಿಗೆ 80-4-100ರೂ. ಮತ್ತು 110-5-175ರೂ.ಗಳಂತೆ ಗ್ರೇಡನ್ನೂ, ಕೆಲವು ಅಧಿಕಾರಿಗಳಿಗೆ 35-3-50 ರೂ. ಮತ್ತು 20-1-35ರೂ ನಂತೆ ಗ್ರೇಡನ್ನೂ ಮಂಜೂರು ಮಾಡಿ, ಸಂಬಳಗಳನ್ನು ಜಾಸ್ತಿ ಮಾಡಿದ್ದಾರೆ. ಇದರಲ್ಲಿ ಕೆಲವು ಮಾಧ್ಯಮಿಕ ಸ್ಕೂಲ್ ಉಪಾಧ್ಯಾಯರಿಗೂ ದೊರೆಯುತ್ತೆ.

ಆದರೆ, ಚಿಕ್ಕ ಚಿಕ್ಕ ಪ್ರೈಮರಿ ಉಪಾಧ್ಯಾಯರಿಗೂ ಸಂಬಳ ಹೆಚ್ಚಿಸಿ, ಅವರೂ ಸಹಾಯ ಮಾಡಲಾಗುವುದೆಂದು, ಅನೇಕರು ನಿರೀಕ್ಷಿಸಿದ್ದಾರೆ. ಹೈಸ್ಕೂಲ್ ಮತ್ತು ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರಿಗೆ ಹೀಗೆ ಮಾಡಿದ್ದಕ್ಕೆ, ಸರಕಾರದವರನ್ನು ನಿಜವಾಗಿಯೂ ಅಭಿನಂದಿಸಬೇಕಾಗಿದೆ.

ಭಾವಚಿತ್ರ ಅನಾವರಣ— ಮಹಿಳೆಯರ ಏಳಿಗೆಗೋಸ್ಕರ ದುಡಿಯುತ್ತಿದ್ದು, ಗತಿಸಿ ಹೋದ ಶ್ರೀಮತಿ ವೆಂಕಟಮ್ಮ [ಇವರು ಹಿಂದಿನ ಮೊದಲನೆಯ ಮೆಂಬರ್ ಆಗಿರುವ ರಾಜಮಂತ್ರಪ್ರವೀಣ ಯನ್. ಪಿ ರಾಜಗೋಪಾಲಾಚಾರಿಯವರ ಧರ್ಮಪತ್ನಿ] ಯವರ ಭಾವಚಿತ್ರವನ್ನು 28ನೇ ದಿನ ಸೋಮವಾರ ಸಂಜೆ, ಬೆಂಗಳೂರು ಮಹಿಳಾ ಸೇವಾ ಸಮಾಜದಲ್ಲಿ ಸೇರಿದ್ದ ಮಹಿಳೆಯರ ಸಭೆಯಲ್ಲಿ ರಾಜಕುಮಾರಿ ದೇವರಾಜ ಅರಸ್ ನವರು ಅನಾವರಣ ಮಾಡಿದರು ಅವರ ಗುಣಕಥನ ಮಾಡಿದ ಮೇಲೆ, ಮೈಸೂರು ರಾಷ್ಟ್ರಗೀತದೊಡನೆ ಸಭೆಯು ಮುಕ್ತಾಯವಾಯಿತು.

ಬೇವಿನ ಮರದಲ್ಲಿ ಹಾಲು — ರಾಜಧಾನಿಯ ನಜರ್ ಬಾದ್‌ನಲ್ಲಿ ಒಂದು ಬೇವಿನಮರವಿದೆ. ಇದರಲ್ಲಿ ಒಂದು ದೊಡ್ಡ ರಂಧ್ರವಿದೆ ಈ ರಂಧ್ರದಲ್ಲಿ ಬೆಳ್ಳಗೆ ಹಾಲು ಸುರಿಯುತ್ತೆ. ಉಕ್ಕಿ ಉಕ್ಕಿ ಬರುತ್ತಾ ಇದೆ. ಇದರ ಬಳಿ ಚಾಮುಂಡೇಶ್ವರಿ ದೇವತೆ ಎಂದು ಹೇಳಲಾಗಿರುವ ಒಂದು ವಿಗ್ರಹವನ್ನು ಪೂಜೆ ಮಾಡಲಾಗುತ್ತಿದೆ. ಜನಗಳು ವಿಚಿತ್ರ ವಿಚಿತ್ರವಾಗಿ ಮಾತನಾಡುತ್ತಿದ್ದಾರೆ. ಇದು ಕಲಿಯುಗವಾದ್ದರಿಂದ ಈ ರೀತಿಯದೆ ಎಂತ ಕೆಲವರೂ ಮತ್ತೆ ಕೆಲವರು ಚಾಮುಂಡೇಶ್ವರಿ ಪೂಜೆ ನಿಲ್ಲಿಸಿದ್ದಕ್ಕೆ ಹೀಗಾಗಿದೆ ಎಂತಲೂ ಆಡಿಕೊಳ್ಳುತ್ತಿದ್ದಾರೆ. ಆದರೆ ಹಾಲುವಾಸ್ತ್ರ ಸಿಹಿಯುಂಟು

ಮಿಸ್ ಬರಿ—ಅಮೇರಿಕಾ ದೇಶದವರಾದ ಇವರು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಮೊನ್ನೆ ದಿನ ಇತರ ದೇಶದಲ್ಲಿ ವಿದ್ಯಾರ್ಥಿಗಳ ಜೀವನ ಎನ್ನುವ ವಿಚಾರವಾಗಿ ಉಪನ್ಯಾಸ ಮಾಡಿದರು.

ವೈ ಕಾಂ ವ ಕ —ಬೆಂಗಳೂರಿನಲ್ಲಿ ಇದರ ಮೀಟಿಂಗ ಸೋಮವಾರ, ಮಂಗಳವಾರ ಮತ್ತು ಬುಧವಾರ ನಡೆಯಿತು. ಕೆಲವು ಕಾಂಗ್ರೆಸ್ ಸದಸ್ಯರು ವಿನಾ ಎಲ್ಲರೂ ಬಂದಿದ್ದರು ಮುಂದಿನ ತಿಂಗಳು (ಜನವರಿಯಲ್ಲಿ) ವೈಸರಾಯರು ಮೈಸೂರು ಸಂಸ್ಥಾನಕ್ಕೆ ಬಂದಾಗ ಕಾಂಗ್ರೆಸಿನವರು ಯಾವರೀತಿ ಪಾತ್ರ ವಹಿಸಬೇಕು ಎಂಬುದಾಗಿ ಚರ್ಚೆಯಾಗಿ ಕೊನೆಗೆ ಯಾವವಿಧವಾದ ಪ್ರದರ್ಶನವನ್ನೂ ತೋರಿಸಕೂಡದೆಂದೂ, ತಾಟಸ್ಥ್ಯ ಮನೋಭಾವದಿಂದ ಇರಬೇಕೆಂದು ಚರ್ಚೆಯಾಯಿತೆಂದೂ ತಿಳಿದುಬಂದಿದೆ. ಮತ್ತು ರಾಜಕೀಯ ಸುಧಾರಣ ಸಮಿತಿಯಲ್ಲಿರುವ 7ಜನ ಕಾಂಗ್ರೆಸ ಸದಸ್ಯರು ಆ ಸಮಿತಿಗೆ ಅಸಹಕಾರ ತೋರಿಸಿ ರಾಜನಾಮೆ ಕೊಟ್ಟರೂ ಕೊಡಬಹುದೆಂದು ಹೇಳಲಾಗಿದೆ. ಯಾವವಿಧವಾದ ಸಮಾಚಾರವೂ ಸರಿಯಾಗಿ ತಿಳಿದುಬಂದಿಲ್ಲ

ಮಿ|| ಮಹಮ್ಮದ್ ಶರೀಫ್— ಇವರನ್ನು ಬೆಂಗಳೂರು ನಗರದ ಮುನಿಸಿಪಾಲಿಟಿಯ ಉಪಾಧ್ಯಕ್ಷರನ್ನಾಗಿ 1939ನೇ ವರ್ಷಕ್ಕೆ ಚುನಾಯಿಸಲಾಯಿತು.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. S. No. 382/1938.

ಪಾಂಗಾಳ ಅಣ್ಣಪ್ಪ ನಾಯಕ— ವಾದಿ
ಮತ್ತು
ಸುಬ್ಬ ಸೇರಿಗಾರ ಕೊರಗ ಸೇರಿಗಾರರ ಮಗ, ಉಡುಪಿ ತಾಲೂಕು, ಪಣಗುಡ್ಡೆ ಗ್ರಾಮ, ಪುತ್ತಿಗೆ ಮಠದ ಸ್ವಾಮಿಯರ ಮೋಟರ್ ಕಾರ್ ಡ್ರೈವರ್. ಆವರೊಟ್ಟಿಗೆ ಸಂಚಾರದಲ್ಲಿರುವವ - **ಪ್ರತಿವಾದಿ.**

ಇವರೊಳಗೆ
ಪ್ರತಿವಾದಿಗೆ

ಸದರಿ ವಾದಿಯು ನಿಮ್ಮ ಮೇಲೆ ಪ್ಲೇಂಟ್ ನಿವೃತ್ತಿಗೋಸ್ಕರ ದಾಖಲುಮಾಡಿದ ಈ ಕೋರ್ಟು ಸದರಿ ನಂ. ತಾ.23-12-'38 ನೇ ದಿವಸ ತನ್ಕಿಗೆ ಇಡೋಣಾಗಿಯದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದರಿ ದಿವಸ ಬೆಳಿಗ್ಯೆ 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ, ಈ ಮೂಲಕ ನಿಮ್ಮ ತಿಳುವಳಿಕೆಗೆ ತಂದದೆ

P. Panduranga Nayak,
P. Dayananda Nayak,
Advocates for Plaintiff.

ಮೊಕ್ಕಾಂ:—ಉಡುಪಿ ತಾ. 6—12—'38,

ಹೊಸ ನಿರ್ಮಾಣದ ಸಿನೆಮಾಯಂತ್ರಗಳು ಈಗತಾನೆ ಬಂದಿವೆ.



ಅಬಾಲ ವೃದ್ಧರಿಗೆ ಮನೆಯಲ್ಲಿ ಬಾಯಸ್ಕೋಪುಗಳನ್ನು ನೋಡುವ ಸಂಧಿ. ಜಾಹೀರಾತಿನಲ್ಲಿ ಚಿತ್ರಿಸಿದ ರೀತಿಯಾಗಿದ್ದರೆ ಹಣ ವಾಪಾಸು. ಇಲೆಕ್ಟ್ರಿಕ್ ಬೆಟರಿಗಳಿಂದಲೂ ಶಕ್ತಿಯುಕ್ತವಾದ ಬಲ್ಬುಗಳಿಂದಲೂ ಕೂಡಿರುವ ಈ ಮೆಶೀನುಗಳಿಂದ ಸಿನೆಮಾ ಕಂಪನಿಗಳ ದೃಶ್ಯಗಳನ್ನು ಕೊಠಡಿಯಲ್ಲಿ ಕಾಣಬಹುದು ಸರ್ಕಸ್ ಆಟಗಳು, ಜಂಗಲ್ ಕಾಡುಗಳ ದೃಶ್ಯಗಳು, ಸಮುದ್ರದಲ್ಲಿಯ ಸ್ಟೀಮರ್ ಯುದ್ಧಗಳು; ಮನಮೋಹಿಸುವ ಕೋಮಲಾಂಗಿಯರ ನೃತ್ಯವಿನೋದಾದಿ ಆಶ್ಚರ್ಯಕರ ಹಾಗು ಪರಮಾನಂದವನ್ನುಂಟುಮಾಡತಕ್ಕ ಸೀನರಿಗಳು, ಹಣಸಂಪಾದನೆ ಮಾಡುವವರಿಗೂ ಈ ಯಂತ್ರವು ಉಪಯೋಗಕಾರಿಯಾಗುವುದು.

ನಂಬ್ರ 1 ಬಾಯಸ್ಕೋಪ್ ಮಶೀನು ಮತ್ತು 15 ಅಡಿ ಉದ್ದದ ಫಿಲ್ಮ ಸಮೇತ ಕ್ರಯ ರೂ. 7
ನಂಬ್ರ 2 ಬಾಯಸ್ಕೋಪ್ ಮೆಶೀನ 10 ಫೀಟು ಫಿಲ್ಮ ಸಹಿತ ಕ್ರಯ ರೂ. 5
ಹೆಚ್ಚಿನ ಪ್ರತಿ 25 ಫೀಟು ಫಿಲ್ಮುಗಳಿಗೆ ಬೆಲೆ ರೂ 1 ಮಾತ್ರ.
ಪ್ಯಾಕಿಂಗ್ ಮತ್ತು ಪೋಸ್ಟೇಜು ನಂಬ್ರ 1ಕ್ಕೆ ರೂ 1—8—0, ಪ್ಯಾಕಿಂಗ್ ಮತ್ತು ಪೋಸ್ಟೇಜು ನಂಬ್ರ 2ಕ್ಕೆ ರೂ. 1—4—0, ಆರ್ಡರಿನೊಂದಿಗೆ ರೂ 2ನ್ನು ಮುಂಗಡವಾಗಿ ಕಳುಹಿಸಿದ ಕಾಗದ ಪತ್ರಗಳಿಗೆ ಮಾತ್ರ ಗಮನಕೊಡಲಾದೀತು.

ವಿಳಾಸ- - Wedlock & Co., *Part Town. MADRAS*

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 4-12-38

"ಯಕ್ಷಗಾನ ಕಲೆ" ಕಳೆದ ತಾ. 28ನೇ ಮಂಗಳವಾರ ದಿನ ರಾತ್ರಿ 9 30ಕ್ಕೆ ಕದ್ರಿ ಶ್ರೀ. ಮಂಜುನಾಥ ಥಿಯೇಟರಿನಲ್ಲಿ ಅತಿಕಾಯ-ಮೈರಾವಣ-ಇಂದ್ರಜಿತು ಕಾಳಗವೆಂಬ ಪ್ರಸಂಗಗಳ ಯಕ್ಷಗಾನ ತಾಳ ಮದ್ದಳೆಯು ಯಶಸ್ವಿಯಾಗಿ ಜರಗಿತು. ಈ ಸಂದರ್ಭದಲ್ಲಿ ಶ್ರೀ| ಕೆ. ಕೃಷ್ಣರಾಯರು 'ಯಕ್ಷಗಾನ ಕಲೆ'ಯ ವಿಷಯವಾಗಿ ಮಾತಾಡಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ| ಯಂ. ಆರ್. ಶಾಸ್ತ್ರಿಗಳು ಭಾಷಣಕರ್ತರ ಅಭಿಪ್ರಾಯವನ್ನು ಪುಷ್ಟೀಕರಿಸಿದರು.

ಹೈದರಾಬಾದ್ ದಿನಾಚರಣೆ—ಮಂಗಳೂರು ಟೌನ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಕಳೆದ ತಾ. 2ರಲ್ಲಿ ಹೈದರಾಬಾದ್ ದಿನಾಚರಣೆಯು ರಾಷ್ಟ್ರಬಂಧು ಪತ್ರಿಕೆಯ ಉಪಸಂಪಾದಕರಾದ ಶ್ರೀ| ಕೆ. ಕೃಷ್ಣರಾಯರ ಸಭಾಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೇಶವ ಕಾಮತರೂ, ಎಸ್. ಎನ್. ಹೊಳ್ಳರೂ ಭಾಷಣ ಮಾಡಿ ಹೈದರಾಬಾದಿಗೆ ಮಂಗಳೂರಿಂದ ಒಂದು ಸತ್ಯಾಗ್ರಹಿಗಳ ತಂಡವನ್ನು ಕಳುಹಿಸುವ ಆಲೋಚನೆಯಿದೆಯೆಂದರು. ಇದೇ ಸಭೆಯಲ್ಲಿ ಶ್ರೀ| ಶೌಕತಅಲಿಯವರ ನಿಧನದ ಕುರಿತು ದುಃಖ ಸೂಚಿಸಲ್ಪಟ್ಟಿತು. ಅಧ್ಯಕ್ಷರ ಸಮಯೋಚಿತ ಭಾಷಣವಾದ ಮೇಲೆ ಸಭಾಂತ್ಯವಾಯಿತು.

ಪತ್ರಿಕಾಕರ್ತರ ರಾಜಿನಾಮೆ—ಸ್ವತಂತ್ರ ಭಾರತ ಪತ್ರಿಕೆಯ ಸಂಸ್ಥಾಪಕರೂ, ಸಂಪಾದಕರೂ ಆದ ಶ್ರೀ| ಹಿರಿಯಡ್ಕ ರಾಮರಾಯ ಮಲ್ಯರು ತನ್ನ ಸಂಪಾದಕತ್ವಕ್ಕೆ ರಾಜಿನಾಮೆ ಕೊಟ್ಟಿದ್ದಾರೆಂದು ತಿಳಿದು ಬಂದಿದೆ.

ಗೀತಾ ಜಯಂತಿ—ನಿನ್ನೆಯ ದಿನ ಉಳ್ಳಾಲ ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ಗೀತಾ ಜಯಂತ್ಯುತ್ಸವವು ಶ್ರೀ. ಬಿ. ಅಚ್ಯುತ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಲಕ್ಷ್ಮಣ, ಸಮಾಜ ಶ್ರೀನಿವಾಸಾಚಾರ್, ಅರಿಬೈಲ್ ಭೋಜರಾವ್ ಮತ್ತು ಶ್ರೀಮತಿ ಲೀಲಾಬಾಯಿ ಪಿತಾಂಬರರಾಯರು ಗೀತೆಯ ಮಹತ್ವದ ವಿಷಯವಾಗಿ ಭಾಷಣಗಳನ್ನಿತ್ತರು.

ರೈತರ ಶಿಷ್ಟ ಮಂಡಲ—ಕಾಸರಗೋಡು ತಾಲೂಕಿನ ಸುಮಾರು 40ಗ್ರಾಮಗಳ ರೈತರು ನಾಳೆ ತಾ. 7ನೇ ಬುಧವಾರ ಜಿಲ್ಲಾ ಕಲೆಕ್ಟರ್ ದೊರೆಗಳಲ್ಲಿಗೆ ಒಂದು ಶಿಷ್ಟ ಮಂಡಲವನ್ನು ಕಳುಹಿಸಲಿರುವರು. ಶಿಷ್ಟ ಮಂಡಲದವರು ಕಲೆಕ್ಟರರನ್ನು ತಾ. 8ನೇ ದಿನ ಬೆಳಿಗ್ಗೆ ಕಂಡು ತಮ್ಮ ಸಂಕಷ್ಟಗಳನ್ನು ನಿವೇದಿಸಿಕೊಳ್ಳುವರೆಂದು ತಿಳಿದು ಬರುತ್ತದೆ.

ಆಗಮನ—ಅಖಿಲಭಾರತ ಗ್ರಾಮ ಕೈಗಾರಿಕೆಗಳ ಸಂಘದ ಸದಸ್ಯರಾದ ಶ್ರೀ| ಪಿ. ಕೆ. ಮಾಧವನ್‌ರವರು ಈ ಜಿಲ್ಲೆಯಲ್ಲಿ ಗ್ರಾಮ ಕೈಗಾರಿಕೆಗಳ ವಿಷಯ ತಿಳಿದುಕೊಂಡು ಹೋಗಬೇಕೆಂದು ತಾ. 2ರಲ್ಲಿ ಬಂದಿರುವರು.

ಅವಿಶ್ವಾಸದ ಠರಾವು— ಇದೇ ತಾ. 1ರಲ್ಲು ಶ್ರೀ| N. S. ಕಿಲ್ಲೆಯವರ ಬಂಗ್ಲೆಂವಿಗೆ ಹೋಗಿ, ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ| ಶ್ರೀನಿವಾಸ ಮಲ್ಯರು ಮತ್ತು ಶ್ರೀಮತಿ ಕಮಲಾದೇವಿಯವರ ಮೇಲೆ ತರಲ್ಪಟ್ಟಿರುವ ಅವಿಶ್ವಾಸ ಠರಾವಿನ ಕುರಿತು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ| ಗಂಗಾಧರ ರಾವ್ ದೇಶಪಾಂಡೆಯವರಿಗೆ ಎಲ್ಲಾ ವಿಷಯವನ್ನು ತಿಳಿಸಿರುವರೆಂದೂ ಶ್ರೀ| ಗಂಗಾಧರ ರಾಯರು ಸಭೆ ಕರೆಯಲು ಶ್ರೀ| ಮಲ್ಯರಿಗೆ ಪತ್ರ ಬರೆದಿರುವರೆಂದೂ ತಿಳಿದು ಬರುತ್ತದೆ.

ಮಂಗಳೂರಲ್ಲಿ ಇಂಟರ್ ನ್ಯಾಶನಲ್ ಜಟ್ಟಿ ಕಾಳಗದ ಟೂರ್ನಮೆಂಟ್—ದೇಶವಿದೇಶೀಯ ಪ್ರಖ್ಯಾತ ಜಟ್ಟಿಗಳು ಹಲವರು ಬಂದಿರುವರು. ಬಲ್ಗೇರಿಯಾ, ಜೆಕೋಸ್ಲೋವೆಕಿಯಾ ಮುಂತಾದ ಯುರೋಪ್ ದೇಶದ ಜಟ್ಟಿಗಳೂ ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನದ ಪ್ರಖ್ಯಾತ ಜಟ್ಟಿಗಳೂ ಇದ್ದಾರೆ. ಈ ಜಟ್ಟಿ ಕಾಳಗದ ಮೇಳವನ್ನು ಪ್ರದರ್ಶಿಸುವ ವ್ಯವಸ್ಥೆಯನ್ನು ನಮಸ್ಕಾರವಾದೂ ಮದ್ರಾಸಿನ ಪ್ರಖ್ಯಾತ 'ಮೈಸೂರು ಕೆಫೆ' ಮಾಲಕರೂ ಆದ ಶ್ರೀ| ಗುರುರಾಜ ಆಚಾರ್ಯ ಸಹೋದರರು ನಿರ್ವಹಿಸುತ್ತ ಮೈಸೂರಲ್ಲಿ ಯಶಸ್ವಿಯಾಗಿ ಈ ಸ್ಪರ್ಧೆಯ ಪ್ರದರ್ಶನವನ್ನು ಮಾಡಿ, ಈಗ ಮಂಗಳೂರಿಗೆ ಕರೆದುಕೊಂಡು ಬಂದು ಇಂತಹ ಅಪೂರ್ವ ಸಂದರ್ಭವನ್ನು ನಮ್ಮ ಜಿಲ್ಲೆಯವರಿಗೆ ಕಲ್ಪಿಸಿಕೊಟ್ಟಿರುತ್ತಾರೆ. ಮಂಗಳೂರಿನ ಮೈದಾನಿನಲ್ಲಿ ಸುಸಜ್ಜಿತವಾಗಿಯೂ, ಪ್ರೇಕ್ಷಕ ವರ್ಗಕ್ಕೆ ಸಕಲ ಸೌಕರ್ಯವುಳ್ಳದ್ದಾಗಿಯೂ ಮಾಡಿರುವ ಈ ಅಂತರರಾಷ್ಟ್ರೀಯ ಮಲ್ಲಯುದ್ಧರಂಗದಲ್ಲಿ ಸ್ಪರ್ಧೆಯು ನಡೆಯತೊಡಗಿದೆ. ಇನ್ನು ಕೆಲವೇ ದಿವಸಗಳಲ್ಲಿ ಮಂಗಳೂರಿಂದ ಮುಂದೆ ಕಲ್ಲಿಕೋಟೆಯತ್ತ ಕಡೆ ಈ ಮಲ್ಲಪಡೆ ಸಾಗುವುದು.

"ಮಂಗಳೂರು ಸ್ವದೇಶೀ ಸ್ಟೋರ್ಸ್" ರಥಬೀದಿ, ಮಂಗಳೂರು. ಈ ಶುದ್ಧ ಖಾದಿ ಸಂಸ್ಥೆಯನ್ನು ಅಖಿಲ ಭಾರತ ಚರಕಾ ಸಂಘದ (A. I. S. A.) ಕರ್ಣಾಟಕ ಶಾಖೆಯವರು ಶಿಫಾರಸು (Certify) ಮಾಡಿರುವರು. ಅಖಿಲ ಭಾರತ ಚರಖಾ ಸಂಘದವರು ಶಿಫಾರಸು ಮಾಡಿದ ಖಾದಿ ಸಂಸ್ಥೆಗಳಿಂದಲೇ ಖಾದಿಯನ್ನು ಕೊಂಡುಕೊಳ್ಳಬೇಕೆಂಬ ರಾಷ್ಟ್ರ ಮುಖಂಡರ ಹಿತವಾದವನ್ನು ಮಹಾಜನರು ಅನುಸರಿಸುವರೆ ಈಗ ಅನುಕೂಲವಿದೆ".

ಗ್ರಾಮ ಕಾಂಗ್ರೆಸ್ ಕಮಿಟಿ, ಮುದ್ರಾಡಿ:—ತಾ. 30-11-38ರಲ್ಲಿ ಶ್ರೀ ಧರ್ಮರಾಜ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಮಿಟಿಯ ಸಭೆಯೊಂದು ಜರಗಿ ಮದ್ರಾಸು ಸರಕಾರವು ತಂದಿರುವ ಸಾರ್ವಜನಿಕ ಆರೋಗ್ಯ ಮಸೂದೆಯನ್ನು ಸಮರ್ಥಿಸುವ ಸಂಸ್ಥಾನಾಧಿಕಾರಿಗಳ ದಬ್ಬಾಳಿಕೆಗೆ ಕಡಿಮೆ ಸೂಚಿಸುವ ಒಕ್ಕಲು ಹಿತಮಸೂದೆಯನ್ನು ತಯಾರಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಮೊದಲಾದ ಠರಾವುಗಳು ಅಂಗೀಕೃತವಾದವು.

ಮುಂಬಯಿ

(ನಮ್ಮ ಸ್ವಂತ ಬಾತ್ಮಿದಾರರಿಂದ)

ಪ್ರೈವೇಟ್ ಮೋಟರ್ ಡ್ರೈವರ್ಸ್ ಕೋನ್ಫರೆನ್ಸ್—ಮುಂಬಯಿಯಲ್ಲಿಯ ಪ್ರೈವೇಟ್ ಮೋಟರ್ ಡ್ರೈವರರು, ಶ್ರೀ. ಕೆ. ಎಫ್. ನರಿಮೊನರವರ ಅಧ್ಯಕ್ಷತೆಯಲ್ಲಿ ಸಮ್ಮೇಳನವೊಂದನ್ನು ಸೇರಿಸಿ, ಅದರಲ್ಲಿ ತಮಗಿರುವ ಸಂಕಷ್ಟಗಳನ್ನು ಪ್ರದರ್ಶಿಸಿ, ಮುಂಬಯಿ ಪ್ರೈವೇಟ್ ಮೋಟರ್ ಡ್ರೈವರ್ಸ್ ಯೂನಿಯನು ತಮಗೆ ಮಾಡಿದ ಉಪಕಾರಕ್ಕಾಗಿಯೂ, ತಮ್ಮ ಬಂಧುಗಳಲ್ಲಿ ಕೆಲಸ ಇಲ್ಲದವರಿಗೆ ಧರ್ಮಾರ್ಥ ಲಾಭವೆಂಬೊಂದು ಉಪಾಯವನ್ನು ಮಾಡಿ, ನಿರುದ್ಯೋಗಿ ಡ್ರೈವರರಿಗೆ ಸಹಾಯ ಮಾಡಿದ್ದಕ್ಕಾಗಿ ಅವರಿಗೆ ತಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸಿದರು ಮತ್ತು ಮೋಟರ್ ವೆಹಿಕಲ್ಸ್ ಬಿಲ್ಲನ್ನು ತಿದ್ದುಪಡಿ ಮಾಡಬೇಕೆಂದು ಮುಂಬಯಿ ಸರಕಾರದೊಡನೆ ಬೇಡಿಕೊಂಡು, ಡ್ರೈವರರ ಜೀವನವು ಅತ್ಯಂತ ಹೀನ ಸ್ಥಿತಿಯಲ್ಲಿರುವುದರಿಂದ ಇವರ ಸಂಬಳವನ್ನು ಕಡಿಮೆ ಪಕ್ಷ 55 ರೂಪಾಯಿ ಮಾಡಬೇಕೆಂದೂ, ದಿವಸಕ್ಕೆ 8ಗಂಟೆ ಮಾತ್ರ ಕೆಲಸ ಮಾಡಿಸಬೇಕೆಂದೂ, ಒಂದು ದಿವಸ ರಜೆ ಕೊಡಬೇಕೆಂದೂ ಮತ್ತು ಅಸೌಖ್ಯದಲ್ಲಿರುವಾಗ ಸಂಬಳ ಕೊಡಬೇಕೆಂಬ ಠರಾವುಗಳನ್ನು ಪಾಸುಮಾಡಿದರು.

ಮಿಲ್ಲುಗಳ ವಿಚಾರಣೆ—ಮುಂಬಯಿ ಸರಕಾರದಿಂದ ಸ್ಥಾಪಿಸಲ್ಪಟ್ಟ ಟೆಕ್ಸ್‌ಟೈಲ್ ಲೇಬರ ವಿಚಾರಣಾ ಸಮಿತಿಯು ತನ್ನ ಕಾರ್ಯವನ್ನು ದಸಂಬ್ರ 7ತಾರೀಕಿಗೆ ಪ್ರಾರಂಭಿಸುತ್ತದೆ. ಇದರ ಕೆಲಸವೇನೆಂದರೆ, ನೂಲುವ ಮಿಲ್ಲುಗಳನ್ನೆಲ್ಲಾ ಸಂದರ್ಶಿಸಿ, ಅಲ್ಲಿನ ಮಾಲಕರ ಸ್ಥಿತಿಯು ಹೇಗಿದೆ, ಕಾಮಗಾರರ ಅವಸ್ಥೆಯು ಯಾವ ತರದಲ್ಲಿದೆ ಎಂಬುದನ್ನೆಲ್ಲ ವಿಚಾರಿಸಿಕೊಂಡು ಬಂದು ಸರಕಾರಕ್ಕೆ ತಿಳಿಸುವಂಥದ್ದು. ಈ ಕಮಿಟಿಯು ದಸಂಬರ ಅಂತ್ಯದ ವರೆಗೆ ಇಲ್ಲಿದ್ದು ಅನಂತರ ಅಹಮದಾಬಾದ, ಗುಜರಾಥ ಮೊದಲಾದ ಸ್ಥಳಗಳಲ್ಲಿಯ ಮಿಲ್ಲುಗಳನ್ನು ಸಂದರ್ಶಿಸಿ, ಫೆಬ್ರವರಿಯ ಮಧ್ಯಕ್ಕೆ ಮುಂಬಯಿಗೆ ಹಿಂದಿರುಗಲಿದೆ.

ಮುಂಬಯಿ ಜನತೆಯ ಪ್ರಾರ್ಥನೆ—ಮುಂಬಯಿಯ ನಗರಸಭೆಯ ಚುನಾವಣೆಗೆ ಮುಂಬಯಿ ಪ್ರಾಂತೀಯ ಕಾಂ. ಕಮಿಟಿಯವರು, ಶ್ರೀ. ನರಿಮೊನರು ನಿಲ್ಲಬಾರದೆಂದು ಅವರ ನಾಮಪತ್ರವನ್ನು ನಿರಾಕರಿಸಿ, ಇಂದಿನವರೆಗೆ ಅಗ್ರಸ್ಥಾನದಲ್ಲಿದ್ದು ಕಾಂಗ್ರೆಸ್ ಅಂದರೆ ಏನೆಂಬುದನ್ನರಿಯದ, ಮತ್ತು ಇಂದಿನ ವರೆಗೆ ಖಾದಿಯನ್ನು ಕೂಡ ಸ್ವೀಕರಿಸದ್ದ ಕೆಲವರನ್ನು ಮುಂಬಯಿ ನಗರಸಭೆಗೆ ಕಾಂಗ್ರೆಸ್ ಸದಸ್ಯರನ್ನಾಗಿ ಚುನಾಯಿಸಿದ್ದನ್ನು ನೋಡಿ, ಮುಂಬಯಿಯ ಜನತೆಯು, ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ. ಸುಭಾಸ್‌ಚಂದ್ರ ಬೋಸರಿಗೆ ತಮ್ಮ ನಿವೇದನಪತ್ರವೊಂದನ್ನು ನಿನ್ನೆ ಕಳುಹಿಸಿರುವರು. ಅದರಲ್ಲಿ ಶ್ರೀ. ನರಿಮೊನ್‌ರವರು ಮಾಡಿದ ಜನತಾಸೇವೆ ಜನತೆಗಿರುವ ಅಪಾರ ಪ್ರೇಮ ಮೊದಲಾದವು ವಿವರಿಸಲ್ಪಟ್ಟಿವೆ.

ಕ್ರಿಕೆಟ್—ತಾ. 2-24-25ರಲ್ಲಿ ನಡೆದ ಪಂಚಪಕ್ಷೀಯ ಕ್ರಿಕೆಟ ಪಂದ್ಯಾಟದಲ್ಲಿ ಯುರೋಪಿಯನರು ಪಾರ್ಸಿಗಳನ್ನು 1ರನ್ನುಗಳಿಂದ ಸೋಲಿಸಿದರು. ಯುರೋಪಿಯನರದ್ದು ಒಟ್ಟು 487. ಪಾರ್ಸಿಗಳದ್ದು 486. ತಾ. 26, 27, 28ರಲ್ಲಿ ಹಿಂದೂಗಳು ಶ್ರೀ. ಸಿ. ಕೆ. ನಾಯ್ಡುರವರ ನಾಯಕತ್ವದಲ್ಲಿ, ರೆಸ್ಟ್ (ಕ್ರಿಶ್ಚನರು) ರೊಡನೆ ಆಟವಾಡಿ ಒಂದೇ 7ವಿಕೆಟಿಂದ 786 ರನ್ನುಗಳನ್ನು ಗಳಿಸಿದರು. ಇದರಲ್ಲಿ ಅಮರನಾಥರು 241, ಎಲ್. ಪಿ ಜೈ 103, ಮರ್ಚೆಂಟ್ 71 (ಔಟಾಗಲಿಲ್ಲ) ರನ್ನುಗಳನ್ನು ಪಡೆದು ತಮ್ಮ ಕೀರ್ತಿಯನ್ನು ಉಜ್ವಲಗೊಳಿಸಿದರು. ರೆಸ್ಟ್ ಪಂಗಡದವರು ಒಂದನೇ ಇನ್ನಿಂಗ್ಸನಲ್ಲಿ 349, ಮತ್ತು ಎರಡನೇದ್ದರಲ್ಲಿ 195 ರನ್ನುಗಳನ್ನು ಪಡೆದರೂ, ಹಿಂದೂಗಳಿಂದ ಒಂದು ಇನ್ನಿಂಗ್ಸ್ ಮತ್ತು ಕೆಲವೇ ರನ್ನುಗಳಿಂದ ಸೋತುಹೋದರು. 29-30-1ರಲ್ಲಿ ಜರಗಿದ ಪಂದ್ಯಾಟದಲ್ಲಿ ಮುಸ್ಲಿಮರಿಗೆ 246, ಯುರೋಪಿಯನರಿಗೆ 172ರನ್ನುಗಳು.

ಸದಾರ್-ಪತ್ರಿಕ್ ಕದಲ್‌ರ ಸಂಘರ್ಷಣೆ—ಕಾಂಗ್ರೆಸ ದಿವಾನರುಗಳ ಸರ್. ಪತ್ರಿಕ್ ಕೆಡಲ್ರು, ಸದಾರ್ ಪಟೇಲರೊಡನೆ ಸಾಧಾರಣ 6ಗಂಟೆಯ ವರೆಗೆ ಬುಧವಾರ ದಿವಸ ಚರ್ಚಿಸಿದರು. ಮೊದಲಾಗಿಯೇ ತಯಾರಿಸಲ್ಪಟ್ಟ ಸಂಧಿಪತ್ರಕ್ಕೆ ಸರ್ದಾರರು ಸಮ್ಮತಿಸಿದರೂ, ಠಾಕೂರ್ ಸಾಹೇಬ್ ಮತ್ತು ಸರ್. ಪತ್ರಿಕರವರಿಗೆ ಸಂಪೂರ್ಣ ಒಪ್ಪಿಗೆ ಇಲ್ಲವಂತೆ. ಸರ್ದಾರರವರ ಶರ್ತುಗಳಲ್ಲೊಂದು ಏನೆಂದರೆ, ರಾಜಕೋಟೆ ಪ್ರಜಾಮಂಡಲದಿಂದ ಕೊಡತಕ್ಕೊಂದು ಕಮಿಟಿಯು ಮಾಡಲ್ಪಟ್ಟು, ಇವರು ಈಗ ಜನತೆಯಲ್ಲಿರುವ ಸಂಕಷ್ಟಗಳನ್ನು ಪರಿಹರಿಸಲು ತಕ್ಕ ಉಪಾಯಗಳನ್ನು ಕಂಡುಹಿಡಿಯಬೇಕೆಂದು. ಸರ್. ಪತ್ರಿಕರವರು ಮೊದಲಿನ ಒಳ್ಳೆಯಲ್ಲಿ ಕೆಲವು ಸುಧಾರಣೆಗಳನ್ನು ಅಪೇಕ್ಷಿಸುವುದರಿಂದ, ಈ ಸಂಧಾನ ಸಂಪೂರ್ಣ ಕೊನೆಗೊಳ್ಳಲಿಲ್ಲ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ—ಶ್ರೀ. ಸುರತ್ಕಲು ಸೋಮಪ್ಪ ಬಿ. ಕೋಟ್ಯಂಕಾರರು ಮುಂಬಯಿಯ ತನ್ನ ಉದ್ಯೋಗದಿಂದ ನಿವೃತ್ತರಾಗಿ ಊರಿಗೆ ಹೋಗಲು ನಿಶ್ಚಯಿಸಿದ ನಿಮಿತ್ತ ಮಂಡಳಿಯು ಪ್ರೀತಿಭೋಜನಕ್ಕೆ ಆಮಂತ್ರಿಸಿತ್ತು. ಅವರು ಹೋಗ್ಯವಾಗಿ ಸೇರಿರುವುದು ಸ್ತುತ್ಯ. ತಾ. 27ರಲ್ಲಿ ಗ್ರೂಪ್ ಫೋಟೊ, ಮಾನಪತ್ರ ಸಮರ್ಪಣೆ, ಗುಜರಾತಿ, ಟೀಪಾರ್ಟಿ ಮೊದಲಾದವುಗಳಿಂದ ಪ್ರೀತಿಯುತರನ್ನು ಸತ್ಕರಿಸಲಾಯಿತು.

ಮೊಗವೀರ ಯುವಕ ಸಂಘ—ತಾ. 26-9-'38ರಲ್ಲಿ ಮುಂದರಿಸಲ್ಪಟ್ಟ ಸಾರ್ವಜನಿಕ ಸಭೆಯು ತಾ. 26-11-'38ರಲ್ಲು, ಸಂಘದ ಸ್ವಾಗತ ಸಮಿತಿಯ ಆಶ್ರಯದಲ್ಲಿ ಭಾನುವಾರ ರಾತ್ರಿ ಶಾಲಾ ಮಂದಿರದಲ್ಲಿ ಶ್ರೀ. ಭಾಸ್ಕರ್ ಕೋಟ್ಯಂಕಾರರ ಅಧ್ಯಕ್ಷತೆಯಲ್ಲಿ ನೆರವೇರಿತು.

ಶ್ರೀಗಳಾದ ಯಮ್. ರಾಮಚಂದ್ರ ರಾವ್, ಕೆ. ಯಸ್. ಬಂಗೇರ, ಬಿ. ಯಲ್. ಕೋಟ್ಯಾನ್, ವಿ. ಯಂ. ಸಾಲ್ಯಾನ್, ಯಚ್. ವಿ ಕಾಂಚನ್ ಮತ್ತು ಯಸ್. ಕೆ. ಪುತ್ರನ್‌ರ ಭಾಷಣಗಳಾದುವು.

ರೂ. 1—8—0 ಕ್ಕೆ 3 ವಾಚುಗಳು ಮತ್ತು 495 ಮನೋಹರ ವಸ್ತುಗಳು



ನಮ್ಮ ರೂ 1-8-0 ಕ್ರಯದ16 ಸಣ್ಣ ಸೀಸೆ "ಒಟ್ಟೋರೋಸ್"ನ್ನು ಕೊಂಡುಕೊಳ್ಳುವವರಿಗೆ ಒಂದು ಬಂಗಾರದ ಡಮ್ಮಿ ರಿಸ್ಟ್‌ವಾಚು, ಒಂದು ಪೌಡರ್ ಪ್ಯಾಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿಕಡ್ಡಿಯ ಕೇಸು, ಒಂದು ಸಿಗರೇಟುಲೈಟು, ಒಂದುಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ್ ಸ್ಕ್ರೂ, 555 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರಂಟಿಯಿರುವ ಭದ್ರ ಮೆಶಿನರಿಯುಳ್ಳ ಗಡಿಯಾರ, ಒಂದು ಫೌಂಟೆನ್ ಪೆನ್ನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು 14ಆಣೆ ಹೆಚ್ಚಿಗೆ.

Oriental Fancy Stores, S. C. E 90.

Post Box. No. 12204, **CULICUTTA.**

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ ಅಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ದೋಷಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. **ಕ್ರಯ**:-100ಮಾತ್ರೆಗಳಿಗೆ ರೂ. 1-5-0, 500ಕ್ಕೆರೂ. 5-0-0. ಐದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ.

ಆ ಮ ಲ ಕೀ ತೈ ಲ

(ಸುಗಂಧಯುಕ್ತ ಕೇಶವರ್ಧಕ ತೈಲ)

ಮೆದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖ ನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0.

2 ಔನ್ಸಿನ ಸೀಸೆ ಒಂದರ 0—6—0.

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ.

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ.

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ. ಭಾರತ.

ಈ ವಾರದ ನಿಮ್ಮ ಭವಿಷ್ಯ

ತಾ. 8—11—38ರಿಂದ 15—12—38ರ ವರೆಗೆ

[ಜ್ಯೋತಿಷವು ಅಪ್ರಸ್ತುತವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಿನ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. [ಸಂ ನ.

●

ಮೇಷ, ಕನ್ಯಾರಾಶಿಯವರ ಗ್ರಹಗತಿಯು ಬಹಳ ಕೆಟ್ಟದು—ಮಿಥುನ, ಕರ್ಕಾಟಕ, ಸಿಂಹ, ವೃಶ್ಚಿಕ, ಧನು, ಮೀನರಾಶಿಗಳವರ ಭವಿಷ್ಯವು ಕನಿಷ್ಠ ಕರಗತಿಯಲ್ಲಿರುವುದು—ವೃಷಭ, ತುಲಾ, ಕುಂಭ ಈ ರಾಶಿಗಳವರ ಭವಿತವ್ಯವು ಮಧ್ಯಮರೀತಿಯಲ್ಲಿರುವುದು—ಮಕರ ರಾಶಿಯವರ ಭವಿಷ್ಯವು ಚೆನ್ನಾಗಿರುವುದು.

○

ಮೇಷರಾಶಿ—

ಕಾಲನಿಯಮವನ್ನನುಸರಿಸಿ ಚಲಿಸತಕ್ಕ ಗ್ರಹಚಕ್ರದ ಗತಿಯಿಂದಾಗಿ ಅಹೋರಾತ್ರಿಗಳು ಹೇಗೆ ಉಂಟಾಗುವವೋ ಅಂತೆಯೇ ಗ್ರಹಗತಿಯನ್ನನುಸರಿಸಿ ಪರಿವರ್ತನೆಹೊಂದತಕ್ಕ ಮನುಷ್ಯನ ಭಾಗ್ಯಚಕ್ರವೂ ಕೂಡ ಸುಖದುಃಖಗಳನ್ನುಂಟುಮಾಡುವುದು. ಇವುಗಳಲ್ಲಿ ಇಷ್ಟೊಂದು ವಿಶೇಷವಿದೆ. ಅಹೋರಾತ್ರಿಗಳು ದೇಶಭೇದವನ್ನನುಸರಿಸಿದ್ದರೂ ಏಕದೇಶದಲ್ಲಿ ಸರ್ವರಿಗೂ ಏಕಕಾಲದಲ್ಲಿಯೇ ಉಂಟಾಗುವವು. ಆದರೆ ಈ ಸುಖದುಃಖಗಳಿಗೆ ದೇಶಭೇದವಿಲ್ಲದಿದ್ದರೂ ವ್ಯಕ್ತಿಭೇದವಿರುವ ಪ್ರಯುಕ್ತ ಏಕಗೃಹದಲ್ಲಿ ಏಕಕಾಲದಲ್ಲಿಯೇ ಸುಖದುಃಖಗಳ ಮಿಶ್ರೀಕರಣವು ಕಂಡುಬರುವುದು. ಪ್ರಕೃತ ನಿಮ್ಮ ಅದೃಷ್ಟಚಕ್ರವು ದುಃಖವೆಂಬ ಕಾರ್ಗತ್ತಲೆಯಲ್ಲಿ ನಿಮ್ಮನ್ನು ಕೆಡಹಿರುವುದರಿಂದ ನಿಮ್ಮ ಜ್ಞಾನವೆಂಬ ದೃಷ್ಟಿಗೆ ಆವುದೊಂದೂ ಗೋಚರಿಸದು. ಆತಏವ ನಿಮಗಾವ ರೀತಿಯಲ್ಲಿಯೂ ಸುಖವಿಲ್ಲವು. ಸ್ವಕೀಯರಾದ ಆಪ್ತಜನರಲ್ಲೂ ಕೂಡ ಮನೋವೈಷಮ್ಯವುಂಟಾಗಿ ಕಲಹವಾಗುವುದು. ಕಾರ್ಯಗಳೆಲ್ಲವೂ ನಿಷ್ಫಲಗಳಾಗುವವು. ಗ್ರಹದೊಳಗಿನ ಅಂತಃಕಲಹವು ವಿಶೇಷವಾಗಿ ನಿಮ್ಮ ದುಃಖಕ್ಕೆ ಕಾರಣವಾಗಿರುವುದು. ಧನಕ್ಕಾಗಿ ನೀವು ಬಹಳ ಪೇಚಾಡುವಿರಿ. ತಾ. 10 ರಿಂದ 13ರವರೆಗಿನ ದಿನಗಳು ಹೆಚ್ಚಿನ ಅನಿಷ್ಟದಾಯಕಗಳಾಗಿವೆ.

ವೃಷಭರಾಶಿ—

ಮುಂದೆ ಸಂಭವಿಸುವ ಕಲ್ಯಾಣದ ಚಿಹ್ನೆಗಳನ್ನು ಕಂಡೊಡನೆಯೇ ಮನಸ್ಸು ಹೆಚ್ಚಿನಂಶ ಸಮಾಧಾನ ಹೊಂದುವುದಷ್ಟೆ. ಇದೇ ರೀತಿಯಲ್ಲಿ ನಿಮ್ಮ ವಿರೋಧಿಗಳಿಗೂ ನಿಮಗೂ ಇರತಕ್ಕ ಮನಸ್ತಾಪವು ನಿವೃತ್ತಿಹೊಂದಿ ಪರಸ್ಪರ ಸೌಹಾರ್ದದಿಂದ ಇರುವ ಶುಭಚಿಹ್ನೆಯು ಪ್ರಕೃತ ನಿಮಗೆ ತೋರಿರುವದು. ಆದ್ದರಿಂದಲೇ ನಿಮ್ಮ ಯಾವ ಕಾರ್ಯಗಳಿಗೂ ವಿಘ್ನಗಳು ಬಹಳ ಕಡಿಮೆಯಾಗಿದ್ದು ಹೆಚ್ಚಿನವು ಕೊನೆಗೊಳ್ಳುವವು. ನಿಮ್ಮ ಸ್ವಭಾವವು ತೀಕ್ಷ್ಣವಾಗಿದ್ದರೂ ಅದು ನಿಮ್ಮ ಶ್ರೇಯಸ್ಸಿಗೇನೇ ಕಾರಣವಾಗಿರುವುದು. ಇಷ್ಟೆಲ್ಲಾ ಅನುಕೂಲವಿದ್ದರೂ ದೇಹವು ಆರೋಗ್ಯವಾಗಿರುವುದೆಂದು ಹೇಳಬರುವುದಿಲ್ಲ. ಮತ್ತು ಉದರರೋಗಗಳು ತಾಪಜ್ವರಾದಿಗಳು ಕಂಡುಬರುವವು. ವ್ಯಯಕ್ಕಿಂತಲೂ ಆಯವು ಇಮ್ಮಡಿಯಾಗಿರುವುದೆಂದು ಹೇಳಬಹುದು. ತಾ. 10, 11ರಲ್ಲಿ ಧನಲಾಭ ಕಾರ್ಯಜಯಗಳೂ ವಿವಾಹಿತರಿಗೆ ಸ್ತ್ರೀ ಸುಖವೂ ಸಿಗುವದು.

ಮಿಥುನರಾಶಿ—

'ಬಲ್ಲವರ ಮಾತು ಬೆಲ್ಲಕ್ಕಿಂತ ಸವಿ' ಎಂಬ ಮಾತನ್ನು ನೀವು ಕೇಳಿರಬಹುದು. ಅವರ ಮಾತಿನಲ್ಲಿ ಅಷ್ಟೊಂದು ಮಾಧುರ್ಯವೇನಿರಬಹುದೆಂಬಾಶಂಕೆಯು ನಿಮಗೆ ಹುಟ್ಟೀತು. ಆದರೆ ಸ್ವಾಭಾವಿಕವಾಗಿ ಅವರ ಮಾತು ಅಷ್ಟು ... ಗನಿರಿಗೆ. ಯಾಕೆಂದರೆ ವಿವಿಧರೀತಿಯ ಜನರ ಮನವನ್ನರಿತು ತದನುಸಾರ ವರ್ತಿಸುವುದು ಬಲ್ಲವರ ನೈಸರ್ಗಿಕಗುಣ. ಆದ್ದರಿಂದಲೇ ಅವರಿಗೆ ಅವರ ಮಾತಿನಿಂದಲೇ ಬೆಲೆಬಂದಿರುವುದು. ಸಧ್ಯದ ಪರಿಸ್ಥಿತಿಯಲ್ಲಿ ನಿಮ್ಮ ನೈಪುಣ್ಯರವಿಯು ಮೇಘದಿಂದ ಆವರಿತನಾಗಿರುವುದರಿಂದ ಬಹಳ ಮಂದನಾಗಿ ಪ್ರಕಾಶಿಸುವನು. ಇದರಿಂದ ಕೆಲವೊಂದು ವ್ಯವಹಾರದಲ್ಲಿ ಕಲಹವಾದೀತು. ಮಿತ್ರಬಾಂಧವರ ನೆರವಿಂದಾಗಿ ಹರ್ಷಿತಾಂತಃಕರಣರಾದ ನಿಮಗೆ ಶತ್ರು ನಿವೃತ್ತಿಗೆ ಇದು ಸುಸಮಯವು. ಧನವ್ಯಯದಿಂದಲೂ, ದೇಹಾಲಸ್ಯದಿಂದಲೂ ಶೋಕಾಕುಲಿತರಾದ ನಿಮಗೆ ಪುತ್ರವಿಷಯಕವಾದ ಚಿಂತೆಯೂ ಅಂಟಿಕೊಳ್ಳುವದು. ತಾ. 8,9 ಮತ್ತು 12, 13ನೇ ದಿನಗಳು ಹೆಚ್ಚಿನ ಅನುಕೂಲಗಳಾಗಿವೆ.

ಕರ್ಕಾಟಕರಾಶಿ—

ಆಯಃಕರ್ಮಣಿ ರಜ್ಯಂತೇ ಭೂತಿಕರ್ಮಾಣಿ ಕುರ್ವತೇ। ಹಿತಂ ಚ ನಾಭ್ಯಸೂಯಂತಿ ಪಂಡಿತಾ ಭರತರ್ಷಭ" ಯಾರು ಶಿಷ್ಟಜನರು ಆಚರಿಸತಕ್ಕ ಕರ್ಮಗಳಲ್ಲೇ ಯಾವಾಗಲೂ ಮನಸ್ಸನ್ನು ಸಂತೋಷಪಡಿಸುವರೋ, ಧನಲಭಿಸತಕ್ಕ ಕಾರ್ಯಗಳನ್ನೇ ಮಾಡುತ್ತಿರುವರೋ ಮತ್ತು ಪರಹಿತದಲ್ಲಿ ಅಸೂಯೆಪಡುವುದಿಲ್ಲವೋ ಅಂಥವರು ಪಂಡಿತರು ಎಂದು ವಿದುರನು ಧೃತರಾಷ್ಟ್ರನನ್ನು ಕುರಿತು ಹೇಳುವನು. ಇಂತಹ ಪಂಡಿತರು ತಮ್ಮ ಕಾಲವನ್ನು ಬಹಳ ಸುಖದಿಂದ ಕಳೆಯುವರು. ಆದರೆ ನಿಮ್ಮಲ್ಲಿ ಇಲ್ಲಿ ಹೇಳಿದ ಕೆಲವು ಭಾಗಗಳು ಕಡಿಮೆಯಿರುವುದರಿಂದ ನಿಮ್ಮ ಈಶ್ವರೋಪಾಸನೆಯು ಬಹಳ ಕಷ್ಟದಿಂದ ಆಗುವುದು. ಶಿಷ್ಟಾಚಾರದಲ್ಲಿ ನಿಮಗೆ ವಿಶ್ವಾಸವಿಲ್ಲವು. ಸಂಸರ್ಗಗುಣದಿಂದಾಗಿ ನಿಮ್ಮ ಮನಸ್ಸು ಕೂಡಾ ಪರೋತ್ಕರ್ಷವನ್ನು ಸಹಿಸುವುದಿಲ್ಲವು. ಈ ತೆರನಾದ ನಿಮ್ಮ ಕ್ರಿಯೆಗಳಿಂದ ನೀವು ಕೈಕೊಂಡ ಕಾರ್ಯಗಳಲ್ಲಿ ವಿರೋಧಿಗಳ ಕೈಯೇ ಮೇಲಾಗಿ ಹೆಚ್ಚಿನಂಶ ಧನನಾಶವಾಗುವುದು. ದೇಹವು ಸಂಪೂರ್ಣ ನಿರೋಗಿಯೆಂದು ಹೇಳಲಾಗದು. ಮಿತ್ರ ಜನರಿಂದಾಗಿ ಸ್ವಲ್ಪ ಮಟ್ಟಿನ ಮಾನಸಿಕ ಸುಖ ದೊರೆಯುವುದು. ಕಾಮಿಗಳ ಮಾಂಭಿತವು ಪೂರ್ತಿಗೊಳ್ಳುವುದು. ತಾ. 8, 9 ಮತ್ತು 12, 13 ಈ ದಿನಗಳು ಧನಮಾನಗಳಿಗೆ ಹಾನಿಕರಗಳಾಗಿವೆ.

ಸಿಂಹರಾಶಿ—

ಈ ವಾರದಲ್ಲಿ ನಿಮಗೆ ಸಂಭವಿಸತಕ್ಕ ಇಷ್ಟಾನಿಷ್ಟಗಳ ಸಮೂಹದಲ್ಲಿ ಹತ್ತರಲ್ಲಿ ನಾಲ್ಕು ಇಷ್ಟಗಳೂ ಮಿಕ್ಕುಳಿದವು ಅನಿಷ್ಟಗಳೂ ಸಂಭವಿಸುವವು. ಸಾಂಪತ್ತಿಕ ಸ್ಥಿತಿಯು ಬಹಳ ಸುಧಾರಿಸಿರುವುದು. ಪ್ರತಿಯೊಂದು ಕಾರ್ಯಗಳಲ್ಲಿ ಲಾಭವು ತೃಪ್ತಿಕರವಾಗಿರುವುದು. ಆದಕಾರಣದಿಂದಲೇ ನಿಮ್ಮ ಮಾತಿಗೆ ಹತ್ತು ಜನರು ಬೆಲೆಕೊಡುವರು. ಆದರೆ ದಾಯಾದಿಗಳ ಉಪದ್ರವವು ಅಧಿಕವಾಗುವುದು. ವಿಘ್ನದಿಂದಾಗಿ ಇಷ್ಟಪೂರ್ತಿಯಾಗದು. ದೇಹಾಲಸ್ಯವು ಅಧಿಕವಾಗುವುದರಿಂದಲೂ ಬಂಧು ಬಳಗದವರ ವಿಯೋಗದಿಂದಲೂ ದುಃಖವು ಹೆಚ್ಚುವುದು. ತಾ. 10, 11 ಮತ್ತು 14, 15 ಈ ದಿನಗಳಲ್ಲಿ ದೇಹಾಲಸ್ಯವು ವಿಘ್ನಗಳು ಹೆಚ್ಚುವವಲ್ಲದೆ ಧನವ್ಯಯವು ನಿಮ್ಮ ಮರ್ಯಾದೆಯನ್ನು ಮೀರಿ ಹೋಗುವುದು.

ಕನ್ಯಾರಾಶಿ—

ಕಷ್ಟಸಾಧ್ಯವಾದ ಕಾರ್ಯವನ್ನು ಮಾಡುವುದರಿಂದ ಜನರು ಈಪ್ಸಿತಾರ್ಥವನ್ನು ಪಡೆಯುವರು. ಹೇಗೆಂದರೆ, "ಪ್ರಭುಃ ಕ್ಷಮಯಾ ಯುಕ್ತೋ ದರಿದ್ರಶ್ಚ ಪ್ರದಾನವಾನ್। ದ್ವಾವಿಮೌ ಪುರುಷಶ್ರೇಷ್ಠೌ ಸ್ವರ್ಗಸ್ಯೋಪರಿತಿಷ್ಠತಃ" ದಯಾದಾಕ್ಷಿಣ್ಯಾದಿ ಗುಣಗಳಿಂದ ಕೂಡಿದ ಪುರುಷನಿಗೆ ಚಿಕ್ಕದೊಂದು ಅಧಿಕಾರ ದೊರೆತರೆ ಅದೆಷ್ಟೋ ಗುಣಗಳು ಅವನಿಂದ ಮಾಯವಾಗುತ್ತವೆ. ಆದರಲ್ಲೂ ಪ್ರಭುತ್ವವಂ ಪಡೆದನೆಂದರೆ ಬೇರೆ ಕೇಳಬೇಕಾಗಿಲ್ಲ. ಮತ್ತು ಜನಸಾಮಾನ್ಯರಿಗೆ ಧರ್ಮಬುದ್ಧಿಯು ಹುಟ್ಟುವುದು ಬಹಳ ವಿರಳ. ಇನ್ನು ಹೊಟ್ಟೆ ಬಟ್ಟೆಗಾಗಿ ಅಲೆಯತಕ್ಕವನಲ್ಲಿ ದಾನಬುದ್ಧಿಯು ಬರುವುದೆಂದರೆ ಅತ್ಯಂತ ಆಶ್ಚರ್ಯಕರವಾದ ಸಂಗತಿ. ಹೀಗೆ ಬಹಳ ದುಸ್ಸಾಧ್ಯಗಳಾದ ಗುಣಗಳು ಪರಸ್ಪರದಲ್ಲಿ ಕಂಡುಬಂದರೆ ಅವರು ನಿಶ್ಚಯವಾಗಿಯೂ ಪರತ್ರ ಸ್ವರ್ಗವಾಸಿಗಳು. ನಿಮಗೆಂತೂ ಈ ವಾರದಲ್ಲಿ ಬಹಳ ಅನಿಷ್ಟಗಳ ಸಮೂಹಗಳೇ ಬಂದೊದಗಿವೆ. ರೋಗಪೀಡೆ, ನಿರರ್ಥಕ ಧನವ್ಯಯ, ಸ್ತ್ರೀಯರಿಂದ ಅನಿಷ್ಟ, ಮನೋರೋಗ ಇವುಗಳು ವಿಶೇಷವಾಗಿ ಸಂಭವಿಸಲಿವೆ. ಇವುಗಳಿಂದ ನೀವು ಪಾರಾಗಿ ಋಜುಮಾರ್ಗಾವಲಂಬಿಗಳಾಗಿದ್ದಲ್ಲಿ ಪೂರ್ವೋಕ್ತ ಪುರುಷಶ್ರೇಷ್ಠರಲ್ಲಿ ಗಣಿಸಲ್ಪಡುವಿರಿ. ವಾರದ ಆದ್ಯಂತ ಭಾಗಗಳು ಬಹಳ ಕಷ್ಟದಾಯಕಗಳಾಗಿವೆ.

ತುಲಾರಾಶಿ—

ಇತರ ರಾಶಿಯವರಿಗಿಂತ ನಿಮ್ಮ ಭವಿಷ್ಯವು ಎಷ್ಟೋ ಉತ್ತಮವಿದೆಯೆಂದು ಹೇಳಬಹುದು. ಇಷ್ಟಾನಿಷ್ಟ ಗ್ರಹರ ಮಿಶ್ರೀಕರಣವು ಸಮನಾಗಿರುವುದರಿಂದ ವಿಶೇಷ ವ್ಯತ್ಯಯಗಳೇನೂ ಪ್ರಕೃತದ ಪರಿಸ್ಥಿತಿಯಲ್ಲುಂಟಾಗದು. ಮನಸ್ಸು ಅತ್ಯಂತ ಚಂಚಲವಾಗಿದ್ದು ಯಾವ ಕಾರ್ಯಕ್ಕೂ ತಕ್ಕ ಉತ್ಸಾಹವಿಲ್ಲದೆ ಸರ್ವದಾ ಭಯವಿಹ್ವಲವಾಗಿರುವುದು. ಶತ್ರುಗಳ ತೀಕ್ಷ್ಣ ದೃಷ್ಟಿಯು ನಿಮ್ಮ ಹಣದ ಮೇಲೆ ಬಿದ್ದಿರುವುದು. ಶರೀರಕ್ಕೆ ಅಕಸ್ಮಾತ್ ಗಾಯಗಳು ಆದಾವು. ಆರಂಭಿಸುವ ಕಾರ್ಯಗಳಲ್ಲಿ ಶ್ರಮಕ್ಕೆ ಯೋಗ್ಯವಾದ ಬೆಲೆಯು ದೊರೆಯುವದು. ಮಿತ್ರವೃಂದ ಪರಿಜನರಿಂದ ಕೂಡಿರುವ ನಿಮಗೆ ದಿನಗಳು ಕಷ್ಟವಾಗಿ ಪರಿಣಮಿಸವು. ಗೃಹಸ್ಥಧರ್ಮಾವಲಂಬಿಗಳಿಗೆ ಧರ್ಮಕರ್ಮಗಳಿಗೇನೂ ಹಾನಿಯಾಗದು. ಆತ್ಮವಂಚನೆಯು ಬಾಯಿಸ್ತೆ ನಿಮ್ಮಿಂದ ಮಾಡಲ್ಪಟ್ಟಿರುವುದರಿಂದ ಮೊದಲೇ ಭಯಗ್ರಸ್ತವಾದ ನಿಮ್ಮ ಚಿತ್ತವು ವಿಶೇಷ ಕಳವಳಗೊಳ್ಳುವುದು. ತಾ. 10ರಿಂದ 13ರ ವರೆಗಿನ ದಿವಸಗಳು ಅತ್ಯುತ್ತಮವಿರುವವು.

ವೃಶ್ಚಿಕರಾಶಿ—

ವಿರೋಧಿಗಳಿಂದುಂಟಾದ ಹಾನಿಯಿಂದ ಮನಸ್ಸು ಹೆಚ್ಚಿನ ವ್ಯಥೆಗೀಡಾಗುವುದಿಲ್ಲವ. ಆದರೆ ಆಪ್ತಜನರೆಂದು ನೋಗುಹಾಕಿಕೊಂಡ ಆತ್ಮೀಯರೇ ಮೋಸ ಮಾಡಿದ್ದಲ್ಲಿ ಅದು ಅತ್ಯಂತವಾಗಿ ಅಂತಃಕರಣವನ್ನು ದಹಿಸುವುದಲ್ಲದೆ ಎಂದೆಂದಿಗೂ ಮರೆಯುವುದಿಲ್ಲವು. ಈ ಘಟನೆಯು ನಿಮಗೀ ವಾರದಲ್ಲಿ ಸಂಭವಿಸುವುದು. ಪಿತ್ಥ ಮತ್ತು ನೇತ್ರೋದರ ವ್ಯಾಧಿಯಿಂದಲೂ ಪುತ್ರ ಭೃತ್ಯರ ಅವಿಧೇಯತೆಯಿಂದಲೂ ಮನೋವ್ಯಥೆಯು ಹೆಚ್ಚುವುದಲ್ಲದೆ ಸ್ತ್ರೀಯರೊಡನೆ ಕಲಹವಾಗುವುದು. ದೇಹದಲ್ಲಿ ಆಯಾಸವು ಅಧಿಕವಾಗುವುದು. ಕಷ್ಟಾರ್ಜಿತವಾದ ಧನ ಮತ್ತು ಇತರವಸ್ತುಗಳು ಒಡನೆಯೇ ಖರ್ಚಾಗುವವು. ವಾರದ ಉತ್ತರಾರ್ಧ ಭಾಗದಲ್ಲಿ ರಾಜಭಯ, ಬಂಧೋದ್ವೇಗಾದ್ಯನಿಷ್ಟಗಳು ಹೆಚ್ಚುವವು.

ಧನುರಾಶಿ—

ನಿಮ್ಮ ಭಾಗಕ್ಕೆ ಈ ವಾರವು ತಕ್ಕಮಟ್ಟಿಗೆ ಇದೆಯೆಂದು ಹೇಳಬಹುದು. ಅನೇಕ ತರದ ಉದ್ಯೋಗದಲ್ಲಿ ವ್ಯಾಪೃತರಾದ ನಿಮಗೆ ನ್ಯಾಯವಾದ ಲಾಭವು ಸಿಕ್ಕುವುದು. ವ್ಯಾಪಾರ ಕಾರ್ಯದಲ್ಲಿ ಉದ್ಯುಕ್ತರಾದವರು ಈ ವಿಷಯವನ್ನು ನೆನಪಿನಲ್ಲಿಡತಕ್ಕದ್ದು. ಏನೆಂದರೆ "ಯಥಾ ಮಧು ಸಮಾದತ್ತೇ ರಕ್ಷನ್ ಪುಷ್ಪಾಣಿ ಷಟ್ಪದಃ। ತದ್ವದರ್ಥಾನ್ಮನುಷ್ಯೇಭ್ಯಃ ಆದದ್ಯಾದವಿಹಿಂಸಯಾ" ಪುಷ್ಪಗಳಲ್ಲಿರತಕ್ಕ ಮಕರಂದವನ್ನು ಭ್ರಮರಗಳು ಪುಷ್ಪಗಳಿಗೇನೂ ಹಾನಿಮಾಡದೆ ಹೇಗೆ ಸಂಗ್ರಹಿಸುವವೋ ಅದೇ ರೀತಿಯಲ್ಲಿ ನೀವು ನಿಮ್ಮ ಗಿರಾಕಿಗಳಿಂದ ನ್ಯಾಯವಾದ ರೀತಿಯಲ್ಲಿ ಅವರ ಮನಸ್ಸಿಗೆ ನೋಯಿಸದೆ ಯೋಗ್ಯವಾದ ಮುನಾಫೆಯನ್ನು ಹೊಂದತಕ್ಕದ್ದು. ಅದು ಬಿಟ್ಟು ತಲೆಗಿಡುಕತನಕ್ಕೆ ಹೋದರೆ ಪರಿಣಾಮವು ಒಳಿತಾಗದು. ನೀವೇನೋ ಇಷ್ಟರ ತನಕ ನ್ಯಾಯವನ್ನು ಅತಿಕ್ರಮಿಸಿದ್ದೀರೆಂದು ಹೇಳುವುದಿಲ್ಲ. ಆದರೂ ಈ ಭಾಗದಲ್ಲಿ ಕಲಹ ಮತ್ತು ಅಪಹೇಳನಕ್ಕೆ ಸಿಲುಕಿರಬಹುದು. ಇದೆಲ್ಲಕ್ಕೂ ಚಂಚಲವಾದ ಮತ್ತು ಕುಮಾರ್ಗಗಾಮಿಯಾದ ನಿಮ್ಮ ಮನಸ್ಸೇ ಕಾರಣವಾಗಿರುವುದು. ಸತ್ಪುರುಷರಾದ ನಿಮಗೆ ಕಾರ್ಯಗಳಲ್ಲಿ ಜಯವೂ ಜನರಿಂದ ಮನ್ನಣೆಯೂ ಮಿತ್ರವರ್ಗದಿಂದ ಅಭಿವೃದ್ಧಿಯೂ ದೊರೆಯುವುದು. ಅಂಗಶ್ರೀಯವು ನಿಮ್ಮ ಮಾನಸಿಕ ಸುಖಕ್ಕೆ ತಡೆಯಾಗಿರುವುದು.

ಮಕರರಾಶಿ—

ಹೆಚ್ಚಿನಂಶ ಗ್ರಹರ ಅನುಕೂಲ್ಯದಿಂದ ನಿಮಗೀ ವಾರವು ಅತ್ಯುತ್ತಮವಿರುವುದು. ಆದರೆ ನಿಮ್ಮ ನಿಷ್ಠುರ ಕಠೋರನುಡಿಯು ನಿಮ್ಮ ಪ್ರಗತಿಗೆ ಕಂಟಕಪ್ರಾಯವಾಗಿದೆ. ಈ ಭಾಗದಲ್ಲಿ ಹೆಚ್ಚಿನ ನಿಗಾ ತೆಗೆದುಕೊಳ್ಳಿರಿ. ಇತರ ಎಲ್ಲಾ ಭಾಗಗಳಲ್ಲಿಯೂ ನಿಮ್ಮ ಮನೋರಥವು ನಿರರ್ಗ...

(ಪುಟ ೧೫ಕ್ಕೆ)

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ „ „ 0—1—3
೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ „ 0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅಮೃತ. ಬೆಲೆ 0-4-0, 0-2-0.

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-4-0.

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸಹಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ. ಬೆಲೆ: 0-8-0 ಮತ್ತು ರೂ. 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:— ಕುಂದಾಪುರ-ಕಾಮತ್ಸ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ-ಜಿ. ಕೃಷ್ಣ ಕಾರಂತರು, ಆಯುರ್ವೇದೀಯ ಔಷಧಗಳ ಏಜಂಟರು, ಕಾರ್ಕಳ-ವಿ. ವಿ. ಶೆಣೈ-ಕೆಮಿಸ್ಟ್, ಕಾಸರಗೋಡು-ಭಕ್ತಾ ಬ್ರದರ್ಸ್ ಮತ್ತು ಶ್ರೀರಾಮ ಸ್ಟೇಶನರಿ ಹೌಸ್, ಪುತ್ತೂರು-ಬಿ. ಪಾಂಡುರಂಗ ಗೋವಿಂದ ಭಂಡಾರಿ ಮತ್ತು ಪೈ ಡಿಸ್ಪೆನ್ಸರಿ, ಮೂಲ್ಕಿ-ಬಿ. ಎನ್. ಸೀತಾರಾಮ ಪ್ರಾಸುಪೋರ್, ವಸಂತ್ ಮಾರ್ಕೆಟ್ಸ್, ಮೂಡಬಿದ್ರೆ-ಸಂಜೀವ ಶೇಷಗಿರಿ ಪ್ರಭು ಬ್ರದರ್ಸ್, ಬಂಟ್ವಾಳ-ಪ್ರಭು ಅಂಡ್ ಕೋ., ಉಡುಪಿ-ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.

[ಹೆಗ್ಗಡೇರು ಹೆಂಡ್ತಿ ಸಮೇತ ಚಾವಡಿಯಲ್ಲಿ ಬೆಳಗ್ಗೆ ಕೂತುಕೊಂಡು ಬೆಂಗಳೂರಿನಿಂದ ಬಂದ ಅಳಿಯನ ಕಾಗ್ದ ಓದುವ ಸಮಯದಲ್ಲಿ ಶೆಟ್ರು ಬರೋಣ]

ಹೆಗ್ಗಡೇರು—ಓಹೋ, ಇದು ಎತ್ತಲಾಗಿಂದ?—(ಹೆಂಡ್ತಿಯ ಕಡೆಗೆ ನೋಡಿ,) ನೋಡು ಒಂದು ಬಣ್ಣದ ಚಾಪೆ ತಾ, ಬೇಗ ತಾ. ಬನ್ನಿ ಕೂತುಕೊಳ್ಳಿ

ಶೆಟ್ರು—ದಂಪತಿಗಳೆಂದರೆ ಹೀಗಿರಬೇಕು-ಏನು ವಿಲಾಸ, ಏನು ವೈಭವ-ಮೆದು ವಾಸಿನಲ್ಲಿ ಕುಳಿತು ಲೋಡಿಗೆ ಒರಗಿ ಕೈಯಲ್ಲಿ ಕಾಗ್ದ ಹಿಡ್ಕೊಂಡಿರುವ ಠೀವಿ! ಎದುರಲ್ಲಿ ವೀಳ್ಯದ ಹರಿವಾಣ-ಬದಿಯಲ್ಲಿ ದೊಡ್ಡ ಪೀಕ್ದಾನಿ-ಏನು ನೀವು ಸುಖ ಸಾಗರದಲ್ಲಿ ತೇಲಾಡುತ್ತೀರಿ—ನಿಮಗೇನು ಹೇಳಿ?

ಹೆಗ್ಗಡೇರು—ಶೆಟ್ರೇ, ಹೊಳೆಯುವುದೆಲ್ಲಾ ಚಿನ್ನವಲ್ಲ ಇದೇ, ಇದೇ ಕೈಯಲ್ಲಿದ್ದ ಕಾಗ್ದದ ವಿಷಯವೇ ಈಗ ಆಲೋಚನೆ ಮಾಡುವುದು. ಅದು ಹಾಗಿರಲಿ-ಏನು ಬೆಳಗ್ಗೆ ಬರೋಣಾಯ್ತು? ವಿಶೇಷ ಏನಾದರೂ ಕೆಲಸವಿತ್ತಾ? ಅಲ್ಲ ಹೀಗೆಯೋ?

ಶೆಟ್ರು—ವಿಶೇಷ ಏನೂ ಇಲ್ಲ-ಅಷ್ಟು ಗಡಿಬಿಡಿಯೂ ಇಲ್ಲ-ಈ ನಮ್ಮ ಹೆಂಗಸರು ನಮಗೆಲ್ಲಿ ಸುಖವಾಗಿ ಕೂತುಕೊಳ್ಳಲಿಕ್ಕೆ ಬಿಡುತ್ತಾರೆ ಹೇಳಿ? ನಮ್ಮ ಶೆಡ್ತೀರು, ನನ್ನ ಹೆಂಡ್ತಿ, ಮತ್ತು ನನ್ನ ದೊಡ್ಡ ಮಗಳು, ಆ ಮೊನ್ನೆ ಸ್ವಲ್ಪ ಸಮಯದ ಹಿಂದೆ ರಜೆಯಲ್ಲಿ ನಿಮ್ಮ ಅಳಿಯ ಮತ್ತು ಮಗಳು ಬಂದಿದ್ರಲ್ಲಾ ಇಲ್ಲಿ-ಆ ಕಾಲದ ಲಾಗಾಯಿತು ನನ್ನನ್ನು ಕೂತುಕೊಳ್ಳಲಿಕ್ಕೆ ಬಿಡುವುದಿಲ್ಲ.

ಹೆಗ್ಗಡೇರು—ಇದೇನ್ರಿ ರೋಗ!

ಶೆಟ್ರು—ರೋಗ ತಮ್ಮಂಥವರಿಗೆ ದೊಡ್ಡದಲ್ಲ-ನಮ್ಮಂಥವರಿಗೆ ಸ್ವಲ್ಪ ಹದವಿಲ್ಲಾರಿದ್ದೇ-ಅಲ್ಲಾ, ಒಬ್ಬರು ಮಾಡುತ್ತಾರೆಂತ ಇನ್ನೊಬ್ಬರಿಗೆ ಸಾಧ್ಯವುಂಟಾ? ಅದೆಲ್ಲಾ ಈ ಹೆಂಗಸರಿಗೆ ಗೊತ್ತಾಗುತ್ತದೋ? ನಮ್ಮ ನಮ್ಮ ಸ್ಥಿತಿಗತಿ ನಾವು ನೋಡಿಕೊಳ್ಳಬೇಕಲ್ಲವಾ?-ತುಳುವಿನಲ್ಲಿ ಒಂದು ಗಾದೆ ಉಂಟು; ಆಡಿ ತೂದು ಮುಡಿ ದೆಪ್ಪೊಡು ಅಂತ. ಇದು ಹಾಗೇನಿಲ್ಲ-ಒಬ್ಬರನ್ನು ನೋಡುವುದು ಅವರ ಹಾಗೆ ಮಾಡಬೇಕೆಂಬುದು-ಸಂಪಾದನೆಯನ್ನು ನೋಡಲಿಕ್ಕೇ ಇಲ್ಲ-ಅಲ್ಲಾ ನಿಮ್ಮ ಅಳಿಯನಿಗೆ ದೊಡ್ಡ ಸರಕಾರಿ ಹುದ್ದೆ ಉಂಟು ಎಂದು ನೀವು ಹೇಳಿದಿರಲ್ಲಾ ಮೊನ್ನೆ. ಅಂಥವರು ಹಾಗೆ ಮಾಡುತ್ತಾರೆಂತ ನಾವು ಸಹಾ ಹಾಗೆ ಮಾಡಬೇಕೆಂದು ನನ್ನ ಹೆಂಡ್ತಿ ಮತ್ತು ಮಕ್ಕಳದ್ದು ಜೋರು. ಇದು ನೋಡಿ ಹುಲಿಯ ಬಣ್ಣ ಬರಬೇಕೆಂದು ನರಿ ಮೈ ಸುಟ್ಟುಕೊಂಡಿದೆಯಂತೆ-ಆ ರೀತಿ ನಮ್ಮ ಹೆಂಗಸರ ಪಾಡು ನೀವು ದೊಡ್ಡ ಹುಟ್ಟುವಳ್ಳಿದಾರರು, ನಿಮ್ಮ ಅಳಿಯ ದೊಡ್ಡ ಉದ್ಯೋಗಸ್ಥರು-ಅವರಿಗೇನು ಕೆಲಸ ಮೊನ್ನೆ ಹೇಳಿದಿರಲ್ಲಾ ನೀವು? ತಲಬು ಎಷ್ಟು ಇತ್ತು?

ಹೆಗ್ಗಡೇರು—ಅವನಿಗೆ ಅಕ್ಕೌಂಟ್ಸ್ ಡಿಪ್ಟ್‌ನಲ್ಲಿ ಡಿಪುಟಿ ಎಕ್ಕೌಂಟೆಂಟ್ ಜನರಲ್(Accounts Department; Deputy Accountant general) ಕೆಲಸ. ತಲಬು ಈಗಲೇ ಸುಮಾರು ಆರ್ನೂರಕ್ಕೆ ಮಿಕ್ಕಿ ಇತ್ತು.

ಶೆಟ್ರು—ನೋಡಿ ಹೀಗೆಲ್ಲಾ ಇರುವಾಗ ನೀವು ಮಾಡಿದ್ರೆಂತ ನಮಗೆ ಸಾಧ್ಯವಿತ್ತಾ-ನಮ್ಮ ಹುಟ್ಟುವಳ್ಳಿ ಏನು? ನಮ್ಮ ಕುಟುಂಬ ಎಷ್ಟು ದೊಡ್ಡದ್ ಇತ್ತು? ಇದೆಲ್ಲಾ ನೋಡಬೇಕಲ್ಲವಾ—ನೋಡದೇನೇ ಹಾರಿಬಿಡುವುದಾ? ಮೊನ್ನೆ ನಿಮ್ಮ ಮಗಳು ಬಂದವಳು ಅವಳ ಹೊಸ ವಜ್ರದ ಬೆಂಡೋಲೆಯನ್ನೂ ಬೆಂಗಳೂರಿನಲ್ಲಿ ತೆಗೆದುಕೊಂಡ ಬಂಗಾರದ ಹೊಸ ಮುತ್ತಿನ ಬಳೆಗಳನ್ನೂ, ಮತ್ತು ಕೆಲವು ಈಗಿನ ಫೇಶನಿನ ಸೀರೆಗಳನ್ನೂ ನಮ್ಮ ಹೆಂಗಸರಿಗೆ ತೋರಿಸಿದಳಂತೆ, ಅಂದಿನಿಂದ ನಮಗೆ ಗ್ರಹಚಾರ ಶುರುವಾಗಿದೆ ನೋಡಿ ಅವಳು, ನಿಮ್ಮ ಮಗಳು ಉಟ್ಟುಕೊಂಡಿದ್ದಳಲ್ಲವೇ ಅದೇ ನಮೂನೆದ್ದು ಒಂದು ಸೀರೆ, ಮತ್ತು ಅವಳು ಕಿವಿಯಲ್ಲಿ ಇಟ್ಟುಕೊಂಡ ನಮೂನೆದಲ್ಲ ಮತ್ತೊಂದು ಅವಳು ತೋರಿಸಿದ ಹೊಸ ನಮೂನೆಯ ಹೊಸ ಕ್ರಮದಲ್ಲಿ ಕಟ್ಟಿದ ವಜ್ರದ ಬೆಂಡೋಲೆ ಜೋಡು ಒಂದು ನನ್ನ ಮಗಳಿಗೂ ಆಗಬೇಕಂತೆ-ಇದಕ್ಕೆ ನಮ್ಮ ಶೆಡ್ತೀರದ್ದು ರುಜುಂ ಇಲ್ಲದ ವಕಾಲತು-ಈ ಗ್ರಹಚಾರ ನನಗೆ ಹಿಡಿದು ಸುಮಾರು ಹತ್ತು ಹನ್ನೊಂದು ತಿಂಗಳಾಯಿತು-ಒಟ್ಟಾರೆ ಮೇಲಿನದಕ್ಕೆ ಪ್ರಾಯಶ್ಚಿತ್ತ ಮಾಡದಿದ್ದರೆ ಮನೆಯಲ್ಲಿ ಸುಖವಿಲ್ಲ. ಏನು ಮಾಡುವುದು ಹೇಳಿ? ನಿನ್ನೆ ಇಡೀ ರಾತ್ರಿ ನಿದ್ದೆಯೇ ಇಲ್ಲ-ನಮ್ಮ ಯಜಮಾಂತಿದ್ದು 'ಲೆಚ್ಚರೇ ಲೆಚ್ಚರ್'—"ಹುಡುಗಿಗೆ ಅದು ಇಲ್ಲ, ಇದು ಇಲ್ಲ—ನೀವು ಯಾವ ಗೊಡವೆಯಲ್ಲಿಯೂ ಇಲ್ಲ—ಎಂಥಾದ್ದು ಅಂತ ನೆನಸಿದ್ದೀರಿ ನೀವು? ಹೆಗ್ಗಡೇರ ಮಗಳು ತೋರಿಸಿದ ವಜ್ರದ ಬೆಂಡೋಲೆ ಮತ್ತು ಸೀರೆ ಅವರ ಹತ್ತರ ಹೇಳಿದ್ರೆ, ಅವರು ತರಿಸಿಕೊಡುವುದಿಲ್ವಾ? ಎಂಥಾದ ಏನಾ! ಹುಡುಗಿ ಇನ್ನೂ ಮಗು ಅಂತ ನೆನಸಿದೀರಾ ನೀವು. ಸ್ವಲ್ಪ ಎಚ್ಚರಗೊಳ್ಳಿ," ಅಂದ್ಳು. ಸತ್ತೆ ಅಲ್ಲ ಹೆಗ್ಗಡೇರ ಇವರ ಬಾಯಿಯಲ್ಲಿ—ಅರಮನೆಯ ಮುಂದಿರಬೇಡ ಕುದುರೆಯ ಹಿಂದಿರಬೇಡ ಅಂತ ಒಬ್ಬ ಹೇಳಿದ್ದಂತೆ-ಈ ಗಾದೆ ಆಯಿತು ನನ್ನದು. ಆದಕಾರಣ ನಿಮ್ಮ ಹತ್ತರ ಮಾತಾಡಿ ನಿಮ್ಮಿಂದ ಒಂದು ಕಾಗ್ದ ಬರಿಸಿ ನಿಮ್ಮ ಅಳಿಯನ ಮುಖಾಂತರ ಒಂದು ಜೋಡು ವಜ್ರದ ಬೆಂಡೋಲೆ ಮತ್ತು ನಿಮ್ಮ ಮಗಳು ಉಟ್ಟುಕೊಂಡಂಥ ಒಂದು ಸೀರೆ ತರಿಸುವ ಅಂಥ ಬೆಳಗ್ಗೆ ಎದ್ದುಕೊಂಡು ನಿಮ್ಮಲ್ಲಿ ಬಂದೆ. ನಿಮ್ಮಿಂದ ಈ ಕಾಗ್ದ ಬರೆಸಿ ಅಲ್ಲಿ ತೆಕ್ಕೊಂಡು ಹೋಗಿ ತೋರಿಸದೆ ಇದ್ದರೆ ಇವತ್ತು ನನಗೆ ಅನ್ನಕ್ಕೂ ಸಹಾ ಸೊನ್ನೆ ಅಂತ ಕಾಣುತ್ತದೆ ಅಷ್ಟು ಜೋರು ಸಿಟ್ಟಿನಲ್ಲಿದ್ದಾರೆ ತಾಯಿ ಮತ್ತು ಮಗಳು.

ಹೆಗ್ಗಡೇರು—ಅಲ್ಲ, ಇದ್ದ ಸಂಗ್ತಿಯನ್ನು ನಿಮ್ಮೊಡನೆ ಅಡಗಿಸದೆ ಹೇಳುವುದಕ್ಕೇನು? ನೋಡಿ ಈಗ ನಾವಿಬ್ಬರೂ ಮಾತಾಡುತ್ತಿದ್ದದ್ದು ನಮ್ಮ ಅಳಿಯಂದೇ ಸಂಗ್ತಿ—ಈ ಕಾಗ್ದ ಅವನದ್ದೇ-ನನ್ನಿಂದ ನೀವು ಒಂದು ಕಾಗ್ದವನ್ನು ಬರೆಸಿ, ಕೊಂಡು ಹೋಗುವ ಬದಲಿಗೆ ನೀವು ಈ ಕಾಗ್ದವನ್ನೇ ತೆಕ್ಕೊಂಡು ಹೋಗಿ ನಿಮ್ಮ ಹೆಂಡ್ತಿಗೂ ಮಗಳಿಗೂ ಓದಿ ಹೇಳಿ ಬಿಟ್ಟರೆ ಒಂದು ಪೈಯ್ಯ ಖರ್ಚಿಲ್ಲದೆ ನಿಮ್ಮ ಗ್ರಹಚಾರ ಪರಿಹಾರವಾಗುತ್ತದೆ ಶೆಟ್ರೆ—ಆಗುತ್ತದೆ—ಇದಕ್ಕೆ ಅನುಮಾನವಿಲ್ಲ ನೋಡಿ ಕಾಗ್ದವನ್ನು ನಿಮಗೆ ಓದಿ ಹೇಳುತ್ತೇನೆ.

ಬೆಂಗಳೂರು.
22-11-1938

ತೀರ್ಥರೂಪ ಮಾವಯ್ಯನವರ ಪಾದಕ್ಕೆ ನಿಮ್ಮ ಅಳಿಯನು ಮಾಡಿಕೊಳ್ಳುವ ಅನೇಕ ಆಶೀರ್ವಾದಂಗಳು. ಉಭಯಕ್ಷೇಮ. ಪರಿ ತರುವಾಯ ನಿಮ್ಮ ಹತ್ತರ ತಿಂಗಳು ತಿಂಗಳು ಸ್ವಲ್ಪ ಸ್ವಲ್ಪವಾಗಿ ಸಂದಾಯ ಮಾಡುತ್ತೇನೆಂತ ತೆಗೆದುಕೊಂಡು ಹೋದ ರೂಪಾಯಿ 1500ನ್ನು ಮುಂಗಡ ಕೊಟ್ಟು ಎರಡೂವರೆ ಸಾವಿರ ರೂಪಾಯಿಯ ಒಂದು ಮೋಟಾರ್ ಕಾರ್ ತಕ್ಕೊಂಡೆವು. ಬಾಕಿ ಹಣವನ್ನು 'ಹಯ್ಯರ್ ಪರ್ಚೇಸ್ ಸಿಸ್ಟಮ್' (Hire purchase system) ನಲ್ಲಿ ಕಂತಿನಿಂದ ತುಂಬುತ್ತೇನೆಂದು ನಾನು ಬರಹ ಮೂಲಕ ಕಂಪನಿಗೆ ವಾಗ್ದಾನ ಕೊಟ್ಟಿರುತ್ತೇನೆ. ಇದು ಹ್ಯಾಗೂ ಇರಲಿ. ನಿಮ್ಮ ಮಗಳು ಯಾವ ವಿಚಾರದಲ್ಲಿಯೂ ನಾನು ಹೇಳಿದ ಹಾಗೆ ಕೇಳುವದಿಲ್ಲ. ಅವಳಿಗೆ ಇಷ್ಟ ಬಂದ ಹಾಗೆ ಮಾಡುತ್ತಾಳೆ. ಬಂಗ್ಲೆ ಸಣ್ಣದಾಯಿತು ಅಂದ್ಲು.-ದೊಡ್ಡದು ನೋಡಿ ಮಾಡಿದ್ದೆ. ಅದಕ್ಕೆ ನೂರೈವತ್ತು ರೂಪಾಯಿ ಬಾಡಿಗೆ. ಈಗ ಕ್ಲಬ್ಬಿಗೆ (ಮಹಿಳಾ ಸಭೆಗೆ) ಹೋಗುತ್ತಾಳೆ. ಅದರ ಮೆಂಬರ್ ವರಾಡ (subscription) ಗಳೇ ಸುಮಾರು ಆಗುತ್ತೆ. ಇಂಗ್ಲೀಷ್ ಕಲಿಯಬೇಕೆಂದಳು. ಅದರ ಬಗ್ಗೆ ರೂಪಾಯಿ 25 ಕೊಟ್ಟು ಒಬ್ಬ ಮಾಸ್ತರನ್ನು ಮಾಡಿದೆ. ಗಾಯನ ತಪ್ಪಲಿಕ್ಕೆ ಕಲಿಯಬೇಕೆಂದ್ಲು-ಅದಕ್ಕೂ ಒಬ್ಬ ಗಾಯನ ಮಾಸ್ತರನ್ನು ನೇಮಿಸಿದೆ. ಅವನಿಗೆ ತಿಂಗಳಿಗೆ 20 ರೂಪಾಯಿ ಕೊಡುತ್ತದೆ. ಮಗು ಹಿಡಿಯಲಿಕ್ಕೆ ಒಂದು 'ಆಯ' (Ayah) ಬೇಕೆಂದಳು; ಎರಡು ಊಟ, ಮೂರು ಕಾಫಿ, ನರ್ಸ್‌ನ ಡ್ರೆಸ್ ಕೊಟ್ಟು ತಿಂಗಳಿಗೆ ಹತ್ತು ರೂಪಾಯಿ ಸಂಬಳಾಂತ ನಿಶ್ಚಯ ಮಾಡಿದ್ದೆ. ಅಡಿಗೆ ಮಾಡುವದಕ್ಕೆ ಅಡಿಗೆ ಚೆನ್ನಾಗಿ ಗೊತ್ತಿದ್ದ ಒಬ್ಬ ಅಡಿಗೆ ಭಟ್ರು ಬೇಕೆಂದ್ಲು. ತಿಂಗಳಿಗೆ ಇಪ್ಪತ್ತೈದು ರೂಪಾಯಿಕೆ

ಪುಟ ೧೫೦ರಲ್ಲಿ ನೋಡಿರಿ.

ಲಗಾಂ ಇಲ್ಲದ ಕುದುರೆ

(Dash without Discretion.)

(ಲೇಖಕರು – ಶ್ರೀ ಬಿ. ಶ್ಯಾಮರಾಯ ಶೆಟ್ಟಿ, ಬಿ. ಎ. ಎಲ್. ಟಿ. ಉಡುಪಿ.)

Doubtless dash is essential for success in life—but not dash devoid of discretion. *If exigencies demand, even dash may be sacrificed but not discretion.* "It is good to possess a giant's strength but do not use it as a giant," says a master mind. *Very often we act first, deliberate next,* when it is too late to recall our past error. Folly blunders; but Wisdom gains experience and uses it. Many a time *a word expressed hastily might spoil a situation,* but a word withheld might save it. Intelligence entertains others where as wisdom saves self from the slings of Fortune. *How often we blow costly whistles!* Many a great man blew it only once and never repeated the experiment for it opened their eyes and made them see life in its proper perspective. *How easy it is to laugh and scoff,* jeer and sneer, abuse and criticise others! There is nothing wonderful here-no act-no feat-no art. Any one can do this-even a hyena can laugh-a fool can scoff. *How many of us* have laughed against ourselves? For this is really difficult. This is an achievement-it is the highest art, for when you laugh against yourself, you are on the road to self-improvement. Let us **think** and **act** for this requires a man, a man with dash and discretion. In the absence of discretion action will run riot and all will be confusion. So man, oh man, you repuire discretion-wisdom-more than anything else in this life, and lacking that, whatever your other merits be, very often you may fail and fail miserably too. When you fail, this jeering world instead of cheering you up will call you a F-o-o-l and forgetting your good turns, delicious dishes, costly parties, sweet smiles, past favours and shewing that friendship is only a name that follows wealth or fame will leave you a wretch—to weep and weep alone.

THE TROPICAL
Insurance Co., Ltd.
NEW DELHI

Chairman: Sjt SUBHAS CHANDRA BOSE.
(*PRESIDENT*, INDIAN NATIONAL CONGRESS)

100% Swadeshi Concern founded by such eminent Leaders as
PANDIT MOTHILAL NEHRU. **Dr. M. A. ANSARI,**
HAKIM AJMA KHALN. **T. A. K SHERWANI.**
and others

WANTED influential Agents, Special Agents and Organisers on liberal commission and salary.

APPLY TO.

M. SUNDER RAM SHETTY, BRANCH MANAGER, **HAMPANKATTA MANGALORE.**
Or
K. S. RAMAMURTHI, M. A. BRANCH SECRETARY, **180 MOUNT ROAD, MADRAS.**

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ರಾಣಿಯರ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸು ಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಅಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street,* G. T. MADRAS.

ನೋಡ

ಹರಿವ ನದಿನದಗಳಿಂದೆ ಕೆರೆ ಸರೋವರದಿಂದೆ ।
ನಾಗರದ ಬಿಸಿಲಿಂದೆ ಜನುಮ ಪೊಂದಿಹೆನು ॥
ಬೆಡಗಿನಿಂ ಬಾಂದಳದಿ ತೇಲಿ ತೊನೆಯುವ ।
ಆದರವಿಲ್ಲದಿಹ ರೂಪುಗೊಂಡಿಹೆನು ॥
ಹಸಿದ ಕುಸುಮದ ತಣಿಸಿ ಸಸ್ಯಗಳ ಜೀವನದಿ ।
ಹೊಸ ಕಳೆಯ ತುಂಬಿಸಲು ಬದುಕಿ ಬಾಳುವೆನು ॥
ದೇಹದಂಡಿಸಿ ದುಡಿವ ಜಗದ ಜನಗಳಿಗೆಲ್ಲ ।
ಜೀವನಾಮೃತ ಸುರಿಸಿ ಸುಖದ ಕೊಡ ತಹೆನು ।
ದುರ್ಬಲರ ಹೀರಿಸುವ ಧರ್ಮದ್ರೋಹಿಯು ಬಡವ ।
ಆಲಸದಿ ವಿಲಾಸದೊಳು ಮಗ್ನರಾಗಿರುವ ॥
ನಿರ್ಜೀವ ನಿರ್ಲಕ್ಷ್ಯ ಜಡ ಜನರಿಗೆಲ್ಲ ।
ಗುಡುಗು ಘರ್ಜನೆಯಿಂದ ಭಯವ ಬೀರುವೆನು ॥
ಬಳ್ಳಿಗಳ ತಳಿಯುವೆನು ಯೌವನದಿ ಮೆರೆಯುವೆನು ।
ಸೂರ್ಯ ಚಂದ್ರರ ಮುಸುಕಿ ॥
ಕಾಂತಿಯನು ಕೀಳುವೆನು ।
ವೇಗದಲಿ ಸಾಗಿ ಕೋಲ್ಮಿಂಚುಗಳ ಕಾರುವೆನು ।
ಬಂಡೆಗಳ ಸೀಳುವೆನು ಕಾಲಯಮನಾಗುವೆನು ॥
ಗಾಳಿಯೊಡನಾಡುವೆನು ಬೆಟ್ಟಗಳ ಸೇರುವೆನು ।
ಮಳೆಯಾಗಿ ಧರೆಗಿಳಿದು ಹೊಳೆಯಾಗಿ ಹರಿಯುವೆನು ॥
ಬೆಳೆಯುವೆನು ಬೆಳೆಸುವೆನು ।
ಬಾಗುವೆನು ಬಗ್ಗಿಸುವೆನು ।
ಹಿಗ್ಗುವೆನು ಕುಗ್ಗುವೆನು ।
ಮುಗ್ಗರಿಸಿ ಬೀಳುವೆನು ।
ಸಾವುನೋವುಗಳಿಲ್ಲ ಕಾಲನಿಯಮಗಳಿಲ್ಲ ।
ಉತ್ತುವೆನು ಬೆಳೆಯುವೆನು ನಿತ್ಯ ನಾ ಜಗದಿ ॥

—ವಿ. ಕೆ. ಕಾಪು

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶ್ರೇಷ್ಠ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜೀರ್ಣಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿ ... ವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ ಪುಸ್ತಕ. ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ

ಆತಂಕನಿಗ್ರಹ ಫಾರ್ಮಸಿ, ೩೪,
ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

"ಸ ರ ಸ್ವ ತಿ"

ಸರಸ್ವತಿಯ ಹದಿನೆಂಟನೆಯ ಸಂಪುಟವು ೧೯೩೭ನೆಯ ಜನವರಿ ತಿಂಗಳಿನಿಂದ ಪ್ರಾರಂಭವಾಗುವುದು. ಕನ್ನಡನಾಡಿನ ಸುಪ್ರಸಿದ್ಧವಾದ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟ ಕಥೆಕವಿತೆ ನಾಟಕಗಳಿಂದ ಮಹಿಳೆಯರಿಗತ್ಯುಪಯುಕ್ತವಾದ ಲೇಖನಗಳಿಂದ ಕೂಡಿದೆ. ಪ್ರತಿ ಸಂಚಿಕೆಗಳಲ್ಲಿಯೂ ಮಕ್ಕಳ ಪುಟಗಳಿವೆ. ಮಕ್ಕಳಿಗಾಗಿಯೇ "ಕನ್ನಡಿಗರ ಕಣಜ" ಎಂಬ ಗ್ರಂಥಮಾಲೆಯು ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ:— ೩—೮—೦ ಮಾತ್ರ.

ವಿಳಾಸ:— ಸರಸ್ವತಿ ಕಾರ್ಯಾಲಯ,
ಚಾಮರಾಜ ಪೇಟೆ, ಬೆಂಗಳೂರು ನಗರ.

ಶೀಲಭಕ್ತಿ (ನಾಟಕ) ೦—೧೦—೦

ಕಬ್ಬಿನ ಬೆಳೆ

ಬೀಜ ಮತ್ತು ನಡುವ ಕ್ರಮ

(ಮುಂದುವರಿಸಿದ್ದು)

ಬೇರೆ ಬೆಳೆಗಳಂತೆ ಬೀಜಗಳನ್ನು ಉಪಯೋಗಿಸದೆ ಕಬ್ಬಿನ ತುಂಡುಗಳನ್ನೇ ನಡುವರೆ ಉಪಯೋಗಿಸುವುದರಿಂದ ಕಬ್ಬನ್ನು ಬಿತ್ತುವದೆಂದು ಕರೆಯದೆ ನಡುವುದೆಂದು ಹೇಳುವುದು ವಾಡಿಕೆ.

ಬೆಳೆಯ ಗುಣವು ಮುಖ್ಯವಾಗಿ ಮೊಳಕೆಯನ್ನು ಹೊಂದಿಕೊಂಡಿರುವುದರಿಂದ ನಡುವ ಕೊಡಿಗಳನ್ನು ಆರಿಸಿ ತೆಗೆಯುವುದು ಅತ್ಯಾವಶ್ಯಕ. ಯಾವ ಜಾತಿಯ ಕಬ್ಬನ್ನು ನಡುವುದಾದರೂ ಮುಖ್ಯವಾಗಿ ಒಳ್ಳೆಯ ದಪ್ಪವಾಗಿರುವ ಮತ್ತು ಕಣ್ಣುಗಳು ಒಳ್ಳೆಯದಾಗಿರುವ ಕೊಡಿಗಳನ್ನೇ ಆರಿಸಿ ತೆಗೆಯಬೇಕು. ಇನ್ನು ಕಬ್ಬನ್ನು ತುಂಡುಗಳಿಂದ ಬೆಳೆಯಿಸುವುದರಿಂದ ಯಾವ ಜಾತಿಯ ಕಬ್ಬನ್ನಾದರೂ 10–12ವರುಷಗಳಿಗೊಂದು ಸಲವಾದರೂ ಬದಲಾಯಿಸದಿದ್ದರೆ ಅದು ಸಮೃದ್ಧಿಯಾಗಿ ಬೆಳೆಯಲಾರದು. ಆದುದರಿಂದಲೇ ಮುಂಚೆ ಕೆಲವು ವರ್ಷಗಳಿಂದಲೂ ನಡುತ್ತಾ ಬಂದ ಕಬ್ಬುಗಳನ್ನು ಬಿಟ್ಟು ಹೊಸ ಕಬ್ಬುಗಳನ್ನು ನಡುವುದು ಅವಶ್ಯ. ಸರಕಾರದವರು ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸಿ, ಕೊಯಮತ್ತೂರಿನಲ್ಲಿ ಒಂದು ಕಬ್ಬಿನ ಪರಿಶೋಧನಾ ಕ್ಷೇತ್ರವನ್ನು ನಡೆಯಿಸುತ್ತಿರುವರು. ಆ ಕ್ಷೇತ್ರದಲ್ಲಿ ಹೊಸ ಜಾತಿಯ ಉತ್ತಮವಾದ ಕಬ್ಬುಗಳು ವರ್ಷಂಪ್ರತಿಯೂ ಶಾಸ್ತ್ರೀಯ ರೀತಿಯಿಂದ ಉತ್ಪಾದಿಸಲ್ಪಟ್ಟು, ಅವುಗಳನ್ನು ಇನ್ನಿತರ ಪರಿಶೋಧನಾ ಕ್ಷೇತ್ರಗಳಲ್ಲಿ ಪರೀಕ್ಷಿಸಿ ಆಯಾ ಊರುಗಳಿಗೆ ಉಪಯುಕ್ತವಾದ ಜಾತಿಯ ಕಬ್ಬುಗಳನ್ನು ರೈತರಿಗೆ ಒದಗಿಸಿ ಕೊಡುವರು. ರೈತರು ಈ ಹೊಸ ಜಾತಿಯ ಕಬ್ಬುಗಳ ವಿಷಯ ಬೇಕಾದ ಅನುಭವವನ್ನು ಕಲ್ಯಾಣಪುರದಲ್ಲಿರುವ ಕೃಷಿ ಡೆಮೋನ್ಸ್ಟ್ರೇಟರವರಿಂದಲೂ, ಉಡುಪಿಯ ಗ್ರಾಮದಲ್ಲಿರುವ ಕಬ್ಬಿನ ರೈತರ ಸಹಕಾರ ಸಮಿತಿಯ ಪರಿಶೋಧನಾ ಕ್ಷೇತ್ರದಿಂದಲೂ ತಿಳಿಯಬಹುದು.

ಉತ್ತಮ ಜಾತಿಯ ಕಬ್ಬುಗಳ ಪ್ರಯೋಜನ:—

1. ಒಂದೇ ಜಾತಿಯ ಕಬ್ಬುಗಳನ್ನು ಅನೇಕ ವರ್ಷಗಳ ವರೆಗೆ ಬೆಳೆಯಿಸುವುದರಿಂದ ಬೀಜವು ಕೆಟ್ಟದಾಗಿ, ಬೆಳೆಯು ಒಂದೇ ರೀತಿಯಾಗಿರದೆ, ಒಂದೇ ಗದ್ದೆಯಲ್ಲಿ ಬೇರೆ ಬೇರೆ ಪ್ರಮಾಣದ ಕಬ್ಬುಗಳು ಕಂಡುಬರುವುವು. ಉತ್ತಮ ಜಾತಿಯ ಕಬ್ಬುಗಳ ಬೀಜವು ಒಳ್ಳೆಯದಿದ್ದು ಒಂದೇ ತೆರನಾದ ಕಬ್ಬು ಅಂದವಾಗಿ ಬೆಳೆಯುವುದು. 2. ಎಕ್ರೆ ಒಂದರ ಸರಾಸರಿ ಉತ್ಪತ್ತಿಯನ್ನು ಕಡಿಮೆಯೆಂದರೆ ೩ಟನ್ (ಸಾಧಾರಣ 10ಅಡಿ)ಗಳಷ್ಟು ಸುಲಭವಾಗಿ ಏರಿಸಲು ಸಾಧ್ಯವಾಗುವುದು. ೩. ಉತ್ತಮ ಜಾತಿಯ ಕಬ್ಬುಗಳ ರಸವು ಹೆಚ್ಚು ಸಕ್ಕರೆಯುಳ್ಳದ್ದಾಗಿದ್ದು, ಬೆಲ್ಲವು ಜಾಸ್ತಿಯಾಗುವುದು; ಅಂದರೆ ಡಿಗ್ರಿಯು (Brix) ಹೆಚ್ಚಾಗಿ ಸಕ್ಕರೆ ಶಾರ್ಕರೆಯಲ್ಲಿ ಅದರ ಶ್ರೇಯವು ಹೆಚ್ಚುವುದು. 4. ಕ್ರಿಮಿಕೀಟಾದಿಗಳ ಬಾಧೆಗಳನ್ನು ತಡೆಗಟ್ಟಿ ಆ ಬಾಧೆಯು ಕಡಿಮೆಯಾಗುವುದರಿಂದ ಬೆಳೆಯು ಉತ್ತಮವಾಗುವುದು. ೬. ನೀರಾಶ್ರಯವು ಕಡಿಮೆ ಇದ್ದ ಸ್ಥಳಗಳಲ್ಲಿ ನೀರು ಕಮ್ಮಿ ಬೇಕಾಗುವ ಜಾತಿಯ ಕಬ್ಬುಗಳನ್ನು ನಡಲು ಅನುಕೂಲವಾಗಿ, ಕಬ್ಬಿನ ಬೆಳೆಯು ಹೆಚ್ಚಾಗುವುದು.

ನಡುವ ಕ್ರಮ:—ಕಬ್ಬನ್ನು ನಡುವ ಕ್ರಮವು ಆಯಾ ದೇಶದ ಹವಾಗುಣವನ್ನೂ ನೀರಾಶ್ರಯವನ್ನೂ ಹೊಂದಿಕೊಂಡು ಬೇರೆ ಬೇರೆ ವಿಧವಾಗಿದೆ. ಅವುಗಳಲ್ಲಿ ಈ ಕೆಳಗಿನವು ನಮ್ಮ ಊರಿಗೆ ಉಪಯುಕ್ತವಾಗಿವೆ.

1. ನಡುವ ಕಬ್ಬುಗಳನ್ನು ಆರಿಸಿ ಅವುಗಳ ತುದಿಯ ಅರ್ಧ ಕಬ್ಬನ್ನು ಮಾತ್ರ ಬೀಜಕ್ಕೆ ಉಪಯೋಗಿಸುವ ಏರ್ಪಾಡು ಮಾಡಲಾಗಿದೆ. ಒಳಗಡೆ ಕೆಂಪಾಗಿರುವ ಕಬ್ಬುಗಳನ್ನೆಂದೂ ಉಪಯೋಗಿಸಬಾರದು. 2. ನಾಲ್ಕೈದು ಗಂಟುಗಳಿರುವ ತುಂಡುಗಳನ್ನು ಮಾಡಿ, ಅವು ಕಟ್ಟಿ ಒಂದು ದಿನದ ವರೆಗೆ ನೀರಿನಲ್ಲಿಟ್ಟು ಆ ಮೇಲೆ ತಂಪಾದ ಸ್ಥಳದಲ್ಲಿ ನಾಲ್ಕೈದು ದಿವಸಗಳ ವರೆಗೆ ಮುಚ್ಚಿಟ್ಟು ಮೊಳಕೆ ಬರಲು ಬೇಕಾದ ಶಾಖವನ್ನು ಕೊಡಬೇಕು. ೩ ಗಂಟುಗಳಲ್ಲಿರುವ ಕಣ್ಣುಗಳೊಡೆದು ಮೊಳಕೆಗಳು ಕಂಡೆ. ಬಂದೊಡನೆಯೇ, ಈ ತುಂಡುಗಳ ಎರಡೂ ತುದಿಗಳನ್ನು 1% ಬೋರ್ಡೋ ಮಿಕ್ಸ್ಚರ್ ದ್ರಾವಕದಲ್ಲಿ ಅಥವಾ 1% ಪಾದರಸ ನೀರಿನಲ್ಲಿ ಮುಳುಗಿಸಿ ನಡಬೇಕು. ಇದರಿಂದ ರೋಗಗಳನ್ನು ತಡೆಗಟ್ಟಲು ಅನುಕೂಲವಾಗುವುದು. ಮಾತ್ರವಲ್ಲದೆ ಒಳಗಿನ ರಸವು ಕಮ್ಮಿಯಾಗಿ ಮೊಳಕೆಗಳು ಒಣಗಿ ಹೋಗುವುದಿಲ್ಲ. 4 ನಡುವಾಗ ಮೊಳಕೆಗಳು ಎಡಬಲ ಬದಿಗಳಿಗೆ ಬೀಳುವಂತೆ ಜಾಗ್ರತೆಯಲ್ಲಿದ್ದು ಆ ಮೇಲೆ ಕೆಳಗೆ ಮಣ್ಣು ಮುಚ್ಚಿ ನೀರು ಬಿಡಬೇಕು. ೬ ಮೊಳಕೆಗಳನ್ನು ನೋಡಿ ಚೆನ್ನಾಗಿ ಮೊಳಕೆ ಬಾರದ ಸ್ಥಳದ ಕೊಡಿಗಳನ್ನು ತೆಗೆದು ಬೇರೆ ಕೊಡಿಗಳನ್ನು ನಡುವುದು ಅವಶ್ಯ.

ಈ ರೀತಿ ಕಬ್ಬು ನಡುವರೆ ಎಕ್ರೆ ಒಂದರ ಸರಾಸರಿ 12,000 ಕೊಡಿಗಳು ಬೇಕಾಗುತ್ತವೆ. (ಒಂದು ಕೊಡಿ ಎಂದರೆ ೩ಗಂಟುಗಳ ಒಂದು ತುಂಡ.)

ಬೇರೆ ಬೇರೆ ಜಾತಿಯ ಹೊಸ ಕಬ್ಬುಗಳ ವಿಷಯ ಈ ಲೇಖನದಲ್ಲಿ ವಿವರಿಸಿ ಬರೆಯಲು ಅಸಾಧ್ಯವಾದುದರಿಂದ ಹೆಚ್ಚಿನ ಅನುಭವದ ಬಗ್ಗೆ ಕಲ್ಯಾಣಪುರದಲ್ಲಿರುವ ಕೃಷಿ ಡೆಮೋನ್ಸ್ಟ್ರೇಟರವರನ್ನು ವಿಚಾರಿಸಿದಲ್ಲಿ ಅವರು ಎಲ್ಲ ತರದ ಅನುಭವವನ್ನಿತ್ತು ಸಹಕಾರ ಸಮಿತಿಯ ಮೆಂಬರರಿಗೆ ಬೇಕಾದ ಬೀಜಗಳನ್ನು ಸಾಧ್ಯವಾದ ಮಟ್ಟಿಗೆ ಒದಗಿಸಿಕೊಡಲು ಸದಾ ಸಿದ್ಧರಿರುವರು.

K. J. Ballal
President,
The Sugarcane Grower's Cooperative Union, Ltd. Udipi.

ಸಂದೇಶ

ವಾರಪತ್ರಿಕೆಯನ್ನೇ

ಕೊಳ್ಳಿರಿ

ಬೆಳಗಾವಿ ಜಿಲ್ಲೆಯಲ್ಲಿಯ
ಒಂದೇ ಒಂದಾದ ರಾಷ್ಟ್ರೀಯ
ಕನ್ನಡ ವಾರಪತ್ರಿಕೆ

ವಿವಿಧ ಲೇಖನಗಳಿಂದಲೂ, ಕರ್ನಾಟಕದ, ಹಿಂದುಸ್ಥಾನದ ಮತ್ತು ಪರದೇಶದ ಚಿತ್ರವೈಚಿತ್ರ ಸುದ್ದಿಗಳಿಂದಲೂ, ಸಂಗತಿಗಳಿಂದಲೂ ಕೂಡಿದ ಪತ್ರಿಕೆ ಇರುವದು, ಕಾರಣ ಕರ್ನಾಟಕದ ಎಲ್ಲ ಕಡೆಯ ಕನ್ನಡಿಗರೇ ಇಂದೇ ಚಂದಾದಾರರಾಗಿರಿ.

ಸ್ಥಳದವರಿಗೆ ೧—೮—೦
ಪರಸ್ಥಳದವರಿಗೆ ೨—೮—೦.

ಏಜಂಟರು, ಜಾಹೀರಾತುದಾರರು ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ,
ಸಂದೇಶ ಕಾರ್ಯಾಲಯ,
ಹನುಮನ ಬೀದಿ, ಬೆಳಗಾವಿ.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ** 1926

18 ಬಲ್ಮರ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಮೇಜಿನ ಬೆಲ್ಲು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡೋಣಾಗುವುದು.

CROWN RUBBER STAMP CO,
Balmat Road, MANGALORE.
Included by the Mysore Govt Stores Purchase Committee in the list of approved Firms.

ಏನೆಂದಿರಿ!
ಕನ್ನಡದಲ್ಲಿ ಒಳ್ಳೇ ಪುಸ್ತಕಗಳಿಲ್ಲವೆಂದೇ? ಅದೇಕೆ?

ಅತ್ಯುತ್ತಮ ಐತಿಹಾಸಿಕ ಕಾದಂಬರಿಗಳೂ ಚರಿತ್ರೆಗಳೂ, ರಸವತ್ತಾದ ಸಾಮಾಜಿಕ ಪೌರಾಣಿಕ ಕಥೆ ಕಾದಂಬರಿಗಳೂ, ಶ್ರೇಷ್ಠತರಗತಿಯ ಹಾಗೂ ಹೆಸರುವಾಸಿಗಳಾದ ಪತ್ತೇದಾರೀ ಕಥೆಗಳೂ ಶ್ರೀ ಶೇಷಾಚಲ ಗ್ರಂಥಮಾಲೆಯಲ್ಲಿ ಕಳೆದ ೨೦ವರ್ಷಗಳಿಂದಲೂ ಕ್ರಮಶಃ ಪ್ರಕಟವಾಗುತ್ತಲಿದ್ದು ಅಂಥ ೧೦೦ ೧೫೦ ಮನೋಹರ ಪುಸ್ತಕಗಳು ಈಗಾಗಲೇ ಹೊರಟು ಕನ್ನಡ ವಾಚಕರನ್ನು ತೃಪ್ತಿಗೊಳಿಸುತ್ತವೆ. ಹಾಗು ಪ್ರತಿವರ್ಷವೂ ಈ ಗ್ರಂಥಮಾಲೆಯ ದ್ವಾರ ಕ್ಷೀಮಾಚಾರಿಯ ಹೊಸ ಪುಸ್ತಕಗಳು ತಪ್ಪದೆ ಪ್ರಕಟವಾಗುತ್ತಲಿವೆ. ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ **ಬೆಲೆ ಕಡಿಮೆ**

ಅಪೇಕ್ಷಿತರು: **ಶ್ರೀ ಶೇಷಾಚಲ ಪ್ರೆಸ್,**
ಪೋ ಆನಂದವನ (ಹಾವೇರಿ) ಜಿ ಧಾರವಾಡ
ಈ ಅಡ್ರೆಸ್ಸಿಗೆ ಬರೆದ ಬೇಕ ಕ್ಯಾಟಲಾಗ್ ಪಡೆಯಿರಿ. ದೇ. ಭ ಬ್ಯಾರಿಸ್ಟರ್ ಸಾವರಕರರಿಂದ ಬರೆಯಲ್ಪಟ್ಟ ರಮ್ಯ ಭೀಷಣ "**ಕಾಳೆಪಾಣಿ** ಪುಸ್ತಕವು ಕರಿನೀರು" ಎಂದು ಕನ್ನಡದಲ್ಲಿ ನಮ್ಮಿಂದ ಬೇಗನೇ ಪ್ರಕಟವಾಗುವುದು

ಕೂದಲು

ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲುಗಳೇ ಸ್ಥಿರವಾಗಿ ಕಪ್ಪಗಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ಡಬ್ಬಲ್ ವಾಪಾಸು ಕೊಡಲು ಗ್ಯಾರಂಟಿ ಎಂಬುವದಕ್ಕೆ ದೊರೆತ ನೂರಾರು ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ 5-0-0 ಅರಲಂತೆ ಕ್ಕೂ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವ ತೈಲ ರೂ 7-0-0 ಬೆಲೆಯ ಎಣ್ಣೆ ಬೇಕಾಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲೇ

HAZRA & Co.,
P O Bihar Nursery (DARBHANGA).

ನಂದಾದೀಪ(ಕಥಾಸಂಗ್ರಹ) ೦—೮—೦

CO-OPERATIVE LAND MORTGAGE BANKS IN SOUTH KANARA

ಭೂಮಿ ಅಡವಿನ ಸಹಕಾರಿ ಬೇಂಕುಗಳು

ಇವುಗಳಿಂದ ಯಾರು ಸಾಲ ಪಡೆಯಲು ಅರ್ಹರಾಗುವರು?

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು.)

ಬೇಂಕಿನಿಂದ ಪಡೆದ ಸಾಲಗಳನ್ನು ಕಂತಿನಿಂದ ಸಲಾಯಿಸಬೇಕು. ಯೊರತು ಏಕ ಗಂಟಿನಿಂದಲ್ಲ. ೨೦ ವರ್ಷಗಳಲ್ಲಿ ಕೆಳಗೆ ಕಾಣಿಸದಂತೆ ಅಸಲು ಬಡ್ಡಿಗಳು ಅಡಕವಾದ ಏಕ ಪ್ರಕಾರದ ಕಂತುಗಳಿಂದ ಸಲಾಯಿಸಬಹುದು. ಅಥವಾ ಸರಿಯಾದ ಕಂತುಗಳಿಂದ ಅಸಲು ವ ಅಸಲಿನ ಮೇಲಿನ ಬಡ್ಡಿ, ಹೀಗೆ ಕಂತುಗಳಿಂದ ಕೊಟ್ಟುಕೊಂಡು ಬರಬಹುದು; ಹೇಗೆಂದರೆ—

ರೂ. ೧೦೦೦ಗಳನ್ನು ೨೦ ವರ್ಷಗಳಲ್ಲಿ ಸೇಕಡ ೫||ರ ದರದ ಬಡ್ಡಿಯಿಂದ ಅಸಲು ಬಡ್ಡಿ ಕೂಡ ವರ್ಷ ೧ರ ರೂ. ೮೩-೧೦-೧೦ರಂತೆ ಏಕಪ್ರಕಾರದ ಕಂತುಗಳಿಂದ ಸಾಮಾನ್ಯವಾಗಿ ಸಂದಾಯಮಾಡತಕ್ಕದ್ದಾಗಿರುತ್ತದೆ. ಈ ಸಂದಾಯದ ಲೆಕ್ಕ ಹೇಗೆಂದರೆ:—

ವರುಷ.	ಬಡ್ಡಿ.			ಅಸಲು.			ಬಾಕಿ ನಿಲ್ಲುವ ಅಸಲು		
	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ	ಪೈ
1ನೆಯ ವರ್ಷದಲ್ಲಿ	55	0	0	28	10	10	971	5	2
2 ,,	53	6	8	30	4	2	941	1	0
3 ,,	51	12	1	31	14	9	909	2	3
4 ,,	50	0	1	33	10	9	875	7	6
5 ,,	48	2	4	35	8	6	839	15	0
6 ,,	46	3	1	37	7	9	802	7	3
7 ,,	44	2	2	39	8	8	762	14	7
8 ,,	41	15	4	41	11	6	721	3	3
9 ,,	39	10	7	44	0	3	677	2	10
10 ,,	37	3	11	46	6	11	630	11	11
11 ,,	34	11	0	48	15	10	581	12	1
12 ,,	31	15	11	51	10	11	530	1	2
13 ,,	29	2	6	54	8	4	475	8	10
14 ,,	26	2	5	57	8	5	418	0	5
15 ,,	22	15	10	60	11	0	357	5	5
16 ,,	19	10	5	64	0	5	293	5	0
17 ,,	16	2	0	67	8	10	225	12	2
18 ,,	12	6	8	71	4	2	154	8	0
19 ,,	8	7	11	75	2	11	79	5	1
20 ,,	4	5	9	79	5	1			

ರೂ. 1000ನ್ನು ಸೇಕಡ 5½ ದರವ ಬಡ್ಡಿಯಿಂದ 20 ವರ್ಷಗಳಲ್ಲ ಸರಿಯಾದ ಅಸಲಿನ ಕಂತು ಮತ್ತು ಬಡ್ಡಿ ಸಂದಾಯ ಮಾಡುವದಾದರೆ—

ವರುಷ.	ಬಡ್ಡಿ.		ಅಸಲು.	ಜುಮಲಾ ಕೊಡತಕ್ಕದ್ದು.	
	ರೂ.	ಆ	ರೂ.	ರೂ.	ಆ.
1ನೆಯ ವರುಷದಲ್ಲಿ	55	0	50	105	0
2 ,,	52	4	50	102	4
3 ,,	49	8	50	99	8
4 ,,	46	12	50	96	12
5 ,,	44	0	50	94	0
6 ,,	41	4	50	91	4
7 ,,	38	8	50	88	8
8 ,,	35	12	50	85	12
9 ,,	33	0	50	83	0
10 ,,	30	4	50	80	4
11 ,,	27	8	50	77	8
12 ,,	24	12	50	74	12
13 ,,	22	0	50	72	0
14 ,,	19	4	50	69	4
15 ,,	16	8	50	66	8
16 ,,	13	12	50	63	12
17 ,,	11	0	50	61	0
18 ,,	8	4	50	58	4
19 ,,	5	8	50	55	8
20 ,,	2	12	50	52	12

ಮೇಲೆ ಹೇಳಿದ ಎರಡು ರೀತಿಗಳಲ್ಲಿ ಯಾವುದಾದರೂ ಒಂದು ರೀತಿಯಿಂದ ಸಂದಾಯ ಮಾಡಲು ಸಾಲಪಡೆಯುವವನು ಅವನಿಗೆ ಅನುಕೂಲವಿದ್ದಂತೆ ಒಪ್ಪಿಕೊಳ್ಳಬಹುದು. ಹಾಗೆ ಒನ್ಮೆ ಒಂದು ರೀತಿ ಅನುಸರಿಸಿದ ಅನಂತರ ಇನ್ನೊಂದು ರೀತಿಯನ್ನು ಬದಲು ಮಾಡಕೂಡದು.

ವಾಯಿದೆಗೆ ಮುಂದಾಗಿಯೇ ಹೆಚ್ಚಿಗೆ ಹಣ ಪಾವತಿಮಾಡಬಹುದು. ಹಾಗೆ ಮಾಡಿದ್ದಲ್ಲಿ ಆ ಹಣವನ್ನು ವಾಯಿದೆಯ ತಾರೀಕಿನಲ್ಲಿ ಕಂತಿಗೆ ಜಮೆ ಕಟ್ಟಿಕೊಳ್ಳಲಾದೀತು. ಹಾಗೆ ಜಮೆ ಕಟ್ಟಿಕೊಳ್ಳುವ ವರೆಗೆ ಅದಕ್ಕೆ ಸಾಲದ ದರದ ಬಡ್ಡಿ [ಸೇಕಡಾ ೫||] ಕೊಡಲಾದೀತು. ಆ ರೀತಿ ಜಮೆ ಕಟ್ಟಿಕೊಂಡ ನತರವೂ ಹಣ ಉಳಿದರೆ ಮುಂದಿನ ಕೂಡಿದಷ್ಟು ಕಂತುಗಳಲ್ಲಿ ಅಡಕವಾದ ಅಸಲು ಹಣಕ್ಕೆ ಜಮೆ ಮಾಡಿಕೊಳ್ಳಲಾದೀತು; ಮತ್ತು ಹಾಗೆ ಜಮೆ ಕಟ್ಟಿಕೊಂಡ ಕಂತುಗಳ ಬಡ್ಡಿ ಕೇಳೋಣಾಗಲಿಕ್ಕಿಲ್ಲ. ಇನ್ನೂ ಹಣ ಉಳಿದರೆ ಅದನ್ನು ಮುಂದಿನ ಕಂತಿನ ವಾಯಿದೆಯ ವರೆಗೆ ಅಮಾನತು ಇಟ್ಟುಕೊಂಡು ಅದಕ್ಕೆ ಸಾಲದ ಬಡ್ಡಿಯ ದರ ಎಣಿಸಲಾದೀತು.

ವಾಯಿದೆಗೆ ಕಂತುಕೊಡಲು ತಪ್ಪಿದರೆ ಮುಂದಿನ ಕಂತುಗಳ ಉಜುರು ಶಿವಾಯಿ ಇಡೀ ಸಾಲವನ್ನು ಆಡಳಿತೆಯವರು ವಸೂಲು ಮಾಡಬಹುದು. ಆದರೆ ಮೂರು ತಿಂಗಳುಗಳಿಗಿಂತಲೂ ಹೆಚ್ಚು ಸಮಯ ಕಂತು ಬಾಕಿ ನಿಂತರೆ, ಇಡೀ ಸಾಲವನ್ನು ವಸೂಲು ಮಾಡುವದೋ ಅಥವಾ ಬಾಕಿಯಾದ ಕಂತನ್ನು ಮಾತ್ರ ವಸೂಲುಮಾಡುವದೋ ಎಂಬುದನ್ನು ಆಡಳಿತೆಯವರು ಕೂಡಲೇ ನಿರ್ಧರಿಸಬೇಕು. ಇಡೀ ಸಾಲ ವಸೂಲು ಮಾಡುವದು ಬೇಡವೆಂತ ಸಾಕಾದ ಸಬಬುಗಳಿಂದ ಆಡಳಿತೆಯವರು ನಿರ್ಣಯಿಸಿದ ಸಂಗತಿಯಲ್ಲಿ ಮುಂದಾಗಿ ಕೇಂದ್ರ ಬೇಂಕಿನ ಪ್ರೆಸಿಡೆಂಟರ ಅನುಮತಿ ಪಡೆದು ಪೂರಾ ಬಡ್ಡಿ ಸಮೇತ ವಸೂಲು ಮಾಡಿ ಆ ಸಂಗತಿಯನ್ನು ರಿಜಿಸ್ಟ್ರಾರರವರಿಗೆ ತಿಳಿಸಬೇಕು. ಬಾಕಿಯಾದ ಕಂತಿನ ಹಣದ ಮೇಲೆ ಮುಂಚಿನ ಬಡ್ಡಿಯ ದರಕ್ಕಿಂತ ಸೇಕಡಾ ೧|| ಹೆಚ್ಚಿಗೆ ದರದ ಬಡ್ಡಿ ಹೊರಿಸಲ್ಪಡುವದು.

ಮುಂದಿನ ಕಂತುಗಳ ವಾಯಿದೆಗಳನ್ನು ರದ್ದುಮಾಡಿ ಸಾಲದ ಲೆಕ್ಕವನ್ನು ಅಖೈರು ಮಾಡಿದ ಸಂಗತಿಯಲ್ಲಿ ಕೂಡ ಬಾಕಿಯಾದ ಕಂತಿನ ಯಾ ಕಂತುಗಳ ಹಣವನ್ನು ಅದರ ಮೇಲಿನ ಬಡ್ಡಿ ಸಮೇತ ಸಾಲಪಡೆದವನು ತೆತ್ತಲ್ಲಿ ಆಡಳಿತೆಯವರು ಅಡವು ದಸ್ತೈವಜಿನಲ್ಲಿ ಪ್ರಥಮ ನಿಶ್ಚಯಿಸಿದಂತೆಯೇ ಕಂತುಗಳಿಂದ ಮುಂದೆ ಸಾಲ ಸಲಾಯಿಸುವಂತೆ ಅನುಮತಿ ಕೊಡಬಹುದು. ಆದರೆ ಆ ಕುರಿತು ಆಡಳಿತೆಯವರು ಮುಂದಾಗಿ ಕೇಂದ್ರ ಬೇಂಕಿನ ಪ್ರೆಸಿಡೆಂಟರ ಮತ್ತು ರಿಜಿಸ್ಟ್ರಾರರವರ ಒಪ್ಪಿಗೆಯನ್ನು ಪಡೆಯಬೇಕು. ಮತ್ತು ಅದರಂತೆ ಹೊಸ ಕರಾರು ಬರಿಸಿಕೊಳ್ಳಬೇಕು.

ಒಂದು ಉದ್ದೇಶಕ್ಕೆ ಕೊಟ್ಟ ಸಾಲವನ್ನು ಇನ್ನೊಂದುಉದ್ದೇಶಕ್ಕೆ ವಿನಿಯೋಗಿಸಿದೆ ಎಂದು ಆಡಳಿತೆಯವರು ಅಭಿಪ್ರಾಯಪಟ್ಟರೆ ಮುಂದಿನ ವಾಯಿದೆಗೆ ಕಾಯದೇ ಇಡೀ ಸಾಲದವಸೂಲಿಗೆ ಆಡಳಿತೆಯವರು ಉಪಕ್ರಮಿಸಬಹುದು ಅಡವಿನ ಆಸ್ತಿಯು ಹೊಳೆಯಿಂದ ಯಾ ನೆರೆಯಿಂದ ಕೊಚ್ಚಿಕೊಂಡು ಹೋಗುವ ಸಂಭವವಿದ್ದಲ್ಲಿ, ಅಥವಾ ಹೊಯಿಗೆ ಮಣ್ಣು ಬಿದ್ದು ಹಾಳಾಗಿ ಅಡವಿನ ಭದ್ರತೆಯು ಅಪಾಯಕ್ಕೆ ಗುರಿಯಾದ ಸಂಗತಿಯಲ್ಲಿ ಅಥವಾ ಸಾಲ ಪಡೆದವನು ಬೇಂಕಿಗೆ ನಷ್ಟ ಉಂಟುಮಾಡುವ ರೀತಿ ನಡೆದುಕೊಂಡರೆ ಅಥವಾ ಬೇಂಕಿಗೆ ಯಾವ ತರದಿಂದಾದರೂ ವಂಚಿಸಿದರೆ ಅಥವಾ ಬೇಂಕಿನವರು ಅವರಿಗೆ ಸಲತಕ್ಕ ಹಣಕ್ಕೋಸ್ಕರ ಕೋರ್ಟಿನ ವ್ಯವಹರಣೆ ಮಾಡಲು ಒತ್ತಾಯವಾಗುವಂತೆ ನಡೆದುಕೊಂಡರೆ ಅಥವಾ ಅಡವಿನ ಆಸ್ತಿಯ ಬೆಲೆಯು ಕಾಲಕಾಲಾಂತರಗಳಿಂದ ಕಡಿಮೆಯಾಗಿ ಆಡಳಿತೆಯವರು ಮಂಜೂರು ಮಾಡುವ ಹೆಚ್ಚಿಗೆ ಭದ್ರತೆಯನ್ನು ಕೊಡಲು ಯಾ ಆಡಳಿತೆಯವರು ಹೇಳುವಷ್ಟು ಸಾಲದ ಸಾಕನ್ನು ಅಂಶವನ್ನೂ ವಸೂಲು ಕೊಡಲು ಸಾಲ ಪಡೆದವನು ತಪ್ಪಿದರೆ ಅಥವಾ ಬೇರೆ ಯಾವ ಕಾರಣದಿಂದಾದರೂ ಸಾಲವನ್ನು ಕೂಡಲೇ ವಸೂಲು ಮಾಡುವದು ಬೇಂಕಿನ ಹಿತದೃಷ್ಟಿಯಿಂದ ಅಗತ್ಯವೆಂತ ಆಡಳಿತೆಯವರು ಅಭಿಪ್ರಾಯ ಪಟ್ಟಲ್ಲಿ ಕೂಡ ಮುಂದಿನ ವಾಯಿದೆ ರದ್ದುಮಾಡಿ ಸಾಲವನ್ನು ಕೂಡಲೇ ವಸೂಲು ಮಾಡಲು ಆಡಳಿತೆಯವರು ಉಪಕ್ರಮಿಸಬಹುದು.

ಈ ಬೇಂಕುಗಳು ಸಹಕಾರಿ ತತ್ವಗಳಿಗೆ ಅನುವಾಗಿ ಕೃಷಿಕರಿಗೆ ಸಾಲದಿಂದ ವಿಮೋಚನೆ ಮಾಡುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟವುಗಳಾದುದರಿಂದ ಸಾಲ ಕೇಳುವವನು ಪೂರ್ಣ ಸಾಲವು ತೀರುವ ಹಾಗಿದ್ದರೆ ಮಾತ್ರ ಈ ಬೇಂಕಿನಿಂದ ಸಾಲ ಸಿಗುವುದು. ಸ್ವಲ್ಪ ಸಾಲ ಬಾಕಿ ಇರಗೊಡಿಸಿ ಸ್ವಲ್ಪ ಸಾಲ ಮಾತ್ರ ಈ ಬೇಂಕಿನ ಮೂಲಕ ಸಾಲ ಪಡೆದು ತೀರಿಸುವರೆ ಬರುವುದಿಲ್ಲ ಸಾಲ ತೀರಾ ತೊಳೆದೇ ಹೋಗಬೇಕು, ಕೊಳೆ ಉಳಿಯಕೂಡದು. ಸಾಲ ಸಂದಾಯಮಾಡತಕ್ಕ ವಾಯಿದೆ ಮುಂದೆ ಇದ್ದು ಸಾಲಗಾರನು ವಾಯಿದೆಯ ಮುಂದಾಗಿ ಹಣ ಪಡೆಯಲು ಸಮ್ಮತಿಸತಿದ್ದರೆ ಮಾತ್ರ ಅಂತಹ ಸಾಲ ಮತ್ತು ಅದಕ್ಕೆ ಅಡವಿರುವ ಆಸ್ತಿ ಕೂಡ ಪ್ರತ್ಯೇಕ ಇರಗೊಡಿಸಿ ಮಿಕ್ಕ ಸಾಲಗಳನ್ನೆಲ್ಲಾ ತೀರಿಸಲು ಈ ಬೇಂಕಿನಿಂದ ಸಾಲಪಡೆಯಬಹುದು.

ಇನ್ನೊಂದು ಮುಖ್ಯ ಸಂಗತಿ ಯಾವುದೆಂದರೆ-ಸಾಲಕೊಳ್ಳುವವರ ಎಲ್ಲ ಆಸ್ತಿಗಳ ಏಸ್ ಉತ್ಪತ್ತಿ ಮತ್ತು ಬೇರೆ ಸಂಪಾದನೆ ಕೂಡ ಅವರ ಕುಟುಂಬದ ಜೀವನಕ್ಕೂ ಸಾಲದ ಕಂತು ಕೊಡಲಿಕ್ಕೂ ಸಾಕಾದಷ್ಟು ಇದ್ದರೆ ಮಾತ್ರ ಸಾಲ ಸಿಗುವುದು ಬರೇ ಭದ್ರತೆಯನ್ನು ನೋಡಿ ಮಾತ್ರ ಸಾಲಕೊಡುವುದಿಲ್ಲ. ಎಲ್ಲಾ ಖರ್ಚುಗಳು ಕಳೆದು ಸಾಲದ ಕಂತು ಕೊಡಲು ಸಾಲ ಪಡೆಯುವವನಿಗೆ ಶಕ್ತಿ ಇದೆ ಎಂಬುದು ಬೇಂಕಿಗೆ ಸಮಾಧಾನವಾಗಬೇಕು ಇದರ ಸಲುವಾಗಿಯೇ ಸಾಲದ ಅರ್ಜಿಯ ಫೋರ್ಮಿನಲ್ಲಿಯೇ ಈ ಕುರಿತು ಸ್ಪಷ್ಟಪಡಿಸುವರೆ ಅಂಕೆ ಸಂಖ್ಯೆಗಳನ್ನು ಕೊಡಲು ಪ್ರತ್ಯೇಕ ಕಲಮುಗಳಿವೆ.

ಹಾಗಾದರೆ ಒಬ್ಬನ ಮನೆಯ ಖರ್ಚನ್ನು ಹೇಗೆ ಎಣಿಸಬೇಕೆಂದು ಬೇಂಕಿನವರು ಏನಾದರೂ ಪ್ರಮಾಣ ನಿರ್ಧರಿಸಿಟ್ಟಿದ್ದಾರೆಯೇ ಎಂಬ ಪ್ರಶ್ನೆ ಹುಟ್ಟುತ್ತದೆ. ಹಾಗೇನು ಮುಂದಾಗಿ ನಿರ್ಣಯ ಮಾಡಿಟ್ಟಿಲ್ಲ. ಮನೆಯ ಖರ್ಚಿನ ಮಟ್ಟವು ಆಯಾ ಮನುಷ್ಯನ

ಜಾತಿ, ಮತ, ವಾಸಸ್ಥಾನ, ವಿದ್ಯೆ, ನಾಗರಿಕತೆ, ಅಭ್ಯಾಸ, ಆಚಾರ ನಡೆವಳಿಕೆ ಮುಂತಾದ ಅನೇಕ ಸಂಗತಿಗಳ ಮೇಲೆ ಹೊಂದಿಕೊಂಡಿದೆ. ಇದಕ್ಕೆ ದುಡ್ಡಿಗೆ ಸು ಪ್ಪೇರು ಎಂಬಂತೆ ಅಥವಾ ತಲೆ ಒಂದರ ಇಂತಿಷ್ಟು ಎಣಿಕೆ ಹಾಕಿಕೊಳ್ಳಬೇಕೆಂಬ ಕೋಷ್ಟಕವೇನೂ ಇಲ್ಲ. ಬೇಂಕಿನ ಮೆನೇಜರ್ ವ್ಯವಸ್ಥಾಪಕರು, ಡೈರೆಕ್ಟರರು ಮತ್ತು ಸಹಕಾರಿ ಅಡವಿನ ಬೇಂಕುಗಳ ಸಬ್ ರಿಜಿಸ್ಟ್ರಾರರು–ಹೀಗೆ ಮೂರು ಮಂದಿ ಸ್ಥಳ ತನಿಖೆಯಿಂದ ನೋಡಿ ವಿಚಾರಿಸಿ ತಿಳಿದುಕೊಂಡೇ ಖರ್ಚಿನ ಅಂದಾಜುಮಾಡಿಕೊಳ್ಳುವುದರಿಂದ ಇದರಲ್ಲಿ ವಿಶೇಷ ತಪ್ಪಾಭಿಪ್ರಾಯಗಳು ಬರುವದು ಅಸಂಭವ.

ಅಕ್ಕಿ, ಅಡಿಕೆ, ತೆಂಗಿನಕಾಯಿ ಮುಂತಾದ ಭೂಮಿಯ ಉತ್ಪತ್ತಿಗೆ ಹೇಗೆ ಕ್ರಯ ಎಣಿಸುತ್ತಾರೆ, ಎಂಬುದು ಎಲ್ಲರು ಕೇಳುವ ಇನ್ನೊಂದು ಪ್ರಶ್ನೆ. ಇದಕ್ಕೆ ಇಡೀ ಜಿಲ್ಲೆಗೆ ಲಗಾವಾಗುವ ನಿರಖು ಧಾರಣೆಯಿಲ್ಲವೆಂದು ಧಾರಾಳವಾಗಿ ಹೇಳಬಹುದು. ಅಲ್ಲಲ್ಲಿ ಸಹಜವಾಗಿ ಕೆಲವು ವರ್ಷಗಳಿಂದೀಚೆಗೆ ಯಾವ ಧಾರಣೆ ಇದ್ದಿತು ಎಂಬುದನ್ನು ತಿಳಿದುಕೊಂಡು ಅದರ ಆಧಾರದ ಮೇಲೆ ಗೊತ್ತುಮಾಡಬೇಕಷ್ಟೆ.

ಹಳ್ಳಿಯಿಂದ ವ್ಯಾಪಾರದ ಕೇಂದ್ರಕ್ಕೆ ಇರುವ ದೂರದ ಮೇಲೆ ಕೂಡ ಧಾರಣೆಯು ನಿಷ್ಕರ್ಷೆಪು ಹೊಂದಿದೆ, ಎಂಬದು ಬೇರೆ ಹೇಳಬೇಕಾಗಿಲ್ಲ. ಸಾಮಾನ್ಯವಾಗಿ ಅಕ್ಕಿಗೆ ಮುಡಿ ೧ರ ರೂ. ೩, ಅಡಿಕೆ ಖಂಡಿ ೧ರ ರೂ. ೮೦, ತೆಂಗಿನ ಕಾಯಿಗಳಿಗೆ ೧೦೦ಕ್ಕೆ ರೂ. ೨|| ಯಾ ೩ ಹೀಗೆ ಸರಾಸರಿ ಎಣಿಸಬಹುದಷ್ಟೇ.

ಆಸ್ತಿಯ ಬೆಲೆ ಕಟ್ಟುವದು ಕೂಡ ಆಸ್ತಿ ಇರುವ ಗ್ರಾಮ, ವ ಪ್ರದೇಶದ ಮೇಲೆ ಹೊಂದಿಕೊಂಡಿದೆ. ಸರಹದ್ದು, ಕಾಡು ಪ್ರದೇಶ, ಉತ್ಪತ್ತಿ, ವ್ಯಾಪಾರ ಕೇಂದ್ರಕ್ಕೆ ಸಾಗಿಸಲು ಇರುವ ಸೌಕರ್ಯಗಳು, ಹಳ್ಳಿಯ ಆರೋಗ್ಯದ ಪರಿಸ್ಥಿತಿ ಮುಂತಾದ ಅನೇಕ ಸಂಗತಿಗಳ ಮೇಲೆ ಹೊಂದಿಕೊಂಡಿದೆ. ಪುತ್ತೂರು ಬೇಂಕಿನ ಕೆಲವು ಸಾಲದ ಅರ್ಜಿಗಳಿಗೆ ಕಾರಣವಾದ ಭೂಮಿಗಳಿಗೆ ೧೬ ವರ್ಷಗಳ ಐನ್ ಹುಟ್ಟುವಳಿಯಷ್ಟು ಬೆಲೆ ಹಿಡಿದಿದೆ. ವರುಷಾವಧಿಯ ಐನ್ ಉತ್ಪತ್ತಿಯ ೧೬ರಿಂದ ೨೦ಪಾಲಷ್ಟು ಬೆಲೆ ಎಣಿಸಬಹುದಾಗಿ ಕಾಣುತ್ತದೆ. ಇದಕ್ಕೆ ಪ್ರತ್ಯೇಕವಾಗಿ ನಿರ್ದಿಷ್ಟವಾದ ಪ್ರಮಾಣ ವಿಲ್ಲ.

ಕ್ರಮಗಳಲ್ಲಿ ಆಸ್ತಿಯ ಬಜಾರು ಧಾರಣೆಯ ಅರೆವಾಸಿಗೆ ಮೀರದಷ್ಟು ಸಾಲ ಕೊಡಬಹುದೆಂತ ಇದ್ದರೂ ಸಾಮಾನ್ಯವಾಗಿ ಸೇಕಡ ೪೦ಕ್ಕೆ ಮೀರಿ ಸಾಲ ತತ್ಕಾಲ ಕೊಡುವಂತೆ ಕಾಣುವುದಿಲ್ಲ.

ನೋಟೀಸು

THE VIJAYA BANK, LTD., COONDAPOOR.

ದಿ ವಿಜಯ ಬೇಂಕ್, ಲಿಮಿಟೆಡ್, ಕುಂದಾಪುರ.

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ—

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಅಡವಿನಮೇಲೆ ಪಡೆದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ, ನ್ಯಾಯವಾಗಿ ಕೊಡದೆ ಇದ್ದುದರಿಂದಲೂ, ಸದ್ರಿಯವರಿಗೆ ಬಟ್ಟ ರಿಜಿಸ್ಟ್ರಿ ನೋಟೀಸುಗಳಲ್ಲಿ ಕೆಲವು ಪಾವತಿಯಾಗದೆ ಇದ್ದುದರಿಂದಲೂ, ಸದ್ರಿ ಲೋನನ್ನು ಇನ್ನು ಹೆಚ್ಚಿಗೆ ಸಮಯ ಬಾಕಿ ಇಟ್ಟಲ್ಲಿ ಬೇಂಕಿಗೆ ನಷ್ಟವಾಗಬಹುದಾಗಿ ಕಂಡುಬರುವುದರಿಂದಲೂ, ಸದ್ರಿ ಲೋನಿನ ಅಫಾಮಿಯು ಹವುಗೆ ಬರ ಎಲ್ಲಾ ಅಸ್ಲು ಬಡ್ಡಿ ಹಣಗಳನ್ನು ಕೊಟ್ಟು ತಾ 16-12-'38ನೇ ಶುಕ್ರವಾರ ಮಧ್ಯಾಹ್ನ 3 ಘಂಟೆಯ ಒಳಗೆ ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದಲ್ಲಿ ತಾ. 17-12-'38ನೇ ಶನಿವಾರ ಮಧ್ಯಾಹ್ನ ಘಂಟೆ 1ಕ್ಕೆ ಸದ್ರಿ ನಗಗಳನ್ನು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಹಣಗಳಲ್ಲಿ ನಮಗೆ ಬರ ಅಸ್ಲು, ಬಡ್ಡಿ ಮತ್ತು ಎಲ್ಲಾ ಖರ್ಚು ವಗೈರೆ ಕಳೆದು ಹೆಚ್ಚಿಗೆ ಹಣ ಉಳಿದರೆ ಸದ್ರಿಯವರ ಅಮಾನತು ಲೆಕ್ಕಕ್ಕೆ ನಿಬಡ್ಡಿಯಿಂದ ಜಮಾಮಾಡಲ್ಪಡುವುದು. ಏಲಮ್ಮಿನಿಂದ ಹುಟ್ಟಿ ಬಂದ ಹಣ ಬೇಂಕಿಗೆ ಬರತಕ್ಕ ಹಣಕ್ಕೆ ಕಮ್ಮಿ ಬಿದ್ದಲ್ಲಿ ಸದ್ರಿ ಅಸಾಮಿಯವರಿಂದ ಹೆಚ್ಚಿಗೆ ಬರತಕ್ಕ ಹಣಗಳಿಗೆ ದಾವಾದುಮಾಡಲಾಗುವುದು. ಏಲಂ ಅದೇ ದಿವಸ ಆಗದೆ ಇದ್ದಲ್ಲಿ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು ತಿಳಿದಿರುವುದು.

ಲೋನು ನಂಬ್ರ.	ಹೆಸರು ಮತ್ತು ವಿಳಾಸ.	ಅಸಲು ರೂಪಾಯಿ.	ಇಟ್ಟ ತಾರೀಕು.
99/36	N. ಸೂರಪ್ಪ ಭಂಡಾರಿ, ನಂದ್ಯಪ್ಪ ಶೆಟ್ರ ಮೊಮ್ಮಗ, ಬಳ್ಕೂರು ಗ್ರಾಮದ ನೈಲಾಡಿ, ಪೋಸ್ಟ್-ಬಾರಕೂರು.	475—0—0	15-7-37
113/36	ಟಿ. ವಿಟ್ಠಲ್ ಶೆಟ್ಟಿ, ಲಚ್ಚಮ್ಮ ಸಟ್ಟೇರಿ ಮಗ, ಹೆಂಗವಳ್ಳಿ ಗ್ರಾಮದ ತೊಂಭತ್ತು, ಪೋಸ್ಟ್-ಶಂಕರನಾರಾಯಣ,	260—0—0	21-7-37
141/36	ಸಾಕ್ರಾ ಅಬ್ದುಲ್‌ಖಾದರ್, ಸಾಕ್ರಾ ಅಲೀ ಸಾಹೇಬರ ಮಗ, ಮರ್ಚಂಟ್, ಗಂಗೊಳ್ಳಿ, ಪೋಸ್ಟ್-ಗಂಗೊಳ್ಳಿ.	40—0—0	4-8-37
177/36	ಎ. ಚಿನ್ನಯ್ಯ ಶೆಟ್ಟಿ, ಪುಟ್ಟಯ್ಯ ಹೆಗ್ಡೇರ ಅಳಿಯ, ವಂಡ್ಸೆ ಗ್ರಾಮ, ಪೋಸ್ಟ್-ವಂಡ್ಸೆ.	300 - 0—0	17-8-37
249/36	ಸುಬ್ರಾಯ ಸೇರಿಗಾರ, ಮಂಜಯ್ಯ ಶೇರಿಗಾರರ ಮಗ, ಕುಂದಾಪುರ	10 0—0	16-9-37
274/36	ಶೇಕ್ ಉಮ್ಮರ್ ಸಾಹೇಬ, ಶೇಕ್ ಮೈದಿನ್ ಸಾಹೇಬರ ಮಗ, ಕುಂದಾಪುರದ ಗುಡ್ಡೆ, ಪೋಸ್ಟ್-ಕುಂದಾಪುರ,	12 -0- -0	25-9 37
30/37	ಶೀನ ಶೇರಿಗಾರ, ಶೇಷ ಶೇರಿಗಾರರ ಮಗ, ಕುಂಭೇಶ್ವರ ದೇವಸ್ಥಾನದ ಬಳಿಯಲ್ಲಿರುವವ, ಕುಂದಾಪುರ.	92—0—0	13 10-37

OFFICE OF THE BANK, Coondapoor, Date 30-11-38.

K. Sanjiva Hegde,
AGENT.

೨೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಬಳ್ಳಾರಿ ನಗರ.

ಈ ವರ್ಷ ಡಿಸೆಂಬರ್ ತಿಂಗಳಿನಲ್ಲಿ ನಡೆಯಬೇಕಾಗಿರುವ ೨೪ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಳ್ಳಾರಿ ನಗರಕ್ಕೆ ಆಹ್ವಾನಿಸಬೇಕೆಂದು ಅಲ್ಲಿನ ಕನ್ನಡ ಮುಂದಾಳುಗಳು ಉದ್ದೇಶಪಟ್ಟ ಮೇರೆಗೆ, ತಾ. ೩೦-೭-೧೯೩೮ರಲ್ಲಿ ಬಳ್ಳಾರಿಯ ಶ್ರೀಮಾನ್ ಕೆ. ಗುರುರಾಜಾರಾವ್, ಬಿ.ಎ, ಬಿ.ಎಲ್, ಅವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಬಳ್ಳಾರಿಯ ಪ್ರಮುಖ ಕನ್ನಡಿಗರನೇಕರು ಈ ಸಭೆಯಲ್ಲಿ ಭಾಗವಹಿಸಿದ್ದರು. ಸಭೆ ಸರ್ವಾನುಮತದಿಂದ ತೀರ್ಮಾನಿಸಿದ ಮೇರೆಗೆ ಸಭೆಯ ಪರವಾಗಿ ಶ್ರೀ। ಎನ್. ಆರ್. ಗಂಗಾಪತಿಯವರು ತಾ. ೧೨-೮-೧೯೩೮ರಲ್ಲಿ ಪರಿಷತ್ತಿಗೆ ಲಿಖಿತಮೂಲಕ ಸಮ್ಮೇಳನದ ಆಹ್ವಾನವನ್ನು ಕಳಿಸಿದರು. ಹಾಗೆ ವಿಶ್ವಾಸಪೂರ್ವಕವಾಗಿ ಬಳ್ಳಾರಿಯವರು ಕಳಿಸಿಕೊಟ್ಟ ಆಹ್ವಾನವನ್ನು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿ ತಾ. ೨೭-೮-೧೯೩೮ರಲ್ಲಿ, ಸಂತೋಷ ಕೃತಜ್ಞತೆಗಳೊಡನೆ ಸ್ವೀಕರಿಸಿತು.

ಈಗ ಸುಮಾರು ೫೦ ಮಂದಿ ಮಹನೀಯರನ್ನೊಳಗೊಂಡ ಸ್ವಾಗತ ಮಂಡಲಿ ಏರ್ಪಡಾಗಿದೆ; ಶ್ರೀ। ಎನ್. ಆರ್. ಗಂಗಾಪತಿಯವರು ಗೌ। ಕಾರ್ಯದರ್ಶಿಯವರಾಗಿಯೂ, ಶ್ರೀ। ಕೋಗರಿ ವೀರಮಲ್ಲಪ್ಪನವರು ಕೋಶಾಧ್ಯಕ್ಷರಾಗಿಯೂ ಇದ್ದಾರೆ.

ಈ ಸಲದ ಸಮ್ಮೇಳನವನ್ನು ಬಳ್ಳಾರಿಯಲ್ಲಿ ನಡಸಬೇಕೆಂದು ಅಲ್ಲಿನ ಕನ್ನಡಿಗರು ಬೆಂಬಲವಾಗಿ ನಿಂತಿದ್ದಾರೆ. ಈ ಸಮ್ಮೇಳನ ಬಹು ಯಶಸ್ವಿಯಾಗಿ ನಡೆಯುವುದರಲ್ಲಿ ಯಾವ ಸಂದೇಹವೂ ಇಲ್ಲ.

ಈ ಸಲದ ಸಮ್ಮೇಳನದಲ್ಲಿ ಕನ್ನಡ ಭಾಷಾ ಸಾಹಿತ್ಯ ಸಂಸ್ಕೃತಿಗಳ ಏಳಿಗೆಗೂ ಕನ್ನಡಿಗರ ಒಕ್ಕೂಟಕ್ಕೂ ಸಂಬಂಧಪಟ್ಟ ಅನೇಕ ಪ್ರಶ್ನೆಗಳು ಪರ್ಯಾಲೋಚಿತವಾಗಿ ಬಹು ಮುಖ್ಯವಾದ ತೀರ್ಮಾನಗಳಾಗತಕ್ಕದ್ದಿವೆ. ಆದುದರಿಂದ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಅಭಿಮಾನಿಗಳು ದಯಮಾಡಿ ಬಂದು ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ಮಾಡಬೇಕೆಂದು ಪರಿಷತ್ತು ವಿನಯದಿಂದ ಪ್ರಾರ್ಥಿಸುತ್ತದೆ.

ತಾರೀಖುಗಳು—ಸಮ್ಮೇಳನ ೧೯೩೮ನೆಯ ಡಿಸೆಂಬರ್ ತಿಂಗಳ ೨೯, ೩೦ ಮತ್ತು ೩೧ನೆಯ ತಾರೀಖುಗಳಲ್ಲಿ (ಕ್ರಿಸ್‌ಮಸ್ ರಜಾ ಕಾಲದಲ್ಲಿ) ನೆರವೇರುವಂತೆ ನಿಶ್ಚಯವಾಗಿದೆ.

ಅಧ್ಯಕ್ಷರು—ಬಹುಕಾಲದಿಂದ ಕನ್ನಡ ನಾಡು ನುಡಿಗಳ ಸೇವೆಯಲ್ಲಿ ನಿರತರಾಗಿದ್ದುಕೊಂಡು, ಅವುಗಳ ಏಳಿಗೆಗಾಗಿ ಅಪೂರ್ವ ಭಕ್ತಿ ತ್ಯಾಗಗಳಿಂದ ಬಹುಮುಖವಾಗಿ ಕೆಲಸಮಾಡುತ್ತಿರುವ, ಕನ್ನಡದ ಪ್ರಮುಖ ಮುಂದಾಳುಗಳಲ್ಲಿ ಒಬ್ಬರಾದ, ಹುಬ್ಬಳ್ಳಿಯ ಅಧ್ಯಾತ್ಮ ಕಾರ್ಯಾಲಯದ ಒಡೆಯರಾದ ಶ್ರೀಮಾನ್ ಆರ್. ಆರ್. ದಿವಾಕರ್, ಎಂ.ಎ., ಎಲ್.ಎಲ್.ಬಿ., ಅವರು.

ಕವಿಗೋಷ್ಠಿ, ನಾಟ್ಯಸಮ್ಮೇಳನ—ಕಳೆದ ವರ್ಷ ನಡೆಸಿದಂತೆ ಈ ವರ್ಷವೂ ಕವಿಗೋಷ್ಠಿಯನ್ನು ನಡೆಸಲು ಅವಕಾಶವಾಗಬಹುದು. ಇದರ ಜೊತೆಗೆ ನಾಟ್ಯಸಮ್ಮೇಳನವೊಂದನ್ನೂ ನಡೆಸುವ ಉದ್ದೇಶ ಸ್ವಾಗತ ಮಂಡಲಿಗೆ ಇದೆ.

ಪ್ರಬಂಧ, ಭಾಷಣ, ನಿರ್ಣಯಗಳು ಇತ್ಯಾದಿ—ಕನ್ನಡ ಭಾಷಾ ಸಾಹಿತ್ಯ ವಿಚಾರಗಳಿಗೆ ಸಂಬಂಧಪಟ್ಟ ಭಾಷಣಗಳು. ಕನ್ನಡ ಸಾಹಿತ್ಯ ವಾಚನ ಮುಂತಾದ ಕಾರ್ಯಗಳಿಗೆ ಎಂದಿನಂತೆ ಅವಕಾಶವಿದೆ.

ನಾಟಕ, ಯಕ್ಷಗಾನ, ಲಾವಣಿ—ಸಮ್ಮೇಳನದಲ್ಲಿ ಈ ತರಹ ಪ್ರದರ್ಶನಗಳಿಗೂ ಅವಕಾಶಕೊಡಬೇಕೆಂಬ ಉದ್ದೇಶವಿದೆ.

ಒಟ್ಟು ಕರ್ನಾಟಕದ ನಾನಾ ಭಾಗಗಳಲ್ಲಿರುವ ದೇಶಭಕ್ತರೂ, ಭಾಷಾಭಿಮಾನಿಗಳೂ, ಸಾಹಿತ್ಯ ಪ್ರೇಮಿಗಳೂ, ಕಲಾಭಿಜ್ಞರೂ ಸಮ್ಮೇಳನಕ್ಕೆ ಬರುವರೆಂದು ಬಳ್ಳಾರಿಯ ಸ್ವಾಗತ ಮಂಡಲಿ ನಿರೀಕ್ಷಿಸಿಕೊಂಡಿದೆ. ಎಲ್ಲರೂ ಬಂದು, ಸಮ್ಮೇಳನ ಕಾರ್ಯಗಳಲ್ಲಿ ಭಾಗವಹಿಸಿ, ಕಾಯಾ ವಾಚಾ ಮನಸಾ ಏಳಿಗೆಯ ಕೆಲಸಕ್ಕೆ ನಮ್ಮ ಬೆಂಬಲಕೊಡಬೇಕೆಂದು ಕರ್ನಾಟಕ ಸಾಹಿತ್ಯ ಪರಿಷತ್ತು ತನ್ನ ಪರವಾಗಿಯೂ ಬಳ್ಳಾರಿಯ ಸ್ವಾಗತ ಮಂಡಲಿಯ ಪರವಾಗಿಯೂ ಮತ್ತೊಮ್ಮೆ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತದೆ.

ಸಿ. ಕೆ. ವೆಂಕಟರಾಮಯ್ಯ,
ಎಂ.ಎ., ಎಲ್.ಎಲ್.ಬಿ.,
ಗೌ. ಕಾರ್ಯದರ್ಶಿ, ಕ. ಸಾ. ಪರಿಷತ್ತು.
ತಾ. ೧೬-೧೧-೧೯೩೮
ಬೆಂಗಳೂರು.

ಹಿಂದೂದೇಶದ, ಪ್ರಮುಖ ಪಟ್ಟಣವಾದ
ಮುಂಬಯಿಂದ ಹೊರಡುವ ಒಂದೇ ಒಂದಾದ ಕನ್ನಡ ರಾಷ್ಟ್ರೀಯ
ವಾರಪತ್ರಿಕೆ.

ಮುಂಬಯಿ ಕನ್ನಡಿಗ

ಇದರಲ್ಲಿ ಕನ್ನಡ ವಿದ್ವಾಂಸರ ಲೇಖನಗಳು, ಕವಿತೆಗಳು ಮತ್ತು ಕಥೆಗಳು ತಪ್ಪದೆ ಪ್ರತಿವಾರಕ್ಕೆ ಪ್ರಕಟವಾಗುತ್ತವೆ ಅಲ್ಲದೆ ತರತರದ ವಾರ್ತೆಗಳು, ಚಿತ್ರಗಳೂ ಇರುವುವು. ನೂತನ ಪದ್ಧತಿಯ ಮೇಲೆ ಹೊರಡಿಸಿರುವ ವಾರ ಪತ್ರಿಕೆಯೊಂದರೆ ಇದೊಂದೇ.

ವಾರ್ಷಿಕ ಚಂದಾ ರೂ. ೩—೮—೦.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ

MANAGER,
BOMBAY KANNADIGA,
PODAR CHAMBERS.
109 Parsi Bazar Street, Fort BOMBAY.

ಲಗಾಂ ಇಲ್ಲದ ಕುದುರೆ

ಪುಟ ೧೪ರಿಂದ

ಟ್ಟು ಒಬ್ಬ ಅಡಿಗೆ ಭಟ್ಟನನ್ನು ಮಾಡಿದೆ. ಇನ್ನು ಹೊರಗಿನ ಕೆಲಸ ಗಿಲಸ ಅಂತ ಹೇಳಿ ಅದಕ್ಕೆ ಜನ ಬೇರೆ; ಸಂಬಳ ಬೇರೆ. ಆದಾಯಿತಲ್ಲಾ ನಲ್ವತ್ತು ರೂಪಾಯಿ ಕೊಟ್ಟು ಒಬ್ಬ ಮೋಟರ್ ಡ್ರೈವರ್, ಇಪ್ಪತ್ತು ರೂಪಾಯಿಯ ಒಬ್ಬ ಕ್ಲೀನರ್ ಹೀಗೆ ಇಬ್ಬರನ್ನು ನೇಮಿಸಬೇಕಾಯಿತು. ಇದು ಹ್ಯಾಗೂ ಇರಲಿ- ನಾನು ಆಫೀಸಿಗೆ ಹೋಗುವುದೇ ತಡ- ಇವಳು ಮೋಟರ್ ಡ್ರೈವ್ ಮಾಡಿ ಪರ್ಚೇಸಿಗೆ ಹೋಗುವುದು. **ಪ್ರತಿ ದಿವಸವೂ ಪರ್ಚೇಸ್! ಸಿಕ್ಕಿಸಿಕ್ಕಿದ ಅಂಗಡಿಯಲ್ಲಿ ಪರ್ಚೇಸ್!** ಒಂದು ರಾಶಿ ಶೀರೆ. ಪ್ರದರ್ಶನಕ್ಕೆ ತೆಕ್ಕೊಂಡು ಹೋಗಬಹುದು. ತಿಂಗಳ ಆಖೈರಿಗೆ ಬಿಲ್ಲು ಕೊಟ್ಟು ಕೊಟ್ಟು ಸಾಕಾಯಿತು. ಮಾವಾ, ನನ್ನ ದಸ್ಕತ್ತು ಬಸಳೆ ತಿದ್ದುತ್ತಾ ಬಂದಿದೆ. ಆದರೆ ಬೊಕ್ಕಸ ಮಾತ್ರ ಪ್ರತಿ ತಿಂಗಳ ಹತ್ತನೇ ತಾರೀಕಿನೊಳಗೆಯೇ ಬರಿದು. ರಾತ್ರಿ 8½ ಘಂಟೆಯ ತನಕ ಹೆಂಗಸರ ಕ್ಲಬ್ಬಿನಿಂದ ಇವಳು ಹಿಂದೆ ಬರುವುದಿಲ್ಲ. ಒಟ್ಟಾರೆ ನಿಮ್ಮ ಮಗಳು ಅಂಕೆಯಿಲ್ಲದ ಕಪಿಯಾಗಿದ್ದಾಳೆ. ಒಳ್ಳೇ ರೀತಿಯಲ್ಲಿ ಸಣ್ಣ ಪ್ರಾಯದಲ್ಲಿ ತರ್ಬೇತು ಮಾಡದಿದ್ದದ್ದು ನಿಮ್ಮ ತಪ್ಪು. ಹೆಚ್ಚು ಹೇಳುವುದೇನು? ಬ್ಯಾಂಕಿಗೆ 4000 ರೂಪಾಯಿ ಸಾಲ ಪಡಕೊಂಡದ್ದು ಕೊಡಬೇಕು. ಮರ್ಯಾದೆ ಹೋಗುತ್ತದೆ. ಅವರು ಸ್ವಲ್ಪ ಸಮಯದಲ್ಲಿ ವ್ಯಾಜ್ಯ ಮಾಡುವುದರಲ್ಲಿದ್ದಾರೆ. ಜಾಮೀನು ನಿಂತ ಕುಳ ನಾನು ಜೋರು ಮಾಡುತ್ತಾನೆ. ಏನಾದರೂ ಗಡಿಬಿಡಿಯಾದರೆ ನನ್ನ ಕೆಲಸ ಹೋದೀತು. ಮತ್ತೆ ನಿಮ್ಮ ಮಗಳಿಗೇನೇ ಕಷ್ಟ ಆದಕಾರಣ ನಮ್ಮ ಮೇಲೆ ಪ್ರೀತಿ ಇಟ್ಟು 4000 ರೂ. ಕೂಡಲೇ ಟೆಲಿಗ್ರಾಫ್ ಮನಿಯಾರ್ಡರ್ ಮಾಡಬೇಕಾಗಿ ಪ್ರಾರ್ಥನೆ ಇಂತೀ ನಿಮ್ಮ ಅಳಿಯನು ಬೇಡುವ ಆಶೀರ್ವಾದಂಗಳು,

M. A. D. Shetty.

ನೋಡಿದಿರಾ ಸ್ವಾಮಿ ಶೆಟ್ರೇ,-ನಮ್ಮ ಅವಸ್ಥೆ; ನಮ್ಮ ಚಿಂತೆ-ನಮ್ಮ ಭಾಗ್ಯ-ನಮ್ಮ ದೌರ್ಭಾಗ್ಯ—ನೋಡಿ, ಹುಡುಗಿಯನ್ನೂ ನನ್ನನ್ನೂ ಇವ ದೂರುತಾನಲ್ಲಾ—ಇವನಿಗೆ ಮುಂಚೆ ತಿಳಿಯಲಿಲ್ಲ-ಅವಳಿಗೆ ದೂರುವವ ಇವ ಮಾಡುವದೇನು? ಸಿಕ್ಕಿಸಿಕ್ಕಿದವರನ್ನು ಊಟಕ್ಕೆ ಕರೆಯುವುದು. ಬಾಟ್ಲಿ ಬಾಟ್ಲಿ ಒಡೆಯುವುದು. ಅದೇನು ನಲ್ಲಿಯ ನೀರೋ? ಸವಾರನಿಗೆ ಬೋಧವಿಲ್ಲದಿದ್ದರೆ, ಲಗಾಂ ಕೈತಪ್ಪಿ ಕೆಳಗೆ ಬೀಳುತ್ತದೆ ಕುದುರೆ ಕಂಡಾಬಟ್ಟೆ ಓಡಿ ಗಾಡಿ ಕಣಿವೆಯಲ್ಲಿ ಬಿದ್ದ ಮೇಲೆ ಅಳುವುದು. ನೋಡಿ ಶೆಟ್ರೇ, ಕಳೆದ ಸಾರಿ ಅವಳು ಚೊಚ್ಚಲ ಗರ್ಭಿಣಿ ಆ ಗಂಡು ಮಗುವನ್ನು ಹೆತ್ತ ಸಮಯದಲ್ಲಿ-ಇವ ಬೆಂಗ್ಳೂರಿನಿಂದ ಕಾರ್ ಮಾಡಿ, ಸರ್ಜನ್, ಲೇಡಿಡಾಕ್ಟರ್, ಮಿಡ್ ವೈಫನ್ನು ಕರಕೊಂಡು ಬಂದಿದ್ದ. ಇಲ್ಲಿ ದೊಡ್ಡ ಟಿಫಿನ್-ಇದು ಎಲ್ಲಾ ಅನಾವಶ್ಯಕಲ್ಲಾ-ನಮ್ಮ ಊರಲ್ಲಿ ಸುಲಭದಲ್ಲಿ ಡಾಕ್ಟರ್ ಇಲ್ಲವಾ? ನೋಡೀ ಅದೂ ಅಲ್ಲದೆ ಅವಳಿಗೇನೂ ಕಾಯಿಲೆ ಇರಲಿಲ್ಲ-ಗರ್ಭಕೋಶ ಸಮ ಉಂಟಾ ಅಂತ ನೋಡುಕ್ಕ ಅಂಬ್ರ-ಇದೆಲ್ಲಾ ಮರ್ಜಿ ತೋರಿಸುಕ್ಕೆ 'ಜಂಟ್ಲ್ ಮೆನ್' ಮರ್ಜಿ. ಎರಡು ಬಾಟ್ಲಿ ಬ್ರಾಂಡಿ-ಎಂಬತ್ತು ವರುಷದ ಹಿಂದಿದ್ದು ಅಂಬ್ರ—ಅದನ್ನು 'ಪೇಪರ್'ನಲ್ಲಿಯೇ ಹಾಕಬೇಕೆಂದಿದ್ದ— ಇದಕ್ಕೆ ಬಾಟ್ಲಿ ಒಂದೊಂದಕ್ಕೆ 150 ರೂಪಾಯಿ. ನೋಡಿದಿರಾ, ಇಷ್ಟೇ ಆಯ್ತಾ—ಗಿಳಿಯ ಪಂಜರದ ಹಾಗಿದ್ದ ಒಂದು ತೊಟ್ಟಿಲು ಕಳುಹಿಸಿದ್ದ— ಇಲೆಕ್ಟ್ರಿಲ್ಲಿ ನಡಿಯುವುದು-ಈ ನಮ್ಮ ಹಳ್ಳಿ ತೊಟ್ಟಿಲಲ್ಲಿ ಮಲಗಿಸಿದ್ರೆ ಮಗುವಿಗೆ ಗಾಳಿ ಹೆಚ್ಚಾಗಿ ಶ್ವಾಸಬಂದಾಗುತ್ತದೆಂದು ಹೆಂಡತಿಗೆ ಹೆದರಿಸಿದ ಅಂಬ್ರ ಈಗ ನಮ್ಮನ್ನು ದೂರಲಿಕ್ಕೆ ಹೊರಟಿದ್ದ. ರ. ಪೈ ಮಾತ್ರ ನಷ್ಟ ಬೇಕು—ಈ ಕುದುರೆಗಳಿಗೆ ಲಗಾಂ ಇಲ್ಲದಿದ್ದರೆ ಶೆಟ್ರೇ, ಅದರ ಮೇಲೆ ಹತ್ತಿದ ನಮಗೂ ಕಾಲುತುಂಡು.

ಶೆಟ್ರು—ಕೊಡಬೇಡಿ ಹೆಗ್ಗಡೇರೆ-ಒಂದು ಪೈಯ್ಯೂ ಕೊಡಬೇಡಿ-ಹೋಗಲಿ ಅವನ ಮರ್ಯಾದಿ ಹೋಗುವುದಾದರೆ ಈಗಲೇ ಹೋಗಲಿ-ಈ ನಾಲ್ಕು ಸಾವಿರ ರೂಪಾಯಿ ಗರ್ಜಿಯಲ್ಲಿಯೇ ಹೋಗಲಿ—ಕೊಟ್ಟು, ಕೊಟ್ಟು, ನಮ್ಮನ್ನು ತಗ್ಗಿಸಿಕೊಂಡು ಕಡೇಗೆ ಒಂದು ಐದು ರೂಪಾಯಿಯ ಗರ್ಜು ಬರುವಾಗ ಆ ಮರ್ಯಾದೆ ಹೋಗುವದು ಬೇಡ—ಇವರಿಗೆಲ್ಲಾ ಬೇರೊಬ್ಬರ ಹೆಗಲಿನಲ್ಲಿ ಕೂತುಕೊಂಡು ಹೋಗುವವರಿಗೆ ಹೊತ್ತವರ ದಣಿವು ತಿಳಿಯುವುದಿಲ್ಲ—ದರ್ಬಾರಿಗೆ ಒಂದು ಅಂತ್ಯ ಉಂಟಯ್ಯಾ! ನನ್ನ ಇಂಗ್ಲೀಷ್ ಮಗ ಹೇಳಿದ ಹಾಗೆ, 'ನೋಸೆನ್ಸ್' (Nonsense)

ಹೆಗ್ಡೇರು:- ಹೌದು ಇದು ನನಗೂ ಗೊತ್ತುಂಟು ಆದರೆ ನಾನು ಈಗ ಸಹಾಯ ಮಾಡದಿದ್ದರೆ ಅವನ ಸರಕಾರಿ ಕೆಲಸ ಹೋಗಿಬಿಟ್ಟರೆ ಅವಳು ದಾರಿಯಲ್ಲಿ ಅಲ್ಲವಾ. ಹುಡುಗಿ ಕೊಟ್ಟು ಸಿಕ್ಕಿಬಿದ್ದೆಲ್ಲಾ! ನನ್ನ ಮಗಳೇನಾದರೂ ಆತ್ಮಹತ್ಯ ಮಾಡಿಕೊಂಡರೆ ನಾನು ಏನು ಮಾಡುವುದು ಹೇಳಿ?

ಶೆಟ್ರು:—ಸ್ವಾಮಿ, ಹೆಗ್ಗಡೇರೇ, ನೀವು ದೊಡ್ಡವರು. ಇದು ಲೋಕಕ್ಕೇನೇ ತಿಳಿದ ಸಂಗ್ತಿ. ಆದರೆ ಬೇಜಾರ ಮಾಡಬೇಡಿ-ನಾನು ಒಂದು ಸಂಗ್ತಿಯನ್ನು ಹೇಳುತ್ತೇನೆ. ಏನೂ ಬೇಜಾರ ಮಾಡಬಾರದು. ಇದು ನಾನು ವ್ಯಕ್ತಿದೃಷ್ಟಿಯಿಂದ ಹೇಳುವುದಲ್ಲ—ಒಂದು ಸೂತ್ರದ ದೃಷ್ಟಿಯಿಂದ ಹೇಳುವುದು:—ಕೆಲಸ ಹೋದರೂ ಚಿಂತೆಯಿಲ್ಲ. ಅವರಿಬ್ಬರು ಸತ್ತರೂ ಚಿಂತೆಯಿಲ್ಲ-ಕೊಡಬೇಡಿ—ದಮ್ಮಯ್ಯಾ ಕೊಡಬೇಡಿ-ಯಾರಾದರೂ ಸಾಯದೆ ಈ ವ್ಯಾಧಿ ಗುಣವಾಗುವುದಿಲ್ಲ. ಮತ್ತೆಲ್ಲಾ ಸೌಖ್ಯವಾದೀತು. ಯಾರಾದರೂ ಸಾಯದೆ ಇವಕ್ಕೆ ಬುದ್ಧಿ ಬರೋದಿಲ್ಲ ಸಾಯೋದೂ ಇಲ್ಲಾನ್ನಿ. ಸಾಯದೆ ಬುದ್ಧಿ ಬರುತ್ತೋ? ನೋಡಿ, ಇದೆಲ್ಲಾ ನಮ್ಮ ಹೆಂಗಸರಿಗೆ ಗೊತ್ತುಂಟಾ? ಅವರು ಸಹಾ ಇದೇ ಆಟಕ್ಕೆ ಮೆಚ್ಚುವದಿಲ್ಲವಾ! ನೋಡಿ ಹೆಗ್ಗಡೇರೆ ನಮ್ಮ ಪೂರ್ವಿಕರ ಕಾಲದಲ್ಲಿ ಜೀವನದ ಆಟವು ಸರಳವಾಗಿದ್ದ ಕಾರಣ ಸಂಜೆಗೆ ಸುರುವಾದರೆ ಆಟ ಬೆಳಗ್ಗಿನವರೆಗೂ ಸರಾಗವಾಗಿ ಸಾಗುತ್ತಿತ್ತು ಮಂಗಳವಾಗಿತ್ತು. ಈಗಿನ ಅವಸ್ಥೆ ನೋಡಿ ಸಂಜೆಗೆ ಆರು ಘಂಟೆಗೆ ಸುರುವಾದ ಆಟ ರಾತ್ರಿ ಏಳೇ ಗಂಟೆಗೆ ಕೈದಲ್ಲವಾ ಏನು ದುರಂತ ಅವಸ್ಥೆ! ಎಲ್ಲೆಲ್ಲಿಯೂ ಈ ನಮ್ಮ ಕುದುರೆಗಳಿಗೆಲ್ಲಾ ಲಗಾಂ ಇಲ್ಲದ ಕಾರಣ ಅವಸ್ಥೆ ಹೀಗೆಯೇ ಆಗಿದೆ. ಈಗಿನ ಕಾಲದಲ್ಲಿ ಮದುವೆ ಮಾಡಿದವನಿಗೂ ಸುಖವಿಲ್ಲ—ದಂಪತಿಗಳಿಗೂ ಸುಖವಿಲ್ಲ—ಶಿಸ್ತೆಲ್ಲಾ ತಪ್ಪಿ ಹೋಗಿದೆ. ಆದುದರಿಂದ ಕೊಡಬೇಡಿ, ಒಂದು ಪೈಯ್ಯೂ ಕೊಡಬೇಡಿ-ನಿಮ್ಮ ಹಾಗಿನವರು ಹೀಗೆ ಮಾಡಿ ಮಾಡಿ ಒಂದು ಕುಟುಂಬ ಇದ್ದ ಮಧ್ಯಮ ತರಗತಿಯ ನಮ್ಮಂಥವರಿಗೆ ಬಹು ಕಷ್ಟವಾಗಿದೆ-ನೋಡಿ ನನಗೆ ಸುರುವಿಗೊಂದು ಹೆಣ್ಣು. ಅವಳ ಒತ್ತಿನವ ಒಂದು ಗಂಡು ಹುಡುಗ. ಇವ ಪೇಟೇಲಿ ಕೋಲೇಜಿಗೆ ಹೋಗುತ್ತಾನೆ—ಬಿ ಎ. ಕ್ಲಾಸಿನಲ್ಲಿದ್ದಾನೆ—ತಿಂಗಳಿಗೆ 60 ರೂಪಾಯಿ ತಕ್ಕೊಂಡು ಹೋಗುತ್ತಾನೆ—ಚರ್ಚೆ ನಾನು ಮಾಡಿದರೆ, 'ನೋಸೆನ್ಸ್' (Non-sense) ಅಂತ ಹೇಳುತ್ತಾನೆ. ಆ ದುಸ್ತೇನು? ಸಿಗರೇಟು ಏನು? ಆ ಜಟ್ಟೇನು? ಇವುಗಳ ಹತ್ತರ ಮಾತಾಡಲಿಕ್ಕೆ ಸಾಧ್ಯವುಂಟಾ!—'ನೊಸೆನ್ಸ್' (Non-sense) ಬರುತ್ತದೆ.

ನೋಡಿ, ನೋಡಿ, ನನ್ನ ಅಕ್ಕನ ಮಕ್ಕಳ ಹಾಡು ನೋಡಿ —ನಮ್ಮ ತಾಯಿಯಿರುವಾಗ ನನ್ನ ಅಕ್ಕ ನಮ್ಮ ಮನೆಗೆ ಬಂದಳೆಂದರೆ ದೇವರು ಬಂದ ಹಾಗೆ—ಕಾರಣ—ಗಂಡ ಸ್ವಲ್ಪ ಆಸ್ತೀಗೀಸ್ತಿ ಅವಳ ಹೆಸರಿನಲ್ಲಿ ಕೊಟ್ಟಿದ್ದರು—ಅವರು, ನನ್ನ ಭಾವ, ತೀರಿ ಹೋಗಿ ಒಂದೆರಡು ವರ್ಷ ಆಯಿತು—ನನ್ನ ಅಕ್ಕನ ಮೂವರು ಗಂಡು ಮಕ್ಕಳಿಗೆ ಲಗಾಮೇ ಇಲ್ಲ-ಶೋಕದ ಮೂರು ಮೆಟ್ಲನ್ನೂ ನೋಡಲಿಕ್ಕೆ ಇಳಿದರು.—ನನ್ನ ಅಕ್ಕನ ಹತ್ತರ ಹೇಳಿದೆ ನಾನು—ಸ್ವಲ್ಪ ಲಗಾಂ ಬಿಗಿ ಹಿಡಿಯುವುದು ಒಳ್ಳೇದು, ಮಕ್ಕಳು ಹಾಳಾಗುತ್ತಾರೆಂದು—ಅದಕ್ಕೆ ಅವಳು ನನ್ನೊಡನೆ ಸಿಟ್ಟುಗೊಂಡು 'ನಿನಗೇನು, ಅವರ ತಂದೆ ಮಾಡಿದ್ದು ಖರ್ಚು ಮಾಡುತ್ತಾರೆ. ಅವರು—ನಮ್ಮ ಹಿರಿಯರು ಮಾಡಿದ್ದು ತೆಗಿಯುತ್ತಾರೋ?' ಎಂದು ಬಿಸಿ ಬಿಸಿ ಮಾತಾಡಿಬಿಟ್ಟಳು— ಸುಮ್ಮಗೆ ಕೂತುಕೊಂಡೆ-ಈಗಿನ ಅವಸ್ಥೆ ನೋಡಿ – ಸ್ತ್ರೀ ಗುರುತು ಮಕ್ಕಳಿಗೆ ಕೊಟ್ಟ ಕೊಟ್ಟು ಆಸ್ತಿಯಂತೂ ಹೋಯಿತಲ್ಲಾ—ಹೆಚ್ಚಿಟ್ಟು ಸಹಾ ಕಪ್ಪಾದ್ದು ಎಷ್ಟು ಸಾಬೂನು ಹಾಕಿದರೂ ಬಿಳಿದು

ಪುಟ ೯೦ರಲ್ಲಿ ನೋಡಿರಿ. (ರಾಶಿಭವಿಷ್ಯ ಪುಟ 7ರಲ್ಲಿದೆ)

No. 7. SRI DURGAPARAMESHWARI TEMPLE, BAPPANAD.

STATEMENT OF RECEIPTS AND DISBURSEMENTS.

For Fasli 1344 to Fasli 1346.

RECEIPTS

	Fasli 1344. Rs As Ps.	Fasli 1345 Rs As. Ps.	Fasli 1346. Rs As. Ps.	TOTAL. Rs. As Ps.
Rent from landed Properties	1,352 1 3	1,731 12 5	1,125 11 0	4,209 8 8
Rent from buildings	58 4 0	232 0 0	83 0 0	373 4 0
Rent of vesseles and ground rent	64 14 0	59 4 0	36 7 6	160 9 6
Tastik.	817 11 10	844 13 9	763 11 2	2,426 4 9
Dabbi collections ..	339 13 0	335 4 4	348 14 11	1,024 0 3
Kaneke	213 1 0	168 1 5	236 3 3	617 5 8
Sale of rice etc. ...	48 9 5	184 11 8	153 8 10	386 13 11
Sundry sevascollections	560 8 5	790 10 6	720 15 9	2,072 2 8
Miscellaneous recpts	153 12 2	112 9 3	179 2 9	445 8 2
Loans. .. .			50 0 0	50 0 0
TOTAL Rs.	3,608 11 1.	4,459 3 4.	3,697 11 2	11,765 9 7.

DISBURSEMENTS

	Fasli 1344 Rs As, Ps.	Fasli 1345. Rs. As Ps	Fasli 1346. Rs As. Ps.	TOTAL Rs. As. Ps
Daily Puja & sevas ..	766 5 3	895 11 9	1,022 0 1	2.682 1 1
Utsavas ...	1,915 14 0	1,555 3 7	1,577 14 9	5,049 0 4
Assessment	398 0 0	824 4 0	417 1 0	1,639 5 0
Establishment .	203 7 5	447 2 0	1,448 2 1	2,098 11 6
Repairs & maintenance	195 10 11	104 5 0	90 0 4	390 0 3
H.R.E.B.Contributions	105 0 0	55 13 0	58 8 0	219 5 0
P. B. Contribution		12 0 0	31 0 0	43 0 0
Health Department Contributions			20 10 0	20 10 0
Legal Charges ...	32 4 0			32 4 0
Vessels purchases ...			40 4 6	40 4 6
Crakers & fireworks				
During Utsavas ..	343 10 8	387 3 3	382 9 10	1,113 7 9
Mis. Expenses ...	45 9 0	120 2 2	104 13 0	270 8 2
Loan repaid			50 0 0	50 0 0
TOTAL Rs.	4,005 13 3.	4,399 12 9.	5,242 15 7.	13,648 9 7.

Examined with the books and found correct.

Mangalore,
25th, September, 1938.

(*Sd.*) **M. S. KRISHNA RAW,**
Auditor.

(True Copy)

ದಾಸು ಸೆಟ್ಟಿ ರುಜು, ಆಡಳ್ತೆ ಮೊಕ್ತೇಸರ.

ನಂಬ್ರ ೭ನೇ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಬಪ್ಪನಾಡು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಮಾರ್ಕ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಗುತ್ತ ರಾಜರು ಟ್ರೇಡ್‌ಮಾರ್ಕಳ್ಳ ರಿಂಗ್‌ಮಾರ್ಕ ಮುಲಾಮು ಈ ಕೆಳಗಡಂತೆ ಪ್ರತ್ಯಕ್ಷವಾಡಲಾಗಿದೆ

ಅಮೃತಾಂಜನ ಡಿಪೋವಿನ ಶ್ರವಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚಿನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುತ್ತದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬ್ಯಾಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರುಪಿ ದೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, — ಯಂ. ಆರ್. ಪೂಂಜ,

President & Manager, — ಪ್ರೆಸಿಡೆಂಟ್ ಮತ್ತು ಮೆನೇಜರ.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಮ್ನಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಪ್ರತ್ಯಕ್ಷ ಬಂದು ತಿಳಿಯಿರಿ. ಇದರ ಶಾಪು ಯೊಂದನ್ನು ಗವರ್ನಮೆಂಟ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಸ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಜಡ್ಡು ಹುವು, ಮಲಬದ್ಧತೆ, ಬಳಲಿಕೆ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ವೀರ್ಯಶಕ್ತಿಯನ್ನು ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯಸ್ತಂಭನಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ 2—8—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೇಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE**

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):—ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ಎರಡು ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು.

ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ.

ನಮ್ಮಲ್ಲಿ ಉತ್ತಮ ಹೂವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ.

ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,

ಪೋಸ್ಟ್:—ಕಾಪು, ದ. ಕ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೧—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಶಿಯನ್.

ಸೀರೆಗಳು

ಸ್ವದೇಶಿ ಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್ ಸಿನರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್ ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು ಹೆಚ್ಚಿನ ವಾಹಿತಿಗೆ ಬರೆಯಿರಿ, ಯಾ ಪ್ರತ್ಯಕ್ಷ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,

ಸೋದೆ ಮಠದ ಲೇನು - - - ಉಡುಪಿ. ದ. ಕ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು.
ಮಂಗಳೂರು. ಕೊಡಿಯಾಲಬೈಲು.

ಸೀತಾನದಿ ಜಾನುವಾರು ಸಂತೆ

ತಾರೀಕು 3-12-1938ರಿಂದ ತಾರೀಕು 9-12-38ರ ವರೆಗೆ ಮಾತ್ರ.

ಜಾನುವಾರುಗಳನ್ನು ಪಡಕೊಳ್ಳುವವರಿಗೆ ಇದೇ ಅತ್ಯುತ್ತಮ ಸಂದರ್ಭ.

ಪ್ರಯಾಣಿಕರಿಗೆ ಅನುಕೂಲವಾಗುವಂತೆ ಅಗತ್ಯವಿದ್ದಲ್ಲಿ ಸ್ಪೆಶ್ಯಲು
ಸರ್ವಿಸು ಚಾಲುಮಾಡುವ ಯೋಗ್ಯ ವ್ಯವಸ್ಥೆ ಮಾಡಲಾಗುವುದು.
ಪ್ರಯಾಣಿಕರ ಸೌಕರ್ಯದ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು.

JOINT MANAGERS.

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ
ದೊರೆಯುವುದು.

ವಾರ್ಷಿಕ ಚಂದಾ ರೂ 3 0 0 ಬಿಡಿ ಪ್ರತಿ 0 1 0

ಮೆನೇಜರ್ — ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital	...	Rs. 1,00000
Subscribed & Paid up „	.. ...	Rs. 30,500
Reserves ...	... ...	Rs. 1,078

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು
ಸ್ವೀಕರಿಸಲ್ಪಡುತ್ತವೆ.

3ರಿಂದ	6	ತಿಂಗಳ ವರೆಗೆ	4 ಸಲೆ
7 „	11	„	5 „
12 „	18	„	6 „

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯಿತಿ
ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?

ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ವ್ಯಾಸಭವನಂ
ತೇರುಬೀದಿ,
ಉಡುಪಿ

ಎಸ್. ಯು ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S S. KARANTH, for & on behalf of SUPPLY AGENCY LTD., at THULUNAD PRESS, UDIPI
and Published by K. H SHETTY at "NAVAYUGA" OFFICE, UDIPI, South India.

Registered No M. 3618.

15-12-1938

Earning while Spending!

SEEMS PARADOXICAL, BUT TRUE

ALL THE SAME OF AN

ADVERTISEMENT

IN THE

1939

NAVAYUGA

ANNUAL

Date of Publication 12—1—1939 *Last date of receipt of Advt 31—12—38*

ADVT. TARIFF

1 Page — Rs. 25/-
½ „ — Rs. 15/-
¼ „ — Rs. 8/-
⅛ „ — Rs. 5/-

Special rates for Special positions and in coloured paper or in Coloured ink

Your goods are good, yet surely your salesman can't shout as loudly as an advertisement in the Navayuga Annual shouting with over ten thousand mouths through village and city, along the high roads and by-lanes all over Karnataka.

TO AVOID DISAPPOINTMENT

Send your Advt. Immediately

Advt. Manager, '*Navayuga*' UDIPI, S. India.

The Canara Industrial & Banking Syndicate, Limited.

(INCORPORATED IN BRITISH INDIA)
[ESTD. 1925]

HEAD OFFICE:—MUKUND NIVAS, **UDIPI**, S. INDIA

MEMBER:

RESERVE BANK OF INDIA

BANKERS' CLEARING HOUSE, BOMBAY.

DEPOSIT RATES.

3 to 5 MONTHS	...	...	$2\frac{1}{2}$% p. a.
6 to 11 „	....	....	3% „
12 to 23 „	..	....	$3\frac{1}{2}$% „
24 „	....	....	4% „
SHORT TERM	...	....	2% „

BANKING BUSINESS OF EVERY DESCRIPTION TRANSACTED.

Please Note

The Subscribers, Agents & Advertisers *in*

NAVAYUGA

PLEASE NOTE THAT PAYMENTS DUE TO **NAVAYUGA** MAY BE MADE TO THE CREDIT OF NAVAYUGA ACCOUNT IN ANY BRANCH OF

THE CANARA INDUSTRIAL & BANKING SYNDICATE, LIMITED, UDIPI

Without being liable to pay any amount by way of Commission.

WHERE THE SYNDICATE HAS BRANCHES

Bombay, Bangalore, Belgaum, Byadgi, Bellary, Adoni. Hospet, Nandyal, Prodattur, Tadpatri, Taliparamba, Hubli, Gadag. Mangalore, Cannanore, Payyanur, Kanhangad, Kasargode, Karkal, Udipi, Uppinangady, Karwar, Kumta, Ankola, Honavar, Bhatkal, Sirsi, Sagar, Coondapoor, Brahmavar, Hungarcutta, Nippani, Tumkur & Hindupur,

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅನ್ಯೂತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಾಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿನಾಶಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: MANGALORE
BRANCHES. Udipi, Coondapoor, Kaup & Karkal

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at $3\frac{1}{2}$ p. c. per annum.
One year Fixed Deposits at 4 p. c. per annum.
Two years' Fixed Deposits at $4\frac{1}{2}$ p. c. per annum.

Interest on Fixed Deposits is payable every quarter.
Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary

THE PANGAL NAYAK BANK LIMITED.

Estd.] **H. O. UDIPI.** [1920

BRANCHES:
MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at $3\frac{1}{2}$ p. c per annum.
Two years' Fixed Deposits at 4 p. c. per annum.
Savings Bank Deposits .... 3 p. c per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD 1921
FOUNDER
Sri A B SHETTY, M.L.A.
Parliamentary Secretary Govt of Madras
ಸಂಸ್ಥಾಪಕರು,
ಶ್ರೀ ಎ. ಬಿ. ಶೆಟ್ಟಿ, ಎಂ ಎಲ್ ಎ
ಸಂಪಾದಕ
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೧೫-೧೨-೧೯೩೮ | Vol. XVIII
ಸಂಚಿಕೆ ೧೬ | Udipi, Thursday 15—12—1938 | No. 16

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ. ೧—೧೦—೦
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ

ಸಮಾಚಾರ ಸಂಗ್ರಹ

ಸ್ವಾಮಿ ಸತ್ಯದೇವ ಇವರಿಗೆ ಬರ್ಲಿನಿನಿಂದ ಆಮಂತ್ರಣ

ಬರ್ಲಿನಿನ ಆರ್ಯ ಸಂಸ್ಕೃತಿಯ ಕೇಂದ್ರದ ಪ್ರಧಾನಾಧಿಕಾರಿಗಳು ಜ್ವಾಲಾಪುರದ ಸತ್ಯಜ್ಞಾನ ನಿಕೇತನದ ಆಚಾರ್ಯ ಸ್ವಾಮಿ ಸತ್ಯದೇವ ಪಾರಿವ್ರಾಜಕರನ್ನು ಆರ್ಯ ಸಂಸ್ಕೃತಿಯ ಕುರಿತು ಜರ್ಮನಿಯಲ್ಲಿ ಭಾಷಣಮಾಡಿಯುವಂತೆ ಆಮಂತ್ರಣಕೊಟ್ಟಿರುವರು. ಸ್ವಾಮಿಜಿಯವರು ಈ ಆಮಂತ್ರಣದ ಮೇರೆಗೆ ಯುರೋಪಿಯಾನ ಸಂಚಾರ ಹೊರಡಲಿರುವರೆಂದು ತಿಳಿದುಬರುವುದು. ಈ ಸಂದರ್ಭದಲ್ಲಿ ಅವರು ಡ್ಯೂಕ್ ಆಫ್ ವಿಂಡ್ಸರರನ್ನೂ ನೋಡಬಯಸುವರು

ಕರ್ನಾಟಕವು ಹಿಂದೂ ಮುಸಲ್ಮಾನರೊಳಗಣ ಭೇದ ರಹಿತ ಅನ್ಯೋನ್ಯ ಭಾವನೆಯ ನಾಡು

ಅಂಧೇರಿಯ ಪ್ರೊಫೆಸರ್ ಕೆ. ಎಮ್. ಮೌಲ್ವಿಯವರು ಮುಂಬಾಯಿಯಲ್ಲಿ ತಮ್ಮ ಭಾಷಣದಲ್ಲಿ ಕರ್ನಾಟಕದಲ್ಲಿ ಹಿಂದೂ ಮುಸಲ್ಮಾನರಲ್ಲಿ ಪರಸ್ಪರ ವಿರುದ್ಧವಿಲ್ಲ ಮತ್ತು ಅವರು ಪರಸ್ಪರ ಭ್ರಾತೃಭಾವವುಳ್ಳವರಿರುವರು ಎಂಬ ವಿಷಯವನ್ನು ಸದೃಷ್ಟಾಂತವಾಗಿ ವಿವರಿಸಿ ಭಾಷಣವಿತ್ತರು. ಬೊಂಬಾಯಿ ಕ್ರೊನಿಕಲ್ ಪತ್ರಿಕೆಯು ಕೂಡಾ ಈ ವಿಷಯವನ್ನು ಸಮರ್ಥಿಸಿ, ಹೀಗನ್ನುವುದು. 'ಕರ್ನಾಟಕದ ಮುಸಲ್ಮಾನರುಕೂಡಾ ತಮ್ಮ ಹಿಂದೂ ಸಹೋದರರಲ್ಲಿ ತುಂಬಾ ಸಹಾನುಭೂತಿಯುಳ್ಳವರಾಗಿದ್ದಾರೆ ಮತ್ತು ತಮ್ಮ ಹಿಂದೂ ಬಾಂಧವರ ದುಃಸ್ಥಿತಿಯ ಕಾಲದಲ್ಲಿ ತಾವು ನೆರವಾಗುವರು.'

ಕಳೆದ ಉತ್ತರ ಕನ್ನಡದ ಅನಿರೀಕ್ಷಿತ ನೆರೆಯ ಹಾವಳಿಯ ಕಾಲದಲ್ಲಿ ಭಟ್ಕಳ ಪಟ್ಟಣವು ಅಕಸ್ಮಿಕವಾಗಿ ನೆರೆಯಿಂದ ತುಂಬಿತು. ಈ ಸಮಯದಲ್ಲಿ ಈಜುವುದರಲ್ಲಿ ತುಂಬಾ ತರಬೇತಿಯಿರುವ ಮುಸಲ್ಮಾನ ತರುಣರು ನೆರೆಗೆ ಬಲಿಬಿದ್ದು ಮುಳುಗಿ ಸಾಯಬಹುದಾದ ಅನೇಕ ಮಂದಿ ಹಿಂದೂ ಸ್ತ್ರೀ ಪುರುಷ, ಬಾಲಕರನ್ನು ಬದುಕಿಸಿರುವರು. ಕರ್ನಾಟಕದ ಹಲವು ಸ್ಥಳಗಳಲ್ಲಿ ಹಿಂದೂಮುಸಲ್ಮಾನರು ಪರಸ್ಪರ ಸಮಾಧಿ ಸ್ಥಳಗಳನ್ನು ಭಕ್ತಿಯುತ ದೃಷ್ಟಿಯಿಂದ ಕಾಣುವುದನ್ನು ನೋಡಬಹುದು.

ಗುಂಡುನಾಟದ ಕೋಟು

ಲಂಡನಿನಲ್ಲೀಗ ಗುಂಡುಹೊಡೆದರೂ ಆ ಪಾಯದಿಂದ ತಪ್ಪಿಸಿಕೊಳ್ಳಬಹುದಾದ ಕೋಟು ತಯಾರಾಗಿರುವುದು. ಕ್ರಯ ಮಾತ್ರ ಹೆಚ್ಚು ಬಿದ್ದೀತು.

ಸ್ಪರ್ಶಮಾತ್ರದಿಂದ ರೋಗಗ್ರಸ್ತರನ್ನು ಗುಣಪಡಿಸುವ ಕನ್ಯೆ

ಈ ಹುಡುಗಿಯು ಫ್ರಾನ್ಸಿನ ಕ್ಲಾಯರ್ ಫೊಂಟ್ ಎಂಬ ಊರಿನವಳು. ಈ ಅದ್ಭುತ ಶಕ್ತಿಯನ್ನು ಕಂಡುಕೊಳ್ಳುವ ಎಳು ತಿಂಗಳ ಮೊದಲು ಹಲದಿನ ಮಲಗುವುದೇ ಸಾಧ್ಯವಾಗಲಿಲ್ಲ. ಅವಳು ಒಮ್ಮೊಮ್ಮೆ ಕುರ್ಚಿಯಲ್ಲಿ ಕೂಡ್ರುವವಳು, ಒಮ್ಮೊಮ್ಮೆ ಹಾಸಿಗೆಯಲ್ಲಿ ಬೀಳುವವಳು ಆದರೆ ಕಣ್ಣು ರೆಪ್ಪೆ ಮುಚ್ಚುತ್ತಿರಲಾಗಲಿಲ್ಲ. ಅವಳು ಅತೀವ ಅಶಕ್ತಳಾದಳು, ಅವಳ ಕಾಹಿಲೆಯ ಕಾರಣವನ್ನು ಡಾಕ್ಟರರು ಕಂಡುಹಿಡಿಯಲಾರದಾದರು. ಒಮ್ಮೆ ಒಂದು ದಿನ ಅವಳ ನೆರೆಮನೆಯ ಕಾಹಿಲೆಬಿದ್ದ ಒಬ್ಬಾಕೆ ಅವಳನ್ನು ನೋಡಬಂದಳು ಆಗ ಹಠಾತ್ತಾಗಿ ಈಕೆಯು ಅವಳನ್ನು ಸ್ಪರ್ಶಿಸಿದಳು. ಕೂಡಲೇ ಈ ಸಂದರ್ಶನೆಯನ್ನಿತ್ತಾಕೆಯ ಕಾಹಿಲೆಯು ಗುಣವಾಯಿತು. ಅಂದಿನಿಂದ ಅವಳಿಗೆ ಸರಿಯಾಗಿ ನಿದ್ರೆಬರತೊಡಗಿತು. ಅವಳ ಕೀರ್ತಿಯು ನಾಲ್ಕು ಕಡೆಗೂ ಹಬ್ಬಿತು. ಆವಳಿದ್ದಲ್ಲಿಗೆ ಚಿಕಿತ್ಸೆಗಾಗಿ ಅನೇಕರು ಬರತೊಡಗಿದರು. ಕೆಲಮಂದಿ ಡಾಕ್ಟರರು ಕೂಡಾ ತಮ್ಮ ಕಾಹಿಲೆಯ ಬಿಡುಗಡೆಗಾಗಿ ಬರುವದಿತ್ತು. ಕಾಹಿಲೆಗೆ ಬಲಿಬಿದ್ದ ನೂರಾರು ಬಡ ಒಕ್ಕಲಿಗರು, ಹಲವು ಶ್ರೀಮಂತರು, ಕಲಾವಿದರು, ಕವಿಗಳು, ಮತ್ತು ಕೆಲ ವೈದ್ಯರೂ ಕೂಡಾ ಈಕೆಯ ಸ್ಪರ್ಶಮಾತ್ರದಿಂದ ಗುಣಹೊಂದುತಿದ್ದರು. ಅವಳು ಬೇರೆ ಜನರನ್ನು ಗುಣಪಡಿಸುವುದು ಹೆಚ್ಚಿದಂತೆ, ಅವಳ ಆರೋಗ್ಯವು ವೃದ್ಧಿಹೊಂದಿತು.

ಮಂಗನು ಕೈದಿಯಾದುದು

ಚೆಮ್ಸ್‌ಫೋರ್ಡ್ ಎಂಬಲ್ಲಿ ಪೋಲೀಸರು ಒಂದು ಮಂಗನನ್ನು ಕೈದುಮಾಡಿರುವರು ಮತ್ತು ಅದರ ಯಜಮಾನನನ್ನು ಹುಡುಕಿದ್ದಾರೆ. ಒಂದು ದಿನ ಈ ಮಂಗನು ಒಂದು ಸಮಿಪಾಸದ ಬಂಗಲೆಯ ಪಾಕಶಾಲೆಯನ್ನು ನುಗ್ಗಿ ತನಗೆ ಬೇಕಾದಂತೆ ತಿನ್ನತೊಡಗಿತು. ಆಗ ಬಂಗಲೆಯ ಯಜಮಾನಿಯು ಬೊಬ್ಬಿಟ್ಟಳು. ಆಗ ನೆರೆಕರೆಯವರು ಓಡಿಬಂದು, ಮಂಗನನ್ನು ಹಿಡಿದರು. ಕೊನೆಗೆ ಕೈದುಮಾಡಿ ಪೋಲೀಸರು ಸ್ಟೇಷನಿನಲ್ಲಿರಿಸಿರುವರು.

ಜಡ್ಜರೊಬ್ಬರು ಮಾಟಗಾರನ ಮಂತ್ರಕ್ಕೆ ಆಹುತಿಯಾದರು

ಆಫ್ರಿಕದಲ್ಲಿ ನ್ಯಾಯಾಧಿಪತಿಯೊಬ್ಬನು ಮಾಟಗಾರ ಡಾಕ್ಟರನೊಬ್ಬನ ತಪ್ಪಿಗೆ ಶಿಕ್ಷೆ ವಿಧಿಸುವ ಸಮಯದಲ್ಲಿ ಅವನ ಮಂತ್ರಕ್ಕೆ ಬಲಿಬಿದ್ದು ಮರಣಹೊಂದಿದನು. ಈ ಮಾಟಗಾರನು ಒಬ್ಬ ಹಿಂದೀಯನನ್ನು ಕೊಂದು ಅವನ ಹೆಣದಿಂದ ಎಣ್ಣೆ ತಯಾರಿಸಿದನೆಂಬ ಆರೋಪದಿಂದ ಅಪಾದಿತನಾಗಿ ತಪ್ಪಿಗೆ ಗುರಿಯಾಗಿದ್ದನು. ಜಡ್ಜರು ಆಪಾದಿಯನ್ನು ವಿಚಾರಿಸಿ, ಅವನಿಗೆ ತನ್ನ ಕುರಿತು ಏನಾದರೂ ಹೇಳಲಿದೆಯೇ ಎಂದು ಕೇಳಿದರು. ಆಗ ಈ ಮಾಟಗಾರ ಡಾಕ್ಟರನು ತನ್ನ ಮಾತಿನಲ್ಲಿ ಕೆಲ ಶಬ್ದಗಳನ್ನುಚ್ಚರಿಸಿ, ಜಡ್ಜರಿಗೆ ಶಾಪವಿತ್ತನು. ಕೆಲ ನಿಮಿಷಗಳಲ್ಲಿ ನ್ಯಾಯಾಧಿಪತಿಗಳು ಮೂರ್ಛೆಬಿದ್ದರು. ಅನಂತರ ಸ್ಮೃತಿಬರಲಿಲ್ಲ. ಮರುದಿನ ಮರಣಹೊಂದಿದರು.

ತಿರುವಾಂಕೂರು ಸಂಸ್ಥಾನ ಕಾಂಗ್ರೆಸ್ ಅಧ್ಯಕ್ಷರ ಭಾಷಣ

ಕೊಟ್ಟಾಯಮಿನಲ್ಲಿ ಸಾರ್ವಜನಿಕ ಸಭೆ ಜರಗಿತು. ಸುಮಾರು ಹತ್ತುಸಾವಿರ ಮಂದಿ ನೆರೆದಿದ್ದರು. ಅಧ್ಯಕ್ಷರು ತಾನು ಪಿಳ್ಳೆಯವರು ಸ್ಟೇಟ್ ಕಾಂಗ್ರೆಸಿನ ಪ್ರೆಸಿಡೆಂಟರಿರುವರು. ತಮ್ಮ ಭಾಷಣದ ಹೀಗೆಂದರು.

"ದೇಶದಲ್ಲಿ ಶಾಂತಿನೆಲೆಗೊಳಿಸಲು ಇನ್ನೂ ಅವಕಾಶವಿದೆಯೆಂದು ಸರಕಾರಕ್ಕೆ ತಿಳಿಸಿರುತ್ತೇನೆ. ಸ್ಟೇಟ ಕಾಂಗ್ರೆಸಿಗೆ ಜನತೆಯ ಸಂಪೂರ್ಣ ಬೆಂಬಲವಿದೆಯೆಂಬುದು ನಾನು ಬಲ್ಲೆ. ಈ ದೇಶದ ಪ್ರತಿಯೊಬ್ಬರೂ ಜವಾಬ್ದಾರಿ ಸರಕಾರ ಬೇಕೆನ್ನುವರು. ಹೀಗಿರಲು, ಇಂಥಾ ಪ್ರಜಾಭೀಷ್ಟಕ್ಕೆ ವಿರುದ್ಧವಿರುವ ಸರಕಾರದ ಧೋರಣೆಯು ಬಹು ಆಶ್ಚರ್ಯಜನಕವಾದುದು. ಸರಕಾರವಿನ್ನೂ ತನ್ನ ಒತ್ತಾಟವನ್ನು ಕಡಿಮೆ ಮಾಡಿಲ್ಲ. ಇನ್ನೂ ಕೈದು ಮಾಡುವದವರಲ್ಲಿ ಸೆರೆಗೊಯ್ಯುವ ಕಾರ್ಯವನ್ನು ಮುಂದೊತ್ತದೆ. ಕಾಂಗ್ರೆಸಿನ ಮೇಲೆ ಹೊರಿಸಲಾಗುವ ಅಪವಾದವು ನಿಜವಾದವುಗಳಲ್ಲ. ಕಾಂಗ್ರೆಸೀಗ ಅದೆಷ್ಟೋ ಮುಂದೆ ನಡೆದಿದೆ.

ಸರಕಾರವು ಸ್ವಯಂ ಸೇವಕರ ಮತ್ತು ದೇಶ ಸೇವಿಕೆಯರ ಸಂಸ್ಥೆಯನ್ನು ವ್ಯವಸ್ಥೆಗೊಳಿಸಲು ತಡೆಕೊಡುತ್ತದೆ. ಇಂಥಾ ದಳ ರಚನೆಯು ಮಿಲಿಟರಿ ಶಿಕ್ಷಣಕ್ಕನುಸಾರವಾದುದೆಂಬುದು ಅವರ ಕಾರಣ. ಇದರಲ್ಲೇನು ಅರ್ಥವಿದೆ? ಕಾಂಗ್ರೆಸಿನ ಕೆಲಸವೆಂಬುದು ಆಟವಲ್ಲ. ಬಹು ಶಿಸ್ತುಬದ್ಧವಾದುದು. ತರಬೇತಿ ಹೊಂದಿದ ದಳವು ಬೇಕೇ ಬೇಕು. ಎಲ್ಲಾ ತರುಣ ತರುಣಿಯರು ಈ ಸಂಸ್ಥೆಗಳನ್ನು ಸೇರಬೇಕೆಂದು ನಾನು ಕೋರುವೆನು." ಅನಂತರ ಮುಂದಣ ಕಾಂಗ್ರೆಸಿನ ಕಾರ್ಯಕ್ರಮವನ್ನು ವಿವರಿಸಿ, ಸಭಿಕರನ್ನು ಅಭಿನಂದಿಸಿ, ಭಾಷಣವು ಕ್ತಾಯಗೊಳಿಸಿದರು.

THE UDIPI BANK LTD.
ನಿರಖು ಠೇವಣಾತಿ (ಡಿಪೋಜಿಟು)ಗಳು
ನೂ. ಕೆ. 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು.
ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ
ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100/-ರ ತನಕವೂ
ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ
ಸೌಕರ್ಯವಿರುವುದು.
ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ
ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ಮುಸಲೋನಿಯು ಹಿಟ್ಲರನ ಶಿಕ್ಷಕ

ಮುಸಲೋನಿಯು ಪ್ರಭಾವಶಾಲಿಯು; ಹಿಟ್ಲರನು ನಟನು ಮುಸಲೋನಿಯು ಗಂಭೀರಸ್ವಭಾವಿಯು, ಸುಸಂಸ್ಕೃತನು, ಹಿಟ್ಲರನು ತೇಲುನೋಟದಿಂದ ನೋಡು ವವನು, ಅವನಾಡುವುದು ರಾಜಕೀಯ ದ್ಯೂತ ಮುಸಲೋನಿಯು ಆತ್ಮವಿಶ್ವಾಸಿ, ಮಿತಭಾಷಿ, ಚತುರ ಮತ್ತು ವಿವೇಕಶಾಲಿ ಹಿಟ್ಲರನು ಸಾಮಾನ್ಯ ಬುದ್ಧಿಶಾಲಿ ಮಾತಿನ ಮಲ್ಲ, ಅಹಂಭಾವಿ, ದುಡುಕುಸ್ವಭಾವದವನು ಮುಸಲೋನಿಯನ್ನನು ಸರಿಸಿ ನಡೆದವನು ಹಿಟ್ಲರನು

ಇಂದು ಜಗತ್ತಿನ ಧೂಮಕೇತುಗಳಂತಿರುವ ಹಿಟ್ಲರ್ ಮತ್ತು ಮುಸಲೋನಿಯರ ತಾರುಣ್ಯವು ತೀರಾ ಭಿನ್ನವಾದುದು ಮುಸಲೋನಿಯೊಬ್ಬ ಬಡ ಕಮ್ಮಾರನ ಮಗನು ಅವನು ತನ್ನ ತಂದೆಯೊಂದಿಗೆ ಕರ್ಮಶಾಲೆಯಲ್ಲಿ ಬೆಳಗಿಂದ ಸಂಜೆಯವರೆಗೆ ಗೇಯುತ್ತಿದ್ದನು. ಅವನು ತಂದೆಯು ಆತನ ಮಿತ್ರರೊಂದಿಗೆ ನಡೆಯಿಸುತ್ತಿದ್ದ ಕ್ರಾಂತಿಪರ ಚರ್ಚೆಯನ್ನು ಆತ್ಯಾತುರದಿಂದ ಕೇಳುತ್ತಿದ್ದನು. ಅವನ ತಂದೆಯು ತನ್ನ ಜೀವನದ ದುಃಸ್ಥಿತಿಗೆ ಕಾರಣವಾದ ವಾತಾವರಣವನ್ನು ಕಡು ದ್ವೇಷಿಸುತ್ತಿದ್ದನು ತನ್ನ ಮಕ್ಕಳು ಕ್ರಾಂತಿಪುರುಷರಾಗಬೇಕೆಂದು ಅವನ ಹಿರಿದಾಸೆ. ಹೀಗಾಗಿ ಅವನು ತನ್ನ ಮಕ್ಕಳಿಗೆ ಕಾರ್ಲ್ ಮಾರ್ಕ್ಸನ ಸಾಮ್ಯವಾದಿ ಮತ್ತು ರಾಜ್ಯ ಸತ್ತೆಯ ವಿರುದ್ಧ ತತ್ವವನ್ನು ಬೋಧಿಸುತ್ತಿದ್ದನು ಕ್ರಾಂತಿಪುರುಷರ ತವರೂರೆನಿಸಿದ ರೊಮಾನದಲ್ಲಿ ಬಳೆದ ಮುಸಲೋನಿಯು ತನ್ನ ಆದರ್ಶ ತಂದೆಯ ಉದ್ದೇಶಪೂರ್ವಕವಾದ ಆದರ್ಶ ಶಿಕ್ಷಣದ ವಾತಾವರಣದಿಂದ ಬಳೆದ ಆಧುನಿಕ ಯುಗದ ಕ್ರಾಂತಿ ಪುರುಷನೊಬ್ಬನು

ಮುಸಲೋನಿಯು ಆರಂಭದಿಂದಲೂ ರಾಜಕೀಯ ತತ್ವ ವಿಚಾರವನ್ನು ಮನನ ಮಾಡುವುದರಲ್ಲಿ ಆತ್ಯಾಸಕ್ತಿಯನ್ನು ತೋರಿಸಿದ್ದನು ತನ್ನ ಹದಿನೆಂಟನೆಯ ವರ್ಷ ಪ್ರಾಯದಲ್ಲೇ ತನ್ನ ತಂದೆಯ ಆಕಸ್ಮಿಕ ಮರಣದ ಕಾರಣದಿಂದ ತನ್ನ ಹೆತ್ತಾಕೆಯನ್ನೂ, ತನ್ನ ಒಡಹುಟ್ಟಿದವರನ್ನೂ ಪೋಷಿಸುವ ಭಾರಕ್ಕೆ ಹೆಗಲೊಡ್ಡ ಬೇಕಾಯಿತು ಅನಂತರ ಕೆಲಕಾಲದೊಳಗ ರಾಜಕೀಯ ಬಂಡಾಯವನ್ನೆಬ್ಬಿಸಿದನೆಂಬ ಆರೋಪದ ಮೇಲೆ ಸೆರೆಮನೆಯಲ್ಲ ಬಂಧಿಯಾಗಬೇಕಾಯಿತು ಅಲ್ಲಿಂದ ತಲೆತಪ್ಪಿಸಿಕೊಂಡು ಸ್ವಿಜರ್ಲಂಡಿಗ ಹೋದನು ಅಲ್ಲಿ ಗಾರೆ ಇಟ್ಟಿಗೆಯ ಕೆಲಸಕ್ಕೆ ಸೇರಿಕೊಂಡನು ಆದರ ಅಲ್ಲಿಯೂ ಕಂಡುಹಿಡಿಯಲ್ಪಟ್ಟು ಗಡಿಪಾರು ಹೊಂದಿದನು ಕೆಲಕಾಲ ಅಜ್ಞಾತನಾಗಿ, ಪುನಃ ಸೆರೆಮನೆಯನ್ನು ಸೇರಬೇಕಾಯಿತು ಅವನು ತನಗೆ ಬಿಡುವಿದ್ದಾಗಲೆಲ್ಲಾ ಶ್ರಮಪಟ್ಟು ಅಭ್ಯಾಸಿಸುತಿದ್ದನು ಮಹಾಯುದ್ಧದ ಮೊದಲೇ ಪ್ರಸಿದ್ಧ ಅವಂತಿ'ಯೆಂಬ ಸಮತಾವಾದಿಪತ್ರಿಕೆಯ ಸಂಪಾದಕನಾದನು

ಮುಸಲೋನಿಯು ಯುದ್ಧವು ಆರಂಭವಾದೊಡನೆ ಕಾಲವು ಕನಗನು ಕೂಲವಾಗಿ ಮಾರ್ಪಟ್ಟಿರುವುದನ್ನು ಮನಗಂಡನ ತನ್ನ ಪ್ರಭಾವವನ್ನು ಹಚ್ಚಿಸುವ ಸಂಗಡವೊಂದರ ಮುಖಂಡನಾದನು ಇವನೀ ಆಕಾಂಕ್ಷೆಯು ನೆರವೇರಲು ಮೂರು ವರ್ಷಗಳು ಬೇಕಾದುವು 1922ರಲ್ಲಿ ಈ ಸಂಗಡದ ಶಕ್ತಿಯು ಅಸಾಮಾನ್ಯವೆನಿಸಿತು, ಮತ್ತು ಅವನು ರೋಮ್ ಸರಕಾರದ ಪ್ರಮುಖ ಮುಖಂಡನಾದನು ಮುಸಲೋನಿಯು ರಾಜ್ಯದ ಅಥವಾ ದೇವಧರ್ಮದ ವಿಚಾರದಲ್ಲಿ ತನ್ನ ಸ್ವೇಚ್ಛೆ ಬಂದಂತೆ ವರ್ತಿಸದೆ, ಅವರೆಡರ ಏಳಿಗಗಾಗಿ ತನ್ನ ನೆರವನ್ನಿತ್ತು ಹೋರಾಡಿದ ಮಹಾ ವಿವೇಕಶಾಲಿಯು ಮುಸಲೋನಿಯು ಸುಸಂಸ್ಕೃತನು, ಮತ್ತು ಅವನು ವಿವಿಧ ಕಲಾಸಂಪತ್ತನ್ನು ಸಂಗ್ರಹಿಸಲು ಸದಾ ಸಾಧಿಸುವವನು, ಅವನು ಜರ್ಮನಿ, ಫ್ರೆಂಚ್ ಮತ್ತು ಇಂಗ್ಲಿಷಿನಲ್ಲಿ ಧಾರಾಳವಾಗಿ ತಡೆಯಿಲ್ಲದೆ ಮಾತಾಡಬಲ್ಲನು. ತನ್ನ ಕಛೇರಿಯಲ್ಲ ತನ್ನ ಪ್ರಾಮುಖ್ಯ ವಿಷಯಗಳನ್ನು ತಾನಾಗಿ ನಿರ್ವಹಿಸಲು ಗೇಯುವವನಿರುವನು ಒಟ್ಟಾರೆ ಹೇಳುವುದಾದರೆ, ಮುಸಲೋನಿಯು ಪ್ರತಿಭಾಶಾಲಿಯು, ವಿವೇಕಿ, ಕಾರ್ಯಪಟುವು ಮತ್ತು ಸುಸಂಸ್ಕೃತನು.

ಎರಡನೆಯದಾಗಿ ಹಿಟ್ಲರನ ವಿಷಯ ಹಿಟ್ಲರನ ಬಾಲ್ಯವು ತೀರಾ ಬೇರೆಯೇ ಅವನೊಬ್ಬ ಬಡ ಕಸ್ಟಮ್ಸ್ ನೌಕರನ ಮಗ ಅವನು ತನ್ನ ಹದಿನೈದರಿಂದ ಇಪ್ಪತ್ತೈದು ವರ್ಷಗಳ ವರೆಗೆ ಸೋಮಾರಿಯಾಗಿ ಬಳೆದವ ವಿದ್ಯಾಭ್ಯಾಸದ ಆಕಾಂಕ್ಷೆ, ಬುದ್ಧಿತೀಕ್ಷ್ಣತೆಯ ಚಿಹ್ನೆ, ಅಥವಾ ಯಾವೊಂದು ಉಚ್ಚ ಆದರ್ಶತೆಯು ಅವನಲ್ಲಿ ಆವನ ಬಾಲ್ಯಕಾಲದಲ್ಲಿ ಕಂಡುಬರಲಿಲ್ಲ ಅವನಿಗೆ ಯಾವ ಕಲೆಯಲ್ಲಿಯೂ ಹೆಚ್ಚಿನ ಅಭಿರುಚಿಯಿರಲಿಲ್ಲ ಒಂದು ಚಿತ್ರ ಕಲಾಶಾಲೆಗೆ ಪ್ರವೇಶಕೋರಿದನು ಅದೂ ನಿರಾಕರಿಸಲ್ಪಟ್ಟಿತು ಮಹಾಯುದ್ಧ ಆರಂಭವಾದ ಈ ಗೊಂದಲದಕಾಲದಲ್ಲ ಅವನೊಂದು ನೌಕರಿ ಗಳಿಸಿಕೊಳ್ಳುವಷ್ಟರ ಯೋಗ್ಯತೆ ಹೊಂದಿದನು ಅಷ್ಟೆ ಆದರೆ ಈ ಸಮಯದಲ್ಲಿ ಮುಸಲೋನಿಯು ಇಟಲಿಯಲ್ಲಿ ರಾಜ್ಯ ಸೂತ್ರಚಾಲನೆಮಾಡುವ ಸಾಮರ್ಥತೆಯನ್ನು ಗಳಿಸಿದ್ದನು.

ಹಿಟ್ಲರನ ಜೀವನ ಪ್ರಗತಿಯು ಮುಸಲೋನಿಯನ್ನನುಕರಿಸುವುದರಲ್ಲಿ ಕೊಂಡಿಕೊಂಡಿರುವುದು. ಅವನು ಸ್ವಭಾವಜನ್ಯ ಶಕ್ತಿಯುತನಲ್ಲ, ಊಹನಾ ಶಕ್ತಿಯೂ ಇಲ್ಲದವನ, ತನ್ನ ಆರಂಭ ಜೀವನದಿಂದಲೂ ಹೆಜ್ಜೆಹೆಜ್ಜೆಗೂ ಮುಸಲೋನಿಯನ್ನನುಸರಿಸತೊಡಗಿದನು ಮುಸಲೋನಿಯಂಥಾ ಉಜ್ವಲ ಪ್ರಭಾವದ, ಆತ್ಮನಿರ್ಧಾರದ, ಸುಸಂಸ್ಕೃತರು ಇಂದಿನ ಇಟಲಿಯಲ್ಲಿ ದೊರೆಯುವುದು. ಪ್ರಾಯಶಃ ದುರ್ಲಭ ಆದರೆ ಹಿಟ್ಲರನು ಸಾಮಾನ್ಯ ಜನತೆಯ ಗುಂಪಿಗೆ ಸೇರತಕ್ಕವನು ಹೀಗೆಂದ ಒಳಿಕ, ಹಿಟ್ಲರನು ಇಂದೀಗ ಜಗತ್ತನ್ನು ಬೆರಗುಗೊಳಿಸುವ, ತನ್ನ ಸರ್ವಾಧಿಕಾರದ ಪಟ್ಟವನ್ನೆಂತು ಕಲ್ಪಿಸಿಕೊಂಡನೆಂಬ ಪ್ರಶ್ನೆ ಬರಬಹುದು ವಿಚಾರಮಾಡಿ ನೋಡಿದರೆ ಮುಸಲೋನಿಯ ಇಂದಿನ ಅಸಾಧಾರಣ ಸಾಮರ್ಥ್ಯಕ್ಕೆ ಅವನ ವ್ಯಕ್ತಿತ್ವವು ಹಲವು ರೀತಿಯಲ್ಲಿ ಕಾರಣವಾಗಿರುವುದೆಂದು ತಿಳಿಯದಿರದು. ಆದರೆ, ಹಿಟ್ಲರನ ಸ್ಥಾನಕ್ಕೆ ಜರ್ಮನಿಯ ಪರಿಸ್ಥಿತಿಯೇ ಕಾರಣವು ಯುದ್ಧದ ನಂತರದ ವರ್ಸೈಲ್ಸ್‌ನ ಅಪಮಾನಕರ ಒಪ್ಪಂದವು ಕಚ್ಚಿದ ಜರ್ಮನರ ಸ್ವಾಭಿಮಾನಕ್ಕೆ ಕುರಾಪಾಯವಾಗಿದ್ದಿತು ಯುದ್ಧದ ಅಪಜಯಕ್ಕೆ ವೈರಿಗಳ ಸಾಮರ್ಥ್ಯಕ್ಕಿಂತಲೂ, ದೇಶದ್ರೋಹಿಗಳ ವಂಚನೆಯೇ ಮೂಲಕಾರಣವೆಂಬುದನ್ನು ಬಹಿರಂಗಪಡಿಸುವ ಕಾರ್ಯವು ಹಿಟ್ಲರನದ್ದಾಗಿದ್ದಿತು ಜರ್ಮನರ ಸ್ವಾಭಾವಿಕವಾದ ವೀರ ಹೃದಯವು ಸಿಡಿಸದ್ದಿತು ಹಿಟ್ಲರನು ಅಧಿಕಾರಗಳಿಸಿದನು ಇಂಗ್ಲಂಡು ಮತ್ತು ಫ್ರಾನ್ಸು ವೀರ ಯೋಧರಾದ ಜರ್ಮನರ ವರ್ತನೆಯನ್ನು ಖಂಡಿಸುವಂತಹ ಸ್ಥಿತಿಯಲ್ಲಿರಲಿಲ್ಲ ಜರ್ಮನಿಯು ಹಿಟ್ಲರನ ಮುಂದಾಳುತನದಲ್ಲಿ ಶಸ್ತ್ರಧಾರಿಯಾಯಿತು ಸಮಾನ ಅಧಿಕಾರ, ಮತ್ತು ಸ್ಥಾನಮಾನವು ತಮಗೆ ದೊರೆಯಬೇಕೆಂಬ ಆಗ್ರಹವು ಜರ್ಮನರನಾಯಿತು ಇಟಲಿಯಾನರು ಸುಸಂಸ್ಕೃತರು, ಕಲಾವಿದರು, ಅವರೆನ್ನು ಯೋಧರನ್ನಾಗಿ ಮಾರ್ಪಡಿಸುವ ಮುಸಲೋನಿಯ ನಾಯಕತ್ವವು ಅದೆಷ್ಟೋ ಮಹತ್ವದ್ದು. ಇನ್ನು ಸರ್ವಾಧಿಕಾರಿಯಾದ ನಂತರ ಹಿಟ್ಲರನ ಮತ್ತು ಮುಸಲೋನಿಯ ಮನಃಸ್ಥಿತಿ, ರೀತಿನೀತಿಗಳನ್ನು ವಿಚಾರಿಸಿದರ, ನಿಶ್ಚಯವಾಗಿ ಮುಸಲೋನಿಯನ್ನೇ ಪಾಲಿಗೆ

THE TROPICAL
Insurance Co., Ltd.
NEW DELHI
Chairman: Sjt SUBHAS CHANDRA BOSE.
(PRESIDENT INDIAN NATIONAL CONGRESS)
100% Swadeshi Concern founded by such eminent Leaders as
PANDIT MOTHILAL NEHRU   Dr M A ANSARI
HAKIM AJMAL KHAN   T A K SHERWANI
and others
WANTED influential Agents, Special Agents and Organisers on liberal commission and salary
APPLY TO
M SUNDER RAM SHETTY, BRANCH MANAGER, HAMPANKATTA, MANGALORE
Or
K S RAMAMURTHI M A, BRANCH SECRETARY, 160 MOUNT ROAD, MADRAS

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು
ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ ಪುರುಷರು

ದಿಗಂಬರವಾಗಿರುವ ಗುಟ್ಟುಗಳ, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಸುಖಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ವಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅದಗಿವೆ ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು
ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0
ಸಿಗುವ ವಿಳಾಸ—T. V ದೇವಕರ್ ಅಂಡ್ ಕಂಪೆನಿ,
ನಂಬುಲಿಯರ್ ಬೀದಿ, ಜಿ ಟಿ ಮದರಾಸು
T V Devkar & Co, *Nambulier Street*, G. T MADRAS

ಹಿಟ್ಲರನಿಗಿಂತ ಉಚ್ಚ ಮಾರ್ಗಾವಲಂಬಿಯೆಂಬುದು ವಿದಿತವಾಗುತ್ತದೆ. ಮುಸಲೋನಿಯು ತನ್ನ ಅಭಿಪ್ರಾಯಕ್ಕೆ ವಿರುದ್ಧವಿದ್ದ ಕೆಲ ಮಂದಿ ಪ್ರತಿಭಾಶಾಲಿಗಳಾದ ಇಟಲಿಯಾನರನ್ನು ದೇಶದಿಂದ ಗಡಿಪಾರು ಮಾಡಿದನೆಂಬುದು ಅದೊಂದು ದೊಡ್ಡ ಅಪರಾಧವಲ್ಲ. ಆದರೆ ಹಿಟ್ಲರನ ಅಧಿಕಾರದಲ್ಲಿ ಪ್ರಸಿದ್ಧ ಜರ್ಮನರೆಲ್ಲರೂ ತಮ್ಮ ಮಾತೃಭೂಮಿಯನ್ನಗಲಬೇಕಾಗಿ ಬಂದಿತು. ಹಿಟ್ಲರನಲ್ಲಿರುವ ಅದೊಂದು ವಿಶೇಷ ಶಕ್ತಿಯೆಂದರೆ, ಅವನ ಅಸಾಧಾರಣ ವಕ್ತೃತ್ವ. ಇದರಿಂದವನು ಜರ್ಮನರ ಬಲವನ್ನು ಸುಲಭವಾಗಿ ಒಂದುಗೂಡಿಸುವ ಸಮರ್ಥತೆಯನ್ನು ಗಳಿಸಿದನು. ಜರ್ಮನರ ಹೆಗ್ಗಳಿಕೆಯ ನೆಪದಿಂದ ದ್ಯೂತವನ್ನಾಡ್ವುವ ಹಿಟ್ಲರನು, ಮುಖ್ಯ ಜಯಕಾಂಕ್ಷೆಯುಳ್ಳವನು. ಅವನಿಗೆ ಮೇಲಾಟ ವಿನಾ ಯಾವುದೂ ಸರಿಹೋಗುವಂತಿಲ್ಲ.

ಹಿಟ್ಲರನ ಜೀವನ, ನಡತೆ, ಸಂಸ್ಕೃತಿಗಳನ್ನು ಪರಿಶೀಲಿಸಿದರೆ, ಅವನಲ್ಲಿ ಮಹತ್ವಿಕೆಯ ಯಾವ ಹೆಚ್ಚಿನ ಚಿಹ್ನೆಗಳೂ ಕಂಡು ಬರುವುದಿಲ್ಲ ಅವನೊಬ್ಬ ನೈಜ ಪ್ರತಿಭೆಯವನಲ್ಲ, ಕಲಾವಂತನಲ್ಲ. ಅವನೊಬ್ಬ ಚತುರ ನಟನೆನ್ನಬಹುದು. ಅವನು ಮಧ್ಯರಾತ್ರಿಯಲ್ಲಾದರೂ ಮಂತ್ರಿಮಂಡಲವನ್ನು ಬೇಕಾದಾಗ ಕೂಡಿಸುವನು. ಆದರೆ ಅವನು ತಾನು ಸ್ವಯಂ ಕಛೇರಿಯ ಕೆಲಸವನ್ನು ಮಾಡದೆ, ತನ್ನ ಕೈಕೆಳಗಿನವರಿಂದಲೇ ಮಾಡಿಸುವನು. ಅವನು ತನ್ನ ಹೆಚ್ಚಿನ ಸಮಯವನ್ನು ತನ್ನ ಪ್ರದೇಶದಲ್ಲಿ ಸಿನೆಮಾ ನಟಿಯರ ಸಹವಾಸದಿಂದ ಕಳೆಯುವನು. ಅವನಲ್ಲಿರುವ ಇನ್ನೊಂದು ಹುಚ್ಚೆಂದರೆ, ತನ್ನ ಸಂಗಾತಿಗಳು ಸೇರಿದಾಗ ಅವರಿಗೆ ದ್ರಾಕ್ಷಾರಸಕನ್ನು ಕುಡಿಯಲು ಕೊಡುವನು. ತಾನು ಮಾತ್ರ ನೀರು ಕುಡಿಯುವನು ಒಟ್ಟಾರೆ ಹೇಳುವುದಾದರೆ ಅವನೊಬ್ಬ ಜಾದುಗಾರನಂತೆ, ನಟನಂತೆ ಅವನ ಸೂತ್ರವೆಲ್ಲಾ ನಿಗೂಢಕರ ಭಾವನಾಸ್ಪದವಾದುವುಗಳು. ಅವನೆಲ್ಲಿ, ಹೇಗೆ, ಯಾವಾಗ, ಕತ್ತಿಯೆತ್ತುವನೆಂಬುದು ಊಹಿಸುವುದು ಸಾಧ್ಯವಲ್ಲ

! ವಾ ರ್ತಾ ವಾ ಹಿ ನಿ !

ಖಾನ್ ಸಹೋದರರು ನಿರ್ಮಲಾಂತಃಕರಣವುಳ್ಳವರು, ಬಡಜನರ ಬಂಧುಗಳು—

ಖಾನ್ ಸಹೋದರರ ಶುದ್ಧ ಹೃದಯದ ಕುರಿತು, ಅವರ ನಿಷ್ಕಳಂಕ ವರ್ತನೆಯ ವಿಷಯದಲ್ಲಿ ಯಾವೊಬ್ಬ ಕಟುಟೀಕಾಕಾರನಾದರೂ ಸಂದೇಹ ತೋರಿಸಿರುವುದಿಲ್ಲ ಫಕೀರ ಖಾನ್ ಸಾಹೇಬರ ಹೃದಯವು ಯಾವಾಗಲೂ ದೀನದುಃಖಿಗಳ ಕಡೆಗೆ ಇರುವುದು. ಅವರು ತನ್ನ ಜೀವನವನ್ನು ಬಡವರ ಹಿತಕ್ಕಾಗಿಯೇ ವಿನಿಯೋಗಿಸುವ ಮಹಾ ಸಾತ್ವಿಕ ಪುರುಷರು. ಒಮ್ಮೆ ಮಹಾತ್ಮಾ ಗಾಂಧಿಯವರೊಡನೆ ಪ್ರಸ್ತಾಪಿಸುತ್ತಿರುವಾಗ ಹೀಗೆಂದರು "ಪೂಜ್ಯರೇ, ನನಗೆ ರಾಜಕೀಯ ವಿಚಾರಗಳೆಂದರೆ ಕಡು ಹಗೆ; ರಾಜಕೀಯ ವಿಷಯಗಳೆಂಬುದು ತಿರುಳಿಲ್ಲದ, ನಿರರ್ಥಕವಾದ ಭ್ರಮೆಗೊಳಿಸುವ ಚಕ್ರವ್ಯೂಹ; ನನಗೆ ಅವುಗಳಿಂದ ದೂರವಿದ್ದು ಅತೀ ದರಿದ್ರರ ಮನೆಸೇರಿ ಅವರನ್ನು ಸೇವಿಸುವುದೇ ಆನಂದವೆಂದು ತೋರುತ್ತದೆ." ಅವರ ಜೀವನವು ಎಷ್ಟು ಸರಳವಾದುದು, ನಡತೆಯು ಎಷ್ಟು ಸಹಾನುಭೂತಿಯುಳ್ಳದೆಂಬುದಕ್ಕೆ ಇನ್ನೊಂದು ದೃಷ್ಟಾಂತ ಕೊಡಬಹುದು ಅವರು ಗಾಂಧಿಜಿ ಮತ್ತು ಅವರ ಹಿಂಬಾಲಕರೊಂದಿಗೆ ಪಯಣ ಬೆಳೆಸುತ್ತಿದ್ದರು. ದಾರಿಯಲ್ಲಿ ಒಬ್ಬ ನಿರಾಶಾ ಯುವಕನು ಕಲ್ಲುಗಳ ಹೊರೆಯೊಂದನ್ನು ಕತ್ತೆಯ ಮೇಲೇರಿಸಿಕೊಂಡು ಹೋಗುತ್ತಿದ್ದನು. ಈ ಕತ್ತೆಯು ತಡವಿ ಬಿದ್ದು, ಕಲ್ಲಿನ ಹೊರೆಯು ಅದರ ಬೆನ್ನಿಂದ ಉರುಳಿ ಕೆಳಗೆ ಬಿತ್ತು. ಆ ಬಡ ತರುಣನು ಹೊರೆಯನ್ನು ತಿರುಗಿ ಕತ್ತೆಯ ಮೇಲೆ ಹೊರಿಸಲು ಹೋರಾಡುತ್ತಿರುವುದನ್ನು ಖಾನ್ ಸಾಹೇಬರು ಕಂಡು, ಒಡನೆ ಗುಂಪಿನಿಂದ ಧಾವಿಸಿ, ಯುವಕನ ಬಳಿಗೆ ಬಂದರು. ಮತ್ತು ತನ್ನೊಂದಿಗಿರುವವರನ್ನೂ ಈ ಕೆಲಸದಲ್ಲಿ ನೆರವಾಗಲು ಕರೆದರು. ಈ ಕೆಲಸವು ಪೂರ್ತಿಗೊಂಡಾಗ ತನಗೆ ಆ ದಿನ ದೊರೆತ ಸೇವೆಯ ಸಂದರ್ಭಕ್ಕಾಗಿ ಅತೀವ ಆನಂದಿತರಾದರು.

ಶ್ರೀನಗರದಲ್ಲಿ ಪತ್ರಿಕಾವ್ಯವಸಾಯಿಗಳ ಠರಾವು—

ಕಾಶ್ಮೀರದ ಇತ್ತೀಚಿನ ರಾಜಕೀಯ ಗೊಂದಲದ ಕಾಲದಲ್ಲಿ ಸೆರೆಮನೆಯನ್ನು ಸೇರಿದ ಪತ್ರಿಕಾ ವ್ಯವಸಾಯಿಗಳಿಗೆ ಸ್ಪೆಶಲ್ ಕ್ಲಾಸನ್ನು ಕೊಡತಕ್ಕದ್ದು ಎಂದು ಶ್ರೀನಗರದಲ್ಲಿ ನಡೆದ ಪತ್ರಿಕಾ ವ್ಯವಸಾಯಿಗಳ ಸಭೆಯಲ್ಲಿ ನಿರ್ಣಯವಾಯಿತು.

ಗಾಂಧಿಜಿಯವರ ಗಡಿನಾಡಿನ ಪ್ರಯಾಣವು ಚಿತ್ರಿತವಾಗಿದೆ—

ಲಾಹೋರಿನ ಕಮಲ ಮೂವಿಟೋನಿನವರು ಗಾಂಧಿಜಿಯವರ ಗಡಿನಾಡಿನ ಚಿತ್ರಪಟವನ್ನು ತೆಗೆದಿರುವರು. ಮತ್ತು ಲಾಹೋರಿನ ದೀಪಾವಳಿ ದೃಶ್ಯಗಳನ್ನೂ ಸಂಗ್ರಹಿಸಿರುವರು.

ಸಂಯುಕ್ತ ಪ್ರಾಂತ್ಯದ ವಿದ್ಯಾಭ್ಯಾಸದ ಯೋಜನೆ—

ಸಂಯುಕ್ತ ಪ್ರಾಂತ್ಯ ಸರಕಾರದ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣದ ಕುರಿತಾದ ಯೋಜನೆಯ ವರದಿಯು ಈಗ ತಾನೇ ಸಿದ್ಧವಾಗಿ, ಕಮಿಟಿಯ ಚೆಯರ್ ಮ್ಯಾನರಾದ ನರೇಂದ್ರದೇವ್ ಇವರ ಕೈಯಲ್ಲಿದೆ.

ಈ ವರದಿಯ ಮೇರೆಗೆ ಇಡೀ ಪ್ರಾಂತ್ಯದ ಏಳು ವರ್ಷದ ಪ್ರಾಥಮಿಕ ಕಡ್ಡಾಯ ಶಿಕ್ಷಣಕ್ರಮವು ರಚಿತವಾಗಿದೆ. ಈ ಯೋಜನೆಯನ್ನು ಸರಕಾರವು ಅಂಗೀಕರಿಸಿದರೆ, ಪ್ರಾಥಮಿಕ ಶಿಕ್ಷಣಕ್ಕೇನೇ ಎಂಟು ಕೋಟಿ ರೂಪಾಯಿ ವೆಚ್ಚವಾಗುವುದು.

ಈ ಸ್ಕೀಮಿನ ಮೇರೆಗೆ ಎಂಟು ಮಿಲ್ಲಿಯ ಬಾಲಕರಿಗೆ ವಿದ್ಯಾಭ್ಯಾಸ ಕೊಡಲ್ಪಡುವದು.

ಜಗತ್ತಿನ ಅತಿ ದೊಡ್ಡ ಪುಸ್ತಕ ಭಂಡಾರ—

ಲೋಕ ಕ್ರಾಂತಿಯ ಪ್ರಧಾನ ಕೇಂದ್ರವಾದ ಹಳೆ ಕೋಮಿನಂಟೆನ್ನ ಎಂಬಲ್ಲಿ ಲೆನಿನ್ ಹೊಸ ಲೈಬ್ರರಿಯು ಸ್ಥಾಪಿತವಾಗಿರುವುದು. ಇದು ಜಗತ್ತಿನ ಅತ್ಯಂತ ದೊಡ್ಡ ಪುಸ್ತಕಭಂಡಾರವಾಗುವುದಾಗಿ ಗೊತ್ತಾಗುತ್ತದೆ. ಈ ಲೈಬ್ರರಿಯ ಕಟ್ಟೋಣದ ಕೆಲಸವು ತೊಡಗಿದ್ದು ಒಂದು ಭಾಗವು ಪೂರೈಸಿರುವುದು. ಈ ಕಟ್ಟೋಣವು ಪೂರೈಸಿದ ನಂತರ ವರ್ಷಾಂತ್ಯದೊಳಗೆ 11 ಮಿಲಿಯ ಗ್ರಂಥಗಳನ್ನು ಸಂಗ್ರಹಿಸುವಂತೆ ಯೋಚಿಸಲಾಗಿದೆ ಕಟ್ಟಡದ ಕೆಲಸಕ್ಕೆ ತೊಡಗಿ ಆರು ವರ್ಷಗಳು ಸಂದುವು.

ಮೈಸೂರು ದಿವಾನರನ್ನ ಪ್ರಶಂಸಿಸಿದರು

ಮಿ. ಎಸ್. ರಾಲ್ಫ್ ಹಾರ್ಲೊ, ಇವರು ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಮಾರಂಭದಲ್ಲಿ ಭಾಷಣವಿತ್ತರು. ಇವರು ತಮ್ಮ ಭಾಷಣದಲ್ಲಿ ಮೈಸೂರಿನ ಪ್ರಗತಿಯನ್ನು ಕೊಂಡಾಡಿ, ಯುನೈಟೆಡ್ ಸ್ಟೇಟ್ಸಿನಲ್ಲಿ ಬಡ ಹಳ್ಳಿಗರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂಬ ಉದ್ದೇಶದಲ್ಲಿ ಯಶಸ್ವಿಯಾಗಲಿಲ್ಲ ಆದರೆ, ಇಲ್ಲಿಯ ದಿವಾನರು ಬಹು ಚಟುವಟಿಕೆಯುಳ್ಳವರು. ಕಾರ್ಯ ಸಮರ್ಥರು ಇಂದು ಮೈಸೂರು ಇಲೆಕ್ಟ್ರಿಸಿಟಿ ಯೋಜನೆಯಲ್ಲಿ ಯಶಸ್ವಿಯಾಗುತ್ತಿರುವುದು ಅಭಿನಂದನೀಯವಿದೆಂದರು.

ಅನಂತರ ಅಂತರರಾಷ್ಟ್ರೀಯ ಬಾಂಧವ್ಯವನ್ನು ನೆಲೆಗೊಳಿಸಿ ದಾಸತ್ವವನ್ನು ನಿವೃತ್ತಿಗೊಳಿಸಬೇಕೆಂದರು. ಗಾಂಧಿಜಿಯವರ ಸತ್ಯ ಅಹಿಂಸೆಯ ತತ್ವಕ್ಕಾಗಿ ಅವರನ್ನು ಕೊಂಡಾಡಿದರು ಮತ್ತು ಹಿಂದೂದೇಶದ ಜನತೆಯ ಆತಿಥ್ಯ ಮತ್ತು ಬಂಧುತ್ವವನ್ನು ಮರೆಯೆನೆಂದರು. ಪ್ರೊಫೆಸರ್ ಬಿ. ಎಂ. ಶ್ರೀಕಂಠಯ್ಯನವರು ಪ್ರೊಫೆಸರ ಮತ್ತು ಅತಿಥಿಗಳಿಗೆ ಧನ್ಯವಾದವನ್ನರ್ಪಿಸಿದರು.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವವು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ ಕ್ರಯ ಡಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1 ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ಪಿ.ಳ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

THE **Bombay Life**

ಸ್ಥಾಪನೆ] **ASSURANCE CO., LTD.** [1908

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:

(1) ರಥಬೀದಿ, ಮಂಗಳೂರು
(2) ಪುತಿಯಾರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು. (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, ಬೊಂಬೈ (ಫೋ. ನಂ. 26314)

ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು.

(6) ವಟ್ಟಪಾಳಂ, ದ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂತೊರು

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)

ರಿಜಿಸ್ಟ್ರಿಯಾದ ಆಫೀಸು: ಉಡುಪಿ.

ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.

ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	....	ರೂ.	1,40,08,725
ಪ್ರೀಮಿಯಂ ಆದಾಯ ಮಿಕ್ಕಿದುದು	....	,,	30,00,000
ಒಟ್ಟು ಮೂಲ ಮಿಕ್ಕಿದುದು	...	,,	1,00,00,000
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು		,,	50,00,000

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ. **ಅತ್ಯಧಿಕ ಪ್ರತಿಫಲ.**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ

ಮುಸಲೋನಿಯು ಹಿಟ್ಲರನ ಶಿಕ್ಷಕ

ಮುಸಲೋನಿಯು ಪ್ರಭಾವಶಾಲಿಯು; ಹಿಟ್ಲರನು ನಟನು ಮುಸಲೋನಿಯು ಗಂಭೀರಸ್ವಭಾವಿಯು, ಸುಸಂಸ್ಕೃತನು, ಹಿಟ್ಲರನು ಕೀಲುಬೊಂಬೆಯಂತೆ ಕುಣಿಯುವವನು, ಅವನಾಡುವುದು ರಾಜಕೀಯ ದ್ಯೂತ ಮುಸಲೋನಿಯು ಆತ್ಮವಿಶ್ವಾಸಿ. ಮಿತಭಾಷಿ, ಚತುರ ಮತ್ತು ವಿವೇಕಶಾಲಿ ಹಿಟ್ಲರನು ಸಾಮಾನ್ಯ ಬುದ್ಧಿಶಾಲಿ ಮಾತಿನ ಮಲ್ಲ, ಅಹಂಭಾವಿ, ದುಡುಕುಸ್ವಭಾವದವನು. ಮುಸಲೋನಿಯನ್ನನು ಸರಿಸಿ ನಡೆದವನು ಹಿಟ್ಲರನು

ಇಂದು ಜಗತ್ತಿನ ಧೂಮಕೇತುಗಳಂತಿರುವ ಹಿಟ್ಲರ್ ಮತ್ತು ಮುಸಲೋನಿಯರ ತಾರುಣ್ಯವು ತೀರಾ ಭಿನ್ನವಾದುದು. ಮುಸಲೋನಿಯೊಬ್ಬ ಬಡ ಕಮ್ಮಾರನ ಮಗನು ಅವನು ತನ್ನ ತಂದೆಯೊಂದಿಗೆ ಕಮ್ಮಾರಶಾಲೆಯಲ್ಲಿ ಬೆಳಗಿಂದ ಸಂಜೆಯವರೆಗೆ ಗೇಯುತ್ತಿದ್ದನು. ಅವನು ತಂದೆಯು ಆತನ ಮಿತ್ರರೊಂದಿಗೆ ನಡೆಯಿಸುತಿದ್ದ ಕ್ರಾಂತಿಪರ ಚರ್ಚೆಯನ್ನು ಆತ್ಯಾತುರದಿಂದ ಕೇಳುತ್ತಿದ್ದನು. ಅವನ ತಂದೆಯು ತನ್ನ ಜೀವನದ ದುಃಸ್ಥಿತಿಗೆ ಕಾರಣವಾದ ವಾತಾವರಣವನ್ನು ಕಡು ದ್ವೇಷಿಸುತ್ತಿದ್ದನು. ತನ್ನ ಮಕ್ಕಳು ಕ್ರಾಂತಿಪುರುಷರಾಗಬೇಕೆಂದು ಅವನ ಹಿರಿದಾಶೆ. ಹೀಗಾಗಿ ಅವನು ತನ್ನ ಮಕ್ಕಳಿಗೆ ಕಾರ್ಲ್ ಮಾರ್ಕ್ಸನ ಸಾಮ್ಯವಾದಿ ಮತ್ತು ರಾಜ್ಯ ಸತ್ತೆಯ ವಿರುದ್ಧ ತತ್ವವನ್ನು ಬೋಧಿಸುತ್ತಿದ್ದನು ಕ್ರಾಂತಿಪುರುಷರ ತವರೂರೆನಿಸಿದ ರೊಮಾನದಲ್ಲಿ ಬಳೆದ ಮುಸಲೋನಿಯು ತನ್ನ ಆದರ್ಶ ತಂದೆಯ ಉದ್ದೇಶಪೂರ್ವಕವಾದ ಆದರ್ಶ ಶಿಕ್ಷಣದ ವಾತಾವರಣದಿಂದ ಬಳೆದ ಆಧುನಿಕ ಯುಗದ ಕ್ರಾಂತಿಪುರುಷನೊಬ್ಬನು

ಮುಸಲೋನಿಯು ಆರಂಭದಿಂದಲೂ ರಾಜಕೀಯ ತತ್ವ ವಿಚಾರವನ್ನು ಮನನ ಮಾಡುವುದರಲ್ಲಿ ಅತ್ಯಾಸಕ್ತಿಯನ್ನು ತೋರಿಸಿದ್ದನು ತನ್ನ ಹದಿನೆಂಟನೆಯ ವರ್ಷ ಪ್ರಾಯದಲ್ಲೇ ತನ್ನ ತಂದೆಯ ಆಕಸ್ಮಿಕ ಮರಣದ ಕಾರಣದಿಂದ ತನ್ನ ಹೆತ್ತಾಕೆಯನ್ನೂ, ತನ್ನ ಒಡಹುಟ್ಟಿದವರನ್ನೂ ಪೋಷಿಸುವ ಭಾರಕ್ಕೆ ಹೆಗಲೊಡ್ಡಬೇಕಾಯಿತು ಅನಂತರ ಕೆಲಕಾಲದೊಳಗ ರಾಜಕೀಯ ಬಂಡಾಯವನ್ನೆಬ್ಬಿಸಿದನೆಂಬ ಆರೋಪದ ಮೇಲೆ ಸೆರೆಮನೆಯಲ್ಲಿ ಬಂಧಿಯಾಗಿರಬೇಕಾಯಿತು. ಅಲ್ಲಿಂದ ತಲೆತಪ್ಪಿಸಿಕೊಂಡು ಸ್ವಿಜರ್ಲೆಂಡಿಗೆ ಹೋದನು. ಅಲ್ಲಿ ಗಾರೆ ಇಟ್ಟಿಗೆಯ ಕೆಲಸಕ್ಕೆ ಸೇರಿಕೊಂಡನು ಆದರೆ ಅಲ್ಲಿಯೂ ಕಂಡುಹಿಡಿಯಲ್ಪಟ್ಟು ಗಡಿಪಾರು ಹೊಂದಿದನು ಕೆಲಕಾಲ ಅಜ್ಞಾತನಾಗಿ, ಪುನಃ ಸೆರೆಮನೆಯನ್ನು ಸೇರಬೇಕಾಯಿತು. ಅವನು ತನಗೆ ಬಿಡುವಿದ್ದಾಗಲೆಲ್ಲಾ ಶ್ರಮಪಟ್ಟು ಅಭ್ಯಾಸಿಸುತಿದ್ದನು. ಮಹಾಯುದ್ಧದ ಮೊದಲೇ ಪ್ರಸಿದ್ಧ ಆವಂತಿ'ಯೆಂಬ ಸಮತಾವಾದಿಪತ್ರಿಕೆಯ ಸಂಪಾದಕನಾದನು.

ಮುಸಲೋನಿಯು ಯುದ್ಧವು ಆರಂಭವಾದೊಡನೆ ಕಾಲವು ತನಗನುಕೂಲವಾಗಿ ಮಾರ್ಪಟ್ಟಿರುವುದನ್ನು ಮನಗಂಡನು. ತನ್ನ ಪ್ರಭಾವವನ್ನು ಹೆಚ್ಚಿಸುವ ಸಂಗಡವೊಂದರ ಮುಖಂಡನಾದನು. ಇವನೀ ಆಕಾಂಕ್ಷೆಯು ನೆರವೇರಲು ಮೂರು ವರ್ಷಗಳು ಬೇಕಾದುವು 1922ರಲ್ಲಿ ಈ ಸಂಗಡದ ಶಕ್ತಿಯು ಅಸಾಮಾನ್ಯವೆನಿಸಿತು; ಮತ್ತು ಅವನು ರೋಮ್ ಸರಕಾರದ ಪ್ರಮುಖ ಮುಖಂಡನಾದನು ಮುಸಲೋನಿಯು ರಾಜ್ಯದ ಅಥವಾ ದೇವಧರ್ಮದ ವಿಚಾರದಲ್ಲಿ ತನ್ನ ಸ್ವೇಚ್ಛೆ ಬಂದಂತೆ ವರ್ತಿಸದೆ, ಅವರೆಡರ ಏಳಿಗಗಾಗಿ ತನ್ನ ನೆರವನ್ನಿತ್ತು ಹೋರಾಡಿದ ಮಹಾ ವಿವೇಕಶಾಲಿಯು. ಮುಸಲೋನಿಯು ಸುಸಂಸ್ಕೃತನು, ಮತ್ತು ಅವನು ವಿವಿಧ ಕಲಾಸಂಪತ್ತನ್ನು ಸಂಗ್ರಹಿಸಲು ಸದಾ ಸಾಧಿಸುವವನು, ಅವನು ಜರ್ಮನಿ, ಫ್ರೆಂಚ್ ಮತ್ತು ಇಂಗ್ಲಿಷಿನಲ್ಲಿ ಧಾರಾಳವಾಗಿ ತಡೆಯಿಲ್ಲದೆ ಮಾತಾಡಬಲ್ಲನು. ತನ್ನ ಕಛೇರಿಯಲ್ಲಿ ತನ್ನ ಪ್ರಾಮುಖ್ಯ ವಿಷಯಗಳನ್ನು ತಾನಾಗಿ ನಿರ್ವಹಿಸಲು ಗೇಯುವವನಿರುವನು. ಒಟ್ಟಾರೆ ಹೇಳುವುದಾದರೆ, ಮುಸಲೋನಿಯು ಪ್ರತಿಭಾಶಾಲಿಯು, ವಿವೇಕಿ, ಕಾರ್ಯಪಟುವು ಮತ್ತು ಸುಸಂಸ್ಕೃತನು.

ಎರಡನೆಯದಾಗಿ ಹಿಟ್ಲರನ ವಿಷಯ ಹಿಟ್ಲರನ ಬಾಲ್ಯವು ತೀರಾ ಬೇರೆಯೇ. ಅವನೊಬ್ಬ ಬಡ ಕಸ್ಟಮ್ ನೌಕರನ ಮಗ. ಅವನು ತನ್ನ ಹದಿನೈದರಿಂದ ಇಪ್ಪತ್ತೈದು ವರ್ಷಗಳ ವರೆಗೆ ಸೋಮಾರಿಯಾಗಿ ಬೆಳೆದವ ವಿದ್ಯಾಭ್ಯಾಸದ ಆಕಾಂಕ್ಷೆ, ಬುದ್ಧಿತೀಕ್ಷ್ಣತೆಯ ಚಿಹ್ನೆ, ಅಥವಾ ಯಾವೊಂದು ಉಚ್ಚ ಆದರ್ಶತೆಯು ಅವನಲ್ಲಿ ಅವನ ಬಾಲ್ಯಕಾಲದಲ್ಲಿ ಕಂಡುಬರಲಿಲ್ಲ ಅವನಿಗೆ ಯಾವ ಕಡೆಯಲ್ಲಿಯೂ ಹೆಚ್ಚಿನ ಅಭಿರುಚಿಯಿರಲಿಲ್ಲ ಒಂದು ಚಿತ್ರಕಲಾಶಾಲೆಗ ಪ್ರವೇಶಕೋರಿದನು. ಅದೂ ನಿರಾಕರಿಸಲ್ಪಟ್ಟಿತು. ಮಹಾಯುದ್ಧ ಆರಂಭವಾದ ಈ ಗೊಂದಲದಕಾಲದಲ್ಲ ಅವನೊಂದು ನೌಕರಿ ಗಳಿಸಿಕೊಳ್ಳುವಷ್ಟರ ಯೋಗ್ಯತೆ ಹೊಂದಿದನು ಅಷ್ಟೆ. ಆದರೆ ಈ ಸಮಯದಲ್ಲಿ ಮುಸಲೋನಿಯು ಇಟೆಲಿಯಲ್ಲಿ ರಾಜ್ಯ ಸೂತ್ರಚಾಲನೆಮಾಡುವ ಸಮರ್ಥತೆಯನ್ನು ಗಳಿಸಿದ್ದನು.

ಹಿಟ್ಲರನ ಜೀವನ ಪ್ರಗತಿಯು ಮುಸಲೋನಿಯನ್ನನುಕರಿಸುವುದರಲ್ಲಿ ಹೊಂದಿಕೊಂಡಿರುವುದು. ಅವನು ಸ್ವಭಾವಜನ್ಯ ಶಕ್ತಿಯುತನಲ್ಲ, ಊಹನಾ ಶಕ್ತಿಯೂ ಇಲ್ಲದವನು. ತನ್ನ ಆರಂಭ ಜೀವನದಿಂದಲೂ ಹೆಜ್ಜೆಹೆಜ್ಜೆಗೂ ಮುಸಲೋನಿಯನ್ನನುಸರಿಸತೊಡಗಿದನು ಮುಸಲೋನಿಯಂಥ ಉಜ್ವಲ ಪ್ರಭಾವದ, ಆತ್ಮನಿರ್ಧಾರದ, ಸುಸಂಸ್ಕೃತರು ಇಂದಿನ ಇಟೆಲಿಯಲ್ಲಿ ದೊರೆಯುವುದು ಪ್ರಾಯಶಃ ದುರ್ಲಭ ಆದರೆ ಹಿಟ್ಲರನು ಸಾಮಾನ್ಯ ಜನತೆಯ ಗುಂಪಿಗೆ ಸೇರತಕ್ಕವನು ಹೀಗೆಂದ ಬಳಿಕ, ಹಿಟ್ಲರನು ಇಂದೀಗ ಜಗತ್ತನ್ನು ಬೆರಗುಗೊಳಿಸುವ, ತನ್ನ ಸರ್ವಾಧಿಕಾರದ ಪಟ್ಟವನ್ನೆಂತು ಕಲ್ಪಿಸಿಕೊಂಡನೆಂಬ ಪ್ರಶ್ನೆ ಬರಬಹುದು. ವಿಚಾರಮಾಡಿ ನೋಡಿದರೆ. ಮುಸಲೋನಿಯ ಇಂದಿನ ಅಸಾಧಾರಣ ಸಾಮರ್ಥ್ಯಕ್ಕೆ ಅವನ ವ್ಯಕ್ತಿತ್ವವು ಹಲವು ರೀತಿಯಲ್ಲಿ ಕಾರಣವಾಗಿರುವುದೆಂಬುದು ತಿಳಿಯದಿರದು. ಆದರೆ, ಹಿಟ್ಲರನ ಸ್ಥಾನಕ್ಕೆ ಜರ್ಮನಿಯ ಪರಿಸ್ಥಿತಿಯೇ ಕಾರಣವು ಯುದ್ಧದ ನಂತರದ ವರ್ಸೈಲ್ಸ್‌ನ ಅಪಮಾನಕರ ಒಪ್ಪಂದವು ಕಚ್ಚೆದೆಯ ಜರ್ಮನರ ಸ್ವಾಭಿಮಾನಕ್ಕೆ ಕುರಾರಪ್ರಾಯವಾಗಿದ್ದಿತು. ಯುದ್ಧದ ಅಪಜಯಕ್ಕೆ ವೈರಿಗಳ ಸಾಮರ್ಥ್ಯಕ್ಕಿಂತಲೂ, ದೇಶದ್ರೋಹಿಗಳ ವಂಚನೆಯೇ ಮೂಲಕಾರಣವೆಂಬುದನ್ನು ಬಹಿರಂಗಪಡಿಸುವ ಕಾರ್ಯವು ಹಿಟ್ಲರನದ್ದಾಗಿದ್ದಿತು. ಜರ್ಮನರ ಸ್ವಾಭಾವಿಕವಾದ ವೀರ ಹೃದಯವು ಸಿಡಿದೆದ್ದಿತು ಹಿಟ್ಲರನು ಅಧಿಕಾರಗಳಿಸಿದನು ಇಂಗ್ಲಂಡು ಮತ್ತು ಫ್ರಾನ್ಸು ವೀರ ಯೋದ್ಧರಾದ ಜರ್ಮನರ ವರ್ತನೆಯನ್ನು ಖಂಡಿಸುವಂತಹ ಸ್ಥಿತಿಯಲ್ಲಿರಲಿಲ್ಲ ಜರ್ಮನಿಯು ಹಿಟ್ಲರನ ಮುಂದಾಳುತನದಲ್ಲಿ ಶಸ್ತ್ರಧಾರಿಯಾಯಿತು ಸಮಾನ ಅಧಿಕಾರ, ಮತ್ತು ಸ್ಥಾನಮಾನವು ತಮಗೆ ದೊರೆಯಬೇಕೆಂಬ ಆಗ್ರಹವು ಜರ್ಮನರದಾಯಿತು ಇಟೆಲಿಯಾನರು ಸುಸಂಸ್ಕೃತರು, ಕಲಾವಿದರು, ಅವರನ್ನು ಯೋಧರನ್ನಾಗಿ ಮಾರ್ಪಡಿಸುವ ಮುಸಲೋನಿಯ ನಾಯಕತ್ವವು ಅದೆಷ್ಟೋ ಮಹತ್ವದ್ದು. ಇನ್ನು ಸರ್ವಾಧಿಕಾರಿಯಾದ ನಂತರ ಹಿಟ್ಲರನ ಮತ್ತು ಮುಸಲೋನಿಯ ಮನಃಸ್ಥಿತಿ, ರೀತಿನೀತಿಗಳನ್ನು ವಿಚಾರಿಸಿದರೆ, ನಿಶ್ಚಯವಾಗಿ ಮುಸಲೋನಿಯುಷ್ಟೇ ಪಾಲಿಗೆ

THE TROPICAL
Insurance Co., Ltd.
NEW DELHI

Chairman: Sjt SUBHAS CHANDRA BOSE.
(PRESIDENT, INDIAN NATIONAL CONGRESS)

100% Swadeshi Concern founded by such eminent Leaders as
PANDIT MOTHILAL NEHRU Dr M A ANSARI
HAKIM AJMA KHALN, T A K SHERWANI
and others

WANTED influential Agents, Special Agents and Organisers on liberal commission and salary.

APPLY TO

M. SUNDER RAM SHETTY, BRANCH MANAGER, HAMPANKATTA **MANGALORE**

Or

K. S. RAMAMURTHI, M. A BRANCH SECRETARY, 160 MOUNT ROAD, **MADRAS.**

ಮದನರತಿಕಾಮಶಾಸ್ತ್ರವೆಂಬಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮನ ಉಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಪಡಿಸಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ—**T. V. ದೇವಕರ್ ಅಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T V Devkar & Co, *Nambulier Street*, **G. T. MADRAS.**

ಹಿಟ್ಲರನಿಗಿಂತ ಉಚ್ಚ ಮಾರ್ಗಾವಲಂಬಿಯೆಂಬುದು ವಿದಿತವಾಗುತ್ತದೆ. ಮುಸಲೋನಿಯು ತನ್ನ ಅಭಿಪ್ರಾಯಕ್ಕೆ ವಿರುದ್ಧವಿದ್ದ ಕೆಲ ಮಂದಿ ಪ್ರತಿಭಾಶಾಲಿಗಳಾದ ಇಟೆಲಿಯಾನರನ್ನು ದೇಶದಿಂದ ಗಡಿಪಾರು ಮಾಡಿದನೆಂಬುದು ಅದೊಂದು ದೊಡ್ಡ ಅಪರಾಧವಲ್ಲ. ಆದರೆ ಹಿಟ್ಲರನ ಅಧಿಕಾರದಲ್ಲಿ ಪ್ರಸಿದ್ಧ ಜರ್ಮನರೆಲ್ಲರೂ ತಮ್ಮ ಮಾತೃಭೂಮಿಯನ್ನಗಲಬೇಕಾಗಿ ಬಂದಿತು. ಹಿಟ್ಲರನಲ್ಲಿರುವ ಅದೊಂದು ವಿಶೇಷ ಶಕ್ತಿಯೆಂದರೆ, ಅವನ ಅಸಾಧಾರಣ ವಕ್ತೃತ್ವ. ಇದರಿಂದವನು ಜರ್ಮನರ ಬಲವನ್ನು ಸುಲಭವಾಗಿ ಒಂದುಗೂಡಿಸುವ ಸಮರ್ಥತೆಯನ್ನು ಗಳಿಸಿದನು. ಜರ್ಮನರ ಹೆಗ್ಗಳಿಕೆಯ ನೆಪದಿಂದ ದ್ಯೂತವನ್ನೊಡ್ಡುವ ಹಿಟ್ಲರನು, ಮುಖ್ಯ ಜಯಕಾಂಕ್ಷೆಯಲ್ಲಿರುವನು. ಅವನಿಗೆ ಮೇಲಾಟ ವಿನಾ ಯಾವುದೂ ಸರಿಹೋಗುವಂತಿಲ್ಲ.

ಹಿಟ್ಲರನ ಜೀವನ, ನಡತೆ, ಸಂಸ್ಕೃತಿಗಳನ್ನು ಪರಿಶೀಲಿಸಿದರೆ, ಅವನಲ್ಲಿ ಮಹತ್ವಿಕೆಯ ಯಾವ ಹೆಚ್ಚಿನ ಚಿಹ್ನೆಗಳೂ ಕಂಡುಬರುವುದಿಲ್ಲ ಅವನೊಬ್ಬ ನೈಜ ಪ್ರತಿಭೆಯವನಲ್ಲ, ಕಲಾವಂತನಲ್ಲ, ಅವನೊಬ್ಬ ಚತುರ ನಟನೆನ್ನಬಹುದು. ಅವನು ಮಧ್ಯರಾತ್ರಿಯಲ್ಲಾದರೂ ಮಂತ್ರಿಮಂಡಲವನ್ನು ಬೇಕಾದಾಗ ಕೂಡಿಸುವನು. ಆದರೆ ಅವನು ತಾನು ಸ್ವಯಂ ಕಛೇರಿಯ ಕೆಲಸವನ್ನು ಮಾಡದೆ, ತನ್ನ ಕೈಕೆಳಗಿನವರಿಂದಲೇ ಮಾಡಿಸುವನು. ಅವನು ತನ್ನ ಹೆಚ್ಚಿನ ಸಮಯವನ್ನು ತನ್ನ ಪ್ರದೇಶದಲ್ಲಿ ಸಿನೆಮ ನಟಿಯರ ಸಹವಾಸದಿಂದ ಕಳೆಯುವನು. ಅವನಲ್ಲಿರುವ ಇನ್ನೊಂದು ಹುಚ್ಚೆಂದರೆ, ತನ್ನ ಸಂಗಾತಿಗಳು ಸೇರಿದಾಗ ಅವರಿಗೆ ದ್ರಾಕ್ಷಾರಸವನ್ನು ಕುಡಿಯಲು ಕೊಡುವನು. ತಾನು ಮಾತ್ರ ನೀರು ಕುಡಿಯುವನು ಒಟ್ಟಾರೆ ಹೇಳುವುದಾದರೆ ಅವನೊಬ್ಬ ಜಾದುಗಾರನಂತೆ, ನಟನಂತೆ ಅವನ ಸೂತ್ರವೆಲ್ಲಾ ನಿಗೂಢಕರ ಭಾವನಾಸ್ಪದವಾದುವುಗಳು. ಅವನೆಲ್ಲಿ, ಹೇಗೆ, ಯಾವಾಗ, ಕತ್ತಿಯೆತ್ತುವನೆಂಬುದು ಊಹಿಸುವುದು ಸಾಧ್ಯವಲ್ಲ

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ ಕ್ರಯ ಡಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವದಕ್ಕೆ ಪೂರ್ವದಲ್ಲಿ ಭೋಗಮಾಡುವದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವದರಿಂದಲೂ ದುಷ್ಟಮಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವದು ಅರ್ಧ ತೊಲಿ ಶೀಸೆ 1ಕ್ಕೆ ರೂ. 5--0--0.

'**ಕಾಮಶಾಸ್ತ್ರ**' ಧರ್ಮಾರ್ಥ ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೬೪, **ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ.**

] ವಾ ರ್ತಾ ವಾ ಹಿ ನಿ [

ಖಾನ್ ಸಹೋದರರು ನಿರ್ಮಲಾಂತಃಕರಣವುಳ್ಳವರು, ಬಡಜನರ ಬಂಧುಗಳು—

ಖಾನ್ ಸಹೋದರರ ಶುದ್ಧ ಹೃದಯದ ಕುರಿತು, ಅವರ ನಿಷ್ಕಳಂಕ ವರ್ತನೆಯ ವಿಷಯದಲ್ಲಿ ಯಾವೊಬ್ಬ ಕಟುಟೀಕಾಕಾರನಾದರೂ ಸಂದೇಹ ತೋರಿಸಿರುವುದಿಲ್ಲ ಫಕೀರ ಖಾನ್ ಸಾಹೇಬರ ಹೃದಯವು ಯಾವಾಗಲೂ ದೀನದುಃಖಿಗಳ ಕಡೆಗೆ ಇರುವುದು. ಅವರು ತನ್ನ ಜೀವನವನ್ನು ಬಡವರ ಹಿತಕ್ಕಾಗಿಯೇ ವಿನಿಯೋಗಿಸುವ ಮಹಾ ಸಾತ್ವಿಕ ಪುರುಷರು. ಒಮ್ಮೆ ಮಹಾತ್ಮಾ ಗಾಂಧಿಯವರೊಡನೆ ಪ್ರಸ್ತಾಪಿಸುತ್ತಿರುವಾಗ ಹೀಗೆಂದರು "ಪೂಜ್ಯರೇ, ನನಗೆ ರಾಜಕೀಯ ವಿಚಾರಗಳೆಂದರೆ ಕಡುಹಗೆ; ರಾಜಕೀಯ ವಿಷಯಗಳೆಂಬುದು ತಿರುಳಿಲ್ಲದ, ನಿರರ್ಥಕವಾದ ಭ್ರಮೆಗೊಳಿಸುವ ಚಕ್ರವ್ಯೂಹ; ನನಗೆ ಅವುಗಳಿಂದ ದೂರವಿದ್ದು ಅತೀ ದರಿದ್ರರ ಮನೆಸೇರಿ ಅವರನ್ನು ಸೇವಿಸುವುದೇ ಆನಂದವೆಂದು ತೋರುತ್ತದೆ." ಅವರ ಜೀವನವು ಎಷ್ಟು ಸರಳವಾದುದು, ನಡತೆಯು ಎಷ್ಟು ಸಹಾನುಭೂತಿಯುಳ್ಳದೆಂಬುದಕ್ಕೆ ಇನ್ನೊಂದು ದೃಷ್ಟಾಂತ ಕೊಡಬಹುದು. ಅವರು ಗಾಂಧಿಜಿ ಮತ್ತು ಅವರ ಹಿಂಬಾಲಕರೊಂದಿಗೆ ಪಯಣಬೆಳೆಸುತ್ತಿದ್ದರು. ದಾರಿಯಲ್ಲಿ ಒಬ್ಬ ಪಠಾಣ ಯುವಕನು ಕಲ್ಲುಗಳ ಹೊರೆಯೊಂದನ್ನು ಕತ್ತೆಯ ಮೇಲೇರಿಸಿಕೊಂಡು ಹೋಗುತ್ತಿದ್ದನು. ಈ ಕತ್ತೆಯು ತಡವಿಬಿದ್ದು, ಕಲ್ಲಿನ ಹೊರೆಯು ಅದರ ಬೆನ್ನಿಂದ ಉರುಳಿ ಕೆಳಗೆ ಬಿತ್ತು. ಆ ಬಡ ತರುಣನು ಹೊರೆಯನ್ನು ತಿರುಗಿ ಕತ್ತೆಯ ಮೇಲೆ ಹೊರಿಸಲು ಹೋರಾಡುತ್ತಿರುವುದನ್ನು ಖಾನ್ ಸಾಹೇಬರು ಕಂಡು, ಒಡನೆ ಗುಂಪಿನಿಂದ ಧಾವಿಸಿ, ಯುವಕನ ಬಳಿಗೆ ಬಂದರು ಮತ್ತು ತನ್ನೊಂದಿಗಿರುವವರನ್ನೂ ಈ ಕೆಲಸದಲ್ಲಿ ನೆರವಾಗಲು ಕರೆದರು. ಈ ಕೆಲಸವು ಪೂರ್ತಿಗೊಂಡಾಗ ತನಗೆ ಆ ದಿನ ದೊರೆತ ಸೇವೆಯ ಸಂದರ್ಭಕ್ಕಾಗಿ ಅತೀವ ಆನಂದಿತರಾದರು.

ಶ್ರೀನಗರದಲ್ಲಿ ಪತ್ರಿಕಾ ವ್ಯವಸಾಯಿಗಳ ರಹಾವು—

ಕಾಶ್ಮೀರದ ಇತ್ತೀಚೆಯ ರಾಜಕೀಯ ಗೊಂದಲದ ಕಾಲದಲ್ಲಿ ಸೆರೆಮನೆಯನ್ನು ಸೇರಿದ ಪತ್ರಿಕಾ ವ್ಯವಸಾಯಿಗಳಿಗೆ ಸ್ಪೆಶಲ್ ಕ್ಲಾಸನ್ನು ಕೊಡತಕ್ಕದ್ದು ಎಂದು ಶ್ರೀನಗರದಲ್ಲಿ ನಡೆದ ಪತ್ರಿಕಾ ವ್ಯವಸಾಯಿಗಳ ಸಭೆಯಲ್ಲಿ ನಿರ್ಣಯವಾಯಿತು.

ಗಾಂಧಿಜಿಯವರ ಗಡಿನಾಡಿನ ಪ್ರಯಾಣವು ಚಿತ್ರಿತವಾಗಿದೆ—

ಲಾಹೋರಿನ ಕಮಲ ಮುವಿಟೋನಿನವರು ಗಾಂಧಿಜಿಯವರ ಗಡಿನಾಡಿನ ಚಿತ್ರಪಟವನ್ನು ತೆಗೆದಿರುವರು. ಮತ್ತು ಲಾಹೋರಿನ ದೀಪಾವಳಿ ದೃಶ್ಯಗಳನ್ನೂ ಸಂಗ್ರಹಿಸಿರುವರು.

ಸಂಯುಕ್ತ ಪ್ರಾಂತ್ಯದ ವಿದ್ಯಾಭ್ಯಾಸದ ಯೋಜನೆ—

ಸಂಯುಕ್ತ ಪ್ರಾಂತ್ಯ ಸರಕಾರದ ಪ್ರಾಥಮಿಕ ಮತ್ತು ಸೆಕಂಡರಿ ಶಿಕ್ಷಣದ ಕುರಿತಾದ ಯೋಜನೆಯ ವರದಿಯು ಈಗ ತಾನೇ ಸಿದ್ಧವಾಗಿ, ಕಮಿಟಿಯ ಚಯರ್ ಮ್ಯಾನರಾದ ನರೇಂದ್ರದೇವ್ ಇವರ ಕೈಯಲ್ಲಿದೆ

ಈ ವರದಿಯ ಮೇರೆಗೆ ಇಡೀ ಪ್ರಾಂತ್ಯದ ಏಳು ವರ್ಷದ ಪ್ರಾಥಮಿಕ ಕಡ್ಡಾಯ ಶಿಕ್ಷಣಕ್ರಮವು ರಚಿತವಾಗಿದೆ ಈ ಯೋಜನೆಯನ್ನು ಸರಕಾರವು ಅಂಗೀಕರಿಸಿದರೆ, ಪ್ರಾಥಮಿಕ ಶಿಕ್ಷಣಕ್ಕೇನೇ ಎಂಟು ಕೋಟಿ ರೂಪಾಯಿ ವೆಚ್ಚವಾಗುವುದು.

ಈ ಸ್ಕೀಮಿನ ಮೇರೆಗೆ ಎಂಟು ಮಿಲ್ಲಿಯ ಬಾಲಕರಿಗೆ ವಿದ್ಯಾಭ್ಯಾಸ ಕೊಡಲ್ಪಡುವದು.

ಜಗತ್ತಿನ ಅತಿ ದೊಡ್ಡ ಪುಸ್ತಕ ಭಂಡಾರ—

ಲೋಕ ಕ್ರಾಂತಿಯ ಪ್ರಧಾನ ಕೇಂದ್ರವಾದ ಹಳೆ ಕೋಮಿನಂಟರ್ನ ಎಂಬಲ್ಲಿ ಲೆನಿನ್ ಹೊಸ ಲೈಬ್ರೆರಿಯು ಸ್ಥಾಪಿತವಾಗಿರುವುದು. ಇದು ಜಗತ್ತಿನ ಅತ್ಯಂತ ದೊಡ್ಡ ಪುಸ್ತಕಭಂಡಾರವಾಗುವುದಾಗಿ ಗೊತ್ತಾಗುತ್ತದೆ. ಈ ಲೈಬ್ರೆರಿಯ ಕಟ್ಟೋಣದ ಕೆಲಸವು ತೊಡಗಿದ್ದು ಒಂದು ಭಾಗವು ಪೂರೈಸಿರುವುದು. ಈ ಕಟ್ಟೋಣವು ಪೂರೈಸಿದ ನಂತರ ವರ್ಷಾಂತ್ಯದೊಳಗೆ 11 ಮಿಲಿಯ ಗ್ರಂಥಗಳನ್ನು ಸಂಗ್ರಹಿಸುವಂತೆ ಯೋಚಿಸಲಾಗಿದೆ ಕಟ್ಟಡದ ಕೆಲಸಕ್ಕೆ ತೊಡಗಿ ಆರು ವರ್ಷಗಳು ಸಂದುವು.

ಮೈಸೂರು ದಿವಾನರನ್ನು ಪ್ರಶಂಸಿಸಿದರು

ಮಿ. ಎಸ್. ರಾಲ್ಫ್ ಹಾರ್ಲೊ, ಇವರು ಬೆಂಗಳೂರಿನ ಕರ್ಣಾಟಕಾ ಸಾಹಿತ್ಯ ಪರಿಷತ್ತಿನ ಸಮಾರಂಭದಲ್ಲಿ ಭಾಷಣವಿತ್ತರು. ಇವರು ತಮ್ಮ ಭಾಷಣದಲ್ಲಿ ಮೈಸೂರಿನ ಪ್ರಗತಿಯನ್ನು ಕೊಂಡಾಡಿ, ಯುನೈಟೆಡ್ ಸ್ಟೇಟ್ಸಿನಲ್ಲಿ ಬಡ ಹಳ್ಳಿಗರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂಬ ಉದ್ದೇಶದಲ್ಲಿ ಯಶಸ್ವಿಯಾಗಲಿಲ್ಲ ಆದರೆ, ಇಲ್ಲಿಯ ದಿವಾನರು ಬಹು ಚಟುವಟಿಕೆಯುಳ್ಳವರು. ಕಾರ್ಯ ಸಮರ್ಥರು. ಇಂದು ಮೈಸೂರು ಇಲೆಕ್ಟ್ರಿಸಿಟಿ ಯೋಜನೆಯಲ್ಲಿ ಯಶಸ್ವಿಯಾಗುತ್ತಿರುವುದು ಅಭಿನಂದನೀಯವಿದೆಂದರು.

ಅನಂತರ ಅಂತರರಾಷ್ಟ್ರೀಯ ಬಾಂಧವ್ಯವನ್ನು ನೆಲೆಗೊಳಿಸಿ ದಾಸತ್ವವನ್ನು ನಿವೃತ್ತಿಗೊಳಿಸಬೇಕೆಂದರು. ಗಾಂಧಿಜಿಯವರ ಸತ್ಯ ಅಹಿಂಸೆಯ ತತ್ವಕ್ಕಾಗಿ ಅವರನ್ನು ಕೊಂಡಾಡಿದರು ಮತ್ತು ಹಿಂದೂದೇಶದ ಜನತೆಯ ಆತಿಥ್ಯ ಮತ್ತು ಬಾಂಧವ್ಯವನ್ನು ಪ್ರಶಂಸಿದರು. ಪ್ರೊಫೆಸರ್ ಬಿ. ಎಂ. ಶ್ರೀಕಂಠಯ್ಯನವರು ಪ್ರೊಫೆಸರ ಮತ್ತು ಅತಿಥಿಗಳಿಗೆ ಧನ್ಯವಾದವನ್ನರ್ಪಿಸಿದರು.

THE Bombay Life ASSURANCE CO., LTD.

ಸ್ಥಾಪನೆ] [1908

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:

(1) ರಥಬೀದಿ, ಮಂಗಳೂರು
(2) ಪುತಿಯಾರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 357, ಮೌಂಟ ರೋಡು, ಮದ್ರಾಸು. (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗ್ಗಮ್, ಬೊಂಬೈ (ಫೋ. ನಂ. 26314)

ಇನ್ಸ್ಪೆಕ್ಟರೇಟ್ ಆಫೀಸ್‌ಗಳು.

(6) ಪಟ್ಟಪಾಳಂ, ಟ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂತೂರು.

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)

ರಿಜಿಸ್ಟ್ರಿಯಾದ ಆಫೀಸು: **ಉಡುಪಿ.**

ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.

ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	ರೂ.	1,40,08,725
ಪ್ರೀಮಿಯಂ ಆದಾಯ ಮಿಕ್ಕಿದುದು	,,	30,00,000
ಒಟ್ಟು ಮೂಲ ಮಿಕ್ಕಿದುದು	,,	1,00,00,000
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	50,00,000

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ. **ಅತ್ಯಧಿಕ ಪ್ರತಿಫಲ.**

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರಿ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

ಕರ್ನಾಟಕ ಏಕೀಕರಣ ಮತ್ತು ಸ್ವತಂತ್ರ ಆಳ್ವಿಕೆಯ ಪ್ರಾಂತ್ಯರಚನೆ

(ಶ್ರೀ. ಬೆನಗಲ್ ರಾಮರಾವ್, ಎಮ್. ಎ., ಎಲ ಎಲ್. ಬಿ., ಇವರ ಇಂಗ್ಲೀಷ್ ಲೇಖನದ ಅನುವಾದ.)

ಕಳೆದ ಬಾರಿ ನಾವು ಧಾರವಾಡದಲ್ಲಿ ಸಭೆ ಸೇರಿದಂದಿನಿಂದ ಘಟನೆಗಳು ಪ್ರಾಮುಖ್ಯವಾಗಿ ದಕ್ಷಿಣಭಾಗದಲ್ಲಿ ಬಹು ಶೀಘ್ರವಾಗಿ ಮುಂದೊತ್ತಿವೆ.

(1) ನಿಷ್ಪಕ್ಷಪಾತಿಗಳೆಂದೂ, ನಿರ್ಭೀತರೆಂದೂ, ಪ್ರಸಿದ್ಧರಾದ ಪ್ರಧಾನರೊಬ್ಬರು ಮದ್ರಾಸು ನ್ಯಾಯ ವಿಧಾಯಕ ಸಭೆಯ ನಿರ್ದಿಷ್ಟ ಸೂಚನೆಯನ್ನಾಗಲೀ. ಕಾಂಗ್ರೆಸು ಮಂಡಲದ ಪ್ರಮುಖ ಅಧಿಕಾರಿಗಳ ಸಲಹೆಯನ್ನಾಗಲೀ ಪರಿಗಣಿಸದೆ, ಬೇರೆಲ್ಲವುಗಳಿಗಿಂತ ಮೊದಲಾಗಿ, ಆಂಧ್ರರ ಗಡುತರ ಗುಲ್ಲಿಗೆ ತಲೆಬಗ್ಗಿಸಿ, ಆಂಧ್ರ ಪ್ರಾಂತ್ಯ ರಚನೆಗೆ ತಮ್ಮ ಸಮ್ಮತಿ ಕೊಟ್ಟಿರುವುದು,

(2) ಬೇರೆಬೇರೆ ಕೇಂದ್ರಗಳ (Andhras of both the circars and so called Rayala seema) ಆಂಧ್ರ ನಾಯಕರು ತಾವು ತಮ್ಮೊಳಗೆ (glorified as the shre Bagh Pact) ತೀರ್ಮಾನಿಸಿ, ಸಮ್ಮಿಳಿತ ಆಂಧ್ರಪ್ರಾಂತ್ಯ ರಚನೆಗೆ ಒಡಂಬಡಿಕೆಮಾಡಿಕೊಂಡಿರುವುದು

(3) ಆಂಧ್ರ ಪ್ರಾಂತ್ಯ ನಿರ್ಮಾಣವಾಗುವ ಮೊದಲೇ ರಾಯಲ ಸೀಮೆಯ ಕಲಾಶಾಲೆ ('nanthapur College) ಯನ್ನು ಸದ್ಯದಲ್ಲೇ ಆಂಧ್ರ ವಿಶ್ವವಿದ್ಯಾಲಯದ ನಿಯತಿಗೆ ಒಳಪಡಿಸುವಂತೆ ರಭಸವಾಗಿ ಸಾಗಿಸುತ್ತಿರುವ ಕಾರ್ಯಯೋಜನೆಗಳು.

(4) ಮದ್ರಾಸಿನಲ್ಲಿ ಆಂಧ್ರರ ಸಮ್ಮೇಳನವನ್ನು ಜರಗಿಸಿ, ಇಂದಿನವರೆಗೆ ಇಂಥಾ ವಿಷಯಗಳಲ್ಲಿ ಹೆಚ್ಚಿನ ಭಾಗವಹಿಸದಿರುವ ಆಂಧ್ರ ಮುಖಂಡರು ಕೂಡಾ ಸೇರಿ, ವೇದಿಕೆಯನ್ನಡರುವಂತೆ ಮಾಡಿ, ವೈಭವಯುಕ್ತ ಪ್ರದರ್ಶನ ನಡೆಸಿರುವುದು

(5) ಈ ಸಮ್ಮೇಳನದಲ್ಲಿ ಮದ್ರಾಸು ನಗರವನ್ನು ಆಂಧ್ರ ಮತ್ತು ದ್ರಾವಿಡ ವಿಭಾಗಗಳನ್ನಾಗಿ ವಿಂಗಡಿಸಿ, ಆಂಧ್ರ ಶಾಖೆಯನ್ನು ಮುಂದಣ ಆಂಧ್ರಪ್ರಾಂತ್ಯದ ಪ್ರಧಾನ ಪಟ್ಟಣವನ್ನಾಗಿ ಮಾರ್ಪಡಿಸುವ ನಿರ್ಧಾರಕ್ಕೆ ಬಂದಿರುವುದು.

(6) ರಾಯಲ ಸೀಮೆಯ ಯುಕ್ತವೆನಿಸುವ ನಗರವನ್ನೇ ಆಗತ್ಯವೆಂದು ತೋರಿಬಂದಲ್ಲಿ ಆಂಧ್ರರು ಆಂಧ್ರ ವಿದ್ಯಾಲಯದ ಮತ್ತು ಆಂಧ್ರಪ್ರಾಂತ್ಯದ ಪ್ರಧಾನ ಕೇಂದ್ರವಾಗಿ ಮಾರ್ಪಡಿಸಬಹುದೆಂಬ ನಿರ್ಣಯಕ್ಕೆ ಬಂದುದು.

(7) ತುಂಗಭದ್ರ ಯೋಜನೆಯಲ್ಲಿ ಆಂಧ್ರರು ಬಹು ಉತ್ಸುಕತೆ ತೋರಿಸುತ್ತಿರುವುದು.

(8) ಆಂಧ್ರಪ್ರಾಂತ್ಯದ ಮೇರೆಗಳನ್ನು ನಿರ್ಧರಿಸುವುದಕ್ಕೂ, ಅದರ ನಕಾಶೆ ತಯಾರಿಸುವಿಕೆಗೂ, ತಮ್ಮದೊಂದು ಸಮಿತಿಯ ನೇಮಕದಲ್ಲಿ ಉತ್ಸಾಹಿತ ಇರಾಧೆಯಲ್ಲಿರುವುದು.

(9) ಇತ್ತೀಚೆಯ ಮದ್ರಾಸಿನ ಲಿಬರಲ್ ಫೆಡರೇಶನ್ (ಇದು ಜಸ್ಟೀಸ್ ಪಾರ್ಟಿಯ ಮತ್ತೊಂದು ಹೆಸರೆನ್ನಬಹುದು) ನಲ್ಲಿ ಬೊಬ್ಬಿಲಿ ರಾಜರ ಮುಖಂಡತ್ವದಲ್ಲಿ ಕನ್ನಡ ಭಾಗವಾದ ಬಳ್ಳಾರಿ, ಕನ್ನಡ ಜಿಲ್ಲೆಗಳನ್ನು ಮುಂಬಾಯಿ ಪ್ರಾಂತ್ಯಕ್ಕೆ ಸೇರಿಸಬಹುದೆಂಬ ಅಭಿಪ್ರಾಯವಿತ್ತಿರುವುದು.

(10) ಮೇಲಾಗಿ ಆಂಧ್ರರ ಪರವಾಗಿ ಬಹುಬೇಗನೆ ಒಂದು ಡೆಪ್ಯುಟೇಶನನ್ನು ಇಂಗ್ಲಾಂಡಿಗೆ ಕಳುಹಿಸಿ, ಸೆಕ್ರಿಟರಿ ಓಫ್ ಸ್ಟೇಟ್ ಇವರಿಗೆ ಆಂಧ್ರಪ್ರಾಂತ್ಯದ ರಚನೆಯ ಆವಶ್ಯಕತೆಯನ್ನು ಮನಗಾಣಿಸಿ, ಮಂಜೂರುಗೊಳಿಸುವಂತೆ ಮಾಡುವ ಸೂಚನೆ ಬಂದಿರುವುದು.

ಈ ಎಲ್ಲಾ ವಿಷಯಗಳು ತೇಲುನೋಟದಿಂದ ನೋಡಿದರೆ, ಬಾಧಕ ರಹಿತವಾದುದು ಮಾತ್ರವಲ್ಲದೆ ಒಂದು ರೀತಿಯಿಂದ, ಕರ್ನಾಟಕ ಪ್ರಾಂತ್ಯ ರಚನೆಗೆ ಅನುಕೂಲವಾದುದೆಂದು ಮೇಲಿಂದ ಮೇಲೆ ಕಾಣಬಹುದು. ಆದರೆ, ಸರಿಯಾಗಿ ವಿಮರ್ಶಿಸಿ, ವಿಚಾರಮಾಡಿ ನೋಡಿದರೆ, ಮೇಲಣ ಸಂಘಟನೆಗಳು ನಮ್ಮ ಉದ್ದೇಶಕ್ಕೆ ಹಾನಿಕರವಾದುವುಗಳೆಂಬುದು ಗೊತ್ತಾಗದಿರದು. ನಿಜವಾಗಿ ಅವುಗಳು ತೋರಿಕೆಯಲ್ಲಿ ಕಾಣುವಂತೆ ಅಂತರಾಳದಲ್ಲಿ ಸಾಧುವಾಗಿರುವುದಿಲ್ಲ ಆದುದರಿಂದ ನಾವು ಈ ಕಡೆಗೆ ನಮ್ಮ ಮನಸನ್ನು ತಿರುಗಿಸಿ, ವಿಚಾರಮಾಡಬೇಕು ಕಾರ್ಯವು ಮಿಂಚಿಹೋಗುವ ಮೊದಲೇ ಆವಶ್ಯವೆನಿಸುವ ಮುಂಜಾಗ್ರತೆಯನ್ನು ಸಕಾಲದಲ್ಲೇ ತೆಗೆದುಕೊಳ್ಳತಕ್ಕದ್ದು ಇನ್ನು ಮಳೆಯಾಲಿಗಳು ಕಾಸರಗೋಡು ತಾಲೂಕನ್ನು ತಮಗೆ ಒಪ್ಪಿಸಬೇಕೆನ್ನುವ ವಿಚಾರ. ಈ ಕುರಿತು ನಾವು ಯೋಚಿಸಬೇಕಾಗಿದೆ. ಕೊನೆಯದಾಗಿ ಕರ್ನಾಟಕ ಜಿಲ್ಲೆಗಳಲ್ಲಡಕವಾಗಿರದ ಕೊಡಗು ಮತ್ತು ಬೇರ ಸಂಸ್ಥಾನಜಿಲ್ಲೆಗಳ ಭಾವೀಸ್ಥಾನವ ಕುರಿತು ನಾವು ಯುಕ್ತ ಧೋರಣೆಗೆ ಬರಬೇಕಾಗಿದೆ ಆಂಧ್ರರಿಗೆ ರಾಜಾಜಿಯವರ ಆಶ್ವಾಸನೆಯಿರುವಂತೆ, ಮುಂಬಾಯಿಯ ಪ್ರಧಾನ ಮಾನ್ಯ ಖೇರರು ನಮ್ಮ ಧ್ಯೇಯಸಾಧನೆಗೆ ನೆರವಾಗುವೆನೆಂಬ ಭರವಸೆ ಕೊಟ್ಟಿರುವರೆಂಬುದೇನೋ ನಿಜ ಆದರೆ, ನಮ್ಮ ಮುಂದೆ ಸದ್ಯಕ್ಕೆ ನಿಂತಿರುವ ತೊಡಕೆಂಬುದು ಮುಂಬಾಯಿಯ ಕಡೆಯದ್ದಲ್ಲ; ಮದ್ರಾಸಿನ ಕಡೆಯದ್ದು, ಆದುದರಿಂದ ಮಾನ್ಯ ಖೇರರ ಆಶ್ವಾಸನೆಯಿಂದ ಸದ್ಯ ನಮಗೆ ಹೆಚ್ಚಿನ ಪ್ರಯೋಜನವಿರದು ಈಗ ಕನ್ನಡಿಗರು (ಕೆಲ ಜಿಲ್ಲೆಯ ಮಟ್ಟಿಗಾದರೂ) ಕಣ್ಣು ತೆರೆದು, ಈ ಸಮಸ್ಯೆಯನ್ನು ಬಿಡಿಸತೊಡಗಿದ್ದಾರೆಂಬುದು ಸಂತೋಷಕರ ಆದರೆ, ಈಗಿನ ಪರಿಸ್ಥಿತಿಯಲ್ಲಿ ಕಾರ್ಯಕಾರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಇನ್ನಷ್ಟು ರಭಸದಿಂದ ಕಾರ್ಯವನ್ನು ಮುಂದೊತ್ತಬೇಕಾಗಿದೆ ಕರ್ನಾಟಕದ ಏಕೀಕರಣ ಸಮ್ಮೇಳನವು ಈ ವರ್ಷಾಂತ್ಯದೊಳಗೆ, ಬೇರೆಲ್ಲಾ ಸಮ್ಮೇಳನಗಳೊಂದಿಗೆ, ಬಳ್ಳಾರಿಯಲ್ಲಿ ಜರಗಲಿರುವುದು. ನನ್ನ ಅಭಿಪ್ರಾಯದಂತೆ, ಆಂಧ್ರರ ತಂತ್ರದಿಂದ ತಮ್ಮ ಮೇಲ್ಮೆಗೆ ಆಗಬಹುದಾದ ತೊಡಕುಗಳನ್ನು ನಿವಾರಿಸುವುದರ ಸಲುವಾಗಿ, ನಿರ್ಭೀತಿಯಿಂದ, ನಿಷ್ಪಕ್ಷಪಾತ ದೃಷ್ಟಿಯಿಂದ ವಿವಿಧ ಕೇಂದ್ರಗಳ, ಬೇರೆ ಬೇರ ಪಂಗಡಗಳ ಉತ್ಸಾಹೀ ಅನುಭವಿಗಳಾದ ಕನ್ನಡಿಗರು (ಸಾಧಾರಣ 50 ಮಂದಿ) ಬಹು ಬೇಗನೆ ಧಾರವಾಡ, ಹುಬ್ಬಳ್ಳಿ, ಹೊಸಪೇಟೆ ಅಥವಾ ಬೆಂಗಳೂರಲ್ಲಿ ಸಭೆ ಜರಗಿಸುವುದು ಅಗತ್ಯವೆಂದು ತೋರುವುದು. ನನ್ನ ಕನ್ನಡ ಬಾಂಧವರು ಈ ವಿಷಯ ಲಕ್ಷಿಸುವರೇ?

— ಕರ್ನಾಟಕ ಪ್ರಾಂತದಲ್ಲಿ ಕಾಂಗ್ರೆಸ್ ಸದಸ್ಯರು —

ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರನ್ನು ಮಾಡುವ ಕಾರ್ಯವು ೩೧-೧೦-೩೮ಕ್ಕೆ ಮುಗಿದಿದ್ದು ನಮ್ಮ ಕಚೇರಿಗೆ ಕೆಳಗಿನಂತೆ ಅಂಕೆಗಳು ಬಂದಿರುವವು ಹೋದವರ್ಷದ ಸಂಖ್ಯೆ ೧,೧೯,೨೫೮ ಇದ್ದು ಈ ವರ್ಷ ೧,೭೨,೧೧೩ಕ್ಕೆ ಏರಿರುವದು. ಅಂದರೆ ೫೨,೮೫೫ ಸದಸ್ಯರು ಹೆಚ್ಚಾದಂತಾಯಿತು.

	ಜಿಲ್ಲಾ	ಹಳ್ಳಿಗರು	ಪಟ್ಟಣಿಗರು	ಒಟ್ಟು
೧	ಧಾರವಾಡ	೨೭,೮೬೫	೫,೪೫೬	೩೩,೩೨೧
೨	ಬೆಳಗಾವಿ	೨೪,೩೨೭	೩,೫೩೩	೨೭,೮೬೦
೩	ಕಾರವಾರ	೧೪,೮೮೧	೩೦೩	೧೫,೧೮೪
೪	ಮಂಗಳೂರು	೮,೩೭೩	೩ ೫೫೨	೧೧,೯೨೫
೫	ವಿಜಾಪುರ	೧೫,೬೮೩	೩,೦೯೩	೧೮,೭೭೬
೬	ಬಳ್ಳಾರಿ	೪,೦೬೨	೯೮೧	೫,೦೪೩
೭	ಕೊಡಗು	೨,೫೯೩	——	೨,೫೯೩
೮	ಚಿತ್ರದುರ್ಗ	೧೦ ೯೨೯	೮೫೬	೧೧,೭೮೫
೯	ಬೆಂಗಳೂರು	೧೦,೪೦೦	೨,೫೦೦	೧೨,೯೦೦
೧೦	ಮೈಸೂರು	೯,೭೧೨	೬,೩೩೫	೧೬,೦೪೭
೧೧	ಶಿವಮೊಗ್ಗ	೪,೭೬೦	೩೪೮	೫,೧೦೮
೧೨	ಕಡೂರು	೧,೧೬೬	——	೧,೧೬೬
೧೩	ಹಾಸನ	೧,೫೦೦	——	೧,೫೦೦
೧೪	ತುಮಕೂರು	೪,೫೦೦	೫೦೦	೫,೦೦೦
೧೫	ಕೋಲಾರ	೩,೯೦೫	೩೫೭	೪,೨೬೨
೧೬	ಬೆಂಗಳೂರು ದಂಡು.	——	೧,೫೩೩	೧,೫೩೩
	ಒಟ್ಟು	೧,೪೬,೮೫೬	೨೫,೨೫೭	೧,೭೨,೧೧೩

ಟೀಪು:— ಕೆಲವು ಜಿ. ಕಾ. ಕ. ಗಳಿಂದ ಆ ಜಿಲ್ಲೆಯಲ್ಲಾದ ಮುಸಲ್ಮಾನ ಸದಸ್ಯರ ಸಂಖ್ಯೆ ಬಂದಿಲ್ಲ ಕೂಡಲೇ ಅವರು ಕಳಿಸಿಕೊಡಬೇಕು ೬-೧೨-೩೮ರ ಒಳಗಾಗಿ ಮಾಹಿತಿ ನಮ್ಮಲ್ಲಿರಬೇಕು

ಧಾರವಾಡ

ಗುದ್ಲೆಪ್ಪ ಹಳ್ಳಿಕೇರಿ,
ಪ್ರ| ಕಾರ್ಯದರ್ಶಿ.

ಹಿಂದೂದೇಶದ, ಪ್ರಮುಖ ಪಟ್ಟಣವಾದ
ಮುಂಬಯಿಂದ ಹೊರಡುವ ಒಂದೇ ಒಂದಾದ ಕನ್ನಡ ರಾಷ್ಟ್ರೀಯ
ವಾರಪತ್ರಿಕೆ.
ಮುಂಬಯಿ ಕನ್ನಡಿಗ
ಇದರಲ್ಲಿ ಕನ್ನಡ ವಿದ್ವಾಂಸರ ಲೇಖಗಳು, ಕವಿತೆಗಳು ಮತ್ತು ಕಥೆಗಳು ತಪ್ಪದೆ ಪ್ರತಿವಾರಕ್ಕೆ ಪ್ರಕಟವಾಗುತ್ತವೆ ಅಲ್ಲದೆ ತರತರದ ವಾರ್ತೆಗಳು, ಚಿತ್ರಗಳೂ ಇರುವುವು ನೂತನ ಪದ್ಧತಿಯ ಮೇಲೆ ಹೊರಡಿಸಿರುವ ವಾರ ಪತ್ರಿಕೆಯೆಂದರೆ ಇದೊಂದೇ.
ವಾರ್ಷಿಕ ಚಂದಾ ರೂ. ೩—೮—೦.
ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ
MANAGER,
BOMBAY KANNADIGA,
PODAR CHAMBERS,
109 Parsi Bazar Street, Fort BOMBAY.

ರೂ. 1—8—0ಕ್ಕೆ 3 ವಾಚುಗಳು ಮತ್ತು 495 ಮನೋಹರ ವಸ್ತುಗಳು.

ನಮ್ಮ ರೂ 1-8-0 ಕ್ರಯದ 16 ಪಣ್ಣ ಸೀಸೆ "ಒಟೋರೋಸ"ನ್ನು ಕೊಂಡುಕೊಳ್ಳುವವರಿಗೆ ಒಂದು ಬಂಗಾರದ ಢವಿನ್ಮ ರಿಸ್ಟವಾಚು, ಒಂದು ಪೌಡರ್ ಪೇಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿಕಡ್ಡಿಯ ಕೇಸು, ಒಂದು ಸಿಗರೇಟು ಟ್ಯೂಬು, ಒಂದುಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ್ ಸ್ಪ್ರಿಂಗ್, 666 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರಂಟಿಯಿರುವ ಭದ್ರ ಮೆಶಿನರಿಯುಳ್ಳ ಗಡಿಯಾರ, ಒಂದು ಫೌಂಟನ್ ಪೇನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 14 ಆಣೆ ಹೆಚ್ಚಿಗೆ.
Oriental Fancy Stores, S. C E 90.
Post Box. No. 12204, CULICUTTA.

ಸ್ವಾವಲಂಬನದ ಹಾದಿಹಿಡಿಸುವುದೇ ಜೀವನಸಮಸ್ಯೆಯನ್ನು ಬಿಡಿಸುವುದು.

(Self-help is the way to self-improvement.)

(ಲೇಖಕರು —ಶ್ರೀ ಬಿ. ಶ್ಯಾಮರಾಯ ಶೆಟ್ರು, ಬಿ. ಎ. ಎಲ್. ಟಿ., ಉಡುಪಿ)

Do you know your community? If so, surely you have met this question—How much have you settled on your wife and children?' This is the badge of your community. The very question and the system born of it unman children and make them unpractical and extravagant. This is the sign of a degenerating community. If you want to regenerate it the question ought to be 'What are you' instead of 'Who are you?' That community is strong healthy and happy wherein every member is able to give an account of himself with confidence independent of his parents. The emphasis ought to be shifted from 'How far have you carried your wife and children' to 'How far have you made them carry themselves?' The child who earns a rupee gets the benefit of life and not the child that sees its father hoarding thousands in its name. We in our pride believe in treating the symptoms rather than the cause. We water the leaves and let the roots go dry for we believe often, the fruits on the tree to be the outcome of the leaves that cluster round them and ignore the roots that shoot up their sap and give us the fruits. That community which always carries its children dies of fatigue, but that community which makes its children walk on their legs grows and flourishes. Make men of your children. Oh! how grand it is for a son to earn and make an endowment in his father's name to perpetuate his memory rather than get a fortune from his father and die very often in disgrace obliterating himself and his sire. Rich parents, awake arise and reflect!

ರಾಮಶೆಟ್ರು—ಓಹೋ! ದೂಮ ಹೆಗ್ಗಡೇರೋ! ನಮಸ್ಕಾರ, ಗುರುತಾಯಿತೇ? ಬಹಳ ಸಮಯವಾಯಿತು ನಾವಿಬ್ಬರೂ ಒಟ್ಟಾಗದೆ ಸುಮಾರು ಏಳೆಂಟು ವರ್ಷ ದಾಟಿತೂಂತ ಕಾಣುತ್ತೆ. ಏನು ನೀವಿಷ್ಟು ಆಚಾರವಾಗಲಿಕ್ಕೆ ಕಾರಣ? ದೇಹದಲ್ಲಿ ಬಹಳ ಕ್ಷೀಣವಾಗಿದ್ದೀರಲ್ಲ!

ದೂಮ ಹೆಗ್ಗಡೇರು—ಏನು ಹೇಳಲಿ! ಯಾವುದಕ್ಕೂ ಮನಸ್ಸಿನಲ್ಲಿ ಸುಖವಿದ್ದರಲ್ಲವೇ?

ರಾಮಶೆಟ್ರು—ನಾನು ಊರುಬಿಟ್ಟು ಬೊಂಬಾಯಿಗೆ ಹೋದವನು ಇದೇ ಪ್ರಥಮ ಬರುವುದು. ಈ ಏಳೆಂಟು ವರ್ಷಗಳೊಳಗೆ ನಿಮ್ಮಲ್ಲಿ ಎಷ್ಟು ಮಾರ್ಪಾಟತೋರುತ್ತೆ! ನಿಮ್ಮ ಆಗಿನ ಮೈಕಟ್ಟಿನ ಬಿಗುಪೆಲ್ಲಿ? ರೀವಿಯೆಲ್ಲಿ? ಮುಖಕಾಂತಿಯೆಲ್ಲಿ?

ದೂಮಹೆಗ್ಗಡೇರು—ಅವೆಲ್ಲ ಇಳಿಯದೆ ಹ್ಯಾಗೆ ಉಳಿದೀತು?

ರಾಮಶೆಟ್ರು—ಅಂದರೆ?

ದೂಮ ಹೆಗ್ಗಡೇರು—ಅಂದರೆ, ಒಳ್ಳೇದೆಂತ ತೋರಿದ್ದು ಕೆಟ್ಟದಾಗಿ ಪರಿಣಮಿಸಿತು, ನೋಡಿ ನಮ್ಮ ತಂದೆಯವರು ನಮಗೆ ಹೇರಳ ಆಸ್ತಿಕೊಟ್ಟದ್ರಿಂದಲೇ ನಮ್ಮ ಅವಸ್ಥೆ ಇಲ್ಲಿಗ ಬಂತೆನ್ನಬೇಕು. ನೋಡಿ, ನೀವು ಊರುಬಿಟ್ಟು ಹೋದಿರಿ ಸಣ್ಣ ಪ್ರಾಯದಲ್ಲೇನೋ ನಿಮಗೆ ಸ್ವಲ್ಪ ಕಷ್ಟ ಬಂದರೂ ಚಿಂತೆಯಿಲ್ಲಾನ್ನುವ ಹಾಗೆ ಈಗ ದುಡಿಮ ಬಹಳ ಕಾರುಬಾರುಮಾಡುತ್ತೀರಿ ಸುಮಾರು ಆಸ್ತಿಗೀಸ್ತಿಮಾಡಿದ್ದೀರೆ ಅಂತೆ. ನಿಮ್ಮ ತಂದೆಯವರು ಮೊನ್ನೆ ಸಿಕ್ಕಿದಾಗ ಎಲ್ಲ ಹೇಳಿದರು. ಮುಪ್ಪಿನ ಕಾಲದಲ್ಲಿ ಅವರಿಗೆ ನಿಮ್ಮಿಂದ ಬಹಳ ಸೌಖ್ಯ ಸಿಕ್ಕಿತು. ನೀವೇ ಧನ್ಯರು ತಂದೆತಾಯಿಗಳಿಂದ ಒಂದು ಪೈಯ ಸಹಾಯವನ್ನೂ ಹೊಂದದೆ ನೀವು ಇಷ್ಟೆಲ್ಲಾ ಕೆಲಸಮಾಡಿದ್ದು ಶ್ಲಾಘನೀಯವಾದದ್ದೇ ಸರಿ.

ರಾಮಶೆಟ್ರು—ನಮ್ಮ ತಂದೆಯವರಿಂದ ಕಾಸೂ ಸಿಕ್ಕಲಿಲ್ಲಾಂತಲ್ಲ. 'ಮಗಾ ನಿನ್ನ ಕಾಲ ಮೇಲ ನೀನು ನಿಲ್ಲಲಿಕ್ಕೆ ಕಲಿಯಬೇಕು. ಹಾಗಾಗುವಂತೆ ಕೈಕೊಡೋದು ಮಾತ್ರ ಹೆತ್ತವರ ಕರ್ತವ್ಯ. ಇಗೋ ನಿನ್ನ ಖರ್ಚಿಗಾಗಿ ಕೈಕೊಟ್ಟು ಬಿಡ್ತೇನೆ, ಕಡಿಮೆಯಾದ್ರೆ ಬರೆ ಬಗ್ಗೆ ನನ್ನ ಆಶೀರ್ವಾದ ಇದೇಂತ ಇನ್ನೂರು ರೂಪಾಯಿ ಕೊಟ್ಟಿದ್ರು ನಾನು ಬೊಂಬಾಯಿಗೆ ಹೊರಡುವಾಗ. ತಾವಾಗಿ ಪ್ರಯತ್ನ ಮಾಡೋವ್ರಿಗೆ ದೇವರೂ ಕೈಕೊಡ್ತಾನೇನ್ನಿ. ಹಾಗೂ ಹೀಗೂ ಒಂದು ಹಾದಿ ಹಿಡಿದುಬಿಟ್ಟೆ—ನಿಮ್ಮ ತಂದೆಯವರು ಹ್ಯಾಗಿದ್ದಾರೆ?

ದೂಮಹೆಗ್ಗಡೇರು—ಅವರು ಕಳೆದ ವರುಷ ತೀರಿ ಹೋದರು—ನಮ್ಮ ತಾಯಿಯೂ ಸಹ ಅವರ ಹಿಂದೆಯೇ ಇದ್ದಾರೆ—ಎಲ್ಲಾ ರಗಳೆ-ಸುಖವಿಲ್ಲ - ಶಾಂತಿಯಿಲ್ಲ.

ರಾಮಶೆಟ್ರು—ಹುಣ್ಣಿಮೆ ಚಂದ್ರನ ಹಾಗೆ ಥಳಥಳಿಸುತ್ತಿದ್ದ ನೀವೇ ಹೀಗೆ ಹೇಳುವದಾದರೆ ಬಾಕಿಯವರ ಪಾಡೇನು? ನನಗೆ ಗೊತ್ತಿದ್ದ ಸಂಗ್ತಿಯಲ್ಲವಾ—ಸರ್ವ ಸಂಪನ್ನರಾಗಿದ್ದೀರಿ ನೀವು-ನಿಮ್ಮ ತಂದೆಯವರು ಹೇರಳ ಕೊಟ್ಟಿದ್ದರು—ತಾಯಿಯ ಮನೆಯಲ್ಲಿ ವಿಶೇಷ ಅನುಕೂಲವಿತ್ತು. ನಿಮ್ಮ ತಂಗಿ ಗಂಡಾಂದ್ರೆ ಒಬ್ಬ ತುಂಡು ಅರಸನ ಹಾಗಿದ್ದವರು-ಆ ಕಾಲದಲ್ಲಿ ನಾವೆಲ್ಲ ಎಲ್ಲಿ? ನಿಮಗೆ ತಾನು ಹೆಣ್ಣು ಕೊಡಬೇಕು, ತಾನು ಕೊಡಬೇಕು ಎಂದು ಮೇಲಾಡಿದ ಗುತ್ತು ಮನೆತನಗಳೆಷ್ಟೋ! ನನಗೋ ಒಂದು ಗಂಟೇ ಹೆಣ್ಣು ಗಂಟುಬಿತ್ತು! ಹಣ್ಣಿನ ಕಡೆಯವರಿಗೆ ಜಾತಿ ಗಂಡು ಜೋಡು ಬಿದ್ದರೆ ಸಾಕೂಂತಿತ್ತು, ನನಗೆ ನಮ್ಮಿಂದ ದೊಡ್ಡವರ ನೆಂಟಸ್ತಿಕೆಯಾದರೆ ಹೇಗಾದ್ರೂ ಮೇಲೆ ಹೋಗಿಬಿಡಬಹುದೆಂಬ ಭ್ರಾಂತಿಯೂ ಇತ್ತೆನ್ನಿ. ಆದಕಾರಣ ಆ ಜೋಂಟು ಹುಡುಗಿಗೂ ನನಗೂ 600 ರೂಪಾಯಿ ವರದಕ್ಷಿಣೆ ಕೊಟ್ಟು ಗಂಟು ಹಾಕಿದರು ನನ್ನ ಮಾವನಿಗೆ ಹಿರೇ ಹೆಣ್ಣುಗಳು ಮೂರು. ನಮ್ಮ ಷಡ್ಡಗರೆಲ್ಲಾ ದೊಡ್ಡ ದೊಡ್ಡ ಯಜಮಾನರು ಆಗ. ಈಗೆಲ್ಲಾ ದೂಳು ಮುಕ್ಕುತ್ತಾರೆನ್ನಿ—ಹಾರಿದ್ದು ಬಹಳ ವಿಶೇಷವಾಯಿತು. ನಮ್ಮನ್ನು ನೋಡಿ ಆಗ ಎಷ್ಟೋ ನಗಾಡುತ್ತಿದ್ದರು-ಅದು ಬಿಡಿ. ಆದಕಾರಣ ಆ ಸಮಯದಲ್ಲಿ ನನ್ನ ಮದುವೆಗೆ ದಿಬ್ಬಣ ಹೊರಡುವಾಗ ನಮ್ಮ ಮಾವನವರ ಜೋಂಟ ಮಗಳ, ಅಂದರೆ ನನ್ನ ಹೆಂಡ್ತಿಯ ಕೈಹಿಡಿದು ಬಿಕ್ಕಿ ಬಿಕ್ಕಿ ಅಳಲಿಕ್ಕೆ ಶುರೂಂತೆ!-ಕಾರಣ, ನಾನು ಬಹಳ ಬಡವಾಂತ!-ಅತ್ತದ್ದೇ ಮಾತ್ರವಾ! ಕಲಂಬಿ ಮ್ಯಾಲೆ ಮಲಗಿ ಸುರಿಸಿದ ಕಣ್ಣೀರಿಂದ ಮೂರು ತಲೆದಿಂಬು ಒದ್ದೆಮುದ್ದೆಯಾಗಿತ್ತಂತೆ. ಅಂತೂ ಬಂದೋರೆಲ್ಲಾ ಏನೇನೋ ಸಮಾಧಾನ ಹೇಳಿದ ಮೇಲೆ ಬಹಳ ಕಷ್ಟದಿಂದ ನಮ್ಮಲ್ಲಿಗೆ ದಿಬ್ಬಣ ಬಂದರಂತ ಅಂತೂ ನಮ್ಮ ಮದುವೆ ಆಯ್ತು ಅನ್ನಿ! ಒಂದು ಒಂದೂವರ ವರ್ಷದೊಳಗೆ ನನ್ನ ಹೆಂಡ್ತಿ ಗರ್ಭಿಣಿಯಾದಳು—ನಾನೇನು ಉಡುಗಿರೆ ಹೆಚ್ಚು ಕೊಡಲಿಲ್ಲ-ಒಂದು ಇಪ್ಪತ್ತೈದು ರೂಪಾಯಿ ಸಭೆಯ ಎದುರು ಕೊಟ್ಟಿದ್ದೆ-ಆ ಸುಟ್ಟ ಮರ್ಯಾದೆಯೆಂಬೋದುಂಟಲ್ಲಾ, ಅದನ್ನು ಕಾಪಾಡೋದಕ್ಕೆ-ಮರು ದಿವಸ ಹಾಗೆಯೇ ಅದನ್ನು ವಾಪಾಸು ತಂದೆ-ಅವಳು ಬಾಣಂತಿಯಾದಾಗ ನಾನು ಅಲ್ಲಿಗೆ, ನನ್ನ ಹೆಂಡ್ತಿ ಮನೆಗೆ, ಹೋಗಿದ್ದೆ ಅದೇ ಸಮಯ ನನ್ನ ನಾದಿನಿಯೂ ಹೆತ್ತಿದ್ದಳು. ಅವಳ ಗಂಡ ಮೋಟರ್ ಕಾರಿನಲ್ಲಿ ಬರುವುದು, ಆ ಕಡೆಯಿಂದ ದೊಡ್ಡ ದೊಡ್ಡವರಲ್ಲ ಮಗು ನೋಡೋಕೆ ಬರೋದೇನು! ಭಾರೀ ಭಾರೀ ಸರಬರಾಯ-ಈ ಗೌಜಿಯಲ್ಲಿ ನನ್ನೇ ಭಾವ ಬಡ ಅವ ನನ್ನು ಯಾರು ಕೇಳುತಾರ್ರೀ? ನಮ್ಮ ಮಾಯಿ ನಮ್ಮನ್ನು ಒಂದು ಕಸದ ಹಾಗೆ ಮಾಡಿದ್ರು—ನಮ್ಮ ಹುಡುಗಿ ತಿಳಲಿಕ್ಕೆ ಶುರು—ಅದೆಲ್ಲಾ ವಿವರವಾಗಿ ವಿವರಿಸುವುದು ಚಂದವಲ್ಲ-ನಮ್ಮ ಮಾಯಿ ಹೇಳಿದ್ರಂತೆ ನಮ್ಮ ಹುಡುಗಿಯ ಹತ್ತರ—"ನೀನೊಬ್ಬಳು ಗತಿಯಿಲ್ಲದವಳು! ನೋಡು, ನಿನ್ನ ಅಕ್ಕನನ್ನು ನೋಡಲಿಕ್ಕೆ ಬರುವ ಜನ-ಅದರ ಒಟ್ಟಿಗೆ ಬರುವ ಸರಬರಾಯ ಎಷ್ಟು ಏನೂಂತ ಹೇಳ್ಲಿ! ನಿನಗೆಲ್ಲಾ ಇಲ್ಲಿದ್ದೇ ಆಗಬೇಕು" ಅಂತ. ನಮ್ಮ ಹುಡುಗಿಗೆ ಸ್ವಲ್ಪ ನಾಚಿಕೆ ಆಗಿ ಅಳಲಿಕ್ಕೆ ಶುರು. ನಾನು ಒಳಗೆ ಹೋಗುವಾಗ ಅಳುತ್ತಾಳೆ-ಯಾಕೆಂದರೆ ಹೇಳುವುದಿಲ್ಲ-ಕೊಂಚ ಮಟ್ಟಿಗೆ ನನಗೆ ಗುಟ್ಟು ತಿಳಿಯಿತು—ಥೂ ಈ ಜನ್ಮವೇ ತಂದೆ—ಸತ್ತರೆ ಸಾಯಬಾರದೇಕೆ? ಬದುಕಿದರೆ ಮನುಷ್ಯನಾಗಿ ಬಂದೇನು ಎಂದು ಒಬ್ಬರ ಒಟ್ಟಿಗೆ ಬೊಂಬಾಯಿಗೆ ಹೊರಟೇ ಬಿಟ್ಟೆ-ಶುರುವಿಗೆ ಶ್ರೀಂಗಣ ಕಲ್ತೆ-ಅಂದ್ರೆ ಓದಿನವಲ್ಲ—ತಟ್ಟೆ ತೊಳೆಯೋಕ ಹೋಟೆಲಲ್ಲಿ-ಹಾಗೆ ಒಂದೊಂದೇ ಕಲ್ತು ಮಾಹಿತಿ ಮಾಡಿಕೊಂಡೆ-ಈಗ ನನ್ನದೇ ಸ್ವಂತ ನಾಲ್ಕು ಕಾಫಿ ಹೋಟೆಲುಗಳು ಇವೆ. ಮನೆಗೆ ಸ್ವಲ್ಪ ಸಹಾಯಗೀಯಾ ಮಾಡಿದೆ. ನನ್ನ ಹೆಸರಲ್ಲೇ ಸ್ವಲ್ಪ ಆಸ್ತಿ ತೆಕ್ಕೊಂಡಿದ್ದೇನೆ. ನಗದಿ ಹಣ ಸಾಧಾರಣ ಒಂದು ೫೦ ಸಾವಿರ ರೂಪಾಯಿ ಬೇಂಕಿನಲ್ಲಿ ಠೇವಣಾತಿ ಉಂಟು. ಈಗ ನಮ್ಮಂಥವರ ಹತ್ತಿರ ಮಾತಾಡಲಿಕ್ಕೆ ಸ್ವಲ್ಪ ಧೈರ್ಯಬರುತ್ತದೆ—ಅದಾಯಿತಲ್ಲಾ, ನೀವು ಹೀಗೆಲ್ಲಾ ಕಷ್ಟನಷ್ಟಗಳಿಗೆ ಹೇಗೆ ಬಿದ್ರಿ ಯಪ್ಪಾ! ಆಶ್ಚರ್ಯವೇ ಸರಿ!

ದೂಮ ಹೆಗ್ಗಡೇರು—ನೋಡಿ, ರಾಮಶೆಟ್ರೇ-ನಿಮ್ಮ ಕಥೆ ಕೇಳಿ ಬಹು ಸಂತೋಷವಾಯಿತು. ನೀವು ಸ್ವತಃ ಮಾಡಿದ ಆಸ್ತಿಗೀಸ್ತಿ ಮನೆನಾರು ಬಿಟ್ಟು ೫೦ ಸಾವಿರ ರೂಪಾಯಿ ಠೇವಣಾತಿ ಉಂಟಲ್ಲಾ ನಾನು ಮಾಡಿದ ಕಾರ್ಬಾರೆಂಬೋದು ಸತ್ತು ಹೋದಾಗ್ಗೆ ಇದ್ದದ್ದನ್ನೆಲ್ಲಾ ಲಗಾಡಿ ತೆಗೆದದ್ದು ಒಂದು. ಸಾಲಮಾಡಿದ್ದು ಮತ್ತೊಂದು. ನೋಡಿ, ಊಟ ಮಾಡುವ ಅಭ್ಯಾಸ ಇದ್ದ ಒಬ್ಬ ಮನುಷ್ಯ ಅನ್ನರನ್ನ ಹಳಿದು ಮಾತಾಡುವುದು ತಪ್ಪು—ತೀರಾ ತಪ್ಪು—ಇದಕ್ಕೆ ನೀವೇ ಸಾಕ್ಷಿ. ನೋಡಿ, ಇವತ್ತು ನೀವೆಲ್ಲಿ? ನಾವೆಲ್ಲಿ? ನಮ್ಮ ದೊಡ್ಡ ತೋರದ ಬಾವ ಒಬ್ಬ ನಮ್ಮನ್ನು ಲಗಾಡಿ ತೆಗ್ದ-ನಮ್ಮ ಮನ ಹೋಯಿತು ನಮ್ಮ ಹೊಟ್ಟೆಗೆ ಹೊಡ್ದಾ ನಮ್ಮ ತಂದೆಯವರು ನಮ್ಮ ತಾಯಿಯ ಹೆಸರಲ್ಲಿ ಅಷ್ಟು ಆಸ್ತಿ ಕೊಟ್ಟಿದ್ದರಲ್ಲಾ-ಅವರಿಗೆ ತಲೆ ಇಷ್ಟು ಅಂತ ಮಾಡಿದ್ದೀರಾ? ಅವರು ಬಿಡಿದ ಹಣ ಎಲ್ಲ ಅವರಿಂದ ನಮಗೆ ಒಂದು-ಬಂದಷ್ಟೇ ಬೇಗ ಹಾರಿಹೋಯಿತು—ನಮ್ಮ ಒದಂ ಬಾವನ ಗರಂ ಕಂಡ-ತೋರ ಮಜೀ ಕಂಡು ಅವನು ಹೇಳಿದ್ದೇ ಗೀತ ಎಂದು ನೆನಸಿದರು ಅವನಿಗೆ ಸಿಕ್ಕಿಸಿಕ್ಕಿದ ದುರಭ್ಯಾಸ ಇದ್ದರೂ ಜಂಜಾಲಿ ವ್ಯಾಪಾರ ಇದ್ದರೂ,ನಮ್ಮ ತಂದೆಯವರಿಗೂ ತಾಯಿಗೂ ಅವನ್ನ ಅವನ ತೋರ ಯಜಮಾನಿಕೆಯದೆಸೆಯಿಂದ ಪರಿಮಳವೇ ಆಯ್ತು. ಬಂದಬಂದ ಹಾಗೆ ದುಡ್ಡು ತೆಕ್ಕೊಂಡು ಹೋದ-ತಂದೆಯವರನ್ನು ಜಾಮೀನು ಹಾಕಿಸಿದ-ಕಡೇಗೆ ತಂದೆಯವರು ನನ್ನನ್ನು ಹಟಹಿಡಿದು-ಮನೆಯ ಆಳಿಯಸೆಂದು ಜಾಮೀನು ಹಾಕಿಸಿದರು. ನಾನು ಸಹಾ ಊರ್ಜಿತ ಮಾಡಿದೇನ್ನಿ.

ಪುಟ ೧೪ ನೋಡಿ

SAVING MONEY AND TIME

Thousands of prudent and thriving business men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD 1906
CANARA BANK
LIMITED

(ನವಯುಗದ ಬಾತ್ಮಿದಾರರಿಂದ)

ಮೈಸೂರು ಡಿ. ೪

ಮಾಧ್ಯಮಿಕ ಪರೀಕ್ಷೆ—ಬ್ರಿಟಿಷ್ ಇಂಡಿಯಾದಲ್ಲಿ ಮಾಧ್ಯಮಿಕ ಪರೀಕ್ಷೆಯೇ ಇಲ್ಲ. ಮತ್ತು ಚಿಕ್ಕ ಹುಡುಗರಿಗೆ ಈ ಪರೀಕ್ಷೆಯಿಂದ ಬಹಳ ಬಂಧವಿಧವಾದ ತೊಂದರೆಯೇ ಜಾಸ್ತಿ. ಆದುದರಿಂದ ಈ ಪರೀಕ್ಷೆಯನ್ನು ವಜಾಮಾಡಬೇಕೆಂದು ಲೆಜಿಸ್ಲೇಟಿವ್ ಮತ್ತು ರೆಪ್ರೆಸೆಂಟೇಟಿವ್ ಅಸೆಂಬ್ಲಿಯಲ್ಲಿ ಚರ್ಚೆ ನಡೆದು ಸರ್ಕಾರದವರಿಗೆ ಶಿಫಾರಸ್ಸು ಹೋಗಿತ್ತು ಇದರ ಮೇಲೆ ಶ್ರೀಮನ್ ಮಹಾರಾಜರ ಸರ್ಕಾರದವರು, ಒಂದು ಪ್ರಕಟನೆ ಹೊರಡಿಸಿ, ಮಾಧ್ಯಮಿಕ ಪರೀಕ್ಷೆಯು ಸ್ತ್ರೀಯರಿಗೆ ಮಾತ್ರ ಇಲ್ಲವೆಂದೂ, ಅವರುಗಳು ಹೈಸ್ಕೂಲಿಗೆ ಹೋಗುವಾಗ ಮಿಡ್ಲ್ ಸ್ಕೂಲ್ ಉಪಾಧ್ಯಾಯರಿಂದ ಒಂದು ಸರ್ಟಿಫಿಕೇಟ್ ಪಡೆದರೆ ಸಾಕೆಂದೂ ತಿಳಿಸಿದ್ದಾರೆ.

ರಾಜಕೀಯ ಸುಧಾರಣಾ ಸಮಿತಿ—ಮೇಲ್ಕಂಡ ಸಮಿತಿಯು ಕಳೆದ ತಿಂಗಳು 29 ಮತ್ತು 30ರಲ್ಲಿ ಸಭೆ ನಡೆಸಿ ಕೆಲವು ಮಹನೀಯರುಗಳ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು ಒಟ್ಟು ಎರಡು ದಿನಗಳಲ್ಲಿ ಸುಮಾರು 31 ಜನರನ್ನು ಪರೀಕ್ಷೆ ಮಾಡಲಾಯಿತು ಶ್ರೀ ಕೆ ಟಿ ಭಾಷ್ಯಂರವರು ಕಾಂಗ್ರೆಸ್ ಪರವಾಗಿ ಒದಗಿರುವ ಮೆಮೊರಾಂಡಂನ ಅಭಿಪ್ರಾಯವನ್ನು ತಿಳಿಸಿದರು ಸಮಿತಿಯು ಪುನಃ ಈ ತಿಂಗಳು 13-14-15ರಲ್ಲಿ ಸೇರಿ ಪುರಾವೆ ಅದರ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮೈಸೂರಾಮರ ಆಗಮನ—ಭಾರತ ಮಿಂಡದ ಪ್ರಸಿದ್ಧ ಪುರಾತನ ... ಲಿನ ಲಿತಗೋಪುರ ... ನಮ್ಮ ಮೈಸೂರು ದೇಶಕ್ಕೆ ಆಗಮಿಸಲು ಕೇವಲ ಕೆಲವೇ ದಿನಗಳು ಮಾತ್ರ ಉಳಿದಿವೆ ... ಇವರ ಆಗಮನಕ್ಕೋಸ್ಕರ ರಾಜಧಾನಿಯಲ್ಲಿ ವಿಶೇಷ ರೀತಿಯ ಏರ್ಪಾಟು ಮಾಡಲಾಗುತ್ತಿದೆ. ಇವುಗಳಲ್ಲಿ ವಿನ್ನೂ ... ನಮ್ಮ ಪ್ರತಿನಿಧಿಗಳು ಈ ದಿನ ... ನಿಂದ ... ಬಂದರು.

ರಾಜಧಾನಿಯಲ್ಲಿರುವ ದೊಡ್ಡ ರೈಲ್ವೆ ನಿಲ್ದಾಣದಲ್ಲಿ ಮೈಸೂರು ... ರೈಲ್ವೆ ... ಗಾಗಿ ... ದೊಡ್ಡ ... ಚಿತ್ರ ... ಕಲ್ಲು ... ರೈಲ್ವೆ ಸ್ಟೇಷನ್ ... ಬಹಳ ಉತ್ತಮ ... ರೈಲ್ವೆ ... ದೊಡ್ಡ ಕನ್ನಡಿ ಇಟ್ಟಿದ್ದಾರೆ ... ಮೈಸೂರು ... ಬಟ್ಟೆಯನ್ನು ಬದಲಾಯಿಸುತ್ತಾರೆಂದು ಹೇಳಲಾಗಿದೆ ರೈಲ್ವೆ ವರ್ಕ್ಸ್ ... ಬಿದಿಯನ್ನು ಬಹಳ ಚೊಕ್ಕಟವಾಗಿಡಿಸಿ, ಎಲ್ಲಾ ಮನೆಗೂ ಸುಣ್ಣ ಮತ್ತು ಬಣ್ಣ ... ವಿದ್ಯುಚ್ಛಕ್ತಿ ... ದೀಪಗಳನ್ನು ಹಾಕಿ, ದೀಪದ ಕಂಬಗಳಿಗೆ ಬಣ್ಣ ... ಮೈಸೂರು ... ಬಣ್ಣ ಬಣ್ಣದ ... ಚನ್ನಾಗಿಟ್ಟಿದ್ದಾರೆ ಮೈಸೂರು ... (ಲಲಿತ ಮಹಲ್) ... ಬಣ್ಣ ಬಣ್ಣದ ಹೂಗಿಡಗಳು ಮತ್ತು ದೀಪಗಳನ್ನೂ ಹಾಕಿ ವಿಶೇಷ ರೀತಿಯಲ್ಲಿಟ್ಟಿದ್ದಾರೆ.

ಮೈಸೂರಾಮರ ಈಗಿನ ... ಬರುವ ತಿಂಗಳು ತಾ. 13ಕ್ಕೆ ... ತಾ. 11 ... ರಾಜಧಾನಿಯ ... ಸಂಸ್ಥೆಗಳಿಗೆ ಭೇಟಿಕೊಟ್ಟು ... ಪುರಕ್ಕೆ ಹೋಗುವರು ... ದಿನ ... ಪುರದಿಂದ ... ರಾಜಧಾನಿಗೆ ಬಂದು ರೈಲ್ವೆ ಸ್ಟೇಷನಿಗೆ ... ಪ್ರಯಾಣವಾಡಿ, ... ಪುರಕ್ಕೆ ಪ್ರಯಾಣ ಬೆಳೆಸುವರೆಂದು ತಿಳಿದು ಬಂದಿದೆ

ಮೈಸೂರು ... ಪುರಕ್ಕೆ ಹೋಗುವ ರಸ್ತೆಯನ್ನು ಬಹಳ ಚೊಕ್ಕಟವಾಗಿ ... ಮಾಡಿದ್ದಾರೆ ... ಮೈಸೂರು ... ಆಗಮನವನ್ನು ... ಅನೇಕ ... ಮಾಡಿದೆ, ... ವನ್ನು ... ತ.ಸಲ ...

ಮೈಸೂರು ಸಮಾಚಾರ

ದೀಪದ ಕಡ್ಡಿ ಬರಕೂಡದು—ಗೊಂಡಾಲ ಮತ್ತು ಗ್ವಾಂಧಾಗರದ ಸಂಸ್ಥಾನದಿಂದ ದೀಪದ ಕಡ್ಡಿಗಳು ಮೈಸೂರು ಸಂಸ್ಥಾನಕ್ಕೆ ಬರಕೂಡದೆಂದು ಸರ್ಕಾರದ ಆಜ್ಞೆ ಆಗಿದೆ

ಲೆಜಿಸ್ಲೇಟಿವ್ ಕೌನ್ಸಿಲು—ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲು ಮುಂದಿನ ತಿಂಗಳು ೨೧ರಲ್ಲಿ ನಡೆಯುತ್ತದೆಂದು ತಿಳಿಸಲಾಗಿದೆ.

ಬಡವರಿಗೆ ಹೊಸ ಮನೆ—ಬೆಂಗಳೂರು ಸಿಟಿಯಲ್ಲಿ ಕೆಲವು ಬಡವರು, ಮನೆಗಳಿಲ್ಲದೆ ಇರುವುದರಿಂದಲೂ, ಕೆಲವರು ಕಳೆದುಕೊಂಡು ಬಿಟ್ಟದ್ದರಿಂದಲೂ, ಅಂಥವರಿಗೆ ಖಾಲಿ ನಿವೇಶನಕೊಟ್ಟು ಮನೆಗಳನ್ನು ಕಟ್ಟಲು ಏರ್ಪಾಡುಗಳು ನಡೆಯುತ್ತಾ ಇವೆಯೆಂದೂ ತಿಳಿದುಬಂದಿದೆ

ಮಿ. ಹಾಲ್ಡೋರ್—ಅಮೇರಿಕಾ ದೇಶದವರಾದ ಇವರು, ನೆನ್ನೆ ಸಂಜೆ, ಬೆಂಗಳೂರು ವಿಶ್ವವಿದ್ಯಾನಿಲಯದಾವರಣದಲ್ಲಿ, ಸಮಾಜ ಕಾರ್ಯಕ್ಕೆ ವಿದ್ಯಾರ್ಥಿಗಳ ಚಳುವಳಿ ಎನ್ನುವ ವಿಚಾರವಾಗಿ ಒಂದು ಉಪನ್ಯಾಸವಿತ್ತರು.

ಮೈಸೂರು ಎಂ ಬಿ. ಬಿ ಯಸ್. ಡಿಗ್ರಿ ಲಂಡನ್ನಿನ ರಾಯಲ್ ಕಾಲೇಜ್ ಆಫ್ ಸರ್ಜನ್‌ಗೆ ಸೇರಿದ ಇನ್‌ಸ್ಪೆಕ್ಟರೂ, ಕಾಯ... ಮತ್ತು ಓರ್ ಪ್ರೊಫೆಸರ ... ಕೆಲವು ತಿಂಗಳ ಹಿಂದೆ ಬಂದು, ಇಲ್ಲಿಯ ಮೆಡಿಕಲ ಕಾಲೇಜ್ ಮತ್ತು ಕೃಷ್ಣರಾಜೇಂದ್ರ ಆಸ್ಪತ್ರೆಯನ್ನು ಪರೀಕ್ಷೆ ಮಾಡಿಕೊಂಡು ಹೋಗಿದ್ದರು

ಇದರ ಮೇಲೆ ರಾಯಲ ಕಾಲೇಜ ಆಫ್ ಸರ್ಜನ್ಸಿನ ಫೆಲೋಷಿಪ್ಪಿನ ಕೊನೆಗೆ ಪರೀಕ್ಷೆಗೆ ಮೈಸೂರಿನ ... ಆಸ್ಪತ್ರೆಯನ್ನು ಒಪ್ಪಿದ್ದಾರೆಂದೂ ಹೇಳಲಾಗಿದೆ

ಬೆಂಗಳೂರು ಡಿ ೫

ಮೈಸೂರು ಬೇಂಕ್‌ನ ರಜತ ಮಹೋತ್ಸವ—ಶ್ರೀಮನ ಮಹಾರಾಜರ ಅಧ್ಯಕ್ಷತೆಯಲ್ಲಿ ಮೈಸೂರು ಬೇಂಕಿನ ರಜತ ಮಹೋತ್ಸವವು ಡಿಸೆಂಬರ್ ೨ನೇ ತಾ. ಶುಕ್ರವಾರ ಸಂಜೆ ೫ಗಂಟೆಗೆ ನಡೆಯಿತು ಪ್ರಭುಗಳು ಈ ಬಿನ್ನವತ್ತಳೆಯನ್ನು ಸ್ವೀಕರಿಸಿ, ಭಾಷಣ ಮಾಡಿ ಬೇಂಕು ಇನ್ನೂ ಉನ್ನತ ಸ್ಥಿತಿಗೆ ಬರಲೆಂದು ಹಾರೈಸಿ ಅಪ್ಪಣೆ ಕೊಡಿಸಿದರು. ತರುವಾಯ, ದಿವಂಗತ, ಡಾ. ಕೆ. ಪಿ. ಪುಟ್ಟಣ್ಣಶೆಟ್ಟರ ಛಾಯಾಚಿತ್ರವನ್ನು ಮಹಾಪ್ರಭುಗಳ ದಿವ್ಯ ಹಸ್ತದಿಂದ ಅನಾವರಣವಾದ ಮೇಲೆ, ಸಭೆಯು ಜಯಜಯಕಾರದೊಡನೆ ಕೊನೆಗೊಂಡಿತು. ಮಹಾಪ್ರಭುಗಳು ನಿರ್ಗಮಿಸಿದರು. ಅನೇಕರು ದಾರಿಯ ಉದ್ದಕ್ಕೂ ಕಾದುಕೊಂಡಿದ್ದು ಇವರ ದರ್ಶನ ಲಾಭಪಡೆದರು

ಎ ಎಂ ಸಿ ಸಿ—ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಎರಡನೆಯ ಸಭೆಯು ತುಮಕೂರಿನಲ್ಲಿ ೩ ಮತ್ತು ೪ರಲ್ಲಿ ನಡೆಯಿತು. ಇದರ ಅಧ್ಯಕ್ಷತೆಯನ್ನು ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ವಹಿಸಿದ್ದರು. ಸಭೆಯು ಸಾಮಾನ್ಯರ ... ಕಾಂಗ್ರೆಸ್ ಮತ್ತು ಇತರರಿಂದ ತುಂಬಿತ್ತಲ್ಲದೆ, ಅನೇಕ ದೇಶೀಯ ಸಂಸ್ಥಾನಗಳಿಂದಲೂ ಅನೇಕ ಪ್ರತಿನಿಧಿಗಳು ಬಂದಿದ್ದರೆಂದು ಹೇಳಲಾಗಿದೆ. ಈ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯರವರು, ಸದಸ್ಯರನ್ನು ಸ್ವಾಗತಿಸಿದರು ಮೊದಲನೆಯ ದಿನ ಬೆಳಗ್ಗೆ ಧ್ವಜಾರೋಹಣ ನಡೆಯಿತು ಸ್ವಾಗತಾಧ್ಯಕ್ಷ ಸಭೆಸೇರಲು, ಅಧ್ಯಕ್ಷರು, ಅಧ್ಯಕ್ಷ ಭಾಷಣಮಾಡಿ, ಅವರಲ್ಲಿ ಇಂದು ಮೈಸೂರಿನಲ್ಲಿ ಸರ್ಕಾರದವರು ತೋರಿಸುತ್ತಿರುವ ನೀತಿಯನ್ನು ತಿಳಿಸಿ ವಿದುರಾಶ್ವತ್ಥ ಪ್ರಕರಣವನ್ನು ಖಂಡಿಸಿ, ಸ್ವತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್‌ನವರೊಂದಿಗೆ ಎಲ್ಲರೂ ಸೇರಿ, ಒಟ್ಟಾಗಿ ಸರ್ಕಾರದ ಜೊತೆ ... ಪ್ರಯತ್ನಪಡಬೇಕೆಂದು ತಿಳಿಸಿದರು ತರುವಾಯ ಅನೇಕ ನಿರ್ಣಯಗಳನ್ನು ಚರ್ಚಿಸಲಾಯಿತು. ಹೊರಸೆದರವೂ ಧ್ವಜಾರೋಹಣ ಕಠಿನದೆದು, ನಿರ್ಣಯಗಳನ್ನು (ಕೆಲವು ಮಾತ್ರ) ಪಾಸ್ ಮಾಡಿದ ಮೇಲೆ ಇನ್ನು ಮುಂದೆ ಕಾಂಗ್ರೆಸ್ ನವರು ಹೇಗೆ ವರ್ತಿಸಬೇಕೆಂದು ಚರ್ಚಿಸಲಾಯಿತೆಂದು ತಿಳಿದು ಬಂದಿದೆ. ಸಂಜೆ ಅಧಿವೇಶನ ವಂದೇಮಾತರಂ ಗೀತೆಯು ನಡೆದ ಮೇಲೆ ಭರ್ಖಾಸ್ತಾಯಿತು ಪರ ಸ್ಥಳದಿಂದ ಬಂದಿದ್ದ ಪ್ರತಿನಿಧಿಗಳೂ, ಇತರರೂ ತಮ್ಮ ತಮ್ಮ ಊರುಗಳಿಗೆ ನಿರ್ಗಮಿಸಿದರು.

ಡಾ! ನಾ. ಸು ಹರ್ಡೀಕರ್—ಇವರು ಕಳೆದ ವಾರವೆಲ್ಲಾ ಮೈಸೂರು ಸಂಸ್ಥಾನದಲ್ಲಿ ಸಂಚರಿಸಿ, ಕಾಂಗ್ರೆಸ್ ಸ್ವಯಂಸೇವಕರೊಡನೆ ಮಾತುಕತೆ ನಡೆಯಿಸಿ, ತುಮಕೂರಿನಲ್ಲಿ ನಡೆದ ಎ. ಎಂ. ಸಿ. ಸಿ ಯಲ್ಲಿ ಭಾಗವಹಿಸಿ ನಂತರ ನಿರ್ಗಮಿಸಿದರು

LAKSHMI

OFFERS

ATTRACTIVE

– POLICIES under New Schemes and Plans Suitable for Every Purse and Purpose.

"The Golden Policy"
"Family Income Policy"
"Optional Endowment Policy"
"Your Child's Future"

AND

"Marriage Endowment Policy" are the Latest & the Best.

For Particulars Write to:—

The Branch Manager, 334, *Thambuchetty St*, G. T. MADRAS. OR *A. B. Krishna Raj*, ORGANISER, UDIPI

THE
Lakshmi Insurance Co., Limited,
LAHORE.

ಸ್ವೀಕಾರ ವಿಮರ್ಶೆ

ಕಲ್ಯಾಣಪುರ ಮಿಲಾಗ್ರಿಸ್ ಹಾಯ್ ಸ್ಕೂಲಿನ ರಜತೋತ್ಸವದ ವರದಿ—ಮತ್ತು (1937-38) ವಾರ್ಷಿಕ ಪಟ್ಟಿಯು ನಮ್ಮ ಕೈಸೇರಿರುವುದು. 1913ರಲ್ಲಿ ಸ್ಥಾಪಿತವಾದ ಈ ಶಾಲೆಯು ಈ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಜಿಲ್ಲೆಯ ಉತ್ತಮ ಹಾಯ್‌ಸ್ಕೂಲುಗಳಲ್ಲೊಂದಾಗಿ ಮಾರ್ಪಟ್ಟಿರುವುದು ಬಹು ಸಂತೋಷಕರ. ಈ ಶಾಲೆಯು ಉನ್ನತಿಗೇರಿ ಮುಡಿಯುತ್ತಿರುವ ವ್ಯವಸ್ಥಾಪಕರನ್ನೂ, ಅಲ್ಲದೆ ಹಲಕಾಲ ಪ್ರಧಾನ ಅಧ್ಯಾಪಕರಾಗಿ ಉತ್ತಮ ಸೇವೆಯನ್ನು ಸಲ್ಲಿಸಿದ ಮಿ. ಜೆ ಎಮ್. ಟೆಲ್ಲಿಸ್ ಇವರನ್ನೂ ನಾವು ಅಭಿನಂದಿಸುವೆವು.

ಮಂದಾಲಸೋಪಾಖ್ಯಾನ—ಇದು ಮಾರ್ಥಿಕ ಪದ್ಯದಲ್ಲಿ ರಚಿಸಿ ಶ್ರೀ ಕುಮಾರ ಮಾಧವ ನವರ ಕಾಳಿದಾಸ ಪೌರಾಣಿಕ ಸಾಹಿತ್ಯ ಶೀಕಂರಶಾಸ್ತ್ರೀ ಇವರಿಂದ ರಚಿಸಲ್ಪಟ್ಟು, ಮೈಸೂರು ಶ್ರೀ ಶಂಕರ ವಿಜಯ ಕಾರ್ಯಾಲಯದಿಂದ ಪ್ರಕಟಿಸಲ್ಪಟ್ಟಿರ ಪುದು. ಪಂಡಿತ ಕುಮಾರ ಮಾಧವರು ಉತ್ತಮ ಪಾಂಡಿತ್ಯವುಳ್ಳವರ; ಇವರ ಕೃತಿಗಳು ಈ ಮೊದಲೇ ಬಹು ಪ್ರಸಿದ್ಧಿ ಪಡೆದಿವೆ ಮಂದಾಲಸೋಪಾಖ್ಯಾನವು ಪೌರಾಣಿಕ ಪ್ರಸಿದ್ಧ ಕಥೆಯಾಗಿದೆ ಮಂದಾಲಸೆಯು ತನ್ನ ಬಾಲಕರಿಗೆ ... ಜ್ಞಾನವೋಧೆಯು ಅಸಾಧಾರಣವಾದುದೆಂದು ಪೌರಾಣಿಕ ಸಾಹಿತ್ಯ ವಿಚಾರದಲ್ಲಿ ಸಕ್ತಿಯುಳ್ಳವರು ಬಲ್ಲರು ಮಕ್ಕಳಲ್ಲಿ ನೈತಿಕ ವಿಚಾರವನ್ನು ಬಿತ್ತತಕ್ಕ ಮಾತೆಯ ಜೊತೆಗೆ ಬಾಲಕರಲ್ಲಿ ಪ್ರತಿಬಿಂಬಿಸುವಂತೆ ಅಲ್ಲಲ್ಲಿ ಆಯ್ದು ವಿವರಿಸಿದರೆ, ಚೆನ್ನಾದೀತು, ಶೈಲಿಯು ಸರಳವಾಗಿದೆ ವಿಷಯವು ಉತ್ತಮವಾಗಿದೆ, ಕನ್ನಡ ಸಾಹಿತ್ಯದಲ್ಲಿ ಇಂಥಾ ಕೃತಿಗಳು ಹೆಚ್ಚಾಗಲೆಂದು ನಾವು ಹಾರೈಸುವೆವು.

ಸಂದೇಶ

ಬೆಳಗಾವಿ ಜಿಲ್ಲೆಯಲ್ಲಿಯ
ಒಂದೇ ಒಂದಾದ ರಾಷ್ಟ್ರೀಯ
ಕನ್ನಡ ವಾರಪತ್ರಿಕೆ

ವಿವಿಧ ಲೇಖನಗಳಿಂದಲೂ, ಕರ್ನಾಟಕದ, ಹಿಂದುಸ್ಥಾನದ ಮತ್ತು ಪರದೇಶದ ಚಿತ್ರ ವೈಚಿತ್ರ್ಯ ಸುದ್ದಿಗಳಿಂದಲೂ, ಸಂಗತಿಗಳಿಂದಲೂ ಕೂಡಿದ ಪತ್ರಿಕೆ ಇರುವದು, ಕಾರಣ ಕರ್ನಾಟಕದ ಎಲ್ಲ ಕಡೆಯ ಕನ್ನಡಿಗರೇ ಇಂದೇ ಚಂದಾದಾರರಾಗಿರಿ.

ಸ್ಥಳದವರಿಗೆ ೧—೮—೦.
ಪರಸ್ಥಳದವರಿಗೆ ೨—೮—೦.

ಏಜಂಟರು, ಜಾಹೀರಾತುದಾರರು ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವ್ಯವಸ್ಥಾಪಕರು,
ಸಂದೇಶ ಕಾರ್ಯಾಲಯ,
ಹನುಮಾನ ವೀಧಿ, ಬೆಳಗಾವಿ.

ನಂದಾದೀಪ(ಕಥಾಸಂಗ್ರಹ) ೦—೮—೦

THE
Canara Banking Corporation, Udipi, Ltd.
Established] (INCORPORATED IN BRITISH INDIA) [1906.
MEMBER:-
RESERVE BANK OF INDIA
BANKERS' CLEARING HOUSE, MADRAS

Capital Authorised, Issued & Subscribed	Rs.	3,50,000
Paid up Capital	.. Rs	3,03,205
Reserves	... Rs.	2,88,842

RATES OF INTEREST ON DEPOSITS

3 months ...	2½% p. a.
6 or 9 months ..	3 % p. a.
12 or 24 months ...	3½% p. a.
Short Term ...	2 % p. a.

All kinds of Banking Transactions undertaken.

ನವಯುಗ

ಉಡುಪಿ, ಗುರುವಾರ, ತಾ. ೧೫-೧೨-೩೮

ಆಶ್ರಿತ ಸಂಸ್ಥಾನಗಳ ಮುಂದಣ ವಿಚಾರ.

ದೇಶೀಯ ರಾಜರುಗಳ ಆಡಳಿತೆಗೊಳಪಟ್ಟಿರುವ ಸಂಸ್ಥಾನಗಳಲ್ಲಿ ಇಂದೀಗ ಪ್ರಚಂಡ ಜಾಗ್ರತೆಯು ಹಿಡಿದೆದ್ದಿರುವುದು. ಸ್ವಾತಂತ್ರ್ಯ ಸಮರದಲ್ಲಿ ಸ್ವಾಭಿಮಾನ ಪ್ರೇರಣೆಯಿಂದ, ಅಲ್ಲಲ್ಲಿ ಸ್ವತಂತ್ರ್ಯವೀರರು ತಮ್ಮ ಪವಿತ್ರ ಉದ್ದೇಶವನ್ನು ನೆರವೇರಿಸಲಿಕ್ಕಾಗಿ ತಮ್ಮನ್ನು ಇದಿರಿಸುತ್ತಿರುವ ಯಾವ ಭಯಾನಕ ಅತ್ಯಾಚಾರ, ಅಮಾನುಷ ಪೀಡೆಗೂ ಬೆದರದೆ, ಆವೇಶಪರರಾಗಿ, ತಮ್ಮ ಸ್ವಾತಂತ್ರ್ಯ ಯುದ್ಧವನ್ನು ಕಾಂಗ್ರೆಸ್ ಧ್ಯೇಯದ ದ್ಯೋತಕಗಳನ್ನನುಸರಿಸಿ, ಮುಂದೊತ್ತುತ್ತಿರುವರು ಪ್ರಜಾಪ್ರಭುತ್ವವೆಂಬುದು ಪ್ರಜೆಗಳ ಜನ್ಮಸಿದ್ಧವಾದ ಹಕ್ಕು, ಇದರ ಸ್ಥಾಪನೆಗಾಗಿ ಒಮ್ಮೆ ಪ್ರಜೆಗಳಲ್ಲಿ ಪ್ರೇರಣೆಯುಂಟಾಯಿತೆಂದರೆ, ನಂತರ ತಮ್ಮ ಸ್ವಭಾವಸಿದ್ಧವಾದ ಹಕ್ಕನ್ನು ಸ್ಥಾಪಿಸಲು, ಎಂಥಾ ಸಂಕಷ್ಟಕ್ಕೂ ಎದೆಯೊಡ್ಡಲು ಹಿಂಜರಿಯರೆಂಬದು ನಿಶ್ಚಯ. ಇಂಥಾ ಸ್ವಾತಂತ್ರ್ಯ ಆಕಾಂಕ್ಷೆಗಾಗಿ ಹೋರಾಟನಡೆಸುವ ಪ್ರಜೆಗಳ ಶಕ್ತಿಯ ವ್ಯಾಪನೆಯನ್ನು ಯಾವ ಪ್ರಭುತ್ವವೂ ನಿರೋಧಿಸಿ ಉಳಿಯಲಾರದೆಂಬುದಕ್ಕೆ ಇತಿಹಾಸದ ಹಲವು ಘಟನೆಗಳು ಸಾಕ್ಷ್ಯವನ್ನೀಯುವವು

ಮೈಸೂರು ಮೊದಲಾದ ಕೆಲ ಸಂಸ್ಥಾನಗಳು ಪ್ರಜೆಗಳ ಕಾಂಕ್ಷೆಯು ನ್ಯಾಯಬದ್ಧವಾದುದೆಂದು ಭಾವಿಸಿಕೊಳ್ಳುವಂತಿದೆ ಪ್ರಜಾಗಣದ ಅಭಿಪ್ರಾಯವನ್ನು ಅಲ್ಲಗಳೆದು ಉಳಿಯುವುದು ಸುಲಭ ಸಾಧ್ಯವಲ್ಲವೆಂದರಿತುಕೊಂಡಿವೆ ಅಲ್ಪ ಸ್ವಲ್ಪ ಜವಾಬ್ದಾರಿ ಸರಕಾರವನ್ನೀಯುವ ನಿಶ್ಚಿತಕ್ಕೆ ಬಂದಿರುವುವು; ಆದರೆ, ಪ್ರಜೆಗಳು ಸಂಪೂರ್ಣ ಜವಾಬ್ದಾರಿಕೆ ದೊರೆತ ವಿನಾ ತೃಪ್ತರಾಗುವಂತಿಲ್ಲ. ಅಂದಿನವರೆಗೆ ಗೊಂದಲ ನಿಲ್ಲುವಂತೆಯೂ ಸಾಧ್ಯವಿಲ್ಲ. ಇನ್ನು ಹೈದರಾಬಾದು, ತಿರುವಾಂಕೂರು ಮೊದಲಾದ ಸಂಸ್ಥಾನಗಳಲ್ಲಿ ರಾಜ್ಯಾಧಿಕಾರದ ಹೆಸರಲ್ಲಿ ನಡೆಯುತ್ತಿರುವ ದಬ್ಬಾಳಿಕೆಯು ಇನ್ನಷ್ಟು ತೀವ್ರವಾಗಿ ಮುಂದೊತ್ತಿರುವುದು ಶೋಚನೀಯ ಢಂಕನ್ ಮೊದಲಾದ ಸಣ್ಣ ಪುಟ್ಟ ಸಂಸ್ಥಾನಗಳು ಕೂಡಾ ತಮ್ಮ ಅಲ್ಪಶಕ್ತಿಯನ್ನು ಅರಿತುಕೊಳ್ಳದೆ ವಿವೇಕ ರೀತಿ ನೀತಿ ನ್ಯಾಯದೃಷ್ಟಿಯನ್ನು ಮರೆತುಬಿಟ್ಟು ಅಮಾನುಷ, ಅತ್ಯಾಚಾರಕ್ಕೆ, ಭಯಂಕರ ಪೀಡೆಗೆ ಪ್ರಜೆಗಳನ್ನು ಒಳಪಡಿಸಿರುವುದು. ಸರಕಾರದ ಆಜ್ಞೆಯಂತೆ ಅಲ್ಲಿಯ ಪೋಲೀಸರು, ಪ್ರಜೆಗಳ ನಿರ್ನಾಮಕ್ಕಾಗಿ ಬದ್ಧಕಂಕಣರಾಗಿರುವರೆಂದು ತೋರುವುದು ಅಂತ್ಯಂತ ಕ್ರೂರತೆಯಿಂದ ಪ್ರಜಾಸ್ವಾತಂತ್ರ್ಯವನ್ನು ಇದಿರಿಸುವ ದುಷ್ಟ ಹೇತುಕ ಇರಾದೆಯಿಂದ ಪ್ರಜಾದ್ರೋಹಕ್ಕೆ ಎಳ್ಳಷ್ಟು ಅಂಜದೆ ಜನತೆಯನ್ನು ನಿಬಿಡ ಪೀಡನೆಗೊಳಪಡಿಸುತ್ತಿರುವುದು.

ಈ ನಾಗರಿಕ ಯುಗದಲ್ಲಿ ಇಂಥಾ ನಿರಂಕುಶ ವರ್ತನೆಯು, ಅಮಾನುಷ ಪೀಡೆಯು ರಾಜ್ಯದಾಡಳಿತೆಯ ಹೆಸರಲ್ಲಿ ಬಹುಕಾಲ ನಡೆಯುವುದು ಸಾಧ್ಯವೇ ಇಲ್ಲ. ಬ್ರಿಟಿಷರ ಅಧೀನತೆಗೆ ಮಾತ್ರ ಒಳಪಟ್ಟಿದ್ದು, ಒಳಗಿಂದೊಳಗೆ, ರಾಜ್ಯಾಧಿಕಾರವನ್ನು ತಮ್ಮ ಸ್ವೇಚ್ಛೆಯಂತೆ ನಡೆಸಿಕೊಂಡು ಬಂದರಾಯಿತು. ಪ್ರಜೆಗಳ ಕಾಂಕ್ಷೆಯನ್ನಾಗಲೀ, ದೇಶದ ವಿಚಾರವನ್ನಾಗಲೀ, ಮನ್ನಿಸುವುದಾಗಲೀ, ಬಿಡುವುದಾಗಲೀ ತಮ್ಮ ಇಷ್ಟವೆಂದು ಇನ್ನೂ ನಂಬಿಕೊಂಡು ಮೋಸಹೋಗುತ್ತಿರುವರು. ಇಂಥಾ ಸಂಸ್ಥಾನಗಳ ಮೇಲೆ ಹತೋಟಿ ಇರದೆ, ಸ್ವೇಚ್ಛಾಪರ ದಬ್ಬಾಳಿಕೆ, ಕ್ರೂರ ಶಾಸನದ ಕರಾಳ ಕೃತ್ಯಕ್ಕೆ ಜನತೆಯನ್ನು ಒಳಪಡಿಸಲು ಬಿಡುವುದು ಇನ್ನೆಷ್ಟು ಕಾಲ ನ್ಯಾಯವಾದೀತು? ಆಶ್ರಿತ ಸಂಸ್ಥಾನಗಳ ಪ್ರಶ್ನೆಯೆಂಬುದು ಬರೇ ಆಯಾಯ ಸಂಸ್ಥಾನಗಳಿಗನ್ವಯಿಸುವ ಪ್ರಶ್ನೆಯೆಂದು ಗಣಿಸುವುದು ತಪ್ಪು, ಇದು ಸಮಗ್ರ ಹಿಂದೂದೇಶದ ಪ್ರಾಮುಖ್ಯ ವಿಚಾರಗಳಲ್ಲೊಂದಾಗಿರುವುದು ಆದುದರಿಂದ ಇಂಥಾ ಅತ್ಯಾಚಾರ, ಅನ್ಯಾಯಗಳನ್ನು ಎಂಡಿಸಿ, ಪ್ರಜೆಗಳಿಗೆ ಅವರ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ನೆರವಾಗುವುದು ದೇಶದ ಮುಂದಿರುವ ಕಾರ್ಯವಾಗಿದೆ.

ದೇಶದ ಹಲವು ಮುಖಂಡರು ಈ ಆಶ್ರಿತ ಸಂಸ್ಥಾನಗಳ ಸಮಸ್ಯೆಯನ್ನು ಬಿಡಿಸುವ ಕುರಿತು ಹಲವು ಸಲಹೆಸೂಚನೆಗಳನ್ನಿತ್ತಿರುವರು. ಜವಾಹರಲಾಲರು ಹೇಳಿರುವಂತೆ, ಆರ್ಥಿಕ ಸ್ವಾತಂತ್ರ್ಯವಿಲ್ಲದೆ, ಪ್ರಜೆಗಳ ಪ್ರಗತಿಗೆ ಕಂಟಕಮಯವಾದ, ಸಣ್ಣ ಪುಟ್ಟ ನೂರಾರು ಸಂಸ್ಥಾನಗಳು ಬೇಗನೇ ಲೋಪಹೊಂದಿ, ಬೇರೆ ಸಂಸ್ಥಾನಗಳೊಂದಿಗೆ ಸೇರುವಂತಾಗುವುದು ಅಗತ್ಯ ಮತ್ತು ಅಂಥಾ ಸಂಸ್ಥಾನಾಧೀಶರಿಗೆ ಯುಕ್ತವರ್ಷಾಸನ ಕೊಟ್ಟು, ಬಾಳುವಂತೆ ಬಿಡಬೇಕು, ಇನ್ನು ದೊಡ್ಡ ಸಂಸ್ಥಾನಗಳು ಪ್ರಜಾಜವಾಬ್ದಾರಿ ಆಡಳಿತೆಯುಳ್ಳವುಗಳಾಗಿ, ಉಳಿಯುವಂತಾಗಬಹುದು; ಇಂಥಾ ಸಂಸ್ಥಾನಗಳನ್ನು ಅಳಿಸಿಬಿಡುವ, ಅಥವಾ ಗಾಂಧಿಜಿಯವರ ಸಲಹೆಯಂತೆ, ರಾಜ್ಯರುಗಳನ್ನು ಟ್ರಸ್ಟಿಗಳನ್ನಾಗಿ ಮಾಡಿ, ರಾಜಾಡಳಿತವನ್ನು ಪ್ರಜಾಪ್ರಾತಿನಿಧ್ಯಮಂಡಲಕ್ಕೆ ಒಪ್ಪಿಸಿಬಿಡುವ ದಾರಿಯೊಂದೇ ಉಳಿದಿರುವುದು. ಇವನ್ನುಳಿದ ಬೇರಾವ ಮಧ್ಯವರ್ತಿಯ ದಾರಿಯಿರುವಂತೆ ತೋರುವುದಿಲ್ಲ

ಆಶ್ರಿತ ರಾಜರುಗಳಿಗೀಗ ಸಂಧಿಕಾಲ. ಬ್ರಿಟಿಷ ಸಾಮ್ರಾಜ್ಯದಂಥಾ ಮಹಾಶಕ್ತಿಯು ಕೊಂಗ್ರೆಸಿಗೀಗ ತಲೆ ಬಗ್ಗಿಸದ ವಿನಾ ಬೇರೆ ದಾರಿಯಿರದೆಂದು ಒಪ್ಪಿಕೊಂಡಿರುವುದೆಂದ ಮೇಲೆ, ಆಶ್ರಿತ ಸಂಸ್ಥಾನಾಧೀಶರು ಇನ್ನೆಷ್ಟು ಕಾಲ ಪ್ರಜೆಗಳನ್ನಿದಿರಿಸಿ ಬಾಳಬಹುದೆಂಬುದು ಯೋಚಿಸತಕ್ಕ ವಿಷಯ. ಕಾಲವು ಪರಿಪಕ್ವವಾಗಿ, ಆಶ್ರಿತ ಸಂಸ್ಥಾನಾಧೀಶರು, ತಮ್ಮ ತಪ್ಪನ್ನು ತಾವೇ ಅರಿತುಕೊಂಡು, ಕಾಂಗ್ರೆಸ್ ಮುಖಂಡರ ಸಲಹೆ ಸೂಚನೆಯಲ್ಲಿ ವಿಶ್ವಾಸರಿಸಿ, ವಿವೇಕದಿಂದ ನಡೆದರೆ ಲೇಸು. ಬದಲಾಗಿ, ತಮ್ಮ ಅಧಿಕಾರದ ದರ್ಪದ ನೆಲೆಯನ್ನರಿಯದೆ, ಅವಿವೇಕದಿಂದ ಪ್ರಜೆಗಳ ಅಧಿಕಾರವನ್ನು ಇನ್ನೂ ನಿರ್ಬಂಧಿಸುವುದನ್ನು ಬಿಡಲಾರದ ಹೋದರೆ, ತಮ್ಮ ಹಾನಿಯನ್ನು ತಾವೇ ತಂದುಕೊಳ್ಳುವರು ಸಂಸ್ಥಾನವು ಪ್ರಜೆಗಳ ಸೊತ್ತಾಗಿರುವುದೆಂಬುದನ್ನು ಭಾವಿಸಿಕೊಳ್ಳಬೇಕಲ್ಲದೆ, ತಮ್ಮ ಪ್ರಭುತ್ವವು ಅಳಿದು ಹೋಗಲರಕ್ಕದ್ದಲ್ಲವೆಂಬ ಭ್ರಮೆಯು ದೂರವಾಗಬೇಕಾಗಿದೆ. ಅಲ್ಲವಾದರೆ, ಅವ ತಮ್ಮ ಇರುವಿಕೆಯನ್ನು ಮಾತ್ರವಲ್ಲ, ತಮ್ಮ ವಂಶದ ಮೇಲ್ಮೆಯನ್ನು ಸಹಾ ಕಳಕೊಳ್ಳುವ ದುರ್ವಿಧಿಗೆ ಕಾಲಶಕ್ತಿಯೇ ಒಳಪಡಿಸಿ ಬಿಡುವುದು; ಯಾಕಂದರೆ, ರಾಜ್ಯದಲ್ಲಿ ಪ್ರಜಾಶಕ್ತಿಯನ್ನು ಇನ್ನಾವ ಶಕ್ತಿಯೂ ತಡೆಯಲಾರದೆಂಬುದು ಸತ್ಯ.

ಪೊಪ್ಯುಲರ್ ಇನ್ಸೂರೆನ್ಸ್ ಕೊ, ಲಿಮಿಟೆಡ್, ಮಂಗಳೂರು. ಇದರ ಮದ್ರಾಸು ಶಾಖೆಯ ಉದ್ಘಾಟನಾ ಸಮಾರಂಭ.

ಮದ್ರಾಸಿನಲ್ಲಿ ಈ ಕಂಪೆನಿಯ ಶಾಖೆಯನ್ನು ಕಳೆದ ತಾ. ೬ರಲ್ಲು 1೩೩, ಮೌಂಟ್ ರೋಡಿನಲ್ಲಿ, ತೆರೆಯಲಾಯಿತು. ರಾ. ಎ. ಶ್ರೀನಿವಾಸರಾವ್, ಬಿ ಎ. (Hons); ಬಿ. ಎಲ್., ಇವರು ಈ ಶಾಖೆಯ ಸೆಕ್ರೆಟರಿಗಳಾಗಿ ನೇಮಕಹೊಂದಿರುವರು.

ಈ ಶಾಖೆಯ ಉದ್ಘಾಟನಾ ಸಮಾರಂಭ ಕಾಲದಲ್ಲಿ ಕಂಪೆನಿಯ ಆಡಳಿತ ಮಂಡಳಿಯವರು, ರೋಯಪೇಟೆಯ, ವುಡ್ ಲೆಂಡ್ಸ್'ನಲ್ಲಿ ಅಧ್ಯ ನಾಗರಿಕರನ್ನು ಫಲಾಹಾರವಿತ್ತು ಸತ್ಕರಿಸಿದರು. ಈ ಸಂದರ್ಭದಲ್ಲಿ ಜಸ್ಟಿಸ್, ಕೆ. ಪಿ ಲಕ್ಷ್ಮಣರಾಯರು, ರಾ. ವಿ ಎಲ್. ಯತಿರಾಜ, ಬಾರ್-ಎಟ್-ಲಾ, ಪಬ್ಲಿಕ ಪ್ರೊಸೆಕ್ಯೂಟರ್. ಡಾ. ಕೇಶವ ಪೈ ಎಮ್. ಡಿ, ಬಿ ಪಿ ಇ, ಡಾ. ಯು ಎಲ್. ನಾರಾಯಣ ರಾವ್, ಅಲ್ಲದೆ, ಹಲವು ವಿಮಾ ಕಂಪೆನಿಗಳಿಂದ ಪ್ರಧಾನಾಧಿಕಾರಿಗಳೂ ಇತರ ಪ್ರಮುಖ ನಾಗರಿಕರೂ ಭಾಗವಹಿಸಿದ್ದರು.

ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ ರಾ. ಬಿ. ವಿಟ್ಠಲರಾಯರು, ಈ ಕಂಪೆನಿಯು ಸ್ಥಾಪಿತವಾದಂದಿನಿಂದ ಅದು ಹೇಗೆ ಅಭ್ಯುದಯದ ಹಾದಿಯಲ್ಲಿ ಮುಂದರಿಯುತ್ತಿದೆ ಮತ್ತು ಅದು ಇಂದು ಹೇಗೆ ಸುಭದ್ರವಾದ ಸ್ಥಾನವನ್ನು ಹೊಂದಿರುವುದು ಎಂಬುದನ್ನು ಸಂಕ್ಷೇಪವಾಗಿ ವಿವರಿಸಿ ಭಾಷಣವಿತ್ತರು ಅನಂತರ ಸಭಿಕರಲ್ಲಿ ಹಲವರು ಕಂಪೆನಿಯ ಏಳಿಗೆಗಾಗಿ ಅವಿಶ್ರಾಂತ ಶ್ರಮವಹಿಸಿ ಗೆಯ್ಯುತ್ತಿರುವ ಶ್ರೀ ವಿಟ್ಠಲರಾಯರ ಸಾಹಸೋದ್ಯಮಶೀಲತೆಯನ್ನು ಅಭಿನಂದಿಸಿ. ಸಂಸ್ಥೆಯ ಏಳಿಗೆಯನ್ನು ಹಾರೈಸಿ ಭಾಷಣವಿತ್ತರು. ಶಿಕ್ಷಿತರೂ, ಚತುರರೂ ಆದ ಶ್ರೀ. ಎ ಶ್ರೀನಿವಾಸರಾವ್, ಬಿ. ಎ. (Hons) ಬಿ ಎಲ್, ಇವರು ಈ ಶಾಖೆಯ ಸೆಕ್ರೆಟರಿಗಳಾಗಿ ನೇಮಕಹೊಂದಿರುವುದು ಕಂಪೆನಿಯ ಪ್ರಗತಿಯ ದೃಷ್ಟಿಯಿಂದ ಶ್ರೇಯಸ್ಕರವೆಂದು ಆಡಳಿತ ಮಂಡಲವನ್ನು ಪ್ರಶಂಸಿದರು.

ಸಿ. ರಾಜಗೋಪಾಲಾಚಾರ್ಯರಿಗೆ ತಮಿಳಿನಲ್ಲಿ ಪ್ರೇಮವಿಲ್ಲವೇ?

ಶ್ರೀಮತಿ ಸರೋಜಿನಿ ದೇವಿಯರ ವಚನಗಳು ಕೂಡಾ ಕವಿತೆಯಂತೆ. ರಾಷ್ಟ್ರಭಾಷಾ ಪ್ರಚಾರ ಸಂಘದ ಮಾನಪತ್ರಕ್ಕೆ ಉತ್ತರವೀಯುತ್ತಾ ಸರೋಜಿನಿಯರು ಹಿಂದೂಸ್ಥಾನಿಯ ಪ್ರಾಮುಖ್ಯತೆಯನ್ನು ಮನಗಾಣಿಸಿದರು. ಹಿಂದೂಸ್ಥಾನಿಯು ಪ್ರಚಾರದಿಂದ ಯಾವ ಭಾಷೆಗೂ ತೊಂದರೆಯಾಗದೆಂದರು. "ಒರಿಸ್ಸಾದವರಿಗೆ ಒರಿಯಾ ಉತ್ತಮ ಭಾಷೆ". ಬಂಗಾಳಿಗಳಿಗೆ ಬಂಗಾಳಿಗಿಂತ ಮೇಲಾದಭಾಷೆಯಿಲ್ಲವೆನಿಸುತ್ತದೆ. ಹಿಂದಿಯನ್ನು ತನ್ನ ಪ್ರಾಂತ್ಯದಲ್ಲಿ ಪ್ರಸಾರ ಮಾಡಬೇಕೆಂದಿರುವ ರಾಜಗೋಪಾಲಾಚಾರಿಯರ ಮುಂದೆ ತಮಿಳೆಂಬುದು ಕಾಡು ಜನರ ಭಾಷೆಯೆಂದು ಹೇಳಿದರೆ ಅವರು ತಲೆಯೊಡೆಯಲು ಮುಂದಾಗುವರು. ನನ್ನನ್ನೇ ಅತಿಥಿಯಾಗಿ ಕರೆದಿರುವ ಡಾ| ಪಟ್ಟಾಭಿ ಸೀತಾರಾಮಯ್ಯ ಮತ್ತು ರೆಡ್ಡಿಯವರ ಮುಂದೆ ಹಿಂದೂಸ್ಥಾನಿಗಾಗಿ ತೆಲುಗನ್ನು ಬಿಟ್ಟುಬಿಡಬೇಕೆಂದರೆ ಅವರು ನಿಮ್ಮನ್ನು ತುಂಡು ತುಂಡು ಮಾಡಬಹುದು" ಎಂದರು.

ನೋಟೀಸು

ಪುತ್ತೂರು
ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ—
ಕ್ರಮ ಅಪ್ಲಿಕೇಶನ್ ನಂಬ್ರ 547/1938
ಕ್ರಮ ನಂಬ್ರ 481/1936

ಅರ್ಜಿದಾರರು—ವಿ. ಸ್ವಾಮಿನ್ನ ಪೂಜ ಮದ್ದಾಸು.
ಎದ್ರಿಗಳು—೩ಂ ಸಣ್ಣ ಹೆಂಗಸು ಆಲಂಗಾರು ಸಬ್ಬಂಡ ಭಟ್ರ ವಿಧವೆ ಮಂಂತಪ್ಪ ಶ್ರೀ ಮುಳಿಯಾರ ಗ್ರಾಮ ಕಾಸರಗೋಡು ತಾಲ್ಲೂಕು.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ಮೇಲ್ಕಂಡ ಕ್ರಮ ನಂಬ್ರ 481/1936ನೇ ಡಿಕ್ರಿ ವಿಧಿಪ್ರಕಾರ ಸರ್ಕಾರಕ್ಕೆ ಬರು ಕೋರ್ಟು ಫೀಸು ವಸೂಲಿಗೆ ಎದ್ರಿಳು ಪಡೆದ ಸದ್ರಿ O.S 481/36ನ್ನು ಡಿಕ್ರಿ ಪಕ್ಷನ್ನು ಅರ್ಜಿದಾರರ ಜಪ್ತು ಮಾಡ್ತಿ ದ್ದಿರಿಂದ ಆ ಕುರಿತು ಎದ್ರಿಳ ಆಕ್ಷೇಪವಿದ್ದಲ್ಲಿ ತಾ. 19-12-1938ನೇ ದಿವಸ ಹಗಲು ಹತ್ತು ಘಂಟೆಗೆ ತಪ್ಪದೇ ಸದ್ರಿ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸತಕ್ಕದ್ದು ತಪ್ಪಿದ್ದ ಏಕಪಕ್ಷವಾಗಿ ತೀರ್ಮಾನವಾಗುವುದು ಅಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಕೊಡಲ್ಪಟ್ಟಾಗಿರುತ್ತದೆ.

(By order of the court)

Puttur S. K. 12-12-1938	B Achyuta Baliga, VAKIL FOR PETITIONER

ತಿರುವಾಂಕೂರು ಸಂಸ್ಥಾನದಲ್ಲಿ ಸ್ತ್ರೀಪೋಲೀಸರು — ಕಡಪಾ ಬೋ

ಅಕ್ಕನಿಗಾಗಿ ತಂಗಿ ಮದುವೆಯ ತಂತ್ರ ಹೂಡಿದಳು

ಘತಿಮ ನೇರ್ಘುಪಟಳೆಂಬವಳ ಅಕ್ಕ ಗೂಸುಬೆನ್ನಿನವಳು ಅವಳಿಗೊಬ್ಬ ಒಳ್ಳೆಯ ಗಂಡನನ್ನು ದೊರಕಿಸಲು ಸಲ್ಘುಪಟಳ ಯತ್ನ ತಿಪಳು ಈಶನನೆಂಬವನನ್ನು ಮದುವೆಯಾಗಲೊಪ್ಪಿದಳು ಮದುವೆ ರಿಜಿಸ್ಟ್ರಿಗೆ ಹೋದಾಗ ಅವಳು ತನ್ನ ಹೆಸರು ಸಲ್ಘರ್ ಎಂದು ಬರೆದಳು. ಈಶನಿಗೆ ಘತಿಮಳ ಚೆಲುರೂಪದಿಂದ ತುಂಬಾ ಆನಂದ ಆ ಪರಿ ರಾತ್ರಿ ಸಜ್ಜೆರ್ ಕೋಣೆಯಲ್ಲಿ ಕಣ್ಣು ತೆರೆಯುವಾಗ ಘತಿಮಳ ಬದಲಾಗಿ ಅವಳಕ್ಕ ಸಜ್ಜರ್ ಎಂತ ಒಂದಳು ಮಾತಬಲ್ಲದೇ? ವಿವಾಹ ಪಟ್ಟಿಯಕ್ಕೆ ಮನವಿ ಮಾಡಿದ ನ್ಯಾಯಾಧಿಪತಿಗಳು ಬಹು ಗೊಂದಲಗಟ್ಟರು ಕೊನಗ ಹಡ್ಡಳಗೆ ಜೀವನಾಂಶ ಕೊಡಿಸಿದರು

ಹದಿನಾರು ವರ್ಷ ಪ್ರಾಯದ ಒಳ್ಳೆಯ ಸಂಸಾರಿ

ಒಬ್ಬ ತರುಣನು ಒಂದು ಬೈಸಿಕಲ್ಲನ್ನು ಕದ್ದ ಅಪರಾಧದಿಂದ ಕೋರ್ಟಿನಲ್ಲಿ ವಿಚಾರಣೆಗೊಳಪಟ್ಟಿದ್ದನು ಈ ಸಮಯದಲ್ಲಿ ನ್ಯಾಯಸ್ಥಾನದ ದ್ವಾರದಲ್ಲಿ ಯುವತಿಯೊಬ್ಬಳು ಅಳುತ್ತಾ ನಿಂತುಕೊಂಡಿದ್ದಳು, ಅವಳು ಮೇಜಿಸ್ಟ್ರೇಟರಲ್ಲಿ ಅವನು ತನ್ನ ಗಂಡನ, ಪ್ರಾಯದಲ್ಲಿ ಸಣ್ಣವ ಆದರೂ ಒಳ್ಳೆಯ ಗಂಡ, ನನ್ನನ್ನು ಮತ್ತು ಮಗುವನ್ನು ಪ್ರೀತಿಸುವನು ದಯೆಯಿಟ್ಟು ಅವನಿಗೆ ಮಾಫಿ ಮಾಡಿರಿ ಎಂದು ವಿನಂತಿಸಿಕೊಂಡಳು. ಕೊನೆಗೆ ಮೇಜಿಸ್ಟ್ರೇಟರು ಅವನನ್ನು ಎಚ್ಚರಿಸಿ, ಬಿಟ್ಟುಬಿಟ್ಟರು

ಅವನ ಪ್ರಾಯ ಹದಿನಾರು ವರ್ಷ, ಅವನ ಪತ್ನಿಯ ಪ್ರಾಯ 19 ವರ್ಷ ಮಗುವು ಕಲವು ವಾರಗಳ ಮೊದಲು ಹುಟ್ಟಿರುವುದು ಹೆಚ್ಚು ಸಂಪಾದನೆಯ ಉದ್ಯೋಗವಿಲ್ಲ. ತಾನು ಉದ್ಯೋಗ ಹುಡುಕಲಿಕ್ಕಾಗಿ ಸೈಕಲು ಹತ್ತಿ ಹೋದಯಿಂದ, ಅವನ ಅಂಬೋಣ.

ತಿರುವಾಂಕೂರು ಸಂಸ್ಥಾನದಲ್ಲಿ ಸ್ತ್ರೀ ಪೋಲೀಸರು

ತಿರುವಾಂಕೂರು ಸರಕಾರವು ಹನ್ನೆರಡು ಮಂದಿ ಸ್ತ್ರೀಯರನ್ನು ಪೋಲೀಸರನ್ನಾಗಿ ಆರಿಸಿ, ಪೋಲೀಸು ಹೆಡ್ ಕ್ವಾಟರ್ಸ್ಸಲ್ಲಿರಿಸುವುದಂತೂ, ಈ ಯೋಜನೆಯು ಜಯಶೀಲವಾದಲ್ಲಿ ಮುಂದ ಹೆಚ್ಚು ಹೆಚ್ಚು ಸ್ತ್ರೀ ಪೋಲೀಸರನ್ನು ನೇಮಕಮಾಡುವುದಾಗಿಯೂ ವಾರ್ತೆ.

ಮದರಾಸು ಸರಕಾರದ ಧನಸಹಾಯ

ಸುಳಿಗಾಳಿಯ ಹಾವಳಿಗೆ ಬಲಿಬಿದ್ದ ಗೋದಾವರಿ ಮತ್ತು ಕೃಷ್ಣಾ ಜಿಲ್ಲೆಗಳ ಜನತೆಗೆ ನೆರವಾಗಲು ಆ ಜಿಲ್ಲೆಗಳ ಕಲೆಕ್ಟರುಗಳ ವಶಕ್ಕೆ ರೂ. 10,000ಗಳಂತ ಕೊಟ್ಟಿರುವುದಾಗಿ ತಿಳಿದುಬರುತ್ತದೆ. ಪೂರ್ವಗೋದಾವರಿಗೆ ರೂ 4000 ಕೊಡಲಾಗಿದೆಯೆಂದೂ ತಿಳಿಯುತ್ತದೆ

ಕಡಪಾಬೋರ್ಡಿಗೆ ಶ್ರೀ ಅಧ್ಯಕ್ಷರು

ಕಡಪಾ ಜಿಲ್ಲಾಬೋರ್ಡಿನ ಅಧ್ಯಕ್ಷರಾಗಿ ಕಾಂಗ್ರೆಸು ಸದಸ್ಯ ಶ್ರೀಪತಿ ರಾಮಸುಬ್ಬಮ್ಮನವರು ಆರಿಸಲ್ಪಟ್ಟಿರುವರು ಹಲವರು ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಿರುವರು

ಮೈಸೂರು ಹೈಸ್ಕೂಲುಗಳ ...

ಮೈಸೂರು ಹೈಸ್ಕೂಲುಗಳ ನಾಲ್ಕನೇ, ಐದನೇ, ಮತ್ತು ಆರನೇ ಫಾರಮ್‌ಗಳನ್ನು ಇನ್ನು ಮುಂದೆ ಹೈಸ್ಕೂಲಿನ ಫಸ್ಟ್ ಇಯರ್, ಸೆಕೆಂಡ್ ಇಯರ್ ಮತ್ತು ಥರ್ಡ್ ಇಯರ್ ತರಗತಿಗಳೆಂದು ಕರೆಯಲ್ಪಡತಕ್ಕದ್ದೆಂದ ಸರಕಾರದವರು ನಿರ್ಣಯಕ್ಕೆ ಬಂದಿರುವರು

ಬೊಂಬಾಯಿ ಪ್ರಧಾನ ಖೇರರ ಸಂಚಾರ

ಬೊಂಬಾಯಿ ಮುಖ್ಯಮಂತ್ರಿಗಳಾದ ಶ್ರೀ ಬಿ ಜಿ. ಖೇರರು ಬೆಳಗಾಂ, ಧಾರವಾಡ, ಹುಬ್ಬಳ್ಳಿಗಳಲ್ಲಿ ಸಂಚರಿಸುತ್ತಲಿದ್ದಾರೆ. ಅಲ್ಲಲ್ಲಿ ಪ್ರಚಂಡ ಸ್ವಾಗತವು ದೊರೆಯುತ್ತಿರುವುದು. ಕರ್ನಾಟಕ ಪ್ರಾಂತ ನಿರ್ಮಾಣದಲ್ಲಿ ಜನರ ಆಕಾಂಕ್ಷೆಯನ್ನು ತಿಳಿದು, ಈ ವಿಷಯ ಸರಕಾರವು ಪ್ರಯತ್ನಿಸುವುದೆಂದು ಉತ್ತರವಿತ್ತರು.

ಮೈಸೂರು ದೇಶದ ವಿದ್ಯುತ್ ವ್ಯವಸ್ಥೆ

ಮೈಸೂರು ಸಂಸ್ಥಾನದ ಇಲಕ್ಟ್ರಿಕ್ ಸೌಕರ್ಯ ವ್ಯವಸ್ಥೆಯಿಂದ 1936ರಲ್ಲಿ 55 ಲಕ್ಷ ರೂಪಾಯಿ ವರಮಾನವಾಯಿತೆಂದು ವರದಿಯಲ್ಲಿ ಸೂಚಿತವಾಗಿರುವುದು. 162 ಊರುಗಳಿಗೆ ವಿದ್ಯುತ್ ಸೌಕರ್ಯವು ದೊರೆತಿರುವುದು 120002 ಬೈಟುಗಳು ಇದ್ದುವು ಉತ್ಪತ್ತಿಯಾದ ಯೂನಿಟ್ಟುಗಳು 240,003,000 ಇದರ ತಯಾರಿಕೆಗ ಬೇಕಾದ ಕೆಲವು ಕಾರ್ಖಾನೆಗಳು ಸಂಸ್ಥಾನದಲ್ಲಿವೆ.

ಸುಭ ರೀತಿಗಳು

ದೇಹವು ಚಲನಯುಕ್ತ ದೇವ ಮಂದಿರವಂದು ಭಾವಿಸು, ನಿನ್ನ ಕಛೇರಿ ಅಥವಾ ಕಾರ್ಯಗೃಹವು ದೊಡ್ಡ ದೇವಾಲಯ ಅಥವಾ ಬೃಂದಾವನವೂ, ಮತ್ತು ಮಾಡುವ ಕ್ರಿಯೆಯು ದೇವರಿಗೊಪ್ಪಿಸುವವುಗಳೆಂದೂ ಪರಿಗಣಿಸು. ಕಲಸವು ಆರಾಧನೆಯಾಗಿದ್ದೆ, ಶುದ್ಧ ರೀತಿಯಲ್ಲಿ ಮಾಡಿದರ ಕಾರ್ಯವೆಂಬುದೇ ಧ್ಯಾನವು ಕರ್ಮವನ್ನು ಕರ್ಮಕ್ಕಾಗಿ, ಉದ್ದೇಶರಹಿತನಾಗಿ ನಿರ್ವಹಿಸು ಈ ಜಗತ್ತು ದೇವರಿಂದ ವ್ಯಾಪಿತವಾದುದು. ನಿನ್ನ ಮಡದಿ ಮಕ್ಕಳು ತಂದೆ ಮ ಇನ್ನೆಲ್ಲಾ ಬಂಧುಗಳು ದೇವರ ಮಕ್ಕಳು ಅಥವಾ ಪ್ರತಿಬಿಂಬವೆಂದು ತಿಳಿದುಕೋ ಜಗತ್ತಿನಲ್ಲಿರುವ ಎಲ್ಲಾ ಜೀವಿಗಳು—ಇರುವೆಗಳು, ನಾಯಿಗಳು, ಆನೆಗಳು, ಹುಲಿಗಳು, ಮನುಷ್ಯರು, ಹಿಂದುಗಳು ಮತ್ತು ಕ್ರೈಸ್ತರು—ನಿನಗಿಂತ ಭಿನ್ನರಾಗಿಲ್ಲವೆಂಬ ಯಥಾರ್ಥ ಜ್ಞಾನವನ್ನು ಸಾಕ್ಷಾತ್ಕಾರ ಮಾಡಿಕೋ. ಹೇಳುವುದರಲ್ಲ ಮತ್ತು ವಿಪ್ರದುರ್ಭಾವದಲ್ಲಿ ಹೆಚ್ಚಿನ ಭಿನ್ನತೆಯಿಲ್ಲ. ಎಲ್ಲಾ ಆಕಾರಗಳು ದೇವರನ್ನು ಅಂದರೆ ಸಗುಣಬ್ರಹ್ಮನನ್ನು ಹೊಂದಿಕೊಂಡಿರುವವುಗಳಾಗಿವೆ.

ಕರ್ಮಯೋಗಿ ಸ್ವಾಮಿ ವಿರಜಾನಂದರು.

ಶ್ರೀ ರಾಮಕೃಷ್ಣ ಮಿಶನಿನ ಹೊಸ ಪ್ರೆಸಿಡೆಂಟರು ಸ್ವಾಮಿ ವಿರಜಾನಂದರು. ಇವರು ತನ್ನ ಹದಿನೇಳನೆಯ ವರ್ಷದಲ್ಲಿ ಅಂದರೆ 1891ರಲ್ಲಿ ಪ್ರಪಂಚವನ್ನು ತ್ಯಜಿಸಿ, ಬೆಂಗಳೂರಿನ ರಾಮಕೃಷ್ಣ ಸಂಸ್ಥೆಯನ್ನು ಸೇರಿದರು ಪರಮಹಂಸರ ಸ್ವಯಂ ಶಿಷ್ಯರೆನಿಸಿದ ಹಲವು ಸನ್ಯಾಸಿಗಳೊಂದಿಗಿರಾಗಿರುವ ಭಾಗ್ಯವು ಇವರಿಗೆ ಲಭಿಸಿದ್ದಿತು.

1897ನೇ ಇಸವಿಯಲ್ಲಿ ಸ್ವಾಮಿ ವಿವೇಕಾನಂದರು ಪಶ್ಚಿಮ ದೇಶಗಳಿಂದ ಮರಳಿದ ಕಾಲದಲ್ಲಿ ವಿರಜಾನಂದರಿಗೆ ಅವರನ್ನು ಸೇವಿಸುವ ಭಾಗ್ಯವು ತಾನಾಗಿ ಲಭಿಸಿತು ಅದೇ ವರ್ಷ ಅವರು ಸನ್ಯಾಸ ದೀಕ್ಷೆ ಪಡೆದರು. ಪೂರ್ವ ಬಂಗಾಳಕ್ಕೆ ಪ್ರಚಾರ ಕಾರ್ಯಕ್ಕೆ ತೆರಳಿದರು. ಉಳಿದ ಹಲವು ವರ್ಷಗಳಲ್ಲಿ ಅವರು ಉತ್ತರ ಬಂಗಾಳದಲ್ಲಿ ಬೇರೆ ಬೇರೆ ಕಡೆ ಸಂಚರಿಸಿದರು. ಈ ಕಾಲಗಳಲ್ಲಿ ಹಲಸಮಯ ಅಲ್ಮೋರ ಜಿಲ್ಲೆಯ ಮಾಯಾವತಿಯಲ್ಲಿಯ ಅದ್ವೈತಾಶ್ರಮದಲ್ಲಿದ್ದರು. 1906ರಲ್ಲಿ ಅವರು ಬೇಲೂರು ಮಠದ ಟ್ರಸ್ಟಿಕಳಾಗಿ ನೇಮಕ ಹೊಂದಿದರು. ಅದೇ ವರ್ಷದಲ್ಲಿ ಮಾಯಾವತಿ ಆಶ್ರಮದ ಮೇಲ್ವಿಚಾರಣೆಯೂ ಇವರಿಗೆ ಒಪ್ಪಿಸಲ್ಪಟ್ಟಿತು

1911ರಲ್ಲಿ ಅವರು ಶ್ಯಾಮಲ ತಲದಲ್ಲಿ ಸುಂದರ ಪ್ರದೇಶದಲ್ಲಿ ವಿವೇಕಾನಂದ ಆಶ್ರಮವನ್ನು ಸ್ಥಾಪಿಸಿದರು ಈ ಪ್ರಶಾಂತ ವಾತಾವರಣದಲ್ಲಿ ಅವರು ಹಲವು ವರ್ಷಕಾಲ ಧ್ಯಾನಮಗ್ನರಾಗಿ ಜೀವಿಸುತ್ತಿದ್ದರು. 1934ರಲ್ಲಿ ಬೇಲೂರು ಮಠದ ಜಾಗತ್ರ ಬಂದರು ಅಂದಿನಿಂದ ರಾಮಕೃಷ್ಣ ಮಠದ ಮತ್ತು ಮಿಶನಿನ ಕಾರ್ಯದಲ್ಲಿ ವಿಶೇಷ ಭಾಗವಹಿಸತೊಡಗಿದರು. 1934ರಲ್ಲಿ ಅದರ ಇಲ್ಲಿಯ ಕಾರ್ಯದರ್ಶಿಯಾಗಿ ನೇಮಕ ಹೊಂದಿದರು ಕಳೆದ ಮೇ ತಿಂಗಳಲ್ಲಿ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ವಿರಜಾನಂದರು ಆತ್ಮಸಿದ್ಧಿಯುಳ್ಳವರು, ಕರ್ಮಯೋಗಿಗಳು ಅವರ ಪರಿಶುದ್ಧತೆ, ಕಾರ್ಯವಿವೇಕ, ಸೇವಾಧೈರ್ಯಗಳು ನಿಜವಾಗಿ ಆದರ್ಶಪ್ರಾಯವಾದುವುಗಳು. ಪಾವನ ಸಂಘವು ಇವರ ಆಡಳಿತೆಯಿಂದ ಸುಸೂತ್ರವಾಗಿ ನಡೆಯುವುದರಲ್ಲಿ ಅನುಮಾನವಿಲ್ಲ.

ರಷ್ಯಾ ಟರ್ಕಿಗಳೊಳಗೆ ಪರಸ್ಪರ ಮೈತ್ರಿ

ರಷ್ಯದ ವಿದೇಶಾಂಗ ಇಲಾಖೆಯ ಒಂಡನ್ ಸಕ್ರೆಟರಿಯವರಾದ ಎಂ. ಪೊಟೆಂಕಿನ್ ರವರು ಟರ್ಕಿಯ ನವ ಅಧ್ಯಕ್ಷ ಎಂ. ಇಸ್ಮೆಟ್ ಇನ್ಯೂನುರವರನ್ನು ಸಂದರ್ಶಿಸಿರುವರು. ರಷ್ಯಾ-ಟರ್ಕಿಗಳೊಳಗೆ ಪರಸ್ಪರ ಒಪ್ಪಂದವಾಗುವ ಸಂಭವವಿದೆ ಅನಂತರ ರಷ್ಯ, ರುಮೇನಿಯಾ, ಬಲ್ಗೇರಿಯಾ, ಪೋಲೆಂಡ್, ಮತ್ತು ಟರ್ಕಿ ಈ ರಾಷ್ಟ್ರಗಳೆಲ್ಲಾ ಒಟ್ಟಾಗಿ ಆತ್ಮರಕ್ಷಣೆಯ ಕಾರ್ಯದಲ್ಲಿ ಮಗ್ನವಾಗುವ ಸಂಭವವಿದೆ

ರಷ್ಯಾ ಟರ್ಕಿಗಳೊಳಗೆ — ಪರಸ್ಪರ ಮೈತ್ರಿ —

ಸಮಾಜಸೇವೆಯಲ್ಲಿ ವಿದ್ಯಾರ್ಥಿಗಳು ಉತ್ಸಾಹಯುಕ್ತ ಭಾಗವಹಿಸಬೇಕು

ಬೆಂಗಳೂರಲ್ಲಿ ಯೂನಿವರ್ಸಿಟಿ ಯೂನಿಯನಿನ ಆಶ್ರಯದಲ್ಲಿ ಅಮೇರಿಕಾ ವಿದ್ಯಾನಿಲಯದ ಪ್ರೊಫೆಸರ್ ವಿ. ಎಸ್ ರಾಲ್ಫ್ ಹಾರ್ಲೋರವರು 'ಸಮಾಜಸೇವೆಗಳಲ್ಲಿ ವಿದ್ಯಾರ್ಥಿಗಳ ಕಾರ್ಯ'ವೆಂಬುದರ ಕುರಿತು ಭಾಷಣವಿತ್ತರು. ವಿದ್ಯಾರ್ಥಿಗಳು ಈಗೀಗ ಸಮಾಜದ ಸೇವೆಯ ರೀತಿಯನ್ನು ಅರಿತುಕೊಳ್ಳುತ್ತಿರುವುದು ಶ್ರೇಯಸ್ಕರ ಅಮೇರಿಕಾದಲ್ಲಿ ಶಿಕ್ಷಣಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಸಮಾಜ ಸೇವೆಯ ಕುರಿತು ಸಾಕಷ್ಟು ಅನುಭವ ಕೊಡಲಾಗುವುದು ವಿದ್ಯಾರ್ಥಿಗಳು ಹಳ್ಳಿಗರ ಪರಿಸ್ಥಿತಿಯನ್ನರಿತುಕೊಳ್ಳಬೇಕು. ಅವರ ಸಂಪರ್ಕ ಬೆಳಸಬೇಕು. ಅವರ ಏಳ್ಗೆಗಾಗಿ ದುಡಿಯಬೇಕು. ಜನತೆಯಲ್ಲಿ ಅಜ್ಞಾನ, ಅಂಧಶ್ರದ್ಧೆ ತೊಲಗುವಂತೆ, ನೆರವಾಗಬೇಕು. ತಿಳುವಳಿಕೆಯು ಜನಸಾಮಾನ್ಯರಲ್ಲಿ ಬೆಳೆಯುವಂತೆ ವಿದ್ಯಾರ್ಥಿಗಳು ಸಹಕರಿಸುವುದು ಮಹಾಪಾವನ ಕಾರ್ಯವು ಎಂದು ಅಮೋಘವಾದ ಬೋಧಪರ ಭಾಷಣವನ್ನಿತ್ತರು

ಅವಿಶ್ವಾಸದ ಠರಾವು ಬಿದ್ದು ಹೋಯಿತು

ಅಸ್ಸಾಂ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಶ್ರೀ. ಬಾರ್ದೋಲೈ ಮಂತ್ರಿಮಂಡಲದ ಮೇಲೆ ಮಿ ಅಬ್ದುಲ್ ಹುಸೇನ್ ಚೌಧರಿಯವರು ಅವಿಶ್ವಾಸದ ಠರಾವನ್ನು ಚರ್ಚೆಗೆ ತಂದಿದ್ದರು ಠರಾವಿಗೆ 30 ಮಂದಿ ಮತವಿತ್ತರು. ಆದರೆ, ಅದನ್ನು 59 ಮಂದಿ ವಿರೋಧಿಸಿದರು. ಹೀಗಾಗಿ ಈ ಅವಿಶ್ವಾಸದ ಠರಾವು ಬಿದ್ದುಹೋಯಿತು

ದಿವಂಗತ ಬ್ರಿಜೇಂದ್ರನಾಥ ಶೀಲರು

ದಿವಂಗತ ಶೀಲರು 1864ರಲ್ಲಿ ಜನಿಸಿದರು ಅವರ ಮರಣಕಾಲದಲ್ಲಿ ಅವರ ಪ್ರಾಯವು 74 ವರ್ಷವಾಗಿದ್ದಿತು ಅವರು ಎಮ್ ಎ ಡಿಗ್ರಿ ಪಡೆದ ನಂತರ ಕೆಲವು ಕೊಲೇಜುಗಳಲ್ಲಿ ಮಹೋಪಾಧ್ಯಾಯರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅನಂತರ ಕೊಚ್ಚಿ ಬಿಹಾರ ಕೊಲೇಜಿನ ಪ್ರಿನ್ಸಿಪಾಲರಾದರು ನಾಗಪುರದ ಮೋರಿಸ್ ಕೊಲೇಜಿನಲ್ಲಿ ಸಹಾ ಪ್ರಿನ್ಸಿಪಾಲರಾಗಿದ್ದರು. 1920ರಿಂದ 1930ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯ ವೈಸ್ ಚೆನ್ಸಲರಾಗಿದ್ದರು ಮುಂಬಾಯಿ ಯೂನಿವರ್ಸಿಟಿಯಲ್ಲಿ ಕನ್ವಕೇಶನ್ ಭಾಷಣ ಕೊಟ್ಟಿದ್ದರು. ಅಲ್ಲದೆ ಪ್ರಾಚೀನ ಸಂಸ್ಕೃತಿಯ ಅಂತರರಾಷ್ಟ್ರೀಯ ಸಮ್ಮೇಳನಕ್ಕೂ ಅವರೊಬ್ಬ ಪ್ರತಿನಿಧಿಯಾಗಿ ರೋಮಿಗೆ ಹೋಗಿದ್ದರು ಅವರು ಮೈಸೂರು ನ್ಯಾಯವಿಧಾಯಕ ಸಭೆಯ ವಿಶೇಷ ಸದಸ್ಯರೂ ಆಗಿದ್ದರು. ಅವರು ಕೊನೆಯ ಸಾರ್ವಜನಿಕ ಸಂಸ್ಥೆಯಲ್ಲಿ ಭಾಗಿಯಾದುದೆಂದರೆ 1936ರಲ್ಲಿ ಜರಗಿದ ಶ್ರೀರಾಮಕೃಷ್ಣ ಪರಮಹಂಸರ ಶತಮಾನೋತ್ಸವ ಸಮಾರಂಭದಲ್ಲಿ ಬ್ರಿಜೇಂದ್ರರ ಮರಣದಿಂದ ಭಾರತಮಾತೆಯು ಅಂತರರಾಷ್ಟ್ರೀಯ ಕೀರ್ತಿಯನ್ನು ಗಳಿಸಿದ್ದ ಜಗತ್ತಿನ ಮಹಾತತ್ವವೇತ್ತರೂ, ಉನ್ನತ ಕಲಾವಿದರೂ ಆದವರಲ್ಲೊಬ್ಬನನ್ನು ಕಳೆದುಕೊಂಡಂತಾಯಿತು.

ತಲೆಯಲ್ಲಿ ಗಾಯನಪೆಟ್ಟಿಗೆಯಿದ್ದ ಮನುಷ್ಯ

ಸಿಲೋನಿನಲ್ಲಿ ಒಬ್ಬ ಮನುಷ್ಯನು ಇರುವನು. ಅವನಿಗೆ ಗಾಯನದ ತಲೆಯಿದೆ. ಗಾಯನ ಹೊರಡಿಸಬೇಕೆಂದಿದ್ದರೆ ಕಿವಿಗಳನ್ನು ಹಿಡಿದು ತಿರುವಿಸುವನು, ಮತ್ತು ತಲೆಯನ್ನು ತಿರುಗಿಸುವನು. ಆಗ ಗಾಯನ ಸ್ವರವು ಹೊರಡುವುದು.

ಸುಲಭ ಸಾಧನ ಮಾ...

ಸ್ವಾಮಿ ಶಿವ... ಹೀಗೆ 'ವಿಜಯ...' ಕತ್ತಾರೆ.

ಮಾನವನು ... ತ್ವವನ್ನು ಹೊಂ... ಟ್ಟಿ ಹಿಮಾಲಯ... ಲ್ಲ ಗೃಹಸ್ಥನಾಗಿ... ಕ್ತನಾಗಿರುವಾಗಲೂ ... ಭಾವವನ್ನು ಧಾರಣ... ದ ಸುಲಭಸಾಧ್ಯ...

ಧ್ಯಾನಕ್ಕಾಗಿ ... ದಿಲ್ಲ, ಅಥವಾ ಸ... ಳ್ಳುವುದೂ ಅಗತ್ಯ... ಕೊಂಡಿರುವಾಗ ... ಒಂದೆರಡು ನಿಮಿ... ಡು ದಯೆ, ಪ್ರ... ಶುದ್ಧತೆ, ಪೂ... ದೇವರ ವಿವಿದ ... ಕು ಮತ್ತು ... ಥವಾ ಶ್ರೀರಾಮ ... ಯಿರುವ ಯಾವ... ಜೆಯನ್ನು ಮಾಡ...

ಕಾಂಗ್ರೆಸು ...

ಅಖಿಲಭಾರತ ... ಸ್ಟ್ ಪಂಗಡದ ... ರಾದ ಜಯಪ್ರಕಾ... ದ್ಯದ ರಾಜಕೀಯ... ತ ವಾದಿಗಳ ಅ... ದಲ್ಲಿ ಮಾತನಾಡಿದ ... ಸು ಭವನದಲ್ಲಿ ...

ದೇಶದ ಪರಿಸ್ಥಿ... ಗ, ದೇಶದ ಹೋ... ಹೇಗಿದೆಯೆಂಬುದ... ಕು ಸ್ವಾತಂತ್ರ್ಯ ... ಪ್ರಭುತ್ವವು ಸ... ನುಚ್ಚುನೂರಾಗು... ಗ ಪ್ರಧಾನರು ... ಯಿಂದ ಇಂಥಾ ... ವಂತೆ ಕಾಣುವರು ... ಸರಕಾರವಾಗಿರು... ರಾಷ್ಟ್ರೀಯ ... ವಾಗಿರಬೇಕಾಗಿದೆ ... ರ ಬೇಕೆಂದು ... ನ್ನು ಅಂತರರಾಷ್ಟ್ರೀ... ಕ್ಕೆ ಒದಗಿಸಲಾಗು... ... ಹಿಂದೂದೇಶ... ಅಧಿಕಾರವನ್ನು ... ಜಯಶೀಲವಾಗಿ ... ದರೂ, ಕಾಂಗ್ರೆ... ವ್ಯ ಆಡಳಿತೆಯ ... ಕಾರದ ಪ್ರಾಮು... ತುಬಿಟ್ಟಿದೆ ಅಧಿಕ... ಕವೆಂಬುದು ಹಿಂದ... ರಿಸಬೇಕೆಂದಿರುವ ... ಯತ್ನದಿಂದಲೂ ... ದ ಚಳವಳಿಯನ್ನು ... ವಾಗಿದೆ ಆದರೆ ... ಹಿಂದೆ ಬೀಳದಂತೆ ... ರ ಕಾಂಗ್ರೆಸು ... ಹಲಕೆಲವು ಪ್ರಶ್ನೆ... ಯಲು ಬರುವುದಿಲ್ಲ...

...ಗೆ ಸ್ತ್ರೀಅಧ್ಯಕ್ಷರು — ಬೊಂಬಾಯಿಗೆ ಪ್ರಧಾನ ಖೇರರ ಸಂಚಾರ

ಹೈದರಾಬಾದು ಸಂಸ್ಥಾನದಲ್ಲಿ ಹರತಾಳ

ಯ ಹೊರಗಣ ಚಂದರೆ, ಕಾಂಗ್ರೆಸು ಸಂಸ್ಥೆಯು ಬೀಗೊಂಡು ಮುಂದಿರುವ ಸಮರಕ್ಕೆ ಸಿದ್ಧವಾಗುವಂಥಾ ಪ್ರಧಾನ ಪ್ರಶ್ನೆಯ ಕಡೆಗೆ ದೃಷ್ಟಿಹೋಗಲಿಲ್ಲ

ಕಾಂಗ್ರೆಸು ಸಮತಾವಾದವು ಈ ಕುರಿತು ಎಚ್ಚರಿಸುತ್ತಿದೆ. ಕಾಂಗ್ರೆಸು ತನ್ನ ಇಪ್ಪತ್ತು ವರ್ಷಗಳ ಹೋರಾಟದಲ್ಲಿ ಸ್ವಾತಂತ್ರ್ಯ ಸಾಧನೆಗಾಗಿ ಗಳಿಸಿದ ಅಮೂಲ್ಯ ಶಕ್ತಿಯನ್ನು ಮರೆತುಬಿಟ್ಟು, ಸಣ್ಣ ಸಣ್ಣ ಆಶೆಯ ಪೂರ್ತಿ ಗಾಗಿ ಪ್ರಯತ್ನಿಸುವುದು ಸರಿಯಲ್ಲವೆಂಬುದು ಸಮತಾವಾದಿಗಳ ಹೇಳಿಕೆ. ಕಾಂಗ್ರೆಸು ಅಧಿಕಾರದಲ್ಲಿ ಹೆಚ್ಚು ಸಮಯ ಉಳಿಯುತ್ತಿರುವಂತೆ, ಕಾಂಗ್ರೆಸಿನ ಹೋರಾಟಶಕ್ತಿಯು ದುರ್ಬಲತೆ ಹೊಂದುವುದು ಆದುದರಿಂದ ಬ್ರಿಟಿಷರು ಫೆಡರೇಶನನ್ನು ಹೇರಿಸುವವರೆಗೆ ಸುಮ್ಮನಿರದೆ, ದೇಶದಾಡಳಿತೆಯ ಸೂತ್ರ ರಚನೆಯ ಕಾರ್ಯದಲ್ಲಿ ಕಾಂಗ್ರೆಸು ಮುಂದಾಗಬೇಕು

ಜಾತೀಯ ಭೇದಭಾವನೆ ದೂರ ಸರಿಯಬೇಕಾಗಿದೆ. ಸೋಶಿಯಲಿಸ್ಟರ ಅಭಿಪ್ರಾಯವೇನೆಂದು ಕೇಳಿಕೊಳ್ಳದೆ, ಸುಮ್ಮನೆ ದೂರುವುದರಲ್ಲಿ ಅರ್ಥವಿಲ್ಲ. ಸೋಶಿಯಲಿಸ್ಟ ಪಂಗಡವು ರಾಜಕೀಯ ಸ್ವಾತಂತ್ರ್ಯವನ್ನೇ ದೃಷ್ಟಿಪಥದಲ್ಲಿರಿಸಿಕೊಂಡು, ಆರ್ಥಿಕ ಯೋಜನೆಯನ್ನು ಮೇಲಿಟ್ಟು ಮುಂದಿಟ್ಟಿರುವುದು. ಪ್ರತಿಗಾಮಿಗಳು, ಜಾತೀಯವಾದಿಗಳು, ಜನತೆಯ ಬಳಿ ಸೇರದಂತಾಗಬೇಕು ಉದಾಹರಣೆಗಾಗಿ ಹಿಂದೀ ಭಾಷೆಯ ಪ್ರಶ್ನೆ, ಇಂಗ್ಲೀಷು ಬಿಟ್ಟೆಯನ್ನು ಆಡುವ ಜನರು, ಹಚ್ಚು ಹೆಚ್ಚಾಗಿ ತಮ್ಮ ದೇಶದ ಭಾಷೆಯೆನಿಸಿದ, ಹಿಂದೀಯ ವಿರುದ್ಧ ಚಳವಳಿ ಮಾಡುವುದರಲ್ಲಿ ನಾಚುವುದಿಲ್ಲ ಇದರ ತಾತ್ಪರ್ಯವೇನೆಂದು ತಿಳಿಯದು. ಪಂಡಿತ ಜವಾಹರಲಾಲರು ಸಲಹೆ ಕೊಟ್ಟಿರುವಂತೆ, ಜನತೆಯ ಸಂಪರ್ಕವನ್ನು ಬೆಳೆಸಿ, ಬಡವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ, ರಾಜಕೀಯರಂಗದಲ್ಲಿ ಅವರು ನುಗ್ಗಬಲ್ಲಂತೆ ಕಾಂಗ್ರೆಸು ಸಾಧಿಸತಕ್ಕದ್ದು ಹೀಗಾದರೆ ಜನರು ತಾವಾಗಿ ಭಾಗವಹಿಸುವರು.- ಜಾತೀಯತೆಯು ಮನೋವೃತ್ತಿಯು ತಾನಾಗಿ ಮಾಯವಾಗುವುದು" ಎಂದು ಅವರ ಭಾಷಣದ ಸಾರ.

ಸತ್ಯಾನ್ವೇಷಣ

ಶ್ರೀ ಜೆ. ಕೃಷ್ಣಮೂರ್ತಿಯವರು ಲಾಹೋರು ಟೌನಿನಲ್ಲಿ ತಮ್ಮ ಭಾಷಣದಲ್ಲಿ ಹೀಗೆಂದರು:—

'ಸಮಾಜವು ಸಮ್ಮಿಶ್ರಿತವಾದುದು. ಮಾನವನು ತಾನುಹೇಗೆ ನಡೆಯಬೇಕು ಎಂಬುದನ್ನು ಪರಿಶೀಲಿಸಬೇಕು; ಮತ್ತು ತನ್ನಿಂದ ತನ್ನ ಕ್ರಿಯೆಯಿಂದ ಈ ಜಗತ್ತಿನಲ್ಲೇನಾದರೂ ಮಾರ್ಪಾಟುಮಾಡಲು ಸಾಧ್ಯವಿದೆಯೇ ಎಂಬುದನ್ನು ಯೋಚಿಸಬೇಕು. ಜಗತ್ತಿನ ಉದ್ಧಾರಕ್ಕೆ ಆರ್ಥಿಕಯೋಜನೆ ಮತ್ತು ಆರ್ಥಿಕ ಕ್ರಾಂತಿಯು ಸಾಧನವೆಂದಾಗಿ ಜಗತ್ತಿನಲ್ಲಿ ಎಲ್ಲೆಡೆಗಳಲ್ಲಿ ಹರಡಿಕೊಂಡಿರುವ ಭಾವನೆ. ವ್ಯಕ್ತಿಯು ದೇಶಕ್ಕಾಗಿರುವುದರಿಂದ ಯಾವ ಮತ ಯಾವ ಧರ್ಮವಿದ್ದರೂ, ದೇಶೋದ್ಧಾರವಾಗುವುದೆಂದು ಇನ್ನು ಕೆಲವರ ಅಭಿಮತ ಇನ್ನು ಒಂದು ನಿಶ್ಚಿತ ಮತ, ಆಚಾರಕ್ಕನುಸಾರವಾಗಿ ನಡೆಯುವುದರಿಂದ ಉದ್ಧಾರವೆಂದು ಮತ್ತೆ ಹಲವರ ವಾದ ಇಂದಿನವರೆಗೆ ಸಮಾಜವಾಗಲೀ, ಮತ, ಕೂಟವಾಗಲೀ ಮಾನವನ ವೈಯಕ್ತಿಕ ಉದ್ದೇಶ ಸಾಫಲ್ಯಕ್ಕೆ ನೆರವಾಗಿರುವುದಿಲ್ಲ ಈಗಣ ಆರ್ಥಿಕ ವ್ಯವಸ್ಥೆಯು ಅತ್ಯಂತ ವಿಷಮ ಭಾವವುಳ್ಳದು ಶ್ರೀಮಂತರು ಉತ್ಪತ್ತಿಯ ವ್ಯವಸ್ಥೆಯನ್ನು ಕೃತ್ರಿಮ ಸೂತ್ರಬದ್ಧವಾಗಿ, ಜನತೆಯ ಇಚ್ಛೆಯನ್ನು ತಮ್ಮಾಧೀನಕ್ಕೆ ಬಾಗಿಸಿಕೊಳ್ಳುವರು ಇನ್ನು ಧರ್ಮದ ವಿಚಾರವಾದರೂ ಮಾನವನ ಅಖಂಡ ಚೇತನ ಪ್ರಸರಣಕ್ಕೆ ಪ್ರಜ್ಞೆಯ ವಿಸ್ತಾರಕ್ಕೆ ಸಂಪೂರ್ಣತೆಯ ವಿಕಾಸಕ್ಕೆ ಅವಕಾಶವನ್ನೊದಗಿಸಿ ಕೊಡುವುದಿಲ್ಲ ಅದು ಭಯ ಮತ್ತು ಅನುಕರಣ ಮಾರ್ಗದಲ್ಲಿ ನಿಂತಿದೆ ಮಾನವನು ಪೂರ್ಣ ಭಾವನೆಯ ಪೂರ್ಣಪ್ರಜ್ಞೆಯ ವಿವೇಕ ವಿಚಾರದಿಂದ ಒಂಟಿಗನಾಗಿ ವಿವೇಕಪರನಾಗಿ ನಿರ್ಭೀಕನಾಗಿ ನಡೆಯುವುದೇ ನಿಜತ್ವವನ್ನರಿಯುವುದು ಸಾಧ್ಯ.

ರಾಜಕೋಟೆಯ ಸತ್ಯಾಗ್ರಹಿಗಳು ಕೈದು ಮಾಡಲ್ಪಟ್ಟರು

ಕುಮಾರಿ ಮೈದುಲ್ಲಾ ಮತ್ತು ಹದಿನೈದು ಮಂದಿ ಸತ್ಯಾಗ್ರಹಿಗಳು ತಾ 11ರ ಸಾರ್ವಜನಿಕ ಸಭೆಯಲ್ಲಿ ಕೈದುಮಾಡಲ್ಪಟ್ಟಿರುವರು. ಕುಮಾರಿ ಮೈದುಲ್ಲಳು ಒಮ್ಮೆ ಈ ಮೊದಲೇ ಕೈದು ಮಾಡಲ್ಪಟ್ಟು ಬಿಡುಗಡೆ ಹೊಂದಿದ್ದಳು. ಕುಮಾರಿ ಪಟೇಲಳು ಕೈದು ಮಾಡಲ್ಪಟ್ಟ ನಂತರ ಆವಳು ನಾಯಕಿಯಾದಳು

ಹೈದರಾಬಾದು ಸಂಸ್ಥಾನದಲ್ಲಿ ವಿದ್ಯಾರ್ಥಿಗಳ ಹರತಾಳ

ಉಸ್ಮಾನಿಯಾ ಯೂನಿವರ್ಸಿಟಿಯಿಂದ ಹೊರ ಹಾಕಲ್ಪಟ್ಟ ವಿದ್ಯಾರ್ಥಿಗಳು ಅಧಿಕಾರಿಗಳ ಕೃತ್ಯದ ನಿಷೇಧಾರ್ಥವಾಗಿ ಅನ್ನತ್ಯಾಗ ಪ್ರಾರಂಭಿಸಿದ್ದು, ಅವರ ಸಹಾನುಭೂತಿಯ ಸಲುವಾಗಿ ಎಲ್ಲಾ ಮಿಡ್ಲ್‌ಸ್ಕೂಲು ಮತ್ತು ಹೈಸ್ಕೂಲು ವಿದ್ಯಾರ್ಥಿಗಳು ಶಾಲೆಗೆ ಹೋಗದೆ, ಹರತಾಳವಾಚರಿಸಲು ನಿಶ್ಚಯಿಸಿದ್ದಾರೆ ಯೂನಿವರ್ಸಿಟಿಯ ಹಳೆ ವಿದ್ಯಾರ್ಥಿಗಳಾದ ಕೆಲವು ವಕೀಲರು ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಸಾಹಸವನ್ನು ಪ್ರಶಂಸಿಸಿರುವರು ಮಾತ್ರವಲ್ಲದೆ, 'ವಂದೇ ಮಾತರಂ' ದೇಶಗೀತೆಯನ್ನು ಹಾಡಲು ಅಡ್ಡಿಮಾಡಿದ ಅಧಿಕಾರಿಗಳ ವರ್ತನೆಯನ್ನು ಖಂಡಿಸಿರುವರು

ಮುಂಬಾಯಿಯಲ್ಲಿ ಮದ್ಯಪಾನ ನಿಷೇಧ

ಡಾ ಗಿಲ್ಡರರು ಮುಂಬಾಯಿಯ ಮದ್ಯಪಾನ ನಿಷೇಧದ ಕುರಿತು ಪ್ರಸ್ತಾಪಿಸಿ ಶಾಸನಸಭೆಯೊಂದರಲ್ಲಿ ಹೀಗೆಂದರು—

"ಕಾಂಗ್ರೆಸ್ ಸರಕಾರವು ತನ್ನ ಅಧಿಕಾರವನ್ನು ಕೆಳಗಿಡುವ ಮೊದಲು ಇಡೀ ಪ್ರಾಂತ್ಯದಲ್ಲಿ ಮದ್ಯಪಾನ ನಿಷೇಧವನ್ನು ಜಾರಿಗೆ ತರಲಾಗುವುದು ಜನತೆಯ ಸರಕಾರವು ಪರಸ್ಪರ ಸಹಕಾರದಿಂದ ಈ ವಿಷಯದಲ್ಲಿ ನಿಸ್ಸಂದೇಹವಾಗಿ ಯಶಸ್ವಿಯಾಗಬಹುದು ಅಮೇರಿಕವು ಈ ಕಾರ್ಯದಲ್ಲಿ ಜಯಹೊಂದಲಿಲ್ಲ ಆದರೆ ಹಿಂದೂದೇಶವು ಇದನ್ನು ನೆರವೇರಿಸುವುದು ನಿಶ್ಚಯವು ಅಹಮದಾಬಾದಿನಲ್ಲಿ ಸಾಕಷ್ಟು ಯಶಸ್ವಿಯಾಗಿರುವುದು ಇದು ಕಾಂಗ್ರೆಸಿನ ಪ್ರಚಾರದ ಸಾಹಸಕಾರ್ಯವು" ಎಂದರು

ವರ್ಕಿಂಗ್ ಕಮಿಟಿ ಸಭೆ

ವಾರ್ಧಾದಲ್ಲಿ ಜಮುನಾಲಾಲ ಬಜಾಜರ ಮನೆಯಲ್ಲಿ ನೆರೆದ ವರ್ಕಿಂಗ್ ಕಮಿಟಿ ಅಧಿವೇಶನವು ಅತ್ಯಂತ ಮಹತ್ವಕೆಯುಳ್ಳದ್ದಾಗಿದೆ ಇದರಲ್ಲಿ ಆಶ್ರಿತ ರಾಜ್ಯಗಳಲ್ಲಿ ನಡೆಯುತ್ತಿರುವ ಚಳುವಳಿಕೆಯ ಕುರಿತಾದ ವಿಚಾರ-ಬಂಗಾಲಿ ಬಿಹಾರ ವಾದದ ಕುರಿತು ಬಾಬು ರಾಜೇಂದ್ರರ ವರದಿ, ಸಿಂಧ ಸಭೆಯಲ್ಲಿ ಮುಸ್ಲಿಂ ಲೀಗಿನವರು ಕಾಂಗ್ರೆಸಿನ ಮೇಲೆ ಹೊರಿಸಿರುವ ಆರೋಪಣೆ, ಅಹಿಂಸಾ ತತ್ವ ಪಾಲನೆಯ ಪ್ರಾಮುಖ್ಯತೆ-ಇವೇ ಮೊದಲಾದ ವಿಷಯಗಳು ಚರ್ಚಿಸಲ್ಪಡುವುವು. ಈ ಎಲ್ಲಾ ವಿಷಯಗಳು ಸಮಗ್ರ ಭಾರತಕ್ಕೆ ಸಂಬಂಧಿಸಿರುವ ಪ್ರಾಮುಖ್ಯ ವಿಚಾರಗಳಾಗಿವೆ ಈ ದೃಷ್ಟಿಯಿಂದ ವಾರ್ಧಾ ಕಮಿಟಿ ಸಭೆಯು ಅತ್ಯಂತ ಮಹತ್ವದ್ದಿರುತ್ತದೆ.

ಜಪಾನರು ಗೆಲ್ಲುವರೇ?

ಒಬ್ಬ ಚೀನೀ ಮುತ್ಸದ್ದಿಯು ಈ ಕುರಿತು ಹೀಗೆಂದನು "ಜಪಾನರು ಎಲ್ಲಾ ಕಡೆಗಳಲ್ಲಿ ಗೆದ್ದರೂ, ಕೊನೆಗೆ ಜಯವು ನಮ್ಮದಾಗುವುದು ಚೀನವು ಬಹುಕಾಲ ಹೋರಾಟ ನಡೆಸುವಷ್ಟು ಸಾಮರ್ಥ್ಯವುಳ್ಳದ್ದಿದೆ

ಮೈಸೂರು ವೃತ್ತಪತ್ರಿಕಾ ಬಿಲ್ಲು

ಮೈಸೂರು ವೃತ್ತಪತ್ರದ ಬಿಲ್ಲಿನ ಬಗ್ಗೆ ನೇಮಕ ಹೊಂದಿದ ಸಿಲೆಕ್ಟ್ ಕಮಿಟಿಯವರು ತಮ್ಮ ವರದಿಯನ್ನು ಪ್ರಕಟಿಸಿರುವರು. ಬಿಲ್ಲಿನಲ್ಲಿ ಹೆಚ್ಚಿನ ತಿದ್ದುಪಡಿಯಾಗಿಲ್ಲ. ಮೊದಲನೆಯ ಜಾಮೀನಿನ ಮೊಬಲಗನ್ನು ಸಾವಿರದಿಂದ ೫೦೦ ರೂಪಾಯಿಗಳಿಗೂ, ಎರಡನೆಯ ಸಲ ೩೦೦೦ ದಿಂದ ೨೦೦೦ ರೂಪಾಯಿಗಳಿಗೂ ಮಾತ್ರ ತಗ್ಗಿಸಿದ್ದಾರೆ. ಜನವರಿ ತಾ ೨೦ಕ್ಕೆ ನಡೆಯಲಿರುವ ಕೌನ್ಸಿಲ್ ಸಭೆಯಲ್ಲಿ ಈ ಬಿಲ್ಲು ಚರ್ಚಿಸಲ್ಪಡುವುದು.

ಮಹಾತ್ಮರ ಸಂದೇಶ

ಮಹಾತ್ಮಾ ಗಾಂಧಿಯವರು ತಿರುವಾಂಕೂರು ಚಳವಳಿಯ ಸಂಬಂಧದಲ್ಲಿ ತಾ. ೧೦ರಲ್ಲು ಕೊಟ್ಟ ಹೇಳಿಕೆಯಲ್ಲಿ ಈ ರೀತಿ ಅಭಿಪ್ರಾಯವಿದೆ. "ಶಾಂತತೆ ಭಂಗವಾಗದ ರೀತಿಯಲ್ಲಿ ಚಳವಳ ನಡೆಯಬೇಕು ಅದಕ್ಕೆ ಭಿನ್ನವಾಗಿ ಕಾರ್ಯವು ನಡೆದರೆ ಕಾಂಗ್ರೆಸ್ಸಿನ ವರ್ಚಸ್ಸು ಕುಂದುವುದೆ"ಂದು ಎಚ್ಚರಿಸಿದ್ದಾರೆ.

ರಾಷ್ಟ್ರಪತಿಗಳ ಸಂದೇಶ

ಬಂಗಾಲದ ಸಣಬಿನ ಕಾರ್ಖಾನೆಯ ಮುಷ್ಕರದ ಕುರಿತು ರಾಷ್ಟ್ರಪತಿ ಸುಭಾಷ ಚಂದ್ರ ಭೋಸರು ಒಂದು ವಿನಂತಿಯನ್ನು ಖರಗ್‌ಪುರದಿ ಪ್ರಕಟಿಸಿರುವರು. ಅದು ಹೀಗಿದೆ

"ಜೂಟ್ ಆರ್ಡಿನನ್ಸಿನ ವಿರುದ್ಧ ಮುಷ್ಕರ ಹೂಡಿರುವ ಸಣಬಿನ ಕಾರಖಾನೆಗಳ ಕೆಲಸಗಾರರ ಬೇಡಿಕೆಗಳ ನ್ಯಾಯ ಸಮ್ಮತವಾಗಿದೆ ಅವರ ಕೇಳಿಕೆಯಂತೆ ಅವರ ಸಂಬಳ ದೊರೆಯುವಂತೆ ಮತ್ತು ಪರಿಸ್ಥಿತಿ ಸುಧಾರಿಸುವಂತೆ ಅವರ ಬೇಡಿಕೆಗಳಿವೆ ಜೂಟ್ ಆರ್ಡಿನನ್ಸಿನಿಂದ ಅವರ ಕೆಲಸದ ವೇಳೆ ಕಡಿಮೆ ಮಾಡಲಾಗಿದೆ. (ಶೇಕಡಾ 10ರಂತೆ ಕಡಿಮೆ) ಮೊದಲೇ ಪರಿಸ್ಥಿತಿ ಸರಿಯಿಲ್ಲದಿದ್ದು. ಈಗಂತೂ ಅವರ ಆರ್ಥಿಕ ಸ್ಥಿತಿಯು ಮತ್ತಷ್ಟು ಹಾಳಾದಂತಾಯಿತು ರಾತ್ರಿ ಕೆಲಸವನ್ನು ನಿಲ್ಲಿಸಿದ ಕಾರಣ ಸುಮಾರು ೫೦,೦೦೦ ಜನರು ಕೆಲಸವಿಲ್ಲದೆ ನಿರಾಶ್ರಿತರಾಗುವಂತಾಯಿತು ಸಂಪು ಯಶಸ್ವಿಯಾಗಬೇಕಾದರೆ, ಸಾರ್ವಜನಿಕ ಸಹಾನುಭೂತಿ, ಸಹಾಯವು ಅಗತ್ಯವಿದೆ ತಿಂಗಳುಗಟ್ಟಲೆ ಕೆಲಸವಿಲ್ಲದೆ ಜನರು ಮುಷ್ಕರ ಹೂಡಿದ್ದಾರೆ.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P No 108/1938

ಅರ್ಜಿದಾರರು

1 ಕೊಲ್ಲು ಸೆಡ್ತಿ 2 ಕಲ್ಯಾಣಿ ಸೆಡ್ತಿ 3. ಗುಲಾಬಿ ಸೆಡ್ತಿ ಕಾರ್ಕಳ ತಾಲೂಕು, ಸೂಡಗ್ರಾಮದ ಮಾಳಬೈಲು ಎಂಬಲ್ಲಿರುವವರು.

ಎದ್ರಿರು

1 ಸಂಜೀವ ಸೆಡಿ, ಸಂಕ್ರಪ್ಪ ಸೆಟ್ಟಿ ಏಟ್ಸ್, ವ ಸೀನ ಕವಂಟುಟ ಸೂಡ ಕಾರ್ಕಳ ತಾಲೂಕು ಹಿರ್ಗಾನ ಗ್ರಾಮದಲ್ಲಿರುವವರು,

2. ರಾಘು ಸೆಟ್ಟಿ, ಸೂಡ ಮಾಂಜಾಲು ವಿನಕ್ಕ ಸೆಡ್ತಿ ಮಗ, ಮಂಗಳೂರು ತಾಲೂಕು ಬಪ್ಪನಾಡು ಗ್ರಾಮದ ಪಡಪನೆಯಲ್ಲಿರುವವ,

ಕಾರ್ಕಳ ತಾಲೂಕು ಸೂಡಗ್ರಾಮದ ಮಾಂಜಾಲು ತುಕ್ಕಿ, ಮಾಸೆ ಅಂತಮ್ಮ ಸೆಡ್ತಿ ಎಂಗವ 1ನೇ ಅರ್ಜಿದಾರಳ ತಮ್ಮ ಸಂಕ್ರಪ್ಪ ಸೆಟ್ಟಿಯು ತಾ. 5-9 1938ರಲ್ಲಿ ಮೃತಪಟ್ಟಿರುತ್ತಾನೆ. ಆತನಿಗೆ ಸಿಂಡಿಕೇಟು ಬ್ಯಾಂಕಿನ ಮಹಾಬಲ ಸೆಟ್ಟಿಯಿಂದ ತಾ 1-12 1932 (ನೋಟಿನ ನಂಬರು ವರೆ ತಾ 28 11 1935ನೇ ತಾರೀಕಿನ ರಿನ್ಯೂವಲ್) ಪ್ರೊಮಿಸರಿ ನೋಟಿನ ಪ್ರಕಾರ ಬರಬೇಕಾದ ಹಣವನ್ನು ಬರಮಾಡುವುದರ ಸಲುವಾಗಿ ದಾವೆ ದ ಅರ್ಜಿದಾರರ ವ 2ನೇ ಎದ್ರಿಯ ಕ ... 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಬರಕೊಂಡ ಅರ್ಜಿಯು ತಾ 16 1 1939ಕ್ಕೆ ಇಟ್ಟಿದೆ ಈ ಕುರಿತು ಆಕ್ಷೇಪವುಳ್ಳವರು ಸದ್ರಿ ದಿನ ಕೋರ್ಟಿನ ಮುಂದೆ ಹಗಲು 10 ಘಂಟೆಗೆ ಹಾಜರಾಗಿ ಅವರ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು ಇಲ್ಲವಿದ್ದಲ್ಲಿ ಅರ್ಜಿದಾರರ ಗುಣಕ್ಕೆ ತೀರ್ಮಾನಿಸಲ್ಪಡುವುದು ಎಂಬ ನಿಂಗತಿ ಈ ಮೂಲಕ ಪ್ರಕಟಿಸಲಾಗಿದೆ ಕೋರ್ಟಿನ ಹುಕುಂ ಪ್ರಕಾರ,

K. Mahabala Hegde,
ಅರ್ಜಿದಾರರ ವಕೀಲ್.

Karkal, Dated 13-12-38.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 11-12-38.

ಚರ್ಚೆ—ತಾ. 4ನೇ ಭಾನುವಾರ ಸಾಯಂಕಾಲ ಮಲ್ಲಿಕಟ್ಟೆ ಯುವಜನ ಸಂಘದ ಆಶ್ರಯದಲ್ಲಿ, ಶ್ರೀ| ಕೆ. ಬಾಲಕೃಷ್ಣನ್ ನಾಯರರ ಅಧ್ಯಕ್ಷತೆಯಲ್ಲಿ ಒಂದು ಚರ್ಚೆ ನಡೆಯಿತು. 'ಸ್ವರಾಜ್ಯ ಸಂಸ್ಥಾಪನೆಗೆ ಅಹಿಂಸಾತ್ಮಕವಾದ ಮಾರ್ಗವೇ ಸಾಧು' ವೆಂಬ ವಿಷಯವನ್ನು ಶ್ರೀ| ಕೆ. ಕೃಷ್ಣರಾಯರು ಸಭೆಯ ಮುಂದಿರಿಸಿದರು. ಶ್ರೀ| ವಿ. ಕೆ. ವೈದ್ಯರು ಅದನ್ನು ಸಮರ್ಥಿಸಿದರು. ಶ್ರೀ| ಹೊಳ್ಳರು ರದನ್ನು ವಿರೋಧಿಸಿದರು. ಶ್ರೀ| ಜನಾರ್ದನ ಮಲ್ಯರು ಅವರನ್ನು ಸಮರ್ಥಿಸಿದರು. ಅಧ್ಯಕ್ಷರ ಸಮಯೋಚಿತ ಭಾಷಣದೊಂದಿಗೆ ಸಭಾಂತ್ಯವಾಯಿತು.

ನಗರ ಸಭೆ—ಮಂಗಳೂರು ನಗರ ಸಭೆಯು ತಾ. 5ನೇ ಸಾಯಂಕಾಲ ಮಿ| ಎಲ್. ಸಿ. ಪಾಯಸ್ ರವರ ಅಧ್ಯಕ್ಷತೆಯಲ್ಲಿ ಸೇರಿತು. ಸರಕಾರಿ ಹುಕುಮುಗಳನ್ನು ಓದಿ ರಿಕಾರ್ಡು ಮಾಡಿದ ಬಳಿಕ ಬೇರೆ ವಿಷಯಗಳ ಚರ್ಚೆಯಾಯಿತು. ಮಿಲಾಗ್ರಿ ಶಾಲೆಯ ಸಮೀಪದ ಒಂದು ರಸ್ತೆಯ ಮೂಲೆಯನ್ನು ಅಗಲ ಮಾಡಬೇಕೆಂಬ ವಿಷಯ ಬರಲು, ಸಮೀಪದ ಒಂದು ಕಟ್ಟಡಕ್ಕೆ ಹಾನಿಬಾರದಂತೆ ರಸ್ತೆ ಅಗಲ ಮಾಡಬೇಕೆಂದು ಮಿ| ಡಿ' ಸೋಜರು ಹೇಳಿದರು. ಮಿ| ಆಂದ್ರಾದೆಯವರು ಕೌನ್ಸಿಲಿನವರು ಶಿಫಾರಸು ಮಾಡಿದ ಪ್ರಕಾರವೇ ಕೆಲಸ ನಡೆಯಬೇಕೆಂದರು. ಈ ಚರ್ಚೆಯಲ್ಲಿ ಮಿ| ಆಂದ್ರಾದೆ (ಕಾಂಗ್ರೆಸ್) ಯವರ ಅಭಿಪ್ರಾಯವನ್ನು ಶ್ರೀ| ಶ್ರೇಷ್ಠರು ಅನುಮೋದಿಸಿದರು. ಶ್ರೀ| ಎ. ಆರ್. ಡಿ' ಸೋಜರ ಅಭಿಪ್ರಾಯವನ್ನು ಡಾ| ಉಪೇಂದ್ರ ಪೈಗಳವರು (ಇಬ್ಬರೂ ಕಾಂಗ್ರೆಸ್ ಪಕ್ಷದವರು) ಅನುಮೋದಿಸಿದರು. ಮತ ತೆಗೆದುಕೊಳ್ಳಲಾಗಿ ಮಿ| ಆಂದ್ರಾದೆಯವರ ಠರಾವು ಬಹುಮತ ಪಡೆದು ಮಂಜೂರಾಯಿತು. ರಸ್ತೆಯಿಂದ 4ಅಡಿ ದೂರದಲ್ಲಿ ಕಟ್ಟಡ ಕಟ್ಟಬೇಕೆಂಬ ನಿಯಮವನ್ನುಲ್ಲಂಘಿಸಿದವರಿಂದ ಬಾಂಡು ತೆಗೆದುಕೊಳ್ಳಬೇಕೆಂದೂ, ವಕೀಲರನ್ನು ಕೇಸ್ ವ್ಯವಹರಣೆ ಮಾಡುವ ಬಗ್ಗೆ ನೇಮಿಸುವ ವಿಚಾರವನ್ನು ಮುಂದಿನ ಸಭೆಯಲ್ಲಿ ವಿಚಾರ ಮಾಡಬಹುದೆಂದೂ ನಿರ್ಧಾರವಾಯಿತು. ರೇಡಿಯೋ ಇಡಲು ಒಂದು ತಕ್ಕ ಸ್ಥಳವನ್ನು ಶಿಫಾರಸು ಮಾಡಲು ಒಂದು ಸಮಿತಿಯು ನೇಮಿಸಲಾಯಿತು.

ಹಿಂದೀ ಅಧ್ಯಾಪಕ-ಪ್ರಚಾರಕರ ಪರಿಷತ್ತು—ದ. ಕ. ಜಿಲ್ಲೆಯಲ್ಲಿ ಹಿಂದೀ ಅಧ್ಯಾಪಕ-ಪರಿಷತ್ತನ್ನು ಬರುವ ತಾ. 16ನೇ ಶುಕ್ರವಾರ ಸಾಯಂಕಾಲ ಗಣಪತಿ ಹೈಸ್ಕೂಲಿನಲ್ಲಿ ಡಾ| ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿಸುವ ಏರ್ಪಾಡಾಗಿದೆ. ಜಿಲ್ಲೆಯಲ್ಲಿ ಹಿಂದೀ ಪ್ರಚಾರ ಕಾರ್ಯವನ್ನು ಹೇಗೆ ನಡೆಸಬಹುದೆಂಬ ವಿಚಾರವು ಇಲ್ಲಿ ತೀರ್ಮಾನಿಸಲ್ಪಡುವುದು.

'ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆ ಕರೆಯುವುದಿಲ್ಲ'—ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜನರಲ್ ಬಾಡಿ ಸಭೆಯನ್ನು ತಾ. 11ಕ್ಕೆ ಸೇರಿಸಬೇಕೆಂದು 34ಜನರು ಸಹಿ ಹಾಕಿ ಮಾಡಿದ ಮನವಿಯು ಎರಡನೆಯ ಬಾರಿಯೂ ತಿರಸ್ಕರಿಸಲ್ಪಟ್ಟಿತು. ಮುಂದೇನಾಗುವುದೋ ನೋಡಲಿದೆ.

ರೈತರ ಜಾಥಾ—ಕಳೆದ ತಾ. 7ರಲ್ಲಿ ಕಾಸರಗೋಡು ತಾಲೂಕಿನ 40ಗ್ರಾಮಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಜಾಥಾ ಮಂಗಳೂರಿಗೆ ಬಂದು ಸೇರಿತು. ಆ ದಿನ ಶ್ರೀ| ಹೊಳ್ಳರ ಅಧ್ಯಕ್ಷತೆಯಲ್ಲಿ ಜಾಥದ ಮುಂದಾಳುಗಳಾದ ಶ್ರೀ| ಸುಬ್ರಹ್ಮಣ್ಯ ತಿರುಮಂಬ್ರರವರು ರೈತರ ಸಂಕಷ್ಟಗಳನ್ನು ವಿವರಿಸಿ ಭಾಷಣ ಮಾಡಿದರು. ಜಾಥದವರು ತಾ. 8ರಲ್ಲಿ ಕಲೆಕ್ಟರಿಗೆ ತಮ್ಮ ಮನವಿಗಳನ್ನು ಮಾಡಿದರು. ತಮ್ಮಿಂದ ಆಗುವ ಸಹಾಯವನ್ನು ಖಂಡಿತ ಮಾಡುವುದಾಗಿ ಕಲೆಕ್ಟರರು ಹೇಳಿದರು. ಅಂದೇ ಜಾಥದವರು ಹಿಂತಿರುಗಿದರು.

ಮಿಸ್. ಎಂ. ಸ್ಥೈಮನರ ಭಾಷಣ—ಮದ್ರಾಸ್ ಶಾಖೆಯ ರೆಡ್ ಕ್ರಾಸ್ ಸಂಘದ ಕಾರ್ಯದರ್ಶಿಗಳಾದ ಮಿಸ್ ಮ್ಯೂರಿಲ್ ಸ್ಥೈಮನರು ಗವರ್ನಮೆಂಟ್ ಕಾಲೇಜಿನಲ್ಲಿ ಒಂದು ಭಾಷಣ ಮಾಡುತ್ತಾ ಶಾಂತಿಯ ಕಾಲದಲ್ಲಿ ರೆಡ್ ಕ್ರಾಸ್ ಸಂಸ್ಥೆಯು ಏನು ಕೆಲಸ ಮಾಡಬಹುದೆಂದು ಹೇಳಿದರು. ಮಂಗಳೂರಲ್ಲಿ ಜೂನಿಯರ್ ರೆಡ್ ಕ್ರಾಸ್ ಸಂಘಗಳನ್ನು ಸ್ಥಾಪಿಸಬೇಕೆಂದರು. ಶ್ರೀ| ಪಿ. ರಾಜಗೋಪಾಲಾಚಾರಿಯವರು ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಬೋರ್ಡ್ ಸಭೆ—ಜನವರಿ 11ನೇ ಬುಧವಾರ ದಿವಸ ಜರಗುವುದೆಂದು ಅಧ್ಯಕ್ಷರು ತಿಳಿಸುತ್ತಾರೆ.

ಸೆನೆಟ್ ಚುನಾವಣೆ—ಮದ್ರಾಸ್ ಯುನಿವರ್ಸಿಟಿ ಸೆನೆಟಿಗೆ ರಿಜಿಸ್ಟರ್ಡ್ ಗ್ರೇಜುವೇಟ್ಸನಿಂದ ಆಗತಕ್ಕ ಚುನಾವಣೆಯು ಜನವರಿ ಅಂತ್ಯದೊಳಗೆ ಜರಗುವುದು. ಈ ಚುನಾವಣೆಗೆ ಸೈಂಟ್ ಅಲೋಸಿಯಸ್ ಕಾಲೇಜಿನ ಮೆಥಮೆಟಿಕ್ಸ್ ಪ್ರೊಫೆಸರ್ ಶ್ರೀ| ಎಸ್. ರಾಮಚಂದ್ರ ಅಯ್ಯರರು ಉಮೇದ್ವಾರರಾಗಿದ್ದಾರೆ. ಈ ಅನುಭವಶಾಲಿ ಹಾಗೂ ಸಮರ್ಥ ಉಮೇದ್ವಾರರಿಗೇ ಎಲ್ಲರೂ ಓಟು ಕೊಡುವರೆಂದು ನಿರೀಕ್ಷಿಸಲಾಗಿದೆ.

ಕುಂಬಳೆಯಲ್ಲಿ
ದ. ಕ. ಜಿಲ್ಲಾ ರಾಜಕೀಯ-ಪರಿಷತ್ತು

ಹಂಗಾರಕಟ್ಟೆ—ಹಂಗಾರಕಟ್ಟೆ ಲೇಬರ್ ಶಾಲೆಯಲ್ಲಿ ಶ್ರೀ. ಬಿ. ಅಂತಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಹರಿಜನರ ಸಭೆಯೊಂದ ಜರಗಿ ಹರಿಜನ ಉದ್ಧಾರದ ಕುರಿತು ಭಾಷಣಗಳಾದುವು.

ತೆಕ್ಕಟ್ಟೆ—ಬೋರ್ಡು ಶಾಲೆಯಲ್ಲಿ ತಾ. 3ರಲ್ಲಿ ಆರೋಗ್ಯ ಮತ್ತು ಶಿಶುಸಪ್ತಾಹವು ಕುಂದಾಪುರ ರೇಂಜಿನ ಡಿ. ಐ. ರವರ ಅಧ್ಯಕ್ಷತೆಯಲ್ಲಿ ಜರಗಿತು.

ಬ್ರಹ್ಮಾವರ—ದೊಡ್ಡಹಾಡಿ ಮನೆಯವರು ಸುಮಾರು 50 ಹರಿಜನರಿಗೆ ಭೋಜನವಿತ್ತು, ಹಿತೋಪದೇಶಮಾಡಿದರು. ಅನಂತರ ಹರಿಜನ ಶಿಕ್ಷಣ ಸಹಾಯಕ ಸಂಘದ ನೇತೃತ್ವದಿಂದ ಮೆರವಣಿಗೆ, ಸಭೆ, ಭಾಷಣಗಳಾದುವು.

ಸುಬ್ರಹ್ಮಣ್ಯ

ಡಾ| ವಿಟ್ಠಲ ಶೆಟ್ಟಿಯವರು ತಾ. 6ರಲ್ಲಿ ಶ್ರೀ. ಸುಬ್ರಹ್ಮಣ್ಯ ಕ್ಷೇತ್ರವನ್ನು ಸಂದರ್ಶಿಸಿದರು. ಅಲ್ಲಿಯ ದೇವಸ್ಥಾನದ ಅಧಿಕಾರಿಗಳೂ, ಮಠದ ಅಧಿಕಾರಿಗಳೂ ಮತ್ತು ಮಹಾಜನರೂ ಒಂದು ಆಸ್ಪತ್ರೆಯು ಸುಬ್ರಹ್ಮಣ್ಯದಲ್ಲಿ ಅಗತ್ಯವೆಂದು ಮನವಿಮಾಡಿದರು. ಜಿಲ್ಲಾ ಬೋರ್ಡು ಅಧ್ಯಕ್ಷರು ತಮ್ಮ ಕೈಲಾದ ಸಹಾಯವನ್ನು ಈ ಬಾಬಿನಲ್ಲಿ ಮಾಡುವುದಾಗಿ ಹೇಳಿದ್ದಲ್ಲದೆ, ಆಸ್ಪತ್ರೆಯು ಚೆನ್ನಾಗಿ ನಡೆಯುವಂತೆ ಮಾಡಲು, ದೇವಸ್ಥಾನ, ಮಠ ಮತ್ತು ಮಹಾಜನರ ಸಹಾಯವೂ ಸಹ ಅಗತ್ಯವೆಂದರು. ಡಾ| ಶೆಟ್ಟರ ಮಾತುಗಳಿಂದ ಜನರು ಬಹಳ ಸಂತೃಪ್ತರಾಗಿರುವಲ್ಲದೆ, ಡಾ| ಶೆಟ್ಟರು ಅಧ್ಯಕ್ಷರಾಗಿರುವಾಗ ತಮ್ಮಲ್ಲಿಗೆ ಒಂದು ಆಸ್ಪತ್ರೆ ಖಂಡಿತ ದೊರೆಯುವುದೆಂದು ಧೈರ್ಯದಿಂದಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಪರಿಷತ್ತು

ಕುಂಬಳೆ—9ನೇ ರಾಜಕೀಯ ಪರಿಷತ್ತನ್ನು ಕಾಸರಗೋಡು ತಾಲೂಕಿನವರು ಕೂಡಿಸುವುದಾಗಿ ಒಪ್ಪಿಕೊಂಡ ಮೇರೆಗೆ ಜನವರಿ ತಾ. 16,17,18, ರಲ್ಲಿ ಕುಂಬಳೆಯಲ್ಲಿ ಜರಗಿಸುವುದಾಗಿ ನಿಶ್ಚಯಿಸಲಾಗಿದೆ. ಅದಕ್ಕಾಗಿ ಈ ಕೆಳಗಿನ ಸ್ವಾಗತ ಕಮಿಟಿಯ ಕಾರ್ಯಕಾರಿ ಮಂಡಲಿಯನ್ನು ಚುನಾಯಿಸಲಾಗಿದೆ. ಶ್ರೀಯುತರುಗಳಾದ ಎಂ. ಉಮೇಶರಾವ್ (ಅಧ್ಯಕ್ಷರು) ಪಿ. ವೆಂಕಟ್ರಮಣ ಭಟ್ಟ, ಬಿ. ಗುಡ್ಡಪ್ಪ ರೈ, (ಉಪಾಧ್ಯಕ್ಷರು) ಕುಳ್ವಂಬೆಟ್ಟು ಕೃಷ್ಣ ಭಟ್, ಕೆ. ವಾಸುದೇವ ನಾಯಕ್ (ಪ್ರತಿ ಕಾರ್ಯದರ್ಶಿಯವರು) ಡಾ. ಕೆ. ನಾರಾಯಣ ನಾಯಕ್ (ಖಜಾಂಚಿಯವರು) ಇಳಂತೋಡಿ ಕೃಷ್ಣಭಟ್ಟ, ಮಂಜೇಶ್ವರ ನರಸಿಂಗ ರಾವ್, ಬಿ. ರಾಘವೇಂದ್ರ ಪ್ರಭು ಬಿ. ದೇವಪ್ಪಾಳ್ವ, ಬಿ. ಕರಿಯಪ್ಪ ಭಂಡಾರಿ, ಜನಾಬ್ ಅಬ್ದುಲ್ ಕುಟ್ಟಿ ಶೆರೂಲ್, ಶ್ರೀಯುತ ಬಿ. ಮಾಧವ ಪೈ, ಎಂ. ಅನಂತಕೃಷ್ಣ ರಾವ್.

ಸ್ವಾಸ್ಥ್ಯ ಸಂಘ Health League) ದ ಆರನೇ ವ್ಯಾಯಾಮ ಶಿಕ್ಷಣ ಶಿಬಿರ.

ಎಂದಿನಂತೆ ಆರನೇ ವ್ಯಾಯಾಮ ಶಿಕ್ಷಣ ಶಿಬಿರವು ಇದೇ ತಾ. 15ರಿಂದ ಜನವರಿ ತಾ. 1ರ ವರೆಗೆ ಮೂಡಬಿದರೆಯಲ್ಲಿ ಜರಗುವುದು. ಇದರಲ್ಲಿ ಲಾಠಿ, ಲೇಝಿಂ, ಡಂಬೆಲ್ಸ್, ಸೂರ್ಯನಮಸ್ಕಾರ, ಆಸನ, ಮಿಲಿಟರಿ ಡ್ರಿಲ್, ಸ್ಕೌಟಿಂಗ್, ಗೇಮ್ಸ್ ವಗೈರೆ ಕಲಿಸಲಾಗುವುದು. ನಮ್ಮ ಜಿಲ್ಲೆಯ ಹೆಚ್ಚಿನ ಅಧ್ಯಾಪಕರು ಇದರಲ್ಲಿ ಸೇರಿ ಹೆಚ್ಚಿನ ಪ್ರಯೋಜನವನ್ನು ಹೊಂದುವರೆಂಬ ನಮ್ಮ ಭರವಸೆ. ಮೂಡಬಿದರೆಯ ಹೊರಗಿನಿಂದ ಬರುವ ಉಮೇದ್ವಾರರು ತಾ. 30ರ ಒಳಗೆ ಶಿಬಿರಕ್ಕೆ ಬಂದು ಸೇರಬಹುದು. ಉಮೇದ್ವಾರರಿಗೆ ತರಬೇತಿ ಕೊಡುವುದನ್ನು ಶ್ರೀ. ಕೆ. ಕೆ. ಶೆಟ್ಟಿ (ವ್ಯಾಯಾಮ ವಿಶಾರದ) ಇವರು ವಹಿಸಿರುವರು. ಇದರಲ್ಲಿ ಸೇರಬೇಕೆನ್ನುವ ಉಮೇದ್ವಾರರು ರೂಪಾಯಿ 2-8-0ಯನ್ನೂ, ಏನಂತ ಪತ್ರವನ್ನೂ ಕೊಡಲಿ ಈ ಕೆಳಗಿನವರಿಗೆ ಬರೆಯಬಹುದು.

M. Gopal Pai &
Sidhartha Shetty.
Camp organisers **Moodabidri,**
South Kanara.

ಶಿರ್ವ—ಈ ಸೆಂಟರಿನ ಅಧ್ಯಾಪಕರ ಜನರಲ್ ಟೀಚರ್ಸ್ ಎಸೋಸಿಯೇಶನಿನ ವಾರ್ಷಿಕ ಮಹಾಸಭೆಯು ತಾ 17-12-1938ನೇ ಶನಿವಾರ ಹಿಂದೂ ಎ. ಶಾಲೆಯಲ್ಲಿ ಕೂಡಲಿದೆ. ಅಂದೇ ಹಿಂದೀ ಕ್ಲಾಸುಗಳೂ ತೆರೆಯಲ್ಪಡುವವು.

ಅಗತ್ಯವೆಂದು ಕಂಡು ಊರವರಿಂದ ಪ್ರೋತ್ಸಾಹಿಸಲ್ಪಡುತ್ತಿರುವ ಬೋರ್ಡುಹುಡುಗಿಯರ ಶಾಲೆಗೆ ಪುನಃ ಹೊಸತೊಂದು ಅಧ್ಯಾಪಕಿಯರು ಕಳೆದ ವಾರ ನೇಮಿಸಲ್ಪಟ್ಟಿರುತ್ತಾರೆ. ಆನೇ ದರ್ಜೆ ತನಕ ಇರುವ ಈ ಶಾಲೆಗೆ ಮೂರು ಮಂದಿ ಅಧ್ಯಾಪಕಿಯರೂ ಸಾಕಾಗಲಾರರೆಂದು ಹೇಳಬಹುದು.

ಇದೇ ತಾ. 17-12-38ನೇ ಶನಿವಾರ 4ಘ. (ಅ. ವ.) ಗೆ ಸ್ಥಳೀಯ ಸಭೆಯು ಕೂಡಿ ಚಾಲ್ತಿ ವರ್ಷದ ಲೆಕ್ಕಪತ್ರಾದಿಗಳನ್ನು ಮಂಜೂರಿಸಲಿರುವುದು.

ಉಡುಪಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ—ಯ 1938ನೇ ಸಪ್ಟಂಬರ ತಿಂಗಳಾಂತ್ಯಕ್ಕೆ ಅಂತ್ಯವಾಗುವ 3ನೇ ವರ್ಷದ ವರದಿಯು ನಮ್ಮ ಹಸ್ತಗತವಾಗಿದೆ. ವಿಮರ್ಶೆಯನ್ನು ಯಥಾವಕಾಶವಾಗಿ ಕೊಡಲಾಗುವುದು.

ನಾಟಕ:—ಶ್ರೀ ಶಿವಾಜಿ ವ್ಯಾಯಾಮಶಾಲಾ ಸಂಘದ ಸಹಾಯಾರ್ಥವಾಗಿ ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ 'ಜಹಗೀರಿ ಮನೆಯ ಪತನ' ಎಂಬ ಸಾಮಾಜಿಕ ನಾಟಕವನ್ನು ತಾ. 12ರಲ್ಲಿ ಸದ್ರಿ ಸಂಘದ ನಾಟ್ಯಶಾಖೆಯವರು ಅಭಿನಯಿಸಿ ತೋರಿಸಿದರು. ಪ್ರೇಕ್ಷಕವರ್ಗವು ಕಿಕ್ಕಿರಿದಿತ್ತು.

ವಿವಾಹ ಸಮಾರಂಭ:—ಶ್ರೀ. ವಕೀಲ್ ಪಾಂಡುರಂಗ ನಾಯ್ಕರ ಪುತ್ರ ಶ್ರೀ. ರಘುನಾಥ ನಾಯ್ಕರು ದಿವಂಗತ ರಾವ್ ಬಹದ್ದೂರ್ ಬಿ. ವೆಂಕಟಾಚಾರ್ಯರ ಪುತ್ರಿ ಶ್ರೀಮತಿ ಸರಸ್ವತಿ ದೇವಿಯನ್ನು ತಾ. 14ರಲ್ಲಿ ವಿವಾಹವಾದರು. ತಾ. 12ರಲ್ಲಿ ಶ್ರೀ. ಪಾಂಡುರಂಗ ನಾಯ್ಕರ ಪುತ್ರಿ ಶ್ರೀಮತಿ ಸಾವಿತ್ರಿ ದೇವಿಯನ್ನು ಸದ್ರಿ ಬಿ. ವೆಂಕಟಾಚಾರ್ಯರ ಪುತ್ರ ಶ್ರೀ. ಬಿ. ಗೋಪಾಲಕೃಷ್ಣರಾಯರು ವಿವಾಹವಾದರು. ಇಬ್ಬರು ವರರೂ ಐ. ಸಿ. ಎಸ್. ಅಧಿಕಾರರು. ತಾ. 14ರಲ್ಲಿ ವಿವಾಹ ಸಮಾರಂಭದ ಸಂಬಂಧ ಸಾರ್ವಜನಿಕ ಟೀಪಾರ್ಟಿ ಏರ್ಪಾಡಾಗಿತ್ತು.

ಶ್ರೀ ಶಿವರಾಮ ಕಾರಂತರು—ತಾ. 12ರಲ್ಲಿ ಉಡ್ಪಿಗೆ ಬಂದು 'ಸಿರಿಯರ ಪ್ರಪಂಚ'ದ ಕೆಲ ಗೆಳೆಯರೊಡನೆ ಮಾತುಕತೆ ನಡಿಸಿ ಮರುದಿನ ಕುಂದಾಪುರದತ್ತ ತೆರಳಿದರು.

ದುನಿಯಾ ನ ಮಾನೆ—ಎಂಬ ಪ್ರಭಾತ ಫಿಲ್ಮ ಕಂಪೆನಿಯವರ ಅತ್ಯುಜ್ವಲ ಚಲಚಿತ್ರವು ಸ್ಥಳಿಕ ರಾಮಕೃಷ್ಣ ಥಿಯೇಟರಿನಲ್ಲಿ ತಾ. 18ರಿಂದ ಪ್ರದರ್ಶಿಸಲ್ಪಡುವುದು.

ಡಿನ್ನರ್ ಪಾರ್ಟಿ—ತಾ. 12ರಲ್ಲಿ ಸ್ಥಳೀಯ ಬೆಂಚ್ ಮೆಜಿಸ್ಟ್ರೇಟರಾದ ಶ್ರೀ. ಯು. ಎಸ್. ಆದಂ ದಾವೂದ್ ಸಾಹೇಬರು ಮೋಡರ್ನ್ ಹಾ. ಎ. ಶಾಲೆಯಲ್ಲಿ ಕೆಲವರಿಗೆ ಒಂದು ಡಿನ್ನರ್ ಪಾರ್ಟಿ ಕೊಟ್ಟು ಸತ್ಕರಿಸಿದರು.

ಹೈಕೋರ್ಟು ಜಡ್ಜರ ಆಗಮನ—ಮದ್ರಾಸ್ ಹೈಕೋರ್ಟು ಜಡ್ಜರಾದ ಶ್ರೀ. ಕೆ. ಪಿ. ಲಕ್ಷ್ಮಣರಾಯರು ಉಡ್ಪಿಗೆ ಬಂದಿದ್ದು ತಾ. 13ರಲ್ಲಿ ಲೋಕಲ್ ಬಾರ್ ಎಸೋಸಿಯೇಶನಿನವರಿಂದ ಟೀಪಾರ್ಟಿ ಸತ್ಕಾರ ಪಡೆದರು.

ದಿ ರಬ್ಬರ್ ಬಾಲ್ ಕ್ರಿಕೆಟ್ ಪಂದ್ಯಾಟ—ತಾ. 10ರಲ್ಲಿ ಚೋಲಿ ಮತ್ತು ಸೋಶಿಯಲ್ ಕ್ರಿಕೇಟು ಟೀಮಿನವರಿಗೆ ನಡೆಯಲಾಗಿ, ಮೊದಲಿನವರು ಒಂದನೇ ಇನ್ನಿಂಗ್ಸಿಗೆ 64ರನ್ನುಗಳನ್ನೂ ಎರಡನೆಯವರು ಎಲ್ಲ ವಿಕೆಟ್ಟಿಗೆ 44ರನ್ನುಗಳನ್ನೂ ತೆಗೆದರು. ಕೆಲವು ಕಾರಣಗಳಿಂದ ಚೋಲಿಯವರು ತಾವಾಗಿಯೇ ಸೋಶಿಯಲ್ ನವರಿಗೆ ಎಕ್ಸ್ಟ್ರೀ ಡಿಕ್ಲಾರ್ ಮಾಡಿರುತ್ತಾರೆ. ಗೆದ್ದವರಿಗೆ ರಜತ ಪದಕಗಳನ್ನು ತಾ. 20ನೇ ಸಾಯಂಕಾಲ 4ಘಂಟೆಗೆ ಡಾ. ಪಿ. ಆ ಆಚಾರ್ಯರ ಅಧ್ಯಕ್ಷತೆಯಲ್ಲಿ ಹಂಚಲಾಗುವುದು.

ಖಾನ್ ಗಾಫರ ಖಾನರು ಕಾಂಗ್ರೆಸ ಅಧ್ಯಕ್ಷರಾಗಲಿರುವರೇ?

ಗಡಿನಾಡಿನ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಅವರನ್ನು ಬರುವ ಅಧಿವೇಶನಕ್ಕೆ ಪ್ರೆಸಿಡೆಂಟರಾಗಬೇಕೆಂದು ಕೇಳಿಕೊಂಡರು. ಅದಕ್ಕೆ ಅವರು ತನಗೆ ಕಾಂಗ್ರೆಸು ಅಧ್ಯಕ್ಷನಾಗುವ ಇರಾಧೆಯಿಲ್ಲ, ಕಾಂಗ್ರೆಸಿಗಾಗಿ ತಾನು ಕೈಲಾದಂತೆ ದುಡಿಯುವೆನು. ಅಧ್ಯಕ್ಷನಾಗಿ ಸಂಚರಿಸಿ, ಕಾರ್ಯನಿರ್ವಹಿಸುವುದು ತನಗೆ ಸಾಧ್ಯವಿಲ್ಲವೆಂದು ಉತ್ತರವಿತ್ತಿರುವರು.

The Commonwealth Asssu. Co., Ltd.

ದಿ ಕೋಮನ್ ವೆಲ್ತ್

ಎಸ್ಯೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.
ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು
ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ,
ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:—

ಎಸ್. ಪಿ. ಆರ್. ನಾಯಕ್ ಎಂಡ್ ಸನ್ಸ್,	ಗವಾನೆಕರ್ ಎಂಡ್ ಸನ್ಸ್,
ಸ್ಪೆಶಲ್ ಏಜಂಟ್,	ಚೀಫ್ ಏಜಂಟ್ಸ್,
ಕಾರ್ ಸ್ಟ್ರೀಟ್, ಮಂಗಳೂರು.	ಆನಂದರಾವ್ ಸರ್ಕಲ್ ಬೆಂಗಳೂರು.

ಈ ವಾರದ ನಿಮ್ಮ ಭವಿಷ್ಯ

ತಾ 15—12—38ರಿಂದ 22—12—38ರ ವರೆಗೆ

[ಜ್ಯೋತಿಷವು ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಿನ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ.

ಸಂ ನ.]

●

ತುಲಾರಾಶಿಯವರ ಗ್ರಹಸ್ಥಿತಿಯು ಚೆನ್ನಾಗಿರುವುದು—ಧನು, ಕುಂಭರಾಶಿಯವರ ಗ್ರಹಸ್ಥಿತಿಯು ಮಧ್ಯಮರೀತಿಯಲ್ಲಿರುವುದು—ವೃಷಭ, ಕರ್ಕಾಟಕ, ಸಿಂಹ, ವೃಶ್ಚಿಕ ಮಕರ, ಮೀನರಾಶಿಗಳವರ ಭವಿಷ್ಯವು ಕನಿಷ್ಠತರಗತಿಯಲ್ಲಿರುವುದು—ಮೇಷ, ಮಿಥುನ, ಕನ್ಯಾರಾಶಿಯವರ ಗ್ರಹಚಾರವು ಬಹಳ ಹೀನಾವಸ್ಥೆಯನ್ನೈದಿಹುದು.

●

ಮೇಷರಾಶಿ—

ಮನುಷ್ಯನ ಚಿಂತೆಗೆಲ್ಲನೇಕ ಕಾರಣಗಳಿದ್ದರೂ ಅವುಗಳಲ್ಲಿ ಮುಖ್ಯವಾಗಿ ಶ್ರೀ ಮತ್ತು ಸ್ತ್ರೀಯರು ಕಾರಣರಾಗಿರುವರು. ಇವೆರಡರಲ್ಲಿಯೂ ಸ್ತ್ರೀಯರಿಗಿಂತ ಧನಕ್ಕೇನೇ ಹೆಚ್ಚಿನ ಪ್ರಾಧಾನ್ಯವಿದೆ. ಯಾಕೆಂದರೆ "ಹಣವೇ ನಿನ್ನಯ ಗುಣವೆಷ್ಟು ವರ್ಣಿಸಲಿ" ಎಂಬ ಪದ್ಯದಲ್ಲಿ ಇದರ ಮಾಹಾತ್ಮ್ಯೆಯನ್ನು ವರ್ಣಿಸಿರುವರು. ಆದಕಾರಣ ಹಣವನ್ನು ಬಯಸದಿರುವ ಮನುಷ್ಯನಿಲ್ಲ. ಇದರಿಂದ ಸಂಭವಿಸತಕ್ಕ ಕೇಡನ್ನು ಯಾರೂ ಗಮನಿಸುವುದಿಲ್ಲ. ಈ ಕಲಿಕಾಲದಲ್ಲಿಂತೂ ಕೊಟ್ಟದ್ದನ್ನು ತಿರುಗಿ ಕೊಡತಕ್ಕವರು ಬಹಳ ವಿರಳ. ಈ ದೋಷದಿಂದಾಗಿ ನಿಮಗೆ ಪರಸ್ಪರ ಜಗಳವಾಗುವುದು. ದೇಹದಲ್ಲಿಯೂ ಅಲಸ್ಯವು ಕಂಡುಬರುವುದು. ಆಪ್ತಜನರಲ್ಲೂ ಮನಃಕ್ಲೇಶವುಂಟಾಗುವುದು. ಇಷ್ಟೆಲ್ಲಾ ವ್ಯಸನಗಳಿಂದ ಆಶಾಂತರಾದ ನಿಮಗೆ ವಸತಿಯಲ್ಲಿಯೂ ಸುಖವಿಲ್ಲವು. ಖರ್ಚಿಗೆ ಬೇಕಾದ ಉತ್ಪತ್ತಿಯೂ ಕೂಡ ಇಲ್ಲದಿರುವುದರಿಂದ ಯಾವಾಗಲೂ ವಿಷಣ್ಣವದನರಾಗಿರುವ ನಿಮಗೆ ವಾರದ ಆದ್ಯರ್ಧಭಾಗದಲ್ಲಿ ಹೆಚ್ಚಿನ ಅನಿಷ್ಟಗಳು ಸಂಭವಿಸುವವು.

ವೃಷಭರಾಶಿ—

ಕುಜಶನಿಗಳು ನಿಮಗನುಕೂಲರಿರುವ ಪ್ರಯುಕ್ತ ಸಾಂಪತ್ತಿಕ ಸ್ಥಿತಿಯು ಬಹ್ವಂಶ ಸುಧಾರಿಸಿರುವುದು. ವಿರೋಧಿಗಳ ಕಪಟೋಪಾಯಗಳಿಂದ ನಷ್ಟ ಪಾರಾಗುವಿರಿ. ಇತರ ಗ್ರಹರಿಂದ ೧ ಕೆಲವು ಕಾರ್ಯಗಳು ನಿಮ್ಮಂತೆ ಪೂರ್ತಿಗೊಳ್ಳದಿರುವುದರಿಂದಲೂ, ಸಮಾಜದಲ್ಲಿ ಹೆಚ್ಚಿನವರಿಂದ ಕಲಹವಾಗುವುದರಿಂದಲೂ, ಸ್ವಸ್ತ್ರೀಯೇ ನಿಮಗೆ ಪ್ರತಿಕೂಲಳಾಗಿ ವರ್ತಿಸುವುದರಿಂದಲೂ ನಿಮ್ಮ ಮನಸ್ಸು ಅತ್ಯಂತ ಕಲುಷಿತವಾಗುವುದು. ಸ್ಥಾನ ನಾಶಕ್ಕೆ ಕಾರಣಗಳಾದ ಕೆಲವೊಂದು ಕ್ರಿಯೆಗಳು ಅಜ್ಞಾನವಶದಿಂದ ನಡೆದು ಹೋಗುವವು. ಅರೋಗ್ಯ ವಿಷಯದಲ್ಲಿ ಹೆಚ್ಚಿನ ಗಮನವನ್ನಿಡತಕ್ಕದ್ದು. ತಾ 15, 16 ಮತ್ತು 22 ಗಳಲ್ಲಿ ಅರ್ಥನಾಶ, ಆಕಸ್ಮಾತ್ ಪ್ರಯಾಣದಲ್ಲಿ ಹೆಚ್ಚಿನ ದುಃಖ ಇತ್ಯಾದ್ಯನಿಷ್ಟಗಳು ಸಂಭವಿಸುವವು.

ಮಿಥುನರಾಶಿ—

"ಪ್ರಕ್ಷಾಳನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಂ" ಕೆಸರನ್ನು ಮುಟ್ಟಿ ಆ ಬಳಿಕ ತೊಳೆದುಕೊಳ್ಳುವ ಬದಲಾಗಿ ದೂರದಲ್ಲಿಯೇ ಇದ್ದು ಮುಟ್ಟದಿರುವುದು ಎಷ್ಟೋ ಲೇಸೆಂದು ಪ್ರಾಜ್ಞರ ಹೇಳಿಕೆ. ಆದುದರಿಂದ ನೀವು ಈ ಮೊದಲು ಕೆಲವು ಅಕಾರ್ಯಗಳನ್ನು ಮಾಡಿ ಆ ಮೇಲೆ ತನ್ನಿವೃತ್ತಿಗೋಸ್ಕರ ಧನವ್ಯಯಿಸುವುದಕ್ಕಿಂತ ಮೊದಲೇ ವಿಚಾರ ಮಾಡಿ ಕಾರ್ಯವನ್ನು ಮಾಡುವುದು ಎಷ್ಟೋ ಒಳ್ಳಿತು. ಬಂಧುಮಿತ್ರರು ನಿಮಗೆ ಅನುಕೂಲರಿರುವುದರಿಂದ ಶತ್ರುಗಳನ್ನು ಮರ್ದಿಸಲು ಶಕ್ತರಿರುವಿರಿ. ಕೆಲವು ಕಾರ್ಯಗಳಲ್ಲಿ ಜಯವೂ, ಧನಲಾಭವೂ ಆಗಲಿದ್ದರೂ [illegible] ಚಾತುರ್ಯದಿಂದಾಗಿಯೂ ಪರರ ಅಸೂಯೆಯಿಂದಲೂ ಅದು ನಿಮ್ಮ ಕೈಸೇರದೆ ಹೋಗವುದು. ತಾ. 19ರಿಂದ ವಾರಾಂತ್ಯದ ವರೆಗಿನ ದಿನಗಳು ಚೆನ್ನಾಗಿರುವುದರಿಂದ ಆರೋಗ್ಯ, ಸ್ತ್ರೀಸುಖ, ಧನಲಾಭ, ಸುಖಗಳು ಲಭಿಸುವವು.

ಕರ್ಕಾಟಕರಾಶಿ—

"ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" ಕೇವಲ ಧರ್ಮವೊಂದರಿಂದಲೇ ಸಮಸ್ತವಾದ ಈ ಜಗತ್ತು ನಡೆಯುವುದು. ಲೋಕದ ಕಲ್ಯಾಣವೂ ಕೂಡ ಈ ಧರ್ಮವನ್ನನುಸರಿಸಿಕೊಂಡೇ ಇದೆ. ಕಾಲ ಮಹಿಮೆಯಿಂದಾಗಿ ಈ ಸಮಯದಲ್ಲಿ ಅಂಥಾ ಧರ್ಮಕ್ಕೆ ಹೆಚ್ಚಿನಂಶ ಹಾನಿ ಬಂದಿದೆ. ನೀವೂ ಕೂಡ ಅದನ್ನು ಹೊರತಾಗಿದ್ದವರಲ್ಲ. ಇದರ ಪರಿಣಾಮವಾಗಿ ನಿಮ್ಮ ಉದ್ಯೋಗದಲ್ಲಿ ದಿನಹಾನಿಯೂ ಕಾರ್ಯಗಳಿಗೆ ಅನೇಕ ವಿಘ್ನಗಳೂ ಬರುವವು. ಕೆಲವು ಕಾರ್ಯಗಳಲ್ಲಿ ನಿಮಗೆ ಈ ಹಿಂದಿಗಿಂತ ಎಷ್ಟೋ ಉತ್ತಮ ಪರಿಸ್ಥಿತಿ ಬಂದಿರುವವು. ಆದರೂ ಋಣದ ತಾಪತ್ರಯದಿಂದ ನೀವು ಬಹಳ ಬಿಕ್ಕಟ್ಟಿನಲ್ಲಿ ಸಿಕ್ಕಿಬೀಳುವಿರಿ. ತಾ. 17ರಿಂದ 21ರ ವರೆಗಿನ ದಿನಗಳು ಚೆನ್ನಾಗಿಲ್ಲದಿರುವುದರಿಂದ, ಬಂಧುಗಳಲ್ಲಿ ಮನಸ್ತಾಪ, ಕಲಹ, ಉದರರೋಗ, ಅಪಜಯ, ಮಾರ್ಗಾಯಾಸ ಇತ್ಯಾದಿಗಳು ಸಂಭವಿಸುವವು.

ಸಿಂಹರಾಶಿ—

ಈ ವಾರವು ನಿಮಗೆ ಶುಭಾಶುಭ ಫಲಗಳ ಮಿಶ್ರದಿಂದಾಗಿ ಹೆಚ್ಚಿನ ಹಾನಿ ವಾ ವೃದ್ಧಿಯಾಗಿ ಪರಿಣಮಿಸದು. ನಿರುದ್ಯೋಗಿಗಳು ಸ್ವಾವಲಂಬನೆಯ ವೃತ್ತಿಯನ್ನು ಕೈಕೊಳ್ಳುವರು. ವ್ಯಾಪಾರೀ ಜನರಿಗೆ ಯಾವ ರೀತಿಯಿಂದಲೂ ನಷ್ಟವಾಗದು. ಆದಾಗ್ಯೂ ಕೆಲವೊಮ್ಮೆ ಸಣ್ಣ ಸಣ್ಣ ಗೃಹಚ್ಛಿದ್ರರಿಂದಾಗಿ ಕುಟುಂಬದಲ್ಲಿ ಮನಸ್ತಾಪವುಂಟಾಗುವುದು. ಇದರಿಂದಾಗಿ ಮನೋವ್ಯಥೆಯು ಅಧಿಕವಾಗುವುದು. ಆರೋಗ್ಯದ ಮಟ್ಟಿಗೆ ಈ ವಾರವು ಅಷ್ಟೊಂದು ಪ್ರಶಸ್ತವಾಗಿಲ್ಲವು. ತಾ. 17, 18ರ ಹೊರತು ಇತರ ದಿನಗಳಲ್ಲಿ ಶತ್ರುಗಳಿಂದ ಭಯವೂ ಧನಮಾನಗಳಿಗೆ ಹಾನಿಯೂ ಉಂಟಾಗಿ ಶೋಕಕ್ಕೀಡಾಗುವಿರಿ.

ಕನ್ಯಾರಾಶಿ—

ಲೋಕದಲ್ಲಿ ಧನವು ಸರ್ವಮಾನ್ಯವಾಗಿರವುದು. ಆದಕಾರಣ ಆಬಾಲವೃದ್ಧರಾದಿಯಾಗಿ ವೃದ್ಧರ ವರಿಯಂತವೂ ಧನವನ್ನಪೇಕ್ಷಿಸದವರಿಲ್ಲ. ಆದರೆ ಇದರಿಂದ ಎಷ್ಟೊಂದು ಕೇಡುಗಳು ಸಂಭವಿಸುವವೆಂದು ಒಂದು ಕಡೆ ಹೇಳಿರುವರು. "ಧನಾನಾಂ ಅರ್ಜನೇ ದುಃಖಂ ಅರ್ಜಿತಾನಾಂ ಚ ರಕ್ಷಣೇ । ಆಯೇ ದುಃಖಂ ವ್ಯಯೇ ದುಃಖಂ ಧಿಗ್ಧನಾ ದುಃಖಭಾಜನಂ" ॥ ಎಂದು. ಹಣವನ್ನು ಸಂಪಾದಿಸುವಾಗಲೂ ದುಃಖವು, ಸಂಪಾದಿಸಿದ ಹಣವನ್ನು ಇತರ ಕಳ್ಳಕಾಕರಿಂದ ರಕ್ಷಿಸುವ ಸಲುವಾಗಿ ಆಗಲೂ ದುಃಖವು. ಸಂಪಾದಿಸುವಾಗಲೂ, ಖರ್ಚಾಗುವಾಗಲೂ ದುಃಖದಾಯಕವಾದ ಈ ಧನಕ್ಕೆ ಧಿಕ್ಕಾರವಿರಲಿ ಎಂದಿರುವರು. ನೀವು ಕಷ್ಟದಿಂದ ಗಳಿಸಿದ ಹಣವನ್ನು ವೈರಿಗಳಿಂದ ರಕ್ಷಿಸುವ ಸಲುವಾಗಿ ಮತ್ತು ಇಷ್ಟಾರ್ಥವಿಲ್ಲದೇನೇ ಅಪವ್ಯಯವಾಗುವುದರಿಂದ ಹೆಚ್ಚಿನ ದುಃಖಿತರಾಗುವಿರಿ. ಶಿರೋವ್ಯಾಧಿಯಿಂದ ಅನೇಕ ದುಃಸ್ವಪ್ನಗಳು ಬೀಳುವವು. ಶತ್ರುಪೀಡೆಯಿಂದುಂಟಾದ ಮನೋವ್ಯಥೆಯಿಂದಲೂ ಇತರ ಅನಿಷ್ಟಗಳಿಂದಲೂ ನೀವು ಮನೆ ಬಿಟ್ಟು ಸಿಡುಕಟ್ಟಿ ಅಲೆಯುವಿರಿ. ತಾ 17, 18 ಮತ್ತು 21, 22ರ ದಿನಗಳು ಹೆಚ್ಚಿನ ದುಃಖದಾಯಕಗಳಾಗಿವೆ.

ತುಲಾರಾಶಿ—

ಸರ್ವತೋಮುಖದಿಂದ ಅಭಿವೃದ್ಧಿಯ ಚಿಹ್ನೆಗಳೇ ಕಂಡುಬರುತ್ತವೆ. ನಿಮ್ಮ ತೇಜೋಬಲವು ಮಂಗಳಿಯಲ್ಲಿ ಶತ್ರುಗಳು ತಮ್ಮ ಪ್ರಾಣ ಉಳಿಸಿಕೊಳ್ಳುವರು. ಸರ್ವತ್ರ ಕಾರ್ಯಗಳಲ್ಲಿ ಜಯ, ಧನಗಳು ಲಭಿಸುವವು. ಒಂದೊಮ್ಮೆ ಕೆಲವು ಕಾರ್ಯಗಳಲ್ಲಿ ಅಪಜಯವಾದರೂ ಎಳ್ಳಷ್ಟೂ ನಷ್ಟವಿಲ್ಲವು. ಪತ್ನೀ ಪುತ್ರ ಭೃತ್ಯರಿಂದಾನ್ಯಕವಾದ ಕುಟುಂಬದಲ್ಲಿ ಶುಭಕಾರ್ಯಗಳು ಜರುಗುವವು. ಗೃಹಸ್ಥ ಜೀವನವು ಸುಖಮಯವಾಗಿ ತೋರುವುದು. ಮಧ್ಯೇ ಮಧ್ಯೇ ಸಂಭವಿಸುವ ಕಳತ್ರ ಕಲಹವು ಪ್ರಣಯಕೋಪವಾಗಿ ಪರಿಣಮಿಸುವುದು. ಆದರೆ ನೀವು ವಾಹನಾದಿಗಳ ಸಂಚಾರದಲ್ಲಿ ಮತ್ತು ಕಳ್ಳಕಾಕರು, ವಗ್ನಿರೋಗಗಳಿಂದ ಮಾಡತಕ್ಕ ಕಾರ್ಯಗಳಲ್ಲಿ ವಿಶೇಷ ಜಾಗ್ರತೆ ವಹಿಸಿ. ಆಕಸ್ಮಾತ್ ಗಾಯಾದಿಗಳುಂಟಾಗುವವು. ತಾ. 17, 18, 21, 22 ವಿಶೇಷ ಉತ್ತಮಗಳಾಗಿವೆ.

ವೃಶ್ಚಿಕರಾಶಿ—

ನಿಮಗೆ ಈ ವಾರವು ಹೆಚ್ಚಿನ ಮಟ್ಟಿಗೆ ಒಳ್ಳೆಯದಿಲ್ಲವು. ಯಾವ ಕಾರ್ಯವನ್ನೂ ಮಾಡಲು ನಿಮ್ಮಲ್ಲಿ ಸ್ವಯಂ ಶಕ್ತಿಯಿಲ್ಲದಿರುವುದರಿಂದಲೂ ಮತ್ತು ಇತರರಲ್ಲಿ ನಿಮಗೆ ವಿಶ್ವಾಸವಿಲ್ಲದಿರುವುದರಿಂದಲೂ ನಿರುದ್ಯೋಗಿಗಳಾಗಿರಬೇಕಾಗುವುದು. ಅಂತರ್ಯದಲ್ಲಿ ಅನಿರ್ವಚ್ಯವಾದೊಂದು ಭಯವು ಕಂಡು ಬರುವುದು. ಹೆಚ್ಚಿನವರು ನಿಮ್ಮೊಡನೆ ಜಗಳಾಡಲೂ ನಿಮ್ಮಲ್ಲಿ ಮತ್ಸರಬುದ್ಧಿ ಹುಟ್ಟಲೂ ನಿಮ್ಮ ದುರ್ಗುಣಗಳೇ ಕಾರಣಗಳಾಗಿವೆ. ಸ್ತ್ರೀ ಪ್ರಕೋಪ ನೇತ್ರಪೀಡನ ಇತ್ಯಾದ್ಯನರ್ಥಗಳು ಸಂಭವಿಸುವವು. ಇಷ್ಟರಲ್ಲಿ ನೀವು ಸ್ವತಂತ್ರರಾಗಿಯೇ ನಿಮ್ಮ ಕಾಲವನ್ನು ಕಳೆಯುತ್ತಿರುವುದು ಸಂತೋಷದ ವಿಷಯ. ತಾ 15, 16 ಮತ್ತು 19, 20 ಈ ದಿನಗಳಲ್ಲಿ ಮಿತ್ರಸಮಾಗಮ, ಸಂತೋಷ.

ಧನುರಾಶಿ—

ಮನೋವಾಕ್ಕಾಯಗಳೆಂಬ ತ್ರಿಕರಣಗಳಲ್ಲಿ ಮನಸ್ಸು ಕೆಟ್ಟಿರುವುದು. ಇದರಿಂದ ನೀವು ಬಾಯಲ್ಲೊಂದು ಹೇಳಿ ಕಾರ್ಯದಲ್ಲಿ ಅನ್ಯಥಾ ಮಾಡುವಿರಿ. ಇದು ನಿಮ್ಮ ಮಿತ್ರವೃಂದಕ್ಕೆ ಮನನೋಯಿಸುವದು. ದೇಹದಲ್ಲಿ ಆಯಾಸ, ಶಿರೋದರ ರೋಗಗಳು ತಲೆದೋರುವುವು. ಇತರ ವ್ಯಾವಹಾರಿಕ ಸಂಬಂಧವಾದ ಕೋರ್ಟುಕಛೇರಿ ಕಾರ್ಯಗಳಲ್ಲೂ ವ್ಯಾಪಾರಾದಿ ಉದ್ಯೋಗಗಳಲ್ಲೂ ಇಷ್ಟಾರ್ಥವು ನೆರವೇರವುದು. ಸಾರ್ವಜನಿಕ ಕಾರ್ಯಗಳಲ್ಲಿ ಜನಾದರಕ್ಕೆ ಪಾತ್ರರಾಗುವಿರಿ. ವ್ಯಯಕ್ಕಿಂತ ಆಯವು ವಿಶೇಷ ಅಧಿಕವಾಗಿರುವುದರಿಂದ ಸಾಂಪತ್ತಿಕ ಸ್ಥಿತಿಯು ಸುಧಾರಿಸುವುದು. ತಾ. 15ರಿಂದ 18ರ ವರೆಗೆ ಮತ್ತು 22 ಈ ದಿನಗಳಲ್ಲಿ ನಾನಾವಿಧ ಲಾಭ, ಇಷ್ಟಸಿದ್ಧಿಗಳು, ಇವುಗಳಿಂದ ಸಂತೋಷ ಲಭಿಸುವದು.

ಮಕರರಾಶಿ—

ಸ್ವಯಂ ನೀವು ಆರಕ್ತರಿದ್ದರೂ ಶತ್ರುಗಳಿಂದುಂಟಾಗುವ ವಿಪನ್ನಾವಸ್ಥೆಯಲ್ಲಿ ಸಶಕ್ತರಿರುವಿರಿ. ಧಾನ್ಯ, ಪಶು, ಭೃತ್ಯ ಇವರಿಂದೊಡಗೂಡಿದ ಗೃಹಸಂಪತ್ತಿಗೆ ಅದುಭಾಗದಲ್ಲೂ ಕೊರತೆಯುಳ್ಳವರು. ಸ್ವಗೋತ್ರ ಧರ್ಮಕರ್ಮಾಚರಣೆಗಳಿಗೆ ವಿಶೇಷ ವಿಘ್ನವಾಗದು. ಆದರೂ ವಾಕ್ಸಂಬಂಧವಾಗಿ ಕಲಹವುಂಟಾಗಿ ಮಾನಹಾನಿಯೂ ಸಂಭವಿಸಲೂ ಆಗಲಿದೆ. ಆದಕಾರಣ ವ್ಯವಹಾರದಲ್ಲಿ ತುಂಬಾ ಎಚ್ಚರಿಕೆಯಿಂದಿರತಕ್ಕದ್ದು. ಕೆಲವು ಕಾರ್ಯಗಳು ನಿಮ್ಮ ಇಚ್ಛೆಗೆ ವಿರೋಧವಾಗಿ ಕೊನೆಗಾಣುವುದರಿಂದ ಮಾನಸಿಕ ವ್ಯಥೆಯು ಉಂಟಾಗುವದು. ಪ್ರಯಾಣಕ್ಕೆ ಈ ವಾರವು ಹಿತಕರವಲ್ಲ. ತಾ 17ರಿಂದ 21ರ ವರೆಗಿನ ದಿನಗಳು ಸರ್ವವಿಧದಿಂದಲೂ ಉತ್ಕೃಷ್ಟಗಳಾಗಿವೆ.

ಕುಂಭರಾಶಿ—

ನಿಮಗೇನೋ ಈ ವಾರವು ಹೆಚ್ಚಿನ ಉತ್ತಮವೆಂದು ಹೇಳಲಾಗದು. ಆದರೂ ನಿಮ್ಮ ಪೂರ್ವಕರ್ಮಾರ್ಜಿತ ಶಕ್ತಿಯು ವಿಶೇಷವಾಗಿರುವುದರಿಂದ ಎಂತಹ ಕಷ್ಟಸಾಧ್ಯವಾದ ಕಾರ್ಯವೇ ಆಗಿರಲಿ ನಿಮ್ಮ ವಿಘ್ನಕ್ಕದು ತೃಣಸಮಾನ. ಕೈಕೊಂಡ ಹೆಚ್ಚಿನ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ವಿವಿಧ ವೈಭವಯುಕ್ತರಾದ ನಿಮಗೆ ಪರರಿಂದ ಮಾನಸಮ್ಮಾನಗಳೂ ತುಂಬಾ ಸಿಗುವವು. ಅನೇಕ ರೀತಿಯ ಲಾಭವು, ವಿವಾಹಿಕರಿಗೆ ಸ್ತ್ರೀಪುತ್ರಲಾಭವು. ಆರೋಗ್ಯದ ಮಟ್ಟಿಗೆ ಈ ವಾರವು ಬಹಳ ಹೀನವು. ದೇಹದಲ್ಲಿ ರೋಗಬಾಧೆಯಿಂದ ಶಕ್ತಿ ಕಡಿಮೆಯಾಗಿ ಮನಸ್ಸು ಚಂಚಲವಾಗುವುದು. ಸಣ್ಣಪುಟ್ಟ ವಿಷಯದಲ್ಲಿ ಹೆಚ್ಚಿನಂಶವನ್ನು ವ್ಯರ್ಥ ವ್ಯಯಿಸುವಿರಿ. ತಾ 19ರಿಂದ ವಾರಾಂತ್ಯದ ವರೆಗಿನ ದಿನಗಳಲ್ಲಿ ಮಿತ್ರಲಾಭ, ಇಷ್ಟಾರ್ಥಸಿದ್ಧಿ.

ಮೀನರಾಶಿ—

ನಿಮ್ಮ ಕಾರ್ಯವನ್ನು ನೀವು ಸ್ವಯಂ ಪೂರೈಸಿಕೊಳ್ಳಲು ಶಕ್ತರಾಗದೆ ಇನ್ನೊಬ್ಬರ ನೆರವನ್ನು ಸಂಪಾದಿಸುವಿರಿ. ಸ್ತ್ರೀಯರು ಕೂಡ ನಿಮ್ಮ ಪಕ್ಷದವರಾಗುವರು. ಆದರೇನು ನಿಮ್ಮ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿಲ್ಲವು. ಕಾರಣ ನಿಮಗೆ ವಿರೋಧಿಗಳು ಹೆಚ್ಚಿದ್ದು ಪ್ರತಿಕ್ಷಣದಲ್ಲಿಯೂ ನಿಮಗೆ ಸವಾಲು ಹಾಕುತ್ತಿರುವರು. ನಿಮ್ಮ ಸ್ವಂತ ಕಾರ್ಯಗಳಿಗೆ ಅನೇಕ ಕಷ್ಟಗಳನ್ನು ತಂದೊಡ್ಡುವರು. ಆಯಕ್ಕಿಂತ ವ್ಯಯವು ಅಧಿಕವಾಗುವುದು. ದೇಹಾರೋಗ್ಯವು ಕೆಟ್ಟು ಹೋಗುವುದು. ಆಕಸ್ಮಾತ್ತಾಗಿ ಒದಗಿದ ಪ್ರವಾಸದ ಒಂದು ಮಾರ್ಗದಲ್ಲಿ ನಾನಾ ತರದ ಕಷ್ಟಗಳಿಗೆ ಈಡಾಗುವಿರಿ. ದೇಹದಲ್ಲಿ ಗಾಯಾದಿಗಳಾಗಲಿವೆ. ತಾ 17ರಿಂದ 21ರ ವರೆಗೆ ಬಹಳ ಅನಿಷ್ಟಗಳು ಸಂಭವಿಸಲಿರುವವು. ಜಾಗರೂಕರಾಗಿದ್ದರೆ ಒಳ್ಳಿತಾದೀತು.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್‌ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ „ „ 0—1—3
೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ „ 0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅಮೃತ. ಬೆಲೆ 0–4–0, 0–2–0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0–4–0

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸಹಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ ಬೆಲೆ: 0–8–0 ಮತ್ತು ರೂ 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:—ಕುಂದಾಪುರ ಕಾಮತ್ಸ್ ಸ್ವದೇಶಿ ಎಂಪೋರಿಯಂ, ಬ್ರಹ್ಮಾವರ—ಜಿ ಕೃಷ್ಣ ಕಾಮಂತರ, ಉಡುಪಿ—ಡಿಯ [illegible] ಏಜಂಟರು. ಕಾರ್ಕಳ—ವಿ. ವಿ ಶೆಣೈ—ಕೆಮಿಸ್ಟ್, ಮಾಸರಗೋಡು—[illegible] ಹೌಸ್, ಕತ್ತೂರು—ಬಿ ಪಾಂಡುರಂಗ [illegible] ಭಂಡಾರಿ ವ ಪ್ರಸ್ಥ [illegible], ಮಲ್ಕಿ ಬಿ ಎಸ್ [illegible] ಮರ್ಚಂಟ್, ವ ಊದಬಿದ್ರೆ ಸಂಜೀವ ಶೇನಗಿರಿ ಪ್ರಭು ಬ್ರದರ್ಸ್, ಬಂಟ್ವಾಳ—ಪ್ರಭು ಅಂಡ್ ಕೋ, ಉಡುಪಿ—ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ

ಸ್ವಾವಲಂಬನದ ಹಾದಿ ಹಿಡಿಸುವುದೇ ಜೀವನಸಮಸ್ಯೆಯನ್ನು ಬಿಡಿಸುವುದು.

ಪುಟ ೭೩ರಿಂದ

ಜಾಮೀನಾಗಿ ಹಾಕುವುದೊಂದು ಗೌರವದ ಸ್ಥಾನವೇಂತ ತಿಳಕೊಂಡೆ ನನ್ನ ದಸ್ಕತ್ತಿಗೆ ಎಷ್ಟು ಬೆಲೆ ಉಂಟೊಂತ ನೋಡಿ ಹಿರಿಹಿರಿ ಹಿಗ್ಗಿಕೊಂಡೆ! ಈಗ ತಗ್ಗಿಬಗ್ಗಿ ಹೋಗಿದ್ದೇನೆ-ಹ್ಯಾಗಂತೀರಾ? ಕಡೇಗೆ ನನ್ನ ಭಾವನ ಹುಂಡಿ ನಿಂತಿತು-ಬ್ಯಾಂಕಿನ ನೋಟೀಸು ಹೊರಟಿತು. ಸ್ವಲ್ಪವಾ, ನಾವು ತಂದೆ ಮಕ್ಕಳೂಂತ ೩೦ ಸಾವಿರಕ್ಕೆ ಜಾಮೀನು, ಮಾರಾಯ-ಕಡೇಗೆ ತಾಯಿ ಕೊಟ್ಟ ಆಸ್ತಿ ಈಡು ಹಾಕಿ ಒಮ್ಮೆಗೆ ಹತ್ತಿರ ಒಂದು ಪಾರಿಯನ್ನು ದೂರ ದೂಡಿದೆವು. ಈಗ ಬಡ್ಡಿಗಿಡ್ಡಿಯೆಲ್ಲಾ ಬಾಕಿ! ತಂದೆಯವರು ಈ ಶೋಕದಲ್ಲಿ ಕೊರಗಿ ಹೋದರು-ತಾಯಿಯು ಸಾಯುತ್ತಾ ಇದ್ದಾರೆ-ನಾನು ಎಂತೂ ಪರದೇಶಿಯಾಗಿದ್ದೇನೆ. ಅವನಿಗೂ ಇಲ್ಲ-ನಮಗೂ ಇಲ್ಲ ನಮಗೆ ದಾರಿ ಕೊಟ್ಟದ್ದೇನೆಂಬ ಒಂದು ಓಟಿತ್ತು ನಮ್ಮ ತಂದೆಯವರಿಗೆ. ನಮಗೆ ತಾಯಿ ಮಕ್ಕಳಿಗೆ, ಸಿಕ್ಕಿತು ತುಂಬಾ ಏಂಬ ಒಂದು ಮನೆ ಇತ್ತು-ಎರಡೂ ನಮ್ಮ ತಂದೆ ತಾಯಿಯ ಕಣ್ಣೆದುರಿಗೇನೇ ಹಾರಿಹೋಯಿತು-ಈಗ ಏನು ಮಾಡೋದು? ಯಾವ ಗುಂಡಿಗೆ ಹಾರೋದು? ಈ ಪ್ರಾಯದಲ್ಲಿ ಏನು ಮಾಡ್ಲಿಕ್ಕಾದೀತು! ನನಗೆ ಈಗ 7 ವರ್ಷ ಮೀರಿ ಹೋಯ್ತು ಇನ್ನು ಯಾವ ಕೆಲಸ ಕಲಿಯಲಿಕ್ಕೂ ಸಾಧ್ಯವಿಲ್ಲ-ಒಟ್ಟರೆ ಮೇಲೆ ತಂದ ಆಸ್ತಿ ಕೊಟ್ಟ ನಮ್ಮ ಹುಂಡಿ ಹೇಗಾಯಿತಲ್ಲಾ. ಈಗ ನನ್ನ ನೋಸ ಒಂದು ಉಂಟು, ಅದೇ ಆ ತೋರ ಭಾವನ ಮಗಳು. ಅದಕ್ಕೆ ಲಗ್ನವಾಗುವ ಬಗೆ ಹೇಗೆ ಹೇಳಿ! ರಾಮಶೆಟ್ರೇ, ನಿಮಗೆ ಮಕ್ಕಳೆಷ್ಟು? ನೀವೇನಾದರೂ ಹುಂಡಿ ಮಕ್ಕಳಿಗೆ ಗಂಟುಮಾಡಿ ಕೊಟ್ಟದ್ದೀರಾ?

ರಾಮಶೆಟ್ರು—ನನಗೆ ನಾಲ್ಕು ಮಕ್ಕಳು-ಎರಡು ಹೆಣ್ಣು, ಎರಡು ಗಂಡು-ಹುಡುಗಿ ಮಕ್ಕಳಿಗೆ ಸ್ವಲ್ಪ ಕೊಡುತ್ತೇನೆ. ಇಷ್ಟರವರೆಗೆ ಕೊಡಲಿಲ್ಲ. ನನ್ನ ಕಾಲದ ನಂತರ ಅವರೇನಾದರೂ ಕೇಳಬಾರದ ಹಾಗೆ ಆಪದ್ಧನವಾಗಿ ಸ್ವಲ್ಪ ಅವರ ಹೆಸರಲ್ಲಿ ಮಾಡಿಡಬೇಕು. ಅದಕ್ಕಿಂತ ಹೆಚ್ಚು ಕೊಟ್ಟಿಟ್ಟರೆ ನನ್ನ ಮಕ್ಕಳು ಮದಾಂಧರಾದಾರು. ಮಿಕ್ಕುಳಿದ ಹಣವನ್ನು ಒಂದು ಟ್ರಸ್ಟ್ (Trust) ಮಾಡಬೇಕೆಂದಿದ್ದೇನೆ. ಅದರ ಉದ್ದೇಶವೇನೆಂದರೆ, ನಮ್ಮ ಜಾತಿಯಲ್ಲಿ ತಂದೆತಾಯಿಗಳು ತೀರಿಹೋದ ಪಾಪದ ಹುಡುಗಿಯರ ಲಗ್ನಕ್ಕೆ ಕೈಕೊಡು ಬಡ ಹುಡುಗರಿಗೆ ಏನಾದರೊಂದು ಚಿಕ್ಕ ಉದ್ಯೋಗ ತೊಡಗಲಿಕ್ಕೆ ಮೂಲಧನವಾಗಿ ಹಣ ತೆಕ್ಕೊ, ಮುಂದೆ ಅವರು ಅವರ ಕಾಲಿಂದಲೇ ಜೀವನ ಹಾದಿ ಹಿಡಿದು ಸಾಗುವಂತೆ ಮಾಡೋದೇ. ಹೋಸ್ಟೆಲಿಗೆ ಕೆಲವು ಸಾವಿರ ಕೊಡಬೇಕೆಂದು ಉಂಟು. ದೂಮಹೆಗ್ಗಡೇರೇ, ನಮ್ಮ ಎಲ್ಲಾ ಹಣವನ್ನು ಮಕ್ಕಳಿಗೇನೇ ಕೊಟ್ಟರೆ ಒಮ್ಮೆ ಕೇಡುಂಟು-ಆ ಹಣವನ್ನು ನಂಬಿ ನಿರುದ್ಯೋಗಿಗಳಾಗಿ ಅವರು ಕೆಟ್ಟುಹೋಗುತ್ತಾರೆ-ನಮ್ಮ ಕಷ್ಟಾರ್ಜಿತ ದುಡ್ಡನ್ನು ಲಗಾಡಿ ತೆಗೀತಾರೆ. ಹಾಗೆಮಾಡಿ ನಮ್ಮ ಹೆಸರಿಗೆ ಕಳಂಕ ತರುತ್ತಾರೆ. ಇದರ ಬದಲಾಗಿ ಅವರೊಂದು ಹಾದಿಹಿಡಿಯುವಲ್ಲಿಕ್ಕೆ ತಕ್ಕಷ್ಟು ಮಾತ್ರ ಅವರಿಗೆ ಕೊಟ್ಟರೆ ಅವರೂ ನಡೆದು ದುಡಿದು ಮುಂದೆ ಬರುತ್ತಾರೆ. ನಾವೂ ಕೊಟ್ಟದ್ದು ಅಕ್ಷಯಪಾತ್ರೆಯಾಗಿ ವೃದ್ಧಿಗೊಳ್ಳುತ್ತೆ—ಅದರಿಂದಾಗಿ ನಮ್ಮ ಹೆಸರು ಉಳಿಯುತ್ತೆ. ಮತ್ತು ಮಿಕ್ಕದ್ದನ್ನು ನಾವು ಧರ್ಮಸಂಸ್ಥೆಗಳಿಗೆ ಕೊಡುವುದರಿಂದ ನಮ್ಮ ಹೆಸರು ಬೆಳಗುತ್ತೆ—ಸಮಾಜಸೇವೆ ಮಾಡಿದ ಪುಣ್ಯವೊಂತೂ ಬೆಂಬತ್ತಿ ಬರುತ್ತೇನ್ನಿ! ಸ್ವಾವಲಂಬನದ ಹಾದಿಹಿಡಿದು ಮುಂದು ಬಂದ ಇನ್ನೊಂದು ದೃಷ್ಟಾಂತ ಹೇಳ್ತೇನೆ ನಿಮಗೆ. ನಮ್ಮ ಮನೆಯಲ್ಲಿ ಆಕಳು ಮೇಯಿಸುತ್ತಾ ಸುಬ್ಬು ಎಂಬವನೊಬ್ಬ ಇದ್ದಲ್ಲಾ? ಆ ಹುಡುಗ ಈಗ ಮದ್ರಾಸಿನಲ್ಲಿ ಬಹು ಕಾರುಬಾರು ಮಾಡುತ್ತಿದ್ದಾನೆ—ಗೊತ್ತೇ ನಿಮ್ಗೆ? ಅವನ 'ಮಂಗ್ಳೂರು ಬೀಡಿ ಕಂಪೆನಿ'ಯನ್ನೇ ಅವನ 'ಕೇಸರಿ ನಸ್ಯದ ಡಬ್ಬಿ'ಯನ್ನ ಮದ್ರಾಸಿನಲ್ಲಿ ಗೊತ್ತಿಲ್ಲದವರಿಲ್ಲ! ತುಂಬಾ ಹಣಮಾಡಿದ್ದಾನ್ರೀ! ಮೊನ್ನೆ ಸಿಕ್ಕಿದ ನನಗೆ—ಬೊಂಬಾಯಿಗೆ ಬಂದಿದ್ದ—

ಮಾಪು ಹೆಗ್ಗಡೇರು—ಏನು! ನಮ್ಮ ಸುಬ್ಬು, ಎಮ್ಮೆ ಮೇಯಿಸುತ್ತಿದ್ದ ಸುಬ್ಬುವಾ?—ನಮ್ಮ ಒಕ್ಲು, ನಮ್ಮ ಒಕ್ಲು! ದುಗ್ಗ ಶೆಟ್ಟಿ ಮಗನಾ? ಓ ದೇವರೇ—ಪ್ರಥಮ ನನ್ನಿಂದ ಅವನ ತಂದೆ ಮಗನಿಗೆ ಕೊಡಲಿಕ್ಕೆ ನೂರು ರೂಪಾಯಿ ತೆಕ್ಕೊಂಡು ಹೋಗಿದ್ದ—ಅದು ಹಿಂದೆ ಒಂದು ವರುಷದೊಳಗೆ ಕೊಟ್ಟದ್ದನಪ್ಪಾ. ಅದು ಆಯಿತಲ್ಲಾ. ಒಂದು ಸಂಗ್ತಿ ಮಾಡಬಹುದಾ-ನಮ್ಮ ಸೊಸೆ ಇತ್ತಲ್ಲಾ? ಪುಷ್ಪವತಿ, ನಮ್ಮ ತೋರಭಾವನ ಮಗಳು-ಅವಳಿಗೆ ಈ ಹುಡುಗನ ನೆಂಟಸ್ತಿಕೆ ಮಾಡುತ್ತೀರಾ? ಹ್ಯಾಗಾದ್ರೂ ಮಾಡಿ ಆಗಿಸಿ ಹಾಕೇಂದ್ರೆ! ದಮ್ಮಯ್ಯಾಂತ ಆದೀತು. ಸುಮ್ಮಗೆ ಸುಮ್ಮಗೆ ಗುತ್ತುಮನೆತನಾಂತ ಕಾಸುದುಡಿಯೋಕೆ ಗೊತ್ತಿಲ್ಲದವ್ರಿಕೆಲ್ಲಾ ಸಾಲ್ರಗಟ್ಲೆ ಬಡಿಕೊಟ್ಟು ನಮ್ಮ ದುಡ್ಡನ್ನು ಹಾಳು ಮಾಡ್ಕೊಂಡು ನಮ್ಮ ಮಕ್ಕಳನ್ನು ಕಡೇಗೆ ಕಣ್ಣೀರ ಕಡಲಿಗೆ ದೂಡೋದಕ್ಕಿಂತ ಇಂಥಾ ಗಂಡುಗಳು ನೂರುಪಾಲು ವಾಸೀಂತೇನೆ.

ರಾಮ ಶೆಟ್ರು ನೋಡಿದಿರಾ-ಶೆಟ್ರೇ,—ಸ್ವಾವಲಂಬನದ ಶಕ್ತಿ-ಮಕ್ಕಳಿಗೆ ಈ ದಾರಿಯನ್ನು ಹಿಡಿಸುವುದೇ ಜೀವನದ ಜಟಿಲ ಸಮಸ್ಯೆಯನ್ನೆಲ್ಲ ಬಿಡಿಸುವ ಏಕಮಾತ್ರ ಸುಲಭೋಪಾಯ. ನಮ್ಮ ನಿಮ್ಮ ಹಾದಿ ಬೇರಾದ್ರೂ ನಾವು ಬಂದುಕೂಡಿದ ಅಭಿಪ್ರಾಯ ಒಂದೇ. ಮಕ್ಕಳಿಗೆ ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಕಲಿಸುವ ಹೆತ್ತವರೂ ಗೆಲ್ತಾರೆ, ಮಕ್ಕಳೂ ಗೆಲ್ತಾರೆ. ಹಾಗೆ ಮಾಡದವರು ಅಳ್ತಾರೆ ಅವರ ಮಕ್ಕಳು ಗೋಳಿಡ್ತಾರೆ!

ಮುಂದಿನ ಲೇಖನ—
ನೀನೇ ಹುಟ್ಟು ಹಿಡಿ!

MATRIMONIAL

Wanted a beautiful Educated Muslim girl aged not more than 18 years, to marry a cultured Muslim youth of 26, well settled in life

Apply with Photo

'X'

C/o Navayuga, Udipi.

ಏನಂದಿರಿ!

ಕನ್ನಡದಲ್ಲಿ ಒಳ್ಳೇ ಪುಸ್ತಕಗಳಿಲ್ಲವೆಂದೆ? ಅದೇಕೆ?

ಅತ್ಯುತ್ತಮ ಐತಿಹಾಸಿಕ ಕಾದಂಬರಿಗಳೂ, ಚರಿತ್ರೆಗಳೂ, ರಸವತ್ತಾದ ಸಾಮಾಜಿಕ-ಪೌರಾಣಿಕ ಕಥೆ-ಕಾದಂಬರಿಗಳೂ, ಶ್ರೇಷ್ಠತರಗತಿಯ **ಹಾಗೂ** ಹೆಸರುವಾಸಿಗಳಾದ ಪತ್ತೇದಾರೀ ಕಥೆಗಳೂ ಶ್ರೀ ಶೇಷಾಚಲ ಗ್ರಂಥಮಾಲೆಯಲ್ಲಿ ಕಳೆದಹಿಂವರ್ಷಗಳಿಂದಲೂ ಕ್ರಮಶಃ ಪ್ರಕಟವಾಗುತ್ತಲಿದ್ದು ಅಂಥ ೧೦೦-೧೫೦ ಮನೋಹರ ಪುಸ್ತಕಗಳು ಈಗಾಗಲೇ ಹೊರಟು ಕನ್ನಡ ವಾಚಕರನ್ನು ತೃಪ್ತಿಗೊಳಿಸಿರುತ್ತವೆ. ಹಾಗು ಪ್ರತಿ ವರ್ಷವೂ ಈ ಗ್ರಂಥಮಾಲೆಯ ದ್ವಾರ ೩-೪ ಮಾಲಿಕೆಯ ಹೊಸ ಪುಸ್ತಕಗಳು ತಪ್ಪದೆ ಪ್ರಕಟವಾಗುತ್ತಲವೆ. ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ **ಬೆಲೆ ಕಡಿಮೆ**

ಅಪೇಕ್ಷಿತರು: **ಶ್ರೀ ಶೇಷಾಚಲ ಪ್ರೆಸ್,**
ಪೋ. ಆನಂದವನ (ಹಾವೇರಿ) ಜಿ. ಧಾರವಾಡ

ಈ ಅಡ್ರೆಸ್ಸಿಗೆ ಬರೆಯ ಬೇಕು. ಕ್ಯಾಟಲಾಗ್ ಫುಕ್ಕಟೆ. ವೇ. ಭ. ಪ್ರೊಫೆಸರ್ ಸಾವರಕರರಿಂದ ಬರೆಯಲ್ಪಟ್ಟ ರಮ್ಯ ಭೀಷಣ "**ಕಾಳೆಪಾಣಿ** ಪುಸ್ತಕವು ಕರಿನೀರು"ಎಂದು ಕನ್ನಡದಲ್ಲಿ ನಮ್ಮಿಂದ ಬೇಗನೇ ಪ್ರಕಟವಾಗುವುದು

ತಾರಾ ವಿಹಾರ ಗ್ರಂಥಮಾಲಾ

ಅಂತರ್ ರಾಷ್ಟ್ರೀಯ ಪ್ರಸಿದ್ಧಿಯನ್ನು ಪಡೆದ ಪಂಡಿತ ತಾರಾನಾಥರ ಹಾಗೂ ಇವರ ಸುಪ್ರಸಿದ್ಧ ಸಾಹಿತಿಗಳ ಪ್ರಚೋದನಾತ್ಮಕ ಕ್ರಾಂತಿಕಾರಕ ವಿಚಾರಗಳು ಗ್ರಂಥರೂಪವಾಗಿ ಪ್ರಕಟವಾಗುವವು. ೧ ವರ್ಷದಲ್ಲಿ ತಲೆ-ಎದೆಗಳನ್ನರಳಿಸುವ ಆರು ಗ್ರಂಥಗಳು ಹೊರಡುವವು. ಅಲ್ಲದೆ ಒಂದು ವಿಶೇಷಾಂಕವು ಉಚಿತವಾಗಿ ಕೊಡಲಾಗುವುದು.

ಚಂದಾ: **ಒಂದೇ ರೂಪಾಯಿ ಮಾತ್ರ.**

ಕರ್ನಾಟಕದ ಮೂಲೆಮೂಲೆಗೂ ಬೇಕಾದ ಪತ್ರ, ಜಾಹೀರಾತುಗಳಿಗೆ ಒಳ್ಳೇ ಸುಸಂಧಿ.

ವಿಶೇಷ ಮಾಹಿತಿಗೆ ಬರೆಯಿರಿ
ವಿಶೇಷ ಕಾರಣಗಳಿಂದ ವಿ. ಪಿ. ಕಳುಹಿಸಲಾಗುವುದಿಲ್ಲ

ಮ್ಯಾನೇಜರ್:
ತಾರಾ ವಿಹಾರ ಕಾರ್ಯಾಲಯ,
ಪ್ರೇಮಾಯತನ ಆಶ್ರಮ, **ತುಂಗಭದ್ರಾ.**

ಎಲ್ಲಾ ತರದ

ಶುದ್ಧ ಖಾದಿ

ಮಂಗಳೂರು

ಸ್ವದೇಶಿ ಸ್ಟೋರ್ಸ್,

ರಥಬೀದಿ — — ಮಂಗಳೂರು

ಅಖಿಲ ಭಾರತ ಚರಕಾ ಸಂಘದಿಂದ ಸರ್ಟಿಫೈ ಮಾಡಲ್ಪಟ್ಟಿದೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

ಜಗತ್ಪ್ರಸಿದ್ಧ

"ಗೊನೊಕಿಲರ್" ರಿಜಿಸ್ಟರ್ಡ್

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇನೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ ೩. ವಿ. ಪಿ. ಖರ್ಚು ೦-೩-೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮುದ್ದಾಂಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿಯ ಗುರುತಿನ ಸರಿಯಾದ ಗುರುತನ್ನು 'ಗೊನೊಕಿಲ್ಲರ್' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer **Dr D N. JASANI,** Vitalbhai Patel Road, BOMBAY 4

ಸುಂದರವಾದ ಸಾಜೂಕಾದ

ಪಾಕೆಟ್

ಡೈರಿಗಳು

(ಪೆನ್ಸಿಲು ಸಹಿತ)

ಕ್ರಯ 0—8—0 ಮಾತ್ರ

ಅಂಚೆ ವೆಚ್ಚ ಪ್ರತ್ಯೇಕ

ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುತ್ತೆ.

ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ಸಿಗುತ್ತವೆ.

ಬರೆಯಿರಿ:—

The Kanara Books & News Agency.

Batatawala Mansion, Lalbag,
Bombay 12.

ಹೈದರಾಬಾದ್ ರಾಜ್ಯದಲ್ಲಿ

(ಮಹಾತ್ಮಾ ನಾರಾಯಣ ಸ್ವಾಮಿಜೀ, ಸಾರ್ವದೇಶಿಕ ಆರ್ಯಪ್ರತಿನಿಧಿ ಸಭಾ, ದಿಲ್ಲಿ—ಇವರಿಂದ)

(ಸಂಗ್ರಾಹಕರು—ಸತ್ಯಾರ್ಥಿ, ವೈದಿಕ ಧರ್ಮಪ್ರಚಾರ ಸಮಿತಿ, ಮುಂಬಯಿ)

ಸತ್ಯ ಸಂಗತಿಯಿಂದ ಅನಭಿಜ್ಞರಾದ ಈ ರಾಜ್ಯದ ಕೆಲವು ಅಧಿಕಾರಿಗಳು ಅಲ್ಲಿಯ ಕಾರ್ಯಕ್ಷೇತ್ರದಲ್ಲಿರುವ ಆರ್ಯಸಮಾಜವು ಒಂದು ಸಂಕ್ಷಿಪ್ತವಾಗಿ ಬಾಹ್ಯ (ಹೊರಗಣ) ಜಗತ್ತಿನ ಸಂಬಂಧವಿಲ್ಲದ ಸಂಸ್ಥೆಯೆಂದು ತಿಳಿದುಕೊಂಡಹಾಗಿದೆ. ಅಲ್ಲದೆ ಅದರ ನಾಶವಾದಬಹುದೆಂದು ತಿಳಿದಿದ್ದಾರೆ. ಅವರು ತಮ್ಮ ಅಜ್ಞಾನ ಮತ್ತು ಕ್ಷುದ್ರ ಹಟಗಳಿಂದ ಆರ್ಯರ ಮೇಲೆ ತರತರದ ಅತ್ಯಾಚಾರ ಮಾಡಿದ್ದಾರೆ. ಅವುಗಳ ವಿವರಣೆಯು ಈ ರೀತಿ ಇದೆ—

1. ಐದು ಮಂದಿ ನವಯುವಕ ಮತ್ತು ಉತ್ಸಾಹೀ ಆರ್ಯರು ಮುಸಲ್ಮಾನರಿಂದ ಕೊಲೆಮಾಡಲ್ಪಟ್ಟರು. 2 400 ಮಂದಿ ಆರ್ಯರು ಈಗನಾಯ ಸ್ಟೇಟಿನ ಜೈಲಿನಲ್ಲಿದ್ದಾರೆ 3 700 ಮಂದಿ ಆರ್ಯರ ಮೇಲೆ (ಕೇಸ್) ದಾವೆ ನಡಿಯುತ್ತಿದೆ 4 ಆರ್ಯಸಮಾಜದ ಯಾವ ಪತ್ರಿಕೆಯೂ ಸ್ಟೇಟಿನಿಂದ ಹೊರಡಿಸಲು ಅಸಾಧ್ಯ; ಹೊರಟ ಒಂದು ಪತ್ರಿಕೆಯು ನಿಲ್ಲಿಸಲ್ಪಟ್ಟಿತು. 5 ಆರ್ಯಸಮಾಜದ ಮಂದಿರಗಳಲ್ಲಿ ಯಾವ ಉಪದೇಶಕರೂ ಅಜ್ಞೆ ಪಡೆಯದ ವಿನಹ ಉಪದೇಶವಾಡಲಿಕ್ಕಿಲ್ಲ; ಅಜ್ಞೆಗಾಗಿ ಕೇಳಿದರೂ ಆಜ್ಞೆಯು ಪ್ರಾಯಶಃ ಕೊಡಲ್ಪಡುವುದಿಲ್ಲ. 6. ಯಾರಾದರೂ ಅವರ ಸ್ವಂತ ಮನೆಯಲ್ಲಿಯೂ ಆರ್ಯಸಮಾಜದ ಕಾರ್ಯವನ್ನು ಮಾಡಲಿಕ್ಕಿಲ್ಲ, ಒಂದು ವೇಳೆ ಮಾಡಿದರೆ ಅವರ ಮೇಲೆ ವ್ಯವಹರಣೆಯು ದಾವೆಯು ನಡಿಸಲ್ಪಡುವುದು. 7. ಇಲ್ಲಿ ರಾಜ್ಯದ ಪೋಲೀಸರ ಮನೋವೃತ್ತಿಯನ್ನು ತಿಳಿಯುವುದಕ್ಕಾಗಿ ಒಂದು ಘಟನೆಯನ್ನು ಉಲ್ಲೇಖಿಸುವುದು ಸಾಕೆಂದು ತೋರುವದು. ಇದು ನಾನು ಸ್ವಯಂ ನನ್ನ ಕಿವಿಯಿಂದ ಕೇಳಿದ ಸಂಗತಿ ಇದು. ಪೋಲೀಸ್ ಸಿಪಾಯಿಗಳ ಒಂದು ದಳವು ಬಹಿರಂಗ ರಸ್ತೆಯಲ್ಲಿ **"ವಿಶ್ವದಲ್ಲಿ ಇಸ್ಲಾಮಿನ ಪ್ರಚಾರ ಮಾಡುವೆವು"** ಎಂದು ಹಾಡುತ್ತಾ ಹೋಗುತ್ತಿತ್ತು. ಇದರಿಂದಲೇ ವ್ಯಕ್ತವಾಗುತ್ತದೆ ಅವರು ಜನತೆಯ ಸೇವಕರಲ್ಲ, ಇಸ್ಲಾಮಿನ ಪ್ರಚಾರಕರೆಂದು. 8. ಜೈಲ್ ಖಾನೆಯಲ್ಲಿ ಜೈಲಿನ ಮುಸಲ್ಮಾನ ಅಧಿಕಾರಿಗಳು ಹಿಂದೂ ಕೈದಿಗಳನ್ನು ಮುಸಲ್ಮಾನರನ್ನಾಗಿ ಮಾಡುತ್ತಾರೆ! ಅಸಂಖ್ಯ ... ಘಟನೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಣೆಗಾಗಿ ಕೊಟ್ಟಿದ್ದೇನೆ.

ಹೈದರಾಬಾದ್ ರಾಜ್ಯದ ಒಳಗಿನ ಸ್ಥಿತಿ

ಹೈದರಾಬಾದ್ ರಾಜ್ಯದಲ್ಲಿ ಶೇಕಡ 89% ರಷ್ಟು ಹಿಂದುಗಳೂ ಶೇಕಡ 10% ರಷ್ಟು ಮುಸಲ್ಮಾನರೂ 1% ಕ್ರಿಶ್ಚಿಯನರೂ ಇದ್ದಾರೆ. ನಿಜಾಮ ಸರಕಾರವು, ಉಚಿತ ಅನುಚಿತ ಯಾವ ರೀತಿಯಲ್ಲಿ ಸಾಧ್ಯವಿದೆಯೋ ತದ್ರೀತಿಯಲ್ಲಿ **ಬಹುಸಂಖ್ಯೆಯಲ್ಲಿ ಹಿಂದುಗಳನ್ನು** ಮುಸಲ್ಮಾನರನ್ನಾಗಿಮಾಡಿ ಮುಸಲ್ಮಾನರ ಬಹುಮತಮಾಡಲು ಅಪೇಕ್ಷಿಸುತ್ತದೆ. ಇದಕ್ಕಾಗಿ ರಾಜ್ಯದ ಕಡೆಯಿಂದ ಮಾಡಲ್ಪಡುವ ಕೆಲವು ಕಾರ್ಯಗಳು ಈ ರೀತಿ ಇವೆ.

"ದೀನಿಯಾತ್" ಇದರ ವಿಭಾಗದಿಂದ ಮುಸಲ್ಮಾನರು ನೇಮಿಸಲ್ಪಟ್ಟಿದ್ದಾರೆ. ಹಿಂದುಗಳನ್ನು ಮುಸಲ್ಮಾನರನ್ನಾಗಿ ಮಾಡುವುದೇ ಇದರ ಕೆಲಸವಾಗಿದೆ!

2. ಹಿಂದೂ ಜನಗಳನ್ನು ಮುಸಲ್ಮಾನರನ್ನಾಗಿ ಮಾಡಲನುಕೂಲಿಸ ತಂತೆ ಪಾಠಶಾಲೆಗಳಲ್ಲಿ ಅಧಿಕವಾಗಿ ಮುಸಲ್ಮಾನ ಅಧ್ಯಾಪಕರೇ ನೇಮಿಸಲ್ಪಡುತ್ತಾರೆ. ಒಂದು ಪಾಠಶಾಲೆಯಲ್ಲಿ ಅಸ್ಪೃಶ್ಯ ಜಾತಿ ಗಳು ಮುಸಲ್ಮಾನರಾದ **ಬಳಿಕ ಅವರ ಫೀಸ್ ಮಾಫಿಮಾಡಲ್ಪಟ್ಟು** ಮುಸಲ್ಮಾನರಾಗಲು **ಇತರರಿಗೆ ರುಚಿತೋರಿಸಲಾಯಿತು.**

3. ಹಿಂದುಗಳು ಮುಸಲ್ಮಾನರಾಗಲು ಪ್ರೋತ್ಸಾಹಾತ್ಮಕ ಉಪಯೋಗವಾಗಲು ಸರಕಾರಿ ನೌಕರಿಯು ಅಧಿಕವಾಗಿ ಮುಸಲ್ಮಾನರಿಗೆ ಕೊಡಲ್ಪಡುತ್ತದೆ. ಈ ನೀಲ್ಯಾಚಸಿದಲು ದ್ವೇಷದ **ಪೂರ್ತಿಯಾಗಲು ನಿಜಾಮ ರಾಜ್ಯದಲ್ಲಿ ಆರ್ಯಸಮಾಜದ** ಶಕ್ತಿಯು ಬಾಧಕವೆಂದು ನಿಜಾಮು ಸರಕಾರವು ತಿಳಿಯುತ್ತದೆ. ಆದ ಪರಿಂದ ಹಿಂದುಗಳು ಮತ್ತು ಆರ್ಯಸಮಾಜಕರಿಗೆ ಅವರ ಧಾರ್ಮಿಕ ಕೃತ್ಯಗಳನ್ನು ಮಾಡಲು ಮತ್ತು ನಾಗರಿಕ ಅಧಿಕಾರದ ಸ್ವಾತಂತ್ರ್ಯದಿಂದ ವಂಚಿತರನ್ನಾಗಿ ಮಾಡಲು ಅನೇಕ ತೊಂದರೆಗಳು ಹಾಕಲ್ಪಟ್ಟಿವೆ. ಅವುಗಳಲ್ಲಿ ಕೆಲವು ಈ ರೀತಿಯಲ್ಲಿವೆ-

1. ಆರ್ಯಮಂದಿರಗಳಲ್ಲಿ ಅಜ್ಞೆಯು ವಿನಹ ಉತ್ಸವ, ಉಪದೇಶ, ಕಥೆ ಮುಂತಾದವು ಮಾಡಲಾಗದು. ಪ್ರಾರ್ಥನೆಯ ಅಜ್ಞೆಯು ಸಿಕ್ಕುವುದಿಲ್ಲ. 2 ಮೆರವಣಿಗೆ ತೆಗೆದುಕೊಂಡು ಹೋಗಲಿಕ್ಕಿಲ್ಲ 3 ನ್ಯಾಯಾಮ ಮತ್ತು ವ್ಯಾಯಾಮದ ಶಾಲೆಗಳನ್ನು ಯಾರೂ ತೆರೆಯಲಿಕ್ಕಿಲ್ಲ. 4. ಆರ್ಯಸಮಾಜದ ಯಾವ ಪತ್ರಿಕೆಯನ್ನು ಸ್ಟೇಟಿನಲ್ಲಿ ಹೊರಡಿಸಲಿಕ್ಕಿಲ್ಲ. ಅಲ್ಲದೆ ಒಂದು ಡಜನಿಗಿಂತ ಅಧಿಕ ಹಿಂದೂ ಆರ್ಯಸಮಾಜದ ಪತ್ರಿಕೆಗಳಿಗೆ ಸ್ಟೇಟಿನಲ್ಲಿ ಪ್ರವೇಶವಿಲ್ಲ ನಿಷೇಧಿಸಲ್ಪಟ್ಟಿವೆ 5. **ಆರ್ಯಮಂದಿರಗಳಲ್ಲಿ ಅಥವಾ ಮನೆಗಳಲ್ಲಿ ಸಂಸ್ಕಾರ ಇತ್ಯಾದಿಗಳನ್ನು ಮಾಡಲಿಕ್ಕೆ ಹವನ ಕುಂಡ ಇಡಲಿಕ್ಕೆ ಅಜ್ಞೆ ವಿನಹ ಹಕ್ಕಿಲ್ಲ** (ಅಜ್ಞೆ ಸಿಕ್ಕುವದಿಲ್ಲ.) **6. ಹೊಸ ಸಮಾಜಗಳನ್ನು ತೆರೆಯಲು ಮತ್ತು ಸ್ವತಂತ್ರ ರೀತಿಯಲ್ಲಿ ಪ್ರಚಾರಮಾಡಲು ಅನೇಕ ಬಾಧೆಗಳನ್ನು ತಂದೊಡ್ಡುತ್ತಾರೆ. 7. ಓಮ್. ಮುಂತಾದ ಪತಾಕೆಗಳನ್ನು ತಮ್ಮ ಮಂದಿರಗಳಲ್ಲಿ ಯಾರೂ ಏರಿಸಲಿಕ್ಕಿಲ್ಲ** 8. ಒಬ್ಬೇ ಪರ್ವದಿನಗಳನ್ನಾಚರಿಸಲು ಅಡಚಣೆಗಳಿವೆ. 9. ಸರಕಾರಿ ಪೋಲೀಸರೂ ಸ್ಥಳಿಕ ಅಧಿಕಾರಿಗಳೂ ಹಿಂದೂ ಮತ್ತು ಆರ್ಯರಲ್ಲಿ ಮುಸಲ್ಮಾನರೊಂದಿಗೆ ವ್ಯವಹಾರ ಇಡುವಂತೆ ಇದದೆ ಸರ್ವದಾ ಪ್ರತಿಕೂಲವಾಗಿದೆ. ಇವು ಮತ್ತು ಅನೇಕ ರೀತಿಯ ಬಾಧೆಗಳನ್ನು ಪ್ರತಿಯೊಬ್ಬ ಹಿಂದು ಯಾ ಆರ್ಯನು ತನ್ನ ದೈನಿಕ ವ್ಯವಹಾರದಲ್ಲಿ ಅನುಭವಿಸುತ್ತಾನೆ. ಇವುಗಳ ಕುರಿತು ಉಚಿತ ರೀತಿಯ ವಿಚಾರಮಾಡಲು **ಆರ್ಯನ್ ಕಾಂಗ್ರೆಸ್** ಸೋಲಾಪುರದಲ್ಲಿ ಡಿಶಂಬರ್ 25, 26, 27ಕ್ಕೆ ವಿಸ್ತೃತ ರೀತಿಯಲ್ಲಿ ಸೇರಲಿಕ್ಕಿದೆ. ಎಲ್ಲಾ ರೀತಿಯ ಆಯೋಜನೆಯೂ ಮಾಡಲ್ಪಟ್ಟಿದೆ.

ನಾರಾಯಣ ಸ್ವಾಮಿ,

ಸೋಲಾಪುರ.

"ಸರಸ್ವತಿ"

ಸರಸ್ವತಿಯ ಹದಿನೆಂಟನೆಯ ಸಂಪುಟವು ೧೯೩೯ನೆಯ ಜನವರಿ ತಿಂಗಳಿನಿಂದ ಪ್ರಾರಂಭವಾಗುವುದು. ಕನ್ನಡನಾಡಿನ ಸುಪ್ರಸಿದ್ಧವಾದ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟ ಕಥೆ ಕವಿತೆ ನಾಟಕಗಳಿಂದ ಮಹಿಳೆಯರಿಗತ್ಯುಪಯುಕ್ತವಾದ ಲೇಖನಗಳಿಂದ ಕೂಡಿದ. ಪ್ರತಿ ಸಂಚಿಕೆಗಳಲ್ಲಿಯೂ ಮಕ್ಕಳ ಪುಟಗಳಿವೆ. ಮಕ್ಕಳಿಗಾಗಿಯೇ "ಕನ್ನಡಿಗರ ಕಣಜ" ಎಂಬ ಗ್ರಂಥ ಮಾಲೆಯು ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ:— ೩—೬—೦ ಮಾತ್ರ.

ವಿಳಾಸ:- **ಸರಸ್ವತಿ ಕಾರ್ಯಾಲಯ,**

ಚಾಮರಾಜ ಪೇಟೆ, ಬೆಂಗಳೂರು ನಗರ.

ದೇಶಭಕ್ತ (ನಾಟಕ) ೦—೧೦—೦

ನಿಮಗೆ ಇಚ್ಛೆ ಇರುವುದಾದರೆ

ನಿಮ್ಮಲ್ಲಿ ಯಾ ನಿಮ್ಮ ಕುಟುಂಬದಲ್ಲಿ ಗರ್ಭಿಣಿಯಿದ್ದರೆ ಸುಖವಾಗಿ ಹೆರಿಗೆ (ಪ್ರಸವ) ಯಾಗಬೇಕೆಂದು ನಿಮಗಿಚ್ಛೆ ಇದ್ದರೆ, ಈ ದಿನದಿಂದಲೇ ತಕ್ಕ ಉಪಾಯ ಮಾಡಿರಿ. ಹೆರಿಗೆಯ ವೇದನೆ ಪ್ರಾರಂಭವಾದೊಡನೆ ನಮ್ಮ **ಪ್ರಸೂತಿ ಕಲ್ಯಾಣವಟಿ**ಗಳನ್ನು ಸೇವಿಸಿದರೆ ಸುಖಪ್ರಸವ (ಹೆರಿಗೆ) ವಾಗುವುದರಲ್ಲಿ ಸಂದೇಹವಿಲ್ಲವೆಂಬುದಾಗಿ ಆಧುನಿಕ ವೈದ್ಯರ ಅನುಭವದ ಮಾತಾಗಿದೆ ಹಾಗೂ ಗರ್ಭಿಣಿಯರಿಗೆ ನಮ್ಮ **ಪ್ರಸೂತಿ ಕಲ್ಯಾಣವಟಿಗಳು** ಅಮೃತಸಮಾನವಾಗಿವೆ. ಪ್ರತಿಸಲಕ್ಕೆ ಒಂದೆರಡು ವಟಿಕೆಗಳನ್ನು ಒಂದೆರಡುಸಾರಿ ಸೇವಿಸಿದೊಡನೆಯೇ ಸುಖವಾದ (ಹೆರಿಗೆ) ಪ್ರಸವವಾಗುವುದರಲ್ಲಿ ಅನುಮಾನವಿಲ್ಲ ಹೆತ್ತ ತರುವಾಯ ಒಂದೆರಡು ವಟಿಕೆಗಳ ಸೇವನೆಯಿಂದ ಒಳಗೆ ಸಂಚಿತವಾದ ರಕ್ತಲಸೀಕಾ (Placenta) ಕಸವ ಶೀಘ್ರವಾ ಹೊರಗೆತಳ್ಳಿ ಗರ್ಭಾಶಯಕ್ಕೆ ಬಲಕೊಡುವುದಲ್ಲದೆ ಸಂಜುವಿರೋಧವೆಂಬ ಸೂತಿಕಾರೋಗ ಇತ್ಯಾದಿ ಬಾರದಂತೆ ತಡೆಗಟ್ಟುವದು. ವಿಶೇಷ ಗುಣ ಧರ್ಮ ಮುಕ್ತ ಅನುಪಾನ ವಟಿಕೆಗಳೊಂದಿಗೆ ಕಳುಹಿಸಲ್ಪಡುತ್ತದೆ ಅತೀ ಬಡವರೂ ಸಹ ಉಪಯೋಗಿಸುವಂತೆ ಡಜನು 1ಕ್ಕೆ 0-12-0. ಏಳಾಣೆ ಸ್ಟಾಂಪು ಕಳುಹಿಸಿದ್ದಲ್ಲಿ 6 ವಟಿಕೆಗಳನ್ನು ಕಳುಹಿಸುತ್ತದೆ.

ಪ್ರಸವದ ಮುಂದೇನು

೪೦ ದಿನಗಳ ತನಕ ನಮ್ಮ **ಬಾಣಂತಿ ಕ್ವಾಥ**ವನ್ನು ಉಪಯೋಗಿಸಿ ಉತ್ತಮ ಗುಣಾನುಭವವನ್ನು ಪಡೆಯಿರಿ. ಇದರ ಸೇವನೆಯಿಂದ, ಜ್ವರ, ಉದರಶೂಲೆ, ತಲೆನೋವು, ನಿದ್ರಾಭಂಗ, ನಡುಕ, ನಂಜುವಿರೋಧ ಇತ್ಯಾದಿ ಬಾಣಂತಿಯ ಸರ್ವರೋಗಗಳೂ ಗುಣವಾಗುತ್ತದೆ ಹಾಗೂ ಈ ತರದ ದುಷ್ಪರಿಣಾಮಗಳು ಬಾರದಂತೆ ತಡೆಗಟ್ಟುವದಲ್ಲದೆ ಬಾಣಂತಿಯು ಕಳಕೊಂಡ ಶಕ್ತಿಯನ್ನು ಹೊಂದಿ ದಷ್ಟಪುಷ್ಟಳಾಗಿ ಶಿಶುವಿಗೆ ಯಥೇಷ್ಟ ಶುದ್ಧಹಾಲು ಸಹಾ ಸಿಗುವಂತೆ ಮಾಡುತ್ತದೆ ಕ್ರಯ ಬಾಟ್ಲಿ 1ಕ 1-0-0 ಇದರೊಂದಿಗೆ ಪ್ರಸೂತಿ ಕಲ್ಯಾಣವಟಿ 6 ವಟಿಗಳನ್ನು ಉಚಿತವಾಗಿ ಕಳುಹಿಸುವೆವು. ವಿ. ಪಿ ಚಾರ್ಜು ಪ್ರತ್ಯೇಕ.

ಆಮಲಕೀ ತೈಲ

(ಪುಷ್ಪಗಂಧಾಮೋದಿತ ಬಹುಗುಣಯುಕ್ತ)

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ, ಪ್ರೌಢಸ್ತ್ರೀ-ಪುರುಷರಿಗೂ ನಿತ್ಯ ಕೇಶಪ್ರಸಾದನಾರ್ಥ ಉತ್ತಮವಾದ ಚಿತ್ತಾಕರ್ಷಕತೈಲ.

4 ಔನ್ಸಿನ ಸೀಸೆಗೆ **0-11-0**

2 ಔನ್ಸಿನ ಸೀಸೆಗೆ **0-6-0**

ಧನ್ವಂತರೀಗುಟಿಕಾ

ಕಸ್ತೂರಿಯುಕ್ತ ವಾಯುಮಾತ್ರೆ

ಆಬಾಲವೃದ್ಧ ಸ್ತ್ರೀ-ಪುರುಷರಿಗೆ ಅಕಸ್ಮಾತ್ತಾಗಿ ಬರುವ ರೋಗಗಳಲ್ಲಿ ತತ್ಕ್ಷಣ ಒಂದೆರಡು ಮಾತ್ರೆಗಳನ್ನು ಸೇವಿಸಿದ್ದಲ್ಲಿ ದೋಷಗಳು ನಿವೃತ್ತಿಯಾಗುವ ಸಂಗ್ರಾಹ್ಯ ಔಷಧಿಯಾಗಿದೆ, ಹಾಗೂ ಗರ್ಭಿಣಿಯರ ರೋಗಗಳಲ್ಲಿ ಅತ್ಯುತ್ತಮವಾಗಿದೆ. ಕ್ರಯ 100 ಮಾತ್ರೆಗಳಿಗೆ 1-5-0, 500ಕ್ಕೆ 6- -0. ಏಳಾಣೆ ಸ್ಟಾಂಪು ಕಳುಹಿಸಿದರೆ 18 ಮಾತ್ರೆಗಳನ್ನು ಕಳುಹಿಸುತ್ತದೆ;

ನಮ್ಮ ಔಷಧಿಗಳು ಈ ಕೆಳಗಿನವರಲ್ಲಿ ಸಿಗುತ್ತವೆ:—

ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ, ಎಮ್. ಮಂಜುನಾಥಯ್ಯ, ಕಲ್ಯಾಣಪುರ ಪೋಸ್ಟ್, ದ. ಕ.

ಯಾವತ್ತೂ ಔಷಧಗಳಿಗೂ ಏಜನ್ಸಿ ಶರ್ತಗಳಿಗೂ ಬರೆಯಿರಿ—

ಸ್ವದೇಶೀ ಔಷಧೀ ಭಂಡಾರ.

ಕುಂಜಾಲು, ದ. ಭಾರತ, ಬ್ರಹ್ಮಾವರ ಪೋಸ್ಟ್.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿದ್ದ ಎಲ್ಲಾ ತರದ ರಬ್ಬರ್ ಮೊಹರುಗಳು, ಸ್ಟೆನ್ಸಿಲ್‌ಗಳು, ಪೇಪರಗಳ ಟೋಕ, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವ ತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುವದು.

CROWN RUBBER STAMP CO.,

Balmat Road, MANGALORE

Included by the Mysore Govt. Stores Purchase Committee in the list of approved Firms

ವಿಜಾಪುರದ ಸುದ್ದಿ

ಮುಸಲ್ಮಾನ ಯುವಕರ ಪುಂಡಾಟ—ಕಾಂಗ್ರೆಸ್ ಮೆರವಣಿಗೆಗೆ ಪ್ರತಿಬಂಧ! ಮೂರು ಜನರ ಬಂಧನ. ನಡು ಬಜಾರದಲ್ಲಿ ದಂಗೆ. ಪೋಲೀಸರ ಅಲಕ್ಷತೆ!

ಕರ್ನಾಟಕ ಪ್ರಾಂತೀಯ ಕಾ. ಕ. ಅಪ್ಪಣೆಯ ಮೇರೆಗೆ ಇಲ್ಲಿಯ ನಗರ ಕಾಂಗ್ರೆಸ್ ಕಮಿಟಿಯವರು 3-12-38ರ ದಿನ "ಹೈದರಾಬಾದ" ದಿನವನ್ನು ಒಳ್ಳೇ ಯಶಸ್ವೀ ರೀತಿಯಿಂದ ಜರುಗಿಸಬೇಕೆಂದು ಮಾಡಿದರು. ಆದೇ ರೀತಿ-ಪ್ರಂಜಾನೆ ಸ್ವಯಂ ಕಾಲ ಫೇರಿಯಾಯಿತು. ನಂತರ ಮೊದಲೇ ಗೊತ್ತುಪಡಿಸಿದಂತೆ ಜ. ಕಾ. ಕ. ಕಛೇರಿಯಿಂದ ಮೆರವಣಿಗೆಯು ಹೊರಟು ನಗರದ ಪ್ರಮುಖ ಬೀದಿಗಳಲ್ಲೆಲ್ಲ ಹಾಯ್ದು ನೆಹರಿನ ಕಾಯಿ-ಬಜಾರದ ಹತ್ತಿರ ಬಂತು. ಅಲ್ಲಿ ಮುಸಲ್ಮಾನ ಯುವಕನೊಬ್ಬನು ಹಠಾತ್ತಾಗಿ ಮೆರವಣಿಗೆಯ ಮೇಲೆಯೇ ಕಾಲುಗಾಡಿಯನ್ನು ಬಿಟ್ಟನು. ಮೆರವಣಿಗೆಯು ನಿಂತಿತು. ಗುಂಪು ಕೂಡಿತು. ಮುಸಲ್ಮಾನ ಉಡಾಳರು ಸ್ವಯಂ-ಸೇವಕರ ಕೈಯಲ್ಲಿಯ ಲಾಂಛನಗಳನ್ನು ಕಿತ್ತುಕೊಂಡು ಭೀಕರ ಪರಿಸ್ಥಿತಿಗೆ ಎಳೆಯಲೆತ್ನಿಸಿದರು. ಈಗ ಜ. ಕಾ. ಕ. ಕಾರ್ಯದರ್ಶಿಗಳಾದ ಶ್ರೀ. ದುಭೆಯವರು ಹೇಳಿಕೊಂಡರೂ ಕೇಳಲಿಲ್ಲ. ಪೋಲೀಸರಿಗೆ ಹೇಳಿದರೆ ಬದಿಗೆ ಸರಿದರು!! (ಪೋಲೀಸರು ಮುಸಲ್ಮಾನರಿದ್ದರು.) ಮುಂದೆ ಸ್ವಯಂ-ಸೇವಕ ದಳದವರು ಹಾಗೆಯೇ ಮುಂದುವರಿದರು. ಹಿಂದಿನಿಂದ ಉಡಾಳರು ಅವಾಚ್ಯ ಶಬ್ದಗಳನ್ನು ಆಡುತ್ತ ಬೆನ್ನುಹತ್ತಿದರು.

ನಂತರ ಪರಿಸ್ಥಿತಿಯ ಭೀಕರತೆಯನ್ನು ಕೇಳಿ ಹೋಮ್ ಇನ್ಸಪೆಕ್ಟರರು ಬಂದು ಮೂರು ಜನರನ್ನು ಬಂಧಿಸಿದರು. ಆ ವೇಳೆ ಮೆರವಣಿಗೆಯು ಶಾಂತರೀತಿಯಿಂದ ಸಭಾಸ್ಥಾನವಾದ ಶ್ರೀ. ಸಿದ್ಧೇಶ್ವರ ದೇವಾಲಯದ ಎದುರಿಗೆ ಬಂದಿತು. ಶ್ರೀ. ಮುದಕಪ ವಕೀಲರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಹೈದರಾಬಾದ ದಬ್ಬಾಳಿಕೆ, ಪ್ರಜೆಗಳಿಗೆ ಸಹಾನುಭೂತಿ, ಪೋಲೀಸರ ಕೃತಿಗೆ ನಿಷೇಧ ತೋರಿಸಲಾಯಿತು. ಶ್ರೀ. ಮರುಳಾರಾಧ್ಯ ಶಾಸ್ತ್ರಿ, ದೇಶಪಾಂಡೆ, ದುಭೆ ಮೊದಲಾದವರು ಮಾತನಾಡಿದರು. ಜಯ-ಘೋಷದೊಂದಿಗೆ ಸಭೆಯು ಮುಕ್ತಾಯವಾಯಿತು.

ವಿಜಾಪುರ ಜಿಲ್ಲಾ ಕೈಬರಹಾ ಪತ್ರಿಕಾಕರ್ತರ ಸಮ್ಮೇಲನ—

'ನವಜೀವನ' ಸಂಘದ ಪರವಾಗಿ ಬೇಗನೇ ಕೂಡಲಿರುವದು. ಇದಾಗಲೇ ಚಟುವಟಿಕೆಗಳು ನಡೆಯುತ್ತಲಿವೆ.

(ಕಳೆದ ಬಾರಿ ವಿಳಂಬವಾಗಿ ಕೈಸೇರಿದ್ದರಿಂದ ಈ ಬಾರಿ ಪ್ರಕಟಿಸಲಾಗಿದೆ.)

ಬಾಸಗೋಡ (ತಾಲ್ಲೂಕ-ಅಂಕೋಲಾ)

ತಾ. ೨೯-೧೧-೧೯೩೮ನೇ ದಿವಸ ಕ. ಪ್ರಾಂ. ಕಾಂಗ್ರೆಸ ಕಮಿಟಿಯ ಪ್ರೆಸಿಡೆಂಟರಾದ ಶ್ರೀ. ದೇಶಪಾಂಡೆ ಗಂಗಾಧರರಾಯರು ಇಲ್ಲಿಗೆ ಚಿತ್ತೈಸಿದರು. ಚಿತ್ತರಂಜನ ವಾಚನಾಲಯವನ್ನು ಸಂದರ್ಶಿಸಿ, ವಾಚನಾಲಯದ ಮಹತ್ವವನ್ನೂ, ಆವಶ್ಯಕತೆಯನ್ನು ತಿಳಿಸಿ ಅದರ ಊರ್ಜಿತಾವಸ್ಥೆಗಾಗಿ ೫ರೂಪಾಯಿ ದೇಣಿಗೆಯನ್ನು ಕೊಟ್ಟು ಪ್ರೋತ್ಸಾಹಿಸಿದರು. ಅಂದೇ ಚಿತ್ತರಂಜನ ವಾಚನಾಲಯ ಬಾಸಗೋಡದ ಸಭೆ ಸೇರಿ ಈ ಕೆಳಗಿನ ೫ಜನರ ವ್ಯವಸ್ಥಾಪಕ ಮಂಡಲಿಯು ನೇಮಿಸಲ್ಪಟ್ಟಿತು. ೧. ರಾಮಾ ವೆಂಕಣ್ಣ ನಾಯಕ (ಚೇರ್‌ಮನ್), ೨. ಶಿವು ಬೊಮ್ಮ ಗುನಗಾ, ೩. ಮಂಜ ಬೊಮ್ಮಯ್ಯ ನಾಯ್ಕ, ೪. ದತ್ತಾ ಶೇಷಗಿರಿಶೆಟ್ಟಿ, ೫. ರಾಮಕೃಷ್ಣ ತಿಮ್ಮನಾಯ್ಕ (ಗೌರವ ಕಾರ್ಯದರ್ಶಿ).

ನವಯುಗ

ಮಕರಸಂಕ್ರಾಂತಿ

ವಿಶೇಷ ಸಂಚಿಕೆ

ಬೆಲೆ_ನಾಲ್ಕಾಣೆ

ಬೊಂಬಾಯಿ ಸಮಾಚಾರ

ನೇಯಿಗೆ ಕೈಗಾರಿಕೆಯ ವಿಚಾರಣಾ ಸಮಿತಿ:—ಮುಂಬಯಿ ಸರಕಾರದಿಂದ ಸ್ಥಾಪಿಸಲ್ಪಟ್ಟ ಮುಂಬಯಿ ನೇಯಿಗೆ ಕೈಗಾರಿಕೆಯ ವಿಚಾರಣಾ ಸಮಿತಿಯ ಪ್ರಥಮ ಸಭೆಯು ಬುಧವಾರದಿವಸ ಟೌನ್ ಹಾಲಿನಲ್ಲಿ ಜರಗಿತು. ಆಗ ಗಿರಣಿ ಮಾಲಕರ ಎಸೋಸಿಯೇಷನಿನ ಪ್ರತಿನಿಧಿಗಳು ಸಭೆಯಲ್ಲಿ ಹಾಜರಾಗಿ, "ಕಾಮಗಾರರ ಸಂಬಳವನ್ನು ಜಾಸ್ತಿ ಮಾಡಿದ್ದಲ್ಲಿ ಸಹಜವಾಗಿ ಅವರ ಕೆಲಸದ ಚಾತುರ್ಯವು ಬೆಳೆಯುವದಿಲ್ಲವೆಂದೂ ಮತ್ತು ಮುಂಬಯಿ ಟೆಕ್ಸ್‌ಟೈಲ್ ಲೇಬರ್ ಎನ್‌ಕ್ವಯರಿ ಕಮಿಟಿಯವರು ಕೊಟ್ಟ ತಾತ್ಕಾಲದ ಶಿಫಾರಸುಗಳಿಂದ ಗಿರಣಿ ಕಾಮಗಾರರ ವೇತನಗಳನ್ನು ಜಾಸ್ತಿ ಮಾಡಿದರೂ, ಹೀಗೆ ಮಾಡಿದ ಇವರ ಸಂಪಾದನೆಯು ಪ್ರಶಂಸೆ ಮಾಡುವಷ್ಟು ಮುನ್ನಡೆಯಲಿಲ್ಲ" ಎಂದೂ ತಮ್ಮ ಸ್ವಾಭಾವಿಕವಾದ ರೀತಿಯಲ್ಲಿ ಮಾತಾಡಿದರು. ಇವರು ತಮ್ಮ ಭಾವನೆಯನ್ನು ಪ್ರದರ್ಶಿಸಿದ್ದರೂ, ಇವರ ಮುಖದಿಂದ ಇಂಥಾ ಶಬ್ದಗಳೇ ಹೊರಟಾವೆಂಬ ಸಂಗತಿಯು ಸರ್ವರಿಗೂ ತಿಳಿಯತಕ್ಕ ಸಂಗತಿಯೇ. ಇವರೊಡನೆ ಒಬ್ಬ ಕಾಮಗಾರನಿಗೆ 'ಜೀವನದ ವೇತನವು' (Living wage) ಎಷ್ಟು ಬೇಕೆಂದು ಕೇಳಿದಾಗ, "ಅದನ್ನು ಹೇಳಲು ನನ್ನಿಂದ ಸಾಧ್ಯವಿಲ್ಲ. ಸಾಧಾರಣ ಒಂದು ಪಟ್ಟಣದ ಜನರಿಗೆ ಎಷ್ಟು ಬೇಕೋ ಅದಕ್ಕಿಂತ ಹೆಚ್ಚು ಜಾಸ್ತಿ" ಎಂದು ಇವರ ಪ್ರತ್ಯುತ್ತರ. ಮತ್ತು ಕಾಮಗಾರರಿಗೆ ಅವರ ಚತುರತೆಯ ಪ್ರಕಾರ ಸಂಬಳ ಕೊಟ್ಟಲ್ಲಿ ಏನಾದರೂ ಸುಧಾರಣೆಯಾದೀತೋ ಎಂದು ಪ್ರಶ್ನಿಸಿದಾಗ, ವೇತನ ಜಾಸ್ತಿ ಕೊಟ್ಟಲ್ಲಿ ಇವರ ಚತುರತೆಯು ಜಾಸ್ತಿಯಾಗದು. ಇದಕ್ಕೆ ಸರಿಯಾಗಿ ಎಷ್ಟು ಯಾರ್ನ ಕೊಂಡ ಗ್ರಾಹಕರ ಸಂಖ್ಯೆಯು ಜಾಸ್ತಿ ಮಾಡಬಹುದು" ಈ ಪ್ರತಿನಿಧಿಗಳ ಘೋಷಣೆ. ಇಂಥಾ ಮಾತುಗಳನ್ನು ಕಾಮಗಾರರ ಕಷ್ಟಗಳನ್ನು ವಿಚಾರಿಸಲು ನೇಮಿಸಿದ್ದಲ್ಲಿ, ಇವರು ಇಂದಿನ ತನಕ ತಮ್ಮ ಜೀವನವನ್ನೇ ಕಾಮಗಾರರ ಬೆಳವಳಿಗೆಯಲ್ಲಿ ಸವೆದು, ಸರ್ವದಾ ಅವರ ಮೇಲ್ಮೆ ಹೋರಾಡುತ್ತಿರುವವರನ್ನು ದೂರಿ, ಅವರ ಅವನತಿಗಾಗಿಯೇ ಸೂಚನೆಯನ್ನು ಕೊಡುವದಲ್ಲದೆ ಅನ್ಯಥಾಗಿಯಿಲ್ಲ.

ಸ್ತ್ರೀಯರ ಸಂಪು ಕೊನೆಗೊಂಡಿತು:—ಥಾನಾ ಬೆಂಕಿಪೆಟ್ಟಿಗೆ ಫ್ಯಾಕ್ಟರಿಯಲ್ಲಿ ಸಾಧಾರಣ ಒಂದು ಪಕ್ಷದಿಂದ ನಡೆಯುತ್ತಿದ್ದ ಸ್ತ್ರೀ ಕೆಲಸಗಾರರ ಸಂಪು ಮೊನ್ನೆ ಕೊನೆಗೊಂಡಿತು. ಗಿರಣಿ ಮಾಲಕರು ಕಾಮಗಾರರ ಬೇಡಿಕೆಗಳಿಗೆ ಒಪ್ಪಿಕೊಂಡು, ಸಂಪಿಗೆ ಸೇರಿದವರನ್ನೆಲ್ಲಾ ಕೆಲಸಕ್ಕೆ ಬರಗೊಟ್ಟಿರುವರು.

ಕ್ರಿಕೆಟ್ ಪಂದ್ಯಾಟದಲ್ಲಿ ಮುಸ್ಲಿಮರಿಗೆ ಪ್ರಚಂಡ ವಿಜಯ:—ಮುಂಬಯಿಯಲ್ಲಿ ನಡೆಯುತ್ತಿದ್ದ ಪಂಚ ಪಕ್ಷೀಯ ಕ್ರಿಕೆಟ್ ಪಂದ್ಯಾಟದ ಕೊನೆಯ ಆಟದಲ್ಲಿ ಮುಸ್ಲಿಮರಿಗೆ ಸಂಪೂರ್ಣ ವಿಜಯವಾಯಿತು. ಹಿಂದುಗಳಿಗೆ ಪ್ರಥಮದಾಟದಲ್ಲಿ 69. ಮುಸ್ಲಿಮರಿಗೆ 340. ಹಿಂದುಗಳಿಗೆ ಎರಡನೆಯದರಲ್ಲಿ 377 ಮುಸ್ಲಿಮರಿಗೆ ಆಟದಲ್ಲಿ ಮಾತ್ರ 107. ಹೀಗೆ ಹಿಂದುಗಳಿಗೆ ಅಪಜಯವಾಗಲು ಪ್ರಾಮುಖ್ಯ ಕಾರಣವು ಹಿಂದು ಆಟಗಾರರೊಳಗೆ ಸೈಕ್ಯತೆಯಿಲ್ಲದ್ದೇ. ಅಮರನಾಥರು ಮದುವೆಯ ನೆವದಿಂದ ಕೊನೆಯ ಆಟಕ್ಕೆ ಮುಖವೇ ತಿರುಗಿಸಲಿಲ್ಲ. ವಿಜಾಯ ಸಮಾರಂಭವು ?ನೆಯ ತಾರೀಕಿಗ ಇದ್ದಾಗ್ಯೂ, (ಅದು ಕೂಡ ಒಂದನೆಯ ಪತ್ನಿಯು ಜೀವದಲ್ಲಿ ಇರುವಾಗಲೇ ಆಕೆಯನ್ನು ತೊರೆದು, ಎರಡನೆಯ ವಿವಾಹದ ಆಲೋಚನ.) ತಾ. ?, ?, ?ರ ಆಟಗಳಲ್ಲಿ ಆಡಬಹುದಿತ್ತು. ಇಂಥ ಸಾಂಪ್ರದಾಯಿಕದ ನರೇಂದ್ರರು ಇವರ ಕಡೆಯವನ್ನು ಬಗೆದು, ಇವರು ಯಾವಕಡೆಗೂ ಬಳಸದಂತೆ ಮಾಡಿರುವರು. ಇದೆಲ್ಲಾ ವ್ಯಕ್ತಿದ್ವೇಷವು. ಹಿಂದೂ ಜಿಮಖಾನದ ಅಧ್ಯಕ್ಷರಾದಂಥಾ ಶ್ರೀ. ಟೈರ್ ಸೇಯವರು ಆಟಗಾರರಿಗೆ ಹೀಗೆ ಹೇಳಿದರು, "ಭಾರತದ ನರೇಂದ್ರರು ರಾಜಕೀಯ ವಿಷಯಗಳಲ್ಲಿ ಕೈ ಹಾಕಿ ಅದಕ್ಕೆ ಆತಂಕವನ್ನು ತಂದು, ಹಾಳುಮಾಡಿದರು. ಅದರಂತೆಯೇ ತಮ್ಮ ತಮ್ಮ ಆ ಕೊಳಕು ಮಾರ್ಗವನ್ನು ಭಾರತದ ಕ್ರಿಕೆಟ್ ಆಟದ ಮೇಲೂ ಹಿಡಿಯುತ್ತಿರುವರು. ಹೀಗೆ ಪ್ರಸಿದ್ಧ ಆಟಗಾರರೆಂದೆನಿಸಿಕೊಳ್ಳುವವರು ತಮ್ಮ ಪಾಲಕರಿಂದ ನರೇಂದ್ರರ ಮಾತುಗಳನ್ನು ಕೇಳಿ ವ್ಯಕ್ತಿದ್ವೇಷದಿಂದಿದ್ದಲ್ಲಿ, ನಾನು ಹಿಂದೂ ಜಿಮಖಾನದ ಅಧ್ಯಕ್ಷನಾಗಿರುವ ತನಕ ಇವರನ್ನು ಇನ್ನಾವ ಪಂದ್ಯಾಟಗಳಲ್ಲಿಯೂ ಭಾಗವಹಿಸದಂತೆ ಮಾಡುವೆನು". ಟೈರ್ ಸೇಯವರ ಈ ಮಾತು ಹಿಂದೂ ಆಟಗಾರರ ಹೃದಯದಲ್ಲಿ ದಂಗೆ ಏಳಿಸಿದವು.

ನರೇಂದ್ರರ ಸಭೆಯ ಕುರಿತು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ ಶ್ರೀ. ವಲ್ಲಭ್ಬಾಯಿ ಪಟೇಲರು ಹೀಗೆಂದರು. "ಮುಂಬಯಿಯಲ್ಲಿ ನಡೆದ ನರೇಂದ್ರರ ಸಭೆಯಲ್ಲಿ ಸ್ಟೇಂಡಿಂಗ್ ಕಮಿಟಿಗೆ ಎಷ್ಟು ಸ್ಥಾನಗಳನ್ನು ಕೊಡಬೇಕೆಂಬುದರ ಕುರಿತು ಇವರು ಮೂರು ದಿವಸಗಳವರೆಗೆ ಚರ್ಚಿಸಿದರು. ಆದರೆ ತಮ್ಮ ಸಂಸ್ಥಾನಗಳಲ್ಲಿ ಅನ್ಯಾಯಕ್ಕೆ ಬಲಿಯಾಗುತ್ತಿರುವ ಜನರ ಕುರಿತಾಗಿ ಒಂದೇ ಒಂದು ಮಾತನ್ನು ಉಚ್ಚರಿಸಲಿಲ್ಲ. ತಮ್ಮ ಸಹಾಯಕ್ಕಾಗಿ ಇವರು ಆಂಗ್ಲ ಸಾಮ್ರಾಜ್ಯವನ್ನು ಬೇಡುತ್ತಿರುವರು. ಭಾರತದಲ್ಲಿ ಅಂಥಾ ಬಲವಿದೆಂಬುದು ಇವರಿಗೆ ಇನ್ನೂ ತಿಳಿದುಬಂದಿಲ್ಲ. ತಮ್ಮ ಪ್ರಜೆಗಳನ್ನೇ ಇವರು ಒಗ್ಗಟ್ಟು ಮಾಡಿದ್ದಲ್ಲಿ ಇವರಿಗೆ ಬೇರೆ ಯಾರ ಸಹಾಯವೂ ಬೇಕು. 8ಕೋಟಿ ಪ್ರಜೆಗಳು ಇವರ ಸುತ್ತಮುತ್ತಲು ಸೇರಿಯುವದಿಲ್ಲವೆ"... ಅದೇ ಮುಂತಾದ ಸರಸ ಮಾತುಗಳನ್ನು ಹೇಳಿ ರಾಜಕೋಟೆದ ಕುರಿತು ಕೆಲವು ಮಾತುಗಳನ್ನು ಹೇಳಿದರು.

ಕ್ರೈಸ್ತ ಮಿಶನರಿಯು ಹಿಂದುವಾದರು

ತಾ. 12-11-38ಕ್ಕೆ ಆರ್ಯಸಮಾಜ ಪ್ರೀಲೀಡ್ ಗಂಜ್, ದೋಹಾಡ್ (ಗುಜರಾತ್) ಇಲ್ಲಿ 3 ವರ್ಷಗಳಿಂದ ಕ್ರೈಸ್ತರಾಗಿದ್ದ ಒಬ್ಬ ಕ್ರೈಸ್ತ ಮಿಶನರಿ ಉಪದೇಶಕರು ಶುದ್ಧಿಯ ಮೂಲಕ ವೈದಿಕ ಧರ್ಮ ದೀಕ್ಷೆಯನ್ನು ಹೊಂದಿದರು.

ಬಿಲ್ಲವರ ಎಸೋಸಿಯೇಶನ್

ಈ ಎಸೋಸಿಯೇಶನಿನ ಜನ್ಮಾರಭ್ಯದಿಂದ ಮೆಂಬರಾಗಿದ್ದು, ಸಂಸ್ಥೆಯ ಅಭಿವೃದ್ಧಿಗೆ ಬಲು ಅತ್ಯುತ್ಸಾಹದಿಂದ ಕೆಲಸಮಾಡಿ ಸ್ವಜಾತಿಯ ಏಳಿಗೆಗಾಗಿ ತನ, ಮನ, ಧನವನ್ನರ್ಪಿಸಿ ಅಹೋರಾತ್ರಿ ಹೋರಾಡಿದವರಲ್ಲೊಬ್ಬರಾದ ಸಾಲ್ಯಾನ್ ಅಪ್ಪಣ್ಣನವರ ಅಕಾಲ ಮರಣಕ್ಕಾಗಿ ತಾ 27-11-38ರಲ್ಲಿ ಸಂಸ್ಥೆಯ ಮಹಾಸಭೆಯು ಕೂಡಿ ಶ್ರೀಯುತರ ನಿಧನ ದುಃಖ ಸೂಚಿಸಲಾಯಿತು.

Established] THE [1906

UNITED INDIA

LIFE ASSURANCE COMPANY, LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	Rs. 486 Lakhs
Annual income Exceeds	Rs. 28 Lakhs
Total Assets Exceed	Rs. 100 Lakhs
Total claims paid over	Rs. 36 Lakhs.

The oldest and largest Life Assurance Company of South India, having 31 years of record service.

A POLICY IN THE **UNITED INDIA** *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to:—

THE BRANCH MANAGER,
The United India,
Life Assurance Company Ltd.
BLOCK No. 2, Felix Pai Bazaar,
BRANCH MANGALORE, S. K.

OR

K. Keshava Shenoy, M. A.
Organiser, Shantiniketan,
PENTLANDPET,
MANGALORE.

ಕೂದಲು

ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಗಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ಡಬ್ಬಲ್ ವಾಪಾಸು ಕೊಡಲು ಗ್ಯಾರಂಟಿ ಎಂಬುದಕ್ಕೆ ದೊರೆತ ನೂರಾರು ಸರ್ಟಿಫಿಕೇಟುಗಳೇ ಸಾಕ್ಷಿ.

ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ. 5-0-0. ಕಾಲಂಕಕ್ಕೂ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ. 7-0-0 ಬೆಲೆಯ ಎಣ್ಣೆ ಬೇಕಾಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

HAZRA & Co.,
P. O **Bihar Nursery** (DARBHANGA).

ಕ್ರಿಸ್‌ಮಸ್ ಕಾಣಿಕೆ



ಲಿವರ್ ಚಲನವಲನಗಳುಳ್ಳ ಉತ್ತಮ ತರಗತಿಯ ಸ್ವಿಸ್ ನ್ಯೂ ಪಟೆಂಟ್ ರೋಲ್ಡ್ ಗೋಲ್ಡ್ ಮುಚ್ಚಳಗಳುಳ್ಳ ರಿಸ್ಟ್ ವಾಚುಗಳು ಚೌಕಾಕೃತಿ ಮತ್ತು ಅಷ್ಟಕೋನಾಕೃತಿಯಲ್ಲಿದ್ದು ಕ್ರಿಸ್‌ಮಸ್ ಹಬ್ಬದ ನಿಮಿತ್ತ ಒಂಭತ್ತು ರೂಪಾಯಿ ಬೆಲೆಬಾಳುವಂತಹವು ರೂಪಾ 5-15-0ಕ್ಕೇನೇ ಮಾರಲ್ಪಡುವವು.

ಟಪ್ಪಾಲು ಖರ್ಚು ಪ್ರತ್ಯೇಕ.

ಇಂದೇ ಬರೆಯಿರಿ—

Nelson Watch Co.,
Wall Tax Road, P. O. MADRAS.

ಬೇಕಾಗಿದ್ದಾರೆ

ಪಡು ಅಲೆವೂರು ಎಯಿಡೆಡ್ ಶಾಲೆಗೆ ಒಬ್ಬ ಹಾಯರ್ ಗ್ರೇಡ್ ಟ್ರೈಂಡ್ ಅಧ್ಯಾಪಕರು ಬೇಕಾಗಿದ್ದಾರೆ. ಉಮೇದ್ವಾರರು ಈ ಕೆಳಗಿನವರೊಡನೆ ವಿಚಾರಿಸಬಹುದು.

ಎಂ. ಅಪ್ಪಣ್ಣ ಶೆಟ್ಟಿ,
ಮೆನೇಜರ್, ಪಡು ಅಲೆವೂರು ಶಾಲೆ.
ಪೋಸ್ಟ್ ಉಡುಪಿ.

ಡೈರಿಗಳು

ಬೇಕಾದವರೆ—

ನವಭಾರತ ಪುಸ್ತಕಭಂಡಾರ
ಉಡುಪಿ.

ಯುರೋಪಿನಲ್ಲಿ ಫ್ಯಾಸಿಸ್ಟರ ಪ್ರಭಾವ

ಲೇಖಕರು—ರಾಷ್ಟ್ರಪತಿ ಶ್ರೀ ಸುಭಾಷರು,

ಅನುವಾದಕರು—S. L. ಸುಬ್ರಹ್ಮಣ್ಯಂ, ಉರ್ದುಸ್ಕೂಲು ಹರಿಹರ.

ನಾನು ಕಳೆದ ಜೂನ್‌ನಲ್ಲಿ ಪ್ರೇಗಿಗೆ ಹೋಗಿದ್ದೆನು. ಜೆಕೋಸ್ಲೊವೇಕಿಯದ ಆಗಿನ ಅಧ್ಯಕ್ಷರಾಗಿದ್ದ ಡಾ. ಬೆನ್ಸ್‌ರೊಡನೆ ಕಲೆಯುವ ಸುಯೋಗವು ನನಗೆ ದೊರಕಿತ್ತು. ಮಿ ಸೌರಿಕರು ಅಧ್ಯಕ್ಷರಿದ್ದೂ ಬೆನ್ಸ್‌ರವರು ವಿದೇಶ ಮಂತ್ರಿಗಳಾಗಿದ್ದಾಗ ಸಹ ನಾನು ಅವರೊಡನೆ ಸೇರಿ ಸಂಭಾಷಿಸುವ ಸಂದರ್ಭವುಂಟಾಗಿತ್ತು. ಅವರೊಡನೆ ಸುಮಾರು ಒಂದು ಘಂಟೆಯ ಕಾಲ ಮಾತನಾಡಿದ್ದೆನು. ಜೆಕೋಸ್ಲೊವೇಕಿಯವು ಆಗ ಎಷ್ಟು ಸುರಕ್ಷಿತವಾಗಿತ್ತೋ ಮತ್ತೆ ಯಾವಾಗಲೂ ಸಹ ಆ ರೀತಿ ಇರಲಿಲ್ಲವೆಂದು ನಾನು ಭಾವಿಸಿದ್ದೆನು. ಯೂರೋಪಿನ ಅತ್ಯಂತ ಪ್ರಭಾವಶಾಲಿ ರಾಜನೀತಿಜ್ಞರ ಪೈಕಿ ಡಾ ಬೆನ್ಸ್‌ರವರೊಬ್ಬರು ಆದರೆ ಅವರು ಒಂದು ಭೀಷಣ ಜ್ವಾಲಾಮುಖಿಯ ದವಡೆಯಲ್ಲಿ ಸಿಕ್ಕಿಬಿದ್ದಿರುವರೆಂದು ಯಾರು ತಾನೆ ತಿಳಿದಿದ್ದರು?

ಮಾರನೇ ದಿನ ವಿಯನ್ನದ ಮೂಲಕ ಪ್ರವಾಸಮಾಡಿದೆ. ಅಲ್ಲಿಯೂ ಸಹ ಸಂಪೂರ್ಣವಾದ ಶಾಂತಿಯೇ ಇತ್ತು. ಆಸ್ಟ್ರಿಯದಲ್ಲಿ ಆಗ ಡಾ. ಶೂಷ್ನಿಗ್ ಪ್ರಭುತ್ವವಿತ್ತು. ಅವರಿಗೆ ಕಪ್ಪು ವಸ್ತ್ರಧಾರಿಗಳಾದ ಪಾದರಿಗಳ ಮತ್ತು ಫ್ಯಾಸಿಸ್ಟರ ಸಂಪೂರ್ಣ ಸಹಕಾರ ದೊರೆಯುತ್ತಿತ್ತು. ನಿರಂತಕವಾಗಿ ರಾಜ್ಯಭಾರಮಾಡುತ್ತಿದ್ದ ಇವರಿಗೆ, ಕೆಲವು ದಿನಗಳಲ್ಲಿಯೇ ನಾಜಿಗಳು ಆಸ್ಟ್ರಿಯವನ್ನು ಪ್ರವೇಶಮಾಡುವರೆಂದೂ, ತಾವು ಬಂದಿಗಳಾಗಬೇಕಾಗುವುದೆಂದೂ, ಕಲ್ಪನೆಯು ಸಹ ಇರಲಿಲ್ಲ ಡಾ ಶೂಷ್ನಿಗ್‌ರು ಆಸ್ಟ್ರಿಯದ "ಸೋಶಿಯಲಿಸ್ಟ್"ರನ್ನು ಯಾವ ರೀತಿ ಬಂಧನದಲ್ಲಿಡುತ್ತಿದ್ದರೋ, ಅದೇ ರೀತಿ ತಮ್ಮ ಅವಸ್ಥೆಯೂ ಆಗುವುದೆಂದು ಅವರು ಭಾವಿಸಿರಲಿಲ್ಲ.

ನಾಜಿಗಳು ಮೊದಲು ಸಹ ವರ್ಸೇಲ್ಸ್‌ನ ಒಪ್ಪಂದವನ್ನು ಮುರಿದು, ತಮ್ಮ ಶಕ್ತಿಯ ಹೆಸ್ಮೆಯಿಂದ ರೈನ್‌ಲೇಂಡನ್ನು ಸಹ ಆಕ್ರಮಿಸಿಕೊಂಡಿದ್ದರು. ಫ್ರಾನ್ಸಿನ ಗುಪ್ತ ಪೋಲೀಸರು ಹಿಟ್ಲರನು ಜರ್ಮನ್ ಸೇನೆಗೆ ಮಾಡಿದ್ದ ಕಟ್ಟಪ್ಪಣೆ-ಫ್ರಾನ್ಸಿನ ಸೈನ್ಯವೇನಾದರೂ ಜರ್ಮನಿಯನ್ನು ಆಕ್ರಮಿಸುವ ವಿಚಾರವನ್ನೇನಾದರೂ ಮಾಡಿದ್ದಲ್ಲಿ ರೈನ್‌ಲೇಂಡನ್ನೂ ಬಿಟ್ಟು ಜರ್ಮನಿಗೆ ಕೂಡಲೆ ಹಿಂದಿರುಗಬೇಕೆಂಬ ಅಪ್ಪಣೆಯನ್ನೂ ತಮ್ಮ ಫ್ರೆಂಚ್ ಸರಕಾರಕ್ಕೆ ಸೂಚಿಸಿದ್ದರು.

ಆಸ್ಟ್ರಿಯದ ಸ್ವಾಧೀನತೆಯನ್ನು ರಕ್ಷಿಸುವುದಾಗಿ ಶಕ್ತಿಶಾಲಿ ರಾಷ್ಟ್ರಗಳು ಆಶ್ವಾಸನೆವನ್ನು ಕೊಟ್ಟಿದ್ದುವು, ಆದರೆ ನಾಜಿಗಳು ಆಕ್ರಮಿಸಿಕೊಂಡಾಗ ಮಾತ್ರ ಯಾರೂ ಬಾಯನ್ನು ಸಹ ಬಿಡಲಿಲ್ಲ 1934ನೇ ಜುಲೈ ತಿಂಗಳಿನಲ್ಲಿ ಇಟಲಿಯು ಸಹ ಆಕ್ರಮಣದ ಹೆದರಿಕೆಯನ್ನು ತೋರಿಸಿತ್ತು. ಅಲ್ಲದೆ ಅವರ ಆಕ್ರಮಣವನ್ನೇನಾದರೂ ಮಾಡಿದ್ದೇ ಆದರೆ, ಜರ್ಮನಿಯೊಡನೆ ಯುದ್ಧಮಾಡುವುದಾಗಿ ಸಹ ಹೆದರಿಸಿತ್ತು- ಆದರೆ 1938ರಲ್ಲಿ ಅದರ ರೀತಿನೀತಿಗಳೇ ಬದಲಾಯಿಸಿದುವು. ಆಸ್ಟ್ರಿಯವನ್ನು ನುಂಗಿದ ಮೇಲೆಯೇ, ಜರ್ಮನಿಯು ಸುಡೆಟೆನ್ ಪ್ರಾಂತ್ಯದ ಕಡೆ ಗಮನವಿಟ್ಟುವನ್ನು ಯಾರೂ ಮರೆಯುವಂತಿಲ್ಲ. ಹಿಟ್ಲರನ ಸಾಹಸವು ದಿನದಿನಕ್ಕೆ ಹೆಚ್ಚುತ್ತಲೇ ಹೋಯಿತು, ಕಾರಣ ಇಟಲಿಯ ಸಹಾಯವೇ! ಹಿಟ್ಲರನ ಮಾರ್ಗದಲ್ಲಿ ಇಟಲಿಯು ಅಡ್ಡ ಬರುವುದಿಲ್ಲವೆಂದು ತೀರ್ಮಾನವಾಗಿತ್ತು, ಸಬಲರಾಷ್ಟ್ರಗಳ ಯುದ್ಧ ಸಿದ್ಧತೆಯು, ಅಸ್ತ್ರಶಸ್ತ್ರಗಳ ಸಂಗ್ರಹವು ವಿಶೇಷವಾಗಿ ಇಂಗ್ಲೆಂಡಿನ ಸಿದ್ಧತೆಯು-ಪೂರ್ತಿಯಾಗಿರಲಿಲ್ಲ. ಆದ್ದರಿಂದ 'Now and never' ಎಂಬ ಸಿದ್ಧಾಂತವನ್ನು ಮುಂದಿಟ್ಟು ತನ್ನ ಗುರಿಯನ್ನು ಹೊಂದಲು ಸಿದ್ಧನಾದನು.

ಹಿಟ್ಲರನು ಜೆಕೋಸ್ಲೊವೇಕಿಯವನ್ನು ಸ್ವಾಹಾಮಾಡಲು ನಿಶ್ಚಯಿಸಿದ ಬ್ರಿಟಿಷ್ ಪ್ರಧಾನ ಮಿ. ಚೇಂಬರ್ಲೇನರು ವಿಮಾನ ಯಾತ್ರೆಯನ್ನು ಕೈಗೊಂಡರು. ನಿಜವಾಗಿಯೂ ಜರ್ಮನಿಯು ಯುದ್ಧಕ್ಕೆ ಸಿದ್ಧವಾಗಿತ್ತೇ? ಯಾರಾದರೂ ಈ ಪ್ರಶ್ನೆಯನ್ನು ನನಗೆ ಹಾಕಿದ್ದರೆ ನಾನು ಸ್ಪಷ್ಟವಾಗಿ ಈ ರೀತಿ ಹೇಳುತ್ತಿದ್ದೆನು,-ಇಂಗ್ಲೆಂಡೇನಾದರೂ ಜರ್ಮನಿಗೆ ವಿರೋಧವಾಗಿ ಯುದ್ಧಕ್ಕೆ ಸಿದ್ಧವಾಗಿದೆ ಎಂದು ಹಿಟ್ಲರನಿಗೆ ಒಂದು ವೇಳೆ ತಿಳಿದಿದ್ದರೆ, ಅವನು ಖಂಡಿತ ಯುದ್ಧದ ಯೋಚನೆಯನ್ನು ಸಹ ಮಾಡುತ್ತಿರಲಿಲ್ಲ. ಆದುದರಿಂದ ನನ್ನ ಅಭಿಪ್ರಾಯದಲ್ಲಿ ಎರಡರಲ್ಲಿ ಒಂದು ನಿಜ-ಹಿಟ್ಲರನು ಬ್ರಿಟಿಷ್ ರಾಜನೀತಿಜ್ಞರನ್ನು ಮೂರ್ಖರನ್ನಾಗಿ ಮಾಡಿಬಿಟ್ಟ ಅಥವಾ ಬ್ರಿಟಿಷರು ತಿಳಿದೂ ತಿಳಿದೂ ಜರ್ಮನಿಗೆ ಸಹಾಯ ಮಾಡಿದರು. ಹಿಟ್ಲರನ ಎದುರಿಗೆ ಈ ರೀತಿ ಬ್ರಿಟನ್ನು ಆತ್ಮಸಮರ್ಪಣೆಮಾಡಿದುದರಿಂದ ಫ್ರಾನ್ಸ್ ಮತ್ತು ಬ್ರಿಟನ್ನಿನ ಸಂಧಿಯು ಮುರಿದು ಜರ್ಮನಿಯೊಡನೆ ಪ್ರತ್ಯೇಕ ಸಂಧಿಯನ್ನೂ ಮಾಡಿಕೊಂಡಂತಾಯಿತು. ಬ್ರಿಟಿಷ್ ಮಂತ್ರಿಮಂಡಲದಲ್ಲಿ ಫ್ರಾನ್ಸಿನ ಪರದವರು ಮಂತ್ರಿಗಳ ಈ ಕಾರ್ಯಸಮರ್ಥನೆಮಾಡಲಿಲ್ಲ. ಆದರೆ ಜರ್ಮನ್ ಪಕ್ಷಪಾತಿಗಳು ಮಾತ್ರ ಇದರ ಸಮರ್ಥನೆಯನ್ನು ಮಾಡಿದರು.

ಈ ರೀತಿ ಹಗಲು ದರೋಡೆಗೆ ಫ್ರಾನ್ಸು ಹೇಗೆ ಆತ್ಮ ಸಮರ್ಪಣೆಮಾಡೀತೆಂಬುದೇ ಪ್ರಶ್ನೆ. ಇದಕ್ಕೆ ಉತ್ತರಕೊಡುವುದು ಸುಲಭವೇನೂ ಇಲ್ಲ. ಗತಮಹಾಯುದ್ಧದಿಂದೀಚೆಗೆ ಫ್ರಾನ್ಸಿನ ವ್ಯಾಪಕತೆಯು ಯುರೋಪಿನಲ್ಲಿ ಹೆಚ್ಚಾಗುತ್ತಲೇ ಇದೆ. ಆದರೆ ಈಗ ಅದರ ಶಕ್ತಿ ನಾಶವಾಗಿ ಸಾಧಾರಣ ರಾಷ್ಟ್ರಗಳ ಪಂಕ್ತಿಯಲ್ಲಿ ಮಾತ್ರ ಅದರ ಸ್ಥಾನವಿದೆ. ಇದರಿಂದ ಫ್ರಾನ್ಸಿನ ಸಾಮ್ರಾಜ್ಯವಾದಿಗಳ ಶಾಂತಿಪ್ರಿಯತೆಯು ಪ್ರಗತಿಯಾಯಿತೆಂದು ಮಾತ್ರ ನಾನು ಹೇಳಲಾರೆ ಫ್ರಾನ್ಸಿನ ಸಮತಾವಾದಿಗಳು ಏನು ಮಾಡುತ್ತಿರುವರು? ನನ್ನ ಅಭಿಪ್ರಾಯದಲ್ಲಿ ಅವರು ಆತ್ಮಹೀನತೆಯ ಪ್ರದರ್ಶನವನ್ನು ಮಾತ್ರ ಮಾಡುತ್ತಿರುವರು. ಈ ಕಾರಣದಿಂದಲೇ ಅವರು ಹಿಟ್ಲರನ ವಿರೋಧವನ್ನು ಕಟ್ಟಿಕೊಳ್ಳದೆ ಹೋದುದು, ಯುದ್ಧ ಸಂಭವಿಸುವುದೆಂದು ಅವರು ಬಹಳ ಭಯಭೀತರಾಗಿದ್ದರು.

ಫ್ರಾನ್ಸಿಗೆ ಮನಸ್ಸಿದ್ದಿದ್ದರೆ ಜೆಕೋಸ್ಲೊವೇಕಿಯವನ್ನುಳಿಸುವುದರ ಜೊತೆಗೆ ಯುದ್ಧವನ್ನು ಸಹ ನಿಲ್ಲಿಸಬಹುದಾಗಿತ್ತು. ಒಂದು ವೇಳೆ ಫ್ರಾನ್ಸ್, ಬ್ರಿಟಿಷ್ ಮತ್ತು ಜರ್ಮನಿಗೆ ತಾನು ಜೆಕೋಸ್ಲೊವೇಕಿಯಕ್ಕೆ ಸಹಾಯಮಾಡುವುದಾಗಿ ಹೇಳಿದ್ದರೆ, ರಷ್ಯವು ಅದರ ಸಹಾಯಕ್ಕೆ ಬಂದೇಬರುತ್ತಿತ್ತು ಇದರಿಂದ ಬ್ರಿಟನ್ನೂ ಫ್ರಾನ್ಸಿನ ಕಡೆಗೆ ಬರಲೇಬೇಕಾಗುತ್ತಿತ್ತು. ಬ್ರಿಟನ್ನಿನ ಎಲ್ಲೆಯು ರೈನ್ ಆಗಿರುವುದೇ ಬೆಲ್ಜಿಯಂ ಸಹ ಫ್ರಾನ್ಸನ್ನು ಬಿಡುತ್ತಿರಲಿಲ್ಲ. ಈಗ ತಾನೇ ಯುರೋಪಿನ ಸಂಚಾರವನ್ನು ಮುಗಿಸಿ ಬಂದ ನನ್ನ ಒಬ್ಬ ಮಿತ್ರರು ಬೆಲ್ಜಿಯಂನಲ್ಲಿ ಯುದ್ಧದ ಸಿದ್ಧತೆಯು ಸಂಪೂರ್ಣವಾಗಿತ್ತೆಂದು ಹೇಳಿದರು, ನನಗೆ ನಾಜಿ ಜರ್ಮನಿಯ ಪರಿಚಯವಿರುವುದರಿಂದ ನಾನು ಧೈರ್ಯವಾಗಿ 1914ರ ಪರಿಸ್ಥಿತಿಯುಂಟಾಗುವ ಮೊದಲೇ ಜರ್ಮನಿಯನ್ನು ಶಾಂತಗೊಳಿಸಬಹುದಾಗಿತ್ತೆಂದು ಹೇಳಬಲ್ಲೆನು.

ಬ್ರಿಟನ್ನಾದರೂ, ಜರ್ಮನಿಗೆ, ತಾನು ಫ್ರಾನ್ಸಿನ ಪಕ್ಷವನ್ನು ಬಿಡುವುದಿಲ್ಲವೆಂದು ಹೇಳಿದ್ದರೆ, ಹಿಟ್ಲರನಿಗೆ ಜೆಕೋಸ್ಲೊವೇಕಿಯವನ್ನು ಆಕ್ರಮಿಸುವ ಸಾಹಸವಾಗುತ್ತಿರಲಿಲ್ಲ ಪಾಪ! ಎರಡು ದೇಶಗಳಿಂದ ತ್ಯಜಿಸಲ್ಪಟ್ಟ ಮೇಲೆ, ಆ ಬಡದೇಶವು ಮಾಡುವುದಾದರೂ ಏನು? ಒಂದು ವೇಳೆ ಆಕ್ರಮಣವಾಗುವ ಪೂರ್ವದಲ್ಲಿ, ಅದಕ್ಕೆ ಫ್ರಾನ್ಸು ಮತ್ತು ರಷ್ಯದ ಸಹಾಯದೊರೆತಿದ್ದರೆ ಕೊನೆಯಲ್ಲಾದರೂ ಬ್ರಿಟನ್ನಿನ ಸಹಾಯವು ದೊರೆಯುತ್ತಿತ್ತು. ಆದರೆ ಆ ರೀತಿ ಆಗಲಿಲ್ಲ ಡಾ. ಬೆನ್ಸ್‌ರವರು ಈ ಜ ನೀತಿಯ ದ ನಾಟಕವನ್ನ ಕಣ್ಣಿನಿಂದಲೇ ನೋಡಿದ್ದರು. ಅದಕ್ಕಾಗಿಯೇ ಅವರು ಸುಡೆಟೆನ್ ಪ್ರಾಂತ್ಯವನ್ನೂ ಜರ್ಮನಿಗೆ ಅರ್ಪಿಸಿ, ಹಂಗೇರಿ ಮತ್ತು ಪೋಲೆಂಡನ್ನೂ ಶಾಂತಗೊಳಿಸಿ ಉಳಿದುದನ್ನೇ ತಾವು ಸ್ವೀಕರಿಸಿದರು.

ಇದುವರೆಗೆ ಆಗಿರುವ ಈ ಪ್ರಹಸನವು ನಾಟಕದ ಮೊದಲನೆಯ ದೃಶ್ಯ ಮಾತ್ರ ಇದರ ಸಮಾಪ್ತಿಯು ನಾಲ್ಕು ಶಕ್ತಿಗಳು ಸೇರಿ ಮಾಡಿರುವ "ಪ್ಯಾಕ್ಟ್"ನಿಂದ ಆಗ ಪ್ರವಿಷ್ಟಯು ಫ್ಯಾಸಿಸ್ಟ್ ರಾಜನೀತಿಜ್ಞರ ಯೋಜನೆಯ ಫಲ. ಅವರು ಇದರಲ್ಲಿ ಸಫಲರಾಗುವರೋ ಇಲ್ಲವೋ ಯಾರೂ ಹೇಳಲಾರರು. ಆದರೆ ಒಂದು ವಿಚಾರ ಮಾತ್ರ ನಿಜ. ರಷ್ಯವು ತನ್ನ ಪ್ರತಿಷ್ಠೆಯನ್ನು ಸುರಕ್ಷಿತವಾಗಿಟ್ಟುಕೊಳ್ಳಬೇಕಾದರೆ, ಅದು ಒಬ್ಬಂಟಿಗನಾಗಿ ರಾಷ್ಟ್ರಗಳಿಗೆ ಸಲ್ಲುವ ಸಂಪೂರ್ಣ ಯುದ್ಧಸಾಮಗ್ರಿಗಳನ್ನೆಲ್ಲ ತಯಾರಿಸಿಕೊಳ್ಳಬೇಕಾಗಿದೆ

“ಶೆಂಕ್ಸ”



SHANKS

(ಇಂಗ್ಲಿಷ್‌ಮೇಕ್)

ಕ್ರೂಡ್ ಆಯಿಲ್ ಎಂಜಿನುಗಳು

ಸುಲಭ ಚಲನ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು “ಶೆಂಕ್ಸ” ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬೈಂಡ ಪ್ಲೇಂಟ್), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಯಿರಿ—

ಪೆರಮ್ಯೌಂಟ್ ಇಂಜಿನೀಯರಿಂಗ್ ಕೊರ್ಪರೇಶನ್

೮೨, ಎಪೊಲೊ ಸ್ಟ್ರೀಟ್, ಫೋರ್ಟ್ . . . ಮುಂಬಯಿ.

ಹೊಸ ನಿರ್ಮಾಣದ ಸಿನೆಮಾಯಂತ್ರಗಳು ಈಗತಾನೆ ಬಂದಿವೆ.



ನಂಬ್ರ 1 ... 7

ನಂಬ್ರ 2 ... 5

... 1 ಮಾತ್ರ

ಪ್ಯಾಕಿಂಗ್ ಮತ್ತು ಪೋಸ್ಟೇಜು ನಂ 1ಕ್ಕೆ, ರೂ 1 -8 ... ಪ್ಯಾಕಿಂಗ್ ಮತ್ತು ಪೋಸ್ಟೇಜು ನಂಬ್ರ 2ಕ್ಕೆ ರೂ. 1—4—0. ... ಮುಂಗಡವಾಗಿ ಕಳುಹಿಸಿದ ಕಾಗದ ಪತ್ರಗಳಿಗೆ ಮಾತ್ರ ಗಮನಕೊಡಲಾಗುವುದು.

ವಿಳಾಸ:- Wedlock & Co., *Park Town, MADRAS*

ಅಖಿಲಭಾರತ ಆನುವಂಶಿಕ ವೈದ್ಯರ ಜನೆಯ ಸಮ್ಮೇಲನ.

ಸ್ವಾಗತ ಸಮಿತಿ, ಬೆಂಗಳೂರು ನಗರ

ಪ್ರಕಟನ ಪತ್ರಿಕೆ ನ ೧

ಈ ಸಮ್ಮೇಲನವು ಬೆಂಗಳೂರು ನಗರದಲ್ಲಿ ಭಿಷಗಾಚಾರ್ಯ ಪಂಡಿತ ತಾರಾನಾಥಜಿ, ಅಧ್ಯಕ್ಷ, ಪ್ರೇಮ ವಿದ್ಯಾಪೀಠ ತುಂಗಭದ್ರ, ಅವರ ಅಧ್ಯಕ್ಷತೆಯಲ್ಲಿ ನಡೆಯುವುದು. ಇದರ ಏರ್ಪಾಡಿಗಾಗಿ ಬೆಂಗಳೂರು ನಗರಗಳ ಪ್ರಮುಖ ವೈದ್ಯರಿಂದೊಡಗೂಡಿದ ಸ್ವಾಗತಸಮಿತಿಯೊಂದನ್ನು ರಚಿಸಲಾಗಿದೆ.

ಈಚೆಗೆ ಸರಕಾರದಿಂದ ಸ್ಥಾಪಿತವಾದ ಮೆಡಿಕಲ್ ಕಾಲೇಜುಗಳಿಂದ ಹೊರಬೀಳುತ್ತಿರುವ ಪದವೀಧರರು ನಿರುದ್ಯೋಗದಿಂದ ನರಳುತ್ತಿರುವರೆಂದೂ, ಅವರಿಗೆ ಉದ್ಯೋಗವನ್ನು ಕಲ್ಪಿಸುವ ನಿಮಿತ್ತದಿಂದ ಎಲ್ಲಾ ವೈದ್ಯರೂ ಸರಕಾರದಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದೂ, ಹಾಗೆ ರಿಜಿಸ್ಟರು ಮಾಡಿಸಿಕೊಂಡವರ್ಯಾರೇ ರೋಗಿಗಳಿಗೆ ಔಷಧಕೊಡಬೇಕೆಂದೂ, ಹಾಗೆ ರಿಜಿಸ್ಟರು ಮಾಡಿಸಿಕೊಳ್ಳದವರು ವೈದ್ಯಕೀಯನ್ನು ಮಾಡಿದರೆ ಅಂಥವರನ್ನು ಜುಲ್ಮಾನೆ (ದಂಡ) ಮತ್ತು ಕಾರಾಗೃಹ ವಾಸಗಳಿಂದ ಶಿಕ್ಷೆಗೊಳಪಡಿಸಬೇಕೆಂದೂ ಉದ್ದೇಶಪಟ್ಟು ಬೊಂಬಾಯಿ ಮದ್ರಾಸು ಪ್ರಾಂತಗಳ ಸರಕಾರದವರು ಒಂದು ಕಾನೂನನ್ನು ಮಾಡಲಿರುವರು. ವಿಚಾರಮಾಡಿ ನೋಡಿದರೆ ಈ ಕಾನೂನಿಂದ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಬದಲು, ಈಗ ಹಳ್ಳಿಹಳ್ಳಿಗಳಲ್ಲಿ ನೂರಾರು ವರ್ಷಗಳಿಂದ ವಂಶಪರಂಪರೆಯಾಗಿ ಬಡ ಹಳ್ಳಿಗರಿಗೆ ವೈದ್ಯಸಹಾಯವನ್ನು ನೀಡುತ್ತಿರುವ ಆನುವಂಶಿಕ ವೈದ್ಯರನ್ನು ನಿರ್ಮೂಲಗೊಳಿಸಲೆತ್ನಿಸಿದಂತಾಗುವುದಲ್ಲದೆ, ಬಡಹಳ್ಳಿಗರಿಗೆ ಈಗ ಧರ್ಮಾರ್ಥವಾಗಿ ದೊರೆಯುತ್ತಿರುವ ವೈದ್ಯಕೀಯ ಸಹಾಯವನ್ನು ತಪ್ಪಿಸಿದಂತಾಗುವುದು. ಮತ್ತೆ ಇದರಿಂದ ಸಾಂಸ್ಕೃತಿಕ ದೃಷ್ಟಿಯಿಂದ, ವಂಶಪರಂಪರೆಯಾಗಿ ಬರುತ್ತಿರುವ ಶಾಸ್ತ್ರೀಯ ಆನುವಂಶಿಕ ಶಿಕ್ಷಣವು ಗುರುವಿನಿಂದ ಶಿಷ್ಯನಿಗೆ, ತಂದೆಯಿಂದ ಮಗನಿಗೆ ದೊರೆಯುದಂತಾಗಿ, ಸನಾತನ ಆಯುರ್ವೇದ ಶಾಸ್ತ್ರೀಯ ಶಿಕ್ಷಣವೇ ದೇಶದಿಂದ ಲುಪ್ತವಾಗಿ ಹೋಗುವುದರಲ್ಲಿ ಸಂದೇಹವಿಲ್ಲ. ಮತ್ತು ಕೇವಲ ಭೂವ್ಯವಸಾಯವನ್ನವಲಂಬಿಸಿ ಬಹುಸಂಖ್ಯಾತರಾದ ಕೃಷಿಕರನ್ನೊಳಗೊಂಡ ಈ ದೇಶದಲ್ಲಿ ಆಯುರ್ವೇದ-ಯುನಾನಿ ವೈದ್ಯಕ್ಕೆ ಪ್ರೋತ್ಸಾಹವನ್ನೀಯಬೇಕೆಂದು ಮಾಜಿ ವೈಸರಾಯರಾದ ಲಾರ್ಡ್ ಹಾರ್ಡಿಂಜ್, ಮದ್ರಾಸ್ ಗವರ್ನರರಾಗಿದ್ದ ಲಾರ್ಡ್ ಅಂಪ್ಟಲ್ ಪ್ರಭುಗಳು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರುತ್ತಾರೆ ನಮ್ಮ ಶಾಸನಸಭೆಗಳ ಸದಸ್ಯರಿಗೆ ಪಾಶ್ಚಾತ್ಯ ಪೌರ್ವಾತ್ಯ ವೈದ್ಯಶಾಸ್ತ್ರಗಳ ವಿಚಾರದಲ್ಲಿ ಸರಿಯಾದ ಅಭಿಪ್ರಾಯವುಂಟಾಗಿ, ಅವರು ದೇಶೀಯ ವೈದ್ಯಕ್ಕೆ ಪ್ರೋತ್ಸಾಹವನ್ನೀಯಲು ಮುಂದಾಗಿ ಹಳ್ಳಿಗರೆಲ್ಲರಿಗೂ ವೈದ್ಯಕೀಯ ಚಿಕಿತ್ಸೆಯು ಸುಲಭವಾಗಿ ದೊರೆಯುವಂತೆ ಮಾಡಲು ಬದ್ಧಕಂಕಣರಾಗಬೇಕೆಂಬ ಉದ್ದೇಶದಿಂದ ಇನ್ನು ಮುಂದೆ ಪಾಶ್ಚಾತ್ಯ ವೈದ್ಯಶಾಸ್ತ್ರವೇತ್ತರ ಅಭಿಪ್ರಾಯಗಳನ್ನು ಸಂಗ್ರಹಿಸಿ ಪುಸ್ತಕರೂಪದಲ್ಲಿ ಕೊಡಬೇಕೆಂದಿರುವೆವು. ಮತ್ತೆ ಈ ಸಮಯದಲ್ಲಿ ಆನುವಂಶಿಕವಾಗಿ ನಮಗೆ ದೊರೆತಿರುವ ದೇಶೀಯ ವೈದ್ಯವನ್ನು ಸಿದ್ಧಗೊಳಿಸಲು, ಅದರ ಮೇಲೆ ಬೀಳಲಿರುವ ಗದೆಯ ಪೆಟ್ಟನ್ನು ತಡೆಯಲು, ಆನುವಂಶಿಕ ಆಯುರ್ವೇದೀಯರೂ, ಯುನಾನಿಗಳೂ ದೇಶದ ಎಲ್ಲಾ ಭಾಗಗಳಿಂದ ತಂಡತಂಡವಾಗಿ ನಮ್ಮ ಸಮ್ಮೇಲನಕ್ಕೆ ಬಂದು ಅದರ ಕಾರ್ಯದಲ್ಲಿ ಭಾಗವಹಿಸಿ, ಯಶಸ್ವಿಯಾಗಿ ಮಾಡಬೇಕೆಂದು ಪ್ರಾರ್ಥಿಸಲಾಗಿದೆ.

ಬಿ. ಪಿ. ಪಂಡಿತ್, ಸ್ವಾಗತಾಧ್ಯಕ್ಷ.

ಧಾರವಾಡ —ತಾ. ೪-೧೨-೩೮ನೆಯ ಧಾರವಾಡ ವನಿತಾಸೇವಾ ಸಮಾಜಕ್ಕೆ ಮಂಗಳೂರಿನ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರೂ, ಮೇಲಾದ ಮಹಾತ್ಮಾಗಾಂಧಿ ಆದ ಶ್ರೀಮಾನ್ ನಾರಾಯಣ ಕಿಣಿಯವರು ಭೇಟಿಯನ್ನು ಕೊಟ್ಟರು. ಅವರ ಜೊತೆಯಲ್ಲಿ ಶ್ರೀ. ಎನ್. ಬಿ. ಹಿರೇಮಠದವರೂ ಇದ್ದರು. ಸಮಾಜದ ಸಂಚಾಲಕರು ಅವರಿಗೆ ಸಂಸ್ಥೆಯ ಎಲ್ಲ ಕಾರ್ಯಕಲಾಪಗಳನ್ನು ತಿಳಿಸಿದರು. ಕೋಮಲ ಬಾಲಕಿಯರು ಆಸನಗಳನ್ನೂ ಹಾಕಿ ತೋರಿಸಿದರು. ಅಲ್ಲದೆ ಮತ್ತು ಬೇರೆ ಬೇರೆ ಚಟುವಟಿಕೆಯ ಕಾರ್ಯಕ್ರಮಗಳನ್ನು ತೋರಿಸಿದರು.

ಬರುವ ಕಾಂಗ್ರೆಸ್ ಅಧಿವೇಶನ ಸಿದ್ಧತೆ

ಅಧ್ಯಕ್ಷರು ಆನೆಯ ಮೇಲೆ ಸವಾರಿ ಮಾಡುವರು—ಆಯಾಯ ಜನರಿಗೆ ಬೇಕಾಗುವಂತೆ ಆಯಾಯ ರೀತಿಯ ಊಟ ಉಪಚಾರಗಳು—ಉತ್ತಮ ವ್ಯವಸ್ಥೆಗಳು.

ತ್ರಿಪುರಿಯಲ್ಲಿ ಜರಗಲಿರುವ ಬರುವ ಕಾಂಗ್ರೆಸು ಮಹಾಸಭೆಯ ಸಿದ್ಧತೆಗಳ ಯೋಜನೆಯು ರಚಿತವಾಗಿರುವುದು. ಒಟ್ಟು ಸುಮಾರು ಎರಡು ಲಕ್ಷ ರೂಪಾಯಿ ಖರ್ಚು ಬೀಳಬಹುದೆಂದು ಅಂದಾಜುಮಾಡಲಾಗಿದೆ.

ಸ್ವಾಗತ ಕಮಿಟಿಯವರು ಈ ಸಭೆಯನ್ನು ಫೆಬ್ರವರಿ ಕೊನೆಯ ವಾರ ಮತ್ತು ಮಾರ್ಚಿ ೫ರ ಅವಧಿಯಲ್ಲಿ ಜರಗುವಂತೆ ದಿನಗಳನ್ನು ಗೊತ್ತುಮಾಡಬೇಕೆಂದು ವರ್ಕಿಂಗ್ ಕಮಿಟಿಗೆ ಸಲಹೆಯನ್ನಿತ್ತಿರುವರು. ಮತ್ತು ಅಖಿಲಭಾರತ ಕಾಂಗ್ರೆಸು ಕಮಿಟಿ ಮೀಟಿಂಗನ್ನು ಫೆಬ್ರವರಿ 22ರಿಂದ 24ರ ಅವಧಿಯಲ್ಲಿ ಜರಗಿಸತಕ್ಕದ್ದೆಂದು ಸೂಚಿಸಿರುವರು.

ಎ. ಐ. ಸಿ. ಸಿ. ಯ ಮೀಟಿಂಗಿನ ಮೊದಲು ಪ್ರದರ್ಶನದ ಉದ್ಘಾಟನಾ ಸಮಾರಂಭವು ನೆರವೇರುವುದು. ಮಹಾತ್ಮಗಾಂಧಿಯವರು ಈ ಸಮಾರಂಭವನ್ನು ಜರಗಿಸಬಹುದೆಂದು ಊಹಿಸಲಾಗಿದೆ ಎ. ಐ ಎಸ್ ಎ. ಯ ಶಂಕರಲಾಲ ಬ್ಯಾಂಕರರು ತ್ರಿಪುರಿಗೆ ಪ್ರದರ್ಶನದ ವ್ಯವಸ್ಥೆ ವಿಚಾರದಲ್ಲಿ ಒಮ್ಮೆ ಸಂದರ್ಶಿಸಿರುವರು.

ತ್ರಿಪುರಿ ಕಾಂಗ್ರೆಸ ಸಮಾರಂಭದಲ್ಲಿ ಅಧ್ಯಕ್ಷರು ಆನೆಯ ಮೇಲೇರಿ ಮೆರವಣಿಗೆಯಿಂದ ಪ್ರವೇಶಿಸುವಂತಾಗಬೇಕೆಂದು ಸೂಚನೆ ಬಂದಿರುವುದು. ಕಾಂಗ್ರೆಸ ನಗರ ರಚನೆಯ ನಕ್ಷೆ ತಯಾರಾಗಿರುವುದು. ಸ್ಥಳೀಕ ಕಲಾಕುಶಲರಿಂದ ನಗರ ರಚನೆ, ಮತ್ತು ನಗರ ಶೃಂಗಾರವು ಮಾಡಲ್ಪಡುವುದು. ತ್ರಿಪುರಿಯ ಪ್ರಾಚೀನ ಕಲೆಯ ಪ್ರದರ್ಶನಕ್ಕೆ ಹೆಚ್ಚಿನ ಗಮನಕೊಡಲಾಗುವುದು.

2000ಮಂದಿ ಸ್ವಯಂಸೇವಕರನ್ನು ಕೂಡಿಸುವ ಯೋಚನೆಯಿದೆ. ಇದರಲ್ಲಿ 300ಮಂದಿ ಮಹಿಳೆಯರೂ ಬೇರೆ ಬೇರೆ ಪ್ರಾಂತ್ಯಗಳ ಜನರ ಅನುಕೂಲತೆಗನುಸಾರವಾಗಿ ಬೇರೆ ಬೇರೆ ಪ್ರಾಂತೀಯರ ಹೊಟೆಲುಗಳನ್ನೇ ತೆರೆಯುವ ಏರ್ಪಾಡು ಮಾಡಲಾಗುವುದು. ಕಮಿಟಿಯ ಅಂದಾಜು ಮೇರೆಗೆ ಸುಮಾರು ಲಕ್ಷ ಜನರು ಕಲೆಯಬಹುದೆಂದು ಅಭಿಪ್ರಾಯಪಡುತ್ತದೆ ನಗರವು ಜಿ ಐ. ಪಿ. ರೈಲ್ವೆಯ ಮದನ ಮಹಲ ಸ್ಟೇಶನಿನಿಂದ ಬರೇ 8ಮೈಲು ದೂರಕ್ಕಿದೆ. ಇಲ್ಲಿಂದ ಪ್ರಯಾಣಸೌಕರ್ಯಕ್ಕಾಗಿ ಮೋಟರು ಬಸ್ಸು, ಮೋಟರು ಲೋರಿಗಳ ಸರ್ವಿಸು ವ್ಯವಸ್ಥೆಮಾಡಲಾಗುವುದು

ಆಶಾಭಗ್ನನಾದ ತರುಣನ ಪ್ರತೀಕಾರ

ಮಿಲನ ಎಂಬಲ್ಲಿ ಮೋಟ್ವಾ ಎಂಬವನು ಮದುವೆಯಾದ ರಾತ್ರಿ ಪತ್ನಿಯೊಂದಿಗೆ ಶಯ್ಯಾಗೃಹಕ್ಕೆ ಹೋಗಿ, ವಿರಾಮಹೊಂದುತ್ತಿದ್ದನು ಅಷ್ಟರಲ್ಲಿ ಮೇಲಿಂದ ನೀರು ಹನಿಹನಿಯಾಗಿ ಅವನ ತಲೆಯ ಮೇಲೆ ಬೀಳತೊಡಗಿತು. ಇದೇನು? ಎಂದು ಮೇಲೆ ನೋಡಿದ. ಆದರೆ ನೀರು ಎಲ್ಲಿಂದ ಬೀಳುತ್ತದೆಂಬುದು ಗೊತ್ತಾಗಲಿಲ್ಲ. ಗುಣುಗುಟ್ಟಿ ಮಲಗಿಕೊಂಡ. ಮರುದಿನ ರಾತ್ರಿಯೂ ಪತ್ನಿಯೊಂದಿಗೆ ವಿಹರಿಸುತ್ತಿರುವ ಸಮಯ ನೀರು ಸುರಿಯಿತು ಮೇಲಿಂದ ನೋಡಿದ, ಶೋಧಿಸಿದ. ಅಂತಸ್ಥಿನಿಂದ ಒಂದು ಬಿರುಕು ಕಂಡುಬಂತು. ಆ ಜಾಗವನ್ನು ಗುರುತಿಟ್ಟು ಓಡಿದ ಉಪ್ಪರಿಗೆಗೆ, ನೋಡುತ್ತಾನೆ ಒಬ್ಬ ತರುಣನು ಪಾತ್ರೆಯಲ್ಲಿ ನೀರು ಹಿಡಿದುಕೊಂಡಿರುವುದನ್ನು. ಇವನೇ ಅವನ ಪತ್ನಿಯ ಕೈಯನ್ನು ಬೇಡಿದವ. ದೊರೆಯದಿರಲು ಬೇಸರಗೊಂಡು, ಈ ರೀತಿ ಪ್ರತೀಕಾರಕ್ಕೆಳಸಿದವ ಈ ಮನುಷ್ಯ.

ಗುಲಬಾಗಲದಲ್ಲಿ ವಿದ್ಯಾರ್ಥಿಗಳ ಮುಷ್ಕರ

ಹೈದರಾಬಾದನ ಗುಲಬಾಗಲ ಕೋಲೇಜದಲ್ಲಿಯ 300ವಿದ್ಯಾರ್ಥಿಗಳು ಕೋಲೇಜಿನಿಂದ ಹೊರಡಿಸಲ್ಪಟ್ಟರು. 'ವಂದೇ ಮಾತರಂ' ಗೀತೆಯ ಮತ್ತು ಮುಷ್ಕರದ ಕುರಿತಾದ ಆರ್ಡರನ್ನು ಮನ್ನಿಸದಿದ್ದುದೇ ಇದರ ಕಾರಣ.

ಮಕರಸಂಕ್ರಾಂತಿ ವಿಶೇಷ ಸಂಚಿಕೆಯಲ್ಲಿ ಜಾಹೀರಾತು ಕೊಟ್ಟು ವಿಶೇಷ ಲಾಭಪಡೆಯಿರಿ.

ಮದ್ರಾಸಿನಲ್ಲಿ ಹಿಂದೀ ಅಧ್ಯಾಪಕರ ಟ್ರೈನಿಂಗ್ ಸ್ಕೂಲ್:—ತಾ. 2-1-1939 ರಲ್ಲಿ ಹಿಂದೀ ಪ್ರಚಾರಕ ಟ್ರೈನಿಂಗ್ ತರಗತಿಯು ಆರಂಭವಾಗಿ ಐದೂವರೆ ತಿಂಗಳ ಅವಧಿಯಲ್ಲಿ ಮುಕ್ತಾಯವಾಗುವುದು. ರಾಷ್ಟ್ರಭಾಷಾ ವಿಶಾರದ ಪದವೀಧರರಿಗೆ ಮಾತ್ರ ಪ್ರವೇಶದೊರೆಯುವುದು ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯವರಿಂದ ಕೊಡೋಣಾಗುವ ಸರ್ಟಿಫಿಕೇಟು ದಾರಿಗಳಿಗೇನೇ ಹಾಯಸ್ಕೂಲುಗಳಲ್ಲಿ ಹಿಂದೀ ಅಧ್ಯಾಪಕರ ಕೆಲಸವನ್ನು ಕೊಡಲಾಗುವುದೆಂದು ಮದ್ರಾಸು ಸರಕಾರವು ಇತ್ತೀಚೆಗೆ ನಿರ್ಧಾರಮಾಡಿರುವುದು ವಿದ್ಯಾರ್ಥಿಗಳು ಈ ಸುಸಂಧಿಯ ಸದುಪಯೋಗಮಾಡಿಕೊಂಡಾರೆಂದು ನಿರೀಕ್ಷೆ. ಪ್ರವೇಶ ಅರ್ಜಿ ಫಾರ್ಮು ವಗೈರೆಯನ್ನು 'ಜನರಲ್ ಸೆಕ್ರೆಟರಿ' ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ, ತ್ಯಾಗರಾಯ ನಗರ ಮದ್ರಾಸು. ಇವರಿಂದ ಪಡೆಯಬಹುದು. ಇದೇ ತಿಂಗಳ ತಾ. 25ರೊಳಗಾಗಿ ಅರ್ಜಿಗಳು ಸಭಾ ಕಛೇರಿಗೆ ತಲ್ಪತಕ್ಕದ್ದು.

ಮೈಸೂರು ಪತ್ರ

ತಾ. ೧೧-೧೨-೧೯೩೮

ಅಂತರ ವಿಶ್ವವಿದ್ಯಾನಿಲಯದ ಕ್ರಿಕೆಟ್ ಪಂದ್ಯ:—ರೋಹಿಂಟರ್ ಬೇರಿಯ ಅಂತರ ವಿಶ್ವವಿದ್ಯಾನಿಲಯದ ಕ್ರಿಕೆಟ್ ಟೂರ್ನಿಯಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯಕ್ಕೂ ಮೈಸೂರು ವಿಶ್ವವಿದ್ಯಾನಿಲಯಕ್ಕೂ ಇದೇ ಮಾಹೆ 7-8 ಮತ್ತು ೯ರಲ್ಲಿ ಮೈಸೂರಿನಲ್ಲಿ ಕ್ರಿಕೆಟ್ ಪಂದ್ಯವು ನಡೆಯಿತು. ಇದು ಮೈಸೂರು ಮಹಾರಾಜಾ ಕಾಲೇಜಿನ ಮೈದಾನದಲ್ಲಿ ನಡೆಯಿತು. ಪ್ರೇಕ್ಷಕರು ಮೂರು ದಿನವೂ ಕಿಕ್ಕಿರಿದಿದ್ದರು.

ಸರ್ಕಾರದ ಪ್ರಕಟಣೆಗಳು:—ಈ ಮಾಸಾಂತ್ಯದಲ್ಲಿ ನಮ್ಮ ಸರಕಾರದವರು, ಮೈಸೂರು ಖನಿಜ ಸಂಪತ್ತು, ಪ್ರೈವೇಟು ಸಂಸ್ಥೆಗಳಿಗೆ ಇದರಲ್ಲಿ ಹೆಚ್ಚು ವಿಶೇಷ ಸೌಕರ್ಯ, ವಿದ್ಯುತ್ ಇಲಾಖೆ, ಟೆಕ್ನಿಕಲ್ ಸ್ಕೂಲ್, ಮೈಸೂರು ಸಿಟಿ ಮ್ಯುನಿಸಿಪಾಲಿಟಿ, ಮತ್ತು ಮ್ಯುನಿಸಿಪಲ್ ಇತ್ರಗಳಿಗೆ ಸಂಬಂಧಪಟ್ಟ ಜಾತೆಯ ವರದಿಯನ್ನು ಪ್ರಕಟಿಸಿದ್ದಾರೆ ಇವುಗಳನ್ನು ಮುಂದಕ್ಕೆ ವಿಮರ್ಶಿಸಲಾಗುತ್ತೆ.

ವೃತ್ತಪತ್ರಿಕಾ ಮಸೂದೆ:—ಮೈಸೂರು ಸಂಸ್ಥಾನದಲ್ಲಿ ಹೊಸದಾಗಿ ಜಾರಿಗೆ ತರಲಿರುವ ಮೌಲ್ಯಂಥ ಮಸೂದೆಯ ವಿಚಾರವನ್ನು ಚರ್ಚಿಸಲು ಸರ್ಕಾರದಿಂದ ನೇಮಕವಾಗಿರುವ ಸಮಿತಿಯವರು, ಪ್ರಥಮಸಚಿವರರ ಅಧ್ಯಕ್ಷತೆಯಲ್ಲಿ ಸಭೆ ಸಡೆಸಿ, ಸೆಕ್ಯೂರಿಟಿಯನ್ನು ರೂ.1000ದಿಂದ ರೂ. 750ಕ್ಕೂ, ನಂತರದ್ದನ್ನು ರೂ. 3000ದಿಂದ ರೂ. 2500ಕ್ಕೂ ಇಳಿಸಲಾಯಿತೆಂದೂ, ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ.

ಪ್ರವಾಸ ಮಾಡುವವರಿಗೆ:—ಮೈಸೂರು ಸಂಸ್ಥಾನದಲ್ಲಿ ಹೊರಗಿನಿಂದ ಬಂದು ಪ್ರವಾಸ ಮಾಡುವವರಿಗೆ ಹೆಚ್ಚಿನ ಸೌಕರ್ಯವನ್ನು ಸುಲಭವಾಗಿ ಪ್ರವಾಸಮಾಡುವಂತೆ ಸಹಾಯಮಾಡಲು, ಒಂದು ಟೂರಿಸ್ಟ್ ಬ್ಯೂರೋ ಎನ್ನುವುದನ್ನು ಸ್ಥಾಪಿಸಲು ಸರ್ಕಾರದವರು ಆಲೋಚಿಸುತ್ತಿರುವರೆಂದು ಗೊತ್ತಾಗಿದೆ.

ಕಾಂಗ್ರೆಸ್ ಭವನ—ಬೆಂಗಳೂರು ಸಿಟಿ ಗಾಂಧಿ ನಗರದಲ್ಲಿ ಸುಮಾರು 2000 ಚ. ॥ ಗ ॥ ಇರುವ ಒಂದು ನಿವೇಶನವನ್ನೂ, ಕಾಂಗ್ರೆಸ್ ಭವನವನ್ನು ಕಟ್ಟಿಸಲು, ಮುಫತ್ತಾಗಿ ಕೊಡಬೇಕೆಂದು, ಬಂದಿದ್ದ ಅರ್ಜಿಯ ವಿಚಾರವಾಗಿ ಒಂದು ನಗರಸಭೆಯಲ್ಲಿ ಬಹಳ ಚರ್ಚೆ ನಡೆಯಿತು. ಇದರ ಮೇಲೆ ಕೊನೆ, ಆ ಜಾಗವನ್ನು ಚ. ॥ ಗ ॥ ಒಂದಕ್ಕೆ ರೂ. ೧ರ ಮೇರೆ ಮಾರಬಹುದೆಂದು ತೀರ್ಮಾನವಾಯಿತು.

ನೋಟೀಸು

ದಿ ಕರ್ಣಾಟಕ ಬೇಂಕ್ ಲಿಮಿಟೆಡ್, ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಸಾಲಗಳ ಮೊಬಲಗನ್ನಾಗಲೀ, ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದಿದ್ದುದರಿಂದ, ಸದರಿಯವರಿಗೆ ಕ್ರಮದಂತೆ ರಿಜಿಸ್ಟ್ರಿನೋಟೀಸುಗಳನ್ನು ಕೊಟ್ಟಾಗ್ಯೂ ಕೂಡಾ ಪಾವತಿಮಾಡದಿದ್ದುದರಿಂದ ಸದರಿ ಆಭರಣಗಳನ್ನು ಇದೇ ತಾರೀಕು 17ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದಿರುವುದು—

ಜಂಜ್ರಾ ನಂಬ್ರ	ಸಾಲದ ನಂಬ್ರ	ಅಸಾಮಿಗಳ ಹೆಸರು	ಸಾಲದ ಮೊಬಲಗು
			ರೂ.
1	147/34	ನರಸಿಂಹ ಭಂಡಾರ್ಕರ್, ಶ್ರೀನಿವಾಸ ಭಂಡಾರ್ಕರನ ಮಗ, ಉಡುಪಿ, ದ. ಕ.	85—0—0
2	843/36	ಶೀನ ಶೆಟ್ಟಿ, ಗಂಗಯ್ಯ ಶೆಟ್ಟಿಯ ಮಗ ಉದಿಯಾವರ ಗ್ರಾಮ, ಉಡುಪಿ ತಾಲೂಕು, ದ. ಕ.	30—0—0

Office of the Bank,
TENKAPET, UDIPI
Dated 12-12—'38

K. Vasudeva Rao.
Agent.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಜಮ ಟ್ರೇಡ್‌ಮಾರ್ಕುಳ್ಳ ರಿಂಗ್ ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿವಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವ ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸಂಗತದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ
ಮೈಸೂರು ಸ್ಟೇಟಿನ ಏಜಂಟರು– ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE
MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೂಡ ಲಾಗುವುದು.

ನಿರಖು ಠೇವಣಾತಿ ನೇಕಡ 5¼ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!
K. R. K. SHET
Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,
ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲುಮಿಶ್ರಿ, ಕಸ್ತೂರಿ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಉರಿ ತದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯಸ್ತಂಭ ಉಂಟುಮಾಡುವದು. ಬಾಟ್ಲಿ 1ರ ರೂ 2–8–0.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, **MANGALORE**

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):— ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು ಎಕ್ರೆ ಒಂದಕ್ಕೆ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು

ಎಲ್ಲ ತೋಟದಲ್ಲಿ ಇದು ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವದು

ಕೆ. ಎಮ್. ಸೆಟ್ಟಿ, ಕೆನರಾ ನರ್ಸರಿ,
ಪೋಸ್ಟ್:—ಕಾಪು, ದ. ಕ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್	ಭೈರನ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮— ೦	೧೦೦ ಮಾತ್ರೆಗಳಿಗೆ ರೂ ೨—೮— ೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು ಪಿ ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!
ಮನಮೋಹಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು
ಸೈನ್‌ಬೋರ್ಡ್‌ಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು
ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತವೆ [ಗ್ಯಾರಂಟಿ ಕೆಲಸ!
ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,
ಸೋಡೆ ಮಠದ ಲೇನು - - - ಉಡುಪಿ, ದ ಕ

ಬರುವ ಕಾಂಗ್ರೆಸ್ ಅಧಿವೇಶನ ಸಿದ್ಧತೆ

ಅಧ್ಯಕ್ಷರು ಆನೆಯ ಮೇಲೆ ಸವಾರಿ ಮಾಡುವರು — ಆಯಾಯ ಜನರಿಗೆ ಬೇಕಾಗುವಂತೆ ಆಯಾಯ ರೀತಿಯ ಊಟ ಉಪಚಾರಗಳು — ಉತ್ತಮ ವ್ಯವಸ್ಥೆಗಳು.

ತ್ರಿಪುರಿಯಲ್ಲಿ ಜರಗಲಿರುವ ಬರುವ ಕಾಂಗ್ರೆಸು ಮಹಾಸಭೆಯ ಸಿದ್ಧತೆಗಳ ಯೋಜನೆಯು ರಚಿತವಾಗಿರುವುದು. ಒಟ್ಟು ಸುಮಾರು ಎರಡು ಲಕ್ಷ ರೂಪಾಯಿ ಖರ್ಚು ಬೀಳಬಹುದೆಂದು ಅಂದಾಜು ಮಾಡಲಾಗಿದೆ.

ಸ್ವಾಗತ ಕಮಿಟಿಯವರು ಈ ಸಭೆಯನ್ನು ಫೆಬ್ರವರಿ ಕೊನೆಯ ವಾರ ಮತ್ತು ಮಾರ್ಚಿ 5ರ ಅವಧಿಯಲ್ಲಿ ಜರಗುವಂತೆ ದಿನಗಳನ್ನು ಗೊತ್ತುಮಾಡಬೇಕೆಂದು ವರ್ಕಿಂಗ್ ಕಮಿಟಿಗೆ ಸಲಹೆಯನ್ನಿತ್ತಿರುವರು, ಮತ್ತು ಅಖಿಲಭಾರತ ಕಾಂಗ್ರೆಸು ಕಮಿಟಿ ಮೀಟಿಂಗನ್ನು ಫೆಬ್ರವರಿ 22ರಿಂದ 24ರ ಅವಧಿಯಲ್ಲಿ ಜರಗಿಸತಕ್ಕದ್ದೆಂದು ಸೂಚಿಸಿರುವರು.

ಎ. ಐ. ಸಿ. ಸಿ. ಯ ಮೀಟಿಂಗಿನ ಮೊದಲು ಪ್ರದರ್ಶನದ ಉದ್ಘಾಟನಾ ಸಮಾರಂಭವು ನೆರವೇರುವದು. ಮಹಾತ್ಮ ಗಾಂಧಿಯವರು ಈ ಸಮಾರಂಭವನ್ನು ಜರಗಿಸಬಹುದೆಂದು ಊಹಿಸಲಾಗಿದೆ. ಎ. ಐ. ಎಸ್. ಎ. ಯ ಶಂಕರಲಾಲ ಬ್ಯಾಂಕರರು ತ್ರಿಪುರಿಗೆ ಪ್ರದರ್ಶನದ ವ್ಯವಸ್ಥೆ ವಿಚಾರದಲ್ಲಿ ಒಮ್ಮೆ ಸಂದರ್ಶಿಸಿರುವರು.

ತ್ರಿಪುರಿ ಕಾಂಗ್ರೆಸ ಸಮಾರಂಭದಲ್ಲಿ ಅಧ್ಯಕ್ಷರು ಆನೆಯ ಮೇಲೇರಿ ಮೆರವಣಿಗೆಯಿಂದ ಪ್ರವೇಶಿಸುವಂತಾಗಬೇಕೆಂದು ಸೂಚನೆ ಬಂದಿರುವುದು. ಕಾಂಗ್ರೆಸ ನಗರ ರಚನೆಯ ನಕ್ಷೆ ತಯಾರಾಗಿರುವುದು. ಸ್ಥಳೀಕ ಕಲಾಕುಶಲರಿಂದ ನಗರ ರಚನೆ, ಮತ್ತು ನಗರ ಶೃಂಗಾರವು ಮಾಡಲ್ಪಡುವುದು. ತ್ರಿಪುರಿಯ ಪ್ರಾಚೀನ ಕಲೆಯ ಪ್ರದರ್ಶನಕ್ಕೆ ಹೆಚ್ಚಿನ ಗಮನಕೊಡಲಾಗುವುದು.

2000ಮಂದಿ ಸ್ವಯಂಸೇವಕರನ್ನು ಕೂಡಿಸುವ ಯೋಜನೆಯಿದೆ. ಇದರಲ್ಲಿ 300ಮಂದಿ ಮಹಿಳೆಯರೂ ಬೇರೆ ಬೇರೆ ಪ್ರಾಂತ್ಯಗಳ ಜನರ ಅನುಕೂಲತೆಗನುಸಾರವಾಗಿ ಬೇರೆ ಬೇರೆ ಪ್ರಾಂತೀಯರ ಹೊಟೆಲುಗಳನ್ನೇ ತೆರೆಯುವ ಏರ್ಪಾಡು ಮಾಡಲಾಗುವುದು. ಕಮಿಟಿಯು ಅಂದಾಜು ಮೇರೆಗೆ ಸುಮಾರು ಲಕ್ಷ ಜನರು ಕಲೆಯಬಹುದೆಂದು ಅಭಿಪ್ರಾಯಪಡುತ್ತದೆ. ನಗರವು ಜಿ. ಐ. ಪಿ. ರೈಲ್ವೆಯ ಮದನ ಮಹಲ ಸ್ಟೇಶನಿನಿಂದ ಬರೇ 8ಮೈಲು ದೂರಕ್ಕಿದೆ. ಇಲ್ಲಿಂದ ಪ್ರಯಾಣಸೌಕರ್ಯಕ್ಕಾಗಿ ಮೋಟರು ಬಸ್ಸು, ಮೋಟರು ಲೋರಿಗಳ ಸರ್ವಿಸು ವ್ಯವಸ್ಥೆ ಮಾಡಲಾಗುವುದು

ಅಖಿಲಭಾರತ ಆನುವಂಶಿಕ ವೈದ್ಯರ ಏಳನೆಯ ಸಮ್ಮೇಲನ.

ಸ್ವಾಗತ ಸಮಿತಿ, ಬೆಂಗಳೂರು ನಗರ ಪ್ರಕಟನ ಪತ್ರಿಕೆ ನ ೧

ಈ ಸಮ್ಮೇಲನವು ಬೆಂಗಳೂರು ನಗರದಲ್ಲಿ ಭಿಷಗಾಚಾರ್ಯ ಪಂಡಿತ ತಾರಾನಾಥಜಿ, ಅಧ್ಯಕ್ಷ, ಶ್ರೀಮ ವಿದ್ಯಾಪೀಠ ತುಂಗಭದ್ರಾ, ಅವರ ಅಧ್ಯಕ್ಷತೆಯಲ್ಲಿ ನಡೆಯುವುದು. ಇದರ ಏರ್ಪಾಡಿಗಾಗಿ ಬೆಂಗಳೂರು ನಗರಗಳ ಪ್ರಮುಖ ವೈದ್ಯರಿಂದೊಡಗೂಡಿದ ಸ್ವಾಗತಸಮಿತಿಯೊಂದನ್ನು ರಚಿಸಲಾಗಿದೆ.

ಈಚೆಗೆ ಸರಕಾರದಿಂದ ಸ್ಥಾಪಿತವಾದ ಮೆಡಿಕಲ್ ಕಾಲೇಜುಗಳಿಂದ ಹೊರಬೀಳುತ್ತಿರುವ ಪದವೀಧರರು ನಿರುದ್ಯೋಗದಿಂದ ನರಳುತ್ತಿರುವರೆಂದೂ, ಅವರಿಗೆ ಉದ್ಯೋಗವನ್ನು ಕಲ್ಪಿಸುವ ನಿಮಿತ್ತದಿಂದ ಎಲ್ಲಾ ವೈದ್ಯರೂ ಸರಕಾರದಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದೂ, ಹಾಗೆ ರಿಜಿಸ್ಟರು ಮಾಡಿಸಿಕೊಂಡವರೇ ರೋಗಿಗಳಿಗೆ ಔಷಧಕೊಡಬೇಕೆಂದೂ, ಹಾಗೆ ರಿಜಿಸ್ಟರು ಮಾಡಿಸಿಕೊಳ್ಳದವರು ವೈದ್ಯಕೀಯನ್ನು ಮಾಡಿದರೆ ಅಂಥವರನ್ನು ಜುಲ್ಮಾನೆ (ದಂಡ) ಮತ್ತು ಕಾರಾಗೃಹ ವಾಸಗಳಿಂದ ಶಿಕ್ಷೆಗೊಳಪಡಿಸಬೇಕೆಂದೂ ಉದ್ದೇಶಪಟ್ಟು ಬೊಂಬಾಯಿ ಮದ್ರಾಸು ಪ್ರಾಂತಗಳ ಸರಕಾರದವರು ಒಂದು ಕಾನೂನನ್ನು ಮಾಡಲಿರುವರು. ವಿಚಾರಮಾಡಿ ನೋಡಿದರೆ ಈ ಕಾನೂನಿಂದ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಬದಲು, ಈಗ ಹಳ್ಳಿಪಳ್ಳಿಗಳಲ್ಲಿ ನೂರಾರು ವರ್ಷಗಳಿಂದ ವಂಶಪಾರಂಪರೆಯಾಗಿ ಬಡಜನರಿಗೆ ವೈದ್ಯಸಹಾಯವನ್ನು ನೀಡುತ್ತಿರುವ ಆನುವಂಶಿಕ ವೈದ್ಯರನ್ನು ನಿರ್ಮೂಲಗೊಳಿಸಲೆತ್ನಿಸಿದಂತಾಗುವುದಲ್ಲದೆ, ಬಡಹಳ್ಳಿಗರಿಗೆ ಈಗ ಧರ್ಮಾರ್ಥವಾಗಿ ದೊರೆಯುತ್ತಿರುವ ವೈದ್ಯಕೀಯ ಸಹಾಯವನ್ನು ತಪ್ಪಿಸಿದಂತಾಗುವುದು, ಮತ್ತು ಇದರಿಂದ ಸಾಂಸ್ಕೃತಿಕ ದೃಷ್ಟಿಯಿಂದ, ವಂಶಪರಂಪರೆಯಾಗಿ ಬರುತ್ತಿರುವ ವಿದ್ಯೆಯ ಆನುವಂಶಿಕ ಶಿಕ್ಷಣವು ಗುರುವಿನಿಂದ ಶಿಷ್ಯನಿಗೆ, ತಂದೆಯಿಂದ ಮಗನಿಗೆ ದೊರೆಯುವಂತಾಗಿ, ನಿಜವಾದ ಆಯುರ್ವೇದ ಶಾಸ್ತ್ರೀಯ ಶಿಕ್ಷಣವೇ ದೇಶದಿಂದ ಲುಪ್ತವಾಗಿ ಹೋಗುವುದರಲ್ಲಿ ಸಂದೇಹವಿಲ್ಲ, ಮತ್ತು ಕೇವಲ ಭೂವ್ಯವಸಾಯವನ್ನವಲಂಬಿಸಿ ಬಹುಸಂಖ್ಯಾತರಾದ ಕೃಷಿಕರನ್ನೊಳಗೊಂಡ ಈ ದೇಶದಲ್ಲಿ ಆಯುರ್ವೇದ-ಯುನಾನಿ ವೈದ್ಯಕ್ಕೆ ಪ್ರೋತ್ಸಾಹವನ್ನೀಯಬೇಕೆಂದು ಮಾಜಿ ವೈಸರಾಯರಾದ ಲಾರ್ಡ ಹಾರ್ಡಿಂಜ್, ಮದ್ರಾಸ್ ಗವರ್ನರರಾಗಿದ್ದ ಲಾರ್ಡ್ ಆಂಟಿಲ್ ಪ್ರಭುಗಳು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರುತ್ತಾರೆ. ನಮ್ಮ ಶಾಸನಸಭೆಗಳ ಸದಸ್ಯರಿಗೆ ಪಾಶ್ಚಾತ್ಯ ಪೌರ್ವಾತ್ಯ ವೈದ್ಯಶಾಸ್ತ್ರಗಳ ವಿಚಾರದಲ್ಲಿ ಸರಿಯಾದ ಅಭಿಪ್ರಾಯವುಂಟಾಗಿ, ಅವರು ದೇಶೀಯ ವೈದ್ಯಕ್ಕೆ ಪ್ರೋತ್ಸಾಹವನ್ನೀಯಲು ಮುಂದಾಗಿ ಹಳ್ಳಿಗರೆಲ್ಲರಿಗೂ ವೈದ್ಯಕೀಯ ಚಿಕಿತ್ಸೆಯು ಸುಲಭವಾಗಿ ದೊರೆಯುವಂತೆ ಮಾಡಲು ಬದ್ಧಕಂಕಣರಾಗಬೇಕೆಂಬ ಉದ್ದೇಶದಿಂದ ಇನ್ನು ಮುಂದೆ ಪಾಶ್ಚಾತ್ಯ ವೈದ್ಯಶಾಸ್ತ್ರವೇತ್ತರ ಅಭಿಪ್ರಾಯಗಳನ್ನು ಸಂಗ್ರಹಿಸಿ ಪುಸ್ತಕರೂಪದಲ್ಲಿ ಕೊಡಬೇಕೆಂದಿರುವೆವು ಮತ್ತೆ ಈ ಸಮಯದಲ್ಲಿ ಆನುವಂಶಿಕವಾಗಿ ನಮಗೆ ದೊರೆತಿರುವ ದೇಶೀಯ ವೈದ್ಯವನ್ನು ಶುದ್ಧವಾಗಿಡಲು, ಅದರ ಮೇಲೆ ಬೀಳಲಿರುವ ಗಂಡಾಂತರವನ್ನು ಕಳೆಯಲು, ಆನುವಂಶಿಕ ಆಯುರ್ವೇದೀಯರು, ಯುನಾನಿಗಳೂ ದೇಶದ ಎಲ್ಲಾ ಭಾಗಗಳಿಂದ ತಂಡತಂಡವಾಗಿ ನಮ್ಮ ಸಮ್ಮೇಲನಕ್ಕೆ ಬಂದು ಅದರ ಕಾರ್ಯದಲ್ಲಿ ಭಾಗವಹಿಸಿ, ಯಶಸ್ವಿಯಾಗಿ ಮಾಡಬೇಕೆಂದು ಪ್ರಾರ್ಥಿಸಲಾಗಿದೆ.

ಬಿ. ವಿ. ಪಂಡಿತ್, ಸ್ವಾಗತಾಧ್ಯಕ್ಷ.

ಧಾರವಾಡ —ತಾ. ೪-೧೨-೩೮ನೆಯ ಧಾರವಾಡ ವನಿತಾಸೇವಾ ಸಮಾಜಕ್ಕೆ ಮಂಗಳೂರಿನ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರೂ, ವಕೀಲರೂ ಆದ ಶ್ರೀಮಾನ್ ನಾರಾಯಣ ಶೆಟ್ಟಿಯವರು ಭೇಟಿಯನ್ನು ಕೊಟ್ಟರು. ಅವರ ಜೊತೆಯಲ್ಲಿ ಶ್ರೀ. ಎನ್. ಬಿ. ಹಿರೇಮಠರವರೂ ಇದ್ದರು. ಸಮಾಜದ ಸಂಚಾಲಕರು ಅವರಿಗೆ ಸಂಸ್ಥೆಯ ಎಲ್ಲ ಕಾರ್ಯಕಲಾಪಗಳನ್ನು ತಿಳಿಸಿದರು. ಕೋಮಲ ಬಾಲಿಕೆಯರು ಆಸನಗಳನ್ನೂ ಹಾಕಿ ತೋರಿಸಿದರು. ಅಲ್ಲದೆ ಮತ್ತು ಬೇರೆ ಬೇರೆ ಚಟುವಟಿಕೆಯ ಕಾರ್ಯಕ್ರಮಗಳನ್ನು ತೋರಿಸಿದರು.

ಆಶಾಭಗ್ನನಾದ ತರುಣನ ಪ್ರತೀಕಾರ

ಮಿಲನ ಎಂಬಲ್ಲಿ ಮೋಟ್ಸಾ ಎಂಬವನು ಮದುವೆಯಾದ ರಾತ್ರಿ ವಧುವಿನೊಂದಿಗೆ ಶಯ್ಯಾಗೃಹಕ್ಕೆ ಹೋಗಿ, ವಿರಾಮಹೊಂದುತ್ತಿದ್ದನು. ಅಷ್ಟರಲ್ಲಿ ಮೇಲಿಂದ ನೀರು ಹನಿಹನಿಯಾಗಿ ಅವನ ತಲೆಯ ಮೇಲೆ ಬೀಳತೊಡಗಿತು. ಇದೇನು? ಎಂದು ಮೇಲೆ ನೋಡಿದ. ಆದರೆ ನೀರು ಎಲ್ಲಿಂದ ಬೀಳುತ್ತದೆಂಬುದು ಗೊತ್ತಾಗಲಿಲ್ಲ. ಗುಣುಗುಟ್ಟಿ ಮಲಗಿಕೊಂಡ. ಮರುದಿನ ರಾತ್ರಿಯೂ ಪತ್ನಿಯೊಂದಿಗೆ ವಿಹರಿಸುತ್ತಿರುವ ಸಮಯ ನೀರು ಸುರಿಯಿತು ಮೇಲಿಂದ. ನೋಡಿದ, ಶೋಧಿಸಿದ. ಅಂತಸ್ತಿನಿಂದ ಒಂದು ಬಿರುಕು ಕಂಡುಬಂತು. ಆ ಜಾಗವನ್ನು ಗುರುತಿಟ್ಟು ಓಡಿದ ಉಪ್ಪರಿಗೆಗೆ, ನೋಡುತ್ತಾನೆ ಒಬ್ಬ ತರುಣನು ಪಾತ್ರೆಯಲ್ಲಿ ನೀರು ಹಿಡಿದುಕೊಂಡಿರುವುದನ್ನು. ಇವನೇ ಅವನ ಪತ್ನಿಯ ಕೈಯನ್ನು ಬೇಡಿದವ. ದೊರೆಯದಿರಲು ಬೇಸರಗೊಂಡು, ಈ ರೀತಿ ಪ್ರತೀಕಾರಕ್ಕೆಳಸಿದವ ಈ ಮನುಷ್ಯ.

ಗುಲಬಾಗಲದಲ್ಲಿ ವಿದ್ಯಾರ್ಥಿಗಳ ಮುಷ್ಕರ

ಹೈದರಾಬಾದಿನ ಗುಲಬಾಗಲ ಕೋಲೇಜದಲ್ಲಿಯ 300ವಿದ್ಯಾರ್ಥಿಗಳು ಕೋಲೇಜಿನಿಂದ ಹೊರಡಿಸಲ್ಪಟ್ಟರು. 'ವಂದೇ ಮಾತರಂ' ಗೀತೆಯ ಮತ್ತು ಮುಷ್ಕರದ ಕುರಿತಾದ ಆರ್ಡರನ್ನು ಮನ್ನಿಸದಿದ್ದುದೇ ಇದರ ಕಾರಣ.

ಮಕರಸಂಕ್ರಾಂತಿ
ವಿಶೇಷ ಸಂಚಿಕೆಯಲ್ಲಿ
ಜಾಹೀರಾತು ಕೊಟ್ಟು
ವಿಶೇಷ ಲಾಭಪಡೆಯಿರಿ.

ಮದ್ರಾಸಿನಲ್ಲಿ ಹಿಂದೀ ಅಧ್ಯಾಪಕರ ಟ್ರೈನಿಂಗ್ ಸ್ಕೂಲ್:—ತಾ. 2-1-1939ರಲ್ಲಿ ಹಿಂದೀ ಪ್ರಚಾರಕ ಟ್ರೈನಿಂಗ್ ತರಗತಿಯು ಆರಂಭವಾಗಿ ಐದೂವರೆ ತಿಂಗಳ ಅವಧಿಯಲ್ಲಿ ಮುಕ್ತಾಯವಾಗುವುದು. ರಾಷ್ಟ್ರಭಾಷಾ ವಿಶಾರದ ಪದವೀಧರರಿಗೆ ಮಾತ್ರ ಪ್ರವೇಶದೊರೆಯುವುದು ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯವರಿಂದ ಕೊಡೋಣಾಗುವ ಸರ್ಟಿಫಿಕೇಟು ದಾರಿಗಳಿಗೇನೇ ಹೈಸ್ಕೂಲುಗಳಲ್ಲಿ ಹಿಂದೀ ಅಧ್ಯಾಪಕರ ಕೆಲಸವನ್ನು ಕೊಡಲಾಗುವುದೆಂದು ಮದ್ರಾಸು ಸರಕಾರವು ಇತ್ತೀಚೆಗೆ ನಿರ್ಧಾರಮಾಡಿರುವುದು ವಿಶೇಷದಯು ಈ ಸುಸಂಧಿಯ ಸದುಪಯೋಗಮಾಡಿಕೊಂಡಾರೆಂದು ನಿರೀಕ್ಷೆ. ಪ್ರವೇಶ ಅರ್ಜಿ ಫಾರ್ಮು ವಗೈರೆಯನ್ನು 'ಜನರಲ್ ಸೆಕ್ರೆಟರಿ' ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ, ತ್ಯಾಗರಾಯ ನಗರ ಮದ್ರಾಸು, ಇವರಿಂದ ಪಡೆಯಬಹುದು. ಇದೇ ತಿಂಗಳ ತಾ. 25ರೊಳಗಾಗಿ ಅರ್ಜಿಗಳು ಸಭಾ ಕಛೇರಿಗೆ ತಲ್ಪತಕ್ಕದ್ದು.

ಮೈಸೂರು ಪತ್ರ

ತಾ. ೧೧-೧೨-೧೯೩೮

ಅಂತರ ವಿಶ್ವವಿದ್ಯಾನಿಲಯದ ಕ್ರಿಕೆಟ್ ಪಂದ್ಯ:—ರೋಹಿಂಟನ್ ಬೇರಿಯ ಅಂತರ ವಿಶ್ವವಿದ್ಯಾನಿಲಯದ ಕ್ರಿಕೆಟ್ ಟೂರ್ನಿಯಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯಕ್ಕೂ ಮೈಸೂರು ವಿಶ್ವವಿದ್ಯಾನಿಲಯಕ್ಕೂ ಇದೇ ಮಾಹೆ 7-8 ಮತ್ತು 9ರಲ್ಲಿ ಮೈಸೂರಿನಲ್ಲಿ ಕ್ರಿಕೆಟ್ ಪಂದ್ಯವು ನಡೆಯಿತು. ಇದು ಮೈಸೂರು ಮಹಾರಾಜಾ ಕಾಲೇಜಿನ ಮೈದಾನದಲ್ಲಿ ನಡೆಯಿತು. ಪ್ರೇಕ್ಷಕರು ಮೂರು ದಿನವೂ ಕಿಕ್ಕಿರಿದಿದ್ದರು.

ಸರ್ಕಾರದ ಪ್ರಕಟಣೆಗಳು:—ಈ ವಾರಾಂತ್ಯದಲ್ಲಿ ನಮ್ಮ ಸರಕಾರದವರು, ಮೈಸೂರು ಖನಿಜ ಸಂಪತ್ತು, ಕೈಗಾರಿಕೆಗಳಿಗೆ ಮೈಸೂರಲ್ಲಿ ಹೆಚ್ಚು ವಿಶೇಷ ಸೌಕರ್ಯ, ವಿದ್ಯುತ್ ಇಲಾಖೆ, ಟೆಕ್ನಿಕಲ್ ಸ್ಕೂಲ್, ಮೈಸೂರು ಸಿಟಿ ಮ್ಯುನಿಸಿಪಾಲಿಟಿ, ಮತ್ತು ಮ್ಯುಸಿಯಂ ಇವುಗಳಿಗೆ ಸಂಬಂಧಪಟ್ಟ ವಾರ್ಷಿಕ ವರದಿಯನ್ನು ಪ್ರಕಟಿಸಿದ್ದಾರೆ ಇವುಗಳನ್ನು ಮುಂದಕ್ಕೆ ವಿಮರ್ಶಿಸಲಾಗುತ್ತೆ.

ವೃತ್ತಪತ್ರಿಕಾ ಮಸೂದೆ:—ಮೈಸೂರು ಸಂಸ್ಥಾನದಲ್ಲಿ ಹೊಸದಾಗಿ ಜಾರಿಗೆ ತರಲಿರುವ ಮೇಲ್ಕಂಡ ಮಸೂದೆಯ ವಿಚಾರವನ್ನು ಚರ್ಚಿಸಲು ಸರ್ಕಾರದಿಂದ ನೇಮಕವಾಗಿರುವ ಸಮಿತಿಯವರು, ಪ್ರಭುಮುಖ್ಯರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಸೆಕ್ಯೂರಿಟಿಯನ್ನು ರೂ.1000ದಿಂದ ರೂ. 750ಕ್ಕೂ, ನಂತರದ್ದನ್ನು ರೂ. 3000ದಿಂದ ರೂ. 2500ಕ್ಕೂ ಇಳಿಸಲಾಯಿತೆಂದೂ, ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ.

ಪ್ರವಾಸ ಮಾಡುವವರಿಗೆ:—ಮೈಸೂರು ಸಂಸ್ಥಾನದಲ್ಲಿ ಹೊರಗಿನಿಂದ ಬಂದು ಪ್ರವಾಸ ಮಾಡುವವರಿಗೆ ಹೆಚ್ಚಿನ ಸೌಕರ್ಯ ಮತ್ತು ಸುಲಭವಾಗಿ ಪ್ರವಾಸಮಾಡುವಂತೆ ಸಹಾಯಮಾಡಲು, ಒಂದು ಟ್ಯೂರಿಸ್ಟ್ ಬ್ಯೂರೋ ಎನ್ನುವುದನ್ನು ಸ್ಥಾಪಿಸಲು ಸರ್ಕಾರದವರು ಆಲೋಚಿಸುತ್ತಿರುವರೆಂದು ಗೊತ್ತಾಗಿದೆ.

ಕಾಂಗ್ರೆಸ್ ಭವನ—ಬೆಂಗಳೂರು ಸಿಟಿ ಗಾಂಧಿ ನಗರದಲ್ಲಿ ಸುಮಾರು 2000 ಚ. ॥ ಗ ॥ ವಿರುವ ಒಂದು ನಿವೇಶನವನ್ನು, ಕಾಂಗ್ರೆಸ್ ಭವನವನ್ನು ಕಟ್ಟಿಸಲು, ಮುಫತ್ತಾಗಿ ಕೊಡಬೇಕೆಂದು, ಬಂದಿದ್ದ ಅರ್ಜಿಯ ವಿಚಾರವಾಗಿ ಒಂದು ನಗರಸಭೆಯಲ್ಲಿ ಬಹಳ ಚರ್ಚೆ ನಡೆಯಿತು, ಇದರ ಮೇಲೆ ಕೊನೆ, ಆ ಜಾಗವನ್ನು ಚ. ॥ ಗ ॥ ಒಂದಕ್ಕೆ ರೂ. ೧೭ ಮೇರೆ ಮಾರಬಹುದೆಂದು ತೀರ್ಮಾನವಾಯಿತು.

ನೋಟೀಸು

ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳ ಮೊಬಲಗನ್ನಾಗಲೀ, ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದಿದ್ದುದರಿಂದ, ಸದರಿಯವರಿಗೆ ಕ್ರಮದಂತೆ ರಿಜಿಸ್ಟ್ರಿನೋಟೀಸುಗಳನ್ನು ಕೊಟ್ಟಾಗ್ಯೂ ಕೂಡಾ ಪಾವತಿಮಾಡದಿದ್ದುದರಿಂದ ಸದರಿ ಆಭರಣಗಳನ್ನು ಇದೇ ತಾರೀಖು 17ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದಿರುವುದು—

ಜಂಜಾಬಿ ನಂಬ್ರ	ಸಾಲದ ನಂಬ್ರ	ಅಸಾಮಿಗಳ ಹೆಸರು	ಸಾಲದ ಮೊಬಲಗು
			ರೂ.
1	147/34	ನರಸಿಂಹ ಭಂಡಾರ್ಕರ್, ಶ್ರೀನಿವಾಸ ಭಂಡಾರ್ಕರನ ಮಗ, ಉಡುಪಿ, ದ. ಕ.	85—0—0
3	843/36	ಶೀನ ಶೆಟ್ಟಿ, ಗಂಗಯ್ಯ ಶೆಟ್ಟಿಯ ಮಗ ಉದಿಯಾವರ ಗ್ರಾಮ, ಉಡುಪಿ ತಾಲೂಕು, ದ. ಕ.	30—0—0

Office of the Bank,
TENKAPET, UDIPI
Dated 12-12-'38

K. Vasudeva Rao.
Agent.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಜೆಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವ ಕಶ್ಮಲವನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ

ಮೈಸೂರು ಸ್ಟೇಟಿನ ಏಜಂಟರು:— ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5¼ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಹುಕಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನಾಯಿತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಸ್ತೂರಿ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಉರಿಯುವದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ 2-8-0.

ಕಸ್ತೂರಿಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ.
ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager

Kanara Printing Works,

Hampankatte, **MANGALORE.**

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):— ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು ಒಕ್ಕೊಂದು ಮರಕ್ಕೆ ರೂ. ೫೦ರ ಮೇಲೆ ಉತ್ಪತ್ತಿಯಾಗುವುದು.

ಎಲ್ಲಾ ತೋಟದಲ್ಲಿ ಇದು ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ.
ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿಗಿಡಗಳು ಕೂಡ ದೊರೆಯುತ್ತವೆ.
ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,

ಪೋಸ್ಟ್:—**ಕಾಪು,** ದ. ಕ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲರಾ ಪಿಲ್ಸ್	**ಭೈರವ ಮಾತ್ರೆಗಳು**
ಕೋಲರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ ಫಿಜಿಶಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! **ಪ್ರಾಮಾಣಿಕತೆ!** **ಪ್ರಸಿದ್ಧ!**

ಮನಮೋಹಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು

ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ. **[ಗ್ಯಾರಂಟ ಕೆಲಸ!**

ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,

ಸೋದೆ ಮಠದ ಲೇನು — — — ಉಡುಪಿ, ದ. ಕ.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು.
ಮಂಗಳೂರು. ಕೊಡಿಯಾಲಬೈಲು.

ಸೀತಾನದಿ ಜಾನುವಾರು ಸಂತೆ

ತಾರೀಕು **3-12-1938**ರಿಂದ ತಾರೀಕು **9-12-38**ರ ವರೆಗೆ ಮಾತ್ರ.

ಜಾನುವಾರುಗಳನ್ನು ಪಡಕೊಳ್ಳುವವರಿಗೆ ಇದೇ ಅತ್ಯುತ್ತಮ ಸಂದರ್ಭ.

ಪ್ರಯಾಣಿಕರಿಗೆ ಅನುಕೂಲವಾಗುವಂತೆ ಅಗತ್ಯವಿದ್ದಲ್ಲಿ ಸ್ಪೆಶ್ಯಲು
ಸರ್ವಿಸು ಚಾಲುಮಾಡುವ ಯೋಗ್ಯ ವ್ಯವಸ್ಥೆ ಮಾಡಲಾಗುವುದು.
ಪ್ರಯಾಣಿಕರ ಸೌಕರ್ಯದ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ
ದೊರೆಯುವುದು.

ವಾರ್ಷಿಕ ಚಂದಾ ರೂ 3 0 0 ಬಿಡಿ ಪ್ರತಿ 0 1 0

ಮೆನೇಜರ್— ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital	.	Rs. 1,00000
Subscribed & Paid up ,,	.. ...	Rs. 30,500
Reserves	... .	Rs. 1,078

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು
ಸ್ವೀಕರಿಸಲ್ಪಡುತ್ತವೆ.

3ರಿಂದ	**6**	ತಿಂಗಳ ವರೆಗೆ	**4** ಸಲೆ
7 ,,	**11**	,,	**5** ,,
12 ,,	**18**	,,	**6** ,,

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯಿತಿ
ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?

ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ನ್ಯಾಶಭವನಂ
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S S. KARANTH, for & on behalf of SUPPLY AGENCY LTD, at THULUNAD PRESS, UDIPI
and Published by K H SHETTY at "NAVAYUGA" OFFICE, UDIPI South India

Registered No. M. 3618.

22-12-1938

ನವ ಯುಗ
NAVA YUGA

Delightful Reading! Spectacular Get up!
Wide Range!



Earning while Spending!

SEEMS PARADOXICAL, BUT TRUE
ALL THE SAME OF AN

ADVERTISEMENT

IN THE

1939 NAVAYUGA

ANNUAL

Date of Publication 12—1—1939 *Last date of receipt of Adv' 31—12—38*

Your goods are good, yet surely your salesman can't shout as loudly as an advertisement in the Navayuga Annual shouting with over ten thousand mouths through village and city, along the high roads and by-lanes all over Karnataka.

ADVT TARIFF	
1 Page	- Rs. 25/-
½ ..	- Rs 15/-
¼ ..	- Rs 8/-
⅛ ,,	- Rs 5/-

Special rates *for* Special positions *and* in coloured paper or in Coloured ink.

TO AVOID DISAPPOINTMENT

Send your Advt. Immediately

Advt. Manager, '*Navayuga*' UDIPI, S India.

The Canara Industrial & Banking Syndicate, Limited.

(INCORPORATED IN BRITISH INDIA)
[ESTD. 1925]

HEAD OFFICE: –MUKUND NIVAS, **UDIPI**, S. INDIA.

MEMBER:

RESERVE BANK OF INDIA

BANKERS' CLEARING HOUSE, BOMBAY.

DEPOSIT RATES.

3 to 5 MONTHS	....	2½% p. a.
6 to 11	....	3% ,,
12 to 23 ,,	....	3½% ,,
24 ,,	...	4% ,,
SHORT TERM	...	2% ,,

BANKING BUSINESS OF EVERY DESCRIPTION TRANSACTED.

Please Note

The Subscribers, Agents & Advertisers *in*

NAVAYUGA

PLEASE NOTE THAT PAYMENTS DUE TO **NAVAYUGA** MAY BE MADE TO THE CREDIT OF NAVAYUGA ACCOUNT IN ANY BRANCH OF

THE CANARA INDUSTRIAL & BANKING SYNDICATE, LIMITED, UDIPI

Without being liable to pay any amount by way of Commission.

WHERE THE SYNDICATE HAS BRANCHES:

Bombay, Bangalore, Belgaum, Byadgi, Bellary, Adoni, Hospet, Nandyal, Prodattur, Tadpatri, Taliparamba, Hubli, Gadag, Mangalore, Cannanore, Payyanur, Kanhangad, Kasargode, Karkal, Udipi, Uppinangady, Karwar, Kumta, Ankola, Honavar, Bhatkal, Sirsi, Sagar, Coondapoor, Brahmavar, Hungarcutta, Nippani, Tumkur & Hindupur,

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು
ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ
ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: MANGALORE

BRANCHES. Udipi, Coondapoor, Kaup & Karkal

Fixed deposits are now received at all the offices of the Bank at the following terms:–

3 Months Fixed Deposits at 3 p. c. per annum.
6 Months | 9 months | Fixed Deposits at 3½ p. c. per annum.
One year Fixed Deposits at 4 p. c per annum.
Two years' Fixed Deposits at 4½ p. c. per annum.

Interest on Fixed Deposits is payable every quarter.

Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary

THE PANGAL NAYAK BANK LIMITED.

Estd.] **H. O. UDIPI.** [1920

BRANCHES.
MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at 3½ p. c per annum.
Two years' Fixed Deposits at 4 p. c. per annum.
Savings Bank Deposits .... 3 p c per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD. 1921
FOUNDER
Sri. A. B. SHETTY, M.L.A.
Parliamentary Secretary Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ

NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೧೭
ಉಡುಪಿ, ಗುರುವಾರ ೨೨-೧೨-೧೯೩೮
Udipi, Thursday 22—12—1938
Vol. XVIII
No. 17

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩-೦-೦
೬ ತಿಂಗಳಿಗೆ ರೂ ೧-೧೨-೦
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ

ವಾರ್ತಾ ವಾಹಿನಿ

ಇಂಗ್ಲಾಂಡಿನ ಆರ್ಥಿಕ ಶಕ್ತಿ—

ಮಿ. ಚೇಂಬರ್ಲೇನರು ಕೋಮನ್ಸ್ ಸಭೆಯಲ್ಲಿಮಾತಾಡುತ್ತಿರುವ ಗ ಹೀಗೆಂದರು ಜರ್ಮನಿನ ರಾಜಕೀಯ ಧುರೀಣರು ಯುದ್ಧದ ವಿಚಾರವನ್ನು ಪರ್ಯಾಲೋಚಿಸುವಾಗ ಅವರ ಮುಂದೆ ನಮ್ಮ ಶಸ್ತ್ರಸನ್ನಾಹದ ವಿಚಾರ ಮಾತ್ರವಲ್ಲದೆ, ದೀರ್ಘಕಾಲ ಯುದ್ಧ ಮುಂದರಿಯುವುದಾದರೆ, ನಮಗಿರುವ ಆರ್ಥಿಕ ಶಕ್ತಿಯನ್ನು ಗಣನೆಗೆ ತಾರದಿರಲಾರರು. ಆದುದರಿಂದ ನಮಗಿಂಥಾ ಶಕ್ತಿಯ ಬೆಂಬಲವಿದೆ. ಇದರಿಂದ ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳಲಿಕ್ಕಾಸ್ಪದವಿದೆ ಯೆಂಬುದರಲ್ಲಿ ಅನುಮಾನವಿ_.

ಬ್ರಿಟಿಷರ ಪೆಲೆಸ್ತೈನಿನ ಧೋರಣೆಯ ಖಂಡನೆ—

ಪೆಲಸ್ತೈನಿನ ಕುರಿತಾಗಿ ಕಾಂಗ್ರೆಸು ವರ್ಕಿಂಗ್ ಕಮಿಟಿಯು ಈ ರೀತಿಯ ಠರಾವನ್ನು ಮಂಜೂರು ಮಾಡಿರುವುದು

'ವರ್ಕಿಂಗ್ ಕಮಿಟಿಯು ಪೆಲಸ್ತೈನಿನ ಕುರಿತಾದ ವಿಷಯದಲ್ಲಿ ಆಗಾಗ್ಯೆ ತನ್ನ ಅಭಿಪ್ರಾಯವನ್ನು ಕೊಟ್ಟಿರುವುದು ಮಾತ್ರವಲ್ಲದೆ, ಅರಬ್ಬರ ಹೋರಾಟವಲ್ಲಿ ತನ್ನ ಸಹಾನುಭೂತಿಯನ್ನು ವ್ಯಕ್ತಗೊಳಿಸಿರುವುದು ಶಾಂತಿ ಮತ್ತು ಕಾಯಿದೆ ರಕ್ಷಣೆಯ ನೆವದಿಂದ ಬ್ರಿಟಿಷರು ಮತ್ತು ಪೋಲೀಸರು ಬಹು ಅನ್ಯಾಯ ಮಾಡುತ್ತಿರುವರಾಗಿ ನಮಗೆ ಆಧಾರಬದ್ಧವಾದ ಅಭಿಪ್ರಾಯಗಳು ದೊರೆಯುತ್ತಿವೆ ಅರಬ್ಬರು ತಮ್ಮ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ಹೋರಾಟದಲ್ಲಿ ತೋರಿಸಿರುವ ಧೈರ್ಯ ಸಾಹಸವನ್ನು ಈ ಕಮಿಟಿಯು ಅಭಿನಂದಿಸುತ್ತದೆ ಮತ್ತು ಈ ಹೋರಾಟದಲ್ಲಿ ಅರಬ್ಬರು ಜಯಶಾಲಿಗಳಾಗುವಂತೆ ಹಾರೈಸುತ್ತದೆ ಬ್ರಿಟಿಷ ಸಾಮ್ರಾಜ್ಯಶಾಹಿಯು ಪೆಲಸ್ತೈನಿನ ಅನ್ಯಾಯ ವರ್ತನೆಯನ್ನು ಈ ಕಮಿಟಿಯು ತೀವ್ರವಾಗಿ ಖಂಡಿಸುತ್ತದೆ. ಮುಂದೆ ಪಲೆಸ್ತೈನ ಸರಕಾರವೇ ತನ್ನ ವಿಷಯವನ್ನು ಸ್ವಯಂ ನಿರ್ಧರಿಸುವಂತೆ ಬ್ರಿಟಿಷರು ತಡೆಯಾಗಬಾರದೆಂದು ಅಭಿಪ್ರಾಯಪಡುತ್ತದೆ.

'ಯೆಹೂದ್ಯರ ದುಃಸ್ಥಿತಿಯ ಕುರಿತಾಗಿ ವರ್ಕಿಂಗ್ ಕಮಿಟಿಯು ಸಹಾನುಭೂತಿ ಪಡುತ್ತಿರುವುದಾದರೂ, ಯೆಹೂದ್ಯರು ಬ್ರಿಟಿಷ ಸಾಮ್ರಾಜ್ಯಶಾಹಿಯ ಶಕ್ತಿಯ ಮರೆಯಲ್ಲಿ ಅವರ ಬೆಂಬಲದಿಂದ ತಮ್ಮ ಸ್ಥಾನವನ್ನು ಪಡೆಯಬೇಕೆನ್ನುವುದನ್ನು ತಿಳಿದು, ವಿಷಾದಿಸುತ್ತದೆ. ಮುಂದಾದರೂ ಅರಬ್ಬರು ಮತ್ತು ಯೆಹೂದ್ಯರು ಐಕ್ಯಭಾವದಿಂದ ತಮ್ಮ ಸಮಸ್ಯೆಯನ್ನು ತಾವೇ ಬಿಡಿಸಿಕೊಳ್ಳಲು ಯತ್ನಿಸಿ, ಯೆಹೂದ್ಯರಿಗೆ ಸಾಕಷ್ಟು ಪ್ರಾತಿನಿಧ್ಯವಿತ್ತು ಸ್ವತಂತ್ರ ಸರಕಾರವನ್ನು ಸ್ಥಾಪಿಸುವರೆಂದು ಭರವಸೆ ಪಡುತ್ತಿದೆ

ಬ್ರಿಟಿಷರು ಚೈನಕ್ಕೆ ಸಾಲ ಕೊಡಕೂಡದು—

ಬ್ರಿಟಿಷರು ಚೈನಾ ಸರಕಾರಕ್ಕೆ 50 ಲಕ್ಷ ಸಾಲಕೊಡುವ ಅಭಿಪ್ರಾಯವನ್ನು ಜಪಾನು ತೀವ್ರವಾಗಿ ಖಂಡಿಸಿತ್ತು. ಜಪಾನಿನ ಪತ್ರಿಕೆಗಳೆಲ್ಲಾ ಈ ವಿಚಾರವನ್ನು ಒಡನೆ ವಿರೋಧಿಸಿ ಬರೆಯುತ್ತಿವೆ.

ಸನಾತನಿಗಳ ಸಭೆ—

ಡಿಸೆಂಬರ ತಾ. 15ರಲ್ಲಿ ಪಾಂಡರೀಪ್ವರ ಅಗ್ರಹಾರದಲ್ಲಿ ಶ್ರೀ ಗೋಪಾಲಯ್ಯನವರ ಅಧ್ಯಕ್ಷತೆಯಲ್ಲಿ ಸನಾತನಿಗಳ ಸಭೆಯು ಜರಗಿತು. ಪಂಡಿತ ಕೇಶವಯ್ಯರು, ಸುಬ್ಬರಾಯ ದೇವಸ್ಥಾನ ಪ್ರವೇಶ ಮಸೂದೆಯ ವಿರೋಧವಾಗಿ ಠರಾವು ತಂದರು ಅದು ಸರ್ವಸಮ್ಮತಿಯಿಂದ ಮಂಜೂರಾಯಿತು

ಸಿ ಎನ್. ರಾಜಭೋಜರ ದೂರು—

ಶ್ರೀ ಸಿ ಎನ್ ರಾಜಭೋಜರು ಕಾಂಗ್ರೆಸು ಮಂತ್ರಿಗಳ ಹರಿಜನರೇಳಿಗೆಯ ಕುರಿತಾದ ಕಾರ್ಯಕ್ರಮವನ್ನು ಟೀಕಿಸುತ್ತಾ ಸಾಕಷ್ಟು ಪ್ರೋತ್ಸಾಹವು ದೊರೆತಿಲ್ಲವೆಂದರು. ದೇವಸ್ಥಾನ ಪ್ರವೇಶ ಮತ್ತು ಹೋಟೆಲು ಪ್ರವೇಶ ಮೊದಲಾದ ವಿಷಯದಲ್ಲಿ ಕಾಯಿದೆಯನ್ನು ಸರಿಯಾಗಿ ಜಾರಿಗೆ ತರಲಿಲ್ಲ ಹರಿಜನರನ್ನು ಎರಡು ಪ್ರಾಂತ್ಯಗಳ ಹೊರತು ಬೇರೆ ಕಡೆ ಮಂತ್ರಿಪದವಿಗೇರಿಸಲಿಲ್ಲ ಹರಿಜನರ ಏಳಿಗೆಯ ಕುರಿತು ಸಾಕಷ್ಟು ವಿಚಾರ ನಡೆಸಲು ಪ್ರತ್ಯೇಕವೊಬ್ಬ ಮಂತ್ರಿಯನ್ನು ನೇಮಿಸಬೇಕೆಂ' ಎಂದು ಇವರ ಅಭಿಪ್ರಾಯ.

ಉಟಕಮಂಡ್ಯಾಯಿಯಲ್ಲಿ ಖಾದಿ ಶಾಲೆ—

ಮಹಾತ್ಮಾಜೀ [illegible] ಶಿಷ್ಯರಾಗಿರುವ ವಿನೋಬಾ [illegible] ಮಾನವ ಗ್ರಾಮವಾದ [illegible] ಲ್ಲಿಯಲ್ಲಿ ಖಾದಿ ತರಬೇತಿ ಶಾಲೆಯನ್ನು ತೆರೆದಿರುವರು. ಕೆಲಸಗಾರರ ಪ್ರಥಮ ವಳ ಪ್ರಾಂತ [illegible] ದಿಂದ [illegible] ಚರಕ [illegible] ವಿಶಾರದ [illegible] ತೆರಳರು [illegible]. ಖಾದಿ ಶಿಕ್ಷಣಕ್ಕಾಗಿ ಬೇರೆ ಬೇರೆ ಕೇಂದ್ರಗಳಿಂದ ಕೆಲಸಗಾರರು ಬರಬಹುದು [illegible] ಜಿಲ್ಲೆಗಳ ಇವರಕ್ಕಾಗಿ ಜಿಲ್ಲೆಗಳ [illegible] ಸ್ಥಳಗಳನ್ನು ಸಂದರ್ಶಿಸಬೇಕಾಗಿ ತಿಳಿದುಬರುತ್ತದೆ

ಜರ್ಮನಿಗೆ ಸೇವಕರ ಅಡಚಣೆ—

[illegible] ಗ್ರೇಟ್ ಬ್ರಿಟನಿನಲ್ಲಿ [illegible]ತ್ತಿರುವ ಜರ್ಮನ ಮತ್ತು [illegible] ಸೇವಕಿಯರು ಕೆಲಸಕ್ಕಾಗಿ ಜರ್ಮನಿಗೆ ಬರಬೇಕೆಂದು ಒತ್ತಾಯ [illegible] ಕೇಳುತ್ತವೆ ಇದರಿಂದ ಸುಮಾರು 20,000 ಸ್ತ್ರೀಯರು ಜರ್ಮನಿಗೆ ಹೋಗಬಹುದಾಗಿ ಅಂದಾಜು ಮಾಡಲಾಗಿದೆ ಉತ್ತರ ಜರ್ಮನಿಯಲ್ಲಿ ಜನರ ಅಡಚಣೆ ಹೆಚ್ಚಾಗಿದೆಯಂತೆ ಹೊಲ್ಲೆಂಡಿನಿಂದಲೂ ಜರ್ಮನ ಸ್ತ್ರೀಯರು ಹಿಂದೆ ಬರುವಂತೆ ತಿಳಿಸಿರುವರು. ಸುಮಾರು 25,000 ಜರ್ಮನಿ ಸೇವಕಿಯರು ಅಲ್ಲಿಂದ ಮರಳಬಹುದು.

ಸ್ತ್ರೀಯರಿಗೆ ಹಾಲೊರ್ಳೆ ಬುದ್ಧಿವಾದ—

ಯುನೈಟೆಡ್ ಸ್ಟೇಟಿನ ನೋರ್ತಾಂಪ್ಟನ್ ಕೋಲೇಜಿನ ಪ್ರೊಫೆಸರ್ ರಾಲ್ಫ್ ಹಾಲೋರ್ ತನ್ನ ಪತ್ನಿಯೊಂದಿಗೆ ಹಿಂದೂದೇಶ ಸಂಚಾರಕ್ಕೆ ಬಂದಿರುವರ. ಶ್ರೀಮತಿ ಹಾಲೋರವರು ಎರ್ನಾಕುಳಸ್ತ್ರೀಯರ ಸಭೆಯೊಂದರಲ್ಲಿ ಭಾಷಣವಿತ್ತರು ಅವರು ತಮ್ಮ ಭಾಷಣದಲ್ಲಿ ತನಗೆ ತನ್ನ ಕಲಿದಿನಗಳಲ್ಲಿ ದೊರೆತ ಅನುಭವವನ್ನು ಹೇಳಿದರು. ಹಿಂದೂದೇಶದ ಸ್ತ್ರೀಯರಲ್ಲಿ ಒಕ್ಕಟ್ಟು ಬೆಳೆಯುತ್ತಿರುವುದು [illegible] ಸಂತೋಷಕರವೆಂದು ಸ್ತ್ರೀಯರೀಗ ತಮ್ಮ ಕರ್ತವ್ಯ ಹೊಣೆಗಾರಿಕೆ [illegible] ಅರಿವು ಬಂದಿದೆಯೆಂದು ತನ್ನ ಸಂತುಷ್ಟಿಯನ್ನು ಸೂಚಿಸಿದರು. ಹಿಂದೂದೇಶದ ಸ್ತ್ರೀಯರು ವೈದ್ಯಕೀಯ ಸೇವೆಯಲ್ಲಿ ಮುಂದಿರುವುದಾಗಿ ಹೇಳಿ ಅಭಿನಂದಿಸಿದರು ಸಾಮಾಜಿಕ ಕ್ಷೇತ್ರದಲ್ಲಿಯೂ ಸ್ತ್ರೀಯರು ಹೆಚ್ಚು ಸೇವಾಗೈಯುವರೆಂದರು. ಸ್ತ್ರೀಯರು ನಿರ್ಮಾಣಾತ್ಮಕ ಹಲವು ಕಾರ್ಯವಿಚಾರವನ್ನು ವಿವರಿಸಿ, ಅಂತರರಾಷ್ಟ್ರೀಯ ಬಾಂಧವ್ಯಕ್ಕೆ [illegible] ಸ್ಥಾಪಿಸಬಹುದೆಂದು [illegible]. ಜಗತ್ತಿನ ಶಾಂತಿ ರಕ್ಷಣೆಗಾಗಿ ಸ್ತ್ರೀಯರು ಪಕ್ಷಪಾತರಹಿತ [illegible] ಶಕ್ತಿಯುತರಾಗಿ [illegible] ಮುಂದಾಗಬೇಕೆಂದು ಹೇಳಿದರು.

ಮೀರಾಬಿನಲ್ಲಿ ದುಃಸ್ಥಿತಿ—

[illegible] ನೆರೆಯಿಂದಾಗಿ [illegible] ದ್ದು [illegible] ಕರ್ನಾಟಕ ಪ್ರಾಂತಿಕ [illegible] ಕುರಿತು [illegible]

THE UDIPI BANK LTD.

ನಿರಖು ಠೇವಣಾತಿ (ಡಿಪೋಜಿಟು)ಗಳು

ಸಾ. ಶೇ 4½ರ ಬಡ್ಡಿಯಲ್ಲಿ ಸ್ವೀಕರಿಸಲ್ಪಡುವವು

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ

ಪ್ರತಿ ತಿಂಗಳ ಶಿಲ್ಕಿನ ಮೇಲೆ ಬಡ್ಡಿ ಸಿಗುವುದಲ್ಲದೆ ಒಮ್ಮೆಗೆ ರೂ. 100 ರ ತನಕವೂ ವಾರಕ್ಕೆರಡಾವರ್ತಿಯೂ ಚೆಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯವಿರುವುದು.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ

ದಿ ಉಡುಪಿ ಬೇಂಕ್ ಲಿಮಿಟೆಡ್,
ಉಡುಪಿ

ಬಾಡಿದ ಕುಸುಮ

(ಲೇಖಕಿ—ಕುಮಾರಿ ತುಳಸೀಬಾಯಿ, ಕೊಡಿಯಾಲ್ಬೈಲು, ಕೊಪ್ಪ.)

●

ಪಾಪ! ಸೀತಮ್ಮ ಒಂದು ಕ್ಷಣದ ಸುಖಕ್ಕೆ ಮರುಳಾಗಿ ಜೀವನವನ್ನೇ ಹಾಳುಮಾಡಿಕೊಂಡಳು. ಕೆಡಿಸಿದ ಗುಂಡೂರಾಯನೂ ಅವಳನ್ನು ವರಿಸಲಿಲ್ಲ; ಸಮಾಜವೂ ಆಶ್ರಯನೀಯಲಿಲ್ಲ. ಹಾಗಾದರೆ ಆ ಬಹಿಷ್ಕೃತೆಯ ಗತಿಯೇನು?

●

ಈ ನಾರದ ಕಥೆ

ಗುಂಡೂರಾಯನು ಯಾವಾಗಲೂ ನಮ್ಮ ಗಡಿಬಿಡಿ ಶಾಸ್ತ್ರಿಗಳ ಮನೆಗೆ ಬರುವ ವಾಡಿಕೆ ಇಟ್ಟುಕೊಂಡಿದ್ದನು. ನಮ್ಮ ಶಾಸ್ತ್ರಿಗಳಿಗೂ ಗುಂಡೂರಾಯನ ತಂದೆ ತ್ರಿವಿಕ್ರಮರಾಯರಿಗೂ ಪೂರ್ವದಿಂದಲೂ ಪರಿಚಯವಿದ್ದಿತ್ತು. ಶಾಸ್ತ್ರಿಗಳಿಗೊಬ್ಬಳು ಹುಡುಗಿ, ಸೀತಮ್ಮನೆಂಬ ಹೆಸರು. ಸೀತಮ್ಮನ ತಾಯಿ ಭಾಗೀರಥಿಯಮ್ಮನು ಸ್ವಲ್ಪ ಮಡಿಯವಳು. ಇವರಿಗೆ ಯಾವಾಗಲೂ ಹಣೆಯಲ್ಲಿ ಒಂದು ಬಾದಾಮಿಯಷ್ಟು ದೊಡ್ಡ ಕುಂಕುಮದ ತಿಲಕವಾದರೂ ಇರಬೇಕು. ಇದು ಇವರ ಸತೀತ್ವದ ಚಿಹ್ನೆಯಂತೆ! ಸಣ್ಣ ತಿಲಕವಿಟ್ಟವರು ಮತ್ತು ಒರೆ ಬೈತಲೆಯ ಹೆಂಗಸರು ಗರತಿಯರಲ್ಲವಂತೆ!! ಅವಳು ಮಡಿಯಲ್ಲಿರುವಾಗ ಒಂದು ನೊಣವು ಮೈಮೇಲೆ ನುಸುಳಿದರೂ ಭಾಗೀರಥಿಯಮ್ಮನು ತಾನು ಮೈಲಿಗೆಯಾದೆನೆಂದು ಭಾವಿಸಿ, ಇನ್ನೊಮ್ಮೆ ಗಂಗಾಸ್ನಾನ ಮಾಡುತ್ತಿದ್ದಳು. ಇಂಥವಳ ಹೊಟ್ಟೆಯಲ್ಲಿ ಹುಟ್ಟಿದ ಸೀತಮ್ಮನ ಆಚಾರ-ವಿಚಾರಗಳನ್ನು ಕೇಳಬೇಕೆ? ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆನ್ನುವುದರಲ್ಲ ಸಂದೇಹವಿಲ್ಲ. ಇನ್ನು ಶಾಸ್ತ್ರಿಯವರ ವಿಚಾರ—ಅವರಂತೂ ಜ್ಯೋತಿಷದಲ್ಲ ಜ್ಯೋತಿ, ವೇದಶಾಸ್ತ್ರಗಳಲ್ಲಿ ಮೋತಿ, ರೂಪದಲ್ಲಿ ಯಾ ಚೇಷ್ಟೆಗಳಲ್ಲಿ ಕೋತಿಯಾಗಿದ್ದರು ಮಡಿಮೈಲಿಗೆಗಂತೂ ವಂಶಪರಂಪರೆಯನ್ನೇ ಕಲ್ಪಿಸಿದ್ದಾರೆ!

○ ○ ○ ○

ಇವರ ಮನೆಗೆ ಸಾಧಾರಣ ತರದ ಜಂಟಲ್‌ಮೇನರಿಗೆ ಪ್ರವೇಶವಿರಲಿಲ್ಲ. ಅವರು ಬಂದರೆ, ಎಲ್ಲಿಯಾದರೂ ತನ್ನ ಮಗಳ ಮೇಲೆ ಓರೆನೋಟವನ್ನು ಬೀರುವರೋ ಎಂದು ಭಯ ಅವರಿಗೆ. ಆದರೆ, ನವತರುಣನಾದ ಗುಂಡೂರಾಯನಿಗೆ ಶಾಸ್ತ್ರಿಗಳ ಕಾಲೇಜಿನಲ್ಲ (ಮನೆಯನ್ನೇ ಅಹುದು.) ಪ್ರವೇಶ ದೊರಕಿದುದು ಆಶ್ಚರ್ಯದ ವಿಷಯ. ಅದು ಅವನ ಪೂರ್ವ ಪುಣ್ಯವಶೇಷದ ಫಲಕಿನ್ನೇ ಏನೋ! ಬಂತು ಬಂತು ರಾಯರ ಕುದುರೆ ಕತ್ತೆಯಾಯಿತಂತೆ. ಹಾಗೆಯೇ ಶಾಸ್ತ್ರಿಗಳ ಶಾಸ್ತ್ರವಲ್ಲಾ ಮೂಲೆಗೆ ಬೀಳಲಾರಂಭಿಸಿತು. ಏಕೆ? ಮಗಳಿಗೋಸ್ಕರ ಅವರೀಗ ಅಪರಾಧಗಳ ಮೂಟೆಯನ್ನು ಹೊರುವವರಾದರು. ಆ ಶಾಸ್ತ್ರಿಗೇನು ಕುಂಡುಕೊರತೇ ಮಗಳು ಕೊಬ್ಬಿ ಕೋಣನ ಹಾಗೆ ಬೆಳೆದಿದ್ದಾಳೆ. ಇನ್ನೂ ಮದುವೆಮಾಡಲಿಲ್ಲ ಎಂದು ಎಲ್ಲರೂ ಹೇಳತೊಡಗಿದರು. ಇತರರಿಂದ ಬರುವ ದೂರನ್ನು ಕೇಳಿಕೇಳಿ ಶಾಸ್ತ್ರಿಗಳ ಕಿವಿ ಕೆಪ್ಪಾಗಿತ್ತು. ಗುಂಡೂರಾಯನಿಗೂ ಸೀತಮ್ಮನಿಗೂ ಸ್ನೇಹಬಿದ್ದಿದೆ ಎಂದು ಜನರ ಗದ್ದಲವೇ ಗದ್ದಲ ಊರಲ್ಲಿ! ಶಾಸ್ತ್ರಿಗಳು ಮಗಳ ಮೇಲೆ ಸಿಟ್ಟಿನಿಂದ ಬೆಂಕಿಕಾರಿ ಕಿಡಿಕಿಡಿಯಾಗಿದ್ದರು. ನಮ್ಮ ಶುದ್ಧ ಮಡಿಯಮ್ಮ ಭಾಗೀರಥಿಯಂತೂ ಗುಡುಗಿನಂತೆ ಗುಡುಗುಡಿಸಿದರು. ಅತ್ತಲಾಗಿ ಒತ್ತಪ್ಪ-ಇತ್ತಲಾಗಿ ಬಡಿಯಪ್ಪ, ಮಧ್ಯದಲ್ಲಿ ಸೀತಮ್ಮ ಚಟ್ಟಪ್ಪ. ಸೀತಮ್ಮನು ಪ್ರಾಯದ ಹುಡುಗಿ. ಗುಂಡೂರಾಯನೂ ಪ್ರಾಯದ ಹುಡುಗ. ಅದಲ್ಲದೆ ಜಾತಿಯಲ್ಲಿ ಕೀಳಾದವನೇ? ಆದರೆ ಇವರೀರ್ವರಲ್ಲಿಯೂ ಪ್ರೇಮಪಾಶವು ಬಿಗಿದಾಗಿದೆ. ಇತ್ತ ಶಾಸ್ತ್ರಿಗಳು ಅಪರಾಧದ ಮೂಟೆಹೊತ್ತು ಹಣ್ಣಾದರು. ಭಾಗೀರಥಿಯಮ್ಮನಂತೂ ಸಾಕ್ಷಾತ್ ಚಂಡಿಯ ಅವತಾರವೇ, ಮಗಳಿಗೆ ಬೈಗುಳಯ ಬೆಳೆ; ಪೆಟ್ಟಿನ ಮಳೆಯನ್ನು ಸುರಿಸಿ, ಮನೆಯಿಂದ 'ಡಿಸ್ ಮಿಸ್' ಮಾಡಿಬಿಟ್ಟಳು. ವಾಚಕರೇ!

ಧೀರೆಯಾದ ತಾಯಿಯಲ್ಲವೇ? ಕಣ್ಣಿನಲ್ಲಿ ರಕ್ತವಿಲ್ಲ! ಖಂಡಿತವಾಗಿಯೂ ಕಣ್ಣಿನಲ್ಲಿ ರಕ್ತವೂ ಇಲ್ಲ!!

ಸೀತಮ್ಮನಿಗಾಗ ಯೌವನದ ಮಬ್ಬು. ಮದುವೆಯ ಮಬ್ಬಿಲ್ಲದಿದ್ದರೂ ಪ್ರಾಯದ ತರುಣನೊಬ್ಬನ ಪ್ರೇಮದಲ್ಲಿ ಮಿಲನವಾಗಬೇಕೆಂಬ ಹೆಬ್ಬಯಕೆ ಅವಳಲ್ಲಿ ಬೇರೂರಿಕೊಂಡಿದ್ದಿತು. ಅದೇ ಈಗ ಅವಳಿಗೆ ವೈತ್ಯವಿಪ್ರಾಯವಾಗಿ ಪರಿಣಮಿಸಿತು. ಅವಳು ಈಗ ತುಂಬಿದ ಗರ್ಭಿಣಿ ಅತ್ತ ಗುಂಡೂರಾಯನು ಸೀತಮ್ಮನನ್ನು 'ಸತ್ತೆಯೋ ಇದ್ದೆಯೋ' ಎಂದು ಸಹ ಮಾತನಾಡಿಸುವ ಗೋಜಿಗೆ ಬರಲಿಲ್ಲ. ಆಯಿತು! ಸೀತಮ್ಮನಿಗೆ ತ್ರಿಶಂಕುಸ್ವರ್ಗವೇ ಗತಿಯಾಯಿತು! ಇನ್ನು ಮರಣಾನಂತರ ಅವಳಿಗೆ ದೇವರು ಯಾವ ಸ್ವರ್ಗವನ್ನು ಕಾಯ್ದಿಡುವನೋ ಅವನೇ ಬಲ್ಲನು!

○ ○ ○

ತಂದೆತಾಯಂದಿರು ಈ ಸುಟ್ಟ ಸಮಾಜದ ಬಹಿಷ್ಕಾರಕ್ಕೆ ಹೆದರಿ ಅರಿಯದ—ಏನೋ ಹೆಣ್ಣುಜನ್ಮ—ಹುಡುಗಿಯನ್ನು ಹೊರಗೆ ಹಾಕಬೇಕೆ? ಗುಂಡೂರಾಯನಿಗೆ ಸೀತಮ್ಮ ಒಂದು ಕ್ಷಣಹೊತ್ತಿನ ಸುಖಕ್ಕಾಗಿ ತನ್ನ ದೇಹವನ್ನೇ ಮಾರಿದಳೆಂದರೆ ತಪ್ಪಾಗದು. ಆದರೆ ಇವಳ ಮೊರೆಯನ್ನು ಕೇಳಿಯೂ, ಗುಂಡುಕಲ್ಲಿನಂತಾದನು.

ಪಾಪ! ಕೋಮಲವಾದ ಕುಸುಮ ಸೀತಮ್ಮನೆಂದರೆ! ಆ ಹೂವು ಈ ಸಮಾಜ ಸರಸ್ಸಿನಲ್ಲಿ ನೀರಿಲ್ಲದೆ ಬಾಡಿ ಹೋಗಬೇಕೆ? ಕಾಲಚಕ್ರ! ಮಾಡುವುದೇನು?

○ ○ ○

ಗುಂಡೂರಾಯನ ಮನೆಯ ಬಾವಿಯಲ್ಲಿ ತುಂಬಿದ ಬಸುರಿಯ ಶವ! ಹರಹರಾ!! ಯಾವ ಆನಂದದ ತೆರೆಗಳು ಸೀತಮ್ಮನನ್ನು ತೇಲಿಸಿದವೋ (ಪ್ರೇಮಸಾಗರದಲ್ಲಿ) ಅದೇ ತೆರೆಗಳು ಈಗ ದುಃಖದ ತೆರೆಗಳಾಗಿ ಅತೀ ಆಳದಲ್ಲಿ ಅವಳನ್ನು ಸೆಳೆದುಕೊಂಡು ಹೋದವು.

ಹಾ! ವಿಧಿಯ ವಿಚಿತ್ರ ಲೀಲೆ!! ಸಮಾಜದ ಕಣ್ಣಿಗೆ ಅಂಜನ ಬಿದ್ದಿದೆ!!! ಕುಸುಮವು ಬಾಡಿದುದರಲ್ಲೇನಾಶ್ಚರ್ಯ?

THE TROPICAL
Insurance Co., Ltd.
NEW DELHI
Chairman: Sjt. SUBHAS CHANDRA BOSE.
(PRESIDENT, INDIAN NATIONAL CONGRESS)
100% Swadeshi Concern founded by such eminent Leaders as
PANDIT MOTHILAL NEHRU. Dr. M. A. ANSARI.
HAKIM AJMAL KHAN, T. A. K. SHERWANI.
and others
WANTED influential Agents, Special Agents and Organisers on liberal commission and salary.
APPLY TO:
M. SUNDER RAM SHETTY, BRANCH MANAGER, HAMPANKATTA MANGALORE. Or K. S. RAMAMURTHI, M. A. BRANCH SECRETARY, 160 MOUNT ROAD, MADRAS.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಗೆಯೇ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿನಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ನಲಿಯುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—T. V. ದೇವಕರ್ ಅಂಡ್ ಕಂಪೆನಿ,
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.
T. V. Devkar & Co., *Nambulier Street*, G. T. MADRAS.

ಅಖಿಲಭಾರತ ಆನುವಂಶಿಕ

ವೈದ್ಯರ ಐದನೆಯ ಸಮ್ಮೇಲನ

ಸ್ವಾಗತಸಮಿತಿ, ಬೆಂಗಳೂರು ನಗರ

ಪ್ರಕಟನ ಪತ್ರಿಕೆ ನಂ. ೨

೧ ಈ ಸಮ್ಮೇಲನವು ಇದೇ ತಿಂಗಳು ೨೫ ಮತ್ತು ೨೬ನೆಯ ತಾರೀಖುಗಳಲ್ಲಿ ಬೆಂಗಳೂರು ನಗರದಲ್ಲಿ ತುಂಗಭದ್ರಾ ಪ್ರೇಮವಿದ್ಯಾಪೀಠದ ಅಧ್ಯಕ್ಷರಾದ ಭಿಷಗಾಚಾರ್ಯ ಪಂಡಿತ ತಾರಾನಾಥರು ಅವರ ಅಧ್ಯಕ್ಷತೆಯಲ್ಲಿ ಸೇರುವುದು.

೨ ಇದೇ ಸಮಯದಲ್ಲಿ ರಸಾಯನ ಚರ್ಚಾಪರಿಷತ್ತನ್ನೂ, ಆಯುರ್ವೇದ ವಿದ್ವತ್ಸಮ್ಮೇಲನವನ್ನೂ ನಡೆಯಿಸಲಾಗುವುದು.

೩ ಸ್ವಾಗತಸಮಿತಿಗೆ ರೂ. ೫ ಅಥವಾ ಮೇಲ್ಪಟ್ಟು ಧನ ಸಹಾಯ ಮಾಡುವವರು ಸ್ವಾಗತ ಸಮಿತಿ ಸದಸ್ಯರೆನಿಸುವರು. ರೂ. ೨೫, ೫೦, ೧೦೦ ಅಥವಾ ಮೇಲ್ಪಟ್ಟು ಧನಸಹಾಯ ಮಾಡುವವರೆಲ್ಲರೂ ಅನುಕ್ರಮವಾಗಿ ಆಶ್ರಯದಾತರು, ಪೋಷಕರು, ಮಹಾಪೋಷಕರು ಎನಿಸಿಕೊಳ್ಳುವರು.

೪ ಪ್ರತಿನಿಧಿಗಳಾಗಿ ಬರುವ ವೈದ್ಯರು ಪ್ರತಿಯೊಬ್ಬರೂ ರೂ. ೩ ಪ್ರವೇಶಧನವನ್ನು ಕೊಡಬೇಕು. ಅವರ ಊಟ, ವಸತಿಗಳಿಗೆ ಉಚಿತವಾಗಿ (ಪುಕ್ಕಟೆ) ಏರ್ಪಾಟು ಮಾಡಲಾಗುವುದು. ಸ್ತ್ರೀ ವೈದ್ಯರಿಗೆ ಯಾವ ಪ್ರವೇಶಧನವೂ ಇರುವುದಿಲ್ಲ. ಅವರಿಗೆ ಪ್ರತ್ಯೇಕವಾದ ಏರ್ಪಾಟನ್ನು ಉಚಿತವಾಗಿ ಮಾಡಲಾಗುವುದು. ಪ್ರತಿನಿಧಿಗಳು ಇದೇ ತಿಂಗಳು ೨೦ನೆಯ ತಾರೀಖಿನೊಳಗಾಗಿ ಇಲ್ಲಿಗೆ ತಲಪುವಂತೆ ತಾವು ಬರುವ ರೈಲುಮಾರ್ಗ, ಸಮಯ, ಎಷ್ಟು ಜನ ಬರುವವರು, ಮೊದಲಾದುವನ್ನು ತಿಳಿಸಿ ತಮ್ಮ ಪ್ರಾತಿನಿಧ್ಯದ ಹಣವನ್ನೂ ಅದರೊಂದಿಗೆ ಕಳುಹಿಸಬೇಕು. ಹಾಗೆ ಸಕಾಲದಲ್ಲಿ ಸಂಗತಿಗಳನ್ನು ತಿಳಿಸದೆ ಹೋದಲ್ಲಿ ಅಂಥವರ ಏರ್ಪಾಟಿಗೆ ತೊಂದರೆಯುಂಟಾಗಬಹುದು.

೫ ಈ ಸಮ್ಮೇಲನಕ್ಕೆ ಭಾರತದೇಶದ ವಿವಿಧ ಭಾಗಗಳಿಂದ ಪ್ರತಿನಿಧಿಗಳು ಬರುವರಾದ್ದರಿಂದ ಊಟ ವಸತಿಗಳ ಸೌಕರ್ಯಕ್ಕೆ ಪ್ರತಿನಿಧಿಗಳು ಸಾಧ್ಯವಿದ್ದಷ್ಟು ಮುಂಚಿತವಾಗಿ ತಿಳಿಸಬೇಕೆಂದು ಕೋರಲಾಗಿದೆ. ಮೈಸೂರು ಸಂಸ್ಥಾನದ ವೈದ್ಯರೆಲ್ಲರೂ ಸ್ವಾಗತ ಸಮಿತಿಯ ಸದಸ್ಯರಾಗಿ ಈ ಸಮ್ಮೇಲನವನ್ನು ಯಶಸ್ವಿಯಾಗಿ ಮಾಡಿ, ಆಯುರ್ವೇದದ ಶುದ್ಧತೆಯನ್ನೂ ಆನುವಂಶಿಕತೆಯನ್ನೂ ರಕ್ಷಿಸಲು ನೆರವಾಗುವರೆಂದು ನಂಬಲಾಗಿದೆ. ಕರ್ನಾಟಕದ ವೈದ್ಯರೆಲ್ಲರೂ ಹೆಚ್ಚು ಸಂಖ್ಯೆಯಲ್ಲಿ ಬಂದು ಸಮ್ಮೇಲನಕ್ಕೆ ಕಳೆಗಟ್ಟಿಸಬೇಕೆಂದು ಈ ಮೂಲಕ ಸ್ವಾಗತಸಮಿತಿಯವರು ಪ್ರಾರ್ಥಿಸುವರು.

ಕಾರ್ಯದರ್ಶಿಗಳು,
ದ. ಕೃ. ಭಾರದ್ವಾಜ,
ಡಾ|| ಬಿ. ವಿ. ನಂಜುಂಡ ಸ್ವಾಮಿ
ಸ್ವಾಗತಸಮಿತಿಯ ಕಾರ್ಯಾಲಯ
೪೪, ವೈನೆಗಾರಪೇಟೆ, ಬೆಂಗಳೂರು ನಗರ

ಡೈರಿಗಳು
ನವಭಾರತ ಪುಸ್ತಕ ಭಂಡಾರ

ರಸ್ಯದ ಹದಿನಾಲ್ಕು ಮಿಲ್ಯ ಯುವಕಸೇನೆ

ಆಧುನಿಕ ರಸ್ಯದ ಜೀವಾಳವೇ ಅಲ್ಲಿಯ ಯುವಕಯುವತಿಯರು.

ಸರಕಾರವು ತರುಣಜನಾಂಗದ ಪಕ್ಷಪಾತಿಯಾಗಿ ಅವರಿಗೆ ಬೇಕಾದುದನ್ನೆಲ್ಲಾ ಒದಗಿಸಿಕೊಟ್ಟು ತರಬೇತಿ ಮಾಡಲ್ಪಡುವುದು.

ರಸ್ಯದ ಝಾರರಾದ ಎರಡನೇ ನಿಕೋಲಸರು ಪಕುಂಟವಾಗಿ ಕೊಲೆ ಮಾಡಲ್ಪಟ್ಟಾಗ 50ವರ್ಷ ವಯಸ್ಸಿನವರಿದ್ದಾರು. ಅವರು ನರಿತ ಕೂದಲಿನ ಹಳಬರಿದ್ದರೆ, ಅವರ ಕೊಲೆಯು ಹಳೆಯ ರಸ್ಯದ ವಿನಾಶ ಮತ್ತು ನವೀನರಸ್ಯದ ಪ್ರಸವ ವೇದನೆಯ ಸಂಕೇತವಾಗುತ್ತಿತ್ತು. ತಮ್ಮ ಝಾರರನ್ನು ಕೈದುಮಾಡಿ, ಬಂಧನದಲ್ಲಿರಿಸಿ ಕೊನೆಗೆ ತಲೆಗಡಿದವರು ರಸ್ಯದ ತರುಣ ಸೈನಿಕರು, ನಾವಿಕರು ಮತ್ತು ಕೆಲಸಗಾರರು. ಸೊಂಟಗಳಲ್ಲಿ ರಿವಾಲ್ವರುಗಳನ್ನಿಟ್ಟುಕೊಂಡು ಲೆನಿನ್‌ಗ್ರಾಡ್ ಮತ್ತು ಮೋಸ್ಕೋ ಪಟ್ಟಣಗಳಲ್ಲಿ ಪಹರೆ ನಡಿಸುತ್ತಿದ್ದ ತರುಣ ತರುಣಿಯರು, ಝಾರರ ಕೊನೆಯ ಸಮಾಚಾರದಿಂದ ಅತ್ಯಂತ ಉಲ್ಲಾಸಗೊಂಡರು. ಅದರಿಂದ ಹಿಂದಿನ ಸಂಪ್ರದಾಯವನ್ನು ಎತ್ತಿಹಿಡಿಯುವ ಹಳೆಯ ಕೂಟವೊಂದು ಅದೃಶ್ಯವಾಗಿ ಅದರ ಅಧಿಕಾರವು ನಿರ್ನಾಮವಾಗಿ ಕ್ರಾಂತಿಕಾರಕ ನವತಾರುಣ್ಯದ ಹೆಚ್ಚಳಕ್ಕೆ ಆಸ್ಪದವುಂಟುಯಿತು. ಸರಳಿಕೊಂಡಿದ್ದು ನಶಿಸಬೇಕಾದ ಹಳೆತನವು ಅಳಿದು ಬೆಳಗಿ ಬಾಳಬೇಕಾದ ಹರೆಯತನವು ನವಚೈತನ್ಯ ಹೊಂದಿ ತನ್ನ ಸ್ಥಾನವನ್ನಾಕ್ರಮಿಸಿಕೊಂಡಿತು

ರಸ್ಯದಲ್ಲಿ ಕ್ರಾಂತಿಯಾದ ಕೂಡಲೆ ಎಳೆಪ್ರಾಯದ ಮಕ್ಕಳು ತೀವ್ರ ಕಷ್ಟಪರಂಪರೆಗೊಳಗಾಗಿದ್ದರು ಹೊಟ್ಟೆಗಿಲ್ಲದೆ ಮತ್ತು ರೋಗರುಜೆಗಳಿಗೊಳಗಾಗಿ ಎಷ್ಟು ಮಂದಿ ಮಕ್ಕಳು ಮೃತರಾಗಿರುವರೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಮಕ್ಕಳು ಹಿಂಡುಗಟ್ಟಿಗೊಂಡು ಪುಂಡರಾಗಿ ದೇಶದಲ್ಲೆಲ್ಲಾ ಅಲೆದು ತಕ್ಷೀರುಗಳನ್ನು ಮಾಡುವುದರಲ್ಲಿ ನಿರತರಾದರು ಅವರನ್ನು ಹಾಗೆಯೇ ಬಿಡುತ್ತಿದ್ದರೆ ದೇಶದ ಸ್ವಾಸ್ಥ್ಯಕ್ಕೇನೇ ಅವರು ದೊಡ್ಡ ಅಪಾಯವಾಗಿ ಪರಿಣಮಿಸುತ್ತಿದ್ದರು. ಆದರೆ ರಸ್ಯದ ಕ್ರಾಂತಿಯ ನಾಯಕರು, ಮುಂದಿನ ಜನಾಂಗವಾದ ಮಕ್ಕಳ ಮೇಲೆಯೇ ದೇಶದ ಹಿತ ಅಥವಾ ಅಹಿತವು ಅವಲಂಬಿಸಿರುವುದೆಂಬುದನ್ನು ಮನಗಂಡು ತಾವು ಮಹತ್ತಾದ ತ್ಯಾಗ ಮಾಡಿ ಸಾಧಿಸಿರುವಂತಹ ಮಾರ್ಪಾಟುಗಳನ್ನು ತರುಣ ಜನಾಂಗದ ಏಳಿಗೆಗಾಗಿ ಉಪಯೋಗಿಸಹತ್ತಿದರು. ತರುಣ ಜನಾಂಗವನ್ನು ತನ್ನ ಪ್ರಬಲ ಶಸ್ತ್ರವಾಗಿ ಉಪಯೋಗಿಸಿದ ಪ್ರಥಮ ಸರಕಾರವೇ ಸೋವಿಯೆಟ್ ರಸ್ಯ. ಲೆನಿನ್ ಮತ್ತು ಸ್ಟೆಲಿನರು ಸ್ಥಾಪಿಸಿ ಸಂಘಟಿಸಿದ ಯುವಕ ಸಂಘಗಳ ಮಾದರಿಯನ್ನೇ ಹಿಟ್ಲರ್ ಮುಸಲಿನಿಯವರು ಅನಂತರ ಅನುಸರಿಸಿದುದು. ತರುಣರ ಉತ್ಸಾಹ, ಕಾರ್ಯಶಕ್ತಿ ಮತ್ತು ತ್ಯಾಗ ಬುದ್ಧಿಯನ್ನು ಉಪಯೋಗಿಸಿಕೊಂಡೇ ಹಿಟ್ಲರ್ ಮುಸಲೋನಿಗಳು ತಮ್ಮ ಅಧಿಕಾರ ಸ್ಥಾಪಿಸಿದುದು

ಸೋವಿಯೆಟ್ ಸರಕಾರವು ತರುಣ ಪಕ್ಷಪಾತಿಯಿರುವುದು. ತರುಣರ ಉನ್ನತಿಗಾಗಿ ಹೆಚ್ಚಿನ ಸಂದರ್ಭಗಳನ್ನದು ಕಲ್ಪಿಸಿಕೊಡುವುದು. ಇದಕ್ಕೆ ಪ್ರತಿಯಾಗಿ ಸರಕಾರವು ಅವರಿಂದ ಹೆಚ್ಚಿನ ಕಾರ್ಯಗಳನ್ನು ಮಾಡಿಸಿಕೊಳ್ಳುವುದು. ರಸ್ಯದಲ್ಲಿ ಮಕ್ಕಳು ಸುಖವಾಗಿ ಜನ್ಮಕ್ಕೆ ಬಂದು ಆರೋಗ್ಯವಾಗಿ ಬೆಳೆದು ಒಳ್ಳೇ ವಿದ್ಯೆಬುದ್ಧಿ ಪಡೆದು ಯೋಗ್ಯ ಉದ್ಯೋಗಗಳನ್ನು ಗಳಿಸಿಕೊಳ್ಳುವಂತೆ ಸೋವಿಯೆಟ್ ಸರಕಾರವು ನೋಡುವುದು 16ನೇ ವಯಸ್ಸಿನಲ್ಲಿ ಶಾಲೆ, ಮುಂದೆ ಹೆಚ್ಚಿನ ಪ್ರೌಢವಿದ್ಯೆ ಕಲಿಯದೆ ಹೋಗದ ತರುಣರಲ್ಲಿ 2 ವರ್ಷ ಕಾರ್ಖಾನೆಯೊಳಗೆ ಹೋಗಿ ದಿನಕ್ಕೆ 6 ಘಂಟೆ ಕೆಲಸ ಮಾಡಿ, ಏನ ವರೆಂದು ಉದ್ಯೋಗದಲ್ಲಿ ತರಬೇತಿ ಹೊಂದಬೇಕು ಈ ಸಂದರ್ಭದಲ್ಲಿ ಸರಕಾರವು ಅವರಿಗೆ ಅರ್ಧ ಸಂಬಳ ಕೊಡುವುದು ಈ ತರುಣರು ನಿಯಮಿತ ಸಮಯ ಮೀರಿ ಕೆಲಸ ಮಾಡಕೂಡದು ಆಟಪಾಠಗಳ ಕಡೆಗೂ ಅವರು ಗಮನ ಕೊಡಬೇಕು ಅದಕ್ಕೆ ಬೇಕಾದ ಅನುಕೂಲತೆಯು ಅವರ ಕಾರ್ಖಾನೆಯಲ್ಲೇ ಇರುವುದು- ಸರಕಾರಿ ಡಾಕ್ಟರರು ಅವರ ಆರೋಗ್ಯದ ಕುರಿತು ಹೆಚ್ಚಿನ ನಿಗಾ ತೆಗೆದುಕೊಳ್ಳುವರು. 1931ರಿಂದ ಈ ವಿದ್ಯಾರ್ಥಿ ಕೆಲಸಗಾರರ ಸಂಬಳವು ನೂರಕ್ಕೆ 300ರಷ್ಟು ಹೆಚ್ಚಿರುವುದು.

ಸರಕಾರವು ಈ ತರುಣರ ಕುರಿತು ಇಷ್ಟೊಂದು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಪ್ರತಿಫಲವಾಗಿ ಅವರು ಕೊಡತಕ್ಕದ್ದಾದರೂ ಏನು? ತಮ್ಮ ಆತ್ಮವನ್ನೇ ಸರಕಾರಕ್ಕೆ ಮಾರಿಬಿಡತಕ್ಕದ್ದೆಂದು ಕೆಲವರು ಹೇಳಬಹುದು ಆದರೆ ಅದೇ ತಮ್ಮ ಮುಕ್ತಿಯೆಂದು ರಸ್ಯದ ತರುಣರು ಭಾವಿಸುವರು. ಸರಕಾರದ ಪ್ರಚಂಡ ನೂತನ ಪ್ರಯೋಗದಲ್ಲಿ ತಮ್ಮ ಹಾಗೂ ಇಡೀ ಮಾನವಕೋಟಿಯ ರಕ್ಷಣೆಯಿದೆಯೆಂಬ ಮನೋಭಾವದಿಂದ ಅವರು ಅದರಲ್ಲಿ ಸಹಭಾಗಿಯಾಗುವುದೇ ತಮ್ಮ ಜೀವನದ ಏಕಮಾತ್ರ ಧ್ಯೇಯವೆಂದು ಭಾವಿಸುವರು ರಸ್ಯದ ಎಳೆಯುವಕರು ತರುಣಶೋಧಕರಾಗಿ (young pioneer) ಮೊದಲಾಗಿ ಒಂದೇ ರೀತಿಯ ರೀತಿನೀತಿ ವೇಷಭೂಷಣಗಳಲ್ಲಿ ತರಬೇತು ಹೊಂದಿ ಆ ಮೇಲೆ 'ಕೋಮ್ಸೊಮೋಲ್' ಎಂಬ ಪ್ರೌಢ ಯುವಕ ಸಂಘಕ್ಕೆ ಸೇರುವರು. ಇದರಿಂದಲೇ ತನ್ನ ಪಸ್ತುಸ ಧ್ಯೇಯವಾಗುವುದೆಂದು ರಸ್ಯದ ತರುಣನು ಭಾವಿಸುವನೇ ಹೊರತು, ಆತನ ಮೇಲೆ ಒತ್ತಾಯವೂ ನಿರ್ಬಂಧವೂ ಹಾಕಲ್ಪಡುವುದಿಲ್ಲ, ಲೋಕದ ನವನಾಗರಿಕತೆಯ ದೀವಟಿಗೆಯನ್ನು ಬೆಳಗುತ್ತಿರುವ ತನ್ನ ಸರಕಾರದ ಸೇವೆಯನ್ನು ಮಾಡುವುದರಲ್ಲಿ ರಸ್ಯದ ತರುಣನು ಅಭಿಮಾನಪಡುವನು. ಆ ಕಾರ್ಯದಲ್ಲಿ ಮುಂದಾಳಾಗಲು ಹಾತೊರೆಯುವನು ಅದರಲ್ಲಿ ಉತ್ತೇಜನ ತಾಳುವನು

ಇಂದಿಗೆ ಸುಮಾರು 14 ಮಿಲ್ಯ ಯುವಕರು ರಸ್ಯದ ಒಂದಲ್ಲೊಂದು ಸಂಘದ ಸದಸ್ಯರಾಗಿರುವರು. ರಸ್ಯದ ಬಾಲಕನ ರಾಜಕೀಯ ಶಿಕ್ಷಣವು 7ನೇ ವರ್ಷದಲ್ಲಿ ಆರಂಭವಾಗುವುದು. ಆತನ ಶಾಲೆಯ ಶಿಕ್ಷಕರಾಗಿದ್ದರೆ 7ನೇ ಜನ್ಮದಿನದಲ್ಲಿ ಅಕ್ಟೋಬರಿಸ್ಟ್ ಎಂಬ ಸಂಘಕ್ಕೆ ಸೇರಿಸಲ್ಪಡುವನು ಆವನು ತನ್ನ ಹೆಚ್ಚಿನ ಸಮಯವನ್ನು ವಿನೋದ, ಆಟ, ಮತ್ತು ಸಮತಾವಾದದ ಮೂಲತತ್ವಗಳನ್ನು ಕಲಿಯುವುದರಲ್ಲಿ ಕಳೆಯುವನು ಈ ಅಕ್ಟೋಬರಿಸ್ಟ್ ಸಂಘಕ್ಕೆ ಯಂಗ್ ಪಯನೀಯರ್ ಸಂಘದವರು ನಾಯಕರಾಗಿ ಆರಿಸಲ್ಪಡುವರು ಯಂಗ್ ಪಯನೀಯರ್ ಸಂಘಕ್ಕೆ ಕೊಮ್ಸೊಮೋಲ್ ಸಂಘದವರು ನಾಯಕರಾಗುವರು, ಕೊಮ್ಸೊಮೋಲ್ ಸಂಘದ ಮೆಂಬರರ ವಯಸ್ಸು 20ಕ್ಕಿಂತ ಮಿಕ್ಕಿರಬಾರದು ಅಕ್ಟೋಬರಿಸ್ಟ್ ಸಂಘದ ಬಾಲಕರು ಮಾಡುವ, ನೋಡುವ, ಅವರಿಗೆ ಹೇಳಲ್ಪಡುವ ಎಲ್ಲಾ ವಿಷಯಗಳೂ ಬಂಡವಾಳಶಾಹಿಯ ರೀತಿನೀತಿಗಳಿಂದ ಸಂಪೂರ್ಣವಿಮುಕ್ತವಾಗಿರುವವು, ಅವನು ಓದುವ ಇಂದಿನ ಚಿತ್ರಕಥೆಗಳು ಕೂಡ ... ಧನಿಕಶಾಹಿಯ ಕುರಿತು ವಿರುದ್ಧ ಪ್ರಚಾರದ ವಿಷಯಗಳನ್ನೊಳಗೊಂಡಿವೆ ಧರ್ಮವು ಭ್ರಾಮಕವಾದುದು ಲೋಕದ ಸುಖಸುಭಿಕ್ಷೆಯಿಂದಿರುವ ಒಂದೇ ದೇಶವೆಂದರೆ ರಸ್ಯ ಅದಕ್ಕಾಗಿ ಎಂತಹ ತ್ಯಾಗವಾದರೂ ಹೆಚ್ಚಿನದಲ್ಲೆಂಬುದನ್ನೆಲ್ಲಾ ಅಕ್ಟೋಬರಿಸ್ಟ್ ಸಂಘದ ಬಾಲಕರಿಗೆ ಕಲಿಸಲಾಗುತ್ತದೆ 10ನೇ ವಯಸ್ಸಿನಲ್ಲಿ ಅಕ್ಟೋಬರಿಸ್ಟ್ ಸಂಘದ ಮೆಂಬರನೇ ಯಂಗ್ ಪಯನೀಯರನಾಗಿ ಆತನ ಜವಾಬ್ದಾರಿಕೆಗಳು ಹೆಚ್ಚುವವು. ಆಗ ಆತನ ಸೈನಿಕ ಶಿಕ್ಷಣವು ಆರಂಭವಾಗುವುದು ಆತನಿಗೆ ಕವಾಯತು, ಬಂದೂಕು ಪ್ರಯೋಗ, ಮತ್ತು ವಿಮಾನಸಂಚಾರದ ಪ್ರಾಥಮಿಕ ಸೂತ್ರಗಳನ್ನು ಕಲಿಸಲಾಗುತ್ತದೆ. ಈ ಸಮಯದಲ್ಲೇ ಆತನಿಗೆ ಸ್ವಲ್ಪ ಶಾಸ್ತ್ರಗಳ ಮೂಲಕ ಇತರ ಸಾಮಾನ್ಯ ವಿಷಯಗಳು ಕಲಿಸಲ್ಪಡುವವು [ಅಪೂರ್ಣ]

THE Bombay Life

ಸ್ಥಾಪನೆ] **ASSURANCE CO., LTD.** [1908

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:

(1) ರಥಬೀದಿ, ಮಂಗಳೂರು

(2) ಪುತಿಯಾರ, ಕಲ್ಲಿಕೋಟೆ.

(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು. (ಫೋನ್ ನಂ. 8245,)

(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)

(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, ಬೊಂಬೈ (ಫೋ. ನಂ. 26314)

ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು.

(6) ವಟ್ಟವಾಳಂ, ದ. ಮಲಬಾರ್.

(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂಕೂರು

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)

ರಿಜಿಸ್ಟ್ರಿಯಾದ ಆಫೀಸು: ಉಡುಪಿ.

ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕಂಣೆಗಳೆಲ್ಲವನ್ನು ಒದಗಿಸಿಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.

ಸಮೃದ್ಧಿಯು ಸರ್ವಾಧರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ .	ರೂ.	1,40,08,725
ಪ್ರೀಮಿಯಂ ಆದಾಯ ಮಿಕ್ಕಿದುದು ...	,,	30,00,000
ಒಟ್ಟು ಮೂಲ ಮಿಕ್ಕಿದುದು	,,	1,00,00,000
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	50,00,000

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ ಅತ್ಯಧಿಕ ಪ್ರತಿಫಲ.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟರ್ ಆಫೀಸಿಗಾಗಲೀ, ಮಾಪ್ತವಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ

ಮಹಾತ್ಮಾ ಗಾಂಧಿಯವರ ಗ್ರಾಮ ಕೈಗಾರಿಕೆಗಳ ಕುರಿತಾದ ಹಲವು ಸಂದೇಶ

(ಈ ಕರಿರಾದ ಲೇಖನ ಗಳು ಗಾಂಧೀಜಿಯವರ ಸಂಗ್ರಹವಾದ Cent Percent Swadeshi or the Economics of Village Industries, ಎಂಬ ಪುಸ್ತಕದಲ್ಲಿ ಸಂಗ್ರಹೀತವಾಗಿದೆ)

ಗಾಂಧಿಜಿಯವರು ಗ್ರಾಮ ಕೈಗಾರಿಕೆಗಳ ಸುಧಾರಣೆಯ ಕುರಿತಾಗಿ ಪ್ರಸ್ತಾಪಿಸಿದಾಗ ಒಂದೆಡೆ ತಮ್ಮ ಹೃದಯದ ಆತುರವನ್ನು ಹೀಗೆಂದಿರುವರು "ಹೊಟ್ಟೆ ಬಟ್ಟೆಗಿಲ್ಲದೆ, ದಿನದಿನಕ್ಕೆ ನಿರ್ಜೀವಸ್ಥಿತಿಗೆ ಇಳಿಯುತ್ತಿರುವ ದೇಶದ ಒಡೆ ಜನತೆಯ ಪರಿಸ್ಥಿತಿಯನ್ನು ಪಟ್ಟಣಿಗರರಿತಿರುವರೇ? ವಿದೇಶೀಯ ಸೂಲಿಗಾರರ ಸಲುವಾಗಿ ತಾವು ಪ್ರಾತಿನಿಧ್ಯವಹಿಸಿ, ಲಾಭ ಮತ್ತು ಗಸ್ತಿಕೆಯನ್ನು ಜನತೆಯಿಂದ ಹೀರಿ, ಸ್ವಾರ್ಥದ ಖಯಾಲಿಕವಾದ ಸೌಕರ್ಯಗಳನ್ನು ಗಳಿಸಿಕೊಳ್ಳುತ್ತಿರುವರೆಂಬುವನ್ನು ಅರಿತಿರುವರೇ? ಹಲವು ಹಳ್ಳಿಗಳಲ್ಲಿ ಪ್ರತ್ಯಕ್ಷ ಕಣ್ಣಿಗೆ ಬೀಳುವ ಅಸ್ಥಿಪಂಜರಗಳ ದೃಶ್ಯವನ್ನು ಯಾವ ತರ್ಕ ವಿದ್ಯೆಯ ವ್ಯಾಖ್ಯಾನವೂ ಮರೆಮಾಚಲಾರದು. ಇತಿಹಾಸದಲ್ಲಿ ಅಸದೃಶವಾದ ಮಾನವೀಯತೆಯ ವಿರುದ್ಧವಾಗಿ ನಡೆಸುವ ಈ ಅಪರಾಧದ ಹೊಣೆಗಾರಿಕೆಯನ್ನು ಹೇಳಿದೊಬ್ಬ ದೇವರಿರುವನಾದರೆ, ಆಂಗ್ಲೇಯರೂ ಮತ್ತು ಪಟ್ಟಣವಾಸಿಗಳೂ ಹೊರಬೇಕಾಗಿದೆಯೆಂಬುದರಲ್ಲಿ ನನಗೆಳ್ಳಷ್ಟೂ ಅನುಮಾನವಿಲ್ಲ"

() () () ()

ಗಾಂಧಿಜಿಯವರೇಕೆ ಕೈಗಾರಿಕೆಯ ಸುಧಾರಣೆಯ ವಿಷಯದಲ್ಲಿ ಪಾಶ್ಚಿಮಾತ್ಯ ದೇಶಗಳನ್ನು ಅನುಸರಿಸದೆ, ನಿರ್ಜೀವ ಸ್ಥಿತಿಗಿಳಿದಿರುವ ಗ್ರಾಮೋದ್ಯಮವನ್ನು ಪುನರುಜ್ಜೀವನ ಸ್ಥಿತಿಗೆ ತರಬೇಕೆಂದಿರುವರು. ಈ ಕುರಿತು ಅವರ ಉತ್ತರ ಹೀಗಿದೆ

"ನಾನು ಹೇಳುತ್ತಿರುವ ಸೂಚನೆಗಳ ಕುರಿತು ವೃತ್ತಪತ್ರಿಕೆಗಳಲ್ಲಿ ಆಗಾಗ್ಗೆ ವಿಮರ್ಶೆಗಳು ಬರುತ್ತಿವೆ. ಮಾನವನಿಗಾಗಿ ಪಂಚಭೂತಗಳ ವಿಚಾರವನ್ನು ಶೋಧಿಸಿ, ತನ್ನ ಬುದ್ಧಿಬಲದಿಂದ (ನೀರು, ಗಾಳಿ, ಬೆಂಕಿ ಮತ್ತು ವಿದ್ಯುಚ್ಛಕ್ತಿ) ಇವುಗಳನ್ನು ತನ್ನಾಧೀನಕ್ಕೆ ತಂದಿರುವನು. ಅಮೇರಿಕಾದಲ್ಲಿ ಇವರಿಂದ ಪ್ರತಿಯೊಬ್ಬನಿಗೆ ೩೩ ಗುಲಾಮರಂತಿರುವರು. ಆದುದರಿಂದ ಪಾಶ್ಚಿಮಾತ್ಯರೀತ್ಯಾ ಹಿಂದೂದೇಶದ ಉದ್ಧಾರಕ್ಕೆ ಸಾಧಿಸಬೇಕು- ಎಂದು ನನಗೆ ಹಲವು ಸಲಹೆ ಸೂಚನೆಗಳು ಬರುತ್ತಿವೆ.'

"ಈ ಪ್ರಯೋಗವನ್ನು ಹಿಂದೂದೇಶದಲ್ಲಿ ಬಳಕೆಗೆ ತಂದರೆ, ಪ್ರತಿಯೊಬ್ಬನಿಗೆ ೩೩ ಗುಲಾಮರು ದೊರೆಯುವ ಬದಲು, ಪ್ರತಿಯೊಬ್ಬನು ಮೂವತ್ತಮೂರು ಪಾಲಷ್ಟು ಹೆಚ್ಚು ದಾಸ್ಯಕ್ಕೊಳಗಾಗುವನೆಂದು ನನ್ನ ಅಭಿಮತ. ಜನರ ಸಂಖ್ಯೆಯು ಕಡಿಮೆಯಿರುವಾಗ ಕೆಲಸ ಪೂರೈಸಲು ಯಂತ್ರಸಾಧನಗಳು ಒಳ್ಳೇದು. ಆದರೆ ಹಿಂದೂದೇಶದಂತೆ ಕೆಲಸಕ್ಕೆ ಬೇಕಾದುದಕ್ಕಿಂತ ಜನಸಂಖ್ಯೆ ಹೆಚ್ಚಿರುವಲ್ಲಿ ಅದು ಹಾನಿಕರವಾದುದು

() () () ()

'ಹಳ್ಳಿಗಳಿಗೆ ಮರಳಿರಿ' ಎಂಬುದರ ತಪ್ಪು ಗ್ರಹಿಕೆ. 'ಹಳ್ಳಿಗಳಿಗೆ ಹಿಂದಿರುಗಿರಿ' ಎಂಬ ವಿಚಾರದ ಕುರಿತು ಕೆಲವು ಟೀಕಾಕಾರರು, ಹೀಗೆ ಮಾಡುವುದರಿಂದ ಪ್ರಗತಿಯ ಗಡಿಯಾರದ ಮುಳ್ಳುಗಳನ್ನು ಹಿಂದೆ ಹಾಕಿದಂತಾಗುವುದು ಎನ್ನುವರು. ಇದು ನಿಜವಾಗಿದೆಯೋ? ಗ್ರಾಮಕ್ಕೆ ಹಿಂದೆ ಹೋಗಲೇಬೇಕು. ಅಥವಾ ಗ್ರಾಮಗಳನ್ನು ಗ್ರಾಮಕ್ಕೆ ಸಲ್ಲಿಸುವುದೇ ಎಂಬುದನ್ನು ಯೋಚಿಸಬೇಕು. ನಾನು ಪಟ್ಟಣವಾಸಿಗಳನ್ನು ಹಳ್ಳಿಗಳಿಗೆ ಹೋಗಿ, ಅಲ್ಲಿ ವಾಸಿಸಿರೆಂದು ಹೇಳುವುದಿಲ್ಲ. ಆದರೆ, ಯಾವುದು ಹಳ್ಳಿಗರಿಗೆ ನೀರೆರೆಕ್ಕದುದ್ದೋ ಅದನ್ನು ಅವರಿಗೆ ಕೊಟ್ಟುಬಿಡಿರಿ' ಎನ್ನುವೆನು" ಎಂದು ಗಾಂಧಿಜಿಯವರು ತಿರುಗಿ ಒಂದೆಡೆ ಹೇಳಿರುವರು.

ಗಾಂಧಿಜಿಯವರ ಅಭಿಮತದಂತೆ ಹಿಂದೂದೇಶದ ಉದ್ಧಾರವು ಸಾಮಾನ್ಯ ಪ್ರಮಾಣದ ಕೈಗಾರಿಕೆಗಳಲ್ಲದಕವಾಗಿರುವುದೆಂದಾಗಿದೆ. ಈ ಕುರಿತು ಹೀಗೆನ್ನುವರು "ಉದಾಹರಣೆಗಾಗಿ ಸಕ್ಕರೆ ತಯಾರಿಸುವಿಕೆಯ ಕುರಿತಾಗಿ ಯೋಚಿಸುವ. ಸಕ್ಕರೆಯ ಪ್ರಯೋಗವು ದಿನದಿನಕ್ಕೆ ಹೆಚ್ಚುತ್ತಿದೆ, ಬೆಲ್ಲದ ಹೆಸರೇ ಉಳಿಯುವುದಿಲ್ಲವೋ ಎಂಬುದಾಗಿ ತೋರುತ್ತದೆ. ಶುದ್ಧ ಸಕ್ಕರೆಗಿಂತ ಬೆಲ್ಲದಲ್ಲಿ ಪೌಷ್ಟಿಕ ಶಕ್ತಿ ಹೆಚ್ಚೆಂಬುದು ತಿಳಿದ ಸಂಗತಿ. ಇಂಥಾ ಹಳ್ಳಿಯ ಕೈಗಾರಿಕೆಗಳೇ ಅಭಿವೃದ್ಧಿಯಾಗತಕ್ಕದ್ದು"

() () () ()

ಹಳ್ಳಿಗರ ಕಸಬು ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರುವಂತೆ ಬೇಕಾದ ಪ್ರೋತ್ಸಾಹ, ಸಲಹೆಯನ್ನೀಯುವುದು ನಿಜವಾದ ಸ್ವದೇಶೀಯು. ಇದರಿಂದ ನಿರ್ಗತಿಕರಾದ ಮಿಲ್ಲಿಯ ಗಟ್ಟಳೆ ಜನರಿಗೆ ಸಹಾಯವಾಗುವುದು. ಗ್ರಾಮ ಕೈಗಾರಿಕೆಗಳನ್ನು ಊರ್ಜಿತಗೊಳಿಸುವುದರಿಂದ, ಜನತೆಯಲ್ಲಿ ವಿಚಾರಶಕ್ತಿಯೂ, ಕಲಾಕೌಶಲ್ಯವೂ ಹೆಚ್ಚುವುದು. ನಿರುದ್ಯೋಗಿಗಳಾದ ನೂರಾರು ಯುವಕರಿಗೆ ಆಶ್ರಯ ದೊರೆತಂತಾಗುವುದು. ಈಗ ನಿರರ್ಥಕವಾಗಿ ವ್ಯಯವಾಗುವ ಜನರ ಉತ್ಸಾಹಶಕ್ತಿಯನ್ನು ಯೋಗ್ಯ ಕಾರ್ಯದಲ್ಲಿ ಪ್ರಯೋಗಿಸಿದಂತಾಗುವುದು. ಒಳ್ಳೆಯ ಸಂಪಾದನೆಯ ಉದ್ಯೋಗದಲ್ಲಿರುವ ಯಾರೊಬ್ಬನಾದರೂ ತನ್ನ ಉದ್ಯೋಗವನ್ನು ಬಿಟ್ಟುಬಿಟ್ಟು ಈ ಸಣ್ಣ ಕೈಗಾರಿಕೆಗಳನ್ನು ಅನುಸರಿಸಬೇಕೆಂದು ನಾನು ಹೇಳುವುದಿಲ್ಲ. ನೂಲುವ ಚರಕವನ್ನು ನಾನು ಉಪಯೋಗಿಸಿದಂತೆ, ನಿರುದ್ಯೋಗಿಗಳಾಗಿರುವ ಬಡತನಕ್ಕೆ ಗುರಿಯಾಗಿರುವ ಜನರು ಇಂಥಾ ಕೈಗಾರಿಕೆಗಳನ್ನೇ ಆಶ್ರಯಿಸಿ, ತಮ್ಮ ಅಲ್ಪ ಆದಾಯವನ್ನು ಸ್ವಲ್ಪ ಊರ್ಜಿತಗೊಳಿಸಲೆಂದೇ ನನ್ನ ಸಲಹೆ.

)([] [])(

ಗ್ರಾಮ ಕೈಗಾರಿಕೆಗಳ ಉದ್ಧಾರವೆಂದರೆ ಯಂತ್ರ ಸಾಧನಗಳ ವಿರುದ್ಧವೇ?

ಗಾಂಧಿಜಿಯವರು ತಿರುಗಿ ಹೀಗೆನ್ನುವರು "ಗ್ರಾಮ ಕೈಗಾರಿಕೆಗಳ ಪುನರುತ್ಥಾನವೆಂದರೆ, ಯಂತ್ರಗಳೊಡನೆ ಹೋರಾಟವೆಂದಲ್ಲ. ಹಿಂದೂದೇಶದ ಏಳುನೂರು ಸಾವಿರ ಹಳ್ಳಿಗಳಲ್ಲಿ ಪಸರಿಸುವ ಹಳ್ಳಿಗರೆಂಬ ಚೇತನಸ್ವರೂಪದ ಯಂತ್ರಗಳ ಇದಿರು ನಿರ್ಜೀವ ಯಂತ್ರಗಳನ್ನು ನಿಲ್ಲಿಸಕೂಡದು. ಯಂತ್ರಗಳ ಉಪಯೋಗವೆಂಬುದು ಮಾನವನ ಸುಖಕ್ಕಾಗಿ. ಮಾನವನ ಪ್ರಯತ್ನಕ್ಕಾಗಿ ನೆರವಾಗುವುದಾಗಿದೆ. ಈಗಿನ ಯಂತ್ರ ನಿರ್ಮಾಣದಿಂದ ದೇಶದ ಐಶ್ವರ್ಯವು ಕೆಲವರ ಕೈಸೇರಿ, ಮಿಲ್ಲಿಯಗಟ್ಟಳೆ ಜನರ ಬಾಯಿ ತುತ್ತು ತಪ್ಪಿಹೋಗುವುದು.'

ಅವರೊಮ್ಮೆ ತಮ್ಮ ಸ್ವದೇಶೀಯ ಕುರಿತಾಗಿ ತಮ್ಮ ಅಚಲ ವಿಶ್ವಾಸವನ್ನು ಹೀಗೆ ವ್ಯಕ್ತಪಡಿಸಿರುವರು. "ಸರಕಾರವು ನನ್ನ ರೀತಿಯ ರಹಸ್ಯವನ್ನು ತಿಳಿದುಕೊಂಡು, ನನಗೆ ಸಂಪೂರ್ಣ ಸಹಕಾರವನ್ನು ಕೊಟ್ಟರೆ, ನಾನು ಆಶ್ಚರ್ಯಕರವಾದ ಕಾರ್ಯಗಳನ್ನು ಸಾಧಿಸಬಲ್ಲೆನು. ನಾನು ಆರ್ಥಿಕ ನೆರವನ್ನು ಕೋರುವುದಿಲ್ಲ. ಸರಕಾರದ ಮನಃಪೂರ್ವಕವಾದ ನೈತಿಕ, ಉತ್ಸಾಹಪೂರಿತ ಬೆಂಬಲವು ಬೇಕಾಗಿದೆ".

)( ][ ][ )(

ಖಾದಿಯು ಗಾಂಧಿಜಿಯವರ ಸ್ವದೇಶೀ ಚಳವಳದ ಕೇಂದ್ರ ಸ್ಥಾನವನ್ನು ಹೊಂದಿರುವುದು.

"ಹಿಂದೂದೇಶದ ಜನತೆಯ ಹತ್ತಿಯ ಕೈಗಾರಿಕೆ ವಿನಾಶಕ್ಕಾಗಿ ಈಸ್ಟ್ ಇಂಡಿಯಾ ಕಂಪೆನಿಯು ಸಾಧಿಸಿತು. ಹಿಂದೂದೇಶವನ್ನು ಲಂಕೆಶಯರಿನ ವಸ್ತ್ರದ ಮೇಲೆ ಹೊಂದಿಕೊಂಡಿರುವಂತೆ ಮಾಡಿತು. ಇದರಿಂದಾಗಿ ದೇಶದಲ್ಲಿ ಬೇರೆ ಉದ್ಯೋಗವಿರದೆ, ಮಿಲ್ಲಿಯ ಗಟ್ಟಳೆ ಜನರು ನಿರುದ್ಯೋಗಿಗಳಾಗಿರಬೇಕಾಯಿತು. ಹಲಕಾಲದ ನಿರುದ್ಯೋಗದಿಂದ ಜನರಲ್ಲಿ ಸೋಮಾರಿತನವು ಬೆಳೆಯಿತು. ಜನರು ಧೃತಿಗೆಡುವವರಾದರು. ಹಿಂದೂದೇಶವು ಇಂಥಾ ಬಡತನದ ಪಡೆಗೆ ಆಹುತಿಯಾಗಲು ಅನ್ಯದೇಶೀಯರ ಆಳ್ವಿಕೆಯು ಕಾರಣವಾಯಿತೆಂಬುದು ನಿಸ್ಸಂದೇಹವು ಮತ್ತು ಅದಕ್ಕಿಂತಲೂ ಮಿಗಿಲಾಗಿ ನಾವು, ನಾವೂ ಸ್ವಯಂ ಕಾರಣಭೂತರಾಗಿರುವೆವು. ತಮ್ಮ ಅಲ್ಪ ಲಾಭಕ್ಕಾಗಿ ಪರಕೀಯರ ಹಂಗಿಗೆ ಒಲಿಬಿದ್ದು ಜನತೆಯನ್ನು ವಂಚಿಸಿ, ದೇಶದ ಆರ್ಥಿಕ ಸ್ವಾತಂತ್ರ್ಯವನ್ನು ಮಾರಲಿಕ್ಕೆ ಮುಂದಾದ ಮಧ್ಯತರಗತಿಯ ಜನರೀಗ ತಮ್ಮ ಅಪರಾಧವನ್ನು ಮನಗಂಡು ಚರಕ ಸಂದೇಶವನ್ನು ಹಳ್ಳಿಗರಿಗೆ ಸಾರಿ, ಅವರ ಸೋಮಾರಿತನವನ್ನು ದೂರ ಸರಿಸಲು, ಮುಂದಾದರೆ, ದೇಶದ ಜನತೆಯ ಪರಿಸ್ಥಿತಿಯನ್ನು ಹಲವು ರೀತಿಯಲ್ಲಿ ಉತ್ತಮ ಸ್ಥಿತಿಗೆ ತರಬಹುದು'.

ಈ ಪುಸ್ತಕದಲ್ಲಿ ಗಾಂಧಿಜಿಯವರ ಅಮೂಲ್ಯ ಸಂದೇಶ, ಸಲಹೆ, ಸೂಚನೆಗಳಲ್ಲದೆ ಮಹದೇವ ದೇಸಾಯಿಯವರ ಲೇಖನಗಳೂ ಇವೆ.

ದೊರೆಯುವ ಸ್ಥಳ—

ನವಜೀವನ ಪ್ರೆಸ್—ಅಹ್ಮದಾಬಾದ್.

ಬೆಲೆ 1—8—0.



"ಶೆಂಕ್ಸ"

SHANKS

(ಇಂಗ್ಲಿಷ್ ಮೇಕ್)

ಕ್ರೂಡ್ ಆಯಿಲ್ ಎಂಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶೆಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬೈಂಡ ಪ್ಲಾಂಟ), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರಕೊಳ್ಳಿ—

ಪೆರಮ್ಯಾಂಟ್ ಇಂಜಿನೀಯರಿಂಗ್ ಕೋರ್ಪರೇಶನ್

೮೨, ಎಪೊಲೊ ಸ್ಟ್ರೀಟ್, ಫೋರ್ಟ್ . . . ಮುಂಬಯಿ.

ಹೊಸ ನಿರ್ಮಾಣದ ಸಿನೆಮಾಯಂತ್ರಗಳು ಈಗತಾನೆ ಬಂದಿವೆ.



ಆಬಾಲವೃದ್ಧರಿಗೆ ಮನೆಯಲ್ಲೇ ಬಾಯಸ್ಕೋಪುಗಳನ್ನು ನೋಡುವ ಸಂಧಿ. ಜಾಹೀರಾತಿನಲ್ಲಿ ಚಿತ್ರಿಸಿದ ರೀತಿಯಾಗಿದ್ದರೆ ಹಣ ವಾಪಾಸು. ಇಲೆಕ್ಟ್ರಿಕ್ ಬೆಟರಿಗಳಿಂದಲೂ ಶಕ್ತಿಯುಕ್ತವಾದ ಬಲ್ಬುಗಳಿಂದಲೂ ಕೂಡಿರುವ ಈ ಮೆಶೀನುಗಳಿಂದ ಸಿನೆಮಾ ಕಂಪನಿಗಳ ದೃಶ್ಯಗಳನ್ನು ಕೂಡಲೇ ಕಾಣಬಹುದು. ಸರ್ಕಸ್ ಆಟಗಳು, ಜಂಗಲ್ ಕಾಡುಗಳ ದೃಶ್ಯಗಳು, ಸಮುದ್ರದಲ್ಲಿಯ ಸ್ಟೀಮರ್ ಯುದ್ಧಗಳು, ಮನಮೋಹಕ ಕೋಮಲಾಂಗಿಯರ ನೃತ್ಯವಿನೋದಾದಿ ಆಶ್ಚರ್ಯಕರ ಹಾಗು ಪರಮಾನಂದವನ್ನುಂಟು ಮಾಡತಕ್ಕ ಸೀನೆರಿಗಳ ಹಣಸಂಪಾದನ ಮಾಡುವವರಿಗೂ ಈ ಯಂತ್ರವು ತುಂಬಾ ಸಹಕಾರಿಯಾಗುವುದು.

ನಂಬ್ರ 1 ಬಾಯಸ್ಕೋಪ್ ಮಶೀನು ಮತ್ತು 15 ಅಡಿ ಉದ್ದದ ಫಿಲ್ಮ್ ಸಮೇತ ಕ್ರಯ ರೂ 7

ನಂಬ್ರ 2 ಬಾಯಸ್ಕೋಪ್ ಮಶೀನ 10 ಫೀಟು ಫಿಲ್ಮ್ ಸಹಿತ ಕ್ರಯ ರೂ 5

ಹೆಚ್ಚಿನ ಪ್ರತಿ 25 ಫೀಟು ಫಿಲ್ಮುಗಳಿಗೆ ಬೆಲೆ ರೂ 1 ಮಾತ್ರ

ಪ್ಯಾಕಿಂಗ್ ಮತ್ತು ಪೋಸ್ಟೇಜು ನಂಬ್ರ 1ಕ್ಕೆ ರೂ 1—8—0, ಪ್ಯಾಕಿಂಗ್ ಮತ್ತು ಪೋಸ್ಟೇಜು ನಂಬ್ರ 2ಕ್ಕೆ ರೂ 1—4—0, ಆರ್ಡರಿನೊಂದಿಗೆ ರೂ 2ನ್ನು ಮುಂಗಡವಾಗಿ ಕಳಹಿಸಿದ ಕಾಗದ ಪತ್ರಗಳಿಗೆ ಮಾತ್ರ ಗಮನಕೊಡಲಾಗುತ್ತ

ವಿಳಾಸ Wedlock & Co., *Park Town, MADRAS.*

ನವಯುಗ

ಮಕರಸಂಕ್ರಾಂತಿ

ವಿಶೇಷ ಸಂಚಿಕೆ

ಬೆಲೆ_ನಾಲ್ಕಾಣೆ

ರಷ್ಯಾದ ಕ್ರಾಂತಿಕಾರರು

೧ ಕಾರ್ಲ್ ಮಾರ್ಕ್ಸ್

ಬಾಲ್ಯದಲ್ಲೇ ಕುಡುಕನಾದ, ವಿದ್ಯಾರ್ಥಿಯಾಗಿರುವಾಗಲೇ ಸುಂದರಿಯೋರ್ವಳನ್ನು ವರಿಸಿದ, ಉಪಾಧ್ಯಾಯರನ್ನು ಟೀಕಿಸಿ ಲೇಖನ ಬರೆದು ಹೆಸರು ಪಡೆದ. ಅನಂತರ ಕ್ರಾಂತಿಕಾರಕ ಲೇಖನಗಳನ್ನು ಬರೆದು ಸರಕಾರದ ವಕ್ರದೃಷ್ಟಿಗೊಳಗಾದ ಅತಿ ಸಾಹಸಿ ಈತ.

●

(ಲೇಖಕರು — 'ಆರಾಧ್ಯ' ತುಮಕೂರು)

ಇಂದು ರಷ್ಯಾದೇಶದಲ್ಲಿ ಆಚರಿಸುತ್ತಿರುವ ಸರ್ವ ಸಮಸ್ಯೆಯ ತತ್ವವನ್ನು ಸಾರಿದವನು ಕಾರ್ಲ್‌ಮಾರ್ಕ್ಸ್ ಯಹೋದ್ಯ ಪಂಗಡದಲ್ಲಿ ಜನಿಸಿದವನಾದರೂ ರಷ್ಯಾದೇಶದ ಯಾವ ಕಛೇರಿಯಲ್ಲಿ ನೋಡಿದರೂ ಮಾರ್ಕ್ಸ್‌ನ ಪಟವಿದೆ. ಅವನು ತೋರಿಸಿದ ಮಾರ್ಗದಿಂದ ರಾಜ್ಯಭಾರವು ನಡೆಯುತ್ತಿದೆ ಬಡವರು ಬಲ್ಲಿದರು ಎಂಬ ಭೇದಭಾವವನ್ನು ಬಿಟ್ಟು ಜಗತ್ತಿನ ಸಂಪತ್ತನ್ನು ಸಮವಾಗಿ ಹಂಚಿ ಅದರ ಸೌಖ್ಯವನ್ನು ಉಣಬೇಕೆಂಬುದೇ ಇವನ ತತ್ವದ ಸಾರ.

ಮಾರ್ಕ್ಸ್‌ನು ಜರ್ಮನಿಯ ಟ್ರೈಯ್ಯರ್ ಎಂಬ ಊರಿನಲ್ಲಿ 1818ರಲ್ಲಿ ಜನ್ಮವೆತ್ತಿದನು. ಇವನ ತಂದೆಯು ಶ್ರೀಮಂತನಲ್ಲದಿದ್ದರೂ ಜೀವನವನ್ನು ನಡೆಯಿಸಲು ಸಾಕಾದಷ್ಟು ಸಂಪಾದನೆಯನ್ನು ತನ್ನ ವಕೀಲ್ ವೃತ್ತಿಯಿಂದ ಪಡೆಯುತಿದ್ದನು. ಸಾಧಾರಣ ಜೀವನವನ್ನು ನಡೆಯಿಸಲು ಬೇಕಾದ ಸೌಕರ್ಯಗಳಿದ್ದರೂ ಮಾರ್ಕ್ಸ್‌ನಿಗೆ ಅದು ರುಚಿಸಲಿಲ್ಲ ಪೋಲಿಯಂತೆ ಬೀದಿಬೀದಿಗಳನ್ನು ಅಲೆಯುವ ಕೆಲಸಕ್ಕೆ ಆರಂಭಿಸಿದನು. ಜೊತೆಗೆ ಸಾರಾಯಿ ಕುಡಿಯುವುದು ಬೇರೆ. ಇವನಿಗೆ ಸಾರಾಯಿ ಕುಡಿಯುವುದೆಂದರೆ ನಾವು ಬೇಸಿಗೆಯಲ್ಲಿ ತಣ್ಣೀರು ಕುಡಿದಂತೆ ಇವನು ಸಾರಾಯಿ ಕುಡಿಯುವುದರಲ್ಲಿ ಅಗ್ರಗಣ್ಯನು. ಕೇವಲ 18ನೆಯ ವಯಸ್ಸಿನಲ್ಲಿ ಇವನಿಗೆ ಸಾರಾಯಿ ಸಂಘದ ಅಧ್ಯಕ್ಷ ಪದವಿಯು ಸಿಕ್ಕಿತು. ಒಂದು ದಿನ ಕುಡಿತದ ಮಿತಿಮೀರಿ ಬೀದಿಗೆ ಬಂದನು. ಮದೋನ್ಮತ್ತನಾದ ಮಾತ್ರಕ್ಕೆ ಸರ್ಕಾರವು ಸುಮ್ಮನಿರಬಲ್ಲುದೆ? ಇವನನ್ನು ಆಹ್ವಾನಿಸಿ ಜೈಲಿಗೆ ಕಳುಹಿಸಿತು. ಆದರೆ ಇವನು ಅಲ್ಲಿದ್ದುದು ಒಂದೇದಿನ. ಬಿಡುಗಡೆಯಾಗಿ ಬಂದೊಡನೆ ಮತ್ತೆ ತನ್ನ ಸಾರಾಯಿ ಅಂಗಡಿಗೆ ಹೋದ ಅಲ್ಲಿ ಯಾವುದೋ ಕಲಹ ಬಂದು ಕುಸ್ತಿಗೆ ನಿಲ್ಲಬೇಕಾಯಿತು. ಮಾರ್ಕ್ಸ್‌ನೇನು ಸಾಮಾನ್ಯನೇ? ದೃಢಕಾಯಿ, ಪೋಕರಿ ಸ್ವಭಾವ; ಜೊತೆಗೆ ಸಾರಾಯಿ ಸ್ವಭಾವ. ಕಾಳಗ ಮಾಡಿ ಕಣ್ಣಿಗೆ ಏಟುತಿಂದ. ತಂದೆಗೆ ಇದೆಲ್ಲವನ್ನೂ ನೋಡಿ ಸಿಟ್ಟುಬಂದಿತು ಮಗನನ್ನು ಕರೆದು ಹುಚ್ಚಾಪಟ್ಟೆ ಬೈದು ಮುಂದಿನ ವಿದ್ಯಾಭ್ಯಾಸಮಾಡಲು ಬರ್ಲಿನ್ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿಬಿಟ್ಟನು.

ಬರ್ಲಿನ್ ನಗರಕ್ಕೆ ಬಂದರೇನು? ವಿದ್ಯಾಭ್ಯಾಸವನ್ನು ಮುಂದುವರಿಸಿದನೇ? ಇಲ್ಲ. ಆಗಿನ ಅವನ ನಡುಪ್ರಾಯ ಜೊತೆಗಾತಿಯೊಬ್ಬಳನ್ನು ಹುಡುಕಲು ಹೊರಟಿತು ವೆಸ್ಟ್ ಫಾಲನ್ ಎಂಬಾಕೆಯನ್ನು ನೋಡಿ ಮೋಹಿಸಿದ ಆ ಲಲನಾಮಣಿಯು ಇವನನ್ನು ಕೂಡಲು ಇವನಿಗೆ ಸಾಕಾದಷ್ಟು ಸೌಂದರ್ಯವಿರಲಿಲ್ಲ. ಆದರೂ ಆ ಸುರಸುಂದರಿಯು ಇವನನ್ನು ಮದುವೆಯಾದಳು. ವೆಸ್ಟ್‌ಫಾಲನ್‌ಳು ಮಾರ್ಕ್ಸ್‌ನ ಜೊತೆಯಲ್ಲಿ ಬಹುದಿವಸ ಇರಲಾರಳೆಂಬ ಸಂಶಯವು ಎಲ್ಲರಲ್ಲಿಯೂ ಮೂಡಿತ್ತು. ಆದರೆ ಅಂತಹ ಸಂಶಯಗಳಿಗೆ ಭಿನ್ನವಾಗಿ ಸುಲಲಿತವಾದ ಸಂಸಾರವನ್ನು ನಡೆಯಿಸಿದಳು. ವೆಸ್ಟ್ ಫಾಲನ್ನಳಿಗೆ ಇವನಲ್ಲಿನ ಯಾವ ಗುಣವು ಆಕರ್ಷಿಸಿತ್ತೋ ಅದನ್ನು ಹೇಳಲಾಗುವುದಿಲ್ಲ. ಆದರೆ ಒಂದನ್ನು ಮಾತ್ರ ಊಹಿಸಬಹುದಾಗಿದೆ.

ಮಾರ್ಕ್ಸ್‌ನು ಬಡವರೆಂದರೆ ತನ್ನ ಪ್ರಾಣವನ್ನು ಕೊಡಲು ಸಿದ್ಧ. ಅವಳೂ ಸಹ ಅದೇ ಪ್ರಕೃತಿಯವಳು. ಕರುಣಾಮಯಿ, ಪತಿಭಕ್ತಿ ಪರಾಯಣಳು. ತನ್ನ ದೇಹ—ಆತ್ಮವನ್ನು ಅವನಿಗೆ ಧಾರೆಯೆರೆದಿದ್ದಳು. ಅಂತಹ ಸುಖದ ಜೀವನವನ್ನು ಪಡೆಯುವನೆಂದು ಅವನ ತಂದೆಯು ತಿಳಿದಿರಲಿಲ್ಲ. ಅವಳು ಕುಲೀನವಂಶಜಳೆಂದು ಅವರ ಮದುವೆಗ ಅಡಚಣೆಯನ್ನು ತಂದೊಡ್ಡಿದ್ದನು. ಆದರೆ, ತರುವಾಯ ಅವರ ದಾಂಪತ್ಯ ಜೀವನವನ್ನು ನೋಡಿ ಮನಸಾರ ಹಿಗ್ಗಿದನು

ಮಾರ್ಕ್ಸ್‌ನು ಬರ್ಲಿನ್ ನಗರದಲ್ಲಲ್ಲದೆ ಬಾನ್ ವಿಶ್ವವಿದ್ಯಾನಿಲಯದಲ್ಲೂ ಕೊಂಚ ವ್ಯಾಸಂಗಮಾಡಿದನು. ಆಗ ಆತನಿಗೆ ೨೦ ವರ್ಷವಯಸ್ಸು. ಒಂದು ಸಲ ತನ್ನ ಉಪಾಧ್ಯಾಯರ ನೀತಿನಡತೆಗಳನ್ನು ಖಂಡಿಸಿ ಟೀಕಿಸಿ ದೊಡ್ಡದಾದ ಲೇಖನವೊಂದನ್ನು ಬರೆದು ಬಹಿರಂಗಪಡಿಸಿದ. ಅವನ ಆಗಿನ ಲೇಖನವನ್ನು ನೋಡಿದವರೆಲ್ಲರೂ ಆ ಭಾಷೆಯ ಶೈಲಿ, ವಿಧಾನಗಳಿಗೆ ತಲೆದೂಗಿದರು ವ್ಯಾಸಂಗಮಾಡುತಿದ್ದ ಹಾಗೆಯೇ ವೃತ್ತಾಂತಕಾರರ ಚಳುವಳಿಗೆ ಸೇರಲಾರಂಭಿಸಿದನು, ಆಗಿನ ರಾಜಕೀಯ ರಂಗದ ವಿಷಮ ಪರಿಸ್ಥಿತಿಯ ಪರಿಣಾಮವಾಗಿ ಪ್ರತಿವಿಶ್ವವಿದ್ಯಾನಿಲಯಗಳಲ್ಲೂ ಒಂದೊಂದು ಗುಪ್ತ ಕ್ರಾಂತಿಕಾರರ ಸಂಘಗಳಾಗಹತ್ತಿದ್ದವು. ಅಂತಯೇ ಅಲ್ಲಿಯೂ ಒಂದು ಸಂಘವು ಚಳುವಳಿಗೆ ಆರಂಭಿಸಿತ್ತು ಸರ್ಕಾರವು ಪ್ರಜೆಗಳ ಸೌಖ್ಯಕ್ಕೆ ಭಂಗತರುವಂತಹ ಕಾನೂನನ್ನು ಜಾರಿಗೆ ತಂದರೆ ಅಥವ ಶಾಂತಿಗೆ ಭಂಗಬರುವ ಆಜ್ಞೆಮಾಡಿದರೆ ಅದನ್ನು ತಡೆಗಟ್ಟುವುದು, ಪ್ರತಿಭಟಿಸುವುದು, ಈ ಸಂಘದ ಮುಖ್ಯ ಧ್ಯೇಯವಾಗಿತ್ತು. ಮಾರ್ಕ್ಸ್‌ನು ಈ ಸಂಘಕ್ಕೆ ಸೇರಿ ನಾಯಕನಾದ ಬೋರ್ ಎಂಬವನ ಮುಖ್ಯ ಸ್ನೇಹಿತನಾದನು. ಆಗಾಗ್ಯೆ ಚಿಕ್ಕಪುಟ್ಟ ಲೇಖನಗಳನ್ನು ಬರೆಯುವುದನ್ನು ಮಾತ್ರ ಬಿಟ್ಟಿರಲಿಲ್ಲ.

ಪತ್ರಿಕಾ ಪ್ರಪಂಚದಲ್ಲಿ ಓಡಾಡಬೇಕೆಂಬ ಆಸೆ ಬಹಳವಾಗಿತ್ತು. ಅದಕ್ಕೆ ಬೇಕಾದ ಬುದ್ಧಿಚಾತುರ್ಯ, ಕುಶಲತೆಯೂ ಇವನಲ್ಲಿ ಇತ್ತು. ವ್ಯಾಸಂಗವನ್ನು ಬಿಟ್ಟೊಡನೆ ವೃತ್ತಪತ್ರಿಕೋದ್ಯೋಗವನ್ನು ಕೈಕೊಂಡನು. ಇವನ ಲೇಖನಗಳಲ್ಲ ಹೊಸರೀತಿ, ಅಸಮಾನತ್ವಲಿ, ಮನಮೋಹಕವ ಧೋರಣೆಗಳಿರುತ್ತಿದ್ದವು ಇಂತಹ ಬರವಣಿಗೆಯನ್ನು ಬರೆಯಬಲ್ಲ ಕೌಶಲ್ಯವನ್ನು ಕಂಡು ಜರ್ಮನಿಯ ಪತ್ರಿಕೋದ್ಯೋಗಿಗಳು ಸಂಪಾದಕರುಗಳು ಆಶ್ಚರ್ಯಪಟ್ಟರು. ಹತ್ತಾರು ಲೇಖನಗಳನ್ನು ಬರೆದ ಮೇಲೆ ತಾನೇ ಪತ್ರಿಕೆಯೊಂದನ್ನು ಪ್ರಾರಂಭಿಸಬೇಕೆಂಬ ಆಕಾಂಕ್ಷೆ ಹುಟ್ಟಿತು. ಮನೋಬಲ ದೃಢತೆಗಳು ಮನುಷ್ಯನನ್ನು ಮೇಲ್ತರಗತಿಗೆ ಒಯ್ಯುವವೆಂಬುದನ್ನರಿತ ಮಾರ್ಕ್ಸ್‌ನು ತನ್ನ ಇಷ್ಟದಂತೆ ೨೪ನೇ ವಯಸ್ಸಿನಲ್ಲಿ 'ಜೀಟಂಗ' ಎಂಬ ಪತ್ರಿಕೆಯೊಂದನ್ನು ಪ್ರಾರಂಭಿಸಿದನು. ಜರ್ಮನಿಯಲ್ಲಿ ಇದರಷ್ಟು ಪ್ರಚಾರವಾಗಿದ್ದ ಮತ್ತು ಗೌರವವನ್ನು ಪಡೆದಿದ್ದ ಪತ್ರಿಕೆಯು ಬೇರೊಂದಿಲ್ಲ. ಇವನ ನಿರ್ಭಯ ಲೇಖನಗಳು ಸರ್ಕಾರವನ್ನು ಖಂಡಿಸಿ ಬರೆಯುತ್ತಿದ್ದ ಬರಹಗಳು ಪ್ರತಿಯೊಬ್ಬರೂ ಮೆಚ್ಚುವಂತಿದ್ದವು.

ದಿನೇದಿನೇ ಮಾರ್ಕ್ಸ್‌ನು ಕೀರ್ತಿಶಾಲಿಯಾಗುತ್ತಾ ಬಂದನು. ಮರ್ಯಾದೆಯಿಂದ ಕಾಣುತ್ತಿದ್ದ ಸರ್ಕಾರದವರು ಇವನನ್ನು ತುಳಿದುಹಾಕಲು ಪ್ರಯತ್ನಪಟ್ಟರು ಸ್ವತಂತ್ರ ಲೇಖನಗಳನ್ನು ಬರೆಯಕೂಡದೆಂದು ಕಟ್ಟಾಜ್ಞೆ ಮಾಡಿದರು. ಅವನು ಬರೆದ ಸುಮಾರು 140 ಲೇಖನಗಳನ್ನು ಪ್ರಕಟಿಸಲು 'ಸೆನ್ಸಾರ್ ಬೋರ್ಡಿನವರು' ಅವಕಾಶಕೊಡಲಿಲ್ಲ. ಕೊನೆಕೊನೆಗೆ ಇವನು ಬರೆಯುತ್ತಿದ್ದ ಚಿಕ್ಕಪುಟ್ಟ ಬರಹಗಳ ಪ್ರತಿಯೊಂದು ಪದವನ್ನು ಕೂಲಂಕಷವಾಗಿ ನೋಡಲು ಪ್ರಾರಂಭಿಸಿದರು. ಯಾವುದಾದರು ಕಾರಣದಿಂದ ಇವನ ಪತ್ರಿಕೆಯನ್ನು ನಿಲ್ಲಿಸಬೇಕೆಂಬ ಮನಸ್ಸುಮಾಡಿ ಸರ್ಕಾರದವರು ಮಾರ್ಕ್ಸ್‌ನು ರಷ್ಯಾದ ಜನರ ಮೇಲೆ ಬರೆದ ಲೇಖನಗಳನ್ನೇ ಕಾರಣವನ್ನಾಗಿ ಮಾಡಿಕೊಂಡು 'ಜೀಟಂಗ' ಪತ್ರಿಕೆಗೆ ಮುಟ್ಟುಗೋಲು ಹಾಕಿದರು.

ಇವನ ಅಭಿವೃದ್ಧಿಯನ್ನು ನೋಡಿ ಸರ್ಕಾರಕ್ಕೆ ಭಯ ಹೆಚ್ಚಾಗುತ್ತಾ ಬಂತು. ಏನಾದರೂ ಮಾಡಿ ಇವನನ್ನು ದೇಶೋಚ್ಚಾಟನೆಮಾಡಬೇಕೆಂದು ಕಿರುಕುಳ ಮಾಡಲಾರಂಭಿಸಿದರು. ಈ ರೀತಿಯ ಕಷ್ಟವನ್ನು ಅನುಭವಿಸುವುದಕ್ಕಿಂತಲೂ ಸ್ಥಳವನ್ನು ಬಿಟ್ಟು ಹೊರಡುವುದು ಉತ್ತಮವೆಂದೆನಿಸಿ ಪ್ಯಾರಿಸ್ ನಗರಕ್ಕೆ ಬಂದು 'ಎಮಿಗ್ರೆ' ಎಂಬ ಪತ್ರಿಕೆಯನ್ನು ಹೊರಡಿಸಲಾರಂಭಿಸಿದ. ಈ ಪತ್ರಿಕೆಯು ಗುಪ್ತವಾಗಿ ಜರ್ಮನಿಯಲ್ಲಿ ಪ್ರಚಾರವಾಗುವ ಏರ್ಪಾಡು ಮಾಡಲ್ಪಟ್ಟಿತ್ತು. ಸರ್ಕಾರದವರು ಇದನ್ನು ಸಹ ನಿಲ್ಲಿಸುವ ಏರ್ಪಾಡು ಮಾಡಿದರು. ಪತ್ರಿಕೆಯನ್ನು ನಿಲ್ಲಿಸಿದ್ದು ಮಾತ್ರವಲ್ಲ; ಅಲ್ಲಿಂದ ದೂರ ಹೊರಡಿಸಿದರು. ಬೆಲ್ಜಿಯಂಗೆ ಬಂದ. ಅಲ್ಲಿಂದಲೂ ಉಚ್ಚಾಟನೆಯಾಯಿತು. ತಿರುಗಿ ಜರ್ಮನಿಗೆ ಬಂದ. ಅಲ್ಲಿಂದಲೂ ಓಡಿಸಿದರು. ಪ್ಯಾರಿಸಿಗೆ ಹೋದ. ಅಲ್ಲಿಯೂ ಇವನಿಗೆ ಸ್ಥಳಸಿಕ್ಕಲಿಲ್ಲ. ಹೀಗೆ ಎಲ್ಲಿಯೂ ಸ್ಥಳಸಿಗದಂತಾಯಿತು. ಇದನ್ನು ನೋಡಿ ಮಾರ್ಕ್ಸ್‌ನಿಗೆ ತುಂಬಾ ಜಿಗುಪ್ಸೆ ಹುಟ್ಟಿತು. ಕೋಪವೂ ಬಂದಿತು. ಸರ್ಕಾರವನ್ನು ಪ್ರತಿಭಟಿಸಿ ಭಾಷಣವೊಂದನ್ನು ಬರ್ಲಿನ್ ನಗರದಲ್ಲಿ ಮಾಡಬೇಕಾಯಿತು. ಇದರ ಫಲವಾಗಿ ೨೪ಗಂಟೆಗಳಲ್ಲಿ ರಾಜ್ಯವನ್ನು ಬಿಟ್ಟು ಹೊರಡಬೇಕೆಂದು ರಾಜಾಜ್ಞೆಯಾಯಿತು. ಯತ್ನವಿಲ್ಲದ ಲಂಡನ್ನಿಗ ಹೋಗಬೇಕಾಯಿತು.

ವೃತ್ತಪತ್ರಿಕೆಯನ್ನು ನಡೆಯಿಸಲು ಶಕ್ತಿ ಇಲ್ಲದೆ ಹೋದರೂ ಕ್ರಾಂತಿಕಾರರ ಲೇಖನಗಳನ್ನು ಬರೆಯುವುದನ್ನು ನಿಲ್ಲಿಸಲಿಲ್ಲ ತಪ್ಪದೆ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಗೆ ಲೇಖನಗಳನ್ನು ಕಳುಹಿಸುತಿದ್ದ. ಲಂಡನ್ ನಗರದಲ್ಲಿ ಕೆಲಸಕ್ಕೋಸ್ಕರ ಬೀದಿಬೀದಿಗಳನ್ನು ಅಲೆದನು ಎಷ್ಟೋ ಜನರನ್ನು ಬೇಡಿಕೊಂಡನು. ಯಾರೂ ಇವನನ್ನು ನೋಡಿ ಮರುಗಲಿಲ್ಲ. ಸಹಾಯ ನೀಡಲಿಲ್ಲ ಇವನ ಗೆಳೆಯನೊಬ್ಬನು ಮಾತ್ರ ಕೊಂಚ ಹಣವನ್ನು ಕಳುಹಿಸುತ್ತಿದ್ದ. ಆದರಿಂದ ತನ್ನ ಹೊಟ್ಟೆಯನ್ನು ಹೊರೆದುಕೊಂಡು "ಬ್ರಿಟಿಷ್ ಮ್ಯೂಸಿಯಂ'ನಲ್ಲಿದ್ದ

ಮುಂದಿನ ಪುಟ ನೋಡಿರಿ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906

CANARA BANK LIMITED

ತ್ರಿಪುರಿ ಕಾಂಗ್ರೆಸ್ ಸಿದ್ಧತೆ

ತ್ರಿಪುರಿ ಅಧಿವೇಶನದ ಸಿದ್ಧತೆಗಳು ಭರದಿಂದ ಸಾಗುತ್ತಿವೆ, ಉಪಚಾರ ಸಮಿತಿಯವರು ಕಾಂಗ್ರೆಸು ನಗರಕ್ಕೆ ಬರುವ ಬಡರೈತರಿಗೆ ಒಂದಾಣೆ ಮತ್ತು ಎರಡಾಣೆ ದರದಲ್ಲಿ ಊಟದ ವ್ಯವಸ್ಥೆ ಮಾಡಿರುವರು. ಜಬ್ಬಲ್‍ಪುರದಲ್ಲಿ ಸ್ವಯಂ ಸೇವಕರನ್ನು ತರಬೇತುಗೊಳಿಸುವ ಎರಡು ದಳಗಳನ್ನು ಏರ್ಪಡಿಸಲಾಗಿದೆ. ಸ್ಥಳೀಕ ಕಾಲೇಜಿನ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಸೇವೆಮಾಡಲು ಮುಂದಾಗಿದ್ದಾರೆ. ವ್ಯಾಪಾರ ನಾಮನಿರ್ದೇಶಕ ವಿವರಣಾ ಪುಸ್ತಕವೊಂದನ್ನು ಪ್ರಕಟಗೊಳಿಸುವ ವ್ಯವಸ್ಥೆ ಮಾಡಲಾಗಿದೆ.

ಜಬ್ಬಲ್ ನಗರದಿಂದ ಒಂದರಿಂದಲೇ 15,000 ರೂ ಕಾಂಗ್ರೆಸು ಫಂಡಿಗೆ ದೊರೆತಿದೆ. ಮಹಾಕೋಸಲದ ಕಾಂಗ್ರೆಸು ಪಾರ್ಟಿಯ ಎಮ್. ಎಲ್. ಎ. ಯವರು ತಮ್ಮ ಒಂದು ತಿಂಗಳ ವೇತನವನ್ನು ಕಾಂಗ್ರೆಸು ಫಂಡಿಗೆ ಕೊಡಲೊಪ್ಪಿದ್ದಾರೆ. ಅನೇಕ ಉಪಸಮಿತಿಗಳ ರಚನೆಯಾಗಿದೆ. ಕುಮಾರಿ ಬಾಲಾ ಮಿತ್ರ ಎಮ್. ಎ. ಶೃಂಗಾರ ಉಪಸಮಿತಿಯ ಕಾರ್ಯದರ್ಶಿಯಾಗಿ ನೇಮಕಹೊಂದಿರುವರು.

ಅಸ್ಸಾಮಿನಲ್ಲಿ ಮದ್ಯಪಾನ ನಿಷೇಧ

1940ರ ಒಳಗೆ ಅಸ್ಸಾಮಿನಲ್ಲಿ ಸಂಪೂರ್ಣ ಮದ್ಯಪಾನ ನಿಷೇಧಿಸಬೇಕೆಂಬ ಅಭಿಪ್ರಾಯವನ್ನು ಸರಕಾರದಿಂದ ನೇಮಕ ಹೊಂದಿದ ಕಮಿಟಿಯು ಶಿಫಾರಸು ಮಾಡಿರುತ್ತದೆ. ಬರುವ ಎಸೆಂಬ್ಲಿ ಬಜೆಟ್ ಸಮಯ ಈ ಕುರಿತಾಗಿ ಸರಕಾರವು ಒಂದು ಬಿಲ್ಲು ತರಲಿರುವಂತೆ ಕೇಳಿಕೊಳ್ಳಲಾಗಿದೆ.

ಪುಸ್ತಕಗಳನ್ನು ಓದಿ ಮುಗಿಸಿಬಿಟ್ಟನು. ಕಾರ್ಲ್ ಮಾರ್ಕ್ಸ್‌ನಲ್ಲಿ ಅಸಾಧಾರಣ ಬುದ್ಧಿ ಬಲವಿತ್ತು. ರಾಜ್ಯವನ್ನಾಳಬಲ್ಲ ಶಕ್ತಿ ಇತ್ತು. ಆದರೆ ಆತನ ಸಲಹೆಯನ್ನೊಪ್ಪಿ ನಡೆಯಿಸುವ ಸಾಹಸಿಗಳಾರೂ ಇವನಿಗೆ ದೊರಕಲಿಲ್ಲ. ಇವನು ಬರೆದ 'ಡಾಸ್ ಕ್ಯಾಪಿಟಲ್' ಎಂಬ ಪುಸ್ತಕವು ಪ್ರಪಂಚದ ಶ್ರೇಷ್ಠ ಪುಸ್ತಕಗಳಲ್ಲೊಂದಾಗಿದೆ. ಇವನ ಜೀವನ ಚರಿತ್ರೆಯನ್ನು ಕುರಿತು ಲಕ್ಷಾಂತರ ಪುಸ್ತಕಗಳಾಗಿವೆ. ಮಾರ್ಕ್ಸ್‌ನು 'ಕಮ್ಯೂನಿಸಮ್'ನ ಪ್ರಚೋದಕ. ಇವನು ಹುಟ್ಟಿದುದು, ಬೆಳೆದುದು ಕೇವಲ ಬಡತನದ ಸಂಸಾರದಲ್ಲಾದರೂ ಇವನ ತತ್ವವನ್ನು ವಿಶಾಲ ವಿಶ್ವವೇ ಒಪ್ಪಿದೆ. ಯುರೋಪಿನಲ್ಲಿ ಇವನನ್ನು ರಾಕ್ಷಸನೆನ್ನುವವರಿದ್ದಾರೆ, ದೇವನೆಂದು ಪೂಜಿಸುವವರೂ ಇದ್ದಾರೆ. ಮಾರ್ಕ್ಸ್‌ನನ್ನು 'ಕಮ್ಯೂನಿಸ್ಟ್' ಎಂದು ವಾದಿಸುವವರೂ ಇದ್ದಾರೆ. "ಸಮತಾವಾದಿ" ಎಂದು ವಾದಿಸುವವರಿದ್ದಾರೆ. ಆದರೂ ಇವೆರಡು ಸಂಗಡಕ್ಕೂ ತಾನು ಸೇರಿಲ್ಲವೆಂದು ಮಾರ್ಕ್ಸ್‌ನ ಹೇಳಿಕೆ.

ಇವನು ಯಾವ ಸಂಗಡಕ್ಕಾದರೂ ಸೇರಲಿ. ಇವನ ತತ್ವವನ್ನು ಇಂದು ರಷ್ಯಾದ ಕೋಟಿಜನರು ಶಿರಸಾಗಿ ಪಾಲಿಸುತ್ತಿದ್ದಾರೆ. ಒಬ್ಬರೇ ಪಾಲಿಸುವ ಮಾತ್ರವಲ್ಲ, ಆ ತತ್ವದ ಬಲದಿಂದ ತಮ್ಮ ರಾಷ್ಟ್ರವು ಎಂತಹ ಉನ್ನತಿಗೇರಬಹುದೆಂಬುದನ್ನು ಇಂದು ಜಗತ್ತಿಗೆ ತೋರಿಸುತ್ತಿದ್ದಾರೆ. ಬೀದಿಬೀದಿಗಳಲ್ಲಿ ಭಿಕಾರಿಯಂತೆ ತಿರುಗುತ್ತಿದ್ದ ಹೆಂಡಕುಡುಕನೆಂಬ ಬಿರುದನ್ನು ಪಡೆದಿದ್ದ ಮಾರ್ಕ್ಸ್‌ನು ಇಂತಹ ವಿಖ್ಯಾತ ಪುರುಷನಾಗುತ್ತಾನೆಂದು ತಿಳಿದಿದ್ದವರಾರು?

(ಬರುವವಾರ-ಲಿಯೋ ಟಾಲ್‌ಸ್ಟಾಯ್)

ಸಮಾಚಾರ ಸಂಗ್ರಹ

ಬ್ರಹ್ಮಚಾರಿಗಳ ಸಂಸ್ಥೆ

(ಸಿಂಧ್ಯ) ಹೈದರಾಬಾದಿನಲ್ಲಿ ಒಂದು ಅಖಿಲಭಾರತ ಬ್ರಹ್ಮಚಾರೀಮಂಡಲ ಸ್ಥಾಪಿಸುವ ಸೂಚನೆಯಿದೆ. ಸುಭಾಸ ಬೋಸರನ್ನು ಅಧ್ಯಕ್ಷರನ್ನಾಗಿ ಆರಿಸುವ ಅಭಿಪ್ರಾಯವಿದೆ. ಶ್ರೀ ಸುಭಾಸರು ಕಾಂಗ್ರೆಸು ಕೆಲಸಗಾರರು ಸಂಸಾರತಾಪತ್ರಯದಿಂದ ದೂರವಿದ್ದು ಹೆಚ್ಚು ಕೆಲಸ ಸಾಧಿಸಬಹುದುದೆಂದು ಹೇಳಿರುವರಾಗಿ ತಿಳಿಯುತ್ತದೆ, ಈ ಸಂಸ್ಥೆಯ ಪ್ರಧಾನ ಕಛೇರಿಯು ಸಿಂಧಿನಲ್ಲೇ ಇರಬೇಕೆಂದೂ, ಇಲ್ಲಿ ಜೋಯಿತ್ರಿಮ, ಗಿಡ್ವಾನಿಯರಂಥಾ ಉತ್ತಮ ಬ್ರಹ್ಮಚಾರೀ ದೇಶಧುರೀಣರಿರುವರೆಂದೂ ಅಭಿಪ್ರಾಯಪಿರುತ್ತದೆ.

ನ್ಯಾಯಸ್ಥಾನದಲ್ಲಿ ಸ್ತ್ರೀಯರು ಇಜಾರ ಧರಿಸಬಹುದೇ!

ಈ ಪ್ರಶ್ನೆ ಅಮೇರಿಕದಲ್ಲಿ ಬಂತು. ಮಿಸ್ ಹಲೆನ ಹಲ್ಸಿಕ್ ಎಂಬಾಕೆ ಶಾಲಾ ಅಧ್ಯಾಪಕಿ. ಅವಳಿಗೆ ಕೋರ್ಟಿನಲ್ಲಿ ಒಂದು ಸಾಕ್ಷ್ಯವನ್ನೀಯಬೇಕಾಗಿ ಬಂತು. ಅವಳು ಇಜಾರ ಮತ್ತು ಸ್ವೆಟರ್ ಧರಿಸಿ ನ್ಯಾಯಸ್ಥಾನಕ್ಕೆ ಬಂದಳು. ನ್ಯಾಯಾಧಿಪತಿಯು ಅವಳನ್ನು ಸರಿಯಾದ ಉಡುಗೆ ಧರಿಸಿಕೊಂಡು ಬಾರೆಂದು ಹೇಳಿ, ಸಂಬ್ರವನ್ನು ಮರುದಿನಕ್ಕೆ ಮುಂದರಿಸಿದ. ಮರುದಿನ ಬರುತ್ತಾ ಹಲೆನಳು ಇನ್ನೊಂದು ಬಣ್ಣದ ಇಜಾರ, ಮತ್ತೊಂದು ವರ್ಣದ ಸ್ವೆಟರ್ ಧರಿಸಿಕೊಂಡು ಬಂದಳು. ಈ ಸಂದರ್ಭ ನ್ಯಾಯಾಧಿಪತಿಯು ಅವಳ ಸಾಕ್ಷ್ಯ ಕೇಳದೆ, ಆದರೆ ಅವಳನ್ನು ಕೋರ್ಟಿನ ತುಚ್ಛೀಕಾರತೆಗಾಗಿ ಕೈದುಮಾಡಿ 5ದಿನದ ಸಜೆ ವಿಧಿಸಿದ. ಅವಳು ಅಪೀಲು ಮಾಡಿದಳು. ಜುಪೀರಿಯರಿನಲ್ಲಿ ಬಿಡಲಾಯಿತು. ಕೊನೆಗೆ ಪ್ರಧಾನ ನ್ಯಾಯಾಧೀಶರು ಅವಳು ಇಜಾರ ಧರಿಸಿಕೊಂಡು ಬರುವುದು 'ಸಮಗೌರವಿಯ ತೊಡಿಗೆ'ಯ ನಿಬಂಧನೆಯ ಬಾಧಕವಾಗಿರುವದರಿಂದ, ನ್ಯಾಯಬದ್ಧವೆಂದು ಅವಳನ್ನು ಬಿಡುಗಡೆ ಮಾಡಿದರು.

ಕಾಂಗ್ರೆಸಿನ ಕೋಶಾಧಿಕಾರಿ ಸ್ಥಾನಕ್ಕೆ ಜಮ್ನಾಲಾಲ ಬಜಾಜರ ರಾಜಿನಾಮೆ.

ಶೇಟ ಜಮನಾಲಾಲ ಬಜಾಜರು ಖಾಸಗಿ ಕಾರಣಗಳ ನೆಸೆಯಿಂದ ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಕೋಶಾಧಿಕಾರಿ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿರುವರೆಂದು ತಿಳಿದುಬರುತ್ತದೆ. ಅವರು 1920ರಲ್ಲಿ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಕೋಶಾಧಿಕಾರಿಗಳಾಗಿ ಚುನಾವಣೆ ಹೊಂದಿದ್ದರು (25—27) ಒಂದೆರಡು ವರ್ಷಗಳ ಹೊರತು ಇಂದಿನ ವರೆಗೂ ಅವರೇ ಖಜಾನ್ಜಿಗಳಾಗಿ ಉತ್ಕೃಷ್ಟ ಸೇವೆ ನಡೆಸಿದರು. ಬಜಾಜರು ಶ್ರದ್ಧಾವಂತ ಕಾಂಗ್ರೆಸ ಕೆಲಸಗಾರರು. ಹಲವು ಸಲ ಸೆರೆಮನೆಯನ್ನು ಸೇರಿದವರು. ಅವರು ಕಳೆದ ಎರಡು ವರ್ಷಗಳಿಂದಲೂ ತನ್ನ ಈ ಹೊಣೆಗಾರಿಕೆಯ ಹೊರೆಯನ್ನು ಇಳಿಸುವಂತೆ ವಿನಂತಿಸಿದ್ದರು. ಆದರೆ ಕಾಂಗ್ರೆಸು ಸಮ್ಮತಿಸಲಿಲ್ಲ. ಇದೀಗ ಅವರು ಅಸೌಖ್ಯದ ನೆಸೆಯಿಂದ ಆರುತಿಂಗಳ ಕಾಲ, ಹಿಮಾಲಯದ ಬಳಿ, ವಾಸಮಾಡಬೇಕೆಂಬ ಬಯಕೆಯುಳ್ಳವರಿದ್ದಾರೆ. ಅನಂತರ ಅವರು ಕಾಂಗ್ರೆಸಿನ ಸೇವೆಯಲ್ಲಿ ತಿರುಗಿ ಮುಂದುಗದಿರು. ವರ್ಕಿಂಗ್ ಕಮಿಟಿಯು ಇಷ್ಟರವರೆಗೂ ಅವರ ರಾಜೀನಾಮೆಯನ್ನು ಮಂಜೂರು ಮಾಡಿರುವುದಿಲ್ಲ. ಅವರೀಗ ತಮ್ಮ ಪತ್ನಿಯ ಕಾಹಿಲೆಯ ನೆಸೆಯಿಂದ ಮುಂಬಾಯಿಯಲ್ಲಿರುವರು.

ಎಮ್. ಎಲ್ ಎ ಮೇಲೆ ಬೆದರಿಕೆ.

ಗಡಿನಾಡು ಪ್ರಾಂತ್ಯದ ಎಸೆಂಬ್ಲಿಯಲ್ಲಿ ದೇವಸ್ಥಾನ ಸುಧಾರಣಾ ಮಸೂದೆಯನ್ನು ತಂದಿರುವ ಡಾ. ಚಾರುಚಂದ್ರ ಘೋಷರಿಗೆ ಮೇಲಿಂದ ಮೇಲೆ ಬೆದರಿಕೆಯ ಪತ್ರಗಳು ಬರುತ್ತಿವೆ. ಅವರು ಅವುಗಳನ್ನು ಪೋಲೀಸರ ವಶ ಕೊಟ್ಟಿರುವರು.

ಒಬ್ಬನು ತಾನು ಕಾಳೀಭಕ್ತನೆಂಬಭಿಧಾನದಿಂದ ಹೀಗೆ ಬರೆದಿರುವನು! ನೀವು ದೇಶಹಿತಕ್ಕಾಗಿ ದುಡಿಯುವ ಧುರೀಣರೆಂದು ನಾವು ಅಭಿಮಾನ ತಾಳಿದವು, ಆದರೆ, ನಿಮ್ಮ ವರ್ತನೆಯು ನಮಗೆ ಸಂತಾಪವನ್ನುಂಟುಮಾಡಿರುವುದು. ನೀವು ತಂದಿರುವ ದೇವಸ್ಥಾನ ಸುಧಾರಣಾ ಮಸೂದೆಯನ್ನು ಒಂದು ವಾರದೊಳಗೆ ಹಿಂತೆಗೆಯಿರಿ, ಇಲ್ಲವೆ ನಿಮ್ಮನ್ನು ವಧಿಸಲಾಗುವುದು

ನಾಝಿಯೂ ಮನೋಶಾಸ್ತ್ರ

ಪ್ರೊ ಸಿಗ್ಮಂಡ್ ಫ್ರುಡ್, ಎಂಬ ಪ್ರಸಿದ್ಧ ಜರ್ಮನಿ ಮನಃಶಾಸ್ತ್ರಜ್ಞನು ದೇಶಭ್ರಷ್ಟನಾಗಿ ಬ್ರಿಟನಿನಲ್ಲಿರುವನು. ಇವನು ತನ್ನ ಸಮಯವನ್ನು ತನ್ನ ಕೊನೆಯ ಉತ್ಕೃಷ್ಟಗ್ರಂಥವಾದ ನಾಝಿಯಮನಃಶಾಸ್ತ್ರವೆಂಬುದರ ರಚನೆಯಲ್ಲಿ ಕಳೆಯಲ್ಪಡುವನು. ಅವನ ಮಗನಾದ ಮಾರ್ಟಿನ್ ಫ್ರುಡ್, ಎಂಬವನು ಅವನನ್ನು ಕಾಣ ಹೋದನು. ಅವನು ಈ ಕುರಿತು ಹೀಗೆಂದಿರುವನು.

ತಂದೆಯವರೀಗ ತನ್ನ ಗ್ರಂಥರಚನೆಯಲ್ಲಿ ಸಂಪೂರ್ಣವಾಗಿ ಮಗ್ನರಾಗಿದ್ದಾರೆ. ಯಾವಾಗಲೂ ಬರೆಯುತ್ತಿದ್ದಾರೆ. ಯಾರನ್ನು ನೋಡುವುದಿಲ್ಲ. ಇವರೀ ಸಂದ ಪ್ರಾಯದಲ್ಲಿ ಇಷ್ಟು ಹುರುಪಿನಿಂದ ಎಂದೂ ಬರೆಯುತ್ತಿದ್ದಿಲ್ಲ. ಇವರ ಪ್ರಾಯವೀಗ 82 ವರ್ಷ.

ಒಂದೇ ವರ್ಷದಲ್ಲಿ ಜಗತ್ತಿನಲ್ಲಿ 18 ಮಿಲಿಯ ಜನಸಂಖ್ಯೆ ಹೆಚ್ಚಿತು.

ಲೀಗಿನ ಮಾಸಿಕ ಬುಲೆಟಿನನುಸಾರವಾಗಿ 1937ನೇ ವರ್ಷದ ಅಂತ್ಯದಲ್ಲಿ ಜಗತ್ತಿನ ಜನಸಂಖ್ಯೆಯು 2,134,000,008; 1937ನೇ ವರ್ಷದಲ್ಲಿ 18,000,000 ಅಥವಾ ಶೇಕಡಾ 1 1 ಹೆಚ್ಚಿದಂತಾಯಿತು. ಏಸ್ಯಾಖಂಡದಲ್ಲಿ ಜಗತ್ತಿನ ಅರೆವಾಸಿಗಿಂತ ಹೆಚ್ಚಿನ ಜನಸಂಖ್ಯೆಯಿದೆ, ಅದರಲ್ಲಿ ಹಿಂದೂದೇಶವೊಂದರಲ್ಲೇ 375,000888 ಮತ್ತು ಚೈನದಲ್ಲಿ 150,000,000.

ಸ್ವಿಜರ್ಲೆಂಡಿನ ಹೊಸ ಅಧ್ಯಕ್ಷರು

ಸ್ವಿಜರ್ಲೆಂಡಿನ ಉಪಾಧ್ಯಕ್ಷರಾದ ಡಾಕ್ಟರ್ ವೆಟ್ಟರರು 1939ನೇ ವರ್ಷಕ್ಕೆ ಪ್ರೆಸಿಡೆಂಟರಾಗಿ ಜನರಲ್ ಅಸೆಂಬ್ಲಿಯಿಂದ ಚುನಾವಣೆಹೊಂದಿದ್ದಾರೆ. ಡಾಕ್ಟರ್ ಪಿಲೆಟ್ ಗೋಲಜ್‍ರವರು ವೈಸ್-ಪ್ರೆಸಿಡೆಂಟರಾಗಿ ನೇಮಕ ಹೊಂದಿರುವರು.

ನಾಝಿಯೂ ತತ್ವಕ್ಕೆ ಅಳಿಗಾಲವಿಲ್ಲ

ಜರ್ಮನರ ಕೋಮನ್‌ವೆಲ್ತು ಅಳ್ಳಿಕೆಯು ಎಂದೂ ದೂರ ಸರಿಯಲಾರದು. ನಾವೀಗ ಜಮಾನಿನಿಂದ ಸಾಧ್ಯವಿರುವಷ್ಟರ ಉತ್ಪತ್ತಿಯನ್ನು ಲಭಿಸಿಕೊಂಡಿರುವೆವು. ಜಗತ್ತಿನಲ್ಲಿ ಬೇರೆಯವರಿಗಿಂತ ಬೇಸಾಯದ ಉತ್ಪತ್ತಿಯನ್ನು ಹೆಚ್ಚಿಸುವುದರಲ್ಲಿ ಹೆಚ್ಚಾಗಿ ಸಾಧಿಸಿದವರು ನಾವು. ಜರ್ಮನಿಯನ್ನು ಅತ್ಯಂತ ಬಲಿಷ್ಠ ರಾಜ್ಯವಾಗಿ ಮಾಡಿ, ಬೇರಾರೂ ಒಡೆಯದಂಥಾ ಪರಿಸ್ಥಿತಿಗೆ ಮುಟ್ಟಿಸುವೆವು." ಎಂದು ಹಿಟ್ಲರನು ಕೆಲ ನಗಾರರ ಸಭೆಯಲ್ಲಿ ಹೇಳಿದನು—

ಅಖಿಲಭಾರತೀಯ ಹಿಂದೂ ಮಹಾಸಭಾ

ಈ ಮಹಾಸಭೆಯ ಬರುವ ನಾಗಪುರದಲ್ಲಿ ಜರಗುವ ಅಧಿವೇಶನಕ್ಕೆ ಬ್ಯಾರಿಸ್ಟರ್ ದಾಮೋದರ ಸಾವರ್ಕರರು ಅಧ್ಯಕ್ಷರಾಗಿ ಸರ್ವಸಮ್ಮತಿಯಿಂದ ಆರಿಸಲ್ಪಟ್ಟಿರುವರು. ಶ್ರೀಮತಿ ಪಾರ್ವತಿಬಾಯಿ ಚಿಟ್ನೀಸ ಈ ಕಯ ಸ್ವಾಗತ ಸಮಿತಿಯ ಚೆಯರ್ಮೇನರಾಗಿಯೂ, ಶ್ರೀಮತಿ ಗಿರಿಜಾಬಾಯಿ ಕೇಳ್ಕರರು ಪರಿಷತ್ತಿನ ಉದ್ಘಾಟನಾ ಸಮಾರಂಭದ ಅಧ್ಯಕ್ಷೆಯರಾಗಿಯೂ ಆರಿಸಲ್ಪಟ್ಟಿರುವರು.

ನಮ್ಮ ಬೇಲೂರು ಏಜಂಟರು—
ಬಿ. ಆರ್. ಕೊಂಡಯ್ಯ ಶೆಟ್ಟಿ ಮತ್ತು ಬ್ರದರ್ಸ್.

General Assurance Society Ltd.

ಹಿಂದೂದೇಶದ ಪ್ರಮುಖ ವಿಮಾ ಕಂಪೆನಿ:

ಜನರಲ್ ಎಶೂರೆನ್ಸ್ ಸೊಸೈಟಿ ಲಿಮಿಟೆಡ್.

ಪ್ರಧಾನ ಆಫೀಸು:—ಅಜ್ಮೀರ್ ಸ್ಥಾಪನೆ **1907**

- ಸಂತೃಪ್ತಿ ಹೊಂದಿರುವ 50,000 ಪೊಲಿಸಿದಾರರೇ ನಮ್ಮ ಉತ್ಕೃಷ್ಟ ಪ್ರಶಸ್ತಿ ಪತ್ರ
- ಎಲ್ಲಾ ವರ್ಗದವರ ಪ್ರತಿಯೊಂದು ಅವಶ್ಯಕತೆಗೂ ಅನುಕೂಲವಾದ ಪೊಲಿಸಿಗಳು
- ಏಜನ್ಸಿ ಶರ್ತಗಳು: ಉದಾರ ಮತ್ತು ಲಾಭಕರ

ಹೆಚ್ಚಿನ ವಿವರವನ್ನು ಈ ಕೆಳಗಿನವರಿಂದ ಪಡೆಯಬಹುದು—
ಜನರಲ್ ಮೆನೇಜರ್, ಅಜ್ಮೀರ್.
ಅಥವಾ, ಶಾಖಾ ಮೆನೇಜರ್:—ಮದ್ರಾಸ್, ಹುಬ್ಬಳ್ಳಿ, ಬೆಂಗಳೂರು.
ಅಥವಾ, ಚೀಫ್ ಏಜಂಟರು:—ಮಧುರ, ರಾಜಮಹೇಂದ್ರಿ, ಸಿಕಂದರಾಬಾದ್, ತಿರುಚಿನಾಪಳ್ಳಿ
ಅಥವಾ ಒರ್ಗನೈಸರ್ಸ್.—ಔರಂಗಬಾದ್, ಬಳ್ಳಾರಿ, ನೆಲ್ಲೂರು.

THE

Canara Banking Corporation, Udipi, Ltd.

Established] (INCORPORATED IN BRITISH INDIA) [1906

MEMBER:—

RESERVE BANK OF INDIA

BANKERS' CLEARING HOUSE, MADRAS.

Capital Authorised, Issued & Subscribed	Rs.	3,50,000
Paid up Capital	Rs.	3,03,205
Reserves	Rs.	3,88,842

RATES OF INTEREST ON DEPOSITS

3 months	2½% p a
6 or 9 months	3 % p a.
12 or 24 months	3½% p. a
Short Term	2 % p a

All kinds of Banking Transactions undertaken

ನವಯುಗ

ಉಡುಪಿ, ಗುರುವಾರ, ತಾ. ೨೨-೧೨-೩೮

ಸಾರ್ವಭೌಮ ಸರಕಾರವೂ ಆಶ್ರಿತ ಸಂಸ್ಥಾನಗಳೂ

ಇಂದೀಗ ಆಶ್ರಿತ ಸಂಸ್ಥಾನಗಳಲ್ಲಿ ಪ್ರಜಾಜವಾಬ್ದಾರಿ ಸರಕಾರಕ್ಕಾಗಿ ನಡೆಯುವ ಹೋರಾಟದಲ್ಲಿ ಚಕ್ರವರ್ತಿ ಸರಕಾರವು ಯಾವ ಧೋರಣೆ ವಹಿಸಿರುವುದೆಂಬುದು ತಿಳಿಯತಕ್ಕ ವಿಷಯವಾಗಿದೆ. ಬ್ರಿಟಿಷ್ ಸರಕಾರದ ಈ ಕುರಿತಾದ ಮನೋಭಾವವು ಮಿ ವಾಡ್ಲ್ಯಾರ್ ವಿಲ್ಲೆರವರ ಪ್ರಶ್ನೆಗೆ ಇಂಡಿಯಾ ಅಂಡರ್ ಸೆಕ್ರೆಟರಿಯವರು ಕಾಮನ್ಸ್ ಸಭೆಯಲ್ಲಿ ಕೊಟ್ಟ ಉತ್ತರದಿಂದ ಗ್ರಹಿಸಬಹುದಾಗಿದೆ ಮೊದಲಾಗಿ ಆಶ್ರಿತ ಸಂಸ್ಥಾನಗಳಲ್ಲಿ ರಾಜಕೀಯ ಸುಧಾರಣೆಯ ಕುರಿತಾಗಿ ಬ್ರಿಟಿಷ್ ಸರಕಾರದ ಧೋರಣೆ ಹೇಗಿದೆ ಎಂಬ ಮಿ ವಾಡ್ಲ್ಯಾರ್ ವಿಲ್ಲೆರವರ ಪ್ರಶ್ನೆಗೆ ಸರಕಾರದ ಪರವಾಗಿ ಉತ್ತರವೀಯುತ್ತಾ ಲೆ. ಕ|| ಲಿವೆಲಿನ್‌ರು ಹೀಗೆಂದರು. "ಸಂಸ್ಥಾನಾಧೀಶರು ತಮ್ಮ ಸಂಸ್ಥಾನಗಳ ಒಳಗೆ ರಾಜಕೀಯ ಸುಧಾರಣೆಗಳನ್ನು ಕೊಡುವ ವಿಷಯದಲ್ಲಿ ಸರಕಾರದ ಅಡ್ಡಿಯಿರಲಾರದು; ಆದರೆ ಅಂಥಾ ಸುಧಾರಣೆಗಳನ್ನು ಕೊಡಲೇ ಬೇಕೆಂದು ಸಂಸ್ಥಾನಾಧಿಪತಿಗಳನ್ನು ಒತ್ತಾಯಗೊಳಿಸಲಾರದ ಯಾವ ರೂಪದ ಸರಕಾರವಿರಬೇಕೆಂಬುವನ್ನು ನಿರ್ಣಯಿಸುವ ಸ್ವಾತಂತ್ರ್ಯವು ಆಯಾ ಸಂಸ್ಥಾನಾಧೀಶರದ್ದಾಗಿದೆ."

ಎರಡನೆಯದಾಗಿ ಬೇರೆ ಬೇರೆ ಸಂಸ್ಥಾನಗಳಲ್ಲಿ ಸದ್ಯ ನಡೆಯುತ್ತಿರುವ ಆಳರಸರ ಹೋರಾಟದಲ್ಲಿ 'ಸರಕಾರದ ಅಭಿಪ್ರಾಯವೇನೆಂದು ವಿಲ್ಲೆಯವರ ಇನ್ನೊಂದು ಪ್ರಾಮುಖ್ಯ ಪ್ರಶ್ನೆ. ಈ ಕುರಿತು ಮಿ ಲೆ ಕ ಲಿವೆಲಿನ್‌ರವರು ಕೊಟ್ಟ ಉತ್ತರವು ಬ್ರಿಟಿಷ ಸರಕಾರದ ಅಂತರ್ಯವನ್ನು ಹೊರಗೆಡಹುತ್ತದೆ "ಹಿಂಸೆ ಮತ್ತು ಅವ್ಯವಸ್ಥೆಯ ಕಾಲದಲ್ಲಿ ಸಂಸ್ಥಾನಾಧೀಶರನ್ನು ಕಾಪಾಡಲು ನೆರವಾಗುವುದು ಸಾರ್ವಭೌಮ ಸರಕಾರದ ಕರ್ತವ್ಯವಿದೆ; ಮತ್ತು ಅವರಿಗೆ ತಮ್ಮ ಪ್ರಜೆಗಳ ನ್ಯಾಯಸಮ್ಮತವಾದ ಕೂರಿಕೆಗಳನ್ನು ನಿವಾರಿಸಲು ನೆರವಾಗುವುದು ಚಕ್ರವರ್ತಿ ಸರಕಾರದ ಬಾಧ್ಯತೆಯಾಗಿದೆ.

ಬ್ರಿಟಿಷ ಸರಕಾರವು ಪ್ರಜೆಗಳ ನ್ಯಾಯವಾದ ಕೋರಿಕೆಗಳೇನು ಎಂಬುದರ ವಿಷಯ ಲಕ್ಷಿಸದೆ, ಸಂಸ್ಥಾನಾಧೀಶರಿಗೆ ಬೇಕಾದಲ್ಲಿ ತನ್ನ ಬೆಂಬಲವನ್ನು ಕೊಡುವವೆಂಬ ಈ ರೀತಿಯ ಮನೋವೃತ್ತಿಯನ್ನಿರಿಸಿಕೊಂಡಿರುವುದು ಸರಿಯಲ್ಲ ಪ್ರಜೆಗಳ ಹೋರಾಟದ ಮೂಲ ಉದ್ದೇಶವಾದರೂ ಏನಾಗಿರುವುದೆಂಬುದನ್ನು ಬ್ರಿಟಿಷರು ಅರಿತುಕೊಳ್ಳಬೇಕಾಗಿದೆ ಪ್ರಜೆಗಳು ತಮ್ಮ ಧರ್ಮಬದ್ಧವಾದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುವರೆಂದಮೇಲೆ ಅವರ ಚಳವಳಿವು ನೀತಿಯ ಅಡಿಗಲ್ಲಮೇಲೆ ನಿಂತಿದೆ ನರೇಂದ್ರರುಗಳು ಸ್ವಾರ್ಥ, ಸಂಕುಚಿತ ಭಾವದಿಂದ ಪ್ರಜೆಗಳ ಹಕ್ಕನ್ನು ಅಲ್ಲಗಳೆಯುವುದು ಸರಿಯಲ್ಲವೆಂಬುದು ಬ್ರಿಟಿಷ್ ಸರಕಾರಕ್ಕೆ ತಿಳಿದಿರಬೇಕಾದ ಸಂಗತಿ, ಆದುದರಿಂದ ನ್ಯಾಯಸಮ್ಮತವಾದ ರಾಜಕೀಯ ಸುಧಾರಣೆಗಳು ಪ್ರಜೆಗಳಿಗೆ ದೊರೆಯುವಂತೆ ನರೇಂದ್ರರುಗಳನ್ನು ಒತ್ತಾಯಗೊಳಿಸುವ ಹೊಣೆಗಾರಿಕೆಯು ಸಾರ್ವಭೌಮ ಸರಕಾರಕ್ಕ ಇದ್ದೇ ಇದೆ ಭೇದ ನೀತಿಯಲ್ಲಿ ಅರ್ಥವಿಲ್ಲ ಒಂದು ವೇಳೆ ಘಟನೆಗಳು ಮುಂಮೊತ್ತಿ ಬ್ರಿಟಿಷ್ ಪ್ರಭುತ್ವವು ಸಂಸ್ಥಾನಾಧೀಶರುಗಳ ಬೆಂಬಲಕ್ಕ ಬಂದರೆ, ಆಗ ಆಶ್ರಿತಸಂಸ್ಥಾನಗಳ ಚಳವಳಿಯ ಪ್ರಶ್ನೆಯು ಸ್ಟೇಟ್ ಕಾಂಗ್ರೆಸುಗಳ ಪ್ರಶ್ನೆಯಾಗಿ ಉಳಿಯುವುದಿಲ್ಲ. ಪ್ರಜಾಜವಾಬ್ದಾರಿಕೆಯು ತಮ್ಮ ಜನ್ಮಸಿದ್ಧವಾದ ಹಕ್ಕನ್ನು ಪ್ರಜೆಗಳು ಕೇಳುತ್ತಿರುವಾಗ ಅದಕ್ಕೆ ವಿರುದ್ಧವಾಗಿ ಹೊರಗಿನ ಶಕ್ತಿಯು ಬೆಂಬಲವಾಗಿ ನಿಲ್ಲುವುದಾದರೆ, ತಮ್ಮ ಬಾಂಧವರ ರಕ್ಷಣೆಗೆ ದೇಶದ ಎಲ್ಲೆಡೆಯ ಜನತೆಯು ನೈತಿಕ ಮತ್ತು ರಾಜಕೀಯ ಕಾರಣಗಳಿಂದ, ಮುಂದಾಗದೆ ಇರಲು ಸಾಧ್ಯವೇ ಇಲ್ಲ ಇಂಡಿಯಾ ನೇಶನಲ್ ಕಾಂಗ್ರೆಸ್ಸಿನ ಧೋರಣೆಯೂ ಕೂಡಾ ಹೀಗೆಯೇ ಇರುವುದೆಂಬುದು ನಿಶ್ಚಯವಿದೆ. ಆಶ್ರಿತ ಸಂಸ್ಥಾನಗಳ ಚಳವಳಿಯಲ್ಲಿ ಸದ್ಯಕ್ಕೆ ಇಂಡಿಯಾ ನೇಶನಲ್ ಕಾಂಗ್ರೆಸು ಭಾಗವಹಿಸುವ ಧೋರಣೆಯಲ್ಲಿ ಹರಿಪುರದ ನಿರ್ಣಯವನ್ನೇ ಹಿಡಿದೊತ್ತಿರುವುದಾದರೂ, ಅವಶ್ಯಬಿದ್ದಲ್ಲಿ, ಈ ನಿರ್ಣಯವನ್ನು ಮಾರ್ಪಡಿಸುವುದೆಂಬುದು ಸ್ಪಷ್ಟವಿರುವುದು. ಬಹುಶಃ ಅದರ ಧೋರಣೆಯ ಮಾರ್ಪಾಟವು ಚಕ್ರವರ್ತಿ ಸರಕಾರದ ನೀತಿಯನ್ನನುಸರಿಸಿಕೊಂಡಿದೆ. ಚಕ್ರವರ್ತಿ ಸರಕಾರವು ದೇಶೀಯ ಸಂಸ್ಥಾನಗಳ ಜವಾಬ್ದಾರಿ ಸರಕಾರದ ಚಳವಳಿಗೆ ವಿರುದ್ಧ ರಾಜರಿಗೆ ಬೆಂಬಲ ಕೊಡಲುದ್ಯುಕ್ತವಾದರೆ, ಕಾಂಗ್ರೆಸು ಕೂಡಾ ಸಂಸ್ಥಾನಗಳ ಒಳಗೆ ಪ್ರಜೆಗಳ ಜವಾಬ್ದಾರಿ ಸರಕಾರದ ಚಳವಳಿಯಲ್ಲಿ ನೇರವಾದ ಮತ್ತು ಪ್ರತ್ಯಕ್ಷವಾದ ಬೆಂಬಲವನ್ನು ಕೊಡುವ ನಿರ್ಧಾರಕ್ಕೆ ಬರಬೇಕಾಗಿದೆ. ಇಂಥಾ ಸಂದರ್ಭದಲ್ಲಿ ಆಶ್ರಿತ ಸಂಸ್ಥಾನಗಳ ಪ್ರಶ್ನೆ ಮತ್ತು ಕಾಂಗ್ರೆಸಿನ ಪ್ರಶ್ನೆಯು ಭಿನ್ನಭಿನ್ನವಾಗಿರದೆ, ಅಖಂಡಭಾರತವು ಬ್ರಿಟಿಷ್ ಸಾಮ್ರಾಜ್ಯಶಾಹಿಯ ತಂತ್ರವನ್ನು ಇದಿರಿಸಿ ಹೋರಾಟ ನಡೆಸುವುದಾಗಿದೆ.

ಹಳ್ಳಿಗಳಲ್ಲಿ ವಕೀಲರು!

ಕೃಷ್ಣಾಜಿಲ್ಲೆಯ ಲಾಯರುಗಳ ದ್ವಿತೀಯ ಸಮ್ಮೇಳನವು ಕಳೆದ ತಾ 18ರಲ್ಲು ಮದರಾಸು ಹಾಯ್‌ಕೋರ್ಟಿನ ನಿವೃತ್ತ ನ್ಯಾಯಾಧೀಶ ಸರ್. ಯಂ. ವೆಂಕಟಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಅಧ್ಯಕ್ಷರು ತಮ್ಮ ಬೋಧಪರ ಭಾಷಣದಲ್ಲಿ ವಕೀಲರುಗಳ ಹಲವು ಸಮಸ್ಯೆಗಳ ಕುರಿತು ಪ್ರಸ್ತಾಪಿಸುತ್ತಾ, ವಕೀಲಿ ವೃತ್ತಿಯ ಇಂದಿನ ದುರವಸ್ಥೆಯನ್ನು ಮನಗಾಣಿಸಿ, ಅವರ ಸ್ಥಿತಿಗತಿಯನ್ನು ಹೇಗೆ ಸುಧಾರಿಸಬಹುದು ಎಂಬ ಕುರಿತಾಗಿ ಹಲವು ಉಪಯುಕ್ತ ಸಲಹೆ ಸೂಚನೆಗಳನ್ನಿತ್ತಿರುವರು ಇಂದೀಗ ಹಳ್ಳಿಗಳಲ್ಲಿ ವಕೀಲರು ನೆಲಸಿ, ಹಳ್ಳಿಗರಿಗೆ ಕಾಯಿದೆ, ಕಾನೂನುಗಳ ಪ್ರಶ್ನೆಯಲ್ಲಿ ನೆರವಾಗಿ ಬಾಳುವುದರಿಂದ ತುಂಬಾ ಅನುಕೂಲವಿದೆಯೆಂದು ಸರ್ ವೆಂಕಟಸುಬ್ಬರಾಯರು ಒಳ್ಳೆ ಸೊಗಸಾಗಿ ವಿವರಿಸಿರುವರು ಅವರ ಬೋಧೆಯು ಅತ್ಯಂತ ಮಹತ್ವವುಳ್ಳದ್ದು. ಇದನ್ನು ವಕೀಲರೆಲ್ಲರೂ, ಮುಖ್ಯವಾಗಿ ತರುಣ ವಕೀಲರುಗಳು, ಚೆನ್ನಾಗಿ ಲಕ್ಷಿಸಬೇಕಾಗಿದ

ಸರ್. ವೆಂಕಟಸುಬ್ಬರಾಯರು ಹೇಳಿರುವಂತೆ ವಕೀಲರುಗಳು ತಾವು ಕೋರ್ಟುಗಳಿರುವ ಶಹರುಗಳಲ್ಲಿಯೇ ನೆಲಸಿಕೊಂಡಿರಬೇಕೆಂಬ ತಪ್ಪು ಅಭಿಪ್ರಾಯವನ್ನು ಕಟ್ಟಿಕೊಂಡಿರಬೇಕಾಗಿಲ್ಲ. ನ್ಯಾಯಸ್ಥಾನಕ್ಕೆ ಬರುವ ಹೆಚ್ಚಿನ ವ್ಯಾಜ್ಯಗಳು ಹಳ್ಳಿಯಿಂದ ಬರುವಂಥವುಗಳಾಗಿವೆ, ಮತ್ತು ಆರಂಭದಲ್ಲೇ ತಕ್ಕ ಎಚ್ಚರವಿದ್ದರೆ ಅಂಥಾ ಹಲವು ವ್ಯಾಜ್ಯಗಳನು ದೂರಮಾಡಲು ಸಾಧ್ಯವಿದೆ ಆದುದರಿಂದ ಇಂಥಾ ಸಂದರ್ಭಗಳಲ್ಲಿ ವಕೀಲರು ಹಳ್ಳಿಗಳಲ್ಲಿ ಇರುವುದಾದರೆ, ಹಳ್ಳಿಗರಿಗೆ ಬೇಕಾದ ಅನುಭವವು ಸಕಾಲದಲ್ಲಿ ದೊರೆಯುವಂತಾಗುತ್ತದೆ ಮಾತ್ರವಲ್ಲದೆ ಹಲವು ವ್ಯಾಜ್ಯಗಳ ದುಷ್ಪರಿಣಾಮವು ಕೂಡಾ ಸಮಯದ ಅನುಭವದಿಂದ ದೂರವಾಗಬಹುದು. ಪೇಟೆಗಳಲ್ಲಿ ಬೇಕಾದ್ದಕ್ಕಿಂತ ಹೆಚ್ಚು ಲಕ್ಷ್ಯ ವಕೀಲರ ಸಂಖ್ಯೆಯಿದೆ. ಆದರೆ ಹಳ್ಳಿಗಳಲ್ಲಿ ನ್ಯಾಯವಿಚಾರದಲ್ಲಿ ನುರಿತವರ ಅಭಾವವಿದೆ. ಅವರು ಹಳ್ಳಿಗರ ಕಾಯಿದೆ ಪ್ರಶ್ನೆಯಲ್ಲಿ ನೆರವಾಗಿ ಯುಕ್ತ ಪ್ರತಿಫಲ ಪಡೆಯಬಹುದು ಶಹರುಗಳಲ್ಲಿ ನುರಿತ ಪ್ರತಿಷ್ಠಾವಂತ ದೀರ್ಘಕಾಲದ ಅನುಭವವುಳ್ಳ ವಕೀಲರ ಮುಂದೆ ಸಾಮಾನ್ಯ ತರುಣ ವಕೀಲರುಗಳಿಗೆ ಹೆಚ್ಚಿನ ಸ್ಥಾನಮಾನ ದೊರೆಯಲಾರದು, ತಕ್ಕ ಕೆಲಸ ಯುಕ್ತ ಸಂಪಾದನೆಯಿಲ್ಲದ, ಜೀವನ ಬೇಗೆಯು ಇನ್ನಷ್ಟು ಹೆಚ್ಚಿ, ಜನ್ಮವು ನೀರಸ, ನಿರರ್ಥಕವೆನಿಸಬಹುದು ಆದರೆ ಹಳ್ಳಿಗಳಲ್ಲಿ ನೆಲಸುವದರಿಂದ ವಿನಯ ಸರಳತೆ, ಶುದ್ಧವರ್ತನೆಯ ತರುಣ ಉತ್ಸಾಹೀ ವಕೀಲರು, ಗ್ರಾಮಗಳ ಮುಂದಾಳುಗಳಾಗಿ, ಗ್ರಾಮಸಂಘಟನೆಯ ಯೋಜನೆಯಲ್ಲಿ ಮುನ್ನಡೆಯುವವರಾಗಿ, ಉಚ್ಚಸೇವೆಯನ್ನು ಸಲ್ಲಿಸಿ, ಕೀರ್ತಿವಂತರಾಗಿ ಬಾಳಬಹುದಾಗಿದೆ. ಮೇಲಾಗಿ ಈಗೀಗ ಹಳ್ಳಿಗಳೂ, ಪಟ್ಟಣಗಳಂತೆ ದಿನದಿನಕ್ಕೆ ಉಚ್ಚ ಸೌಕರ್ಯ ಸಾಧನಗಳನ್ನು ಪಡೆಯುತ್ತ ಅಭಿವೃದ್ಧಿ ಹೊಂದತೊಡಗಿವೆ ಆದುದರಿಂದ ಶಿಕ್ಷಿತರಿಗೂ ಹಳ್ಳಿಯ ಜೀವನವು ಒಗ್ಗುವಂತಾಗಲು ಸಾಧ್ಯವಿದೆ, ಹಳ್ಳಿಯಲ್ಲಿ ಆನಂದದಾಯಕವಾದ ವಾತಾವರಣದಲ್ಲಿ ಮಿತವ್ಯಯದಿಂದ ಮುಖಂಡರಾಗಿ ಬಾಳುವ ಜೀವನವು ಸುಖಮಯವಾದುದು. ಆದುದರಿಂದ ಸರ್ ವೆಂಕಟಸುಬ್ಬರಾಯರ ಅವರ ಹಿತಬೋಧೆಯಂತೆ ವಕೀಲ ವೃತ್ತಿಯನ್ನವಲಂಬಿಸಿರುವ ತರುಣರು ತಮ್ಮ ಜೀವನವು ಶಹರುಗಳಲ್ಲಿ ನಿರರ್ಥಕವಾಗಿ ಸಾಗುವುದೆಂದು ಮನಸ್ಸಾಕ್ಷಿಯು ತಿಳಿಸುತ್ತಿರುವುದಾದರೆ ಯಥಾರ್ಥ ವಿಚಾರವನ್ನು ಮನಗಂಡು, ತಮ್ಮ ವೃತ್ತಿಯು ಶಹರುಗಳನ್ನೇ ಅವಲಂಬಿಸಿಕೊಂಡಿರುವುದೆಂಬ ಅಭಿಪ್ರಾಯವನ್ನು ದೂರವಿರಿಸಿ, ಹಳ್ಳಿಗಳ ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸಿ, ತಮ್ಮ ಉತ್ತಮ ಕಲೆಯ ಉತ್ಕೃಷ್ಟ ಪ್ರಯೋಜನವನ್ನು ಹಳ್ಳಿಗರಿಗೆ ಒದಗಿಸಿಕೊಟ್ಟು ಯುಕ್ತ ಪ್ರತಿಫಲವನ್ನು ಗಳಿಸಿ ಹಳ್ಳಿಗಳ ಅಭ್ಯುದಯಕಾರ್ಯಭಾಗದಲ್ಲಿ ಮುಂದಾಗಿ, ದೇಶದ ಉದ್ಧಾರಕಾರ್ಯಕ್ಕೆ, ತಮ್ಮ ನೆರವನ್ನೀಯುವಂತಾದರೆ ಲೇಸಾಗಬಹುದು

ಕೆನರಾ ಮ್ಯೂಚುವಲ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್ ಉಡುಪಿ

ಈ ಕಂಪೆನಿಯ ೧೯೩೮ನೇ ಸಪ್ಟಂಬರ ೩೦ಕ್ಕೆ ಅಂತ್ಯವಾಗುವ ತೃತೀಯ ವರ್ಷದ ವರದಿಯು ನಮ್ಮ ಕೈಸೇರಿರುವುದು.

ಕಂಪೆನಿಯು ಸ್ಥಾಪನೆಯಾದ ಕೆಲವೇ ವರ್ಷಗಳೊಳಗ ಪ್ರಗತಿಯ ದಾರಿಯನ್ನನುಸರಿಸಿ, ಜನತೆಯ ಪ್ರೇಮ, ವಿಶ್ವಾಸಕ್ಕೆ ಪಾತ್ರವಾದ ರೀತಿಯಲ್ಲಿ ಕಾರ್ಯವನ್ನು ಕೈಕೊಳ್ಳುತ್ತಿದೆಯೆಂದು ವರದಿಯಿಂದ ತಿಳಿಯಬರುವುದು. ಈ ವರದಿಯಲ್ಲಿ ಸೂಚಿಸಲಾಗುವಂತೆ ಈ ವರ್ಷದಲ್ಲಿ ಕಂಪೆನಿಯು ರೂ 10,1[illegible] ಮೊಬಲಗಿನ ವಿಮಾ ಅರ್ಜಿ (proposals)ಗಳನ್ನು ಪಡೆದಿದ್ದು ಅವುಗಳಲ್ಲಿ [illegible] ರೂ ಮೊಬಲಗಿನ ಪೋಲಿಸಿಗಳು ಸ್ವೀಕೃತವಾಗಿರುವವು. ವಿಮಾಚಂದಾ ಮತ್ತು ಇನ್ನಿತರ ಆದಾಯವು ಕಳೆದ ವರ್ಷದ [illegible] ರೂ. ಇದ್ದುದು ಈ ವರ್ಷ 1,0[illegible] ರೂಪಾಯಿ 14 ಆಣೆಗೆ ಏರಿರುವುದು ಕಂಪೆನಿಯ ಏಳಿಗೆಯನ್ನು ಸೂಚಿಸುವುದು. ಬಡ್ಡಿ ಮತ್ತು ಬೇರೆ ವಿಧಾನಗಳಿಂದ ಆದ ಉತ್ಪತ್ತಿಯು ಕಳೆದ ವರ್ಷ [illegible]-8 ಆಗಿದ್ದು ಈ ವರ್ಷ ರೂ 2[illegible]-1-11ಕ್ಕೆ ಹೆಚ್ಚಿರುವುದಾಗಿ ತಿಳಿಯುತ್ತದೆ.

ಪೋಲಿಸಿಗಳ ಹಕ್ಕುದಾರರಿಗೆ ಈ ವರ್ಷ ತೆತ್ತ ಮೊಬಲಗು [illegible] ರೂಪಾಯಿಗಳಷ್ಟು. ಹಕ್ಕುದಾರರ ಹಣವನ್ನು ಸಲ್ಲಿಸುವಾಗ ಡೈರೆಕ್ಟರು ಸಾಧ್ಯವಾದಷ್ಟು ಬಹು ಬೇಗನೇ ಇತ್ಯರ್ಥಿಸಿ, ಜನತೆಯ ಪ್ರೇಮ-ವಿಶ್ವಾಸಗಳಿಗೆ ಪಾತ್ರರಾಗುವಂತೆ ನೋಡುತ್ತಿರುವರೆಂಬುದು ಅಭಿನಂದನೀಯವಾದುದು. ಕಂಪೆನಿಯ ಖರ್ಚಿನ ದಾಮಾಷವು ಕಳೆದ ವರ್ಷ ಶೇಕಡಾ [illegible] ಇದ್ದುದು ಈ ವರ್ಷಕ್ಕೆ ಶೇಕಡಾ 3[illegible]ಕ್ಕೆ

ಕಗ್ಗಿರುವುದು, ಕಂಪೆನಿಯ ಆಡಳಿತ ಮಂಡಳಿಯ ಕಾರ್ಯದಕ್ಷತೆ ಮತ್ತು ಜಾಗ್ರತೆಯನ್ನು ವ್ಯಕ್ತಗೊಳಿಸುವುದು ಇನ್ಶೂರೆನ್ಸ್ ಏಕ್ಟಿಗನುಸಾರವಾಗಿ ಕಂಪೆನಿಯು ಸರಕಾರದ ಭದ್ರತೆಯ ಮೇಲೆ ಹಣವನ್ನು ವಿನಿಯೋಗಿಸಿರುವುದು. ಈಗ ಇದರ ಜೀವ ವಿಮೆ ಫಂಡಿನ ಮೊಬಲು ರೂಪಾಯಿ 108,179-12-6 ಈ ಜೀವ ವಿಮೆಯ ಫಂಡಿನ ಮೊಬಲಗು ರೂ 60,000 ಈ ವರ್ಷದಲ್ಲಿ ಹೆಚ್ಚಿರುವುದುಂಟು. ಕಂಪನಿಯ ಭದ್ರತೆ ಮತ್ತು ಪ್ರಗತಿಯನ್ನು ವ್ಯಕ್ತಗೊಳಿಸುವುದು ಒಟ್ಟಾರೆ ಕಂಪೆನಿಯು ಇಷ್ಟೊಂದು ಸ್ವಲ್ಪ ಸಮಯದೊಳಗೆ ಭದ್ರತೆಯ ಹಾದಿಯ ವಿಮಾ ಕಂಪೆನಿಗಳ ಸಾಲಿನಲ್ಲಿ ಮುನ್ನಡೆಯುತ್ತಿರುವುದೆಂಬುದು ಅಭಿನಂದನೀಯವು.

ಬೆನಾರಿಸ್ ಹಿಂದೂ ಯೂನಿವರ್ಸಿಟಿ

ಕಳೆದ ತಾ 18ರಲ್ಲಿ ಬೆನಾರಿಸ್ ಹಿಂದೂ ಯೂನಿವರ್ಸಿಟಿಯ 'ವಾರ್ಷಿಕಸಭೆಯು ಯೂನಿವರ್ಸಿಟಿ ಕೋರ್ಟ'ನಲ್ಲಿ ವೈಸ್ ಚಾನ್ಸಲ್ಲರಾದ ಪಂಡಿತ ಮಾಲವೀಯರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿವರ್ಸಿಟಿಯ ಕಟ್ಟಡ ಸಾಮಾಗ್ರಿಗಳನ್ನು ವಿಸ್ತರಿಸುವ ಸೂಚನೆಗಳನ್ನು ವಿರೋಧಿಸಿ, ಈಗಿರುವ ಶಾಖೆಗಳನ್ನೇ ಸರಿಯಾಗಿ ವ್ಯವಸ್ಥೆಗೊಳಿಸುವಂತೆ ಸಾಧಿಸತಕ್ಕದ್ದು ಎಂದು ಕೆಲವು ಸದಸ್ಯರು ವಾದ ಹೂಡಿದರು. ಪಂಡಿತ ಮಾಲವೀಯರು ವಾರ್ಷಿಕ ವರದಿಯಲ್ಲಿ ವಿದಿತವಾಗಿರುವಂತೆ, ಆರ್ಥಿಕ ಪರಿಸ್ಥಿತಿಯು ಈಗಿರುವ ಡಿಪಾರ್ಟುಮೆಂಟುಗಳನ್ನೇ ಸುವ್ಯವಸ್ಥೆಯಿಂದ ಉತ್ಕೃಷ್ಟ ರೀತಿಯಲ್ಲಿ ನಡೆಸಲು ಸಾಕಾಗದ ಪರಿಸ್ಥಿತಿಯಲ್ಲಿದೆ ಮತ್ತು ಹಿಂದೂದೇಶದ ಬೇರೆ ಬೇರೆ ಕೇಂದ್ರಗಳಿಗೆ ಆಶ್ರಯಕೊಡುತ್ತಿರುವುದು ಮತ್ತು ಇಲ್ಲಿ ಕೆಲ ಕೈಗಾರಿಕೆಗಳ ವಟ್ಟಿಗೆ ಬೇರಿಲ್ಲಿಯೂ ದೊರೆಯದ ಶಿಕ್ಷಣವು ದೊರೆಯುವುದು. ಆದುದರಿಂದ ಆಯಾ ಪ್ರಾಂತಿಕ ಸರಕಾರಗಳ ಸಹಾಯವನ್ನು ಹೊಂದುವುದಕ್ಕೆ ಪ್ರಯತ್ನವು ಮಾಡುವುದು ಎಂದರು. ಜೋಧಪುರದ ಮಹಾರಾಜಾಧಿರಾಜರೂ ಬೆನಾರಿಸಿನ ಮಹಾರಾಜರೂ ಪ್ರೊ ಚಾನ್ಸಲ್ಲರಾಗಿಯೂ, ರಾಜಾ ಜ್ವಾಲಾ ಪ್ರಸಾದರು ಪ್ರೊ ವೈಸ್ ಚಾನ್ಸಲ್ಲರಾಗಿಯೂ ಆರಿಸಲ್ಪಟ್ಟಿರುವರು

ಹಸ್ತ ಪರೀಕ್ಷಕನೊಬ್ಬನು ಹುಚ್ಚು ಕಟ್ಟಿ ಬಹು ಜನಾ ಹುತಮಾಡಿದನು

ಮುಂಬಯಿಯ ಬೀದಿಯಲ್ಲಿ ಹಸ್ತ ಪರೀಕ್ಷಕನೊಬ್ಬನು ಸಿಕ್ಕಾಬಟ್ಟೆ ಓಡುತ್ತಾ ದಾರಿಯಲ್ಲಿ ಸಿಕ್ಕವರನ್ನು ತಿವಿಯುತ್ತಾ ಹೋದನು ಹೀಗಾಗಿ ಹತ್ತು ಜನರು ತಿವಿಯಲ್ಪಟ್ಟರು. ರಾಮ ಸ್ವರೂಪನು ಮೊದಲು ಮುಂಬಾಯಿ ಶಹರದ ಪ್ರಧಾನ ಕೇಂದ್ರವಾದ ಬೋರಿಬಂದರದಿಂದ ಓಡತೊಡಗಿದನು ಎಡಬಲ ನೋಡದೆ, ಸಿಕ್ಕಿ ಸಿಕ್ಕಿದವರ ಮೇಲೆಬಿದ್ದನು ದಾರಿಯಲ್ಲಿ ವಿದ್ಯಾರ್ಥಿಯೊಬ್ಬನು ತನ್ನ ಸಹೋದರಿ ಮತ್ತು ತಾಯಿಯೊಂದಿಗೆ ದಾರಿಯಲ್ಲಿ ಟ್ರಾಮಿಗಾಗಿ ಕಾದುಕೊಳ್ಳುತ್ತಿದ್ದನು ಅವನನ್ನು ಇರಿದನು ಅಷ್ಟರಲ್ಲಿ ಒಳಬಯಲ್ಲೊಬ್ಬ ಪೋಲೀಸ ಕಾನ್ಸ್ಟೇಬಲ ಎದುರು ಬಿದ್ದ–ಅವನನ್ನೂ ತಿವಿದನು ಹೀಗೆ ಅವನಿಂದ ತಿವಿಯಲ್ಪಟ್ಟ ಹತ್ತು ಜನರಲ್ಲಿ ನಾಲ್ಕು ಜನರ ಪರಿಸ್ಥಿತಿಯು ನಿರಾಶಾಜನಕವಾಗಿರುವುದೆಂದು ತಿಳಿಯುತ್ತದೆ ಕಡೆಗೆ ಪೋಲೀಸರು ಕೈವಶಮಾಡಿದರು ರಾಮ ಸ್ವರೂಪನ ತಲೆಯು ಸ್ವಸ್ಥ ಸಮಾಧಾನ ಪಟ್ಟಾಗ ಅವನು ತನಗೆ ತನ್ನ ಗಿರಾಕಿಗಳೊಂದಿಗೆ ಜಗಳವುಂಟಾಯಿತೆಂದೂ, ಇದರಿಂದಲೇ ತನಗೆ ಅರಿವು ಮರೆತು ಹೋಗಿ, ತನ್ನ ಸ್ಥಿತಿಯು ಭಯಾನಕವಾಯಿತೆಂದೂ ಒಪ್ಪಿದನು.

ಕಾಂಗ್ರೆಸು ಫೆಡರೇಶನನ್ನು ವಿರೋಧಿಸುವುದು — ಜ…
ಗಾರರನ್ನು ಕೆಲಸದಿಂದ ತಳ್ಳುವವು — ಜಪಾನು ಕೊ…

ಅಖಿಲ ಭಾರತ ಕ್ಷತ್ರಿಯರ ಮಹಾಸಭೆ.

ಕಲ್ಕತ್ತದಲ್ಲಿ ತಾ 27, 30 ಮತ್ತು 31ಕ್ಕೆ ಅಖಿಲಭಾರತ ಕ್ಷತ್ರಿಯರ ಮಹಾಸಭೆಯು ಜರಗಲಿರುವುದು ಸ್ವಾಗತ ಕಮಿಟಿಯ ಮೇಲ್ವಿಚಾರಣೆಯಿಂದ ಅನೇಕ ಉಪಸಮಿತಿಗಳು ನೇಮಕ ಮಾಡೋಣಾಗಿಯದೆ ಸುಮಾರು 15 ಸಾವಿರ ಜನರು ನೆರೆಯಬಹುದಾದ ಸಭಾಕ್ಷೇತ್ರವನ್ನು ರಚಿಸಲಾಗಿದೆ ಅಧ್ಯಕ್ಷರು ತ್ರಿಪುರದ ಮಹಾರಾಜರು.



ಡಾಕ್ಟರ್ ಸುಬ್ಬರಾಯನರ ಭಾಷಣ.

ವಿದ್ಯಾಮಂತ್ರಿಗಳಾದ ಡಾಕ್ಟರ್ ಸುಬ್ಬರಾಯನರು ಈರೋಡು ತಾಲೂಕಿನ ಅರಸನೆಯ ರಾಜಕೀಯ ಪರಿಷತ್ತಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಿರುವಾಗ ಕಾಂಗ್ರೆಸಿನ ಸ್ವಾತಂತ್ರ್ಯ ಹೋರಾಟವು ಜಗತ್ತಿನ ಸ್ವಾತಂತ್ರ್ಯಸಮರದ ಒಂದು ಅಂಗವಾಗಿರುವುದೆಂದರು ಜಪಾನು ಚೈನಗಳ ಯುದ್ಧದ ಕುರಿತಾಗಿ ಪ್ರಸ್ತಾಪಿಸುತ್ತಾ ಚೈನವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಾದರೆ, ಇದರಿಂದಾಗಿ ಹಿಂದೂದೇಶಕ್ಕೆ ಧಕ್ಕೆಬರಬಹುದು ಎಂಬುದನ್ನು ಭಾರತೀಯರು ಗಮನಿಸಬೇಕಾಗಿದೆ ಎಂದರು. ಜನರು ಜಪಾನರ ಸಾಮಾನುಗಳಿಗೆ ಬಹಿಷ್ಕಾರ ಹಾಕಿ, ಚೈನಾ ಜನರ ಕಡೆಗಿರುವ ತಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಬೇಕೆಂದು ಕೇಳಿಕೊಂಡರು ಬ್ರಿಟಿಷ್ ಸಾಮ್ರಾಜ್ಯಶಾಹಿಯು ಇನ್ನೂ ತನ್ನ ವ್ಯಾಪಾರವನ್ನು ಸರಾಗವಾಗಿ ನಡೆಸಬಲ್ಲೆವೆಂಬ ಮತ್ತು ಬೇರೆ ಜನಾಂಗಗಳನ್ನು ತಮ್ಮಾಧೀನವಿರಿಸಿಕೊಳ್ಳಬಲ್ಲೆವೆಂಬ ಭ್ರಮೆಯನ್ನು ಇನ್ನಾದರೂ ಬಿಡಬೇಕಾಗಿದೆ ಎಂದರು

'ಫೆಡರೇಶನು ಜಾರಿಗೆ ಬರುವ ಕುರಿತಾಗಿ ಕೆಲವು ಜನರು ಫೆಡರೇಶನನ್ನು ಸ್ವೀಕರಿಸಿ, ಬೇಕಾದಂತೆ ಅನುಕೂಲ ರೀತಿಗೆ ಮಾರ್ಪಡಿಸಬಹುದೆಂದು ತಿಳಿಯುತ್ತಾರೆ, ಆದರೆ ಬ್ರಿಟಿಷ್ ಸರಕಾರವು ಫೆಡರೇಶನನ್ನು ದೇಶದ ಮೇಲೆ ಹೊರಿಸಿದರೆ ನಿಶ್ಚಯವಾಗಿ ತಿರುಗಿ ಹೋರಾಟವು ಆರಂಭವಾಗುವುದು ಎಂದರು ಅನಂತರ ಖಾದಿಯ ಆರ್ಥಿಕ ಮತ್ತು ರಾಜಕೀಯ ಮಹತ್ವಿಕೆಯನ್ನು ವಿವರಿಸಿ, ಜನತೆಯು ಖಾದಿಗೆ ಪ್ರೋತ್ಸಾಹ ಕೊಟ್ಟು ಸಾವಿರಾರು ಜನರಿಗೆ ಅನ್ನ ದೊರೆಯುವಂತೆ ಸಾಧಿಸಬೇಕೆಂದರು. ಹಿಂದೂ ಸಮಾಜದಲ್ಲಿರುವ ಅಸ್ಪೃಶ್ಯತೆಯನ್ನು ನಿವಾರಿಸಬೇಕೆಂದರು ಇಲ್ಲವಾದರೆ ಸಮಾಜವು ಐಕ್ಯತೆಗೆ ತೊಡಕಾಗುವುದು. ಮೇಲಾಗಿ ಹಿಂದೀ ವಿರುದ್ಧ ಚಳವಳಿ ಹೂಡುವ ನೆವದಿಂದ ಹಿಂದೀಯ ಪ್ರಶ್ನೆಯೊಡನೆ ಬ್ರಾಹ್ಮಣ–ಅಬ್ರಾಹ್ಮಣ ಪ್ರಶ್ನೆಯನ್ನು ಮುಂದಕ್ಕೆ ತರುವುದರಲ್ಲಿ ಅರ್ಥವಿಲ್ಲವೆಂದರು. ಕೊನೆಯದಾಗಿ ಮಾನ್ಯ ಮಂತ್ರಿಗಳು ಮಲಬಾರು ದೇವಸ್ಥಾನ ಪ್ರವೇಶ ಮಸೂದೆಗೆ ಜನತೆಯು ಸಹಕಾರದೊಂದಿಗೆ ಬೆಂಬಲವಿತ್ತು, ಉಚ್ಚ ಉದ್ದೇಶವನ್ನು ಯಶಸ್ವಿಗೊಳಿಸುವಂತೆ ಸಾಧಿಸಬೇಕೆಂದು ವಿನಂತಿಸಿದರು.

ತಿರುವಾಂಕೂರಿನ ಸ್ಟೇಟ್ ಕಾಂಗ್ರೆಸು

ಮಹಾರಾಜರಿಗೆ ಒಪ್ಪಿಸಿದ ಮನವಿಯಲ್ಲಿ ರಾಜದ್ರೋಹ ವಿಚಾರಗಳಿರುವುದೆಂಬ ಅಪಾದನೆಯ ಮೇಲೆ ತಿರುವಾಂಕೂರು ಸ್ಟೇಟ್ ಕಾಂಗ್ರೆಸಿನ ಅಧ್ಯಕ್ಷ ಎ ತಾನು ಪಿಳ್ಳೆಯವರೂ ಮತ್ತು ವರ್ಕಿಂಗ್ ಕಮಿಟಿಯ ನಾಲ್ವರು ಸದಸ್ಯರೂ ಕೈದುಮಾಡಲ್ಪಟ್ಟಿರುವರು

ವಿವಾಹ ವಿಚ್ಛೇದನದ ಮೆರವಣಿಗೆ

ಮುಂಬಾಯಿಯ ದಾದರದ ರಸ್ತೆಯಲ್ಲಿ ಮೆರವಣಿಗೆ ಸರಿಯುತ್ತಿತ್ತು ನಮಗೆ ವಿವಾಹ ವಿಚ್ಛೇದದಲ್ಲಿ ಸಹಾನುಭೂತಿಯಿದೆ ಪ್ರೇಮವಿಲ್ಲದ ಮದುವೆಯು ಪಾಪಯುಕ್ತವಾದುದು ವಿಚ್ಛೇದವು ಬೇಕಲಿ ಎಂದು ಸ್ತ್ರೀಪುರುಷರ ತಂಡವು ಬೊಬ್ಬಿಡುತ್ತಿತ್ತು. ಈ ಮೆರವಣಿಗೆಯ ಮುಂಚಾಲುಗಳಾಗಿ ಕುಮಾರಿ ನಾಸೀಮ ಜಾಗೀರದಾರ ಮತ್ತು ಪ್ರೇಮುರಿದ್ದರು ಜನರು ಇದೇನೆಂದು ಮನೆಯ ಹೊರಗಬಂದು ನೋಡತೊಡಗಿದರು ಇದು ಕೊನೆಗೆ ನೋಡುವಾಗ ಸಿನೆಮ ಕಂಪನಿಯವರ (Divorce) ವಿವಾಹ ವಿಚ್ಛೇದನವೆಂಬ ಚಲಚಿತ್ರದ ಪ್ರಚಾರ ಕಾರ್ಯವಾಗಿತ್ತು ಇದೊಂದು ಜಾಹೀರುಪಡಿಸುವ ಹೊಸ ವಿಧಾನ.

ಜಪಾನು ಕೊರಿಯ ಸುರಂಗ ಮಾರ್ಗ

ಜಗತ್ತಿನ ಅತಿ ಉದ್ದವಾದ ಸಮುದ್ರದಡಿಯ ಸುರಂಗಮಾರ್ಗವನ್ನು ರಚಿಸುವ ಯೋಜನೆಯನ್ನು ಜಪಾನು ರೈಲ್ವೇಮಂತ್ರಿ ಮಂಡಲವೀಗ ಮಾಡಿರುವುದು. ಇದು ಜಪಾನು ಕೊರಿಯನ್ನು ಒಂದುಗೂಡಿಸುವುದು ಇದರ ಖರ್ಚು ಸುಮಾರು ಒಂದು ಬಿಲ್ಲಿಯ ಯನ್ ಆಗಬಹುದಾಗಿ ಅಂದಾಜುಮಾಡಲಾಗಿದೆ ಸಮುದ್ರಭಾಗದ ಉದ್ದ 150 ಮೈಲು ಸೈನ್ಯಖಾತೆಯು ಇದನ್ನು ಅತ್ಯಾದರದಿಂದ ಹಾರೈಸುವುದು. ಯಾಕೆಂದರೆ ಈ ಮಾರ್ಗ ನಿರ್ಮಾಣದಿಂದ ಸೈನ್ಯವು ಆಕಾಶದ ವಿಮಾನ ಧಾಳಿಯ ಬೆದರಿಕೆಯಿಲ್ಲದೆಯೂ, ಸಮುದ್ರದ ಸಬ್ ಮೆರಿನುಗಳ ಹಾವಳಿಗೆ ಸಿಲುಕದಯೂ ಸಂಚರಿಸಲು ಸಹಾಯಕವಾಗುವುದು.

ಜರ್ಮನ ಕಂಪೆನಿಗಳು ಯೆಹೂದ್ಯ ಮತ್ತು ಬ್ರಿಟಿಷ ಕೆಲಸಗಾರರನ್ನು ಕೆಲಸದಿಂದ ತಳ್ಳಿದರು

ಬ್ರಿಟಿಷ ಮತ್ತು ಯೆಹೂದ್ಯ ಕೆಲಸಗಾರರನ್ನು ಲಂಡನಿನಲ್ಲಿರುವ ಕೆಲ ಜರ್ಮನಿ ಕಂಪೆನಿಗಳು ಕೆಲಸದಿಂದ ರದ್ದುಮಾಡಿದ ವಿಚಾರ ಸರಕಾರದ ತಿಳುವಳಿಕೆಗೆ ಬಂದಿರುವುದೇ ಎಂದು ಪ್ಲೂಚರರು ಪ್ರಶ್ನಿಸಿದಾಗ ಸರ್ ಸಾಮ್ಯುವೆಲ ಹೋರೆಯರು ಈರೀತಿ ಉತ್ತರವಿತ್ತರು 'ಕೆಲಸದಿಂದ ನಿವೃತ್ತಿಗೊಳಿಸಿದ ವಿಚಾರ ತಿಳಿದು ಬಂದಿದೆ ಆದರೆ ಇದು ಜರ್ಮನಿ ಸರಕಾರದ ಆಜ್ಞೆಯ ಮೇರೆಗೆಂಬುದು ತಿಳಿದುಬಂದಿಲ್ಲ ಬ್ರಿಟನಿನಲ್ಲಿ ಖಾಯಂಸ್ಥಿತಿಯವರಾದ ವಿದೇಶೀ ಸಂಸ್ಥೆಯವರಲ್ಲಿಯಾದರೂ, ಇಲ್ಲಿಯೇ ತಕ್ಕ ಯೋಗ್ಯ ನೌಕರನು ದೊರೆಯುವಂತಿದ್ದರೆ ಬೇರಡೆಯವರಲ್ಲಿಯ ನೌಕರನನ್ನು ನೇಮಿಸದಂತೆ ಎಚ್ಚರ ತೆಗೆದುಕೊಳ್ಳಲಾಗುವುದು.' ಎಂದರು

ಬ್ರಿಟಿಷರ ಯುದ್ಧದ ಸಾಲ

ಬ್ರಿಟಿಷರ ಯುದ್ಧದ ಸಾಲದ ಕುರಿತಾದ ಶ್ವೇತಪತ್ರವು ಪ್ರಕಟಿಸೆಯಾಗಿರುವುದು ಅದರಲ್ಲಿ ಮಿ. ಸಮ್ನರ್ ವೆಲ್ಲೆಸಿಯವರು ದಶಂಬರ 1ರಲ್ಲಿ ಸಾಲದ ತಪಸೀಲಿನ ಕುರಿತು ಬರೆದ ಕಾಗದವು ಅಡಕವಾಗಿದೆ. ಅದರಲ್ಲಿ ಅಮೆರಿಕಾ ಸರಕಾರವು ಈ ಸಾಲದ ಕುರಿತಾಗಿ ಬ್ರಿಟಿಷ್ ಸರಕಾರವು ಕೊಡಬಹುದಾದ ಸೂಚನೆಗಳಿಗೆ ತಕ್ಕ ಸಿಗಾಕೊಡಲಿರುವುದೆಂದೂ ತಿಳಿಸಿರುವರು. ಇದಕ್ಕೆ ಉತ್ತರವಾಗಿ ಬ್ರಿಟಿಷ ಪ್ರತಿನಿಧಿಯು ತಿರುಗಿ ಈ ಕುರಿತಾದ ವಿವರಗಳಲ್ಲಿ ಚರ್ಚಿಸಲು ಬ್ರಿಟಿಷರು ಒಪ್ಪುವರೆಂದೂ, ತೃಪ್ತಿಕರವಾದ ಇತ್ಯರ್ಥವು ನಡೆಯಲು ಸಾಧ್ಯವಿದೆಯೆಂದೂ ಸೂಚಿಸಿರುವರು ಈ ಶ್ವೇತಪತ್ರದ ಮೇರೆಗೆ ಬ್ರಿಟಿಷರಿಂದ ದಶಂಬರ 15ರವರೆಗೆ ಸಲ್ಲಬೇಕಾದ ಮೊಬಲಗು (ಬಡ್ಡಿ ಅಸಲು ಸಹಿತ) 123 ಮಿಲ್ಲಿಯ ಡೊಲರುಗಳೆಂದು ತಿಳಿದುಬರುತ್ತದೆ

ಜರ್ಮನಿಗೆ ಅಮೇರಿಕದ ಸೂಚನೆ

ಜರ್ಮನಿಯಲ್ಲಿರುವ ಅಮೇರಿಕನರನ್ನು ಜನಾಂಗ ಭೇದದ ಯಾವ ಭೇದಿಕೆಯಿಂದ ನೋಡಬಾರದೆಂದು ಅಮೇರಿಕ ಸರಕಾರವು ತಿರುಗಿ ಜರ್ಮನಿಗೆ ತಿಳಿಸಿರುವುದು ಹಿಂದೆ ಸಹಾ ಇದೇ ರೀತಿಯಲ್ಲಿ ತಿಳಿಸಿರುವುದಕ್ಕಾಗಿ ತುಂಬಾ ವಿಷಾದಿಸುತ್ತದೆಂಬುದನ್ನು ಕಾಣಿಸಿರುವುದು.

ಕಾಂಗ್ರೆಸ್… ಸಂಸ್ಥಾನ… ನರಿನು…

ಹಿಂದೂ ದೇ… ಲ್ಲಿ ನರಿನು… ನತೆಯು ಸ್ವ… ಲ್ಲಿ ಅತ್ರ್… ಅಭಿಪ್ರಾಯ… ಸಿರುವರು… ಆಶ್ರಿತ ರಾಜ್ಯ… ಭೇದಗಳಿಗೆ… ಸ ಮತ್ತು… ಬ್ರಿಟಿಷರಿಂ… ನ್ನು ನರೇಂದ್ರ… ಗೆ ಒಳಸ… ಗವನ್ನು ಇರ… ಆಶ್ರಿತ ರೆ… ನನ್ನ… ಹೇ ಜನಾಂಗ… ಜವಾಬ್ದಾರಿ…

ದಸಗಳ…

ಇಂಗ್ಲಂಡ… ಒಕ್ಕಲಿಗ… ಲಂಡಿಯರ… ಲ್ಪಟ್ಟ… ಕಾಲಿಗೆ ಇಂ… ರಿಂದ ಗೊ… ಗಲಬಹುದು… ಳಸಬಹುದಾಗಿ… ರೈತರಿಗೆ ಇ… ವಷ ಕ್ಕೆ… ನು ಆಗ… ಪಾರ ನಪ್ಪ…

ಮುಂಬ… ಗಳು… ನನ್ನು…

ರಾವ… ವ್ ವಿಷಯ… ಲಯ ಪ್ರೊಫೆ… ಕ್ಕ… ರು ಸಭೆಯ… ಗಳು ಹೆಲ… ಕ್ಕೆಗಳಲ್ಲಿ… ಮೊದಲು… ದ್ದವು… ಯಾಗಲಿಲ್ಲ… ದು ಕೋರಿ…

ಸತ್ಯಮ…

ಶ್ರೀ ಎ… ಹರ್ಲ್… ಟಾಗಿ ನೇ…

ಕಾಂಗ್ರೆಸ… ವಿರೋ…

ಆಶ್ರಿತ… ಗವಹಿಸಿ… ಹಲ ಸಂಸ್ಥಾ… ಕಾಲದಲ್ಲಿ…

...ನ ಕಂಪೆನಿಗಳು ಯೆಹೂದ್ಯ ಮತ್ತು ಬ್ರಿಟಿಷ್ ಕೆಲಸ...
...ರು ಸುರಂಗಮಾರ್ಗ — ಬ್ರಿಟಿಷರ ಯುದ್ಧದ ಸಾಲ

...ಆಶ್ರಿತ ...ರಿತು ...ಭಿಯು ...ನು ಸಭೆಗಳ ...ರ್ಗಳ ಜ ...ಭಿಪ್ರಾಯ ...ತು ತಮ್ಮ ...ನ್ಯಕ್ತಿಗೊಳಿ ...ಯಾ ಮತ್ತು ...ದು ಕೃತಕ ...ದು ಬ್ರಿಟಿ ...ಗವು ...ಗಿದೆ, ಇದ ...ದನೆ ...ಥಾ ವಿಭಾ ...ಸಮುತ್ತಿರೆ. ...ವೆಂದು ...ನಮ್ಮ ...ಜನತಗ ...



...ರು ಹಿಂಗೆಂದರು ಆಶ್ರಿತ ರಾಜ್ಯಗಳಲ್ಲಿ ಪ್ರಜೆಗಳಿಗೆ ಜವಾಬ್ದಾರಿ ಸರಕಾರವು ದೊರೆಯುವ ವಿನಾ ಇಂಡಿಯನ್ ನ್ಯಾಶನಲ್ ಕಾಂಗ್ರೆಸು ಬೆದರಿಕೆಗೆ ಬಗ್ಗಲು ಬಿಡಲಾರದು ಎಂದರು. ಅನಂತರ ಸಂಸ್ಥಾನಿಕ ಪ್ರಜೆಗಳು ಸ್ವಾತಂತ್ರ್ಯಕ್ಕಾಗಿ ಅವಶ್ಯವಿರುವಷ್ಟು ಮಾಡಬೇಕೆಂದೂ ಇಲ್ಲವಾದರೆ ನುಲಭವಾಗಿ ದೊರೆತ ಸ್ವಾತಂತ್ರ್ಯ ಬೇಗನೇ ಮಾಯವಾಗಬಹುದೆಂದೂ ಹೇಳಿದರು. ಕಾಂಗ್ರೆಸಿನ ಸಂಪೂರ್ಣ 'ಸಹಾನುಭೂತಿ ಮತ್ತು ಬೆಂಬಲವು ಆಶ್ರಿತ ಸಂಸ್ಥಾನಗಳ ಕೆಲಸಗಾರರಿಗೆ ಇರುವುದಾಗಿ ಆಶ್ವಾಸನೆಯಿತ್ತರು.

...ಟೀಸು ...ಲ್ಲಿ ನಡೆದ ...ಗಳ ...ದ್ದಗಳ ...ಡಿಸುವುದ ...ಯಿಗೆ ತ ...ದೇಶರಗೊ ...ಗಿರುತ್ತದೆ ...ಯಿಂದ ...ರು ಲುಕ್ಸಾ ...ಕೊಡುವ ...

ಅಬ್ಕಾರಿ ಖಾತೆಯ ಉದ್ಯೋಗಸ್ಥರು

ಕೃಷಿ ಇಲಾಖೆಯ ... ಮಿ. ... ಪಿಳ್ಳೆ ... ರೊಬ್ಬರಿಗೆ ಉತ್ತರವೀಯುತ್ತಾ ಹೇಳಿದರು. ಮದ್ಯಪಾನ ನಿಷೇಧಾಂದೋಲನದಿಂದ ... ತ್ತಿರುವ ಕಾರಣ ... ಅಬ್ಕಾರಿ ಇಲಾಖೆಯ ನೌಕರರಿಗೆ ... ಉದ್ಯೋಗವನ್ನು ಕೊಡುವ ... ಸರಕಾರವು ಮಾಡುತ್ತಿರುವುದು ... ಸಲು ... ರಿಯಾಯಿತಿ ... ಇನ್ಸ್‌ಪೆಕ್ಟರರನ್ನಾಗಿ ನೇಮಿಸುವಂತೆಯೂ ತಕ್ಕ ಅನುಕೂಲತೆ ಮಾಡಿಕೊಡಲಾಗಿದೆ. ಅಂತೂ ಸರಕಾರವು ಈ ಖಾತೆಯ ಕೆಲಸಗಾರರಿಗೆ ಉದ್ಯೋಗ ದೊರೆಯುವಂತೆ ಹೆಚ್ಚಿನ ವಿಚಾರವನ್ನು ಕೈಕೊಳ್ಳುವುದು.

...ಾರ್ಥಿ ...ಸರ ...ಸಿದರು ...ಜಿಗ ಪಂಜಿ ...ದಲು ಇಟಿ ...ಯೋ ...ಸಿದ್ಧ ...ವಿದ್ಯಾರ್ಥಿ ...ಈ ಪ್ರ ...ಇವೇ ...ಕೊಂಡಿ ...ಹೆಚ್ಚಿಗೆ ...ಕೊಂ...

ಹಿಂದೀ ವಿರುದ್ಧ ಪಿಕೆಟಿಂಗ್

ಇವತ್ತು ... ಮತ್ತು ... ರನ್ನು ಈ ದಿನ ಬೆಳಿಗ್ಗೆ ... ಹಿಂದೀ ವಿರುದ್ಧ ಪಿಕೆಟಿಂಗ್ ಮಾಡುತ್ತಿದ್ದುದಕ್ಕಾಗಿ ... ಶಾಲಾ ಕೆಲಸಕ್ಕೆ ತಡೆಮಾಡುವ ಆರೋಪದ ಮೇಲೆ ... ಮಾಡಲ್ಪಟ್ಟರು. ಆರುತಿಂಗಳ ಕಠಿಣ ಸಜೆ ಮತ್ತು ರೂಪಾಯಿ 50/- ಜುಲ್ಮಾನಾ ... ಕಠಿಣ ಸಜೆಯನ್ನು ವಿಧಿಸಲಾಯಿತು.

...ರು ...ವರು ಪ ...ಕೀ ...ನನ್ನು ...ರಲ್ಲಿ ಭಾ ...ಸಿದ ...ಡಿಸುವ ...ಯುವ

ಅಮೃತಸರದ ಮುನಿಸಿಪಲ್ ಆಫೀಸರನೊಬ್ಬನು ಹೊಡೆಯಲ್ಪಟ್ಟನು

... ಅಹ್ಮದ್ ಎಂಬ ... ಪಲ್ ... ಇನ್ಸ್‌ಪೆಕ್ಟರ ... ಸುರಂಗಮಾರ್ಗದಲ್ಲಿ ... ಹಿಂದಿನಿಂದ ಒಂದು ... ಹೊಡೆದನು. ... ದಾರಿಗನೊಬ್ಬನು ... ಆ ಆಫೀಸರನನ್ನು ... ಪೋಲೀಸರಿಗೆ ತಿಳಿಸಿದ ... ಆಸ್ಪತ್ರೆಯಲ್ಲಿರುವ ಈ ಆಫೀಸರನಿಗೆ ಬಹಳ ... ಯಲ್ಲಿರುವನು.

ಬರ್ಮಾದಲ್ಲಿ ವಿದ್ಯಾರ್ಥಿಗಳ ಮುಷ್ಕರ

ಮುಷ್ಕರದ ರೋಗವು ತಿರುಗಿ ಬರ್ಮಾ ದೇಶದ ವಿದ್ಯಾರ್ಥಿಗಳಿಗೂ ಸೋಂಕಿದೆ. ಆಖಿಲ ಬರ್ಮಾ ವಿದ್ಯಾರ್ಥಿ ... ಅಧ್ಯಕ್ಷ ಮತ್ತು ಸೆಕ್ರೆಟರಿಯವರು ... ಕೈದು ಮಾಡಿರುವುದೇ ಈ ... ಇಷ್ಟರ ವರೆಗೆ ... ಕಾಲೇಜುಗಳ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆ. ವಿದ್ಯಾರ್ಥಿಗಳು ಸಭೆ ಜರಗಿಸಿ, ಕೈದುಮಾಡಲ್ಪಟ್ಟವರನ್ನು ಬಿಡುಗಡೆ ಮಾಡಬೇಕೆಂದು ...

ನಳಿನಿರಂಜನ ಸರ್ಕಾರರು ಗಾಂಧಿಯವರ ದರ್ಶನ ಮಾಡಿದರು.

ಬಂಗಾಳದ ಅರ್ಥಿಕ ಸಚಿವರಾದ ಮಾನ್ಯ ನಳಿನಿರಂಜನ ಸರ್ಕಾರರವರು ಮಹಾತ್ಮಾಗಾಂಧಿಯವರನ್ನು ಕಳೆದ ತಾ 16 ರಲ್ಲಿ ಅಪರಾಹ್ಣ 1-30ಕ್ಕೆ ವಾರ್ಧಾದಲ್ಲಿ ಭೆಟ್ಟಿಯಾದರು. ಈ ... ಶ್ರೀ ... ಜಮನಾಲಾಲ ಬಜಾಜರು ಜ. ದಿ. ಬಿರ್ಲಾರೂ ಹಾಜರಿದ್ದರು. ಇವರೊಳಗೆ ನಡೆದ ... ವಿಚಾರ ... ತಿಳಿದಿಲ್ಲ.

ಹರಿದ್ವಾರ ಕಾಂಗ್ರಿ ಗುರುಕುಲ ಯೂನಿವರ್ಸಿಟಿ

ಈ ವರ್ಷದ ಗುರುಕುಲ ಯೂನಿವರ್ಸಿ...

...ಟಗೆ ವಿದ್ಯಾರ್ಥಿಗಳನ್ನು ... ರವು ಇವರ ವಾರ್ಷಿಕೋತ್ಸವಕಾಲ ... ರ್ಣಯಿಸಲಾಗುವುದು. ಪ್ರಾಂತದ ... ತೀದ ... ಪತ್ರಿಕೆ ... ಗುರುಕುಲ ಆಫೀಸಿಗೆ ... ಬರೆಯಬೇಕು.

ಅಖಿಲ ಭಾರತ ಸಮತಾವಾದ ಸಂಘದ ಜನರಲ್ ಸೆಕ್ರೆಟರಿಯವರಾದ ಜಯಪ್ರಕಾಶ ನಾರಾಯಣರಾಯರು ಮದ್ರಾಸ್ ಟ್ರಾಮ್‌ವೇ ಕೆಲಸಗಾರರ ಸಭೆಯಲ್ಲಿ

ಜಯಪ್ರಕಾಶರು ... ಕೆಲಸಗಾರರೆಲ್ಲರೂ ಕಾಂಗ್ರೆಸನ್ನು ... ಬಲಿಸ ... ಹೇಳಿದರು.

ಅವರ ಭಾಷಣದ ಸಾರಾಂಶವು

ನೀವು ಕೆಲಸಗಾರರು, ನಿಮ್ಮ ಸಂಘದ ಉದ್ದೇಶವು ನಿಮ್ಮ ಸಮಸ್ಯೆಗಳ ವಿಚಾರವಾಗಿರುವ ... ಹುಟ್ಟಿಸುವ ... ಯು ತಗ್ಗಿಸುವ ... ಮಾತ್ರ ಇದ್ದು, ಇದರಿಂದ ನೀವು ... ರದು. ಇವೆಲ್ಲಾ ... ಉದ್ದೇಶ ... ಯಗಳು ... ಕೂಡ ... ದಲ್ಲಿ ... ಮಜೂರರ ಗಿದ್ದ, ದಿನಕ್ಕೆ ರೂ 1-... ಮಜೂರಿ ... ದಲ್ಲಿ ... ಕೆಲಸದ ... ತನಗೆ ಗೊತ್ತಿದೆ. ಅಮೇರಿಕ ಮತ್ತು ಬ್ರಿಟಿಷ ಕೆಲಸಗಾರರು ಒಳ್ಳೆಯ ಮಜೂರಿ ಪಡೆಯುವರು, ಆದರೆ ಅವಶ್ಯವಾದ ... ದಿನ್ನು ... ಮತ್ತು ... ಹಾಗೆಯೇ ... ಅವರ ... ಸಮಾಜದಲ್ಲಿ ... ದ್ದು ...

ಇಂದಿನ ಮಜೂರರ ... ಸ್ಥಿತಿ ... ಕೆಲಸಗಾರರ ... ಆರ್ಥಿಕ ... ಕಾರಣ ... ಇದ್ದರೆ ... ಸಂಪತ್ತಿನಲ್ಲಿ ... ತಮ್ಮ ಹಕ್ಕು ಎಂಬುದು ... ಹರಿಜನರು ಅವರು ... ಇತರ ಸವರ್ಣರಂತೆ ಮನುಷ್ಯರಾಗಿ ಹುಟ್ಟಿದವರು. ತಮಗೂ ಉಚ್ಚ ವರ್ಣೀಯರಂತೆ ದೇವಸ್ಥಾನ ಪ್ರವೇಶಕ್ಕೆ ... ಕೋರುವುದು ಹೇಗೆ ನ್ಯಾಯವೋ ಹಾಗೆಯೇ ಮಜೂರರು ಕೂಡಾ ತಮ್ಮ ಕೆಲಸದ ಪ್ರತಿಫಲ ತಮಗೆ ದೊರೆಯಬೇಕೆನ್ನ...

...ನ್ಯಾಯವಾದ ... ರತ ... ರಿಂದ ... ಪಕ್ಷದ ಉದ್ದೇಶವಾದರೂ ಮಜೂರರು ತಮ್ಮ ನ್ಯಾಯದ ಹಕ್ಕನ್ನು ಪಡೆಯುವಂತೆ ಚೈತನ್ಯ ತುಂಬಿಸುವುದೇ ಆಗಿದೆ.

ಮದ್ರಾಸಿನಲ್ಲಿ ತಾವು ಮಜೂರರ ಮುಖಂಡರೆಂದು ಹೇಳುವ ಕೆಲ ಜನರು ಮಜೂರರು, ಕಾಂಗ್ರೆಸಿನ ಆಶ್ರಯ ಬೇಡವು ... ದಕ್ಷಿಣ ಬ್ರಿಟಿಷರ ಅಧಿಕಾರಕ್ಕೇ ... ರವುದು ... ಎಂದು ಸಾರುತ್ತಾ ಹೋಗುತ್ತಾರೆಂಬುದು ನಾನು ಕೇಳಿದೆ. ನಾನು ನಿಸ್ಸಂದೇಹವಾಗಿ ಹೇಳುತ್ತೇನೆ, ಇಂತಾ ಜನರು ಮಜೂರರ ಹಿತೈಷಿಗಳಲ್ಲ, ಅವರ ಪರಮ ಶತ್ರುಗಳು. ನೀವೆಲ್ಲಾ ಕೆಲಸಗಾರರು ನಿಮ್ಮೊಳಗೆ ಪ್ರತ್ಯೇಕ ಕೆಲಸದ ವಿಭಾಗಗಳಾಗಿ ಒಡೆದಾಗುವಿರಿ. ಮಜೂರರೆಲ್ಲರ ಏಳಿಗೆಗಾಗಿ ಎಲ್ಲರೂ ಕಾಂಗ್ರೆಸನ್ನು ಸೇರಬೇಕು. ಕಾಂಗ್ರೆಸು ನವಭಾರತ ಕಳೆದ ಎಂಬ ವರ್ಷಗಳಿಂದ ಪ್ರಬಲ ಹೋರಾಟವನ್ನು ಮಾಡುತ್ತಾ ಸ್ವಲ್ಪಮಟ್ಟಿಗೆ ಅಧಿಕಾರವನ್ನು ಪಡೆದಿದೆ. ಇದು ಹೆಚ್ಚಲ್ಲ. ಯಾಕೆಂದರೆ, ಇನ್ನೂ ಅಧಿಕ ರವು ಬ್ರಿಟಿಷರ ಕೈಯಲ್ಲಿದೆ. ಬ್ರಿಟಿಷರ ಆಳ್ವಿಕೆಯನ್ನು ಕಿತ್ತೊಗೆಯ ... ಕಾಂಗ್ರೆಸು ಜಾತಿ ಮತ ಭೇದವಿಲ್ಲದೆ, ಎಲ್ಲಾ ಪಂಗಡದ ಎಲ್ಲಾ ಜನತೆಯನ್ನು ಕರೆದು ಅವರ ಸಮ್ಮತಿಯಂತೆ ಅವರ ಪ್ರತಿನಿಧಿಯನ್ನು ನೇಮಿಸುವುದಾಗಿ ಸಾರಿ ಪ್ರಕಟಿಸಿರುವುದು. ಮಜೂರರು ಕಾಂಗ್ರೆಸಿನಲ್ಲಿದ್ದರೆ, ಮತ್ತು ... ಅವರು ಆಲೋಚಿಸದ ... ಅವರ ಯೋಗ್ಯ ಪ್ರತಿನಿಧಿಯ ... ಸಭಾಗೃಹದಲ್ಲಿ ಇರುವುದಾದರೆ, ಅವರ ಅಭಿಪ್ರಾಯವನ್ನು ಸಮರ್ಥನೆ ಮಾಡುವವರಿದ್ದಂತೆ ಆಗುವುದು.

ತ್ವರೆ ಮಾಡಿರಿ! ತ್ವರೆ ಮಾಡಿರಿ!

ಗ್ರಾಮೋಫೋನ್ ಸಿಂಗರ್

ಎಂಬ

ಕನ್ನಡ ಹಿಂದಿ, ... ಬಲ್ಲವರು ... ಗಾನ ಸ್ಟೋರ್ ... ಗಳ ಮತ್ತು ಸಿನೇಮಾ ಹಾಡುಗಳ ಸಂಗೀತ ಪುಸ್ತಕವು ಬೇಗನೇ ಪ್ರಕಟವಾಗಲಿವೆ.

- ಆಧುನಿಕ ರುಚಿಗೊಪ್ಪುವ ಸಂಗೀತ ಪುಸ್ತಕವಿದು
- ಪ್ರತಿಯೊಬ್ಬರಿಗೆ ಓದಿ ಆನಂದಿಸತಕ್ಕ ಪುಸ್ತಕವಿದು.

ನಿಮ್ಮ ಆರ್ಡರುಗಳನ್ನು ಇಂದೇ ಕೊಡಿರಿ. ... ಹೆಚ್ಚು ಪ್ರತಿ ಬೇಗನೆ ಕೊಳ್ಳುವವರ ಹೆಸರನ್ನು ಪುಸ್ತಕದಲ್ಲಿ ಮುದ್ರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ:—

THE KANARA BOOKS & NEWS AGENCY,
Batatawala Mansion Lalbag,
BOMBAY 12

ನೋಟೀಸು

1939 40ನೇ ಇಸವಿಯ ... ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಯ ... ಗಾರಿಕೆ ... ಡಿಸ್ಟ್ರಿಕ್ಟಿಗೆ ... ಕಂಟ್ರಾಕ್ಟ್‌ದಾರರಿಂದ ಮೊಹರು ಮಾಡಲ್ಪಟ್ಟ ಟೆಂಡರು ಯಾನೆ ದರಖಾಸ್ತುಗಳು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರ ಆಫೀಸಿನಲ್ಲಿ 17-1-39ನೇ ಅಪರಾಹ್ಣ ಘಂಟೆ 4ರ ವರೆಗೆ ತೆಗೆದುಕೊಳ್ಳಲಾಗುವುದು.

ಕಂಟ್ರಾಕ್ಟಿಗೆ ಸಂಬಂಧಪಟ್ಟ ಅಂದಾಜು ಪಟ್ಟಿಗಳು ವಗೈರೆ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರ ಆಫೀಸಿನಲ್ಲಿ ಆಫೀಸು ಸಮಯದಲ್ಲಿ ನೋಡಬಹುದು.

... ಕೆ. ಕೆ. ಸಂಬಿಯಾರ್
... ದಕ್ಷಿಣ ಕನ್ನಡ

ಪುಟ ೩ರಿಂದ

ಬರೆದುಕೊಂಡಿರುವರು ಮತ್ತು ಜನರ ದುಃಸ್ಥಿತಿನಿವಾರಣೆಗಾಗಿ ಸರಕಾರವು ನೆರವಾಗುವಂತೆ ಕೇಳಿಕೊಂಡಿರುವರು. ಬಾಕಿ ಉಳಿದಿರುವ ಕಂದಾಯ ರಿಯಾಯಿತಿ, ಮುಂದಣ ಕಂದಾಯ ವಸೂಲಿಯಲ್ಲಿ ಉದಾರ ವರ್ತನೆ ದುಃಸ್ಥಿತಿಗೆ ಬಲಿಬಿದ್ದ ನಿರುದ್ಯೋಗಕ್ಕೆ ಬಲಿಬಿದ್ದವರಿಗೆ ಉದ್ಯೋಗ ದೊರಕಿಸುವುದು ಇವೇ ಮೊದಲಾದ ಸೂಚನೆಗಳು ಅವರ ಮನವಿಯಲ್ಲಿರುವುವು.

ದಕ್ಷಿಣ ಭಾರತದಲ್ಲಿ ಹಿಂದೀ ಪ್ರಚಾರ–

ದಕ್ಷಿಣ ಭಾರತ ಹಿಂದೀ ಪ್ರಚಾರಕ ಸಮ್ಮೇಳನದ ಸಭೆಯು ಮದ್ರಾಸಿನ ತ್ಯಾಗರಾಜ ನಗರದಲ್ಲಿ ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಆಂಧ್ರ, ಕೇರಳ, ಕರ್ನಾಟಕ, ಮತ್ತು ತಮಿಳುಭಾಗಗಳಿಂದ ಸುಮಾರು 50 ಮಂದಿ ಪ್ರತಿನಿಧಿಗಳು ಬಂದಿದ್ದರು ಶ್ರೀ. ಯದುಗಿರಿ ಕುಮಾರಿಯರ ಪ್ರಾರ್ಥನೆಯೊಂದಿಗೆ ಸಭೆಯು ಆರಂಭಗೊಂಡಿತು. ಪ್ರತಿನಿಧಿಗಳಿಗೆ ಮತ್ತು ಅಧ್ಯಕ್ಷರಿಗೆ ಸಭೆಯ ಕಾರ್ಯದರ್ಶಿಯಾದ ಎನ್. ಸತ್ಯನಾರಾಯಣರು ಸ್ವಾಗತ ಬಯಸಿದರು. ಕೇರಳ ಪ್ರಾಂತಿಕ ಶಾಖೆಯ ಕಾರ್ಯದರ್ಶಿಯರಾದ ಶ್ರೀ. ದೇವದೂತಜೀಯವರು ಹಿಂದೀ ಪ್ರಚಾರಕರೊಳಗೆ ಪರಸ್ಪರ ಐಕ್ಯತೆಯ ಆವಶ್ಯಕತೆಯನ್ನು ವಿವರಿಸಿ, ಇಂದೀಗ ದಕ್ಷಿಣಭಾರತದಲ್ಲಿ ಹಿಂದೀ ಭಾಷಾ ಶಿಕ್ಷಣಕ್ಕಾಗಿ ಜನರು ಹೆಚ್ಚುಹೆಚ್ಚಾಗಿ ಆತುರಪಡುತ್ತಿರುವರೆಂದೂ, ಪ್ರಚಾರಕರ ಸಂಖ್ಯೆಯು ಕಡಿಮೆಯಿರುವುದೆಂದೂ ಆದುದರಿಂದ ಹಿಂದೀ ಅಧ್ಯಾಪಕರು ಹೆಚ್ಚಾಗುವಂತೆ ತಕ್ಕಯೋಜನೆ ನಡೆಸತಕ್ಕುದೆಂದೂ ಹೇಳಿದರು. ಆಂಧ್ರದೇಶ ಹಿಂದೀ ಪ್ರಚಾರ ಶಾಖೆಯ ಕಾರ್ಯದರ್ಶಿಯರಾದ ಶ್ರೀ ಸುಬ್ಬರಾಯರು ಹಿಂದೀ ಪ್ರಚಾರ ಸಂಸ್ಥೆಯು ಆರಂಭವಾದಂದಿನಿಂದ ತೆಲುಗುದೇಶದಲ್ಲಿ ಹಿಂದಿಯು ಬಹುಬೇಗನೆ ಪ್ರಸಾರವಾಗುತ್ತಿರುವುದೆಂಬುದನ್ನು ವಿವರಿಸಿದರು. ತಮಿಳುನಾಡಿನ ಹಿಂದೀ ಪ್ರಚಾರ ಶಾಖೆಯ ಕಾರ್ಯದರ್ಶಿಯರಾದ ಶ್ರೀ. ಮಿಶ್ರರು ಹಿಂದೀ ಚಳವಳಿಯು ಹಿಂದೀ ವಿರುದ್ಧ ಚಳವಳಿಯಿಂದಾಗಿ ಹಿಂದಿಯು ಇನ್ನಷ್ಟು ಬೇಗನೆ ಪ್ರಸರಿಸುತ್ತಿರುವುದು. ಈ ಸರಕಾರದವರು 63 ಶಾಲೆಗಳಲ್ಲಿ ಹಿಂದೀ ಶಿಕ್ಷಣ ನೀಡುವ ಅಭಿಪ್ರಾಯ ಮಾಡಿರುವರು. 30ರಲ್ಲಿ ಹಿಂದೀ ಶಿಕ್ಷಣ ನಡೆಯುವುದೆಂದರು. ಕರ್ನಾಟಕ ಪ್ರಾಂತ್ಯದ ಕಾರ್ಯದರ್ಶಿ ಶ್ರೀ. ಸಿದ್ಧನಾಥ ಪಂತರು ಪ್ರಸಿದ್ಧ ನಾಯಕರು ಹಿಂದೀ ಪ್ರಚಾರಕಾರ್ಯದ ಅಧಿಕಾರಸ್ಥಾನದಲ್ಲಿರಬೇಕೆಂದು ಸಲಹೆಯಿತ್ತರು. ಮದ್ರಾಸಿನ ಪ್ರತಿನಿಧಿ ಶ್ರೀ. ಅಷ್ಟೆಯವರು ಮದ್ರಾಸು ನಗರದ ಹಿಂದೀ ಪ್ರಚಾರಕಾರ್ಯವನ್ನು ವಿವರಿಸಿ, ಕಳೆದ ಒಂದೇ ವರ್ಷದಲ್ಲಿ ಹಿಂದಿಯ ಪ್ರಚಾರವು ಬಹುವಾಗಿ ವಿಸ್ತರಿಸಿದ್ದುದೆಂದರು.

ಡಾಕ್ಟರ್ ಪಟ್ಟಾಭಿಯವರು ಪರಸ್ಪರ ಐಕ್ಯತೆಯಿಂದ ದಕ್ಷಿಣಭಾರತದಲ್ಲಿ ಹಿಂದೀ ಪ್ರಚಾರವು ಶೀಘ್ರವಾಗಿ ನಡೆಯುವಂತೆ ಸಾಧಿಸಬೇಕೆಂದು ಪ್ರಚಾರಕರನ್ನು ಕೇಳಿಕೊಂಡರು. ಹಿಂದೀ ಪ್ರಚಾರಕರು ಯಾವ ಮುಖಂಡರ ಕಡೆಗೂ ನೋಡದೆ, ಹಿಂದಿಯನ್ನು ಪ್ರಚಾರಮಾಡುವುದು ತಮ್ಮ ಕರ್ತವ್ಯವೆಂದು, ಉತ್ಸಾಹಪೂರ್ವಕ ಪ್ರಯತ್ನಿಸಬೇಕೆಂದರು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 18–12–38

ನಗರ ಸಭೆ—ಮಂಗಳೂರು ನಗರ ಸಭೆಯ ಮೀಟಿಂಗು ನಾಳೆಯ ದಿನ ಸಾಯಂಕಾಲ ನಡೆಯಲಿರುವುದು.

ಕ್ರಿಸ್ತ ಧರ್ಮಾರ್ಯರ ಪರಿಷತ್ತು—ಬರುವ ವಾರ ಮಂಗಳೂರಲ್ಲಿ ಯೂಕ್ರಿಸ್ಟಿಕ್ ಕಾಂಗ್ರೆಸು ಜರಗಲಿದೆ, ಈ ಸಮಾರಂಭಕ್ಕೆ ಅನೇಕ ಕಡೆಗಳಿಂದ ಕ್ರಿಸ್ತ ಗೃಹಸ್ಥರೂ, ಧರ್ಮಬೋಧಕರೂ, ಬರಲಿರುವರು. ಈ ಬಗ್ಗೆ ಸಕಲ ಏರ್ಪಾಡುಗಳೂ ಭರದಿಂದ ಸಾಗುತ್ತಿವೆ.

ಹಿಂದೀ ಪ್ರಚಾರ—ಕಳೆದ ತಾ 16ನೇ ಶುಕ್ರವಾರ ಸಾಯಂಕಾಲ ಗಣಪತಿ ಹೈಸ್ಕೂಲಿನಲ್ಲಿ ಹಿಂದೀ ಅಧ್ಯಾಪಕ ಪ್ರಚಾರಕರ ಸಭೆಯು ಡಾ| ಕೆ ವಿಟ್ಠಲಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿಜೂರರು ಈ ಸಮ್ಮೇಳನದ ಉದ್ದೇಶಗಳನ್ನು ವಿವರಿಸಿದರು. ಡಾ. ಶೆಟ್ಟಿಯವರು ಹಿಂದೀ ಪ್ರಚಾರಕರಲ್ಲಿ ಐಕಮತ್ಯವು ಆಗತ್ಯವೆಂಬುದನ್ನು ಒತ್ತಿ ಹೇಳಿದರು. ಅನಂತರ ಡಾ| ವಿಟ್ಠಲಶೆಟ್ಟಿ ಅಧ್ಯಕ್ಷರಾಗಿಯೂ, ಶ್ರೀ ಬಿಜೂರರು ಉಪಾಧ್ಯಕ್ಷರಾಗಿಯೂ, ಶ್ರೀ ಹುಸೇನರು ಕಾರ್ಯದರ್ಶಿಯರಾಗಿಯೂ, ಮತ್ತು ಶ್ರೀ. ಬಿ. ಲಕ್ಷ್ಮಣದೇವ ಪಿದ್ಯಾರ್ಥಿಯವರು ಖಜಾಂಚಿಯರಾಗಿಯೂ ಆರಿಸಲ್ಪಟ್ಟರು. ಇದೇ ಸಂದರ್ಭದಲ್ಲಿ ಕಾರ್ಯಕಾರಿ ಮಂಡಲಿಗೆ ಸದಸ್ಯರ ಚುನಾವಣೆಯು ನಡೆಯಿತು.

ಶ್ರೀ ಆನಂದಾಶ್ರಮ ಗುರುಗಳು—ಸಾರಸ್ವತ ಬ್ರಾಹ್ಮಣ ಸಮಾಜದ ಗುರುಗಳಾದ ಶ್ರೀ. ಚಿತ್ರಾಪುರ ಮಠದ ಶ್ರೀ ಶ್ರೀ ಆನಂದಾಶ್ರಮ ಮಹಾ ಸ್ವಾಮಿಗಳವರು ಮಂಗಳೂರಲ್ಲಿ ಕೆಲದಿನಗಳಿದ್ದು ಶಿಷ್ಯ ವೃಂದದವರಿಗೆ ಧರ್ಮಬೋಧೆ, ಆಶೀರ್ವಚನಗಳನ್ನಿತ್ತು ಮದ್ರಾಸಿಗೆ ತೆರಳಿದರು. ಶ್ರೀ. ಶ್ರೀ. ಗಳವರನ್ನು ಅವರ ಶಿಷ್ಯ ವೃಂದದವರೂ, ಇನ್ನಿತರ ಆಸ್ತಿಕ ಮಹಾ ಜನರೂ ರೈಲ್ವೇ ಸ್ಟೇಶನ ವರೆಗೆ ಹೋಗಿ ಬೀಳ್ಕೊಟ್ಟರು.

ಜಿಲ್ಲಾ ಮೆಡಿಕಲ್ ಎಸೋಸಿಯೇಶನ್—ಹಿಂದಿನ ರವಿವಾರ ವೆನ್‌ಲಾಕ್ ಆಸ್ಪತ್ರೆಯ ಪರಾರದಲ್ಲಿ ಜಿಲ್ಲಾ ಮೆಡಿಕಲ್ ಎಸೋಸಿಯೇಶನ ವಾರ್ಷಿಕ ಸಭೆಯು ಶ್ರೀ. ಫ್ರಾನ್ ಮಸ್ಕರೇನ್ಹಸ್‌ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿತು.

ಹೈಕೋರ್ಟು ಜಡ್ಜರು—ಈ ದಿನ ಸಾಯಂಕಾಲ ಮಂಗಳೂರ ವಕೀಲ ಸಂಘದವರು ಮದ್ರಾಸ್ ಹೈಕೋರ್ಟ್ ನ್ಯಾಯಾಧೀಶರಾದ ದಿ. ಬ. ಶ್ರೀ ಕೆ. ಪಿ ಲಕ್ಷ್ಮಣ ರಾವ್ ಇವರಿಗ ಒಂದು ಸತ್ಕಾರವನ್ನೀಯುವರು.

ದಕ್ಷಿಣ ಕನ್ನಡ

ಕಾರ್ಕಳ.—ಪ್ರೋಸ್ಟ್ ಗ್ರಾಜುವೇಟ್ ರಿಸರ್ಚ್ ಸ್ಕಾಲರ್‌ಶಿಪ್: ಇಲ್ಲಿಯ ಡಾ| ಕೆ. ನಾರಾಯಣ ರಾಯರ ಮಗಳು ಶ್ರೀಮತಿ ಕಮಲಾ ಬಾಯಿವೆಂಕಟ್ರಾವ್ ಎಂಬವರು ಶ್ರೀವಾದ್ಯವನೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಮದ್ರಾಸ್ ಯುನಿವರ್ಸಿಟಿಯ ಪೋಸ್ಟ್ ಗ್ರಾಜುವೇಟ್ ರಿಸರ್ಚ್ ಸ್ಕಾಲರಶಿಪ್‌ಗೆ ಆರಿಸಲ್ಪಟ್ಟಿರುತ್ತಾರೆ. ಇವರಿಗೆ ಈಗೋಸ್ಕರವಾಗಿ ತಿಂಗಳೊಂದರ ರೂ 30–0–0ರಂತೆ ಸರಕಾರಿ ವೇತನವು ದೊರೆಯುವುದು.

ಮೂಲ್ಕಿ:—ಇಲ್ಲಿಯ ಯೂನಿಯನ್ ಕ್ಲಬ್ಬಿನ ಮೆನೇಜಿಂಗ್ ಕಮಿಟಿಯವರ ಸಾಧಾರಣ ಸಭೆಯು ತಾ 2ರಲ್ಲಿ ಜರಗಿದಾಗ ಪ್ರಸಿಡೆಂಟರ "ರೂಲಿಂಗಿಗೆ" ಮೆಂಬರರ walk out ಮಾಡಿದ್ದು ಸಭೆಯಲ್ಲಿ ಗಲಿಬಿಲಿಯಾಗಿ ಕಾರ್ಯಕ್ರಮವನ್ನು ನೆರವೇರಿಸದೇ ಸಭೆಯು ಮುಗಿಯಿತು.

ಕಲ್ಯಾಣಪುರ:—ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ 10 ವರ್ಷಗಳಿಂದ ನಡೆದು ಬರುವ ಶ್ರೀ ಭಜನಾ ಸಪ್ತಾಹ ಮಹೋತ್ಸವವು ತಾ. 27-11-38 ರಿಂದ 4-12-38ರ ವರೆಗೆ ಅಹೋರಾತ್ರಿ ನೆರವೇರಿಸಲ್ಪಟ್ಟಿತು. ಈ 7 ದಿವಸಗಳ ಮಧ್ಯದಲ್ಲಿ ದಿ ಕಲ್ಯಾಣಪುರ ಎಮೆಚ್ಯೂರ್‍ಸ್, ಇವರು ಆಡಿದ ನಾಟಕದಿಂದ ಜಮೆಯಾದ ಹಣವನ್ನು ಮಕ್ಕಳ ಪೂಜೆಗೆಂದು ಒಪ್ಪಿಸಿರುವುದು ಅಭಿನಂದನೀಯವಿದೆ.

ಘರಂಗಿಪೇಟೆ:—ಈ ಸಂಘದ ಉಪಾಧ್ಯಾಯ ಸಂಘದ ಮಾಸಿಕ ಸಭೆಯು ಕಳೆದ ತಾ. 17ರಲ್ಲಿ ಘರಂಗಿಪೇಟ ಶ್ರೀ ರಾಮಾ ಹಾ. ಎ ಶಾಲೆಯ ಬೂಂದಡೀ ಶಾಖೆಯ ಹೆಡ್ಮಾಸ್ತರ್ ಮೆ| ಮಾರ್ಸೆಲ್ ಬೋಬೋರವರ ಅಧ್ಯಕ್ಷತೆಯಲ್ಲಿ ಜರಗಿತು.

ಕುಂದರವಾಡ ರಾಜೂಕಾಕಾ

ಪಾಕೆಟ್

ಡೈರಿಗಳು

(ಪೆನ್ಸಿಲು ಸಹಿತ)

ಕ್ರಯ 0—8—0 ಮಾತ್ರ

ಅಂಚೆ ವೆಚ್ಚ ಪ್ರತ್ಯೇಕ

ವ್ಯಾ. ಧಾ ಕಮಿಶನ ಕೊಡಲಾಗುತ್ತೆ

ಎಲ್ಲಾ ತರದ ಪುಸ್ತಕಗಳೂ

ನಮ್ಮಲ್ಲಿ ಸಿಗುತ್ತವೆ.

ಬರೆಯಿರಿ:—

The Kanara Books & News Agency.

Batatawala Mansion, Lalbag,

Bombay 12

ಬರುವ ವಾರ

ತಿಂಗಳಕಾಣಿಕೆ

ಓದಲುಮರೆಯಬೇಡಿರಿ

ಉಡುಪಿ

ದಿ ರಬ್ಬರ್ ಬಾಲ್ ಕ್ರಿಕೆಟ್ ಪಂದ್ಯಾಟ

ಈ ಕುರಿತು ನಾವು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ ಬಾತ್ಮಿಯ ಕುರಿತು 'ಸೋಶಿಯಲ್ ಟೀಮಿನವರು ಆಡಿ ಗೆದ್ದರೋ? ಕಾಡಿ ಗೆದ್ದರೋ?' ಎಂಬ ಶಿರೋನಾಮೆಯಿಂದ ಪತ್ರ ವ್ಯವಹಾರವೊಂದು ನಮ್ಮ ಬಳಿಗೆ ಬಂದಿದೆ ಸೋಶಿಯಲ್ ಟೀಮಿನವರು ಇಲ್ಲದ ಸಾಧನೆಗಳನ್ನು ಮುಂದೊಡ್ಡಿ, ಕಾಡಿ ಗೆದ್ದರೆಂಬುದೇ ಬಾತ್ಮಿಯ ಸಾರಾಂಶ.

ಬೋವಿಸ ಸಮಾಜದಲ್ಲೂ ಕುಹಕಗಳೆ?

ಎಂಬ ಶಿರೋನಾಮೆಯಿಂದ ಶ್ರೀ ಪಿ. ಪಿ. ಕರ್ಕೇರ ಎಂಬವರಿಂದ ಬೊಂಬಾಯಿ ಬೋವಿ ಸಮಾಜದ ಕುರಿತೊಂದು ಬಾತ್ಮಿ ನಮ್ಮೆಡೆಗೆ ಬಂದಿದೆ, ಶ್ರೀ. ಯು. ರಾಮಪ್ಪನವರು ಕುಹಕ ವ್ಯಾಪಾರವನ್ನು ತಡೆಗಟ್ಟಿ ನಿಶ್ಚಿತ ಮಾರ್ಗದಲ್ಲೇ ಕಾರ್ಯಕ್ರಮವನ್ನು ಸಾಗಿಸಬೇಕೆಂದೂ ಎಲ್ಲರೂ ಸಮಾಜೋನ್ನತಿಗಾಗಿ ಪ್ರಯತ್ನಿಸಬೇಕೆಂದೂ ಅದರಲ್ಲಿ ಅಡಕವಾಗಿದೆ.

(ಸಂ. ನ)

ಕಾಡಬೆಟ್ಟು ರೋಡಿಗೆ ನೀರಿಲ್ಲ—ಹಳೆ ಕೌನ್ಸಿಲಿನ ಮೆಂಬರ್ ಶ್ರೀ. ಎಂ. ವಾಮನ ಭಟ್ಟರ ಠರಾವಿನಂತೆ ಕಾಡುಬೆಟ್ಟು ರಸ್ತೆಗೆ ನೀರು ಹಾಕಬೇಕಾಗಿ ಪಬ್ಲಿಕ್ ಹೆಲ್ತ್ ಕಮಿಟಿಯಲ್ಲಿ ತೀರ್ಮಾನವಾಗಿತ್ತೆಂದೂ ಈಗಿನ ಹೊಸ ಕೌನ್ಸಿಲಿನ ಕಮಿಟಿಯಲ್ಲಿ ನೀರು ಹಾಕುವುದು ಬೇಡವೆಂದು ತೀರ್ಮಾನವಾಗಿದೆಯೆಂದೂ, ಹೀಗೆ ಒಂದು ಕಮಿಟಿಯ ತೀರ್ಮಾನವನ್ನು ಮತ್ತೊಂದು ಕಮಿಟಿಯು ತೆಗೆದು ಹಾಕುವುದು ಆಶ್ಚರ್ಯವೆಂದೂ, ಇನ್ನಾದರೂ ಕೌನ್ಸಿಲು ಮೀಟಿಂಗಿನಲ್ಲಿ ಹಳೆ ಕಮಿಟಿಯ ತೀರ್ಮಾನದಂತೆ ನೀರು ಹಾಕಿಸುವ ವ್ಯವಸ್ಥೆ ಮಾಡುವುದು ಶ್ರೇಯಸ್ಕರವೆಂದೂ ಒಂದು ಬಾತ್ಮಿ.

ಇನಾಮು ಹಂಚೋಣ—ದಿ ರಬ್ಬರ್ ಬಾಲ್ ಟೂರ್ನಮೆಂಟಿನಲ್ಲಿ ಗೆದ್ದವರಿಗೆ ಇನಾಮು ಹಂಚುವ ಸಭೆಯು ತಾ. 20ರಲ್ಲಿ ಡಾ. ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಅವರ ಕಟ್ಟಡದಲ್ಲಿ ಜರಗಿತು. ಆ ಸಂದರ್ಭದಲ್ಲಿ ಫಲಹಾರ, ವರದಿ, ಭಾಷಣಗಳಿದ್ದುವು.

ಉಡುಪಿ ನಗರ ಸಭೆ:—ಉಡುಪಿ ನಗರ ಸಭೆಯು ಇದೇ ತಾ. 20ರಲ್ಲು ಜರಗಿ ಶ್ರೀಗಳಾದ ಕೆ. ಆರ್. ಶೆಣೈ ಮತ್ತು ಎನ. ಸುಂದರ ರಾಯರು ಬಹುಮತದಿಂದ ಕಂಟ್ರಾಕ್ಟ್ ಮತ್ತು ಎಪ್ರೋಂಟಮೆಂಟ ಕಮಿಟಿಗಳಿಗೆ ಸದಸ್ಯರಾಗಿ ಚುನಾಯಿಸಲ್ಪಟ್ಟರು.

ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀ. ಸುಭಾಸಚಂದ್ರ ಭೋಸರು ಉಡುಪಿಗೆ ಚಿತ್ತೈಸಿದಾಗ ಅವರಿಗೊಂದು ಮಾನಪತ್ರವನ್ನೀಯಬೇಕಾಗಿಯೂ ಅದರಿಂದ ನಗರ ಸಭಾಭವನದಲ್ಲಿ ರಾಷ್ಟ್ರಧ್ವಜವನ್ನೇರಿಸುವ ವ್ಯವಸ್ಥೆಗೊಳಿಸಬೇಕೆಂದೂ ತಂದ ಶ್ರೀ. ಎಲ. ಎಸ್. ನಾಯ್ಕರ ಸೂಚನೆಯು ಒಮ್ಮತದಿಂದ ಸ್ವೀಕರಿಸಲಾಯಿತು. ವಸೂಲಿಗೆ ಅನುಮಾನಕರವಾದ ಐಟಮುಗಳನ್ನು ವಜಾಬಕಿಯಬಹುದೆಂದಾಯಿತು. ಇನ್ನಿತರ ವಿಷಯಗಳ ತೀರ್ಮಾನವಾಗಿ ಸಭೆಯು ಕೊನೆಗೊಂಡಿತು.

ಏನಂದಿರಿ!

ಕನ್ನಡದಲ್ಲಿ ಒಳ್ಳೇ ಪುಸ್ತಕಗಳಿಲ್ಲವೆಂದೆ! ಅದೇಕೆ?

ಅತ್ಯುತ್ತಮ ಐತಿಹಾಸಿಕ ಕಾದಂಬರಿಗಳೂ, ಚರಿತ್ರೆಗಳೂ, ರಸವತ್ತಾದ ಸಾಮಾಜಿಕ-ಪೌರಾಣಿಕ ಕಥೆ-ಕಾದಂಬರಿಗಳೂ, ಶ್ರೇಷ್ಠತರಗತಿಯ ಹಾಗೂ ಹೆಸರುವಾಸಿಗಳಾದ ಪತ್ತೆದಾರೀ ಕಥೆಗಳೂ ಶ್ರೀ ಶೇಷಾಚಲ ಗ್ರಂಥಮಾಲೆಯಲ್ಲಿ ಕಳೆದಹಿಂವರ್ಷಗಳಿಂದಲೂ ಕ್ರಮಶಃ ಪ್ರಕಟವಾಗುತ್ತಲಿದ್ದು ಅಂಥ ೧೦೦-೧೫೦ ಮನೋಹರ ಪುಸ್ತಕಗಳು ಈಗಾಗಲೇ ಹೊರಟು ಕನ್ನಡ ವಾಚಕರನ್ನು ತೃಪ್ತಿಗೊಳಿಸಿರುತ್ತವೆ, ಹಾಗು ಪ್ರತಿವರ್ಷವೂ ಈ ಗ್ರಂಥಮಾಲೆಯ ದ್ವಾರ ೩-೪ನಾಲ್ಕನೀಯ ಹೊಸ ಪುಸ್ತಕಗಳು ತಪ್ಪದೆ ಪ್ರಕಟವಾಗುತ್ತಲಿವೆ. ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ **ಬೆಲೆ ಕಡಿಮೆ**

ಅಪೇಕ್ಷಿತರು: **ಶ್ರೀ ಶೇಷಾಚಲ ಪ್ರೆಸ್,**

ಪೋ. ಆನಂದವನ (ಹಾವೇರಿ) ಜಿ. ಧಾರವಾಡ

ಈ ಅಡ್ರೆಸ್ಸಿಗೆ ಬರೆಯಬೇಕು. ಕ್ಯಾಟಲಾಗ್ ಪುಕ್ಕಟೆ. ದೇ. ಘ. ಬ್ಯಾರಿಸ್ಟರ್ ಸಂಪಾದಕರಿಂದ ಬರೆಯಲ್ಪಟ್ಟ ರಮ್ಯ ಭೀಷಣ "**ಕಾಲಾಪಾನಿ ಪುಸ್ತಕವು** ಕರಿನೀರು"ಎಂದು ಕನ್ನಡದಲ್ಲಿ ನಮ್ಮಿಂದ ಬೇಗನೇ ಪ್ರಕಟವಾಗುವುದು.

The Commonwealth Asssu. Co., Ltd.

ದಿ ಕೋಮನ್‌ವೆಲ್ತ್

ಎಸ್ಯೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.

ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:—

ಎಸ್. ಪಿ. ಆರ್. ನಾಯಕ್ ಎಂಡ್ ಸನ್ಸ್,	**ಗವಾನಕರ್ ಎಂಡ್ ಸನ್ಸ್,**
ಸ್ಪೆಶಲ್ ಏಜಂಟ್	ಚೀಫ್ ಏಜಂಟ್ಸ್,
ಕಾರ್ ಸ್ಟ್ರೀಟ್, ಮಂಗಳೂರು.	ಆನಂದರಾವ್ ಸರ್ಕಲ್
	ಬೆಂಗಳೂರು.

ನಿಮಗೆ ಇಚ್ಛೆ ಇರುವುದಾದರೆ

ನಿಮ್ಮಲ್ಲಿ ಯಾ ನಿಮ್ಮ ಕುಟುಂಬದಲ್ಲಿ ಗರ್ಭಿಣಿಯರಿದ್ದರೆ ಸುಖವಾಗಿ ಹೆರಿಗೆ (ಪ್ರಸವ) ಯಾಗಬೇಕೆಂದು ನಿಮಗಿಚ್ಛೆ ಇದ್ದರೆ, ಈ ದಿನದಿಂದಲೇ ತಕ್ಕ ಉಪಾಯ ಮಾಡಿರಿ. ಹೆರಿಗೆಯ ವೇದನೆ ಪ್ರಾರಂಭವಾದೊಡನೆ ನಮ್ಮ **ಪ್ರಸೂತಿ ಕಲ್ಯಾಣವಟಿ**ಗಳನ್ನು ಸೇವಿಸಿದರೆ ಸುಖಪ್ರಸವ (ಹೆರಿಗೆ) ವಾಗುವುದರಲ್ಲಿ ಸಂದೇಹವಿಲ್ಲವೆಂಬುದಾಗಿ ಆಧುನಿಕ ವೈದ್ಯರ ಅನುಭವದ ಮಾತಾಗಿದೆ ಹಾಗೂ ಗರ್ಭಿಣಿಯರಿಗೆ ನಮ್ಮ **ಪ್ರಸೂತಿ ಕಲ್ಯಾಣವಟಿಗಳು** ಅಮೃತಸಮಾನವಾಗಿವೆ. ಪ್ರತಿಸಲಕ್ಕೆ ಒಂದೆರಡು ವಟಿಕೆಗಳನ್ನು ಒಂದೆರಡುಸಾರಿ ಸೇವಿಸಿದೊಡನೆಯೇ ಸುಖವಾದ (ಹೆಂಗೆ) ಪ್ರಸವವಾಗುವುದರಲ್ಲಿ ಅನುಮಾನವಿಲ್ಲ. ಹೆತ್ತ ತರುವಾಯ ಒಂದೆರಡು ವಟಿಕೆಗಳ ಸೇವನೆಯಿಂದ ಒಳಗೆ ಸಂಚಿತವಾದ ರಕ್ತಲಸೀಕಾ (Placenta) ಕಸದ ಶೇಷವಹಾ ಹೊರಗೆತಳ್ಳಿ, ಗರ್ಭಾಶಯಕ್ಕೆ ಬಲಕೊಡುವುದಲ್ಲದೆ ನಂಜುವಿರೋಣವೆಂಬ ಸೂತಿಕಾ ರೋಗ ಇತ್ಯಾದಿ ಬಾರದಂತೆ ತಡೆಗಟ್ಟುವದು. ವಿಶೇಷ ಗುಣ ಧರ್ಮ ಮತ್ತು ಅನುಪಾನ ವಟಿಕೆಗಳೊಂದಿಗೆ ಕಳುಹಿಸಲ್ಪಡುತ್ತದೆ. ಅತೀ ಬಡವರೂ ಸಹ ಉಪಯೋಗಿಸುವಂತೆ ಡಜನು 1ಕ್ಕೆ 0-12-0. ಏಳಾಣೆ ಸ್ಟಾಂಪು ಕಳುಹಿಸಿದ್ದಲ್ಲಿ 6 ವಟಿಕೆಗಳನ್ನು ಕಳುಹಿಸುತ್ತದೆ.

ಪ್ರಸವದ ಮುಂದೇನು

12 ದಿನಗಳ ತನಕ ನಮ್ಮ ಬಾಣಂತಿ ಕ್ವಾಥವನ್ನು ಉಪಯೋಗಿಸಿ ಉತ್ತಮವಾದ ಗುಣಗಳ ಲಾಭವನ್ನು ಪಡೆಯಿರಿ. ಇದರ ಸೇವನೆಯಿಂದ, ಜ್ವರ, ಉದರ ಶೂಲೆ, ತಲೆನೋವು, ನಿದ್ರಾ ಭಂಗ, ನಡುಕು, ನಂಜುವಿರೋಣ ಇತ್ಯಾದಿ ಬಾಣಂತಿಯ ಸರ್ವರೋಗಗಳೂ ಗುಣವಾಗುತ್ತದೆ. ಹಾಗೂ ಈ ತರದ ದುಷ್ಪರಿಣಾಮಗಳು ಬಾರದಂತೆ ತಡೆಗಟ್ಟುವದಲ್ಲದೆ ಬಾಣಂತಿಯು ಕಳಕೊಂಡ ಶಕ್ತಿಯನ್ನು ತುಂಬಿ ದಷ್ಟಪುಷ್ಟಳಾಗಿ ಶಿಶುವಿಗೆ ಯಥೇಷ್ಟ ಶುದ್ಧ ಹಾಲು ಸಹಾ ಸಿಗುವಂತೆ ಮಾಡುತ್ತದೆ. ಕ್ರಯ ಬಾಟ್ಲಿ 1ರ 1-0-0. ಇದರೊಂದಿಗೆ ಪ್ರಸೂತ ಕಲ್ಯಾಣವಟಿ 6 ವಟಿಗಳನ್ನು ಉಚಿತವಾಗಿ ಕಳುಹಿಸುವೆವು. ವಿ. ಪಿ ಚಾರ್ಜು ಪ್ರತ್ಯೇಕ.

ಆಮಲಕೀ ತೈಲ

(ಪುಷ್ಪಗಂಧಾಮೋದಿತ ಬಹುಗುಣಯುಕ್ತ)

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ, ಪ್ರೌಢಸ್ತ್ರೀ-ಪುರುಷರಿಗೂ ನಿತ್ಯ ಕೇಶಪ್ರಸಾದನಾರ್ಥ ಉತ್ತಮವಾದ ಚಿತ್ತಾಕರ್ಷಕತೈಲ.

4 ಔನ್ಸಿನ ಸೀಸೆ ೧ರ 0-11-0
2 ಔನ್ಸಿನ ಸೀಸೆ ೧ರ 0-6-0

ಧನ್ವಂತರಿ ಗುಟಿಕಾ

ಕಸ್ತೂರಿಯುಕ್ತ ವಾಯುಮಾತ್ರೆ

ಆಬಾಲವೃದ್ಧ ಸ್ತ್ರೀ-ಪುರುಷರಿಗೆ ಅಕಸ್ಮಾತ್ತಾಗಿ ಬರುವ ರೋಗಗಳಲ್ಲಿ ತಕ್ಷಣ ಒಂದೆರಡು ಮಾತ್ರೆಗಳನ್ನು ಸೇವಿಸಿದ್ದಲ್ಲಿ ದೋಷಗಳು ನಿವೃತ್ತಿಯಾಗುವ ಸಂಗ್ರಾಹ್ಯ ಔಷಧಿಯಾಗಿದೆ, ಹಾಗೂ ಗರ್ಭಿಣಿಯರ ರೋಗಗಳಲ್ಲಿ ಅತ್ಯುತ್ತಮವಾಗಿದೆ. ಕ್ರಯ 100 ಮಾತ್ರೆಗಳಿಗೆ 1-6-0, 600ಕ್ಕೆ 5-0-0. ಐದಾಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ;

ನಮ್ಮ ಔಷಧಿಗಳು ಈ ಕೆಳಗಿನವರಲ್ಲಿ ಸಿಗುತ್ತವೆ:—

ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ, ಎಮ್. ಮಂಜುನಾಥಯ್ಯ, ಕಲ್ಯಾಣಪುರ ಪೋಸ್ಟ್, ದ. ಕ.

ಯಾವತ್ತೂ ಔಷಧಗಳಿಗೂ ಏಜನ್ಸಿ ಶರ್ತಗಳಿಗೂ ಬರೆಯಿರಿ—

ಸ್ವದೇಶೀ ಔಷಧೀ ಭಂಡಾರ.

ಕುಂಜಾಲು, ದ. ಭಾರತ, ಬ್ರಹ್ಮಾವರ ಪೋಸ್ಟ್.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಬೋರ್ಡು, ಪೇಟೆಗಳ ಬೀಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBBER STAMP CO,
Balmat Road, MANGALORE.
Included by the Mysore Govt Stores Purchase Committee in the list of approved Firms.

ಬೊಂಬಾಯಿ ಸಮಾಚಾರ

(ಸ್ವಂತ ಬಾತ್ಮೀದಾರರಿಂದ)

16-12-38

ವರ್ಷಾರ್ಧದಲ್ಲಿ ಮುಂಬಯಿ ಸರಕಾರದ ಚಟುವಟಿಕೆ—ಎರಡನೆಯ ವರ್ಷಾರ್ಧದಲ್ಲಿ ಮುಂಬಯಿ ಸರಕಾರವು ಯಾವ ಚಟುವಟಿಕೆಗಳನ್ನು ಮಾಡಿದೆಂಬುದರ ಕುರಿತು ಪ್ರಕಟಣಾಪತ್ರವೊಂದನ್ನು ಸರಕಾರವು ಪ್ರಕಟಿಸಿದೆ. ಅದರಲ್ಲಿ ಜಾತಿಭೇದಗಳನ್ನಿಟ್ಟುಕೊಂಡು, ದೂಷಣೆಮಾಡುತ್ತಾ, ರಾಜ್ಯದ ಶಾಂತಿಗೆ ಕಂಟಕಪ್ರಾಯರಾದವರನ್ನು ಇನ್ನು ಮುಂದೆ ಕಠಿಣವಾಗಿ ಶಿಕ್ಷಿಸುವರೆಂದು ಪ್ರಕಟಿಸಿರುವರು, ಮಾತ್ರವಲ್ಲ ಹೀಗೆ ಜಾತಿಭೇದಗಳಿಂದ ಹೊಡೆದಾಡಿಕೊಳ್ಳುತ್ತಿದ್ದ ಆರು ಪತ್ರಿಕೆಗಳನ್ನು ನಿಲ್ಲಿಸಬೇಕಾಯಿತಂತೆ. ಇನ್ನು ಕೋರ್ಟುಗಳ ವಿಷಯದಲ್ಲಿಯೂ ಹಲವಾರು ಬದಲಾವಣೆಗಳನ್ನು ಮಾಡಿರುವೆವೆಂದೂ, 'ಎಕ್ಸಿಕ್ಯೂಟಿವ್' ಮತ್ತು 'ಜ್ಯುಡಿಶಿಯರಿ' ಇವೆರಡನ್ನು ಬೇರೆಬೇರೆ ಮಾಡುವ ಪ್ರಶ್ನೆಯನ್ನೂ ನಿಶ್ಚಯಿಸಿ ಒಂದಿಲ್ಲವೆಂದೂ ಪ್ರಕಟಣೆಯು ಸಾರುತ್ತಿದೆ. ಜೈಲುಗಳ ಸುಧಾರಣೆಗಾಗಿಯೂ ನೂರಾರು ಮಾರ್ಪಾಟುಗಳನ್ನು ಮಾಡಿ, ಕೈದಿಗಳಿಗೆ ಯೋಗ್ಯ ಆಚಾರವಿಚಾರಗಳನ್ನು ಪಾಲಿಸುವಂತೆ ಮಾಡಿರುವೆವೂ, ಮತ್ತು ಸರಕಾರೀ ಉದ್ಯೋಗದಾರರ ಜನತೆಯೊಡನೆ ಹೆಚ್ಚಿನ ಬಳಕೆಯನ್ನು ಬೆಳೆಸಿ, ತಮ್ಮ ಕಾರ್ಯಗಳಲ್ಲಿ ಅವರೂ ಸಹಕರಿಸುವಂತೆ ಮಾಡಿಕೊಳ್ಳಬೇಕೆಂದೂ, ಪ್ರಕಟಣೆಯು ಸಾರವಾಗಿದೆ. ಮದ್ಯಪಾನ ನಿಷೇಧ ಕುರಿತಾಗಿಯೂ, ಸರಕಾರವು ತಾನು ಮಾಡಿರುವ ಈ ಸುಧಾರಣೆಗಳನ್ನೆಲ್ಲ ಅನುಭವಿಸಿದವರು ಜನರಾಗಿರುವುದರಿಂದ, ಇದರ ಸಂಪೂರ್ಣ ಪರಿಜ್ಞಾನವು ಜನತೆಗೆ ಗೊತ್ತು!

ಹಿಂದೀ ದೈನಿಕ ಪತ್ರಿಕೆ—"ನವರಾಷ್ಟ್ರ" ಎಂಬ ಹಿಂದೀ ದೈನಿಕ ಪತ್ರಿಕೆಯೊಂದು ಮುಂಬಯಿಯಲ್ಲಿ ದಸಂಬರ 24ಕ್ಕೆ ಹೊರಡಲಿದೆ. ಪ್ರೊಫೆಸರ್ ಇಂದ್ರರವರು ಇದರ ಮುಖ್ಯ ಸಂಪಾದಕರಾಗುವರು.

ಕೇರಳ ಸಂಸ್ಥಾನ ಜನರ ಮಹಾಸಭೆ. ಕೇರಳ ಪ್ರಾಂತೀಯ ಜನರ ಕಾನ್ಫರೆನ್ಸ್ ಕಳೆದ ಶನಿವಾರ ಮತ್ತು ಆದಿತ್ಯವಾರಗಳಲ್ಲಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷರಾದ ಡಾ। ಸುರೇಶ್ಚಂದ್ರ ಬೆನರ್ಜಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಸಂಸ್ಥಾನಗಳಲ್ಲಿಯ ಜನರ ಸ್ವಾತಂತ್ರ್ಯದ ಕುರಿತೂ, ಕಾಂಗ್ರೆಸು ಹರಿಪುರದಲ್ಲಿ ಸಂಸ್ಥಾನಗಳ ಕುರಿತೂ ಪಾಸುಮಾಡಿರುವ ಠರಾವನ್ನು ಹಿಂದೆಗೆಯಬೇಕೆಂದೂ, ಮೊದಲಾದ ಠರಾವುಗಳನ್ನು ಪಾಸ ಮಾಡಿ ... ಕೇರಳ ಜನರಲ್ಲಿ ನೂತನ ಹುರುಪನ್ನುಂಟುಮಾಡಿತು.

ಅಧ್ಯಕ್ಷರು ತಮ್ಮ ಅಪೂರ್ವ ಭಾಷಣದಲ್ಲಿ ಕೇರಳದ ಪುರಾತನ ಚರಿತ್ರೆಯನ್ನು ಇಂದಿನವರೆಗೆ ಸಂಪೂರ್ಣವಾಗಿ ವಿವರಿಸಿ, ಸಂಸ್ಥಾನದ ಜನರು ಈಗ ಸ್ವಾತಂತ್ರ್ಯವನ್ನು ... ಕಂಡ ಹಿಡಿದಿರುವರೆಂದೂ, ಟ್ರೇವಂಕೂರೇ ಅದಕ್ಕೆ ಮುನ್ನಡಿಯ ಇಟ್ಟಿದೆಂದೂ, ಜನತೆಯು ಇತ್ಯಾದಿ ಉತ್ಸಾಹದಿಂದ, ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂದೂ ವಿವರಿಸಿದರು.

ಬಾಡಿಗೆ ವಿಚಾರಣಾ ಸಮಿತಿ—ಈ ಸಮಿತಿಯು ಸ್ಥಾಪನೆಯಾಗಿ ಹಲವು ಮಾಸಗಳು ಸಂದು ಹೋದರೂ, ಇಂದಿನ ತನಕ ಸ ಐಕ್ಯಮತ್ಯದಲ್ಲಿ ನಿದ್ರಿಸುತ್ತಿತ್ತು. ಈ ಕಮಿಟಿಯ ಸದಸ್ಯರು ಕಳೆದ ಸೋಮವಾರ ನಿಷ್ಪ್ರಯೋಜಕವಾದ ನಿದ್ರೆಯಿಂದ ಹೊರಗೆ ಬಂದು, ತಾವು ಕನಸಿನಲ್ಲಿ ಕಂಡ, ವಿಷಯಗಳ ಕುರಿತು ಚರ್ಚಿಸತೊಡಗಿದರು. ಬಿ ಪಿ ಟಿ ಯ ಎಸ್. ಯ ಮುಂದಾಳುಗಳು ಕೆಲವು ಸೂಚನೆಗಳನ್ನು ಕೊಟ್ಟರು. ಕಟ್ಟಡಗಳನ್ನು ಕಟ್ಟುವ ಸರ್ವ ಅಧಿಕಾರವನ್ನೂ ಸರಕಾರವಾಗಲೀ, ಮುನಿಸಿಪಾಲಿಟಿಯಾಗಲೀ ಇಟ್ಟುಕೊಂಡ 5 ಅಥವಾ 10 ವರ್ಷದ ಉಪಾಯಗಳನ್ನು ಮಾಡಬೇಕು. ಯಾಕೆಂದರೆ ಹಣವಿದ್ದವರು ಒಟ್ಟೊಟ್ಟಿಗೇ ಕಟ್ಟೋಣಗಳನ್ನು ಕಟ್ಟುವಲ್ಲಿ ಅವರು ತುಂಬ ಬಾಡಿಗೆ ಹಾಕಿ ಜನರನ್ನು ಸುಲಿಯುವರು. ಸರಕಾರವೇ ಬಾಡಿಗೆಯನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಬೇಕು. ಒಬ್ಬ ಮನುಷ್ಯನ ಆದಾಯದ ಶೇಕಡಾ 10%ಕ್ಕಿಂತ ಹೆಚ್ಚು ಬಾಡಿಗೆ ಬೀಳದಂತೆ ಮಾಡಿ ಬಂಡವಾಳಗಾರನಿಗೆ ಶೇಕಡಾ 4%ರಂತೆ ಸರಕಾರವೇ ಕೊಡುವಂತೆ ಮಾಡಬೇಕೆಂದೆಲ್ಲ ಸೂಚನೆಗಳನ್ನು ಶ್ರೀ ಜಮ್ನಾದಾಸ್ ಮೆಹತಾರವರೇ ಮೊದಲಾದವರು ತಂದರು.

ದಿ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನ ಫಂಡು, ಮುಂಬಾಯಿ:—ಈ ಸಂಸ್ಥೆಯ ಸದಸ್ಯರಾದ ರಾ. ಎಸ. ಪಿ. ಅಂಚನ್‌ರವರ ಈ ಸಂಸ್ಥೆಯ ಬಂಡವಾಳದಿಂದ ವೃದ್ಧಿಯಾಗುವ ಉದ್ದೇಶ್ಯ ತಾ. 5-1-31ರಲ್ಲಿ ಕೊಟ್ಟ ರೂಪಾಯಿ 115-0-0ನ್ನು ಅವರು ತಾ. 5-12-38ರಲ್ಲಿ ನಮ್ಮ ತಿಳುವಳಿಕೆಗೆ ಗೊತ್ತಿದ್ದು ಆದ ಖರ್ಚು ಕಳೆದು ಉಳಿದ ರೂಪಾಯಿ 100-3-6ವನ್ನು ಈ ಮೇಲಿನ ಸಂಸ್ಥೆಯ ಮೇಲಧಿಕಾರಿಯವರ ವಶ ಕೊಟ್ಟಿರುತ್ತಾರೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬಂಟರ ಯಾನೆ ನಾಡವರ ಸಂಘ:— ಇದರ ವಾರ್ಷಿಕ ಮಹಾಸಭೆಯು ನವಂಬರ್ ತಾ. 27ರಲ್ಲು ಮ. ರಾ. ಪಾಂಗಾಳ ಮಹಾಬಲ ಶೆಟ್ಟಿ ಅಧ್ಯಕ್ಷತೆಯಲ್ಲಿ ದಿ ಸೇಠಸಲ ಮೆಡಿಕಲ್ ಕಾಲೇಜನಲ್ಲಿ ಅತಿ ಸಂಭ್ರಮದಿಂದ ನಡೆಯಿತು. ಗತ ವರ್ಷದ ವರದಿಯೂ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳೂ ಪರಿಶೀಲಿಸಿ ಮಂಜೂರು ಮಾಡಲ್ಪಟ್ಟವು. ಹೊಸ ಕಾರ್ಯನಿರ್ವಾಹಕ ಮಂಡಳಿಯ 11 ಮಂದಿ ಸದಸ್ಯರನ್ನು ಈ ಕೆಳಗೆ ಕಾಣಿಸಿದ ಪ್ರಕಾರ ಚುನಾಯಿಸಲಾಯಿತು. ಡಾ. ವೆಂಕಟರಾವ್ ಸೆಟ್ಟಿ, ಜೆ. ಪಿ. ಅಧ್ಯಕ್ಷ. ಪಾಂಗಾಳ ಮಹಾಬಲ ಸೆಟ್ಟಿ, ಉಪಾಧ್ಯಕ್ಷ. ಶ್ರೀ ಯಸ್ ಸಂಜೀವ ಸೆಟ್ಟಿ, ಶ್ರೀ ಶಾಂತಪ್ಪ ರೈ, ಮಾನಾರ್ಹ ಜೊತೆ ಕಾರ್ಯದರ್ಶಿಗಳು. ಶ್ರೀ ಕೌಡೂರು ವೆಂಕಪ್ಪ ಹೆಗ್ಡೆ, ಶ್ರೀ. ಪಿ. ಕೃಷ್ಣಯ್ಯ ಸೆಟ್ಟಿ, ಗೌರವ ಜೊತೆಕೋಶಾಧಿಕಾರಿಗಳು. ಶ್ರೀ. ಬಿ. ಗೋವಿಂದ ಸೆಟ್ಟಿ, ಬಿ. ನಾರಾಯಣ ಸೆಟ್ಟಿ, ಪಿ. ಚಂದು ಸೆಟ್ಟಿ, ಪಿ. ಅಣ್ಣು ಸೆಟ್ಟಿ ಮತ್ತು ಕೆ. ಸಂಕಪ್ಪ ಸೆಟ್ಟಿ ಸದಸ್ಯರು.

ಸಭೆಯಲ್ಲಿ ಸಂಘದ ಮೇಲ್ಮೆಯ ಕುರಿತು ಅನೇಕ ವಿಷಯಗಳು ಚರ್ಚಿಸಲ್ಪಟ್ಟವು. ಶ್ರೀ. ಮೊಂಬ ಶೆಟ್ಟಿ ಪರಸ್ಪರ ಸಹಾಯದ ಠರಾವನ್ನು ಕಾರ್ಯನಿರ್ವಾಹಕ ಕಮಿಟಿಗೆ ಪರ್ಯಾಲೋಚಿಸಲು ಬಿಟ್ಟುಕೊಡಲಾಯಿತು. ಶ್ರೀ ಕಾರ್ಕಳ ವಕೀಲ್ ಸಂಜಪ್ಪ ಸೆಟ್ರ ನಿಧನದ ಕುರಿತು ಅವರ ಆತ್ಮಕ್ಕೆ ಶ್ರೀದೇವರು ಶಾಂತಿಯನ್ನೀಯಲೆಂದು ಪ್ರಾರ್ಥಿಸಲಾಯಿತು. ಲಕ್ಷ್ಮೀ ಟಿಫಿನ್ ಅಲ್ಲದೆ ಚಹ ಫಲಾಹಾರದಿಂದ ಅಂದಿನ ಸಭೆಯು ಅಂತ್ಯವಾಯಿತು.

ಹರಿಕೀರ್ತನೆ:— ದಕ್ಷಿಣ ಕನ್ನಡಿಗರಾದ ಶ್ರೀ ಮ। ರಂ। ಸಾಮಕ ಪರಿದಾಸರು ಇಲ್ಲಿಗೆ ಬಂದಿದ್ದು, ಇಲ್ಲಿನ ಸಮಸ್ತ ಕನ್ನಡಿಗರು ಹಾಗೂ ಕೌಳವರು ಮನಮೆಚ್ಚುವಂತಹ ತಮ್ಮ ಹರಿಕೀರ್ತನೆಗಳನ್ನು ಮಾಡಿ, ಭಕ್ತರಿಂದ ಕಾಣಿಕೆ ಕಾಂಚನಗಳನ್ನು ಪಡೆದದ್ದಲ್ಲದೆ, ಎಸ್. ಕೆ ಸೆಟ್ಟಿ, ಮಲ್ಪೆ ಮೊಗವೀರ ತರುಣ ಸಂಘ, ವಿ ಕೆ. ಸುವರ್ಣ, ಬಿ. ಲೋಕಯ್ಯ, ಇವರಿಂದ ಕ್ರಮವಾಗಿ ಒಂದೊಂದು ಸುವರ್ಣ ಪದಕವನ್ನು ಬಹುಮಾನ ಪಡೆದು, ಶ್ರೀ ಗೋಕರ್ಣನಾಥ ಮಂಡಳಿಯವರಿಂದ "ಪಂಚಕನ್ಯಾ ಚರಿತ್ರೆ" ಎಂಬ 5 ದಿನಗಳ ಕೀರ್ತನವನ್ನು ಮಂಗಳ ಮಾಡಿ, ಕಾಣಿಕೆ ಸಹಿತವಾಗಿ ಪಟ್ಟೆಯ ನಿಲುವಂಗಿಯೊಂದನ್ನು ಪಡೆದು, ತಾ. 11ರಲ್ಲಿ ಊರಿಗೆ ಹಿಂತಿರುಗಿದರು.

ಕೂದಲು

ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ದಬ್ಬಲ್ ವಾಪಾಸು ಕೊಡಲು ಗ್ಯಾರಂಟಿ ಎಂಬುದಕ್ಕೆ ದೊರೆತ ನೂರಾರು ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ 5-0-0 ಕಾಲಂಶಕ್ಕೂ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವದಕ್ಕೆ ರೂ 7-0 0 ಬೆಲೆಯ ಎಣ್ಣೆ ಬೇಕಾಗುವದು ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

HAZRA & Co.,
P. O. Bihar Nursery (DARBHANGA)

[ಪೇಟೆಗೆ ಬಂದಿದ್ದ ದೊಡ್ಡ ಶೆಟ್ರಿಗೆ ಅವಾಂ ವ ಗ ಚೆನ್ನಪ್ಪನ ಮಾಸ್ತರು ನೋಡ ಸಿಕ್ಕಿದಾಗ—

ಮಾಸ್ತರು—ಓಹೋ, ಶೆಟ್ರೆ! ಯಾವಾಗ ಬರೋಣಾಯ್ತು? ಮೀಟಿಂಗಿಗೆ ಹೋಗುವವರೋ? ತಮ್ಮ ಹತ್ತಿರ ಒಂದೆರಡು ಮಾತು ಹೇಳೋದಿದೆ ಬಿಡುವುಂಟೋ?

ದೊಡ್ಡ ಶೆಟ್ರು—ಹೆಚ್ಚು ಇಲ್ಲ, ಹತ್ತು ಘಂಟೆಗೆ ವಕೀಲರಲ್ಲಿ ಬರುತ್ತೇನೆಂತ ಹೇಳಿದ್ದೇನೆ—ತದನಂತರ ಅವರು ಕೋರ್ಟಿಗೆ ಹೋಗಿ ಬಿಡ್ತಾರೆ

ಮಾಸ್ತರು—ನನಗೂ ಅಷ್ಟು ಹೊತ್ತಿಗೆ ಶಾಲೆಯಲ್ಲಿರಬೇಕಲ್ಲ, ವಿಶೇಷವೇನೂ ಇಲ್ಲ, ತಮ್ಮ ಮಗನ ವಿಷಯ ಒಂದೆರಡು ಮಾತು ನನ್ನ ಕೈಯಲ್ಲಿ ಅವನನ್ನು ಬಿಟ್ಟಿದ್ದೀರೆಂದಾದ ಮೇಲೆ ನನ್ನ ಕರ್ತವ್ಯ ನಾನು ಮಾಡಬೇಕಷ್ಟೆ!

ದೊಡ್ಡ ಶೆಟ್ರು—ಅದು ಸರಿಯೇ, ಅದ್ರ ನನ್ನ ಹತ್ತಿರ ಏನು ಹೇಳೋದಿದೆ?

ಮಾಸ್ತರು—ನೋಡಿ, ನಿಮ್ಮ ಮಗ ಶಾಲೆಗೆ ಸರಿಯಾಗಿ ಬರೋದಿಲ್ಲ, ಯಾಕೆ ಬರೋದಿಲ್ಲಾಂದ್ರೆ—ಸೌಖ್ಯವಿದ್ದಿಲ್ಲಾಂತಾನೆ ಆದರೆ ಯಾವಾಗಲೂ ಪೇಟೆ ತುಂಬ ಬೈಸಿಕಲ್ಲಿನಲ್ಲಿ ಓಡಾಡುತಿದ್ದಾನೆ. ಶಾಲೆಗೆ ಬಂದರೂ ಹಲವು ಸರ್ತಿ ಒಂದೆರಡು ಪಾಠದ ಮೇಲೆ ಕಾಣೆ! ಕಳೆದ ಪರೀಕ್ಷೆಯಲ್ಲಿ ಎಲ್ಲಾ ಪಾಠಗಳಲ್ಲಿಯೂ ಲಾಸ್. ತನಗೆ ತೋರಿಸಿ ಸಹಿ ಮಾಡಿಸಿಕೊಂಡು ಬರಲಿಕ್ಕೆ ಕೊಟ್ಟ ಪ್ರೋಗ್ರೆಸ್ ಕಾರ್ಡು ಇನ್ನೂ ಹಿಂದೆ ಬಂದಿಲ್ಲ.—ಕೇಳಿದರೆ ತಾವು ಸಿಕ್ಕಲಿಲ್ಲಾಂತಾನೆ—ಹೆಚ್ಚಾಗಿ ನಿಮ್ಮವರ ಹುಡುಗರೇ ಕಲಿಯುವುದರಲ್ಲಿ ಸ್ವಲ್ಪ ಹಿಂದೆ—ಆದರೆ ಶಿವಪ್ಪೋರಿನ ಆ ಬೋರ್ರ ಸೆಟ್ಟಿಯೆಂಬ ಹುಡುಗ ಬಹಳ ಗಟ್ಟಿಗನಿದ್ದಾನೆ ನೋಡಿ! ಪ್ರತಿ ಒಂದು ಪಾಠದಲ್ಲಿಯೂ ಅವನು ಫಸ್ಟ್—ಆದರೆ ಜೀವನ ತಂದೆ ಬರೇ ಬಾಲಗೇಣಿ ಒಕ್ಕಲ ಅಂತೆ. ಸಂಬಳ ಕೊಡಲಿಕ್ಕೆ ಗತಿಯಿಲ್ಲಾಂತ ಮೊನ್ನೆ ಹೆಡ್ ಮಾಸ್ತರರ ಮುಂದ ಕಣ್ಣೀರಿಟ್ಟ. ಶಾಲೆ ಬಿಡಿಸಿ ಗೇಯಲಿಕ್ಕೆ ಹಾಕ್ತೇನೆಂದ ಆದರ ಗೇಯುವವರು ಗೇಯಬೇಕು, ಓದುವವರು ಓದಬೇಕು ನೋಡಿ! ಬೆಳೆಯ ಗುಣ ಮೊಳೆಯಲ್ಲೇ ಕಾಣಿಸಿಕೊಳ್ಳುವ ಹಾಗೆ ಆ ಹುಡುಗ ಮುಂದೊಂದು ಹೆಸರಿಗ ಬರುವಂತವನೆಂಬುದು ನಮಗೆಲ್ಲ ನಿಶ್ಚಯ. ಆ ದುದರಿಂದ ನಮ್ಮ ಹೆಡ್ ಮಾಸ್ತರು ಅವನ ತಂದೆಯನ್ನು ಸಮಾಧಾನ ಮಾಡಿ ಸರಕಾರದ ಕಡೆಯಿಂದಲೂ ನಿಮ್ಮ ಬಡ ವಿದ್ಯಾರ್ಥಿ ಫಂಡಿನಿಂದಲೂ ಸಹಾಯ ಸಿಗುವಂತೆ ವ್ಯವಸ್ಥೆ ಮಾಡುತ್ತೇನೆಂತ ಹೇಳಿ ಹುಡುಗನನ್ನು ಶಾಲೆಯಲ್ಲಿಟ್ಟುಕೊಂಡಿದ್ದಾರೆ. ಕಲಿಯುವುದರಲ್ಲಾಗಲೀ ಶೀಲದಲ್ಲಾಗಲೀ ಹುಡುಗಾಂದ್ರೆ ಚೆನ್ನ! ಆದರ ನಿಮ್ಮ ಮಗ ಮಾತ್ರ ಏನು ಪ್ರಯೋಜನವಿಲ್ಲದೇ—ಹೀಗೆ ಹೇಳಿದ ಅಂತ ಬೇಜಾರ ಮಾಡಬೇಡಿ—ತಮ್ಮ ಹಿತಚಿಂತಕನಾಗಿ, ಹಾಗೂ ನನ್ನ ಕರ್ತವ್ಯ ದೃಷ್ಟಿಯಿಂದ, ಹೇಳಬೇಕಾದ್ದು ಹೇಳಿದೆ ಅವನನ್ನು ಸ್ವಲ್ಪ ಬಿಗು ಹಿಡಿಬೇಕ್ರೀ!

ದೊಡ್ಡ ಶೆಟ್ರು—ನನ್ನ ಮಗ ಕಲಿಯುವುದಿಲ್ಲವೆಂಬ ಸಂಗ್ತಿಯಲ್ಲಿ ನೀವು ಕಳವಳ ಪಡುವುದು ಬೇಡಾ—ಅಂವ ನಾಳೆ ಕೂಳಿಗಾಗಿ ನೌಕರಿ ಮಾಡ್ಬೇಕಾಗಿಲ್ಲ ನೋಡ್ರೀ—ಸರಕಾರಿ ಚಾಕ್ರಿ ಸಿಕ್ಕಬೇಕೆಂದಿಲ್ಲ - ವಕಾಲ್ತು ಡಾಕ್ಟ್ರೀ ಮಾಡ್ತಾ ಸಿಕ್ಕಿದ್ದೋರ ಕೈಕಾಲು ಹಿಡಿಬೇಕಾಗಿಯೂ ಇಲ್ಲ ಆ ದೃಷ್ಟಿಯಿಂದ ನಾನು ಅವನನ್ನು ಪ್ಯಾಟೀ ಶಾಲೆಗೆ ಕಳುಹಿಸಿದ್ದೇ ಅಲ್ಲ. ಹಳ್ಳಿ ಹೆಂಗಸರಿಂದ

ನೀನೇ ಹುಟ್ಟು ಹಿಡಿ.

(PADDLE YOUR OWN CANOE.)

Young man, paddle your own canoe Do not build your hopes on others. for it shows that you value yourself less When you introduce yourself as the son of so-and-so, you give yourself away unintentionally as a big zero. The question is what you are and not what your wife is nor what your father and father-in-law are He who takes pride in others and their possessions will achieve nothing by himself. Where is the glory in waiting for dead—men's shoes? How are you sure that you will come by them? Your father may be a Rockfeller, your father-in-law a Henry Ford, your wife an El Dorado; but where is the guarantee that their humour will not change? If you nourish your future on this, you are a poor psychologist, for man's psychology changes more quickly than the weather. So, O man, paddle your own canoe If a windfall comes, you are lucky—your exertion won't impede it, on the other hand it will add to it If it does not come, no disappointment. You can boast that you have not wasted your time. You can smile and say, 'I have learnt to paddle my own canoe.' The question might arise whether every one can be a Gandhi or a Nehru or a Bose or a Tagore. Why not? If not of international or national fame, you will be a miniature one in your own village or home and India will be full of vitality and life—tall, stout and stately I N-D-I-A wants he-men and not she-men who are father-made, mother-made, wife made, barber-made and tailor-made. India will give you little credit for your inheritance and much for what you are. **The letters which constitue the word 'India are significant. She wants 'Intelligence', 'Nobility', 'Devotion', 'Inspiration', and 'Aspiration' in every son and daughter of hers-for that is the stuff she is made of.** Young India, paddle your own canoe.

(ಲೇಖಕರು:—ಶ್ರೀ. ಬಿ ರಾಮಪ್ಪಯ್ಯ ಶೆಟ್ರು, ಬಿ. ಎ ಎಲ್. ಟಿ ಉಡುಪಿ.

ಹಿರಿದೆ ಸ್ವಲ್ಪ ಪ್ಯಾಟಿಯವರ ಮರ್ಜಿ ಕಲ್ತುಕೊಳ್ಳಿ, ಅದ್ರೊಂದಿಗೆ ಏನಾದ್ರೂ ನಾಲ್ಕಕ್ಷರ ಇಂಗ್ಲೀಷ್ ಹೆಕ್ಕಿಕೊಂಡರೆ ಸಾಕ್ರೀ, ರಿಕಾರ್ಡು ನೋಡಿ ಕೋಳ್ಳೋವಷ್ಟು, ವ್ಯಾಜ್ಯಸಾಜ್ಯ, ದೊಡ್ಡ ದೊಡ್ಡ ಮೀಟಿಂಗ್ ಇಂಥಾ ಸಮಯದಲ್ಲಿ ಮುನ್ಸೀಪ್ರು, ವಕೀಲ್ರು, ಪ್ರೆಸಿಡೆಂಟ್ರು ಮೊದಲಾದ ದೊಡ್ಡ ಮನುಸ್ರು ಮಾತಾಡಿಕೊಳ್ಳೋದ್ರ ಅರ್ಥವಾಗೋವಷ್ಟು, ಇನ್ನು ನಾಲ್ಕು ಮಾತು ಆಡೋವಷ್ಟು ಬಂದರೆ ಸಾಕ್ರೀ ನಿಮ್ಮ ಪ್ಯಾಸುಗೀಸು, ಸರ್ಟಿಪಿಕ್ಟು ಬೇಕಿಲ್ಲ ನಮ್ಗೆ ಕಾಣ್ರೀ. ಅಷ್ಟು ಅಂವ ಮಾಡ್ಕೊಂಡು ಮನೆಗ ಬಂದ್ರೆ ಮತ್ತೆಲ್ಲಾ ಇದ್ದೇಂತೇನೆ! ಅವನ ತಾಯಿ ಮನೆಯಲ್ಲಿ ಅವಳೊಬ್ಬಳೇ ಹೆಣ್ಣು—ಬಾಕಿ ಎಲ್ಲಾ ಅವನ ಮಾವಂದಿರು—ನಾಳೆ ಅಲ್ಲಿಯ ಯಜಮಾನ ಅವನೇ—ನನಗೆಂತೂ ಕುಟುಂಬವಿಲ್ಲ, ನನ್ನದೆಲ್ಲಾ ನಾಳೆ ಅವನಿಗೇ. ಅದು ಅವನಿಗೇ ಗಂಟ್ಟುಂಟು—ನಿಮ್ಮ ವಿದ್ಯೆಯಿಂದ ಅಂವ ಏನಾದ್ರೂ ಗಂಟು ಮಾಡೋದ ಬೇಡ, ನನ್ನ ಮಗನಿಗೆ ಸರ್ವ ಸ್ವತಂತ್ರದ ದೊಡ್ಡ ಸ್ಥಾನ ಉಂಟ್ರೀ—ಅವನು ಹೆದರಬೇಕೆಂದಿಲ್ಲ. ಅವನು ಇದ್ದಲ್ಲಿಗೇನೇ—ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಿಕೆ, ಬೆಂಚ್ ಮೆಂಬರಿಕೆ, ಎಸೆಂಬ್ಲಿ ಮೆಂಬರಿಕೆ ಬಂದು ಬಿಡ್ತೆ! ಇದಕ್ಕೆಲ್ಲಾ ಬೇಕಾದ್ದು ಮುಖ್ಯ ರೊಕ್ಕ. ಅದು ದೇವರ ದಯೆಯಿಂದ ನಮ್ಮ ಹತ್ತರ ಧಾರಾಳ ಇತ್ತ್! ತೊಂದ್ರೆ ಇಲ್ಲ, ಮತ್ತೇನು! ಅರ್ಜಿಗೆ ತಕ್ಕ ಸ್ವಲ್ಪ ಇಂಗ್ಲೀಸ್ ಇದ್ದುಬಿಟ್ರೆ ಅದಕ್ಕೊಂದು ಕಾಂತಿ ಬರ್ತ್ತೇಂತ ಶಾಲೆಗೆ ಹಾಕಿದ್ದೇನಲ್ಲದೆ ಮತ್ತ್ಯಾಕೂ ಅಲ್ಲ! ನನ್ನ ಒಕ್ಕಲ ಬಾಬನ ಮಗ ಬೋರ್ರನ್ನ ವಿಶೇಷ ಹೊಗಳುತ್ತೀರಲ್ಲಾ ನೀವು! ಅದರಲ್ಲೇನು ವಿಶೇಷ? ಅವನು ಇಲ್ಲಿ ವಿದ್ಯೆ ಕಲಿಯದಿದ್ದರೆ ಮನೇಲಿ ಎಷ್ಟು ಕೋಣ ಮೇಯಿಸಬೇಕು, ಮತ್ತೇನು ಮಣ್ಣು ಮುಕ್ಕೋದು ಅಲ್ಲ? ಬಡವರ ಮಕ್ಕಳಿಗೆ ವಿದ್ಯೆ; ನಮ್ಮಂಥಾ ಶ್ರೀಮಂತರ ಮಕ್ಕಳಿಗೆ ಯಾಕೆ? ಸ್ವಲ್ಪ ಸಾಕೊಂತೇನೆ. ನೀವು ಅವನ ಗೋಜಿಗ ಹೆಚ್ಚು ಹೋಗಬೇಡಿ—ಈಗ್ಲೇ ಅವನ ಸ್ಥಿತಿಗತಿ ಗೊತ್ತಿದ್ದು ಎಷ್ಟೋ ಕಡೆಗಳಿಂದ ದೊಡ್ಡ ದೊಡ್ಡ ನಂಟಸ್ತಿಕೆ ಬರುತ್ತದೆ. ವರದಕ್ಷಿಣೆ ತುಂಬಾ ಕೊಡುತ್ತಾರಂತ! ನೀರೆಲ್ಲ ಮತ್ತೂ ಮತ್ತೂ ಹರಿಯೋದು ಸಮುದ್ರಕ್ಕೆ ಅಲ್ದಾ? ಆಯ್ತು ನಮ್ಮ ಸಂಗ್ತಿ ತಿಳೀತ್ಯಾಲ್ಲಾ ನಿಮ್ಗೆ? ಇನ್ನು ನಮ್ಗೂ ಪುರ್ಸೊತ್ತಿಲ್ಲ—ನಿಮ್ಗೂ ಹೊತ್ತಾಯ್ತು!

(ಮಾಸ್ತರನ್ನು ಬಿಟ್ಟು ಮುಂದೆ ಹೋಗುತ್ತಾ ಶೆಟ್ರು ತನ್ನೊಳಗೆ) ಈ ಹಳ್ಳಟಿಗಳಿಗೆಲ್ಲಾ ಅಧಿಕ ಪ್ರಸಂಗ! ಏನು ಅಧಿಕ ಪ್ರಸಂಗಾಂತೇನೆ—ನಮ್ಮ ಸ್ಥಿತಿ ಇವುಕ್ಕೆ ಗೊತ್ತೈತ್ತಾ? ಬಿಕ್ನೇಶಿಗಳ್—ತಮ್ಮ ಕೆಲ್ಸಾ ತಾವು ಮಾಡೋದಪ್ಪಾ! ನಮ್ಮಂಥಾ ದೊಡ್ಡ ದೊಡ್ಡವರಿಗೆಲ್ಲಾ ಬುದ್ಧಿ ಹೇಳೋ ಅಧಿಕ ಪ್ರಸಂಗ ಯಾಕಿವುಕ್ಕೆ?

() () () ()

[ಹನ್ನೆರಡುವರ್ಷಗಳ ನಂತರ]

ಚೆನ್ನಪ್ಪ—ಅಯ್ಯೋ, ನನ್ನ ತಂದೆಯವರ ಮನಸ್ಸೇ! ನಮ್ಮ ತಾಯಿಯು ತೀರಿಹೋಗಿ ವರುಷ ಎರಡಾಗುವುದರೊಳಗೇ ಅವಳಿಗೆ ಕೊಟ್ಟಮಾತು ತಪ್ಪಿ ತಿರುಗಿ ಮದುವೆಮಾಡಿಕೊಂಡರು ದಿನ ಹೋದಂತೆ ನಮ್ಮ ಮೇಲೆ ಇವರ ಪ್ರೀತಿ ಕುಂದುತ್ತ ಬರುತ್ತೆ! ನಮ್ಮ ಮಲತಾಯಿ ನಮ್ಮ ವಿಷಯ ಅಲ್ಲದ ಸಲ್ಲದ ಚಾಡಿಹೇಳಿ ದೋಷಾರೋಪಣೆಮಾಡಿ, ಅವರ ಮನಸ್ಸಿನಲ್ಲಿ ವಿಷಸುರಿಸಿಬಿಟ್ಟಿದ್ದಾಳೆ. ತಂದೆ ಆಸ್ತಿ ನಮಗೆ ಬರುತ್ತೇಂತ ಚಾಯಿಕಳ್ಕೊಂಡು ಕೂತಿದ್ದೆ ಸ್ಯೆ! ತಾಯಿಯಿರುವಾಗ ಏನೋ ಒಂದು ಇನ್ನೂರು ಮುಡಿ ಹುಟ್ಟುವಳ್ಳಿಯ ಆಸ್ತಿಕೊಟ್ಟಿದ್ದರು. ಅದಕ್ಕೆ ಹತ್ತು ಸಾವಿರ ರೂಪಾಯಿ ಸಾಲವುಂಟು. ಇದರ ಬಡ್ಡಿಯೇ ವರ್ಷಕ್ಕೆ ಒಂದು ಸಾವಿರ! ತಾಯಿ ತೀರಿಕೊಂಡ ಮೇಲೆ ಮಲತಾಯಿಯ ದುರ್ಬೋಧನೆಯಿಂದ ಆದರ ಬಡ್ಡಿಯನ್ನೂ ಕೊಡದೆ ಅದು ಹೆಚ್ಚುತ್ತಾ ಬರುತ್ತೆ. ಕುಟುಂಬವಿಲ್ಲದ ಕಾರಣ ಇವರ ಸಾವಿರ ಮುಡಿ ಹುಟ್ಟುವಳ್ಳಿಯ ಆಸ್ತಿಯು ನಮಗೇ ಅಂತ ತಾಯಿಯ ಕಾಲದಲ್ಲಿ ಆಶೆತೋರಿಸಿದ್ದರು. ಆಗ್ಲೆ ಏನಾದ್ರೂ ದಾಖ್ಲೆಮಾಡಿದ್ರೆ ಆಗ್ತಿತ್ತು! ಈಗ ಮಲತಾಯಿ ಒಬ್ಬಳ ಹೆಸರಲ್ಲೇ ವೀಲ್ ಆಗಿದೇಂತ ವರ್ತಮಾನ! ಅಯ್ಯೋ ನಮ್ಮ ದುರದೃಷ್ಟವೇ—ನನ್ನ ಒಡಹುಟ್ಟಿದ ತಂಗಿಯರು ಮೂವರಲ್ಲಿ ಇಬ್ಬರಿಗೆ ತಾಯಿಯ ಕಾಲದಲ್ಲಿಯೇ ಲಗ್ನ ಆದ್ದು ಅವರ ಪುಣ್ಯ. ಈಗ ತಂದೆಯವರು ಕಿರಿಯವಳ ಮದುವೆಯ ಗೊಡವೆಯಲ್ಲೇ ಇಲ್ಲವಲ್ಲಾ! ನಮ್ಮ ತಾಯಿಯ ಮನೆಯ ಕಡೆ ನೋಡಿದರೆ ಅಲ್ಲಿಯೂ ಪಸೆಉಳಿಯುವ ಲಕ್ಷಣವಿಲ್ಲ. ನನ್ನ ಮಾವಂದಿರ ದುಂದುಗಾರಿಕೆಯಲ್ಲಿ ತೀರ್ವೆ ಸಹಾ ಕೊಡೋದು ಕಷ್ಟವಾಗಿ, ಕುಟುಂಬದ ಆಸ್ತಿಗಳು ಏಲಂಗೆ ಬರುತ್ತಾ ಇವೆ. ತಾಯಿ ಇರುತ್ತಿದ್ದರೆ ತಂದೆಯವರು ಬಿಡುತ್ತಿದ್ರಾ? ನಮ್ಮ ನೆಂಟರ ಕಡೆಗೆ ತಿರುಗೋಣಾಂದ್ರೆ, ಅವರು ಕೊಟ್ಟ ಬದಿಯೆಲ್ಲ ತಂದೆ ಕೈಯಲ್ಲೇ ಇದ್ದು ಈಗ ಮಲತಾಯಿ ಬಗಲಿಗೆ ಬಿತ್ತೂಂತನನ್ನ ಮಾವನ ಮನೆಯವರಿಗೆ ಸಿಟ್ಟು! ನನ್ನನ್ನು ಅಷ್ಟು ಮಾನಿಸುತಿದ್ದ ಮಾವ—ಈಗ ನೋಡುವ ಕ್ರಮವೇ ಬೇರೆಯಲ್ಲಾ! ಏನಾದ್ರೂ ದುಡ್ಡಿನ ತಾಪತ್ರಯ ಮಾತಾಡಿದ್ರೆ 'ಇಲ್ಲಿ ಬಂದು ಕರಕರಿಮಾಡಬೇಡ—ನಮ್ದೇ ನಮಗೆ ಜಾಸ್ತಿಯಾಗಿದೆ—ಹುಡುಗಿಯನ್ನು ಬಿಟ್ಟರೂ ಚಿಂತೆಯಿಲ್ಲ—ಒಂದು ಪೈಯೂ ಸಿಕ್ಕಲಾರದು', ಅಂತ ಹೇಳುತ್ತಾರೆ. ನನ್ನ ಗತಿಯೇ! ತಂಗಿಯ ಮದುವೆ ವಿಚಾರ ತಂದೆಯವರ ಹತ್ತಿರ ಮಾತಾಡಿದರೆ—'ನಿನ್ನ ತಾಯಿಯ ಮನೆಯಲ್ಲಿ ಸ್ಥಿತಿ ಇಲ್ಲವಾ?—

Established] [1906

THE

UNITED INDIA

LIFE ASSURANCE COMPANY. LTD.,

HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	Rs.	486 Lakhs
Annual income Exceeds	Rs.	28 Lakhs
Total Assets Exceed	Rs.	100 Lakhs
Total claims paid over	Rs.	36 Lakhs.

The oldest and largest Life Assurance Company of South India, having 31 years of record service.

A POLICY IN THE UNITED INDIA *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to:—

THE BRANCH MANAGER,
The United India,
Life Assurance Company Ltd.
BLOCK No 2, Pelix Pai Bazaar,
BRANCH, MANGALORE, S. K.

OR

K. Keshava Shenoy, M. A.
Organiser, Shantiniketan,
PENTLANDPET,
MANGALORE.

ಕಟ್ಟಿ ಮಾರಿ ಮದುವೆಮಾಡು—ಮತ್ತೆ ನೀನು ಯಾಕೆ ಗಂಡಸಾಗಿ ಹುಟ್ಟಿದ್ದು—ತಂಗಿಗೆ ಮದುವೆಮಾಡಲಿಕ್ಕೆ ಆಗದವ" ಅನ್ನುತ್ತಾರೆ. ಸಿಕ್ಕಿಬಿದ್ದೆಲ್ಲಾ!—ಬೇರೆಯುವರ ದೋಣಿನಂಬಿ ಕಾದುಕೂತು ಆಯುಷ್ಯ ಹಾಳಾಯ್ತು! ಈಗ ಬೇರೆಯುವರ ದೋಣಿಯೂ ಇಲ್ಲ—ನಾನು ಸ್ವಂತ ದೋಣಿ ಮಾಡ್ಕೊಂಡಿಲ್ಲ! ಶಾಲೆಯಲ್ಲಿ ನಮ್ಮ ಮಾಸ್ಟರ್ ಹೇಳುತ್ತಿದ್ದರು-(There is many a slip betwixt the cup and the lip)-ಕೈಗೆ ಬಂದ ತುತ್ತು ಬಾಯಿಗೆ ಒದಗೋದಿಲ್ಲಾಂತ! ಛೆ. ಆಗ ನನಗೆ ಸತ್ಯಾಂತ ತೋರಲಿಲ್ಲ.—ಈಗ ಅದು ಅನುಭವಕ್ಕೆ ಬಂತು!

(ಮರುದಿವಸ ಚನ್ನಪ್ಪನು ಪೇಟೆಗೆ ಹೋದಲ್ಲಿ ಒಂದು ವರ್ತಮಾನ ಪತ್ರಿಕೆ ತೆಕ್ಕೊಂಡು ಮೇಲಿಂದ ಮೇಲೆ ಮಗುಚುತ್ತಿದ್ದಾಗ)

ಅರೆ! ಇದು ಯಾರದು ಚಿತ್ರ- ಡಾಕ್ಟರ್ ಬೋಗ್ರ! ಯಾವ ಬೋಗ್ರ? ಹಲ್ಲೋ! ಗುರುತವಿದ್ದಹಾಗೆ ಕಾಣ್ತಾನೆ! ಹೌದು! ಇದು ನಿಜವಾಗಿ ನಮ್ಮ ಬಾಬನ ಮಗ ಬೊಗ್ರ! ನನ್ನೊಟ್ಟಿಗೆ ಶಾಲೆಯಲ್ಲಿ ಕಲಿಯುತ್ತಿದ್ದ ಹುಡುಗ—ಈಗ ಪೇಪರಿನಲ್ಲಿ ಚಿತ್ರ ಬರುವಷ್ಟು ಹೆಸರುವಾಸಿಯಾದನೇ? ನೋಡುವ, ಅವನ ವಿಷಯ ಏನು ಬಂದಿದೆ? "ನಾಮ್ದಾರ್ ಡಾಕ್ಟರ್ ಬೋಗ್ರ—ಆರೋಗ್ಯ ಖಾತೆಯ ಮಂತ್ರಿ—ಇವರು ನಿಪುಣರಾದ ಡಾಕ್ಟರರು—ದೇಶಭಕ್ತರು! ಜನತಾ ಸೇವಾಸಕ್ತರು! ಬಡ ಸಂಸಾರದಲ್ಲಿ ಹುಟ್ಟಿ—ಧರ್ಮಸಂಸ್ಥೆಗಳಿಂದ ಸಹಾಯ ಪಡೆದು ಶಿಕ್ಷಣವನ್ನು ಸಾಗಿಸಿದವರು—ನಿಜವಾಗಿ ಸ್ವಾವಲಂಬನದಿಂದಲೇ ಮೇಲೆ ಮೇಲೇರಿ ಬಂದವರು—ತನ್ನ ಹುಟ್ಟು ತಾನೇ ಹಿಡಿದವರು ಇವರ ಅಸಾಧಾರಣ ಪ್ರತಿಭೆ, ದೇಶಸೇವಾತತ್ಪರತೆ ಇವನ್ನು ಕಂಡು ಜನರು ಇವರಿಗೆ ಈ ಮಾನ್ಯ ಸ್ಥಾನವನ್ನು ಕೊಟ್ಟಿರುವರು! ಇವರು ನಿಜವಾಗಿಯೂ ಇದಕ್ಕೆ ಅರ್ಹರು ...." ಈಗ ಬೋಗ್ರನೆಲ್ಲಿ? ನಾನೆಲ್ಲಿ?—ಪರರನ್ನು ನಂಬಿ ಕೂತವ ಕೆಟ್ಟ! ಬೇರೆಯುವರು ಪಡಹಾಯಿಸಿಯಾರೆಂದು ಕಾದವ ಹಿಂದ ಬಿದ್ದ! ತನ್ನನ್ನೇ ನಂಬಿ ತಾನೇ ಹುಟ್ಟು ಹಿಡಿದು ತನ್ನದೇ ದೋಣಿ ನಡೆಯಿಸಿದವ ಗೆದ್ದ! ನನಗೆ ಈ ಬುದ್ಧಿಯು ಮುಂಚೆ ಬಂದಿದ್ದರೆ! ಹಾಯ್, ಹಾ ಹಾಯ್! ಟೂ ಲೇಟ್! ಟೂ ಲೇಟ್! (Too late)

ಬರುವ ಲೇಖನ —

ರೂಪಾಯಿಗೆ ಹದಿನಾರೇ ಆಣೆ

ಬೇಕಾಗಿದ್ದಾರೆ

ಪಡು ಅಲೆವೂರು ಎಯಿಡೆಡ್ ಶಾಲೆಗೆ ಒಬ್ಬ ಹಾಯರ್ ಗ್ರೇಡ್ ಟ್ರೈಂಡ್ ಅಧ್ಯಾಪಕರು ಬೇಕಾಗಿದ್ದಾರೆ ಉಮೇದ್ವಾರರು ಈ ಕೆಳಗಿನವರೊಡನೆ ವಿಚಾರಿಸಬಹುದು

ಎಂ. ಅಜ್ಜಣ್ಣ ಶೆಟ್ಟಿ,
ಮೆನೇಜರ್ ಪಡು ಅಲೆವೂರು ಶಾಲೆ
ಪೋಸ್ಟ್ ಉಡುಪಿ.

ಡೈರಿಗಳು
ಬೇಕಾದರೆ—
ನವಭಾರತ ಪುಸ್ತಕ ಭಂಡಾರ
ಉಡುಪಿ

ಶಾರದಾಮಣಿ ದೇವಿಯ ಜನ್ಮದಿನಾಚರಣೆ

ಸರೋಜಿನಿ ದೇವಿಯರ ಭಾಷಣ.

ಮದ್ರಾಸಿನ ಮೈಲಾಪುರದ ಶ್ರೀರಾಮಕೃಷ್ಣ ಮಠದಲ್ಲಿ ಶ್ರೀಶಾರದಾಮಣಿ ದೇವಿಯರ ಜನ್ಮೋತ್ಸವವನ್ನು ಕಳೆದ ತಾ 16 ರಲ್ಲಿ ಆಚರಿಸಲಾಯಿತು ಶ್ರೀಮತಿ ಸರೋಜಿನಿ ದೇವಿಯರು ಅಧ್ಯಕ್ಷೆಯರಾಗಿದ್ದರು ಸಭೆಯಲ್ಲಿ ಹಲವು ಮಹಿಳೆಯರು ಸೇರಿದ್ದರು ಹಲವು ಸ್ತ್ರೀಯರು ಶಾರದಾಮಣಿಯ ಜೀವನ ಮಹತ್ವಿಕೆಯ ಕುರಿತು ಭಾಷಣವಿತ್ತರು ಅನಂತರ ಶ್ರೀಮತಿ ಸರೋಜಿನಿ ದೇವಿಯರು ಪವಿತ್ರ ಮಾತೆ ಶಾರದಾಮಣಿಯ ಸ್ಮರಣಾತ್ಮಕ ಶುದ್ಧ ಜೀವನದ ಕುರಿತು ಅಮೋಘ ಭಾಷಣದಲ್ಲಿ ಹೀಗಂದರು

'ಪರಮಹಂಸರು ವಿದ್ಯಾವಂತರಲ್ಲದಿದ್ದರೂ ಮಿಲಿಯಾಂತರ ಜನರ ಉದ್ಧಾರಕ್ಕೆ ಸಮರ್ಥರಾದರು ಬರೇ ವಿದ್ಯೆಯು ಸಾಕಾಗದು ಮಹತ್ವಿಕೆಯು ವಿಚಾರವು ಮಾನವನಲ್ಲಿರುವ ಆತ್ಮವು. ಆತ್ಮನೊಂದಿಗೆ ಒಂದಾಗದ ವಿನಾ, ಪ್ರಾರ್ಥನೆಯಲ್ಲಿ ಒಲಿಯದ ವಿನಾ ಸಾಧನದಲ್ಲಿ ಒಂದಾಗಿ ನಿಂತದ ಹೊರತು, ಯಾವ ಸ್ತ್ರೀಯಾಗಲೀ ಪುರುಷನಾಗಲೀ, ಮಹತ್ವಿಕೆಯನ್ನು ತಳೆಯಲಾರನೆಂಬುದು ಪರಮಹಂಸರ ಅನುದಿನದ ಹಂಬಲು.

'ಪರಮಹಂಸರು ತನ್ನ ಸತಿಗೆ ಬೇರೆ ಸ್ತ್ರೀಯರಿಗೆ ದೊರೆತಿರುವುದು ನಿನಗೆ ದೊರೆಯಲಾರದು ಯಾಕೆಂದರೆ, ಮಾನವ ಸಮಾಜದ ಹಿರಿನಾಗಿ ನಾನಿರಬೇಕಾಗಿದೆ ನೀನು ಅವರ ಮಾತೆ" ಎಂದು ಹೇಳಿದರು ಈ ಮಾತಿಗೆ ಆದೀತೆಂದು ಒಪ್ಪುವ ಧೈರ್ಯವು ಹೆಚ್ಚಿನ ಸ್ತ್ರೀಯರಿಗೆ ಬರುತ್ತಿದ್ದಿಲ್ಲ. ಆವಳು ತನ್ನ ಪತಿದೇವನ ಸಂದರ್ಶನೆಯನ್ನು ಮಾಡುವ ಕಾಲದಲ್ಲಿ ಇತರರ ಯುವತಿಯರಂತೆ ಸತೀತ್ವ ಮತ್ತು ಮಾತೃತ್ವ ಕಾಂಕ್ಷೆಯುಳ್ಳ, ಕೆಂಪು ಅಂಚಿನ ಸೀರೆಯುಟ್ಟು, ಕುಂಕುಮ ಧರಿಸಿದ ನವ ಪ್ರಾಯದ ಎಳೆ ತರುಣಿಯು. ಆಗ ಆಕೆಯು ತನ್ನ ಹೃದಯವನ್ನು ಸ್ಥಿರಪಡಿಸಿಕೊಂಡು 'ನಾನು ನಿಮ್ಮಿಂದ ನೀವಳಿಸುವಂತೆ ಬಾಳು ಕಲಿಯುವೆನು ನಾನು ಜ್ಞಾನವನ್ನು ಗಳಿಸುವೆನು' ಎಂದಳು.

ಜಗತ್ತಿನಲ್ಲಿ ಯಾವ ಪುಸ್ತಕವನ್ನು ಓದಿ ನೋಡಿದರೂ, ಯಾವ ಪದವಿಯನ್ನು ಪಡೆಯುತ್ತಿರುವಾಗಲಾದರೂ, ಯಾವ ಪರೀಕ್ಷೆಯಲ್ಲಿ ಉತ್ತೀರ್ಣತೆಯನ್ನು ಹೊಂದುವಾಗಲೂ, ಪ್ರೇಮ ಮತ್ತು ಸೇವೆಯಿಂದ ಕೂಡಿರದ ತಿಳುವು ಸಲಕ್ಕ ಬಾರದೆಂಬುದು ನಾವು ಕಂಡುಕೊಳ್ಳತಕ್ಕದ್ದು ಜಾಣ್ಮೆ ಮತ್ತು ಪ್ರತಿಭೆಯು ಪ್ರೇಮವಾಗಿ ಮಾರ್ಪಾಡುಹೊಂದಲಾರದೆ ಹೋದರೆ, ನಿರರ್ಥಕ. ಇದೇ ಮಹಾತ್ಮಾ ಗಾಂಧಿಯವರು ಕಲಿಸುವ ಪಾಠ ಇವರು ಶ್ರೀರಾಮಕೃಷ್ಣ ಪರಮಹಂಸರ ಸಾಲಿಗೇರುವವರು. ಮಹಾತ್ಮಾ ಗಾಂಧಿಯವರು ಪರಮಹಂಸರಂಥಾ ಆ ಭಾವಪ್ರಪೂರ್ಣರ ಅಪಾರವಾದ ಪ್ರೇಮ ಮತ್ತು ತಣಿಯದ ಸೇವಾಕಾಂಕ್ಷೆಯುಳ್ಳವರು

ಶಾರದಾಮಣಿಯು ಆದರ್ಶಸ್ವರೂಪದೇವಿಯು. ಶಾರದಾ ದೇವಿಯರ ವೈಧವ್ಯ ಕಾಲದಲ್ಲಿ ಅವರ [illegible] ಧ್ಯೇಯವು ಅನ್ನವಷ್ಟು ಹೆಚ್ಚಾಯಿತು. ಪರಮಹಂಸರ ಸುಖದುಃಖಗಳಲ್ಲಿ ಸಹಭಾಗಿನಿಯಾಗಿರುವಾಗ ಅವರ ಸಂಸಾರಜಗತ್ತು ಅಷ್ಟು ವಿಶಾಲವಾಗಿರಲಿಲ್ಲ ಅವರು ತನ್ನ ಜೀವನದಲ್ಲಿ ಇದೊಂದು ಅಮೋಘ ಉದ್ದೇಶವಿದೆಯೆಂಬುದನ್ನರಿತರು ಶಾರದ ದೇವಿಯರು ಶಕ್ತಿಯಾಗಿ, ಸ್ತ್ರೀಪುರುಷರ ಭಕ್ತಿಭಾವಗಳಿಗೆ ಆದರ್ಶಮಾತೃತ್ವಕ್ಕೆ ಮಾರ್ಗನಿದರ್ಶಕರಾದರು. ಪರಮಹಂಸರು ಆಕೆಯನ್ನು ತನ್ನ ಚೇತನಬೋಧೆಯ ಸ್ವರೂಪದಲ್ಲಿ ಅಗಲಿದ್ದರು. ಶಾರದಾದೇವಿಯರು ತನ್ನ ಆತ್ಮಸೌಂದರ್ಯದಿಂದಲೂ, ಧೀರತೆಯ ಶಕ್ತಿಯಿಂದಲೂ, ಸರ್ವರ ಭಕ್ತಿಭಾವಕ್ಕೆ ಪಾತ್ರರಾದರು. ವಿಧವೆಯರು ಈ ಪಾವನೆಯ ಆಶ್ರಯದಿಂದ ತಮ್ಮ ಅಶ್ರುಬಿಂದುಗಳನ್ನು ಪ್ರೇಮ ಮಾತೃಕ ಧಾರವನ್ನಾಗಿ ಮಾರ್ಪಡಿಸಿಕೊಂಡು ತಮ್ಮ ಜೀವನವು ನಿರರ್ಥಕವಾಯಿತೆಂದು ಕೊರಗುತ್ತಿರುವ ಬಾಳಿಗೆ ಪ್ರೇಮ ಮತ್ತು ಸೇವೆಯನ್ನು ಸಲ್ಲಿಸಲು ಮುಂದಾದರು.

ನಮ್ಮ ದೇಶದಲ್ಲಿ ಮಿಲಿಯಗಟ್ಟಲೆ ವಿಧವೆಯರಿರುವರು ಅವರು ತಮ್ಮ ಪತಿಯಂದಿರ ಮರಣಕ್ಕಾಗಿ ಶೋಕಿಸುವರು ಗೋಳಿಡುವರು ಈಗ ನಮ್ಮೆಲ್ಲಾ ಸ್ತ್ರೀಸಮಾಜಕ್ಕೆ ಶಾರದಾಮಾತೆಯ ಜೀವನ ಮತ್ತು ನಿದರ್ಶನವು ಆದರ್ಶಪ್ರಾಯವಾದುದು. ತಾನು ಹೊಂದಿಕೊಂಡಿರುವ ಸ್ತ್ರೀಯ ಮಹತ್ವಿಕೆಯು ಪುರುಷನ ಮಹತ್ವಿಕೆಗೆ ಸಾಧನವು ತಮ್ಮ ಕಟ್ಟ ಹೆಂಡತಿರಿಂದ [illegible] ಪುರುಷನ ಜೀವನ ಪ್ರಗತಿಯು ತಡೆದಿರುವುದು. ತರುಣರೇ ಆಗಲಿ, ಅಥವಾ ವೃದ್ಧರಾಗಿರಲಿ, ಸುಖಿಯಿರಲಿ, ದುಃಖಿಯಿರಲಿ, ಸಮಹಿತರಿರಲಿ, ಅವಿವಾಹಿತರಿರಲಿ,—ಸದಾ ಸ್ತ್ರೀಪುರುಷರಿಗೆ ಶ್ರೀ ಶಾರದಾಮಣಿ ದೇವಿಯರು ಮಾರ್ಗದರ್ಶಕರು. ನಾವೆಲ್ಲರೂ ಆಕೆಯನ್ನು ಆತ್ಮಭಾವದಿಂದ ನೆನೆಸೋಣ"

ನಾವಿಂದು, ಪೂಜ್ಯ, ಸರಳ ಮಹಿಳೆಯನ್ನು ಸ್ಮರಿಸಿ, ಗೌರವಿಸುವ ಕಾಲದಲ್ಲಿ ನಮ್ಮ ಜೀವನವನ್ನು ಆಕೆಯ ಜೀವನ ಧ್ಯೇಯದಂತೆ ಮಾರ್ಪಡಿಸಲು ಯತ್ನಿಸೋಣ ಮಹಾಪುರುಷರ ಮಹಿಮೆ ಬಹುಕಾಲ, ದೇಶಗಳನ್ನು ಮೀರಿಹೋಗುವಂತಹದ್ದು. ಪರಮಹಂಸರ ಸಂದೇಶವು ಇಂದು ಜಗತ್ತಿನ ಎಲ್ಲೆಡೆಯಲ್ಲಿ ಹಬ್ಬಿರುವುದು. ರಾಮಕೃಷ್ಣ ಮಿಶನಿನ ಕೇಂದ್ರಗಳು ಅನೇಕ [illegible] ಮೂಲೆ ಕಡೆಗಳಲ್ಲಿಯೂ ಸ್ಥಾಪಿತವಾಗಿದೆ ಪರಮಹಂಸರಂಥಾ ಮಾನವ ಪುರುಷರು, ಶಾರದಾಮಣಿಯಂಥಾ ಪೂಜ್ಯ ಮಾತೆಯರು, ಜಗತ್ತಿಗೆ ಸಂದವರು. ಅವರ ಆತ್ಮಶಕ್ತಿಯು ನಿರಂತರ ಉಳಿಯುವಂತಹುದು ರಾಮಕೃಷ್ಣ ಪರಮಹಂಸರಂತೆ ಶಾರದಾಮಣಿ ದೇವಿಯಂಥಾ ವ್ಯಕ್ತಿಗಳು ಜನ್ಮವೆತ್ತಿದ ನಾಡಿನವರೆಂಬ ಗೌರವಕ್ಕೆ ಪಾತ್ರರಾಗುವಂತ ಉನ್ನತ ಮಾರ್ಗದಲ್ಲಿ ನಡೆಯುವಾ

ಎಲ್ಲಾ ತರದ

ಶುದ್ಧ ಖಾದಿ

ಮಂಗಳೂರು

ಸ್ವದೇಶಿ ಸ್ಟೋರ್ಸ್,

ರಥಬೀದಿ -- ಮಂಗಳೂರು.

ಅಖಿಲ ಭಾರತ ಚರಕಾ ಸಂಘದಿಂದ ಸರ್ಟಿಫೈ ಮಾಡಲ್ಪಟ್ಟದೆ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" ರಿಜಿಸ್ಟರ್ಡ್

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

[illegible] ಅಂಗ್ಲೇಯ ಮತ್ತು [illegible] ಗೋನೋಕಿಲ್ಲರ್ [illegible] ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ ಧಾತುಸ್ರಾವ, [illegible] ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ [illegible]

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲ್ಲರ್" ಹೆಸರನ್ನೂ ಗಮನಿಸಿರಿ

ಏಕಮುಖ್ಯರು ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲಭಾಯಿ ಪಟೇಲ್ ರೋಡ್, ಮುಂಬಯಿ

Sole Manufacturer Dr D N JASANI, Vitalbhai Patel Road, BOMBAY 4

ವಿನೋದತರಂಗ

ಶಿಕ್ಷಕ—"ಪೃಥ್ವಿಯು ದುಂಡಗಿದ್ದು ೨೪॥ ಅಂಶದ ಕೋನಮಾಡಿಕೊಂಡು ತಿರುಗುತದೆ."

ವಿದ್ಯಾರ್ಥಿ—"ಹಾಗಾದರೆ ನಾವು ನೆಟ್ಟಗೆ ನಿಲ್ಲಲು ಹೇಗೆ ಸಾಧ್ಯ?"

)( )( )( )(

ತಂದೆ—"ರಾಮ ಈ ಸಂಸಾರನೌಕ ಸಿನೇಮಾದಿಂದ ಏನು ಕಲಿತೆಯೋ?"

ರಾಮ—"ಮಾಧೂನಂತೆ ರೊಕ್ಕಾ ಕುಡಗ ಮಾಡಿ ಖರ್ಚುಮಾಡೋದು, ಮತ್ತ ಆಚಾರಿಹಾಂಗ ಸಿಗರೇಟ ಸೇದೋದು."

)( )( )( )(

ಇಬ್ಬರು ವಯಸ್ಸಾದವರು ದಾರಿಯಲ್ಲಿ ಆಧುನಿಕ ಸ್ತ್ರೀಯನ್ನು ನೋಡಿ—

ಒಬ್ಬ—"ನೋಡಿದಿರಾ ಈಗಿನ ದಿನ?"

ಎರಡನೇಯವ—"ಹೌದು, ಈಗ ದಿನದ ಕಾಲ ತಿರುಗಿಬಿಟ್ಟದರೀ, ನಾನಾ ಪರೀ ನಮ್ಮ ಮಕ್ಕಳ ಕೈಯಲ್ಲಿ ಎಲ್ಲಿ ಎಮಗೊಳವಿ ಬರುವದೋ ಎಂದು ಅಂಜೀನಿ."

)( )( )( )(

ತಂದೆ—"ಆಲ್ಲೋ ಮಗು ತಲೆ ಎಷ್ಟು ಬೆಳೆಸಿದ್ದಿಯೋ ಇಷ್ಟೆನಪ್ಪ ಇನ್ನ ಹೆರಳಹಾಕೋ ಬೇಕಾದೀತೋ ಅವಳಾಂಗ."

ಮಗ—"ಹಾಗಾದರೆ ಅಪ್ಪನ ಹಜಾಮತ ಎಂದ ಅಂದರ."

)( )( )( )(

ಹಳ್ಳಿಯ ಪ್ರಯಾಣಿಕ—"ಇಲ್ಲಿಂದ ಕೋಲಾಪುರಕ್ಕೆ ಯಾವ ಛಾರ್ಜ ಆಗ್ತೈತರಿ? ದ್ಯಾವರು."

ಸ್ಟೇಶನ್ ಮಾಸ್ತರ—'ಒನ್ ಎಟ' (1-8-0)

ಹಳ್ಳಿಯವ—"ಎಟ ಯಾಕರೀ ಎಷ್ಟು ರೊಕ್ಕ ಕಗೋರಿ"

)( )( )( )(

ತಂದೆ—"ಲೀಲಾ ನೀನು ಹೀಗೆ ನೂರು ಎಂಟು ಹುಡುಗರನ್ನ ನೋಡಕೋತಾ ತಿರುಗೋದು ಚಲೋ ದಲ್ಲ ನೋಡು"

ಲೀಲಾ—"ನೂರಾಎಂಟು ಹುಡುಗರನ್ನಲ್ಲ. ಒಬ್ಬನನ್ನೇ ನೋಡುತ್ತಾ ಇದ್ದೇನೆ."

)( )( )( )(

ಒಬ್ಬ ಹುಡುಗ—"ಅಲ್ಲೋ ಎಷ್ಟು ಅಶಕ್ತ ಇದ್ದಿಯೋ ನೀನು"

ಸಂಗಡಿಗ—"ನಮ್ಮಪ್ಪ ಸಶಕ್ತ ಇದ್ದರೆ ನಾನು ಸಶಕ್ತ ಇರಬೇಕಲ್ಲಾ."

)( )( )( )(

ಗಂಡ ಹೆಂಡತಿಗೆ—"ನೀನು ಒಳ್ಳೆ ಸುಖಿಬೇಡಿ ಬಂದಾಂಗ ಕಾಣಸ್ತೀ."

ಹೆಂಡತಿ—"ನಾನಲ್ಲ ನೀವು. ಯಾಕೆಂದರೆ ಕೆಲಸ ಇಲ್ಲದೇ ಮನೇಲಿ ಕೂತಿರಲ್ಲಾ!"

)( )( )( )(

ಮಗ—(ತಂದೆಯೊಡನೆ) ಅಪ್ಪಾ ಅಮ್ಮನು ಎಲ್ಲ ಕೆಲಸವನ್ನೂ ತಿರುಗ ಮರಗ ಮಾಡ್ತಾಳೆ.

ತಂದೆ—ಏನದು!

ಮಗ—ರಾತ್ರಿ ಕಥೆಕೇಳೆಂದರೆ, ನಿದ್ದೆ ಮಾಡೆನ್ನುತ್ತಾಳೆ ಬೆಳಗ್ಗೆ ನಿದ್ರೆಮಾಡೋಣವೆಂದರೆ, ಎಚ್ಚರವಾಗಿರೆನ್ನುತ್ತಾಳೆ.

ಒಬ್ಬ ಧಾಂಡಿಗನು ರೈಲ್ವೆ ಸ್ಟೇಶನಿನಲ್ಲಿ ಯುವತಿಯೋರ್ವಳನ್ನು ಕಂಡು ಒಯ್ಯಾರದಿಂದ—'ನಾನು ನಿನ್ನನ್ನು ಎಲ್ಲೋ ಕಂಡಂತಿದೆಯಲ್ಲ?'

ತರುಣಿ—ಈ ಆನೆಮಾಂ ಹೋದಲ್ಲೆಲ್ಲಾ ಉಂಟಲ್ಲಾ!

MATRIMONIAL

Wanted a beautiful Educated Muslim girl aged not *more than 18 years, to marry* a cultured Muslim youth of 26, well settled in life.

Apply with Photo
'X'
C/o Navayuga, Udipi.

ಡಾಕ್ಟರ್ ವಿಠಲ ಶೆಟ್ಟಿ ಭಾಷಣ.

ಭಾವೀಜನಾಂಗವಾದ ವಿದ್ಯಾರ್ಥಿಗಳನ್ನು ಸರಿದಾರಿಗೆ ಹಚ್ಚುವ ಉಪಾಧ್ಯಾಯರಲ್ಲಿ ಅಸಂತೃಪ್ತಿಯಿರಕೂಡದು.

ಮೂಲ್ಕಿ ಸೆಂಟರಿನ ಉಪಾಧ್ಯಾಯರ ಸಂಘದ ವರ್ಧಂತಿಯು, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ವಿಠಲಶೆಟ್ಟಿ ಅಧ್ಯಕ್ಷತೆಯಲ್ಲಿ ತಾ. 10-12-38ರಲ್ಲಿ ವಿಜೃಂಭಣೆಯಿಂದ ಜರಗಿತು ಪ್ರೆಸಿಡೆಂಟರು ಬಂದ ಕೂಡಲೇ ಶಾಲೆಯ ಎದುರು ಇರುವ ರಾಷ್ಟ್ರೀಯ ಧ್ವಜವನ್ನು ಅನಾವರಣಮಾಡಿದರು. ಕಾಫಿ ಫಲಾಹಾರ ಆದನಂತರ ಸಭೆಯು ಪ್ರಾರಂಭವಾಯ್ತು. ಮೊದಲು ವರದಿ, ವಿನೋದಗಳಾದವು.

ಮುಂದಿನ ವರುಷದ ಕಾರ್ಯಕಾರಿ ಮಂಡಲವನ್ನು ಆರಿಸಿದ ವೇಳೆ ಪ್ರೆಸಿಡೆಂಟರು ತನ್ನ ಸುರಸ ಶೈಲಿಯಲ್ಲಿ ಕನ್ನಡ ಭಾಷೆಯಲ್ಲಿ ಈ ಕೆಳಗಿನ ಭಾಷಣವನ್ನು ಮಾಡಿದರು.

ಬಂಧುಭಗಿನಿಯರೇ,

ನಾನು ಕೆಲವೊಂದು ಸಮಯದಿಂದ ಶಾಲೆಗಳನ್ನು ಅಂದರೆ ಪ್ರಾಥಮಿಕ ಶಾಲೆಗಳನ್ನು ಸಂದರ್ಶಿಸುತ್ತಾ ಇರುವೆನು. ಶಾಲೆಗಳೆಲ್ಲಾ ಬಹಳ ಒಳ್ಳೆಯ ಸ್ಥಿತಿಯಲ್ಲಿವೆ ನನಗೆ ಶಾಲೆಗಳಲ್ಲಿ ಮಕ್ಕಳನ್ನ ನೋಡುವುದೆಂದರೆ ಆನಂದ. ಮಕ್ಕಳು ಯಾವಾಗಲೂ ಬಾಹ್ಯಾಂತರ ಶುದ್ಧದವರಾಗಿದ್ದು, ಅವರಲ್ಲಿ ಸ್ವಾಭಾವಿಕ ಆನಂದವಿರುತ್ತದೆ. ಅವರಲ್ಲಿ ಜಾತಿಮತಗಳೇ ಬೇರೆ ಯಾವ ಭೇದವಾಗಲೀ ಇಲ್ಲದೆ ಪರಸ್ಪರ ಅನ್ಯೋನ್ಯದಲ್ಲಿರುತ್ತಾರೆ. ಅಂಥಾ ಮಕ್ಕಳ ರಕ್ಷಣೆಯ ವ ಶಿಕ್ಷಣೆಯ ಭಾರವು ನಮ್ಮ ಶಿಕ್ಷಕವೃಂದದ ಮೇಲುಂಟು

ನಮ್ಮ ಜಿಲ್ಲೆಯ 806ಗ್ರಾಮಗಳಲ್ಲಿ 170,000 ಶಾಲಾ ವಯಸ್ಸಿನ ಮಕ್ಕಳಿದ್ದಾರೆ ಅವರಲ್ಲಿ48000 ಮಕ್ಕಳಿಗೆ ಇನ್ನೂ ಪ್ರಾಥಮಿಕ ವಿದ್ಯಾಭ್ಯಾಸದ ಅನುಕೂಲವಿಲ್ಲ. ಈ ಮಕ್ಕಳಿಗೆ ವಿದ್ಯೆಯ ವಿಲೇವಾರಿ ಆಗಬೇಕು. ಆದರೆ ನಮ್ಮ ಜಿಲ್ಲೆಯ ಉಪಾಧ್ಯಾಯರು ಅಸಂತೃಪ್ತಿಯಲ್ಲಿದ್ದಾರೆ ನಮ್ಮ ಜಿಲ್ಲೆಯಲ್ಲಿ ಒಟ್ಟು ವಿದ್ಯೆಗಾಗಿ 7ಲಕ್ಷ ರೂಪಾಯಿ ಖರ್ಚು ಆಗುತ್ತದೆ. ಆದರೆ ಹೆಚ್ಚಿನಂಶವು ಹೈಸ್ಕೂಲುಗಳಿಗಾಗಿ ಖರ್ಚಾಗುತ್ತವೆ. ಇದ್ದು ನಮ್ಮ ಜಿಲ್ಲಾ ಬೋರ್ಡಿಗೆ ಒಂದು ಆಸ್ಪತ್ರೆಯುಂಟು ಇದು ನಮಗೊಂದು ಬಿಳಿ ಆನೆ ಆಗಿದೆ. ಇದನ್ನು ಸರಕಾರದವರು ತೆಗೆದುಕೊಂಡರೆ ಸುಮಾರು ಸುಖವಾಗುವುದು, ಹೀಗೆ ದುಡ್ಡಿನ ಅಭಾವ.

ನಮ್ಮ ಪ್ರಾಥಮಿಕ ವಿದ್ಯಾಭ್ಯಾಸದ ಅಗತ್ಯಗಳು—ನಮ್ಮ ಶಾಲೆಗಳು ಒಳ್ಳೆಯ ಅಭಿವೃದ್ಧಿಯನ್ನು ತೋರಿಸುತ್ತವೆ ತುಂಬಾ ಶಾಲೆಗಳಿಗೆ ಹಟ್ಟ ಉಪಾಧ್ಯಾಯರ ಅಗತ್ಯ ಉಂಟು ಇದು ಮಾತ್ರವಲ್ಲದೆ, ಪ್ರತಿನಿತ್ಯವೂ ಹೊಸ ಶಾಲೆಗಳಿಗೂ ಹೊಸ ಅಗತ್ಯಗಳಿಗೂ ತುಂಬಾ ಅರ್ಜಿಗಳು ಬರುತ್ತಲೇ ಇವೆ. ಇವೆಲ್ಲವನ್ನೂ ಸುಧಾರಿಸಬೇಕು. ಸರಕಾರಕ್ಕೆ ದುಡ್ಡಿಗಾಗಿ ಬರೆಯುವಾಗ, ಈಗಿದ್ದ ಉಪಾಧ್ಯಾಯರಿಗೆ ಕಡಿತ ಹಾಕಿರಿ ಎಂದು ಬರಿಯುತ್ತಾರೆ. ಮತ್ತು ಇಷ್ಟು ಕಡಿತ ಹಾಕಲೂ ಒಪ್ಪಿಗೆ ಕೊಡುತ್ತಾರೆ. ಆದರೆ ನಮ್ಮ ಉಪಾಧ್ಯಾಯರ ಜೊಚ್ಚಿ ತಡೆಯಲಾಗುವುದಿಲ್ಲ. ನಾನು ಮುಂಚಿನಿಂದಲೂ ಉಪಾಧ್ಯಾಯರ ಕಡೆಯಿಂದಿರುವಾಗ, ಈಗ ನನ್ನ ಕಾಲದಲ್ಲಿಯೇ ಅವರಿಗೆ ಕಡಿತ ಹಾಕುವುದು ತುಂಬಾ ಕಷ್ಟ. ಆದರೆ, ಅವರ ಕಡಿತವನ್ನು ಹೋಗಲಾಡಿಸುವ ದೃಢ ಪ್ರಯತ್ನದಲ್ಲಿದ್ದೇನೆ. ಉಪಾಧ್ಯಾಯರು ತಮ್ಮ ಸಂಕಷ್ಟಗಳನ್ನು 'ತಮ್ಮ ಸಂಘ'ಗಳ ಮೂಲಕ ನಿವಾರಿಸಲು ಯತ್ನಮಾಡುತ್ತಾರೆ. ಹಾಗೆ ಮಾಡುವುದು ಉಚಿತ. ಸಂಘಶಕ್ತಿಯು ವಿಪರೀತ ಇರುವುದು ಆದದರಿಂದ ಎಲ್ಲಾ ಉಪಾಧ್ಯಾಯರೂ ಸಂಘದ ಸದಸ್ಯರಾಗಬೇಕು. ಮತ್ತು ಸಂಘದ ಮೂಲಕ ಕೆಲಸ ಮಾಡಬೇಕು. ಆದರೆ, ಉಪಾಧ್ಯಾಯರು ಸ್ವಲ್ಪ ಸುಧಾರಿಸಿಕೊಂಡು ಕೆಲಸ ಮಾಡಬೇಕು ಅವರ ಕೆಲಸವು ದಿವಸಕ್ಕೆ 4ತ್ತೆಘಂಟೆ, ಹೀಗೆ ವರುಷಕ್ಕೆ 180ದಿವಸ ನಾವು ಸ್ವಲ್ಪ ಗಟ್ಟಿ ಆಗುವ ವರೆಗೆ ಅವರು ಸುಧಾರಿಸಿದರೆ ಉತ್ತಮವಿತ್ತು.

ಉಪಾಧ್ಯಾಯರ ಕಷ್ಟ ನಿವಾರಿಸುವ ಬಗ್ಗೆ ಜಿಲ್ಲಾ ಬೋರ್ಡನ್ನು ಬಲಪಡಿಸುವ ಬಗ್ಗೆ ನಾನು, ಇದೇ ತಿಂಗಳ ಅಂತ್ಯದಲ್ಲಿ ಕಲ್ಕತ್ತದಲ್ಲಿ ಜರಗಲಿರುವ ಅಖಿಲ ಭಾರತ ಜಿಲ್ಲಾ ಬೋರ್ಡು ಮತ್ತು ಮುನಿಸಿಪಾಲಿಟಿಗಳ ಅಧ್ಯಕ್ಷರುಗಳ ಪರಿಷತ್ತಿಗೆ ಹೋಗುವೆನು (All India Conference of the Persidents of the Local Boards and Municipalitis at Calcutta.) ಅಗತ್ಯ ಉಳ್ಳ ಅನುಭವವನ್ನು ಅಲ್ಲಿಂದ ಪಡೆದು, ಬಂದವನೇ, ನಿಮ್ಮ ಸಭೆಗಳನ್ನು ತಾಲೂಕು ಪ್ರಕಾರ ಮಾಡಿ, ನಿಮ್ಮ ಅಭಿಪ್ರಾಯವನ್ನು ತಿಳಿದು ಮುಂದಿನ ಕೆಲಸವನ್ನು ಮಾಡುವೆನು.

ನಾನು ನಿಮ್ಮ ಸಂಘವು ದಿನೇ ದಿನೇ ವೃದ್ಧಿ ಆಗಿ ಇನ್ನೂ ತುಂಬಾ ಕೆಲಸಗಳನ್ನು ಮಾಡಿ, ನಿಮ್ಮ ಸಂಕಷ್ಟಗಳನ್ನು ನಿವಾರಿಸಬೇಳಸುವೆನು ನೀವು ನನ್ನನ್ನು ಕರೆದುದಕ್ಕಾಗಿ ನಾನು ಆಭಾರಿಯಾಗಿರುವೆನು. ನೀವು ಕರೆದುದಕ್ಕಾಗಿ, ನಾನು ಮೆಡಿಕಲ ಎಸೋಸಿಯೇಶನಿನ, ವಾರ್ಷಿಕ ವರ್ಧಂತಿಯನ್ನು ಅದರ ಅಧ್ಯಕ್ಷನಾಗಿದ್ದರೂ ಬಿಟ್ಟು ಬಂದಿರುವೆನು, ಮತ್ತು ಉಪಾಧ್ಯಾಯರ ಕಡಿತವನ್ನು ತೆಗೆಯಲು ನನ್ನ ಕೈಲಾದ ಸಹಾಯವನ್ನು ಮಾಡುವೆನು ಮತ್ತು ಇಲ್ಲಿ ನೆರೆದಿರುವ ಮಕ್ಕಳು ಗಾಂಧಿ ಟೋಪ್ಪಿಯಿಟ್ಟುದುದಕ್ಕೆ ನಾನು ತುಂಬಾ ಸಂತೋಷಪಡುತ್ತೇನೆ. ಮತ್ತು ನಿಮ್ಮ ಉದ್ದೂ ಖಾದಿಯಾಗಬೇಕೆಂದು ಬಯಸುವೆನು.

ಅಧ್ಯಕ್ಷರ ಭಾಷಣವಾದ ನಂತರ, ಶ್ರೀ॥ ಭೋಜರಾಯರು ಅಧ್ಯಕ್ಷರನ್ನೂ, ಸಭಿಕರನ್ನೂ ಅಭಿನಂದಿಸಿದರು, ಆ ಬಳಿಕ 'ವಂದೇ ಮಾತರಂ' ಹಾಡುವಿಕೆಯಿಂದ ಸಭೆಯು ಕೊನೆಗೊಂಡಿತು

KANTI
Toilet Soap

ಕಟ್ಟಕಡೆಗೆ
ಲಕ್ಷಾಂತರ ಜನರು ಮನಗಂಡಿರುವ ವಿಷಯವಿದು. ಶೀತಲ ಉಲ್ಲಾಸಕರ ಮತ್ತು ಸಂಭ್ರಮದ ಸ್ನಾನಕ್ಕೆ ಸ್ವಸ್ತಿಕ
'ಕಾಂತಿ'
ಟ್ಯೊಲೆಟ್ ಸೋಪಿನ ಹೊರತು ಇನ್ನೊಂದು ಉತ್ತಮವಿರಲಾರದು.
ಅಲ್ಪ ಬೆಲೆಗೆ
ಅತಿ ದೊಡ್ಡ ತುಂಡು
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.
ಒಮ್ಮೆ ನೀವು ಸ್ವಸ್ತಿಕ ಕಾಂತಿ ಟ್ಯೊಲೆಟ್ ಸೋಪನ್ನು ಉಪಯೋಗಿಸಿದರೆ ಆ ಮೇಲೆ ಇತರ ಸೋಪನ್ನು ಮೆಚ್ಚಲಾರಿರಿ.

ಸ್ವೀಕಾರ ಮತ್ತು ವಿಮರ್ಶೆ

ಎರಡೇ ವಾರಗಳಲ್ಲಿ ಓದುಬರಹ:—ಬರೆದವರು:- ಶ್ರೀ. ಪಿ. ವಿ. ಉಪಾಧ್ಯಾಯರು, ಬಿ. ಎ., ಎಲ್‌ಎಲ್. ಬಿ. ಪ್ರಕಾಶಕರು:— ಸ್ವಸ್ತಿಕ ಏಜನ್ಸಿ ಲಿಮಿಟೆಡ್, ಉಡುಪಿ. ಬೆಲೆ: 0-1-0 ಶ್ರೀ. ಪಿ. ವಿ. ಉಪಾಧ್ಯಾಯರು ಕನ್ನಡ ಜಿಲ್ಲೆಯ ಸುರಿತ ಬರಹಗಾರರಲ್ಲೊಬ್ಬರು, ಇವರ ನಗೆಬರಹಗಳು ಜನತೆಯ ಮನಸ್ಸನ್ನು ಆಕರ್ಷಿಸುವಂತಹವುಗಳು. ಇದೀಗ ಅವರು ಪ್ರಾಯಸ್ಥರಿಗೆ ಬಹು ಬೇಗನೇ ಅಕ್ಷರಾಭ್ಯಾಸ ಮಾಡಿಸುವ ಉದ್ದೇಶದಿಂದ ಈ ಪುಸ್ತಕವನ್ನು ಬರೆದಿರುವರು. ಪುಸ್ತಕದಲ್ಲಿ 14 ಪಾಠಗಳಿವೆ. ಅಕ್ಷರಮಾಲೆಯ ಎಲ್ಲಾ ಅಕ್ಷರಗಳನ್ನೂ ಆಡಿಒತ್ತುಗಳನ್ನೂ ಅತಿ ಸುಲಭ ರೀತಿಯಲ್ಲಿ, ಅತ್ಯಲ್ಪ ಕಾಲದೊಳಗೆ ಬೋಧಿಸುವ ಹೊಸ ಹಾದಿಯ ಓದುಬರಹದ ಅತ್ಯಲ್ಪ ಬೆಲೆಯ ಪುಸ್ತಕವೊಂದನ್ನು ರಚಿಸಿ, ಕನ್ನಡ ನಾಡಿಗೆ ಸಮರ್ಪಿಸಿದ ಶ್ರೀ ಉಪಾಧ್ಯಾಯರ ಶ್ರಮವನ್ನು ಧಾರಾಳವಾಗಿ ಹೊಗಳಬಹುದು.

ಹಳ್ಳಿಗರ ಕೈಪಿಡಿ:—ಸಂಪಾದಕರು ಶ್ರೀ. ರಂಗನಾಥ ರಾಮಚಂದ್ರ ದಿವಾಕರ, ಗೌ. ಕಾರ್ಯದರ್ಶಿ, ಕರ್ನಾಟಕ ಲೋಕಮಾನ್ಯ ಪರ್ಸ್ ಫಂಡ್ ಟ್ರಸ್ಟ್, ಹುಬ್ಬಳ್ಳಿ. ಬೆಲೆ: ೦-೮-೦. ಅಂಚೆ ವೆಚ್ಚ ಬೇರೆ.

ಶ್ರೀ ರಂಗನಾಥ ರಾಮಚಂದ್ರ ದಿವಾಕರರು ಕರ್ನಾಟಕ ಗಾಷ್ಟ್ರದ ಅಖಂಡ ಮುಖಂಡರಲ್ಲಿ ಒಬ್ಬರು, ಉಚ್ಚ ಸಂಸ್ಕೃತಿಯವರು. ಕಲಾ ಕೋವಿದರು, ಮತ್ತು ಸಾಹಿತಿಗಳು. ದೇಶೋದ್ಧಾರಕ್ಕಾಗಿ ಇವರಂತೆ ಎಡೆಬಿಡದೆ, ದುಡಿಯುತ್ತಿರುವವರಲ್ಲಿ ಕನ್ನಡ ನಾಡಿನಲ್ಲಿ ಇವರ ಸಾಲಿನಲ್ಲಿ ನಿಲ್ಲುವವರು ಹೆಚ್ಚು ಮಂದಿ ಇರಲಾರರು. ಈ ಮಹನೀಯರು ಹಳ್ಳಿಗರ ಉಪಯುಕ್ತತೆಗಾಗಿ, ಅವಶ್ಯವೆನಿಸುವ ವಿಷಯಗಳನ್ನೆಲ್ಲಾ ಸಂಗ್ರಹಿಸಿ ಅದನ್ನು ಹಳ್ಳಿಗರ ಕೈಪಿಡಿ ಎಂಬ ಹೆಸರಿಂದ ಸಂಗ್ರಹಿಸಿರುವರು ಕರ್ನಾಟಕ ಲೋಕಮಾನ್ಯ ಪರ್ಸ್ ಫಂಡ್ ಟ್ರಸ್ಟ— ಇದರ ಪರವಾಗಿ ಈ ಪುಸ್ತಕವು ಪ್ರಕಟವಾಗಿರುವುದು.

ವಿಷಯಗಳು ಅತ್ಯಂತ ಬೋಧಪ್ರದವಾದವುಗಳು. ಹಳ್ಳಿಗರ ಕೈಪಿಡಿಯಿದು ಬರೇ ಹಳ್ಳಿಗರಿಗಾಗಿ ಮಾತ್ರ ಉಪಯುಕ್ತವಾಗಿರುವುದಾಗಿರುವುದಲ್ಲ. ದೇಶದ ಯಥಾರ್ಥ ವಿಚಾರವನ್ನು ರಾಜಕೀಯ ಇತಿಹಾಸವನ್ನೂ, ಸಾಮಾಜಿಕ ವ್ಯವಸ್ಥೆಯನ್ನೂ, ದೇಶದ ಭಾವೀ ಸ್ವರೂಪವನ್ನು, ಗ್ರಹಿಸಲಿಚ್ಛಿಸುವ ದೇಶಾಭಿಮಾನಿಗಳು ಅವಶ್ಯವಾಗಿ ಈ ಪುಸ್ತಕವನ್ನು ಓದಬೇಕು. ತಿಳಿಗನ್ನಡದಲ್ಲಿ ಇಷ್ಟೊಂದು ಅಮೂಲ್ಯ ವಿಷಯಗಳನ್ನೊಳಗೊಂಡ, ದೇಶದ ಚಿತ್ರವನ್ನು ಇಷ್ಟೊಂದು ಸೊಗಸಾಗಿ ಬಿಡಿಸಿರುವ ಗ್ರಂಥವು ಕನ್ನಡ ಭಾಷೆಯಲ್ಲಿ ದೊರೆಯುವುದು ದುರ್ಲಭ. ಕ್ರೌನ್ ಅಷ್ಟಾಕೃತಿಯ ೨೫೦ ಪುಟಗಳಷ್ಟು ವಿಸ್ತರಿಸುವ ಪುಸ್ತಕದ ಬೆಲೆ ಬರೇ ಎಂಟಾಣೆಯೆಂದು ತಿಳಿದುಬರುತ್ತದೆ. ಇದರಿಂದ ಇದರ ಪ್ರಕಟಣೆಯ ಉದ್ದೇಶವು ತಿಳಿಯುತ್ತದೆ

ಕೆನರಾ ಸ್ಟೂಡೆಂಟ್ಸ್ ಯೂನಿಯನ್, ಮುಂಬಯಿ:—ಈ ಸಂಸ್ಥೆಯ ೧೯೩೭-೩೮ನೇ ಇಸವಿಯ ಚತುರ್ಥ ವಾರ್ಷಿಕ ವರದಿಯು ನಮ್ಮ ಕೈಸೇರಿದೆ ಸಮಾಜದ ಹಾಗೂ ರಾಷ್ಟ್ರದ ಏಳಿಗೆಯ ದೃಷ್ಟಿಯನ್ನು ಮುಂದಿಟ್ಟುಕೊಂಡು ನಾನ್ನಡೆಯುವ ಈ ಯೂನಿಯನಿನ ಕಾರ್ಯವು ಪ್ರಶಂಸನೀಯವು. ಈ ಸಂದರ್ಭದಲ್ಲಿ ಯೂನಿಯನಿನ ಏಳಿಗೆಗಾಗಿ ದುಡಿಯುವ ಯುವಕರನ್ನು ನಾವು ಅಭಿನಂದಿಸುವೆವು. ಈ ಯೂನಿಯನಿನ ಸದಸ್ಯರು ತಮ್ಮ ಆದರ್ಶ ಉದ್ದೇಶ, ಸೇವಾಧ್ಯೇಯವನ್ನು ಪಾಲಿಸಿಬಿಡದೆ ಇನ್ನಷ್ಟು ಉತ್ಸಾಹದಿಂದ ಐಕ್ಯತೆಯಲ್ಲಿ ತಮ್ಮ ಸಂಸ್ಥೆಯ ಮೇಲ್ಮೆಗಾಗಿ ದುಡಿಯುವಂತೆಯೂ, ಮುಂಬಾಯಿಯಂಥಾ ವಿಶಾಲ ನಗರದಲ್ಲಿ ಇದರ ಸ್ಥಾನವು ಇನ್ನಷ್ಟು ಭದ್ರ ತಳಹದಿಯ ಮೇಲೆ ನಿಂತು, ಸ್ಥಿರವಾಗಿ ಉಳಿಯುವಂತೆಯೂ ನಾವು ಹಾರೈಸುತೇವೆ.

ಈ ವಾರದ ನಿಮ್ಮ ಭವಿಷ್ಯ

ತಾ 22—12—38ರಿಂದ 29—12—38ರ ವರೆಗೆ

[ಜ್ಯೋತಿಷವು ಅಸ್ಪಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಿನ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ.

ಸಂ ನ.]

ಮೇಷರಾಶಿ—

ನಿಮಗೀ ವಾರದಲ್ಲಿ ವ್ಯಸನವು ತಪ್ಪಿದ್ದಲ್ಲ. ಯಾಕೆಂದರೆ, ಹೊಟ್ಟೆನೋವು, ಕಣ್ಣುನೋವು ವಗೈರೆಗಳು ಸದಾ ನಿಮ್ಮ ಶಾರೀರಕ ಸುಖವನ್ನಪಹರಿಸುವವು. ಪ್ರತಿಕೂಲಳಾದ ಭಾರ್ಯೆಯಿಂದಲೂ, ಹಣದ ಸಲುವಾಗಿ ಸಂಬಂಧಿಸಿದ ಕೋರ್ಟು ವಗೈರೆಗಳಲ್ಲಿನ ವಿವಾದಗಳಿಂದಲೂ ವ್ಯಸನವು ಹೆಚ್ಚಿ ಮಾನಸಿಕ ಸುಖವು ನಿಮಗೆ ದುರ್ಲಭವಾಗುವುದು. ಈ ದುಃಖದ್ವಯಗಳಿಂದ ಹೀನರಾದ ನಿಮ್ಮ ವದನವು ಕಾಂತಿಹೀನವಾಗಿರುವುದು. ಪ್ರಯಾಣಕ್ಕೆ ಈ ವಾರವು ಶುಭವಲ್ಲವು. ನೀವು ನಿಮ್ಮ ಉದ್ಯೋಗದಲ್ಲಿ ತಕ್ಕ ಮಟ್ಟಿಗೆ ಸುಧಾರಣೆ ಹೊಂದಿರುವುದರಿಂದ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿಯೇ ಸಿಗುವುದು. ಸಾಂಸಾರಿಕ ಗೃಹಸ್ಥರಿಗೆ ಅವಶ್ಯವಿರತಕ್ಕ ಅನೇಕ ವಸ್ತುಗಳು ಲಭಿಸುವವು. ತಾ. 22, 23 ಮತ್ತು 29ಈ ದಿನಗಳಲ್ಲಿ ರಾಜಕೀಯ ಭಾಗದಲ್ಲಿ ಭಯವೂ, ಆಯಾಸ, ಧನವ್ಯಯಗಳೂ ಹೆಚ್ಚು ವವು.

ವೃಷಭರಾಶಿ—

ವಿವೇಕಶಾಲಿಯಾದ ಪುರುಷನು ತನಗೆ ಸಂಭವಿಸತಕ್ಕ ಸುಖ ದುಃಖಗಳನ್ನು ಸಮನಾಗಿ ಪರಿಗಣಿಸುವನು. ಹೇಗಂದರೆ ಅತನು ಸುಖಬಂದಾಗ ಹಿಗ್ಗುವುದೂ ಇಲ್ಲ ಕಷ್ಟಬಂದಾಗ ಕುಗ್ಗುವುದೂ ಇಲ್ಲ. ಇದರಿಂದ ಪರರಿಗೆ ಆತನ ಹೃದಯವನ್ನು ತಿಳಿಯುವುದು ಬಹಳ ಕಷ್ಟವಾಗುವುದು. ಆತನ ಗುಟ್ಟು ರಟ್ಟಾಗುವುದಿಲ್ಲವು. ಅಂತೆಯೇ ನೀವೂ ಕೂಡ ನಿಮ್ಮ ಅಂತರಂಗವನ್ನು ಹೆರವರಿಗೆ ತೋರ್ಪಡಿಸದೆ ಬಹಳ ಗಂಭೀರವಾಗಿ ವರ್ತಿಸುವಿರಿ. ಇದು ನಿಮಗೆ ಬಹಳ ಕಲ್ಯಾಣಕಾರಿಯಾದುದು. ಈ ವಾರದಲ್ಲಿ ನಿಮ್ಮ ಹಣದ ಬಿಕ್ಕಟ್ಟು ನಿವಾರಣೆಯಾಗಿ ಯಾವಾಗಲೂ ನಿಮ್ಮ ಕೈಯಲ್ಲಿ ಕಾಸು ಉಳಿಯುವುದು. ಇದರಿಂದ ನಿಮ್ಮ ಶತ್ರುಗಳು ಬಹ್ವಂಶವಾಗಿ ಕಡಿಮೆಯಾಗುವರು ಮಿತ್ರವೃಂದವು ವೃದ್ಧಿಗೊಳ್ಳುವುದು ಆದರೆ ಸ್ತ್ರೀ ಹೇತುಕವಾಗಿ ನಿಮಗೊಂದು ಅನಿಷ್ಟ ಸಂಭವಿಸಲಿದೆ. ಆರೋಗ್ಯವು ಕೂಡ ನೆಟ್ಟಗಿರಲಾರದು. ತಾ. 22ರಿಂದ 25ರ ವರೆಗೆ ಕೆಲಹಾದ್ಯನಿಷ್ಟಗಳು ತೋರಿಬಂದರೂ ಆ ವೇಳೆ ನಿವಾರಣೆಯಾಗುವುದು.

ಮಿಥುನರಾಶಿ—

"ಬಂದ ಬಹುಚಿಂತೆಯಲಿ ಧೈರ್ಯವ ತಳೆವನ ಜಾಣ" ಎಂಬಂತೆ ವಿವೇಕಿಗಳು ಆಪತ್ಸಾಗರವನ್ನು ಧೈರ್ಯವೆಂಬ ನಾವೆಯ ಮೂಲಕ ಉತ್ತರಿಸುವರು. ನಿಮಗೇನೋ ಈ ವಾರದಲ್ಲಿ ಹಿಂದೆಂದೂ ಸಂಭವಿಸದ ದುಸ್ಸಹವಾದ ಅನೇಕ ಕಷ್ಟಗಳು ಬರಲಿವೆ ಕೇವಲ ಅನಾಥರಕ್ಷಕನನ್ನು ಸಂಪೂರ್ಣ ಭಕ್ತಿಯಿಂದ ಸೇವಿಸುತ್ತಾ ಧೈರ್ಯದಿಂದ ವರ್ತಿಸಿದರೆ ಹಲವು ಕಷ್ಟಗಳಿಂದ ಪಾರಾಗುವಿರಿ. ಕಾರ್ಯನಿರ್ವಾಹಕ ಶಕ್ತಿಯು ನಿಮಗೆ ಸ್ವಯಂ ಇಲ್ಲದಿರುವುದರಿಂದಲೂ ವಿರೋಧಿಗಳ ಪೀಡೆಯಿಂದಲೂ ನಿಮ್ಮ ಅನೇಕ ಕೆಲಸಗಳು ಕೊನೆ ಹೊಂದವು. ಕೋರ್ಟಿನಲ್ಲಿ ಖರ್ಚು ಬಂದಲ್ಲಿ ಖರ್ಚು ಎಂಬಂತೆ ಸರ್ವಸ್ವ ಖರ್ಚೇ ನಿಮ್ಮ ಬೆನ್ನು ಹಿಡಿದಿರುವುದರಿಂದ ಹಣದ ಅಡಚಣೆ ಹೇಳತೀರದು. ಸಮಾಜದ ನಿಂದೆಗೆ ಪಾತ್ರರಾಗುವಿರಿ. ತಾ 24ರಿಂದ 28ರ ವರೆಗಿನ ದಿನಗಳು ಬಹಳ ಶೋಕದಾಯಕಗಳಾಗಿವೆ

ಕರ್ಕಾಟಕರಾಶಿ—

ಮನೋವ್ಯಥೆಯು ಹೆಚ್ಚಿನಂಶ ನಿವಾರಿತವಾಗುವುದು. ಶರೀರಾಲಸ್ಯವೂ ಬಹುಮಟ್ಟಿಗೆ ಕಡಿಮೆಯಾಗುವುದು. ಬಂಧು ಮಿತ್ರರು ಹಲವು ವಿಧದಿಂದ ನಿಮಗೆ ನೆರವಾಗುವರು. ಆದುದರಿಂದಲೇ ನೀವು ವೈರಿಗಳ ಕುಟಿಲ ತಂತ್ರಗಳನ್ನು ನಿರ್ಲಕ್ಷ್ಯದಿಂದ ಭೇದಿಸುವಿರಿ. ಆದರೆ ನಿಮ್ಮ ಸ್ವೀಕೃತ ಕಾರ್ಯಗಳಿಗೆ ನಿಮ್ಮ ವಿಶ್ವಾಸಾರ್ಹರಾದ ಜನರೇ ವಿಘ್ನವನ್ನುಂಟುಮಾಡುವರು. ಗೃಹಕಲಹವು ದಿನೇ ದಿನೇ ವೃದ್ಧಿಗೊಳ್ಳುವುದು. ಧರ್ಮಕರ್ಮಗಳಲ್ಲಿ ನಿಮಗೆ ವಿಶ್ವಾಸವು ಕಡಿಮೆಯಾಗುವುದು. ನೀವು ಜಯ ಸ್ವಂತ ಕೆಟ್ಟಾಗಿ ಖರ್ಚುಮಾಡುವುದು ನಿಮ್ಮ ಸ್ವಭಾವವಾಗಿರುವುದು. ತಾ. 26ರಿಂದ 29ರ ವರೆಗಿನ ದಿನಗಳಲ್ಲಿ ಅಕಸ್ಮಾತ್ ಪ್ರವಾಸಕಾರ್ಯವು ಸಂಭವಿಸಿ ಹೆಚ್ಚಿನ ಕಷ್ಟಕ್ಕೀಡಾಗುವಿರಿ. ರಾಜಕೀಯ ಭಯವೂ ಶ್ರಮವೂ ಅಧಿಕವಾಗುವುದು.

ಸಿಂಹರಾಶಿ—

ಈ ವಾರವು ನಿಮಗೆ ಹೆಚ್ಚಿನ ಭಾಗದಲ್ಲಿ ಉತ್ತಮವಾಗಿದೆ. ಆದರೂ ಸ್ತ್ರೀಪುತ್ರರ ವಿಯೋಗದಿಂದಾಗಿ ಬಹಳ ದೈನ್ಯಭಾವವನ್ನು ತಳೆಯುವಿರಿ ಕಿಂಚಿದ್ವೇದನಾ ಲಕ್ಷಣ ಕಂಡುಬಂದೀತು. ನೀವು ನಿಮುದ್ಯೋಗಿಗ ಆಗಿರದೆ ಉದ್ಯಮ ಶೀಲರಾದಲ್ಲಿ ಮನೋರಥವು ಈಡೇರುವುದು. ಯಾವ ಕಾರ್ಯವನ್ನು ಮಾಡತಕ್ಕ ಧೈರ್ಯೋತ್ಸಾಹಗಳು ಜನಬೆಂಬಲವು ನಿಮಗಿರುವುದರಿಂದ ನಾನಾ ರೀತಿಯ ಉದ್ಯೋಗದಲ್ಲಿ ಧನಾರ್ಜನೆ ಮಾಡುವಿರಿ. ಮಿತವ್ಯಯದಿಂದ ಧನ ಸಂಗ್ರಹಿಸುವಿರಿ. ಸಂಕಲ್ಪಗಳು ಕಾರ್ಯರೂಪಕ್ಕೆ ಬರುವವು. ಶಯ್ಯಾಸುಖವು ಕಡಿಮೆಯಾಗದು. ತಾ. 24ರಿಂದ28ರ ವರೆಗಿನ ದಿನಗಳಲ್ಲಿ ಜನರಿಂದ ಮಾನಮರ್ಯಾದೆಗಳು, ವಾಹನಗಳ ಯಾನ, ಸವಿಶಯನಗಳು ದೊರೆಯುವವು.

ಕನ್ಯಾರಾಶಿ—

"ಲೋಹಿತೇ ಸಾಯಕೈರ್ವಿದ್ಧಂ ವನಂ ಪರಶುನಾ ಹತಂ। ವಾಚಾ ಯದುಕ್ತಂ ನಿರ್ಭತ್ಸಂ ನ ಸಂರೋಹತಿ ವಾಕ್‌ಕ್ಷತಂ" ಬಾಣದಿಂದ ಹೊಡೆಯಲ್ಪಟ್ಟದ್ದೂ, ಕೊಡಲಿಯಿಂದ ಕತ್ತರಿಸಲ್ಪಟ್ಟ ವನವೂ ಕೂಡ ಕಲವು ಸಮಯಗಳಲ್ಲಿ ವೃದ್ಧಿ ಹೊಂದಿ ಪೂರ್ವ ರೂಪವನ್ನೇ ತಳೆಯುವವು. ಯಾವುದು ಮಾತಿನಿಂದ ನಿಂದೆಯುಮಾಡಲ್ಪಟ್ಟಿತೋ ಅಂಥಾ ವಾಕ್ಕಿಂಟ ಹುಣ್ಣು ಆರುವಾನಕವೂ ಉಳಿವದೇ ಯೋಚಿಸು ಎಂಬೂ ನಡುಮಾದ್ದು. ನಿಮಗೆ ಮಾತಿನಿಂದಾದ ಮಾನಹಾನಿಯು ಮತ್ತು ಮನಸ್ತಾಪವು ಎಂದೂ ಆರದು. ಶತ್ರುಗಳಿಂದುಂಟಾಗುವ ಪೀಡೆಯು ಮೊದಲೇ ವ್ಯಥೆಗೊಂಡಿದ್ದ ನಿಮ್ಮ ಮನಸ್ಸನ್ನು ಮತ್ತಷ್ಟು ಪೀಡಿಸುವದು. ಪ್ರವಾಸಕ್ಕೆ ಈ ವಾರವು ಬಹಳ ಹಾನಿಕರವು. ವಾರಾಂತ್ಯದ ನಾಲ್ಕು ದಿನಗಳು ಸ್ವಲ್ಪ ಮಟ್ಟಿಗೆ ಉತ್ತಮವಿರುವುದರಿಂದ ಕೆಲವಂಶ ಧನಲಾಭವೂ ಕಿಂಚಿತ್ ಸ್ತ್ರೀಸೌಖ್ಯವೂ ಲಭಿಸುವದು

ತುಲಾರಾಶಿ—

"ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ" ಎಂದು ನೀತಿವಚನವಾಗಿರುವುದು. ಅಂದರೆ ಸತತ ಉದ್ಯೋಗವನ್ನು ಮಾಡತಕ್ಕ ಪುರುಷೋತ್ತಮನಿಗೆ ತಕ್ಕ ಫಲವು (ಸಂಪತ್ತು) ಲಭಿಸಿಯೇ ತೀರುವದು. ನೀವೂ ಕೂಡಾ ಈ ವಾರದಲ್ಲಿ ಉದಾಸೀನರಾಗದೆ ದುಡಿಯಿರಿ. ನಿಮ್ಮ ಅದೃಷ್ಟವು ಬಹಳ ಒಳ್ಳೆಯದಿರುವುದು ನಿಮ್ಮ ಪುರುಷಪ್ರಯತ್ನಕ್ಕೆ ದೈವವೂ ಕೂಡ ಅನುಕೂಲವಾಗಿರುವುದರಿಂದ ನಿಮ್ಮ ಮಾರ್ಗವು ಅಪ್ರತಿಹತವಾಗಿರುವುದು. ಸಾಂಸಾರಿಕ ತಾಪತ್ರಯವಿಲ್ಲವು. ಮಾನಸಿಕ ಸುಖವಿಹುದು. ಶಾರೀರಕ ಸುಖಕ್ಕೆ ಒಂದು ಅಪಘಾತ ಸಂಭವಿಸಲಿದೆ. ಆದಕಾರಣ ವಾಹನಾದಿ ಯಾನಗಳಲ್ಲಿ ವೃಕ್ಷಾರೋಹಣ ಇತ್ಯಾದಿ ಕಾರ್ಯಗಳಲ್ಲಿ ಜಾಗ್ರತೆಯಿಂದಿರಿ. ವಾರದ ಆದ್ಯಂತ್ಯ ಭಾಗಗಳು ಹೆಚ್ಚಿನಂಶ ಇಷ್ಟಾರ್ಥಪೂರಕಗಳಾಗಿವೆ.

ವೃಶ್ಚಿಕರಾಶಿ—

ಈ ವಾರವು ನಿಮ್ಮ ಭಾಗಕ್ಕೆ ಅನಿಷ್ಟಕಾರಕವಾಗಿರುವುದು. ಚಂಚಲಚಿತ್ತರಿಂದ ನಿಮಗೆ ವಿಶ್ವಾಸಾರ್ಹರಾದ ಜನರು ಬಹಳ ದುರ್ಲಭವಾಗುವರು. ಗಳಿಸಿದ ಹಣವು ನಷ್ಟ ಹೊಂದುವ ಸಂಭವವಿದೆ. ಕಾರಣ "ದಾನಂ ಭೋಗೋ ನಾಶಸ್ತಿಸ್ರೋ ಗತಯೋ ಭವಂತಿ ವಿತ್ತಸ್ಯ। ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ" ಧನದ ವ್ಯಯಕ್ಕೆ ಮೂರು ದಾರಿಗಳು. ಒಂದನೇ ದಾನ ರೂಪವಾದುದು. ಎರಡನೇದು ಆತ್ಮೀಯ ಭೋಗರೂಪವಾದುದು. ಮೂರನೇದು. ಕಳ್ಳಕಾಕರ ವಶವಾಗಿ ನಾಶಹೊಂದುವದು. ಈ ಪ್ರಕಾರ ಮೊದಲಿನ ಎರಡಕ್ಕೆ ಯಾರು ಉಪಯೋಗಿಸುವುದಿಲ್ಲವೋ ಅವರ ಧನಕ್ಕೆ ಮೂರನೆಯ ಮಾರ್ಗವೇ ಗತಿಯು ನಿಮ್ಮ ಲೋಭತ್ವದಿಂದಾಗಿ ನಿಮಗೂ ಕೂಡ ಈ ಮೂರನೇ ದಾರಿಯು ಸಂಭವ ಬರುವಂತಿದೆ ಜನರಲ್ಲಿ ವಿಶೇಷತಃ ಸ್ತ್ರೀಯರಲ್ಲಿ ಕೆಲಸವಾಗುವುದು ಆಪ್ತ ಜನರು ಅರ್ಧದಲ್ಲಿ ಕೈಬಿಡುವರು. ತಾ 24, 25ರ ವರೆಗೆ ಸ್ವೀಕೃತ ಕಾರ್ಯಜಯ ಸ್ತ್ರೀ ಸುಖಗಳು ಲಭಿಸುವವು.

ತುಲಾರಾಶಿಯವರ ಗ್ರಹಸ್ಥಿತಿಯು ಉತ್ತಮವಿಹುದು ಧನೂರಾಶಿಯವರ ಗ್ರಹಚಾರವು ಮಧ್ಯಮ ತರಗತಿಯಲ್ಲಿರುವುದು. ಮೇಷ, ವೃಷಭ, ಕರ್ಕಾಟಕ, ಸಿಂಹ, ಕನ್ಯಾ, ವೃಶ್ಚಿಕ, ಕುಂಭರಾಶಿಗಳವರ ಭವಿಷ್ಯವು ಕನಿಷ್ಠಾವಸ್ಥೆಯಲ್ಲಿರುವುದು. ಮಿಥುನರಾಶಿಯವರ ಭವಿಷ್ಯವು ಅತ್ಯಂತ ಹೀನಾವಸ್ಥೆಯನ್ನೈದಿಹುದು.

ಧನೂರಾಶಿ—

ಸಾರ್ವಜನಿಕ ಸೇವೆಗೈದು ಜನಪದದ ವಿಶೇಷ ಗೌರವಾದರಗಳಿಗೆ ಪಾತ್ರರಾಗುವಿರಿ, ತಾತ್ಕಾಲಿಕ ಖರ್ಚಿಗೆ ಬೇಕಾಗುವಷ್ಟು ಧನವಸನಾದಿಗಳು ತಾವಾಗಿ ಸಿಗುವವು. ಪುತ್ರ ಮಿತ್ರರಿಂದೊಡಗೂಡಿದ ನಿಮ್ಮ ಕಾರ್ಯಗಳು ಹೆಚ್ಚಾಗಿ ಜಯ ಶೀಲವಾಗಿ ಪೂರ್ತಿಗೊಳ್ಳುವವು. ಆದರೆ ಶತ್ರುಗಳು ನಿಮ್ಮ ಶಮ್ಮಿಂದ ಸಾಧ್ಯವಾಗುವಷ್ಟು ಪ್ರತೀಕಾರ ಮಾಡಲು ಹಿಂದಾಗರು. ದೇಹದಲ್ಲಿ ಅಲ್ಲಲ್ಲಿ ನೋವುಗಳು, ಹೊಟ್ಟೆನೋವು, ಆಯಾಸ ಇತ್ಯಾದಿಗಳು ಸ್ವಲ್ಪ ಹೆಚ್ಚಾಗುವವು. ಮನಸ್ಸನ್ನು ಬಿಗಿ ಹಿಡಿದು ಸತ್ಕರ್ಮಗಳಲ್ಲಿ ಪ್ರವರ್ತಿಸುವಂತೆ ಮಾಡತಕ್ಕದ್ದು ನಿಮ್ಮ ಆದ್ಯ ಕರ್ತವ್ಯವಾಗಿದೆ ತಾ. 22, 23 ಮತ್ತು 26, 27, 29ನೇ ದಿನಗಳು ಅನುಕೂಲಗಳಾಗಿರುವುದರಿಂದ ಇಷ್ಟಾನ್ನ ಭೋಜನ, ಧನಲಾಭ, ಸ್ತ್ರೀಸುಖಗಳು ದೊರೆಯುವವು

ಮಕರರಾಶಿ—

ಧನಾರ್ಜನೆ ಮಾಡುವ ಮಾನಗಳಾದ ಧರ್ಮಕರ್ಮಾಸಕ್ತರಿಗೂ ಕೂಡ ಇಷ್ಟು ಒಳ್ಳೇ ಸಮಯವು ಹಿಂದೆ ಬರಲಿಲ್ಲ ಮುಂದೆ ಸದ್ಯ ಬರುವಂತಿಲ್ಲವೆನಬಹುದು. ಪ್ರತಿಯೊಬ್ಬ ಉದ್ಯೋಗಿಗೂ ಅವನವನ ಕಾರ್ಯದಲ್ಲಿ ತಕ್ಕ ಪ್ರತಿಫಲಸಿದ್ಧೇ ಇದೆ. ನೀವು ಎಲ್ಲಾ ಭಾಗದಲ್ಲೂ ಚಿಕ್ಕ ಪಾಲುಗಾರನಂತಿರುವಿರಿ. ಕೋರ್ಟು ವಗೈರೆಗಳ ವ್ಯವಹಾರದಲ್ಲಿ ನಿಮ್ಮ ಪಂಥವೇ ಸರಿಯೆನಿಸುವದು. ನಿಮ್ಮ ಹೆಸರನ್ನು ಕೇಳದೊಡನೆ ವಿರೋಧಿಗಳು ಕಣ್ಮರೆಯಾಗುವರು. ಸರ್ವತೋಮುಖದಿಂದ ಧನವು ವೃದ್ಧಿ ಹೊಂದುವುದು ಆದರೆ ಆಜ್ಞಾನದಿಂದಾಗಲೀ, ಯಾ ಅವಿವೇಕದಿಂದಾಗಲೀ ವ್ಯರ್ಥ ಧನವ್ಯಯಿಸಿ ಆ ಮೇಲೆ ಪಶ್ಚಾತ್ತಾಪಪಡುವಿರಿ. ಆಕಸ್ಮಿಕ ಪ್ರವಾಸವು ಗಂಡಾಂತರವಿದ್ದರೂ ಹೊಂದುವಿರಿ. ತಾ. 24, 25 ಮತ್ತು 29 ಈ ದಿನಗಳು ಚೆನ್ನಾಗಿವೆ

ಕುಂಭರಾಶಿ—

ನಿಮಗೆ ಪ್ರತಿಭಟಿಸುವವರಾರೂ ಇಲ್ಲದಿರುವುದರಿಂದ ಧೈರ್ಯದಿಂದ ಸ್ವೀಕೃತ ಕಾರ್ಯಗಳನ್ನು ಕೊನೆಗಾಣಿಸಿ ನಾನು ಸುಖಿಯಾಗಿರುವೆನು ಎಂಬ ಭಾವನೆಯು ನಿಮ್ಮಲ್ಲುತ್ಪನ್ನವಾಗಿಹುದು ಆದರೆ ನೀವು ವ್ಯವಹಾರ ಜಾಣರಾಗಿಲ್ಲವು ಆದಕಾರಣದಿಂದಲೇ ಮಾತು ಮಾತಿಗೆ ಕಲಹವಾಗುವದು. ಧನವಾಹನಗಳ ಹಾನಿಯಿಂದಾಗಿ ಮಾನಸಿಕ ಸುಖವು ಇನಿತೂ ಉಳಿಯದು. ದೇಹಾಲಸ್ಯದಿಂದಲೂ ಮನೋರೋಗದಿಂದಲೂ ಶರೀರವು ಕೃಶವಾಗುವದು. ದುಃಖ ಮತ್ತು ಭಯಗಳು ಏಕಕಾಲದಲ್ಲಿ ಸಂಭವಿಸುವುದು. ತಾ. 24, 25 ಮತ್ತು 29ರಲ್ಲಿ ಕಾರ್ಯಕ್ಕೆ ವಿಘ್ನಗಳು ಅಧಿಕವಾಗುವವು, ಧನಮಾನಗಳಿಗೆ ಧಕ್ಕೆಯು ಸಂಭವವಿದೆ.

ಮೀನರಾಶಿ—

ಧನವ್ಯಯವು ಎಲ್ಲೆಯನ್ನು ಮೀರಿ ಹೋಗುವುದು. ಆತ್ಮೀಯರ ವಿರಹದಿಂದಲೂ, ಅಕಸ್ಮಾತ್ ಸಂಭವಿಸುವ ದೇಹಾಘಾತದಿಂದಲೂ, ಶೋಕಕ್ಕೆ ಪಾತ್ರರಾಗುವಿರಿ. ತನು ಪೀಡೆಯು ಕಾರ್ಯಕ್ಕೆ ವಿಘ್ನಗಳು ಹೆಚ್ಚಾಗಿ ಸಂಭವಿಸುವವು. ಶರೀರದಲ್ಲಿ ಹುಣ್ಣು, ಕಜ್ಜಿ ವಗೈರೆ ಚರ್ಮರೋಗಗಳು ಉಂಟಾಗಿ ಶಾರೀರಕ ಸುಖಾನಿಗಳಾಗುವವು ಕೈಕೊಂಡ ಕಾರ್ಯಗಳು ಅರ್ಧವರ್ಧವಾಗಿ ನಿಲ್ಲುವವು. ಆದರೂ ತಾ 22ರಿಂದ 25ರ ವರೆಗೂ 29ರಲ್ಲೂ ದರ್ಶನಾಯವಾರ ಸಕ್ತರಿಗೆ ವಿವಿಧ ವಸ್ತ್ರ, ಧನಲಾಭ, ವನಿತಾಸುಖ ಮಿತ್ರ ಸಮಾಗಮ ಮೊದಲಾದ ಸಂತೋಷ ಕಾರ್ಯಗಳು ಜರಗುವವು. ಕೆಲವಂಶ ಇಷ್ಟಾರ್ಥವೂ ಕೈಗೂಡುವದು

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ ಬೆಲೆ: 0—1—0
೨ ಹೊಸ ಮಾದರಿ „ 0 -1—3
೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ „ 0 —4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-4-0

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸದಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ. ಬೆಲೆ. 0-8-0 ಮತ್ತು ರೂ 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:— ಕುಂದಾಪುರ-ಕಾಮತ್ಸ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ-ಜಿ. ಕೃಷ್ಣ ಕಿಣಿಂತರು, ಆಯುರ್ವೇದೀಯ ಔಷಧಗಳ ಏಜೆಂಟರು, ಕಾರ್ಕಳ-ವಿ. ವಿ ಶೆಣೈ-ಕೆಮಿಸ್ಟ್, ಕಾಸರಗೋಡು-ಭಕ್ತಾ ಬ್ರದರ್ಸ್ ಮತ್ತು ಶ್ರೀರಾಮ ಸ್ಟೇಶನರಿ ಹೌಸ್, ಪುತ್ತೂರು-ಬಿ ಪಾಂಡುರಂಗ ಗೋವಿಂದ ಭಂಡಾರಿ ಮತ್ತು ಪೈ ಡಿಸ್ಪೆನ್ಸರಿ, ಮೂಲ್ಕಿ ಬಿ. ಎಸ್ ಸೀತಾರಾಮ ಮ್ಯಾನುಫೇಕ್ಚರ್ಸ್, ಜನರಲ್ ಮರ್ಚಂಟ್ಸ್, ಮೂಡಬಿದ್ರೆ-ಸಂಜೀವ ಶೇಣಗಿರಿ ಪ್ರಭು ಬ್ರದರ್ಸ್, ಬಂಟ್ವಾಳ ಪ್ರಭು ಅಂಡ್ ಕೋ, ಉಡುಪಿ-ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಮೈಸೂರು ಸಮಾಚಾರ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ಡಿ. ೧೮

ಮೈಸೂರು ಜಿಲ್ಲಾ ವಿಭಾಗ—1939 ನೇ ಜೂನ್ ತಿಂಗಳಿಂದ ಮೈಸೂರು ಜಿಲ್ಲೆಯನ್ನು ಎರಡು ಭಾಗಗಳನ್ನಾಗಿ ಮಾಡಿ, ಮಂಡ್ಯ ಜಿಲ್ಲೆಯೆಂದು ಒಂದು ಭಾಗವನ್ನು ತೆರೆಯುತ್ತಾರೆ. ಇದಕ್ಕೆ ಈಗಾಗಲೇ ಎಲ್ಲಾ ಸಿದ್ಧತೆಗಳೂ ನಡೆಯುತ್ತಾ ಇವೆ. ಮಂಡ್ಯದಲ್ಲಿ ಜಿಲ್ಲಾ ಕಛೇರಿಯನ್ನು ಬಹಳ ರಭಸದಿಂದ ಕಟ್ಟುತ್ತಿದ್ದಾರೆ. ಜನವರಿ ಮೊದಲನೇ ತಾರೀಕಿನಿಂದ, ಕೆಲವು ಇಲಾಖೆಯವರು (ಮೈಸೂರು ಜಿಲ್ಲೆಯಲ್ಲಿ) ಹೊಸ ಜಿಲ್ಲೆಗಳನ್ನಿಟ್ಟು ಮಂಡ್ಯದ ಜಿಲ್ಲೆಯ ಕಾರ್ಯಗಳನ್ನು ನಡೆಸುವರೆಂದು ನಂಬಲರ್ಹವಾಗಿದೆ. ಮೈಸೂರು ಸಂಸ್ಥಾನದಲ್ಲೆಲ್ಲಾ ಮೈಸೂರು ಜಿಲ್ಲೆಯೇ ದೊಡ್ಡ ಜಿಲ್ಲೆಯಾದ್ದರಿಂದ, ಇದನ್ನು ಹೀಗೆ ವಿಭಾಗ ಮಾಡುತ್ತಾರೆಂದು ತಿಳಿದು ಬಂದಿದೆ. ಇದೇ ವಿಷಯವಾಗಿ ಎರಡು ವರ್ಷಗಳ ಕೆಳಗೆ ನಡೆದ ದಸರಾ ಅಧಿವೇಶನದ ಅಸೆಂಬ್ಲಿಯಲ್ಲಿ ಪ್ರಶ್ನೆಗಳು ಎದ್ದಿದ್ದವು.

ರಾಜಕೀಯ ಸುಧಾರಣಾ ಸಮಿತಿ—ದೇಶಲ್ಯಂದ ಸಮಿತಿಯು ಮುಂದೆ ಈ ವಿಷಯದಲ್ಲಿ ಅನೇಕರು ತಮ್ಮ ಅಭಿಪ್ರಾಯವನ್ನಿತ್ತರು. ಇಷ್ಟಲ್ಲದೆ ಅನೇಕ ಕಾಂಗ್ರೆಸ್ ಮುಖಂಡರುಗಳು, ಪ್ರೊಫೆಸರ್ ಎಚ್. ಸಿ. ದಾಸಪ್ಪ, ಬೆಂಗಳೂರಿನ ರೆಡ್ಡಿ ಸುಬ್ಬಾ ಗುಂಡಪ್ಪಗೌಡ ಅವರು ತಮ್ಮ ಅಭಿಪ್ರಾಯವನ್ನಿತ್ತರು. ಮೈಸೂರಿನ ಶ್ರೀ ಸಿ ನರಸಿಂಹಯ್ಯನವರು, ಸದ್ಯಕ್ಕೆ ಓವರ್ ಮಿಂಗ್‌ವಿಗ ಮಂತ್ರಿಗಳಿದ್ದಂತೆ ಸಂಶೇಂದು ತಿಳಿಸಿದರಂತೆ. ಮತ್ತು ಬೆಂಗಳೂರಿನಲ್ಲಿರುವ ಶ್ರೀಮತಿ ತಿಪಂಗಡಮ್ಮ, ಬೇಲೂರು ಶ್ರೀನಿವಾಸಯ್ಯಂಗಾರ್ಯರ, ಇದಕ್ಕೆ ಒಂದು ಮೆಮೋರಂಡಂ ಸಲ್ಲಿಸಿ, ಪ್ರೊಫೆಸರ್ ಬಿಡಿ ಕೇಶವರು, ಅಭಿಪ್ರಾಯ ಪಟ್ಟಿದಂತೆ ಸದ್ಯದಲ್ಲಿ ಜನಾಬ್ದಾರಿ ಸರ್ಕಾರದ ಅವಶ್ಯಕತೆ ಇಲ್ಲವೆಂದು ತಿಳಿಸಿದ್ದಾರೆ.

ಮಿ. ಇನಾಂ ಹುಸೇನ್— ಇವರನ್ನು ಚಿತ್ರದುರ್ಗದ ಜಿಲ್ಲಾ ಜಗಳೂರು ಪೌರ ಸಭೆಯ ಮಿತಗಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ

ಖುಲಾಸೆ—ಶ್ರೀ. ಕೆ. ಶ್ರೀನಿವಾಸಯ್ಯಂಗಾರ್ ಎಂಬವರು ಇಲ್ಲಿಯ ಬ್ಯಾರಿಸ್ಟರ್, ಇವರೂ, ಇವರ ಬಂಧುಗಳೊಬ್ಬರೂ, ಒಂದು ಸತ್ತಿನ ಕೃಷಿ ವ್ಯವಹಾರದಲ್ಲಿ ಪೂರ್ಣ ಮಿಥ್ಯ ಥ್ ಅನ್ನ್ ಉರುಫ್ ಗಿದ್ದು ಎಂಬವರ ಕ್ರಿದ ಮೊಬಲಗಿನ ಸಂಖ್ಯೆಯನ್ನು ತಿದ್ದಲು, ಮೋಸಮಾಡಲು ಯತ್ನಿಸಿದರೆಂಬ ಆಪಾದನೆಯ ಮೇಲೆ ಬಂದಿದ್ದ ಮೊಕದ್ದಮೆಯು ರುಜುವಾತಾಗಲಿಲ್ಲವಾಗಿ, ನಗರದ ಮೊದಲನೇ ಮ್ಯಾಜಿಸ್ಟ್ರೇಟರು ಇವರನ್ನು ಖುಲಾಸೆ ಮಾಡಿದರು.

ಭೂಮಿ ಇಲ್ಲದವರಿಗೆ ಸಹಾಯ—ಹಿಂದುಳಿದ ವರ್ಗದವರಿಗೆ ಮುಖ್ಯವಾಗಿ ಆದಿ ಕರ್ನಾಟಕ, ಇತರ ಕೆಲವು ವರ್ಗದವರಿಗೆ ಭೂಮಿಯನ್ನು ಮುಖ್ಯವಾಗಿ ಕೊಟ್ಟು ವ್ಯವಸಾಯವನ್ನು ಪ್ರೋತ್ಸಾಹಿಸಲು ಒಂದು ಸರ್ಕಾರದ ಆರ್ಡರ್ ಹೊರಟಿದ್ದು ಇದಕ್ಕೆ ಸರ್ಕಾರ ಹಣವನ್ನು ಕೊಡಲಾಗಿದೆ

ಪ್ರಾಥಮಿಕ ವಿದ್ಯಾಭ್ಯಾಸ—ಈ ಸಂತ ಪ್ರವೀಣ ಮಿಸ್, ... ಚಾರಿ, (ಮೊದಲನೆ ಮೆಂಬರ್, ...), ಮತ್ತು ಇತರ 1 ದುಂಡು ಸದಸ್ಯರ ... ಭ್ಯಂದ ವಿದ್ಯಾಭ್ಯಾಸ ಸಮಿತಿ ... ಇಂಟೀರಿಂ ವರದಿ ಹೊರಡಿಸಿ, ಈ ವಿದ್ಯಾಭ್ಯಾಸಕ್ಕೆ ತಗಲುವ ವೆಚ್ಚ, ಅದರ ಆಡಳಿತ ವ್ಯವಸ್ಥೆ, ಮತ್ತು ಅದನ್ನು ಮುಂದೆ ತರಲು ನಡೆಸಬೇಕಾದ ಕೆಲಸ, ಇವೇ ಮುಂತಾದ ವಿಷಯಗಳನ್ನೊಳಗೊಂಡಿರುವ ಈ ವಿದ್ಯಾಭ್ಯಾಸದ ವರದಿಯು ಹೊರ ಬಿದ್ದಿದೆ. ಇದರಿಂದ ಇನ್ನು ಮುಂದೆ ಪ್ರಾಥಮಿಕ ವಿದ್ಯಾಭ್ಯಾಸವು ಸುಲಭವಾಗಿ ನಡೆಯುವಂತಾಗುತ್ತದೆ. 1937ನೇ ಅಕ್ಟೋಬರ್‌ನಲ್ಲಿ ಆಸಮಿತಿಯು ರಚಿಸಲಾಯಿತು.

ಗ್ರಾಮ ಸೇವಾಕಾರ್ಯ ಮೈಸೂರು ವಿಶ್ವವಿದ್ಯಾನಿಲಯ ಸಂಘದವರು, ಪ್ರತಿವಾರ ಪ್ರೊಫೆಸರ್ ಸುಮಾರು 10 ಮೈಲು ದೂರದಲ್ಲಿರುವ ಕೇರ್ಗಳ್ಳಿ ಎನ್ನುವ ಹಳ್ಳಿಗೆ ಹೋಗಿ ಅಲ್ಲಿಯ ಜನಗಳಿಗೆ ಸಹಾಯಮಾಡಿ, ಅವರನ್ನು ಓದುಬರಹ, ಪ್ರಪಂಚ ವ್ಯವಹಾರದಲ್ಲಿ ಮುಂದೆ ತರುತ್ತಿದ್ದಾರೆ. ಕಳೆದ ವಾರ ವೈಸ್ ಛಾನ್ಸಲರ್ ಆದ, ಶ್ರೀ ಎನ್ ಎಸ್. ಸುಬ್ಬರಾಯರು ಇಲ್ಲಿಗೆ ದಯಮಾಡಿ, ಇವುಗಳನ್ನು ನೋಡಿಕೊಂಡು ಬಂದರು.

ಮರಣ—ಮೈಸೂರು ರೈಲ್ವೇಗಳ ನಿವೃತ್ತ ಚೀಫ್ ಇಂಜಿನೀಯರ್, ಶ್ರೀ. ಕೆ. ಶ್ರೀನಿವಾಸಯ್ಯಂಗಾರ್ಯರು ಮೊನ್ನೆ ದಿನ ಮರಣ ಹೊಂದಿದರೆಂದು ತಿಳಿಯಲು ವಿಷಾದವಾಗುತ್ತದೆ. ಇವರ ಸಹೋದರರಾಗಿದ್ದ ಶ್ರೀ. ಕೆ ಭಾಷ್ಯಂರವರು ಮಹಾತ್ಮಸಿನಲ್ಲೂ, ಶ್ರೀ. ಕೆ. ಸಂತಾನಂ ರವರು ಇಂಡಿಯಾರಿನಲ್ಲೂ ಇರುತ್ತಾರೆ.

ಗೋವುಗಳಿಗೆ ಹೆಚ್ಚು ಸೌಖ್ಯ—ಈ ಸಂಸ್ಥಾನದಲ್ಲಿ ಗೋವುಗಳಿಗೆ ಬೇಕಾದ ಹುಲ್ಲು, ಕಪಿದು ಮುಂತಾದವನ್ನು ಸುಲಭವಾಗಿ ಒದಗಿಸಲು, ಪರ್ಯಾಯ ಮಾಡಲು, ನಮ್ಮ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿದ್ದಾರೆ.

ಅಸ್ಥಿಭಾರ ಶಿಲೆ—ಚಾಮುಂಡಿ ಬೆಟ್ಟದಲ್ಲಿ ಒಂದು ಅಗಾಧವಾದ ಕಲ್ಲು ಒಂದೆಯನ್ನು ಸುಮಾರು ಇಂಜಿನದ ಶಕ್ತಿಯಿಂದ ಮೇಲಕ್ಕೆ ಎತ್ತುತ್ತಿದ್ದಾರೆ. ಇದನ್ನು ಆರಿಯ ಮೂಲಕ ಶಿವಮೊಗ್ಗ ಜೋಗ್ ಜಲಪಾತಕ್ಕೆ ತೆಗೆದುಕೊಂಡು ಹೋಗಿ, ಚೆನ್ನಾಗಿ ಅದನ್ನು ಅಲಂಕಾರ ಮಾಡಿ, ಸೊಗಸಾದ ಕಲ್ಲು ಕೆಲಸದಿಂದ ಅದರ ಮೇಲೆ, ಇದನ್ನು ಕೆತ್ತುವಂತೆ ಮಾಡಿ ಅದನ್ನು ಅಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿ ತಯಾರು ಮಾಡುವ ಮನೆಗೆ ಹಾಕುವ ಅಸ್ಥಿಭಾರ ಶಿಲೆಯನ್ನಾಗಿ ಉಪಯೋಗಿಸುತ್ತಾರೆಂದು ತಿಳಿದು ಬಂದಿದೆ. ಈ ಕೆಲಸವು ನೋಡಲು ಬಹಳ ತಮಾಷೆಯಾಗಿದೆ.

Degrees. Books Medicines

Free H L. M S H M B H M D etc Free Homeo-Ayur Unani Naturo degrees by post al [illegible] Practitioners also get soon Homeo Materiamedica, Rs 5, Homeo Practice book Rs 4 Insanity Cure Pills Rs [illegible] 2 annas stamps —

Principal Indian Homeopathic Institute and Society (Govt Regd)

P O MAH[illegible] (Dt India)

WANTED

An Overseer to take charge of Halady Bridge works. Apply stating qualifications and minimum salary required

B M. Raghunatha Shetty,
Contractor,
Brahmavar, S, K.

ಕ್ರಿಸ್‌ಮಸ್ ಕಾಣಿಕೆ



ಲಿವರ್ ಚಲನವಲನಗಳುಳ್ಳ ಉತ್ತಮ ತರಗತಿಯ ... ರೋಲ್ಡ್ ಗೋಲ್ಡ್ ಮುಚ್ಚಳಗಳುಳ್ಳ ರಿಸ್ಟ್ ವಾಚುಗಳು ಚೌಕಾಕೃತಿ ಮತ್ತು ಅಷ್ಟಕೋಣಾಕೃತಿಯು ... ಕ್ರಿಸ್ಮಸ್ ಹಬ್ಬದ ... ಒಂಭತ್ತು ರೂಪಾಯಿ ಬೆಲೆಯುಳ್ಳವುಗಳೆಲ್ಲ ರೂಪಾಯಿ 5 15 0ಕ್ಕೇನೇ ಮಾರಲ್ಪಡುವವು.

ಟಪ್ಪಾಲು ಖರ್ಚು ಪ್ರತ್ಯೇಕ.

ಇಂದೇ ಬರೆಯಿರಿ—

Nelson Watch Co,
Wall Tax Road, P. O MADRAS

ನೋಟೀಸು

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಒಡವಿನ ಮೇಲೆ ಪಡದ ಸಾಲಗಳನ್ನು ಮರುಪಾವತಿ ಮಾಡದೇ ಬಡ್ಡಿ ಸಹ ಹೆಚ್ಚು ಸಮಯ ಕೊಡದೆ ಬಾಕಿಮಾಡಿಕೊಂಡಿರುವುದರಿಂದ ಸದರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜಾರಿಯಾಗದೆ ವಾಪಾಸು ಬಂದಿರುವುದರಿಂದ ಈ ಮೂಲಕ ಜಾಹೀರು ಪಡಿಸುವುದೇನೆಂದರೆ—

ಸದರಿ ನಗಗಳನ್ನು ತಾ. 3–1–39ನೇ ಮಂಗಳವಾರ ಮಧ್ಯಾಹ್ನ ಘಂಟೆ ೩ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಅದೇ ದಿವಸ ಸಂಪೂರ್ಣ ಆಗದೆ ಇದ್ದರೆ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು. ತಿಳಿದಿರುವೆದು.

ಸಾಲದ ಸಂಖ್ಯ	ಅಸಾಮಿಗಳ ಹೆಸರು	ಸಾಲದ ಮೊಬಲಗು
608/36	ಮೋಚು ಸೆಡ್ತಿ, ಸುಬ್ಬಯ್ಯ ಸೆಟ್ರ ಸೊಸೆ, ಪಡುಗ್ರಾಮ ಉಡುಪಿ ತಾಲೂಕು	27 0 0
199/37	ಎಂ ಎಚ್ಚಂಣ ಸೆಟ್ಟಿ, ದೇಜು ಸೆಟ್ರ ತಮ್ಮ, ಮೂಲೂರುಗ್ರಾಮ, ಉಡುಪಿ ತಾಲೂಕು	50 0 0
436/36	ಮೈದಿನ್ ಬ್ಯಾರಿ ಬಂಜ ಯಾನೆ ಹಮ್ಮದ್ ಬ್ಯಾರಿಗಳ ಮಗ, ಕಳತೂರುಗ್ರಾಮ, ಉಡುಪಿ ತಾಲೂಕು	30 0 0
25/36	ರಾಮಣ್ಣ ಸೆಟ್ಟಿ, ಬೊಮ್ಮಯ್ಯ ಸೆಟ್ರ ಮಗ, ಕುತ್ಯಾರ್ರ ಗ್ರಾಮ, ಉಡುಪಿ ತಾಲೂಕು	12 0 0

Office of the Bank,
KAUP,
19 12–1938.

K. Gopalkrishna Shetty,
Agent

ರೂ 1—8—0ಕ್ಕೆ 3 ವಾಚುಗಳು ಮತ್ತು 495 ಮನೋಹರ ವಸ್ತುಗಳು.



ನಮ್ಮ ರೂ 1–8–0 ಕ್ರಯದ16 ಪಣ್ಣ ಸೀಸೆ "ಒಟೋತೋಸ"ನ್ನು ಕೊಂಡುಕೊಳ್ಳುವವರಿಗೆ ಒಂದು ಬಂಗಾರದ ಡಮ್ಮಿ ರಿಸ್ಟುವಾಚು. ಒಂದು ಪೌಡರ್ ಪೇಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿಕಡ್ಡಿಯ ಕೇಸು, ಒಂದು ಸಿಗರೇಟುಲೈಟು, ಒಂದು ಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ್ ಸ್ಕ್ರೂ, 365 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರಂಟಿಯಿರುವ ಭದ್ರ ನೇತಿನರಿಯುಳ್ಳ ಗಡಿಯಾರ, ಒಂದು ಫೌಂಟೆನ್ ಪೇನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು 14ಆಣೆ ಹೆಚ್ಚಿಗೆ.

Oriental Fancy Stores, S. C. E 90.

Post Box. No. 12204, **CULICUTTA.**

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿ ಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ವಿವರ್ಣ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದವರಿಗೆ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ 5—0—0

'ಕಾಮಶಾಸ್ತ್ರ' ದರ್ಪಣ ಪುಸ್ತಕವು ಮೂಫಿಯಾಗಿ ಕಳುಹಿಸುವೆವು. ಒಂದು ಕಾರ್ಡ ಹಾಕಿರಿ

ಆತಂಕನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. c. 282/38

ಸ್ವಾಮಿನ್ ಮಿಂಡೋಸ—**ವಾದಿ**

ಕೆ. ಕೃಷ್ಣಯ್ಯ ಪ್ರಭು—**ಪ್ರತಿವಾದಿ**

ಸದರಿ ಪ್ರತಿವಾದಿ ಕೆ ಕೃಷ್ಣಯ್ಯ ಪ್ರಭುಗಳಿಗೆ ತಿಳಿಸುವುದೇನೆಂದರೆ—

ವಾದಿಗೆ ನೀವು ಬರಕೊಟ್ಟ ಡಿ. ಪ್ರೋ. ನೋಟಿನ ಅಸಲು ಬಡ್ಡಿ ಖರ್ಚುಗಳ ವಸೂಲಿ ಕುರಿತು ದಾಖಲುಮಾಡಿದ ಮೇಲ್ಕಂಡ ವ್ಯಾಜ್ಯವು ತನಿಖೆ ಬಗ್ಗೆ ತಾ 23-12-38 ಕ್ಕೆ ಇಟ್ಟಿದೆ. ಸದರಿ ವ್ಯಾಜ್ಯದಲ್ಲಿ ವ್ಯವಹರಿಸುವದಿದ್ದರೆ ಸದರಿ ದಿವಸ 10ಘಂಟೆಗೆ ಸರಿಯಾಗಿ ಸ್ವತಃ ಆಗಲೀ ವಕೀಲರ ಮುಖಾಂತರವಾಗಲೀ ಸದರಿ ಕೋರ್ಟಿನಮುಂದೆ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾಗುವುದು ತಿಳಿದಿರಲಿ.

ಪುತ್ತೂರು,
ತಾ 9-12-38

C. S. Shastry,
Vakil for Plaintiff

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಮಾಲಿನ್ಯವನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಅನ್ಯಾದಿಯಾಗಿ ತಿರುಗಿ ಹೊಂದುವಳು.

III **ಸುಖಸೇವನ:** –ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುತ್ತದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಹಕರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವೆಹಿವಾಟಗಳಿಗೆ ನಿಗಾ ಕೊಡುವುದಲ್ಲದ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಮಾನಾಗಿಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಕದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಒಡೆವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2–8–0.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತವೆ
ಈಗ ದರವನ್ನು ಹೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager,
Kanara Printing Works,
Hampankatte, **MANGALORE**

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):— ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೪ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು ಎಳೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು.

ಎಲ್ಲ ತೋಟದಲ್ಲಿಯೂ ಇರತಕ್ಕದ್ದು ಗಿಡವೊಂದರ ಕ್ರಯ ರೂ. 1-0-0 ಮಾತ್ರ.
ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ.
ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಕೆ. ಎಮ್. ಸೆಟ್ಟಿ, ಕೆನರಾ ನರ್ಸರಿ,
ಪೋಸ್ಟ್:—ಕಾಪು, ದ. ಕ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೊಲರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್‌ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು
ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ. [ಗ್ಯಾರಂಟಿ ಕೆಲಸ!

ಪೈಂಟಿಂಗ್ ಸಂಬಂಧವಾದ ಯಾವ ಕೊಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿರಿ.

ಪೈಂಟರ್ ಗಣಪತಿರಾವ್,
ಸೋದೆ ಮಠದ ಲೇನು – – – ಉಡುಪಿ, ದ. ಕ.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. · ಕೊಡಿಯಾಲಬೈಲು.

ಉಡುಪಿಯಿಂದ ಬರೇ 12 ತಾಸುಗಳೊಳಗೆ
ಸಕಲೇಶಪುರ, ಹಾಸನ, ಅಥವಾ ಮಡಿಕೇರಿಗೆ
ಪ್ರಯಾಣಮಾಡಲು ಅತ್ಯನುಕೂಲವಾದ ಸರ್ವೀಸುಗಳ ಏರ್ಪಾಡು ಮಾಡೋಣಾಗಿದೆ.

ಉಡ್ಪಿಯಿಂದ ಬೆಳಿಗ್ಗೆ 5-30 A. M ಗೆ ಹೊರಡುವ ಕರಾವಳಿ ಅಥವಾ ಕಾರ್ಕಳ ಲ್ಯಾನು ಸರ್ವೀಸಿನಲ್ಲಿ ಹೊರಟರೆ, ಅದೇ ದಿನ ಬೆಳಿಗ್ಗೆ 9-30 A. M ನ ಒಳಗೆ ಮಂಗಳೂರಿಗೆ ತಲುಪಿ, ಮಂಗಳೂರಿನಿಂದ 9-15 A. M ಗೆ ಹೊರಡುವ ಸಕಲೇಶಪುರ ಸರ್ವೀಸಿನಲ್ಲಿ ಹೊರಟು ಸಂಜೆ 5 P. M. ನ ಒಳಗೆ ಸಕಲೇಶಪುರಕ್ಕೂ, ಮತ್ತು ಮಂಗಳೂರಿನಿಂದ 10-30 A. M, 11-30 A. M ಮತ್ತು 12 Noon ಗೆ ಹೊರಡುವ ಮಡಿಕೇರಿ ಸರ್ವೀಸುಗಳಲ್ಲಿ ಹೊರಟು, 5-30 P. M, 6-30 P. M ಮತ್ತು 7 P. M ನ ಒಳಗೆ ಮಡಿಕೇರಿಗೂ ತಲ್ಪುವಂತೆ ಯೋಗ್ಯ ಸರ್ವೀಸುಗಳ ಏರ್ಪಾಡು ಮಾಡಿರುತ್ತೇವೆ. ಅಂತೆಯೇ ಸಕಲೇಶಪುರದಿಂದ 8 A. M ಗೆ ಹೊರಟು 3-30 P. M ನ ಒಳಗೆ ಮಂಗಳೂರಿಗೆ ತಲುಪಿ, ಮಂಗಳೂರಿನಿಂದ 4 P. M. ಯಾ 4-45 P. M ಗೆ ಹೊರಡುವ ಕರಾವಳಿ ಮತ್ತು ಕಾರ್ಕಳ ಲ್ಯಾನು ಸರ್ವೀಸಿನಲ್ಲಿ ಹೊರಟು ರಾತ್ರಿ ಉಡ್ಪಿಗೆ ತಲುಪಬಹುದು. ಮಡಿಕೇರಿಯಿಂದ 8 A. M. ಗೆ ಹೊರಟು ಮಂಗಳೂರಿಗೆ ಬಂದು ತಲ್ಪುವವರು ಅಂದೇ ಸಂಜೆ ಉಡ್ಪಿಗೂ, ಮತ್ತು ಮಡಿಕೇರಿಯಿಂದ 10-30 A. M ಗೆ ಹೊರಡುವವರು ಮಂಗಳೂರಿಗೆ 5 P. M. ನ ಒಳಗೆ ಬಂದು ತಲುಪಿ, ಮಂಗಳೂರಿನಿಂದ 5 P. M ಮತ್ತು 6 P. M. ಗೆ ಹೊರಡುವ ಕಾರ್ಕಳ ಸರ್ವೀಸುಗಳಲ್ಲಿ ಕಾರ್ಕಳ ತನಕವೂ ಹೋಗಿ ತಲ್ಪುವ ಯೋಗ್ಯ ಸರ್ವೀಸುಗಳ ಏರ್ಪಾಡು ಮಾಡಿರುತ್ತೇವೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಪ್ರಯಾಣ ಸೌಕರ್ಯಗಳನ್ನು ಒದಗಿಸಲಿರುವೆವು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮುಖಾಂತರವಾಗಲೀ ಅಥವಾ ಸ್ವತಃ ಕೇಳಿ ತಿಳಕೊಳ್ಳಿರಿ.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ ದೊರೆಯುವುದು.

ವಾರ್ಷಿಕ ಚಂದಾ ರೂ 3 0 0 ಬಿಡಿ ಪ್ರತಿ 0 1 0

ಮೆನೇಜರ್— ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital	**Rs. 1,00000**
Subscribed & Paid up „	**Rs. 30,500**
Reserves	**Rs. 1,078**

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

3ರಿಂದ	**6**	**ತಿಂಗಳ ವರೆಗೆ**	**4 ಸಲೆ**
7 „	**11**	**„**	**5 „**
12 „	**18**	**„**	**6 „**

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯಿತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?

ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ವ್ಯಾಸಭವನಂ
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್.

Printed by S S KARANTH, for & on behalf of SUPPLY AGENCY LTD., at THULUNAD PRESS, UDIPI and Published by K. H SHETTY at "NAVAYUGA" OFFICE, UDIPI, South India.

Registered No. M. 3618

29-12-1938

ತಿಂಗಳ ಕಾಣಿಕೆ-೪

MONTHLY SPECIAL 4

ನವ ಯುಗ

NAVA YUGA





ನುರಿತ ಬರಹಗಾರರ ಮತ್ತು ಬರಹಗಾರ್ತಿಯರ

ವಿಚಾರಪರ ಲೇಖನ, ರಸಭರಿತ ಕತೆ, ಕವನಗಳಿಂದ

ಬಣ್ಣ ಬಣ್ಣದ ಚಿತ್ರಗಳಿಂದ

ಈ ಸಂಚಿಕೆಯು ಸರ್ವಾಂಗ ಸುಂದರವಾಗಿ

ತಾ. 12-1-39ಕ್ಕೆ ಪ್ರಕಟವಾಗುವುದು.

ಬೆಲೆ 0—4-0 ಸ್ಥಳೀಯ ಏಜಂಟರಿಂದ ಪ್ರತಿಯನ್ನು ಕಾದಿರಿಸಿರಿ!

The Canara Industrial & Banking Syndicate, Limited.

(INCORPORATED IN BRITISH INDIA)
[ESTD. 1925]

HEAD OFFICE:—MUKUND NIVAS, UDIPI, S. INDIA.

MEMBER:

RESERVE BANK OF INDIA

BANKERS' CLEARING HOUSE, BOMBAY.

DEPOSIT RATES.

3 to 5 MONTHS	....	2½% p. a.
6 to 11 ,,	....	3% ,,
12 to 23 ,,	....	3½% ,,
24 ,,	....	4% ,,
SHORT TERM	....	2% ,,

BANKING BUSINESS OF
EVERY DESCRIPTION TRANSACTED.

Please Note

The Subscribers, Agents & Advertisers *in*

NAVAYUGA

PLEASE NOTE THAT PAYMENTS DUE TO **NAVAYUGA** MAY BE MADE TO THE CREDIT OF NAVAYUGA ACCOUNT IN ANY BRANCH OF

THE CANARA INDUSTRIAL & BANKING SYNDICATE, LIMITED, UDIPI

Without being liable to pay any amount by way of Commission.

WHERE THE SYNDICATE HAS BRANCHES

Bombay, Bangalore, Belgaum, Byadgi, Bellary, Adoni, Hospet, Nandyal, Prodattur, Tadpatri, Taliparamba, Hubli, Gadag. Mangalore, Cannanore, Payyanur, Kanhangad, Kasargode, Karkal, Udipi, Uppinangady, Karwar, Kumta, Ankola. Honavar, Bhatkal, Sirsi, Sagar, Coondapoor, Brahmavar, Hungarcutta, Nippani, Tumkur & Hindupur,

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು
ತೈಲ ಮತ್ತು ಅರಿಷ್ಟಾಸವಗಳು

ಆಸವ ಜಿಬ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ
ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಪುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗ	—ಕೃಷ್ಣಾರಕ
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD.

HEAD OFFICE: MANGALORE

BRANCHES. Udipi, Coondapoor, Kaup & Karkal.

Fixed deposits are now received at all the offices of the Bank at the following terms:-

3 Months Fixed Deposits at 3 p. c per annum.
6 Months } 9 months } Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.
Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE
PANGAL NAYAK BANK
LIMITED.

Estd.] H. O. UDIPI. [1920

BRANCHES:
MANGALORE, KATAPADI, and KANHANGAD.

Deposits are accepted at all the Offices of the bank on the following terms

One year Fixed Deposits at 3½ p. c. per annum.
Two years' Fixed Deposits at 4 p. c. per annum.
Savings Bank Deposits .... 3 p c per annum.

INTEREST ON FIXED DEPOSITS IS PAYABLE EVERY HALF YEAR OF THE CALENDAR YEAR.

Reckoning of interest on the day to day balances is a special feature of our Savings Bank System.

ESTD 1921
FOUNDER
Sri. A B SHETTY, M L A.
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ

NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೨೯-೧೨-೧೯೩೮ | Vol XVIII
ಸಂಚಿಕೆ ೧೮ | Udipi, Thursday 29—12—1938 | No 18

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೮—೦
೬ ತಿಂಗಳಿಗೆ ರೂ ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ವಿ ಪಿ ಕ್ರಮವನ್ನು ನಿಲ್ಲಿಸಲಾಗಿದೆ

ರಾಜಕೋಟೆಯ ಮುಂದಾಳುಗಳಿಗೆ ಶಿಕ್ಷೆ

ಒಂದೇ ದಿನದಲ್ಲಿ 14 ಜನರ ದಸ್ತಗಿರಿ

ಹಿಂದೆ ದಸ್ತಗಿರಿಮಾಡಲ್ಪಟ್ಟು ವಿಚಾರಣೆಗೆ ಒಳಗಾಗಿದ್ದ ದರ್ಬಾರ್ ಗೋಪಾಲ್ ದಾಸ್ ಇವರಿಗೆ ಒಂದು ತಿಂಗಳ ಕಠಿಣ ಕಾರಾಗೃಹವಾಸ ಮತ್ತು ರೂ. 100 ಜುಲುಮಾನೆ; ಡಾಕ್ಟರ್ ಲಲ್ಲುಭಾಯಿಯವರಿಗೆ ಮೂರುತಿಂಗಳ ಕಠಿಣ ಸಜೆ ಮತ್ತು ರೂ. 300 ಜುಲುಮಾನೆ ವಿಧಿಸಲಾಗಿದೆ. ಈ ಶಿಕ್ಷೆ ವಿಧಿಸಲ್ಪಟ್ಟ ದಿನವೇ 'ಕ್ಯಾಡೆಲ್ ಹಿಂದೆ ಹೋಗು!' ಎಂಬ ನಿಶಾನೆಗಳನ್ನು ಹಿಡಿದುಕೊಂಡ ಪ್ರಚಂಡ ಮೆರವಣಿಗೆ ಹೊರಟು ರಾಜಕೋಟೆಯ ಪ್ರಮುಖ ಬೀದಿಗಳಲ್ಲಿ ಹೋಯಿತು. ಹದಿನಾಲ್ಕು ಜನ ಪ್ರಮುಖರು ದಸ್ತಗಿರಿ ಮಾಡಲ್ಪಟ್ಟಿರುವರು.

ಕೊಚ್ಚಿಯಲ್ಲಿ ಸೀಪ್ಲೇನ್ (ಕಡಲಲ್ಲಿ ಇಳಿಯುವ ವಾಯು ವಿಮಾನವು) ಮುರಿದು ಬಿತ್ತು

ಕೊಚ್ಚಿಬಂದರದಲ್ಲಿದ್ದ 'ಮೆಂಚೇಸ್ಟರ್' ಎಂಬ ಯುದ್ಧ ಹಡಗದಿಂದ ಏರಿದ ವಾಯು ವಿಮಾನವು ರೇವಿನ ಮೇಲ್ಗಡೆ ಹಾರಾಡುತ್ತಿದ್ದು ಟೆಲಿಗ್ರಾಫ್-ಕಂಬದ ಮರಕ್ಕೆ ತಾಗಿ ಸಿಕ್ಕಿಬಿದ್ದು ಮುರಿದುಹೋಯಿತು. ವಿಮಾನವನ್ನು ನಡೆಸುತ್ತಿದ್ದ ಸಬ್ ಲೆಫ್ಟನೆಂಟ್ ಜೆ. ಕೊಲ್ಲಿಸ್ ಮತ್ತು ಪಿ. ಎಸ್. ಜೋಕ್ಸರ್ ಇವರಿಬ್ಬರೂ ಆಘಾತಕ್ಕೆ ಸಿಲುಕಿ ಕೂಡಲೆ ಮರಣಹೊಂದಿದರು. ಗ್ರಿಫ್ಫಿನ್ ಎಂಬವನೊಬ್ಬ ಮಾತ್ರ ಜಖಂ ಹೊಂದಿದ್ದು ಆಸ್ಪತ್ರೆಗೆ ಒಯ್ಯಲ್ಪಟ್ಟಿರುವನು. ವಿಮಾನವು ಮುರಿದು ನೀರಿಗೆ ಬಿದ್ದು ಅದರ ತುಂಡುಗಳೆಲ್ಲ ನೀರಿನಲ್ಲಿ ತೇಲುತ್ತಿದ್ದವು. ಮೃತರಾದವರಿಗೆ ತಲೆಗೆ ಪೆಟ್ಟಾಗಿ ತಕ್ಷಣ ತೀರಿಕೊಂಡರೆಂದು ತಿಳಿಯಲಾಗಿದೆ

ಡಿ. ಬೋರ್ಡು ಮೆಂಬರರ ಕರ್ತವ್ಯ? ಸಭೆಗಳನ್ನಲಂಕರಿಸಿ ವಾಗ್ಯುದ್ಧ ಮಾಡುವುದಲ್ಲ. ಹಳ್ಳಿಗಿಳಿದು ಗೇಯಬೇಕು! ಮ ಗಾಂಧಿಯವರ ಉಪದೇಶ.

ಮಹಾತ್ಮಾಜಿಯವರು ಡಿಸ್ಟ್ರಿಕ್ಟ್ ಬೋರ್ಡು ಎಂಬ ಶಿರೋನಾಮೆಯಿಂದ ತಮ್ಮ 'ಹರಿಜನ' ಪತ್ರಿಕೆಯಲ್ಲಿ ಬರೆದುದರ ತಾತ್ಪರ್ಯ —

ಡಿ. ಬೋರ್ಡುಗಳಲ್ಲಿ ಕಾಂಗ್ರೆಸ್ಸು ಬಹು ಪಕ್ಷದಲ್ಲಿರುವುದರಿಂದ ಮೆಂಬರರಿಗೆ ಸಭೆ ಸೇರಿ ಜನಸೇವೆಮಾಡಲು ಹೆಚ್ಚೇನೂ ಇರುವುದಿಲ್ಲ. ಬೋರ್ಡಿನ ಹಲವು ಇಲಾಖೆಗಳಿಗೆ ತಕ್ಕಷ್ಟು ಹಣವೂ ಇರುವುದಿಲ್ಲ. ಆದುದರಿಂದ ಸುರತ್ತಿನ ಡಿ| ಬೋರ್ಡು ಮೆಂಬರರೊಬ್ಬರು ಎಪ್ರಿಲಿನಲ್ಲಿ ಬರುವ 'ನ್ಯಾಶನಲ್ ವೀಕ್' ಎಂಬ ವಾರದಲ್ಲಿ ತಾವೆಲ್ಲ ರಸ್ತೆ ರಿಪೇರಿಯ ಕೆಲಸವನ್ನು ಮಾಡಬೇಕೆಂದು ತಯಾರಿಸಿರುವ ಸರ್ಕ್ಯುಲಾರನ್ನು ಗಾಂಧಿಜಿಯವರಿಗೆ ತೋರಿಸಿ ಅದಕ್ಕೆ ಆಶೀರ್ವದಿಸಬೇಕೆಂದು ಕೇಳಿದಾಗ ಅವರು ಕೊಟ್ಟ ಪ್ರತ್ಯುತ್ತರ—

"ನಿಮಗೆ ನನ್ನ ಆಶೀರ್ವಾದವು ಬೇಕೆಂದಿದ್ದರೆ ನೀವು ಈಗಲೇ ಕೆಲಸತೊಡಗಬೇಕು. ಮತ್ತು ವಿನೋದಕ್ಕಾಗಿ ಎಂಬಂತೆ ವರ್ಷದಲ್ಲೊಂದು ವಾರ ಮಾತ್ರ ಮಾಡುವ ಬದಲಾಗಿ ನಿಮ್ಮ ಮೆಂಬರಿಕೆಯ ಕಾಲವೆಲ್ಲ ನಿಮ್ಮ ಗೃಹಕೃತ್ಯಾದಿ ಕರ್ತವ್ಯಗಳನ್ನು ಕಡೆಗಣಿಸದೆ ದೊರೆಯುವ ಸಮಯವನ್ನು ಪೂರಾ ಸಂಬಳಪಡೆದು ಗೇಯುವ ನೌಕರರಂತೆಯೇ ನೀವು ಗೌರವಾರ್ಥವಾಗಿ ದುಡಿಯಬೇಕು. ಆ ರೀತಿ ನೀವು 'ಜನಾಂಗ ಸೇವಾ' ಸಂಸ್ಥೆಯನ್ನು ಆವಿರ್ಭಾವಕ್ಕೆ ತರತಕ್ಕುದು. ಏನೋ ಕೆಲವು ಕರ್ಚುವೆಚ್ಚದ ಬಾಬಿನಲ್ಲಿ ವೋಟುಕೊಡುವುದಕ್ಕಾಗಿ ಮಾತ್ರ ನೀವು ಸಭೆಸೇರಬೇಕು. ಚಿಲ್ಲರೆ ನೌಕರಿ ನೇಮಕಗಳು ಮುಂತಾದುವುಗಳ ಕುರಿತಾಗಿ ಗಳಿಗೆಗಟ್ಟಳೆ ಚರ್ಚೆಮಾಡುವುದಕ್ಕಾಗಿಯಲ್ಲ. ಅದರಿಂದ ಹೆಮ್ಮೆಪಡುವ ಬದಲಾಗಿ ನೀವಾಗಿ ಮಾಡಿದ ರಸ್ತೆಗಾಗಿ ನೀವು ಗರ್ವಪಡಬೇಕು ರಾತ್ರಿಶಾಲೆಗಳನ್ನು ನಡೆಯಿಸಿ, ಹಳ್ಳಿಯವನಿಗೆ ಉತ್ತಮ ಕೃಷಿಬೆಳೆಯಿಸಲು ಸಹಾಯಕರಾಗಿ ಮಂದಿಗೆ ಸ್ವಾಸ್ಥ್ಯದ ಪಾಠಕೊಡಿ, ಮದ್ಯಪಾನ ಪ್ರತಿಬಂಧಕ ಕಾರ್ಯಕ್ರಮವು ಹಳ್ಳಿಗರ ಆತ್ಮಸಂತೋಷದಿಂದಲೇ ಸಾಗುವಂತೆ ಮಾಡಿ, ರಾಟೆ ಮತ್ತು ಮಗ್ಗಗಳ ಕೆಲಸ ಮಾಡಿ ತೋರಿಸಿ ಹಳ್ಳಿಗರಿಗೆ ಪ್ರೋತ್ಸಾಹಿಸಿ, ಹೀಗೆಲ್ಲ ಮಾಡಿ ಆ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರರಾಗಿ ತಮಗೇನೂ ಕೆಲಸವಿಲ್ಲವೆನ್ನುವ ಬದಲಾಗಿ ತಮಗೆ ಒಂದಿಷ್ಟೂ ಬಿಡುವಿಲ್ಲವೆಂಬಂತಾಗಿ ನಿಮ್ಮ ಚುನಾವಣೆಯು ಸಾರ್ಥಕವಾಗುವುದು ಹೀಗೆ ನೀವು ಮಾಡಲು ಸಿದ್ಧವಿಲ್ಲವಾದರೆ ವರ್ಷದಲ್ಲೊಂದು ವಾರ ದೇಶಪ್ರೇಮದ ಕುಶಾಲಿನ ಆಟ ಆಡುವ ಡಂಭಾಚಾರದ ನಿಮ್ಮ ಸರ್ಕ್ಯುಲಾರಿನ ನಾಟಕ ಆಡಬೇಡಿರಿ ಎಂದರು. ಶಿಫಾರಸು ಹೊಂದಿ ತಲೆಯೆತ್ತಿ ಹಿಂತಿರುಗಿ ಬರುವೆನೆಂದು ಹೋಗಿದ್ದ ಆ ಮೆಂಬರರು ಹಿಂದೆ ಬರುವಾಗ ಅವರ ಮುಖಭಂಗಿಯ 'ಸ್ನೇಪ್ ಶಾಟ್' ತೆಗೆಯಲು ಯಾರೂ ಇದ್ದಿಲ್ಲವಲ್ಲ!

TO

All our Subscribers, Advertisers, Readers, Writers, Representatives, Agents, Wel-wishers, Printers & Patrons

we wish

A Bright & Happy

NEW YEAR

(1939)

K. K. SHETTY, EDITOR. | K. H SHETTY, MANAGER

'NAVAYUGA'
UDIPI.

ನಾವು ನಮ್ಮ ಚಂದಾದಾರರಿಗೂ, ಜಾಹೀರಾತುದಾರರಿಗೂ, ವಾಚಕರಿಗೂ ಬರಹಗಾರರಿಗೂ, ಪ್ರತಿನಿಧಿಗಳಿಗೂ, ಏಜಂಟರಿಗೂ, ಪ್ರೋತ್ಸಾಹಕರಿಗೂ ಮತ್ತು ಯಾವತ್ತೂ ಹಿತಚಿಂತಕರಿಗೂ

ಇದೀಗ ಬರುವ

ಹೊಸ ವರ್ಷವು

ಆನಂದ ಮತ್ತು ಶುಭದಾಯಕವಾಗಲೆಂದು ಹಾರ್ದಿಕವಾಗಿ ಹಾರೈಸುತ್ತೇವೆ.

ಕೆ. ಕೆ. ಶೆಟ್ಟಿ, ಸಂಪಾದಕ. | ಕೆ. ಎಚ್. ಶೆಟ್ಟಿ, ಸಂಚಾಲಕ

ನವಯುಗ
ಉಡುಪಿ.

ಮದ್ಯಪಾನ ಪ್ರತಿಬಂಧಕ ಕಾರ್ಯಕ್ರಮ ಮತ್ತೂ ರಭಸದಿಂದ ಸಾಗಬೇಕು ಗಾಂಧಿಜಿಯವರ ಆತುರ

ಸರಕಾರದ ಉತ್ಪತ್ತಿ ಕಡಿಮೆಯಾಗುವುದೆಂಬ ಭಯದಿಂದ ಕಾಂಗ್ರೆಸ್ಸು ಸರಕಾರಗಳು ಮದ್ಯಪಾನ ಪ್ರತಿಬಂಧಕ ಕಾರ್ಯವನ್ನು ನಿಧಾನದಿಂದ ಮುಂದುವರಿಸುವುದರಿಂದ ಕಾಂಗ್ರೆಸ್ಸು ಮಂದಿಗೆ ಕೊಟ್ಟಿದ್ದ ಅಭಿವಚನಗಳನ್ನು ಅಕ್ಷರಶಃ ಅಲ್ಲವಾದರೂ ತತ್ವದಲ್ಲಿ ಮುರಿದಿರುತ್ತದೆಂದು ನನ್ನ ಅಭಿಮತ. ರಾಜಾಜಿಗಳಂತಹ ಮದ್ಯಪಾನ ಪ್ರತಿಬಂಧನ ಬದ್ಧ ಕಂಕಣರಿಗೂ ಸರಕಾರಕ್ಕೆ ಮದ್ಯದಿಂದ ಬರುವ ಉತ್ಪತ್ತಿಯನ್ನು ಮದ್ಯಪಾನ ನಿಷೇಧ ಕಾರ್ಯಕ್ರಮಗಳಿಗೇ ವಿನಿಯೋಗಿಸುವ ಧೈರ್ಯ ಬರಲಿಲ್ಲ. ಈ ಭಾಗದ ಕಾರ್ಯಕ್ರಮವು ಸ್ಫೂರ್ತಿಯಿಂದ ನಡೆಯುತ್ತಿಲ್ಲ. ಮಂತ್ರಿಗಳು ಮದ್ಯಪಾನ ಪ್ರತಿಬಂಧಕದ ಹೆಜ್ಜೆಯಿಡುವಾಗಲೆಲ್ಲ ಅಚಾಕೋಮುಟಿ ದೃಷ್ಟಿಯಿಂದ ನೋಡುತ್ತಿದ್ದಾರೆ. ಹೊಸಹೊಸ ತೆರಿಗೆಗಳನ್ನಾದರೂ ನಗರ ಪಟ್ಟಣಗಳಲ್ಲಿ ಹೊರಿಸಿ ಇಂಡಿಯಾ ಗವರ್ನಮೆಂಟಿನಿಂದ ನಿಬಡ್ಡಿಯಿಂದ ಸಾಲವನ್ನಾದರೂ ಪಡೆದು ಮದ್ಯಪಾನದ ಉತ್ಪತ್ತಿಯ ನಷ್ಟವನ್ನು ಭರ್ತಿ ಮಾಡಿಕೊಂಡಾದರೂ ಈ ಕಾರ್ಯಕ್ರಮವನ್ನು ರಭಸದಿಂದ ಮುಂದೊತ್ತಬೇಕು ಎಂದು ಗಾಂಧಿಜಿಗಳು 'ಹರಿಜನ' ಪತ್ರಿಕೆಯಲ್ಲಿ ಆತುರತೋರಿದ್ದಾರೆ.

ಹೊಸ ವರುಷದ ಬಿರುದುಬಾವಲಿಗಳ ಪ್ರಕಟಣೆ

ನವ ವರ್ಷಾರಂಭವು ಆದಿತ್ಯವಾರವಾಗಿರುವುದರಿಂದ ನವ ವರ್ಷದಲ್ಲಿ ಸನ್ಮಾನಿತರಾದವರ ಹೆಸರು ಬಿರುದುಬಾವಲಿಗಳ ವಿವರಗಳು ಜನವರಿ ತಾ 2ನೆಯ ಸೋಮವಾರ ದಿನದ ಬೆಳಗ್ಗಿನ ಪತ್ರಿಕೆಗಳಲ್ಲಿ ಪ್ರಕಟವಾಗುವವು

ಹಿಟ್ಲರನ ಝಾರ್ ನಿರ್ಮಾಣದ ಯುಕ್ತಿ

ರಷ್ಯಾದ ಝಾರ್ ವಂಶಜನೆಂದು ನಟಿಸುತ್ತಿರುವ ಗ್ರಾಂಡ್ ಡ್ಯೂಕ್ ವಾಲ್ಡಿಮಾರ್ ಎಂಬವನನ್ನು ತನ್ನ ಸೂತ್ರದ ಗೊಂಬೆಯ ಝಾರನನ್ನಾಗಿ ಮಾಡಬೇಕು. ಈಗ ತಾನೇ ನುಂಗಿರುವ ಜೆಕ್ ಮತ್ತು ಹಂಗೇರಿಯಗಳ ಮೂಡು ಸಂದು ಮೂಲೆಯ ರುಥೇನಿಯಾದ ಮುಖ್ಯ ಪಟ್ಟಣವಾದ ಚಸ್ಟನಲ್ಲಿ ಆತನನ್ನ ಗದ್ದುಗೆಯ ಮೇಲೇರಿಸಿ ಯುಕ್ರೇಯಿನ್ ಸಂಸ್ಥಾನದ ಸಾಮ್ರಾಟನೆನ್ನಿಸಬೇಕು. ಇಂತಹ ಗಡಿನಾಡಿನ ಯುಕ್ರೇಯಿನ್ ರಾಜ್ಯದಿಂದ ಆವಕ್ರೋಶಿತ್ತಿರುವ ರಷ್ಯಾದ ಯುಕ್ರೇಯಿನ್ ಪ್ರಾಂತ್ಯವನ್ನು ನುಂಗಬೇಕು. ಪೋಲಿಶ್ ಯುಕ್ರೇಯಿನನ್ನೂ ಕೂಡಿಸಬೇಕು. ಹಾಗಾಗುವಂತೆ ಯುಕ್ರೇಯಿನ್ ಮಹಾ ಸಾಮ್ರಾಜ್ಯ ಸಂಸ್ಥಾಪನೆಯ ಏಕೀಕರಣ ಚಳವಳಿ

ಬುಡ ಹಾಕಲು ಈಗ ಜರ್ಮನಿನಲ್ಲಿ ಚಿಕ್ಕ ಗದ್ದುಗೆಯನ್ನು ಅಳವಡಿಸಿ ಗೂಂಬೆಯೊಂದನ್ನು ಇಡುತ್ತಾನೆ. ಅಲ್ಲಿ ಈಗ ಇರುವುದು ಏಳು ಲಕ್ಷ ಯುಕ್ರೇಯಿನರು. ಆದರೆ ಅದರ ಉತ್ತರದಲ್ಲಿ ಏಳು ಮಿಲಿಯ ಪೋಲಿಶ್ ಯುಕ್ರೇಯಿನರಿದ್ದಾರೆ. ದಕ್ಷಿಣದ ರುಮೇನಿಯದಲ್ಲಿ ಒಂದು ಮಿಲಿಯ ಯುಕ್ರೇಯಿನರಿದ್ದಾರೆ. ಪೂರ್ವದಲ್ಲಿ ರಸ್ಯಾದ ಯುಕ್ರೇಯಿನದಲ್ಲಿ ೩೫ಮಿಲಿಯ ಇದ್ದಾರೆ. ಕ್ರಮೇಣ ಇವೆಲ್ಲ ಗೊಂಚಲು ನೋಡಿ ಒಂದುಗೂಡಿ ನಾಲ್ವತ್ತೆರಡು ಮಿಲಿಯದ ಏಳುಲಕ್ಷ ಜನಸಂಖ್ಯೆಯ ಮಹಾರಾಜ್ಯವಾಗಿ ಜರ್ಮನರ ರಕ್ಷಣೆಯಾಡಳಿತಗಳಲ್ಲಿ ಬೀಳಬೇಕು. ಅಲ್ಲಿ ನಿಂತು ಜರ್ಮನರು ರಸ್ಯನರನ್ನು ನಡುಗಿಸುವ ಗರ್ಜನೆ ಮಾಡಬೇಕು. ಯುಕ್ರೇಯಿನರ ಮನವೊಲಿಸಿಕೊಳ್ಳುವದಕ್ಕಾಗಿ ಈಗಾಗಲೇ ಹಿಟ್ಲರನು ಜರ್ಮನಿನ ಯುಕ್ರೇಯಿನರ ಸಂಕಷ್ಟ ನಿವಾರಣೆಗೆ ದಾನವಾಗಿ ಎಂಟೂವರೆ ಸಾವಿರ ಪವನುಗಳನ್ನು ಕಳುಹಿಸಿದ್ದಾನೆ. ಹೀಗೇ ಗಾಳಿ ಬೀಸಿ ಆವಶ್ಯಬಿದ್ದಾಗ ಭಯಂಕರ ಬಿರುಗಾಳಿ ಭೀತಿ ಹುಟ್ಟಿಸಿ ಹೋಗೂ ಮಾಡಿ ರಸ್ಯಾದ ಯುಕ್ರೇಯಿನವನ್ನು ನೆಲಸಮಮಾಡಿ ಜರ್ಮನಿಗೆ, ಪರಂಪರೆ ಅಷ್ಟು ಸಮೃದ್ಧವಲ್ಲ ಫಲವತ್ತಾದ ಭೂಮಿಯಿಂದಲೂ ಧನವನ್ನು ದ್ಧಿಯಿಂದಲೂ ತುಂಬಿರುವ ರಸ್ಯಾದ ಯುಕ್ರೇಯಿನ್ ಪ್ರಾಂತವು ಜರ್ಮನಿಗೆ ಕೊಟ್ಟು ತುಂಬಬೇಕಾಗಿದ ಯುಕ್ರೇಯಿನ್ ಎಂದರೆ ಈಗ ರಸ್ಯಾ ಸಾಮ್ರಾಜ್ಯಕ್ಕೆ ಹತ್ತಿ, ಎಣ್ಣೆ, ಕಲ್ಲಿದ್ದಲು, ಗೋಧಿ, ಸಕ್ಕರೆ, ಇವನ್ನೆಲ್ಲ ಪೂರೈಸಿ ಕೊಡುವುದರಲ್ಲಿ ಮೊದಲ ಸ್ಥಾನದಲ್ಲಿರುವ ಪ್ರಾಂತ. ಅದನ್ನೀಗ ಒಳಹಾಕಬೇಕಾಗಿದೆ ಹಿಟ್ಲರನಿಗೆ.

ಇಂದಿನವರಿಗೆ ಶತಮಾನಗಳ

ನಂತರವೂ ಮಕ್ಕಳು ಹುಟ್ಟಬಹುದು!

ಒಂದುಕಾಲದ ತಂದೆ! ಮತ್ತಾವುದೋ ಒಂದು ಕಾಲದ ತಾಯಿ! ಪುರುಷ ಸಂಪರ್ಕವಿಲ್ಲದೆ ಮಕ್ಕಳುಂಟಾಗುವ ಪುರುಷವೀರ್ಯ ಇಂಜಕ್ಷನಿನ ಕ್ರಮದಲ್ಲಿ ಅದ್ಭುತ ಶೋಧೆ!

ಪುರುಷವೀರ್ಯವು ವಿಸರ್ಜನೆಯಾದ ನಂತರವೂ ಅದು ಶತಮಾನಗಳ ತನಕ ಸಚೇತನವಾಗಿ ಉಳಿಯುವಂತೆ ಅತಿಶೀತ ಪರಿಸ್ಥಿತಿಯಲ್ಲಿರಿಸಲ್ಪಡಲು ಸಾಧ್ಯವೆಂಬುದನ್ನು ಅಮೇರಿಕದಲ್ಲಿ ಕೆಲಿಫೋರ್ನಿಯಾ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಡಾಕ್ಟರ್ ಅಲೆಕ್ಸಾಂಡರ್ ಗೋಯಟ್ಸ್ ಎಂಬವರು ಮನಗಂಡಿದ್ದಾರೆ. ಇಂದಿನ ವಿವಿಧ ಪ್ರತಿಭಾಶಾಲಿಗಳ ವೀರ್ಯವನ್ನು ಆ ರೀತಿಯಲ್ಲಿ ಸಂಗ್ರಹಿಸಿಟ್ಟು ಮುಂದಿನ ಸ್ತ್ರೀಯರಲ್ಲಿ ಅವರಿಗಿಷ್ಟವಿದ್ದ ವ್ಯಕ್ತಿವಿಶೇಷದ ವ್ಯಕ್ತಿಯ ವೀರ್ಯವನ್ನು ಇಂಜೆಕ್ಶನ್ ಮಾಡಿ ಗರ್ಭೋತ್ಪಾದನೆ ಮಾಡಬಹುದೆಂದು ಅವರ ಮತ. ಇದು ಪ್ರಯೋಗಸಿದ್ಧವಾದರೆ ಗ್ರಾಮಫೋನಿನಲ್ಲಿ ಎಂದೋ ಬಾಳಿ ಬದುಕಿದ್ದವರ ಸ್ವರ ಕೇಳಲಾಗುವಂತೆ ಯಾವುದೋ ಕಾಲದಲ್ಲಿದ್ದವರಿಗೆ ಮತ್ತೊಂದು ಕಾಲದಲ್ಲಿ ಮಕ್ಕಳೂ ಆಗುವುದನ್ನು ಕಾಣಬಹುದು!

ವಿಜ್ಞಾನದ ಪ್ರಭಾವ

ಹುಟ್ಟುವ ಮಗು ಗಂಡೋ ಹೆಣ್ಣೋ ನಿಮ್ಮಿಷ್ಟವಿದ್ದಂತೆ! ಸುಲಭದ ಇಂಜೆಕ್ಶನ್ ಮೂಲಕ!

ಗರ್ಭಧಾರಣೆಗೆ ಮುಂಚಿತವಾಗಿ ಸ್ತ್ರೀಯು ಅನುಕೂಲವಾದ ಇಂಜೆಕ್ಶನ್ ತೆಗೆದುಕೊಂಡರಾಯಿತು ಇಂಗ್ಲೆಂಡಿನಲ್ಲಿ ಇಬ್ಬರು ಡಾಕ್ಟರು ಈ ವರ್ಷ ನೂರು ಹೆಂಗಸರಿಗೆ ಈ ಚಿಕಿತ್ಸೆ ನಡೆಸಿ ನೇರಡಾ ಎಂಭತ್ತರ ಪಾಲಿಗೆ ಯಶಸ್ವಿಗಳಾಗಿದ್ದಾರೆ. ಆ ಇಂಜೆಕ್ಶನುಗಳ ಮೂಲತತ್ವವಿಷ್ಟು: ಗರ್ಭಧಾರಣೆಗೆ ಪೂರ್ವದಲ್ಲಿ ಎಸಿಡ್ ಗುಣಯುಕ್ತವಾದ ಔಷಧದ ಪ್ರಯೋಗದಿಂದ ಹೆಣ್ಣೂ ತದ್ವಿರುದ್ಧವಾದ ಆಲ್ಕಲೀ ಗುಣದ ಇಂಜಕ್ಷನಿಂದ ಗಂಡೂ ಹುಟ್ಟುವುದು. ಮೊದಮೊದಲು ಈ ತತ್ವದ ಆಧಾರದಿಂದ ಚಿಕ್ಕ ಚಿಕ್ಕ ಪ್ರಾಣಿಗಳಲ್ಲಿ ಪ್ರಯೋಗ ನಡೆಸಿ ಬಹುಪಕ್ಷ ಸಫಲವಾಗಲು ಕೊನೆಗೆ ಜಾನುವಾರುಗಳಲ್ಲಿಯೂ ಅದು ಫಲಕಾರಿಯೆಂದು ಅಳೆದು ಈಗ ಮನುಷ್ಯರಿಗೂ ಪ್ರಯೋಗಿಸಲ್ಪಟ್ಟು ಗಂಡುಹೆಣ್ಣುಗಳು ಹುಟ್ಟುವುದು ಮನುಷ್ಯನ ಇಷ್ಟಾನುಸಾರವಾಗುವಂತೆ ಗೊಂಡ ಪ್ರಯೋಗವಾಯಿತಂತರ ಮುಂದೆ ಗಂಡೋ ಹೆಣ್ಣೋ ಅಧಿಕಾಂಶ ನಿಷ್ಪಯೋಜಕವೆಂಬುದರ ಗಂಡೋ ಹೆಣ್ಣೋ! ಮತ್ತು ಇಚ್ಛಾನುಸಾರವಾಗಿ ಪಡೆದುಕೊಳ್ಳುವದೂ ಕ್ರಮವೂ ಒದಗಿಹುದು!

ಮಿಸ್ ಮೀರಾಬೆನ್ನಳ ಖಾದಿಟ್ರೈನಿಂಗ್ ಶಾಲೆ

ಖಾನ್ ಅಬ್ದುಲ್‌ಗಫರ್ ಮೊದಲಾದ ಪ್ರಮುಖ ಮುಂದಾಳುಗಳೇ ಮೊದಲ ವಿದ್ಯಾರ್ಥಿತಂಡ

ಗಾಂಧಿಜಿಯವರ ಶಿಷ್ಯೆಯಾದ ಮಿಸ್ ಮೀರಾಬೆನ್ನಳು ಉತ್ತಮಾಂಜಿಯಲ್ಲೊಂದು ಖಾದಿ ಟ್ರೈನಿಂಗ್ ಶಾಲೆಯನ್ನು ಸ್ಥಾಪಿಸಿದ್ದಾಳೆ. ಅದರಲ್ಲಿ ತರಬೇತು ಹೊಂದುವ ಮೊದಲ ತಂಡದಲ್ಲಿ ಖಾನ್ ಅಬ್ದುಲ್ ಗಫರ್ ಮೊದಲಾದ ಪ್ರಮುಖ ಮುಂದಾಳುಗಳಿದ್ದಾರೆ. ಉತ್ತಮಾಂಜ ಪ್ರಾಂತದ ಹಲವು ಜಿಲ್ಲೆಗಳ ಖಾದಿಪ್ರಚಾರ ನಿರತರನ್ನು ಕರೆದು ಅವರಿಗೆ ಖಾದಿವಿಷಯ ಉಪಯುಕ್ತ ಶಿಕ್ಷಣವನ್ನೀಯುವುದೂ ತದುದ್ದೇಶದಿಂದ ಇತರ ಖಾದೀ ಕೇಂದ್ರಗಳನ್ನು ಸಂದರ್ಶಿಸಿ ಪಾಠಕೊಡುವುದೂ ಟ್ರೈನಿಂಗ್ ಶಾಲೆಯ ಉದ್ದೇಶವೆಂದು ತಿಳಿಯಲಾಗಿದೆ.

ತಿರುವಾಂಕೂರಿನಲ್ಲಿ

ಸ್ಟೇಟ್ ಕಾಂಗ್ರೆಸಿನ ಅಧ್ಯಕ್ಷರು ಮುಂತಾದ ಮುಖಂಡರು ದಿನ ದಿನ ಸೆರೆಮನೆಗೆ ತಳ್ಳಲ್ಪಡುತ್ತಿದ್ದಾರೆ.

ತಿರುವಾಂಕೂರು ಸ್ಟೇಟ್ ಕಾಂಗ್ರೆಸ್ಸಿನ ಪ್ರೆಸಿಡೆಂಟರಾಗಿದ್ದ ನಾರಾಯಣ ಪಿಳ್ಳೆಯವರನ್ನು ದಸ್ತಗಿರಿ ಮಾಡಲಾಗಿ ಅವರು ತಮ್ಮ ಸ್ಥಾನಕ್ಕೆ ಅಚ್ಯುತನ್‌ರವರನ್ನು ಇಟ್ಟು ನಡೆದರು. ಅಚ್ಯುತನ್‌ರವರ ಸರ್ತಿ ಮರುದಿನವೇ ಬಂತು. ಅವರನ್ನು ಹಿಡಿ ಎಲ್ಲಪ್ಪಾ ಶಂಕರರವರನ್ನು ನೇಮಿಸಿ ನಡೆದರು. ಶಂಕರರವರಿಗೂ ದಸ್ತಗಿರಿಯಾಗಿದೆ. ಹಲವು ಯುವಕ ಸಂಘ(ಯೂತ್ಸ್ ಲೀಗ್)ಗಳ ಮುಂದಾಳುಗಳೂ ರಿಮಾಂಡಿನಲ್ಲಿಡಲ್ಪಟ್ಟಿರುವರು.

'ಥೇಂಕ್ಸ್' (ಧನ್ಯವಾದಾಹೇ ಹೆ!) ಎಂದುದಕ್ಕೆ ಕಾರಾಗೃಹ ಶಿಕ್ಷೆ.

ಲಾಹೋರಿನ ಸಮೀಪದ ಹಳ್ಳಿಯವನೊಬ್ಬನು ಒಂದು ತಕ್ಸೀರಿನ ಸಂಬಂಧವಾಗಿ ತನಗೆ ಹತ್ತು ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಾಗ ಆ ತೀರ್ಪನ್ನು ಕೇಳಿ ಮೆಜಿಸ್ಟ್ರೇಟರಿಗೆ ವ್ಯಂಗ್ಯವಾಗಿ ಹಾಗೂ ಉದ್ಧಟತನದಿಂದ 'ಥೇಂಕ್ಸ್' ಎಂದನು. ಅದಕ್ಕಾಗಿ ಅವನನ್ನು ತಿರುಗಿ ವಿಚಾರಣೆಗೊಳಪಡಿಸಿ ಒಂದು ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ನೋಟೀಸು

ಉಡುಪಿ ತಾಲೂಕು ಉಳಿಯಾರಗೋಳಿಗ್ರಾಮದ ಕೊತ್ತಲಗುತ್ತು ಬಸಪ್ಪ ಶೆಟ್ಟಿ ಸೊಸೆ ವಿಮಾನಕ್ಕ ಸೆಡ್ತಿಯಾದ ನಾನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ – ನನ್ನ ಕುಟುಂಬಾರ್ಥದ ಸವಾಪ್ತಿ ಹಕ್ಕಿನ ಉಳಿಯಾರಗೋಳಿ ಗ್ರಾಮ ಮತ್ತು ಕಾರ್ಕಳ ತಾಲೂಕು ಬಳಕುಂಜ ಗ್ರಾಮದ ಮೂಲಿಹಕ್ಕಿನ ಆಸ್ತಿಗಳಿಗೆ ಕೊಡಾ ಅನ್ವಯಿಸುವ ಕುಟುಂಬಾರ್ಥಕ್ಕಾಗಿ ಮಾಡಿದ ಸಾಲಗಳು ಈ ಕೆಳಗೆ ಕಾಣಿಸಿದವುಗಳಾಗಿರುತ್ತವೆ.

1. ನನ್ನ ಕುಟುಂಬದ ಅಭಿವೃದ್ಧಿಗೋಸ್ಕರ ನಾವು ನಡೆಸಿದ ನಾಗಮಂಡಲ ಸೇವೆ ಬಾಬ್ತು ಕುಟುಂಬದವರು ಒಟ್ಟಾಗಿ ಕೊಳಚೂರು ಅಣ್ಣಪ್ಪ ಶೆಟ್ರಿಂದ ಭೋಗ್ಯಾಧಿ ಈಡಿನಲ್ಲಿ ಪಡೆದ ಸಾಲದ ರೂಪಾಯಿ ೪೫೦.

2. ನನ್ನ ಮಗಳು ಪುಟ್ಟುವಿನ ಮದುವೆಬಗ್ಗೆ ಕುಟುಂಬಾರ್ಥವಾಗಿ ಪುವೆಡಗುತ್ತು ಕೊರಗಶೆಟ್ಟಿ ಅಳಿಯ ಕಾಳಪ್ಪ ಶೆಟ್ರಿಂದ ಡಿಮಾಂಡ್ ನೋಟಿನಲ್ಲಿ ಪಡೆದ ಸಾಲದ ರೂಪಾಯಿ ೨೦೦ (ಇದು ಉಡುಪಿ ಡಿ. ಮು. ಕೋರ್ಟಿನಲ್ಲಿ ಡಿಕ್ರಿಯಾಗಿದೆ ಅದರ ನಂಬ್ರ S. C. No.474/38.) ಇವಲ್ಲದೆ ನಮಗೆ ಬೇರೆಸಾಲಗಳು ಇರುವದಿಲ್ಲ. ಆದರೆ ಈಗಿನ ಪಟ್ಟಾಧಾರಿಣಿಯಾಗಿರುವ ನನ್ನ ತಾಯಿ ಸುಮಾರು ೮೫ ವರ್ಷಪ್ರಾಯದ ಮುದುಕಿಗೆ ಸರಿಯಾದ ಗಂಡು ಮಕ್ಕಳು ದುರ್ಬೋಧನೆ ಕೊಟ್ಟು ಹೊಸತಾಗಿ ಸುಳ್ಳು ಸಾಲ ಪಗ್ಗೆರೆ ಮಾಡಿಸಿ ಕುಟುಂಬದ ಆಸ್ತಿಗಳನ್ನು ಶಿಕ್ಕಾಬಟ್ಟೆ ಹರಾಕುಗೊಳಿಸಿ ನಮಗೆಲ್ಲಾ ನಷ್ಟ ಹೊಂದಿಸುವ ಇರಾದೆಯಲ್ಲಿ ಇದ್ದಾರಾಗಿ ನನಗೆ ಖಂಡಿತ ತಿಳಿದಿರುತ್ತದೆ. ಸದರಿ ನನ್ನ ತಾಯಿ ಪ್ರಾಯಸ್ಥಳಾಗಿದ್ದು ಸ್ವಸಗೀರೆಕವಾಗಿ ಮಂದ ಪ್ರಕೃತಿಯವಳಾಗಿದ್ದಾಳೆ. ಅದ್ದರಿಂದ ಅಂಥವಳ ಹುಟ್ಟಿಟ್ಟುಗಳನ್ನು ಯಾವ ವಿಧದಿಂದಲಾದರೂ ಪಡೆದು ಸೃಷ್ಟಿಸುವ ಯಾವದೊಂದು ಸಾಲ ಪರಾಧೀನ ಪಗ್ಗೆರೆ ನಾವು ಸೇರದೆ ಇರುವಂತಹದು ಸಿಂಧು ಆಗತಕ್ಕದ್ದಲ್ಲ.

✱ ಈ ಎಡಗೈ ಹೆಬ್ಬೆಟ್ಟಿನ ಗುರುತು ವಿಮಾನಕ್ಕ ಸೆಡ್ತಿ ರುಜು,

ಈ ಬಗ್ಗೆ ಸಾಕ್ಷಿ.—

Wit—U. Dadu *N/o* Kadia Poojary, Uliyaragoli village, Kaup.

ತಾ॥ ೨೩–೧೨–೩೮.

THE Bombay Life
ASSURANCE CO., LTD.
ಸ್ಥಾಪನೆ] [1908
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಆಫೀಸುಗಳು:
(1) ರಥಬೀದಿ, ಮಂಗಳೂರು.
(2) ಪ್ರತಿಯಾರ, ಕಲ್ಲಿಕೋಟೆ.
(3) ಪೋಸ್ಟ್ ಬಾಕ್ಸ್ 337, ಮೌಂಟ ರೋಡು, ಮದ್ರಾಸು. (ಫೋನ್ ನಂ. 8245,)
(4) ವಿಶ್ವೇಶ್ವರಪುರಂ, ಸರ್ಕಲ್, ಬೆಂಗಳೂರು ಸಿಟಿ. (ಫೋನ್ ನಂ. 2182,)
(5) ಗೌತಮನಿವಾಸ, ಚಾರ್ನಿ ರೋಡ್, ಗಿರ್ಗಾಮ್, ಬೊಂಬಾಯಿ (ಫೋ. ನಂ. 26314)
ಇನ್ಸ್‌ಪೆಕ್ಟರೇಟ್ ಆಫೀಸ್‌ಗಳು.
(6) ಪಟ್ಟಿವಾಳಂ, ದ. ಮಲಬಾರ್.
(7) ಸೆಂಟ್ರಲ್ ಸ್ಟೇಶನ್ ರೋಡ್, ತಿರುವಾಂಕೂರು

ಮದ್ರಾಸ್ ಶಾಖಾ ಕಾರ್ಯದರ್ಶಿಗಳು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
(ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರನ್ನು ಸಂಘೀಕರಿಸಿಕೊಂಡಿದೆ)
ರಿಜಿಸ್ಟ್ರಿಯಾದ ಆಫೀಸು: ಉಡುಪಿ.
ಜೀವವಿಮೆಯಲ್ಲಿ ಅತ್ಯುಚ್ಚ ಮತ್ತು ಅತ್ಯಾಧುನಿಕ ಸಲಕರಣೆಗಳೆಲ್ಲವನ್ನು ಒದಗಿಸಿ ಕೊಡುವ ಮೇಲ್ತರಗತಿಯ ವಿಮಾಸಂಸ್ಥೆ.
ಸಮೃದ್ಧಿಯು ಸರ್ವಾದರಣೀಯತೆಯನ್ನು ಸ್ಪಷ್ಟೀಕರಿಸುತ್ತದೆ.

1937ರಲ್ಲಾದ ಹೊಸ ವ್ಯವಹಾರ	ರೂ.	1,40,08,725
ಪ್ರೀಮಿಯಂ ಆದಾಯ ಮಿಕ್ಕಿದುದು	,,	30,00,000
ಒಟ್ಟು ಮೂಲ ಮಿಕ್ಕಿದುದು	,,	1,00,00,000
ಒಟ್ಟು ವಿಮಾಹಣ ಕೊಟ್ಟದ್ದು ಮಿಕ್ಕಿದುದು	,,	50,00,000

ಏಜೆನ್ಸಿಗಾಗಿ ಗೌರವ ಮತ್ತು ಪ್ರಭಾವಶಾಲಿ ತರುಣ ತರುಣಿಯರಿಂದ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ. ಆಕರ್ಷಕ ಪ್ರತಿಫಲ.
ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ರಿಜಿಸ್ಟ್ರ ಆಫೀಸಿಗಾಗಲೀ, ಯಾವುದಾದರೂ ಶಾಖಾ ಆಫೀಸಿಗಾಗಲೀ ಬರೆಯಿರಿ.

ಈ ವಾರದ ಕತೆ

ಹಸ್ತಪರೀಕ್ಷೆಯ ಫಲ

ನಾನು ಮಿಾರೆಯನ್ನು ಪ್ರೀತಿಸುತ್ತಿದ್ದೆ 'ನೀವು ಬಯಸುವ ಸ್ತ್ರೀಯು ನಿಮಗೆ ಬೇಗನೇ ವಶಳಾಗುತ್ತಾಳೆ. ಅವಳೂ ನಿಮ್ಮನ್ನೇ ಕಾತರಿಸುತ್ತಾಳೆ' ಎಂದು ಮುಂಜಾನೆ ಬಂದ ಬೈರಾಗಿಯೂ ನನ್ನ ಹಸ್ತಪರೀಕ್ಷೆ ಮಾಡಿ ಹೇಳಿದ. ಮಿಾರೆಯ ಮುಗುಳುನಗೆಯೂ ನನ್ನಲ್ಲಿ ಆತುರವನ್ನು ಉಮ್ಮಡಿಸಿತು. ಒಂದು ದಿನ ನಾನವಳಿಗೆ ಪ್ರಣಯಪತ್ರವೊಂದನ್ನು ಬರೆದೇಬಿಟ್ಟೆ. ಈ ಪತ್ರಕ್ಕೆ ನನಗೆ ಮಿಾರೆಯಿಂದ ಮರುತ್ತರ ಬಾರದಿದ್ದರೂ ಕಾಲೇಜಿನ ಪ್ರಿನ್ಸಿಪಾಲರಿಂದ ಬಂದೇಬಿಟ್ಟಿತು!

ಕತೆಗಾರರು—ಶ್ರೀ. ಎನ್. ಸಂಜೀವ ಶೆಟ್ಟಿ.

ನನ್ನ ಕೊಠಡಿಯ ಒತ್ತಿನ ಕೋಣೆಯಲ್ಲಿ ರಂಗನಾಥ ನಂಬಿಯಾರನು ಯಾರೊಡನೆಯೋ ಜಗಳವಾಡುತ್ತಿದ್ದ. ಅವನ ಒರಟು ಭಾಷೆಯ ಕರ್ಕಶತೆಯು ಕಿವಿಗೆ ಹೊಡೆದಂತಾಗಿ ಬೇಗನೆ ಹಾಸಿನಿಂದ ಏಳಬೇಕಾಯ್ತು. ಆ ದಿನ ಬೆಳಗಿನ ಜಾವದಲ್ಲಿ ಮನದಾಸೆಯೇ ಸ್ವಪ್ನ ಪ್ರಪಂಚವನ್ನು ಆವರಿಸಿದ್ದ ಕಾರಣ ಮೈಯಲ್ಲಿ ಕಸುವಿರಲಿಲ್ಲ. ನಾನು ಹಾಸಿನಿಂದ ಎದ್ದು, ಕೋಣೆಯ ಬಾಗಿಲನ್ನು ತೆರೆದಿಟ್ಟು, ಆರಾಮ ಕುರ್ಚಿಯಲ್ಲಿ ಒರಗಿಕೊಂಡೆ. ಬೆಳಗಿನ ಕನಸು ಮನಸ್ಸಿನಲ್ಲಿ, ಹಸುರಾಗಿದ್ದ ಕಾರಣ ಅದನ್ನೇ ತಿರುತಿರುಗಿ ಮೆಲುಕುಹಾಕುತ್ತಾ ಇನಿಕನಸಿಗೆ ಭಂಗವನ್ನುಂಟುಮಾಡಿದ್ದಕ್ಕೆ ಒಮ್ಮೊಮ್ಮೆ, ನಂಬಿಯಾರನನ್ನು ಶಪಿಸುತ್ತಾ ಆಕಳಿಗೆ ತೆಗೆಯುತ್ತಿದ್ದೆ. ಅಷ್ಟು ಹೊತ್ತಿಗೆ ಕೈಯ ಇಕ್ಕೆಳಯಿಂದ ತಾಳವಿಕ್ಕುತ್ತಾ ಬೈರಾಗಿಯೊಬ್ಬನು ಬಂದು, ನನ್ನ ಕೋಣೆಯ ಮುಂದುಗಡೆ ನಿಂತುಕೊಂಡನು. ಇವನ ಕಾಟ ಈ ಸಮಯದಲ್ಲಿ ಏಕೆ ಬಂತೆಂದು ನಸು ಕೆರಳಿದೆ. ಆದರೆ ಬಂದ ಆಸಾಮಿಯು ಒಳ್ಳೇ ನುರಿತವನಿದ್ದನು. ಬಂದವನೇ ನನ್ನ ಮುಖ ನೋಡಿ, ಭವಿಷ್ಯ ಹೇಳತೊಡಗಿದನು. ನನ್ನ ಮನಸ್ಸಿನ ಕನಸು, ಅದಕ್ಕೆ ಅಡ್ಡಿಬರುವ ಶನಿಯ ಕಾಟ! ಹೀಗಲ್ಲಾ ನೂರಾರು ವಿಚಾರಗಳನ್ನು ಹೇಳಿ, ನನ್ನ ಹಸ್ತಪರೀಕ್ಷೆಗೆ ಉಪೇಕ್ಷಿಸಿದನು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿದ್ದ ನನಗೆ ಅವನ ನೂರು ಹರಟೆಗಳಲ್ಲಿ ಹಲವು ಸತ್ಯವಾಗಿ ತೋರಿದವು ಮಿಕ್ಕವು ಸ್ಥೂಲವಾಗಿ ಹೇಳಿರುವುದರಿಂದ ಅವುಗಳನ್ನು ಸಟೆಯೆಂದು ತೆಗೆದುಹಾಕುವಹಾಗಿರಲಿಲ್ಲ. ಅಷ್ಟು ಹೊತ್ತು ಅವನ ಪುರಾಣವನ್ನು ಕೇಳಿದ ಮೇಲೆ, ಅವನು ಸ್ವಲ್ಪವಾದರೂ, ನನ್ನ ಕಿಸೆಯನ್ನು ಹಗುರಮಾಡದೆ ಹೋಗುವಹಾಗಿಲ್ಲವೆಂದು ನನಗೆ ಖಾತ್ರಿ ಗೊತ್ತು. ಆದ್ದರಿಂದ ಕೊಡುವ ದುಡ್ಡಿಗೆ ಮಿಗಿಲಾದ ಪ್ರಯೋಜನವಾದರೂ ದೊರಯಲಿ ಎಂದು ನಾನು ಅವನಿಗ ಕೈತೋರಿಸಿದೆ. ಬೈರಾಗಿಯು ತನ್ನ ರುದ್ರಾಕ್ಷಿ ಸರವನ್ನು ನನ್ನ ಕೈಮೇಲಿಟ್ಟು ಅದಕ್ಕೆ ನಮಿಸಿ ಭವಿಷ್ಯ ಹೇಳಲಿಕ್ಕೆ ತೊಡಗಿದ. "ನೀವು ಬಯಸುವ ಸ್ತ್ರೀಯು ನಿಮಗೆ ಬೇಗನೇ ವಶಳಾಗುತ್ತಾಳೆ. ಅವಳೂ ಕೂಡಾ ನಿಮ್ಮನ್ನೇ ಕಾತರಿಸುತ್ತಾಳೆ. ಆದರೆ ಶನಿಕಾಟವು ಈ ವರೆಗೆ ಇದ್ದ ಕಾರಣ ನಿಮ್ಮ ಮನೋರಥವು ಈಡೇರಲಿಲ್ಲ. ಈಗ ಶನಿದೃಷ್ಟಿಯ ಮೇಲೆ ಗುರುದೃಷ್ಟಿ ಬಿದ್ದಿದೆ' ಎಂದು ಹೇಳುತ್ತಾ ಈ ಕೈಯಿಂದ ಸಾಧುವಿಗೆ ಒಂದು ಊಟವನ್ನು ಕೊಡಿಸಬೇಕೆಂದು ಉಪಸಂಹಾರಮಾಡಿದನು.

ಬೈರಾಗಿಯು ಹೇಳಿದ್ದು ನಿಜವಾಗಿಯೇ ಕಂಡಿತು. ನಾನು ಆಗ ಬಿ. ಎ. ಯಲ್ಲಿ ಓದುತ್ತಿದ್ದೆ. ಮಿಾರಾಬಾಯಿಯು ನಮ್ಮ ಕೊಲೇಜಿನಲ್ಲಿಯೇ ಎಫ್. ಎ. ಯಲ್ಲಿ ಓದುತ್ತಿದ್ದಳು. ಮಿಾರೆ ಬಲು ಸೂಟಿಯಾದ ಹುಡುಗಿ. ಅವಳು ನಮ್ಮ ಕೊಲೇಜಿನ ವಿದ್ಯಾರ್ಥಿಗಳ ಪ್ರಾಣವಾಗಿದ್ದಳು. ನಾವೆಲ್ಲರೂ ಆಕೆಯ ಪ್ರೇಮಭಿಕ್ಷುಗಳು. ಆಕೆಯ ಮೂರ್ತಿಗೆ ನಮ್ಮ ಹೃದಯಮಂದಿರದಲ್ಲಿ ನಿತ್ಯ ಪೂಜೆ ನಡಿಯುತ್ತಿತ್ತು. ಅವಳ ಹೃದಯದಲ್ಲಿ ಭೀಮನಂತೆ ಬೆಳೆದು, ಇತರರಿಗೆ ಅಲ್ಲಿ ಎಡೆಕೊಡಬಾರದೆಂದು ನಮ್ಮೆಲ್ಲರ ಮಧ್ಯೆ ... ಚುನಾವಣೆಯ ಸಮಯದ ಕಾಂಗ್ರೆಸು, ಜಸ್ಟೀಸ್ ಕಾದಾಟಕ್ಕಿಂತಲೂ ಜೋರಾಗಿಯೇ ದಿನವಹಿ ನಡೆಯುತಿದ್ದವು.

ನಾನು ಮಿಾರೆಯ ಕೃಪೆಗೆ ಪಾತ್ರನಾದ ವಿಷಯವನ್ನು ನಾನು ಅಂದಿನ ಕನಸಿನಲ್ಲಿ ಕಂಡಿದ್ದೆ. ನಾನೂ ಆಕೆಯೂ ಟ್ರಾಮಿನಲ್ಲಿ ಕುಳಿತು ಬೀದಿಗೆ ವಿಹಾರಕ್ಕೆ ಹೋದದ್ದು, ಮತ್ತೆ ಅಲ್ಲಿಂದ ಇಂಪೀರಿಯಲ್ ಸಿನೇಮದಲ್ಲಿ ಸೋಫಾದ ಮೇಲೆ ಕುಳಿತು ಚಲಚಿತ್ರವನ್ನು ಕಂಡದ್ದು. ಅಲ್ಲಿ ಆ ಚಿತ್ರದ ಕುರಿತು ವಿಮರ್ಶೆ ಮಾಡಿದ್ದು, ಆ ಮೇಲೆ ಕಾರಿನಲ್ಲಿ ಕುಳಿತು ಆಕೆಯ ಮನೆಗೆ ಹೋದದ್ದು. ಆಕೆಯ ಸತ್ಕಾರ ಇತ್ಯಾದಿ ನಾನು ಕನಸುಕಂಡಿದ್ದೆ. ನಾವು ಅನ್ಯೋನ್ಯವಾಗಿ ಪ್ರೇಮ ಶರಧಿಯಲ್ಲಿ ತೇಲಾಡುತ್ತಾ ಬಾಳಿನ ಸುಧೆಯನ್ನು ಸವಿಯುತ್ತಿದ್ದಾಗ ರಂಗನಾಥನ ಒರಟು ಮಾತು ನನ್ನ ಸ್ವಪ್ನ ಪ್ರಪಂಚವನ್ನು ಲಯಗೊಳಿಸಿ ಮಹತ್ತಾದ ಹೃದಯ ವೇದನೆಯನ್ನುಂಟುಮಾಡಿತು.

ಈ ಕನಸನ್ನು ನಾನು ಕಂಡದ್ದು ಬೆಳಗಿನ ಜಾವದಲ್ಲಿ. ಬೆಳಗಿನ ಜಾವದ ಕನಸು ಕೆಲವೇ ದಿವಸಗಳಲ್ಲಿ ಸಿದ್ಧಿಯಾಗುತ್ತದೆಂದು ನಮ್ಮ ಅಜ್ಜಿಯು ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಆಕೆಯು ಬಹಳ ವರ್ಷಗಳ ಹಿಂದೊಮ್ಮೆ ಬೆಳಗ್ಗಿನ ಜಾವದಲ್ಲಿ ತನ್ನ ಗಂಡ ಅಂದರೆ ನನ್ನ ಅಜ್ಜ, ಒಂದು ಎತ್ತರ ಪ್ರದೇಶದಿಂದ ಬಿದ್ದು ಕೈಕಾಲು ಮುರಿದುಕೊಂಡನೆಂದು ಕನಸನ್ನು ಕಂಡಳಂತೆ. ಆಕೆಯು ಹೆದರಿ ಮರುದಿವಸವೇ ನಮ್ಮೂರ ವಿಘ್ನೇಶ್ವರನಿಗೆ ಹತ್ತು ತೆಂಗಿನಕಾಯಿಗಳನ್ನು ಒಡೆಸಿ ಪತಿಯ ವಿಪತ್ತನ್ನು ಪರಿಹರಿಸೆಂದು ಪ್ರಾರ್ಥಿಸಿಕೊಂಡಳಂತೆ ಈ ಕನಸು ಬಿದ್ದು ಒಂದು ವಾರದೊಳಗೆ ನಮ್ಮ ಅಜ್ಜ ಹಾಸಿನಲ್ಲಿ ಮಲಗಿದ್ದವನು ನೆಲಕ್ಕುರುಳಿ ಬಿದ್ದು, ಕೈ ಮೋಂಟುಮಾಡಿಕೊಂಡನಂತೆ. ನಮ್ಮ ಅಜ್ಜಿಯು ಸ್ವಪ್ನ ಮಹಾತ್ಮೆಯನ್ನು ವರ್ಣಿಸುವಾಗ ಈ ಉಪಕತೆಯನ್ನು ತನ್ನ ಸ್ವಂತ ಅನುಭವದಿಂದ ಎತ್ತಿ ಹೇಳುತ್ತಿದ್ದಳು. ಈ ಸ್ವಪ್ನದಲ್ಲಿ ನಂಬಿಗೆಯು ನನಗೆ ಆಗ ಇರಲಿಲ್ಲವಾದರೂ, ಈಗ ಸಂಪೂರ್ಣ ಉಂಟಾಯಿತು.

ಬೈರಾಗಿಯನ್ನು ಸಂಪೂರ್ಣವಾಗಿ ಪರೀಕ್ಷಿಸಬೇಕೆಂದು 'ನಾನು ವಿವಾಹಿತನೋ ಅಥವಾ ಅವಿವಾಹಿತನೋ' ಎಂದು ಕೇಳಿದೆ. ಅವನು ನನ್ನ ಹಸ್ತವನ್ನು ದೃಷ್ಟಿಸಿ ನೋಡಿ, ನಾನು ಅವಿವಾಹಿತನೆಂದು ಹೇಳಿದನು ಅವನ ಮಾತುಗಳನ್ನು ಕೇಳಿ ನನಗೆ ಸ್ವಲ್ಪ ಸಿಟ್ಟುಬಂತು. ಏಕೆಂದರೆ ನನಗೆ ಪದಿನಾರು ವರ್ಷವಾಗುವಾಗಲೇ ಮಾಮೂಲು ಪಕ್ಕೆಂದು ನನ್ನ ಹಿರಿಯರು ನನಗೆ ನನ್ನ ಸೋದರತ್ತೆಯ ಮಗಳನ್ನು ಮದುವೆಮಾಡಿದ್ದರು ಹುಡುಗಿಯು ಹಳ್ಳಿಯವಳಾದರೂ ಚಿಂತೆಯಿರಲಿಲ್ಲ. ಆದರೆ ನೋಡಲಿಕ್ಕೆ ಅತಿ ಕುರೂಪಿ. ಡಾರ್ವಿನ್ನನು ಆಕೆಯನ್ನು ಕಂಡಿದ್ದರೆ ಮಂಗನಿಂದ ಮನುಷ್ಯನ ಉತ್ಪತ್ತಿ ಎಂಬ ತನ್ನ ಸಿದ್ಧಾಂತವನ್ನು ರುಜುಪಡಿಸುವುದಕ್ಕಾಗಿ, ಲಕ್ಷಾಂತರ ಡೋಲರನ್ನು ಕೊಟ್ಟು, ಈಕೆಯನ್ನು ಕೊಂಡುಹೋಗುತ್ತಿದ್ದನು. ನನ್ನ ಮಾವನೂ ಆಗ ಅಂತರರಾಷ್ಟ್ರೀಯ ವ್ಯಕ್ತಿಯಾಗುತ್ತಿದ್ದನು. ಆ ಯೋಗವು ಅವರಿಗಿರಲಿಲ್ಲವೆನ್ನಿ.

ನಾನು ಡಾರ್ವಿನ್ನನ ಸಿದ್ಧಾಂತಕ್ಕೆ ಬದ್ಧ ವಿರೋಧಿ ನನ್ನ ಅಜ್ಜನ ಪಿಜ್ಜನ ಅಜ್ಜ ಮುದಿ ಕೋತಿಯೆಂದು ಅಭಿಮಾನ ಪಡುವಷ್ಟು ನಾನೂ ಮೂರ್ಖನಾಗಿಲ್ಲ ಆದ್ದರಿಂದ ಆಕೆಯ ಮೇಲೆ ನನಗಿದ್ದ, ಅಸಹ್ಯಭಾವವು ದ್ವಿಗುಣವಾಯಿತು. ನಾನು ಅಜ್ಜ ನೆಟ್ಟ ಗೋಳಿಮರವೆಂದು ಎಷ್ಟು ಮಾತ್ರಕ್ಕೂ ನೇಣು ಹಾಕಿಕೊಳ್ಳಲಾರನೆಂದು ನಿಶ್ಚಯಿಸಿದ್ದೆನು ಆದ್ದರಿಂದಲೇ ನಾನು ವಿವಾಹಿತರಲ್ಲಿ ಒಬ್ಬನಾಗಿರಲು ಕಾರಣ.

ನಾನು ವಿವಾಹಿತನೆಂದು ಎಷ್ಟು ಒತ್ತಿ ಹೇಳಿದರೂ ಬೈರಾಗಿಯು ಆ ಮಾತನ್ನು ಒಪ್ಪಿಗೆಳಿದನು ಕೊನೆಗೆ ನನ್ನ ಹತ್ತಿರಯಲ್ಲ ಕೂಗುತ್ತಿದ್ದ ಜೋಡು ಜನಿವಾರವನ್ನು ಅಂಗಿಯ ಎಡೆಯಿಂದ ಹೊರಗೆಳೆದು ತೋರಿಸಿದೆ ಬೈರಾಗಿಯು ಪುನಃ ಕೈಯನ್ನು ನೋಡಿ ರೇಖೆಯನ್ನು ಪರೀಕ್ಷಿಸಿದನು. ಮತ್ತೆ ಈ ಗೆರೆಯು ಆ ರೇಖೆಯನ್ನು ಇಲ್ಲಿ ಕೂಡಿದ್ದ ಕಾರಣ ನಿಮಗೆ ವಿವಾಹ ಯೋಗವು ಇಪ್ಪತ್ತೈದನೇ ವಯಸ್ಸಿಗೇ ಇರುವುದು ಹಿಂದೆ ನೀವು ಮದುವೆಯಾಗಿದ್ದರೆ ಅದು ಯೋಗವಿಲ್ಲದಿರುವ ಕಾರಣ ಸಿಂಧುವಾಗದೆಂದು ಕೊನೆಯ ತೀರ್ಪನ್ನು ಕೊಟ್ಟು ತನ್ನ ರುಸುಂ ಪಡೆದು ಹೊರಟೇ ಹೋದನು.

ಅಂದು ಆದಿತ್ಯವಾರವಾದ್ದರಿಂದ ನಮಗೆ ರಜೆಯಿತ್ತು ಆದಿತ್ಯವಾರ ದಿವಸ ವಿಹಾರಕ್ಕೆ ವಿದ್ಯಾರ್ಥಿಗಳೂ, ಪಟ್ಟಣಿಗರೂ ಎಲ್ಲರೂ ಬೀಚಿಗೆ ಬರುತ್ತಾರೆ ನಾನು ಸಂಜೆಯ ಹೊತ್ತು ಗಾಳಿ ತೆಗೆದುಕೊಳ್ಳುವುದಕ್ಕೆ ಅಲ್ಲಿಗೆ ಹೋದೆ. ನಾನು ಸ್ವಪ್ನದಲ್ಲಿ ಕಂಡಿದ್ದ ಸ್ಥಳಕ್ಕೆ ಹೋದಾಗ ಅಲ್ಲಿ ಮಿಾರೆಯು ತನ್ನ ಗೆಳತಿಯರೊಡನೆ ಇರುವುದನ್ನು ಕಂಡು ಆಶ್ಚರ್ಯಪಟ್ಟೆನು.

ನನ ಕನಸು ಫಲಿಸಿದ ...



"ಶೆಂಕ್ಸ"

SHANKS

(ಇಂಗ್ಲಿಷ್ ಮೇಕ್)

ಕ್ರೂಡ್ ಆಯಿಲ್ ಎಂಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶೆಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬೈಂಡ ಪ್ಲೆಂಟು), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಕೊಳ್ಳಿ—

ಪೆರಮ್ಮೆಂಟ್ ಇಂಜಿನೀಯರಿಂಗ್ ಕೊರ್ಪೊರೇಶನ್

೮೨, ಎಸ್ಪೊಲೊ ಸ್ಟ್ರೀಟ್, ಫೋರ್ಟ್ . . . ಮುಂಬಯಿ.

ಹೊಸ ನಿರ್ಮಾಣದ ಸಿನೆಮಾಯಂತ್ರಗಳು ಈಗತಾನೆ ಬಂದಿವೆ.



ಆಬಾಲವೃದ್ಧರಿಗೆ ಮನೆಯ ಲ್ಲೀ ಬಾಯಸ್ಕೋಪುಗಳನ್ನು ನೋಡುವ ಸಂಧಿ ಜಾಹೀರಾತಿನಲ್ಲಿ ಚಿತ್ರಿಸಿದ ರೀತಿಯಾಗಿದಿದ್ದರೆ ಹಣ ವಾಪಾಸು. ಇಲೆಕ್ಟ್ರಿಕ್ ಬೆಟರಿಗಳಿಂದಲೂ ಶಕ್ತಿಯುಕ್ತವಾದ ಬಲ್ಬುಗಳಿಂದಲೂ ಕೂಡಿರುವ ಈ ಮೆಶೀನುಗಳಿಂದ ಸಿನೆಮಾ ಕಂಪನಿಗಳ ದೃಶ್ಯಗಳನ್ನು ಕೂತಲ್ಲೇ ಕಾಣಬಹುದು ಸರ್ಕಸ್ ಆಟಗಳು, ಜಂಗಲ್ ಕಾಡುಗಳ ದೃಶ್ಯಗಳು, ಸಮುದ್ರದಲ್ಲಿಯ ಸ್ಟೀಮರ್ ಯುದ್ಧಗಳ, ಮನಮೋಹಿಸುವ ಕೋಮಲಾಂಗಿಯರ ನೃತ್ಯ ವಿನೋದಾದಿ ಆಶ್ಚರ್ಯಕರ ದಾಗು ಪರಮಾನಂದವನ್ನುಂಟು ಮಾಡತಕ್ಕ ಸೀನರಿಗಳು, ಮನರಂಜನೆ ಮಾಡುವವರಿಗೂ ಈ ಯಂತ್ರವು ತುಂಬಾ ಸಹಕಾರಿಯಾಗುವುದು

ನಂಬ್ರ 1 ಬಾಯಸ್ಕೋಪ್ ಮಶೀನು ಮತ್ತು 15 ಅಡಿ ಉದ್ದದ ಫಿಲ್ಮ್ ಸಮೇತ ಕ್ರಯ ರೂ 7

ನಂಬ್ರ 2 ಬಾಯ ಸ್ಕೋಪ್ ಮೆಶೀನ 10 ಫೀಟ ಫಿಲ್ಮ್ ಸಹಿತ ಕ್ರಯ ರೂ. 5

ಹೆಚ್ಚಿನ ಪ್ರತಿ 25 ಫೀಟ ಫಿಲ್ಮುಗಳಿಗೆ ಬರಿ ರೂ 1 ಮಾತ್ರ

ಪ್ಯಾಕಿಂಗ್ ಮತ್ತು ಪೋಸ್ಟೇಜು ನಂಬ್ರ 1ಕ್ಕೆ ರೂ 1—8—0, ಪ್ಯಾಕಿಂಗ್ ಮತ್ತು ಪೋಸ್ಟೇಜು ನಂಬ್ರ 2ಕ್ಕೆ ರೂ. 1—4—0. ಆರ್ಡರಿನೊಂದಿಗೆ ರೂ. 2ನ್ನು ಮುಂಗಡವಾಗಿ ಕಳುಹಿಸಿದ ಕಾಗದಪತ್ರಗಳಿಗೆ ಮಾತ್ರ ಗಮನಕೊಡಲಾಗುವದು.

ವಿಳಾಸ:- Wedlock & Co., *Park Town, MADRAS.*

ಎಲ್ಲವೂ, ನನಗೆ ನಿಜವಾಗುವುದರಲ್ಲಿ ಸಂಶಯವೇ ಉಂಟಾಗಲಿಲ್ಲ. ನನಗೆ ಆಕೆಯ ಬಳಿಗೆ ಹೋಗಿ ಹಸ್ತ ಲಾಘವ ಕೊಟ್ಟು ಮಾತಾಡಿಸಬೇಕೆನ್ನಿಸಿತು. ಅಷ್ಟು ಹೊತ್ತಿಗೆ ರಂಗನಾಥ ನಂಬಿಯಾರನು ನನ್ನೆಡೆಗೆ ಶನಿಯು ಹಾಗೆ ಬಂದು, ಸಿನೇಮಕ್ಕೆ ಬಾರೆಂದು ಎಳೆದುಕೊಂಡೇ ಹೋದನು. ನಾನು ಹೋಗುವಾಗ ಆಕೆಯನ್ನು ಹಿಂದಿರುಗಿ ನೋಡಿದೆ. ಆಕೆಯೂ ನನ್ನಾ ನೋಟಕ್ಕೆ ಪ್ರತ್ಯುತ್ತರವಾಗಿ ಮಂದಹಾಸವನ್ನು ಬೀರಿದಳು. ಆಕೆಯ ಮುಗುಳು ನಗೆಯು ನನ್ನ ಕನಸನ್ನು ನೆನಸನ್ನಾಗಿಯೇ ಮಾಡಿತು.

ಮರುದಿವಸ ನಾನು ಕೋಲೇಜಿನಲ್ಲಿ ಲೆಬರೇಟರಿಗೆ ಹೋಗುತ್ತಿದ್ದಾಗ ಮೀರೆಯ ಭೇಟಿಯಾಯಿತು. ಆಕೆಯು ನನ್ನನ್ನು ಕಂಡು ಅದೊಂದು ಅಪೂರ್ವ ರೀತಿಯಿಂದ ನಕ್ಕು ನನ್ನನ್ನು ಸನ್ಮಾನಿಸಿದಳು. ಇದರಿಂದ ಆಕೆಯು ನನ್ನಲ್ಲಿ ಸಂಪೂರ್ಣ ಅನುರಾಗವುಳ್ಳವಳಾಗಿರುವಳೆಂದು ನಂಬಿದೆನು. ಅದೇ ದಿನ ಸಾಯಂಕಾಲವೂ ಆಕೆಯು ಹಾಗೆಯೇ ಮಂದಹಾಸವನ್ನು ಬೀರಿದಳು. ನನಗೆ ಇದರಿಂದ ಬುದ್ಧಿ ಭ್ರಮೆಯೇ ಆಯಿತು.

ನಾನು ಕಾಲೇಜಿನಿಂದ ಮನೆಗೆ ಬಂದವನೇ ಆಕೆಗೊಂದು ಪ್ರಣಯಪತ್ರವನ್ನು ಬರೆಯ ಕುಳಿತೆ. ನಾಲ್ಕಾರು ಬಾರಿ ಕಾಗದದಲ್ಲಿ ಬರೆದು, ಹರಿದು, ಕೊನೆಗೊಂದು ಪ್ರತಿಯನ್ನು ತಯಾರಿಸಿ ಮರುದಿವಸ ಟಪ್ಪಾಲಿನಲ್ಲಿ ಹಾಕಿದೆ. ನಮಗೆ ಮುಂದಿನ ವಾರದಲ್ಲಿ ಪರೀಕ್ಷೆಯಿದ್ದ ಕಾರಣ ಅಂದಿನಿಂದ ಎಂಟು ದಿವಸಗಳ ವರೆಗೆ ರಜೆಯಿತ್ತು. ನಾನು ನನ್ನ ಪತ್ರಕ್ಕೆ ಪ್ರತ್ಯುತ್ತರದ ನಿರೀಕ್ಷಣೆಯಲ್ಲಿಯೇ ಇದ್ದನಾದ ಕಾರಣ ಕೋಣೆಯಲ್ಲಿಯೇ ಇದ್ದೆ. ಎರಡು ಮೂರು ದಿವಸವಾದರೂ ಉತ್ತರ ಬಾರದಕಾರಣ ಕೂಡಲೇ ಮರುತ್ತರ ಬರೆಯುವಂತೆ ಮತ್ತೊಂದು ಪ್ರಣಯ ಗೀತೆಯನ್ನು ರಿಜಿಸ್ಟರಾಗಿ ಕಳುಹಿಸಿದೆ. ಅದಕ್ಕೂ ಉತ್ತರ ದೊರೆಯಲಿಲ್ಲ. ಅಷ್ಟಾಗುವಾಗ ನಮ್ಮ ರಜೆಯು ಮುಗಿಯಿತು. ನಾನು ಎಂದಿನಂತೆ ಕೋಲೇಜಿಗೆ ಹೋದೆ. ನಮ್ಮ ವಸ್ತು ಶಾಸ್ತ್ರದ ಪಾಠ ಹೇಳುತ್ತಿರುವಾಗ ಆಫೀಸಿನಿಂದ ಒಂದು ಚೀಟನ್ನು ಒಬ್ಬ ಜವಾನನು ತಂದು ಪ್ರೊಫೆಸರಿಗೆ ಕೊಟ್ಟನು. ಅವರದನ್ನು ನೋಡಿ "Ranga Rao is wanted at the office" (ಅಂದರೆ ರಂಗರಾಯರು ಆಫೀಸಿನಲ್ಲಿ ಬೇಕಾಗಿದ್ದಾರೆ) ಎಂದು ಹೇಳಿದರು. ನನಗೆ ದಿಗಿಲು ಹಾರಿತು. ಆ ದಿವಸ ಬೆಳಗ್ಯೆ ಮೀರೆ ಕ್ಲಾಸಿಗೂ ಬಂದಿರಲಿಲ್ಲ.

ನನ್ನ ವರ್ತನೆಯು ವಿಪರೀತ ಕೆಟ್ಟೆತೆಂದು ಭಾವಿಸಿ ಒಳಗೆ ಡೋಲು ಹೊಡೆಯುತ್ತಿದ್ದರೂ, ಹೊರಗೆ ಧೈರ್ಯವನ್ನೇ ಪ್ರಕಟಿಸುತ್ತಾ ಪ್ರಿನ್ಸಿಪಾಲರ ಆಫೀಸಿಗೆ ಬಂದು ಅವರಿಗೆ ವಂದಿಸಿ ನಿಂತುಕೊಂಡೆ. ಅವರು ನನ್ನನ್ನು ದೃಷ್ಟಿಸಿ ನೋಡಿ, ನಾನು ಮೀರೆಗೆ ಬರೆದ ಪ್ರಣಯ ಪತ್ರಗಳನ್ನು ನನಗೆ ತೋರಿಸಿ, "ನೀನು ಅಯೋಗ್ಯವಾಗಿ ವರ್ತಿಸಿದ್ದರಿಂದ ನಿನ್ನನ್ನು ಮೂರು ವರ್ಷ ಕಾಲೇಜಿನಿಂದ ಹೊರಗಿರಿಸಲಾಗಿದೆ." ಎಂಬ ತೀರ್ಪು ಓದಿ ಹೇಳಿದರು. ನಾನು ಎಷ್ಟು ಕ್ಷಮೆ ಕೇಳಿದರೂ ಅವರ ಕಲ್ಲೆದೆಯು ಕರಗಲೇ ಇಲ್ಲ. ಬಳಿಕ ನಾನು ಬೈರಾಗಿಯನ್ನು ಶಪಿಸುತ್ತಾ ಅಲ್ಲಿಂದ ಹೊರಟು ಕೋಣೆಗೆ ಬಂದೆ.

ಮಧುರೆಯಲ್ಲಿ ಮದ್ರಾಸ್ ಅಧಿಪತ್ಯದೊಳಗಣ ಸಮಸ್ತ ಲೋಕಲ್‌ಬೋರ್ಡು ನೌಕರರ ಪರಿಷತ್ತು

ನಮ್ಮ ಜಿಲ್ಲಾಬೋರ್ಡಿನ ಕಾರ್ಯದರ್ಶಿಗಳಾದ ಶ್ರೀಯುತ ಎಂ. ಸುಂದರರಾಯರು ಅಧ್ಯಕ್ಷರು.

ಇದೀಗ ಲೋಕಲ್ ಬೋರ್ಡು ನೌಕರರ ಏಳನೆಯ ಪರಿಷತ್ತು ಕಳೆದ ತಾ. ೨೫ರಲ್ಲಿ ಮಧುರೆಯಲ್ಲಿ ಜರಗಿತು. ಇಪ್ಪತ್ತನಾಲ್ಕು ಜಿಲ್ಲೆಗಳಿಂದಲೂ ಪ್ರತಿನಿಧಿಗಳು ಬಂದು ಕೂಡಿದ್ದರು. ಅಧ್ಯಕ್ಷರ ಭಾಷಣದಲ್ಲಿ ಸರಕಾರವು ಗಮನವೀಯಬೇಕಾಗಿರುವ ನ್ಯಾಯ ಸಮ್ಮತವಾದ ಹಲವು ವಿಷಯಗಳಿದ್ದುವು. ಸರಕಾರವು ತನ್ನ ನೌಕರರಿಗೆ ಕೊಡುವ ಸಂಬಳದ ಸ್ಕೇಲನ್ನೇ ಅದೇ ಉದ್ಯೋಗದಲ್ಲಿರುವ ಬೋರ್ಡು ನೌಕರರಿಗೆ ಇಡಬೇಕು, ಹೊಸ ಸ್ಕೇಲುಗಳನ್ನು ಪ್ರಯೋಗಿಸುವಾಗ ಅವನ್ನು ಮುಂಚಿನವರಿಗೆ ಪ್ರಯೋಗಿಸದೆ ಅವರಿಗೆ ಹಿಂದಿನ ಕ್ರಮವಂತಯೇ ನಡೆಯಿಸಬೇಕು. ತಾಲೂಕು ಬೋರ್ಡುಗಳು ರದ್ದಿಯಾದಾಗ ಅವುಗಳಿಂದ ಡಿ| ಬೋರ್ಡಿಗೆ ತಗೆದುಕೊಳ್ಳಲ್ಪಟ್ಟ ನೌಕರರಿಗೆ ಅವರವರ ಹಿಂದಿನ ಸಂಬಳಕ್ಕೆ ಬರ್ತಿಯಾಗುವಂತ ಪರ್ಸನಲ್ ಪೇ ಕೊಡಬೇಕು. ಬೋರ್ಡುಗಳ ಪೇದೆಗಳೇ ಮೊದಲಾದ ಕೆಳನೌಕರರಿಗೆ ಪ್ರೊವಿಡೆಂಟ್ ಫಂಡಿನ ವ್ಯವಸ್ಥೆಯನ್ನಾಗಲೀ ಪೋಸ್ಟಲ್ ಲೈಫ್ ಎಶ್ಯೂರನ್ಸ್ ಪತ್ರವನ್ನಾಗಲೀ ತೆಗೆಸಿಕೊಟ್ಟು ನಡೆಯಿಸಿಕೊಂಡು ಬರಬೇಕು. ಪ್ರಾಥಮಿಕ ವಿದ್ಯಾಭ್ಯಾಸ ಇಲಾಖೆಗೆ ಹಣವನ್ನೊದಗಿಸಿಕೊಟ್ಟು ಬಡ ಉಪಾಧ್ಯಾಯರ ಸಂಬಳದಲ್ಲಿ ಕಡಿತವಾಗದಂತೆ ಸರಕಾರವು ನೋಡಿಕೊಳ್ಳಬೇಕು. ಲೋಕಲ್ ಫಂಡ್ ಖಾತೆಯು ಪ್ರಾಂತಿಕ ವ್ಯಾಪ್ತಿಯುಳ್ಳದ್ದಾಗಿರುವಂತೆ ಪ್ರೊವಿನ್ಸಿಯಲೈಜೇಶನ್ ಮಾಡತಕ್ಕದ್ದು. ಜಿಲ್ಲಾ ಬೋರ್ಡಿನ ಕಾರ್ಯದರ್ಶಿಗಳನ್ನು ಪ್ರಾಂತೀಯ ಅಧಿಕಾರಿಗಳ ಪಟ್ಟಕ್ಕೇರಿಸಿ ಅವರನ್ನು ಬೋರ್ಡುಗಳ ಎಕ್ಸಿಕ್ಯೂಟಿವ್ ಅಧಿಕಾರಿಗಳನ್ನಾಗಿ ಮಾಡಬೇಕು. ಬೋರ್ಡು ನೌಕರರ ಈ ಪ್ರಾಂತಿಕ ಸಂಘವು ತನ್ನ ಕಾರ್ಯಕಲಾಪಗಳನ್ನು ನೌಕರರಿಗೆ ತಿಳಿಸಿ ವಿಚಾರ ವಿನಿಮಯಗಳನ್ನು ಮಾಡಲನುಕೂಲವಾಗುವಂತೆ ಒಂದು ಮಾಸಿಕವನ್ನೋ ತ್ರೈಮಾಸಿಕವನ್ನೋ ಹೊರಡಿಸುವುದುತ್ತಮ. ಪ್ರಾಂತ್ಯಕ್ಕೇನೇ ಒಂದು ಮ್ಯೂಚುವಲ್ ಬೆನಿಫಿಟ್ ಫಂಡನ್ನು ಸ್ಥಾಪಿಸುವ ಯೋಚನೆ ಮಾಡಿದರೆ ಒಳ್ಳೆತು. ಸರಕಾರವು ಗ್ರಾಮಾಂತರಗಳಲ್ಲಿ ಕೈಕೊಂಡಿರುವ ಜನಪದ ಉದ್ಧಾರದ ವಿಧಾಯಕ ಕಾರ್ಯಕ್ರಮಗಳಲ್ಲಿ ನಾವು ಪುನರಾರೆ ಸಹಾಯವನ್ನು ಮಾಡಬೇಕು. ಇವೆಲ್ಲ ವಿಷಯಗಳನ್ನು ಸಮರ್ಥಿಸುವ ಅಧ್ಯಕ್ಷ ಭಾಷಣವು ಮನನೀಯವಾಗಿತ್ತು.

WANTED

An Overseer to take charge of Halady Bridge works. Apply stating qualifications and minimum salary required.

B. M. Raghunatha Shetty,
Contractor,
Brahmavar, S. K.

ತ್ವರೆ ಮಾಡಿರಿ!   ತ್ವರೆ ಮಾಡಿರಿ!

ಗ್ರಾಮಫೋನ್ ಸಿಂಗರ್

ಎಂಬ

ಕನ್ನಡ, ಹಿಂದಿ, ಮರಾಠಿ ಭಾಷೆಯ ಗ್ರಾಮಫೋನ್ ಹಾಡುಗಳ ಮತ್ತು ಸಿನೇಮ ಹಾಡುಗಳ ಸಂಗೀತ ಪುಸ್ತಕವು ಬೇಗನೇ ಪ್ರಕಟವಾಗಲಿದೆ.

● **ಆಧುನಿಕ ರುಚಿಗೊಪ್ಪುವ ಸಂಗೀತ ಪುಸ್ತಕವಿದು.**

● **ಪ್ರತಿಯೊಬ್ಬರೂ ಓದಿ ಆನಂದಿಸತಕ್ಕ ಪುಸ್ತಕವಿದು.**

ನಿಮ್ಮ ಆರ್ಡರುಗಳನ್ನು ಇಂದೇ ಕೊಡಿರಿ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ೫೦ಕ್ಕಿಂತ ಹೆಚ್ಚು ಪ್ರತಿ ತೆಗೆದುಕೊಳ್ಳುವವರ ವಿಳಾಸವನ್ನು ಪುಸ್ತಕದಲ್ಲಿ ಮುದ್ರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ—

THE KANARA BOOKS & NEWS AGENCY,
Batatawala Mansion Lalbag,
BOMBAY 12

ರೂ. 1—8—0ಕ್ಕೆ 3 ವಾಚುಗಳು ಮತ್ತು 495 ಮನೋಹರ ವಸ್ತುಗಳು.



ನಮ್ಮ ರೂ. 1—8—0 ಕ್ರಯದ 16 ಸಣ್ಣ ಸೀಸೆ "ಒಟೋರೋಸ್"ನ್ನು ಕೊಂಡುಕೊಳ್ಳುವವರಿಗೆ ಒಂದು ಬಂಗಾರದ ಹಮ್ಮಿ ರಿಸ್ಟುವಾಚು, ಒಂದು ಪೌಡರ್ ಪೇಕೇಟ್ ಕ್ಲಿಪ್ಪಿನಿಂದ ಕೂಡಿದ ಒಂದು ಪೆನ್ಸಿಲ್, ಒಂದು ಸಿಗರೇಟ್ ಕೇಸು, ಒಂದು ಬೆಂಕಿ ಕಡ್ಡಿಯ ಕೇಸು, ಒಂದು ಸಿಗರೇಟುಲೈಟು, ಒಂದು ಕರವಸ್ತ್ರ ಒಂದು ಉಂಗುರ, ಕತ್ತರಿಯೊಂದು, ಸರಪಣಿಯುಕ್ತ ಚಾವಿ ಒಂದು, ಒಂದು ಪೆನ್ಸಿಲ್ ಸ್ಕ್ರೂ, 500 ಅಡಿ ದೂರಕ್ಕೆ ಬೆಳಗುವ ಒಂದು ಟೋರ್ಚ್ ಲೈಟ್, ಅಥವಾ ಹತ್ತು ವರ್ಷ ಗ್ಯಾರೆಂಟಿಯಿರುವ ಭದ್ರ ಮೆಶಿನರಿಯುಳ್ಳ ಗಡಿಯಾರ, ಒಂದು ಫೌಂಟೆನ್ ಪೇನು, ಬಹುಮಾನವಾಗಿ ಕೊಡಲಾಗುವುದು. ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು 14 ಅಣೆ ಹೆಚ್ಚಿಗೆ.

Oriental Fancy Stores, S. C. E. 90.
***Post Box. No. 12204*, CULCUTTA.**

ನೋಟೀಸು

ಉಡುಪಿ ತಾಲೂಕು ಹೆರ್ಗ ಗ್ರಾಮದ ಸೆಟ್ಟಿಬೆಟ್ಟನಲ್ಲಿರುವ ಬಡಗಬೆಟ್ಟು ರಾಮಯ್ಯ ಹೆಗ್ಡೆರವ ಸೆಟ್ಟಿಬೆಟ್ಟು ಲಕ್ಷ್ಮಿ ಹೆಗ್ಗಡ್ತಿರ ಮಗಳು ನೇತ್ರಾವತಿ ಹೆಗ್ಗಡ್ತಿಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ—

ನಮ್ಮ ಕುಟುಂಬದಲ್ಲಿ ಹಿರಿಯರಾಗಿ ಅಡಳ್ತೆ ವಹಿವಾಟುದಾರ್ತಿಯಾಗಿದ್ದ ನನ್ನ ತಾಯಿ ಲಕ್ಷ್ಮಿ ಹೆಗ್ಗಡ್ತಿರು ತಾ. 5-12-'38ರಲ್ಲು ಮೃತರಾದ ಲಾಗಾಯಿತು ಅವರ ಮಕ್ಕಳಲ್ಲಿ ಹಿರೇ ಮೆಂಬರಳಾದ ನಾನು ನಮ್ಮ ಕುಟುಂಬದ ಸಮಸ್ತ ಸ್ಥಿರ ಚರ ಸೊತ್ತುಗಳ ಸ್ವಾಧೀನಗಾರಳಾಗಿ ಕುಟುಂಬದ ಆಡಳ್ತೆ ವಗೈರೆ ನಡೆಸಿಕೊಂಡು ಬರುವುದಲ್ಲದೆ ಸದ್ರಿ ಮೃತರ ಉತ್ತರಕ್ರಿಯಾದಿಗಳನ್ನು ನಾನೇ ನಡಿಸುತ್ತೇನೆ. ಸದ್ರಿಯವರ ಪಟ್ಟೆಯ ಬಾಕಿ ಸಬ್ಡೀಲಿಗೆ ಕೂಡಾ ನಾನು ಅರ್ಜಿ ಕೊಟ್ಟಿರುತ್ತೇನೆ. ಅಳಿಯ ಸಂತಾನ ಕಾನೂನಿಗನುಸಾರವಾಗಿ ನನಗೆ ಬಂದಿರುವ ಸದ್ರಿ ಆಡಳ್ತೆಗೆ ತೊಂದರೆ ಕೊಡುವ ಉದ್ದೇಶ್ಯ ನನ್ನ ತಂಗಿ ಚಂದ್ರಭಾಗಿ ಹೆಗ್ಗಡ್ತಿಯು ಆಕೆಯ ಗಂಡ ಹಿರೇಬೆಟ್ಟು ಚಂದಯ್ಯ ಹೆಗ್ಡೆರ ದುರ್ಬೋಧನೆಯಿಂದಲೂ ಕುಟುಂಬದ ನೆಮ್ಮದಿಗೂ ವೃದ್ಧಿಗೂ ಹಾನಿತರುವ ದುರಾಲೋಚನೆಯಿಂದಲೂ ತಾನೇ ಯಜಮಾನ್ತಿಯೆಂಬುದಾಗಿ ಪ್ರಕಟಿಸಿರುವ ಸಂಗ್ತಿ ನನಗೆ ಈಗ ತಿಳಿದುಬಂದಿರುತ್ತದೆ. ಸದ್ರಿ ಚಂದ್ರಭಾಗಿ ಹೆಗ್ಗಡ್ತಿಗೆ ನಮ್ಮ ಕುಟುಂಬದ ಆಡಳ್ತೆಯಲ್ಲಿ ನನ್ನ ಜೀವಮಾನದ ವರೇಗೆ ಪ್ರವೇಶಿಸಲಿಕ್ಕೆ ಆಗ್ಲೀ ಯಾವ ತರದ ಅಧಿಕಾರವಿಲ್ಲ. ಅವಳು ಈಗ ಯಜಮಾನ್ತಿಯೂ ಅಲ್ಲ. ಅದ್ರಿಂದ ಅವಳ ವ ಅವಳ ಗಂಡನ ಆಧಾರವಿಲ್ಲದ ಹೇಳಿಕೆ ನಂಬಿ ಯಾರುಪ್ರು ನಮ್ಮ ಕುಟುಂಬಕ್ಕೆ ಬರತಕ್ಕ ಗೇಣಿ ವ ಇತರದೇಣಿಗೆಗಳನ್ನು ಕೊಟ್ಟರೆ ವ ಕುಟುಂಬದ ಪರವಾಗಿ ಅವರಿಂದ ಯಾವ ತರದ ರಿಕಾರ್ಡು ಮಾಡಿಸಿಕೊಂಡರೆ ಅದು ನನ್ನ ಆಡಳ್ತೆಗೆ ಒಳಪಟ್ಟ ಕುಟುಂಬದ ಯಾವತ್ತೂ ಸ್ಥಿರಚರ ಸೊತ್ತುಗಳ ಮೇಲುಗ್ಲೀ, ನನ್ನ ಮೇಲುಗ್ಲೀ ಸಂಭಾಗವಾರದೆಂತ ಈ ಮೂಲಕ ಪ್ರಕಟಿಸಿರುತ್ತೇನೆ. ನನ್ನ ಕುಟುಂಬದ ಕಡೆಯಿಂದ ನಾನು ಕೊಡುವ ರಶೀದಿಗಳಿಗೆ ವ ನನ್ನ ಹೆಸರಿನಲ್ಲಿ ಆಗತಕ್ಕ ಯಾವತ್ತೂ ರಿಕಾರ್ಡುಗಳಿಗೆ ನನ್ನ ದಸ್ಕತು ಮತ್ತು ಎಡಕ್ಕೆ ಹೆಬ್ಬೆಟ್ಟು ಮೊಹರು ವ ನನ್ನ ತಂದೆ ಬಡಗಬೆಟ್ಟು ರಾಮಯ್ಯ ಹೆಗ್ಡೇರ ಸಾಕ್ಷಿಯಿದ್ದರೇನೇ ಮಂಜೂರಲ್ಲದೆ ಅನ್ಯಥಾ ಸಂಭಾಗವಾರದೆಂತ ಸಹಾ ಈ ಮೂಲಕ ತಿಳಿಸುತ್ತೇನೆ.

● **ಈ ಎಡಕ್ಕೆ ಹೆಬ್ಬೆಟ್ಟಿನ ಗುರುತು ಮತ್ತು ಮೇಲಿನ ದಸ್ಕತು ನೇತ್ರ ಹೆಗ್ಗಡ್ತಿ ರುಜು.**

ರಾಮಯ್ಯ ಹೆಗಡೆ ಸಾಕ್ಷಿ.

"ಸರಸ್ವತಿ"

ಸರಸ್ವತಿಯ ಹದಿನೆಂಟನೆಯ ಸಂಪುಟವು ೧೯೩೯ನೆಯ ಜನವರಿ ತಿಂಗಳಿನಿಂದ ಪ್ರಾರಂಭವಾಗುವುದು. ಕನ್ನಡನಾಡಿನ ಸುಪ್ರಸಿದ್ಧರಾದ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟ ಕಥೆ ಕವಿತೆ ನಾಟಕಗಳಿಂದ ಮಹಿಳೆಯರಿಗತ್ಯುಪಯುಕ್ತವಾದ ಲೇಖನಗಳಿಂದ ಕೂಡಿದೆ. ಪ್ರತಿ ಸಂಚಿಕೆಗಳಲ್ಲಿಯೂ ಮಕ್ಕಳ ಪುಟಗಳಿವೆ. ಮಕ್ಕಳಿಗಾಗಿಯೇ "ಕನ್ನಡಿಗರ ಕಣಜ" ಎಂಬ ಗ್ರಂಥಮಾಲೆಯು ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ:— ೩—೬—೦ ಮಾತ್ರ.

ವಿಳಾಸ:— **ಸರಸ್ವತಿ ಕಾರ್ಯಾಲಯ,**
ಚಾಮರಾಜ ಪೇಟೆ, ಬೆಂಗಳೂರು ನಗರ.

ಎಲ್ಲಾ ತರದ

ಶುದ್ಧ ಖಾದಿ

ಮಂಗಳೂರು

ಸ್ವದೇಶಿ ಸ್ಟೋರ್ಸ್,

ರಥಬೀದಿ — — ಮಂಗಳೂರು.

ಅಖಿಲ ಭಾರತ ಚರಕಾ ಸಂಘದಿಂದ ಸರ್ಟಿಫೈ ಮಾಡಲ್ಪಟ್ಟಿದೆ.

ಗೃಹಿಣಿಯರಿಗಾಗಿ

ಸ್ತ್ರೀಪುರುಷರಲ್ಲಿ ನೈಸರ್ಗಿಕವಾಗಿ ವ್ಯತ್ಯಾಸ ಕಂಡುಬರುವುದು. ದೇಹ–ಮನಸ್ಸು ವಿಚಾರ, ಮತ್ತು ಸ್ವಭಾವದಲ್ಲಿ ಸ್ತ್ರೀಯರಿಗೂ, ಪುರುಷರಿಗೂ, ಭಿನ್ನತೆಯಿರುವುದು. ಈ ವ್ಯತ್ಯಾಸದಲ್ಲಿ ಉತ್ತಮವಾವುದು ಎಂಬ ಪ್ರಶ್ನೆಯಿಲ್ಲ

ಪುರುಷನು ಕಾರ್ಯ ಪ್ರವರ್ತಕನು, ಕಾರ್ಯನಿರ್ಮಾಣಕನು ಮತ್ತು ರಕ್ಷಣೆಯ ಭಾರವನ್ನು ಹೊರುವವನು, ಅವನ ಮನಸ್ಸು ಕಲ್ಪನೆ ಮತ್ತು ಶೋಧನೆಯಲ್ಲಿ ಓಡುವುದು; ಅವನ ಉತ್ಸಾಹವು ಹೋರಾಟ ಅಥವಾ ವಿಜಯದ ಕಡೆಗೆ ಹರಿದುಂಬಿಸುವುದು. ಆದರೆ ಸ್ತ್ರೀಯ ಜೀವನದಿಗಂತವು ಭಿನ್ನವಾದುದು. ಸ್ತ್ರೀಯು ಮಧುರವಾದ ವ್ಯವಸ್ಥೆ, ಸುಸೂತ್ರವಾದ ನಿಯಮ, ಮತ್ತು ಉತ್ತಮ ನಿಷ್ಪರ್ಷ-ಈ ವಿಷಯಗಳಲ್ಲಿ ಸ್ವಾಭಾವಿಕವಾಗಿ ಪ್ರಾಜ್ಞತೆಯುಳ್ಳವಳು. ವಸ್ತುಗಳ ಗುಣ, ಅವುಗಳ ವಿಶೇಷತೆ ಮತ್ತು ಅವುಗಳಿರಬೇಕಾದ ಸ್ಥಳ, ಇವುಗಳನ್ನವಳು ತಿಳಿದುಕೊಳ್ಳಬಲ್ಲಳು. ಅವಳು ವಿರೋಧಕ್ಕೆ ಮಂಗಲದಾಗದೆ, ವಿರೋಧವಿಚಾರವು ದೂರಸರಿಯುವಂತೆ ಮಾಡುವವಳು.

ಪುರುಷನು ತನ್ನ ವಾತಾವರಣದಲ್ಲಿ ಉನ್ನತಿಯನ್ನು ಬಯಸುವನು. ಧನವನ್ನೂ ಸಾಮರ್ಥ್ಯವನ್ನೂ ಗಳಿಸಲು, ಮುಂದಾಗುವನು. ಜನತೆಯ ಲಕ್ಷ್ಯವನ್ನು ತನ್ನ ಕಡೆಗೆ ತರುವಂತೆ ಉದ್ಯೋಗಿಸುವನು ಈ ರೀತಿಯಾಗಿ ಅವನು ವೈಭವದಿಂದ ವೈಭವದೆಡೆಗೆ ಓಡಾಡುವನು. ಇದು ಪುರುಷನ ಸ್ವಭಾವವು; ಸ್ತ್ರೀಯು ಪ್ರೇಮದ ಬಲದಿಂದ, ಪೋಷಿಸುವ ಧ್ಯೇಯದಿಂದ, ಅವನನ್ನು ಅನುಸರಿಸುವಳು, ಅವನ ವ್ಯಸನ, ಮತ್ತು ಕಷ್ಟಕಾಲದಲ್ಲಿ ಅವನನ್ನು ತನ್ನ ಚೇತನ, ಪ್ರೇಮಾಶ್ರುಧಾರೆ ಮತ್ತು ಸಹಾನುಭೂತಿ ಸಾಮರ್ಥ್ಯದಿಂದ ಸಮಾಧಾನ ಪಡಿಸುವಳು, ಸ್ಫೂರ್ತಿಗೊಳ್ಳುವಂತೆ ಮಾಡುವಳು.

ಮಾನವನು ವಿವಿಧ ಯೋಚನೆಯುಳ್ಳವನು. ಅವನ ಉದ್ಯೋಗವು ವಿಧವಿಧವಾದುದು ಆದರೆ ಸ್ತ್ರೀಯು ಉತ್ತೇಜಿತವಾದ ಆಕರ್ಷಿತ ಸ್ವಭಾವವುಳ್ಳವಳು ಅವಳ ನಿಜವಾದ ಕಾರ್ಯವು ಬಾಲಕರನ್ನು ಮಾತ್ರ ಶಿಕ್ಷಿತರನ್ನಾಗಿ ಮಾಡುವುದಲ್ಲದೆ, ಪುರುಷರನ್ನು ಉತ್ತಮ ಸುಧಾರಣೆಯ ದಾರಿಗೆ ತರುವುದಾಗಿದ ಭಾವೀ ಜನಾಂಗದ ಏಳಿಗೆಯ ಭಾರ ಮಾತ್ರವಲ್ಲದೆ ಅವಳ ಮುಂದಿರುವ ಸಮಾಜದ ಉನ್ನತಿಯ ಹೊಣೆಗಾರಿಕೆಯೂ ಸ್ತ್ರೀಯದ್ದಾಗಿದೆ. ಇಂಥಾ ಪವಿತ್ರ ಉದ್ದೇಶವು ಸಫಲ ಹೊಂದಲು ಸ್ತ್ರೀಯು ಉನ್ನತ ಪ್ರೇಮ, ಸ್ವಾರ್ಥತ್ಯಾಗ, ನಂಬಿಕೆ ಮತ್ತು ಪರಿಶುದ್ಧತೆಯ ಉಚ್ಚಶೀಲವನ್ನು ಗಳಿಸಬೇಕಾಗುವುದು. ಇಂಥಾ ಗುಣಗಳು ಪುಸ್ತಕ ಬರೆಯುವುದರಿಂದಾಗಲೀ, ಭಾಷಣದಿಂದಾಗಲೀ ಬರತಕ್ಕದ್ದಲ್ಲ. ಸ್ತ್ರೀಯು ತನ್ನ ಸ್ವಭಾವಜನ್ಯವಾದ ಕೋಮಲತೆ, ಮಧುರ ಸ್ವರ, ನೋಟ, ಇವುಗಳನ್ನು ವೃದ್ಧಿಗೊಳಿಸಿ, ಉಚ್ಚ ಶೀಲವನ್ನು ಮೂರ್ತಿಮತ್ತಾಗಿ ಮಾಡಿಕೊಳ್ಳುವುದರಿಂದ ಮಾತ್ರ ಇದು ಸಾಧ್ಯ.

ನಿಜವಾದ ಗೃಹಿಣಿಯು ಸುತ್ತಲೂ ಸುಖ, ಶಾಂತಿ, ಸತ್ಯವು ಮನೆಮಾಡಿಕೊಂಡಿರುವುದು. ಸ್ತ್ರೀಯು ಇಂಥಾ ಪರಿಸ್ಥಿತಿಗೆ ಬರಬೇಕಾದರೆ, ಅವಳಲ್ಲಿ ಅಸಾಮಾನ್ಯ

ಗೃಹಿಣಿಯರ ಗೃಹರಕ್ಷಣೆಯ ಮಹತ್ವ.

(ಇಂಗ್ಲಿಷ್ ಲೇಖನವೊಂದರ ಆಧಾರದಿಂದ.)

ಜನಾಂಗದ ಏಳಿಗೆಯು ಸ್ತ್ರೀಯನ್ನು ಹೊಂದಿಕೊಂಡಿರುವುದು ಬಾಲಕರನ್ನು ಸುಶಿಕ್ಷಿತರನ್ನಾಗಿ ಮಾಡುವ ಪುರುಷರನ್ನು ಸುಧಾರಣೆಯ ದಾರಿಯಲ್ಲಿ ನಡೆಸುವ ಪವಿತ್ರ ಕಾರ್ಯವು ಸ್ತ್ರೀಯದ್ದಾಗಿದೆ. ವಂಶದ ರಕ್ಷಣೆ, ಜನಾಂಗದ ಪಾವನತೆ. ದೇಶದ ಅಭ್ಯುದಯವು, ಮಾತೃತ್ವದ ಅಧೀನವಿರುವುದು.

ತಾಳ್ಮೆ, ನಿಷ್ಕಳಂಕ ಸ್ವಭಾವ ಮತ್ತು ಭ್ರಮೆಯಿರದ ಜಾಣ್ಮೆ ಆವಶ್ಯಕ.

ಸಮಾಜವೆಂಬುದು ಅನೇಕ ಕುಟುಂಬಗಳನ್ನೊಳಗೊಂಡದ್ದಾಗಿರುವುದು. ಸಮಾಜದ ಉನ್ನತಿಯೆಂದರೆ ಕುಟುಂಬಿಗಳನ್ನೊಳಗೊಂಡ ಗೃಹಗಳ ಸುಖ. ಆದುದರಿಂದ ಪುರುಷನು ಸಮಾಜವನ್ನು ಅಥವಾ ದೇಶವನ್ನು ರಕ್ಷಿಸುವ ಭಾರವನ್ನು ಹೊರುವವನಿದ್ದರೆ, ಗೃಹಿಣಿಯು ಗೃಹಕೃತ್ಯದ ಜವಾಬ್ದಾರಿಯನ್ನು ವಹಿಸುವವಳಾಗಿರುವಳು. ಕುಟುಂಬವನ್ನು ಯಥಾರ್ಥತೆಯಿಂದ ಉಚ್ಚ ಧ್ಯೇಯದಿಂದ, ನಂಬಿಕೆ ಮತ್ತು ಪ್ರೇಮಪೂರ್ವಕವಾಗಿ ನಡೆಸಿಕೊಂಡು ಬರುವ ಸ್ತ್ರೀಯ ಹೊಣೆಗಾರಿಕೆಯು ಪುರುಷನ ದೇಶದ ಆಳ್ವಿಕೆಗಿಂತಲೂ ಮಹತ್ವಕೆಯದ್ದಿದೆ. ಬಾಲಕರನ್ನು ಶಿಕ್ಷಿತರನ್ನಾಗಿ ಮಾಡುವಂತೆ, ಅವರು ತಾರುಣ್ಯದಲ್ಲಿ ತಪ್ಪು ಅಥೋಗತಿಗಿಳಿಯದಂತೆ ಗೃಹಿಣಿಯು ಎಚ್ಚರ ತೆಗೆದುಕೊಳ್ಳುವಳು. ತಕ್ಕ ಬೋಧೆಯನ್ನೀಯುವಳು. ಪುರುಷನು ನಿರಾಶೆಯಿಂದ ಹಾದಿತಪ್ಪಿ ಅವಾರದುಃಖಿತನಾಗಿ ದುರ್ಗತಿಗಿಳಿಯುವಾಗ ಸ್ತ್ರೀಯು ಅವನಿಗೆ ನೆರವಾಗಲೆಂದು ಅವನೆಡೆಗೆ ಧಾವಿಸುವಳು. ಅವನನ್ನು ದೇವಲೋಕದೆಡೆಗೆ ನಡೆಸುವಳು. ಅವನಿಗೆ ಇಹಪರಗಳ ನಿಜತ್ವವನ್ನು ಅರುಹುವಳು ಅವನ ಅಪರಾಧಕ್ಕಾಗಿ ಅವನನ್ನು ಎಚ್ಚರಿಸುತ್ತ ತಾರೆಯಿಂದ ತಾರೆಗೆ ನಡೆಸಿಕೊಂಡು ಹೋಗುವಳು

ಪ್ರೇಮ ಮತ್ತು ಭಕ್ತಿಯ ತಳಹದಿಯನ್ನು ಪರಿಕಿಸಿಕೊಂಡಿರದ ಸ್ತ್ರೀ ಜೀವನವು ತನ್ನ ಇಂದ್ರಿಯಗಳ ಭ್ರಮೆಗೊಳಪಡುವುದು. ಇಂದ್ರಿಯಮಯತ್ವದ ವೇಗವು ಅವಳ ಜೀವಿತವನ್ನು ನಿರರ್ಥಕ ಭ್ರಾಂತಿಗೆ ಒಳಪಡಿಸುವುದು ಹೀಗಾಗಿ ಅವಳ ಹೃದಯವು ಅಂಥಿಸತಕ್ಕ ಪವಿತ್ರ ವಸ್ತುವಿನ ಅಭಾವದಿಂದ ದುಃಖಹೊಂದುವುದು ಹೃದಯ ಶೂನ್ಯತೆಯನ್ನು ದೂರಗೊಳಿಸಲೆಂದು ಕೊನೆಗೆ ಅವಳು, ಸಾಹಿತ್ಯ, ವಿಜ್ಞಾನ, ಸುಧಾರಣೆ-ಎಂಬೀ ಮೊದಲಾದ ವಿಷಯಗಳನ್ನು ಹಿಂಬಾಲಿಸುವಳು ಹೀಗಾಗಿ ತಾನು ಮಾಡಲಾರದ ಕೆಲಸವನ್ನು ಬಯಸುವಳು ತನಗನರ್ಹವಾದ ಕಾರ್ಯಕ್ಕೆ ಮುಂದಾಗುವಳು ಅನಂತರ ತನ್ನ ಸ್ವಾತಂತ್ರ್ಯ ಸ್ವಾರ್ಥ ಬಯಕೆಗಾಗಿ ಹೋರಾಟ ನಡೆಸಬೇಕೆನ್ನುವಳು. ಪುರುಷನ ದಾರಿಯನ್ನು ಅನುಸರಿಸಲು ನೋಡುವಳು

ಆದರೆ, ಸರ್ವಸಾಮಾನ್ಯ ಸ್ತ್ರೀಯರು, ಸ್ತ್ರೀಯರ ಸ್ವಾಭಾವಿಕ ಗಾರಿಯನ್ನು ತೊರೆದುಬಿಡುವ-ಇಂಥಾ ಸ್ತ್ರೀಯರನ್ನು ಹಿಂಬಾಲಿಸಲಾರರು. ಸ್ತ್ರೀಯು ತನ್ನ ವಂಶೋದ್ಧಾರಕಳಾಗಿರುವಳು. ಅವಳ ಜೀವನವು ಮಾತೃತ್ವದಲ್ಲಿ ಕೇಂದ್ರೀಕರಿಸಿರುವುದು ಅವಳ ಸ್ವಭಾವವು ಪ್ರತ್ಯಕ್ಷ ವ, ಅಪ್ರತ್ಯಕ್ಷ ರೀತಿಯಿಂದ ಈ ಗುರಿಗೆನೇ ನಡೆಸುವುದು ಜನಾಂಗದ ಪಾವನತೆ, ಅಂತೆಯೇ ದೇಶದ ಉನ್ನತಿಯು, ಇವೆಲ್ಲಾ ಮಾತೆಯ ಶುದ್ಧತೆಯನ್ನನುಸರಿಸಿಕೊಂಡಿರುವುವು.

ಮೇಲಣ ವಿಚಾರದ ಸತ್ಯವನ್ನು ಹಿಂದಣ ಇತಿಹಾಸಗಳ ಆಧಾರದ ಮೇಲಿಂದಲೂ ಗ್ರಹಿಸಬಹುದು ಉನ್ನತಿ ಮತ್ತು ಅಭ್ಯುದಯದ ಕಾಲವೆಲ್ಲೆಲ್ಲಾ ಸ್ತ್ರೀಯರು ಪರಿಶುದ್ಧತೆ ಮತ್ತು ಪ್ರೇಮದಲ್ಲಿ ರಾಜಿಸುತ್ತಿದ್ದರೆಂದು ತಿಳಿಯುತ್ತದೆ; ಮಾತ್ರವಲ್ಲದೆ ಪತಿಯರು ತಮ್ಮ ಪತ್ನಿಯನ್ನೇ ಅತ್ಯಂತ ಪ್ರೇಮ ಗೌರವದಿಂದ ಕಾಣುತ್ತಿದ್ದರೆಂದು ತಿಳಿದುಬರುತ್ತದೆ. ಪ್ರಸಿದ್ಧ ಇಂಗ್ಲೀಷ ಕವಿ, ಶೇಕ್ಸ್‌ಪಿಯರನ-'ಸ್ತ್ರೀಯರನ್ನು ವಿಶ್ವಾಸಪೂರಿತ, ಭ್ರಮೆಗೊಳಪಡದ, ಬಹು ತಿಳುವಿನ ದೋಷರಹಿತ ನ್ಯಾಯಮಾರ್ಗದ ಉತ್ಕೃಷ್ಟ ಶುದ್ಧ ಆದರ್ಶವನ್ನೀಯುವ ಪವಿತ್ರತೆಯ ದಾರಿಗೆ ಮುನ್ನಡೆಸುವ-ಜೀವನದ ಹಕ್ಕಿಗಳೆಂದು ಕೊಂಡಾಡಿರುವನು.

ಬಾಲೀ ದ್ವೀಪದಲ್ಲಿ ಪ್ರಾಚೀನ ಹಿಂದೂ ವಂಶಜರು

ಬಾಲೀ ದ್ವೀಪವೆಂದರೆ ಜಾವಾ ಮಹಾದ್ವೀಪದ ಸಮೀಪವಿರುವ ಚಿಕ್ಕ ದ್ವೀಪ. ಜಾವಾದಲ್ಲಿ ಸುಮಾರು ಹದಿನಾರನೆಯ ಶತಮಾನದ ತನಕವಿದ್ದ ಹಿಂದೂ ರಾಜ್ಯವು ಮಹಮ್ಮದೀಯರ ಕೈವಶವಾದಾಗ ಅಲ್ಲಿದ್ದ ಹಿಂದೂ ಮಹಿಳೆಯರಲ್ಲಿ ಮತಾಂತರಹೊಂದಲು ಇಷ್ಟಪಡದವರು ಬಾಲೀ ದ್ವೀಪಕ್ಕೆ ಹೋಗಿ ನೆಲಸಿದರು. ಇವರ ಆಚಾರಗಳು ಈಗಲೂ ಪ್ರಾಚೀನ ಹಿಂದೂ ಕಟ್ಟುಕಟ್ಟಳೆಗಳಂತಿವೆ. 1903ನೆಯ ಇಸವಿಯವರೆಗೂ ಇವರಲ್ಲಿ ಜೀವಂತವಾಗಿ ಪತಿಯ ಚಿತೆಯನ್ನೇರುವ 'ಸತಿ' ಕ್ರಮವಿತ್ತು. ಅಂದಿನಿಂದ ಅಲ್ಲಿಯ ಡಚ್ಚ ಸರಕಾರವು ಅದನ್ನು ನಿಲ್ಲಿಸಿಯದೆ ನಮ್ಮ ಹಿಂದೂದೇಶಕ್ಕೆ ಬಹು ದೂರ ಪೂರ್ವಕ್ಕೆ ಸಮುದ್ರದಲ್ಲಿರುವ ದ್ವೀಪಾವಳಿಗಳಲ್ಲೆಲ್ಲ ಹಿಂದೂ ಶಿಲ್ಪಕಲೆಯ ದೇವಸ್ಥಾನಗಳೂ ಪ್ರತಿಮೆಗಳೂ ಪೌರಾಣಿಕ ವ್ಯಕ್ತಿಗಳ ಪೂಜಾರಾಧನೆಗಳ ಕುರುಹುಗಳೂ ಈಗಲೂ ಕಂಡುಬರುವುದನ್ನು ಕಂಡರೆ ಒಂದು ಕಾಲದಲ್ಲಿ ಹಿಂದೂದೇಶದ ವ್ಯಾಪ್ತಿಯೂ, ವರ್ಚಸ್ಸು ಎಷ್ಟು ವಿಶಾಲವಾಗಿತ್ತೆಂಬುದು ವ್ಯಕ್ತವಾಗುತ್ತದೆ.

NAVAYUGA

NOTICE

Since the circulation of our popular weekly Navayuga has markedly increased the following revised rates will come into force from 1-1-1939. All previous quotations stand cancelled from the said date.

Casual Advertisements:—

Re. 1/- (Rs one) per inch column per insertion.

Contract Advertisements:—

Rs. 0-8-0 (As eight) par inch columnper insertion.

Advt. Manager.

ನೂರಾರು ರಮ್ಯ ಚಿತ್ರ ! ಲಲಿತ ಮಾಸಪತ್ರ !!

ವಸಂತ

ಸಂಪಾದಕರು— ಡಿ. ಎಸ್. ಶಿ. ಕುಲಕರ್ಣಿ, ಎಂ. ಎ.

ಜಾನೇವರಿಯಿಂದ ಪ್ರಾರಂಭ !

ಬಿಡಿ ಪ್ರತಿ ಎರಡೇ ಆಣೆ.

ವಿಷಯಗಳು – ಶಿಕ್ಷಣ, ಕರ್ನಾಟಕ ಸಂಸ್ಕೃತಿ, ಲಲಿತಸಾಹಿತ್ಯ, ಕಲಾವಿಮರ್ಶೆ.

ಲೇಖಕರು— ಪ್ರೊ. ಜಾಗೀರದಾರ, ಗೋಕಾಕ, ಮುಗಳಿ, ಮಹಿಷಿ, ಶ್ರೀ. ಶಿವರಾಮ ಕಾರಂತ, ವಿ ಸೀತಾರಾಮಯ್ಯ, ರಂಗರಾವ ದಿವಾಕರ, ಬೇಂದ್ರೆ, ಅ. ನ. ಕೃಷ್ಣರಾಯ ಇತ್ಯಾದಿ

ವಸಂತ ಆಫೀಸ್, ಗದಗ.

ಚಲೋ ರಿಸ್ಟ್ ವಾಚಿಗೆ

ರೂಪಾಯಿ 1-15-0 ಮಾತ್ರ



ಸರಿಯಾದ ಸಮಯವನ್ನು ಸೂಚಿಸತಕ್ಕ ಅತ್ಯುಮದಾದ ರಿವರ ರಿಸ್ಟ್‌ವಾಚಿನ ಬೆಲೆ ಬರೇ ಯಾ ಬಾಚಿಕೆ ಆಕಾರವುಳ್ಳವುಗಳಿಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ ಉತ್ತಮ ಜಾತಿಗೆ ರೂ 2-8-0, ಆಕ್ಕುತ್ತ ಮದಕ್ಕೆ ರೂ 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕೈವಿ ಮಾದಿಗೆ ರೂ 4-8-0, ರೋಲ್ಡ್‌ಗೋಲ್ಡಿಗೆ ರೂ 6-8-0, ಚಿತ್ರದಲ್ಲಿ ತೋರುವಂತಹದಕ್ಕೆ ರೂ 8-8-0. ಅಂಚೆ ವೆಚ್ಚ 0-10-0 ಪ್ರತ್ಯೇಕ.

Empress Trading Co.,
P.O Box No. 6744. Calcutta(G)

ಭಾರತದ ಸ್ವಾತಂತ್ರ್ಯ ಸಮಸ್ಯೆ

(ಲೇಖಕರು—ಪಂಡಿತ ಜವಹರಲಾಲ್ ನೆಹರು.)
(ಅನುವಾದಕ—ಎಸ್. ಎಲ್. ಸುಬ್ರಹ್ಮಣ್ಯಂ, ಹರಿಹರ.)

ಜಗತ್ತಿಗೆಲ್ಲ ಒದಗಿದ್ದ ಯುದ್ಧಸಂಕಟವು ಎಲ್ಲರನ್ನೂ ಚಂಚಲರನ್ನಾಗಿ ಮಾಡಿ ದೆ. ಸೌಭಾಗ್ಯದಿಂದ ಯುದ್ಧವೇನೋ ನಿಂತಿತು ಆದರೇನು ಸರ್ವನಾಶವಂತೂ ಆಗಿಯೇ ಹೋಯಿತು. ಭವಿಷ್ಯವು ಯುದ್ಧದ ಭಯಕ್ಕಿಂತಲೂ ಹೆಚ್ಚು ಅಂಧಕಾರಮಯವಾಗಿದೆ.

ಯುರೋಪಿಗೆ ಪರೀಕ್ಷಾಕಾಲ ಒದಗಿದಾಗ, ವಾಸ್ತವಿಕ ಶಾಂತಿ ಮತ್ತು ಪ್ರಗತಿಯ ಸಮರ್ಥಕರಲ್ಲಿ ಸಾಕಷ್ಟು ಸ್ಥೈರ್ಯವಿರಲಿಲ್ಲವೆಂದು ಸ್ಪಷ್ಟವಾಯಿತು. ಅರ್ಥಾತ್ ಸಂಕಟವನ್ನು ಎದುರಿಸುವಷ್ಟು ದೃಢತೆಯು ಅವರಲ್ಲಿರಲಿಲ್ಲ. ತಮ್ಮದೇ ದೇಶವಾಸಿಗಳಿಂದ ಉಂಟಾದ ಹಾನಿಯು, ವಿದೇಶೀಯರಿಂದುಂಟಾದ ಹಾನಿಗಿಂತಲೂ ಅಧಿಕವಾಯಿತು.

ಏನೇ ಆಗಲಿ, ಯುರೋಪಿನಲ್ಲಿ ಫಾಸಿಜಂನ್ನು ಪ್ರಚಾರಮಾಡುವುದೇ ಅವರ ಉದ್ದೇಶವಾಗಿತ್ತು. ಆದರೆ ಅದಕ್ಕಾಗಿ ಇಡೀ ವಿಶ್ವದ ಸರ್ವನಾಶವಾಗಬೇಕಾಗಿದೆ. ಭಾರತೀಯರಾದ ನಾವು ಈ ಎಲ್ಲ ಘಟನೆಗಳನ್ನು ಬಹಳ ದುಃಖದಿಂದ ಪರಿಶೀಲಿಸುತ್ತಿರುವೆವು. ನಾವು ಶಾಂತಿ ಮತ್ತು ಸ್ವಾಧೀನತೆಯ ಸಮರ್ಥಕರು. ಈ ಕಾರಣದಿಂದ ಲೋಕತಂತ್ರದ ಪೂರ್ಣ ಆತ್ಮ ಸಮರ್ಪಣೆಯನ್ನು ನೋಡಿ ನಮಗೆ ಬಹಳ ಮನೋವೇದನೆಯಾಗುತ್ತದೆ. ಆದರೆ ಈ ಅವಮಾನ ಮತ್ತು ವಿಶ್ವಾಸಘಾತುಕತೆಯಲ್ಲಿ ಭಾರತೀಯರು ಯಾವ ಭಾಗವನ್ನೂ ವಹಿಸಲಿಲ್ಲವೆಂಬುದಷ್ಟೇ ಅವರಿಗಿರುವ ಸಮಾಧಾನ.

ಪೂರ್ವ ರಾಷ್ಟ್ರಗಳಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ಪ್ರಭಾವವು ತೀರ ಕಡಿಮೆಯಾಗುತ್ತಿದೆ. ಈ ದೇಶಗಳ ಪ್ರಗತಿಶೀಲ ಪಕ್ಷಗಳ ಪ್ರತಿಷ್ಠೆಯೂ ಸಹ ನಷ್ಟವಾಗಿ ಯಾರೂ ಅವರನ್ನು ನಂಬಲಾರದಷ್ಟು ಹೀನಸ್ಥಿತಿಗೆ ಇಳಿದಿದೆ. ಈ ಸಂಕಟ ಸಮಯದಲ್ಲಿ ಅವರು ಏನೂ ಮಾಡಲಾರದೆ ಹೋದರು. ಭಾರತವಂತೂ ಸಂಪೂರ್ಣ ಸಂಘಟಿತ ಶಕ್ತಿ ಮತ್ತು ಆತ್ಮ ಬಲಿದಾನದ ಮೂಲಕವೇ ಸ್ವರಾಜ್ಯವನ್ನು ಹೊಂದುವುದೆಂದು ಎಂದಿಗಿಂತ ಹೆಚ್ಚು ವಿಶ್ವಾಸವುಳ್ಳದಾಗಿದೆ.

ಭಾರತದ ಆತ್ಮ ನಿರ್ಭರತೆ

ಭಾರತವು ಈಗ ಹಿಂದಿನಂತೆ ದುರ್ಬಲವಾಗಿಲ್ಲ. ಆತ್ಮ ವಿಶ್ವಾಸವು ಹೆಚ್ಚುತ್ತಿದೆ ಇಷ್ಟೇ ಅಲ್ಲ, ಭಾರತವು ಇನ್ನೂ ಮುಂದೆ ಹೋಗಿದೆ—ಪರಿಣಾಮವೇನೇ ಆಗಲಿ, ನಾವು ನಮಗಿಂತ ಹೆಚ್ಚು ಶಾರೀರಿಕ ಬಲದ ಮುಂದೆ, ಎಂದಿಗೂ ಕೈಜೋಡಿಸಿ ಮಾತ್ರ ಬೇಡುವುದಿಲ್ಲ. ಇದೇ ಭಾರತದ ಇಂದಿನ ಭಾವನೆ. ಆದುದರಿಂದ ಸ್ವಾತಂತ್ರ್ಯ ಪ್ರಾಪ್ತಿಗಾಗಿ, ನಾವು ನಮ್ಮದೇ ಕಾಲುಗಳ ಮೇಲೆ ನಿಂತು ಕಾದಾಡಬೇಕು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಅದರಲ್ಲೂ ವಿಶೇಷತಃ ಮ್ಯೂನಿಚ್ ಘಟನೆಯ ನಂತರವೂ ಮತ್ತೂ ವೃದ್ಧಿಯಾಗುತ್ತಿರುವ ಫಾಸಿಜಂನ ಪ್ರಭಾವವನ್ನು ನೋಡಿದ ಮೇಲೂ ಸಂಕೀರ್ಣ ರಾಷ್ಟ್ರೀಯ ದೃಷ್ಟಿಕೋಣದಿಂದ ವಿಚಾರಮಾಡುವುದು ಕೇವಲ ಮೂರ್ಖತನ.

ಸ್ವಾಧೀನತೆಯು ಅವಿಭಾಜ್ಯ ವಸ್ತು, ಸ್ವಾತಂತ್ರ್ಯದಲ್ಲಿ ಒಡಕುಗಳಿರಲಾರವು. ಪ್ರಪಂಚದ ಕೆಲವು ಭಾಗಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ, ಲೋಕತಂತ್ರ್ಯವಿದ್ದೂ, ಮತ್ತೆ ಕೆಲವು ಕಡೆ ಅದರ ವಾಸನೆಯೇ ಇಲ್ಲದಿರುವುದು ಈಗಿನ ಕಾಲದಲ್ಲಿ ಸಂಭವವೇ ಇಲ್ಲ. ಇವೆರಡರ ಮಧ್ಯೆ ಘರ್ಷಣವಾಗಿಯೇ ತೀರಬೇಕು, ಏಕೆಂದರೆ ಫಾಸಿಜಂಗೆ ಸ್ವಾತಂತ್ರ್ಯದ ಹೆಸರೇ ಭಯಂಕರವಾಗಿ ತೋರುವುದು, ಅದರ ಅಸ್ತಿತ್ವವೇ ಒಂದು ಅಪರಾಧ. ಇದರಿಂದಲೇ ಅದು ಇತರ ದೇಶದ ನಾಶವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡಿರುವುದು!

ಈ ವಸ್ತುಸ್ಥಿತಿಯನ್ನು ನೋಡಿದರೆ ಎರಡೇ ಮಾರ್ಗಗಳು ತೋರುವುವು. ಫಾಸಿಜಂನ ಎದುರಿನಲ್ಲಿ ಆತ್ಮ ಸಮರ್ಪಣೆಯ ನೀತಿಯನ್ನನುಸರಿಸುವುದು ಒಂದು, ಅಥವಾ ಅದನ್ನು ಎದುರಿಸಿ ನಿಂತು ಅದರೊಡನೆ ಹೋರಾಡುವುದು. ಇವುಗಳ ಪೈಕಿ ಮೊದಲನೆಯ ನೀತಿಯನ್ನೇ ಈಗ ಬ್ರಿಟಿಷ ಸರಕಾರವು ಅನುಸರಿಸಿರುವುದು. ಅರ್ಥಾತ್ ಇದು ಬ್ರಿಟನ್ನಿನ ಆತ್ಮ ಸಮರ್ಪಣೆಯಲ್ಲ, ಏಕೆಂದರೆ ಅವರು ಫಾಸಿಜಂನ ಸಮರ್ಥಕರೇ ಆಗಿರುವರು. ಆದರೆ ಸ್ವಾತಂತ್ರ್ಯದ ಅಭಿಮಾನಿಗಳೂ ಸಹ ಈ ರೀತಿ ಹೇಗೆ ತಾನೇ ಮಾಡುವರು? ಖಂಡಿತವಾಡಲಾರರು.

ಸ್ಪೇನಿನ ಪ್ರಜಾತಂತ್ರದ ಘೋಷಣೆಯು ಎದುರಿಸುವುದೇ ವಿಜಯವೆಂದಿದೆ. ಈ ಘೋಷಣೆಯನ್ನು ಅವರು ಬಹಳ ಸ್ಫೂರ್ತಿಯಿಂದ ಕಾರ್ಯಾನ್ವಿತ ಮಾಡಿರುವರು. ಮರಣವೇ ಎದುರು ಬಂದರೂ ಸರಿಯೆ ಆತ್ಮ ಸಮರ್ಪಣೆಯನ್ನು ಮಾತ್ರ ಮಾಡಲಾರೆವು ಈ ಭಾವನೆಯಿಂದ ಫಾಸಿಜಂನೊಡನೆ ಹೋರಾಡಬೇಕು. ಕೊನೆವರೆಗೂ ನಮ್ಮ ಸ್ವಾಧೀನತೆ ಮತ್ತು ಸಿದ್ಧಾಂತಗಳಿಗಾಗಿ ಪೂರ್ಣ ದೃಢತೆಯಿಂದ ಹೋರಾಡಬೇಕು.

ನಿಜವಾಗಿ ಇಂಗ್ಲೆಂಡು ಲೋಕ ತಂತ್ರಕ್ಕಾಗಿ ಕಾದುವುದಾದಲ್ಲಿ ನಿಸ್ಸಂದೇಹವಾಗಿ ಸಮಗ್ರ ಜಗತ್ತಿನ ಸಹಾನುಭೂತಿ ಮತ್ತು ಸಹಾಯವು ಅದಕ್ಕೆ ದೊರೆತೇ ದೊರೆಯುವುದು ಆದರೆ ಇತರರನ್ನು ತಮ್ಮ ಅಧೀನರನ್ನಾಗಿ ಮಾಡಿಕೊಳ್ಳುವ ಉದ್ದೇಶದಿಂದ ಹೊಡೆದಾಡುವ ಸಾಮ್ರಾಜ್ಯವಾದಿ ಇಂಗ್ಲೆಂಡಿಗೆ ಯಾರು ತಾನೇ ಸಹಾನುಭೂತಿಯನ್ನು ತೋರಿಸಿಯಾರು?

ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ದೌರ್ಬಲ್ಯ

ಕಳೆದ ಸಂಕಟದಲ್ಲಿ ಇವೆರಡೂ, ಇವುಗಳ ಸಾಮ್ರಾಜ್ಯದ ದುರ್ಬಲತೆಯನ್ನು ತೋರಿಸಿದುವು. ಸಾಮ್ರಾಜ್ಯಶಾಹಿಯು ಯಾವಾಗಲೂ ಲೋಕ ತಂತ್ರಕ್ಕೆ ವಿರೋಧವೇ. ಅದು ಧೈರ್ಯದಿಂದ ಫಾಸಿಜಂನೊಡನೆ ಹೋರಾಡಲಾರದು. ಕಾರಣ ಮನಸ್ಸಿನಲ್ಲಿ ಫಾಸಿಜಂನೊಡನೆ ಸಹಾನುಭೂತಿ ಇರುವುದೇ? ಬ್ರಿಟನ್ನು ಮತ್ತು ಫ್ರಾನ್ಸ್‌ಗಳ ಸಾಮ್ರಾಜ್ಯವು ಶೀಘ್ರದಲ್ಲೇ ನಾಶಹೊಂದುವುವು ಅಷ್ಟೇ ಅಲ್ಲ, ಅವರ ಇದೇ ನೀತಿಯೇ ಮುಂದೂ ಅನುಸರಿಸಲ್ಪಟ್ಟರೆ, ಅವರು ವಿಶ್ವದ ದೃಷ್ಟಿಯಲ್ಲಿ ಬಹಳ ಅಗೌರವ ದೃಷ್ಟಿಯಿಂದಲೂ ಕಾಣಲ್ಪಡುವರು. ಅವರ ಸ್ಥಾನವು ಫಾಸಿಜಂನಿಂದ ಆಕ್ರಮಿಸಲ್ಪಡುವುದು.

ಸಾಮೂಹಿಕ ಸಂರಕ್ಷಣೆಯ ಉದ್ದೇಶವಾದರೂ ಏನು? ಭಿನ್ನ ಭಿನ್ನ ರಾಷ್ಟ್ರಗಳ ಹಿಂಸಾತ್ಮಕ ಆಕ್ರಮಣಗಳನ್ನು ವಿರೋಧಿಸುವುದೇ, ಆದರೆ ಸಾಮ್ರಾಜ್ಯವಾದದ ಆಧಾರದ ಮೇಲೆ ಅವಲಂಬಿತವಾಗಿರುವುದರಿಂದ ಈ ಸಾಮೂಹಿಕ ಸಂರಕ್ಷಣಾ ನೀತಿಯು ಸಫಲವಾಗಿಲ್ಲ, ಅಲ್ಲದೆ ಈ ನೀತಿಯು ಇರುವವರೆಗೆ ಸಫಲವಾಗುವಂತೆಯೂ ಇಲ್ಲ ಆದರೂ ಜಗತ್ತಿನಲ್ಲಿ ನ್ಯಾಯ ಮತ್ತು ಶಾಂತಿಯು ಚಿರಸ್ಥಾಯಿಯಾಗಿರಲು, ಈ ಸಾಮೂಹಿಕ ಸಂರಕ್ಷಣೆಯ ವ್ಯವಸ್ಥೆಯು ಅಗತ್ಯವು.

ಈಗಂತೂ, ನಾವು ನೋಡುತ್ತಿರುವಂತೆಯೇ ಹೊಸದೊಂದು ಯುರೋಪಿನ ನಿರ್ಮಾಣವಾಗುತ್ತಿದೆ. ನಾವು ಇದನ್ನರಿತು ಸಹ ಅದಕ್ಕನುಕೂಲವಾಗಿ ಹೊಂದಿಕೊಳ್ಳಬೇಕು. ಕಾಲಚಕ್ರವು ಬಹಳ ತೀವ್ರ ವೇಗದಿಂದ ಉರುಳುತ್ತಿದೆ. ನಾವು ನೋಡುತ್ತ ಬಂದಿರುವುದರಲ್ಲೇ ಅನೇಕ ಪರಿವರ್ತನೆಗಳಾಗುತ್ತಾ ಬಂದಿದೆ.

ಒಬ್ಬ ಭಾರತೀಯನ ದೃಷ್ಟಿಯಿಂದ ಭಾರತದ ಸಂಪೂರ್ಣ ಸ್ವಾತಂತ್ರ್ಯವನ್ನು ಹೃದಯಾಂತರಾಳದಿಂದ ಬಯಸುವೆನು. ನಾನು ಅದಕ್ಕಾಗಿ ಪ್ರಯತ್ನ ಪಡುತ್ತಲೂ ಇರುವೆನು.

ಆದರೆ ಎಂದಿಗಿಂತ ಇಂದು ಹೆಚ್ಚು ವಿಚಾರಣೀಯವಾದ ವಿಚಾರವೆಂದರೆ—ಅಂತರ್ರಾಷ್ಟ್ರೀಯ ದೃಷ್ಟಿಕೋಣದಿಂದ ನೋಡಿದರೂ, ಫಾಸಿಜಂನೊಡನೆ ಹೋರಾಡಬೇಕಾದರೂ, ಭಾರತವು ಸ್ವತಂತ್ರವಾಗುವುದು ಅನಿವಾರ್ಯವು. ಸ್ವಾಧೀನವೂ, ಲೋಕತಂತ್ರವೂ ಆದ ಭಾರತವೇ, ಜಗತ್ತಿನ ಇತರ ಭಾಗಗಳ ಲೋಕತಂತ್ರದ ಸಹಾಯಕ್ಕೆ ಸಿದ್ಧವಾಗಬಲ್ಲದು. ಸಾಮ್ರಾಜ್ಯಶಾಹಿಯ ಪಾದತಲದಲ್ಲಿ ತುಳಿಯಲ್ಪಟ್ಟಿರುವ, ಪರಾಧೀನ ಭಾರತವು ಜಗತ್ತಿನ ಲೋಕತಂತ್ರಕ್ಕೆ ಒಂದು ಹೊರೆಯಾಗಿದೆ. ಈ ಹೊರೆಯು ದಿನದಿನಕ್ಕೆ ವೃದ್ಧಿಯಾಗುತ್ತಿದೆ.

ಬ್ರಿಟಿಷರು ಪಾಲೆಸ್ಟೈನ್‌ನಲ್ಲಿ ತಮ್ಮಿಂದ ಉಂಟಾದ ಸಮಸ್ಯೆಗಳನ್ನು ಎದುರಿಸಬೇಕಾಗಿದೆ

ಬ್ರಿಟನ್ನಿಗೆ ಲೋಕತಂತ್ರದಲ್ಲಿ ವಿಶ್ವಾಸವಿರುವುದಾದರೆ ಅದಕ್ಕಿರುವುದು ಒಂದೇ ಒಂದು ಮಾರ್ಗ ಏನೆಂದರೆ—ಅದು ಸಾಮ್ರಾಜ್ಯದ ಮೋಹವನ್ನು ಬಿಟ್ಟು, ಅದಕ್ಕೆ ಬದಲಾಗಿ ಲೋಕತಂತ್ರವನ್ನು ಸ್ಥಾಪಿಸುವುದು. ಸ್ವಾಧೀನ ಭಾರತವು ನಿಸ್ಸಂಶಯವಾಗಿಯೂ ಜಗತ್ತಿನ ಫಾಸಿಜಂಗೆ ವಿರೋಧವಾಗಿ ಹೋರಾಡುವುದು.

ಕಟ್ಟಕಡೆಗೆ
ಲಕ್ಷಾಂತರ ಜನರು ಮನಗಂಡಿರುವ ವಿಷಯವಿದು. ಶೀತಲ ಉಲ್ಲಾಸಕರ ಮತ್ತು ಸಂಭ್ರಮದ ಸ್ನಾನಕ್ಕೆ
ಸ್ವಸ್ತಿಕ
'ಕಾಂತಿ'
ಟ್ಯೊಲೆಟ್ ಸೋಪಿನ ಹೊರತು ಇನ್ನೊಂದು ಉತ್ತಮವಿರಲಾರದು.
ಅಲ್ಪ ಬೆಲೆಗೆ ಅತಿ ದೊಡ್ಡ ತುಂಡು
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.
ಒಮ್ಮೆ ನೀವು ಸ್ವಸ್ತಿಕ ಕಾಂತಿ ಟ್ಯೊಲೆಟ್ ಸೋಪನ್ನು ಉಪಯೋಗಿಸಿದರೆ ಆ ಮೇಲೆ ಇತರ ಸೋಪನ್ನು ಮೆಚ್ಚಲಾರಿರಿ.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ವಿಶಿಷ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಗೆ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ 5—0—0

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ

ಆತಂಕನಿಗ್ರಹ ಫಾರ್ಮಸಿ, ೩೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ರಷ್ಯಾದ ಕ್ರಾಂತಿಕಾರರು

ಟಾಲ್‌ಸ್ಟಾಯ್‌ನಂತಹ ಮಹಾನುಭಾವನನ್ನು ಕ್ರಾಂತಿಕಾರರ ಶ್ರೇಣಿಯಲ್ಲಿ ಸೇರಿಸಬಾರದೆಂದು ಕೆಲವರ ವಾದ. ಅವನು ಶಾಂತಮೂರ್ತಿಯಾದರೂ ತೀಕ್ಷ್ಣ ಕ್ರಾಂತಿಕಾರನೆಂದು ಮತ್ತೆ ಕೆಲವರ ವಾದ. ಟಾಲ್‌ಸ್ಟಾಯಿಯಂತಹ ಶಾಂತ ಕ್ರಾಂತಿಕಾರರ ಚಳುವಳಿಯು ಕೇವಲ ರಾಜಕೀಯ ಪ್ರಪಂಚಕ್ಕೆ ಸಂಬಂಧಪಟ್ಟುದಲ್ಲ ಅವರ ಕ್ರಾಂತಿ ಪ್ರಭಾವದಿಂದ ರಾಷ್ಟ್ರದ ಮೂಲೆಯೆಲ್ಲವೂ ಎಚ್ಚತ್ತು ಗೊಂದಲವನ್ನು ಪ್ರಾರಂಭಮಾಡುವಂತಹದು. "ಯಾವ ವಿಷಯದಲ್ಲಿಯೂ ನನಗೆ ಹೆಚ್ಚಿಗೆ ತಿಳುವಳಿಕೆಯುಂಟಾಗದೆ, ವಿಶ್ವವಿದ್ಯಾಲಯದ ಪದವಿಯನ್ನು ಪಡೆದೆನು" ಎಂದು ಹೇಳಿಕೊಂಡ ಕರುಣ ಟಾಲ್‌ಸ್ಟಾಯ್ ಕೆಲವು ದಿವಸಗಳಲ್ಲಿಯೇ ತನ್ನ ಲೇಖನಿಯಿಂದ ಸರ್ವರನ್ನೂ ವಿಸ್ಮಯಗೊಳಿಸಿ ರಷ್ಯಾದಲ್ಲಿ ಹೊಸ ವಿಪ್ಲವದ ಬೀಜವನ್ನು ನೆಟ್ಟನು.

1862ರಲ್ಲಿ ಟಾಲ್‌ಸ್ಟಾಯಿಗೆ ಮದುವೆಯಾಯಿತು. ಈ ಸತಿಪತಿಗಳ ಕೂಡುವಿಕೆಯು ಅವರೀರ್ವರ ಸುಖದ ಮೇರೆಯನ್ನು ಮುಟ್ಟಿತ್ತು. ತನ್ನ ಪತ್ನಿಯ ಸಹಾಯದಿಂದ ಪ್ರಸಿದ್ಧ ಕಾದಂಬರಿಗಳನ್ನು ಬರೆಯುವುದಕ್ಕೆ ಮೊದಲುಮಾಡಿದನು. ಅವಳು ಇವನಿಗೆ ತಿದ್ದಿ ಶುದ್ಧ ಪ್ರತಿಗಳನ್ನು ಮಾಡಿಕೊಡುತ್ತಿದ್ದಳು. ಕೆಲವು ದಿವಸಗಳಲ್ಲಿ ಟಾಲ್‌ಸ್ಟಾಯಿಯ ಮನದಲ್ಲಿ ಪ್ರಚಂಡ ಬಿರುಗಾಳಿಯೆದ್ದಿತು. 'ನಮ್ಮ ಜೀವನದಲ್ಲಿ ಧನದಿಂದಾಗುವ ಪ್ರಯೋಜನವೇನು? ಕೀರ್ತಿಯಿಂದಾಗುವ ಲಾಭವೇನು? ಮಕ್ಕಳು ಮರಿಗಳಿಂದಾಗುವುದೇನು?' ಎಂಬ ಸಂಶಯಗಳು ಟಾಲ್‌ಸ್ಟಾಯಿಯ ಮನಸ್ಸಿನಲ್ಲಿ ಮೂಡಿದವು. ಇವುಗಳು ಒಂದಕ್ಕಿಂತ ಮತ್ತೊಂದು ಹೆಚ್ಚಿಗೆ ಹಿಂಸಿಸತೊಡಗಿದವು ಇದರ ತತ್ವವನ್ನು ತಿಳಿಯಲೋಸುಗ ಆತನು ಮಾಡಿದ ಶೋಧನೆಗಳು ಗಣನಾರ್ಹವಾದುವುಗಳು. ಮಾನವ ಜೀವನದ ಅರ್ಥವನ್ನು ವಿಚಾರಿಸುವ ಸಲುವಾಗಿ ಅನೇಕ ಮತಗ್ರಂಥಗಳನ್ನು ಪಠಿಸಿದನು. ವಿಧವಿಧವಾದ ಸಾಧನೆಗಳನ್ನು ಹುಡುಕತೊಡಗಿದನು. ತನ್ನ ರಚನೆಗಳಲ್ಲಿ ರಷ್ಯಾ ದೇಶದವರ ಜೀವನ ಚರಿತ್ರೆಗಳನ್ನೆಲ್ಲಾ ಬಣ್ಣಿಸಿದ್ದಾನೆ. ಈತನ ದರ್ಶನಶಕ್ತಿ, ಭಾವನಾಶಕ್ತಿ, ಕಲ್ಪನಾ ಸಾಮರ್ಥ್ಯಗಳಲ್ಲಿ ಯಾರೂ ಈತನನ್ನು ಮೀರಿಸುವಂತಿಲ್ಲ. ಈತನ ಕಲ್ಪನೆಗಳ ಕಡೆ ನೋಡುವುದಾದರೆ ಈತನು ತನ್ನ ಭೋಗ್ಯ ಭಾಗ್ಯಗಳನ್ನು ತ್ಯಜಿಸಿ ವಿರಕ್ತ ಜೀವನವನ್ನಾಶ್ರಯಿಸಿದ್ದನೆಂದು ಹೇಳಬಹುದು.

ಸಾವನ್ನು ಇತರರು ಹೇಗೆ ನೋಡುತ್ತಿದ್ದಾರೆಂಬುದನ್ನು ಪರೀಕ್ಷಿಸುವ ಚಪಲತನವು ಟಾಲ್‌ಸ್ಟಾಯಿಗೆ ಹುಟ್ಟಿ ವಿಧವಿಧ ಸಾಧನೆಗಳನ್ನು ಮಾಡಲಾರಂಭಿಸಿದನು. ಆದರೂ ಈತನಿಗೆ ಶಾಂತಿ ಸಿಗಲಿಲ್ಲ. ಹಾಗೆಯೇ ಯೋಚಿಸತೊಡಗಿದ 'ನಮ್ಮ ಜೀವನವು ಒಂದು ಕನಸು. ಮರಾಶಿಯನ್ನು ದೂರ ಮಾಡದ ಹೊರತು ಸೌಖ್ಯವಾಗುವುದಿಲ್ಲ. ಇವೆಲ್ಲವೂ ನಿಷ್ಫಲವಾದುದು' ಎಂದು ಹೇಳುವನು. ಜನರು, ಇವರು ತನ್ನವರು, ನಮ್ಮವರು ಎನ್ನುವರು. ಆದರೆ ಕೊನೆಗೆ ಎಲ್ಲರಿಗೂ ಮೃತ್ಯುವು ಸಿದ್ಧವಾಗಿದೆ ಇದಕ್ಕಾಗಿ ನಾವು ಈ ಕ್ಷಣಿಕ ಸುಖಗಳನ್ನೆಲ್ಲಾ ಬಾಚಿ ತಬ್ಬಲಾಗುವುದಿಲ್ಲ. ಯುವಕರೂ ಅಜ್ಞಾನಿಗಳೂ ಮೃತ್ಯುವನ್ನು ಲಕ್ಷ್ಯಕ್ಕೆ

ಲಿಯೋಟಾಲ್‌ಸ್ಟಾಯ್

(ಲೇಖಕರು—ಆರಾಧ್ಯ, ತುಮಕೂರು)

ಕಾರದೆ ಮಾಡಬಾರದ ಕೆಲಸವನ್ನು ಮಾಡುತ್ತಿರುವುದನ್ನು ನೋಡಿ ಟಾಲ್‌ಸ್ಟಾಯಿಯು ಬಹಳ ಕೊರಗುತ್ತಿದ್ದನು. ಆದರೆ ತಮ್ಮ ಜೀವನಯಾತ್ರೆಗಳನ್ನು ಸುಮುಖವಾಗಿ ಯಾರೂ ನಡೆಯಿಸುವುದಿಲ್ಲವೆಂದು ನಂಬಿದ್ದ. ಇವನು ಕೃಷೀವಲರು ಅನುಸರಿಸುತ್ತಿರುವ ಮತವನ್ನು ಕಂಡು ಬಹಳ ಹಿಗ್ಗಿದನು. ಮತವೆಂದರೆ ಸತ್ಯ ಮತವೆಂದರೆ ನಮ್ಮ ಆತ್ಮ ಸಾಕ್ಷಾತ್ಕಾರ. ವಿಶ್ವನಾಯಕನಾದ ಪರಮಾತ್ಮನ ಸತ್ಯ ಸ್ವರೂಪವನ್ನು ದರ್ಶನಮಾಡುವುದೇ ಮಾನವ ಜೀವನದ ಪರಮಾರ್ಥ. ಮತವೆಂದರೆ ಕೇವಲ ಆಚಾರ ಮಾತ್ರವಲ್ಲ. ಸಮಾಜದಲ್ಲಿ ಗೌರವವನ್ನು ಸಂಪಾದಿಸಲು ಮಾಡುವ ನಟನೆಯಲ್ಲ ಪ್ರತಿ ದಿನವೂ ನಾವು ಮಾಡುವ ಪಾಪದ ಪರಿಹಾರಕ್ಕಾಗಿ ಏರ್ಪಟ್ಟ ಶಾಂತಿಯಲ್ಲ. ಸುಮ್ಮನೆ ಕಾಲಹರಣಮಾಡದೆ ದೇವರಲ್ಲಿ ಭಕ್ತಿಯನ್ನಿರಿಸಿ ನಮ್ಮ ಕರ್ತವ್ಯವನ್ನು ಸಾಧಿಸಿಕೊಳ್ಳಬೇಕು ಇದೇ ಮಾನವ ಜನ್ಮದಲ್ಲಿ ಮಾಡಬೇಕಾದ ಕರ್ತವ್ಯ ಎಂಬುದನ್ನು ಕೃಷೀವಲರು ಚೆನ್ನಾಗಿ ಅರಿತವರೆಂದು ಟಾಲ್‌ಸ್ಟಾಯಿಯು ಕಂಡುಕೊಂಡನು.

ಆಗರ್ಭ ಶ್ರೀಮಂತನಾಗಿ ಜನಿಸಿದರೂ ರಷ್ಯಾ ದೇಶೀಯರಲ್ಲಿ ಎದೆಯ ಕೆಚ್ಚನ್ನೂ, ಸೋದರಭಾವನೆಯನ್ನೂ ಬೆಳೆಸಲು ಹೆಣಗಿದವರಲ್ಲಿ ಟಾಲ್‌ಸ್ಟಾಯಿಯು ಅಗ್ರಗಣ್ಯ. ಆತನಿಗೆ ಬೇಕಾದಷ್ಟು ಸಂಪತ್ತಿದ್ದಿತು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಭೂಮಿಗೆ ಈತನೇ ಯಜಮಾನನು. ಆದರೆ ಇವನಿಗೆ ಅದರಲ್ಲಿ ಸುಖವು ಕಂಡುಬರಲಿಲ್ಲ. ಅವನು ಆಲೋಚನಾಪರ. ಮೊದಲಿನಿಂದಲೂ ಇವನಲ್ಲಿ ಒಂದಲ್ಲ ಒಂದು ಬಗೆಯ ಅಂತಃಕಲಹವು ನಡೆಯುತ್ತಲೇ ಇತ್ತು. ಬುದ್ಧಿಯು ತೀಕ್ಷ್ಣವಾದರೂ ಮಿಥ್ಯಾಪ್ರಪಂಚದ ಮೇಲೆ ಆಶೆ ಇರಲಿಲ್ಲ. ಟಾಲ್‌ಸ್ಟಾಯಿಯು ಬರೀ ಮಾತಿನ ಮಲ್ಲನಲ್ಲ. ತಾನು ಆಡಿದ್ದನ್ನು ಮಾಡಿತೋರಿಸುವ ಕರ್ಮಯೋಗಿ

ರೈತರ ಜೀವನದ ಪಥದಲ್ಲಿ ನಂಬಿಕೆ ಹುಟ್ಟಿ ತಾನು ಕೂಡ ತನ್ನ ಹಿಂದಿನ ಆಡಂಬರಗಳನ್ನೆಲ್ಲಾ ಬಿಟ್ಟು ರೈತರಂತೆ ಕಷ್ಟಪಟ್ಟು ದುಡಿಯಲು ಮೊದಲುಮಾಡಿದನು. ನಿತ್ಯವೂ ತಪ್ಪದೆ ದೇವರ ಪ್ರಾರ್ಥನೆ ಇತ್ಯಾದಿ ಕಾರ್ಯಗಳನ್ನು ಮಾಡುವುದಕ್ಕೆ ಮೊದಲುಮಾಡಿದನು. ಪ್ರಾಣಿಗಳಲ್ಲಿ ಬಹಳ ದಯಾಪರನಾಗಿದ್ದನು. ಮಾಂಸ ಭಕ್ಷಕನಾಗಿದ್ದವನು ಎಲ್ಲವನ್ನೂ ತ್ಯಜಿಸಿ ಕಾಯಿಪಲ್ಯಗಳ ಆಹಾರಕ್ಕೆ ನಿಂತನು. ಇವನು ಜನ್ಮತಃ ಕ್ರೈಸ್ತ ಮತದವನು. ಈ ಕ್ರೈಸ್ತಮತ ಗ್ರಂಥಗಳನ್ನು ಪಠಿಸಿ ಅದರಲ್ಲಿರುವ ಕುಂದುಕೊರತೆಗಳನ್ನು ತೆಗೆದುಹಾಕಬೇಕೆಂಬ ಕುತೂಹಲದಿಂದ ಅನೇಕ ಗ್ರಂಥಗಳನ್ನು ಆಮೂಲಾಗ್ರವಾಗಿ ಓದಿದನು. ಅದರಲ್ಲಿರುವ ಕಲ್ಮಷಗಳನ್ನು ನೋಡಿ ತನ್ನ ಸ್ವಂತ ಅನುಭವದ ಆಧಾರದಿಂದ ನೂತನ ಕ್ರಮವೊಂದನ್ನು ಕಂಡುಹಿಡಿದನು ಇದರಿಂದ ಇವನಿಗೆ ಸಮಾಜ ಬಹಿಷ್ಕಾರವೂ ಆಯಿತು. ಆದರೂ ಟಾಲ್‌ಸ್ಟಾಯಿಯು ಹಿಂದೆಗೆಯಲಿಲ್ಲ ಅವನು ಈ ವಿಷಯದಲ್ಲಿ ಹೇಳುತ್ತಿದ್ದುದು ಇಷ್ಟೆ! "ಧಾರ್ಮಿಕ ಜೀವನವನ್ನು ನಡೆಯಿಸಲು ನಾನು ಪ್ರಯತ್ನಮಾಡಿದಾಗ ನನ್ನ ಬಂಧುಗಳೂ, ಪ್ರಿಯ ಸ್ನೇಹಿತರೂ ನನ್ನನ್ನು ನೋಡಿ ಹಾಸ್ಯ ಮಾಡಿ ನಕ್ಕರು ತಮ್ಮ ಮಾರ್ಗಕ್ಕೆ ನನ್ನನ್ನು ಸೆಳೆಯಲು ಪ್ರಯತ್ನಪಟ್ಟರು. ಪ್ರಾಪಂಚಿಕ ಸುಖವೇ ಅತ್ಯುತ್ತಮವಾದ ಸುಖವೆಂದು ಅವರ ವಾದ ನನ್ನ ಅನುಭವದಲ್ಲಿ ಪ್ರಾಪಂಚಿಕ ಸುಖವು ಸುಖವಲ್ಲ. ದುಃಖವು ದುಃಖವಲ್ಲ. ಯಾರ ಅಂತರಾತ್ಮವು ಅವರು ಮಾಡುತ್ತಿರುವ ಕಾರ್ಯವನ್ನು ಒಪ್ಪುತ್ತದೆಯೋ ಅವರಿಗೆ ಶಾಂತಿದೊರೆಯುವುದು. ಯಾರ ಅಂತರಾತ್ಮವು ಅವರ ಕಾರ್ಯವನ್ನು ಒಪ್ಪುವುದಿಲ್ಲವೋ ಅವರಿಗೆ

ಶ್ರೀಮಂತ ಬಡವರೆಂಬ ಭೇದವೇಕೆ? ಯಜಮಾನ, ಜವಾನರೆಂಬ ವ್ಯತ್ಯಾಸವೇಕೆ? ಒಬ್ಬನಿಗಾಗಿ ಇನ್ನೊಬ್ಬನು ದುಡಿಯಲೇಕೆ? ಸರ್ವರೂ ಒಂದೇ ಸ್ಥಾನದಲ್ಲಿದ್ದರೆ ಮೇಲು-ಕೀಳುಗಳಾಗುತ್ತವೆಯೆ? ಎಂದು ಸೋವಿಯಟ್ ತತ್ವದ ಮೂಲಾಕ್ಷರವನ್ನು ಬಿತ್ತಿದವನೇ ಟಾಲ್‌ಸ್ಟಾಯ್.

ಶಾಂತಿದೊರೆಯುವುದಿಲ್ಲ. ಈ ಪ್ರಾಪಂಚಿಕ ಸುಖವು ಅವರಿಗೆ ಯಥಾರ್ಥ ಶಾಂತಿಯನ್ನು ಕೊಡಲಾರದು" ಎಂಬುದೇ ಇವನ ವಾದ.

ದಿನೇ ದಿನೇ ಟಾಲ್‌ಸ್ಟಾಯಿಯ ಚಳುವಳಿಯು ಪ್ರಬಲವಾಗುತ್ತಾ ಬಂದಿತು. ಅವನು ತನ್ನ ಗುಲಾಮರಿಗೆಲ್ಲಾ ಸ್ವಾತಂತ್ರ್ಯವನ್ನು ಕೊಟ್ಟು ಅವರನ್ನು ಬಂಧವಿಮುಕ್ತರನ್ನಾಗಿ ಮಾಡಿದನು ತಲಾಂತರಗಳಿಂದ ಬಂದಿದ್ದ ದಾಸ್ಯವನ್ನು ವಿರೋಧಿಸಿ ಬುಡಮುಟ್ಟ ಕಿತ್ತೊಗೆಯಲು ಟೊಂಕಕಟ್ಟಿ ನಿಂತನು 1891ರಲ್ಲಿ ರಷ್ಯದ ಚಕ್ರವರ್ತಿಯು ಗುಲಾಮಗಿರಿಯನ್ನು ಹೋಗಲಾಡಿಸಿ ಅವರಿಗೆಲ್ಲಾ ಸ್ವಾತಂತ್ರ್ಯವನ್ನು ಕೂಡ ಮಾಡಬೇಕೆಂದು ರಾಜಾಜ್ಞೆಯನ್ನು ಹೊರಡಿಸುವಂತೆ ಮಾಡಿದವನು ಟಾಲ್‌ಸ್ಟಾಯಿಯೇ. ಹಿಂದಿನ ಬಂಧನದಿಂದ ಬಿಡಿಸಲ್ಪಟ್ಟ ಈ ಬಡವರ ಗುಂಪು ಬೇರೆಯ ರೀತಿಯಲ್ಲಿ ದಾಸ್ಯಕ್ಕೆ ಕೈ ಚಾಚುವರೆಂದು ತಿಳಿದು ಅವರಿಗೆ ವ್ಯವಸಾಯ ಮಾಡಿಕೊಂಡಿರಲು ಪುಕ್ಕಟೆ ಭೂಮಿಯನ್ನು ಕೊಡಿಸಿದ್ದನು. ಟಾಲ್‌ಸ್ಟಾಯಿಯು ಮೊದಲಿನಿಂದಲೂ ಸಿರಿತನದಲ್ಲಿ ಬೆಳೆದವನಾದುದರಿಂದ ತನ್ನ ಕೆಲಸವನ್ನು ಮಾಡಿಕೊಡಲು ಗುಲಾಮರನ್ನು ಇಟ್ಟುಕೊಂಡಿದ್ದನು. ಆದರೆ ಆತನು ಎಂದು ಸರ್ವ ಸಮತಾವಾದವನ್ನು ಪ್ರಚಾರ ಮಾಡಲು ಹೊರಟನೋ ಅಂದೇ ತನ್ನಲ್ಲಿದ್ದ ಸೇವಕರನ್ನೆಲ್ಲಾ ಬಿಟ್ಟು ತನ್ನ ಕೆಲಸಗಳನ್ನು ತಾನೇ ಮಾಡತೊಡಗಿದನು. ತನ್ನ ಜೋಡನ್ನು ತಾನೇ ಹೊಲಿದುಕೊಳ್ಳುವುದು, ತನ್ನ ಬಟ್ಟೆಗಳನ್ನು ತಾನೇ ಒಗೆದುಕೊಳ್ಳುವುದು ಮುಂತಾದ ಕೆಲಸಗಳನ್ನು ಮಾಡಿಕೊಳ್ಳಲು ಪ್ರಾರಂಭ ಮಾಡಿದನು.

'ಒಂದು ಕಡೆಯಲ್ಲಿ ಶ್ರೀಮಂತರ, ಇನ್ನೊಂದೆಡೆಯಲ್ಲಿ ಬಡವರ, ಒಂದೆಡೆಯಲ್ಲಿ ಯಜಮಾನರು, ಇನ್ನೊಂದೆಡೆಯಲ್ಲಿ ಜವಾನರು, ಒಂದು ಕಡೆ ಮೆರೆಯುವರು ಇಂದು ತೇಗುತ್ತಿದ್ದವರ ದೃಶ್ಯ, ಇನ್ನೊಂದೆಡೆಯಲ್ಲಿ ಹೊಟ್ಟೆಗಿಲ್ಲದೆ ಬಳಲುತ್ತಿದ್ದವರ ನೋಟ. ಒಂದೆಡೆಯಲ್ಲಿ ಮತ್ತೆ ಉಲ್ಲಾಸ ಬಟ್ಟೆಯ ಮೆರವಣಿಗೆ, ಇನ್ನೊಂದೆಡೆಯಲ್ಲಿ ಹೊದೆಯಲು ಬಟ್ಟೆಯಿಲ್ಲದೆ ಚಳಿ, ಗಾಳಿಗಳಲ್ಲಿ ಬಳಲುತ್ತಿದ್ದವರ ಮನಕರಗುವ ದೃಶ್ಯ.... ಏಕೆ ಈ ವ್ಯತ್ಯಾಸ? ಎಂದೆನಿಸಿತು ಟಾಲ್‌ಸ್ಟಾಯಿಗೆ. ನಮಗಾಗಿ ಇನ್ನೊಬ್ಬರೇಕೆ ದುಡಿಯಬೇಕು. ನಮಗಾಗಿ ಇನ್ನೊಬ್ಬರೇಕೆ ಶ್ರಮಪಡಬೇಕು, ನಮ್ಮಿಂದ ಇನ್ನೊಬ್ಬರೇಕೆ ಮರುಗಿ ಕೊರಗಬೇಕು, ಸರ್ವರೂ ಒಂದೇ ಸ್ಥಾನದಲ್ಲಿದ್ದರೆ ಇಂತಹ ಮೇಲು ಕೀಳುಗಳು ಉಂಟಾಗುತ್ತವೆಯೇ ಎಂದು ಆಲೋಚನೆ ಮಾಡತೊಡಗಿದನು. ಇದನ್ನೇ ಅವನು ಕೂಗಿ ಸಾರಿ ಹೇಳಿದುದು ಇದೇ ಸೋವಿಯಟ್ ತತ್ವದ ತಿರುಳು,

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD 1906
CANARA BANK
LIMITED

ಅಂದು ಅವನು ಹಾಕಿದ ಬೀಜವು ಮೊಳೆತು ಸಸಿಯಾಗಲು ಪ್ರಾರಂಭಿಸಿತು. ಅದರ ಬಾಲ್ಯಾವಸ್ಥೆಯನ್ನು ನೋಡಲು ಅವನಿಗೆ ಅವಕಾಶ ಸಿಕ್ಕಿತೇ ಹೊರತು, ಇಂದು ಅದು ಫಲ ಬಿಟ್ಟಿರುವುದನ್ನು ನೋಡುವ ಅದೃಷ್ಟ ಅವನಿಗೆ ಇಲ್ಲದೆ ಹೋಯಿತು. ಟಾಲ್‌ಸ್ಟಾಯಿಯು ದಂಗೆಯನ್ನೇಳಿಸಲಿಲ್ಲ. ಕಿರೀಟಗಳನ್ನು ಕೆಳಗುರುಳಿಸಲಿಲ್ಲ. ಆದರೂ ಅವನು ಬರೆದ ಉಗ್ರವಾದ ಲೇಖನಗಳು ಮುಂದೆ ನಡೆದ ಘೋರ ಕ್ರಾಂತಿಗೆ ಬಹುವಾಗಿ ಸಹಾಯ ಮಾಡಿದುವು. "ನಾಗರೀಕತೆಯೇ ಸರ್ವಸಮತಾತತ್ವಕ್ಕೆ ದೊಡ್ಡ ಅಡಚಣೆ. ಸರಕಾರವೇ ಈ ಉಚ್ಚ ನೀಚ ಭಾವಗಳಿಗೆ ಕಾರಣ"ವೆಂದು ಅವನ ಮತ. ಹೀಗವನು ಅಭಿಪ್ರಾಯ ಪಟ್ಟು ಸುಮ್ಮನಾಗಲಿಲ್ಲ ತನಗೆ ತೋರಿದ್ದೆಲ್ಲವನ್ನೂ ಬಚ್ಚಿಡದೆ ಮುದ್ರಿಸಿ ಪ್ರಚುರಗೊಳಿಸಿದನು. ಸಂಸಾರಕ್ಕೆ ವಿರೋಧ ಪ್ರೇರೇಪಿತವಾದ ಇವನ ಲೇಖನಗಳನ್ನೂ, ಪುಸ್ತಕಗಳನ್ನೂ ಓದಿದವರು ಎಚ್ಚೆತ್ತುಕೊಂಡರು.

ರಷ್ಯದಲ್ಲಿಯಲ್ಲದೆ ಬೇರೆ ಕಡೆಗಳಲ್ಲಿಯೂ ಇವನ ಭಾವನೆಗೆ ಮನ್ನಣೆ ದೊರಕಿತು. ಜನರಿಗೆ ಸರಕಾರದಲ್ಲಿದ್ದ ಹೆದರಿಕೆ, ಗೌರವಗಳು ಇವನ ಲೇಖನಗಳನ್ನು ಓದಿದ ಮೇಲೆ ಅಳಿಯಿತು. ಜನರಲ್ಲಿ ಹೊಸ ಹುರುಪೊಂದು ಹುಟ್ಟಿ ರಶ್ಯದಲ್ಲಿ ಜನಜಾಗೃತಿಯುಂಟಾಯಿತು. ಜನಸಾಮಾನ್ಯಕ್ಕೆ ತಮ್ಮ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಹೆಚ್ಚು ಅರಿವುಂಟಾಯಿತು ತಮ್ಮ ಮೇಲೆ ಸಂಪತ್ತೂ ಸರ್ಕಾರವೂ ನಡೆಯಿಸುತ್ತಿರುವ ದಬ್ಬಾಳಿಕೆಯನ್ನು ಕಂಡು ಖಂಡಿಸಲನುವಾದರು. ಅಲ್ಲಿಂದೀಚೆಗೆ ಕ್ರಾಂತಿಯ ಸಸಿಯ ಬೆಳವಣಿಗೆಯು ರಭಸದಿಂದ ಮೊದಲಾಯಿತು.

ಪ್ರಚಂಡರೂ, ಪ್ರಬಲರೂ ಆದ ಬಲ್ಲಿಗರ ಬಲೆಗೆ ಸಿಕ್ಕಿ ವಿದ್ಯೆ ಸ್ವಾತಂತ್ರ್ಯಗಳ ಬೆಳಕನ್ನು ಕಾಣದೆ ಇದ್ದವರಿಗೂ, ಮೂಢತೆ ಮತ್ತು ದಾಸ್ಯತೆಗಳ ಕತ್ತಲಲ್ಲಿ ಬಿದ್ದು ಬಾಹ್ಯ ಪ್ರಪಂಚವನ್ನು ಸಹ ಅರಿಯದಿದ್ದವರಿಗೂ ಸಹ ಜ್ಞಾನದ ಬೆಳಕನ್ನು ತೋರಿ ಅವರನ್ನು ದಾಸ್ಯದ ಬಂಧನದಿಂದ ಬಿಡಿಸಿದವನು ಟಾಲ ಸ್ಟಾಯ್ ಇಂದಿನ ಸೋವಿಯಟ್ ರಾಜ್ಯಾಂಗ ಪದ್ಧತಿಯನ್ನು ಸುಸೂತ್ರವಾಗಿ ನಡೆಯಿಸಲು ತಕ್ಕ ಸಾಮರ್ಥ್ಯವನ್ನು ಪಡೆಯುವಂತೆ ಮಾಡಿ ವಿಶ್ವವೇ ಇಂದು ರಷ್ಯದ ಕಡೆ ತಿರುಗಿ ನೋಡುವಂತೆ ಮಾಡಿದ ಮಹಾವ್ಯಕ್ತಿ ಇವನು.

ಬರುವ ವಾರ—

ವಾಲ್ಡಿಮಿರ್ ಲೆನಿನ್

ಪ್ರೇರಣೆ

ಅಂತರಾತ್ಮನ ಮುಗುಳು ಅರಳಲು
ಜ್ಞಾನ ಸೂರ್ಯನ ಪ್ರೇರಣೆ
ಮುಗುಳು ಮುಚ್ಚದ ತೆರೆದೊಳಿರುವುದು
ಬುದ್ಧಿಗೊಂಡದು ಸಾಧನೆ ॥೧॥
ಮನದ ಸಲಿಲವು ಶಾಂತಿ ಪಡೆಯಲು
ಕುಸುಸು ಮುಸಕದು ಕೆಸರಿನಿಂ
ಕರಣವೆಂಬವ ಬೇರು ಸಡಿಲದ
ತೆರದೊಳಿರುವುದು ಪಸುರಿನಿಂ ॥೨॥
ಕಾಂಡ ದೇಹವು ರಾಮಣೀಯವು,
ಅರಳಿ ಮೆರೆವುದು ಕುಸುಮವೂ
ಮರಳಿ ಮುಚ್ಚದು ಪ್ರತಿಭೆ! ಜಗವನು
ಬೀರಿ ಶೋಭೆಯ ಪಡೆವುದೂ.

ಯನ್. ಸಂಜೀವ ಶೆಟ್ಟಿ,

ನಿಂಜೂರು.

ಕುಂದಾಪುರದ ಪರಿಷತ್ತುಗಳು!
ಪುರಜನರ ಅಭೂತಪೂರ್ವ ಉತ್ಸಾಹ!

ಕುಂದಾಪುರ ಕರ್ನಾಟಕ ಸಾಹಿತ್ಯಸಂಘದ ವಸಂತ ಮಹೋತ್ಸವವು ತಾ. ೧೬ರಲ್ಲಿ ಪ್ರಾರಂಭವಾಯಿತು. ಅಂತ್ಯಸುಧಾರಿತ ಯಕ್ಷಗಾನ ಸಭೆಯು ಜರಗಿತು. ಸುಪ್ರಸಿದ್ಧ ಅರ್ಥಗಾರರು ಭಾಗವಹಿಸಿದರು. ತಾ. ೧೮ನೇ ಸಂಜೆ ಕುಂದಾಪುರ ಕ್ಲಬ್ಬಿನಲ್ಲಿ ಮಂಗಳೂರಿನ ಸುಪ್ರಸಿದ್ಧ ವಕೀಲರೂ ರಾಷ್ಟ್ರಭಕ್ತರೂ ಆಗಿರುವ ಶ್ರೀಮಾನ್ ಕೆ. ಆರ್. ಆಚಾರ್ ಅವರ ಅಧ್ಯಕ್ಷತೆಯಲ್ಲಿ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು ಜರಗಿತು. ಸ್ವಾಗತಾಧ್ಯಕ್ಷರಾದ ಶ್ರೀ. ಎ. ವಿ. ಎಸ್. ಹೆಬ್ಬಾರ ಬಿ.ಎ ಬಿ.ಎಲ್‌ರವರು ಅಧ್ಯಕ್ಷರಿಗೂ ಪ್ರತಿನಿಧಿಗಳಿಗೂ ಸ್ವಾಗತವನ್ನು ಕೋರಿ ಇಂತಹ ಬಿಕ್ಕಟ್ಟಿನ ಪ್ರಸಂಗದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನ ಆವಶ್ಯಕತೆಯೆಷ್ಟಿರುವುದೆಂಬುದನ್ನು ವಿವರಪಡಿಸಿದರು. ಸಭಿಕರಲ್ಲಿ ಕೆಲವು ಮಹನೀಯರು ಏಕೀಕರಣವನ್ನು ಸಮರ್ಥಿಸಿದರು. ಏಕೀಕರಣ ಪ್ರಯತ್ನಗಳನ್ನು ಕೂಡಲೇ ಕೈಗೊಳ್ಳುವಂತೆ ಬೊಂಬಾಯಿ ಮತ್ತು ಮದ್ರಾಸು ಸರಕಾರವನ್ನು ಕೇಳಿಕೊಳ್ಳಬೇಕೆಂದೂ ದಕ್ಷಿಣಕನ್ನಡ ಮಲಬಾರಿಗೆ ಸೇರಿಸಬೇಕೆಂದು ಮಾಡುತ್ತಿರುವ ಮಲಬಾರಿನ ಅಪಪ್ರಚಾರವನ್ನು ಖಂಡಿಸಬೇಕೆಂದೂ ೬ ಠರಾವುಗಳು ಅಂಗೀಕೃತವಾದುವು ಅಧ್ಯಕ್ಷರು ಏಕೀಕರಣದ ಆವಶ್ಯಕತೆಯ ಕುರಿತು ¾ ಘಂಟೆಯ ವರೆಗೆ ಸ್ಫೂರ್ತಿದಾಯಕವಾದ ಭಾಷಣಮಾಡಿದರು. ಎಲ್ಲರಿಗೂ ಧನ್ಯವಾದಾರ್ಪಣೆಯಾದಮೇಲೆ ಕ್ರಮವಾದ ರೀತಿಯಿಂದ ಪ್ರಚಾರ ಮಾಡುವ ಬಗ್ಗೆ ಸಮಿತಿಯ ರಚನೆಯೂ ಆಯಿತು.

ಜಿಲ್ಲಾ ಯಕ್ಷಗಾನ ಪರಿಷತ್ತು—

ತಾ. ೧೭ನೇ ಬೆಳಿಗ್ಗೆ ೮—೩೦ಕ್ಕೆ ವಿದ್ಯಾರ್ಥಿಗಳಿಗೆ ಹಲವು ವಿಷಯಗಳಲ್ಲಿ ಸ್ಪರ್ಧೆಗಳು ಜರಗಿದುವು ಅ. ಪ. 4—30ಕ್ಕೆ ಶ್ರೀ ಕೃಷ್ಣ ನಾಟಕಶಾಲೆಯಲ್ಲಿ ಮಂಗಳೂರಿನ ವಕೀಲರೂ ಯಕ್ಷಗಾನ ಕಲಾ ಕುಶಲರೂ ಆಗಿರುವ ಶ್ರೀ. ಕೆ. ಬಾಲಕೃಷ್ಣರಾವ್ ಬಿ.ಎ.ಬಿ.ಎಲ್. ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಯಕ್ಷಗಾನ ಕಲಾಪರಿಷತ್ತು ಯಶಸ್ವಿಯಾಗಿ ಜರಗಿತು. ಸ್ವಾಗತಾಧ್ಯಕ್ಷರಾದ ಶ್ರೀ. ಎಚ್. ರಾಮಪ್ಪಯ್ಯ ಎಮ್.ಎ ಬಿ.ಎಲ್. ರವರು ಜಿಲ್ಲೆಯನಾನಾಭಾಗಗಳಿಂದ ಬಿತ್ತೈಸಿದ ಪ್ರತಿನಿಧಿಗಳಿಗೂ ಅಧ್ಯಕ್ಷರಿಗೂ ಪ್ರೇಕ್ಷಕರಿಗೂ ಸ್ವಾಗತವನ್ನು ಕೋರಿ ಯಕ್ಷಗಾನ ಕಲಾಭಿವೃದ್ಧಿಯನ್ನು ಹೇಗೆ ಮಾಡಬಹುದೆಂದು ವಿವರಿಸಿ ಭಾಷಣವನ್ನು ಮಾಡಿದರು. ತರುವಾಯ ಯಕ್ಷಗಾನ ಕಲಾಕೋವಿದರಾದ ಶ್ರೀಗಳಾದ ಮಲ್ಪೆ ಸಾಮಗರೂ, ಪೊಳಲಿ ಶಾಸ್ತ್ರಿಗಳೂ, ಕುರಿಯ ಶಂಕರ ಭಟ್ಟರೂ ಕೋಣಿ ಅಣ್ಣಪ್ಪಶೆಟ್ಟರಂತರೂ ಯಕ್ಷಗಾನಕಲೆಯ ವಿಷಯದಲ್ಲಿ ಭಾಷಣಗಳನ್ನು ಮಾಡಿದರು. ಕರ್ನಾಟಕದ ಪ್ರಸಿದ್ಧ ಹರಿದಾಸರಾದ ಶ್ರೀ ಹಂಡೆ ಶ್ರೀಪಾದಾಚಾರ್ಯರು ಯಕ್ಷಗಾನ ಕಲೆಯ ವಿಷಯದಲ್ಲಿ ವಿಮರ್ಶಾತ್ಮಕ ಭಾಷಣ ಮಾಡಿದರು. ತರುವಾಯ ಸಂಘದ ಕಾರ್ಯದರ್ಶಿಗಳಾದ ಶ್ರೀ. ವಿದ್ವಾನ್ ಪಿ. ಕೆ. ಆಚಾರ್ಯರು 2 ವರ್ಷಗಳ ಯಕ್ಷಗಾನ ಸಭೆಗಳ ವರದಿ ಓದಿ ವಿಮರ್ಶೆಮಾಡಿದರು.

ಪ್ರತಿ ತಾಲೂಕಿಗೆ ಒಬ್ಬರಂತೆ ೧೨ಸದಸ್ಯರಿಂದ ಕೂಡಿದ ಜಿಲ್ಲಾಯಕ್ಷಗಾನ ಕಲಾಸಮಿತಿಯು ಏರ್ಪಟ್ಟಿದ್ದು ಅಲ್ಲದೆ ಶ್ರೀ. ಕೆ. ಬಾಲಕೃಷ್ಣರಾಯರೇ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಅಧ್ಯಕ್ಷರು ಯಕ್ಷಗಾನಕಲೆಯ ಅಭಿವೃದ್ಧಿ ಮಾಡುವುದು ಎಷ್ಟು ಆವಶ್ಯವೆಂದು ವಿವರಿಸಿ ¾ ಘಂಟೆಯವರೆಗೆ ಉತ್ತಮ ಭಾಷಣ ಮಾಡಿದರು ಸ್ವಾಗತಾಧ್ಯಕ್ಷರು ಎಲ್ಲರಿಗೂ ಧನ್ಯವಾದವನ್ನರ್ಪಿಸಿದರು. ರಾತ್ರಿ 9—30ಕ್ಕೆ ಯಕ್ಷಗಾನ ಸಭೆ ಜರಗಿತು. ಸುಪ್ರಸಿದ್ಧ ಅರ್ಥಗಾರರೆಲ್ಲರೂ ಭಾಗವಹಿಸಿದರು. ಶ್ರೀ ಕೋಟ ಶ್ರೀನಿವಾಸ ನ್ಯಾಕರೂ ಶ್ರೀ ರಾಮಪ್ಪಡಿಗರೂ ಪುತ್ತೂರಿನ ವೆಂಕಟರಮಣಯ್ಯನವರೂ ಭಾಗವತಿಕೆಯನ್ನು ಮಾಡಿದರು. ಕೃಷ್ಣಸಂಧಾನ ಮತ್ತು ಭೀಷ್ಮಪರ್ವವೆಂಬ 2 ಪ್ರಸಂಗಗಳು ಅಭಿನಯಿಸಲ್ಪಟ್ಟವು. ಅಧ್ಯಕ್ಷರಾದ ಶ್ರೀ ಬಾಲಕೃಷ್ಣರಾಯರು ಬರುವ ವರ್ಷ ಜಿಲ್ಲಾಯಕ್ಷಗಾನಪರಿಷತ್ತನ್ನು ಮಂಗಳೂರಲ್ಲಿ ಜರಗಿಸುತ್ತೇವಾಗಿ ಭರವಸೆಕೊಟ್ಟಿರುವರು.

ಕನ್ನಡ ಸಾಹಿತ್ಯೋತ್ಸವ— ತಾ. ೧೮ನೇ ಬೆಳಿಗ್ಗೆ ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನ ಕನ್ನಡ ಪ್ರೊಫೆಸರರೂ ಕನ್ನಡಸಾಹಿತಿಗಳೂ ಆಗಿರುವ ಶ್ರೀ. ಸಾಬಾಜಿ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯೋತ್ಸವವು ಸಾಂಗವಾಗಿ ಜರಗಿತು ಸ್ವಾಗತ ಅಧ್ಯಕ್ಷರಾದ ಶ್ರೀ ವಿದ್ವಾನ್ ಪಿ. ಕೆ. ಆಚಾರ್ಯರು ಅಧ್ಯಕ್ಷರ ಪರಿಚಯ ಭಾಷಣ ಮಾಡಿ, ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಹೇಗೆ ಮಾಡಬಹುದೆಂದು ವಿವರಿಸಿದರು ಅನೇಕ ಮಹನೀಯರು ಉಚಿತ ಭಾಷಣಗಳನ್ನು ಮಾಡಿದರು ಅಧ್ಯಕ್ಷರು ಸುಂದರವಾದ ಶೈಲಿಯಿಂದ ಕನ್ನಡವನ್ನು ಹೇಗೆ ವೃದ್ಧಿಗೊಳಿಸಬಹುದೆಂದೂ ವಿವರಿಸಿದರು

ವರ್ಧಂತಿ ಸಭೆಯು—

ಅದೇ ಸಂಜೆ ಸಾಬಾಜಿ ಆಚಾರ್ಯರ ಅಧ್ಯಕ್ಷತೆಯಲ್ಲಿಯೇ ಜರಗಿತು. ಕಾರ್ಯದರ್ಶಿಗಳಾದ ಶ್ರೀ. ವಿದ್ವಾನ್, ಪಿ. ಕೆ. ಆಚಾರ್ಯರು ವರದಿ ವಾಚನಮಾಡಿದರು ಶ್ರೀ. ಮಲ್ಪೆಸಾಮಗರು ಸಂಘದ ಶ್ರೇಯಃ ಪ್ರಾರ್ಥನೆಮಾಡಿದರು ಜಯಶಾಲಿಗಳಾದ ವಿದ್ಯಾರ್ಥಿಗಳಿಗೆ ಬಹುಮಾನಗಳು ಹಂಚಲ್ಪಟ್ಟವು. ತರುವಾಯ ಅಧ್ಯಕ್ಷ ಮಹನೀಯರು ಕನ್ನಡದ ಬಗ್ಗೆ ದೇಶಭಾಷೆಯ ಏಳಿಗೆಯಿಂದಲೇ ದೇಶದ ಏಳಿಗೆ ಎಂಬುದನ್ನು ಹಲವು ದೃಷ್ಟಾಂತದಿಂದ ಖಚಿತಪಡಿಸಿ ಸ್ವಾರಸ್ಯವಾಗಿ ಮಾತಾಡಿ ಸಭಿಕರನ್ನು ಸಂತೋಷಗೊಳಿಸಿದರು. ಸಂಘದ ಉಪಾಧ್ಯಕ್ಷರಾದ ಶ್ರೀ. ಎಚ್. ರಾಮಪ್ಪಯ್ಯನವರು ಅಧ್ಯಕ್ಷರಿಗೂ ಇತರ ಪರಿಷತ್ತುಗಳಲ್ಲಿ ಸಹಕರಿಸಿದ ಎಲ್ಲಾ ಮಹನೀಯರಿಗೂ ಧನ್ಯವಾದವನ್ನರ್ಪಿಸಿದರು.

ರಾತ್ರೆ ದಕ್ಷಿಣೋತ್ತರ ತಾಲೂಕುಗಳ ಸುಪ್ರಸಿದ್ಧ ಅರ್ಥಗಾರರ ಕೂಡುವಿಕೆಯಿಂದ ಯಕ್ಷಗಾನ ಸಭೆ ಜರಗಿತು. ಕೃಷ್ಣಾರ್ಜುನ ಕಾಳಗವು ಅಭಿನಯಿಸಲ್ಪಟ್ಟಿತು.

THE TROPICAL
Insurance Co., Ltd.
NEW DELHI

Chairman: Sjt. SUBHAS CHANDRA BOSE.
(*PRESIDENT*, INDIAN NATIONAL CONGRESS.)

100% Swadeshi Concern founded by such eminent Leaders as
PANDIT MOTHILAL NEHRU. Dr. M. A. ANSARI
HAKIM AJMA KHALN. T. A. N. K. HERWANI.
and others

WANTED influential Agents, Special Agents and Organisers on liberal commission and salary.

APPLY TO:

M. SUNDER RAM SHETTY, BRANCH MANAGER, HAMPANKATTA MANGALORE.

Or

K. S. RAMAMURTHI, M. A. BRANCH SECRETARY, 160 MOUNT ROAD, MADRAS.

ಮದನರತಿಕಾಮಶಾಸ್ತ್ರವೆಂಬಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street,* G. T. MADRAS.

ಕೂದಲು
ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟಹಣಕ್ಕೆ ಡಬ್ಬಲ್ ವಾಪಾಸು ಕೊಡಲು ಗ್ಯಾರಂಟಿ ಎಂಬುದಕ್ಕೆ ದೊರೆತ ನೂರಾರು ಸರ್ಟಿಫಿಕೇಟುಗಳೇ ಸಾಕ್ಷಿ. ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ. 5-0-0. ಕಾಲಂಶಕ್ಕೂ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ. 7-0-0 ಬೆಲೆಯ ಎಣ್ಣೆ ಬೇಕಾಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

HAZRA & Co.,
P. O. Bihar Nursery (DARBHANGA)

ಸುಂದರವಾದ ಸಾಜೂಕಾದ
ಪಾಕೆಟ್
ಡೈರಿಗಳು
(ಪೆನ್ಸಿಲು ಸಹಿತ)
ಕ್ರಯ 0—8—0 ಮಾತ್ರ
ಅಂಚೆ ವೆಚ್ಚ ಪ್ರತ್ಯೇಕ
ವ್ಯಾ. ಧಾ. ಕಮಿಶನ್ ಕೊಡಲಾಗುತ್ತೆ.
ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ಸಿಗುತ್ತವೆ.
ಬರೆಯಿರಿ:—
The Kanara Books & News Agency.
Batatawala Mansion, Lalbag,
Bombay 12.

THE
Canara Banking Corporation, Udipi, Ltd.
Established:] (INCORPORATED IN BRITISH INDIA) [1906.
MEMBER:-
RESERVE BANK OF INDIA
BANKERS' CLEARING HOUSE, MADRAS.

Capital Authorised, Issued & Subscribed		Rs. 3,50,000
Paid up Capital	....	Rs. 3,03,205
Reserves	....	Rs. 3,88,842

RATES OF INTEREST ON DEPOSITS

3 months	...	2½% p. a.
6 or 9 months	..	3 % p. a.
12 or 24 months	...	3½% p. a.
Short Term	...	2 % p. a.

All kinds of Banking Transactions undertaken.

ಉಡುಪಿ, ಗುರುವಾರ, ತಾ. ೨೯-೧೨-೩೮

ಹಿನ್ನೋಟ ೧೯೩೮

ಕಾಲಚಕ್ರದಲ್ಲಿ ಒಂದು ವರುಷ ಉರುಳಿತು. ಆದರಲ್ಲಿ ಲೋಕವು ಹೊರಳಿತು. ಮತ್ತಷ್ಟು ನರಳಿತು. ಅಲ್ಲದೆ ಅದಕ್ಕೆ ಯಾವ ಭಾಗದಲ್ಲಾದರೂ ಹೇಳಿಕೊಳ್ಳುವಷ್ಟು ಸುಖ-ಶಾಂತಿ-ಸಮಾಧಾನಗಳು ದೊರೆತವೇ? ಈ ಒಂದು ವರ್ಷದಲ್ಲಿ ನಾವು ಕಂಡುದೇನು? ಪ್ರಬಲ ರಾಷ್ಟ್ರಗಳು ಅಬಲ ರಾಷ್ಟ್ರಗಳನ್ನು ಗೋಳುಗುಡಿಸಿದುದು, ನುಂಗಿದುದು, ನುಂಗುತ್ತಿರುವುದು. ಎಲ್ಲೆಲ್ಲಿಯೂ ಸ್ವಾರ್ಥ, ನ್ಯಾಯ ನೀತಿಗೆ ಬಾಹಿರವಾದ ಮಹತ್ವಾಕಾಂಕ್ಷೆ, ಆತ್ಮಸಂರಕ್ಷಣೆಗಾಗಿ ಅನ್ಯರ ಆಹುತಿ, ಸರ್ವಾಧಿಕಾರದ ತೃಷೆ, ಹೀಗೆಲ್ಲ ಬಲವಿದ್ದವರ ಮೇಲ್ಗಾಲು! ನಿರ್ಬಲರ ಅಳಗಾಲ! ಮಧ್ಯ ಯುರೋಪಿನಲ್ಲಿ ಹಿಟ್ಲರನ ಜರ್ಮನ್ ರಾಜ್ಯ ವಿಸ್ತಾರದ ಲಾಲಸೆಯಿಂದ ಹಂಗೇರಿಯದ ಸ್ವಾತಂತ್ರ್ಯಾಪಹರಣ! ಜೆಕೋಸ್ಲವೇಕಿಯದ ನಿರ್ನಾಮ! ಬ್ರಿಟನ್ ಫ್ರಾನ್ಸುಗಳು ಸ್ವರಕ್ಷಣೆಯ ದೃಷ್ಟಿಯಿಂದ ಹಿಟ್ಲರ ಮುಸೋಲಿನಿಗಳ ಭಯದಿಂದ ಕರ್ತವ್ಯ ಬಾಹಿರರಾಗಿ ನಿರ್ಬಲ ಜನಾಂಗಗಳು ಕತ್ತು ಹಿಸುಕಲ್ಪಟ್ಟಾಗ ತಾಟಸ್ಥ್ಯ ಭಾವದಿಂದ ಕುಳಿತು ಬಲವೇ ನ್ಯಾಯವೆಂಬ ಅನೀತಿಗೆ ಬೆಂಬಲಕೊಟ್ಟುದು. ನೆರೆಯವನನ್ನು ಸೋದರನಂತೆ ಪ್ರೀತಿಸು ಎಂಬ ಕ್ರೈಸ್ತ ಮಹಾತ್ಮನ ಉಪದೇಶವು ಕ್ರೈಸ್ತಮತಾವಲಂಬಿಗಳಾದ ಪಶ್ಚಿಮ ರಾಷ್ಟ್ರಗಳಲ್ಲಿ ಉಂಟೇ? ಬದಲಾಗಿ ನೆರೆಮನೆಯನ್ನು ಅಳಿಸಿ ಕರುಳಟ್ಟಲಿಕ್ಕೆ ಜಾಗ ಮಾಡಿಕೊಳ್ಳುವ ಕ್ಷುದ್ರ ನೀತಿಗೆ ಪ್ರಾಬಲ್ಯವುಂಟಾಯಿತೇ? ಒಂದು ಕೈಯಲ್ಲಿ ಬೈಬಲ್ ಮತ್ತೊಂದು ಕೈಯಲ್ಲಿ ಖಡ್ಗ! ಅಯ್ಯೋ! ಆ ಸ್ಪೈಯಿನಿನ ದುರವಸ್ಥೆಯೋ! ಮುನ್ನೂರರುವತ್ತೈದು ದಿನವೂ ನಿರಪರಾಧಿಗಳಾದ ಹೆಂಗಸರು ಮಕ್ಕಳೂ ಕೆಂಗೆಂಡವನ್ನು ದುರಿಸುವ ಬಾಂಬಿನ ಸುರಿಮಳೆಗೆ ಬಲಿಬೀಳುತ್ತಿದ್ದರಲ್ಲ! ಆ ಯೆಹೂದಿಗಳ ದುರವಸ್ಥೆ! ಯಾವ ತಪ್ಪಿಗಾಗಿ, ಯಾವ ಅಪರಾಧಕ್ಕಾಗಿ ಅವರ ಸರ್ವಸ್ವಾಪಹರಣ? ಇತರರಂತೆಯೇ ಅವರೂ ಊರಲ್ಲಿ ಹುಟ್ಟಿ ಬೆಳೆದವರಲ್ಲವೇ? ಅವರಿಗೆ ಮಾತ್ರ ಅಲ್ಲಿ ಬಾಳಲು ಹಕ್ಕಿಲ್ಲವೇ? ಬುದ್ಧಿಶಕ್ತಿಯಿಂದ ಉದ್ಯಮದಿಂದ ಮಿತವ್ಯಯದಿಂದ ಅವರು ಗಳಿಸಿದ್ದ ಮನೆಮಾರು ವೃತ್ತಿ ಉದ್ಯೋಗ ಎಲ್ಲವನ್ನೂ ಬಿಟ್ಟು ಕೇವಲ ಯೆಹೂದಿಗಳೆಂಬ ಹೆಸರಿದ್ದುದಕ್ಕಾಗಿ ಪ್ರಾಣ ಬಲಿಕೊಡಬೇಕಾಯಿತೇ? ಮಾನಹಾನಿಗೊಳಗಾಗಬೇಕಾಯಿತೇ? ದೇಶಭ್ರಷ್ಟರಾಗಿ ತುತ್ತಿಗೆ ಗತಿಯಿಲ್ಲದೆ ನಿಲ್ಲಲು ಜಾಗವಿಲ್ಲದೆ ದಿಗ್ದೇಶಗಳಲ್ಲಿ ಬೀದಿಪಾಲಾಗಬೇಕಾಯಿತೇ? ನ್ಯಾಯನೀತಿಯೆಂಬುದು ಲೋಕದಲ್ಲಿಲ್ಲವೆಂಬಂತಾಯಿತಲ್ಲ! ೧೯೩೮ ಯುರೋಪಿನಲ್ಲಿ ತೋರಿದ ದೃಶ್ಯವಿದು! ಇನ್ನು ಏಸ್ಯ ಖಂಡದ ಪಡುಗಡೆಯಲ್ಲಿ ನೋಡಿದರೂ ಆ ಜೆರೂಸಲೆಮಿನಲ್ಲಿ ಯೆಹೂದಿಗಳಿಗೂ ಅರಬರಿಗೂ ಜಗಳ ಗಂಟಿಕ್ಕಿ ಚಂದನೋಡುತ್ತಿರುವ ದುರಂತ ದೃಶ್ಯ. ಪೂರ್ವದಲ್ಲಿ ಆ ಬುದ್ಧದೇವನ ಅಹಿಂಸಾ ಪರಮೋಧರ್ಮವೆಂಬುದರ ಅನುಯಾಯಿಗಳಾದ ಜಪಾನರು ಮಾಡುತ್ತಿರುವುದೇನು? ಚೀನಾ ರಾಜ್ಯವನ್ನು ನುಂಗುತ್ತಿರುವುದು! ಜಯಿಸಲ್ಪಟ್ಟ ಚೀನೀಯರ ಮೇಲೆ ಅತ್ಯಾಚಾರ ನಡೆಯಿಸುವುದು! ಪಶುಕರ್ಮದಲ್ಲಿ ನಿಸ್ಸೀಮರೆಂದು ತೋರಿಸುವುದು! ನಿರ್ಬಲ ಜನಾಂಗಗಳನ್ನು ಪೀಡಿಸುವ ಈ ದುಷ್ಟ ಪ್ರಬಲ ರಾಜ್ಯಗಳ ಪೈಶಾಚಿಕ ಕ್ರೀಡೆಯನ್ನು ಅಡಗಿಸಲು ತ್ರಾಣವಿರುವ ಬ್ರಿಟನ್, ಅಮೇರಿಕಾ, ರಸ್ಯಾ ಮುಂತಾದುವುಗಳು ಕಣಕಲ್ಪಟ್ಟರೂ ಕೆರಳದೆ ಆದರೂ ತಳಮಳಗೊಂಡೇ ದಿನದೂಡಿದವು! ಅಂತೂ ಅಲ್ಲದೆ.. ನೆಮ್ಮದಿಯಿದ್ದಿಲ್ಲ! ವಿಜಯದ ಹೆಮ್ಮೆಯಿಂದ ಮುಂದಾಗುತ್ತಿರುವ ರಾಜ್ಯಗಳಲ್ಲಾಗಲೀ ತಾಟಸ್ಥ್ಯದಿಂದ ದುರ್ದಿನವನ್ನು ಸಾಧ್ಯವಿದ್ದಷ್ಟು ದೂರ ದೂಡುವ ದೇಶಗಳಲ್ಲಾಗಲೀ ಒಳಗಿನ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಅಲ್ಲಿ ತೋರುವುದೂ ನೆಮ್ಮದಿಯಿಲ್ಲದ ಜೀವನ! ಸರ್ವಾಧಿಕಾರಿಗಳ ಛತ್ರಛಾಯೆಗೊಳಗಾಗಿರುವವರೂ ಸುಖದಿಂದ ಕಾಲಕಳೆದರೇ? ಜರ್ಮನಿ ರಸ್ಯಾ ಇಟಲಿಯ ಮಂದಿಯ ಜೀವನವು ಸುಖಮಯವಾಗಿದೆಯೇ? ಒಳಸಂಚುಗಳೆಷ್ಟು! ದಂಡು ಕಾನೂನಿನ ಗುಂಡಿನ ಬಾಯಿಗೆ ಬಲಿಬಿದ್ದವರೆಷ್ಟು! ಕೇವಲ ವಿದ್ರೋಹದ ಸಂಶಯಕ್ಕೀಡಾಗಿ ಕಾರಾಗೃಹ ಸೇರಿದವರೆಷ್ಟು! ಗಡಿಪಾರಾದವರೆಷ್ಟು! ತಮಗೂ ಕ್ಷೇಮದಾಯಕವಲ್ಲದ ಇತರರಿಗೆ ನಾಶಕಾರಿಯಾದ ಸಮರಸನ್ನಾಹದ ಹದವಿಲ್ಲದ ವೆಚ್ಚಕ್ಕಾಗಿ ಬಡವನ ಮೇಲೆ ಬೀಳುತ್ತಿದ್ದ ಹೊರಲಾರದ ತೆರಿಗೆಯ ಭಾರವೆಷ್ಟು! ಸಾಮ್ರಾಜ್ಯವಾದಿಯೆನ್ನಿರಿ, ಪ್ರಜಾಪ್ರಭುತ್ವವೆನ್ನಿರಿ, ಸರ್ವಾಧಿಕಾರತ್ವವೆನ್ನಿರಿ, ಸಾಮ್ಯಸತ್ತಾತ್ಮಕ ರಾಜ್ಯವೆನ್ನಿರಿ, ಒಳಹೊಕ್ಕು ಅಲ್ಲಿಯ ಮಂದಿಯ ಪಾಡನ್ನು ಪರಿಶೀಲಿಸಿದರೆ ತೋರುವುದು ಕರುಣಾಜನಕ ದೃಶ್ಯ! ದುರಂತ ನಾಟಕ! ಬಡವನಿಗೆ ಜಾಗವಿಲ್ಲ; ಬಾಳಲು ಹಕ್ಕಿಲ್ಲ! ಮಂದಿಯ ಬೆನ್ನು ತಟ್ಟಿತಟ್ಟಿ ಕೊನೆಗೆ ಬೆನ್ನು ಹತ್ತಿ ಆಮೇಲೆ ಚಾಟಿ ಹೊಡೆಹೊಡೆದು ಸವಾರಿಮಾಡುವ ದೃಶ್ಯವೇ ಅಲ್ಲೆಲ್ಲ!

ನಮ್ಮ ಹಿಂದೂಸ್ಥಾನದ ಕಡೆಗೆ ನೋಡಿದರೆ ಎಷ್ಟೋ ದೇಶೀಯ ರಾಜ್ಯಗಳಲ್ಲಿ ದಬ್ಬಾಳಿಕೆ! ಪ್ರಜೆಗಳ ಪೀಡೆ! ದಂಡು ಕಾನೂನು! ಗೋಳಿಬಾರ್! ೧೯೩೮ ತೋರಿರುವ ರುದ್ರಪ್ರತಾಪ ಇದು! ಅಖಿಲ ಭಾರತೋದ್ಧಾರದ ಏಕಮಾತ್ರ ಮಹಾಸಂಸ್ಥೆಯಾದ ಕಾಂಗ್ರೆಸ್ಸಿನಲ್ಲಿಯೂ ಒಡಕುಗಳೆಷ್ಟು! ಭಿನ್ನಾಭಿಪ್ರಾಯಗಳೆಷ್ಟು! ಕಾಂಗ್ರೆಸ್ಸು ಬಲಗೊಂಡುದನ್ನು ಕಂಡು ಸ್ವಾರ್ಥಿಗಳೂ ಸ್ಥಾನಮಾನ ಪದವಿಯ ಲಾಲಸೆಯುಳ್ಳವರೂ ಕಪಟಸನ್ಯಾಸಿಗಳಂತೆ ಖಾದಿಟೋಪಿಧಾರಿಗಳಾಗಿ ಅದನ್ನು ಹೊಕ್ಕು ದೇಶ ಪ್ರಾಂತ ಜಿಲ್ಲೆ ತಾಲೂಕು ಗ್ರಾಮಗಳ ಉದ್ಧಾರವೆಂಬ ಸೋಗಿನಿಂದ ಕಾಂಗ್ರೆಸ್ಸಿನ ಪವಿತ್ರ ನಾಮಕ್ಕೆ ಕಳಂಕ ತಂದಿರುವವರೆಷ್ಟು! ಈ ಪರಿಸ್ಥಿತಿಯನ್ನು ಕಂಡು ಮಹಾತ್ಮಾಗಾಂಧಿಗಳೇ ಕಾಂಗ್ರೆಸ್ ಶುದ್ಧೀಕರಣವಾಗಬೇಕೆಂದು ರೋದಿಸಬೇಕಾಯಿತಲ್ಲ! ನಿಜವಾದ ದೇಶಭಕ್ತರು ದೇಶಕ್ಕಾಗಿ, ಸರ್ವಸ್ವವನ್ನು ಕಳಕೊಂಡವರು, ದೇಶಕ್ಕಾಗಿ ದುಡಿಯಬೇಕೆಂಬ ಶುದ್ಧ ಶ್ರದ್ಧೆಯಿದ್ದವರು ಎಷ್ಟು ಜನರಿಂದು ಜುಗುಪ್ಸೆಗೊಂಡು ಕಾಂಗ್ರೆಸಿನಿಂದ ದೂರಾಗಿಯೇ ನಿಂದು ಕೈಲಾದ ಸೇವೆಯನ್ನು ಅರ್ಪಿಸುತ್ತಿಲ್ಲ! ದೇಶಸೇವೆಯ ಸೋಗಿನವರೆಷ್ಟು ಕಾಂಗ್ರೆಸ್ ಭಕ್ತರೆಂದು ಮೆರೆಯುತ್ತ ಸ್ವಾರ್ಥಸಾಧನೆ ಮಾಡುತ್ತಿಲ್ಲ! ಹಳ್ಳಿಮೂಲೆಯ ಕಾಂಗ್ರೆಸ್ ಕಮಿಟಿಗಳಲ್ಲಿಯೂ ಸ್ಥಾನಮಾನಕ್ಕಾಗಿ ಎಷ್ಟು ಕಚ್ಚಾಟ! ಎಷ್ಟು ಕುಟಿಲ ತಂತ್ರ! ನಮ್ಮ ಜಿಲ್ಲೆಯಲ್ಲೇನು ಮತ್ತೆ! ಎಲ್ಲ ಕಡೆಯಲ್ಲಿಯೂ ಹರಡಿರುವ ರೋಗವೇ ಇಲ್ಲಿಯೂ! ಮಹಾತ್ಮಾ ಗಾಂಧಿಯವರಂತಹ ಆದರ್ಶವಾದಿಗಳನ್ನು ಜವಾಹಿರಲಾಲ್ ನೆಹರೂಗಳಂತಹ ಶುದ್ಧಾಂತಃಕರಣದ ಕರ್ಮಯೋಗಿಗಳನ್ನು ೧೯೩೮ ಮತ್ತೊಂದೆರಡರಾದರೂ ಉಂಟುಮಾಡಿದ್ದರೆ ೧೯೩೮ ನೀನೇ ಧನ್ಯ ಧನ್ಯ! ನೀನೇ ಚಿರಸ್ಮರಣೀಯ ಎನ್ನಬಹುದಿತ್ತು. ಆದರೆ ಆ ಯೋಗವು ೧೯೩೮ರ ಹಣೆಯಲ್ಲಿ ಬರೆದಿಲ್ಲ! ಸುಮ್ಮನೆ ಹೊರಳಿತು! ವ್ಯರ್ಥ ಉರುಳಿತು! ವಿಸ್ಮೃತಿಯ ಪರದೆಯ ಹಿಂದೆ ಸರಿಯಿತು!

ವಾರ್ಧಾ ಶಿಕ್ಷಣ ಪದ್ಧತಿ

ಸೆಂಟ್ರಲ್ ಎಡ್ವೈಸರಿ ಬೋರ್ಡಿನ ಕಮಿಟಿ ರಿಪೋರ್ಟು

ಉತ್ಪತ್ತಿಯ ದೃಷ್ಟಿಯಿಂದ ಶಿಶುವನ್ನು ದುಡಿಸಿ ಶಾಲೆಯ ವೆಚ್ಚವನ್ನು ಪೂರ್ಣವಾಗಿಯಾಗಲೀ ಸ್ವಲ್ಪ ಮಟ್ಟಿಗಾಗಿಯಾಗಲೀ ಭರ್ತಿಮಾಡಿಕೊಳ್ಳುವ ಉದ್ದೇಶವು ಈ ಪದ್ಧತಿಯಲ್ಲಿದೆಯೆಂದಾಗಲೀ ಇದರಿಂದ ಮಕ್ಕಳನ್ನು ನಿಶ್ಚಿತವಾದ ಉದ್ಯೋಗಕ್ಕೆ ಖಡ್ಡಾಯವಾಗಿ ದೂಡುವ ಉದ್ದೇಶವಿದೆಯೆಂದಾಗಲೀ ಶಾಲೆಗಳನ್ನು ಕೀಳು ತರಗತಿಯ ವೃತ್ತಿ ಶಾಲೆಗಳನ್ನಾಗಿ ಮಾರ್ಪಡಿಸುವ ಲಕ್ಷಣಗಳಿವೆ ಎಂದಾಗಲೀ ಟೀಕಿಸುವವರೆಲ್ಲ ವಾರ್ಧಾ ಸ್ಕೀಮಿನ ನಿಜವಾದ ಮಹತ್ವವನ್ನು ಬಗೆಗಾಣಲಿಲ್ಲವೆಂದು ರಿಪೋರ್ಟು ಸಾರುತ್ತಿದೆ. ಆದರೆ ಪ್ರಬಲವಾದ ವಿರೋಧ ಟೀಕೆ ಟಿಪ್ಪಣಿಗಳಿಲ್ಲದೆ ಹೋಗಿದ್ದರೆ ಆ ವಾರ್ಧಾ ಸ್ಕೀಮು ತಿರುತಿರುಗಿ ಕೆತ್ತಿ ಮೆತ್ತಿ ಈಗಿನ ಆಕಾರ ಬರುತ್ತಿತ್ತೋ ಅಥವಾ ಮೂಲದಲ್ಲಿದ್ದ ಮಕ್ಕಳ ಜೈಲು ಶಾಲೆಯಾಗಿಯೇ ಉಳಿಯುತ್ತಿತ್ತೋ? ಈಗ ಅದು ವ್ಯಾಪಕವಾಗಿ ಪ್ರಯೋಗಾರ್ಹವಾಗುವಂತಿಲ್ಲವಾದರೂ ದಾನಧರ್ಮಶೂರ ವೀರರಿರುವಲ್ಲಿ ಅಂತಹ ವಿದ್ಯಾಮಂದಿರಗಳು ಸ್ಥಾಪಿತವಾಗಿ ಒಂದೆರೆಗಳಿಗೆಯ ಸಂದರ್ಶಕರ ಮನಮೋಹಕವಾಗಿ ಶಾಲೆ ನಡೆಯುತ್ತ ಮಕ್ಕಳ ನಂದನವನವೆಂದು ಅವರಲ್ಲೊಂದು ತಪ್ಪು ಗ್ರಹಿಕೆ ಹುಟ್ಟಿಸುವಷ್ಟು ಚಂದದ ಪದ್ಧತಿಗೆ ಬಂದಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ತಿರುತಿರುಗಿ ತಿದ್ದಲ್ಪಟ್ಟ ಆ ಪದ್ಧತಿಯ ಇಂದಿನ ಸ್ವರೂಪ ರೇಖೆಯು ಹೀಗಿದೆ—ಕ್ರಿಯಾತ್ಮಕವಾಗಿ ವಿದ್ಯಾಪ್ರಾಪ್ತಿಯಾಗಬೇಕೆಂಬುದಕ್ಕೆ ಅದು ಪ್ರಾಧಾನ್ಯವನ್ನಿತ್ತಿದೆಯಲ್ಲದೆ ವಿಕ್ರಯಾರ್ಹವಾದ ವಸ್ತುಗಳ ತಯಾರಿಯೇ ಮುಖ್ಯೋದ್ದೇಶವಲ್ಲ. ನೂಲುವುದು ನೇಯುವುದೇ ಮೂಲವೃತ್ತಿಯಾಗಿರಬೇಕೆಂದೇನೂ ಇಲ್ಲ. ಬದಲಾಗಿ ಅದಕ್ಕಿಂತಲೂ ಹೆಚ್ಚಿನ ಶೈಕ್ಷಣಿಕ ಗುಣವಿರುವ ಬೇರೆ ವೃತ್ತಿಯನ್ನು ಸೇರಿಸಿಕೊಳ್ಳಬಹುದು. ಯಾವುದಾದರೂ ಮತೀಯರಿಗೆ ಮತ ಶಿಕ್ಷಣವು ದೊರೆಯಬೇಕೆಂದು ಅಪೇಕ್ಷಿಸಿದಲ್ಲಿ ಅದಕ್ಕೆ ಅಸ್ಪದ ಕೊಡಲಾಗುವುದಿಲ್ಲವೆಂದಿಲ್ಲ. ಉಪಾಧ್ಯಾಯರ ವೇತನವು ಶಾಲೆಯಲ್ಲಿ ಮಕ್ಕಳಿಂದ ಸಿದ್ಧವಾಗುವ ವಸ್ತುಗಳ ವಿಕ್ರಯದಿಂದಲೇ ಪೂರ್ತಿಯಾಗಬೇಕೆಂದು ಅದು ಹೇಳುವುದೂ ಇಲ್ಲ. ಅಂತಹ ಅರ್ಥವು ಅದರಲ್ಲಿ ಅಡಕವಾಗಿಯೂ ಇಲ್ಲ. ಈ ರೀತಿ ಅದು ಸುಮಾರು ಸುಮಾರು ಬಣ್ಣ ಬದಲಾಯಿಸುತ್ತ ಬಂದಿದೆ. ಹೀಗೆ ಬದಲಾಗುತ್ತ ಇನ್ನು ಪ್ರಯೋಗಕ್ಷೇತ್ರದಲ್ಲಿ ತೂರಲ್ಪಟ್ಟು ಅನುಭವದಿಂದ ತಡೆಗಂಡಂತೆ ಬಹುಬಗೆಯ ಪರಿವರ್ತನೆ ಹೊಂದಿ ಕೊನೆಗದು ಇಂದಿನ ಶಿಕ್ಷಣಕ್ಕೆ ಹೆಚ್ಚು ಬಿಟ್ಟುಕೊಡದ ಒಂದು ಪದ್ಧತಿಗೆ ಬಂದೀತೆನ್ನೋಣ.

ಮ್ಯುನಿಸಿಪಾಲಿಟಿಗೆ ಕಮಿಷನರುಗಳು ಬೇಕೇ ಬೇಡವೇ?

ಅವಶ್ಯಕವಾಗಿಯೂ ಬೇಕೇ ಬೇಕೆಂದು ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ಡೆಪ್ಯುಟಿ ಸ್ಪೀಕರರಾದ ಮಿಸೆಸ್ ಲಕ್ಷ್ಮೀಪತಿಯವರ ಪ್ರಕಟ ಅಭಿಮತ. ಕಾರ್ಯನಿರ್ವಾಹಕ ಕರ್ತವ್ಯಗಳನ್ನು ನೋಡಿಕೊಳ್ಳಲಿಕ್ಕೆ ಕಮಿಷನರಿರುವುದು ಜೇಯಲ್ ಮ್ಯಾನಿಗೆ ಒಳ್ಳೆಯದೇ. ಅನುದಿನದ ಕಾರ್ಯನಿರ್ವಾಹವು ವಿಚಕ್ಷಣತೆಯಿಂದಲೂ ಸುಸಂಘಟಿತವಾಗಿಯೂ ನಡೆಯಬೇಕಾದರೆ ಕಮಿಷನರು ಕಾರ್ಯನಿರ್ವಾಹದ (ಎಕ್ಸೆಕ್ಯುಟಿವ್) ಪ್ರಾಮುಖ್ಯ ಅಧಿಕಾರಿಗಳಾಗಿರಬೇಕು. ಅವರು ಸರಕಾರದಿಂದ ನಿಯಮಿತರಾಗಿರುವುದರಿಂದ ಮುನಿಸಿಪಲ್ ಕೌನ್ಸಿಲಿನೊಳಗಣ ಪಂಗಡ ಉಪಪಂಗಡಗಳ ಘರ್ಷಣೆ ವರ್ಚಸ್ಸುಗಳಿಂದೆಲ್ಲ ವಿರಹಿತರಾಗಿದ್ದು ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಅದುದರಿಂದ ಕಮಿಷನರನ್ನು ತೆಗೆದು ಹಾಕಬೇಕೆಂದು ಎಷ್ಟು ಚಳವಳವಿದ್ದರೂ ಸರಕಾರವು ಅವರನ್ನಿಡುವ ನಿಶ್ಚಿತವಾದ ತೀರ್ಮಾನ ಮಾಡಿಯದೆ— ಎಂದು ಮಧುರೆಯಲ್ಲಿ ಜರಗಿದ ಪ್ರಾಂತಿಕ ಮುನ್ಸಿಪಲ್ ನೌಕರರ ಹನ್ನೊಂದನೆಯ ಪರಿಷತ್ತಿನ ತನ್ನ ಅಧ್ಯಕ್ಷ ಭಾಷಣದಲ್ಲಿ ಹೇಳಿದರು.

ಬೊಂಬಾಯಿ ಸಮಾಚಾರ

ಮುಂದೇನು ಮಾಡಬೇಕು

ಕಾಂಗ್ರೆಸು ಹನ್ನೊಂದು ಪ್ರಾಂತಗಳಲ್ಲಿ ಅಧಿಕಾರವನ್ನು ಪಡೆಯಬೇಕು. ಕಾಂಗ್ರೆಸು ಪ್ರಜೆಯೊಂದ ತನ್ನ ಮಂತ್ರಿಗಳ ... ಸಹಕರಿಸಬೇಕು. ಜೊತೆ ಚುನಾವಣೆಗಳನ್ನು ಜಾರಿಗೆ ತಂದು, ಪ್ರಾಂತ್ಯಗಳ ಮೂಲಕವೇ ಹಿಂದೂ-ಮುಸ್ಲಿಂ ಪ್ರಶ್ನೆಯನ್ನು ಬಿಡಿಸಬೇಕು. 'ಸಂಟ್ರಲಿ'ನಲ್ಲಿ ಕಾಂಗ್ರೆಸ್ ಸರ್ವಾಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಳ್ಳಬೇಕು. ಅಥವಾ ಇನ್ನಾರೂ ಹಾಗೆ ಮಾಡದಂತೆ ತಡೆಗಟ್ಟಬೇಕು. ಇಡೀ ರಾಷ್ಟ್ರದಲ್ಲಿಲ್ಲ ಚಳವಳವನ್ನು ಹೂಡಿ, ಸದ್ಯ ಒಲ್ಲೆ ಬರಲಿರುವ ಸಂಯುಕ್ತ ರಾಜ್ಯಾಂಗ ಘಟನೆಯ ಕುಂದುಕೊರತೆಗಳನ್ನು ಜನರಿಗೆ ತೋರಿಸಿಕೊಡಬೇಕು. ಕಾಂಗ್ರೆಸಿನ ಭವಿಷ್ಯದ ಸರ್ವ ಚಟುವಟಿಕೆಗಳನ್ನೂ ಭಾರತದ ಜನತೆಯ ನೇರವಾದ, ಮಹತ್ತ್ವಾಗಿ ... ಹಸ್ತಗತ ಮಾಡಬೇಕು, ಎಂದು ಶ್ರೀ ಸತ್ಯಮೂರ್ತಿಯವರು ಮಂಗಳವಾರ ಸಂಜೆ ಕಾಂಗ್ರೆಸ್ ಹೌಸಿನಲ್ಲಿ ಭಾಷಣ ಮಾಡುತ್ತಾ ಹೇಳಿದರು.

"ಉಪಾಯಗಳಿಂದಲೇ ಮಂತ್ರಿಮಂಡಲವು ಸಾಧ್ಯವೇ"

"ಬಂದ ಹಾಗೆ ಹಿಂದ ಹೋಗು ಸುಬ್ಬ ... " ಎಂಬಂತೆ ಬಂಗಾಲ ಸರಕಾರದ ಫೈನಾನ್ಸ್ ಮಂತ್ರಿಗಳಾದ ಆನರೇಬಲ್ ನಳಿನೀರಂಜನ ಸರಕಾರರವರು, ಬಂಗಾಲದಲ್ಲಿ ಒಡಂಬಡಿಕೆಯ ಮಂತ್ರಿ ಮಂಡಲವನ್ನು ಸ್ಥಾಪಿಸುವುದರ ಕುರಿತು, ಕಾಂಗ್ರೆಸಿನ ಹೈಕಮಾಂಡಿನೊಡನೆ ವಿಚಾರಿಸಿ... ವ ಬೊಂಬಾಯಿಗೆ ಬಂದಿದ್ದವರು, ನಿರಾಶರಾಗಿ ಹಿಂದಿರುಗಿದರು. ಕಾಂಗ್ರೆಸ್ಸಿನಧಿಪತಿಯಾದ ಶ್ರೀ ಫಿರ್ಲರವರೂ ಮಹಾತ್ಮಾಜಿಯವರೂ ಪಂಡಿತ ಮಿತ್ರರು, ಶ್ರೀ ಸರ್ಕಾರರವರು ಭಿ...ರವರ ಬೆನ್ನು ಹಿಡಿದು, ಹೈಕಮಾಂಡಿನೊಡನೆ ವಿಚಾರಿಸುವರ ವಿಚಾರಕ್ಕೆ ಬರುವಂತೆ ಏರ್ಪಾಟು ಪಡೆದು, ಅಲ್ಲಿಂದ ಬೊಂಬಾಯಿಗೆ ಬರುವಂತಾಯಿತು. ಇಲ್ಲಿ ಸುಭಾಷಚಂದ್ರಭೋಸರವರಿಗೆ ತಮ್ಮ ಉಪಾಯವನ್ನೆಲ್ಲಾ ಬಿಚ್ಚಿ ಹೇಳಲು, ಕೂನೆಗೆ ಒಲೇ ಉಪಾಯಗಳು ನರಯಲ್ಲದೆ, ಮಂತ್ರಿ ಪದವಿಯನ್ನು ಸ್ವೀಕರಿಸುವ ಜನರ ಹೆಸರೇ ಹೊರಡಲಿಲ್ಲ. ಆದ್ದರಿಂದ ಹೈಕಮಾಂಡು, ತಮ್ಮ ಚತುರೋಪಾಯಗಳನ್ನು ಬಂಗಾಲಿಗೆ ಹಿಂತಿರುಗುವಂತೆ ಶ್ರೀ ಸರ್ಕಾರರವರಿಗೆ ಸೂಚಿಸಿತು.

"ಕಾಂಗ್ರೆಸು ನಗರ ಸಭೆಯನ್ನು ಪಡೆಯಲಿ"

"...ಂಬಯಿ ನಗರವು ಇಡೀ ಭಾರತದಲ್ಲೇ ಸುಂದರ ಗೃಹ"ವೆಂಬ ಬಿರುದನ್ನು ಪಡೆದಿದೆ ಪ್ರಧಮ ನೋಟಕ್ಕೆ ಇದರ ಸುವಿಲಾಸಗಳು ಕಂಡುಬಂದರೂ ಹಿಂಬದಿಯನ್ನು ನೋಡಿದ್ದಲ್ಲಿ ಕೊಳಕು ಕೂಪಗಳು ಕಂಡುಬರುವವು. ಈ ಹೊಲಸು ಹಟ್ಟಿಗಳಲ್ಲಿ ನಿಜವಾದ ಜನಲಯ ವಾಸಮಾಡುತ್ತಿದೆ. ಇಂಥ ಕೊಳಕುಗಳನ್ನು ತಗದೂಗಯ ಬೆಕಾದರ, ಜನತೆಯ ಜೀವನವು ಬಳಕನ್ನು ಕಾಣಬೇಕಾದರ, ಕಾಂಗ್ರೆಸಿಗೆ ಒಟುಕೊಡಿ ಎಂದ್ರನಾಡ್ ಕಲ್ಪತ್ತಾ ವಿದಿಲಾದ ಸ್ಥಳಗಳಲ್ಲ ನಗರಸಭೆಗಳು ಕಾಂಗ್ರೆಸ್ ಸದಸ್ಯರಿಂದ ಬೆಳಗುತ್ತಿರಲು, ಮುಂಬಯಿನಗರವು ಇನ್ನೂ ಹಿನ್ನಟ್ಟುತ್ತಿದೆ ಇತರ ನಗರಸಭೆಗಳಲ್ಲಿ ಹಣದ ಅಡಚಣೆ ಇರುವುದರಿಂದ ಯಾವಕಾರ್ಯವನ್ನು ಮಾಡಲು ಸಾಧ್ಯವಾಗಲಿಲ್ಲ ಆದರೆ ಮುಂಬಯಿಯ ನಗರಸಭೆಯಲ್ಲಿ ಹಣವು ಹೊರಚೆಲ್ಲುತ್ತಿದ್ದರೂ ಅದನ್ನು ಉಪಯೋಗಿಸುವವರಿಲ್ಲದೆ ಉಳಿದಿದೆ ಆದ್ದರಿಂದ ಕಾಂಗ್ರೆಸಿಗೆ ಓಟು ಕೊಟ್ಟು, ಅದರ ಪ್ರತಿಫಲವನ್ನು ಪಡೆಯಿರಿ" ಪಂಡಿತ ಜವಹರಲಾಲ್ ನೆಹರುರವರು, ಸೋಮವಾದ ಅಗ್ರಿಪಾದ್ ಮೈದಾನಿನಲ್ಲ ನಗರಸಭೆಯ ಚುನಾವಣೆಯ ಕುರಿತಾಗಿ ಜರಗಿದ ಸಾರ್ವಜನಿಕ ಸಭೆಯಲ್ಲಿ, ಈ ವೀರವಾಣಿಗಳ ಮೂಲಕ, ತಮ್ಮ ಸಂದೇಶವನ್ನು ಜನತೆಗೆ ತಿಳಿಯ...

ತಾ 5-1-1939ರ ನಂತರ

ನವಯುಗದ

ಮಕರಸಂಕ್ರಾಂತಿ ವಿಶೇಷ ಸಂಚಿಕೆಗೆ

ಜಾಹೀರಾತನ್ನು

ಸ್ವೀಕರಿಸಲಾಗುವುದಿಲ್ಲವೆಂದು

ಈ ಮೂಲಕ ತಿಳಿಸಲಾಗಿದೆ

Advt. Manager

ಪಡಿಸಿದರು. ಶ್ರೀ ಸುಭಾಷರವರಿಗೆ ಸೌಖ್ಯವಿಲ್ಲದಿದ್ದುದರಿಂದ ಅವರು ಈ ಸಭೆಗೆ ಬರಲಿಲ್ಲ ಶ್ರೀಗಳಾದ ಲಕ್ಷ್ಮ ಕೃಪಲಾನಿ ಮೊದಲಾದವರು ಹಾಜರಿದ್ದರು

ಸ್ಪೈನಿಗಾಗಿ ಯುದ್ಧ ಮಾಡಿದ ವೀರ

ನಾಗಪುರದ ಗೋಪಾಲ ಮುಕುಂದ ಹುದ್ದಾರ್ ಎಂಬವರು, ಸ್ಪೈನಿನಲ್ಲಿ ಜನರಲ್ ಫ್ರಾಂಕೋಗೆ ವಿರುದ್ಧವಾಗಿ ಯುದ್ಧ ಮಾಡಿ ಅವನಿಂದ ಸೆರೆಹಿಡಿಯಲ್ಪಟ್ಟು ಬ್ರಿಟಿಷರ ಮಾತಿನ ಮೇರೆಗೆ ಬಿಡಲ್ಪಟ್ಟವರು ರವಿವಾರ ಮುಂಬಯಿಗೆ ಬಂದು ಇಳಿದರು ಮುಂಬಯಿಯ ಜನತೆಯು ವಿತ್ತು ಕಾಮಗಾರರು ಇವರಿಗೆ ಸ್ವಾಗತವನ್ನಿತ್ತರು. ಇವರು 1936ರಲ್ಲಿ ಸೈನಿಕ ಶಿಕ್ಷಣಕ್ಕಾಗಿ ಇಂಗ್ಲಂಡಿಗೆ ಹೋದವರು, ಅಲ್ಲಿಂದ ಸ್ಪೈನಿನ ಜನತೆಯ ಪರವಾಗಿ ಯುದ್ಧ ಮಾಡಲು ಅಂತರರಾಷ್ಟ್ರೀಯ ಬ್ರಿಗೇಡ ಸದಸ್ಯರಾಗಿ ಸ್ಪೈನಿಗೆ ಹೋಗಿದ್ದರು ಹೀಗೆ ಸ್ಪೈನಿನಲ್ಲಿ ಜನರಲ್ ಫ್ರಾಂಕೋಗೆ ವಿರುದ್ಧವಾಗಿ ಹೋರಾಡಿದ ಭಾರತೀಯರು ಅತಿ ವಿರಳ

ಅಕಾಲ ನಿಧನ

'ದಿ ಕೆನರಾ ಫಿಝಿಕಲ್ ಕಲ್ಚರ್ ಇನ್ಸ್ಟಿಟ್ಯೂಟಿನ ವ್ಯವಸ್ಥಾಪಕರಾದ ಪ್ರೊಫೆಸರ್ ಎನ್ ಲೀಷಪ್ಪನವರ ತೃತೀಯ ಪುತ್ರ ಭವಾನಿಶಂಕರನು ಕಲಕಾಲ ಅಸ್ವಸ್ಥ ಹಿಡಿದಿದ್ದು ಇದೇ 18ನೇ ತಾರೀಕು ಅದಿತ್ಯವಾರ ದೈವಾಧೀನನಾದನೆಂಬ ವಿಷಯವನ್ನು ತಿಳಿಸಲು ತುಂಬಾ ವಿಷಾದಪಡುವೆವು ಈ ಶೋಚನೀಯ ನಿಧನದಿಂದ ನಾವೆಲ್ಲರೂ ಪ್ರೊಫೆಸರರ ಕುಟುಂಬದವರ ದುಃಖದಲ್ಲಿ ಭಾಗಿಗಳಾಗಿರುವೆವಲ್ಲದೆ, ಭಗವಂತನು ಮೃತನ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುವೆವು

ಸ್ಪೈನಿನಲ್ಲಿ ಉಗ್ರ ರಣಾಗ್ರ ಉತ್ತರ ಚೈನಾ...

ಉತ್ತರ ಚೈನಾದಲ್ಲಿ

ಚೀನೀಯರ ಗೊರಿಲ್ಲಾ ಯುದ್ಧಕ್ರಮದಿಂದಾಗಿ ಜಪಾನಿಯರಿಗೆ ರೈಲುಸ್ಟೇಶನನ್ನು ಮತ್ತು ಹಿಡಿದ ನಗರಪಟ್ಟಣಗಳನ್ನು ಬಿಟ್ಟು ಊರನ್ನು ಗೆಲ್ಲಲು ಕಷ್ಟವಾಗಿದೆ. ಮಾತ್ರವಲ್ಲ ಊರಿಗೆ ಇಳಿಯಲು ಜಪಾನು ಸೈನಿಕರಿಗೆ ಈ ಚೀನೀಯರ ವಿಚಿತ್ರತರದ ಗೊರಿಲ್ಲಾ ಗುಪ್ತಕಾಳಗದ ಮುಟ್ಟಿಗೆ ಹೆದರುತ್ತಾರೆ ಆರ್ಥಿಕ ದೃಷ್ಟಿಯಿಂದ ಈ ಯುದ್ಧಕ್ರಮವು ಚೀನೀಯರಿಗೆ ಅನುಕೂಲ, ಜಪಾನಿಯರಿಗೆ ಕಾಲನಷ್ಟ ಜನನಷ್ಟ, ದ್ರವ್ಯನಷ್ಟ ಈ ತರದ ಯುದ್ಧಕ್ರಮದಿಂದಲ್ಲೇ ಜಪಾನಿಯರನ್ನು ಹಣ್ಣುಗೊಳಿಸಬೇಕೆಂದು ಚೀನೀಯರು ಪಟ್ಟಣಬಿಟ್ಟು ಹಳ್ಳಿ ಸೇರಿ ಗುಡ್ಡಕಾಡುಗಳಲ್ಲ ಅಡಗಿ ಕಾದಿರುವ ಹುಲಿಸಿಂಹಗಳಂತ ಹಾರಿಬೀಳಲು ಚದರಿ ಸಿದ್ಧರಾಗಿದ್ದಾರೆ

ಹೈದರಾಬಾದಿನ ಗಲಭೆಯು ಶಾಂತಿಗೊಳ್ಳುವ ಸಂಭವವಿದೆ

ಹಿಂದುಗಳೂ ಮುಸ್ಲಿಮರೂ ಐಕ್ಯದಿಂದ ಮುಂದೆ ಇರುವ ಯಾವ ಸೂತ್ರವನ್ನಾಗಲೀ ಸ್ವೀಕರಿಸಲು ಹೈದರಾಬಾದು ಸರಕಾರವು ಸಿದ್ಧವಿದೆ ಜನತೆಯಲ್ಲ ಈ ತೆರದ ಐಕ್ಯ ಸಾಧನೆಯ ಕುರಿತು ತುಂಬ ಕಳಕಳಿಯಿದೆ ಉಭಯ ಪಕ್ಷದ ಮುಂದಾಳುಗಳು ಒಪ್ಪಂದದ ಕಾಲುಶರತ್ತುಗಳನ್ನು ಪರಸ್ಪರ ಸೌಹಾರ್ದ ಹಾಗೂ ಸಹಾನುಭೂತಿಯಿಂದ ಅಂಗೀಕೃತವಾಗುವಂತೆ ತರುತ್ತಿದ್ದಾರೆ ಜಟಿಲ ಸಮಸ್ಯೆಗಳೆಲ್ಲವೂ ಬಿಡಿಸಲ್ಪಟ್ಟವು. ಇನ್ನುಳಿದವು ಒಪ್ಪೊಂದು ಮಹತ್ವದವುಗಳಲ್ಲ. ಅಂತೂ ಹೈದರಾಬಾದಿನಲ್ಲಿ ಹಿಂದೂಮುಸ್ಲಿಮರೊಳಗೆ ಮೈತ್ರಿಯು ಚಿರಗಿ ಸ್ಥಾಪನೆಯಾಗುವುದರಲ್ಲಿ ಸಂದೇಹವಿಲ್ಲ-ಹೀಗೆಂದು ಡಾ ಅಬ್ದುಲ ಹಮೀದರೂ ತನ್ನ ಒಂದುವಾರದ ಹೈದರಾಬಾದಿನ ಸಂದರ್ಶನದಲ್ಲಿ ಉಭಯಪಕ್ಷದ ಪ್ರಮುಖರನ್ನು ಕಂಡುಮಾತಾಡಿ ಬಳಿಕ ನಾಡಿನೋಡಿ ಸಂತೃಪ್ತರಾಗಿ ಬೊಂಬಾಯಿಗೆ ಹೊರಡುವಾಗ ಎಸೋಸಿಯೇಟೆಡ್ ಪ್ರೆಸ್ಸಿನ ಪ್ರತಿನಿಧಿಗಳಿಗೆ ಕೊಟ್ಟ ಭೇಟಿಯಲ್ಲಿ ಕಂಠೋಕ್ತವಾಗಿ ನುಡಿದಿರುವರು

ಡಾಕ್ಟರ್ ಅಂಬೇಡಕರರ ಆಶ್ವಾಸನೆ

ಕಾಂಗ್ರೆಸ್ ಮಂತ್ರಿಪಕ್ಷಕ್ಕ ರಾಜೀನಾಮೆ ಕೊಟ್ಟರೆ ಇಂಡಿಪಡೆಂಟ್ ಲೇಬರ್ ಪಾರ್ಟಿಯು ಅಸ್ಥಾನಕ್ಕೆ ಕಾಲಿಡುವುದಿಲ್ಲ

ಫಡರೇಶನನ್ನು ಪ್ರತಿಭಟಿಸುವುದಕ್ಕಾಗಿ ಕಾಂಗ್ರೆಸ್ಸು ತನ್ನ ಮಂತ್ರಿತ್ವಗಳಿಗಲ್ಲ ರಾಜಿನಾಮೆಕೊಟ್ಟರೆ ನನ್ನ ಪಾರ್ಟಿಯು ಅಲ್ಲಿ ಕಾಲಿಡುವುದಿಲ್ಲವೆಂದು ನಾನು ಬರೆದುಕೊಡುತ್ತೇನ ಮಾತ್ರವಲ್ಲ, ಫೆಡರೇಶನನ್ನು ಪ್ರತಿಭಟಿಸುವ ಕಾರ್ಯಕ್ರಮದಲ್ಲಿ ನನ್ನ ಪಕ್ಷವು ಕಾಂಗ್ರೆಸ್ ಪಕ್ಷದೊಂದಿಗೆ ಎದೆಯೊಡ್ಡಿ ಹೋರಾಡಲು ಸಿದ್ಧವಿದೆ ಎಂದು ಅಖಿಲಭಾರತ ಕಿಸಾನ್ ಸಭೆಯ ಅಧ್ಯಕ್ಷರಾದ ಸ್ವಾಮಿ ಸಹಜಾನಂದರನ್ನು ಸಂದರ್ಶಿಸಿದಾಗ ಆಶ್ವಾಸನಕೊಟ್ಟಿರುವರು ಡಾಕ್ಟರ್ ಅಂಬೇಡ್ಕರ್

ಸ್ಪೈಯಿನಿನಲ್ಲಿ ಉಗ್ರ ರಣಾಗ್ರ

ಮಯಾರ್ಲ್ಸ್, ಸರಾಗೋಶಾ, ಟೊರಿಬಾಸಾ, ಮಾರ್ಡಕಾನ್ಸ್ ಈ ಸ್ಥಳಗಳಲ್ಲಿ ಅತ್ಯುಗ್ರ ರಣಾಗ್ರವು ಈ ವಾರದಲ್ಲ ನಡೆಯಿತು ವಿಶೇಷ ನಷ್ಟ ಹಾನಿಗಳಿಂದ ವಿದ್ರೋಹಿಗಳಿಗೆ ಕಿಂಚಿತು ಪ್ರಯೋಜನ ದೊರೆತರೂ ಸರಕಾರದ ಪಕ್ಷವು ವೈರಿಯನ್ನು ಹಿಮ್ಮೆಟ್ಟಿಸಿಯದೆ. ವಿಮಾನಕಾಳಗದಲ್ಲಿ ಶತ್ರುವಿನ ನಾಲ್ಕು ವಿಮಾನಗಳನ್ನು ಪುಡಿಗೈದು ಕೆಳಗುರುಳಿಸಿದೆ ಬಾರ್ಸಿಲೋನಾದಲ್ಲಿ ಸೆರೆಹಿಡಿದ ಶತ್ರುಗಳ ಮೇಲೆ ದಂಗೆ, ವಿದ್ರೋಹ ಮುಂತಾದ ಮಹಾಪರಾಧಗಳಿಗಾಗಿ ಮರಣದಂಡನೆ ವಿಧಿಸಲಾದುದನ್ನು ನಿಲ್ಲಿಸಲಾಗಿದೆ.

ಚಿದಂಬರ ಮುನಿಸಿಪಾಲಿಟಿಯು ಮಾನಪತ್ರ ಸ್ವೀಕಾರದ ಸಮಯ ಹರಿಜನೋದ್ಧಾರದ ವಿಷಯವಾಗಿ ಭಾಷಣ ಮಾಡಿದ ಮಾನ್ಯ ಗೃಹಮಂತ್ರಿ ಮುನಿಸ್ವಾಮಿ ಪಿಳ್ಳೆಯವರು

ಜಪಾನ ಮಂತ್ರಿಮಂಡಲ ಸಭೆ

ಮಿಸಾನು ಹಿಡಿಯುವರ ಸಂಬಂಧ ರಶಿಯಾ ಸರಕಾರದವರ ಧೋರಣೆಯ ಬಗ್ಗೆ ಜಪಾನ ಮಂತ್ರಿಗಳು ಕೂಡಿ ಚರ್ಚೆ ನಡೆಸಿದರು. ಇದರ ಒಗ್ಗೆ ಆದ ಗೊತ್ತುವಳಿಯನ್ನ ಸೋವಿಯಟ್ ಸರಕಾರದವರು ಮಂರಿಯುತ್ತಿರುವುದರಿಂದ ಜಪಾನದ ಹಕ್ಕು ಬಾಧ್ಯತೆಗಳಿಗೆ ಬಾಧೆ ಬರಹತ್ತಿದೆಯೆಂದು ಅರಿಟಾ ಮಂತ್ರಿಗಳು ಸಾರಿದರು. ನೌಕಾ...

ಮಾತೆಯ ಪರ... ಸುತ್ತಿರುವರೆಂ... ಖರು ಹೇಳಿದರು

ಫ್ರೆಂಚ್ ...

ಜೀ...

ಹಣ ...ಶ್ವಸದ ಗೊತ್ತು... ಡಬೇಕೆಂದು ... ದ್ದಕ್ಕೆ ಮತಗಳ... ಮತಗಳಿಂದ ... ಚೇಂಬರದಲ್ಲಿ ... 281 ಪ್ರತಿಕೂಲ... ಯು ಸ್ಪೀಕರ... ಬಹುಮತದಿಂದ... ಸದ ಗೊತ್ತುವ... ದ್ದಿಲ್ಲ

ವಿಜ...

ನವಯು... ಬೇಕಾದ ಪ್ರತಿ... ಡಬೇಕಾ... ಮಂಗಳವ... ಜೇಕು ... ಪ್ರತಿಗಳನ್ನು... ಗಲಾರದೆಂದು... ಗಿದೆ. ಹಾಗೆಯೆ... ಹೆಚ್ಚು ಪ್ರತಿ... ಒರೆದು ತಿಳಿ... ಪ್ರತಿಗಳನ್ನು...

ಸಹ್ಯಾದ...

ಅಖಿಲಭಾ... ವರ್ಕಿಂಗಿ...

ಇದು ಜನವ... ಲಿಯದಲ್ಲಿ ಜರಗಿ... ಮುಂದರಿಸಿ ...

ಅಂಗೀ...

ಮಹಾತ್ಮಾ... ರಿಸಲ್ಪಟ್ಟ... ದಿವಾನ್ ಸರ್...

THE UDIPI ...

ನಿರಖು ಠೇವಣಾತಿ...

ಸಾ ಶೇ 4½ರ ಬಡ್ಡಿ...

ಸೇವಿಂಗ್ಸ್ ಬೇಂ...

ಪ್ರತಿ ನಿತ್ಯದ ಶಿಲ್ಕಿನ ಮೇಲೆ ಬಡ್ಡಿ ಸಿಗು...

ವಾರಕ್ಕೆರಡಾವರ್ತಿಯೂ ಚೆಕ್ಕುಗಳ...

ಸೌಕರ್ಯ...

ಹೆಚ್ಚಿನ ವಿವ...

ದಿ ಉಡುಪಿ ...

...ಲ್ಲಿ ಯುದ್ಧ — ಹೈದರಾಬಾದಿನಲ್ಲಿ ಶಾಂತಿ ನೆಲೆಗೊಳ್ಳುವ ಸಂಭವ.

...ನ್ನು ನಿರೀಕ್ಷಿ... ...ಯ ಪ್ರಮು... ...ಂಡಳಕ್ಕೆ ...ು ಮೇಲೆ ವಿ... ...ಹಾಸುಮಾ... ...ಗಳು ಕೇಳಿ... ...ಕೇವಲ 7 ...ಲು ಕಪ್ಪಿತು. ...ಲ ಮತ್ತು ...ದ ಮಸೂದೆ ...ಷ್ಟು ಕಡಿಮೆ ...ಮೇಲೆ ವಿಶ್ವಾ... ...ಸ್ವೀಕೃತವಾಗಿ

...ಗೆ ...ು ತಮಗೆ ...ಯಲ್ಲ ಮಾ... ...ನ್ನು ಪ್ರತಿ... ...ಗೆ ತಿಳಿಸ... ...ರಿ ಹೆಚ್ಚಿಗೆ ...ಸಕೂಲವಾ... ...ರ ತಿಳಿಸಲಾ... ...ರ ಕೆಲವರು ...ಕಂಬವಾಗಿ ...ರಿಗೆ ಹೆಚ್ಚಿಗೆ ...ಬಗಲಿಲ್ಲ ...ಮೆನೇಜರ್

...ಂಗ್ರೆಸ್ ...ತ ಸಭೆ ...ಬಾರ್ಡೋಲಿ ...ತಾ. 11ಕ್ಕೆ ...ಟ್ಟಿತು ...ರಿಂದ ತಯಾ... ...ಲ್ ಮತ್ತು ...ಪಟೇಲ್‌ರವರಿಂ...

ದ. ಚರ್ಚಿಸಲ್ಪಟ್ಟ ಸಂಧಾನ ಶರ್ತಗಳು ರಾಜಕೋಟಿ ಠಾಕೋರ್ ಸಾಹೇಬರಿಂದ ಅಂಗೀಕರಿಸಲ್ಪಟ್ಟವೆಯಂತೆ. ಕಾಳಗವು ಒಂದೊವ್ಮೆಗೆ ಶಾಂತವಾದುದರಿಂದ ರಾಜಕೋಟೆಯ ಪ್ರಜಾಜನರಲ್ಲಿ ಆನಂದೋತ್ಸಾಹಗಳು ಹೊರಸೂಸತೊಡಗಿವೆ.

ಚಕ್ರವರ್ತಿಗಳ ಸಂದೇಶ

ಕ್ರಿಸ್‌ಮಸ್ ಮತ್ತು ಹೊಸ ವರುಷದ ತಂತೀ ಸಂದೇಶಗಳನ್ನು ವೈಸರಾಯ ಪ್ರಭುಗಳೂ ಸಾರ್ವಭೌಮ ಚಕ್ರವರ್ತಿಯರೂ ಪರಸ್ಪರ ಬದಲಾಯಿಸಿಕೊಂಡರು.

ಮಾನ್ಯ ಕಂದಾಯ ಮಂತ್ರಿ ಪ್ರಕಾಶಂರವರು. ಇವರು ಮಲಬಾರ್ ಕೃಷಿಕರ ಕಷ್ಟನಷ್ಟಗಳನ್ನು ಪರಿಶೀಲಿಸುವ ಸಲುವಾಗಿ ಕಲ್ಲಿಕೋಟೆ, ತಲಚೇರಿ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದರು.

ಕೈದಿಗಳ ಬಿಡುಗಡೆಗಾಗಿ

ಬಂಗಾಳ ಕೈದಿಗಳ ಬಿಡುಗಡೆಯ ಬಗ್ಗೆ ಕಲ್ಕತ್ತಾ ಹೆಮ್ಮಕ್ಕಳು ಜಯಘೋಷಗಳನ್ನು ಮಾಡುತ್ತಾ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಗೈದರು.

ದೇವಸ್ಥಾನ ಪ್ರವೇಶ ಮಸೂದೆ

ದೇವಸ್ಥಾನ ಪ್ರವೇಶ ಮಸೂದೆಯ ಪ್ರಚಾರಕಾರ್ಯದ ಸಲುವಾಗಿ ಹೊರಟ ಪಾರ್ಲಿಮೆಂಟರಿ ಸೆಕ್ರಿಟರಿ ಶ್ರೀ. ಎಮ್.

ಬೆಪಿನೀಡುರವರು ಪಾಲ್ಘಾಟ್ ಮತ್ತು ಗುರುವಾಯೂರಲ್ಲಿ ಮಹಾಜನ ಸಮುದಾಯದ ಮುಂದೆ ಸದ್ರಿ ಮಸೂದೆಯ ಆವಶ್ಯಕತೆಯನ್ನು ವಿವರಿಸಿ ಸಮರ್ಥಿಸಿ ಭಾಷಣ ಮಾಡಿದರು

ದರ್ಬಾರ ಗೋಪಾಲದಾಸರಿಗೆ ಶಿಕ್ಷೆ

ರಾಜಕೋಟೆಯಲ್ಲಿ 14 ಜನರ ಕೈದು

ದರ್ಬಾರ ಗೋಪಾಲದಾಸರಿಗೆ ಒಂದು ತಿಂಗಳ ಕಠಿಣ ಶಿಕ್ಷೆ ಮತ್ತು 100ರೂಪಾಯಿ ದಂಡ, ಕೊಡದಿದ್ದರೆ ಪುನಃ ಒಂದು ವಾರ ಶಿಕ್ಷೆ ವಿಧಿಸಲ್ಪಟ್ಟಿತು. "ಕ್ಯಾಡೆಲ್ಲರೇ ತಿರುಗಿ ಹೋಗಿರಿ" ಎಂಬ ಪಟಗಳನ್ನು ಹಿಡಿದು ಪುರಜನರು ದೊಡ್ಡದೊಂದು ಮೆರವಣಿಗೆ ಹೋಗುವಾಗ 14 ಜನರ ಕೈಸರೆಯಾಯಿತು.

ಲಾಹೋರದಲ್ಲಿ ಬಾಂಬು ಸ್ಫೋಟ

ಲಾಹೋರದಲ್ಲಿ ಭಯಂಕರ ಬಾಂಬು ಸ್ಫೋಟನದಿಂದ ಇಬ್ಬರು ದಂಡಾಳುಗಳಿಗೆ ವಿಪರೀತ ಗಾಯವಾಗಿದೆ. ಪೋಲೀಸ ಅಧಿಕಾರಿಗಳು ಒಬ್ಬನನ್ನು ಸೆರೆಹಿಡಿದಿದ್ದಾರೆಂದು ತಿಳಿದುಬರುತ್ತದೆ.

ಫ್ರೆಂಚ್ ಮುಖ್ಯ ಮಂತ್ರಿಗಳ ಟೂನಿಸ್ ಪ್ರವಾಸ

ಪಾರ್ಲಿಮೆಂಟ ಅಧಿವೇಶನದ ತರುವಾಯ ಫ್ರೆಂಚ್ ಮುಖ್ಯಮಂತ್ರಿಗಳಾದ ಎಂ. ಡಿಲೇಡಿಯರು ಟೂನಿಸಕ್ಕೆ ಪ್ರವಾಸ ಹೋಗುವರೆಂದು ಸುದ್ದಿ.

ಮದ್ರಾಸಿನಲ್ಲಿ ಮೈಸೂರು ಯುವರಾಜರ ಸತ್ಕಾರ ಕೂಟ

ಇದೇ ತಾ. 25ರಲ್ಲು ಮೈಸೂರು ಯುವರಾಜರು ಮದ್ರಾಸಿನ ಸಾನ್‌ಶೋಮ್ ಮೈಸೂರು ಪೆಲೇಸಿನಲ್ಲಿ ಟೀಪಾರ್ಟಿಯನ್ನೊಂದು ಏರ್ಪಡಿಸಿದ್ದರು ಪ್ರಧಾನ ಮಂತ್ರಿ ಸಿ ರಾಜಗೋಪಾಲಾಚಾರ್ಯರ್, ಪ್ರಿನ್ಸ್ ಆಫ್ ಆರ್ಕಾಟ್, ಕುಮಾರರಾಜ ಮತ್ತು ರಾಜಕುಮಾರಿ ಸಿತಾಪುರಂ ಮೊದಲಾದವರು ಹಾಜರಿದ್ದರು.

ಶ್ರೀ. ಜಯಕರರಿಗೆ ಹೊಸ ನೇಮಕ

ರಾದ ಶ್ರೀ. ಜಯಕರರು ಪ್ರಿವೀ ಕೌನ್ಸಿಲಿನ ನ್ಯಾಯಮೂರ್ತಿಗಳಾಗಿ ನೇಮಿಸಲ್ಪಟ್ಟಿದ್ದಾರೆಂದೂ ಇದಕ್ಕೆ ಅವರ ಅನುಮತಿ ದೊರೆತಿದೆಯೆಂದೂ ಸುದ್ದಿ.

ಬೇಗಮ್ ಅನ್ಸಾರಿಯವರ ನಿಧನ

ಬಹು ದಿವಸ ಬೇನೆಯಿಂದ ನರಳುತ್ತಿದ್ದ ಡಾ| ಅನ್ಸಾರಿಯವರ ಧರ್ಮಪತ್ನಿಯಾದ ಬೇಗಮ್ ಅನ್ಸಾರಿಯವರು ತಾ. 21ರಲ್ಲು ಹೊಸ ಡಿಲ್ಲಿಯಲ್ಲಿ ಸ್ವರ್ಗಸ್ಥರಾದರು.

ಮುಸ್ಲಿಂ ಲೀಗಿನ ಅಧಿವೇಶನ

ಮುಸ್ಲಿಂ ಲೀಗಿನ 29ನೇ ಅಧಿವೇಶನದ ಅಧ್ಯಕ್ಷರಾದ ಮಿ| ಜಿನ್ನರು ತಾ. 24ರಲ್ಲಿ

ಮುಂಜಾನೆ ಪಟ್ನಾಕ್ಕೆ ಬಂದರು. ಅವರನ್ನು ಮೆರವಣಿಗೆಯೊಂದಿಗೆ ದೊಡ್ಡ ದೊಡ್ಡ ಬೀದಿಗಳಲ್ಲಿ ಕರೆದೊಯ್ದರು ಬೀದಿಗಳ ಇಕ್ಕೆಡೆಗಳಲ್ಲಿ ಹಸುರುಅಂಗಿಯ ನ್ಯಾಶನಲ್ ಗಾರ್ಡದವರು ಕಿಕ್ಕಿರಿದು ನೆರೆದಿದ್ದರು

ಮೇಯರರಿಗೆ ಮುಷ್ಟಿ ಪ್ರಹಾರ

ನ್ಯೂಯೋರ್ಕ ನಗರದ ಮೇಯರವರಾದ ಲಾಗಾರ್ಡಿಯಾರವರು ನಗರ ಭವನದಿಂದ ಬರುತ್ತಿರುವಾಗ ಸಾಝಿಪುಂಡನೊಬ್ಬನು ಅವರ ಮೈಮೇಲೆ ಹಾರಿ ಮುಷ್ಟಿಯಿಂದ ಚೆನ್ನಾಗಿ ಪ್ರಹಾರಮಾಡಿದನು ಅಲ್ಲಿಯೇ ನಿಂತ ಪೋಲೀಸಿನವರು ಆ ಪುಂಡನನ್ನು ಹಿಡಿದು ಮೂರ್ಛೆಬೀಳುವ ಹಾಗೆ ಹೊಡೆದರು, ಅನಾಹುತದ ಮುಂಚೆ "ನಾಝಿ ಪಕ್ಷವನ್ನು ಟೀಕಿಸುವುದನ್ನು ನಿಲ್ಲಿಸದಿದ್ದರೆ ಪ್ರಾಣಕ್ಕೆ ಎರವಾಗೀರಿ" ಎಂದ ಸ್ವಸ್ತಿಕದ ರುಜುವಾತಿದ ಕಾಗದಕೊಡಲ್ಪಟ್ಟಿತ್ತಂತೆ

ಪಂಜಾಬದ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸಿಗೆ ವಿಜಯ:

ಶೇಖುಪುರ ಜಿಲ್ಲಾ ಬೋರ್ಡ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರಾದ ಮೂಲಸಿಂಗರು ಪ್ರತಿಸ್ಪರ್ಧಿಗಳಾದ ಜಗಜಿತ್ ಸಿಂಗರನ್ನು 16 ಮತಗಳಿಂದ ಸೋಲಿಸಿದರೆಂದು ಸುದ್ದಿ. ಜಗಜಿತ್ ಸಿಂಗರು ಪಂಜಾಬ ಸರಕಾರದ ಪಾರ್ಲಿಮೆಂಟರಿ ಕಾರ್ಯದರ್ಶಿಗಳಿರುವರು ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಇಲ್ಲಿ ಪ್ರಚಂಡ ವಿಜಯವನ್ನು ಸಂಪಾದಿಸಿದ್ದು ಎರಡನೇ ಬಾರಿ.

ಸರ್ ಸಯ್ಯದ್ ರೇಝಾ ಆಲಿಯವರು

ಕೇಂದ್ರಶಾಸನ ಸಭೆಯಲ್ಲಿ ಶೌಕತ ಅ

ಕ್ಕೆ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದಿದ್ದಾರೆಂದು ವಾರ್ತೆ.

ಕೊಲ್ಹಾಪುರ ಮುಖಂಡರ ಕೈದು-ಜವಾಬ್ದಾರೀ ಸರಕಾರದ ಅಪೇಕ್ಷೆ

ಇದೇ ತಾ. 25ರಲ್ಲಿ ಕೊಲ್ಹಾಪುರದ ಕೃಷಿಕರೂ ರೈತರೂ ಒಟ್ಟುಗೂಡಿ ಶ್ರೀ. ಮಾಧವರಾಯರ ಮುಂದಾಳುತನದಲ್ಲಿ ಪ್ರಧಾನಮಂತ್ರಿಯ ಮನೆಗೃಹಕ್ಕೆ ತೆರಳಿ ತಮ್ಮ ಹಾಲು ಹವಾಲೆಗಳ ತೀರ್ಮಾನದ ಬಗ್ಗೆ ಮೊರೆಯಿಟ್ಟರು. ತೀರ್ವೆ ಕಮ್ಮಿಯಾಗಬೇಕು; ನಾಗರೀಕ ಸ್ವಾತಂತ್ರ್ಯ ಹಕ್ಕುಗಳು ದೊರಕಬೇಕು. ಕೊಲ್ಹಾಪುರ ಸ್ಟೇಟಿನಲ್ಲಿ ಪ್ರಜಾಜವಾಬ್ದಾರಿ ಸರಕಾರವು ಸ್ಥಾಪಿಸಲ್ಪಡಬೇಕು ಶ್ರೀ ಬಾಗಲ ಮಾಧವರಾಯರು ಮುಂದಾಳುತನ ವಹಿಸಿದುದರಿಂದ ಅವರು ಕೈದುಮಾಡಲ್ಪಟ್ಟರು. ಕೂಡಲೇ ಸರ್ವರೂ ಶಾಂತ ರೀತಿಯಿಂದ ವರ್ತಿಸಬೇಕೆಂದು ಉಪದೇಶಿಸಿತ್ತು ಶ್ರೀ. ರಾಯರು ಶ್ರೀ. ಜಾಗ್ತೇಬರನ್ನು ತನ್ನ ಪ್ರತಿನಿಧಿ ಲೀಡರರನ್ನಾಗಿ ನೇಮಿಸುವಂತೆ ಏರ್ಪಾಟುಮಾಡಿಕೊಂಡರು. ಮೆರವಣಿಗೆಯಲ್ಲಿ ಭಾಗವಹಿಸಿದ ಪ್ರಮುಖರನ್ನು ಕಂಡು ಮಾತುಕಥೆ ನಡಿಸಿದ ಬಳಿಕ ಪ್ರಧಾನಮಂತ್ರಿಗಳು ನೆರೆದ ಜನಸಮುದಾಯವನ್ನುದ್ದೇಶಿಸಿ ಸರಕಾರದಿಂದ ಪರಿಶೀಲಿಸಲಾಗುವುದು ಎಂದರು.

ನೆಲ್ಲೂರಲ್ಲಿ ಸಮ್ಮೇಳನ

ಮದ್ರಾಸ ಸಂಸ್ಥಾನದ ಪ್ರಾಂತಿಕ ಬಿನ್ ಸರಕಾರೀ ಸಹಕಾರಿ ನೌಕರರ ದ್ವಿತೀಯ ಸಮ್ಮೇಳನವು ತಾ. 26ರಲ್ಲು ನಲ್ಲೂರು ಕೇಂದ್ರದಲ್ಲಿ ಶ್ರೀ. ಎ ಶಂಕರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಹಕಾರ ಸಂಘಗಳ ನೌಕರರಿಗೂ ಅವರ ಮೇಸ್ತ್ರರರಿಗೂ ವೈತ್ರೀಭಾವವು ಚೆನ್ನಾಗಿರಬೇಕೆಂದೂ ಪ್ರತಿ ಜಿಲ್ಲೆಯಲ್ಲೂ ಉಭಯತ್ರರ ಕಮಿಟಿಗಳ ನೇಮಕವಾಗಬೇಕೆಂದೂ ನಿರ್ಧರಿಸಲಾಯಿತು.

ಕಾಂಗ್ರೆಸ್ ಪ್ರೆಸಿಡೆಂಟರಿಗೆ ದೇಹಾಲಸ್ಯ

ರಾಷ್ಟ್ರಪತಿ ಸುಭಾಸಬಾಬುಗಳವರು ದೇಹಾಲಸ್ಯದ ನಿಮಿತ್ತ ತಮ್ಮ ಕಾರ್ಯಕ್ರಮಗಳನ್ನು ಮುಂದರಿಸಿರುವುದರಿಂದ ದಕ್ಷಿಣ ಹಿಂದೂಸಾನದ ಪ್ರವಾಸಕಾರ್ಯ

...ANK LTD.
...ಪೋಜಿಟು)ಗಳು
...ೀಕರಿಸಲ್ಪಡುವವು
...ೀವನಾತಿಗಳಿಗೆ
...ದೆ ಒಮ್ಮೆಗೆ ರೂ. 100/-ರ ತನಕವೂ
...ಕ ಹಣ ವಾಪಾಸು ಪಡೆಯುವ
...ುದು.
...ಚಾರಿಸಿರಿ
...ಂಕ್ ಲಿಮಿಟೆಡ್,
...ಪಿ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)
ತಾ 25-12-38

ಹೈಕೋರ್ಟ್ ಜಡ್ಜರಿಗೆ ಸತ್ಕಾರ— ಮಂಗಳೂರು ವಕೀಲ ಸಂಘದವರು ಮದ್ರಾಸ್ ಹೈಕೋರ್ಟಿನ ಮಾನ್ಯ ನ್ಯಾಯಾಧೀಶರುಗಳಾದ ಶ್ರೀ। ಎಸ್. ವರದಾಚಾರ್ಯರಿಗೂ, ಶ್ರೀ. ಕೆ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರಿಗೂ ತಾ. 23ನೇ ಸಾಯಂಕಾಲ ಒಂದ ಟೀಪಾರ್ಟಿ ಸತ್ಕಾರವನ್ನಿತ್ತರು. ಫಲಾಹಾರಾದ್ಯುಪಚಾರಗಳಾದ ಮೇಲೆ ಶ್ರೀ. ಎ. ವರದರಾಯರು ಮಾನ್ಯ ಅತಿಥಿಗಳ ಗುಣಕಥನಮಾಡಿ ಭಾಷಣಮಾಡಿದರು. ಮತ್ತು ಇದೇ ಸಂದರ್ಭದಲ್ಲಿ ನ್ಯಾಯವು ಬೇಗನೆ ದೊರಕುತ್ತಿಲ್ಲವೆಂದು ಸಹ ಸೂಚಿಸಿದರು. ಜಸ್ಟಿಸ್ ಶ್ರೀ. ವರದಾಚಾರ್ಯರು ವಕೀಲ ಸಂಘದವರಿಗೆ ತಮ್ಮ ವಂದನೆಗಳನ್ನರ್ಪಿಸಿದರು. ಮತ್ತು ನ್ಯಾಯವು ಬೇಗನೆ ಲಭಿಸಬೇಕಾದರೆ ನ್ಯಾಯಾಧೀಶರುಗಳೂ, ವಕೀಲರುಗಳೂ ಪರಸ್ಪರ ಸಹಕರಿಸಿದರೇನೇ ಸಾಧ್ಯವಾಗಬಹುದೆಂದರು. ಈ ಸಮಾರಂಭದಲ್ಲಿ ಸರಕಾರಿ ವಕೀಲರಾದ ಶ್ರೀ. ಬಿ. ಸೀತಾರಾಮರಾಯರು ಸಹ ಭಾಗವಹಿಸಿದ್ದರು. ಧನ್ಯವಾದಾರ್ಪಣೆ ಯೊಂದಿಗೆ ಸಭಾಂತ್ಯವಾಯಿತು.

ಶ್ರೀ. ಗಣೇಶ ವಾಚನಾ ಸಂಘಕ್ಕೆ ಸಂದರ್ಶನ— ಮದ್ರಾಸ್ ಹೈಕೋರ್ಟು ಜಡ್ಜರುಗಳಿಬ್ಬರೂ ವಕೀಲ ಸಂಘದವರ ಸತ್ಕಾರವನ್ನು ಸ್ವೀಕರಿಸಿದ ತರುವಾಯ ಶ್ರೀ ಗಣೇಶವಾಚನಾಸಂಘಕ್ಕೆ ಚಿತ್ತೈಸಿ ಅಲ್ಲಿ ಶ್ರೀ. ಕೆ. ಬಾಲಕೃಷ್ಣರಾಯರು ನಿರ್ಮಿಸಿದ್ದ ತಾಳಮದ್ದಳೆಯನ್ನು ಕೇಳಿ ಸಂತೋಷಪಟ್ಟರು. ವಾಚನಾ ಸಂಘದವರು ಅವರುಗಳಿಗೆ ಹೂವಿನ ಹಾರ ತುರಾಯಿಗಳನ್ನು ಕೊಟ್ಟು ಸತ್ಕರಿಸಿದರು.

ವೈಸ್ ಚಾನ್ಸಲರ್ ಶ್ರೀ। ಎನ್. ಎಸ್. ಸುಬ್ಬರಾಯರ ಆಗಮನ— ಮೈಸೂರು ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾದ ಶ್ರೀ. ಎನ್. ಎಸ್. ಸುಬ್ಬರಾವ್ ಯಂ. ಎ., (ಕ್ಯಾಂಟಬ್), ಬಾರ್-ಎಟ್-ಲಾ ಇವರು ನಿನ್ನೆಯ ದಿನ ಸಾಯಂಕಾಲ ಮಂಗಳೂರಿಗೆ ಚಿತ್ತೈಸಿದರು.

ಸತ್ಕಾರ— ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರೂ, ಕಂಠೀರವ ಪತ್ರಿಕೆಯ ಸಂಪಾದಕರೂ ಆಗಿರುವ ಶ್ರೀ. ಬೋಳಾರ ವಿಟ್ಠಲರಾಯರು ತಮ್ಮ ಬಂಗ್ಲೆಯಲ್ಲಿ ಈ ದಿನ ಸಾಯಂಕಾಲ ಮಾನ್ಯ ವೈಸ್ ಚಾನ್ಸಲರಿಗೂ ಅವರ ಪತ್ನಿಯವರಿಗೂ ಒಂದು ಟೀಪಾರ್ಟಿಯನ್ನಿತ್ತರು. ಅನೇಕ ಕನ್ನಡ ಪಂಡಿತರುಗಳೂ, ವಿದ್ವಾಂಸರೂ ಮತ್ತು ಪತ್ರಿಕಾ ಪ್ರತಿನಿಧಿಗಳೂ ಅನೇಕ ಮಹಿಳೆಯರೂ ಆಹ್ವಾನಿತರಾಗಿದ್ದರು. ಶ್ರೀ। ಎಚ್. ಭೀಮರಾಯರು ಆಹ್ವಾನಿತರ ಪರಿಚಯವನ್ನು ಶ್ರೀ। ಸುಬ್ಬರಾಯರಿಗೆ ಮಾಡಿಸಿದರು. ಸ್ವಲ್ಪ ಕಾಲ ಎಲ್ಲರೊಡನೆಯೂ ಸಂಭಾಷಣೆಮಾಡಿ, ಕನ್ನಡದಲ್ಲಿ ಅಥವಾ ದೇಶಭಾಷೆಯಲ್ಲಿ ಶಿಕ್ಷಣಕೊಡುವ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ಇದೇ ಸಾಯಂಕಾಲ 5-30ಕ್ಕೆ ಕೆನರಾ ಹೈಸ್ಕೂಲು ದಿನಾಚರಣೆಯ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ಅವರು ವಹಿಸಿದರಾಗಿ ತಿಳಿದುಬರುತ್ತದೆ.

ಜಿ. ಕಾ. ಕಮಿಟಿಯ ಸಭೆ— ಎರಡು ಸಾರಿ ಸಭೆ ಜರಗಿಸಬೇಕೆಂದು ಅನೇಕ ಸದಸ್ಯರು ಸಹಿ ಹಾಕಿ ಅರ್ಜಿ ಕಳುಹಿಸಿದರೂ ಸಭೆಯನ್ನು ಕರೆಯಲು ಜಿ. ಕಾ. ಕಮಿಟಿಯ ಅಧ್ಯಕ್ಷರು ನಿರಾಕರಿಸಿ ಸದಸ್ಯರ ಅಭಿಪ್ರಾಯಕ್ಕೆ ತಿರಸ್ಕಾರವನ್ನು ತೋರಿಸಿದರಷ್ಟೆ. ಈಗ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಸಭೆಕರೆಯಬೇಕೆಂದು ತಿಳಿಸಿದ್ದಾರಾಗಿ ಸುದ್ದಿ. ಆದು ಕಾರಣ ಜನವರಿ ತಾ. ೧ನೇ ಅಪರಾಹ್ನ 2ಘಂಟೆಗೆ ಜಿ. ಕಾಂ. ಕಮಿಟಿಯ ಸಭೆಸೇರುವುದೆಂದು ನೋಟೀಸು ಕೊಟ್ಟಿರುವುದಾಗಿ ಸುದ್ದಿ. ಆದರೆ ಇದರಲ್ಲಿ ಅವಿಶ್ವಾಸದ ಠರಾವುಗಳ ಪ್ರಸ್ತಾವವೇ ಇಲ್ಲವೆಂದು ತಿಳಿದುಬರುತ್ತದೆ. ಆದರೆ ಶ್ರೀ। ಹಿ. ರಾಮರಾಯ ಮಲ್ಯರು ಜಿ. ಕಾ. ಕಮಿಟಿಯ ಅಧ್ಯಕ್ಷರ ಮೇಲೆ ಅವಿಶ್ವಾಸದ ಠರಾವನ್ನು ತರುವುದಾಗಿ ನೋಟೀಸು ಕೊಟ್ಟಿರುವರೆಂದೂ ಈ ಠರಾವನ್ನು ಶ್ರೀ। ನಾರಾಯಣಕಿಲ್ಲೆಯವರು ಅನುಮೋದಿಸುವರೆಂದೂ ತಿಳಿದುಬಂದಿದೆ.

ಶ್ರೀ. ಹಿ. ರಾ. ಮಲ್ಯರ ಪ್ರಕಟಣೆ— ಇದೇ ಬರುವ ತಾ. 1-1-1939ನೇ ಮಧ್ಯಾಹ್ನ ಘಂಟೆ 2ಕ್ಕೆ ಮಂಗಳೂರು ಫಳ್ನೀರ್ ಬೈಲು ಬಜಾರಿನಲ್ಲಿರುವ ಕಾಂಗ್ರೆಸ್ ಆಫೀಸಿನಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಜರಗಲಿದೆಯೆಂದು ತಮಗೆಲ್ಲರಿಗೂ ನೋಟೀಸು ಈ ಮೊದಲೇ ಸಿಕ್ಕಿರುತ್ತದೆ. ಈ ನೋಟೀಸಿನಲ್ಲಿ ರಿಕ್ವಿಜಿಶನ್ ಮತ್ತು ಅವಿಶ್ವಾಸ ಠರಾವುಗಳ ಪ್ರಸ್ತಾಪವಿಲ್ಲ. ಆದರೂ ಈ ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ। ಶ್ರೀನಿವಾಸ ಮಲ್ಯರ ಮೇಲೆ ಅವಿಶ್ವಾಸ ಠರಾವು ತರುವುದಾಗಿ ಕ್ಲುಪ್ತಸಮಯದೊಳಗೆ ಅಧ್ಯಕ್ಷರಿಗೆ ತಿಳಿಸಲಾಗಿರುವುದರಿಂದ ಈ ವಿಚಾರದ ಚರ್ಚೆಯೂ ಈ ಸಭೆಯಲ್ಲಿ ನಡೆಯಲಿಕ್ಕಿರುತ್ತದೆ. ಆದುದರಿಂದ ಜಿಲ್ಲೆಯಲ್ಲಿಯ ಕಾಂಗ್ರೆಸ್ ಚಳವಳದ ದೃಷ್ಟಿಯಿಂದ ಈ ಮಹಾಸಭೆಯು ವಿಶೇಷ ಮಹತ್ವದ್ದಿರುತ್ತದೆ. ಕಾರಣಾಂತರಗಳಿಂದ ಸಭೆಗೆ ಬರಲು ತಮಗೆ ತೊಂದರೆಯಾಗುವಂತಿದ್ದರೂ ಕೂಡ ತಾವು ತಪ್ಪದೆ ಈ ಸಭೆಗೆ ಬಂದು ತಮ್ಮ ಸದಸ್ಯತನದ ಪವಿತ್ರ ಕರ್ತವ್ಯವನ್ನು ಪಾಲಿಸಬೇಕೆಂದು ಆಗ್ರಹಪೂರ್ವಕ ವಿನಂತಿ. ತಮಗೆ ಸಮೀಪದಲ್ಲಿರುವ ಇತರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರಿಗೂ ಈ ಸಂಗತಿಯನ್ನು ತಿಳಿಸಿ ಸಭೆಗೆ ಅಗತ್ಯಬರುವಂತೆ ತಿಳಿಸಬೇಕಾಗಿಯೂ ವಿನಂತಿ.

ಹಿ ರಾಮರಾಯ ಮಲ್ಯ.

ದ. ಕ. ಜಿಲ್ಲಾ ಸೆಂಟ್ರಲ್ ಕೋಆಪರೇಟಿವ್ ಬೇಂಕಿನ ರಜತೋತ್ಸವ— ಬೇಂಕಿನ ರಜತೋತ್ಸವವು ಕೊಡಿಯಾಲಬೈಲಿನಲ್ಲಿರುವ ಬ್ಯಾಂಕ್ ಕಟ್ಟಡದಲ್ಲಿ 18-2-39ಕ್ಕೆ ಮೈಸೂರು ದಿವಾನರಾದ ಸರ್. ಮಿರ್ಜಾ, ಎಂ. ಇಸ್ಮಾಯಿಲರ ಅಧ್ಯಕ್ಷತೆಯಲ್ಲಿ ಜರಗಲಿಕ್ಕಿರುವುದು. ಈ ಸಮಯದಲ್ಲಿ "ಜುಬಿಲಿ ಸೋವನೀರ್" ಪ್ರಕಟವಾಗಲಿರುವುದು. ಇದರಲ್ಲಿ ಜನವರಿ ಅಂತ್ಯದೊಳಗೆ ಕಳುಹಿಸಲ್ಪಡುವ ಹಿತೈಷಿಗಳ ಸಂದೇಶಗಳೂ ಪ್ರಕಟಿಸಲ್ಪಡುವವೆಂದು ತಿಳಿದುಬರುತ್ತದೆ.

ಬೈಂದೂರು— ಇಲ್ಲಿ ತಾ. 20-12-38 ರಲ್ಲಿ ಶ್ರೀ. ಬಿ. ಸುಬ್ಬಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಒಂದು ಯಕ್ಷಗಾನ ಕೂಟವು ಜರಗಿತು. ಈ ಸಂದರ್ಭದಲ್ಲಿ ರೂ. 200 ಇಲ್ಲಿಯ ಆಸ್ಪತ್ರೆಯ ಕಟ್ಟಡಕ್ಕೆ ಸಂಯೋಗಿಸಿ, ಪ್ರಸೂತಾಗಾರವನ್ನು ಕಟ್ಟಿಸುವ ಬಗ್ಗೆ ಜಮಾ ಬಂದಿರುವುದಾಗಿ ತಿಳಿಯುತ್ತದೆ.

ರೂ 600 ಇಲ್ಲಿಯ ನೆರೆಹಾವಳಿಗೊಳಪಟ್ಟ ಜನತೆಯ ಸಹಾಯಾರ್ಥವಾಗಿ ಜಿಲ್ಲಾ ನೆರೆಹಾವಳಿ ನಿವಾರಣಾ ಸಂಘದಿಂದ ಮಂಜೂರಾಗಿದೆಯಾಗಿ ತಿಳಿದು ಬಂದಿದೆ.

ಉಪ್ಪುಂದ— ಇಲ್ಲಿ ಈ ವರುಷ ರಥೋತ್ಸವ ಕಾಲದಲ್ಲಿ ಇಲ್ಲಿಯ ತರುಣವೃಂದದ ಸಾಹಸದಿಂದ ಜೂಗಾರಾಟವು ಸಂಪೂರ್ಣವಾಗಿ ನಿಲ್ಲಿಸಲ್ಪಟ್ಟಿರುವುದು.

ಮೂಲ್ಕಿ— ಸ್ಥಳೀಯ ಬೋರ್ಡು ಹೈಸ್ಕೂಲು ಫುಟುಬೋಲ್ ಟೀಮಿನ XIಕ್ಕೂ, ಯೂತ್ ಲೀಗಿನ XIನಿಗೂ ತಾ. 23ರಲ್ಲಿ ನಡೆದ ಫುಟ್‌ಬೋಲ್ ಸ್ಪರ್ಧೆಯಲ್ಲಿ ಮೊದಲಿನವರು ಗೆದ್ದಿರುತ್ತಾರೆ.

ಉಡುಪಿ

ಹೈಕೋರ್ಟ್ ಜಡ್ಜರ ಆಗಮನ—ಧಾರ್ಮಿಕ ಲೌಕಿಕ ಸತ್ಕಾರಕೂಟಗಳು

ಮದ್ರಾಸ್ ಹೈಕೋರ್ಟಿನ ಜಡ್ಜರಾದ ಶ್ರೀ. ಕೆ. ಕೃಷ್ಣಸ್ವಾಮಿ ಐಯ್ಯಂಗಾರರವರು ಇದೇ ತಾ. 22ರಲ್ಲಿ ಉಡುಪಿಗೆ ಚಿತ್ತೈಸಿದರು. ಜಿಲ್ಲಾಜಡ್ಜರಾದ ಶ್ರೀ. ಪಿ. ರಾಜಗೋಪಾಲಾಚಾರ್ಯರೂ ಜತೆಯಲ್ಲಿ ಬಂದಿದ್ದರು. ಇವರುಗಳ ಆಗಮನದ ಸಲುವಾಗಿ ಸ್ಥಳೀಯ ವಕೀಲಕೂಟದವರು ಡಿ. ಮು. ಕೋರ್ಟಿನ ವರಾಂಡದಲ್ಲಿ ಗಾರ್ಡನ್ ಪಾರ್ಟಿ ಸತ್ಕಾರಕೂಟವನ್ನೇರ್ಪಡಿಸಿದ್ದರು. ಈ ಸಮಾರಂಭಕ್ಕೆ ಸಾರ್ವಜನಿಕ ಪ್ರಮುಖರಿಗೆ ಆಮಂತ್ರಣವಿತ್ತು. ಈ ಸಂದರ್ಭದಲ್ಲಿ ಶ್ರೀ ನರಸಿಂಹದಾಸರ ಕೊಳಲು ಗಾಯನವಿತ್ತು. ಶ್ರೀಕೃಷ್ಣಮಠದಲ್ಲಿ ಮಾನ್ಯ ಅತಿಥಿಗಳಿಗೆ ಪರ್ಯಾಯ ಶ್ರೀ ಫಲಿಮಾರು ಶ್ರೀಗಳವರು ಸಂಸ್ಥಾನಕ್ಕುಚಿತವಾದ ಉಡುಗೊರೆಗಳನ್ನಿತ್ತು ಔತಣಸಮಾರಂಭವನ್ನೇರ್ಪಡಿಸಿದ್ದರು.

ಯಕ್ಷಗಾನ— ಶ್ರೀಕೃಷ್ಣ ಮಠದಲ್ಲಿ ಇದೇ ತಿಂಗಳ ತಾ. 30, 31 ಮತ್ತು ಜನವರಿ ತಾ. 1ರಲ್ಲಿ ಯಕ್ಷಗಾನ ಕೂಟಗಳು ಜರಗಲಿರುವವು ಎಂದು ತಿಳಿದುಬರುತ್ತದೆ.

ಹೈದರಾಬಾದು ದಿನಾಚರಣೆ— ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಹೈದರಾಬಾದು ದಿನಾಚರಣೆಯು ಕಳೆದ ಶುಕ್ರವಾರ ಆಚರಿಸಲಾಯಿತು. ಮುನಿಸಿಪಲ್ ಚೆಯರ್‌ಮೇನ್ ಶ್ರೀ ಲಕ್ಷ್ಮೀನಾರಾಯಣ ಆರಾಂಬರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಶ್ರೀಗಳಾದ ನಾಗಪ್ಪಕಾಮತ್ ಮತ್ತು ಯು. ಜಿ. ರಾಯರ ಭಾಷಣಗಳಾಗಿ ದಬ್ಬಾಳಿಕೆಯ ನಿಷೇಧ, ಆಶ್ರಿತ ರಾಜ್ಯಗಳ ಪ್ರಜೆಗಳ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಾನುಭೂತಿಪರ ನಿರ್ಣಯಗಳಾದುವು. ಶ್ರೀ. ಟಿ. ರಮಾನಾಥಪೈಗಳ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಮುನಿಸಿಪಲ್ ಕಮಿಶನರರ ಟ್ರಾನ್ಸ್‌ಫರ್— ಮುನಿಸಿಪಲ್ ಕೌನ್ಸಿಲಿನ ಕಮಿಶನರರಾದ ಶ್ರೀ ನಾರಾಯಣ ಶೆಟ್ಟಿಯವರಿಗೆ ಮಂಗಳೂರಿಗೆ ಟ್ರಾನ್ಸ್‌ಫರ್ ಆಗಿರುವುದಾಗಿ ವದಂತಿ.

ಬಾತ್ಮಿ— ರಥಬೀದಿಯ ಚರಂಡಿಗಳು ಇನ್ನೂ ಮುಚ್ಚಲ್ಪಡಲಿಲ್ಲ. ರಥಬೀದಿಯ ಇಲೆಕ್ಟ್ರಿಕ್ ದೀಪಗಳು ಇನ್ನೂ ಗರ್ಭಧಾರಣೆಯಲ್ಲೇ ಇವೆ. ಅಷ್ಟರಿಂದ ದಿನ ಜನಸಂದಣಿಯಿಲ್ಲದ ಓಣಿಯು ದುರಸ್ತಿಯಾದರೂ ಪಣಿಯಾಡಿ ವಾರ್ಡಿನ ಬೈಲುಕೆರೆಗೊಂದು ದೀಪವಿನ್ನೂ ಹಾಕುವ ವ್ಯವಸ್ಥೆ ಆಗಲಿಲ್ಲವಲ್ಲಾ ಎಂಬು ಪೋಟರೊಬ್ಬರ ಬಾತ್ಮಿ

ಕಾಡಿಗೆದ್ದುದಲ್ಲ, ಆಡಿಯೇ ಗೆದ್ದುದು ಎಂಬ ಹೆಸರಿನಿಂದ ರಬ್ಬರ್ ಬಾಲ್ ಟೂರ್ನಮೆಂಟಿನವರ ಕಡೆಯಿಂದ ಒಂದು ಬಾತ್ಮಿ ಬಂದಿದೆ. ಅದರಲ್ಲಿ ಸೋಶಿಯಲ್‌ನವರು ಆಡಿಯೇ ಗೆದ್ದಿರುತ್ತಾರೆ. ಕ್ರಿಕೆಟ್‌ನಲ್ಲಿ ಕಾಡಿಗೆಲ್ಲುವುದೆಂಬುದಿಲ್ಲ, ಜೋಲಿಯವರು ತಾವಾಗಿಯೇ ಸೋಶಿಯಲಿನವರಿಗೆ ವಿಕ್ಟರಿಡಿಕ್ಲೇರ್ ಮಾಡಿರುವುದರಿಂದ ಆಡಿಯೇ ಗೆದ್ದಂತಾಯಿತೆಂದೇ ಬಾತ್ಮಿಯ ಸಾರಾಂಶ [ಸಂ. ನ.]

The Commonwealth Assu. Co., Ltd.

ಕೋಮನ್‌ವೆಲ್ತ್

ಎಸ್ಸೂರೆನ್ಸ್ ಕೋ., ಲಿಮಿಟೆಡ್, ಪೂನಾ ಸಿಟಿ.
ಜೀವವಿಮೆಯಲ್ಲಿ ಅತ್ಯುತ್ತಮ ಸೌಕರ್ಯಗಳನ್ನು ಸುಲಭದರದಲ್ಲಿ ಒದಗಿಸಿಕೊಡುವುದು

ಈ ಸಂಸ್ಥೆಯ ಹಿರಿಯ ಗುಣ.

ಈ ಉತ್ತಮವಾದ ವಿಮಾಸಂಸ್ಥೆಯ ಪ್ರತಿನಿಧಿಯಾಗಿ, ಇಲ್ಲವೆ ವಿಮೆಮಾಡಿ ಸೇರಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಣವರಿಗೆ ಬರೆದುಕೊಳ್ಳಿರಿ:—

ಎಸ್. ಪಿ ಆರ್. ನಾಯಕ್ ಎಂಡ್ ಸನ್ಸ್,
ಸ್ಪೆಶಲ್ ಏಜಂಟ್.
ಕಾರ್ ಸ್ಟ್ರೀಟ್, ಮಂಗಳೂರು.

ಗನಾಸಕರ್ ಎಂಡ್ ಸನ್ಸ್,
ಚೀಫ್ ಏಜಂಟ್ಸ್,
ಆನಂದರಾವ್ ಸರ್ಕಲ್
ಬೆಂಗಳೂರು.

ಅಮೇರಿಕದಲ್ಲಿ ಲೀಮಾ ಪರಿಷತ್ತಿನ ನಿರ್ಣಯ

ಉತ್ತರ ಮತ್ತು ದಕ್ಷಿಣ ಅಮೇರಿಕಾ ಖಂಡದ ಸಮಸ್ತ ಸರಕಾರಗಳ ಒಗ್ಗಟ್ಟಿನ ಗೊತ್ತುವಳಿ

ಅಮೇರಿಕಾ ಖಂಡದ ಯಾವತ್ತು ಇಪ್ಪತ್ತೊಂದು ಸ್ವತಂತ್ರ ಸರಕಾರಗಳ ಪ್ರತಿನಿಧಿಗಳಿಂದ ಕೂಡಿದ ಈ ಮಹಾ ಪರಿಷತ್ತಿನಲ್ಲಿ ಆ ಪ್ರತಿನಿಧಿಗಳ ಸಹಿ ಹಾಕಲ್ಪಟ್ಟ 'ಅಮೇರಿಕದ ಒಗ್ಗಟ್ಟಿನ ಪ್ರತಿಜ್ಞಾ ಪತ್ರ' ಎಂಬುದು ಮಹತ್ವದ್ದಿದೆ. ಆ ಸರಕಾರಗಳೆಲ್ಲ ತಮ್ಮ ತಮ್ಮ ಒಳ ಆಡಳಿತಗಳ ವಿಷಯದಲ್ಲೆಲ್ಲ ಸರ್ವತಂತ್ರ ಸ್ವತಂತ್ರವಾಗಿದ್ದುಕೊಂಡೇ ಅಖಿಲ ಖಂಡದ ಹಿತರಕ್ಷಣೆಯ ವಿಧ್ಯಮಾನಗಳಲ್ಲಿ ಒಗ್ಗಟ್ಟಿನ ಧೋರಣೆಯ ತತ್ವವನ್ನು ಅಂಗೀಕರಿಸಿದ್ದಾರೆ. ಭೇದೋಪಾಯದಿಂದ ಹೊರಗಿನವರ್‍ಯಾರೂ ಪ್ರವೇಶಿಸದಂತೆ ಭದ್ರವಾದ ಐಕ್ಯದ ವ್ಯೂಹವನ್ನು ರಚಿಸುವ ಬದ್ಧಕಂಕಣರಾಗಿದ್ದಾರೆ. ತಮ್ಮ ರಾಜ್ಯಗಳ ಸರ್ವ ಸ್ವತಂತ್ರವನ್ನು ನಿರ್ಬಲಗೊಳಿಸುವ ಪರರಾಷ್ಟ್ರೀಯ ಪ್ರಾಬಲ್ಯವನ್ನು ಪ್ರತಿಭಟಿಸುವ ದೀಕ್ಷೆಯನ್ನು ಕೈಗೊಂಡಿರುವರು. ಅಮೇರಿಕಾ ಖಂಡದ ರಾಜ್ಯಗಳ ಪರಸ್ಪರ ಐಕ್ಯತೆ, ಶಾಂತಿ, ಭದ್ರತೆಗಳಿಗೆ ಕೆಡಕಾಗುವಂತಹ ಹೊರಗಿನ ಕೈಯೇನಾದರೂ ತೋರಿದರೆ ಅದನ್ನು ತುಂಡರಿಯುವುದಕ್ಕೆ ಎಲ್ಲರೂ ಒಂದಾಗಬೇಕೆಂಬುದು ಆ ಪ್ರತಿಜ್ಞಾ ಪತ್ರದ ಮೂಲಭೂತ ತತ್ವ.

ಸಂದೇಶ

ಬೆಳಗಾವಿ ಜಿಲ್ಲೆಯಲ್ಲಿಯ ಒಂದೇ ಒಂದಾದ ರಾಷ್ಟ್ರೀಯ

ಕನ್ನಡ ವಾರಪತ್ರಿಕೆ

ವಿವಿಧ ಲೇಖನಗಳಿಂದಲೂ, ಕರ್ನಾಟಕದ, ಹಿಂದುಸ್ಥಾನದ ಮತ್ತು ಪರದೇಶದ ಚಿತ್ರವೈಚಿತ್ರ ಸುದ್ದಿಗಳಿಂದಲೂ, ಸಂಗತಿಗಳಿಂದಲೂ ಕೂಡಿದ ಪತ್ರಿಕೆ ಇರುವದು, ಕಾರಣ ಕರ್ನಾಟಕದ ಎಲ್ಲ ಕಡೆಯ ಕನ್ನಡಿಗರೇ ಇಂದೇ ಚಂದಾದಾರರಾಗಿರಿ.

ಸ್ಥಳದವರಿಗೆ ೧—೮—೦.
ಪರಸ್ಥಳದವರಿಗೆ ೨—೮—೦.

ಏಜಂಟರು, ಜಾಹೀರಾತುದಾರರು ಹೆಚ್ಚಿನಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮ್ಯಾನೇಜರ,
ಸಂದೇಶ ಕಾರ್ಯಾಲಯ,
ಹನುಮನ ಬೀದಿ, ಬೆಳಗಾವಿ.

ತಾರಾ ವಿಹಾರ ಗ್ರಂಥಮಾಲಾ

ಅಂತರ್ ರಾಷ್ಟ್ರೀಯ ಪ್ರಸಿದ್ಧಿಯನ್ನು ಪಡೆದ ಪಂಡಿತ ತಾರಾನಾಥರ ಹಾಗೂ ಇತರ ಸುಪ್ರಸಿದ್ಧ ಸಾಹಿತಿಗಳ ಪ್ರಚೋದನಾತ್ಮಕ ಕ್ರಾಂತಿಕಾರಕ ವಿಚಾರಗಳು ಗ್ರಂಥರೂಪವಾಗಿ ಪ್ರಕಟವಾಗುವವು. ೧ ವರ್ಷದಲ್ಲಿ ಹಲವೆಡೆಗಳನ್ನರಳಿಸುವ ಆರು ಗ್ರಂಥಗಳು ಹೊರಡುವವು. ಅಲ್ಲದೆ ಒಂದು ವಿಶೇಷಾಂಕವು ಉಚಿತವಾಗಿ ಕೊಡಲಾಗುವುದು.

ಚಂದಾ: ಒಂದೇ ರೂಪಾಯಿ ಮಾತ್ರ.
ಕರ್ನಾಟಕದ ಮೂಲೆಮೂಲೆಗೂ ಬೇಕಾದ ಪತ್ರ. ಜಾಹೀರಾತುಗಳಿಗೆ ಒಳ್ಳೇ ಸುಸಂಧಿ.

ವಿಶೇಷ ಮಾಹಿತಿಗೆ ಬರೆಯಿರಿ.
ವಿಶೇಷ ಕಾರಣಗಳಿಂದ ವಿ. ಪಿ. ಕಳುಹಿಸಲಾಗುವುದಿಲ್ಲ.
ಮ್ಯಾನೇಜರ್:
ತಾರಾ ವಿಹಾರ ಕಾರ್ಯಾಲಯ,
ಪ್ರೇಮಾಯತನ ಆಶ್ರಮ, ತುಂಗಭದ್ರಾ.

ರೂಪಾಯಿಗೆ ಹದಿನಾರೇ ಆಣೆ.

The noumenon within the phenomenon.

(ಲೇಖಕರು:—ಶ್ರೀ ಬಿ. ಶ್ಯಾಮರಾಯ, ಶೆಟ್ಟಿ, ಬಿ. ಎ., ಎಲ್. ಟಿ., ಉಡುಪಿ)

The world is made up of different characters who take pleasure in contrasting. Hence we hear people saying "I am a man of wide means, you of slender means, I am a Kaiser, you a beggar, I have married the daughter of a Caesar, you that of pauper, I am an artist, you an artisan, I am a scholar, you a pedlar." Thus is man's boast in this planet. He thinks that he alone is the paragon among men and by his feats in his field 'has raised a mortal to the skies or brought an angel down'. What an exaggerated value! What a mistaken notion! In his egoism he forgets that his neighbour also has a place and an equally good place in the economy of Nature. O! man, there are castles and cottages, palaces and hovels. Can the castles and palaces say that because their furnitures are far richer they can dispense with the broom that keeps all places neat and trim and drives off dirt and disease? Whatever the cost of the gramophone be, whatever the records you use, it gives no music without the pin. It is not worth while to bank too much on your comb or coat or your degree. If you do so, you live like the fabled frog in a well. Don't exaggerate the value of the company of a prince or a noble. The larger world is the matter-of-fact business world where money alone will count. A rupee is a rupee whether it emanates from a prince or a peasant. **Shed false values. Establish correct values.** Don't run after names. If you are a rose you will smell as sweet by any other name. Don't call your hen a swan, your rupee, a dollar. Who will pay more than sixteen annas for your rupee, if you speak in terms of parties, hand-shake, pedigree, pelf and power. Life does not want more emphasis on this. The rupee has an independent value of only sixteen annas, if it is good and less or nothing, if it is bad.

[ಬಟ್ಟೆಯಂಗಡಿಯ ಬಾಗಿಲ ಹೊರಗಿಟ್ಟ ಕುರ್ಚಿಯಲ್ಲಿ ನಾಗ ಮತ್ತು ರುಕ್ಮ ಟೀಪಿಯಲ್ಲಿ ಕೂತುಕೊಂಡಿದ್ದಾಗ ಗಟ್ಟಿಹತ್ತಿ ಮಡಿಮ ಬಂದಿದ್ದ ಬಡ ತ್ಯಾಂಪನು ಅಂಗಡಿಯೊಳಗೆ ಪ್ರವೇಶಿಸಿ ಬಟ್ಟೆಬರೆಗಳನ್ನು ನೋಡುತ್ತಾ]

ತ್ಯಾಂಪ—ಸಾಹುಕಾರ್ರೇ, ಈ ಶೀರೆಗೇನು?

ಸಾಹುಕಾರ—ಆರು ರೂಪಾಯಿ.

ತ್ಯಾಂಪ—ನಾಲ್ಕಕ್ಕೆ ಬಾರದಾ?

ಸಾಹುಕಾರ—ನಮ್ಮಲ್ಲಿ ಒಂದೇ ದರ.

ತ್ಯಾಂಪ—ಇದೊಂದೇ ಅಲ್ಲ, ಬೇರೆ ಬಟ್ಟೆಬರೆ ಬೇಕು—ಒಂದು ಕೊಡೆ, ಒಂದು ಶಾಲು, ಎರಡು ವೇಸ್ಟಿ-ಮಕ್ಕಳುಮರಿಗಳಿಗೆ ಅಂಗಿ ಅರಿವೆ. ಹೀಗೆಲ್ಲಾ ಬೇಕು. ದರದಲ್ಲಿ ಏನಾದರೂ ಹೊಂದಿಸಿ ಕೊಡೋದಾದರೆ ತೆಗೀತೇನೆ.

ಸಾಹುಕಾರ—ತೆಗೀರಿ. ಆದರೆ ಒಂದಕ್ಕೆ ನಾಲ್ಕು ಹೇಳಿ ಮೂರುಗಳಿಗೆ ಚೌಕಸಿ ನಡಿಸುವ ರಗಳೆ ವ್ಯಾಪಾರ ನಮ್ಮಲ್ಲಿಲ್ಲ. ನಿಶ್ಚಿತವಾದ ದರ ನಮ್ಮದು. ರೂಪಾಯಿಗೆ ಹದಿನಾರಾಣೆ ಎಂದ ಹಾಗೆ! ಕಡಿಮೆಯೂ ಇಲ್ಲ. ಹೆಚ್ಚೂ ಇಲ್ಲ.

(ತ್ಯಾಂಪನು ಬೇಕಾದ ಬಟ್ಟೆಬರೆಗಳನ್ನು ಕೊಂಡುಕೊಂಡು ಹೊರಟುಹೋದುದನ್ನು ಕಂಡು)

ನಾಗ—ನೋಡಿದಿಯಾ, ರುಕ್ಮಾ! ಆ ಬೆಪ್ಪಣ್ಣ ಗಟ್ಟಿಹತ್ತಿ ಹೊಟ್ಟೆ ಕಟ್ಟಿ, ರಟ್ಟೆ ಕುಟ್ಟಿ ಎರಡು ಪುಡಿಕಾಸು ಮಾಡಿಕೊಂಡು ಬಂದದೆ-ನೋಡು, ಈಗ ಮನೆಮುಂದಿ ಎದುರು ತನ್ನ ತೋರ ತೋರಿಸೋಣಾಂತ ಹಾರುತ್ತೆ! ಆ ಮುಂಡ್ಯನ ಜಡ್ಡಿನ ತೋಮನೆ ಮಗನಲ್ಲಾ ಅದು. ಈಗ ಆಕಾಶನೇ ಕಾಣ್ತೆ!

ರುಕ್ಮ—ಹೌದೂಂತೇನೆ! ಅದು ಆ ಪುಡಿಕಾಸಿನ ಗಡಿಬಿಡಿಯಲ್ಲಿ ಅಂಗಡಿಗೇನೇ ನೋಡ್ತಿತ್ತಲ್ಲದೆ, ನಾವು ಇಲ್ಲಿ ಕೂತಿರೋದು ಅದರ ಕಣ್ಣಿಗೇ ಬೀಳಲಿಲ್ಲ!

(ಹತ್ತಿರದಲ್ಲೇ ಒಂದು ಕೊಡೆಯನ್ನು ಬಿಡಿಸಿ ನೋಡುತ್ತಿದ್ದ ಗ್ರಾಹಕರೊಬ್ಬರು ಇವರ ಮಾತುಕತೆಗಳನ್ನು ಕೇಳಿ)

ಗ್ರಾಹಕ—ನೀವು ಹೀಗೆ ಅವನನ್ನು ಅಷ್ಟು ತಾತ್ಸಾರ ಮಾಡಿ ಮಾತಾಡಲು ಕಾರಣವೇನು? ಅವನೇನು ಅಂಗಡಿಯಿಂದ ಕದ್ದು ಕೊಂಡು ಹೋದನೇ?—ದುಡ್ಡು ಸಂಪಾದನೆ ಮಾಡಿಕೊಂಡು ಬಂದಿದ್ದಾನೆ-ಆ ದುಡ್ಡಿನ ಬೆಲೆ ಅವನಿಗೆ ಗೊತ್ತುಂಟು!-ಸಾಹುಕಾರನಿಗೂ ಗೊತ್ತಿದೆ! ನೋಡಿ, ಸಾಹುಕಾರರು ಹೇಗೆ ಸಾಮಾನು ಕಟ್ಟಿಕೊಟ್ಟು ಬಿಟ್ಟರು! ಅವರೆ ಈಗ ನೀವು ಆಡಿದ ಮಾತಿಗೆ ಏನು ಬೆಲೆಯುಂಟು?

ನಾಗ—ನಮ್ಮನ್ನು ವಿಚಾರಮಾಡಲಿಕ್ಕೆ ನೀವು ಯಾರು?

ಗ್ರಾಹಕ—ನಾನು ನಿಮ್ಮನ್ನು ವಿಚಾರ ಮಾಡಲಿಲ್ಲ—ನಿಮ್ಮ ಮಾತಿನಲ್ಲಿ ಹುರುಳಿಲ್ಲ; ನ್ಯಾಯವಿಲ್ಲವೆಂದು ಮಾತ್ರ ಹೇಳಿದೆ. ಇದರಲ್ಲಿ ವ್ಯಕ್ತಿವಿಚಾರವೇನೂ ಇಲ್ಲ.

ರುಕ್ಮ—ಆಗಲಿ, ನೀವು ಯಾರು?

ಗ್ರಾಹಕ—ನಾನು ಯಾರು ಎಂದು ಕೇಳುವುದು ಶಿಷ್ಟಾಚಾರವಲ್ಲ. ನೋಡನೋಡಸಿಕ್ಕಿದವರನ್ನೆಲ್ಲ-ನೀವು ಯಾರು? ನಿಮಗೆಷ್ಟು ಹುಟ್ಟುವಳಿ ಉಂಟು? [illegible] ಮಾಡಿಕೊಂಡಿತ್ತೀರಿ? ಎಷ್ಟು ಸಂಬಳವುಂಟು? ಹೀಗೆಲ್ಲಾ ಕೇಳುವುದು ಸಭ್ಯತೆಯಲ್ಲ. ನಾನ್ಯಾರಾದರೇನು? ನನ್ನ ಮಾತು ಗ್ರಹಿಸಿ. ನಾನೂ ಸಹಾ ಆ ಬಡವನ ಹಾಗೇ ಏನೋ ತೆಕ್ಕೊಳ್ಳಲಿಕ್ಕೆ ಬಂದವ.

ನಾಗ—ನಮ್ಮ ಸರಿಸಮಾನರಾದರೆ ಮಾತುಗೀತು! ಅಲ್ಲವಾದರೆ ಖಾಲಿ ಕೂಲಿ ಜನರ ಹತ್ತಿರ ಚರ್ಚೆಮಾಡೋದಿಲ್ಲ!

ಗ್ರಾಹಕ—ನಾನು ನಿಮ್ಮ ಸರಿಸಮಾನನೋ ಅಲ್ಲವೋ ಎಂತ ಹೇಳಬೇಕಾದರೆ ನೀವು ಯಾರೆಂತ ಗೊತ್ತಾಗಬೇಕಾಯಿತು.

ರುಕ್ಮ-ನಾವು ಕುರ್ಚಿಯಲ್ಲಿ ಕೂತುಕೊಂಡಿರುವುದರಿಂದಲೇ ನಾವು ದೊಡ್ಡವ ಮನುಷ್ಯರೆಂಬುದು ಗೊತ್ತಾಗುವುದಿಲ್ಲವೇ?

ಗ್ರಾಹಕ—ಹಾಗೋ, ಸಾಹುಕಾರರೇನೋ ಕುರ್ಚಿಗಳು ಜಾಸ್ತಿ ಇದ್ದ ಕಾರಣ ಕೆಲವನ್ನು ಹೊರಗೆ ಇಟ್ಟಿದ್ದಾರೆ. ಅವುಗಳಲ್ಲಿ ಒಮ್ಮೊಮ್ಮೆ ಕೆಲವು ಗಿರಾಕಿಗಳ ಸಂಗಡ ಬಂದ ನಾಯಿಗಳೂ ಕೂತುಕೊಳ್ಳುತ್ತಾವೆ. ಕುರ್ಚಿಯಲ್ಲಿ ಕೂತುಕೊಂಡ ಮಾತ್ರದಲ್ಲಿ ನಾಯಿಯು ದೊರೆಯಾಗುವುದಿಲ್ಲ. ಇವುಗಳಲ್ಲಿ ಕೂತುಕೊಂಡಮಾತ್ರಕ್ಕೆ ಸಾಹುಕಾರರು ನಿಮಗೆ ಹೆಚ್ಚಿನ ಗೌರವ ಕೊಡುವುದಿಲ್ಲ. ನೋಡಿ, ಈಗ ನೀವು ತಾತ್ಸಾರಮಾಡಿದ ತ್ಯಾಂಪ ಬಂದು ರೂಪಾಯಿ ಕೊಟ್ಟು ಸಾಮಾನು ತೆಗೆದುಕೊಂಡು ಹೋದ. ನೀವು ಕುರ್ಚಿಯಲ್ಲಿ ಕೂತುಕೊಂಡಿದ್ದೀರಿ ಯಲ್ಲಾ—ನೋಡುವ, ಬರಿಕುರ್ಚಿಯಲ್ಲಿ ಕೂತುಕೊಂಡದ್ದು ನೋಡಿ ಸಾಹುಕಾರರು ನಿಮಗೆ ಸಾಮಾನು ಕೊಡುತ್ತಾರೋ? ಅಥವಾ ದುಡ್ಡು ನೋಡಿ ಕೊಡುತ್ತಾರೋ?

ನಾಗ, ರುಕ್ಮನನ್ನು ನೋಡಿ—ಏನಾ, ಇವರು ನಮ್ಮನ್ನು ಇಷ್ಟು ಸಸಾರ ಮಾಡುವುದು? ನಾವು ರೊಕ್ಕಕ್ಕಿಂತಭಾರ ಎಂಬೊದು ಇವರಿಗೆ ತೋರಿಸಲೇ ಬೇಕು. ಸ್ವಾಮಿ ಸಾಹುಕಾರರೇ ನಮಗೆ ಈ ತರದ ಒಂದು ಡಜನ್ ಟವೆಲ್ ಕೊಡಿ.

ಸಾಹುಕಾರ—ಕೊಡೋಣ, ಅವಕ್ಕೆ ಒಂದು ರೂಪಾಯಿ ಆಗುತ್ತೆ. ನಮ್ಮದೆಲ್ಲ ನಗದಿ ವ್ಯಾಪಾರ. ಬೆಳದಾದ ರುರೂಪಿನವನು ನಮ್ಮ ಪೆಟ್ಟಿಗೆಗೆ ಬೀಳಬೇಕು, ನೋಡಿ. ಬರೇ ಕುರ್ಚಿಗಿರ್ಚಿಯಲ್ಲಿ ಕುಳಿತ ಫರ್ಜಿರಿ ನೋಡಿ ಮಾಲು ಹೊರಹಾಕೋದಿಲ್ಲ ನಮ್ಮಲ್ಲಿ! ಹ್ಯಾಗೆ? ಟವೆಲ್ ಪ್ಯಾಕೆಟ್ ತೆಗೀಲಾ?

ಗ್ರಾಹಕ—ಹ ಹ್ಹ ಹ್ಹಾ! ಸ್ವಾಮಿ, ರಾಯರುಗಳೇ ನೋಡಿದಿರಾ! ವ್ಯವಹಾರ ಲೋಕದಲ್ಲಿ ಎಲ್ಲಾ ಬೆಲೆ ರೊಕ್ಕಕ್ಕೆ! ಕಾಸಿಲ್ಲದ ಮರ್ಜಿಯನ್ನು ಮೂಸುವವರೇ ಇಲ್ಲ! ತಿಳೀತೋ ಈಗ? ನಿಮಗೆ ಲೋಕಾನುಭವ ಇಲ್ಲ. ಆಕಾಶದಲ್ಲೇ ಹಾರಾಡುತ್ತಿದ್ದೀರಿ. ಅಂತೂ ನಮ್ಮೊಳಗೆ ಇಷ್ಟು ಮಾತುಕತೆಯಾದ ಮೇಲೆ ಇನ್ನು ಸ್ವಲ್ಪ ಹತ್ತಿರ ಮಾತಾಡುವ-ನಿಮಗೆಲ್ಲಿ? ಯಾವಾಗ ಪೇಟೆಗೆ ಬಂದದ್ದು? ಏನು ಕೆಲಸ? ಹಿಂತೆರಳುವುದು ಯಾವಾಗ? ನಿಮ್ಮನ್ನು ನೋಡುವಾಗ ದೊಡ್ಡ ಮನೆಯವರೋ ಗುತ್ತಿನವರೋ ಎಂದು ತೋರುತ್ತದೆ-ನಿಮ್ಮ ಠೀವಿ ನೋಡಿ ನಿಮ್ಮ ಪರಿಚಯಮಾಡಿಕೊಳ್ಳೋಣಾಂತ ನನಗೂ ಅನ್ನಿಸುತ್ತೆ-ಮಾನ್ಯ ಮನೆತನದವರಾಗಿರಬೇಕು ನೀವು—ಹೀಗೆ ಕೇಳಿದೆನೆಂದು ಬೇಸರಮಾಡಬೇಡಿ.

ರುಕ್ಮ—ಇದು ನೀವು ಹೇಳಿದ ಸಭ್ಯರೀತಿಗೆ ವಿರೋಧವಲ್ಲವಾ?

ಗ್ರಾಹಕ—ಈಗ ನಮಗೆ ಸ್ವಲ್ಪ ಹತ್ತಿರ ಪರಿಚಯವಾಯ್ತಲ್ಲವಾ? ಇನ್ನೂ ನಾಲ್ಕು ಮಾತು ಆಡೋಣಾಂತ ತೋರಿದೆ. ಅದಕ್ಕಾಗಿ ಕೇಳಿದೆ ಮನಸ್ಸಿದ್ದರೆ ಹೇಳಿಬಿಡಿ.

ನಾಗ—ಹಾಗಾದರೆ ಕೇಳಿ, ನಾವು ಗುತ್ತಿನವರು-ಕೇದಿಗೆ ಗುತ್ತಿನ ಶೆಟ್ರದ್ದು ಗೊತ್ತಿಲ್ಲವಾ ನಿಮಗೆ? ಅವರು ಇಲ್ಲಿಯ ಬೆಂಚಿ ಮೆಜಿಸ್ಟ್ರೇಟ್! ಅವರ ಮಗ ನಾನು. ಇವರು ನಮ್ಮ ಭಾವ-ಅಂದರೆ, ಅವರ ಅಳಿಯ.

ಗ್ರಾಹಕ—ಬಂದಂಥಾ ಕಾರ್ಯ?

ರುಕ್ಮ—ಬಹಳ ವಿಶೇಷವೇನೂ ಇಲ್ಲ-ಶೇವಿಂಗ್ ಸೆಲೂನಿನಲ್ಲಿ ಕ್ರಾಪ್ ಕಟ್ಟಿಂಗ್ ಆಗಬೇಕಿತ್ತು, ಇಂದು ಅದೇನೋ ಟೋಕಿನ ಸಿನೇಮಾ ಉಂಟಂತೆ! ಹೀಗೆ ಒಂದರ ಹಿಂದೆ ಒಂದಾಗಿ ಚಿಲ್ಲರೆ ಕೆಲಸ!

ಗ್ರಾಹಕ—ರಾತ್ರಿ ಪೇಟೆಯಲ್ಲಿಯೇ ಉಳಕೊಂಡು ನಾಳೆ ಸವಾರಿಯಾ?

ನಾಗ—ಹೌದು, ಹಾಗೇ—

ಗ್ರಾಹಕ—ಸಿನೆಮಾ ಹಗಲಿದ್ದರೂ ನಿಮಗೆ ರಾತ್ರಿಯದ್ದೇ ನೋಡ್ಬೇಕು! ಅದಾದ ಮೇಲೆ ಶಯನ ಬೊಕ್ಕ ವಿಚಾರವೂ ಬೇಕಾದೀತು!

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ.

"ಗೊನೊಕಿಲರ್" ರಿಜಿಸ್ಟರ್ಡ್

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩ ವಿ ಪಿ ಖರ್ಚು ೦-೫-೦ ಪ್ರತ್ಯೇಕ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲ್ಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer Dr. D. N. JASANI, Vitalbhai Patel Road, BOMBAY 4

ರುಕ್ಮ—ಮತ್ತೇನು ಬೀದಿ ಜಗಲಿಯಲ್ಲಾಗಲೀ ಹೋಟ್ಲಿನ ಹರಕು ತಗಡಿನಾಸೆಯಲ್ಲಾಗಲೀ ಬಿದ್ದುಕೊಳ್ಳೋದಕ್ಕಾಗುತ್ತಾ ನಮ್ಮಂಥಾ ಗುತ್ತಿನ ಮನೆತನದವರಿಗೆ?

ಗ್ರಾಹಕ—ಒಂದು ಕ್ಷೌರಕ್ಕಾಗಿ ಪೇಟೆಗೆ ಒರಬೇಕಾಯಿತು ನಿಮಗೆ! ಅದರ ಹಿಂದೆ ಕಾಫಿ ಊಟ, ಸಿನೆಮಾ ನಾಟಕ, ಸಾಜೂಕಿನ ಶಯನ ಹೀಗೆ ಸರಬತ್ತಿ! ಇವಕ್ಕೆಲ್ಲ ಒಂದು ಹತ್ತು ರೂಪಾಯಿ ನೋಟಾದರೂ ಬೇಕಲ್ಲ?

ನಾಗ—ಹತ್ತು ರೂಪಾಯಿ ಎಲ್ಲಿಗೆ ಸಾಕು?

ಗ್ರಾಹಕ—ಹೀಗೇ ವರ್ಷಕ್ಕೆ ಪೇಟೆಗೆ ಎಷ್ಟು ಸಲ ಸವಾರಿ ಬರುತ್ತೆ?

ರುಕ್ಮ—ಅವರದೆಲ್ಲಾ ಯಾರು ಲೆಕ್ಕ ಇಟ್ಟಿದ್ದಾರೆ!

ಗ್ರಾಹಕ—ಪೇಟೆಗೆ ಬಂದಲ್ಲಿ ನಿಮಗೇನಾದರೂ ಸಂಪಾದನೆ ಆಗುತ್ತಾ?

ನಾಗ—(ಸಿಟ್ಟಿನಿಂದ)— ನಿಮ್ಮನಿರಿ—ನಮಗೆ ಸಂಪಾದನೆ ಮಾಡಬೇಕೆಂದಿಲ್ಲ—ನಮ್ಮ ಗುತ್ತಿನಲ್ಲಿ ಹೇರಾಳ ಉಂಟು! ನಾವೇನು ಖಾಲಿಕೂಲಿ ಜನರಂತೆ ಹಿಟ್ಟು, ಹೊಟ್ಟೆ ಪಾಡಿಗಾಗಿ ಪೇಟೆಯವರ ಹಾಗೆ ನೌಕರಿ ಮಾಡಬೇಕಾಗಿಲ್ಲ! ಹಾಗೆಲ್ಲ ದುಡುಮೆಗೆ ಪೇಚಾಡುವ ಕೀಳುಜನ ನಾವೆಂತ ತಿಳಕೊಂಡಿರಾ?

ಗ್ರಾಹಕ—ಸ್ವಾಮಿ,—ಸಣ್ಣ ಶೆಟ್ರುಗಳೇ, ನೀವು ಇನ್ನೂ ಎಳೆಪ್ರಾಯದವರು. ಲೋಕದ ಅನುಭವ ಇಲ್ಲದಿದ್ದವರು. ನೀವು ಬಿಡಿ, ನಿಮ್ಮಿಂದ ಎಷ್ಟೋ ಪಾಲು ದೊಡ್ಡವರು ಹೀಗೇ ತೋರ ತೋರ ಮಾತಾಡಿ ಕಡೆಗೆ ಮುಳುಗಿಹೋದರು. ಬೇರೆಯವರಿಗೂ ಒಂದೊಂದು ಗುಟುಕು ನೀರುಕುಡಿಸಿದ್ದರು. ಆ ತ್ಯಾಂಪನಿಗೆ ಬೇಕಾದ ಬಟ್ಟೆಬರೆ ಸಿಕ್ಕಿತು—ನಿಮಗೆ ಸಿಕ್ಕಿತಾ? ನಿಮಗೆ ಒಂದು ಪ್ಯಾಕೆಟ್ ಟುವಾಲೂ ಕ್ರೆಡಿಟ್ ಬರಲಿಲ್ಲ—ನಿಮ್ಮ ಸ್ವಂತ ಯೋಗ್ಯತೆ ಎಷ್ಟರಲ್ಲಿ ಉಂಟೆಂಬುದು ಗೊತ್ತಾಯಿತಲ್ಲ? ನಿಮ್ಮ ಗುತ್ತು, ನಿಮ್ಮ ಕ್ರೋಪ್, ಇವುಗಳನ್ನು ಹಿಡಿದುಕೊಂಡು ಹೋದರೆ ಯಾವ ಅಂಗಡಿಯಲ್ಲಿಯಾಗಲೀ ಯಾವ ಬೇಂಕಿನಲ್ಲಿಯಾಗಲೀ ನಿಮಗೊಂದು ಕಾಸಿನ ಕ್ರೆಡಿಟ್ ಸಿಕ್ಕುತ್ತಾ? ಏನೋ ನಿಮ್ಮ ಹಿರಿಯರು ಅಲ್ಪ ಸ್ವಲ್ಪ ಮಾಡಿಟ್ಟದ್ದು ಈಗ ಉಂಟು, ಅದು ಇನ್ನೆರಡು ದಿವಸದಲ್ಲಿ ಕರಗಿಹೋಗುತ್ತದೆ. ಅನಂತರ ನೀವು ಮೇಲೆ ಕೆಳಗೆ ನೋಡಿದರೆ ಸೈ. ಏನಾದ್ರೂ ಸಂಪಾದನೆ ಮಾಡಿದ್ದೀರಾ? ಅಥವಾ ಸಂಪಾದನೆ ಮಾಡಲಿಕ್ಕೆ ಗೊತ್ತುಂಟಾ ಅಂದರೆ ನಿಮಗೆ ಸಿಟ್ಟುಬರುತ್ತದೆ! ಆದರೆ ದೇವರು ನಿಮಗೆ ಕೈಕಾಲು ಬುದ್ಧಿ ಕೊಟ್ಟು ನೀವು ಪಶುಧರ್ಮದಲ್ಲೇ ಇದ್ದೀರಲ್ಲಾ! ಅವುಗಳಿಗಿಂತಲೂ ಕಡೆ ನೀವು. ಅವು ತಮ್ಮ ಹೊಟ್ಟೆಪಾಡಾದ್ರೂ ತಾವೇ ನೋಡಿಕೊಳ್ಳುತ್ತವೆ. ನಿಮ್ಮಿಂದ ಅದೂ ಸಾಗೋದಿಲ್ಲ! ನಿಮ್ಮನ್ನು ಹೊತ್ತ ಭೂಮಿಗೆ ನೀವು ಭಾರ ಅಲ್ವಾ? ಹೀಗೆ ಹೇಳಿದೆನೆಂತ ಸಿಟ್ಟುಮಾಡಬೇಡಿ. ಲೋಕ ನೋಡಿ ನೋಡಿ ನನ್ನ ಗಡ್ಡ ಹಣ್ಣು ಆಗುತ್ತಾ ಬಂದಿದೆ, ಆದುದರಿಂದ ನಿಮ್ಮಂಥಾ ಕಿರಿಯರಿಗೆ ಎರಡು ಮಾತು ಹೇಳುವ ಅಧಿಕಾರವುಂಟು ನನಗೆ! ನೋಡಿ, ಸಣ್ಣ ಶೆಟ್ರುಗಳೇ, ನಿಮ್ಮ ಈ ಮಿಥ್ಯಾಭಿಪ್ರಾಯಗಳನ್ನು ಬಿಡಬೇಕು ಇವನ್ನು ಕಟ್ಟಿಕೊಂಡವರ ಮನೆ ಆಸ್ತಿಗಳೆಲ್ಲಾ ಬಳಿದುಹೋದವು—**ಹಣ ಹೆಸ್ರೆ ಮಾತಾಡುವ ಹೊತ್ತು,** **ಶೆಟ್ರುಗಳಿಗಿಂತ ಬೀದಿಗುಡಿಸಿಯಾದರೂ ಪ್ರಾಮಾಣಿಕತೆಯಿಂದ ಒಂದು ಕಾಸನ್ನಾದರೂ ಸಂಪಾದಿಸಿ 'ಇದು ನನ್ನ ಕಾಸು' ಎಂದು ತಲೆಯೆತ್ತಿ ತೋರಿಸುವವನೇ ಧೀರ. ಹಾಗೇ ಆ ತ್ಯಾಂಪನ ಹೆಮ್ಮೆಗೆ ಬೆಲೆ ಉಂಟು! ನಿಮ್ಮದಕ್ಕಿಲ್ಲ! ಮೊದಲಾಗಿ ಸಂಪಾದನೆ ಮಾಡಲಿಕ್ಕೆ ಕಲಿಯಬೇಕು! ಧರಂ ತೋರಿಸಬೇಕು ಅದರಲ್ಲಿ!** ಯಾರದು ಧನ್ನೋ ಖರ್ಚು ಮಾಡುವುದರಲ್ಲಿ ಏನು ಭಾರ ಉಂಟು? ಅದರಿಂದ ದಿನ ಹೋದಂತೆ ಭಾರ ಏರುವ ಬದಲು, ಹಗುರ ಹಗುರಾಗುತ್ತಾ ಬಂದು ಕೊನೆಗೆ ಗಾಳಿಗೆ ಹಾರಿ ಹೋಗುವ ಧೂಳಿಗೆ ಸಮ ಆಗ್ತೀರಿ ನೀವು. ಈ ಮಾತು ಮರೆಯಬೇಡಿ! ಆದುದರಿಂದ ಕಾಸು ಸಂಪಾದನೆ ಮಾಡಲರಿಯದವರು ಮೋಜಿಗಾಗಿ ಕ್ಷೌರ, ಶೋಕಿಗಾಗಿ ಸಿಗರೇಟು, ಶಾಸ್ತ್ರಲಿಗಾಗಿ ದೃಷ್ಟಿಚಿತ್ರ, ಸಿಂಗಾರಕ್ಕಾಗಿ ಸಿಲ್ಕಿನ ಕೋಟು ಶರ್ಟು, ಕುಶಾಲಿಗಾಗಿ ನಾಟಕ ಸಿನೆಮಾ, ನಾಲಿಗೆಗಾಗಿ ಹೋಟ್ಲು! ಹೀಗೆಲ್ಲಾ ನಾಗಸಿನ ಬಾಳಿಗೆ ಮರುಳಾಗಿ ಹಿರಿಯರ ದುಡ್ಡನ್ನು ಖರ್ಚು ಮಾಡಿ ಮಾಡಿ ಕಡಗ ಲಸಿಕ್ಕಿಂತ ಕೀಳಾಗಿ ಗೋಳಿನ ಬಾಳಿಗೆ ಬೀಳಬೇಡಿ ಶೆಟ್ರೇ! ಈ ಕೆಲಸ ಆ ಕೆಲಸವೆಂದು ಧರಂ ಮಾಡಿಕೊಳ್ಳಬೇಡಿ—ಹಸೆಯಿಲ್ಲದ ನಿಮ್ಮ ಬರಂಗೆ, ಟೈಟ್‌ಲಗೆ, ಡಿಗ್ರಿಗೆ 'ಕ್ರೆಡಿಟ್' ಕೊಡುವ ಬೇಂಕೇ ಇಲ್ಲ—ವ್ಯಕ್ತಿ ಮಹತ್ವ, ಗುತ್ತು ಗಿತ್ತು ಕೇಳದೆ ಯಾರಿಂದ ಬಂತು ಎಂದು ನೋಡದೆ ಪ್ರತಿ ಬೇಂಕೂ ರೂಪಾಯಿಗೆ ಹದಿನಾರಾಣೆ ಕೊಟ್ಟೇ ಬಿಡುತ್ತೆ! ಆದ್ರಿಂದ ಆ ರೂಪಾಯಿ ಸಂಪಾದಿಸುವ ಶಕ್ತಿ ದೊಡ್ಡದು. ಅದಿಲ್ಲದಿದ್ದರೆ ಎಂಥಾ ಗುತ್ತಾದವರೂ ಬೇಗ ಬತ್ತಿ ಹೋಗುತ್ತೆ! ಕಡೇಗೆ ಮರದ ಗುತ್ತಿಯೇ ಅಲ್ಲಿ. ಈ ಗುಟ್ಟು ತಿಳಿಯದೆ ಅನೇಕರು ನಿಮ್ಮ ಹಾಗೆ ವಿಲಾಸ ಜೀವನದಲ್ಲಿ ತೇಲಾಡಿ ಶ್ರೀಮಂತರೆಂದು ತೋರಿಸಿ ಕಡೇಗೆ ಪಸೆ ಆರಿದ ಮೇಲೆ ಲೋಕದಲ್ಲೆಲ್ಲಾ ರೂಪಾಯಿಗೆ ಹದಿನಾರೇ ಆಣೆ ಎಂಬ ಸತ್ಯವನ್ನು ಕಂಡರು.—ಆಗ ಅವರ ದುಃಸ್ಥಿತಿಯನ್ನು ಸರಿಗೊಳಿಸಿಕೊಳ್ಳಲಿಕ್ಕೆ ಅವರಿಗೆ ಆಗಲಿಲ್ಲ—ಆದ ಕಾರಣ ನೀವು ಜಾಗ್ರತೆಯಲ್ಲಿರಿ—**ನಿಮ್ಮ ಮನೆಯನ್ನು ಸೇರಿ—ಪೇಟೆಯನ್ನು ಬಿಡಿರಿ—ಉದ್ಯೋಗ ಉದ್ಯಮಗಳನ್ನು ಹಿಡಿಯಿರಿ.** ಆ ಕೆಲಸ ಈ ಕೆಲಸವೆನ್ನದೆ—ರೂಪಾಯಿ ಹುಟ್ಟುವ ನ್ಯಾಯದ ಹಾದಿಯಲ್ಲಿ ನಡೆಯಿರಿ. ಡಂಬಾಚಾರವನ್ನು ದೂಡಿರಿ—ಯಾವ ಉದ್ಯೋಗ ಮಾಡಿದರೂ ರೂಪಾಯಿಗೆ ಹದಿನಾರೇ ಆಣೆ—ದೊಡ್ಡ ಉದ್ಯೋಗದ ರೂಪಾಯಿಗೆ ಹದಿನೇಳಾಣೆಯಿಲ್ಲ—ಸಣ್ಣದಕ್ಕೆ ಹದಿನೈದೆಂದಿಲ್ಲ. **ಎಲ್ಲಾ ಉದ್ಯೋಗದ ರೂಪಾಯಿಗೂ ಹದಿನಾರೇ ಆಣೆ**——ಅದಿಲ್ಲದ ದೊಡ್ಡ ಹೆಸರಿಗೆ, ಗೊಡ್ಡು ಮುಂಡಾಸಿಗೆ, ದಡ್ಡತನದ ಸೀಸದ ರೂಪಾಯಿಗೆ ಕುರುಡು ಕಾಸಿನ ಬೆಲೆಯೂ ಇಲ್ಲ. ಆದುದರಿಂದ **ನಿಮ್ಮ ಬಾಳಿನ ರೂಪಾಯಿಯ ಬೆಲೆ ಯಾವಾಗಲೂ ಹದಿನಾರಾಣೆಯೇ ಇರುವಂತೆ ನೋಡಿಕೊಳ್ಳಿ, ಕಿರಿ ಶೆಟ್ರೇ!** ಸಮಾಜದ ಪುರೋವೃದ್ಧಿ ದೃಷ್ಟಿಯಿಂದ ನಿಮ್ಮ ಹಿತಚಿಂತನೆಯಿಂದ ಹೇಳಿದ ಮಾತಿಗೆ ರೇಗಬೇಡಿ. ಸೀಸದ ರೂಪಾಯಿ ಆಗಬೇಡಿ. ತ್ಯಾಂಪನ ರೂಪಾಯಿಯ ಹಾಗೆ ಎಲ್ಲಿ ಹೋದರೂ ಯಾವ ಕಾಲ ಬಂದರೂ ಮೋಸವಿಲ್ಲದ ಹದಿನಾರಾಣೆ ಕಾಸು ಬರುವ ತಾಜಾ ಮೋಹರ್ ರೂಪಾಯಿ ಆಗಿ ಬಾಳೀರಿ! ಅಂತಹ ರೂಪಾಯಿ ಗುತ್ತಿನ ಮನೆಯಿಂದ ಬಂತೂಂತ ಬೆಲೆ ಏರೋದಿಲ್ಲ. ಗರೀಬನ ಕೈಯಿಂದ ಬಿತ್ತೂಂತ ಬೆಲೆ ತಗ್ಗೋದಿಲ್ಲ. ರೂಪಾಯಿಗೆ ಹದಿನಾರೇ ಆಣೆ!

ಬರುವ ಲೇಖನ:—
ನಿಮಗೇನು ಹೇಳಿ!
ಕಾಪತ್ರ್ಯ ಇಲ್ಲದವರು!

ಸಿರಿವಂತನಾರು?

ಬೆರಗುಗೊಳಿಸುವ ಭವ್ಯಭವನವಿರಬಹುದು।
ನಿರತ ದುಡಿಯುವ ಸೇವಕರ ತಂಡವಿರಬಹುದು।
ಹಸನಾದ ಬಲುಬಗೆಯ ವೇಷಭೂಷಣಗಳಿರಬಹುದು।
ಹಸಿವಿಲ್ಲದಿಹ ಜನರ ಕರೆದು ಮಾನಿಸಿರಬಹುದು।
ಕೊಂಬುಕಹಳೆಗಳಿಂದ ಮದುವೆ ಮಾಡಿರಬಹುದು।
ಕೊಡಹಾಲು ಸುರಿದು ದೇವರ ಪೂಜಿಸಿರಬಹುದು।
ಮಾಮುದ್ದು ಬಿರುದಿನಾ ಬಯಲ ದಂಭಕೆ ಮೆಚ್ಚಿ।
ಪೊಳ್ಳು ಹೆಸರಿನ ಫಲಕ ಕೈಲಿ ಸುರಿದಿರಬಹುದು।
ನೀನೆ ಧನಿ, ನೀನೆ ಗುಣಿ, ನೀನೇ ನಾಡಿನ ಸಿರಿಯು!
ನೀನೆ ಬಡವರ ಬಂಧು, ನೀನೆ ದೇವರ ದೇವ।
ಎಂದು ವಿಧವಿಧದಿಂದ ಸುತ್ತಿಮೆರೆಯುವ।
ಪರೋಪಜೀವಿಗಳ ತಂಡ ಕೂಡಿಸಿಕೊಂಡು।
ಹಣ ಸಿರಿಯ ವೈಭವವ ಜನಕೆ ತೋರಿಸಿ।
ಧನವಂತ ತಾನೆಂಬ ಭಾವಬಿತ್ತಿರಬಹುದು।
ಬಿಡದು ಬಾವಲಿ ಮಾತ್ರೆ ಘನತೆ ಗೌರವವಲ್ಲ।
ವಿನಯವೊಂದಿಲ್ಲದಿರೆ ಮಗಳ। ಭೂಮಿಯ ತೊರೆಯು
ಬಡತನದ ಬೇಗೆಯಲಿ ಬೆಂದು ಬೇಗುದಿಗೊಂಡ।
ಬಡ ಜನರನಾದರಿಸಿ ನಾದಸೇವೆಯ ಗೈವ।
ವಿನಯವಂತನೆ ಜಗದಿ ನಿಜವಾದ ಧನಿಕ॥
ದೀನಧನಿಕನುಯೆಂಬ ಭೇದಭಾವವನೆಳೆವ!
ಮಾನವದ ಗುಣವಹುದು ಹಣವಲ್ಲವೈ ಜಗದಿ.

ಏ. ಕೆ. ಕಾಪು.

ಎಲ್ಲೆಲ್ಲೂ ಪ್ರಸಿದ್ಧಿಪಡೆದಿರುವ ಉಡುಪಿಯ ಚರಿತ್ರೆಯನ್ನು ತಿಳಿಯಬೇಕೇ?
ಹಾಗಿದ್ದರೆ

ನಮ್ಮ ಉಡುಪಿ

ಎಂಬ ಚಿತ್ರಮಯ ಪುಸ್ತಕವನ್ನು ಓದಿರಿ!

ಉಡುಪಿ ಕ್ಷೇತ್ರಕ್ಕೆ ಯಾತ್ರಾದೃಷ್ಟಿಯಿಂದಾಗಲೀ ಐತಿಹಾಸಿಕ ಮಹತ್ವದ ದೃಷ್ಟಿಯಿಂದಾಗಲೀ ಸಂದರ್ಶನಾರ್ಥವಾಗಿ ಬಂದವರೂ ಬರುವವರೂ ಮೊದಲಾಗಿ ತಿಳಿದುಕೊಳ್ಳಬೇಕಾದದು ಈ ಕ್ಷೇತ್ರದ ಹಿಂದಿನ ಮತ್ತು ಇಂದಿನ ಸಚಿತ್ರ ವಿವರ. ಸಮಾಜ ಸೇವಕರಿಗೆ ಬೇಕಾದುದು ವೈಯಕ್ತಿಕ ಜೀವಜ್ಯೋತಿಗಳ ಜೀವನಚರಿತ್ರೆ, ಅವೆಲ್ಲವೂ ಈ ಪುಸ್ತಕದಲ್ಲಿವೆ.

ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಹೊಸ ದೃಷ್ಟಿಯಿಂದ ಬರೆದ ಪುಸ್ತಕ.

ಉಡುಪಿಗೆ ಬಂದರೂ ಸರಿಯೆ, ಬಾರದಿದ್ದರೂ ಸರಿಯೇ 'ನಮ್ಮ ಉಡುಪಿ'ಯನ್ನು ಓದಲೇ ಬೇಕು.

ಬೆಲೆ ಐದಾಣೆ

ಆರಾಣೆ ಸ್ಟಾಂಪು ಕಳಿಸಿದ್ದಲ್ಲಿ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮೂಲಕ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳ:— **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ್, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದುದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು.

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ಮೋಸಗೊಳಿಸುವ ಔಷಧವೆಂದು ಖಾತ್ರಿಪಡಿಸುವವರಿಗೆ ರೂಪಾಯಿ 100 ಬಹುಮಾನ

ಸ್ತಂಭಕ ವಟಿ—ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram
No. 552 **P. O. Katrisarai, (GAYA)**

ಏನೆಂದಿರಿ!
ಕನ್ನಡದಲ್ಲಿ ಒಳ್ಳೇ ಪುಸ್ತಕಗಳಿಲ್ಲವೆಂದೆ ಅದೇಕೆ?

ಅತ್ಯುತ್ತಮ ಐತಿಹಾಸಿಕ ಕಾದಂಬರಿಗಳೂ, ಚರಿತ್ರೆಗಳೂ, ರಸವತ್ತಾದ ಸಾಮಾಜಿಕ-ಪೌರಾಣಿಕ ಕಥೆ ಕಾದಂಬರಿಗಳೂ, ಶ್ರೇಷ್ಠತರಗತಿಯ ಹಾಗೂ [illegible] ಸರುವಾಸಿಗಳಿಂದ ಸತ್ಯೆ [illegible] ಕಥೆಗಳೂ ಶ್ರೀ ಶೇಷಾಚಲ ಗ್ರಂಥಮಾಲೆಯಲ್ಲಿ ಕಳೆದ [illegible] ವರ್ಷಗಳಿಂದಲು ಕ್ರಮಶಃ ಪ್ರಕಟವಾಗುತ್ತಲಿದ್ದು ಅಂಥ ೧೦೦-೧೫ ಮನೋಹರ ಪುಸ್ತಕಗಳು ಈಗಾಗಲೇ ಹೊರಟು ಕನ್ನಡ ವಾಚಕರನ್ನು ತೃಪ್ತಿಗೊಳಿಸಿರುತ್ತವೆ, ಹಾಗು ಪ್ರತಿವರ್ಷವೂ ಈ ಗ್ರಂಥಮಾಲೆಯ ದ್ವಾರ ೬-೮ ವಾಚನೀಯ ಹೊಸ ಪುಸ್ತಕಗಳು ತಪ್ಪದೆ ಪ್ರಕಟವಾಗುತ್ತಲಿವೆ. ಗ್ರಂಥಮಾಲೆಯ ಕಾಯಂ ಗ್ರಾಹಕರಿಗೆ **ಬೇಕಡಿಮೆ**

ಅಪೇಕ್ಷಿತರು: **ಶ್ರೀ ಶೇಷಾಚಲ ಪ್ರೆಸ್**

ಪೋ. ಆನಂದವನ (ಹಾವೇರಿ) ಜಿ. ಧಾರವಾಡ
ಈ ಅಡ್ರೆಸ್ಸಿಗೆ ಬರೆಯಬೇಕು. ಕ್ಯಾಟಲಾಗ್ ಪುಕ್ಕಟೆ. ದೇ. ಭ. ಬ್ಯಾರಿಸ್ಟರ್ ಸಾವರಕರರಿಂದ [illegible] ರಮ್ಯ [illegible] "**ಕಾಳೆಪಾಣಿ ಪುಸ್ತಕವು** ಕರಿನೀರು"ಎಂದು ಕನ್ನಡದಲ್ಲಿ ನಮ್ಮಿಂದ ಬೇಗನೆ ಪ್ರಕಟವಾಗುವುದು.

ಫೇನ್ಸಿ ಲಿವರ್ ರಿಸ್ಟ್‌ವಾಚ್



ರೂ. **2—4—0.**

ಸಣ್ಣ ಸುಂದರ, ಆಕಾರ ಗಟ್ಟಿ ಮಟ್ಟಾದ ಮಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರಂಟಿ ದುಂಡಾಕೃತಿಯ, ದೀರ್ಘಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುವಕ್ಕೆ ರೂ. 4-8-0, ಚಿತ್ರದಲ್ಲಿ ತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0-0, ಜುವೆಲಿರುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ಟ. ಖ. ಪ್ರತ್ಯೇಕ.

ಎಚ್. ಡಾವಿಡ್ ಅಂಡ್ ಕೊ.
ಪೊ. ಬಾಕ್ಸ್ 11424 ಕಲ್ಕತ್ತ.

H. David & Co.
Post Box No. 11424. Calcutta

ಡೈರಿಗಳು

ಬೇಕಾದರೆ—

ನವಭಾರತ ಪುಸ್ತಕ ಭಂಡಾರ ಉಡುಪಿ

ತುಸು ವಿನೋದ

ಪ್ರಯಾಣಿಕ—(ಓಡಿ ಬರುತ್ತಾ) ಅಯ್ಯೋ ನಿಲ್ಲು ನಿಲ್ಲೆಂದರೂ ಟ್ರೈನು ಹೋಗಿ ಬಿಟ್ಟಿತಲ್ಲಾ ಮೇಸ್ಟ್ರೇ?

ಸ್ಟೇ. ಮಾಸ್ಟರ್—ಹೌದು ಸ್ವಾಮಿ! ನೀವು ಬರುವಾಗಲೇ ಕೂಗಿಕೊಂಡು ಬಂದ್ರಿ. ಅದು ಹೆದರಿ ಓಡಿ ಹೋಯಿತು.

o o o

ಮಗ—ಎಮ್ಮೆಗೂ ಕೋಣಕ್ಕೂ ಇರುವ ವ್ಯತ್ಯಾಸವೇನಪ್ಪಾ?

ತಂದೆ—ಅದು ಹೆಣ್ಣು, ಇದು ಗಂಡು.

ಮಗ—ಗಂಡು ಹೆಣ್ಣೆಂದರೇನಪ್ಪಾ?

ತಂದೆ—ಅಂದರೆ ನನಗೂ ನಿನ್ನ ತಾಯಿಗೂ ಇರುವ ವ್ಯತ್ಯಾಸವೇ! ಕಾಣ್ ಮಗಾ!!

o o o

ಅವಳು—(ಸಿನೆಮಾ ಮಂದಿರದಲ್ಲಿ) ರೀ! ನೋಡಿದೇನ್ರಿ? ಆ ಶರ್ಟು ನಿಮ್ಮ ಶರ್ಟಿನಂತೇ ಇದೆಯಲ್ಲ! ನೀವಿಟ್ಟರೂ ಒಟ್ಟಿಗೆ ತೆಗೆದಿದ್ದೇನು?

ಅವನು—ಒಟ್ಟಿಗೆ ತೆಗೆದದ್ದೂ ಇಲ್ಲ, ಮತ್ತಾಂಗಟ್ಟಿಯೂ ಇಲ್ಲ. ಅದು ನನ್ನದೇ ಶರ್ಟು. ಆವ ನಮ್ಮ ಮಡಿವಾಳ ಮಾಲಿಂಗನಲ್ಲವೇನೇ!

o o o

ಸ್ನೇಹಿತ—ನೀನು ಕಲ್ಕತ್ತೆಯಲ್ಲಿ ಯಾವ ಡಿಪಾರ್ಟುಮೆಂಟಿನಲ್ಲಿದ್ದಿ?

ಮಿತ್ರ—ಬರಿಯುತ್ತಿದ್ದೇನೆ.

ಸ್ನೇಹಿತ—ಎಲ್ಲಿ? ಆಫೀಸಿನಲ್ಲೋ? ವಕೀಲರ ಬಳಿಯಲ್ಲೋ?

ಮಿತ್ರ—ಇಲ್ಲ! ಒಂದು ರೂಂ ಬಾಡಿಗೆ ಮಾಡಿಕೊಂಡು ತಿಂಗಳಿಗೆರಡಾವರ್ತಿ ಖರ್ಚಿಗೆ ಹಣ ಕಳುಹಿಸುವರೆ ತಂದೆಯವರಿಗೆ ಬರಿಯುತ್ತಿದ್ದೇನೆ, ಅಷ್ಟೆ.

o o o

ತಂದೆ—ಸಂಧ್ಯಾವಂದನೆ ಮಾಡಿದೆಯೇನೋ ಮಗಾ?

ಮಗ—ಸಂಧ್ಯಾವಂದನೆ! ಸಂಧ್ಯಾವಂದನೆ ಅಂದರೇನಪ್ಪಾ? ಬೆಳಿಗ್ಗೆ ಗುಡ್ ಮೋರ್ನಿಂಗ್, ಸಾಯಂಕಾಲ ಗುಡ್ ಈವ್ನಿಂಗ್.

o o o

ಮೇಸ್ಟ್ರು—ಹಂಸಧ್ವನಿಯ ಆರೋಹಣಾವರೋಹಣ ಯಾವುದೋ?

ಒಬ್ಬ—ಸರಿಗಮಪನಿಸ–ಸನಿಪಗರಿಸ ಸರ್.

ಮೇಸ್ಟ್ರು—ಕಾಫಿಯ ಆರೋಹಣಾವರೋಹಣ ಏನೋ?

ಇನ್ನೊಬ್ಬ—ಸ ರಿ ಮ ಪ.......

ಮತ್ತೊಬ್ಬ—ತಪ್ಪು ಸರ್, ದಬ್ರಿಯಿಂದ ಟಂಬ್ಲರಿಗೆ, ಟಂಬ್ಲರಿಂದ ದಬ್ರಿಕ್ಕೆ, ನಂತರ ಬಾಯಿಗೆ ಸರ್.

o o o

ಸ್ನೇಹಿತ—ಮಿತ್ರಾ! ನಾವು ಕಡೇ ವರೆಗೂ ಮಿತ್ರತ್ವದಲ್ಲೇ ಇರಬೇಕೆಂದು ನನ್ನ ಇಚ್ಛೆ.

ಮಿತ್ರ—ಅಪ್ಪಾ ಬಹಳ ಸಂತೋಷ, ದೇವರು ಒಳ್ಳೇದು ಮಾಡುವನು, ನನಗೆ ಒಂದು [illegible]ಗಂಟು ಹತ್ತು ರೂಪಾಯಿ ಕಡ ಕೊಡುವೆಯಾ?

ಸ್ನೇಹಿತ—ಹಾಗಾದರೆ ಈ ಹೊತ್ತೇ ನಮ್ಮ ಸ್ನೇಹದ ಕೊನೆ.

o o o

ಆತ—ನಿನ್ನ ಮಗಳಿಗೆ ಯಾರೋ ಮುತ್ತಿಡುವುದಕ್ಕೆ ಪ್ರಯತ್ನಿಸುತ್ತಿದ್ದರು. ನೀನು ನೋಡಿದಿಯಾ?

ಈತ—ಅವ ಮುತ್ತಿಟ್ಟನೋ?

ಆತ—ಇಲ್ಲ!

ಈತ—ಹಾಗಾದರೆ ಅವಳು ನನ್ನ ಮಗಳಲ್ಲ.

o o o

ಯಜಮಾನ್ತಿ—ಬೇಗನೇ ಡಾಕ್ಟರರನ್ನು ಕರಕೊಂಡು ಬಾ ಎಂದರೆ ತಡ ಮಾಡಿದಿಯಲ್ಲವೇನೋ ಸುಬ್ಬ. ಮಗು ಸತ್ತು ಹೋಯ್ತಲ್ಲವೇನೊ?

ಸುಬ್ಬ—(ಅಳುತ್ತಾ) ಏನ್ಮಾಡ್ಲಮ್ಮಾ! ದಾರಿಯಲ್ಲಿ ನಿದ್ದೆ ಬಂದುಬಿಡ್ತು. ಇನ್ನೊಂದು ಮಗು ಸಾಯೋವಾಗ ಡಾಕ್ಟರರನ್ನು ಕರೆತರಲು ಕಾದಿರುತ್ತೇನಮ್ಮ. ಅಲ್ಲೇ ಇದ್ದೀನಿ.

ಯಜಮಾನ್ತಿ—ಛೀ! ಮುಚ್ಚು ಬಾಯಿ!

o o o

ಒಬ್ಬ—ನನ್ನ ಹೆಂಡತಿಗೆ ಅಡಿಗೆಗೊಬ್ಬಳು, ಬಟ್ಟೆ ಒಗೆಯಲಿಕ್ಕೊಬ್ಬಳು, ಮಗು ಹಿಡಿಯಲಿಕ್ಕೊಬ್ಬಳು ಬಡಿಸಲಿಕ್ಕೊಬ್ಬಳು ಹೀಗೆ ತುಂಬಾ ಪರಿಚಾರಿಕೆಯರಿದ್ದಾರೆ, ನಿನಗೆ?

ಇನ್ನೊಬ್ಬ—ಹ್ಞು! ನನ್ನ ಹೆಂಡತಿಗೆ ನಾನೊಬ್ಬನೇ!

ವಿ. ಆರ್. ಉದ್ಯಾವರ, (ಫ್ಲೂಟಿಸ್ಟ್)
ಮಧುರಾ ಫಿಲ್ಮ್ಸ್ ಲಿಮಿಟೆಡ್, ಮದ್ರಾಸ್.

ನಿಮಗೆ ಇಚ್ಛೆ ಇರುವುದಾದರೆ

ನಿಮ್ಮಲ್ಲಿ ಯಾ ನಿಮ್ಮ ಕುಟುಂಬದಲ್ಲಿ ಗರ್ಭಿಣಿಯರಿದ್ದರೆ ಸುಖವಾಗಿ ಹೆರಿಗೆ (ಪ್ರಸವ) ಯಾಗಬೇಕೆಂದು ನಿಮಗಿಚ್ಛೆ ಇದ್ದರೆ, ಈ ದಿನದಿಂದಲೇ ತಕ್ಕ ಉಪಾಯ ಮಾಡಿರಿ. ಹೆರಿಗೆಯ ವೇದನೆ ಪ್ರಾರಂಭವಾದೊಡನೆ ನಮ್ಮ **ಪ್ರಸೂತಿ ಕಲ್ಯಾಣವಟಿ**ಗಳನ್ನು ಸೇವಿಸಿದರೆ ಸುಖಪ್ರಸವ (ಹೆರಿಗೆ) ವಾಗುವುದರಲ್ಲಿ ಸಂದೇಹವಿಲ್ಲವೆಂಬುದಾಗಿ ಆಧುನಿಕ ವೈದ್ಯರ ಅನುಭವದ ಮಾತಾಗಿದೆ. ಹಾಗೂ ಗರ್ಭಿಣಿಯರಿಗೆ ನಮ್ಮ **ಪ್ರಸೂತಿ ಕಲ್ಯಾಣವಟಿಗಳು** ಅಮೃತಸಮಾನವಾಗಿವೆ. ಪ್ರತಿಸಲಕ್ಕೆ ಒಂದೆರಡು ವಟಿಕೆಗಳನ್ನು ಒಂದೆರಡುಸಾರಿ ಸೇವಿಸಿದೊಡನೆಯೇ ಸುಖವಾದ (ಹೆರಿಗೆ) ಪ್ರಸವವಾಗುವುದರಲ್ಲಿ ಅನುಮಾನವಿಲ್ಲ. ಹೆತ್ತ ತರುವಾಯ ಒಂದೆರಡು ವಟಿಕೆಗಳ ಸೇವನೆಯಿಂದ ಒಳಗೆ ಸಂಚಿತವಾದ ರಕ್ತಲಸೀಕಾ (Placenta) ಕಸದ ಶೇಷಸಹಾ ಹೊರಗೆತಳ್ಳಿ ಗರ್ಭಾಶಯಕ್ಕೆ ಬಲಕೊಡುವುದಲ್ಲದೆ ಸಂಜುವಿರೋಣವೆಂಬ ಸೂತಿಕಾರೋಗ ಇತ್ಯಾದಿ ಬಾರದಂತೆ ತಡೆಗಟ್ಟುವವು. ವಿಶೇಷ ಗುಣ ಧರ್ಮ ಮತ್ತು ಅನುಪಾನ ವಟಿಕೆಗಳೊಂದಿಗೆ ಕಳುಹಿಸಲ್ಪಡುತ್ತವೆ. ಅತೀ ಬಡವರೂ ಸಹ ಉಪಯೋಗಿಸುವಂತೆ ಡಜನು 1ಕ್ಕೆ 0–12–0. ಏಳಾಣೆ ಸ್ಟಾಂಪು ಕಳುಹಿಸಿದ್ದಲ್ಲಿ 6 ವಟಿಕೆಗಳನ್ನು ಕಳುಹಿಸುತ್ತದೆ.

ಪ್ರಸವದ ಮುಂದೇನು?

12 ದಿನಗಳ ತನಕ ನಮ್ಮ ಬಾಣಂತಿ ಕ್ವಾಥವನ್ನು ಉಪಯೋಗಿಸಿ ಉತ್ತಮವಾದ ಗುಣಗಳ ಲಾಭವನ್ನು ಪಡೆಯಿರಿ. ಇದರ ಸೇವನೆಯಿಂದ, ಜ್ವರ, ಉದರಶೂಲೆ, ತಲೆನೋವು, ನಿದ್ರಾಭಂಗ, ನಡುಕು, ಸಂಜುವಿರೋಣ ಇತ್ಯಾದಿ ಬಾಣಂತಿಯ ಸರ್ವರೋಗಗಳೂ ಗುಣವಾಗುತ್ತವೆ. ಹಾಗೂ ಈ ತರದ ದುಷ್ಪರಿಣಾಮಗಳು ಬಾರದಂತೆ ತಡೆಗಟ್ಟುವದಲ್ಲದೆ ಬಾಣಂತಿಯು ಕಳಕೊಂಡ ಶಕ್ತಿಯನ್ನು ತುಂಬಿ ದಷ್ಟಪುಷ್ಟಳಾಗಿ ಶಿಶುವಿಗೆ ಯಥೇಷ್ಟ ಶುದ್ಧ ಹಾಲು ಸಹಾ ಸಿಗುವಂತೆ ಮಾಡುತ್ತದೆ. ಕ್ರಯ ಬಾಟ್ಲಿ 1ರ 1–0–0. ಇದರೊಂದಿಗೆ ಪ್ರಸೂತ ಕಲ್ಯಾಣವಟಿ 6 ವಟಿಗಳನ್ನು ಉಚಿತವಾಗಿ ಕಳುಹಿಸುವೆವು. ವಿ. ಪಿ. ಚಾರ್ಜು ಪ್ರತ್ಯೇಕ.

ಆಮಲಕೀ ತೈಲ

(ಪುಷ್ಪಗಂಧಾಮೋದಿತ ಬಹುಗುಣಯುಕ್ತ)

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ, ಪ್ರೌಢಸ್ತ್ರೀ-ಪುರುಷರಿಗೂ ನಿತ್ಯ ಕೇಶಪ್ರಸಾದನಾರ್ಥ ಉತ್ತಮವಾದ ಚಿತ್ತಾಕರ್ಷಕ ತೈಲ.

4 ಔನ್ಸಿನ ಸೀಸೆ ಗರ 0–11–0
2 ಔನ್ಸಿನ ಸೀಸೆ ಗರ 0–6–0

ಧನ್ವಂತರಿ ಗುಟಿಕಾ

ಕಸ್ತೂರಿಯುಕ್ತ **ವಾಯುಮಾತ್ರೆ**

ಆಬಾಲವೃದ್ಧ ಸ್ತ್ರೀ-ಪುರುಷರಿಗೆ ಅಕಸ್ಮಾತ್ತಾಗಿ ಬರುವ ರೋಗಗಳಲ್ಲಿ ತಕ್ಷಣ ಒಂದೆರಡು ಮಾತ್ರೆಗಳನ್ನು ಸೇವಿಸಿದ್ದಲ್ಲಿ ದೋಷಗಳು ನಿವೃತ್ತಿಯಾಗುವ ಸಂಗ್ರಾಹ್ಯ ಔಷಧಿಯಾಗಿದೆ, ಹಾಗೂ ಗರ್ಭಿಣಿಯರ ರೋಗಗಳಲ್ಲಿ ಅತ್ಯುತ್ತಮವಾಗಿವೆ. ಕ್ರಯ 100 ಮಾತ್ರೆಗಳಿಗೆ 1—5—0, 500ಕ್ಕೆ 5—0—0. ಐದಾಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತವೆ.

ನಮ್ಮ ಔಷಧಿಗಳು ಈ ಕೆಳಗಿನವರಲ್ಲಿ ಸಿಗುತ್ತವೆ:—

ಸಪ್ಲೈ ಏಜನ್ಸಿ ಲಿಮಿಟೆಡ್ ಉಡುಪಿ, ಎಮ್. ಮಂಜುನಾಥಯ್ಯ, ಕಲ್ಯಾಣಪುರ ಪೋಸ್ಟ್, ದ. ಕ.

ಯಾವತ್ತೂ ಔಷಧಗಳಿಗೂ ಏಜನ್ಸಿ ರಿಯಾಗಳಿಗೂ ಬರೆಯಿರಿ—

ಸ್ವದೇಶೀ ಔಷಧೀ ಭಂಡಾರ.
ಕುಂಜಾಲು, ದ. ಭಾರತ, ಬ್ರಹ್ಮಾವರ ಪೋಸ್ಟ್.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಟೆಗಳ ಬಿಲ್ಲು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರದಲ್ಲಿ ಮಾಡಿ ಕೊಡಲಾಗುವುದು.

CROWN RUBBER STAMP CO,
Balmat Road, MANGALORE.
Included by the Mysore Govt. Stores Purchase Committee in the list of approved Firms.

ಮಕರಸಂಕ್ರಾಂತಿ ವಿಶೇಷ ಸಂಚಿಕೆ ಬೆಲೆ ೪ ಆಣೆ.

ಸ್ವೀಕಾರ ಮತ್ತು ವಿಮರ್ಶೆ

ಗೋಪಾಲ ಭೇಷಜಾಶ್ರಮ, ಮಂಗಳೂರು:—ಆಯುರ್ವೇದ ಭೂಷಣ ಎಮ್. ಪಿ. ಶಾಸ್ತ್ರಿಯವರ ಗೋಪಾಲ ಭೇಷಜಾಶ್ರಮದ 26ನೇ ಮತ್ತು 27ನೇ ವರ್ಷಗಳ ವಾರ್ಷಿಕ ವರದಿಯನ್ನು ನಾವು ಸಾದರದಿಂದ ಸ್ವೀಕರಿಸಿರುವೆವು. ಭೇಷಜಾಶ್ರಮ ಮತ್ತು ಆಯುರ್ವೇದೌಷಧಾಲಯ, ಇವೆರಡೂ ಶಾಸ್ತ್ರಿಯವರ ಮಂಗಳೂರಿನ ಪ್ರಸಿದ್ಧ ಆಸ್ಪತ್ರೆಗಳು. ಇಲ್ಲಿ ಆಯುರ್ವೇದ ರೀತ್ಯಾ ಯೋಗ್ಯ ಚಿಕಿತ್ಸೆ ದೊರೆಯುತ್ತದೆ, ಮತ್ತು ಶಾಸ್ತ್ರಿಯವರು ಉದಾರತೆಯಿಂದ ಬಡಜನರಿಗೆ ಅರ್ಥಕ್ಕೆಯದಲ್ಲಿ ಅಥವಾ ಸಂದರ್ಭಬಿದ್ದಲ್ಲಿ ಧರ್ಮಾರ್ಥವಾಗಿ ಸಹಾ ಔಷಧ ಕೊಟ್ಟು ಜನತಾ ಸೇವೆಯನ್ನು ಮಾಡುತ್ತಿರುವ ಧಾರ್ಮಿಕ ಮನೋವೃತ್ತಿಯವರು. ಇವರ ಪ್ರಸಿದ್ಧ ಔಷಧಾಲಯವು ಇನ್ನಷ್ಟು ಉತ್ತಮವಾಗಿ ಮುನ್ನಡೆಯಲೆಂದು ಬಯಸುವೆವು.

ದಕ್ಷಿಣ ಕನ್ನಡ ಜಿಲ್ಲಾ (ಕಾರ್ಕಳ) ಗ್ರಾಮೋದ್ಧಾರ ಸಂಘದ 1937–'38ನೇ ಇಸವಿಯ ಕಾರ್ಯವೃತ್ತಾಂತ:—ಈ ಸಂಘವು XXI/1860 ಕಾಯಿದೆಯ ಮೇರೆಗೆ 1937-'38ನೇ ಇಸವಿಯ ನಾಲ್ಕನೇ ಸಂಘವಾಗಿ ರಿಜಿಸ್ಟ್ರು ಮಾಡಲ್ಪಟ್ಟು ಗ್ರಾಮೋದ್ಧಾರ ಕಾರ್ಯದಲ್ಲಿ ನಿರತವಾಗಿ, ದೇಶೋದ್ಧಾರಕ್ಕೆ ನೆರವಾಗ ಮೂಲ ಉದ್ದೇಶವುಳ್ಳದಾಗಿದೆ. 1937-1938ನೇ ವರ್ಷದ ಕಾರ್ಯವೃತ್ತಾಂತವನ್ನು ಅವಲೋಕಿಸಿದರೆ, ದೇಶಸೇವೆಯ ಉತ್ಕೃಷ್ಟ ಧ್ಯೇಯ ಹೊಂದಿದ [illegible]ಗಳ ಏಳ್ಗೆಗಾಗಿ ಈ ಮಂಡಳಿಯವರು ನಿರತರಾಗಿ ದುಡಿಯುತ್ತಿರುವರೆಂಬುದು ವಿದಿತವಾಗುತ್ತದೆ. ಈ ಗ್ರಾಮೋದ್ಧಾರ ಸಂಘದ ಕಾರ್ಯಕಲಾಪವು ಯಶಸ್ವಿಯಾಗಿ ನಡೆಯಲಿ, ಜನತೆಯು ನಾಕನ್ನು ಬೆಂಬಲಿಸಲೆಂದೂ, ಇಂಥಾ ಉತ್ತಮ ಧ್ಯೇಯದ ಸಂಘ ಸಂಸ್ಥೆಗಳು ಅಭಿವೃದ್ಧಿ ಹೊಂದುವಂತೆಯೂ ನಾವು ಅಂತಃಕರಣ ಪೂರ್ವಕವಾಗಿ ಹಾರೈಸುವೆವು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ನೌಕರರ ಸಂಘ:—ಇದರ ನಾಲ್ಕನೆಯ ವರ್ಷದ ಸಭೆಯ ಅಧ್ಯಕ್ಷರ ಭಾಷಣ ಮತ್ತು ವರದಿ ನಮಗೆ ತಲುಪಿರುತ್ತದೆ. ಜಿಲ್ಲಾ ಬೋರ್ಡ ನೌಕರರು ತಮ್ಮೊಳಗೆ ಪರಸ್ಪರ ಐಕ್ಯತೆಯಿಂದ, ಇಂಥಾ ಸಂಸ್ಥೆಯನ್ನೇರ್ಪಡಿಸಿ, ತಮ್ಮೇಳಿಗೆಗಾಗಿ ಸಾಧಿಸುವುದು ಅಗತ್ಯ; ಈ ಸಂಘದ ಕಾರ್ಯಕಲಾಪಗಳು ಇನ್ನಷ್ಟು ಶ್ರೇಯಸ್ಕರವಾಗಿ ನಡೆದು, ಇದರ ಉದ್ದೇಶ ಉನ್ನತವು ಜಯಶೀಲತೆಯನ್ನು ಹೊಂದಲೆಂದು ಹಾರೈಕೆ.

ವರದಿ—ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ '37ನೇ ಇಸ್ವಿಯ ವರದಿಯನ್ನು ನಾವು ಸ್ವೀಕರಿಸಿರುವೆವು. ಈ ಕುರಿತು ಸಾವಕಾಶದಲ್ಲಿ ಪ್ರಸ್ತಾಪಿಸುವೆವು.

ಕೆಲೆಂಡರ್—ಶ್ರೀ. ಎಸ್. ಯು. ನಾಯಕ ಮುದ್ರಾಯಂತ್ರ ಮತ್ತು ಕಂಪೆನಿ, ಚೌಕಿಂದ, ಕುಂದಾಪುರ ಇವರ ಪತ್ರಿಕೆಯ ಶ್ರೀ ವರ್ಣದ ಮನೋಹರ ಚಿತ್ರವುಳ್ಳ 1939ನೇ ಇಸವಿಯ ಕೆಲೆಂಡರ ನಮ್ಮ ಕಚೇರಿಗೆ ಬಂದಿದೆ. ಅಂದವಾಗಿದ್ದು ಗಿರಾಕಿಗಳಿಗೆ ಹಂಚುವ ಸ್ಟಾಂಪು ಕಳುಹಿಸಿದವರಿಗೆ ಈ ಕೆಲೆಂಡರನ್ನು ಉಚಿತವಾಗಿ ಕೊಡಲಾಗುವುದೆಂದೂ ತಿಳಿಸುತ್ತಾರೆ.

'ಪ್ರೇಮಾಹುತಿ' ಮತ್ತು 'ಸಂಧ್ಯಾರಾಗ' ಎಂಬ ಘಾಟಕದಾಸ ಮನೋಹರ ಗ್ರಂಥಪ್ರಕಟಣ ಸಮಿತಿಯ 2 ಪುಸ್ತಕಗಳು ವಿಮರ್ಶೆಗಾಗಿ ನಮ್ಮಲ್ಲಿಗೆ ಬಂದಿವೆ. ಯಥಾವಕಾಶವಾಗಿ ವಿಮರ್ಶಿಸಲಾಗುವುದು.

ಕರ್ನಾಟಕ ರಸಸಾಹಿತ್ಯ ಭಂಡಾರ, ಉಡುಪಿ, ಇವರು ಚಿತ್ರ ಅಚ್ಚಿನಕೆಯ, ಸಾದರ ಪುಡಿಗಳನ್ನು ಅಭಿಪ್ರಾಯಕ್ಕಾಗಿ ಕಳಿಸಿದ್ದಾರೆ. ಎಲ್ಲವೂ ಉತ್ತಮವಾಗಿದ್ದು ಪ್ರೋತ್ಸಾಹಾರ್ಹವಾಗಿವೆ.

MATRIMONIAL

Wanted a beautiful Educated Muslim girl aged not more than 18 years, to marry a cultured Muslim youth of 26, well settled in life.

Apply with Photo
'X'
C/o Navayuga, Udipi.

ಬೆಂಗಳೂರಲ್ಲಿ ಅಖಿಲಭಾರತ

ಆನುವಂಶಿಕ ಆಯುರ್ವೇದ ಮತ್ತು ಯುನಾನಿ ವೈದ್ಯಪರಿಷತ್ತು.

ಪಂಡಿತ ತಾರಾನಾಥರ ಅಧ್ಯಕ್ಷಭಾಷಣ

'ಇಂಗ್ಲೆಂಡಿನಲ್ಲಿ ಸಾವಿರ ಜನರಿಗೊಬ್ಬ ನಂತೆ ಅಮೇರಿಕದ ಯುನೈಟೆಡ್ ಸ್ಟೇಟ್ಸಿನಲ್ಲಿ ಎಂಟುನೂರು ಮಂದಿಗೊಬ್ಬನಂತೆ ಡಾಕ್ಟರರು ಇರುವರೆಂದು ಕೇಳಿದ್ದೇವೆ. ಅಲ್ಲಿಗಿಂತಲೂ ಹೆಚ್ಚಿನ ಬೇನೆಬೇಸರಿಕೆಗಳುಳ್ಳ ಈ ದೇಶದಲ್ಲಿ ಆ ಪರಿಮಾಣದಿಂದ ಲೆಕ್ಕ ಹಾಕಿದರೆ ಎಷ್ಟು ಡಾಕ್ಟರರು ಬೇಕಾಗಿಲ್ಲ? ಇಂದಿನ ಎಲ್ಲೋಪತಿಕ್ ಕಾಲೇಜು(ವಿದೇಶೀ ವೈದ್ಯ ಶಿಕ್ಷಣಾಲಯ)ಗಳೂ ಶಾಲೆಗಳೂ ಬೇಕಾದ ಸಂಖ್ಯೆಯನ್ನು ಪೂರೈಸಿ ಕೊಡಲಾಪವೇ? ಯಾವ ಸರಕಾರವೂ ಸ್ವಪ್ನೇಪಿ ಆ ಕಾರ್ಯವನ್ನು ನೆರವೇರಿಸಲಾರದು. ಎಂದಮೇಲೆ ಆ ಪೂರೈಕೆಯಾಗಬೇಕಾದುದು ಆಯುರ್ವೇದ, ಯುನಾನಿ ಮತ್ತು ಹೋಮ್ಯೋಪತಿಗಳಿಂದಲೇ. ಜನತೆಯು ತಕ್ಕಷ್ಟು ರಾಜಕೀಯ ಜಾಗ್ರತಿಯನ್ನು ಹೊಂದಿರುವುದಾದರೆ ಆದರ ಈ ಪೂರೈಕೆಯ ಬೇಡಿಕೆಯನ್ನು ಸರಕಾರವು ನಡೆಯಿಸಿಕೊಡುವಂತೆ ಮಾಡಿಕೊಳ್ಳದಿರದು. ಇಂದಿನ ಮಂತ್ರಿಗಳು ಮಾಡಿರುವ ಶಾಸನ ನಿರ್ಮಾಣಗಳಲ್ಲಿ ಜನತೆಗೆ ನಿಜವಾಗಿ ಪ್ರಯೋಜನಕ್ಕೆ ಬೀಳುವ ಆದಾವ ವೈದ್ಯರು ಹಕೀಮರಿದ್ದಾರೆಯೋ ಅವರಿಗ ಇರಲ್ಲಿ ಆಶ್ರಯ ಕೊಡಲಾಗಲಿಲ್ಲ. ದೇಶೀಯ ವೈದ್ಯರ ಕಡೆಗೆ ಹಿಂದೆಯೂ ಇಂದೂ ಇಂದಿನ ಕಾಂಗ್ರೆಸ್ ಮಂತ್ರಿತ್ವದಲ್ಲೂ ಮಲತಾಯಿ ದೃಷ್ಟಿ ಇದ್ದೇ ಇರುವುದು ಶೋಚನೀಯ. ಉದಾಹರಣೆಗಾಗಿ, ಬೊಂಬಾಯಿ ಪ್ರಾಂತ್ಯದಲ್ಲಿ ೧೪ ವೈದ್ಯಕೀಯ ಸಹಾಯ ಕೇಂದ್ರಗಳನ್ನು ತೆರೆವುದೆಂದು ನಿಶ್ಚಯಿ

ಸಿದಾಗ ಅವುಗಳಲ್ಲಿ ಅಕ್ಕೆ "ವಿದೇಶೀ ಚಿಕಿತ್ಸಾ (ಎಲ್ಲೋಪತಿ) ಡಾಕ್ಟರರೂ ಒಕ್ಕೆ ಆಯುರ್ವೇದ ವೈದ್ಯರೂ ನೇಮಕವಾಗಬೇಕೆಂದೂ, ಎಲ್ಲೋಪತಿ ಡಾಕ್ಟರರಿಗೆ ಸಂಬಳ, ಪ್ರಯಾಣ ಭತ್ತೆ ಮತ್ತು ಮದ್ದುಗಳ ವೆಚ್ಚದ ಬಗ್ಗೆ ನಿಶ್ಚಿತವಾದ ಹಣವು ಅನುಕ್ರಮವಾಗಿ ರೂ. 50, 25, 35, ಆಯುರ್ವೇದ ವೈದ್ಯರಿಗೆ ರೂ. 30, 15, 150 ಪಾಶ್ಚಾತ್ಯ ಚಿಕಿತ್ಸಾಕ್ರಮದ ದ್ವೇಷಿಯಾಗಿ ಹೇಳುವುದಲ್ಲ. ಆದರೆ ಆ ಒಂದು ಕೇಂದ್ರದ ವೆಚ್ಚದಿಂದ ಈ ಬಡನಾಡಿನಲ್ಲಿ ಆಯುರ್ವೇದ ರೀತ್ಯಾ ಎರಡು ಕೇಂದ್ರಗಳನ್ನು ನಡೆಯಿಸಬಹುದು. ಮಾತ್ರವಲ್ಲ ಸರ್ವತ್ರ ಪಾಶ್ಚಾತ್ಯ ಚಿಕಿತ್ಸಾ ಪದ್ಧತಿಯಿಂದ ನಮ್ಮ ದೇಶವನ್ನು ತುಂಬುವುದು ಹಿತವಲ್ಲ. ನಮ್ಮ ಆಯುರ್ವೇದ ಮತ್ತು ಯುನಾನಿ ಔಷಧಗಳಿಲ್ಲದೆ ಬಡವರಿಗೆ ಎಟಕದ ಬೆಲೆಯ ವಿದೇಶೀಯ ಔಷಧಗಳಿಂದಲೂ ಚಿಕಿತ್ಸೆಯಿಂದಲೂ ನಮ್ಮ ಬಡನಾಡು ಉದ್ಧಾರವಾದೀತೇ? ಇಂದಿನ ಮೆಡಿಕಲ್ ರಿಜಿಸ್ಟ್ರೇಶನ್ ಎಂಬ ಬಿಡ್ಡಾಯ ಕ್ರಮದಿಂದ ಆನುವಂಶಿಕ ವೈದ್ಯರನ್ನು ಮೂಲೆಪಾಲು ಮಾಡುವುದು ಹಿತವಲ್ಲ. ಈಗೇನೋ ಸುವ್ಯವಸ್ಥಿತವಾದ ಆಯುರ್ವೇದ ಕಾಲೇಜುಗಳನ್ನೂ ಶಾಲೆಗಳನ್ನೂ ಸರಕಾರವೇ ತೆರೆದು ಅವುಗಳಲ್ಲಿ ಕಲಿತವರಿಂದ ಆಯುರ್ವೇದ ಚಿಕಿತ್ಸಾ ಭವನಗಳನ್ನೂ ಆಸ್ಪತ್ರೆಗಳನ್ನೂ ನಡೆಸುವ ಧ್ಯೇಯವಿದೆಯೆಂಬ ಕಾರಣದಿಂದ ಈ ಆನುವಂಶಿಕ ವೈದ್ಯರನ್ನು ಬದಿಗಟ್ಟಬಹುದು. ಆದರೆ ಅಂತಹ ಹಲವು ಶಾಲೆಕಾಲೇಜುಗಳನ್ನು ತೆರೆಯಲು ಸರಕಾರದಲ್ಲಿ ಹಣವಿದೆಯೆಂದಾಗಲೀ ಅಥವಾ ಹಣವಿದ್ದರೂ ಮನಸ್ಸಿದೆಯೆಂದಾಗಲೀ ನಾನು ನಂಬುವುದಿಲ್ಲ. ಮೊಂಟೆಗ್ ಚೆಲ್ಮ್ಸ್‌ಫೋರ್ಡ್ ರಿಫಾರ್ಮಿನ ಕಾಲದಿಂದಲೂ ಸರಕಾರದ ಮನೋವೃತ್ತಿಯನ್ನು ವಸ್ತುಸ್ಥಿತಿಯಿಂದಲೂ ಕೃತಿಯಿಂದಲೂ ಕಂಡವರಿಗೆ ಆಯುರ್ವೇದಕ್ಕಷ್ಟು ಪ್ರೋತ್ಸಾಹ ದೊರೆತಿದೆಯೆಂಬುದು ಸ್ಪಷ್ಟವಿದೆ. ಮುಂತಾಗಿ ಸತ್ಯ ಹಾಗೂ ನಿದರ್ಶನ್ಯವಾದ ಮಾತುಗಳಿಂದ ಭಾಷಣವು ವಿಚಾರದ್ಯೋತಕವಾಗಿತ್ತು. ಪಂಡಿತಜೀಯವರು ಸ್ವತಃ ಬಂದು ಅಧ್ಯಕ್ಷಪದವಿಯನ್ನಲಂಕರಿಸಲಾಗದಿದ್ದುದರಿಂದ ಅವರ ಧರ್ಮಪತ್ನಿಯವರು ಅಧ್ಯಕ್ಷಭಾಷಣವನ್ನೋದಬೇಕಾಗಿತ್ತು.

ದಲಿತ ವರ್ಗಕ್ಕೆ ಕಾಂಗ್ರೆಸ್ಸ್ ಮಂತ್ರಿತ್ವದಿಂದ ವಿಶೇಷ ಪ್ರಯೋಜನವೇನೂ ಆಗಿಲ್ಲ!

ಹೀಗೆಂದು ಈ ರೋಡಿನಲ್ಲಿ ಡಿಪ್ರೆಸ್ಡ್ ಕ್ಲಾಸ್ ಜನರ ಪರಿಷತ್ತಿನಲ್ಲಿ ರಾವ್ ಬಹದ್ದೂರ್ ಯಮ್. ಸಿ. ರಾಜಾ, ಎಮ್. ಎಲ್. ಎ. ಇವರು ಇಂದಿನ ಕಾಂಗ್ರೆಸ್ ಸರಕಾರವು ಹರಿಜನಾದಿಗಳಿಗೆ ತೋರುತ್ತಿರುವ ಧೋರಣೆಯನ್ನು ಟೀಕಿಸಿರುವರು. ಹಿಂದಿನ ಸರಕಾರವು ಈ ದಲಿತ ವರ್ಗದ ಉದ್ಧಾರಕ್ಕಾಗಿ ಏನೇನು ವ್ಯವಸ್ಥೆಗಳನ್ನು ಮಾಡಿರುವುದೋ ಅದನ್ನು ಬಿಡಲಾರದೆ ಹಿಡಿದಿದೆಯಲ್ಲದೆ ಮುಂದುವರಿಸಿಲ್ಲ. ಹಿಂದಿನ ಸರಕಾರವು ಮಾಡಿರುವ ಕಾರ್ಯಕ್ರಮಗಳನ್ನು ತೆಗೆದು ಹಾಕದಿರುವುದೊಂದೇ ಗುಣವಲ್ಲದೆ ಮತ್ತೇನೂ ವಿಶೇಷ ತೋರುವುದಿಲ್ಲ. ಹಿಂದಿನ ವ್ಯವಸ್ಥೆಗಳಿಗೊಂದು ಬಣ್ಣ ಬೇರೆ ಮಾಡಿದ್ದಾರೆ. ಅದರಲ್ಲಿಯೂ ಈ ವರ್ಗವನ್ನು ಉದ್ಧಾರ ಮಾಡುವ ದೃಷ್ಟಿಗಿಂತ ಕಾಂಗ್ರೆಸನ್ನು ಬಲಪಡಿಸುವ ಧ್ಯೇಯವೇ ಮುಂದಾಗಿ ಕಾಣುತ್ತದೆ. ಎಂದು ಮುಂತಾಗಿ ಅವರ ಹಲವು ಟೀಕೆಗಳಿದ್ದುವು.

ನವಯುಗಕ್ಕೆ ಚಂದಾದಾರರಾಗಿರಿ.

ಪ್ರಸಿದ್ಧ ಜೈನಕ್ಷೇತ್ರವಾದ ವೇಣೂರಲ್ಲಿ ಜರಗಲಿರುವ

ಪಂಚಕಲ್ಯಾಣ ಮಹೋತ್ಸವ ಕಾಲದಲ್ಲಿ

ಜಾಹೀರಾತಿನ ದರಗಳಲ್ಲಿ ಹೆಚ್ಚು - ಕಡಿಮೆ - ಇಲ್ಲ

ಇಡೀ ಪುಟಕ್ಕೆ	೧೦-೦-೦
ಅರ್ಧ ,,	೫-೦-೦
ಕಾಲು ,,	೩-೦-೦
ಅರೆಕಾಲು	೨-೦-೦
ಕಲಮಿನ ಒಂದಿಂಚಿಗೆ	೧-೦-೦

ಜಾಹೀರಾತುದಾರರಿಗೆ ಇದಕ್ಕಿಂತ ಉತ್ತಮ ಸಂದರ್ಭ ಬೇರೊಂದು ದೊರೆಕಲಾರದು.

•

ತಾರೀಕು **29-1-1939**ರ

ಅಂತರಂಗವು ವಿಶೇಷ ಸಂಚಿಕೆಯ ರೂಪದಲ್ಲಿ ಹೊರಡಲಿರುವುದು

ಜೈನಮತಕ್ಕೆ ಸಂಬಂಧಿಸಿದ ಅನೇಕ ಲೇಖನಗಳೂ, ಚಿತ್ರಗಳೂ, ಇತರ ವಿವರಗಳೂ ಈ ಸಂಚಿಕೆಯಲ್ಲಿ ಪ್ರಕಟವಾಗಲಿವೆ.

•

ಪ್ರತಿಯೊಂದು ಜೈನಗೃಹಕ್ಕೂ ಅಲಂಕಾರಪ್ರಾಯವಾಗಿ
• ಮೆರೆಯಲಿದೆ ಈ ಸಂಚಿಕೆ •

ಮೆನೇಜರ್ ಅಂತರಂಗ **ಉಡುಪಿ**

ಮೇಜರ್ ಕೊಟ್ಟಾರಿ ಕನ್ನಯ್ಯನಾಯಿಡು

(ಲೇಖಕರು:—ಶ್ರೀ ಎಸ್. ಗುಂಡುರಾವ್ ಮೈಸೂರು.)

ಕ್ರಿಕೆಟ್‌ರಂಗದಲ್ಲಿ ಶ್ರೀ ನಾಯ್ಡುರವರ ಹೆಸರು ಮೊದಲಾಗಿ ಕೇಳಿಬರುವುದು. ಹಿಂದುಸ್ಥಾನದಲ್ಲಿ ಯಾರಾದರೂ ಕ್ರಿಕೆಟ್ ಆಟಗಾರರಿದ್ದರೆ ಅದು ಶ್रೀ. ನಾಯ್ಡುರವರು. 'ನಾಯ್ಡುರವರಿಲ್ಲದಿದ್ದರೆ ಕ್ರಿಕೆಟೂ ಇಲ್ಲ' ಎಂದು ಹೇಳುತ್ತಾ ಕವನ ಕಟ್ಟಿಹಾಡಿದವರಿದ್ದಾರೆ.

ಕ್ರಿಕೆಟ್‌ರಂಗದಲ್ಲಿ

ಭರತಖಂಡದ ಕ್ರಿಕೆಟ್ ಚರಿತ್ರೆಯಲ್ಲಿ ಯಾವತ್ತು ಪ್ರಪಂಚದ ಸುಪ್ರಸಿದ್ಧ ಕ್ರಿಕೆಟ್ ಆಟಗಾರರಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದಿರುವ ಮೇಜರ್ ಕೊಟ್ಟಾರಿಕನ್ನಯ್ಯ ನಾಯುಡುರವರ ವಿಚಾರವಾಗಿ ಒಂದೆರಡು ಮಾತುಗಳನ್ನು ಇಲ್ಲಿ ಹೇಳಲು ನಿಜವಾಗಿಯೂ ಒಂದು ಹೆಮ್ಮೆಯೇ ಸರಿ.

ಮೇಜರ್ ನಾಯ್ಡುರವರು ೧೮೯೫ನೇ ಅಕ್ಟೋಬರ ೩೧ರಲ್ಲಿ ನಾಗಪುರದಲ್ಲಿ ಹುಟ್ಟಿದರು. ಕೇವಲ ಏಳುವರ್ಷವಾಗಿರುವಾಗಲೇ ಕ್ರಿಕೆಟ್ ಆಟವನ್ನಾಡಲು ಉಪಕ್ರಮಿಸಿದರು. ಇವರು ತಮ್ಮ ಶಾಲಾದಿನಗಳಲ್ಲಿ ಹತ್ತು ಸೆಂಚುರಿ (ಶತಕ) ಗಳನ್ನು ಹೊಡೆದು ಒಂದು ಅದ್ಭುತ ರಿಕಾರ್ಡನ್ನು ಸ್ಥಾಪಿಸಿಬಿಟ್ಟರು. ಮತ್ತು ಆ ಕಾಲದಲ್ಲಿ ಅವರ ಶಾಲೆಯವರು "ಬಿಯರ್ಡಾನ್ ಶೀಲ್ಡನ್ನು" ಹೊಂದಲು ಇವರೇ ಕಾರಣರಾದರು.

ಮೇಜರ್ ನಾಯ್ಡುರವರನ್ನು ನೋಡಿದರೆ ಎಂಥಹ ಮಹನೀಯರಿಗಾದರೂ ಅವರನ್ನು ತಬ್ಬಿಕೊಳ್ಳುವಷ್ಟು ಒಂದು ಬಗೆಯ ಉತ್ಸಾಹವೂ, ಪ್ರೀತಿಯೂ ಹುಟ್ಟುತ್ತದೆ. ಈ ಮಹನೀಯರು ಸುಮಾರು ಆರೂವರೆ ಅಡಿ ಎತ್ತರ ಇರುವರು, ಸೊಗಸಾದ ಕಪ್ಪು ಕಣ್ಣುಗಳು, ಸರ್ವತೋಮುಖವುಳ್ಳ ಇವರು ನಿಜವಾಗಿಯೂ ಕ್ರಿಕೆಟ್ ಆಡುವುದಕ್ಕೆ ಹುಟ್ಟಿದ್ದಾರೋ ಅಥವ ಕ್ರಿಕೆಟ್ಟೇ ಇವರಿಗೋಸ್ಕರ ಹುಟ್ಟಿದೆಯೋ ಯಾವುದು ಹೇಳಲಿಕ್ಕೂ ಅನುಮಾನವಾಗಿದೆ. ಬಹುಶಃ ಎರಡನೆಯದನ್ನು ಹೇಳಿದರೆ ತಪ್ಪಾಗಲಾರದು. ಇವರ ಆಟವನ್ನು ನೋಡಲು ಒಂದು ಬಗೆಯ ಸಂತೋಷವೇ ಸರಿ. ವಿಕೆಟ್ಟಿನ ಸುತ್ತಮುತ್ತಲೂ ಹೊಡೆಯುತ್ತ ಪ್ರೇಕ್ಷಕರನ್ನು ಒಂದು ವಿಧವಾದ ಸಂತೋಷದಲ್ಲಿಡುತ್ತಾರೆ. ಇವರಿಗೆ "ಇಂಡಿಯನ್ ಜೋಸೆಫ್" ಎಂದು ಹೇಳುತ್ತಾರೆ.

ಮೇಜರ್ ನಾಯ್ಡುರವರು ತಮ್ಮ ಕ್ರಿಕೆಟ್ ಚಮತ್ಕಾರವನ್ನು ತೋರಿಸಿದ್ದು ಬೊಂಬಾಯಿಯ ಚತುಶ್ಕೋನದಲ್ಲಿ. ೧೯೧೬ರಿಂದ ಈ ಚತುಶ್‌ಕೋನದ ಪಂದ್ಯದಲ್ಲಾಡಿ ಸುಮಾರು ೧೦೦೦ ರನ್ನುಗಳನ್ನು ಹೊಡೆದು, ಮೊದಲನೆಯ ಆಟಗಾರರ ಸ್ಥಾನವನ್ನೇ ಪಡೆದುಬಿಟ್ಟರು. ಮತ್ತು ಹೀಗೆ ೧೦೦೦ ರನ್ನುಗಳನ್ನು ಹೊಡೆಯಲು ಇವರೇ ಮೊದಲನೆಯವರೆಂದು ಹೇಳಲಾಗಿದೆ.

ಇವರು ಇಂದೂರಿನಲ್ಲಿದ್ದಾರೆ. ಅಲ್ಲಿಯ ಮಹಾರಾಜರ ಸೈನ್ಯಾವಳಿನವರು.

ಭೇಟ, ಗೀರಿ, ಅಸ್ಟಿಲ್ ಮುಂತಾದ ಸುಪ್ರಸಿದ್ಧ ಇಂಗ್ಲಿಷ್ ಕ್ರಿಕೆಟ್ ಆಟಗಾರರ ಗುಂಪಿಗೆ ನಾಯಕರಾಗಿದ್ದ, ಅರ್ಥರ್, ಗಿಲ್ಲಿಗನ್‌ರವರ ಗುಂಪು ಭರತಖಂಡದಲ್ಲಿ 1926ರಲ್ಲಿ ಸಂಚರಿಸುವಾಗ, ಬೊಂಬಾಯಿಯಲ್ಲಿ ನಾಯ್ಡುರವರು, ಭರತಖಂಡದ ಪರವಾಗಿ ಆಟವಾಡಿ (ಇವರ ಮೇಲೆ) 100 ನಿಮಿಷಗಳಲ್ಲಿ 153 ರನ್ನುಗಳನ್ನು ಮಾಡಿದರು. ಇದರಲ್ಲಿ 11 ಸಿಕ್ಸರ್‌ಗಳನ್ನೂ ಮತ್ತು ಬೋಂಡರಿಗಳನ್ನೂ ಹೊಡೆದು, ಒಂದು ವಿಶ್ವದ ರಿಕಾರ್ಡನ್ನು ಸ್ಥಾಪಿಸಿದ್ದಾರೆ. ಇದನ್ನು ಕ್ರಿಕೆಟ್ ಚರಿತ್ರೆಯ ಇತಿಹಾಸದಲ್ಲಿ, ಸುವರ್ಣಾಕ್ಷರಗಳಿಂದ ಬರೆದಿಡಬಹುದು. ಆದಿನ ಇವರಿಗೆ ದೊರೆತ ಎಲ್ಲರ ಮನ್ನಣೆಯು ಒಂದು ಸೊಗಸಾದ ವಿಷಯವೇ ಸರಿ.

ನಾಯ್ಡುರವರು, 1932ರಲ್ಲಿ ಭರತಖಂಡದ ಕ್ರಿಕೆಟ್ ಆಟಗಾರರು, ಇಂಗ್ಲೆಂಡಿನಲ್ಲಿ ಸಂಚರಿಸಿದಾಗ, ಅದರ ನಾಯಕರಾಗಿ ಓರ್ವ ಬೋಲರ್ ಎಂದು ಪ್ರಶಸ್ತಿಪಡೆದು ಸುಮಾರು 79 ವಿಕೆಟ್ಟನ್ನು ಪಡೆದರು.

ನಾಯ್ಡುರವರ ಆಟವನ್ನು ನೋಡಿ ಅನೇಕರು ಮೂಗಿನ ಮೇಲೆ ಬೆರಳನ್ನಿಟ್ಟುಕೊಂಡಿದ್ದಾರೆ. ಇವರ ಹೊಡೆತವು ಸರಿಯಾಗಿ ಬಿಟ್ಟರೆ ಅದನ್ನು ಮೂರುದಿನಗಳು ಬೇಕಾದರೂ ನೋಡುತ್ತಿರಬಹುದು, 1932ರಲ್ಲಿ ಇಂಗ್ಲೆಂಡಿನವರ ಮೇಲೆ ಲಾರ್ಡ್ಸನಲ್ಲಿ ಎಂ. ಸಿ. ಸಿ ಯವರ ಮೇಲೆ ಒಂದು ಸೆಂಚುರಿಯನ್ನು ಹೊಡೆದರು. ಮತ್ತು 1932ನೇ ಪ್ರವಾಸದಲ್ಲಿ (ಇಂಗ್ಲೆಂಡಿನಲ್ಲಿ) 6 ಸೆಂಚುರಿಗಳನ್ನೂ 1900 ರನ್ನುಗಳನ್ನೂ ಹೊಡೆದವರಲ್ಲಿ ಇವರು ಮೊಟ್ಟಮೊದಲನೆಯವರು.

1933–34ರಲ್ಲಿ ಇಂಗ್ಲೆಂಡಿನ ಕ್ರಿಕೆಟ್ ಆಟಗಾರರು ಭರತಖಂಡದಲ್ಲಿ ಸಂಚರಿಸಿದಾಗ ಇಂಡಿಯಾ ಟೆಸ್ಟ್ ಪಂದ್ಯದಲ್ಲಿ ಕಲ್ಕತ್ತ, ಮದ್ರಾಸ್ ಮತ್ತು ಬೊಂಬಾಯಿಯಲ್ಲಿ ಆಲ್ ಇಂಡಿಯಾ ಟೆಸ್ಟ್ ಪಂದ್ಯದಲ್ಲಿ ಭರತಖಂಡದ ನಾಯಕರಾಗಿದ್ದವರು ಇವರೇ.

ಇವರು ಎಂ. ಸಿ. ಸಿ. ಮೇಲೆ, ಲಾಹೋರಿನಲ್ಲಿ ಅವರ ಮೊಟ್ಟಮೊದಲನೆಯ ಸೆಂಚುರಿಯನ್ನೇರಿಸಿದರು.

ಇಷ್ಟಲ್ಲದೆ, 1932ರಲ್ಲಿ ಹಿಂದೂದೇಶದಲ್ಲಿ ಸಂಚರಿಸಿದ ಎಂ. ಸಿ. ಸಿ. ಗುಂಪಿನ ನಾಯಕರಾಗಿದ್ದ ಜಾರ್ಡಿನ್‌ರವರಿಗೆ ಮೇಜರ್ ನಾಯ್ಡುರವರು 'ನಾನು ನಿಮ್ಮನ್ನು ಇದಿರುಗೊಳ್ಳುವವರೆಗೆ ಸುಮ್ಮನಿರಿ." ಎಂದು ಹೇಳಿ ಅವರ ಮೇಲೆ ಅದ್ಭುತ ಕ್ರೀಡೆಯನ್ನು ತೋರಿಸಿದರು.

ಇವರನ್ನು ಮಿ॥ ಮಿಸ್‌ಡನ್ನರವರು ಪ್ರಪಂಚದ ಸುಪ್ರಸಿದ್ಧ 5ಜನ ಕ್ರಿಕೆಟ್ ಆಟಗಾರರಲ್ಲಿ ಒಬ್ಬರೆಂದು ತಿಳಿಸಿದ್ದಾರೆ.

ನಾಯ್ಡುರವರು ಇಷ್ಟಲ್ಲದೆ ಅನೇಕ ಟೂರ್ನಿಯಲ್ಲಿಯೂ, ಜ್ಯೂಬಿಲಿ ಪಂದ್ಯದಲ್ಲೂ ಭಾಗವಹಿಸಿ ಸೆಂಚುರಿಗಳನ್ನೂ ಉತ್ತಮ ಸ್ಕೋರುಗಳನ್ನೂ ಮಾಡಿದ್ದಾರೆ.

ಈಚೀಚೆಗೆ ಮೇಜರ್ ನಾಯ್ಡುರವರನ್ನು ಕಂಡರೆ ಅನೇಕರಿಗೆ ದ್ವೇಷಾಸೂಯೆಯು ಇತ್ತೆಂದು ಅಲ್ಲಲ್ಲಿ ನಡೆದಿರುವ ಕೆಲವು ಅಂಶಗಳಿಂದ ತಿಳಿದುಬರುತ್ತೆ.

1936ರಲ್ಲಿ ಭರತಖಂಡದಲ್ಲಿ ಪ್ರವಾಸಮಾಡಿದ ಆಸ್ಟ್ರೇಲಿಯ ಆಟಗಾರರ ನಾಯಕರಾಗಿದ್ದ, ರೈಡರ್‌ರವರ ಗುಂಪಿನವರ ಮೇಲೆ ಇವರು ಒಳ್ಳೆಯ ಆಟವನ್ನು ತೋರಿಸಿದರಲ್ಲದೆ, ಕೇವಲ ಒಂದೇ ಒಂದು ಟೆಸ್ಟ್ ಪಂದ್ಯದಲ್ಲಿ ಇವರು ಭರತಖಂಡದ ಗುಂಪಿಗೆ ನಾಯಕರಾಗಿದ್ದರು. ಆದರೆ ಮಾತ್ರ, ಆಸ್ಟ್ರೇಲಿಯಾದ ಆಟಗಾರರು ಇವರ ಆಟವನ್ನು ಬಹಳ ಮೆಚ್ಚಿದ್ದಾರೆ. ಮತ್ತು ಅದೇ ಸಮಯದಲ್ಲಿ, ಅಂದರೆ 1937ರಲ್ಲಿ, ನಮ್ಮ ಭರತಖಂಡದ, ಕ್ರಿಕೆಟ್ ಆಟಗಾರರು, ಇಂಗ್ಲಾಂಡಿನಲ್ಲಿ ಸಂಚರಿಸಲು ಹೊರಡಬೇಕಾಗಿತ್ತು. ಆಗ ಆಟಗಾರರ ಚುನಾವಣೆಯೂ ನಡೆಯಿತು. ಆ ಆಟಗಾರರ ಗುಂಪಿಗೆ ಓರ್ವ ನಾಯಕರನ್ನು ಚುನಾಯಿಸುವ ಸಮಯದಲ್ಲಿ, ಇವರು ಈ ಸ್ಥಾನಕ್ಕೆ ಅರ್ಹರಲ್ಲವೆಂದು, ಅನೇಕರು ಅಭಿಪ್ರಾಯಪಡಲು, ಇವರಿಗೆ ಬಹಳ ನಿರಾಶೆಯಾಯಿತು. ಅಷ್ಟರಲ್ಲಿ, ಭರತಖಂಡದ ಪ್ರವಾಸವನ್ನು ಮುಗಿಸಿಕೊಂಡು, ಆಸ್ಟ್ರೇಲಿಯಾಕ್ಕೆ ಹಿಂತಿರುಗಲು ಮುಂಬೈಗೆ ಹೊರಟಿದ್ದ ಆಸ್ಟ್ರೇಲಿಯಾದ ಗುಂಪಿನ ವೈಸ್ ನಾಯಕರಾಗಿದ್ದ ಮಿ॥ ಸಿ. ಜಿ. ಮೆಕಾರ್ಟ್ನೆಯವರನ್ನು ಓರ್ವ ಪತ್ರಿಕೋದ್ಯೋಗಿಗಳು ಭೇಟಿಮಾಡಿ, ಈ ವಿಷಯವನ್ನು ತಿಳಿಸಲು, ಅವರು ತಮ್ಮಮೊದಲನೆಯ ಓಟನ್ನು ನಾಯ್ಡುರವರಿಗೆ (ನಾಯಕರಾಗಲು) ಕೊಡುವರೆಂದು ತಿಳಿಸಿದರು. ಆಗ ಇದರ ವಿಚಾರವಾಗಿ ಒಂದು ಕೋಲಾಹಲವೇ ನಡೆದುಹೋಯಿತು.

ಹಾಗೂ ಹೀಗೂ, ನಮ್ಮವರು ಇಂಗ್ಲಾಂಡಿಗೆ ಹೊರಟೇಬಿಟ್ಟರು, ಅಲ್ಲೋ ಒಂದು ಅಲ್ಲೋಲಕಲ್ಲೋಲ ನಡೆದು ಆ ಗುಂಪಿನ ಓರ್ವ ಸದಸ್ಯರಾಗಿದ್ದ ಶ್ರೀ ಅಮರನಾಥರ ವಿಚಾರವಾಗಿ ಒಂದು ದೊಡ್ಡ ಪುಸ್ತಕವನ್ನು ಬರೆಯಬಹುದಾದ ಒಂದು ವಿಷಯವೇ ನಡೆದುಬಿಟ್ಟಿತು. ಇದಕ್ಕೆ ನಾಯ್ಡುರವರು ಕೂಡ ಬೆಂಬಲಕೊಟ್ಟರೆಂದು ಅಲ್ಲಲ್ಲಿ ಗುಲ್ಲೆದ್ದಿತು. ಇವೆಲ್ಲವೂ ನಾಯ್ಡುರವರಿಗೆ ಕೆಲವು ಕಾಲ, ಒಂದು ಬಗೆಯ ವ್ಯಸನವನ್ನುಂಟುಮಾಡಿತು. ಆದರೆ ಇಷ್ಟು ಹೊತ್ತಿಗೆ ನಾಯ್ಡುರವರು, ಇಂದೂರಿನ ಮಹಾರಾಜರೊಂದಿಗೆ ಅಮೆರಿಕಾ ದೇಶದಲ್ಲಿ ಪ್ರವಾಸ ಮಾಡಿಕೊಂಡು ಬಂದರು.

ಇಷ್ಟಲ್ಲದೆ ನಾಯ್ಡುರವರಿಗೆ ಇತ್ತೀಚೆಗೆ ಕೂಡ, ಒಂದು ಬಗೆಯ ವ್ಯತಿರಿಕ್ತವಾದ ಉತ್ತರಗಳು ಬರುತ್ತಿದ್ದುವು. ಸುಮಾರು ಎರಡು ವರ್ಷಗಳ ಕೆಳಗೆ ನಮ್ಮ ಭರತಖಂಡದಲ್ಲಿ ಸಂಚರಿಸಿದ, ಇಂಗ್ಲೆಂಡಿನ ಕ್ರಿಕೆಟ ಆಟಗಾರರ ಅಂದರೆ ಲಾರ್ಡ್ ಟೆನಿಸನ್ ಟೀಮಿನ ಮೇಲೆ, ಇವರ ಆಟವು ನಿಜವಾಗಿಯೂ ಮಾದರಿಯದಾಗಿತ್ತು. ಆದರೆ ಇವರ ಮೇಲೆ, ನಮ್ಮವರು ಆಲ್ ಇಂಡಿಯಾ ಟೆಸ್ಟ್ ಪಂದ್ಯದಲ್ಲಿ, ಆಟವಾಡಲು ಕರೆಸಿ, ಅವರಿಗೆ 11 ಜನರಲ್ಲಿ ಒಂದು ಸ್ಥಾನವನ್ನು ಕೂಡ ಕೊಡದೆ ಒಂದು ಬಗೆಯ ನಿರಾಶೆಯನ್ನುಂಟುಮಾಡಿದರು. ಇವರು ಇಷ್ಟಕ್ಕೆ ಬಿಡಲಿಲ್ಲ. ಇಂಗ್ಲೆಂಡಿನ ಗುಂಪಿನ ಮೇಲೆ ಬೇರೆ ಕಡೆಗಳಲ್ಲಿ ಒಳ್ಳೆಯ ಆಟವನ್ನು ತೋರಿಸಲು, ಭರತಖಂಡದ ಎಲ್ಲ ಜನರೂ ಇವರ ಪರವಾಗಿ ಒಗ್ಗಟ್ಟಾಗಿ ನಿಂತು ಇವರಿಗೆ ಅಭಯಹಸ್ತವನ್ನೀಡಿದರು. ಇದಕ್ಕೆ ಒಂದು ನಿದರ್ಶನವೂ ಸಿಗುವುದರಲ್ಲಿತ್ತು. ಟೆನಿಸನ್ ಟೀಮಿನವರು ಮುಂಬೈ ಹಿಂದೂ ಜಿಂಖಾನದಲ್ಲಿ ಒಂದು ಪಂದ್ಯವನ್ನಾಡಬೇಕೆಂದೂ, ಅದಕ್ಕೆ ಹಿಂದುಗಳ ಪರವಾಗಿ ನಾಯ್ಡುರವರು ನಾಯಕರಾಗುವರೆಂದೂ, ಸುಮಾರು 10,000ರೂಗಳನ್ನು ಟೆನಿಸನ್ ಟೀಮಿಗೆ (ಗೇಟ್ ಮೂಲಕ) ಕೊಡುವುದೆಂದೂ ಭರವಸೆಯಿತ್ತಾಗ, ಟೆನಿಸನ್ ಟೀಮಿನವರು ಇದಕ್ಕೆ ಒಪ್ಪಲಿಲ್ಲ. ಆ ಸಮಯದಲ್ಲಿ ಹೀಗೆ ಭರವಸೆ ಕೊಡಲು, ನಾಯ್ಡುರವರಿಗೆ ಆಗಿದ್ದ ಸಹಾಯವೇ ಸೂಚಿಸುತ್ತದೆ.

ಮುಂಬೈಯಲ್ಲಿ ನಾಯ್ಡುರವರೆಂದರೆ ಅನೇಕರು ಪ್ರಾಣಬಿಡುತ್ತಾರೆ. 1937ನೇ ವರ್ಷ ನಡೆದ ಬೊಂಬಾಯಿ ಪೆಂಟೇಂಗ್ಯುಲರ್ ಪಂದ್ಯದಲ್ಲಿ, ಇವರು ಹಿಂದುಗಳ ಪರವಾಗಿ ನಾಯಕರಾಗಿ ಒಂದು ಸೆಂಚುರಿಯನ್ನೇರಿಸಿದರು. ಮತ್ತು 1938ನೇ ವರ್ಷ (ಅಂದರೆ ಕಳೆದ ತಿಂಗಳು) ಪುನಃ ಈ ಪೆಂಟೇಂಗ್ಯುಲರ್ ಪಂದ್ಯದಲ್ಲಿ ಹಿಂದುಗಳ ನಾಯಕರಾಗಿ ಅದ್ಭುತ ಆಟವನ್ನಾಡಿದರು.

ನಾಯ್ಡುರವರಿಗೆ ಇಂದು ಅವರ ಹಿಂದಿರುವ ಸಹಾಯವು, ನಮ್ಮ ಕಾಂಗ್ರೆಸ್ ಮುಖಂಡರಿಗೆ ಯಾವ ರೀತಿ ಸಹಾಯವಿದೆಯೋ ಅದರಷ್ಟೇ ಉಂಟು. ಇಂದು ಯಾವ ಹುಡುಗನನ್ನು ಕೇಳಲಿ, ನಾಯ್ಡುರವರೇ ನಮ್ಮ ನಾಯಕರಾಗಿರಬೇಕೆಂದು ಹೇಳುತ್ತಾರೆ. ನಾಯ್ಡುರವರು ನಿಜವಾಗಿಯೂ ನಮ್ಮ ದೇಶದ ಕ್ರಿಕೆಟ್ ಆಟಗಾರರಲ್ಲಿ ಉನ್ನತ ಸ್ಥಾನವನ್ನು ಪಡೆದಿರುವವರಲ್ಲೊಬ್ಬರು. ನಾಯ್ಡುರವರು ಮಹಾಪುರುಷರು, ಧನ್ಯರು, ಇಡೀ ಭರತಖಂಡವೇ ಅವರ ಹಿಂದಿದೆ. ಇಂಥಹ ಮಹನೀಯರು ನಮ್ಮ ದೇಶದಲ್ಲಿರುವುದು, ನಮಗೆಲ್ಲರಿಗೂ ಒಂದು ಹೆಮ್ಮೆಯೇ ಸರಿ. ಭಾರತದ ನಿಜವಾದ ಪುತ್ರರೆನಿಸಿದ ಇವರು ಇನ್ನೂ ಚಿರಕಾಲ ಬಾಳಬೇಕು. ಇಂದು ನಾಯ್ಡುರವರನ್ನು ನಮ್ಮ ನಾಯಕರನ್ನಾಗಿ ಚುನಾಯಿಸಿದರೆ, ನಮ್ಮ ದೇಶಕ್ಕೆ ಒಂದು ಕೀರ್ತಿ; ಅಲ್ಲದೆ, ನಮ್ಮ ಆಟ, ಮತ್ತು ಮ್ಯಾಚ್‌ಗಳಲ್ಲಿ ಉತ್ತಮ ಪ್ರದರ್ಶನವನ್ನೂ ತೋರಿಸಲು ಸಹಾಯವಾಗುತ್ತೆ.

"If at all there is any cricketer in India it is Nayudu, C. K. And C. K." ಇದು ನಮ್ಮ ದೇಶದ ಓರ್ವ ಸುಪ್ರಸಿದ್ಧ ಮತ್ತು ಮಾನ್ಯ ಮಹನೀಯರು ನುಡಿದ ಮಾತು ಇನ್ನೂ ನನಗೆ ಚೆನ್ನಾಗಿ ನೆನಪುಂಟು.

ನಾಯ್ಡುರವರಿಗೆ ಭರತಖಂಡದ ನಾಯಕತ್ವಕೊಡದಿದ್ದಲ್ಲಿ ಎಲ್ಲರೂ ಬಹುಷ್ಕರಿಸಿದರು, No Naidu, No Cricket." ಎಂದು ಹೇಳಿರುವ ಒಂದು ಪದವನ್ನು ನಾನು ಓದಿದ್ದೇನೆ.

ಕೊನೆಯದಾಗಿ ನಾಯ್ಡುರವರಿಗೆ ಆಯುರಾರೋಗ್ಯವನ್ನು ಕೋರಿ. ("Hats off to Naidu)" ನಮ್ಮ ಟೋಪಿಗಳನ್ನು ಅವರಿಗೋಸ್ಕರ ಎತ್ತೋಣ.

ವಿಶೇಷಸಂಚಿಕೆಯನ್ನು ನೋಡಿ.

ಈ ವಾರದ ನಿಮ್ಮ ಭವಿಷ್ಯ

ತಾ. 29—12—38ರಿಂದ 5—1—39ರ ವರೆಗೆ

[ಜ್ಯೋತಿಷವು ಅಸ್ಪಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ವಾರ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ.

ಸಂ ನ.]

ಸಿಂಹ, ತುಲಾ, ಮಕರ ರಾಶಿಗಳವರ ಗ್ರಹಸ್ಥಿತಿಯು ಸಾಮಾನ್ಯ ಉತ್ತಮ ಸ್ಥಿತಿಯಲ್ಲಿರುವುದು. ಮೇಷ ರಾಶಿಯವರ ಭವಿಷ್ಯವು ಮಧ್ಯಮರೀತಿಯಲ್ಲಿರುವುದು. ವೃಷಭ, ಮಿಥುನ, ಕರ್ಕಾಟಕ, ಧನು, ಕುಂಭ ಮೀನ ರಾಶಿಯವರ ಸ್ಥಿತಿಯು ಸ್ವಲ್ಪ ಹೀನತರಗತಿಯಲ್ಲಿರುವುದು. ಕನ್ಯಾ, ವೃಶ್ಚಿಕ ರಾಶಿಯವರ ಮಟ್ಟಿಗೆ ಈ ವಾರವು ಕೆಟ್ಟದಿರುವುದು.

ಮೇಷರಾಶಿ—

ವಿಪತ್ತುಗಳೆಂಬ ಕಾರಿರುಳಲ್ಲಿ ಚಂದ್ರೋದಯವಾದಂತೆ ಈಗೀಗ ನಿಮ್ಮ ಭವಿಷ್ಯವು ಸುಧಾರಿಸುತ್ತಾ ಬಂದಿದೆ, ಇಷ್ಟದಾಯಕರಾದ ಸೌಮ್ಯ ಗ್ರಹರ ಶುಭದೃಷ್ಟಿಯು ನಿಮ್ಮ ರಾಶಿಯ ಮೇಲೆ ಬಿದ್ದಿರುವುದರಿಂದ ಅನೇಕ ವಿಪತ್ತುಗಳಿಂದ ಪಾರಾಗುವಿರಿ. ಧನ ಭಾಗದಲ್ಲಿ ಹೆಚ್ಚಿನಂಶ ಸುಧಾರಣೆಯಾಗಿರುವುದು. ನಿರುದ್ಯೋಗಿಗಳಾಗಿ ಕಾಲ ಕಳೆಯಬೇಕಾದ ಪ್ರಸಂಗ ಬರಲಾರದು. ಆದರೆ ದೇಹಾಲಸ್ಯವು ನಿಮ್ಮನ್ನು ಪೂರ್ತಿಯಾಗಿ ಬಿಟ್ಟಿಲ್ಲವು. ಲೇವಾದೇವಿ ವಿಷಯದಲ್ಲಿ ಪರಸ್ಪರ ಮನಸ್ತಾಪದಿಂದ ನೀವು ವ್ಯಸನಾಕ್ರಾಂತರಾಗಿರುವಿರಿ. ಮತ್ತು ಕೆಲವೊಂದು ಭಾಗಗಳಲ್ಲಿ ಸ್ವಾರ್ಥವಿಲ್ಲದೆ ಧನ ವ್ಯಯ ಮಾಡುವಿರಿ. ಆತ್ಮೀಯರಿಂದಾಗಿ ಮನಃಕ್ಲೇಶವುಂಟಾಗುವುದು. ತಾ. 29, 30 ಮತ್ತು 3, 4 ಈ ದಿನಗಳಲ್ಲಿ ಧನವ್ಯಯವು ಮೇರೆ ಮೀರುವುದು, ಮಾನಹಾನಿಕರವಾದ ಸಂಘಟನೆಗಳುಂಟಾಗುವವು.

ವೃಷಭರಾಶಿ—

ನಿಮಗೀ ವಾರದಲ್ಲಿ ಅನಿಷ್ಟಗಳೇ ಹೆಚ್ಚಾಗಿ ಸಂಭವಿಸಲಿವೆ. ಎಷ್ಟೊಂದು ಮಿತಾಹಾರಿಯಾಗಿದ್ದರೂ ಅಜೀರ್ಣ ಸಂಬಂಧದಿಂದಾಗಿ ಶರೀರದ ಪ್ರಕೃತಿಯು ಕೆಡುವುದು. ಸ್ತ್ರೀಯರಿಂದಾಗಿ ಹೆಚ್ಚಿನ ಅಶುಭಗಳು ಸಂಭವಿಸುವವು. ಅದರಲ್ಲೂ ನಿಮ್ಮ ಶೋಕಕ್ಕೆ ನಿಮ್ಮಾಕೆಯೇ ಕಾರಣಳೆಂದರೆ ತಪ್ಪಾಗಲಾರದು. ಚಿತ್ತಚಂಚಲಕ್ಕೆ ಕಾರಣಗಳಾದ ಅನೇಕ ಕಾರ್ಯಗಳು ಸಂಭವಿಸುವವು. ಆದರೂ ನೀವು ಸಂಪದ್ಭಾಗದಲ್ಲಿ ಎಷ್ಟೋ ಸುಧಾರಿಸಿರುವಿರಿ, ವಿರೋಧಿಗಳಲ್ಲಿನ ಪ್ರಾತಿಕೂಲ್ಯವು ನಿವೃತ್ತಿಯಾಗಿ ಅನ್ಯೋನ್ಯ ಮೈತ್ರೀಭಾವದಿಂದ ವರ್ತಿಸುವಿರಿ. ಸ್ತ್ರೀಯರಿಂದ ಅನಿಷ್ಟ ಸಂಭವಿಸಿದರೂ ಅವರಿಂದ ಧನ ಪ್ರಾಪ್ತಿಯ ಯೋಗವಿದೆ, ತಾ. 29, 30, 2, 3, 4 ಈ ದಿನಗಳು ಮಿತ್ರ ಸಮಾಗಮ, ಇಷ್ಟಭೋಗಗಳಿಂದ ಸಂತೋಷಜನಕಗಳಾಗಿವೆ.

ಮಿಥುನರಾಶಿ—

ಹಾಸು ಖರ್ಚಿಲ್ಲದೆ ಬರೇ ಬಾಯ್ಮಾತಿನಿಂದಲೇ ಜನರನ್ನು ಒಲಿಸಿಕೊಂಡು ನಿಮ್ಮ ಕಾರ್ಯವನ್ನು ಸಾಧಿಸಲು ಒಳ್ಳೇ ಚತುರರಿರುವಿರಿ. ಆರಂಭಿಸಿದ ಕಾರ್ಯಗಳಲ್ಲಿ ಕೆಲವನ್ನು ಕೊನೆಗೊಳಿಸಿ ತಕ್ಕ ಪ್ರತಿಫಲವನ್ನು ಪಡೆಯುವಿರಿ. ಆದರೆ ಹೆಜ್ಜೆಹೆಜ್ಜೆಗೂ ನಿಮಗೆ ಶತ್ರುಗಳ ಪೀಡೆ ತಪ್ಪುವದಿಲ್ಲವು. ಇದರಿಂದಾಗಿಯೇ ಅನೇಕ ಕಾರ್ಯಗಳು ಅರ್ಧಮರ್ಧವಾಗಿ ಉಳಿಯುವವು. ಪ್ರವಾಸ ನಿಮಿತ್ತವಾಗಿ ಹೆಚ್ಚಿನ ಕಷ್ಟನಷ್ಟಗಳಿಗೆ ಗುರಿಯಾದರೂ ಪುಣ್ಯತೀರ್ಥಕ್ಷೇತ್ರಾದಿಗಳ ದರ್ಶನ ಲಭಿಸುವುದು. ಮಾಕ್ಷ್ಯಯಗಳಿಗೆ ವ್ಯತಿರಿಕ್ತವಾಗಿ ಮನಸ್ಸು ವರ್ತಿಸುವುದರಿಂದ ಬಹು ಭಾಗದಲ್ಲಿ ನಿಮಗೆ ಹಾನಿಯಿದೆ. ಆರೋಗ್ಯದ ಭಾಗಕ್ಕೆ ಈ ವಾರವು ಚೆನ್ನಾಗಿಲ್ಲವು. ವಾರದ ಅರ್ಧಾರ್ಧ ಭಾಗಗಳಲ್ಲಿ ಇಷ್ಟಾರ್ಥಗಳು ನೆರವೇರುವುವು.

ಕರ್ಕಾಟಕರಾಶಿ—

ಕುಟುಂಬದಲ್ಲಿ ಗೃಹಚ್ಛಿದ್ರಗಳು, ಗೃಹ ತಾಪತ್ರಯಗಳು ಅಧಿಕವಾಗಿ ಮನಸ್ಸಿಗೆ ಒಂದಿಷ್ಟು ನೆಮ್ಮದಿ ಸಿಗಲಾರದು. ತಂದೆ ಮಕ್ಕಳಲ್ಲಿ, ಗಂಡ ಹೆಂಡಿರಲ್ಲಿ ಕೂಡ ಜಗಳವಾಗುವ ಪ್ರಸಂಗವೂ ಬರಬಹುದು. ಅಲ್ಪಜನರ ಸಹವಾಸದಿಂದ ರಾಜಭಯ, ಇತರ ಜನರ ತಿರಸ್ಕಾರ ಇತ್ಯಾದಿಗಳಿಗೆ ಗುರಿಯಾಗುವಿರಿ. ಅನೇಕ ರೀತಿಯಲ್ಲಿ ನೀವು ಧನ ವ್ಯಯಿಸುವಿರಿ; ಆದರೆ ಧನ ಸಂಪಾದಿಸುವ ಮಾರ್ಗವು ಮಾತ್ರ ಕಾಣದಂತಾಗಿದೆ. ನಾಸ್ತಿಕ ಬುದ್ಧಿಯು ನಿಮ್ಮಲ್ಲಿ ವಿಶೇಷವಾಗಿ ಗೋಚರಿಸುವದು. ತಾತ್ಕಾಲಿಕವಾಗಿ ನಿಮಗೆ ಬಂಧುಮಿತ್ರರ ಪೂರ್ಣ ಸಹಾನುಭೂತಿಯಿದೆ. ಇದೇ ಕಾರಣದಿಂದಲೇ ಎಂತಹ ಇದಿರಾಳಿಯನ್ನೂ ಕೂಡಾ ನೀವು ತೃಣ ಸಮಾನವೆಂದು ಭಾವಿಸಿ ಆತನನ್ನು ಲಕ್ಷಕ್ಕೆ ತಾರದೇನೇ ವರ್ತಿಸುವಿರಿ. ತಾ. 31ರಿಂದ 4ರ ವರೆಗೆ ಹೆಚ್ಚಾಗಿ ಇಷ್ಟ ಕಾರ್ಯಗಳೇ ಜರಗುವವು.

ಸಿಂಹರಾಶಿ—

ಪ್ರಕೃತಿಯ ಆಲಸ್ಯದಿಂದಲೂ, ಶತ್ರುಗಳ ಉಪಟಳದಿಂದಲೂ ನೀವು ಬಹಳ ಹಣ್ಣಾಗಿರುವಿರಿ. ಆದರೂ ಈ ವಾರವು ನಿಮಗೆ ಬಹಳ ಉತ್ತಮವಾಗಿ ಕಂಡು ಬರುತ್ತದೆ. ಯಾಕೆಂದರೆ, ಸ್ವಾಭಾವಿಕವಾಗಿ ನೀವು ಒಳ್ಳೇ ವಿವೇಕಿಗಳಿರುವಿರಿ. ಕಾರ್ಯಾಕಾರ್ಯ ವಿಚಕ್ಷಣತೆ ಮತ್ತು ಜನರ ಇಂಗಿತವನ್ನು ನೋಡಿದೊಡನೆಯೇ ತಿಳಿಯುವ ಶಕ್ತಿ ಇವುಗಳು ನಿಮ್ಮಲ್ಲಿರುವುದರಿಂದ ನೀವು ಕೈಕೊಂಡ ಕಾರ್ಯಗಳ್ಯಾವವೂ ನಿಷ್ಫಲವಾಗಲಾರವು. ನಾನಾ ವಿಧದಿಂದ ಧನ ಸಂಪಾದಿಸುವಿರಿ. ಕೈಯಲ್ಲಿ ಕಾಸಿರುವುದರಿಂದ ಬಂಧುಗಳೂ ಮಿತ್ರರೂ ನಿಮಗೆ ಬಹಳೇ ಮಂದಿ ಇರುವರು. ಮನೋಭಿಲಾಷೆಗಳನ್ನು ಪೂರ್ತಿಗೈಯುವಿರಿ. ಒಳ್ಳೇ ವಾಚಾಲರಿರುವುದರಿಂದಲೂ ಜನರ ಮುಂದಾಳಾಗಿ ಕಾರ್ಯನಿರ್ವಹಿಸಲು ಶಕ್ತರಿರುವುದರಿಂದಲೂ ಜನರ ಗೌರವಕ್ಕೆ ಪಾತ್ರರಾಗುವಿರಿ. ತಾ. 2ರಿಂದ 5ರ ವರೆಗೆ ಅತ್ಯುತ್ತಮವಿದೆ.

ಕನ್ಯಾರಾಶಿ—

ತಾತ್ಕಾಲಿಕ ಗ್ರಹಸ್ಥಿತಿಯಲ್ಲಿ ನಿಮಗೆ ಯಾವ ಭಾಗದಲ್ಲಿ ನೋಡಿದರೂ ಮನಸ್ಸಿಗೆ ತೃಪ್ತಿಯಾಗುವ ಮಾರ್ಗವೇ ತೋರುವುದಿಲ್ಲವು. "ಆಪದರ್ಥೇ ಧನಂ ರಕ್ಷೇತ್ ದಾರಾನ್ ರಕ್ಷೇತ್ ಧನೈರಪಿ। ಆತ್ಮಾನಂ ಸತತಂ ರಕ್ಷೇತ್ ದಾರೈರಪಿ ಧನೈರಪಿ" ಅಂದರೆ ಎಂತಹ ಆಪತ್ತು ಸಂಭವಿಸಿದರೂ ಕೂಡ ಧನವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು. ಎಷ್ಟು ವ್ಯಯವಾದರೂ ಭಾರ್ಯೆಯನ್ನು ರಕ್ಷಿಸುವ ವಿಷಯದಲ್ಲಿ ಎಣಿಸಲಾಗದು, ಹೆಂಡತಿಯನ್ನೂ, ಧನವನ್ನೂ ಕೂಡ ಗಣನೆಗೆ ತಾರದೆ ಆತ್ಮರಕ್ಷಣೆಯನ್ನು ಮಾಡಿಕೊಳ್ಳತಕ್ಕದ್ದು ಎಂದಿರುವರು. ಪ್ರಕೃತ ನಿಮ್ಮ ಆತ್ಮವನ್ನು ಇತರ ರೋಗ ಪೀಡೆಯಿಂದ ನಿವೃತ್ತಿ ಹೊಂದಿಸತಕ್ಕದ್ದು. ಆ ಮೇಲೆ ಬಾಕಿ ವಿಚಾರಗಳು. ನಾವು ಚೆನ್ನಾಗಿದ್ದರೇನೇ ಆಪ್ತರೂ ಬಂಧುಗಳೂ, ಮಿತ್ರರೂ ಇರುವರು. ಇಲ್ಲದಲ್ಲಿ ಯಾರೂ ಇಲ್ಲವು. ಶತ್ರುಗಳಿಂದ ಮನೋವ್ಯಥೆಯು ಅಧಿಕವಾಗುವುದು. ಹಣದ ಬಿಕ್ಕಟ್ಟು ಬಹಳವಾಗಿರುವುದು. ತಾ. 31ರಿಂದ 4ರ ವರೆಗೆ ಬಹಳ ಹಾನಿಯಿದೆ.

ತುಲಾರಾಶಿ—

"ಸಾಯುವ ಕಾಲ ತಪ್ಪಿದರೂ ನೋಯುವ ಕಾಲ ತಪ್ಪದು" ಎಂಬ ಗಾದೆಯಿದೆಯಷ್ಟೆ. ಇದರ ಅರ್ಥವು ನಿಮಗೆ ಈ ವಾರದಲ್ಲಿ ಅನುಭವಕ್ಕೆ ಬರಲಿದೆ. ಇತರ ವಿಷಯಗಳಲ್ಲಿ ಉತ್ತಮ ಸ್ಥಿತಿಯಿರುವುದು. ಉದ್ಯೋಗಿಗಳಿಗೆ ಇಚ್ಛಾಧಿಕವಾಗಿ ಫಲಪ್ರಾಪ್ತಿಯಾಗುವುದು. ನಿರುದ್ಯೋಗಿಗಳೂ ಕೂಡ ಉದ್ಯೋಗಾವಲಂಬಿಗಳಾಗುವರು. ಶತ್ರುಗಳು ಮಿತ್ರರಾಗಿ ಪರಿಣಮಿಸುವರು. ವನಿತಾಧರಮಧುಪಾನದಿಂದ ಮತ್ತರಾದ, ಸಾಂಸಾರಿಕ ಮಾನಸಿಕ ತಾಪತ್ರಯ ವಿರಹಿತರಾದ ನೀವು ಭೂಪಾಲನಂತಿರುವಿರೆಂದರದು ಅತಿಶಯೋಕ್ತಿಯಾಗದು. ತಾ. 2ರಿಂದ ವಾರಾಂತ್ಯದ ವರೆಗೆ ರಾಜಕೀಯ ಭಾಗದಲ್ಲಿ ಕೈ ಹಾಕಬೇಡಿರಿ. ಹಾನಿ ಸಂಭವಿಸೀತು.

ವೃಶ್ಚಿಕರಾಶಿ—

ಆಪತ್ಸಾಗರದಲ್ಲಿ ಮುಳುಗಿರತಕ್ಕವನಿಗೆ ಹೇಗೆ ಜಗತ್ತೇ ಶೂನ್ಯವಾಗಿ ತೋರುವುದೋ ಅಂತೆಯೇ ನಿಮಗೂ ಕೂಡ ಕಂಡು ಬಂದೀತು. ಕಾರಣ, ಶಾರೀರಕ, ಮಾನಸಿಕ, ಸಾಂಸಾರಿಕ ಈ ಸುಖತ್ರಯಗಳು ನಿಮಗಿಲ್ಲವೆಂದ ಮೇಲೆ ಮತ್ತಿನ್ನೇನಿದೆ. ನೇತ್ರವೇದನೆ, ಪಿತ್ಥ ಪ್ರಕೋಪಗಳಿಗೆ ದೇಹವು ತುತ್ತಾಗಿರುವುದು. ಆಪ್ತ ಬಂಧುಗಳ ವಿಶ್ವಾಸಘಾತುಕತನ, ಭಯ, ಸ್ತ್ರೀ ಪ್ರಕೋಪ, ಕಲಹ ಮತ್ತು ಜನರ ತಿರಸ್ಕಾರ ಇವುಗಳು ಮನಸ್ಸನ್ನು ಚಂಚಲವನ್ನಾಗಿಯೂ ಕ್ಲೇಶಯುಕ್ತವಾದುದನ್ನಾಗಿಯೂ ಮಾಡಿರುವವು. ಪುತ್ರಭೃತ್ಯಾದಿಗಳಿಂದ ಹೀನರಾಗಿದ್ದುದರಿಂದ ಸಾಂಸಾರಿಕ ತಾಪತ್ರಯಗಳು ದಿನೇದಿನೇ ಹೆಚ್ಚುತ್ತಿರುವವು ಅಂತೂ ಆವಭಾಗದಲ್ಲೂ ಸುಖವಿಲ್ಲವು. ವಾರದ ಮಧ್ಯಭಾಗವು ಕಾಮುಕರಾದ ನಿಜಜನರಿಗೆ ವಾಂಛಿತಾರ್ಥಪ್ರದವಾಗಿರುವುದು.

ಧನುರಾಶಿ—

ಅನಿಷ್ಟಗಳು ಹೆಚ್ಚಾಗಿದ್ದರೂ ಕಾತರರಾಗಬೇಕಾಗಿಲ್ಲವು. ನಿಮ್ಮ ಉದ್ಯೋಗದಲ್ಲಿ ಯುಕ್ತ ಪ್ರತಿಫಲವು ದೊರೆಯುವುದು. ಜನರಲ್ಲಿ ಸಮಾನತೆಯಿಂದ ಇರುವಿರಿ, ಗೌರವಕ್ಕೇನೂ ಹಾನಿಯಾಗದು. ನಿಮ್ಮ ಖರ್ಚಿಗೆ ಬೇಕಾಗುವಷ್ಟು ಧನಾದಿಗಳನ್ನು ಸ್ವಯಂ ದುಡಿಯಲು ಸಮರ್ಥರಿರುವಿರಿ, ಸಂತೋಷ. ಆದರೆ ನಿಮಗೆ ಪ್ರಕೃತ ಸುಖವೆಂಬುದು ಬಹಳ ದುರ್ಲಭವಾಗಿದೆ. ಯಾಕೆಂದರೆ ನಿಮ್ಮ ಸುಖಸ್ಥಾನದಲ್ಲಿರುವುದು ಯಾರು ಗೊತ್ತೇ? ಶನೇಶ್ವರ ಮಹಾರಾಜರು. ಇವರ ಮಹಿಮೆಯನ್ನು ನೀವು ಕೇಳಿಯೂ, ಅನುಭವಿಸಿಯೂ ಇರಬಹುದು. ಅದಿರಲಿ, ದೇಹದಲ್ಲಿ ಆಯಾಸವು ಸ್ವಲ್ಪ ಹೆಚ್ಚಿಗೆ ತೋರೀತು. ಮನಸ್ಸು ಎಂದೂ ಸ್ಥಿರವಾಗಿ ನಿಲ್ಲಲಾರದು. ತಾ. 29ರಿಂದ 1ರ ವರೆಗೆ ಆಪ್ತ ಜನರಲ್ಲಿ ಕಲಹ, ಮಾರ್ಗಾಯಾಸ ಕಾರ್ಯಹಾನಿಗಳು ಸಂಭವಿಸಲಿವೆ.

ಮಕರರಾಶಿ—

ಆಸ್ತಿಕರಿಗೆ, ಅಂದರೆ ಆಸ್ತಿಕಮಾರ್ಗದಲ್ಲಿ ನಡೆಯುತ್ತಿರುವವರಿಗೆ ಮತ್ತು ಧರ್ಮಕರ್ಮಾಭಿಮಾನಿಗಳಿಗೆ ಈ ವಾರವು ಬಹಳ ಶ್ರೇಯಸ್ಕರವಾಗಿದೆ. ಹೊಸ ಉದ್ಯಮವನ್ನು ಕೈಕೊಳ್ಳತಕ್ಕರಿಗೆ ಇದು ಸುಸಂಧಿ. ಉದ್ಯೋಗದಲ್ಲಿರತಕ್ಕವರು ಉತ್ತಮ ಸ್ಥಿತಿಯನ್ನೈದುವರು. ವ್ಯಾಪಾರಾದಿ ಕಾರ್ಯಾಸಕ್ತರಿಗೆ ಅಪೇಕ್ಷೆಗಿಂತಲೂ ಅಧಿಕವಾಗಿ ಲಾಭಸಿಗುವದು. ಮಿತ್ರ ಜನರಿಂದಾಗಿ ಧನಲಾಭವಾಗುವ ಪ್ರಯೋಗವಿದೆ. ಪುತ್ರ ಮಿತ್ರ ಭೃತ್ಯರಿಂದಾವೃತನಾದ ಸಂಸಾರಸಾಗರವೆಂಬ ಆನಂದಾಬ್ಧಿಯಲ್ಲಿ ತೇಲಾಡುವಿರಿ. ಶತ್ರುಗಳೆಂಬ ಹತ್ತಿಯ ಸಮೂಹಕ್ಕೆ ಅಗ್ನಿಪ್ರಾಯರಾಗುವಿರಿ. ಅಂತೂ ವಾರವು ವಾಸರವಾಗಿ ಕಂಡೀತು. ವಾರದ ಆದ್ಯಂತ ಭಾಗಗಳು ಹೆಚ್ಚಿನ ಉತ್ತಮಗಳಾಗಿವೆ.

ಕುಂಭರಾಶಿ—

ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯೆಂಬಂತೆ ಕೆಲಸಕ್ಕೆ ತಕ್ಕ ಪ್ರತಿಫಲವು ದೊರೆಯುವುದು. ಹಿಡಿದ ಕಾರ್ಯವನ್ನು ಪೂರೈಸುವಿರಿ. ಸಮಾಜದಲ್ಲೂ ಗೌರವಾದರಗಳಿಗೆ ಕೊರತೆಬರಲಾರದು, ಆದರೆ ಮಾತು ಮಾತಿಗೆ ಕಲಹವಾದೀತು. ಆದ್ದರಿಂದ ಮಿತಭಾಷಿಯಾಗಿದ್ದಷ್ಟೂ ಒಳ್ಳಿತು. ಅಚಾತುರ್ಯದಿಂದಾಗಿ ಧನವ್ಯಯಕ್ಕೂ ಬಹಿಷ್ಕಾರಕ್ಕೂ ಪಾತ್ರರಾಗುವಿರಿ. ಕೆಲವೊಂದು ಅನಿವಾರ್ಯ ಕಾರಣಗಳಿಂದ ವ್ಯಸನಾಕ್ರಾಂತರಾದ ನಿಮಗೆ ದೇಹಪೀಡೆಯೂ ಅಧಿಕವಾಗಿರುವುದು, ಶಕ್ತಿಯೂ ಕಡಿಮೆಯಾಗಿರುವುದು. ತಾ. 30, 31 ಈ ದಿನಗಳನ್ನು ಬಿಟ್ಟು ಇತರ ಎಲ್ಲಾ ದಿನಗಳೂ ಧನಹಾನಿ, ಮಾನನಾಶ, ಕಾರ್ಯವಿಘ್ನ, ಶೋಕ ಇತ್ಯಾದಿ ಅನಿಷ್ಟದಾಯಕಗಳಾಗಿರುವವು.

ಮೀನರಾಶಿ—

ಧರ್ಮಾಸಕ್ತರಾಗಿರುವ ನಿಮಗೆ, ಸ್ತ್ರೀ ಸುಖಕ್ಕೆ ಹಾನಿಯಾಗದು. ನೀವು ಕಾರ್ಯದಕ್ಷರಿರುವುದರಿಂದ ಸ್ವೀಕೃತ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ತಕ್ಕ ಫಲವನ್ನೂ ಹೊಂದುವಿರಿ. ಆದರೆ ವಿರೋಧಿಗಳಿಂದಾಗಿ ಮನೋವ್ಯಥೆಯು ಅಧಿಕವಾಗುವುದು. ಶರೀರಾಲಸ್ಯ ಮುಂಚಿನಂತೆಯೇ ಇರುವುದು. ನಿಮ್ಮ ಖರ್ಚಿಗೆ ಬೇಕಾದಷ್ಟು ಉತ್ಪತ್ತಿಯಿಲ್ಲದಿರುವುದರಿಂದ ಹಣದ ಅಡಚಣೆಯಲ್ಲಿ ಬಿದ್ದಾಡಬೇಕಾಗುವುದು. ಊರು ಬಿಡಲಿಕ್ಕೆ ಈ ಸಮಯವು ಒಳ್ಳೆಯದಿಲ್ಲವು. ಮಾರ್ಗದಲ್ಲಿ ನಾನಾತರದ ಕಷ್ಟನಷ್ಟಗಳಿಗೆ ಪಾತ್ರರಾಗುವಿರಿ. ಶರೀರದಲ್ಲಿ ಹುಣ್ಣು ಕಜ್ಜಿ ವಗೈರೆಗಳು ಹೆಚ್ಚುವ ಸಂಭವವಿದೆ. ತಾ. 29, 30 ಮತ್ತು 2, 3, 5 ಈ ದಿನಗಳಲ್ಲಿ ಕಾರ್ಯಸಿದ್ಧಿ, ಸ್ತ್ರೀಸುಖ, ಧನ ಲಾಭವು ತೃಪ್ತಿಕರವಾಗಿರುವುದು.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್

(ರಿಜಿಸ್ಟರ್ಡ್)

೧ ಈ ವರೆಗೆ ಇದ್ದ ಪ್ಯಾಕೇಟುಗಳ	ಬೆಲೆ:	0—1—0
೨ ಹೊಸ ಮಾದರಿ	,,	0—1—3
೩ ಮೆಡಿಕೇಟೆಡ್ ನಂ. ೧, ಸೀಸೆಯಲ್ಲಿ	,,	0—4—0

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಪಾಲನೆಗೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ. ಬೆಲೆ 0-4-0, 0-2-0.

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-1-0.

ಹಿಮತೈಲ

ಮೆದುಳಿಗೆ ತಂಪನ್ನೂ, ಮನಸ್ಸಿಗೆ ಹರ್ಷವನ್ನೂ ಸಹಾ ಕೊಡುವ ಮೂಲಿಕೆಗಳಿಂದಲೇ ತಯಾರಿಸಲ್ಪಟ್ಟಿರುವ ಶಾಸ್ತ್ರೀಯ ತೈಲ. ಬೆಲೆ: 0-8-0 ಮತ್ತು ರೂ. 1.

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ, ಮಂಗಳೂರು.

ನಮ್ಮ ಸ್ಟಾಕಿಸ್ಟರು:— ಕುಂದಾಪುರ-ಕಾಮತ್ಸ್ ಸ್ವದೇಶೀ ಎಂಪೋರಿಯಂ, ಬ್ರಹ್ಮಾವರ-ಜಿ. ಕೃಷ್ಣ ಕಾರಂತರ, ಆಯುರ್ವೇದೀಯ ಔಷಧಗಳ ಏಜೆಂಟರು, ಕಾರ್ಕಳ-ವಿ. ವಿ. ಶೆಣೈ-ಕೆಮಿಸ್ಟ್, ಕಾಸರಗೋಡು-ಭಕ್ತಾ ಬ್ರದರ್ಸ್ ಮತ್ತು ಶ್ರೀರಾಮ ಸ್ಟೇಶನರಿ ಹೌಸ್, ಪುತ್ತೂರು-ಬಿ. ಪಾಂಡುರಂಗ ಗೋವಿಂದ ಭಂಡಾರಿ ಮತ್ತು ಪೈ ಡಿಸ್ಪೆನ್ಸರಿ, ಮೂಲ್ಕಿ-ಬಿ. ಎಸ್. ಸೀತಾರಾಮ ಶ್ಯಾನುಭೋಗ್, ಜನರಲ್ ಮರ್ಚೆಂಟ್, ಮೂಡಬಿದ್ರೆ-ಸಂಜೀವ ಶೇಣಗಿರಿ ಪ್ರಭು ಬ್ರದರ್ಸ್, ಬಂಟ್ವಾಳ-ಪ್ರಭು ಅಂಡ್ ಕೋ, ಉಡುಪಿ-ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.

ವ್ಯಭಿಚಾರಿಣಿ ಯಾರು? (ನಾಟಕ)

ಬೆಲೆ ಎಂಟಾಣೆ.

ಗಡಿನಾಡಿನಲ್ಲಿ ನಾನು ನೋಡಿದ್ದೇನು?

ಮನುಷ್ಯನು ಮನುಷ್ಯನಿಗಾಗಿ ಏನು ಮಾಡಿರುವನು?

ಮಹಾತ್ಮಾ ಖಾನ್‌ಸಾಹೇಬರ ಮಾತುಕತೆ.

[ಶ್ರೀ ಪ್ಯಾರೇಲಾಲರು ಮಹಾತ್ಮಾಜೀಯವರ ಆಪ್ತ ಕಾರ್ಯದರ್ಶಿಗಳು. ಗಡಿನಾಡಿನ ಸಂಚಾರದಲ್ಲಿ ಇವರು ಮಹಾತ್ಮಾಜೀಯವರ ಜೊತೆಯಲ್ಲೇ ಇದ್ದರು. ಇದರಿಂದ ಅವರ ಲೇಖನವು ಗ್ರಾಹಕರಿಗೆ ಶಿಕ್ಷಾಪ್ರದವೂ ಮನೋರಂಜಕವೂ ಆಗುವುದೆಂದು ಇಲ್ಲಿ ಭಾಷಾಂತರಿಸಿ ಕೊಡಲಾಗಿದೆ.

ಪೇಶಾವರ ಮತ್ತು ಮದ್ರಾಸ್ ಜಿಲ್ಲೆಗಳ ಸಂಚಾರವನ್ನು ಮುಗಿಸಿಕೊಂಡು, ಮಹಾತ್ಮಾಜೀಯವರು ಖಾನ್ ಸಾಹೇಬರೊಡನೆ "ಖುದಾಯಿ ಖಿದ್ಮತ್‌ಗಾರರಿಗೆ ಅಹಿಂಸೆಯ ವಿಚಾರದಲ್ಲಿ ಮಾತನಾಡಲಾರಂಭಿಸಿದರು. ಆಗ ಅವರು ಖಾನ್ ಸಾಹೇಬರನ್ನು ಕುರಿತು, "ಏನು ಖಾನ್ ಸಾಹೇಬ್, ತಮ್ಮ ಅಭಿಪ್ರಾಯವೇನು? ಅಹಿಂಸೆಯನ್ನು ಖುದಾಯಿ ಖಿದ್ಮತ್‌ಗಾರರು ಎಲ್ಲಿವರೆಗೆ ಪಾಲಿಸಬಲ್ಲರು" ಎನ್ನಲು ಖಾನ್ ಸಾಹೇಬರು ಈ ರೀತಿ ಹೇಳಿದರು. "ಮಹಾತ್ಮಾಜೀ, ಅವರೇ ಆ ದಿನ ಒಪ್ಪಿಕೊಂಡಂತೆ ಅವರು ಇನ್ನೂ ಅಹಿಂಸೆಯ ಮೇಲ್ಮಟ್ಟವನ್ನೂ ಮುಟ್ಟಲು ಇನ್ನೂ ಕೆಲವು ಕಾಲ ಬೇಕು. ಅವರ ಹೃದಯದಿಂದ ಹಿಂಸೆಯು ಸಂಪೂರ್ಣವಾಗಿ ಹೋಗಿಲ್ಲ. ಅವರ ಸ್ವಭಾವದಲ್ಲಿ ಸಹ ಕೆಲವು ದೋಷಗಳಿದ್ದರೂ ಅವರ ಸತ್ಯಪ್ರೇಮದಲ್ಲಿ ಮಾತ್ರ ಏನೂ ಸಂಶಯವಿಲ್ಲ. ಸಮಯ ದೊರೆತಿದ್ದಾದರೆ, ತಮ್ಮ ಆದರ್ಶಕ್ಕನುಗುಣವಾಗಿ ಅವರನ್ನು ತಿದ್ದಬಲ್ಲೆನು. ನಿಜವಾಗಿಯೂ ಖಾನ್ ಸಾಹೇಬರು ಅಹಿಂಸೆ ಪ್ರಚಾರಕರು, ಅವರ ಕೋಮಿಗೆ ಹಿಂಸೆಯು ಒಂದು ದೊಡ್ಡ ಶಾಪವೆಂದು ಅವರ ದೃಢವಿಶ್ವಾಸ. ಅವರ ಜೀವನವನ್ನು ಒಳಹೊಕ್ಕು ಅದನ್ನು ಒಳಗೇ ಕೊರೆದು ಹಾಳುಮಾಡುವ ಒಂದು ಗಾಯ, ಹಿಂಸೆಯೆಂದವರು ಹೇಳುವರು. ಅವರ ನಾಶದ ಮೂಲ ಹಿಂಸೆಯಂತೆ.

ಒಂದು ದಿನ ಮಾತನಾಡುತ್ತಾ ಅವರು ತಮ್ಮ ದೇಶದ ಪ್ರಕೃತಿ -- ಮತ್ತು ಸಮೃದ್ಧಿಯ ವರ್ಣನೆಮಾಡುತ್ತಿದ್ದರು. ಮಾತನಾಡುತ್ತಾ ಆಡುತ್ತಾ, ಆವೇಶಪೂರಿತರಾಗಿ "ಮನುಷ್ಯನು ಮನುಷ್ಯನಿಗಾಗಿ ಏನು ತಾನೇ ಮಾಡಿರುವನು?" ಎನ್ನುವ ವಿಚಾರಬಂದಾಗ, "ಮಹಾತ್ಮಾಜೀ, ನಮ್ಮ ಈ ಪುಣ್ಯಭೂಮಿ ಎಷ್ಟು ಫಲವತ್ತಾಗಿದೆ? ಇಲ್ಲಿ ಎಷ್ಟು ಫಲಗಳು, ದವಸ ಧಾನ್ಯಗಳಾಗುತ್ತವೆ? ಪೃಥ್ವಿಯಮೇಲೆ ಒಂದು ಚಿಕ್ಕ ಸ್ವರ್ಗನಿರ್ಮಾಣವಾದಬಹುದಲ್ಲ. ಆದರೆ ವಸ್ತುಸ್ಥಿತಿಯನ್ನು ನೋಡಿ ದೇಶವು ನಾಶವಾಗುತ್ತಿದೆ. ಪಠಾಣರಿಗೆ ಹಿಂಸೆಯು ದೊಡ್ಡ ಶಾಪವೆಂಬ ನನ್ನ ವಿಶ್ವಾಸವು ದಿನದಿನಕ್ಕೂ ಬಲವಾಗುತ್ತಿದೆ. ಇದರಿಂದಲೇ ನಮ್ಮ ಐಕ್ಯತೆಯು ಭಂಗವಾಯಿತು. ಸಾಲದ್ದಕ್ಕೆ ನಮ್ಮ ಆನುವಂಶಿಕ ಗೃಹ ಕಲಹೆಗಳು ಬೇರೆ ನಮ್ಮ ಐಕಮತ್ಯವನ್ನು ನಿರ್ನಾಮಮಾಡಿಬಿಟ್ಟವು. ಪಠಾಣರು ತಮ್ಮ ಸರ್ವಶಕ್ತಿಯನ್ನೂ ತಮ್ಮ ಸಹೋದರರ ಪ್ರಾಣಹಿಂಸೆಮಾಡುವುದರಲ್ಲೇ ವಿನಿಯೋಗಿಸುತ್ತಿರುವರು.

ಇತರ ಪ್ರಾಂತ್ಯಗಳ ವಿಚಾರ ಏನೇ ಇರಲಿ, ನಮ್ಮ ಪ್ರಾಂತ್ಯಕ್ಕಂತೂ, ಈ ಅಹಿಂಸೆಯು ಭಗವಂತನಿಂದ ಅನುಗ್ರಹಿಸಲ್ಪಟ್ಟ ಒಂದು ಮಹಾವರಪ್ರಸಾದ. ಪಠಾಣರ ಮುಕ್ತಿಗೆ, ಅಹಿಂಸೆಯ ಹೊರತು ಬೇರೆ ಸಾಧನವೇ ಇಲ್ಲ. ಇದು ನನ್ನ ಅನುಭವ. ಇಷ್ಟು ಅಲ್ಪಾವಧಿಯಲ್ಲೇ ಈ ಅಹಿಂಸೆಯ ಪರಿಣಾಮವಾಗಿ ನಮ್ಮ ಜೀವನವೇ ಬದಲಾಯಿಸಿ ಹೋಗಿದೆ. ಮಹಾತ್ಮಾಜಿ, ಮೊದಲು ನಾವು ಎಷ್ಟು ಮುಟ್ಠಾಳರಿದ್ದೆವು, ಎಷ್ಟು ಅಂಜುಬುರುಕರಿದ್ದೆವು, ಯಾರಾದರೂ ಇಂಗ್ಲಿಷಿನವನನ್ನು ನೋಡಿದೆವೆಂದರೆ ತೀರಿತು,–ಹೆದರಿ ಹೋಗುತ್ತಿದ್ದೆವು. ವ್ಯರ್ಥವಾಗಿ ಕಾಲಕಳೆಯುವದಂತೂ ನಮ್ಮ ಜೀವನದ ಒಂದು ಅಂಗವೇ ಆಗಿತ್ತು. ತಮ್ಮ ಈ ಆಂದೋಲನವು ನಮ್ಮಲ್ಲಿ ಹೊಸಜೀವನವನ್ನೇ ಉಂಟುಮಾಡಿದೆ. ನಾವು ಹೆಚ್ಚು ಶ್ರದ್ಧಾಳುಗಳಾಗಿದ್ದೇವೆ. ಯಾವ ಜಮೀನಿನಿಂದ ಮೊದಲು ಹತ್ತರೂ ಉತ್ಪತ್ತಿಯಾಗುವುದೂ ಸಹ ಕಷ್ಟವಾಗಿತ್ತೋ ಅಲ್ಲೇ ಈಗ ಅದರೆರಡರಷ್ಟನ್ನು ಹೊಂದುತ್ತಿದ್ದೇವೆ. ಭಯವನ್ನಂತೂ ಹೃದಯದಿಂದ ದೂರ ಓಡಿಸಿದೆವು. ಈಗ ನಾವು ಯಾವ ಆಂಗ್ಲನಿಗೂ, ಅಷ್ಟೇಕೆ, ಯಾವ ಮನುಷ್ಯನಿಗೂ ಹೆದರುವುದಿಲ್ಲ. ಗುಂಡಿನೇಟು ಏನು ಮಾಡಬಲ್ಲದು?

ನಂತರ ಅವರು ಸರ್ವಿಯ ಶಾಸನ ಭಂಗದ ಸುದ್ದಿ ಎತ್ತಿದರು. ಒಂದು ಸಾರಿ ಒಬ್ಬ ಆಂಗ್ಲ ಅಧಿಕಾರಿಯು ಸೈನ್ಯ ಸಮೇತ ಬಂದು, ರಕ್ತ ಕವಚಧಾರಿಗಳ ಗುಂಪನ್ನು ಚದುರುವಂತೆ ಆಜ್ಞೆ ಮಾಡಿದನು. ಭಾಷಣ ಬಂಧನದ 144ನೇ ಬಾಣಪ್ರಯೋಗದ ಆಜ್ಞೆಯು ತನ್ನಲ್ಲಿದ್ದರೂ, ಅವನು ಅದನ್ನು ತೋರಿಸಲಿಲ್ಲ. ಅವನು ಗುಂಪಿನ ಮುಂದುಗಡೆ ಇದ್ದ ಒಬ್ಬ ಸ್ವಯಂಸೇವಕನ ಕೈಯಿಂದ, ಧ್ವಜವನ್ನು ಕಿತ್ತುಕೊಳ್ಳಲೆತ್ನಿಸಿದನು. ಸಾಧ್ಯವಾಗದಿರಲು ಕೋಪದಿಂದ, ಗುಂಡು ಹಾರಿಸುವಂತೆ ಆಜ್ಞೆ ಮಾಡಿದನು. ಆದರೆ ಗುಂಪು ಸ್ವಲ್ಪವೂ ಅಲ್ಲಾಡದೆ ಶಾಂತರೀತಿ ಇದ್ದುದನ್ನು ನೋಡಿ, ಅವನು ಬೆರಗಾದನು. ನಮ್ಮ ಸ್ವಯಂ ಸೇವಕರು ಗುಂಡಿಗೆ ಎದೆ ಒಡ್ಡಿದುದನ್ನು ನೋಡಿ ಅವನಿಗೆ ಮುಂದೆ ಹೋಗುವ ಧೈರ್ಯವೇ ಬರಲಿಲ್ಲ. ಆ ಅಧಿಕಾರಿಯ ಅವಸ್ಥೆಯು ಹೇಳತೀರದು. ಆಗ ನಾನು ಅವನನ್ನು ಕುರಿತು 'ನಾವಂತೂ ನಿಶ್ಶಸ್ತ್ರರಿದ್ದೇವೆ. ನಮ್ಮನ್ನು ಕಂಡು ನೀವೇಕೆ ಹೆದರಬೇಕು? ಗುಂಡು ಹಾರಿಸುವ ಬದಲು ಭಾಷಣ ಪ್ರತಿಬಂಧಕಾಜ್ಞೆಯನ್ನೇ ಮೊದಲು ಕೊಟ್ಟಿದ್ದರೆ, ಸಂತೋಷದಿಂದ ನಾವೇ ಚದುರಿ ಹೋಗುತ್ತಿದ್ದೆವಲ್ಲ! ಆಜ್ಞೆ ಮೀರಬೇಕೆಂಬುದು ನಮ್ಮ ಧರ್ಮವಲ್ಲ' ಎನಲು ಅವನಿಗೆ ತನ್ನ ಮೂರ್ಖತೆಗಾಗಿ ನಾಚಿಕೆಯಾಯಿತು. ಇಂಗ್ಲಿಷರು ನಮ್ಮ ಅಹಿಂಸೆಯನ್ನು ಕಂಡರೆ ಬಹಳ ಹೆದರುವರು. ಅವರ ಅಭಿಪ್ರಾಯದಲ್ಲಿ ಹಿಂಸಕ ಪಠಾಣನಿಗಿಂತಲೂ, ಅಹಿಂಸೆಯ ಪಠಾಣನೇ ಹೆಚ್ಚು ಭಯಂಕರನು.

ಸ್ವರಾಜ್ಯದ ಬೀಗದ ಕೈ

ತಮ್ಮ ವ್ಯಾಖ್ಯಾನುಸಾರವಾಗಿ ನಾವು ಅಹಿಂಸೆಯ ತತ್ವಗಳನ್ನು ಜೀರ್ಣಪಡಿಸಿಕೊಳ್ಳಲು ಸಮರ್ಥರಾಗಿ ಅದರಂತೆ ಆಚರಿಸಿದೆವಾದರೆ, ನಮ್ಮ ಸ್ಥಿತಿಯು ಎಷ್ಟು ಉತ್ತಮಗೊಳ್ಳುವುದು! ನಾವು ಎಷ್ಟು ಶಕ್ತಿಶಾಲಿಗಳಾಗುವೆವು! ನಾವಂತೂ ನಾಶವಾಗುವುದರಲ್ಲಿದ್ದೆವು. ಆದರೆ ದೇವರು ನಮ್ಮನ್ನು ಆ ಸರ್ವನಾಶದಿಂದ ಉಳಿಸಲು ಈ ಅಹಿಂಸಾಂದೋಲನವನ್ನು ನಮ್ಮಲ್ಲಿಗೆ ಕಳಿಸಿದರು. ನಾನು ನಮ್ಮ ಜನರಿಗೆ ಹೀಗೆ ಹೇಳುತ್ತಿರುವೆನು. 'ಸ್ವರಾಜ್ಯದ ಹೆಸರಿನಲ್ಲಿ ಸುಮ್ಮನೆ ಘೋಷ ಮಾಡುವುದರಿಂದೇನು ತಾನೇ ಲಾಭ? ಯಾವ ದಿನ ನಿಮ್ಮ ಹೃದಯದಿಂದ ಭಯವು ಸಂಪೂರ್ಣವಾಗಿ ನಾಶವಾಗುವುದೋ ಯಾವ ದಿನ ನೀವು ಸತ್ಯವ್ರತರಾಗಿ, ಧರ್ಮಿಷ್ಠರಾಗಿ ನಿಮ್ಮ ರೊಟ್ಟಿಯನ್ನು ಸಂಪಾದಿಸಲಾರಂಭಿಸುವಿರೋ ಅಂದೇ ಸ್ವರಾಜ್ಯ ಸಿಗುವದೆಂದಿಟ್ಟುಕೊಳ್ಳಿ.

ಶಾಂತಿ ಸೇನೆ

ಗಾಂಧಿಜಿಯವರು ಖಾನ್ ಸಾಹೇಬರಿಗೆ ಈ ರೀತಿ ಹೇಳಿದರು 'ನನ್ನ ಅಹಿಂಸೆಯ ಕಲ್ಪನೆಯನ್ನು ಚನ್ನಾಗಿ ಗ್ರಹಿಸಿರುವಿರಾದರೆ, ಖುದಾಯಿ ಖಿದ್ಮತ್‌ಗಾರರಿಗೆ ಅದರಲ್ಲಿ ಚನ್ನಾಗಿ ಶಿಕ್ಷಣ ಕೊಡಿರಿ' ಖಾನ್ ಸಾಹೇಬರು ನೊಜಬೇ ಬಂದು ಕೇಂದ್ರವನ್ನು ಸ್ಥಾಪಿಸಬೇಕೆಂದಿದ್ದರು. ಅಲ್ಲದೆ ಉತಮಾನ ಜಾಯಿಯಲ್ಲಿ ನೇಯ್ಗೆ ಕೇಂದ್ರವನ್ನು ತೆರೆಯಲೂ ಸಹ ನಿಶ್ಚಯ ಮಾಡಿದರು 'ನನ್ನ ಮನಸ್ಸಿನಲ್ಲಿ' ಖಾನ್ ಸಾಹೇಬರು ಪ್ರಾರಂಭ ಮಾಡಿದರು. 'ಮಹಾತ್ಮಾಜಿ, ಉತಮಾನಜಾಯಿಯನ್ನು ಒಂದು ಮಾದರಿ ಗ್ರಾಮವನ್ನಾಗಿ ಮಾಡಿ ಗ್ರಾಮಸ್ಥರಿಗೇ ಸರಿಯಾದ ಸೇವೆಯ ಶಿಕ್ಷಣ ಕೊಟ್ಟು ಪ್ರಚಾರಕ್ಕಾಗಿ ಸ್ಥಾಯಿ ವ್ಯವಸ್ಥೆಯನ್ನು ಮಾಡಬೇಕೆಂಬ ಅಭಿಲಾಷೆ ಇದೆ. ಈ ಖುದಾಯಿ ಖಿದ್ಮತ್‌ಗಾರರಿಗಾಗಿ ಏರ್ಪಡಿಸುವ ಗೃಹಗಳಲ್ಲಿ ಸ್ವಾವಲಂಬನದ ಆದರ್ಶಕ್ಕೆ ಗಮನ ಕೊಡಲಾಗುವುದು. ನಾವೇ ಸ್ವಂತ ಮಾಡಿದ ಬಟ್ಟೆಯನ್ನೇ ಧರಿಸುವೆವು. ನಾವೇ ಸ್ವಯಂ ಬೆಳೆಸಿದ ಹಣ್ಣು, ತರಕಾರಿಗಳನ್ನೇ ತಿನ್ನುವೆವು. ಒಂದು ಚಿಕ್ಕ ಗೋಶಾಲೆಯನ್ನು ಸಹ ನಿರ್ಮಿಸುವೆವು. ನಾವೇ ನಿರ್ಮಾಣ ಮಾಡಿಕೊಳ್ಳಲಾರದ ಯಾವ ವಸ್ತುವನ್ನೂ ಸಹ ನಾವು ಉಪಯೋಗಿಸುವುದೇ ಇಲ್ಲ.'

"ಬಹಳ ಸೊಗಸಾಗಿದೆ" ಎಂದು ಮಹಾತ್ಮರು ಹೀಗೆ ನುಡಿದರು. ನಾನು ಮತ್ತೊಂದು ಸಲಹೆ ಕೊಡುವೆನು. ಖುದಾಯಿ ಖಿದ್ಮತ್‌ಗಾರರು ತಮ್ಮ ತಮ್ಮ ಜೋಪಡಿಗಳನ್ನು ಸಹ ತಾವೇ ಕಟ್ಟಿಕೊಳ್ಳಬೇಕು. 'ಜರೂರು ನಮ್ಮದೂ ಅದೇ ಭಾವನೆ' ಎಂದರು ಖಾನ್ ಸಾಹೇಬರು.

"ಶಾಸಕತನಗಿಂತ ಮೊದಲು, ಗುಂಪಿಗೆ ಶಿಕ್ಷಣ ಕೊಡಲು ಖಾನ್ ಸಾಹೇಬರಿಗೆ ಒಪ್ಪಿಗೆಯಾಗುವ ಕೆಲವು ಖುದಾಯಿ ಖಿದ್ಮತ್‌ಗಾರರನ್ನು ವಾರ್ಧಾಕ್ಕೆ ಕಳಿಸಬೇಕು. ಇದರಿಂದ ಅವರಿಗೆ ಖಾದಿಯ ವಿಜ್ಞಾನದಲ್ಲಿ ನಿಪುಣರಾಗುವದಲ್ಲದೆ, ಗ್ರಾಮ ನಿರ್ಮಲೀಕರಣ, ಗ್ರಾಮೋದ್ಯೋಗ ದ್ವಾರದ ವಿಚಾರದಲ್ಲಿ ಸಹ ಅನುಭವವುಂಟಾಗುವುದು. ವಾರ್ಧಾ ಯೋಜನೆಯನ್ನು ಸಹ ಶಿಕ್ಷಣದ ರೀತಿನೀತಿಗಳನ್ನು ತಿಳಿಯಬಹುದು ಇಲ್ಲಿಯೂ ಪ್ರಚಾರಮಾಡಬಹುದು. ಆದರೆ ಖಾನ್ ಸಾಹೇಬರೇ ತಾವೇ ಇದರ ನೇತೃತ್ವವನ್ನು ವಹಿಸಿ ಸ್ವಯಂ ಅನುಭವಿಗಳಾಗುವ ವರೆಗೆ ಇವೆಲ್ಲಾ ನಿಷ್ಪ್ರಯೋಜನವಾಗುವುವು" ಎಂದರು ಮಹಾತ್ಮರು. ಖಾನ್ ಸಾಹೇಬರು ಒಪ್ಪಿದರು. ಕೊನೆಯಲ್ಲಿ ಒಂದು ಮಾತು" ಎಂದು ಗಾಂಧಿಜಿ ಈ ರೀತಿ ಹೇಳಿದರು. "ಎಲ್ಲಿಯವರೆಗೆ ತಾವು ಸಮಯ ಶೀಲತೆಯನ್ನು ನಿಯಮಾನುಸಾರ ಪಾಲಿಸುವುದಿಲ್ಲವೋ, ಅಲ್ಲಿವರೆಗೆ ಯಾವ ಕೆಲಸವನ್ನೂ ಸಾಧಿಸಲಾರಿರಿ. ನಿದ್ರೆ ಊಟ, ಕೆಲಸ ಇವೆಲ್ಲಕ್ಕೂ ಪ್ರತ್ಯೇಕ ಸಮಯವಿರಬೇಕು. ನಾನು ನನ್ನ ಕಾರ್ಯಕ್ರಮದಲ್ಲಿ ಇವಕ್ಕೆ ಬಹಳ ಮಹತ್ವಕೊಡುತ್ತೇನೆ. ಅಹಿಂಸೆಯೊಡನೆ ಇದು ಅನಿವಾರ್ಯವೇ ಹೌದು"

General Assurance Society Ltd.

ಹಿಂದೂದೇಶದ ಪ್ರಮುಖ ವಿಮಾ ಕಂಪೆನಿ:

ಜನರಲ್ ಎಶ್ಯೂರೆನ್ಸ್ ಸೊಸೈಟಿ

ಲಿಮಿಟೆಡ್.

ಪ್ರಧಾನ ಆಫೀಸು:— ಅಜ್ಮೀರ್ ಸ್ಥಾಪನೆ **1907**

- ಸಂತೃಪ್ತಿ ಹೊಂದಿರುವ **50,000** ಪೊಲಿಸಿದಾರರೇ ನಮ್ಮ ಉತ್ಕೃಷ್ಟ ಪ್ರಶಸ್ತಿ ಪತ್ರ
- ಎಲ್ಲಾ ವರ್ಗದವರ ಪ್ರತಿಯೊಂದು ಆವಶ್ಯಕತೆಗೂ ಅನುಕೂಲವಾದ ಪೊಲಿಸಿಗಳು.
- ಏಜನ್ಸಿ ಶರ್ತಗಳು: ಉದಾರ ಮತ್ತು ಲಾಭಕರ

ಹೆಚ್ಚಿನ ವಿವರವನ್ನು ಈ ಕೆಳಗಿನವರಿಂದ ಪಡೆಯಬಹುದು:—

ಜನರಲ್ ಮೆನೇಜರ್, ಅಜ್ಮೀರ್.

ಅಥವಾ, ಶಾಖಾ ಮೆನೇಜರ್:–ಮದ್ರಾಸ್, ಹುಬ್ಬಳ್ಳಿ, ಬೆಂಗಳೂರು,

ಅಥವಾ, ಚೀಫ್ ಏಜಂಟರು:–ಮಧುರ, ರಾಜಮಹೇಂದ್ರಿ, ಸಿಕಂದರಾಬಾದ್, ತಿರುಚಿನಾಪಳ್ಳಿ.

ಅಥವಾ ಓರ್ಗನೈಸರ್:–ಔರಂಗಬಾದ್, ಬಳ್ಳಾರಿ, ನೆಲ್ಲೂರು,

ಮೈಸೂರು ಸಮಾಚಾರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮೈಸೂರು, ೮-೧೨.

ಆನೆಗಳನ್ನು ಹಿಡಿದಿದ್ದಾರೆ—ಖಾರಾಪುರದಲ್ಲಿರುವ ಬಹು ರಮ್ಯ ಮತ್ತು ದಟ್ಟವಾದ ಅರಣ್ಯದಲ್ಲಿ ಸುಮಾರು 60 ಆನೆಗಳನ್ನು ಹಿಡಿದು, ಒಂದು ಕಡೆ ಕೂಡುಬಿಟ್ಟಿದ್ದಾರೆ. ಸುತ್ತಲೂ ಕಟಕಟ ಕಟ್ಟಿ, ಪಳ್ಳ ತೋಡಿ, ಬೆಂಕಿಯನ್ನು ಹಾಕಿ, ಕಾಡು ಕುರುಬರುಗಳು ಆನೆಗಳನ್ನು ಕಾಯುತ್ತಿದ್ದಾರೆ. ಆನೆಗಳು ತಪ್ಪಿಸಿಕೊಳ್ಳಲು ಜಾಗವಿಲ್ಲ. ಹಾಗೆ ಹೋದಲ್ಲಿ ಈ ಕಾಯುತ್ತಿರುವವರು ಶಬ್ದ ಮಾಡಿ, ಕೆರಳಿ ಆನೆಗಳನ್ನು ಹಿಂದಕ್ಕೆ ಅಟ್ಟುತ್ತಾರೆ. ಆನೆಗಳಿಗೆ ಆಹಾರವನ್ನೂ, ನೀರನ್ನೂ ಒದಗಿಸಲು ಒಂದು ಚಿಕ್ಕ ಕಟ್ಟೆ ಕಟ್ಟಿ ಅದರಲ್ಲಿ ನೀರನ್ನು ಹರಿಸುತ್ತಾರೆ. ಈ ಆನೆಗಳು ಕೋಪ ಬಂದಾಗ ಇದನ್ನು ಸೊಂಡಲಿನಿಂದ ಎರಚುತ್ತವೆ. ಇನ್ನಲ್ಲಿಯ ಮಳೆಯ ಹಾಗೆ ಕಾಣಬೇಕೆಂದು ಇದರ ಮೇಲೆ ನೀರನ್ನು ಚುಕಿ ಬಿಡುತ್ತಾರೆ. ಅಂತು ಸುಮಾರು 60 ಆನೆಗಳನ್ನು ಹಿಡಿದಿರುವರೆಂದು ತಿಳಿದು ಬಂದಿದೆ.

ಮೈಸರಾಯರು ಬಂದಾಗ ಇವುಗಳನ್ನು ಇತರ ಆನೆಗಳ ಸಹಾಯದಿಂದ ಹಗ್ಗಗಳಿಂದ ಬಿಗಿಯುತ್ತಾರೆ ಇದೇ ಇದರಲ್ಲಿ ಅತಿ ಮುಖ್ಯವಾದ್ದು. ತರುವಾಯ ಆನೆಗಳು ನೀರಿನಲ್ಲಿ ಹೇಗೆ ಹೋಗುತ್ತವೆ ಎನ್ನುವುದನ್ನು ತೋರಿಸಲಾಗುತ್ತೆ. ಖಾರಾಪುರದಲ್ಲಿರುವ ಬಂಗಲೆಗೆ ಸುಣ್ಣ ಬಣ್ಣಗಳಾಗುತ್ತಿವೆ. ಮದ್ರಾಸ್ ಗೌರ್ನರಿಗೆ ವಿಶೇಷ ಗುಡಾರ ಏರ್ಪಾಡಾಗಿದೆ. ರಸ್ತೆಗಳು ಚೆನ್ನಾಗಿವೆ. ಈ ದೃಶ್ಯವನ್ನು ನೋಡಲು ಎರಡು ಕಣ್ಣುಗಳು ಸಾಲದು. ಆದರೆ ಆ ಆನೆಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಒಂದು ಬಲೆಗೆ ಬಿದ್ದಿರುವಂತೆ ತೋರುತ್ತದೆ. ಇದು ಕೆಲವು ದಿನ ಮಾತ್ರ. ತರುವಾಯ ಎಲ್ಲಾ ಆನೆಗಳನ್ನು ಪುನಃ ಕಾಡಿಗೆ ಬಿಟ್ಟುಬಿಡುತ್ತಾರೆಂದು ಹೇಳಲಾಗಿದೆ.

ಮೈಸೂರು ಕಾಂಗ್ರೆಸ್—ಮೇಲ್ಕಂಡ ಕಾಂಗ್ರೆಸಿನ ಅಧಿವೇಶನವು, ಮುಂದಿನ ಮಾರ್ಚಿ ೨೧, ೨೭ ಮತ್ತು ೨೨ರಲ್ಲಿ, ವಿದುರಾಶ್ವತ್ಥದಲ್ಲಿ ಸೇರುವುದೆಂದು, ಅದರ ಕಾರ್ಯದರ್ಶಿಗಳು ತಿಳಿಸುತ್ತಾರೆ.

ದೇಶೀಯ ವಿದ್ಯಾಶಾಲೆ—ಮೇಲ್ಕಂಡ ಶಾಲೆಯ ವಾರ್ಷಿಕೋತ್ಸವವು, ಆಫಿಷಿಯೇಟಿಂಗ್, ದ್ವಿತೀಯ ಸಚಿವರಾದ ಶ್ರೀ ಕೆ. ವಿ. ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆಯಿತು. ಮತ್ತು ಮೇಲ್ಕಂಡ ಶಾಲೆಯ ವ್ಯಾಯಾಮ ಶಾಲೆಯ ವಾರ್ಷಿಕೋತ್ಸವವು, ದಂಡಿನ ಮತ್ತು ಕೊಡಗಿನ ಶಾಲೆಗಳ ಇನ್ಸ್‌ಪೆಕ್ಟರರಾದ ಮಿ॥ ಎಂ. ಯಸ್. ಥಾಂಸನರವರ ಅಧ್ಯಕ್ಷತೆಯಲ್ಲಿ ಜರಗಿತು.

ಮರಣ—ಮೈಸೂರು ಸಂಸ್ಥಾನದಲ್ಲಿ ಸುಪ್ರಸಿದ್ಧ ಎಕ್ಸಿಕ್ಯೂಟಿವ್ ಇಂಜನೀಯರರಾಗಿದ್ದ ಶ್ರೀ. ಲಕ್ಷ್ಮಣಾಚಾರ್ಯರು, ಬೆಂಗಳೂರಿನಲ್ಲಿ ಮರಣ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ.

ವಾರ್ಷಿಕೋತ್ಸವ—ಚೀಫ್ ಇಲೆಕ್ಟ್ರಿಕಲ್ ಇಂಜನೀಯರ್ ಮಿ॥ ಯಸ್. ಜಿ. ಫೋರ್ಬ್ಸ್‌ರವರ ಅಧ್ಯಕ್ಷತೆಯಲ್ಲಿ, ಬೆಂಗಳೂರು ಇಂಜನೀಯರಿಂಗ್ ಕಾಲೇಜಿನ 18ನೇ ವಾರ್ಷಿಕೋತ್ಸವವು ನಡೆಯಿತು.

ನಿವೃತ್ತರಾದರು—ಪ್ರಥಮ ಸಚಿವರಾದ ಶ್ರೀ. ಯಸ್. ಪಿ. ರಾಜಗೋಪಾಲಾಚಾರಿಯವರು ಈ ತಿಂಗಳು ತಾ. ೭ರಲ್ಲಿ ತಮ್ಮ ಅಧಿಕಾರದ ಚಾರ್ಜನ್ನು ದ್ವಿತೀಯ ಸಚಿವರಾದ ಶ್ರೀ. ಯನ್. ಮಾಧವರಾಯರಿಗೆ ಒಪ್ಪಿಸಿದರು. ಆದರೆ ಈ ತಾರೀಖಿಂದ ಶ್ರೀ ರಾಜಗೋಪಾಲಾಚಾರಿಯವರು ರಜವನ್ನೂ ಪಡೆದರು. ಈ ರಜವು ಮುಗಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗುತ್ತಾರೆ.

ತಗಡೂರು ಮತ್ತು ವಾರ್ಧಾ ವಿದ್ಯಾಭ್ಯಾಸ—ವಾರ್ಧಾ ವಿದ್ಯಾಭ್ಯಾಸದ ಕಾರ್ಯದರ್ಶಿಗಳಾದ, ಶ್ರೀ. ಆರ್ಯನಾಯಕಂರವರು ಕಳೆದ ತಿಂಗಳು ಮೈಸೂರಿಗೆ ಬಂದು, ತಗಡೂರಿನಲ್ಲಿ ಆ ವಿದ್ಯಾಭ್ಯಾಸದ ಶಾಲೆಯ ಪ್ರಾರಂಭೋತ್ಸವ ನಡೆಸಿದ್ದರು. ಸುಮಾರು ಒಂದು ತಿಂಗಳಲ್ಲಿ ಇಲ್ಲಿ ನಡೆಯುವ ಕಾರ್ಯವನ್ನು ತಿಳಿಸಲಿಕ್ಕೂ ಮತ್ತು ವಾರ್ಧಾದಲ್ಲಿ ತರಬೇತು ಪಡೆದು ಬರಲಿಕ್ಕೂ, ಇಲ್ಲಿಂದ ಇಬ್ಬರು ವಿದ್ಯಾರ್ಥಿಗಳನ್ನು ಚುನಾಯಿಸಲಾಗಿದೆ. ಇವರುಗಳು ಶೀಘ್ರದಲ್ಲೇ ವಾರ್ಧಾಕ್ಕೆ ಹೊರಡುತ್ತಾರೆ.

ತಿರಸ್ಕರಿಸಿ ಪುರಸ್ಕರಿಸಿದರು—ರಾಷ್ಟ್ರಪತಿಗಳಾದ ಶ್ರೀ ಸುಭಾಷಚಂದ್ರ ಭೋಸರು ಬೆಂಗಳೂರಿಗೆ ಈ ಮಾಸಾಂತ್ಯದಲ್ಲಿ ಬಂದಾಗ ದಂಡಿನ ನಗರಸಭೆಯವರು, ಅವರಿಗೆ ಒಂದು ಸಿವಿಲ್ ಮಾನಪತ್ರವನ್ನು ಕೊಡಲು ತಗಲುವ ಸುಮಾರು ೫೦೦ ರೂ.ಗಳನ್ನು ಕೊಡಬೇಕೆಂದು ನಗರಸಭೆಗೆ ಸೂಚಿಸಿದ್ದ ನಿರ್ಣಯವನ್ನು ಅದರ ಅಧ್ಯಕ್ಷರಾದ ಮಿ॥ ವಿಲಿಯಂಸ್‌ರವರು ಆಗುವುದಿಲ್ಲವೆಂದು ತಿಳಿಸಿದ್ದಾರೆ. ಆದರೆ ಅದೇ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಜನವರಿಯಲ್ಲಿ ಬೆಂಗಳೂರಿಗೆ ಬಂದಾಗ ಸುಮಾರು ೨೦೦೦ ರೂಗಳನ್ನು ಖರ್ಚುಮಾಡಬಹುದೆಂದು ತಂದಿದ್ದ ನಿರ್ಣಯವು ಪಾಸಾಯಿತು.

ವಿದೇಶಕ್ಕೆ ಪ್ರಯಾಣ—ದಾಮೋದರದಾಸ್ ಸ್ಕಾಲರ್‌ಷಿಪ್ ಹೊಂದಿರುವ ಶ್ರೀ. ಬಿ. ಕೆ. ಮೂರ್ತಿಯವರು ಶೀಘ್ರದಲ್ಲೇ ವಿಲಾಯಿತಿಕ್ಕೆ ಹೊರಡುವರು.

ಅ॥ ಭಾ॥ ಸಾಬೂನು ತಯಾರಿಕೆ—ಮೇಲ್ಕಂಡ ತಯಾರಿಕೆ ಮೊದಲನೇ ಅಧಿವೇಶನವು ದಿವಾನ ಸರ್. ಮಿರ್ಜಾರವರ ಅಧ್ಯಕ್ಷತೆಯಲ್ಲಿ ಮುಂದಿನ ಈಸ್ಟರ್ ರಜಾ ದಿನದಲ್ಲಿ, ಬೆಂಗಳೂರಿನಲ್ಲಿ ನಡೆಯುತ್ತದೆ.

ಮಂಡ್ಯದಲ್ಲಿ ದೊಂಬಿ—ಮಂಡ್ಯದ ಬಳಿಯಿರುವ ದಾಸನಗಾಳದಲ್ಲಿ ಕಬ್ಬುಗಳ ವಿಚಾರವಾಗಿ ಎರಡು ಪಾರ್ಟಿಗಳಿಗೆ ಆಗಾಗ್ಗೆ ಜಗಳ ನಡೆಯುತ್ತಾ ಇದೆಯೆಂದು ಇಲ್ಲಿಗೆ ವರದಿ ಬಂದಿದೆ.

ಅಂಧಕಾಸುರ ಸಂಹಾರ—ಅಂಧಕಾಸುರನೆಂಬ ರಾಕ್ಷಸನು ಜನಗಳಿಗೆ ಹಿಂದಿನ ಕಾಲದಲ್ಲಿ ತೊಂದರೆ ಕೊಡುತ್ತಿದ್ದನೆಂದೂ ಇವರ ಮೇಲೆ ಈಶ್ವರನು ಕೋಪದಿಂದ ಬಂದು ಆ ರಾಕ್ಷಸನನ್ನು ಕೊಂದನೆಂದೂ ಪುರಾಣದಲ್ಲಿದೆ ಹೇಳಲಾಗಿ, ಈ ಉತ್ಸವವನ್ನು ಈಶ್ವರನ ದೇವಸ್ಥಾನವು ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲ ನಡೆಸುತ್ತಾರೆ. ಇದು ಮೈಸೂರಿನಲ್ಲಿ ಅತಿ ವಿಜೃಂಭಣೆಯಿಂದ ನಡೆಯುತ್ತದೆ. ಅದರಲ್ಲೂ ಅರಮನೆಯ ಕೋಟೆಯೊಳಗೆ ಹೆಚ್ಚು ಸಂಭ್ರಮದಿಂದ ನಡೆಯುವುದುಂಟು. ಇದನ್ನು ನಡೆಸಲು ಈಗಾಗಲೇ ದೊಡ್ಡ ದೊಡ್ಡ ಚೋಂಬುಗಳನ್ನು ಕಟ್ಟಿದ್ದಾರೆ. ಇದಕ್ಕೆ ಒಂದು ದೊಡ್ಡ ಅಂಧಕಾಸುರನ ಚಿತ್ರಪಠವನ್ನು (ಬಟ್ಟೆಯದ್ದು) ಕಟ್ಟುತ್ತಾರೆ. ಇದರ ಮುಂದೆ ರಂಗವಲ್ಲಿಯಲ್ಲಿ ಚೆನ್ನಾಗಿ ಅವನ ಚಿತ್ರ ಬರೆಯುತ್ತಾರೆ. ಮೈಸೂರು ಅರಮನೆಯ ಮುಂದೆ ನಡೆವ ಈ ದೃಶ್ಯವನ್ನು ವಿದ್ಯುಚ್ಛಕ್ತಿಯಿಂದ ನಡೆಸುವರು. ಇದು ನವನಾಗರಿಕ ಮತ್ತು ಆಧುನಿಕ ರೀತಿಯಲ್ಲಿ ನಡೆಸುತ್ತಾರೆ. ಈ ಬಾರಿ ಈ ಉತ್ಸವವು ಜನವರಿ ತಾ. ೪ನೇ ಬುಧವಾರ ರಾತ್ರಿ ನಡೆಯುತ್ತೆ. ಆ ದಿನ ಇದನ್ನು ನೋಡಲು ಸಾವಿರಾರು ಜನರು ಅರಮನೆಯ ಮುಂದೆ ಜಮಾಯಿಸುತ್ತಾರೆ. ಆಗ ಆ ಮುಹೂರ್ತಕ್ಕೆ ಸರಿಯಾಗಿ ಈಶ್ವರ ದೇವರು ಕೋಪದಿಂದ ಬಂದು ಇವನನ್ನು ಒಂದು ಬಾಣದಿಂದ ಸುಡುತ್ತಾರೆ. ಈ ಬಾಣವನ್ನು ವಿದ್ಯುಚ್ಛಕ್ತಿಯ ಮೂಲಕ ಬಿಡುವರು. ಈ ದೃಶ್ಯವು ನೋಡುವುದಕ್ಕೆ ಬಹಳ ಚೆನ್ನಾಗಿರುತ್ತೆ. ಅಂತೂ ಇದನ್ನು ನೆರವೇರಿಸಲು ಮೈಸೂರು ಅರಮನೆಯ ಮುಂದೆ ವಿಶೇಷ ರೀತಿಯಲ್ಲಿ ಎಲ್ಲ ತರದ ಏರ್ಪಾಡನ್ನು ಮಾಡುತ್ತಿದ್ದಾರೆ. ಈ ರೀತಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಉತ್ಸವವನ್ನು ನಡೆಸುವುದು, ಈ ಊರಿನಲ್ಲಿ ಒಂದರಲ್ಲೇ ಇರಬಹುದೆಂದು ನಂಬಲಾಗಿದೆ.

ಕ್ಯಾಂಪ್ (ಬೆಂಗಳೂರು) ೭-೧೨

ಅಖಿಲ ಭಾರತ ಆನುವಂಶಿಕ ಆಯುರ್ವೇದ ಮತ್ತು ಯುನಾನಿ ಸಮ್ಮೇಳನ—ತುಂಗಭದ್ರೆಯ, ಪಂಡಿತ ತಾರಾನಾಥರ ಅಧ್ಯಕ್ಷತೆಯಲ್ಲಿ, ಅಖಿಲ ಭಾರತ ಆನುವಂಶೀಕ ಆಯುರ್ವೇದ ಮತ್ತು ಯುನಾನಿ ಸಮ್ಮೇಳನವು (ಜನೆಯದ) ಈ ದಿನ ಬೆಳಗ್ಗೆ ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟರ ಭವನದಲ್ಲಿ ನಡೆಯಿತು. ಇದರ ಆರಂಭೋತ್ಸವವನ್ನು ಮೈಸೂರು ಮುನಿಸಿಪಲ್ ಕಮಿಷನರ್ ಮಿ॥ ಯಸ್. ಅಬ್ದುಲ್ ವಾಜಿದ್‌ರವರು ನೆರವೇರಿಸಿದರು. ಈ ಉತ್ಸವಕ್ಕೆ ಭವನವನ್ನು ಚೆನ್ನಾಗಿ ಅಲಂಕಾರ ಮಾಡಿತ್ತಲ್ಲದೆ ಅನೇಕ ವೈದ್ಯರೂ, ಮಹಿಳೆಯರೂ, ವಿರಸೀಯರೂ ಬಂದಿದ್ದರು. ಭಿಷಗ್ರತ್ನ ಶ್ರೀ. ಬಿ. ವಿ. ಪಂಡಿತರು ಸ್ವಾಗತಾಧ್ಯಕ್ಷ ಭಾಷಣ ಮಾಡಿದರು. ಸಮ್ಮೇಲನವು ಯಶಸ್ವಿಯಾಗಿ ನಡೆಯಿತು. ಅಧ್ಯಕ್ಷ ಭಾಷಣವು ಬಹಳ ಸಮರ್ಪಕವಾಗಿತ್ತಲ್ಲದೆ, ಈ ಉದ್ಯಮವನ್ನು ಮುಂದೆ ಹೇಗೆ ತರಬೇಕೆಂಬುದನ್ನೂ ಚರ್ಚಿಸಲಾಯಿತು. ಸಮ್ಮೇಲನವು ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯೊಡನೆ ಮುಕ್ತಾಯವಾಯಿತು. ಈ ಸಮ್ಮೇಳನಕ್ಕೆ ಸೇರಿದ ಹಾಗೆ ಒಂದು ವಸ್ತು ಪ್ರದರ್ಶನವು ಒಕ್ಕಲಿಗರ ಸಂಘದಲ್ಲಿ ಏರ್ಪಾಡಾಗಿತ್ತು. ಇದನ್ನು ರಾವ್ ಬಹದ್ದೂರ್ ಬಿ. ಕೆ. ಗರುಡಾಚಾರ್ಯರು ಬಂದು ಆರಂಭೋತ್ಸವವನ್ನು ಮಾಡಿದರು. ಒಟ್ಟಿನಲ್ಲಿ ಈ ಸಮ್ಮೇಳನದಿಂದ ಹಿಂದಿದ್ದ ಆಯುರ್ವೇದ ಮತ್ತು ಯುನಾನಿ ಪದ್ಧತಿಯು ಇನ್ನೂ ಕೆಲವು ಕಾಲ ಹೇಗೆ ಉಳಿಸಿಕೊಂಡು ಬರಬಹುದೆಂದು ಗೊತ್ತಾಯಿತು.

Established] [1906

THE
UNITED INDIA
LIFE ASSURANCE COMPANY, LTD.,
HEAD OFFICE—MADRAS.

Trustee:—THE OFFICIAL TRUSTEE OF MADRAS.

Policies in force	**Rs. 486 Lakhs**
Annual income Exceeds	**Rs. 28 Lakhs**
Total Assets Exceed	**Rs. 160 Lakhs**
Total claims paid over	**Rs. 36 Lakhs.**

The oldest and largest Life Assurance Company of South India, having 31 years of record service.

A POLICY IN THE UNITED INDIA *COMBINES PERFECT SAFETY WITH PRUDENCE.*

BRANCHES ALL OVER INDIA.

WANTED AGENTS

For particulars, please apply to:—

THE BRANCH MANAGER,
The United India,
Life Assurance Company Ltd.
BLOCK No. 2, Felix Pai Bazaar,
BRANCH, **MANGALORE, S. K.**

OR

K. Keshava Shenoy, M. A.
Organiser, Shantiniketan,
PENTLANDPET,
MANGALORE.

Degrees: Books: Medicines.

Free H. L. M. S; H. M. B, H. M. D etc. Free Homeo-Ayur-Unani-Naturo degrees by post also—Practitioners also get soon, Homeo Materiamedica, Rs. 5, Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)
P. O. MAHUVA, (Kathiawar Dt. India)

ಕ್ರಿಸ್‌ಮಸ್ ಕಾಣಿಕೆ

ಲಿವರ್ ಚಲನವಲನಗಳುಳ್ಳ, ಉತ್ತಮ ತರಗತಿಯ ಸ್ವಿಸ್ ನ್ಯೂವಟೇಸ್ ರೋಲ್ಡ್‌ಗೋಲ್ಡ್ ಮುಚ್ಚಳಗಳುಳ್ಳ ರಿಸ್ಟ್ ವಾಚುಗಳು ಚೌಕಾಕೃತಿ ಮತ್ತು ಅಷ್ಟಕೋಣಾಕೃತಿಯಲ್ಲಿದ್ದು ಕ್ರಿಸ್‌ಮಸ್ ಹಬ್ಬದ ನಿಮಿತ್ತ ಒಂಭತ್ತು ರೂಪಾಯಿ ಬೆಲೆಬಾಳುವಂತಹವು ರೂಪಾ 5-15-0ಕ್ಕೇನೇ ಮಾರಲ್ಪಡುವವು.

ಟಪ್ಪಾಲು ಖರ್ಚು ಪ್ರತ್ಯೇಕ.

ಇಂದೇ ಬರೆಯಿರಿ—
Nelson Watch Co.,
Wall Tax Road, P. O. MADRAS.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಪ್ಪರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ,

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು,

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ, ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವಿಮ್ಮ, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ಕೆ ರೂ. ೭—೮—0.

ಕಸ್ತೂರಿಮಿಶ್ರಣ ದಶಮೂಲ
ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ
ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, MANGALORE

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು):— ಈ ಮರವು ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೫ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು.

ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ.
ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ.
ಕ್ರಯದ ಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಕೆ. ಎಮ್. ಸೆಟ್ಟಿ, ಕೆನರಾ ನರ್ಸರಿ,
ಪೋಸ್ಟ್:—ಕಾಪು, ದ. ಕ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರವೀಣತೆ! ಪ್ರಾಮಾಣಿಕತೆ! ಪ್ರಸಿದ್ಧಿ!

ಮನಮೋಹಕ ಸೀನ್‌ಸಿನೆರಿಗಳು, ಕೆತ್ತನೆ ಕೆಲಸಗಳು, ನಮೂನೆವಾರು ಸೈನ್ ಬೋರ್ಡುಗಳು, ಇತ್ಯಾದಿ ಯಾವದೇ ಪೈಂಟಿಂಗ್ ಕೆಲಸಗಳು
ಮಿತ ದರ!] ನಾಜೂಕಾಗಿ ಮಾಡಿಕೊಡಲ್ಪಡುತ್ತದೆ. [ಗ್ಯಾರಂಟಿ ಕೆಲಸ!
ಪೈಂಟಿಂಗ್ ಸಂಬಂಧವಾದ ಯಾವ ಕಂಟ್ರಾಕ್ಟ್ ಕೆಲಸವನ್ನಾದರೂ ಕೈಕೊಳ್ಳಲಾಗುವದು.
ಹೆಚ್ಚಿನ ಮಾಹಿತಿಗೆ ಬರೆಯಿರಿ, ಯಾ ಸ್ವತಃ ಬಂದು ವಿಚಾರಿಸಿ.

ಪೈಂಟರ್ ಗಣಪತಿರಾವ್,

ಸೋದೆ ಮಠದ ಲೇನು – – – ಉಡುಪಿ, ದ. ಕ.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. ಕೊಡಿಯಾಲಬೈಲು.

ಉಡುಪಿಯಿಂದ ಬರೇ 12 ತಾಸುಗಳೊಳಗೆ

ಸಕಲೇಶಪುರ, ಹಾಸನ, ಅಥವಾ ಮಡಿಕೇರಿಗೆ

ಪ್ರಯಾಣಮಾಡಲು ಅತ್ಯನುಕೂಲವಾದ ಸರ್ವಿಸುಗಳ ಏರ್ಪಾಡು ಮಾಡೋಣಾಗಿದೆ.

ಉಡ್ಪಿಯಿಂದ ಬೆಳಿಗ್ಯೆ 5-30 A. M ಗೆ ಹೊರಡುವ ಕರಾವಳಿ ಅಥವಾ ಕಾರ್ಕಳ ಲ್ಯಾನು ಸರ್ವೀಸಿನಲ್ಲಿ ಹೊರಟರೆ, ಅದೇ ದಿನ ಬೆಳಿಗ್ಯೆ 9-30 A. M ನ ಒಳಗೆ ಮಂಗಳೂರಿಗೆ ತಲುಪಿ, ಮಂಗಳೂರಿನಿಂದ 9-45 A. M.ಗೆ ಹೊರಡುವ ಸಕಲೇಶಪುರ ಸರ್ವೀಸಿನಲ್ಲಿ ಹೊರಟು ಸಂಜೆ5 P. M·ನ ಒಳಗೆ ಸಕಲೇಶಪುರಕ್ಕೂ, ಮತ್ತು ಮಂಗಳೂರಿನಿಂದ 10-30A. M , 11-30 A M. ಮತ್ತು 12 Noonಗೆ ಹೊರಡುವ ಮಡಿಕೇರಿ ಸರ್ವೀಸುಗಳಲ್ಲಿ ಹೊರಟು, 5-30P.M , 6-30 P M ಮತ್ತು 7 P. M.ನ ಒಳಗೆ ಮಡಿಕೇರಿಗೂ ತಲ್ಪುವಂತೆ ಯೋಗ್ಯ ಸರ್ವೀಸುಗಳ ಏರ್ಪಾಡು ಮಾಡಿರುತ್ತೇವೆ. ಅಂತೆಯೇ ಸಕಲೇಶಪುರದಿಂದ 8 A.M.ಗೆ ಹೊರಟು, 3-30 P. M.ನ ಒಳಗೆ ಮಂಗಳೂರಿಗೆ ತಲುಪಿ, ಮಂಗಳೂರಿನಿಂದ 4 P. M· ಯಾ 4-45P. M ಗೆ ಹೊರಡುವ ಕರಾವಳಿ ಮತ್ತು ಕಾರ್ಕಳ ಲ್ಯಾನು ಸರ್ವೀಸಿನಲ್ಲಿ ಹೊರಟು ರಾತ್ರಿ ಉಡ್ಪಿಗೆ ತಲುಪಬಹುದು. ಮಡಿಕೇರಿಯಿಂದ 8 A. M.ಗೆ ಹೊರಟು ಮಂಗಳೂರಿಗೆ ಬಂದು ತಲ್ಪುವವರು ಅಂದೇ ಸಂಜೆ ಉಡ್ಪಿಗೂ, ಮತ್ತು ಮಡಿಕೇರಿಯಿಂದ 10-30 A. M.ಗೆ ಹೊರಡುವವರು ಮಂಗಳೂರಿಗೆ 5 P. M.ನ ಒಳಗೆ ಬಂದು ತಲುಪಿ, ಮಂಗಳೂರಿನಿಂದ 5 P. M. ಮತ್ತು 6 P. M. ಗೆ ಹೊರಡುವ ಕಾರ್ಕಳ ಸರ್ವೀಸುಗಳಲ್ಲಿ ಕಾರ್ಕಳ ತನಕವೂ ಹೋಗಿ ತಲ್ಪುವ ಯೋಗ್ಯ ಸರ್ವೀಸುಗಳ ಏರ್ಪಾಡು ಮಾಡಿರುತ್ತೇವೆ.

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಪ್ರಯಾಣ ಸೌಕರ್ಯಗಳನ್ನು ಒದಗಿಸಲಿರುವೆವು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮುಖಾಂತರವಾಗಲೀ ಅಥವಾ ಸ್ವತಃ ಕೇಳಿ ತಿಳಕೊಳ್ಳಿರಿ.

JOINT MANAGERS

The Joint Booking Office
KODIALBAIL, Mangalore

The Combined Booking Agency,
MANGALORE

ಈಗಾಗಲೇ ಅಖಿಲ ಕರ್ನಾಟಕದ
ಓದುಗರ ಮನಸ್ಸನ್ನು
ಸೂರೆಗೊಂಡ ಹೊಸಮಾದರಿಯ
ಕನ್ನಡ ವಾರಪತ್ರಿಕೆ

ಅಂತರಂಗ

ಕರ್ನಾಟಕದ ಎಲ್ಲಾ ಪ್ರಮುಖ ನ್ಯೂಸ್ ಏಜಂಟರಲ್ಲಿ ದೊರೆಯುವುದು.

ವಾರ್ಷಿಕ ಚಂದಾ ರೂ. 3 0 0 ಬಿಡಿ ಪ್ರತಿ 0 1 0

ಮೆನೇಜರ್— ಅಂತರಂಗ,
ಉಡುಪಿ.

ಪುರಂದರದಾಸರ ಪದಗಳು

೧, ೨, ೩, ಭಾಗಗಳು.

ಪ್ರತಿಯೊಂದು ಭಾಗಕ್ಕೆ ೦—೪—೦

ತುಳುನಾಡ್ ಛಾಪಖಾನೆ, ಉಡುಪಿ.

ಸಪ್ಲೈ ಏಜೆನ್ಸಿ ಲಿಮಿಟೆಡ್

ಉಡುಪಿ

Authorised & Issued Capital	...	**Rs. 1,00000**
Subscribed & Paid up „	... ...	**Rs. 30,500**
Reserves	... .	**Rs. 1,078**

ಈ ಕೆಳಗಣ ದರದ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುತ್ತವೆ.

3ರಿಂದ	**6 ತಿಂಗಳ ವರೆಗೆ**	**4 ಸಲೆ**
7 „	**11 „**	**5 „**
12 „	**18 „**	**6 „**

ಎರಡು ವರ್ಷ ಯಾ ಅದಕ್ಕಿಂತ ಮೇಲ್ಪಟ್ಟ ಡಿಪಾಸಿಟುಗಳು ರಿಯಾಯಿತಿ ದರದ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.

ಒಂದೇ ಯೋಜನೆಯಲ್ಲಿ ಎರಡು ಲಾಭಗಳು.

ಧರ್ಮಕ್ಕೆ ಅಂತರಂಗವನ್ನು ಓದಬೇಕೇ?

ನಮ್ಮ 'ಅಂತರಂಗ ಡಿಪಾಸಿಟ್' ಯೋಜನೆಗೆ ಸೇರಿರಿ.

ಫೈನಾನ್ಸ್ ಡಿಪಾರ್ಟ್‌ಮೆಂಟ್,
ವ್ಯಾಸಭವನಂ
ತೇರುಬೀದಿ,
ಉಡುಪಿ

ಎಸ್. ಯು. ಪಣಿಯಾಡಿ,
ಮೆನೇಜಿಂಗ್ ಡೈರೆಕ್ಟರ್,

Printed by S.S. KARANTH, for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI, South India.